
ತೀ.ನಂ.ಶ್ರೀ

ಸಮಗ್ರ ಗದ್ಯ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಪ್ರೊ॥ ತೀ.ನಂ.ಶ್ರೀ. ಜನ್ಮಶತಮಾನೋತ್ಸವ ವರ್ಷ

ತೀ.ನಂ.ಶ್ರೀ.
ಸಮಗ್ರ ಗದ್ಯ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡಭವನ, ಬೆಂಗಳೂರು – ೦೨

THI.NAM.SREE. SAMAGRA GADYA

An Athology of complete prose

Publisher
V.N. Mallikarjuna Swamy
Administrative Officer
Kannada Pustaka Pradhikara
Kannada Bhavana, J.C. Road
Bangalore - 560 002

Coverpage Design : M.S. Murthy

First Print : 2006

Pages : xx + 764

Price : **Rs. 275/-**

ISBN : 81-7713-200-8

ತೀ.ನಂ.ಶ್ರೀ. ಸಮಗ್ರ ಗದ್ಯ

ಪ್ರಕಾಶಕರು
ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨

ರಕ್ಷಾಪುಟ ವಿನ್ಯಾಸ : ಎಂ.ಎಸ್. ಮೂರ್ತಿ

ಮೊದಲ ಮುದ್ರಣ : ೨೦೦೬

ಪುಟಗಳು : xx + ೭೬೪

ಬೆಲೆ : **ರೂ. ೨೭೫/-**

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000

ಚಾಮರಾಜಪೇಟೆ, ಬೆಂಗಳೂರು-೧೮
✆ : 2661 3123, 2661 8752

ಎರಡು ಮಾತು

ಹತ್ತೊಂಬತ್ತನೆಯ ಶತಮಾನದ ಕೊನೆಯ ಮೂರು ದಶಕಗಳು ಮತ್ತು ಇಪ್ಪತ್ತನೆಯ ಶತಮಾನದ ಮೊದಲ ಒಂದು ದಶಕ – ಈ ನಾಲ್ಕು ದಶಕಗಳು (೧೮೭೦-೧೯೧೦), ಹೊಸಗನ್ನಡ ಸಾಹಿತ್ಯ ದೃಷ್ಟಿಯಿಂದ, ಅನೇಕ ಮಹತ್ವದ ಸಾಹಿತಿಗಳು ಹುಟ್ಟಿಕೊಂಡ ಕಾಲವಾಗಿದೆ. ಪಂಜೆ, ಪೈ, ಬಿ.ಎಂ.ಶ್ರೀ., ಕೈಲಾಸಂ, ಡಿ.ವಿ.ಜಿ., ಎ.ಆರ್.ಕೃ., ಮಾಸ್ತಿ, ಬೇಂದ್ರೆ, ಕುವೆಂಪು, ವಿ.ಸೀ., ಕಾರಂತ, ಶ್ರೀರಂಗ, ಪು.ತಿ.ನ., ಡಿ.ಎಲ್.ನ., ಅ.ನ.ಕೃ., ಗೊರೂರು, ತೀ.ನಂ.ಶ್ರೀ. ಮತ್ತು ಇನ್ನೂ ಹಲವರು ಹುಟ್ಟಿದ್ದು ಈ ನಾಲ್ಕು ದಶಕಗಳಲ್ಲಿ. ಈ ಮಹಾ ಸಾಹಿತಿಗಳ ಸಾಧನೆಯಿಂದಾಗಿ, ನವೋದಯ ಸಾಹಿತ್ಯ ಸಂದರ್ಭ ಎಂದು ಹೆಸರಿಸುವ ಕಾಲಮಾನವು, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಏಕಕಾಲಕ್ಕೆ ಅತ್ಯಂತ ಎತ್ತರದ ಬಹುಸಂಖ್ಯೆಯ ಸಾಹಿತಿಗಳು ಸಂಭವಿಸಿದ ಹಾಗೂ ಕನ್ನಡ ಸಾಹಿತ್ಯಕ್ಕೆ ಅತ್ಯಂತ ವೈವಿಧ್ಯ, ವಿಸ್ತಾರ ಮತ್ತು ಚಲನಶೀಲತೆಯನ್ನು ತಂದ ಕಾಲವಾಗಿದೆ.

ಈ ಮಹನೀಯರ ಶತಮಾನ ಸ್ಮರಣೆಯನ್ನು ಕಳೆದ ಸುಮಾರು ಎರಡು ದಶಕಗಳಲ್ಲಿ ಕನ್ನಡನಾಡು ಯಥೋಚಿತವಾಗಿ ಮಾಡಿಕೊಳ್ಳುತ್ತ, ಈ 'ಹಿಂದಣ ಹೆಜ್ಜೆ'ಗಳಿಗೆ ತನ್ನ ಗೌರವವನ್ನು ಸಲ್ಲಿಸಿದೆ. ಪ್ರಸ್ತುತದಲ್ಲಿ ಪ್ರೊ. ತೀ.ನಂ. ಶ್ರೀಕಂಠಯ್ಯ ನವರ ಜನ್ಮಶತಮಾನೋತ್ಸವ ನಡೆದಿದೆ. ಅವರ ಶತಮಾನ ಸ್ಮರಣೆಯ ಅಂಗವಾಗಿ ಹಲವು ಹತ್ತು ಕಡೆಗಳಲ್ಲಿ ಅವರ ಸಾಹಿತ್ಯದ ವಿವಿಧ ಮುಖಗಳನ್ನು ಕುರಿತು ವಿಚಾರ ಸಂಕಿರಣಗಳೂ, ಗೌರವ ಗ್ರಂಥ ಪ್ರಕಟನೆಯ ಕಾರ್ಯವೂ ನಡೆದಿವೆ. ಜತೆಗೆ, ಪ್ರೊ. ತೀ. ಶ್ರೀ. ನಾಗಭೂಷಣ ಅವರು ಸಂಪಾದಿಸಿದ 'ತೀ.ನಂ.ಶ್ರೀ. ಪಥ–ಪರಿಸರ' ಎಂಬ ಅಪರೂಪದ ಬೃಹತ್ ಕೃತಿಯೊಂದು ಪ್ರಕಟವಾಗಿದೆ. ಈ ಪಂಕ್ತಿಗೆ 'ತೀ.ನಂ.ಶ್ರೀ. ಸಮಗ್ರ ಗದ್ಯ' ಸಂಪುಟವು ಇದೀಗ ಸೇರಲಿದೆ.

ಇದು ತೀ.ನಂ.ಶ್ರೀ.ಯವರು ಬರೆದ ಸಮಗ್ರ ಗದ್ಯ ಲೇಖನಗಳ ಸಂಗ್ರಹ. ಅವರ 'ಆಚಾರ್ಯ ಕೃತಿ'ಯಾದ ಭಾರತೀಯ ಕಾವ್ಯಮೀಮಾಂಸೆಯನ್ನು ಹೊರತುಪಡಿಸಿದರೆ, ಅವರು ಈವರೆಗೆ ಬರೆದ ಗದ್ಯ ಬರೆಹಗಳು ನಮಗೆ ಲಭ್ಯವಾಗುವುದು ಅವರ 'ಪಂಪ' (೧೯೩೯), 'ಕಾವ್ಯ ಸಮೀಕ್ಷೆ' (೧೯೪೭), 'ಸಮಾಲೋಕನ' (೧೯೫೮), 'ನಂಟರು' (೧೯೬೩) ಮತ್ತು 'ಕಾವ್ಯಾನುಭವ' (೧೯೭೦) ಎಂಬ ಕೃತಿಗಳಲ್ಲಿ. ಇವುಗಳಲ್ಲಿ 'ಪಂಪ', 'ಕಾವ್ಯ ಸಮೀಕ್ಷೆ' ಮತ್ತು

'ನಂಟರು' – ಈ ಮೂರು ಕೃತಿಗಳಲ್ಲಿನ ಬರೆಹಗಳು ಬಹುಮಟ್ಟಿಗೆ ಒಂದು ವಿಷಯಕ್ಕೆ ಬದ್ಧವಾಗಿರುವಂತೆ ತೋರಿದರೆ, ಅವರ ಇನ್ನೆರಡು ಪುಸ್ತಕಗಳೊಳಗಿನ ಬರೆಹಗಳು ಮಿಶ್ರಸ್ವರೂಪದವುಗಳಾಗಿವೆ. ಹಾಗೂ ಈ ಪುಸ್ತಕಗಳೊಳಗೆ ಸೇರ್ಪಡೆಯಾಗದ ಮತ್ತು ಬೇರೆ ಬೇರೆ ಕಡೆ ಪ್ರಕಟವಾದ ಲೇಖನಗಳೂ ಸಾಕಷ್ಟಿವೆ. ಈ ಹಿನ್ನೆಲೆಯಲ್ಲಿ ತೀ.ನಂ.ಶ್ರೀ ಅವರ ಈ ಎಲ್ಲ ಬರೆಹಗಳನ್ನು ಒಂದು ವಸ್ತು ವಿಷಯಾನುಕ್ರಮದಲ್ಲಿ ಜೋಡಿಸಿ ಒಂದು ಸಮಗ್ರ ಸಂಪುಟ ವನ್ನಾಗಿ, ತೀ.ನಂ.ಶ್ರೀ. ಜನ್ಮ ಶತಮಾನೋತ್ಸವದ ಈ ಹೊತ್ತಿನ ಸಂದರ್ಭದಲ್ಲಿ ಯಾಕೆ ಪ್ರಕಟಿಸಬಾರದು ಎನ್ನುವ ಚಿಂತನೆಯನ್ನು, ನಾನು, ಪ್ರೊ. ತೀ.ಶ್ರೀ. ನಾಗಭೂಷಣ ಅವರೊಂದಿಗೆ ಸಮಾಲೋಚಿಸಿ, ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿರುವ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರ ಗಮನಕ್ಕೆ ತಂದಾಗ, ಅವರು ಅತ್ಯಂತ ಉತ್ಸಾಹದಿಂದ, ಕಾರ್ಯ ಪ್ರವೃತ್ತರಾದ ಕಾರಣದಿಂದ ಈಗ ಸಿದ್ಧವಾಗಿ ಪ್ರಕಟವಾಗುತ್ತಿದೆ 'ತೀ.ನಂ.ಶ್ರೀ. ಸಮಗ್ರ ಗದ್ಯ' ಸಂಪುಟ.

ಈ ಸಂಪುಟವನ್ನು ಎಂಟು ವಿಭಾಗಗಳಾಗಿ ವರ್ಗೀಕರಿಸಲಾಗಿದೆ. ಒಂದೊಂದು ವಿಭಾಗದಲ್ಲೂ ಸಾಧ್ಯವಾದಮಟ್ಟಿಗೆ ಒಂದು ನಿರ್ದಿಷ್ಟವಾದ ವಿಷಯಾನುಕ್ರಮವುಳ್ಳ ಲೇಖನಗಳಿರುವಂತೆ ನೋಡಿಕೊಳ್ಳಲಾಗಿದೆ, ಮತ್ತು ತೀ.ನಂ.ಶ್ರೀ. ಅವರ ಶಿಷ್ಯರು ಮತ್ತು ಅಭಿಮಾನಿಗಳ ಪರಿಶ್ರಮದಿಂದ ದೊರೆತ, ಬೇರೆ ಬೇರೆಡೆಗಳಲ್ಲಿ ಪ್ರಕಟವಾದ ತೀ.ನಂ.ಶ್ರೀ. ಅವರ ಹನ್ನೊಂದು ಲೇಖನಗಳನ್ನು ಈ ಸಂಪುಟದಲ್ಲಿ ಉಚಿತವರಿತು ಅಳವಡಿಸಲಾಗಿದೆ.

ಪ್ರೊ. ತೀ.ನಂ. ಶ್ರೀಕಂಠಯ್ಯನವರು ನವೋದಯ ಸಾಹಿತ್ಯ ಸಂದರ್ಭದಲ್ಲಿ ಕನ್ನಡದ ವಿದ್ವತ್ತು ಮತ್ತು ವಿಮರ್ಶೆಗಳಿಗೆ ಭದ್ರವಾದ ಬುನಾದಿಯನ್ನು ಹಾಕಿದ ಮೊದಲಿಗರಲ್ಲಿ ಒಬ್ಬರು. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಈ ಮೂರೂ ಭಾಷಾಸಾಹಿತ್ಯಗಳ ಪರಿಣತಿಯಿಂದ ಬರೆಯಬಲ್ಲ ಅವರ ಸಾಮರ್ಥ್ಯವು ತುಂಬ ಗಟ್ಟಿಮುಟ್ಟಾದ ಮತ್ತು ಎಲ್ಲ ಕಾಲಕ್ಕೂ ನಿಲ್ಲಬಲ್ಲಂಥ ಕೆಲವು ಕೃತಿಗಳನ್ನು ನೀಡಿದೆ. ಯಾವುದೇ ವಿಷಯವನ್ನು ಕುರಿತು ಬರೆಯುವ ಅಥವಾ ಮಾತನಾಡುವ ಮುನ್ನ ಅದು ನಿಷ್ಕೃಷ್ಟವಾಗಿ ಖಚಿತವಾಗುವವರೆಗೂ ತಡೆ ಹಿಡಿಯುವ ತಾಳ್ಮೆ, ಬರೆದುದನ್ನು ಮತ್ತೆ ಮತ್ತೆ ಪರಿಷ್ಕರಿಸುವ ಎಚ್ಚರ, ಬರೆದುದನ್ನು ಪ್ರಕಟಿಸುವ ಬಗ್ಗೆ ಅವರಿಗಿದ್ದ ಸಂಯಮ–ಇತ್ಯಾದಿಗಳಿಂದಾಗಿ, ನವೋದಯದ ಉತ್ಸಾಹ, ಆವೇಶ, ಪ್ರಕಟನೆಯ ಕಾತರ, ಹೆಸರಿನ ಹಂಬಲ, ಈ ಎಲ್ಲವುಗಳಿಂದ ವಿಮುಖವಾದ ಒಂದು ಚಿಂತನಶೀಲ ಸ್ತಿಮಿತ ಮನಸ್ಸಿನ ಹದವನ್ನು ಕಾಯ್ದುಕೊಂಡವರು ತೀ.ನಂ. ಶ್ರೀಕಂಠಯ್ಯನವರು. ಈ ಕಾರಣದಿಂದ ಅಂದಿನ ಇತರ ಲೇಖಕರಿಗೆ ಹೋಲಿಸಿದರೆ ಅವರು ಬರೆದದ್ದು ತೀರಾ ಕಡಿಮೆ; ಆದರೆ ಏನು ಬರೆದರೋ ಅದಷ್ಟೂ ಘಟ್ಟಿಯಾದದ್ದು.

ತೀ.ನಂ. ಶ್ರೀಕಂಠಯ್ಯನವರು ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ್ದೇ ಒಬ್ಬ ಕವಿಯಾಗಿ, ೧೯೩೨ರಲ್ಲಿ ಅವರು ಪ್ರಕಟಿಸಿದ 'ಒಲುಮೆ' ಎಂಬ ಕವನ ಸಂಗ್ರಹದ ಮೂಲಕ. ಹೊಸಗನ್ನಡದಲ್ಲಿ ಪ್ರೇಮವನ್ನು ಒಂದು ಘನವಾದ ಹಾಗೂ ಜನಪ್ರಿಯವಾದ ರೀತಿಯಲ್ಲಿ ವರ್ಣಿಸಿ ವಿಖ್ಯಾತರಾದ ಕನ್ನಡದ ಒಲವಿನ ಕವಿ ಕೆ.ಎಸ್. ನರಸಿಂಹಸ್ವಾಮಿಯವರಿಗಿಂತ ಮೊದಲೆ, ಈ ವಸ್ತುವನ್ನು ಕುರಿತು ಮೊದಲು ಬರೆದವರು ತೀ.ನಂ.ಶ್ರೀ. ಈ ದೃಷ್ಟಿಯಿಂದ ಚಾರಿತ್ರಿಕವಾಗಿ ತೀ.ನಂ.ಶ್ರೀ. ಅವರ 'ಒಲುಮೆ' ಕವನ ಸಂಗ್ರಹವೆ ಹೊಸಗನ್ನಡ ಸಾಹಿತ್ಯ ಸಂದರ್ಭದ ಮೊದಲ ಪ್ರೇಮಕಾವ್ಯ ಸಂಕಲನ. ಮುಂದೆ ತೀ.ನಂ.ಶ್ರೀ. ಅವರು, ಸಾಹಿತ್ಯ ವಿಮರ್ಶೆ, ಛಂದಸ್ಸು, ವ್ಯಾಕರಣ, ಭಾಷಾಶಾಸ್ತ್ರ, ಸಂಶೋಧನೆ, ನಿಘಂಟು-ಮೊದಲಾದ ಕ್ಷೇತ್ರಗಳಲ್ಲಿ ಕೃಷಿ ಮಾಡಿದ ಬಹು ದೊಡ್ಡ ವಿದ್ವಾಂಸರೆಂದು ಹೆಸರು ಮಾಡಿದರೂ, ಅವರು ತಮ್ಮೊಳಗಿನ ಕವಿಯನ್ನು ಯಾವತ್ತೂ ಕಳೆದುಕೊಳ್ಳಲಿಲ್ಲ; ವಿದ್ವತ್ತಿನ ಕ್ಷೇತ್ರದ ಜತೆಗೆ ಹೇಗೋ ಹಾಗೆ ಸಮಕಾಲೀನ ಸೃಜನ ಸಾಹಿತ್ಯದ ಜತೆಗೂ ಸಮಾನ ಆಸಕ್ತಿಯನ್ನು ಉಳಿಸಿಕೊಂಡು ಬಂದವರು. ಇದರಿಂದಾಗಿ ಅವರ ಬರಹ ವಿಮರ್ಶೆಯ ಅಥವಾ ವಿದ್ವತ್ತಿನ ಹೆಸರಿನಲ್ಲಿ ಯಾವತ್ತೂ ಶುಷ್ಕವಾಗಲಿಲ್ಲ; ರಸದ ಸ್ಪರ್ಶವನ್ನು ಕಳೆದುಕೊಳ್ಳಲಿಲ್ಲ.

ಕನ್ನಡ ನವೋದಯ ಸಂದರ್ಭದ ನಮ್ಮ ಪ್ರತಿಭಾವಂತರ ಮುಂದೆ ಇದ್ದ ಪ್ರಶ್ನೆಗಳೆಂದರೆ, ತಮ್ಮ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಸ್ಥಗಿತಗೊಳಿಸಿಕೊಂಡಂತೆ ತೋರುವ ಕನ್ನಡ ಸಾಹಿತ್ಯವನ್ನು ಮತ್ತೆ ಚಲನಶೀಲವನ್ನಾಗಿ ನೋಡುವುದು ಹೇಗೆ, ಹೊಸ ರೂಪಗಳನ್ನು ಆವಿಷ್ಕಾರ ಮಾಡುವುದು ಹೇಗೆ, ಹೊಸ ಕಾಲದ ಸಂವೇದನೆಗಳ ಅಭಿವ್ಯಕ್ತಿಗೆ ಅಗತ್ಯವಾದ ಭಾಷೆಯನ್ನು ಸಿದ್ಧಪಡಿಸುವುದು ಹೇಗೆ ಎನ್ನುವಂಥವು. ಇದಕ್ಕಾಗಿ ಅಂದು ಸಾಹಿತ್ಯ ಕ್ಷೇತ್ರದ ಮುಂಚೂಣಿಯಲ್ಲಿದ್ದವರು ಮುಕ್ತವಾಗಿ ಇಂಗ್ಲಿಷಿನಿಂದ, ಸ್ಥಳೀಯ ಮೂಲಗಳಿಂದ ಮತ್ತು ಸಂಸ್ಕೃತ ಸಾಹಿತ್ಯ ಪರಂಪರೆಯಿಂದ ಕನ್ನಡದ ಪುನರುಜ್ಜೀವನಕ್ಕೆ ಅಗತ್ಯವಾದ ಪ್ರೇರಣೆಗಳನ್ನು ಪಡೆದುಕೊಳ್ಳುವ ಪ್ರಯತ್ನ ಮತ್ತು ಪ್ರಯೋಗಗಳಲ್ಲಿ ತೊಡಗಿಸಿಕೊಂಡರೆನ್ನುವುದು ಈಗ ಚರಿತ್ರೆಯ ಒಂದು ಭಾಗವಾಗಿದೆ. ಇಂಗ್ಲಿಷ್ ಮತ್ತು ಕನ್ನಡದ ಜತೆಗೆ ಸಂಸ್ಕೃತದಲ್ಲೂ ಪರಿಣತರಾದ ತೀ.ನಂ. ಶ್ರೀಕಂಠಯ್ಯನವರಿಂದ ಕನ್ನಡಕ್ಕೆ ಆದ ಲಾಭ ಮೂರು ತೆರನಾದುದು. ಮೊದಲನೆಯದು, ಸಂಸ್ಕೃತ ಮುಕ್ತಕಗಳ ಅನುವಾದ ಹಾಗೂ ವಿಶಾಖದತ್ತನ 'ಮುದ್ರಾರಾಕ್ಷಸ' ಎಂಬ ಕೃತಿಯ ರೂಪಾಂತರ. ಎರಡನೆಯದು, 'ಭಾರತೀಯ ಕಾವ್ಯಮೀಮಾಂಸೆ'ಯಂಥ ಆಚಾರ್ಯ ಕೃತಿಯ ನಿರ್ಮಿತಿ; ಮೂರನೆಯದು, ಸಂಸ್ಕೃತ ಸಾಹಿತ್ಯವನ್ನು ಕುರಿತು, ಅವರು ಕನ್ನಡದಲ್ಲಿ ಬರೆದ ಕೆಲವು ಮುಖ್ಯ ಲೇಖನಗಳು. ವಾಲ್ಮೀಕಿಯ ವರ್ಣನೆಗಳು, ಕಾಳಿದಾಸನ ನಾಟಕಗಳಲ್ಲಿ ದುರಂತ ವಸ್ತುವಿನ್ಯಾಸ, ಶಾಕುಂತಲವನ್ನು ಕುರಿತು, ಪಾತ್ರ

ನಿರೂಪಣೆಯಲ್ಲಿ ವ್ಯಾಸರ ದೃಷ್ಟಿ, ಭಾಸನ ದೃಷ್ಟಿ, ಧನಂಜಯನ ದಶರೂಪಕ – ಇವು ಆ ಬರೆಹಗಳು. ಈ ಬರೆಹಗಳ ಹಿಂದೆ ಇರುವ ವಿದ್ವತ್ತು, ಭಾರತೀಯ ಕಾವ್ಯಮೀಮಾಂಸೆ ಹಾಗೂ ಆಧುನಿಕ ಸಾಹಿತ್ಯ ವಿಮರ್ಶೆಯಿಂದ ಪರಿಷ್ಕೃತಗೊಂಡ ಒಂದು ಮನಸ್ಸು, ಪ್ರಾಚೀನ ಕೃತಿಗಳನ್ನು ಹೊಸ ಕಾಲದ ಬೆಳಕಿನಲ್ಲಿ ವ್ಯಾಖ್ಯಾನಿಸುವ ಕೌಶಲ ಇವು ಕನ್ನಡ ಸಾಹಿತ್ಯ ವಿಮರ್ಶೆಗೆ ಹೊಸ ಆಯಾಮಗಳನ್ನು ಗಣನೀಯ ವಾಗಿ ವಿಸ್ತರಿಸಿದ ಲಕ್ಷಣಗಳಾಗಿವೆ.

ನವೋದಯ ಸಾಹಿತ್ಯವಿಮರ್ಶೆಗೆ ತೀ.ನಂ.ಶ್ರೀ. ಅವರ ಕೊಡುಗೆ ಗಣನೀಯ ವಾದದ್ದು. ಮುಖ್ಯವಾಗಿ ಅದು ವಿದ್ವತ್ತು ಮತ್ತು ವಿನಯಗಳ, ಪ್ರಾಚ್ಯ–ಪಾಶ್ಚಾತ್ಯ ವಿಮರ್ಶಾ ಪರಿಜ್ಞಾನಗಳ ಒಂದು ಹದವಾದ ಮೇಳನದಿಂದ ರೂಪುಗೊಂಡದ್ದು. ವರ್ಣನಾವಿಮರ್ಶೆ, ತೌಲನಿಕ ವಿಮರ್ಶೆ ಮತ್ತು ಸಂಶೋಧನ ವಿಮರ್ಶೆ ಈ ಮೂರು ಲಕ್ಷಣಗಳೂ ಅವರ ವಿಮರ್ಶೆಯೊಳಗೆ ಹೆಣೆದುಕೊಂಡಿವೆ. ಮೂಲತಃ ಕವಿ ಕೃತಿಗಳ ಬಗ್ಗೆ ರುಚಿಯನ್ನೂ ಹೊಸ ತಿಳಿವಳಿಕೆಯನ್ನೂ ಹುಟ್ಟಿಸುವಂಥದು ಅವರ ವಿಮರ್ಶೆ. ಅಷ್ಟೆ ಅಲ್ಲ ಹಲವು ಬಗೆಯ ವಾಗ್ವಾದಗಳನ್ನು ಬೆಳೆಯಿಸು ವಂಥದ್ದು. ನಿದರ್ಶನಕ್ಕೆ 'ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ' ಎಂಬ ಬರೆಹ, ಬಹುಶಃ ಜನ್ನನ ಕೃತಿಗಳನ್ನು ಕುರಿತು ಬಂದ ಈ ಮೊದಲ ವಿಮರ್ಶೆ ಅನಂತರ ಈ ಕುರಿತ ಚರ್ಚೆಯ ಒಂದು ಪರಂಪರೆಗೆ ನಾಂದಿಯಾಯಿತು. ಹೀಗೆಯೆ ಪಂಪನ ಬನವಾಸಿಯನ್ನು ಕುರಿತು, 'ಪಂಪಭಾರತ'ದ ಕೃಷ್ಣನನ್ನು ಕುರಿತು ತೀ.ನಂ.ಶ್ರೀ. ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಕನ್ನಡ ವಿಮರ್ಶೆಯ ಪರಂಪರೆಯನ್ನು ಬೆಳೆಯಿಸಿದವುಗಳು. 'ಕೆರೆಗೆ ಹಾರ' ಎಂಬ ಜನಪದ ಕೋಲಾಟ ಪದದ ಸ್ವಾರಸ್ಯವನ್ನು ಕುರಿತು, ೧೯೪೪ರಲ್ಲಿ ತೀ.ನಂ.ಶ್ರೀ. ಬರೆದ ಪರಿಚಯ ಲೇಖನವೂ, ಮುಂದೆ ಈ ಹಾಡಿನ ವಿವಿಧ ಮಗ್ಗುಲುಗಳನ್ನು ಕುರಿತ ಚರ್ಚೆಗಳಿಗೆ ಮುನ್ಸೂಚನೆಯಾಯಿತು. ೧೯೩೯ರಷ್ಟು ಹಿಂದೆಯೆ ಪಂಪನನ್ನು ಕುರಿತ ಕಿರುಕೃತಿಯೊಂದರಲ್ಲಿ, ಪಂಪ ಭಾರತದಲ್ಲಿ ಬರುವ ಬನವಾಸಿ ನಾಡಿನ ವರ್ಣನೆಯ ಔಚಿತ್ಯವನ್ನು ಕುರಿತು, ಚಿಂತನೆ ಮಾಡುತ್ತ 'ಪಂಪ ಎಲ್ಲೇ ಹುಟ್ಟಿ ಎಲ್ಲೇ ಬೆಳೆದಿರಲಿ ಅವನ ಜೀವನದ ಸಾರವತ್ತಾದ ಭಾಗವು ಈ ಬನವಾಸಿ ನಾಡಿನಲ್ಲಿ ಕಳೆದಿರಬಹುದು' ಎಂದು ತೀ.ನಂ.ಶ್ರೀ. ಹೇಳಿದ ಮಾತುಗಳನ್ನು, ಅನಂತರ ನಡೆದ ಸಂಶೋಧನೆಗಳು ಹೇಗೆ ದೃಢಪಡಿಸಿವೆ ಎಂಬುದನ್ನು ನೆನೆಯಬಹುದು.

ತೀ.ನಂ.ಶ್ರೀ. ಅವರ ಸಾಹಿತ್ಯವಿಮರ್ಶೆಯ ಮತ್ತೊಂದು ಲಕ್ಷಣವೆಂದರೆ, ಸಮಕಾಲೀನ ಸಾಹಿತ್ಯ ಕೃತಿಗಳಿಗೆ ಅವರು ಸ್ಪಂದಿಸಿರುವ ಕ್ರಮ. ಬಿ.ಎಂ.ಶ್ರೀ.ಯವರ 'ಇಂಗ್ಲಿಷ್ ಗೀತಗಳು' ಕೃತಿಗೆ ಅವರು ಬರೆದ ಪ್ರಸ್ತಾವನೆಯನ್ನು ಇದರದೊಂದು

ಮಾದರಿ ಎನ್ನಬಹುದು. 'ಇಂಗ್ಲಿಷ್ ಗೀತಗಳು' ಕೃತಿಯ ಮೌಲಿಕತೆಯನ್ನು ವಿವರವಾಗಿ ಪರಿಚಯಿಸುತ್ತಲೆ, 'ಇಂಗ್ಲಿಷ್ ಗೀತಗಳಲ್ಲಿ ಬಂದಿರುವ ಎಲ್ಲ ಮಾತೂ ರಸಮಯವೆಂದಾಗಲಿ, ಎಲ್ಲ ಅನುವಾದವೂ ಉತ್ಕೃಷ್ಟವೆಂದಾಗಲಿ ನನ್ನ ವಾದವಲ್ಲ. ಆದರೆ ಪಕ್ಷಪಾತವಿಲ್ಲದ ಕಿವಿಗಳಿಗೆ ಈ ಕೃತಿಯಲ್ಲಿ ಹೊಸಗನ್ನಡದ ವಿಜಯಘೋಷ ಸ್ಪಷ್ಟವಾಗಿ ಕೇಳಿಬರುತ್ತದೆ' ಎಂದು ಬರೆಯುತ್ತಾರೆ. ತೀ.ನಂ.ಶ್ರೀ. ಅವರ ವಿಮರ್ಶೆ ಎಷ್ಟು ನಿಷ್ಪಕ್ಷಪಾತವೂ ಗುಣಗ್ರಾಹಿಯೂ ಆಗಿದೆ ಎನ್ನುವುದಕ್ಕೆ ಇದೊಂದು ನಿದರ್ಶನವೇ ಸಾಕು. ಪು.ತಿ.ನ. ಅವರ 'ಅಹಲ್ಯೆ' ಎಂಬ ನಾಟಕಕ್ಕೆ ತೀ.ನಂ.ಶ್ರೀ.ಯವರು ಬರೆದ ವಿಸ್ತಾರವಾದ ಪ್ರಸ್ತಾವನೆ, ಅತ್ಯಂತ ವಿವೇಚನಾ ಪೂರ್ಣವಾದ ಮತ್ತು ರಸಮಯವಾದ ವಿಮರ್ಶೆಯಾಗಿದೆ. ಬೇಂದ್ರೆಯವರ 'ಗರಿ'ಯನ್ನು ಕುರಿತು, ರಾಜರತ್ನಂ ಅವರ ಮಕ್ಕಳ ಕವಿತೆಗಳನ್ನು ಕುರಿತು, ಗೋಕಾಕರ 'ಸಮುದ್ರದಾಚೆಯಿಂದ' ಕುರಿತು, 'ಸಣ್ಣ ಕತೆಯಲ್ಲಿ ವಾಸ್ತವಿಕತೆಯ ಸ್ಥಾನ'ವನ್ನು ಕುರಿತು, 'ಮಕ್ಕಳಿಗೆ ಹೇಳುವ ಕತೆಗಳು' ಕುರಿತು ಉತ್ಸಾಹ ಪೂರ್ಣವಾದ ಚರ್ಚೆಯನ್ನು ಬೆಳೆಯಿಸಿದ್ದಾರೆ. 'ಗದಾಯುದ್ಧವೂ ಸ್ವೀಕರಣ ವಿಚಾರವೂ' ಎಂಬ ಲೇಖನದಲ್ಲಿ ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಪ್ರಚಲಿತವಾದ 'ಕೃತಿಚೌರ್ಯ'ದ ವಿಷಯವನ್ನು, ಭಾರತೀಯ ಕಾವ್ಯಮೀಮಾಂಸೆಯ ಸಂದರ್ಭದ 'ಹರಣ' 'ಸ್ವೀರಕಣ' ಪರಿಕಲ್ಪನೆಗಳ ಹಿನ್ನೆಲೆಯಲ್ಲಿ, ರನ್ನನ ಗದಾಯುದ್ಧವನ್ನು ತೀ.ನಂ.ಶ್ರೀ. ಚರ್ಚಿಸಿರುವ ಲೇಖನವು, ಕೃತಿಗಳ ಮೌಲ್ಯಮಾಪನಕ್ಕೆ ಮಾರ್ಗದರ್ಶಿಯಾಗಬಲ್ಲ ಒಂದು ಹೊಸ ಪ್ರಯತ್ನವಾಗಿದೆ.

ತೀ.ನಂ.ಶ್ರೀ.ಯವರ ಆಚಾರ್ಯ ಕೃತಿಯಾದ 'ಭಾರತೀಯ ಕಾವ್ಯ ಮೀಮಾಂಸೆ', ಭರತನಿಂದ ಮೊದಲುಗೊಂಡು ಜಗನ್ನಾಥ ಪಂಡಿತನವರೆಗೂ, ಸುಮಾರು ಒಂದು ಸಾವಿರದ ಐನೂರು ವರ್ಷಗಳ ಕಾಲ ನಡೆದ ಸಂಸ್ಕೃತ ಆಲಂಕಾರಿಕರ ಚಿಂತನೆಗಳನ್ನು ಸಮಗ್ರವಾಗಿ ಹಾಗೂ ಹೃದ್ಯವಾಗಿ ನಿರೂಪಿಸಿರುವ ಭಾರತೀಯ ಕಾವ್ಯಶಾಸ್ತ್ರದ ಚರಿತ್ರೆ ಮಾತ್ರವಲ್ಲ, ಅದರ ವಿವೇಚನೆ ಕೂಡಾ ಹೌದು. ಅಷ್ಟೆ ಅಲ್ಲ ಸಂಸ್ಕೃತ ಆಲಂಕಾರಿಕರ ಎಷ್ಟೋ ಪರಿಕಲ್ಪನೆಗಳನ್ನು ಕೊಡುಗೆಗಳನ್ನು ತೀ.ನಂ.ಶ್ರೀ.ಯವರು ಪಶ್ಚಿಮದ ಸಾಹಿತ್ಯ ಶಾಸ್ತ್ರದ ಚಿಂತನೆ ಗಳೊಂದಿಗೆ ಕ್ವಚಿತ್ತಾಗಿ ಹೋಲಿಸಿ ನೋಡುತ್ತ, ಮುಂದೆ ಕನ್ನಡದಲ್ಲಿ ನಡೆದ ತೌಲನಿಕ ಕಾವ್ಯಮೀಮಾಂಸೆಯ ಕೆಲಸಗಳಿಗೆ ದಿಕ್ಸೂಚಿ ಮತ್ತು ಪ್ರೇರಣೆಯನ್ನು ಒದಗಿಸಿದರೆಂಬುದನ್ನು ಗಮನಿಸಬಹುದು. ನಿದರ್ಶನಕ್ಕೆ ಹೇಳುವುದಾದರೆ, ಭಾರತೀಯ ಕಾವ್ಯಮೀಮಾಂಸೆಯಲ್ಲಿ ಬರುವ 'ಸಾಧಾರಣೀಕರಣ' ತತ್ವವನ್ನು ಕುರಿತು ಬರೆಯುವಾಗ 'ಪಾಶ್ಚಾತ್ಯ ಸೌಂದರ್ಯದ ಮೀಮಾಂಸೆಯಲ್ಲಿ ಇತ್ತೀಚೆಗೆ

ಕಾಣಿಸಿಕೊಂಡಿರುವ 'Psychical Distance' ಎಂಬ ತತ್ವ ನಮ್ಮವರ 'ಸಾಧಾರಣೀಕರಣ' ತತ್ವವನ್ನು ಆಶ್ಚರ್ಯಕರವಾದ ರೀತಿಯಲ್ಲಿ ಹೋಲುತ್ತದೆ' (ಭಾ.ಕಾ.ಮೀ. ೧೯೫೩ ಪು. ೨೬೩.ಅ.) ಎಂದು ಸಾಹಿತ್ಯ ಚಿಂತನೆಯಲ್ಲಿ ಈ ಕುರಿತು ಮುಂದೆ ನಡೆದ ಚರ್ಚೆಗಳಿಗೆ ಪೀಠಿಕೆ ಹಾಕುತ್ತಾರೆ. ಕನ್ನಡದಲ್ಲಿ ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯವಿಮರ್ಶೆಯು ರೂಪುಗೊಳ್ಳುವ ಸಂದರ್ಭದಲ್ಲಿ ಸಿದ್ಧವಾಗಬೇಕಾದ ಭಾಷೆ ಹಾಗೂ ಪರಿಭಾಷೆಗಳ ದೃಷ್ಟಿಯಿಂದ, ಇಂಗ್ಲಿಷಿನ ಯಾವ ಯಾವ ಪದಗಳಿಗೆ, ಕನ್ನಡದಲ್ಲಿ ಭಾರತೀಯ ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ ಸಂವಾದಿ ಪದಗಳು ಯಾವ್ಯಾವುವಿರಬೇಕು ಎನ್ನುವುದನ್ನು ಪ್ರಾಸಂಗಿಕವಾಗಿ ತಮ್ಮ 'ಆಚಾರ್ಯ ಕೃತಿ'ಯಲ್ಲಿ ಸೂಚಿಸಿದ್ದಾರೆ: "ನಮ್ಮ ಕಾವ್ಯಚರ್ಚೆಯಲ್ಲಿ 'ಶಕ್ತಿ' ಎಂಬುದನ್ನು ವಿಶಾಲಪರವಾದ 'genius' ಎಂಬ ಅರ್ಥದಲ್ಲಿಯೂ 'ಪ್ರತಿಭೆ' ಎಂಬುದನ್ನು Imagination ಎಂಬ ಅರ್ಥದಲ್ಲಿಯೂ ನಿಯತವಾಗಿ ಉಪಯೋಗಿಸುವುದು ಉತ್ತಮ. ಕನ್ನಡದಲ್ಲಿ ಬರೆಯುವಾಗ ಕೆಲವರು. Imagination ಎಂಬುದಕ್ಕೆ 'ಭಾವನೆ' 'ಕಲ್ಪನೆ' ಎಂಬ ಪ್ರತಿಶಬ್ದಗಳನ್ನು ಇಟ್ಟುಕೊಳ್ಳುತ್ತಾರೆ. ಆದರೆ 'ಭಾವನೆ' ಎಂದರೆ Contemplation, Meditation ಎಂದು ಅರ್ಥ. 'ಕಲ್ಪನೆ' ಎಂಬುದನ್ನು fancy, conception ಎಂಬುದಕ್ಕೆ ಸಮಾನವಾಗಿ ಅಂಗೀಕರಿಸೋಣ" (ಭಾ.ಕಾ.ಮೀ. ಪು. ೧೬೨. ಅ) – ಎಂದು ಸೂಚಿಸುತ್ತಾರೆ.

ತೀ.ನಂ.ಶ್ರೀ.ಯವರ 'ಭಾರತೀಯ ಕಾವ್ಯಮೀಮಾಂಸೆ'ಯ ಹೆಚ್ಚಳ ಮತ್ತು ಭಿನ್ನತೆಯಿರುವುದು, ಯಾವುದೇ ಸಾಹಿತ್ಯ ಚಿಂತನೆ ನಡೆಯಬೇಕಾದದ್ದು, ಅದಕ್ಕೆ ಹಿನ್ನೆಲೆಯಾದ ಹಾಗೂ ಸಮಕಾಲೀನವಾದ ಒಂದು ಸಮೃದ್ಧ ಸಾಹಿತ್ಯ ಪರಂಪರೆ ಯಲ್ಲಿ ಎನ್ನುವ ಎಚ್ಚರವನ್ನು ಈ ಕೃತಿ ಕಾಯ್ದುಕೊಂಡಿದೆ ಎನ್ನುವ ಕಾರಣದಿಂದ. ಜತೆಗೆ ಭಾರತೀಯ ಕಾವ್ಯಮೀಮಾಂಸೆ ಮೌಲಿಕವಾದ ಅನೇಕ ಪರಿಕಲ್ಪನೆಗಳನ್ನು ಆವಿಷ್ಕಾರ ಮಾಡಿದರೂ, ಅವು ಆಧುನಿಕ ಸಾಹಿತ್ಯ ಸಂದರ್ಭಗಳ ವಿವೇಚನೆಗೆ–ಧ್ವನಿ ತತ್ವವೊಂದನ್ನು ಹೊರತುಪಡಿಸಿ–ಅಷ್ಟಾಗಿ ಉಪಯುಕ್ತ ವಾಗಲಾರವು ಎಂಬುದನ್ನು ಬಲ್ಲ ತೀ.ನಂ.ಶ್ರೀ.ಯವರು ತಮ್ಮ ಸಾಹಿತ್ಯವಿಮರ್ಶೆಯ ಲೇಖನಗಳಲ್ಲಿ ಪಶ್ಚಿಮದ ಮುಖಾಮುಖಿಯಿಂದ ನಿಷ್ಪನ್ನವಾದ ಆಧುನಿಕ ಸಾಹಿತ್ಯ ವಿಮರ್ಶೆಯ ಪರಿಕರಗಳನ್ನು ಬಳಸಿಕೊಂಡದ್ದು ಸಹಜವಾಗಿಯೆ ಇದೆ. ಆದರೆ ತೀ.ನಂ.ಶ್ರೀ. ಅವರು ತಮ್ಮ 'ಭಾರತೀಯ ಕಾವ್ಯಮೀಮಾಂಸೆ' ಎಂಬ ಕೃತಿಯಲ್ಲಿ ಕಾವ್ಯಮೀಮಾಂಸೆಯ ತತ್ವಗಳನ್ನು ಅನ್ವಯಿಸಿ ಚರ್ಚಿಸಲು ಪ್ರಯತ್ನಪಟ್ಟಿರುವುದು ಕೇವಲ ಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿ ಮಾತ್ರವಲ್ಲ, ಆಧುನಿಕ ಸಾಹಿತ್ಯ ಪರಂಪರೆಯ ಮೂಲಮಾನದಲ್ಲೂ ಎನ್ನುವುದು ಗಮನಿಸಬೇಕಾದ ಸಂಗತಿ

ಯಾಗಿದೆ. ಅದರಲ್ಲೂ ಧ್ವನಿತತ್ವವನ್ನು ಕುರಿತು ನಿರೂಪಿಸುವ ಸಂದರ್ಭದಲ್ಲಿ ವ್ಯಾಸ ಕಾಳಿದಾಸಾದಿ ಕವಿಗಳು ಮಾತ್ರವಲ್ಲ, ಪಂಪ-ಕುಮಾರವ್ಯಾಸ-ಬೇಂದ್ರೆ-ಕುವೆಂಪು-ಮತ್ತು ಜಾನಪದೀಯ ಅಭಿವ್ಯಕ್ತಿಗಳೂ ನಿದರ್ಶನಗಳಾಗಿ ಬಳಕೆಯಾಗಿವೆ. ಹಾಗೆಯೇ ಈ ಲಕ್ಷ್ಯ ಪದ್ಯಗಳನ್ನು ಕುರಿತ ಚರ್ಚೆಯ ಸಂದರ್ಭದಲ್ಲಿ ತೀ.ನಂ.ಶ್ರೀ. ಅನಂತರ ಕನ್ನಡದಲ್ಲಿ ಪ್ರಾರಂಭವಾದ ಪ್ರಾಯೋಗಿಕ ವಿಮರ್ಶೆಯ ಮೊದಲ ಮಾದರಿಗಳನ್ನು ಹಾಕಿಕೊಟ್ಟರೆಂದು ಹೇಳಬಹುದು.

ತೀ.ನಂ.ಶ್ರೀ. ಅವರ ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ಭಾಷಾಶಾಸ್ತ್ರ ಇತ್ಯಾದಿಗಳನ್ನು ಕುರಿತು ಬರೆಯಲು ನಾನು ಶಕ್ತನಲ್ಲ. ಗಮನಿಸಬೇಕಾದ ಮಾತೆಂದರೆ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ, ಭಾಷಾವಿಜ್ಞಾನವನ್ನು ಒಂದು ಅಧ್ಯಯನದ ವಿಷಯವನ್ನಾಗಿ ಪ್ರವೇಶಗೊಳಿಸಿ ಅದಕ್ಕೊಂದು ಭದ್ರವಾದ ನೆಲೆಗಟ್ಟನ್ನು ಕಲ್ಪಿಸಿದವರು ತೀ.ನಂ. ಶ್ರೀಕಂಠಯ್ಯನವರು. ಹಾಗೆಯೆ ಕನ್ನಡ ನಿಘಂಟುವಿನ ಶಾಸ್ತ್ರೀಯ ತಳಹದಿಯನ್ನು ಹಾಕಿದವರೂ ಅವರೇ.

'ಪಾಂಡಿತ್ಯ ಎಂದರೆ ವಿಷಯ ರಾಶಿಯ ಸಂಗ್ರಹವಲ್ಲ. ಆ ರಾಶಿ ಬೇಕೇ ಬೇಕು. ಆದರೆ ಅಷ್ಟೇ ಸಾಲದು. ಆ ವಿವಿಧ ವಿಷಯಗಳಲ್ಲಿ ಮರೆಯಾಗಿರುವ ಸಂಬಂಧಗಳನ್ನು ಊಹಿಸಿ ಗ್ರಹಿಸಿ ಎಳೆಗಳ ತೊಡಕುಗಳನ್ನು ಬಿಡಿಸಿ ಕೂಡಿಸಿ ತತ್ವವನ್ನು ಬೆಳಕಿಗೆ ತರುವ ಸಂಯೋಜಕ ಪ್ರತಿಭೆಯೂ ಅವಶ್ಯಕವಾಗಿ ಬೇಕು'. ಇದು ತೀ.ನಂ.ಶ್ರೀಯವರು ತಮ್ಮ ಮಿತ್ರರಾದ, ಪ್ರೊ. ಡಿ.ಎಲ್. ನರಸಿಂಹಾಚಾರ್ಯರ ಗೌರವ ಗ್ರಂಥಕ್ಕೆ ಬರೆದ ಲೇಖನದಲ್ಲಿ ನಿಜವಾದ ವಿದ್ವತ್ತಿನ ಲಕ್ಷಣವನ್ನು ನಿರ್ವಚಿಸಿದ ಬಗೆ. ಈ ಲಕ್ಷಣ ತೀ.ನಂ.ಶ್ರೀ. ಅವರ ವಿದ್ವತ್ತಿಗೂ ಯಥಾವತ್ತಾಗಿ ಅನ್ವಯಿಸುತ್ತದೆ.

'ತೀ.ನಂ.ಶ್ರೀ. ಸಮಗ್ರ ಗದ್ಯ' ಸಂಪುಟವು, ಅವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಅವರನ್ನು ಕುರಿತ ಮರುಅಧ್ಯಯನಕ್ಕೆ ಅತ್ಯಂತ ಉಪಯುಕ್ತವಾದ ಗ್ರಂಥವಾಗಿದೆ. ಇಂಥ ಒಂದು ಕೃತಿಯನ್ನು ತುಂಬ ಪ್ರೀತಿಯಿಂದ ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರಿಗೂ, ಈ ಸಂಪುಟವನ್ನು ಪ್ರಕಟಿಸಲು ಸಮ್ಮತಿಸಿದ ಪ್ರೊ. ತೀ. ಶ್ರೀ. ನಾಗಭೂಷಣ ಅವರಿಗೂ, ಈ ಕೃತಿ ಪ್ರಕಟಣೆಗೆ ಪರಿಶ್ರಮದಿಂದ ನೆರವಾದ ಪ್ರೊ. ತೀ.ನಂ. ಶಂಕರನಾರಾಯಣ ಅವರಿಗೂ ಹಾರ್ದಿಕವಾದ ಅಭಿನಂದನೆಗಳು.

ಅಕ್ಟೋಬರ್ ೨೦೦೬ **ಜಿ.ಎಸ್. ಶಿವರುದ್ರಪ್ಪ**

ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು – ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು – ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿ ಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾ ದೇವಿಯವರ ಜ್ಞಾನಶಕ್ತಿ ೨x೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು

ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದು ವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯ ದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ –

ಹಿಂದಣ ಅನಂತವನು ಮುಂದಣ ಅನಂತವನು
ಒಂದುದಿನ ಒಳಕೊಂಡಿತ್ತು ನೋಡಾ
ಒಂದುದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತ ವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ

ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

* * *

ಆಧುನಿಕ ಕನ್ನಡ ಸಾರಸ್ವತಲೋಕವನ್ನು ಶ್ರೀಮಂತಗೊಳಿಸಿದ ಪ್ರಮುಖ ಚೇತನಗಳ ಸಾಲಿನಲ್ಲಿ ಆಚಾರ್ಯ ತೀ.ನಂ.ಶ್ರೀ.ಯವರೂ ಒಬ್ಬರು. ತಮ್ಮ ಸಂಯಮಶೀಲ ಬರಹ ವಾಗ್ಮಿತೆ ವಿದ್ವತ್ಪೂರ್ಣ ಅಧ್ಯಾಪನ ಶಿಷ್ಯ ವಾತ್ಸಲ್ಯ ಗುಣಗಳಿಂದ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ತೀ.ನಂ.ಶ್ರೀ.ಯವರು ಅನನ್ಯ ರೀತಿಯಲ್ಲಿ ಬಾಳಿದವರು. ೨೦೦೬ ಅವರ ಜನ್ಮಶತಮಾನೋತ್ಸವ ವರ್ಷ. ಈ ಸಂದರ್ಭದಲ್ಲಿ ಅವರ ಸಮಗ್ರ ಗದ್ಯ ಸಾಹಿತ್ಯವನ್ನು ಪ್ರಕಟಿಸುವ ಸದವಕಾಶವನ್ನು ಪ್ರಾಧಿಕಾರಕ್ಕೆ ಒದಗಿಸಿದವರು ಗುರುಗಳಾದ ರಾಷ್ಟ್ರಕವಿ ಡಾ। ಜಿ.ಎಸ್. ಶಿವರುದ್ರಪ್ಪನವರು ಹಾಗೂ ತೀ.ನಂ.ಶ್ರೀ.ಯವರ ಸುಪುತ್ರರಾದ ಡಾ। ತೀ. ಶ್ರೀ ನಾಗಭೂಷಣ ಅವರು.

ಈ ಸಂಪುಟದಲ್ಲಿ ತೀ.ನಂ.ಶ್ರೀ.ಯವರ ಭಾರತೀಯ ಕಾವ್ಯ ಮೀಮಾಂಸೆ ಸೇರಿಲ್ಲ. ಉಳಿದಂತೆ ಅವರ ಪಂಪ, ಕಾವ್ಯ ಸಮೀಕ್ಷೆ, ಸಮಾಲೋಕನ, ನಂಟರು ಮತ್ತು ಕಾವ್ಯಾನುಭವ ಕೃತಿಗಳನ್ನು ಸೇರಿಸಲಾಗಿದೆ. ಜೊತೆಗೆ ತೀ.ನಂ.ಶ್ರೀ.ಯವರ ಕೆಲವು ಅಪ್ರಕಟಿತ ಬರಹಗಳೂ ಇಲ್ಲಿ ಸೇರಿರುವುದು ಮತ್ತೊಂದು ವಿಶೇಷ. ಗುರುಗಳಾದ ಡಾ। ಜಿ.ಎಸ್.ಎಸ್. ಅವರು ಶ್ರಮವಹಿಸಿ ತೀ.ನಂ.ಶ್ರೀ.ಯವರ ಈ ಎಲ್ಲ ಗದ್ಯ ಲೇಖನಗಳನ್ನು ವಸ್ತು ವಿಷಯಾನುಕ್ರಮದಲ್ಲಿ ಜೋಡಿಸಿ, ಒಳನೋಟವನ್ನೊಳಗೊಂಡ ಮುನ್ನುಡಿ ರೂಪದ ಎರಡು ಮಾತು ಬರೆದು ಕೊಟ್ಟಿದ್ದಾರೆ. ಅವರ ಪ್ರೀತಿ ಅಭಿಮಾನಗಳಿಗೆ ಗೌರವಪೂರ್ವಕ ನಮನಗಳು. ಸಂಪುಟ ಪ್ರಕಟಣೆಗೆ ಒಪ್ಪಿಗೆ ನೀಡಿ ಪ್ರಕಟಣೆಯ ಸಂದರ್ಭದಲ್ಲಿ ಸಹಕರಿಸಿದ ಡಾ। ತೀ.ಶ್ರೀ. ನಾಗಭೂಷಣ, ಡಾ। ತೀ.ನಂ. ಶಂಕರನಾರಾಯಣ ಹಾಗೂ ಗುರುಗಳಾದ ಡಾ। ಎಂ. ಚಿದಾನಂದಮೂರ್ತಿ ಅವರಿಗೆ ಪ್ರೀತಿಪೂರ್ವಕ ನಮನ ಗಳು ಮತ್ತು ಲಕ್ಷ್ಮೀ ಮುದ್ರಣಾಲಯದ ಎಲ್ಲ ಶ್ರಮಿಕ ಬಂಧುಗಳಿಗೆ ಕಲಾವಿದ ಗೆಳೆಯ ಎಂ.ಎಸ್. ಮೂರ್ತಿಗೆ ಆತ್ಮೀಯ ಕೃತಜ್ಞತೆಗಳು.

ಪ್ರೊ॥ ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಪರಿವಿಡಿ

ಭಾಗ ೧ : ಸಂಸ್ಕೃತ ಸಾಹಿತ್ಯ

೧. ವಾಲ್ಮೀಕಿಯ ವರ್ಣನೆಗಳು ೩
೨. ಪಾತ್ರನಿರೂಪಣೆಯಲ್ಲಿ ವ್ಯಾಸರ ದೃಷ್ಟಿ ಭಾಸನ ದೃಷ್ಟಿ ೧೩
೩. ಕಾಳಿದಾಸನ ನಾಟಕಗಳಲ್ಲಿ ದುರಂತ ವಸ್ತು ವಿನ್ಯಾಸ ೨೧
೪. 'ಶಾಕುಂತಲ'ವನ್ನು ಕುರಿತು ೫೦
೫. ಧನಂಜಯನ 'ದಶರೂಪಕ' ೫೯
೬ ಸಂಸ್ಕೃತ ಕವಿಚರಿತೆ ೬೯

ಭಾಗ ೨ : ಹಳಗನ್ನಡ ಸಾಹಿತ್ಯ

೧. ಪಂಪ ಮಹಾಕವಿ ೮೧
೨. ಪಂಪ ೮೪
೩. ಪಂಪಭಾರತದ ಕೃಷ್ಣ : ಒಂದು ಚಿಕ್ಕ ಟಿಪ್ಪಣಿ ೧೨೬
೪. 'ಗದಾಯುದ್ಧ'ವೂ ಸ್ವೀಕರಣ ವಿಚಾರವೂ ೧೩೦
೫. ದಾನಚಿಂತಾಮಣಿ ಅತ್ತಿಮಬ್ಬೆ ೧೫೪
೬ ಜನ್ನನ ಕಾವ್ಯಗಳಲ್ಲಿ ಪ್ರಣಯನಿರೂಪಣೆ ೧೬೮
೭ ಮಹಾದೇವಿಯಕ್ಕನ ಕೆಲವು ವಚನಗಳು ೧೮೬
೮. ಕನ್ನಡ ಭಾರತದಲ್ಲಿ ಶೃಂಗಾರದ ಸನ್ನಿವೇಶಗಳು ೨೦೮

ಭಾಗ ೩ : ಹೊಸಗನ್ನಡ ಸಾಹಿತ್ಯ

೧. 'ಶ್ರೀ'ಯವರ ಕೃತಿಗಳು ೨೨೭
೨. 'ಇಂಗ್ಲಿಷ್ ಗೀತಗಳು' ೨೩೩
೩. ಭಾವಗೀತ ೨೫೫
೪. 'ಗರಿ' ೨೬೧

೫. 'ಸಖೀಗೀತ' ೨೮೦
೬ 'ಅಹಲ್ಯೆ' ೨೮೬
೭ 'ಸಮುದ್ರದಾಚೆಯಿಂದ' ೩೦೦
೮. 'ಯೆಂಡ್ಕುಡ್ಕ ರತ್ನ' ೩೦೬
೯. 'ತುತ್ತೂರಿ', 'ಕಡಲೆಪುರಿ' ೩೧೧
೧೦. 'ಉಷಃಕಾಲ' ೩೧೫
೧೧. 'ಕೆರೆಗೆ ಹಾರ' ೩೨೧
೧೨. ಮಕ್ಕಳಿಗೆ ಹೇಳುವ ಕಥೆಗಳು ೩೩೦
೧೩. ಸಣ್ಣ ಕಥೆಯಲ್ಲಿ ವಾಸ್ತವಿಕತೆಯ ಸ್ಥಾನ ೩೩೮
೧೪. ಮಾಸ್ತಿ ವೆಂಕಟೇಶ ಅಯ್ಯಂಗಾರರ ಸಾಹಿತ್ಯ ವಿಮರ್ಶೆ ೩೪೪
೧೫. ತಾರಾಪ್ಯಾರಿ ೩೫೦

ಭಾಗ ೪ : ಭಾಷೆ ಮತ್ತು ಭಾಷಾವಿಜ್ಞಾನ

೧. "ಕುದುರೆ" ೩೫೭
೨. "ಮುನ್ನೀರು ಮುಂತಾಗಿ...' ೩೬೧
೩. "ಎನಿತ್ತೆನಿತ್ತಂಬುಜಪತ್ರನೇತ್ರೆಯಾ...." ೩೬೬
೪. "ಕರ್ನಾಟಕ" ಎಂಬ ರೂಪವು ಅಸಾಧುವೆ? ೩೭೫
೫. "ಗೊಮ್ಮಟ" ಶಬ್ದದ ನಿಷ್ಪತ್ತಿ – ಒಂದು ಸೂಚನೆ ೩೮೦
೬ ಉಳ್–, ಒಳಗು ೩೮೮
೭ 'ಇದೆ', 'ಇವೆ' ಮೊದಲಾದ ಕೆಲವು ಕ್ರಿಯಾರೂಪಗಳ ವಿಚಾರ ೩೯೦
೮. ಕನ್ನಡ ಭಾಷೆಯ "ಅ–" ಸ್ವನಗಳು ೪೧೦
೯. ಏನಿ–ಗಡಿಂ–ರೀ ೪೧೫
೧೦. 'ಅಮರವಾಣಿ' ೪೨೫
೧೧. ಕನ್ನಡ – ಸಂಸ್ಕೃತ : ವಾದಭೂಮಿ ೪೪೦
೧೨. ಕನ್ನಡದ ಈಗಿನ ವ್ಯಾಪ್ತಿ ೪೫೩
೧೩. ಭಾಷೆಗಳು ೪೬೪
೧೪. 'ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿ' ೪೮೫

ಭಾಗ ೫ : ಛಂದಸ್ಸು

೧.	'ಚತ್ತಾಣ' ಮತ್ತು 'ಬೆದಂಡೆ'	೪೯೭
೨.	ಕನ್ನಡದಲ್ಲಿ ಹೊಸ ಮಟ್ಟುಗಳಿಗಿರುವ ಅವಶ್ಯಕತೆ	೫೦೯
೩.	ಹೊಸ ಛಂದಸ್ಸಿನ ಲಯಗಳು	೫೧೯
೪.	ಮಾತ್ರೆ, ಮುಡಿ, ಪದ್ಮಗಣ	೫೪೨
೫.	"ಅಪೂರ್ವ" ಷಟ್ಪದಿಯ ಲಕ್ಷಣ	೫೫೯

ಭಾಗ ೬ : ಮುನ್ನುಡಿಗಳು, ಬಿಡಿ ಲೇಖನಗಳು

೧.	ರಾಜಸೇವಾಸಕ್ತ ಪ್ರೊ. ಬಿ.ಎಂ. ಶ್ರೀಕಂಠಯ್ಯನವರಿಗೆ 'ಸಂಭಾವನೆ'	೫೭೧
೨.	ಸರ್. ಎಂ. ವಿಶ್ವೇಶ್ವರಯ್ಯನವರ ೮೧ನೆಯ ಹುಟ್ಟುಹಬ್ಬ	೫೭೪
೩.	ಎಲ್.ವಿ. ರಾಮಸ್ವಾಮಿ ಅಯ್ಯರ್ ಅವರು	೫೭೬
೪.	ನಾಟಕಾವತಂಸ ಶ್ರೀಮಾನ್ ಸ್ಥಾನಂ ನರಸಿಂಹರಾಯರು	೫೭೯
೫.	ಕಾರಂತರ ಅರವತ್ತು; ಕನ್ನಡದ ಕ್ರಾಂತಿಪುರುಷ	೫೮೨
೬	ಜ್ಞಾನೋಪಾಸಕ	೫೮೪
೭	ಶೂನ್ಯ ಸಂಪಾದನೆಯನ್ನು ಕುರಿತು	೫೮೮
೮.	'ವಚನ' ಸುಂದರಿ	೫೯೨
೯.	ಉಷಾಸ್ವಪ್ನ	೫೯೪
೧೦.	ಚಿತ್ರಪರಿಚಯ; ಕುರುಡ ಭಿಕ್ಷುಕ	೫೯೬
೧೧.	ಬಡತನದ ಬಾಳು	೫೯೮
೧೨.	ಹುಟ್ಟಿದ ಹಳ್ಳಿ-ಹಳ್ಳಿಯ ಹಾಡು	೬೦೨
೧೩.	ಜಾನಪದ ಕಥನ ಗೀತೆಗಳು	೬೦೫
೧೪.	ಕಂದನ ಕಾವ್ಯಮಾಲೆ	೬೦೭
೧೫.	ಎಡ್ಮಂಡ್ ಬರ್ಕ್	೬೦೯

ಭಾಗ ೭ : ಲಲಿತ ಪ್ರಬಂಧ

೧.	ನಂಟರು	೬೧೫
೨.	ತಾರೆಗಳು	೬೧೯

೩. ಮನೆಗಳು ೬೨೨
೪. ಕಾಸಿನ ಸಂಘ ೬೨೯
೫. ನೆಗಡಿ ೬೩೮
೬ ತಗುಣೆ ೬೪೪
೭ ಮಮತೆ ೬೫೭
೮. 'ವೋಟು' ೬೫೯
೯. ಗುರುಸ್ಮರಣೆ ೬೬೧
೧೦. ಮೈಸೂರು ರಾಜ್ಯದ ವಿದ್ಯಾಭಿವೃದ್ಧಿಯಲ್ಲಿ
ಮೈಸೂರು ವಿಶ್ವವಿದ್ಯಾನಿಲಯದ ಪಾತ್ರ ೬೭೧
೧೧. ನಂದಾದೀವಿಗೆ ೬೭೮
೧೨. ವಿಶ್ವೇಶ್ವರಯ್ಯನವರ ದರ್ಶನ ೬೮೫
೧೩. ಹಿಮದರ್ಶನ ೬೯೨
೧೪. ಪ್ರವಾಸಿಯ ಪೆಟ್ಟಿಗೆಗಳು ೭೦೦
೧೫. ಪ್ರವಾಸಿ ೭೧೫
೧೬. ಪ್ರವಾಸಿಯ ಪತ್ರಗಳಿಂದ ಕೆಲವು ತುಣುಕುಗಳು ೭೩೩
೧೭. ಪ್ರವಾಸಿಯ ಪತ್ರ–ದಿನಚರಿಗಳಿಂದ ೭೪೪

ಭಾಗ ೮ : ತೀ.ನಂ.ಶ್ರೀ. ಅವರ ಪುಸ್ತಕಗಳ 'ಅರಿಕೆ'ಗಳು

೧. ಪಂಪ ೭೫೫
೨. ಕಾವ್ಯ ಸಮೀಕ್ಷೆ ೭೫೭
೩. ಸಮಾಲೋಕನ ೭೫೯
೪. ನಂಟರು ೭೬೨

ಭಾಗ ೧

ಸಂಸ್ಕೃತ ಸಾಹಿತ್ಯ

ವಾಲ್ಮೀಕಿಯ ವರ್ಣನೆಗಳು*

ವಾಲ್ಮೀಕಿ ಭರತಖಂಡದ ಆದಿಕವಿಯೆಂದು ಹಿಂದಿನಿಂದಲೂ ಹೆಸರುಗೊಂಡಿದ್ದಾನೆ. ವಾಲ್ಮೀಕಿಗಿಂತ ಮೊದಲು ಕವಿಗಳೇ ಇರಲಿಲ್ಲವೆಂದು ಈ ಉಕ್ತಿಗೆ ಅರ್ಥಮಾಡಿದರೆ ಒಪ್ಪುವುದಕ್ಕಾಗದಿದ್ದರೂ, ಭಾರತೀಯ ಕವಿ ಪರಂಪರೆಗೆಲ್ಲ ಆತನೆ ಗುರುವೆಂದು ಹೇಳಿದರೆ ತಪ್ಪಾಗಲಾರದು. ಈ ಮಹಾಕವಿಯ ಪ್ರತಿಭೆ ಅನುಭವ ತಪಸ್ಸುಗಳ ಸಾರವಾಗಿ ರೂಪುಗೊಂಡ ರಾಮಾಯಣವು ನಮ್ಮ ದೇಶದಲ್ಲಿ ಹೊಸದೊಂದು ಕಾವ್ಯಮಾರ್ಗವನ್ನೇ ತೆರೆಯಿತು. ಈಚಿನ ಕವಿಗಳಿಗೆಲ್ಲ ಆತನ ಮಹಾಕೃತಿ ಒಂದು ನಿರವಧಿಯಾದ ಆಕರ. ಅಲ್ಲಿ ಹೇಳಿರುವ ಕಥೆ ಅನೇಕ ಕಾವ್ಯನಾಟಕಗಳ ಜೀವವಸ್ತುವಾಗಿದೆ; ಅಲ್ಲಿಯ ಹಿರಿಯ ಪಾತ್ರಗಳು ಅನೇಕ ಕೃತಿಗಳ ನಾಯಕ ವ್ಯಕ್ತಿಗಳಾಗಿರುವುದು ಮಾತ್ರವಲ್ಲದೆ, ಭಾರತೀಯರ ಆರಾಧ್ಯದೇವತೆಗಳಾಗಿದ್ದಾರೆ. ಮಿಕ್ಕ ವಿಷಯ ಹಾಗಿರಲಿ. ನಮ್ಮ ಕಾವ್ಯ ಪ್ರಪಂಚದಲ್ಲಿ ವಿಪುಲವಾಗಿ ಬರುವ ವರ್ಣನೆಗಳಿಗೆ ಕೂಡ ವಾಲ್ಮೀಕಿಯೇ ಮಾದರಿಯನ್ನು ಒದಗಿಸಿ ಕೊಟ್ಟನೆಂದು ತೋರುತ್ತದೆ. ಈಚಿನ ಅನೇಕ ಕಾವ್ಯಗಳಲ್ಲಿನ ಚರ್ವಿತಚರ್ವಣಗಳ ಅಸಾರತೆಯನ್ನೂ ಚಮತ್ಕಾರಗಳ ಕೃತಕತೆಯನ್ನೂ ಕಂಡು ವರ್ಣನೆಗಳೆಂದರೆ ಸಹೃದಯರು ಮುಖ ತಿರುಗಿಸಿಕೊಳ್ಳುವುದು

---

* 'ಜನಪ್ರಗತಿ' ವಿಶೇಷ ಸಂಚಿಕೆ, ಬೆಂಗಳೂರು, ೧೯೫೧.

ಅಸಹಜವಲ್ಲ. ಆದರೆ ಈಚಿನ ಹಲವರ ಪ್ರತಿಭಾದಾರಿದ್ರ್ಯಕ್ಕೂ ಔಚಿತ್ಯಜ್ಞಾನ ಶೂನ್ಯತೆಗೂ ವಾಲ್ಮೀಕಿಯಲ್ಲ ಹೊಣೆ. ಆತನ ವರ್ಣನೆಗಳ ರುಚಿಯನ್ನೂ ಕಲ್ಪನೆಗಳ ನವೀನತೆಯನ್ನೂ ಒಂದೆರಡು ನಿದರ್ಶನಕೊಟ್ಟು ಪರಿಚಯ ಮಾಡಿಕೊಡಬೇಕೆಂಬುದು ಪ್ರಕೃತೋದ್ದೇಶ.

ವರ್ಣನೆಯೆಂದರೆ ಪ್ರಕೃತಿಯ ನೆನಪು ಮೊದಲು ಬರುತ್ತದೆ. ವಾಲ್ಮೀಕಿಗೆ ಗಿರಿ ನದಿ ವನಗಳೆಂದರೆ ಹೆಣ್ಣುಮಗಳಿಗೆ ತೌರೂರು ಇದ್ದಂತೆ. ಆತನು ಪ್ರಕೃತಿಯ ಮಡಿಲಲ್ಲಿ ಬೆಳೆದವನು; ಅಲ್ಲಿಯೇ ಆಶ್ರಮ ಕಟ್ಟಿಕೊಂಡು ವಾಸಮಾಡಿದವನು. ಬೆಟ್ಟದ, ಬನದ, ಮರದ ಪ್ರತಿಯೊಂದು ಮುಖದಲ್ಲೂ ಸೊಗಸನ್ನು ಕಂಡು ಸವಿದವನು. ರಾಮಚಂದ್ರನು ಅಯೋಧ್ಯೆಯನ್ನು ತೊರೆದು ಚಿತ್ರಕೂಟಕ್ಕೆ ಬರುವುದನ್ನೇ ವಾಲ್ಮೀಕಿ ಕಾದಿದ್ದನೆಂದು ತೋರುತ್ತದೆ. ಹಿಂದೆಲ್ಲ ನಗರವನ್ನು, ಉಪ್ಪರಿಗೆಯನ್ನು, ಅಂಗಡಿ ಬೀದಿಯನ್ನು, ಅರಮನೆಯನ್ನು ವರ್ಣಿಸಿ ಆಗಿತ್ತು. ಇನ್ನು ಮುಂದೆ ತನಗೆ ಪರಮಪ್ರಿಯವಾದ ಪ್ರಕೃತಿಯ ಸೊಗಸನ್ನು ವಿಷಯಕ್ಕೆ ಅನುಗುಣವಾಗುವಂತೆ ವಾಲ್ಮೀಕಿ ವರ್ಣಿಸಲು ತೊಡಗುತ್ತಾನೆ. ಚಿತ್ರಕೂಟಗಿರಿಯನ್ನು ಸೀತೆಗೆ ದರ್ಶನಮಾಡಿಸುವ ರಾಮನನ್ನು ಕವಿ "ಗಿರಿವನಪ್ರಿಯ" ಎಂದು ಕರೆದಿದ್ದಾನೆ. ರಾಮನು ಮಾತ್ರವಲ್ಲ, ವಾಲ್ಮೀಕಿಯೂ ಗಿರಿವನಪ್ರಿಯನೇ. ಅದಕ್ಕೇ ಈ ವರ್ಣನೆಗಳಲ್ಲಿ ಅವನಿಗೆ ಅಷ್ಟು ಉತ್ಸಾಹ, ತಲ್ಲೀನತೆ.

ಚಿತ್ರಕೂಟಕ್ಕೆ ಬಂದಾಗ ರಾಮನು ರಾಜ್ಯವನ್ನು ಬಿಟ್ಟಿದ್ದನು, ಬಂಧುಗಳನ್ನು ಅಗಲಿದ್ದನು. ಆದರೂ ರಮಣೀಯವಾದ ಆ ಗಿರಿಯನ್ನು ನೋಡಿ, ರಾಮನ ಮನಸ್ಸನ್ನು ಆ ವ್ಯಥೆ ಬಾಧಿಸುವುದು ನಿಂತುಹೋಯಿತಂತೆ :

'ನ ರಾಜ್ಯಭ್ರಂಶನಂ ಭದ್ರೇ ನ ಸುಹೃದ್ಭಿರ್ವಿನಾಭವಃ ।
ಮನೋ ಮೇ ಬಾಧತೇ ದೃಷ್ಟ್ವಾ ರಮಣೀಯಮಿಮಂ ಗಿರಿಂ' ॥

ಎಂದು ಸೀತೆಗೆ ರಾಮನು ಹೇಳುತ್ತಾನೆ. ಅಷ್ಟೇ ಅಲ್ಲ; ಅವನು ಇದಕ್ಕೂ ಒಂದು ಹೆಜ್ಜೆ ಮುಂದೆ ಹೋಗುತ್ತಾನೆ :

ದರ್ಶನಂ ಚಿತ್ರಕೂಟಸ್ಯ ಮಂದಾಕಿನ್ಯಾಶ್ಚ ಶೋಭನೇ ।
ಅಧಿಕಂ ಪುರವಾಸಾಚ್ಚ ಮನ್ಯೇ ತವ ಚ ದರ್ಶನಾತ್ ॥

"ಓ ಶೋಭನೆ, ಚಿತ್ರಕೂಟದ ದರ್ಶನವನ್ನೂ ಮಂದಾಕಿನೀ ನದಿಯ ದರ್ಶನವನ್ನೂ ನಗರವಾಸಕ್ಕಿಂತ, ಅಷ್ಟೇ ಏಕೆ, ನಿನ್ನ ದರ್ಶನಕ್ಕಿಂತ ಕೂಡ, ಹೆಚ್ಚಿನದೆಂದು ನಾನು ಭಾವಿಸುತ್ತೇನೆ." ಗಿರಿನದಿಗಳ ನೋಟವಿದ್ದರೆ ಪ್ರಿಯೆಯ ಅಗಲಿಕೆಯನ್ನೂ ಗಣಿಸುವುದಿಲ್ಲವೆಂದು ರಾಮನು ಆಡಿದ ಪ್ರಕೃತಿಪ್ರೇಮದ ಮಾತಿಗೆ ಘೋರಪರೀಕ್ಷೆ ಕೆಲವು ಕಾಲದಲ್ಲೇ ಒದಗಿತು. ಭರತನ ಅಲೌಕಿಕವಾದ ಭಕ್ತಿಯನ್ನು ಕಂಡು ಅದರಿಂದ ರಾಮನು ಮನಗರಗಿದ್ದನು; ಇಂಥ ಸಹೋದರನ ವಿಯೋಗದ ಜೊತೆಗೆ ಸೀತಾಪ ಹರಣದ ಸಿಡಿಲೂ ಬಡಿದು ರಾಮನು ಇನ್ನಷ್ಟು ಬೆಂದುಹೋಗಿದ್ದನು. ಸೀತೆಯನ್ನು

ಹುಡುಕಿಕೊಂಡು ರಾಮಲಕ್ಷ್ಮಣರು ಪಂಪಾತೀರಕ್ಕೆ ಬರುತ್ತಾರೆ. ಪಂಪಾಸರೋವರದ ನೀರು ವೈಡೂರ್ಯದಂತೆ ನಿರ್ಮಲ, ಅಲ್ಲಿಯ ವೃಕ್ಷಗಳು ಶಿಖರವೆತ್ತಿದ ಗಿರಿಗಳಷ್ಟು ಉನ್ನತ. ಇದನ್ನು ಕಂಡಾಗ, ರಾಮನ ಮನಸ್ಸು ಶೋಕದಿಂದ ಕುದಿಯುತ್ತಿದ್ದರೂ ಆ ವನಸ್ಥಲದ ಸೊಬಗನ್ನು ಸವಿಯಿತಂತೆ :

> 'ಭರತಸ್ಯ ಚ ದುಃಖೇನ ವೈದೇಹ್ಯಾ ಹರಣೇನ ಚ ।
> ಶೋಕಾರ್ತಸ್ಯಾಪಿ ಮೇ ಪಂಪಾ ಶೋಭತೇ ಚಿತ್ರಕಾನನಾ' ॥

ಹೀಗೆಂದು ಹೇಳುವಷ್ಟು ರಸಜ್ಞ ರಾಮ !

ಪಂಪಾವರ್ಣನೆ ಕಿಷ್ಕಿಂಧಾಕಾಂಡದ ಮೊದಲನೆಯ ಸರ್ಗದಲ್ಲಿ ವಿಸ್ತಾರವಾಗಿ ಬಂದಿದೆ. ಕಾವ್ಯದಲ್ಲಿ ವರ್ಣನೆ ಯಾವ ರೀತಿಯಲ್ಲಿ ಬಂದರೆ ತನ್ನ ಸೊಗಸನ್ನೂ ಕಾವ್ಯದ ಸೊಗಸನ್ನೂ ಒಟ್ಟಿಗೆ ಪೋಷಿಸುವುದೆಂಬುದಕ್ಕೆ ಇದೊಂದು ಉತ್ತಮ ನಿದರ್ಶನ. ಇಲ್ಲಿಯ ನಿರೂಪಣೆಯೆಲ್ಲವೂ ರಾಮನ ಮುಖದಿಂದಲೇ ಬರುತ್ತದೆ. ಸೀತಾವಿರಹದ ಸಂತಾಪವು ತನ್ನ ಜೀವವನ್ನೇ ದಹಿಸುತ್ತಿದ್ದರೂ ರಾಮನು ತನ್ನ ಮುಂದಿರುವ ರಮ್ಯತೆಯನ್ನು ಲಕ್ಷ್ಮಣನಿಗೆ ಬೆರಳುನೀಡಿ ತೋರಿಸುತ್ತಿದ್ದಾನೆ. ಎಳಹಸುರು ಗರಿಕೆ, ಬಳ್ಳಿತಬ್ಬಿದ ಮರಗಳು, ಅವುಗಳಿಂದ ಉದುರಿದ ಮತ್ತು ಉದುರುತ್ತಿರುವ ಹೂವುಗಳು, ಕಂದರಗಳಿಂದ ಹೊರಸೂಸಿ ಹಿತವಾಗಿ ಬೀಸುತ್ತಿರುವ ತಂಗಾಳಿ, ಈ ತಂಗಾಳಿಗೆ ತೂಗುತ್ತಿರುವ ರೆಂಬೆಗಳು, ಅವುಗಳಲ್ಲಿ ಝೇಂಕರಿಸುತ್ತಿರುವ ದುಂಬಿಗಳು, ಧ್ವನಿಗೈಯುತ್ತಿರುವ ಕೋಗಿಲೆಗಳು–ಎಲ್ಲವನ್ನೂ ರಾಮನು ತೋರಿಸುತ್ತಾನೆ. ರಾಮನು ಕವಿದೃಷ್ಟಿಯಿಂದಲೂ ಈ ದೃಶ್ಯವನ್ನು ಪರಿಭಾವಿಸಬಲ್ಲನು :

> ಪುಷ್ಪಸಂಛನ್ನ ಶಿಖರಾಃ ಮಾರುತೋತ್ಕ್ಷೇಪಚಂಚಲಾಃ ।
> ಅಮೀ ಮಧುಕರೋತ್ತಂಸಾಃ ಪ್ರಗೀತ ಇವ ಪಾದಪಾಃ ॥
> ಸುಪುಷ್ಪಿತಾಂಸ್ತು ಪಶ್ಯೇಮಾನ್ ಕರ್ಣಿಕಾರಾನ್ ಸಮಂತತಃ ।
> ಹಾಟಕಪ್ರತಿಸಂಛನ್ನಾನ್ ನರಾನ್ ಪೀತಾಂಬರಾನಿವ ॥

"ಮುಡಿಯ ತುಂಬ ಪುಷ್ಪಗಳನ್ನು ತಳೆದು ಗಾಳಿಕೆ ಅತ್ತಿತ್ತ ಒಲೆದಾಡಿ, ಭ್ರಮರಗಳಿಂದ ಇಂಬುಗೊಂಡ ಈ ವೃಕ್ಷಗಳು ಹಾಡುವ ಗಾಯಕರಂತೆ ತೋರುತ್ತಿವೆ. ಚೆನ್ನಾಗಿ ಹೂವುಬಿಟ್ಟ ಈ ಕರ್ಣಿಕಾರಗಳನ್ನು ನೋಡು, ಲಕ್ಷ್ಮಣ; ಸರಿಗೆಯೆಳೆಗಳಿಂದ ಹುದಿದ ಪೀತಾಂಬರವನ್ನು ಧರಿಸಿರುವ ಪುರುಷರಂತೆ ಕಾಣಿಸುತ್ತಿವೆ." ಈ ಸೌಂದರ್ಯದ ಪರಿಭಾವನೆಯಲ್ಲಿ ತನ್ನ ಪರಿತಾಪವನ್ನು ಮರೆಯುವೆನೆಂದು ರಾಮನು ಎಣಿಸಿದ್ದನೇನೋ. ಈ ರಮ್ಯತೆಯೇ ಅವನ ದುಃಖವನ್ನು ಕೆರಳಿಸಿತು :

> ಅಶೋಕಸ್ತಬಕಾಂಗಾರಃ ಷಟ್ಪದಸ್ವನನಿಃಸ್ವನಃ ।
> ಮಾಂ ಹಿ ಪಲ್ಲವತಾಮ್ರಾರ್ಚಿರ್ವಸಂತಾಗ್ನಿಃ ಪ್ರಧಕ್ಷ್ಯತಿ ॥

ಅಶೋಕಪುಷ್ಪದ ಗೊಂಚಲುಗಳು ಕೆಂಡವಾಗಿ, ಭ್ರಮರಗಳ ಮೊರೆತ ಸೂಸೂ ಶಬ್ದವಾಗಿ, ಕೆಂಪುಚಿಗುರು ಜ್ವಾಲೆಯಾಗಿ, ವಸಂತಾಗ್ನಿ ರಾಮನನ್ನು ಸುಡತೊಡಗಿತು.

ಕಾನನಗಳನ್ನು ಸೊಗಸುಗೊಳಿಸುವ ವಸಂತವು ಸೀತೆಗೆ ಮೆಚ್ಚಿನ ಋತು. ಈಗಲಾದರೋ ಅವಳು ಕಾಣಿಸದೆ, ರಮ್ಯವಾದ ವೃಕ್ಷಗಳು ಮಾತ್ರ ಕಾಣಿಸಿ, ರಾಮನ ಸಂತಾಪ ಅಧಿಕವಾಗುತ್ತಿದೆ. ಇತ್ತ ಗಂಡುನವಿಲು ನರ್ತಿಸುತ್ತಿರಲು ಮೋಹಗೊಂಡ ಹೆಣ್ಣುನವಿಲು ಅದಕ್ಕೆ ಅಭಿಮುಖವಾಗುತ್ತಿದೆ. ಸೀತೆ ಅಪಹೃತೆಯಾಗದಿದ್ದರೆ ಅವಳು ಹೀಗೆಯೇ ಪ್ರೇಮದಿಂದ ಅಭಿಮುಖಿಯಾಗುತ್ತಿದ್ದಳು. ಅದೋ, ಪಂಪಾಸರೋವರದ ಜಲದಲ್ಲಿ ಪರಿಮಳಿತವಾದ ಕಮಲಗಳು ಬಾಲ್ಯಸೂರ್ಯನಂತೆ ಕಂಗೊಳಿಸುತ್ತಿವೆ. ತಿಳಿನೀರಿನಲ್ಲಿ ಗಾಳಿಗೆ ಎದ್ದ ಅಲೆಗಳು ಈ ಪದ್ಮಗಳಿಗೆ ಬಂದು ತಾಗಿ ಅವುಗಳ ಕಳೆಯನ್ನು ಏರಿಸುತ್ತಿವೆ. ಈ ಪದ್ಮಗಳನ್ನು ಮೆಚ್ಚಿದ್ದ ಪದ್ಮಪತ್ರ ವಿಶಾಲಾಕ್ಷಿ ಸೀತೆ ಮಾತ್ರ ಇಲ್ಲಿ ಇಲ್ಲ. ಅವಳನ್ನು ಕಾಣದೆ ರಾಮನಿಗೆ ಜೀವವೇ ಬೇಡವಾಗಿದೆ. ಉದ್ದಕ್ಕೂ ಹೀಗೆಯೇ. ಒಂದು ವಾಕ್ಯದಲ್ಲಿ ಸಂಗ್ರಹಿಸುವುದಾದರೆ,

> ಯಾನಿ ಸ್ಮ ರಮಣೀಯಾನಿ ತಸ್ಯಾ ಸಹ ಭವಂತಿ ಮೇ ।
> ತಾನ್ಯೇವಾರಮಣೀಯಾನಿ ಜಾಯಂತೇ ಮೇ ತಯಾ ವಿನಾ ॥

"ಅವಳ ಸಹವಾಸದಲ್ಲಿ ಯಾವುವೆಲ್ಲ ನನಗೆ ಸೊಗಸುತ್ತಿದ್ದವೋ ಅವೇ ಈಗ ಅವಳಿಲ್ಲದೆ ನನಗೆ ಸೊಗಸದವಾಗಿವೆ."

ಇದೇ ಇಲ್ಲಿಯ ವರ್ಣನೆಯ ಸ್ವಾರಸ್ಯ. ಕಾವ್ಯದಲ್ಲಿ ವರ್ಣನೆಗೆ ಉನ್ನತವಾದ ಸ್ಥಾನವುಂಟು. ವಸ್ತುಗಳಲ್ಲಿ ಹುದುಗಿರುವ ಸೌಂದರ್ಯಸಾರವನ್ನು ಎತ್ತಿ ತೋರಿಸುವ ಕವಿಯ ಸೂಕ್ಷ್ಮದೃಷ್ಟಿ ಗೋಚರವಾಗುವುದು ವರ್ಣನೆಯಲ್ಲಿ; ಅವನ ಕಲ್ಪನೆ ಗರಿಗೆದರಿ ಹಾರುತ್ತಾ, ಹೊಸ ಹೊಸ ಆಕೃತಿಗಳನ್ನು ನಿರ್ಮಿಸಿ ನೆಲದ ಮೇಲಾಗಲಿ ಜಲದ ಮೇಲಾಗಲಿ ಹಿಂದೆಂದೂ ಕಾಣದ ಮಿಂಚಿನ ಮೆರುಗನ್ನು ಎಲ್ಲಕ್ಕೂ ಲೇಪಿಸುವುದು ವರ್ಣನೆಯಲ್ಲಿ. ಆದರೆ ಈ ವರ್ಣನೆಗಳು ಕಥೆಯ ಅಥವಾ ಪಾತ್ರಗಳ ಹಂಗನ್ನೇ ಕೋರದೆ ಸ್ವಚ್ಛಂದವಾಗಿ ಬಂದು ಹವಣುಮೀರಿದ ಸ್ಥಾನವನ್ನು ಆಕ್ರಮಿಸಿದರೆ, ಕವಿಯ ಪ್ರತಿಭೆ ಎಷ್ಟೇ ಪ್ರಖರವಾಗಿದ್ದರೂ, ಅವು ಸಹೃದಯನಿಗೆ ಆನಂದವನ್ನು ಕೊಡುವ ಬದಲು ಉದ್ವೇಗವನ್ನು ಉಂಟುಮಾಡುತ್ತವೆ. ಕಾವ್ಯದ ಜೀವವು ರಸ. ಈ ರಸಕ್ಕೆ ಪೋಷಕವಾಗಿ ಬಂದಾಗಲೇ ವರ್ಣನೆಗಳು ಸಾರ್ಥಕವಾಗುವುದು; ಅವುಗಳ ರುಚಿ ಇಮ್ಮಡಿಸುವುದು.

ರಾಮಾಯಣದ ಪ್ರಧಾನರಸವು ಕರುಣವೆಂದು ಎಲ್ಲರೂ ಬಲ್ಲರು. ವ್ಯಾಧನ ಬಾಣಕ್ಕೆ ತುತ್ತಾಗಿ ಮಡಿದ ತನ್ನ ಪ್ರಿಯನಿಗಾಗಿ ಆಕ್ರಂದನಮಾಡುತ್ತಿದ್ದ ಕ್ರೌಂಚಪಕ್ಷಿಯ ಶೋಕವೇ ರಾಮಾಯಣಕ್ಕೆ ಆದಿಯಾಯಿತು. ರಾಮ, ಸೀತೆ, ದಶರಥ, ಭರತ–ಹೀಗೆ ಹಲವು ಪಾತ್ರಗಳ ಶೋಕವೇ ರಾಮಾಯಣದ ನೆಲೆಗಟ್ಟು : ಈ ಶೋಕಸ್ಥಾಯಿಯೇ ಕವಿಯ ಪ್ರತಿಭಾಬಲದಿಂದ ಶ್ಲೋಕವಾಗಿ ಪರಿಣಮಿಸಿ ರಾಮಾಯಣದಲ್ಲಿ ಕರುಣರಸವಾಹಿನಿ ಮಡುಗಟ್ಟಿ ಹರಿದಿರುವುದು. ಭಾರತೀಯ ಕವಿಗಳಿಗೆ ಆದಿಗುರುವಾದ ವಾಲ್ಮೀಕಿ ವರ್ಣನೆಗಳನ್ನು ಹೇಗೆ ರಸಪೋಷಕವಾಗುವಂತೆ ಅಳವಡಿಸಬೇಕೆಂದು ಮೇಲಿನ

ವಸಂತವರ್ಣನೆಯಲ್ಲಿರುವಂತೆ ನಿದರ್ಶಿಸುವುದರಲ್ಲೂ ಆದಿಗುರುವಾಗಿದ್ದಾನೆ. (ಆದರೆ ಅನೇಕ ಮಂದಿ ಈಚಿನ ಕವಿಗಳು ಆತನ ಮೇಲ್ಪಂಕ್ತಿಯನ್ನು ಈ ಭಾಗದಲ್ಲಿ ಅನುಸರಿಸಲಿಲ್ಲ, ಅಷ್ಟೆ)

ಇನ್ನು ವರ್ಣನೆಗಳ ಕಡೆಗೇ ನೇರವಾಗಿ ತಿರುಗೋಣ. ಈಗಾಗಲೇ ನೋಡಿರುವ ವಸಂತಋತುವಿನ ಚಿತ್ರಗಳ ಜೊತೆಗೆ ಇನ್ನೂ ಒಂದೆರಡನ್ನು ಪರಿಶೀಲಿಸೋಣ. ವಸಂತಕಾಲದಲ್ಲಿ ಮುತ್ತುಗದ ಮರಗಳಲ್ಲಿ ಎಲೆಗಳೆಲ್ಲ ಉದುರಿಹೋಗಿ ನಿಗಿನಿಗಿ ಕೆಂಡದಂತೆ ಕೆಂಪು ಹೂಗಳು ತುಂಬಿ ವನಪ್ರದೇಶದಲ್ಲಿ ಯಾರ ಕಣ್ಣನ್ನಾದರೂ ಕುಕ್ಕುತ್ತವೆ. ಮೊದಲ ಬಾರಿ ನೋಡಿದಾಗ ಇವು ಮುತ್ತುಗದ ಮರಗಳೆಂದು ನಂಬುವುದೂ ಕಷ್ಟವಾಗುತ್ತದೆ. ವಾಲ್ಮೀಕಿಯ ಮನಸ್ಸನ್ನು ಈ ಮುತ್ತುಗದ ಹೂಗಳು ಸೂರೆಗೊಂಡಿವೆ. ಅವುಗಳ ಉಲ್ಲೇಖ ಅವನ ವರ್ಣನೆಗಳಲ್ಲಿ ಮತ್ತೆ ಮತ್ತೆ ಗೋಚರಿಸುತ್ತದೆ :

ಗಿರಿಪ್ರಸ್ಥಾಸ್ತು ಸೌಮಿತ್ರೇ ಸರ್ವತಃ ಸಂಪ್ರಪುಷ್ಪಿತೈಃ ।
ನಿಷ್ಪತ್ರೈಃ ಸರ್ವತೋ ರಮ್ಯೈಃ ಪ್ರದೀಪ್ತಾ ಇವ ಕಿಂಶುಕೈಃ ॥

"ಚೆನ್ನಾಗಿ ತುಂಬ ಹೂವು ಬಿಟ್ಟು, ಎಲೆಯೊಂದೂ ಇಲ್ಲದ ರಮ್ಯವಾದ ಮುತ್ತುಗದ ಮರಗಳಿಂದ ಬೆಟ್ಟದ ತಪ್ಪಲುಗಳು ಎತ್ತೆತ್ತಲೂ ಉರಿ ಹೊತ್ತಿಸಿದಂತೆ ಕಂಗೊಳಿಸುತ್ತಿವೆ." – ಈ ಚಿತ್ರ ಎಷ್ಟು ನಿಜವೆಂಬುದನ್ನು ಮಲೆನಾಡಿನ ಅನುಭವವುಳ್ಳವರೆಲ್ಲರೂ ಬಲ್ಲರು.

ಇದಂ ಮೃಷ್ಟಮಿದಂ ಸ್ವಾದು ಪ್ರಫುಲ್ಲಮಿದಮಿತ್ಯಪಿ ।
ರಾಗಮತ್ತೋ ಮಧುಕರಃ ಕುಸುಮೇಷ್ವೇವ ಲೀಯತೇ ॥
ನಿಲೀಯ ಪುನರುತ್ಪತ್ಯ ಸಹಸಾನ್ಯತ್ರ ಗಚ್ಛತಿ ।
ಮಧುಲುಬ್ಧೋ ಮಧುಕರಃ ಪಂಪಾತೀರದ್ರುಮೇಷ್ವಸೌ ॥

"ಇದು ಸವಿ, ಇದು ಸಿಹಿ, ಇದು ಅರಳಿದೆ – ಹೀಗೆನ್ನುತ್ತಾ ರಾಗದಿಂದ ಸೊಕ್ಕಿದ ದುಂಬಿ ಹೂವುಗಳಲ್ಲೇ ಅಡಗಿಬಿಡುತ್ತದೆ; ಹಾಗೆ ಅಡಗಿ ಮತ್ತೆ ನೆಗೆದು ಥಟ್ಟನೆ ಇನ್ನೊಂದು ಕಡೆಗೆ ಸಾಗುತ್ತದೆ, ಪಂಪಾತೀರದ ಮರಗಳಲ್ಲಿ ಮಧು ಲೋಲುಪವಾದ ಈ ದುಂಬಿ." ಚಂಚಲನಾದ ರಸಿಕನ ಚಿತ್ರ ಇಲ್ಲಿ ಚೆನ್ನಾಗಿ ಬಂದಿದೆ.

ಹಿಮಾಂತೇ ಪಶ್ಯ ಸೌಮಿತ್ರೇ ವೃಕ್ಷಾಣಾಂ ಪುಷ್ಪಸಂಭವಂ ।
ಪುಷ್ಪಮಾಸೇ ಹಿ ತರವಃ ಸಂಘರ್ಷಾದಿವ ಪುಷ್ಪಿತಾಃ ।
ಆಹ್ವಯಂತ ಇವಾನ್ಯೋನ್ಯಂ ನಗಾಃ ಷಟ್ಪದನಾದಿತಾಃ ॥
ಕುಸುಮೋತ್ತಂಸವಿಟಪಾಃ ಶೋಭಂತೇ ಬಹು ಲಕ್ಷ್ಮಣ ॥

"ಹಿಮಕಾಲ ಮುಗಿಯಲಾಗಿ ವೃಕ್ಷಗಳು ಹೂತಿರುವುದನ್ನು ನೋಡು, ಲಕ್ಷ್ಮಣ. ಈ ಹೂವಿನ ತಿಂಗಳಿನಲ್ಲಿ ಮರಗಳು ಹುರುಡಿನಿಂದ ಹೂವು ಬಿಟ್ಟಂತೆ ಇವೆ. ಬೆಟ್ಟಗಳು ದುಂಬಿಗಳ ನಾದದಿಂದ ಕೂಡಿ ಒಂದನ್ನೊಂದು ಸ್ಪರ್ಧೆಗೆ ಕರೆಯುವಂತೆ ಇವೆ.

(ಯಾವುದರಲ್ಲಿ ಹೂವು ಹೆಚ್ಚು, ಯಾವುದರಲ್ಲಿ ಹೂವು ಮೊದಲು ಎಂದೇ ಈ ಸ್ಪರ್ಧೆ ಇರಬೇಕು!) ಹೂವು ಮುಡಿದ ಈ ವೃಕ್ಷಗಳು ಬಹು ರಮಣೀಯವಾಗಿವೆ, ಲಕ್ಷ್ಮಣ."

ಹೂವು, ದುಂಬಿ, ಮರ, ಬೆಟ್ಟ – ಇವುಗಳ ವಿಷಯವನ್ನು ಮತ್ತೆಮತ್ತೆ ಎತ್ತುವುದರಲ್ಲಿ ವಾಲ್ಮೀಕಿಗೆ ಬೇಸರವೇ ಇಲ್ಲ. ಆದರೆ ತನ್ನ ಕಲ್ಪನೆಯ ಮಹಿಮೆಯಿಂದ ನಮಗೂ ಅವು ಬೇಸರಕೊಡದಂತೆ, ಉಲ್ಲಾಸವನ್ನೇ ನೀಡುವಂತೆ ಈ ಮಹಾಕವಿ ರಚಿಸಿದ್ದಾನೆ. ಮೇಲಿನ ಪದ್ಯಗಳಲ್ಲಿ ಹಿತವಾದ ಉತ್ಪ್ರೇಕ್ಷೆ ಬಂದಿರುವುದರಿಂದ ವರ್ಣನೆಗೆ ಜೀವಕಳೆಯುಂಟಾಗಿದೆ.

ವಸಂತ ಮಾತ್ರವಲ್ಲ. ಕಾವ್ಯದ ಬೇರೆ ಬೇರೆ ಕಡೆಗಳಲ್ಲಿ ಸಮಯೋಚಿತವಾಗಿ ಬಂದಿರುವ ಮಿಕ್ಕ ಋತುಗಳ ವರ್ಣನೆಯಲ್ಲೂ ವಾಲ್ಮೀಕಿಯ ಉಜ್ಜ್ವಲ ದೃಷ್ಟಿ ಚೆನ್ನಾಗಿ ಗೋಚರವಾಗುತ್ತದೆ. ಇದು ಮಳೆಗಾಲದ ವರ್ಣನೆಯ ಒಂದು ಪದ್ಯ :

ಕಶಾಭಿರಿವ ಹೈಮಾಭಿಃ ವಿದ್ಯುದ್ಭಿರಿವ ತಾಡಿತಂ ।
ಅಂತಃಸ್ತನಿತನಿರ್ಘೋಷಂ ಸವೇದನಮಿವಾಂಬರಂ ॥

"ಚಿನ್ನದ ಚಾವಟಿಗಳಂತಿರುವ ಮಿಂಚುಗಳು ಹೊಡೆದುವೊ ಎಂಬಂತೆ ಆಕಾಶವು ಒಳಗುಡುಗಿನ ಮೊರೆಯಿಡುತ್ತಾ ನೋವಿನಿಂದ ನರಳುವಂತಿದೆ."

ಶರತ್ಕಾಲವನ್ನು ಕುರಿತ ಕೆಳಗಿನ ಪದ್ಯದ ಸೊಗಸು ಬೇರೊಂದು ರೀತಿಯದು :

ಲೋಕಂ ಸುವೃಷ್ಟ್ಯಾ ಪರಿತೋಷಯಿತ್ವಾ
ನದೀಸ್ತಟಾಕಾನಿ ಚ ಪೂರಯಿತ್ವಾ ।
ನಿಷ್ಪನ್ನಸಸ್ಯಾಂ ವಸುಧಾಂ ಚ ಕೃತ್ವಾ
ತ್ಯಕ್ತ್ವಾ ನಭಸ್ತೋಯಧರಾಃ ಪ್ರನಷ್ಟಾಃ ॥

ಹೇರಳದ ಮಳೆಗರೆದು ಲೋಕವನು ತಣಿಸಿ
ಹೊಳೆಗಳಲಿ ಕೆರೆಗಳಲಿ ಜಲವ ತುಂಬಿರಿಸಿ
ಅಂತೆ ಧರಣಿಯೊಳೆಲ್ಲ ಪಯಿರುಗಳ ಬೆಳಸಿ
ತೊರೆದು ನಭವನು ಮುಗಿಲು ಲಯವಾದುವು.

ಇಲ್ಲಿ ಕವಿ ತಿಳಿಸಿರುವುದು ಕೇವಲ ವಸ್ತುಸ್ಥಿತಿ; ಆದರೆ ಇದೊಂದು ಧ್ವನಿ ಪೂರ್ಣವಾದ ಅನ್ಯೋಕ್ತಿ. ಲೋಕೋಪಕಾರವನ್ನು ಅತಿಶಯವಾಗಿ ಮಾಡಿ, ತಮ್ಮ ಕೆಲಸ ಮುಗಿದ ಕೂಡಲೆ, ನೆಲೆಸಿಕ್ಕದಂತೆ ಮರೆಯಾಗುವ ಅಪೂರ್ವ ಮಹಾಪುರುಷರ ಕಡೆಗೆ ಈ ವರ್ಣನೆ ಬೆರಳುನೀಡಿ ತೋರಿಸುತ್ತಿದೆ.

ಅರಣ್ಯಕಾಂಡದಲ್ಲಿ ಬರುವ ಹೇಮಂತದ ವರ್ಣನೆಯಲ್ಲಿ ಕವಿಯ ಉತ್ಕೃಷ್ಟ ಪ್ರತಿಭೆ ಮೈದೋರಿದೆ :

ಜ್ಯೋತ್ಸ್ನಾ ತುಷಾರಮಲಿನಾ ಪೌರ್ಣಮಾಸ್ಯಾ ನ ರಾಜತೇ ।
ಸೀತೇವ ಚಾತಪಶ್ಯಾಮಾ ಲಕ್ಷ್ಯತೇ ನ ತು ಶೋಭತೇ ॥

"ಬೆಳುದಿಂಗಳು ಹಿಮದಿಂದ ಮಂಕಾಗಿ ಹುಣ್ಣಿಮೆಯಂದು ಬೆಳಗುತ್ತಿಲ್ಲ; ಬಿಸಿಲಿಗೆ ಕಂದಿದ ಸೀತೆಯಂತೆ ಅದು ಗೋಚರವೇನೋ ಆಗುತ್ತಿದೆ, ಆದರೆ ಶೋಭಿಸುತ್ತಿಲ್ಲ." ಇದನ್ನು ಹೇಳುತ್ತಿರುವವನು ಲಕ್ಷ್ಮಣ. ಕಾಡಿನಲ್ಲಿ ತಮ್ಮ ಜೊತೆಗೆ ಬಿಸಿಲಲ್ಲಿ ಅಲೆದಾಡುತ್ತಿರುವ ಅತ್ತಿಗೆಯ ವಿಷಯದಲ್ಲಿ ಲಕ್ಷ್ಮಣನ ಅನುಕಂಪ ಹೀಗೆ ಪ್ರಾಸಂಗಿಕವಾಗಿ, ಸೂಚಿತವಾಗಿ ಮಂಕಾದ ಬೆಳುದಿಂಗಳ ವರ್ಣನೆಗೆ ಅಪೂರ್ವವಾದ ಮಿರುಗನ್ನು ಕೊಟ್ಟಿದೆ.

ಕೊನೆಯದಾಗಿ ಒಂದು ಸ್ವಭಾವಚಿತ್ರ :

ಏತೇ ಹಿ ಸಮುಪಾಸೀನಾಃ ವಿಹಗಾ ಜಲಚಾರಿಣಃ ।
ನಾವಗಾಹಂತಿ ಸಲಿಲಂ ಅಪ್ರಗಲ್ಭಾ ಇವಾಹವಂ ॥

ಚಳಿಗಾಲದಲ್ಲಿ ಕೊರೆಯುವ ನದಿಯ ನೀರಿಗೆ ಇಳಿಯಲು ಮನುಷ್ಯರು ಹಿಂಜರಿಯುವುದು ಹಾಗಿರಲಿ, ಇಲ್ಲಿ ನೀರುಹಕ್ಕಿಗಳು ಕೂಡ, ಯುದ್ಧಮುಖದಲ್ಲಿನ ಅಂಜುಬುರುಕರಂತೆ, ರೆಕ್ಕೆ ಮುದುರಿಕೊಂಡು ದಡದಲ್ಲಿ ಸುಮ್ಮನೆ ಕುಳಿತಿವೆ!

ಯಾರ ಅನುಭವಕ್ಕಾದರೂ ಬರಬಹುದಾದ ವಿಷಯಗಳ ಸಹಜ ವರ್ಣನೆಯನ್ನು ಇದುವರೆಗೂ ನೋಡಿದೆವು. ಆದರೆ ಮಾನವಸಾಮಾನ್ಯಕ್ಕೆ ಗೋಚರವಾಗದ ಅದ್ಭುತ ಸಂದರ್ಭಗಳನ್ನು ವಾಲ್ಮೀಕಿ ಹೇಗೆ ವರ್ಣನೆಮಾಡಿ ನಮಗೆ ರೋಮಾಂಚವುಂಟು ಮಾಡುವನೆಂಬುದನ್ನು ಕೊಂಚಮಟ್ಟಿಗೆ ಪರಿಶೀಲಿಸುವುದು ಅಗತ್ಯ. ಈಗ ಸುಂದರಕಾಂಡದ ಮೊದಲನೆಯ ಸರ್ಗಕ್ಕೆ ನೇರವಾಗಿ ಸಾಗೋಣ. ಸೀತೆಯನ್ನು ಹುಡುಕಿಕೊಂಡು ಹೊರಟ ಹನುಮಂತನು ಸಾಗರವನ್ನು ಲಂಘಿಸಿದ ಪ್ರಸಂಗ ಅದು. ಶ್ರದ್ಧೆಯ ಕಣ್ಣಿನಿಂದ ನೋಡುವವರಿಗೆ ರಾಮಾಯಣದಲ್ಲಿ ಉಕ್ತವಾಗಿರುವ ಪ್ರತಿಯೊಂದು ಸಂಗತಿಯೂ ಅಕ್ಷರಶಃ ಸತ್ಯ. ಆ ದೃಷ್ಟಿ ಇಲ್ಲದವರೂ ಕೂಡ, ಅನೇಕ ಯೋಜನ ವಿಸ್ತೀರ್ಣವಾದ ಸಮುದ್ರವನ್ನು ಆಂಜನೇಯನು ಆಕಾಶಮಾರ್ಗದಿಂದ ದಾಟಿದನೆಂಬುದು ಕಲ್ಪನಾಪ್ರಪಂಚದಲ್ಲಿ ಮಾತ್ರ ಸಾಧ್ಯವೆಂದು ಭಾವಿಸುವವರೂ ಕೂಡ, ಇಲ್ಲಿಯ ವರ್ಣನೆಯಲ್ಲಿ ಲೌಕಿಕಸತ್ಯವನ್ನಲ್ಲದಿದ್ದರೂ ಕಾವ್ಯಸತ್ಯವನ್ನು ಚೆನ್ನಾಗಿ ಕಾಣಬಹುದು; ಹಾಗೆ ಕಂಡು ಅಮಿತವಾದ ರಸಾಸ್ವಾದವನ್ನು ಪಡೆಯಬಹುದು.

ಸಾಗರವನ್ನು ಲಂಘಿಸಲು ತನ್ನ ಮಿತಪ್ರಮಾಣದ ದೇಹ ಸಾಲದೆಂದು ಅರಿತು, ಪರ್ವಕಾಲದ ಸಾಗರದಂತೆ ಆಂಜನೇಯನೂ ವರ್ಧಿಸಿದನಂತೆ. (ಆತನ ದೇಹ ಬೆಳೆದಂತೆಯೇ ಆತನನ್ನು ವರ್ಣಿಸಲು ಹೊರಟ ವಾಲ್ಮೀಕಿಯ ಉತ್ಸಾಹವೂ ಬೆಳೆದಿದೆ.) ಅವನು ಹಾರುವ ಮುನ್ನ ವೇಗವನ್ನು ಹೆಚ್ಚಿಸಿಕೊಳ್ಳಲು ಹಸ್ತಪಾದಗಳಿಂದ ಒತ್ತಿದ

ಬಿರುಸಿಗೆ ಮಹೇಂದ್ರಾಚಲವೂ ಚಲಿಸಿತು. ಅದರ ಮರಗಳ ಮೇಲಿನ ಪುಷ್ಪಗಳೆಲ್ಲವೂ ಉದುರಿ ಬೆಟ್ಟಕ್ಕೆ ಬೆಟ್ಟವೇ ಪುಷ್ಪಮಯವಾಯಿತು!

ತಸ್ಯ ಲಾಂಗೂಲಮಾವಿದ್ಧಮಾತ್ತವೇಗಸ್ಯ ಪೃಷ್ಠತಃ ।
ದದೃಶೇ ಗರುಡೇನೇವ ಹ್ರಿಯಮಾಣೋ ಮಹೋರಗಃ ॥

"ವೇಗವನ್ನು ತಾಳಿ ಹೊರಟ ಆತನ ಹಿಂದುಗಡೆ ತೂಗಾಡುತ್ತಿದ್ದ ಬಾಲವು ಗರುಡನು ಎತ್ತಿಕೊಂಡು ಹೋಗುವ ಮಹಾಸರ್ಪದಂತೆ ಕಾಣಿಸಿತು." – ಈ ಚಿತ್ರದಿಂದ ಆಂಜನೇಯನು ಆಕಾಶದಲ್ಲಿ ಹಾರಿದ್ದನ್ನು ಕಣ್ಣಾರ ಕಂಡಂತೆ ಭಾಸವಾಗುವುದಿಲ್ಲವೇ!

ಊರುವೇಗೋದ್ಧತಾ ವೃಕ್ಷಾಃ ಮುಹೂರ್ತಂ ಕಪಿಮನ್ವಯುಃ ।
ಪ್ರಸ್ಥಿತಂ ದೀರ್ಘಮಧ್ವಾನಂ ಸ್ವಬಂಧುಮಿವ ಬಾಂಧವಾಃ ॥

"ಆಂಜನೇಯನ ತೊಡೆಗಳ ವೇಗಕ್ಕೆ ಕಿತ್ತೆದ್ದು ಬಂದ ವೃಕ್ಷಗಳು (ಆ ವೇಗಕ್ಕೆ ವಶವಾಗಿ) ಒಂದು ಮುಹೂರ್ತಕಾಲ ಅವನ ಹಿಂದೆ ಸಾಗಿಹೋದುವು – ನಿಡಿದಾದ ದಾರಿಯಲ್ಲಿ ಪಯಣ ಹೊರಟ ಬಂಧುವನ್ನು ಅವನ ನಂಟರು ಸ್ವಲ್ಪ ಕಾಲ ಹಿಂಬಾಲಿಸುವಂತೆ!"

ತಸ್ಯಾಂಬರಗತೌ ಬಾಹೂ ದದೃಶಾತೇ ಪ್ರಸಾರಿತೌ ।
ಪರ್ವತಾಗ್ರಾದ್ವಿನಿಷ್ಕ್ರಾಂತೌ ಪಂಚಾಸ್ಯಾವಿವ ಪನ್ನಗೌ ॥

"(ಬೃಹದಾಕಾರವನ್ನು ತಳೆದ) ಹನುಮಂತನು ಚಾಚಿದ ಎರಡು ತೋಳುಗಳೂ ಬೆಟ್ಟದ ಶಿಖರದಿಂದ ಹೊರಬಿದ್ದ ಐದು ಹೆಡೆಯ ಸರ್ಪಗಳಂತೆ ಕಾಣಿಸಿದುವು."

ತಾನು ವರ್ಣಿಸುವ ಪ್ರತಿಯೊಂದು ಅಂಶವೂ, ಕೊಡುವ ಪ್ರತಿಯೊಂದು ಹೋಲಿಕೆಯೂ ವಾಲ್ಮೀಕಿಯ ಪ್ರತಿಭಾಚಕ್ಷುಸ್ಸಿಗೆ ಎಷ್ಟೊಂದು ಸ್ಪಷ್ಟವಾಗಿ, ಸಮಗ್ರವಾಗಿ, ಸುಸಂಗತವಾಗಿ ಗೋಚರವಾಗಿರಬೇಕು! ಹಾಗಿಲ್ಲದಿದ್ದರೆ ಹಾರುವ ಹನುಮಂತನ ಬಾಲಕ್ಕೆ ಒಂದು ಅದ್ಭುತವಾದ ಹೋಲಿಕೆ ಮಿಾಸಲಾಗುತ್ತಿರಲಿಲ್ಲ. ಅವನ ವೇಗದಿಂದ ಕಿತ್ತುಬಂದ ಮರಗಳು ಅವನೊಡನೆಯೇ ಕೆಲವು ದೂರ ಸಾಗಿದ್ದು ಗಮನಕ್ಕೆ ಬರುತ್ತಿರಲಿಲ್ಲ. ತೋಳುಗಳಿಗೆ ಹಾವುಗಳ ಹೋಲಿಕೆ ಹೊಳೆದರೂ, ಐದು ಬೆರಳುಗಳಿಗೆ ಐದು ಹೆಡೆಗಳ ಹೋಲಿಕೆ ಅಗತ್ಯವೆಂಬುದು ಸ್ಮರಣೆಗೆ ಬರುತ್ತಿರಲಿಲ್ಲ.

ಪಿಬನ್ನಿನ ಬಭೌ ಶ್ರೀಮಾನ್ ಸೋರ್ಮಿಮಾಲಂ ಮಹಾರ್ಣವಂ ।
ಪಿಪಾಸುರಿವ ಚಾಕಾಶಂ ದದೃಶೇ ಚ ಮಹಾಕಪಿಃ ।

"ತರಂಗಮಾಲೆಯಿಂದ ಕೂಡಿದ ಮಹಾಸಾಗರವನ್ನೇ ಕುಡಿಯುವವನಂತೆ, ಆಕಾಶವನ್ನೇ ಹೀರಲೆಳಸುವವನಂತೆ ಈ ಮಹಾಕಪಿ ಕಾಣಿಸಿದನು." ಆ ಬೃಹದ್ದೇಹಿಯ ಬೃಹದಾಕಾಂಕ್ಷೆಯನ್ನು ಹೀಗಲ್ಲದೆ ಇನ್ನು ಹೇಗೆ ರೂಪಿಸಬಹುದು!

ಈ ಕಪಿ ಹಾರುವಾಗ ಗಾಳಿಯನ್ನು ಸೀಳಿಕೊಂಡು ಹೋಗಬೇಕಾಯಿತಷ್ಟೆ. ಆಗ ಉಂಟಾದ ಗಾಳಿಯ ಮೊರೆತ ಮೋಡದ ಮೊಳಗಿನಂತೆ ಇತ್ತು. ಸಮುದ್ರದ ಯಾವ

ಯಾವ ಭಾಗದ ಮೇಲೆ ಈತನು ಹಾರಿಹೋಗುತ್ತಿದ್ದನೋ ಅಲ್ಲೆಲ್ಲಾ ಈತನ ವೇಗದ ಪ್ರಭಾವದಿಂದ ನೀರು ಹುಚ್ಚೆದ್ದು ಕುಣಿಯಿತು; ವೇಗದ ಸೆಳೆತಕ್ಕೆ ಅಲೆಗಳು ಮೇಲುಕ್ಕಿ ದಿಕ್ಕುದಿಕ್ಕಿಗೂ ತೂರಿದುವು! ಹನುಮಂತನನ್ನೇ ಅನುಸರಿಸುತ್ತಿದ್ದ ಆತನ ಛಾಯೆ ಸಾಗರದ ನೀರಿನ ಮೇಲೆ ಅಗಲವಾಗಿ ಹರಡಿದ ಬಿಳಿಮೋಡದ ರಾಶಿಯಂತೆ ಗೋಚರಿಸಿತು. ಯಾವ ಮಾಗದಲ್ಲಿ ಈ ಕಪಿ ಹಾರಿದನೋ ಅಲ್ಲಿ ಈತನ ವೇಗದ ಪ್ರಭಾವದಿಂದ ನೀರಿನಮೇಲೆ ಒತ್ತಡವುಂಟಾಗಿ ಸಾಗರವು ಒಂದು ಕಡಾಯಿಯಂತಾಯಿತು!

ಹೀಗೆ ಕಡಲನ್ನು ದಾಟುವ ಆಂಜನೇಯನನ್ನು ನಾವು ಕೂಡ ವಾಲ್ಮೀಕಿಯ ಸಹಾಯದಿಂದ ಇನ್ನೂ ಬಹುದೂರ ಅನುಸರಿಸಿಕೊಂಡು ಹೋಗಿ ಅದ್ಭುತದ ಅನುಭವವನ್ನು ಹೆಚ್ಚಿಸಿಕೊಳ್ಳಬಹುದು. ಆದರೆ ಆದಿಕವಿಯ ಕಲ್ಪನಾವೈಖರಿಯನ್ನು ಅರಿತು ಬೆರಗುಗೊಳ್ಳುವುದಕ್ಕೆ ಇಷ್ಟು ಮಾತ್ರದ ಸಂಚಕಾರ ಸಾಕು.

ಇತ್ತೀಚಿನ ಕವಿಗಳು ಒಂದೆರಡು ಮಾತಿನಲ್ಲಿ, ಒಂದೆರಡು ಚಿತ್ರದಲ್ಲಿ ಹೇಳಿ ಮುಗಿಸಿ ದಣಿಯುವ ಅಂಶಗಳನ್ನು ವಾಲ್ಮೀಕಿ ಸುದೀರ್ಘವಾಗಿಯೇ ಬೆಳಸಿ, ಬಿಡಿಸಿ ಹೇಳುತ್ತಾನೆ. ಆತನ ಮಹಾಕಾವ್ಯದ ಪ್ರಮಾಣವನ್ನು ನೆನೆದರೆ ಇದು ಆತನಿಗೆ ಭೂಷಣವೇ ಹೊರತು ದೂಷಣವಲ್ಲ. ಇದರ ಜೊತೆಗೆ "ಕಿಱಿದಱೊಳೆ ಪಿರಿದುಮರ್ಥ"ವನ್ನು ಸೂಚಿಸುವ ಶಕ್ತಿಯೂ ಈ ಮಹಾಕವಿಗೆ ವಿಪುಲವಾಗಿ ಉಂಟು. ಅವಶ್ಯವೆನಿಸಿದಾಗ ಮಿತವಾಕ್ಯದಲ್ಲೇ ಅವನು ಅಪರಿಮಿತವಾದ ವಿಷಯವನ್ನು ಮನಗಾಣಿಸಬಲ್ಲನು. ಹನುಮಂತನು ರಾವಣನ ಅಂತಃಪುರದಲ್ಲಿ ಸೀತೆಯನ್ನು ಹುಡುಕುತ್ತಾ ಕಡೆಗೆ ಮಂಡೋದರಿಯನ್ನು ಕಂಡು, ಅವಳ ರೂಪಯೌವನಸಂಪತ್ತಿನಿಂದ ಅವಳೇ ಸೀತೆಯಿರಬಹುದೆಂದು ಮೊದಲ ಊಹೆಯಲ್ಲಿ ಭ್ರಮಿಸಿದನಷ್ಟೆ. ತನ್ನ ಅನ್ವೇಷಣವು ಸಾರ್ಥಕವಾಯಿತಲ್ಲ ಎಂದು ಅವನಿಗೆ ಅಧಿಕ ಹರ್ಷವುಂಟಾಯಿತಂತೆ :

> ಆಸ್ಫೋಟಯಾಮಾಸ ಚುಚುಂಬ ಪುಚ್ಛಂ
> ನನಂದ ಚಿಕ್ರೀಡ ಜಗೌ ಜಗಾಮ ।
> ಸ್ತಂಭಾನರೋಹನ್ನಿಪಪಾತ ಭೂಮೌ
> ನಿದರ್ಶಯನ್ ಸ್ವಾಂ ಪ್ರಕೃತಿಂ ಕಪೀನಾಂ ॥

"ಅವನು ಸಿಡಿದೆದ್ದನು, ತನ್ನ ಬಾಲಕ್ಕೆ ಮುತ್ತುಕೊಟ್ಟನು, ನಲಿದನು, ಆಡಿದನು, ಹಾಡಿದನು, ಓಡಿದನು, ಕಂಬಗಳನ್ನು ಹತ್ತಿದನು, ಧೊಪ್ಪನೆ ನೆಲಕ್ಕೆ ಬಿದ್ದನು – ತನ್ನ ಕಪಿ ಸ್ವಭಾವವನ್ನು ಹೀಗೆ ತೋರ್ಪಡಿಸಿದನು!"

ಹನುಮಂತನು ಮಹಾವ್ಯಕ್ತಿಯಾದರೂ ಅವನು ಕಪಿಯೆಂಬುದನ್ನು ವಾಲ್ಮೀಕಿ ಮರೆತಿಲ್ಲ. ಆ ಕಪಿಚಾಪಲ್ಯವನ್ನು ಇಲ್ಲಿ ಅನುಪಮವಾಗಿ ಉಲ್ಲೇಖಿಸಿದ್ದಾನೆ. "ಚುಚುಂಬ ಪುಚ್ಛಂ" ಎಂಬ ಉಕ್ತಿಗಂತೂ ಏನು ಬೆಲೆ ಕೊಟ್ಟರೂ ಸಾಲದು! ಈ ಕಪಿ ತನ್ನ ಮೊದಲ ಊಹೆಗೆ ನಲಿದು ಹೀಗೆ ಕುಣಿದು ಕುಪ್ಪಳಿಸಿ, ಬಳಿಕ ವಿಮರ್ಶೆಯಿಂದ ಈಕೆ ಸೀತೆಯಾಗಿರಲಾರಳೆಂದು ಮನಗಂಡು ವಿಷಾದಪಟ್ಟದ್ದನ್ನೂ ವಾಲ್ಮೀಕಿ ವರ್ಣಿಸಿದ್ದಾನೆ.

ಸಚರಾಚರವಾದ ಜಗತ್ತಿನ ಎಲ್ಲ ರೂಪಗಳನ್ನೂ ಚೇಷ್ಟಿತಗಳನ್ನೂ ಭಾವನೆಗಳನ್ನೂ ಏಕಪ್ರಕಾರವಾದ ಅರಿವಿನಿಂದ ವರ್ಣಿಸುವ ಶಕ್ತಿ ವಾಲ್ಮೀಕಿಗೆ ಅಸದಳವಾಗಿ ಉಂಟು.

ವಿಶಾಲವಾದ ಅನುಭವವಿಲ್ಲದೆ, ಆ ಅನುಭವದ ಎಳೆಗಳು ಚಿನ್ನದ ತಂತಿಯಂತೆ ಸುಸೂತ್ರವಾಗಿ ಬಂದು ಕಾವ್ಯಪಟದಲ್ಲಿ ನೆಯ್ಗೆಗೊಂಡಲ್ಲದೆ, ಒಬ್ಬನು ಮಹಾಕವಿಯಾಗಲಾರನು. ಇಂಥ ಕವಿ ಲೋಕದ ಸಮಸ್ತ ವಸ್ತುಜಾಲವನ್ನೂ ಸ್ತಿಮಿತ ಚಕ್ಷುಸ್ಸಿನಿಂದ ನೋಡಿ ತನ್ನ ಕೃತಿಯಲ್ಲಿ ರೂಪಿಸಿದರೂ ಕೆಲ ಕೆಲವು ನೋಟಗಳ, ಕಲ್ಪನೆಗಳ ಕಡೆಗೆ ಆತನ ಮನಸ್ಸು ಮತ್ತೆ ಮತ್ತೆ ಹೊರಳುತ್ತದೆ. ಕವಿ ಕೃತಿಗಳಲ್ಲಿ ಆಳವಟ್ಟಿರುವ "ಪ್ರತಿಮಾ" ಚಿತ್ರಣಗಳನ್ನು (Imagery) ಶಾಸ್ತ್ರೀಯವಾಗಿ ವಿಭಜಿಸಿ ಈ ಸಾಮಗ್ರಿ ಎಲ್ಲಿಂದ ಬಂದದ್ದು, ಯಾವ ಯಾವ ಬಗೆಯದು, ಕವಿಯ ಒಲವು ಎತ್ತಕಡೆಗೆ – ಈ ಮೊದಲಾದ ಅಂಶಗಳನ್ನೆಲ್ಲಾ ಪರಿಶೀಲಿಸಿ, ಆತನ ಮನೋಧರ್ಮವನ್ನೂ ಅನುಭವ ಸಾಮಗ್ರಿಯನ್ನೂ ಅರ್ಥಮಾಡಿಕೊಳ್ಳುವ ಪದ್ಧತಿ ಪಾಶ್ಚಾತ್ಯ ವಿಮರ್ಶೆಯಲ್ಲಿ ಇತ್ತೀಚೆಗೆ ಪ್ರಬಲವಾಗಿದೆ. ಬಾಹ್ಯಚರಿತ್ರೆ ಏನೂ ತಿಳಿಯದೆ ಐತಿಹ್ಯದ ತೆರೆಯ ಹಿಂದೆ ಮಸುಕು ಮಸಕಾಗಿ ಗೋಚರಿಸುವ ವಾಲ್ಮೀಕಿಯಂಥ ಕವಿಗಳ ವಿಷಯದಲ್ಲಂತೂ ಈ ಬಗೆಯ ಪರಿಶೀಲನೆ ಅತ್ಯಾವಶ್ಯಕ. ಇದರಿಂದ ಕವಿಯ ಶೀಲಸ್ವಭಾವಗಳನ್ನು ಮಾತ್ರವಲ್ಲದೆ ಕಾಲದೇಶಾದಿಗಳನ್ನು ಕೂಡ ಕುರಿತು ಹೊಸಬೆಳಕನ್ನು ಕಾಣುವುದು ಅಶಕ್ಯವಲ್ಲ. ಈ ಕಾರ್ಯ ಶಾಸ್ತ್ರೀಯವಾಗಿ ನಡೆದರೆ, ವಾಲ್ಮೀಕಿಯ ವರ್ಣನಾಕೌಶಲವನ್ನು ಕೂಡ ಇಲ್ಲಿ ಈಗ ಮಾಡಿರುವುದಕ್ಕಿಂತ ಹೆಚ್ಚು ಸಂಗತವಾಗಿ ಬಂಧುರವಾಗಿ ಪರಿಚಯಮಾಡಿಕೊಡಲು ಸಾಧ್ಯವಾದೀತು.

ಸಮಾಲೋಕನ : ೧೯೫೮

ಪಾತ್ರನಿರೂಪಣೆಯಲ್ಲಿ ವ್ಯಾಸರ ದೃಷ್ಟಿ ಭಾಸನ ದೃಷ್ಟಿ*

ಸಂಸ್ಕೃತ ಸಾಹಿತ್ಯದಲ್ಲಿ ಭಾಸ ಎಂಬ ಹೆಸರು ಬಲು ಹಿಂದೆಯೇ ಪ್ರಖ್ಯಾತವಾಯಿತು. ಕಾಳಿದಾಸನು ನಾಟಕ ರಚನೆಗೆ ತೊಡಗುತ್ತಿದ್ದ ಕಾಲಕ್ಕೇ ಭಾಸನ ಕೀರ್ತಿ ದೃಢವಾಗಿ ನೆಲೆಗೊಂಡಿತ್ತು. ಭಾಸನ ನಾಟಕಗಳ ಸತ್ತ್ವವನ್ನು ಪರೀಕ್ಷಿಸಬೇಕೆಂದು ವಿದ್ವಾಂಸರು ಬೆಂಕಿಗೆ ಎಸೆದರಂತೆ; ಅವುಗಳಲ್ಲಿ 'ಸ್ವಪ್ನವಾಸವದತ್ತ'ವನ್ನು ಬೆಂಕಿ ಕೂಡ ಸುಡಲಿಲ್ಲವಂತೆ. ಈ ಅಗ್ನಿ ಪರೀಕ್ಷೆಯ ದಂತಕಥೆಯ ಒಳ ಅರ್ಥ ಏನಾದರೂ ಆಗಿರಲಿ; ಅನೇಕ ಶತಮಾನಗಳ ಹಿಂದೆಯೆ ಭಾಸನ ಕೃತಿಗಳು – ಸ್ವಪ್ನವಾಸವದತ್ತ ಕೂಡ – ರಸಿಕರಿಗೆ ಅಲಭ್ಯವಾದುವು. ಹೀಗಿರುವಾಗ ಸುಮಾರು ಐವತ್ತು ವರ್ಷಗಳ ಹಿಂದೆ ಕೇರಳದಲ್ಲಿ ತ. ಗಣಪತಿಶಾಸ್ತ್ರಿ ಎಂಬ ವಿದ್ವಾಂಸರು ಎಲ್ಲಿಯೋ ಅಡಗಿದ್ದ ಹದಿಮೂರು ನಾಟಕಗಳನ್ನು ಕಂಡುಹಿಡಿದು ಹೊರಕ್ಕೆ ತಂದು, ಅವುಗಳಲ್ಲಿ ಕರ್ತೃವಿನ ಹೆಸರು ಎಲ್ಲಿಯೂ ಕಾಣಬರದಿದ್ದರೂ ಅವು ಭಾಸಕವಿಯವೇ ಆಗಿರಬೇಕೆಂದು ನಿರ್ಣಯಿಸಿ ಪ್ರಕಟಪಡಿಸಿದರು. ಅಂದು ಮೊದಲುಗೊಂಡು, ಈ ನಾಟಕಗಳ ಕರ್ತೃ ಪ್ರಖ್ಯಾತನಾದ ಭಾಸ ಮಹಾಕವಿ ಹೌದೆ ಅಲ್ಲವೆ ಎಂಬ ವಿಷಯವಾಗಿ ತುಂಬ ಚರ್ಚೆ ನಡೆದಿದೆ; ಇನ್ನೂ ನಿಲುಗಡೆ ಬಂದಿಲ್ಲ. ಈ ಜಟಿಲವಾದ ವಿವಾದದಲ್ಲಿ ಕೈಹಾಕಲು ಇಂದಿನ ಪುಟ್ಟ ಭಾಷಣ ಎಷ್ಟು ಮಾತ್ರಕ್ಕೂ ಸ್ಥಳವಲ್ಲ.

---

* ಆಕಾಶವಾಣಿಯಲ್ಲಿ ಪ್ರಸಾರ ಮಾಡಿದ ಭಾಷಣ.

ಒಟ್ಟಿನ ಮೇಲೆ, ಈ ನಾಟಕಗಳು ಈಗಿನ ರೂಪದಲ್ಲಿ ಭಾಸನ ಕೃತಿಗಳ ಯಥಾವತ್ತಾದ ಪ್ರತಿಗಳಾಗದಿದ್ದರೂ ಕೇರಳದ ನಟರು ಅಭಿನಯಕ್ಕಾಗಿ ಸಿದ್ಧಪಡಿಸಿಕೊಂಡ ರಂಗ ಪ್ರತಿಗಳಾಗಿರಬಹುದೆಂದೂ, ಇವುಗಳಲ್ಲಿ ಭಾಸನ ಮೂಲ ಲಿಖಿತದ ಮುಖ್ಯ ಭಾಗವೆಲ್ಲ ಸಮಾವೇಶಗೊಂಡಿರಬೇಕೆಂದೂ ಅಂಗೀಕರಿಸಿ ಮುಂದುವರಿಯೋಣ. ಒಬ್ಬ ಮಹಾ ಕವಿಯ ಪ್ರತಿಭೆಯ ಜ್ಯೋತಿ ಈ ನಾಟಕಗಳಲ್ಲಿ ರಮ್ಯವಾಗಿ ಹೊರಹೊಮ್ಮುತ್ತದೆ.

ಈ ಹದಿಮೂರು ನಾಟಕಗಳಲ್ಲಿ ಹೆಚ್ಚು ಪಾಲಿನವು – ಎಂದರೆ ಆರು – ವ್ಯಾಸರ ಮಹಾಭಾರತದ ವಸ್ತುವನ್ನು ಅವಲಂಬಿಸಿರತಕ್ಕವು. ಈ ಆರು–ಮಧ್ಯಮ ವ್ಯಾಯೋಗ, ಪಂಚರಾತ್ರ, ದೂತವಾಕ್ಯ, ದೂತ ಘಟೋತ್ಕಚ, ಕರ್ಣಭಾರ ಮತ್ತು ಊರುಭಂಗ. ಇವುಗಳಲ್ಲಿ ಪಂಚರಾತ್ರವನ್ನು ಬಿಟ್ಟು ಮಿಕ್ಕ ಐದು ಒಂದೊಂದೇ ಅಂಕದ ಚಿಕ್ಕನಾಟಕಗಳು. ಪಂಚರಾತ್ರದಲ್ಲಿ ಇರುವವು ಕೂಡ ಮೂರು ಅಂಕಗಳು ಮಾತ್ರ. ಗಾತ್ರದಲ್ಲಿ ಹೀಗೆ ಇವು ಕಿರಿಯವಾದರೂ ಒಟ್ಟುಗೂಡಿಸಿ ನೋಡಿದರೆ, ಮಹಾಭಾರತದ ಆರಣ್ಯಕ ಪರ್ವದಿಂದ ಶಲ್ಯಪರ್ವದ ಕೊನೆಯವರೆಗಿನ ಕಥಾ ಭಾಗವನ್ನು ಇವು ಬೇರೆ ಬೇರೆ ಪ್ರಸಂಗಗಳ ಮೂಲಕ ಅಳವಡಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಇಲ್ಲಿಯ ಕಥೆಯ ಹಿನ್ನೆಲೆ ವ್ಯಾಸ ಭಾರತದ್ದು; ಇಲ್ಲಿಯ ಪಾತ್ರಗಳೂ ಅಲ್ಲಿಯವು. ಆದರೆ ಭಾಸನು ರೂಪಿಸಿರುವ ಘಟನೆಗಳೂ ಸಂಗತಿಗಳೂ ಬಲುಮಟ್ಟಿಗೆ ಸ್ವಪ್ರತಿಭಾ ಕಲ್ಪಿತವಾದವು. ಇಂದಿನ ಈ ಭಾಷಣದಲ್ಲಿ ಎರಡು ಮೂರು ನಾಟಕಗಳನ್ನೂ ಅಲ್ಲಿಯ ಒಂದೆರಡು ಪಾತ್ರಗಳನ್ನೂ ಮಾತ್ರ ನಾವು ಅವಲೋಕಿಸುವುದು ಸಾಧ್ಯ.

ಮೊದಲು 'ಮಧ್ಯಮ ವ್ಯಾಯೋಗ'ವನ್ನು ತೆಗೆದುಕೊಳ್ಳೋಣ. ಪಾಂಡವರ ಅರಣ್ಯವಾಸದ ಕಾಲದಲ್ಲಿ ಭೀಮನು ತನ್ನ ರಾಕ್ಷಸ ಜಾತಿಯ ಹೆಂಡತಿ ಹಿಡಿಂಬೆಯನ್ನೂ ಮಗ ಘಟೋತ್ಕಚನನ್ನೂ ಸಂಧಿಸಿದನೆಂಬ ಒಂದು ಅಪೂರ್ವ ಸನ್ನಿವೇಶ ಚಿತ್ರಿತವಾಗಿದೆ. ಇಲ್ಲಿ ಮೂವರ ಸ್ವಭಾವಗಳೂ ಒಂದೆರಡು ರೇಖೆಗಳಲ್ಲಿಯೇ ಚೆನ್ನಾಗಿ ಮಿಂಚುತ್ತವೆ. ಮಗನ ಶಕ್ತಿಯನ್ನು ಬಾಹುಯುದ್ಧದಲ್ಲಿ ಭೀಮನು ಮನಗಂಡು, "ಭೋಃ ಸುಯೋಧನ ವರ್ಧತೇ ತೇ ಶತ್ರುಪಕ್ಷಃ" ("ಎಲಾ ದುರ್ಯೋಧನ, ನಿನ್ನ ಶತ್ರುಪಕ್ಷ ಬೆಳೆಯುತ್ತಿದೆ") ಎಂದು ತನ್ನೊಳಗೇ ಹೇಳಿಕೊಳ್ಳುತ್ತಾನೆ. ತನ್ನ ಹೆಂಡತಿ ಹಿಡಿಂಬೆ ಪಾರಣೆಯ ಸಲುವಾಗಿ ಮನುಷ್ಯ ಮಾಂಸವನ್ನು ಬಯಸಿದ್ದು ತನ್ನನ್ನು ಕಾಣಬೇಕೆಂದು ಹೂಡಿದ ಉಪಾಯ ಮಾತ್ರ ಎಂಬುದನ್ನು ತಿಳಿದುಕೊಂಡು "ಜಾತ್ಯಾ ರಾಕ್ಷಸೀ, ನ ಸಮುದಾಚಾರೇಣ" ("ಇವಳು ಹುಟ್ಟಿನಲ್ಲಿ ರಾಕ್ಷಸಿ, ನಡವಳಿಕೆಯಲ್ಲಲ್ಲ") ಎಂದು ಮೆಚ್ಚುತ್ತಾನೆ.

ಈಗ 'ಪಂಚರಾತ್ರ'ದ ಕಡೆಗೆ ತಿರುಗೋಣ. ಇದರ ಕಥೆ ಮಹಾಭಾರತದ ಮೂಲ ಪ್ರಸಂಗವನ್ನು ತಿರುಗು ಮುರುಗು ಮಾಡಿಬಿಟ್ಟಿದೆ. ಅಲ್ಲಿಯ ಹಲವು ಪಾತ್ರಗಳನ್ನು ಭಾಸನು ಇಲ್ಲಿ ಹೊಸ ಸನ್ನಿವೇಶಗಳಲ್ಲಿ ತೋರಿಸಿ, ಅವರ ಪರಿಚಿತವಾದ ಮುಖಗಳ ಮೇಲೆ ಹೊಸ ಬಣ್ಣದ ಬೆಳಕುಗಳನ್ನೂ ಹಾಯಿಸುತ್ತಾನೆ; ಆದರೆ ಮೂಲ ಸ್ವಭಾವ ವಿಪರಿವರ್ತನೆ ಹೊಂದದಂತೆ ನಿರ್ವಹಿಸುತ್ತಾನೆ. ಮಹಾಭಾರತದ ಕಥೆಯಂತೆ ದುರ್ಯೋಧನನು ಗೋಗ್ರಹಣಕ್ಕೆ ಕೈ ಹಾಕಿದ್ದು ಅಜ್ಞಾತವಾಸದಲ್ಲಿದ್ದ ಪಾಂಡವರನ್ನು

ಅವಧಿ ಮುಗಿಯುವುದರೊಳಗೆ ಹೊರಹೊರಡಿಸುವ ಸಲುವಾಗಿ. 'ಪಂಚರಾತ್ರ'ದಲ್ಲೂ ಗೋಗ್ರಹಣವು ಮುಖ್ಯವಾಗಿ ಬಂದರೂ, ಅದರ ಉದ್ದೇಶ ಪರಿಣಾಮಗಳು ಬೇರೆಯಾಗುತ್ತವೆ. ಇಲ್ಲಿ ದುರ್ಯೋಧನನು ಮಹಾಯಾಗವೊಂದನ್ನು ವಿಜೃಂಭಣೆಯಿಂದ ನೆರವೇರಿಸಿ ತನ್ನ ಗುರು ದ್ರೋಣಾಚಾರ್ಯನ ಮೆಚ್ಚಿಕೆಯನ್ನು ಗಳಿಸಿದ್ದಾನೆ; ಆತನು ಇಷ್ಟಬಂದ ಗುರುದಕ್ಷಿಣೆಯನ್ನು ಕೋರಿ ಸ್ವೀಕರಿಸಬೇಕೆಂದು ಒತ್ತಾಯಪಡಿಸುತ್ತಾನೆ. ಆಗ ದ್ರೋಣನು ಕಾಡುಪಾಲಾಗಿದ್ದ ತನ್ನ ಪ್ರಿಯ ಶಿಷ್ಯರಾದ ಪಾಂಡವರನ್ನು ನೆನೆದು, 'ಅವರಿಗೆ ಅರ್ಧ ರಾಜ್ಯವನ್ನು ನೀನು ಸಲ್ಲಿಸಿದರೆ ಅದೇ ಗುರುದಕ್ಷಿಣೆ' ಎನ್ನುತ್ತಾನೆ. ಮಹಾಭಾರತದ ದುರ್ಯೋಧನನಂತೆಯೇ ಇಲ್ಲಿಯ ದುರ್ಯೋಧನನಿಗೂ ಪಾಂಡವರಿಗೆ ಅರ್ಧ ರಾಜ್ಯ ಕೊಡಲು ಸರ್ವಾತ್ಮನಾ ಇಷ್ಟವಿಲ್ಲ. ಆದರೆ ಕೊಟ್ಟ ಮಾತನ್ನು ಕಳೆದುಕೊಳ್ಳಲೂ ಇಷ್ಟವಿಲ್ಲ. ದುರ್ಯೋಧನನು ಉತ್ತರ ಕೊಡುವ ಮೊದಲೇ ಶಕುನಿ ಬಾಯಿ ಹಾಕಿ, "ಇದೆಲ್ಲ ವಂಚನೆ; ನೀನು ಖಂಡಿತ ಒಪ್ಪಬೇಡ" ಎನ್ನುತ್ತಾನೆ. ಅದಕ್ಕೆ ಪ್ರತಿಯಾಗಿ "ಮಾತನ್ನೂ ಉಳಿಸಿಕೊಳ್ಳಬೇಕು, ಪಾಂಡವರಿಗೂ ಉಪಯೋಗವಾಗ ಬಾರದು. ಹಾಗೆ ಶತ್ರುಗಳ ಬಾಧೆ ತಟ್ಟುವಂಥ, ಯಾವ ಕೆಲಸಕ್ಕೂ ಬಾರದಂಥ ಕುತ್ಸಿತವಾದ ನೆಲವನ್ನು ಕೊಟ್ಟುಬಿಡೋಣ" ಎಂದು ದುರ್ಯೋಧನನು ಮಾವನನ್ನು ಒಪ್ಪಿಸಲು ಪ್ರಯತ್ನಿಸುತ್ತಾನೆ. ಆದರೆ ಪಾಂಡವರ ಮಹಿಮೆಯನ್ನು ಶಕುನಿ ಬಲ್ಲ; "ಪಾರ್ಥನಿಗಿಂತ ಶೂರ ಯಾರಿದ್ದಾನೆ? ಯುಧಿಷ್ಠಿರ ಇದ್ದ ಕಡೆ ಬಂಜರು ನೆಲದಲ್ಲೂ ಪೈರು ಹುಲುಸಾಗಿ ಬೆಳೆಯುತ್ತದೆ" ಎಂದು ದುರ್ಯೋಧನನಿಗೆ ತಿಳಿವಳಿಕೆ ಕೊಡುತ್ತಾನೆ. ಆದರೆ ಪಂಚರಾತ್ರದ ದುರ್ಯೋಧನನು–

> ಗುರುಕರತಲ ಮಧ್ಯೇ ತೋಯಮಾವರ್ಜಿತಂ ಮೇ
> ಶ್ರುತಮಿಹ ಕುಲವೃದ್ಧೈಃ ಯತ್‌ಪ್ರಮಾಣಂ ಪೃಥಿವ್ಯಾಂ ।
> ತದಿದಮಪನಯೋ ವಾ ವಂಚನಾ ವಾ ಯಥಾ ವಾ
> ಭವತು ನೃಪ ಜಲಂ ತತ್ ಸತ್ಯಮಿಚ್ಛಾಮಿ ಕರ್ತುಂ ॥

> ಉದಕಮನೆರೆದಂ ಗುರುಹ
> ಸ್ತದೊಳದೆ ದಾನಪ್ರಮಾಣಮೆಂಬರ್ ಪಿರಿಯರ್
> ಇದನೀತಿಯೊ ವಂಚನೆಯೋ
> ತೊದಳಾಗಿಸೆನಿತ್ತ ಜಲಮನೆಂತಿರ್ದೊಡಮೇಂ

ಎಂದು ನಿರ್ಧಾರವಾಗಿ ಹೇಳಿಬಿಡುತ್ತಾನೆ. (ಇಲ್ಲಿ ಕನ್ನಡದ ಅನುವಾದ ಪದ್ಯ ಶ್ರೀ ದೇವಶಿಖಾಮಣಿ ಅಳಸಿಂಗರಾಚಾರ್ಯರದು. 'ತೊದಳಾಗಿಸೆಂ' ಎಂದರೆ ಸುಳ್ಳು ಮಾಡುವುದಿಲ್ಲ ಎಂದು ಅರ್ಥ.)

ಈ ಶಕುನಿ, "ನಿನ್ನ ಮಾತು ಸುಳ್ಳಾಗಬಾರದು, ಅಷ್ಟೇತಾನೆ. ಹಾಗಾದರೆ ಒಂದು ಕೆಲಸ ಮಾಡೋಣ" ಎಂದು ದುರ್ಯೋಧನನನ್ನು ಸಮಾಧಾನಪಡಿಸಿ, ತಾನೇ ದ್ರೋಣಾಚಾರ್ಯನ ಬಳಿಗೆ ಬಂದು, "ಐದು ರಾತ್ರಿಗಳೊಳಗೆ ಪಾಂಡವರ ವೃತ್ತಾಂತವನ್ನು

ತಂದರೆ ದುರ್ಯೋಧನ ಅವರಿಗೆ ರಾಜ್ಯಾರ್ಧವನ್ನು ಕೊಡುತ್ತಾನಂತೆ. ಈಗ ತಾವು ತರೋಣವಾಗಲಿ" ಎಂದು ನಿಬಂಧನೆಯನ್ನು ಒಡ್ಡುತ್ತಾನೆ. "ಕೇವಲ ಐದು ರಾತ್ರಿಗಳಲ್ಲಿ ತನ್ನಿ ಎಂದು ಹೇಳುವ ಬದಲು ನಾನು ಕೊಡುವುದೇ ಇಲ್ಲ ಎಂದು ನೇರವಾಗಿಯೇ ಹೇಳಿಬಿಡು" ಎಂದು ದ್ರೋಣನು ರೇಗಿದರೂ, "ಧರ್ಮ ವಿಷಯದಲ್ಲಿ ನೆವಗಳನ್ನು ಹೂಡಬಾರದು" ಎಂದು ಭೀಷ್ಮನು ಬುದ್ಧಿ ಹೇಳಿದರೂ, ದುರ್ಯೋಧನನು ಇದೇ ನನ್ನ ನಿಶ್ಚಯ ಎಂದು ಪಟ್ಟುಹಿಡಿಯುತ್ತಾನೆ.

ಆ ವೇಳೆಗೆ ದೂತರಿಂದ ಕೀಚಕ ಮರಣದ ಸುದ್ದಿ ತಿಳಿಯಬಂದಿತು; ಈ ಶಸ್ತ್ರವಿಲ್ಲದ ವಧೆ ಭೀಮನಿಂದಲೇ ಆಗಿರಬೇಕೆಂದು ಕುಶಲಮತಿಯಾದ ಭೀಷ್ಮನಿಗೆ ಹೊಳೆಯಿತು. ನಿಬಂಧನೆಯನ್ನು ಒಪ್ಪಿಕೊಳ್ಳುವಂತೆ ದ್ರೋಣನಿಗೆ ಅವನು ಸೂಚಿಸಿ, ವಿರಾಟನ ಮೇಲೆ ತನಗೆ ವೈರವುಂಟೆಂದು ನಟಿಸಿ, ಅವನ ಗೋವುಗಳನ್ನು ಹಿಡಿಯಲು ದಂಡೆತ್ತಿ ಹೋಗಬೇಕೆಂದು ದುರ್ಯೋಧನನಿಗೆ ಸಲಹೆ ಮಾಡುತ್ತಾನೆ. ಹೀಗೆ ಪಾಂಡವರನ್ನು ಅಜ್ಞಾತವಾಸದಿಂದ ಬಯಲಿಗೆ ತರುವ ಗೋಗ್ರಹಣ ಪ್ರಸಂಗವು ಮಹಾಭಾರತದ ಕಥೆಯಂತೆ ಅವರಿಗೆ ರಾಜ್ಯವನ್ನು ತಪ್ಪಿಸುವ ಸಲುವಾಗಿ ನಡೆದರೆ, ಪಂಚರಾತ್ರದಲ್ಲಿ ಅವರಿಗೆ ರಾಜ್ಯವನ್ನು ಕೊಡಿಸುವ ಸಲುವಾಗಿ ಮಾರ್ಪಡುತ್ತದೆ. ಕಥೆ ಹೊಸ ರೀತಿಯಲ್ಲಿ ಬೆಳೆದು, ಭೀಮಾರ್ಜುನರು ಯುದ್ಧದಲ್ಲಿ ಭಾಗವಹಿಸಿದ್ದ ಸಂಗತಿ ಸ್ಪಷ್ಟವಾಗುತ್ತದೆ; "ಅಭಿಮನ್ಯುವಿಗೆ ಉತ್ತರೆಯನ್ನು ಕೊಡಲು ನಿಶ್ಚಯವಾಗಿದೆ. ಮದುವೆ ಎಲ್ಲಿ ನಡೆಯಬೇಕು" ಎಂದು ಯುಧಿಷ್ಠಿರನೇ ಉತ್ತರನನ್ನು ಹಿರಿಯರಾದ ಭೀಷ್ಮ ದ್ರೋಣರಿಗೆ ಅರಿಕೆ ಮಾಡಲು ಕಳಿಸಿಕೊಡುತ್ತಾನೆ. ಈಗ ಶಕುನಿಯ ಮನಸ್ಸಿನಲ್ಲಿ ಇನ್ನು ಉಳಿದಿದ್ದ ಅಲ್ಪ ಸಂದೇಹವೂ ಪರಿಹಾರವಾಗಿ, ಪಾಂಡವರ ನೆಲೆ ಐದು ರಾತ್ರಿಗಳೊಳಗೇ ಸಿಕ್ಕಿ ಬಿಡುತ್ತದೆ.

ಈಗ ದುರ್ಯೋಧನ ಏನು ಮಾಡುತ್ತಾನೆ?

ಬಾಢಂ ದತ್ತಂ ಮಯಾ ರಾಜ್ಯಂ ಪಾಂಡವೇಭ್ಯೋ ಯಥಾ ಪುರಂ ।
ಮೃತೇಽಪಿ ಹಿ ನರಾಃ ಸರ್ವೇ ಸತ್ಯೇ ತಿಷ್ಠಂತಿ ತಿಷ್ಠತಿ ॥

ಇದೊ ಕೊಟ್ಟೆನೀಗಳೇ ಪೂ
ರ್ವದವೊಲ್ ಪಾರ್ಥರ್ಗೆ ಸಲ್ವ ರಾಜ್ಯಾರ್ಧಮನಾಂ
ತೊದಳಿಲ್ಲದಿರ್ಪ ದೃಢಸ
ತ್ಯದ ಬಲದಿಂ ಮೃತರುಮಲ್ತೆ ಜೀವಿಪರಿಳೆಯೊಳ್

ಹೀಗೆಂದು ಸತ್ಯವನ್ನು ಎತ್ತಿ ಹಿಡಿಯುವ ದುರ್ಯೋಧನನ ದೃಢಚಿತ್ತದ ಘೋಷಣೆಯಿಂದ ನಾಟಕ ಮುಗಿಯುತ್ತದೆ.

ಈ ನಾಟಕದಲ್ಲಿ ಅಪೂರ್ವ ಕಲ್ಪನೆಗಳು ಹಲವು ಉಂಟು; ಇವುಗಳಲ್ಲಿ ದುರ್ಯೋಧನನ ಧರ್ಮಬುದ್ಧಿ ಎಲ್ಲಕ್ಕೂ ಮಿಗಿಲು. ಕೊಟ್ಟ ಮಾತನ್ನು ಉಳಿಸಿಕೊಳ್ಳು

ವುದಕ್ಕಾಗಿ, ಅವನು ತನಗೆ ಸ್ವಲ್ಪವೂ ಇಷ್ಟವಿಲ್ಲದ ರಾಜ್ಯಾರ್ಧ ಪ್ರದಾನಕ್ಕೂ ಸಿದ್ಧವಾಗುತ್ತಾನೆ; ಡಾ. ಎ.ಆರ್. ಕೃಷ್ಣಶಾಸ್ತ್ರಿಗಳು ಹೇಳುವಂತೆ, ವ್ಯಾಸರಿಗೆ ಸಗ್ಗದವನು ಭಾಸನಿಗೆ ಸಗ್ಗುತ್ತಾನೆ! ಆದರೂ ಒಟ್ಟಿನಲ್ಲಿ ಅವನು ನಮಗೆ ಪರಿಚಿತನಾದ ದುರ್ಯೋಧನನೇ. ಗುರುಭಕ್ತಿ, ಪಾಂಡವ ದ್ವೇಷ, ರಾಜಕೀಯ ಚತುರತೆ, ಸತ್ಯಪ್ರವಣತೆ ಇವುಗಳಿಂದ ಕೂಡಿದ ಅವನ ಮನಸ್ಸಿನ ಹೊಯ್ದಾಟವನ್ನು ಭಾಸನು ಕೆಲವೇ ಮಾತುಗಳಲ್ಲಿ ಅಧಿಕವಾಗಿ ಮನಗಾಣಿಸುತ್ತಾನೆ. ಇಲ್ಲಿಯ ಪ್ರತಿಜ್ಞೆಯಂತೆ ಅವನು ಪಾಂಡವರಿಗೆ ರಾಜ್ಯಾರ್ಧವನ್ನು ಸಲ್ಲಿಸಿಬಿಟ್ಟಿದ್ದರೆ ಮಹಾಭಾರತದ ಮುಂದಿನ ಕಥೆಯೇ ನಿಂತುಹೋಗಬೇಕಾಗುತ್ತದೆ. ಆದರೆ ಹಾಗಾಗಲಿಲ್ಲವೆನ್ನುವುದಕ್ಕೆ ಭಾಸನ ಮಿಕ್ಕ ನಾಟಕಗಳು ಸಾಕ್ಷಿ. ಭಾಸನಿಗೂ ಸಗ್ಗದ ಶಕುನಿ ಹೇಗೂ ಇದ್ದನಷ್ಟೆ. ಪಂಚರಾತ್ರದಲ್ಲಿಯೇ ಅವನ ಕುಹಕ ಬುದ್ಧಿಯೂ ಕುಟಿಲೋಪಾಯಗಳೂ ಎದ್ದುಕಾಣುತ್ತವೆ. ಮುಂದೆ ಇನ್ನೇನು ತಂತ್ರಗಳನ್ನು ಹೂಡಿ, ದುರ್ಯೋಧನನ ದಾನವನ್ನು ಮುರಿದನೋ!

'ದೂತವಾಕ್ಯ'ದಲ್ಲಿ ದುರ್ಯೋಧನನ ಇನ್ನೊಂದು ಮುಖ ಕಾಣಿಸಿಕೊಳ್ಳುತ್ತದೆ. ಶ್ರೀಕೃಷ್ಣನು ಸಂಧಾನಕ್ಕಾಗಿ ಬಂದಾಗ ದುರ್ಯೋಧನನು ಅವನನ್ನು ಹೇಗೆ ಕಂಡನೆಂಬುದು ಈ ಏಕಾಂಕನಾಟಕದ ವಸ್ತು. ಅಲ್ಲಿಯ ಒಂದು ಸಂಗತಿಯನ್ನು ಮಾತ್ರ ನೋಡೋಣ. ಕೃಷ್ಣನು ಸಭೆಗೆಂದು ಬರುತ್ತಿದ್ದಾಗ ಅವನ ಮುಂದುಗಡೆ ದುರ್ಯೋಧನ ಕರ್ಣರಿಬ್ಬರೂ ನಡೆದು ಬರುತ್ತಿದ್ದರು, ಹಿಂದುಗಡೆ ವೃಷ್ಣಿಗಳೂ ಕೃತವರ್ಮನೂ ಇದ್ದರು ಎಂಬುದು ಮಹಾಭಾರತದ ಸ್ಪಷ್ಟವಾದ ಉಕ್ತಿ :

> ಅಗ್ರತೋ ವಾಸುದೇವಸ್ಯ ಕರ್ಣದುರ್ಯೋಧನಾವುಭೌ ।
> ವೃಷ್ಣಯಃ ಕೃತವರ್ಮಾ ಚಾಪ್ಯಾಸನ್ ಕೃಷ್ಣಸ್ಯ ಪೃಷ್ಠತಃ ॥

ಅವನು ಸಭೆಗೆ ಪ್ರವೇಶ ಮಾಡಿದಾಗ ಮಹಾರಾಜ ಧೃತರಾಷ್ಟ್ರನು ಎದ್ದು ನಿಂತು ಸ್ವಾಗತಿಸಿದನಂತೆ; ಅವನೊಂದಿಗೆ ಅಲ್ಲಿದ್ದ ಸಾವಿರಾರು ಮಂದಿ ರಾಜರೂ ಎದ್ದುನಿಂತರಂತೆ.

ದೂತವಾಕ್ಯದಲ್ಲಾದರೆ ಪ್ರಸಂಗ ಬೇರೆಯಾಗಿದೆ

ದುರ್ಯೋಧನನು ಸಭೆಯಲ್ಲಿ ಕುಳಿತಿರುವಾಗ ಕೃಷ್ಣನ ಆಗಮನವನ್ನು ಕಂಚುಕಿ ಅರಿಕೆ ಮಾಡುತ್ತಾನೆ. ದೂತನಾಗಿ ಬಂದವರನ್ನು ಅಲಕ್ಷ್ಯ ಮಾಡಬೇಕೆಂಬ ಉದ್ದೇಶದಿಂದ ದುರ್ಯೋಧನನು ದ್ರೌಪದಿಯ ವಸ್ತ್ರಾಪಹರಣದ ಚಿತ್ರವನ್ನು ತರಿಸಿ ಅದನ್ನು ನೋಡುತ್ತಾ ಕುಳಿತಿರುತ್ತಾನೆ; ಕೃಷ್ಣನು ಬಂದಾಗ ಯಾರಾದರೂ ಎದ್ದುನಿಂತರೆ ಅವರು ಹನ್ನೆರಡು ಸ್ವರ್ಣಭಾರಗಳ ದಂಡವನ್ನು ತೆರಬೇಕೆಂದು ಸಭಾಸದರಿಗೆ ವಿಧಿಸಿರುತ್ತಾನೆ. ಆದರೆ ಕೃಷ್ಣನು ಪ್ರವೇಶ ಮಾಡಿದ ಕೂಡಲೆ ಸಭಾಸದರು ಸಂಭ್ರಮದಿಂದ ಎದ್ದುನಿಲ್ಲುತ್ತಾರೆ; ದುರ್ಯೋಧನನೂ ಇದ್ದಕ್ಕಿದ್ದ ಹಾಗೆಯೇ ಪೀಠದಿಂದ ಉರುಳುತ್ತಾನೆ; "ಈ ದೂತ ತುಂಬ ಮಾಯಾವಿ" ಎಂದು ತನ್ನೊಳಗೇ ಎಂದುಕೊಳ್ಳುತ್ತಾನೆ.

ದುರ್ಯೋಧನನ ಈ ಅವಮರ್ಯಾದೆಯ ಪ್ರಸಂಗವನ್ನು ಯಾರು ಮೊದಲು ಕಲ್ಪಿಸಿದರೋ. ಈ ಮೊದಲೇ ಸೂಚಿಸಿರುವ ಹಾಗೆ ವ್ಯಾಸರ ಮಹಾಭಾರತದಲ್ಲಿ ಇದು ಇಲ್ಲ. ಅಲ್ಲಿಯ ದುರ್ಯೋಧನನು ಶ್ರೀಕೃಷ್ಣನನ್ನು ತಾನೇ ಗೌರವದಿಂದ ಸಭೆಗೆ ಕರೆತರುತ್ತಾನೆ; ಕನ್ನಡದ ಪಂಪಭಾರತದಲ್ಲಿ, ದುರ್ಯೋಧನನು "ಅಂಜನಾಚಲದವೋಲ್ ಕಣ್ಗೊಪ್ಪಿ ಬರ್ಪಂಬುಜೋದರನಂ ಮೆಲ್ಲನೆ ನೋಡಿ ಮೆಯ್ಯಲಸಿದಂತೆಂತಾನು ಮೆಟ್ಟಿದ್ದುರ್ಮ" ಅಪ್ಪಿಕೊಂಡನೆಂಬ ಸೂಚನೆ ಬರುತ್ತದೆ. ಇತ್ತ ಕುಮಾರವ್ಯಾಸ ಭಾರತದ ಮೇರೆಗೆ, ಕೃಷ್ಣನನ್ನು ಆಸ್ಥಾನದಲ್ಲಿದ್ದವರೆಲ್ಲರೂ ಕೈಮುಗಿದು ತಲೆಬಾಗಿ ಸ್ವಾಗತಿಸಿದರೂ, ಸಿಂಹಾಸನದ ಮೇಲೆ ಕುಳಿತಿದ್ದ ದುರ್ಯೋಧನನು ಇಳಿಯಲಿಲ್ಲ. ಆಗ ಕೃಷ್ಣನು ಭೂಮಿಯನ್ನು ಉಂಗುಟದಿಂದ ಒತ್ತಿದನಂತೆ; "ಮಣಿ ಖಚಿತ ಕಾಂಚನದ ಪೀಠದ ಗೊಣಸು ಮುರಿದುದು, ನಭದಿ ಸುರಸಂದಣಿಗಳಾ ಎನೆ ಕೆಡೆದು ಬಿದ್ದನು ಹರಿಯ ಚರಣದಲಿ." ಅದನ್ನು ನೋಡಿ ಕೃಷ್ಣನು, "ಧರಣಿಪತಿ, ಸಿಂಹಾಸನದ ಮೇಲಿರದೆ ಬಹರೇ, ನಾವು ಬಂದೇ ಹರಸುವೆವು ತಪ್ಪಾವುದೆನುತ ಎತ್ತಿದನು ಮಸ್ತಕವ" – ಇದನ್ನೆಲ್ಲ ನೋಡಿದರೆ, ಭಾಸನೇ ದುರ್ಯೋಧನನ ಈ ಕುಮತಿತನದ ಪ್ರಸಂಗವನ್ನು ಮೊದಲಬಾರಿಗೆ ಕಲ್ಪಿಸಿ, ಅಲ್ಲಿಂದ ಮುಂದೆ ಅದು ಕವಿಲೋಕದಲ್ಲಿ ಪ್ರಚಲಿತವಾಯಿತೋ ಏನೋ ಎನ್ನಿಸುತ್ತದೆ. ಅಂತೂ ಈ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ಆವಶ್ಯಕ.

ಕೊನೆಯದಾಗಿ 'ಊರು ಭಂಗ' ನಾಟಕದ ದುರ್ಯೋಧನನನ್ನು ಕುರಿತು ಎರಡು ಮಾತು. ಇಲ್ಲಿ ದುರ್ಯೋಧನನ ಗದಾಯುದ್ಧ ಕೌಶಲದ ವರ್ಣನೆ ಉಜ್ವಲವಾಗಿ ಬಂದಿದೆ. ಅವನ ಹೊಕ್ಕುಳ ಕೆಳಗೆ ಭೀಮನು ಗದೆಯಿಂದ ಹೊಡೆದು ತೊಡೆಯನ್ನು ಮುರಿದದ್ದು ಧರ್ಮ ಯುದ್ಧವಲ್ಲ ಎಂಬುದು ವ್ಯಾಸ ಮಹಾಭಾರತದಲ್ಲೇ ಸ್ಪಷ್ಟವಾಗಿದೆ; ಅದು ಭಾಸನ ಕೃತಿಯಲ್ಲೂ ವಿಶದವಾಗುತ್ತದೆ. ಎರಡು ಕಡೆಗಳಲ್ಲೂ ದುರ್ಯೋಧನನು ಧೀರನಾಗಿಯೇ ಭೂಮಿಗೆ ಬೀಳುತ್ತಾನೆ. ಆದರೆ ಮಹಾಭಾರತದಲ್ಲಿಲ್ಲದ ಒಂದು ಹೊಸ ಮನೋವೃತ್ತಿ ಇಲ್ಲಿಯ ದುರ್ಯೋಧನನಲ್ಲಿ ಗೋಚರವಾಗುತ್ತದೆ. ಭೀಮನ ವರ್ತನೆಯಿಂದ ರೋಷಗೊಂಡ ಬಲರಾಮನಿಗೆ ಇಲ್ಲಿ ದುರ್ಯೋಧನನು :

> ಜೀವಂತು ತೇ ಕುರುಕುಲಸ್ಯ ನಿವಾಪಮೇಘಾಃ ।
> ವೈರಂ ಚ ವಿಗ್ರಹಕಥಾಶ್ಚ ವಯಂ ಚ ನಷ್ಟಾಃ ॥

"ಕುರುವಂಶದವರಿಗೆಲ್ಲ ತರ್ಪಣೋದಕವನ್ನು ಎರೆಯಲು ಏಕಮಾತ್ರರಾಗಿ ಉಳಿದಿರುವ ಅವರು ಬದುಕಿಕೊಳ್ಳಲಿ. ವೈರವೂ ನಷ್ಟವಾಯಿತು; ಯುದ್ಧದ ಮಾತೂ ನಷ್ಟವಾಯಿತು. ಜೊತೆಗೆ ನಾನೂ ನಷ್ಟವಾದೆ" ಎಂದು ಹೇಳಿ ಅವನನ್ನು ತಡೆಯುತ್ತಾನೆ.

> ಪ್ರತಿಜ್ಞಾವಸಿತೇ ಭೀಮೇ ಗತೇ ಭ್ರಾತೃಶತೇ ದಿವಂ ।
> ಮಯಿ ಚೈವಂ ಗತೇ ರಾಮ ವಿಗ್ರಹ ಕಿಂ ಕರಿಷ್ಯತಿ ॥

"ಭೀಮನ ಪ್ರತಿಜ್ಞೆ ಮುಗಿದ ಬಳಿಕ, ನನ್ನ ನೂರುಮಂದಿ ತಮ್ಮಂದಿರು ಸ್ವರ್ಗಕ್ಕೆ ನಡೆದ ಬಳಿಕ, ನಾನೂ ಹೀಗಾದ ಬಳಿಕ – ಬಲರಾಮ, ಯುದ್ಧದಿಂದ ಏನಾಗುತ್ತದೆ" ಎನ್ನುತ್ತಾನೆ.

ಹೀಗೆ ಅವನ ಯುದ್ಧಾಸಕ್ತಿ ನಷ್ಟವಾದರೂ ಅವನ ಕೆಚ್ಚು ಮಾತ್ರ ನಿಶ್ಚಲವಾಗಿದೆ.

ಯೇನ್ಯೈನ ಮಾನೇನ ಸಮಂ ಪ್ರವಿಷ್ಟಾಃ ।
ತೇನ್ಯೈವ ಮಾನೇನ ಸಮಂ ಪ್ರಯಾತಾಃ ॥

"ಯಾವ ಮಾನದೊಂದಿಗೆ ನಾವು ಈ ಲೋಕಕ್ಕೆ ಬಂದೆವೋ ಆ ಮಾನದೊಂದಿಗೇ ಇಲ್ಲಿಂದ ತೆರಳುತ್ತೇವೆ" ಎಂದು ಆತ್ಮಾಭಿಮಾನದಿಂದ ಘೋಷಿಸುತ್ತಾನೆ. ಅವನ ದೃಷ್ಟಿಯಲ್ಲಿ, ತಾನು ಮಾಡಿದ್ದೂ ಬಾಳಿದ್ದೂ ಸರಿ; ತನ್ನ ಅವಸಾನವೂ ಸರಿ :

ಅಧೀತಂ ವಿಧಿವದ್ದತ್ತಂ ಭೂಃ ಪ್ರಶಾಸ್ತಾ ಸಸಾಗರಾ ।
ಮೂರ್ಧ್ನಿ ಸ್ಥಿತಮಮಿತ್ರಾಣಾಂ ಕೋ ನು ಸ್ವಂತತರೋ ಮಯಾ ॥
ಯದಿಷ್ಟಂ ಕ್ಷತ್ರ ಬಂಧೂನಾಂ ಸ್ವಧರ್ಮಮನುಪಶ್ಯತಾಂ ।
ತದಿದಂ ನಿಧನಂ ಪ್ರಾಪ್ತಂ ಕೋ ನು ಸ್ವಂತತರೋ ಮಯಾ ॥

"ನಾನು ವಿದ್ಯೆಯನ್ನು ಕಲಿತೆ; ಶಾಸ್ತ್ರೋಕ್ತವಾಗಿ ದಾನವನ್ನು ಮಾಡಿದೆ; ಸಮುದ್ರ ಮುದ್ರಿತವಾದ ರಾಜ್ಯವನ್ನು ಚೆನ್ನಾಗಿ ಆಳಿದೆ; ಶತ್ರುಗಳ ತಲೆಮೆಟ್ಟಿ ನಿಂತೆ. ನನಗಿಂತ ಉತ್ತಮವಾದ ಅವಸಾನ ಬೇರೆ ಯಾರಿಗುಂಟು? ಸ್ವಧರ್ಮ ನಿರತರಾದ ಕ್ಷತ್ರಿಯರು ಯಾವುದನ್ನು ಬಯಸುತ್ತಾರೋ ಅಂಥ ಈ ಮರಣವನ್ನು ನಾನು ಪಡೆದೆ; ನನಗಿಂತ ಉತ್ತಮವಾದ ಅವಸಾನ ಬೇರೆ ಯಾರಿಗುಂಟು!"

ಹೀಗೆಂದು ಮಹಾಭಾರತದ ಶಲ್ಯಪರ್ವದ ಕೊನೆಯಲ್ಲಿ ದುರ್ಯೋಧನನು ಶ್ರೀಕೃಷ್ಣನಿಗೆ ಹೇಳಿ ತನ್ನ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಾನೆ. ಇದೇ ಭಾವವೇ ಭಾಸನ ಊರುಭಂಗ ನಾಟಕದಲ್ಲಿ, ಪತಿಯ ದುಃಸ್ಥಿತಿಯನ್ನು ಕುರಿತು ರೋದಿಸುತ್ತಿದ್ದ ತನ್ನ ಪತ್ನಿ ಪೌರವಿಗೆ ದುರ್ಯೋಧನನು ಹೇಳುವ ಈ ಕೆಳಗಿನ ಮಾತಿನಲ್ಲಿ ಸ್ಫುಟಗೊಳ್ಳುತ್ತದೆ :

ವೇದೋಕ್ತೈರ್ವಿವಿಧೈರ್ಮಖೈರಭಿಮತೈರಿಷ್ಟಂ ಧೃತಾ ಬಾಂಧವಾಃ
ಶತ್ರೂಣಾಮುಪರಿ ಸ್ಥಿತಂ ಪ್ರಿಯಶತಂ, ನವ್ಯಂಸಿತಾಃ ಸಂಶ್ರಿತಾಃ ।
ಯುದ್ಧೇಷ್ವಾದಶವಾಹಿನೀ ನೃಪತಯಃ ಸಂತಾಪಿತಾ ನಿಗ್ರಹೇ
ಮಾನಂ ಮಾನಿನಿ ವೀಕ್ಷ್ಯ ಮೇ ನಹಿ ರುದಂತ್ಯೇವಂ ವಿಧಾನಾಂ ಸ್ತ್ರಿಯಃ ॥

"ನಾನು ವೇದೋಕ್ತವಾದ ಬಗೆ ಬಗೆಯ ಯಾಗಗಳನ್ನು ನೆರವೇರಿಸಿದೆ; ಬಾಂಧವರನ್ನು ಪೋಷಿಸಿದೆ; ಶತ್ರುಗಳನ್ನು ಮೆಟ್ಟಿನಿಂತೆ, ಆಶ್ರಿತರನ್ನು ವಂಚಿಸಲಿಲ್ಲ; ಯುದ್ಧದಲ್ಲಿ ಹದಿನೆಂಟು ಸೇನೆಗಳ ರಾಜರುಗಳನ್ನು ಸಂತಾಪಗೊಳಿಸಿದೆ; ಓ ಮಾನಿನಿ, ನನಗೆ ಘಾಸಿಯುಂಟಾದಾಗಲೂ ಮಾನವನ್ನು ನೋಡಿದ ಬಳಿಕ, ನನ್ನಂಥವರ ಪತ್ನಿಯರು ಹೀಗೆ ಅಳುವುದಿಲ್ಲ" ಎಂದು ಸಮಾಧಾನ ಮಾಡುತ್ತಾನೆ.

ಇಲ್ಲಿಗೆ ಈ ದುರ್ಯೋಧನ ವೃತ್ತಾಂತವನ್ನು ನಾವೂ ಮುಗಿಸಬೇಕು. ಆದರೆ ದುರ್ಯೋಧನನ ಮಗನೆಂದು ಭಾಸನು ಹೊಸದಾಗಿ ಸೃಷ್ಟಿಸಿರುವ ದುರ್ಜಯ ಕುಮಾರನು

ತನ್ನ ತಂದೆಯನ್ನು ಹುಡುಕಿಕೊಂಡು ಬಂದು ಅವನ ಮುರಿದ ತೊಡೆಯಮೇಲೆ ಕುಳಿತುಕೊಳ್ಳಲು ಬಯಸುವ ಊರುಭಂಗದ ಅಪೂರ್ವ ಪ್ರಸಂಗವನ್ನು ಕುರಿತು ಕೊಂಚ ಪ್ರಸಂಗಿಸಿದಲ್ಲದೆ ಮನಸ್ಸು ನಿಲ್ಲುವುದಿಲ್ಲ. ಅಲ್ಲಿಯ ಉಕ್ತಿಗಳನ್ನೇ ಆಲಿಸೋಣ.

ದುರ್ಯೋಧನ :
ಮಗು, ನೀನು ಇಲ್ಲಿಗೆ ಏಕೆ ಬಂದೆ?

ದುರ್ಜಯ :
ನೀನು ತಡಮಾಡಿದೆ ಎಂದು.

ದುರ್ಯೋಧನ :
ಅಯ್ಯೋ, ಈ ಅವಸ್ಥೆಯಲ್ಲಿ ಕೂಡ ಪುತ್ರಸ್ನೇಹ ನನ್ನ ಹೃದಯವನ್ನು ಸುಡುತ್ತದೆಯಲ್ಲ.

ದುರ್ಜಯ :
ನಾನು ನಿನ್ನ ತೊಡೆಯಮೇಲೆ ಕುಳಿತುಕೊಳ್ಳುತ್ತೇನೆ. (ಎಂದು ತೊಡೆಯನ್ನು ಏರುತ್ತಾನೆ).

ಆಗ ದುರ್ಯೋಧನನು "ದುರ್ಜಯ, ದುರ್ಜಯ! ಅಯ್ಯೋ" ಎಂದು ನಿವಾರಿಸಿದಾಗ, ದುರ್ಜಯನು "ಏಕೆ ತಡೆಯುತ್ತೀಯೆ" ಎಂದು ಕೇಳುತ್ತಾನೆ.

ಆದರೆ ದುರ್ಯೋಧನನು – ಈ ಪರಿಚಿತವಾದ ಪೀಠ ಇನ್ನೂ ಮುಂದೆ ನಿನಗೆ ಇಲ್ಲವಪ್ಪಾ ಎನ್ನುತ್ತಾನೆ.

ದುರ್ಜಯ :
ಅಪ್ಪಾ, ನೀನು ಎಲ್ಲಿಗೆ ಹೋಗುತ್ತೀಯೆ?

ದುರ್ಯೋಧನ :
ನೂರು ಮಂದಿ ತಮ್ಮಂದಿರನ್ನು ಹಿಂಬಾಲಿಸಿ.

ದುರ್ಜಯ :
ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗು.

ದುರ್ಯೋಧನ :
ಹೋಗು ಮಗು, ವೃಕೋದರನನ್ನು ಕೇಳು.

ಕರುಳು ಹಿಂಡುವ ಈ ವಾಕ್ಯದೊಡನೆ ಈ ಭಾಷಣವನ್ನು ಮುಗಿಸೋಣ.

ಕಾವ್ಯಾನುಭವ : ೧೯೭೦

ಕಾಳಿದಾಸನ ನಾಟಕಗಳಲ್ಲಿ ದುರಂತ ವಸ್ತು ವಿನ್ಯಾಸ*

೧

ಸುಮಾರು ಇಪ್ಪತ್ತೈದು ಶತಮಾನಗಳಿಗೆ ಹಿಂದೆ ಗ್ರೀಸ್ ದೇಶದಲ್ಲಿ ದುರಂತ ನಾಟಕವು ಜನಿಸಿದಂದಿನಿಂದ ಇಂದಿನವರೆಗೂ ಅದು ಪಾಶ್ಚಾತ್ಯ ಸಾಹಿತ್ಯದಲ್ಲಿ ಅಗ್ರಪೀಠವನ್ನು ವಹಿಸಿದೆ. ಈಸ್ಕಿಲಸ್, ಸೋಫೋಕ್ಲೀಸ್, ಯೂರಿಪಿಡೀಸ್, ಷೇಕ್ಸ್‌ಪಿಯರ್, ಗಯಟೆ, ಇಬ್ಸೆನ್ – ಲೋಕವಿಶ್ರುತವಾದ ಈ ಕೆಲವು ಹೆಸರುಗಳನ್ನು ಉಚ್ಚರಿಸಿದರೆ ಸಾಕು; ದುರಂತ ನಾಟಕದ ಉನ್ನತಿಯನ್ನೂ ವೈವಿಧ್ಯ ವಿಸ್ತಾರಗಳನ್ನೂ ಬೇರೆ ವರ್ಣಿಸಬೇಕಾಗಿಲ್ಲ. ಈ ಬಗೆಯ ನಾಟಕವು ಏರದ ಕವಿತಾ ಶಿಖರವಿಲ್ಲ, ಶೋಧಿಸದ ಹೃದಯಗಹ್ವರವಿಲ್ಲ. ಇದರಲ್ಲಿ ಕವಿ ಸಾಮಾಜಿಕನನ್ನು ಮರುಗಿಸುವನು, ನಡುಗಿಸುವನು, ಉಬ್ಬಿಸುವನು, ಬೆಡಗುಗೊಳಿಸುವನು; ಎಂದಿಗೂ ಹರಿಯದ ಜೀವನ ಸಮಸ್ಯೆಯನ್ನು ತಲೆಯಲ್ಲಿ ತುಂಬಿ ರಂಗಮಂದಿರದಿಂದ ಹೊರಗೆ ಕಳುಹಿಸುವನು. ಪಾಶ್ಚಾತ್ಯರಿಗೆ ದುರಂತ ನಾಟಕವು ಕೇವಲ ಕಲೆಯ ಬೆಡಗಲ್ಲ. ಅದು ಆತ್ಮ ಸಂಸ್ಕಾರದ ಸಾಧನ, ಜೀವನ ಸಾರದ ಸಾಕ್ಷಾತ್ಕರಣ.

ಜೀವನವು ಹಲವು ವ್ಯಕ್ತಿಗಳ, ಹಲವು ಶಕ್ತಿಗಳ ಕದನಕ್ಷೇತ್ರ. ಒಂದು ಕಡೆ ಮಾನವನು ತನ್ನ ಹವಣಿಗೆ ಮೀರಿದ್ದನ್ನು, ಕೈಗೆ ನಿಲುಕದ್ದನ್ನು ಪಡೆಯಲು ಬಯಸಿ

* ಪ್ರಬುದ್ಧ ಕರ್ನಾಟಕ, ೧೫.೧.

ದೈವದ ಕಾಟಕ್ಕೆ ಸಿಕ್ಕುತ್ತಾನೆ. ಇನ್ನೊಂದು ಕಡೆ ತನ್ನ ಸುಖಸಾಧನೆಯಲ್ಲಿ ಮಗ್ನನಾಗಿ ಸಮಾಜದ ಕಟ್ಟಳೆಗೆ ಎದುರು ಬೀಳುತ್ತಾನೆ. ಒಮ್ಮೆ ಮಾನವನ ಮನಸ್ಸಿನಲ್ಲೇ ಎರಡು ಕವಲೊಡೆದು ಪಾಪ ಪುಣ್ಯಗಳಿಗೆ, ಧರ್ಮಕಾಮಗಳಿಗೆ, ಅಥವಾ ಎರಡು ಧರ್ಮಗಳಿಗೇ, ಹೋರಾಟ ಹತ್ತುತ್ತದೆ. ಮತ್ತೊಮ್ಮೆ ತಾನು ಯಾವ ತಪ್ಪನ್ನೂ ಮಾಡದಿದ್ದರೂ ತನ್ನ ಆವರಣವೇ, ತನ್ನ ಜನ್ಮವೇ ತನಗೆ ಶೂಲವಾಗಿ ಪರಿಣಮಿಸುತ್ತದೆ. ಒಂದೊಂದು ಸಲ ಗುಣಾಧಿಕ್ಯವೇ ದೋಷಚ್ಛಾಯೆಯನ್ನು ತಾಳುವುದೂ ಉಂಟು. ಅಂತೂ ಈ ಘೋರಘರ್ಷಣದ ಫಲವಾಗಿ ಜೀವನರಂಗವು ಮುರಿದ ಬಯಕೆಗಳಿಂದಲೂ ಬಿದ್ದ ದೇಹಗಳಿಂದಲೂ ತುಂಬುತ್ತದೆ. ಇಲ್ಲಿ, ತಪ್ಪಿಗೆ ತಕ್ಕಷ್ಟೇ ಶಿಕ್ಷೆ, ತಪ್ಪಿಗೆ ಮಾತ್ರ ಶಿಕ್ಷೆ ಎಂದು ಯಾರೂ ಹೇಳುವ ಹಾಗಿಲ್ಲ. ಅಲ್ಪವಾದ ಲೋಪದೋಷಗಳೇ ಸನ್ನಿವೇಶ ಮಹಿಮೆಯಿಂದ ಬೃಹದಾಕಾರವನ್ನು ತಾಳುತ್ತವೆ. ಎಂಥ ಉದಾತ್ತ ಪ್ರಕೃತಿಯ ವೀರನಾದರೂ ಒಂದಲ್ಲ ಒಂದು ಸಲ ಕಾಲುಜಾರದೆ ಇರುವುದಿಲ್ಲ. ಆದರೆ ಅವನ ದುರದೃಷ್ಟದಿಂದ ಅದೇ ವಿಪರೀತವಾಗಿ ಪರಿಣಮಿಸಿ, ಹೆಜ್ಜೆಯಿಟ್ಟಷ್ಟೂ ಕೆಸರಿನ ಆಳ ಹೆಚ್ಚಾಗುತ್ತಾ ಹೋಗುತ್ತದೆ. ಸತ್ತ್ವಶಾಲಿಗಳ ಜೀವನದಲ್ಲಿ ಒದಗುವ ಇಂಥ ವಿಷಮಘಟನೆಗಳನ್ನು ಕಂಡು ನಮ್ಮೆದೆ ತಲ್ಲಣಿಸುತ್ತದೆ; ಅದರ ದುರಂತ ಪರಿಣಾಮವನ್ನು ಕಂಡು ಅಪಾರವಾದ ವಿಷಾದವು ಮೂಡುತ್ತದೆ. ಕೊನೆಯ ಅನಾಹುತವು ಸಂದರ್ಭಕ್ಕೆ ಅನುರೂಪವೆಂದೂ ಹೇಳಲಾರೆವು, ಸರ್ವಥಾ ಅನ್ಯಾಯವೆಂದೂ ಹೇಳಲಾರೆವು. ಅಂತೂ ಬಾಳಿನಲ್ಲಿ ಇದ್ದೊಂದು ಅಭೇದ್ಯ ಸಮಸ್ಯೆ. ಇದನ್ನು ನಮ್ಮ ಕಣ್ಣಮುಂದೆ ನಿಲ್ಲಿಸುವುದೇ ದುರಂತ ನಾಟಕ.

ಇತ್ತ ನಮ್ಮ ಸಂಸ್ಕೃತ ನಾಟಕಗಳ ಕಡೆ ತಿರುಗಿದರೆ ಅಲ್ಲಿ ಕಾಣುವುದೇನು? ಇಲ್ಲಿ ಚಿತ್ರಿತವಾಗುವ ಜೀವನದಲ್ಲೂ ಕ್ಲೇಶಸಂಕಟಗಳಿಲ್ಲದೆ ಇಲ್ಲ. ವ್ಯಕ್ತಿ ಶಕ್ತಿಗಳ ಮಸೆದಾಟವಿಲ್ಲದೆ ಇಲ್ಲ. ಆದರೆ ಇವು ಕೊನೆತನಕ ನಿಲ್ಲತಕ್ಕವಲ್ಲ. ಈ ಲೋಕದಲ್ಲೇ ನಮ್ಮ ಕಣ್ಣೆದುರಿಗೇ ಎಲ್ಲಕ್ಕೂ ಪೂರ್ಣಸಮನ್ವಯ ಒದಗುತ್ತದೆ. ಬಾಳಿನ ಭಿನ್ನ ತಂತುಗಳಿಗೆಲ್ಲ ತೊಡಕು ತಪ್ಪಿ, ಒಂದರೊಡನೊಂದು ಹೊಂದಿಕೊಂಡು ಮಂಗಳಸೂತ್ರವಾಗಿ ಮುಗಿಯುತ್ತವೆ. ನಾಟಕದ ವಸ್ತು ಯಾವುದೇ ಆಗಿರಲಿ, ನಡುವೆ ಎಂಥ ವಿಷಮ ಸಂಘಟನೆಗಳೇ ಒದಗಿರಲಿ ಕೊನೆ ಮಾತ್ರ ಒಂದೇ : ಮಂಗಳ ಶಾಂತಿ. 'ದುರಂತ'ವೆಂಬ ಹೆಸರು ಈ ಚಿತ್ರಕ್ಕೆ ಒಪ್ಪಲಾರದು.

ಸಂಸ್ಕೃತ ಸಾಹಿತ್ಯದಲ್ಲಿ ಆದಿಯಿಂದಲೂ ಹೀಗಿರಲಿಲ್ಲ. ನಾಟಕಗಳನ್ನು ಬಿಟ್ಟು 'ಇತಿಹಾಸ'ಗಳನ್ನು ಕ್ಷಣಕಾಲ ಪರಿಶೀಲಿಸಿದರೆ ಈ ಅಂಶವು ಸ್ಫುಟವಾಗುತ್ತದೆ. 'ರಾಮಾಯಣ' 'ಮಹಾಭಾರತ'ಗಳಲ್ಲಿ ದುರಂತ ವ್ಯಕ್ತಿಗಳೂ ಸನ್ನಿವೇಶಗಳೂ ಎಷ್ಟೊಂದಿಲ್ಲ! ಮೊದಲು ಅಷ್ಟು ಸರಳೆಯೂ ಸ್ನೇಹಮಯಿಯೂ ಆಗಿದ್ದ ಕೈಕೆಗೆ ಮಂಥರೆಯ ದುರ್ಬೋಧನೆಯಿಂದ ಹೆಬ್ಬಯಕೆ ಹುಟ್ಟಿ ಎಂಥ ಅನರ್ಥದಲ್ಲಿ ಫಲಿಸಿತು; ರಾಮನ ಅಪವಾದಭೀತಿ ಸೀತೆಗೂ ಅವನಿಗೂ ಎಷ್ಟು ಕ್ಲೇಶ ನಿಷ್ಠುರಗಳನ್ನೊಡ್ಡಿತು! ಎಂಥ ವಿಯೋಗವನ್ನು ತಂದಿತು! ಉದಾರ ಹೃದಯದ ಕರ್ಣನು ಕುಂತೀಕನ್ಯೆಯ

ಗರ್ಭದಲ್ಲಿ ಜನಿಸಿದ್ದೇ ಅವನಿಗೆ ಮೃತ್ಯುವಾಗಿ ಪರಿಣಮಿಸಲಿಲ್ಲವೆ? ಮಹಾವೀರನೂ ಸತ್ಯವ್ರತನೂ ಕುರುಜ್ಯೇಷ್ಠನೂ ಆದ ಭೀಷ್ಮನು ದಾಕ್ಷಿಣ್ಯವಶನಾಗಿ ತನ್ನವರ ಕೈಯಿಂದಲೇ ಸಾಯಲಿಲ್ಲವೆ? ಕಡೆಗೆ ಈ ಎರಡು ಮಹಾಗ್ರಂಥಗಳ ಪ್ರತಿನಾಯಕರಾದ ರಾವಣ ದುರ್ಯೋಧನರ ವೃತ್ತಾಂತವೂ ಬೇರೆಯಲ್ಲ. ರಾವಣನ ತೇಜಸ್ಸಿಗೆ ಸ್ತ್ರೀ ವ್ಯಾಮೋಹದ ಕಳಂಕವೊಂದು ತಗುಲದಿದ್ದರೆ ಅವನ ಸಮಾನರು ಯಾರು? ಮಹಾಸತ್ತ್ವನೂ ಅಭಿಮಾನಧನನೂ ಆದ ದುರ್ಯೋಧನನಿಗೆ ಛಲದ ಹುಚ್ಚು ಹಿಡಿದು ಊರು ಭಂಗವಾಯಿತು. ಇಷ್ಟೇ ಅಲ್ಲ. ಈ ಎರಡು ಇತಿಹಾಸಗಳ ಪರ್ಯವಸಾನವೇ ಮಹಾ ವಿಷಾದದಲ್ಲಿ. ಗ್ರಂಥವು ಮಂಗಳಾಂತವೇ ಆಗಬೇಕೆಂಬ ಹಟ ಅವುಗಳ ಕರ್ತೃಗಳಿಗಿದ್ದಂತೆ ತೋರುವುದಿಲ್ಲ.

ಸಂಸ್ಕೃತ ನಾಟಕದಲ್ಲಿ ಮಾತ್ರ ಈ ದೃಷ್ಟಿವೈಶಾಲ್ಯವು ತಪ್ಪಿಹೋಗಿದೆ. ಇದುವರೆಗೆ ದೊರೆತಿರುವ ನಾಟಕಗಳಲ್ಲೆಲ್ಲಾ ಭಾಸನ 'ಊರುಭಂಗ'ವೊಂದೇ ದುರಂತ ನಾಟಕವೆಂಬ ಹೆಸರಿಗೆ ಅರ್ಹವಾದದ್ದು. ಅದಕ್ಕೆ ಕೂಡ ಆ ಹೆಸರನ್ನು ಕೊಡಲೊಪ್ಪದ ವಿದ್ವಾಂಸರಿದ್ದಾರೆ.[೧] ಅವರ ವಾದವು ವಿಚಾರದ ಮುಂದೆ ನಿಲ್ಲಲಾರದೆಂಬುದು ನಿಜ. ಆದರೆ ಊರುಭಂಗವು ಸಂಸ್ಕೃತ ಸಾಹಿತ್ಯದಲ್ಲಿ ಅಡ್ಡಪಂಕ್ತಿಯ ಕೃತಿಯೆಂದು ಮಾತ್ರ ಒಪ್ಪಿಕೊಳ್ಳಬೇಕು. ಸಾಮಾನ್ಯ ವಿಧಿಗೆ ಅದು ಒಂದು ಅಪವಾದವಿದ್ದಂತೆ – ನಮ್ಮ ದೇಶದಲ್ಲಿ ದುರಂತ ನಾಟಕದ ಈ ಅತ್ಯಂತಾಭಾವಕ್ಕೆ ಏನು ಕಾರಣ? ಕರ್ಮವಾದವನ್ನು ನಂಬಿದ್ದರಿಂದ ನಮ್ಮವರಿಗೆ ಈ ಬಗೆಯ ಕೃತಿಯನ್ನು ರಚಿಸುವುದು ಅಸಾಧ್ಯವಾಯಿತೆ? ಅಥವಾ ಆರಂಭ ಕಾಲದಿಂದಲೂ ಸಂಸ್ಕೃತ ನಾಟಕವು ಮಂಗಳಾಂತದ ನಿಯಮಕ್ಕೆ ಸೆರೆಸಿಕ್ಕಿದ್ದರಿಂದ ಈ ಬಗೆಯ ಬೆಳವಣಿಗೆಯನ್ನು ಕಳೆದುಕೊಂಡಿರಬಹುದೆ? ಇದು ಮುಖ್ಯವಾದ ಪ್ರಶ್ನೆಯಾದರೂ ಇದರ ವಿವೇಚನೆ ನಮಗೆ ಸದ್ಯದಲ್ಲಿ ಪ್ರಸಕ್ತವಲ್ಲ. ಕಾರಣ ಏನೇ ಆಗಿರಲಿ; ಸಂಸ್ಕೃತ ನಾಟಕಕಾರರಿಗೆ ಜೀವನವನ್ನೂ ವ್ಯಕ್ತಿಗಳನ್ನೂ ದುರಂತವಾಗಿ ಪ್ರತಿಪಾದಿಸುವ ಅಭ್ಯಾಸವು ಬರಲಿಲ್ಲ. ಅವರು ಹಿಂದಿನ ಪುರಾಣೇತಿಹಾಸಗಳಿಂದ ದುರಂತ ಸನ್ನಿವೇಶಗಳನ್ನು ಆರಿಸಿಕೊಂಡರೂ ಅವಕ್ಕೆ ಹೊಸ ಬಣ್ಣವನ್ನು ಕಟ್ಟುತ್ತಾರೆ. ಕಥೆಯನ್ನು ವಿಷಾದಗತಿಯಲ್ಲೇ ನಡಸಿಕೊಂಡು ಬಂದರೂ ಅದರ ಕೊನೆಯಲ್ಲಿ ಮಂಗಳವನ್ನು ಹಾಡುತ್ತಾರೆ. ಮಿಕ್ಕವರ ಮಾತಿರಲಿ! ಈ ಆಕ್ಷೇಪಣೆಯಿಂದ ಕಾಳಿದಾಸ ಭವಭೂತಿಗಳು ಕೂಡ ತಪ್ಪಿಸಿಕೊಳ್ಳುವಂತಿಲ್ಲ.

ನಾಟಕವು ಮಂಗಳಾಂತವಾದ ಮಾತ್ರಕ್ಕೇ ಕೆಟ್ಟುಹೋಗುವುದೆಂದು ಮೇಲಿನ ಮಾತಿಗೆ ಅರ್ಥವಲ್ಲ. ಎಲ್ಲ ಸಂದರ್ಭಗಳಿಗೂ ದುರಂತ ದೃಷ್ಟಿ ಸರಿಹೋಗತಕ್ಕದ್ದೂ ಅಲ್ಲ. ಜೀವನವು ಬಹುಮುಖದಾದದ್ದು. ಎಷ್ಟೋ ವೇಳೆ ಒಂದೇ ಸನ್ನಿವೇಶವನ್ನು ಬೇರೆ ಬೇರೆ ದೃಷ್ಟಿಗಳಿಂದ ಅವಲೋಕಿಸುವುದು ಸಾಧ್ಯ; ಅವುಗಳಲ್ಲಿ ಯಾವುದನ್ನು ಅವಲಂಬಿಸಿದರೆ ಉತ್ತಮವೂ ಅರ್ಥಪೂರ್ಣವೂ ಆದ ಫಲವು ದೊರೆಯುತ್ತದೋ

---

೧. A.B. Keith, *The Sanskrit Drama*, pp. 38, 278.

ಅದನ್ನೇ ನಾಟಕಕಾರನು ಸಾಮಾನ್ಯವಾಗಿ ಅಂಗೀಕರಿಸಬೇಕು. ಆದರೆ ಕೆಲವು ಸನ್ನಿವೇಶಗಳಲ್ಲಾದರೂ ದುರಂತ ದೃಷ್ಟಿಯ ತ್ಯಾಗವು ಅಸಮಂಜಸವಾಗಬಹುದು. ಮಹಾಕವಿ ಕೂಡ ಈ ಔಚಿತ್ಯನಿಯಮವನ್ನು ಮೀರಿದರೆ ಅವನ ಕೃತಿಪಾಕವು ಹದತಪ್ಪಿಹೋಗಬಹುದು. ಇನ್ನು ಕೆಲವು ವೇಳೆ ಕವಿಯ ಮಂಗಳಾಕಾಂಕ್ಷೆಯಿಂದ ಹಳೆಯ ಕಥೆಗೆ ಹೊಸ ಕಳೆಯೊಂದು ಬರಬಹುದು; ಈ ಬಗೆಯ ಪ್ರತಿಪಾದನೆಯಿಂದಲೇ ಅದು ಸುಸಂಬದ್ಧವೂ ಲೋಕೋತ್ತರವೂ ಆಗಬಹುದು. ಆ ಸಮಯದಲ್ಲಿ ಕವಿಯ ಕಾರ್ಯಕ್ಕೆ ಬೇರೆ ಯಾವ ಸಮರ್ಥನೆಯೂ ಬೇಕಿಲ್ಲ.

ಕಾಳಿದಾಸನ 'ವಿಕ್ರಮೋರ್ವಶೀಯ'ವೂ 'ಅಭಿಜ್ಞಾನ ಶಾಕುಂತಲ'ವೂ ನಾಟಕದ ಪ್ರಸಿದ್ಧ ಸಂಪ್ರದಾಯದಂತೆ ಮಂಗಳದಲ್ಲಿ ಮುಗಿದಿರತಕ್ಕವು. ಇವಕ್ಕೆ ತಳಹದಿಯಾದ ಪ್ರಾಚೀನ ಕಥೆಗಳೆರಡೂ ತಿರುಳಿನಲ್ಲಿ ದುರಂತವಾಗಿರತಕ್ಕವು. ಈ ಮೂಲವಸ್ತುವನ್ನು ಕಾಳಿದಾಸನು ಹೇಗೆ ಬೆಳಸಿದ್ದಾನೆ! ದೃಷ್ಟಿಭೇದದಿಂದ ಲಾಭನಷ್ಟಗಳೇನಾದರೂ ಉಂಟಾಗಿವೆಯೇ – ಇದರ ವಿವೇಚನೆಯೇ ಪ್ರಸ್ತುತ ಲೇಖನದ ಉದ್ದೇಶ.

೨

ಉರ್ವಶೀ–ಪುರೂರವರ ಪ್ರಣಯಪ್ರಸಂಗವು ತುಂಬ ಪುರಾತನವಾದ ಕಥೆ.[೨] 'ಋಗ್ವೇದ'ದಲ್ಲಿಯೇ ಇವರನ್ನು ನಾವು ಮೊದಲು ನೋಡುತ್ತೇವೆ. ಇವರಿಬ್ಬರಿಗೆ ನಡೆದ ಒಂದು ಸಂವಾದವು ಅಲ್ಲಿಯ ಒಂದು ಸೂಕ್ತದ (x. ೯೫) ತುಂಬ ಇದೆ. ಅದರ ವಾಕ್ಯವಾಕ್ಯಕ್ಕೂ ಅರ್ಥವು ಸ್ಫುಟವಾಗಿದ್ದರೂ ಅಭಿಪ್ರಾಯವನ್ನು ಗ್ರಹಿಸುವುದೇನೂ ಕಷ್ಟವಲ್ಲ. 'ಶತಪಥಬ್ರಾಹ್ಮಣ'ದಲ್ಲಿ (xi. ೫. ೧) ಈ ಸಂವಾದದ ವಿವರಣೆ ವಿನಿಯೋಗಗಳೂ ಅದಕ್ಕೆ ಮೊದಲು ನಡೆದ ಕಥೆಯ ನಿರೂಪಣೆಯೂ ತಕ್ಕಮಟ್ಟಿಗೆ ದೊರೆಯುತ್ತವೆ. ಇದೆಲ್ಲದರ ಆಧಾರದಿಂದ ವೈದಿಕ ಯುಗದಲ್ಲಿ ಈ ಕಥೆಯ ಸ್ವರೂಪವೇನೆಂಬುದನ್ನು ಗ್ರಹಿಸಬಹುದು.

ಉರ್ವಶಿ ಒಬ್ಬ ಅಪ್ಸರೆ; ಪುರೂರವನು ಚಂದ್ರವಂಶದ ದೊರೆ. ಅವನನ್ನು ವರಿಸುವಾಗ ಆಕೆ ಕೆಲವು ನಿಬಂಧನೆಗಳನ್ನು ಮಾಡಿಕೊಂಡಳು; ತನ್ನ ಕಣ್ಣಿಗೆ ಅವನು ನಗ್ನನಾಗಿದ್ದಾಗ ಕಾಣಿಸಿಕೊಳ್ಳಕೂಡದೆಂಬುದು ಇವುಗಳಲ್ಲಿ ಒಂದು. ನಾಲ್ಕು ವರ್ಷಗಳನ್ನು

---

೨. ಇದು ಬರಿಯ ಕಥೆಯಲ್ಲ. ಇಲ್ಲಿ ಪುರೂರವನೇ ಸೂರ್ಯ, ಉರ್ವಶಿಯೇ ಉಷಸ್ಸು. ತಮ್ಮ ಪ್ರಥಮ ಸಮಾಗಮವು ಮುರಿದ ಬಳಿಕ, ಕಣ್ಣುಮರೆಯಾದ ಉಷೆಯನ್ನು ಹುಡುಕಿಕೊಂಡು ಸೂರ್ಯನು ಭಗ್ನಹೃದಯದಿಂದ ತೊಳಲುವನೆಂಬ ಪ್ರಾಕೃತಿಕ ದೃಶ್ಯವೇ ಈ ಕಥೆಯಾಗಿ ಪರಿಣಮಿಸಿರಬಹುದು. ಪ್ರಕೃತಿಯ ವಿಸ್ತಾರದಲ್ಲಿ ಪ್ರಾಚೀನರ ಕಣ್ಣಿಗೆ ತೋರಿಬಂದ ದುರಂತ ಭಾವವೇ ಅವರು ರಚಿಸಿದ ಮಾನವ ದುರಂತ ಕಥೆಗಳಿಗೆ ಜೀವನಾಧಾರವಾಗಿರಬಹುದು– ಹೀಗೆಂದು ಮ್ಯಾಕ್ಸ್‌ಮುಲರ್ ಪಂಡಿತರ ಅಭಿಪ್ರಾಯ. (*Chips from a German Workshop*, Vol. IV, pp. 107-116)

ಇಬ್ಬರೂ ಒಟ್ಟಿಗೆ ಕಳೆದರು; ಉರ್ವಶಿ ಗರ್ಭವತಿಯೂ ಆದಳು. ಈ ನಡುವೆ ಅವಳ ಸಹವಾಸವನ್ನು ಕಳೆದುಕೊಂಡಿದ್ದ ಗಂಧರ್ವರು ಮತ್ತೆ ಅವಳನ್ನು ಪಡೆಯಬೇಕೆಂದು ಆಲೋಚಿಸಿ ಒಂದು ಉಪಾಯವನ್ನು ಹೂಡಿದರು. ಒಂದು ರಾತ್ರಿ ಉರ್ವಶಿಯ ಮಂಚಕ್ಕೆ ಕಟ್ಟಿದ್ದ ಎರಡು ಮುದ್ದಿನ ಮರಿಟಗರುಗಳಲ್ಲಿ ಒಂದಾಗುತ್ತಲೊಂದನ್ನು ಅಪಹರಿಸಿಕೊಂಡು ಹೋದರು. ಅದನ್ನು ಉರ್ವಶಿ ಕಂಡು "ಇಲ್ಲಿ ವೀರನಿಲ್ಲ ಗಂಡಸಿಲ್ಲ ಎಂಬ ಹಾಗೆ ನನ್ನ ಮುದ್ದಿನ ಕಂದನನ್ನು ಅಪಹರಿಸುತ್ತಿದ್ದಾರೆ" ಎಂದು ಎರಡು ಸಲವೂ ಕೂಗಿಕೊಂಡಳು. ಆಗ ಪುರೂರವನ ಮನಸ್ಸು ಚುಚ್ಚಿ, ಅವನು "ನಾನಿರುವಾಗ ವೀರನಿಲ್ಲವೆ ಗಂಡಸಿಲ್ಲವೆ?" ಎಂದುಕೊಂಡು, ಬಟ್ಟೆಬರೆ ಹಾಕಿಕೊಂಡರೆ ಕಾಲ ವಿಳಂಬವಾದೀತೆಂದು ಥಟ್ಟನೆ ನಗ್ನತೆಯಲ್ಲೇ ಕಳ್ಳರ ಹಿಂದೆ ನೆಗೆದನು. ಆ ಸಮಯಕ್ಕೆ ಸರಿಯಾಗಿ ಗಂಧರ್ವರು ದೊಡ್ಡ ಮಿಂಚೊಂದನ್ನು ಸೃಷ್ಟಿಸಿದರು. ಹಗಲಿನಂಥ ಅದರ ಬೆಳಕಿನಲ್ಲಿ ಉರ್ವಶಿ ಪುರೂರವನ ನಗ್ನತೆಯನ್ನು ಕಂಡಳು; ಮತ್ತೆ ಬರುವೆನೆಂದು ನುಡಿದು ಒಡನೆಯೇ ಅಂತರ್ಧಾನವಾದಳು. ಅವಳ ವಿಯೋಗಕ್ಕೆ ತುಂಬ ಹಲುಬುತ್ತಾ ಅಲೆಯುತ್ತಾ ಪುರೂರವನು ಕುರುಕ್ಷೇತ್ರಕ್ಕೆ ಬಂದನು. ಅನ್ಯತಃಪ್ಲಕ್ಷವೆಂಬ ಕೊಳದ ತೀರದಲ್ಲಿ ಅವನು ಹೋಗುತ್ತಿದ್ದಾಗ. ಅಲ್ಲಿ ತನ್ನ ಸಖಿಯರೊಂದಿಗೆ ಜಲಕೇಳಿಯಲ್ಲಿದ್ದ ಉರ್ವಶಿ ಅವನನ್ನು ಕಂಡು ಗುರುತಿಸಿದಳು; ಸಖಿಯರ ಕೋರಿಕೆಯಂತೆ ಅವನಿಗೆ ಕಾಣಿಸಿಕೊಂಡಳು. ಆಗ ಅವರಿಬ್ಬರಿಗೂ ನಡೆದ ಸಂವಾದವನ್ನು ಋಗ್ವೇದದ ಸೂಕ್ತವು ನಿರೂಪಿಸುತ್ತದೆ. ಪುರೂರವನು "ಓ ಘೋರ ಮಾನಸೆ, ನಿಲ್ಲು. ನಿನ್ನೊಂದಿಗೆ ಎರಡು ಮಾತಾಡಬೇಕು" ಎಂದು ಬೇಡಿದರೆ, ಅವಳು "ನಿನ್ನ ಮಾತಿನಿಂದ ನನಗೇನು ಕೆಲಸ? ಮೊಟ್ಟಮೊದಲ ಉಷಸ್ಸಿನಂತೆ ನಾನು ಅತಿ ಕ್ರಾಂತಳಾಗಿದ್ದೇನೆ. ಮನೆಗೆ ಹಿಂದಿರುಗು. ಗಾಳಿಯಂತೆ ನನ್ನನ್ನೂ ಹಿಡಿಯಲಾಗುವುದಿಲ್ಲ" ಎಂದು ಉತ್ತರ ಕೊಡುತ್ತಾಳೆ. ಅದಕ್ಕೆ ಪುರೂರವನು ಅವಳನ್ನು ಕಳೆದುಕೊಂಡಂದಿನಿಂದಲೂ ತಾನು ವೀರಕಾರ್ಯಗಳನ್ನೆಲ್ಲಾ ಬಿಟ್ಟು ಅಲೆಯುತ್ತಿರುವುದಾಗಿ ತಿಳಿಸಿ, ತನ್ನಲ್ಲಿ ಅವಳಿಗಿದ್ದ ಅನುರಾಗಾತಿಶಯವನ್ನು ಜ್ಞಾಪಿಸುತ್ತಾನೆ. ಆದರೆ ಮರ್ತ್ಯರಿಗೂ ಅಮರ್ತ್ಯರಿಗೂ ಸಂಬಂಧವು ಶಾಶ್ವತವಲ್ಲವೆಂದೂ, ತನ್ನ ಮಾತನ್ನು ಕೇಳದಿದ್ದುದು ತಪ್ಪೆಂದೂ ಉರ್ವಶಿ ಸೂಚಿಸುತ್ತಾಳೆ. "ನನ್ನ ಗರ್ಭದಲ್ಲಿರುವ ಮಗನನ್ನು ನಿನ್ನ ಬಳಿಗೆ ಕಳಿಸುತ್ತೇನೆ. ನೀನು ಮನೆಗೆ ಹಿಂದಿರುಗು. ನನ್ನನ್ನು ತಡೆಯಲಾರೆ, ಮೂಢ!" ಎನ್ನುತ್ತಾಳೆ. ಪುರೂರವನು "ನಾನು ಮತ್ತೆ ಹಿಂದಿರುಗದ ಕಡೆಗೆ ಹೋಗುತ್ತೇನೆ. ಪ್ರಾಣ ಕಳೆದುಕೊಳ್ಳುತ್ತೇನೆ. ತೋಳಗಳ ಬಾಯಿಗೆ ಬೀಳುತ್ತೇನೆ" ಎಂದು ಉದ್ವೇಗಪಡುತ್ತಾನೆ. ಆಗ ಉರ್ವಶಿ, "ಪುರೂರವ, ಸಾಯಬೇಡ :

> – ನ ವೈ ಸ್ತ್ರೈಣಾನಿ ಸಖ್ಯಾನಿ ಸಂತಿ
> ಸಾಲವೃಕ್ಷಾಣಾಂ ಹೃದಯಾನ್ಯೇತಾ –

ಹೆಂಗಸರೊಂದಿಗೆ ಕೆಳೆ ಇಲ್ಲ; ಅವರದು ತೋಳಹೃದಯ" ಎಂದು ಉತ್ತರ ಕೊಡುತ್ತಾಳೆ. "ಹಿಂದಕ್ಕೆ ಬಾ–ನನ್ನೆದೆ ಬೇಯತ್ತಿದೆ" ಎಂದು ಪುರೂರವನು ಅಂಗಲಾಚಿದರೂ

ಅವಳು ಕರಗದೆ, "ನೀನು ಮರ್ತ್ಯ. ನಿನ್ನ ಸಂತತಿ ಹವಿಸ್ಸಿನಿಂದ ದೇವತೆಗಳನ್ನು ತೃಪ್ತಿಪಡಿಸಲಿ! ನನ್ನೊಂದಿಗೆ ಸ್ವರ್ಗದಲ್ಲಿ ವಿಹರಿಸುವೆ" ಎಂದು ಮಾತು ಮುಗಿಸುತ್ತಾಳೆ. ಇಲ್ಲಿಗೆ ಋಗ್ವೇದದ ವೃತ್ತಾಂತವು ಮುಗಿಯುತ್ತದೆ; ಕಥೆಯೂ ನಿಲ್ಲಬೇಕು. ಆದರೆ ಶತಪಥ ಬ್ರಾಹ್ಮಣವು ಅದನ್ನು ಮುಂದುವರಿಸುತ್ತದೆ-ಯಾಗಾಗ್ನಿಮಥನವಿಧಿಯ ಮಹತ್ತ್ವವನ್ನು ಬೋಧಿಸಲು ಆ ರೀತಿ ಮಾಡಬೇಕಾಯಿತೇನೋ. ಇಲ್ಲಿ ಪುರೂರವನ ದೀನಾವಸ್ಥೆಗೆ ಉರ್ವಶಿ ಕಡೆಗೆ ಮರುಗಿ, ಅಂದಿಗೆ ವರುಷಕ್ಕೆ ಸರಿಯಾಗಿ ಒಂದಿರುಳು ತನ್ನ ಸಹವಾಸವನ್ನು ಅವನಿಗೆ ಕರುಣಿಸುತ್ತಾಳೆ. ಆ ವೇಳೆಗೆ ಪುತ್ರನೂ ಜನಿಸಿರುತ್ತಾನೆ. ಪುರೂರವನು ಅವಳ ಸಲಹೆಯಂತೆ ಮರುದಿನ ಗಂಧರ್ವರಿಂದ ತಾನೂ ಅವರಲ್ಲೊಬ್ಬನಾಗುವಂತೆ ವರವನ್ನು ಪಡೆಯುತ್ತಾನೆ. ಅದನ್ನು ಸಾಧಿಸಲು ಅವರು ಅಗ್ನಿಮಥನವಿಧಿಯನ್ನು ಅವನಿಗೆ ಉಪದೇಶಿಸುತ್ತಾರೆ. ಅದರಂತೆ ಆಚರಿಸಿ ಯಜ್ಞಗಳನ್ನು ನಡಸಿ ಪುರೂರವನೂ ಗಂಧರ್ವತ್ವವನ್ನು ಹೊಂದುತ್ತಾನೆ. ಶತಪಥಬ್ರಾಹ್ಮಣವು ಹೇಳದಿದ್ದರೂ ಈ ಅಮರ್ತ್ಯಜನ್ಮದಲ್ಲಿ ಉರ್ವಶಿಯನ್ನೂ ಮತ್ತೆ ಹೊಂದುತ್ತಾನೆಂದು ಊಹಿಸಬಹುದು.

ಶತಪಥಬ್ರಾಹ್ಮಣದ ನಿರೂಪಣೆಯನ್ನು ಪುರಾಣಯುಗವೂ[೩] ಅನುಸರಿಸುತ್ತದೆ. ಆದರೆ ವಿವರಗಳಲ್ಲಿ ಆಗಲೆ ಹಲವು ವ್ಯತ್ಯಾಸಗಳು ಕಾಣಿಸುತ್ತವೆ. ಉದಾಹರಣೆಗೆ,

---

೩. 'ಪದ್ಮಪುರಾಣ'ದಲ್ಲೂ (ಆನಂದಾಶ್ರಮದ ಪರಿಷ್ಕರಣ-ಸೃಷ್ಟಿಖಂಡ, ೧೨) 'ಮತ್ಸ್ಯಪುರಾಣ' ದಲ್ಲೂ (xxiv) ಬರುವ ಉರ್ವಶೀ-ಪುರೂರವ ವೃತ್ತಾಂತವೇ ಬೇರೆ. ಅದು ಕಾಳಿದಾಸನ ನಾಟಕದ ಕಥೆಗೆ ಹೆಚ್ಚು ಹತ್ತಿರವಾಗಿದೆ. ವಿಕ್ರಮೋರ್ವಶೀಯದಲ್ಲಿರುವಂತೆ ಇಲ್ಲಿಯೂ ಪುರೂರವನು ಉರ್ವಶೀ ಚಿತ್ರಲೇಖೆಯರನ್ನು ಕೇಶಿದಾನವನ ಸೆರೆಯಿಂದ ಬಿಡಿಸುತ್ತಾನೆ. ಅದಕ್ಕೆ ಇಂದ್ರನು ಸಂತೋಷಪಟ್ಟು ಉರ್ವಶಿಯನ್ನೇ ಪುರೂರವನಿಗೆ ಅನುಗ್ರಹಿಸುತ್ತಾನೆ. ಒಂದು ಸಲ, ಭರತ ಮುನಿಯ ಏರ್ಪಾಡಿನಂತೆ ಲಕ್ಷ್ಮೀಸ್ವಯಂವರವೆಂಬ ನಾಟಕವನ್ನು ಆಡುತ್ತಿದ್ದಾಗ, ಎದುರಿಗೆ ಕುಳಿತಿದ್ದ ಪುರೂರವನನ್ನು ಲಕ್ಷ್ಮೀವೇಷದಲ್ಲಿದ್ದ ಉರ್ವಶಿ ನೋಡಿ ಕಾಮಪೀಡಿತಳಾಗಿ ಅಭಿನಯವನ್ನು ಮರೆಯುತ್ತಾಳೆ. ಭರತನು ಅದರಿಂದ ಕೋಪಗೊಂಡು, ಐವತ್ತೈದು ವರುಷಗಳ ಕಾಲ ನೀನು ಲತೆಯಾಗಿ ಪರಿಣಮಿಸಿ ಪ್ರಿಯವಿಯೋಗವನ್ನು ಹೊಂದು ಎಂದು ಶಪಿಸುತ್ತಾನೆ. ಆ ಶಾಪವು ಕಳೆದಮೇಲೆ ಉರ್ವಶಿ ಪುರೂರವನನ್ನು ಮತ್ತೆ ಹೊಂದಿ ಎಂಟು ಜನ ಮಕ್ಕಳನ್ನು ಪಡೆಯುತ್ತಾಳೆ- ಮಿಕ್ಕ ಕಡೆಗಳಲ್ಲಿ ಪ್ರಮುಖವಾಗಿರುವ ಉರ್ವಶಿಯ ನಿಬಂಧನೆಗಳ ಮಾತೇ ಈ ನಿರೂಪಣೆಯಲ್ಲಿಲ್ಲ. ಪುರಾಣಗಳ ಕಾಲವು ತುಂಬ ಅನಿಶ್ಚಿತವಾಗಿರುವುದರಿಂದ, ಕಾಳಿದಾಸನ ನಾಟಕಕ್ಕೆ ಈ ಪಾಠವು ಮೂಲವೋ ಅಥವಾ ಅವನ ನಾಟಕವನ್ನೇ ಅನುಸರಿಸಿ ಇದು ಹುಟ್ಟಿತೋ ಹೇಳುವುದು ಕಷ್ಟ. ಕಾಳಿದಾಸನನ್ನು ಪದ್ಮಪುರಾಣವು ಅನುಸರಿಸಿರುವ ಸಂಭವವೇ ಹೆಚ್ಚೆಂದು ತೋರುತ್ತದೆ (ಪರಿಶಿಷ್ಟವನ್ನು ನೋಡಿ).

ಮಹಾಭಾರತದಲ್ಲಿ ಉರ್ವಶಿ ಪುರೂರವನ ಪತ್ನಿಯೆಂದು ಮಾತ್ರ ಗೊತ್ತಾಗುತ್ತದೆ (ಮಹಾಭಾರತ. : ಪುಣೆಯ ಭಾಂಡಾರ್‌ಕರ್ ಸಂಸ್ಥೆಯ ಪರಿಷ್ಕರಣ - ಆದಿಪರ್ವ, ೭೧. ೨೧). ಆದರೆ ಅವರಿಬ್ಬರ ವಿಯೋಗಸಮಾಗಮಗಳ ಪ್ರಸಕ್ತಿ ಇಲ್ಲ.

'ವಿಷ್ಣುಪುರಾಣ'ದಂತೆ (iv. ೬), ಉರ್ವಶಿಗೆ ಭೂಲೋಕವಾಸವು ಮಿತ್ರಾವರುಣರ ಶಾಪದಿಂದ ಸಂಭವಿಸುತ್ತದೆ. ಪುರೂರವನೊಂದಿಗೆ ಅರುವತ್ತೊಂದು ವರುಷಗಳ ಸುಖ ಜೀವನದಲ್ಲಿ ಅವಳು ದೇವಲೋಕದ ಹಂಬಲವನ್ನೇ ಮರೆಯುತ್ತಾಳೆ. ಮುಂದಾದರೂ ಅವನನ್ನು ಬಿಟ್ಟುಹೋಗುವುದು ಗಂಧರ್ವರ ತಂತ್ರದಿಂದಲೇ. ಬಳಿಕ ಇಬ್ಬರಿಗೂ ನಡೆಯುವ ಸಂವಾದದಲ್ಲಿ ಉರ್ವಶಿಯ ಬಾಯಿಂದ ಯಾವ ಪರುಷವಾಕ್ಯಗಳೂ ಹೊರಡುವುದಿಲ್ಲ; ಪುರೂರವನಲ್ಲಿ ಅವಳಿಗೆ ಆದರವಿದೆ. ಇಷ್ಟಾದರೂ ಅವನು ನಿರ್ದಿಷ್ಟ ಯಜ್ಞವನ್ನು ನಡಸಿ ಗಂಧರ್ವದೇಹವನ್ನು ಪಡೆದಮೇಲೆಯೇ ಅವರಿಬ್ಬರಿಗೂ ನಿತ್ಯ ಸಹವಾಸ ದೊರೆಯುವುದು.

ಋಗ್ವೇದದಿಂದ ಶತಪಥಬ್ರಾಹ್ಮಣಕ್ಕೆ, ಶತಪಥಬ್ರಾಹ್ಮಣದಿಂದ ವಿಷ್ಣುಪುರಾಣಕ್ಕೆ ಕಥೆಯ ಮೂಲಸೂತ್ರವು ಕೊಂಚ ಕೊಂಚ ಬದಲಾಯಿಸುತ್ತಾ ಹೋಗಿದೆ. ಇವುಗಳಲ್ಲಿ ಋಗ್ವೇದದಿಂದ ವ್ಯಕ್ತವಾಗುವ ವೃತ್ತಾಂತವೇ ಹೆಚ್ಚು ಅರ್ಥಪೂರ್ಣವೆಂದು ತೋರುತ್ತದೆ. ಈ ಉಪಾಖ್ಯಾನದಲ್ಲಿ ಒಂದೆರಡು ವಿಷಯಗಳು ತುಂಬ ಸ್ಫುಟವಾಗಿವೆ. ವೈದಿಕ ಕಥೆಯಲ್ಲಿರುವಂತೆ ಉರ್ವಶಿ ಪುರೂರವನನ್ನು ಮೋಹಿಸಿ ಭೂಮಿಗೆ ಬಂದಿದ್ದರೂ ಸರಿಯೆ, ವಿಷ್ಣುಪುರಾಣದಲ್ಲಿರುವಂತೆ ಮಿತ್ರಾವರುಣರ ಶಾಪವು ಇಲ್ಲಿಗೆ ಕಳಿಸಿದ್ದರೂ ಸರಿಯೆ–ಅವಳು ದೇವಗಣಿಕೆ, ಗಂಧರ್ವರ ಮನಃಪ್ರಿಯೆ ಎಂಬುದನ್ನು ಮರೆಯಬಾರದು. ಸ್ವರ್ಗದ ವೈಭವವಿಲಾಸಗಳನ್ನರಿತವಳಿಗೆ ಒಬ್ಬ ಮಾನವನೊಂದಿಗೆ ಅವಿಭಕ್ತ ಸಂಬಂಧವು ಎಷ್ಟು ದಿನ ರುಚಿಸಬಲ್ಲುದು! "ನ ವೈ ಸ್ತ್ರೈಣಾನಿ ಸಖ್ಯಾನಿ ಸಂತಿ" ಎಂದು ಹೇಳತಕ್ಕವಳು ಅವಳು. ಪುರೂರವನ ಸಂಗಡ ನಾಲ್ಕು ವರುಷ ಇದ್ದಷ್ಟಕ್ಕೇ ಅವಳು ತಣಿದು ಹೋದಳು. ತಾನು ಅವನನ್ನು ಕೈಬಿಡುವುದಕ್ಕೆ ನೆವ ದೊರೆತ ಕೂಡಲೆ ದೇವಲೋಕಕ್ಕೆ ಜಾರಿದಳು. ಅದೂ ಎಂಥ ನೆವ! ಪುರೂರವನು ಆ ವಿಚಿತ್ರ ನಿಬಂಧನೆಯನ್ನು ಮುರಿದದ್ದಾದರೂ ಅವಳ ಮುದ್ದಿನ ಮರಿಗಳನ್ನು ಕಾಪಾಡುವುದಕ್ಕಾಗಿ–ಗಂಧರ್ವರ ತಂತ್ರಕ್ಕೆ ಒಳಗಾಗಿ. ಆದರೆ ಉರ್ವಶಿ ಇದೊಂದನ್ನೂ ಎಣಿಸಲಿಲ್ಲ. ಪುರೂರವನ ಪರಮ ವೇದನೆಯನ್ನು ಗಮನಿಸಲಿಲ್ಲ. ತನ್ನವರೊಂದಿಗೆ ನಡೆದುಬಿಟ್ಟಳು.

ದೇವತೆಗಳಲ್ಲಿ ಈ ಬಗೆಯ ವರ್ತನೆ ಅಪೂರ್ವವೇನೂ ಅಲ್ಲ. ಗಂಗೆ ಶಾಪವಶದಿಂದ ಮನುಷ್ಯರೂಪಿಣಿಯಾಗಿ ಶಂತನುವಿನ ಪತ್ನಿಯಾದಾಗ, ಇಂಥದೇ ಒಂದು ಅಸಂಗತವಾದ ನಿಬಂಧನೆಯನ್ನು ಮಾಡಿಕೊಳ್ಳಲಿಲ್ಲವೆ? ಅದನ್ನು ಮುರಿದನೆಂಬ ವ್ಯಾಜದಿಂದ ಅವನನ್ನುತೊರೆದುಬಿಡಲಿಲ್ಲವೆ? ಈ ದೇವತೆಯರೆಲ್ಲ ಯಾವುದೋ ಒಂದು ನಿಮಿತ್ತಕ್ಕಾಗಿ ಮಾನವನ ಸಖ್ಯವನ್ನು ಬಯಸತಕ್ಕವರು; ಅದು ಮುಗಿದ ಕೂಡಲೇ ತಮ್ಮ ಪಾಡಿಗೆ ತಾವು ಹೊರಟುಹೋಗತಕ್ಕವರು. ದೈವಮಾನುಷಸಂಬಂಧವೇ ಹೀಗೆ. ಉರ್ವಶಿ ಅಮರ್ತ್ಯೆ, ಪುರೂರವನು ಮರ್ತ್ಯ. ಇವರಿಬ್ಬರಿಗೂ ನಿರಂತರವಾದ ಸಂಘಟನೆ ಹೇಗಾದೀತು? ಋಗ್ವೇದದಂತೆ ಉರ್ವಶಿಯೇ ಚಂಚಲತೆಯಿಂದ ಪುರೂರವನನ್ನು ಕೈಬಿಟ್ಟ ಮಾತಿರಲಿ; ಶತಪಥಬ್ರಾಹ್ಮಣ ವಿಷ್ಣುಪುರಾಣಗಳಂತೆ ಅವಳಿಗೆ

ಆತನಲ್ಲಿ ಆದರವಿದ್ದರೂ ಕೂಡ ಪುರೂರವನು ಗಂಧರ್ವದೇಹವನ್ನು ಪಡೆದ ಹೊರತು ಇಬ್ಬರ ಸಮಾಗಮವೂ ನಿತ್ಯವಾಗುವಂತಿಲ್ಲ. ಏಕೆಂದರೆ, ಮರ್ತ್ಯನು ಮರ್ತ್ಯನಾಗಿರುವವರೆಗೂ ಅಮರ್ತ್ಯಭೋಗವು ಅವನ ಅರ್ಹತೆಗೆ ಮೀರಿದ್ದು. ಮಾನುಷನು ಅಮಾನುಷರೊಡನೆ ಶಾಶ್ವತ ಸಂಬಂಧವನ್ನು ಬಯಸಿದರೆ, ತನ್ನ ನಿಲವಿಗೆ ಮೀರಿದ ಹಣ್ಣಿಗೆ ಕೈನೀಡಿದರೆ, ಅದು ವಿಫಲಮನೋರಥದಲ್ಲಿ ಮುಗಿಯುವುದೇ ಖಂಡಿತ. ಮರ್ತ್ಯನ ಆಸೆ ಎಷ್ಟೆಷ್ಟು ಗಾಢವೋ ಅನನ್ಯವೋ ಅದರ ಪರಿಣಾಮವು ಅಷ್ಟಷ್ಟು ಘೋರವೂ ದುರಂತವೂ ಆಗುತ್ತದೆ. ಉರ್ವಶಿಯ ಸಂಬಂಧದಿಂದ ಪುರೂರವನು ಪಟ್ಟಪಾಡು ಎಷ್ಟು! ಅವಳನ್ನು ಕಳೆದುಕೊಂಡ ಬಳಿಕ ಅವನ ಶೌರ್ಯವು ಮತ್ತೆ ಬೆಳಗಲಿಲ್ಲ, ಯುದ್ಧದಲ್ಲಿ ಅವನ ಗರ್ಜನೆ ಮತ್ತೆ ಕೇಳಿಸಲಿಲ್ಲ, ಬತ್ತಳಿಕೆಯಿಂದ ಅವನ ಬಾಣವು ಮತ್ತೆ ಹೊರಬೀಳಲಿಲ್ಲ. ದಸ್ಯುಸಂಹಾರಕ್ಕಾಗಿ ಅವನು ಜನ್ಮವೆತ್ತಿದ್ದವನು. ಈಗ ಉರ್ವಶಿಯ ಹುಚ್ಚುಹಿಡಿದು ಸತ್ತ್ವವು ಉಡುಗಿಹೋಗುತ್ತದೆ, ಘನತೆ ಬಯಲಾಗುತ್ತದೆ, ಆತ್ಮಹತ್ಯದ ಕಡೆಗೆ ಕೂಡ ಅವನು ಮನಸ್ಸು ತಿರುಗಿಸುತ್ತಾನೆ. ಅಲಭ್ಯವಸ್ತು ಪ್ರಣಯದ ದುರಂತ ಪರಿಣಾಮವನ್ನು ಸೂಚಿಸುವುದೇ ಉರ್ವಶೀ ಪುರೂರವರ ಕಥೆಯ ಸಾರ.

ವಿಕ್ರಮೋರ್ವಶೀಯ ನಾಟಕವು ನಮ್ಮನ್ನು ಬೇರೊಂದು ಪ್ರಪಂಚಕ್ಕೆ ಒಯ್ಯುತ್ತದೆ. ಉರ್ವಶೀಪುರೂರವರ ಪ್ರಥಮ ಸಮಾಗಮವನ್ನು ಕಾಳಿದಾಸನು ತುಂಬ ಜಾಣ್ಮೆಯಿಂದ ಸಂಘಟಿಸಿದ್ದಾನೆ. ಇಲ್ಲಿ ಪುರೂರವನ ರಥಕ್ಕೆ ಸ್ವರ್ಗಗಮನ ಶಕ್ತಿಯುಂಟು. ಒಂದು ದಿನ ಅವನು ಸೂರ್ಯೋಪಸ್ಥಾನವನ್ನು ಮುಗಿಸಿಕೊಂಡು ಭೂಮಿಗೆ ಇಳಿಯುತ್ತಿರುವಾಗ ಅಪ್ಸರೆಯರ ಆಕ್ರಂದನ ಕಿವಿಗೆ ಬೀಳುತ್ತದೆ. ದೇವೇಂದ್ರನ ಸುಕುಮಾರಶಸ್ತ್ರವೆನಿಸಿದ ಉರ್ವಶಿಯನ್ನೂ ಅವಳ ಸಖಿಯಾದ ಚಿತ್ರಲೇಖೆಯನ್ನೂ ಮಾರ್ಗಮಧ್ಯದಲ್ಲಿ ಕೇಶಿಯೆಂಬ ದಾನವನು ಅಪಹರಿಸಿಕೊಂಡು ಹೋದನೆಂದು ಅಪ್ಸರೆಯರಿಂದ ತಿಳಿದು ಇಂದ್ರಪಕ್ಷಪಾತಿಯಾದ ಪುರೂರವನು ಒಡನೆಯೇ ದಾನವನ ಬೆನ್ನಟ್ಟಿಹೋಗಿ ಅವನನ್ನು ನಿಗ್ರಹಿಸುತ್ತಾನೆ. ಬಂದಿಗಳಾಗಿದ್ದ ಇಬ್ಬರನ್ನೂ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಹಿಂದಿರುಗುತ್ತಿರುವಾಗ ದಾರಿಯಲ್ಲಿ ಉರ್ವಶಿ ಮೂರ್ಛೆಯಿಂದ ಎಚ್ಚತ್ತು ತನ್ನ ರಕ್ಷಕನಾದ ಪುರೂರವನನ್ನು ನೋಡಿ "ದಾನವರಿಂದ ಉಪಕಾರವೇ ಆಯಿತು" ಎಂದುಕೊಳ್ಳುತ್ತಾಳೆ. ಇತ್ತ ಪುರೂರವನ ಮನಸ್ಸೂ ಅವಳ ರೂಪದಲ್ಲಿ ಸೆರೆಸಿಕ್ಕುತ್ತದೆ. ಬಳಿಕ ಉರ್ವಶಿ ತನ್ನ ಸಖಿಯರೆಲ್ಲರೊಡನೆ ಸೇರಿ ಇಂದ್ರಲೋಕಕ್ಕೆ ಹೊರಡಬೇಕಾಗುತ್ತದೆ. ಹೊರಡುವಾಗ ಅವಳು "ಬಳ್ಳಿಯ ಕವಲಿನಲ್ಲಿ ನನ್ನ ಏಕಾವಳೀ ಹಾರವೂ ಸಿಕ್ಕಿಕೊಂಡಿತು" ಎಂದು ನಟಿಸಿ ನಿಂತು ಪುರೂರವನನ್ನೇ ನೋಡಿಕೊಂಡು ಹೋಗುತ್ತಾಳೆ; ತನ್ನ ಜೊತೆಯಲ್ಲಿ ಅವನ ಮನಸ್ಸನ್ನೂ ಮೃಣಾಲತಂತುವಿನಂತೆ ಎಳೆದುಕೊಂಡು ಹೋಗುತ್ತಾಳೆ.

ಉರ್ವಶಿ ಗಣಿಕೆ, 'ಸಾಧಾರಣ' ಸ್ತ್ರೀ. ಅವಳಿಗೂ ಪುರೂರವನಿಗೂ ಪರಸ್ಪರ ಅನುರಾಗವು ಜನಿಸಿದಮೇಲೆ ಅವರಿಬ್ಬರ ಸಂಸರ್ಗಕ್ಕೆ ಅಡ್ಡಿ ಇರಲಾರದು. ವೈದಿಕ

ಕಥೆಯಲ್ಲಿ ಅಂಥ ಅಡ್ಡಿಯೂ ಇಲ್ಲ. ಆದರೆ ಕಾಳಿದಾಸನು ಇಷ್ಟು ಸುಲಭವಾಗಿ ಅವರನ್ನು ಒಂದುಗೂಡಿಸುವುದಿಲ್ಲ. ಈಗ ಪುರೂರವನ ಅಂತಃಪುರಕ್ಕೆ ನಮ್ಮನ್ನು ಒಯ್ಯುತ್ತಾನೆ. ಅಲ್ಲಿ ಅರಸನ ಪಟ್ಟಮಹಿಷಿಯಾದ ಕಾಶೀರಾಜಪುತ್ರಿಗೆ ಆಗಲೆ ಸಂಶಯವು ಮೂಡಿದೆ. ನಿಪುಣಿಕೆಯೆಂಬ ಅನ್ವರ್ಥನಾಮವುಳ್ಳ ತನ್ನ ಚೇಟಿಯ ಮೂಲಕ ಪುರೂರವನ ಪ್ರಣಯ ರಹಸ್ಯವನ್ನು ವಿದೂಷಕನಿಂದ ಹೊರಡಿಸಿರುತ್ತಾಳೆ. ಇತ್ತ ಪ್ರಮದವನದಲ್ಲಿ ಪುರೂರವನು ಈ ಒಡಕು ಬಾಯಿಯ ವಿದೂಷಕನೊಂದಿಗೆ ತನ್ನ ವಿರಹತಾಪವನ್ನು ಹೇಳಿಕೊಳ್ಳುತ್ತಿರುವಾಗ ಉರ್ವಶಿಯೂ ಮದನಚೋದಿತಳಾಗಿ ಅವನನ್ನೇ ಹುಡುಕಿಕೊಂಡು ಚಿತ್ರಲೇಖೆಯೊಡನೆ ಬರುತ್ತಾಳೆ. ತಿರಸ್ಕರಿಣೀವಿದ್ಯೆಯ ಬಲದಿಂದ ಅದೃಶ್ಯಳಾಗಿ ನಿಂತು ಇವರ ರಹಸ್ಯ ಸಲ್ಲಾಪವನ್ನು ಕೇಳಿ ಪುರೂರವನ ಮನಸ್ಸು ತನ್ನಲ್ಲೇ ನಟ್ಟಿರುವುದೆಂದು ದೃಢ ಮಾಡಿಕೊಂಡು ತನ್ನ ಪ್ರಣಯಸಂತಾಪವನ್ನು ಸೂಚಿಸುವ ಪದ್ಯವನ್ನು ಒಂದು ಭೂರ್ಜಪತ್ರದ ಮೇಲೆ ಬರೆದು ಅವಳ ಬಳಿ ಹಾಕುತ್ತಾಳೆ. ಅದನ್ನು ಓದಿಕೊಂಡು ಅವನು ಹರ್ಷಪಡುತ್ತಿರುವಾಗ ತಾನೂ ಎದುರಿಗೆ ಕಾಣಿಸಿಕೊಳ್ಳುತ್ತಾಳೆ. ಆದರೆ ಒಂದು ಕ್ಷಣಕಾಲ ಪ್ರಿಯನ ಬಳಿ ಕುಳಿತುಕೊಂಡು ತಮ್ಮಿಬ್ಬರ ವಿರಹವೇದನೆಯನ್ನು ತಗ್ಗಿಸಿಕೊಳ್ಳುವುದಕ್ಕೂ ಉರ್ವಶಿಗೆ ಅವಕಾಶ ದೊರೆಯುವುದಿಲ್ಲ. ಸ್ವರ್ಗದಲ್ಲಿ ಭರತಮುನಿ ಲಕ್ಷ್ಮೀ ಸ್ವಯಂವರವೆಂಬ ನಾಟಕದ ಅಭಿನಯಕ್ಕೆ ಏರ್ಪಾಡು ಮಾಡಿರುತ್ತಾನೆ; ಅದರಲ್ಲಿ ಪಾತ್ರವಹಿಸಲು ಉರ್ವಶಿ ಬರಬೇಕೆಂದು ಆ ಒಡನೆಯೇ ಒಂದು ಕರೆ ಕೇಳಿಸುತ್ತದೆ. ನಲ್ಲನಲ್ಲೆಯರು ವಿಷಾದದಿಂದ ಅಗಲಬೇಕಾಗುತ್ತದೆ. ಇನ್ನು ಪುರೂರವನು ಉರ್ವಶಿಯ ಪತ್ರವನ್ನಾದರೂ ನೋಡುತ್ತಾ ಕಾಲಕಳೆಯಬೇಕೆಂದಿದ್ದರೆ, ಅದು ವಿದೂಷಕನ ಅಚಾತುರ್ಯದಿಂದ ಎಲ್ಲೋ ಹಾರಿಹೋಗಿರುತ್ತದೆ. ಅಷ್ಟೇ ಅಲ್ಲ, ಈ ಮಿತ್ರರಿಬ್ಬರ ರಹಸ್ಯಾಲಾಪವನ್ನು ಆಲಿಸಲು ಬರುತ್ತಿದ್ದ ಪಟ್ಟಮಹಿಷಿಯ ಕೈಗೆ ಅದು ಸಿಕ್ಕಿ ತುಂಬ ಅನರ್ಥಕ್ಕೆ ಕಾರಣವಾಗುತ್ತದೆ. ಅರಸನು ಈಗ ಒಡವೆ ಸಹಿತ ಸಿಕ್ಕಿಬಿದ್ದ ಕಳ್ಳನಂತಾಗುತ್ತಾನೆ. ರಾಣಿ ಅವನ ಸಂಗಡ ಈರ್ಷ್ಯಾಕಲಹವನ್ನೆಸಗಿ, ಅವನು ಪಾದಕ್ಕೆ ಬಿದ್ದರೂ ಪ್ರಸನ್ನಳಾಗದೆ, ಕೋಪದಿಂದ ಹೊರಟುಹೋಗುತ್ತಾಳೆ.

ಆದರೆ, ಉರ್ವಶಿಯ ಪರಾಧೀನತೆಯೂ ಪ್ರಥಮ ಪತ್ನಿಯ ಈರ್ಷ್ಯೆಯೂ ಚಿರವಿಘ್ನಗಳಲ್ಲ. ಹೇಗೆ ಬಂದುವೋ ಹಾಗೆಯೇ ನಿವಾರಣೆಯಾಗುತ್ತವೆ. ಹಿಂದೆ ಹೇಳಿದ ನಾಟಕಾಭಿನಯಕಾಲದಲ್ಲಿ, ಲಕ್ಷ್ಮಿಯ ಪಾತ್ರವನ್ನು ವಹಿಸಿದ್ದ ಉರ್ವಶಿ ಪುರುಷೋತ್ತಮನಲ್ಲಿ ತನ್ನ ಮನಸ್ಸು ನಟ್ಟಿದೆಯೆಂದು ಹೇಳುವ ಬದಲು ವ್ಯಗ್ರತೆಯಿಂದ "ಪುರೂರವನಲ್ಲಿ" ಎಂದುಬಿಡುವಳು. ಇದರಿಂದ ಭರತಮುನಿಗೆ ಕೋಪ ಬಂದು ಅವಳಿಗೆ ಸ್ವರ್ಗಚ್ಯುತಿಯಾಗುವಂತೆ ಶಾಪಕೊಡುವನು. ಆಗ ಇಂದ್ರನು ತನಗೆ ಪುರೂರವನು ರಣ ಸಹಾಯನೆಂಬುದನ್ನು ಸ್ಮರಿಸಿಕೊಂಡು ಉರ್ವಶಿಯಲ್ಲಿ ಕರುಣಿಸಿ, "ನಿನ್ನಲ್ಲಿ ಪುರೂರವನು ಸಂತಾನವನ್ನು ಕಾಣುವವರೆಗೂ ಅವನ ಸಂಗಡ ಇರು" ಎಂದು ಅನುಗ್ರಹಿಸುವನು. ಹೀಗೆ ಭರತಶಾಪವೇ ಉರ್ವಶಿಯ ಪರಾಧೀನತೆಯನ್ನು

ತಪ್ಪಿಸಲು ಸಹಾಯಮಾಡುತ್ತದೆ.[೪] ಇತ್ತ ಪುರೂರವನ ರಾಣಿಯ ಕಾಟವೂ ತನಗೆ ತಾನೇ ತಪ್ಪುತ್ತದೆ. ತನ್ನ ಗಂಡನು ಇನ್ನು ದಕ್ಕಲಾರನೆಂದು ಆಕೆ ತಿಳಿದು, "ಕೈಮೀರಿದ್ದಕ್ಕೆ ಕೃಷ್ಣಾರ್ಪಣ" ಎನ್ನುವಂತೆ ಒಂದು ದಿನ ಪ್ರಿಯಪ್ರಸಾಧನವೆಂಬ ವ್ರತದ ನೆಪದಲ್ಲಿ, ಅವನ ಬಯಕೆಯ ರಮಣಿಗೆ ಅವನನ್ನು ದಾನಮಾಡಿಬಿಡುತ್ತಾಳೆ. ಇಷ್ಟರೊಳಗೆ ಸ್ವರ್ಗ ತಪ್ಪಿದ ಉರ್ವಶಿಯೂ ಪುರೂರವನೊಂದಿಗೇ ಇರಲು ಬಂದು ಮರೆಯಲ್ಲಿ ನಿಂತು ಎಲ್ಲವನ್ನೂ ಕೇಳಿರುತ್ತಾಳೆ. ಸರಿ. ಇಬ್ಬರ ಅಭೀಷ್ಟವೂ ಕೈಗೂಡಿತು. ಪುರೂರವನು ನಿರಂತರ ವಿಹಾರದಲ್ಲಿ ನಿರತನಾಗುತ್ತಾನೆ.

ಇಷ್ಟೆಲ್ಲ ನಡೆಯುವ ವೇಳೆಗೆ ನಾಟಕದಲ್ಲಿ ಮೂರು ಅಂಕಗಳು ಸಾಗಿವೆ. ಇವರ ದಾಂಪತ್ಯಸೌಖ್ಯಕ್ಕೆ ಈಗ ಬೇರೆ ಅಡಚಣೆಗಳು ಒದಗುತ್ತವೆ. ಗಂಧಮಾದನ ಪರ್ವತದಲ್ಲಿ ಇಬ್ಬರೂ ವಿಹರಿಸುತ್ತಿದ್ದಾಗ ಪುರೂರವನು ಒಬ್ಬ ವಿದ್ಯಾಧರ ಕನ್ಯೆಯನ್ನು ದಿಟ್ಟಿಸಿ ನೋಡಿದನೆಂಬ ಅಲ್ಪಕಾರಣದಿಂದಲೇ ಉರ್ವಶಿ ಈರ್ಷ್ಯೆಗೊಂಡು ಯಾವ ಅನುನಯಕ್ಕೂ ಪ್ರಸನ್ನಳಾಗದೆ ಅವನನ್ನು ಬಿಟ್ಟು ಹೋಗುತ್ತಾಳೆ. ಕೋಪಾವೇಶದಲ್ಲಿ ಅರಿವಿಲ್ಲದೆ ಕುಮಾರಸ್ವಾಮಿಯ ವನವನ್ನು ಪ್ರವೇಶಿಸಿ ಅಲ್ಲಿಯ ಶಾಪಮಹಿಮೆಯಿಂದ ಒಂದು ಲತೆಯಾಗಿ ಪರಿಣಮಿಸುತ್ತಾಳೆ. ಇತ್ತ ಪುರೂರವನು ಅವಳ ಅಗಲಿಕೆಯಿಂದ ಉನ್ಮಾದಹೊಂದಿ ಎಲ್ಲೆಲ್ಲೂ ಹುಡುಕುತ್ತಾ, ದಾರಿಯಲ್ಲಿ ಕಂಡ ಮೃಗಪಕ್ಷಿ ಪರ್ವತಗಳನ್ನೆಲ್ಲಾ "ಉರ್ವಶಿಯನ್ನು ನೀವು ಕಂಡಿರಾ, ನೀವು ಕಂಡಿರಾ?" ಎಂದು ಕೇಳುತ್ತಾ ಅಲೆಯುತ್ತಿರುತ್ತಾನೆ. (ಅವನ ವಿಲಾಪವು ನಾಲ್ಕನೆಯ ಅಂಕವನ್ನೇ ಹೆಚ್ಚು ಕಡಿಮೆ ತುಂಬಿ ಒಂದು ಅತ್ಯುತ್ತಮ ಕಾವ್ಯವಾಗಿದೆ.) ಕೊನೆಯಲ್ಲಿ ಅವನಿಗೆ ಸಂಗಮನೀಯವೆಂಬ ಮಣಿ ದೊರೆಯುತ್ತದೆ. ಋಷಿಯೊಬ್ಬನಿಂದ ಅದರ ಪ್ರಭಾವವನ್ನರಿತು ತೆಗೆದುಕೊಂಡು ಮುಂದೆ ಹೋಗುತ್ತಿರುವಾಗ ಪುರೂರವನು ಒಂದು ಲತೆಯನ್ನು ಕಾಣುತ್ತಾನೆ. ಅದರ ದರ್ಶನದಿಂದ ಉರ್ವಶಿಯ ನೆನಪು ಬಂದು ಅವನು ಭಾವಪರವಶನಾಗಿ ಅದನ್ನೇ ಅಪ್ಪಿಕೊಳ್ಳುತ್ತಾನೆ. ಆ ಲತೆಯೇ ಉರ್ವಶಿ. ಮಣಿಪ್ರಭಾವದಿಂದ ಶಾಪವಿಮೋಚನೆಯಾಗಿ ಅವಳು ಸ್ವಸ್ವರೂಪವನ್ನು ಪಡೆಯುತ್ತಾಳೆ. ಹಿಂದಿನ ಕ್ಲೇಶಗಳನ್ನು ಮರೆತು ಇಬ್ಬರೂ ರಾಜಧಾನಿಗೆ ಹಿಂದಿರುಗುತ್ತಾರೆ.

---

೪. ಈ ಸಂಗತಿಯನ್ನೆಲ್ಲಾ ಒಂದು ವಿಷ್ಕಂಭದಲ್ಲಿ ಭರತಶಿಷ್ಯರಿಬ್ಬರ ಸಂವಾದವನ್ನು ಕೇಳಿ ತಿಳಿದುಕೊಳ್ಳುತ್ತೇವೆ. ಕಾಳಿದಾಸನು ಇದನ್ನೇ ಅಂತರ್ನಾಟಕವಾಗಿ – 'ಗರ್ಭಾಂಕ'ವಾಗಿ – ರಚಿಸಿ ನಮ್ಮ ಕಣ್ಣಮುಂದೆ ನಡೆಸಿದ್ದರೆ ನಾಟಕದ ಸ್ವಾರಸ್ಯವು ಇನ್ನಷ್ಟು ಹೆಚ್ಚುತ್ತಿತ್ತು. (ಗರ್ಭಾಂಕದ ಪ್ರಯೋಜನವನ್ನು ಈಚೆಗೆ ಬಂದ ಶ್ರೀಹರ್ಷ ಭವಭೂತಿಗಳು ತಿಳಿದಿದ್ದರು.) ಹಾಗೆಯೇ ಮುಂದೆ ಬರುವ ಉರ್ವಶೀಪುರೂರವರ ಈರ್ಷ್ಯಾಕಲಹದ ವೃತ್ತಾಂತವು ಚತುರ್ಥಾಂಕದ ಆದಿಯ ಪ್ರವೇಶಕದಲ್ಲಿ ಒಂದು ವರದಿಯ ರೂಪವಾಗಿ ಬರುವುದಕ್ಕಿಂತ ಸ್ವತಂತ್ರ ದೃಶ್ಯವಾಗಿಯೇ ಬಂದಿದ್ದರೆ ಸ್ವಾರಸ್ಯ ಇನ್ನೂ ಹೆಚ್ಚುತ್ತಿತ್ತು.

ಕೆಲವು ವರ್ಷಗಳು ಕಳೆಯುತ್ತವೆ. ಈಗ ಪುರೂರವನಿಗೆ ಮಕ್ಕಳಿಲ್ಲವೆಂಬುದು ಹೊರತು ಬೇರೆ ಯಾವ ಚಿಂತೆಯೂ ಇಲ್ಲ. ಒಂದು ದಿನ ಸಂಗಮನೀಯ ಮಣಿಯನ್ನು ಒಂದು ಹದ್ದು ಹಾರಿಸಿಕೊಂಡು ಹೋಗುತ್ತದೆ. ಅದು ಪುರೂರವನ ಬಾಣಪಥವನ್ನು ಮೀರಿದರೂ ದೂರದ ಆಶ್ರಮದಲ್ಲಿದ್ದ ಕ್ಷತ್ರಿಯಕುಮಾರನೊಬ್ಬನ ಗುರಿಗೆ ಸಿಕ್ಕಿ ಅವನ ಬಾಣಕ್ಕೆ ಬಲಿಯಾಗಿ ಬೀಳುತ್ತದೆ. ಈ ಕುಮಾರನೇ ಆಯುಸ್ಸು-ಪುರೂರವನಿಗೆ ಉರ್ವಶಿಯಲ್ಲಿ ಹಿಂದೆಯೇ ಜನಿಸಿದ್ದ ಪುತ್ರ. ಪುರೂರವನು ಯಾವುದೋ ಒಂದು ಯಾಗಕ್ಕೆ ಹೋಗಿದ್ದಾಗ ಉರ್ವಶಿ ಈ ಮಗನನ್ನು ಪ್ರಸವಿಸಿ ತಂದೆಯ ಕಣ್ಣಿಗೆ ಬೀಳದಿರುವಂತೆ ಇದುವರೆಗೂ ಚ್ಯವನಾಶ್ರಮದಲ್ಲಿ ಬಿಟ್ಟಿದ್ದಳು. ತನ್ನ ದಿವ್ಯಪ್ರಭಾವದಿಂದ ಗಂಡನಿಗೆ ಇದೊಂದೂ ಗೊತ್ತಾಗದ ಹಾಗೆ ನಡೆಸಿದ್ದಳು. ಈಗ ಹಕ್ಕಿಯನ್ನು ಹೊಡೆದು ಆಶ್ರಮ ನಿಯಮವನ್ನುಲ್ಲಂಘಿಸಿದನೆಂದು ಚ್ಯವನರು ಈ ಕ್ಷತ್ರಿಯಕುಮಾರನನ್ನು ತಾಯಿಯ ಬಳಿಗೇ ಕಳಿಸಿದ್ದರಿಂದ ಅವನು ತನ್ನ ತಂದೆಯ ಕಣ್ಣೆದುರಿಗೆ ಮೊದಲ ಸಲ ನಿಲ್ಲುತ್ತಾನೆ. ಅನಿರೀಕ್ಷಿತವಾದರೂ ಅಪೇಕ್ಷಿತವಾದ ಪುತ್ರಲಾಭದಿಂದ ಪುರೂರವ ಹಿಗ್ಗುತ್ತಿರುವಾಗ ಉರ್ವಶಿ ಬಂದು ಇಂದ್ರನ ಕಟ್ಟಳೆಯನ್ನು ಜ್ಞಾಪಿಸುತ್ತಾಳೆ. "ಮುಂಗಾರು ಮಳೆ ಬಂದು ವೃಕ್ಷದ ಬೇಗೆ ಹಿಂಗಿದ ಸಮಯದಲ್ಲೇ ಅದಕ್ಕೆ ಸಿಡಿಲುಬಡಿದಂತಾಯಿತು." ಪುರೂರವನಿಗೆ ಪುತ್ರಸಮಾಗಮ ಕಾಲದಲ್ಲೇ ಪತ್ನೀವಿಶ್ಲೇಷವೊದಗಿತು. ಪರಮದುಃಖ ದಿಂದ ಉರ್ವಶಿ ಬೀಳ್ಕೊಳ್ಳುತ್ತಿರುತ್ತಾಳೆ, ಅತಿಶಯ ನಿರ್ವೇದದಿಂದ ಪುರೂರವನೂ ತಪೋವನದ ಕಡೆ ತಿರುಗುತ್ತಿರುತ್ತಾನೆ. ಈ ಪ್ರಣಯಿಗಳಿಗೆ ಇದೇ ಅತ್ಯಂತ ವಿಚ್ಛೇದವಾಗಿ ಪರಿಣಮಿಸಬೇಕು. ಆದರೆ ಹೊತ್ತಿಗೆ ಸರಿಯಾಗಿ ದೇವೇಂದ್ರನಿಗೆ ಮುಂದೊದಗಲಿರುವ ಸುರಾಸುರಸಂಗ್ರಾಮದ ನೆನಪು ಬಂದಿತು. ಆಗ ತನ್ನ ಬಲಭುಜವಾದ ಪುರೂರವನ ಸಹಾಯವಿಲ್ಲದಿದ್ದರೆ ಹೇಗೆ? ರಾಜಕಾರಣಪಟುವಾದ ಇಂದ್ರನು ಒಡನೆಯೇ ನಾರದನನ್ನು ಇವರ ಬಳಿಗೆ ಕಳಿಸಿಕೊಟ್ಟನು. "ಶಸ್ತ್ರ ಸಂನ್ಯಾಸ ಬೇಡ; ನಿನಗೆ ಯಾವಜ್ಜೀವವೂ ಉರ್ವಶಿ ಸಹಧರ್ಮಚಾರಿಣಿಯಾಗಿರಲಿ" ಎಂಬ ಇಂದ್ರನ ಅಪ್ಪಣೆಯನ್ನು ನಾರದನು ತಿಳಿಸಿದ ಬಳಿಕ ನಲ್ಲ ನಲ್ಲೆಯರ ಆನಂದಸಂಭ್ರಮದಲ್ಲಿ, ಆಯುಃಕುಮಾರನ ಯೌವ ರಾಜ್ಯಾಭಿಷೇಕ ಮಂಗಳದಲ್ಲಿ ವಿಕ್ರಮೋರ್ವಶೀಯವು ಮುಗಿಯುತ್ತದೆ.

ವೈದಿಕಯುಗದಿಂದ ಈ ನಾಟಕದ ಬಳಿಗೆ ಎಷ್ಟು ದೂರ ಸಾಗಿಬಂದಿದ್ದೇವೆ! ಇಲ್ಲಿಯ ಕಥೆಯೇ ಬೇರೆ, ಆವರಣವೇ ಬೇರೆ, ಉರ್ವಶಿಯೇ ಬೇರೆ. ವೈದಿಕ ಕಥೆಯಲ್ಲಿ ಉರ್ವಶಿ ತನ್ನ ಒಂದು ಲೀಲೆಗಾಗಿ, ಕ್ರೀಡೆಗಾಗಿ, ಪುರೂರವನನ್ನು ಕಾಮಿಸಿದಳು; ಸಮಯಬಂಧಪೂರ್ವಕವಾಗಿ ಅವನೊಡನೆ ನಿಂತಳು. ಅದು ಮುರಿದ ಕೂಡಲೆ ತನ್ನ ಪ್ರಣಯವನ್ನೂ ಮುರಿದಳು (ಮತ್ತೆ ಅವಳನ್ನು ಪಡೆಯಲು ಪುರೂರವನು ದೇಹಾಂತರವನ್ನೇ ಪಡೆಯಬೇಕಾಯಿತು.) ತನ್ನ ನಾಟಕದಲ್ಲಿ ಕಾಳಿದಾಸನು ಈ ಕಟ್ಟಡವನ್ನೇ ವ್ಯತ್ಯಾಸಪಡಿಸಿದ್ದಾನೆ. ಇಲ್ಲಿ ನಾಯಕ ನಾಯಿಕೆಯರ ವಿಯೋಗ ಸಂಯೋಗಗಳ ಸ್ವರೂಪವೇ ತುಂಬ ಭಿನ್ನವಾಗಿದೆ. ಮೊದಲು ಅಂತಃಪುರದ ಸಾಮಾನ್ಯ

ಕಲಹವೊಂದು ಅವರಿಬ್ಬರ ಸಮಾಗಮವನ್ನು ಕೆಲಮಟ್ಟಿಗೆ ಬೆದರಿಸುತ್ತದೆ. ಮೂಲಕಥೆಗಳಲ್ಲಿ ಪುರೂರವನಿಗೆ ಹಿರಿಯ ಹೆಂಡತಿ ಇದ್ದಳೆಂಬ ಪ್ರಸ್ತಾವ ಬಂದಿಲ್ಲ. ಅದು ಬರತಕ್ಕದ್ದೂ ಅನುಚಿತ. ಏಕೆಂದರೆ, ಅದರಿಂದ ಕಥೆಯ ಘನತೆಯೂ ನಾಯಕನ ಘನತೆಯೂ ತಗ್ಗುತ್ತವೆ. ಇದನ್ನು ಲಕ್ಷಿಸದೆ ಕಾಳಿದಾಸನು, ಬಹುಶಃ ನಾಟಕದ ಸಂಪ್ರದಾಯವನ್ನು ಅನುಸರಿಸಿ, ಕಾಶೀರಾಜಪುತ್ರಿಯ ವೃತ್ತಾಂತವನ್ನು ಬೆಳಸಿದ್ದಾನೆ. ಪುರೂರವನು ಗಣಿಕೆಯೊಬ್ಬಳ ವ್ಯಾಮೋಹೋನ್ಮಾದದಲ್ಲಿ ತನ್ನ ಗೃಹಸ್ಥಧರ್ಮಕ್ಕೆಲ್ಲಾ ತಿಲಾಂಜಲಿ ಕೊಟ್ಟನೆಂಬ ಭಾವವಾದರೂ ಇಲ್ಲಿ ಪರಿಸ್ಫುಟವಾಗಿದ್ದರೆ ಚೆನ್ನಾಗಿತ್ತು. ಆದರೆ ಕಾಳಿದಾಸನಿಗೆ ಈ ಪ್ರಯೋಜನವನ್ನು ಸಾಧಿಸುವ ಉದ್ದೇಶವೂ ಹೆಚ್ಚಾಗಿದ್ದಂತೆ ಕಾಣುವುದಿಲ್ಲ; ನಾಯಕನ ಧೀರೋದಾತ್ತತೆಯೂ ದಾಕ್ಷಿಣ್ಯ ಧರ್ಮವೂ ಇದಕ್ಕೆ ಅಡ್ಡಿಯಾಯಿತೇನೊ. ಹೋಗಲಿ; ಕಟ್ಟಿದ ಗಂಟನ್ನಾದರೂ ಚಾತುರ್ಯದಿಂದ ಬಿಚ್ಚಿದ್ದಾನೆಂದು ಹೇಳಲು ಸಾಧ್ಯವಿಲ್ಲ. ರಾಣಿಯ ಈರ್ಷ್ಯೆ ಒಮ್ಮಿಂದೊಮ್ಮೆ ಅನುತಾಪಕ್ಕೆ ತಿರುಗುತ್ತದೆ. ಅವಳು ಮಾಡಿದ ಪತಿದಾನವು ಮಹಾಪತಿವ್ರತೆಗೆ ಮಾತ್ರ ಸಾಧ್ಯವಾದದ್ದು; ಈ ಕ್ಷತ್ರಿಯ ರಮಣಿಗೆ ಅಷ್ಟು ಉಚಿತವಲ್ಲವೆನಿಸುತ್ತದೆ. ಇನ್ನು ಮುಂದಿನ ವಿಘ್ನವೇನೆಂದು ನೋಡೋಣ. ಈರ್ಷ್ಯಾ ಕೋಪದಿಂದ ಕುಮಾರವನವನ್ನು ಪ್ರವೇಶಿಸಿ ಉರ್ವಶಿ ಲತೆಯಾಗಿ ನಿಂತದ್ದೂ, ನಾಯಕನಿಗೆ ಸಂಗಮನೀಯಮಣಿ ಹಠಾತ್ತಾಗಿ ದೊರೆತು ಶಾಪವಿಮೋಚನೆ ಮಾಡಿದ್ದೂ–ಎರಡೂ ಅದ್ಭುತಕಾರ್ಯಗಳು. ಇವುಗಳಿಂದ ಒಂದು ಅಂಕದ ತುಂಬ ಶ್ರೇಷ್ಠವಾದ ಭಾವಗೀತೆ ನಮಗೆ ದೊರೆತದ್ದೇನೋ ದಿಟ. ಆದರೆ ನಾಟಕದ ಕ್ರಿಯೆಗೆ ಹೆಚ್ಚಿನ ಪ್ರಯೋಜನ ಲಭಿಸಲಿಲ್ಲ.[೫] ಮೂಲ ಕಥೆಯಲ್ಲಿ ಪ್ರಧಾನವಾಗಿರುವ ನಾಯಕನ ಉನ್ಮಾದಕ್ಕೆ ಕಾಳಿದಾಸನು ಈ ರೀತಿಯಲ್ಲಿ ಅವಕಾಶವನ್ನು ಕಲ್ಪಿಸಿ ತರಬೇಕಾಯಿತೇನೋ. ಐದನೆಯ ಅಂಕದಲ್ಲಿ ಮತ್ತೊಂದು ವಿಶೇಷವೊದಗಿ ಅನಿರೀಕ್ಷಿತವಾಗಿ ಪರಿಹಾರ ವಾಗುತ್ತದೆ. ಅದರ ಸ್ವರೂಪವನ್ನು ಆಗಲೆ ಸೂಚಿಸಿದ್ದಾಗಿದೆ; ಪರಿಹಾರದ ವಿಚಾರವಾಗಿ ಎರಡು ಮಾತು ಮುಂದೆ ಬರುತ್ತದೆ.

ಬರಸಿಡಿಲಿನಂತೆ ಎರಗಿ ಮಾನವನ ಸುಖವನ್ನು ಭಸ್ಮಮಾಡುವ ಒಂದು ಮಹಾವಿಯೋಗದ ಸಂಘಟನೆಯನ್ನು ತೆಗೆದುಹಾಕಿ, ಅದರ ಸ್ಥಾನದಲ್ಲಿ ಕಾಳಿದಾಸನು ಹೀಗೆ ಲಕ್ಷಣಶಾಸ್ತ್ರಪ್ರಸಿದ್ಧವಾದ ಅಯೋಗಮಾನ–ಶಾಪ ವಿಪ್ರಲಂಭಗಳೆಂಬ ಹಲವು ವಿರಹಗಳನ್ನೊಡ್ಡುತ್ತಾನೆ; ಅವುಗಳನ್ನು ಮತ್ತೆ ಮತ್ತೆ ಪರಿಹರಿಸುತ್ತಾನೆ. ಒಂದೇ ನಿಟ್ಟಿನಲ್ಲಿ ಒಂದೇ ಪ್ರವಾಹದಲ್ಲಿ ಧುಮುಕುವ ಜಲಪಾತಕ್ಕೆ ಹಲವು ತಡೆಗಳನ್ನು ಅಲ್ಲಲ್ಲಿ ಕಟ್ಟಿ ಸಣ್ಣ ಸೀಳುಗಳಾಗಿ ಒಡೆದು ಮೆಲ್ಲನೆ ಕೆಳಗಿಳಿಸಿದಂತಾಯಿತು. ಮೊದಲಿನ ಶಕ್ತಿಯೆಲ್ಲಿ, ಘೋಷವೆಲ್ಲಿ, ಭೀಷಣ ವಿಸ್ಮಯವೆಲ್ಲಿ!

---

೫. ಈ ಸಂಗಮನೀಯಮಣಿಯ ಪ್ರಸಕ್ತಿ ಐದನೆಯ ಅಂಕದಲ್ಲೂ ಬರುತ್ತದೆ. ಅದರ ಮೂಲಕವೇ ತಂದೆಮಕ್ಕಳ ಸಂಗಮವೂ ಘಟಿಸುತ್ತದೆ. ಇಲ್ಲಿ ಅದು ನಿಜವಾಗಿಯೂ ನಾಟಕದ ಕ್ರಿಯೆಗೆ ಸರಿಯಾದ ಅಂಗವಾಗಿದೆ.

ಊರ್ವಶಿಯ ಸ್ವಭಾವವೂ ಇಲ್ಲಿ ತುಂಬ ಪರಿವರ್ತನವನ್ನು ಹೊಂದಿದೆ. ಹಳೆಯ ಕಥೆಗಳಲ್ಲಿ ಅವಳು ಅಮಾನುಷಿ; ಅವಳ ಹೃದಯವೂ ಅಂಥದೇ. ಹಿಂದೆ ಸೂಚಿಸಿರುವಂತೆ ಪುರೂರವನ ಸಹವಾಸವು ಅವಳಿಗೆ ಕ್ಷಣಮಾತ್ರದ ಒಂದು ಲೀಲೆ. ವಿಶ್ಲೇಷದ ವ್ಯಥೆಯಲ್ಲ, ಭಗ್ನಹೃದಯವೆಲ್ಲ ಆ ಮಾನವನಿಗೇ ಹೊರತು ಈ ಅಮಾನುಷ ಕಾಮಿನಿಗಲ್ಲ. ಮಾನುಷ–ಅಮಾನುಷಿಯರಿಗಿರುವ ಈ ಮನೋಧರ್ಮಭೇದವು ಋಗ್ವೇದದ ಸಂವಾದದಲ್ಲಿ ಪರಿಸ್ಫುಟವಾಗಿದೆ. ವಿಕ್ರಮೋರ್ವಶೀಯದಲ್ಲಿ ಕಾಳಿದಾಸನ ಕೈಗೆ ಊರ್ವಶಿ ಸಿಕ್ಕಿ ಮಾನವಸದೃಶಿಯಾಗಿದ್ದಾಳೆ. ತಿರಸ್ಕರಿಣೀವಿದ್ಯೆ, ಪ್ರಭಾವದರ್ಶನ ಮೊದಲಾದ ಒಂದೆರಡು ಇಂದ್ರಜಾಲಗಳನ್ನು ಬಿಟ್ಟರೆ ಅವಳಲ್ಲಿ ಬೇರೆ ಯಾವ ಅಮಾನುಷತೆಯೂ ಉಳಿದಿಲ್ಲ – ಪ್ರೇಮಕಾತರತೆಯಲ್ಲಿ ಇವನ್ನು ಕೂಡ ಸರಿಯಾಗಿ ಉಪಯೋಗಿಸಲಾರಳು (ಎರಡನೆಯ ಅಂಕದಲ್ಲಿ). ಅವಳಿಗೆ ಪುರೂರವನಲ್ಲಿ ಅತ್ಯಂತ ವ್ಯಾಮೋಹವಿದೆ. ಅವನ ಸಂಗಡ ಕಟ್ಟು ಕಟ್ಟಳೆಗಳನ್ನು ಮಾಡಿಕೊಳ್ಳುವುದಿರಲಿ; ಅವನಿಗೆ ತನ್ನಲ್ಲಿ ಅನುರಾಗವುಂಟೋ ಇಲ್ಲವೋ ಎಂದು ಶಂಕಿಸಿ ತಾನೇ ಅಧೀರಳಾಗುತ್ತಾಳೆ. ಸಾಮಾನ್ಯ ಮಾನವಿಯಂತೆ ಅವನ ಸಹವಾಸಕ್ಕೆ ಹಂಬಲಿಸುತ್ತಾಳೆ. ಅವನ ವಿಯೋಗಭೀತಿಯಿಂದ ಮಗನನ್ನು ಕೂಡ ತನ್ನ ಬಳಿ ಇಟ್ಟುಕೊಳ್ಳದೆ ಎಲ್ಲೋ ದೂರಕ್ಕೆ ಅಟ್ಟಿಬಿಟ್ಟಿರುತ್ತಾಳೆ. ಕಡೆಯಲ್ಲಿ ಅಗಲಬೇಕಾದ ಸಂದರ್ಭವೊದಗಿದಾಗ ಇವಳ ವ್ಯಥೆ ಹೆಚ್ಚೋ ಪುರೂರವನ ವ್ಯಥೆ ಹೆಚ್ಚೋ ಹೇಳುವುದು ಕಷ್ಟ. ಅವಳ ವರ್ತನೆಯಲ್ಲಿ ದೇವವನಿತೆಯ ಠೀವಿಯಿಲ್ಲ, ದರ್ಪವಿಲ್ಲ.

ವೈದಿಕಕಥೆಯಲ್ಲಿರುವಂತೆ ಇಲ್ಲಿಯೂ ಊರ್ವಶಿ ಗಣಿಕೆಯೇನೋ ಹೌದು; ಆದರೆ ದಿಟ್ಟತನದಿಂದ ತಾನೇ ಪುರೂರವನನ್ನು ಹುಡುಕಿಕೊಂಡು ಮುಂದುವರಿದು ಬರುವಳೆಂಬ ಅಂಶವನ್ನು ಬಿಟ್ಟರೆ ಅವಳಿಗೂ ಕುಲಕನ್ಯೆಯರಿಗೂ ಹೆಚ್ಚಿನ ವ್ಯತ್ಯಾಸವು ಸ್ಫುಟವಾಗುವುದಿಲ್ಲ. ಈ ಪಕ್ಷಕ್ಕೆ ಕಥಾನಾಯಿಕೆ ಒಬ್ಬ ದೇವಗಣಿಕೆಯೇಕಾಗಬೇಕು? ಅದು ಹೋಗಲಿ. ವೇಶ್ಯೆಯರಲ್ಲೂ 'ಮೃಚ್ಛಕಟಿಕ'ದ ವಸಂತಸೇನೆಯಂತೆ ಉದಾತ್ತ ರಮಣಿಯರಿರಬಹುದು. ಅಂಥವರ ಗುಣಕೀರ್ತನೆಯಿಂದ ಕೃತಿಯ ಭಾವವೇ ಉನ್ನತ ವಾಗಬಹುದು. ಆದರೆ ಊರ್ವಶಿಯಲ್ಲಿ ಈ ಬಗೆಯ ಸತ್ತ್ವವಿಶೇಷ ಕಾಣಬರುವುದಿಲ್ಲ. ಹಾಗೆ ನೋಡಿದರೆ, ಪುರೂರವನಲ್ಲಿ ಅನನ್ಯವಾದ ಆಸಕ್ತಿಯುಂಟೆಂಬುದೊಂದೇ ಅವಳ ಗುಣ. ಮಿಕ್ಕ ಸಂಗತಿಗಳಲ್ಲಿ ಅವಳ ಅಸಹನೆಯನ್ನೂ ಸ್ವಾರ್ಥಶೀಲತೆಯನ್ನೂ ನೋಡಿ ನಮಗೆ ಅಷ್ಟೇನೂ ಗೌರವ ಹುಟ್ಟುವುದಿಲ್ಲ.

ಮೇಲಿನ ವಿವೇಚನೆಯಿಂದ ಒಂದೆರಡು ಅಂಶಗಳು ವ್ಯಕ್ತವಾಗಿರಬಹುದು. ಮೂಲತಃ ಊರ್ವಶೀ–ಪುರೂರವರ ಪ್ರಣಯಕಥೆ ದುರಂತಕಥೆ. ಅದರ ಆಳದಲ್ಲಿ ಭೀಷಣವಾದ–ಆದರೂ ನಿತ್ಯವಾದ ತತ್ತ್ವವೊಂದಿದೆ; ಮಾನವನಿಗೆ ದೇವತೆಗಳ ಕೂಟವು ಬೆಂಕಿಯ ಸಂಗಡದ ಸರಸದಂತೆ; ಅದರಲ್ಲೂ ಗಣಿಕೆಯ ಸ್ನೇಹವು ಜಲಲಿಪಿಯಂತೆ. ಪುರೂರವನ ಪೂರ್ವದ ಉನ್ನತಿಯನ್ನೂ ಈಗಿನ ದುರ್ಗತಿಯನ್ನೂ ನೋಡಿ ನಾವು

ಮರುಗಿ ತಲ್ಲಣಿಸುತ್ತೇವೆ. ಆದರೆ ಹಾಗೆ ನಡೆದದ್ದು ಹೀಗೆ ಮುಗಿಯಬೇಕು. ಈ ಹಳೆಯ ಕಥೆಯ ತಿರುಳಿಗೂ ಭಾವೋತ್ಕರ್ಷಕ್ಕೂ ಲೋಪಬಾರದಂತೆ ಕಾಳಿದಾಸನು ನೋಡಿಕೊಳ್ಳಬೇಕಾಗಿತ್ತು. ಆದರೆ ಅವನ ಗಮನ ಇತ್ತಕಡೆ ಹರಿಯಲಿಲ್ಲವೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಮೂಲ ಚಿತ್ರವನ್ನು ತೆಗೆದು ಅದರ ಚೌಕಟ್ಟಿನಲ್ಲಿ ಚತುರವಾದರೂ ಭವ್ಯವಲ್ಲದ ತನ್ನ ಹೊಸ ಚಿತ್ರವನ್ನು ಸೇರಿಸಿದನು. ಅರ್ಥಪುಷ್ಟಿ ಸಾಲದ ಹಲವು ಘಟನೆಗಳನ್ನು ಜೋಡಿಸಿದನು. ಪಾಶ್ಚಾತ್ಯ ವಿಮರ್ಶಕರೊಬ್ಬರು ಹೇಳುವಂತೆ[೬] "ಉಜ್ಜ್ವಲವಾದ ದುರಂತಕಥೆಯೊಂದನ್ನು ಕೆಡಿಸಿ, ಕ್ಷುದ್ರವಾದ ಕುಟುಂಬ ತಂತ್ರಗಳ ಬಳಕೆಯ ವೃತ್ತಾಂತವೊಂದನ್ನು ಬೆಳಸಿದನು; ಸ್ವರ್ಗದ ಅಪ್ಸರೆಯನ್ನು ತಂದು ನಾಡಾಡಿಯ ರಾಣಿವಾಸದವಳನ್ನಾಗಿ ಪರಿವರ್ತಿಸಿದನು."

ಮೂಲಕಥೆಯ ಮಾತಿರಲಿ. ವಿಕ್ರಮೋರ್ವಶೀಯವು ಈಗ ರಚಿತವಾಗಿರುವ ರೀತಿಯಲ್ಲೇ ಅದರ ಪರ್ಯವಸಾನವು ಅಷ್ಟೊಂದು ಸಮಂಜಸವಾಗಿಲ್ಲ. ಉರ್ವಶಿ ಸ್ವರ್ಗಚ್ಯುತಳಾದಾಗ, ಪುರೂರವನು ಅವಳಲ್ಲಿ ಸಂತಾನವನ್ನು ಕಾಣುವತನಕ ಅವನ ಸಂಗಡ ಇರುವಂತೆ ಇಂದ್ರನು ಶಾಪಪರಿಹಾರವನ್ನು ಕರುಣಿಸಿದನು. ಅವನ ಮನಸ್ಸಿನ ಅಭಿಪ್ರಾಯದಂತೆ, ಉರ್ವಶಿಗೆ ಪುತ್ರಜನನವಾದ ಕೂಡಲೆ ಅವಳು ಸ್ವರ್ಗಕ್ಕೆ ಹಿಂದಿರುಗಬೇಕಾಗಿತ್ತು. "ದೃಷ್ಟಸಂತಾನಃ" ಎಂಬ ಮೂಲದ ಮಾತಿಗೆ ಇದೇ ಸ್ಫುಟಾರ್ಥ. (ವೈದಿಕ ಕಥೆಯಲ್ಲಿ ಇದಕ್ಕೂ ಮೊದಲೇ ಪುರೂರವನನ್ನು ಬಿಟ್ಟುಹೋಗುತ್ತಾಳೆ.) ಆದರೆ ನಿಪುಣನಾದ ವಕೀಲನಂತೆ ಉರ್ವಶಿ ಇಂದ್ರವಚನದ ಅಂತರಾರ್ಥಗಳನ್ನೆಲ್ಲಾ ಪರ್ಯಾಲೋಚಿಸಿದಳು. ಪುರೂರವನಿಗೆ ತಿಳಿಯದಂತೆ ಪ್ರಸವಿಸಿ, ಹುಟ್ಟಿದ ಮಗನ ಮುಖವು ಅವನ ಕಣ್ಣಿಗೆ ಬೀಳದಂತೆ ಏರ್ಪಡಿಸಿದರೆ ತಾನು ಎಂದೆಂದಿಗೂ ಪ್ರಿಯನಿಂದ ಅಗಲಬೇಕಾಗಿಲ್ಲವೆಂದು ಕಂಡು ಹಿಡಿದಳು. ತನ್ನ ದಿವ್ಯಶಕ್ತಿಯಿಂದ ಆ ರೀತಿ ನಡೆಸಿ, ವಿಧಿಯ ಕಣ್ಣಿಗೇ ಮಣ್ಣೆರಚಿದಳು. ಪುರೂರವನಲ್ಲಿ ಇವಳಿಗಿದ್ದ ವ್ಯಾಮೋಹವು ಸ್ವಾರ್ಥಪರವಾದದ್ದು. ಅದರ ಭರದಲ್ಲಿ ತನ್ನ ಮಾತೃ ಧರ್ಮವನ್ನೂ ಪೂರ್ಣವಾಗಿ ಮರೆತಳು. ಮಗ ಹುಟ್ಟಿದ ದಿವಸ ಚ್ಯವನಾಶ್ರಮದಲ್ಲಿ ಬಿಟ್ಟಂದಿನಿಂದ ಮತ್ತೆ ಆ ಋಷಿಗಳೇ ಹುಡುಗನನ್ನು ಆಸ್ಥಾನಕ್ಕೆ ಕಳಿಸುವವರೆಗೂ ಒಂದು ಸಲವಾದರೂ ಅವಳು ಪುರೂರವನ ಪಕ್ಕವನ್ನು ಬಿಟ್ಟು ಮಗನ ಬಳಿಗೆ ಹೋಗಿ ನೋಡಿಕೊಂಡು ಬಂದಿರಲಿಲ್ಲ. ವರ್ಷಗಳು ಗತಿಸಿದಮೇಲೆ ಪುನಃ ನೋಡಿದಾಗ ಆ ಹುಡುಗನನ್ನು ಗುರುತಿಸಲೇ ಆರಳು. ಗುರುತಿಸಲು ಹೇಗೆ ತಾನೆ ಸಾಧ್ಯ? "ತುಂಬ ದೊಡ್ಡವನಾಗಿದ್ದಾನೆ!" ಎಂದುಕೊಳ್ಳುತ್ತಾಳೆ. ಅತ್ತ ಪುರೂರವನು ರಾಜ್ಯಭಾರವನ್ನು ಕೂಡ ಅಲಕ್ಷಿಸಿ – ಇನ್ನು ಮೊದಲನೆಯ ಹೆಂಡತಿಯ ಮಾತೇಕೆ?–ಗಂಧಮಾದನ ಪರ್ವತದಲ್ಲಿ ಅಲೆಯುತ್ತಿರುತ್ತಾನೆ. ಈ ರೀತಿ ಇಬ್ಬರಲ್ಲೂ ಕರ್ತವ್ಯಪರಾಙ್ಮುಖವಾದ ವ್ಯಾಮೋಹವು ಹೇಗೆತಾನೆ ಮಂಗಳದಲ್ಲಿ ಮುಗಿಯಬಹುದು? ಆದರೆ ಕಾಳಿದಾಸನು ಈ

೬. A.W. Ryder, *Kalidasa*, p. 119.

ಅಸಾಮಂಜಸ್ಯವನ್ನು ಗಮನಿಸಲಿಲ್ಲ; ಗಮನಿಸಿದ್ದರೂ ನಾಟ್ಯನಿಬಂಧನೆಗಳ ವಜ್ರಮುಷ್ಟಿಯಿಂದ ತನ್ನ ಪ್ರತಿಭೆಯನ್ನು ಬಿಡಿಸಿಕೊಳ್ಳಲು ಅವನಿಗೆ ಸಾಧ್ಯವಾಗಲಿಲ್ಲ. ಈ ವಿಷಮ ಸನ್ನಿವೇಶದಲ್ಲಿ ವಸ್ತುರಚನೆ ಕೂಡ ಗಂಟು ಗಂಟಾಗಿದೆ. ಕಲಹಪ್ರಿಯನಾದ ನಾರದನು ತನ್ನ ನಿತ್ಯಧರ್ಮದಂತೆ ಕೂಡಿದವರಿಬ್ಬರನ್ನಗಲಿಸದೆ, ಅಗಲತಕ್ಕವರಿಬ್ಬರನ್ನು ಕೂಡಿಸುವುದಕ್ಕೆ ಇದೇ ಸಂದರ್ಭವೆಂದು ತೋರುತ್ತದೆ. "ಮೋಡವಿಲ್ಲದೆ ಬರಿಯ ಮಿಂಚು ಇಳಿದಂತೆ" ಅವನು ಭೂಮಿಗೆ ಇಳಿದನು. ನಾಟಕದ ಕಥೆಯಲ್ಲೂ ಹಾಗೆಯೇ ಆಗಿದೆ. ವಿಶೇಷ ಭಯದ ಮಿಂಚೊಂದು ಮಿಂಚಿತು; ಆದರೆ ಮಳೆ ಸುರಿಯಲಿಲ್ಲ. ಸ್ಥಿರಸಂಯೋಗವೇ ವಿಚಿತ್ರವಾಗಿ ಫಲಿಸಿತು. ಶಾಸ್ತ್ರೀಯವಾದ ಮಂಗಳವನ್ನು ನಾರದನು ಹಾಡಿಬಿಟ್ಟನು. ಇದರಿಂದ ಮೂಲದ ದುರಂತಭಾವ ಕಣ್ಮರೆಯಾಯಿತು!

ವಿಕ್ರಮೋರ್ವಶೀಯದ ಕವಿತಾಸೌಂದರ್ಯಕ್ಕೆ ನಾವು ಎದೆಯೊಪ್ಪಿಸುತ್ತೇವೆ, ಉಪಮಾವೈಖರಿಗೆ ಬೆರಗಾಗುತ್ತೇವೆ, ಸಂವಾದಚಾತುರ್ಯಕ್ಕೆ ತಲೆದೂಗುತ್ತೇವೆ, ಆದರೆ ಅದರ ವಸ್ತುವಿಘಟನೆಗೆ ವಿಷಾದಪಡುತ್ತೇವೆ.

೩

ಕಾಳಿದಾಸನ ಮಿಕ್ಕ ನಾಟಕಗಳಲ್ಲಿರುವಂತೆಯೇ 'ಅಭಿಜ್ಞಾನ ಶಾಕುಂತಲ'ದಲ್ಲಿಯೂ ಶೃಂಗಾರವೇ ಪ್ರಧಾನರಸ. ಅದರ ನಾಯಿಕೆ ಶಕುಂತಲೆ-ಕಣ್ವರ ಆಶ್ರಮದ ತರುಲತೆಗಳೊಂದಿಗೆ ತಾನೂ ಜಂಗಮಲತೆಯಾಗಿ ಬೆಳೆದು ಹುಲ್ಲೆ ನವಿಲುಗಳೊಂದಿಗೆ ಅಡಿಕೊಂಡು ಮುಗ್ಧತೆಯ ಮೂರ್ತಿಯಾಗಿದ್ದ ಶಕುಂತಲೆ. ದುಷ್ಯಂತನನ್ನು ಮೊದಲ ಬಾರಿ ಕಂಡಾಗ ತನಗೆ ಅನುರಾಗವು ಅಂಕುರಿಸಿತು ಎಂಬುದನ್ನೂ ತಿಳಿಯದೆ, "ಇದೇನು, ಈತನನ್ನು ನೋಡಿ ತಪೋವನವಿರೋಧಿಯಾದ ವಿಕಾರಕ್ಕೆ ಒಳಗಾದೆನು!" ಎಂದು ತನ್ನೊಳಗೆ ತಾನು ವಿಚಾರಮಾಡುವಷ್ಟು ಸರಳೆ ಇವಳು. ಮುಂದೆ ಪ್ರೇಮಪ್ರವಾಹಕ್ಕೆ ಸಿಕ್ಕಿ, ಸಿಕ್ಕಿದರೂ ಸ್ವಾತಂತ್ರ್ಯವನ್ನವಲಂಬಿಸಲು ಹಿಂಜರಿದು ಹೆಣಗಿ, ಕಡೆಗೆ ದುಷ್ಯಂತನ ಭಾರ್ಯೆಯಾಗುತ್ತಾಳೆ; ಗರ್ಭಧಾರಿಣಿಯಾಗುತ್ತಾಳೆ. ಪ್ರಿಯನನ್ನು ಅಗಲಿದ ದಿನ ವಿರಹ ಚಿಂತೆಯಲ್ಲಿ ಮುಳುಗಿದ್ದಾಗ ದುರ್ವಾಸರ ಶಾಪಕ್ಕೆ ತನ್ನರಿವಿಲ್ಲದೆಯೇ ಗುರಿಯಾಗಿ, ಅದರ ಮಹಿಮೆಯಿಂದ ತನ್ನ ನೆನಪನ್ನು ಪೂರ್ಣವಾಗಿ ಮರೆತ ದುಷ್ಯಂತನ ಆಸ್ಥಾನಕ್ಕೆ ಆ ಮುಂದೆ ಹೋಗಿ ಅಲ್ಲಿ ಪೂರ್ಣ ತಿರಸ್ಕಾರವನ್ನು ಹೊಂದುತ್ತಾಳೆ. ಬಳಿಕ ತನ್ನ ತಾಯಿಯ ಪ್ರಭಾವದಿಂದ ಮಾರೀಚ ಆಶ್ರಮವನ್ನು ಸೇರಿ, ಚಕ್ರವರ್ತಿಲಕ್ಷಣಶಾಲಿಯಾದ ಪುತ್ರನನ್ನು ಪಡೆದು, ಅಲ್ಲೇ ವರ್ಷಗಟ್ಟಳೆ ಏಕವೇಣೀಧರಳಾಗಿ ತಪಸ್ಸನ್ನಾಚರಿಸುತ್ತಾಳೆ. ಈ ನಡುವೆ ಅಭಿಜ್ಞಾನದ ಉಂಗುರವನ್ನು ಕಂಡು ಅರಿವು ಮರಳಿದ ದುಷ್ಯಂತನ ಸತ್ಯವಾದ ಪಶ್ಚಾತ್ತಾಪವನ್ನು ಕೇಳಿ, ಹಳೆಯ ಕ್ಲೇಶವನ್ನು ಮರೆತು ಅವನನ್ನು ಪುನಃ ಅಂಗೀಕರಿಸುತ್ತಾಳೆ. ಕಾಳಿದಾಸನು ಜಗತ್ತಿನಲ್ಲೇ ವಿಖ್ಯಾತಿಗೊಳಿಸಿರುವ ಈ ಕಥೆಯನ್ನು ಯಾರು ತಾನೆ ಅರಿಯರು? ಇಲ್ಲಿ ಅದನ್ನು ಮತ್ತೆ ನಿರೂಪಿಸುವ ಸಾಹಸಕ್ಕೆ ಹೋಗದೆ ಪ್ರಕೃತ ವಿವೇಚನೆಗೆ ತೊಡಗಬಹುದು.

ವಿಕ್ರಮೋರ್ವಶೀಯದಲ್ಲಿ ಕಾಳಿದಾಸನು ದುರಂತವಾಗಬೇಕಾಗಿದ್ದ ಕಥೆಯ ಸತ್ತ್ವವನ್ನು ಕುಗ್ಗಿಸಿ ಅದನ್ನು ಮಂಗಳಾಂತವಾಗಿ ತಿರುಗಿಸಿದನೆಂದು ನೋಡಿದೆವು. ಶಾಕುಂತಲದಲ್ಲೂ ಪ್ರಥಮ ಪ್ರಣಯವಿದೆ, ಕಠೋರ ವಿಚ್ಛೇದವಿದೆ, ಅಂತ್ಯದಲ್ಲಿ ಪುನಸ್ಸಮಾಗಮವಿದೆ. ಈ ನಾಟಕದಲ್ಲಿ ಪ್ರತಿಭಾಪರಿಣತಿಯನ್ನೂ ಉದಾತ್ತ ವಸ್ತು ರಚನೆಯನ್ನೂ ಕೊಂಡಾಡದ ವಿಮರ್ಶಕರಿಲ್ಲ. ಆದರೆ ಇದರ ಪರ್ಯವಸಾನವು ಉಚಿತವಾಗಿದೆಯೆ ಎಂಬ ವಿಚಾರ ಒಮ್ಮೊಮ್ಮೆ ಮೂಡದೆ ಇಲ್ಲ. ಐದನೆಯ ಅಂಕವನ್ನಂತೂ ಶಕುಂತಲೆಯ ಘೋರಾವಮಾನದ ದುರಂತಚ್ಛಾಯೆ ಮುಸುಕಿದೆ. ಇದೆಲ್ಲ ನಡೆದ ಮೇಲೆ ಅವಳು ದುಷ್ಯಂತನನ್ನು ಮತ್ತೆ ಸ್ವೀಕರಿಸಿದಳೆಂದರೆ ಸಮರ್ಪಕವಾಗುತ್ತದೆಯೆ? ನಾಟಕ ಲಕ್ಷಣಕ್ಕೆ ಕಟ್ಟುಬಿದ್ದು ಇಲ್ಲಿಯೂ ಮತ್ತೊಮ್ಮೆ ಕಾಳಿದಾಸನು ಸಹಜ ದುರಂತವಾದ ಕಥೆಯನ್ನು ಅನುರೂಪವಲ್ಲದ ಮಂಗಳದಲ್ಲಿ ಮುಕ್ತಾಯಮಾಡಿದ್ದಾನೆಯೆ? ಇದೇ ನಮ್ಮೆದುರಿಗಿರುವ ಪ್ರಶ್ನೆ.

ದುಷ್ಯಂತ-ಶಕುಂತಲೆಯರ ಪ್ರಣಯವೃತ್ತವು ದುರಂತ ಕಥೆಯಾಗುವುದಾದರೆ ಅಲ್ಲಿ ದುರಂತಪಾತ್ರ ಯಾರೆಂಬುದನ್ನು ಮೊದಲು ನೋಡಬೇಕು. ಆ ಪಾತ್ರ ದುಷ್ಯಂತನಂತೂ ಅಲ್ಲವೆಂದು ಕಷ್ಟವಿಲ್ಲದೆ ತಿಳಿದುಕೊಳ್ಳಬಹುದು. ಕಾಳಿದಾಸನ ನಾಟಕದಲ್ಲೂ ಅಷ್ಟೆ, ಅದಕ್ಕೆ ಆಧಾರವಾಗಿರುವ ಮಹಾಭಾರತದ ಶಾಕುಂತ ಲೋಪಾಖ್ಯಾನದಲ್ಲೂ ಅಷ್ಟೆ – ದುಷ್ಯಂತನ ಪಾತ್ರದಲ್ಲಿ ಯಾವ ದುರಂತಗುಣವೂ ಕಾಣಬರುವುದಿಲ್ಲ. ಅವನು ಮಹಾಭಾರತದಲ್ಲಿ ಧೂರ್ತ; ಶಾಕುಂತಲದಲ್ಲಿ ಧೀರೋದಾತ್ತ. (ಈ ಅಂಶವು ಕ್ಷಿಪ್ರದಲ್ಲೇ ವಿಶದವಾಗುತ್ತದೆ.) ಎರಡು ಕಡೆಗಳಲ್ಲೂ ಅವನ ಲೋಪದೋಷಗಳು ಯಾವುವೂ ದುರಂತಮಾರ್ಗದಲ್ಲಿ ಹರಿದು ನಮ್ಮ ವಿಷಾದ ವಿಸ್ಮಯಗಳಿಗೆ ಕಾರಣವಾಗತಕ್ಕವಲ್ಲ. ವಿಕ್ರಮೋರ್ವಶೀಯಕ್ಕೂ ಶಾಕುಂತಲಕ್ಕೂ ಇದೊಂದು ದೊಡ್ಡ ವ್ಯತ್ಯಾಸ. ಅಲ್ಲಿ ನಾಯಕನಾದ ಪುರೂರವನೇ ದುರಂತಪಾತ್ರ, ಇಲ್ಲಾದರೆ ದುರಂತತೆಯುಂಟೆ ಎಂಬ ಚರ್ಚೆಗೆ ಸಿಕ್ಕತಕ್ಕವಳು ನಾಯಿಕೆ ಮಾತ್ರ.

ಮೊದಲು ಮಹಾಭಾರತದ ಶಾಕುಂತಲೋಪಾಖ್ಯಾನದಲ್ಲಿ ಬಂದಿರುವ ಚಿತ್ರ ಹೇಗಿದೆಯೆಂಬುದನ್ನು ನೋಡುವುದು ಆವಶ್ಯಕ. ಲೆಕ್ಕಾಚಾರದ ಮನಸ್ಸಿನ ತಾಪಸಕನ್ಯೆಯೊಬ್ಬಳನ್ನು ಕಾಮುಕರಾಜನೊಬ್ಬನು ಮೋಹಿಸಿ ವಂಚಿಸುವುದೇ ಅಲ್ಲಿಯ ಕಥೆ. ದುಷ್ಯಂತನು ಶಕುಂತಲೆಯನ್ನು ಕಣ್ವರ ಆಶ್ರಮದಲ್ಲಿ ನೋಡಿದ ಕೂಡಲೆ ಕಾಮಿಸಿ, ಮನಸ್ಸಿನಲ್ಲಿಲ್ಲದ ಆಣೆಪ್ರಮಾಣಗಳಿಂದ ನಂಬಿಸಿ ಗಾಂಧರ್ವವಿಧಿಯಿಂದ ವರಿಸುತ್ತಾನೆ. ಒಂದು ಮುಹೂರ್ತಕಾಲವಾದರೂ – ಫಲಸಮಿತ್ತುಗಳನ್ನು ತರಲು ಹೋಗಿದ್ದ ಕಣ್ವರು ಹಿಂದಕ್ಕೆ ಬರುವವರೆಗಾದರೂ ಆತ್ಮಸಂಯಮನ ಮಾಡಲು ಅವನಿಗೆ ತಾಳ್ಮೆಯಿಲ್ಲ, ಮನಸ್ಸೂ ಇಲ್ಲ. ತನ್ನ ನಗರಕ್ಕೆ ಹಿಂದಿರುಗಿದ ಕೂಡಲೆ ಉದ್ದೇಶಪೂರ್ವಕವಾಗಿ ಶಕುಂತಲೆಯ ವಿಷಯವನ್ನು ಮರೆಯುತ್ತಾನೆ. ಇನ್ನು ಶಕುಂತಲೆಯ ಘನತೆ

೭. ಪರಿಶಿಷ್ಟವನ್ನು ನೋಡಿ.

ವ್ಯಕ್ತವಾಗುವುದೂ ಅಷ್ಟರಲ್ಲೇ ಇದೆ. ಅವಳ ಮಾತುಕಥೆಗಳನ್ನೆಲ್ಲ ಪರಿಶೀಲಿಸಿದರೂ ದುಷ್ಯಂತನಲ್ಲಿ ಅವಳಿಗೆ ಅನುರಾಗವಿತ್ತೆಂಬುದೇ ಸ್ಫುಟವಾಗುವುದಿಲ್ಲ. ದುಷ್ಯಂತನನ್ನು ಅವಳು ವರಿಸಿದ್ದಕ್ಕೆ ತಾನು ರಾಜಮಾತೆಯಾಗಬೇಕೆಂಬ ಹೆಬ್ಬಯಕೆಯೊಂದೇ ಮುಖ್ಯ ಕಾರಣವೆಂದು ತೋರುತ್ತದೆ. ಅದರಿಂದ ಆ ನಿಬಂಧನೆಯೊಂದನ್ನೇ ಅವನ ಸಂಗಡ ಮಾಡಿಕೊಂಡಳು. ಈ ವಾಣಿಜ್ಯಸಂಬಂಧದಲ್ಲಿ ಆರ್ದ್ರಭಾವವುಂಟೆ, ಲಲಿತ ಸನ್ನಿವೇಶವುಂಟೆ, ಅನುನಯ ಪ್ರಸಾದಗಳುಂಟೆ! ವರ್ಷಗಳು ಕಳೆದುವು. ಸರ್ವದಮನನು ಹುಟ್ಟಿ ಬೆಳೆದನು. ಕಡೆಗೆ ಕಣ್ವರು ತಾಯಿಮಕ್ಕಳನ್ನು ದುಷ್ಯಂತನ ಆಸ್ಥಾನಕ್ಕೆ ಕಳಿಸಿದರು. ದುಷ್ಯಂತನಿಗೆ ಶಕುಂತಲೆಯ ಗುರುತು ಸಿಕ್ಕಿತು! ಆದರೆ ಲೋಭದಿಂದಲೋ ಅಪವಾದಭೀತಿಯಿಂದಲೋ ತಾನು ಅವಳನ್ನು ಬಲ್ಲವನೇ ಅಲ್ಲವೆಂದು ಸಾಧಿಸುವನು! "ದುಷ್ಟ ತಾಪಸಿ, ಪುಂಶ್ಚಲಿ" ಎಂದು ಅವಳನ್ನು ದೂಷಿಸುವನು. ಶಕುಂತಲೆ ಇದಕ್ಕೆಲ್ಲಾ ಸಗ್ಗುವವಳಲ್ಲ. ಸತ್ಯಾಸತ್ಯಗಳನ್ನು ಕುರಿತು, ಪುತ್ರಪ್ರೇಮವನ್ನು ಕುರಿತು ದೀರ್ಘವಾದ ಉಪನ್ಯಾಸವನ್ನು ಸಭಾಮಧ್ಯದಲ್ಲಿ ನಿಂತುಕೊಡುವಳು : ದುಷ್ಯಂತನ ಮಿಥ್ಯಾಚಾರವನ್ನು ಬಯಲಿಗೆಳೆಯುವಳು. ಇಷ್ಟಾದರೂ ಅವನು ದಾರಿಗೆ ಬಾರದಿರಲು, ನಿನ್ನ ಹಂಗಿಲ್ಲದೆಯೇ ನನ್ನ ಪುತ್ರನು ಶೈಲಸಾಗರಪರ್ಯಂತವಾದ ಭೂಮಿಯನ್ನಾಳುವನೆಂದು ಶಪಥ ಮಾಡಿ ಆಶ್ರಮಕ್ಕೆ ಹಿಂದಿರುಗುತ್ತಿರುವಳು. ಆ ವೇಳೆಗೆ ಅಂತರಿಕ್ಷದಲ್ಲಿ "ದುಷ್ಯಂತ, ಇವನು ನಿನ್ನ ಮಗ; ಶಕುಂತಲೆ ಸತ್ಯವನ್ನೇ ಹೇಳುತ್ತಾಳೆ. ಆದ್ದರಿಂದ ಇವನನ್ನು ಸ್ವೀಕರಿಸು" ಎಂಬ ಆಕಾಶವಾಣಿ ಕೇಳಿಸುವುದು. ಆಗ ದುಷ್ಯಂತನು ತನಗೆ ಎಲ್ಲವೂ ಮೊದಲಿಂದಲೂ ತಿಳಿದಿತ್ತೆಂದೂ, ಲೋಕತೃಪ್ತಿಗಾಗಿ ಇಷ್ಟನ್ನು ನಡಸಿದ್ದಾಯಿತೆಂದೂ ಹೇಳಿ ಪತ್ನೀಪುತ್ರರನ್ನು ವಿಜೃಂಭಣೆಯಿಂದ ಸ್ವೀಕರಿಸುವನು.

ಈ ಕಥೆಯಲ್ಲಿ ಸಹಜವಾಗಿ ದುರಂತಗುಣವಿದೆ. ಕೊನೆಯಲ್ಲಿ ಅಂಟಿಕೊಂಡಿರುವ ಆಕಾಶವಾಣಿ ಪೌರಾಣಿಕ ದೃಷ್ಟಿಯಿಂದ ಎಷ್ಟೇ ಮುಖ್ಯವಾಗಿದ್ದರೂ ಕಥಾಬಂಧದ ದೃಷ್ಟಿಯಿಂದ ಅಸಂಗತವಾಗಿದೆ. ಕಥೆ ಈ ರೀತಿ ಮುಗಿಯುವುದೆಂಬುದಕ್ಕೆ ಮೊದಲಿನಿಂದ ಯಾವ ಸನ್ನಾಹವೂ ಇಲ್ಲ. ದುಷ್ಯಂತ ಶಕುಂತಲೆಯರಿಗೆ ನಡೆದ ವ್ಯವಹಾರಕ್ಕೆ ವಿಚ್ಛೇದವೊಂದೇ ನ್ಯಾಯವಾದ ಪರಿಸಮಾಪ್ತಿ. ಇದೊಂದು ಲೋಕಸಾಧಾರಣವಾದ ವೃತ್ತ : ಕಾಮುಕನ ಜಾಲಕ್ಕೆ ಸಿಕ್ಕಿ ವಂಚಿತಳಾದ ಕನ್ಯೆಯ ಆಶಾಭಂಗದ ಕಥೆ. ಇದನ್ನು ನಾಟಕ ರೂಪಕ್ಕೆ ತಿರುಗಿಸಬೇಕೆಂದರೆ, ಶಕುಂತಲೆಯ ಗಂಡುಬೀರಿತನವನ್ನು ತಗ್ಗಿಸಿ, ಅವಳ ಮುಗ್ಧತೆಯನ್ನೂ ಅಶರಣತೆಯನ್ನೂ ಸ್ಪಷ್ಟವಾಗಿ ಚಿತ್ರಿಸಿ, ಕರುಣವಿಷಾದಗಳನ್ನು ಸುಲಭವಾಗಿ ಹೆಚ್ಚಿಸಬಹುದು. ಆದರೆ ಇಷ್ಟರಿಂದ ನಾಟಕದ ಭಾವವು ಉನ್ನತವಾಗಲಾರದು. ಇಲ್ಲಿಯ ದಾಂಪತ್ಯ ವ್ಯವಹಾರದಲ್ಲಿ ಘನತೆಯ ತಳಹದಿಯೇ ಇಲ್ಲ. ಈ ವಸ್ತುವನ್ನೊಳಗೊಂಡ ನಾಟಕವು ದುರಂತವೇನೋ ಆಗಬಹುದು! ಆದರೆ ಅದರ ರಚನೆ ಎಷ್ಟೇ ಉತ್ತಮವಾಗಿದ್ದರೂ ಶಾಕುಂತಲ ನಾಟಕದ ನೆಲೆಗೆ ಅದು ಎಂದಿಗೂ ಏರಲಾರದು. ದುಷ್ಯಂತ, ಶಕುಂತಲೆ ಎಂಬ ಹೆಸರುಗಳು ಮಾತ್ರ ಮೂಲಕಥೆಗೂ

ಕಾಳಿದಾಸನ ನಾಟಕಕ್ಕೂ ಸಮಾನವೇ ಹೊರತು ವಿವರಗಳಲ್ಲಿ ಒಂದಕ್ಕೊಂದಕ್ಕೆ ಹೋಲಿಕೆಯೇ ಇಲ್ಲ. ಇಲ್ಲಿ ಇತಿಹಾಸಪ್ರಸಿದ್ಧವಾದ ದುರಂತವಸ್ತುವನ್ನು ಕಾಳಿದಾಸನು ಕೈಬಿಟ್ಟನೆಂದು ಯಾರೂ ಆಕ್ಷೇಪಿಸುವ ಹಾಗಿಲ್ಲ! ಅದಕ್ಕೆ ಬದಲು, ಅದರ ಜಘನ್ಯತೆಯನ್ನು ತೊಡೆದುಹಾಕಿ ದಿವ್ಯತೆಯನ್ನು ಅಳವಡಿಸಿದನೆಂದು ಅವನನ್ನು ಹೊಗಳಬೇಕಾಗಿದೆ. ಆದ್ದರಿಂದ ಮೂಲ ಕಥೆಯ ಮಾತನ್ನು ಬಿಟ್ಟು ಶಾಕುಂತಲ ನಾಟಕದ ರಚನೆಯ ಕಡೆಗೇ ತಿರುಗೋಣ.

"ಬೆಸ್ತರವನ ಕೈಯಿಂದ ಉಂಗುರವನ್ನು ಪಡೆದು ದುಷ್ಯಂತನು ತನ್ನ ಭ್ರಾಂತಿಯನ್ನು ತಿಳಿದುಕೊಂಡ ಸ್ಥಳದಲ್ಲಿಯೆ, ವ್ಯರ್ಥವಾದ ಪರಿತಾಪದ ಮಧ್ಯದಲ್ಲಿಯೇ, ಪಾಶ್ಚಾತ್ಯ ಕವಿಯು ಶಾಕುಂತಲ ನಾಟಕವನ್ನು ಮುಗಿಸಿಬಿಡುತ್ತಿದ್ದನೆಂಬುದು ನಮ್ಮ ದೃಢವಾದ ನಂಬಿಕೆ. ಕೊನೆಯ ಅಂಕದಲ್ಲಿ ಸ್ವರ್ಗದಿಂದ ಹಿಂದಿರುಗುವ ದಾರಿಯಲ್ಲಿ ದೈವಯೋಗದಿಂದ ದುಷ್ಯಂತಶಕುಂತಲೆಯರು ಪುನಃ ಸೇರಿದುದು ಪಾಶ್ಚಾತ್ಯ ನಾಟಕ ರೀತಿಗೆ ಅನುಸಾರವಾಗಿ ಅವಶ್ಯಕವಾಗಿ ಸಂಭವಿಸಬೇಕಾದ ಘಟನೆಯಲ್ಲ! ಏಕೆಂದರೆ ಶಾಕುಂತಲ ನಾಟಕದ ಆರಂಭದಲ್ಲಿ ಬಿತ್ತಿದ ಬೀಜಕ್ಕೆ ಈ ವಿಚ್ಛೇದವೇ ಚರಮ ಫಲ. ಅದಾದ ಮೇಲೆಯೂ ದುಷ್ಯಂತ ಶಕುಂತಲೆಯರು ಪುನಃ ಕೂಡಿದುದು ಬಾಹ್ಯ ಸಾಧನದಿಂದ, ದೈವಾನುಗ್ರಹದಿಂದ! ನಾಟಕದಲ್ಲಿ ಅಂತರ್ಗತವಾದ ಯಾವ ಘಟಾಸೂತ್ರದಲ್ಲಾಗಲಿ, ದುಷ್ಯಂತಶಕುಂತಲೆಯರ ವ್ಯವಹಾರವಾವುದರಲ್ಲಾಗಲಿ, ಈ ಪುನರ್ಮಿಳನಕ್ಕೆ ಮಾರ್ಗವಾವುದೂ ಇರಲಿಲ್ಲ. – ಹೀಗೆಂದು ರವೀಂದ್ರನಾಥ ಠಾಕೂರರು ತಮ್ಮ ಉತ್ಕೃಷ್ಟ ಲೇಖನವೊಂದರಲ್ಲಿ[೮] ಬರೆಯುತ್ತಾರೆ. ಕಾಳಿದಾಸನ ನಾಟಕದ ವಸ್ತು ಕೂಡ ಸಹಜವಾಗಿ ದುರಂತವೆಂದು ಈ ಮಾತಿನ ಅಭಿಪ್ರಾಯ. ಇದನ್ನು ಅನುಸರಿಸಿದರೆ ಉಚಿತವಾಗುವ ಪರ್ಯವಸಾನವನ್ನು ಸೂಚಿಸುವುದೂ ಕಷ್ಟವಲ್ಲ. ದುಷ್ಯಂತನಿಂದ ತಿರಸ್ಕಾರ ಹೊಂದಿದ ಬಳಿಕ ಶಕುಂತಲೆ ಯಾವಜ್ಜೀವವೂ ತಪೋವೃತ್ತಿಯನ್ನಾಶ್ರಯಿಸ ಬಹುದು. (ಅಥವಾ ದುಃಖಾವೇಗದಲ್ಲಿ ಪ್ರಾಣತ್ಯಾಗವನ್ನೇ ಮಾಡಬಹುದು.) ಇತ್ತ ದುಷ್ಯಂತನಿಗೂ ಪ್ರಿಯೆ ಅತಿಕ್ರಾಂತಳಾದಬಳಿಕ ಉಂಗುರ ದೊರೆತು, ಅವನು ಅಳವಿಲ್ಲದ ಅಂತ್ಯವಿಲ್ಲದ ಪಶ್ಚಾತ್ತಾಪದಲ್ಲಿ ಮುಳುಗಬಹುದು. ನಾಯಕನಾಯಕಿಯರಿಗೆ ಪುನರ್ದರ್ಶನಕ್ಕೆ ಅವಕಾಶ ಕೊಡದೆ – ಕೊಟ್ಟರೂ ಪುನಸ್ಸಂಗಮವನ್ನು ನಿಷೇಧಿಸಿ – ನಾಟಕವನ್ನು ದುಃಖದಲ್ಲಿ ಕೊನೆಗಾಣಿಸಬಹುದು.

ಈ ಪಕ್ಷವನ್ನು ಹಿಡಿದಲ್ಲಿ ಇಂಥ ಸಮಾಪ್ತಿಯ ಔಚಿತ್ಯವೇನು?... ಶಾಕುಂತಲ ನಾಟಕವನ್ನು ಶಕುಂತಲೆಯ ದೃಷ್ಟಿಯಿಂದಲೂ ನೋಡತಕ್ಕದ್ದು ಅಗತ್ಯ. ಮಂದಿಯ ಮುಂದೆ ತನ್ನನ್ನು ನಿರಾಕರಿಸಿದ ದುಷ್ಯಂತನೊಂದಿಗೆ ಶಕುಂತಲೆ ಮತ್ತೆ ಹೇಗೆ ಸಮಾಧಾನದಿಂದ ಸಂಸಾರ ಮಾಡಬಹುದು? ಹೆಣ್ಣುಜೀವವಾದ ಮಾತ್ರಕ್ಕೆ

---

೮. ರವೀಂದ್ರನಾಥ ಠಾಕೂರರ 'ಪ್ರಾಚೀನ ಸಾಹಿತ್ಯ' (ಟಿ.ಎಸ್. ವೆಂಕಣ್ಣಯ್ಯನವರ ಕನ್ನಡ ಪರಿವರ್ತನ)– ಕುಮಾರಸಂಭವ ಮತ್ತು ಶಾಕುಂತಲ, ಪು. ೧೬

ಮಾನಮರ್ಯಾದೆಗಳೇ ಇಲ್ಲವೇ? ದುಷ್ಯಂತನ ಗುಣದಲ್ಲಿ ಎಳ್ಳಷ್ಟಾದರೂ ಶಂಕೆಯನ್ನಿಡದೆ, ಮುಗ್ಧತೆಯಿಂದ ತನ್ನ ಹೃದಯಸರ್ವಸ್ವವನ್ನೂ ಅರ್ಪಿಸಿದುದೊಂದೇ ಅವಳ ಅಪರಾಧ. ಅವಳ ನೆಚ್ಚಿಕೆಗೆ ವಜ್ರಕರ್ಕಶವಾದ ಫಲವು ದೊರೆಯಿತು. "ಮದುವೆಯಲ್ಲೇ ಆರ್ಯಪುತ್ರನಿಗೆ ಸಂದೇಹ. ಬಹುದೂರಕ್ಕೆ ಏರಿದ್ದ ನನ್ನ ಆಸೆ ಇನ್ನೆಲ್ಲಿ!" ಎಲ್ಲವೂ ಭಗ್ನವಾಯಿತು. ಪಾಪದ ಸೊಂಕನ್ನರಿಯದವಳಿಗೆ ಸ್ವಚ್ಛಂದ ಚಾರಿಣಿಯೆಂಬ ಅಪವಾದದ ಕಳಂಕ ಹತ್ತಿತು. ತನ್ನನ್ನು ಇಂಥ ಅವನತಿಗೆ ಗುರಿಮಾಡಿದವನ ಅಪರಾಧವನ್ನು ಶಕುಂತಲೆ ಮರೆಯಬಹುದೆ; ಮುಂದೆ ಅವನು ಪಶ್ಚಾತ್ತಾಪಪಟ್ಟರೂ ಅವನೊಂದಿಗೆ ಬೆರೆಯಬಹುದೆ? ಶಕುಂತಲೆಗೆ ಅವನಲ್ಲಿ ಪ್ರೇಮ ಅಳಿಸದಿರಬಹುದು : ಆದರೆ ಪುನಸ್ಸಮಾಗಮ ಮಾತ್ರ ಅನುಚಿತ. ಉತ್ತರರಾಮಾಯಣದಲ್ಲಿ ಸೀತೆಯ ಅವಸ್ಥೆ ಹೇಗೋ ಇಲ್ಲಿ ಶಕುಂತಲೆಯದೂ ಹಾಗೆಯೇ. ಲಂಕೆಯಲ್ಲಿ ಅಗ್ನಿಶುದ್ಧಿಯನ್ನು ನಡಸಿ ಸೀತೆ ಪಾವನೆಯೆಂದರಿತು ರಾಮನು ಅವಳನ್ನು ಅಯೋಧ್ಯೆಗೆ ಕರೆತಂದನು. ಜನದ ಮಾತಿಗೆ ಹೆದರಿ ಪೂರ್ಣಗರ್ಭಿಣಿಯನ್ನು – ಅವಳಲ್ಲಿ ತಪ್ಪಿಲ್ಲವೆಂದು ತಿಳಿದೂ ತಿಳಿದೂ – ಮೋಸದಿಂದ ಕಾಡಿಗಟ್ಟಿದನು. ಮುಂದೆ ಅಶ್ವಮೇಧಯಾಗ ಕಾಲದಲ್ಲಿ ವಾಲ್ಮೀಕಿಯೇ ಬಂದು ಕೇಳಿಕೊಂಡಾಗ, ಸೀತೆ ತನ್ನ ಪವಿತ್ರತೆಯನ್ನು ಜನಸಮಕ್ಷದಲ್ಲಿ ಸ್ಥಾಪಿಸುವುದಾದರೆ ಅವಳನ್ನು ಸ್ವೀಕರಿಸುತ್ತೇನೆಂದು ಹೇಳಿದನು. ಆದರೆ ಇಂಥ ಮಾನಹಾನಿಕರವಾದ ಪರೀಕ್ಷೆಗೆ ಸೀತೆ ಎಷ್ಟು ಬಾರಿ ಒಪ್ಪುತ್ತಾ ಹೋಗಬಹುದು? ಆ ಘೋರ ಪರೀಕ್ಷೆಯ ಕಾಲದಲ್ಲಿ "ರಾಘವನನ್ನುಳಿದು ಅನ್ಯರನ್ನು ಮನಸ್ಸಿನಲ್ಲೂ ಹೇಗೆ ನಾನು ನೆನೆಯೆನೋ, ಹಾಗೆಯೇ ಭೂದೇವಿ ನನಗಾಗಿ ಬಾಯಿ ತೆರೆಯಲಿ" ಎಂದು ಅವಳು ಬೇಡಲಿಲ್ಲವೆ? ಶಕುಂತಲೆಯ ಸ್ಥಿತಿ ಇನ್ನೇನು : ಅವಳು ಐದನೆಯ ಅಂಕದ ಘೋರ ತಿರಸ್ಕಾರದ ಕೊನೆಯಲ್ಲಿ ಹೆಚ್ಚುಕಡಮೆ ಅದೇ ಮಾತುಗಳಲ್ಲಿ "ಭಗವತಿ ವಸುಂಧರೆ, ನನಗಾಗಿ ಬಾಯಿ ತೆರೆ" ಎಂದು ರೋದಿಸುವುದಿಲ್ಲವೆ? ಶಕುಂತಲೆಯ ಕೊನೆಯೂ ಸೀತೆಯ ಕೊನೆಯನ್ನೇ ಏಕೆ ಅನುಸರಿಸಬಾರದು? – ಹೀಗೆಂದು ವಾದಿಸಬಹುದು.

ಇವೆರಡು ಸಂದರ್ಭಗಳಿಗೂ ಪೂರ್ಣಸಾಮ್ಯವುಂಟೆಂದು ತೋರುವುದು ಮೇಲು ನೋಟಕ್ಕೆ ಮಾತ್ರ. ಒಳಹೊಕ್ಕು ಪರಿಶೀಲಿಸಿದರೆ ಶಕುಂತಲೆಯ ಪರಿಸ್ಥಿತಿ ತುಂಬ ಬೇರೆಯಾಗುತ್ತದೆ. ಉತ್ತರರಾಮಾಯಣದಲ್ಲಿ ಸೀತೆ ನಿರ್ದೋಷಿಯೆಂದು ರಾಮನಿಗೆ ಉದ್ದಕ್ಕೂ ಗೊತ್ತಿತ್ತು. ಆದರೂ ಅವಳ ಪರಿಶುದ್ಧತೆಗೆ ನಿದರ್ಶನವನ್ನು ಮತ್ತೆ ಮತ್ತೆ ನಿರ್ದಾಕ್ಷಿಣ್ಯವಾಗಿ ಅಪೇಕ್ಷಿಸಿದನು. ಇಲ್ಲಾದರೆ ಶಕುಂತಲೆ ತನ್ನ ಪತ್ನಿಯೆಂಬುದರ ಅರಿವೇ ದುಷ್ಯಂತನಿಗಿಲ್ಲ. ಅದೊಂದು ಮರೆತುಹೋಗದಿದ್ದರೆ, ಅವನು ಶಕುಂತಲೆಯನ್ನು ಇದುವರೆಗೂ ಆಶ್ರಮದಲ್ಲಿ ಬಿಟ್ಟು ಅವಳು ತಾನಾಗಿಯೇ ಆಸ್ಥಾನಕ್ಕೆ ಬರುವಂತೆ ಮಾಡುತ್ತಿದ್ದನೆ? ಶಕುಂತಲೆಯನ್ನು ಅಗಲುವಾಗ ಮಾತು ಕೊಟ್ಟಿದ್ದಂತೆ ತನ್ನ ಉಂಗುರದಲ್ಲಿ ಕೆತ್ತಿದ್ದ 'ದುಷ್ಯಂತ' ಎಂಬ ಅಕ್ಷರಗಳನ್ನು ದಿವಸಕ್ಕೊಂದರಂತೆ ಅವಳು ಎಣಿಸಿ ಮುಗಿಸುವುದರೊಳಗಾಗಿ ತನ್ನ ಅರಮನೆಗೆ ವೈಭವದಿಂದ ಕರೆತರುತ್ತಿದ್ದನು. ಆದರೆ

ದುಷ್ಯಂತನು ಕಣ್ವಾಶ್ರಮವನ್ನು ಬಿಟ್ಟು ಹೊರಟ ದಿನವೇ ಶಕುಂತಲೆಯ ವ್ಯಗ್ರತೆಯಿಂದ ದುರ್ವಾಸರ ಶಾಪವು ಬಡಿದು, ದುಷ್ಯಂತನ ಸ್ಮೃತಿಯೊಂದಿಗೆ ಇಬ್ಬರ ಸುಖವೂ ಮಸುಳಿಹೋಯಿತು. ಆದ್ದರಿಂದಲೇ ಯಾರೆಷ್ಟು ಜ್ಞಾಪಿಸಿದರೂ ತಾನೇ ಎಷ್ಟು ಪ್ರಯತ್ನಿಸಿದರೂ ದುಷ್ಯಂತನಿಗೆ ಶಕುಂತಲೆಯನ್ನು ವರಿಸಿದ ನೆನಪುಬಾರದು. ದುರದೃಷ್ಟವಶದಿಂದ ಅವಳು ಅಭಿಜ್ಞಾನದ ಉಂಗುರವನ್ನು ಬೇರೆ ಕಳೆದುಕೊಂಡಿದ್ದಾಳೆ. ಅದರ ದರ್ಶನವಾದರೆ ಮಾತ್ರ ದುಷ್ಯಂತನ ನೆನಪು ಮರಳೀತು. ಇಂಥ ವಿಷಮಸ್ಥಿತಿಯಲ್ಲಿ ಅವನು ಶಕುಂತಲೆಯನ್ನು ನಿರಾಕರಿಸದೆ ಮತ್ತೇನು ಮಾಡಬಹುದು!

ಆದರೂ ದುಷ್ಯಂತನು ಶಕುಂತಲೆಯನ್ನೂ ಅವಳೊಂದಿಗೆ ಬಂದಿದ್ದ ಆಶ್ರಮವಾಸಿಗಳನ್ನೂ ಎಷ್ಟು ಸೌಜನ್ಯದಿಂದ ಕಾಣುತ್ತಾನೆ. ಅಸಹನಶೀಲನಾದ ಶಾರ್ಙ್ಗರವನೊಡನೆ ಕೂಡ ಎಷ್ಟು ಗಂಭೀರವಾಗಿ ಮಾತಾಡುತ್ತಾನೆ! ಕಡೆಗೆ ಶಕುಂತಲೆ ಅಪಮಾನದ ದುಃಖರೋಷಗಳಿಂದ ಉದ್ವೇಗಗೊಂಡು "ಅನಾರ್ಯ" ಎಂದು ತನ್ನನ್ನು ಕರೆದಾಗಲೂ ಅವನು ಕೆರಳುವುದಿಲ್ಲ. ಇಲ್ಲಿ ಶಕುಂತಲೆಯನ್ನು ವಂಚಿಸಿದನೆಂದು ಅವನನ್ನು ತಿರಸ್ಕರಿಸುವ ಬದಲು, ಇದೇ ಸಮಯದಲ್ಲೇ, ದೊಡ್ಡ ಪ್ರಲೋಭನವೊಂದಕ್ಕೆ ಒಳಗಾಗಲಿಲ್ಲವೆಂದು ನಾವು ಗೌರವಿಸಬೇಕಾಗುತ್ತದೆ. ಶಕುಂತಲೆಯನ್ನು ಸ್ವೀಕರಿಸುವುದು ಅವನಿಗೆ ತುಂಬ ಸುಲಭವಾಗಿತ್ತು. ಇವರೆಲ್ಲರೂ ಅದಕ್ಕಾಗಿಯೇ ಆಸ್ಥಾನಕ್ಕೆ ಬಂದಿದ್ದರು! ಅದನ್ನೇ ಒತ್ತಿ ಒತ್ತಿ ಕೋರುತ್ತಿದ್ದರು. ಇದರ ಮೇಲೆ ಶಕುಂತಲೆಯ ಲಾವಣ್ಯ ಎಷ್ಟು ಸಮ್ಮೋಹಕವೆಂದರೆ, ದುಷ್ಯಂತನ ಪ್ರತೀಹಾರಿಯೇ ಹೇಳುವಂತೆ "ಅನಾಯಾಸವಾಗಿ ದೊರೆತ ಇಂಥ ರೂಪವನ್ನು ನೋಡಿ ಬೇರೆ ಯಾರು ವಿಚಾರಮಾಡುವರು!" ಆದರೆ ದುಷ್ಯಂತನ ಮನಸ್ಸು ನಿಶ್ಚಲ. ಶಕುಂತಲೆ ಪರಪತ್ನಿಯೆಂದು ತಿಳಿದುಕೊಂಡಿರುವುದರಿಂದ ಅವಳನ್ನು ದಿಟ್ಟಿಸಿ ನೋಡುವುದಕ್ಕೂ ಹಿಂಜರಿಯುವನು. ಈ ಪ್ರಸಂಗವು ಶಕುಂತಲೆಯ ಸಹನೆಯನ್ನು ಹೇಗೆ ಪರೀಕ್ಷಿಸಿತೋ ದುಷ್ಯಂತನ ಧರ್ಮವನ್ನೂ ಹಾಗೆಯೇ ಪರೀಕ್ಷಿಸಿತು. ಇಲ್ಲಿ ಉದ್ದಕ್ಕೂ ಅಷ್ಟೆ! ದುಷ್ಯಂತನಲ್ಲಿ ಎಳ್ಳಷ್ಟಾದರೂ ತಪ್ಪಿಲ್ಲ. ಅವನಲ್ಲಿ ನಮಗಿರುವ ಗೌರವವು ಈ ಅಂಕದಲ್ಲೇ ಮುಗಿಲು ಮುಟ್ಟುವುದು.

ಇಲ್ಲಿ ಒಂದು ಆಕ್ಷೇಪಣೆ ತಲೆಯೆತ್ತಬಹುದು : ದುಷ್ಯಂತನೇನೋ ನಿಜವಾಗಿ ಧರ್ಮಾತ್ಮನೆ! ಆದರೆ ಐದನೆಯ ಅಂಕದಲ್ಲಿ, ಶಕುಂತಲೆಯ ದೃಷ್ಟಿಯಲ್ಲಿ ಮಾತ್ರ ವಂಚಕನೇ ಸರಿ – ಆದ್ದರಿಂದ ಅವಳ ಮಟ್ಟಿಗಾದರೂ ದುಷ್ಯಂತನು ವಂಚಕನೇ ಆಗಲಿಲ್ಲವೆ? ನಿಜ. ತನ್ನ ಸಖಿಯರ ಕ್ರೂರ ಕಾರುಣ್ಯದ ಫಲವಾಗಿ ಶಕುಂತಲೆಗೆ ದುರ್ವಾಸರ ಶಾಪದ ವೃತ್ತಾಂತವೂ ಅದರ ಭೀಷಣ ಪರಿಣಾಮವೂ ತಿಳಿದಿರಲಿಲ್ಲ.

---

೯. ನಾಲ್ಕನೆಯ ಅಂಕದ ವಿಷ್ಕಂಭದ ಮೊದಲಲ್ಲಿ "ಇಂದು (ಅದ್ಯ) ಆ ರಾಜರ್ಷಿ ಯಾಗವ ಮುಗಿಸಿ ಋಷಿಗಳನ್ನು ಬೀಳ್ಕೊಂಡು ತನ್ನ ಪುರವನ್ನು ಪ್ರವೇಶಿಸಿ..." ಎಂದು ಅನಸೂಯೆ ಹೇಳುವುದನ್ನೂ ಆದಾದ ಕೊಂಚ ಹೊತ್ತಿಗೆ ದುರ್ವಾಸನು ಬರುವುದನ್ನೂ ಗಮನಿಸ ಬಹುದು.

ಆದ್ದರಿಂದಲೇ ದುಷ್ಯಂತನು ಧರ್ಮಕಂಚುಕವನ್ನು ತೊಟ್ಟ ಮಿಥ್ಯಾಚಾರಿಯೆಂದು ಭಾವಿಸಿ ಅಳವಿಲ್ಲದ ಯಾತನೆಯನ್ನು ಪಟ್ಟಳು. ಆದರೆ ಶಾಪದ ಆ ವೃತ್ತಾಂತವನ್ನು ನಾವು ಬಲ್ಲೆವು; ಶಕುಂತಲೆಯ ಪಕ್ಷದಲ್ಲಿ ಎಷ್ಟರಮಟ್ಟಿಗೆ ನ್ಯಾಯವಿತ್ತೋ ದುಷ್ಯಂತನ ಪಕ್ಷದಲ್ಲೂ ಅಷ್ಟರಮಟ್ಟಿಗೇ ನ್ಯಾಯವಿತ್ತೆಂದು ನಾವು ಬಲ್ಲೆವು. ಇದರಿಂದ ಸನ್ನಿವೇಶದ ಬಣ್ಣವೇ ಪೂರ್ಣವಾಗಿ ಬದಲಾಯಿಸುವುದಿಲ್ಲವೆ? ಒಂದು ಕಡೆ ನಮ್ಮ ಅನುಕಂಪವು ಆ ಸರಳ ಹೃದಯದ ಮುಗ್ಧೆಯ ಬಳಿಗೆ ಹರಿಯುತ್ತದೆ; ಇನ್ನೊಂದು ಕಡೆ ನಮ್ಮ ಗೌರವವು ಕೈಗೆ ಬಂದ ಸುಂದರಿಯನ್ನು ತನ್ನವಳಲ್ಲವೆಂದು ತ್ಯಜಿಸಿದ ಧೀರೋದಾತ್ತನ ಮೇಲೆ ನೆಲಸುತ್ತದೆ. ಹೀಗೆ ಶಾಕುಂತಲದ ಐದನೆಯ ಅಂಕದಲ್ಲಿ ಎರಡು ಧರ್ಮಗಳಿಗೆ ಹೋರಾಟವು ನಡೆದರೂ, ಸದ್ಯದ ಸನ್ನಿವೇಶವನ್ನು ದುರಂತಚ್ಛಾಯೆ ಮುಸುಕಿದ್ದರೂ, ಇದರ ಪರ್ಯವಸಾನವೂ ದುರಂತವೇ ಆಗಬೇಕೆಂದು ತೋರುವುದಿಲ್ಲ. ಶಕುಂತಲೆಗೆ ಅತ್ಯಸಂಗತವಾದ ಸಂಕಟವೊದಗಿದರೂ ಅದು ಅವಳ ಹೃದಯವನ್ನು ಸರ್ವಕಾಲಕ್ಕೂ ವಿರಸಗೊಳಿಸಬೇಕೆಂದು ತೋರುವುದಿಲ್ಲ. ಪೂರ್ಣಗ್ರಹಣವು ಹಿಡಿದರೂ ಲೋಕವನ್ನು ಎಷ್ಟುಕಾಲ ಅಂಧಕಾರದಲ್ಲಿ ಮುಳುಗಿಸಬಹುದು? ಆದಕಾರಣ, ಶಕುಂತಲೆಗೆ ದುಷ್ಯಂತನ ನಿಜ ಸ್ವಭಾವ ಮುಂದೆ ಗೊತ್ತಾದ ಹೊರತು, ಕದಡದ ಮನಸ್ಸು ತಿಳಿದ ಹೊರತು, ಇದುವರೆಗಿನ ಸಂಘಟನೆಗಳ ಆಕಾಂಕ್ಷೆ ಪೂರ್ಣವಾಗುವುದಿಲ್ಲ.

ಶಕುಂತಲೆಯನ್ನು ದುರಂತನಾಯಿಕೆಯನ್ನಾಗಿ ಕ್ಷಣಕಾಲ ಭಾವಿಸೋಣ. ಅವಳ ದುರಂತ ದೋಷ (tragic flaw) ಯಾವುದು? "ಶಕುಂತಲೆಯಲ್ಲಿ ಯಾವಾಗ ಆತಿಥ್ಯ ಧರ್ಮವು ಸ್ವಲ್ಪವಾದರೂ ಉಳಿಯಲಿಲ್ಲವೋ, ದುಷ್ಯಂತನೇ ಸಮಸ್ತವೂ ಆದನೋ ಆಗ ಶಕುಂತಲೆಯ ಆ ಪ್ರೇಮದಲ್ಲಿ ಶುಭವು ಉಳಿಯಲಿಲ್ಲ."[೧೦] "ದುರ್ವಾಸರ ಶಾಪವು ಕವಿಯ ರೂಪಕ ಮಾತ್ರ! ದುಷ್ಯಂತ ಶಕುಂತಲೆಯರ ಸ್ವಚ್ಛಂದವಾದ ಸಮಾಗಮವು ಚಿರಕಾಲದ ಅಭಿಶಾಪದಿಂದ ಶಪಿತವಾದದ್ದು."[೧೧] ಹೀಗೆಂದು ಠಾಕೂರರು ಬರೆಯುತ್ತಾರೆ. ಶಕುಂತಲೆ ತನ್ನ ರಮಣನಲ್ಲಿ ಅನನ್ಯನಿರೀಕ್ಷಕವಾದ ಮೋಹವನ್ನಿಟ್ಟು, ಕಣ್ವರು ತನಗೆ ನೇಮಿಸಿದ್ದ ಅತಿಥಿಪೂಜಾಕರ್ತವ್ಯವನ್ನು ಕೂಡ ಮರೆತದ್ದರ ಫಲವಾಗಿ ದುರ್ವಾಸರ ಶಾಪವೊದಗಿತು! ಸ್ವಾರ್ಥನಿಷ್ಠವಾದ, ಧರ್ಮವಿಘಾತಕವಾದ ವ್ಯಾಮೋಹವೇ ಅವಳ ದುಃಖಪರಂಪರೆಗೆ ಬೀಜ ಎಂದು ಹೇಳಿದಂತಾಯಿತು. ಶಕುಂತಲೆ ತನ್ನ ಪತಿಯನ್ನು ಅಗಲಿದ ದಿನ ಅವನ ಚಿಂತೆಯಲ್ಲೇ ಮೈಮರೆತು ದುರ್ವಾಸರ ಆಗಮನವನ್ನು ಲಕ್ಷಿಸದೆ ಹೋದದ್ದು ನಿಜ. ಆದರೆ ಇದಕ್ಕಿಂತಲೂ ಸಹಜವಾದ ಸಂಗತಿ ಯಾವುದುಂಟು? ಆದೊಂದು ದಿನವಾದರೂ ಅವಳಿಗೆ ಅಷ್ಟು ಹಕ್ಕಿಲ್ಲವೆ? ಈ ರೀತಿ ನಡೆದದ್ದರಿಂದ ಕರ್ತವ್ಯಲೋಪವೇನೋ ಸಂಘಟಿಸಿತು. ಆದರೆ ಎಂಥ ತಪ್ಪು, ಎಂಥ ಶಿಕ್ಷೆ! ಇಷ್ಟೂ ಸಾಲದೆ ಅವಳ ಜೀವನ, ಎಂದೆಂದಿಗೂ ಕಗ್ಗತ್ತಲೆಯಾಗಬೇಕೆ?

---

೧೦. ಕುಮಾರಸಂಭವ ಮತ್ತು ಶಾಕುಂತಲ, ಪು. ೨೪-೫.
೧೧. ಅದೇ, ಪು. ೨೬

ದುರಂತ ಪ್ರಪಂಚದಲ್ಲಿ ಕೂಡ ದೋಷದಂಡನೆಗಳಿಗೆ ಅನುರೂಪತೆಯಿಲ್ಲದಿದ್ದರೂ ಅರ್ಥಸಹಿತವಾದ ಸಂಬಂಧವಾದರೂ ಬೇಡವೆ?

ನಾಟಕದಲ್ಲಿ ಈಗ ಅವಳಿಗೆ ಒದಗಿರುವ ಸಂಕಟಕ್ಕೆ ಅವಳ ಅಲ್ಪ ಲೋಪವನ್ನು ಹೊಣೆಮಾಡಲು ಮನಸ್ಸೊಪ್ಪುವುದಿಲ್ಲ. ದುರದೃಷ್ಟವು ಹೆಜ್ಜೆ ಹೆಜ್ಜೆಗೂ ಅವಳನ್ನು ಬೆನ್ನಟ್ಟಿದಂತೆ ತೋರುತ್ತದೆ. ಉಗ್ರಕೋಪದ ದುರ್ವಾಸನು ನೆವ ದೊರೆತದ್ದೇ ಸಾಕೆಂದು ಅವಳನ್ನು ಘೋರವಾಗಿ ಶಪಿಸುತ್ತಾನೆ. ಬಳಿಕ ಮರುಗಿ ಪರಿಹಾರವನ್ನು ಹೇಳಿದರೂ, ಅದಕ್ಕೆ ಏಕಮಾತ್ರ ಸಾಧನವಾದ ಉಂಗುರವು ಶಚೀತೀರ್ಥದಲ್ಲಿ ಬಿದ್ದುಹೋಗುತ್ತದೆ. ಶಾಪದ ರಹಸ್ಯವನ್ನು ಬಲ್ಲ ಅನಸೂಯೆ ಪ್ರಿಯಂವದೆಯರಿಬ್ಬರೂ ಶಕುಂತಲೆಯ ಜೊತೆಗೆ ಬಾರದೆ ಆಶ್ರಮದಲ್ಲೇ ನಿಲ್ಲಬೇಕಾಗುತ್ತದೆ. ಕಡೆಗೆ ದುಷ್ಯಂತನಿಂದ ಹಿಂದೆ ಶಕುಂತಲೆಯ ವಿಷಯವನ್ನು ಕೇಳಿದ್ದ ವಿದೂಷಕನು ಕೂಡ ಅವಳ ಆಗಮನದ ವೇಳೆಗೆ ಸರಿಯಾಗಿ ಕಾರ್ಯಾಂತರದ ಮೇಲೆ ರಾಜಸಮೀಪವನ್ನು ಬಿಟ್ಟುಹೋಗಿ ಆ ಸಂಗತಿಯನ್ನು ಜ್ಞಾಪಿಸುವುದಕ್ಕೆ ಇಲ್ಲವಾಗುತ್ತಾನೆ. ವಿಷಮಸಂಘಟನೆಗಳು ಹೇಗೆ ಹೆಣೆದುಕೊಂಡಿವೆ! ಶಕುಂತಲೆಯ ದುಃಖಕ್ಕೆಲ್ಲಾ ಬಟ್ಟನಮೇಲೆ ಇವೇ ಕಾರಣವೆನ್ನಬೇಕು. ಕಥೆಯ ದುರಂತಾಂಶವು ಮುಖ್ಯವಾಗಿ ಈ ಘಟನೆಗಳಿಂದ ಏರ್ಪಡುತ್ತದೆಯೇ ಹೊರತು ಅವಳ ಚಾರಿತ್ರದ ಲೋಪದಿಂದಲೇ ಅಲ್ಲ. ಆದ್ದರಿಂದಲೇ ಅವಳ ಕಥೆಗೆ ದುರಂತಪರ್ಯವಸಾನವು ಉಚಿತವಾಗುವುದಿಲ್ಲವೆಂದೂ ಅದರಿಂದ ನಾಟಕದ ಸತ್ತ್ವವು ಕುಗ್ಗುವುದೆಂದೂ ಹೇಳಬೇಕಾಗುತ್ತದೆ. ಕೇವಲ ಘಟನೆಗಳ ಮಹಿಮೆಯಿಂದ ದುರಂತವಾಗುವ ನಾಟಕವು ಮೇಲುದರ್ಜೆಯದಲ್ಲವೆಂದು ರಸಜ್ಞರು ಬಲ್ಲರು.

ಶಾಕುಂತಲದಲ್ಲಿ ಬಂದಿರುವ ಋಷಿಶಾಪವು ಚೈತ್ರದ ನಡುಹಗಲಿನಲ್ಲಿ ಹಠಾತ್ತಾಗಿ ಒದಗುವ ಮುಂಗಾರು ಮೋಡದಂತೆ. ಆಲಿಕಲ್ಲು ಮಳೆಗಾಳಿಗಳ ಹೊಡೆತದಲ್ಲಿ, ಸಿಡಿಲು ಗುಡುಗುಗಳ ಆರ್ಭಟದಲ್ಲಿ, ದಿನದ ಉಲ್ಲಾಸವೆಲ್ಲಾ ಹೀಗೆಯೇ ಕೊನೆತನಕ ಉಡುಗಿ ಹೋಗುವುದೇನೋ ಎನ್ನಿಸುತ್ತದೆ. ಆದರೆ ಸಂಜೆಯ ಹೊತ್ತಿಗೆ ಮೋಡಗಳು ಚೆದರುತ್ತವೆ, ಆಕಾಶವು ಶಾಂತವಾಗುತ್ತದೆ. ಹೊಂಬಿಸಿಲು ಮತ್ತೆ ಮಿನುಗುತ್ತದೆ. ಅದುವರೆಗೂ ಸುರಿದು ಬೆದರಿಸಿದ ಮಳೆಯ ತಂಪಿನಿಂದಲೇ ದಿನವೂ ರಮ್ಯತರವಾಗುತ್ತದೆ, ಉಪಭೋಗಕ್ಷಮವಾಗುತ್ತದೆ. ದುರ್ವಾಸರ ಶಾಪದ ಪರಿಣಾಮವೂ ಹೀಗೆಯೇ. ಅದರ ದೆಸೆಯಿಂದ ದುಷ್ಯಂತಶಕುಂತಲೆಯರ ಪ್ರೇಮವೂ ಇನ್ನೂ ಗಾಢವಾಯಿತು, ಊರ್ಜಿತವಾಯಿತು, ಉದಾತ್ತವಾಯಿತು. ಇದು ಹೇಗೆಂಬುದನ್ನು ವಿವರಿಸುವ ಮೊದಲು ಅವರ ಪುನಸ್ಸಮಾಗಮನವನ್ನು ಕುರಿತು ಹೊರಡಬಹುದಾದ ಇನ್ನೂ ಒಂದೆರಡು ಆಕ್ಷೇಪಣೆಗಳನ್ನು ಪರಿಶೀಲಿಸೋಣ.

ಶಕುಂತಲಾ ಪ್ರಸಂಗದಲ್ಲೇನೋ ದುಷ್ಯಂತನು ನಿರ್ದೋಷಿಯಾಗಿರಬಹುದು. ಆದರೆ ಆಕೆಯ ಕೈಯನ್ನು ಹಿಡಿಯಲು ಅವನು ಎಷ್ಟು ಮಾತ್ರಕ್ಕೂ ಅರ್ಹನಲ್ಲ. ದುರ್ವಾಸರ ಶಾಪವು ಅವನನ್ನು ರಕ್ಷಿಸಿತೆಂದೇ ಹೇಳಬೇಕು. ಅದು ಒಡ್ಡಿದ ವಿರಹ

ಪಶ್ಚಾತ್ತಾಪಗಳ ಮೂಲಕವೇ ದುಷ್ಯಂತನು ಶಕುಂತಲೆಯ ಬೆಲೆಯನ್ನು ಅರಿತುಕೊಂಡದ್ದು. ಇಲ್ಲವಾದರೆ ಆತನ ಅಂತಃಪುರವನ್ನು ಅಲಂಕರಿಸಿದ್ದ ಹಲಮಂದಿ ರಮಣಿಯರ ನಡುವೆ ಅವಳೂ ಸೇರಿಹೋಗುತ್ತಿದ್ದಳು. ಕೆಲವು ದಿನಗಳಲ್ಲಿ ಅವಳ ಸಹವಾಸದಿಂದಲೂ ದಣಿದು ಬೇರೊಬ್ಬ ಸುಂದರಿಯ ಕಡೆ ದುಷ್ಯಂತನು ತಿರುಗುತ್ತಿರಲಿಲ್ಲವೆಂದು ನಮಗೇನು ಗೊತ್ತು? ಐದನೆಯ ಅಂಕದ ಆರಂಭದಲ್ಲಿ ಬರುವ ಹಂಸಪದಿಕೆಯ ವೃತ್ತಾಂತವನ್ನು ನೋಡಿ. "ಇದರಿಂದ ಕವಿಯು ದುರ್ವಾಸರ ಶಾಪದಿಂದ ಯಾವುದು ಸಂಘಟಿಸಿತೋ ಅದರ ಬೀಜವು ರಾಜನ ಸ್ವಭಾವದಲ್ಲೇ ಇದೆ ಎಂದು ಅತ್ಯಂತ ಕುಶಲತೆಯಿಂದ ತಿಳಿಸಿರುತ್ತಾನೆ."[೧೨] ಹಿಂದೊಮ್ಮೆ ದುಷ್ಯಂತನು ಹಂಸಪದಿಕೆಯನ್ನು ಒಲಿದಿದ್ದರೂ ಈಗ ಉಪೇಕ್ಷಿಸುತ್ತಿದ್ದಾನೆ. ಅದಕ್ಕಾಗಿ ಅವಳು ಉಪಾಲಂಭನ ಮಾಡಿದರೆ ಅವಳ ಕೌಶಲ್ಯವನ್ನು ಮಾತ್ರ ಮೆಚ್ಚಿ ವಿದೂಷಕನ ಸಂಗಡ ಹೇಳಿಕಳಿಸುತ್ತಾನೆ. ತಪೋಮಯಿಯಾದ ಶಕುಂತಲೆಯೊಂದಿಗೆ ಇಂಥ ಚಂಚಲ ನಾಗರಿಕನಿಗೆ ಪುನಸ್ಸಂಘಟನೆಯಾಗಬಹುದೆ?

ಇಲ್ಲಿ, ಶಾಕುಂತಲದಂಥ ಲೋಕೋತ್ತರವಾದ ನಾಟಕದಲ್ಲಿ ಕೂಡ ಕಾಳಿದಾಸನು ರೂಢಿಯಂತೆ ಉಪನಾಯಿಕೆಯರ ಹೆಸರನ್ನೆತ್ತಿದ್ದು ಅನುಚಿತವೆಂದೇ ಒಪ್ಪಿಕೊಳ್ಳಬೇಕು. ಹಂಸಪದಿಕೆಯನ್ನೂ ವಸುಮತಿಯನ್ನೂ ರಂಗಸ್ಥಳದ ಮೇಲೆ ತಾರದೆ ಬಿಟ್ಟ ಎಚ್ಚರಿಕೆಗಾಗಿ ಅವನಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು. ಅವರಿಬ್ಬರ ಮಾತೂ ಬಾರದಿದ್ದರೆ ದುಷ್ಯಂತನು ನಮ್ಮ ದೃಷ್ಟಿಯಲ್ಲಿ ಇನ್ನೂ ಉನ್ನತವಾಗುತ್ತಿದ್ದನು. ಆದರೆ ಇದು ನಮ್ಮ ದೃಷ್ಟಿ – ಆಧುನಿಕ ದೃಷ್ಟಿ – ಎಂಬುದನ್ನು ಮರೆಯಬಾರದು. ಬಹುಪತ್ನೀಕತ್ವವು ನಮಗೆ ಅನುಚಿತವೆನಿಸುವುದರಿಂದ ಪ್ರಾಚೀನ ವೀರರೆಲ್ಲರೂ ನಮ್ಮ ನೋಟದಲ್ಲಿ ಒಂದು ಮೆಟ್ಟಲು ಇಳಿದುಹೋಗುತ್ತಾರೆ. ಆದರೆ ಹಿಂದಿನ ಕಾಲದ ಧರ್ಮ ಹೀಗಿರಲಿಲ್ಲ. ಒಬ್ಬ ರಾಜನಿಗೆ ಹಲವಾರು ಪತ್ನಿಯರು ಹಲವು ಕಾರಣಗಳಿಂದ – ಎಷ್ಟೋ ವೇಳೆ ರಾಜಕೀಯ ವ್ಯವಹಾರದ ಫಲವಾಗಿ – ಒದಗುತ್ತಿದ್ದರು. ಇಂಥ ಸಮಯದಲ್ಲಿ ಅವನು ಏಕಪತ್ನೀವ್ರತವನ್ನೇ ಹಿಡಿಯಬೇಕೆಂದು ಹಟಮಾಡುವುದು ಯುಕ್ತವಲ್ಲ. ಎಲ್ಲ ಹೆಂಡತಿಯರಲ್ಲೂ ಒಂದೇ ಸಮನಾದ ಅನುರಾಗವನ್ನಿಡುವುದೂ ಅವನಿಗೆ ಸಾಧ್ಯವಲ್ಲ. ಮಿಕ್ಕವರ ವಿಚಾರ ಹೇಗೇ ಇರಲಿ – ಅವರೊಡನೆಯೂ ದುಷ್ಯಂತನು ದಾಕ್ಷಿಣ್ಯದಿಂದ ವರ್ತಿಸುತ್ತಾನೆ – ಶಕುಂತಲೆಯ ವಿಷಯದಲ್ಲಿ ಮಾತ್ರ ಅವನ ಸದ್ಭಾವವನ್ನು ಶಂಕಿಸುವುದು ಸರಿಯಾಗಿ ತೋರುವುದಿಲ್ಲ. ಹಂಸಪದಿಕೆಯ ಗೀತವನ್ನು ಕಾಳಿದಾಸನು ತಂದಿರುವುದು[೧೩] ಮುಖ್ಯವಾಗಿ ವಿದೂಷಕನನ್ನು ಜಾಗ ಬಿಡಿಸುವುದಕ್ಕೋಸ್ಕರ; ಶಾಪವು ಸಂಪೂರ್ಣವಾಗಿ ಕವಿದು ದುಷ್ಯಂತನಿಗೆ ಶಕುಂತಲೆಯ ನೆನಪು ಎಳ್ಳಷ್ಟಾದರೂ ಉಳಿದಿಲ್ಲವೆಂದು

೧೨. 'ಪ್ರಾಚೀನ ಸಾಹಿತ್ಯ' – ಶಾಕುಂತಲ, ಪು. ೫೭.

೧೩. S.D. and A.B. Gajendragadkar, *Abhijnana-Sakuntala*, Notes, pp. 224 ff.

ತೋರಿಸುವುದಕ್ಕೋಸ್ಕರ.[೧೪] "ಪ್ರಥಿತಂ ದುಷ್ಯಂತಸ್ಯ ಚರಿತಂ." ಅವನೇ ಶಕುಂತಲೆಗೆ ಅರ್ಹನಲ್ಲದಿದ್ದರೆ ಮತ್ತಾರು ಅರ್ಹರು!

ಮಾರೀಚಾಶ್ರಮದಲ್ಲಿ ತಪೋನಿಷ್ಠೆಯಿಂದ ಕೃಶೆಯಾದ ಶಕುಂತಲೆ ದಿವ್ಯತೇಜಸ್ಸಿನ ಕುಡಿಯಾಗಿ ಪರಿಣಮಿಸಿದ್ದಾಳೆ. ಪ್ರೇಮ–ವಿರಹ–ತಿರಸ್ಕಾರ–ಯಾತನೆಗಳಿಂದ ಅವಳು ಶೋಷಿಸಿಹೋಗಿದ್ದರೂ ಅವಳ ಹೃದಯವು ಶೋಧಿಸಿ ಉದಾತ್ತವಾಗಿದೆ. ಆದರೆ ಅವಳ ಮಾನವೀಯತೆ ಮಾತ್ರ ಕುಂದಿಲ್ಲ. ಹೇಮಕೂಟದ ದಿವ್ಯಶಿಖರದಲ್ಲಿ ಅವಳು ತನ್ನ ಪತಿಯನ್ನೆದುರುಗೊಳ್ಳುವ ದೃಶ್ಯವನ್ನು ನೋಡಬಹುದು. "ಆರ್ಯಪುತ್ರನಿಗೆ ಜಯವಾಗಲಿ" ಎನ್ನುವಾಗ ಅರ್ಧೋಕ್ತಿಯಲ್ಲಿ ಅವಳ ಕೊರಳ ಸೆರೆ ಬಿಗಿಯುತ್ತದೆ. ದುಷ್ಯಂತ ತನ್ನನ್ನು ನಿರಾಕರಿಸಿದನೆಂಬ ಕೋಪದಿಂದ ಅವಳು ಎಂದೂ ತನ್ನ ಹೃದಯದಿಂದ ಅವನನ್ನು ಹೊರಕ್ಕೆ ದೂಡಿದವಳಲ್ಲ. ಈ ವೇಳೆಗಾಗಲೇ ಸಾನುಮತಿಯಿಂದ ಅವನ ಉತ್ಕಟ ಪಶ್ಚಾತ್ತಾಪವನ್ನರಿತು ಅವನ ಮೇಲೆ ಅನಂತಕ್ಷಮೆಯನ್ನು ವರ್ಷಿಸಿದ್ದಾಳೆ. ದುಷ್ಯಂತನು ಕೂಡ ತನ್ನಲ್ಲಿ ನಿಜವಾಗಿ ತಪ್ಪಿಲ್ಲದಿದ್ದರೂ ಕಠೋರವಾದ ಪಶ್ಚಾತ್ತಾಪಕ್ಕೊಳಗಾಗಿ ತನ್ನ ಪ್ರೇಮದ ಸ್ವಾರ್ಥವನ್ನು ಸುಟ್ಟಿರುವುದರಿಂದ ಮಡದಿಯ ಮುಂದೆ ನಿಲ್ಲಲು ಅರ್ಹನಾಗಿದ್ದಾನೆ. ಶಕುಂತಲೆ ಅವನನ್ನು ಸ್ವೀಕರಿಸುತ್ತಾಳೆ; ಆದರೆ ನೆಚ್ಚಿಕೆ ಮುರಿದ ಉಂಗುರವನ್ನು ಮಾತ್ರ ಮತ್ತೆ ಸ್ವೀಕರಿಸುವುದಿಲ್ಲ. ಅಹ, ಅವಳು ಇನ್ನೂ ಮಾನವಿಯೇ! ಚಿರಕಾಂಕ್ಷಿತವಾದ ಈ ಸಮಾಗಮವು ಸಿದ್ಧಿಸಿದ ಬಳಿಕವೇ ದಂಪತಿಗಳಿಗೆ ಶಾಪದ ನಿಜವೃತ್ತಾಂತ ತಿಳಿಯಬರುವಂತೆ ನಾಟಕವನ್ನು ರಚಿಸಿ ಕಾಳಿದಾಸನು ಅವರ ಪ್ರೇಮದ ಬೇರನ್ನು ಭದ್ರಪಡಿಸಿದ್ದಾನೆ; ಪತಿಸಮಾಗಮದಿಂದ ಶಕುಂತಲೆ ಇಂದು ನಿಜವಾಗಿಯೂ ಸುಖಿ. ಅವಳ ಕಂಬನಿಯನ್ನು ಒರಸಿ ದುಷ್ಯಂತನು ಅವಳ ಸರ್ವಕ್ಲೇಶಗಳನ್ನೂ ಒರಸಿದ್ದಾನೆ.

ದುಷ್ಯಂತಶಕುಂತಲೆಯರಿಬ್ಬರ ದೃಷ್ಟಿಯಿಂದಲೂ ನಾಟಕದ ಸಮಾಪ್ತಿಯ ಮಂಗಳವು ಉಚಿತವಾಗಿದೆಯೆಂದು ನೋಡಿದ್ದಾಯಿತು. ಆದರೆ ಅದು ಅಲೌಕಿಕ ಸಂಘಟನೆಗಳ ಮೂಲಕ ಉಂಟಾಗಿರುವುದರಿಂದ ನಾಟಕದ ವಸ್ತುರಚನೆಗೆ ಬಾಹ್ಯವಾಗಿದೆಯೆ ಎಂದು ವಿಚಾರ ಮಾಡಬೇಕು. ಪುರಾಣಯುಗದ ಕಥೆಗಳಿಗೆ ಅಲೌಕಿಕಾಂಶಗಳು ಬರುವುದೇ ಒಂದು ತಪ್ಪಲ್ಲ : ಅದು ಅನಿವಾರ್ಯವೆಂದೂ ಹೇಳಬಹುದು. ಒಂದಾಗ ಮಾತ್ರ, ಅವು ಕಥೆಗೆ ನೆವಮಾತ್ರಕ್ಕೆ ಅಂಟಿಕೊಂಡಿರಕೂಡದು. ಹಾಸುಹೊಕ್ಕಿನಂತೆ ಅದರೊಡನೆ ಹೆಣೆದುಕೊಂಡಿರಬೇಕು! ಕಥೆಯ ಗತಿಗೂ ಆವರಣಕ್ಕೂ ವಿರುದ್ಧವೆನಿಸಬಾರದು. ಮಹಾಭಾರತದ ಶಾಕುಂತಲೋಪಾಖ್ಯಾನವನ್ನು ಕೊನೆಗಾಣಿಸುವ ಅಲೌಕಿಕ ವಾಣಿಯಲ್ಲಿ ಈ ದೋಷಗಳೆಲ್ಲವೂ ಇರುವುದರಿಂದ ಅದು ಅನುಚಿತವೆಂದೂ ಮೂಲಕಥೆ ನಿಜವಾಗಿ ದುರಂತಕಥೆಯೇ ಎಂದೂ ನಿರ್ಧರಿಸಲಾಯಿತು. ಶಾಕುಂತಲ

---

೧೪. ಇನ್ನೂ ಒಂದು ಮುಖ್ಯ ಪ್ರಯೋಜನವಿದೆ. ಮುಂದಿನ ಲೇಖನದಲ್ಲಿ ಹಂಸಪದಿಕೆಯ ಪ್ರಸಂಗವನ್ನು ಕುರಿತು ವಾಕ್ಯಗಳನ್ನು ನೋಡಿ.

ನಾಟಕಕ್ಕಾದರೆ ಈ ಮಾತು ತಟ್ಟುವುದಿಲ್ಲ. ಇಲ್ಲಿಯ ಆವರಣವೇ ದೈವ–ಮಾನವ ಸಮನ್ವಯದ ಆವರಣ. ಕಥಾನಾಯಿಕೆಯಾದ ಶಕುಂತಲೆ ಅಪ್ಸರೆಯೊಬ್ಬಳ ಪುತ್ರಿ. ಅವಳ ಸಮಸ್ತ ಸಂಕಟಗಳಿಗೂ ಮೂಲವಾದ ಋಷಿಶಾಪ ತುಂಬ ಅಲೌಕಿಕವಾದ ಸಂಗತಿ. ಸಾಮಾನ್ಯ ಲೌಕಿಕ ಕಾರಣದಿಂದ ದುಷ್ಯಂತನಿಗೆ ಶಕುಂತಲೆಯ ನೆನಪು ಇಷ್ಟು ನಿಯತವಾಗಿ ನಿಶ್ಶೇಷವಾಗಿ ಅಳಿಯುತ್ತಿರಲಿಲ್ಲ; ಅವನ ಚಾರಿತ್ರವು ಅಕಳಂಕಿತವಾಗಿ ನಿಲ್ಲುತ್ತಿರಲಿಲ್ಲ. ಇನ್ನು ಐದನೆಯ ಅಂಕದ ಕೊನೆಯಲ್ಲಿ ಶಕುಂತಲೆಯನ್ನು ಇತ್ತ ದುಷ್ಯಂತನು ನಿರಾಕರಿಸುವನು, ಅತ್ತ ಶಾರ್ಙ್ಗರವನು ಆಶ್ರಮಕ್ಕೆ ಮರಳಬೇಡವೆಂದು ಗರ್ಜಿಸುವನು. ಈ ಕಠೋರ ಪರಿಸ್ಥಿತಿಯಲ್ಲಿ ಪ್ರಸವಕಾಲದವರೆಗೂ ಅವಳು ರಾಜಪುರೋಹಿತನ ಮನೆಯಲ್ಲಿ ನಿಲ್ಲಬೇಕಾದ ದುರವಸ್ಥೆ ಒದಗುವುದು. ಎಂಥ ಸಹನೆಯ ಮೂರ್ತಿಗೂ ಈ ಕೊನೆಯ ವಿಷದ ಗುಳಿಗೆಯನ್ನು ನುಂಗಿಕೊಳ್ಳುವುದು ಅಸಾಧ್ಯ. ಆಗ ಅಲೌಕಿಕಾಶ್ಚರ್ಯವೊಂದು ನಡೆಯುತ್ತದೆ.[೧೫] ಶಕುಂತಲೆಯ ತಾಯಿ ಮೇನಕೆ ಆಕಾಶಗಮನದಿಂದ ಬಂದು ಮಗಳನ್ನು ಅದೃಶ್ಯವಾಗಿ ಕರೆದೊಯ್ಯುತ್ತಾಳೆ. ಮುಂದೆ ದುಷ್ಯಂತನು ಪರಿತಾಪ ಪಡುವಾಗ ಸಾನುಮತಿ ತನ್ನ ಅಲೌಕಿಕ ಪ್ರಭಾವದಿಂದ ಅದೃಶ್ಯಳಾಗಿ ನಿಂತು ನೋಡಿ, ಆ ವೃತ್ತಾಂತವನ್ನು ಶಕುಂತಲೆಗೆ ಮುಟ್ಟಿಸುತ್ತಾಳೆ. ಇಷ್ಟನ್ನೆಲ್ಲಾ ನಾವು ನೋಡಿದ ಮೇಲೆ, ಇಂದ್ರಸಹಾಯನಾಗಿ ಸ್ವರ್ಗಕ್ಕೆ ಹೋಗಿದ್ದ ದುಷ್ಯಂತನು ಹಿಂದಿರುಗುವಾಗ ದಾರಿಯಲ್ಲಿ ಮಾರೀಚಾಶ್ರಮದಲ್ಲಿಳಿದು ತನ್ನ ಪತ್ನಿಯನ್ನು ಕಂಡನೆಂದರೆ ನಮಗೆ ಯಾವ ಆಶ್ಚರ್ಯವೂ ಆಗುವುದಿಲ್ಲ; ಹಿಂದಿನ ಸಂಘಟನೆಗಳಿಗೆ ಇದು ಅನುರೂಪವೆನಿಸುತ್ತದೆ. ಅಲ್ಲದೆ ದೇವತೆಗಳೂ ದುಷ್ಯಂತ–ಶಕುಂತಲೆಯರ ಪುನಸ್ಸಮಾಗಮವನ್ನು ಕುರಿತು ಆಲೋಚಿಸುತ್ತಿರುವರೆಂದು ಆಗಲೆ ಸಾನುಮತಿಯಿಂದ ತಿಳಿದುಬಂದಿರುತ್ತದೆ. ಇನ್ನು ಮರ್ತ್ಯವನ್ನು ಸ್ವರ್ಗದಲ್ಲಿ ಪರಿಣಾಮಗೊಳಿಸುವ ಈ ನಾಟಕಕ್ಕೆ ಹೇಮಕೂಟದ ದಿವ್ಯಾಶ್ರಮಕ್ಕಿಂತ ಉಚಿತತರವಾದ ಸಮಾಪ್ತಿ ಸ್ಥಾನ ಯಾವುದು?

ಮರ್ತ್ಯವನ್ನು ಸ್ವರ್ಗದಲ್ಲಿ ಪರಿಣಾಮಗೊಳಿಸುವುದೆಂದರೇನು? ಇದರ ವಿವರಣೆಗೆ ರವೀಂದ್ರನಾಥರು ತಮ್ಮ ಉಜ್ಜ್ವಲವಾದ ಒಂದು ಉಪನ್ಯಾಸವನ್ನೇ – ಹಿಂದೆ ಉದಾಹರಿಸಿರುವ 'ಕುಮಾರಸಂಭವ ಮತ್ತು ಶಾಕುಂತಲ'ವನ್ನೇ – ಪೂರ್ಣವಾಗಿ ವಿನಿಯೋಗಿಸಿದ್ದಾರೆ. ಅಲ್ಲಿಯ ಒಂದೆರಡು ಅಂಶಗಳನ್ನು ಸೂಚಿಸುವುದು ಮಾತ್ರ ಈಗ ಸಾಧ್ಯ. ದೈಹಿಕವಾಗಿ ಜನಿಸಿದ ಮೋಹವು ಯಾತನೆ ಪಶ್ಚಾತ್ತಾಪಗಳ ಬೆಂಕಿಯಲ್ಲಿ ಪುಟಹೊಂದಿ ಸ್ವಾರ್ಥದ ಕಲ್ಮಷವನ್ನೆಲ್ಲಾ ಕಳೆದುಕೊಂಡು ಕೊನೆಯಲ್ಲಿ ದೈವಿಕ ಪ್ರೇಮದ – ಆತ್ಮಗಳ ಸಮಾಗಮದ – ಅಪರಂಜಿಯಾಗುತ್ತದೆ. ಇದೇ ಶಾಕುಂತಲ ನಾಟಕದ ಸಾರ. "ಪ್ರಥಮಾಂಕದಲ್ಲಿ ಪ್ರಿಯಳಾದ ಶಕುಂತಲೆಯೊಂದಿಗೆ ದುಷ್ಯಂತನ ವ್ಯರ್ಥ

---

೧೫. *Abhijnan-Sakuntala*, Notes, p. 228.

ಪ್ರಣಯವನ್ನೂ ಕಡೆಯ ಅಂಕದಲ್ಲಿ ಭರತಜನನಿಯೊಂದಿಗೆ ಆತನ ಸಾರ್ಥಕ ಸಮ್ಮಿಳನವನ್ನೂ ಕವಿಯು ಚಿತ್ರಿಸಿರುತ್ತಾನೆ."[೧೬] ದುಷ್ಯಂತ-ಶಕುಂತಲೆಯರಿಗೆ ಮೊಟ್ಟಮೊದಲು ಜನಿಸಿದ ಅನುರಾಗವು ಸಹಜವಾಗಿಯೇ ವಿಷಯೋನ್ಮುಖವಾದದ್ದು; ಸ್ವಸುಖಾಪೇಕ್ಷಿಯಾದದ್ದು. ಈ ಪ್ರಣಯಕ್ಕೆ ಹಿನ್ನೆಲೆ ಕಣ್ವರ ಆಶ್ರಮ-ಸಾಕುಮಗಳನ್ನು ಗಂಡನ ಮನೆಗೆ ಕಳಿಸಿಕೊಡುವಾಗ ಸಂಸಾರಿಯಂತೆ ಕಂಬನಿದುಂಬುವ ಕಣ್ವರ ಆಶ್ರಮ. ಮುಂದೆ ಅಗಲಿಕೆಯೊದಗುತ್ತದೆ, ಅಪಾರ ಯಾತನೆಯೊದಗುತ್ತದೆ, ಅಗಾಧ ಪರಿತಾಪವೊದಗುತ್ತದೆ. ಈ ಘರ್ಷಣದಲ್ಲಿ, ಮೀರಿದ ಆಸೆಯೂ ಕಾಮಪಿಪಾಸೆಯೂ ಕಳಚಿಬಿದ್ದು, ಇಬ್ಬರ ಹೃದಯಗಳಲ್ಲೂ ನೋವಿನ ಕಾವಿನಿಂದ ಹೊಸ ಸತ್ತ್ವವೊಂದು ಅರಳಿ, ಪುನಸ್ಸಮಾಗಮದ ವೇಳೆಗೆ ಇಬ್ಬರೂ ಪರಿಶುದ್ಧರಾಗಿರುತ್ತಾರೆ. ಇವರು ಈಗ ಸೇರುವುದು ಶಾಂತಿಯ ನೆಲೆಯಾದ ಹೇಮಕೂಟ ಪರ್ವತದಲ್ಲಿ, ದಾಂಪತ್ಯವನ್ನು ವಿಶ್ವದ ದೃಷ್ಟಿಯಲ್ಲಿ ಸಾರ್ಥಕಗೊಳಿಸುವ ತಮ್ಮ ತನಯನ ಸಮ್ಮುಖದಲ್ಲಿ. ಈ ಕೊನೆಯನ್ನು ಗುರಿಯಲ್ಲಿಟ್ಟುಕೊಂಡೇ ಕಾಳಿದಾಸನು ತನ್ನ ನಾಟಕವನ್ನು ರಚಿಸಿದ್ದಾನೆ. ಈ ಉದಾತ್ತ ಭಾವವನ್ನೇ ಅದರಲ್ಲಿ ದಳದಳವಾಗಿ ವಿಕಾಸಗೊಳಿಸಿದ್ದಾನೆ. ಇದರ ಸನ್ನಿಧಿಯಿಂದಲೇ ನಾಟಕದ ಕಟ್ಟಡ ಇಷ್ಟು ಏಕಮುಖವೂ ಅಚಲವೂ ಆಗಿರುವುದು. ಇಲ್ಲಿ ಬಂದಿರುವ ದುರಂತ ಸನ್ನಿವೇಶಗಳೆಲ್ಲವೂ ಕವಿಯ ಆಶ್ರಯಸಾಧನೆಗೆ ಸಮುಚಿತವಾದ ಅಂಗಗಳೇ ಹೊರತು, ತಾವೇ ಸ್ವತಂತ್ರವಾಗಿ ನಿಂತು ಪಟ್ಟಕಟ್ಟಿಸಿಕೊಳ್ಳತಕ್ಕವಲ್ಲ.

೪

ಕಾಳಿದಾಸನ ಪ್ರಥಮನಾಟಕ ಮಾಲವಿಕಾಗ್ನಿಮಿತ್ರವೆಂಬುದು ನಿರ್ವಿವಾದ ವಿಷಯ. ಬಳಿಕ, ವಿಕ್ರಮೋರ್ವಶೀಯವನ್ನು ಮುಂಚೆ ಬರೆದನೆ, ಶಾಕುಂತಲವನ್ನು ಮುಂಚೆ ಬರೆದನೆ? ಈ ಸಮಸ್ಯೆಯನ್ನು ಬಿಡಿಸಲು ಆಂತರಿಕ ಪ್ರಮಾಣಗಳ ಆಧಾರವೊಂದೇ ನಮಗೆ ಗತಿ. ವಿಮರ್ಶಕರ ಅಭಿಪ್ರಾಯಗಳು ಎರಡು ಕಡೆಗೂ ತೂಗುತ್ತಿವೆ.[೧೭] ಆದರೆ ವಿಕ್ರಮೋರ್ವಶೀಯವೇ ಮುಂಚೆ ಹುಟ್ಟಿದ್ದೆಂದು ಊಹಿಸಿದರೆ ತಪ್ಪಾಗಲಾರದು.

ಇವೆರಡು ನಾಟಕಗಳಿಗೂ ಸಂವಿಧಾನಗಳಲ್ಲಿ ಎಷ್ಟೊಂದು ಸಾಮ್ಯವಿದೆ![೧೮] ಶಾಪ ವೃತ್ತಾಂತವೇ ಎರಡರಲ್ಲೂ ಕಥೆಯ ಕೀಲುಗಲ್ಲು; ವಿಕ್ರಮೋರ್ವಶೀಯದಲ್ಲಿ ಒಂದು ಸಾಲದೆಂದು ಎರಡು ಬರುತ್ತಿವೆ, ಅಷ್ಟೇ ವ್ಯತ್ಯಾಸ. ಎರಡು ಕಡೆಗಳಲ್ಲೂ ನಾಟಕದ ಕ್ರಿಯೆ ಸ್ವರ್ಗಭೂಮಿಗಳಿಗೆ ಸೇತುವೆ ಕಟ್ಟುತ್ತಿದೆ; ದೇವತೆಗಳ ಮಾಧ್ಯಸ್ಥ್ಯವಿಲ್ಲದೆ ಕಥೆ

---

೧೬. ಕುಮಾರಸಂಭವ ಮತ್ತು ಶಾಕುಂತಲ, ಪು. ೩೨-೩

೧೭. ರೈಡರ್ ಅವರು ವಿಕ್ರಮೋರ್ವಶೀಯವೇ ಕೊನೆಯ ಕೃತಿಯೆಂದು ಹೇಳುತ್ತಾರೆ; ಕಾಳೆ, ಕೀತ್, ಗಜೇಂದ್ರಗಡ್‌ಕರ್ ಮೊದಲಾದವರು ಶಾಕುಂತಲಕ್ಕೆ ಈ ಸ್ಥಾನವನ್ನು ಸಲ್ಲಿಸುತ್ತಾರೆ.

೧೮. M.R. Kale, *Vikramorvas'iya*, Introduction, pp. 32 ff ಹೋಲಿಸಿ.

ಕೊನೆಮುಟ್ಟುವ ಹಾಗಿಲ್ಲ. ಮೊದಲ ಅಂಕಗಳಲ್ಲಿ ನಾಯಕನು ರಕ್ಷಕನಂತೆ ನಾಯಿಕೆಯ ಪರಿಚಯಮಾಡಿಕೊಳ್ಳುತ್ತಾನೆ; ಕೊನೆಯ ಅಂಕಗಳಲ್ಲಿ ಇವರ ಕುಮಾರನ ಮೂಲಕ ಕಥೆಯ ನಿರ್ವಹಣವಾಗುತ್ತದೆ. ನಾಯಿಕೆಯರಲ್ಲಿ ಕೂಡ, ಒಬ್ಬಳು ಅಪ್ಸರೆಯಾದರೆ ಇನ್ನೊಬ್ಬಳು ಅಪ್ಸರೆಯ ಪುತ್ರಿ. ಅವರ ಭಾವಾಭಿನಿವೇಶವು ವ್ಯಕ್ತವಾಗುವ ರೀತಿಯಲ್ಲೂ ತುಂಬ ಹೋಲಿಕೆಯಿದೆ. ಉರ್ವಶಿಯ ಏಕಾವಳೀಹಾರವು ಬಳ್ಳಿಯ ಕವಲಿಗೆ ಸಿಕ್ಕಿಕೊಂಡರೆ ಶಕುಂತಲೆಯ ವಲ್ಕಲದ ಸೆರಗು ಗೋರಂಟಿ ಗಿಡಕ್ಕೆ ಸಿಕ್ಕಿಕೊಳ್ಳುತ್ತದೆ; ಇದರ ಜೊತೆಗೆ ಅವಳ ಕಾಲಿಗೆ ದರ್ಭೆ ಬೇರೆ ಚುಚ್ಚಿಕೊಂಡಿರುತ್ತದೆ. ಇಬ್ಬರೂ ಪ್ರಣಯಪತ್ರಗಳನ್ನು ರಚಿಸಿ ತಮ್ಮ ಮನೋಗತವನ್ನು ಪ್ರಿಯನಿಗೆ ತಿಳಿಸತಕ್ಕವರು; ಶಕುಂತಲೆಯ ನಾಚಿಕೆಯನ್ನು ಮುರಿಯಲು ಮಾತ್ರ ಸಖಿಯರ ಪ್ರೋತ್ಸಾಹ ತುಂಬ ಬೇಕಾಗುತ್ತದೆ.

ಹೀಗೆ ಕಥಾರಚನೆಯ ಸಾಧನಗಳಲ್ಲಿ ಹಲವು ಸಮಾನವಾಗಿದ್ದರೂ ಅವುಗಳ ಉಪಯೋಗ ಮಾತ್ರ ಎರಡು ಕಡೆಗಳಲ್ಲೂ ಭಿನ್ನಫಲವನ್ನು ಕೊಟ್ಟಿದೆ. ಇಲ್ಲಿ ಮುಖ್ಯವಾದುವು ದೇವ-ಮಾನವ ಸಂಸರ್ಗ ಮತ್ತು ಶಾಪವೃತ್ತಾಂತ. ಎರಡು ನಾಟಕಗಳಲ್ಲೂ ಕಥಾರಥ ಹರಿಯಬೇಕಾದರೆ ಈ ಎರಡು ಚಕ್ರಗಳೇ ಬೇಕು. ಆದರೆ ಅವುಗಳ ವಿನ್ಯಾಸದ ಅಚಾತುರ್ಯದಿಂದ ವಿಕ್ರಮೋರ್ವಶೀಯವು ಅಂತಃಶೂನ್ಯವಾಗಿ ಪರಿಣಮಿಸಿರುವಾಗ, ಅವೇ ಅಂಶಗಳ ಜೋಡಣೆಯಿಂದಲೇ ಶಾಕುಂತಲವು ಜ್ಯೋತಿರ್ಮಯವಾಗಿ ಬೆಳಗುತ್ತಿದೆ. ಇದಕ್ಕೆ ಕವಿಯ ಅನುಭವ ವಿಕಾಸವೂ ಔಚಿತ್ಯ ಜ್ಞಾನಪರಿಪಾಕವೂ ಕಾರಣ. ವಿಕ್ರಮೋರ್ವಶೀಯದಲ್ಲಿ ಒದಗುವ ಪ್ರಣಯ ವಿಘ್ನಗಳೆಲ್ಲಾ ಅಲ್ಪಸಾರವಾದವು. ಪುರೂರವನು ಅನ್ಯಸ್ತ್ರೀಯನ್ನು ನೋಡಿದ ಮಾತ್ರಕ್ಕೇ ಉರ್ವಶಿ ವಿಚಾರವಿಲ್ಲದೆ ಕೋಪಗೊಂಡು ನಡೆದುಬಿಡುವುದೂ ಅವಳನ್ನು ಹುಡುಕಿಕೊಂಡು ಆತನು ಉನ್ಮತ್ತನಂತೆ ಅಲೆಯುವುದೂ ಅವರಿಗಿನ್ನೂ ಹುಡುಗತನವೆಂಬುದನ್ನು ತೋರಿಸುತ್ತಿದೆ – ಜೀವನದಲ್ಲಿ ಯಾವುದರ ಬೆಲೆ ಎಷ್ಟೆಂಬುದರ ಅರಿವು ಅವರಿಗೆ ಇಲ್ಲವೆಂದು ವ್ಯಕ್ತಪಡಿಸುತ್ತದೆ. ಹೋಗಲಿ; ಕ್ಲೇಶಪಟ್ಟರೂ ಅದರಿಂದ ಅವರ ಹೃದಯಗಳಿಗೆ ಯಾವ ಉತ್ತಮ ಸಂಸ್ಕಾರವೂ ಆದಂತೆ ನಮಗೆ ತೋರುವುದಿಲ್ಲ. ಉದಾಹರಣೆಗೆ, ಉರ್ವಶಿ ಮೊದಲು ಹೇಗಿದ್ದಳೋ ಕೊನೆಗೂ ಹಾಗೆಯೆ ನಿಲ್ಲುತ್ತಾಳೆ. ಕಾಳಿದಾಸನು ಅಪ್ರತಿಮಪ್ರತಿಭಾಶಾಲಿಯೆನ್ನುವುದು ನಿಜ; ಅವನ ಕಾವ್ಯವಾಹಿನಿ ನಿರರ್ಗಳವೆನ್ನುವುದೂ ನಿಜ. ಆದರೆ ಈ ಬಗೆಯ ಪ್ರಣಯಕ್ಕಿಂತ ಹೆಚ್ಚು ತೂಕವಾದದ್ದನ್ನು, ಈ ಬಗೆಯ ಪ್ರಣಯಿಗಳಿಗಿಂತ ಹೆಚ್ಚು ಸತ್ತ್ವಶಾಲಿಗಳನ್ನು ಸೃಷ್ಟಿಸುವ ಶಕ್ತಿ ಅವನಿಗಿನ್ನೂ ಆಗ ಒದಗಿರಲಿಲ್ಲವೇನೋ. ಅಂತೂ ವೈದಿಕ ಕಥೆಯ ಭಾವ ಇವನ ನಾಟಕದ ಜರಡಿಯಲ್ಲಿ ಸೋರಿಹೋಯಿತು.

ಶಾಕುಂತಲವನ್ನು ರಚಿಸುವ ವೇಳೆಗೆ ಅವನ ಕಲೆ ಪರಿಣತವಾಗಿತ್ತು, ಅನುಭವವು ಗಾಢವಿಶಾಲವಾಗಿತ್ತು, ಜೀವನದ ತಿರುಳು ಅವನಿಗೆ ಕರಗತವಾಗಿತ್ತು, ಆದ್ದರಿಂದ

ಅವನ ಕುಲುಮೆಗೆ ಬಿದ್ದ ಶಾಕುಂತಲೋಪಾಖ್ಯಾನಕ್ಕೆ ಅಭೂತಪೂರ್ವವಾದ ಹೊಸ ಕಳೆ ಬಂದಿತು. ಅದು ದುರಂತನಾಟಕವಾಗಿದ್ದರೆ ಎಷ್ಟು ಅರ್ಥವತ್ತಾಗಬಹುದೋ ಅದಕ್ಕೆ ಹತ್ತು ಪಟ್ಟು ಫಲವು ಮಂಗಳಾಂತದಿಂದ ಲಭಿಸಿತು. ಕಾಳಿದಾಸನು ವಿಚಾರ ಪೂರ್ವಕವಾಗಿ ದುರಂತತೆಯನ್ನು ನಿರಾಕರಿಸಿದನೆಂದು ಈ ಮಾತಿನ ಅಭಿಪ್ರಾಯವಲ್ಲ. ಅವನ ಕೃತಿಗಳನ್ನು ಪಕ್ಷಪಾತವಿಲ್ಲದೆ ವಿಮರ್ಶಿಸಿದರೆ, ಅವನಿಗೆ ದುರಂತದೃಷ್ಟಿ ಇರಲಿಲ್ಲವೆಂಬ ನಿರ್ಣಯವು ಸಿದ್ಧಿಸತಕ್ಕ ಸಂಭವವೇ ಹೆಚ್ಚು. ಇದಕ್ಕೆ ಸಂಸ್ಕೃತ ನಾಟಕ ಸಂಪ್ರದಾಯವು ಕಾರಣವೆಂದರೂ, ಅವನಲ್ಲೂ ಇದೊಂದು ಕೊರತೆಯೇ! ಇದರ ದೆಸೆಯಿಂದಲೇ ವಿಕ್ರಮೋರ್ವಶೀಯವು ಅಸಮರ್ಪಕವಾದದ್ದು. ಆದರೆ ಕವಿಗೆ ಇರುವುದು ಒಂದೇ ಕಣ್ಣಲ್ಲ ಎಂಬುದನ್ನೂ ನಾವು ಮರೆಯಬಾರದು. ಜೀವನದ ಆಳವೂ ಘನತೆಯೂ ರಹಸ್ಯವೂ ಮಂಗಳಾಂತ ನಾಟಕಗಳಲ್ಲೂ ಚೆನ್ನಾಗಿ ವ್ಯಕ್ತವಾಗಬಹುದು. ತಾನು ಆರಿಸಿಕೊಂಡ ವಸ್ತುವಿಗೆ ಯಾವ ದೃಷ್ಟಿ ಒಪ್ಪುತ್ತದೋ ಅದನ್ನೇ ಕವಿ ಅವಲಂಬಿಸುವುದು ಅಗತ್ಯ. ಸಾಹಿತ್ಯಪ್ರಪಂಚದಲ್ಲಿ ಯಾವ ಕೃತಿಯ ಘನತೆಯನ್ನೇ ಆಗಲಿ, ಅದರ ಉನ್ನತ ಸತ್ತ್ವದಿಂದಲೂ ಏಕಮುಖತೆಯಿಂದಲೂ ನಿರ್ಧರಿಸಬೇಕು. ಈ ಬಗೆಯ ಪರೀಕ್ಷೆಯಿಂದ ಕಾಳಿದಾಸನ ಶಾಕುಂತಲ ನಾಟಕ ಎಷ್ಟುಮಾತ್ರಕ್ಕೂ ಹಿಂಜರಿಯಬೇಕಾಗಿಲ್ಲ.

ಪರಿಶಿಷ್ಟ

ಶಾಕುಂತಲ ನಾಟಕಕ್ಕೆ ಮಹಾಭಾರತದ ಶಾಕುಂತಲೋಪಾಖ್ಯಾನವೇ ಮೂಲವೆಂದು ಸಾಮಾನ್ಯವಾದ ಅಭಿಪ್ರಾಯ! ಅದನ್ನೇ ಇಲ್ಲಿ ಅಂಗೀಕರಿಸಲಾಗಿದೆ. ಆದರೆ ಇದನ್ನು ಒಪ್ಪದವರೂ ಉಂಟು.[೧೯] ಬಂಗಾಳದಲ್ಲಿ ಪ್ರಚುರವಾಗಿರುವ 'ಪದ್ಮಪುರಾಣ'ದ ಮಾತೃಕೆಗಳಲ್ಲಿ ಶಾಕುಂತಲೋಪಾಖ್ಯಾನದ ಬೇರೊಂದು ಪಾಠ ದೊರೆಯುತ್ತದೆ. ಪ್ರೊ. ಎಚ್. ಶರ್ಮಾ ಎಂಬುವರು, *Padmapurana and Kalidasa* ಎಂಬ ಗ್ರಂಥದಲ್ಲಿ ಇದನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಇದರ ಕಥೆಗೂ ಕಾಳಿದಾಸನ ನಾಟಕಕ್ಕೂ ತುಂಬ ಸಾಮ್ಯ ಉದ್ದಕ್ಕೂ ಕಾಣಬರುತ್ತದೆ. ಅವುಗಳಲ್ಲಿ ಬಹುಮುಖ್ಯವಾದದ್ದು ದುರ್ವಾಸರ ಶಾಪ. ಇದರ ಫಲವಾಗಿಯೇ ಶಕುಂತಲೆಯ ನಿರಾಕರಣೆ. ಬೆಸ್ತರವನಿಂದಲೇ ಉಂಗುರ ದೊರೆಯುತ್ತದೆ. ಮಾರೀಚಾಶ್ರಮದಲ್ಲೇ, ಭರತಕುಮಾರನ ಮೂಲಕವೇ ದಂಪತಿಗಳ ಸಮಾಗಮ. ಶಾಕುಂತಲದ ಪ್ರಿಯಂವದೆ ಶಾರ್ಙ್ಗರವ (=ಸಂಗಿವರ) ಶಾರದ್ವತಾದಿಗಳು ಇಲ್ಲಿಯೂ ಕಣ್ಣಿಗೆ ಬೀಳುತ್ತಾರೆ. ಇನ್ನೂ ಹಲವೂ ಸಾಮ್ಯಗಳಿವೆ. – ಈ ಕಥೆಯೇ ಕಾಳಿದಾಸನಿಗೆ ಮೂಲ ವಸ್ತುವಾಗಿರಬೇಕೆಂದು ಪ್ರೊ. ಶರ್ಮರೂ ಅವರ ಗುರುಗಳಾದ ಡಾ. ವಿನ್‌ಟರ್‌ನಿಟ್ಸ್ ಅವರೂ (ಮುನ್ನುಡಿಯಲ್ಲಿ) ಅಭಿಪ್ರಾಯಪಡುತ್ತಾರೆ.

---

೧೯. M. Winternitz, *A History of Indian Literature*, Vol. 1, p. 376.

ಪದ್ಮಪುರಾಣದ ಕಾಲವು ಅನಿಶ್ಚಿತವೆಂಬುದು ನಿಜ. ಆದರೂ ಈ ಕಥೆ ಕಾಳಿದಾಸನಿಗೆ ಮಾತೃಕೆಯಾಗುವಷ್ಟು ಪ್ರಾಚೀನವಲ್ಲವೆಂದು ತೋರುತ್ತದೆ. ಉದಾಹರಣೆಗೆ, ಮಹಾಭಾರತದಲ್ಲೂ ಮಿಕ್ಕ ಹಲವು ಪುರಾಣಗಳಲ್ಲೂ ಬರುವ[೨೦]

ಭಸ್ತ್ರಾ ಮಾತಾ ಪಿತುಃ ಪುತ್ರಃ ಯೇನ ಜಾತಃ ಸ ಏವ ಸಃ ।
ಭರಸ್ವ ಪುತ್ರಂ ದುಷ್ಯಂತಮಾವಮಂಸ್ಥಾಃ ಶಕುಂತಲಾಮ್ ॥
ರೇತೋಧಾಃ ಪುತ್ರ ಉನ್ನಯತಿ ನರದೇವ ಯುಮಕ್ಷಯಾತ್ ।
ತ್ವಂ ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುಂತಲಾ ॥[೨೧]

ಎಂಬೀ ಆನುವಂಶ ಶ್ಲೋಕಗಳು – ಆಕಾಶವಾಣಿಯ ವಾಕ್ಯಗಳು – ಪದ್ಮ ಪುರಾಣದ ಪಾಠದಲ್ಲಿ ಬರುವುದಿಲ್ಲ. ಶಾಕುಂತಲೋಪಾಖ್ಯಾನದಲ್ಲಿ ಇವು ಪ್ರಾಚೀನ ಭಾಗ, ಬಹು ಮುಖ್ಯವಾದ ಭಾಗ. ಆದರೆ ಆಕಾಶವಾಣಿಯ ಪ್ರಸಕ್ತಿಯೇ ಪದ್ಮಪುರಾಣದಲ್ಲಿ ಇಲ್ಲ. ಇದನ್ನು ನೋಡಿದರೆ ಕಾಳಿದಾಸನ ಶಾಕುಂತಲವನ್ನು ನೋಡಿಕೊಂಡು ಈ ಪುರಾಣಕರ್ತನು ತನ್ನ ಕಥೆಯನ್ನು ಬದಲಾಯಿಸಿರಬೇಕೆಂದು ತೋರುತ್ತದೆ. (ಕಾಳಿದಾಸನೇ ತನ್ನ ಕಥೆಯ ಸೂಕ್ಷ್ಮಾಂಶಗಳಿಗೂ ಇವನನ್ನು ಬೇಡಿದನೆಂದು ನಂಬುವುದು ಕಷ್ಟ.) ಅಲ್ಲದೆ ಪುರಾಣತ್ವವನ್ನು ಉಳಿಸಿಕೊಳ್ಳಲು ಇವನು ಮಹಾಭಾರತದಿಂದಲೂ ಹಲವು ಅಂಶಗಳನ್ನು ತೆಗೆದುಕೊಂಡಿದ್ದಾನೆ. ಇದರಿಂದ ಕಥೆಯಲ್ಲಿ ಅನನ್ವಯಗಳು ಅಲ್ಲಲ್ಲೇ ದೊರೆಯುತ್ತವೆ.

ಅಂತೂ, ಈ ವಾದದ ನಿರ್ಣಯ ಹೇಗೆ ಪರಿಣಮಿಸಿದರೂ ಶಾಕುಂತಲ ನಾಟಕದ ಮಹತ್ವಕ್ಕೂ ಸಮರ್ಪಕತೆಗೂ ಯಾವ ಆಕ್ಷೇಪಣೆಯೂ ತಟ್ಟಲಾರದು. ನಮಗೆ ಪ್ರಕೃತವಾದದ್ದು ಅಷ್ಟೆ.

ಕಾವ್ಯ ಸಮೀಕ್ಷೆ : ೧೯೪೭

●

---

೨೦. Ibid., p. 377, n. 1.

೨೧. ಮಹಾಭಾರತ (ಭಂಡಾರ್‌ಕರ್ ಪ್ರಾಚ್ಯಸಂಶೋಧನ ಸಂಸ್ಥೆಯ ಪರಿಷ್ಕರಣ).... ಆದಿಪರ್ವ, ೬೯. ೨೯-೩೦ ಮತ್ತು ೯೦, ೩೧-೩೨.

‘ಶಾಕುಂತಲ’ವನ್ನು ಕುರಿತು*

ವಿಶ್ವಕವಿಗಳ ವಿರಳಪಂಕ್ತಿಯಲ್ಲಿ ಕಾಳಿದಾಸನಿಗೆ ಭದ್ರವಾದ ಸ್ಥಾನವನ್ನು ಗಳಿಸಿಕೊಟ್ಟಿರುವ ಕೃತಿ ‘ಅಭಿಜ್ಞಾನ ಶಾಕುಂತಲ’. “ಕಾವ್ಯೇಷು ನಾಟಕಂ ರಮ್ಯಂ ತತ್ರ ರಮ್ಯಾ ಶಕುಂತಲಾ” — ಎಂದು ಹೇಳಿ ಭರತ ಖಂಡದ ಪಂಡಿತರು ಸಂಸ್ಕೃತ ಸಾಹಿತ್ಯದಲ್ಲಿ ಶಾಕುಂತಲ ನಾಟಕಕ್ಕೆ ಅಗ್ರಪಟ್ಟವನ್ನು ಕಟ್ಟಿದರು. ಪಾಶ್ಚಾತ್ಯರಲ್ಲಿ ಗಯಟೆಯಂಥ ಮಹಾಕವಿ ಮರ್ತ್ಯ ಸ್ವರ್ಗಗಳ ಸಾರ ಸಮ್ಮಿಳನವನ್ನೇ ಶಾಕುಂತಲವೆಂಬ ಒಂದು ಹೆಸರಿನಲ್ಲಿ ಕಂಡನು. ಎಷ್ಟೋ ಉತ್ತಮ ಕೃತಿಗಳನ್ನು ಕೂಡ ಒಂದು ಬಾರಿ ಸವಿನೋಡಿದಮೇಲೆ ಮತ್ತೆ ಕೈಗೆ ತೆಗೆದುಕೊಳ್ಳಲು ಬೇಗ ಮನಸ್ಸು ಬರುವುದಿಲ್ಲ. ಆದರೆ ಶಾಕುಂತಲವನ್ನು ಓದಿದಷ್ಟೂ ಇದರ ಸವಿ ಹೆಚ್ಚುತ್ತದೆ; ನಮ್ಮ ಅನುಭವ ಆಳವಾದ ಹಾಗೆಲ್ಲ ಅದರ ಅರ್ಥವೂ ಅಭಿನವವಾಗುತ್ತದೆ. ತರುಣರಿಗೆ, ಪರಿಣತರಿಗೆ—ಎಲ್ಲರಿಗೂ ಇದರಲ್ಲಿ ಆಹ್ಲಾದವುಂಟು, ಆತ್ಮ ಸಂಸ್ಕಾರವುಂಟು. ಇಂಥ ಮಹಾ ಕೃತಿಯ ಸ್ವಾರಸ್ಯ ಮಹತ್ತ್ವಗಳನ್ನು ಸುಮಾರು ಹತ್ತು ನಿಮಿಷಕಾಲದ ಹರಟೆಯಲ್ಲಿ ನಿರೂಪಿಸುವುದು ಹೇಗೆ ಸಾಧ್ಯ! ಕಡಲನ್ನು ಕಡೆಯುವ ಸಾಹಸಕ್ಕೆ ಇಲ್ಲಿ ನಾನು ಕೈಹಾಕುವುದಿಲ್ಲ. ಶಾಕುಂತಲವು ಶಕುಂತಲಾ-ದುಷ್ಯಂತರ ಪ್ರೇಮಕಥೆ; ಈ ಎರಡು ಪಾತ್ರಗಳ ವಿಷಯದಲ್ಲಿ ಅದರಲ್ಲೂ ಮುಖ್ಯವಾಗಿ ಶಕುಂತಲೆಯ ವಿಷಯದಲ್ಲಿ, ಗಮನಾರ್ಹವೆಂದು ತೋರಿದ ಕೆಲವು ಅಂಶಗಳನ್ನು ಪ್ರಸ್ತಾವಿಸುವುದಷ್ಟೇ ನನ್ನ ಉದ್ದೇಶ.

---

* ಪ್ರಬುದ್ಧ ಕರ್ನಾಟಕ. ೨೪.೨.

ಕಾಳಿದಾಸನು ತನ್ನ ಮಿಕ್ಕ ನಾಟಕಗಳಲ್ಲಿ ಮಾಳವಿಕೆ, ಉರ್ವಶಿ, ಧಾರಿಣಿ, ಇರಾವತಿ ಮೊದಲಾದ ಅನೇಕ ಮಂದಿ ನಾಯಿಕೆ ಉಪನಾಯಿಕೆಯರನ್ನು ನಿರ್ಮಿಸಿದ್ದಾನೆ. ಆದರೆ ಈ ಉಳಿದವರ ಬಗೆಯೇ ಬೇರೆ, ಶಕುಂತಲೆಯ ಬಗೆಯೇ ಬೇರೆ. "ಸ್ತ್ರೀರತ್ನಸೃಷ್ಟಿರಪರಾ ಪ್ರತಿಭಾತಿ ಸಾ ಮೇ" (ಬೇರೆ ತೋರ್ಕುಮೆನಗೀ ಸ್ತ್ರೀರತ್ನಸೃಷ್ಟಿಕ್ರಮಂ)! ಪಟ್ಟಣದ ಚದುರೆಯರ, ಅರಮನೆಯ ವಿಲಾಸಿಯರ ಬೆಡಗುಬಿನ್ನಾಣಗಳನ್ನು ಕಾಳಿದಾಸನು ಜೀವನದಲ್ಲಿ ಕಂಡು, ನಾಟಕಗಳಲ್ಲಿ ಚಿತ್ರಿಸಿ, ದಣಿದು ಈ ತಪೋವನದ ಮುಗ್ಧೆಯನ್ನು ನಿರ್ಮಿಸಿದಂತೆ ತೋರುತ್ತದೆ. "ದೂರೀಕೃತಾಃ ಖಲು ಗುಣೈರುದ್ಯಾನಲತಾ ವನಲತಾಭಿಃ" (ದೂರಕಿಕ್ಕಿದುವೈಸೆ ಗುಣದಲಿ ವನಲತೆಗಳುದ್ಯಾನಲತೆಗಳನು)!

ಒಬ್ಬ ರಾಜರ್ಷಿ ಅಪ್ಸರೆಯೊಬ್ಬಳ ಸೊಬಗಿಗೆ ಮರುಳಾಗಿ ವ್ರತಭ್ರಷ್ಟನಾದದ್ದರ ಫಲವಾಗಿ ಶಕುಂತಲೆ ಜನಿಸಿದ್ದು ನಿಜ. ಆದರೆ ಚಾಂಚಲ್ಯದ ಸೋಂಕು ಅವಳಿಗೆ ಅಷ್ಟಕ್ಕೇ ಮುಗಿಯಿತು, ಹುಟ್ಟಿದಕೂಡಲೆ ಹೆತ್ತವರು ತೊರೆದರು; ಅವಳು ಕಣ್ವರ ಸಾಕುಮಗಳಾಗಿ ಪ್ರಕೃತಿಯ ಮಡಿಲಿನಲ್ಲಿ ಬೆಳೆದಳು. ಆಶ್ರಮದ ಶಾಂತ, ಸರಳ ಜೀವನದೊಂದಿಗೆ ಅವಳ ಬಾಳು ಬೆರೆಯಿತು; ಅದರೊಂದಿಗೆ ಸಮರಸವಾಗಿ ಹರಿಯಿತು. ಋಷಿಕನ್ಯೆಯರಾದ ಅನಸೂಯೆ ಪ್ರಿಯಂವದೆಯರು ಅವಳ ಜೀವದ ಗೆಳತಿಯರು; ತನ್ನಂತೆಯೇ ತಾಯಿಯ ಆರೈಕೆಯನ್ನು ಅರಿಯದ ದೀರ್ಘಾಪಾಂಗವೆಂಬ ಜಿಂಕೆಯ ಮರಿ ಅವಳ ಮುದ್ದಿನ ಕಂದ; ತಾನು ನೀರೆರೆದು ಬೆಳಸಿದ ವನಜ್ಯೋತ್ಸ್ನೆಯೆಂಬ ಲತೆ ಅವಳ ತಂಗಿ. ಕಣ್ವರ ಆಶ್ರಮದಲ್ಲಿ ಶಕುಂತಲೆಯೂ ಒಂದು ಜಂಗಮಲತೆ.

ಈ ನಡೆದಾಡುವ ಬಳ್ಳಿಯಲ್ಲಿ ಯೌವನಕುಸುಮವು ಅರಳಿದ ವೇಳೆಗೆ, ದುಷ್ಯಂತ ಮಹಾರಾಜನು ಬೇಟೆಯ ನಿಮಿತ್ತದಿಂದ ಇತ್ತ ಬಂದನು. ತುಂಬಿಯಂತೆ ಈ ಹೂವಿಗೆ ಮನಸೋತನು. ಕಾಡಾನೆಯಂತೆ ಶಕುಂತಲೆಯ ಹೃದಯವನ್ನು ಹೊಕ್ಕು ಅಲ್ಲಿಯ ಶಾಂತಿಯನ್ನು ಕದಡಿ "ತಪೋವನವಿರೋಧಿಯಾದ ವಿಕಾರ"ವನ್ನು ಉಂಟುಮಾಡಿದನು. ಹೀಗೆ ಇಬ್ಬರಲ್ಲೂ ಹಬ್ಬಿದ ಅನುರಾಗವು ಹೇಗೆ ಪರಿಣಮಿಸಿತೆಂಬುದೇ ಶಾಕುಂತಲ ನಾಟಕದ ವಸ್ತು.

ಶಕುಂತಲೆಯಲ್ಲಿ ಭಾವ ತೀವ್ರ; ಮಾತು ಮಿತ. ಇಷ್ಟು ಕೊಂಚ ಮಾತಾಡುವ, ಆದರೂ, ಸ್ವಭಾವದ ಸೌರಭದಿಂದ ನಾಟಕವನ್ನೆಲ್ಲಾ ತುಂಬುವ ನಾಯಿಕೆಯರು ಕಾವ್ಯ ಪ್ರಪಂಚದಲ್ಲಿ ಹಲವರಿಲ್ಲ. ಹೆಣ್ಣಿನಲ್ಲಿ ಮಾತು ಸ್ವಲ್ಪವಾದರೇ ಸೊಗಸು ಹೆಚ್ಚೆಂದು ಬಲ್ಲವರ ಹೇಳಿಕೆ. ಅಂತೂ, ತನ್ನ ಸಖಿಯರು ಹಾಸ್ಯ ಮಾಡಿದಾಗ ಶಕುಂತಲೆ ಕೋಪಿಸಿಕೊಳ್ಳಬಲ್ಲಳೇ ಹೊರತು ಪ್ರತ್ಯುತ್ತರ ಕೊಡಲಾರಳು. ಪುಷ್ಪರಾಶಿಯಲ್ಲಿ ಬಿದ್ದ ಕೆಂಡದಂತೆ ಪ್ರೇಮವು ತನ್ನ ಹೃದಯವನ್ನು ದಹಿಸಿ ಶರೀರವನ್ನು ಶೋಷಿಸುತ್ತಿದ್ದರೂ, ಅವಳು ತನ್ನ ಅಂತರಂಗದ ಗುಟ್ಟನ್ನು ಪ್ರಾಣಸಖಿಯರಿಗೆ ಕೂಡ ಬಾಯಿಬಿಟ್ಟು

ಹೇಳಲಾರಳು. ಮುಂದೆ ಸಖಿಯರ ಸಹಾಯದಿಂದ ತನ್ನ ನಲ್ಲನೊಡನೆ ಏಕಾಂತದಲ್ಲಿರಲು ಸಾಧ್ಯವಾದಾಗಲೂ ಚಾತುರ್ಯದ ಮಾತೆರಡನ್ನು ಆಡಲಾರಳು. ಚತುರೋಕ್ತಿ ಎಲ್ಲಿ ಬಂತು!—ಪ್ರೇಮದ ಉದ್ರೇಕದಲ್ಲಿ ಪ್ರಿಯನು ಎಲ್ಲಿ ಮರ್ಯಾದೆಯನ್ನು ಮೀರುವನೋ ಎಂಬ ಆತಂಕ ಅವಳಿಗೆ. "ಪೌರವ, ವಿನಯವನ್ನು ಕಾಪಾಡಿಕೊ. ಮದನ ಬಾಧೆಗೆ ಒಳಗಾದರೂ ತಾನು ಸ್ವತಂತ್ರಳಲ್ಲ" ಎಂದು ಅವನನ್ನು ತಡೆಯುವಳು. ಗಾಂಧರ್ವ ವಿವಾಹವು ಧರ್ಮಸಮ್ಮತವೆಂದು ಅವನು ಸ್ಥಾಪಿಸಿದರೂ ಅವಳ ಮನಸ್ಸಿನ ಶಂಕೆ ಶಮನವಾಗದು. ಪ್ರಾಣಪ್ರಿಯನನ್ನು ಕೂಡುವುದಕ್ಕೆ ಅವಳ ಸಂಕೋಚದ ಸ್ವಭಾವವೇ ಎಲ್ಲಕ್ಕೂ ಹೆಚ್ಚಿನ ಅಡ್ಡಿ. ಆದರೆ ಉದ್ದಾಮಪ್ರೇಮವನ್ನು ಎಷ್ಟು ಕಾಲ ತಡೆಗಟ್ಟಲಾದೀತು? ಇಬ್ಬರ ಹಂಬಲಿಕೆಯೂ ಫಲಿಸಿತು. ದುಷ್ಯಂತ ಶಕುಂತಲೆಯರು ದಂಪತಿಗಳಾದರು.

ಹಲವು ಪ್ರೇಮ ಕಥೆಗಳು ಮದುವೆಯಲ್ಲಿ ಮುಕ್ತಾಯಹೊಂದುತ್ತವೆ. ಮುಂದೆ ಎಂದೆಂದಿಗೂ ನಲ್ಲನಲ್ಲೆಯರು ಸುಖವಾಗಿದ್ದುಬಿಡುತ್ತಾರೆಂದೇ ಸಾಮಾನ್ಯನ ಭಾವನೆ. ಆದರೆ ಜೀವನದಲ್ಲಿ ಎಷ್ಟೋ ವೇಳೆ ಆ ಬಳಿಕವೇ ಕಥೆ ಬೆಳೆಯುವುದು, ನೋವು ನಲಿವು ಬಲಿಯುವುದು. ತಾರುಣ್ಯದ ಅನುರಾಗವು ವಿರಹದ ಪೆಟ್ಟಿಗೆ ಸಿಕ್ಕಿ, ಕ್ಲೇಶಪರಿತಾಪಗಳ ಕುಲುಮೆಯಲ್ಲಿ ಕರಗಿ ಪುಟಹೊಂದಿ, ಅಂತಃಸತ್ತ್ವವಿದ್ದ ಪಕ್ಷದಲ್ಲಿ ಕೊನೆಗೆ ಅಪರಂಜಿಯಾಗುತ್ತದೆ. ಶಾಕುಂತಲ ನಾಟಕದ ಉತ್ತರಭಾಗದಲ್ಲಿ ಈ ಕಥೆ ಅನ್ಯಾದೃಶವಾಗಿ ರೂಪುಗೊಂಡಿದೆ.

ಶಕುಂತಲೆಯನ್ನು ಅವಳ ನಲ್ಲನು ಬೀಳ್ಕೊಂಡ ದಿವಸವೇ, ಅವನ ಚಿಂತೆಯಲ್ಲಿ ಮುಳುಗಿ ಅವಳು ವಿಶ್ವವನ್ನೇ ಮರೆತಿದ್ದ ಘಳಿಗೆಯಲ್ಲಿಯೇ, ಕಣ್ವಾಶ್ರಮಕ್ಕೆ ಅತಿಥಿಯಾಗಿ ಮುನಿಸಿನ ಮೂರ್ತಿಯಾದ ದುರ್ವಾಸನು ಬರಬೇಕೆ! ತನ್ನ ಕೂಗಿಗೆ ಶಕುಂತಲೆ ಉತ್ತರ ಕೊಡಲಿಲ್ಲವೆಂಬ ಕಾರಣವನ್ನೇ ಈ ಮುನಿ ದೊಡ್ಡದು ಮಾಡಿಕೊಂಡು ಅವಳನ್ನು ದುಷ್ಯಂತನು ಸಂಪೂರ್ಣವಾಗಿ ಮರೆತುಬಿಡುವಂತೆ ಶಾಪಕೊಡಬೇಕೆ! ಶಕುಂತಲೆಯ ಕಿವಿಗೆ ಬೀಳದ ಅವನ ಗರ್ಜನೆ ಅವಳ ಸಖಿಯರ ಎದೆಯನ್ನು ತಲ್ಲಣಗೊಳಿಸಿತು. ಪ್ರಿಯಂವದೆ ಅನುನಯದ ಸವಿ ನುಡಿಗಳನ್ನಾಡಿ, ಶಾಪಕ್ಕೆ ಪರಿಹಾರವೊಂದನ್ನು ಋಷಿಯ ಬಾಯಿಂದ ಹೇಳಿಸಿದಳು. ಆದರೆ ಶಕುಂತಲೆಗೆ ದುಃಖ ತಟ್ಟುವುದೇನೂ ತಪ್ಪಲಿಲ್ಲ. "ನವಮಾಲಿಕಾಲತೆಗೆ ಬಿಸಿನೀರನ್ನು ಯಾರು ತಾನೆ ಎರೆದಾರು!" ಎಂದುಕೊಂಡು, ಶಾಪದ ವಿಷಯವನ್ನು ಅವಳಿಗೆ ಹೇಳಲು ಸಖಿಯರು ಹಿಂಜರಿದದ್ದರಿಂದ ಪರಿಸ್ಥಿತಿ ಕಠಿಣತರವಾಯಿತು. ಅಂತೂ, ಶಕುಂತಲೆಯನ್ನು ಅಗಲಿದಾಗ ಅವಳ ಬೆರಳಿಗೆ ತನ್ನ ಮುದ್ರೆಯುಂಗುರವಿಟ್ಟು, ಅದರಲ್ಲಿ ಕೆತ್ತಿದ್ದ ತನ್ನ ಹೆಸರಿನ ಅಕ್ಷರಗಳನ್ನು ಅವಳು ದಿನಕ್ಕೆ ಒಂದೊಂದರಂತೆ ಎಣಿಸಿ ಮುಗಿಸುವುದರೊಳಗೆ ಅವಳನ್ನು ರಾಜಧಾನಿಗೆ ಕರೆದುಕೊಂಡು ಹೋಗಲು ಪರಿಜನರು ಬರುವರೆಂದು ಮಾತುಕೊಟ್ಟು ಊರಿಗೆ ತೆರಳಿದ ದುಷ್ಯಂತನ ನೆನಪಿಗೆ ದಾರಿಯಲ್ಲೇ ಕತ್ತಲೆ ಕವಿಯಿತು. ಶಕುಂತಲೆಯ ಸುಖದ ಬಳ್ಳಿ ಅವಳ ಅರಿವಿಲ್ಲದೆಯೇ ಅಲ್ಲಿಗೇ ಮುರುಟಿತು.

ದುರ್ವಾಸನ ಶಾಪದ ಭೀಷಣ ಪರಿಣಾಮವನ್ನು ಕಾಳಿದಾಸನು ಒಡನೆಯೇ ವ್ಯಕ್ತಗೊಳಿಸುವುದಿಲ್ಲ. ಅದಕ್ಕೆ ಮೊದಲು, ನಾಲ್ಕನೆಯ ಅಂಕದಲ್ಲಿ ಒಂದು ಸುಕುಮಾರ ಸಂದರ್ಭವನ್ನು ಚಿತ್ರಿಸಿ ಶಿರೀಷಕೋಮಲೆಯಾದ ಶಕುಂತಲೆಯ ವಿಷಯದಲ್ಲಿ ನಮ್ಮ ಸ್ನೇಹಕನಿಕರಗಳನ್ನು ಇನ್ನಷ್ಟು ದೃಢಪಡಿಸುತ್ತಾನೆ. ಕಣ್ವ ಮಹರ್ಷಿಗಳು ಗರ್ಭಿಣಿಯಾದ ತಮ್ಮ ಸಾಕುಮಗಳನ್ನು ಗಂಡನ ಮನೆಗೆ ಕಳಿಸಿಕೊಡುವ ದೃಶ್ಯ ಅದು. ಶಕುಂತಲೆಗೆ ಅತ್ತ ಪತಿಯನ್ನು ಸೇರಬೇಕೆಂಬ ತವಕ : ಇತ್ತ ತಂದೆಯನ್ನು, ಗೆಳತಿಯರನ್ನು, ಒಡನಾಡಿಗಳನ್ನು, ತಪೋವನವನ್ನು ಬಿಟ್ಟುಹೋಗಲಾರದ ಕಳವಳ. ಅವಳನ್ನು ಬೀಳ್ಕೊಡುವಾಗ ಇವರಿಗೂ ತೀವ್ರ ವೇದನೆ. ಈ ಅಗಲಿಕೆಯ ಚಿತ್ರವು ನೋಟಕರ ಕರುಳನ್ನು ಹಿಂಡುತ್ತದೆ. ಆದ ಕಾರಣವೇ "ಕಾವ್ಯೇಷು ನಾಟಕಂ ರಮ್ಯಂ ತತ್ರ ರಮ್ಯಾ ಶಕುಂತಲಾ" ಎಂಬುದಕ್ಕೆ ಉತ್ತರ ಭಾಗವಾಗಿ, "ತತ್ರಾಪಿ ಚ ಚತುರ್ಥೋಂಕಃ ತತ್ರ ಶ್ಲೋಕಚತುಷ್ಟಯಂ" ಎಂಬ ಶ್ಲಾಘನೆ ಹುಟ್ಟಿತು. ಈ ಶ್ಲೋಕಚತುಷ್ಟಯದಲ್ಲಿ ಒಂದನ್ನಾದರೂ ಉದಾಹರಿಸಿದಲ್ಲದೆ ಮನಸ್ಸು ನಿಲ್ಲದು. ಕಣ್ವರು ತಪೋವನದ ತರುಗಳಿಗೆ ಹೇಳುವ ಮಾತು ಇದು :

ಜಲವನದಾವಳೀಂಟಳೆರೆದಲ್ಲದೆ ನಿಮ್ಮಯ ಪಾತೆಗಂಬುವಂ
ತಳಿರ್ಗಳ ಕೊಯ್ವುಳಾವಳೊಲವಿಂ ಮಿಗೆ ಸಿಂಗರದಾಸೆಯುಳ್ಳೊಡಂ ।
ಅಲರ್ಗಳ ತಾಳೆ ನೀವು ಮೊದಲುತ್ಸವಾಂತಪಳಾವಳಾ ಶಕುಂ-
ತಳೆ ಪತಿಸದ್ಮಕೈದಿದಪಳಾಕೆಗನುಜ್ಞೆಯನೀವುದೆಲ್ಲರುಂ ॥

(ಬಸವಪ್ಪಶಾಸ್ತ್ರಿಗಳ ಅನುವಾದ)

ಶಕುಂತಲೆಯ ಹೃದಯ ಎಷ್ಟು ಮೃದು, ಆಶ್ರಮದ ಮರಬಳ್ಳಿಗಳಲ್ಲಿ ಅವಳಿಗಿದ್ದ ಸೋದರಸ್ನೇಹ ಎಷ್ಟು ಸಹಜ ಎಂಬುದಕ್ಕೆ ಇದಕ್ಕಿಂತ ನಿದರ್ಶನ ಬೇಕೆ!

ಎಂಥ ಮೋಹದ ಮಗಳಾದರೂ ತೌರುಮನೆಯನ್ನು ಒಂದು ದಿನ ಬಿಡಲೇಬೇಕು. ಇದು ಸಂಸಾರದ ಸಾಮಾನ್ಯನಿಯಮ. ಹೆಣ್ಣು ಹೆರರೊಡವೆಯೆಂದು ಕಣ್ವರಂತೆ ನಾವೂ ಸಮಾಧಾನ ತಂದುಕೊಳ್ಳುತ್ತೇವೆ. ಪತಿಗೃಹದಲ್ಲಿ ಅವಳಿಗೆ ಎಲ್ಲ ಮಂಗಳಗಳೂ ಒದಗಲೆಂದು ಹಾರೈಸುತ್ತೇವೆ. ಅಯ್ಯೋ, ಶಕುಂತಲೆಗೆ ಆ ಭಾಗ್ಯ ಸದ್ಯಕ್ಕೆ ಎಲ್ಲಿಂದ ಬರಬೇಕು! ನಾಲ್ಕನೆಯ ಅಂಕವು ವೀಣೆಯ ಮಂಜುಳ ಸ್ವರದಂತೆ ನಮ್ಮನ್ನು ಮರುಳುಗೊಳಿಸಿ, ದುರ್ವಾಸರ ಶಾಪದ ವಿಷಯವನ್ನು ನಮ್ಮ ಸ್ಮೃತಿಯಿಂದ ಒಂದು ಘಳಿಗೆಯ ಕಾಲ ಜಾರಿಸಿಬಿಟ್ಟಿತ್ತು. ಆದರೆ ಋಷಿಯ ಬಿರುನುಡಿ ವಿಫಲವಾಗುವುದುಂಟೆ! ಹಿಂದಿನ ಅಂಕದಲ್ಲಿ ಸ್ನೇಹಾರ್ದ್ರವಾಗಿದ್ದ ಹೃದಯವನ್ನು ಈಗ ನಾವು ಕಲ್ಲುಮಾಡಿಕೊಂಡು ಶಕುಂತಲೆಯ ದುರ್ದೈವದ ಪರಮಾವಧಿಯನ್ನು ಇನ್ನು ಐದನೆಯ ಅಂಕದಲ್ಲಿ ನೋಡಲು ಸಜ್ಜಾಗಬೇಕು. ಎರಡು ಕಡೆಗಳಲ್ಲೂ ಕರುಣಾರಸ; ಆದರೆ ಒಂದರ ಮಾರ್ದವಕ್ಕೂ ಮತ್ತೊಂದರ ಭೀಷಣತೆಗೂ ಎಂಥ ಅಂತರ! ನಾಲ್ಕನೆಯ ಅಂಕವಾದ ಕೂಡಲೆ ಬರುವುದರಿಂದ ಐದನೆಯ ಅಂಕದ ಪರಿಣಾಮ ಇನ್ನಷ್ಟು ತೀವ್ರವಾಗುತ್ತದೆ. ಕಥೆಯ

ಕೇಂದ್ರ ದೃಶ್ಯವೇ ಇದು : ನಾಟಕೀಯ ಸ್ವಾರಸ್ಯ ಇಲ್ಲಿ ಶಿಖರವನ್ನು ಮುಟ್ಟುತ್ತದೆ. ಅದರ ವಿಚಾರವನ್ನು ಇಲ್ಲಿ ಲಂಬಿಸಲು ಅವಕಾಶವಿಲ್ಲದಿದ್ದರೂ ಒಂದು ಸಂಗತಿಯ ಕಡೆಗೆ ಗಮನವನ್ನೆಳೆಯಲೇಬೇಕು. ಶಕುಂತಲೆ ಗಂಡನ ಮನೆಗೆ ಎಷ್ಟೊಂದು ತವಕದಿಂದ, ಆಸೆಯಿಂದ ಬಂದಳು! ತನ್ನ ಹೃದಯೇಶ್ವರನ ಪ್ರಾಣವಲ್ಲಭೆಯಾಗಿ ಪಟ್ಟದ ರಾಣಿಯಾಗಿ ಸುಖವನ್ನು ಕಾಣುವೆನೆಂದು ನಂಬಿದ್ದಳು. ಆದರೆ ದುಷ್ಯಂತನಿಗೆ ಅವಳನ್ನು ಮದುವೆಯಾಗಿದ್ದ ವಿಷಯದಲ್ಲೇ ಸಂದೇಹ; ಬಹುದೂರಕ್ಕೆ ಏರಿದ್ದ ಅವಳ ಆಸೆ ಇನ್ನೆಲ್ಲಿ! ರಾಣಿಯಾಗಿ ಬಾಳುವುದಿರಲಿ; ತಾನು ಸ್ವಚ್ಛಂದಚಾರಿಣಿಯಲ್ಲವೆಂದು ನಾಲ್ಕು ಜನರ ಮುಂದೆ ನಿಂತು ರುಜುವಾತುಮಾಡಿಕೊಡಬೇಕಾದ ಪ್ರಸಂಗವೊದಗಿತು. ತನ್ನನ್ನು ಪರಸ್ತ್ರೀಯೆಂದು ಅವನು ತಿಳಿದದ್ದರಿಂದ "ಆರ್ಯಪುತ್ರ" ಎಂದು ಸಂಬೋಧಿಸಲು ಕೂಡ ಅವಳಿಗೆ ಅಧಿಕಾರವಿಲ್ಲವಾಯಿತು. ಆಶ್ರಮದಿಂದ ಹೊರಟ ವೇಳೆಯಲ್ಲಿ ತನಗೆ ಸಖಿಯರು ಕೊಟ್ಟಿದ್ದ ಸೂಚನೆ ಸ್ಮರಣೆಗೆ ಬಂದು, ಗುರುತಿನ ಉಂಗುರವನ್ನು ತೋರಿಸುವೆನೆಂದು ಶಕುಂತಲೆ ಬೆರಳನ್ನು ನೋಡಿಕೊಳ್ಳುತ್ತಾಳೆ. ಆ ದುರದೃಷ್ಟದ ಉಂಗುರ ಯಾವಾಗಲೋ ಮಾಯವಾಗಿದೆ. "ಮತ್ತೊಂದು ಗುರುತನ್ನು ಹೇಳುವೆ"ನೆನ್ನುತ್ತಾಳೆ. ನೋಡತಕ್ಕದ್ದು ಆಯಿತು! ಇನ್ನು ಕೇಳತಕ್ಕದ್ದು ಬಂತು!— ಎಂದು ದುಷ್ಯಂತನ ಭಾವನೆ. ಕೈಹಿಡಿದ ಗಂಡನು ಹೀಗೆ ನಂಬಿಕೆ ಸಾಲದ ನ್ಯಾಯಾಧೀಶನಂತೆ ವಿಚಾರಣೆ ಮಾಡುತ್ತಾ ಕುಳಿತಿದ್ದಾನೆ. ಆದರೂ ಶಕುಂತಲೆ ಧೈರ್ಯಗುಂದದೆ ತನ್ನ ಹೇಳಿಕೆಯನ್ನು ಮುಂದುವರಿಸಲೇಬೇಕಾಗಿದೆ. ತಮ್ಮಿಬ್ಬರಿಗೆ ಮಾತ್ರವೇ ಗೊತ್ತಿದ್ದ ಒಂದು ಸಂಗತಿಯನ್ನು ಅವಳು ಈಗ ಜ್ಞಾಪಿಸುತ್ತಾಳೆ :

ಒಂದು ದಿನ ನವಮಾಲಿಕಾಮಂಟಪದಲ್ಲಿ ಕುಳಿತಿದ್ದಾಗ ನೀರು ತುಂಬಿದ ತಾವರೆಯೆಲೆಯ ದೊನ್ನೆ ನಿನ್ನ ಕೈಯಲ್ಲಿರಲಿಲ್ಲವೆ?... ಆಗ ನನ್ನ ಸಾಕುಮಗುವಾದ ದೀರ್ಘಾಪಾಂಗವೆಂಬ ಜಿಂಕೆಯ ಮರಿ ಸಮೀಪಕ್ಕೆ ಬಂತು. ಮೊದಲು ಇದು ನೀರು ಕುಡಿಯಲಿ ಎಂದು ನೀನು ಕನಿಕರದಿಂದ ಅದಕ್ಕೆ ನೀರು ತೋರಿಸಿದೆ. ಆದರೆ ನಿನ್ನ ಬಳಕೆಯಿಲ್ಲದ್ದರಿಂದ ಅದು ನಿನ್ನ ಕೈಯ ಬಳಿಗೆ ಬರಲಿಲ್ಲ. ಬಳಿಕ ಅದೇ ದೊನ್ನೆಯನ್ನು ನಾನು ಹಿಡಿದುಕೊಂಡಾಗ ಅದು ನೀರನ್ನು ಬಯಸಿತು. ಆಗ, 'ಎಲ್ಲರಿಗೂ ತಮ್ಮ ತಮ್ಮ ಜನದಲ್ಲೇ ನಂಬಿಕೆ; ನೀವಿಬ್ಬರೂ ಕಾಡುಪ್ರಾಣಿಗಳು' — ಎಂದು ನೀನು ಹಾಸ್ಯ ಮಾಡಿದೆ.

ಎಂಥ ಪ್ರಸಂಗ! ಪ್ರಿಯನ ಪರಿಹಾಸಕ್ಕೆ ಈ ಮುಗ್ಧೆ ಯಾವ ಉತ್ತರವನ್ನೂ ಕೊಡದೆ, ಅದರ ಸೊಗಸನ್ನು ಮೌನವಾಗಿ ಸವಿದಿದ್ದಳು. ಅವನ ಪ್ರೇಮದ ಫಲವನ್ನು ತನ್ನ ಬಸಿರಿನಲ್ಲಿ ತಳೆದು ಪೋಷಿಸಿದಂತೆ, ಈ ನರ್ಮಕಥೆಯನ್ನು ತನ್ನ ಚಿತ್ತದಲ್ಲಿ ಬಚ್ಚಿಟ್ಟು ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದಳು. ಅವನು ತೊಡಿಸಿದ ಉಂಗುರಕ್ಕಿಂತಲೂ ಅವನು ಆಡಿದ ಈ ಮಾತು ಅವಳಿಗೆ ಅನರ್ಘ್ಯರತ್ನವಾಗಿತ್ತು. ಇಂಥ ಪ್ರಣಯಗೋಪ್ಯವನ್ನು ಹಲವರೆದುರಿಗೆ ಬೀದಿಯ ಘೋಷಣೆಯಾಗುವಂತೆ

ಈ ಅಲ್ಪಭಾಷಿಣಿ ವಿವರಿಸಿ ಹೇಳಬೇಕಾಯಿತು. ಆದರೂ ದುಷ್ಯಂತನಿಗೆ ನೆನಪು ಮರಳಲಿಲ್ಲ! ನಂಬಿಕೆ ಹುಟ್ಟಲಿಲ್ಲ. ಶಕುಂತಲೆಗೆ ಇದಕ್ಕಿಂತಲೂ ಘೋರಯಾತನೆ ಬೇಕೆ! ಈ ಧೂರ್ತನು ತನ್ನನ್ನು ಉದ್ದೇಶಪೂರ್ವಕವಾಗಿ ವಂಚಿಸುತ್ತಿರುವನೆಂದೇ ಅವಳಿಗೆ ತೋರಿತು. ಇತ್ತ ಗಂಡನ ಮನೆ ಹೀಗೆ ದೂರವಾಯಿತು; ಅತ್ತ ತಂದೆಯ ಮನೆಗೆ ಅಪವಾದ ಹೊತ್ತ ತಾನು ಕಾಲಿಡುವಂತಿಲ್ಲ. "ಓ ಭೂಮಿದೇವಿ, ನನಗಾಗಿ ಬಾಯಿ ತೆರೆ!" ಎಂಬ ಆರ್ತನಾದವೊಂದೇ ಅವಳ ಭಾಗಕ್ಕೆ ಉಳಿದುದು.

ಆದರೆ ಅನಾಹುತ ಇಷ್ಟು ದೂರ ಹೋಗುವುದು ದೈವಸಂಕಲ್ಪವಾಗಿರಲಿಲ್ಲ. ಹೆತ್ತ ಕೂಡಲೇ ಕೂಸನ್ನು ತೊರೆದಿದ್ದ ಮೇನಕೆಗೆ ಈಗ ಕರುಳು ಬಾಧಿಸಿ, ದುಃಖಭಾಗಿನಿಯಾದ ಮಗಳನ್ನು ಅವಳು ಹತ್ತಿರಕ್ಕೆ ಕರೆದುಕೊಂಡಳು. ಮಾರೀಚ ಮಹರ್ಷಿಗಳ ದಿವ್ಯಾಶ್ರಮದಲ್ಲಿ, ತಾಯ ಆರೈಕೆಯಲ್ಲಿ, ಶಕುಂತಲೆ ಭರತಭೂಮಿಯ ಪ್ರಥಮ ಚಕ್ರವರ್ತಿಯನ್ನು ಹೆತ್ತಳು. ಗಂಡನು ತನ್ನನ್ನು ನಿಷ್ಕಾರಣವಾಗಿ ನಿರಾಕರಿಸಿದ್ದರೂ ಅವಳು ಮಾತ್ರ ಅವನನ್ನು ತನ್ನ ಹೃದಯದಿಂದ ಹೊರದೂಡಲಿಲ್ಲ. ಪಾತಿವ್ರತ್ಯದ ಕಠಿನ ನಿಯಮಗಳನ್ನು ಪಾಲಿಸುತ್ತಾ, ಜೀವತಸರ್ವಸ್ವವಾದ ಮಗನನ್ನು ನೋಡಿಕೊಳ್ಳುತ್ತಾ, ಈ ಸುಶೀಲೆ ವರ್ಷಗಳನ್ನು ನೂಕಿದಳು. ಇತ್ತ, ಶಕುಂತಲೆಯ ಬೆರಳಿನಿಂದ ಜಾರಿ ಶಚೀತೀರ್ಥದಲ್ಲಿ ಮುಳುಗಿದ್ದ ಉಂಗುರ ಒಬ್ಬ ಬೆಸ್ತರವನ ಮೂಲಕ ದುಷ್ಯಂತನ ಕೈಗೆ ಕೊನೆಗೆ ಸೇರಿತು. ಅದನ್ನು ಕಂಡೊಡನೆಯೇ ಅವನಿಗೆ ತನ್ನ ಪ್ರಾಣಪ್ರಿಯೆಯ ನೆನಪೂ, ಅದರ ಬೆನ್ನ ಹಿಂದೆಯೇ ಅಪಾರವಾದ ಪರಿತಾಪವೂ ಒದಗಿದುವು. ಶಕುಂತಲೆ ತನ್ನಿಂದ ಧಿಕ್ಕಾರಹೊಂದಿ, ಕಣ್ವಶಿಷ್ಯರ ಘರ್ಜನೆಗೆ ನಡುಗಿ, ನೆಲೆತಪ್ಪಿ ನಿಂತಾಗ ಅವಳು ತನ್ನ ಕಡೆಗೆ ಬೀರಿದ ಬಾಷ್ಪಾಕುಲವಾದ ದೃಷ್ಟಿ ಈಗ ವಿಷದ ಮುಳ್ಳಿನಂತೆ ಅವನನ್ನು ದಹಿಸತೊಡಗಿತು... ದುಷ್ಯಂತನ ಉತ್ಕಟ ಪಶ್ಚಾತ್ತಾಪದ ವೃತ್ತಾಂತ ಶಕುಂತಲೆಯ ಕಿವಿಗೂ ಮುಟ್ಟಿತು.

ಇನ್ನು ಹೇಮಕೂಟದ ದಿವ್ಯಾಶ್ರಮದಲ್ಲಿ ದಂಪತಿಗಳ ಪುನಃಸಮಾಗಮ. ತಮ್ಮಿಬ್ಬರ ಅಗಲಿಕೆಗೆ, ಅಳಲಿಗೆ, ಋಷಿಶಾಪವೇ ನಿಜವಾದ ಕಾರಣವೆಂದು ಇಬ್ಬರಿಗೂ ತಿಳಿಯುವ ಮೊದಲೇ ಅವರ ಹೃದಯಗಳು ಒಂದುಗೂಡುವಂತೆ ಸಂವಿಧಾನವನ್ನು ಕಲ್ಪಿಸಿ, ಗಾಢ ಪ್ರೇಮದ ಅಸಾಮಾನ್ಯ ಶಕ್ತಿಯನ್ನು ಕಾಳಿದಾಸನು ನಿದರ್ಶಿಸಿರುವನು. ತೊರೆದ ಗಂಡನು ಈಗ ಮರಳಿ ಬಂದಿದ್ದಾನೆ; ಅನುತಾಪದಿಂದ ಸೊರಗಿ ಗುರುತು ಸಿಕ್ಕಲಾರದಷ್ಟು ಬಡವಾಗಿದ್ದಾನೆ; ಚರಣತಲದಲ್ಲಿ ಹೊರಳಿ ಕ್ಷಮೆ ಬೇಡುತ್ತಿದ್ದಾನೆ. ಶಕುಂತಲೆಗೆ ಇನ್ನೇನು ಬೇಕು? ಪ್ರಿಯನ ಹಿಂದಿನ ಅಪರಾಧವೆಲ್ಲವೂ ಅವಳಿಗೆ ಮರೆತುಹೋಗುತ್ತದೆ; ಪ್ರೇಮದ ಕಂಬನಿಯಿಂದ ಅವನನ್ನು ಅಭಿಷೇಕಿಸಿ ಸ್ವೀಕಾರ ಮಾಡುತ್ತಾಳೆ. ಶಕುಂತಲೆಯ ಕಣ್ಣೀರನ್ನು ಒರೆಸಲು ದುಷ್ಯಂತನು ಕೈ ನೀಡಿದಾಗ ಅವನ ಬೆರಳಿನಲ್ಲಿದ್ದ ಉಂಗುರ ಅವಳಿಗೆ ಕಾಣಿಸುತ್ತದೆ. ತಮ್ಮ ಪುನಃ ಸಮಾಗಮಕ್ಕೆ ಗುರುತಾಗಿ ಆ ಉಂಗುರವನ್ನು ಮತ್ತೆ ಧರಿಸುವಂತೆ ಅವನು ಕೋರುತ್ತಾನೆ. ಆದರೆ ಶಕುಂತಲೆ, "ಇದರಲ್ಲಿ ನನಗೆ ನಂಬಿಕೆಯಿಲ್ಲ;

ಆರ್ಯ ಪುತ್ರನೇ ಇದನ್ನು ಧರಿಸಿಕೊಳ್ಳಬೇಕು" ಎಂದು ಉತ್ತರ ಕೊಟ್ಟು, ನೆಚ್ಚಿಕೆತಪ್ಪಿದ ಆ ಉಂಗುರವನ್ನು ನಿರಾಕರಿಸುತ್ತಾಳೆ. ಶಕುಂತಲೆ ಈಗ ದಿವ್ಯತಪಸ್ವಿನಿಯಾಗಿದ್ದರೂ ಅವಳ ಸರಳ ಮಾನವಹೃದಯ ಮಾತ್ರ ಮರೆಯಾಗಿಲ್ಲ!

ಪ್ರೇಮದ ಕುಲುಮೆಯಲ್ಲಿ ಶಕುಂತಲೆಯ ಬಾಳು ಪುಟಗೊಂಡ ಬಗೆಯನ್ನು ಕಂಡೆವು. ಇನ್ನು ಅವಳ ಪ್ರಿಯನನ್ನು ಕುರಿತು ಎರಡು ಮಾತು : 'ಅಭಿಜ್ಞಾನ ಶಾಕುಂತಲ'ಕ್ಕೆ 'ದುಷ್ಯಂತೋದ್ಧಾರ' ಎಂಬ ಎರಡನೆಯ ಹೆಸರನ್ನು ಕೊಡಬಹುದು. ಕಾಳಿದಾಸನ ನಾಟಕಕ್ಕೆ ಮಹಾಭಾರತದ ಒಂದು ಉಪಾಖ್ಯಾನ ಆಧಾರವಸ್ತು. ಆದರೆ ಅಲ್ಲಿಯ ದುಷ್ಯಂತನನ್ನೂ ಇಲ್ಲಿಯ ದುಷ್ಯಂತನನ್ನೂ ಹೋಲಿಸಿದರೆ, ಕಾಳಿದಾಸನು ದುರ್ವಾಸನ ಹೊಸದಾಗಿ ಶಾಪವನ್ನು ಕಲ್ಪಿಸಿ ದುಷ್ಯಂತನ ಪಾತ್ರವನ್ನು ಎಷ್ಟೊಂದು ಉತ್ತಮ ಗೊಳಿಸಿರುವನೆಂಬುದು ವ್ಯಕ್ತವಾಗುತ್ತದೆ. ಮೂಲೋಪಾಖ್ಯಾನದಲ್ಲಿ, ದುಷ್ಯಂತನು ಶಕುಂತಲೆಯೊಂದಿಗೆ ತಾನು ಬೆಳಸಿದ್ದ ಸಂಬಂಧವನ್ನು ತಿಳಿದೂ ತಿಳಿದೂ ಅಪಲಾಪಿಸಿ ಅಧಮನಾಗಿ ವರ್ತಿಸುತ್ತಾನೆ. ನಾಟಕದಲ್ಲಾದರೆ ಋಷಿಶಾಪದ ಪ್ರಭಾವದಿಂದ ಶಕುಂತಲೆಯ ನೆನಪು ಅವನ ಮನಸ್ಸಿನಿಂದ ಸಂಪೂರ್ಣವಾಗಿ ಅಳಿಸಿಹೋಗಿರುತ್ತದೆ. ಅವಳು ಅನುಪಮ ಸುಂದರಿಯಾದರೂ ತನ್ನ ಭಾಗಕ್ಕೆ ಅನ್ಯಪತ್ನಿಯಾದ ಕಾರಣ ಅವಳನ್ನು ದಿಟ್ಟಿಸಿ ನೋಡುವುದಕ್ಕೂ ದುಷ್ಯಂತನಿಗೆ ಇಷ್ಟವಿಲ್ಲ. ಮದುವೆಯಾದದ್ದನ್ನು ನಾನೇ ಮರೆತಿರುವೆನೋ ಈಕೆಯೇ ಸುಳ್ಳಾಡುತ್ತಿರುವಳೋ ಎಂಬ ಸಂಶಯ ಒಡ್ಡಿರುವಾಗ, ಪತ್ನೀಪರಿತ್ಯಾಗದ ದೋಷ ಹೆಚ್ಚೋ ಪರಸ್ತ್ರೀ ಸಂಪರ್ಕದ ದೋಷ ಹೆಚ್ಚೋ—ಎಂದು ದುಷ್ಯಂತನು ಕೇಳುವ ಪ್ರಶ್ನೆ ಕಣ್ವಶಿಷ್ಯರ ಬಾಯನ್ನೂ ಕಟ್ಟುತ್ತದೆ. ಹೀಗೆ ಶಕುಂತಲೆಯನ್ನು ನಿರಾಕರಿಸುವ ದೃಶ್ಯದಲ್ಲೇ ದುಷ್ಯಂತನು ಧೀರೋದಾತ್ತನಾಗಿ ಶೋಭಿಸುತ್ತಾನೆ.

ಆದರೆ ಈ ಉದ್ಧಾರವನ್ನು ವಿವರಿಸುವುದು ನಮ್ಮ ಪ್ರಕೃತೋದ್ದೇಶವಲ್ಲ. ನಾಟಕದ ಚೌಕಟ್ಟಿನೊಳಗೇ ಇನ್ನೊಂದು ಉದ್ಧಾರ ನಡೆದಿದೆ. ಶಕುಂತಲೆಯನ್ನು ಕಾಣುವುದಕ್ಕೆ ಮೊದಲೇ ದುಷ್ಯಂತನಿಗೆ ವಸುಮತಿ, ಹಂಸಪದಿಕೆ ಮೊದಲಾದ ಹಲವರು ಪತ್ನಿಯರಿದ್ದರು. ಆದರೆ ಅರಮನೆಯ ನಾಗರಿಕ ಜೀವನದಲ್ಲಿ ಆಳವಾದ ಚಿರಸ್ಥಾಯಿಯಾದ ಪ್ರೇಮವನ್ನು ದುಷ್ಯಂತನು ಅರಿತಿದ್ದಂತೆ ತೋರುವುದಿಲ್ಲ. ಈ ತಾಪಸಕನ್ಯೆಯನ್ನು ಕಂಡೊಡನೆಯೇ ಅವಳಲ್ಲಿ ಅವನ ಮನಸ್ಸು ಅನನ್ಯವಾಗಿ ನಿರಂತರವಾಗಿ ನೆಲಸಿತು; ಈ ನೈಜವಾದ ಪ್ರೇಮದಿಂದ ಅವನ ಮನಸ್ಸು ಆತ್ಮ ಉದ್ಧಾರವಾಯಿತು. ದುರ್ವಾಸನ ಶಾಪ ತಟ್ಟದೆಹೋಗಿದ್ದರೆ ದುಷ್ಯಂತನು ಶಕುಂತಲೆಯನ್ನು ಕೆಲವು ಕಾಲ ಮಾತ್ರ ಪ್ರೀತಿಸಿ ಉಪೇಕ್ಷಿಸಿಬಿಡುತ್ತಿದ್ದನು! ಇವಳು ಇನ್ನೊಬ್ಬಳು ಹಂಸಪದಿಕೆಯಾಗಿ ಮೂಲೆಗೆ ಸೇರುತ್ತಿದ್ದಳು ಎಂಬ ಅಭಿಪ್ರಾಯ ವೊಂದುಂಟು. ಆದರೆ ಇದನ್ನು ಒಪ್ಪುವುದು ಕಷ್ಟ. ಶಕುಂತಲೆಯಲ್ಲಿ ದುಷ್ಯಂತನಿಗೆ ಮೂಡಿದ ಪ್ರೇಮದ ಮಟ್ಟವೇ ಬೇರೆಯೆಂದು ತೋರುತ್ತದೆ. ಇದು ನಾಲ್ಕು ದಿನ

ಮಿಂಚಿ ಮಾಯವಾಗುವುದಲ್ಲ; ಯಾವಜ್ಜೀವವೂ, ಬಹುಶಃ ಆಚೆಗೂ, ನೆಲಸತಕ್ಕದ್ದು. ಹೀಗೆ ಹೇಳಲು ಕಾರಣವುಂಟು. ಶಾಪದ ತಮಸ್ಸು ಆವರಿಸಿದ ಬಳಿಕ, ಶಕುಂತಲೆಯ ವಿಚಾರದ ಮಟ್ಟಿಗೆ ದುಷ್ಯಂತನು ಹೊಸ ಜನ್ಮವೆತ್ತಿದಂತೆಯೇ ಆಯಿತು. ಯಾರು ಎಷ್ಟೇ ಬಗೆಯಾಗಿ ಜ್ಞಾಪಿಸಲಿ, ಕಡೆಗೆ ಶಕುಂತಲೆಯೇ ಸಾಕ್ಷಾತ್ತಾಗಿ ಬಂದು ನಂಬಿಕೆ ಕೊಡಲಿ, ದುಷ್ಯಂತನಿಗೆ ಅವಳ ನೆನಪಾಗುವಂತಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅವನಿರುವಾಗ ಐದನೆಯ ಅಂಕದ ಆದಿಯಲ್ಲಿ ಒಂದು ಪ್ರಸಂಗ ನಡೆಯುತ್ತದೆ :

ಪೊಸತಪ್ಪ ಮಧುವ ಬಯಸುತೆ
ರಸಾಲಮಂಜರಿಯನಂತು ಚುಂಬಿಸಿ ನೀಂ ಸಾ-।
ರಸವಾಸಮಾತ್ರದಿಂ ಸಂ-
ತಸವಾಂತದನೆಂತು ಮರೆದೆಯೆಲೆ ಮಧುಕರನೇ ॥

(ಬಸವಪ್ಪಶಾಸ್ತ್ರಿಗಳ ಅನುವಾದ)

ಎಂದು ತುಂಬಿಯನ್ನು ಕುರಿತು ಹಾಡುವ ನೆವದಲ್ಲಿ ಹಂಸಪದಿಕೆ ದುಷ್ಯಂತನನ್ನು ಹಂಗಿಸುತ್ತಾಳೆ. ಈ ಮಧುರಗೀತವನ್ನು ಕೇಳಿ ದುಷ್ಯಂತನ ಮನಸ್ಸು ಉಮ್ಮಳಿಸುತ್ತದೆ. (ಹಂಸಪದಿಕೆಯನ್ನು ಉಪೇಕ್ಷಿಸಿದ್ದಕ್ಕಾಗಿ ಅಲ್ಲ; ಜಾಣ್ಮೆಯಿಂದ ಅವಳು ಹಂಗಿಸಿದ ಬಗೆಯನ್ನು ಅವನು ಶ್ಲಾಘಿಸುತ್ತಾನೆ, ಅಷ್ಟೆ. ಈ ಹಾಡು ಸ್ಪಷ್ಟವಾಗಿ ಶಕುಂತಲಾಪ್ರಣಯ ವನ್ನು ಪ್ರೇಕ್ಷಕವರ್ಗಕ್ಕೆಲ್ಲಾ ಸೂಚಿಸುತ್ತದೆ. ಆದರೆ ದುಷ್ಯಂತನಿಗೆ ಮಾತ್ರ ಶಾಪ ಮಹಿಮೆಯ ಅದರ ಅರಿವೇ ಆಗುವಂತಿಲ್ಲ. ಹೀಗಿದ್ದರೂ ಅವನ ಮನಸ್ಸು ಉಮ್ಮಳಿಸುತ್ತದೆ. ಇಷ್ಟಜನವಿಯೋಗ ಯಾವುದೂ ನನಗೆ ಉಂಟಾಗಿಲ್ಲ; ನೆಮ್ಮದಿಯಾಗಿಯೇ ಇದ್ದೇನೆ. ಆದರೂ ಈ ಇಂಚರವನ್ನು ಕೇಳಿ ನನ್ನ ಬಗೆಯೇಕೆ ಹೀಗೆ ಪರ್ಯುತ್ಸುಕವಾಗಿದೆ? ಅರಿವಿಗೆ ನಿಲುಕದಿದ್ದರೂ ಸಂಸಾರರೂಪವಾಗಿ ನೆಲಸಿರುವ ಜನ್ಮಾಂತರದ ಸ್ನೇಹವೊಂದನ್ನು ಹೃದಯ ನೆನೆಯುತ್ತಿರಬೇಕು — ಹೀಗೆಂದು ದುಷ್ಯಂತನು ಪರಿಭಾವಿಸುತ್ತಾನೆ. ಇದು ನಿಜ! ಶಾಪಕ್ಕೆ ಹಿಂದಿನ ಜನ್ಮಾಂತರದ ಶಕುಂತಲಾಪ್ರೇಮ ಈ ಸ್ಮರಣೆಗೆ ಗೋಚರವಾಗದಿದ್ದರೂ ಹೃದಯದ ಆಳದಲ್ಲಿ ಕುಳಿತು, ಅರಿಯದ ಮೂಗುಪೆಟ್ಟಿನ ದುಡಿತದಂತೆ ಅವನನ್ನು ಬಾಧಿಸುತ್ತಿದೆ. ದುರ್ವಾಸರ ಶಾಪಕ್ಕಿಂತಲೂ ದುಷ್ಯಂತನ ಪ್ರೇಮ ಪ್ರಬಲತರವಾಯಿತು; ಮರವೆ ಮುಸುಕಿದರೂ ಅದರ ಮಿಡಿತ ತಪ್ಪಲಿಲ್ಲ!

ಈ ಅಸಾಧಾರಣ ಪ್ರೇಮ ದುಷ್ಯಂತನಿಗೆ ವಿಶೇಷ ಅನುಭವವನ್ನು ತಂದಿತು! ಅವನ ಹೃದಯವನ್ನು ಶೋಧಿಸಿತು. ಶಕುಂತಲೆಯನ್ನು ನಿರಾಕರಿಸಿದ ಬಳಿಕ ಒದಗಿದ ಪರಿತಾಪದಿಂದ ಅವನ ಆತ್ಮ ಎಷ್ಟು ಮೃದುವಾಯಿತು! ರಾಜ್ಯಪರಿಪಾಲನೆಯಲ್ಲಿ ಧರ್ಮದ ಜೊತೆಗೆ ದಯೆಯೂ ಸೇರಿತು. ಈ ವಿಷಯವನ್ನೆಲ್ಲಾ ಇಲ್ಲಿ ವಿವರಿಸಲು ಅವಕಾಶ ಸಾಲದು. ಮಿಕ್ಕ ವಿಚಾರವಿರಲಿ. ಅವನ ಕೆಚ್ಚಿನಲ್ಲಾದ ಮಾರ್ಪಾಡನ್ನೇ ನೋಡಿ. ನಾಟಕದ ಮೊದಲಲ್ಲಿ ತಾನು ಸತ್ಪುರುಷನೆಂಬ ನೆಚ್ಚಿಕೆ ಅವನಿಗಿದ್ದಿತು. ಈಗ

ಅಹಂಕಾರ ಸುಟ್ಟು ನಮ್ರತೆ ಮೊಳೆಯಿತು. "ಸತಾಂ ಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ" (ಸಂದೇಹಾಸ್ಪದವಾದ ಸಂದರ್ಭಗಳಲ್ಲಿ ಸತ್‌ಪುರುಷರಿಗೆ ಅಂತಃಕರಣ ಹರಿದ ದಾರಿಯೇ ಪ್ರಮಾಣ) ಎಂದು ತಿಳಿದು, ಆರ್ಯವಾದ ತನ್ನ ಮನಸ್ಸು ಶಕುಂತಲೆಯಲ್ಲಿ ನೆಲೆಗೊಂಡ ಕಾರಣದಿಂದ ಅವಳು "ಕ್ಷತ್ರಪರಿಗ್ರಹೋಚಿತೆ"ಯಾಗಿರಬೇಕೆಂದು ದಿಟ್ಟತನದಿಂದ ನಿರ್ಧರಿಸಿದ ಮೊದಲಿನ ದುಷ್ಯಂತನೆಲ್ಲಿ; ನಿದರ್ಶನದ ಮೇಲೆ ನಿದರ್ಶನವೊದಗುತ್ತಿದ್ದರೂ ಸರ್ವದಮನನು ತನ್ನ ಮಗನೇ ಆಗಿರಬೇಕೆಂದು ನಂಬಲು ಅಳುಕಿದ ಈಚಿನ ದುಷ್ಯಂತನೆಲ್ಲಿ! ಕಡೆಗೆ, "ನನ್ನ ತಂದೆ ದುಷ್ಯಂತ; ನೀನಲ್ಲ" ಎಂದು ಆ ತುಂಟ ತರಳನು ಹೇಳುವತನಕ ಇವನ ಸಂದೇಹವು ಪೂರ್ಣವಾಗಿ ಪರಿಹಾರವಾಗಲಿಲ್ಲ!

ಮೊದಲೇ ಶಕುಂತಲಾ-ದುಷ್ಯಂತರು ರೂಪಗುಣಗಳಲ್ಲಿ ಲೋಕಕ್ಕೆ ಮಿಗಿಲಾಗಿದ್ದರು; ಒಬ್ಬರಿಗೊಬ್ಬರು ಅನುರೂಪರಾಗಿದ್ದರು. ಶಾಪದ ಸಾಣೆಗೆ ಸಿಕ್ಕಿದಮೇಲಂತೂ ಅವರ ಆತ್ಮಗಳಿಗೆ ಹೊಸ ತೇಜಸ್ಸು ಬಂದಿತು. ಅವರ ಪ್ರೇಮ ಪಾವನವಾಯಿತು; ಅವರ ಕಥೆ ಅಮರವಾಯಿತು.

ಕಾವ್ಯ ಸಮೀಕ್ಷೆ : ೧೯೪೭

ಧನಂಜಯನ 'ದಶರೂಪಕ'*

ಸಂಸ್ಕೃತದಲ್ಲಿ "ರೂಪಕ" ಎಂಬ ಶಬ್ದಕ್ಕೆ ಅನೇಕ ಅರ್ಥಗಳಿವೆ. ಆಪಟೆಯವರ ಸಂಸ್ಕೃತ-ಇಂಗ್ಲಿಷ್ ನಿಘಂಟಿನಲ್ಲಿ ಎಂಟು ಅರ್ಥಗಳನ್ನು ಗುರುತಿಸಿದ್ದಾರೆ. ಇವುಗಳಲ್ಲಿ ಎರಡನ್ನು ಮಾತ್ರ ಇಲ್ಲಿ ಗಮನಿಸಬಹುದು. ಒಂದು ಪ್ರಸಿದ್ಧವಾದ ಅರ್ಥಾಲಂಕಾರ—ಹೋಲಿಕೆಯ ಆಧಾರದ ಮೇಲೆ ಕಲ್ಪಿತವಾದದ್ದು. ಈ ರೂಪಕಾಲಂಕಾರದಲ್ಲಿ ಉಪಮೇಯಕ್ಕೂ ಉಪಮಾನಕ್ಕೂ ಅಭೇದವಿರುತ್ತದೆ, "ಮುಖ ಕಮಲ" ಎಂಬುದರಲ್ಲಿ ಇರುವಂತೆ. "ದೃಶ್ಯ"ವಾದ ಎಂದರೆ ಅಭಿನಯಿಸಿ ತೋರಿಸಬಹುದಾದ, ಕೃತಿ ಎಂಬುದು ರೂಪಕ ಶಬ್ದದ ಇನ್ನೊಂದು ಅರ್ಥ; ಇದೇ ನಮಗೆ ಪ್ರಕೃತವಾದ ಅರ್ಥ. ಕನ್ನಡದಲ್ಲಿ ಇಂಥ ಕೃತಿಯನ್ನು ಸಾಮಾನ್ಯವಾಗಿ "ನಾಟಕ" ಎಂಬ ಹೆಸರಿನಿಂದ ಕರೆಯುತ್ತೇವೆ. ಸಂಸ್ಕೃತದಲ್ಲಾದರೆ "ನಾಟಕ" ಎನ್ನುವುದು ರಂಗಸ್ಥಲದಲ್ಲಿ ಅಭಿನಯಿಸಬಹುದಾದ ಕೃತಿಗಳ ಸಮೂಹದಲ್ಲಿ ಒಂದು ವಿಶೇಷ ಪ್ರಭೇದ ಮಾತ್ರ. ಕಾಳಿದಾಸನ 'ಅಭಿಜ್ಞಾನ ಶಾಕುಂತಲ', ಭವಭೂತಿಯ 'ಉತ್ತರ ರಾಮಚರಿತ' ಮೊದಲಾದವು ಈ ಜಾತಿಯವು. ಅಭಿನೇಯವಾದ ಕೃತಿಗಳೆಲ್ಲಕ್ಕೂ "ನಾಟಕ" ಎಂಬ ಹೆಸರು ಸಂಸ್ಕೃತದಲ್ಲಿ ಸಲ್ಲುವುದಿಲ್ಲ. ಉದಾಹರಣೆಗೆ, ಸುಪ್ರಸಿದ್ಧವಾದ

* ಆಕಾಶವಾಣಿಯಲ್ಲಿ ಪ್ರಸಾರ ಮಾಡಿದ ಭಾಷಣ; ಸ್ವಲ್ಪಮಟ್ಟಿಗೆ ವಿಸ್ತರಿಸಿ, ಇಲ್ಲಿ ಪ್ರಕಟಿಸಲಾಗಿದೆ.

'ಮೃಚ್ಛಕಟಿಕ'ವು "ಪ್ರಕರಣ" ಎಂಬ ಜಾತಿಗೆ ಸೇರಿದ್ದು; ಶಾಸ್ತ್ರೀಯ ಪರಿಭಾಷೆಯಲ್ಲಿ ಅದನ್ನು "ನಾಟಕ" ಎಂದು ಕರೆಯಬಾರದು. ಸಂಸ್ಕೃತದಲ್ಲಿಯೇ ಒಮ್ಮೊಮ್ಮೆ "ನಾಟಕ" ಎಂಬ ಶಬ್ದಕ್ಕೆ ದೃಶ್ಯಕಾವ್ಯ (the drama) ಎಂಬ ವಿಶಾಲಾರ್ಥವೂ ಕಾಣಿಸಿಕೊಂಡರೂ, ಒಟ್ಟಿನಲ್ಲಿ ಅದು ವಿಶಿಷ್ಟವಾದ ಅರ್ಥದಲ್ಲಿಯೇ ನಿಲ್ಲುತ್ತದೆ. "ನಾಟಕ", "ಪ್ರಕರಣ"– ಈ ಎರಡೂ ಅಲ್ಲದೆ "ಭಾಣ", "ಪ್ರಹಸನ" ಮೊದಲಾದ ಇನ್ನೂ ಎಂಟು ದೃಶ್ಯ ಕಾವ್ಯಪ್ರಭೇದಗಳುಂಟು. ಈ ಹತ್ತು ಬಗೆಗಳಿಗೂ "ರೂಪಕ" ಎಂದು ಸಾಮಾನ್ಯ ಸಂಜ್ಞೆ. ಹೀಗೆ ದಶಪ್ರಕಾರಗಳುಳ್ಳ "ರೂಪಕ"ದ ಸ್ವರೂಪ, ರಚನೆ ಮೊದಲಾದ ವಿವರಗಳನ್ನು ನಿರೂಪಿಸುವ ಗ್ರಂಥ 'ದಶರೂಪಕ'; 'ದಶರೂಪ' ಎಂಬ ಹೆಸರೂ ಇದಕ್ಕೆ ಉಂಟು.

ಈಚಿನ ಸಂಸ್ಕೃತ ಲಕ್ಷಣಕಾರರು ಈ ಹತ್ತು ಪ್ರಭೇದಗಳ ಜೊತೆಗೆ "ಸಟ್ಟಕ", "ಶ್ರೀಗದಿತ" ಮೊದಲಾದ ಹದಿನೆಂಟು ಉಪರೂಪಕಗಳನ್ನು ಬೇರೆ ಹೇಳುತ್ತಾರೆ. ರೂಪಕಕ್ಕೂ ಉಪರೂಪಕಕ್ಕೂ ಭೇದವೇನೆಂಬುದು ತಿಳಿದುಕೊಳ್ಳಬೇಕಾದ ಅಂಶವಾದರೂ ಇಲ್ಲಿ ನಮಗೆ ಅಪ್ರಕೃತ. ಈಚಿನವರು ಉಪರೂಪಕಗಳ ಪಟ್ಟಿಯಲ್ಲಿ ಸೇರಿಸುವ "ನಾಟಿಕಾ" ಎಂಬುದು ಮಾತ್ರ ಹಿಂದಿನಿಂದಲೂ ಪ್ರಸಿದ್ಧವಾಗಿದೆ. (ಹರ್ಷಚಕ್ರವರ್ತಿಯ 'ರತ್ನಾವಳಿ' ನಾಟಿಕೆಗೆ ಒಂದು ಒಳ್ಳೆಯ ನಿದರ್ಶನ.) ನಾಟಿಕೆ ಭರತನ 'ನಾಟ್ಯಶಾಸ್ತ್ರ'ದಲ್ಲಿಯೇ ಉಕ್ತವಾಗಿದೆ; "ನಾಟಕ", "ಪ್ರಕರಣ"–ಈ ಎರಡರ ಕೆಲವು ಲಕ್ಷಣಗಳ ಸಂಮಿಶ್ರಣದಿಂದ ಅದು ಹುಟ್ಟುವುದೆಂಬ ಸೂಚನೆಯೂ ಅಲ್ಲಿಯೇ ಇದೆ. ಆದಕಾರಣ, ನಾಟಿಕೆಯೆಂಬ ಈ "ಸಂಕೀರ್ಣ" ಪ್ರಭೇದದ ವಿಷಯವನ್ನು ಒಳಕೊಂಡಿದ್ದರೂ ನಮ್ಮ ಗ್ರಂಥದ ಹೆಸರು 'ಏಕಾದಶರೂಪಕ' ಎಂದು ಆಗದೆ 'ದಶರೂಪಕ' ಎಂದೇ ಉಳಿಯಿತು. ಇದರ ಮೇಲೆ ಈ "ದಶರೂಪಕ" (ಅಥವಾ "ದಶರೂಪ") ಎಂಬ ಶಬ್ದ ನಮ್ಮ ಗ್ರಂಥಕಾರನಿಂದ ನೂತನವಾಗಿ ಕಲ್ಪಿತವಾದದ್ದೇನೂ ಅಲ್ಲ. ಅದು ಭರತನ 'ನಾಟ್ಯಶಾಸ್ತ್ರ'ದಲ್ಲಿಯೇ ಕಾಣಿಸಿಕೊಳ್ಳುತ್ತದೆ. (ಅಷ್ಟೇ ಅಲ್ಲ; ಅದು 'ನಾಟ್ಯಶಾಸ್ತ್ರ'ಕ್ಕಿಂತಲೂ ಪ್ರಾಚೀನವಾಗಿರಬಹುದೆಂದು ಕೆಲವು ಮಂದಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.) ಕ್ರಿ.ಶ. ಸುಮಾರು ೮೦೦ರಲ್ಲಿ ಇದ್ದ ವಾಮನನು ತನ್ನ 'ಕಾವ್ಯಾಲಂಕಾರಸೂತ್ರ'ದಲ್ಲಿ "ಸಂದರ್ಭೇಷು ದಶರೂಪಕಂ ಶ್ರೇಯಃ" (ಕಾವ್ಯ ಬಂಧಗಳಲ್ಲಿ ದಶರೂಪಕವೇ ಮೇಲು) ಎಂದು ಹೇಳಿದ್ದನೆಂಬುದನ್ನೂ ಇಲ್ಲಿ ಉಲ್ಲೇಖಿಸಬಹುದು. "ಕಾವ್ಯೇಷು ನಾಟಕಂ ರಮ್ಯಂ" ಎಂಬ ಪ್ರಸಿದ್ಧವಾದ ಲೋಕೋಕ್ತಿಯನ್ನು ಈ ವಾಕ್ಯ ನೆನಪಿಗೆ ತರುತ್ತದೆ.

'ದಶರೂಪಕ' ಗ್ರಂಥವನ್ನು ರಚಿಸಿದವನ ಹೆಸರು ಧನಂಜಯ. ಈತನಿಗೆ ಆಶ್ರಯಕೊಟ್ಟಿದ್ದ ದೊರೆ ಮಾಲವ ದೇಶದಲ್ಲಿ ಆಳುತ್ತಿದ್ದ ಪರಮಾರ ವಂಶದ ಮುಂಜರಾಜ. ಈ ಮುಂಜನು ಸರಸ್ವತಿಯ ಪರಮಭಕ್ತನೂ ಕೊಡುಗೈಯ ದಾನಿಯೂ ಆಗಿದ್ದ ಭೋಜರಾಜನ ದೊಡ್ಡಪ್ಪನೆಂಬುದನ್ನೂ, ಕರ್ಣಾಟಕದ ಚಾಳುಕ್ಯ ಚಕ್ರವರ್ತಿ

ಎರಡನೆಯ ತೈಲಪನೊಂದಿಗೆ ಹಲವು ಬಾರಿ ಯುದ್ಧಮಾಡಿ ಕಡೆಗೆ ಸೋತು ಸೆರೆಸಿಕ್ಕಿ ಚಾಳುಕ್ಯ ರಾಜಧಾನಿಯಲ್ಲಿ ತಲೆದಂಡವನ್ನು ತೆತ್ತವನೆಂಬುದನ್ನೂ ಇಲ್ಲಿ ಸ್ಮರಿಸಬಹುದು. ಮುಂಜನ ಆಳಿಕೆಯ ಕಾಲ ಕ್ರಿ.ಶ. ೯೭೪ರಿಂದ ಸು. ೯೯೫ರ ವರೆಗೆ. ಆದಕಾರಣ, ಅವನ ಆಶ್ರಿತನಾದ ಧನಂಜಯನ ಕಾಲ ಕ್ರಿ.ಶ. ಹತ್ತನೆಯ ಶತಮಾನದ ಕೊನೆಯ ಪಾದವೆಂದು ನಿರ್ಧರಿಸಬಹುದು.

'ದಶರೂಪಕ'ದ ಮೇಲಿನ ಸುಪ್ರಸಿದ್ಧ ವ್ಯಾಖ್ಯಾನವಾದ 'ದಶರೂಪಾವಲೋಕ'ದ ಕರ್ತೃವನ್ನು ಕುರಿತು ಎರಡು ಮಾತನ್ನು ಇಲ್ಲಿ ಹೇಳಬೇಕು. ಇದನ್ನು ಬರೆದವನು ಧನಿಕ. ಇವನು ಧನಂಜಯನ ಸಹೋದರನೆಂದು ಊಹಿಸಲು ತಕ್ಕಮಟ್ಟಿಗೆ ಅವಕಾಶವಿದೆ. ಈತನ ವ್ಯಾಖ್ಯಾನ ಸವಿಸ್ತರವಾಗಿಯೂ ಸಮುಚಿತವಾದ ಅನೇಕ ಉದಾಹರಣೆಗಳಿಂದ ಕೂಡಿಯೂ ಇರುವುದರಿಂದ 'ದಶರೂಪಕ'ವನ್ನು ಅರ್ಥ ಮಾಡಿಕೊಳ್ಳಲು ತುಂಬ ಸಹಾಯ ಮಾಡುತ್ತದೆ. "ಧನಿಕನ 'ಅವಲೋಕ'ವನ್ನು ಕಳೆದರೆ 'ದಶರೂಪಕ' ಅರೆಯಾಗಿಯೇ ಉಳಿಯುತ್ತದೆ" ಎಂದು ಈ ಕೃತಿಯನ್ನು ಸವಿಸ್ತರವಾದ ಪೀಠಿಕೆ, ಟಿಪ್ಪಣಿ ಮೊದಲಾದವುಗಳೊಡನೆ ಕನ್ನಡಕ್ಕೆ ಅನುವಾದ ಮಾಡಿರುವ ಶ್ರೀ ಕೆ.ವಿ. ಸುಬ್ಬಣ್ಣನವರು ಹೇಳಿರುವುದನ್ನು ಧಾರಾಳವಾಗಿ ಒಪ್ಪಬಹುದು. ಧನಿಕನು 'ಕಾವ್ಯನಿರ್ಣಯ' ಎಂಬ ಬೇರೊಂದು ಗ್ರಂಥವನ್ನು ಬರೆದಿದ್ದನಂತೆ; ಇದು ದೊರೆತಿಲ್ಲ. 'ದಶರೂಪಕ'ದ ಮೇಲೆ ಇನ್ನೂ ಕೆಲವು ವ್ಯಾಖ್ಯಾನಗಳು ಹುಟ್ಟಿವೆ. ಇವುಗಳಲ್ಲಿ ಬಹುರೂಪಮಿಶ್ರ ಎಂಬಾತನು ಬರೆದದ್ದು ತುಂಬ ಚೆನ್ನಾಗಿದೆಯೆಂದು ತಿಳಿಯಬರುತ್ತದೆ. ಆದರೆ ಇದು ಇನ್ನೂ ಅಚ್ಚಾಗಿ ಹೊರಬಿದ್ದಿಲ್ಲ, ನಾನು ಬಲ್ಲಮಟ್ಟಿಗೆ.

> ಅವಸ್ಥಾನುಕೃತಿರ್ನಾಟ್ಯಂ ರೂಪಂ ದೃಶ್ಯತಯೋಚ್ಯತೇ ।
> ರೂಪಕಂ ತತ್ಸಮಾರೋಪಾತ್ ದಶಧೈವ ರಸಾಶ್ರಯಂ ॥ . . .
> ಅನ್ಯದ್ಭಾವಾಶ್ರಯಂ ನೃತ್ಯಂ ನೃತ್ತಂ ತಾಲಲಯಾಶ್ರಯಂ

'ದಶರೂಪಕ'ದ ವಿಷಯಪ್ರವೇಶ ಭಾಗದಿಂದ ಎತ್ತಿಕೊಂಡಿರುವ ಈ ಮೂರು ಪಂಕ್ತಿಗಳು ಸಾಕು ಅದರ ಬರವಣಿಗೆಯ ರೀತಿಯನ್ನು ತೋರಿಸುವುದಕ್ಕೆ. ಇಲ್ಲಿ ಧನಂಜಯನು ಎಷ್ಟೊಂದು ವಿಷಯಗಳನ್ನು ಅಡಕವಾಗಿ, ಆದರೆ ಖಚಿತವಾಗಿ ತಿಳಿಸಿದ್ದಾನೆ; ಸೂಕ್ಷ್ಮ ವ್ಯತ್ಯಾಸಗಳನ್ನು ಹೇಗೆ ಪರಿಷ್ಕಾರ ಮಾಡಿದ್ದಾನೆ! ವಿಧಿಯಿಲ್ಲದೆ ಸ್ವಲ್ಪಮಟ್ಟಿಗೆ ವಿಸ್ತರಿಸಿ, ಅವುಗಳ ಅನುವಾದವನ್ನು ಹೀಗೆ ಕೊಡಬಹುದು : "ಕಥಾನಾಯಕ ಮೊದಲಾದವರ ಅವಸ್ಥೆಗಳನ್ನು ಅಭಿನಯರೂಪದಲ್ಲಿ ಅನುಕರಣ ಮಾಡುವುದೇ ನಾಟ್ಯ. ಈ ನಾಟ್ಯವು ಕಣ್ಣಮುಂದೆ ತೋರ್ಪಡುವುದರಿಂದ ಇದನ್ನು ರೂಪವೆನ್ನುತ್ತಾರೆ. ಕಥಾಪುರುಷರ ಆ ಅವಸ್ಥೆಗಳು ನಟನಲ್ಲಿ ಆರೋಪಿತವಾಗುವುದರಿಂದ ಇದು ರೂಪಕ ಎನಿಸಿಕೊಳ್ಳುತ್ತದೆ. ರಸಗಳ ವೈವಿಧ್ಯವನ್ನು ಅವಲಂಬಿಸಿ ರೂಪಕದಲ್ಲಿ ಕೇವಲ ಹತ್ತು ಪ್ರಭೇದಗಳು

ಉಂಟಾಗುತ್ತವೆ . . . ಭಾವಾಶ್ರಯವಾದ ನೃತ್ಯವು ರಸಾಶ್ರಯವಾದ ನಾಟ್ಯಕ್ಕಿಂತ ಬೇರೆಯದು; ನೃತ್ತ ಎನ್ನುವುದು ತಾಳಲಯಗಳನ್ನು ಅವಲಂಬಿಸತಕ್ಕದ್ದು."

ಇಂದಿನ ದಿನಗಳಲ್ಲಿ ನಾವು "ನಾಟ್ಯ" ಎಂಬ ಶಬ್ದವನ್ನು ಸಾಮಾನ್ಯವಾಗಿ ಇಂಗ್ಲಿಷಿನ 'Dance' ಎಂಬ ಅರ್ಥದಲ್ಲಿ ಬಳಸುತ್ತೇವೆ. ಒಂದು ಗೀತವನ್ನೋ ಪದ್ಯವನ್ನೋ ಒಬ್ಬರು ಹಿನ್ನೆಲೆಯಲ್ಲಿ ಹಾಡುತ್ತಿರುವಾಗ, ಅದರ ಒಂದೊಂದು ಪದದ ಅರ್ಥವನ್ನೂ ನಟ ಅಥವಾ ನಟಿ ಅಭಿನಯಿಸಿ ತೋರಿಸುತ್ತಾ ನರ್ತನ ಮಾಡುವುದಕ್ಕೆ ಈಗ "ಭರತನಾಟ್ಯ" ಎಂಬ ಹೆಸರು ರೂಢಿಯಾಗಿದೆ. ಇದಕ್ಕೆ ನಮ್ಮ ಶಾಸ್ತ್ರಕಾರರ ಪರಿಭಾಷೆಯಲ್ಲಿ "ನೃತ್ಯ" ಎಂಬ ಹೆಸರು ಹೆಚ್ಚಾಗಿ ಒಪ್ಪುತ್ತದೆ. "ನಾಟ್ಯ" ಎನ್ನುವುದು ಒಂದು ಕಥಾವಸ್ತುವನ್ನು ಅವಲಂಬಿಸತಕ್ಕದ್ದು; ಕಥಾ ಪುರುಷರ ಬಹು ವಿಧವಾಗಿ ಬೆಳೆಯುತ್ತಾ ಹೋಗುವ ಅವಸ್ಥಾ ವಿಶೇಷಗಳನ್ನು ಅಭಿನಯದ ಮೂಲಕ ರೂಪಿಸತಕ್ಕದ್ದು. ಈ ವ್ಯಾಪ್ತಿಯನ್ನು ನೆನೆದರೆ ಅದು ಇಂಗ್ಲಿಷಿನ 'Drama' ಎಂಬ ಶಬ್ದಕ್ಕೆ ಸಮಾನವಾಗುತ್ತದೆ. "ನಾಟ್ಯ"ಕ್ಕೇ "ರೂಪಕ" ಎಂಬುದು ಇನ್ನೊಂದು ಹೆಸರಾಗುತ್ತದೆ. ನಾಟ್ಯವು ರಸಾಶ್ರಯ, ನೃತ್ಯವು ಭಾವಾಶ್ರಯ; ನಾಟ್ಯದಲ್ಲಿ ವಾಕ್ಯಾರ್ಥಾಭಿನಯವಿರುತ್ತದೆ, ನೃತ್ಯದಲ್ಲಿ ಪದಾರ್ಥಾಭಿನಯವಿರುತ್ತದೆ-ಹೀಗೆಂದು ಧನಿಕನು ತನ್ನ ವ್ಯಾಖ್ಯಾನದಲ್ಲಿ ಇವೆರಡಕ್ಕೂ ಇರುವ ಭೇದವನ್ನು ಸ್ಪಷ್ಟಪಡಿಸುತ್ತಾನೆ. ಇದರ ವಿವರಣೆಗೆ ಇಲ್ಲಿ ಅವಕಾಶವಿಲ್ಲ. "ನಾಟ್ಯ", "ನೃತ್ಯ" ಈ ಎರಡಕ್ಕಿಂತಲೂ ಭಿನ್ನವಾದದ್ದು "ನೃತ್ತ"; ಇದರಲ್ಲಿ ತಾಳಕ್ಕೆ ಅನುಸಾರವಾದ ಲಯಬದ್ಧವಾದ ಕುಣಿತವಿರುತ್ತದೆಯೇ ಹೊರತು ಚಿತ್ತವೃತ್ತಿಗಳನ್ನು ಕುರಿತ ಅಭಿನಯವಿರುವುದಿಲ್ಲ. ಇಂದಿನ ಅಲರಿಪ್ಪು, ಜತಿಸ್ವರ ಮೊದಲಾದವು "ನೃತ್ತ"ಕ್ಕೆ ನಿದರ್ಶನವಾಗಬಹುದು.

ನಾಟ್ಯದಲ್ಲಿ ಐದು ಅಂಗಗಳಿರುತ್ತವೆ : ಆಂಗಿಕ, ವಾಚಿಕ, ಆಹಾರ್ಯ ಎಂಬ ಮೂರು ಅಭಿನಯಗಳು; ಜೊತೆಗೆ ಗೀತ ಮತ್ತು ವಾದ್ಯ. ಇವುಗಳಲ್ಲಿ ಆಂಗಿಕ ಎನ್ನುವುದು ನಟರು ಶರೀರದ ಅಂಗಗಳ ಚಲನವಲನಗಳಿಂದ ಮಾಡುವ ಅಭಿನಯ. ವಾಚಿಕ ಎನ್ನುವುದು ಅವರ ಮಾತುಗಾರಿಕೆ-ಒಂದು ರೂಪಕದ ಸಮಗ್ರವಾದ ಪಾಠ್ಯಾಂಶವನ್ನು ಇದು ಒಳಕೊಳ್ಳುತ್ತದೆ. ಆಹಾರ್ಯ ಎಂದರೆ ನಟರ ವೇಷ ಭೂಷಣ, ರಂಗಸಜ್ಜಿಕೆ ಮೊದಲಾದವು. ಈ ಅಭಿನಯತ್ರಯಕ್ಕೆ ಪೋಷಕವಾಗಿ ಬಾಯಿಹಾಡಿಕೆ ಮತ್ತು ವಾದ್ಯಗಳ ಬಾಜನೆ. ನಾಟ್ಯದ ಈ ಐದು ಅಂಗಗಳಲ್ಲಿ "ವಾಚಿಕ" (ಎಂದರೆ ಪಾಠ್ಯಭಾಗ) ಮಾತ್ರ 'ದಶರೂಪಕ'ದ ವಿಷಯ. ಅದರ ಮೊದಲನೆಯ ಪ್ರಕಾಶದಲ್ಲಿ ಕಥಾವಸ್ತುವಿನ ವಿನ್ಯಾಸ, ಎರಡನೆಯದರಲ್ಲಿ ನಾಯಕ ನಾಯಿಕೆ ಮೊದಲಾದವರ ವಿಚಾರ, ಮೂರನೆಯದರಲ್ಲಿ ರೂಪಕಪ್ರಭೇದಗಳ ಲಕ್ಷಣ, ಕೊನೆಯದರಲ್ಲಿ ರಸಸ್ವರೂಪಕಥನ—ಇವು ಮುಖ್ಯವಾಗಿ ಬಂದಿವೆ. ಇಷ್ಟೆಲ್ಲ ವಿಚಾರವನ್ನು ಧನಂಜಯನು ಕೇವಲ ೩೦೨ ಪದ್ಯಗಳಲ್ಲಿ-ಇವುಗಳಲ್ಲಿ "ಶ್ಲೋಕ"ಗಳೇ ಬಹುಪಾಲು-ಅಡಕಮಾಡಿದ್ದಾನೆ.

> ವ್ಯಾ ಕೀರ್ಣೇ ಮಂದಬುದ್ಧೀನಾಂ ಜಾಯತೇ ಮತಿವಿಭ್ರಮಃ ।
> ತಸ್ಯಾರ್ಥಸ್ತತ್ಪದೈಸ್ತೇನ ಸಂಕ್ಷಿಪ್ಯ ಕ್ರಿಯತೇಽಂಜಸಾ ॥

"ಶಾಸ್ತ್ರದ ವಿಷಯವನ್ನು ಎಲ್ಲೆಲ್ಲೋ ಹರಡಿ, ಬೆಳಸಿ ಹೇಳಿದರೆ ಮಂದಮತಿಗಳಿಗೆ ಬುದ್ಧಿಭ್ರಮೆಯಾಗುತ್ತದೆ. ಆದಕಾರಣ ಅದರ (ಎಂದರೆ 'ನಾಟ್ಯಶಾಸ್ತ್ರ'ದ) ವಿಷಯವನ್ನು ಅಲ್ಲಿಯ ಪದಗಳನ್ನೇ ಉಪಯೋಗಿಸಿಕೊಂಡು ಸಂಕ್ಷೇಪವಾಗಿ ನೇರವಾಗಿ ರಚಿಸುತ್ತೇನೆ" ಎಂದು ಧನಂಜಯನು ಗ್ರಂಥದ ಮೊದಲಲ್ಲೇ ಆಶ್ವಾಸನ ಕೊಟ್ಟು, ಕೊಟ್ಟ ಮಾತನ್ನು ಒಟ್ಟಿನಲ್ಲಿ ಯಶಸ್ವಿಯಾಗಿ ನಡಸಿಕೊಡುತ್ತಾನೆ. ಇದೇ ಅವನ ಕೃತಿಯ ವಿಶಿಷ್ಟತೆ. ಭರತನ 'ನಾಟ್ಯಶಾಸ್ತ್ರ'ವು "ನಾಟ್ಯ"ದ ಎಲ್ಲ ಅಂಗಗಳನ್ನೂ ಕುರಿತ ಅನೇಕಾನೇಕ ವಿವರಗಳನ್ನು ನಿರೂಪಿಸುವ ಒಂದು ವಿಶ್ವಕೋಶವೆನ್ನಬಹುದು. ಈ ಬೃಹತ್ ಪ್ರಮಾಣದ ಮಹಾಕೃತಿಯ ಮೇಲೆ ಆಚಾರ್ಯ ಅಭಿನವಗುಪ್ತನು ಬರೆದಿರುವ 'ಅಭಿನವಭಾರತೀ' ಎಂಬ ವ್ಯಾಖ್ಯಾನವಂತೂ ಬಹು ವಿಷಯಗರ್ಭಿತವಾಗಿ ಅನೇಕ ಸ್ವತಂತ್ರ ವಿಚಾರಗಳನ್ನು ಒಳಕೊಂಡು ಒಂದು "ಭಾಷ್ಯ"ವೆನಿಸಿಕೊಳ್ಳುವಷ್ಟುಮಟ್ಟಿನ ಮಹತ್ತ್ವವುಳ್ಳದ್ದು. ತೂಕದಲ್ಲಿ ವ್ಯಾಪ್ತಿಯಲ್ಲಿ ಪ್ರಾಮಾಣ್ಯದಲ್ಲಿ "ದಶರೂಪಕ"ವು ಇದರ ಸಮಕ್ಕೆ ಬಾರದೆ ಹೋದರೂ, ತನ್ನ ಸರಳತೆ ಸಂಕ್ಷೇಪಗಳಿಂದಲೇ ಜನಪ್ರಿಯವಾಗಿ ನಿಂತಿದೆ; ನೂತನ ವಿಷಯಗಳನ್ನು ಹೇಳದಿದ್ದರೂ ಹಿಂದಿನವರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಕೊಟ್ಟು ಒಳ್ಳೆಯ ಪಠ್ಯಪುಸ್ತಕವಾಗಿ ಪರಿಣಮಿಸಿದೆ. ವಯಸ್ಸಿನಲ್ಲಿ ಧನಂಜಯನಿಗಿಂತ ಅಭಿನವಗುಪ್ತನು ಕೊಂಚ ಕಿರಿಯವನಾಗಿದ್ದಿರಬಹುದು. ಒಬ್ಬನ ಕೃತಿಯನ್ನು ಇನ್ನೊಬ್ಬನು ನೋಡಿದ್ದನೆಂದು ಹೇಳಲು ಆಧಾರಗಳಿಲ್ಲ.

"ವಸ್ತು ನೇತಾ ರಸಸ್ತೇಷಾಂ ಭೇದಕಃ" – ರೂಪಕಪ್ರಭೇದಗಳಲ್ಲಿ ಒಂದನ್ನು ಮತ್ತೊಂದರಿಂದ ಪ್ರತ್ಯೇಕಿಸತಕ್ಕವು ಈ ಮೂರು : ವಸ್ತು, ನೇತೃ ಮತ್ತು ರಸ. ಇವುಗಳಲ್ಲಿ "ವಸ್ತು" ಎಂದರೆ ಕಥಾವಸ್ತು; ಇದನ್ನು ಇತಿವೃತ್ತ ಎಂದೂ ಕರೆಯುವುದುಂಟು. ಆಧಿಕಾರಿಕ (ಎಂದರೆ ಪ್ರಧಾನವಾದ) ಕಥಾಸಂಗತಿ, ಪ್ರಾಸಂಗಿಕ (ಎಂದರೆ ಗೌಣವಾದ) ಕಥಾಸಂಗತಿ ಇವನ್ನು ಹೇಗೆ ಅಳವಡಿಸಬೇಕು, ಕಥೆಯ "ಬೀಜ" ಎಲ್ಲಿಯೂ ವಿಚ್ಛೇದಗೊಳ್ಳದಂತೆ ಹೇಗೆ ಬೆಳಸಬೇಕು, ಇತಿವೃತ್ತದ ವಿಭಾಗಗಳಾದ "ಮುಖ", "ಪ್ರತಿಮುಖ", "ಗರ್ಭ", "ಅವಮರ್ಶ", "ಉಪಸಂಹೃತಿ" ಎಂಬ ಪಂಚ "ಸಂಧಿ"ಗಳ ಸ್ವರೂಪವೇನು, ಇವುಗಳ ಅಂಗಗಳು ಯಾವುವು–ಇದನ್ನೆಲ್ಲ ದಶರೂಪಕಕಾರನು ಮೊದಲನೆಯ ಪ್ರಕಾಶದಲ್ಲಿ ವಿವರಿಸುತ್ತಾನೆ. ಒಮ್ಮೊಮ್ಮೆ ಇಲ್ಲಿಯ ವಿಶ್ಲೇಷಣೆ ತುಂಬ ಶಾಸ್ತ್ರಬದ್ಧವಾಯಿತು ಎನಿಸಬಹುದು; ಆದರೆ ಆಧುನಿಕರಿಗೂ ಮಾರ್ಗದರ್ಶನ ಮಾಡಬಹುದಾದ ಹಲವು ಅಂಶಗಳು ಇಲ್ಲಿ ದೊರೆಯುತ್ತವೆ. ರೂಪಕದಲ್ಲಿ ವಸ್ತುವಿನ್ಯಾಸ ಹೇಗೆ ಬಿಗಿಯಾಗಿ ಏಕಮುಖವಾಗಿ ನಡೆಯಬೇಕೆಂಬುದನ್ನು ಇದರ ಪರಿಶೀಲನೆಯಿಂದ ಚೆನ್ನಾಗಿ ಗ್ರಹಿಸಬಹುದು.

"ನೇತೃ" ಎಂದರೆ ರೂಪಕದ ನಾಯಕ. ದಶರೂಪಕದ ಎರಡನೆಯ ಪ್ರಕಾಶದಲ್ಲಿ ಪಾತ್ರವರ್ಗವೆಲ್ಲದರ ವಿಚಾರ ಬಂದಿದ್ದರೂ, ನಾಯಕ, ನಾಯಿಕೆ, ಇವರ ಕಡೆಗೇ ಇಲ್ಲಿಯ ಮುಖ್ಯದೃಷ್ಟಿ. ಇವರೊಳಗಿನ ವಿಪುಲ ಪ್ರಭೇದಗಳು ಇಲ್ಲಿ ಸಾಂಪ್ರದಾಯಿಕವಾದ

ರೀತಿಯಲ್ಲಿ ಉಕ್ತವಾಗಿವೆ. ಅದರಲ್ಲೂ ಶೃಂಗಾರ ರಸದ ಪೋಷಿಕೆಯರಾದ ನಾಯಿಕೆಯರ ಬಗೆಬಗೆಯ ಪ್ರಕಾರಗಳನ್ನೂ ಅವಸ್ಥೆಗಳನ್ನೂ ಹಾವಭಾವಾದಿಗಳನ್ನೂ ಉಲ್ಲೇಖಿಸುವುದರಲ್ಲಿ ದಶರೂಪಕಕಾರನಿಗೆ ಹೆಚ್ಚು ಆಸಕ್ತಿ. ಈ ಚಿಕ್ಕ ಗ್ರಂಥದ ಹಲವು ಪಂಕ್ತಿಗಳು ಈ ವಿವರಣೆಗೆ ಮೀಸಲಾಗಿವೆ. ಇಡಿ ಗ್ರಂಥವೇ ಬಲುಮಟ್ಟಿಗೆ ಶೃಂಗಾರೋನ್ಮುಖವಾಗಿದೆ ಎಂದು ಹೇಳಬಹುದೋ ಏನೋ. ಪಾತ್ರಗಳ ವಿವೇಚನೆಯನ್ನು ಕುರಿತು ನಮ್ಮ ಲಕ್ಷಣಗ್ರಂಥಗಳಲ್ಲಿ ವ್ಯಕ್ತವಾಗುವ ಒಂದು ಕೊರತೆಯನ್ನು ಇಲ್ಲಿ ಸೂಚಿಸಿದರೆ ಅಧಿಕ ಪ್ರಸಂಗವಾಗಲಾರದು. ರೂಪಕದ ಒಂದೊಂದು ಪಾತ್ರವೂ ಒಂದೊಂದು ಪ್ರಭೇದದ ಪ್ರತಿನಿಧಿ ಮಾತ್ರವಾಗಿ ನಿಲ್ಲದೆ ವಿಶಿಷ್ಟ ವ್ಯಕ್ತಿಯ ಜೀವಕಳೆಯಿಂದ ಹೇಗೆ ಕೂಡಿರುತ್ತದೆ, ಸದೃಶಸ್ವಭಾವದ ಪಾತ್ರಗಳಲ್ಲಿ ಪರಸ್ಪರ ವೈಲಕ್ಷಣ್ಯಗಳು ಹೇಗೆ ಗೋಚರವಾಗುತ್ತವೆ, ಕಥೆ ಬೆಳೆದ ಹಾಗೆಲ್ಲ ಪಾತ್ರಗಳ ಸ್ವಭಾವದಲ್ಲೂ ಬೆಳೆವಳಿಗೆ, ಪರಿವರ್ತನೆ ಮೊದಲಾದವು ಹೇಗೆ ನಡೆಯುತ್ತವೆ–ಇಂಥ ವಿಚಾರಕ್ಕೆ ಪಾಶ್ಚಾತ್ಯರ ವಿಮರ್ಶೆಯಲ್ಲಿ ಒಂದು ಪ್ರಮುಖಸ್ಥಾನ ದೊರೆತಿದೆ. 'ಅಭಿಜ್ಞಾನ ಶಾಕುಂತಲ', 'ಮೃಚ್ಛಕಟಿಕ' ಮೊದಲಾದ ರೂಪಕಗಳಲ್ಲಿ ಉತ್ಕೃಷ್ಟ ನಿದರ್ಶನಗಳಿದ್ದರೂ ಇತ್ತಕಡೆ ನಮ್ಮ ಲಾಕ್ಷಣಿಕರ ಗಮನ ಏಕೆ ಹರಿಯಲಿಲ್ಲವೋ!

ರೂಪಕಪ್ರಭೇದಗಳು ಈಗಾಗಲೆ ನಾವು ನೋಡಿರುವಂತೆ ಹತ್ತು :

> ನಾಟಕಂ ಸಪ್ರಕರಣಂ ಭಾಣಃ ಪ್ರಹಸನಂ ಡಿಮಃ ।
> ವ್ಯಾಯೋಗಸಮವಕಾರೌ ವೀಥ್ಯಂಕೇಹಾಮೃಗಾ ಇತಿ ॥

ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥೀ, ಅಂಕ, ಈಹಾಮೃಗ–ಎಂದು ಇವನ್ನು ದಶರೂಪಕದ ಪ್ರಾರಂಭ ಭಾಗದಲ್ಲೇ ಬರುವ ಶ್ಲೋಕ ಹೆಸರಿಸುತ್ತದೆ. ಭರತನ 'ನಾಟ್ಯಶಾಸ್ತ್ರ'ವು ರಚಿತವಾದ ಕಾಲಕ್ಕೆ ಇವು ಪ್ರಸಿದ್ಧವಾಗಿದ್ದುವು; ಅಲ್ಲಿಯ ರೀತಿಯನ್ನೇ ಅನುಸರಿಸಿ ಅವುಗಳನ್ನು ನಿರೂಪಿಸುವ ಪದ್ಧತಿ ಮುಂದಕ್ಕೂ ನಡೆದುಬಂದಿತು. ಧನಂಜಯನು ತನ್ನ ಗ್ರಂಥದ ಮೂರನೆಯ ಪ್ರಕಾಶದಲ್ಲಿ ಇವುಗಳ ವಿಚಾರವನ್ನು ತಿಳಿಸುತ್ತಾನೆ. ರೂಪಕಗಳಲ್ಲಿ "ನಾಟಕ"ವೇ "ಸಂಪೂರ್ಣ ಲಕ್ಷಣ"ವುಳ್ಳದ್ದೆಂದು ಪರಿಗಣಿತವಾಗಿರುವುದರಿಂದ ಅದರ ರಚನೆಯ ವಿಷಯ ಇಲ್ಲಿ ವಿಸ್ತಾರವಾಗಿ ಬಂದಿದೆ. ಆ ಬಳಿಕ "ಪ್ರಕರಣ"; ಅದರ ಮುಂದಿನದು "ನಾಟಿಕೆ" (ಇದು ಇಲ್ಲಿ ಏಕೆ ಸೇರಿತೆಂಬುದೆಂಬುದನ್ನು ಈ ಮೊದಲೇ ನಾವು ನೋಡಿದ್ದೇವೆ). "ನಾಟಕ"ಗಳಲ್ಲಿ ಭಟ್ಟನಾರಾಯಣನ 'ವೇಣೀಸಂಹಾರ'ವೂ 'ನಾಟಿಕೆ'ಗಳಲ್ಲಿ 'ರತ್ನಾವಲಿ'ಯೂ ಧನಿಕನಿಗೆ ತುಂಬ ಮೆಚ್ಚಿಕೆಯಾಗಿದ್ದಂತೆ ತೋರುತ್ತದೆ. ಅವುಗಳಿಂದ ಅನೇಕ ಪದ್ಯಗಳನ್ನೂ ಸಂಭಾಷಣೆಯ ಖಂಡಗಳನ್ನೂ ಅವನು ತನ್ನ ವ್ಯಾಖ್ಯಾನದ ಉದ್ದಕ್ಕೂ ಉದಾಹರಿಸಿದ್ದಾನೆ.

ಮಿಕ್ಕ ಪ್ರಭೇದಗಳಲ್ಲಿ "ಭಾಣ"ವೊಂದನ್ನಾದರೂ ಇಲ್ಲಿ ಹೆಸರಿಸಬೇಕು. ಇದರ ವಸ್ತು "ಧೂರ್ತಚರಿತ"; ಇದರಲ್ಲಿರುವುದು ಒಂದೇ ಅಂಕ. ಒಬ್ಬನೇ ಪಾತ್ರ (ಇವನು ನಿಪುಣನೂ ಪಂಡಿತನೂ ಆದ ವಿಟ!) ರಂಗಸ್ಥಲದಮೇಲೆ ನಿಂತು ಮಾತಾಡುತ್ತಾ,

ತೆರೆಯ ಮರೆಯಲ್ಲಿ ಬಂದುಹೋಗುವ ಬೇರೆ ಬೇರೆ ಪಾತ್ರಗಳೊಂದಿಗೆ ಸಂಭಾಷಣೆ ಮಾಡುತ್ತಿರುವಂತೆ ತೋರ್ಪಡಿಸಿಕೊಳ್ಳುತ್ತಾ, "ಏನೆಂದೆ?", "ಏನು ಹೇಳುತ್ತೀಯೆ?" ಎಂಬಂಥ ನಿರ್ದೇಶಿಕೆಗಳ ಮೂಲಕ ಆ "ಮರೆಯ ಪಾತ್ರ"ಗಳ ಉಕ್ತಿ ಪ್ರತ್ಯುಕ್ತಿಗಳನ್ನೆಲ್ಲಾ ತಾನೇ ವಚನಿಸುತ್ತಾ ಕಥೆಯನ್ನು ಬೆಳೆಸುವ ರೀತಿ ಇಲ್ಲಿಯದು. ಪ್ರಾಚೀನಭಾರತದಲ್ಲಿ ಇಂಥ ಕೃತಿಗಳು ಜನಪ್ರಿಯವಾಗಿದ್ದುವೆಂದು ತೋರುತ್ತದೆ. 'ಚತುರ್ಭಾಣೀ' ಎಂಬ ಸಂಗ್ರಹದಲ್ಲಿ ದೊರೆಯುವ ಶೂದ್ರಕನ 'ಪದ್ಮಪ್ರಾಭೃತಕ', ಈಶ್ವರದತ್ತನ 'ಧೂರ್ತವಿಟಸಂವಾದ' ಮೊದಲಾದ ಕೃತಿಗಳು ಇದಕ್ಕೆ ಸಾಕ್ಷಿ. (ಇವು ಹರ್ಷ ಚಕ್ರವರ್ತಿಯ ಕಾಲಕ್ಕೂ ಹಿಂದಿನವಾಗಿರಬಹುದು, ಗುಪ್ತರ ಕಾಲದ ಕೊನೆಯ ಭಾಗಕ್ಕೇ ಸೇರಬಹುದು ಎಂದು ವಿದ್ವಾಂಸರು ಊಹಿಸುತ್ತಾರೆ.) ಈಗಿನ ಕಾಲದಲ್ಲೂ ಪ್ರತಿಭಾಶಾಲಿಗಳಾದ ಕವಿಗಳು "ಭಾಣ"ಕ್ಕೆ ಹೇಗೆ ಹೊಸರೂಪವನ್ನು ಕೊಟ್ಟು ಜೀವಂತಗೊಳಿಸಬಲ್ಲರೆಂಬುದಕ್ಕೆ ಶ್ರೀಮಾನ್ ದ.ರಾ. ಬೇಂದ್ರೆಯವರ 'ತಿರುಕರ ಪಿಡುಗು' ಒಳ್ಳೆಯ ನಿದರ್ಶನ.

ರಸವಿಚಾರಕ್ಕೆ ಈಗ ಬರುತ್ತೇವೆ. ಇದರ ವಿವರಗಳು 'ದಶರೂಪಕ'ದ ನಾಲ್ಕನೆಯ ಪ್ರಕಾಶವನ್ನು ತುಂಬಿರುವುದಲ್ಲದೆ, ಮಿಕ್ಕ ಪ್ರಕಾಶಗಳಲ್ಲೂ ಪ್ರಾಸಂಗಿಕವಾಗಿ ಬರುತ್ತವೆ. ನಮ್ಮ ಲಾಕ್ಷಣಿಕರ ಮತದಂತೆ ರೂಪಕದಲ್ಲಿ ರಸಕ್ಕೇ ಪರಮಪ್ರಾಧಾನ್ಯ. ಭರತನ 'ನಾಟ್ಯಶಾಸ್ತ್ರ'ದಲ್ಲೇ ಇದು ಎದ್ದು ಕಾಣಿಸುತ್ತದೆ. ಈಚೆಗೆ ಬಂದ ಆನಂದವರ್ಧನನಂಥ ಕಾವ್ಯಮೀಮಾಂಸಾ ವಿಶಾರದರು ಈ ತತ್ತ್ವವನ್ನು ದೃಶ್ಯಕಾವ್ಯಕ್ಕೆ ಮಾತ್ರವಲ್ಲದೆ ಶ್ರವ್ಯಕಾವ್ಯಕ್ಕೂ ಅನ್ವಯಿಸಿ ಸ್ಥಾಪಿಸಿದರು. ರಸಪಾರಮ್ಯದ ಈ ಪ್ರತಿಪಾದನೆ ಜಗತ್ತಿನ ಕಲಾ ಮೀಮಾಂಸೆಗೇ ಭಾರತೀಯರ ಕಾಣಿಕೆ ಎನ್ನಬಹುದು. ಪ್ರಸ್ತುತ ವಿಷಯವಾದ ರೂಪಕವನ್ನು ಮಾತ್ರ ಸದ್ಯದಲ್ಲಿ ಗಮನಿಸೋಣ. ಒಂದು ರೂಪಕದಲ್ಲಿ ಒಂದೇ ರಸ "ಅಂಗಿ"ಯಾಗಿರಬೇಕು; ಎಂದರೆ ಎಲ್ಲಕ್ಕಿಂತ ಮುಖ್ಯವಾಗಿ, ಎಲ್ಲಕ್ಕೂ ನಿಯಾಮಕವಾಗಿ ನಿಲ್ಲಬೇಕು. ವಸ್ತುವಿನ್ಯಾಸ, ಪಾತ್ರಪೋಷಣೆ ಇದೆಲ್ಲವೂ ಈ ಮುಖ್ಯರಸಕ್ಕೆ "ಅಂಗ"ವಾಗಿ, ಅನುಗುಣವಾಗಿ ಅಳವಟ್ಟಿರಬೇಕು. ಇಷ್ಟೇ ಅಲ್ಲ. ವೈವಿಧ್ಯಕ್ಕಾಗಿ ಬರುವ ಇತರ ರಸಗಳು ಕೂಡ ತಮ್ಮ ಸ್ಥಾನವನ್ನು ಮೀರದಂತೆ ಮುಖ್ಯ ರಸಕ್ಕೆ ಅಡ್ಡಿಯಾಗದಂತೆ ಇರಬೇಕು. ಈ ನಿರ್ಣಯವನ್ನು ದಶರೂಪಕಕಾರನೂ ಖಚಿತವಾದ ಮಾತುಗಳಲ್ಲಿ ಎತ್ತಿ ಹಿಡಿಯುತ್ತಾನೆ.

ರೂಪಕದಲ್ಲಿ ರಸವೆ ಪ್ರಧಾನ ಎಂಬುದನ್ನು ಲಾಕ್ಷಣಿಕರು ಒಪ್ಪಿದರೂ ಅದರ ನಿಷ್ಪತ್ತಿ ಹೇಗೆ, ರಸಗಳ ಸಂಖ್ಯೆ ಎಷ್ಟು ಎಂಬ ವಿಷಯವಾಗಿ ಅಭಿಪ್ರಾಯ ಭೇದ ಬೇಕಾದಷ್ಟು ಉಂಟು. ರಸನಿಷ್ಪತ್ತಿಯನ್ನು ಕುರಿತು ಲೊಲ್ಲಟ, ಶಂಕುಕ, ಭಟ್ಟನಾಯಕ, ಅಭಿನವಗುಪ್ತ ಇವರ ವಾದಗಳು ಭಾರತೀಯ ಕಾವ್ಯಮೀಮಾಂಸಾ ಶಾಸ್ತ್ರದಲ್ಲಿ ಪ್ರಸಿದ್ಧವಾಗಿವೆ. ಧನಂಜಯನೂ ಧನಿಕನೂ "ಧ್ವನಿ" ಸಿದ್ಧಾಂತದ ವಿರೋಧಿಗಳು. "ಭಾವನೆ"ಯ ಮೂಲಕ ರಸದ ಆಸ್ವಾದವುಂಟಾಗುತ್ತದೆ ಎಂದು ಅವರು

ಪ್ರತಿಪಾದಿಸುತ್ತಾರೆ. ಇವರ ಮತ ಭಟ್ಟನಾಯಕನ ನಿಲವನ್ನು ಹೋಲುತ್ತದೆ. ಈ ಜಟಿಲವಾದ ಶಾಸ್ತ್ರೀಯ ಚರ್ಚೆಗೆ ಇಲ್ಲಿ ಕೈಹಾಕದೆ 'ದಶರೂಪಕ'ದ ಈ ಭಾಗದಿಂದ ಎರಡು ಪಂಕ್ತಿಗಳನ್ನು ಮಾತ್ರ ಉದಾಹರಿಸಬಹುದು :

> ಕ್ರೀಡತಾಂ ಮೃಣ್ಮಯೈರ್ಯದ್ವತ್ ಬಾಲಾನಾಂ ದ್ವಿರದಾದಿಭಿಃ ।
> ಸ್ವೋತ್ಸಾಹಃ ಸ್ವದತೇ ತದ್ವತ್ ಶ್ರೋತೃಣಾಮರ್ಜುನಾದಿಭಿಃ ॥

"ಮಣ್ಣಿನ ಆನೆ ಮೊದಲಾದವುಗಳನ್ನು ಇಟ್ಟುಕೊಂಡು ಆಡುವಾಗ ಮಕ್ಕಳು ತಮ್ಮ ಉತ್ಸಾಹವನ್ನೇ ಯಾವ ರೀತಿಯಲ್ಲಿ ಸವಿಯುತ್ತಾರೋ ಅದೇ ರೀತಿಯಲ್ಲಿ ಶ್ರೋತೃಗಳು (ಎಂದರೆ ಸಾಮಾಜಿಕರು) ಅರ್ಜುನ ಮೊದಲಾದ ಕಥಾ ಪುರುಷರ ಮೂಲಕ [ತಮ್ಮ ಸ್ಥಾಯಿಭಾವದ ಆಸ್ವಾದವನ್ನೇ ಪಡೆಯುತ್ತಾರೆ.]"

ರಸಗಳ ಸಂಖ್ಯೆ ಎಷ್ಟು? ಇದನ್ನು ಕುರಿತೂ ವಿಪುಲವಾದ ಚರ್ಚೆ ನಮ್ಮ ದೇಶದಲ್ಲಿ ನಡೆದಿದೆ. ಭರತನು 'ನಾಟ್ಯಶಾಸ್ತ್ರ'ದಲ್ಲಿ ಹೇಳಿದ್ದು ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತ–ಎಂಬ ಎಂಟೇ ರಸಗಳು. ಇವುಗಳ ಜೊತೆಗೆ ಒಂಬತ್ತನೆಯದಾಗಿ ಶಾಂತರಸವನ್ನು ಸೇರಿಸಬೇಕೆಂಬ ಅಭಿಪ್ರಾಯ ಆಮೇಲೆ ತಲೆಯೆತ್ತಿತ್ತು. ಆನಂದವರ್ಧನನು ತನ್ನ 'ಧ್ವನ್ಯಾಲೋಕ'ದಲ್ಲಿ ಶಾಂತರಸಕ್ಕೆ ಪ್ರಾಶಸ್ತ್ಯವನ್ನು ಕೊಟ್ಟನು. (ಈಚೆಗೆ ಬಂದ ಅಭಿನವಗುಪ್ತನಂತೂ ಅದಕ್ಕೆ ಎಲ್ಲಕ್ಕೂ ಹಿರಿಯ ಪಟ್ಟವನ್ನು ಕಟ್ಟಿದನು.) ಆದರೆ ಧನಂಜಯನು ರಸಗಳಿಗೆ ಆಧಾರಭೂತವಾದ ಸ್ಥಾಯಿಭಾವಗಳ ಪಟ್ಟಿಯನ್ನು ಕೊಡುತ್ತಾ, "ಶಮಮಪಿ ಕೇಚಿತ್ ಪ್ರಾಹುಃ ಪುಷ್ಟಿರ್ನಾಟ್ಯೇಷು ನೈತಸ್ಯ" ("ಶಮವೆಂಬುದೂ ಉಂಟೆಂದು ಕೆಲವರು ಹೇಳುತ್ತಾರೆ; ಆದರೆ ನಾಟ್ಯಗಳಲ್ಲಿ ಅದಕ್ಕೆ ಪುಷ್ಟಿಯಿಲ್ಲ") ಎಂದು ತನ್ನ ಅಭಿಪ್ರಾಯವನ್ನು ತಿಳಿಸುತ್ತಾನೆ. ಎಂದರೆ ಅವನ ಮತದಂತೆ ರೂಪಕಗಳಲ್ಲಿ ಶಾಂತರಸಕ್ಕೆ ಸ್ಥಾನವಿಲ್ಲ. ಶಾಂತರಸವನ್ನು ಕುರಿತ ಚರ್ಚೆಗಳಲ್ಲಿ ಹರ್ಷ ಚಕ್ರವರ್ತಿಯ 'ನಾಗಾನಂದ ನಾಟಕ'ದ ಹೆಸರು ಪ್ರಮುಖವಾಗಿ ಬರುತ್ತದೆ. ಈ ನಾಟಕದಲ್ಲಿ ಶಾಂತರಸವುಂಟೆಂದು ಆನಂದವರ್ಧನಾದಿಗಳ ಅಭಿಪ್ರಾಯ. ಆದರೆ ಇದನ್ನು ಧನಿಕನು ತನ್ನ ವ್ಯಾಖ್ಯಾನದಲ್ಲಿ ಪ್ರಬಲವಾಗಿ ವಿರೋಧಿಸುತ್ತಾನೆ; ಇಲ್ಲಿಯ ಸ್ಥಾಯಿ "ಶಮ"ವಲ್ಲ, "ದಯೋತ್ಸಾಹ" ಎನ್ನುತ್ತಾನೆ. ನಾಟ್ಯದಲ್ಲಿ ಶಾಂತರಸದ ಪ್ರತಿಪಾದನೆ ಸಾಧ್ಯವೆ ಅಲ್ಲವೆ ಎಂಬುದನ್ನು ಕುರಿತು ಧನಂಜಯ ಧನಿಕರ ವಾದವನ್ನು ಒಪ್ಪದಿರುವುದು ಸಾಧ್ಯ. ಆದರೆ 'ನಾಗಾನಂದ ನಾಟಕ'ದ ವಿಷಯದಲ್ಲಿ ಮಾತ್ರ ಧನಿಕನ ಅಭಿಪ್ರಾಯವನ್ನು ಅಂಗೀಕರಿಸಬೇಕೆಂದು ತೋರುತ್ತದೆ.

'ದಶರೂಪಕ'ದ ಎರಡು ಪದ್ಯಗಳು ತುಂಬ ಪ್ರಸಿದ್ಧವಾಗಿವೆ. ಅವುಗಳಲ್ಲಿ ಒಂದು ಗ್ರಂಥದ ಪ್ರಾರಂಭ ಭಾಗದಲ್ಲೂ ಇನ್ನೊಂದು ಅದರ ಪರಿಸಮಾಪ್ತಿಯಲ್ಲೂ ಬರುತ್ತವೆ. ಮೊದಲನೆಯ ಪದ್ಯ ಹೀಗಿದೆ :

ಆನಂದನಿಸ್ಯಂದಿಷು ರೂಪಕೇಷು
ವ್ಯುತ್ಪತ್ತಿಮಾತ್ರಂ ಫಲಮಲ್ಪಬುದ್ಧಿಃ ।
ಯೋಽಪೀತಿಹಾಸಾದಿವದಾಹ ಸಾಧುಃ
ತಸ್ಮೈ ನಮಃ ಸ್ವಾದುಪರಾಙ್ಮುಖಾಯ ॥

ರೂಪಕಗಳಿಂದ ದೊರೆಯುವ ಪ್ರಯೋಜನವೇನು ಎಂಬ ವಿಷಯವನ್ನು ಕುರಿತು ಧನಂಜಯನು ಇಲ್ಲಿ ಪ್ರಸಂಗಿಸುತ್ತಿದ್ದಾನೆ. ರೂಪಕಗಳು ಆನಂದವನ್ನು ಹೊರಸೂಸತಕ್ಕ ಕೃತಿಗಳು. ಅವುಗಳನ್ನು ನೋಡುವವರಿಗೆ–ಅಷ್ಟೇಕೆ, ಓದುವವರಿಗೆ ಕೂಡ–ಆನಂದಮಯವಾದ ರಸಾಸ್ವಾದವುಂಟಾಗುತ್ತದೆ. ಹೀಗಿರುವಾಗ, ಅವುಗಳ ಫಲವೆಲ್ಲ ಕೇವಲ ತಿಳಿವಳಿಕೆ, ಯುಕ್ತಾಯುಕ್ತ ಪರಿಜ್ಞಾನ–ಧರ್ಮಾಧರ್ಮಗಳನ್ನು ತಿಳಿಸುವ ಇತಿಹಾಸಗಳಲ್ಲಿ ಹೇಗೋ ಹಾಗೆ ಎಂದು ಕೆಲವು ಮಂದಿ ಅಲ್ಪಮತಿಗಳು ಹೇಳುತ್ತಾರಲ್ಲ. ಸವಿಕಟ್ಟು ಕಣ್ಣಮುಂದೆಯೇ ಇದ್ದರೂ ಒಲ್ಲದೆ ಅದರ ಕಡೆಗೆ ಬೆನ್ನು ಮಾಡಿ ಎದುರುದಿಕ್ಕಿಗೆ ಮೋರೆಯನ್ನು ತಿರುಗಿಸಿಕೊಂಡಿರುವ ಅಂಥ ಸಜ್ಜನರಿಗೆ ಇದೋ ನಮಸ್ಕಾರ!–ಎಂದು ಧನಂಜಯನು ಇಲ್ಲಿ ಉಪಹಾಸ ಮಾಡಿದ್ದಾನೆ.

ರೂಪಕಗಳಿಗೆ ಮಾತ್ರವಲ್ಲ; ಸಾಹಿತ್ಯಕ್ಕೆ ಮಾತ್ರವಲ್ಲ; ಎಲ್ಲ ಕಲೆಗಳಿಗೂ ಅನ್ವಯಿಸತಕ್ಕ ಮಾತು ಇದು. ಕಲೆಯ ಫಲವನ್ನು ಕುರಿತು ನಮ್ಮ ದೇಶದಲ್ಲಿ ಮಾತ್ರವಲ್ಲದೆ ಅನ್ಯದೇಶಗಳಲ್ಲೂ ಬಲುಹಿಂದಿನಿಂದ ಚರ್ಚೆ ನಡೆದಿದೆ. ಅದರಿಂದ ಲೋಕಜ್ಞಾನ ಬರುತ್ತದೆ; ನೀತಿಬೋಧೆ ಉಂಟಾಗುತ್ತದೆ ಎಂದು ಒತ್ತಿ ಹೇಳುವವರು ಯಾವಾಗಲೂ ಉಂಟು. ಈ ಪ್ರಯೋಜನ ದೊರೆಯುವುದೇ ಇಲ್ಲ ಎಂದು ಸಂಪೂರ್ಣವಾಗಿ ಅಲ್ಲಗಳೆಯುವುದು ತಪ್ಪು; ಅನುಭವಕ್ಕೆ ವಿರೋಧ. ಆದರೆ ಕೆಲವು ಮಂದಿ ನೀತಿತತ್ವರರು ಇಂಥ "ವ್ಯುತ್ಪತ್ತಿ"ಯೇ ಕಲೆಯ ಪ್ರಯೋಜನ; ಇದೊಂದನ್ನೇ ಅಲ್ಲಿ ಅರಸಬೇಕು ಎಂದು ಹೇಳುವುದೂ ಉಂಟು. ಇಂಥವರನ್ನು ಕುರಿತು ಧನಂಜಯನ ಟೀಕೆ. ನಾಟಕದ ಪರಮ ಫಲ ಆನಂದಾನುಭವ. ಅದೊಂದು ಇದ್ದರೆ ಮತ್ತೆ ಯಾವ ಫಲ ದೊರೆಯದಿದ್ದರೂ ಚಿಂತೆಯಿಲ್ಲ; ಅದರ ಜೊತೆಗೆ ಮತ್ತೆ ಯಾವ ಫಲ ದೊರೆತರೂ ನಾವು ಬೇಡವೆನ್ನುವುದಿಲ್ಲ. ಈ ಮುಖ್ಯ ಪ್ರಯೋಜನದ ಕಡೆಗೆ ಮಾತ್ರ ಕಣ್ಣು ಮುಚ್ಚಿಕೊಳ್ಳಬೇಡಿ ಎಂದು ಅವನ ಎಚ್ಚರಿಕೆ.

'ದಶರೂಪಕ'ದಿಂದ ಉದಾಹರಿಸಬೇಕೆಂದಿರುವ ಇನ್ನೊಂದು ಪದ್ಯ ಇದು.

ರಮ್ಯಂ ಜುಗುಪ್ಸಿತಮುದಾರಮಥಾಪಿ ನೀಚಂ
ಉಗ್ರಂ ಪ್ರಸಾದಿ ಗಹನಂ ವಿಕೃತಂ ಚ ವಸ್ತು ।
ಯದ್ವಾಪ್ಯವಸ್ತು ಕವಿಭಾವಕಭಾವ್ಯ ಮಾನಂ
ತನ್ನಾಸ್ತಿ ಯನ್ನ ರಸಭಾವಮುಪೈತಿ ಲೋಕೇ ॥

ನಾಟಕದಲ್ಲಿ, ಕಾವ್ಯದಲ್ಲಿ, ಯಾವುದೇ ಕಲೆಯಲ್ಲಿ, ಪ್ರತಿಪಾದಿಸಲು ಅರ್ಹವಾದ ವಸ್ತು ಅಥವಾ ವಿಷಯ ಎಂಥದಾಗಿರಬೇಕು ಎಂಬುದು ಅನೇಕರನ್ನು ಬಾಧಿಸಿರುವ

ಪ್ರಶ್ನೆ. ತಮ್ಮ ತಮ್ಮ ಒಲವುಗಳಿಗೆ, ನಂಬಿಕೆಗಳಿಗೆ, ಹಿನ್ನೆಲೆಗಳಿಗೆ ಅನುಸಾರವಾಗಿ ಕಲೋಪಾಸಕರೂ ವಿಚಾರಕರೂ ಇಂಥ ವಸ್ತುವನ್ನು ಆರಿಸಿಕೊಳ್ಳಬೇಕು, ಇಂಥದನ್ನು ಮುಟ್ಟಕೂಡದು ಎಂದು ವಿಧಿನಿಷೇಧಗಳ ವ್ಯವಸ್ಥೆ ಮಾಡಿರುವುದೂ ಉಂಟು. ಮಡಿವಂತಿಕೆ, ವಾಸ್ತವಿಕತೆ, ರಂಜಕತೆ, ಅಶ್ಲೀಲ, ಕ್ರಾಂತಿ–ಈ ಮೊದಲಾದವುಗಳನ್ನು ಕುರಿತ ವಾದಗಳೆಲ್ಲ ಇಲ್ಲಿ ಏಳುತ್ತವೆ, ಬೀಳುತ್ತವೆ.

ಈ ಸಮಸ್ಯೆಗೆ ಧನಂಜಯನು ತನ್ನ ಪದ್ಯದಲ್ಲಿ ಧೀರೋದಾತ್ತವಾದ ಉತ್ತರವನ್ನು ಕೊಡುತ್ತಾನೆ. ಕಲಾವಸ್ತು ಇಂಥದೇ ಆಗಿರಬೇಕೆಂಬ ಯಾವ ನಿಯಮನವೂ ಇಲ್ಲ. ಲೋಕದಲ್ಲಿ ಅದು ರಮ್ಯವಾಗಿರಬಹುದು, ಅಸಹ್ಯವಾಗಿರಬಹುದು, ಉದಾತ್ತವಾಗಿರ ಬಹುದು, ನೀಚವಾಗಿರಬಹುದು, ಭೀಷಣವಾಗಿರಬಹುದು, ಪ್ರಸನ್ನವಾಗಿರಬಹುದು, ಕ್ಲಿಷ್ಟವಾಗಿರಬಹುದು, ವಿಕೃತವಾಗಿರಬಹುದು; ಅದು ಇಂದ್ರಿಯಗಳ ಗ್ರಹಣಕ್ಕೆ ಅತೀತವಾದ "ಅವಸ್ತು"ವೇ ಆಗಿರಬಹುದು. ರಸತ್ವವನ್ನು ಹೊಂದಲಾರದ, ಎಂದರೆ ಕಲಾತ್ಮಕವಾದ ಪ್ರತಿಪಾದನೆಗೆ ಅಳವಡದ, ಯಾವುದೊಂದು ವಸ್ತುವೂ ಲೋಕದಲ್ಲಿ ಇಲ್ಲ. ಆದರೆ ಒಂದು ಎಚ್ಚರಿಕೆ : "ಕವಿಭಾವಕ ಭಾವ್ಯಮಾನಂ" ಎಂಬ ವಿಶೇಷಣ ಅದನ್ನು ನಿರ್ದೇಶಿಸುತ್ತದೆ. ಈ "ವಸ್ತು" ಯಾವುದೇ ಆಗಿರಲಿ, ಕವಿ ಅದನ್ನು ಹಸಿಹಸಿಯಾಗಿ ಹೇಳಿಬಿಡದೆ, "ಭಾವಿಸಿ" (ಎಂದರೆ ಪ್ರತಿಭಾದೃಷ್ಟಿಯಿಂದ ಪರಿಭಾವಿಸಿ) ನಿರೂಪಿಸಬೇಕು. ಭಾವಕ (ಎಂದರೆ ಸಹೃದಯನೂ) ಅದನ್ನು "ಭಾವಿಸಿ" ಆಸ್ವಾದಿಸಬೇಕು. ಒಂದು ವಸ್ತು ಲೋಕದಲ್ಲಿ ಯಾವ ಸ್ವರೂಪದ್ದೇ ಆಗಿರಲಿ; ಲೌಕಿಕವಾದ ಪರಿಸರಣಕ್ಕೆ ಅನುಗುಣವಾಗಿ ಪ್ರೀತಿ, ದ್ವೇಷ, ಜುಗುಪ್ಸೆ, ಉತ್ಸಾಹ, ಶೋಕ, ವಿಸ್ಮಯ ಈ ಮೊದಲಾದ ಚಿತ್ತವೃತ್ತಿಗಳಲ್ಲಿ ಯಾವುದನ್ನೇ ಉಕ್ಕಿಸತಕ್ಕದ್ದಾಗಿರಲಿ–ಅದು ಕವಿಪ್ರತಿಭೆಯಲ್ಲಿ ಮಿಂದು ಬಂದರೆ, ಸಹೃದಯ ಪ್ರತಿಭೆಯಲ್ಲಿ ಮತ್ತೆ ಹೊಮ್ಮಿ ಬಂದರೆ ಅದಕ್ಕೆ ರಸಮಯತೆ ಬರುತ್ತದೆ; ಅದು ನಿರ್ಮಲವಾದ ಲೋಕೋತ್ತರವಾದ ಆನಂದವನ್ನು ಸೂಸುತ್ತದೆ. ಲೋಕಕ್ಕೂ ಕಲೆಗೂ ವ್ಯತ್ಯಾಸವಿರುವುದು ಇಲ್ಲಿ; ಕವಿ–ಸಹೃದಯರ ಹೊಣೆಗಾರಿಕೆ ಇರುವುದೂ ಇಲ್ಲಿ.

ದಶರೂಪಕಕಾರನು ಈ ಎರಡು ಪದ್ಯಗಳಲ್ಲಿ ಹೊಸದೇನನ್ನೂ ಹೇಳಿಲ್ಲ. ಇವು ಭಾರತೀಯ ಕಾವ್ಯಮೀಮಾಂಸೆಯಲ್ಲಿ ಸುಪರಿಚಿತವಾದ ಮೂಲತತ್ತ್ವಗಳು. ಆದರೆ ಇವನ್ನು ಸ್ಫುಟವಾದ ದೃಢವಾದ ರಮ್ಯವಾದ ರೂಪದಲ್ಲಿ ಕಡೆದು ಎತ್ತಿ ಹಿಡಿದಿರುವುದಕ್ಕಾಗಿ ಧನಂಜಯನಿಗೆ ನಮ್ಮ ವಿಶೇಷ ಕೃತಜ್ಞತೆ ಸಲ್ಲಬೇಕು.

ಕಾವ್ಯಾನುಭವ : ೧೯೭೦

ಸಂಸ್ಕೃತ ಕವಿಚರಿತೆ*

ಸಂಸ್ಕೃತವು ನಮ್ಮ ಪ್ರಾಚೀನ ಸಂಸ್ಕೃತಿಯ ಕೈಗನ್ನಡಿ. ಅದು ಸಾಹಿತ್ಯವು ಪ್ರಪಂಚದ ಉತ್ತಮ ಸಾಹಿತ್ಯಗಳಲ್ಲಿ ಗಣನೆಗೆ ಬರತಕ್ಕದ್ದು. ಅದರ ಕವಿ ಪ್ರಮುಖರ ಹೆಸರು ದೇಶ ವಿದೇಶಗಳಲ್ಲೆಲ್ಲಾ ಪ್ರಸಿದ್ಧವಾಗಿದೆ. ಸಂಸ್ಕೃತ ಸಾಹಿತ್ಯ ವಿಚಾರದಲ್ಲಿ ನಾವು ಆಸಕ್ತಿ ವಹಿಸುವುದಕ್ಕೆ ಈ ಕಾರಣವೇ ಸಾಕು. ಆದರೆ ಇಷ್ಟಕ್ಕೇ ಮುಗಿಯಲಿಲ್ಲ. ಆ ಸಾಹಿತ್ಯದ ಬೆಂಬಲದಿಂದ ಕನ್ನಡದಲ್ಲಿ ಇದುವರೆಗೆ ಎಷ್ಟೋ ಗ್ರಂಥಗಳು ಹುಟ್ಟಿವೆ; ಹಳಗನ್ನಡದ ಗ್ರಂಥರಾಶಿಗೆಲ್ಲಾ ಒಂದಲ್ಲ ಒಂದು ವಿಧದಲ್ಲಿ ಸಂಸ್ಕೃತವೇ ಪ್ರೇರಕವೆನ್ನಬಹುದು. ಈಗಲೂ ಸಂಸ್ಕೃತದ ಬಾಂಧವ್ಯವು ಕನ್ನಡಕ್ಕೆ ಬಿಟ್ಟಿಲ್ಲ; ಅದರ ಸಾಹಿತ್ಯದಿಂದ ಇನ್ನೂ ಎಷ್ಟೋ ಉಪಕಾರವನ್ನು ನಾವು ಹೊಂದಬೇಕಾಗಿದೆ. ಹೀಗೆ ನಮಗೆ ಅಂಟಿಕೊಂಡು ಉತ್ತಮವೂ ಉತ್ತೇಜನಕವೂ ಆಗಿರುವ ಗ್ರಂಥರಾಶಿಯ ಪರಿಚಯವು ಯಾವ ಕನ್ನಡಿಗನಿಗೆ ತಾನೆ ಬೇಕಾಗಿಲ್ಲ? ಆ ಸಾಹಿತ್ಯವು ಬೆಳೆದ ರೀತಿಯನ್ನೂ ಅದನ್ನು ಬೆಳೆಸಿದ ಕವಿಗಳ ವಿಷಯವನ್ನೂ ತಕ್ಕಮಟ್ಟಿಗಾದರೂ ನಾವು ತಿಳಿದ ಹೊರತು, ಸಂಸ್ಕೃತದಿಂದ ಸರಿಯಾದ ಪ್ರಯೋಜನವನ್ನು ಕನ್ನಡಭಾಷೆಗೆ ಪಡೆಯುವುದು ಹೇಗೆ

* ಪ್ರಥಮ ಸಂಪುಟ–ಲೇಖಕರು : ಶ್ರೀಮಾನ್ ಎಮ್.ಎನ್ – ಶ್ರೀನಿವಾಸ ಅಯ್ಯಂಗಾರ್ಯರು. ೧೯೨೮ : ವಿಮರ್ಶೆ (ಪ್ರಬುದ್ಧ ಕರ್ನಾಟಕ ೧೧.೨)

ಸಾಧ್ಯ? ಸಂಸ್ಕೃತ ಸಾಹಿತ್ಯದ ಮಹತ್ತ್ವವನ್ನು ನೋಡಿದರೆ, ಅದರ ಪರಿಚಯವನ್ನು ಮಾಡಿಕೊಡುವ ಪುಸ್ತಕಗಳು ಕನ್ನಡದಲ್ಲಿ ಈ ವೇಳೆಗೆ ಎಷ್ಟೊ ಹುಟ್ಟಿರಬೇಕಾಗಿತ್ತು. ಆದರೇನು? ನಮ್ಮ ಜನರಲ್ಲಿ ಪ್ರಚುರವಾಗಿರುವ ತಿಳಿವಳಿಕೆಯಲ್ಲಾ ಅಜ್ಞಾತರು ಬರೆದ ಚಾಟು ಶ್ಲೋಕಗಳಲ್ಲಿ ನೆಲಸಿದೆ; 'ಭೋಜಪ್ರಬಂಧ'ದ ದಂತಕಥೆಗಳಲ್ಲಿ ಕೊನೆಯಾಗಿದೆ. ಭೋಜರಾಜನ ಆಸ್ಥಾನದಲ್ಲಿ ಕಾಳಿದಾಸ, ಬಾಣ, ಭವಭೂತಿ—ಈ ಕವಿಗಳೆಲ್ಲರೂ ಇದ್ದರೆಂದು ಹೇಳಿದರೆ, ಅವರಲ್ಲಿ ಒಬ್ಬೊಬ್ಬನಿಗೂ ಅನೇಕ ಶತಮಾನಗಳಷ್ಟು ಆಯುಸ್ಸು ಹಾಕಿಕೊಟ್ಟಂತೆ ಆಗುತ್ತದೆ; ಅಥವಾ ಭಿನ್ನಭಿನ್ನ ಕಾಲಗಳಲ್ಲಿ ಸ್ವರ್ಗಸ್ಥರಾದ ಕವಿಗಳನ್ನೆಲ್ಲಾ—ಕಾಳಿದಾಸನೊಬ್ಬನನ್ನೇ ಅಲ್ಲ—ಭೋಜರಾಜನ ಔದಾರ್ಯದ ಮಹಿಮೆ ಅವನ ಸಭೆಗೆ ಆಕರ್ಷಿಸಿದಂತೆ ಆಗುತ್ತದೆ : ಈ ಪರಿಹಾಸ್ಯದ ಅರಿವು ನಮ್ಮಲ್ಲಿ ಅನೇಕರಿಗೆ ಉಂಟಾಗಿಲ್ಲ. ಈ ಅಜ್ಞಾನವನ್ನೆಲ್ಲಾ ಚದರಿಸಿ ಶಾಸ್ತ್ರೀಯವಾದ ತಿಳಿವಳಿಕೆಯನ್ನು ಜನರಲ್ಲಿ ಹುಟ್ಟಿಸುವ ಪ್ರಯತ್ನವನ್ನು—ಅದರಲ್ಲೂ ಮೊಟ್ಟಮೊದಲನೆಯ ಪ್ರಯತ್ನವನ್ನು—ಎಷ್ಟು ಹೊಗಳಿದರೂ ಸಾಲದು. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್ಯರು ಕನ್ನಡದಲ್ಲಿ ಇದುವರೆಗೆ ಯಾರೂ ಮಾಡದ ಈ ಕಾರ್ಯಕ್ಕೆ ಕೈಹಾಕಿ ಕನ್ನಡಿಗರೆಲ್ಲರ ವಂದನೆಗೆ ಪಾತ್ರರಾಗಿದ್ದಾರೆ. ನಮ್ಮ ಇದುವರೆಗಿನ ದುರವಸ್ಥೆ ಅವರ ಮನಸ್ಸಿಗೆ ಹೆಚ್ಚಾಗಿ ಯಾತನೆಕೊಟ್ಟಿರಬೇಕು:

> "....ಇಂತಹ ಮನೋರಂಜಕ ಕಲ್ಪಿತ ಕಥೆಗಳೇ ಪ್ರಚಾರದಲ್ಲಿರುವುದು ಹೊರತು ಅವುಗಳ ತಥ್ಯಾಂಶದ ಕಡೆಗೆ ಲಕ್ಷ್ಯಕೊಟ್ಟು ಅವರವರ [=ಕವಿಗಳ] ಕಾಲ ದೇಶ ಸ್ಥಿತಿಗತಿಗಳನ್ನು ವಿಮರ್ಶಿಸಿ ಬರೆಯಲ್ಪಟ್ಟಿರುವ ದೇಶೀಯ ಸಾಹಿತ್ಯವು ಯಾವುದೂ ಕಂಡುಬರುವುದಿಲ್ಲ. ಇಂತಹ ಚಾರಿತ್ರಕ ಗ್ರಂಥ ರಚನೆಗೆ ವಿದೇಶೀಯ ಪಂಡಿತರು ನಮಗೆ ಮಾರ್ಗದರ್ಶಕರಾಗಿರುವರು."
> (ಪೀಠಿಕೆ, ೨೭)

ಎಂದು ವ್ಯಥೆಯಿಂದ ಹೇಳಿದ್ದಾರೆ. ಈ ಕೊರತೆಯನ್ನು ಪೂರ್ಣ ಮಾಡುವುದಕ್ಕಾಗಿಯೇ ಅವರು 'ಸಂಸ್ಕೃತ ಕವಿಚರಿತೆ'ಯನ್ನು ಬರೆದಿದ್ದಾರೆ.

'ಸಂಸ್ಕೃತ ಕವಿಚರಿತೆ' ಆ ಕವಿಪರಂಪರೆಯಂತೆಯೇ ವಿಸ್ತಾರವಾಗಿದೆ. ಈಗ ಪ್ರಕಟವಾಗಿರುವುದು ಅದರ ಪ್ರಥಮ ಸಂಪುಟ. ಇದರಲ್ಲಿ, ವೈದಿಕಸಾಹಿತ್ಯದ ಪ್ರಸ್ತಾವಕ್ಕೆ ಹೋಗದೆ, ಆದಿಕವಿಯೆನಿಸಿದ ವಾಲ್ಮೀಕಿಯಿಂದ ಮೊದಲು ಮಾಡಿ ಕ್ರಿ.ಶ. ೮೦೦ರ ವರೆಗೆ ಬಾಳಿದ ಕವಿಗಳ ವಿಷಯವನ್ನು ಚರ್ಚಿಸಿದ್ದಾರೆ. ಇಷ್ಟು ವಿಚಾರಕ್ಕೆ ೪೩೬ (=೧೦೫+೩೩೧) ಪುಟಗಳನ್ನು ಗ್ರಂಥಕರ್ತರು ವಿನಿಯೋಗಿಸಿರುವುದನ್ನು ನೋಡಿದರೆ ಸಾಕು, ಅವರು ಪಟ್ಟಿರುವ ಶ್ರಮವು ವ್ಯಕ್ತವಾಗುತ್ತದೆ. ಇದನ್ನು ಬರೆಯುವುದಕ್ಕೆ ಅವರು ಎಷ್ಟೋ ಗ್ರಂಥಗಳನ್ನು ಓದಿದ್ದಾರೆ, ಶೋಧಿಸಿದ್ದಾರೆ. ಸಂಸ್ಕೃತದ ಮೂಲ ಗ್ರಂಥಗಳು, ಇಂಗ್ಲೀಷಿನ ವಿಮರ್ಶಗ್ರಂಥಗಳು—ಇವುಗಳ ಪರಿಚಯವನ್ನು ಮಾತ್ರವೇ ಅಲ್ಲ; ಮರಾಠಿ, ತೆಲುಗು ಮೊದಲಾದ ದೇಶೀಯ ಭಾಷೆಗಳಲ್ಲಿ ಸಂಸ್ಕೃತಕವಿಜೀವಿತದ ಮೇಲೆ ಹುಟ್ಟಿರುವ ಗ್ರಂಥಗಳ ಪರಿಚಯವನ್ನು ಕೂಡ ತೋರ್ಪಡಿಸಿದ್ದಾರೆ. ಇದಲ್ಲದೆ, ತಮ್ಮ ಸ್ವತಂತ್ರಾಭಿಪ್ರಾಯಗಳನ್ನು ಹಲವು ಕಡೆಗಳಲ್ಲಿ ಪ್ರಕಟಿಸಿದ್ದಾರೆ. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್ಯರ

ಉದ್ಯೋಗವು ಸಂಸ್ಕೃತಕ್ಕೆ ಸಂಬಂಧಪಟ್ಟದ್ದಲ್ಲವೆಂದೂ, ಅವರಿಗೆ ಬೆಂಗಳೂರಿನ ಮಿಂಟೋ ಕಣ್ಣಾಸ್ಪತ್ರೆಯಲ್ಲಿ ಕೆಲಸವಿದೆಯೆಂದೂ ಕೇಳುತ್ತೇವೆ. ಇದು ತಿಳಿದ ಮೇಲಂತೂ, ಅವರ ಅವ್ಯಾಜವಾದ ಭಾಷಾಪ್ರೇಮವನ್ನೂ ಸಂತತಶ್ರಮವನ್ನೂ ಮೆಚ್ಚದವರು ಯಾರು? ಈ ಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾನಿಲಯದವರು ಬಹುಮಾನವನ್ನು ದಯಪಾಲಿಸಿ ಪ್ರೋತ್ಸಾಹಿಸಿದ್ದಾರೆಂದು ತಿಳಿಯಬರುತ್ತದೆ. ಇದು ಸಂತೋಷಕರವಾದ ಸಂಗತಿ. ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ಬೆಳಗಿದ ಮಹಾಕವಿಗಳಲ್ಲಿ ಹೆಚ್ಚು ಕಡಮೆ ಎಲ್ಲರ ವಿಚಾರವೂ ಈ ಸಂಪುಟದಲ್ಲಿಯೇ ಬಂದಿದೆಯಾದರೂ ಉಳಿದ ಕವಿಗಳ ವಿಷಯವನ್ನು ತಿಳಿಸುವ ದ್ವಿತೀಯ ಸಂಪುಟವೂ ಬೇಗ ಹೊರಬೀಳಲೆಂದು ಕೋರುತ್ತೇವೆ.

ಪ್ರಥಮ ಪ್ರಯತ್ನಗಳಲ್ಲಿ ಲೋಪ ದೋಷಗಳುಂಟಾಗುವುದು ಸಹಜ. ಎಷ್ಟೋ ವೇಳೆ, ಅವುಗಳನ್ನು ಕುರಿತು ಪ್ರಸಂಗಿಸುವುದೇ ಅನುಚಿತವೆನ್ನಬಹುದು. ಆದರೂ, ಈ ಬಗೆಯ ಗ್ರಂಥಗಳು ನಿರ್ದುಷ್ಟವಾದ ಜ್ಞಾನವನ್ನು ಜನರಲ್ಲಿ ಹರಡುವುದಕ್ಕಾಗಿ ಹುಟ್ಟುವುದರಿಂದ, ಇಂಥ ಕೃತಿಯೊಂದು ಯಾವ ರೀತಿಯಲ್ಲಿ ಇದ್ದಿದ್ದರೆ ಇನ್ನೂ ಉತ್ತಮವಾಗುತ್ತಿತ್ತು, ಹೆಚ್ಚು ಉಪಯುಕ್ತವಾಗುತ್ತಿತ್ತು—ಎನ್ನುವುದನ್ನು ವಿಮರ್ಶಕನು ತನಗೆ ತೋರಿದಮಟಿಗೆ ಸೂಚಿಸದೆ ಹೋದರೆ ಅವನ ಕರ್ತವ್ಯಕ್ಕೆ ಲೋಪವು ಬರುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ಮನಸ್ಸು ಬಿಚ್ಚಿ ನಾಲ್ಕು ಮಾತನ್ನು ಬರೆಯುವುದು ಅಗತ್ಯವಾಗಿದೆ.

ಒಂದು ಸಾಹಿತ್ಯದ ಚರಿತ್ರೆಯನ್ನು ಬರೆಯಲು ಹೊರಟಾಗ ಎರಡು ಮಾರ್ಗಗಳನ್ನು ಅನುಸರಿಸಲು ಅವಕಾಶವುಂಟು. ಸಾಹಿತ್ಯವೆಂದರೆ ಒಂದು ಭಾಷೆಯಲ್ಲಿ ಬರೆದಿರುವ ಗ್ರಂಥಗಳ ಸಮುದಾಯವೆಂದು ಅರ್ಥವಿಟ್ಟುಕೊಂಡು, ಆ ಗ್ರಂಥಗಳನ್ನು ಬರೆದ ಕವಿಗಳೆಲ್ಲರ ಚರಿತ್ರೆಯನ್ನೂ ಅವರ ಗ್ರಂಥಗಳ ವಿಮರ್ಶೆಯನ್ನೂ ಅನುಕ್ರಮವಾಗಿ ಕೊಡುತ್ತಾ ಹೋಗುವುದು ಒಂದು ಮಾರ್ಗ. ಇದು ನೋಡುವುದಕ್ಕೆ ಸುಲಭವಾಗಿಯೂ ಸಕಾರಣವಾಗಿಯೂ ತೋರಿದರೂ ಇದರಲ್ಲಿ ಪ್ರಯೋಜನವು ಕಡಮೆ; ಕ್ಲೇಶವು ಹೆಚ್ಚು. ಒಂದು ಭಾಷೆಯಲ್ಲಿ ಬರೆದ ಎಲ್ಲಾ ಕವಿಗಳನ್ನೂ ಕೀರ್ತಿಸುವುದು ಸಾಧ್ಯವೆ? ಒಂದು ವೇಳೆ ಸಾಧ್ಯವಾದರೂ ಯುಕ್ತವೆ? ಕನ್ನಡದಂಥ ಅಲ್ಪವ್ಯಾಪ್ತಿಯ ಭಾಷೆಗೆ ಸೇವೆ ಸಲ್ಲಿಸಿದ ಕವಿಗಳೇ ಸಾವಿರಗಟ್ಟಳೆಯಾಗಿ ಇರುವಾಗ, ಹಿಂದೂ ದೇಶದಲ್ಲೆಲ್ಲಾ ವೈಭವದಿಂದ ಬಹುಕಾಲ ಮೆರೆದ ಸಂಸ್ಕೃತ ಭಾಷೆಯಲ್ಲಿ ಕಾವ್ಯರಚನೆಮಾಡಿದ ಕವಿಗಳ ಚರಿತ್ರೆಯನ್ನು ಬರೆಯುವುದು ಹಾಗಿರಲಿ, ಅವರೆಲ್ಲರ ಹೆಸರುಗಳನ್ನು ಪಟ್ಟಿಹಾಕುವುದೇ ಶ್ರಮಸಾಧ್ಯವಾಗುತ್ತದೆ. ಒಂದು ವೇಳೆ, ಹೀಗೆ ಎಲ್ಲ ಕವಿಗಳ ವಿಚಾರವನ್ನು ಬರೆದರೂ ಅದರಿಂದ ಉಪಯೋಗವು ಕಡಮೆ. ಆ ಅಸಂಖ್ಯಾತ ಕವಿಗಳಲ್ಲಿ ಕೆಲವರು ಮಾತ್ರವೇ ಗಣ್ಯರು, ಯಶಸ್ವಿಗಳು; ನಮಗೆ ಬೇಕಾದದ್ದು ಈ ಕೆಲವರ ವಿಷಯ. ಆದ್ದರಿಂದ ಕವಿಗಳ ಚರಿತ್ರೆಯನ್ನು ಬರೆಯಬೇಕೆನ್ನುವವರು ಕೂಡ ಕೆಲವರು ಕವಿಗಳನ್ನು ಮಾತ್ರ ಆಯ್ದುಕೊಂಡು ತಮ್ಮ ಗಮನವನ್ನೆಲ್ಲಾ ಅವರ ಕಡೆಗೇ ತಿರುಗಿಸಬೇಕಾಗುತ್ತದೆ.

ಈ ಮಾರ್ಗದಲ್ಲಿ ಇನ್ನೊಂದು ಕಷ್ಟವುಂಟು. ಸಂಸ್ಕೃತಸಾಹಿತ್ಯದಲ್ಲಿ ಪ್ರಸಿದ್ಧರಾದ ಕವಿಗಳನ್ನೇ ಕುರಿತು ಬರೆಯುತ್ತೇವೆ ಎಂದು ಇಟ್ಟುಕೊಳ್ಳೋಣ. ಅವರ ಜೀವನ ಚರಿತ್ರೆಯಲ್ಲಿ ನಮಗೆ ಏನು ಗೊತ್ತಿದೆ? ಅತ್ಯಂತ ಪ್ರಸಿದ್ಧನಾದ ಕಾಳಿದಾಸನಂಥ ಮಹಾಕವಿಯ ಕಾಲವೇ—ಚರಿತ್ರೆಯ ಮಾತೇಕೆ?—ಸರಿಯಾಗಿ ನಿರ್ಣಯಕ್ಕೆ ಬಂದಿಲ್ಲ. ಅವನು ಬರೆದ ಗ್ರಂಥಗಳು ಇಷ್ಟೇ, ಇಂಥವೇ ಸರಿ—ಎಂದು ಕೂಡ ಸರ್ವಸಮ್ಮತವಾಗಿ ನಿಷ್ಕರ್ಷೆಯಾಗಿಲ್ಲ. ಹೀಗಿರುವಲ್ಲಿ ಮಿಕ್ಕವರ ಪಾಡೇನು? ಇಷ್ಟೇ ಅಲ್ಲ. ಇದುವರೆಗೆ ಅನೇಕ ಗ್ರಂಥಗಳು ಸಿಕ್ಕಿವೆ. ಆದರೆ ಅವುಗಳನ್ನು ಬರೆದ ಕವಿಗಳು ಯಾರು ಎನ್ನುವುದೇ ಗೊತ್ತಾಗಿಲ್ಲ. ಇನ್ನು ಅವರ ಚರಿತ್ರೆಯನ್ನು ಬರೆಯುವುದು ಹೇಗೆ? ನಮ್ಮ ದೇಶದಲ್ಲಿ ವ್ಯಕ್ತಿಚರಿತ್ರೆಗೆ ಪ್ರಾಧಾನ್ಯವಿರಲಿಲ್ಲ. ಒಬ್ಬ ಮನುಷ್ಯನು ಎಲ್ಲಿ ಯಾವಾಗ ಹುಟ್ಟಿದನು, ಹೇಗೆ ಬಾಳಿದನು, ಅವನ ನಡೆನುಡಿಗಳಲ್ಲಿ ಸ್ವಾರಸ್ಯವೇನಾದರೂ ಇತ್ತೆ?—ಇದೆಲ್ಲವನ್ನೂ ಶೋಧಕ ದೃಷ್ಟಿಯಿಂದ ಪರಿಶೀಲಿಸಿ, ಇದ್ದ ಸಂಗತಿಯನ್ನು ಇದ್ದಂತೆಯೇ ನಿರೂಪಿಸುವ ಕುತೂಹಲವು ನಮ್ಮವರಿಗಿರಲಿಲ್ಲ. ಆದ್ದರಿಂದ ಒಬ್ಬ ಕವಿಯ ವಿಚಾರದಲ್ಲಿ ಕೆಲವು ಕಥೆಗಳು ಪ್ರಚುರವಾಗಿದ್ದರೂ ಅವನ್ನು ನಂಬುವುದಕ್ಕೇ ಮನಸ್ಸು ಹಿಂಜರಿಯುತ್ತದೆ. ಇಂಗ್ಲಿಷ್ ಮೊದಲಾದ ಪಾಶ್ಚಾತ್ಯಭಾಷೆಗಳಲ್ಲಿ ಅಲ್ಲಿಯ ಕವಿಗಳ ನಡೆ ನುಡಿಗಳನ್ನು ತಿಳಿಸುವ, ಮನೋರಂಜಕವಾದ, ಸತ್ಯಕಥೆಗಳು ಹಲವಿವೆ; ಅಂಥ ಕಥೆಗಳನ್ನು ಕೂಡಿಸುವುದರಲ್ಲಿ ಅಲ್ಲಿಯ ಜನರಿಗೆ ಆಸಕ್ತಿಯಿದೆ; ಅನೇಕ ಕವಿಗಳು ತಮ್ಮ ಜೀವನ ಚರಿತೆಗಳನ್ನು ತಾವೇ ಬರೆದಿಟ್ಟಿದ್ದಾರೆ. ಅಲ್ಲಿಯಂತೆ ನಮ್ಮಲ್ಲಿಯೂ ಕವಿಯ ಚರಿತ್ರೆಯನ್ನು ಅದರ ಸ್ವಾರಸ್ಯಕ್ಕಾಗಿಯೇ ಜನರು ಓದುವಂತೆ ಮಾಡಲು ಬೇಕಾದ ಸಾಮಗ್ರಿ ಎಲ್ಲಿದೆ? ಆ ಸಾಮಗ್ರಿಯಿಲ್ಲದೆ ಬರೆಯುವ ಕವಿಚರಿತೆಗಳಲ್ಲಿ ಚರ್ಚೆಗಳೂ ತಪ್ಪುಗಳೂ ಪ್ರಬಲವಾಗಿ ಗ್ರಂಥವು ಶುಷ್ಕವಾಗುವ ಸಂಭವವೇ ಹೆಚ್ಚು.

ಮೇಲೆ ಹೇಳಿದ ಮಾರ್ಗದಲ್ಲಿ ಬರೆದ ಗ್ರಂಥವನ್ನು ಉಪಚಾರಕ್ಕೆ ಮಾತ್ರ "ಸಾಹಿತ್ಯ ಚರಿತ್ರೆ"ಯೆಂದು ಕರೆಯಬಹುದು; ಅದು "ಕವಿ ಚರಿತ್ರೆ". ಒಂದು ಸಾಹಿತ್ಯದ ಜೀವಿತ ಕಾಲವನ್ನು ನಿಯತವಾದ ಕೆಲವು ಅವಧಿಗಳನ್ನಿಟ್ಟುಕೊಂಡು ವಿಭಾಗಿಸಿ, ಆಯಾ ಅವಧಿಗಳೊಳಗೆ ಕಾವ್ಯ, ನಾಟಕ, ಕಥೆ ಮೊದಲಾದ ಸಾಹಿತ್ಯಶಾಖೆಗಳು ಹೇಗೆ ಬೆಳೆದುವು ಎನ್ನುವುದನ್ನು ನಿರೂಪಿಸಿದರೆ ಅದು ನಿಜವಾದ "ಸಾಹಿತ್ಯಚರಿತ್ರೆ"ಯಾಗುತ್ತದೆ. ಇಂಗ್ಲಿಷ್ ಮೊದಲಾದ ಸಾಹಿತ್ಯಗಳ ಚರಿತ್ರೆಯನ್ನು ಬರೆಯುವಾಗ ಈ ಕ್ರಮವನ್ನು ಹಿಡಿಯುತ್ತಾರೆ. ಅಥವಾ ಸಾಹಿತ್ಯದ ಒಂದೊಂದು ಶಾಖೆಯ ಬೆಳವಳಿಗೆಯನ್ನೇ ಬೇರೆ ಬೇರೆಯಾಗಿ ಮೊದಲಿನಿಂದ ಕೊನೆಯವರೆಗೂ ತೋರಿಸಬಹುದು. ಈ ಕ್ರಮವನ್ನು ಪ್ರೊ. ಕೀತ್ ಮೊದಲಾದವರು ತಮ್ಮ ಸಂಸ್ಕೃತ ಸಾಹಿತ್ಯಚರಿತ್ರೆಗಳಲ್ಲಿ ಅನುಸರಿಸಿದ್ದಾರೆ. ಅಂತೂ ಈ ಮಾರ್ಗಗಳ ಸೌಕರ್ಯವೇನೆಂದರೆ—ಸಾಹಿತ್ಯವು ಬೆಳೆದ ಬಗೆಯನ್ನು ಸ್ಪಷ್ಟಪಡಿಸಬಹುದು. ಒಂದೊಂದು ಕಾಲದಲ್ಲಿ ಒಂದೊಂದು ರೀತಿಯ ಗ್ರಂಥಗಳು ಏಕೆ ಪ್ರಚಾರವಾಗಿದ್ದುವು ಎನ್ನುವುದನ್ನು ವ್ಯಕ್ತಪಡಿಸಬಹುದು; ಆ ಸಾಹಿತ್ಯದ ಶ್ರೇಷ್ಠಗ್ರಂಥ ಶ್ರೇಷ್ಠಕವಿಗಳಿಗೆ ಮಾತ್ರ ಗಮನಕೊಡಬಹುದು. ಇದು ದೊಡ್ಡ ಅನುಕೂಲತೆ. ಈ

ಬಗೆಯ ಚರಿತ್ರೆಗಳಿಂದಲೇ ನಾವು ಒಂದು ಸಾಹಿತ್ಯದ ಗುಣದೋಷ ಸ್ವಭಾವಗಳನ್ನು ಸುಲಭವಾಗಿ ಗ್ರಹಿಸುವುದು ಸಾಧ್ಯ. ಇಲ್ಲಿ, ಕವಿಚರಿತ್ರೆಗೂ ಅವಕಾಶ ಪ್ರಯೋಜನಗಳುಂಟು. ಶ್ರೇಷ್ಠನಾದ ಕವಿಯ ಚರಿತ್ರೆಯನ್ನು ಅವನ ಗ್ರಂಥಗಳ ವಿಚಾರವು ಬಂದ ಸಂದರ್ಭದಲ್ಲಿ ಕೊಡಬಹುದು. ಎಲ್ಲಾ ಸಾಹಿತ್ಯಚರಿತ್ರಕಾರರು ಮಾಡುವುದೂ ಹೀಗೆಯೇ.

ಈಗ ನಾವು ಅವಲೋಕಿಸುತ್ತಿರುವ ಗ್ರಂಥವು 'ಸಂಸ್ಕೃತ ಕವಿಚರಿತ್ರೆ'; ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲ. ಆದ್ದರಿಂದ ಸಂಸ್ಕೃತ ಸಾಹಿತ್ಯದ ಬೆಳವಣಿಗೆಯ ಕಡೆಗೆ ಗ್ರಂಥಕರ್ತರು ಪೀಠಿಕೆಯಲ್ಲಿ ಕೊಂಚಮಟ್ಟಿಗೆ ಹೊರತು ಬೇರೆಯ ಕಡೆ ಗಮನವನ್ನು ಕೊಟ್ಟಿಲ್ಲ; ಅವರ ಸಂವಿಧಾನದಲ್ಲಿ ಇದು ಅಷ್ಟು ಸಾಧ್ಯವೂ ಅಲ್ಲ. ಹೀಗಾಗಿ ಸಾಹಿತ್ಯಚರಿತೆಯನ್ನು ಓದುವುದರ ಒಂದು ಪ್ರಮುಖ ಪ್ರಯೋಜನವು ಇಲ್ಲಿ ನಮಗೆ ದೊರೆಯದಂತಾಯಿತು. ಗ್ರಂಥಕರ್ತರ ಆಸಕ್ತಿ ಮುಖ್ಯವಾಗಿ ಕವಿಗಳಲ್ಲಿ, ಅವರ ಕಾವ್ಯಗಳಲ್ಲಲ್ಲ. ಅವರು ವಾಲ್ಮೀಕಿಯಿಂದ ವಾಮನನವರೆಗೆ ನಾಲ್ವತ್ತೆಂಟು ಜನ ಕವಿಗಳ ಚರಿತ್ರೆಯನ್ನು ಇಲ್ಲಿ ಕೊಟ್ಟಿದ್ದಾರೆ. ಈ ಕವಿಗಳಲ್ಲಿ, ಪ್ರಖ್ಯಾತರಾದ ಅಶ್ವಘೋಷ, ಕಾಳಿದಾಸ, ಭಾರವಿ, ಬಾಣ, ಭವಭೂತಿ ಮೊದಲಾದವರೂ ಇದ್ದಾರೆ; ಸುಭಾಷಿತ ಸಂಗ್ರಹಗಳಲ್ಲಿ ಸಿಕ್ಕಿದ ಒಂದೆರಡು ಶ್ಲೋಕಗಳಿಂದ ಮಾತ್ರ ಹೆಸರುಳಿದಿರುವ, ಅಷ್ಟು ಪ್ರಸಿದ್ಧರಲ್ಲದ, ಧೀರನಾಗ, ಇಂದ್ರಸಿಂಹ ಮೊದಲಾದವರೂ ಇದ್ದಾರೆ. 'ಜಾತಕಮಾಲೆ'ಯನ್ನು ಬರೆದ ಆರ್ಯ ಶೂರನಂಥ ಶ್ರೇಷ್ಠ ಕವಿಯನ್ನು ಕೈಬಿಟ್ಟು, ಈ ಅಪ್ರಸಿದ್ಧರಾದ ಇಂದ್ರಸಿಂಹಾದಿಗಳನ್ನು ಗ್ರಂಥಕರ್ತರು ಏಕೆ ಪುರಸ್ಕರಿಸಿದರೋ ತಿಳಿಯದು. ಅಲ್ಲದೆ ಈ ಕವಿಗಳಲ್ಲಿ ಕಾವ್ಯಕರ್ತೃಗಳು ಮಾತ್ರವೇ ಇಲ್ಲ; ಅಮರಸಿಂಹನಂಥ ಕೋಶ ಸಂಗ್ರಹಕಾರರೂ ಭಾಮಹನಂಥ ಆಲಂಕಾರಿಕರೂ ಸೇರಿದ್ದಾರೆ. ಆದರೂ 'ನಾಟ್ಯಶಾಸ್ತ್ರ'ಕಾರನೆಂದು ಹೆಸರುಗೊಂಡಿರುವ ಭರತಮುನಿಯ ವಿಚಾರವು ಇಲ್ಲಿ ಪ್ರತ್ಯೇಕವಾಗಿ ಬಂದಿಲ್ಲ; ದಂಡಿಯನ್ನು ಕುರಿತು ಬರೆಯುವಾಗ ಎರಡೇ ವಾಕ್ಯಗಳಲ್ಲಿ ಅದನ್ನು ಮುಗಿಸಿ ಬಿಟ್ಟಿದ್ದಾರೆ (ಉ. ೧೦೨*). ಈ ಅತಿವ್ಯಾಪ್ತಿ ಅವ್ಯಾಪ್ತಿಗಳು ಆಗದಂತೆ ಗ್ರಂಥಕರ್ತರು ನೋಡಿಕೊಂಡಿದ್ದರೆ ಚೆನ್ನಾಗುತ್ತಿತ್ತು.

ಸಂಸ್ಕೃತದಷ್ಟು ವಿಸ್ತಾರವುಳ್ಳ ಸಾಹಿತ್ಯದ ವಿಚಾರವನ್ನು ಹೇಳುವ ಗ್ರಂಥವು ಕವಿಚರಿತೆಯ ಮಾರ್ಗವನ್ನು ಅವಲಂಬಿಸದಿದ್ದರೆ ಉತ್ತಮವೆಂದು ಹಿಂದೆ ಸೂಚಿಸಿದೆಯಷ್ಟೆ. ಅದು ಹೋಗಲಿ. ಕವಿಗಳ ವಿಷಯವನ್ನೇ ಹೇಳಬೇಕೆಂಬ ಉದ್ದೇಶವಿದ್ದರೂ ಅದನ್ನು ನಿರ್ವಹಿಸುವುದರಲ್ಲಿ ಒಂದು ಯುಕ್ತವಾದ ಕ್ರಮವನ್ನು ಅನುಸರಿಸಬಹುದು. ಕವಿಗಳ ಜೀವನವನ್ನು ಕುರಿತು ಹೆಚ್ಚಾಗಿ ಪ್ರಸಂಗಿಸುವುದು ಅಸಾಧ್ಯ.

---

* ಈ ಗ್ರಂಥದಲ್ಲಿ ಕ್ರಿಸ್ತಪೂರ್ವದ ಕವಿಗಳನ್ನು ಚರ್ಚಿಸುವ ಭಾಗಕ್ಕೂ ಕ್ರಿಸ್ತನಿಗೆ ಈಚೆಯ ಕವಿಗಳನ್ನು ಚರ್ಚಿಸುವ ಭಾಗಕ್ಕೂ ಪ್ರತ್ಯೇಕವಾಗಿ ಪುಟ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಕ್ರಿಸ್ತಪೂರ್ವಕ್ಕೆ ಸಂಬಂಧಪಟ್ಟ ಪುಟಗಳನ್ನು 'ಪೂ.' ಎಂಬ ಸಂಕೇತದಿಂದಲೂ, ಕ್ರಿಸ್ತೋತ್ತರದ ಪುಟಗಳನ್ನು 'ಉ.' ಎಂಬ ಸಂಕೇತದಿಂದಲೂ ಇಲ್ಲಿ ಸೂಚಿಸಿದೆ.

ಆದ್ದರಿಂದ ಅವರ ಕಾವ್ಯಗಳ ಸ್ವರೂಪವನ್ನು ತಿಳಿಸಿ, ಅವುಗಳ ಗುಣ ದೋಷಗಳನ್ನು ಹೊರಗೆಡಬಹುದು. ಇದರಿಂದ ಸಂಸ್ಕೃತ ಕವಿಗಳ ನಿಜವಾದ ಪರಿಚಯವನ್ನು ವಾಚಕರಿಗೆ ಮಾಡಿಕೊಟ್ಟಂತೆ ಆಗುತ್ತದೆ. ಈ ಪ್ರಯೋಜನವು ಪ್ರಕೃತ ಗ್ರಂಥದಿಂದ ಇನ್ನು ಸ್ವಲ್ಪ ಹೆಚ್ಚಾಗಿ ಲಭಿಸಬಹುದಾಗಿತ್ತೆನ್ನಿಸುತ್ತದೆ. ಕವಿಯ ವಿಚಾರವನ್ನು ಹೇಳುವಾಗಲೇನೋ ಅವನ ಕಾವ್ಯಗಳನ್ನೂ ಕುರಿತು ಕೆಲವು ಮಾತುಗಳನ್ನು ಗ್ರಂಥಕರ್ತರು ಹೇಳುತ್ತಾರೆ. ಬಾಣನ ಕಾವ್ಯಗಳ ಮೇಲಿನ ಅವರ ವಿಮರ್ಶೆಯಂತೂ ಸೊಗಸಾಗಿದೆ. ಬಾಣನಲ್ಲಿ ಅವರಿಗೆ ಅಭಿಮಾನವಿರುವುದರಿಂದ ಹೊಗಳಿಕೆ ಸ್ವಲ್ಪ ಹೆಚ್ಚಾಗಿದ್ದರೂ ಒಟ್ಟಿನಲ್ಲಿ ವಿಮರ್ಶೆ ಉತ್ತಮವಾಗಿದೆ. ಇದನ್ನು ಓದಿದಾಗ, ಮಿಕ್ಕ ಕವಿಗಳ ಮೇಲೆಯೂ ಇದೇ ರೀತಿಯಲ್ಲೇ ಪ್ರೀತಿಯನ್ನು ತೋರಿಸಬಾರದಾಗಿತ್ತೆ—ಎನ್ನಿಸಿತು. ಸಾಮಾನ್ಯವಾಗಿ ಈ ಗ್ರಂಥದಲ್ಲಿ, ಕಾಲ ನಿರ್ಣಯಕ್ಕೂ, ಐತಿಹ್ಯ ವಿವೇಚನೆಗೂ, ವಿದ್ವಾಂಸರಿಗೆ ಮಾತ್ರ ರುಚಿಸುವ ಚರ್ಚೆಗಳಿಗೂ ಕಾವ್ಯಪರಿಚಯಕ್ಕಿಂತ ಹೆಚ್ಚಾಗಿ ಪ್ರಾಶಸ್ತ್ಯಕೊಟ್ಟಿರುವುದು ಪಾಠಕ ಸಾಮಾನ್ಯರಿಗೆ ಸ್ವಲ್ಪ ಅನುಲ್ಲಾಸಕ್ಕೆ ಕಾರಣವೆಂದು ತೋರುತ್ತದೆ. ಭಾಸ ಮತ್ತು ಸಾತವಾಹನರ ಮೇಲಣ ಚರ್ಚೆಗಳು ಇದಕ್ಕೆ ಉದಾಹರಣೆ.

ಮೂಲ ಗ್ರಂಥಗಳಿಂದ ಅಲ್ಲಲ್ಲಿ ಪದ್ಯಗಳನ್ನು ಗದ್ಯಭಾಗಗಳನ್ನೂ ಗ್ರಂಥಕರ್ತರು ಉದ್ಧರಿಸಿಯೇ ಇದ್ದಾರೆ. 'ಬುದ್ಧಚರಿತ'ದಿಂದಲೂ 'ಉತ್ತರ ರಾಮಚರಿತ'ದಿಂದಲೂ ಎತ್ತಿ ಬರೆದಿರುವ ಪದ್ಯಗಳು ಬಹು ರಮ್ಯವಾಗಿವೆ; ಅವು ಆ ಗ್ರಂಥಗಳಲ್ಲಿ ಎಲ್ಲರಿಗೂ ಅಭಿರುಚಿಯನ್ನು ಹುಟ್ಟಿಸತಕ್ಕುವಾಗಿವೆ. ಹೀಗೆ ಕೊಟ್ಟಿರುವ ಪದ್ಯಗಳೆಲ್ಲಕ್ಕೂ ಕನ್ನಡದಲ್ಲಿ ಅರ್ಥವನ್ನು ಬರೆದಿದ್ದರೆ ಚೆನ್ನಾಗುತ್ತಿತ್ತು. ಆದರೆ, ಯಾವ ಕಾರಣದಿಂದಲೋ, ಕೆಲವು ಪದ್ಯಗಳಿಗೆ ಅರ್ಥ ಬರೆಯದೆ ಬಿಟ್ಟಿದ್ದಾರೆ; ಮತ್ತೆ ಕೆಲವಕ್ಕೆ ಅತಿ ದೀರ್ಘವಾದ ವ್ಯಾಖ್ಯಾನ ಮಾಡಿದ್ದಾರೆ. ವಾಲ್ಮೀಕಿ 'ರಾಮಾಯಣ'ದ ಶ್ಲೋಕವೊಂದನ್ನು ತೆಗೆದುಕೊಂಡು ಅದಕ್ಕೆ ಆರು ವಿಧವಾಗಿ ಅರ್ಥಮಾಡಬಹುದೆಂದು ತೋರಿಸದೆ ಇದ್ದರೂ ಇರಬಹುದಾಗಿತ್ತು. ತ್ರಿವಿಕ್ರಮಭಟ್ಟನ 'ದಮಯಂತೀ ಕಥೆ'ಯಲ್ಲಿ ಬರುವ ನಳ ಹಂಸೀ ಸಂವಾದ ಶ್ಲೇಷ ಚಮತ್ಕಾರಗಳೆಲ್ಲವನ್ನೂ ಹತ್ತು ಹನ್ನೊಂದು ಪುಟಗಳಲ್ಲಿ (ಉ. ೨೯೯-೩೦೯) ವಿವರಿಸಿರುವುದಕ್ಕೆ ಬದಲು, 'ವೇಣೀ ಸಂಹಾರ'ವನ್ನು ಬರೆದ ಭಟ್ಟ ನಾರಾಯಣನಿಗೆ ಈಗ ಕೊಟ್ಟಿರುವ ಮೂರುವರೆ ಪುಟಗಳನ್ನು ಹೆಚ್ಚಿಸಬಹುದಾಗಿತ್ತು. ಮುಖ್ಯವಾಗಿ ಈ ಗ್ರಂಥದಲ್ಲಿ ಕೆಲವು ಅಂಶಗಳಿಗೆ ಅವುಗಳ ಮಹತ್ತ್ವಕ್ಕೆ ಅನುರೂಪವಲ್ಲದ ಪ್ರಾಮುಖ್ಯತೆ ಬಂದಿದೆ. ಐತಿಹ್ಯಗಳನ್ನು ಕುರಿತು ಕೆಲವು ಕಡೆ ದೀರ್ಘವಾಗಿ ಚರ್ಚಿಸಿರುವುದೂ ಇದರಿಂದಲೇ. ಭರ್ತೃಹರಿಯ ಕಥೆಯನ್ನು ಹೇಳುವಾಗ ಅಸಂಗಸೇನೆಯ ವೃತ್ತಾಂತವು ಸುಳ್ಳೆಂದು ಸಾಧಿಸಲು ಅಷ್ಟೇಕೆ ಕ್ಲೇಶಪಡಬೇಕು (ಉ. ೬೧-೪)? ಆ ಉದ್ದೇಶಕ್ಕೆ ಹೊಂದುವಂತೆ, ರಾಜನಾದವನು ಎಂದಿಗೂ ಕಾಮ ಕ್ರೋಧಾದಿಗಳನ್ನು ಜಯಿಸಿಯೇ ಇರುತ್ತಾನೆಂದು ಅರ್ಥ ಬರುವ ಹಾಗೆ ಊಹಿಸುವುದು ಅಸಂಗತವಲ್ಲವೆ?

"ಯಾವುದಾದರೊಂದು ಗ್ರಂಥವನ್ನು ನೋಡಿ ಓದಿ ಆನಂದ ರಸಾಸ್ವಾದನ ಮಾಡುವ ಪ್ರತಿಯೊಬ್ಬನಿಗೂ ಗ್ರಂಥಕಾರನ ಕಾಲ ದೇಶ ಸ್ಥಿತಿಗತಿಗಳನ್ನರಿಯಬೇಕೆಂಬ ಕುತೂಹಲವೂ ಸಹಜವಾದುದಾಗಿರುವುದು." (ಪೀಠಿಕೆ, ೧೯-೨೦) ಈ ಕುತೂಹಲ ವನ್ನು ತೃಪ್ತಿಗೊಳಿಸುವುದು ಈ ಗ್ರಂಥದ ಮುಖ್ಯ ಪ್ರಯೋಜನಗಳಲ್ಲಿ ಒಂದು. ಹರ್ಷ ಚಕ್ರವರ್ತಿಯ ವಿಷಯವನ್ನು ಹೇಳುವಾಗ ಅವನ ಕಾಲಸ್ಥಿತಿಯ ವರ್ಣನೆ ಚೆನ್ನಾಗಿಯೇ ಬಂದಿದೆ. ಅಲ್ಲಿಯ ಹಾಗೆ ಇತಿಹಾಸದ ಸಹಾಯವು ಸಿಕ್ಕದ ಕಡೆಗಳಲ್ಲಿ ಕವಿಯ ಕಾಲ ಸ್ಥಿತಿಯನ್ನು ಅವನ ಗ್ರಂಥದಿಂದ ಊಹಿಸುವುದೂ ಒಳ್ಳೆಯದೇ. ಆದರೆ ಇಲ್ಲಿ 'ಮಾಲತೀ ಮಾಧವ'ದಿಂದ ಭವಭೂತಿಯ ಕಾಲಸ್ಥಿತಿಯನ್ನು ಊಹೆಗಟ್ಟಿರುವುದು (ಉ. ೨೨೫-೯) ಸ್ವಲ್ಪ ಹೆಚ್ಚು. ಇದರಂತೆಯೇ ನಾಟಕಗಳಲ್ಲಿ ಪಾತ್ರ ಪ್ರಯೋಜನವನ್ನು ಹೇಳಹೊರಟು ಒಂದು ನೀತಿಯನ್ನು ಬೋಧಿಸುವುದಕ್ಕಾಗಿಯೇ ಆ ಪಾತ್ರವನ್ನು ಕವಿ ಕಲ್ಪಿಸಿದನೆಂದು ಧ್ವನಿ ಹುಟ್ಟುವಂತೆ ಬರೆದಿರುವುದು ಒಪ್ಪುವಂತಿಲ್ಲ. 'ಮುದ್ರಾರಾಕ್ಷಸ'ದ ವಿಚಾರವಾಗಿ (ಉ. ೨೭೪) ಬರೆದಿರುವುದು ಇದಕ್ಕೆ ಉದಾಹರಣೆ.

ಇನ್ನು ಕಾಲ ನಿರ್ಣಯ ಕ್ರಮವನ್ನು ಕುರಿತು ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಸಾಹಿತ್ಯವೂ ಕವಿಗಳೂ ಎಷ್ಟೆಷ್ಟು ಪ್ರಾಚೀನವೆಂದು ತೋರ್ಪಟ್ಟರೆ ಅಷ್ಟಷ್ಟೂ ನಮಗೆ ಕೀರ್ತಿಕರವೆಂಬ ಭಾವನೆ ನಮ್ಮಲ್ಲಿ ಸಂಪೂರ್ಣವಾಗಿ ಇನ್ನೂ ಅಳಿದಿಲ್ಲ. ಪಾಶ್ಚಾತ್ಯರ ವಿಮರ್ಶ ಪದ್ಧತಿಯನ್ನು ಅನುಸರಿಸಿ ಕವಿಕಾಲವನ್ನು ನಿರ್ಧರಿಸಲು ಹೊರಟರೂ ಅಭಿಮಾನದ ಮಂಜು ನಮ್ಮ ಕಣ್ಣುಗಳನ್ನು ಆಗಾಗ ಮುಸುಕಬಹುದು; ಪೂರ್ವ ಸಂಪ್ರದಾಯದ ಪಾಶವು ನಮ್ಮ ಹೆಜ್ಜೆಗಳಿಗೆ ಅಲ್ಲಲ್ಲಿ ತೊಡರಬಹುದು. ಆದ್ದರಿಂದ ನಾವು ಎಚ್ಚರದಿಂದ ಇದ್ದ ಹೊರತು ದೋಷಗಳು ಸಂಘಟಿಸುವುದು ಅನಿವಾರ್ಯವಾಗುತ್ತದೆ. ಐತಿಹ್ಯಗಳಿಗೆ ಎಷ್ಟು ಗಮನವನ್ನು ಕೊಡಬೇಕು; ಯಾವ ಯಾವ ಆಧಾರಗಳು ಎಷ್ಟೆಷ್ಟು ಮುಖ್ಯವಾದವು?—ಎನ್ನುವುದನ್ನು ಮೊದಲೇ ನಿರ್ಧರಿಸಿ ಅದರಂತೆ ನಿರ್ಣಯಿಸುವುದು ಅಗತ್ಯ. ಇದಲ್ಲದೆ, ಹೊಸಹೊಸದಾಗಿ ಹೊರಬೀಳುವ ಆಧಾರ ಗಳನ್ನೂ ಪ್ರಸಿದ್ಧ ಪಂಡಿತರು ಕೊಡುವ ಅಭಿಪ್ರಾಯಗಳನ್ನೂ ವಿವೇಚನೆಯೊಡನೆ ಸಂಗ್ರಹಿಸಿಕೊಳ್ಳುತ್ತಾ ಅವುಗಳನ್ನು ತಕ್ಕಂತೆ ಉಪಯೋಗಿಸಿಕೊಳ್ಳಬೇಕು. ಪ್ರಕೃತ ಗ್ರಂಥದಲ್ಲಿ ಕಾಲನಿರ್ಣಯವು ಸರ್ವ ಸಮರ್ಪಕವಾಗಿಲ್ಲ. "ಚರಿತ್ರೆ" ಎಂದು ಕರೆಯುವ ಪುಸ್ತಕದಲ್ಲಿ "....ರಾಮಾಯಣವು ಕಿ.ಪೂ. ೧೧೮೧ ಶತಮಾನಗಳ ಹಿಂದೆ ಬರೆಯಲ್ಪಟ್ಟಿತೆಂದು ಸ್ಥೂಲಮಾನದಿಂದ ವ್ಯಕ್ತವಾಗುವುದು" ಎಂದು (ಪು. ೧೧) 'ಶ್ರೀರಾಮ ಕಾಲನಿರ್ಣಯ ಬೋಧಿನಿ'ಯನ್ನು ಅನುಸರಿಸಿ ಬರೆಯುವ ಸಾಹಸಕ್ಕೆ ಹೋಗಬಹುದೇ? ಇಂಥ ಅಂಶಗಳು ಬೇರೆ ಯಾವುವೂ ಈ ಗ್ರಂಥದಲ್ಲಿ ಇಲ್ಲವಾದರೂ, ಈ ತರದ ಒಂದೊಂದು ಸಂಗತಿಯಿಂದಲೇ ಚರಿತ್ರೆಯ ಪ್ರಾಮಾಣ್ಯವು ತಗ್ಗುತ್ತದೆ.—ಭಾಸ ಕಾಳಿದಾಸಾದಿಗಳನ್ನು ಕ್ರಿಸ್ತ ಪೂರ್ವದವರೆಂದು ಹೇಳಿರುವದು ಬಹು ಜನ ಸಮ್ಮತವಲ್ಲ. ಕಾಳಿದಾಸನ ಕಾಲವನ್ನು ನಿರ್ಣಯಿಸುವಾಗ, ಅಶ್ವಘೋಷನ 'ಬುದ್ಧಚರಿತ'ಕ್ಕೂ 'ರಘುವಂಶ'ಕ್ಕೂ ಕೆಲವು ವರ್ಣನೆಗಳಲ್ಲಿರುವ ಹೋಲಿಕೆಗಳು ಅನೇಕರನ್ನು ತಪ್ಪುದಾರಿಗೆ ಎಳೆದಿವೆ. ಅಶ್ವಘೋಷನು

ಕಲ್ಪನಾಚಾತುರ್ಯ ವಿಚಾರದಲ್ಲಿ ಕಾಳಿದಾಸನಿಗೆ ಸರಿಹೋಗದಿದ್ದ ಮಾತ್ರಕ್ಕೇ ಕಾಳಿದಾಸನು ಅಶ್ವಘೋಷನಿಂದ ಸ್ವೀಕರಿಸಿರಲಾರನೆಂದು ಊಹಿಸಬಹುದೆ? ಮಹಾ ಕವಿಯಾದವನು ಪೂರ್ವ ಕವಿಗಳಿಗೆ ಋಣಿಯೇ ಆಗುವುದಿಲ್ಲವೆಂದು ಯಾವ ಸಾಹಿತ್ಯಜ್ಞನು ತಾನೆ ಧೈರ್ಯದಿಂದ ಹೇಳಿಯಾನು? ಅಶ್ವಘೋಷವನ್ನು ಅನುಸರಿಸಿ ಕಾಳಿದಾಸನು ಬರೆದನೆಂದು ಹೇಳುವುದರಲ್ಲಿ ಯಾವ ಅಸಾಧುತ್ವವೂ ತೋರುವುದಿಲ್ಲ.—ಸ್ಕಾಂದ ಪುರಾಣದ ಕುಮಾರಿಕಾಖಂಡವನ್ನು ನಂಬಿ, 'ಮೃಚ್ಛಕಟಿಕಾ'ಕಾರನಾದ ಶೂದ್ರಕನ ಕಾಲವು ಕ್ರಿ.ಶ. ಎರಡನೆಯ ಶತಮಾನವೆಂದು ನಿರ್ಧರಿಸಿರುವುದಕ್ಕೆ ಆಧಾರಗಳು ಸಾಲವು. (ಉ. ೩೫-೬).—"ಭರತಾಚಾರ್ಯನ ನಾಟ್ಯಶಾಸ್ತ್ರವು ಕ್ರಿಸ್ತಪೂರ್ವಕ್ಕೆ ಎಷ್ಟೋ ಶತಮಾನಗಳ ಹಿಂದಿನದೆಂಬುದು ನಿರ್ವಿವಾದವಾದುದು." (ಉ. ೧೦೨):—ಈಗ ಇರುವ ನಾಟ್ಯಶಾಸ್ತ್ರವು ಅಷ್ಟು ಹಿಂದಿನದೆಂಬುದೇನು 'ನಿರ್ವಿವಾದ'ವಾದ ಸಂಗತಿಯಲ್ಲ. ಇಂಥ ಸಂದಿಗ್ಧವಾದ ಕಡೆಗಳಲ್ಲಿ ತಮ್ಮ ಅಭಿಪ್ರಾಯಕ್ಕೆ ಆಧಾರವನ್ನೇ ಕೊಡದೆ, ಇಷ್ಟು ಖಂಡಿತವಾಗಿ ಬರೆಯುವುದು ಉತ್ತಮವಾದ ಮಾರ್ಗವಲ್ಲ.

ಅಂತಃಪ್ರಮಾಣಗಳನ್ನೇ ಮುಖ್ಯವಾಗಿ ನೆಚ್ಚಿ, ಇದುವರೆಗೂ ಒಬ್ಬನೇ ಎಂದು ತಿಳಿದಿದ್ದ ಕವಿ ನಿಜವಾಗಿ ಒಬ್ಬನಲ್ಲ; ಆ ಹೆಸರಿನ ಅನೇಕ ಕವಿಗಳಿದ್ದರು—ಎಂದು ನಿರ್ಣಯಿಸುವುದು ಕೆಲವು ಪಾಶ್ಚಾತ್ಯ ವಿಮರ್ಶೆಗಳಲ್ಲಿ ಕಾಣಬರುತ್ತದೆ. ಈ ಪದ್ಧತಿ ಸಿಡಿಮದ್ದಿನ ಹಾಗೆ; ಎಚ್ಚರಿಕೆಯಿಲ್ಲದೆ ಉಪಯೋಗಿಸಿದರೆ ಅನಾಹುತಕ್ಕೆ ಕಾರಣವಾಗುತ್ತದೆ. ಪ್ರಕೃತಗ್ರಂಥದಲ್ಲಿ, ಕಾಳಿದಾಸ, ಭರ್ತೃಹರಿ, ದಂಡಿ, ಬಾಣ, ಮಯೂರ—ಈ ಒಂದೊಂದು ಹೆಸರಿನ ಬಹು ಜನರಿದ್ದರೆಂದು ನಿರ್ಧರಿಸಿದ್ದಾರೆ. ದಂಡಿ ಬಾಣರ ವಿಷಯದಲ್ಲಿ ಈ ಊಹೆ ಹೊಸದಲ್ಲ. ಕಾಳಿದಾಸನ ವಿಚಾರವು ಬಹು ಮುಖ್ಯವಾಗಿರುವುದರಿಂದ ಅದೊಂದನ್ನಾದರೂ ಇಲ್ಲಿ ಕೊಂಚ ಚರ್ಚಿಸುವುದು ಆವಶ್ಯಕವಾಗಿದೆ. ಕಾಳಿದಾಸ ಎಂಬ ಹೆಸರಿನ ಮೂವರು ಕವಿಗಳಿದ್ದರೆಂದೂ, ಮೊದಲನೆಯ ಕಾಳಿದಾಸನು 'ಮಾಲವಿಕಾಗ್ನಿಮಿತ್ರ', 'ವಿಕ್ರಮೋರ್ವಶೀಯ', 'ಶಾಕುಂತಲ'—ಈ ನಾಟಕಗಳನ್ನು ಮಾತ್ರ ಬರೆದನೆಂದೂ, ಎರಡನೆಯ ಕಾಳಿದಾಸನು 'ಜ್ಯೋತಿರ್ವಿದಾಭರಣ'ವನ್ನೂ 'ಮೇಘದೂತ', 'ಕುಮಾರಸಂಭವ' 'ರಘುವಂಶ'—ಈ ಕಾವ್ಯಗಳನ್ನೂ ಬರೆದನೆಂದೂ, ಈ ಇಬ್ಬರೂ ಕ್ರಿಸ್ತ ಪೂರ್ವದಲ್ಲಿದ್ದರೆಂದೂ ಮೂರನೆಯ ಕಾಳಿದಾಸನು ಕ್ರಿ.ಶ. ಐದನೆಯ ಶತಮಾನದಲ್ಲಿದ್ದುಕೊಂಡು 'ಋತುಸಂಹಾರ', 'ಶೃಂಗಾರತಿಲಕ', 'ಶ್ರುತಬೋಧ', 'ರಥಾಂಗದೂತ', 'ರಾಕ್ಷಸ ಕಾವ್ಯ'. 'ಶ್ಯಾಮಲಾದಂಡಕ'—ಈ ಮೊದಲಾದ ಅನೇಕ ಕಾವ್ಯಗಳನ್ನೂ, ಸ್ತೋತ್ರಗಳನ್ನೂ ಬರೆದನೆಂದೂ ನಮ್ಮ ಗ್ರಂಥಕಾರರು ಸಿದ್ಧಾಂತ ಮಾಡಿದ್ದಾರೆ. ಈ ರೀತಿಯಲ್ಲಿ ಮೂರುಜನ ಕಾಳಿದಾಸರಿಗೆ ಗ್ರಂಥಗಳನ್ನು ಹಂಚಿಕೊಟ್ಟಿರುವುದು ಬೇರೆ ಯಾವ ಪ್ರಸಿದ್ಧ ವಿಮರ್ಶ ಗ್ರಂಥಗಳಲ್ಲೂ ಬಂದ ಹಾಗೆ ತೋರುವುದಿಲ್ಲ. ನಾಟಕತ್ರಯ ಕರ್ತನೂ ಕಾವ್ಯತ್ರಯ ಕರ್ತನೂ ಬೇರೆ ಬೇರೆ ಎಂದು ಹೇಳುವುದಂತೂ ಅತಿ ನೂತನವಾದ ಅಭಿಪ್ರಾಯವೇ ಸರಿ.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ತಮ್ಮ ಗ್ರಂಥಗಳು ಖ್ಯಾತಿಗೆ ಬರಲೆಂದು ಸಾಮಾನ್ಯ ಕವಿಗಳು ಅವುಗಳನ್ನು ಪ್ರಸಿದ್ಧ ಪುರುಷರ ಹೆಸರಿನಲ್ಲಿ ಪ್ರಕಟಿಸುವ ರೂಢಿ ನಮ್ಮಲ್ಲಿ ಹಿಂದೆ ಇತ್ತು. ಶಂಕರಾಚಾರ್ಯ ರಚಿತವೆಂದು ಹೇಳಿಸಿಕೊಳ್ಳುವ ಅನೇಕ ಸ್ತೋತ್ರಗಳು ಈಗ ಪ್ರಚಾರದಲ್ಲಿರುವುದೇ ಇದಕ್ಕೆ ನಿದರ್ಶನ. ಕಾಳಿದಾಸನ ವಿಚಾರವೂ ಹೀಗೆಯೇ ಆಗಿದೆಯೆನ್ನುವುದರಲ್ಲಿ ಸಂಶಯವಿಲ್ಲ. 'ಶ್ರುತಬೋಧ', 'ಶೃಂಗಾರತಿಲಕ', 'ರಾಕ್ಷಸ ಕಾವ್ಯಾ'ದಿಗಳನ್ನು ಈಚೆಯವರು ಯಾರೋ ಬರೆದು ಕಾಳಿದಾಸನಿಗೆ ಆರೋಪಿಸಿರಬೇಕು. ಅಲ್ಲವಾದರೆ, ಅಪ್ರಸಿದ್ಧನಾದ ಅಭಿನವ ಕಾಳಿದಾಸನೊಬ್ಬನು ಆ ಗ್ರಂಥಗಳನ್ನು ರಚಿಸಿರಬೇಕು. ಅಂತೂ ಪ್ರಸಿದ್ಧನಾದ ಕಾಳಿದಾಸನು ಒಬ್ಬನೇ ಎಂದೂ ಅವನು 'ಋತುಸಂಹಾರ', 'ಕುಮಾರಸಂಭವ' 'ಮೇಘದೂತ', 'ರಘುವಂಶ', 'ಮಾಲವಿಕಾಗ್ನಿ ಮಿತ್ರ', 'ವಿಕ್ರಮೋರ್ವಶೀಯ', 'ಶಾಕುಂತಲ'—ಈ ಎಲ್ಲ ಗ್ರಂಥಗಳನ್ನು ರಚಿಸಿದನೆಂದೂ ಪ್ರಸಿದ್ಧ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. 'ಜ್ಯೋತಿರ್ವಿದಾಭರಣ'ವು ಕಾಳಿದಾಸನ ಕೃತಿಯೆಂದೇ ನಂಬಿಕೊಂಡು, ಅದರ ಒಂದು ಶ್ಲೋಕದಲ್ಲಿ ಕಾಳಿದಾಸನ ಕಾವ್ಯತ್ರಯದ ಪ್ರಸಕ್ತಿ ಬಂದು ನಾಟಕತ್ರಯದ ಸುಳಿವೇ ಇಲ್ಲದಿರುವುದರಿಂದ ಕಾವ್ಯತ್ರಯ ಕರ್ತನೇ ಬೇರೆ ಎಂದು ಸಿದ್ಧಾಂತ ಮಾಡಿರುವುದು (ಪೂ. ೯೮) ಯುಕ್ತವಲ್ಲ; ಏಕೆಂದರೆ 'ಜ್ಯೋತಿರ್ವಿದಾಭರಣ'ವು ನಿಜವಾಗಿಯೂ ಕಾಳಿದಾಸನ ಕೃತಿಯೆಂದು ನಂಬುವುದೇ ಅನುಚಿತ. ಕಾವ್ಯತ್ರಯಕಾರನನ್ನು ಪ್ರತ್ಯೇಕಿಸುವುದಕ್ಕೆ ನಮ್ಮ ಗ್ರಂಥಕರ್ತರು ಕೊಟ್ಟಿರುವ ಇನ್ನೊಂದು ಕಾರಣವೂ ಸಮರ್ಪಕವಾಗಿಲ್ಲ : ನಾಟಕಗಳೆಲ್ಲವೂ ಮಂಗಳಾಂತಗಳಾಗಿವೆ; ಮೂರು ಕಾವ್ಯಗಳಲ್ಲಿ ಒಂದೂ ಮಂಗಳದಲ್ಲಿ ಮುಗಿದಿಲ್ಲ—ಆದ್ದರಿಂದ ಅವುಗಳನ್ನು ಬೇರೆ ಬೇರೆ ಕವಿಗಳು ಬರೆದಿರಬೇಕು ಎಂದು ಊಹಿಸುವುದು ಹಾಸ್ಯಾಸ್ಪದವಾಗುತ್ತದೆ. ಕಾಳಿದಾಸನನ್ನೂ ಭವಭೂತಿಯನ್ನೂ ಹೋಲಿಸಿ (ಉ. ೨೩೧) 'ಶಾಕುಂತಲ', 'ರಘುವಂಶ'ಗಳೆರಡರಿಂದಲೂ ಉದಾಹರಿಸಿದಾಗ ಲೇಖಕರಿಗೆ ಈ ಕರ್ತೃಭೇದದ ನೆನಪು ಇದ್ದಂತೆ ತೋರುವುದಿಲ್ಲ.

ಅಶ್ವಘೋಷನ ಗ್ರಂಥಗಳನ್ನು ಹೇಳುವಾಗ, ಈಚೆಗೆ ಅಪೂರ್ಣವಾಗಿ ದೊರೆತ 'ಶಾರಿಪುತ್ರಪ್ರಕರಣ' ಮೊದಲಾದ ರೂಪಕಗಳ ವಿಚಾರವಾಗಿ ಪಾಶ್ಚಾತ್ಯ ವಿದ್ವಾಂಸರು ಪ್ರಕಟಿಸಿರುವ ಅಂಶಗಳನ್ನೂ ನಿರೂಪಿಸಬಹುದಾಗಿತ್ತು. ಭವಭೂತಿಯ ಜನ್ಮ ಸ್ಥಳವಾದ ಪದ್ಮಪುರವು ಉಜ್ಜಯಿನಿಯೇ ಎಂದು ನಿರ್ಧರಿಸಿರುವುದು (ಉ. ೨೨೩-೪) ಸಕಾರಣವಾಗಿಲ್ಲ. ಸಂಸ್ಕೃತವನ್ನು ಕುರಿತ ಗ್ರಂಥದಲ್ಲಿ, ಧಾರುಣಿ (ಪೂ. ೭೨) ಮನಾಪಹರಣ (ಉ. ೧೭೪) ಮೊದಲಾದ ಅಪಪ್ರಯೋಗಗಳಿರಬಾರದು; 'ಸೌಂದರನಂದ' ಎಂಬ ಕಾವ್ಯದ ಹೆಸರನ್ನು 'ಸೌಂದರಾನಂದ' (ಉ. ೨೯) ಎಂದು ಬರೆದಿರಬಾರದು. ಇಂಥ ಅಲ್ಪ ವಿಷಯಗಳಿಗೂ ಗಮನಕೊಟ್ಟರೆ ಪಾಂಡಿತ್ಯವು ಸಾರ್ಥಕವಾಗುತ್ತದೆ.

ಇದುವರೆಗೆ ಈ ಗ್ರಂಥದ ಕುಂದುಕೊರತೆಗಳನ್ನು ಎಣಿಸಿದ್ದೇ ಆಯಿತು; ಅದರ ಗುಣಗಳನ್ನು ಸ್ಪಷ್ಟಪಡಿಸುವ ಕಾರ್ಯವು ಉಳಿದು ಹೋಯಿತು. ಅವುಗಳನ್ನು ಒಂದೆರಡು

ಮಾತಿನಲ್ಲಿ ಸೂಚಿಸುವುದು ಮಾತ್ರ ಈಗ ಸಾಧ್ಯ. ಈ ಗ್ರಂಥದಲ್ಲಿ ಅನೇಕ ಕಾವ್ಯಗಳನ್ನು ರಮ್ಯವಾಗಿ ವರ್ಣಿಸಿದ್ದಾರೆ; ಅನೇಕ ಗಹನಾಂಶಗಳನ್ನು ಸರಸವಾಗಿ ಚರ್ಚಿಸಿದ್ದಾರೆ. 'ಮಾಲತೀಮಾಧವ'ದ ಕಥೆಯನ್ನು ವಿವರಿಸಿರುವುದೂ 'ಉತ್ತರ ರಾಮಚರಿತ'ದ ಪ್ರಧಾನರಸವು ಕರುಣವೇ ಎಂದು ತೋರಿಸಿರುವುದೂ ಈ ಮಾತಿಗೆ ಉತ್ತಮವಾದ ಉದಾಹರಣೆ. ಕಾವ್ಯ ವಿಮರ್ಶೆಯಲ್ಲೂ ಗ್ರಂಥಕರ್ತರು ಪ್ರಾಚೀನ ಸಂಪ್ರದಾಯಕ್ಕೆ ಅಷ್ಟು ಕಟ್ಟುಬಿದ್ದಿಲ್ಲ. ಪ್ರತ್ಯಕ್ಷರದಲ್ಲೂ ಶ್ಲೇಷವನಿಟ್ಟು ಬರೆಯುತ್ತೇನೆಂದು ಪ್ರತಿಜ್ಞೆ ಮಾಡಿದ ಸುಬಂಧುವಿನ 'ವಾಸವದತ್ತ'ವನ್ನು ಕುರಿತು ಈ ಗ್ರಂಥದಲ್ಲಿರುವ ಬರೆವಣಿಗೆಗೆ ಯಾರ ಮೆಚ್ಚಿಕೆ ತಾನೆ ದೊರೆಯುವುದಿಲ್ಲ! ಅಲ್ಲಿಂದ ಕೆಲವು ವಾಕ್ಯಗಳನ್ನು ಎತ್ತಿ ಬರೆದು ಈ ವಿಮರ್ಶೆಯನ್ನು ಮುಗಿಸಬಹುದು :—

> ". . . ಇದರಲ್ಲಿನ ಸಂಭೋಗ ಶೃಂಗಾರವು ಬಹೂಜ್ವಲವಾಗಿರುವುದು. ಅಲ್ಲದೆ ನಾಯಕ ನಾಯಕಿಯರ ವಿಚಾರವನ್ನು ಹೇಗೆ ಹೇಗೋ ಮಾಡಿ ವಿಯೋಗ ಮಾಡಿರುವನು. ಇವನ ಕಾವ್ಯದಲ್ಲಿ ಅಸಂಭಾವಿಕ ಮತ್ತು ಅತ್ಯುಕ್ತಿ ವಿಷಯಗಳು ಹೇರಳವಾಗಿರುವುವು. . . . ಕಥೆಯನ್ನು ಸಂಕ್ಷೇಪಮಾಡಿ ವರ್ಣನೆಯನ್ನು ಬಹು ದೊಡ್ಡದಾಗಿ ಮಾಡಿರುವನು. . . . ಹೆಸರು ಮಾತ್ರಕ್ಕೆ ಕಥಾನಾಯಕನಿರುವನು. ನಾಯಕ–ನಾಯಕಿಯರಿಗೆ ಮಾತನಾಡಲು ಅವಕಾಶಕೊಡದೆ ಮೂಕರಂತೆ ರಾತ್ರಿಯನ್ನು ಕಳೆದುದಾಗಿ ತೋರಿಸಿರುವನು. . . . ಕವಿಯು ತನ್ನ ಕಾವ್ಯದಲ್ಲಿ ನವರಸಗಳನ್ನೂ ಹೇಳಿ ತೋರಿಸಬೇಕೆಂಬ ಆಸೆಯಿಂದ ಮನಬಂದಂತೆ ಬರೆದುಕೊಂಡಿರುವನು. . . . ನಾಯಕ ನಾಯಕಿಯರು ಗಾಂಧರ್ವ ವಿವಾಹಾನಂತರ ಶೃಂಗಾರೋತ್ಸವ ಕುತೂಹಲ ರಾಗಿ ಹೊರಟದ್ದಾಗ ಶ್ಮಶಾನ ದರ್ಶನವನ್ನು ಮಾಡಿಸುವುದು ರಸೋದ್ದೀಪಕ ವೆಂದು ಸುಬಂಧುವು ತಿಳಿದಿರಬಹುದು. ಮನೋಜವೆಂಬ ಕುದುರೆಯ ಮೇಲ ಕುಳಿತು ಕಣ್ಣು ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿ ಕುಸುಮಪುರಿಯಿಂದ ವಿಂಧ್ಯಾಟವಿಗೆ ಬಂದರೆಂದು ವರ್ಣಿಸುವಾಗ ಕಂದರ್ಪಕೇತುವಿಗೆ ಶ್ಮಶಾನವನ್ನು ನೋಡುವುದಕ್ಕೆ ಕಾಲವು ಸಿಕ್ಕಿದುದು ಹೇಗೆ? . . . ಸಹಜ ರಸಿಕನಾದವನು ಮೋಹಿಸುವ ಭಾಗವು ಇವನ ಕಾವ್ಯದಲ್ಲಿ ಅತ್ಯಲ್ಪವಾಗಿರುವುದು. . . ." (ಉ. ೧೧೧–೩).

ಭಾಗ ೨

ಹಳಗನ್ನಡ ಸಾಹಿತ್ಯ

ಪಂಪ ಮಹಾಕವಿ*

ಕಳೆದ ಕಾರ್ತಿಕ ಶುದ್ಧ ಪಂಚಮಿಗೆ ಪಂಪನು ಆದಿಪುರಾಣವನ್ನು ಬರೆದು ಮುಗಿಸಿ ಒಂದು ಸಾವಿರ ವರ್ಷಗಳು ತುಂಬಿದುವು. ಹಳಗನ್ನಡ ಸಾಹಿತ್ಯದಲ್ಲಿ ಒಂದು ಕಾವ್ಯದ ರಚನೆಯ ಕಾಲ ಇಷ್ಟು ನಿರುಕಾಗಿ ಗೊತ್ತಾಗುವುದೇ ಆಶ್ಚರ್ಯ. ಅದರಲ್ಲೂ, "ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪಂ!"—ಇಂಥ ಕವಿಕುಲಗುರು ಗ್ರಂಥರಚನೆ ಮಾಡಿದ ದಿನ ಹೀಗೆ ತಿಳಿಯಬಂದಿರುವುದು ನಮ್ಮ ಭಾಗ್ಯ ವಿಶೇಷ. ಪಂಪನ ಸಹಸ್ರವಾರ್ಷಿಕೋತ್ಸವ ಕಳೆದ ಮೂರು ತಿಂಗಳಿನಿಂದಲೂ ಕನ್ನಡ ನಾಡಿನ ಅನೇಕ ಕಡೆಗಳಲ್ಲಿ ಜರುಗಿದೆ. ಕೆಲವು ಕಡೆಗಳಲ್ಲಿ ವಿಶೇಷ ವಿಜೃಂಭಣೆ ಯಿಂದ, ಮತ್ತೆ ಕೆಲವು ಕಡೆಗಳಲ್ಲಿ ಅನುಕೂಲಕ್ಕೆ ತಕ್ಕ ಹಾಗೆ, ಎಲ್ಲ ಕಡೆಗಳಲ್ಲೂ ಭಕ್ತಿ ಪುರಸ್ಸರವಾಗಿ ನಡೆದಿದೆ. ಪಂಪನ ಈ ಜಯಘೋಷಕ್ಕೆ ಮೈಸೂರಿನ–ಕನ್ನಡ ನಾಡಿನ–ಆಕಾಶವಾಣಿಯೂ ತನ್ನ ದನಿಯನ್ನು ಕೂಡಿಸ ಬೇಕೆಂದು ಸಂಕಲ್ಪಿಸಿದ್ದರಿಂದ ಇಂದಿನ ಕಾರ್ಯಕ್ರಮಕ್ಕೆ ಅವಕಾಶವುಂಟಾಯಿತು. ಏಳೆಂಟು ಪದ್ಯಗಳನ್ನು ಮಾತ್ರ ಓದಿ ಹೇಳಿ ಪಂಪ ವಾಣಿಯ ಸ್ವರೂಪವನ್ನು ತಿಳಿಯಪಡಿಸುವುದು ಹೇಗೆ? ಐದೈದು ನಿಮಿಷಕಾಲ ಮಾತನಾಡಿ ಅವನ ಪರಿಚಯವನ್ನಾಗಲಿ, ಅವನ ಕೃತಿಗಳ ಪರಿಚಯವನ್ನಾಗಲಿ ಮಾಡಿಕೊಡುವುದು

* ಆಕಾಶವಾಣಿಯಲ್ಲಿ ಪ್ರಸಾರವಾದ ಒಂದು ಉಪನ್ಯಾಸ (೧೦.೨.೧೯೪೨)

ಹೇಗೆ? "ಪಂಪ" ಎಂಬ ಹೆಸರನ್ನು ಒಂದೆರಡು ಸಲ ಜಪಿಸಿ, ಒಂದೆರಡು ಭಕ್ತಿ ಕುಸುಮಗಳನ್ನು ಅವನಿಗೆ ಅರ್ಪಿಸುವುದಷ್ಟೇ ನಮ್ಮ ಉದ್ದೇಶ. ನಮಗಿರುವ ಕಾಲಪರಿಮಿತಿಯಲ್ಲಿ ಈ ಅಲ್ಪಾರಾಧನೆ ಮಾತ್ರವೇ ಸಾಧ್ಯ.

ಪಂಪನದು ಬಹುಮುಖವಾದ ಜೀವನ : ಅದು ನಿಜವಾಗಿ ತುಂಬುಜೀವನ. ಅವನು ಜಾತಿಯಲ್ಲಿ ಬ್ರಾಹ್ಮಣ, ಮತದಲ್ಲಿ ಜೈನ, ಮನೋಧರ್ಮದಲ್ಲಿ ರಸಿಕ. ಈ ವಿವಿಧ ಸಂಸ್ಕಾರಗಳಲ್ಲಿ ಒಂದಕ್ಕೊಂದು ಪೋಷಕವಾಯಿತೇ ಹೊರತು, ಮಾರಕವಾಗಲಿಲ್ಲ. ಇದೇ ಅವನ ಜೀವನದ ಗುಟ್ಟು; ಅವನ ಹಿರಿಮೆಯ ಗುಟ್ಟು. ಪಂಪನಿಗೆ ಜೈನ ಧರ್ಮದಲ್ಲಿ ಅಚಲವಾದ ಭಕ್ತಿಯಿತ್ತು; ಧರ್ಮಗಳಲ್ಲೆಲ್ಲಾ ಅದೇ ಶ್ರೇಷ್ಠವೆಂದು ಅವನು ದೃಢವಾಗಿ ನಂಬಿದ್ದನು. ತನ್ನ ತಂದೆ ಅದನ್ನು ಅವಲಂಬಿಸಿದ್ದಕ್ಕೆ ಅವನು ಹೆಮ್ಮೆ ಪಡುತ್ತಿದ್ದನು. ಆದರೆ ಧರ್ಮಾಂತರವು ಧರ್ಮಾಂಧತೆಯಾಗಲಿಲ್ಲ; ಪಂಪನ ಜೈನ ನಿಷ್ಠೆ ಅವನು ವ್ಯಾಸಭಾರತವನ್ನು ಸಂಗ್ರಹಿಸಿ ಕಾವ್ಯರಚನೆ ಮಾಡುವುದಕ್ಕೆ ಅಡ್ಡಿಯಾಗಿ ಬರಲಿಲ್ಲ.

ಪಂಪನಿಗೆ ರಸಿಕ ಜೀವನದಲ್ಲಿ ವಿಶೇಷ ಅಭಿಲಾಷೆಯಿತ್ತು. ಅವನದು ಸುಕುಮಾರವಾದ ಮನಸ್ಸು, ಸುಸಂಸ್ಕೃತವಾದ ಮನಸ್ಸು. "ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನಿಂಪುಗಳ್ಗೆ ಆಗರವಾದ ಮಾನಸರೆ ಮಾನಸರ್!" ಎಂಬುದು ಅವನ ನಿರ್ಣಯ. ಅವನಿಗೆ ಅಲಂಕಾರದಲ್ಲಿ – ಲಲಿತವಾದ ಮಧುರವಾದ ಅಲಂಕಾರದಲ್ಲಿ – ಆಸಕ್ತಿ; ಸಂಗೀತವೆಂದರೆ ಪ್ರಾಣ : ರಣರಂಗದಲ್ಲಿ ಕೂಡ ರಾತ್ರಿಯ ವೇಳೆ ಗಾಯನವನ್ನು ಅವನು ಕೇಳಬೇಕು; ಹೂವಿನ ಮೇಲೆ ಆಸೆ : ಮಲ್ಲಿಗೆ ಹೂವು ಅವನಿಗೆ ಸಂಸಾರಸಾರಗಳಲ್ಲಿ ಒಂದು; ಹೆಣ್ಣಿನಲ್ಲಿ ಪ್ರೇಮ – ಈ ಪ್ರೇಮದಿಂದಲೇ ಜೀವನ ಸಾರ್ಥಕವೆಂದು ಅವನ ತಿಳಿವಳಿಕೆ. ಅವನು ಸಂಸಾರದ ಭೋಗಗಳನ್ನೆಲ್ಲ ಕೊರತೆ ಮಾಡಿಕೊಳ್ಳದೆ ಅನುಭವಿಸಿದವನು. ಆದರೆ ಇದೆಲ್ಲ ಕ್ಷಣಿಕವೆಂದೂ ಪಂಪನು ಬಲ್ಲನು : "ಅಮರೇಂದ್ರೋನ್ನತಿ ಖೇಚರೇಂದ್ರ ವಿಭವಂ ಭೋಗೀಂದ್ರ ಭೋಗಂ ಮಹೇಂದ್ರ ಮಹೈಶ್ವರ್ಯಂ : ಇವೆಲ್ಲಂ ಅಧ್ರುವಂ!" ಧರ್ಮವೇ ಪ್ರಧಾನ; ಮುಕ್ತಿಯಲ್ಲೇ ಜೀವನಿಗೆ ವಿಶ್ರಾಂತಿ; ವೈರಾಗ್ಯವಿಲ್ಲದೆ, ತಪಸ್ಸಿಲ್ಲದೆ ಅದು ದೊರೆಯದು ಎಂಬುದನ್ನೂ ಅವನು ಬಲ್ಲನು.

ಪಂಪನು ಒಂದು ಕಡೆ ಕವಿ, ಮತ್ತೊಂದು ಕಡೆ ಕಲಿ. (ಒಂದು ಕಡೆ ಅವನು "ಲಲಿತಾಲಂಕರಣಂ". ಇನ್ನೊಂದು ಕಡೆ "ಚತುರಂಗ ಬಲಭಯಂಕರಣಂ") ಅವನು ಕೈಯಲ್ಲಿ ಲೇಖನಿ ಹಿಡಿದು 'ವಿಕ್ರಮಾರ್ಜುನವಿಜಯ'ವನ್ನು ಬರೆದು, ಅದರ ಮೂಲಕ ತನ್ನ ಪ್ರಭುವಾದ ಅರಿಕೇಸರಿಯ ಕೀರ್ತಿಯನ್ನು ಚಿರಕಾಲ ನಿಲ್ಲಿಸಿದನು. ಒರೆಯಿಂದ ಕತ್ತಿಯನ್ನು ಹಿರಿದು ರಣರಂಗದಲ್ಲಿ ತನ್ನ ಶೌರ್ಯವನ್ನು ಮೆರೆದು, ಒಡೆಯನ ಉಪ್ಪಿನ ಋಣವನ್ನೂ ಸಲ್ಲಿಸಿದನು. ಪಂಪನು ಹೀಗೆ ರಾಜನ ಆಶ್ರಿತನಾದರೂ "ಅಭಿಮಾನದ ಮೂರ್ತಿ". "ಓಲಗಿಸಿ ಬಾಟ್ವುದೆ ಕಷ್ಟಮಿಳಾಧಿನಾಥರಂ" ಎಂದು ತನ್ನ ಪ್ರಭುವಿನ

ಮುಂದೆಯೇ ನಿರ್ದಾಕ್ಷಿಣ್ಯವಾಗಿ ಹೇಳಬಲ್ಲ ಧೈರ್ಯವೂ "ಪೆಱರೀವುದೇಂ ಪೆಱರ ಮಾಡುವುದೇಂ ಪೆಱರಿಂದವಪ್ಪುದೇಂ!" ಎಂದು ಸಾರುವ ಕೆಚ್ಚೂ ಅವನಿಗಿತ್ತು. ಅರಿಕೇಸರಿ ಅವನನ್ನು ಸನ್ಮಾನಿಸಿ, ತನ್ನ ಸ್ನೇಹದಿಂದ ಸೆರೆಹಿಡಿದನು. ಅದಕ್ಕೆ ಕಟ್ಟು ಬಿದ್ದು ಪಂಪನು ಅವನ ರಾಜಧಾನಿಯಲ್ಲಿ ಹಲವು ಕಾಲ ನೆಲಸಿದನು. ಆದರೂ ಅವನ ಹೃದಯವೆಲ್ಲ ಬನವಾಸಿಯ ವನಸ್ಥಲಗಳಲ್ಲೇ ತೊಳಲಾಡುತ್ತಿತ್ತು! ಬನವಾಸಿಯ ಸೌಂದರ್ಯವನ್ನೂ ಅದಕ್ಕಾಗಿ ತನ್ನ ಹಂಬಲವನ್ನೂ ಅವನು ಮರೆಯಲಾಗದ ಮಾತುಗಳಲ್ಲಿ ವರ್ಣಿಸಿದ್ದಾನೆ.

ಹೀಗೆ, ಪರಸ್ಪರ ವಿರೋಧಿಗಳೆಂದು ಮೇಲುನೋಟಕ್ಕೆ ತೋರಬಹುದಾದ ಅಂಶಗಳು ಪಂಪನ ಬಾಳಿನಲ್ಲಿ ಸಮನ್ವಯಗೊಂದು ಅದರ ಸೊಗಸನ್ನು ಹೆಚ್ಚಿಸಿದುವು. ಅವನದು ತುಂಬುಜೀವನ; ಸಾಮರಸ್ಯದ ಜೀವನ. ಇದರ ತಿರುಳು ಅವನ ಕಾವ್ಯಗಳಲ್ಲಿ ರಮ್ಯವಾಗಿ ರೂಪುಗೊಂಡಿದೆ. ಕವಿಯ ಶೀಲದಂತೆ ಅವನ ಶೈಲಿ; ಕವಿಯ ಅನುಭವದಂತೆ ಅವನ ಕಾವ್ಯ. ಪಂಪನು ಹಿರಿಯ ಬಾಳನ್ನು ಬಾಳಿದವನು; ಹಿರಿಯ ಗುರಿಯನ್ನು ಹಿಡಿದಿದ್ದವನು. ಅವನ ಕೃತಿಗಳಲ್ಲೂ ಈ ಹಿರಿಮೆ ಗೋಚರವಾಗುತ್ತದೆ. ಅವುಗಳ ವಸ್ತುವನ್ನೇ ನೋಡಿ : ಒಂದು 'ಆದಿಪುರಾಣ' : – ಇದರದು ಜೈನ ಪುರಾಣಗಳಲ್ಲೆಲ್ಲಾ ಅತಿರಮ್ಯವಾದ, ಶ್ರೇಷ್ಠವಾದ, ವಿಸ್ತಾರವಾದ ಕಥೆ. ಇನ್ನೊಂದು ಭಾರತ : ಇದರದು ಜಗತ್ತಿನ ಇತಿಹಾಸ ಕಾವ್ಯಗಳಲ್ಲೆಲ್ಲಾ ಪ್ರಥಮ ಸ್ಥಾನವನ್ನು ಗಳಿಸಬಲ್ಲ ಕಥೆ. ಎರಡೂ ಎರಡು ಸಾಗರಗಳು : ಇವನ್ನು ಪಂಪನು ಈಜುವಾಗ ಒಂದು ಕಡೆ ವಿನಯವನ್ನೂ ಮತ್ತೊಂದು ಕಡೆ ಕೆಚ್ಚನ್ನೂ ತೋರ್ಪಡಿಸಿದ್ದಾನೆ. ಅವನದು "ಹಿತಮಿತ ಮೃದು ವಚನ"ವೂ ಹೌದು; "ಪ್ರಸನ್ನ ಗಂಭೀರ ವಚನ"ವೂ ಹೌದು.

ಪಂಪನು ಮಹಾಕವಿಯಷ್ಟೇ ಅಲ್ಲ; ಅವನು ಕವಿಗಳ ಕವಿ. ಅವನಿಗೆ ರನ್ನನಂಥ ಉದ್ದಾಮ ಕವಿಗಳೇ ಶಿಷ್ಯರಾಗಿದ್ದಾರೆ. ಕಾಲಚಕ್ರ ತಿರುಗಿದಂತೆಲ್ಲ, ಅವನ ಕಾವ್ಯಗಳ ಕಾಂತಿ ಮಂಕಾಗುವ ಬದಲು ಉಜ್ಜ್ವಲವಾಗಿ ಬೆಳಗುತ್ತಿದೆ. ಪಂಪನು ಕನ್ನಡ ಸಾಹಿತ್ಯದ ನಂದಾದೀವಿಗೆ; ಇದರ ಬೆಳಕು ಮನೆ ಮನೆಗೂ ವ್ಯಾಪಿಸಲಿ!

ಪಂಪ*

೧. ಪರಿಚಯ

ಸುಮಾರು ಸಾವಿರ ವರ್ಷಗಳ ಹಿಂದೆ ಹೆಸರುಗೊಂಡ ಕವಿಯೊಬ್ಬನು ಕನ್ನಡದ 'ಕವಿಕುಲಗುರು'ವಾಗಿ ನಿಂತಿದ್ದಾನೆ. ಅಂದಿನಿಂದ ಇಂದಿನವರೆಗೆ ಅವನ ಕವಿತೆಯನ್ನು ಓದಿ ಮೆಚ್ಚಿದ ರಸಿಕರ ಸಂಖ್ಯೆ ಹಾಗಿರಲಿ; ಆ ಅರಕೆಯಿಲ್ಲದ ಭಂಡಾರದಿಂದ ಕಂಡಂತೆ ಕಾಣದಂತೆ ಭಾವಗಳನ್ನೂ ಉಕ್ತಿಗಳನ್ನೂ ಸಂಗ್ರಹಿಸಿ ತಮ್ಮ ಕಾವ್ಯಗಳನ್ನು ತುಂಬಿಸಿಕೊಂಡ ದೊಡ್ಡ ಪುಟ್ಟ ಕವಿಗಳೇ ಎಷ್ಟೋ ಮಂದಿ ಆಗಿಹೋದರು. ವಿಮರ್ಶೆಯ ತಕ್ಕಡಿಯಲ್ಲಿಟ್ಟು ತೂಗಿ ಹಿಂದಿನದಕ್ಕೆಲ್ಲ ಹೊಸ ಬೆಲೆಯನ್ನು ಕಟ್ಟುತ್ತಿರುವ ಈಗಿನ ಕಾಲದಲ್ಲಿ ಕೂಡ ಈತನ ಸ್ಥಾನ ಮಹತ್ತ್ವಗಳಿಗೆ ಕುಂದುಕ ಬಂದಿಲ್ಲ. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂದು ನಾಗರಾಜನೆಂಬ ಕವಿ ಸುಮಾರು ಆರುನೂರು ವರ್ಷಗಳ ಕೆಳಗೆ ಸಾರಿದನು; ಅದೇ ಈ ಹೊತ್ತಿಗೂ ಮಾರ್ದನಿಗೊಡುತ್ತಿದೆ.

ಇಷ್ಟು ಪ್ರಭಾವಶಾಲಿಯಾದ ಮಹಾಕವಿಯ ಕೃತಿಗಳನ್ನು ಸವಿನೋಡುವುದಕ್ಕೆ ಪೀಠಿಕೆಯಾಗಿ ಅವನ ಜೀವನದ ಪರಿಚಯವನ್ನು ಒಂದಿಷ್ಟು ಮಾಡಿಕೊಳ್ಳಬೇಕೆಂಬ ಕುತೂಹಲ ಹುಟ್ಟುವುದು ಸಹಜ. ನಮ್ಮ

* ಮೈಸೂರು ವಿಶ್ವವಿದ್ಯಾನಿಲಯ, ೧೯೩೯.

ಸುದೈವದಿಂದ ಈ ವಿಷಯದಲ್ಲಿ ಪಂಪನೇ ಸಹಾಯವನ್ನು ಒದಗಿಸಿದ್ದಾನೆ. ಅವನು ಬಿಟ್ಟುಹೋಗಿರುವ ಕಾವ್ಯಗಳು ಎರಡು. ಇವೆರಡರಲ್ಲೂ —ಮುಖ್ಯವಾಗಿ, 'ಆದಿ ಪುರಾಣ'ದ ಮೊದಲಲ್ಲೂ 'ವಿಕ್ರಮಾರ್ಜುನವಿಜಯ'ದ ಕೊನೆಯಲ್ಲೂ—ಅವನು ಸ್ವವಿಷಯವನ್ನು ಹೇಳಿಕೊಂಡಿದ್ದಾನೆ; ಒಂದೊಂದು ಸಲ ಸಂಕೋಚದ ಎಲ್ಲೆಯನ್ನು ಮೀರಿ ಹೇಳಿಕೊಂಡಿದ್ದಾನೆ. ಇದರ ಜೊತೆಗೆ, ಕಾವ್ಯದ ರಸ ಉಕ್ಕಿ ಉಕ್ಕಿ ಬಂದ ಕಡೆ, ಒಂದೇ ಅಭಿಪ್ರಾಯ ಮತ್ತೆ ಮತ್ತೆ ತಲೆಹಾಕಿದ ಕಡೆ, ಕವಿಯ ಮನೋಧರ್ಮದ ಮುದ್ರೆ ಬಿದ್ದೇ ಇರುತ್ತದೆ. ಇದೆಲ್ಲದರ ಸಹಾಯದಿಂದ ಪಂಪನ ಕುಲ ಶೀಲ ದೇಶ ಕಾಲಗಳ ಪರಿಚಯವನ್ನು ತಕ್ಕಮಟ್ಟಿಗೆ ಮಾಡಿಕೊಳ್ಳಬಹುದು.

ಪಂಪನ ಹಿರಿಯರು ಮೊದಲಿಗೆ ವೈದಿಕರು. ಅವನ ಮುತ್ತಜ್ಜನ ತಂದೆಯಾದ ಮಾಧವಸೋಮಯಾಜಿ ಮಂತ್ರಸಿದ್ಧಿಯನ್ನು ಪಡೆದು ದೊಡ್ಡ ಯಾಗಗಳನ್ನು ಮಾಡಿ ಪ್ರಸಿದ್ಧಿ ಹೊಂದಿದವನು. ಈತನ ಮಹಿಮೆಯಲ್ಲಿ ಪಂಪನಿಗೆ ಗೌರವ; ಆದರೆ ತನ್ನ ಯಾಗ ಧೂಮದಿಂದ ಅವನು ಕೀರ್ತಿಗೆ ಕಪ್ಪುಹತ್ತಿಸಿಕೊಂಡನೆಂದು ವ್ಯಸನವೂ ಆಗಿದೆ. ಈ ಮಾಧವಸೋಮಯಾಜಿಯ ಸಂತತಿಯಲ್ಲಿ ಹುಟ್ಟಿದ ಅಭಿರಾಮದೇವರಾಯನೇ ಪಂಪನ ತಂದೆ. ಈತನು ವೈದಿಕಧರ್ಮವನ್ನು ಬಿಟ್ಟು ಜೈನಧರ್ಮವನ್ನು ಅವಲಂಬಿಸಿದ್ದಕ್ಕೆ ಕಾರಣವನ್ನು ಪಂಪನು ಹೀಗೆ ಹೇಳಿದ್ದಾನೆ :

> ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲ್-ಏ-
> ಮಾತೊ ಜಿನೇಂದ್ರಧರ್ಮಮೆ ವಲಂ[೧] ದೊರೆ ಧರ್ಮದೊಳೆಂದು ನಂಬಿ ತ-
> ಜ್ಜಾತಿಯನುತ್ತರೋತ್ತರಮೆ[೨] ಮಾಡಿ ನೆಗಟ್ಟಿದನ್-ಇಂತಿರೆ-ಆತ್ಮವಿ-
> ಖ್ಯಾತಿಯನಾತನ್-ಆತನ ಮಗಂ ನೆಗಟ್ಟಿಂ[೩] ಕವಿತಾಗುಣಾರ್ಣವಂ.

ಪಂಪನಿಗೆ ತನ್ನ ಬ್ರಾಹ್ಮಣ ಜಾತಿಯಲ್ಲಿ ಹೆಮ್ಮೆಯುಂಟು; ಇಂಥ ಉತ್ತಮ ಜಾತಿಯಲ್ಲಿ ಹುಟ್ಟಿದವನು ನಂಬುವುದಕ್ಕೆ ಯೋಗ್ಯವಾದ ಉತ್ತಮ ಧರ್ಮವೆಂದರೆ ಜೀವದಯೆಯಿಂದ ನಿರ್ಮಲವಾದ ಜೈನಧರ್ಮವೇ ಸರಿಯೆಂದು ಅವನ ಭಾವನೆ. ತನ್ನ ತಂದೆ ಜೈನನಾಗಿ, ಶ್ರೇಷ್ಠವಾದ ತನ್ನ ಜಾತಿಯನ್ನು ಶ್ರೇಷ್ಠತರವಾಗಿ ಮಾಡಿದನೆಂದು ಅವನಲ್ಲಿ ಪಂಪನಿಗೆ ತುಂಬ ಅಭಿಮಾನ.

ಹೀಗೆ, ಅನೂಚಾನವಾಗಿ ಬಂದ ಬ್ರಾಹ್ಮಣಸಂಪ್ರದಾಯದ ಜೊತೆಗೆ ಹೊಸದಾಗಿ ಒದಗಿದ ಜೈನಸಂಸ್ಕಾರವೂ ಪಂಪನ ಬದುಕಿನಲ್ಲಿ ಬೆರೆಯಿತು. ಎರಡೂ ವಿಹಿತವಾಗಿ ಕೂಡಿಕೊಂಡುವೇ ಹೊರತು, ಒಂದನ್ನೊಂದು ಹೊರದೂಡಲಿಲ್ಲ. ಧರ್ಮಾಂತರ ಹೊಂದಿದರೂ ಧರ್ಮಾಂಧತೆ ಇಲ್ಲಿ ಕವಿಯಲಿಲ್ಲ. ಪಂಪನ ಮನಸ್ಸು ಎರಡು ಸಂಸ್ಕೃತಿಗಳ

---

೧. ವಲಂ=ನಿಶ್ಚಯವಾಗಿ.

೨. ಉತ್ತರೋತ್ತರಮೆ=ಇನ್ನೂ ಮೇಲಾಗಿ.

೩. ನೆಗಟ್ಟಂ=ಪ್ರಸಿದ್ಧಿಹೊಂದಿದ.

ಸಾರವನ್ನೂ ಒಳಕೊಂಡು ಪುಷ್ಟಿಹೊಂದಿತು, ಉದಾರವಾಯಿತು. ಇದರ ಫಲ ಅವನ ಕವಿತೆಗೂ ಒದಗಿತು.

ಪಂಪನ ಮನೆತನದವರು ಇದ್ದುದು ವೆಂಗಿಮಂಡಲದ ವೆಂಗಿಪಟುವೆಂಬ ಅಗ್ರಹಾರದಲ್ಲಿ. ವೆಂಗಿಮಂಡಲವು ಕೃಷ್ಣಾ ಗೋದಾವರೀ ನದಿಗಳ ನಡುವೆ ಪೂರ್ವಸಮುದ್ರದ ಕರೆಯ ತನಕ ಮುಟ್ಟಿದ್ದ ವಿಸ್ತಾರವಾದ ನಾಡು. ಇದು ಆಂಧ್ರಭೂಮಿಯಾದರೂ, ನಮ್ಮ ಸಾಹಿತ್ಯದಲ್ಲಿ ಹೆಸರುವಾಸಿಯಾಗಿರುವ ಅನೇಕ ಕನ್ನಡ ಮನೆತನಗಳು ಇಲ್ಲಿ ನೆಲಸಿದ್ದಂತೆ ಗೊತ್ತಾಗುತ್ತದೆ. ಪಂಪನು ತನ್ನ ಹಿರಿಯರ ಊರಿನಲ್ಲೇ ಹುಟ್ಟಿ ಬೆಳೆದನೆ ಎಂಬ ವಿಷಯದಲ್ಲಿ ಸಂದೇಹವಿದೆ. ಮುಂದೆ ಅವನು ದೊಡ್ಡ ಕವಿಯಾಗಿ, ವೆಂಗಿ ಮಂಡಲದ ಪಶ್ಚಿಮದ ಕಡೆ, ಕನ್ನಡಸೀಮೆಗೆ ಹತ್ತಿರವಾಗಿ ಲೆಂಬುಳಪಾಟಕವೆಂಬ[೧] ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದ ಚಾಳುಕ್ಯ ವಂಶದ ಎರಡನೆಯ ಅರಿಕೇಸರಿಯ ಆಸ್ಥಾನವನ್ನು ಸೇರಿದನು. ಈ ಪ್ರಭುವಿನ ಆಶ್ರಯದಲ್ಲಿ ಕಾವ್ಯರಚನೆಮಾಡಿ, ಅದಕ್ಕೆ ಫಲವಾದ 'ಪೂಜೆ ನೆಗಟ್ತೆ ಲಾಭ'ಗಳನ್ನೆಲ್ಲಾ ಪಡೆದನು. ಹೀಗೆ ಪಂಪನ ಪೂರ್ವೋತ್ತರಗಳು ವೆಂಗಿಮಂಡಲಕ್ಕೇ ಸಂಬಂಧಿಸಿದ್ದರೂ ಅವನ ಹೃದಯ ನೆಲಸಿದ್ದುದು ಮಾತ್ರ ಅಲ್ಲಿಗೆ ಎಷ್ಟೋ ದೂರದಲ್ಲಿದ್ದ ಬನವಾಸಿ ದೇಶದಲ್ಲಿ—ಅಚ್ಚಗನ್ನಡ ಪ್ರಾಂತದ ಮಲೆನಾಡಿನ ಮಡಿಲಿನಲ್ಲಿ. ಪಂಪನು ಮಾಡಿರುವ ಬನವಾಸಿದೇಶದ ವರ್ಣನೆ ತುಂಬ ಪ್ರಸಿದ್ಧವಾಗಿದೆ. ದೇಶ ದೇಶವನ್ನು ಸುತ್ತಿ ಬನವಾಸಿಯ ಪ್ರಾಂತಕ್ಕೆ ಬಂದ ಅರ್ಜುನನು ಇಲ್ಲಿಯ ಚೆಲುವಿಗೆ ಮೆಚ್ಚಿ ಆ ಮಾತುಗಳನ್ನು ಆಡಿದಂತೆ ಪಂಪನು ನಿರೂಪಿಸಿದ್ದಾನೆ; ಆದರೆ ನಿಜವಾಗಿ ಇದು ಪಂಪನ ಹೃದಯದಿಂದಲೇ ಉಕ್ಕಿದ ಹಂಬಲಿಕೆಯ ಚಿಲುಮೆ :

> ಸೊಗಯಿಸಿ ಬಂದ[೨] ಮಾಮರನೆ ತಳ್ತೆಲೆವಳ್ಳಿಯೆ ಪೂತ[೩] ಜಾತಿ ಸಂ-
> ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರ-ಒಳ್ಮೊಗಂ
> ನಗೆಮೊಗದೊಳ್ ಪಳಂಚಲೆಯೆ[೪] ಕೂಡುವ ನಲ್ಲರೆ—ನೋಟಿಪ್ಪೊಡೆ-
> ಆವ ಬೆ-
> ಟ್ಟುಗಳೊಳಂ-ಆವ ನಂದನವನಂಗಳೊಳಂ ಬನವಾಸಿದೇಶದೊಳ್. .

ಹಿಂದೆ ಪಂಪನು ಬನವಾಸಿಯ ಪ್ರಾಂತದ ದಟ್ಟವಾದ ವನಗಳಲ್ಲಿ ಅಲೆದಾಡಿ, ಅಲ್ಲಿಯ ಹೂಗಳ ಕಂಪನ್ನು ಹೀರಿ, ತೆಂಕಣ ತಂಗಾಳಿಗೆ ಮೈಯೊಡ್ಡಿ, ನಲ್ಮೆಯ ಕೇಳಿಗಳಲ್ಲಿ ಮೈಮರೆತು ಸುಖಪಟ್ಟಿರಬೇಕು. ಈಗ ಲೆಂಬುಳುಪಾಟಕದ ಬಿರುಬೇಸಗೆಯ ಎರೆನೆಲದಲ್ಲಿ ಕಾಲ ನೂಕುತ್ತಿರುವಾಗ ಅವನಿಗೆ ಆ ಹಳೆಯ ನೆನಪು ಮಿಂಚಿ, ಬನವಾಸಿಯ

---

೧. ಇದು ನೈಜಾಮರ ರಾಜ್ಯದ ಕರೀಂ ನಗರ ಜಿಲ್ಲೆಯಲ್ಲಿ ಈಗ ವೇಮುಲವಾಡ ಎಂಬ ಹೆಸರನ್ನುಳ್ಳ ಊರು.

೨. ಬಂದ=ಫಲಬಿಟ್ಟ.

೩. ಪೂತ=ಹೂವುಬಿಟ್ಟ.

೪. ಪಳಂಚಲೆಯೆ=ಸೋಕಿ ಸರಸವಾಡುವಂತೆ.

ನಾಡೆಲ್ಲ ನಂದನವನದಂತೆ ತೋರುತ್ತಿದೆ. ಅಲ್ಲಿ ಮನುಷ್ಯನಾಗಿ ಹುಟ್ಟಿ ರಸಿಕನಾಗಿ ಬಾಳಬೇಕು; ಆ ಅದೃಷ್ಟವಿಲ್ಲದಿದ್ದರೆ ಕಡೆಗೆ ಮರಿದುಂಬಿಯೋ ಕೋಗಿಲೆಯೋ ಆಗಿಯಾದರೂ ಅಲ್ಲಿ ಹುಟ್ಟಿ ವಿಹರಿಸಬೇಕು ಎಂದುಕೊಳ್ಳುತ್ತಾನೆ. ಇಷ್ಟೇ ಅಲ್ಲ:—

> ತೆಂಕಣಗಾಳಿ ಸೋಂಕಿದೊಡಂ–ಒಳ್ನುಡಿಗೇಳ್ದೊಡಂ ಇಂಪನಾಳ್ದಗೇ–
> ಯಂ[1] ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಂ–ಆದ ಕೆಂದಲಂ–
> ಪಂ[2]ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಂ–ಏನನೆಂಬೆನ್–
> ಆರ್–
> ಅಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ!

ಪಂಪನು ವಾಸವಾಗಿರುವ ಕಡೆಯಲ್ಲಿ ಅಪೂರ್ವವಾಗಿ ಒಂದು ಲಲಿತಸುಖದ ಅನುಭವ ಒದಗಿದರೆ, ಅವನ ಮನಸ್ಸು ತಡೆದರೂ ನಿಲ್ಲದೆ—ಅಂಕುಶದಿಂದ ಚುಚ್ಚಿದರೂ ಲಕ್ಷ್ಯಮಾಡದ ಆನೆಯಂತೆ—ಬನವಾಸಿ ದೇಶವನ್ನು ನೆನೆದುಕೊಳ್ಳುತ್ತದೆ. ಅಲ್ಲಿ ಹಿಂದೆ ಕಂಡ ಇಂಪು ತಂಪು ಸವಿ ಸೊಬಗುಗಳು ಅವನ ಹೃದಯವನ್ನು ಇಷ್ಟುಮಟ್ಟಿಗೆ ಸೆಳೆದಿವೆ. ಪಂಪನು ಎಲ್ಲಿಯೇ ಹುಟ್ಟಿ ಬೆಳೆದಿರಲಿ, ಬನವಾಸಿಯ ಮಲೆನಾಡಿನಲ್ಲಿ ಅವನ ಜೀವಮಾನದ ಸಾರವತ್ತಾದ ಭಾಗ ಕಳೆದಿರಬೇಕು. ಅಲ್ಲಿಯ ಸೊಗಸು ಅವನ ಮನಸ್ಸನ್ನು ತಿದ್ದಿ ಕವಿತಾಶಕ್ತಿಯನ್ನು ಪುಟಗೊಳಿಸಿರಬೇಕು. ಅವನ ಕಾವ್ಯದ ಭಾಷೆ ಕೂಡ ಈ ಬನವಾಸಿಪ್ರಾಂತದ ನೆರೆಯಲ್ಲಿದ್ದ 'ಪುಲಿಗೆಱೆ[3]ಯ ತಿರುಳ ಕನ್ನಡ'. ಲಾಭಕ್ಕಾಗಿ ಗೌರವಕ್ಕಾಗಿ ಇತರ ಕಾರಣಕ್ಕಾಗಿ ಅವನು ದೂರದೇಶದಲ್ಲಿ ನಿಲ್ಲಬೇಕಾಯಿತು. ಆದರೆ ನಲ್ಲೆಯನ್ನಗಲಿದ ಪ್ರಿಯನಂತೆ, ಈ ಪ್ರವಾಸಿ ತನ್ನ ನಚ್ಚಿನ ನಾಡಿಗಾಗಿ ಹಂಬಲಿಸುತ್ತಾನೆ; 'ತೆಂಕನಾದ ಮಱೆಯಲ್ಕೆ–ಇನ್ನೇಂ ಮನಂ ಬರ್ಕುಮೇ' ಎಂದು ನಿಟ್ಟುಸಿರಿಡುತ್ತಾನೆ!

ಪಂಪನಿಗೆ ಬನವಾಸಿಯ ನೆನಪನ್ನು ಮಾತ್ರ ಉಳಿಸಿಕೊಟ್ಟು, ವೆಂಗಿಮಂಡಲದ ಪಡುಗಡಿಯಲ್ಲೇ ಅವನನ್ನು ನಿಲ್ಲಿಸಿಕೊಂಡವನು ಅರಿಕೇಸರಿ. ಪಂಪನ ಗುಣಾತಿಶಯಗಳು ಅರಿಕೇಸರಿಯ ಮನಸ್ಸನ್ನು ಸೆರೆಹಿಡಿದುವು; ಅವನು ಈ ಕವಿಯನ್ನು ಪ್ರೀತಿಯಿಂದ ಬರಮಾಡಿಕೊಂಡು 'ವಿಕ್ರಮಾರ್ಜುನ ವಿಜಯ'ವನ್ನು ಅವನಿಂದ ಬರಸಿದನು. ಇದಕ್ಕಾಗಿ ಪಂಪನಿಗೆ ಲೆಕ್ಕವಿಲ್ಲದಷ್ಟು ಒಡವೆ ವಸ್ತುಗಳನ್ನು ಕೊಟ್ಟದ್ದಲ್ಲದೆ ಧರ್ಮವುರವೆಂಬ ಮನೋಹರವಾದ ಅಗ್ರಹಾರವನ್ನು ಶಾಸನ ಹಾಕಿಸಿಕೊಟ್ಟನು. ಈ ಮೊದಲೇ ತನ್ನ 'ಗುಣಾರ್ಣವ'ನೆಂಬ ಬಿರುದಿಗೆ ಸರಿಜೋಡಿಯಾಗುವಂತೆ 'ಕವಿತಾಗುಣಾರ್ಣವ'ನೆಂಬ ಬಿರುದನ್ನು ಅವನಿಗೆ ಕೊಟ್ಟು ಸನ್ಮಾನಿಸಿದ್ದನು. ಇತ್ತ ಪಂಪನು ಪುರಾಣಪ್ರಸಿದ್ಧರಾದ ರಾಜರಿಗಿದ್ದ ಉದಾತ್ತಗುಣಗಳನ್ನು ಅರಿಕೇಸರಿಯಲ್ಲಿ ಕಂಡು ಮೆಚ್ಚಿದನು; ಹೆಚ್ಚೇಕೆ, ಮಹಾಭಾರತದ ಅರ್ಜುನನೇ ಸಾಕ್ಷಾತ್ತಾಗಿ ಇಲ್ಲಿದ್ದಂತೆ ಇವನಿಗೆ ತೋರಿತು. ಆದಕಾರಣ,

---

೧. ಇಂಪನಾಳ್ದ ಗೇಯಂ=ಮಧುರವಾದ ಗಾಯನ.

೨. ಕೆಂದಲಂಪಂ=ಪ್ರೇಮಸುಖವನ್ನು.

೩. ಪುಲಿಗೆಱೆ=ಧಾರವಾಡ ಜಿಲ್ಲೆಯಲ್ಲಿ ಈಗ ಲಕ್ಷ್ಮೇಶ್ವರ ಎಂಬ ಹೆಸರನ್ನುಳ್ಳ ಊರು.

ಅರಿಕೇಸರಿ ಬೇರೆಯಲ್ಲ, ಅರ್ಜುನ ಬೇರೆಯಲ್ಲ, ಇವನೇ ಅವನು—ಎಂದು ಕಂಠೋಕ್ತವಾಗಿ ಹೇಳಿ, ಭಾರತಕಥೆಯಲ್ಲಿ ಅರಿಕೇಸರಿಯ ಚರಿತ್ರೆಯನ್ನು ಬೆರಸಿ ಹೇಳುವ ಉದ್ದೇಶದಿಂದ 'ವಿಕ್ರಮಾರ್ಜುನ ವಿಜಯ'ವನ್ನು ರಚಿಸಿದನು; ತನ್ನ ಸ್ವಾಮಿಯ ಕೀರ್ತಿಯನ್ನು ಎಲ್ಲ ಕಾಲಕ್ಕೂ ನಿಲ್ಲಿಸಿಕೊಟ್ಟನು. ಇದರಮೇಲೆ, ಪಂಪನು ಕವಿ ಮಾತ್ರವೇ ಅಲ್ಲ : ಕಲಿಯೂ ಹೌದು. ತನ್ನ ಒಡೆಯನ ಕಾಳಗಗಳಲ್ಲಿ ಅವನು ಶೌರ್ಯದಿಂದ ಹೋರಾಡಿದ್ದೂ ಉಂಟು. ಹೀಗೆ ಪ್ರಭುವಿಗೂ ಆಶ್ರಿತನಿಗೂ ಬೇಕಾದಷ್ಟು ಪರಸ್ಪರ ಪ್ರಯೋಜನವಾಯಿತು.

ಆದರೂ, ತನಗೂ ಅರಿಕೇಸರಿಗೂ ಇದ್ದ ಸಂಬಂಧ ಇಷ್ಟು ದೂರದಲ್ಲೇ ತಡೆದಿದ್ದರೆ ಪಂಪನು ರಾಜಾಶ್ರಯದಲ್ಲಿ ಹೆಚ್ಚು ಕಾಲ ನಿಲ್ಲುತ್ತಿದ್ದನೋ ಇಲ್ಲವೋ. 'ಓಲಗಿಸಿ ಬಾಳ್ವುದೆ ಕಷ್ಟಂ-ಇಳಾಧಿನಾಥರಂ' ಎಂಬುದನ್ನು ಅವನು ತಿಳಿದಿದ್ದನು; ನರೇಂದ್ರರಲ್ಲಿ ಒಂದು ಕಡೆ ಶೌರ್ಯ, ಔದಾರ್ಯ ಮೊದಲಾದ ಗುಣಗಳಿದ್ದರೆ ಇನ್ನೊಂದು ಕಡೆ ಮದ, ಅವಿವೇಕ ಮೊದಲಾದುವು ಇರುವುದನ್ನು ಅವನು ಕಂಡಿದ್ದನು. ಇದರಮೇಲೆ, ತಾನು 'ಅಭಿಮಾನಮೂರ್ತಿ'; ಸಮಯಬಿದ್ದರೆ, 'ಪೆಱರೀವುದೇಂ, ಪೆಱರು ಮಾಡುವುದೇಂ, ಪೆಱರಿಂದವಪ್ಪುದೇಂ!' ಎಂದು ಘೋಷಿಸತಕ್ಕ ಕೆಚ್ಚುಳ್ಳವನು. ಇಂಥ ಸ್ವತಂತ್ರಪ್ರವೃತ್ತಿಯ ಮನುಷ್ಯನು ರಾಜನ ಹತ್ತಿರ ನಿಲ್ಲುವಂತೆ ಕಟ್ಟಿಹಾಕಿದ್ದು—ಸ್ನೇಹ. ಅರಿಕೇಸರಿಗೂ ಪಂಪನಿಗೂ ಇದ್ದ ಸಂಬಂಧವು ಸ್ವಾಮಿ-ಸೇವಕಭಾವವನ್ನು ಮಿಾರಿ, ಪ್ರೀತಿ ಗೌರವಗಳಲ್ಲಿ ಬೇರೂರಿ, ಅತ್ಯುತ್ತಮವಾದ ನಿಷ್ಕಪಟವಾದ ಸ್ನೇಹದಲ್ಲಿ ಅರಳಿದಂತೆ ತೋರುತ್ತದೆ. ಇವರಿಬ್ಬರ ಹೊಂದಿಕೆಯನ್ನು ಆಲೋಚಿಸಿದಾಗ ಕೃಷ್ಣಾರ್ಜುನ-ಅದಕ್ಕಿಂತ ಹೆಚ್ಚಾಗಿ ಕರ್ಣ ದುರ್ಯೋಧನರ-ಗೆಳೆತನ ನೆನಪಿಗೆ ಬರುತ್ತದೆ. ಆಶ್ರಯವಿಹೀನನಾಗಿದ್ದ ಕರ್ಣನಿಗೆ ದುರ್ಯೋಧನನು ಅಂಗರಾಜ್ಯವನ್ನು ಕೊಟ್ಟು ಅಭಿಷೇಕಮಾಡಿದ ಬಳಿಕ, ಈ ಹೊಸ ಸಾಮಂತನನ್ನು—

> ಪೊಡಮಡುವರ್ ಜೀಯೆಂಬರ್;
> 'ಕುಡು, ದಯೆಗೆಯ್-, ಏಂ ಪ್ರಸಾದಂ'-ಎಂಬಿವು ಪೆಱರೊಳ್
> ನಡೆಗೆ-; ಎಮ್ಮ ನಿನ್ನ ಯೆಡೆಯೊಳ್
> ನಡೆಯಲ್ವೇಡ- ಎನಗೆ ಕೆಳೆಯನ್ನೆ ರಾಧೇಯಾ!

ಎಂದು 'ಬೇಡಿಕೊಂಡ'ನಂತೆ! ಅರಿಕೇಸರಿಗೂ ಪಂಪನಿಗೂ ಇದೇ ಬಗೆಯ ವ್ಯವಹಾರ ವಿದ್ದಿರಬಹುದೆ?—ಸ್ನೇಹ ಸಲಿಗೆಗಳು ಎಷ್ಟುದೂರ ಹೋಗಬಲ್ಲುವೆಂಬುದನ್ನು ಅರಿಕೇಸರಿಯ ಸಹವಾಸದಲ್ಲಿ ಪಂಪನು ಅರಿಯದೆ ಇದ್ದರೆ, ತನ್ನ ಕಾವ್ಯದಲ್ಲಿ ಕರ್ಣ ದುರ್ಯೋಧನರ ಗೆಳೆತನವನ್ನು ಈಗಿರುವಷ್ಟು ಮಾರ್ಮಿಕವಾಗಿ ಚಿತ್ರಿಸಲು ಸಾಧ್ಯವಾಗುತ್ತಿರಲಿಲ್ಲವೇನೋ!

ಅರಿಕೇಸರಿಯ ಪರಿಚಯಕ್ಕೆ ಪಂಪನು ತನ್ನ ಕಾವ್ಯದ ಎಷ್ಟೋ ಭಾಗವನ್ನು ಮೀಸಲಾಗಿರಿಸಿದ್ದಾನೆ. ಅವನ ವಂಶಕಥೆಯನ್ನು ಎಷ್ಟು ವಿಸ್ತರಿಸಿದರೂ, ಅವನ ಸಾಹಸವನ್ನು ಎಷ್ಟು ಶ್ಲಾಘಿಸಿದರೂ, ಅವನ ಬಿರುದುಗಳನ್ನು ಎಷ್ಟು ಹೊಗಳಿದರೂ ಇವನಿಗೆ ತಣಿವಿಲ್ಲ. ಇತಿಹಾಸವನ್ನು ಬರೆಯುವವರಿಗೆ ಇದರಿಂದ ಅನೇಕ ಸಂಗತಿಗಳು ಖಚಿತವಾಗಿ ತಿಳಿದುಬಂದಿವೆ. ಆದರೆ ಕಾವ್ಯಲೋಲರಾದ ನಮಗೆ ಅರಸನಿಗಿಂತ ಕವಿಯ ವಿಷಯದಲ್ಲೇ ಆಸಕ್ತಿ ಹೆಚ್ಚು. ಪಂಪನೇ ಕೊಟ್ಟಿರುವ ತನ್ನ ಚಿತ್ರ ಇದು:

> ಕದಳೀಗರ್ಭಶ್ಯಾಮಂ,
> ಮೃದುಕುಟಿಲ ಶಿರೋರುಹಂ, ಸರೋರುಹವದನಂ,
> ಮೃದು ಮಧ್ಯಮ ತನು, ಹಿತ ಮಿತ-
> ಮೃದುವಚನಂ, ಲಲಿತ ಮಧುರ ಸುಂದರ ವೇಷಂ.

ಪಂಪನದು ಕನ್ನಡಿಗರಿಗೆ ಸಹಜವಾದ ನಸುಗಪ್ಪುಬಣ್ಣ (ಅರಿಕೇಸರಿಯ ಮೈಬಣ್ಣವೂ ಇದೇ!), ಮಟ್ಟಸಾದ ಆಕೃತಿ, ಮೃದುವಾದ ಗುಂಗುರುಗುರುಳು, ದುಂಡಾದ ಮುಖ; ಇವುಗಳ ಜೊತೆಗೆ ಅವನ 'ಹಿತ ಮಿತ ಮೃದುವಚನ'ವೂ 'ಲಲಿತ ಮಧುರ ಸುಂದರ ವೇಷ'ವೂ ನಮ್ಮನ್ನು ಆಕರ್ಷಿಸುತ್ತವೆ. ಪಂಪನ ದನಿಯನ್ನು ಕೇಳುವ ಅದೃಷ್ಟ ನಮಗಿಲ್ಲದಿದ್ದರೂ ಅದರ ಗುಣಗಳನ್ನು ಅವನ ಕಾವ್ಯಗಳಲ್ಲಿ ಇಂದಿಗೂ ಆಸ್ವಾದಿಸಬಹುದು. ವೇಷ ಭೂಷಣಗಳ ವಿಷಯದಲ್ಲಿ ಅವನಿಗೆ ತುಂಬ ಆಸಕ್ತಿ. ತಾನು 'ಲಲಿತಾಲಂಕರಣ'ನೆಂದು ಅವನು ಬೇರೊಂದು ಕಡೆ ತಿಳಿಸಿದ್ದಾನೆ. ಯಾವ ಋತುವಿಗೆ ಯಾವ ಉಡಿಗೆ ತೊಡಿಗೆ ಒಪ್ಪುತ್ತದೆ, ಯಾವ ಹೊತ್ತಿನಲ್ಲಿ ಹೇಗೆ ರಚನೆಮಾಡಿದರೆ ಹೊಂದುತ್ತದೆ—ಎಂಬ ಸೂಕ್ಷ್ಮಾಂಶಗಳಿಗೆ ಗಮನಕೊಡುವ ರಸಿಕತೆ ಅವನಲ್ಲಿತ್ತು. ಪಂಪನು "ಸಿಸ್ತುಗಾರ"ನಾಗಿದ್ದನೆಂದರೂ ತಡೆಯುತ್ತದೆ. ಇದಕ್ಕೆ ತಕ್ಕಹಾಗೆ, ತಾನು 'ವನಿತಾಕಟಾಕ್ಷಕುವಲಯವನ ಚಂದ್ರ'ನಾಗಿದ್ದುದನ್ನೂ, ಕೇರಳ ಮಲಯ ಆಂಧ್ರ ಮೊದಲಾದ ನಾಡುಗಳ ಸುಂದರಿಯರು ತನಗೆ ಪ್ರಿಯೆಯರಾಗಿದ್ದುದನ್ನೂ ಅವನು ಸಂಕೋಚವಿಲ್ಲದೆ ಹೇಳಿಕೊಂಡಿದ್ದಾನೆ. ಪಂಪನು ಸ್ತ್ರೀರೂಪದ ಮೋಹಕತೆಯನ್ನೂ ಬಲ್ಲವನು; ಒಲುಮೆಯ ತಿರುಳನ್ನು ಕಂಡವನು. ಅವನ ಕಾವ್ಯದಲ್ಲಿ 'ಸಾರಂ- ಅನಂಗಜಂಗಮಲತಾ ಲಲಿತಾಂಗಿಯರಿಂದಮಲ್ತೆ ಸಂಸಾರಂ!' ಎಂಬ ಮಾತು ಋಷಿ ಶಾಪಕ್ಕೆ ಗುರಿಯಾದ ಪಾಂಡುಮಹಾರಾಜನ ಬಾಯಿಂದ ಹೊರಡುತ್ತದೆ. ಇದು ಕೇವಲ ಒಂದು ಪಾತ್ರದ ಉದ್ಗಾರವಲ್ಲ; ಕವಿಯ ಅಭಿಪ್ರಾಯವೂ ಇದೇ ಆಗಿದ್ದಿತೆಂದು ಸಂಶಯವಿಲ್ಲದೆ ಹೇಳಬಹುದು.

ಹೆಣ್ಣಿನ ಸೊಬಗಿಗೆ ಮನಸೋತಿದ್ದ ಪಂಪನು ಅಷ್ಟೇ ಸುಕುಮಾರವಾದ ಹೂವುಗಳ ವಿಷಯದಲ್ಲೂ ಉತ್ಸುಕನಾಗಿದ್ದುದು ಆಶ್ಚರ್ಯವಲ್ಲ. 'ಆದಿಪುರಾಣ'ದ ಹನ್ನೊಂದನೆಯ ಆಶ್ವಾಸದಲ್ಲಿ ಪುಷ್ಪಗಳ ಪ್ರದರ್ಶನವನ್ನೇ ನೋಡಬಹುದು. ಪಂಪನ ಕಾವ್ಯದ ರಮಣಿಯರಿಗೆ ಅವುಗಳನ್ನು ಬಿಡಿಸಿ ಮುಡಿದು ತೃಪ್ತಿಯಿಲ್ಲ; ಇವನಿಗೆ ಅವುಗಳನ್ನೂ

ಅವರನ್ನೂ ವರ್ಣಿಸಿ ತೃಪ್ತಿಯಿಲ್ಲ. ಒಂದೊಂದು ಜಾತಿಯ ಹೂವಿನಲ್ಲಿ ಒಂದೊಂದು ಗುಣವಿಶೇಷ ಅವನ ಕಣ್ಣಿಗೆ ಬೀಳುತ್ತದೆ. ಆದರೂ ಮಲ್ಲಿಗೆಯಲ್ಲಿ ಅವನಿಗೆ ಅಭಿಮಾನ ಎಲ್ಲಕ್ಕೂ ಹೆಚ್ಚು. ಮಲ್ಲಿಗೆಯೂ ಮಾವೂ ವರ್ಷದ ಉದ್ದಕ್ಕೂ ಬಿಡುತ್ತಿದ್ದರೆ, 'ಪೆಱತಾವುದು ಸಂಸಾರಸಾರಸರ್ವಸ್ವ ಫಲಂ'!

ಇನ್ನು ಪಂಪನ ಕಾಲದ ವಿಚಾರ. ತಾನು ಆದಿಪುರಾಣವನ್ನು ರಚಿಸಿದ್ದು 'ಶಕವರ್ಷಮೆಂಟುನೂಱಕ್ಕೆ ಕಡೆಯೊಳಱುವತ್ತು ಮೂಱು ಸಂದಂದು' ಪ್ಲವಸಂವತ್ಸರದಲ್ಲಿ ಎಂದಿಷ್ಟು ಹೇಳಿಬಿಡದೆ ಅದು ಮುಗಿದ ತಿಥಿ ವಾರ ನಕ್ಷತ್ರಗಳನ್ನೂ ಅವನು ಕೊಟ್ಟಿದ್ದಾನೆ. ಇದರಿಂದಲೇ ಕೊಂಚ ತೊಡಕುಂಟಾಗಿದೆ. ಈ ರಚನೆಯ ಕಾಲ ಕ್ರಿ.ಶ. ೯೪೧ಕ್ಕೆ ಸರಿಹೋಗುವುದೆಂದೇ ಸಾಮಾನ್ಯಭಾವನೆ. ಆದರೆ ಈಚೆಗೆ ಒಬ್ಬಿಬ್ಬರು ವಿದ್ವಾಂಸರು ಲೆಕ್ಕಹಾಕಿ ಅದು ಕ್ರಿ.ಶ. ೯೪೨ಕ್ಕೆ ಸಲ್ಲುತ್ತದೆಂದು ಒಂದು ವರ್ಷ ಮುಂದಕ್ಕೆ ನೂಕಿದ್ದಾರೆ. [ಆದಿ ಪುರಾಣರಚನೆಯ ಸಹಸ್ರವರ್ಷೋತ್ಸವ ೧೯೪೧ರಲ್ಲೇ ಕನ್ನಡ ನಾಡಿನಲ್ಲೆಲ್ಲಾ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.]

ಪಂಪನು 'ದುಂದುಭಿಸಂವತ್ಸರೋದ್ಭವ'ನಾದ್ದರಿಂದ, ಆದಿಪುರಾಣವನ್ನು ಬರೆದಾಗ ಅವನಿಗೆ ಮೂವತ್ತೊಂಬತ್ತು ವರ್ಷ. ಈ ವೇಳೆಗಾಗಲೇ ಅವನು ಅರಿಕೇಸರಿಯ ಆಶ್ರಯವನ್ನು ಪಡೆದಿದ್ದನೆಂಬುದು ಅವನ 'ಕವಿತಾಗುಣಾರ್ಣವ' ಎಂಬ ಬಿರುದಿನಿಂದ ಗೊತ್ತಾಗುತ್ತದೆ. ಅದಾದ ಕೆಲವು ಕಾಲಕ್ಕೆ ಅವನು 'ವಿಕ್ರಮಾರ್ಜುನವಿಜಯ'ವನ್ನು ರಚಿಸಿದನು; ಈ ಗ್ರಂಥವನ್ನು ಒಂದು ವರ್ಷದಲ್ಲಿ ಮುಗಿಸಬೇಕೆಂದು ಅರಿಕೇಸರಿ ಕೋರಿದನಂತೆ. ಪಂಪನ ನಿರರ್ಗಳವಾದ ಕವಿತಾವಾಹಿನಿಗೆ ಇಷ್ಟು ಕಡಮೆಯ ಅವಧಿ ಕೂಡ ಬೇಕಾಗಲಿಲ್ಲ :

> ಬೆಳಗುವೆನಿಲ್ಲಿ ಲೌಕಿಕಮನ್-ಅಲ್ಲಿ ಜಿನಾಗಮಮಂ ಸಮಸ್ತಭೂ-
> ತಳಕೆ ಸಮಸ್ತಭಾರತಮುಂ- ಆದಿಪುರಾಣಮುಮೆಂದು ಮೆಯ್-ಅಸುಂ-
> ಗೊಳುತಿರೆ ಪೂಣ್ದು[1], ಪೂಣ್ದ ತೆಱದೆ ಒಂದು-ಅಱುದಿಂಗಳೊಳ್- ಒಂದು ಮೂಱು ತಿಂ-
> ಗಳೊಳೆ ಸಮಾಪ್ತಿಯಾದುದೆನೆ ಬಣ್ಣಿಸಿದಂ ಕವಿತಾಗುಣಾರ್ಣವಂ!

'ಸಮಸ್ತಭಾರತ'ವನ್ನು (ಎಂದರೆ, 'ವಿಕ್ರಮಾರ್ಜುನ ವಿಜಯ' ಅಥವಾ 'ಪಂಪಭಾರತ'ವನ್ನು) ಆರು ತಿಂಗಳಲ್ಲಿಯೂ 'ಆದಿಪುರಾಣ'ವನ್ನು ಮೂರು ತಿಂಗಳಲ್ಲಿಯೂ ಕವಿತಾಗುಣಾರ್ಣವನು ಸಮಾಪ್ತಿಗೊಳಿಸಿಬಿಟ್ಟನು! ಒಂದೇ ವರ್ಷದೊಳಗೆ ಎರಡನ್ನೂ ಅವನು ಬರೆದನೆಂದು ಈ ಪದ್ಯಕ್ಕೆ ಕೆಲವರು ಅರ್ಥ ಮಾಡುತ್ತಾರೆ. ಆದರೆ ಪಂಪನ ಶಕ್ತಿಯನ್ನು ಸ್ಥಾಪಿಸುವುದಕ್ಕೆ ಇಷ್ಟು ದೂರ

---

೧. ಮೆಯ್ ಅಸುಂಗೊಳುತಿರೆ ಪೂಣ್ದು = (ತಾನು ಹಿಡಿದ ಕಾರ್ಯದ ಅಗಾಧತೆಗೆ) ಮೈ ಬೆಚ್ಚಿ ಬೆಂಡಾಗುತ್ತಿರಲು ಪ್ರತಿಜ್ಞೆ ಮಾಡಿ.

ಹೋಗಬೇಕಾಗಿಲ್ಲ. ಈ ಎರಡು ಗ್ರಂಥಗಳ ಶೈಲಿಯನ್ನು ಹೋಲಿಸಿದರೆ ಎರಡಕ್ಕೂ ನಡುವೆ ತಕ್ಕಮಟ್ಟಿನ ಕಾಲ ಕಳೆದಿರಬೇಕೆಂದು ಚೆನ್ನಾಗಿ ಗೊತ್ತಾಗುತ್ತದೆ.

'ಬೆಳಗುವೆನ್-ಇಲ್ಲಿ ಲೌಕಿಕಮನ್-, ಅಲ್ಲಿ ಜಿನಾಗಮಮಂ.'- ಈ ಪ್ರತಿಜ್ಞೆಯನ್ನು ನೆರವೇರಿಸಲು ಪಂಪನು ತನ್ನ ಎರಡು ಕಾವ್ಯಗಳಿಗೂ ಆಧಾರವಾಗಿ ಎರಡು ಮಹಾಕೃತಿಗಳನ್ನೇ ಸಂಸ್ಕೃತದಿಂದ ಆರಿಸಿಕೊಂಡನು : ಒಂದು ವ್ಯಾಸರ 'ಮಹಾಭಾರತ', ಇನ್ನೊಂದು ಜಿನಸೇನ-ಗುಣಭದ್ರಸೂರಿಗಳ 'ಮಹಾಪುರಾಣ'. ವೈದಿಕಧರ್ಮದವರಲ್ಲಿ ಮಹಾಭಾರತಕ್ಕಿರುವ ಪೂಜ್ಯತೆಯನ್ನು ಇಲ್ಲಿ ವರ್ಣಿಸುವುದು ಅನಾವಶ್ಯಕ. ಮತದ ದೃಷ್ಟಿಯನ್ನು ಬಿಟ್ಟು, ಅದನ್ನು ಪಂಪನಂತೆ ಲೌಕಿಕದೃಷ್ಟಿಯಿಂದ ಕೇವಲ ಕಾವ್ಯವಾಗಿ ಪರಿಶೀಲಿಸಿದರೂ,-ಅಲ್ಲಿಯ ಕಥಾವಿಸ್ತಾರ, ಮಾನವನ ಹೃದಯದ ತಳವನ್ನೂ ಮಹೋನ್ನತಿಯ ತುದಿಯನ್ನೂ ಕಾಣಿಸುವ ಪಾತ್ರ ಸೃಷ್ಟಿ, ಅಲ್ಲಿಯ ವೈರ, ಸ್ನೇಹ, ಜೀವನಸಮಸ್ಯೆ-ಇದೆಲ್ಲ ಭರತಖಂಡದಲ್ಲಿ ಮಾತ್ರವಲ್ಲ, ಜಗತ್ತಿನಲ್ಲಿಯೇ ಬೇರೆ ಯಾವ ಇತಿಹಾಸ ಕಥೆಯಲ್ಲಿ ಸಿಕ್ಕುತ್ತದೆ! ಜೈನರಲ್ಲೂ 'ಹರಿವಂಶಪುರಾಣ'ದ ಅಂಗವಾಗಿ ಬರುವ ಒಂದು ಭಾರತಕಥೆಯುಂಟು; ಆದರೆ ಅದರ ಸರಣಿಯೇ ಬೇರೆ. ಅಲ್ಲಿ ವ್ಯಾಸಭಾರತದ ವಿಸ್ತಾರವಿಲ್ಲ, ಸ್ವಾರಸ್ಯವಿಲ್ಲ. ಪಂಪನು ಜೈನನಾಗಿದ್ದರೂ ವ್ಯಾಸಕಥೆಯನ್ನೇ ಅವಲಂಬಿಸಿದ್ದು ಅವನ ಉದಾರದೃಷ್ಟಿಯನ್ನು ತೋರಿಸುತ್ತದೆ, ಅವನು ನಿಜವಾದ ಕವಿಯೆಂಬುದನ್ನು ಸಾರುತ್ತದೆ.

ವೈದಿಕಧರ್ಮದವರಲ್ಲಿ ಮಹಾಭಾರತಕ್ಕಿರುವ ಪೂಜ್ಯತೆಯೆ ಜೈನರಲ್ಲಿ ಮಹಾಪುರಾಣಕ್ಕೆ ಇರುವಂತೆ ತೋರುತ್ತದೆ. ತೀರ್ಥಂಕರರು, ಚಕ್ರವರ್ತಿಗಳು ಮೊದಲಾದ ಅರವತ್ತುಮೂರು ಮಂದಿ ಜೈನ 'ಶಲಾಕಾಪುರುಷ'ರ ಕಥೆಯನ್ನು ಜನ್ಮಾಂತರ ಸಂಗತಿಗಳೊಡನೆ ಸಂಪ್ರದಾಯಕ್ಕನುಸಾರವಾಗಿ ನಿರೂಪಿಸತಕ್ಕ ಸಂಸ್ಕೃತ ಗ್ರಂಥವೇ 'ಮಹಾಪುರಾಣ.' ಇದು ಗುರುಶಿಷ್ಯರಿಬ್ಬರ ಕೃತಿ. ನೃಪತುಂಗ ಚಕ್ರವರ್ತಿಯ (ಕ್ರಿ.ಶ. ೮೧೪-೮೭೭) ಗುರುಗಳಾದ ಜಿನಸೇನಾಚಾರ್ಯರು ಇದರ ಮೊದಲಿನ ೪೨ ಪರ್ವಗಳನ್ನು ರಚಿಸಿ ಕಾಲಾಧೀನರಾದ ಬಳಿಕ ಅವರ ಶಿಷ್ಯರಾದ ಗುಣಭದ್ರಾಚಾರ್ಯರು ಗ್ರಂಥವನ್ನು ಪೂರ್ಣಗೊಳಿಸಿದರು. ಮಹಾಪುರಾಣದಲ್ಲಿ ಜೈನ ತೀರ್ಥಂಕರರೆಲ್ಲರ ಚರಿತ್ರೆಯೂ ಬಂದಿದೆ; ಆದರೆ ಮಿಕ್ಕ ಇಪ್ಪತ್ತು ಮೂವರ ಕಥೆ ಒಂದು ತೂಕವಾದರೆ ಆದಿತೀರ್ಥಂಕರನಾದ ವೃಷಭಸ್ವಾಮಿಯದೇ ಒಂದು ತೂಕ. ಇದು ಮಹಾಪುರಾಣದಲ್ಲಿ ೪೭ ಪರ್ವಗಳನ್ನು, ಎಂದರೆ ಅರ್ಧಕ್ಕೆ ಹೆಚ್ಚಿನ ಭಾಗವನ್ನು, ಆಕ್ರಮಿಸಿ 'ಪೂರ್ವಪುರಾಣ'ವೆಂಬ ಪ್ರತ್ಯೇಕವಾದ ಹೆಸರನ್ನು ಕೂಡ ಪಡೆದಿದೆ. ಇದರ ಗಂಭೀರವಾದ ಕಾವ್ಯಶೈಲಿಯನ್ನು ಪಂಪನು ಮೆಚ್ಚಿ, ಆ ಮೇಲ್ಪಂಕ್ತಿಯನ್ನೇ ತನ್ನ 'ಆದಿಪುರಾಣ'ದಲ್ಲಿ ಅನುಸರಿಸಿದನು.

ಆದಿಪುರಾಣ ವಿಕ್ರಮಾರ್ಜುನವಿಜಯಗಳೆರಡರಲ್ಲೂ ಹೀಗೆ ಪಂಪನು ಕಾವ್ಯಕ್ಕೆ ಮಹಾವಸ್ತುಗಳನ್ನೇ ಆರಿಸಿಕೊಂಡಿದ್ದಾನೆ; ಈ ಅಗಾಧಕಾರ್ಯಕ್ಕೆ ತಕ್ಕ ನಮ್ರತೆಯನ್ನೂ ತೋರ್ಪಡಿಸಿದ್ದಾನೆ. 'ಆನ್ ಧೃಷ್ಟನೆನ್-; ಈ ಕಥಾಬ್ಧಿಯುಮನೇನ್- ಈಸಲ್

ಮನಂದಂದೆನೋ' ಎಂದು ಒಂದರಲ್ಲೂ, 'ವ್ಯಾಸಮುನೀಂದ್ರ ರುಂದ್ರವಚನಾಮೃತವಾರ್ಧಿಯನೀಸುವೆಂ; ಕವಿವ್ಯಾಸನೆನ್-ಎಂಬ ಗರ್ವಮೆನಗಿಲ್ಲ' ಎಂದು ಇನ್ನೊಂದರಲ್ಲೂ ಪೀಠಿಕಾ ಭಾಗದಲ್ಲೇ ವಿನಯದ ಮಾತುಗಳು ಬಂದಿವೆ. ಪಂಪನು ಈ ಎರಡು ಸಾಗರಗಳನ್ನೂ ಈಜಿ ಆಚೆಯ ತಡಿಗೆ ಸೇರಿದ ಬಗೆಯನ್ನು ಇನ್ನು ಗಮನಿಸೋಣ.

೨. ಆದಿಪುರಾಣ

ಆದಿಪುರಾಣದಲ್ಲಿ ಎರಡು ಫಲಗಳನ್ನು ಜೊತೆಜೊತೆಗೇ ಸಾಧಿಸಬೇಕೆಂದು ಪಂಪನ ಪ್ರಯತ್ನ : 'ನೆಗಟ್ದಿ-ಆದಿಪುರಾಣದೊಳ್- ಅಱಿವುದು ಕಾವ್ಯಧರ್ಮಮಂ ಧರ್ಮಮುಮಂ' ಎಂದು ಅದರ ಪ್ರಾರಂಭದಲ್ಲಿ ಅವನೇ ಹೇಳಿದ್ದಾನೆ. ಧರ್ಮವು ಅಗತ್ಯವಾಗಿ ಕಾವ್ಯದ ತಿರುಳಾಗಬಹುದು; ರಸವುಕ್ಕುವಂತೆ ಅದನ್ನು ನಿರೂಪಿಸಲೂ ಬಹುದು. ಆದರೆ ಎಷ್ಟೋವೇಳೆ ಧರ್ಮದ ಹೆಸರಿನಲ್ಲಿ ವ್ಯಾಖ್ಯಾನಗಳೂ ಮತವಿಚಾರಗಳೂ ತಲೆಹಾಕಿ ಕಾವ್ಯರಸವನ್ನು ಬತ್ತಿಸುತ್ತವೆ. ಪಂಪನ ಆದಿಪುರಾಣಕ್ಕೂ ಈ ದೂರು ತಪ್ಪಿಲ್ಲ.

ಹೀಗಾಗುವುದಕ್ಕೆ ಮುಖ್ಯವಾದ ಕಾರಣವು ಜೈನಪುರಾಣದ ಸ್ವರೂಪದಲ್ಲೇ ಇದೆ. ಅದರಲ್ಲಿ ಲೋಕದೇಶಾದಿ ವಿಭಾಗಗಳು, ತಪೋಮಹಿಮೆ, ಜನ್ಮಾಂತರ ಕಥೆಗಳು, ತೀರ್ಥಂಕರನಿಗೆ ಕೊನೆಯ ಜನ್ಮದಲ್ಲಿ ನಡೆಯುವ 'ಪಂಚಮಹಾಕಲ್ಯಾಣ'ಗಳು, ಅವನು ಮಾಡಿದ ಧರ್ಮೋಪದೇಶ—ಈ ಮೊದಲಾದುವನ್ನೆಲ್ಲಾ ಜೈನಸಂಪ್ರದಾಯಕ್ಕೆ ಅನುಸಾರವಾಗಿ ಕವಿ ವರ್ಣಿಸಲೇಬೇಕು. ಪಂಪನಿಗೆ ಆಧಾರಗ್ರಂಥವಾಗಿದ್ದ ಸಂಸ್ಕೃತ, 'ಪೂರ್ವಪುರಾಣ'ದಲ್ಲಿ ಈ ಅಂಶಗಳೆಲ್ಲಾ ತುಂಬ ವಿಸ್ತಾರವಾಗಿ ಬಂದಿವೆ. ತನ್ನ ಕಾವ್ಯವು ಜೈನಧರ್ಮದ ಕೈಪಿಡಿಯೂ ಆಗಬೇಕಾಗಿದ್ದುದರಿಂದ ಪಂಪನು ಅವನ್ನು ಕೈಬಿಡದೆ ಸಂಗ್ರಹಿಸಬೇಕಾಯಿತು. ಕಥೆ ಹೇಳುವುದರಲ್ಲಿ ಕೂಡ ಅವನು ಸಂದರ್ಭಗಳನ್ನು ವ್ಯತ್ಯಾಸಮಾಡುವ ಹಾಗಿರಲಿಲ್ಲ; ತನ್ನ ಕಲ್ಪನಾಶಕ್ತಿಗೆ ಎಡೆಗೊಡುವುದಕ್ಕಾಗಿ ಸಂಪ್ರದಾಯವನ್ನು ಮಿರುವಹಾಗಿರಲಿಲ್ಲ. ಆದಕಾರಣ, ಆದಿಪುರಾಣರಚನೆಯಲ್ಲಿ ಪಂಪನು ಕೈಕಟ್ಟಿಸಿಕೊಂಡು ಪಟ್ಟುಗಳನ್ನು ತೋರಿಸುವ ಗರಡಿಯಾಳಿನಂತೆ ಕಾಣಿಸುತ್ತಾನೆ.

ಜಿನಸೇನರ ಪೂರ್ವಪುರಾಣಕ್ಕೆ ಪಂಪನು ಹೊತ್ತಿರುವ ಸಾಲವನ್ನು ಮೊದಲೇ ಒಪ್ಪಿಕೊಂಡುಬಿಡುವುದು ಉತ್ತಮ. ಕಥಾಸರಣಿಯನ್ನು ಮಾತ್ರವಲ್ಲ, ಎಷ್ಟೋ ಭಾವಗಳನ್ನು ಕೂಡ ಅವನು ಅಲ್ಲಿಂದಲೇ ಸ್ವೀಕರಿಸಿದನು. ಪಂಪನ ಕಾವ್ಯದ ಎಷ್ಟೋ ಪದ್ಯಗಳೂ ವಚನಖಂಡಗಳೂ—ಕೆಲವು ಉತ್ತಮವಾದ ಪದ್ಯಗಳು ಕೂಡ—ಪೂರ್ವಪುರಾಣದ ಭಾಗಗಳ ಅನುವಾದದಂತಿವೆ. ಸಂಸ್ಕೃತ ಮಹಾಕೃತಿಯೊಂದರ ಸಾರವನ್ನು ಕನ್ನಡದಲ್ಲಿ ಭಟ್ಟಿಯಿಳಿಸುವುದು ಹೇಗೆಂಬುದಕ್ಕೆ ನಿದರ್ಶನವಾಗಿ ಆದಿಪುರಾಣ ಹುಟ್ಟಿದಂತಿದೆ. ಇಷ್ಟನ್ನು ಹೇಳಿದ ಬಳಿಕ, ಪಂಪನ ಪರವಾಗಿ ಈ ಮಾತುಗಳನ್ನೂ ಹೇಳಬೇಕು. ಪೂರ್ವಪುರಾಣದ್ದು ಅತಿ ವಿಸ್ತಾರವಾದ ಧಾಟಿ; ಮಾತೆತ್ತಿದ್ದರೆ ಮತಪ್ರಕ್ರಿಯೆ ದೀರ್ಘವಾಗಿ

ಬರುತ್ತದೆ; ಅದರ ಧಾರ್ಮಿಕಸಂಗತಿಗಳಲ್ಲಿ ಕಾವ್ಯವಾಹಿನಿ ಎಷ್ಟೋ ವೇಳೆ ಅದೃಶ್ಯವಾಗಿ ಬಿಡುತ್ತದೆ. ಆದಿಪುರಾಣದಲ್ಲಾದರೆ ಈ ಅಂಶಗಳೆಲ್ಲ ಸಂಗ್ರಹವಾಗಿ ಬಂದಿವೆ; ಮರಳು ನೆಲ ಇಲ್ಲೂ ಒಮ್ಮೊಮ್ಮೆ ಕಾಣಿಸಿಕೊಂಡರೂ ಕಾವ್ಯದ ಹೊಳೆ ಆ ಜಾಗದಲ್ಲಿ ಕೂಡ ಒಂದು ರೇಖೆಯಷ್ಟಾದರೂ ಮಿಂಚುತ್ತದೆ. ಅಲ್ಲದೆ, ಪಂಪನ ಸ್ವತಂತ್ರ ಪ್ರತಿಭೆಯಿಂದಲೇ ಚಿಮ್ಮಿದ ಉತ್ಕೃಷ್ಟ ಕಾವ್ಯಧಾರೆಯೂ ಇಲ್ಲಿ ಬೇಕಾದಷ್ಟು ಉಂಟು.

ಆದಿಪುರಾಣದ ಕೆಲವು ನೀರಸವಾದ ಸಂಗತಿಗಳನ್ನೂ ವಿವರಣೆಗಳನ್ನೂ ಬಿಟ್ಟರೆ ಅದೊಂದು ಉತ್ತಮ ಕಾವ್ಯವಾಗುತ್ತದೆ. ಇದರಲ್ಲಿ ಪಂಪನು ಜೈನಧರ್ಮದ ಒಳತಿರುಳನ್ನು ರಮ್ಯವಾಗಿ ನಿರೂಪಿಸಿದ್ದಾನೆ. ಇಲ್ಲಿ ಬರುವ ಬೇರೆ ಬೇರೆ ಕಥೆಗಳೆಲ್ಲ ಒಂದು ಮುಖ್ಯೋದ್ದೇಶಕ್ಕೆ ಅಧೀನವಾಗಿ ಹೆಣೆದುಕೊಂಡು, ಕಾವ್ಯದ ಜೀವವಾದ ರಸೈಕ್ಯವನ್ನು ಸಾಧಿಸುತ್ತವೆ. ಈ ಮೂಲಸೂತ್ರವು ಪೂರ್ವಪುರಾಣದಲ್ಲಿ ಇಲ್ಲವೆಂದಲ್ಲ; ಆದರೆ ಅದರ ಸ್ವರೂಪ ಎದ್ದುಕಾಣುವಂತೆ, ವಾಚಕರಿಗೆ ಹೃದ್ಯವಾಗುವಂತೆ ರಚಿಸಿದ ಯಶಸ್ಸು ಪಂಪನಿಗೆ ಸಲ್ಲಬೇಕು.

ಮಾನವನ ಸಹಜಪ್ರವೃತ್ತಿ ಭೋಗದ ಕಡೆಗೆ. ಇತ್ತ, ವಿಷಯಸುಖದಲ್ಲಿ ವ್ಯಾಮೋಹಗೊಂಡು ಅದನ್ನು ಪಡೆಯುವುದಕ್ಕಾಗಿ ಸಂಸಾರದಲ್ಲಿ ತೊಳಲುತ್ತಾನೆ; ಅತ್ತ, ಕೀರ್ತಿವೈಭವಗಳಿಗೆ ಬೆರಗಾಗಿ ಅವನ್ನು ಸಾಧಿಸಲು ಮುನ್ನುಗ್ಗುತ್ತಾನೆ. ಇದೆಲ್ಲವನ್ನು ಪಡೆದರೂ ಅವನಿಗೆ ಉಳಿಯುವುದು—ಅತೃಪ್ತಿ. ದೊರೆತ ರಸ ಅವನ ಬಾಯಾರಿಕೆಯನ್ನು ಇಂಗಿಸುವುದಿಲ್ಲ; ಇನ್ನಷ್ಟು ಹೆಚ್ಚಿಸುತ್ತದೆ. ಇದರ ಮೇಲೆ, ಪಡೆದ ಭೋಗಗಳಾದರೂ ನೆಲೆಗೊಂಡು ನಿಲ್ಲುತ್ತವೆಯೇ? ನೋಡನೋಡುತ್ತಿದ್ದಹಾಗೆಯೇ ಕೈಯಲ್ಲೇ ಕರಗಿಬಿಡುತ್ತವೆ. ಭೋಗದ ಕೊನೆ ತ್ಯಾಗವೆಂದು, ವೈಭವದ ಕೊನೆ ವೈರಾಗ್ಯವೆಂದು ಮನವರಿಕೆ ಯಾಗುವವರೆಗೆ ಜೀವನಿಗೆ ಮುಕ್ತಿಯಿಲ್ಲ. ಈ ತತ್ತ್ವವು ಹಿಂದೂದೇಶದ ವೈದಿಕ–ಅವೈದಿಕ ದರ್ಶನಗಳೆಲ್ಲಕ್ಕೂ ಒಟ್ಟಿನ ಮೇಲೆ ಸಮಾನವಾಗಿದ್ದರೂ ತೀವ್ರ ತಪಶ್ಚರ್ಯವನ್ನು ಬೋಧಿಸುವ ಜೈನದರ್ಶನದಲ್ಲಿ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯವುಂಟು. ಪ್ರತಿಯೊಬ್ಬ ಜೈನತೀರ್ಥಂಕರನ ಚರಿತ್ರೆಯೂ ಸಂಸಾರದ ಅಸಾರತೆಯನ್ನೂ ಸಂನ್ಯಾಸದ ಮಹತ್ತ್ವವನ್ನೂ ಬೋಧಿಸುತ್ತದೆ. ಈ ತತ್ತ್ವ ಮಿಕ್ಕೆಲ್ಲ ಕಡೆಗಿಂತ ರಮ್ಯವಾಗಿ ಕಾವ್ಯಮಯವಾಗಿ ರೂಪುಗೊಂಡಿರುವುದು ಆದಿತೀರ್ಥಂಕರನ ಚರಿತ್ರೆಯಲ್ಲಿ.

ಆದಿನಾಥನು ತಪಸ್ಸಿನಿಂದ ಧರ್ಮಾಮೃತವನ್ನು ಸಾಧಿಸಿ ಲೋಕಕ್ಕೆಲ್ಲ ಮಳೆಗರೆದ ವೈರಾಗ್ಯಮೂರ್ತಿ. ಈ ಪರಿಪಾಕವನ್ನು ಪಡೆಯುವುದಕ್ಕೆ ಅವನ ಜೀವ ಎಷ್ಟೋ ಜನ್ಮಗಳನ್ನು ಎತ್ತಬೇಕಾಯಿತು. ನಾಟಕದ ದೃಶ್ಯಗಳಂತೆ ಈ ಜನ್ಮಗಳು ಒಂದನ್ನೊಂದು ಹಿಂಬಾಲಿಸುತ್ತವೆ. ಹಿಂದೆ ಜಯವರ್ಮನೆಂಬ ರಾಜಪುತ್ರನಾಗಿ ಹುಟ್ಟಿದ್ದಾಗ ಈ ಜೀವನಿಗೆ ತೀವ್ರವಾದ ಭೋಗಾಸಕ್ತಿ ಹೇಗೆ ಉಂಟಾಯಿತು, ಅದರ ವಾಸನೆ ಜನ್ಮ ಜನ್ಮಕ್ಕೂ ಹೇಗೆ ಬೆನ್ನು ಹತ್ತಿತ್ತು, ಧರ್ಮಶ್ರದ್ಧೆ ಹೇಗೆ ಹುಟ್ಟಿತು, ವಿಷಯಾಸಕ್ತಿ ಹೇಗೆ ಸಡಿಲಿತು, ವೈರಾಗ್ಯ ಹೇಗೆ ಬಲಿಯಿತು—ಎಂಬ ಸೂತ್ರ ಈ ಕಥೆಗಳಿಗೆಲ್ಲಾ ಏಖಮುಖವಾದ

ಹೊಂದಿಕೆಯನ್ನು ಕೊಡುತ್ತದೆ. ತೀರ್ಥಂಕರನಿಗೆ ಬೇರೆ ಬೇರೆ ಜನ್ಮಗಳಲ್ಲಿ ಸಂಬಂಧ ಪಟ್ಟಿದ್ದವರ ಭವಾವಳಿಗಳೂ ಇವುಗಳೊಂದಿಗೆ ಹೆಣೆದುಕೊಂಡು ಮೂಲತತ್ತ್ವವನ್ನೇ ಪುಷ್ಟಿಗೊಳಿಸುತ್ತವೆ. ಇಲ್ಲಿ ನಾವು ಆದಿನಾಥನ ಪೂರ್ವ ಕಥೆಯ ಒಂದೆರಡು ಸಂಗತಿಗಳನ್ನು ಮಾತ್ರ ನೋಡುವುದು ಸಾಧ್ಯ.

ಆದಿನಾಥನು ಹಿಂದೆ ಲಲಿತಾಂಗದೇವನಾಗಿ ದೇವಭೂಮಿಯಲ್ಲಿ ಹುಟ್ಟಿದ್ದಾಗ ಅವನಿಗೆ ಸ್ವಯಂಪ್ರಭೆಯೆಂಬ ಪ್ರಿಯೆ ಒದಗಿದಳು. ಆ ಮನೋಮೋಹನೆಯ ಸೊಬಗನ್ನು ವರ್ಣಿಸುವುದು ಪಂಪನಿಗೂ ಅಸದಳವೆನಿಸುತ್ತದೆ;—

ನೆಗಟ್ದಮರಾಂಗನಾಜನದ ರೂಪುಗಳೆಲ್ಲಂ ಅದು–ಈಕೆಯೊಂದು ದೇ–
ಸೆಗೆ, ನಿಮಿರ್ವೊಂದು ಪುರ್ವಿನ ನಯಕ್ಕೆ[1], ಅಮರ್ವೊಂದದಗುಂತಿಗೆ[2],
ಒಂದು ಭಂ–
ಗಿಗೆ, ನೆಗಟ್ವೊಂದು ಮೆಲ್ಪಿನ ತೊದಳ್ನುಡಿಗಪ್ಪೊಡಂ–ಎಯ್ದೆವಾರವು[3]–
ಏ–
ನೊಗಸುಗ[4]ಮೆಂದು ತಳ್ತು[5]–ಅಗಲನ್–ಆಕೆಯನಾ ಲಲಿತಾಂಗ ವಲ್ಲಭಂ.

ತಾನು ದೇವಲೋಕದಲ್ಲಿ ಹುಟ್ಟಿದ್ದು ಈ ಸ್ವಯಂಪ್ರಭೆಯ ನಲ್ಮೆಯಿಂದ ಸಾರವತ್ತಾಯಿತೆಂದು ಲಲಿತಾಂಗನು ಭಾವಿಸುತ್ತಾನೆ. ಆದರೆ ಈ ಸುಖ ಎಷ್ಟು ದಿನ! ಜೈನಜಗತ್ತಿನಲ್ಲಿ ದೇವತೆಗಳು ಹೆಸರಿಗೆ ಮಾತ್ರ ಅಮರರು; ಮಿಕ್ಕವರಂತೆ ಅವರಿಗೂ ಮರಣವುಂಟು. ಲಲಿತಾಂಗನು ಮುಡಿದಿದ್ದ ಹೂಮಾಲೆ ಬಾಡಿತು, ಅವನ ದೇಹಕಾಂತಿ ಮಸಕಾಯಿತು;—ಇನ್ನು ಆರು ತಿಂಗಳಿಗೆ ಅವನ ಕೊನೆಯೆಂಬ ಸೂಚನೆ ಮುಟ್ಟಿತು. ಸುರಭೋಗವನ್ನು ಬಿಡಲಾರದೆ ಅವನು ನನ್ನನ್ನು ಉಳಿಸಿಕೊಳ್ಳಿರೆಂದು ಯಾರು ಯಾರಿಗೋ ಅಂಗಲಾಚುತ್ತಾನೆ; ಶರೀರಗಳು ಎರಡಾದರೂ ಒಂದೇ ಪ್ರಾಣವೆಂಬಂತಿದ್ದ ತನ್ನ ಪ್ರಿಯೆಗೆ ಮೊರೆಯಿಡುತ್ತಾನೆ. ಆದರೆ ಅವನನ್ನು ಅಂತಕನ ಕೈಯಿಂದ ಬಿಡಿಸುವವರು ಯಾರು? ಅಂತಕನಿಗೇ ಮೊದಲು ಆ ಅಧಿಕಾರವಿಲ್ಲ;

ನಿನಗೊರ್ವಂಗಲ್ಲವಸ್ಥಾಂತರಂ–, ಅಮರಜನಕ್ಕೆಲ್ಲಮಿಾ ಪಾಂಗೆ[6]–ಕಾರು–
ಣ್ಯನಿನಾದಂ ನಿನ್ನನ್–ಆದಂ[7] ನಗಿಸುಗುಂ–. ಎಟೆದುಯ್ವಂತಕಂಗಿಲ್ಲ,
ದೇವಾಂ–

೧. ನಿಮಿರ್ವೊಂದು ಪುರ್ವಿನ ನಯಕ್ಕೆ=ಹುಬ್ಬು ಹಾರಿಸುವ ಒಂದು ನಯಕ್ಕೆ.

೨. ಅದಗುಂತಿಗೆ=ಅತಿಶಯಕ್ಕೆ.

೩. ಎಯ್ದೆವಾರವು=ಹತ್ತಿರಕ್ಕೂ ಬರುವುದಿಲ್ಲ.

೪. ಏನ್ ಒಗಸುಗಂ=ಏನು ವಿಶೇಷ(?).

೫. ತಳ್ತು=ಸೇರಿ.

೬. ಈ ಪಾಂಗೆ=ಈ ರೀತಿಯೇ.

೭. ಆದಂ=ವಿಶೇಷವಾಗಿ.

ಗನೆಯರ್ ಮಾಱಾಂಪರೇ[೧], ಪೇೞ್! ಜನನ ಮೃತಿ ಜರಾತಂಕ
ಶೋಕಾಗ್ನಿಯಿಂದೆ-ಆ-
ವನುಮಿಾ ಸಂಸಾರದೊಳ್ ಬೇಯದನ್-ಒಳನೆ! ಶರಣ್ ಧರ್ಮದಿಂದೆ-
ಒಂದುಮುಂಟೇ!

ಎಂದು ಅವನ ಜೊತೆಯ ದೇವತೆಗಳು ಎಚ್ಚರಿಸಿದರು. ಬಳಿಕ ಲಲಿತಾಂಗನು ತನ್ನ ಜೀವಿತದ ಮಿಕ್ಕ ಕಾಲವನ್ನು ಜಿನಾರ್ಚನೆಯಲ್ಲಿ ಕಳೆದು, ಶರತ್ಕಾಲದ ಮೋಡದಂತೆ ಕರಗಿಹೋಗಿ ವಜ್ರಜಂಘನೆಂಬ ವಿದ್ಯಾಧರಕುಮಾರನಾಗಿ ಹುಟ್ಟುತ್ತಾನೆ.

ಇತ್ತ ಅವನನ್ನು ಕಳೆದುಕೊಂಡ ಸ್ವಯಂಪ್ರಭೆ ಕಂಗೆಟ್ಟು, '. . . . ಎರ್ದೆಯಾಣ್ಮನೆನ್ನ ರಸನೆಲ್ಲಿದನೋ ಲಲಿತಾಂಗವಲ್ಲಭಂ!' ಎಂದು ಹಲುಬುತ್ತಾ, ಕೊನೆಗೆ ತಾನೂ ಜಿನಧ್ಯಾನದಲ್ಲಿ ಕಾಲ ಕಳೆದು, ಶ್ರೀಮತಿಯೆಂಬ ರಾಜಕುಮಾರಿಯಾಗಿ ಹುಟ್ಟುತ್ತಾಳೆ. ಹಳೆಯ ವಾಸನೆಗಳು ಜನ್ಮಾಂತರಕ್ಕೆ ಹಿಂಬಾಲಿಸಿ ಬರುವಂತೆ ಹಳೆಯ ಸಂಬಂಧಗಳೂ ಈ ವಜ್ರಜಂಘ ಶ್ರೀಮತಿಯರನ್ನು ಹಿಂಬಾಲಿಸುತ್ತವೆ. 'ಭವದಿಂದಂ ಭವದೊಳ್ ತಗುಳ್ದು[೨] ಪರಮ ಸ್ನೇಹಂಗಳಿಂತೀಗಳ್- ಇಲ್ಲಿವರಂ ಬಂದುವು.' ಒಬ್ಬರನ್ನೊಬ್ಬರು ಪ್ರಸಂಗಾಂತರದಿಂದ ಸಂಧಿಸಿ, ನಲ್ಲನಲ್ಲೆಯರಾಗಿ ಮತ್ತೆ ಕೂಡಿದರು. ತನ್ನ ಜೀವ ಬಯಸುತ್ತಿದ್ದ ಭೋಗಗಳೆಲ್ಲವನ್ನೂ ವಜ್ರಜಂಘನು ಶ್ರೀಮತಿಯೊಂದಿಗೆ ಬಹುಕಾಲ ಅನುಭವಿಸಿದನು. ಹೀಗಿರುವಲ್ಲಿ ಒಂದು ರಾತ್ರಿ ಸೆಜ್ಜೆಯ ಮನೆಯಲ್ಲಿ ಈ ದಂಪತಿಗಳು ಮಲಗಿರುವಾಗ ಒಂದು ಸಂಗತಿ ನಡೆಯಿತು. ಕೇಶಸಂಸ್ಕಾರಕ್ಕೆಂದು ಅಗ್ಗಿಷ್ಟಿಕೆಯಲ್ಲಿ ಸುವಾಸನೆಯ ಧೂಪದ್ರವ್ಯವನ್ನು ಬೇಕಾದಷ್ಟು ಹಾಕಿ, ಸೆಜ್ಜೆಮನೆಯ ಗವಾಕ್ಷಗಳನ್ನು ತೆರೆದಿಡುವುದನ್ನು ಸೆಜ್ಜೆವಳನು ಮರೆತುಬಿಟ್ಟಿದ್ದನು. ಇದರ ಫಲವಾಗಿ ಹೊಗೆ ಸುತ್ತಿಕೊಂಡು, ವಜ್ರಜಂಘ ಶ್ರೀಮತಿಯರು ಉಸಿರುಕಟ್ಟಿ ಪ್ರಾಣಬಿಟ್ಟರು :

ಮೊದಲೊಳ್ ನೀಳ್ದು ಪೊದಳ್ದು[೩] ಪರ್ಬಿ ಪದಪಂ ಕೈಕೊಂಡು[೪] ಮಂದೈಸಿ[೫]
ಮಾ-
ಣದೆ, ತನ್ನಂದದೊಳೇೞ್ಗುಂದದೆ, ನಿರುದ್ಧೋಚ್ಛ್ವಾಸಮಪ್ಪನ್ನೆಗಂ
ಪುದಿದು-, ಆ ದಂಪತಿಯಂ ಪುದುಂಗೊಳಿಸಿ[೬] ಲೋಕಾಶ್ಚರ್ಯಮಂ ಮಾಡಿ
ಕೊಂ-
ದುದು ಕೃಷ್ಣಾಗರುಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೋಲ್!

---

೧. ಮಾಱಾಂಪರೇ=ಪ್ರತಿಭಟಿಸಿ ನಿಲ್ಲುತ್ತಾರೆಯೇ?

೨. ತಗುಳ್ದು=ಹಿಂಬಾಲಿಸಿ. ೩. ಪೊದಳ್ದು=ಹೊರಹೊಮ್ಮಿ.

೪. ಪದಪಂ ಕೈಕೊಂಡು=ಸ್ಫುರಣೆಹೊಂದಿ.

೫. ಮಂದೈಸಿ=ದಟ್ಟವಾಗಿ. ೬ ಪುದುಂಗೊಳಿಸಿ=ಒಡಗೂಡಿಸಿ.

ಗವಾಕ್ಷಗಳನ್ನು ತೆರೆಯದೆ ಮರೆತಷ್ಟರಿಂದಲೇ ಇಷ್ಟು ಅನಾಹುತವಾಗಬಹುದೆ? ಭೋಗದ ಸಾಮಗ್ರಿಯಾದ ಆ ಸುಗಂಧಧೂಮವು ಕೃಷ್ಣಸರ್ಪದಂತೆ ಈ ಭೋಗಿಗಳನ್ನು ಕೊಲ್ಲಬಹುದೆ? ದೀಪದ ಕುಡಿ ಆರುತ್ತಲೂ ಮನೆಯಲ್ಲಿ ಕತ್ತಲೆ ಹಬ್ಬುವಂತೆ, ಹಿಂದೆಲ್ಲ ತೊಳಗುತ್ತಿದ್ದ ಅವರ ಸುಂದರ ದೇಹಗಳು ಈಗ ನೋಡ ನೋಡುತ್ತಿದ್ದ ಹಾಗೆಯೇ ಕಪ್ಪು ತಿರುಗಿದುವು! ಸಂಸಾರದ ಭೋಗಗಳೇ ಹೀಗೆ : ಹಾವಿನ ಹೆಡೆಯಂತೆ ಮೋಹಿಸಿ ಮುಟ್ಟಿ ಕೊಲ್ಲುತ್ತವೆ!

ಈ ದುರಂತ ದೃಶ್ಯದಲ್ಲಿ ಕೂಡ, ಒಂದು ಸಾರವತ್ತಾದ ಅಂಶವು ಪಂಪನ ಗಮನವನ್ನು ಸೆಳೆದಿದೆ :

ಬಿಡದೆ ಪೊಗೆ ಸುತ್ತೆ, ತೋಳಂ
ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮನ್- ಅಂ-
ದು-ಒಡಗಳೆದರ್-: ಓಪರ್-ಓಪರೊಳ್-
ಒಡಸಾಯಲ್ ಪಡೆದರ್!—ಇನ್ನವೇಂ ಸೈಪೊಳವೇ!

ಆ ಪ್ರಾಣವಲ್ಲಭರು ಬಿಗಿದ ತೋಳನ್ನು ಸಡಿಲಿಸದೆ ಒಟ್ಟಿಗೇ ಪ್ರಾಣ ಬಿಟ್ಟರಂತೆ. "ಒಡಗೂಡಿ ಬಾಳಿದ ಪ್ರಿಯರು ಒಡಗೂಡಿ ಸಾಯುವುದರಂಥ ಪುಣ್ಯವುಂಟೇ!" ಎಂದು ಪಂಪನು ಕೇಳುತ್ತಾನೆ. ಈ ಪ್ರಶ್ನೆ ಅವನ ಮನೋಧರ್ಮವನ್ನು ಪ್ರತಿಬಿಂಬಿಸುವ ಕನ್ನಡಿ. ಈ ಸೆಜ್ಜೆಮನೆಯ ಪ್ರಸಂಗದ ನಿರೂಪಣೆಯಲ್ಲಿ ಪಂಪನು ಪೂರ್ವ ಪುರಾಣವನ್ನೇ ಹೆಜ್ಜೆ ಹೆಜ್ಜೆಗೂ ಅನುಸರಿಸಿದ್ದರೂ, ಈ ಪದ್ಯ ಮಾತ್ರ ಸಂಪೂರ್ಣವಾಗಿ ಅವನದು; ಇದನ್ನು ಸ್ವಲ್ಪ ವ್ಯತ್ಯಾಸದೊಡನೆ ವಿಕ್ರಮಾರ್ಜುನವಿಜಯದಲ್ಲೂ (v. ೯೩) ಸೇರಿಸಿ, ಇದರ ಭಾವ ತನಗೆ ಬಲು ಮೆಚ್ಚಿಕೆಯಾದದ್ದೆಂಬುದನ್ನು ಸ್ಫುಟಪಡಿಸಿದ್ದಾನೆ.

ಹೀಗೆ ಅಪ್ರಯಾಸವಾಗಿ ಸಹಮರಣವನ್ನು ಹೊಂದಿದ ವಜ್ರಜಂಘ ಶ್ರೀಮತಿಯರ ಪ್ರೇಮಸಂಬಂಧ ಮುಂದಿನ ಜನ್ಮಕ್ಕೂ ತಪ್ಪಲಿಲ್ಲ; ಭೋಗಕಾಂಕ್ಷೆಯೂ ಮುಗಿಯಲಿಲ್ಲ. 'ಭೋಗಭೂಮಿ'ಯಲ್ಲೇ ಇವರು ಮತ್ತೆ ಹುಟ್ಟಿ ಸುಖವನ್ನು ಸವಿಯುತ್ತಿರುವಾಗ ಅಲ್ಲಿಗೆ ಆದಿನಾಥನ ಜನ್ಮಾಂತರದ ಗೆಳೆಯನೊಬ್ಬನು ಬಂದು ಕನಿಕರದಿಂದ ಎಚ್ಚರಿಸುತ್ತಾನೆ. (ಹಿಂದೊಮ್ಮೆ ಇವನಿಗೆ ಜಿನಧರ್ಮದಲ್ಲಿ ಅಭಿರುಚಿಯನ್ನು ಹುಟ್ಟಿಸಿದ್ದವನೂ ಈತನೇ.)–

'ನಿನಗೆ ಜಯವರ್ಮನಾದಂ-
ದಿನ ಭವದಿಂದಿತ್ತ ಭೋಗಕಾಂಕ್ಷೆಯೆ ತಿಣ್ಣಂ[೧];
ಮನದೊಳ್ ಸಮ್ಯಕ್ತ್ವದ ದೆಸೆ-
ಯಿನಿಸಿಲ್ಲ ದಲ್-! ಅಮ್ಮ[೨], ಕೈಕೊಳಲ್ಕಿದು ಕಾಲಂ.

---

೧. ತಿಣ್ಣಂ=ಕಠಿನ, ಪ್ರಬಲ.

೨. ಅಮ್ಮ=ಅಪ್ಪ!

ಎಂದು ಬೋಧಿಸಿ, ಭೋಗತೃಷ್ಣೆಯನ್ನು ಸಡಿಲಿಸುತ್ತಾನೆ; ದಂಪತಿಗಳಿಬ್ಬರಿಗೂ ಸಮ್ಯಗ್ದರ್ಶನ[೧]ವನ್ನು ಕೈಕೊಳಿಸುತ್ತಾನೆ.

ಮನೆಯಿಂದ ಮನೆಗೆ ಹೋಗುವಂತೆ ನಮ್ಮ ಕಥಾನಾಯಕನು ಬೇರೆ ಬೇರೆ ಜನ್ಮಗಳನ್ನೆತ್ತಿ, ಹೆಚ್ಚು ಹೆಚ್ಚಿನ ಪರಿಪಾಕವನ್ನು ಹೊಂದಿದ ಕಥೆಯನ್ನು ಇಲ್ಲಿ ವಿವರಿಸಬೇಕಾಗಿಲ್ಲ. ಕಟ್ಟಕಡೆಗೆ ಅವನು ಭೂಮಿಯ ಮೇಲೆ ಹದಿನಾಲ್ಕನೆಯ ಮನುವಾದ ನಾಭಿರಾಜನಿಗೆ ವೃಷಭಸ್ವಾಮಿ ಅಥವಾ ಪುರುದೇವನೆಂಬ ಹೆಸರಿನ ಮಗನಾಗಿ ಕೊನೆಯ ಜನ್ಮವನ್ನೆತ್ತಿದನು. ಈ ವೇಳೆಗೆ ಅವನ ಭೋಗಾಸಕ್ತಿ ಕ್ಷೀಣವಾಗಿರುತ್ತದೆ. ಅವನು ಸಂಸಾರದಲ್ಲಿ ಅಂಟಿಯೂ ಅಂಟದಂತೆ ಬಾಳಿ, ಸಂನ್ಯಾಸಕ್ಕೆ ಹೊರಡುವ ಕಾಲ ಒದಗಿತು. ಈ 'ಪರಿನಿಷ್ಕ್ರಮಣ' ಸಮಯದಲ್ಲಿ, ಅದಕ್ಕೆ ಹೊಂದಿಕೊಳ್ಳುವಂತೆ ಸಂಸಾರದ ಅನಿತ್ಯತೆಯನ್ನು ಅವನಿಗೆ ಕೊನೆಯಬಾರಿ ಮನಗಾಣಿಸುವ ಒಂದು ಸಂಗತಿ ನಡೆಯುತ್ತದೆ. ಆದಿಪುರಾಣದ ಸಾರವೇ ಇದೆಂದು ಬೇಕಾದರೂ ಹೇಳಬಹುದು; ಪಂಪನು ಇದನ್ನು ಉಜ್ಜ್ವಲವಾದ ರೀತಿಯಲ್ಲಿ ನಿರೂಪಿಸಿದ್ದಾನೆ.

ಪುರುದೇವನು ಸಾಮಂತಗಣದ ನಡುವೆ ಸಭೆಯಲ್ಲಿರುವಾಗ ಇಂದ್ರನು ಆತನನ್ನು ನಾಟ್ಯಪ್ರಸಂಗದಿಂದ ಓಲೈಸಬೇಕೆಂಬ ಭಕ್ತಿಯಿಂದ ಅಲ್ಲಿಗೆ ಬಂದನು. ಅವನ ಬಿನ್ನಹಕ್ಕೆ ಪುರುದೇವನು 'ನಿಮಗೆ ಯಾವುದು ಸಂತೋಷವೋ ಅದಾಗಲಿ' ಎಂದು ಮುಗುಳುನಗೆಯೊಡನೆ ಸಮ್ಮತಿಕೊಡಲು, ದಿವ್ಯಸಂಗೀತ ಮೊದಲಾಯಿತು. ಬಳಿಕ, ನೀಳಾಂಜನೆಯೆಂಬ ಅಮರನರ್ತಕಿ ಮುಂದೆ ಬಂದಳು :

> ಎನಿಸಿದ ನೀಳಾಂಜನೆ ಕ-
> ರ್ಬಿನ ಬಿಲ್ಲಿಂ ಮಸೆದ ಮದನದ ಕಣೆ[೨] ಬರ್ದುಂಕಿ-
> ತ್ತೆ[೩]ನಿಸುತ್ತೆ- ಒಳಪೊಕ್ಕಳ್ ಭೋಂ-
> ಕೆನೆ ನಿಖಿಳಜನಾಂತರಂಗಮಂ ರಂಗಮುಮಂ . . .

ತೆರೆ ಸರಿಯಿತು; ಮದನನೂ ಸಜ್ಜಾದನು. ನೀಳಾಂಜನೆಯ ನಾಟ್ಯದ ಬೆಡಗನ್ನು ಕೇಳಬೇಕೆ!—

> ತಾಳದ ಲಯಮಂ ನಿಜಿ, ನೀ-
> ಳಾಳಕ[೪], ಹಾರದ ಪೊದಳ್ದ ಮುತ್ತು-ಎಂಬಿವು ಮುಂ-
> ಮೇಳಿಸಿ ಕೈಕೊಂಡುವು; ಲುಳಿ-
> ತಾಳಕಿ[೫] ಕೈಕೊಂಡಳೆಂಬುದೊಂದಚ್ಚರಿಯೇ! . . .

---

೧. ಸಮ್ಯಗ್ದರ್ಶನ=ಜೈನಧರ್ಮದಲ್ಲಿ ದೃಢವಾದ ನಂಬಿಕೆ.

೨. ಕಣೆ=ಬಾಣ.   ೩. ಬರ್ದುಂಕಿತ್ತು=ಹೊರಬಿದ್ದಿತು.

೪. ನೀಳಾಳಕ=ಕಪ್ಪಾದ ಮುಂಗುರುಳು.

೫. ಲುಳಿತಾಳಕಿ=ಇಲ್ಲಿ, ನೀಳಾಂಜನೆ.

ಅವಳ ಅಭಿನಯದ ಹೊಸ ಸೊಗಸಿನಲ್ಲಿ ನಾಟ್ಯಾಗಮವೇ ಹೊಸದಾಯಿತು. ತನ್ನ ಹುಬ್ಬಿನ ಒಂದು ಚಲನೆಯಿಂದ ಅವಳು ಪಕ್ಕವಾದ್ಯದವರಿಗೆ ಲಯವನ್ನು ಸೂಚಿಸುವಳು. ಒಂದು ಕಡೆಗೆ ಅವಳು ಕಣ್ಣು ತಿರುಗಿಸಿದರೆ ಅಲ್ಲಿ ಬೆಳುದಿಂಗಳು ತುಂಬಿದಂತಾಗುವುದು. ಸಭೆಗೆ ಬಂದಿದ್ದ ದೇವತೆಗಳಂತೆ ಮಾನವರೂ ಎವೆಯಿಕ್ಕದೆ ಅವಳ ಅಂಗಸೌಷ್ಠವವನ್ನು ನೋಡುವರು.

ಅವಯವದಿಂದಮೆ ದೇವಾಂ-
ಗವಸ್ತ್ರದುಳ್ಳುಡೆ[1]ಯನ್-ಆಕೆಯೋಸರಿಸುವ, ಸೂ-
ಸುವ ಹಾರಲತೆಯನ್-ಅಳವಡಿ-
ಸುವ ಭಂಗಿಯೆ ಮದನರಾಜರಾಜ್ಯವಿಳಾಸಂ!

ಇಂಥ ಮೋಹಿನಿಯ ನಾಟ್ಯದಿಂದ ಮಿಕ್ಕ ನೋಟಕರ ಮನಸ್ಸು ಸೂರೆಹೋಗುವ ಮಾತಿರಲಿ; ಅದು ಪುರುಪರಮೇಶ್ವರನ ಮನಸ್ಸನ್ನೂ ರಂಜಿಸಿತು-ಶುದ್ಧಸ್ಫಟಿಕದಲ್ಲಿ ಬೇರೊಂದು ವಸ್ತುವಿನ ಕಾಂತಿ ನಿರ್ಲೇಪವಾಗಿ ರಂಜಿಸುವಂತೆ.

ಹೀಗೆ ಜೀವನದ ಸುಖಸಾರವೇ ಇದೆಂಬಂತೆ ನೀಳಾಂಜನೆಯ ಅತಿಶಯ ನಾಟ್ಯವು ನಡೆಯುತ್ತಿರುವಾಗ, ಅದರ ನಡುವೆಯೇ ಅವಳ ಆಯುಸ್ಸು ಮುಗಿಯಿತು; ಮಿಂಚು ಹೊಳೆದು ಮರೆಯಾಗುವಂತೆ ಅವಳು ರಂಗಸ್ಥಳದಲ್ಲಿ ಇದ್ದಕ್ಕಿದ್ದಹಾಗೆ ಅದೃಶ್ಯೆಯಾದಳು. ಇದೆಲ್ಲವನ್ನೂ ಸೂತ್ರಧಾರನಾಗಿ ನಿಂತು ನೋಡುತ್ತಿದ್ದ, ಬಹುಶಃ ನಿರೀಕ್ಷಿಸಿದ್ದ, ಇಂದ್ರನು ರಸಭಂಗಕ್ಕೆ ಎಡೆಗೊಡದೆ ಅದೇ ಕ್ಷಣದಲ್ಲಿ ಅದೇ ರೀತಿಯ ಬೇರೊಂದು ಪಾತ್ರವನ್ನು ಅನುಸಂಧಿಸಿ, ನಾಟ್ಯ ನಿಲ್ಲದೆ ಮುಂದುವರಿಯುವಂತೆ ಮಾಡಿದನು. ಅಲ್ಲಿ ನೆರೆದಿದ್ದ ದೇವಮಾನವರಲ್ಲಿ ಯಾರಿಗೂ ಈ ರಹಸ್ಯದ ಅರಿವೇ ಆಗಲಿಲ್ಲ. ಆದರೆ ಪುರುದೇವನಿಗೆ ಮಾತ್ರ ತಿಳಿಯಿತು. ದೇಹ ಎಷ್ಟು ಅನಿತ್ಯವೆಂಬುದನ್ನು ಕಂಡು ಅವನು ಬೆರಗಾದನು; ಒಡನೆಯೇ ಗಾಢವೈರಾಗ್ಯ ಅವನ ಮನಸ್ಸಿನಲ್ಲಿ ನೆಲೆಗೊಂಡಿತು :

ಕೋಟಿ ತೆಱದಿಂದಮೆಸೆವೀ
ನಾಟಕಮಂ ತೋಱಿ ಮಾಣ್ದಳಿಲ್ಲಳ್[2]; ಬಗೆಯೊಳ್
ನಾಟುವಿನಂ- ಅಮರಿ[3] ಸಂಸೃತಿ-
ನಾಟಕಮುಮನೆನಗೆ ನೆಱೆಯೆ ತೋಱಿದಳೀಗಳ್!

ತನು ರೂಪ ವಿಭವ ಯೌವನ-
ಧನ ಸೌಭಾಗ್ಯಾಯುರಾದಿಗಳ್ಗೆ- ಎಣೆ : ಕುಡುಮಿಂ-

೧. ಉಳ್ಳುಡೆ=ಒಳ ಉಡುಪು.

೨. ಮಾಣ್ದಳಿಲ್ಲಳ್=ಸುಮ್ಮನಾಗಲಿಲ್ಲ.

೩. ಅಮರಿ=ದೇವಾಂಗನೆ.

ಚಿನ ಪೊಳೆವು ಮುಗಿಲ ನೆಟಿಲ್- ಇಂ-
ದ್ರನ ಬಿಲ್ ಬೊಬ್ಬುಳಿಕೆ[೧]ಯುರ್ಬುರ್ಪರ್ಬಿದ ಭೋಗಂ! . .

ಈ ಸುರನರ್ತಕಿಯರಲ್ಲಿ ಚಿತ್ರವಿಚಿತ್ರವಾದ ಸರಸನಾಟ್ಯವನ್ನಲ್ಲದೆ ಸಂಸಾರ ನಾಟ್ಯವನ್ನೂ ಕಂಡು—ದೇಹ ರೂಪ ಮೊದಲಾದುವೆಲ್ಲ ಅತಿ ಚಂಚಲಗಳೆಂದು ಪುರುದೇವನು ಮನಗಂಡನು. ಎಲ್ಲ ಜನ್ಮಗಳಲ್ಲೂ ದುಃಖವೇ ತುಂಬಿ ತುಳುಕುವುದನ್ನು ದೃಢಮಾಡಿಕೊಂಡನು. ಕೊನೆಗಾಣದ ಸುಖತೃಪ್ತಿಗಳು ದೊರೆಯುವುದು ಮುಕ್ತಿಯಲ್ಲಿ ಮಾತ್ರ ಎಂದು ಅರಿತನು. ತಾನು ಇದುವರೆಗೂ ಎಷ್ಟು ಜನ್ಮಗಳನ್ನೆತ್ತಿದ್ದಾಯಿತು, ಎಷ್ಟು ಭೋಗಗಳನ್ನು ಸವಿದದ್ದಾಯಿತು, ಎಷ್ಟು ಆಸೆಗಳಲ್ಲಿ ನರಳಿದ್ದಾಯಿತು! ಇದಕ್ಕೆ ಕೊನೆ ಎಲ್ಲಿ!—

ಎನಿತಾನುಮಂಬುನಿಧಿಗಳನ್-
ಅನೇಕನಾಕಂಗಳಲ್ಲಿ ಕುಡಿದುಂ ಪೋಯ್ತು-
ಲ್ಲೆನಗೆ!-ನರಭೋಗಮೆಂಬೀ
ಪನಿಪುಲ್ಲಂ ನಕ್ಕೆ[೨] ತೃಷ್ಣೆ ಪೇಱ್ ಪೋದಪುದೇ!

ಎಲ್ಲ ಭೋಗವೂ ಭಂಗುರ, ಎಲ್ಲ ಸೊಬಗೂ ಅಸಾರ, ಎಲ್ಲ ಆಸೆಯೂ ಅಪಾರ ಎಂಬುದನ್ನು ಪುರುಪರಮೇಶ್ವರನು ಚೆನ್ನಾಗಿ ಮನಗಂಡನು. 'ಇನ್ ತಿರಿಯಲಾಱೆಂ[೩] ಭವಾಂಬೋಧಿಯೊಳ್' ಎಂದು, ಸಂಸಾರಕ್ಕೆ ಬೇಸತ್ತು, ಭೋಗದ ಕಡೆ ಬೆನ್ನು ತಿರುಗಿಸಿ, ಮುಕ್ತಿಸಾಧನೆಗಾಗಿ ಪರಿನಿಷ್ಕ್ರಮಣಮಾಡಿದನು.

ಇಲ್ಲಿಗೆ ಆದಿಪುರಾಣದ ಒಂದು ಘಟ್ಟ ಮುಗಿಯಿತು. ಪುರುದೇವನು ಉಗ್ರತಪಸ್ಸಿನಿಂದ ಕರ್ಮದ ಬೇರನ್ನು ಕತ್ತರಿಸಿ 'ಕೇವಲಜ್ಞಾನ'[೪]ವನ್ನು ಸಂಪಾದಿಸುವುದೂ, ಆದಿತೀರ್ಥಂಕರನಾಗಿ ನಿಂತು ಧರ್ಮೋಪದೇಶಮಾಡಿ ಮುಂದೆ ಕಾಲವೊದಗಿದಾಗ 'ಪರಿನಿರ್ವಾಣ'[೫] ಹೊಂದುವುದೂ ಆದಿಪುರಾಣದ ಕಥಾವಸ್ತುವಿನ ದೃಷ್ಟಿಯಿಂದ ಮುಖ್ಯವಾದರೂ ಅದನ್ನೆಲ್ಲಾ ಇಲ್ಲಿ ನಿರೂಪಿಸಲು ಸಾಧ್ಯವಿಲ್ಲ. ಆದಿನಾಥನ ಜನ್ಮಾವಳಿಯ ಕಥೆಗಳಲ್ಲಿ ಭೋಗದ ನಿರಾಸವನ್ನು ನೋಡಿದೆವು; ಇನ್ನು ವಿಭವದ ನಿಷ್ಫಲತೆಯನ್ನು ಅವನ ಹಿರಿಯ ಮಗನೂ ಪ್ರಥಮ ಚಕ್ರವರ್ತಿಯೂ ಆದ ಭರತನ ವೃತ್ತಾಂತದಲ್ಲಿ ನೋಡಬೇಕಾಗಿದೆ.

---

೧. ಬೊಬ್ಬುಳಿಕೆ=ನೀರುಗುಳ್ಳೆ

೨. ಪನಿಪುಲ್ಲಂ ನಕ್ಕೆ=ನೀರಿನ ಹನಿಯಿಂದ ಕೂಡಿದ ಹುಲ್ಲೆಸಳನ್ನು ನೆಕ್ಕಿದರೆ.

೩. ತಿರಿಯಲಾಱೆಂ=ಸುತ್ತಲಾರೆನು.

೪. ಕೇವಲಜ್ಞಾನ=ಪರಿಪೂರ್ಣಜ್ಞಾನ.

೫. ಪರಿನಿರ್ವಾಣ=ಮುಕ್ತಿ.

[illegible]

[illegible] ಅವನು ವೃಷಭಾಚಲಕ್ಕೆ ಬಂದನು. ತನ್ನ ವಿಜಯದ ಪ್ರಶಸ್ತಿಯನ್ನು ಅಲ್ಲಿ ಕೆತ್ತುವ ಆಸೆಯಿಂದ ನೋಡಿದನು—

> [illegible]
> [illegible]
> [illegible] ನೋಡಿ ನೋಡಿ
> [illegible]
> [illegible] ಗರ್ವರಸ—ಆ ಭರತೇಶ್ವರ ಚಕ್ರವರ್ತಿಯಾ!

ಚಕ್ರವರ್ತಿಯಾಗಿ ವಿಜಯವೈಭವವನ್ನು ಗಳಿಸಿದವನು ತಾನೊಬ್ಬನೇ ಅಲ್ಲ. ಹಿಂದಿನ ಕಲ್ಪಕೋಟಿಗಳಲ್ಲಿ ಚಕ್ರವರ್ತಿಗಳು ತಂಡ ತಂಡವಾಗಿ ಮೆರೆದು, ತಮ್ಮ ಮಹಿಮೆಗೆ ಸಾಕ್ಷಿಯಾಗಿ ಆ ಬೆಟ್ಟದ ತಪ್ಪಲಲ್ಲೆಲ್ಲಾ ಪ್ರಶಸ್ತಿಗಳನ್ನು ಕೆತ್ತಿಸಿದ್ದಾರೆ. ಇನ್ನೊಬ್ಬನ ಪ್ರಶಸ್ತಿಯನ್ನು ಬರೆಸುವುದಕ್ಕೆ ಕೂಡ ಎಡೆಯಿಲ್ಲದಂತೆ ಅವು ಕಿಕ್ಕಿರಿದಿವೆ! ಭರತಚಕ್ರವರ್ತಿ ಇದನ್ನು ನೋಡಿ ನೋಡಿ ನೋಡಿದನು : ಅದುವರೆಗೂ ಮಡುಗಟ್ಟಿದ್ದ ಅವನ ಗರ್ವರಸ ಸೋರಿಹೋಯಿತು; ತನ್ನ ಒಣಹೆಮ್ಮೆಗೆ ನಾಚಿಕೆಯುಂಟಾಯಿತು. ಹಿಂದಿನ ದೊರೆಗಳಲ್ಲೊಬ್ಬನ ಪ್ರಶಸ್ತಿಯನ್ನು ಒರಸಿಹಾಕಿ ಆ ಜಾಗದಲ್ಲಿ ತನ್ನ ಪ್ರಶಸ್ತಿಯನ್ನು ಬರೆಸಿ, ಸಂಪ್ರದಾಯವನ್ನು ಪಾಲಿಸಿದನು. ಏನು ವಿಜಯ ಇದು!

ಭರತನು ಊರಿಗೆ ಹಿಂದಿರುಗಿದಾಗ ಇನ್ನೊಂದು ಸಂಗತಿ ನಡೆಯಿತು. ಅದುವರೆಗೂ ತಡೆಯಿಲ್ಲದೆ ನುಗ್ಗುತ್ತಿದ್ದ ಚಕ್ರರತ್ನವು ರಾಜಧಾನಿಯ ಬಾಗಿಲಲ್ಲಿ ನಿಂತುಬಿಟ್ಟಿತು. ಹೊರಗಿನ ರಾಜರೆಲ್ಲರೂ ಭರತ ಚಕ್ರವರ್ತಿಗೆ ತಲೆಬಾಗಿದ್ದರೂ ಅವನ ತಮ್ಮಂದಿರಾದ ಬಾಹುಬಲಿಯೇ ಮೊದಲಾದವರು ಅವನನ್ನು ಅಧಿರಾಜನೆಂದು ಒಪ್ಪಿಕೊಳ್ಳದಿದ್ದುದರಿಂದ ವಿಜಯಯಾತ್ರೆ ಮುಗಿದಂತಾಗಲಿಲ್ಲ. ಹೀಗೆ, ದೇಶದೇಶಗಳನ್ನು

ಗೆದ್ದು ಬಂದವನಿಗೆ ಮನೆವಾರ್ತೆಯೇ ವಿಗಡಿಸಿಕೊಂಡಿತು. ವಿಜಯೋನ್ಮತ್ತನಾದ ಭರತನಿಗೆ ತಮ್ಮಂದಿರನ್ನು ಅಧೀನರನ್ನಾಗಿಸಿದ ಹೊರತು ತೃಪ್ತಿಯಿಲ್ಲ. ಇವನ ಹಠವನ್ನರಿತು, ಬಾಹುಬಲಿಯನ್ನುಳಿದ ಮಿಕ್ಕ ನೂರುಮಂದಿ ಸಹೋದರರು "ನಮ್ಮ ತಂದೆ ಕೊಟ್ಟ ರಾಜ್ಯಕ್ಕೆ ಈಗ ಅಣ್ಣನ ಹಂಗಿಗೇಕೆ ಸಿಕ್ಕಬೇಕು?" ಎಂದು ಆಲೋಚಿಸಿ, ಆ ರಾಜ್ಯವನ್ನೇ ತೊರೆದು, ಮತ್ತೆ ತಂದೆಯ ಬಳಿಗೆ ಹೋಗಿ ಅವನಿಂದ ಶ್ರೇಷ್ಠವಾದ ತಪೋರಾಜ್ಯವನ್ನು ಪಡೆದು ನಿಂತರು. ಇವರ ವರ್ತನೆಯನ್ನು ಕೇಳಿ ಭರತನಿಗೆ ಬೆರಗುಂಟಾಯಿತು; ಆದರೆ ಬುದ್ಧಿ ಬರಲಿಲ್ಲ. ಈಗ ಬಾಹುಬಲಿಯನ್ನು ಕೆಣಕುತ್ತಾನೆ. ಅವನು ಈ ಚಕ್ರವರ್ತಿಯ ಸಾಹಸ ಕಾರ್ಯಗಳನ್ನೆಲ್ಲಾ ಹಾಸ್ಯ ಮಾಡಿ ನಕ್ಕು,

> ಭರತಂ ಷಟ್ಖಂಡಭೂವಲ್ಲಭನೆನೆ ಸಿರಿಯಂ ಗೆಂಟಜೊಳ್[೧] ಕೇಳ್ದರಾಗಂ-
> ಬೆರಸಿರ್ಪ-ಈ ನಣ್ಪೆ[೨] ಸಾಲ್ಗುಂ ಕರದೊಡೆ ಬೆಸನೇನೆಂಬ ಜೀಯೆಂಬ
> ದೇವಂ-
> ಬ-ಅರಸೆಂಬಾಳೆಂಬ ದೈನ್ಯಕ್ಕೆಲವೊ ತನುವನ್-ಆನೊಡ್ಡುವಂತು-
> ಆದಿದೇವಂ
> ಪುರುದೇವಂ ದೇವದೇವಂ ಕುಡೆ ಪಡೆದ ನೆಲಕ್ಕಾರೊಳಂ ಪಂಥ ಮುಂಟೇ?

ಎಂದು ಭರತನ ದೂತನಿಗೆ ಹೇಳಿಬಿಡುತ್ತಾನೆ. ಇಬ್ಬರೂ ಶೂರರು, ಛಲಗಾರರು; ಯುದ್ಧವೇ ಒಡ್ಡಿತು. ದೃಷ್ಟಿಯುದ್ಧ ಜಲಯುದ್ಧ ಮಲ್ಲಯುದ್ಧಗಳೆಂಬ ಮೂರರಲ್ಲೂ ಬಾಹುಬಲಿಯೇ ಗೆಲ್ಲುತ್ತಾನೆ. ಆಗ ಅಣ್ಣನು ಸೋಲಿನಿಂದ ಖತಿಗೊಂಡು, ತಮ್ಮನನ್ನು ಘಾತಿಸುವಂತೆ ತನ್ನ ಚಕ್ರಕ್ಕೆ ಬೆಸಸುತ್ತಾನೆ. ಆದರೆ ಆ ಚಕ್ರವು ವಿಜಯಿಯಾದ ಬಾಹುಬಲಿಗೆ ಪ್ರದಕ್ಷಿಣೆ ಮಾಡಿ ಅವನ ಮಗ್ಗುಲಲ್ಲೇ ನಿಂತುಬಿಡುತ್ತದೆ. ಭರತನ ಮಹಿಮೆಯೆಲ್ಲಿ, ರಾಜ್ಯಲೋಭಕ್ಕಾಗಿ ಅವನು ಈಗ ಮಾಡಲೆಳಸಿದ ಅಕಾರ್ಯವೆಲ್ಲಿ! ಇದನ್ನು ನೋಡಿ, ವಿಜಯೋತ್ಸಾಹದ ಸಮಯದಲ್ಲಿ ಬಾಹುಬಲಿಗೆ ವೈರಾಗ್ಯ ಹುಟ್ಟಿಬಿಡುತ್ತದೆ :

> ಇನಿಯವು[೩] ಮೊದಲೊಳ್, ನಂಜಿನ
> ಪನಿವೊಲ್ ಬಟಿಕೆಯ್ದೆ ಮುಳಿದು ಕೊಂದಿಕ್ಕುವುವು-; ಇಂ
> ತೆನೆಯನೆ ವಿಷಯಸುಖಾಸ್ವಾ-
> ದನದೊಳ್ ಲಂಪಟರಿದೇಕೆಯೋ ನರಪಶುಗಳ್!

"ತಾನು ಆಸೆಪಟ್ಟ ರಾಜ್ಯವನ್ನು ಭರತನೇ ಆಳಿಕೊಳ್ಳಲಿ, ನಾನು ಜೈನದೀಕ್ಷೆಯನ್ನು ಪಡೆಯುತ್ತೇನೆ" ಎಂದು ಬಾಹುಬಲಿ ನಿಶ್ಚಯಿಸಿ, ತನ್ನ ಹೀನಕಾರ್ಯಕ್ಕಾಗಿ ನಾಚಿ ನಿಂತಿದ್ದ ಅಣ್ಣನನ್ನು ಕುರಿತು,

---

೧. ಗೆಂಟಜೊಳ್=ದೂರದಲ್ಲಿ(ಯೇ).

೨. ನಣ್ಪು=ನಂಟತನ.

೩. ಇನಿಯವು=ಮಧುರವಾದವು.

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಂ–ಈ ಭಟಖಡ್ಗಮಂಡಲೋ–
ತ್ಪಲವನವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ; ಭೂ–
ವಲಯಮನ್–ಅಯ್ಯನಿತ್ತುದುಮನ್–ಆಂ ನಿನಗಿತ್ತೆನ್.
ಇದೇವುದ[೧]ಣ್ಣ! ನೀ–
ನೊಲಿದ ಲತಾಂಗಿಗಂ ಧರೆಗಂ–ಆಟಿಸಿ[೨]ದಂದು ನೆಗಟ್ತೆ ಮಾಸದೇ!

ಅವಧರಿಸದೆ ನಿನ್ನೊಳ್ ಪಿರಿ–
ದವಿನಯಮಂ ನೆಗಟ್ದ ದೋಷಮಂ ತಪದೊಳ್ ನೀ–
ಗುವೆನ್–ಅಸದಾಗ್ರಹಮಂ ಬಿಸು–
ಡುವುದು–ಒರ್ಮೆಗೆ ಮೆಱೆವುದೆನ್ನ ದುರ್ವಿಳಸನ[೩]ಮಂ.

ಎಂದು ಬೇಡಿಕೊಂಡು ಒಪ್ಪಿಸಿ, ತಾನು ಆದಿನಾಥನ ಬಳಿಗೆ ಹೋಗಿ, "ಹಿಂದೆ ಲೌಕಿಕ ಯುವರಾಜಪದವಿಯನ್ನು ಕೊಟ್ಟಿದ್ದಿರಿ; ಈಗ ಸಂನ್ಯಾಸದ ಯುವರಾಜ ಪದವಿಯನ್ನು ದಯಪಾಲಿಸಿ" ಎಂದು ಕೇಳಿಕೊಂಡು ಬಂದು ತಪಸ್ಸಿಗೆ ನಿಲ್ಲುತ್ತಾನೆ. ಇನ್ನು, ಭರತನಿಗೆ ಸೇರಿದ ನೆಲದ ಮೇಲೆ ನಿಂತಿದ್ದೆನಲ್ಲಾ ಎಂಬ ಕ್ಲೇಶ ಅವನನ್ನು ಬಾಧಿಸುತ್ತಿರುತ್ತದೆ. ಇದನ್ನು ತಿಳಿದು ಭರತನೇ ಬಂದು ಈ ಮಾನಶಾಲಿಯ ಚರಣಕ್ಕೆರಗಿ, "ಇದು ನೀನೇ ನನಗೆ ಕೊಟ್ಟ ನೆಲ; ಅನ್ಯರದೆಂದು ಬಗೆಯಬಹುದೆ? 'ನಿನ್ನನೆ ನೀಂ ಬಗೆಯ; ಬಗೆಯದಿರ್ ಪೆಱಪೆಱತಂ' " ಎಂದು ಪ್ರಾರ್ಥಿಸಿ, ಅವನ ತಪಸ್ಸನ್ನು ಹದಗೊಳಿಸುತ್ತಾನೆ.[೪]

ವೈರಾಗ್ಯಚಕ್ರವರ್ತಿಯ ವಿಜಯದ ಎದುರಿಗೆ ಲೌಕಿಕ ಚಕ್ರವರ್ತಿಯ ವಿಜಯ ಎಷ್ಟು ಮಂಕಾಗಿ, ಹೀನವಾಗಿ ಕಾಣುತ್ತದೆ! ಭರತನಿಗೆ ತಲೆಬಾಗಲೊಲ್ಲದ ತಮ್ಮಂದಿರೆಲ್ಲರೂ ತೀರ್ಥಂಕರನ ಬಳಿಗೆ ತಾವಾಗಿಯೇ ಹೋಗಿ ಯತಿದೀಕ್ಷೆಯನ್ನು ಪಡೆಯುತ್ತಾರೆ. ಭರತನಿಗಾದರೂ ತನ್ನ ವಿಜಯಗಳಿಂದ ಏನು ಪ್ರಯೋಜನವಾಯಿತು? ತನಗೆ ಸಗ್ಗದವರು ಇನ್ನೂ ಇದ್ದಾರಲ್ಲಾ ಎಂಬ ಹುರುಡು ಹುಟ್ಟಿ ಅವನ ನೆಮ್ಮದಿಯನ್ನು ಉಡುಗಿಸಿತು, ಅಕಾರ್ಯಕ್ಕೆ ಕೂಡ ಕೈಹಾಕಿಸಿತು. ಇದನ್ನೆಲ್ಲಾ ನೋಡಿ ಭರತನು ಕಡೆಗೆ ಬುದ್ಧಿಯನ್ನು ಕಲಿತುಕೊಳ್ಳುತ್ತಾನೆ. ರಾಜ್ಯವನ್ನು ಧರ್ಮದಿಂದ ಆಳಿ, ಕೊನೆಗೆ ತಾನೂ ಯತಿದೀಕ್ಷೆಯನ್ನು ತಾಳುತ್ತಾನೆ. ಆಗ ಮನುಷ್ಯರಿಗೆ ಮಾತ್ರವಲ್ಲ, ದೇವತೆಗಳಿಗೂ ಅವನು ವಂದ್ಯನಾಗುತ್ತಾನೆ.

ಇದುವರೆಗೆ ನೋಡಿದಂತೆ, ಆದಿಪುರಾಣದಲ್ಲಿ ವೈರಾಗ್ಯ ಪ್ರತಿಪಾದನೆ ರಮ್ಯವಾದ ಎರಡು ಕಥೆಗಳಲ್ಲಿ ಕವಲೊಡೆದಿದೆ. ಕಥಾಂಶಗಳು ಸ್ವಾರಸ್ಯದಿಂದ ಕೂಡಿ, ಧರ್ಮತತ್ತ್ವಗಳು

---

೧. ಇದೇವುದು=ಇದರಿಂದ ಏನು!

೨. ಆಟಿಸು=ಅಪೇಕ್ಷಿಸು. ೩. ದುರ್ವಿಳಸನ=ಕೆಟ್ಟ ಮೆರೆತ.

೪. ಈ ಬಾಹುಬಲಿಯ ಪ್ರತಿಮೆಯೇ ಶ್ರವಣಬೆಳ್ಗೊಳದ ಗೊಮ್ಮಟೇಶ್ವರ.

ಸನ್ನಿವೇಶದಿಂದ ಉಕ್ಕಿ ಬಂದಿರುವುದರಿಂದ ಅವು ಮತವಿಚಾರವನ್ನೊಲ್ಲದವರನ್ನೂ ಮೆಚ್ಚಿಸುತ್ತವೆ. ಪಂಪನ ನಿರೂಪಣೆಯ ಒಂದು ವಿಶೇಷಾಂಶವನ್ನು ಇಲ್ಲಿ ಗಮನಿಸಬೇಕು. ಭೋಗಗಳು ಕ್ಷಣಿಕವೆನ್ನುತ್ತಾನೆ; ಅವುಗಳ ಪರಿಣಾಮವು ವಿಷಮವೆನ್ನುತ್ತಾನೆ. ಆದರೆ, ಮಿಕ್ಕ ಕೆಲವರು ಕವಿಗಳೂ ದಾರ್ಶನಿಕರೂ ಮಾಡುವಂತೆ–ಮಾನವದೇಹವೇ ನಿಂದ್ಯವೆಂದು, ಸಂಸಾರದಲ್ಲಿ ಸುಖ ಲೇಶವೂ ಇಲ್ಲವೆಂದು ಅವನು ಎಲ್ಲೂ ದೂಷಿಸಿಲ್ಲ. ಪಂಪನಿಗೆ ದೇಹ ಸೌಂದರ್ಯದಲ್ಲಿ ಅಭಿಮಾನವಿತ್ತು; ಸಂಸಾರಸುಖದಲ್ಲಿ ಆಸಕ್ತಿಯಿತ್ತು. ಕ್ಷಣಿಕವಾದರೂ ಧರ್ಮವಿರುದ್ಧವಲ್ಲದ ಸವಿ ಇದರಲ್ಲೆಲ್ಲಾ ಉಂಟೆಂದು ಅವನು ಅನುಭವಿಸಿ ತಿಳಿದಿದ್ದನು.

'ಧರ್ಮಂ ಪ್ರಧಾನಂ–, ಅರ್ಥಂ
ಧರ್ಮಾಂಘ್ರಿಪ ಫಳಂ–, ಅದರ್ಕೆ ರಸಮದು ಕಾಮಂ'

ಎಂದು ಅವನು ಸ್ಪಷ್ಟವಾಗಿ ಹೇಳಿದ್ದಾನೆ. ಆದಕಾರಣ, ಈ ಕಾವ್ಯದಲ್ಲಿ ಅವನು ತನ್ನ ಮನಸ್ಸಾಕ್ಷಿಗೆ ವಿರೋಧವಾಗಿ ಎಲ್ಲೂ ಮಾನವದೇಹವು ಕಶ್ಮಲದ ಕೂಪವೆಂದು ಅಲ್ಲಗಳೆದಿಲ್ಲ. ಅದರ ಬದಲು ದೇಹಸೌಂದರ್ಯದ ಆಕರ್ಷಣೆಯನ್ನೂ, ಜೀವನಕ್ಕೆ ಪರಿಮಳವನ್ನು ಕೊಡುವ ಭೋಗಾಂಗಗಳ ಸೊಗಸನ್ನೂ ಅನೇಕ ಸಂದರ್ಭಗಳಲ್ಲಿ ನಿರೂಪಿಸಿದ್ದಾನೆ. ನೀಳಾಂಜನೆಯ ಮನೋಹರ ನಾಟ್ಯದ ವರ್ಣನೆಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ತನ್ನ ಬಾಳಿನಲ್ಲಿ ಎಲ್ಲ ಬಗೆಯ ಭೋಗಗಳನ್ನೂ ಕೊರತೆ ಮಾಡಿಕೊಳ್ಳದೆ ಅನುಭವಿಸಿ, ಅವುಗಳ ಸವಿಯನ್ನೂ ಅಸ್ಥಿರತೆಯನ್ನೂ ಒಟ್ಟಿಗೇ ಕಂಡು, ಅವಕ್ಕೆ ಮೀರಿದ ಶಾಶ್ವತಸುಖವನ್ನು ಬಯಸುವ ರಸಿಕ ಹೃದಯ ಅವನದು.

೩. ವಿಕ್ರಮಾರ್ಜುನವಿಜಯ

ಭಾರತದ ಕಥೆಯನ್ನು ಅವಲಂಬಿಸಿ ಕನ್ನಡದಲ್ಲಿ ಕಾವ್ಯ ಬರೆಯುವುದು ಪಂಪನಿಗಿಂತ ಹಿಂದೆಯೇ ಮೊದಲಾಗಿದ್ದಂತೆ ತೋರುತ್ತದೆ. 'ಕಾವ್ಯಾವಲೋಕನ'ದಲ್ಲಿ ನಾಗವರ್ಮನು (ಕ್ರಿ.ಶ. ಸುಮಾರು ೧೧೪೫) ಈಗ ನಮಗೆ ದೊರೆಯದ ಹಲವು ಪ್ರಾಚೀನ ಕಾವ್ಯಗಳಿಂದ ಪದ್ಯಗಳನ್ನು ಉದ್ಧರಿಸಿ ಉಳಿಸಿಕೊಟ್ಟಿದ್ದಾನೆ. ಇಲ್ಲಿ ಭಾರತಕ್ಕೆ ಸಂಬಂಧಪಟ್ಟ ಪದ್ಯಗಳೂ ಹೇರಳವಾಗಿ ಬಂದಿವೆ; ಇವುಗಳಲ್ಲಿ ಕೆಲವಾದರೂ ಪಂಪನಿಗಿಂತ ಪ್ರಾಚೀನವೆಂದು ಹೇಳಲು ಅವಕಾಶವುಂಟು. ಇಷ್ಟಾದರೂ, ಭಾರತದ ಒಟ್ಟು ಕಥೆಯನ್ನು ಒಂದು ಆಯಕಟ್ಟಿನಲ್ಲಿ ಹಿಂದೆ ಯಾರೂ ನಿರೂಪಿಸಿರಲಿಲ್ಲ; ಪಂಪನೇ ಇದನ್ನು ಸೂಚಿಸಿದ್ದಾನೆ. 'ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ', ಮುಖ್ಯ ಪ್ರಸಂಗಗಳಲ್ಲಿ ಯಾವುದನ್ನೂ ಕೈಬಿಡದೆ, 'ಸಮಸ್ತಭಾರತ'ವನ್ನು 'ವಿಕ್ರಮಾರ್ಜುನವಿಜಯ' ವಾಗಿ ಕನ್ನಡದಲ್ಲಿ ಮೊದಲು ಹೇಳಿದ ಕವಿ ಪಂಪ; ಅದನ್ನು ಹೇಳಿಸಿದ ದೊರೆ ಅರಿಕೇಸರಿ.

'ಸಮಸ್ತಭಾರತ' ಎಂಬ ಪದದಲ್ಲಿ ಇನ್ನೊಂದು ಅರ್ಥವೂ ಅಡಕವಾಗಿದೆಯೆಂದು ಕೆಲವರು ವಿದ್ವಾಂಸರ ಅಭಿಪ್ರಾಯ. 'ಸಮಾಸ' ಎಂದರೆ ಕೂಡಿಸುವುದು : ಈ ಕಾವ್ಯದಲ್ಲಿ ಭಾರತ ಕಥೆಯ ಜೊತೆಗೆ ತನ್ನ ಪ್ರಭುವಿನ ಚರಿತ್ರೆಯೂ ಕೂಡಿ ಬಂದಿದೆಯೆಂಬುದನ್ನೂ ಪಂಪನು ಈ ಮಾತಿನಿಂದ ಸೂಚಿಸಿರಬಹುದು. ಹೇಗೂ, ಅರಿಕೇಸರಿಯನ್ನು ತನ್ನ ಕೃತಿಗೆ ನಾಯಕನ್ನಾಗಿ ಮಾಡಿ, 'ಸಂದ-ಅರ್ಜುನನೊಳ್ ಪೋಲ್ವೀ ಕಥಾಭಿತ್ತಿಯನ್-ಅನುನಯದಿಂ ಪೇಟಲೆಂದೆತ್ತಿಕೊಂಡೆಂ' ಎಂದು ಅವನು ಸ್ಪಷ್ಟವಾಗಿ ಹೇಳಿಯೇ ಇದ್ದಾನೆ. ಅದರಂತೆ, ಅರಿಕೇಸರಿಯ ಹೆಸರು ಬಿರುದುಗಳನ್ನು ಅರ್ಜುನನಿಗೂ ಅರ್ಜುನನ ಸಾಹಸಗಳನ್ನು ಅರಿಕೇಸರಿಗೂ ಸಮಗೊಳಿಸಿ, ಒಬ್ಬನ ಮಾತು ಬಂದಾಗಲೆಲ್ಲ ಇನ್ನೊಬ್ಬನ ನೆನಪು ಬರುವಂತೆ ಮಾಡಿದ್ದಾನೆ.

ಪೌರಾಣಿಕ ವೀರನೊಬ್ಬನೊಂದಿಗೆ ಹೋಲಿಕೆ ಪಡೆಯಲು ಪಂಪನ ನಾಯಕನಿಗೆ ಕೆಲಮಟ್ಟಿನ ಯೋಗ್ಯತೆಯೂ ಇದ್ದಿತು. ಈ ಅರಿಕೇಸರಿಯ ವೃತ್ತಾಂತ ಅವನ ವೇಮುಲವಾಡದ ಶಿಲಾಶಾಸನದಿಂದಲೂ (ಕ್ರಿ.ಶ. ಸು. ೯೨೭), ಅವನ ಮೊಮ್ಮಗ ಮೂರನೆಯ ಅರಿಕೇಸರಿಯ ಪರಭಣಿಯ ತಾಮ್ರಶಾಸನದಿಂದಲೂ (ಕ್ರಿ.ಶ. ೯೬೬) ಕೊಂಚಮಟ್ಟಿಗೆ ತಿಳಿಯಬರುತ್ತದೆ; ಪಂಪನ ಹೇಳಿಕೆಗಳು ಈ ವಿಷಯವನ್ನೇ ದೃಢಪಡಿಸುತ್ತವೆ. ರಾಷ್ಟ್ರಕೂಟ ಚಕ್ರವರ್ತಿಗಳಿಗೆ ಅಧೀನವಾಗಿ ಆಳುತ್ತಿದ್ದ ಒಂದು ಚಾಳುಕ್ಯ ಶಾಖೆಗೆ ಸೇರಿದ 'ಸಾಮಂತಚೂಡಾಮಣಿ' ನಮ್ಮ ಅರಿಕೇಸರಿ. ಸಮ್ರಾಟರಿಗೂ ಸಾಮಂತರಿಗೂ ದೇಹಸಂಬಂಧವೂ ಇದ್ದಿತು. ಮೂರನೆಯ ಇಂದ್ರಚಕ್ರವರ್ತಿಯ (ಕ್ರಿ.ಶ. ೯೧೫) ಮಗಳಾದ ರೇವಕನಿರ್ಮಡಿಯೆಂಬ ಹೆಸರುಳ್ಳ ಲೋಕಾಂಬಿಕೆಯನ್ನು ಅರಿಕೇಸರಿ ಮದುವೆಯಾಗಿದ್ದನು. ಅವನು 'ಇಂದ್ರೇಂದ್ರನ (=ಇಂದ್ರರಾಜನ) ತೋಳೆ ತೊಟ್ಟಿಲಾಗಿರೆ ಬಳೆದಂ' ಎಂಬ ಪಂಪನ ಹೇಳಿಕೆಯನ್ನು ನೋಡಿದರೆ ಅರಿಕೇಸರಿಯ ತಾಯಿಯ ತವರುಮನೆಯೂ ರಾಷ್ಟ್ರಕೂಟವಂಶವೇ ಆಗಿರಬೇಕೆಂದು ತೋರುತ್ತದೆ. ಈ ನಮ್ಮ ನಾಯಕನು ಚಿಕ್ಕಂದಿನಿಂದಲೂ 'ಪರಬಲದ ನೆತ್ತರ ಕಡಲೊಳಗಣ ಜಿಗುಳೆ ಬಳೆವ ತೆಱದೊಳೆ ಬಳೆದಂ.' ಮುಂದೆ, ಇಂದ್ರಚಕ್ರವರ್ತಿಯ ಮಗನಾದ ನಾಲ್ಕನೆಯ ಗೋವಿಂದನೊಡನೆ ಹೋರಾಡಿ, ಅವನ ಹೆದರಿಕೆಯಿಂದ ತನಗೆ ಶರಣಾಗಿ ಬಂದಿದ್ದ ಬಿಜ್ಜನೆಂಬವನನ್ನು ರಕ್ಷಿಸಿದ್ದಲ್ಲದೆ, ಗೋವಿಂದನ ಆಧಿಪತ್ಯವನ್ನೇ ತಪ್ಪಿಸಿ ಇಂದ್ರನ ತಮ್ಮನಾದ ಬದ್ದೆಗನೆಂಬಾತನಿಗೆ ರಾಷ್ಟ್ರಕೂಟಸಾಮ್ರಾಜ್ಯವನ್ನು ಕೈಗೂಡಿಸಿಕೊಟ್ಟ ಸಾಹಸವೂ ಅರಿಕೇಸರಿಯದು. ಇನ್ನು, ರಾಷ್ಟ್ರಕೂಟರು ಯದುವಂಶೀಯರೆಂಬುದನ್ನು ಜ್ಞಾಪಿಸಿಕೊಂಡರೆ, ಅರ್ಜುನನ ಕಥೆಗೂ ಅರಿಕೇಸರಿಯ ಕಥೆಗೂ ಹೋಲಿಕೆ ವ್ಯಕ್ತವಾಗುತ್ತದೆ. ಸುಭದ್ರೆ, ಲೋಕಾಂಬಿಕೆ—ಈ ಇಬ್ಬರೂ ಯದುವಂಶದ ಕನ್ಯೆಯರು. ಅರ್ಜುನನಂತೆ ಅರಿಕೇಸರಿಯೂ ತನ್ನ ನಲ್ಲೆಯನ್ನು ಅವಳ ಬಂಧುಗಳ ಇಷ್ಟಕ್ಕೆ ವಿರೋಧವಾಗಿ ಹರಣಮಾಡಿಕೊಂಡು ಬಂದು 'ಪ್ರಿಯಗಳ್ಳ'ನೆಂಬ ಬಿರುದನ್ನು ಸಂಪಾದಿಸಿದನೇನೋ. ಅವನಿಗೂ ಲೋಕಾಂಬಿಕೆಯ ಅಣ್ಣನಾದ ಗೋವಿಂದನಿಗೂ ಇದ್ದ ವೈರದಲ್ಲಿ ಅರ್ಜುನ-ಬಲರಾಮರ ವೈಮನಸ್ಯದ ಛಾಯೆ ಇದ್ದರೂ ಇರಬಹುದು.

ಮೇಲೆ ಗುರುತು ಕಾಣಿಸಿರುವ ಐತಿಹಾಸಿಕಾಂಶಗಳು ವಿಕ್ರಮಾರ್ಜುನ ವಿಜಯದ ಸಮಸ್ಯೆಯೊಂದನ್ನು ಬಿಡಿಸುತ್ತವೆ. ತುಂಬಿದ ಕುರುಸಭೆಯಲ್ಲಿ ದ್ರೌಪದಿಯ ಮುಡಿಯನ್ನು ದುಶ್ಶಾಸನನು ಹಿಡಿದು ಎಳೆದಾಡಿದ್ದೇ ಭಾರತಯುದ್ಧಕ್ಕೆ ಬೀಜವಷ್ಟೆ. ತಮ್ಮ ಅಂತಃಪುರದ ಹೆಣ್ಣಿಗೆ ಒದಗಿದ ಈ ಘೋರಾಪಮಾನದ ಕಳಂಕವನ್ನು ಪಾಂಡವರು ಶತ್ರುರಕ್ತದಿಂದಲೇ ತೊಳೆಯಬೇಕಾಯಿತು. ದುಶ್ಶಾಸನನನ್ನು ಕೊಂದ ಕೈಯಿಂದ ದ್ರೌಪದಿಯ ಮುಡಿಯನ್ನು ಭೀಮನು ಕಟ್ಟಿದಮೇಲೆ ಈ ಮಾತನ್ನು ಆಡುತ್ತಾನೆ :

ಇದಱೊಳ್ ಶ್ವೇತಾತಪತ್ರ ಸ್ಥಗಿತ ದಶದಿಶಾಮಂಡಲಂ ರಾಜಚಕ್ರಂ
ಪುದಿದಟ್ಟಾಡಿತ್ತು–[೧] ಅಡಂಗಿತ್ತಿದಱೊಳೆ ಕುರುರಾಜಾನ್ವಯಂ; ಮತ್ತತಾಪ–
ಕ್ಕಿದಱಿಂದಂ ನೋಡು–ಅಗುರ್ವು[೨]ರ್ವಿದುದು–; ಇದುವೆ ಮಹಾ–
ಭಾರತಕ್ಕಾದಿಯಾಯ್ತು–. ಅ–
ಬ್ಜದಳಾಕ್ಷೀ ಪೇಟಿ–, ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶ ಪ್ರಪಂಚಂ!

ದ್ರೌಪದಿಯ ಕೇಶಪಾಶವು ಕುರುಕುಲಕ್ಕೆ ಮಾತ್ರವಲ್ಲ, ಸಮಸ್ತ ರಾಜಕುಲಕ್ಕೇ ಯಮಪಾಶವಾಯಿತು; ಅದನ್ನು ದುಶ್ಶಾಸನನು ಮುಟ್ಟಿದ್ದೇ ಮಹಾಭಾರತಕ್ಕೆ ಆದಿಯಾಯಿತು! ಈ ವಿಷಯ ಪಂಪನಿಗೆ ಚೆನ್ನಾಗಿ ಗೊತ್ತು. ಆದರೆ ಅವನ ಕಾವ್ಯದಲ್ಲಿ, ವಿಜಯಶಾಲಿಯಾದ ಅರ್ಜುನನೊಂದಿಗೆ ತುಲಾಭಾರ ತೂಗಿಸಿಕೊಂಡು ಪಟ್ಟಕಟ್ಟಿಸಿ ಕೊಳ್ಳುವ ಮಹಿಷಿ ಯಾರು?—ಭಾರತದ ಚಾಲಕ ಶಕ್ತಿಯಾದ ದ್ರೌಪದಿಯಲ್ಲ, ತವರುಮನೆಯಲ್ಲಿ ತೆಪ್ಪಗೆ ಕುಳಿತಿದ್ದ ಸುಭದ್ರೆ! ಇಷ್ಟೇ ಅಲ್ಲ. ಅರ್ಜುನ–ಸುಭದ್ರೆಯರ ಪ್ರಣಯಕಥೆಗೆ ಪಂಪನು ಹೆಚ್ಚಿನ ಪ್ರಾಮುಖ್ಯವನ್ನು ಕೊಟ್ಟು ಎಲ್ಲೆ ಮೀರಿ ಬೆಳಸಿದ್ದಾನೆ. 'ಕತೆಯ ಮೆಯ್ಗಿಡಲೀಯದೆ' ಬರೆಯುವುದರಲ್ಲಿ ನಿಪುಣನಾದ ಕವಿ ಇಲ್ಲೇಕೆ ಹೀಗೆ ಮಾಡಿದನು? ತನ್ನ ಪ್ರಭುವಿನ ಪಟ್ಟ ಮಹಿಷಿಯಾದ ಲೋಕಾಂಬಿಕೆಯ ಸಂತೋಷಕ್ಕಾಗಿ ಯದುಕುಲದ ಸುಭದ್ರೆಗೆ ಕಥಾದೃಷ್ಟಿಯಿಂದ ಎಷ್ಟುಮಾತ್ರಕ್ಕೂ ಸಲ್ಲದ ಈ ವಿಭವ ಗೌರವಗಳನ್ನು ಅವನು ಸಲ್ಲಿಸಿರಬಹುದೆ?

ದ್ರೌಪದಿಯ ವಿಷಯದಲ್ಲಿ ಪಂಪನು ಮಾಡಿರುವ ಇನ್ನೊಂದು ಮಾರ್ಪಾಡನ್ನು ಕುರಿತು ಎರಡು ಮಾತನ್ನು ಹೇಳಬೇಕಾಗಿದೆ. "ಪಾಂಚಾಲಿ ಪಂಚವಲ್ಲಭೆ"ಯೆಂಬ ದೂರು ತಟ್ಟದಂತೆ ಅವಳನ್ನು ಅರ್ಜುನನೊಬ್ಬನಿಗೇ ಮದುವೆಮಾಡಿಸಿದ್ದಾನೆ. ಆದರೆ ಕೊನೆಯ ತನಕ ಇದನ್ನೇ ನಿರ್ವಹಿಸಲು ಪಂಪನ ಪ್ರತಿಭೆಗೂ ಸಾಧ್ಯವಾಗಲಿಲ್ಲ. ವಿಕ್ರಮಾರ್ಜುನವಿಜಯದಲ್ಲಿ, ಸುಭದ್ರೆಯನ್ನು ವರಿಸಿದ ಬಳಿಕ ಅರ್ಜುನನಿಗೆ ದ್ರೌಪದಿಯ ಅಭಿಮಾನ ಕಡಮೆಯಾಯಿತೋ ಏನೋ; ಇನ್ನು ಭೀಮನು ಮುಂದೆ ಬರುತ್ತಾನೆ. ವ್ಯಾಸಭಾರತದಂತೆ ಇಲ್ಲಿಯೂ ದುಶ್ಶಾಸನವಧೆಯ ಭೀಷಣಪ್ರತಿಜ್ಞೆಯನ್ನು ಮಾಡುವವನು ಭೀಮ; ಕೀಚಕನ ಬಾಧೆಯನ್ನು ಪರಿಹರಿಸಿಕೊಳ್ಳಲು ದ್ರೌಪದಿ ಕಟ್ಟೇಕಾಂತದಲ್ಲಿ

೧. ಅಟ್ಟಾಡಿತ್ತು=ನಿಶ್ಶೇಷವಾಯಿತು.

೨. ಅಗುರ್ವು=ಭಯಂಕರತೆ.

ಹೋಗುವುದು ಭೀಮನಲ್ಲಿಗೆ; ವೇಣೀಬಂಧನದ ಪ್ರಸಂಗದಲ್ಲಂತೂ, ದ್ರೌಪದಿ ತನಗೆ ನಾದಿನಿಯೆಂಬುದನ್ನೇ ಭೀಮನು ಮರೆತು ಅವಳನ್ನು 'ತನ್ನ ತಳೋದರಿ'ಯಂತೆ ನಡಸಿಕೊಳ್ಳುತ್ತಾನೆ! ಇಲ್ಲಿ ಪಂಪನಿಗೇನೋ ಮರವಿನ ದೋಷ ತಟ್ಟಿತು; ಆದರೆ ಕಥೆ ಬದುಕಿತು.

ದ್ರೌಪದಿ ಅರ್ಜುನನೊಬ್ಬನಿಗೇ ಮಡದಿಯಾಗಿದ್ದಳೆಂಬ ಸಂಗತಿ ಜೈನಭಾರತದಲ್ಲಿ ಸ್ಪಷ್ಟವಾಗಿ ಬರುತ್ತದೆ; ಪಂಪನ ಮಾರ್ಪಾಡಿಗೆ ಮುಖ್ಯವಾದ ಪ್ರೇರಣೆ ಇಲ್ಲಿಂದಲೇ ಒದಗಿರಬೇಕು. ಇದೊಂದು ಅಂಶವನ್ನು ಬಿಟ್ಟರೆ, ಪಂಪನ ಗ್ರಂಥದಲ್ಲಿ ಬೇರೆಲ್ಲಿಯೂ ಜೈನಕಥೆಯ ಪ್ರಭಾವ ಕಾಣಬರುವುದಿಲ್ಲ. ವ್ಯಾಸಭಾರತದ ಸ್ವಾರಸ್ಯಕ್ಕೆ ಅವನು ಮನಸೋತಿದ್ದನು; ವೈದಿಕ ಮತದವನಾದ ಅರಿಕೇಸರಿಯನ್ನು ತನ್ನ ಕಾವ್ಯನಾಯಕನನ್ನಾಗಿ ಮಾಡಿಕೊಂಡಿದ್ದನು. ಆದ್ದರಿಂದ ಪಂಪನ ಜೈನಶ್ರದ್ಧೆ ಎಲ್ಲಿಯೂ ಕಥೆಗೆ ಅಡ್ಡಿಯಾಗಿ ತಲೆಹಾಕಿಲ್ಲ. ವಿಕ್ರಮಾರ್ಜುನವಿಜಯದಲ್ಲಿ ಕಣ್ಣಿಟ್ಟು ಹುಡುಕಿನೋಡಿದರೆ ಅಲ್ಲೊಂದು ಇಲ್ಲೊಂದು ಜೈನವಾಸನೆಯುಳ್ಳ ಮಾತೂ ಮಾರ್ಪಾಡೂ ಸಿಕ್ಕಬಹುದು; ಶ್ರೀಕೃಷ್ಣನ ಮಹಿಮೆಯನ್ನು ಪಂಪನು ತುಂಬುಕಂಠದಿಂದ ಘೋಷಿಸದೆ ಇರುವುದಕ್ಕೆ ಅವನ ಜೈನದೃಷ್ಟಿ ಕಾರಣವಾಗಿರಬಹುದು; ಅಷ್ಟೇ. ಸಂಶೋಧನೆಗೆಂದು ಹೊರಟಲ್ಲದೆ, ಯಾವ ಸಾಮಾನ್ಯವಾಚಕನಿಗೂ ಇಲ್ಲಿಯ ಕಥಾ ನಿರೂಪಣೆಯಿಂದ ಪಂಪನು ಜೈನನೆಂಬುದು ಗೊತ್ತಾಗಲಾರದು.

ಮಹಾಭಾರತವು ಲಕ್ಷ ಶ್ಲೋಕಗಳಿಂದ ಕಿಕ್ಕಿರಿಯುವ ಮಹಾ ಗ್ರಂಥ. ಇದರಲ್ಲಿ ನಡುನಡುವೆ ತುಂಬಿಕೊಂಡಿರುವ ಉಪಾಖ್ಯಾನಗಳನ್ನೂ ನೀತಿವಿಸ್ತಾರವನ್ನೂ ಕೈಬಿಟ್ಟರೂ, ಪಾಂಡವರಾಜ್ಯಾಭಿಷೇಕಕ್ಕೇ ಕಥೆಯನ್ನು ಮುಕ್ತಾಯಗೊಳಿಸಿದರೂ,—ಆಗ ಕೂಡ ಅದು ದೀರ್ಘವಾಗಿಯೇ ನಿಲ್ಲುತ್ತದೆ. ಪಂಪನು ಇದನ್ನು ಸಂಗ್ರಹವಾಗಿ–ತುಂಬ ಸಂಗ್ರಹವಾಗಿ—ಹೇಳಬೇಕಾಯಿತು. ಮೂಲದಲ್ಲಿ ಅಧ್ಯಾಯಗಟ್ಟಳೆಯ ವಿಸ್ತಾರವನ್ನುಳ್ಳ ಕಥಾಭಾಗವನ್ನು ಇಲ್ಲಿ ನಾಲ್ಕು ಪದ್ಯ ಎರಡು ವಚನಖಂಡದಲ್ಲಿ ಸವಿಗೆಡದಂತೆ ಸಂಕ್ಷೇಪಿಸಬೇಕಾದರೆ ಅವನಿಗೆ ಬಲು ಜಾಣ್ಮೆ ಬೇಕಾಯಿತು. ಈ ಪರೀಕ್ಷೆಗೆ ಅವನು ಸಜ್ಜಾಗಿಯೂ ಇದ್ದನು; ಪೂರ್ವಪುರಾಣವನ್ನು ಸಂಗ್ರಹ ಮಾಡಿ ಕೈ ಪಳಗಿಸಿಕೊಂಡಿದ್ದನು. ಕೆಲಸ ಅಲ್ಲಿಗಿಂತ ಇಲ್ಲಿ ಕಠಿನವಾದರೂ, ಅಲ್ಲಿಲ್ಲದ ಒಂದು ದೊಡ್ಡ ಅನುಕೂಲ ಇಲ್ಲಿ ಪಂಪನಿಗಿತ್ತು. ಜೈನನಾದ ಅವನ ದೃಷ್ಟಿಯಲ್ಲಿ ಭಾರತ ಒಂದು 'ಲೌಕಿಕ' ಕಥೆ; ಇದರ ಸಂದರ್ಭಗಳನ್ನು ತನ್ನ ಉದ್ದೇಶಕ್ಕೂ ಅಭಿರುಚಿಗೂ ಸರಿಹೋಗುವಂತೆ ತಿದ್ದಲು ಅವನಿಗೆ ಯಾವ ಅಡ್ಡಿಯೂ ಇರಲಿಲ್ಲ. ಇದರ ಮೇಲೆ 'ಕಿರಾತಾರ್ಜುನೀಯ' 'ವೇಣೀಸಂಹಾರ' ಮೊದಲಾದ ಸಂಸ್ಕೃತ ಕಾವ್ಯ ನಾಟಕಗಳಲ್ಲಿ ವೈದಿಕಮತದ ಕವಿಗಳೇ ಭಾರತಕಥೆಯನ್ನು ತಮಗೆ ಇಷ್ಟಬಂದಂತೆ ಮಾರ್ಪಡಿಸಿಕೊಂಡು, ಸ್ವಾತಂತ್ರ್ಯದ ಹೆದ್ದಾರಿಯನ್ನು ತೆರೆದಿದ್ದರು. ಈ ಹಿಂದಿನ ಕವಿಗಳಿಂದೆಲ್ಲ ಪಂಪನು ಸೂಚನೆಗಳನ್ನು ಬೇಕಾದಷ್ಟು ಸ್ವೀಕರಿಸಿದ್ದಾನೆ; ಆ ಕಾಲದಲ್ಲಿ ಪ್ರಚಾರದಲ್ಲಿದ್ದು ಈಗ ನಮಗೆ ದೊರೆಯದಿರುವ ಭಾರತದ ಭಿನ್ನ

ಪಾಠಗಳಿಂದಲೂ ಬಹುಶಃ ಪ್ರೇರಣೆಯನ್ನು ಪಡೆದಿದ್ದಾನೆ; ಜೈನಭಾರತವನ್ನು ನೋಡಿದ್ದಾನೆ. ಇಷ್ಟೆಲ್ಲಾ ಆದ ಮೇಲೆ, ತನ್ನ ಪ್ರತಿಭೆ ನಡಸಿದ ಕ್ರಮದಲ್ಲಿ ಅಳುಕಿಲ್ಲದೆ ಮುಂದುವರಿದಿದ್ದಾನೆ.

ವಿಕ್ರಮಾರ್ಜುನವಿಜಯವು ಕನ್ನಡದ ಕನ್ನಡಿಯಲ್ಲಿ ಚಿಕ್ಕದಾಗಿ ಬಿದ್ದ ವ್ಯಾಸಭಾರತದ ನೆರಳಲ್ಲ; ಅಲ್ಲಿಯ ಚಿನ್ನವನ್ನು ಶೋಧಿಸಿ ತಂದು ಹೊಸದಾಗಿ ಎರಕಹೊಯ್ದು ಒಪ್ಪವಿಟ್ಟು ನಿಲ್ಲಿಸಿದ ನೂತನ ಪುತ್ತಳಿ ಅದು. ಅದರ ನಿರ್ಮಾಣದಲ್ಲಿ ಪಂಪನು ಪಾತ್ರಗಳನ್ನು ತಿದ್ದಿದ್ದಾನೆ, ಸನ್ನಿವೇಶಗಳನ್ನು ನಯಗೊಳಿಸಿದ್ದಾನೆ, ಕಠೋರವೆಂದು ತೋರಿದ ಕೆಲವು ಸಂಗತಿಗಳನ್ನು ಬೇಕೆಂದು ಕೈಬಿಟ್ಟಿದ್ದಾನೆ. ಅಲ್ಲಲ್ಲೇ ಹೊಸ ಸೊಗಸನ್ನು ಎರಡೇ ಮಾತಿನಲ್ಲಿ ಮೂಡಿಸಿದ್ದಾನೆ. ಪಂಪನು ಎಷ್ಟು ಸಂತತವಾಗಿ ಸದ್ದಿಲ್ಲದೆ ತಿದ್ದುಪಡಿಗಳನ್ನು ಮಾಡುತ್ತಾ ಹೋಗಿರುವನೆಂದರೆ, ಅವನ ಕಾವ್ಯವನ್ನು ವ್ಯಾಸಭಾರತದೊಂದಿಗೆ ಉದ್ದಕ್ಕೂ ಹೋಲಿಸಿ ನೋಡಿದ ಹೊರತು ಅವನ ಸ್ವತಂತ್ರ ಕಲ್ಪನೆಯ ಪರಿಮಾಣ ನಮಗೆ ಗೊತ್ತಾಗುವುದಿಲ್ಲ. ಹಾಗೆ ಹೋಲಿಸಿ ನೋಡಿದಾಗ, ಮೂಲದ ಈ ಸೊಗಸು ಮರೆಯಾಗಿದೆ, ಈ ಚಿತ್ರ ಮಸಕಾಗಿದೆ, ಇಲ್ಲಿ ತಿದ್ದುವಾಗ ಪಂಪನು ಎಡವಿದ್ದಾನೆ, ಇಲ್ಲಿ ತಪ್ಪುದಾರಿಗೆ ತಿರುಗಿದ್ದಾನೆ—ಎಂಬ ಆಕ್ಷೇಪಣೆ ಒಂದೊಂದು ಕಡೆ ಏಳಬಹುದು. ಸ್ವಾತಂತ್ರ್ಯವಹಿಸಿ ಬರೆದದ್ದಕ್ಕೆ ಪಂಪನು ತೆರಬೇಕಾದ ದಂಡ ಅದು. ಹೀಗೆ ದೋಷಗಳನ್ನು ಬೆದಕುವಾಗ, ಅವನು ಸೃಷ್ಟಿಸಿರುವ ಹೊಸ ಸೌಂದರ್ಯವನ್ನು ಮರೆಯದಿದ್ದರೆ ಸಾಕು; ಅದರ ಸವಿಯಲ್ಲಿ ಟೀಕೆಗಳೆಲ್ಲ ಅಡಗಿಹೋಗುತ್ತವೆ.

ಪಂಪನು ಕಲ್ಪಿಸಿರುವ ವ್ಯತ್ಯಾಸಗಳನ್ನೆಲ್ಲಾ ಸೂಕ್ಷ್ಮವಾಗಿ ವಿಮರ್ಶೆಮಾಡುವುದು ನಮ್ಮ ಪುಸ್ತಕದ ಗುರಿಗೆ ನಿಲುಕದ ವಿಷಯ. ಎದ್ದು ಕಾಣುವ ಒಂದೆರಡರ ಕಡೆಗೆ ಬೆರಳು ನೀಡಿ ಮಾತ್ರ ತೋರಿಸಬಹುದು. ಭಾರತ ಯುದ್ಧಕ್ಕೆ ದಾರಿಮಾಡಿಕೊಟ್ಟ ದ್ಯೂತದ ಪ್ರಾರಂಭವನ್ನು ನೋಡಿ : ಕಪಟವರಿಯದ ಧರ್ಮಪುತ್ರನನ್ನು ಸಿಕ್ಕಿಸಿಕೊಳ್ಳಲು ಶಕುನಿದುರ್ಯೋಧನರು ಇದೇ ರೀತಿಯಾಗಿ ಬಲೆಯನ್ನು ಹರಡಿ ಅವನಿಗೆ ಜೂಜಿನ ಹುಚ್ಚು ನೆತ್ತಿಗೇರುವಂತೆ ಮಾಡಿದರೇನೋ, ವ್ಯಾಸಮುನಿಗಳಿಗಿಂತಲೂ ಆಸ್ಥಾನ ಕವಿಯಾದ ಪಂಪನಿಗೆ ಈ ಮೋಸದ ಜೂಜಿನ ರೀತಿ ಹೆಚ್ಚು ಅನುಭವವಾಗಿದ್ದಿತೇನೋ ಎನ್ನಿಸುತ್ತದೆ. ಶಲ್ಯನು ಮಡಿದ ಬಳಿಕ ದುರ್ಯೋಧನನ ಚರ್ಯೆಯನ್ನು ನೋಡಿ : ವ್ಯಾಸಭಾರತದಲ್ಲಿ, ಅವನು ಶತ್ರುಗಳನ್ನು ಎದುರಿಸಲಾರದೆ ಒಂದು ದಿನದ ಮಟ್ಟಿಗಾದರೂ ಜೀವಗಳ್ಳನಂತೆ ಅಡಗಿಕೊಳ್ಳಲು ಯತ್ನಿಸುತ್ತಾನೆ. ಇಲ್ಲಾದರೆ, 'ಅಭಿಮಾನಧನ'ನಾಗಿ ಸ್ವಜನವತ್ಸಲನಾಗಿ, ಆಡಿದ ಮಾತನ್ನೂ ಹೂಡಿದ ಹಠವನ್ನೂ ಪ್ರಾಣವಿರುವವರೆಗೂ ಸಾಧಿಸುವ ಛಲಗಾರನಾಗಿ ಕಾಣಿಸಿಕೊಳ್ಳುತ್ತಾನೆ. ತನ್ನ ಆಯುಷ್ಯದ ಕೊನೆಯ ದಿನ ದುರ್ಯೋಧನನು ಹೀಗೆ ಬೆಳಗುವುದಕ್ಕೆ ಅವನು ಪಂಪನ ಪ್ರತಿಭೆಯ ತೀರ್ಥದಲ್ಲಿ ಮಿಂದು ನಿಂತಿರುವುದೇ ಕಾರಣ. ಇನ್ನು ಹಿಡಿಂಬೆಯ ಸರಳಸ್ವಭಾವವು ಭೀಮನೊಂದಿಗೆ

ಅವಳು ಆಡಿದ ಎರಡು ಮಾತುಗಳಲ್ಲಿ ರೂಪುಗೊಳ್ಳುವುದು; ಖಾಂಡವವನವು ಅಗ್ನಿಗೆ ಆಹಾರವಾದಾಗ ನಡೆದ ಕರುಣಾರ್ದ್ರವಾದ ಸಂಗತಿಗಳು ಒಂದೆರಡು ಪದ್ಯಗಳಲ್ಲೇ ಕಣ್ಣಿಗೆ ಕಟ್ಟುವುದು;—ಹೀಗೆ ಪಟ್ಟಿಯನ್ನು ಬೆಳಸುತ್ತಾ ಹೋಗಬಹುದು.

ಇವೆಲ್ಲಕ್ಕೂ ಮಿಗಿಲಾಗಿ, ಪಂಪನ ಒಟ್ಟು ಕಾವ್ಯವನ್ನೇ ವ್ಯಾಸಭಾರತದಿಂದ ಬೇರ್ಪಡಿಸಿರುವ ಒಂದು ವ್ಯತ್ಯಾಸವನ್ನು ಸ್ವಲ್ಪ ವಿವರವಾಗಿ ಗಮನಿಸಬೇಕಾಗಿದೆ: ಅದು ಗ್ರಂಥರಚನೆಯಲ್ಲಿ ಪಂಪನಿಗಿದ್ದ ಗುರಿ. 'ಪಂಪಭಾರತ' ಎನ್ನುವುದು ವಾಚಕರು ತಮ್ಮ ಸೌಕರ್ಯಕ್ಕಾಗಿ ಕೊಟ್ಟಿರುವ ಹೆಸರು; ಪಂಪನೇ ಇಟ್ಟದ್ದು—'ವಿಕ್ರಮಾರ್ಜುನವಿಜಯ.' ಪಂಪನ ದೃಷ್ಟಿಯನ್ನು ಈ ಹೆಸರೇ ಸೂಚಿಸುತ್ತದೆ. ಮಹಾಭಾರತವು ಒಂದು "ಮನೆತನದ ಇತಿಹಾಸ"ವಾದರೆ, ಅದರಲ್ಲಿ ಹಲವು ಮಂದಿ ಮಹಾವೀರರ ಜೀವನ ವೃತ್ತಾಂತಗಳು ಹೆಣೆದುಕೊಂಡಿದ್ದರೆ, 'ವಿಕ್ರಮಾರ್ಜುನವಿಜಯ'ದಲ್ಲಿ ನಾಯಕಪಟ್ಟ ದೊರೆತಿರುವುದು ಆ ವೀರರಲ್ಲಿ ಒಬ್ಬನಿಗೆ ಮಾತ್ರ. ಕೌರವಪಾಂಡವರ ವೈರದ ಕಥೆಯನ್ನು ಪ್ಯಾಪಿಸಿಕೊಂಡರೆ ಸಮಸ್ತ ಭಾರತಕ್ಕೆ ನಾಯಕನಾಗುವ ಅರ್ಹತೆ ಅರ್ಜುನನಿಗಿಂತ ದ್ರೌಪದಿಯ ಮನಃಪ್ರಿಯನಾದ ಭೀಮನಿಗೆ ಹೆಚ್ಚಾಗಿದೆಯೆಂದು ಕೆಲವರಿಗೆ ತೋರಬಹುದು. ಆದರೆ, ತನ್ನ ಪ್ರಭುವಾದ ಅರಿಕೇಸರಿಯೊಂದಿಗೆ ಸರಿದೂಗುವುದಕ್ಕೆ ಒರಟು ನಡತೆಯ ಭೀಮನಿಗಿಂತಲೂ ನಯವಿನಯ ವಿಕ್ರಮಗಳ ಮೂರ್ತಿಯಾದ ಅರ್ಜುನನೇ ಉತ್ತಮವೆಂದು ಪಂಪನು ಭಾವಿಸಿರಬೇಕು. ಇಷ್ಟರಮೇಲೆ, ಅರ್ಜುನನ ಮಹಿಮೆಯ ಬೇರು ಮಹಾಭಾರತದಲ್ಲೇ ಉಂಟು. ಧರ್ಮಪುತ್ರ ಭೀಮಸೇನರಿಬ್ಬರೂ ಹುಟ್ಟಿದ್ದರೂ ಪಾಂಡು ಕುಂತಿಗಳು ತೃಪ್ತಿಹೊಂದದೆ, 'ಲೋಕಶ್ರೇಷ್ಠ'ನಾದ ಮಗನನ್ನು ಪಡೆಯಬೇಕೆಂಬ ಹೆಬ್ಬಯಕೆಯಿಂದ ವ್ರತ ಹಿಡಿದು ಅರ್ಜುನನನ್ನು ಪಡೆಯುತ್ತಾರೆ. ಅವನು ಹುಟ್ಟಿದಾಗ ಸ್ವರ್ಗದ ಸಮಸ್ತ ದೇವತೆಗಳೂ ಇಳಿದು ಬಂದು ಗೌರವಿಸುವರು; ಈ ಮಹಿಮೆ ಪಾಂಡುಪುತ್ರರಲ್ಲಿ ಇನ್ನು ಯಾರಿಗೂ ಒದಗಲಿಲ್ಲ. ಇಷ್ಟಕ್ಕೂ ದೇವೇಂದ್ರನ ಅನುಗ್ರಹದಿಂದಲ್ಲವೆ ಅರ್ಜುನನು ಹುಟ್ಟಿದ್ದು! ಹೀಗೆ ಜನನ ಕಾಲದಲ್ಲಿ ದೇವತೆಗಳಿಂದ ಪುರಸ್ಕಾರಹೊಂದಿದ ಈ ಶಿಶು ಮುಂದೆ ದೇವತೆಗಳಿಗೇ ಅಜೇಯನಾಗುತ್ತಾನೆ. ಖಾಂಡವ ದಹನದ ಸಂದರ್ಭದಲ್ಲಿ ಇವನನ್ನು ಬೇಡಿದ ಯಾಚಕನು ಅಗ್ನಿ, ಇವನಿಗೆ ಸೋತ ಎದುರಾಳಿ ಇಂದ್ರ. ಇಂದ್ರಕೀಲದ ಪ್ರಸಂಗದಲ್ಲಿ ಇವನು ಕಿರಾತವೇಷದ ಹರನೊಂದಿಗೇ ಸೆಣಸಿ ಅವನನ್ನು ನೆಲಕ್ಕೆ ಮೆಟ್ಟುತ್ತಾನೆ; ಈ ವಿಜಯಕ್ಕೆ ಬಹುಮಾನವಾಗಿ ಪಾಶುಪತಾಸ್ತ್ರವನ್ನು ಪಡೆಯುತ್ತಾನೆ. ಮುಂದೆ ಭಾರತ ಯುದ್ಧದಲ್ಲಿ ಇವನ ರಥವನ್ನು ನಡಸುವವನು ಸಾಕ್ಷಾತ್ ಶ್ರೀಕೃಷ್ಣ. ಕರ್ಣನೊಂದಿಗೆ ನಡೆದ ಸಮರದಲ್ಲಿ ಬ್ರಹ್ಮ ರುದ್ರರು ಮೊದಲುಗೊಂಡು ಎಲ್ಲ ದೇವತೆಗಳೂ ಆಕಾಶದಲ್ಲಿ ನಿಂತು ಅರ್ಜುನನ ವಿಜಯವನ್ನೇ ನಿರೀಕ್ಷಿಸುತ್ತಾರೆ. ಹೀಗೆ ಮಹಾಭಾರತದಲ್ಲಿಯೇ ದೇವತೆಗಳ ಮೆಚ್ಚಿಕೆಯ ವೀರ ಅರ್ಜುನ. ತನ್ನ ಪರಾಕ್ರಮದ ಜೊತೆಗೆ ಅವರ ಬೆಂಬಲವೂ ಇದ್ದಮೇಲೆ ಇವನಿಗೆ ಯಾವುದು ತಾನೇ ಅಸಾಧ್ಯ!

ಈ ಅಂಶಗಳನ್ನೆಲ್ಲಾ ಪಂಪನು ತನ್ನ ಕಾವ್ಯದಲ್ಲೂ ಬೆಳಸಿದ್ದಲ್ಲದೆ, ಅರ್ಜುನನ ಸಾಹಸದ ದೃಷ್ಟಿಯಿಂದಲೇ ಭಾರತಕಥೆಯನ್ನು ನಿರೀಕ್ಷಿಸಿದನು.

'ಒತ್ತಿ ತಱುಂಬಿ[1]ನಿಂದ ರಿಪುಭೂಜಸಮಾಜದ ಬೇರ್ಗಳಂ ನಭ-
ಕ್ಕೆತ್ತದೆ, ಬಂದು ತನ್ನ ಮಱೆವೊಕ್ಕೊಡೆ ಕಾಯದೆ, ಚಾಗದೊಳ್ಪಿನ-ಅ
ಚ್ಚೊತ್ತದೆ ಮಾಣ್ದು ಬಾೞ್ವ ಪುೞುವಾನಸ[2]ನೆಂಬನ್-ಅಜಾಂಡ-
ಮೆಂಬುದೊಂ-
ದತ್ತಿಯ ಪಣ್ಣೊಳಿರ್ಪ ಪುೞುವಲ್ಲದೆ ಮಾನಸನೇ ಮುರಾಂತಕಾ!'

ಎಂದು, ಅರ್ಜುನ ಬಾಯಿಂದಲೇ ವೀರಜೀವನದ ಗುರಿಯನ್ನು ಉದ್ಘೋಷಿಸಿ, ಅದನ್ನೆಲ್ಲಾ ಅವನು ಸಾಧಿಸಿದ ಪ್ರಸಂಗಗಳನ್ನು 'ವಿಕ್ರಮಾರ್ಜುನ ವಿಜಯ'ದ ತುಂಬ ವಿಸ್ತರಿಸಿದನು. ಶತ್ರು ಮಿತ್ರರೆಲ್ಲರಿಂದಲೂ ಒಂದೇಸಮನಾಗಿ ಅರ್ಜುನನ ಮಹತ್ತ್ವವನ್ನು ಹೊಗಳಿಸಿದನು. ಭಾರತಸಂಗ್ರಾಮ ನಡೆಯುವಾಗ ಕುರುಕ್ಷೇತ್ರದ ಒಂದು ಮೂಲೆಯಲ್ಲಿ ಸಂಶಪ್ತಕರೊಡನೆ ನಿತ್ಯಕಾಳಗಮಾಡುತ್ತಿದ್ದರೂ ಅರ್ಜುನನು ನಮ್ಮ ಕಣ್ಣಿಗೆ ಮರೆಯಾಗುವುದಿಲ್ಲ. ಸೈಂಧವ ವಧೆ, ಕರ್ಣವಧೆ ಮೊದಲಾದ ಮಹಾ ಸಂದರ್ಭಗಳಿರಲಿ. ಪಾಂಡವ ದಳಕ್ಕೆ ಸೋಲಾಗುವ ಸೂಚನೆ ಬಂದಿತೆಂದರೆ, ಅರ್ಜುನನ ರಥ ಅಲ್ಲಿಗೆ ಹಾಯ್ದು ಬರುತ್ತದೆ, ವಿಜಯ ಕೈಸೇರುತ್ತದೆ. ಎಷ್ಟೋಸಲ ಭೀಮಸೇನನನ್ನು ಕೂಡ ಅರ್ಜುನನು ಶತ್ರುಗಳ ಕಾಟದಿಂದ ಪಾರುಮಾಡುತ್ತಾನೆ.

ಇನ್ನು, ಕೌರವ ಧ್ವಂಸವಾದಮೇಲೆ ರಾಜ್ಯಾಭಿಷೇಕದ ಸಮಯವೊದಗುತ್ತದೆ. ಪಾಂಡವರಲ್ಲಿ ಹಿರಿಯನಾದ ಯುಧಿಷ್ಠಿರನೇ ನ್ಯಾಯವಾಗಿ ಪಟ್ಟ ಕಟ್ಟಿಸಿಕೊಳ್ಳಬೇಕು. ಆದರೆ—

ಪ್ರಾಯದಪೆಂಪೆ ಪೆಂಪೆಮಗೆ! ಮಾೞಿದರಂ ತವೆ ಕೊಂದ ಪೆಂಪು, ಕ-
ಟ್ಟಾಯದ ಪೆಂಪು, ಶಕ್ರನೊಡನೇೞಿದ[3] ಪೆಂಪು-ಇವು ಪೆಂಪುವೆತ್ತುನಿ-
ಟ್ಟಾಯುಗಳಾಗಿ[4] ನಿನ್ನೊಳಮರ್ದಿರ್ದುವು. ನೀಂ ತಲೆವೀಸದೆ-ಉರ್ವರಾ-
ಶ್ರೀಯನ್-ಇದಾಗದೆನ್ನದೆ-ಒಳಕೊಳ್ ಪರಮೋತ್ಸವದಿಂ ಗುಣಾರ್ಣವಾ!'

"ನಮಗೆ ವಯಸ್ಸಿನ ಹಿರಿಯತನವೇ ಹಿರಿಯತನ, ಶೌರ್ಯ ಮಹಿಮೆಗಳ ಹಿರಿಯತನ ನಿನ್ನದು; ನೀನೇ ರಾಜ್ಯಲಕ್ಷ್ಮಿಯನ್ನು ವರಿಸು; ಒಲ್ಲೆನೆಂದು ತಲೆಯಲ್ಲಾಡಿಸಬೇಡ"

---

೧. ತಱುಂಬಿ=ಅಡ್ಡಗಟ್ಟಿ

೨. ಪುೞುವಾನಸ=ಅಲ್ಪಮನುಷ್ಯ

೩. ಶಕ್ರನೊಡನೇೞಿದ=ಇಂದ್ರನೊಡನೆ ಒಂದೇ ಪೀಠದಲ್ಲಿ ಕುಳಿತ.

೪. ನಿಟ್ಟಾಯುಗಳಾಗಿ=ಚಿರಕಾಲ ನಿಲ್ಲುವವುಗಳಾಗಿ.

ಎಂದು ಧರ್ಮರಾಜನು ತಾನೇ ಮುಂದೆ ಬಂದು ಅರ್ಜುನನನ್ನು ಒಪ್ಪಿಸಿ ಸಿಂಹಾಸನದ ಮೇಲೆ ಕುಳ್ಳಿರಿಸುತ್ತಾನೆ!

ಪಂಪಭಾರತದಲ್ಲಿ ಅರ್ಜುನನಿಗೆ ನಾಯಕಪಟ್ಟ ದೊರೆತಮೇಲೆ, ಅವನ ಪ್ರತಿಸ್ಪರ್ಧಿಯಾದ ಕರ್ಣನಿಗೂ ಪ್ರಾಮುಖ್ಯ ಸಹಜವಾಗಿಯೇ ದೊರೆಯಿತು. ದುರ್ಯೋಧನನ ಛಲದಿಂದಲೇ ಭಾರತ ಯುದ್ಧವು ಒದಗಿತೆಂಬುದು ನಿಜ; ಅವನು ಮಡಿಯುವ ತನಕ ಆ ಕಿಚ್ಚು ನಂದಲಿಲ್ಲವೆಂಬುದು ನಿಜ. ಆದರೆ ಪಂಪನ ಮನಸ್ಸನ್ನು ಕರ್ಣನು ಸೆಳೆದಷ್ಟು ದುರ್ಯೋಧನನು ಸೆಳೆದಿಲ್ಲ. 'ದುಶ್ಶಾಸನ ಕರ್ಣ ಶಕುನಿ ಸೈಂಧವರೆಂಬ ದುಷ್ಟಚತುಷ್ಟಯ'ದಲ್ಲಿ ಕರ್ಣನನ್ನೂ ಒಮ್ಮೆ ಪಂಪನು ಸೇರಿಸಿದ್ದರೂ, ಅದೊಂದು ಕ್ಷಣಿಕವಾದ ಆಪಾದನೆ; ಅಷ್ಟೆ. ಪಂಪನ ಹೃದಯದ ಅಂತರಾಳದಲ್ಲಿ ಕರ್ಣನ ದುರ್ದೈವವನ್ನು ಕುರಿತು ವಿಶೇಷ ಮರುಕವಿದೆ, ಅವನ ಮಹಾಸತ್ತ್ವವನ್ನು ಕುರಿತು ವಿಶೇಷ ಗೌರವವಿದೆ. ಇದರಮೇಲೆ, ಪಂಪನ ದೃಷ್ಟಿಯಲ್ಲಿ ಕರ್ಣವಧೆ ಭಾರತ ಸಂಗ್ರಾಮದ ಕೇಂದ್ರದೃಶ್ಯ ಮಾತ್ರವಲ್ಲ, ಅದರ ಕೊನೆಯ ಗುರಿಯೂ ಹೌದು. 'ಕರ್ಣಂಗೊಡ್ಡಿತ್ತು ದಲ್ ಭಾರತಂ!'—ಈ ಮಾತನ್ನು ಕೃಷ್ಣನ ಬಾಯಲ್ಲಿ ಪಂಪನು ಆಡಿಸುತ್ತಾನೆ; ಅಷ್ಟೇ ಸಾಲದೆಂಬಂತೆ ಅರ್ಜುನನಿಂದಲೂ ಹೇಳಿಸಿ ದೃಢಪಡಿಸುತ್ತಾನೆ. ಕುಂತಿಯ ಈ ಚೊಚ್ಚಲು ಮಗನನ್ನು ಆಹುತಿಯಾಗಿ ತೆಗೆದುಕೊಳ್ಳುವುದಕ್ಕಾಗಿಯೇ ಅಷ್ಟು ಭೀಷಣವಾದ ರಣಯಜ್ಞ ಒಡ್ಡಿತೇನೋ! ತಾನು ಸೂತಪುತ್ರನಲ್ಲ, ಪಾಂಡವರಿಗೆ ಸೋದರನಾಗಬೇಕು ಎಂದು ಕರ್ಣನು ಕೇಳಿದ ಬಳಿಕ ಮನಸ್ಸನ್ನು ಸ್ವಲ್ಪ ಸಡಿಲಿಸಿದ್ದರೆ ಭಾರತದ ಕಥೆಯೇ ಬೇರೆಯ ದಾರಿಯನ್ನು ಹಿಡಿಯುತ್ತಿತ್ತು. ಕಡೆಗೆ ಪಾಂಡವರಿಗಾದರೂ ಇವನು ತಮ್ಮ ಹಿರಿಯಣ್ಣನೆಂದು ಮುಂಚೆ ಗೊತ್ತಾಗಿದ್ದರೂ ಚೆನ್ನಾಗಿತ್ತು. ಆದರೆ, ತನ್ನ ಕಣ್ಣ ಮುಂದೆ ಬೆಳೆದ ಐವರು ಮಕ್ಕಳನ್ನು ಉಳಿಸಿಕೊಳ್ಳುವುದಕ್ಕಾಗಿ, ತಾನು ಹೆತ್ತಾಗಲೇ 'ನಿಧಾನಮನ್–ಈಡಾಡುವಂತೆ' ಗಂಗೆಯ ನೀರಿನಲ್ಲಿ ತೊರೆದುಬಿಟ್ಟಿದ್ದ ಈ ಒಬ್ಬನನ್ನು ಕುಂತಿ ಬಲಿಗೊಟ್ಟಳು. ಕುಲಕ್ಷಯವು ಸಂಪೂರ್ಣವಾದಮೇಲೆ,

ಕೊಂತಿ ಬಂದು, ಕರ್ಣನ ಕಳೇವರಮಂ ತಟ್ಟೈಸಿಕೊಂಡು, ಪಾಂಡವರ್ಙೆಯ್ವರು ಮನ್–ಅಲ್ಲಿಗೆ ಬರಿಸಿ

ನಿಮ್ಮಣ್ಣನ್–ಎನ್ನ ಪಿರಿಯ ಮ–
ಗಂ, ಮಾತೇಂ ಕರ್ಣನ್–ಆಂ ಮಹಾಪಾತಕಿಯೆಂ!
ನಿಮ್ಮಯ ಮೋಹದಿನ್–ಈತಂ–
ಗೆ–ಆಂ ಮಾಡಿದೆನ್–ಇನಿತನೆಂದು ಶೋಕಂಗೆಯ್ದಳ್.

ಈ ಮಾತನ್ನು ಕೇಳಿ ಪಾಂಡವರಿಗೂ ಅಳಲು ಉಕ್ಕಿಬಂದು –

ಅಱಿಪಿದರಾರುಮಿಲ್ಲೆಮಗೆ ನೀನೆಮಗಣ್ಣನಯ್–ಎಂದು.
ಮುನ್ನಮಾಂ
ಅಱಿದೊಡೆ, ಪಟ್ಟಮಂ ನೆಲನುಮಂ ನಿನಗಿತ್ತು ಕುರುಪ್ರಧಾನನೊಳ್

ಕಱುಪ[1]ನೆ ನಿಚ್ಚಟಂ[2] ಬಿಸುಟು ನಿನ್ನಯ ಪೇೞ್ದುದುಗೆಯ್ದು, ಪಾಟಿ[3]ಯಂ
ಮೆಱೆಯೆವೆ ಬಾಯ ತಂಬುಲದೊಳಂ ಮಡಗೂೞೊ[4]ಳಂ–ಅಂಗ ವಲ್ಲಭಾ!

ಎಂದು ಅವರು ಹಲುಬಿದರು. ಆ ರೀತಿ ಅವರು ಖಂಡಿತವಾಗಿ ಮಾಡುತ್ತಿದ್ದರು. ದುರ್ಯೋಧನನ ಮೇಲಿನ ಕೋಪವನ್ನು ತೊರೆದು, ಕರ್ಣನಿಗೆ ವಿಧೇಯರಾಗಿ ಅವನು ಅನುಭವಿಸಿಬಿಟ್ಟದ್ದೇ ಪರಮಪ್ರಸಾದವೆಂದು ಭಾವಿಸಿಕೊಂಡು ಬಾಳುತ್ತಿದ್ದರು; ಕರ್ಣನನ್ನು ಕೊಲ್ಲುವ ಬದಲು ಅರ್ಜುನನು ಅವನ ಪಾದಪೀಠದ ಬಳಿ ನಿಂತು ಓಲೈಸುತ್ತಿದ್ದನು. ಇತ್ತ ದುರ್ಯೋಧನನಿಗಾದರೆ, ಪಂಪಭಾರತದ ಕಥೆಯ ಪ್ರಕಾರ, ಕರ್ಣನು ಯಾರೆಂಬುದು ಮೊದಲೇ ಗೊತ್ತಿತ್ತು; ಕರ್ಣನಿಗೆ ರಾಜ್ಯವನ್ನು ಒಪ್ಪಿಸಿ ಅವನ ಅಧೀನದಲ್ಲಿ ತಾನು ಬಾಳಬೇಕೆಂಬ ಉದ್ದೇಶವೂ ಇತ್ತು. ಆದರೆ ಈ ಕಾರ್ಯವನ್ನು ಮಾಡಲು ದುರ್ಯೋಧನನು ಏಕೋ ತಡಮಾಡಿದನು; ಅಷ್ಟರಲ್ಲೇ, ಅವನಿಗೂ ಭೀಮನಿಗೂ ಕೋಪ ಮಸಗಿ, ವೈರ ಬೆಳೆದು, ಉರಿ ಹೊತ್ತಿದ ಯುದ್ಧದಲ್ಲಿ ಕರ್ಣನು ಸುಟ್ಟುಹೋದನು :

ಉದಧಿತರಂಗ ತಾಟಿತ ಧರಾತಳಮಂ ನಿನಗಿತ್ತು, ನಿನ್ನ ಕೊ–
ಟ್ಟುದನೆ ಪಸಾದಮೆಂದು ಪೊಡೆವಟ್ಟು ಮನೋಮುದದಿಂದೆ ಕೊಂಡು ಬಾ–
ೞ್ದಿದುವೆ ಬಯಕ್ಕೆ ಮುಂ; ನಿನಗದಂ ಕಿಡಿಪಂದು–ಎಲೆ ಕರ್ಣ, ಕೇತು[5]ವಾ–
ದುದು ನಿನಗೆ–ಆ ವೃಕೋದರನ ಕಾಯ್ಪು[6]ನೆ ಪೊತ್ತಿಸಿದೆನ್ನ ಕಾಳೆಗಂ!

ಎಂದು ಕರ್ಣನನ್ನು ಕಳೆದುಕೊಂಡ ಮೇಲೆ ದುರ್ಯೋಧನನು ರೋದಿಸುತ್ತಾನೆ. ಕಲಹ ಬೆಳೆಯದೆ ಇದ್ದರೆ ಎರಡು ಪಕ್ಷದವರೂ ಕರ್ಣನ ಆಶ್ರಯದಲ್ಲಿ ಹೊಂದಿಕೊಂಡು ಬಾಳಬಹುದಾಗಿತ್ತು. ಆದರೆ ಹುಟ್ಟಿದ ಘಳಿಗೆಯಿಂದಲೇ ಕರ್ಣನ ಬೆನ್ನು ಹತ್ತಿ ಅವನಿಗೆ ತಾಯ ಒಲುಮೆಯನ್ನೂ ಕುಲದ ಹಿರಿಮೆಯನ್ನೂ ತಪ್ಪಿಸಿದ್ದ ದುರ್ದೈವದ ಸಂಕಲ್ಪವೇ ಬೇರೆಯಾಗಿತ್ತು!

ದ್ರೋಣಾಚಾರ್ಯನ ಕೈಕೆಳಗೆ ಹಸ್ತಿನಾವತಿಯ ರಾಜಪುತ್ರರೊಡನೆ ತಾನೂ ಶಸ್ತ್ರಾಭ್ಯಾಸಮಾಡುವುದಕ್ಕಾಗಿ, 'ಕೌರವರ್ಗೆಲ್ಲಂ ಪ್ರಾಣಂ ಬರ್ಪಾಕೃತಿಯೊಳೆ ಬಾಣಾಸನ ಬಾಣಪಾಣಿ ಕರ್ಣಂ ಬಂದಂ' ಎಂದು ಪಂಪನು ನಿರೂಪಿಸುತ್ತಾನೆ. ಈ ಧನುರ್ಧಾರಿ ಕೌರವರಿಗೆ ಮಾತ್ರ ಪ್ರಾಣವಾಗಿ ಬರಲಿಲ್ಲ; ಪಂಪಭಾರತಕ್ಕೇ ಪ್ರಾಣವಾಗಿ ಬಂದನು. ಅವನ ತ್ಯಾಗದ, ಸ್ನೇಹದ, ಕೆಚ್ಚಿನ, ಪೌರುಷದ ಸನ್ನಿವೇಶ ಬಂದಿತೆಂದರೆ ಪಂಪನ ಕೊರಳು ಉಬ್ಬುತ್ತದೆ, ಕವಿತೆ ಉಕ್ಕುತ್ತದೆ. ಪಂಪಭಾರತದ ಮೊದಲಿನ ಎಂಟು ಆಶ್ವಾಸಗಳಲ್ಲಿ, ಗೋಗ್ರಹಣ ವೃತ್ತಾಂತದ ಕೊನೆಯವರೆಗೆ, ಕರ್ಣನ ವಿಚಾರ ಹೆಚ್ಚಾಗಿ ಬರಲು ಅವಕಾಶವಿಲ್ಲ;—ಅದೆಲ್ಲಾ ವಿಕ್ರಮಾರ್ಜುನನ ಏಕಾಂಗ ಸಾಹಸದ ಕ್ಷೇತ್ರ, ಆ

೧. ಕಱುಪು=ಕ್ರೋಧ.
೨. ನಿಚ್ಚಟಂ=ನಿಶ್ಚಲವಾಗಿ.
೩. ಪಾಟಿ=ಕ್ರಮ
೪. ಮಡಗೂೞ್=ಉಂಡು ಬಿಟ್ಟ ಅನ್ನ.
೫. ಕೇತು=ಧೂಮಕೇತು.
೬. ಕಾಯ್ಪು=ಕೋಪ.

ಬಳಿಕ ಸಂಧಿಯ ಪ್ರಯತ್ನ ಮುರಿದುಬಿದ್ದು, ಯುದ್ಧವು ಒಡ್ಡಿದ ಮೇಲೆ ಕರ್ಣನು ಮುಂದೆ ಬಂದು ನಿಲ್ಲುತ್ತಾನೆ; ರಂಗದ ಮಧ್ಯಭಾಗವನ್ನೇ ಆಕ್ರಮಿಸುತ್ತಾನೆ.

ತನ್ನ ಜನನದ ಗುಟ್ಟನ್ನು ಕೃಷ್ಣನು ಕಿವಿಯಲ್ಲಿ ಊದಿ ಹೋದಮೇಲೆ ಕರ್ಣನಿಗೊಂದು ಸಮಸ್ಯೆ ಒದಗಿತು. ತಾನು ಅಂಬಿಗನ ಮಗನೆಂದೇ ಅದುವರೆಗೂ ಅವನು ನಂಬಿದ್ದನು; ತನಗಿಲ್ಲದೆ ಹೋದ ಕುಲಗೌರವಕ್ಕೆ ಹತ್ತುಪಾಲು ಮಿಗಿಲಾಗಿ ಕಲಿತನದ ಗೌರವವನ್ನು ಬೆಳಸಿಕೊಂಡಿದ್ದನು. ದಿಕ್ಕಿಲ್ಲದ ತನಗೆ ರಾಜ್ಯವನ್ನು ಕೊಟ್ಟು ಒಂದೇ ಹೃದಯವನ್ನು ತನ್ನೊಡನೆ ಸಮಭಾಗಮಾಡಿಕೊಂಡಿದ್ದ ದುರ್ಯೋಧನನ ಹಗೆಯೇ ತನ್ನ ಹಗೆಯೆಂದು ಅವನು ಪಾಂಡವರನ್ನು ಏಕನಿಷ್ಠೆಯಿಂದ ದ್ವೇಷಿಸುತ್ತಿದ್ದನು. ಈಗಲಾದರೋ, ಅವರು ತನ್ನ ತಮ್ಮಂದಿರೆಂದು ಗೊತ್ತಾಯಿತು. ಪ್ರಾಣಮಿತ್ರನನ್ನು ಕೈಬಿಟ್ಟು ಈ ಹೊಸ ನಂಟರೊಡನೆ ಸೇರಿಕೊಳ್ಳುವ ಆಲೋಚನೆ ಅವನಿಗೆ ಕ್ಷಣಮಾತ್ರವೂ ಹೊಳೆಯಲಿಲ್ಲ; ಆದರೆ ತನ್ನ ಸೋದರರೆಂದು ಗೊತ್ತಾದಮೇಲೆ ಅವರನ್ನು ಕೊಲ್ಲುವುದು ಹೇಗೆ ಎಂಬ ಚಿಂತೆ ಹುಟ್ಟಿತು :

> ಅಜಿದಂ ಸೋದರರೆಂದು ಪಾಂಡವರನ್–ಇನ್ನೆಂತೆನ್ನರಂ ಕೊಲ್ವೆನ್–;
> ಅ–
> ಟ್ಟಿಜಿಸೊಳೆನ್ನಂ ಪೊರೆದೆಯ್ದೆ ನಂಬಿದ ನೃಪಗೆಂತು–ಆಜಿ[೧]ಯೊಳ್ ತಪ್ಪುವೆಂ!—

ಎಂಥ ಕಠಿನ ಸಮಸ್ಯೆ!—ತಮ್ಮಂದಿರನ್ನು ಕಾಯಲೂ ಬೇಕು; ನೆಚ್ಚಿದ ಒಡೆಯನಿಗಾಗಿ ಕಾದಲೂ ಬೇಕು. ಕರ್ಣನ ಪಾಲಿಗೆ ಈ ಎರಡು ಕರ್ತವ್ಯಗಳೂ ಒಂದಕ್ಕೊಂದು ಎದುರಾಗಿ ನಿಂತುಬಿಟ್ಟುವು. ಇಷ್ಟೇ ಸಾಲದೆಂಬಂತೆ, ಕುಂತಿ ಬೇರೆ ಬಂದು ತನ್ನ ತಾಯ್ತನಕ್ಕೆ ಕಾಣಿಕೆಯಾಗಿ "ಅರ್ಜುನನ ಮೇಲೆ ಪುರಿಗಣೆ[೨]ಯನ್ನು ತೊಡುವುದಿಲ್ಲ, ಮಿಕ್ಕವರು ಕೈಗೆ ಸಿಕ್ಕಿದರೂ ಕೊಲ್ಲುವುದಿಲ್ಲ" ಎಂಬ ಭಾಷೆಯನ್ನು ಕರ್ಣನಿಂದ ಪಡೆದಳು. ಈ ಧರ್ಮಸಂಕಟದಲ್ಲಿ ಅವನು ಏನುಮಾಡಬೇಕು? ಆದಷ್ಟು ಶೌರ್ಯದಿಂದ ಯುದ್ಧಮಾಡಿ ರಣರಂಗದಲ್ಲಿ ತನ್ನ ಜೀವವನ್ನೇ ತೆತ್ತುಬಿಡುವುದೆಂದು ನಿರ್ಧರಿಸಿದನು.

ಕರ್ಣನಿಗೆ ಒಡ್ಡಿದ ಸಮಸ್ಯೆಯೇ ಭಾರತಸಂಗ್ರಾಮದ ತಿರುಳು. ಒಂದು ಕುಲದೊಳಗೆ ಅಂತಃಕಲಹವು ಹುಟ್ಟಿದರೆ, ಒಂದೇ ರಕ್ತದಿಂದ ಜನಿಸಿದವರಲ್ಲಿ ಕೆಲವರು ಅತ್ತ ಕೆಲವರು ಇತ್ತ ನಿಂತು ಸೆಣಸಬೇಕಾಗಿ ಬಂದರೆ ಇಂಥ ಧರ್ಮಸಂಕಟವೊದಗಲೇ ಬೇಕು; ಕರ್ತವ್ಯ ಹೀಗೆ ಕವಲೊಡೆಯಲೇಬೇಕು.—ಈ ಮನಃಕ್ಷೋಭೆಯ ಕರಾಳಚ್ಛಾಯೆ ಭಾರತಯುದ್ಧದ ಒಟ್ಟು ಕಥೆಯನ್ನೇ ಮುಸುಕಿದೆ. ಹಾಗೆ ನೋಡಿದರೆ ಕರ್ಣನೇ ವಾಸಿ. ಯುದ್ಧವನ್ನಾದರೂ ಶ್ರದ್ಧೆಯಿಂದ ಮಾಡಿದನು; ದುರ್ಯೋಧನನು ತನ್ನಲ್ಲಿಟ್ಟಿದ್ದ ನೆಚ್ಚಿಕೆಗೆ ತಕ್ಕಂತೆ ನಡೆಯಲು ಮನಃಪೂರ್ವಕವಾಗಿ ಹೆಣಗಿದನು. ಭೀಷ್ಮ, ದ್ರೋಣ,

---

೧. ಆಜಿ=ಯುದ್ಧ.

೨. ಪುರಿಗಣೆ=ದಿವ್ಯಾಸ್ತ್ರ(?)

ಶಲ್ಯ ಮೊದಲಾದ ಕೌರವಪಕ್ಷದ ವೀರರನ್ನು ಕುರಿತು ಈ ಪ್ರಶಂಸಾವಾಕ್ಯವನ್ನೂ ಆಡುವಂತಿಲ್ಲ. ಇವರು ದುರ್ಯೋಧನನ ದಾಕ್ಷಿಣ್ಯವನ್ನೂ ಬಿಡಲಾರರು; ಪಾಂಡವರ ಮೇಲಿನ ವಿಶ್ವಾಸವನ್ನೂ ತೊರೆಯಲಾರರು. ಉದಾಹರಣೆಗೆ, ದುರ್ಯೋಧನನಿಂದ ಸೇನಾಧಿಪತ್ಯವನ್ನು ಹೊಂದಿದಮೇಲೆ ಭೀಷ್ಮನು ತನಗೆ ಹೇಳಿಕೊಳ್ಳುವ ಈ ಮಾತುಗಳನ್ನು ಗಮನಿಸಿ :

> ಎನ್ನನೆ ನಚ್ಚಿದನ್-, ಅನುವರ-
> ಕೆ[೧]-ಎನ್ನನೆ ಪೂಣಿಸಿದನ್[೨]-ಎನಗೆ-ಎರಟ್ಟಿಂಡಮುಂ-ಓ-
> ರನ್ನರ್[೩] ದಲ್; ಎಂತು ಕಾದುವೆ-
> ನೆನ್ನಯ ಮಕ್ಕಳೊಳಮೆನ್ನ ಮೊಮ್ಮಕ್ಕಳೊಳಂ :—

ಇದೇ ಅವನ ಕಷ್ಟ! ಇದರಿಂದ ಎಷ್ಟೋ ಸಲ ಅವನು ಮೇಲು ಮೇಲೆ ತೋರಿಕೆಗಾಗಿ ಯುದ್ಧಮಾಡುತ್ತಾನೆ. ಇವನ ವರ್ತನೆಯನ್ನು ದುರ್ಯೋಧನನು ಕಂಡು, "ಪಾಂಡವರ ನಂಟತನವನ್ನೇ ನೀವು ನೆನೆಯುತ್ತಿದ್ದೀರಿ, ನನ್ನ ಅನ್ನದ ಋಣವನ್ನೂ ಸ್ವಲ್ಪ ನೆನೆಯಿರಿ" ಎಂದು ಮೂದಲಿಸಿದಾಗ ಮಾತ್ರ ಅತಿಶಯ ಶೌರ್ಯದಿಂದ ಹೋರಾಡುತ್ತಾನೆ. ಕಡೆಗೆ, ಜೀವಕ್ಕೆ ಬೇಸತ್ತು ತನ್ನ ಮರಣದ ಉಪಾಯವನ್ನು ಪಾಂಡವರಿಗೆ ತಾನೇ ಬೋಧಿಸುತ್ತಾನೆ. ದ್ರೋಣ ಶಲ್ಯರ ಮಾತೂ ಇಲ್ಲಿಗೇ ಮುಟ್ಟುತ್ತದೆ.— ಇವರೆಲ್ಲರೂ ಮನಸ್ಸನ್ನು ಕಲ್ಲುಮಾಡಿಕೊಂಡು ಯಾವುದಾದರೂ ಒಂದು ಪಕ್ಷವನ್ನು ಪಟ್ಟುಹಿಡಿಯಬಾರದಾಗಿತ್ತೆ? ಅಮಿತಸಂಖ್ಯೆಯ ಶತ್ರುಸೇನೆಯನ್ನು ಲೀಲೆಯಿಂದ ತರಿದೊಟ್ಟುತ್ತಿದ್ದ ಈ ಮಹಾಶೂರರು ತಮ್ಮ ಹೃದಯದೌರ್ಬಲ್ಯವನ್ನು ಮಾತ್ರ ಜಯಿಸಲಾರದೆ ಹೋದರು. ಕುಟುಂಬಕಲಹದ ದುರಂತ ಪರಿಣಾಮವೇ ಇದು.

ಕೌರವಪಕ್ಷದ ಅಪಜಯಕ್ಕೆ ಇನ್ನೊಂದು ಕಾರಣವಿತ್ತು. ದುರ್ಯೋಧನನು ಯಾರ ಸಹಾಯವನ್ನು ನೆಚ್ಚಿಕೊಂಡಿದ್ದನೋ ಆ ಪ್ರಮುಖರಿಗೆಲ್ಲ ಕರ್ಣನಲ್ಲಿ ವೈಮನಸ್ಯವಿತ್ತು. ಭೀಷ್ಮ ದ್ರೋಣ ಅಶ್ವತ್ಥಾಮ ಶಲ್ಯ ಮೊದಲಾದವರಿಗೆಲ್ಲ ಕರ್ಣನು ಕುಲಹೀನನೆಂದು ತಿರಸ್ಕಾರ; ಅವನನ್ನು ದುರ್ಯೋಧನನು ಉಬ್ಬಿಸಿದ್ದಾನೆಂದು ಅಸಮಾಧಾನ. ಇತ್ತ ಕರ್ಣನಿಗಾದರೆ ಇವರೆಲ್ಲರ ಸೊಕ್ಕನ್ನು ಕಂಡು ರೋಷ; ದುರ್ಯೋಧನನ ಅನ್ನವನ್ನುಂಡು ಅವನಿಗೇ ಎದುರುಬೀಳುವ ಇವರ ಸ್ವಭಾವವನ್ನು ಕಂಡು ಅಪನಂಬಿಕೆ. ಹೀಗಾಗಿ ಎಷ್ಟೋ ಸಂದರ್ಭಗಳಲ್ಲಿ ಇವರಿವರ ಹುರುಡು ಹಗೆತನಕ್ಕೆ ತಿರುಗಿಬಿಡುತ್ತಿದ್ದಿತು. ಒಂದು ಸಲ ಅಶ್ವತ್ಥಾಮನಿಗೂ ಕರ್ಣನಿಗೂ ಹತ್ತಿದ ಜಗಳ ಕೈಮಿಾರಿದಾಗ,

> ಅಸದಳಮಾಗಿಯುಂ-ಈ ನ-
> ಮ್ಮ ಸೈನ್ಯಂ-ಇಂತೊರ್ವರೊರ್ವರೊಳ್ ಸೆಣಸಿ ಖಳ- ,,

---

೧. ಅನುವರಕೆ=ಯುದ್ಧಕ್ಕೆ.

೨. ಪೂಣಿಸಿದನ್=ಪ್ರತಿಜ್ಞೆಮಾಡಿಸಿದನು.

೩. ಓರನ್ನರೆ=ಒಂದೇ ಬಗೆಯವರು.

ವ್ಯಸನದೊಳೆ ಕೆಟ್ಟುದಲ್ಲದೊ-
.ಡೆ ಸುಯೋಧನ ನಿನಗೆ ಮಲೆವ ಮಾರ್ವಲಮೊಳವೇ?

ಎಂದು ಕೃಪನು ವ್ಯಸನದಿಂದ ಹೇಳುತ್ತಾನೆ. ಶತ್ರುಗಳಮೇಲೆ ಒಗ್ಗಟ್ಟಿನಿಂದ ಕೈಮಾಡಬೇಕಾದ ಸಮಯದಲ್ಲಿ ಈ ಶೂರರು ಕೋಪಾವೇಶದಿಂದ ಸಮರತ್ಯಾಗ ಮಾಡುವುದಕ್ಕೂ ಹಿಂಜರಿಯುತ್ತಿರಲಿಲ್ಲ.

ಭೀಷ್ಮ-ಕರ್ಣರಿಗೆ ಸ್ಪರ್ಧೆ ಹುಟ್ಟಿ ವಿರಸಕ್ಕೆ ತಿರುಗಿದ ಒಂದು ಪ್ರಸಂಗವನ್ನು ಪಂಪನು ಬಲು ಸೊಗಸಾಗಿ ನಿರೂಪಿಸಿದ್ದಾನೆ; ಅದರಲ್ಲಿ, ಅವರವರು ಆಡಿದ ಎರಡು ಮಾತಿನಲ್ಲೇ ಅವರವರ ಶೀಲಸತ್ತ್ವಗಳು ಪ್ರಕಾಶವಾಗುವಂತೆ ರಚಿಸಿದ್ದಾನೆ. ಈ ಸಂದರ್ಭವನ್ನು ಸ್ವಲ್ಪ ವಿಶದವಾಗಿ ಪರಿಶೀಲಿಸಿದರೆ ಪಂಪನ ಪಾತ್ರರಚನೆ ರಸಪೋಷಣೆಗಳ ರೀತಿ ಚೆನ್ನಾಗಿ ವ್ಯಕ್ತವಾಗುತ್ತದೆ.

ಭೀಷ್ಮನಿಗೆ ವೀರಪಟ್ಟವನ್ನು ಕಟ್ಟಿ, ಹಗೆಗಳನ್ನೆಲ್ಲಾ ನನ್ನ ಮಂಚದ ಕಾಲಿಗೆ ಕಟ್ಟಿದೆನೆಂದು ದುರ್ಯೋಧನನು ಹಿಗ್ಗುತ್ತಿದ್ದನು. ಈ ಮುಪ್ಪಿನ ಮುದುಕನು ಶತ್ರುಗಳನ್ನು ಹೇಗೆ ಎದುರಿಸಿ ನಿಲ್ಲಬಹುದು, ತಾನೇ ಸಾಕಿದ ಮೊಮ್ಮಕ್ಕಳೊಡನೆ ಹೇಗೆ ಮನಸ್ಸಿಟ್ಟು ಕಾದಬಹುದು—ಎಂದು ಕರ್ಣನಿಗೆ ಪ್ರಬಲವಾದ ಸಂದೇಹ; ಪಟ್ಟವನ್ನು ತನಗೆ ಕಟ್ಟಲಿಲ್ಲವಲ್ಲಾ ಎಂದು ಅಸಮಾಧಾನ ಬೇರೆ. ಆಗ—

ಭಗವತಿಯೇಱುವೇಟ್ವ ತೆಱದಿಂ ಕಥೆಯಾಯ್ತಿವರೇಱು[1]; ನೀನಿದಂ
ಬಗೆದು-ಇವರಿನ್ನುಂ-ಆಂತಿಜಿವರೆಂದು ವಿಮೋಹಿಸಿ ವೀರಪಟ್ಟಮಂ
ಬಗೆಯದೆ ಕಟ್ಟಿದೈ: ಗುರುಗಳಂ ಕುಲವೃದ್ಧರನ್-ಆಜಿಗುಯ್ದು ಕೆ-
ಮ್ಮಗೆ[2] ಪಗೆವಾಡಿಯೊಳ್[3] ನಗಿಸಿಕೊಂಡೊಡೆ ಬಂದಪುದೇಂ
ಸುಯೋಧನಾ!

ಎಂದು ಕರ್ಣನು ತುಂಬಿದ ಸಭೆಯಲ್ಲಿ ಹಾಸ್ಯಮಾಡುತ್ತಾನೆ. ಈ ಕಂಗೆಟ್ಟ ಮುದುಕನಿಗೆ ಬದಲು ನನಗೆ ವೀರಪಟ್ಟವನ್ನು ಕಟ್ಟು ಎಂದು ದಿಟ್ಟತನದಿಂದ ಸೂಚಿಸುತ್ತಾನೆ. ಕರ್ಣನ ಈ ಅವಿನಯದ, ಅಹಂಕಾರದ ಮಾತುಗಳನ್ನು ಕೇಳಿ ಋಜು ಸ್ವಭಾವದ ದ್ರೋಣಾಚಾರ್ಯನು ಸಿಡಿದೆದ್ದು ನಿಂತನು. 'ಸಿಂಗದ ಮುಪ್ಪುಂ ನೆಗೆಟ್ದೀ ಗಾಂಗೇಯರ ಮುಪ್ಪುಂ-ಇಳಿಕೆವಡೆಗುಮೆ!' ಎಂದು ಗರ್ಜಿಸಿದನು. ಅಷ್ಟಕ್ಕೇ ನಿಲ್ಲದೆ,

ಕುಲಜರನ್-ಉದ್ಧತರಂ ಭುಜ-
ಬಲಯುತರಂ ಹಿತರನ್-ಈ ಸಭಾಮಧ್ಯದೊಳ್ ಅ-

---

೧. ಕಥೆಯಾಯ್ತಿವರೇಱು=ಇವರ ಪರಾಕ್ರಮವೆಲ್ಲ ಕಥೆಯ ಮಾತಾಯಿತು.

೨. ಕೆಮ್ಮಗೆ=ಸುಮ್ಮನೆ.

೩. ಪಗೆವಾಡಿಯೊಳ್=ಶತ್ರುಗಳ ಪಾಳೆಯದವರಿಂದ.

ಗ್ಗಲಿಸಿದ ಮದದಿಂ ನಾಲಗೆ
ಕುಲಮಂ ತುಬ್ಬುವ[1] ವೊಲ್-ಉಜಿದೆ[2] ನೀಂ ಕೆಡೆನುಡಿವೈ!

ಎಂದು ಕರ್ಣನನ್ನು ಮೂದಲಿಸಿ, ಅವನ ಕುಲವನ್ನು ಎತ್ತಿ ಆಡಿಬಿಟ್ಟನು. ಈಗ ಕರ್ಣನ ರೋಷವನ್ನು ಕೇಳಬೇಕೆ? ಕುಲ, ಕುಲ ಎಂದು ಮಾತೆತ್ತಿದ್ದಕ್ಕೆಲ್ಲಾ ತನ್ನ ಸೂತಕುಲವನ್ನು ಅಲ್ಲಗಳೆಯುವ ಇವರ ವರ್ತನೆಯನ್ನು ಅವನು ಎಷ್ಟೆಂದು ಸಹಿಸಿಯಾನು :

ಕುಲಮನೆ ಮುನ್ನಂ-ಉಗ್ಗಡಿಪಿರ್-ಏಂ ಗಳ! ನಿಮ್ಮ
ಕುಲಂಗಳಾಂತು ಮಾ-
ರ್ಮಲೆವರನ್-[3] ಅಟ್ಟಿತಿಂಬುವೆ?-ಕುಲಂ ಕುಲಮಲ್ತು; ಚಲಂ ಕುಲಂ,
ಗುಣಂ
ಕುಲಂ, ಅಭಿಮಾನಮೊಂದೆ ಕುಲಂ-, ಅಣ್ಮು[4] ಕುಲಂ! ಬಗೆವಾಗಳ್-
ಈಗಳೀ
ಕಲಹದೊಳ್-ಅಣ್ಣ, ನಿಮ್ಮ ಕುಲಂ- ಆಕುಲಮಂ ನಿಮಗುಂಟು-
ಮಾಡುಗುಂ!

ಹೀಗೆಂದು ಪೌರುಷಮಂತ್ರವನ್ನು ಉದ್ಘೋಷಿಸಿ, ಇವರು ಎಬ್ಬಿಸಿದ ಕುಲದ ಭೂತವನ್ನು ಅಣಗಿಸಿದನು; ನಿಜವಾದ ಕುಲ ಯಾವುದೆಂದು ಸಾರಿದನು. ತನಗೆ ಉಂಟಾದ ಅಪಮಾನದ ಆವೇಶದಲ್ಲಿ,

ಗಂಗಾಸುತಂ ಪೃಥಾಸುತ-
ರಂ ಗೆಲ್ದೊಡೆ ತಪಕೆ ಪೋಪೆನ್-; ಅವರ್ಗಳ ಕಯ್ಯೊಳ್
ಗಾಂಗೇಯನಟಿದೊಡೆ-, ಅಹಿತರನ್-
ಆಂ ಗೆಲೆ ತಳ್ತು-ಇಟಿವೆನ್- ಅನ್ನೆಗಂ ಬಿಲ್ವಿಡಿಯೆಂ!

ಎಂದು ಹಿಂದುಮುಂದು ನೋಡದೆ ಪ್ರತಿಜ್ಞೆ ಮಾಡಿಬಿಟ್ಟನು.

ಇಷ್ಟೆಲ್ಲ ನಡೆದರೂ ಭೀಷ್ಮನು ಎಲ್ಲವನ್ನೂ ಸುಮ್ಮನೆ ನೋಡುತ್ತಾ ಅಚಲಿತನಾಗಿ ಕುಳಿತಿದ್ದನು. ಕರ್ಣನು ಪಂಥವನ್ನು ಹೂಡಿದ ಮೇಲೆ ತನ್ನ ಮಾತಿಗೆ ಅವಕಾಶ ವುಂಟಾಯಿತು. ಕರ್ಣನ ಘೋಷಣೆಗೆ ಭೀಷ್ಮನು ಏನು ಉತ್ತರ ಕೊಡಬಹುದೆಂದು ನಿರೀಕ್ಷಿಸುತ್ತಿರುತ್ತೇವೆ. ಇದು ಆ ಉತ್ತರ :

---

೧. ತುಬ್ಬು=ಸೂಚಿಸು.

೨. ಉಜಿದೆ=ಲಕ್ಷ್ಯಮಾಡದೆ.

೩. ಮಾರ್ಮಲೆವರನ್=ಪ್ರತಿಭಟಿಸುವವರನ್ನು

೪. ಅಣ್ಮು=ಪೌರುಷ

ಕಲಿತನದುರ್ಕು, ಜವ್ವನದ ಸೊರ್ಕು, ನಿಜೇಶನ ನಚ್ಚು, ಮಿಕ್ಕ ತೋ-
ಳ್ವಲದ ಪೊಡರ್ಪು-ಕರ್ಣ, ನಿನಗುಳ್ಳನಿತೇನೆನಗುಂಟೆ?-ಭಾರತಂ
ಕಲಹಂ-ಇದಿರ್ಚುವಂ ಹರಿಗನ್-ಅಪ್ಪೊಡೆ, ಮೊಕ್ಕಳಮೇಕೆ ನೀಂ ಪಳಂ-
ಚಲೆದಪೆಯಣ್ಣ? ಸೂಟ್ಪಿಡೆಯಲಪ್ಪುದು ಕಾಣ ಮಹಾಜಿರಂಗದೊಳ್.

ಇದರಲ್ಲಿ ಒಂದೊಂದೂ ಆರಿಸಿ ತೂಕಮಾಡಿ ಪ್ರಯೋಗಿಸಿದ ಮಾತು; ಒಂದೊಂದೂ ಕರ್ಣನ ಅಹಂಕಾರಕ್ಕೆ ಕೊಡತಿಯ ಪೆಟ್ಟಿನಂತೆ ಬೀಳುತ್ತದೆ. ಮುಂದಿರುವುದು ಭಾರತಯುದ್ಧ; ಎದುರಿಸಿ ನಿಲ್ಲುವವನು ಅರ್ಜುನ! ಈಗಿನಿಂದಲೇ ಏತಕ್ಕೆ ಇಷ್ಟೊಂದು ಎದ್ದೆದ್ದು ಹಾರಾಡುತ್ತೀಯಪ್ಪಾ? ಈ ಮಹಾ ಸಂಗ್ರಾಮದಲ್ಲಿ ನಿನ್ನ ಸರದಿಯೂ ಬರುತ್ತದೆ ಕಾಣಯ್ಯ, ಆತುರಪಡಬೇಡ—ಎಂದು ಭೀಷ್ಮನು ಕರ್ಣನಿಗೆ ಭರವಸೆ ಕೊಡುತ್ತಾನೆ.

'ಸೂಟ್-ಪಡೆಯಲಪ್ಪುದು ಕಾಣ' ಎಂಬ ಮಾತಿನಲ್ಲಿ ಎಷ್ಟು ಅರ್ಥ ತುಂಬಿದೆ! ಈ ಸಮರದಲ್ಲಿ ಕುರುಪಕ್ಷದ ನಾಯಕರಿಗೆಲ್ಲ ಕಾದಾಡುವ ಸರದಿ ದೊರೆಯುತ್ತದೆಯೇ ಹೊರತು ವಿಜಯ ದೊರೆಯುವ ಸಂಭವವಿಲ್ಲ. ಭೀಷ್ಮನ ಸರದಿ ಬಂದಿದೆ, ಮತ್ತೊಬ್ಬನ ಸರದಿ ಬರುತ್ತದೆ, ಕರ್ಣನದೂ ಬರುತ್ತದೆ; ಆದರೆ ಕರ್ಣನು ನಿರೀಕ್ಷಿಸಿರುವಂತೆ ಅಲ್ಲಿಗೇ ನಿಲ್ಲದೆ ಯುದ್ಧ ಮುಂದಕ್ಕೂ ಸಾಗುತ್ತದೆ!

ಭೀಷ್ಮನು ಇಷ್ಟನ್ನು ಆಡಿದ ಬಳಿಕ, ಮುದುಕನಾದ ತಾನು ಏನು ಮಾಡಬಲ್ಲೆನೆಂಬುದಕ್ಕೆ ಪೀಠಿಕೆ ಹಾಕುತ್ತಾನೆ :

ಮುದುಪರ ಬಿಲ್ಪಲ್ಮೆ ಯುಂ-ಇಚೆ-
ವದಟುಂ ಬಗೆವಾಗಳ್-ಅಣ್ಣನೆಂದಂತುಟೆ : ತ-
ಪ್ಪದು; ಕರಮೆ ತುಚ್ಛಮಕ್ಕುಂ
ಕದನದೊಳ್!—ಇನ್ನೆನ್ನ ನುಡಿದ ನುಡಿಯಂ ಕೇಳಿಂ :

ಪಿಡಿಯೆಂಚಕ್ರಮನೆಂಬ ಚಕ್ರಿಯನ್[೧]-ಇಳಾಚಕ್ರಂ ಭಯಂಗೊಳ್ವಿನಂ
ಪಿಡಿಯಿಪ್ಪೆಂ ಕರಚಕ್ರಮಂ; ನರರಥಂ ತೂಳ್ದು[೨]-ಆ ಕುರುಕ್ಷೇತ್ರದಿಂ
ಪಡುವೆಣ್ಗಾವುದು[೩] ಪೋಗೆ ಪೋ ಗಡ-! ಇಸುವೆಂ; ನಿಚ್ಚಂ ಧರಾಧೀಶರಂ
ಪಡಲಿಟ್ಟಂತಿರೆ ಮಾಟ್ಪೆನ್-ಓವದೆ[೪] ಪಯಿಂಛಾಸಿರ್ವರಂ[೫] ಯುದ್ಧದೊಳ್.

—ಮುದುಕರ ಶಕ್ತಿಯೆಲ್ಲ ಕರ್ಣನು ಹೇಳಿದಷ್ಟೇ; ಅವರ ಕೈಯಲ್ಲಿ ಏನಾದೀತು— ಎಂದು ಭೀಷ್ಮನು ಮೊದಲು ಒಪ್ಪಿಕೊಂಡು, ಬಳಿಕ ಕೈಕೊಳ್ಳುವ ಅಸಾಧಾರಣ

೧. ಚಕ್ರಿಯನ್=ಕೃಷ್ಣನನ್ನು. ೨. ತೂಳ್ದು=ಹಿಮ್ಮೆಟ್ಟಿ
೩. ಪಡುವೆಣ್ಗಾವುದು=ಪಶ್ಚಿಮಕ್ಕೆ ಎಂಟುಗಾವುದ ದೂರ.
೪. ಓವದೆ=ನಿಷ್ಕರುಣವಾಗಿ.
೫. ಪಯಿಂಛಾಸಿರ್ವರಂ=ಹತ್ತುಸಾವಿರ ಮಂದಿಯನ್ನು.

ಪ್ರತಿಜ್ಞೆಯನ್ನು ನೋಡಿ. ಕರ್ಣನ ಪ್ರತಿಜ್ಞೆಗೂ ಅದಕ್ಕೂ ಎಷ್ಟು ಅಂತರ! ಮಾತುಕೊಟ್ಟದ್ದೇ ಅಲ್ಲದೆ, ತಾನು ಸೇನಾಪತಿಯಾಗಿದ್ದ ಹತ್ತು ದಿನದೊಳಗೆ ಅಷ್ಟನ್ನೂ ಭೀಷ್ಮನು ಸಾಧಿಸಿದನು!

ಮೇಲಿನ ದೃಶ್ಯದಲ್ಲಿ ಭೀಷ್ಮ-ಕರ್ಣ ಪ್ರಸಂಗದ ಒಂದು ಮುಖವನ್ನು ಮಾತ್ರ ನೋಡಿದೆವು; ಇದರ ಇನ್ನೊಂದು ಮುಖದ ಪರಿಚಯವನ್ನು ಮಾಡಿಕೊಂಡ ಹೊರತು ಪಂಪನು ರಚಿಸಿರುವ ಚಿತ್ರದ ಸ್ವಾರಸ್ಯ ಪೂರ್ಣವಾಗುವುದಿಲ್ಲ.

ಸೇನಾಧಿಪತ್ಯಕ್ಕಾಗಿ ಕರ್ಣನು ಭೀಷ್ಮನೊಡನೆ ಇಷ್ಟೊಂದು ಹುರುಡಿಸಿದನಷ್ಟೆ. ಅವನು ಶರಶಯ್ಯೆಯನ್ನು ಹಿಡಿದಮೇಲೆ-ಕರ್ಣನು ತನಗೆ ವೀರಪಟ್ಟ ಕಟ್ಟಲು ಬಂದ ದುರ್ಯೋಧನನನ್ನು ತಡೆದು ಆ ಗೌರವ ದ್ರೋಣನಿಗೆ ಸಲ್ಲುವಂತೆ ಮಾಡುತ್ತಾನೆ. ತೊರೆದಿದ್ದ ಬಿಲ್ಲನ್ನು ಮತ್ತೆ ಹಿಡಿದು, ದ್ರೋಣನ ಕೈಕೆಳಗೆ ಪರಾಕ್ರಮದಿಂದ ಕಾದುತ್ತಾನೆ. ಅವನೂ ಬಿದ್ದಮೇಲೆ ತನ್ನ ಸರದಿಯೇ ಬಂದಿತು. ಮೊದಲದಿನ ಬೆಳಗ್ಗೆ ಯುದ್ಧಕ್ಕೆ ಹೊರಡುವ ಮೊದಲು ಕರ್ಣನು—

ಪಸುರ್ಪೊನ್ನ ರಥಮನೇಱಿ, ಮುನ್ನೊರ್ವನೆ ಶರಶಯನದೊಳಿರ್ದ ಗಾಂಗೇಯನಲ್ಲಿಗೆ ಬಂದು ರಥಮಿೞಿದು, ಮೂಱುಸೂೞ್ ಬಲವಂದು, ತದೀಯ ಪಾದಪದ್ಮಂಗಳಂ ತಲೆಯೊಳಿಟ್ಟುಕೊಂಡು—

ಆಂ ಮಾತಱಿಯದೆ ಮುಳಿದುಂ
ನಿಮ್ಮಡಿಯಂ ನೋಯೆ ನುಡಿದೆನ್-ಉೞಿದೆ-ಏಳಿಸಲ್[1]-ಏನ್-
ಎಮ್ಮಳವೆ? ಮಱೆವುದಾ ಮನ-
ದುಮ್ಮಚ್ಚ[2]ಮನ್-ಅಜ್ಜ, ನಿಮ್ಮನೆರೆ[3]ಯಲೆ ಬಂದೆಂ.

ಧುರದೊಳ್ ನಿಮ್ಮಡಿಯುಂ ಗೆಲಲ್-
ಅರಿಯ[ರನ್-ಆ] ಪಾಂಡುಸುತರನ್-ಎಮ್ಮಂದಿಗರ್-ಅ-
ಚ್ಚರಿಯಲ್ತೆ ಗೆಲ್ವರೆಂಬುದು.
ಹರಿಗನೊಳೞಿದು-ಎಂತುಮೆನ್ನ ಚಲಮನೆ ಮೆಱೆವೆಂ.

—ಹೀಗೆಂದು ಭೀಷ್ಮನಿಗೆ ಕರ್ಣನು ಅರಿಕೆಮಾಡುತ್ತಾನೆ. ಅವನ ಹಿಂದಿನ ಅಹಂಕಾರವೆಲ್ಲಿ, ಇಂದಿನ ವಿನಯವೆಲ್ಲಿ! ಭೀಷ್ಮರಿಗೇ ಗೆಲ್ಲಲು ಅಸಾಧ್ಯರಾದ ಪಾಂಡವರನ್ನು ತನ್ನಂಥವರು ಗೆಲ್ಲುವುದು ಎಂದಿಗಾದರೂ ಸಾಧ್ಯವೇ? ಈಗ ತಾನು ಕಾದುವುದು ಗೆಲವಿಗಲ್ಲ, ಛಲಕ್ಕಾಗಿ. ಕರ್ಣನ ಈ ಹೃದಯಪರಿವರ್ತನೆ ಭೀಷ್ಮನ ಹೃದಯವನ್ನೂ ಕರಗಿಸಿತು. ಕರ್ಣನ ಬಿನ್ನಹದಲ್ಲಿರುವ ಉನ್ನತ ಗುಣವೇ ಭೀಷ್ಮನ ಉತ್ತರದಲ್ಲೂ ಕಾಣಬರುತ್ತದೆ :

ನುಡಿವುದಂ ಪತಿಭಕ್ತಿಯ ಪೆಂಪಿಂ ನೀಂ ನುಡಿದೈ; ಪೆಱತಂದದಿಂ
ನುಡಿದೆಯಲ್ತೆ. ಮದಾಯಂ[4]-ಅಮೋಘಂ; ಸೂಟ್ಟಡೆಯಲ್ಕೆ-
ಎನಗಕ್ಕುಂ-. ಇ-

೧. ಏಳಿಸು=ಅಲ್ಲಗಳೆ. ೨. ಉಮ್ಮಚ್ಚ=ಕ್ರೋಧ. ೩. ಎರೆ=ಬೇಡು. ೪. ಮದಾಯಂ=ನನ್ನ ಶೌರ್ಯ

ನ್ನೆಡೆಯೊಳ್-ಎಂ[ದಯ್]-ಅದೆಂದುದದೇಂ ತಪ್ಪಾದುದೆ? ನಮ್ಮೊವಜರ್[೧]
ಜಸಂ-
ಬಡೆದ ಭಾರ್ಗವರಪ್ಪುದಱಿಂದಂ ನಂಟರುಂ- ಅಂಗಮಹೀಪತೀ.

ಹಿಂದೆ ಕರ್ಣನು ಆಡಿದ್ದ ಕಟುವಾಕ್ಯಗಳಲ್ಲಿ ಈರ್ಷ್ಯೆಯೂ ಸೇರಿತ್ತೆಂಬುದನ್ನು ಭೀಷ್ಮನು ಈಗ ಮರೆತನು; ಅದರಲ್ಲೆಲ್ಲಾ ಸ್ವಾಮಿಭಕ್ತಿಯ ಉತ್ಕರ್ಷವನ್ನೇ ಕಂಡು ಕರ್ಣನ ಬೆನ್ನು ತಟ್ಟಿದನು. ತನ್ನ ಶೌರ್ಯವನ್ನು ತೋರಲು ಅವಕಾಶ ಬೇಗ ದೊರೆಯಬೇಕು ಎಂದು ಕರ್ಣನಂಥ ವೀರನು ಉತ್ಸಾಹದಿಂದ ಮುಂದುವರಿದರೆ ತಪ್ಪೇನು?—ಇದೆಲ್ಲದರ ಜೊತೆಗೆ ತನಗೂ ಕರ್ಣನಿಗೂ ಇದ್ದ ಒಂದು ಬಾಂಧವ್ಯವೂ ನೆನಪಾಯಿತು. ಪ್ರಖ್ಯಾತರಾದ ಪರಶುರಾಮರೇ ತಮ್ಮಿಬ್ಬರಿಗೂ ಧನುರ್ವಿದ್ಯೆಯನ್ನು ಕಲಿಸಿದ ಗುರುಗಳು : ಆದಕಾರಣ, "ನಾವಿಬ್ಬರೂ ಬಂಧುಗಳೂ ಹೌದು, ಕರ್ಣ!" ಎಂದು ಭೀಷ್ಮನು ಔದಾರ್ಯದಿಂದ ಹೇಳುತ್ತಾನೆ. ಅಷ್ಟೇ ಅಲ್ಲ. ಕರ್ಣನು ಸೂತಪುತ್ರನೆಂದೇ ತನ್ನ ನಂಬಿಕೆಯಾಗಿದ್ದರೂ, 'ನೀನೆಮಗೆ ಕುಂತಿಯ ಗಾಂಧಾರಿಯ ಮಕ್ಕಳ ಲೆಕ್ಕದೆ ಮೊಮ್ಮನೈ' ಎಂದು ವಾತ್ಸಲ್ಯದ ಮಾತನ್ನಾಡಿ ಕರ್ಣನ ಮನಃಖೇದವನ್ನೆಲ್ಲಾ ತೊಳೆಯುತ್ತಾನೆ. (ಈ ಮಾತು ದಿಟವೂ ಹೌದೆಂದು ಭೀಷ್ಮನಿಗೆ ತಿಳಿಯದು.) ಕೊನೆಗೆ—

ನಿನ್ನನೆ ನಚ್ಚಿದಂ ಕುರುಮಹೀಪತಿ; ನಿನ್ನ ಶರಾಳಿಗಳ್ಗೆ ಮು-
ನ್ನಂ ನಡುಗುತ್ತುಮಿರ್ಪುದು- ಅರಿಸಾಧನಸಂಪದಂ-. ಅಂತೆ ಶಸ್ತ್ರಸಂ-
ಪನ್ನನೆ ಆಗಿ, ಶಲ್ಯನನೆ ಸಾರಥಿಯಾಗಿರೆ ಮಾಡಿ ಕಾದು ನೀಂ
ನಿನ್ನಯ ಬಲ್ಲಮಾಟ್ಕೆಯೊಳ್-ಇದಂ ನುಡಿದೆಂ ನಿನಗಂಗವಲ್ಲಭಾ.

ಎಂದು ಭೀಷ್ಮನು ಕರ್ಣನನ್ನು ಹೊಗಳಿ, ಉಚಿತವಾದ ಸಲಹೆಯನ್ನು ಕೊಟ್ಟು ಪ್ರೋತ್ಸಾಹಿಸುತ್ತಾನೆ. "ಶಲ್ಯನಂಥ 'ನೆಗಟ್ದಿ ಕುಲದ ಚಲದ- ಒಳ್ಪಿನ ಭೂಪ'ನನ್ನು ನನಗೆ ತೇರು ನಡಸೆಂದು ಸೊಕ್ಕಿನಿಂದ ಕೇಳುವುದೆ? ಕುಲಹೀನನೆಂಬ ಅಪವಾದ ಈಗಾಗಲೇ ನನಗೆ ಬಂದಿಲ್ಲವೆ? ಸಾವುಗೆಲವುಗಳನ್ನು ಲೆಕ್ಕಿಸದೆ, ನನ್ನ ಪೌರುಷದಿಂದ ನಿಮ್ಮನ್ನು ಮೆಚ್ಚಿಸುತ್ತೇನೆ" ಎಂದು ಕರ್ಣನು ಹೇಳಲು, ಆ ನುಡಿಯಂತೂ ಭೀಷ್ಮನ ಮನಸ್ಸನ್ನು ಸೆರೆಹಿಡಿಯುತ್ತದೆ. ಅವನು ತನ್ನ ಮೊದಲ ಸಲಹೆಯನ್ನೇ ಕರ್ಣನಿಗೆ ಮತ್ತೆ ಒತ್ತಿ ಹೇಳಿ ಅವನನ್ನು ಹರಸಿ ಕಳುಹಿಸಿಕೊಡುತ್ತಾನೆ.

ಮುಂದಿನ ಕಥೆಯನ್ನು ಬೆಳೆಸಲು ಮನಸ್ಸಿದ್ದರೂ ಇಲ್ಲಿ ಅವಕಾಶವಿಲ್ಲ. ಅರ್ಜುನನೊಂದಿಗೆ ನಡೆದ ಕೊನೆಯ ಕಾಳಗದಲ್ಲಿ ಕರ್ಣನ ತೇಜಸ್ಸು ಪ್ರಜ್ವಲಿಸಿತು :

ಬೆಳಗುವ ಸೊಡರ್ಗಳ ಬೆಳಗ-
ಗ್ಗಳಿಸುವ ವೋಲ್ ಪೋಪ ಪೊಟ್ತುಱೊಳ್, ತೇಜಂ ಪ-

೧. ಒವಜರ್=ಉಪಾಧ್ಯಾಯರು.

ಜ್ವಳಿಸೆ ತಟತಟಿಸಿ ತೊಳತೊಳ–
ತೊಳಗಿದನ್–ಅಸ್ತಮಯಸಮಯದೊಳ್ ದಿನಪಸುತಂ!

ಆರುವ ಹೊತ್ತಿನಲ್ಲಿ ದೀಪದ ಕುಡಿ ಮತ್ತಷ್ಟು ಉರಿದೇಳುವ ಹಾಗೆ, ಸೂರ್ಯಪುತ್ರನು ತನ್ನ ಅಸ್ತಮಯಕಾಲದಲ್ಲಿ ತೇಜಸ್ಸಿನಿಂದ ತೊಳಗಿದನಂತೆ!–ಇಲ್ಲಿ ಕರ್ಣನಿಗೆ ಉರಿಯುವ ದೀಪದ ಹೋಲಿಕೆಯನ್ನು ಕೊಟ್ಟಿರುವುದೂ, ಅವನನ್ನು ದಿನಪಸುತನೆಂದು ಕರೆದಿರುವುದೂ ಪಂಪನ ಪ್ರತಿಭೆಗೆ ಉಜ್ಜ್ವಲವಾದ ಸಾಕ್ಷಿ.

ಕುರುಕ್ಷೇತ್ರವೊಂದು ಮಹಾಶ್ಮಶಾನ. ಅಲ್ಲಿ ಕಾದಿದ ಮಹಾವೀರರ ಕೊನೆಯ ಸಾಹಸವನ್ನು ವರ್ಣಿಸಿ ಅವರು ಬಿದ್ದ ಜಾಗದಲ್ಲಿ ವೀರಗಲ್ಲನ್ನು ಒಂದೆರಡು ಪದ್ಯಗಳಲ್ಲಿ ಕಡೆದು ನಿಲ್ಲಿಸುವುದು ಪಂಪನ ಪದ್ಧತಿ. ಪಂಪಭಾರತದ ಉದ್ದಕ್ಕೂ ಚರಮಶ್ಲೋಕಗಳು ತುಂಬಿವೆ. ಇವುಗಳಲ್ಲೆಲ್ಲಾ, ಕರ್ಣನ ಮೇಲಿನ ಅವನ ಪದ್ಯ ಅದ್ವಿತೀಯವಾಗಿದೆಯೆಂದು ಎಲ್ಲ ಸಹೃದಯರ ನಿರ್ಣಯ. ಅದನ್ನು ರಚಿಸುವಾಗ, ಕರ್ಣನ ಶೌರ್ಯ ಸತ್ಯ ಸತ್ತ್ವತ್ಯಾಗಗಳ ಚಿತ್ರವೇ ಪಂಪನ ಕಣ್ಣಮುಂದೆ ಕಟ್ಟಿರಬೇಕು. ಈ ವೇಳೆಯಲ್ಲಿ ಕವಿಯ ಹೃದಯವನ್ನೆಲ್ಲಾ ಕರ್ಣನೊಬ್ಬನೇ ತುಂಬಿದ್ದನು. ಭಾರತಕಥೆಯ ಮಿಕ್ಕ ಪಾತ್ರಗಳ ಮಾತಿರಲಿ; ಕಾವ್ಯನಾಯಕನಾದ ಅರ್ಜುನ–ಅರಿಕೇಸರಿಯನ್ನೇ ಒಂದು ಕ್ಷಣದ ಮಟ್ಟಿಗೆ ಅಲ್ಲಿಂದ ಹೊರದೂಡಿದ್ದನು. ಹಾಗೆ ಕರ್ಣನ ಮಹಿಮೆ ಪಂಪನ ಮನಸ್ಸನ್ನು ಸೂರೆಗೊಳ್ಳದಿದ್ದರೆ, ಅವನು 'ವಿಕ್ರಮಾರ್ಜುನವಿಜಯ'ದಲ್ಲಿ ಹೀಗೆ ಬರೆಯುತ್ತಿದ್ದನೆ?—

ನೆನೆಯದಿರಣ್ಣ ಭಾರತದೊಳ್–ಇನ್ ಪೆಱರಾರುಮನ್–. ಒಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ : ಕರ್ಣನೊಳ್–ಆರ್ ದೊರೆ!–
ಕರ್ಣನೇಱು, ಕ–
ರ್ಣನ ಕಡುನನ್ನಿ, ಕರ್ಣನಳವು–, ಅಂಕದ ಕರ್ಣನ ಚಾಗಮೆಂದು ಕ–
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ!

೪. ಕವಿತೆಯ ರೀತಿ

ಆದಿಪುರಾಣ ವಿಕ್ರಮಾರ್ಜುನವಿಜಯಗಳ ತಳಕಟ್ಟನ್ನು ನೋಡಿ ಅಲ್ಲಿ ಬರುವ ಮಹಾವ್ಯಕ್ತಿಗಳೊಬ್ಬಿಬ್ಬರ ಗುರುತುಮಾಡಿಕೊಂಡ ಮಾತ್ರಕ್ಕೆ ಕವಿತಾಗುಣಾರ್ಣವನ ಆಳವನ್ನು ಶೋಧಿಸಿದಂತೆ ಆಗಲಿಲ್ಲ; ಆ ಹೆಬ್ಬಯಕೆಯೂ ಇಲ್ಲಿ ನಮಗಿಲ್ಲ. ಈ ವಿಸ್ತಾರವಾದ ಚಂಪೂಕಾವ್ಯಗಳಲ್ಲಿ ಮುಖ್ಯಕಥೆಗೂ ಉಪಸಂದರ್ಭಗಳಿಗೂ ಪುಷ್ಟಿಕೊಡುವ ವರ್ಣನೆಯಿದೆ, ವಾಕ್ಚಿತ್ರವಿದೆ; ಇದಕ್ಕೆ ಆಧಾರವಾಗಿ ಪಂಪನ ಲೋಕಾನುಭವವಿದೆ; ಈ ಅನುಭವಕ್ಕೆ ರೂಪುಕೊಟ್ಟಿರುವ ಪ್ರತಿಭೆಯಿದೆ. ಇದೆಲ್ಲ ಇದೆಯೆಂಬುದಕ್ಕಾದರೂ ಒಂದೆರಡು ನಿದರ್ಶನಗಳನ್ನು ಕೊಟ್ಟು ಪಂಪನ ಕವಿತೆಯ ರೀತಿಯನ್ನು ಸೂಚಿಸಿದಲ್ಲದೆ ಈ ಪುಟ್ಟ ಪುಸ್ತಕವೂ ಪೂರ್ಣವಾಗುವುದಿಲ್ಲ.

ತನ್ನ ಕೃತಿಗಳೆರಡರಲ್ಲಿ ಪಂಪನಿಗೆ ಯಾವುದರ ಮೇಲೆ ಹೆಚ್ಚು ಮಮತೆಯಿತ್ತೋ ಹೇಳುವುದು ಕಷ್ಟ; ಆದರೆ ವಾಚಕರಿಗೆ ಯಾವುದು ಹೆಚ್ಚು ಪ್ರಿಯವೆಂಬುದನ್ನು ಹೇಳುವುದು ಕಷ್ಟವಲ್ಲ. ಆದಿಪುರಾಣವನ್ನು ಬರೆದ ಪಂಪನು 'ಪುರಾಣಕವಿ'ಯೆಂಬ ಪ್ರಶಸ್ತಿಯನ್ನು ಪಡೆದನು; ರನ್ನನು ಈ ಕಾವ್ಯವನ್ನು 'ಉಪಮಾತೀತ'ವೆಂದು ಹೊಗಳಿದನು. ಇದರ ಕಥೆಯಲ್ಲಿ ಉತ್ತಮವಾದ ದೃಷ್ಟಿಯಿದೆ, ಮಾತಿನಲ್ಲಿ ಇಂಪೂ ಗಾಂಭೀರ್ಯವೂ ಇವೆ. ಆದರೆ ಸನ್ನಿವೇಶಗಳ ಸ್ವಾರಸ್ಯವೂ ಜೀವ ತುಂಬಿ ಮೆರೆಯುವ ಬಗೆ ಬಗೆಯ ಮಹಾವ್ಯಕ್ತಿಗಳ ಸಮ್ಮಿಳನವೂ ಕಿರುನುಡಿಯಲ್ಲಿ ಹೇರಳವಾದ ಅರ್ಥವನ್ನು ಅಡಗಿಸುವ ಜಾಣ್ಮೆಯೂ ಪಂಪಭಾರತದಲ್ಲಿರುವಷ್ಟು ಆದಿಪುರಾಣದಲ್ಲಿ ಇಲ್ಲವೆಂದು ರಸಜ್ಞರು ಒಪ್ಪಿಕೊಳ್ಳಲೇಬೇಕು. ಇದರ ಮೇಲೆ ಆದಿಪುರಾಣದ ಶೈಲಿಯಲ್ಲಿ—ಮುಖ್ಯವಾಗಿ ಅದರ ಗದ್ಯಭಾಗದಲ್ಲಿ—ಪಾಂಡಿತ್ಯದ ಸೆಡೆತ ಹೆಚ್ಚು; ಸಂಸ್ಕೃತದ ಗದ್ಯಕಾವ್ಯಗಳ ಮಾದರಿಯಿಂದ ಮೋಸಹೋಗಿ ಪಂಪನು ಇಲ್ಲಿ ಮಾರುದ್ದದ ಸಮಾಸಗಳನ್ನು ಹೆಣೆಯುತ್ತಾನೆ. ವಿಕ್ರಮಾರ್ಜುನ ವಿಜಯವನ್ನು ಬರೆಯುವವೇಳೆಗೆ ಅವನಲ್ಲಿ ಸಂಸ್ಕೃತ ಪಾಂಡಿತ್ಯದ ಸೊಕ್ಕು ಇಳಿದಿತ್ತು. ತಿರುಳುಗನ್ನಡದ ಇಂಪೂ ಹುರುಳೂ ಅದರ ನುಡಿಗಟ್ಟಿನ ಹದವೂ ಅವನಿಗೆ ವಶವಾಗಿದ್ದುವು. ಬಹುಶಃ, ಅವನ ಲೋಕಾನುಭವವೂ ಹೆಚ್ಚು ಪರಿಪಾಕ ಗೊಂಡಿತ್ತು. ಈ ಎಲ್ಲ ಕಾರಣಗಳಿಂದ, ಇಲ್ಲಿ ಕೊಡುವ ಉದಾಹರಣೆಗಳನ್ನು ಮುಖ್ಯವಾಗಿ ವಿಕ್ರಮಾರ್ಜುನವಿಜಯದಿಂದಲೇ ಆರಿಸಿಕೊಳ್ಳಲಾಗಿದೆ.

ವರ್ಣನೆ ಹೃದ್ಯವಾಗಬೇಕಾದರೆ, ಕವಿ ಸೂಕ್ಷ್ಮವಾಗಿ ಅವಲೋಕಿಸಿರಬೇಕು. ಯುದ್ಧವರ್ಣನೆಯಲ್ಲಿ ಪಂಪನಿಗೆ ಈ ಅನುಕೂಲವಿತ್ತು. ಅವನು ಸ್ವಯಂ ಶೂರನಾಗಿದ್ದನು; ರಣರಂಗದಲ್ಲಿ ಓಡಾಡಿ ಅಲ್ಲಿಯ ಸನ್ನಿವೇಶಗಳನ್ನು ಅರಿತಿದ್ದನು. ಆದಕಾರಣ ಕವಿಸಮಯವೊಂದನ್ನೇ ನೆಚ್ಚದೆ ತಾನು ಕಂಡ ವಿಷಯಗಳನ್ನೂ ಅವನು ಉಪಯೋಗಿಸಿಕೊಳ್ಳಲು ಅವಕಾಶವಿತ್ತು. ಉದಾಹರಣೆಗೆ, ದಿನದ ಯುದ್ಧ ಮುಗಿದಮೇಲೆ ಸೇನಾನಾಯಕರು ಏನೇನುಮಾಡುತ್ತಿದ್ದರೆಂಬ ಅಂಶವನ್ನು ಪಂಪನು ಸ್ವಾಭಾವಿಕವಾಗಿ ಸುಂದರವಾಗಿ ನಿರೂಪಿಸಿದ್ದಾನೆ. ತನ್ನ ಅನುಭವವನ್ನೇ ಅವನು ಇಲ್ಲಿ ಅನುವಾದ ಮಾಡುತ್ತಿರುವಂತಿದೆ :

ಇತ್ತಲೆರಡುಂ ಪಡೆಯ ನಾಯಕರ್-ಅಟಿಯೆ ನೊಂದ ತಮ್ಮ-ಅಣುಗಾಳ್ಗಳ ಕೊಂಡಾಟದಾನೆಗಳ ನಚ್ಚಿನ ಕುದುರೆಗಳ ಪುಣ್ಗಳನ್-ಉಡಿಯಲುಂ-ಓವಲುಂ ಮರ್ದುಬೆಜ್ಜರನಟ್ಟುತ್ತುಂ-, ಇಕ್ಕಿದ ಸನ್ನಣಂಗಳಂ ಗೆಲ್ದು ಕಣಕೆನೆ ಪೋಗುರ್ಚಿ, ತಮ್ಮ ಮೆಯ್ಯೊಳ್-ಉಡಿದ-ಅಂಬುಗಳುಮನ್- ಎಲ್ವಂ ನಟ್ಟು-ಉಡಿದ ಬಾಳ ಕಕ್ಕಡೆಯ-ಉಡಿಗಳುಮನ್- ಅಯಸ್ಕಾಂತಮಂ ತೋಱಿ ತೆಗೆಯಿಸುತ್ತುಂ, ವಜ್ರಮುಷ್ಟಿಯ ಪೊಯ್ಗೊಳಂ ಬಾಳ್ಗಳ ಕೋಳೊಳಂ-ಉಚ್ಚಳಿಸಿದ ಕಪಾಲದೋಡುಗಳಂ ಗಂಗೆಗಟ್ಟುತ್ತುಂ;—

ಉನ್ನತಮಸ್ತಕಸ್ಥಳದೊಳ್-ಅಂಬುಗಳ್-ಅಟ್ಟುಡಿದಿರ್ದೊಡೆ-ಅತ್ತಮಿ-
ತ್ತಂ ನೆರೆತಂದು ಬಲ್ಲಡಿಗರ್-ಇಟ್ಟುಕಿನೊಳ್ ಕಿಟಿ-; ನೊಂದೆ
ನೆನ್ನದೆ-, ಅಃ
ಎನ್ನದೆ-, ಅಣಂ ಮೊಗಂ ಮುರಿಯದೆ-, ಅಳ್ಕದೆ, ಬೇನೆಗಳೊಳ್
ಮೊಗಂಗಳಂ
ಬಿನ್ನಗೆಮಾಡದೆ-ಇರ್ದರ್-ಅಳವಚ್ಚರಿಯಾಗೆ ಕೆಲರ್ ಮಹಾರಥರ್!

ರಸಮೊಸರ್ವನ್ನೆಗಂ ತಗುಳೆ ಪಾಡುವ ಗಾಣರ ಗೇಯಂ-, ಅಜ್ಜೆಬಿಂ
ಪೊಸಯಿಸೆ ಸೋಂಕುವ - ಒಲ್ದೊಲಿಸುವ - ಓಪಳ ಸೋಂಕು
ಪೊದಳ್ದ ಜಾದಿಯೊಳ್
ಮಸಗಿದ ಕಂಪು, ಕಂಪನೊಳಕೊಂಡು-ಅಲೆವೊಂದೆಲರ್-ಎಂಬಿವು-
ಅಂದು ಪಾ-
ಚಿಸುವುವು-ಉದಗ್ರ ವೀರಭಟರ- ಆಹವ ಕೇಳಿ ಪರಿಶ್ರಮಂಗಳಂ.

ಈ ಮಹಾರಥರು ತಮ್ಮ ಪ್ರೀತಿಯ ಬಂಟರಿಗೂ ಆನೆ ಕುದುರೆಗಳಿಗೂ ಉಂಟಾದ ಗಾಯಗಳಿಗೆ ಮದ್ದುಕಟ್ಟಿ ನೋಡಿಕೊಳ್ಳಲು ವೈದ್ಯರನ್ನು ಮರೆಯದೆ ಕಳುಹಿಸುತ್ತಿದ್ದುದು, ತಾವು ಧರಿಸಿದ್ದ ಲೋಹದ ಕವಚಗಳನ್ನು ಕಣಕ್ಕನೆ ಒಮ್ಮೆಗೇ ಕಳಚಿಬಿಡುತ್ತಿದ್ದುದು, ತಮ್ಮ ಮೈಯಲ್ಲಿ ನಾಟಿ ಮುರಿದುಕೊಂಡಿದ್ದ ಆಯುಧದ ಚೂರುಗಳನ್ನು ತೆಗೆಯಲು ಅಯಸ್ಕಾಂತವನ್ನು ಉಪಯೋಗಿಸುತ್ತಿದ್ದುದು, ಮುಷ್ಟಿಘಾತದಿಂದಲೋ ಕತ್ತಿಯೇಟಿನಿಂದಲೊ ಸಿಡಿದು ಹಾರಿದ ಭಟರ ತಲೆಚಿಪ್ಪುಗಳನ್ನು ಗಂಗಾಜಲದಲ್ಲಿ ಬಿಡಲು ಕಳುಹಿಸುತ್ತಿದ್ದುದು—ಇಂಥ ಸಹಜವಾದ ವಿವರಗಳನ್ನು ಓದಿದಾಗ, ಅತ್ಯುಕ್ತಿಯ ವರ್ಣನೆಗಳಿಂದ ಬೇಸರಗೊಂಡಿದ್ದ ರುಚಿ ಮತ್ತೆ ಹದಕ್ಕೆ ಬರುತ್ತದೆ. ಇದಕ್ಕೆ ಮಿಗಿಲಾದದ್ದು ಆ ಮಹಾವೀರರ ಸ್ಥೈರ್ಯದ ಚಿತ್ರ, ಯುದ್ಧದ ಆವೇಶದಲ್ಲಿ ತಮ್ಮ ನೆತ್ತಿಗೆ ಬಾಣ ನಾಟಿದ್ದನ್ನೇ ಅರಿಯದೆ ಹೋರಾಡಿದ್ದು ಅಷ್ಟು ಆಶ್ಚರ್ಯವಲ್ಲ; ಸಂಜೆಯಲ್ಲಿ ಶಿಬಿರಕ್ಕೆ ಬಂದಮೇಲೆ, ದೃಢಕಾಯರಿಬ್ಬರು ಆಕಡೆ ಈಕಡೆ ನಿಂತು ಇಕ್ಕುಳದಲ್ಲಿ ಅದನ್ನು ಕೀಳುವಾಗ, ನೋವನ್ನು ಮಾತಿನಲ್ಲಿ ತೋರಿಸದೆ, ಅಂಗಚಲನೆಯಲ್ಲಿ ತೋರಿಸದೆ, ಕಡೆಗೆ ಮುಖವನ್ನು ಸಪ್ಪಗೆ ಕೂಡ ಮಾಡಿಕೊಳ್ಳದೆ ಈ ಧೀರರು ಸಹಿಸಿಕೊಂಡದ್ದು ಹೆಚ್ಚಿನ ಆಶ್ಚರ್ಯ-ಇದರ ಜೊತೆಗೆ ಒಂದು ಸುಕುಮಾರಚಿತ್ರ : ಈ ರಣರಸಿಕರು ಜೀವನದಲ್ಲೂ ರಸಿಕರು. ಶಿಬಿರದಲ್ಲಿದ್ದಾಗ ಕೂಡ ಗಾಯನವಿಲ್ಲದೆ, ನಲ್ಲೆಯ ಪ್ರಿಯಸ್ಪರ್ಶವಿಲ್ಲದೆ, ಅವಳು ಮುಡಿದಿದ್ದ ಜಾಜಿಯ ಹೂವಿನ ಕಂಪಿಲ್ಲದೆ ಆ ಕಂಪಿನಿಂದ ಮಗಮಗಿಸುವ ತಂಗಾಳಿಯ ಸೇವನೆಯಿಲ್ಲದೆ ಅವರ ಯುದ್ಧಶ್ರಮ ಹರಿಯದು!

ಯುದ್ಧದಂತೆಯೇ ಮನೆವಾರ್ತೆಯ ಚಿತ್ರವನ್ನೂ ಪಂಪನು ಮನಮುಟ್ಟುವ ತಿಳಿಮಾತಿನಲ್ಲಿ ಕೊಡಬಲ್ಲನು. ಆದಿಪುರಾಣದಲ್ಲಿ, ಶ್ರೀಮತಿಯ ಪರಿಣಯವಾದಮೇಲೆ, 'ಮಗಳುಮನ್-ಅಳಿಯನುಮಂ ಕಿಱಿದಂತರಂಬರಂ ಕಟಿಪಿ' ಹಿಂದಿರುಗುವಾಗ

ಪೊಡೆವಡುವ-ಅಪ್ಪಿಕೊಳ್ವ, ನೆನೆಯುತ್ತಿರಿಮೆಂಬ, ಸಮಸ್ತವಸ್ತುವಂ
ಕುಡುವ, ಪಲರ್ಮೆಯಿಂ ಪರಸಿ ಸೇಸೆಯನಿಕ್ಕುವ, ಬುದ್ಧಿವೇಟ್ಟ, ಕ-
ಯ್ಯೆಡೆ ನಿಮಗೆಂದೊಡಂಬಡಿಪ, ನಲ್ಲರಗಲ್ಕೆಗೆ ಕಣ್ಣ ನೀರ್ಗಳಂ
ಮಿಡಿವ ಬಹುಪ್ರಕಾರ ಜನಸಂಕಟಮೊಪ್ಪಿದುದಾ ಪ್ರಯಾಣದೊಳ್!

ಮಗಳನ್ನು ಮೊದಲಸಲ ಗಂಡನ ಮನೆಗೆ ಕಳುಹಿಸುವಾಗ ಪಂಪನೂ ಈ ಕರುಳಿನ ಯಾತನೆಯನ್ನು ಕಂಡಿರಬೇಕು.

ಇದ್ದುದನ್ನು ಇದ್ದಂತೆಯೇ ವರ್ಣಿಸುವುದರ ಜೊತೆಗೆ, ಲೋಕಸ್ಥಿತಿಯ ಎಲ್ಲೆಗೆ ಬಹುದೂರ ಮೀರಿಹೋಗದೆ ವಸ್ತುಗುಣವನ್ನು ಕೆಲಮಟ್ಟಿಗೆ ಅತಿಶಯಪಡಿಸಿ ಹೇಳಿದರೆ ಕಾವ್ಯಕ್ಕೆ ತುಂಬ ಪುಷ್ಟಿಬರುತ್ತದೆ. ಕುರುಜಾಂಗಣದೇಶದ ವರ್ಣನೆಯಲ್ಲಿ ಬರುವ ಈ ಹಿತಕರವಾದ ಅತಿಶಯೋಕ್ತಿಯನ್ನು ನೋಡಿ :

ಮಿಡಿದೊಡೆ ತನಿಗರ್ಬುರ್ ರಸಂ-
ಬಿಡುವುವು, ಬಿರಿದೊಂದು ಮುಗುಳ ಕಂಪಿನೊಳೆ ಮೊಗಂ-
ಗಿಡು[1]ವುವು ತುಂಬಿಗಳ್-, ಅಟ್ಕಮೆ-
ವಡು[2]ವುವು ಕುಡಿದೊಂದು ಪಣ್ಣ ರಸದೊಳೆ ಗಿಳಿಗಳ್.

ಪಂಪನ ಕಾವ್ಯಗಳಲ್ಲಿ ಎಲ್ಲಕ್ಕೂ ಮಿಗಿಲಾಗಿ, ಮೊದಲಾಗಿ ಕಾಣುವ ಗುಣದೆಂದರೆ ಅವನ ಮಿತವಚನ. ಆಡಂಬರವಿಲ್ಲದ ಎರಡು ಮಾತಿನಲ್ಲಿ ಒಂದು ಸಮಗ್ರ ಚಿತ್ರವನ್ನೋ ಭಾವವನ್ನೋ ಅಡಕಮಾಡುವ ಸಾಮರ್ಥ್ಯ ಅವನಿಗೆ ವಿಶೇಷವಾಗಿ ಉಂಟು. ಅವನ ನುಡಿಯಲ್ಲಿ ಹೀಗೆ ಧ್ವನಿಶಕ್ತಿಯಿರುವುದರಿಂದಲೇ ಅದರ ಮಿತಿಗೆ ಬೆಲೆ ಬಂದಿರತಕ್ಕದ್ದು. ಯಾವ ಒಂದು ಸೂಕ್ಷ್ಮವಾದ ವಿವರದಿಂದ ಒಟ್ಟು ಸಂದರ್ಭದ ತಿರುಳೇ ಕೈಗೆ ಸಿಕ್ಕುತ್ತದೋ ಆ ವಿವರ ಪಂಪನ ಕಣ್ಣಿಗೆ ಅನಾಯಾಸವಾಗಿ ಬೀಳುತ್ತದೆ; ಸುಲಭವಾದ ಎರಡು ಮಾತಿನಲ್ಲಿ ರೂಪುಗೊಳ್ಳುತ್ತದೆ. ಇದಕ್ಕೆ ಅತ್ಯುತ್ಕೃಷ್ಟವಾದ ನಿದರ್ಶನವೆಂದರೆ— ತನ್ನ ಸೇನೆಯನ್ನು ಪಾಂಡವರ ಸೇನೆಗೆ ಎದುರೊಡ್ಡಿ ನಿಂತ ಭೀಷ್ಮನ ವರ್ಣನೆ :

ಆಗಳ್ ಕೌರವಬಲದ ಸೇನಾನಾಯಕಂ ಗಾಂಗೇಯನ್-ಅಡ್ಡಮಾಗೆ ತನ್ನೊಡ್ಡಿದ ಮಕರವ್ಯೂಹದ ಮೊನೆಯೊಳ್-ಸುತ್ತಿಱಿದೆತ್ತಿದ ಪೊನ್ನ ತೊಳಪ ಪಟಿಯಿಗೆ[3]ಗಳುಂ, ಮೆಱೆವ ಬೆಳ್ಳಿಯ ರಥಮುಂ, ಆ ರಥದೊಳ್-ಒಡಂಬಡೆ ಪೂಡಿದ ಕುದುರೆಗಳುಂ, ಜೋಲ್ದ ಪುರ್ವನೆತ್ತಿ ಕಟ್ಟಿದ ಲಲಾಟ ಪಟ್ಟದೊಳ್-ಇಟ್ಟಳ[4]ಮೊಪ್ಪುವ ಬೀರವಟ್ಟಮುಂ-ಅಸದಳಂ-ಎಸೆಯೆ; ದಿವ್ಯ ಕವಚಮಂ ತೊಟ್ಟು, 'ಪರಶುರಾಮಂ ಬಾಟಿಗೆ-' ಎಂದು ಪ್ರಚಂಡ ಕೋದಂಡಮಂ ಕೊಂಡು, ಪಾಂಡವ ಬಲಮಂ ಮಾರ್ಕೊಂಡು ನಿಂದಾಗಳ್—

ಸೇನಾಪತಿ ಪದವಿಗೆ ಗುರುತಾದ ವೀರಪಟ್ಟವನ್ನು ಭೀಷ್ಮನ ಹಣೆಗೆ ಕಟ್ಟುವಾಗ, ಕುಸಿದು ಜೋಲುಬಿದ್ದು ಕಣ್ಣಿನ ಮೇಲೆ ಮುಸುಕುತ್ತಿದ್ದ ಅವನ ಹುಬ್ಬನ್ನೂ ಎತ್ತಿ ಕಟ್ಟಿದ್ದಾರೆ! ಭೀಷ್ಮನ ಮುಪ್ಪು ಯಾವ ಎಲ್ಲೆಗೆ ಮುಟ್ಟಿತ್ತೆಂಬುದನ್ನು ತೋರಿಸುವುದಕ್ಕೆ ಇಂಥ ನಿದರ್ಶನ ಬೇರೆ ಯಾವುದುಂಟು?—ಈ ಮುದುಕನನ್ನು ಕರ್ಣನು ಹಾಸ್ಯಮಾಡಿದ್ದು ಏನಾಶ್ಚರ್ಯ! ಆದರೆ, ಮುಪ್ಪು ಕವಿದರೂ ಸಗ್ಗದೆ ಉಕ್ಕುತ್ತಿದ್ದ ಭೀಷ್ಮನ ಶೌರ್ಯವನ್ನೂ ನೋಡಿ. ಪ್ರಚಂಡ ಕೋದಂಡವನ್ನು ಹಿಡಿದು ತನ್ನ ಗುರುವಿನ ಹೆಸರನ್ನು

---

೧. ಮೊಗಂಗಿಡು=ಮುಖಗೆಟ್ಟು ಹೋಗು.
೨. ಅಟ್ಕಮೆವಡು=ಅಜೀರ್ಣಹೊಂದು.
೩. ಪಟಿಯಿಗೆ=ಧ್ವಜ. ೪. ಇಟ್ಟಳಂ=ಒತ್ತಾಗಿ.

ಘೋಷಿಸಿ ಶತ್ರುಗಳಿಗೆ ಎದುರಾಗಿ ನಿಲ್ಲುವಾಗ ಅವನ ಹುರುಪನ್ನು ಯಾವ ತರುಣನು ತಾನೆ ಸರಿಗಟ್ಟಬಹುದು!

ಕೊನೆಯದಾಗಿ, ಒಂದು ಕಥಾಪ್ರಸಂಗವನ್ನೇ ಪಂಪನು ಹೇಗೆ ಅಡಕವಾಗಿ ಹೇಳಬಲ್ಲನೆಂಬುದಕ್ಕೆ ಒಂದು ನಿದರ್ಶನ : ಶಂತನು ಮಹಾರಾಜನು ಬೇಟೆಗೆಂದು ಹೋಗಿ ಅಲೆಯುತ್ತಿದ್ದಾಗ ತನಗೆ ಸೋಕಿದ ಸತ್ಯವತಿಯ ದೇಹಪರಿಮಳಕ್ಕೆ ದುಂಬಿಯಂತೆ ಸೋತು ಅವಳನ್ನು ಕಂಡು ಮೋಹಿಸಿದ ಸಂದರ್ಭವನ್ನು ಪಂಪನು ಈ ಪದ್ಯದಲ್ಲಿ ಸಂಗ್ರಹಿಸಿದ್ದಾನೆ :

ಮೃಗಯಾವ್ಯಾಜದಿನೊರ್ಮೆ ಶಂತನು ತೊಳಲ್ತರ್ಪಂ ಪಳಂಚಲ್ಕೆ ತ-
ನ್ಮೃಗಶಾಬಾಕ್ಷಿಯ ಕಂಪು ತಟ್ಟೆ ಮಧುಪಂಬೊಲ್ ಸೋಲ್ತು ಕಂಡೊಲ್ದು ನ-
ಲ್ಮೆಗೆ ದಿಬ್ಯಂಬಿಡಿವಂತೆವೊಲ್ ಪಿಡಿದು, 'ನೀಂ ಬಾ ಪೋಪಂ-' ಎಂದಂಗೆ ಮ-
ಲ್ಲಗೆ ತತ್ಕನ್ಯಕೆ ನಾಣ್ಚಿ, 'ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ'-

ಎಂದಳಂತೆ. ಶಂತನು ಸತ್ಯವತಿಯ ಕೈಯನ್ನು "ತನ್ನ ಒಲುಮೆ ಸತ್ಯವೆಂದು ದೃಢಪಡಿಸಲು ದಿವ್ಯಪ್ರಮಾಣವನ್ನು ಹಿಡಿಯುವಂತೆ" ಹಿಡಿದನೆಂಬ ಉತ್ಪ್ರೇಕ್ಷೆಯನ್ನೂ, ಒಂದೊಂದೇ ವಾಕ್ಯದಲ್ಲಿ ಗಂಡಿನ ಆತುರವೂ ಹೆಣ್ಣಿನ ನಾಚಿಕೆಯೂ ಹೊರಪಟ್ಟಿರುವುದನ್ನೂ ಇಲ್ಲಿ ಗಮನಿಸಬಹುದು.

ತನ್ನ ಕಾವ್ಯಶೈಲಿಯ ತಿರುಳು ಏನೆಂಬುದನ್ನು ಪಂಪನೇ ಅರಿತಿದ್ದನು. 'ಹಿತಮಿತ ಮೃದುವಚನ', 'ಪ್ರಸನ್ನ ಗಂಭೀರ ವಚನ ರಚನ ಚತುರ' ಎಂದು ತನ್ನನ್ನು ಬೇರೆಬೇರೆ ಕಡೆಗಳಲ್ಲಿ ವರ್ಣಿಸಿಕೊಂಡಿರುವುದಲ್ಲದೆ, '....ಕೋಮಲಂ....ಸೂಕ್ತಿಗರ್ಭಂ ಮೃದು ಸಂದರ್ಭಂ ವಿಚಾರಕ್ಷಮಂ ಉಚಿತಪದಂ ಶ್ರವ್ಯಂ....' ಎಂದು ಮೊದಲಾಗಿ ತನ್ನ ಕಾವ್ಯದ ಗುಣಗಳನ್ನೂ ನಿರೂಪಿಸಿದ್ದಾನೆ. ಪಂಪನ ಕವಿತೆಯ ರೀತಿಯನ್ನು ಪರಿಶೀಲಿಸತಕ್ಕವರು ಈ ವಿಶೇಷಣಗಳಿಗೆಲ್ಲ ವ್ಯಾಖ್ಯಾನಮಾಡಿದರೆ ಸಾಕು.

೫. ಪ್ರಶಸ್ತಿ

ಮಹಾಕವಿಪಟ್ಟವು ಒಬ್ಬನಿಗೆ ಬರುವುದು ಅವನ ಪ್ರತಿಭೆಯ ಮಹಿಮೆಯಿಂದ. ಈ ಪ್ರತಿಭೆ ಯಾರಲ್ಲಿ ಯಾವಾಗ ಬೆಳಗುವುದೆಂಬುದನ್ನು ಒಂದು ಸಾಹಿತ್ಯದ ಜಾತಕದಲ್ಲಿ ಗುಣಿಸಿ ಹೇಳುವವರು ಇನ್ನೂ ಹುಟ್ಟಿಲ್ಲ. ಪ್ರತಿಭಾಶಾಲಿಯಾಗುವುದಕ್ಕೆ ಕವಿಗೆ ಪುಣ್ಯ ಬೇಕು; ಅಂಥ ಕವಿಯನ್ನು ಪಡೆಯುವುದಕ್ಕೆ ಅವನ ಜನತೆಗೂ ಪುಣ್ಯ ಬೇಕು. ಅಷ್ಟೇ.

ಈ ಬಗೆಯ ಪ್ರತಿಭಾಶಲಿ ಅವತರಿಸಿದಾಗ ಸನ್ನಿವೇಶ ಸಲಕರಣೆಗಳು ಹದವಾಗಿದ್ದರೆ ಅವನ ಶಕ್ತಿ ಬೇಗ ಪಾಕಹೊಂದುತ್ತದೆ : ಉತ್ತಮಫಲವನ್ನು ಕೊಡುತ್ತದೆ. ಪಂಪನು ಹುಟ್ಟುವುದಕ್ಕೆ ನೂರಾರು ವರ್ಷಗಳಿಗೆ ಹಿಂದೆಯೇ ಕನ್ನಡ ಕಾವ್ಯರಚನೆಗೆ ಮೊದಲಾಗಿತ್ತು. ಗದ್ಯದಲ್ಲಿ ಬರೆದಿದ್ದರು, ಪದ್ಯದಲ್ಲಿ ಬರೆದಿದ್ದರು, ಶಾಸನಗಳನ್ನು ಕೊರೆದಿದ್ದರು. ಕವಿಗಳಿಗೆ ಮಾರ್ಗ ತೋರಿಸಲು ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ಹೆಸರಿನಲ್ಲಿ ಒಂದು

ಅಲಂಕಾರ ಗ್ರಂಥ ಬಂದಿತ್ತು; ಗುಣಗಾಂಕನೆಂಬ ಬಿರುದು ಹೊಂದಿದ್ದ ಮೂಡಣ ಚಾಳುಕ್ಯರಾಜನೊಬ್ಬನಿಗೆ ಅಂಕಿತವಾಗಿ ಛಂದಶ್ಶಾಸ್ತ್ರದ ಮೇಲೂ ಒಂದು ಗ್ರಂಥ ಹುಟ್ಟಿತ್ತು. ಪುಲಿಗೆಱೆಯ ಪ್ರಾಂತದಲ್ಲಿ ಬಳಕೆಯಲ್ಲಿದ್ದ ಮಾತಿಗೆ ಕನ್ನಡದ ತಿರುಳೆಂಬ ಹೆಸರಿನ ರಾಜಮುದ್ರೆ ಬಿದ್ದಿತ್ತು. ಹೀಗೆ, ಪಂಪನ ಬೆರಳು ಮೀಟಿದಾಗ ಇಂಪಾದ ನಾದವನ್ನು ಕೊಡುವುದಕ್ಕೆ ಕನ್ನಡದ ವೀಣೆ ಶ್ರುತಿಮಾಡಿ ಸಿದ್ಧವಾಗಿತ್ತು.

ಮಹಾಕವಿಯಾಗುವುದಕ್ಕೆ ಪಂಪನೂ ಸಿದ್ಧತೆಯನ್ನು ಪಡೆದನು. ಸಂಸ್ಕೃತದ ವಿಸ್ತಾರವಾದ ಸಾಹಿತ್ಯವನ್ನು ಶ್ರದ್ಧೆಯಿಂದ ಓದಿ ಮನಸ್ಸಂಸ್ಕಾರವನ್ನೂ ಮೇಲ್ಪಂಕ್ತಿಯನ್ನೂ ಗಳಿಸಿಕೊಂಡನು. ಇದಕ್ಕಿಂತ ಹೆಚ್ಚಾಗಿ, ದೇಶದ ಮೇಲೆಲ್ಲಾ ಸಂಚರಿಸಿ, ರಾಜಾಸ್ಥಾನದಲ್ಲಿ ನೆಲಸಿ, ಅನೇಕ ಮುಖವಾದ ಬದುಕನ್ನು ಬಾಳಿ, ಅನುಭವವನ್ನು ವಿಶಾಲಪಡಿಸಿ ಕೊಂಡನು. ಅವನ ಜೀವನದ ಸಾರವಾಗಿ ಹೊಮ್ಮಿದ ಆದಿಪುರಾಣವೂ ವಿಕ್ರಮಾರ್ಜುನ ವಿಜಯವೂ 'ಮುನ್ನಿನ ಕಬ್ಬಮನೆಲ್ಲಮನ್–ಇಕ್ಕಿ ಮೆಟ್ಟಿದುವು' ಎಂದರೆ ಏನಾಶ್ಚರ್ಯ?

ಪಂಪನ ಕೃತಿಗಳು ಹೊರಬಿದ್ದ ಬಳಿಕ, ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಯುಗವೇ ಮೊದಲಾಯಿತು. ಅಲ್ಲಿಂದೀಚೆಗೆ ಚಂಪೂಧಾಟಿಯಲ್ಲಿ ಕಾವ್ಯ ಬರೆದವರಿಗೆಲ್ಲ, ಅವರು ಜೈನರಾಗಿರಲಿ ಅಲ್ಲದಿರಲಿ, ಪಂಪನ ಕಾವ್ಯಗಳೇ ಆದರ್ಶ. ಕನ್ನಡ ಸಾಹಿತ್ಯದ ಈ ನಂದಾದೀವಿಗೆಯಿಂದ ಎಷ್ಟುಮಂದಿ ದೊಡ್ಡ ಕವಿಗಳು ತಮ್ಮ ಕಾವ್ಯದ ಸೊಡರುಗಳನ್ನು ಹೊತ್ತಿಸಿಕೊಂಡಿಲ್ಲ! ಗದಾಯುದ್ಧದ ರನ್ನ, 'ಅಭಿನವಪಂಪ' ನಾಗಚಂದ್ರ—ಹೀಗೆ ಹೆಸರು ಹೇಳಿದರೆ ಸಾಕು. ಇನ್ನೆಷ್ಟೋ ಮಂದಿ ಕವಿಗಳಲ್ಲಿ ಒಬ್ಬನು ಪಂಪನ ರಸವನ್ನು, ಮತ್ತೊಬ್ಬನು ರೀತಿಯನ್ನು, ಇನ್ನೊಬ್ಬನು ಇಂಪನ್ನು,—ಹೀಗೆ ತಮ್ಮ ತಮ್ಮ ರುಚಿಗೆ ಅನುಸಾರವಾಗಿ ಮೆಚ್ಚಿದ್ದಾರೆ, ಬಯಸಿದ್ದಾರೆ. ಪಂಪನು 'ಆದಿಕವಿ'ಯೆಂದು ಮಧುರನ ಹೇಳಿಕೆ; ಹೊಸಯುಗದ ಶಕಪುರುಷನೆಂಬ ಅರ್ಥವನ್ನು ಇಟ್ಟುಕೊಂಡರೆ ಪಂಪನು ಆದಿಕವಿಯೂ ಆಗುತ್ತಾನೆ. 'ಅಗ್ರಕವಿ'ಯಂತೂ ಉದ್ದಕ್ಕೂ ಆಗಿಯೇ ಇದ್ದಾನೆ.

ಪಂಪನನ್ನು ನೆನೆದಾಗಲೆಲ್ಲ ಸಂಸ್ಕೃತ ಕವಿಯೊಬ್ಬನ ನೆನಪು ತಪ್ಪದೆ ಆಗುತ್ತದೆ—ಆತನು ಕಾಳಿದಾಸ. ಕಾಳಿದಾಸನು ಸಂಸ್ಕೃತದಲ್ಲಿ ಅಗ್ರಕವಿ, ಕವಿಗಳ ಕವಿ—ಎಂದಿಷ್ಟು ಮಾತ್ರವೇ ಈ ಹೋಲಿಕೆ ಹೊಳೆಯುವುದಕ್ಕೆ ಕಾರಣವಲ್ಲ. ಮಹತ್ತ್ವವಷ್ಟೇ ಅಲ್ಲದೆ ಮನೋಧರ್ಮದಲ್ಲಿಯೂ ಇಬ್ಬರಿಗೂ ಸಾದೃಶ್ಯವಿದೆ. ಕಾಳಿದಾಸ, ಪಂಪ : ಇಬ್ಬರೂ ರಾಜಾಸ್ಥಾನದಲ್ಲಿ ಗೌರವಕ್ಕೆ ಪಾತ್ರರಾಗಿ, ನಾಗರಿಕರಲ್ಲಿ ನಾಗರಿಕರಾಗಿ ಬಾಳಿದವರು; ಇಬ್ಬರೂ ರಸಿಕರು–ಭೋಗವನ್ನು ನಿರಾಕರಿಸದೆ, ಅಲ್ಪಮಾರ್ಗಕ್ಕೆ ಇಳಿಯದೆ ತುಂಬು ಜೀವನವನ್ನು ಬಾಳಿದವರು; ಸುಖದಲ್ಲಿ ಮುಳುಗಿದಾಗಲೂ ಬದುಕಿನ ಕೊನೆಯ ಗುರಿಯನ್ನು ಮರೆಯದವರು. ಕವಿತಾಮಾರ್ಗದಲ್ಲೂ ಅಷ್ಟೇ : ಪ್ರಸನ್ನ ಗಂಭೀರ ವಾಣಿಯಲ್ಲಿ ಸೂಕ್ಷ್ಮವಾದ ನೋಟವನ್ನು, ಅನುಭವದ ಸಾರವನ್ನು ನಿರೂಪಿಸಬಲ್ಲವರು. ಇವರಿಬ್ಬರಲ್ಲಿ ಹಿರಿಯವನು ಕಾಳಿದಾಸ—ಕಾಲದಲ್ಲಿ ಮಾತ್ರವಲ್ಲ, ಪ್ರತಿಭೆಯಲ್ಲಿ ಕೂಡ.

ಇದನ್ನೊಪ್ಪಿಕೊಂಡು, ಧೈರ್ಯವಾಗಿ ಈ ಮಾತನ್ನು ಹೇಳಬಹುದು : ಪಂಪನು ಕನ್ನಡದ ಕಾಳಿದಾಸ.

ಮುಂದೆ ಓದಲು ಸೂಚನೆ

ಪಂಪನ ಕಾವ್ಯಗಳು—

'ಆದಿಪುರಾಣಂ' (ಮೈಸೂರು ಓರಿಯೆಂಟಲ್ ಲೈಬ್ರೆರಿ)

'ಪಂಪಭಾರತಂ ಎಂಬ ವಿಕ್ರಮಾರ್ಜುನವಿಜಯಂ' (ಕನ್ನಡ ಸಾಹಿತ್ಯ ಪರಿಷತ್ತು)

ವಿಮರ್ಶೆ, ಇತ್ಯಾದಿ—

ಶ್ರೀಗಳಾದ—

ಎಸ್.ವಿ. ರಂಗಣ್ಣ : 'ಪಂಪಭಾರತ' (ಪರಿಷತ್ಪತ್ರಿಕೆ, xv. ೩)

ಎನ್. ಅನಂತರಂಗಾಚಾರ್ : 'ಪಂಪಮಹಾಕವಿ' (ಪರಿಷತ್ಪತ್ರಿಕೆ, xv. ೪)

ಎ.ಆರ್.ಕೃ. ಮತ್ತು ಬಿ.ವೆಂ. : 'ಪರಭಣಿಯ ತಾಮ್ರಶಾಸನ ಮತ್ತು ಪಂಪಭಾರತ' (ಪ್ರಬುದ್ಧ ಕರ್ಣಾಟಕ, xv. ೧)

ಟಿ.ಎಸ್.ವೆಂ. : 'ಪಂಪಭಾರತ' (ಪ್ರಬುದ್ಧ ಕರ್ಣಾಟಕ, xv. ೪)

ಎಂ. ಗೋವಿಂದ ಪೈ : 'ಪಂಪನ ದೇಶಕಾಲಗಳ ವಿಚಾರ' (ಭಾರತಿ, ಸಂ. i)

"ಶ್ರೀ" : 'ಕವಿ ಕಂಡ ನಾಡು' (ಕನ್ನಡ ನುಡಿ, i. ೫)

ಮುಳಿಯ ತಿಮ್ಮಪ್ಪಯ್ಯ : 'ನಾಡೋಜ ಪಂಪ'
'ಆದಿಪುರಾಣಸಂಗ್ರಹ'
'ಸಮಸ್ತಭಾರತಸಾರ'

ಪಂಪಭಾರತದ ಕೃಷ್ಣ :
ಒಂದು ಚಿಕ್ಕ ಟಿಪ್ಪಣಿ*

'ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ
ಗಂಡಿನೊಳ್ ಭೀಮಸೇನಂ
ಬಲದೊಳ್ ಮುದ್ರೇಶನತ್ಯುನ್ನತಿಯೊಳಮರಸಿಂಧೂ
ದ್ಭವಂ ಚಾಪವಿದ್ಯಾ-
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆ
ಯೊಳ್ ಫಲ್ಗುಣಂ ಧರ್ಮದೊಳ್
ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ
ಭಾರತಂ ಲೋಕಪೂಜ್ಯಂ'

ಪಂಪಭಾರತದ ಈ ಪದ್ಯ (೧೪-೬೪) ತುಂಬ ಪ್ರಸಿದ್ಧವಾಗಿದೆ. ಭಾರತ ಕಥೆಯಲ್ಲಿ ಬರುವ ಅನೇಕ ಪ್ರಮುಖ ವ್ಯಕ್ತಿಗಳನ್ನು ಪಂಪನು ಇಲ್ಲಿ ಹೆಸರಿಸಿ ಅವರವರ ಜೀವಗುಣವೇನೆಂಬುದನ್ನು ಎತ್ತಿಹಿಡಿದಿದ್ದಾನೆ. ತನ್ನ ಕಥಾವಸ್ತುವಿನ ನಾಯಕ ಪ್ರತಿನಾಯಕರನ್ನು ಮಾತ್ರವಲ್ಲದೆ, ಭೀಷ್ಮನಂಥ ಕುಲಪಿತಾಮಹನನ್ನು ಮಾತ್ರವಲ್ಲದೆ, ಅಷ್ಟೇನೂ ಪ್ರಧಾನನಲ್ಲದ ಶಲ್ಯನನ್ನೂ ಇಲ್ಲಿ ಸೇರಿಸಿ ಅವನ ಗುಣಗಾನಮಾಡಿದ್ದಾನೆ. ಮಹಾಭಾರತ ಪ್ರಪಂಚಕ್ಕೆ ಪ್ರೇರಕಶಕ್ತಿಯಾದ ದ್ರೌಪದಿಯ ಹೆಸರು ಇಲ್ಲಿ ಬರಲಿಲ್ಲವಲ್ಲ ಎಂಬ ಕೊರತೆ ಮನಸ್ಸಿನಲ್ಲಿ ಸುಳಿದರೂ, ಪಂಪನು ಇಲ್ಲಿ ಕೇವಲ ಪುರುಷ ಪಾತ್ರಗಳನಷ್ಟೇ ಗಣನೆ ಮಾಡಿದ್ದಾನೆ ಎಂದು ಹೇಗೋ ಸಮಾಧಾನಮಾಡಿಕೊಳ್ಳಬಹುದು. ಆದರೆ ಒಬ್ಬ ಮಹಾವ್ಯಕ್ತಿಯ ಹೆಸರು ಈ ಪಟ್ಟಿಯಲ್ಲಿ

* 'ಅಭಿವಂದನೆ', ೧೯೫೬

ಕಾಣಿಸದಿರುವುದು ಮಾತ್ರ ಅನೇಕರನ್ನು ವಿಚಾರಕ್ಕೂ ಕೆಲವರನ್ನು ಅತೃಪ್ತಿಗೂ ಒಳಗುಮಾಡಿದೆ. ಕುಮಾರವ್ಯಾಸನ ಉತ್ಕೃಷ್ಟ ಕೃತಿಯನ್ನು ಕೇಳಿ, ಓದಿ, ಭಾರತಕಥೆಗೆ ಶ್ರೀಕೃಷ್ಣನೇ ಸೂತ್ರಧಾರನೆಂದು ಮನಗಂಡಿರುವ ರಸಜ್ಞರಿಗೆ, ಭಾವುಕರಿಗೆ—ಪಂಪನ ಪದ್ಯದಲ್ಲಿ ಕೃಷ್ಣನ ಸ್ಮರಣೆ ಕೂಡ ಇಲ್ಲದೆ ಹೋಯಿತಲ್ಲ, ಅವನು ಅಷ್ಟು ಅಮುಖ್ಯನಾದರೆ—ಎನ್ನಿಸುವುದು ಅಸಹಜವಲ್ಲ. ಈ "ಲೋಪ"ಕ್ಕೆ ಕಾರಣವನ್ನು ಹುಡುಕುವುದೂ ಅನಿವಾರ್ಯ

ಈ ವೀರಶ್ರೇಣಿಯ ಒಕ್ಕಣೆಗೆ ಒಂದು ವೃತ್ತವನ್ನು ಮಾತ್ರ ಪಂಪನು ವಿನಿಯೋಗಿಸಿದ್ದಾನೆ; ಅಲ್ಲಿ ಕಿಕ್ಕಿರಿದಿರುವ ಹೆಸರುಗಳ ನಡುವೆ ಕೃಷ್ಣನ ಹೆಸರನ್ನೂ ಸೇರಿಸಲು ಪಂಪನಿಗೆ ಜಾಗ ಸಾಲದೆ ಹೋಯಿತು ಎಂದು ತೇಲುನೋಟದ ಉತ್ತರ ಕೊಡುವುದು ಅನಭಿಜ್ಞತೆ. ಪಂಪನು ಪದ್ಯಬಂಧದಲ್ಲಿ ಅಷ್ಟೊಂದು ಅಶಕ್ತನೇನೂ ಅಲ್ಲ. ಹಾಗಾದರೆ, ಉದ್ದೇಶಪೂರ್ವಕವಾಗಿಯೇ ಅವನು ಕೃಷ್ಣನ ಹೆಸರನ್ನು ಕೈಬಿಟ್ಟಿರಬೇಕು. ಪಂಪನು ಮತದಲ್ಲಿ ಜೈನ. ಜೈನಪುರಾಣದಂತೆ ಕೃಷ್ಣ (ವಾಸುದೇವ)ನು ತನ್ನ ಕಾಲದ ಪ್ರತಿವಾಸುದೇವನನ್ನು ಕೊಂದ ಪರಿಣಾಮವಾಗಿ ನರಕಕ್ಕೆ ಇಳಿಯಬೇಕಾಗುತ್ತದೆ. (ಭಾವಿ ತೀರ್ಥಂಕರರ ಸಾಲಿಗೆ ಆ ಬಳಿಕ ಅವನು ಏರುವನೆಂಬುದು ಬೇರೆ ಮಾತು.) ಆದಕಾರಣ ಪಂಪನಿಗೆ ಕೃಷ್ಣನ ವಿಷಯದಲ್ಲಿ ಭಕ್ತಿಯಿರಲಿಲ್ಲ. ಉದಾಹರಣೆಗೆ, ನೋಡಿ : ದ್ರೌಪದಿಯ ಮಾನಪರೀಕ್ಷೆಯ ಪ್ರಸಂಗದಲ್ಲಿ, ದುಶ್ಶಾಸನನು ಆಕೆಯ ಸೀರೆಯನ್ನು ಎಷ್ಟೇ ಸೆಳೆಸೆಳೆದುಹಾಕಿದರೂ ಶ್ರೀ ಕೃಷ್ಣನ ಅನುಗ್ರಹದಿಂದ ಅದು ಅಕ್ಷಯವಾಗಿ ಪರಿಣಮಿಸಿದ ಸಂಗತಿಯನ್ನೇ ಪಂಪನು ಹೇಳಿಲ್ಲ. ಆಕೆಯ ಮುಡಿಯನ್ನು ದುಶ್ಶಾಸನನು ಎಳೆದಾಡಿದ್ದಕ್ಕೇ ಪ್ರಾಮುಖ್ಯಕೊಟ್ಟು ಆಕೆ 'ಉಟ್ಟುದುವರಂ ಕೈದಂದು' ಅವನು ನಿಂತನೆಂದಷ್ಟೇ ಹೇಳಿ ಪಂಪನು ಈ ಭಾಗವನ್ನು ತೇಲಿಸಿಬಿಟ್ಟಿದ್ದಾನೆ—ಈ ರೀತಿಯಾಗಿ ಆಕ್ಷೇಪಿಸುವವರೂ ಇಲ್ಲದಿಲ್ಲ.

ಈ ಆಕ್ಷೇಪಣೆಯನ್ನು ಕೆಲಮಟ್ಟಿಗೆ ಪರಿಶೀಲಿಸಬೇಕು. ದ್ರೌಪದಿಗೆ ಅಕ್ಷಯ ವಸ್ತ್ರದ ವರವನ್ನು ಶ್ರೀಕೃಷ್ಣನು ದಯಪಾಲಿಸಿದನೆಂಬ ಅಂಶವನ್ನು ಪಂಪನು ಮರೆ ಮಾಡಿದ್ದಾನೆಂಬ ದೋಷ ಅವನಿಗೆ ನಿಜವಾಗಿ ತಟ್ಟುವುದಿಲ್ಲ. ಈ ಸಂಗತಿಯೇ ಮೂಲಮಹಾಭಾರತದಲ್ಲಿ ಇದ್ದಂತೆ ತೋರುವುದಿಲ್ಲ. (ಇದರ ವಿವರಣೆಗೆ ಇಲ್ಲಿ ಎಡೆಯಿಲ್ಲ. ಪುಣೆಯ ಭಾಂಡಾರ್‌ಕರ್ ಪ್ರಾಚ್ಯ ಸಂಶೋಧನ ಸಂಸ್ಥೆಯವರು ಪ್ರಕಟಿಸುತ್ತಿರುವ ಮಹಾಭಾರತದ ಪರಿಷ್ಕರಣದಲ್ಲಿ ಸಭಾಪರ್ವದೊಳಗಿನ ಈ ಭಾಗದ ಪಾಠಸಾಮಗ್ರಿಯನ್ನೂ ಇದನ್ನು ಕುರಿತ ಸಂಪಾದಕೀಯ ಟಿಪ್ಪಣಿಗಳನ್ನೂ ಕುತೂಹಲಿಗಳು ಓದಿನೋಡಬಹುದು.) ದ್ರೌಪದಿಯ ಸೀರೆಯನ್ನು ದುಶ್ಶಾಸನನು ಸೆಳೆದನೆಂಬ ವಿಷಯ ಮಹಾಭಾರತ ಕಥೆಯಲ್ಲಿ ಹಿಂದಿನಿಂದ ಇತ್ತು : ಪಂಪನಂತೂ ಅದನ್ನು ಅರಿತಿದ್ದನು; ಆದಕಾರಣವೇ ಅದನ್ನು ತನ್ನ ಕೃತಿಯಲ್ಲಿ ಎರಡುಮಾತಿನಲ್ಲಿ ಸೂಚಿಸಿದ್ದಾನೆ. ಅವನ "ಶಿಷ್ಯ"ನಾದ ರನ್ನನು "ತುಱುವಂ ಕಳಿಸುವ ಕೃಷ್ಣೆಯ ನಿಜೆಯಂ ಪಿಡಿದುರ್ಚವೇಟ್ಟಿ . . . ದುರ್ನಯಂ" ಎಂದು ನಿರ್ದೇಶಿಸಿರುವುದನ್ನೂ, (ಗದಾಯುದ್ಧ, ೬–೧೦)

ಇಲ್ಲಿನ ನೆನಪಿಗೆ ತಂದುಕೊಳ್ಳಬಹುದು. ಆದರೆ ಈ ಪ್ರಸಂಗದಲ್ಲಿ ಕೃಷ್ಣನ ಮಹಿಮೆಯ ಪ್ರಕಾಶನವು ಇತ್ತೀಚಿನ ಪ್ರಕ್ಷೇಪವೆಂದೇ ಹೇಳಬೇಕಾಗುತ್ತದೆ. ಸಂಸ್ಕೃತ ಮಹಾಭಾರತದ ಹಸ್ತಪ್ರತಿಗಳ ಸಾಕ್ಷ್ಯವನ್ನು ಗಮನಕ್ಕೆ ತಂದುಕೊಂಡ ಬಳಿಕ ಬೇರೆಯ ನಿರ್ಣಯಕ್ಕೆ ಬರುವುದು ಅತಿ ಕಷ್ಟ. ಹೀಗಿರುವುದರಿಂದ, ಪಂಪಭಾರತದ ಈ ಭಾಗದಲ್ಲಿ ಕೃಷ್ಣನ ಕೈವಾಡವಿಲ್ಲದಿರುವುದನ್ನು ಕುರಿತು, ಇದು ಪಂಪನಲ್ಲಿ ಒಂದು ಕುಂದು ಎಂದು ಹೇಳುವುದು ತಪ್ಪಿಹೋಗಿ, ಈ "ಪವಾಡ" ಪಂಪನ ಕಾಲಕ್ಕಿಂತ ಈಚೆಗೇನಾದರೂ ಮಹಾಭಾರತದಲ್ಲಿ ಸೇರಿಕೊಂಡಿತೇ ಹೇಗೆ ಎಂಬ ಆಲೋಚನೆ ಮನಸ್ಸಿನಲ್ಲಿ ಮೂಡುತ್ತದೆ.

ಇನ್ನು ಕೃಷ್ಣನ ಪ್ರಾಮುಖ್ಯಮಹತ್ತ್ವಗಳ ವಿಚಾರ. ಈ ಅತಿ ಸಂಕ್ಷಿಪ್ತವಾದ ಟಿಪ್ಪಣಿಯಲ್ಲಿ ಒಟ್ಟು ಭಾವನೆಯನ್ನು ಮಾತ್ರ ಉಲ್ಲೇಖಿಸುವುದು ಸಾಧ್ಯ. ಪಂಪಭಾರತದಲ್ಲಿ ಎಲ್ಲಿ ಕೂಡ ಕೃಷ್ಣನನ್ನು ಉದ್ದೇಶವಿಟ್ಟುಕೊಂಡಾಗಲಿ ಮರವಿನಿಂದಾಗಲಿ ಅವಜ್ಞೆ ಗೈದಿರುವಂತೆ ಅದರ ನಿಷ್ಪಕ್ಷಪಾತಿಯಾದ ಓದುಗನಿಗೆ ತೋರಲಾರದು; ಅಂಥ ಆಲೋಚನೆಯೇ ಪಂಪನ ಚಿತ್ತದಲ್ಲಿ ಸುಳಿದಂತೆ ಕಾಣುವುದಿಲ್ಲ. ಪಂಪಭಾರತದ ಮೊದಲನೆಯ ಮಂಗಳ ಪದ್ಯದಲ್ಲಿ "ನಾರಾಯಣ"ನಿಗಿಂತ "ಚಳುಕ್ಯನಾರಾಯಣ"ನು ಒಂದು ಕೈ ಮೇಲೆಂದು ಸೂಚಿಸಿರುವುದು ನಿಜ. ಆದರೆ ಅದು ಪಂಪನ ಕಾವ್ಯವನ್ನು ಕವಿದಿರುವ "ರಾಜಕೀಯಶ್ಲೇಷ"ಯ ಪ್ರಭಾವ; ಅವಹೇಳನದ ಕುರುಹೇನೂ ಅಲ್ಲ. ಪಂಪನಲ್ಲಿ ಶ್ರೀಕೃಷ್ಣನನ್ನು ಕುರಿತು ಭಕ್ತಿಯ ಉದ್ರೇಕವಿಲ್ಲವೆಂಬುದು ದಿಟ; ಆದರೆ ಅವನ ಕಾವ್ಯದಲ್ಲಿ ಅದನ್ನು ನಿರೀಕ್ಷಿಸುವುದೇ ಅನುಚಿತ! ಇದೊಂದು ಅಂಶವನ್ನು ಬಿಟ್ಟರೆ ಸಾಕು. ಕೃಷ್ಣನು ಪುರುಷೋತ್ತಮ ಮಾತ್ರವಲ್ಲ, ಅವನು ಅವತಾರ ಪುರುಷನೆಂಬುದನ್ನೂ ಪಂಪನು ಅರಿತು ಅದೇ ರೀತಿಯಾಗಿ ನಿರೂಪಿಸಿರುವುದೂ ಅವನ ಕೃತಿಯಲ್ಲಿ ಎಷ್ಟೋಕಡೆ (ಉದಾಹರಣೆಗೆ, ೬ನೆಯ ಮತ್ತು ೯ನೆಯ ಆಶ್ವಾಸಗಳಲ್ಲಿ) ಗೋಚರವಾಗುತ್ತದೆ. ಕರ್ಣನ ಸಾರಥ್ಯವನ್ನು ಅರ್ಧದಲ್ಲಿ ಬಿಟ್ಟು, ಅರ್ಧ ದಿನದ ಸೇನಾಪತಿಯಾಗಿ ಕೊನೆಗೊಂಡ ಶಲ್ಯನಿಗಿಂತಲೂ "ತ್ರೈಲೋಕ್ಯಗುರು" ಕೃಷ್ಣನು ಕಡಮೆಯೆಂಬ ಭಾವ ಪಂಪನ ಕನಸಿನಲ್ಲಿ ಕೂಡ ತೋರಿರಲಾರದು! ಅಷ್ಟೇ ಅಲ್ಲ. ಕೃಷ್ಣನನ್ನು ಕುರಿತು ಮಾತಾಡುವಾಗ "ಅಜಿತ" "ಅನಂತ" ಎಂಬ ಪರ್ಯಾಯಪದಗಳನ್ನು ಪಂಪನು ತನ್ನ ಕೃತಿಯಲ್ಲಿ ಒಂದೆರಡು ಕಡೆ (ಅಜಿತ : ೯–೨೬ ವ.; ಅನಂತ : ೫–೫೮ ವ., ೧೦–೪೬ ವ.) ಉಪಯೋಗಿಸಿದ್ದಾನೆ. ಇವು ತೀರ್ಥಂಕರರಿಬ್ಬರ ಹೆಸರುಗಳನ್ನು ನೆನಪಿಗೆ ತರುವುದಿಲ್ಲವೆ? "ಅನಂತ" ಎಂಬುದೇನೋ "ಅನಂತಪದ್ಮನಾಭ"ನನ್ನು ಸ್ಮರಣೆಗೆ ತಂದರೂ "ಅಜಿತ" ಎಂಬುದಂತೂ ಕೃಷ್ಣನಿಗೆ ಪ್ರಚುರವಾದ ಹೆಸರಲ್ಲವಷ್ಟೆ. ಇಲ್ಲಿ ಪಂಪನು ಉದ್ದೇಶಪೂರ್ವಕವಾಗಿಯೇ ಈ ಹೆಸರುಗಳನ್ನು ಉಪಯೋಗಿಸಿದ್ದಾನೆಂದೂ, ಆ ಮೂಲಕ ಕೃಷ್ಣನಲ್ಲಿ ತನಗಿರುವ ಪೂಜ್ಯಭಾವವನ್ನು ಪ್ರಕಟಿಸಿದ್ದಾನೆಂದೂ ತೋರುತ್ತದೆ. ಈ ಮನ್ನಣೆಯನ್ನು ತನ್ನ ಕಥಾನಾಯಕನಾದ ಅರ್ಜುನ–ಅರಿಕೇಸರಿಗೂ ಅವನು ಸಲ್ಲಿಸಿಲ್ಲ.

ಈ ದೃಷ್ಟಿಯನ್ನು ಮುಂದುವರಿಸಿದರೆ, ಪಂಪನ ಪದ್ಯದಲ್ಲಿ ಕೃಷ್ಣನ ಹೆಸರು ಬಾರದಿರುವುದಕ್ಕೆ ಕಾರಣ ಹೊಳೆಯುತ್ತದೆ. ಅಲ್ಲಿ ಹೇಳಿರುವವರೆಲ್ಲ ಕೇವಲ ಲೌಕಿಕ ವೀರರು. "ಬೆಳಗುವೆನಿಲ್ಲಿ ಲೌಕಿಕಮಂ" ಎಂದು ಪ್ರತಿಜ್ಞೆ ಮಾಡಿ ಬರೆದ ಕೃತಿಯಲ್ಲಿ ಈ ಲೌಕಿಕ ಪುರುಷರ ಚರಿತೆಗೇ ಹೆಚ್ಚು ಗಮನ ಕೊಟ್ಟು ಅವರ ಗುಣ ದೋಷಗಳನ್ನು ಪಂಪನು ನಿರೂಪಿಸಿದ್ದಾನೆ. ಶ್ರೀ ಕೃಷ್ಣನು "ಲೌಕಿಕ"ವನ್ನು ಎಲ್ಲರಿಗಿಂತಲೂ ಚೆನ್ನಾಗಿ ಬಲ್ಲವನಾದರೂ, ಭಾರತಲೋಕದ ವ್ಯವಹಾರದ ನಡುವೆ ಸುಳಿದು ಅದರ ಎಳೆಗಳನ್ನು ಆಡಿಸಿದವನಾದರೂ, ಅವನು ಲೋಕದ ಮಟ್ಟಕ್ಕೆ ಮೀರಿದವನು, ದೇವತ್ವದ ನೆಲೆಯವನು. ಆದಕಾರಣವೇ ಈ ಮಿಕ್ಕವರ ಸಾಲಿನಲ್ಲಿ ಅವನನ್ನು ನಿಲ್ಲಿಸಲು ಪಂಪನ ಮನಸ್ಸು ಒಪ್ಪಲಿಲ್ಲ. ಪಂಪನ ಪದ್ಯದಲ್ಲಿ ಕೃಷ್ಣನ ಹೆಸರು ಕಾಣಿಸದಿರುವುದಕ್ಕೆ ಕಾರಣ ಅವನು ಈ ಪಂಕ್ತಿಗೆ ಕೆಳಗಿನ ಅಗಣ್ಯನೆಂದಲ್ಲ, ಅದಕ್ಕೆ ಮೀರಿದ ಮಹಾಮಹಿಮನೆಂದು. ಇಲ್ಲಿ ಪಂಪನ ಮೌನವು ಶ್ರೀಕೃಷ್ಣನ ಲೋಕೋತ್ತರತ್ವಕ್ಕೆ ಉತ್ತಮ ಧ್ವನಿಯ ಕಾಣಿಕೆ.

ಸಮಾಲೋಕನ : ೧೯೫೮

●

'ಗದಾಯುದ್ಧ'ವೂ
ಸ್ವೀಕರಣ ವಿಚಾರವೂ

'ಕಾವ್ಯಮೀಮಾಂಸೆ' ಎಂಬ ಸಂಸ್ಕೃತ ಲಕ್ಷಣ ಗ್ರಂಥದಲ್ಲಿ ಸ್ವಾರಸ್ಯವುಳ್ಳ ಒಂದು ಸಂಸ್ಕೃತ ಶ್ಲೋಕವಿದೆ :

ಪುಂಸಃ ಕಾಲಾತಿಪಾತೇನ ಚೌರ್ಯಮನ್ಯದ್ವಿಶೀರ್ಯತಿ ।
ಅಪಿ ಪುತ್ರೇಷು ಪೌತ್ರೇಷು ವಾಕ್ಚೌರ್ಯಂ ನ ಶೀರ್ಯತಿ ॥

"ಮನುಷ್ಯನು ಮಾಡಿದ ಇತರ ಚೌರ್ಯವೆಲ್ಲ ಕೆಲವು ದಿನಗಳು ಕಳೆದ ಮೇಲೆ ಮರೆತು ಹೋಗುತ್ತದೆ. ವಾಕ್ಚೌರ್ಯವು ಮಾತ್ರ ಮಕ್ಕಳು ಮೊಮ್ಮಕ್ಕಳ ಕಾಲಕ್ಕೂ ಅಳಿಸಿ ಹೋಗುವುದಿಲ್ಲ" ಎಂದು ಇದರ ತಾತ್ಪರ್ಯ. ಈ ಮಾತೇನೋ ನಿಜ. ಆದರೆ 'ವಾಕ್ಚೌರ್ಯ'ವೆಂದರೆ ಏನು ಎನ್ನುವುದನ್ನು ಮಾತ್ರ ನಿರ್ಧರಿಸುವುದು ಕಷ್ಟ.

'Encyclopaedia Britannica' ಎಂಬ ಬೃಹತ್ಕೋಶದಲ್ಲಿ 'ವಾಕ್ಚೌರ್ಯ' ಅಥವಾ 'ಹರಣ'ದ* (Plagiarism) ಲಕ್ಷಣವನ್ನು ಹೀಗೆ ಹೇಳಿದೆ : "An appropriation or copying from the work of another, in literature or art and passing off the same as original or without acknowledgement of the real authoriship or source." ಇದನ್ನು ನೋಡಿದರೆ, ಬೇರೊಂದು ಕಡೆಯಿಂದ ವಿಷಯವನ್ನು ಗ್ರಹಿಸಿದ ಮಾತ್ರಕ್ಕೇ ಅದು

---

* ಹರಣ (Plagiarism), ಸ್ವೀಕರಣ (Borrowing) – ಈ ಪದಗಳು 'ಕಾವ್ಯಮೀಮಾಂಸೆ'ಯಲ್ಲಿ ಸಿಕ್ಕುತ್ತವೆ. ಇದು ಕ್ರಿ.ಶ. ಸುಮಾರು ೯೦೦ರಲ್ಲಿದ್ದ ರಾಜಶೇಖರನೆಂಬ ಕವಿಯು ರಚಿಸಿದ ಗ್ರಂಥ.

'ಹರಣ'ವೆನ್ನಿಸಿಕೊಳ್ಳುವುದಿಲ್ಲವೆಂದು ತೋರುತ್ತದೆ. ಅದು ಸರಿಯಾದ ಚೌರ್ಯವಾಗ ಬೇಕಾದರೆ ಅಪಹರಿಸಿದ ಕವಿಯು ಅದೆಲ್ಲವೂ ತಾನೇ ಸ್ವತಂತ್ರವಾಗಿ ಬರೆದುದೆಂಬ ಭಾವನೆಯು ವಾಚಕರಿಗೆ ಹುಟ್ಟುವಂತೆ ಮಾಡಿರಬೇಕು.

ಸಮಗ್ರವಾದ ಗ್ರಂಥವನ್ನಾಗಲಿ ಅಥವಾ ಅದರ ಬಹುಭಾಗವನ್ನಾಗಲಿ ಒಬ್ಬ ಕವಿಯು ಇನ್ನೊಬ್ಬನಿಂದ ಅಪಹರಿಸಿದ್ದರೆ ಆಗ ಅದು 'ಹರಣ'ವೆಂದು ಸಾರಲು ಯಾವ ಅಡ್ಡಿಯೂ ಇಲ್ಲ; ಅದನ್ನು ಎಲ್ಲರೂ ನಿಂದಿಸಿದರೆ ಯಾವ ತಪ್ಪೂ ಇಲ್ಲ. ಆದರೆ ಕೆಲವು ಭಾವಗಳನ್ನು ಹೆರರಿಂದ ಒಬ್ಬ ಕವಿಯು ಗ್ರಹಿಸಿದರೆ ಅದು 'ಹರಣ' ವಾಗಿಬಿಡುತ್ತದೆಯೆ? ಇಂತಹ ಸಂದರ್ಭಗಳಲ್ಲಿ ಅನೇಕ ಕವಿಗಳು ತಮ್ಮ ಸಾಲವನ್ನು ಒಪ್ಪಿಕೊಂಡಿರುವುದಿಲ್ಲ. ಹಿಂದಿನವರಿಂದ ಅಲ್ಲೊಂದು ಇಲ್ಲೊಂದು ಸೂಚನೆಯನ್ನು ಅಂಗೀಕರಿಸುವುದು ತಮ್ಮ ಕುಲದ ಹಕ್ಕು ಎಂದು ಅವರು ತಿಳಿದಿರುತ್ತಾರೆ. ಇದೂ ಚೌರ್ಯವೆಂದು ತೀರ್ಮಾನಿಸಿಬಿಟ್ಟರೆ ಪ್ರತಿಯೊಬ್ಬ ಕವಿಯೂ ಚೋರನೇ ಆಗುತ್ತಾನಲ್ಲ! ಯಾರನ್ನು ನಿಂದಿಸುವುದು, ಯಾರನ್ನು ಬಿಡುವುದು?

ಮಹಾಕವಿಗಳ ವಿಚಾರವು ಬಂದಾಗ 'ಹರಣ', 'ಕೃತಿಚೌರ್ಯ' ಮೊದಲಾದ ಹೀನ ಪದಗಳನ್ನು ಪ್ರಯೋಗಿಸುವುದು ವಿಮರ್ಶಕನ ಧೃಷ್ಟತೆಯನ್ನು ತೋರಿಸುತ್ತದೆ. ಇಂತಹ ಸಮಯಗಳಲ್ಲಿ 'ಸ್ವೀಕರಣ' (Borrowing) ಎಂಬ ಪದವನ್ನು ಅಂಗೀಕರಿಸುವುದು ಮೇಲು. ಸಾಮಾನ್ಯರಿಗೆ ಅನ್ವಯಿಸುವ ಸೂತ್ರಗಳಿಂದ ಮಹಾಕವಿಯನ್ನು ಕಟ್ಟಲು ಸಾಧ್ಯವಿಲ್ಲ. ಪೂರ್ವ ಕವಿಗಳಿಂದ ಭಾವಗಳನ್ನು ಹೇರಳವಾಗಿ ತೆಗೆದುಕೊಂಡಿದ್ದರೂ ಆತನು ಅದನ್ನು ಸ್ವತಂತ್ರವಾದ ರೀತಿಯಲ್ಲಿ ಉಪಯೋಗಿಸಿ ಅವಕ್ಕೆ ತನ್ನ ಮುದ್ರೆಯನ್ನು ಒತ್ತಿರುತ್ತಾನೆ. ಅವನ ಸಾಲುಗಳನ್ನು ಪಟ್ಟಿ ಹಾಕಿ 'ಇಗೋ, ಕಳ್ಳ!" ಎಂದು ಯಾರಾದರೂ ಕೂಗಬಲ್ಲರು. ಆದರೆ ಹಾಗೆ ಕೊಂಡ ಸಾಲವನ್ನು ಓದುವವರು ತಲೆದೂಗುವ ಕಾವ್ಯವಾಗುವಂತೆ ಮಾರ್ಪಡಿಸುವ ರಹಸ್ಯವು ಮಾತ್ರ ಆ ಮಹಾಕವಿಯೊಬ್ಬನಿಗೇ ಗೊತ್ತು.

"The ledger school of criticism, which deals only with borrowings and lendings, ingeniously traced and accurately recorded, looks foolish enough in the presence of this miracle."* ಎಂದು ಬರೆದು ರಾಲಿ ಎಂಬ ವಿದ್ವಾಂಸರು ಈ ಬಗೆಯ ವಿಮರ್ಶೆಯನ್ನು ಹಾಸ್ಯಮಾಡಿದ್ದಾರೆ.

'ಗದಾಯುದ್ಧ'ವನ್ನು ಓದುವವರೆಲ್ಲರಿಗೂ ಈ ಸಮಸ್ಯೆಯನ್ನು ಬಿಡಿಸುವ ಪ್ರಸಂಗವು ಬಿದ್ದೇ ಬೀಳುತ್ತದೆ. ರನ್ನನು 'ಪಂಪಭಾರತ'ದಿಂದಲೂ, 'ವೇಣೀಸಂಹಾರ' ನಾಟಕದಿಂದಲೂ ಭಾವಗಳನ್ನು ಸ್ವೀಕರಿಸಿರುವನೆನ್ನುವುದು ಎಲ್ಲರಿಗೂ ತಿಳಿದಿದೆ; ಅದರಿಂದ ಕೆಲವರಿಗೆ ಅವನಲ್ಲಿ ಗೌರವವೂ ಕಡಿಮೆಯಾಗಿ ಹೋಗಿದೆ. ಇದು ಸರಿಯೆ

---

* Sir Walter Raleigh : *'Milton'* pp. 171-2

ಎನ್ನುವ ವಿಚಾರವನ್ನು ಚರ್ಚಿಸುವುದೇ ಈ ಲೇಖನದ ಉದ್ದೇಶ. ಆದರೆ ಚರ್ಚೆಗೆ ಮೊದಲು 'ಗದಾಯುದ್ಧ'ಕ್ಕೂ ಈ ಎರಡು ಗ್ರಂಥಗಳಿಗೂ ಯಾವ ಬಗೆಯ ಸಂಬಂಧವಿದೆ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಅತ್ಯಾವಶ್ಯಕ.

'ಗದಾಯುದ್ಧ'ಕ್ಕೂ 'ವೇಣೀಸಂಹಾರ'ಕ್ಕೂ ಇರುವ ಸಂಬಂಧವನ್ನು ಸ್ವಲ್ಪದರಲ್ಲಿಯೇ ನಿಷ್ಕರ್ಷಿಸಿಬಿಡಬಹುದು. 'ವೇಣೀಸಂಹಾರ'ವನ್ನು ಬರೆದ ಭಟ್ಟನಾರಾಯಣನ ಕಾಲವು ಸರಿಯಾಗಿ ತಿಳಿದಿಲ್ಲ. ಆದರೂ ವಾಮನನೇ ಮೊದಲಾದ ಪ್ರಾಚೀನಾಲಂಕಾರಿಕರು ಅವನನ್ನು ಸ್ಮರಿಸಿರುವುದರಿಂದ ಕ್ರಿ.ಶ. ೮೦೦ಕ್ಕೆ ಹಿಂದೆಯೇ ಅವನು ಇದ್ದಿರಬೇಕು. ಅಲ್ಲದೆ ಕೆಲವು ಪೂರ್ವ ಕಥೆಗಳ ಆಧಾರದಿಂದ ಅವನ ಕಾಲವನ್ನು ಸುಮಾರು ೬೭೦ನೆಯ ಇಸವಿಯಷ್ಟು ಹಿಂದೆ ಹಾಕಬಹುದು.* ಅಂತೂ ಕ್ರಿ.ಶ. ೯೪೯ರಲ್ಲಿ ಹುಟ್ಟಿದ ರನ್ನನಿಗಿಂತ ಎಷ್ಟೋ ಮುಂಚೆಯೇ 'ವೇಣೀಸಂಹಾರ'ವು ಹುಟ್ಟಿತೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ರನ್ನನು ಈ ನಾಟಕವನ್ನು ನೋಡಿದ್ದನೆಂದೇ ನಾವು ಒಪ್ಪಿಕೊಳ್ಳಬೇಕು. ಮ.ರಾ.ಮಂ.ಆ. ರಾಮಾನುಜೈಯಂಗಾರ್ಯರು ಬರೆದಿರುವಂತೆ ಅವನು 'ವೇಣೀ ಸಂಹಾರ'ವೆಂಬ ಪದವನ್ನು ಎರಡು ಸಲ (I. ೭೦; VIII. ೪೮ ವ.) ಈ ಗ್ರಂಥ ('ಗದಾಯುದ್ಧ')ದಲ್ಲಿ ಉಪಯೋಗಿಸಿದ್ದಾನೆ. ಈ ಪದವನ್ನು ಅವನು ಹಠಾತ್ತಾಗಿ ಉಪಯೋಗಿಸಿದ್ದಾನೆಂದು ಹೇಳುವುದಕ್ಕಾಗುವುದಿಲ್ಲ."† ಅಲ್ಲದೆ, ದ್ರೌಪದಿಯೊಡನೆ 'ಬುದ್ಧಿಮತಿಯೆಂಬ ಮೇಳದ ಕೆಳದಿ' ಇದ್ದಳೆಂದು ರನ್ನನು ಹೇಳಿರುವುದು (I. ೫೫ ವ) 'ವೇಣೀಸಂಹಾರ'ದ ಮೊದಲನೆಯ ಅಂಕದಲ್ಲಿಯೂ, ಆರನೆಯ ಅಂಕದಲ್ಲಿಯೂ ಬರುವ ಬುದ್ಧಿಮತಿಕೆ ಎಂಬ ದ್ರೌಪದಿಯ ಚೇಟಿಯನ್ನು ಸ್ಮರಿಸಿಯೇ ಎಂದು ತೋರುತ್ತದೆ.

ಇವೆಲ್ಲಕ್ಕಿಂತಲೂ ಪ್ರಬಲವಾದ ಕಾರಣವೊಂದಿದೆ. 'ಗದಾಯುದ್ಧ'ದ ಕೆಲವು ಪದ್ಯಗಳು 'ವೇಣೀಸಂಹಾರ'ದಲ್ಲಿ ಬರುವ ಪದ್ಯಗಳ 'ಪಡಿನೆಳಲು' ಗಳಂತಿವೆಯೆಂದು ಮ.ರಾ. ರಾಮಾನುಜೈಯಂಗಾರ್ಯರು ತೋರಿಸಿದ್ದಾರೆ.‡ ಅವುಗಳಲ್ಲಿ ಮುಖ್ಯವಾದ ಎರಡನ್ನು ಇಲ್ಲಿ ಉದಾಹರಿಸಬಹುದು.

'ವೇಣೀಸಂಹಾರ'ದಲ್ಲಿ ದುರ್ಯೋಧನನ ಮಿತ್ರನಾದ ರಾಕ್ಷಸನೊಬ್ಬನು ತಾಪಸ ವೇಷದಿಂದ ಯುಧಿಷ್ಠಿರನ ಬಳಿಗೆ ಬಂದು, ಭೀಮನು ದುರ್ಯೋಧನನ

---

* Dr. A.R. Keith : *The Sanskrit Drama* pp. 212 ನೋಡಿ.

† 'ಗದಾಯುದ್ಧ'ದ ಪರಿಷ್ಕೃತ ತೃತೀಯ ಮುದ್ರಣಕ್ಕೆ ಮ.ರಾ. ರಾಮಾನುಜ ಐಯಂಗಾರ್ಯರು ಕೊಟ್ಟಿರುವ ಪ್ರಸ್ತಾವನೆ : ಪು. XXXI
ಪಂಪನೂ 'ವೇಣೀಸಂಹಾರ'ವೆಂಬ ಪದವನ್ನು ಪ್ರಯೋಗಿಸಿದ್ದಾನೆ; "ಅನ್ನೆಗಂ ವೇಣೀ ಸಂಹಾರೋರು ಭಂಗ ಮಕುಟ ಭಂಗಂಗಳೆಂಬ ತನ್ನ ಮಹಾಪ್ರತಿಜ್ಞೆಯಂ ನೆಱಪಿದ ಭೀಮಸೇನ ನಳವಲ್ಲದೆ ಪೊಗಟ್ಟು . . ." (ಪಂಪಭಾರತ, XIII ೯೮ ವ)

‡ 'ಗದಾಯುದ್ಧ'ಕ್ಕೆ ಪ್ರಸ್ತಾವನೆ, ಅನುಬಂಧ ೧.

ಗದಾಘಾತದಿಂದ ಮಡಿದನೆಂದು ಸುಳ್ಳು ಹೇಳುತ್ತಾನೆ. ಅದನ್ನು ನಂಬಿ ಯುಧಿಷ್ಠಿರನು ತಾನೂ ಸಾಯಬೇಕೆಂದು ನಿಶ್ಚಯಿಸಿ ಮೊದಲು ತರ್ಪಣವನ್ನು ಬಿಡುತ್ತಾ ಹೀಗೆ ಗೋಳಾಡುತ್ತಾನೆ :

ಮಯಾ ಪೀತಂ ಪೀತಂ ತದನು ಭವತಾಂಬಾ ಸ್ತನಯುಗಂ
ಮದುಚ್ಛಿಷ್ಟೈರ್ವೃತ್ತಿಂ ಜನಯಸಿ ರಸೈರ್ವತ್ಸಲತಯಾ ।
ವಿತಾನೇಷ್ವಪ್ಯೇವಂ ತವ ಮಮ ಚ ಸೋಮೇ ವಿಧಿರಭೂ
ನ್ನಿವಾಪಾಂಭಃ ಪೂರ್ವಂ ಪಿಬಸಿ ಕಥಮೇವಂ ತ್ವಮಧುನಾ ॥ VI. ೩೧

["ತಾಯ ಎದೆ ಹಾಲನ್ನು ನಾನು ಮೊದಲು ಕುಡಿದೆ, ಬಳಿಕ ನೀನು ಕುಡಿದೆ; ನಾನು ಉಂಡು ಮಿಕ್ಕುದನ್ನು ಭಕ್ತಿಯಿಂದ ನೀನು ಸೇವಿಸುತ್ತಿದ್ದೆ. ಯಾಗಗಳಲ್ಲೂ ಕೂಡ ಸೋಮಪಾನ ಮಾಡುವಾಗ ನನಗೂ ನಿನಗೂ ಇದೇ ಕ್ರಮವು ನಡೆಯಿತು. ತರ್ಪಣೋದಕವನ್ನು ಮಾತ್ರ ಹೇಗೆ ನೀನೀಗ ಮೊದಲೇ ಕುಡಿಯುವೆ?"]

'ಗದಾಯುದ್ಧ'ದಲ್ಲಿ ದುಶ್ಶಾಸನನ ದುರ್ಗತಿಯನ್ನು ನೋಡಿ ನೋಡಲಾರದೆ ದುರ್ಯೋಧನನು :

ಜನನೀಸ್ತನ್ಯಮನುಂಡೆನಾಂ ಬಳಿಕೆ ನೀಂ ಸೋಮಾಮೃತಂ ದಿವ್ಯ ಭೋ
ಜನಮೆಂಬಿಂತವನುಂಡೆನಾಂ ಬಳಿಕೆ ನೀಂ ಬಾಲತ್ವದಿಂದೆಲ್ಲಿಯುಂ
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೂಟ್ ತಡಮಾಯ್ತುದೊಂದೆಡೆಯೊಳಂ ಹಾ ವತ್ಸ
ದುಶ್ಶಾಸನಾ V.೭

ಎಂದು 'ವಿಪ್ರಳಾಪಂ ಗೆಯ್ಯು'ತ್ತಾನೆ.

ಈ ಎರಡೂ ಪದ್ಯಗಳಿಗೂ ಭಾವ ಸಾಮ್ಯವಿದೆ. ಧರ್ಮರಾಯನ ಬಾಯಿಂದ ಭಟ್ಟನಾರಾಯಣನು ಹೇಳಿಸಿರುವುದನ್ನೇ ರನ್ನನು ಇನ್ನೂ ಉಚಿತವಾಗುವಂತೆ ದುರ್ಯೋಧನನಿಗೆ ಆರೋಪಿಸಿ ರಸಪುಷ್ಟಿಯನ್ನುಂಟುಮಾಡಿದ್ದಾನೆ. ಸಂದರ್ಭಕ್ಕೆ ಹೊಂದಿರುವುದರಿಂದ ರನ್ನನೇ ಸ್ವತಂತ್ರವಾಗಿ ಈ ಭಾವವನ್ನು ಕಲ್ಪಿಸಿದನೆಂದು ಹೇಳಿದರೂ ಒಂದು ವೇಳೆ ತಡೆಯುತ್ತದೆ. ಆದರೂ 'ವೇಣೀಸಂಹಾರ'ದಿಂದ ಸೂಚನೆಯನ್ನಾದರೂ ರನ್ನನು ಪಡೆದಿರಬೇಕೆಂದು ಊಹಿಸುವುದೂ ತಪ್ಪಾಗಲಾರದು.

'ವೇಣೀಸಂಹಾರ'ದ ಮೊದಲನೆಯ ಅಂಕದಲ್ಲಿ ಭೀಮನು ದ್ರೌಪದಿಯೊಂದಿಗೆ ಮಾತನಾಡುತ್ತಿರುವಾಗ ಅವಳು ದುಂದುಭಿಯ ಶಬ್ದವನ್ನು ಕೇಳಿ ಪ್ರಶ್ನೆ ಮಾಡಲು ಅವನು ರಣಯಜ್ಞದ ಸ್ವರೂಪವನ್ನು ವಿವರಿಸುವನು :

ಚತ್ವಾರೋ ವಯಮೃತ್ವಿಜಃ ಸ ಭಗವಾನ್ ಕರ್ಮೋಪದೇಷ್ಟಾ ಹರಿಃ
ಸಂಗ್ರಾಮಾಧ್ವರ ದೀಕ್ಷಿತೋ ನರಪತಿಃ ಪತ್ನೀ ಗೃಹೀತವ್ರತಾ ।

ಕೌರವ್ಯಾಃ ಪಶವಃ ಪ್ರಿಯಾ ಪರಿಭವ ಕ್ಲೇಶೋಪಶಾಂತಿಃ ಫಲಂ
ರಾಜನ್ಯೋಪನಿಮಂತ್ರಣಾಯ ರಸತಿ ಸ್ಫೀತಂ ಯಶೋದುಂದುಭಿಃ ॥
I. ೨೫

["ನಾವು ನಾಲ್ವರು ಋತ್ವಿಜರು. ಕೃಷ್ಣಭಗವಂತನೇ ಆರ್ಚಾರ್ಯನು. ರಾಜನೇ ರಣಯಜ್ಞದಲ್ಲಿ ದೀಕ್ಷಿತನು. ಪತ್ನಿ (=ದ್ರೌಪದಿ)ಯೇ ವ್ರತವನ್ನು ಕೈಕೊಂಡಿರುವಳು. ಕೌರವರೇ ಪಶುಗಳು. ಪ್ರಿಯೆ (=ದ್ರೌಪದಿ)ಗೆ ಅಪಮಾನದಿಂದುಂಟಾದ ಸಂತಾಪವನ್ನು ಮಾಣಿಸುವುದೇ ಫಲವು. ಕ್ಷತ್ರಿಯರನ್ನು ಕರೆಯುವುದಕ್ಕಾಗಿ ದುಂದುಭಿಯು ವಿಜೃಂಭಣೆಯಿಂದ ಮೊಳಗುತ್ತಿರುವುದು."]

ಈ ಪದ್ಯದೊಂದಿಗೆ, 'ಗದಾಯುದ್ಧ'ದ ಎಂಟನೆಯ ಆಶ್ವಾಸದಲ್ಲಿ ದುರ್ಯೋಧನನು ಬಿದ್ದ ಬಳಿಕ ದ್ರೌಪದಿಗೆ ಭೀಮನು ಹೇಳುವ ಈ ಮಾತನ್ನು ಹೋಲಿಸಿ :

ಅರಸಂ ದೀಕ್ಷಿತನಿಲ್ಲಿ ಋತ್ವಿಜರುಮೆಮ್ಮೀ ನಾಲ್ವರುಂ ಸಂಗರಾ
ಧ್ವರದೊಳ್ ತಾನುಪದೇಶಕಂ ಮುರಹರಂ ನೀನುಂ ಗೃಹೀತವ್ರತಾ
ಚರಣವ್ಯಾಪಿಕೆಯುಂ ಭವತ್ಪರಿಭವಂ ಸಂಚಾರಕಂ ಕೌರವೇ
ಶ್ವರನೀತಂ ಪಶುವಾಗೆ ಬೇಳ್ದೆನಿವನಂ ಕೋಪಾಗ್ನಿಯಿಂದಗ್ನಿಜೇ VII. ೪೬

ರನ್ನನ ಪದ್ಯದ ಪೂರ್ವಾರ್ಧವು ಸಂಸ್ಕೃತ ಪದ್ಯದ ಪೂರ್ವಾರ್ಧವನ್ನು ಪರಿವರ್ತಿಸಿದಂತಿದೆಯಲ್ಲವೆ! 'ಸಂಗ್ರಾಮಾಧ್ವರ (=ಸಂಗರಾಧ್ವರ)' 'ಗೃಹೀತ ವ್ರತೆ' – ಮೊದಲಾದ ಪದಗಳು ಕೂಡ ಮೂಲದಲ್ಲಿದ್ದಂತೆಯೇ ಇವೆ. ಅಲ್ಲದೆ ರನ್ನನು ಜೈನನು; ಯಜ್ಞವೆಂದರೆ ಅವನಿಗೆ ಸೈರಿಸದು. ಆದುದರಿಂದ ಈ ಯಜ್ಞ ವರ್ಣನೆಯ ಉತ್ಕೃಷ್ಟವಾದ ಕಲ್ಪನೆಯನ್ನು ಅವನು 'ವೇಣೀಸಂಹಾರ'ದಿಂದಲೇ ಸ್ವೀಕರಿಸಿರಬೇಕೆನ್ನುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ.

ಮ.ರಾ. ರಾಮಾನುಜೈಯಂಗಾರ್ಯರು ಕೈಬಿಟ್ಟಿರುವ ಇನ್ನೊಂದು ಹೋಲಿಕೆಯನ್ನು ನಾವು ನೋಡಬಹುದು. 'ವೇಣೀಸಂಹಾರ'ದ ಚತುರ್ಥಾಂಕದಲ್ಲಿ ಸುಂದರಕನೆಂಬ ಭಟನು ದುರ್ಯೋಧನನನ್ನು ಹುಡುಕಿಕೊಂಡು ರಣರಂಗದಿಂದ ಬರುತ್ತಾ ಅವನನ್ನು ಕಾಣದೆ ಅವನ ದುಸ್ಥಿತಿಯನ್ನು ನೆನೆದು ದೈವವನ್ನು ನಿಂದಿಸಿ ತನಗೆ ತಾನೇ ಕಡೆಗೆ ಹೇಳಿಕೊಳ್ಳುವನು :

"ಅಥವಾ ಕಿಮತ್ರ ದೈವಮುಪಾಲಭೇ । ತಸ್ಯ ಖಲ್ವಿದಂ ನಿರ್ಭರ್ತ್ಸಿತ ವಿದುರ ವಚನ ಬೀಜಸ್ಯ ಅವಧೀರಿತ ಪಿತಾಮಹ ಹಿತೋಪದೇಶಾಂಕುರಸ್ಯ ಶಕುನಿ ಪ್ರೋತ್ಸಾಹನಾದಿ ವಿರೂಢ ಮೂಲಸ್ಯ ಜತುಗೃಹದ್ಯೂತ ವಿಷ ಶಾಖಿನಃ ಸಂಭೂತ ಚಿರಕಾಲ ಸಂಬದ್ಧ ವೈರಾನಲವಾಲಸ್ಯ ಪಾಂಚಾಲೀಕೇಶಗ್ರಹಣ ಕುಸುಮಸ್ಯ ಫಲಂ ಪರಿಣಮಿತಿ ॥ (IV. ೯ ಗ. ಛಾಯಾ)

["ದೈವವನ್ನು ಇಲ್ಲಿ ಏಕೆ ನಿಂದಿಸಲಿ! ವಿದುರ ವಚನ ತಿರಸ್ಕಾರವೇ ಬೀಜ, ಭೀಷ್ಮ ಹಿತೋಪದೇಶ ಧಿಕ್ಕಾರವೇ ಮೊಳಕೆ, ಶಕುನಿಯ ಪ್ರೋತ್ಸಾಹವೇ ಬೇರೂರುವಿಕೆ– ಹೀಗೆ ಬೆಳೆದ ಲಾಕ್ಷಾಗೃಹ ದ್ಯೂತರೂಪಿಯಾದ ವಿಷವೃಕ್ಷಕ್ಕೆ ಬಹುಕಾಲದಿಂದ ಕೂಡಿ ಕಟ್ಟಿದ ವೈರವೇ ಪಾತೆಯಾಗಿ ದ್ರೌಪದೀ ಕೇಶಗ್ರಹಣವೇ ಹೂವಾಗಿ ಈಗ ಫಲವು ಬಿಡುತ್ತಿರುವುದು."]

'ಗದಾಯುದ್ಧ'ದಲ್ಲಿ ದುರ್ಯೋಧನನಿಗೆ ಸಂಧಿ ಮಾಡಿಕೊಳ್ಳೆಂದು ಎಷ್ಟು ಹೇಳಿದರೂ ಪ್ರಯೋಜನವಾಗದಿರಲು ಭೀಷ್ಮರು ಕಡೆಗೆ ಹೀಗೆ ನಿಶ್ಚಯಿಸಿ ಹೇಳುವರು :

ಜತುಗೇಹಾನಲ ಬೀಜಮುಗ್ರ ವಿಷ ಸಂಜಾತಾಂಕುರಂ ಕ್ರೀಡನೋ
ದ್ಧತಿ ಕೃದ್ಯೂತ ವಿನೋದ ಪಲ್ಲವಚಯಂ ಪಾಂಚಾಲರಾಜಾತ್ಮಜಾ
ಯತ ಕೇಶಗ್ರಹ ಪುಷ್ಪಮುಂ ಬಳೆದುದಾ ವೈರದ್ರುಮಂ ಕೌರವ
ಕ್ಷಿತಿಪಾಲೋರು ಕಿರೀಟಭಂಗ ಭಯಮಂ ಪೇಟ್ ಮಾಡದೇಂ ಪೋಕುಮೇ
V. ೫೭

ಇಲ್ಲಿ ವರ್ಣನೆಯಲ್ಲಿ ವ್ಯತ್ಯಾಸಗಳಿದ್ದರೂ ರನ್ನನ 'ವೈರ ದ್ರುಮ'ವು ಭಟ್ಟನಾರಾಯಣನ 'ವಿಷಶಾಖಿ'ಯ ಅಡಿಯಲ್ಲೇ ಬೆಳೆಯಿತೆಂದು ಹೇಳಬಹುದು. ಪುಷ್ಪವು ಎರಡರಲ್ಲಿಯೂ ಒಂದೇ ಆಗಿದೆ. 'ವೇಣೀಸಂಹಾರ'ದಲ್ಲಿರುವುದಕ್ಕಿಂತ ರನ್ನನ ವರ್ಣನೆಯಲ್ಲಿ ಸ್ವಾರಸ್ಯವು ಹೆಚ್ಚಾಗಿದೆ; ಅವನ ವಿವರಣೆ ಹೆಚ್ಚಾಗಿ ಸಮರ್ಪಕವಾಗಿದೆ. ಅಲ್ಲಿಯ ಭಾವವನ್ನು ರನ್ನನು ತನಗೆ ಬೇಕಾದಂತೆ ತಿದ್ದಿ ತನ್ನದಾಗಿ ಮಾಡಿಕೊಂಡಿದ್ದಾನೆ.

'ವೇಣೀಸಂಹಾರ'ದಿಂದ ರನ್ನನು ಐದಾರು ಪದ್ಯಗಳನ್ನು ತೆಗೆದುಕೊಂಡಿದ್ದರೆ ಹೆಚ್ಚಾಯಿತು. ಅಲ್ಲಿಗೆ ಅವನ ಋಣ ಸಂಬಂಧವು ಹರಿಯಿತು. ಇನ್ನು ಯಾವ ವಿಧದಲ್ಲಿಯೂ 'ಗದಾಯುದ್ಧ'ವು 'ವೇಣೀಸಂಹಾರ'ವನ್ನು ಅನುಸರಿಸಿಲ್ಲ. 'ವೇಣೀ ಸಂಹಾರ'ದ ಪ್ರಾರಂಭದಲ್ಲಿರುವಂತೆ 'ಗದಾಯುದ್ಧ'ದಲ್ಲಿಯೂ ಮೊದಲು ದ್ರೌಪದೀ ಭೀಮಸೇನರ ಸಂಭಾಷಣೆಯನ್ನು ನಾವು ಕೇಳುತ್ತೇವೆಯಾದರೂ ಅಲ್ಲಿಯ ಸಂದರ್ಭವೇ ಬೇರೆ. ಇಲ್ಲಿಯದೇ ಬೇರೆ. 'ವೇಣೀಸಂಹಾರ'ದಲ್ಲಿ ಬರುವ ಸಂಭಾಷಣೆಯು ಭಾರತ ಯುದ್ಧಕ್ಕೆ ಮೊದಲು ಜರುಗುವುದು. 'ಗದಾಯುದ್ಧ'ದಲ್ಲಾದರೋ ದುಶ್ಯಾಸನ ಕರ್ಣಾದಿಗಳೆಲ್ಲರೂ ಮಡಿದು ದುರ್ಯೋಧನನೊಬ್ಬನೇ ಉಳಿದಿರುವನು. ಭೀಷ್ಮ ಧೃತರಾಷ್ಟ್ರರು ಬಂದು ಕೇಳಿಕೊಂಡರೆ ಧರ್ಮರಾಯನು ದಾಕ್ಷಿಣ್ಯದಿಂದ ತಿರುಗಿ ಎಲ್ಲಿ ಸಂಧಿಗೆ ಒಡಂಬಡುವನೋ ಎಂದು ಹೆದರಿ ದ್ರೌಪದಿಯೇ ಭೀಮನ ಹತ್ತಿರಕ್ಕೆ ಬಂದು ಅವನನ್ನು ಹುರಿಗೊಳಿಸುವಳು. 'ವೇಣೀಸಂಹಾರ'ದಲ್ಲಿ ಭೀಮನೇ ಮೊದಲು ಕೃದ್ಧನಾಗಿರುವನು. ಅಣ್ಣನು ಸಂಧಿಯ ಮಾತನ್ನಾಡಿದರೂ "ಇದೊಂದು ದಿನ ನೀನು ನನಗೆ ಹಿರಿಯನಲ್ಲ; ನಾನು ನಿನಗೆ ವಿಧೇಯನಲ್ಲ" ಎಂದು ತಿಳಿಸುವಂತೆ ಸಹದೇವನಿಗೆ ಹೇಳಿ ಆಯುಧವನ್ನು ತರುವುದಕ್ಕಾಗಿ ಭ್ರಾಂತಿಯಿಂದ ದ್ರೌಪದಿಯ ಬಿಡಾರಕ್ಕೆ ನುಗ್ಗುವನು.

ಆಗ ಅಲ್ಲಿ ಅವನೂ ಸಹದೇವನೂ ಆಡುವ ಮಾತುಗಳನ್ನು ಬಳಿಕ ಬಂದ ದ್ರೌಪದಿಯು ಕೇಳಿ ಸಂತುಷ್ಟಳಾಗುವಳು.

ಧೃತರಾಷ್ಟ್ರನೂ ಗಾಂಧಾರಿಯೂ ಮಗನನ್ನು ಹುಡುಕಿಕೊಂಡು ಬರುವ ದೃಶ್ಯವೊಂದು ಎರಡರಲ್ಲಿಯೂ ಬರುತ್ತದೆ. ಅದರಂತೆ 'ಪಂಪಭಾರತ'ದಲ್ಲಿಯೂ ಬರುತ್ತದೆ. ದುರ್ಯೋಧನನು ಸತ್ತನೆಂದೇ ಅವನ ತಂದೆ ತಾಯಿಗಳು ಮೊದಲು ತಿಳಿದಂತೆ ರನ್ನನು ಕಲ್ಪಿಸಿದ್ದಾನೆ. ಇದು ಮಿಕ್ಕ ಎರಡು ಗ್ರಂಥಗಳಲ್ಲಿ ಇಲ್ಲ. ಕೆಲವು ಭಾವಗಳು ಮೂರು ಗ್ರಂಥಗಳಲ್ಲಿಯೂ ಕಂಡುಬಂದರೂ ಅವು ಸ್ವೀಕರಣವೆಂದೇ ಸಾಧಿಸುವುದು ತಪ್ಪು. ಸಂದರ್ಭವು ಒಂದೇ ಆಗಿದ್ದಾಗ ಮಾತೂ ಒಂದೇ ಆಗುವುದು ಆಶ್ಚರ್ಯಕರವಲ್ಲ.

'ವೇಣೀಸಂಹಾರ'ದಲ್ಲಿ ದುಶ್ಶಾಸನ ಕರ್ಣಾದಿಗಳ ಮರಣದ ವಾರ್ತೆಯನ್ನು ಕೇಳಿ ದುರ್ಯೋಧನನು ಮಾಡುವ ಪ್ರಲಾಪಕ್ಕೂ 'ಗದಾಯುದ್ಧ'ದಲ್ಲಿ ಬರುವ ಪ್ರಲಾಪಗಳಿಗೂ ಸ್ಪಷ್ಟವಾದ ಸಂಬಂಧವು ಯಾವುದೂ ಇಲ್ಲ. ಕರ್ಣನನ್ನು ನೆನೆದು ದುರ್ಯೋಧನನು ಗೋಳಾಡುವ ಸಂದರ್ಭದ ಒಂದು ಪದ್ಯದ ಛಾಯೆ ಮಾತ್ರ 'ಗದಾಯುದ್ಧ'ದಲ್ಲಿ ಬರುತ್ತದೆ.*

'ಗದಾಯುದ್ಧವು'ವು ನಾಟಕದಂತೆ ಇದೆಯಲ್ಲ, ಇದೇನಾದರೂ 'ವೇಣೀಸಂಹಾರ' ನಾಟಕದ ಪ್ರಭಾವದಿಂದ ಹೀಗಾಯಿತೆ? ಎಂದು ಕೆಲವರಿಗೆ ಶಂಕೆ ಹುಟ್ಟಬಹುದು. ಇದಕ್ಕೆ ಯಾವ ಆಧಾರವೂ ಇಲ್ಲ. 'ವೇಣೀಸಂಹಾರ'ದ ಕಥಾಭಾಗವೇ ಬೇರೆ, ಇಲ್ಲಿಯದೇ ಬೇರೆ; ಅಲ್ಲಿಯ ಬಂಧವೇ ಬೇರೆ. ಇವೆರಡಕ್ಕೂ ಯಾವ ಸಂಬಂಧವೂ ಇಲ್ಲವೆಂದು ಈ ಎರಡು ಗ್ರಂಥಗಳ ಕಥಾ ಸಾರಾಂಶವನ್ನು ಹೋಲಿಸಿದರೆ ವ್ಯಕ್ತವಾಗುವುದು. 'ಗದಾಯುದ್ಧ'ವು ನಾಟಕದಂತೆ ಇರುವುದಕ್ಕೆ ಕಾರಣವು ರನ್ನನ ಪ್ರತಿಭೆಯೊಂದೇ.

ಚರ್ಚೆ ಬರುವುದೆಲ್ಲಾ ರನ್ನನಿಗೂ ಪಂಪನಿಗೂ ಇರುವ ಸಂಬಂಧದ ವಿಚಾರದಲ್ಲಿ. ಪಂಪನು 'ಆದಿಪುರಾಣ'ವನ್ನು ಕ್ರಿ.ಶ. ೯೪೧ರಲ್ಲಿ ಬರೆದನು. ಅದಾದ ಕೆಲವು ದಿನಗಳಿಗೆ 'ವಿಕ್ರಮಾರ್ಜುನ ವಿಜಯ'ವನ್ನೂ ರಚಿಸಿರಬೇಕು. ರನ್ನನು ಹುಟ್ಟಿದುದೇ ಕ್ರಿ.ಶ. ೯೪೯ರಲ್ಲಿ; 'ಗದಾಯುದ್ಧ'ವನ್ನು ಬರೆದುದು ಸುಮಾರು ೯೮೨ರಲ್ಲಿ. ಆದ್ದರಿಂದ ಅವನು 'ವಿಕ್ರಮಾರ್ಜುನ ವಿಜಯ'ವನ್ನು ನೋಡಿದ್ದನೆಂದು ಹೇಳುವುದಕ್ಕೆ ಕಾಲ ನಿರ್ಣಯ ದೃಷ್ಟಿಯಿಂದ ಯಾವ ತಡೆಯೂ ಇಲ್ಲ. ಇದೊಂದು ನಿರ್ಧರವಾದ ಮೇಲೆ ರನ್ನನು 'ಪಂಪಭಾರತ'ವನ್ನು ನೋಡಿದ್ದನೆಂದೇ ಅಲ್ಲ, ಚೆನ್ನಾಗಿ ಮನನ ಮಾಡಿದ್ದನೆಂದು ಕೂಡ ನಿರ್ಭಯವಾಗಿ ಸಾರಬಹುದು. ಹೀಗೆ ಹೇಳುವುದಕ್ಕೆ 'ಗದಾಯುದ್ಧ'ವನ್ನೂ 'ಪಂಪಭಾರತ'ವನ್ನೂ ಸಾಮಾನ್ಯವಾಗಿ ಓದಿಕೊಂಡಿರುವುದು ಕೂಡಾ ಅನಾವಶ್ಯಕ.

---

* 'ಗದಾಯುದ್ಧ' : V. ೩೭, 'ವೇಣೀಸಂಹಾರ' : V. ೧೯.

ಕಡೆಗೆ ಮ. ರಾ. ರಾಮಾನುಜೈಯಂಗಾರ‍್ಯರು ಕೊಟ್ಟಿರುವ ಅವೆರಡರ ಸಾರಾಂಶಗಳನ್ನು* ಹೋಲಿಸಿಬಿಟ್ಟರೆ ಸಾಕು; ಅವಕ್ಕೆ ಹತ್ತಿರದ ಸಂಬಂಧವಿರಬೇಕೆಂದು ಯಾರಿಗಾದರೂ ಹೊಳೆಯುವುದು.

ಮ. ರಾ. ರಾಮಾನುಜೈಯಂಗಾರ‍್ಯರು "ಪಂಪನ ಛಾಯೆಯು ಈ ಗ್ರಂಥದಲ್ಲಿ ಸರ್ವತ್ರ ಕಂಗೊಳಿಸುತ್ತದೆ"–ಎಂದು ಹೇಳಿ, ಬಳಿಕ "ಪಂಪನೂ ಕೂಡ ತನ್ನ ಭಾರತದ ಕಥೆಯನ್ನು ಬೇರೆ ಯಾವುದೋ ಒಂದು ಭಾರತದ ಕಥೆಯನ್ನನುಸರಿಸಿ ಮಾರ್ಪಡಿಸಿರುವ ಹಾಗೆಯೂ, ಪ್ರಾಚೀನ ಮಹಾಕವಿಗಳ ಅಭಿಪ್ರಾಯವನ್ನು ತೆಗೆದುಕೊಂಡಹಾಗೆಯೂ ತಿಳಿದುಬರುತ್ತದೆ."† ಎಂದು ಬರೆದಿದ್ದಾರೆ. ಪಂಪರನ್ನರಿಬ್ಬರ ಕಥೆಗೂ ಮೂಲವು ಬೇರೊಂದು ಪುರಾತನ ಭಾರತವಾಗಿದ್ದು ಪಂಪನಿಗೂ ರನ್ನನಿಗೂ ಪ್ರತ್ಯಕ್ಷ ಸಂಬಂಧವಿಲ್ಲದಿದ್ದರೂ ಇರಬಹುದು ಎಂದು ಅವರ ಬರವಣಿಗೆಯಿಂದ ಧ್ವನಿತವಾಗುತ್ತದೆ. ಆದರೆ ಹೀಗೆಯೇ ಸರಿ ಎಂದು ನಿಷ್ಕರ್ಷಿಸಲು ಸಾಧ್ಯವಿಲ್ಲ. ಪಂಪನಿಗೆ ಆಧಾರವಾಗಿರಬಹುದಾದ ಗ್ರಂಥವು ಇದುವರೆಗೆ ಸಿಕ್ಕಿಲ್ಲ. ರನ್ನನು ಪಂಪನನ್ನು ಯಾವ ಯಾವ ಅಂಶಗಳಲ್ಲಿ ಅನುಸರಿಸಿರುವನೋ ಅವೆಲ್ಲವೂ ಮೂಲ ಗ್ರಂಥದಲ್ಲಿದ್ದುವೆಂದು ಹೇಗೆ ತಾನೆ ಸಾಧಿಸಲಾದೀತು! ಶೋಧನೆಯಿಂದ ಹೊಸ ಸಂಗತಿಗಳು ಹೊರ ಪಡುವವರೆಗೂ ಪಂಪನೇ ರನ್ನನ ಗುರುವೆಂದು ನಾವು ಒಪ್ಪಿಕೊಳ್ಳಲೇಬೇಕು.

ರನ್ನನು 'ಗದಾಯುದ್ಧ'ದ ಕಟ್ಟಡವನ್ನು 'ಪಂಪಭಾರತ'ದ ಹದಿಮೂರನೆಯ ಆಶ್ವಾಸದ§ ತಳಹದಿಯ ಮೇಲೆಯೇ ಕಟ್ಟಿದ್ದಾನೆಂದು ಹೇಳುವುದಕ್ಕೆ ಪ್ರಬಲವಾದ ಕಾರಣಗಳುಂಟು. 'ಮಹಾಭಾರತ'ದ ಕಥೆಗೂ 'ಪಂಪಭಾರತ'ದ ಕಥೆಗೂ ಅನೇಕ ವ್ಯತ್ಯಾಸಗಳಿವೆ. ಹಾಗೆ ವ್ಯತ್ಯಾಸವಿರುವ ಕಡೆಗಳಲ್ಲೆಲ್ಲಾ ರನ್ನನು ಸಾಧಾರಣವಾಗಿ ಪಂಪನ ದಾರಿಯಲ್ಲೇ ಹೋಗಿದ್ದಾನೆ. 'ಗದಾಯುದ್ಧ'ದ ಕಥಾಭಾಗವು ಸ್ವಲ್ಪ; ಅದರಲ್ಲಿ ಮುಕ್ಕಾಲುಪಾಲೆಲ್ಲಾ 'ಮಹಾಭಾರತ'ದಲ್ಲಿ ಇಲ್ಲವೆಂದೇ ಹೇಳಬೇಕು. 'ಗದಾಯುದ್ಧ'ದಲ್ಲಿ ಬರುವ ಹೃದಯವಿದ್ರಾವಕ ಪ್ರಲಾಪಗಳಿಗೂ ಸ್ವಾರಸ್ಯವುಳ್ಳ ಸನ್ನಿವೇಶಗಳಿಗೂ ಸೂಚನೆಯನ್ನು ನಾವು 'ಪಂಪಭಾರತ'ದ ಹದಿಮೂರನೆಯ ಆಶ್ವಾಸದಲ್ಲಿಯೇ ಕಾಣುವುದು.

'ಮಹಾಭಾರತ'ದಂತೆ, ತನ್ನ ಸೈನ್ಯವೆಲ್ಲವೂ ಯುದ್ಧದಲ್ಲಿ ಹತವಾದ ಮೇಲೆ ದುರ್ಯೋಧನನು ಭೀತಿಯಿಂದ ತಾನಾಗಿಯೇ ಹೋಗಿ ವೈಶಂಪಾಯನ ಸರೋವರದಲ್ಲಿ ಅಡಗಿಕೊಳ್ಳುವನು. ಕೃಪಾಶ್ವತ್ಥಾಮ ಕೃತವರ್ಮರು ಅಲ್ಲಿಗೆ ಅವನನ್ನು ಹುಡುಕಿಕೊಂಡು ಬಂದು, "ನೀನು ಹೀಗೆ ಅವಿತುಕೊಳ್ಳಬಾರದು. ನಮ್ಮ ಸಹಾಯದಿಂದ ಯುದ್ಧ

* 'ಗದಾಯುದ್ಧ'ಕ್ಕೆ ಪ್ರಸ್ತಾವನೆ : ಪು. LVII-LXXIV ಮತ್ತು ಅನುಬಂಧ ೩.

† 'ಗದಾಯುದ್ಧ'ಕ್ಕೆ ಪ್ರಸ್ತಾವನೆ : ಪು. XXXV-XXXVI.

§ 'ಗದಾಯುದ್ಧ'ದ ಕೊನೆಯ ಆಶ್ವಾಸಕ್ಕೂ 'ಪಂಪಭಾರತ'ದ ಹದಿನಾಲ್ಕನೆಯ ಆಶ್ವಾಸಕ್ಕೂ ಸಂಬಂಧವಿದೆ; ಆದರೆ ಇದು ಮುಖ್ಯವಲ್ಲ.

ಮಾಡು. ಗೆದ್ದರೆ ಭೂಮಿಯನ್ನಾಳುವೆ; ಮಡಿದರೆ ಸ್ವರ್ಗವನ್ನು ಹೊಂದುವೆ" ಎಂದು ಪ್ರೋತ್ಸಾಹಿಸಿದರೂ ದುರ್ಯೋಧನನು ತಾನು ಬಳಲಿರುವುದರಿಂದ ಒಂದು ರಾತ್ರಿ ವಿಶ್ರಮಿಸಿಕೊಂಡು ಮರುದಿನ ಯುದ್ಧ ಮಾಡುವುದೆಂದು ಹೇಳಿ ಅವರನ್ನು ಕಳುಹಿಸಿಬಿಡುವನು. 'ಪಂಪಭಾರತ'ದಲ್ಲಿ ಏಕಾಕಿಯಾದರೂ ಶತ್ರುಗಳೊಡನೆ ಕಾದುವೆನೆಂದೇ ಹಠ ಹಿಡಿಯುವ ದುರ್ಯೋಧನನಿಗೆ ಭೀಷ್ಮರು ಉಪದೇಶಮಾಡಿ ಅಶ್ವತ್ಥಾಮಾದಿಗಳು ಸಹಾಯಕ್ಕೆ ಬರುವವರೆಗೂ ಮೈಮರೆಸಿಕೊಂಡಿರಲು ಕಷ್ಟದಿಂದ ಅವನನ್ನು ಒಡಂಬಡಿಸುವರು. ದುರ್ಯೋಧನನೂ ಮನಸ್ಸಿಲ್ಲದೆಯೇ ಕೊಳದಲ್ಲಿ ಅಡಗಿ ಅಶ್ವತ್ಥಾಮಾದಿಗಳನ್ನೇ ನಿರೀಕ್ಷಿಸುತ್ತಿರುವನು. ಕಥೆಯನ್ನು ಹೀಗೆ ಮಾರ್ಪಡಿಸಿರುವುದರಿಂದ ಪಂಪನು ದುರ್ಯೋಧನನಿಗೆ 'ಮಹಾಭಾರತ'ದಲ್ಲಿ ತಗುಲಿದ್ದ ಕಳಂಕವನ್ನು ತೊಡೆದು ಅವನ ಕೀರ್ತಿಗೆ ಕಳೆಯೇರಿಸಿದ್ದಾನೆ; ಅವನು ಶೂರ, ಉದಾತ್ತ ಎಂಬ ಭಾವವು ಪಾಠಕರಿಗೆ ಹುಟ್ಟುವಂತೆ ಮಾಡಿದ್ದಾನೆ. 'ಗದಾಯುದ್ಧ'ದಲ್ಲಿಯೂ ಕಥೆ ಇದೇ ರೀತಿಯಾಗಿದೆ.

ರಣರಂಗದಲ್ಲಿ ಸಂಜಯನೊಡನೆ ದುರ್ಯೋಧನನು ನಡೆಯುತ್ತಿರುವಾಗ 'ಮರುಳು' ಮುಂದೆ ಬಂದು ಹಾಸ್ಯಮಾಡಿ ಆಣೆಯಿಕ್ಕುವುದು. ಈ ಸನ್ನಿವೇಶವು ಪಂಪನು ಕಲ್ಪಿಸಿದುದು. 'ಗದಾಯುದ್ಧ'ದಲ್ಲಿ ರನ್ನನು ಇದನ್ನು ಇಟ್ಟುಕೊಂಡಿರುವುದಲ್ಲದೆ 'ಪಂಪಭಾರತ'ದ ಪದ್ಯಗಳ ಆಧಾರದಮೇಲೆಯೇ ದುರ್ಯೋಧನನಿಗೂ ಮರುಳಿಗೂ ನಡೆದ ಸಂಭಾಷಣೆಯನ್ನು ಬೆಳೆಸಿದ್ದಾನೆ. 'ಪಂಪಭಾರತ'ದಲ್ಲಿ ಈ ಘಟನೆಯ ವರ್ಣನೆಯು ಹೀಗಿದೆ :

> ಬೇಡ ವಿರೋಧಮೆಂತುಮರಿಕೇಸರಿಯೊಳ್ ಸಮಸಂದು ಸಂಧಿಯಂ
> ಮಾಡೆನೆ ಮಾಡಲೊಲ್ಲದೆ ಸಹೃದ್ಬಲಮೆಲ್ಲಮನಿಕ್ಕಿ ಯುದ್ಧಮಂ
> ಮಾಡಿದ ಜಾತಿಬೆಳ್ ನಿನಗಮಿಾಯೆಡಱಾದುದದೆಂದು ಮುಂದೆ ಬಂ
> ದೇಡಿಸುವಂತಿರಾಡಿದುದದೊಂದು ಮರುಳ್ ಫಣಿರಾಜ ಕೇತುವಂ
> XIII.೫೪

> ಮರುಳೆನೆ ಲೋಕದೊಳ್ ನೆಗಟ್ದಿಕೊಳ್ಳುಳದೊಳ್ ಮರುಳಾಟವಾಡುವಾಂ
> ಮರುಳೆನೊ ವಿಕ್ರಮಾರ್ಜುನನೊಳೊಲ್ಲದೆ ಸಂಧಿಯನುರ್ಕಿ ಕೆಟ್ಟ ನೀಂ
> ಮರುಳೆಯೊ ಪೇಟಿ ಪೇಟಿದೊಡೆ ಪೋಗದಿರೀಶ್ವರನಾಣೆಯೆಂದು ಪು
> ಲ್ಮರುಳಿನಿಸಾನುಮಂ ತೆಗೆದು ಕಾಡಿದುದಲ್ಲಿ ಫಣೀಂದ್ರ ಕೇತುವಂ XIII.೫೫

ಆಗಳಾ ಮರುಳ ಕೆಯ್ತಕ್ಕೆ ದುರ್ಯೋಧನಂ ಮುಗುಳ್ನಗೆ ನಕ್ಕು ಎನ್ನಂ ವಿಧಾತ್ರಂ ಮರುಳ್ಮಾಡಿದ ಕಾರಣದಿಂ ಮರುಳಕಣ್ಗಾಂ ಮರುಳಾಗಿ ತೋಱಿದನೆಂದಲ್ಲಿಂ ತಳರ್ದು . . .

ಇದರೊಡನೆ 'ಗದಾಯುದ್ಧ'ದ ಈ ಭಾಗದಲ್ಲಿ ಹೋಲಿಸಿ :

ಕದನದೊಳುಣ್ಮಿದೊಳ್ಮಿದುಳ ಕರ್ದಮದೊಳ್ ಜಗುಳ್ದಂಘ್ರಿ ಜಾಱಿಪೋ
ಪುದುಮೊಡನಿರ್ದ ಸಂಜಯನಿಳೇಶ್ವರನಂ ಪಿಡಿದೂರುಭಂಗಮಾ
ಗದೆ ವಲಮೆಂದೊಡಾಗದೆನೆ ಪುಲ್ಮರುಳೊಂದೆಡೆವೋಗಿ ಭೀಮ ಕೋ
ಪದೆ ನಿನಗೂರು ಭಂಗ ಭಯಮಾಗದೆ ಪೋಕುಮೆ ಕೌರವೇಶ್ವರಾ IV.೪೩

ಎಂದ ಮರುಳ ಮಾತು ತನಗೆ ಕರ್ಣ ಕಠೋರಮಾಗೆ ತನಗೆ ಮುನ್ನಂ ಮೈತ್ರೇಯರ್ ಕೊಟ್ಟೂರುಭಂಗ ಶಾಪಮಂ ನೆನೆನೆನೆದು ಮನದೊಳ್ ಕಟ್ಟುವಡೆದು ತಾಂ ಮಹಾಸತ್ವನಪ್ಪುದಱಿಂದದೊಂದುಮಂ ಬಗೆಯದೆ ಮರುಳ ಮಾತಿನೊಳ್ ಪುರುಳೇನೆಂದರಸಂ ಪೋಗೆವೋಗೆ–

ಅರಗಿನ ಮಾಡದೊಳ್ ವಿಷದ ಲಡ್ಡುಗೆಯೊಳ್ ಕೊಲಲೆಂದು ಬಂಧು ಮ
ತ್ಸರದೊಳೆ ವೈರಮಂ ಪದೆದು ಭೀಮನನಿನ್ನಿತರ್ಕೆ ತಂದ ನೀಂ
ಮರುಳನೊ ಭೂತಕೋಟಿವೆರಸಾಹವರಂಗದೊಳಾಡುತಿರ್ಪ ತಾಂ
ಮರುಳನೊ ನೋಟ್ಪವರ್ವರ ಮರುಳ್ತನಮಂ ಫಣಿರಾಜಕೇತನಾ IV.೪೪

ಎನೆ ಸುಯೋಧನಂ ಕೆಳಗಿವಿಗೇಳ್ದು ಮರುಳ ಮಾತಿನೊಳ್ ಪುರುಳಿಲ್ಲೆಂದು ಕಿಱಿದೆಡೆಯಂ ಪೋಗೆವೋಗೆ–

ನುಡಿಯದೆ ಪೋಗಲೀಯೆನೆಲೆ ಪೋದೊಡೆ ಧೂರ್ಜಟಿಯಾಣೆ ಮೀಱಿ ಪೋ
ದೊಡೆ ಕಲಿಭೀಮನಾಣೆಯೆನೆ ಧೂರ್ಜಟಿಯಾಣೆಗೆ ನಿಂದು ಭೀಮನಂ
ದೊಡೆ ಮುಳಿದಟ್ಟಿ ಕುಟ್ಟಲರಸಂ ಗದೆಗೊಂಡೊಡೆ ಭೂತಕೋಟಿಯುಂ
ಬಡಿಗೊಳೆ ಸಂಜಯಂ ನಯದೆ ಬಗ್ಗಿಸಿದಂ ಫಣಿರಾಜ ಕೇತುವಂ IV.೪೫

ರನ್ನನೇನೋ ಈ ಸಂಘಟನೆಯಲ್ಲಿ ಮಾರ್ಪಾಡುಗಳನ್ನು ಮಾಡಿ ವಿಸ್ತರಿಸಿದ್ದಾನೆ. ಆದರೂ ಮರುಳು ದುರ್ಯೋಧನನನ್ನು 'ನಾನು ಮರುಳೋ ನೀನು ಮರುಳೋ?' ಎಂದು ಕೇಳಿ, ಹಾಸ್ಯಮಾಡುವುದೂ, 'ಉತ್ತರ ಕೊಡದೆ ಹೋದರೆ ಈಶ್ವರನಾಣೆ' ಎನ್ನುವುದೂ 'ಪಂಪಭಾರತ'ದಿಂದಲೇ ಇಲ್ಲಿಗೆ ಬಂದಿರಬೇಕೆನ್ನುವುದು ಯಾರಿಗಾದರೂ ತೋರುವುದಲ್ಲವೆ?

'ಗದಾಯುದ್ಧ'ದ ನಾಲ್ಕೈದನೆಯ ಆಶ್ವಾಸಗಳಲ್ಲಿ ಬರುವ ದುರ್ಯೋಧನ ಪ್ರಲಾಪವು ಕರುಣ ರಸದ ಕೊನೆಯನ್ನು ಮುಟ್ಟುವುದೆಂದು ಎಲ್ಲರೂ ಒಪ್ಪುವರು. ಯುದ್ಧರಂಗದಲ್ಲಿ ಎಲ್ಲೆಲ್ಲಿಯೂ ಬಿದ್ದಿರುವ ಶವಗಳ ನಡುವೆ ದುರ್ಯೋಧನನು ಸಂಜಯನೊಡನೆ ನಡೆಯುತ್ತಾ ದ್ರೋಣ, ಅಭಿಮನ್ಯು, ಲಕ್ಷಣ, ದುಶ್ಶಾಸನ, ಕರ್ಣಾದಿಗಳ ಕಳೇಬರಗಳನ್ನು ಕಂಡು ಅಲ್ಲಲ್ಲಿ ನಿಂತು ಅವರನ್ನು ನೆನೆದು ಕಲ್ಲೂ ಕೂಡ ಕರಗುವಂತೆ

ಶೋಕಪಡುವನು. ಈ ಪ್ರಸಂಗವು ಕಾವ್ಯದೃಷ್ಟಿಯಿಂದ ಸರ್ವೋತ್ಕೃಷ್ಟವಾಗಿದೆ. ಇದನ್ನು ಈ ರೀತಿಯಾಗಿ ನಿರೂಪಿಸಿರುವುದರಿಂದಲೇ-

ಒಳಪೊಕ್ಕು ನೋಡೆ ಭಾರತ
ದೊಳಗಣ ಕಥೆಯೆಲ್ಲಮಿಾ ಗದಾಯುದ್ಧದೊಳಂ
ತೊಳಕೊಂಡತ್ತೆನೆ ಸಿಂಹಾ
ವಲೋಕ ಕ್ರಮದಿನಜಿಪಿದಂ ಕವಿ ರನ್ನಂ I.೪೫

ಎಂಬ ಪ್ರತಿಜ್ಞೆಯೂ ಸಾರ್ಥಕವಾಗಿದೆ.

ಇಷ್ಟು ಸುಂದರವಾದ ಭಾಗಕ್ಕೆ ರನ್ನನ ಪ್ರತಿಭೆಯೊಂದೇ ಕಾರಣವಲ್ಲ. ಇದಕ್ಕೆ ಸೂಚನೆಯು 'ಪಂಪಭಾರತ'ದ ಹದಿಮೂರನೆಯ ಆಶ್ವಾಸದಲ್ಲಿದೆ. ಇಲ್ಲಿಯೂ ದುರ್ಯೋಧನನು ಸಂಜಯನೊಡನೆ ಭೀಷ್ಮರ ಬಳಿಗೆ ಹೋಗುತ್ತಾ ಕಾಳೆಗದಲ್ಲಿ ಮಡಿದ ದ್ರೋಣ, ದುಶ್ಶಾಸನ, ಕರ್ಣಾದಿಗಳ ಶವಗಳ ಬಳಿಗೆ ಬಂದು ನೋಡಿ ಪ್ರಳಾಪಿಸುವನು. 'ಪಂಪಭಾರತ'ದಲ್ಲಿ ಈ ಸಂಗತಿಯು ಐದಾರು ಪದ್ಯಗಳಲ್ಲಿ ಅಡಕವಾಗಿದೆ (XIII. ೫೬-೬೧). ರನ್ನನು ಅದನ್ನೇ ಹಿಗ್ಗಿಸಿ, ಮಾರ್ಪಡಿಸಿ, ಹೊಸ ಭಾವಗಳನ್ನು ಸೇರಿಸಿ ಒಂದೂವರೆ ಆಶ್ವಾಸದಷ್ಟು ಬೆಳಸಿದ್ದಾನೆ. ಅದನ್ನು ಓದಿ ಕೊಂಡಾಡುವಾಗ ಆ ಶ್ಲಾಘನೆಯಲ್ಲಿ ಒಂದು ಪಾಲು ಪಂಪನಿಗೆ ಸಲ್ಲತಕ್ಕುದೆಂಬುದನ್ನು ನಾವು ಮರೆಯಬಾರದು.

ಇನ್ನೊಂದು ಕಡೆ ಪಂಪನ ಹೆಜ್ಜೆಯಲ್ಲಿಯೇ ರನ್ನನು ಸಾಗಿರುವುದನ್ನು ನಾವು ನೋಡಬಹುದು. ಭೀಮನು ದುರ್ಯೋಧನನ ತೊಡೆಯನ್ನು ಮುರಿದು, ಕಿರೀಟವನ್ನು ತುಳಿದು ನಡೆದ ಬಳಿಕ ಅಶ್ವತ್ಥಾಮನು ದುರ್ಯೋಧನನಿರುವ ಸ್ಥಳವನ್ನು ತಿಳಿದು ಬರುತ್ತಾ ಮಾರ್ಗದಲ್ಲಿ ಲಕ್ಷ್ಮಿಯನ್ನು ಕಂಡು, . . . 'ನೀನಾರು ಎಲ್ಲಿಗೆ ಹೋಗುವೆ?' ಎಂದು ಕೇಳಿದುದಕ್ಕೆ 'ಅವಳು ತಾನು ಲಕ್ಷ್ಮಿಯೆಂದೂ, ನಾರಾಯಣನ ಅಪ್ಪಣೆಯಿಂದ ದುರ್ಯೋಧನನನ್ನು ಬಿಟ್ಟು ಧರ್ಮರಾಯನನ್ನು ಸೇರಲು ಹೋಗುತ್ತೇನೆಂದು ಹೇಳುವಲ್ಲಿ ಅವಳನ್ನು ಹೀಯಾಳಿಸಿ, ಘನಚೇಟಿಯಂತೆ ಅವಳನ್ನು ನೂಕಿಕೊಂಡು ದುರ್ಯೋಧನನ ಹತ್ತಿರ ಹೋಗುವನು.' ಅಲ್ಲಿ ದುರ್ಯೋಧನನಿಗೆ ಅವಳು ಕೊಡೆ ಹಿಡಿಯುವಂತೆ ಆಜ್ಞೆಮಾಡಿ ತಾನು ಪಾಂಡವರ ತಲೆಗಳನ್ನು ತರುವೆನೆಂದು ಶಪಥಮಾಡಿ ಹೋಗುವನು. ಈ ರೀತಿಯಾಗಿ ಲಕ್ಷ್ಮೀ ಪ್ರವೇಶವಾಗುವುದು 'ಪಂಪಭಾರತ'ದಲ್ಲಿ ಮಾತ್ರ; ವ್ಯಾಸಭಾರತದಲ್ಲಿಲ್ಲ. ರನ್ನನು ಈ ಸಂದರ್ಭದಲ್ಲಿ ಪಂಪನ ಕಥಾಸರಣಿಯನ್ನೇ ಅನುಸರಿಸಿದ್ದಾನೆ. ಅಷ್ಟೇ ಅಲ್ಲ; ಪಂಪನ ಮಾತುಗಳನ್ನೇ ಒಂದೆರಡು ಸಲ ಪ್ರಯೋಗಿಸಿದ್ದಾನೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು; ಲಕ್ಷ್ಮಿಯನ್ನು ಅಶ್ವತ್ಥಾಮನು ಎಳೆ ತಂದುದು : 'ಕುರುಕುಟುಂಬ ಘನಚೇಟಿಯಂ ತರ್ಪಂತೆ' (XIII. ೧೦೨ವ) ಎಂದು ಪಂಪನು ಹೋಲಿಕೆಯನ್ನು ಕೊಟ್ಟಿದ್ದಾನೆ. ರನ್ನನೂ ಅದೇ

ಪದಗಳನ್ನು ಇಟ್ಟುಕೊಂಡು ಭಾವವನ್ನು ಮಾತ್ರ ಸ್ವಲ್ಪ ತಿದ್ದಿ – 'ಕುರುಕುಲ ಕುಟುಂಬನ ಘನಚೇಟಿಯಂ ಕೊಂಡು ಪೋಪಂತೆ' (IX. ೧೬. ವ) ಎಂದು ಬರೆದಿದ್ದಾನೆ.

'ಪಂಪಭಾರತ'ದ ಸನ್ನಿವೇಶಗಳನ್ನು ಮಾತ್ರವೇ ಅಲ್ಲ; ಅದರ ಭಾವಗಳನ್ನೂ ಅದರ ಮಾತುಗಳನ್ನೂ ಕೂಡ ರನ್ನನು ಸಮಯ ಬಿದ್ದಾಗ ಉಪಯೋಗಿಸಿ ಕೊಂಡಿರುವುದಕ್ಕೆ ಉದಾರಹಣೆಗಳು ಇನ್ನೂ ಕೆಲವಿವೆ. ಕೆಲವು ಕಡೆಗಳಲ್ಲಿ, ಪಂಪನು ಒಂದೆರಡು ಮಾತಿನಲ್ಲಿ ಹೇಳಿ ಮುಗಿಸಿದ ಅರ್ಥವನ್ನು ರನ್ನನು ತೆಗೆದುಕೊಂಡು ನಾಲ್ಕೈದು ಪದ್ಯಗಳ ತನಕ ಎಳೆಯುತ್ತಾನೆ. ದುರ್ಯೋಧನನು ಭೀಷ್ಮರ ಬಳಿಗೆ ಏಕಾಂಗಿಯಾಗಿ ಕಾಲುನಡಿಗೆಯಲ್ಲಿ ಬಂದಾಗ ಅವರು ನೋಡಿ ಮರುಗಿ ಹೇಳುವ ಮಾತು 'ಪಂಪಭಾರತ'ದಲ್ಲಿ ಈ ರೀತಿಯಾಗಿದೆ :

. . . ಪೇಟ್ ಮಗನೆ ಬೆಳ್ಗೊಡೆಯೆಲ್ಲಿದುದೆತ್ತವೋಯ್ತು ಸು
ತ್ತಿಟಿದ ಚತುರ್ಬಲಂ ನಿನಗಮೀಯಿರವಾದುದೇ ವೈರಿ ಭೂಪರಿಂ
XIII. ೬೪

'ಗದಾಯುದ್ಧ'ದಲ್ಲಿ ಇದೇ ಸಂದರ್ಭದಲ್ಲಿ–

ಎಲ್ಲಿದುವೊ ಧವಳ ಚಾಮರ
ಮೆಲ್ಲಿತ್ತೇಕಾತಪತ್ರಮಹಿಕೇತನ ಮ
ತ್ತೆಲ್ಲಿತ್ತೊ ಮೃಗೇಂದ್ರಾಸನ
ಮೆಲ್ಲಿದುವೋ ಲೋಲಪಾಳಿ ಕೇತನತತಿಗಳ್ V. ೪೨

ಎಲ್ಲಿದಲೊ ಭಾನುಮತಿ ತಾ
ನೆಲ್ಲಿತ್ತೋಲಗದ ಸೂಟಿಯರ್ಕಳ ತಂಡಂ
ಎಲ್ಲಿತ್ತೊ ಗೀತವಾದ್ಯಂ
ಸಲ್ಲಲಿತ ವಧೂಜನ ಪ್ರವೃತ್ತಂ ನೃತ್ಯಂ V. ೪೩

ಸುತ ಶತಕಮುಂ ಸಹೋದರ
ಶತಕಮುಮೆಲ್ಲಿತ್ತೊ ಮಗನೆ ಪೇಟೆಲ್ಲಿತ್ತೋ
ಚತುರಂಗಸೈನ್ಯಮೆಲ್ಲಿದ
ರತಿರಥ ಸಮರಥ ಮಹಾರಥಾರ್ಧರಥರ್ಕಳ್ V. ೪೪

ಎಂದು ಭೀಷ್ಮರು ಶೋಕಂಗೆಯ್ಯುವರು. ರನ್ನನು ಪಂಪನಿಂದಲೇ ಈ ಭಾವವನ್ನು ಎತ್ತಿಕೊಂಡನೆಂದು ಸಾಧಿಸುವ ಸಾಹಸಕ್ಕೆ ನಾನು ಹೋಗುವುದಿಲ್ಲ. ಆದರೆ ಎಲ್ಲವನ್ನೂ ಆಲೋಚಿಸಿದರೆ, ಇದನ್ನು ಬರೆಯುವಾಗ 'ಪಂಪ ಭಾರತ'ದ ನಿರೂಪಣೆಯ ನೆನಪು ರನ್ನನಿಗೆ ಇದ್ದರೂ ಇರಬಹುದೆಂದು ತೋರುತ್ತದೆ.

ಇದು ಹೋಗಲಿ. ಪಂಪನ ಪದ್ಯಗಳಿಗೆ ಪ್ರತಿಬಿಂಬಿಗಳಂತಿರುವ ಕೆಲವು ಪದ್ಯಗಳು 'ಗದಾಯುದ್ಧ'ದಲ್ಲಿ ಆಯಾ ಸಂದರ್ಭಗಳಲ್ಲಿಯೇ ಸಿಕ್ಕುತ್ತವೆ. ಇದಕ್ಕೆ ಒಂದೆರಡು ನಿದರ್ಶನಗಳನ್ನು ಇಲ್ಲಿ ಕೊಡಬಹುದು.

'ಪಂಪಭಾರತ'ದಲ್ಲಿ ಕರ್ಣನನ್ನು ಕುರಿತು ದುಃಖಿಸುತ್ತ ದುರ್ಯೋಧನನು ಅವನ ಉಪಕಾರವನ್ನೂ ತನ್ನ ಕೃತಘ್ನತೆಯನ್ನೂ ಹೀಗೆ ನೆನೆಯುವನು :

> ನೆಲನಂ ಕೊಟ್ಟನಿನಾತ್ಮಜಾತನೆನಗಾಂ ತಕ್ಕೂರ್ಮೆಯಿಂದಂ ಜಳಾಂ
> ಜಲಿಯಂ ಕೊಟ್ಟೆನುಮಿಲ್ಲ ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷ
> ದ್ದಲಮಂ ಸುಟ್ಟನುದಾತ್ತಪುಣ್ಯನವನಂ ಚೈತಾಗ್ನಿಯಿಂ ಸುಟ್ಟೆನಿ
> ನ್ನೊಲವಿಂದಿತೆರ್ದೆ ಮುಟ್ಟಿ ಕೂರ್ತನೊಳನೇ ಕರ್ಣಂಗೆ ದುರ್ಯೋಧನಂ
> XIII. ೬೦

'ಎಂದು ನೊಂದು ನುಡಿದ ದುರ್ಯೋಧನ'ನಿಗೆ–

> ಕೊಟ್ಟೈ ಕಿರ್ಚನುದಗ್ರ ಶೋಕಶಿಖಿಯಿಂ ಕಣ್ಣೀರ್ಗಳಿಂದೆಯ್ದೆ ನೀ
> ರ್ಗೊಟ್ಟೈ ಸೂರ್ಯಸುತಂಗೆ ಲೌಕಿಕಮನೇ ನೀಂ ದಾಂಟಿದೈ ಪೋಟ್ಟು ಸೀ
> ಳ್ದೊಟ್ಟಿಂ ವೈರಿಯನೊಡ್ಡಿ ತತ್ಪಿಶಿತದಿಂದಾತರಿಗೆ ನೀಂ ಕೂರ್ಪೊಡೇ
> ಗೆಟ್ಟತ್ತಿಂ ನಡೆ ಮಾಡು ತದ್ವಿಜಗಣಕ್ಕಾಹಾರಮಂ ಭೂಪತೀ XIII. ೬೧

ಎಂದು ಸಂಜಯನು ಹೇಳಿ 'ಪೆರ್ಚಿದ ಶೋಕರಸಮಂ ಕೋಪರಸದ ಮೇಲಿಕ್ಕು'ವನು.

ರನ್ನನು ಇದೇ ನಿರೂಪಣೆಯನ್ನೇ ಹೇಗೆ ಸ್ವೀಕರಿಸಿರುವನೆಂಬುದನ್ನು ನೋಡ ಬಹುದು. ದುರ್ಯೋಧನನು–

> ಕೆಳೆಯಂಗಾಯ್ತುಸುಮೋಕ್ಷಮಾಗದೆನಗಂ ಬಾಷ್ಪಾಂಬುಮೋಕ್ಷಂ ಧರಾ
> ತಳಮಂ ಕೊಟ್ಟನಿವಂ ಜಳಾಂಜಳಿಯುಮಂ ನಾಂ ಕೊಟ್ಟೆನಿಲ್ಲನ್ಯಮಂ
> ಡಳಮಂ ಸುಟ್ಟನಿವಂ ಪ್ರತಾಪಶಿಖಿಯಿಂದಾನೀತನಂ ಸತ್ಕ್ರಿಯಾ
> ನಳನಿಂ ಸುಟ್ಟೆನುಮಿಲ್ಲ ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತೆನೋ
> V. ೩೧

ಎನ್ನಲು

> ಜಲದಾನ ಕ್ರಿಯೆಯಂ ವಾ
> ಗ್ಜಲದಿಂ ಕೋಪಾಗ್ನಿಯಿಂದೆ ದಹನಕ್ರಿಯೆಯಂ
> ಕೆಳೆಯಂಗೆ ಮಾಡಿದೈ ಕುರು
> ಕುಲದರ್ಪಣ ಮಱೆವುದಿನ್ನಹಃಪತಿ ಸುತನಂ V. ೩೨

ಎಂದು ಮೊದಲಾಗಿ ಸಂಜಯನು ಹೇಳಲು, ದುರ್ಯೋಧನನು ಅರ್ಜುನನಿಗೆ ಮುಳಿದು 'ಶೋಕರಸಮಂ ಕ್ರೋಧರಸದ ಮೇಲಿಕ್ಕು'ವನು.

ದುರ್ಯೋಧನನು ವೈಶಂಪಾಯನ ಸರೋವರವನ್ನು ಹೊಕ್ಕಾಗ ಹಂಸ ಕೋರಕಾದಿ ಪಕ್ಷಿಗಳು ಹೇಗೆ ಧ್ವನಿಮಾಡಿರುವೆಂದು ಪಂಪನೂ ರನ್ನನೂ ಉತ್ಪ್ರೇಕ್ಷಿಸಿರುವುದನ್ನು ನೋಡೋಣ.

ಅರಟನ ವಿಕ್ರಮಾರ್ಜುನನ ಸಾಹಸಭೀಮನ ಕೋಪಪಾವಕಂ
ಪುದಿದಳುರ್ದಟ್ಟಿಕೊಳ್ಳದಿರದಿಲ್ಲಿಯುಮೆಮ್ಮುವನಿಲ್ಲಿ ಬಾಳ್ವರಂ
ಕದಡದಿರಿತ್ತ ಬಾರದಿರು ಸಾರದಿರೆಂಬವೊಲಾದುದೆತ್ತಮು
ನ್ನದ ಕಳಹಂಸ ಕೋಕ ನಿಕರ ಧ್ವನಿ ರುಂದ್ರ ಫಣೀಂದ್ರಕೇತುವಂ

ಪಂಪಭಾರತ XIII. ೭೩

ಕುರುಪತಿ ನಿನ್ನ ಪೊಕ್ಕ ತೊಱೆಗಳ್ ಮೊದಲಾಗಿರೆ ಬತ್ತಿದಪ್ಪುವೀ
ದೊರೆಯ ದುರಾತ್ಮನಂ ಖಳನನೊಳಕೊಂಡೊಡೆ ಭೀಮನೀ ಸರೋ
ವರಮುಮನೆಮ್ಮುಮಂ ಕದಡುಗುಂ ಪುಗದಿರ್ ತೊಲಗೆಂದು ಬಗ್ಗಿಪಂ
ತಿರೆ ನೆಗೆದತ್ತನೇಕ ಬಕ ಕೋಕ ಮರಾಳ ವಿಹಂಗಮಸ್ವನಂ

ಗದಾಯುದ್ಧ VI. ೧೨

ಇವೆರಡನ್ನೂ ಹೋಲಿಸಿದರೆ 'ಪಂಪಭಾರತ'ವನ್ನು ಮುಂದಿಟ್ಟುಕೊಂಡೇ ರನ್ನನು ತನ್ನ ಪದ್ಯವನ್ನು ಬರೆದಿರಬೇಕೆಂದು ಹೇಳಬಹುದು.

ಇಷ್ಟೇ ಅಲ್ಲ. ಕೆಲವು ಕಡೆಗಳಲ್ಲಿ ಪಂಪನ ವಾಕ್ಯಗಳನ್ನೇ ಒಂದೆರಡು ಮಾರ್ಪಾಡಿ ನೊಡನೆ ರನ್ನನು ಪ್ರಯೋಗಿಸಿರುವನು.

ಕೊಳದಲ್ಲಿ ಅವಿತಿದ್ದ ದುರ್ಯೋಧನನು ಏನು ಮಾಡಿದರೂ ಹೊರ ಹೊರಡದಿರಲು ಧರ್ಮರಾಯನು ಧರ್ಮವನ್ನೇ ಮುಂದಿಟ್ಟು, 'ಸಂಧಿಗೆ ಒಡಂಬಡು; ಕೊಳದಲ್ಲೇಕಿರುವೆ?' ಎಂದು ಸ್ವಾಂತ ವಚನಗಳನ್ನಾಡುತ್ತಿರಲು ಆ ನುಡಿಗೆ ಸೈರಿಸದೆ– 'ಈ ಬೂತೆನ್ನ ಸರಂಗೇಳ್ದೊಡಲ್ಲದೆ ಪೊಱಮಡುವನಲ್ಲಂ ಇವಂಗಾನೆ ಸಾಲ್ವೆಂ' ಎಂದು ಭೀಮಸೇನನು ಮೂದಲಿಸುವನು ಎಂದು 'ಗದಾಯುದ್ಧ'ದಲ್ಲಿದೆ (VII. ೯. ವ) 'ಪಂಪಭಾರತ'ದಲ್ಲಿ ಏನು ಮಾಡಿದರೂ ದುರ್ಯೋಧನನು ಹೊರಡದಿರಲು ಭೀಮಸೇನನು– "ಎನ್ನ ಸರಂಗೇಳ್ದಲ್ಲದೀ ಬೂತು ಪೊಱಮಡುವನಲ್ಲಂ. ಈತಂಗಾನೆ ಬಲ್ಲೆಂ. ಉಸಿರದಿರಿಂ" ಎಂದು (XIII. ೭೬ ವ) ಸಿಂಹನಾದಮಾಡಿ ಮೂದಲಿಸುವನು.

ದುರ್ಯೋಧನನು ಬಿದ್ದ ಮೇಲೆ, ಯುಧಿಷ್ಠಿರಾದಿಗಳ ತಲೆಗಳನ್ನು ತರುವೆನೆಂದು ಅಶ್ವತ್ಥಾಮನು ಪ್ರತಿಜ್ಞೆ ಮಾಡಿ ಶಿಬಿರಕ್ಕೆ ಹೋಗಿ– ". . . ಶ್ರುತ ಸೋಮಕ ಪ್ರಮುಖರಪ್ಪ ಪಂಚಪಾಂಡವರಂ ಕೊಂದು ತದುತ್ತಮಾಂಗಂಗಳಂ ಕೊಂಡು ತಟತಟನೆ ನೇಸಱ್

ಮೂಡುವಾಗಳೆಯ್ದೆವಂದು ದುರ್ಯೋಧನನಂ ಕಂಡು 'ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳಂ' ಎಂದು ಮುಂದಿಕ್ಕಿದಾಗಳ್ ದುರ್ಯೋಧನಂ ನೋಡಿ" ಎಂದು 'ಪಂಪಭಾರತ'ದಲ್ಲಿರುವ ಭಾಗವನ್ನೇ (XIII. ೧೦೬ ವ) ರನ್ನನು ಸ್ವಲ್ಪವೂ ತಪ್ಪದಂತೆ ಅನುಸರಿಸಿ ". . . ಶ್ರುತ ಸೋಮಕ ಪ್ರಭೃತಿಗಳಪ್ಪ ಪಂಪಪಾಂಡವರ ತಲೆಗಳಂ ಕೊಂಡು ತಟತಟನೆ ನೇಸಱ್ ಮೂಡುವಾಗಳ್ ಬಂದು–'ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳಿವೆ'ಯೆಂದು ದುರ್ಯೋಧನನ ಮುಂದಿಕ್ಕಿದೊಡಾ ಮಹಾನುಭಾವ ನಾತಲೆಗಳಂ ನೀಡುಂ ಭಾವಿಸಿ ನೋಡಿ" ಎಂದು ಬರೆದಿದ್ದಾನೆ. (IX. ೩೨ ವ).

ಮೇಲಿನ ಎರಡು ಕಡೆಗಳಲ್ಲಿಯೂ ಪ್ರಶಸ್ತಪಡಿಸಿರುವ ಮಾತುಗಳನ್ನು 'ಪಂಪಭಾರತ'ದಿಂದ ಎತ್ತಿ 'ಗದಾಯುದ್ಧ'ದಲ್ಲಿ ಇಟ್ಟಹಾಗಿದೆಯಲ್ಲವೆ!

ಇದೆಲ್ಲವನ್ನೂ ನೋಡಿ ಅನೇಕರ ಮನಸ್ಸಿನಲ್ಲಿ ಸಹಜವಾಗಿ ಶಂಕೆಯೊಂದು ಹುಟ್ಟುವುದು. "ಇದೇನು? ಹಿಂದಿನ ಕವಿಗಳ ತಲೆ ಮೆಟ್ಟಿದವನು ತಾನೆಂದು ಜಂಬವನ್ನು ಕೊಚ್ಚಿದ* ರನ್ನನು ಹೀಗೆ ಪಂಪನ ಭಿಕ್ಷೆಗೆ ಕೈಯೊಡ್ಡಿರುವನಲ್ಲ! ಇದು ಅವನ ಕೀರ್ತಿಗೆ ಕುಂದು ತರುವುದಿಲ್ಲವೆ?" ಎಂದು ಕೆಲವರು ಕೊರಗಬಹುದು. ರನ್ನನಲ್ಲೇನಿದೆ? ಎಲ್ಲವೂ ಪಂಪನ ಪ್ರಸಾದ? ಎಂದು ಇನ್ನು ಕೆಲವರು ಅಲ್ಲಗಳೆಯಬಹುದು. ಹೀಗೆ ಎಣಿಸುವುದು ಸರಿಯೆ? ರನ್ನನ ಕವಿಪಟ್ಟಕ್ಕೆ ಭಂಗವು ಬಂದಿತೆ?–ಎನ್ನುವುದನ್ನು ಇನ್ನು ವಿಚಾರಮಾಡೋಣ.

ಮೇಲೆ ಉದಾಹರಿಸಿರುವ ಭಾಗಗಳಲ್ಲಿ ರನ್ನನು ಪಂಪನನ್ನು ಹಿಂಬಾಲಿಸಿರುವ ನೆಂದು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಒಪ್ಪಿಕೊಂಡರೆ ಏನು ಹಾನಿ? 'ಪಂಪಭಾರತ'ದಿಂದ ರನ್ನನು ತೆಗೆದುಕೊಂಡಿರಬಹುದಾದ ಅಂಶವು ಎಷ್ಟೆಂದು ಲೆಕ್ಕಮಾಡಿದರೆ ಸುಮಾರು ಹದಿನೈದು ಪದ್ಯಗಳಿಗೂ ಐದು ವಚನ ಖಂಡಗಳಿಗೂ ಹೆಚ್ಚಾಗಲಾರದು. ವಚನಗಳನ್ನು ಬಿಟ್ಟು ಎಣಿಸಿದರೇ ಸುಮಾರು ೫೭೫ ಪದ್ಯಗಳಿರುವ 'ಗದಾಯುದ್ಧ'ದಲ್ಲಿ ಎಲ್ಲಿಯೋ ಇಪ್ಪತ್ತು ಇಪ್ಪತ್ತೈದು ಗದ್ಯಪದ್ಯಗಳಿಗೆ ಆಕರವು ಹೆರರ ಗ್ರಂಥಗಳಲ್ಲಿ ಸಿಕ್ಕಿದ ಮಾತ್ರಕ್ಕೆ 'ಗದಾಯುದ್ಧ'ವೆಲ್ಲಕ್ಕೂ ಅಪವಾದವು ತಟ್ಟಿದಂತಾಗುವುದೆ? ಅದರ ಕವಿತೆಯ ಸವಿಯೆಲ್ಲ ಹುಳಿಯಾಗಿ ಹೋಗುವುದೆ? ಈ ಇಪ್ಪತ್ತು ಇಪ್ಪತ್ತೈದು ಪದ್ಯ ವಚನಗಳ ಮೇಲೆಯೇ ರನ್ನನ ಕೀರ್ತಿಸ್ತಂಭವು ನಿಂತಿದೆಯೆ? ಇದೆಲ್ಲವನ್ನೂ ತೆಗೆದುಹಾಕಿದರೂ 'ಗದಾಯುದ್ಧ'ವು ಮೊದಲಿನಷ್ಟೇ ಚೆನ್ನಾಗಿ ಬೆಳಗುವುದಿಲ್ಲವೆ?

ಈ ದೋಷಾರೋಪವು 'ಗದಾಯುದ್ಧ'ವೊಂದಕ್ಕೇ ತಗಲುವುದಿಲ್ಲ. ರನ್ನನನ್ನು ಕೃತಿಚೋರನೆಂದು ಕರೆದರೆ ಪಂಪನಿಗೂ ಅದೇ ಹೆಸರಿಡಬೇಕಾಗುತ್ತದೆ. ಹಿಂದಿನ

---

* ಆರಾತೀಯ ಕವೀಶ್ವರ
ರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂ
ಡಾರದ ಮುದ್ರೆಯನೊಡೆದಂ
ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ–ಗದಾಯುದ್ಧ, ೧-೩೮.

ಸಂಸ್ಕೃತ ಕವಿಗಳಿಂದ ಅವನು ಅನೇಕ ಭಾವಗಳನ್ನು ತೆಗೆದುಕೊಂಡು ಬರೆದಿದ್ದಾನೆ. 'ಆದಿಪುರಾಣ'ವನ್ನು ಪರಿಶೋಧಿಸಿ ಮುದ್ರಿಸಿದ ಮ. ರಾ. ಎಸ್. ಜಿ. ನರಸಿಂಹಾ ಚಾರ್ಯರು ಅದರ ಅವತರಣಿಕೆಯಲ್ಲಿ ಕೊಟ್ಟಿರುವ ಪಟ್ಟಿಯನ್ನು ಯಾರಾದರೂ ನೋಡಬಹುದು. "ಈ ರೀತಿಯಾಗಿ ಪಂಪನು ಸಂಸ್ಕೃತ ಕವಿಗಳಿಂದ ಕೆಲವು ವಾಕ್ಯ ಗಳನ್ನೂ ಅಭಿಪ್ರಾಯಗಳನ್ನೂ ತೆಗೆದುಕೊಂಡ ಮಾತ್ರದಿಂದಲೇ ಅವನಿಗೆ ಕೃತಿಚೌರ್ಯ ದೋಷವು ಉಂಟಾಯಿತೆಂದಾಗಲಿ ಪ್ರತಿಭೆ ಇಲ್ಲವೆಂದಾಗಲಿ ಭಾವಿಸಕೂಡದು . . ." ಎಂದು ಅವರು ಅಲ್ಲಿ ಟೀಕೆ ಮಾಡಿದ್ದಾರೆ. (ಪು. IX).

ಸಂಸ್ಕೃತ ಕವಿಗಳ ಸ್ಥಿತಿಯಾದರೂ ಹೀಗೆಯೇ ಇದೆ. 'ಮೃಚ್ಛಕಟಿಕ'ವು ಉತ್ತಮವಾದ ನಾಟಕವೆಂದು ಹೆಸರುಗೊಂಡಿದೆಯಷ್ಟೆ. ಈಚೆಗೆ ದೊರೆತಿರುವ ಭಾಸಕವಿಯ 'ಚಾರುದತ್ತ' ನಾಟಕದ ಕಥಾಭಾಗಕ್ಕೂ ಇದರ ಕಥಾಭಾಗಕ್ಕೂ ಬಲು ಹತ್ತಿರದ ಹೋಲಿಕೆ ಇದೆ. 'ಚಾರುದತ್ತ'ದ ಎಷ್ಟೋ ಪದ್ಯಗಳೂ ಮಾತುಗಳೂ ಹೆಚ್ಚು ಕಡಿಮೆ ಹಾಗೆಯೇ 'ಮೃಚ್ಛಕಟಿಕ'ದಲ್ಲಿ ಕಾಣಬರುತ್ತವೆ.* ಭಾಸನ ಕಾಲವು ಇನ್ನೂ ಸರಿಯಾಗಿ ನಿರ್ಣಯ ವಾಗಿಲ್ಲದಿದ್ದರೂ ಅವನು ಪುರಾತನ ಕವಿಯೆಂದೂ, ಈಗ ಸಿಕ್ಕಿರುವ ನಾಟಕಗಳು ಅವನು ಬರೆದುವೇ ಆಗಿರಬೇಕೆಂದೂ ಬಹುಜನ ಸಮ್ಮತವಾದ ಅಭಿಪ್ರಾಯ. ಆದುದರಿಂದ 'ಚಾರುದತ್ತ'ದ ಆಧಾರದ ಮೇಲೆಯೇ 'ಮೃಚ್ಛಕಟಿಕ'ವು ರಚಿತವಾಗಿರ ಬೇಕೆಂದು ತೋರುತ್ತದೆ.

"ಕವಿಕುಲ ಗುರು" ಎಂಬ ಬಿರುದನ್ನು ಪಡೆದ ಕಾಳಿದಾಸನೂ ಕೂಡ ಭಾಸನ ನಾಟಕಗಳಿಂದ ಕೆಲವು ಭಾವಗಳನ್ನು ಸ್ವೀಕರಿಸಿದ್ದಾನೆಂದು ಮಹಾ ಮಹೋಪಾಧ್ಯಾಯ ಗಣಪತಿಶಾಸ್ತ್ರಿಗಳು ತೋರಿಸಿದ್ದಾರೆ.* ಅಲ್ಲದೆ, ಅಶ್ವಘೋಷನೆಂಬ ಕವಿಯು ಬರೆದ 'ಬುದ್ಧಚರಿತ' ದಲ್ಲಿಯೂ ಕಾಳಿದಾಸನ 'ರಘುವಂಶ', 'ಕುಮಾರ ಸಂಭವ'ಗಳಲ್ಲಿಯೂ ಸಮಾನಾಭಿಪ್ರಾಯವುಳ್ಳ ಕೆಲವು ಪದ್ಯಗಳು ದೊರೆಯುತ್ತವೆ.† ಅಶ್ವಘೋಷನೇ ಕಾಳಿದಾಸನಗಿಂತ ಮುಂಚೆಯವನೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಕಾಳಿದಾಸನ ಜೊತೆಯಲ್ಲಿ ನಿಂತು ಕಳ್ಳನೆಂದು ರನ್ನನು ಕರೆಯಿಸಿಕೊಂಡರೆ ಅದು ಅವನಿಗೆ ಭೂಷಣವೇ ಹೊರತು ಅವಮಾನವಲ್ಲ. ಒಂದು ವೇಳೆ ಅಶ್ವಘೋಷನೇ ಕಾಳಿದಾಸನ ಭಾವಗಳನ್ನು ತನ್ನ ಕಾವ್ಯಗಳಲ್ಲಿ ಸೇರಿಸಿಕೊಂಡನೆಂದು ಮುಂದೆ ಸ್ಪಷ್ಟವಾದರೂ ಆಗಲೂ ರನ್ನನು ಹೆದರಬೇಕಾಗಿಲ್ಲ. ಅಶ್ವಘೋಷನೂ ಶ್ರೇಷ್ಠ ಕವಿ.

ಇಂಗ್ಲಿಷ್ ಸಾಹಿತ್ಯವನ್ನು ಬೇಕಾದರೂ ನೋಡಬಹುದು. ಮಿಲ್ಟನ್ ಕವಿಯು ಬರೆದ *'Paradise Lost'* ಎಂಬ ಮಹಾಕಾವ್ಯದ ಪ್ರಭೆಯು ಎಷ್ಟೊಂದು ಜನ ಉದ್ದಾಮ ಕವಿಗಳ ಮೇಲೆ ಬಿದ್ದಿಲ್ಲ! ಕೀಟ್ಸ್ ಕವಿಯ ಶ್ರೇಷ್ಠ ಕೃತಿಗಳಲ್ಲಿ ಒಂದಾದ 'Hyperion' ಎಂಬುದರಲ್ಲಿ ಬಹುಭಾಗವು *'Paradise Lost'* ಕಾವ್ಯದ ಪ್ರಾರಂಭದ

* MM. T. Ganapati Sastri's "Introduction" to the *Svapnavasavadatta*.
† Prof. E. B. Cowell's "Preface" to the *Buddacarita* P.P. x. ff.

ಸರ್ಗಗಳ ನೆನಪನ್ನು ತರುತ್ತದೆ. ಮಿಲ್ಟನನು ನಿರ್ಮಿಸಿರುವ 'Satan!' 'ಪಾತ್ರದ ಉದಾಹರಣೆ ಇಲ್ಲದಿದ್ದರೆ ಬೈರನ್ ಕವಿಯ 'Casin' ಎಂಬ ನಾಟಕದಲ್ಲಿ 'Lucifer' ಪಾತ್ರವು ಬರುತ್ತಿರಲಿಲ್ಲವೆಂದು ತೋರುತ್ತದೆ.

ಈ *'Paradise Lost'* ಕಾವ್ಯದ ವಿಚಾರವೂ ಹಾಗೆಯೇ. ತನಗೆ ಹಿಂದೆ ಇದ್ದ ಕವಿಗಳ ಸಾರವನ್ನೆಲ್ಲಾ ಹೀರಿ ಅದನ್ನು ಮಿಲ್ಟನ್ನನು ಬರೆದಿದ್ದಾನೆ. ಅದಕ್ಕೆ 'ಆಕರ'ಗಳು ಬೇಕಾದಷ್ಟಿವೆ. ಬೈಬಲ್, ಗ್ರೀಕ್, ಲ್ಯಾಟಿನ್, ಇಟಾಲಿಯನ್ ಕಾವ್ಯಗಳು, ಇಂಗ್ಲೀಷ್ ಸಾಹಿತ್ಯ—ಈ ಎಲ್ಲ ಕಡೆಗಳಿಂದಲೂ ಅನೇಕ ಅಭಿಪ್ರಾಯಗಳನ್ನೂ ಸೂಚನೆಗಳನ್ನೂ ಮಿಲ್ಟನನು ತೆಗೆದುತಂದು ತನ್ನ ಗ್ರಂಥದಲ್ಲಿ ಅಡಕಿದ್ದಾನೆ. ಆದರೇನು! ಮಿಲ್ಟನ್ನನು ಕೃತಿಚೋರನಾಗಿರಲಿಲ್ಲ. ಹೀಗೆ ಸ್ವೀಕರಿಸಿದುದಕ್ಕೆಲ್ಲಾ ಹೊಸ ಕಳೆಯನ್ನು ಕೊಟ್ಟು, ಹೊಸ ಧ್ವನಿಯನ್ನು ತುಂಬಿ ತನ್ನ ಕಾವ್ಯವನ್ನು ಹೊಸದಾಗಿ ಮಾಡಿದ್ದಾನೆ.

ಷೇಕ್ಸ್‌ಪಿಯರ್ ಕವಿಯ ಮಿತ್ರನಾದ ಬೆನ್‌ಜಾನ್ಸನ್ ಎಂಬ ಪ್ರಸಿದ್ಧ ನಾಟಕಕಾರ ನಿದ್ದನಷ್ಟೆ. ಅವನು ತನ್ನ ಗ್ರಂಥಗಳಲ್ಲಿ ಗ್ರೀಕ್ ಮತ್ತು ರೋಮನ್ ಕವಿಗಳ ಅಭಿಪ್ರಾಯಗಳನ್ನು ಧಾರಾಳವಾಗಿ ಉಪಯೋಗಿಸಿಕೊಂಡಿದ್ದಾನೆ. ಡ್ರೈಡನ್ ಕವಿಯು ಅವನ ವಿಚಾರದಲ್ಲಿ ಈ ರೀತಿಯಾಗಿ ಹೇಳುತ್ತಾನೆ : "There is scarce a poet or historian among the Roman authors of those times whom he has not translated in Sejanus and Cataline. But he has done his robberies so openly, that one may see he fears not to be taxed by any law. He invades authors like a monarch; and what would be theft in other poets is only victory in him"*

ಇನ್ನು ಷೇಕ್ಸ್‌ಪಿಯರ್ ಮಹಾಕವಿಯ ವಿಚಾರವನ್ನೇ ನೋಡಿ. ಎಲ್ಲೆಲ್ಲಿಂದಲೂ ವಿಷಯಗಳನ್ನೂ ಭಾವಗಳನ್ನೂ ಸಂಗ್ರಹಿಸಿ ತನ್ನ ಪ್ರತಿಭೆಯ ಬೆಳಕಿನಿಂದ ಅವಕ್ಕೆ ಅವನು ಕಾಂತಿಯನ್ನು ಕೊಟ್ಟಿದ್ದಾನೆಂದು ಎಲ್ಲರಿಗೂ ಗೊತ್ತಿದೆ. ಅವನ ನಾಟಕಗಳಲ್ಲಿ ಒಂದಕ್ಕಾದರೂ ಆಕರವು ಸಿಕ್ಕದೆ ಹೋಗಿಲ್ಲ. ಹಾಗೆ ಆಕರವೊಂದು ಸಿಕ್ಕಿ ಅದರಿಂದ ಕಥಾವಸ್ತುವನ್ನೂ ಅಭಿಪ್ರಾಯಗಳನ್ನೂ ಅವನು ಸ್ವೀಕರಿಸಿದ್ದಾನೆಂದು ಗೊತ್ತಾದ ಮಾತ್ರಕ್ಕೆ ಆ ಗ್ರಂಥದ ಶ್ರೇಷ್ಠತ್ವವು ಕಡಿಮೆಯಾಗಿಯೂ ಇಲ್ಲ.

ಈ ವಿಚಾರದಲ್ಲಿ ಒಂದು ವಿಷಯವನ್ನು ನಾವು ನೆನಪಿನಲ್ಲಿಡಬೇಕು. ಹಿಂದಿನವರ ಹಂಗಿಗೇ ಸಿಕ್ಕದೆ ತನ್ನ ಗ್ರಂಥವನ್ನೆಲ್ಲಾ ಮೊದಲಿನಿಂದ ಕೊನೆಯತನಕವೂ ಸ್ವತಂತ್ರವಾಗಿಯೇ ಬರೆದ ಕವಿಯು ಇದುವರೆಗೆ ಹುಟ್ಟಲಿಲ್ಲ. ಕಾರ್ಯ ಪ್ರಪಂಚದಲ್ಲಿ ಹೇಗೋ ಹಾಗೆಯೇ ಕಾವ್ಯ ಪ್ರಪಂಚದಲ್ಲಿಯೂ ಅಸಹಾಯ ಶೂರರು ವಿರಳ. ವರಕವಿಯಾದವನು ಕೂಡ ಪುರಾತನರ ಸಾಲಗಾರನಾಗಲೇ ಬೇಕು. ಕಥಾವಸ್ತುವಿನಲ್ಲೋ, ನಿರೂಪಣೆಯ ರೀತಿಯಲ್ಲೋ, ಶಬ್ದಗಳ ಜೋಡಣೆಯಲ್ಲೋ—ಒಂದರಲ್ಲಾದರೂ

* John Dryden : *Of Dramatic poesy*

ಅವರು ತುಳಿದ ದಾರಿಯಲ್ಲೇ ನಡೆಯಬೇಕು. ಇದರಿಂದ ಹಿಂದಿನ ಕವಿಗಳೇ ಮೇಲೆಂದೂ ಬಳಿಕ ಬಂದವರು ಕೀಳೆಂದೂ ಸಿದ್ಧಾಂತವಲ್ಲ. ನೆಲವು ಹದವಾಗದೆ ಬಿತ್ತವು ಹೇಗೆ ಮೊಳೆಯದೋ ಹಾಗೆಯೇ ಸಹಕಾರಿ ಕಾರಣಗಳು ಒದಗಿದ ಹೊರತು ಮಹಾಕವಿಯು ಅವತರಿಸುವುದಿಲ್ಲ. ಪ್ರತಿಭಾಶಾಲಿಗಳು ಎಲ್ಲಾ ಅಂಗಗಳನ್ನೂ ಹೊಸದಾಗಿ ಸೃಷ್ಟಿಮಾಡಿ ಬಳಿಕ ಅವುಗಳಿಂದ ತಮ್ಮ ಕಾವ್ಯಗಳನ್ನು ಕಟ್ಟುವುದಕ್ಕೆ ತೊಡಗುವುದಿಲ್ಲ. ಹಿಂದೆ ಇದ್ದವುಗಳನ್ನೇ ಬಳಸಿಕೊಂಡು ತಮ್ಮ ಅನ್ಯಾದೃಶವಾದ ಶಕ್ತಿಯಿಂದ ಹತೋಟಿಗೆ ತಂದುಕೊಂಡು, ಜಡವಾದ ಆ ಉಪಕರಣಗಳಿಗೆ ಉಸಿರನ್ನು ತುಂಬಿ ಹೊಸದೊಂದು ಲೋಕವನ್ನು ನಿರ್ಮಿಸಿಬಿಡುತ್ತಾರೆ. ಇದೇ ಪ್ರತಿಭೆಯ ಲಕ್ಷಣ. ಪ್ರತಿಭಾಶಾಲಿಯಾದ ರನ್ನನಿಗೂ ಪೂರ್ವಕವಿಗಳ ಕೃತಿಗಳನ್ನು ಬೇಕಾದ ಹಾಗೆ ಉಪಯೋಗಿಸಿಕೊಳ್ಳುವ ಹಕ್ಕು ಉಂಟಷ್ಟೆ!

ರನ್ನನಲ್ಲಿ ಕೃತಿಚೌರ್ಯ ದೋಷವನ್ನು ಕಾಣುವವರು 'ಕೃತಿಚೌರ್ಯ'ವೆಂದರೆ ಏನೆಂಬುದನ್ನು ಮರೆಯಕೂಡದು. ಹಿಂದೆ ಹೇಳಿರುವಂತೆ ತಾನು ಮಾಡಿದ ಕಳ್ಳತನವನ್ನು ಮರೆಮಾಚುವುದೇ 'ಹರಣದ' ಹೆಗ್ಗುರುತು. ರನ್ನನಲ್ಲಿ ಈ ದೋಷವಿಲ್ಲ. ಪಂಪ ರನ್ನರ ಕಾವ್ಯಗಳ ಹೆಸರುಗಳನ್ನೇ ನೋಡಿ : ಮೊದಲನೆಯದು 'ವಿಕ್ರಮಾರ್ಜುನ ವಿಜಯ'; ಎರಡನೆಯದು 'ಸಾಹಸ ಭೀಮ ವಿಜಯ'. ಎರಡಕ್ಕೂ ಎಷ್ಟೊಂದು ಹೋಲಿಕೆಯಿದೆ! "ವಿಜಯ" ಎಂಬ ಪದವು ಎರಡರಲ್ಲಿಯೂ ಇಹೆ. ಪಂಪನು "ವಿಕ್ರಮ" ಎಂಬ ಪದವನ್ನು ಉಪಯೋಗಿಸಿದ್ದರೆ ರನ್ನನು ಅದೇ ಅರ್ಥವನ್ನು ಕೊಡುವ "ಸಾಹಸ" ಎಂಬ ಪದವನ್ನು ಉಪಯೋಗಿಸಿದ್ದಾನೆ. ಪಂಪನಿಗೆ ಕಥಾ ನಾಯಕನು ಅರ್ಜುನ, ರನ್ನನಿಗೆ ಭೀಮ. ಇಷ್ಟೇ ಅಲ್ಲ. ಪಂಪನು ತನ್ನ ಕಾವ್ಯದ ಆದಿಯಲ್ಲಿ ನಾರಾಯಣ, ಮಹೇಶ್ವರ, ಮಾರ್ತಂಡ ಮೊದಲಾದ ದೇವತೆಗಳನ್ನು ಸ್ತುತಿಸುವಾಗ ಆ ದೇವತ್ವವನ್ನು ತನ್ನ ಸ್ವಾಮಿಯಾದ ಅರಿಕೇಸರಿಗೆ ಆರೋಪಿಸಿದ್ದಾನೆ; ಅಲ್ಲದೆ ಗ್ರಂಥದಲ್ಲೆಲ್ಲಾ ಅರ್ಜುನನಿಗೂ ಅರಿಕೇಸರಿಗೂ ಅಭೇಧವನ್ನು ಹೇಳಿದ್ದಾನೆ. (I. ೧೪, ೫೧ ನೋಡಿ). ರನ್ನನೂ ಇದೇ ಸಂಪ್ರದಾಯವನ್ನನುಸರಿಸಿ "ಗ್ರಂಥಾವತಾರ ದಲ್ಲಿ ಚಾಳುಕ್ಯ ನಾರಾಯಣನನ್ನು ನಾರಾಯಣನಿಗೆ ಶ್ಲೇಷೆಯಿಂದ ಹೋಲಿಸಿ ವಿಷ್ಣುವನ್ನು ಸ್ತುತಿಸಿದ್ದಾನೆ. ಬಳಿಕ ಅದೇ ರೀತಿಯಲ್ಲಿ ಈಶ್ವರನನ್ನೂ, ಬ್ರಹ್ಮದೇವನನ್ನೂ, ಸೂರ್ಯನನ್ನೂ ಸ್ತುತಿಸಿದ್ದಾನೆ." ತನ್ನ ಒಡೆಯನ ಪುತ್ರನಾದ ಇಜೆವ ಬೆಡಂಗನೇ ಭೀಮನೆಂದು ಸಾರಿ ಹೇಳಿರುವುದಲ್ಲದೆ (I. ೩೧) 'ಗದಾಯುದ್ಧ'ದ, ಎರಡನೆಯ ಆಶ್ವಾಸದಲ್ಲಿ ಇಜೆವ ಬೆಡಂಗನ ವಂಶಾವಳಿಯೇ ಭೀಮನ ವಂಶಾವಳಿಯೆಂದು ಕೂಡ ವಿವರಿಸಿದ್ದಾನೆ. (II. ೨ ವ), ಅಲ್ಲದೆ 'ಪಂಪಭಾರತ'ದಲ್ಲಿಯೂ 'ಗದಾಯುದ್ಧ'ದಲ್ಲಿಯೂ ಜೈನ ಮತದ ಪ್ರಸಕ್ತಿಯೇ ಇಲ್ಲ : ಎಲ್ಲವನ್ನೂ ಬ್ರಾಹ್ಮಣ ಧರ್ಮಕ್ಕನುಸಾರವಾಗಿ ಬರೆದಂತೆ ಇದೆ. ಅಲ್ಲಿಯೂ **ಕೂಡ** "ಬೆಳಗುವೆನಿಲ್ಲಿ ಲೌಕಿಕಮಂ" (ಪಂಪಭಾರತ, XIV. ೬೦) ಎಂದು ಹೇಳಿದ ಪಂಪನಂತೆಯೇ ರನ್ನನೂ ನಡೆಸಿದ್ದಾನೆ.

ಇದೆಲ್ಲವೂ ಕೃತಿಚೋರರು ಮಾಡುವ ಕೆಲಸವೆ? ನಮಗೇನೋ ಪಂಪನ ಮೇಲಿನ ಹುರುಡಿನಿಂದ ರನ್ನನು 'ಗದಾಯುದ್ಧ'ವನ್ನು ಬರೆದಂತೆ ತೋರುತ್ತದೆ; ಪಂಪನ ಮಾರ್ಗವನ್ನೇ ಅನುಸರಿಸಿ ಅವನ ಕಾವ್ಯಕ್ಕಿಂತಲೂ ಉತ್ಕೃಷ್ಟವಾದ ಕಾವ್ಯವನ್ನು ಬರೆಯಬಲ್ಲನೆಂಬ ಧೈರ್ಯದಿಂದ ರನ್ನನು ಈ ಕೆಲಸಕ್ಕೆ ಕೈಹಾಕಿದಂತೆ ತೋರುತ್ತದೆ. ಕಳ್ಳರು ಇಷ್ಟು ಬಹಿರಂಗವಾದ ರೀತಿಯಿಂದ ಕದಿಯುವುದಿಲ್ಲ.

'ಪಂಪಭಾರತ'ದ ಹದಿಮೂರನೆಯ ಆಶ್ವಾಸವನ್ನು ನೋಡಿ ರನ್ನನ ಮನಸ್ಸಿಗೆ ಹೀಗೆ ಹೊಳೆದಿರಬಹುದು : "ಇಲ್ಲಿಯ ವಸ್ತು ಚೆನ್ನಾಗಿದೆ. ಆದರೆ ಗ್ರಂಥವು ಎಲ್ಲಿ ಅಳತೆಮೀರಿ ಹೋಗುವುದೋ ಎಂಬ ಭೀತಿಯಿಂದ ಪಂಪನು ಸಂಕ್ಷೇಪವಾಗಿ ಬರೆದಿರುವುದರಿಂದ ಈ ಭಾಗದ ಸ್ವಾರಸ್ಯವೇ ವ್ಯಕ್ತವಾಗಿಲ್ಲ. ಇದರ ಆಧಾರದಿಂದಲೇ ನಾನು ಒಂದು ಕಾವ್ಯವನ್ನು ಕಟ್ಟಬೇಕು. ಚೆನ್ನಾಗಿರುವ ಸಂದರ್ಭಗಳನ್ನು ವಿಸ್ತರಿಸಬೇಕು. ಅನಾವಶ್ಯಕವಾದುವುಗಳನ್ನು ಕಿತ್ತುಹಾಕಬೇಕು. ಮೂಲದಲ್ಲಿ ಒಂದು ಸೊಗಸಾದ ಭಾವವಿದ್ದರೆ ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳಿ ಇನ್ನೂ ಸೊಗಸಾಗುವಂತೆ ಮಾಡಬೇಕು." ಹೀಗೆಂದು ಆಲೋಚಿಸಿ ರನ್ನನು 'ಗದಾಯುದ್ಧ'ವನ್ನು ಬರೆದಂತೆ ಕಾಣಿಸುತ್ತದೆ. ರನ್ನನು ಮಾಡಿರುವ ಸ್ವೀಕರಣವನ್ನು ನಾವು ಈ ದೃಷ್ಟಿಯಿಂದ ನೋಡಬೇಕು.

"ರನ್ನ ಪಂಪರ ಸಂಬಂಧವು ಷೇಕ್ಸ್‌ಪಿಯರ್ ಪ್ಲೂಟಾರ್ಕರವರ ಸಂಬಂಧ ದಂತೆಂ"ದು ಮ. ರಾ. ಬಿ. ಎಂ. ಶ್ರೀಕಂಠಯ್ಯನವರು ಒಂದು ಸಂದರ್ಭದಲ್ಲಿ ಹೇಳಿದರು.* ಇದರ ಔಚಿತ್ಯವನ್ನು ತಿಳಿದವರು ಯಾರೂ ರನ್ನನನ್ನು ದೂಷಿಸುವ ಗೋಜಿಗೆ ಹೋಗಲಾರರು. ಪ್ಲೂಟಾರ್ಕಿಗೂ ಷೇಕ್ಸ್‌ಪಿಯರಿಗೂ ಇದ್ದ ಸಂಬಂಧವನ್ನು ಮೇಬಿ ಎಂಬ ವಿಮರ್ಶಕರು ಹೀಗೆ ಸೂಚಿಸಿದ್ದಾರೆ :

". . . it was in Plutarch that the poet (Shakespeare) found the material for three of the greatest of the tragedies. "Julius Caesar" "Antony And Cleopatra" and "Coriolanus", and, in part, for "Timon of Athens". Not only did he find his material in Plutarch, but he found passages so nobly phrased, whole dialogues sustained at such a height of dignity, force or eloquence, that he incorporated them into his work with essentially minor changes . . . Plutarch supplied traits, hints, suggestions, phrases and actions so complete in themselves that the poet needed to do little but turn upon the biographer's prose his vitalizing and organizing imagination"**

ರನ್ನನ ಸಾಲವು ಇದ್ದಕ್ಕಿಂತಲೂ ಹೆಚ್ಚೆ?

---

* 'ಪ್ರಬುದ್ಧ ಕರ್ಣಾಟಕ', ಕ್ರೋಧನ-ಸಂಕ್ರಾಂತಿಯ ಸಂಚಿಕೆ, 'ವಸ್ತುಕೋಶ' ಪು. ೩.

** H.W. Mabie : *William Shakespeare : Poet, Dramatist and Man* pp. 234-235.

ರನ್ನನೇನೋ ಪಂಪನ ಕಥೆಯನ್ನೇ ಅನುಸರಿಸಿದ್ದಾನೆ. ಆದರೆ ಅವನು ಬೇರೆ ರೀತಿಯಲ್ಲಿ ಮಾಡಲು ಸಾಧ್ಯವಿರಲಿಲ್ಲ. 'ಗದಾಯುದ್ಧ'ದ 'ಕಥೆ'ಯು ಬಹು ಸ್ವಲ್ಪ. ಅದರ ಪ್ರಾರಂಭಕ್ಕೆ ಮೊದಲೇ ಕರ್ಣಶಲ್ಯಾದಿಗಳ ವಧೆಯೂ ನಡೆದುಹೋಗಿರುತ್ತದೆ. ಮುಂದೆ ಬರುವ ಮುಖ್ಯ ಸಂಗತಿಯೆಲ್ಲಾ ದುರ್ಯೋಧನನು ತಂದೆ ತಾಯಿಗಳನ್ನು ನೋಡುವುದು, ಅವನ ವಿಲಾಪ, ಭೀಷ್ಮದರ್ಶನ, ಕೊಳದಲ್ಲಿ ಮೈಮರೆಸುವುದು, ಭೀಮಾದಿಗಳು ಅವನನ್ನು ಹುಡುಕುವುದು, ಗದಾಯುದ್ಧ, ಪಾಂಡವ ಸೂನುಗಳ ಕೊಲೆ—ಇಷ್ಟೆ.' ಇದೆಲ್ಲವೂ ಅನುಕ್ರಮವಾಗಿ ನಡೆಯುವುದರಿಂದ ರನ್ನನು ಮುಖ್ಯ ವ್ಯತ್ಯಾಸವೇನನ್ನು ತುರುವುದಕ್ಕೂ ಅವಕಾಶವಿರಲಿಲ್ಲ. ಆದರೂ ಪಂಪನು ಹೋದ ದಾರಿಯಲ್ಲಿಯೇ ಕಣ್ಣು ಮುಚ್ಚಿಕೊಂಡು ಅವನು ಹೋಗಿಲ್ಲ. ಮಾಡಬಹುದಾದ ಮಾರ್ಪಾಡುಗಳನ್ನು ಮಾಡಿಯೇ ಇದ್ದಾನೆ.

'ಗದಾಯುದ್ಧ'ದ ಮೊದಲ ಮೂರು ಆಶ್ವಾಸಗಳಲ್ಲಿ ಬರುವ ವಿಷಯವು ಪಂಪಭಾರತದಲ್ಲಿಲ್ಲ. ದ್ರೌಪದೀಸಂದರ್ಶನ, ಭೀಮ ಪ್ರತಿಜ್ಞೆ ಮೊದಲಾದ ಭಾಗಗಳನ್ನು ರನ್ನನೇ ಕಲ್ಪಿಸಿದ್ದಾನೆ. ದುರ್ಯೋಧನನು ಸಂಜಯನೊಡನೆ ನಡೆಯುತ್ತಾ, ಅಶ್ವತ್ಥಾಮ, ಪಾಂಡವರು, ಮಾರುತಿ, ಕೃಷ್ಣ—ಮೊದಲಾದವರನ್ನು ಅಲ್ಲಗಳೆಯುವ ಭಾಗವು ಬೇರೆ ಯಾವ ಗ್ರಂಥದಲ್ಲಿ ತಾನೆ ಇದೆ? ಉಪಹಾಸಗರ್ಭಿತವಾಗಿ ಮೂದಲಿಸುವುದರಲ್ಲಿ ರನ್ನನು ಅದ್ವಿತೀಯ ಸಾಮರ್ಥ್ಯವನ್ನು ಇಲ್ಲಿ ಪ್ರಕಟಿಸಿದ್ದಾನಲ್ಲವೆ?

'ಪಂಪ ಭಾರತ'ದಲ್ಲಿ ತಂದೆ ತಾಯಿಗಳನ್ನು ನೋಡಿದ ಮೇಲೆ ದುರ್ಯೋಧನನು ಮಂತ್ರಾಲೋಚನೆ ಮಾಡುವನೆಂದೂ, ಬಳಿಕ ಶಲ್ಯನು ಯುದ್ಧಮಾಡಿ ಮಡಿಯುವ ನೆಂದೂ ಇದೆ. ಈ ಭಾಗವು ತನ್ನ ಕಥೆಯ ಏಕಮುಖಕ್ಕೆ ಭಂಗವನ್ನು ತರುವುದೆಂದು ತಿಳಿದು ರನ್ನನು ಅದನ್ನು ಕಿತ್ತುಹಾಕಿ ತನ್ನ ಕಾವ್ಯವು ಪ್ರಾರಂಭವಾಗುವ ಹೊತ್ತಿಗೆ ಶಲ್ಯವಧೆಯೂ ನಡೆದುಹೋಗಿರುವಂತೆ ಏರ್ಪಡಿಸಿದ್ದಾನೆ.

'ಪಂಪ ಭಾರತ'ದ ದುರ್ಯೋಧನನಿಗೂ ಗದಾಯುದ್ಧದ ದುರ್ಯೋಧನನಿಗೂ ವ್ಯತ್ಯಾಸವಿದೆ. 'ಪಂಪ ಭಾರತ'ದಲ್ಲಿ ದುರ್ಯೋಧನನು ಏಕೋ ಸಪ್ಪೆಯಾಗಿ ತೋರುತ್ತಾನೆ. ರನ್ನನ ದುರ್ಯೋಧನನ ವಿಚಾರದಲ್ಲಿ ಯಾರೂ ಈ ಮಾತನ್ನು ಆಡಲಾರರು. ಭೀಮನಿಗಿಂತಲೂ ದುರ್ಯೋಧನನಲ್ಲಿಯೇ ನಮಗೆ ಅಭಿಮಾನವು ಹೆಚ್ಚಾಗಿ ಹುಟ್ಟುತ್ತದೆ; 'ಗದಾಯುದ್ಧ'ಕ್ಕೆ ನಾಯಕನು ನ್ಯಾಯವಾಗಿ ದುರ್ಯೋಧನನೇ ಹೊರತು ಭೀಮನಲ್ಲ.

ರಣರಂಗದಲ್ಲಿ ದುರ್ಯೋಧನನು ತನ್ನವರನ್ನು ನೆನೆದು ಗೋಳಾಡುತ್ತಾನಷ್ಟೆ. ಆಗ ಅಭಿಮನ್ಯುವಿನ ಶರೀರವನ್ನು ಕಂಡು, ಅವನು ಶತ್ರುಪಕ್ಷದವನಾದರೂ ಮತ್ಸರವಿಲ್ಲದೆ ಅವನ ಶೌರ್ಯವನ್ನು ಹೊಗಳಿ (ಗದಾಯುದ್ಧ IV ೫೪–೮) ಕೈಮುಗಿಯುವ (IV ೫೯) ದುರ್ಯೋಧನನಲ್ಲಿ ಯಾರಿಗೆ ತಾನೆ ಗೌರವವು ಹುಟ್ಟುವುದಿಲ್ಲ! 'ಪಂಪ ಭಾರತ'ದಲ್ಲಿ ಈ ಸಂದರ್ಭದಲ್ಲಿ ಅಭಿಮನ್ಯುವಿನ ಪ್ರಸಕ್ತಿಯೇ ಬರುವುದಿಲ್ಲ. ಇದೊಂದು

ಸಣ್ಣ ಅಂಶವನ್ನು ರನ್ನನು ಸೇರಿಸಿ, ದುರ್ಯೋಧನನು "ಮಹಾನುಭಾವ"ನೆಂದು ನಮಗೆ ತೋರುವಂತೆ ಮಾಡಿದ್ದಾನೆ.

ಅಶ್ವತ್ಥಾಮನು ಲಕ್ಷ್ಮಿಯನ್ನು ಎಳೆದು ತರುವ ಘಟನೆಯನ್ನು ರನ್ನನು ಪಂಪನಿಂದ ಸ್ವೀಕರಿಸಿರುವನಷ್ಟೆ. ಅಲ್ಲಿಯೂ ಕೂಡ ತನ್ನ ಪ್ರತಿಭೆಯ ಬೆಳಕನ್ನು ಬೀರಿಯೇ ಇದ್ದಾನೆ. ಲಕ್ಷ್ಮಿಯನ್ನು ನೆವ ಮಾಡಿಕೊಂಡು ಅಶ್ವತ್ಥಾಮನ ಬಾಯಿಂದ ರನ್ನನು ಹೊರಡಿಸಿರುವ ಐಶ್ವರ್ಯ ಗರ್ಹಣೆಯ (ಗದಾಯುದ್ಧ IX ೬-೧೨) ಸುಳಿವಾದರೂ 'ಪಂಪ ಭಾರತ'ದಲ್ಲಿ ಎಲ್ಲಿದೆ?

ಎಂಟನೆಯ ಆಶ್ವಾಸದ ತುಂಬ 'ಗದಾಯುದ್ಧ'ವನ್ನು ವರ್ಣಿಸಿದುದಕ್ಕೆ ಸಲ್ಲಬೇಕಾದ ಸ್ತುತಿಯೂ ರನ್ನನಿಗೇ ಸೇರತಕ್ಕದ್ದು. 'ಪಂಪಭಾರತ'ದಲ್ಲಿ ಈ ರಸಾವೇಶವಿಲ್ಲ, ಈ ವರ್ಣನೆಯ ರಭಸವಿಲ್ಲ, ಓದುವವರ ಮೈಯನ್ನು ಜುಮ್ಮೆನಿಸುವ ಭೀಮ ದುರ್ಯೋಧನರ ವಾಕ್ಪ್ರಹಾರಗಳಿಲ್ಲ.

ಇದೆಲ್ಲವೂ ಕಥಾಭಾಗದ ವಿಚಾರವಾಯಿತು. ರನ್ನನು ಪಂಪನಿಂದ ವಾಕ್ಯಗಳನ್ನೂ ಭಾವಗಳನ್ನೂ ತೆಗೆದುಕೊಂಡಿರುವ ವಿಚಾರದಲ್ಲಿಯೂ ಒಂದೆರಡು ಮಾತನ್ನು ಹೇಳಬಹುದು. ಕೆಲವು ಕಡೆಗಳಲ್ಲಿ ಪಂಪನ ವಾಕ್ಯಗಳನ್ನು ನೋಡಿ ಬಿಡಲಾರದೆ, ಅವನ್ನು ಮಾರ್ಪಡಿಸುವುದು ಯಾರಿಂದಲೂ ಸಾಧ್ಯವಿಲ್ಲವೆಂದು ಮನಗಂಡು, ರನ್ನನು ತನ್ನ ಕಾವ್ಯದಲ್ಲಿ ಸೇರಿಸಿದೆನೆಂದು ತೋರುತ್ತದೆ.* ಇಂತಹ ಸಂದರ್ಭಗಳು ಬಲು ಕಡಿಮೆ; ಗ್ರಂಥದಲ್ಲೆಲ್ಲಾ ಮೂರುನಾಲ್ಕು ಇದ್ದರೆ ಹೆಚ್ಚಾಯಿತು.

ಮಿಕ್ಕ ಕಡೆಗಳಲ್ಲಿ ಪಂಪನ ಮಾತುಗಳನ್ನೇ ರನ್ನನು ಪ್ರಯೋಗಿಸಲ್ಲ. ಅವನ ಪದ್ಯದಲ್ಲಿ ಒಂದು ಸೊಗಸಾದ ಭಾವವು ಬಂದಿದ್ದರೆ ಅದನ್ನೇ ತಿರುಗಿಸಿ ಬೇರೊಂದು ರೀತಿಯಾಗಿ ತಾನು ಹೇಳಿರುತ್ತಾನೆ. ಹೀಗೆ ಮಾಡುವಾಗಲೂ ಜಾಣತನವನ್ನು ತೋರಿಸಿದ್ದಾನೆ.

ಒಂದೊಂದು ಸಲ, ತನ್ನ ಪ್ರತಿಭಾ ಕೌಶಲವನ್ನೆಲ್ಲಾ ವೆಚ್ಚಮಾಡಿ ಎದೆಗರಗುವ ಪದ್ಯಗಳನ್ನು ಬರೆದು ನಮ್ಮಿಂದ "ಭಲೆ" ಎನ್ನಿಸಿಕೊಂಡ ಬಳಿಕ ರನ್ನನು ವರಕವಿಯ ಭಾವವೊಂದನ್ನು ತಂದು ಉಪಯೋಗಿಸಿಕೊಳ್ಳುತ್ತಾನೆ. ಕರ್ಣನನ್ನು ನೆನೆದು ದುರ್ಯೋಧನನು ಪ್ರಲಾಪಿಸುವ ಭಾಗವು ಇದಕ್ಕೆ ಒಳ್ಳೆಯ ಉದಾಹರಣೆ. "ಆನುಂ ದುಶ್ಶಾಸನನುಂ . . ." (V ೧೧) ಎಂದು ಮೊದಲು ಮಾಡಿ ಸುಮಾರು ಇಪ್ಪತ್ತು ಪದ್ಯಗಳನ್ನು ಬರೆದು ತನ್ನ ಸಾಮರ್ಥ್ಯವನ್ನೆಲ್ಲಾ ಪ್ರಕಟಪಡಿಸಿ ವಾಚಕರನ್ನು ತನ್ನವರನ್ನಾಗಿ ಮಾಡಿಕೊಂಡು ಆಮೇಲೆ "ಕಳೆಯಂಗಾಯ್ತುಸುಮೋಕ್ಷ. . ." (V ೩೧) ಎಂದು ಮೊದಲಾದ ಪದ್ಯಗಳಲ್ಲಿ ಪಂಪನ ಭಾವವನ್ನು ಅನುವಾದ ಮಾಡಿದ್ದಾನೆ.

---

* 'ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳಿವೆ' – ಎಂದು ಹಿಂದೆ ಕೊಟ್ಟಿರುವ ಉದಾಹರಣೆಯನ್ನು ನೋಡಿ.

ಹೀಗೆ ಮಾಡದೆ, ಮೊದಲೇ ಪಂಪನ ಭಾವವೊಂದನ್ನು ಉಪಯೋಗಿಸಿ ಕೊಂಡಿದ್ದರೆ ಅದು ಬರುವ ಭಾಗದ ಮುಂದಿನ ಪದ್ಯವನ್ನೇ ಸ್ವತಂತ್ರವಾಗಿ ಬರೆದು ಅದರ ಲೋಕೋತ್ತರವಾದ ಭಾವವನ್ನು ನಾವು ಸವಿದು ಮೈಮರೆಯುವಂತೆ ಮಾಡಿರುತ್ತಾನೆ. ಇದಕ್ಕೊಂದು ಉದಾಹರಣೆಯೊಂದನ್ನು ಕೊಡಬಹುದು. ಪಾಂಡವರ ತಲೆಗಳೇ ಇವು ಎಂಬ ಭ್ರಾಂತಿಯಿಂದ ಪಾಂಡವ ಪುತ್ರರ ತಲೆಗಳನ್ನು ಅಶ್ವತ್ಥಾಮನು ತಂದು ದುರ್ಯೋಧನನ ಮುಂದಿರಿಸಿದ ಸಂದರ್ಭವನ್ನು ನಿರೂಪಿಸುವಾಗ ಒಂದೆರಡು ವಾಕ್ಯಗಳನ್ನು ಪಂಪನಿಂದ ರನ್ನನು ತೆಗೆದುಕೊಂಡಿದ್ದಾನೆಂದು ಹಿಂದೆ ತೋರಿಸಿದೆಯಷ್ಟೆ ಅದಾದ ಕೂಡಲೇ 'ಗದಾಯುದ್ಧ'ದಲ್ಲಿ ಬರುವ 'ಪಂಪಭಾರತ'ದಲಿಲ್ಲದ ಈ ದುರ್ಯೋಧನೋಕ್ತಿಯನ್ನು ನೋಡಿ :

ಪವನಜನಾಸ್ಯಮಲ್ತಿದವನಾನನಮಪ್ಪೊಡೆ ಮಟ್ಟಮಿರ್ದು ನೋ
ಡುವುದೆ ಮದೀಯ ವಕ್ತ್ರಮನೆ ಕೆಮ್ಮನೆ ಪೋಯ್ತಜಿವಿಲ್ಲದಾಯ್ತು ಪಾಂ
ಡವರ ಶಿರಂಗಳಲ್ಲಿವು ಕೃಷ್ಣೆಯ ಸೂನುಗಳಪ್ಪ ಪಂಚಪಾಂ
ಡವರ ಶಿರಂಗಳಂ ನೆಱೆ ವಿಚಾರಿಸಿದಕ್ಕಟ ಕೊಂಡುಬರ್ಪುದೇ IX. ೩೩

ಪಂಪನು ಪದ್ಯವೊಂದನ್ನು ಲಂಬಿಸಿ ಬರೆದು ಅದರ ಅರ್ಥದ ಸೊಗಸು ಚೆನ್ನಾಗಿ ತೋರದಂತೆ ಮಾಡಿದ್ದರೆ, ಅದೇ ಅರ್ಥವನ್ನು ರನ್ನನು ಸಾಣೆಹಿಡಿದು ಚಿಕ್ಕ ಪದ್ಯವೊಂದರಲ್ಲಿ ಅಡಕ ಮಾಡಿ ಅದಕ್ಕೆ ಹೊಳಪುಗೊಟ್ಟಿರುವುದೂ ಕೆಲವು ಕಡೆ ಉಂಟು. 'ಪಂಪಭಾರತ'ದಲ್ಲಿ, ಧೃತರಾಷ್ಟ್ರನು "ಸಂಧಿಯನ್ನು ಮಾಡಿಕೊಂಡು ಭೂಮಿಯನ್ನಾಳು" ಎಂದು ಮಾಡಿದ ಉಪದೇಶಕ್ಕೆ ಪ್ರತಿಯಾಗಿ ದುರ್ಯೋಧನನು ಈ ಮಾತನ್ನಾಡುವನು :

ತಲೆದೋಱಲ್ಕಣಮಳ್ಕಿ ವೈರಿ ನೆಲನಂ ಪೋ ಪೊಕ್ಕನೆಂಬನ್ನೆಗಂ
ಚಲದಿಂದೆಯ್ದುವ ಕರ್ಣನುಗ್ರರಥಮಂ ಮುಂ ನುಂಗಿದೀ ದ್ರೋಹಿಯೊಳ್
ನೆಲದೊಳ್ ಪಂಬಲೆ ಮತ್ತಮನ್ನ ಮುಳಿಸಿಂಗಾಂ ಕಾದಿ ಪಿಂ ಪೇಸಿದೆಂ
ನೆಲೆಗಂಡಂತೆ ನೆಲಕ್ಕೆ ಗೆಲ್ದೊಡಮದಂ ಚೀ ಮತ್ತಮಾನಾಳ್ವೆನೇ
XIII. ೧೭

'ಗದಾಯುದ್ಧ'ದಲ್ಲಿ ಭೀಷ್ಮರು ಸಂಧಿಯ ಮಾತನ್ನಾಡಿದಾಗ ದುರ್ಯೋಧನನು ಮುಗುಳ್ನಗೆ ನಕ್ಕು ಹೀಗೆಂದು ಹೇಳುವನು :

ನೆಲಕಿಱಿವೆನೆಂದು ಬಗೆದಿರೆ
ಚಲಕಿಱಿವೆಂ ಪಾಂಡುಸುತರೊಳೀ ನೆಲನಿದು ಪಾ
ಟ್ಳಿಲನೆನಗೆ ದಿನಪ ಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ವಪನೇ VII. ೪೭

ಪಂಪನ ಬಳಸಾದ ಪದ್ಯದಲ್ಲಿ ಮರೆಯಾಗಿದ್ದ ದುರ್ಯೋಧನನ ಹಠ ಪ್ರಿಯತೆಯು ರನ್ನನ ಋಜುವಾದ ಶೈಲಿಯಲ್ಲಿ ಎದ್ದು ಬರುವಂತೆ ಕಾಣಿಸುವುದಿಲ್ಲವೆ?

ಒಂದೇ ಭಾವವು ಎರಡು ಗ್ರಂಥಗಳಲ್ಲಿ ಬಂದ ಮಾತ್ರಕ್ಕೇ ಒಬ್ಬ ಕವಿಯು ಇನ್ನೊಬ್ಬನಿಂದ ಅದನ್ನು ತೆಗೆದುಕೊಂಡನೆಂದು ಹೇಳುವುದಕ್ಕಾಗುವುದಿಲ್ಲ. ಮೊಟ್ಟಮೊದಲು ಒಬ್ಬ ಕವಿಯ ಪ್ರತಿಭೆಯಿಂದ ಅಂಕುರಿಸಿದ್ದರೂ ಕೆಲವು ಕಲ್ಪನೆಗಳು ಸ್ವಲ್ಪಕಾಲದಲ್ಲಿಯೇ ಸರ್ವಸಾಧಾರಣವಾಗಿ ಬಿಡುತ್ತವೆ. ಇವು ಹೆರರವು ಎಂಬ ಅರಿವೇ ಇಲ್ಲದೆ ಕವಿಗಳು ಅವನ್ನು ತಮ್ಮ ಗ್ರಂಥಗಳಲ್ಲಿ ಪ್ರಯೋಗಿಸುತ್ತಾರೆ. "ಕವಿಸಮಯ"ದ ಉತ್ಪತ್ತಿಗೆ ಕಾರಣಗಳಲ್ಲಿ ಇದೂ ಒಂದೆಂದು ತೋರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಯಾವ ಕವಿಗಾದರೂ ಅದೇ ಭಾವವು ಹೊಳೆಯಬಹುದು; ಯಾರ ಬಾಯಲ್ಲಾದರೂ ಅದೇ ಮಾತು ಹೊರಡಬಹುದು. ಆ ಸನ್ನಿವೇಶದ ಸ್ವಭಾವವೇ ಅಂತಹದಾಗಿರಬಹುದು. ಆಗ ಒಬ್ಬ ಕವಿಗೆ ಇನ್ನೊಬ್ಬನು ಋಣಿಯೆಂದು ಹೇಳುವುದು ತಪ್ಪು.

ಮ. ರಾ. ರಾಮಾನುಜೈಯಂಗಾರ್ಯರು 'ವೇಣೀಸಂಹಾರ'ಕ್ಕೂ 'ಗದಾಯುದ್ಧ'ಕ್ಕೂ ಇರುವಂತೆ ತೋರಿಸಿರುವ ಭಾವಸಾಮ್ಯಗಳಲ್ಲಿ ಒಂದು ಈ ಜಾತಿಗೆ ಸೇರಿದುದು. 'ವೇಣೀಸಂಹಾರ'ದಲ್ಲಿ ಧೃತರಾಷ್ಟ್ರನೂ ಗಾಂಧಾರಿಯೂ ಯುದ್ಧದಲ್ಲಿ ಮಿಕ್ಕ ಮಕ್ಕಳೆಲ್ಲರೂ ಸತ್ತುಹೋದ ಬಳಿಕ ದುರ್ಯೋಧನನನ್ನು ಹುಡುಕಿಕೊಂಡು ಬರುವರು. ಎಷ್ಟು ಮಾತಾಡಿಸಿದರೂ ದುರ್ಯೋಧನನು ದುಃಖದಿಂದಲೂ ನಾಚಿಕೆಯಿಂದಲೂ ಪ್ರತ್ಯುತ್ತರವನ್ನೇ ಕೊಡದಿರಲು ಗಾಂಧಾರಿಯು :

> ವತ್ಸ ಯದಿ ತ್ವಮಪ್ಯಸ್ಮಾನ್ನಾಲಪಸಿ ತತ್ ಕಿಂ ಸಾಂಪ್ರತಂ ವತ್ಸೋ ।
> ದುಶ್ಶಾಸನ ಆಲಪತು ದುರ್ಮರ್ಷಣೋ ವಾಥಾನ್ಯೋ ವಾ ॥
>
> (V. ೧, ಗ. ಛಾಯಾ)

["ವತ್ಸ, ನೀನೂ ನಮ್ಮನ್ನು ಮಾತಾಡಿಸದಿದ್ದರೆ, ಈಗ ವತ್ಸ ದುಶ್ಶಾಸನನಾಗಲಿ, ದುರ್ಮರ್ಷಣನಾಗಲಿ, ಇನ್ನೊಬ್ಬನಾಗಲಿ ಮಾತನಾಡಿಸುವರೆ?"] ಎಂದು ಅಳುವಳು. 'ಗದಾಯುದ್ಧ'ದಲ್ಲಿ ದುರ್ಯೋಧನನೂ ಮಡಿದನೆಂದು ಗಾಂಧಾರಿಯು ತಪ್ಪಾಗಿ ತಿಳಿದು

> ಮಡಿದೀ ದುಶ್ಶಾಸನನೇಂ
> ನುಡಿಯಿಸುವನೊ ಕುರು ನರೇಂದ್ರ ದುರ್ಮರ್ಷಣನೇಂ
> ನುಡಿಯಿಸುವನೊ ದುಷ್ಕರ್ಣಂ
> ನುಡಿಯಿಸುವನೊ ನೀನುಮುಸಿರದಿರ್ಪುದು ಮಗನೆ III. ೮೧

ಎಂದು ಗೋಳಾಡುವಳು. ಮಕ್ಕಳನ್ನು ನೆನೆದು ತಾಯಿಯರು ಅಳುವುದು ಮಾನವ ವರ್ಗದ ಹುಟ್ಟುಗುಣ. ಈ ಸಂದರ್ಭದಲ್ಲಿ ಈ ಭಾವವು ಎಂತಹ ಕವಿಗಾದರೂ ಸ್ಫುರಿಸುತ್ತಿದ್ದಿತೆಂದು ತೋರುತ್ತದೆ. ಆದುದರಿಂದ ರನ್ನನು ಇದನ್ನು 'ವೇಣೀಸಂಹಾರ'ದಿಂದ ಕಲಿತುಕೊಂಡನೆಂದು ಹೇಳುವುದು ಅನುಚಿತ.

ಅಂತೂ ಈ ಸತ್ವಪರೀಕ್ಷೆಯಲ್ಲಿ ರನ್ನನ ಹೆಸರು ಕೊಂಕಲಿಲ್ಲವೆಂದು ನೋಡಿದುದಾಯಿತು. ಒಂದು ವಿಚಾರದಲ್ಲಿ ಮಾತ್ರ ಅವನನ್ನು ನಾವು ಹೊಗಳುವ ಹಾಗಿಲ್ಲವೆಂದು ಸಂಕೋಚದಿಂದ ಹೇಳಬೇಕಾಗಿದೆ. ಪಂಪನಿಂದ ಉಪಕಾರವನ್ನು ಹೊಂದಿಯೂ ರನ್ನನು 'ಗದಾಯುದ್ಧ'ದಲ್ಲಿ ಅವನ ಸ್ಮರಣೆಯನ್ನು ಕೂಡ ಮಾಡದೆ ಇರುವುದನ್ನು ನೋಡಿ ನಮಗೆ "ಸಖೇದಾಶ್ಚರ್ಯ" ಉಂಟಾಗುತ್ತದೆ. ಹಿಂದಿನ ಕವಿಗಳಲ್ಲೆಲ್ಲಾ ವ್ಯಾಸ, ವಾಲ್ಮೀಕಿ, ಕಾಳಿದಾಸ, ಬಾಣ—ಇಷ್ಟು ಜನಕ್ಕೆ ಮಾತ್ರ ರನ್ನನು 'ಗದಾಯುದ್ಧ'ದಲ್ಲಿ ಅಭಿವಂದಿಸಿದ್ದಾನೆ. ಕನ್ನಡ ಕವಿಗಳ ಪ್ರಸ್ತಾಪವೇ ಇಲ್ಲ. ಯಾರ ಹೆಸರನ್ನು ಎತ್ತದೇ ಇದ್ದರೂ ಪಂಪನನ್ನು ಕುರಿತು ಒಂದು ಮಾತನ್ನಾದರೂ ಆಡಬೇಕಾಗಿದ್ದಿತಲ್ಲವೆ? "ಆರಾತೀಯ ಕವೀಶ್ವರ"ರನ್ನು ಮೀರಿಸಿದೆನೆಂದು ಹೆಮ್ಮೆಪಡುವ ಬದಲು ಪಂಪನಿಗೆ ತನ್ನ ಕೃತಜ್ಞತೆಯನ್ನು ವಿನಯದಿಂದ ಸೂಚಿಸಿದ್ದರೆ, ರನ್ನನ ಗೌರವವು ಹೆಚ್ಚುತ್ತಿದ್ದಿತೇ ಹೊರತು ಕಡಿಮೆಯಾಗುತ್ತಿರಲಿಲ್ಲ. ಮಲ್ಲಣಾರ್ಯರು 'ಭಾವ ಚಿಂತಾರತ್ನ'ದಲ್ಲಿ ವರ್ಣಕವಾಗಿ ಹೇಳಿದ ಕಥೆಯನ್ನೇ ತಾನು ವಸ್ತುಕವಾಗಿ 'ರಾಜಶೇಖರ ವಿಳಾಸ'ದಲ್ಲಿ ಹೇಳುವೆನೆಂದು ಷಡಕ್ಷರ ದೇವನು (ರಾಶೇಖ. I. ೭೮) ಒಪ್ಪಿಕೊಂಡಿಲ್ಲವೆ? ಅದರಿಂದ 'ರಾಜಶೇಖರ ವಿಳಾಸ'ವು ಯಾವ ಭಾಗದಲ್ಲಿ ಮುಕ್ಕಾಗಿದೆ? ರನ್ನನು— "ಕವಿಗೆ ಸರ್ವ ಸ್ವಾತಂತ್ರ್ಯವುಂಟು. ಅವನು ರಾಜನ ಹಾಗೆ. ತನಗೆ ಬೇಕಾದ ವಸ್ತುವನ್ನು ತೆಗೆದುಕೊಳ್ಳುವುದಕ್ಕೆ ಬೇರೆಯವರ ಅನುಮತಿಯನ್ನು ಪಡೆಯಬೇಕೆ? ತೆಗೆದುಕೊಂಡ ಮಾತ್ರಕ್ಕೆ ಕೃತಜ್ಞತೆಯನ್ನು ಸೂಚಿಸಬೇಕೆ? ಮೂಲಕ್ಕಿಂತಲೂ ನನ್ನ ಕಾವ್ಯವು ಮಿಗಿಲಾಗಿರುವಾಗ ಪಂಪನನ್ನು ಸ್ತುತಿಸದಿದ್ದರೆ ಏನು ಹಾನಿ?" ಎಂದು ಉಪೇಕ್ಷಿಸಿ ಬಿಟ್ಟಂತೆ ಕಾಣುತ್ತದೆ. ಇದೊಂದೇ ಅವನ ನಿಜವಾದ ದೋಷ.

ಆದರೆ ಇಷ್ಟು ಕಠಿಣವಾಗಿ ರನ್ನನನ್ನು ದೂಷಿಸುವುದಕ್ಕೂ ಆಗುವುದಿಲ್ಲ. 'ಅಜಿತ ತೀರ್ಥಕರ ಪುರಾಣತಿಲಕ'ದ ಅಂತ್ಯದಲ್ಲಿ ರನ್ನನು ಪಂಪನನ್ನು ಹೆಚ್ಚಾಗಿ ಹೊಗಳಿದ್ದಾನೆ. ಅವನ 'ಆದಿಪುರಾಣ'ಕ್ಕೆ "ಉಪಮಾತೀತಂ" ಎಂಬ ವಿಶೇಷಣವನ್ನು ಕೊಟ್ಟಿದ್ದಾನೆ. (ಅಜಿತ ಪು. XII ೩೬). ತಾನು ಪಂಪನಿಗೆ ಸಮಾನನು ಎಂಬ ಅಭಿಪ್ರಾಯವು ವಾಚಕರಿಗೆ ಹುಟ್ಟುವಂತೆ ಮಾಡಲು ಸಾಹಸಪಟ್ಟಿದ್ದಾನೆ. ಇದೆಲ್ಲವನ್ನೂ ನೋಡಿದರೆ, ಪಂಪನಲ್ಲಿ ರನ್ನಿಗೆ ಅತಿಶಯವಾದ ಗೌರವವಿದ್ದಿತೆಂದು ವ್ಯಕ್ತವಾಗುತ್ತದೆ. ಇಲ್ಲಿಯಾದರೂ ಪಂಪನಿಗೆ ರನ್ನನು ತನ್ನ ಭಕ್ತಿಯ ಕಾಣಿಕೆಯನ್ನು ಒಪ್ಪಿಸಿದ್ದಾನಲ್ಲ ಎಂದು ನಾವು ಒಂದು ವಿಧದಲ್ಲಿ ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳಬಹುದು.

ಕಾವ್ಯಾನುಭವ : ೧೯೭೦

ದಾನಚಿಂತಾಮಣಿ ಅತ್ತಿಮಬ್ಬೆ*

೧

ಕ್ರಿ.ಶ. ೧೦ನೆಯ ಶತಮಾನದ ಕೊನೆಯ ಪಾದ: ರಾಷ್ಟ್ರಕೂಟರ ಹಿರಿಮೆಯನ್ನು ಕೊನೆಗಾಣಿಸಿ ಚಾಳುಕ್ಯ ಸಾಮ್ರಾಜ್ಯವನ್ನು ನೆಲೆಗೊಳಿಸಿದ ಆಹವಮಲ್ಲದೇವ-ನೂರ್ಮಡಿತೈಲಪನ ಆಳಿಕೆಯ ಕಾಲ. "ಆಹವಮಲ್ಲನ ಭುಜಾದಂಡ," "ವಿವೇಕಬೃಹಸ್ಪತಿ" ಎಂಬ ವಿಖ್ಯಾತಿಯನ್ನು ತಳೆದಿದ್ದ ಮಹಾಮಂತ್ರಿ ಧಲ್ಲಪನ ಹಿರಿಯಮಗನಾದ "ಒಜಟರ ಮಲ್ಲ" ನಾಗದೇವನು ತಂದೆಯಂತೆಯೇ ಸ್ವಾಮಿಸೇವಾಧುರಂಧರನಾಗಿ ಅನೇಕ ಸಂಗ್ರಾಮಗಳಲ್ಲಿ ವಿಜಯವನ್ನು ಸೂರೆಗೊಂಡು ಒಡೆಯನ ಮೆಚ್ಚಿಕೆಯನ್ನು ಸೇನಾಪತಿಪದವಿಯನ್ನೂ ಗಳಿಸಿದನು. ಅತ್ತಿಮಬ್ಬೆ, ಗುಂಡಮಬ್ಬೆ ಎಂಬ ಸಹೋದರಿಯರು ಅವನ ಪತ್ನಿಯರು. ಅತ್ತಿಮಬ್ಬೆಗೆ ಅಣ್ಣಿಗದೇವನೆಂಬ ಚಿಕ್ಕ ವಯಸ್ಸಿನ ಹಿರಿಯ ಮಗ. ಈ ಸಂಸಾರ ಸುಖದ ಮಧ್ಯದಲ್ಲೇ ನಾಗದೇವನು ಸ್ವರ್ಗವಾಸಿಯಾದನು. ಪತಿಯ "ಪರೋಕ್ಷ"ದಲ್ಲಿ ಈ ಸತಿಯರಿಗೆ ಏನು ಕರ್ತವ್ಯ?

ಎರಡೆ ವಲಂ ಕುಲವಧುಗಾ-
ಚರಿಸಲ್ ಪತಿಯಿಂ ಪರೋಕ್ಷದೊಳ್ ಜಿನದೀಕ್ಷಾ-।
ಚರಣಂ ಮೇಣ್ ಶುಭಚರಿತದೆ
ಮರಣಂ ಮೇಣಳಿಪಿನಿಂದೆ ದಾಟ್ವುದು ದೊರೆಯೇ॥

---

* 'ಪ್ರಬುದ್ಧ ಕರ್ನಾಟಕ', ೨೯.೪.

ಎಂದು ಪರಿಚ್ಛೇದಿಸಿ ತಮ್ಮಕ್ಕನತ್ತಿಮಬ್ಬೆಯಲ್ಲಿಗೆ ಗುಂಡಮಬ್ಬೆ ಬಂದು ಬದ್ಧಾಂಜಲಿಯಾಗಿ—

ನಿನಗೆ ಮಗಂ ಜಗತ್ತಿಳಕನಿರ್ದಪನಕ್ಕ ಮಗಂ ಸಮರ್ಥನ-
ಪ್ಪಿನಮಿರು ನಾಗದೇವನೊಡನಾಂ ಬೆಸ[ಕೇ]ಳ್ದಪೆನೆಂದು ಬೇಡಿಕೊಂ-।
ಡಿನಿಯನನಪ್ಪಿಕೊಂಡುಚಿತಮಾಗೆ ಚಿತಾಗ್ನಿಯೊಳಣ್ಮಿ ಸತ್ತ ಸ-
ಜ್ಜನಿಕೆಯ ಪೆಂಪು ಸಜ್ಜನಕೆ ಬಣ್ಣಿಸೆ ಸಂದುದು ಗುಂಡಮಬ್ಬೆಯಾ ॥
(ಅಜಿತಪುರಾಣ, ೧. ೪೬—೭)[1]

ಸರಿ. ಮಹಾಭಾರತದ ಮಾದ್ರಿಯಂತೆ ಕಿರಿಯ ಹೆಂಡತಿ ಪ್ರಿಯನ ದೇಹದೊಡನೆ ಚಿತೆಯೇರಿದಳು : ಅವಳ ಪಾತಿವ್ರತ್ಯವನ್ನು ಲೋಕ ಹೊಗಳಿತು. ಆ "ಮಹಾಸತೀತ್ವ"ದ ಗೌರವವನ್ನು ತಂಗಿಗೆ ಬಿಟ್ಟುಕೊಟ್ಟು, ಪುತ್ರ ಪಾಲನೆಗಾಗಿ ಕುಂತಿಯಂತೆ ಅತ್ತಿಮಬ್ಬೆ ನಿಂತಳು; ಸಂನ್ಯಾಸವನ್ನು ಸ್ವೀಕರಿಸದೆ ಶ್ರಾವಕಿಯಾಗಿದ್ದುಕೊಂಡೇ ಜೈನವ್ರತನಿಷ್ಠೆಯ ಉಗ್ರದೀಕ್ಷೆಯನ್ನು ವಹಿಸಿದಳು. ಉರಿಯುವ ಕಿಚ್ಚನ್ನು ಪ್ರವೇಶಿಸದಿದ್ದ ಮಾತ್ರಕ್ಕೆ ಅವಳ ವ್ರತವೇನೂ ಕಿರಿದಾಗಲಿಲ್ಲ :

ಪತಿಯೊಡನೆನ್ನ ತಂಗೆ ದಹನಾರ್ಚಿಯೊಳೊಂದೆ ಮುಹೂರ್ತದೊಳ್ ನಿವೇ
ದಿತತನುವಾದಳಾಂ ಪಿರಿಯೆನಪ್ಪುದಱಿಂ ಪಿರಿದಪ್ಪ ದಾರುಣ-।
ವ್ರತದಹನಾರ್ಚಿಯಿಂದನುದಿನಂ ತನುವಂ ತನುಮಾಡುತಿರ್ಪೆನೆಂ-
ಬತನುವಿರೋಧಮುಂ ತನುವಿರೋಧಮುಮೊಪ್ಪುಗುಮತ್ತಿಮಬ್ಬೆಯೊಳ್ ॥ (೧.೪೯)

ತಾನು ಹಿರಿಯಳಾದ ಕಾರಣ ಹಿರಿದಾದ ಜೀವಾವಧಿಯ ದಾರುಣ ವ್ರತವನ್ನು ಕೈಕೊಂಡು ಅತ್ತಿಮಬ್ಬೆ ತನ್ನ ದೇಹವನ್ನು ಶೋಷಿಸಿ ಕೃಶಗೊಳಿಸತೊಡಗಿದಳು. ಆಕೆಯಲ್ಲಿ ಅತನುವಿರೋಧವೂ (ಎಂದರೆ ಕಾಮ ಪರಾಙ್ಮುಖತೆಯೂ) ತನುವಿರೋಧವೂ (ಎಂದರೆ, ದೇಹದಂಡನೆಯೂ) ಏಕಕಾಲದಲ್ಲಿ ಶೋಭಿಸಿದುವು.

"ಅತನುವಿರೋಧಮುಂ ತನುವಿರೋಧಮುಂ ಒಪ್ಪುಗುಂ ಅತ್ತಿಮಬ್ಬೆಯೊಳ್!"— ಈ ವಿರೋಧಾಭಾಸದ ಉಕ್ತಿ ರನ್ನ ಕವಿಯದು. ಅವನು 'ಅಜಿತ ಪುರಾಣ'ವನ್ನು ರಚಿಸಿದ್ದು ಅತ್ತಿಮಬ್ಬೆಯ ಆಶ್ರಯದಲ್ಲಿ—ಕ್ರಿ.ಶ. ೯೯೩ ರಲ್ಲಿ. ಪ್ರದಾತೃಗಳನ್ನು ಉತ್ಸಾಹದಿಂದ ಹೊಗಳುವುದು ಕವಿಕುಲಕ್ಕೇ ಬಂದ ಪದ್ಧತಿಯೆಂಬುದು ನಿಜ; ರನ್ನನು

---

೧. 'ಅಜಿತ ಪುರಾಣ'ವನ್ನು ಶ್ರೀ ಮಂ.ಆ. ರಾಮಾನುಜೈಯ್ಯಂಗಾರ್ಯರು ಅಚ್ಚುಮಾಡಿಸಿದ್ದಾರೆ (ಮೈಸೂರು—೧೯೧೦). ಇದರ ಮೊದಲ ಎರಡು ಆಶ್ವಾಸಗಳನ್ನು ಮಾತ್ರ ಶ್ರೀ ಆರ್. ತಾತಾ ಅವರು ಅಚ್ಚುಮಾಡಿಸಿದ್ದಾರೆ (ಮಂಗಳೂರು—೧೯೩೯). ಮೊದಲನೆಯ ಆಶ್ವಾಸದಿಂದ ಉದಾಹರಿಸುವಾಗ, ಹೆಚ್ಚು ಶುದ್ಧವಾಗಿರುವ ಮಂಗಳೂರಿನ ಪ್ರತಿಯನ್ನೇ ಇಲ್ಲಿ ಮುಖ್ಯವಾಗಿ ಅವಲಂಬಿಸಿದ್ದೇವೆ.

ಪ್ರಶಂಸಾಪಂಡಿತನೆಂಬುದು ನಿಜ. ಆದರೂ ಅತ್ತಿಮಬ್ಬೆಯನ್ನು ಕುರಿತು ಅಜಿತಪುರಾಣದ ಮೊದಲನೆಯ ಮತ್ತು ಕೊನೆಯ ಆಶ್ವಾಸಗಳಲ್ಲಿ ಬಂದಿರುವ ಮಾತುಗಳು ಕೇವಲ ವೇತನಕ್ಕಾಗಿ ರನ್ನನು ಸಲ್ಲಿಸಿದ ಪ್ರತಿಫಲವಲ್ಲ. ಆಕೆಯ ದಾನಗುಣ ಮಾತ್ರವಲ್ಲದೆ ಧರ್ಮನಿಷ್ಠೆಯೂ ಶೀಲವ್ರತವೂ ಸದಾಚರಣೆಯೂ ರನ್ನನ ಗೌರವವನ್ನು ಗಳಿಸಿವೆ. ಆಕೆಯಲ್ಲಿ ತಪಸ್ವಿನಿಯ ತೇಜಸ್ಸನ್ನು ಕಂಡು ಅವನು ಭಕ್ತಿಭಾವದಿಂದ ತನ್ನ ಸ್ತುತಿಮಾಲಿಕೆಯನ್ನು ಅರ್ಪಿಸಿದ್ದಾನೆ. ಈ ಕೆಲವು ಪದ್ಯಗಳನ್ನು ಗಮನಿಸಬಹುದು;

ಒಡಲನುಪವಾಸದಿಂ ತ-
ನ್ನೊಡಮೆಯನನವರತದಾನದಿಂ ತವಿಸಿ ಜಸಂ-।
ಬಡೆದಳ್ ನೂರ್ಮಡಿತ್ತೈಲನ
ಪಡೆವಳ ತೈಲಪನ ಜನನಿಗೆಣೆ ಪೆಱರೊಳರೇ ॥ (೧.೫೧)

[ಅತ್ತಿಮಬ್ಬೆಯ ಮಗನಾದ ಅಣ್ಣಿಗದೇವನಿಗೆ ಪಡೆವಳ ತೈಲ(ಪ)ನೆಂದೂ ಹೆಸರು; ತಂದೆಯಂತೆ ಅವನೂ ಚಕ್ರವರ್ತಿಯ ಸೇನಾಪತಿಯಾಗಿದ್ದನು.]

ಜಿನಪದಭಕ್ತೆ ಜಗತ್ತ್ರಯ-
ಜನವಂದಿತೆ ಚಕ್ರವರ್ತಿಪೂಜಿತೆ ಜಿನಶಾ-।
ಸನರುಚಿ ಪಡೆವಳತೈಲನ
ಜನನಿಯೆ ತೀರ್ಥಕರಜನನಿಯೆನ್ನದರೊಳರೇ ॥ (೧.೫೫)

ಕಲಿಯೆನೆ ನೆಗೞ್ದ ಕಸವರ-
ಗಲಿಯೆನೆ ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್ ।
ಮೊಲೆವೆತ್ತ ತೈಲಜನನಿಯ
ಕೆಲದೊಳ್ ರಂಜಿಪರೆ ಮಿಾಸೆವೊತ್ತಣ್ಣಂಗಳ್ ॥ (೧.೬೫)

ಅಸಿಲತೆಯೆಂದು ಬಣ್ಣಿಪುದು ಧರ್ಮವಿರೋಧಿಜನಕ್ಕೆ ಧರ್ಮದಿಂ-
ದೆಸಪ ಜನಕ್ಕೆ ಕಲ್ಪಲತೆಯೆಂದೆಳೆ ಬಣ್ಣಿಪುದೆಂಬ ತನ್ನ ಪೆಂ-
ಪೆಸೆಯೆ ಜಗಜ್ಜನಂ ಪೊಗೞೆ ಸಂದ ಮಹಾಸತಿಯಂ ತಗುಳ್ದು ಬ-
ಣ್ಣಿಸುವುದು ಪುಣ್ಯಮಲ್ತೆ ಜಿನಧರ್ಮಪತಾಕೆಯನತ್ತಿಮಬ್ಬೆಯಂ ॥ (೧.೬೬)

ಉತ್ತಮಗೋತ್ರೋದ್ಭವೆ ಸ-
ದ್ವೃತ್ತೆ ಮಹಾಸತಿ ವಿನೇಯಚೂಡಾಮಣಿ ತಾ-।
ನೆತ್ತುಟಿದರೆತ್ತ ಪಿಕ್ಕುವೊ-
ಡತ್ತಿಯ ಪಣ್ಣತ್ತಿಮಬ್ಬೆಯಲ್ಲದರ ಗುಣಂ ॥ (೧.೭೦)

ಶೀಲಾಳಂಕೃತೆಯಂ ಗುಣ-
ಮಾಲಾಳಂಕೃತೆಯನಾ ಮಹಾಸತಿಯಂ ಶ್ರೀ-।

ತೈಲಾಂಬಿಕೆಯಂ ಪೆಸರ್ಗೊಳೆ
ಬಾಲೆಯರಂ ಖಳಕಲಂಕಮೇಂ ಪೊರ್ದುಗುಮೇ ॥ (೧.೭೪)

ಅಳುರದು ಕೀರ್ತಿ ಮುಟ್ಟದು ವಿಷಾಹಿ ಮಹಾಸತಿಯಿರ್ದ ಮಂಡಲಂ
ಬೆಳೆವುದು ಬೇಡಿದಂತೆ ಮಟೆ ಕೊಳ್ವುದೆನಿಪ್ಪ ಜಸಕ್ಕೆ ನೋಂತ ಭೂ-।
ತಿಳಕಪವಿತ್ರೆಯಂ ಗುಣಪವಿತ್ರೆಯಾನಾ ಸತಿಯಂ ಮಹಾಸತೀ-
ತಿಳಕೆಯನತ್ತಿಮಬ್ಬರಸಿಯಂ ಪೆಸರ್ಗೊಳ್ವುದು ಪುಣ್ಯಕಾರಣಂ ॥ (೧.೭೫)

"ಮೊಲೆವೆತ್ತ ತೈಲಜನನಿಯ ಕೆಲದೊಳ್ ರಂಜಿಪರೆ ಮಿಸೆವೊತ್ತ ಅಣ್ಣಂಗಳ್!" "ತಗಳ್ದು ಬಣ್ಣಿಸುವುದು ಪುಣ್ಯಮಲ್ತೆ ಜಿನಧರ್ಮ ಪತಾಕೆಯಂ ಅತ್ತಿಮಬ್ಬೆಯಂ!" "ಪಿಕ್ಕುವೊಡೆ ಅತ್ತಿಯ ಪಣ್ ಅತ್ತಿಮಬ್ಬೆಯಲ್ಲದರ ಗುಣಂ!"—ಇದೆಲ್ಲ ರನ್ನನ ಹೃದಯದಿಂದಲೇ ಹೊಮ್ಮಿದ ನುಡಿ : ಅತ್ತಿಮಬ್ಬೆಯ ನಾಮೋಚ್ಚಾರಣೆ ರಕ್ಷಾಮಂತ್ರವೆಂದೇ ಅವನ ದಿಟದ ನಂಬಿಕೆ. ಕೃತಜ್ಞತೆಯ ಜೊತೆಗೆ ಈ ಭಾವನೆಯೂ ಸೇರಿಯೇ ಇರಬೇಕು, ರನ್ನನು ತನ್ನ ಮಗಳಿಗೆ ಅತ್ತಿಮಬ್ಬೆಯೆಂದು ಈ ಪೂಜ್ಯೆಯ ಹೆಸರನ್ನೇ ಇಟ್ಟು ಕರೆದನು!

ಅತ್ತಿಮಬ್ಬೆಯ ಶುಭ್ರಶೀಲನ್ನು ಉಪಮಿಸುವ ಈ ಪದ್ಯವಂತೂ ಧವಳೋಜ್ವಲ ಮೌಕ್ತಿಕ :

ಬಿಳಿಯರಳೆಯಂತೆ ಗಂಗಾ-
ಜಳದಂತೆಸೆವಜಿತಸೇನ ಮುನಿಪತಿಯ ಗುಣಾ-।
ವಳಿಯಂತೆ ನೆಗಟ್ದ ಕೊಪಣಾ-
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ ॥ (೧೨.೬)

[ಅಜಿತಸೇನಮುನಿ ರನ್ನನ ಪೂಜ್ಯಗುರು; ಕೊಪಣಾಚಳ ಕೊಪಣನಗರದ (ಈಗಿನ ಕೊಪ್ಪಳದ) ಪಕ್ಕದಲ್ಲಿ ಬೆಳಗುವ ಜೈನರ ಪುಣ್ಯಶೈಲ.]

ಅತ್ತಿಮಬ್ಬೆಯ ನಿರರ್ಗಳದಾನಗುಣವನ್ನು ನೆನೆದು, ಉದಾರ ಹೃದಯರಲ್ಲದವರ ದಾನವನ್ನು ತೆಗಳುವ ಈ ಪದ್ಯ ಚೆನ್ನಾಗಿದೆ :

ಅಲಸುತುಮಿಾವ ಚಿಂತಿಸುತುಮಿಾವ ಮೊಗಂಮುರಿದೀವ ಮುಟ್ಟಿ ಮೂ-
ದಲಿಸುತುಮಿಾವ ಪೆರ್ಚನೊಸೆದೀವತಿಬೆಳ್ಪೊಗದಿಂದಮಿಾವ ಮ-।
ಮ್ಮಲಟುಗುತ್ತುಮಿಾವ ಕಡುಲೋಭಕದಾನಗುಣಂಗಳಂ ಪಳಂ-
ಚಲೆದಪುದಾರ್ತು ಕೂರ್ತು ಪಿರಿದೀವ ಗುಣಂ ಗುಣದಂಕಕಾರ್ತಿಯಾ ॥
(೧೨.೧೭)

ದಾನಮಾಡದೆ ವೆಚ್ಚಮಾಡದೆ ಹಣವನ್ನು ಹೂತಿಟ್ಟು ಪೂಜಿಸುವವವರನ್ನು ಈ ಪದ್ಯ ಉಪಹಾಸ ಮಾಡುತ್ತದೆ :

ಪದೆದೆರೆದರ್ಥಿಗೀಯದೆ ಜಸಕ್ಕೆ ತಗುಳ್ಚದೆ ತಮ್ಮ ದಾನಧ-
ರ್ಮದೊಳುಪಯೋಗಮಾಗದುಪಯೋಗಿಸದರ್ಥಮನಾದಮಾನೆಗಂ ।
ಕುದುರೆಗಮಾರ್ತುರ್ ವೆಚ್ಚಿಸದೆ ಪೂಜಿಸಿ ಪೂಜಿಸಿಯಟ್ಟು ಪೂಟ್ಟು ಬ-
ಯ್ದುದೆ ಪೆಱಗೆಂಬುದೀ ದೊರೆತು ದಾನಗುಣಂ ಗುಣದಂಕಕಾರ್ತಿಯಾ ॥
(೧೨.೧೮)

ದಾನಧರ್ಮದಲ್ಲಿ ಒಬ್ಬರು ಒಬ್ಬರಿಗಿಂತ ಹಿರಿಯರಾಗಿದ್ದ ಬೂತುಗ, ಮಮಳ, ನೊಳಂಬಾಂತಕ, ಚಾವುಂಡರಾಯ, ಶಂಕರಗಂಡ ಮೊದಲಾದ ಪ್ರಭುಗಳು ಈ ವೇಳೆಗೆ ಸಂದುಹೋಗಿದ್ದರು. ಆ ಭಾರವಷ್ಟನ್ನೂ ಅತ್ತಿಮಬ್ಬೆಯೊಬ್ಬಳೇ ಹೊತ್ತು ನಿತ್ತರಿಸುತ್ತಾ ಎಲ್ಲರಿಗಿಂತ ಹಿರಿಯಳಾಗಿದ್ದಳು (ಅಜಿತ ಪುರಾಣ, ೧೨.೯). ಅವಳ ಉನ್ನತಿಯನ್ನು ಹೊಗಳಿ, ಆ "ಕೆಟ್ಟ ಕಾಲ"ದಲ್ಲಿ ತನ್ನ ಕಾವ್ಯವನ್ನು ಕೊಂಡಾಡಿದ್ದಕ್ಕಾಗಿ ರನ್ನನು ಕೃತಜ್ಞತೆ ಸಲ್ಲಿಸುವ ಈ ಪದ್ಯ ಅವನ ಹೃದಯದಿಂದ ಉಕ್ಕಿಬಂದಿದೆ :

ವ್ರತಮಂ ಪೇಟ್ವೊಡೆ ನೋಂತು ತಾಳಿದೊಡಲುಂ ಚಕ್ರೇಶನಾಜ್ಞಾಧಿಪಂ
ಸುತನಂ ಪೇಟ್ವೊಡೆ ಚಕ್ರವರ್ತಿಕಟಕಕ್ಕಾರಾಧ್ಯೆಯಾಗಿರ್ದ್ದಯಾ-।
ಯತಿಯಂ ಪೇಟ್ವೊಡೆ ಕೆಟ್ಟ ಕಾಲದೊಳಿದಂ ಕೊಂಡಾಡಿದ್ಯೆ ಧರ್ಮದು-
ನ್ನತಿಯಂ ಪೆರ್ಚಿಸುವಂದು ನೀನೆ ಪಿರಿಯ್ಯೆ ಶ್ರೀ ದಾನಚಿಂತಾಮಣೀ ॥
(೧೨.೮)

ಈ ದಾನಚಿಂತಾಮಣಿಯ ಗುಣಕ್ಕೆ ಸಾಕ್ಷಿ ರನ್ನನಿಂದ ಆಕೆ ಕಾವ್ಯ ಹೇಳಿಸಿದ್ದು ಮಾತ್ರವಲ್ಲ; ಮಣಿಕನಕಖಚಿತವಾದ ೧,೫೦೦ ಜಿನಪ್ರತಿಮೆಗಳನ್ನು ಮಾಡಿಸಿ ದಾನಮಾಡಿದಳಂತೆ. ಒಂದೊಂದಕ್ಕೂ ಮಣಿಯ ಘಂಟೆ. ಮೇಲ್ಕಟ್ಟು, ದೀಪಮಾಲೆ, ರತ್ನತೋರಣ ಮೊದಲಾದ ಕಣ್ಣು ಕೋರೈಸುವ ಬೆಲೆಬಾಳುವ ಪರಿಕರ! ಶಾಸ್ತ್ರದ ಮೇರೆಗೆ ಒಂದು ಸಾವಿರ ಪ್ರತಿಮೆಗಳನ್ನು ಮಾಡಿಸಿದ್ದರೇ ಸಾಕಾಗಿತ್ತು. ಆದರೆ ಇನ್ನೂ ಐನೂರನ್ನು ಅಧಿಕವಾಗಿ ಮಾಡಿಸಿದ ಆಕೆಯ ಧರ್ಮಾನುರಾಗವನ್ನು ರನ್ನನು ಕೊಂಡಾಡುತ್ತಾನೆ (೧. ೫೭-೯).

ಇನ್ನು ಅತ್ತಿಮಬ್ಬೆಯ ವ್ರತಮಹಿಮೆಗೆ ಒಂದು ಒಳ್ಳೆಯ ನಿದರ್ಶನ :

ಉನ್ನತ ಕುಕ್ಕುಟೇಶ್ವರ ಜಿನೇಶ್ವರನಂ ಜಿನಭಕ್ತೆ ವೋಗಿ ಕಾ-
ಣ್ಬನ್ನೆಗಮನ್ನಮಂ ಬಿಸುಟು ಪರ್ವತಮಂ ಪರಿದೇಱೆ ತಜ್ಜನಾ-
ಸನ್ನದೊಳತ್ತಿಮಬ್ಬೆಗೆ ಪಥಶ್ರಮಮಮಾಱಲಕಾಲವೃಷ್ಟಿಯಾ-
ಯ್ತೆನ್ನದೊ ದೇವಭಕ್ತೆಗದು ಚೋದ್ಯಮೆ ಕೊಳ್ಳವೆ ಪುಷ್ಪವೃಷ್ಟಿಗಳ್ ॥ (೧.೬೦)

ಚಾವುಂಡರಾಯನು ಶ್ರವಣಬೆಳ್ಗೊಳದಲ್ಲಿ ಕುಕ್ಕುಟೇಶ್ವರಜಿನಮೂರ್ತಿಯನ್ನು (ಎಂದರೆ, ಗೊಮ್ಮಟೇಶ್ವರ ವಿಗ್ರಹವನ್ನು ಕಡೆಯಿಸಿ ಕೆಲವು ವರ್ಷ ಮಾತ್ರವಾಗಿತ್ತು. ಅದರ ಮಹಿಮೆಯೂ ಪ್ರಸಿದ್ಧಿಯೂ ನಾಡಿನಲ್ಲೆಲ್ಲಾ ಹರಡಿರಬೇಕು. ಈ ಜಿನೇಶ್ವರನ

ದರ್ಶನ ಮಾಡಬೇಕೆಂಬ ತೀವ್ರಾಪೇಕ್ಷೆ ಅತ್ತಿಮಬ್ಬೆಯಂಥ ಜಿನಭಕ್ತೆಗೆ ಸಹಜವಾಗಿಯೇ ಒದಗಿತು. ಮೂರ್ತಿಯನ್ನು ಕಾಣುವವರೆಗೆ ಅನ್ನವನ್ನು ಮುಟ್ಟೆನೆಂಬ ಕಠಿನ ನಿಯಮವನ್ನು ಈಕೆ ಹಿಡಿದು, ಉತ್ತರದ ಚಾಳುಕ್ಯ ರಾಜಧಾನಿಯಿಂದ ದಕ್ಷಿಣದ ಶ್ರವಣಬೆಳ್ಗೊಳಕ್ಕೆ ಪಯಣಿಸಿ, ಬೆಟ್ಟವನ್ನೇರಿ ಗೊಮ್ಮಟೇಶ್ವರನ ಸಮೀಪದಲ್ಲಿ ನಿಂತಳು. ಆಗ ಅಕಾಲವಾದರೂ–ಈಕೆಯ ಮಾರ್ಗಶ್ರಮ ಪರಿಹಾರವಾಗುವಂತೆ–ಮಳೆ ಕರೆಯಿತು! ದೇವಭಕ್ತೆಯ ವಿಷಯದಲ್ಲಿ ಇದೊಂದು ಆಶ್ಚರ್ಯವೆ, ಪುಷ್ಪವೃಷ್ಟಿಗಳಾಗುವುದಿಲ್ಲವೆ?— ಎಂದು ರನ್ನನು ಕೇಳುತ್ತಾನೆ. ಚಾವುಂಡರಾಯನ ಆಶ್ರಿತನಾಗಿದ್ದ ರನ್ನನೂ ಆಗ ಅಲ್ಲಿ ಇದ್ದು ಈ ಚೋದ್ಯವನ್ನು ಕಣ್ಣಾರ ಕಂಡನೇನೋ. ಅತ್ತಿಮಬ್ಬೆಯ ಮೊದಲ ದರ್ಶನ ರನ್ನನಿಗೆ ಅಂದೇ ಆಗಿ, ಆ ಮುಂದೆ ಅವಳ ಆಶ್ರಯವನ್ನು ಅವನು ಪಡೆದನೇನೋ.

೨

ಧಾರವಾಡ ಜಿಲ್ಲೆಯ ಗದಗು ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಜೈನ ಬಸದಿಯ ಕೆಲವು ಪ್ರಾಚೀನ ಶಾಸನಗಳು ಇತ್ತಿಚೆಗೆ ಬೊಂಬಾಯಿ ಕರ್ನಾಟಕ ಶಾಸನ ಸಂಗ್ರಹ ಸಂಪುಟದಲ್ಲಿ ಮುದ್ರಿತವಾಗಿ ಪ್ರಸಿದ್ಧಿಗೆ ಬಂದಿವೆ. (S.I.I., XI-I : *Bombay Karnatak Inscriptions*, Volume 1 - Part 1). ಈ ಸಂಪುಟದಲ್ಲಿ ೫೨, ೫೩ ಎಂದು ಸಂಖ್ಯೆ ಕೊಟ್ಟಿರುವ ಎರಡು ಶಿಲಾಶಾಸನಗಳು ಅತ್ತಿಮಬ್ಬೆಗೆ ಸಂಬಂಧಿಸಿದವು. ೫೩ನೆಯದನ್ನು ಕೊರೆದಿದ್ದ ಶಿಲಾಪಟ್ಟವು ಒಡೆದುಹೋಗಿ ಅದರ ನಾಲ್ಕು ಚೂರುಗಳು ಬಸದಿಯ ಪೌಳಿಯೊಳಗೆ ಬಿದ್ದಿವೆಯೆಂದೂ, ಬಹುಶಃ ಇದು ತುಂಬ ಭಿನ್ನವಾದ ಕಾರಣದಿಂದಲೇ ಇದರ ವಸ್ತುವನ್ನು ಬಸದಿಯ ಸಮೀಪದಲ್ಲಿ ನಿಲ್ಲಿಸಿರುವ ೫೨ನೆಯ ಶಾಸನದಲ್ಲಿ ಕೊರೆದಿರಬಹುದೆಂದೂ ಸಂಪಾದಕರು ಊಹಿಸಿದ್ದಾರೆ.[೨] ೫೩ನೆಯ ಶಾಸನ ಈಗಿರುವ ರೀತಿಯಲ್ಲಿ ಅತ್ಯಂತ ತ್ರುಟಿವಾಗಿದೆ. ಇದರಲ್ಲಿ ಇನ್ನೂ ಉಳಿದಿರುವ ಭಾಗಗಳನ್ನು ಹೋಲಿಸಿ ನೋಡಿದರೆ ೫೨ನೆಯ ಶಾಸನದ ಪೂರ್ವಭಾಗವೆಲ್ಲ ಒಟ್ಟಿನ ಮೇಲೆ ಇದರ ನಕಲೇ ಆಗಿರಬೇಕೆಂದು ಸಂದೇಹವಿಲ್ಲದೆ ಹೇಳಬಹುದು. ಕೆಲವು ಅಕ್ಷರಗಳೂ ಮಾತುಗಳೂ, ಲಿಪಿಕಾರನ ಪ್ರಮಾದದಿಂದಲೋ ಏನೋ, ಅಲ್ಲಲ್ಲಿ ವ್ಯತ್ಯಾಸವಾಗಿರುವುದುಂಟು; ಕೆಲವು ಮಾತು ಸೇರಿರುವುದೂ ಉಂಟು. ಆದರೆ ಇಷ್ಟು ಮಾತ್ರಕ್ಕೇ ಇವೆರಡನ್ನೂ ಸ್ವತಂತ್ರವಾದ ಎರಡು ಶಾಸನಗಳೆಂದು ಭಾವಿಸದೆ, ೫೩ರ ಅತಿವಿಪುಲವಾದ ಗ್ರಂಥಪಾತಗಳನ್ನು ಕೂಡಿಸಿಕೊಳ್ಳಲು ೫೨ನ್ನು ಅವಲಂಬಿಸಿ ಇವುಗಳ ಒಟ್ಟು ಹೇಳಿಕೆಯನ್ನು ಗಮನಿಸಬಹುದು.

---

೨. "This inscription [No. 53], which is very much mutilated is almost a copy of the foregoing record [No. 52] except in the last few lines . . . .It is not improbable that the previous inscription was engraved in consequence of the breakage in the stone containing the present epigraph . . ." (S.I.I., XI-I, p. 43).

೫೨ನೆಯ ಶಾಸನವನ್ನು ಕುರಿತು ಇನ್ನೊಂದು ಮಾತು. ಈ ಶಾಸನ ಶಿಲೆಯಲ್ಲಿ ೫೩ರ ವಸ್ತುವಿನ ಉಲ್ಲೇಖನವಾದ ಬಳಿಕ, ಇನ್ನೂ ಹೆಚ್ಚಿನ ಬರಹವಿದೆ. "ಸಾಸಿರ್ವ"ರು–ಎಂದರೆ, "ಲೊಕ್ಕಿಗುಣ್ಡಿಯೂರೊಡೆಯ ಪ್ರಮುಖ ಮಹಾಜನ ಸಾಸಿರ್ವ"ರು—ಈ ಬಸದಿಗೆ ಬ್ರಹ್ಮಜಿನಾಳಯವೆಂದು ಹೆಸರಿಟ್ಟರೆಂದೂ, ಗ್ರಾಮಾಧಿಪನು ಮೂರುಪರ್ವಗಳಲ್ಲಿ ಇಲ್ಲಿಗೆ ಸಕಲಪರಿಕರಗಳೊಡನೆ ಬಂದು "ಸೇಸೆಗೊಣ್ಡು ಬಲಂಗೊಣ್ಡು ಪೋದ"ನೆಂದೂ ಮೂರು ಪದ್ಯಗಳಿಂದ ತಿಳಿದುಬರುತ್ತದೆ. ಬಳಿಕ "ಮಹಾಸತೀರತ್ನಮತ್ತಿಮಬ್ಬರಶಿಯರ್" ಎಂಬ ಉಕ್ತಿಯಿದೆ. ಆಮೇಲೆ ಬಹುಶಃ ಕೆಲವು ಕಾಲ ಕಳೆದ ಬಳಿಕ ರಚಿತವಾದ ಇನ್ನೊಂದು ಶಾಸನ ಬಂದಿದೆ. ಬಸದಿಗೆ ಪೂಜಾನಿಮಿತ್ತವಾಗಿ ತೋಟ ಮೊದಲಾದದ್ದನ್ನು ಮಹಾಜನ ಸಾಸಿರ್ವರಿಂದ ಪಡೆದ ವಿಷಯ ಇದರ ವಸ್ತು. ಇದರ ಅಂತ್ಯಭಾಗದಲ್ಲಿ ಬರುವ ಈ ಪದ್ಯಗಳು ಗಮನಾರ್ಹವಾದುವು :

ಪರಮಶ್ರೀಜಿನಧರ್ಮಾಂ–
ಬರರವಿ ಸಿರಿಪಾಳಸೆಟ್ಟಿಯಾತ್ಮಜನುದ್ಯ–।
ಚ್ಚರಿತಂ ಬಾಹುಬಲಿ ಸವಿ–
ಸ್ತರದಿಂದಂ ಬರೆದನೆಂದೊಡಾರ್ ಪೊಗ[ಟ]ರಿದಂ ॥

ನಿರುಪಮಮತ್ತಿಯಬ್ಬೆಯ ಜಿನೇಂದ್ರಗೃಹಂ ಧರಣೀತಳಕ್ಕೆ ಬಿ–
[ಟ್ತಿರೆ] ಪೊಸತಾಗಿ ದೆಯ್ವಭರತಾರ್ಯನಿನಾ ಭರತಾರ್ಯನಿಂ ಬ[ಟಿ]
ಕ್ಕಿರದದು. . . ನ್ದರಲೆ ಬೆಂದಡೆ ಸುನ್ದರಮಾಗೆ ನಾಕಿಯಿಂ
ಪರಮಪರೋಪಕಾರಿ ಸಿರಿಪಾಳನಿನೇ[ಂ] ಪರಿಪೂರ್ಣಮಾದು[ದೋ] ॥

ಇದರಿಂದ, ಅತ್ತಿಮಬ್ಬೆ ಕಟ್ಟಿಸಿದ್ದ ಬಸದಿ ಕುಸಿದುಬಿದ್ದಿತ್ತೆಂದೂ, ಅದನ್ನು ದೆಯ್ವಭರತಾರ್ಯ, ನಾಕಿ, ಸಿರಿಪಾಳ—ಇವರು ಕಾಲಕಾಲಕ್ಕೆ ಜೀರ್ಣೋದ್ಧಾರ ಮಾಡಿದರೆಂದೂ, ಸಿರಿಪಾಳಸೆಟ್ಟಿಯ ಮಗನಾದ ಬಾಹುಬಲಿ ಶಾಸನವನ್ನು ಸವಿಸ್ತಾರವಾಗಿ ಬರೆದನೆಂದೂ ಗೊತ್ತಾಗುತ್ತದೆ. ದೇವಾಲಯದೊಂದಿಗೆ ಮೂಲಶಾಸನವೂ ಬಿದ್ದು ಹೋಗಿರಬೇಕು. ಅದನ್ನೂ ಜೀರ್ಣೋದ್ಧಾರ ಮಾಡಿ ಶಿಲಾಪಟ್ಟದ ಮೇಲೆ ಮತ್ತೆ ಉಲ್ಲೇಖಿಸಿ, ಪ್ರಸಕ್ತ ಕಾಲದ ಬಾಹುಬಲಿ ರಚಿತವಾದ ಶಾಸನವನ್ನು ಕೊನೆಗೆ ಸೇರಿಸಿದರೆಂದು ತೋರುತ್ತದೆ.

ಇನ್ನು ಅತ್ತಿಮಬ್ಬೆಯ ಶಾಸನದ ಕಡೆ ತಿರುಗೋಣ. "ಅತ್ತಿಮಬ್ಬರಸಿಯರ್ ಸಕಳಗೂರ್ಜರವಿಜಯಾನನ್ತರಂ ಶ್ರೀಮದಾಹವಮಲ್ಲದೇವಂಗೆ ಬಿನ್ನಪಂಗೆಯ್ದು ಚಕ್ರವರ್ತಿದತ್ತಿಪ್ರಖ್ಯಾತಮಪ್ಪ ಶಾಸನಮಂ ಪೊನ್ನ ಕಳಶಂ ಬೆರಸು ಪಡೆದು ಸಕವರ್ಷ ೯೨೯ನೆಯ ಪ್ಲವಂಗ ಸಂವತ್ಸರದ ಫಾಲ್ಗುಣ ಮಾಸದ ನನ್ದೀಶ್ವರದಷ್ಟ[ಮಿ]ಯುಂ ಬೃಹಸ್ಪತಿವಾರದಂದು ಶುಭಲಗ್ನೋದಯದೊಳ್ ಮಹಾಧ್ವಜ ಮಹಾಭಿಷೇಕ ಮಹಾದಾನ ಧರಣಾನನ್ತರಂ ತಮ್ಮ ಗುರುಗಳು ಸೂರಸ್ತಗಣದ ಕೌಱೂರ್ಗಚ್ಛದ ಅರ್ಹನನ್ದಿ ಪಣ್ಡಿತ ದೇವರ್ಗೆ ಶ್ರೀ ಲೊಕ್ಕಿಗುಣ್ಡಿಯೊಳ್ ಬಸದಿಯಂ ಮಾಡಿಸಿಯದಕ್ಕೆ

ತಳವೃತ್ತಿಯೆಂದು"[೩] ಸುಜುಕಿಯೆಂಬ ಗ್ರಾಮ (?) ವನ್ನು ಕೊಟ್ಟದ್ದು ಇದರ ವಿಷಯ. ಶಾಸನದಲ್ಲಿ ಉಕ್ತವಾಗಿರುವ ಕಾಲ ಶಕವರ್ಷ ೯೨೯; ವಾರದ ದಿನಕ್ಕೆ ಪ್ರಾಮುಖ್ಯ ಕೊಟ್ಟು ಇದು ಕ್ರಿ.ಶ. ೧೦೦೭ಕ್ಕೆ ಸರಿ ಹೋಗುವುದೆಂದು ಶಾಸನ ಸಂಪಾದಕರು ನಿರ್ಧರಿಸಿದ್ದಾರೆ. ಆಗ ಚಾಳುಕ್ಯ ಚಕ್ರವರ್ತಿಯಾಗಿದ್ದವನು ಆಹವಮಲ್ಲ–ನೂರ್ಮಡಿ ತೈಲಪನ ಮಗನೂ ರನ್ನ ಕವಿಯ 'ಗದಾಯುದ್ಧ'ದ ನಾಯಕನೂ ಆದ ಇಱಿವಬೆಡಂಗ–ಸತ್ಯಾಶ್ರಯ. ಶಾಸನದ ಈ ಭಾಗದಲ್ಲಿ, ಮೇಲೆ ಉದಾಹರಿಸಿರುವಂತೆ, "ಶ್ರೀಮದಾಹವಮಲ್ಲ ದೇವಂಗೆ ಬಿನ್ನಪಂಗೆಯ್ದು" ಎಂದು ಇರುವುದಲ್ಲದೆ, ಶಾಸನದ ಪ್ರಾರಂಭದಲ್ಲೂ "ಶ್ರೀಮದಾಹವಮಲ್ಲದೇವರ ರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾ ಚಂದ್ರಾರ್ಕತಾರಂಬರಂ ಸಲುತ್ತಮಿರೆ" ಎಂದು ಇರುವುದರಿಂದ ದಾನದ ಕಾಲದಲ್ಲಿದ್ದ ಚಕ್ರವರ್ತಿಯ ಹೆಸರು "ಆಹವಮಲ್ಲ" ಎಂದೇ ಆಗಿತ್ತೆಂದು ಸ್ಪಷ್ಟವಾಗುತ್ತದೆ. ಇದುವರೆಗೆ ತಿಳಿದಮಟ್ಟಿಗೆ ಆಹವಮಲ್ಲ ಎಂಬುದು ನೂರ್ಮಡಿತೈಲಪನ ಹೆಸರು; ಚರಿತ್ರಕಾರರು ನಿರ್ಧರಿಸಿರುವ ಮೇರೆಗೆ ಆತನ ಆಳಿಕೆಯ ಕಾಲ ಕ್ರಿ.ಶ. ೯೭೩–೯೯೭; ಅವನ ಮಗ ಇಱಿವಬೆಡಂಗ–ಸತ್ಯಾಶ್ರಯನ ಶಾಸನದ ಈ ಭಾಗದಲ್ಲಿ ಮೇಲೆ ಉದಾಹರಿಸಿರುವಂತೆ, "ಶ್ರೀಮದಾಹವಮಲ್ಲ ದೇವಂಗೆ ಬಿನ್ನಪಂಗೆಯ್ದು" ಎಂದು ಇರುವುದಲ್ಲದೆ, ಶಾಸನದ ಪ್ರಾರಂಭದಲ್ಲೂ "ಶ್ರೀಮದಾಹವಮಲ್ಲದೇವರ ರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕತಾರಂಬಂ ಸಲುತ್ತಮಿರೆ" ಎಂದು ಇರುವುದರಿಂದ ದಾನದ ಕಾಲದಲ್ಲಿದ್ದ ಚಕ್ರವರ್ತಿಯ ಹೆಸರು "ಆಹವಮಲ್ಲ" ಎಂದೇ ಆಗಿತ್ತೆಂದು ಸ್ಪಷ್ಟವಾಗುತ್ತದೆ. ಇದುವರೆಗೆ ತಿಳಿದಮಟ್ಟಿಗೆ ಆಹವಮಲ್ಲ ಎಂಬುದು ನೂರ್ಮಡಿತೈಲಪನ ಹೆಸರು; ಚರಿತ್ರಕಾರರು ನಿರ್ಧರಿಸಿರುವ ಮೇರೆಗೆ ಆತನ ಆಳಿಕೆಯ ಕಾಲ ಕ್ರಿ.ಶ. ೯೭೩–೯೯೭; ಅವನ ಮಗ ಇಱಿವಬೆಡಂಗ–ಸತ್ಯಾಶ್ರಯನ ಕಾಲ ಕ್ರಿ.ಶ. ೯೯೭–೧೦೦೮. ಹೀಗಿರುವುದರಿಂದ, ಈ ಶಾಸನದಲ್ಲಿ ಆಹವಮಲ್ಲ ಎಂಬ ಹೆಸರು ತಂದೆ ತೈಲಪನಿಗೆ ಅನ್ವಯಿಸದೆ ಮಗ ಸತ್ಯಾಶ್ರಯನಿಗೆ ಅನ್ವಯಿಸಬೇಕಾಗುತ್ತದೆ. ಶಾಸನದ ಸಂಪಾದಕರು ಈ ಅಭಿಪ್ರಾಯವನ್ನು

---

೩. ಮೇಲೆ ಕೊಟ್ಟಿರುವುದು ೫೨ನೆಯ ಶಾಸನದಲ್ಲಿ ದೊರೆಯುವ ಪಾಠ. ೫೩ರಲ್ಲಿ ಈ ಭಾಗ ಈ ಮುಂದೆ ಕೊಟ್ಟಿರುವಂತೆ ಇದೆ. (ಗ್ರಂಥಪಾತವನ್ನು X X X ಹೀಗೆ ತೋರಿಸಿದೆ.) —"X X X ಯಾನನ್ತರಂ ಶ್ರೀಮದಾ[ಹವ]ಮಲ್ಲದೇವಂಗೆ ಬಿಂನ್ನಪಂಗೆ X X X ಶಾಸನಮಂ ಪಡೆದು । ಶಕನೃಪಾಳಾಕ್ರಾನ್ತಸಂವ X X X ಗ ಸಂವತ್ಸರಂ ಪ್ರವರ್ತಿಸೆ ಫಾಲ್ಗುಣ ಮಾಸದ ನನ್ದೀಶ್ವರದಷ್ಟಮೆ X X X ಭಲಗ್ನೋದಯದೊಳ್ ಮಹಾಧ್ವಜ ಮಹಾಭಿಷೇಕೋತ್ಸವದೊಳ್ ಮಹಾ X X X ತ್ತಿಯೆಬ್ಬರಸಿಯರ್ ಲೊಕ್ಕಿಗುಣ್ಡಿ ಮಹಾಗ್ರಾಮದೊಳ್ ತಮ್ಮ ಗುರುಗಳ್ ಅ X X X ಕರ್ಗೆ ಬಸದಿಯಂ ಮಾಡಿಸಿಯದರ್ಕೆ ತಳವೃತ್ತಿಯೆನ್ನು". ೫೩ ನೆಯ ಶಾಸನದಲ್ಲಿ ವರ್ಷಸಂಖ್ಯೆ ನಷ್ಟವಾಗಿರುವುದು ಶೋಚನೀಯ; "X X X ಗ ಸಂವತ್ಸರಂ" "[ಪ್ಲವಂ]ಗ ಸಂವತ್ಸರಂ" ಎಂದೇ ಇದ್ದಿರಬಹುದು.

ಅಂಗೀಕರಿಸಿದಂತೆ ತೋರಿದರೂ[೪] ಇದು ಇನ್ನೂ ವಿಚಾರಾರ್ಹವಾದ ಅಂಶ. ಇಱಿವಬೆಡಂಗ–ಸತ್ಯಾಶ್ರಯನಿಗೂ ಆಹವಮಲ್ಲ ಎಂಬ ಹೆಸರು ಇತ್ತೆಂಬುದಕ್ಕೆ ಬೇರೆ ಏನಾದರೂ ಪ್ರಮಾಣವುಂಟೆ? ಅವನ ರೂಢಿಯ ಹೆಸರು ಈ ಶಾಸನದಲ್ಲೇಕೆ ಕಾಣಿಸಿಕೊಂಡಿಲ್ಲ? "ಸಕಳ ಗೂರ್ಜರ ವಿಜಯ" ಕೈಗೂಡಿದ್ದು ಯಾವಾಗ? ಶಾಸನದ ಕಾಲವನ್ನು ಉಲ್ಲೇಖಿಸುವುದರಲ್ಲೇನಾದರೂ ತಪ್ಪಾಗಿರಬಹುದೆ? ಅಥವಾ ಚಕ್ರವರ್ತಿದತ್ತಿಯನ್ನು ಪಡೆದದ್ದೂ ಸುಙುಕಿಯನ್ನು ಕೊಟ್ಟದ್ದೂ ಬೇರೆ ಬೇರೆ ಕಾಲದಲ್ಲಿರಬಹುದೆ?– ಈ ಮೊದಲಾದ ಪ್ರಶ್ನೆಗಳು ಉದಿಸುತ್ತವೆ. ಈ ತೊಡಕಿನ ವಿಚಾರಕ್ಕೆ ಇಲ್ಲಿ ಅವಕಾಶವಿಲ್ಲ. ಚಕ್ರವರ್ತಿ ತಂದೆಮಕ್ಕಳಲ್ಲಿ ಯಾರೊಬ್ಬನೇ ಆಗಿರಲಿ, ದಾನ ಮಾಡಿದಾಕೆ ನಮ್ಮ ಅತ್ತಿಮಬ್ಬೆಯೆಂಬುದರಲ್ಲಿ ಮಾತ್ರ ಯಾವ ಸಂದೇಹವೂ· ಇಲ್ಲ. ಇದನ್ನು ದೃಢಪಡಿಸಲು ಶಾಸನದ ತುಂಬ ಆಧಾರವುಂಟು; ಅಲ್ಲಿಂದ ಎತ್ತಿ ತೆಗೆದ ಈ ಪದ್ಯವೊಂದು ಸಾಕು :

> ಜಿನಪದಪಂಕಜಭ್ರಮರನೆಂಬ ನೆಗರ್ತೆಯನಾಳ್ದ ಮಲ್ಲಪ–
> ಯ್ಯನ ನೆಗೞ್ದಪ್ಪಕಬ್ಬೆಯ ಮಗಳ್ ಸಚಿವೋತ್ತಮನಪ್ಪ ಧಲ್ಲಪ–।
> ಯ್ಯನ ಸೊಸೆ ನಾಗದೇವನ ಕುಳಾಂಗನೆ ತೈಲನ ತಾಯ್ ಜಸಕ್ಕೆ ಭಾ–
> ಜನಮೆನಿಪತ್ತಿಮಬ್ಬೆ ಜಿನಶಾಸನಮಂ ಬೆಳಗುತ್ತಮಿ[ರ್ದ]ಪಳ್ ॥

ಈ ಶಾಸನದ ಬಹುಭಾಗ ಅತ್ತಿಮಬ್ಬೆಯ ಮಹಾಪ್ರಭಾವದ ನಿರೂಪಣೆಗೇ ಮೀಸಲಾಗಿದೆ. ಪುರಾಣಪ್ರಸಿದ್ಧೆಯರಾದ ಮರುದೇವಿ, ವಿಜಯಸೇನೆ ಮೊದಲಾದ ಮಹಾನುಭಾವೆಯರಿಗೆ ಈಕೆಯನ್ನು ಶಾಸನದ ಕವಿ ಹೋಲಿಸಿ ತಣಿಯನು; ಈಕೆ ಕುಕ್ಕುಟೇಶ್ವರ ಜಿನನನ್ನು ದರ್ಶನಮಾಡಿದಾಗ ಪುಷ್ಪವೃಷ್ಟಿಯಂತೆ ಅಕಾಲವೃಷ್ಟಿ ಯಾದದ್ದನ್ನೂ, ಈಕೆ ಸಾವಿರದೈನೂರು ಜಿನಪ್ರತಿಮೆಗಳನ್ನು ಮಂದಿರಸಮೇತವಾಗಿ ದಾನಮಾಡಿದ್ದನ್ನೂ ನೋಡಿ ತಣಿಯನು;

> ಆ ಸತಿ ಮು[ನ್] ಮಾಡಿಸಿದಾ
> ಸಾಸಿರದಯ್ನೂಱು ಬಸದಿಗಿದು ಕಳಶಮೆನಲ್ ।
> ಭಾಸುರಮಾಯ್ತು ಜಿನೇಂದ್ರಾ–
> ವಾಸಂ ತೊಳಗುವ ಸುವರ್ಣಕಳಶೋನ್ನತಿಯಿಂ ॥

ಎಂದು ಪ್ರಕೃತದ ಜಿನಾಳಯದ ಪ್ರಭೆಯನ್ನು ಪ್ರಶಂಸಿಸುತ್ತಾನೆ!—ಅಲ್ಲದೆ "ಗುಣದಂಕಕಾರ್ತಿ", "ಕಟಕಪವಿತ್ರೆ" "ದಾನಚಿಂತಾಮಣಿ" ಮೊದಲಾದ ಈಕೆಯ ಪ್ರಶಸ್ತಿಪದಗಳನ್ನು ಗಂಭೀರ ಗದ್ಯಬಂಧದಲ್ಲಿ ವಿಸ್ತರಿಸಿದಲ್ಲದೆ ಈ ಕವಿಗೆ ತೃಪ್ತಿಯಿಲ್ಲ.

---

೪. 'On account of the date the record has to be assigned to the time of Irivabeḍaṅga Satyāśraya, who must have also had the surname or title of Āhavamalla' (S.I.I., XI-I. p. 39).

ಇದರ ಜೊತೆಗೆ, ಈ ಕೆಳಗಿನ ಮನೋಹರವಾದ ಕಂದ ಪದ್ಯಗಳಲ್ಲಿ ಅತ್ತಿಮಬ್ಬೆಯ ಮಹಿಮೆಯನ್ನು ಅವನು ಸಂಗ್ರಹಿಸಿದ್ದಾನೆ. ಇವೆಲ್ಲವೂ ನಡೆದ "ಪವಾಡ"ಗಳನ್ನೇ ಸೂಚಿಸುವಂತಿವೆ :

ನರಪನ ಬೆಸದಿಂ ಜಿನನಂ
ಶಿರದೊಳ್ ಸಲೆ ತಾಳ್ದಿ ದಾನಚಿಂತಾಮಣಿ ನಿ-।
ರ್ಭರ ಗೋದಾವರಿಯಂ ಪುಗೆ
ಪರಿಯುಡುಗಿದುದೆಂದೊಡೊಳ್ಪನದನೇವೇ[ೞ್ವೆಂ] ॥

ಮದವತ್ಕರಿ ಸೆಱೆಯಂ ಪಱಿ-
ದೊದವಿದ ಮುಳಿಸಿಂದೆ ಘೋರನೆಯ್ತಂದೊಡದ-।
ರ್ಕದಿರದಿರೆ ಭಕ್ತಿಯಿಂದದು
ಪದಯುಗಕೆಱಗಿದುದು ದಾನಚಿಂತಾಮಣಿಯ ॥

ಮುದದರ್ಚಿಪ ಜಿನಬಿಂಬಂ
ನದಿಯೊಳ್ ಕಯ್ತಪ್ಪಿ ಬಿೞ್ದೊಡದು ಬಪ್ಪಿನಮು-।
ಣ್ಬುದನು[ಟಿ]ದಿರಲೆಂಟು ದಿನ-
ಕ್ಕದು ಬಂದುದು ಕಯ್ಗೆ ದಾನಚಿಂತಾಮಣಿಯ ॥

ಪ್ರ[ಳ]ಯಾಗ್ನಿಯಂತೆ ಕಟಕಮ-
ನೊಳಕೊಂಡಳುರ್ವಗ್ನಿ ದಾನಚಿಂತಾಮಣಿ ನಿ-।
ರ್ಮಳ[ಜಿ]ನ ಗಂಧೋದಕಮಂ
ತಳಿಯಲ್ಕುಪಶಮಿಸಿತೆಂದೊಡೇ[ಣ್ಣಿ]ಸುವೆ[ಂ] ॥

ಒಡನೇಱಿ ಸವತಿ ನೂಂಕ-
ಲ್ಕೊಡರಿಸೆ ತೊಱೆಯೊಳಗೆ ಪ[ಱು]ಗಲತ್ತಿತ್ತಲಣಂ ।
ಮಿಡುಕದೆ ತಿರಿಯುತ್ತಿರೆ ಕಂ-
ಡಡಿಗೆಱಗಿದಳತ್ತಿಯಬ್ಬೆ[ಗ]ತಿಭಯವಶದಿಂ ॥[೫]

ಜಿನಧರ್ಮಪತಾಕೆಗೆ ವಿಮ-
ಳ ನರ್ಮದಾನದಿಯ [ಕು]ರುಳ ಪಾವೆಯ ಜಿನನಂ ।
ವಿನುತಂ ಕಾಣ್ಬೆನೆಗಂ ಕೂ-
[ಟ] ನೆ ತೊಱೆದುದು ಸಂದುದನ್ತದಾಜನ್ಮಾಂತಂ ॥

---

೫. ಅತ್ತಿಮಬ್ಬೆಯ ಎಂದು ಮಾತ್ರವಲ್ಲದೆ ಅತ್ತಿಯಬ್ಬೆ, ಅತ್ಯಬ್ಬೆ—ಎಂಬ ರೂಪಗಳಲ್ಲೂ ಈಕೆಯ ಹೆಸರು ಬೇರೆ ಬೇರೆ ಕಡೆಗಳಲ್ಲಿ ದೊರೆಯುತ್ತದೆ.

ಹೀಗೆ ಅತ್ತಿಮಬ್ಬೆಯ ಮಹಿಮಾಸ್ತವವನ್ನು ಈ ಶಾಸನದಲ್ಲಿ ಕಡೆಯಿಸಿ ನಿಲ್ಲಿಸಿದ ಕವಿ ಯಾರು? ಇದರ ಕಂದವೃತ್ತಗಳ ಧಾಟಿಯನ್ನೂ ಗದ್ಯದ ಬಿಗಿಯನ್ನೂ ನೋಡಿದರೆ ಈತನು ವಿಶೇಷ ಸಮರ್ಥನಾಗಿರಬೇಕೆನ್ನಿಸುತ್ತದೆ. ರನ್ನನ ಅಜಿತಪುರಾಣದ ಕೆಲವು ಹೇಳಿಕೆಗಳು ಈ ಶಾಸನದಲ್ಲೂ ಬಂದಿವೆಯೆಂದು ವಾಚಕರಿಗೆ ಈಗಾಗಲೇ ಗೊತ್ತಾಗಿರಬೇಕು. ಅಷ್ಟೇ ಅಲ್ಲ. "ಉನ್ನತ ಕುಕ್ಕುಟೇಶ್ವರ . . ." ಎಂಬ ಅಜಿತಪುರಾಣದ ಪದ್ಯ (೧. ೬೦) ಈ ಶಾಸನದಲ್ಲಿ ಉದ್ಧೃತವಾಗಿದೆ. ಈ ಶಾಸನದಲ್ಲಿ ಉಂಟೆಂದು ಮೇಲೆ ಉದಾಹರಿಸಿರುವ "ಜಿನಪದಪಂಕಜಭ್ರಮರ . . ." ಎಂಬ ಪದ್ಯವೂ ಅಜಿತಪುರಾಣದಲ್ಲಿ ಆಗಲೆ ಕಾಣಿಸಿಕೊಂಡಿದೆ (೧. ೬೮). ಇದರ ಮೇಲೆ, ಅತ್ತಿಮಬ್ಬೆಯ ಪ್ರಶಸ್ತಿಗಳಲ್ಲಿ ರನ್ನನಿಗೆ ಪ್ರಿಯತಮವಾದ "ದಾನಚಿಂತಾಮಣಿ" ಎಂಬುದಕ್ಕೆ ಈ ಶಾಸನದಲ್ಲಿ ಹೆಚ್ಚಿನ ಪ್ರಾಮುಖ್ಯ ದೊರೆತಿದೆ. ಜಿನಧರ್ಮಪತಾಕೆ ದಾನಚಿಂತಾಮಣಿ ಅತ್ತಿಮಬ್ಬೆಯ ಔದಾರ್ಯಕ್ಕೆ ಕಳಶವಿಟ್ಟಂತೆ ಒಪ್ಪುವ ದಾನ, ಜೊತೆಗೆ ಅದಕ್ಕೆ "ಚಕ್ರವರ್ತಿದತ್ತಿ"ಯೆಂಬ ವಿಶೇಷ ಗೌರವ: ಹೀಗೆ ತನ್ನ ಧಾರ್ಮಿಕ ಲೌಕಿಕ ಪೋಷಕರಿಬ್ಬರಿಗೂ ನಿಕಟವಾಗಿ ಸಂಬಂಧಿಸಿದ ಈ ಶಾಸನವನ್ನು ಕವಿ ರನ್ನನೇ ರಚಿಸಿರಬಹುದಲ್ಲವೆ? ಕಾಲದ ದೃಷ್ಟಿಯಿಂದಾಗಲಿ[೬] ವಿಷಯದ ದೃಷ್ಟಿಯಿಂದಾಗಲಿ ಶೈಲಿಯ ದೃಷ್ಟಿಯಿಂದಾಗಲಿ ಈ ಊಹೆಗೆ ಯಾವ ಪ್ರತಿಬಂಧಕವೂ ತೋರುವುದಿಲ್ಲ: ಸಂಭಾವ್ಯತೆಯೇ ಹೆಚ್ಚು. ರನ್ನನೇ ಈ ಶಾಸನವನ್ನು ರಚಿಸಿದ್ದರೂ ಇರಬಹುದು!

---

೬. ಶಾಸನದ ವಸ್ತುವನ್ನೂ ಅದರಲ್ಲಿ ಅಜಿತಪುರಾಣದ ಪದ್ಯಗಳು ಬಂದಿರುವುದನ್ನೂ ನೋಡಿದರೆ, ಅಜಿತಪುರಾಣದ ರಚನೆಯಾದ ಬಳಿಕ (ಎಂದರೆ ಕ್ರಿ.ಶ. ೯೯೩ ರಿಂದ ಈಚೆಗೆ) ಅದು ಹುಟ್ಟಿತೆಂದು ಒಪ್ಪಬಹುದು. ರನ್ನನ ಇನ್ನೊಂದು ಉಪಲಬ್ಧ ಕೃತಿಯಾದ ಗದಾ ಯುದ್ಧದ ರಚನೆಯ ಕಾಲ ನಿರ್ದಿಷ್ಟವಾಗಿ ತಿಳಿದಿಲ್ಲ. ಇಱಿವ ಬೆಡಗಂ–ಸತ್ಯಾಶ್ರಯನು ಚಕ್ರವರ್ತಿಯಾದ ಬಳಿಕ, ಎಂದರೆ ಕ್ರಿ.ಶ. ೯೯೭ ರಿಂದ ಈಚೆಗೆ ಅದು ಹುಟ್ಟಿತೆಂದು ಹೇಳಲು "ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ" ಎಂಬ ರನ್ನನ ಉಕ್ತಿ (ಗದಾಯುದ್ಧ, ೧.೩೨) ಅವಕಾಶಕೊಡುತ್ತದೆ. ಈ ಕಾವ್ಯವನ್ನು ರನ್ನನು ಕ್ರಿ.ಶ. ೧೦೦೫ ರಿಂದ ಈಚೆಗೆ, ಸುಮಾರು ೧೦೦೭ ಅಥವಾ ೧೦೦೮ ರಲ್ಲಿ, ರಚಿಸಬೇಕೆಂದು ಕೆಲವು ಆಧಾರಗಳ ಮೇಲೆ ಶ್ರೀ ವೆಂ. ಬಿ. ಲೋಕಾಪೂರ ಅವರು ಊಹಿಸಿದ್ದಾರೆ ('ಗದಾಯುದ್ಧದ ಕಾಲ ನಿರ್ಣಯ', ಪರಿಷತ್ಪತ್ರಿಕೆ ೨೪.೨; ರನ್ನನ ಗದಾಯುದ್ಧದ ಕಾಲನಿರ್ಣಯ', ಜಯಕರ್ನಾಟಕ, ೧೭೭). ಇನ್ನು, ಅತ್ತಿಮಬ್ಬೆಯ ಶಾಸನದ ಕಾಲದ ಪರಮಾವಧಿ ಕ್ರಿ.ಶ. ೧೦೦೭; ಆ ಪಕ್ಷಕ್ಕೆ ಶಾಸನವೂ ಗದಾಯುದ್ಧವೂ ಒಂದೇ ಕಾಲದಲ್ಲಿ ಹುಟ್ಟಿದವೆಂದು ಹೇಳಬೇಕಾಗುತ್ತದೆ. ಎಂತಿದ್ದರೂ ರನ್ನನು ತೈಲಪ, ಇಱಿವಬೆಡಂಗ ಇವರಿಬ್ಬರ ಆಳಿಕೆಯಲ್ಲೂ ಇದ್ದು ಕಾವ್ಯರಚನೆ ಮಾಡಿದವನು. ಇವರಿಬ್ಬರಲ್ಲೊಬ್ಬರ ಆಳಿಕೆಗೆ ಸಂಬಂಧಪಟ್ಟ ಶಾಸನವು ರನ್ನನ ಕೃತಿಯಾಗಿರು ವುದಕ್ಕೆ ಕಾಲದೃಷ್ಟಿಯಿಂದ ಯಾವ ಆಕ್ಷೇಪಣೆಯೂ ತೋರುವುದಿಲ್ಲ.

೩

ಇದುವರೆಗಿನ ನಿರೂಪಣೆಯಲ್ಲಿ, ಅತ್ತಿಮಬ್ಬೆ ಸೇರಿದ ಮನೆತನದ ಪ್ರಖ್ಯಾತಿಯೇ ಮುಖ್ಯವಾಗಿ ಬಂದಿತು: ಮಹಾಮಂತ್ರಿ ಧಲ್ಲನ ಸೊಸೆ, ಚಮೂಪತಿ ನಾಗದೇವನ ಮಡದಿ, ಪಡೆವಳ ತೈಲನ ತಾಯಿ! ಇನ್ನು ಈಕೆ ಹುಟ್ಟಿದ ವಂಶದ ಕಡೆ ತಿರುಗೋಣ. ಇದರ ವೈಭವವೂ ಸಾಮಾನ್ಯವಲ್ಲ. ಅತ್ತಿಮಬ್ಬೆಯ ಪಿತಾಮಹನು ವೆಂಗಿಮಂಡಲದ ಕಮ್ಮೆನಾಡಿನ ಪುಂಗನೂರಿನಲ್ಲಿ ಬಾಳಿದ ಕೌಂಡಿನ್ಯಗೋತ್ರದ "ದ್ವಿಜಾಗ್ರಣಿ"ನಾಗಮಯ್ಯ. ಈತನಿಗೆ ಮಲ್ಲಪಯ್ಯನೂ ಪೊನ್ನಮಯ್ಯ (ಅಥವಾ ಪುನ್ನಮಯ್ಯ)ನೂ ಮಕ್ಕಳು. ಮಲ್ಲಪಯ್ಯನು "ಅಮ್ಮನ ಭಕ್ತ", "ವಿದ್ಯಾನಿಧಾನ", "ಪಂಡಿತ ಮಂಡಳಿಗಂ ಕವಿಮಂಡಳಿಗಂ ತನ್ನ ಮನೆ ತವರ್ಮನೆಯೆನೆ" ಮೆರೆದವನು; ಸ್ವಯಂ ಜ್ಯೌತಿಷ ವಿಶಾರದ; ಜೊತೆಗೆ ಶೂರ. "ಮಲ್ಲಪನಲ್ಲದೆ ಪೆಱನಾವನೊ ಶಾಸ್ತ್ರಶಸ್ತ್ರವಿದ್ಯಾಕುಶಲಂ!" ಅವನ ತಮ್ಮ ಪೊನ್ನಮಯ್ಯನು "ಜಿನಭಕ್ತ" "ಅಣ್ಣನ ಭಕ್ತ"; ಕಾವೇರೀತೀರದಲ್ಲಿ ಕಾಳೆಗದಲ್ಲಿ "ತೈಲಪನೃಪಂ ಬಾಟ್ಗೆ" ಎಂದು ಕತ್ತಿಯನ್ನು ಹಿರಿದು ಶತ್ರುಗಳನ್ನಿರಿದು ತಲೆಯನ್ನೊಪ್ಪಿಸಿ ಸ್ವರ್ಗಕ್ಕೆ ಸಂದವನು. ಸಹೋದರರಿಬ್ಬರೂ "ಕವಿ ಚಕ್ರವರ್ತಿ" ಪೊನ್ನನ ಕೈಯಲ್ಲಿ 'ಪುರಾಣ ಚೂಡಾಮಣಿ' ಯೆನಿಸಿದ 'ಶಾಂತಿಪುರಾಣ'ವನ್ನು ಬರೆಯಿಸಿದವರು. ಪೊನ್ನನು ತನ್ನ ಕೃತಿಯಲ್ಲಿ ತನ್ನ ಈ ಪೋಷಕರನ್ನೂ ಅವರ ವಂಶ ಮಹಿಮೆಯನ್ನೂ ಬಣ್ಣಿಸಿದ್ದನೆ. ರನ್ನನು 'ಅಜಿತಪುರಾಣ'ದಲ್ಲಿ ಆ ಜಾಡಿನಲ್ಲೇ ನಡೆದು ಹೆಚ್ಚಿನ ವಿವರಗಳನ್ನು ತಿಳಿಸಿದ್ದಾನೆ.

ಅಂತೂ ಅತ್ತಿಮಬ್ಬೆಯನ್ನು ಕೊಟ್ಟ ತಂದ ಉಭಯಕುಲದವರೂ ಜೈನ ಬ್ರಾಹ್ಮಣರು; ಚಾಳುಕ್ಯರಾಜರ ಸೇವಾದೀಕ್ಷೆಯನ್ನು ವಂಶ ಪಾರಂಪರ್ಯವಾಗಿ ಹಿಡಿದಿದ್ದವರು; ಶಸ್ತ್ರಗಳನ್ನು ಬೀಸಿ ಸೇನೆಗಳನ್ನು ನಡೆಸಿ ಸಮಯ ಬಂದಾಗ ಸ್ವಾಮಿಗಾಗಿ ಪ್ರಾಣವನ್ನು ತೆತ್ತವರು; ಶಾಸ್ತ್ರ ಪಾರಂಗತವಾಗಿ ವಿಖ್ಯಾತಿಗಳಿಸಿದ್ದಲ್ಲದೆ ಕವಿಶ್ರೇಷ್ಠರನ್ನು ಪೋಷಿಸಿದವರು; ಜಿನಭಕ್ತರು, ಧರ್ಮಪ್ರಿಯರು.

ಮಲ್ಲಪಯ್ಯ, ಅಪ್ಪಕಬ್ಬೆ ಇವರ ಮಗಳೇ ನಮ್ಮ ಅತ್ತಿಮಬ್ಬೆ. (ಈಕೆಗೆ ಐದು ಮಂದಿ ಸೋದರರೂ ಇಬ್ಬರು ಸೋದರಿಯರೂ ಇದ್ದರು; ಇವರಲ್ಲಿ ಗುಂಡಮಬ್ಬೆ ಈಕೆಯ ಸಪತ್ನಿಯೂ ಆಗಿದ್ದು ಪತಿಯೊಡನೆ ಸಹಗಮನ ಮಾಡಿದಳೆಂದು ಈ ಲೇಖನದ ಪ್ರಾರಂಭದಲ್ಲೇ ಗಮನಿಸಿದ್ದೇವೆ.) ಧಾರ್ಮಿಕ ಕಾವ್ಯಗಳನ್ನು ಬರೆಯಿಸುವ ಮನೋಧರ್ಮ. ಅತ್ತಿಮಬ್ಬೆಗೆ ತಂದೆಯ ಮನೆಯಿಂದಲೇ ಬಂದಿತೇನೋ :

ಪೊನ್ನಿಗನಿಂ ಮಲ್ಲಪನುಂ
ಪೊನ್ನನುಮಟ್ಟಿಯೆ ಪುರಾಣಚೂಡಾಮಣಿಯಂ ।
ಮುನ್ನಂ ಪೇಟಿಸಿದಂತೆ ಗು-
ಣೋನ್ನತ ಕವಿರತ್ನನಿಂದಿದಂ ಪೇಟಿಸಿದಳ್ ॥ (ಅಜಿತಪುರಾಣ, ೧.೭೭)

ಅತ್ತಿಮಬ್ಬೆ ಹೊಸ ಕಾವ್ಯದ ನಿರ್ಮಾಪಣಕ್ಕೆ ಮಾತ್ರ ಗಮನಕೊಡಲಿಲ್ಲ; ಹಿಂದಿನ ಕಾವ್ಯಗಳ ಸಂರಕ್ಷಣೆಯನ್ನೂ ಕೈಕೊಂಡಳು. ಆ ಕಾಲದಲ್ಲಿ ಗ್ರಂಥದ ಒಂದೊಂದು ಪ್ರತಿಯನ್ನೂ ಕೈಯಲ್ಲಿ ಬರೆದಿಡಬೇಕಾಗಿತ್ತಷ್ಟೆ. ಅಪೇಕ್ಷಿಸುವವರು ಇಲ್ಲದಿದ್ದರೆ, ಅಥವಾ ಪ್ರತಿಕಾರರಿಗೆ ಹಣ ಕೊಡುವಷ್ಟು ಅವರಿಗೆ ಚೈತನ್ಯವಿಲ್ಲದಿದ್ದರೆ, ಪುಸ್ತಕ ದುರ್ಲಭವಾಗಿ ಕ್ರಮೇಣ ಉಡುಗಿ ಹೋಗುತ್ತಿತ್ತು. ಪೊನ್ನಕವಿಯ 'ಭುವನೈಕರಾಮಾಭ್ಯುದಯ' ಈಗ ದೊರೆಯದಿರುವುದು ಈ ಮಾತಿಗೆ ಸಾಕ್ಷಿ. ಅವನ 'ಶಾಂತಿಪುರಾಣ'ಕ್ಕೂ ಇದೇ ದುರವಸ್ಥೆ ಒದಗುವುದರಲ್ಲಿತ್ತು. ಅತ್ತಿಮಬ್ಬೆಯ ಕಾಲಕ್ಕೇ ಅದರ ಪ್ರಾಚುರ್ಯ ಕಡಮೆಯಾಗಿತ್ತು. ಆದರೆ ತನ್ನ ತಂದೆಯ ಧರ್ಮ ಅವನ ಕಾಲಾನಂತರದಲ್ಲಿ ಮಸುಳಬಾರದೆಂದು ಈಕೆ ಶಾಂತಿಪುರಾಣದ ಒಂದುಸಾವಿರ ಪುಸ್ತಕಗಳನ್ನು ಪ್ರತಿಮಾಡಿಸಿ ಪ್ರಚುರಗೊಳಿಸಿದಳು. ಶಾಂತಿಪುರಾಣದ ಮಾತೃಕೆಯೊಂದರ ಕೊನೆಯಲ್ಲಿ ಸೇರಿರುವ ಪದ್ಯಗಳಿಂದ ಈ ವಿಷಯ ಸ್ಪಷ್ಟವಾಗುತ್ತದೆ. ಅಲ್ಲಿಂದ ಎರಡು ಪದ್ಯಗಳನ್ನು ಉದಾಹರಿಸಬಹುದು; ಇವುಗಳ ಕರ್ತೃ ಯಾರೋ ತಿಳಿಯದು—

ಶ್ರೀಮದಶೇಷ ಜೈನಸಮಯೈಕ ಶಿರೋಮಣಿ ಸರ್ವಜೀವರ-
ಕ್ಷಾಮಣಿಯೆಂದು ಭವ್ಯತತಿ ಬಿಚ್ಚಟಿಸುತ್ತಿರೆ ಸಂದ ದಾನಚಿಂ-।
ತಾಮಣಿ ತನ್ನದೊಂದು ಪಿತೃಭಕ್ತತೆಯಂ ಮೆಱೆಯಲ್ ಪುರಾಣಚೂ-
ಡಾಮಣಿಯಂ ನಿಮಿರ್ಚಿದಳಿಳಾಗ್ರದೊಳಿಂತು ಜಸಕ್ಕೆ ನೋಂತರಾರ್ ॥

ಎಸೆಯದೆ ಪೂಟ್ಟು ಕೆಟ್ಟಪುದು ಶಾಂತಿಪುರಾಣಮದಂ ನೆಗಟ್ಟುವೆಂ
ವಸುಧೆಯೊಳೆನ್ನ ತಂದೆಯ ಪರೋಕ್ಷದೊಳೆಂದು ಸಹಸ್ರಪುಸ್ತಕ-।
ಪ್ರಸರಮನತ್ತಿಮಬ್ಬೆ ಪರಮಾದರದಿಂ ಬರೆಯಲ್ಕೆ ವೇಟಿ ಪೆಂ-
ಪಸದಳಮದ್ವಿತೀಯಮಸಮಂ ಸಲೆ ಭಾವಿಸಲೆಯ್ದೆ ಬಣ್ಣಿಸಲ್ ॥
(ಶಾಂತಿಪುರಾಣ, ಪರಿಶಿಷ್ಟ ೧—ಪದ್ಯಗಳು ೧, ೨)

ನಮ್ಮ ನಾಡಿನಲ್ಲಿ ಹಿಂದೆ ಪ್ರಖ್ಯಾತಿಯಿಂದ ಬಾಳಿದ ಅನೇಕ ಮಹನೀಯರ ಹೆಸರುಗಳು ಮಾತ್ರ ಈಗ ಉಳಿದಿವೆ; ಅವರ ಬಾಳ್ವೆಯ ವಿವರಗಳು ಕನಸಿಗೂ ನಿಲುಕದಂತೆ ಅಳಿದಿವೆ. ಹೀಗಿರುವಲ್ಲಿ ಅತ್ತಿಮಬ್ಬೆಯಂಥ ಪಾವನ ಮಹಿಳೆಯ ಮೂರ್ತಿ ಹಿಂದಿನ ಕಾವ್ಯಶಾಸನಗಳಲ್ಲಿ-ಬಲುಮಟ್ಟಿಗೆ ರನ್ನ ಮಹಾಕವಿಯ ಕೃಪೆಯಿಂದ—ಸ್ಫುಟವಾಗಿ ರೇಖೆಗೊಂಡಿರುವುದು ಕನ್ನಡಿಗರ ಪುಣ್ಯ. ಬಿಚ್ಚುಗ್ಯೆಯ ಆಕೆಯ ವಿವಿಧ ಮಹಾ ದಾನಗಳಿಂದ ಸಾರ್ಥಕವಾದ "ದಾನಚಿಂತಾಮಣಿ"ಯೆಂಬ ಯಶೋಘೋಷ ಇಂದಿಗೂ ನಮ್ಮ ಕಿವಿಗಳಲ್ಲಿ ಮೊಳಗುತ್ತಿದೆ; ವ್ರತೋಪವಾಸಾದಿಗಳಿಂದ ತಾರಿದ ಆಕೆಯ ದೇಹದಲ್ಲಿ ದೀಪವರ್ತಿಯಂತೆ ಹೊಳೆದ ಧಾರ್ಮಿಕ ತೇಜಸ್ಸು ಒಂದು ಸಹಸ್ರಮಾನದವರೆಗೂ ತನ್ನ ಪ್ರಭೆಯನ್ನು ಬೀರಿದೆ!

ಮಹಿಚಕ್ರಕ್ಕಿದು ಚೋದ್ಯಮಲ್ತೆನಿಸುವಂತಾರ್ತೀವು[ದ]ಂ ಕಂಡು ಸ-
ಸ್ಪೃಹರೆಲ್ಲಂ ಗೆಳೆಗೊಂಡು ಬಣ್ಣಿಸುವರಿನ್ನೇಚೋದ್ಯಮಾಗಳ್ ಜಗ-।

ನ್ಮಹನೀಯತ್ವಮನೆಯ್ದೆ ತಾಳ್ದಿದ ಮಹಾಪ್ರಖ್ಯಾತಿಯಂ ಕೇಳ್ದು ನಿಃ-
ಸ್ಪೃಹರುಂ ಬಣ್ಣಿಪರಲ್ತೆ ನಿನ್ನ ಗುಣವಂ ಶ್ರೀದಾನಚಿಂತಾಮಣೀ ॥
(ಅಜಿತಪುರಾಣ, ೧೨. ೧೨)

೧೯೪೮]

ಪರಿಶಿಷ್ಟ

ಅತ್ತಿಮಬ್ಬೆಯ ಮಹಿಮೆಯನ್ನು ವರ್ಣಿಸುವ ಈ ಕೆಲವು ಪದ್ಯಗಳು ಬ್ರಹ್ಮಶಿವನ 'ಸಮಯ ಪರೀಕ್ಷೆ'ಯಲ್ಲಿ ದೊರೆಯುತ್ತವೆ.—

ಗುಣದ ಖಣಿ ದಾನಚಿಂತಾ
ಮಣಿ ವಿಮಲ ಚರಿತ್ರ ಜೈನಶಾಸನರಕ್ಷಾ-।
ಮಣಿ ಸಜ್ಜನೈಕಚೂಡಾ-
ಮಣಿಯೆಂ[ದೆಂ]ದತ್ತಿಮಬ್ಬೆಯಂ ಪೊಗಳದರಾರ್ ॥

ಭರದಿಂ ಬಂದೊತ್ತೆ ಮುಂ[ದಂ] ಮಸಕದೆಸಕದಿಂ ತೀವಿ ಮುಂದೊತ್ತೆ ಗೋದಾ-
ವರಿ ಭೂಪಂ ತೈಲಪಂ ನಿಸ್ತರಿಸು ಕಟಕಮಂ ಬೇಗಮಿನ್ನಬ್ಬೆ ನೀನೆಂ-।
ದೆರೆಯಲ್ ಸರ್ವಜ್ಞನಂ ಪೊತ್ತಗಿಯದೆ [ನದಿಯಂ] ಪೊಕ್ಕೊಡಾ ವಾರಿಪೂರಂ
ಬರಿದತ್ತಾ ಚಕ್ರಿ[ಪಾ]ಯ್ದುಂ ತೊರೆಯನಮಳಸಮ್ಯಕ್ತ್ವ ವಿಖ್ಯಾತಿಯಿಂದಂ ॥

ಅಕಳಂಕಚರಿತೆ ಜಿನಚರ-
ಣಕಂಜಕಿಂಜಲ್ಕಪುಂಜರಂಜಿತ ತನು ಸ-।
ರ್ವಕಳಾವಿದೆ ಶೌಚಿ ಘಟಾಂ
ತಿಕೆ ದಾನವಿನೋದೆಯೆಂಬ ಬಿರುದಿಂ ನೆಗಟ್ದಳ್ ॥ (೧. ೩೮-೪೦)[೭]

ಇವುಗಳಲ್ಲಿ, ಅತ್ತಿಮಬ್ಬೆ ಜಿನಬಿಂಬವನ್ನು ನೆತ್ತಿಯಮೇಲೆ ಹೊತ್ತು ಗೋದಾವರೀ ನದಿಯನ್ನು ಪ್ರವೇಶಿಸಿ ಅದರ ಪೂರ್ಣಪ್ರವಾಹವನ್ನು ತಗ್ಗಿಸಿದಳೆಂಬ "ಪವಾಡ"ದ ಉಲ್ಲೇಖ ಮೇಲೆ ಲಕ್ಕುಂಡಿಯ ಶಾಸನದಿಂದ ಉದ್ಧರಿಸಿರುವ "ನರಪನ ಬೆಸದಿಂ . . ." ಎಂಬ ಪದ್ಯದ ಭಾವವಿಸ್ತರಣದಂತಿದೆಯಲ್ಲವೆ? ಬ್ರಹ್ಮಶಿವನು ಈ ಅಂಶವನ್ನು ಶಾಸನದಿಂದಲೇ ಗ್ರಹಿಸಿರುವುದು ಅಸಂಭವವಲ್ಲ; ಅವನ ಕಾಲ ೧೨ನೆಯ ಶತಮಾನದ ಕೊನೆಯ ಪಾದ.

ಸಮಾಲೋಕನ : ೧೯೫೮

೭ ಈ ಪದ್ಯಗಳನ್ನು ಶ್ರೀ ಎಚ್. ದೇವೀರಪ್ಪನವರು 'ಬ್ರಹ್ಮಶಿವನ ಕಾಲ ವಿಚಾರ' ಎಂಬ ಲೇಖನದಲ್ಲಿ (ಪ್ರಬುದ್ಧ ಕರ್ಣಾಟಕ, ೨೪.೪) 'ಸಮಯ ಪರೀಕ್ಷೆ'ಯ ಒಂದು ಕೈಬರಹದ ಪ್ರತಿಯಿಂದ ಉದ್ಧರಿಸಿಕೊಟ್ಟಿದ್ದಾರೆ.

ಜನ್ನನ ಕಾವ್ಯಗಳಲ್ಲಿ ಪ್ರಣಯನಿರೂಪಣೆ

ಮನಸಿಜನ ಮಾಯೆ ವಿಧಿವಿಳ
ಸನದ ನೆರೆಂಬಡೆಯೆ ಕೊಂದು ಕೂಗದೆ ನರರಂ
(ಯಶೋಧರಚರಿತೆ, ii ೬೧)

೧

ಲೋಕದಲ್ಲಿ ಒಲುಮೆ ಮೂಡದ ಹೃದಯವಿಲ್ಲ. ಮುಸುಕದ ವಿವೇಕವಿಲ್ಲ. ಅದು ಸರ್ವಗ್ರಾಸಿ. ಪಾಮರರೆನ್ನದೆ ಪಂಡಿತರೆನ್ನದೆ ಎಲ್ಲರೂ ಅದರ ಹಿಡಿತಕ್ಕೆ ಒಂದಲ್ಲ ಒಂದು ಸ್ಥಲ ಸಿಕ್ಕಿದವರೇ. ಜನತೆಯ ಪ್ರತಿನಿಧಿಗಳಾದ ಕವಿಗಳಲ್ಲಿ ತಾನೆ ಪ್ರೇಮದ ಮಹಿಮೆಯನ್ನೂ ಅದರ ಕೋಟಲೆಯನ್ನೂ ಹಾಡದವರು ಯಾರುಂಟು? ಯಾವ ಸಾಹಿತ್ಯವನ್ನೇ ನೋಡಲಿ, ಅದರಲ್ಲಿ ಪ್ರೇಮಕಥೆಯೇ ಕವಿಕಾಮಧೇನು. ಅದರ ಸವಿಯನ್ನು ಬಗೆಬಗೆಯಾಗಿ ಹಾಡಿ ಕವಿಗಳು ತಣಿಯರು; ಮರಳಿ ಕೇಳಿ ಜನಗಳು ದಣಿಯರು.

ನಮ್ಮ ಹಳಗನ್ನಡ ಸಾಹಿತ್ಯವೂ ಈ ಲೋಕ ಮೋಹಕವಾದ ಶೃಂಗಾರರಸಕ್ಕೆ ತನ್ನ ಕಾಣಿಕೆಯನ್ನು ಸಲ್ಲಿಸದೆ ಬಿಟ್ಟಿಲ್ಲ. ಒಂದು ದೃಷ್ಟಿಯಿಂದ, ತನ್ನ ಅಳವಿಗೆ ಮೀರಿಯೇ ಸಲ್ಲಿಸಿದೆಯೆಂದು ಹೇಳಬಹುದು. ಮಹಾಕಾವ್ಯವನ್ನು ರಚಿಸಿ ಕವಿಪಟ್ಟವನ್ನು ಗಳಿಸಿದವರೆಲ್ಲರೂ ನಾಯಕನ ವಿಲಾಸ ವಿಹಾರಗಳನ್ನು ತಕ್ಕಮಟ್ಟಿಗೆ ವರ್ಣಿಸಿರಲೇಬೇಕಾಗುತ್ತದೆ. ಆದರೆ ಹಾಗೆ ಮಾಡಿದವರೆಲ್ಲರಿಗೂ ಪ್ರಣಯ ನಿರೂಪಣೆಯಲ್ಲಿ

* ಪ್ರಬುದ್ಧ ಕರ್ನಾಟಕ ೧೪.೨.

ಚಾತುರ್ಯವುಂಟೆಂದು ಹೇಳುವುದು ಕಷ್ಟ. ಅದು ಕವಿಯ ಕರ್ತವ್ಯ, ಅದಿಲ್ಲದೆ ಮಹಾಕಾವ್ಯವಾಗದು—ಎಂಬ ಬುದ್ಧಿಯಿಂದಲೇ ಹಲವರು ಬರೆದಂತೆ ತೋರುತ್ತದೆ. ಅವರು ವರ್ಣಿಸುವ ಅಂಶಗಳಲ್ಲಿ ವೈವಿಧ್ಯವಿರುವುದಿಲ್ಲ; ನಿರೂಪಿಸುವ ಸನ್ನಿವೇಶಗಳಲ್ಲಿ ಜೀವಕಳೆಯುಕ್ಕುವುದಿಲ್ಲ. ಲೋಕದಲ್ಲಿ ರತಿಭಾವವು ಸರ್ವಸಾಧಾರಣವಾದರೂ ಕಾವ್ಯದಲ್ಲಿ ಅದರ ಹೃದಯವನ್ನರಿತು ಸರಸವಾಗಿ ನುಡಿದು ವಾಚಕರನ್ನು ಮರುಳುಮಾಡತಕ್ಕವರು ಎಲ್ಲೋ ಕೆಲವು ಮಂದಿ. ಅಂಥ ಕವಿಗಳಲ್ಲಿ ಜನ್ನನು ಒಬ್ಬನು.

ಜನ್ನನು ಶೃಂಗಾರಪ್ರಿಯನೆನ್ನುವುದಕ್ಕೆ ಸಾಕ್ಷಿಯಾಗಿ ಆ ವಿಷಯಕ್ಕೆ ಮೀಸಲಿಟ್ಟ ಅವನ ಕೃತಿಯೊಂದುಂಟು. ಅವನು 'ಸ್ಮರತಂತ್ರ'ವೆಂಬ ಗ್ರಂಥವನ್ನು ಬರೆದಂತೆ, 'ಮೋಹಾನುಭವಮುಕುರ' (ಸು. ೧೪೦೦) ಎಂಬ ಗ್ರಂಥದಿಂದ ಊಹಿಸಲಾಗಿದೆ. ಈ ಗ್ರಂಥವು ('ಸ್ಮರತಂತ್ರ'ವು) ನಮಗೆ ದೊರೆತಿಲ್ಲ" ಎಂದು ಕವಿಚರಿತೆಯಲ್ಲಿ (i ೩೨೮) ಹೇಳಿದೆ. ಆದರೆ, 'ಮೋಹಾನುಭವಮುಕುರ'ದ[೧] ಕೊನೆಯಲ್ಲಿರುವ

ವರಜಂನ ಕವೀಶ್ವರನಿಂ
ಸ್ಮರತಂತ್ರ ಪ್ರೌ[ಢಿ] ಗೊರೆಮಿಗಿಲ್ ತಾನೆನೆ ಸಂ।
ದುರುತರದನುಭವಮುಕುರಂ
ಸ್ಥಿರಮಿರಿಸುಗೆ ಚಂದ್ರತಾರೆಯುಳ್ಳನ್ನೆವರಂ ॥ (ಪ. ೧೧೪)

ಎಂಬ ಪದ್ಯವನ್ನು ನೋಡಿದರೆ, ಗ್ರಂಥದ ಸರಿಯಾದ ಹೆಸರು 'ಅನುಭವಮುಕುರ' ವೆಂದೂ ಜನ್ನಕವಿ ರಚಿಸಿದ ಕಾವ್ಯವೇ ಇದೆಂದೂ ತೋರುತ್ತದೆ. ('ಸ್ಮರತಂತ್ರ'ವೆಂಬ ಹೆಸರಿನ ಕಾವ್ಯ ಬೇರೆ ಇತ್ತು; ಅದನ್ನು ಜನ್ನನು ಬರೆದನು; 'ಅನುಭವಮುಕುರ'ವು ಪರಕರ್ತೃಕ—ಎಂದು ಅರ್ಥಮಾಡಲು ಆಧಾರ ಸಾಲದು.) ಈ ಅನುಭವಮುಕುರವು ೧೧೪ ಪದ್ಯಗಳನ್ನುಳ್ಳ ಒಂದು ಲಘುಕಾವ್ಯ. ಇದರಲ್ಲಿ ಬಗೆಬಗೆಯ ವೃತ್ತಪ್ರಭೇದಗಳು ಬಂದಿವೆ; ಅಪ್ರಚುರವಾದ ವೃತ್ತಜಾತಿಗಳೇ ಹಲವಿವೆ. ಸಾಮಾನ್ಯವಾಗಿ ಪ್ರತಿ ಪದ್ಯದಲ್ಲೂ ಕವಿ ಕಾಮಿನಿಯನ್ನು ಸಂಬೋಧಿಸಿ ರತಿಲೀಲೆಗೆ ಸಂಬಂಧಿಸಿದ ವಿಷಯಗಳನ್ನು ಪ್ರಶಂಸೆ ಮಾಡುತ್ತಾನೆ. ಈ ಗ್ರಂಥವು ಜನ್ನನಿಂದ ರಚಿತವಾದದ್ದೆಂದು ಒಪ್ಪಿಕೊಂಡರೆ, ಇದನ್ನು ಆತನು ತನ್ನ ತಾರುಣ್ಯದಲ್ಲಿ ವಿವಿಧ ವೃತ್ತರಚನೆಯಲ್ಲಿ ಕೈಯನ್ನು ಪಳಗಿಸುವುದಕ್ಕೋಸ್ಕರ ಬರೆದನೆನ್ನಬಹುದು.

ಜನ್ನನ ಪ್ರಸಿದ್ಧ ಕಾವ್ಯಗಳು ಎರಡು : 'ಯಶೋಧರಚರಿತೆ' (ಕ್ರಿ.ಶ. ೧೨೦೯) ಮತ್ತು 'ಅನಂತನಾಥ ಪುರಾಣ' (ಕ್ರಿ.ಶ. ೧೨೩೦). ಇವುಗಳಲ್ಲಿ ಯಶೋಧರಚರಿತೆ "ಜೈನದೀಕ್ಷೆಗೆ ಒಂದು ಸಣ್ಣ ಕೈಪಿಡಿ." "ಶ್ರಾವಕಜನದುಪವಾಸಂ ಜೀವದಯಾಷ್ಟಮಿ

---

೧. ಮೈಸೂರು ಓರಿಯೆಂಟಲ್ ಲೈಬ್ರರಿಯಲ್ಲಿರುವ ಈ ಗ್ರಂಥದ ಕೈಬರಹದ ಪ್ರತಿಯನ್ನೂ ಅದು ಜನ್ನಕರ್ತೃಕವಾಗಿರಬೇಕೆಂಬ ಅಂಶವನ್ನೂ ನನ್ನ ಗಮನಕ್ಕೆ ತಂದುಕೊಟ್ಟವರು ನನ್ನ ಮಿತ್ರರಾದ ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್, ಎಂ.ಎ., ಅವರು.

ಯೊಳಾಗೆ, ಪಾರಣೆ ಕಿವಿಗಳ್ಗೆ", "ಜೀವದಯೆ ಜೈನಧರ್ಮಂ" ಎಂಬ ತತ್ತ್ವವನ್ನು ನಿರ್ದೇಶಿಸುವ ಉದಾತ್ತೋಪಾಖ್ಯಾನವೇ ಇದರ ವಸ್ತು. ಅನಂತನಾಥಪುರಾಣವಂತೂ ಹದಿನಾಲ್ಕನೆಯ ತೀರ್ಥಂಕರನ ದಿವ್ಯಚರಿತ್ರೆಯನ್ನು ವರ್ಣಿಸಿ 'ಬಾಟ ಬಟ್ಟೆ'ಯನ್ನು ತೋರಿಸುವ ಪುಣ್ಯಕಥೆ; "ಜಾರಚೋರವೀರರ ಕಥೆಯಂತೆ ಬಾಯ್ಸವಿಯ ಮಾತುಗಳಂ ಬಟಿಕೆಯ್ವ ಚರ್ಚೆಯಲ್ಲ." ಈ ಎರಡು ಕೃತಿಗಳನ್ನೂ ಜನ್ನನು ಪರಮ ಭಕ್ತಿಯಿಂದ ರಚಿಸಿರಬೇಕು. ಆದರೂ ಇವುಗಳಲ್ಲಿ ಅವನ ಶೃಂಗಾರಪ್ರಿಯತೆಗೆ ಹಲವು ನಿದರ್ಶನಗಳಿವೆ. ಕಾವ್ಯದ ಮೊದಲಲ್ಲಿ ದೇವತಾದಿ ಸ್ತುತಿಯನ್ನು ಮಾಡಿದ ಬಳಿಕ, ತಮ್ಮ ಪ್ರಜ್ಞೆ ಪದವಿಗಳನ್ನೂ ವಿದ್ಯವೈಭವಗಳನ್ನೂ ಹೇಳಿಕೊಳ್ಳುವುದು ಕನ್ನಡ ಕವಿಗಳ ಹಕ್ಕಷ್ಟೆ. ಜೊತೆಗೆ ತಮ್ಮ ರೂಪಲಾವಣ್ಯಗಳನ್ನೂ 'ರಸಿಕತೆ'ಯನ್ನೂ ಮುಚ್ಚುಮರೆಯಿಲ್ಲದೆ ವರ್ಣಿಸುವುದೂ ಕೆಲವರಲ್ಲಿ ಉಂಟು. ಈ ಪದ್ಧತಿಯನ್ನು ಪಂಪನಿಂದ ಕಲಿತು ಜನ್ನನು ಅವನಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆನ್ನಬಹುದು. ತಾನು ವೈಯಾಕರಣನೆಂದೂ ತರ್ಕವಿನೋದನೆಂದೂ ಹೇಳಿಕೊಳ್ಳುವ ಹಾಗೆಯೇ "ಭರತಸುರತಶಾಸ್ತ್ರ ವಿಳಾಸ"ನೆಂದೂ ಹೇಳಿಕೊಂಡಿದ್ದಾನೆ. "ಕವಿಭಾಳನೇತ್ರ"ನೆಂಬ ಬಿರುದಿನ ಮೇಲೆ ಎಷ್ಟು ಅಭಿಮಾನವೋ "ಅಭಿನವಮದನ" ನೆಂಬ ಬಿರುದಿನ ಮೇಲೂ ಅಷ್ಟೇ. ಇದರ ಮೇಲೆ, ತನ್ನಲ್ಲಿ ರಮಣಿಯರಿಗಿದ್ದ ಪರಮಾದರವನ್ನೂ ವ್ಯಾಮೋಹವನ್ನೂ ಸಂಕೋಚಪಡದೆ ವರ್ಣಿಸಿದ್ದಾನೆ; ಈ ಬಗೆಯ ಪ್ರಣಯರಹಸ್ಯಗಳಿಗೆ ಧಾರ್ಮಿಕ ಕಾವ್ಯದ ಅವತರಣಿಕೆ ಉಚಿತಸ್ಥಾನವಲ್ಲವೆಂಬುದನ್ನು ಕೂಡ ಮರೆತು ವರ್ಣಿಸಿದ್ದಾನೆ.

ತೀರ್ಥಂಕರನ ಚರಿತ್ರೆಯನ್ನು ನಿರೂಪಿಸುವಾಗಲೂ ಅಷ್ಟೇ. ಅಷ್ಟಾದಶ ವರ್ಣನೆಗಳಲ್ಲಿ ಕ್ರಮಪ್ರಾಪ್ತವಾಗಿ ಬರುವ ಶೃಂಗಾರಾಂಶಗಳನ್ನು ವಿವರಿಸುವುದರಲ್ಲಿ ಜನ್ನನಿಗೆ ಉತ್ಸಾಹ ಹೆಚ್ಚು. ವೀತರಾಗನಾದ ಅನಂತನಾಥನು ಕೂಡ ಲಲಿತನಾಯಕನಂತೆ ನಲ್ಲೆಯರೊಡನೆ ವನದಲ್ಲಿ ವಿಹರಿಸಿ ಜಲಕೇಳಿಯಾಡಿ, ಬೆಳದಿಂಗಳಲ್ಲಿ ಉಚಿತ ಸಖರೊಡನೆ ನಗರದ ವೇಶ್ಯಾವಾಟಗಳಲ್ಲಿ ಸುತ್ತದಿದ್ದರೆ ತೀರದು; ಅಲ್ಲಿಯ ಸರಸಸಲ್ಲಾಪಗಳನ್ನು ವರ್ಣಿಸಿ, "ಸೊಡರ್ಗುಡಿಗೆಣ್ಣೆಯೆಟೆವಂತೆ ಬೆಲೆವೆಣ್ಗೆ ಕುಡುಪುದು ಹದಕೆ ಚದುರಿಗಂ", "ಇತ್ತೊಡೆ ಬೇಟಂ, ಈಯದೊಡೆ ಕಾಟಂ" ಎಂದು ಮೊದಲಾದ ವಿಟನೀತಿಯನ್ನು ಶ್ರವಣಮಾಡಿಸದಿದ್ದರೆ ಕವಿಗೆ ತೀರದು. ಇದೆಲ್ಲವೂ ಮುಂದೆ ಬರತಕ್ಕ ನಿರ್ವೇದಭಾವಕ್ಕೆ, ಶಾಂತರಸಕ್ಕೆ, ಸವರಣೆಯೆಂದು ಅವನ ಆಶಯವಾಗಿರಬಹುದು. ಆದರೆ, ಓದುವ ಪಾಠಕನಿಗೆ ಇದು ವೈರಾಗ್ಯದ ಕೊತ್ತಳದ ಮೇಲೆ ಮನ್ಮಥನು ನಟ್ಟ ವಿಜಯಪತಾಕೆಯಂತೆ ಕಾಣಿಸುತ್ತದೆ.

ಹೀಗೆ ಜನ್ನನ ಕಾವ್ಯಗಳಲ್ಲಿ—ಮಿಕ್ಕ ಕವಿಗಳ ಕೃತಿಗಳಲ್ಲಿರುವಂತೆಯೇ—ಅಲ್ಲಲ್ಲಿ ಶೃಂಗಾರವು ಲಜ್ಜೆಮೀರಿ ಬೀದಿಗೆ ಬಂದಿರುವುದು ನಿಜ. ಆದರೆ, ಅದರ ಹೃದಯಗ್ರಹಣ ದಲ್ಲಿಯೂ ಅವನಿಗೆ ಅದ್ವಿತೀಯ ಸಾಮರ್ಥ್ಯವುಂಟು. ಸಾಮಾನ್ಯವಾಗಿ ಮಿಕ್ಕ ಕವಿಗಳು

ಕಾಮಕೇಳಿಯನ್ನು ಮಾತ್ರ ಬಲ್ಲರು. ಜನ್ನನಿಗಾದರೆ ಪ್ರೇಮವೈಚಿತ್ರ್ಯವೂ ಅದರ ಗಭೀರತೆ ಭೀಷಣತೆಗಳೂ ಪೂರ್ಣವಾಗಿ ಅನುಭವಕ್ಕೆ ಬಂದಿರತಕ್ಕವು. ರತಿರಹಸ್ಯವನ್ನು ಬಣ್ಣಿಸುವುದಕ್ಕಿಂತಲೂ ಪ್ರಣಯಸಮಸ್ಯೆಯನ್ನು ಬಿಡಿಸುವುದರ ಕಡೆಗೇ ಅವನ ಆಸಕ್ತಿ ಹೆಚ್ಚು. ಅದೇ ಅವನ ವೈಶಿಷ್ಟ್ಯ—ಅವನ ಕಾವ್ಯದ ಸತ್ತ್ವ. ಯಶೋಧರಚರಿತೆ, ಅನಂತನಾಥಪುರಾಣ—ಈ ಎರಡು ಕಾವ್ಯಗಳ ಪ್ರಧಾನವಸ್ತು ಜೈನಪುರಾಣವೂ, ಪರಮರಸವು ಶಾಂತವೂ ಆದರೂ ಒಂದೊಂದರಲ್ಲಿ ಒಂದೊಂದು ಪ್ರಣಯಕಥೆಯನ್ನು ಅವನು ವಿಸ್ತರಿಸಿರುವುದೇ ಇದಕ್ಕೆ ಗುರುತು. ಜನ್ನನು 'ಕವಿಚಕ್ರವರ್ತಿ'ಯೆಂಬ ಬಿರುದನ್ನು ಪಡೆದವನು. 'ಕರ್ಣಾಟಕೃತಿಗೆ ಸೀಮಾಪುರುಷ'ನೆಂದು ಹೊಗಳಿಸಿಕೊಂಡವನು. ಅವನ ಕಾವ್ಯಗಳಲ್ಲಿ—ಮುಖ್ಯವಾಗಿ ರಸದೊರತೆಯಾದ ಯಶೋಧರಚರಿತ್ರೆಯಲ್ಲಿ—ಯಾವ ಭಾಗವನ್ನೂ ರಸಿಕರು ಕಡೆಗಣಿಸುವಂತಿಲ್ಲ. ಆದರೆ ಈ ಪ್ರಣಯ ಕಥೆಗಳ ನಿರೂಪಣೆಯಲ್ಲಿ ವ್ಯಕ್ತವಾಗುವ ಶಕ್ತಿಯೂ ಪ್ರಜ್ಞೆಯೂ ತನ್ಮಯತೆಯೂ ಇದೇ ಧಾಟಿಯಲ್ಲಿ ಇದೇ ಮಟ್ಟದಲ್ಲಿ ಈ ಕಾವ್ಯಗಳ ಮಿಕ್ಕ ಭಾಗಗಳಲ್ಲಿ ಗೋಚರಿಸುವುದು ವಿರಳ. ಯಶೋಧರ ಚರಿತೆಯಲ್ಲಿ ಅಮೃತಮತೀವೃತ್ತಾಂತ, ಅನಂತನಾಥಪುರಾಣದಲ್ಲಿ ಚಂಡಶಾಸನೋಪಾಖ್ಯಾನ ಇವೇ ಆಯಾ ಕಾವ್ಯಗಳ ತಿರುಳೆಂದು ಹೇಳಿದರೆ ತಪ್ಪಾಗಲಾರದು. ಈ ಎರಡು ಕಥೆಗಳಲ್ಲೂ ಜನ್ನನು ಪ್ರಣಯದ ದಾಳಿಯನ್ನು ಅದ್ಭುತ ಕೌಶಲದಿಂದ ವರ್ಣಿಸಿದ್ದಾನೆ. ಈ ಕಥೆಗಳನ್ನು ಅವನು ಹೇಗೆ ಚಿತ್ರಿಸಿರುವನೆಂಬುದನ್ನು ಮೊದಲು ಅರಿತರೆ ಅಲ್ಲಿ ಒಡ್ಡಿರುವ ಪ್ರಣಯ ಸಮಸ್ಯೆಯ ವಿಶಿಷ್ಟತೆಯನ್ನು ಸುಲಭವಾಗಿ ಗ್ರಹಿಸಬಹುದು.

೨

'ಯಶೋಧರಚರಿತೆ'ಯಲ್ಲಿ ಕಥಾನಾಯಕನೂ ಅವನ ತಾಯಿಯೂ ಒಂದು ಮಾನಸಿಕ ಪಾಪದ ಸಲುವಾಗಿ ಹಲವು ಜನ್ಮಗಳನ್ನೆತ್ತಿ ಸಂಸಾರದಲ್ಲಿ ತೊಳಲಿ, ಕಡೆಗೆ ಸದ್ಗುರುಗಳ ಬಳಿ ದೀಕ್ಷೆಗೊಳ್ಳುವರು. ಇದೆಲ್ಲಕ್ಕೂ ಅಮೃತಮತಿಯ ವೃತ್ತಾಂತವೇ ತಳಹದಿ. ಯಶೋಧರನು ಉಜ್ಜಯಿನಿಯ ಅರಸು; ಅಮೃತಮತಿ ಅವನ ಮನಃಪ್ರಿಯೆ. ಒಂದು ರಾತ್ರಿ ಮೇಲುಮಚ್ಚಿನ ಶಯ್ಯಾಗಾರದಲ್ಲಿ ನಲ್ಲನಲ್ಲೆಯರು ಪವಡಿಸಿ, ಅವರ ಕಣ್ಣನ್ನು ನಿದ್ದೆ ಬಿಗಿದಿರುವಾಗ, ಹತ್ತಿರದ ಗಜಶಾಲೆಯಿಂದ ಮಾವುತನೊಬ್ಬನ ಹಾಡು ಸುತ್ತಣ ನಿಶ್ಶಬ್ದತೆಯನ್ನು ಭೇದಿಸಿಕೊಂಡು ಮೇಲಕ್ಕೆ ಏರುವುದು. ಆ ಮಧುರಗಾನಕ್ಕೆ ಅಮೃತಮತಿಯ ನಿದ್ದೆ ಹಾಗೆಯೆ ಮೆಲ್ಲನೆ ತಿಳಿಯುವುದು. ಎಚ್ಚರಗೊಳ್ಳುವ ಮೊದಲೇ ತನ್ನ ಹೃದಯವನ್ನು ಸೋಕಿದ ಆ ಮಧುರಗಾನದ ಸವಿಗೆ ಸೋತು ಆ ರಮಣಿ "ಮುಟ್ಟಿದ ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್." ಮಾವುತನು ಗಾನಾವೇಶದಲ್ಲಿ ರಾಗದ ಮೇಲೆ ರಾಗವನ್ನು ಅಪೂರ್ವಮಧುರವಾಗಿ ಹಾಡುತ್ತಿರಲು, ಕೇಳುತ್ತ ಕೇಳುತ್ತ, ಬೆಳಗಾಗುವುದರೊಳಗೆ ರಾಣಿಗೆ ಆ ಹಾಡುಗಾರನನ್ನು "ನೋಡುವ, ಕೂಡುವ ಚಿಂತೆ ಕಡಲ್ವರಿದುದು." ಒಂದೇ ಒಂದು ಜಾವದಲ್ಲಿ ಹೀಗೆ ಅನಿರೀಕ್ಷಿತವಾಗಿ ಉಕ್ಕಿದ

ಮೋಹವನ್ನು ತಡೆಯಬೇಕೆಂಬ ಪ್ರವೃತ್ತಿಯೇ ಅಮೃತಮತಿಗೆ ಹುಟ್ಟಿದಂತೆ ತೋರುವುದಿಲ್ಲ. ಬೆಳಗಾದ ಕೂಡಲೇ, ಆ ನೂತನ ಪ್ರಿಯನ ಬಳಿಗೆ ತನ್ನ ಆಪ್ತಸಖಿಯನ್ನು ಕಳಿಸುವಳು. ಅವಳು ಆ ಅಷ್ಟವಂಕನ ರೂಪವನ್ನು ಕಾಣುತ್ತಲೇ ಹೇಸಿ, ಅಂಥ ಅಪಾತ್ರನಲ್ಲಿ ಸುರಸುಂದರಿಯಾದ ತನ್ನ ಒಡತಿಯ ಮನಸ್ಸನ್ನು ಸೇರಿಸಿದ ಕಣ್ಣಿಲ್ಲದ ವಿಧಿಯನ್ನು ಹಳಿಯುತ್ತಾ ಹಿಂದಿರುಗುವಳು.

ಅವಳ ದಾರಿಯನ್ನೇ ಅಮೃತಮತಿ ವಿಷಣ್ಣವದನದಿಂದ ಕಾಯುತ್ತಿದ್ದಾಳೆ. ಆಕೆಯ ಅವಸ್ಥೆಯನ್ನು ದೂತಿ ಕಂಡು ಹೊಟ್ಟೆ ಹಿಡಿಯದೆ, "ಇಂತಪ್ಪ ಕಾಮದೇವಂಗೆಂತೆಂ ತಾಯ್ದರಸಿ ಕೂರ್ತೆ!" ಎಂದು ಕಟಕಿ ಮಾತನ್ನಾಡಿದರೂ ಮೇರೆಮೀರಿದ ವ್ಯಾಮೋಹದಿಂದ ಕಂಗೆಟ್ಟ ಅಮೃತಮತಿಗೆ ಅದರ ವ್ಯಂಗ್ಯವೇ ಹೊಳೆಯುವುದಿಲ್ಲ. ತನ್ನ ನಲ್ಲನು ನಿಜವಾಗಿಯೂ ಕಾಮದೇವನೆಂದೇ ಬಗೆದು, "ಹೇಳು, ಹೇಳು; ಪ್ರಿಯನು ಅಂಥ ಚೆಲುವನೆ? ದೂತಿ, ನೀನು ನನ್ನನ್ನು ಕೊಂದೆ!" ಎಂದು ಅಧೀರಳಾಗಿ ನರಳುವಳು. ರಾಣಿಯ ವಿವೇಕವಿಕಲತೆಯನ್ನು ಕಳೆಯಬೇಕೆಂದು, ಆ ಸುಂದರನ ಅಂಗಸೌಷ್ಠವವನ್ನು "ಪಡೆದಲೆ.... ನೊಚಿವಾಯ್....ಬಿಬ್ಬಿಚೆವಲ್....ಪೊಱಂಟ ಬೆನ್...." ಎಂದು ಮೊದಲಾಗಿ ಜುಗುಪ್ಸೆಯ ಎಲ್ಲೆ ಮೀರುವಂತೆ ಕೆಳದಿ ವರ್ಣಿಸುವಳು. ಇಲ್ಲಿ ಅಮೃತಮತಿಯ ಪರಿಸ್ಥಿತಿ ಎಲ್ಲರನ್ನೂ—ಕವಿಯನ್ನು ಕೂಡ—ಮರುಗಿಸುತ್ತದೆ. ಪ್ರಿಯನು ಯಾರೆನ್ನುವು ದನ್ನೂ ಅರಿಯದೆ ಅವನ ದನಿಗೆ ಮರುಳಾಗಿ ಆಕೆ ತನ್ನ ಹೃದಯವನ್ನು ಅರ್ಪಿಸಿದಳು; ಮೋಹಜ್ವರದ ಶಾಂತಿಗಾಗಿ ಧರ್ಮಾಧರ್ಮಗಳನ್ನು ಕೂಡ ಮರೆತು ಅವಳ ಬಳಿಗೆ ದೂತಿಯನ್ನು ಕಳಿಸಿದಳು. ಈಗ ಕೇಳಿದರೆ, ಇನಿಯನ ರೂಪು ಅತಿಘೋರ; ಅದಕ್ಕೆ ಇನ್ನೂ ಕಪ್ಪು ಬಳಿದು ಸಖಿ ವಿಕಾರವಾಗಿ ವರ್ಣಿಸುತ್ತಿದ್ದಾಳೆ. ವಿಧಿ, ಮನ್ಮಥ, ಪ್ರಿಯನ ರೂಪು, ತನ್ನ ದೂತಿ—ಎಲ್ಲರೂ ತನಗೆ ಶತ್ರುಗಳಾದರು. ಇಷ್ಟಾದರೂ ತೆತ್ತ ಮನಸ್ಸನ್ನು ಹಿಂದಿರುಗಿಸಬೇಕೆಂದರೆ ಆಗದು. "ಗರಗರಿಕೆ ಕೊರಲೊಳ್, ಈ ಕ್ಷಣದೊಳ್ ವಾರ್ಬಿಂದು, ಮಿಡುಕು ಎರ್ದೆಯೊಳ್ ಒದವೆ, ಪುಳಿಂದನ ಕಣೆಗಟ್ಟಿನಿಂದ ವನ ಹರಿಣಿ"ಯಂತೆ ಅವಳು ಕೆಳದಿಗೆ ಎದರುರು ನಿಂತು, "ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್!", "ಒಲವಾದೊಡೆ ರೂಪಿನ ಕೋಟಲೆಯೇವುದೊ!" ಎಂದು ಪ್ರೇಮ ಯೋಗದ ಮಹಾಮಂತ್ರಗಳನ್ನು ಅಚಲ ಮನಸ್ಸಿನಿಂದ ಸಾರುವಳು. ಅಷ್ಟವಂಕನೇ ಅವಳಿಗೆ ಈಗ "ಕಾಮದೇವಂ, ಇಂದ್ರಂ, ಚಂದ್ರಂ." ಲಂಚಕೊಟ್ಟು ದೂತಿಯನ್ನು ವಶಪಡಿಸಿಕೊಂಡು, ಅವಳ ಸಹಾಯದಿಂದ ಆ ಮಾವುತನಲ್ಲಿ ನೆರೆಯತೊಡಗುವಳು.

ಆ ಕುರೂಪಿಯ ಸಹವಾಸದಲ್ಲಿ ಅಮೃತಮತಿಗೆ ಮೆಚ್ಚಿಕೆ ಬೆಳೆದಂತೆಲ್ಲಾ ತನ್ನ ಪತಿಯಲ್ಲಿ ಮನಸ್ಸು ಇಳಿಕೆಯಾಯಿತು—"ಬೇವಂ ಮೆಚ್ಚಿದ ಕಾಗೆಗೆ ಮಾವಿಳದಪ್ಪಂತೆ." ಆದರೂ, ಇನ್ನು ತನಗೊಲ್ಲದ ಗಂಡನನ್ನು ತೊರೆದು, ಕಾಮಿಸಿದ ನಲ್ಲನನ್ನು ಪ್ರಕಟವಾಗಿ ಕೂಡುವ ಧೈರ್ಯವಿಲ್ಲ ಅವಳಿಗೆ. ಸಾಮಾನ್ಯ ಜಾರಸ್ತ್ರೀಯಂತೆ ಗುಪ್ತವಾಗಿ ತನ್ನ ಪ್ರಿಯನ ಬಳಿಗೆ ಹೋಗಿ ಬರುತ್ತಿದ್ದಳು. ಆದರೆ ಒಲಿದವರ ಕಣ್ಣು ಬಲುಚುರುಕು. ಅಮೃತಮತಿಯ

ನಡತೆ ಹಿಂದಿನಂತಿಲ್ಲವೆಂದು ಯಶೋಧರನಿಗೆ ಸಂಶಯ ಹುಟ್ಟಿತು. ಅವಳನ್ನು ಪರೀಕ್ಷಿಸಬೇಕೆಂದು ಒಂದು ರಾತ್ರಿ ನಿದ್ದೆ ಬಂದವನಂತೆ ನಟಿಸಿ ಮಲಗಿರಲು, ಆ ಅವಕಾಶವನ್ನೇ ಕಾಯುತ್ತಿದ್ದ ಅರಸಿ ಗಂಡನ "ತೋಳ್ಸೆಜೆಯಿಂ ನುಸುಳ್ದು" ಜಾರನ ಬಳಿಗೆ ಹೊರಟಳು. (ಮೊದಲು ಹೃದಯಪ್ರಿಯನಾಗಿದ್ದವನ ಆಲಿಂಗನವು ಈಗ ತೋಳಸೆರೆಯಾಯಿತು!) ಹಿರಿದ ಕತ್ತಿಯೊಡನೆ ಅರಸನೂ ಪ್ರಚ್ಛನ್ನವಾಗಿ ಅವಳ "ಬೆನ್ನೊಳೆ ಪೋದಂ-ದೋಷದ ಬೆನ್ನೊಳೆ ಸಂಧಿಸುವ ದಂಡದಂತೆ." ಇತ್ತ ಅರಸಿ ತಡಮಾಡಿ ಬಂದದ್ದಕ್ಕೇ ಅಷ್ಟವಂಕನು ಕೋಪಗೊಂಡಿದ್ದಾನೆ. ಅವಳು ಪ್ರೀತಿಯಿಂದ ತಂದ ಕುಸುಮ ತಾಂಬೂಲುಗಳನ್ನು ಒರಟೊರಟಾಗಿ ಕೆದರಿ, ಕುರುಳನ್ನು ಎಳೆದು ಜಗ್ಗಿಸಿ, ತನ್ನ ಚಾವಟಿಯಿಂದ ಅವಳನ್ನು ಬಡಿಯುತ್ತಿದ್ದಾನೆ, ಜಿರಿದ ಕಾಲಿನಿಂದ ಒದೆಯುತ್ತಿದ್ದಾನೆ. ರಸಿಕತೆಯ, ಕೋಮಲತೆಯ ಗಂಧವೇ ಇಲ್ಲದ ಆ ಪಶು ಸುಕುಮಾರಿಯಾದ ತನ್ನನ್ನು ಹೀಗೆ ನಿಷ್ಕಾರಣವಾಗಿ ದಂಡಿಸಿದರೂ ಆ ಘಾತುಕನ ಮೇಲೆ ಅಮೃತಮತಿಗೆ ಕೋಪವೆ? ಅವನ ಕಾಲಮೇಲೆ ದೈನ್ಯದಿಂದ ಬಿದ್ದು, ಇಲ್ಲದ ತಪ್ಪನ್ನು ಒಪ್ಪಿಕೊಂಡು, ಅವನ ಹೊರತು ಮಿಕ್ಕ ಪುರುಷರೆಲ್ಲರೂ—ತನ್ನ ಗಂಡನು ಕೂಡ ಸೋದರಸಮಾನರೆಂದು ನಂಬಿಕೆ ಕೊಡುತ್ತಿದ್ದಾಳೆ. ಅವಳದು ಪಾಪಕರ್ಮವೆಂದರಿತಿದ್ದರೂ ಇಲ್ಲಿ ಅವಳ ಅಶರಣತೆಯನ್ನು ನೋಡಿ ನಮ್ಮ ಕರುಳು ಹಿಂಡುತ್ತದೆ.

ಈ ಕಡೆ, ಮರೆಯಲ್ಲಿ ನಿಂತು ಇದೆಲ್ಲವನ್ನು ನೋಡುತ್ತಿದ್ದ ಯಶೋಧರನ ಮನಸ್ಸು ಹೇಗಾಗಿರಬೇಕು! ಆಗ ಥಟ್ಟನೆ "ಬಾಳ್ ನಿಮಿರ್ದುದು, ತೋಳ್ ತೂಗಿದುದು, ಮನಂ ಕನಲ್ದುದು!" ಇನ್ನೇನು ಕ್ರೋಧಾವೇಶದಲ್ಲಿ ಇಬ್ಬರನ್ನೂ ಸೀಳಿ ಹೋಳು ಮಾಡಿಬಿಡಬೇಕು—ಅಷ್ಟರಲ್ಲಿ ಧೃತಿ ಬಂದು ಕೈತಡೆಯಿತು. ಆ ಹುಳುಕರನ್ನು ಕೊಲ್ಲುವುದಕ್ಕೂ ಅವನು ಹೇಸಿದನು. ಇರಿದ ಮಾತ್ರಕ್ಕೆ ಇವರಿಬ್ಬರ ಮೋಹ ಮುರಿಯುತ್ತದೆಯೆ? ಹೆಣ್ಣು ತಪ್ಪಿ ನಡೆದರೆ ಅವಳನ್ನು ತೊರೆದುಬಿಡುವುದೇ ವಿಜಯ—ಎಂಬ ವಿವೇಕವುದಿಸಿತು. ಹೀಗೆ ಪತ್ನೀತ್ಯಾಗವನ್ನು ನಿಶ್ಚಯಿಸಿ ಯಶೋಧರನು ಅಲ್ಲಿ ನಿಲ್ಲದೆ ಬಂದು ಮುನ್ನಿನಂತೆ ಪವಡಿಸುವನು. ಅಮೃತಮತಿಯೂ ಹಿಂದಿರುಗಿ, ಗಂಡನು ನಿದ್ದೆಹೋಗುತ್ತಿರುವನೆಂದು ಭಾವಿಸಿ, ಸದ್ದಾಗದಂತೆ ಮಂಚವನ್ನೇರಿ ಸ್ವಲ್ಪ ದೂರದಲ್ಲಿ ಮಲಗುವಳು. ಹಿಂದೆ ಯಶೋಧರನಿಗೆ "ಮುಟ್ಟಿದೊಡೆ ಸುಖದ ಸೋಂಕಂ ಪುಟ್ಟಿಸು"ತ್ತಿದ್ದವಳು ಅವಳು; ಈಗ ಅಷ್ಟವಂಕನ "ತೋಳ್ಮುಟ್ಟಿದ" ಮೇಲೆ—ಹುಳಿ ಮುಟ್ಟಿದ ಹಾಲಿನಂತಾದ ಮೇಲೆ— ಅವಳ ಮೈ ತನ್ನ ಬೆನ್ನಿಗೆ ಆಕಸ್ಮಿಕವಾಗಿ ಸೋಕಿದ ಮಾತ್ರಕ್ಕೆ ಕರ್ಕಶಸ್ಪರ್ಶವಾಗುವುದು: ಅವನ ಮನಸ್ಸು ಅಷ್ಟು ಮಾರ್ಪಟ್ಟಿರುವುದು. ಆ ರಾತ್ರಿಯೆಲ್ಲಾ ಅವನು ವಿಕಲ್ಪ ಶತದಲ್ಲಿ ಹೊರಳಾಡಿ, ಇನ್ನು ಒಲಿಸುವ ಒಲಿಯುವ ಮಾತನ್ನು ದೂರ ನೂಕಿ, ಮುಕ್ತಿ ಸಾಧನೆಯೊಂದೇ ತನಗುಳಿದ ಕರ್ತವ್ಯವೆಂದು ನಿರ್ಧರಿಸಿದನು.

ಆದರೆ ವಿಧಿ ಅವನನ್ನು ಮುಕ್ತಿಸಾಧನೆಗೆ ಬಿಡಲೊಲ್ಲದು. ಮರುದಿನ ಬೆಳಗ್ಗೆ ತನ್ನ ತಾಯ ಬಳಿಗೆ ಹೋಗಿ ರಾಣಿಯ ದುರ್ವರ್ತನೆಯನ್ನು ಒಂದು ಕನಸಿನ

ನೆವದಿಂದ ಸೂಚಿಸಲು, ಅವಳು ಅದರ ತಾತ್ಪರ್ಯವನ್ನು ಅರಿತುಕೊಳ್ಳದೆ, ದುಃಸ್ವಪ್ನಶಾಂತಿಗಾಗಿ ಮಾರಿಗೆ ಒಂದು ಬಲಿ ಕೊಡಬೇಕೆಂದು ಹಟ ಹಿಡಿಯುವಳು. ಯಶೋಧರನು ತಾಯ ಇಷ್ಟವನ್ನು ಮೀರಲಾರದೆ, ಜೀವಹಿಂಸೆಗೆ ಮನಸ್ಸು ಬಾರದೆ, ಒಂದು ಹಿಟ್ಟಿನ ಕೋಳಿಯನ್ನು ಬಲಿ ಕೊಡುತ್ತಿರಲು ಅದರೊಳಗೆ ಅಡಗಿದ್ದ ಒಂದು ಬೆಂತರನಿಗೆ ಘಾಸಿಯಾಗುವುದು. ಪಾಪದ ಸಂಕಲ್ಪ ಕೂಡ ಹೀಗೆ ಪರಿಣಮಿಸಿದ್ದರಿಂದ ಉದ್ವೇಗ ಇನ್ನೂ ಹೆಚ್ಚಿ ತಾಯಿಮಕ್ಕಳು ಎಲ್ಲವನ್ನೂ ತ್ಯಜಿಸಿ ತಪಸ್ಸಿಗೆ ಹೊರಡಲು ಅನುವಾಗುವರು. ಆದರೆ ಅಮೃತಮತಿ ಅವರ ಬಳಿಗೆ ಮಾರಿಯಂತೆ ಬರುವಳು. ಈ ವೇಳೆಗೆ ಅವಳು ತುಂಬ ದುಷ್ಟೆಯಾಗಿದ್ದಾಳೆ. ಆ ದಿನ ಬೆಳಗ್ಗೆ ನಡೆದ ಒಂದು ಪ್ರಸಂಗದಿಂದ ತನ್ನ ಗುಟ್ಟೆಲ್ಲವೂ ಗಂಡನಿಗೆ ಬಯಲಾಯಿತೆಂದು ಅರಿತು, ಆ ಅಪಮಾನದ ಸೇಡನ್ನು ತೀರಿಸಿಕೊಳ್ಳಲು ಕಾದಿದ್ದಾಳೆ. ಯಶೋಧರನನ್ನು ಬಿಟ್ಟಿರಲಾರದವಳಂತೆ ಕಪಟ ಭಕ್ತಿಯ ಮಾತನ್ನಾಡಿ, ತಪೋವನಕ್ಕೆ ಹೊರಡುವ ಮೊದಲು ತನ್ನ ಮನೆಯಲ್ಲಿ ಅತ್ತೆಯೂ ಗಂಡನೂ ಆರೋಗಿಸಬೇಕೆಂದು ಬೇಡಿಕೊಳ್ಳುವಳು. ಸಂಸಾರವನ್ನು ತೊರೆಯುವ ವೇಳೆಯಲ್ಲಿ ಕಳೆದ ಕಿಲ್ಬಿಷಗಳ ಸ್ಮರಣೆಯೇಕೆಂದೋ ಏನೋ, ಯಶೋಧರನು "ಮನವಲ್ಲದ ಮನದೊಳೊಡಂಬಟ್ಟು" ತಾಯೊಡನೆ ಬಂದು ಊಟ ಮಾಡುವಾಗ, ಆ ಪಾತಕಿ ಬಡಿಸಿದ ನಂಜಿನ ಲಡ್ಡುಗೆಯನ್ನು ಸವಿದು ಇಬ್ಬರೂ ಮೃತರಾಗುವರು. ಬಳಿಕ ತಮ್ಮ ಮಾನಸಿಕ ಪಾಪದ ಫಲವಾಗಿ ಅವರಿಬ್ಬರೂ ತಿರ್ಯಗ್ಯೋನಿಯಲ್ಲಿ ಆರಾರು ಸಲ ತೊಳಲಬೇಕಾಗುವುದು. ಹಾಗೆ ಜನ್ಮಾಂತರಗಳನ್ನೆತ್ತಿ ದಾಗಲೂ, ಯಶೋಧರನನ್ನು ಪತ್ನೀಸಂಬಂಧದ ಈರ್ಷ್ಯೆ ವ್ಯಥೆಗಳು ಒಂದೆರಡು ಸಲ ಬೆನ್ನಂಟದೆ ಬಿಡುವುದಿಲ್ಲ.

ಇನ್ನು ಅಮೃತಮತಿ ಯಾವ ನಾಚಿಕೆಯೂ ಯಾರ ಅಂಜಿಕೆಯೂ ಇಲ್ಲದೆ ತನ್ನ ಜಾರನೊಡನೆ ಸ್ವೇಚ್ಛೆಯಿಂದ ವಿಹರಿಸುವಳು. ಅವನ ಸಹವಾಸದಿಂದ ಅವಳಿಗೆ ತೊನ್ನು ಬಡಿಯುವುದು; ದೇಹವು ವ್ರಣಮಯವಾಗುವುದು. ಕುತ್ಸಿತವಿಷಯೋಪ ಭೋಗದಲ್ಲಿ ಅವಳಿಗೆ ಆಸೆ ಬಲಿಯುತ್ತಾ ಹೋಗುವುದು. ಸೇವೆಯ ದಾಸಿಯರು ಕೂಡ ಅವಳ ದುಷ್ಕೃತ್ಯಗಳಿಗೂ ದುರ್ಲಾಲಸೆಗಳಿಗೂ ಹೇಸಿ, "ಪಾತಕಿ ಪುಟಿತಲ್ಲದೊಡೇಂ ಸತ್ತಪಳೇ!", "ಇದೇಂ ನಾಯಕ ನರಕಮೀಕೆಗೊಚ್ಚತಮಾಯ್ತೋ!" ಎಂದು ಆಡಿಕೊಳ್ಳು ವರು. ಕಡೆಗೆ ಆ ಪ್ರಕಾರವೇ ಅವಳು ಧೂಮಪ್ರಭೆಯೆಂಬ ಪಂಚಮನರಕಕ್ಕಿಳಿದು ತನ್ನ ಕಥೆಯನ್ನು ಮುಗಿಸುವಳು.

ಸ್ವರ್ಗೀಯ ಸೌಂದರ್ಯವನ್ನೂ ಹೃದಯವಲ್ಲಭನಾದ ಪತಿಯನ್ನೂ ಹೊಂದಿ ದೇವಿಯಂತಿದ್ದ ಅಮೃತಮತಿ ಅದಮ್ಯವಾದ ಮೋಹಕ್ಕೆ ಬಲಿಯಾಗಿ, ಹೇಗೆ ಶೀಲವಳಿದಳು, ಗುಣವಳಿದಳು, ರೂಪವಳಿದಳು, ನಾಯಕನರಕ್ಕಿಳಿದಳು—ಎಂಬುದನ್ನು ಜನ್ನನು ಈ ರೀತಿ ನಿರೂಪಿಸಿದ್ದಾನೆ; ಅವಳ ಅಧೋಗತಿಯ ಹೆಜ್ಜೆಹೆಜ್ಜೆಯನ್ನೂ ಸೂಕ್ಷ್ಮದೃಷ್ಟಿಯಿಂದ, ಅನುಪಮಶಕ್ತಿಯಿಂದ ಚಿತ್ರಿಸಿದ್ದಾನೆ. ಜೊತೆಗೆ ಅವಳ ಗಂಡನಾದ

ಯಶೋಧರನ ಕ್ರೋಧವೂ, ಧೃತಿಯೂ, ವಿತರ್ಕವೂ, ನಿರ್ಧರವೂ, ಅವನ ಮನೋನಿಗ್ರಹವನ್ನೂ ಮೀರಿಬಂದ ಭವಬದ್ಧವಾದ ಈರ್ಷ್ಯೆಯೂ—ಅಷ್ಟೂ ನಮ್ಮ ಕಣ್ಣಿಗೆ ಕಟ್ಟುವಂತೆ ಎತ್ತಿಹಿಡಿದಿದ್ದಾನೆ. ಈ ಕಥಾಂಶವನ್ನು ಗದ್ಯದ ಸಪ್ಪೆ ಮಾತುಗಳಿಂದ ಮೇಲೆ ಸೂಚಿಸಿರುವುದು ಕೇವಲ ಧೃಷ್ಟತನ. ಯಶೋಧರಚರಿತೆಯನ್ನೇ ಮೊದಲಿನಿಂದ ತುದಿಯವರೆಗೆ ಓದಿದರೆ ಮಾತ್ರ ಔಜ್ಜ್ವಲ್ಯವನ್ನೂ ಪರಿಪಾಕವನ್ನೂ ಅರಿಯುವುದು ಸಾಧ್ಯ.

೩

ಇನ್ನು ಅನಂತನಾಥಪುರಾಣದ ಕಡೆಗೆ ತಿರುಗೋಣ. ಯಶೋಧರಚರಿತೆಯಲ್ಲಿ ಮುಖ್ಯ ಕಥೆಯೂ ಅಮೃತಮತಿಯ ಪ್ರಣಯವೃತ್ತಾಂತವೂ ಹಾಸುಹೊಕ್ಕಿನಂತೆ ನೆಯ್ದುಕೊಂಡಿವೆ. ಇಲ್ಲಾದರೆ, ಸುಪ್ರಭೆ–ಪುರುಷೋತ್ತಮರ ಕಥೆ ತೀರ್ಥಂಕರಚರಿತೆಗೆ ಒಂದು ಪರಿಶಿಷ್ಟದಂತೆ ಬರುತ್ತದೆ; ಅನಂತನಾಥಸ್ವಾಮಿ ಸಮವಸರಣಮಂಡಪದಲ್ಲಿ ಗಣಧರರೊಬ್ಬರು ಈ ಕಥೆಯನ್ನು ನಿರೂಪಿಸಿದರೆಂಬುದು ಹೊರತು, ಇದಕ್ಕೂ 'ಅನಂತನಾಥಪುರಾಣ'ಕ್ಕೂ ಯಾವ ಸಂಬಂಧವೂ ಇಲ್ಲ. ತನಗೆ ಮನಸ್ಸಿಲ್ಲದಿದ್ದರೆ ಯಾವ ಆಕ್ಷೇಪಣೆಗೂ ಒಳಗಾಗದೆ ಜನ್ನನು ಈ ಪ್ರಸಂಗವನ್ನು ಕೈಬಿಡಬಹುದಾಗಿದ್ದಿತೇನೋ. ಆದರೆ ಅದು ಸ್ತ್ರೀನಿಮಿತ್ತಕವಾಗಿ ರಸಗರ್ಭಿತವಾಗಿದ್ದುದರಿಂದ ಎತ್ತಿಕೊಂಡು, ಈ ಉಪಾಖ್ಯಾನವನ್ನು ಪ್ರಧಾನ ಕಥೆಗಿಂತಲೂ ಹೆಚ್ಚು ರಮ್ಯವಾಗಿ ವಿಸ್ತರಿಸಿದಂತೆ ತೋರುತ್ತದೆ. ಇಲ್ಲಿ ನಮಗೆ ಪ್ರಕೃತವಾದದ್ದು ಅದರ ಜೀವವಾದ ಚಂಡಶಾಸನ ಪ್ರಣಯ ಕಥೆ.

ಸುರಮ್ಯ ಮಂಡಳದ ಪೌದನಪುರಕ್ಕೆ ವಸುಷೇಣನು ಪ್ರಭು. ಅವನ ರಾಣಿಯವಾಸದ ಹೆಂಡಿರಲ್ಲಿ—ಅಪ್ಸರೆಯರೆಲ್ಲರ ಸೊಬಗನ್ನು ಮೀರಿಸಲು ಒಬ್ಬೊಬ್ಬಳೇ ಸಾಕೆನ್ನಿಸುವ ಐನೂರ್ವರು ಚೆಲುವೆಯರಲ್ಲಿ—ಸುನಂದೆ ವಸುಷೇಣನಿಗೆ ಅಚ್ಚುಮೆಚ್ಚಾದ ಮಹಾದೇವಿ; ಅವಳ ಯೌನಲಾವಣ್ಯಗಳಲ್ಲೇ ಆತನ ಕಣ್ಣುಗಳಿಗೆ ತೃಪ್ತಿ. ಒಂದು ದಿನ ವಸುಷೇಣನು ಗಜಾರೋಹಣವಿನೋದದಲ್ಲಿರುವಾಗ ತನ್ನ ಪ್ರಾಣಮಿತ್ರನಾದ ಚಂಡಶಾಸನನು ತನ್ನನ್ನು ನೋಡಲು ಬರುತ್ತಿದ್ದಾನೆಂದು ಕೇಳಿದನು. ಇಬ್ಬರೂ ಬಾಲ್ಯದಲ್ಲಿ ಒಟ್ಟಿಗೆ ಧೂಳಾಟವಾಡಿದ ಜೊತೆಗಾರರು. ಹಲವು ದಿನಗಳ ಅಗಲಿಕೆಯಿಂದ ನೊಂದು ತನ್ನನ್ನು ನೆನೆದುಕೊಂಡು ಬರುತ್ತಿರುವ ಈ ಗೆಳೆಯನನ್ನು ವಸುಷೇಣನು ಸಂಭ್ರಮದಿಂದ ತನ್ನ ಅರಮನೆಗೆ ಕರೆತರುವನು. ಅವನ ಸಂತೋಷಕ್ಕಾಗಿ ಕಾವ್ಯಗೋಷ್ಠಿಯೇನು, ಗೀತನಾಟ್ಯಗಳೇನು, ಜಟ್ಟಿಕಾಳಗವೇನು, "ವಾಹವಿಳಾಸ ಕಂದುಕಕೇಳಿ" (=ಪೋಲೋ ಆಟ)ಗಳೇನು! ಈ ಆದರ ಎಲ್ಲಿಗೆ ಮುಟ್ಟುವುದೆಂದರೆ, ಮಿತ್ರರಿಬ್ಬರಿಗೂ ಏಕಸದನವಾಸ, ಸಹವಿಳಾಸಕ್ರೀಡೆ, ಸಹಪಂಕ್ತಿಭೋಜನ. ಇಬ್ಬರಿಗೂ ಊಟಕ್ಕೆ ಬಡಿಸುವವಳು ವಸುಷೇಣನ ಪ್ರಿಯತಮೆಯಾದ ಸುನಂದಾ ಮಹಾದೇವಿ.

ಸುನಂದೆ "ಕುಸುಮಕೋದಂಡನ ವಶೀಕರಣಕಾಂಡಂ ಕೀಲ್ಮಸೆಯಿಟ್ಟು ಗಡಿಗಟ್ಟಿ ತಿರ್ದಿ ಬಣ್ಣವಿಟ್ಟಂತೆ" ಒಪ್ಪುವವಳು. ಅವಳ ಅಪೂರ್ವಲಾವಣ್ಯವೂ ವಿಳಾಸಪ್ರೌಢಿಮೆಗಳೂ ಚಂಡಶಾಸನನ ಕಣ್ಣನ್ನು ಕತ್ತಲಿಡಿಸಿ ಬಗೆಯನ್ನು ಸೂರೆಗೊಳ್ಳುವುವು. ಊಟಕ್ಕೆ ಕುಳಿತಾಗ ಸುನಂದೆ ಬಡಿಸುತ್ತಿರಲು ಅವಳ ಅಂಗಾಂಗ ಸೌಂದರ್ಯವನ್ನು ಹತ್ತಿರದಲ್ಲಿ ನೋಡಿ ಭ್ರಮಿಸಿ ಅವನು ತುತ್ತನ್ನು ಕೂಡ ಸರಿಯಾಗಿ ತೆಗೆದುಕೊಳ್ಳಲಾರದೆ ಹೋಗುವನು. ಅವಳಿಗೆ ಇಷ್ಟು ಸಮೀಪದಲ್ಲಿರುತ್ತಿದ್ದರೂ "ಸೋಂಕುವಾಸೆ" ಕೈಗೂಡದೆ, ಅವನ ಮೋಹಜ್ವರವು ದಿನದಿನಕ್ಕೆ ಬೆಳೆದು ಯಾವ ಶೈತ್ಯೋಪಚಾರಕ್ಕೂ ಸಗ್ಗದೆಹೋಗುವುದು; ಕಡೆಗೆ ಮರೆಮಾಜಲು ಕೂಡ ಕಷ್ಟವಾಗುವುದು. ತನ್ನ ನರ್ಮಸಚಿವನಾದ ಸುದರ್ಶನ ನೆಂಬುವನು ಈ ಅವಸ್ಥೆಯನ್ನು ಅರಿತೂ ಅರಿಯದವನಂತೆ ಬೆಸಗೊಳ್ಳಲು, ಚಂಡಶಾಸನನು "ಈ ಕಡುನಂಟನ ಸತಿಯ ರೂಪು ಸೋಲಿಸಿತೆನ್ನಂ" ಎಂದು ರಹಸ್ಯವನ್ನು ಬಿಚ್ಚಿಹೇಳಿ, "ರಮಣೀಲೋಚನ ಚುಂಬನಂ ಕಳೆಗುಮೇ ನಟ್ಟಿರ್ದ ಹೃಚ್ಛಲ್ಯಮಂ" ಎಂದು ಮೊದಲಾಗಿ ಹಂಬಲಿಸುವನು. ಅವನಿಗೆ ವಿವೇಕ ಹೇಳಿ ಮೋಹವನ್ನು ಮುರಿಯುವ ಬದಲು ಈ ಕುಮಿತ್ರನು "ಪರಿವ ಮನಕ್ಕೆ ಪಗ್ಗಮಿಲ್ಲಂ; ನೋಡುವ ಕಣ್ಗಳ್ಗೆಡೆಗಟ್ಟಿಲ್ಲಂ" ಎಂದು ಉತ್ತೇಜನದ ಮಾತನ್ನಾಡುವನು. ಇಷ್ಟಕ್ಕಾದರೂ ನಿಲ್ಲಿಸಿದ್ದರೆ ಚೆನ್ನಾಗುತ್ತಿದ್ದಿತು. ಆದರೆ ಸುನಂದೆಗೂ ಚಂಡಶಾಸನದಲ್ಲಿ ಅನುರಾಗ ವಿಲ್ಲದಿಲ್ಲವೆಂದೂ ಅವನ ಗಂಡಗಾಡಿಗೆ ಸೋಲದ ರಮಣಿ ಯಾರೆಂದೂ ಕೆಲವು ಹುಸಿಯ ದೃಷ್ಟಾಂತಗಳಿಂದ ನಂಬಿಸಿ, ಅವನ "ಮನದ ಪಿಶಾಚಕ್ಕೆ ವಚನರಚನಾ ಧೂಪಮಂ ತೋಱಿ, ವಿರಹವಿಕಾರಮಂ" ಕೆರಳಿಸುವನು. ಚಂಡಶಾಸನನ ನೆಚ್ಚಿನ ಗೆಳೆಯನಾಗಬೇಕೆಂದು ಸ್ವಾರ್ಥತತ್ಪರನಾದ ಸುದರ್ಶನನು ಹೀಗೆ ಮಾಡಿದಂತೆ ತೋರುತ್ತದೆ. ಅಂತೂ ಅವನ ಒತ್ತಾಸೆಯಿಂದ, ಸುನಂದೆಗೂ ತನ್ನಲ್ಲಿ ಅನುರಾಗವುಂಟು; ಆಕೆ ಅದನ್ನು ಗಂಡನೆದುರಿಗೆ ಪ್ರಕಟಿಸಲು ಹಿಂಜರಿಯುತ್ತಿರಬಹುದು—ಎಂದು ಅಳಿನೆಚ್ಚಿಕೆ ಚಂಡಶಾಸನನಿಗೆ ಹುಟ್ಟಿ ಅವನ ವಿರಹವ್ಯಥೆ ಉಲ್ಬಣವಾಗುವುದು.

ಈ ನಡುವೆ, ಒಂದು ದಿನ ವಸುಷೇಣನೂ ಚಂಡಶಾಸನನೂ ಬೇಟೆಯ ವಿನೋದಕ್ಕಾಗಿ ಅರಣ್ಯಕ್ಕೆ ಹೋಗುವರು. ಅಲ್ಲಿ ವನವಿಹಾರ ಮಾಡಬೇಕೆಂದು ವಸುಷೇಣನು ಬಯಸಿ, ಭೋಜನಸಾಮಗ್ರಿಯೊಡನೆ ನಂದನವನಕ್ಕೆ ಬರಬೇಕೆಂದು ಸುನಂದೆಗೆ ಹೇಳಿ ಕಳಿಸುವನು. ಚಂಡಶಾಸನನು ಕಾಯುತ್ತಿದ್ದ ಅವಕಾಶ ಇಂದು ದೊರೆಯಿತು. ಬೇಟೆಯ ರಭಸದಲ್ಲಿ ಅವನು ವಸುಷೇಣನಿಂದ ಬೇರೆಯಾಗಿ, ಆತನ ರಾಣಿ ಬರುವ ದಾರಿಯಲ್ಲೇ ಕಾದಿರುವನು. ಸುನಂದೆ ಮಿತಪರಿವಾರದೊಡನೆ ಪಲ್ಲಕ್ಕಿಯಲ್ಲಿ ಬರುವುದನ್ನು ಕಂಡ ಚಂಡಶಾಸನ ಔತ್ಕಂಠ್ಯ ಹೊಮ್ಮಿ ಹರಿಯುವುದು. ಥಟ್ಟನೆ ಮುಂದುವರಿದು, ತಡೆದ ಅಂಗರಕ್ಷಕರನ್ನು ಕಡಿದು, ಸುನಂದೆಯನ್ನು ಸೆಳೆದು ತನ್ನ ರಥದಲ್ಲಿರಿಸಿಕೊಂಡು ಮನೋವೇಗದಿಂದ ಹೊರಟುಹೋಗುವನು.

ಸುನಂದೆಯ ಸ್ಥಿತಿಯನ್ನು ಕೇಳಬೇಕೆ? ಪತಿಯೊಡನೆ ವನವಿಹಾರ ಮಾಡುವ ಸುಖವನ್ನು ನಿರೀಕ್ಷಿಸಿಕೊಂಡು ಅವಳು ಉಲ್ಲಾಸದಿಂದ ಬರುತ್ತಿದ್ದರೆ, ಏನಾಯಿತೆಂದು

ಅರಿಯುವ ಮೊದಲೇ ಈ ಕಾಮಕಾತರನ, ವಿಶ್ವಾಸಘಾತುಕನ ಬಂದಿಯಾದಳು. ಚಂಡಶಾಸನನಲ್ಲಿ ಸುನಂದೆಗೆ ಎಳ್ಳಷ್ಟೂ ಅನುರಾಗವಿಲ್ಲ. "ಅವಳಿಂದೆ ಪತಿವ್ರತೆಯಿಲ್ಲ ನೋಡ ಲೋಕದೊಳ್." ರಾವಣನು ಕದ್ದೊಯ್ದ ಸೀತೆಯ ಅವಸ್ಥೆ ಅವಳಿಗೊದಗಿತ್ತು.[೨] "ಉರಗಂ ಪಿಡಿದಂತೆ ಬೆದಱೆ" ಮೂರ್ಛೆಹೋದಳು. ಬಳಿಕ ಎಚ್ಚತ್ತು ತನ್ನ ದುರವಸ್ಥೆಯನ್ನರಿತು ಬಾಯಿಬಿಟ್ಟು ಹಲುಬಿದಳು; ಕೂಗಿದಳು; ನಾಡ ಜನಕ್ಕೂ ಧರೆ ಗಿರಿ ದಿಗ್ದೇವಿಯರಿಗೂ ವ್ಯರ್ಥವಾಗಿ ಮೊರೆಯಿಟ್ಟಳು. ಕಡೆಗೆ ಆ ದ್ರೋಹಿಯ ಕಡೆಗೆ ತಿರುಗಿ ಎದೆ ಚುಚ್ಚುವ ಮಾತುಗಳಿಂದ ಅವನನ್ನು ಮೂದಲಿಸಿದಳು. ಆದರೆ ಚಂಡಶಾಸನನು ಅವಕ್ಕೆ ಕಿವಿಗೊಡಲಿಲ್ಲ. ಏಕೆ ಕಿವಿಗೊಡಲಿಲ್ಲವೋ? ಈಕೆ ತನ್ನನ್ನು ಒಲಿದವಳೇ ಅಲ್ಲವೆಂದು ಈಗ ಸ್ಫುಟವಾದರೂ ಅವನಿಗೆ ಏಕೆ ವಿವೇಕ ಬರಲಿಲ್ಲವೋ? ಹೋಗಲಿ. ಅವನು ಕಾಮಕ್ಕೆ ಸೋಲುವುದೇ ಕೊನೆಗೆ ಸಿದ್ಧವೆಂದರೂ, ಈ ಘಳಿಗೆಯಲ್ಲಿ ಅವನ ಹೃದಯದೊಳಗೆ ಮಿತ್ರಧರ್ಮಕ್ಕೂ ಮೋಹಾವೇಶಕ್ಕೂ ಒಂದು ಕ್ಷಣಕಾಲ ಹೋರಾಟವಾದರೂ ನಡೆಯಲಿಲ್ಲವೆ? ಕಥೆಯ ಭರದಲ್ಲಿ ಜನ್ನನು ಅದರ ನಿರೂಪಣೆಯನ್ನು ಮರೆತಿರಬಹುದೆ?—ಅಂತೂ ಹೀಗೆ ಚಂಡಶಾಸನನು ಸುನಂದೆಯನ್ನು ಸಾಗಿಸಿಕೊಂಡು ಹೋಗುತ್ತಿರುವಾಗ ವಸುಷೇಣನ ಗಡಿನಾಡ ಸಾಮಂತನಾದ ಸಿಂಹಚೂಡನೆಂಬ ಕಡುಗಲಿ ಈ ಹೆಣ್ಣ ಮೊರೆಯನ್ನು ಕೇಳಿ ಚಂಡಶಾಸನನನ್ನು ಅಡ್ಡಗಟ್ಟುವನು. ಮಲ್ಲಯುದ್ಧದಲ್ಲಿ ಅವರ ಶಿರಸ್ಸನ್ನು ಚಂಡಶಾಸನನು ಛೇದಿಸಿ, "ಗಾಳಿಗೆ ಗಱೆ ಮೂಡಿದಂತೆ, ಮನಕ್ಕೆ ಮಡವೊಗೆದಂತೆ" ಪಯಣಿಸಿ, ಸುನಂದೆಯೊಡನೆ ತನ್ನ ದುರ್ಗವನ್ನು ಸೇರಿಕೊಳ್ಳುವನು.

ಇತ್ತ ವಸುಷೇಣನು ಬೇಟೆಯನ್ನು ಮುಗಿಸಿಕೊಂಡು ನಂದನವಕ್ಕೆ ಹಿಂದಿರುಗಿ, "ಬಂದಳೆ ದೇವಿ? ಪಂಕ್ತಿಗೆಡೆಮಾಡಿಸಿದಪ್ಪಳೆ? ಚಂಡಶಾಸನಂ ಬಂದನೆ?" ಎಂದು ಗೃಹ ಮರುತ್ತರರನ್ನು ಬೆಸಗೊಳ್ಳುತ್ತಿರುವಾಗ, ಅಲ್ಲಿಗೆ ಆಕ್ರಂದಿಸುತ್ತಾ ಬಂದ ಸುನಂದೆಯ ಸಖಿಯರಲ್ಲಿ ಒಬ್ಬಳ ಬಾಯಿಂದ ನಡೆದ ಅನಾಹುತವನ್ನು ಕೇಳುವನು. ಹೆಣ್ಣಿನ ದೆಸೆಯಿಂದ ಏನೇನು ಅನರ್ಥಗಳಾಗುವುದಿಲ್ಲ! ಸುನಂದೆಗೆ ಆಸೆಪಟ್ಟು ಚಂಡಶಾಸನನು ಮಿತ್ರದ್ರೋಹಿಯಾದನು. ಆ ವಾರ್ತೆ ಕಿವಿಗೆ ಬೀಳುತ್ತಲೆ, ವಸುಷೇಣನಿಗೆ ಅವನಲ್ಲಿದ್ದ ಗಾಢ ಸ್ನೇಹವು ಮಾಯವಾಗಿ, ಪ್ರಾಣಮಿತ್ರನು ಪರಮಶತ್ರುವಾದನು. ರೋಷವ್ಯಥೆಗಳಿಂದ ಕೆರಳಿದ ವಸುಷೇಣನಿಗೆ ಶತ್ರುವನ್ನು ಘಾತಿಸಿ ಪ್ರಿಯತಮೆಯನ್ನು ಬಿಡಿಸಿತಂದ ಹೊರತು ಊಟವೂ ಬೇಡ, ಮಂತ್ರಾಲೋಚನೆಯನ್ನು ಕೂಡ ಧಿಕ್ಕರಿಸಿ "ಮುಂದನಾರಯ್ಯದೆ, ಪಿಂದಂ ಪಾರದೆ" ಆ ವನದಿಂದ ಹಾಗೆಯೇ ದಂಡೆತ್ತಿ ಹೊರಟು ಶತ್ರುವಿನ ದುರ್ಗವನ್ನು

---

೨. ಇನ್ನು ಮುಂದೆ, ಈ ಕಥೆಗೂ 'ರಾಮಾಯಣ'ದ ಕಥೆಗೂ ಹಲವು ಸಾದೃಶ್ಯಗಳು ತೋರಿಬರುತ್ತವೆ. ರಾಮಾಯಣದಿಂದಲೇ ಈ ಭಾವಗಳನ್ನು ಗ್ರಹಿಸಿ ಜನ್ನನು ತನ್ನ ಕಥೆಯನ್ನು ಬೆಳಸಿರಬಹುದು. ವಿಸ್ತರಭಯದಿಂದ ಈ ಅಂಶವನ್ನು ಕುರಿತು ಇಲ್ಲಿ ಪ್ರಸಂಗಿಸಿಲ್ಲ.

ಮುತ್ತುವನು. ಎಲ್ಲ ಕಾರ್ಯಗಳು ಇಲ್ಲಿ ಮಿಂಚಿನ ವೇಗದಿಂದ ನಡೆಯುವುವು. ದುರ್ಗದ ಪ್ರಜೆಗಳು "ಪರವೆಣ್ಣಂ ತಂದನೋ ತಂದನೋ ಪೆಸರ್ಗಿಡೆ ಪೆರ್ಮಾರಿಯಂ" ಎಂದು ಕೂಗಿಕೊಳ್ಳುತ್ತಿರುವಾಗ, ಎರಡು ಪಡೆಗಳಿಗೂ ದಿನವೆಲ್ಲಾ ಘೋರ ಯುದ್ಧ ನಡೆಯುವುದು.

ಅಂದಿನ ಸಂಜೆಯಲ್ಲಿ ಅಪಹಾರತೂರ್ಯಗಳು ಮೊಳಗಿ ಯುದ್ಧ ತಡೆದ ಮೇಲೆ, ಚಂಡಶಾಸನನು ಠೀವಿಯಿಂದ ಅಲಂಕಾರ ಮಾಡಿಕೊಂಡು ಸುನಂದೆಯನ್ನು ಸೆರೆಯಿಟ್ಟಿದ್ದ ಮಣಿಭವನಕ್ಕೆ ಮಹಾವೈಭವದೊಡನೆ ಬರುವನು. ಅವನು ಆಕೆಯನ್ನು ಅಪಹರಿಸಿ ತಂದು ಒಂದು ದಿನ ಮಾತ್ರ ಕಳೆದಿದೆ. ಪ್ರಯಾಣ ಕಾಲದಲ್ಲಿ ಸಿಂಹಚೂಡನ ಕೋಟಲೆಯೊದಗಿತು. ಊರಿಗೆ ತಲುಪುತ್ತಿದ್ದ ಹಾಗೆಯೇ ವಸುಷೇಣನು ಬೆನ್ನಂಟಿ ಬಂದನು. ಈ ದಿನವೆಲ್ಲಾ ಯುದ್ಧದ ತೊಡಕು. ಹೀಗಾಗಿ ಚಂಡಶಾಸನನು ಸುನಂದೆಯೊಡನೆ ಸಲಿಗೆಯಿಂದ ನಾಲ್ಕು ಮಾತನ್ನಾಡಿ, ಅವಳ ಖೇದವನ್ನು ಪರಿಹರಿಸಿ ಒಲಿಸಿಕೊಳ್ಳುವುದಕ್ಕೆ ಅವಕಾಶ ದೊರೆತಿಲ್ಲ. ಈಗ ರಾತ್ರಿ ಬಂದು ಸ್ವಲ್ಪ ಬಿಡುವು ದೊರೆತದ್ದರಿಂದ ಸುನಂದೆಯ ಬಳಿಗೆ ಬಂದು "ಕಾಮಿ ಕಣ್ಣಚಿವನಲ್ತು; ಆಂ ಗಂಡುದೊಟ್ಟು" ಎಂದು ಮೊದಲಾಗಿ ಅನುನಯದ ಮಾತನ್ನಾಡುವನು; ತನ್ನ ವೈಭವದ ಆಸೆ ತೋರಿಸಿ ಅವಳ ಮನಸ್ಸನ್ನು ಸೆಳೆದುಕೊಳ್ಳಲು ಪ್ರಯತ್ನಿಸುವನು. ಆದರೆ ಸುನಂದೆ ಅವನ ಪ್ರಣಯೌತ್ಸುಕ್ಯವನ್ನು ಕಂಡು ಕಿಡಿಕಿಡಿಯಾಗುವಳು; ಅವನ ಸಂಪತ್ತನ್ನು ತುಚ್ಛವಾಗೆಣಿಸುವಳು; "ವಸುಷೇಣನೃಪನೆ ಕೈವಿಡಿದಸುವಿಂಗೊಡೆಯಂ, ಚಿತಾಗ್ನಿಗೊಡೆಯಂ" ಎಂದು ತನ್ನ ದೃಢನಿಶ್ಚಯವನ್ನು ಸಾರುವಳು. ಆದರೆ ಆಕೆ ಎಷ್ಟು ಒಲ್ಲೆನೆಂದರೂ ಇವನ ಮೋಹ ಮಗ್ಗದು. "ಬಿಡೆನಾಂ; ನೀಂ ಸಯೆ ಸಾವೆನಲ್ಲದುಟಿಯೆಂ ನೀನೊಲ್ದೊಡೇನೊಲ್ಲದಿರ್ದೊಡಮೇಂ? ಆನೆರಡಿಲ್ಲದೊಲ್ದೆಂ" ಎಂದು ಅವಳಷ್ಟೇ ನಿರ್ಧರದಿಂದ ಹೇಳುವನು. ತಮಗೆ ಒಲಿಯಲಿ, ಬಿಡಲಿ; ಸೆರೆಗೆ ಒಳಪಟ್ಟಾದರೂ ಅವಳು ತನ್ನ ಮನೆಯಲ್ಲಿದ್ದರೆ ಸಾಕೆಂದು ಹೇಳಿ ಹೊರಟು ಹೋಗುವನು. ಅವನಿಗೆ ಸುನಂದೆಯಲ್ಲಿದ್ದ ಪ್ರಣಯದ ಅಚಲತೆಯೂ ಅನನ್ಯತೆಯೂ ನಮಗೆ ತಿಳಿಯುವುದಕ್ಕೆ ಇದೇ ಮೊದಲು. ಅದು ಸುನಂದೆಯ ನಿಶ್ಚಯವನ್ನು ಕದಲಿಸದಿದ್ದರೂ ನಮ್ಮ ಹೃದಯವನ್ನು ಕರಗಿಸುತ್ತದೆ.

ಆ ರಾತ್ರಿಯೆಲ್ಲಾ ಚಂಡಶಾಸನನು ವಿರಹದಿಂದ ಪರಿತಪಿಸಿ ಕೊನೆಯ ಉಪಾಯವೊಂದನ್ನು ಚಿಂತಿಸುವನು. ಗಂಡನು ಬದುಕಿರುವ ತನಕ ಸುನಂದೆಯ ಆಸೆ ಹಿಂಗಲಾರದು; ಅವನು ಸತ್ತನೆಂದು ತಿಳಿದಮೇಲಾದರೂ ಅವಳ ಛಲ ಸಡಿಲಬಹುದಲ್ಲವೆ? —ಹೀಗೆ ಯೋಚಿಸಿ ಬೆಳಗಾಗುತ್ತಲೆ, ತಾನು ಇರುಳಲ್ಲಿ ಶತ್ರುಸೈನ್ಯವನ್ನು ಮುತ್ತಿ ಧ್ವಂಸಮಾಡಿ ವಸುಷೇಣನನ್ನು ಕೊಂದಂತೆ ದುರ್ಗದಲ್ಲಿ ವಾರ್ತೆ ಹುಟ್ಟಿಸುವನು. ಒಬ್ಬ ಐಂದ್ರಜಾಲಿಕನು ಮಾಯೆಯಿಂದ ನಿರ್ಮಿಸಿದ ವಸುಷೇಣನ ಪಂದಲೆಯನ್ನು ತೆಗೆಯಿಸಿಕೊಂಡು ಸುನಂದೆಯಿದ್ದಲ್ಲಿಗೆ ಬಂದು, "ವಸುಷೇಣನೆ ಪತಿಯೆನಗೆಂದು ಸುನಂದೆ, ಸಿಡಿಲ್ವೆ; ಮಾಟ್ಪಿ ಸೋವಡಿಕೆಯನೀ ಬಸಿವ ತಲೆಗೆ!" ಎಂದು ಅವಳ ಮುಂದೆ ಆ ಮಾಯದ

ತಲೆಯನ್ನು ಹಾಕಿಸುವನು. ತನ್ನ ವಲ್ಲಭನದೇ ಆ ಶಿರಸ್ಸು; ಅದೇ ಮಣಿಮಕುಟ, ಅದೇ ಕೇಯೂರ, ಅದೇ ಹಾರ. ಹೀಗೆ ಬಲ್ಲ ಗುರುತುಗಳನ್ನು ಕಂಡು ತನ್ನ ಪತಿ ತೀರಿಹೋದನೆಂದೇ ಸುನಂದೆ ಭಾವಿಸುವಳು. ಥಟ್ಟನೆ ಒಂದು ಮಾತಿಲ್ಲದೆ, ಒಂದು ಕ್ಷಣ ತಡ ಮಾಡದೆ, ಆಕೆಯ ಪ್ರಾಣ ದೇಹವನ್ನು ಬಿಟ್ಟು ನಡೆಯುವುದು.[೧]

ಚಂಡಶಾಸನನು ತನ್ನ ಮಾಯವನ್ನು ಹೂಡಿದಾಗ ಸುನಂದೆಯ ಮೇಲೆ ಈ ಪರಿಣಾಮವುಂಟಾಗಬಹುದೆಂದು ಕನಸಿನಲ್ಲಿಯೂ ಭಾವಿಸಿರಲಿಲ್ಲ. ತನಗೆ ಅವಳಲ್ಲಿ ಎಷ್ಟು ಗಾಢೋಜ್ಜ್ವಲಪ್ರಣಯವೋ ಅಷ್ಟೇ ಅವಳಿಗೆ ವಸುಷೇಣನಲ್ಲಿರಬಹುದೆಂದು ಅವನ ಮನಸ್ಸಿಗೇ ಬಂದಿರಲಿಲ್ಲ. ತಾನೊಂದು ಬಗೆದರೆ ದೈವವೊಂದು ಬಗೆಯಿತು. ಈ ಅತರ್ಕಿತವಾದ ಪರ್ಯವಸಾನವನ್ನು ಕಂಡು ಅವನ ಶೋಕದ ಹೆಬ್ಬಾಗಿಲು ತೆರೆಯಿತು. ಅವನಿಗೆ ಸುನಂದೆಯ ಮೇಲಿದ್ದ ಮೋಹವು ಕಳಂಕಿತವೆಂಬುದು ನಿಜ; ಆದರೆ ಅದು ನಿಷ್ಕಪಟವೆಂಬುದೂ ಅತ್ಯುತ್ಕಟವೆಂಬುದೂ ಅಷ್ಟೇ ನಿಜ. ಅವಳ ಮರಣದಿಂದ ಇವನು ಉರಿದು ಬೇಯುವನು; ಅವಳ ಶವದ ಮೇಲೆ ಬಂದು ಬಿದ್ದು ಅಪ್ಪಿಕೊಂಡು ಮೂರ್ಛೆ ಹೋಗುವನು; ಬಳಿಕ ಎಚ್ಚತ್ತು "ಬಾಯ್ಮನಿದು ಮೋನದಿನೇಕೆಲೆ ದೇವಿ, ನೀಂ ಮನಂ ನೋಡುವೆ? ಸಾವಿನಿಂ ಸರಸವಾಡುವರೇ?" ಎಂದು "ಬಾಯಟೆದು ಪಟಿಯಿಸಿ", ಜನ್ಮಾಂತರದಲ್ಲಾದರೂ ಅವಳ ನಿತ್ಯಸಂಗವು ದೊರೆಯಬೇಕೆಂದು ಘೋರವ್ರತವೊಂದನ್ನು ನಿಚ್ಚಯಿಸುವನು; ಹೊಗೆಯ ಮಂಟಪದಲ್ಲಿ ಉರಿಯ ಹಾಸಿಗೆಯ ಮೇಲೆ ತನಗೆ ಸುನಂದೆಯೊಡನೆ ಪ್ರಥಮ ಸಮಾಗಮ! "ನೀಂ ಸಯೆ ಸಾವಿನಲ್ಲದುಟಿಯೆಂ" ಎಂದು ಅವಳೆದುರಿಗೆ ಆಡಿದಂತೆಯೇ ಈಗ ಅವಳ ಮೃತದೇಹದೊಡನೆ ತಾನೂ ಚಿತೆಯೇರಿ ಪ್ರಾಣ ಬಿಡಬೇಕೆಂದು ಅವನ ಅಂತ್ಯಸಂಕಲ್ಪ—ಗಂಡನು ಸತ್ತಾಗ ಹೆಂಡತಿ ಸಹಗಮನ ಮಾಡಿದ ಪ್ರಸಂಗಗಳು ನಮಗೆ ಅಪರಿಚಿತವಲ್ಲ; ಹಿಂದಿನ ಕಾಲದಲ್ಲಿ ಅವು ಬಹು ಪ್ರಚುರವಾಗಿದ್ದವು. ಆದರೆ ಪ್ರಿಯೆ ತೀರಿಹೋಗಲು—ಅವಳು ತನ್ನ ಪತ್ನಿಯಲ್ಲ, ತನ್ನನ್ನೊಲಿದವಳು ಕೂಡ ಅಲ್ಲ—ಗಂಡಸು ಸಹಗಮನ ಮಾಡುವುದು ನಮ್ಮ ಪ್ರಪಂಚಕ್ಕೇ ಹೊಸದು; ಸಾಹಿತ್ಯದಲ್ಲೆಲ್ಲಾ ಜನ್ನನ ಕಲ್ಪನೆಗೆ ಮಾತ್ರ ನಿಲುಕಿದ್ದು. ಆದರೆ ಇದು ಅಷ್ಟು ಅಸಂಭವವೆ? ಮೋಹವು ಸ್ತ್ರೀಪುರುಷಭೇದವನ್ನು ಲೆಕ್ಕಿಸುತ್ತದೆಯೆ? ಅದು ಉಲ್ಬಣವಾದಾಗ ಏನೇನು ವೈಚಿತ್ರ್ಯಗಳನ್ನು ನಡೆಯಿಸದು!

---

೧. ರಾವಣನು ಸೀತೆಯೆದುರಿಗೆ ರಾಮನ ಮಾಯಾಶಿರಸ್ಸು ಧನುಸ್ಸುಗಳನ್ನು ತಂದು ಹಾಕಿಸಿದ ಸನ್ನಿವೇಶವು (ಯುದ್ಧಕಾಂಡ, xxxi-xxxiv) ಇಲ್ಲಿ ಸಹಜವಾಗಿ ನೆನಪಿಗೆ ಬರುತ್ತದೆ. ಆದರೂ ಜನ್ನನು ಉದ್ದೇಶಪೂರ್ವಕವಾಗಿ ಒಂದು ವ್ಯತ್ಯಾಸವನ್ನು ಕಲ್ಪಿಸಿರುವಂತೆ ತೋರುತ್ತದೆ. ಸೀತೆ ಮಾಯಾಶಿರಸ್ಸನ್ನು ನೋಡಿ ಹಲುಬಿ ಮೂರ್ಛೆಹೋದರೂ ಮತ್ತೆ ಎಚ್ಚರಗೊಳ್ಳುವಳು. ತನ್ನನ್ನೂ ಕೊಂದುಬಿಡೆಂದು ರಾವಣನನ್ನು ಕೇಳಿಕೊಳ್ಳುವಳೇ ಹೊರತು ಪ್ರಾಣವನ್ನು ತೊರೆಯಲಾರಳು. ಸುನಂದೆಯ ಪ್ರಾಣ ಥಟ್ಟನೆ ಹೊರಟು ಹೋಯಿತೆಂದು ಹೇಳಿ, ಸೀತೆಗೂ ಅವಳು ಮಿಗಿಲೆಂದು ಸೂಚಿಸುವುದು ಜನ್ನನ ಆಶಯವಾಗಿರಬಹುದು.

ಹೀಗೆ ಚಂಡಶಾಸನನು ಸುನಂದೆಯನ್ನು ಹಿಂಬಾಲಿಸುವ ನಿಶ್ಚಯ ಮಾಡಿದರೆ ಇತ್ತ ಅವನ ರಾಣಿಯರು ಅವನನ್ನು ಹಿಂಬಾಲಿಸಲು ನಿಶ್ಚಯಿಸುವರು. ತಾವು ಅವನ ನೆರಳಂತೆ ಇರತಕ್ಕವರು; ತಮಗೇಕೆ ಅವನ ಪಾಪದ ಮಾತು—ಎಂದು ಈ ಪ್ರಮದೆಯರು ಸಹಗಮನಕ್ಕೆ ಅನುವಾಗುವರು. ಈ ರೀತಿ, "ಮಾವಿಂಗೆ ಮಲ್ಲಿಗೆಗಳ್ ಕೂರ್ತೊಡೆ ಮಾವು ಕೂರ್ತಂದು ವಸಂತಶ್ರೀಗೆ"—ಆ ವಸಂತಶ್ರೀಯೋ ಮತ್ತೊಬ್ಬನಿಗೆ ಕೂರ್ತು ಪ್ರಾಣ ಬಿಟ್ಟವಳು!

ಸಹಗಮನದ ಸಂರಂಭದಲ್ಲಿ ದುರ್ಗವು ಹೀಗೆ "ಕರುಣಾದ್ಭುತ ರೌದ್ರರಸಾಕರ"ವಾಗಿರಲು, ಅದಕ್ಕೆ ಲಗ್ಗೆ ಹತ್ತಬೇಕೆಂದು ಹೊರಟಿದ್ದ ವಸುಷೇಣನಿಗೆ ಈ ವಾರ್ತೆ ಮುಟ್ಟುವುದು. ಅದನ್ನು ಕೇಳಿ ಸ್ತಂಭಿತನಾಗಿ—ಇನಿಯಳು ಹೋದ ಬಳಿಕ ತಾನು "ಅಸು ಪೋದ ಬಾಜ್ವೆಣ"ನ ಹಾಗೆ; ಇನ್ನು ಯಾವ ನಲ್ಲೆಗಾಗಿ ಕಾದಬೇಕು, ಯಾವ ಶತ್ರುವನ್ನು ಕೊಲ್ಲಬೇಕು ಎಂದು ಭಾವಿಸಿ ಅವನು ನಿರ್ವೇಗದಿಂದ ತಪಸ್ಸಿಗೆ ನಡೆಯುವನು. ಇಲ್ಲಿ ಪ್ರಿಯೆಯ ಮರಣದಿಂದ ಚಂಡಶಾಸನ ವಸುಷೇಣರ ಮೇಲಾದ ಪರಿಣಾಮವು ಸಹಜವಾಗಿ ಭಿನ್ನವಾಗಿದೆ. ಚಂಡಶಾಸನನದು ಉತ್ಕಟವ್ಯಾಮೋಹ. ಬದುಕಿದ್ದಾಗ ಪ್ರಿಯೆಯ ಸುಖದ ಗಣನೆಯಿಲ್ಲ; ಅವಳು ಸತ್ತಾಗ ತನ್ನ ದೇಹದ ಗಣನೆಯಿಲ್ಲ. ವಸುಷೇಣನ ಪ್ರೇಮವೂ ಅತಿಗಾಢವಾಗಿದ್ದರೂ ಅದರಲ್ಲಿ ಈ ರಾಜಸ ಅಂಶವಿಲ್ಲ. ಪ್ರಿಯಾವಿಯೋಗವು ಅವನನ್ನು ದಹಿಸಿದರೂ, ಬಾಳಿನಲ್ಲಿ ಬೇಸರ ಹುಟ್ಟಿಸಿದರೂ ಅವನ ನಿರ್ವೇಗವು ರೌದ್ರಮರಣದಲ್ಲಿ ಮುಗಿಯದೆ, ಉಜ್ಜ್ವಲ ತಪಸ್ಸಿನಲ್ಲಿ ಮುಗಿಯುವುದು. ಚಂಡಶಾಸನನ ಪ್ರಣಯ ಧಗ್ಗನುರಿದು ಸಿಕ್ಕಿದ್ದನ್ನೆಲ್ಲಾ ಭಸ್ಮಮಾಡುವ ಮಹಾಜ್ವಾಲೆಯಂತೆ; ವಸುಷೇಣನದು ಸ್ತಿಮಿತವಾದ ಪ್ರದೀಪ ಪ್ರಭೆಯಂತೆ.

ಚಂಡಶಾಸನನು ಸಹಗಮನಕ್ಕೆ ಅನುವಾಗುತ್ತಿದ್ದ ಮಾತನ್ನು ಅಷ್ಟಕ್ಕೇ ಬಿಟ್ಟು, ಮುಂದೆಲ್ಲಾ ವಸುಷೇಣನ ಜನ್ಮಾಂತರಗಳ ಕಥೆಯನ್ನೇ ಜನ್ನನು ಬೆಳಸಿದ್ದಾನೆ. ಸಹಗಮನ ನಡೆಯಿತೆಂದು ಅವನು ಬಾಯಿಬಿಟ್ಟು ಹೇಳದೇ ಇದ್ದರೂ ಅದನ್ನು ನಾವೇ ಊಹಿಸಿಕೊಂಡು,—ಪುನರ್ಜನ್ಮದಲ್ಲಾದರೂ ಚಂಡಶಾಸನನ ಪ್ರಣಯ ಈಡೇರಿತೆ? ಸುನಂದೆಯ ಗತಿ ಹೇಗೆ? ವಸುಷೇಣನಿಗೂ ಅವಳಿಗೂ ಚಂಡಶಾಸನನಿಗೂ ಅವಳಿಗೂ ಮುಂದೆ ಯಾವ ಸಂಬಂಧವೊದಗಿತು?—ಇವೇ ಮೊದಲಾದ ಅಂಶಗಳನ್ನು ತಿಳಿಯಲು ತವಕಪಡುತ್ತಿರುತ್ತೇವೆ. ಆದರೆ ಇದೊಂದಕ್ಕೂ ಜನ್ನನು ಉತ್ತರವನ್ನು ಕೊಡುವುದಿಲ್ಲ, ಸ್ತ್ರೀ ನಿಮಿತ್ತವಾದ ಬದ್ಧವೈರವು ಬೇರೊಂದು ರೂಪದಲ್ಲಿ ಜನ್ಮಾಂತರಕ್ಕೂ ಬೆನ್ನಂಟಿಬಂದು, ಪುರುಷೋತ್ತಮ-ವಾಸುದೇವನಾಗಿ ಅವತರಿಸಿದ್ದ ವಸುಷೇಣನ ಕೈಯಿಂದ ಮಧುಕೈಟಭ ದಾನವನಾಗಿ ಹುಟ್ಟಿದ್ದ ಚಂಡಶಾಸನನನ್ನು ಸಂಹಾರಗೊಳಿಸಿತೆಂಬುದೊಂದೇ ಮುಂದಿನ ಕಥೆಯಲ್ಲಿ ಹೊರಪಡುವ ಪ್ರಕೃತಾಂಶ. ಇದೂ ಕೂಡ ಜನ್ನನ ನಿರೂಪಣೆಯಲ್ಲಿ ಪ್ರಧಾನವಾಗಿಲ್ಲ.

ಇಷ್ಟಾದರೂ, ಈ ಉಪಾಖ್ಯಾನದಲ್ಲಿ ಸುನಂದೆ ಚಂಡಶಾಸನರೇ ಮುಖ್ಯ ಪಾತ್ರಗಳು. ಅವರ ಪ್ರಣಯಪ್ರಸಂಗವನ್ನು ವರ್ಣಿಸುವುದರಲ್ಲೇ, ಅವರ ಸ್ವಭಾವವನ್ನು ಚಿತ್ರಿಸುವುದರಲ್ಲೇ, ಜನ್ನನಿಗೆ ಹೆಚ್ಚು ಆಸಕ್ತಿ. ಪಾತಿವ್ರತ್ಯದ ಅಚಲಸ್ತಂಭವನ್ನು ಬಿಗಿಹಿಡಿದು ಅದರಡಿಯಲ್ಲಿ ಪ್ರಾಣವೊಪ್ಪಿಸುವ ಸುನಂದೆ; ಅಲಭ್ಯಳಾದ ಅವಳನ್ನು ಬಯಸಿ, ಮಿತ್ರದ್ರೋಹದಿಂದ ಮೊದಲು ಪಾತಕರ ಕ್ರೋಧಕ್ಕೆ ಈಡಾಗಿ, ಬಳಿಕ ತನ್ನ ಕಲುಷಿತ ಪ್ರಣಯದ ಸತ್ತ್ವದಿಂದಲೇ, ತನ್ನನ್ನು ಧಿಕ್ಕರಿಸಿದ ಪ್ರಿಯೆಯ ಚಿತೆಯನ್ನೇರುವ ಲೋಕವಿಲಕ್ಷಣ ವರ್ತನೆಯಿಂದಲೇ ಪಾತಕರ ಅನುಕಂಪವನ್ನು ಗಳಿಸುವ ಚಂಡಶಾಸನ! ಇವರಿಬ್ಬರೂ ಕನ್ನಡ ಸಾಹಿತ್ಯದಲ್ಲಿ ಚಿರಂಜೀವಿಗಳು.

೪

ಯಶೋಧರಚರಿತೆಯಲ್ಲಿ ಅಮೃತಮತಿಯ ಕಥೆಯನ್ನು ನಿರೂಪಿಸಿ, ಸುಮಾರು ಇಪ್ಪತ್ತು ವರ್ಷಗಳು ಕಳೆದಮೇಲೆ, ಜನ್ನನು ಅನಂತನಾಥಪುರಾಣದಲ್ಲಿ ಚಂಡಶಾಸನನ ಕಥೆಯನ್ನು ರಚಿಸಿದನು. ಒಂದಕ್ಕೊಂದಕ್ಕಿಷ್ಟು ದೀರ್ಘವಾದ ಅಂತರವಿದ್ದರೂ—ಹರೆಯದ ಹುರುಪಿನಲ್ಲಿ ಬರೆದ ಯಶೋಧರ ಚರಿತೆಯ ಉಜ್ಜ್ವಲತೆಯೂ ಸಾಂದ್ರತೆಯೂ ನಿರಂತರ ರಸಧಾರೆಯೂ ಇಳಿವಯಸ್ಸಿನಲ್ಲಿ ಬರೆದ ಅನಂತನಾಥಪುರಾಣದಲ್ಲಿ ಸ್ವಾಭಾವಿಕವಾಗಿಯೇ ಕುಂಠಿತವಾಗಿದ್ದರೂ—ಈ ಎರಡು ಪ್ರಣಯಕಥೆಗಳಿಗೂ ವಿಶೇಷ ಸಾಮ್ಯವುಂಟು. ಇಪ್ಪತ್ತು ವರ್ಷಗಳು ಹರಿದು ಜನ್ನನ ಶಕ್ತಿಯನ್ನು ಕುಂದಿಸಿರಬಹುದೇ ಹೊರತು ಅವನ ದೃಷ್ಟಿಯನ್ನು ಹೊರಳಿಸಿಲ್ಲ. ಈ ಎರಡು ಕಥೆಗಳಲ್ಲೂ ವಸ್ತು ಒಂದೇ: ದುರ್ಭರವಾದ ದುರಂತವಾದ ಅಧಾರ್ಮಿಕ ಪ್ರಣಯ. ಇದರ ಬಗೆಯೂ ಗತಿಯೂ ಕೊನೆಯೂ ಎರಡರಲ್ಲೂ ಒಂದೇ ಪ್ರಕಾರವಾಗಿದೆ. ಅಮೃತಮತಿಗೆ ಅಷ್ಟವಂಕನಲ್ಲೂ ಚಂಡಶಾಸನನಿಗೆ ಸುನಂದೆಯಲ್ಲೂ ವ್ಯಾಮೋಹವು ಪಾತ್ರವಿವೇಚನೆಯಿಲ್ಲದೆ ಅತರ್ಕಿಕವಾಗಿ ಉದಿಸಿತು; ಕ್ಷಿಪ್ರದಲ್ಲಿಯೇ ಹಬ್ಬಿ ಅವರ ವಿವೇಕವನ್ನು ಮುಸುಕಿತು; ಪಾಪಪಂಕದಲ್ಲಿ ಕಾಲಿಡಿಸಿ ಆಳಕ್ಕೆ ತುಳಿಯಿತು; ಸಾವಿನ ಗಡಿಗೂ ಅಲ್ಲಿಂದಾಚೆಗೂ ಅವರನ್ನು ಬೆನ್ನಂಟಿತು. ಎರಡು ಕಡೆಗಳಲ್ಲೂ ನಮಗೆ ಕಾಣಿಸುವುದು ಇದೇ ಘೋರ ವಿಚಿತ್ರ

ಈ ಅಧಾರ್ಮಿಕ ಪ್ರಣಯವು ಚಾಪಲ್ಯದಿಂದ ಹುಟ್ಟಿ ಔದಾಸೀನ್ಯದಲ್ಲಿ ಪರಿಣಮಿಸುವ ಕ್ಷಣಿಕ ಕಾಮವಲ್ಲ; ಇದು ಗೃಹಸ್ಥಧರ್ಮಕ್ಕೇ ಕುಠಾರರೂಪವಾದ ಆಜೀವ ವ್ಯಾಮೋಹ. ಅಷ್ಟವಂಕನನ್ನು ಬಯಸಿ ಅಮೃತಮತಿ ತನ್ನ ಪಾತಿವ್ರತ್ಯವನ್ನು ಸೂರೆಮಾಡುವಳು; ಮೆಚ್ಚಿ ನಂಬಿದ ಪತಿಗೆ ದ್ರೋಹವನ್ನಾಚರಿಸಿ, ಕಡೆಗೆ ಆತನ ಪ್ರಾಣವನ್ನು ಕೂಡ ತೆಗೆಯುವಳು. ಸುನಂದೆಯನ್ನು ಕಾಮಿಸಿ ಚಂಡಶಾಸನನು ಅತಿಥಿ ಧರ್ಮವನ್ನೂ ಮಿತ್ರಧರ್ಮವನ್ನೂ ಉಲ್ಲಂಘಿಸುವನು; ತನ್ನ ನೆಚ್ಚಿನ ಗೆಳೆಯನ ಸಂಸಾರವನ್ನು ಒಡೆಯುವನು; ತಾನು ಒಲಿದವಳ ಮರಣಕ್ಕೇ ಕಡೆಗೆ ಕಾರಣವಾಗುವನು. ಹೀಗೆ ಒಂದೊಂದು ಪಾತ್ರದಲ್ಲೂ ವ್ಯಾಮೋಹವು ಮಹಾನರ್ಥಕ್ಕೆ ಬೀಜವಾಗುವುದು.

ಅದರ ದೆಸೆಯಿಂದ ವ್ಯಕ್ತಿಯ ಶೀಲವೂ ಗುಣವೂ ಕೆಡುತ್ತಾ ಹೆಜ್ಜೆ ಹೆಜ್ಜೆಗೂ ಅಧೋಗತಿಯಾಗುವುದು. ಅಮೃತಮತಿ ಮೊದಲು ಹೇಗಿದ್ದಳು! ಈ ಮೋಹದ ದೆಸೆಯಿಂದ ಕಡೆಗೆ ಯಾವ ಅಕಾರ್ಯಕ್ಕೂ ಹೇಸದ ಕಲ್ಲೆದೆಯ ಪಾಪಿಯಾಗುವಳು. ಚಂಡಶಾಸನನು ಕೂಡ ಕಳವು, ಕೊಲೆ, ಮೋಸ ಇದೊಂದಕ್ಕೂ ಹಿಂಜರಿಯದೆ ಹೋಗುವನು. ಈಪ್ಸಿತಸಾಧನೆಯ ಒಂದೇ ಗುರಿಯನ್ನು ಹಿಡಿದ ಈ ವ್ಯಕ್ತಿಗಳಿಂದ ನಿಷ್ಕಳಂಕರಾದವರಿಗೂ ಬಾಧೆ ತಟ್ಟುವುದು. ಯಶೋಧರನಿಗೂ ಅವನ ತಾಯಿಗೂ ಒದಗಿದ ಕ್ಲೇಶವನ್ನೂ ಭವಪರಿಭ್ರಮಣವನ್ನೂ ನೋಡಿ ಚಂಡಶಾಸನನಿಂದ ವಸುಷೇಣನಿಗೂ ಸುನಂದೆಗೂ ಒದಗಿದ ದುಃಖ ಪರಂಪರೆಯನ್ನು ನೋಡಿ.

ಆದರೆ ಇಷ್ಟು ಅನಾಹುತಕ್ಕೆಲ್ಲಾ ಈ ವ್ಯಕ್ತಿಗಳು ಮಾತ್ರವೇ ಕಾರಣವೆಂದೂ, ಅವರ ದುಷ್ಪ್ರವೃತ್ತಿಯೊಂದೇ ಹೊಣೆಯೆಂದೂ ಹೇಳಲಾಗುವುದಿಲ್ಲ. ವಿಧಿ ಮೊದಲು ಇಬ್ಬರಿಗೂ ಕಣ್ಣುಕಟ್ಟಿ ಮೋಹದ ಮಡುವಿನೊಳಕ್ಕೆ ನೂಕುತ್ತಾನೆ. ತಳಕ್ಕೆ ಸೆಳೆಯುತ್ತಿರುವ ಸುಳಿಯನ್ನು ಅಡ್ಡಗಟ್ಟಿ ದಡಕ್ಕೆ ಈಜಿಕೊಂಡು ಬನ್ನಿರೆನ್ನುತ್ತಾನೆ. ಇಂದ್ರಿಯದಮನದ ಬಗೆಯನ್ನರಿಯದೆ, ಆ ಪ್ರವೃತ್ತಿಗೇ ಅವಕಾಶ ದೊರೆಯದೆ, ಈ ವ್ಯಕ್ತಿಗಳು ಮುಳುಗಿ ಹೋಗುತ್ತಾರೆ. ಮಾವುತನ ಅತಿಮಧುರವಾದ ಗಾಯನದ ಮೂಲಕವೇ ವ್ಯಾಮೋಹ ವಿಷವು ಅಮೃತಮತಿಯ ಹೃದಯನ್ನು ಸೇರಬೇಕೆ! ಆ ಸಮಯದಲ್ಲಿ ಅವಳು ಮನಸ್ಸನ್ನು ಬಿಗಿಹಿಡಿಯಲಿಲ್ಲವೆಂದು ದಂಡಿಸುವ ಅಧಿಕಾರ ಯಾರಿಗುಂಟು? ವಸುಷೇಣನ ಮನೆಯಲ್ಲಿ ಅತಿಸಲಿಗೆ ದೊರೆಯದಿದ್ದರೆ, ಸುದರ್ಶನಹತಕನ ಕುಮಂತ್ರವು ಉದ್ರೇಕಿಸ ದಿದ್ದರೆ ಚಂಡಶಾಸನನ ಅನುರಾಗವೂ ಹದಮೀರುತ್ತಿರಲಿಲ್ಲವೇನೋ?

ಇಷ್ಟರಮೇಲೆ, ಈ ವ್ಯಕ್ತಿಗಳ ಪ್ರಣಯೋನ್ಮಾದದಲ್ಲಿಯೇ ಮಂದಚೇತನರ ಆಕ್ಷೇಪಣೆಗಳನ್ನು ನಿವಾರಿಸುವ ಒಂದು ಔಜ್ಜ್ವಲ್ಯವಿದೆ. ಅಮೃತಮತಿಗಾಗಲಿ ಚಂಡ ಶಾಸನನಿಗಾಗಲಿ ಪ್ರೇಮವು ಒಂದು ವಿನೋದರೂಪದಲ್ಲಿ, ಕ್ಷಣಿಕಲಾಲಸೆಯ ರೂಪದಲ್ಲಿ ಮೃದುಗತಿಯಿಂದ ಬರಲಿಲ್ಲ; ಮೃತ್ಯುವಿನ ಕಠಾರಿಯಂತೆ ಅವರ ಹೃದಯವನ್ನು ಇರಿದು ಹೊಕ್ಕಿತ್ತು. ಒಲವಿನ ಹುಚ್ಚು ಹಿಡಿದ ಅವರು ಪಟ್ಟ ಕೋಟಲೆಯನ್ನೂ ಬೆಂದ ಬೇಗೆಯನ್ನೂ ಅನುಭವಿಸಿ ಬಲ್ಲವರು ಮಾತ್ರ ಅವರಿಗೆ ಮನೋನಿಗ್ರಹವಿರಲಿಲ್ಲವೆಂದು ಆಕ್ಷೇಪಿಸಲಿ. ಇನ್ನೊಂದು ವಿಷಯ. ಈ ಪ್ರಣಯ ಇಷ್ಟು ಉಗ್ರವಾಗಿದ್ದುದರಿಂದಲೇ ಇಷ್ಟು ಸ್ಥಿರವೂ ಆಯಿತು. ಅವರ ಮಿಕ್ಕ ದುರ್ವ್ಯಾಪಾರಗಳನ್ನು ಖಂಡಿಸಿದರೂ ಈ ಸ್ಥೈರ್ಯವನ್ನು ನಾವು ಮೆಚ್ಚಬೇಕಲ್ಲವೇ? ಹುಳಿತು ನಾರುತ್ತಿದ್ದರೂ ಅಷ್ಟವಂಕನೇ ತನಗೆ ಕಾಮದೇವನೆಂದು ಕೊನೆತನಕ ಭಾವಿಸಿದ ಅಮೃತಮತಿಯ ಅಭಿರುಚಿಗೆ ನಾವು ಜಿಗುಪ್ಸೆಪಟ್ಟರೂ ಅವಳ ಸ್ಥಿರವಾದ ಅನನ್ಯವಾದ ಪ್ರಣಯಕ್ಕೆ ತಲೆದೂಗಬೇಕಲ್ಲವೆ? ಚಂಡಶಾಸನನು, "ಆನೆರಡಿಲ್ಲದೊಲ್ದೆಂ; ಅದಱೆಂ ಬೇಱಾರ ಬೇಟಕ್ಕೆ ಬಾಯ್ವಿಡಲಾಱೆಂ" ಎಂದು ಹೇಳುವುದಿರಲಿ; ಅವನ ಲೋಕಾತೀತವಾದ ಸಹಗಮನವೊಂದೇ ಅವನ ಸರ್ವದ್ರೋಹಗಳಿಗೂ ಅರೆಮರೆಯ ಮುಸುಕಿಕ್ಕುತ್ತದೆ.

ಅಮೃತಮತಿ—ಚಂಡಶಾಸನರ ಪ್ರಣಯಸರಣಿಗೆ ಈ ರೀತಿಯಾಗಿ ನಿಕಟ ಸಾಮ್ಯವಿದ್ದರೂ ಒಂದು ಕಥೆ ಮತ್ತೊಂದರ ಪಡಿಯಚ್ಚಲ್ಲ. ಯಶೋಧರನ ಚರಿತ್ರೆ ಸಂಪ್ರದಾಯಬದ್ಧವಾಗಿದ್ದುದರಿಂದ ಅದರಲ್ಲಿ ಹೆಚ್ಚು ವ್ಯತ್ಯಾಸಗಳನ್ನು ಮಾಡಲು ಜನ್ನನಿಗೆ ಅವಕಾಶವಿರಲಿಲ್ಲ. ಆದರೆ ಆಧಾರಗ್ರಂಥಗಳಲ್ಲಿ[೪] ಹೆಸರನ್ನು ಮಾತ್ರ ಕಾಣಿಸಿದ್ದ ಚಂಡಶಾಸನನ ವಿಷಯದಲ್ಲಿ ಸ್ವಾತಂತ್ರ್ಯವಹಿಸಿ, ಮೂಲಸೂತ್ರವು ಸ್ಫುಟವಾಗುವಂತೆಯೂ ವೈವಿಧ್ಯಕ್ಕೆ ಭಂಗಬಾರದಂತೆಯೂ ಕಥೆ ಕಟ್ಟಿದನು. ಕಥಾವಿಷಯ ಒಂದೇ ಆದರೂ, ಯಶೋಧರಚರಿತೆಯಲ್ಲಿ ಅದು ಸ್ತ್ರೀಯ ವ್ಯಾಮೋಹ, ಅನಂತನಾಥಪುರಾಣದಲ್ಲಿ ಪುರುಷನ ವ್ಯಾಮೋಹ. ಇಲ್ಲಿ ವ್ಯಾಮೋಹದ ವಿಷವಾಹಿನಿ ಒಂದೇ ಹೊಳೆಯ ಎರಡು ಕವಲುಗಳಂತೆ ಎರಡು ಕಡೆಗಳಲ್ಲೂ ಎರಡು ರೂಪಾಗಿ ಹರಿಯುತ್ತದೆ. ಅದು ಹೆಣ್ಣುಗಂಡೆಂಬ ಭೇದವನ್ನರಿಯದ ಸರ್ವಗ್ರಾಸಿ. ಅದಕ್ಕೆ ರೂಪ ಗುಣ ಪಕ್ಷಪಾತವೂ ಇಲ್ಲ. ಚಂಡಶಾಸನನು ಮೋಹಿಸಿದ್ದು ಸುನಂದೆಯ ದಿವ್ಯ ಸೌಂದರ್ಯ ಪ್ರೌಢಿಮೆಗಳಾದರೆ ಅಮೃತಮತಿಗೆ ಅಷ್ಟವಂತನ ಘೋರ ರೂಪವೂ ಪಶುಸ್ವಭಾವವೂ ಪ್ರಿಯವಾಗುತ್ತವೆ; "ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್!" ಇಷ್ಟೇ ಅಲ್ಲ; ಈ ಪ್ರೇಮ ಉದಿಸುವಾಗ ಪ್ರಿಯವಸ್ತುವಿನ ಮನೋಭಾವವನ್ನು ಕೂಡ ಗಣಿಸುವುದಿಲ್ಲ. ಅಷ್ಟವಂಕನಿಗೆ ಅಮೃತಮತಿಯ ಮೇಲಿದ್ದುದು ಪ್ರೇಮವೋ ಕೇವಲ ಕಾಮವೋ ತಿಳಿಯದು; ಆದರೂ ಅವನು ಪ್ರತಿಪ್ರೇಮವನ್ನು ಅವಳಿಗೆ ಸಲ್ಲಿಸುತ್ತಿದ್ದನೆಂದೇ ಭಾವಿಸೋಣ. ಸುನಂದೆಗೆ ಚಂಡಶಾಸನದಲ್ಲಿ ಅನುರಾಗದ ಸೆಲೆಯಾದರೂ ಇದ್ದಿತೆ? ಅದರ ಅಭಾವದಿಂದ ಚಂಡಶಾಸನನ ಪ್ರಣಯಾಗ್ನಿ ನಂದುವ ಬದಲು ಇನ್ನೂ ಪ್ರಜ್ವಲಿಸಿತಲ್ಲವೆ?

ಸೂಕ್ಷ್ಮಾಂಶಗಳಲ್ಲೂ ಸಾಮ್ಯವೈಷಮ್ಯಗಳನ್ನು ಜೊತೆಗೊಳಿಸಿ ಕಥೆಗಳನ್ನು ಜನ್ನನು ರಚಿಸಿರುವುದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಅಮೃತಮತಿಯ ಕೆಳದಿ ಅಷ್ಟವಂಕನ ಹುಚ್ಚನ್ನು ಅವಳಿಗೆ ಬಿಡಿಸಲು ಎಷ್ಟೋ ಪ್ರಯತ್ನ ಮಾಡುವಳು; ಸುದರ್ಶನನು ಇಲ್ಲದ ನೆಚ್ಚಿಕೆಯನ್ನು ಚಂಡಶಾಸನನಿಗೆ ಹುಟ್ಟಿಸಿ ಅವನ ಮೋಹವನ್ನು ಕೆರಳಿಸುವನು. ಎರಡು ಕಡೆಗಳಲ್ಲೂ ಪರಿಣಾಮವೇನೋ ಒಂದೇ. ಅಮೃತಮತಿಯದು

---

೪. ಕನ್ನಡದಲ್ಲಿ ಮಿಕ್ಕ ಜೈನಪುರಾಣಗಳಿರುವಂತೆಯೇ ಅನಂತನಾಥಪುರಾಣಕ್ಕೂ ಸಂಸ್ಕೃತದ 'ಮಹಾಪುರಾಣ'ವೂ ಅದನ್ನು ಅನುಸರಿಸಿ ಬರೆದ ಕನ್ನಡ 'ಚಾವುಂಡರಾಯ ಪುರಾಣ'ವೂ ಆಧಾರ ಗ್ರಂಥಗಳೆಂದು ತೋರುತ್ತದೆ. (ಅನಂತನಾಥನ ಚರಿತ್ರೆಯನ್ನು ಪ್ರತ್ಯೇಕವಾಗಿ ಯಾವ ಸಂಸ್ಕೃತ ಕವಿಯಾದರೂ ವಿಸ್ತರಿಸಿ ಬರೆದಿದ್ದಾನೇನೋ ತಿಳಿಯದು). ಇವುಗಳಲ್ಲಿ, ನಮಗೆ ಪ್ರಕೃತವಾದ ಪ್ರಣಯಕಥೆ ಬಹು ಸಂಕ್ಷಿಪ್ತವಾಗಿ ಬಂದಿದೆ; ಉದಾಹರಣೆಗೆ, ಮಹಾಪುರಾಣದಲ್ಲಿ ಐದಾರು ಶ್ಲೋಕಗಳಲ್ಲಿ ಮುಗಿದುಹೋಗಿದೆ. ಜನ್ನನು ಈ ಶುಷ್ಕ ಸೂಚನೆಗೆ ಜೀವತುಂಬಿ ವಿಸ್ತರಿಸಿ ಮಾರ್ಪಡಿಸಿ ರಸಮಯವಾದ ಕಥೆಯನ್ನು ಕಲ್ಪಿಸಿದ್ದಾನೆ. ಯಶೋಧರಚರಿತೆಗಾದರೆ ವಾದಿರಾಜಕವಿಯ ಸಂಸ್ಕೃತ 'ಯಶೋಧರ ಕಾವ್ಯ'ದ ಪೂರ್ಣಾಧಾರವಿದ್ದಿತು. ಅಲ್ಲಿಯ ನಿರೂಪಣೆಯನ್ನೇ ಜನ್ನನು ಅನುಸರಿಸಿ, ಅಲ್ಲಿಯ ಸೊಗಸುಗಳಲ್ಲಿ ಹಲವನ್ನು ಸ್ವೀಕರಿಸಿದ್ದಾನೆ.

ಪತಿದ್ರೋಹವಾದರೆ, ಚಂಡಶಾಸನನದು ಮಿತ್ರದ್ರೋಹ. ಅದರ ಫಲವಾಗಿ ಯಶೋಧರನಿಗೂ ವಸುಷೇಣನಿಗೂ ಒಂದೇ ಬಗೆಯ ನಿರ್ವೇದವೊದಗಿ ಇಬ್ಬರೂ ತಪಸ್ಸಿನ ಕಡೆ ತಿರುಗುವರು; ಆದರೆ ಯಶೋಧರನ ಉದ್ದೇಶ ಮಾತ್ರ ಅಮೃತಮತಿಯ ಕೊಲೆಪಾತಕತನದಿಂದ ಸಾಗುವುದಿಲ್ಲ. ಹಾಗೆ ನೋಡಿದರೆ, ಅಮೃತಮತಿಯ ಪಾತಕವೇ ಚಂಡಶಾಸನನ ಪಾತಕಕ್ಕಿಂತ ಘೋರತರ. ಚಂಡಶಾಸನನ ಸಹಗಮನವು ಅವನ ದುಷ್ಕೃತ್ಯಗಳಿಗೆ ಒಂದು ಬಗೆಯ ಪ್ರಾಯಶ್ಚಿತ್ತವೆನ್ನಬಹುದು. ಆದ್ದರಿಂದಲೇ ಮೊದಮೊದಲು ಅವನಲ್ಲಿ ನಮಗಿದ್ದ ಕ್ರೋಧ ಮಾಸಿ, ಅನುಕಂಪ ಮೂಡುವುದು. ಅಮೃತಮತಿ ಮಾತ್ರ ನಮ್ಮ ಮೊದಲಿನ ಸಹಾನುಭೂತಿಯನ್ನು ಪೂರ್ಣವಾಗಿ ಕಳೆದುಕೊಂಡು ಕೊನೆಗಾಲದಲ್ಲಿ ಕೇವಲ ಜಿಗುಪ್ಸೆಗೆ ಗುರಿಯಾಗುವಳು—ಹೀಗೆ ಕಥಾಂಶಗಳನ್ನು ಕುಶಲತೆಯಿಂದ ಬೇರ್ಪಡಿಸಿಕೊಂಡಿರುವುದರಿಂದ ಜನ್ನನ ಕೃತಿಗಳೆರಡೂ ಒಂದೇ ಮೂಲತತ್ತ್ವವನ್ನವಲಂಬಿಸಿದರೂ ಪುನರುಕ್ತಿಯಿಂದ ಬೇಸರಪಡಿಸದೆ, ಒಂದೇ ವಸ್ತುವಿನ ಭಿನ್ನಮುಖಗಳಂತೆ ಕಾಣಿಸಿ ಒಂದಕ್ಕೊಂದು ಪೂರಕವಾಗುವುವು.

ಈ ಎರಡು ಕಾವ್ಯಗಳಲ್ಲೂ ಜನ್ನನ ಮನಸ್ಸು ಏಕರೀತಿಯ ದುರಂತ ಪಾತ್ರಗಳ ಕಡೆಗೆ ಏಕೆ ಒಲೆಯಿತು? ಸಮಾಜವ್ಯವಸ್ಥೆಯ ತಳಹದಿಯನ್ನು ಭೇದಿಸುವ, ನೀತಿಧರ್ಮಗಳ ಕಟ್ಟನ್ನು ಹರಿದುಬಿಡುವ, ಈ ಕಲುಷಿತ ಪ್ರೇಮವನ್ನೇ ಏಕೆ ನಿರೂಪಿಸಿದನು? ಆಲಂಕಾರಿಕರ ಮತದಂತೆ ಈ ವಿಧದ ಶೃಂಗಾರವು ರಸವಾಗುವುದಿಲ್ಲ. 'ರಸಾಭಾಸ'ವಾಗುತ್ತದೆ[೫] ಎಂದು ಅವನಿಗೆ ತಿಳಿದೇ ಇರಬೇಕಲ್ಲವೆ? ಹಾಗಾದರೂ, "ಜಾರ ಚೋರ ವೀರರ ಕಥೆ"ಯನ್ನು ತಾನೇ ಉಪಹಾಸ ಮಾಡಿದ್ದನ್ನು ಮರೆತಾದರೂ, ಇದನ್ನೇ ಏಕೆ ಪ್ರತಿಪಾದಿಸಿದನು? ಜನ್ನನು ಮನಸ್ಸು ಮಾಡಿದ್ದರೆ, ಸಾಮಾನ್ಯ ಕವಿಗಳು ಕಾಮಸೂತ್ರದಿಂದ ಕಲಿತು ನಿರೂಪಿಸುವ ಆಳವರಿಯದ ಜೀವವೃಕ್ಷದ ರತಿಯನ್ನೂ, ನೀತಿಸಂಪನ್ನವಾದ 'ಗೃಹಾಶ್ರಮವ್ರತ'ವನ್ನೂ ವರ್ಣಿಸಬಹುದಾಗಿತ್ತು. ಆದರೆ ಕವಿಸಮಯಬದ್ಧವಾದ ಲೆಕ್ಕಾಚಾರದ ವಿರಹವೇದನ ಸಮಾಗಮಸೌಖ್ಯಗಳ ಆ ಏಕನಾದವೆಲ್ಲಿ, ಅದಮ್ಯ ಮೋಹದ ಚಂಡಮಾರುತ ಭರ್ರನೆದ್ದು ಕಟ್ಟುತಡೆಗಳನ್ನುರುಳಿಸಿ ಜೀವಿಗಳನ್ನು ತರಗೆಲೆಯಂತೆ ಸುಳಿ ಸುತ್ತಿಸಿ ಮೊರೆಯುತ್ತಿರುವ ಈ ಭೀಷಣ ನಾದವೆಲ್ಲಿ! ಜೀವನವಿರುವುದು ಇಲ್ಲಿ; ಜೀವನದ ರಹಸ್ಯವಿರುವುದು ಇಲ್ಲಿ; ಜೀವನದ ಸಮಸ್ಯೆಯಿರುವುದು ಇಲ್ಲಿ; ಮೋಹ ಹುಟ್ಟುವಾಗ ಕುಲಪದವಿಗಳನ್ನು ನೋಡುವುದಿಲ್ಲ; ಪಾತ್ರಾಪಾತ್ರಗಳನ್ನು ಲೆಕ್ಕಿಸುವುದಿಲ್ಲ. ಒಂದು ದಿಕ್ಕಿಗೆ ಹರಿಯತೊಡಗಿದರೆ, ಅದಕ್ಕೆ

೫. 'ರಸಾಭಾಸ' ಎಂದರೆ ರಸಭಂಗವಲ್ಲ. ಅದು ರಸದಂತೆ ತೋರುವ, ಆದರೆ ಶಾಸ್ತ್ರೋಕ್ತವಾದ ರಸದಷ್ಟು ಪರಿಪೂರ್ಣವೆನಿಸದ, ಕಾವ್ಯಾನುಭವ. ಶೃಂಗಾರ, ವೀರ ಮೊದಲಾದ ಪ್ರತಿಯೊಂದು ರಸಕ್ಕೂ 'ಆಭಾಸ'ಗಳುಂಟು. ಉದಾಹರಣೆಗೆ, ಗಂಡು ಹೆಣ್ಣುಗಳಲ್ಲಿ ಅನುರಾಗವು ಪರಸ್ಪರವಾಗಿ ಉದಿಸದೆ ಏಕಪಕ್ಷೀಯವಾಗಿ ಹೊಮ್ಮಿದರೆ, ಹೆಣ್ಣಿಗೆ ಹಲವರಲ್ಲಿ ಆಸಕ್ತಿ ಹುಟ್ಟಿದರೆ, ಶೃಂಗಾರಾಭಾಸವಾಗುತ್ತದೆ; ಬೇರೆಯ ಬಗೆಗಳೂ ಉಂಟು.

ಲಜ್ಜೆಯ ಸೋಂಕಿಲ್ಲ, ನೀತಿಯ ಕಟ್ಟಿಲ್ಲ, ಪಾಪಪುಣ್ಯಗಳ ಹಂಗಿಲ್ಲ. ಇದು ಹೀಗಾಗುವುದು ಏಕೆ? ಇಲ್ಲಿ ವಿಧಿಯ ಕ್ರೌರ್ಯವೆಷ್ಟು, ಮಾನವನ ದೌರ್ಬಲ್ಯವೆಷ್ಟು? ಹೀಗೆ ತುಂಬಿದ ಸಂಸಾರಗಳು ಒಡೆದು ದಿವ್ಯಮೂರ್ತಿಗಳು ಮಣ್ಣಿನಲ್ಲಿ ಕೆಡೆದು ಪುಡಿಯಾಗುವುದಕ್ಕೆ ಯಾರು ಯಾರು ಎಷ್ಟೆಷ್ಟು ಹೊಣೆ? ಇದೇ ಸಮಸ್ಯೆ. ಕವಿಗೂ ಹರಿಯದು. ಆದರೆ ಜೀವನದಲ್ಲಿ ಇದರ ವ್ಯಾಪನೆಯನ್ನು ನೋಡಿಯೂ— ಒಂದು ವೇಳೆ ತನಗೂ ಅದರ ಕಡೆಸೆರಗಾದರೂ ಸೋಕಿಯೂ—ಅವನು ಹೇಗೆ ಕಣ್ಣು ಮುಚ್ಚಿ ಕುಳಿತಾನು; ರಹಸ್ಯವನ್ನು ಭೇದಿಸಲಾಗಿದ್ದರೆ ಸಮಸ್ಯೆಯನ್ನಾದರೂ ಸಹೃದಯರ ಮನಸ್ಸಿಗೆ ಮುಟ್ಟಿಸದೆ ಹೇಗೆ ನಿಂತಾನು;

> ಮನಸಿಜನ ಮಾಯೆ ವಿಧಿವಿಳ-
> ಸನದ ನೆರಂಬಡೆಯ ಕೊಂದು ಕೂಗದೆ ನರರಂ

ಎಂಬ ಶೋಕವಿಸ್ಮಯದ ನುಡಿಯನ್ನು ಹೇಗೆ ಹೊರಗೆಡಹದಿದ್ದಾನು!

ಕಾವ್ಯ ಸಮೀಕ್ಷೆ : ೧೯೪೭

ಮಹಾದೇವಿಯಕ್ಕನ ಕೆಲವು ವಚನಗಳು*

"ಅಂದಂದಿನುಚಿತಕ್ಕೆ ಗೀತಮಂ ಪಾಡುತುಂ"
—ಹರಿಹರ : 'ಮಹಾದೇವಿಯಕ್ಕನ ರಗಳೆ', vii. ೨೦೦

೧

ಕ್ರಿ.ಶ. ಹನ್ನೆರಡನೆಯ ಶತಮಾನದ ವೀರಶೈವ ತಾರಾಗಣದಲ್ಲಿ ಮಹಾದೇವಿಯಕ್ಕನ ಅಪೂರ್ವಕಾಂತಿ ಯಾರ ಕಣ್ಣನ್ನಾದರೂ ಸೆಳೆಯುತ್ತದೆ. ಬಸವಣ್ಣ ಅಲ್ಲಮಪ್ರಭುಗಳಂಥ ಪ್ರಥಮಶ್ರೇಣಿಯ ಜ್ಯೋತಿಗಳೊಡನೆ ಹೋಲಿಸಿದಾಗ ಕೂಡ ಆಕೆಯ ವರ್ಚಸ್ಸು ಕುಂದುವುದಿಲ್ಲ. ಎಳಹರೆಯದಲ್ಲೇ ಸಂಸಾರದ ತೊಡರನ್ನು ಹರಿದು, ಎಲ್ಲ ಬಗೆಯ ಅಭಿಮಾನವನ್ನೂ ತೊರೆದು, ಚೆನ್ನಮಲ್ಲಿಕಾರ್ಜುನದೇವನ ಹಂಬಲೊಂದನ್ನೇ ಹೃದಯದಲ್ಲಿ ತುಂಬಿಕೊಂಡು ಅವನನ್ನು ಅರಸುತ್ತಾ ಹೊರಟ ಈ ತೇಜಸ್ವಿನಿಯ ಏಕನಿಷ್ಠೆ ಹಿರಿಯ ಅನುಭಾವಿಗಳನ್ನೇ ಬೆರಗುಗೊಳಿಸಿತು. ಈ ಏರು ಜವ್ವನದ ವಿರಕ್ತೆಯನ್ನು ಅವರು ಪರೀಕ್ಷಿಸಿ ಗೌರವಿಸಿದರು ; ಹಿರಿಯ ತಿಳಿವನ್ನೂ ಅನುಭವವನ್ನೂ ಸೂಸುವ ಈ ಕಿರಿಯಳ ವಚನಗಳನ್ನು ಆಲಿಸಿ ಕೊಂಡಾಡಿದರು. ಅಂದು ವೀರಶೈವರ ಮನನ ಮಂತ್ರವಾಗಿ ಪರಿಣಮಿಸಿದ ಅವಳ ವಚನಗಳು ಇಂದು ಜಾತಿಮತಗಳ ಎಲ್ಲೆಯನ್ನು ದಾಟಿ ಎಲ್ಲ ಕನ್ನಡಿಗರ ಹೃದಯವನ್ನೂ ಸೂರೆಗೊಂಡಿವೆ. ಅವುಗಳ ಕಾವ್ಯ

* ಪ್ರಬುದ್ಧ ಕರ್ನಾಟಕ ೨೩.೩.

ಸಂಪತ್ತೂ ಅವುಗಳಲ್ಲಿ ವ್ಯಕ್ತವಾಗುವ ಮಹಾದೇವಿಯ ಮೂರ್ತಿಸ್ವರೂಪವೂ ಕನ್ನಡ ಸಾಹಿತ್ಯಕ್ಕೆ ಭೂಷಣವಾಗಿ ನಿಂತಿವೆ.

ವೀರಶೈವ ಶರಣರ ವಚನಗಳನ್ನು ಒಟ್ಟಿನಮೇಲೆ ಎರಡು ರಾಶಿಯಾಗಿ ವಿಂಗಡಿಸಬಹುದು. ತಾವು ಕಂಡ ಅಥವಾ ತಿಳಿದ ತತ್ತ್ವವನ್ನು ಉಪದೇಶಿಸುವುದನ್ನೇ ಮುಖ್ಯೋದ್ದೇಶವಾಗಿಟ್ಟುಕೊಂಡು ಅದಕ್ಕೆ ಯಾವ ಬಗೆಯ ಸವಿಯನ್ನೂ ಕೂಡಿಸದೆ ರಚಿಸಿದ ವಚನಗಳು ಒಂದು ಗುಂಪಾಗುತ್ತವೆ. ಇವುಗಳಲ್ಲಿ ವಚನಕಾರರ ಗಮನವೆಲ್ಲಾ ಧರ್ಮದ ಕಡೆಗೆ, ಆಚಾರದ ಕಡೆಗೆ. ಅದು ಶ್ರೋತೃಗಳಿಗೆ ಗೊತ್ತಾದರೆ ಅವರ ಉದ್ದೇಶ ತೀರಿತು. ಮಾತು ಶುಷ್ಕವಾದರೆ, ನಿರೂಪಣೆಯ ಕ್ರಮ ನೀರಸವಾದರೂ ಅವರಿಗೆ ಲಕ್ಷ್ಯವಿಲ್ಲ. ಇಂಥ ರಚನೆಗೆ 'ವಚನಶಾಸ್ತ್ರ' ಎಂಬ ಹೆಸರು ಸರಿಯಾಗಿ ಒಪ್ಪುತ್ತದೆ. ಧರ್ಮದ ದೃಷ್ಟಿಯಿಂದ ಈ ವಚನಗಳಿಗೆ ಪ್ರಾಮುಖ್ಯವಿರುವುದೇನೋ ನಿಜ; ಆದರೆ ರಸಾಪೇಕ್ಷಿಗಳ ಹೃದಯವನ್ನು ಇವು ಆಕರ್ಷಿಸಲಾರವು.

ಎರಡನೆಯ ಗುಂಪಿನ ವಚನಗಳು ಸಂಖ್ಯೆಯಲ್ಲಿ ಅಷ್ಟೊಂದಿಲ್ಲ. ಆದರೆ ಸಾಹಿತಿಯ ದೃಷ್ಟಿಯಲ್ಲಿ ಅವುಗಳ ಬೆಲೆ ಬಲುಹಿರಿದು. ವಚನವಾಙ್ಮಯಕ್ಕೆ ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನವನ್ನು ಗಳಿಸಿಕೊಟ್ಟಿರತಕ್ಕವು ಇವು. ಇವುಗಳಲ್ಲೂ ತತ್ತ್ವವಿದೆ, ನೀತಿಯಿದೆ, ವೀರಶೈವಧರ್ಮದ ಸಾರವಿದೆ. ಆದರೆ ಇವು ಬುದ್ಧಿವ್ಯವಸಾಯದಿಂದ ಹೊರಬಿದ್ದ ವಚನಗಳಲ್ಲ. ಇವು ಹೊಮ್ಮಿರುವುದು ಹೃದಯದ ಆಳದಿಂದ, ಅನುಭವದ ಅರಳಾಗಿ. ಒಂದೊಂದು ವಚನವೂ ಸಾಧಕನು ಅನುಭವಿಸಿದ ಯಾವುದೋ ಒಂದು ನೋವಿನಿಂದ, ನಲವಿನಿಂದ, ಹಂಬಲಿನಿಂದ, ಹಾರೈಕೆಯಿಂದ ಜೀವಗೊಂಡು ಮಿಡಿಯುತ್ತಿರುತ್ತದೆ. ಭಕ್ತಿ, ಜ್ಞಾನ, ವೈರಾಗ್ಯ; ಯಾವುದೇ ಅದರ ವಿಷಯವಾಗಿರಲಿ, ವಚನಕಾರನ ಹೃದಯ ರಸದಲ್ಲಿ ಅದ್ದಿ ತೆಗೆದಿರುವುದರಿಂದ, ನಿಜವಾಗಿ ಅದೊಂದು ಬಿಡಿಕವನ—'ಮುಕ್ತಕ.' ಶರಣನು ತನ್ನ ಜೀವನದ ಒಂದು ವಿಶಿಷ್ಟ ಘಟನೆಯಿಂದ, ವಿಶಿಷ್ಟ ಸನ್ನಿವೇಶದಿಂದ ಆವೇಶಗೊಂಡು ಹಾಡಿರತಕ್ಕ ವಚನಗಳೂ ಉಂಟು. ಇವುಗಳಲ್ಲೆಲ್ಲಾ ಅವನ ವ್ಯಕ್ತಿತ್ವ ಮುದ್ರೆ ಒತ್ತಿಯೇ ಇರುತ್ತದೆ; ಅವನ ಜೀವನದ ಸಂಗತಿಗಳು ಅಲ್ಲಲ್ಲಿ ತಲೆಹಾಕಿರುವುದೂ ಅಸಂಭವವಲ್ಲ. ಸಾಹಿತಿ ಸವಿಯಲು ಬಯಸುವುದು ಇಂಥ ವಚನಾಮೃತವನ್ನು. ಬಸವಣ್ಣನ ವಚನಗಳ ಸ್ವಾರಸ್ಯವನ್ನು ಅರಿತವರಿಗೆ ಈ ವಿಷಯವನ್ನು ವಿಸ್ತಾರವಾಗಿ ಪ್ರತಿಪಾದಿಸ ಬೇಕಾಗಿಲ್ಲ.

ವಚನಕಾರರಲ್ಲಿ ಬಸವಣ್ಣನ ಗುಂಪಿಗೇ ಮಹಾದೇವಿಯಕ್ಕನು ಸೇರುತ್ತಾಳೆ. ತತ್ತ್ವಿಕ ಪ್ರಧಾನವಾದ ವಚನಗಳನ್ನು ಈಕೆ ರಚಿಸಿಲ್ಲವೆಂದಲ್ಲ; 'ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತವನ್ನೊಳಗೊಂಡು ದೊರೆಯುವ ವಚನಗಳಲ್ಲಿ ಈ ವರ್ಗಕ್ಕೆ ಸೇರತಕ್ಕವೂ ಉಂಟು. ಆದರೆ ಅವಳ ವಚನಗಳ ಬಹುಭಾಗ ನಿಜವಾಗಿಯೂ ರಸಾರ್ದ್ರವಾದದ್ದು; ಉಪಮಾನಗಳಿಂದ, ಚಿತ್ರಕಲ್ಪನೆಗಳಿಂದ ಮನೋಹರವಾಗಿರತಕ್ಕದ್ದು; ಅವಳದು ಕವಿಯ

ಹೃದಯ, ಕವಿಯ ಕಣ್ಣು ಎಂಬುದನ್ನು ಸಾರತಕ್ಕದ್ದು. ಇದರ ಸೊಗಸನ್ನು ಕಂಡವರಿಗೆ ಇಂಥ ಇನ್ನಷ್ಟನ್ನು ಓದಬೇಕೆಂಬ ಆಶೆ ಅತಿಶಯವಾಗಿ ಹುಟ್ಟುತ್ತದೆ.

ಆದರೆ ಮಹಾದೇವಿಯಕ್ಕನ ವಚನಗಳನ್ನೆಲ್ಲಾ ಒಟ್ಟುಗೂಡಿಸಿದ ಪುರಾತನ ಸಂಕಲನ ಯಾವುದೂ ಇದುವರೆಗೆ ದೊರೆತಿಲ್ಲ. ರಾವ್‌ಬಹದ್ದೂರ್ ಶ್ರೀಮಾನ್ ಪಿ.ಜಿ. ಹಳಕಟ್ಟಿಯವರು "೧೨ ವಚನಸಂಗ್ರಹಗಳೊಳಗಿನ ವಚನಗಳನ್ನು ಬೇರೆ ತೆಗೆದು" ಒಂದು ಕ್ರಮದಲ್ಲಿ ಜೋಡಿಸಿ 'ಮಹಾದೇವಿ ಅಕ್ಕನ ವಚನಗಳು' ಎಂಬ ಹೆಸರಿನಿಂದ ಪ್ರಸಿದ್ಧಿಪಡಿಸಿದ್ದಾರೆ. ಮೊದಲನೆಯ ಆವೃತ್ತಿ ಅಚ್ಚಾದದ್ದು ೧೯೨೬ರಲ್ಲಿ. ಅಲ್ಲಿಂದೀಚೆಗೆ ಯಾವ ವ್ಯತ್ಯಾಸಗಳೂ ಇಲ್ಲದೆ ಅದೇ ಪುನಃ ಮುದ್ರಿತವಾಗುತ್ತಿದೆ. ಶ್ರೀಮಾನ್ ಹಳಕಟ್ಟಿಯವರು ಹೆಚ್ಚಿನ ವಚನಗಳೇನನ್ನೂ ಅದಕ್ಕೆ ಸೇರಿಸಿಲ್ಲ.[೧] ಹೀಗೆ ಅವರು ಒಂದು ಘಟ್ಟಕ್ಕೆ ತಂದು ನಿಲ್ಲಿಸಿರುವ ಕಾರ್ಯವನ್ನು ಇನ್ನೊಂದು ಹೆಜ್ಜೆ ಮುಂದುವರಿಸುವುದೇ ನಮ್ಮ ಲೇಖನದ ಮುಖ್ಯೋದ್ದೇಶ. ಇದು ಅವರ ಸಂಗ್ರಹಕ್ಕೆ ಒಂದು ಬಗೆಯ ಪರಿಶಿಷ್ಟದಂತೆ, ಪರಿಷ್ಕಾರದಂತೆ ಇದೆಯೆಂದು ಬೇಕಾದರೂ ಹೇಳಬಹುದು.

ಮೊದಲಲ್ಲೇ ಒಂದು ಅರಿಕೆ. ಶ್ರೀಮಾನ್ ಹಳಕಟ್ಟಿಯವರ ಕಣ್ಣಿಗೆ ತಪ್ಪಿಸಿಕೊಂಡಿರುವ ಮಹಾದೇವಿಯಕ್ಕನ ಎಲ್ಲ ವಚನಗಳನ್ನೂ ಇಲ್ಲಿ ಸಂಗ್ರಹಿಸಿಕೊಡಲು ನಾವು ಹೊರಟಿಲ್ಲ. ಅಷ್ಟು ದೊಡ್ಡ ಕಾರ್ಯಕ್ಕೆ ಇಲ್ಲಿ ಸ್ಥಳ ಸಾಲದು. ನಮ್ಮ ಶೋಧನೆಯೂ ಸಾಲದು. ಇದರಮೇಲೆ ಅದು ನಮ್ಮ ಉದ್ದೇಶವೂ ಅಲ್ಲ. ತತ್ತ್ವ ಪ್ರಾಧಾನ್ಯದ ವಚನಗಳಿಗಿಂತ ಕಾವ್ಯಗುಣವುಳ್ಳ ವಚನಗಳ ಕಡೆಗೆ, ಅದರಲ್ಲೂ ಮಹಾದೇವಿಯಕ್ಕನ ವ್ಯಕ್ತಿ ಜೀವನದ ಮೇಲೆ ಬೆಳಕು ಬೀರಬಹುದಾದ ವಚನಗಳ ಕಡೆಗೆ, ಇಲ್ಲಿ ನಮ್ಮ ಮುಖ್ಯಗಮನ. ಕೇವಲ ತತ್ತ್ವದ ವಚನಗಳನ್ನು ಮತಾಭಿಮಾನಿಗಳಾದ ಹಿಂದಿನ ಸಂಗ್ರಹಕಾರರು ಒಂದಲ್ಲ ಒಂದು ಕಡೆ ಉಳಿಸಿಕೊಟ್ಟೇ ಇದ್ದಾರೆ; ಒಂದಲ್ಲ ಒಂದು ದಿನ ಅವೆಲ್ಲವೂ ಪ್ರಕಟವಾಗಿಯೇ ಆಗುತ್ತವೆ. ಮತದೃಷ್ಟಿಯಿಂದ ಅಷ್ಟು ಮುಖ್ಯವೆಂದು ತೋರದ ಆಕೆಯ ಆತ್ಮೀಯ ವಚನಗಳಲ್ಲಿ ಹಲವು ಕಾಲಪುರುಷನ ಬಾಯಿಗೆ ತುತ್ತಾಗಿರುವಂತೆ ಕಾಣುತ್ತದೆ. ಆದರೆ ನಮ್ಮ ಸುದೈವದಿಂದ ಎಲ್ಲವೂ ಹಾಗೆ ನಷ್ಟವಾಗಿಲ್ಲ. ಕೆಲವು ಅಲ್ಲಲ್ಲೇ ಉಳಿದಿವೆ; ಮತ್ತೆ ಕೆಲವು ತಮ್ಮ ಪದಚಿಹ್ನೆಯನ್ನು ನಿಲ್ಲಿಸಿವೆ. ನಮ್ಮ ಕಣ್ಣಿಗೆ ಬಿದ್ದ ಇವುಗಳ ಆಕರಗಳನ್ನು ಸೂಚಿಸಿ, ಅಲ್ಲಿಂದ ಗಮನಾರ್ಹವಾದ ಕೆಲವು ವಚನಗಳನ್ನು ಉದ್ಧರಿಸಿ ಕೊಟ್ಟು ಒಂದೆರಡು ಮಾತನ್ನು ಹೇಳುವುದೇ ಈ ಲೇಖನದ ಗುರಿ.

೨

ಮಿಕ್ಕ ಆಕರಗಳ ಕಡೆಗೆ ತಿರುಗುವ ಮೊದಲು, ಶ್ರೀಮಾನ್ ಹಳಕಟ್ಟಿಯವರಿಗೆ ಬಹುಶಃ ದೊರೆಯದಿದ್ದ ಎರಡು ವಚನಸಂಕಲನಗಳಿಂದ ಎರಡು ವಚನಗಳನ್ನು

೧. ಈ ಲೇಖನಕ್ಕಾಗಿ ಉಪಯೋಗಿಸಿಕೊಂಡಿರುವ ಪ್ರತಿ ಮೂರನೆಯ ಆವೃತ್ತಿಯದು (೧೯೩೪)....ಈ ಲೇಖನದ ಪರಿಶಿಷ್ಟವನ್ನು ನೋಡಿ.

ಒಂದೊಂದರಿಂದ ಒಂದೊಂದರಂತೆ ಇಲ್ಲಿ ಉದ್ಧರಿಸಿಕೊಡುತ್ತೇವೆ. ಇವೆರಡಲ್ಲೂ ಮಹಾದೇವಿಯಕ್ಕನ ಭಕ್ತಿನಿಷ್ಠೆಯೂ ಕವಿವಾಣಿಯೂ ಗೋಚರಿಸುತ್ತವೆ :

ಬೋಳೆಯನೆಂದು ನಂಬಬೇಡ, ಡಾಳಕನವನು, ಜಗದ ಬಿನ್ನಾಣಿ. ಬಾಣ ಮಯೂರ ಕಾಳಿದಾಸ ವೋಹಿಲನುದ್ಭಟ ಮಲುಹಣನವರಿಗಿತ್ತ ಪರಿ ಬೇಱೆ ಮುಕ್ತಿ ಭುಕ್ತಿಯ ತೋಱೆ ಭಕ್ತಿಯ ಮಱಸಿಕೊಂಬನು ಚೆನ್ನಮಲ್ಲಿಕಾರ್ಜುನನು.[೨]

ಕೋಲ ತುದಿಯ ಕೋಡಗದಂತೆ ನೇಣತುದಿಯ ಬೊಂಬೆಯಂತೆ ಆಡಿದೆನಯ್ಯಾ ನೀನಾಡಿಸಿದಂತೆ. ಆನು ನುಡಿದೆನಯ್ಯಾ ನೀನು ನುಡಿಸಿದಂತೆ. ಆನು ಇದ್ದೆನಯ್ಯಾ ನೀನು ಇರಿಸಿದಂತೆ. ಜಗದ ಯಂತ್ರವಾಹಕ ಚೆನ್ನಮಲ್ಲಿಕಾರ್ಜುನ ಸಾಕೆಂಬ[ನ್ನ]ಕ್ಕ.[೩]

೩

ಚಾಮರಸನ 'ಪ್ರಭುಲಿಂಗಲೀಲೆ' ಅಲ್ಲಮಪ್ರಭುವೊಬ್ಬನ ಚರಿತ್ರೆಯಲ್ಲ ; ಅದೊಂದು ಭಕ್ತಕಥಾವಳಿ. ಅದು ಷಟ್ಪದೀಕಾವ್ಯವಷ್ಟೇ ಅಲ್ಲ; ಒಂದು ವಚನಕೋಶವೂ ಹೌದು. ತನ್ನ ಕಥೆಯ ನೆಯ್ಗೆಯಲ್ಲಿ ಚಾಮರಸನು ಶರಣರ ವಚನಗಳ ಸರಿಗೆಯೆಳೆಯನ್ನು ಸೇರಿಸಿಕೊಂಡಿರುವುದು ಮಾತ್ರವಲ್ಲದೆ, ಪ್ರಭುಲಿಂಗಲೀಲೆಯ ಪ್ರತಿಯೊಂದು ಗತಿಯ ಪ್ರಾರಂಭದಲ್ಲೂ ಅಲ್ಲಲ್ಲಿಗೆ ಅನುರೂಪವಾದ ವಚನಗಳನ್ನೂ ಮೊದಲು ಉದಾಹರಿಸಿ ಬಳಿಕ ಪದ್ಯರಚನೆಗೆ ತೊಡಗಿದ್ದಾನೆ. ಇದು ಚಾಮರಸನ ಕೈವಾಡವೇ ಎನ್ನುವುದಕ್ಕೆ ಈ ಬಗೆಯ ವಚನಗಳ ಅವತರಣಿಕೆ ಪ್ರಭುಲಿಂಗಲೀಲೆಯ ಎಲ್ಲ ಮಾತೃಕೆಗಳಲ್ಲೂ

---

೨. ಇದು ಮೈಸೂರು ಓರಿಯೆಂಟಲ್ ಲೈಬ್ರರಿಯಲ್ಲಿ 'ವಚನಸಂಗ್ರಹ' ಎಂಬ ಹೆಸರಿನಲ್ಲಿ ದೊರೆಯುವ ಓಲೆಗರಿಯ ಪ್ರತಿಯಿಂದ (K 499) ತೆಗೆದದ್ದು. ಈ ಸಂಗ್ರಹದಲ್ಲಿ ಸುಮಾರು ೮೦ಕ್ಕೆ ಹೆಚ್ಚಿನ ವಚನಕಾರರ ವಚನಗಳು, ಮುಖ್ಯವಾಗಿ ತತ್ತ್ವಕ್ಕೆ ಸಂಬಂಧಪಟ್ಟವು ದೊರೆಯುತ್ತವೆ. ಇಲ್ಲಿರುವ ಮಹಾದೇವಿಯಕ್ಕನ ವಚನಗಳು ೪ ಮಾತ್ರ : ಅವುಗಳಲ್ಲಿ ಎರಡು ಆಗಲೇ ಹಳಕಟ್ಟಿಯವರ ಸಂಕಲನದಲ್ಲಿ ಸೇರಿರತಕ್ಕವು.

೩. ಇದು ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್ಯರ ವಶದಲ್ಲಿರುವ 'ವಚನಸಾರ' ಎಂಬ ಓಲೆಯ ಪ್ರತಿಯಿಂದ ತೆಗೆದದ್ದು. (ಇದರ ಕಾಲ (ಕ್ರಿ.ಶ. ೧೬೬೧.) ಇಲ್ಲಿಯೂ ಬೇರೆ ಬೇರೆ ವಚನಕಾರರ ವಚನಗಳುಂಟು. ಇಲ್ಲಿ ಬಂದಿರುವ ಮಹಾದೇವಿಯಕ್ಕನ ವಚನಗಳಲ್ಲಿ ಸುಮಾರು ೨೫–೩೦ ಆಗಬಹುದು : ಇವೆಲ್ಲ ಒತ್ತಟ್ಟಿಗೆ ಇಲ್ಲ. (ಈ ವಚನಗಳಲ್ಲಿ ಹಲವು ಹಳಕಟ್ಟಿಯವರ ಸಂಕಲನದಲ್ಲಿ ಬಂದಿವೆ.)
'ವಚನಸಾರ'ದ ಪ್ರತಿಯನ್ನೂ ಗುಮ್ಮಳಾಪುರದ ಸಿದ್ಧಲಿಂಗಯತಿಯ 'ಶೂನ್ಯಸಂಪಾದನೆ'ಯ ಪ್ರತಿಯನ್ನೂ ಉಪಯೋಗಿಸಿಕೊಳ್ಳಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿಯೂ, ಉಪಯುಕ್ತವಾದ ಕೆಲವು ಸೂಚನೆಗಳನ್ನು ಕೊಟ್ಟಿದ್ದಕ್ಕಾಗಿಯೂ ಶ್ರೀಮಾನ್ ನರಸಿಂಹಾಚಾರ್ಯರಿಗೆ ನನ್ನ ಕೃತಜ್ಞತೆಯನ್ನು ಸಂತೋಷದಿಂದ ಸಲ್ಲಿಸುತ್ತೇನೆ.

ತಪ್ಪದೆ ಕಾಣಬರುವುದು ದೊಡ್ಡ ಸಾಕ್ಷಿ. "ಈ ಎಲ್ಲ ಪ್ರತಿಗಳಲ್ಲಿ ಪ್ರತಿಯೊಂದು ಗತಿಯ ಆರಂಭದಲ್ಲಿ ಅವತರಿಸಿದ ವಚನಗಳು ಒಂದೇ ಸಮನಾಗಿಲ್ಲ"[೪] ಎಂಬುದೇನೋ ನಿಜ. ಹಾಗೆಂದು ಉಪೇಕ್ಷಿಸದೆ, ವಚನಗಳ ಸಂಕಲನ ಪಾಠಶೋಧನೆಗಳ ದೃಷ್ಟಿಯಿಂದಲೇ ಪ್ರಭುಲಿಂಗಲೀಲೆಯ ಎಲ್ಲ ಮಾತೃಕೆಗಳನ್ನೂ ಪರಿಶೀಲಿಸುವುದು ಅಗತ್ಯ.

ಮಹಾದೇವಿಯಕ್ಕನ ಕಥೆ ಪ್ರಭುಲಿಂಗಲೀಲೆಯ ೧೦ನೆಯ ಮತ್ತು ೧೭ನೆಯ ಗತಿಗಳಲ್ಲಿ ಮುಖ್ಯವಾಗಿ ನಿರೂಪಿತವಾಗಿದೆ. ಇವೆರಡರ ಆದಿಯಲ್ಲೂ ಅವಳ ವಚನಗಳು ಬಂದಿವೆ. ಅಚ್ಚಿನ ಪ್ರತಿಯಲ್ಲೂ ಅಷ್ಟೇ, ನಾವು ಹೋಲಿಸಿ ನೋಡಿದ ಮಾತೃಕೆಗಳಲ್ಲೂ ಅಷ್ಟೇ.[೫] ೧೦ನೆಯ ಗತಿಯ ಮೊದಲಲ್ಲಿ ಬರುವ ವಚನಗಳ ಸಂಖ್ಯೆ ಆನುಪೂರ್ವಿಗಳು ಒಂದೇ ಆಗಿವೆ. ಆ ನಾಲ್ಕು ವಚನಗಳನ್ನೂ ಕೆಳಗೆ ಕೊಟ್ಟಿದ್ದೇವೆ. ಇವುಗಳಲ್ಲಿ ಒಂದು ಮಾತ್ರ ('ಕಾಯ ಕಜ್ರಿನೆ....') ಹಳಕಟ್ಟಿಯವರ ಸಂಕಲನದಲ್ಲಿ ಸ್ವಲ್ಪ ಪಾಠಭೇದದೊಡನೆ ಸಿಕ್ಕುತ್ತದೆ. (ಪು. ೩೦–ವ. ೮)—

ಮುಡಿ ಬಿಟ್ಟು ಮೊಗ ಬಾಡಿ ತನು ಕರಗಿದವಳ ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ, ಎನ್ನನೇಕೆ ಕಾಡುವಿರಿ ಎಲೆ ತಂದೆಗಳಿರಾ, ಬಲುಹಳಿದು ಭವಗೆಟ್ಟು ಛಲವಳಿದು ಭಕ್ತೆಯಾಗಿ ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ?

ಎರದ ಮುಳ್ಳಿನಂತೆ ಪರಗಂಡರೆನಗವ್ವಾ, ಸೋಂಕಲಮ್ಮೆ ಸುಳಿಯಲಮ್ಮೆ ನಂಬಿ ನಚ್ಚಿ ಮಾತಾಡಲಮ್ಮೆನವ್ವಾ, ಚೆನ್ನಮಲ್ಲಿಕಾರ್ಜುನನಲ್ಲದ ಗಂಡರ ಉರದಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ

ಕಾಯ ಕಜ್ರಿನೆ ಕಂದಿದರೇನಯ್ಯಾ, ಕಾಯ ಮಿಜ್ರಿನೆ ಮಿಂಚಿದರೇನಯ್ಯಾ? ಅಂತರಂಗ ಶುದ್ಧವಾದ ಬಳಿಕ್ಕ ಕಾಯವೇನಾದಡೇನಯ್ಯಾ? ಚೆನ್ನಮಲ್ಲಿಕಾರ್ಜುನಂಗೊಲಿದ ಕಾಯವೇನಾದಡೆ ನಿಮಗೇನಯ್ಯಾ?

ಎರೆಯಂತೆ ಕರಕರಗಿ ಮಳಲಂತೆ ಜರಜರಿದು ಕನಸಿನಲಿ ಕಳವಳಿಸಿ ಆನು ಬೆಜಗಾದೆ, ಆವಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ.

---

೪. ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆಯ ಸಂಸ್ಕರಣ, ಮುನ್ನುಡಿ, ಪು. ೩—"ಇವೆಲ್ಲ ವಚನಗಳಲ್ಲಿ ಯೋಗ್ಯ ಕಂಡವುಗಳನ್ನು ಮಾತ್ರ ಆರಿಸಿ ಆ ಆ ಗತಿಗಳ ಆರಂಭದಲ್ಲಿ ಕೊಟ್ಟಿವೆ" ಎಂಧು ಮುನ್ನುಡಿಯ ಲೇಖಕರು ಹೇಳಿದ್ದಾರೆ.

೫. ಮೈಸೂರು ಓರಿಯೆಂಟಲ್ ಲೈಬ್ರರಿಯ ಪ್ರತಿಗಳು : K 154, K 180, K 328, K 356, K A 170, K 180ರಲ್ಲಿ 'ಪ್ರಭುಲಿಂಲೀಲೆ'ಯೊಂದೇ ಅಲ್ಲ, ಬೇರೆಯ ಗ್ರಂಥಗಳೂ ಇವೆ. ಇದಕ್ಕೆ ಲೈಬ್ರರಿಯವರು ಸೇರಿಸಿರುವ ವಿಷಯಸೂಚಿಕೆಯ ಕೊನೆಯಲ್ಲಿ 'ಅಕ್ಕಗಳ ವಚನ' ಎಂದಿದೆ; ಆದರೆ ಗ್ರಂಥದಲ್ಲಿ ಇದಕ್ಕೆ ಸಂವಾದಿಯಾಗಿರುವುದು 'ಮಹಾದೇವಿಯಕ್ಕನ ವಚನ'ಗಳಲ್ಲ; ಯಾವುವೋ ತತ್ತ್ವದ ಪದಗಳು.

ಆಪತ್ತಿಗೆ ಸಖಿಯರ ನಾನಾರುವನು ಕಾಣೆ. ಅಱಿಸಿ ಕಾಣದ ತನುವ
ಬೆರಸಿ ಕೂಡದ ಸುಖವ ಎನಗೆ ನೀ ಕರುಣಿಸು ಚೆನ್ನಮಲ್ಲಿಕಾರ್ಜುನಾ.[೬]

ಈ ನಾಲ್ಕು ವಚನಗಳೂ ಮಹಾದೇವಿಯಕ್ಕನ ಹೃದಯದ ಕುದಿಯಿಂದಲೇ ಉಕ್ಕಿರಬೇಕೆಂಬುದರಲ್ಲಿ ಯಾವ ಸಂದೇಹವೂ ಕಾಣಿಸದು. ಕೇಶಾಂಬರೆಯಾಗಿ ಹೊರಟ ಈ ಸುಂದರಿಯನ್ನು ಯಾರು ಯಾರು ಕೋಟಲೆಗೊಳಿಸಿದರೋ! ಯಾವ ಯಾವ ಸಂದರ್ಭಗಳಲ್ಲಿ ಈ ಆರ್ತಧ್ವನಿಗಳು ಹೊರಟುವೋ!

೧೭ನೆಯ ಗತಿಯ ಮೊದಲಲ್ಲಿ ಬರುವ ವಚನಗಳನ್ನು ಕುರಿತು ಈ ಬಗೆಯ ಐಕಮತ್ಯವಿಲ್ಲ. ನಾವು ಶೋಧಿಸಿದ ಐದು ಮಾತೃಕೆಗಳಲ್ಲೂ 'ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತವುಳ್ಳ ಒಂದೇ ಒಂದು ವಚನ ದೊರೆಯುತ್ತದೆ ; ಹಳಕಟ್ಟಿಯವರ ಸಂಕಲನದಲ್ಲಿ ಇದಕ್ಕಾಗಲೇ ಸ್ಥಾನ ಸಿಕ್ಕಿದೆ (ಪು. ೪೨, ಸಂ. ೧೨). ಪ್ರಭುಲಿಂಗಲೀಲೆಯ ಧಾರವಾಡದ ಮುದ್ರಣದಲ್ಲಿ ಮಹಾದೇವಿಯಕ್ಕನ ಇನ್ನೂ ಎಂಟು ವಚನಗಳು ಹೆಚ್ಚಾಗಿ ಉಂಟು. ಇವುಗಳಲ್ಲಿ ಮೂರು ಮಾತ್ರ ಹಳಕಟ್ಟಿಯವರ ಸಂಕಲನದಲ್ಲಿ ಕಾಣಿಸಿಕೊಳ್ಳುತ್ತವೆ.[೭] ಮಿಕ್ಕವುಗಳಲ್ಲಿ[೮] ಒಂದನ್ನು ಇಲ್ಲಿ ಎತ್ತಿಕೊಡುತ್ತೇವೆ. ಶಿವಸಾಕ್ಷಾತ್ಕಾರಕ್ಕಾಗಿ ಮಹಾದೇವಿಯಕ್ಕನು ತೊಳಲುತ್ತಿದ್ದುದು ಇಲ್ಲಿ ರಮ್ಯವಾಗಿ ವ್ಯಕ್ತವಾಗುತ್ತದೆ :

ಗಿರಿಯೊಳು ವನದೊಳು ಗಿಡಗಿಡದೆತ್ತ ದೇವ, ಎನ್ನ ದೇವ, ಬಾರಯ್ಯಾ
ತೋಱಯ್ಯಾ ನಿಮ್ಮ ಕರುಣವನೆಂದು ನಾನು ಅಱಿಸುತ್ತ ಅಳಲುತ್ತ ಕಾಣದೆ
ಸುಯಿದು ಬಂದು ಕಂಡೆ ಶರಣರ ಸಂಗದಿಂದ ಅರಸಿ ಹಿಡಿದೇನೆಂದು
ನೀನಡಗುವ ಠಾವ ಹೇಳಾ ಚೆನ್ನಮಲ್ಲಿಕಾರ್ಜುನಾ.

---

೬. ಈ ಲೇಖನದಲ್ಲಿ ಉದಾಹರಿಸಿರುವ ವಚನಗಳು ಎರಡು ಮೂರು ಕಡೆ ದೊರೆತಿದ್ದರೆ, ಭಿನ್ನ ಪಾಠಗಳನ್ನೆಲ್ಲಾ ಗುರುತಿಸುವ ಗೋಜಿಗೆ ಹೋಗಿಲ್ಲ. ಅತಿಮುಖ್ಯವಾದ ಪಾಠಭೇದವೇನಾದರೂ ಇದ್ದರೆ, ಅದನ್ನು ಮಾತ್ರ ಸೂಚಿಸಲಾಗಿದೆ. 'ಱ'ಕಾರವನ್ನು ಮಾತೃಕೆಗಳಲ್ಲಿ ನಿಯತವಾಗಿ ಪ್ರಯೋಗಿಸಿಲ್ಲದಿದ್ದರೂ, ಈ ಲೇಖನದೊಳಗೆ ಉದ್ಧರಿಸಿರುವ ಭಾಗಗಳಲ್ಲಿ ಕ್ಲುಪ್ತವಾಗಿ ತೋರಿಸಿದೆ.

೭ ಪು. ೧೭-ಸಂ. ೭ ಪು. ೯-ಸಂ. ೮, ಪು. ೧೭-ಸಂ. ೪. ಇವಲ್ಲದೆ, 'ಸಾವಿಲ್ಲದ ಸಹಜಂಗೆ....' ಎಂದು ಪ್ರಭುಲಿಂಗಲೀಲೆಯ ಈ ಪ್ರತಿಯಲ್ಲಿ ಬಂದಿರುವ ವಚನವೂ ಹಳಕಟ್ಟಿಯವರ ಸಂಕಲನದಲ್ಲಿರುವ 'ಸಾವಿಲ್ಲದ, ಕೇಡಿಲ್ಲದ....' ಎಂಬ ವಚನವೂ (ಪು. ೨೦. ಸಂ. ೭) ಮೂಲತಃ ಒಂದೇ ಆಗಿರಬೇಕೆಂದು ತೋರುತ್ತದೆ. ಆದರೆ ಪಾಠಭೇದ ಅತಿಶಯವಾಗಿ ಉಂಟು. ಈ ವಚನದ ಇನ್ನೊಂದು ರೂಪ ಶೂನ್ಯಸಂಪಾದನೆ ಯಲ್ಲಿ ದೊರೆಯುತ್ತದೆ. (ಹಳಕಟ್ಟಿಯವರ ಮುದ್ರಣ, ಪು. ೨೮೨-ಸಂ. ೨೩).

೮. ಇವುಗಳಲ್ಲಿ ಎರಡು ವಚನಗಳು ಶ್ರೀಮಾನ್ ಹಳಕಟ್ಟಿಯವರೇ ಅಚ್ಚು ಮಾಡಿಸಿರುವ ಶೂನ್ಯಸಂಪಾದನೆಯಲ್ಲಿ ದೊರೆಯುತ್ತವೆ. (ಪು. ೨೭೮, ಸಂ. ೯, ಪು. ೨೭೯-ಸಂ. ೭). ಅವರ 'ಮಹಾದೇವಿಯಕ್ಕನ ವಚನ'ಗಳಲ್ಲಿ ಏಕೆ ಕೈಬಿಟ್ಟು ಹೋದವೋ.

'ಶೂನ್ಯಸಂಪಾದನೆ'ಯನ್ನು ಒಂದು ರೀತಿಯಲ್ಲಿ ಪ್ರಭುಲಿಂಗಲೀಲೆಯ ಗದ್ಯಾವತಾರವೆನ್ನಬಹುದು. ಈ ಬಗೆಯಾಗಿ ಶಿವಶರಣರ ವಚನಗಳನ್ನು ಕೂಡಿಸಿ ಜೋಡಿಸಿ 'ಕಥಾಸಾಂಗತ್ಯ'ವನ್ನು ರಚಿಸಿದವರಿಗೆ ಪ್ರಭುಲಿಂಗಲೀಲೆಯಿಂದಲೇ ಪ್ರೇರಣೆ ಒದಗಿರಬೇಕೆಂಬುದು ಸ್ಪಷ್ಟ ಮೊದಲು ಶಿವಗಣಪ್ರಸಾದಿ ಮಹಾದೇವಯ್ಯನು ಸಂಗ್ರಹಿಸಿದ ಈ ಕೃತಿ ಬೇರೆ ಬೇರೆ ಪರಿಷ್ಕರಣಗಳಿಗೆ ಹೇಗೆ ಒಳಗಾಯಿತೆಂಬ ವಿಷಯವನ್ನು ಶ್ರೀಮಾನ್ ಎಂ.ಆರ್. ಶ್ರೀನಿವಾಸಮೂರ್ತಿಗಳು ಸಪ್ರಮಾಣವಾಗಿ ಪ್ರತಿಪಾದಿಸಿದ್ದಾರೆ.[೯] ಅವರು ಸೂಚಿಸಿರುವಂತೆ, ಈ ಭಿನ್ನ ಭಿನ್ನ ರೂಪಗಳನ್ನು ಶೂನ್ಯ ಸಂಪಾದನೆ ತಾಳಿದ್ದಕ್ಕೆ ಸಿದ್ಧರಾಮನ ದೀಕ್ಷೆಯ ಪ್ರಸಂಗವೇ ಮುಖ್ಯಕಾರಣವಾಗಿರಬಹುದು; ಆದರೆ ಇಷ್ಟಕ್ಕೇ ಇವುಗಳ ವ್ಯತ್ಯಾಸ ಮುಗಿಯುವುದಿಲ್ಲ. ಮಹಾದೇವಿಯಕ್ಕನ ವೃತ್ತಾಂತವನ್ನು ನಿರೂಪಿಸುವಾಗ ಕೂಡ, ವಿಷಯದಲ್ಲೂ ವಚನ ಸಂಖ್ಯೆಯಲ್ಲೂ ಈ ಪ್ರತಿಗಳಲ್ಲಿ ಒಂದಕ್ಕೊಂದಕ್ಕೆ ಭೇದ ಬೇಕಾದಷ್ಟಿದೆ. ಇವುಗಳಲ್ಲೆಲ್ಲಾ, ಮಹಾದೇವಿಯಕ್ಕನನ್ನು ಕುರಿತ ಭಾಗ ಹೆಚ್ಚು ವಿಸ್ತಾರದೊಡನೆ ಬಂದಿರುವುದು ಹಲಗೆಯ ದೇವರ ಶೂನ್ಯ ಸಂಪಾದನೆಯಲ್ಲಿ.[೧೦] ಕಥೆಯ ಆದಿಭಾಗದಲ್ಲೇ ಈ ವ್ಯತ್ಯಾಸ ಸ್ಪಷ್ಟವಾಗುತ್ತದೆ. ಮಿಕ್ಕ ಪ್ರತಿಗಳಲ್ಲಿ, ಮಹಾದೇವಿಯಕ್ಕನು ಕೌಶಿಕನನ್ನು ಬಿಟ್ಟು ಬಂದ ಅಂಶವನ್ನು "ಭವಿಯ ಸಂಗಮಂ ತೊಱೆದು" ಲಿಂಗಧಾರಣವಾಗಲೊಲ್ಲೆವೆಂದ ಭವಿಯ ಸೋಂಕದೆ ಅಂಗಸಂಗಮಂ ತೊಱೆದು—ಎಂಬಿಷ್ಟರಲ್ಲೇ, ಅವನ ಹೆಸರು ಕೂಡ ಎತ್ತದೆ ಸೂಚಿಸಿ, ಮದುವೆಯ

---

೯. 'ಪ್ರಬುದ್ಧ ಕರ್ಣಾಟಕ', ಸಂ. ೧೫, ಸಂ. ೪ : 'ಶೂನ್ಯ ಸಂಪಾದನೆಗಳು'.

೧೦. ಶ್ರೀಮಾನ್ ಶ್ರೀನಿವಾಸಮೂರ್ತಿಗಳು ಶೂನ್ಯಸಂಪಾದನೆಯ ಐದು ಪಾಠಗಳಂಟೆಂದು ಲೆಕ್ಕ ಮಾಡಿದ್ದಾರೆ : (೧) ಶಿವಗಣಪ್ರಸಾದಿ ಮಹಾದೇವಯ್ಯನದು. ಬಹುಶಃ ಇದರದೇ ಒಂದು ಓಲೆಯ ಪ್ರತಿ ನನ್ನ ವಶದಲ್ಲಿದೆ ; ಇದನ್ನು ವಿಶ್ವಾಸವಿಟ್ಟು ಕೊಟ್ಟವರು ಮೈಸೂರು ಓರಿಯೆಂಟಲ್ ಲೈಬ್ರರಿಯಲ್ಲಿ ಆಗ ಇದ್ದ ಶ್ರೀಮಾನ್ ಎಂ.ಡಿ. ಬಸಪ್ಪನವರು. ಈ ಪ್ರತಿಯಲ್ಲಿ ನಂಬಿಯಣ್ಣನ ರಗಳೆ ಮೊದಲಾದ ಬೇರೆ ಗ್ರಂಥಗಳೂ ಸೇರಿವೆ. ಇಲ್ಲಿ ಬಂದಿರುವ ಶೂನ್ಯಸಂಪಾದನೆಗೆ ಪೀಠಿಕಾ ಭಾಗವಿಲ್ಲ; ಪಿಂಡಸ್ಥಲದ ವಚನದಿಂದ ಮೊದಲಾಗುತ್ತದೆ ; ಒಟ್ಟು ವಚನಸಂಖ್ಯೆ ೧೦೦೨ ಮಾತ್ರ; 'ಶಿವಗಣಪ್ರಸಾದಿ ಮಹಾದೇವಗಳು' ಇದನ್ನು ರಚಿಸಿದ ಸಂಗತಿ ಕೊನೆಯಲ್ಲಿ ಹೇಳಿದೆ; ಬೇರೆ ಯಾವ ಸಂಗ್ರಾಹಕಾರರ ಹೆಸರೂ ಇಲ್ಲ. (೨) ಕೆಂಚವೀರಣ್ಣೊಡೆಯನ ಪ್ರತಿ ಇದು ದೊರೆತಂತೆ ಇದುವರೆಗೂ ತಿಳಿಯಬಂದಿಲ್ಲ. (೩) ಕಲ್ಲೇಶ್ವರದೇವರು ನಂಜೆಯದೇವರು ಮೊದಲಾದವರು ವಿಚಾರಿಸಲು ಅವರಿಗೆ ಹಲಗೆಯದೇವರು, ನಿರೂಪಿಸಿದ್ದು. ಇದರ ಕೈಬರೆಹದ ಪ್ರತಿ ಮೈಸೂರು ಓರಿಯೆಂಟಲ್ ಲೈಬ್ರರಿಯಲ್ಲಿದೆ ಸಂ. KA 105. (೪) ಗುಮ್ಮಳಾಪುರದ ಸಿದ್ಧಲಿಂಗಯತಿಯದು. ಇದರ ಒಂದು ಓಲೆಯ ಪ್ರತಿ ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್ಯರ ವಶದಲ್ಲಿದೆ. (೫) ಗೂಳೂರಿನ ಸಿದ್ಧವೀರಣಾರ್ಯನದು. ಇದನ್ನು ಶ್ರೀಮಾನ್ ಹಳಕಟ್ಟಿಯವರು ಅಚ್ಚುಮಾಡಿಸಿದ್ದಾರೆ. ಈ ಕೊನೆಯದೊಂದು ಹೊರತು ಬೇರೆ ಯಾವ ಪಾಠವೂ ಇದುವರೆಗೆ ಅಚ್ಚಾಗಿಲ್ಲ.

ವಿಚಾರವನ್ನು ತೇಲಿಸಿಯೋ ನಿಷೇಧಿಸಿಯೋ ಮುಗಿಸಿಬಿಟ್ಟಿದ್ದಾರೆ. ಹಲಗೆಯದೇವರ ಪ್ರತಿಯಲ್ಲಾದರೆ, ಮಹಾದೇವಿಗೆ ಪಾರ್ವತಿ ಕೊಟ್ಟ ಶಾಪವೂ, ಅದರಂತೆ ಅವಳು ಭೂಮಿಯ ಮೇಲೆ ಹುಟ್ಟಿ, "ದೇವಿಯರಿತ್ತ ಅವಧಿ ಬರೆ ಕೌಶಿಕನೆಂಬ ರಾಯಂಗೆ ವಧುವಾಗಿ, ನೀರುತಾವರೆಯಂತೆ ಕಣ್ಣು ಕಾಡಿಗೆಯಂತೆ ನೆಯಿ ನಾಲಗೆಯಂತೆ ಗಾಳಿ ಧೂಳಿನಂತೆ ಆ ಸಂಸಾರದೊಳಗಿದ್ದೂ ಇಲ್ಲದೆ, ತನುವನೆ ಸಂಸಾರಕ್ಕೆ ಎರವಾಗಿ ಕೊಟ್ಟು ಮನಮೆಚ್ಚಿ ಲಿಂಗದಲ್ಲಿದ್ದು ಗುರುಚರ ಲಿಂಗದಲ್ಲಿ ಪರಮದಾಸೋಹದಲ್ಲಿ ಭಕ್ತಿಯ ಮಾಡುವಲ್ಲಿ, ಆತ ಕೊಟ್ಟ ಭಾಷೆಗೆ ಉತ್ತರಮಂ ಮಾಡಿ ಹೋಗುತ್ತಿರೆ ಸೀರೆಯಂ ಪಿಡಿದೆಳೆಯೆ ಬಿಟ್ಟು ದಿಗಂಬರಿಯಾಗಿ ದಿಗಂಬರನ ನೆನೆವುತ್ತ" ಹೊರಹೊರಟ ವೃತ್ತಾಂತವೂ ಸ್ಪಷ್ಟೋಕ್ತಿಯಲ್ಲಿ ನಿರೂಪಿತವಾಗಿವೆ. ಇದು ಹರಿಹರ ಕವಿಯ 'ಮಹಾದೇವಿಯಕ್ಕನ ರಗಳೆ'ಯ ಕಥಾಸಂಗತಿಯನ್ನು ನೆನಪಿಗೆ ತರುತ್ತದೆ.

ಶೂನ್ಯ ಸಂಪಾದನೆಯ ಭಿನ್ನಪಾಠಗಳಲ್ಲಿ ಬಂದಿರುವ ಮಹಾದೇವಿಯಕ್ಕನ ವಚನಗಳನ್ನೆಲ್ಲಾ ಸಂಗ್ರಹಿಸುವ ಕೆಲಸಕ್ಕೆ ಈ ಲೇಖನದಲ್ಲಿ ಕೈಹಾಕಿಲ್ಲ; ಅದು ಮುಂದೆ ಮಾಡಬೇಕಾದ ಕಾರ್ಯ. ಇವುಗಳಲ್ಲಿ ಮಹಾದೇವಿಯಕ್ಕನ ಜೀವನಕಥೆಗೆ ಸಂಬಂಧಪಟ್ಟ ಒಂದು ಪ್ರಸಂಗದ ನಿರೂಪಣೆ ಹೇಗೆ ಬಂದಿದೆಯೆಂಬುದನ್ನು ಗಮನಿಸಿ, ಅಲ್ಲಿ ಉದಾಹೃತವಾಗಿರುವ ಕೆಲವು ವಚನಗಳನ್ನು ಉದ್ಧರಿಸುತ್ತೇವೆ. ಮಹಾದೇವಿಯಕ್ಕನನ್ನು ಕಿನ್ನರ ಬೊಮ್ಮಯ್ಯನು ಸಂಧಿಸಿದ ಪ್ರಸಂಗವೇ ಇದು.

ಇದರ ಪ್ರಸ್ತಾವ ಶಿವಗಣಪ್ರಸಾದಿ ಮಹಾದೇವಯ್ಯನ ಪಾಠದಲ್ಲಿ—ಮಹಾದೇವಿ ಯಕ್ಕನು "....ದೇಶಾಂತರಮುಖದೊಳ್ ಚರಿಸಿ ಬಪ್ಪಾಗಳು ಕಿನ್ನರಬೊಮ್ಮಿ ತಂದೆಗಳು ಕಂಡು [ಪ]ರುಷಿಸಿ ನೋಡಲು, ಅಂತರಂಗದ ಜ್ಞಾನಾಗ್ನಿಯೊಳ್ ಕಾಮನಂ ಸುಟ್ಟು ಭಸ್ಮಮಂ ಮಾಡಿ ಅವರಂ ಬೀಳ್ಕೊಂಡು ಕಲ್ಯಾಣದತ್ತ ಅಭಿಮುಖವಾಗಿ ನಡೆತಂದು...." ಎಂಬಷ್ಟರಲ್ಲಿ ಮುಗಿದಿದೆ; ಯಾವ ವಚನಗಳೂ ಉದಾಹೃತವಾಗಿಲ್ಲ. ಗುಮ್ಮಳಾಪುರದ ಸಿದ್ಧಲಿಂಗಯತಿಯ ಪಾಠದಲ್ಲಿ ವಸ್ತು ಇನ್ನು ಸ್ವಲ್ಪ ವಿಸ್ತಾರವಾಗುತ್ತದೆ. ಮಹಾದೇವಿಯಕ್ಕನು ದಿಗಂಬರೆಯಾಗಿ ಬರುತ್ತಿದ್ದಾಳೆಂಬುದನ್ನು ಬಸವಣ್ಣನಿಂದ ತಿಳಿದು, "ಪ್ರಭುದೇವರು ಸಕಲ ಪ್ರಮಥರಿಗೆ ಕಾಮಸಂಹಾರಿಯೆಂಬುದಂ ಪ್ರತ್ಯಕ್ಷವ ತೋಱ ಬೇಕೆಂದು ಭಕ್ತಿವಿಸ್ತಾರದಿಂದ ಕಿನ್ನರಯ್ಯಗಳಂ ಒಪ್ಪಿ ಕಳುಹಲು, ಆ ಪರಮ[ಜ್ಞಾ]ನಿಯಪ್ಪ ಕಿನ್ನರಯ್ಯಗಳು ದಳದಳನೆ ಇದಿರಿನಲಿ ಬಂದು ಕಂಡು ಭಕ್ತಿಭಾವದಿಂದ ಸ್ಪರುಶಿಸಿ ನೋಡಲು, ಆ ಮಹಾದೇವಿಯಕ್ಕಗಳು ತಮ್ಮ ಅಂತರಂಗಜ್ಞಾನಾಗ್ನಿಯೊಳ್ ಕಾಮನಂ ಸುಟ್ಟು ಭಸ್ಮಮಂ ಮಾಡಿ ಕಿನ್ನರಯ್ಯಗಳಿಗೆ ತೋಱದ ಪ್ರಸ್ತಾವದ ವಚನ—

> ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ. ಮನದ ಭಂಗವ ಅಱುಹಿನ ಮುಖದಿಂದ ಗೆಲಿದೆ. ಜೀವದ ಭಂಗವ ಶಿವಾನುಭಾವದಿಂದ ಗೆಲಿದೆ. ಕರುಣದ ಕತ್ತಲೆಯ ಬೆಳಗನುಟ್ಟು ಗೆಲಿದೆ. ಜವ್ವನದ

ಹೊಱಮಿಂಚಿನಲ್ಲಿ ನಿಮ್ಮ ಕಂಗೆ ತೋಱುವ ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯಾ. ಚೆನ್ನಮಲ್ಲಿಕಾರ್ಜು[ನ] ಕಾಮನ ಕೊಂದು ಮನಸಿಜನನುಳುಹಿದರೆ ಮನಸಿಜನ ತಲೆಯ ಬರಹವ ತೊಡೆವನು.[೧೧]

ಇಂತು ಕಾಮನ ಸುಟ್ಟು ಭಸ್ಮಮಂ ಮಾಡಿ ಕಿನ್ನರಯ್ಯಗಳಿಗೆ ತೋಱಿಸಿ ಅವರಂ ಬೀಳ್ಕೊಂಡು ಕಲ್ಯಾಣದತ್ತಲಭಿಮುಖವಾಗಿ ನಡೆತಂದು...."—ಹೀಗೆ ನಿರೂಪಣೆಯಿದೆ. ಗೂಳೂರು ಸಿದ್ಧವೀರಣಾರ್ಯನ ಪಾಠದ ಆನುಪೂರ್ವಿಯೂ ಇದೇ. ಆದರೆ, ಅಲ್ಲಿ ಇನ್ನೆರಡು ವಚನಗಳು ಹೆಚ್ಚಾಗಿ ದೊರೆಯುತ್ತವೆ. (ಇವುಗಳಲ್ಲಿ ಒಂದು ಕಿನ್ನರಯ್ಯನದು; ಇನ್ನೊಂದು ಮಹಾದೇವಿಯಕ್ಕನದು. ಈ ಎರಡನ್ನೂ ಮುಂದೆ ಉದ್ಧರಿಸಲಾಗುತ್ತದೆ).

ಹೀಗೆ, ಮೇಲೆ ನಿರ್ದೇಶಿಸಿದ ಶೂನ್ಯಸಂಪಾದನೆಯ ಪಾಠಗಳಲ್ಲಿ ಕಿನ್ನರಯ್ಯನು ಮಹಾದೇವಿಯ ದೇಹವನ್ನು ಭಕ್ತಿಭಾವದಿಂದ ಸ್ಪರ್ಶಿಸಿ ಪರೀಕ್ಷಿಸಿ ಅವಳು ಕಾಮಾತೀತ ಳೆಂಬುದನ್ನು ಅರಿತನೆಂದೂ, ಪ್ರಭುದೇವರು ಆತನನ್ನು ಈ ಉದ್ದೇಶಕ್ಕಾಗಿಯೇ ಕಳಿಸಿದನೆಂದೂ ಪ್ರತೀತಿಯುಂಟಾಗುತ್ತದೆ. ಆದರೆ, ಹಲಗೆಯದೇವರ ಶೂನ್ಯ ಸಂಪಾದನೆಯ ಪಾಠದಲ್ಲಿ ಈ ಪ್ರಸಂಗ ಇನ್ನಷ್ಟು ವಿಸ್ತಾರವಾಗಿ, ಕೆಲವು ಮಟ್ಟಿಗೆ ಬೇರೆ ರೀತಿಯಲ್ಲಿ ಜರುಗುತ್ತದೆ. ಮಹಾದೇವಿಯಕ್ಕನು "ಶ್ರೀಕಲ್ಯಾಣದತ್ತಲಭಿಮುಖೆಯಾಗಿ ಬರುತ್ತಿರಲಾಗ ಕಲ್ಯಾಣದ ಹೊಱವಳಯಕ್ಕೆ ತನ್ನ ಲೀಲಾವಿನೋದದಿಂ ಕಿನ್ನರ ಬ್ರಹ್ಮಯ್ಯಗಳು ಬಂದಿರಲಾ ಕಾಲದಲ್ಲಿ ಅಕ್ಕಗಳ ದಿಗಂಬರವೇಷಮಂ ನಿರ್ವಾಣದ ನಿಲುಕಡೆಯಂ ದಿವ್ಯಸ್ವರೂಪಿನ ಲಾವಣ್ಯವಂ ಕಂಡು, ಕಿನ್ನರ ಬೊಮ್ಮಣ್ಣಗಳು— ಈಕೆ ಲಿಂಗಾನುಭಾವ ಸಂಪನ್ನೆಯಾದರೆ ಗುರು ತಾಯೆಂದು ಶರಣೆಂಬೆನು. ದೇಹಲಜ್ಜಾಭಿಮಾನವುಳ್ಳಡೆ ಸ್ತ್ರೀಯಾಗಿ ಕೈವಿಡಿವೆನು— ಎಂದು ತನ್ನ ತಾ ನಿಶ್ಚೈಸಿ" ಮಹಾದೇವಿಯಕ್ಕನನ್ನು ಒರೆದೊರೆದು ನೋಡಿದನಂತೆ. ಆ ಪ್ರಸ್ತಾವದಲ್ಲಿ ಅವನ ಈ ಎರಡು ವಚನಗಳನ್ನು ಕೊಟ್ಟಿದ್ದಾರೆ:

ಕಾಯದಲ್ಲಿ ಕಳವಳವಿರಲು ಪ್ರಾಣದಲ್ಲಿ ಮಾಯೆಯಿರಲು ಏತಱ ಗಮನ, ಇದೇತಱ ನಿರ್ವಾಣಾ? ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಸಾರಿಯೆಂಬನಲ್ಲದೆ ಸಜ್ಜನೆಯೆಂದು ಕೈವಿಡಿವನಲ್ಲ ಕೇಳಾ ಮರುಳೆ.[೧೨]

ನಿನ್ನ ಸ್ವರೂಪ ಕಂಡೆನ್ನ ದೃಷ್ಟಿ ನಟ್ಟುದೆನಗೆ. ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನಗೆ. ನಿನ್ನ ಪ್ರೌಢಿಯಿಂದ ಕೂಡಿ[ಹೆ]ನೆಂಬುದು ಭಾವದಲ್ಲಿ ಬಚ್ಚಬಱಿಯ ಹೆಂಗುಸಾಗಿ ತೋಱಿತ್ತೆನಗೆ. ಮಹಾಲಿಂಗ ತ್ರಿಪುರಾಂತಕನೆನಗೊಡ್ಡಿದ ಮಾಯೆಯ ನಿನ್ನ ಸಮಸುಖಕೂಟ

---

೧೧. ಇದು ಹಳಕಟ್ಟಿಯವರ 'ಮಹಾದೇವಿಯಕ್ಕನ ವಚನಗಳ'ಲ್ಲಿ ಬಂದಿದೆ. (ಪು. ೪೬–ಸಂ. ೭); ಅಮುಖ್ಯವಾದ ಪಾಠಭೇದವುಂಟು.

೧೨. ಈ ವಚನ ಗೂಳೂರು ಸಿದ್ಧವೀರಣಾರ್ಯನ ಪಾಠದಲ್ಲೂ ಬಂದಿದೆ.

ದೊಳಿರ್ದು ಶಿವಭಾವಭಕ್ತಿಯಿಂ ಗೆಲುವೆನು ಬಾರೌ ಹೆಣ್ಣೆ ಎಂದು ಕೈವಿಡಿದೆನು.[೧೩]

ಕಿನ್ನರ ಬೊಮ್ಮಯ್ಯನ ಈ ಕಾಮಾಸಕ್ತಿಯನ್ನು ಜರೆದು ಧಿಕ್ಕರಿಸುವ ವಚನಗಳು ಇವು:

ನೋಡುವ ಕಂಗಳಿಗೆ ರೂಪಿಂಬಾಗಿರಲು ನೀವು ಮರುಳಾಗಿ ಬಂದಿರಣ್ಣಾ. ಕೇಳಿದ ಶ್ರೋತ್ರ ಸೊಗಸಿಗೆ ನೀವು ಮರುಳಾಗಿ ಬಂದಿರಣ್ಣಾ. ನಾರಿಯೆಂಬ ರೂಪಿಂಗೆ ನೀವು ಒಲಿದು ಬಂದಿರಣ್ಣಾ. ಮೂತ್ರವು ಬಿಂದುವೊಸರುವ ನಾಳವೆಂದು ಕಂಗಾಣದೆ ಮುಂದುಗೆಟ್ಟು ಬಂದಿರಣ್ಣಾ. ಬುದ್ಧಿಗೇಡಿತನದಿಂದ ಪರಮಾರ್ಥದ ಸುಖವ ಹೋಗಲಾಡಿಕೊಂಡು ಇದಾವ ಕಾರಣವೆಂದಱಿಯದೆ ನೀವು ನರಕ ಹೇತುವೆಂದಱಿದು ಮನ ಹೇಸದೆ ಬಂದಿರಣ್ಣಾ. ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿಹ ಪುರುಷರೆನಗೆ ಸಹೋದರ. ಛೀ ಹೋಗು ಮರುಳೆ.

ಬಟ್ಟಿಹ ಮೊಲೆಯ ಭರದ ಜವ್ವನದ ಚೆಲುವ ಕಂಡು ಬಂದಿರಣ್ಣಾ. ಅಣ್ಣಾ ನಾನು ಹೆಂಗೂಸಲ್ಲ, ಅಣ್ಣಾ ನಾನು ಸೂಳೆಯಲ್ಲ. ಅಣ್ಣಾ ಮತ್ತೆ ನನ್ನ ಕಂಡು ಕಂಡು ಆರೆಂದು ಬಂದಿರಣ್ಣಾ? ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪರಮಪುರುಷನು ನಮಗಾಗದ ಮೊಱೆ ನೋಡಣ್ಣಾ.

ಬಳಿಕ ಈ ವಚನ ಬರುತ್ತದೆ :

ಎನ್ನಂತೆ ಪುಣ್ಯಗೆಯ್ದವರುಂಟೆ, ಎನ್ನಂತೆ ಭಾಗ್ಯಗೆಯ್ದವರುಂಟೆ! ಕಿನ್ನರ ನಂತಪ್ಪ ಸೋದರವೆನಗೆ, ಏಳೇಳು ಜನ್ಮದಲ್ಲಿ ಶಿವಭಕ್ತರೆ ಬಳಗವೆನಗೆ, ಚೆನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ.[೧೪]

ಇಷ್ಟಾದರೂ ಕಿನ್ನರಯ್ಯನು ಅರಿತುಕೊಳ್ಳಲಿಲ್ಲ "ಬಱಿಯ ಮಾತಿನ ಬನ್ನಣೆಯ ಪಸರಿಸೆ ನಾನು ಬಿಡುವೆನೆ ಬಾರೆಂದು ತುಡುಕಿ ಹಿಡಿಯಲು ಆ ಮಹಾದೇವಿ ನೀನಿಂತು

---

೧೩. ನಾವು ಹಿಂದೆಯೇ ಉದಾಹರಿಸಿರುವ 'ವಚನಸಂಗ್ರಹ'ದಲ್ಲಿ (ಮೈ.ಓ.ಲೈ K 499) ಕಿನ್ನರಬೊಮ್ಮಯ್ಯನ ಮೂರು ವಚನಗಳಿವೆ. ಆ ಮೂರೂ ಹಲಗೆಯದೇವರ ಶೂನ್ಯಸಂಪಾದನೆಯಲ್ಲಿ ಕಿನ್ನರಯ್ಯ ಮಹಾದೇವಿಯರ ಪ್ರಸಂಗದ ನಿರೂಪಣೆಯಲ್ಲಿ ಬಂದಿರುವುದನ್ನು ಗಮನಿಸಬೇಕು. ಪಾಠಭೇಗಳುಂಟು ; ಮುಖ್ಯವೆಂದು ತೋರಿದವನ್ನು ಆಯಾ ವಚನದ ಕೆಳಗೆ ಈ ಲೇಖನದಲ್ಲಿ ಸೂಚಿಸಿದ್ದೇವೆ. ಮೇಲಿನ ವಚನದ ಪಾಠ ಈ ರೀತಿ ಇದೆ : "ದೃಷ್ಟಿ ನಟ್ಟು ಮನ ಹಾರೈಸಿತೆನಗೆ. ಭಾವದಲ್ಲಿ ಬಱಿಹೆಂಗುಸಾಗಿ ತೋರಿತ್ತೆನಗೆ. ಮಹಾಲಿಂಗ ತ್ರಿಪುರಾಂತಕ ಎನಗೊಡ್ಡಿದ ಮಾಯೆಯ ನಿನ್ನಿಂದ ಮಱೆವೆ ಗೆಲುವೆ." ಈ ಪಾಠದಲ್ಲಿ ಮೂಲದ ಕೆಲವು ಮಾತು ಬಿಟ್ಟುಹೋಗಿದೆಯೋ, ಶೂನ್ಯಸಂಪಾದನೆಯ ಪಾಠವೇ ಇದರ ವಿಸ್ತಾರವೋ—ಮುಂದೆ ನಿರ್ಣಯವಾಗಬೇಕು.

೧೪. ಈ ವಚನ ಗೂಳೂರು ಸಿದ್ಧವೀರಣಾರ್ಯನ ಪಾಠದಲ್ಲಿಯೂ ಬಂದಿದೆ. ಹಳಕಟ್ಟಿಯವರ 'ಮಹಾದೇವಿಯಕ್ಕನ ವಚನ'ಗಳಲ್ಲಿಯೂ ಸೇರಿದೆ. (ಪು. ೧೦-ಸಂ. ೧೧)

ಮುಂದುಗೆಡುವರೆ ನನ್ನ ತನುವನೊಪ್ಪಿಸಿಹೆನು ನಿನ್ನ ಮನಕೆ ಬಂದಂತೆ ಮಾಡಿಕೊಳೆಂದು ಒಪ್ಪಿಸಲು, ಆತಂ ಸರ್ವಾಂಗಸ್ಥಾನಮಾನಂಗಳಂ" ಸ್ಪರ್ಶಿಸಿ ನೋಡಿ ಆಕೆಗೆ ದೇಹಾಭಿಮಾನವಿಲ್ಲದ್ದನ್ನು ತಿಳಿಯುತ್ತಾನೆ. ಆಕೆ ಕಾಮನನ್ನು ಸುಟ್ಟು ಬೂದಿ ಮಾಡಿದ ಕುರುಹನ್ನು ಕಂಡು ಭೀತನಾಗಿ ಈ ವಚನವನ್ನು ಹೇಳುತ್ತಾನೆ :

> ಮಸ್ತಕವ ಮುಟ್ಟಿ ನೋಡಿದರೆ ಮನೋಹರನುಳುಮೆ ಕಾಣಬಂದಿತ್ತು. ಮುಖಕಮಲವ ಮುಟ್ಟಿ ನೋಡಿದರೆ ಮೂರ್ತಿಯ ಉಳಿವು ಕಾಣಬಂದಿತ್ತು. ಕೊರಳ ಮುಟ್ಟಿ ನೋಡಿದರೆ ಗರಳಧರನಿರವು ಕಾಣಬಂದಿತ್ತು. ತೋಳುಗಳ ಮುಟ್ಟಿ ನೋಡಿದರೆ ಶಿವನಪ್ಪು ಕಾಣಬಂದಿತ್ತು. ಉರಸ್ಥಲವ ಮುಟ್ಟಿ ನೋಡಿದರೆ ಕರಸ್ಥಲದಂಗ ಕಾಣಬಂದಿತ್ತು. ಬಸುಱ ಮುಟ್ಟಿ ನೋಡಿದರೆ ಬ್ರಹ್ಮಾಂಡವಡಗಿ[ತ್ತು] ಕಾಣಬಂದಿತ್ತು. ಗುಹ್ಯವ ಮುಟ್ಟಿ ನೋಡಿದರೆ ಕಾಮದಹನ ಕಾಣಬಂದಿತ್ತು. ಮಹಾಲಿಂಗತ್ರಿಪುರಾಂತಕ ದೇವ, ಮಹಾದೇ[ವಿಯ]ಕ್ಕನ ನಿಲವಱಿಯದೆ ಅಳುಪಿ ಕೆಟ್ಟನು.[೧೫]

ಇದಕ್ಕೆ ಉತ್ತರವಾಗಿ, ನಾವು ಹಿಂದೆಯೇ ಉದಾಹರಿಸಿರುವ "ಅಂಗದ ಭಂಗವ...." ಎಂಬ ಮಹಾದೇವಿಯಕ್ಕನ ವಚನ ಬರುತ್ತದೆ. ಆ ಬಳಿಕ, ಕಿನ್ನರಯ್ಯನು ವಿಷಯ ಪರವಶತೆಯಿಂದ ತಾನು ಕೆಟ್ಟೆನೆಂದು ಮೂರು ವಚನಗಳಲ್ಲಿ ಉಮ್ಮಳಿಸಿದ್ದನ್ನು ಕಂಡು, ಮಹಾದೇವಿಯಕ್ಕನು ಅವನನ್ನು ಹೀಗೆ ಸಂತೈಸುತ್ತಾಳೆ :

> ಎಲೆ ಅಣ್ಣಾ ಎಲೆ ಅಣ್ಣಾ ನೀವು ಮರುಳಲ್ಲಾ! ಅಣ್ಣಾ ಎನ್ನನಿನ್ನಳವೆ; ಹದಿನಾಲ್ಕು ಲೋಕದ ನುಂಗಿದ ಕಾಮನ ಬಾಣದ ಗುಣ ಎನ್ನನಿನ್ನಳವೆ? ವಾರುವ ಮುಗ್ಗಿದಡೆ ಮಿಡಿಯಹಱಿಯ ಹೊಯ್ವರೆ? ಮುಗ್ಗಿದ ಭಂಗವ ಮುಂದೆ ರಣದಲ್ಲಿ ತಿಳಿವುದು ನಿನ್ನ ನೀ ಸಂಹರಿಸಿ ಕೈದುವ ಕೊಳ್ಳಿರಣ್ಣಾ. ಚೆನ್ನಮಲ್ಲಿಕಾರ್ಜುನನೆಂಬ ಹಗೆಗೆ ಬೆಂಗೊಡದಿರಣ್ಣಾ.

ಆಗ ಬೊಮ್ಮಯ್ಯನು ಈ ರೀತಿಯಾಗಿ ಬಿನ್ನೈಸುತ್ತಾನೆ :

> ಶರಣಾರ್ತಿ ಶರಣಾರ್ತಿ ಎಲೆ ತಾಯೆ ನಮ್ಮವ್ವಾ, ಶರಣಾರ್ತಿ ಶರಣಾರ್ತಿ. ಕರುಣಾಸಾಗರ ನಿಧಿಯೆ, ದಯಾಮೂರ್ತಿ ತಾಯೆ ಶರಣಾರ್ತಿ ಶರಣಾರ್ತಿ. ಮಹಾಲಿಂಗ ತ್ರಿಪುರಾಂತಕನೊಡ್ಡಿದ ತೊಡಕ ನೀವು ಬಿಡಿಸಿದಿರಾಗಿ ನಿಮ್ಮ ದಯದಿಂದ ನಾನು ಹುಲಿ ನೆಕ್ಕಿ ಬದುಕಿದೆನು, ಶರಣಾರ್ತಿ ತಾಯೆ.[೧೬]

---

೧೫. ಇದು 'ವಚನಸಂಗ್ರಹ'ದಲ್ಲಿ (ಮೈ.ಓ.ಲೈ. K 499) ಕಿನ್ನರ ಬೊಮ್ಮಯ್ಯನ ಹೆಸರಿನಲ್ಲಿ ದೊರೆಯುವ ವಚನ. ಮುಖ್ಯವಾದ ಪಾಠಭೇದಗಳಿಲ್ಲ.

೧೬. ಇದು 'ವಚನಸಂಗ್ರಹ'ದಲ್ಲಿ (ಮೈ.ಓ.ಲೈ. K 499) ದೊರೆಯುವ ಮೂರನೆಯ ವಚನ. ಅಲ್ಲಿ ಇದರ ಪಾಠ ಹೀಗಿದೆ : "ಶರಣುಶರಣಾರ್ತಿ ಎಮ್ಮವ್ವ, ಶರಣು ಶರಣಾರ್ತಿ ದಯಾಮೂರ್ತಳೆ, ಶರಣುಶರಣಾರ್ತಿ ಎನ್ನಕ್ಕ ಮಹಾದೇವಿ. ಮಹಾಲಿಂಗತ್ರಿಪುರಾಂತಕನೊಡ್ಡಿದ ತೊಡಕ ನೀವು ಬಿಡಿಸಿದಿರಾಗಿ ನಿಮ್ಮಿಂದಲಾನು ಬದುಕಿದೆನು, ಎಲೆ ತಾಯೆ ಶರಣು ಶರಣಾರ್ತಿ." ಇಲ್ಲಿ ಮಹಾದೇವಿಯ ಹೆಸರು ಸೇರಿದೆ; "ಹುಲಿ ನೆಕ್ಕಿ ಬದುಕಿದೆನು" ಎಂಬ ಸ್ವಾರಸ್ಯವಾದ ಚಿತ್ರ ಬಿಟ್ಟುಹೋಗಿದೆ.

> ವಿಷಯಗಳು ನಿರ್ವಿಷಯವಾದವಿಂದು. ಕರಣಂಗಳು ತರಹರಿಸಿ ನಿಂದವಿಂದು— ಎನ್ನ ಅಳಿಪೆಂಬ ಅ[ರ]ವಾವು ಮಡಿಯಿ[ತ್ತಿ]ಂದು. ಮಹಾಲಿಂಗ ತ್ರಿಪುರಾಂತಕಯ್ಯಾ ಮಹಾದೇವಿಯಕ್ಕಗಳ ಧರ್ಮದಿಂದ ಹಿಂದಣ ಹುಟ್ಟು ಮುಱಿಯಿತಿಂದು.

ಇಷ್ಟೆಲ್ಲಾ ನಡೆದ ತರುವಾಯ ಮಹಾದೇವಿಯಕ್ಕನೂ ಕಿನ್ನರಬೊಮ್ಮಯ್ಯನೂ ಒಬ್ಬರನ್ನೊಬ್ಬರು ನಮಸ್ಕಾರಪೂರ್ವಕವಾಗಿ ಬೀಳ್ಕೊಳ್ಳುತ್ತಾರೆ; ಈಕೆ ಕಲ್ಯಾಣನಗರಕ್ಕೆ ಬರುತ್ತಾಳೆ.

ಈ ಪ್ರಸಂಗ ಮೇಲಿನ ನಿರೂಪಣೆಯಂತೆಯೇ ನಡೆಯಿತೇ ಹೇಗೆ ಎಂಬುದನ್ನು ನಿರ್ಧರಿಸಿ ಹೇಳುವುದು ಅಸಾಧ್ಯ.[೧೭] ಶೂನ್ಯಸಂಪಾದನೆಯ ಈ ಪಾಠದ ಕರ್ತೃವಿಗೆ ಇಷ್ಟು ವಿವರಣೆಗೆಲ್ಲ ಆಧಾರ ಎಲ್ಲಿ ದೊರೆಯಿತೋ. ಆತನ "ಕಥಾಸಾಂಗತ್ಯ" ಹಾಗಿರಲಿ: ಇಲ್ಲಿ ಉದಾಹರಿಸಿರುವ ವಚನಗಳನ್ನೇ ನೋಡಿದರೂ ಇಂಥದೊಂದು ಸಂದರ್ಭ ನಡೆದಿರುವುದು ಅಸಂಭವವಲ್ಲವೆನ್ನಿಸುತ್ತದೆ. ಈ ವಚನಗಳಲ್ಲಿ ಯಾವುವೂ ಕಲ್ಪನೆಯ ಮಾತುಗಳಂತಿಲ್ಲ. ಮಹಾದೇವಿಯಕ್ಕನ ಒಂದು ವಚನದಲ್ಲಿ ಕಿನ್ನರಯ್ಯನ ಹೆಸರು ಬಂದಿದೆ. ಕಿನ್ನರಯ್ಯನ ವಚನಗಳಲ್ಲಂತೂ ಮಹಾದೇವಿಯ ಹೆಸರೂ ಅವಳನ್ನು ಅವನು ಮುಟ್ಟನೋಡಿದ ವಿಷಯವೂ ಅದಕ್ಕಾಗಿ ಅವನು ಪಟ್ಟ ಅನುತಾಪವೂ ಸ್ಪಷ್ಟವಾಗಿ ಕಾಣಿಸುತ್ತವೆ. ಅಧೋಗತಿಗೆ ಜಾರುತ್ತಿದ್ದ ತಾನು ಆಕೆಯ ಕರುಣೆಯಿಂದ ಉದ್ಧಾರವಾದ ಸಂಗತಿಯನ್ನು ಕಿನ್ನರಯ್ಯನು "ನಾನು ಹುಲಿ ನೆಕ್ಕಿ ಬದುಕಿದೆನು" ಎಂದು ಹೇಳಿರುವುದು ಅರ್ಥಗರ್ಭಿತವಾಗಿದೆ, ಅಕೃತಕವೂ ಆಗಿದೆ.

ಕೌಶಿಕನನ್ನು ಕೊಡಹಿಬಂದಮಾತ್ರಕ್ಕೇ ಮಹಾದೇವಿಯಕ್ಕನ ಕೋಟಲೆಗಳು ಹರಿಯಲಿಲ್ಲ. ಅವಳ ಅನುಪಮವಾದ ಚೆಲುವು ಜೊತೆಯಲ್ಲೇ ಶತ್ರುವಾಗಿ ಉದ್ಧಕ್ಕೂ ಬಂದಿತು. ದಾರಿಯಲ್ಲಿ ಎಷ್ಟೋ ಮಂದಿ ಅವಳ ರೂಪಿಗೆ ಮರುಳಾಗಿ, ಅವಳ ದಿಗಂಬರವೇಷವನ್ನು ಕಂಡು ಉದ್ರಿಕ್ತರಾಗಿ ಕೆಣಕಿ ಪೀಡಿಸಿರಬೇಕು. (ಇಂಥ ಪ್ರಸಂಗಗಳು ನಡೆದಿರಬೇಕೆಂಬುದು ಆಕೆಯ ವಚನಗಳಿಂದಲೇ ವ್ಯಕ್ತವಾಗುತ್ತದೆ). ಕಿನ್ನರಬೊಮ್ಮಯ್ಯನಂಥ ಶಿವಶರಣನನ್ನೂ ಅವಳ ರೂಪು ಸೆಳೆಯದೆ ಬಿಡಲಿಲ್ಲ. ಒಂದು ವೇಳೆ, ಆಕೆಯ ನಿಷ್ಠೆಯನ್ನು ಪರೀಕ್ಷಿಸಲೆಂದೇ ಆತನು ಬಂದಿದ್ದರೂ, ಅವಳನ್ನು ನೋಡಿದ ಬಳಿಕ ಅವನು ಅವಶನಾಗಿ ದುಡುಕಿದ್ದು ನಿಜವೆಂದು ತೋರುತ್ತದೆ. ಮಹಾದೇವಿಯಕ್ಕನು ದೃಢವಿರಕ್ತಿಯ ಬಲದಿಂದ ತನ್ನ ಸತ್ತ್ವವನ್ನು ಕಾಪಾಡಿಕೊಂಡಳು, ಕಿನ್ನರಯ್ಯನನ್ನೂ ಬದುಕಿಸಿದಳು.

---

೧೭ ಚೆನ್ನಬಸವಾಂಕನ ('ಮಹಾದೇವಿಯಕ್ಕನ ಪುರಾಣ'ದಲ್ಲಿ ಸಂಧಿ ೨೯) ಈ ಪ್ರಸಂಗದ ವಿಷಯ ಹೆಚ್ಚು ಕಡಮೆ ಇದೇ ರೀತಿಯಾಗಿ ಬಂದಿದೆ; ಮಹಾದೇವಿಯಕ್ಕನ ಸತ್ತ್ವವನ್ನರಿತ ಬಳಿಕ ಕಿನ್ನರಬೊಮ್ಮಯ್ಯನು ಆಕೆಯನ್ನು ಕಲ್ಯಾಣಕ್ಕೆ ಕರೆದುತಂದನೆಂಬ ಅಂಶ ಹೆಚ್ಚಾಗಿದೆ.

೫

ಹರಿಹರವಿರಚಿತವಾದ 'ಮಹಾದೇವಿಯಕ್ಕನ ರಗಳೆ' ಏಕಮುಖವಾದ ಗುರಿಯನ್ನುಳ್ಳ ಒಂದು ಸುಂದರ ಕಾವ್ಯ. ಮಹಾದೇವಿ "ಭವಿಯ ಸಂಗಂ ತಪ್ಪಿ, ಭವನ ಸಂಗವನಪ್ಪಿ"ದುದೇ ಇದರ ವಸ್ತು. ಗುಪ್ತಗಣನಾಥನೊಬ್ಬನನ್ನು 'ಭವಿ' ಎಂದು ಕರೆದ ತಪ್ಪಿಗಾಗಿ ಈ ರುದ್ರಕನ್ನಿಕೆ ಭೂಮಿಯಲ್ಲಿ ಹೇಗೆ ಅವತರಿಸಿದಳು; ಚೆನ್ನಮಲ್ಲಿಕಾರ್ಜುನದೇವನೊಬ್ಬನಲ್ಲೇ ಮನನಟ್ಟು, ಭವಿಭಕ್ತರೆನ್ನದೆ ಮಿಕ್ಕ ಯಾವ ಪುರುಷನನ್ನೂ ವರಿಸಲು ಒಲ್ಲದಿದ್ದ ಈ ಚೆಲುವೆ ಕೌಶಿಕ ರಾಜನ ಕಣ್ಮನಗಳನ್ನು ಹೇಗೆ ಸೂರೆಗೊಂಡಳು; ತಾನು ಅವನನ್ನು ಮದುವೆಯಾಗದೆ ಹೋದರೆ ತನ್ನ ತಂದೆತಾಯಿಗಳನ್ನು ಅವನು ಕೊಲ್ಲಿಸಿಬಿಡುವನೆಂಬ ಬೆದರಿಕೆಯ ಮಾತನ್ನು ಕೇಳಿ, "ಏನಾಗಿಯಾದೊಡಂ ಭಕ್ತರಂ ರಕ್ಷಿಪುದು! ನಾನಾವಿಧಂ ಬಂದು ಶರಣರಂ ಸಲಹುವುದು" ಎಂಬ ಪುರಾತನ ವಾಕ್ಯವನ್ನು ನೆನೆದು ಈ ಶಿವಭಕ್ತರ ರಕ್ಷಣೆಗೋಸ್ಕರ ತನ್ನ ಶರೀರವನ್ನು ಕೌಶಿಕನಿಗೆ ಹೇಗೆ ಒಪ್ಪಿಸಿಕೊಟ್ಟಳು; ಮಲ್ಲಿಕಾರ್ಜುನನ ಪೂಜೆಯಲ್ಲೂ ಮಾಹೇಶ್ವರರ ಗೋಷ್ಠಿಯಲ್ಲೂ ದಿನವನ್ನೆಲ್ಲಾ ಕಳೆಯುತ್ತಾ ಕೌಶಿಕನ ಸಂಗದ ವಿಷಯಾನುಭವವನ್ನು ಕನಸಿನ ಕೂಟದಂತೆಯೂ ಅದರಲ್ಲಿ ತನ್ನ ಶರೀರಕ್ಕಾದ. ದುಃಖವನ್ನು ತಾನು ಸಾಕ್ಷಿಯಂತೆಯೂ ನೋಡುತ್ತಾ ಕಾಲವನ್ನು ಹೇಗೆ ನೂಕಿದಳು; ಕೌಶಿಕನು ಮೂರು ತಪ್ಪುಗಳನ್ನು ಮಾಡಿದ ಬಳಿಕ, ಹಿಂದೆ ಹೂಡಿದ್ದ ಒಪ್ಪಂದದ ಮೇರೆಗೆ ಬಿಡುಗಡೆಹೊಂದಿ ಕೇಶಾಂಬರೆಯಾಗಿ ಹೊರಟು "ಪುರದ ಹರಭಕ್ತಿ ಪರ್ವತೆಕೆಯ್ದಿ ನಡೆವಂತೆ" ಹೇಗೆ ನಿಷ್ಠೆಯಿಂದ ನಡೆದಳು; ಕೌಶಿಕನು ಮತ್ತೆ ತನ್ನನ್ನು ಪಡೆಯಲು ಒಡ್ಡಿದ ಜಾಲಗಳನ್ನೆಲ್ಲಾ ಪರಿಹರಿಸಿಕೊಂಡು ತನ್ನ ಹಂಬಲಿಕೆಯ ದೈವದಲ್ಲಿ ಹೇಗೆ ಐಕ್ಯವಾದಳು—ಎಂಬೀ ಕಥೆಯನ್ನು ಹರಿಹರನು ರಮ್ಯೋಜ್ಜ್ವಲ ಕಾವ್ಯವಾಗಿ ರಚಿಸಿದ್ದಾನೆ.

ಇದನ್ನು ಕಟ್ಟಲು ಅವನಿಗೆ ಐತಿಹ್ಯಗಳ ಜೊತೆಗೆ ಮಹಾದೇವಿಯಕ್ಕನ ವಚನಗಳೂ ಆಧಾರವಾಗಿದ್ದಂತೆ ತೋರುತ್ತದೆ. ಕಥಾಪುರುಷರ ವಚನಗಳನ್ನು ಅವನು ಸಮಯೋಚಿತವಾಗಿ ಉಪಯೋಗಿಸಿಕೊಂಡಿರುವುದಕ್ಕೆ 'ಬಸವರಾಜದೇವ ರಗಳೆ', 'ನಂಬಿಯಣ್ಣನ ರಗಳೆ' ಮೊದಲಾದವುಗಳಲ್ಲಿ ನಿದರ್ಶನವಿದೆ.[೧೮] ಆದರೆ 'ಮಹಾದೇವಿಯಕ್ಕನ ರಗಳೆ'ಯಲ್ಲಿ ವಚನಗಳ ಪ್ರಸಕ್ತಿ ಬರುವಷ್ಟುಮಟ್ಟಿಗೆ ಅವನ ಬೇರೆ ಯಾವ ಕೃತಿಯಲ್ಲೂ ಬರುವಂತೆ ಕಾಣುವುದಿಲ್ಲ. ಮಹಾದೇವಿ ಸಮಯಸ್ಫೂರ್ತಿಯಿಂದ 'ಗೀತ'ಗಳನ್ನು ಹಾಡುತ್ತಿದ್ದಳೆಂಬುದನ್ನು ಹರಿಹರನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ಕೆಳಗಿನ ನಿದರ್ಶನಗಳನ್ನು ನೋಡಿ :

---

೧೮. ಉದಾಹರಣೆ, 'ಬಸವರಾಜದೇವರ ರಗಳೆ', ಸ್ಥಲ ೧೨ ; 'ನಂಬಿಯಣ್ಣನ ರಗಳೆ', ಸ್ಥಲ ೭.

"ಆಗಳಾಗಳಿನ ಶಿವಾನುಭವಕ್ಕೆ ನವಗೀತಮಂ ಪಾಡೆ" (iv ೩೪)
"ಗೀತಮಂ ಪಾಡುತಂ ಪೊಱಮಟ್ಟು ನಡೆತಂದು" (vii. ೩೯)

"ಕರತಳಕ್ಕೆ ಬಂದ ಮಲ್ಲಿನಾಥನಂ ಸಮರ್ಥೆ ನೋಡಿ
ಹರುಷದಿಂದ ಉರದೊಳೊತ್ತಿ ಕಣ್ಣೊಳೊತ್ತಿ ಮತ್ತೆ ನೋಡಿ
"ಮುದ್ದನಿತ್ತು ಗಲ್ಲಸುಖಕೆ ಬಲ್ಲುದೊಂದು ಸೊಲ್ಲ ಹಾಡಿ"
(v. ೭೯-೮೧)

ಇವುಗಳ ಜೊತೆಗೆ ಕಿನ್ನರ ಬೊಮ್ಮಯ್ಯನ ಹೆಸರನ್ನೆತ್ತುವ ಈ ಕೆಳಗಿನ ಚರಣಗಳನ್ನೂ ಸೇರಿಸಬಹುದು :

"ಬಂದ ಕಿನ್ನರಬೊಮ್ಮಿ ತಂದೆಯಂ ಕಾಣುತುಂ
ಅಂದಂದಿನುಚಿತಕ್ಕೆ ಗೀತಮಂ ಪಾಡುತುಂ" (vii. ೧೯೯-೨೦೦)

ಬಸವಣ್ಣ, ಅಲ್ಲಮಪ್ರಭು ಮೊದಲಾದ ಶರಣರನ್ನು ಮಹಾದೇವಿ ಕಲ್ಯಾಣದಲ್ಲಿ ಸಂಧಿಸಿದ್ದಳೆಂಬ ನಿಶ್ಚಿತವೆಂದೇ ತೋರುವ ವಿಷಯವನ್ನು ಕೂಡ, ಅದು ತನ್ನ ಕಥಾವಾಹಿನಿಯ ಏಕಮುಖತೆಗೆ ಅಡ್ಡಿಯಾಗುವುದೆಂಬ ಶಂಕೆಯಿಂದಲೋ ಏನೋ, ತನ್ನ ಕಾವ್ಯದಲ್ಲಿ ಹೇಳದೆ ಬಿಟ್ಟ ಹರಿಹರನು ಕಿನ್ನರ ಬೊಮ್ಮಯ್ಯನ ಪ್ರಸಂಗವನ್ನು ಇಲ್ಲಿ ಸ್ಮರಿಸಿರುವುದು ಗಮನಾರ್ಹವಾದ ಸಂಗತಿ; ಶೂನ್ಯಸಂಪಾದನೆಯ ಕಥೆಗೆ ಇದು ಬೆಂಬಲವನ್ನು ಕೊಡುತ್ತದೆ. ಕಿನ್ನರಯ್ಯನ ಹೆಸರುಳ್ಳ ಮಹಾದೇವಿಯಕ್ಕನ ಒಂದು ವಚನವನ್ನಾದರೂ ಹರಿಹರನು ನೋಡಿಯೇ ಇರಬೇಕು. ("ಎನ್ನಂತೆ ಪುಣ್ಯಗೆಯ್ದವರುಂಟೆ..." ಎಂಬ ವಚನವೇ ಅದಾಗಿರಬಹುದೆ?) ಆದ್ದರಿಂದಲೇ "ಅಂದಂದಿನುಚಿತಕ್ಕೆ ಗೀತಮಂ ಪಾಡುತಂ" ಎಂಬ ಮಾತಿನಲ್ಲಿ ಅವನು ಮಹಾದೇವಿಯಕ್ಕನ ಪದ್ಧತಿಯನ್ನು ಕೀರ್ತಿಸಿದ್ದಾನೆ.

ಇಷ್ಟೇ ಅಲ್ಲ. 'ಗೀತ'ಗಳ ಹುರುಳು ಏನೆಂಬುದನ್ನು ಹರಿಹರನು ಕೆಲವು ಕಡೆಗಳಲ್ಲಿ ನಿರೂಪಿಸಿ ನಮಗೆ ಉಪಕಾರ ಮಾಡಿದ್ದಾನೆ. ಅವುಗಳನ್ನು ಇಲ್ಲಿ ಪರಿಶೀಲಿಸಬಹುದು. ಸ್ಪಷ್ಟವಾದ ಆಧಾರ ಈಗ ನಮಗೆ ದೊರೆಯತಕ್ಕದ್ದು ಈ ಕೆಳಗಿನ ಕಾವ್ಯಭಾಗಕ್ಕೆ. ಮಹಾದೇವಿ ಭಾಷೆ ಸಲ್ಲಿಸಿ ಹೊರಟುಬಂದಮೇಲೂ ಕೌಶಿಕನು ಅವಳನ್ನು ಬಿಟ್ಟಿರಲಾರದೆ, ಮತ್ತೆ ಒಲಿಸಿಕೊಳ್ಳುವ ಆಸೆಯಿಂದ ಶಿವಭಕ್ತನ ವೇಷ ತಾಳಿ ಬಂದ ಪ್ರಸಂಗದಲ್ಲಿ, ಆಕೆ ಈ ರೀತಿಯಾಗಿ ಹೇಳಿಕೊಂಡಳಂತೆ :

ಬಿಟ್ಟಪ್ಪೆನೆಂದೊಡಂ ಬಿಡದು ನಿನ್ನಯ ಮಾಯೆ
ಒಟ್ಟಯಿಸಿ ಬಂದಡೊಡವಂದಪ್ಪುದೀ ಮಾಯೆ
ಜೋಗಿಗಂ ಜೋಗಿಣಿಯದಾಯ್ತು ನಿನ್ನಯ ಮಾಯೆ
ರಾಗದಿಂ ಸವಣಂಗೆ ಕಂತಿಯಾಯ್ತೀ ಮಾಯೆ
ಭಗವಂಗೆ ಮಾಸಕಬ್ಬೆಯ ಚೋಹವಾಯ್ತಯ್ಯ
ಬಗೆವರಾರವರವರ್ಗೆ ಅವರಂದವಾ[ಯ್ತ]ಯ್ಯ

ಗಿರಿಯನೇಱಿದೊಡಿರದೆ ಗಿರಿಯನೇಱಿತು ಮಾಯೆ
ಪರಿದಡವಿಯಂ ಪೊಕ್ಕೊಡನೆ ಪೊಕ್ಕದು ಮಾಯೆ
ಬೆನ್ನ ಕಯ್ಯಂ ಬಿಡದು ಬಾಪು ಸಂಸಾರವೇ
ಎನ್ನನಂಜಿಸಿತು ಮಝುಬಾಪು ಸಂಸಾರವೇ
ಕರುಣಾಕರಾ ನಿನ್ನ ಮಾಯೆಗಂಜುವೆನಯ್ಯ
ಪರಮೇಶ್ವರಾ ಮಲ್ಲಿನಾಥ ಕರುಣಿಪುದಯ್ಯ
ಇನ್ನೀವೆನಿನ್ನೀವೆನಯ್ಯೋ ಮಹಾದೇವ
ಪನ್ನಗಾಭರಣ ಕರುಣಿಪುದೆಲೆ ಮಹಾದೇವ
ಎಂದು ವೈರಾಗ್ಯದಿಂದಂ ಗೀತಮಂ ಪಾಡಿ
ಮುಂದಿರ್ದ ಕಾಮುಕನನತಿರೋಷದಿಂ ನೋಡಿ....[೧೯]

(vii. ೯೧ ಮುಂ.)

ಶ್ರೀಮಾನ್ ಹಳಕಟ್ಟಿಯವರ ವಚನಸಂಕಲನದಲ್ಲಿ ದೊರೆಯುವ ಈ ಎರಡು ವಚನಗಳನ್ನು ಇದರೊಂದಿಗೆ ಹೋಲಿಸಬಹುದು :

ಬಿಟ್ಟೆನೆಂದರೆ ಬಿಡದೀ ಮಾಯೆ. ಬಿಡದಿದ್ದರೆ ಬೆಂಬತ್ತಿತ್ತು ಮಾಯೆ. ಯೋಗಿಗೆ ಯೋಗಿಣಿಯಾಯಿತ್ತು ಮಾಯೆ. ಸವಣಗೆ ಸವಣಿಯಾಯಿತ್ತು ಮಾಯೆ. ಯತಿಗೆ ಪರಾಕಿಯಾಯಿತ್ತು ಮಾಯೆ. ನಿನ್ನ ಮಾಯೆಗೆ ನಾನಂಜುವಳಲ್ಲ. ಚೆನ್ನಮಲ್ಲಿಕಾರ್ಜುನದೇವ ನಿಮ್ಮಾಣೆ.

(ಪು. ೫–ಸಂ. ೧೫)

ಕಲ್ಲ ಹೊಕ್ಕರೆ ಕಲ್ಲ ಬರಿಸಿದೆ. ಗಿರಿಯ ಹೊಕ್ಕರೆ ಗಿರಿಯ ಬರಿಸಿದೆ. ಭಾಪು ಸಂಸಾರವೇ! ಬೆನ್ನಿಂದ ಬೆನ್ನ ಹತ್ತಿ ಬಂದೆ. ಚೆನ್ನಮಲ್ಲಿಕಾರ್ಜುನಯ್ಯ ಇನ್ನೀವೆ ನಿನ್ನೀವೆ? (ಪು. ೩–ಸಂ. ೭)

ಹರಿಹರನು ಹೇಳುವ ಗೀತಗಳು ಇವೇ ಆಗಿರಬೇಕಲ್ಲವೆ? ಅವುಗಳ ಭಾವವನ್ನೇ ಅಲ್ಲದೆ ಮಾತುಗಳನ್ನೂ ಹಾಗೆಯೇ ಅವನು ಅನುವಾದ ಮಾಡಿದ್ದಾನೆ.[೨೦] "ಕರುಣಾಕರಾ ನಿನ್ನ ಮಾಯೆಗಂಜುವೆನಯ್ಯ" ಎಂಬುದಕ್ಕೆ ಪ್ರತಿಯಾಗಿ ವಚನದಲ್ಲಿ "ನಿನ್ನ ಮಾಯೆಗೆ ನಾನಂಜುವಳಲ್ಲ" ಎಂದು ಇದೆ; ಹರಿಹರನ ಪಾಠದಂತೆಯೇ ಮೂಲ ವಚನವಿದ್ದಿತೋ ಏನೋ.

---

೧೯. ಶ್ರೀಮಾನ್ ಚೆನ್ನಮಲ್ಲಿಕಾರ್ಜುನರು ಸಂಪಾದಿಸಿ ಮುದ್ರಿಸಿರುವ ಪ್ರತಿಯಲ್ಲಿ ಈ ಭಾಗದಲ್ಲಿ ಕೆಲವು ಚರಣಗಳು ಪುನರುಕ್ತವಾಗಿರುವಂತೆ ತೋರುತ್ತದೆ. ಇಲ್ಲಿ ನಾವು ಮೈಸೂರು ಓರಿಯೆಂಟಲ್ ಲೈಬ್ರೆರಿಯ 'ಶರಣರಗಳೆ' ಎಂಬ ಪ್ರತಿಯ (K 348) ಪಾಠವನ್ನು ಮುಖ್ಯವಾಗಿ ಅನುಸರಿಸಿದ್ದೇವೆ. ಹರಿಹರನ ರಗಳೆಯಿಂದ ಮಿಕ್ಕ ಭಾಗಗಳನ್ನು ಉದ್ಧರಿಸುವಾಗಲೂ ಉಚಿತವಾದ ಕಡೆಗಳಲ್ಲಿ ಮೈಸೂರು ಪ್ರತಿಯ ಪಾಠವನ್ನೇ ಅಂಗೀಕರಿಸಿದ್ದೇವೆ.

೨೦. ಶ್ರೀಮಾನ್ ಕೆ.ಜಿ. ಕುಂದಣಗಾರರು ತಮ್ಮ 'ಮಹಾದೇವಿಯಕ್ಕ' ಎಂಬ ಗ್ರಂಥದ ಮುನ್ನುಡಿಯಲ್ಲಿ ಈ ಸಾಮ್ಯವನ್ನು ಗಮನಿಸಿದ್ದಾರೆ.

ಹರಿಹರನ ಕಾವ್ಯಕ್ಕೂ ಮಹಾದೇವಿಯಕ್ಕನ ವಚನಗಳಿಗೂ ಇಷ್ಟು ನಿಕಟವಾದ ಸಂಬಂಧವುಂಟೆಂದು ಅರಿತಮೇಲೆ 'ಗೀತ'ಗಳ ಉಲ್ಲೇಖ ಹೀಗೆಯೇ ನಿರ್ದಿಷ್ಟವಾಗಿ ಅವನ ಕಾವ್ಯದಲ್ಲಿ ಮತ್ತೆಲ್ಲಾದರೂ ಕಾಣಬರುತ್ತದೆಯೇ ಎಂಬುದನ್ನು ನೋಡುವ ಕುತೂಹಲ ಸಹಜವಾಗಿ ಹುಟ್ಟುತ್ತದೆ. ಅಂಥ ಸ್ಥಳಗಳನ್ನು ಕೆಳಗೆ ಸಂಗ್ರಹಿಸಿ ಕೊಟ್ಟಿದೆ.

ಒಮ್ಮೆ ಮಹಾದೇವಿಯಕ್ಕನು ಶಿವಶರಣರ ಗೋಷ್ಠಿಯಲ್ಲಿರುವಾಗ ಸಂಜೆ ಕವಿಯುತ್ತದೆ; ಕೌಶಿಕರಾಜನ ಊಳಿಗದವರು ಅವಳನ್ನು ಕರೆಯಲು ಬರುತ್ತಾರೆ. ಆಗ ಅವಳು "ಮನವಲ್ಲದ ಮನದೊಳೆಂತಕ್ಕೆ ಮಾಹೇಶ್ವರರಂ ಮಹಮನೆಗೆ ಬಿಜಯಂಗೆಯ್ಯ ವೇಳ್ದು ಬಿನ್ನಪಂಗೆಯ್ದು ಕಱ್ಱನೆ ಕಂದಿ ಸುಱ್ಱನೆ ಸುಯ್ದು ಸುಮ್ಮನವುಡುಗಿ ನಡೆತಂದು....

> ದೇವಾ ಉಳಿವ ಕರೆವ ನೇಹವುಂಟೇ? ಸಂಸಾರಕ್ಕಂ ನಮ್ಮಲ್ಲಿ ಗೆಡೆಯಾಡು ಭಕ್ತಿಯುಂಟೇ? ಏನಯ್ಯಾ ಶಿವನೆ ಏನೆಂದು ಪೇಳ್ವೆನೀ ಲಜ್ಜೆಯ ಮಾತಂ—

ಎಂದು ಚೆನ್ನಮಲ್ಲಿಕಾರ್ಜುನಂಗೆ ಮೊರೆಯಿಟ್ಟು ಮುಳಿದು **ಗೀತಮಂ ಪಾಡಿ** ನಿರ್ವೇದದಿಂದ ಕೌಶಿಕನಲ್ಲಿಗೆ ಬರುತ್ತಾಳೆ.

ಇನ್ನೊಮ್ಮೆ ಮಾಹೇಶ್ವರಾರಾಧನೆಗೆ ಹತ್ತು ಸಾವಿರ ಹೊನ್ನು ಬೇಕೆಂದು ಮಹಾದೇವಿ ಭಂಡಾರದ ಅಧಿಕಾರಿಗಳನ್ನು ಕೇಳಿದಾಗ ಅವರು—ಕೌಶಿಕ ರಾಜನು ವೈಹಾಳಿಯಲ್ಲಿದ್ದಾನೆ; ಅವನಿಗೆ ಅರಿಕೆ ಮಾಡಿದಲ್ಲದೆ ಕೊಡಲು ಶಕ್ಯವಿಲ್ಲ—ಎಂದು ಹೇಳಲು, ಈ ಅಭಿಮಾನ ಶಾಲಿನಿ ಮನಗುಂದಿ ತನ್ನ ಆಭರಣಗಳನ್ನೇ ಮಾಹೇಶ್ವರರಿಗೆ ಅರ್ಪಿಸಿ ಕಳಿಸಿಕೊಟ್ಟು, ಬಳಿಕ ಅನುತಾಪದಿಂದ

> "ದೇವಾ ಶಿವಲಾಂಛನವನನೇಜಿಸಿಕೊಂಡು ಮನೆಗೆ ಬಂದವರಂ ಕಡೆಗಣಿಸಿ ಎಂತು ನೋಡುತಿರ್ಪೆನವರ್ಗೆ ಸತ್ಕಾರಮಂ ಮಾಡಲಿಲ್ಲದಿರ್ದೊಡೆ ನ್ನನೀಧರೆಯ ಮೇಲಿರಿಸುವ ಕಾರಣವೇನಭವಾ? ನಿನ್ನವಳೆಂದೆನ್ನ ಮುದ್ದು ತನವಂ ಸಲಿಸುವೊಡಿರಿಸುವುದಿಲ್ಲಾ ಕೈಲಾಸಕ್ಕೆ ಕೊಂಡೊಯ್ವುದು—

ಎಂದು ಚೆನ್ನಮಲ್ಲಿಕಾರ್ಜುನಂಗೆ **ಗೀತಮಂ ಪಾಡುತಿಪ್ಪ** ಸಮಯದೊಳು" ಕೌಶಿಕನು ಹಿಂದಿರುಗಿ ಬಂದು ನಡೆದ ವೃತ್ತಾಂತವನ್ನು ಕೇಳಿ ಭಂಡಾರಿಗಳನ್ನು ಜರೆದು ಬೀಗದಕ್ಕೆಯನ್ನೇ ಮಹಾದೇವಿಗೆ ಒಪ್ಪಿಸಿಕೊಡುತ್ತಾನೆ.

ಮುಂದೆ, ಕೌಶಿಕನ ಮೂರು ತಪ್ಪುಗಳೂ ಸಂದಮೇಲೆ, ಮಹಾದೇವಿಯಕ್ಕನು ಬದುಕಿದೆನೆಂದು ಹರ್ಷಿಸಿ, ತಂದೆತಾಯಿಗಳನ್ನು ಬೀಳ್ಕೊಂಡು ಗುರುವಿನ ಅನುಜ್ಞೆಯನ್ನು ಪಡೆದು,

> "ಅಶನದಾಸೆಯಿಂ ತೃಷ್ಣೆಯ ತೃಷಿಯಿಂ ಬೆಸನದ ಬೇಗೆಯಂ ವಿಷಯದ ವಿಹ್ವಳತೆಯಂ ತಾಪತ್ರಯದ ಕಲ್ಪನೆಗಳಂ ಗೆಲಿದೆನಿನ್ನೀ ನನ್ನಿಚ್ಛೆಯಾದುದು; ಚೆನ್ನಮಲ್ಲಿಕಾರ್ಜುನ ನಿನಗಂಜೆನಂಜೆಂ...

ಎಂದು **ಗೀತಮಂ ಪಾಡಿ"** ವೈರಾಗ್ಯನಿಧಿಯಾಗಿ ಶ್ರೀಶೈಲವನ್ನು ಕುರಿತು ಹೊರಡುತ್ತಾಳೆ.

ಈ ಮೂರು ಕಡೆಗಳಲ್ಲೂ ಮಹಾದೇವಿ ಹಾಡಿದ ಗೀತದ ವಿಷಯವೇನು ಎಂಬುದನ್ನು ಹರಿಹರನು ಸ್ಪಷ್ಟವಾಗಿ ಕೊಟ್ಟಿದ್ದಾನೆ. ಇವಕ್ಕೆ ಆಧಾರವಾಗಿ ನಿಜವಾದ ವಚನಗಳೇ ಇದ್ದಿರಬೇಕೆಂದು ಅದು ಅವನ ಪದ್ಧತಿಯನ್ನರಿತವರಿಗೆ ಮನವರಿಕೆಯಾಗ ದಿರದು. ಈ ಮೂರು ಬಂದಿರುವುದೂ ಹರಿಹರನ ಕಾವ್ಯದ ಆರನೆಯ ಸ್ಥಲದಲ್ಲಿ—ಮಹಾದೇವಿಯಕ್ಕನು ಕೌಶಿಕನ ಸಂಗಡ ಒಲ್ಲದ ಸಂಸಾರವನ್ನು ನಡೆಸುತ್ತಿದ್ದ ಸಂದರ್ಭದಲ್ಲಿ—ಎಂಬುದನ್ನು ಗಮನಿಸಬೇಕು.

ಇನ್ನೊಂದು ಉಲ್ಲೇಖವುಂಟು. ಅದು ಈ ರಗಳೆಯ ಐದನೆಯ ಸ್ಥಲದಲ್ಲಿ, ಮಹಾದೇವಿಯ ನಿರ್ಭರ ಶಿವಪೂಜೆಯನ್ನು ವರ್ಣಿಸುವೆಡೆಯಲ್ಲಿ ಬರುತ್ತದೆ ;

ಗೀತದೊಳಗೆ ನೂತ್ನಭಕ್ತಿ ಜಾತವಾಗಲೋತು ಪಾಡಿ
ಗೀತದೊಳಗೆ [ಶ]ರ್ವನಜೀವು ತೆಱಹುಗುಡದೆ ತೀವಿ ಪಾಡಿ
ಭಕ್ತಿರಸದ ನದಿಯ ನಡುವೆ ಗೀತವುಣ್ಮಿ ಪೊಣ್ಮೆ ಪಾಡಿ
ಭಕ್ತಿಯೊಳ್ ವಿರಕ್ತಿ ನೆಲಸಿ ಮುಕ್ತೆ ಮುಂದುದೋಱೆ ಪಾಡಿ
ಒಲಿದು ಪಾಡಿ ಉಲಿದು ಪಾಡಿ ಮಲೆದು ಪಾಡಿ ಬಲಿದು ಪಾಡಿ
ಸಲುಗೆಯಿಂದ ಗೆಲಿದು ಪಾಡಿ ಪುಳಕವಡರೆ ನೋಡಿ ಪಾಡಿ....
ದೇವ ಎನಗೆ ಭವಿಯ ಸಂಗವೆಂದು ಮಾಣ್ಬುದೆನ್ನ ತಂದೆ
ದೇವ ಬೆರಕೆಯಿಲ್ಲದಚ್ಚ ಭಕುತಿಸುಖವದೆಂದು ತಂದೆ
ಪೂಜೆಯೊಳಗೆ ಮುಚ್ಚಿ ಬೆಚ್ಚಿ ಮನವನೆಂತು ಕೀಲ್ವೆನಯ್ಯಾ
ಪೂಜೆಯೊಳಗೆ ನಟ್ಟದಿಟ್ಟಗಳನದೆಂತು ಕೀಲ್ವೆನಯ್ಯ
....ಎನುತವರ್ಚಿಸುತ್ತುವಲ್ಲಿ ಅಗಲಲಾಱದಾಲಿಸುತ್ತೆ....

(v, ೧೪೯ ಮುಂ.)

ಇಲ್ಲಿ ಗೀತವನ್ನು ಹಾಡಿದಳೆಂಬ ಉಕ್ತಿ ಮಿಕ್ಕ ಕಡೆಗಳಲ್ಲಿರುವಂತೆ ಅನುವಾದದ ಕೊನೆಯಲ್ಲಿ ಬಾರದೆ ಅದಕ್ಕೆ ಅವತರಣಿಕೆಯಾಗಿ ಮೊದಲೇ ಬಂದಿದೆ; ಇಷ್ಟೇ ವಿಶೇಷ. ಇದಕ್ಕೂ ಮಹಾದೇವಿಯಕ್ಕನ ವಚನವೊಂದು ಆಧಾರವಾಗಿರುವುದು ಅಸಂಭವವಲ್ಲ. "ದೇವ ಎನಗೆ **ಭವಿಯ ಸಂಗ**ವೆಂದು ಮಾಣ್ಬುದೆನ್ನತಂದೆ"—ಎಂಬ ಮಾತನ್ನು ಇಲ್ಲಿ ಮುಖ್ಯವಾಗಿ ಲಕ್ಷಿಸಬೇಕು. ಇದು ಮೂಲ ವಚನದಲ್ಲಿಯೇ ಕಾಣಿಸಿಕೊಂಡಿದ್ದ ಪಕ್ಷದಲ್ಲಿ ಮಹಾದೇವಿಯಕ್ಕನ ಮದುವೆಯ ಸಮಸ್ಯೆ ಬಗೆಹರಿದಂತೆಯೇ ಸರಿ.

ಹರಿಹರನು ವೀರಶೈವ ಪುರಾಣಕಾರರಲ್ಲಿ ಮೊದಲನೆಯವನು. ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಮಹಾದೇವಿಯಕ್ಕ, ಬಸವಣ್ಣ ಮೊದಲಾದವರ ಸಮಕಾಲಿಕನಾಗಿ ಜೀವಿಸಿದ್ದನೇ ಎಂಬುದು ಚರ್ಚಾಸ್ಪದವಾದ ವಿಷಯ; ಹದಿಮೂರನೆಯ ಶತಮಾನದ ಪೂರ್ವಾರ್ಧಕ್ಕಿಂತ ಈಚೆನವನಲ್ಲವೆಂಬುದೇನೋ ನಿಸ್ಸಂದೇಹ. ಆ ವೇಳೆಗೆ ಇನ್ನೂ ಈ ಶಿವಶರಣರ ಅನೇಕ ವಚನಗಳು ಜನರ ನಾಲಗೆಗಳಲ್ಲಿ ನಲಿದು ಕಿವಿಗಳಲ್ಲಿ ಝೇಂಕರಿಸುತ್ತಿದ್ದಿರಬೇಕು; ಅವು ಉದಿಸಿದ ಸಂದರ್ಭ

ವೇನೆಂಬುದು ವೃದ್ಧರಿಗೆ ಗೊತ್ತಿದ್ದಿರಬೇಕು. ಹರಹರನು ತನ್ನ ಕಾವ್ಯರಚನೆಯಲ್ಲಿ ಇವನ್ನೆಲ್ಲಾ ಉಪಯೋಗಿಸಿಕೊಂಡಿದ್ದಾನೆ. ಅವನು ಕವಿ; ಹಿಂದಿನವರ ವಚನಗಳನ್ನು ಎಲ್ಲ ಕಡೆಗಳಲ್ಲೂ ಅಕ್ಷರಶಃ ಅನುವಾದ ಮಾಡಿರಲಾರನು. ಆದರೆ, ಇಂಥ ಗೀತವನ್ನು ಮಹಾದೇವಿ ಹಾಡಿದಳೆಂದು ಅವನು ಬಾಯಿಬಿಟ್ಟು ಹೇಳಿರುವ ಮೇಲಿನ ಕಡೆಗಳಲ್ಲಾದರೂ ಆಯಾ ಮೂಲವಚನದ ತಿರುಳನ್ನೂ ಹಲವು ಮಾತುಗಳನ್ನೂ ಉಳಿಸಿಕೊಟ್ಟಿದ್ದಾನೆಂದು ನಾವು ನಂಬಬಹುದು. ಕನ್ನಡನಾಡಿನ ಮೂಲೆಮೂಲೆಗಳಲ್ಲಿ ಅಡಗಿ ಇನ್ನೂ ಬೆಳಕಿಗೆ ಬಾರದಿರುವ ವಚನಸಂಗ್ರಹಗಳಲ್ಲಿ ಹರಿಹರನ ಅನುವಾದಗಳಿಗೆ ಸಂವಾದಿಯಾದ ವಚನಗಳು ದೊರೆಯುತ್ತವೆಯೇ ಎಂಬುದರ ಶೋಧನೆ ಚೆನ್ನಾಗಿ ನಡೆಯಬೇಕಾಗಿದೆ.

೬

ಮಹಾದೇವಿಯಕ್ಕ, ಬಸವಣ್ಣ ಮೊದಲಾದವರ ವಚನಗಳನ್ನು ಹರಿಹರನು 'ಗೀತ' ಗಳೆಂದು ಕರೆದಿದ್ದಾನೆ; ಅವುಗಳನ್ನು ಹಾಡುತ್ತಿದ್ದರೆಂದು ಹೇಳಿದ್ದಾನೆ.[೨೧] ಇವರ ಅನೇಕ ವಚನಗಳಲ್ಲಿ ಒಂದು ಬಗೆಯ ಲಯಬದ್ಧತೆಯೇನೋ ಸ್ಫುಟವಾಗಿ ಗೋಚರಿಸುತ್ತದೆ. ಇವುಗಳ ಧಾಟಿ ಪದ್ಯದಷ್ಟು ಬಿಗಿಯಲ್ಲ, ಸಾಮಾನ್ಯ ಗದ್ಯದಷ್ಟು ಸಡಿಲವೂ ಅಲ್ಲ. ಈ 'ವಚನ'ಗಳಲ್ಲಿ ಎಷ್ಟು ನಿಜವಾಗಿಯೂ ಹಾಡಿನ ಪೂರ್ಣಲಕ್ಷಣವನ್ನು ಒಳಕೊಂಡಿದ್ದುವು: ಎಷ್ಟನ್ನು ರಾಗದ ಛಾಯೆ ಮಾತ್ರ ತೋರಿಸಿ ವಾಚಿಸುತ್ತಿದ್ದರು ಎಂಬುದು ಇನ್ನೂ ನಿಷ್ಕರ್ಷೆಯಾಗಿಲ್ಲ. ಆದರೂ ಈಗ ವಚನವೆಂದು ಕರೆಯಿಸಿಕೊಳ್ಳುತ್ತಿರುವವುಗಳಲ್ಲಿ ಕೆಲವಾದರೂ ಮೊದಲಿಗೆ ಸಲಕ್ಷಣವಾದ ಹಾಡುಗಳಾಗಿದ್ದಂತೆಯೇ ತೋರುತ್ತದೆ. ಇದಕ್ಕೆ ಒಂದು ನಿದರ್ಶನವನ್ನು ಕೊಡಬಹುದು :

> ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ
> ಚಪ್ಪರವನಿಕ್ಕಿ ಮುತ್ತು ಮಾಣಿಕದ ಮೇಲುಕಟ್ಟ ಕಟ್ಟಿ, ಮದುವೆಯ ಮಾಡಿದರು,
> ನಮ್ಮವರೆನ್ನ ಮದುವೆಯ ಮಾಡಿದರು. ಕಂಕಣ ಕೈದಾರ ಸ್ಥಿರಸೇಸೆಯನಿಕ್ಕಿ
> ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು.

ಇದು ಶ್ರೀಮಾನ್ ಹಳಕಟ್ಟಿಯವರ ಸಂಕಲನದಲ್ಲಿದೆ (ಪು. ೮–ಸಂ. ೬) : ಕೆಲವು ಪಾಠಭೇದಗಳೊಡನೆ ಶೂನ್ಯಸಂಪಾದನೆಯ ಎರಡು ಪ್ರತಿಗಳಲ್ಲೂ,[೨೨] ಹಿಂದೆ ನಾವು ಉದಾಹರಿಸಿರುವ ವಚನಸಾರದಲ್ಲೂ ದೊರೆಯುತ್ತವೆ. ಇಲ್ಲೆಲ್ಲಾ ಇದೊಂದು ವಚನ ಮಾತ್ರವಾಗಿದೆ. ಹಲಗೆಯದೇವರ ಶೂನ್ಯ ಸಂಪಾದನೆಯ ಪ್ರತಿಯಲ್ಲಾದರೆ ಈ ರೀತಿಯಾಗಿ ಅದನ್ನು ಕೊಟ್ಟಿದ್ದಾರೆ :

---

೨೧. ಸಿದ್ಧರಾಮನ ವಚನಗಳನ್ನು ಶಿಷ್ಯರು ರಾಗಬದ್ಧವಾಗಿ ಹಾಡುತ್ತಿದ್ದರೆಂದು ರಾಘವಾಂಕನು ಹೇಳಿರುವುದನ್ನೂ ಇಲ್ಲಿ ಗಮನಿಸಬಹುದು. "ಹಾಡುತಿರ್ದರು ಗುಡ್ಡಕೊಲಿದು ಗುರುವಿನ ವಚನಮಂ ಶುದ್ಧಭೈರವಿಯಲಿ" (ಸಿದ್ಧರಾಮಚಾರಿತ್ರ, viii. ೬೨)

೨೨. ಸಿದ್ಧಲಿಂಗಯತಿ, ಸಿದ್ಧವೀರಣಾರ್ಯ—ಇವರ ಪ್ರತಿಗಳು.

ರಾಗ : ಕಾಂಬೋಧಿ

ಪಲ್ಲವಿ ॥ ಎಮ್ಮವರೆನ್ನ ಮದುವೆಯ ಮಾಡಿದರು
ಲಿಂಗಕ್ಕೆನ್ನ ಮದುವೆಯ ಮಾಡಿದರು
ಪಚ್ಚೆಯ ನೆಲಗಟ್ಟು ಕನಕದ ತೋರಣ
ವಜ್ರದ ಕಂಭ ಮಾಣಿಕದ ಚಪ್ಪರವಿಕ್ಕಿ
ಮದುವೆ ॥ ೧ ॥
ಬಸವ ಬಂದಿಗಟ್ಟೆ ಸಂಗಯ್ಯ ಮದವಣಿಗ
ಆನು ಮು[ತ್ತೈ]ದೆ ಶರಣರು ದಿಬ್ಬಣಿಗರು॥ ೨ ॥
ಕಂಕಣ ಕೈದಾರೆಗಟ್ಟೆ[೨೩] ಸ್ಥಿರಸೇಸೆಯನಿಟ್ಟು
ಚೆನ್ನಮಲ್ಲಿಕಾರ್ಜುನನೆಂಬ ಗಂಡನಿಗೆನ್ನ
ಮದುವೆಯ ಮಾಡಿದರು ॥ ೩ ॥[೨೪]
ಪದ ಸಹ ವಚನ ॥

ಇಲ್ಲಿ ರಾಗದ ಹೆಸರನ್ನು ಹೇಳಿ ಪಲ್ಲವಿಯನ್ನು ಪ್ರತ್ಯೇಕವಾಗಿ ಕೊಟ್ಟು ಕೊನೆಯಲ್ಲಿ 'ಪದ'ವೆಂದು ಕರೆದಿರುವುದು ಗಮನಿಸತಕ್ಕ ವಿಷಯ. ಮಹಾದೇವಿಯಕ್ಕನು ಇದನ್ನು ಮೊದಲಿಗೆ ಹಾಡಾಗಿಯೇ ಕಟ್ಟಿದಳೆಂದು ಕಾಣುತ್ತದೆ. ಅಲ್ಲಿಂದೀಚೆಗೆ ಅದು ಸಾಮಾನ್ಯ ವಚನಗಳೊಡನೆ ಬೆರೆತುಹೋಗಿರಬೇಕು. ಮಹಾದೇವಿಯಕ್ಕನ ಇಂಥ ಪದಗಳು ಇನ್ನೂ ಕೆಲವು ಉಂಟು. ಅವುಗಳ ಶೋಧನೆ ಮುಂದುವರಿಯಬೇಕು.

ಇನ್ನೊಂದು ಮಾತು. ಮಹಾದೇವಿಯಕ್ಕನ ವಚನಗಳ ವಿಚಾರ ಮಾಡುವಾಗ ಅದನ್ನು ಹೇಳಿದರೂ ಒಟ್ಟು ವಚನವಾಙ್ಮಯಕ್ಕೇ ಅನ್ವಯಿಸತಕ್ಕದ್ದು: ಅನೇಕ ವಚನಗಳು ಒಂದು ಖಚಿತವಾದ ಪಾಠದಲ್ಲಿ ನಮಗೆ ದೊರೆಯುವುದಿಲ್ಲ; ಬೇರೆ ಬೇರೆ ಮಾತೃಕೆಗಳಲ್ಲಿ ಅವು ಬೇರೆ ಬೇರೆ ರೂಪಗಳನ್ನು ತಾಳುತ್ತವೆ. ಇದಕ್ಕೆ ನಿದರ್ಶನಗಳನ್ನು ಈ ಲೇಖನದಲ್ಲೇ ತಕ್ಕಮಟ್ಟಿಗೆ ಕಂಡಿದ್ದೇವೆ. ಇದರ ಮೇಲೆ, ಹಿಂದಿನವರ ಅಂಕಿತಗಳನ್ನೇ ಉಪಯೋಗಿಸಿ ಕೊಂಡು ಹೊಸ ವಚನಗಳನ್ನು ಕಟ್ಟುವುದು ಸುಲಭ; ಮಿಕ್ಕ ಮತಗಳ ಪೂಜ್ಯ ಗ್ರಂಥಗಳಲ್ಲೂ ಸಾಹಿತ್ಯದಲ್ಲೂ ಈ ಬಗೆಯ ಪ್ರಕ್ಷೇಪಗಳು ಆಗಿರುವುದಕ್ಕೆ ಬೇಕಾದಷ್ಟು ಉದಾಹರಣೆಗಳಿರುವಾಗ ವೀರಶೈವ ಮತದಲ್ಲಿ ಅದು ನಡೆದಿಲ್ಲವೆಂದು ಶಪಥ ಮಾಡುವುದು ಹೇಗೆ? ಇದಲ್ಲದೆ, ಒಂದೇ ವಚನವನ್ನು ಅಂಕಿತದಲ್ಲಿ ವ್ಯತ್ಯಾಸ

೨೩. ಇಲ್ಲಿ 'ಕೈದಾರ' ಎಂದಿಷ್ಟೇ ಇರಬೇಕಲ್ಲವೆ? 'ಗಟ್ಟೆ' ಎಂಬುದೂ ಸೇರಿದರೆ ಪದ್ಯ ಕೆಡುತ್ತದೆ.

೨೪. ಇಲ್ಲಿ ಒಂದನೆಯ ಮತ್ತು ಮೂರನೆಯ ನುಡಿಗಳ ಕೊನೆಯಲ್ಲಿ ಲಿಪಿಕಾರನು ಪಲ್ಲವಿಯ ಕೆಲಕೆಲವು ಮಾತುಗಳನ್ನು ಸೇರಿಸಿರುವಂತೆ ತೋರುತ್ತದೆ. ಅಚ್ಚು ಮಾಡುವಾಗ ಅವುಗಳನ್ನು ಪ್ರತ್ಯೇಕಿಸಿ ಕೊಡಲಾಗಿದೆ.

ಮಾಡಿ ಬೇರೆ ಬೇರೆ ವಚನಕಾರರಿಗೆ ಆರೋಪಿಸಿರುವುದೂ ಉಂಟು.[೨೫] ವಚನ ವಾಙ್ಮಯವನ್ನು ಶಾಸ್ತ್ರೀಯ ರೀತಿಯಲ್ಲಿ ಪರೀಕ್ಷಿಸಿ, ವಿಮರ್ಶಿಸಿ, ಅದರಲ್ಲಿರುವ ಪ್ರಕ್ಷೇಪಗಳನ್ನೂ ತಿದ್ದುಪಾಡುಗಳನ್ನೂ ಅಸಂಗತಗಳನ್ನೂ ನಿರ್ಧರಿಸಬೇಕು; ವಚನಗಳ ಶುದ್ಧಪಾಠವನ್ನು ಆಧಾರಸಹಿತವಾಗಿ ಪ್ರಕಟಿಸಬೇಕು. ಇದಕ್ಕಾಗಿ ಎಲ್ಲ ಆಕರಗಳನ್ನೂ ಉಪಯೋಗಿಸಿಕೊಳ್ಳಬೇಕು.[೨೬] ಈ ಕಾರ್ಯವು ಸಮರ್ಪಕವಾಗಿ ನಡೆದು, ಮಹಾದೇವಿಯಕ್ಕನ ವಚನಗಳ ಭಾಷೆ ಶೈಲಿಗಳು, ಅವಳ ವ್ಯಕ್ತಿತ್ವ ಜೀವನವೃತ್ತಾಂತಗಳು—ಇವನ್ನೆಲ್ಲಾ ಕುರಿತು ಅಭಿಪ್ರಾಯಗಳನ್ನು ಹೂಡುವುದಕ್ಕೆ ಭದ್ರವಾದ ನೆಲೆಗಟ್ಟು ಬೇಗ ಸಿದ್ಧವಾಗಲಿ.

ಪರಿಶಿಷ್ಟ

ಈ ಲೇಖನ ಮೊದಲ ಬಾರಿ ಮುದ್ರಿತವಾದೀಚೆಗೆ ಶ್ರೀಮಾನ್ ಹಳಕಟ್ಟಿಯವರು ಪ್ರಕಟಿಸಿರುವ 'ಮಹಾದೇವಿಯಕ್ಕನ ವಚನಗಳ' ಆವೃತ್ತಿಗಳಲ್ಲಿ (೪ನೆಯ ಆವೃತ್ತಿ : ೧೯೪೨; ೫ನೆಯ ಆವೃತ್ತಿ : ೧೯೪೪) ಅವರೇ ಸೂಚಿಸಿರುವಂತೆ, ನಾಲ್ಕು ವಚನಗಳು ಹೆಚ್ಚಾಗಿ ಸೇರಿವೆ. ಇವೆಲ್ಲವೂ ನಮ್ಮ ಲೇಖನದಲ್ಲಿ ಆಗಲೇ ಉದ್ಧೃತವಾಗಿರತಕ್ಕವು.

* * *

ಈಚೆಗೆ ಶ್ರೀಮಾನ್ ಎಚ್. ದೇವೀರಪ್ಪನವರು 'ಮಹಾದೇವಿ—ಕೌಶಿಕ' ಎಂಬ ಲೇಖನವನ್ನು ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ 'ಸಾಹಿತ್ಯ ಸಮಿತಿ ಪತ್ರಿಕೆ'ಯಲ್ಲಿ ಪ್ರಕಟಿಸಿದ್ದಾರೆ (೫, ೨, ೩ : ಆಗಸ್ಟ್, ನವಂಬರ್ ೧೯೪೫). ಈ

---

೨೫. ಉದಾಹರಣೆಗೆ, ಶ್ರೀಮಾನ್ ಹಳಕಟ್ಟಿಯವರ ಸಂಕಲನದಲ್ಲಿ "ಊರ ಸೀರಗೆ...." (ಪು. ೩–ಸಂ. ೬) ಎಂಬುದು ಮಹಾದೇವಿಯಕ್ಕನ ಅಂಕಿತದೊಡನೆ ಬಂದಿದೆ; ಇದೇ ವಚನವೇ ಬಸವಣ್ಣನ ಅಂಕಿತದಲ್ಲೂ ಸಿಕ್ಕುತ್ತದೆ (ಬಸವೇಶ್ವರನ ವಚನಗಳು, ಪು. ೪೬, ಸಂ. ೬೦). ಇದು ಮೂಲತಃ ಬಸವಣ್ಣನ ವಚನವೇ ಆಗಿರಬೇಕು; ತಾನೇ ಹೆಚ್ಚಾಗಿರುವ ಮಹಾದೇವಿಯಕ್ಕನು "ಹೊನ್ನೆನ್ನದು, **ಹೆಣ್ಣೆನ್ನದು**...." ಎಂದು ನೆನೆದಿರಲಾರಳು.
ಹೀಗೆಯೇ, "ಸಜ್ಜನನಾಗಿ ಮಜ್ಜನಕ್ಕೆರೆವೆ, ಶಾಂತನಾಗಿ...." ಎಂಬ ವಚನ ಪಾಠವನ್ನು ನೋಡಿದರೆ (ಪು. ೧೫–ಸಂ. ೭) ಅದು ಯಾರೋ ಗಂಡಸಿನ ಮಾತೆಂದು ತೋರುತ್ತದೆ.
"ಅಯ್ಯಾ ಆದಿ ಅನಾದಿಯಿಂದತ್ತತ್ತ...." ಎಂಬುದು (ಪು. ೬–ಸಂ. ೧೯) ನಿಜವಾಗಿ ಘಟ್ಟಿವಾಳಯ್ಯನ ವಚನ ; "ಚಿಕ್ಕಯ್ಯಪ್ರಿಯ ಸಿದ್ಧಲಿಂಗ" ಎಂಬ ಅದರ ಅಂಕಿತದಿಂದ ಇದು ಸ್ಪಷ್ಟವಾಗುತ್ತದೆ. ಇದರಲ್ಲಿ ವಚನಕಾರನು "ಚೆನ್ನಮಲ್ಲಿಕಾರ್ಜುನನರ್ಧಾಂಗಿನಿ" ಯನ್ನು ಸಂಬೋಧಿಸಿದ್ದಾನೆ ; ಅಷ್ಟೇ.

೨೬. 'ಮಹಾದೇವಿಯಕ್ಕನ ಸಾಂಗತ್ಯ'ವೆಂಬ ಗ್ರಂಥದಲ್ಲಿ ಆಕೆಯ ಏಳು ವಚನಗಳು 'ಗಿರಿಮಲ್ಲಿಕಾರ್ಜುನ' ಎಂಬ ಅಂಕಿತದೊಡನೆ ದೊರೆಯುವುವು ಎಂಬುದನ್ನು ಶ್ರೀಮಾನ್ ರಂ.ಶ್ರೀ. ಮುಗಳಿಯವರು ಪರಿಶೋಧಿಸಿರುವ ಅಂಶವನ್ನು ಇಲ್ಲಿ ಸ್ಮರಿಸಬಹುದು ('ಶರಣಸಾಹಿತ್ಯ', ಸಂ. ೧, ಪು. ೩೫೨–೩).

ಲೇಖನದ ಕೊನೆಯಲ್ಲಿ ತೀರ್ಥಹಳ್ಳಿಯ ತಾಲ್ಲೂಕು ಕವಿಲೆದುರ್ಗದ ಮಹಾಮಂತಿನ ಮಠದ ಸ್ವಾಮಿಗಳು ತಮಗೆ ಕೊಟ್ಟ ಓಲೆಗರಿಯ ಪ್ರತಿಯಲ್ಲಿದ್ದ ಮಹಾದೇವಿಯಕ್ಕನ ೨೩ ವಚನಗಳನ್ನು ಮುದ್ರಿಸಿ ಉಪಕಾರ ಮಾಡಿದ್ದಾರೆ. (ಇವುಗಳಲ್ಲಿ ಕೆಲವು ಅವರ ಲೇಖನದೊಳಗೂ ಉಚಿತವಾದ ಕಡೆಗಳಲ್ಲಿ ಉದಾಹೃತವಾಗಿವೆ.) ಈ ವಚನಗಳಲ್ಲಿ ಒಂಬತ್ತು ಮಾತ್ರ ಹಳಕಟ್ಟಿಯವರು ಸಂಪಾದಿಸಿರುವ ಗ್ರಂಥದಲ್ಲಿ ದೊರೆಯುತ್ತವೆ; ಮಿಕ್ಕವು ಪ್ರಕಟವಾಗುವುದಕ್ಕೆ ಇದೇ ಮೊದಲು. ಈ 'ಹೊಸ' ವಚನಗಳಲ್ಲಿ ಮಹಾದೇವಿಯಕ್ಕನ ಆತ್ಮಕಥೆಯ ದೃಷ್ಟಿಯಿಂದ ಗಮನಾರ್ಹವೆಂದು ತೋರಿದ ಮೂರನ್ನು ಕೆಳಗೆ ಎತ್ತಿಕೊಟ್ಟಿದೆ :

ಎಮ್ಮೆಗೊಂದು ಚಿಂತೆ, ಸಮಗಾರಗೊಂದು ಚಿಂತೆ; ಧರ್ಮಿಗೊಂದು ಚಿಂತೆ, ಕರ್ಮಿಗೊಂದು ಚಿಂತೆ, ನನಗೆ ನನ್ನ ಚಿಂತೆ. ತನಗೆ ತನ್ನ ತನ್ನ ಕಾಮದ ಚಿಂತೆ. ಒಲ್ಲೆ ಹೋಗು ಸೆಱಗ ಬಿಡು ಮರುಳೆ! ನನಗೆ ಚೆನ್ನಮಲ್ಲಿಕಾರ್ಜುನದೇವರು ಒಲಿಯರೋ ಒಲಿವರೋ ಎಂಬ ಚಿಂತೆ ॥ ೮ ॥

ಕೈಸಿರಿಯ ದಂಡವ ಕೊಳ್ಳಬಹುದಲ್ಲದೆ ಮೈಸಿರಿಯ ದಂಡವ ಕೊಳಲುಂಟೆ? ಉಟ್ಟಂತ ಉಡಿಗೆತೊಡಿಗೆಯನೆಲ್ಲ ಸೆಳೆದುಕೊಳ್ಳಬಹುದಲ್ಲದೆ ಮುಚ್ಚಿ ಮುಸುಕಿರ್ದ ನಿರ್ವಾಣವ ಸೆಳೆದುಕೊಳ್ಳಬಹುದೆ? ಚೆನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ ಉಡಿಗೆ ತೊಡಿಗೆಯ ಹಂಗೇಕೊ ಮರುಳೆ ॥ ೯ ॥

ಇಹಕೊಬ್ಬ ಗಂಡನೆ? ಪರಕೊಬ್ಬ ಗಂಡನೆ? ಲೌಕಿಕಕ್ಕೆ ಒಬ್ಬ ಗಂಡನೆ, ಪರಮಾರ್ಥಕ್ಕೆ ಒಬ್ಬ ಗಂಡನೆ? ನನ್ನ ಗಂಡ ಚೆನ್ನಮಲ್ಲಿಕಾರ್ಜುನದೇವರಲ್ಲದೆ ಮಿಕ್ಕಿನ ಗಂಡರೆಲ್ಲ ಮುಗಿಲ ಮಱೆಯ ಮಣ್ಣ ಬೊಂಬೆಗಳು ॥ ೧೨ ॥

ಹರಿಹರನು ಚಿತ್ರಿಸಿರುವ ಕಥೆಗೆ ಈ ವಚನಗಳು ಚೆನ್ನಾಗಿ ಹೊಂದಿಕೊಳ್ಳುತ್ತವೆಯಲ್ಲವೆ!

ಶ್ರೀಮಾನ್ ದೇವೀರಪ್ಪನವರು ತಮ್ಮ ಲೇಖನದಲ್ಲಿ ಒಂದು ಕಡೆ—

ಒಲುಮೆ ಒಚ್ಚತವಾದವರು ಕುಲಛಲವನಱಸುವರೆ? ಮರುಳು ಗೊಂಡವರು ಲಜ್ಜೆ ನಾಚಿಕೆಯ ಬಲ್ಲರೆ? ಚೆನ್ನಮಲ್ಲಿಕಾರ್ಜುನಗೊಲಿದವರು ಲೋಕಾಭಿಮಾನವ ಬಲ್ಲರೆ ಮರುಳೆ?

ಎಂಬ ಇನ್ನೊಂದು 'ಹೊಸ' ವಚನವನ್ನು ಉದಾಹರಿಸಿ, "ಹೊಸದಾಗಿ ದೊರೆತಿರುವ ಒಂದು ಕಡತದಿಂದ" ಎಂದು ಅದರ ಆಕರವನ್ನು ನಿರ್ದೇಶಿಸಿದ್ದಾರೆ. ವಿಚಾರ ಮಾಡಿದ್ದರಲ್ಲಿ, ಈ ಕಡತ ಅವರ ಮಿತ್ರರೊಬ್ಬರದೆಂದು ಗೊತ್ತಾಗುತ್ತದೆ.

* * *

ಮದರಾಸು ಸರ್ಕಾರದ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರೆರಿಯವರು ಭಾಗಶಃ ಪ್ರಕಟಿಸುತ್ತಿರುವ *A Descriptive Catalogue of the Kannada Manuscripts* ಎಂಬ ಗ್ರಂಥದಿಂದ, ಇದುವರೆಗೂ ಪ್ರಕಾಶಕ್ಕೆ ಬಾರದಿರುವ ಮಹಾದೇವಿಯಕ್ಕನ ವಚನಗಳ ಸಂಗ್ರಹಗಳು ಆ ಪುಸ್ತಕ ಭಂಡಾರದಲ್ಲಿ ಇರುವಂತೆ ಗೊತ್ತಾಗುತ್ತದೆ. ಇವುಗಳ ಉಪಯೋಗವನ್ನು ವಚನ ಸಂಪಾದಕರು ಅವಶ್ಯವಾಗಿ ಪಡೆಯಬೇಕು.

ಕಾವ್ಯ ಸಮೀಕ್ಷೆ : ೧೯೪೭

ಕನ್ನಡ ಭಾರತದಲ್ಲಿ ಶೃಂಗಾರದ ಸನ್ನಿವೇಶಗಳು*

"ವಿರಹಿಗಳ ಶೃಂಗಾರ"

ಕಾವ್ಯರಚನೆಯಲ್ಲಿ ಕಥಾವಸ್ತುವಿಗೆ ದೊರೆಯುವ ಪುರಸ್ಕಾರವು ಕವಿಯಿಂದ ಕವಿಗೆ ಬೇರ್ಪಡುತ್ತದೆ. ಕಥೆಯನ್ನು ನೆವಮಾತ್ರಕ್ಕೆ ಇಟ್ಟುಕೊಂಡು, ತಮಗೆ ಇಷ್ಟಬಂದ ವರ್ಣನೆಯನ್ನೋ ಸಂಗತಿಯನ್ನೋ ತುಂಬ ಲಂಬಿಸತಕ್ಕವರು ಹಲವರುಂಟು. ಚಿತ್ರ ಬರೆಯುವುದಕ್ಕೆ ಗೋಡೆ ಬೇಕಾಗುವಂತೆ ವರ್ಣನೆಗಳನ್ನು ಮಾಲೆಗಟ್ಟುವುದಕ್ಕೆ ಇವರಿಗೊಂದು ಕಥಾಸೂತ್ರ ಬೇಕು; ಅಷ್ಟೆ. ವಸ್ತು ಕಿರಿದಾಗಿದ್ದಷ್ಟೂ ಮನಸ್ಸಿಗೆ ಬಂದದ್ದನ್ನು ಸೇರಿಸಿ ತಮ್ಮ ಕವಿತಾಜಾಲವನ್ನು ಹೆಣೆಯುವುದಕ್ಕೆ ಇವರಿಗೆ ಅವಕಾಶ ಹೆಚ್ಚು. ಕೃತಿಯ ಸಮುದಾಯ ಶೋಭೆಯ ಕಡೆಗೆ ಇವರ ಗಮನ ಅಷ್ಟು ಹೋಗುವುದಿಲ್ಲ. ಶ್ರೇಷ್ಠ ಕವಿಗಳೆನಿಸಿಕೊಂಡವರು ಕೂಡ ಈ ಬಗೆಯ ಆಕ್ಷೇಪಣೆಗೆ ಒಳಗಾಗುತ್ತಾರ. ಆದರೆ ಗದುಗಿನ ನಾರಣಪ್ಪನನ್ನು ಕುರಿತು ಮೇಲಿನ ಮಾತನ್ನು ಆಡುವ ಹಾಗಿಲ್ಲ. ಅವನು ಆರಿಸಿಕೊಂಡದ್ದು ಮಹಾಭಾರತದ ಮಹಾಕಥೆ. ಇದರಲ್ಲಿ ಪ್ರತಿಪಾದಿಸಬೇಕಾದ ಸಂಗತಿಗಳೆಷ್ಟು, ಸಂಘಟನೆಗಳೆಷ್ಟು! ಎಂಥ ಕವಿಯ ಕೈಯಾದರೂ ಇಲ್ಲಿ ಕಟ್ಟಿಹೋಗುತ್ತದೆ. ಇದನ್ನು ವಿಸ್ತರಿಸುವ ಹವ್ಯಾಸಕ್ಕಿಂತಲೂ ಸಂಗ್ರಹಿಸುವ ಸಮಸ್ಯೆಯೇ ಕುಮಾರವ್ಯಾಸನಿಗೆ ಪ್ರಧಾನವಾಗಿರಬೇಕು. ಕನ್ನಡ ಭಾರತದಲ್ಲಿ ಅವನ ಅದ್ಭುತ ಕವಿತಾಶಕ್ತಿ ಪ್ರಕಟವಾಗಿ ಇದು ಕನ್ನಡ ಸಾಹಿತ್ಯದ ಒಂದು ನಾಯಕ

---

* ಕುಮಾರವ್ಯಾಸ ಪ್ರಶಸ್ತಿ.

ರತ್ನವಾಗಿದ್ದರೂ ಈ ಕವಿತಾಸೌಂದರ್ಯವೆಲ್ಲಾ ಕಥೆಗೆ ಅಂಗವಾಗಿ ಬಂದಿರುವುದೇ ಹೊರತು ಕವಿತೆಗಾಗಿ ಕಥೆಯನ್ನು ಅವನು ವಿಸ್ತರಿಸಿದವನಲ್ಲ. ಆದ್ದರಿಂದಲೇ ಇಲ್ಲಿಯ ವರ್ಣನೆ ಮೊದಲಾದವುಗಳಲ್ಲಿ—ಯುದ್ಧಪ್ರಸಂಗಗಳನ್ನು ಗಣಿಸದೆ—ಬಿಟ್ಟರೆ ಬಹುಶಃ ಯಾವುದೂ ಹದಮೀರುವುದಿಲ್ಲ. ಭಾರತಕಥೆಗೆ ಆವಶ್ಯಕವಾದ ಹಲವು ಉಪವೃತ್ತಾಂತ ಗಳಲ್ಲಿ ಬಹುಶಃ ಯಾವುದೂ ಉಚಿತವಿಸ್ತಾರದ ಎಲ್ಲೆಯನ್ನು ದಾಟುವುದಿಲ್ಲ.

ಶೃಂಗಾರವು ವಿಶ್ವಮೋಹಕವಾದ ರಸ. ಇದರ ನಿರೂಪಣೆಯಲ್ಲಿ ಕವಿಗಳಿಗೆ ಸಾಮಾನ್ಯವಾಗಿ ಅತ್ಯುತ್ಸಾಹವಿರುತ್ತದೆ. ಬೇರೆ ಕಡೆಗಳಲ್ಲಿ ಮನಸ್ಸನ್ನು ಎಷ್ಟು ಬಿಗಿ ಹಿಡಿದಿದ್ದರೂ ಇಲ್ಲಿ ಅವರು ಸ್ವಚ್ಛಂದವಾಗಿ ವರ್ತಿಸುತ್ತಾರೆ; ಶೃಂಗಾರದ ಸನ್ನಿವೇಶಗಳನ್ನು ತರುವುದಕ್ಕೆ ಎಷ್ಟೋ ಸಲ ಕಥೆಯ ನೇರವಾದ ಮಾರ್ಗವನ್ನು ಬಿಟ್ಟು ಅತ್ತಿತ್ತ ಹೊರಳುತ್ತಾರೆ. ಕನ್ನಡ ಕವಿಗಳಿಗೆ ಕುಲಗುರುವಾದ ಪಂಪನಲ್ಲಿ ಕೂಡ ಈ ದೌರ್ಬಲ್ಯವನ್ನು ನಾವು ಕಾಣದೆ ಇಲ್ಲ. ತನ್ನ ಭಾರತದ ನಾಲ್ಕೈದನೆಯ ಆಶ್ವಾಸಗಳಲ್ಲಿ ಅವನು ಅರ್ಜುನ–ಸುಭದ್ರೆಯರ ವಿರಹಸಂತಾಪವನ್ನು ದೀರ್ಘಗೊಳಿಸಿರುವುದೂ ಅರ್ಜುನನನ್ನು ಸುಮ್ಮಸುಮ್ಮನೆ ಸೂಳೆಗೇರಿಯಲ್ಲಿ ತೊಳಲಿಸಿರುವುದೂ ಇದಕ್ಕೆ ನಿದರ್ಶನ. ಕುಮಾರವ್ಯಾಸ ಯೋಗಿಯ ಕಾವ್ಯ ಪದ್ಧತಿಯಲ್ಲಿ ಹಲವು ದೋಷಗಳಿರಬಹುದು. ಆದರೆ ಶೃಂಗಾರ ಪ್ರಿಯತೆಯಿಂದ ತನ್ನ ಕೃತಿಯನ್ನು ಹದಗೆಡಿಸಿದನೆಂದು ಮಾತ್ರ ಅವನನ್ನು ದೂರುವ ಹಾಗಿಲ್ಲ. ಮಿಕ್ಕ ಕವಿಗಳು ಕ್ಲೇಶಪಟ್ಟು ಸಾಧಿಸುವ ಹಲವು ವರ್ಣನೆಗಳಿಗೆ ಇಲ್ಲಿ ಸ್ಥಳವೇ ಸಿಕ್ಕಿಲ್ಲ. ಒಂದು ವೇಳೆ ಅಂಥ ವಿಷಯ ಬಂದರೂ ಅದೂ ಸಂದರ್ಭೋಚಿತವಾಗಿರುತ್ತದೆ; ಕಥಾವಿಸ್ತಾರಕ್ಕೆ ಸಹಾಯಕವಾಗಿರುತ್ತದೆ. ಇದಕ್ಕೆ ಉದಾಹರಣೆಯೊಂದನ್ನು ಕೊಡಬಹುದು. ಪಾಂಡವರು ಅರಣ್ಯವಾಸದಲ್ಲಿದ್ದಾಗ ಅವರ ಮುಂದೆ ತನ್ನ ಸಿರಿಯನ್ನು ಮೆರೆಯ ಬೇಕೆಂದು ಆಲೋಚಿಸಿ ಅವರಿದ್ದ ತಪೋವನಕ್ಕೆ ದುರ್ಯೋಧನನು ಘೋಷ ಯಾತ್ರೆಯ ನೆವದಿಂದ ಬರುತ್ತಾನೆ. ಅವನ ಜೊತೆಯಲ್ಲಿ ರಾಣಿಯವಾಸದವರು; "ಯುವತಿ ಮಯವೋ ಸೃಷ್ಟಿ" ಎನ್ನುವಂತೆ ತಂಡತಂಡದ ಗಣಿಕೆಯರು. ಇವರ ವಿಲಾಸ ಕೇಳಿಯನ್ನು ಕಣ್ಣಾರ ನೋಡಿ ಪಾಂಡವರಿಗೂ ದ್ರೌಪದಿಗೂ ತಮ್ಮ ಹಿಂದಿನ ವೈಭವ ನೆನಪಿಗೆ ಬರಲಿ, ಹೊಟ್ಟೆ ಉರಿಯಲಿ ಎಂದು ಕೌರವನ ಉದ್ದೇಶ. ಈ ಸೊಕ್ಕೇರಿದ ನಾರಿಯರು ತಪೋವನದಲ್ಲೆಲ್ಲಾ ಸುತ್ತಾಡಿ ಅಲ್ಲಿಯ ಮುನಿಗಳ ತಪಸ್ಸಿಗೆ ಭಂಗ ತರುತ್ತಾರೆ. ತಮ್ಮ ಲಲ್ಲೆ ಕುಣಿತಗಳಲ್ಲಿ, ಪುಷ್ಪಾಪಚಯದಲ್ಲಿ, ಜಲಕ್ರೀಡೆಯಲ್ಲಿ, ಯಾರನ್ನೂ ಲೆಕ್ಕಿಸದೆ ಅಲ್ಲಿದ್ದ ಗಂಧರ್ವವನದ ಬಾಗಿಲನ್ನು ಒದೆದು ನೂಕಿ ಒಳಕ್ಕೆ ನುಗ್ಗುತ್ತಾರೆ. ಇದರ ಫಲವಾಗಿ ಗಂಧರ್ವರಾಜನಾದ ಚಿತ್ರರಥನಿಗೂ ದುರ್ಯೋಧನನಿಗೂ ಕಾಳಗ ಮಸಗಿ, ಗಂಧರ್ವರ ಹಿಂಗಟ್ಟುಮುರಿಗೆ ಸಿಕ್ಕಿದ ದುರ್‍ಯೋಧನನು ಕಡೆಗೆ ದ್ರೌಪದಿಯ ಕಾಲುಂಗುಟದ ಸೋಂಕನ್ನು ಪಡೆದು ಬಿಡುಗಡೆ ಹೊಂದಬೇಕಾಗುತ್ತದೆ. ಮಿಕ್ಕ ಕಾವ್ಯಗಳಲ್ಲಿ ಬರುವ ವನವಿಹಾರಕ್ಕೂ ಇದಕ್ಕೂ ಎಷ್ಟು ಅಂತರ! ಇಲ್ಲಿಯ ವರ್ಣನೆ ಇನ್ನೂ ವಿಸ್ತಾರವಾಗಿ ಬಂದಿದ್ದರೂ ಉಚಿತವಾಗಿಯೇ ಇರುತ್ತಿತ್ತು. ಆದರೆ ಆರೋಗ್ಯವನ್ನು ಬಯಸುವವನು ಇನ್ನೂ ಎರಡು ತುತ್ತು ಬೇಕೆನ್ನುವಾಗಲೇ ಊಟ ಬಿಟ್ಟು ಏಳುವಂತೆ ಕುಮಾರವ್ಯಾಸನು ಈ

ಪ್ರಸಂಗವನ್ನು ಸಂಗ್ರಹವಾಗಿ ರಚಿಸಿ ನಮ್ಮ ಕುತೂಹಲವನ್ನು ಬೆಳೆಸಿದ್ದಾನೆ. ಅವನು ಕಥಾನಿರ್ವಹಣದಲ್ಲಿ ವ್ಯಗ್ರನಾಗಿ ಕೈಯಲ್ಲಿರುವ ಅವಕಾಶವನ್ನು ಕೂಡ ಒಂದೊಂದು ಸಲ ಸರಿಯಾಗಿ ಉಪಯೋಗಿಸಿಕೊಳ್ಳುವುದಿಲ್ಲ. ಮೇಲೆ ಸೂಚಿಸಿದಂತೆ ಪಂಪಭಾರತದಲ್ಲಿ ಲಂಬಿಸಿರುವ ಸುಭದ್ರಾಪರಿಣಯದ ವೃತ್ತಾಂತವು ಕುಮಾರವ್ಯಾಸಭಾರತದಲ್ಲಿ ಎಷ್ಟು ಸಂಗ್ರಹವಾಗಿ ಬಂದಿದೆ! "ಬಾಲಕಿಗೆ ಸಂನ್ಯಾಸಿದೇವರ ಮೇಲೆ ಮನವಾಯ್ತವರಿಗೀಕೆಯ ಮೇಲೆ ನೆಲಸಿತು ಚಿತ್ತ." ಎರಡೇ ಪದ್ಯಗಳಲ್ಲಿ ಅವರಿಬ್ಬರ ಅನುರಾಗವು ಪರಮಾವಧಿಯನ್ನು ಮುಟ್ಟುತ್ತದೆ. ನಾವು ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ ಅರ್ಜುನಯೋಗಿ ಸುಭದ್ರೆಯನ್ನು ವರಿಸಿ ಅಪಹರಿಸಿಕೊಂಡು ಹೋಗುತ್ತಾನೆ. ಈ ವೃತ್ತಾಂತ ತನ್ನ ಮುಖ್ಯ ಕಥೆಗೆ ಅವಶ್ಯಕವಲ್ಲವೆಂದೋ ಏಕೆ ನಾರಣಪ್ಪನು ಈ ಭಾಗವನ್ನು ನೀರಸಗೊಳಿಸುವುದಕ್ಕೂ ಹೆದರದೆ ಸಂಕ್ಷೇಪಿಸಿದ್ದಾನೆ. ಕಾವ್ಯಪ್ರಪಂಚದಲ್ಲಿ ಇಂಥ ಕಠೋರ ಸಂಯಮವು ಅಪೂರ್ವ.

ಸುಭದ್ರೆಗಿಂತಲೂ ಮೊದಲೇ ಪರಿಣೀತಳಾದ ದ್ರೌಪದಿಯ ವಿಷಯದಲ್ಲಾದರೆ ನಾರಣಪ್ಪನು ಈ ರೀರಿ ವರ್ತಿಸಲಿಲ್ಲ; ಅವಳ ಸ್ವಯಂವರ ವೃತ್ತಾಂತವನ್ನು ಸಪರಿಕರವಾಗಿ ವರ್ಣಿಸಿದ್ದಾನೆ. ದ್ರೌಪದಿಸುಭದ್ರೆಯರಿಗೆ ಈ ರೀತಿ ತಾರತಮ್ಯವನ್ನು ಕಲ್ಪಿಸಿದ ಕವಿಯ ಔಚಿತ್ಯಜ್ಞಾನವನ್ನು ನೋಡಿ.[೧] ಮಹಾಭಾರತಕ್ಕೆ ನಾಯಕನು ಯಾರೆಂಬ ವಿಚಾರದಲ್ಲಿ ಚರ್ಚೆ ಬೇಕಾದಷ್ಟು ನಡೆಯಬಹುದು; ದೃಷ್ಟಿಭೇದದಿಂದ ಉತ್ತರವೂ ಭಿನ್ನವಾಗಬಹುದು. ಆದರೆ ಅದರ ನಾಯಿಕೆ ದ್ರೌಪದಿಯೆಂಬ ವಿಚಾರದಲ್ಲಿ ಸಂಶಯಲೇಶವೂ ಹುಟ್ಟುವಂತಿಲ್ಲ. ದ್ರೌಪದಿ ಭಾರತದ ಕ್ರಿಯಾಶಕ್ತಿ. ಆದ್ದರಿಂದಲೇ ಕುಮಾರವ್ಯಾಸನು ಅವಳ ಸ್ವಯಂವರದ ಪ್ರಸಂಗವನ್ನು ಉದ್ದೇಶಪೂರ್ವಕವಾಗಿ ಬೆಳಸಿದನು; ಅವಳ ಸೌಂದರ್ಯವನ್ನು ಮನದಣಿಯ ಬಣ್ಣಿಸಿದನು. ನಾವು ಅವಳನ್ನು ಸಕೌತುಕನಯನಗಳಿಂದ ನಿರ್ಭಯವಾಗಿ ನೋಡುವುದು ಇದೊಂದೇ ಕಡೆ. (ಸ್ವಯಂವರವಧುವನ್ನು ಯಾವ ಆಕ್ಷೇಪಣೆಯೂ ಇಲ್ಲದೆ ದಿಟ್ಟಿಸಿ ನೋಡಬಹುದಲ್ಲವೆ.) ಭಾರತಕಥೆಯಲ್ಲಿ ಮುಂದೆ ಉದ್ದಕ್ಕೂ ಸುಡುವ ಕೆಂಡವಾಗುವ ದ್ರೌಪದಿ ಇಲ್ಲಿ ಮಾತ್ರ ಶೀತಳ ಮಾಣಿಕವಾಗಿದ್ದಾಳೆ:

ಪರಿಮಳದ ಪರಮಾಣುಗಳ ಸಂ
ವರಿಸಿ ಮುಕ್ತಾಫಲದ ಕೆಂದಾ
ವರೆಯ ಮಿಡಿದುಂಬಿಗಳ ವರ್ಣಾಂತರವನಳವಡಿಸಿ
ಸರಸವೀಣಾಧ್ವನಿಯ ಹಂಸೆಯ
ಗುರುವಗತಿಗಳನಾಯ್ದು ಮನ್ಮಥ
ವರವಿರಿಂಚಿಯೆ ಸೃಜಿಸಿದನು ಪಾಂಚಲನಂದನೆಯ.

---

೧. ದ್ರೌಪದೀಸ್ವಯಂವರಕ್ಕೆ ಮೊದಲೇ ಬರುವ ಭೀಮ-ಹಿಡಿಂಬಿಯರ ಪ್ರಣಯ ಕಥೆಯನ್ನು ನಾರಣಪ್ಪನು ವಿಸ್ತರಿಸಿಲ್ಲ.

ಇಲ್ಲಿ ವರ್ಣಿತಳಾಗಿರುವ 'ಚೆಲುವಿಕೆಯ ಚೈತನ್ಯ'ವನ್ನು ಕವಿ ಮನ್ಮಥನೇ ಸೃಜಿಸಿದವನು. ಈ ದ್ರೌಪದಿ ತನ್ನ "ಹೊಸ ಹೊಗರ ಜವ್ವನ"ದ ಠೀವಿಯಿಂದ ಅಲ್ಲಿ ನೆರೆದಿದ್ದ ರಾಜಪುತ್ರರ ಸಮೂಹವನ್ನು ಬೆರಗುವಡಿಸುವಳು. (ಅವಳ ಸೌಂದರ್ಯದ ಮಾತು ಹಾಗಿರಲಿ; "ಕೆಲಕಡೆಯ ಕೆಳದಿಯರ ಕಂಗಳ ಹೊಳಹು ದುವ್ವಾಳಿಯಲಿ ಸುಮತಿ ಸ್ಖಲಿತ ಕೆಂದೂಳಿಯಲಿ ಮಾಸಿತು [ರಾಜಪುತ್ರರ] ಮನದ ಮಡಿವರ್ಗ!") ಮತ್ಸ್ಯಯಂತ್ರವನ್ನು ಭೇದಿಸಲು ಬಂದ ವಿಪ್ರವೇಷದ ಅರ್ಜುನನನ್ನು "ಇತ್ತ ನೋಡೌ ತಾಯೆ ಹಾರುವರತ್ತ ಗಡ್ಡದುಪಾಧ್ಯರನು" ಎಂದು ನಗುತ್ತಾ ಸಖಿಯರು ತೋರಿಸುವಾಗ ಈ ವಧು ನಾಚಿಕೆಯಿಂದ ತಲೆ ತಗ್ಗಿಸಿ ನೆಲವನ್ನು ಉಂಗುಟದಲ್ಲಿ ಔಕುವಳು; ಅವನು ವಿಜಯಶಾಲಿಯಾದ ಬಳಿಕ "ಮನ್ಮಥನ ಹೊಗರಿಟ್ಟ ಅಲಗಿ"ನಂತೆ ಪಲ್ಲಕ್ಕಿಯಲ್ಲಿ ಬಂದಿಳಿದು ಹರ್ಷಮಿಶ್ರವಾದ ಲಜ್ಜೆಯಿಂದ ಅವನ ಕೊರಳಿನಲ್ಲಿ ಸ್ವಯಂವರ ಮಾಲಿಕೆಯನ್ನು ಹಾಕುವಳು. ದ್ರೌಪದಿಯ ಮೂರ್ತಿ ಹೀಗೆ ಸೌಮ್ಯವಾಗಿ ನಮ್ಮ ಕಣ್ಣಿಗೆ ಬೀಳುವುದು ಇದೊಂದೇ ಕಡೆ. ಇಷ್ಟೇ ಅಲ್ಲ, ಈ ದ್ರೌಪದೀಸ್ವಯಂವರವನ್ನು ಬಿಟ್ಟರೆ ಲಲಿತ ಶೃಂಗಾರದ ಪ್ರಸಂಗವೇ ಕನ್ನಡ ಭಾರತದಲ್ಲಿಲ್ಲವೆಂದರೂ ತಡೆಯುತ್ತದೆ.

ಜ್ಞಾತಿಮಾತ್ಸರ್ಯದಿಂದ ಭೀಷಣವಾದ ಭಾರತಕಥೆಯಲ್ಲಿ ಪ್ರಣಯದ ಸನ್ನಿವೇಶಗಳಿಗೆ ಎಡೆ ಸಿಕ್ಕುವುದೇ ವಿರಳ. ಸಿಕ್ಕಿದರೆ, ಆಶ್ರಯಮಹಿಮೆಯಿಂದಲೋ ಏನೋ ಅವಕ್ಕೆ ಒಂದು ರೌದ್ರಚ್ಛಾಯೆ ಮುಸುಕುತ್ತದೆ; ಪ್ರಣಯದ ಪರಿಣಾಮವು ವಿಷಮವಾಗುತ್ತದೆ. ಇಂಥ ಮೂರು ಪ್ರಸಂಗಗಳು ಕನ್ನಡ ಭಾರತದಲ್ಲಿ ಎದ್ದು ನಿಂತಿವೆ. ನಾರಣಪ್ಪನು ಅವುಗಳ ತಿರುಳನ್ನು ಚೆನ್ನಾಗಿ ಹಿಡಿದಿದ್ದಾನೆ; ರಸಪುಷ್ಟಿಯಲ್ಲಿ ವ್ಯಾಸಭಾರತದ ನಿರೂಪಣೆಯನ್ನು ಸರಿಗಟ್ಟತಕ್ಕ—ಅಲ್ಲಲ್ಲಿ ಬಹುಶಃ ಮೀರಿಸತಕ್ಕ—ಸಾಮರ್ಥ್ಯದಿಂದ ಅವುಗಳನ್ನು ಚಿತ್ರಿಸಿದ್ದಾನೆ. ಈ ಸಂದರ್ಭಗಳಲ್ಲಿ ದ್ರೌಪದಿಗೆ ಸಂಬಂಧಪಟ್ಟ ಒಂದನ್ನೇ ಮೊದಲು ತೆಗೆದುಕೊಳ್ಳೋಣ. ಕೀಚಕವೃತ್ತಾಂತವು ಪಾಂಡವರ ಜೀವನದಲ್ಲಿ ಒಂದು ಮುಖ್ಯವಾದ ಸಂಗತಿ. ಅವರು ಕಾಡಿನಲ್ಲಿ ಹನ್ನೆರಡು ವರ್ಷ ತೊಳಲಿ ಬಳಲಿದ ಕೋಟಲೆಗಿಂತಲೂ ಒಂದು ವರ್ಷಕಾಲ ವೇಷ ಮರಸಿಕೊಂಡು ಸರೀಕರ ಮನೆಯಲ್ಲಿ ಸೇವಕರಾಗಿ, ಒದಗಿದ ಅಪಮಾನವನ್ನೆಲ್ಲಾ ನುಂಗಿಕೊಂಡು, ಪಟ್ಟ ಕಷ್ಟವೇ ಹೆಚ್ಚು ದುಸ್ಸಹವಾಗಿರಬೇಕು. ಪಾಂಡವರ ಈ ಅಜ್ಞಾತವಾಸದ ಮೂಗುಬ್ಬಸ ಬಿಚ್ಚಿ ಕಾಣುವುದು ಕೀಚಕವೃತ್ತಾಂತದಲ್ಲಿ. ಇದರ ಮೇಲೆ, ಇಲ್ಲಿ ಭೀಮನು ತೋರ್ಪಡಿಸಿದ ಅನನ್ಯಬಾಹುಬಲದ ಸುದ್ದಿ ಹರಡಿದ್ದರಿಂದ ತಾನೆ ದುರ್ಯೋಧನಾದಿಗಳಿಗೆ ಪಾಂಡವರ ನೆಲೆ ತಿಳಿದು ವಿರಾಟಪರ್ವದ ಮುಖ್ಯ ವಿಷಯವಾದ ಗೋಗ್ರಹಣವು ಒದಗಿದ್ದು. ನಾರಣಪ್ಪನು ಕೀಚಕವೃತ್ತಾಂತದ ಈ ಸ್ವಾರಸ್ಯವನ್ನೂ ಔಚಿತ್ಯವನ್ನೂ ಅರಿತು ತನ್ನ ಕೃತಿಯಲ್ಲಿ ಅದನ್ನು ವಿಸ್ತರದಿಂದ ವರ್ಣಿಸಿದ್ದಾನೆ.

ಅನಾಥೆಯೆನಿಸಿದ ಸುಂದರಿಯೊಬ್ಬಳು ಅರಮನೆಯಲ್ಲಿ ಗೌಡಿಯಾಗಿದ್ದರೆ ಅವಳು ಕಾಮುಕರ ಬೇಟೆಯ ಹಕ್ಕಿಯಾಗುವುದು ತುಂಬ ಸಹಜ. ತಾನು ವಿರಾಟನ ರಾಣಿಯ

ಸೇವೆಗೆ ನಿಲ್ಲುವಾಗ ಎಷ್ಟು ನಿಬಂಧನೆಗಳನ್ನು ಮಾಡಿಕೊಂಡಿದ್ದರೇನು, ತನ್ನ ಪತಿಗಳಾದ ಗಂಧರ್ವರೈವರ ಕಾವಲು ತನಗುಂಟೆಂಬ ವರ್ತಮಾನವನ್ನು ಹಬ್ಬಿಸಿದ್ದರೇನು, ದ್ರೌಪದಿಯ ಸೌಂದರ್ಯದಿಂದ ಅವಳಿಗೆ ಪೀಡೆ ತಟ್ಟದಿರುವುದಂತೂ ಶಕ್ಯವಲ್ಲ. ಸಾಮಾನ್ಯರು ಅವಳನ್ನು ಕೆಣಕಲು ಹಿಂಜರಿಯಬಹುದು. ಆದರೆ ತನ್ನ ಅಕ್ಕನ ಓಲಗದಲ್ಲಿ ದ್ರೌಪದಿಯ ರೂಪು ಇನ್ನೂ ಸಾಣೆ ಹಿಡಿದಂತಾಗಿ "ಪಾಂಡವರ ದುರುಪದಿಯ ರೂಪಿಂಗೈದು ಮಡಿಯೀ ಸತಿಯ ವಿಭ್ರಮ" ಎಂದು ಅವನಿಗೆ ತೋರಿದ ಬಳಿಕ ಅವನು ತನ್ನ ಮನೋವೃತ್ತಿಯನ್ನು ತಡೆಯುವನೆ? ಕೀಚಕನು ರಾಜನ ಬಂಧು. ಅವನ ಬಲಭುಜ; ಕೀಚಕನೇ ಮತ್ಸ್ಯದೇಶಕ್ಕೆ ನಿಜವಾದ ದೊರೆಯಾಗಿದ್ದನೆಂದರೂ ತಡೆಯುತ್ತದೆ. ಯಾರ ಅಂಕೆಯೂ ಇಲ್ಲದವನು ಕಾಣದ ಗಂಧರ್ವರಿಗೆ ಬೆದರುವನೆ? ತನ್ನ ಸಾಮದಾನೋಕ್ತಿಗಳಿಗೆ ದ್ರೌಪದಿ ಒಡಂಬಡದಿರಲು, ಕೀಚಕನು ಅಕ್ಕನ ಮುಂದೆ ಗೋಳಾಡಿ ಅವಳ ಮನಸ್ಸನ್ನು ಕರಗಿಸಿ, ಮಧುವನ್ನು ತರುವ ನೆವದಿಂದ ದ್ರೌಪದಿಯನ್ನು ತನ್ನ ಮನೆಗೆ ಅವಳು ಕಳಿಸಿಕೊಡವಂತೆ ಕುಟಿಲೋಪಾಯವನ್ನು ಹೂಡುವನು. ಕೀಚಕನ ದುರಭಿಪ್ರಾಯವನ್ನು ದ್ರೌಪದಿ ಅರಿತಿದ್ದರೂ ಸೇವಾಧರ್ಮಕ್ಕೆ ಕಟ್ಟುಬೀಳಬೇಕಾಗುವುದು. "ಕುರುಕುಲಾಗ್ರಣಿ ಸೆಳೆದವಸ್ತ್ರಾಕರುಷಣದ ಭಯ ಮತ್ತೆ ಬಂದಿದೆ" ಎಂದು ಅಂಜುತ್ತಂಜುತ್ತಲೇ ಕೀಚಕನ ಮನೆಗೆ ಹೋಗುವಳು. ಅಲ್ಲಿ ಇನ್ನೊಮ್ಮೆ ಕೀಚಕನ ಪ್ರಣಯಯಾಚನೆ, ಇನ್ನೊಮ್ಮೆ ದ್ರೌಪದಿಯ ಧಿಕ್ಕಾರ, ಇಂಥ ನಿಶ್ಚಿತ ತಿರಸ್ಕಾರವನ್ನು ಬಹುಶಃ ಹಿಂದೆಂದೂ ಕಾಣದ ಕೀಚಕನಿಗೆ ಬೇಗ ರೋಷ ಬರುವುದು. ಹಿಡಿದ ಕೈಯನ್ನು ಕೊಸರಿಕೊಂಡು ಓಡಿಹೋದ ದ್ರೌಪದಿಯನ್ನು ಬೆಂಬತ್ತಿ ವಿರಾಟನ ಆಸ್ಥಾನದಲ್ಲಿ ಎಲ್ಲರೆದುರಿಗೆ ಒದೆಯುವುದಕ್ಕೂ ಅವನು ಹೇಸುವುದಿಲ್ಲ. ಅಲ್ಲೇ ಯುಧಿಷ್ಠಿರನು ಕಂಕಭಟ್ಟನ ವೇಷದಲ್ಲಿ ದೊರೆಯೊಂದಿಗೆ ಪಗಡೆಯಾಡುತ್ತಾ ಕುಳಿತಿದ್ದಾನೆ; ಅಡಿಗೆಯ ಮಲ್ಲನಾದ ಭೀಮನೂ ನಿಂತಿದ್ದಾನೆ; ಮಿಕ್ಕ ಗಂಡಂದಿರೂ ಇದ್ದಾರೆ. ಆದರೇನು? ಕೀಚಕನಿಗೆ ಹೆದರಿ ರಾಜನಾಗಲಿ ಸಭೆಯವರಾಗಲಿ ತುಟಿಪಿಟಕ್ಕೆನ್ನುವುದಿಲ್ಲ. "ನಾಲುವರ ನಡುವಣ ಹಾವು ಸಾಯದು" ಎಂದು ಮರೆಯಾಗಿ ಮೂದಲಿಸುತ್ತಾ, "ಬಲ ವಿಹೀನರಿಗಾಪ್ತರಿಲ್ಲ" ಎಂದು ಹಲುಬುತ್ತಾ, ದ್ರೌಪದಿ ಕಂಕಭಟ್ಟನನ್ನೇ ಧರ್ಮವನ್ನು ಹೇಳೆಂದು ಕೇಳಿದರೂ ಅವನು ಇದು ಕಾರ್ಯಸಮಯವಲ್ಲವೆಂದು ಸುಮ್ಮನಿದ್ದುಬಿಡುವನು. ಎದುರಿಗಿದ್ದ ಮರವೊಂದನ್ನು ದುರದುರನೆ ನೋಡಿದ ಭೀಮನ ಇಂಗಿತವನ್ನರಿತು ಅವನನ್ನೂ ಸುಮ್ಮನಿರಿಸುವನು. ಮಿಕ್ಕ ತಮ್ಮಂದಿರ ಮಾತನ್ನು ಹೇಳಬೇಕಾಗಿಯೇ ಇಲ್ಲ.

ಮಾನವನ್ನು ಕಾಯುವ ಗಂಡಂದಿರೇ ಹೀಗೆ ಹೇಡಿತನದಿಂದ ಕೈಕಟ್ಟಿ ಕುಳಿತಮೇಲೆ ದ್ರೌಪದಿಯ ಗತಿಯೇನು? ಆ ದಿನವೇನೋ ಸೂರ್ಯನ ಭೃತ್ಯನು ಅದೃಶ್ಯವಾಗಿ ಬಂದು ಕೀಚಕನ್ನೊದೆದು ಅವನ ಕಾಟವನ್ನು ತಪ್ಪಿಸಿದನು. ಬಳಿಕ ದ್ರೌಪದಿ ಅಂತಃಪುರಕ್ಕೆ ದುಃಖದಲ್ಲಿ ಹಿಂದಿರುಗಿದಾಗ ಸುದೇಷ್ಣೆಯೂ ಬಾಯುಪಚಾರಕ್ಕೆ ಸಮಾಧಾನದ ಎರಡು ಮಾತುಗಳನ್ನಾಡಿದಳು. ಆದರೆ ದುಷ್ಟನಾದ ಕೀಚಕನು ಇಂದಲ್ಲದಿದ್ದರೆ ನಾಳೆಯಾದರೂ ತನ್ನ ಮೇಲೆ ಮತ್ತೆ ಕೈಮಾಡದೆ ಬಿಡವನೆ? ಈ ಮಾನಹಾನಿಯ ಸಂಕಟವನ್ನು

ಯಾರಿಗೆ ಹೇಳಿಕೊಳ್ಳುವುದು?" "ಯಮಸುತಂಗಱುಹುವೆನೆ ಧರ್ಮಕ್ಷಮೆಯ ಗರ ಹೊಡೆದಿಹುದು; ಪಾರ್ಥನು ಮಮತೆಯುಳ್ಳವನೆಂಬೆನೇ ತಮ್ಮಣ್ಣನಾಜ್ಞೆಯಲಿ ಭ್ರಮಿತನಾಗಿಹನು." ಭೀಮನೊಬ್ಬನೇ "ಮಿಡುಕುಳ್ಳ ಗಂಡನು"; ಅವನೇ ಇಲ್ಲಿಗೆ ತಕ್ಕವನು. ಅವನಲ್ಲೂ ಹುರುಳಿಲ್ಲದಿದ್ದರೆ ವಿಷಪಾನವೇ ಸರಿ—ಎಂದು ನಿಶ್ಚಯಿಸಿ, ಆ ದಿನ ರಾತ್ರಿ ದ್ರೌಪದಿ ಬಾಣಸದ ಮನೆಗೆ ಬರುವಳು. ತನ್ನ ದುಃಖವು ಎಲ್ಲೆ ಮೀರಿರುವ ಈ ಸಂದರ್ಭದಲ್ಲೂ ಅವಳು ಅಡಿಗೆಯ ಪರಿಕರಗಳ ವೈಭವವನ್ನು ಕಂಡು "ಆರಲಜೆದನೊ ಭೀಮನೀ ಸೂವಾರವಿದ್ಯೆಯ ಭಾಪು ವಿಧಿ ಮುನಿದಾರನಾವಂಗದಲಿ ಬರಿಸದು!" ಎಂದು ವ್ಯಸನದೊಡನೆ ನಸುನಗದೆ ಇರಲಾರಳು. ಇಲ್ಲಿ ಮುಂದೆ ಭೀಮ–ದ್ರೌಪದಿಯರಿಗೆ ನಡೆಯುವ ಸಂಭಾಷಣೆ ಕೀಚಕವೃತ್ತಾಂತದಲ್ಲಿ ಮುಖ್ಯವಾದ ರಸಸ್ಥಾನ. ನಾರಣಪ್ಪನು ಈ ವೀರ ಪಾತ್ರಗಳ ಮನಸ್ಸನ್ನು ಹೊಕ್ಕು ಮಾತುಗಳನ್ನು ಆಡಿಸಿದ್ದಾನೆ.

ದ್ರೌಪದಿ ಬಂದಾಗ ಭೀಮನು ದಿನದ ದುಡಿತದ ಬಳಲಿಕೆಯಿಂದಲೋ ಏನೋ ಬಾರದ ನಿದ್ದೆಯಲ್ಲಿದ್ದನು. ಅವನು ತನ್ನನ್ನು ಹೇಗೆ ಕಾಣುವನೋ ಎಂಬ ಶಂಕೆ ಅವಳಿಗೆ ಸಹಜವಾಗಿ ಹುಟ್ಟಿತು. ಆದರೂ ನೋಡಿಬಿಡೋಣವೆಂದು ಮೆಲ್ಲನೆ ಅವನ ಗಲ್ಲವನ್ನು ಹಿಡಿದಲುಗಿ ಎಬ್ಬಿಸಿದಳು. ತನ್ನ ದುಗುಡದ ಮೋರೆಯನ್ನು ಭೀಮನು ನೋಡಿ ಕಾರಣವನ್ನು ಕೇಳುತ್ತಲೂ ಅವಳು ಒಂದೆ ಮಾತಿನಲ್ಲಿ ಕೀಚಕನಿಂದಾದ ಪರಿಭವವನ್ನು ಜ್ಞಾಪಿಸಿ, "ಎನ್ನನವ ಬೆಂಬಳಿಯಬಿಡ; ನಾನಿನ್ನು ಬದುಕುವಳಲ್ಲ; ಪಾತಕ ನಿನ್ನ ತಾಗದೆ ಮಾಡದು" ಎಂದಳು. ಈ ಮಾತನ್ನು ಕೇಳಿ ಭೀಮನಿಗೆ ಕೋಪ ಬಂದಿತು. ಐದು ಜನ ಗಂಡಂದಿರಿದ್ದರೂ, ದ್ರೌಪದಿ ಕಷ್ಟಕ್ಕೆ ಸಿಕ್ಕಿದಾಗ ಬರುವುದೆಲ್ಲ ತನ್ನೊಬ್ಬನ ಬಳಿಗೇ. ತಾನಾದರೂ ಅವಳ ಹಿಂಸಕರನ್ನು ಇಚ್ಛೆ ಬಂದಂತೆ ನಿಗ್ರಹಿಸು ವುದಕ್ಕುಂಟೆ? ಅಣ್ಣನ ಆಜ್ಞೆ ಹೆಜ್ಜೆ ಹೆಜ್ಜೆಗೂ ಕೈಯನ್ನು ಕಟ್ಟುತ್ತಿದೆ. ಹೀಗಾಗಿ ಭೀಮನಿಗೆ "ಈ ಹುದುವಿನ ಗಂಡತನ" ರೋಸಿಹೋಯಿತು : ನನಗಿನ್ನು ನಿನ್ನ ಸಂಬಂಧವಿಲ್ಲ; ಮಿಕ್ಕ ನಾಲ್ವರಲ್ಲಿ ಹೇಳಿಕೋ ಹೋಗು ಎಂದುಬಿಟ್ಟನು. ಮಿಕ್ಕವರು "ಮಾನಾರ್ಥವೆನೆ ನಿರ್ಗಮಿಸುವರು, ನೀನಲ್ಲದುಳಿದವರುಚಿತಬಾಹಿರರು" ಎಂದು ದ್ರೌಪದಿ ಕೈಮುಗಿದು ಬೇಡಿಕೊಂಡರೂ, ಐದು ಜನ ಗಂಡಂದಿರು ಒಬ್ಬಳನ್ನು ಆಳಲಾರಿರಿ, ನೀವು ಗಂಡರೋ ಭಂಡರೋ ಎಂದು ಹಂಗಿಸಿದರೂ ಅವನು ಮಿಸುಕಲಿಲ್ಲ. "ಈ ನಪುಂಸಕರೊಡನೆ ಹುಟ್ಟಿದ ನಾನು ಮೂಗುಳ್ಳವನೆ!" ನೀನು ಇಷ್ಟಬಂದಂತೆ ಹಂಗಿಸು. ಭೀಮನು "ಹೆಣ್ಣ ಹರಿಬಕ್ಕೋಸುಗವೆ ತಮ್ಮಣ್ಣನಾಜ್ಞೆಯ ಮೀಜೆದ"ನೆಂದು ಜನರು ಆಡಿಕೊಂಡರೆ ನಾನು ಕೇಳಲಾರೆ. ಅರ್ಜುನನ ಬಳಿಗೋ ಯುಧಿಷ್ಠಿರನ ಬಳಿಗೋ ಹೋಗಿ ಅವರನ್ನು ಮರುಗಿಸು. ನಾವು ನಿನ್ನ "ಸೂಳು ಪಾಳೆಯ"ವನ್ನು ಬಿಟ್ಟವರು. "ನಮ್ಮೊಡನೆ ಫಲಸಿದ್ಧಿಯಿಲ್ಲ"—ಎಂದು ಭೀಮನು ಒಳಗಿನ ಬೇಗೆಯನ್ನು ಮೆಟ್ಟಿಕೊಂಡು ತೆಪ್ಪಗೆ ಕುಳಿತನು. ನೆಚ್ಚಿದ್ದ ಒಬ್ಬನು ಹೀಗೆ ಕೈಬಿಡಲು ದ್ರೌಪದಿ ಏನು ಮಾಡಿಯಾಳು: ನನ್ನಂಥ ಹೆಂಗಸರೂ ಭೀಮನಂಥ ಗಂಡಸರೂ ಇನ್ನು ಹುಟ್ಟದಿರಲಿ. ಯಾವ ವಿಷವನ್ನು ಕುಡಿಯಲಿ, ಯಾವ ಬೆಂಕಿಗೆ ಬೀಳಲಿ; "ಸಾವು ಸಮನಿಸದೆನಗೆ" ಎಂದು ಹಲುಬಿದಳು.

ಹಾಗೆಯೇ ತನ್ನ ಬದುಕಿನ ಕಷ್ಟವೆಲ್ಲ ನೆನಪಿಗೆ ಬಂದಿತು: ತಂದೆ ಪಾಂಚಾಲರಾಯ; ಗಂಡಂದಿರು ಪಾಂಡವರು—"ಗೀರ್ವಾಣರಿಂ ಮಿಗಿಲು." ಇಂಥವಳಿಗೆ ಈಗ ಒದಗಿರುವ ಅವಸ್ಥೆಯೋ—"ವಿರಾಟನ ವನಿತೆಯರುಗಳ ಮುಡಿಯ ಕಟ್ಟುವ ತನುವ ತಿಗುರುವ ಕಾಲನೊತ್ತುವ ಕೆಲಸದುತ್ಸಾಹ!" ಪಾಂಡವರ ಸಾಧುತನವನ್ನು ಸ್ಮರಿಸಿ ಅವಳ ರೋಷ ಹೆಚ್ಚಿತು: "ಹಗೆಗಳಿಗೆ ತಂಪಾಗಿ ಬದುಕುವ ಮುಗುದರು....ಭಂಗಕೆ ಹೆಗಲ ಕೊಟ್ಟಾನುವ ವಿರೋಧಿಗಳು" ಪಾಂಡವರಲ್ಲದೆ ಇನ್ನು ಯಾರು! ಪಾಪಿಗಳಿರ, ವೀರರಾಗಿ ಅರಸರಾಗಿ ನನ್ನೊಬ್ಬಳನ್ನು ಆಳಲಾರಿರಿ. ಅಪಕೀರ್ತಿಗೆ ಅಳುಕಲಾರಿರಿ. "ಕೂಳುಗೇಡಿಂಗೊಡಲ ಹೊರೆವಿರಿ."

ಧರೆಯ ಭಂಡಾರವನು ಪುರವನು
ಕರಿ ತುರಗ ರಥ ಪಾಯದಳವನು
ಕುರುಕುಲಾಗ್ರಣಿ ಸೆಳೆದುಕೊಂಡನು ನಿಮ್ಮ ಹೂಱವಡಿಸಿ,
ದುರುಳ ಕೀಚಕಗೆನ್ನ ಕೊಟ್ಟಿರಿ,
ಪರಿಮಿತದಲಿರವಾಯ್ತು ನಿಮ್ಮೈ
ವರಿಗೆ ಲೇಸಾಯ್ತು !....

"ಲೋಗರ ಸೇವೆಯಲಿ ಬೆಂದೊಡಲ ಹೊರೆವಿರಿ! ಸಾವವಳು ನಿಮಗಂಜಲೇಕೆ?" ಎಂದು ಮುಟ್ಟಿ ಮೂದಲಿಸಿದಳು. ಈ ವಾಗ್ಝರಿಯನ್ನು ಭೀಮನು ಸುಮ್ಮನೆ ಕೇಳುತ್ತಾ ಕುಳಿತಿದ್ದಾನೆ. ಅವನ ಮನಸ್ಸು ಇನ್ನೂ ಕರಗಿದಂತೆ ಕಾಣಲಿಲ್ಲ. ತನಗೆ ಮರಣವೇ ಸಿದ್ಧವೋ? ಕೊನೆಯ ಬಾಣವನ್ನು ದ್ರೌಪದಿ ಅವನ ಮೇಲೆಸೆದಳು:

ಭೀಮ ಕೊಟ್ಟೈ ತನಗೆ ಸಾವಿನ
ನೇಮವನು; ನಿಮ್ಮಣ್ಣನಾಜ್ಞೆ ವಿ
ರಾಮವಾಗದೆ ಬದುಕಿ, ಧರ್ಮದ ಮೈಸಿರಿಯನಱಿದು,
ಕಾಮಿನಿಯ ಕೇಳಿಯಲಿ ನೆನೆವುದು;
ತಾಮಸದಿ ತಾ ಮೀಱಿ ನಡೆದು
ದ್ಧಾಮತೆಯ ಸೈರಿಸುವುದು—ಎಂದೆಱಗಿದಳು ಚರಣದಲಿ!

ಈ ಕರುಳು ಇರಿಯುವ ಮಾತಿಗೆ ಯಾವ ಗಂಡಸಿನ ಮನಸ್ಸು ತಾನೆ ಕರಗುವುದಿಲ್ಲ! ಹೆಣ್ಣಿನ ತಂಟೆ ಇನ್ನು ಬೇಡವೆಂದು ರೋಷವನ್ನೆಲ್ಲಾ ಮೂಟೆಕಟ್ಟಿ ಇಟ್ಟಿದ್ದ ಭೀಮನೂ, ಮತ್ತೆ ಕೆರಳಿದನು; ಕಂಬನಿದುಂಬಿದನು; "ಹಗೆಗಳನು ಹಿಂಡಿದನು ಮನದೊಳಗೆ." ದ್ರೌಪದಿಯನ್ನು ತೆಗೆದಪ್ಪಿ, ಕಂಬನಿಯನ್ನು ಮಿಡಿದು ಕುರುಳುಗಲ್ಲಗಳನ್ನು ಸವರಿದನು. ಅಣ್ಣನ ಆಜ್ಞೆಯನ್ನು ಮೀರಿದೆನು; ನಿನ್ನ ಕೆಲಸವಾಯಿತು, ಹೋಗು—ಎಂದನು. ಅವನಿಗೆ ಇನ್ನು ಯಾರ ಅಡ್ಡಿಯೂ ಇಲ್ಲ, ಯಾವ ತಡೆಯೂ ಇಲ್ಲ. ಕೊಟ್ಟ ಮಾತಿನಂತೆ ಮರು ದಿನ ರಾತ್ರಿ ಸ್ತ್ರೀವೇಷದಲ್ಲಿ ಕೀಚಕನನ್ನು ಸಂಧಿಸಿ ಧ್ವಂಸ ಮಾಡುವನು. ಕೀಚಕನ

ಮರಣದ ಸೇಡನ್ನು ತೀರಿಸಿಕೊಳ್ಳಲು ದ್ರೌಪದಿಗೆ ಹಿಂಸೆಕೊಟ್ಟ ಉಪಕೀಚಕರನ್ನು ಅವರ ಅಣ್ಣನ ಹಿಂದೆಯೇ ಯಮಪುರಕ್ಕೆ ಅಟ್ಟುವನು.

ಭೀಮ-ದ್ರೌಪದಿಯರ ಮೇಲಿನ ಸಂವಾದದಲ್ಲಿ ಅಲ್ಲಲ್ಲಿ ಒಂದು ಮಾತು ಬಿರುಸಾಯಿತೆಂದೂ ದ್ರೌಪದಿ ಲಜ್ಜೆಯ ಎಲ್ಲೆಯನ್ನು ಮೀರಿದಳೆಂದೂ ತೋರಬಹುದು. ಆದರೆ ಅವಳ ಅಸಾಮಾನ್ಯವಾದ ದುಃಖವನ್ನು ಜ್ಞಾಪಿಸಿಕೊಂಡರೆ ಈ ಕ್ಷುದ್ರವಾದ ಆಕ್ಷೇಪಣೆಗಳೆಲ್ಲವೂ ಅಡಗಿಹೋಗುತ್ತವೆ. ದ್ರೌಪದಿಗೆ ಮಾನಭಂಗವೊದಗುವುದಕ್ಕೆ ಇದು ಮೂರನೆಯ ಸಲ: "ಮಂದಿಗೆಳೆದನು ಪಾಪ ಕೌರವನಂದು ಮುಂದಲೆವಿಡಿದು; ಸೈಂಧವ ಬಂದು ಬಳಿಕಾರಣ್ಯವಾಸದೊಳೆನ್ನನೆಳೆದೊಯ್ದು; ಇಂದು ಕೀಚಕನಾಯ ಕಾಲಲಿ ನೊಂದೆನು!" ಇಂಥ ವೇಳೆಯಲ್ಲಿ ಅವಳು ಮೃದುವಾದ ಮಾತುಗಳನ್ನು ಆಯುತ್ತಾ ಕುಳಿತುಕೊಳ್ಳಬಹುದೆ? ಭೀಮನನ್ನು ಚುಚ್ಚುವ ಗಂಡುಮಾತುಗಳನ್ನಾಡಿ ಅವನನ್ನು ಕೆರಳಿಸದಿದ್ದರೆ ಅವಳಿಗೆ ಕೀಚಕನ ಕೈಯಿಂದ ನಿಸ್ತಾರವೇ ಇಲ್ಲ. ಈ ಉದ್ದೇಶವನ್ನು ಅವಳು ಎಷ್ಟು ಚೆನ್ನಾಗಿ ಸಾಧಿಸಿದ್ದಾಳೆ! ಮರುಕದಿಂದ ಮೂದಲೆಗೆ, ರೋಷದಿಂದ ಕಂಬನಿಗೆ, ಅವಳ ಹೃದಯದ ಬೇಗೆ ಹೇಗೆ ಹಾಯುತ್ತದೆ! ಅದರ ಕಿಚ್ಚಿನಲ್ಲಿ ವಜ್ರಕರ್ಕಶವಾದ ಮನಸೂ ಕರಗಲೇಬೇಕು. ಇನ್ನು ಅವಳ ಪ್ರಿಯತಮನಾದ ಭೀಮನ ಮಾತೇನು!

ಈ ಪ್ರಸಂಗದಲ್ಲಿ ನಮ್ಮ ಗಮನವೂ ಸಹಾನುಭೂತಿಯೂ ಮುಖ್ಯವಾಗಿ ದ್ರೌಪದಿಯ ಕಡೆಗೇ ಹರಿಯುವುದು ಸಹಜವಾಗಿದೆ. ಕೀಚಕನದು ದುಷ್ಟವರ್ತನೆ. ಅವನು ದ್ರೌಪದಿಗೆ ಕೊಟ್ಟ ಕೋಟಲೆಯನ್ನೂ, ಅವಳನ್ನು ಒರಟುತನದಿಂದ ಎಳೆದಾಡಿದ್ದನ್ನೂ ನೋಡಿ ಭೀಮನಂತೆ ನಮ್ಮ ಮನಸ್ಸೂ ಕನಲುತ್ತದೆ. ಭೀಮನ ತೋಳಿಗೆ ಸಿಕ್ಕಿ ಅವನು ಮಾಂಸದ ಮುದ್ದೆಯಾದಾಗ ದ್ರೌಪದಿಯಂತೆ ನಮಗೂ ಸಮಾಧಾನ ಹುಟ್ಟುತ್ತದೆ. ಕವಿಯ ಭಾವವೂ ಹೀಗೆಯೇ. ಆದರೆ ಅವನು ಕೀಚಕನ ಹೃದಯವನ್ನೂ ನಮಗೆ ತೆರೆದು ತೋರಿಸಿ ಅವನ ವಿಷಯಕ್ಕೂ ನಮ್ಮನ್ನು ಕ್ಷಣಕಾಲ ಮರುಗಿಸದೆ ಬಿಟ್ಟಿಲ್ಲ. ದ್ರೌಪದಿಯ ರೂಪ ಕೀಚಕನನ್ನು ಆಕರ್ಷಣ ಮಂತ್ರದಂತೆ ಸೆಳೆದು ಕಟ್ಟಿತೆಂಬುದು ಕುಮಾರವ್ಯಾಸನ ನಿರೂಪಣೆಯಲ್ಲಿ ಬಲುಚೆನ್ನಾಗಿ ವ್ಯಕ್ತವಾಗುತ್ತದೆ. "ನಟ್ಟ ದೃಷ್ಟಿಯ ತೆಗೆಯಲಾಱದೆ ಸೋತು ಕೀಚಕ ಪಾತಕವ ನೆನೆದ." "ದ್ರುಪದತನುಜೆಯನಾಲಿಯಲಿ ನುಂಗಿದನು." "ಮುಂಗಾಣಿಕೆಯಲೇ ಸೂಱೆವೋದುದು ಮನದ ಸರ್ವಸ್ವ; ಪ್ರಾಣ ಸಡಿಲಿತು; ಬುದ್ಧಿ ಕದಡಿತು." ಈ ಮೋಹಪಾರವಶ್ಯದಲ್ಲಿ ಲಜ್ಜೆವಿವೇಕಗಳು ಎಲ್ಲಿಗೋ ಓಡಿದುವು. ದ್ರೌಪದಿ ತನ್ನನ್ನು ಎಷ್ಟು ನಿರಾಕರಿಸಿದರೂ, ತನಗೆ ನೀತಿಧರ್ಮಗಳನ್ನು ಎಷ್ಟು ಬೋಧಿಸಿದರೂ ಅವನ ಮನಸ್ಸಿಗೆ ನಾಟಲಿಲ್ಲ. "ಮೇಲೆ ಸದ್ಗತಿ ಬೆಂದುಹೋಗಲಿ, ಕಾಲನವರೈತರಲಿ, ಬಂಧುಗಳೇಳಿಸಲಿ, ತನ್ನವರು ತೊಲಗಲಿ, ರಾಣಿಯರು ಬಿಡಲಿ; ಬಾಲೆ ನಿನಗಾನೊಲಿದೆ" ಎಂದು ಸಾರಿದನು. ಕಾಮನ ಬಾಣಕ್ಕೆ ಈಡಾಗಿ ಘಾಸಿಗೊಂಡ ತನ್ನ ಜೀವನವನ್ನು ಉಳಿಸೆಂದು ದ್ರೌಪದಿಗೆ ಕೈಮುಗಿದನು. ಕೀಚಕನ ವಿರಹ ಸಂತಾಪ ಎಷ್ಟು ಘೋರವೆಂದರೆ,

ದ್ರೌಪದಿಗೂ ಅವಳ ಗಂಧರ್ವರಿಗೂ ಹೆದರುತ್ತಿದ್ದ ಸುದೇಷ್ಣೆ ಕೂಡ ಅವನ ಅಳಲಿಗೆ ಮರುಗಿದಳು. ಈ ಪರಿಸ್ಥಿತಿಯಲ್ಲಿ ಕೀಚಕನಿಗೆ "ಬಲಿದ ಚಂದ್ರಿಕೆ ಕರಗಿ ಕಡುಗಿದ ತವರವಾದುದು"; "ಪಾಪಿ ಕಮಲಜ ಜಲಜಲೋಚನೆಗೇಕೆ ಮಾಡಿದನಿನಿತು ಚೆಲುವಿಕೆಯ!" ಎಂದು ಅವನು ತಲ್ಲಣಿಸಿದನು. ಕೀಚಕನು ಒರಟನೆಂಬುದು ನಿಜ; ಪಾಪಿಯೆಂಬುದು ನಿಜ. ಆದರೆ ಅವನ ಕಾಮದ ಕಿಚ್ಚನ್ನು ನಾರಣಪ್ಪನು ಈ ರೀತಿ ಚಿತ್ರಿಸಿ, ಕೀಚಕನಿಗೆ ದ್ರೌಪದಿಯ ಹುಚ್ಚಿನಲ್ಲಿ ಮನೋನಿಗ್ರಹ ಹೇಗೆ ಅಸಾಧ್ಯವಾಗಿತ್ತೆಂಬು ದನ್ನು ಸ್ಫುಟಪಡಿಸಿದ್ದಾನೆ; ಕವಿಯ ವಿಶಾಲ ಹೃದಯದಲ್ಲಿ ಪಾಪಿಯ ಮನೋವೃತ್ತಿಯನ್ನು ಕುರಿತೂ ಅನುಕಂಪವುಂಟೆಂದು ತೋರ್ಪಡಿಸಿದ್ದಾನೆ.

ದುರಂತವಾಗಿ ಪರಿಣಮಿಸುವ ದಾಂಪತ್ಯಪ್ರೇಮದ ಕಥೆಗಳು ಸಾಹಿತ್ಯದಲ್ಲಿ ಹಲವುಂಟು; ಆದರೆ ಪಾಂಡು-ಮಾದ್ರಿಯರ ಕಥೆಯಷ್ಟು ವಾಚಕರ ಕರುಳನ್ನು ಹಿಂಡುವುವು ಅತಿ ವಿರಳ. ಈ ಸಂದರ್ಭವೇ ಅಷ್ಟು ಕರುಣಾರ್ದ್ರವಾದದ್ದು. ವ್ಯಾಸ ಭಾರತದಲ್ಲೂ ಪಂಪಭಾರತದಲ್ಲೂ ಅದರ ನಿರೂಪಣೆಯು ಉತ್ತಮವಾಗಿ ಬಂದಿದೆ. ಆದರೆ ಈ ದುರಂತಕಥೆಯ ಆಳವನ್ನು ಅಳೆದು ಪೂರ್ಣರಸವನ್ನು ಹಿಳಿದಿರುವವನು ನಾರಣಪ್ಪನೇ ಎಂದು ಹೇಳಿದರೆ ಅದು ಹಿಂದಿನ ಪೂಜ್ಯ ಕವಿಗಳಿಗೆ ಅಗೌರವದ ಮಾತಲ್ಲ. ಕನ್ನಡ ಭಾರತದಲ್ಲಿ ಈ ಸಂದರ್ಭವು ಉಜ್ವಲವಾದ ಸರ್ವಾಂಗಪೂರ್ಣವಾದ ಒಂದು ಬಿಡಿ ವಜ್ರದಂತೆ ಹೊಳೆಯುತ್ತದೆ.

ಯಾವುದೋ ವಿಷಮುಹೂರ್ತದಲ್ಲಿ ಪಾಂಡುರಾಜನು ಬೇಟೆಗಾಗಿ ಹೊರಟು, ಮೃಗರೂಪದಿಂದ ವಿಹರಿಸುತ್ತಿದ್ದ ಋಷಿಮಿಥುನಕ್ಕೆ ಅರಿಯದೆ ಅಂಬೆಸೆದನು; ಹೆಣ್ಣನ್ನು ಕೊಂದನು. ಇದರ ಫಲವಾಗಿ "ಎಲವೊ ರಾಜ ಬ್ರುವನೆ, ತನ್ನಯ ಲಲನೆಯರೊಡನಿರೆ ಕೊಂದೆ; ನಿನ್ನಯ ಲಲನೆಯನು ನೀ ಕೂಡಿದಾಗಳೆ ಮರಣ ನಿನಗಹುದು" ಎಂಬ ಘೋರವಾದ ಋಷಿಶಾಪ ಅವನಿಗೆ ತಾಗಿತು. ಈಗ ಪಾಂಡುವಿನ ಸ್ಥಿತಿಯನ್ನು ನಾವು ಪರಿಭಾವಿಸಬೇಕು. ಅವನಿಗಿನ್ನೂ ಹರೆಯ; ಸುಂದರಿಯರಾದ ಇಬ್ಬರು ಹೆಂಡತಿಯರು; ಅಣ್ಣನು ಕುರುಡನಾದ್ದರಿಂದ ರಾಜ್ಯಸೂತ್ರವೂ ತನ್ನ ಕೈಗೆ ಬಂದಿದೆ. ಇಷ್ಟು ರಮ್ಯವಾದ ಬಾಳಿನ ಬುಡಕ್ಕೇ ಶಾಪದ ಸಿಡಿಲು ಬಡಿಯಿತು. ಋಷಿಗಳನ್ನು ಕೊಂದ ಘೋರ ವ್ಯಥೆ, ಸಂಸಾರ ಸುಖವು ಭಗ್ನವಾದ ದುಮ್ಮಾನ—ಇದರಿಂದ ಪಾಂಡು ಒಮ್ಮೆಯೇ ತೀವ್ರವೈರಾಗ್ಯವನ್ನು ಅವಲಂಬಿಸಿದನು. ತನ್ನ ಸರ್ವಸ್ವವನ್ನೂ ದಾನಮಾಡಿ ಶತಶೃಂಗ ಶೈಲಕ್ಕೆ ಹೋಗಿ ಅಲ್ಲಿ ಋಷಿ ಸನ್ನಿಧಿಯಲ್ಲಿ ಪರಮಯೋಗಿಯಾಗಿ ನೆಲಸಿದನು. ಕುಂತಿ ಮಾದ್ರಿಯರು ಅವನನ್ನು ಹಿಂಬಾಲಿಸಿ ಭೀತಿಭಕ್ತಿಗಳಿಂದ ಶುಶ್ರೂಷೆ ಮಾಡುತ್ತಾ ನಿಂತರು. ಕುಂತಿಗೆ ದುರ್ವಾಸರು ಉಪದೇಶಿಸಿದ್ದ ದಿವ್ಯಮಂತ್ರವನ್ನು ಪಾಂಡುವಿನ ಅಪ್ಪಣೆಯಂತೆ ಅವರಿಬ್ಬರೂ ಜಪಿಸಿ ದೇವತೆಗಳ ಅನುಗ್ರಹದಿಂದ ಐವರು ಮಕ್ಕಳನ್ನು ಕೆಲವು ವರ್ಷಗಳಲ್ಲಿ ಪಡೆದರು. ಮಕ್ಕಳ ಶೌರ್ಯಾವಲೋಕನ, ಸತಿಯರ ಪರಿಚರ್ಯೆ, ಋಷಿಗಳ ಸಹವಾಸ, ತಪಸ್ಸಿನ ಆನಂದ—ಇದರಲ್ಲಿ ಪಾಂಡುವಿಗೆ ಹಸ್ತಿನಾವತಿಯ ಸಕಲೈಶ್ವರ್ಯವೂ ತೃಣಸಮಾನವಾಯಿತು.

ಹೀಗೆ ಪೀಠಿಕೆಯನ್ನು ರಚಿಸಿ, ಕುಮಾರವ್ಯಾಸನು ಮುಂದಿನ ಸಂದರ್ಭವನ್ನು ಎತ್ತಿಕೊಳ್ಳುತ್ತಾನೆ. ಕಾಲ ಕಳೆಯಿತು; "ವರುಷ ಹದಿನಾಱಾಯ್ತು ಧರಣೀಶ್ವರನ ಹಿರಿಯ ಮಗಂಗೆ, ಭೀಮಗೆ ವರುಷ ಹದಿನೈದು, ಅರ್ಜುನನಿಗೆ ಹದಿನಾಲ್ಕು ಹದಿಮೂಱು ಕಿಱಿಯರಿಬ್ಬರಿಗೆ."—ಮಕ್ಕಳು ಪ್ರಬುದ್ಧರಾಗುತ್ತ ಬಂದರು. ಪತ್ನಿಯರು ಉದ್ದಕ್ಕೂ ಜೊತೆಯಲ್ಲೇ ಇದ್ದರೂ ಪಾಂಡು ಮನಸ್ಸನ್ನು ಅಸ್ಖಲಿತಯೋಗದಲ್ಲೇ ನೆಲೆಗೊಳಿಸಿದ್ದನು. ಯೌವನದಲ್ಲೇ ಇಂಥ ಉಗ್ರಬ್ರಹ್ಮಚರ್ಯವನ್ನು ಪಾಲಿಸಿದವನಿಗೆ ಇನ್ನು ವಯಸ್ಸು ಇಳಿಮುಖವಾಗಿರುವಾಗ ಮನಸ್ಸು ಎಷ್ಟು ಶಾಂತವಾಗಿರಬೇಕು. ಆದರೆ, "ಬಂದುದೊಂದು ವಸಂತಮಯ ಸಮಯ! ಯೋಗಿಗೆತ್ತಿದ ಖಡುಗಧಾರೆ, ವಿಯೋಗಿಗೆತ್ತಿದ ಸಬಳ, ಅಖಿಳ ವಿರಾಗಿಗಳ ಹೆಡತಲೆಯ ದಡಿ....ಭೋಗಿಗಳ ಕುಲದೈವ—ಎಸೆದುದು ಕುಸುಮಮಯ ಸಮಯ!" ಎಲ್ಲೆಲ್ಲೂ ಹೊಸ ಕಂಪು, ಹೊಸ ನೋಟ, ಹೊಸ ವಿಲಾಸ; ಯಾರ ಮನಸ್ಸನ್ನಾದರೂ ಸೂರೆಗೊಳ್ಳುವ ಸಮಯ ಇದು. ಇಷ್ಟೇ ಸಾಲದೆ,

ಮೊರೆವ ತುಂಬಿಯ ಗಾಯಕರ, ನಯ
ಸರದ ಕೋಕಿಳ ಪಾಠಕರ, ಬಂ
ಧುರದ ಗಿಳಿಗಳ ಪಂಡಿತರ, ಮಾಮರದ ಕರಿಘಟೆಯ,
ಅರಳಿದಂಬುಜಸತ್ತಿಗೆಯ, ಮಂ
ಜರಿಯ ಕುಸುಮದ ಚಾಮರದ, ಚಾ
ತುರ ವಸಂತನೃಪಾಲ ನಡೆದನು ಪಾಂಡುವಿನ ಮೇಲೆ!

ಇದುವರೆಗೂ ತನಗೆ ಸಗ್ಗದೆ, ನೈಷ್ಠಿಕನಾಗಿದ್ದ ಪಾಂಡುವಿನ ಮೇಲೆ ಕೊನೆಯ ಸಲ ಕೈಮಾಡಿ ನೋಡಬೇಕೆಂದು ವಸಂತನೃಪನು ಸೈನ್ಯಸಂಪತ್ತಿನ ಕೋಲಾಹಲದೊಡನೆ ದಾಳಿಯಿಟ್ಟಿದ್ದಾನೆ. (ವಸಂತನೃಪನ ಪರಿವಾರದ ವರ್ಣನೆಯೇನೋ ಕವಿಸಮಯ ಪರಿಚಿತವಾದದ್ದು; ಆದರೆ "ನಡೆದನು ಪಾಂಡುವಿನ ಮೇಲೆ" ಎನ್ನುವುದು ಅದಕ್ಕೆಲ್ಲಾ ಎಷ್ಟೊಂದು ಹೊಸ ಅರ್ಥವನ್ನು ಕೊಡುತ್ತದೆ. ಸಂದರ್ಭಕ್ಕೆ ಎಷ್ಟೊಂದು ಉಚಿತವಾಗಿದೆ!) ತಪೋವನದ ಆವರಣವನ್ನೆಲ್ಲಾ ಪ್ರಣಯದ ಸುಳಿ ಸುತ್ತಿಕೊಂಡಿದೆ. ಆ ಪರಿಮಳದ ತಂಗಾಳಿಯೊಂದೇ ಸಾಕು ಯಾರ ಮನಸ್ಸನ್ನಾದರೂ ಕದಡುವುದಕ್ಕೆ. "ವನ ವೀಧಿಗಳ ವಳಯವ ಹೊಕ್ಕು ಮರಳಿದುದಿಲ್ಲ ವಿರಹಿಗಳು."

ಇಷ್ಟು ಉನ್ಮಾದಕವಾದ ಸನ್ನಿವೇಶದಲ್ಲಿ, ಒಂದು ದಿನ ವನದೊಳಗೆ ಆಡುತ್ತಿದ್ದ ಮಾದ್ರಿಯನ್ನು ಪಾಂಡು ಕಂಡನು. ಅಂದು ಅವಳು ರಚಿಸಿದ್ದ ಹೂವಿನ ಸಿಂಗಾರವೋ, ದೇಹದ ಲಾವಣ್ಯವೋ! "ಆವ ಚೆಲುವಿಕೆ ಶಿವ ಶಿವಾ ಎಂದರಸ ಬೆರಗಾದ." ಇಷ್ಟು ಕಾಲವೂ ಕಟ್ಟಿದ್ದ ದೃಷ್ಟಿಯ ತಡೆಗಳು ಒಮ್ಮೆಯೆ ಒಡೆದುವು. ಮಿಂಚಿನ ವೇಗದಲ್ಲಿ ಮೋಹದ ತುಂಬುಹೊಳೆ ಉಕ್ಕಿ ಭೋರ್ಗರೆಯಿತು. ಆ ಧೀರನ ಪ್ರತಿಜ್ಞೆಯೆಲ್ಲಾ ಮಾದ್ರಿಯ ಬಯಕೆಯಲ್ಲಿ ಮುಗಿಯಿತು. "ಮಱೆದು ಹಿಂದೆಲ್ಲವನು, **ಕುಂತಿಯನಱಿಯಲೀಯದೆ** ಮೆಲ್ಲಮೆಲ್ಲನೆ ತುಱುಗಿದೆಳಲತೆವನದೊಳಾಡುವ ವಧುವ ಸಾರಿದನು."

ಇವನು ಮರೆತರೆ ಮಾದ್ರಿ ಮರೆಯುವಳೇ? ಬೇಡ ಬೇಡ ಎಂದು ಕಾಲಿಗೆರಗಿ ಬೇಡಿದಳು; ಋಷಿಶಾಪವನ್ನು ಜ್ಞಾಪಿಸಿದಳು; ನಿನ್ನ ಧೈರ್ಯವೆಲ್ಲಿ ಎಂದು ಹಂಗಿಸಿದಳು; ಮಕ್ಕಳ ಗತಿಯೇನು ಎಂದು ಎಚ್ಚರಿಸಿದಳು; ಅವನ ಹಿಡಿತದಿಂದ ಬಿಡಿಸಿಕೊಳ್ಳಲು ಹೆಣಗಿದಳು. ಆದರೆ—

ಕೊಂಬುದೇ ಬಯಲಟುತಗಿಚೆತದ
ಡೊಂಬಿನಾಗಮ ನೀತಿಗೀತಿಯ
ಶಂಬರಾರಿಯ ಸಬಳವಲ್ಲಾ! ಬೇಗೆ ಮೂಡಿದುದು.
ಬೆಂಬಿಡದೆ ಮರಳಿದೊಡೆ ಮಱುಮೊನೆ
ಗೊಂಬುದೆಂಬವೊಲವನಿಪತಿಯೊ
ತ್ತಂಬರದಿ ಹಿಡಿದಬಲೆಯನು ಕೂಡಿದನು ಕಳವಳಿಸಿ.

ಆಯಿತು. ಆ ಸಮಾಗಮಸುಖದೊಂದಿಗೇ ಪಾಂಡುವಿನ ಪ್ರಾಣವಾಯುವೂ ತೇಲಿತು. "ಅಕಟ ಪಾಂಡುಮಹೀಶ, ವಿಷಕನ್ನಿಕೆಯನೆನ್ನನು ಮುಟ್ಟಿದೈ!" ಎಂದು ಮಾದ್ರಿ ತನ್ನನ್ನು ಹಳಿದುಕೊಂಡು ಅಳಲಿದಳು. ಇತ್ತ ಕುಂತಿಗೆ ಇಷ್ಟರಲ್ಲಿ ಆತಂಕ ಮೂಡಿದೆ. ಮಾದ್ರಿ ಇಲ್ಲದ್ದನ್ನೂ ರಾಯನು ತನ್ನ ಕಣ್ಣು ತಪ್ಪಿಸಿ ಎತ್ತಲೋ ಸಾಗಿದ್ದನ್ನೂ ಕಂಡಿದ್ದ ಅವಳಿಗೆ ಕೆಟ್ಟ ಶಕುನಗಳಾಗಿ ಕಳವಳ ಹೆಚ್ಚಿದೆ. ಅಷ್ಟರಲ್ಲಿ ಮಾದ್ರಿಯ ರೋದನ ಧ್ವನಿಯೂ ಕೇಳಿಸಲು ಅದರ ದಾರಿಯನ್ನೇ ಹಿಡಿದು ತಾಯಿ ಮಕ್ಕಳು ಬಂದು ಪಾಂಡುವಿನ ಅವಸ್ಥೆಯನ್ನು ಕಂಡರು; "ಮುಪ್ಪಿನಲಿ ನಿಮಗೀಯವಸ್ಥೆಯಿದೊಪ್ಪುವುದೆ!" ಎಂದು ಮರುಗಿದರು. ಬಳಿಕ ತನ್ನ ತೋಳಿನಲ್ಲಿ ನಿಡುನಿದ್ದೆಗೈದ ಪತಿಯೊಂದಿಗೆ ಮಾದ್ರಿ ಸಹಗಮನ ಮಾಡಿ ಕಥೆಯನ್ನು ಮುಗಿಸಿದಳು.

ಈ ಸಂದರ್ಭವನ್ನು ಚಿತ್ರಿಸುವುದರಲ್ಲಿ ನಾರಣಪ್ಪನು ಪ್ರಕಟಿಸಿರುವ ಕಲಾ ಪರಿಣತಿಯನ್ನು ಎಷ್ಟು ಶ್ಲಾಘಿಸಿದರೂ ತೀರದು. ಮೊದಲಿನಿಂದಲೂ ಇದರ ಚರಮಪರಿಣಾಮದ ಕಡೆಗೇ ಅವನು ಗುರಿಯಿಟ್ಟಿದ್ದಾನೆ. ಅದರ ವಿಷಮತೆಯನ್ನು ಪೋಷಿಸುವುದಕ್ಕಾಗಿಯೇ ಪಾಂಡುವಿನ ದೀರ್ಘ ನಿಶ್ಚಲ ಬ್ರಹ್ಮಚರ್ಯವನ್ನು ನಮ್ಮ ಕಣ್ಣಮುಂದೆ ಎತ್ತಿಹಿಡಿದಿದ್ದಾನೆ. ಇಂಥವನ ಮನಸ್ಸನ್ನು ಮುಪ್ಪಿನಲ್ಲಿ ಕದಲಿಸುವ ಸನ್ನಿವೇಶ ಎಷ್ಟು ಪ್ರಬಲವಾಗಿರಬೇಕೆಂಬುದನ್ನು ಅರಿತೇ ವಸಂತದ ದಾಳಿಯನ್ನು ಅಷ್ಟು ಉಜ್ವಲವಾಗಿ ವರ್ಣಿಸಿದ್ದಾನೆ. ಮಿಕ್ಕ ಕಾವ್ಯಗಳಲ್ಲಿ ಕೇವಲ ಬಾಹ್ಯಾಡಂಬರವಾಗುವ ಋತುವರ್ಣನೆ ಇಲ್ಲಿ ಕಥೆಯೊಂದಿಗೆ ಹಾಸುಹೊಕ್ಕಾಗಿ ಮಿಳಿತವಾಗಿದೆ. ಪಾಂಡುವಿನ ಪತನಕ್ಕೆ ಪ್ರಕೃತಿಯೇ ಸಂಚುಮಾಡಿತೆಂದೂ, ದೈವ ಹಟತೊಡದಿದ್ದರೆ ಅವನ ನಿಷ್ಠೆ ಸಡಿಲುತ್ತಿರಲಿಲ್ಲವೆಂದೂ ನಮಗೆ ಭಾವನೆ ಹುಟ್ಟುವುದು ಇದರಿಂದಲೇ. ಇಷ್ಟೆಲ್ಲ ಸನ್ನಾಹ ಮಾಡಿದ ಬಳಿಕ, ಮಾದ್ರಿಯ ಲಾವಣ್ಯವೈಖರಿಯನ್ನೂ ಲಂಬಿಸುತ್ತಾ ಕುಳಿತರೆ ಭಾವಸಮಾಧಿ ಸಡಿಲ ಬಿಡುವುದೆಂದು ಕವಿಗೆ ಗೊತ್ತು. ಆದ್ದರಿಂದ ಎರಡೇ ಮಾತಿನಲ್ಲಿ ಅದನ್ನು ಸೂಚಿಸಿ, ಅದರ ಸೆಳವಿನಲ್ಲಿ ಪಾಂಡುವಿನ ಸ್ಥೈರ್ಯವು ಒಂದೇ ತಡವೆಗೆ

ಕೊಚ್ಚಿಹೋದ ಅಂಶಕ್ಕೆ ನೆಟ್ಟಗೆ ಸಾಗಿದ್ದಾನೆ. ಹಿಂದೆ ನಿರೋಧವು ಅಷ್ಟು ಬಿಗಿಯಾಗಿದ್ದು ರಿಂದಲೇ ಇಂದು ಕಟ್ಟೊಡೆದ ಮೋಹವೂ ಅಷ್ಟು ರಭಸದಿಂದ ನುಗ್ಗಿತು. ಹಿರಿಯ ಹೆಂಡತಿಯ ಕಾವಲು, ಮೋಹದವಳ ನೀತಿಬೋಧೆ—ಎಲ್ಲವೂ ನಿಷ್ಫಲವಾದವು. ಹೆಡತಲೆಯ ಹಾವಿನಂತೆ ಸಮಯವನ್ನು ಕಾಯುತ್ತಿದ್ದ ಋಷಿಶಾಪವು ಫಲಿಸಿಬಿಟ್ಟಿತು. ಇಲ್ಲಿ ಯಾವುದಕ್ಕೆ ಬೆರಗುಪಡೋಣ : ಪಾಂಡುಯೋಗಿ ಇಷ್ಟು ದಿನದ ಮೇಲೆ ಮೋಹದ ಸುಳಿಯಲ್ಲಿ ಮುಳುಗಿದ್ದಕ್ಕಾಗಿಯೆ, ಗಂಡಹೆಂಡಿರ ಸಹಜ ಸಮಾಗಮಕ್ಕೆ ಈ ರೀತಿಯ ಘೋರ ಪರ್ಯವಸಾನ ತಟ್ಟಿದ್ದಕ್ಕಾಗಿಯೆ!

ವಿಷಮಪರಿಣಾಮದ ಪ್ರಣಯ ಸಂದರ್ಭಗಳಲ್ಲಿ ಇನ್ನೊಂದನ್ನು ಪರಿಶೀಲಿಸುವುದು ಉಳಿದಿದೆ. ಅರ್ಜುನನು ಇಂದ್ರಕೀಲ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದಾಗ ಕಿರಾತ ವೇಷದ ಶಿವನೊಡನೆ ಸೆಣಸಿ ಮೆಚ್ಚಿಸಿ ಅವನಿಂದ ಪಾಶುಪತಾಸ್ತ್ರವನ್ನು ಪಡೆಯುವನಷ್ಟೆ. ಈ ವಿಜಯವನ್ನು ಕೊಂಡಾಡಿ ತನ್ನ ತಂದೆಯಾದ ಇಂದ್ರನು ಕಳಿಸಿದ ರಥದಲ್ಲಿ ಬಳಿಕ ಅಮರಾವತಿಗೆ ಅವನು ತೆರಳುವನು. ಅಲ್ಲಿ ಮಗನನ್ನು ಇಂದ್ರನು ದಿವ್ಯಸಭೆಯಲ್ಲಿ ಎದುರುಗೊಂಡು ಸನ್ಮಾನಿಸುತ್ತಾನೆ. ಆಗ ಅರ್ಜುನನ ಮನೋರಂಜನೆಗೋಸ್ಕರ ಅಪ್ಸರೆಯರ ಗೀತನಾಟ್ಯಗಳು ನಡೆಯುತ್ತವೆ. ಅವರಲ್ಲಿ ಉರ್ವಶಿಯ ಅಮಾನುಷ ರೂಪಾತಿಶಯಕ್ಕೆ ವಿಸ್ಮಯಪಟ್ಟು ಅರ್ಜುನನು ಸಹಜಕುತೂಹಲದಿಂದ ಎವೆಯಿಕ್ಕದೆ ನೋಡುತ್ತಿದ್ದುದನ್ನು ಇಂದ್ರನು ಕಂಡು, ತನ್ನ ಮಗನ ಭಾವವನ್ನು ಬೇರೆ ವಿಧವಾಗಿ ಗ್ರಹಿಸುವನು. ಆ ದಿನ ರಾತ್ರಿ ಚಿತ್ರಸೇನನೆಂಬ ಗಂಧರ್ವನಿಗೆ ಈ ಸಂದರ್ಭವನ್ನು ತಿಳಿಸಿ, ಉರ್ವಶಿಯನ್ನು ಅರ್ಜುನನ ಸೇವೆಗೆ ಕಳಿಸಬೇಕೆಂದು ನೇಮಿಸುವನು. ಉರ್ವಶಿ ಈ ಮೊದಲೆ ಅರ್ಜುನನ ಖ್ಯಾತಿಯನ್ನು ಅರಿತಿರಬೇಕು. ಚಿತ್ರಸೇನನ ಮಾತನ್ನು ಕೇಳುತ್ತಲೂ ಅವಳಿಗೆ ಅರ್ಜುನನಲ್ಲಿ ಅನುರಾಗವುದಿಸಿತು. ದಣಿಯ ಅಪ್ಪಣೆಗೆ ತನ್ನ ಅಭಿಲಾಷೆಯೂ ನೆರೆಯಿತು. ಹೀಗೆ ಮೋಹದಿಂದ ತಾನಾಗಿಯೇ ಬಳಿಗೆ ಬಂದ ಸುರ ಸುಂದರಿಯ ಪ್ರಣಯವನ್ನು ಅರ್ಜುನನು ಹೇಗೆ ಕಂಡನೆಂಬುದೇ ಪ್ರಕೃತದ ಸಂದರ್ಭ.

ಉರ್ವಶಿಯ ರೂಪ ಮಾತಿಗೆ ನಿಲುಕುವುದಲ್ಲ. ಅದು "ಕಾಮನ ಹಗೆಗೆ ಹುಟ್ಟಿದ ಧೂಮಕೇತು", "ಲೋಕಸೌಂದರ್ಯೈಕ ಸ್ವರ್ಗ." ಅಶ್ವಮೇಧರಾಜಸೂಯಾದಿ ಮಹಾಕ್ರತುಗಳನ್ನು ಮಾಡಿ ಸ್ವರ್ಗಸುಖವನ್ನು ಸವಿಯಲು ಬಂದ ಧರ್ಮವೀರರು ಕೂಡ ಈಕೆಯ "ಚರಣದುಂಗುಟ ತುದಿ"ಯನ್ನು ಕಾಣರು. ಒಮ್ಮೊಮ್ಮೆ ದೇವ ಕುಮಾರರಾದ ಜಯಂತನಳಕೂಬರರಿಗೂ ಸಮಯ ದೊರೆಯದೆ "ವರುಷವೋಲೈ ಸುವರು ಸೌಧದ ದಾರವಟ್ಟದಲಿ." ಇಂಥ ರಮಣಿ ಅರ್ಜುನನಿಗೆ ಮನಸೋತು ಅವನನ್ನು ಓಲೈಸಲು ಪರಿವಾರದೊಡನೆ ಬಂದಳು. "ಬಳ್ಳಿಮಿಂಚಿನ ಮಂದೆಯಲಿ ಮುರಿದಿಳಿವ ಮಜೆ ಮುಗಿಲಂದದಲಿ", ಅರ್ಜುನನ ಬೀಡಾರದ ಬಾಗಿಲಲ್ಲಿ ಪಲ್ಲಕ್ಕಿಯಿಂದ ಇಳಿದು ಅವನ ಶಯ್ಯಾಗೃಹವನ್ನು ಹೊಕ್ಕು ಅಲ್ಲಿ ಕೆಳದಿಯರ ಭುಜದ ಮೇಲೆ ಕೈಯೂರಿ,

ಮಲಗಿದ್ದ ತನ್ನ ಪ್ರಿಯನನ್ನು ನೋಡುತ್ತಾ ನಿಂತಳು. ಅವಳ ಮುಖಪ್ರಭೆಗೂ ದೇಹಪರಿಮಳಕ್ಕೂ ಅರ್ಜುನನ ನಿದ್ದೆ ತಿಳಿಯಿತು; ಎದುರಿಗೆ "ಮದನಾಲಸೆ" ಊರ್ವಶಿ ನಿಂತಿದ್ದಾಳೆ. ಅವಳನ್ನು ಕಂಡ ಕೂಡಲೆ ಇವನ ಬಾಯಿಂದ ಹೊರಟ ಮಾತೇನು: "ಹಾ ಮಹಾ ದೇವಿಯರಲಾ!" ಈಕೆ ಪುರೂರವನ ಪತ್ನಿಯಾಗಿದ್ದವಳು—ತನ್ನ ಚಂದ್ರವಂಶದ ಜನನಿ; ಇದರ ಮೇಲೆ ತನ್ನ ತಂದೆ ಇಂದ್ರನ ಮಾನಿನಿ, ತಾನು ಅವಳಿಗೆ ಮಗನಾಗಬೇಕು. ಹೀಗೆಂದು ತಿಳಿದು ಅರ್ಜುನನು ಅವಳನ್ನು ತಾಯಿಯಂತೆ ಕಂಡನು, ತಾಯಿಯಂತೆ ಗೌರವಿಸಿದನು.

ಈಗ ಊರ್ವಶಿಯ ಗತಿಯೇನು? ಚಿತ್ರಸೇನನ ಮಾತಿನಂತೆ ಅರ್ಜುನನು ತನ್ನನ್ನು ಬಯಸಿದ್ದಾನೆಂದು ನಂಬಿ, ತನ್ನ ಹೃದಯವನ್ನು ಅರ್ಪಿಸಲು ಬಂದಳು; ಕಾಮನ ಕೋಟಲೆಗೆ ಸಿಕ್ಕಿದಳು. ಅರ್ಜುನನ ನಡೆವಳಿಕೆಯಾದರೆ ವಿಚಿತ್ರವಾಯಿತು. ಬಯಸಿಬಂದ ಸುಂದರಿಯೊಬ್ಬಳು ಎದುರಿಗೆ ನಿಂತಿರುವಾಗ ಹೀಗೆ ವಾವೆ ಸಂಬಂಧಗಳನ್ನು ಹುಡುಕುವ ಇವನು ನಪುಂಸಕನೋ ಜಡನೋ ಶ್ರೋತ್ರಿಯನೋ ಎಂದು ಅವಳು ಸಹಜವಾಗಿ ಶಂಕಿಸಿದಳು. ಏಕೆಂದರೆ ಭೋಗಭೂಮಿಯಾದ ಸ್ವರ್ಗದಲ್ಲಿ ಇದುವರೆಗೆ ಈ ಬಗೆಯ ವಿಚಿತ್ರ ಸನ್ನಿವೇಶವನ್ನು ಊರ್ವಶಿ ಕಂಡಿರಲಾರಳು. ಈಗ ತನ್ನ ಮೋಹ ಹೆಚ್ಚಿ ಹೋದದ್ದರಿಂದ ಅವಳು ಲಜ್ಜೆಯನ್ನು ತೊರೆದು, ಇದ್ದ ಸ್ಥಿತಿಯನ್ನು ವಿವರಿಸಿ, "ಒಲಿದು ಬಂದಬಲೆಯರ ಟೆಕ್ಕರಿಗಳೆವುದೇ ವಿಟಧರ್ಮ? ತಿಳಿಯಲಾ ತಾನಾವಳೆಂಬುದ?" ಎಂದು ಬಾಯಿಬಿಟ್ಟು ಕೇಳಿದಳು. ಆದರೆ ಅರ್ಜುನನ ಪಾಲಿಗೆ ಊರ್ವಶಿ ಸರ್ವ ಸಾಧಾರಣೆಯಾದ ದೇವಗಣಿಕೆಯಲ್ಲ; ಅವಳು ತನ್ನ ವಂಶದ ಪೂಜ್ಯಜನನಿ. ಪುರೂರವನಿಂದ ಜನ್ಮವೆತ್ತಿದ ರಾಜವಂಶದಲ್ಲಿ ತಾನು ಹುಟ್ಟಿದ್ದನ್ನು ವಿವರಿಸಿ, "ನಮ್ಮ ವಿಚಾರಿಸಿದುದಿಲ್ಲಾ?" ಎಂದು ಅರ್ಜುನನು ವಿನಯದಿಂದ ಕೇಳುತ್ತಾನೆ. ಬಳಿಕ ಇಬ್ಬರಿಗೂ ಒಂದು ವಾಕ್ಯಾರ್ಥವೇ ನಡೆಯುತ್ತದೆ:

ಊರ್ವಶಿ— ನಿಮ್ಮ ಭೂಲೋಕದ ವಾವೆಗಳು ಈ ದೇವಭೂಮಿಯಲ್ಲಿ ಸಲ್ಲವು; ಯುದ್ಧಹತರಾದ ವೀರರು, ಯಜ್ಞವೆಸಗಿ ಬಂದವರು ಇವರೆಲ್ಲರಿಗೂ— ತಂದೆ, ಅಜ್ಜ, ಭಾವ, ಮೈದುನ, ಅಣ್ಣ, ತಮ್ಮ ಎನ್ನದೆ ಎಲ್ಲರಿಗೂ— (ನಗುತ್ತಾ) ನಾನೊಬ್ಬಳೇ. ಈ ಮಾತೇಕೆ? "ಮಾನಿನಿಯರಿಚ್ಛೆಯನಜೆಯ ನಜೆಯದವನು....ಕುಜೆಕಣಾ!"

ಅರ್ಜುನ— (ನಡುಗಿ ಕೈಮುಗಿದು) "ಇದು ಮನುಷ್ಯಶರೀರ; ತದ್ಧರ್ಮದಲಿ ತನ್ನವಸಾನ ಪರಿಯಂತ ಇದಜೊಳವ್ಯಭಿಚಾರದಲಿ ವರ್ತಿಸಿ" ಬಳಿಕ ದೇವತೆಗಳಲ್ಲಿಗೆ ಬಂದಾಗ ದೇವದೇಹವನ್ನು ಧರಿಸಿ ಆ ಮಾರ್ಗದಲ್ಲಿ ನಡೆಯಬೇಕು.

ಊರ್ವಶಿ— ಹೌದು ಹೌದು : ಶಾಸ್ತ್ರವಿಧಿಯ ಗೆರೆಯನ್ನೂ ದಾಟದವರು ನೀವು! ಒಬ್ಬ ಹೆಣ್ಣನ್ನು ಐದು ಜನರು ನೆರೆದಿಲ್ಲವೇ? ನಿನಗೆ ನನ್ನಲ್ಲಿ ನಿಃಸ್ಪೃಹತೆ!

ಅರ್ಜುನ— ತಾಯ ನೇಮದಿಂದ ಅದು ಸಂಭವಿಸಿತು. "ಜನನಿಯ ನುಡಿ ಅಲಂಘ್ಯ" ಈಗ ಕಾಮಸುಖಕ್ಕಾಗಿ ನಾನು ದುರ್ಗತಿಗೆ ಇಳಿಯಲಾರೆ.

ಊರ್ವಶಿ— ತಾಯ ನೇಮದಿಂದ ಐವರಿಗೆ ಒಬ್ಬಳ ಕೂಟವಾಗಬಹುದಾದರೆ, ನಿಮ್ಮ ತಂದೆ ಸುರರಾಯನ ವಚನವನ್ನು ಮಾತ್ರ ಮೀರಬಹುದೊ? "ರಾಯನಟ್ಟಲು ಬಂದೆನು." ಮನ್ಮಥನ ಕೋಟಲೆ ಮೀರಿಹೋಯಿತು. "ಗರುವೆಯರು ಮೇಲಿಕ್ಕಿ ಪುರುಷನ ವರಿಸಿದೊಡೆ ಜಾಱುವರೆ?"

ಆದರೆ ಊರ್ವಶಿಯ ತರ್ಕವಾಗಲಿ, ಅವಳ ಒಲುಮೆಯ ಮೂದಲೆಯ ಮಾತುಗಳಾಗಲಿ ಧೈರ್ಯದ ಮೈಜೋಡನ್ನು ತೊಟ್ಟು ನಿಂತ ಅರ್ಜುನನ ಎದೆಗೆ ನಾಟಲಿಲ್ಲ. ತಾಯಿ ಮಗನನ್ನು ನೋಡಲು ಬಂದರೆ ತಪ್ಪೇನು? ಇನ್ನು ತಾವು ಬಿಜಯಮಾಡಬೇಕು— ಎಂದು ನಿರ್ಧಾರದಿಂದ ನುಡಿದುಬಿಟ್ಟನು. ಊರ್ವಶಿಯ ಅವಮಾನ ಈಗ ತುದಿಮುಟ್ಟಿತು. ಲಜ್ಜೆ ಅಳಿದು, ಆಸೆ ಜಾರಿತು. "ರೋಷವೆರಡೆಲೆಯಾಯ್ತು." ಮುಖ ಬೆವರಿತು, ತುಟಿ ನಡುಗಿತು. "ತತ್ತ ರೋಷಾಯುಧವ ಮಸೆದಳು ಧಾರೆಗಂಗಳಲಿ!" ಆವೇಶದ ಮಾತುಗಳು ಮಸೆದುವು:

> ಒಲಿದು ಬಂದವರಾವು, ಸೊಬಗಿನೊ
> ಳೊಲಿಸಿ ಮರುಗಿಪ ಗಂಡ ನೀನ್! ಅತಿ
> ಸುಲಭರಾವ್, ದುರ್ಲಭನು ನೀ ದೇವೇಂದ್ರಕಟಕದಲಿ.
> ಎಲೆ ನಪುಂಸಕ, ಗಂಡುವೇಷದ
> ಸುಳಿವು ನಿನಗೇಕೆ!—ಎನುತ ಸತಿ ಕಳ
> ವಳಿಸಿ ಕರೆವೆತ್ತಿದಳು : ಹಿಡಿ ಹಿಡಿ ಶಾಪವಿದೆ ಎನುತ!

"ರೌದ್ರಾಹಿಮಸ್ತಕಮಾಣಿಕ"ದಂತೆ, "ಲೋಹಧಾರೆಯ ಮಧು"ವಿನಂತೆ, "ರೂಹು ಸುಮನೋಹರ ಭಯಂಕರವಾಯ್ತು ಸುರಸತಿಯ!" ನಿಮ್ಮ ಭಾರತಭೂಮಿಯಲ್ಲಿ ವರುಷಕಾಲ ನಪುಂಸಕನಾಗಿ ಚರಿಸು ಹೋಗೆಂದು ನುಡಿದು ಊರ್ವಶಿ ನಿಲ್ಲದೆ ಹಿಂದಿರುಗಿದಳು. ಅವಳಿಗಾದ ಆಶಾಭಂಗಕ್ಕೂ ಘೋರಾವಮಾನಕ್ಕೂ ಇದು ಅತಿ ಮೃದುವಾದ ಶಾಪವೆಂದೇ ಹೇಳಬೇಕು.

ಆದರೆ ಅರ್ಜುನನಿಗೆ ಮಾತ್ರ ಇಲ್ಲಿ ತನ್ನ ತಪ್ಪೇನೆಂದು ಗೊತ್ತಾಗಲಿಲ್ಲ. "ಸುರಭವನ ವಧುಗಳು ನಾಗರಿಕರು; ಇವರೆತ್ತ ಭಾರತ ಭೂಗತರು ತಾವೆತ್ತ. ಇದು ಘಟಿಸಿದುದು ವಿಧಿ!" ತಾನು ಇಂದ್ರನಿಗೆ ಸೂಚಿಸಲಿಲ್ಲ, ಊರ್ವಶಿಯನ್ನು ಕರಸಲಿಲ್ಲ, ಅಪಚಾರವನ್ನು ಎಸಗಲಿಲ್ಲ, ಧರ್ಮಮಾರ್ಗವನ್ನು ಬಿಡದೆ ನಡೆದದ್ದಕ್ಕೆ ಈ ದಂಡನೆಯೆ? "ತಪವನಾಚರಿಸಿ ದೊಡೆ ವರಪಾಶುಪತಶರವೆನಗಾಯ್ತು; ಧರ್ಮವೆ ತಪವಲಾ ಎಂದಜೆದು ನಡೆದೊಡೆ ಷಂಡತನವಾಯ್ತು!" ಎಂದು ಈ ವಿಷಮಫಲಕ್ಕೆ ಬೆರಗಾಗಿ ವ್ಯಥೆಪಟ್ಟನು. ಬಳಿಕ ಇಂದ್ರನು ನಡೆದ ಸಂಗತಿಯನ್ನು ಚಿತ್ರಸೇನನಿಂದ ತಿಳಿದು ಮಗನ ಬಳಿಗೆ ಬಂದು

ಸಂತೈಸುವನು; ಉರ್ವಶಿಯ ಶಾಪವು ಅಜ್ಞಾತವಾಸದಲ್ಲಿ ಉಪಕಾರವಾಗುವಂತೆ ಅನುಗ್ರಹಿಸುವನು.

ಈ ಅಪೂರ್ವಪ್ರಸಂಗದ ಉದ್ದಕ್ಕೂ ನಾವು ಅರ್ಜುನನ ಮನೋನಿಶ್ಚಯವನ್ನು ನೋಡುತ್ತೇವೆ. ಉರ್ವಶಿಯಂಥ ಚೆಲುವೆ ಬಂದು ಪ್ರಣಯಭಿಕ್ಷೆಯನ್ನು ಬೇಡುತ್ತಿರುವಾಗ ಯಾವ ಧೀರನ ಎದೆ ತಾನೆ ಜಗ್ಗದು! ಆದರೆ ಅರ್ಜುನನಿಗೆ ಅವಳು ತಾಯಂತೆ ಕಂಡಳು; ಅದೇ ಭಾವನೆಯನ್ನೇ ಅವನು ಕಡೆತನಕ ಸಾಧಿಸಿದನು. ಉರ್ವಶಿಯ ರೂಪಿಗೆ ಸೋಲಲಿಲ್ಲ, ಯುಕ್ತಿಗೆ ಸೋಲಲಿಲ್ಲ. ದೈನ್ಯಕ್ಕೆ ಸೋಲಲಿಲ್ಲ, ರೋಷಕ್ಕೆ ಸೋಲಲಿಲ್ಲ. ಪ್ರಲೋಭನ ಜಾಲ ಸುತ್ತಲೂ ಬೀಸಿ, ಸೋಲೇ ಸ್ವರ್ಗಸುಖವಾಗಿದ್ದ ಆ ಪ್ರಸಂಗದಲ್ಲಿ ಪಾರ್ಥನಿಗೆ ಮೋಹದ ಸೆರಗೂ ಕೂಡ ಸೋಕಲಿಲ್ಲವೆಂದರೆ, ಅವನ ವಿಜಯವು ಅದ್ವಿತೀಯವಾದದ್ದು, ಕವಿ ಇದನ್ನು ಚೆನ್ನಾಗಿ ಬಲ್ಲನು; ಈ ಸಂಧಿಯ ಮೊದಲಲ್ಲಿ ಬರುವ 'ಸೂಚನೆ'ಯ ಮೂರು ಚರಣಗಳಲ್ಲಿ ಈ ಸನ್ನಿವೇಶದ ಸಾರವನ್ನೇ ಹೊರಗೆಡಹಿದ್ದಾನೆ:

ಭಯಭರಿತ ಭಕ್ತಿಯಲಿ ಕಾಮಾ
ರಿಯನು ಗೆಲಿದರ್ಜುನನು ಹರವೈ
ರಿಯನು ಗೆಲಿದನು ಧೈರ್ಯದಿಂದುರ್ವಶಿಯ ಶಾಪದಲಿ

ವಿಷಯಸೂಚಿಕೆಯಂತೆ ನೀರಸವಾಗಿರಬೇಕಾಗಿದ್ದ ಈ ಸೂಚನೆಯ ಪದ್ಯಾರ್ಥದಲ್ಲಿ ಎಷ್ಟೊಂದು ಭಾವವು ಎಷ್ಟೊಂದು ರಮ್ಯವಾಗಿ ಅಡಕವಾಗಿದೆ! ಇಂದ್ರಕೀಲದಲ್ಲಿ ಅರ್ಜುನನು ಭಕ್ತಿಯಿಂದ ಶಿವನನ್ನು ಜಯಿಸಿದ್ದು ಸಾಮಾನ್ಯವಲ್ಲ; ಆದರೆ ಉರ್ವಶಿಯ ಸಮ್ಮುಖದಲ್ಲಿ ಧೈರ್ಯದಿಂದ ಕಾಮನನ್ನು ಜಯಿಸಿದ್ದು ಅದಕ್ಕೂ ಮಿಗಿಲು. ಪಾಶುಪತಾಸ್ತ್ರದ ಲಾಭದಿಂದ ಅರ್ಜುನನ ತಲೆ ತಿರುಗಬಹುದಾಗಿತ್ತು; ಇಂದ್ರನಗರಿಯಲ್ಲಿ ನಹುಷನಂತೆ ಅವನು ಸೊಕ್ಕಬಹುದಾಗಿತ್ತು. ಆದರೆ ಹಾಗಾಗದೆ, ಅದರ ಬೆನ್ನಹಿಂದೆಯೇ ಉರ್ವಶೀ ಪ್ರಣಯದ ಸತ್ತ್ವಪರೀಕ್ಷೆಯನ್ನು ಅವನು ದಾಟಿದ್ದು ಹಿಂದಿನ ವಿಜಯಕ್ಕೆ ಇಮ್ಮಡಿಯ ಕಳೆಯನ್ನು ಕೊಡುತ್ತದೆ. ಆದ್ದರಿಂದಲೇ ನಾರಣಪ್ಪನು ಈ ಪ್ರಸಂಗದಲ್ಲಿ ಅರ್ಜುನ-ಉರ್ವಶಿಯರ ಮನೋಭಾವಗಳನ್ನು ಬಿಡಿಸಿ ನಿರೂಪಿಸಿದನು. ಇಲ್ಲಿ ಉರ್ವಶಿಗೇನೋ ಅತಿ ದುಸ್ಸಹವಾದ ಅವಸ್ಥೆಯುಂಟಾಯಿತು: ತನ್ನ ಪ್ರಣಯ ಯಾಚನೆಗೆ ಧಿಕ್ಕಾರವಾಗುವುದಕ್ಕಿಂತ ಘೋರವಾದ ಅವಮಾನ ಹೆಣ್ಣಿಗಿಲ್ಲ. ಉರ್ವಶಿಗಾಗಿ ನಾವು ತುಂಬ ಮರುಗುತ್ತೇವೆ; ಅವಳ ಯಾತನೆಯನ್ನು ಆತ್ಮೀಯವಾಗಿ ಅನುಭವಿಸುತ್ತೇವೆ. ಆದರೆ ಉರ್ವಶಿಯ ಸೌಂದರ್ಯ ವೈಭವಕ್ಕೆ ಈ ಅನಾದರವೊದಗಬೇಕೆಂದೂ ಅವಳ ಪ್ರಣಯ ಭಂಗದಿಂದ ಅರ್ಜುನನ ಗೌರವ ಹೆಚ್ಚಬೇಕೆಂದೂ ನಾವು ನಿರೀಕ್ಷಿಸುತ್ತೇವೆ. ಈ ಸನ್ನಿವೇಶದ ಫಲ ವಿಷಮವಾಗಿ ಅರ್ಜುನನಿಗೆ ಶಾಪ ತಟ್ಟಿದರೂ ಚಿಂತೆಯಿಲ್ಲ. ಅವನ ಸತ್ತ್ವಪರೀಕ್ಷೆಯ ದೃಷ್ಟಿಯಿಂದ ಈ ನಪುಂಸಕತ್ವಲಾಭ ಪಾಶುಪತಾಸ್ತ್ರ ಲಾಭಕ್ಕಿಂತಲೂ ಹೆಚ್ಚಿನದು.

ಕನ್ನಡ ಭಾರತದಲ್ಲಿ ಬಂದಿರುವ ಶೃಂಗಾರದ ಪರಿಮಿತ ಸನ್ನಿವೇಶಗಳಲ್ಲಿ "ವಿರಹಿಗಳ ಶೃಂಗಾರ"ವೇ ಹೆಚ್ಚಾಗಿವೆ. ಉಚಿತಜ್ಞನಾದ ಕವಿ ಒಂದೊಂದು ಕಡೆಯಲ್ಲಿ ಇದರ ಒಂದೊಂದು ಬಗೆಯನ್ನು ನಿರೂಪಿಸಿದ್ದಾನೆ. ಅವನು ಕೀಚಕನ ಮನೋನಿಗ್ರಹವರಿಯದ ಕಾಮಜ್ವರವನ್ನೂ ವರ್ಣಿಸಬಲ್ಲನು; ಜನ್ಮದೀರ್ಘವಾದ ಕಠಿನ ಬ್ರಹ್ಮಚರ್ಯವನ್ನೂ ಒಂದು ಕ್ಷಣಕಾಲದಲ್ಲಿ ಬೂದಿ ಮಾಡಿದ ಪಾಂಡುವಿನ ಚಿತ್ತಸ್ಖಲನೆಯನ್ನೂ ವರ್ಣಿಸಬಲ್ಲನು; ದೇವಗಣಿಕೆಯೇ ಬೇಡಿ ಬಂದರೂ ಚಲಿಸದ ಅರ್ಜುನನ ಸ್ಥೈರ್ಯವನ್ನೂ ವರ್ಣಿಸಬಲ್ಲನು. ಜೊತೆಗೆ, ಮಿಕ್ಕ ಪಾತ್ರಗಳ ಹೃದಯವನ್ನೂ ಹೇಗೆ ಹೊಕ್ಕು ಅವರ ನಡೆನುಡಿಗಳನ್ನು ಎಷ್ಟು ನಾಟಕೀಯವಾಗಿ ಚಿತ್ರಿಸಿದ್ದಾನೆ! ಪಶುವಿನಿಂದ ಸ್ಥಿತಪ್ರಜ್ಞನವರೆಗೆ ಕುಮಾರವ್ಯಾಸ ಯೋಗೀಂದ್ರನು ಅರಿಯದ ಮನೋವೃತ್ತಿಯಿಲ್ಲ. ಅದರ ನಿರೂಪಣೆಯಾದರೂ ಎಷ್ಟು ಕಲಾಮಯವಾಗಿ ಬಂದಿದೆ : ಕೊನೆಯ ಫಲವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕಥೆಯನ್ನು ತೆರೆಯುವ ಕೌಶಲ, ಅಂಗೋಪಾಂಗಗಳನ್ನು ಎಲ್ಲೆ ಮೀರದಂತೆ ಬೆಳಸಿ ವಿಷಯಕ್ಕೆ ಅಳವಡಿಸಿಕೊಳ್ಳುವ ಔಚಿತ್ಯಜ್ಞಾನ, ದುರಂತಪರಿಣಾಮದಲ್ಲಿ ಕವಿತೆಯ ಶಿಖರವನ್ನು ಮುಟ್ಟುವ ಮರ್ಮಜ್ಞತೆ ; ರಸವನ್ನು ಧಾರಾಕಾರವಾಗಿ ಹರಿಸುವ ಪ್ರತಿಭೆ— ಇವನ್ನು ಇಲ್ಲಿ ಎಷ್ಟು ಮೆಚ್ಚಿದರೂ ಸಾಲದು. ಇಲ್ಲಿ ಕಾಣಬಹುದಾದ ನ್ಯೂನತೆಯೆಂದರೆ— ಒಂದೊಂದು ಕಡೆ ಭಾವಕ್ಕೆ ನಯದ ಸಾಣೆ ಸಾಲದಿರುವುದು ಮಾತ್ರ.

ಭಾರತದಲ್ಲಿ ಶೃಂಗಾರವು ಒಟ್ಟಿನಮೇಲೆ ಅಮುಖ್ಯವಾದ ರಸ. ಅದನ್ನು ಆ ಮೆಟ್ಟಿಲಲ್ಲೇ ನಿಲ್ಲಿಸಿ, ನಿಲ್ಲಿಸಿದರೂ ನಿರೂಪಣೆಯನ್ನು ಲೋಕೋತ್ತರವಾಗಿ ನಿರ್ವಹಿಸುವ ಶಕ್ತಿ ಕುಮಾರವ್ಯಾಸನಂಥ ಮಹಾಕವಿಗೆ ಮಾತ್ರ ಸಾಧ್ಯ.

ಕಾವ್ಯ ಸಮೀಕ್ಷೆ : ೧೯೪೭

ಭಾಗ ೨

ಹೊಸಗನ್ನಡ ಸಾಹಿತ್ಯ

'ಶ್ರೀ'ಯವರ ಕೃತಿಗಳು*

ಕಾಲುಶತಮಾನದ ಆಚೆಯ ಮಾತು. ಹೈಸ್ಕೂಲಿನಲ್ಲಿ ಓದುತ್ತಿದ್ದ ನನ್ನ ಕೈಗೆ ಒಂದು ಮಾಸಪತ್ರಿಕೆ ಸಿಕ್ಕಿತು. ಅದರ ಹಾಳೆಗಳನ್ನು ತಿರುವಿಹಾಕುವಾಗ ಸಾಲುಸಾಲಾಗಿ ಅಚ್ಚಾಗಿದ್ದ ಪದ್ಯವೊಂದು ಕಣ್ಣನ್ನು ಸೆಳೆಯಿತು. ಕುತೂಹಲದಿಂದ ಓದತೊಡಗಿದೆನು :

ಹಿಡಿದು ಮಂಜು ಬೀಳುತಿತ್ತು, ಚುಕ್ಕಿ ಕಣ್ಣು
ಮಿಟುಕುತಿತ್ತು;
"ಕುಡಿಯೊ, ಕಂದ, ಕುಡಿಯೊ;" ಎಂದು ನುಡಿವ
ಮಾತು ಕಿವಿಗೆ ಬಿತ್ತು.
ತಿರುಗಿ ನೋಡಲೊಬ್ಬೆಯಾಚೆ, ಒಬ್ಬಳಲ್ಲಿ ಹೆಣ್ಣುಮಗಳು
ನೊರೆಯ ಬಿಳುಪು ಕುರಿಯಮರಿಯ ತಲೆಯ
ತಡವುತಿದ್ದಳು. . .

ನಾವು ಚಿಕ್ಕಂದಿನ ಪಠ್ಯಪುಸ್ತಕಗಳಲ್ಲಿ ಓದಿ ಬಳಕೆ ಮಾಡಿಕೊಂಡಿದ್ದ ಷಟ್ಪದಿ, ಕಂದ, ವೃತ್ತ — ಈ ಯಾವೊಂದು ಜಾತಿಗೂ ಸೇರದಿದ್ದರೂ ತಾಳಕ್ಕೆ ಸರಿಯಾಗಿ ಓಡುವ ಚರಣಗಳು; ಕೇಳಿದ ಕೂಡಲೆ ಅರ್ಥವಾಗುವ ಆಡಂಬರವಿಲ್ಲದ ಪದಗಳು; ಹುಡುಗರ ಅನುಭವಕ್ಕೆ ಕೂಡ ನಿಲುಕುವ ವಿಷಯಸರಣಿ—ಇದನ್ನು ಕಂಡು ನನ್ನ ಎಳೆಯ ಮನಸ್ಸು ಈ ಪದ್ಯದ ಕಡೆಗೆ ಹೆಚ್ಚಾಗಿ ಹರಿಯಿತು. ಇಂಥ ಕವನಗಳು ಇನ್ನೂ ಉಂಟೆ? ಇದನ್ನು ಬರೆದವರು ಯಾರು?—ಎಂದು

---

* ಪುಸ್ತಕ ಪ್ರಪಂಚ : ನವಂಬರ್ ೧೯೪೭

ಅರಿತುಕೊಳ್ಳಲು ಆಸೆಪಟ್ಟೆನು. ಮುಂದೆ ಕಾಲೇಜಿಗೆ ಬಂದಾಗ ಕರ್ಣಾಟಕ ಗ್ರಂಥ ಮಾಲೆಯವರು ೧೯೨೧ರಲ್ಲೇ ಪ್ರಕಟಿಸಿದ್ದ 'ಇಂಗ್ಲಿಷ್ ಗೀತಗಳು' ಎಂಬ ಹೆಸರಿನ ಚಿಕ್ಕ ಕವನಸಂಗ್ರಹವು ಮೈಸೂರು ನಗರದ ಕಿರಾಣಿ ಅಂಗಡಿಯೊಂದರಲ್ಲಿ ದೊರೆಯಿತು; ಮೇಲಿನ ಕವನವೂ ಅದರಲ್ಲಿತ್ತು. ಅದನ್ನು ಬರೆದವರು ನಮ್ಮ ಕಾಲೇಜಿನ ಇಂಗ್ಲಿಷ್ ಪ್ರೊಫೆಸರಾದ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರೆಂದು ಗೊತ್ತಾಯಿತು.

"ಶ್ರೀ"ಯವರ 'ಇಂಗ್ಲಿಷ್ ಗೀತ'ಗಳಲ್ಲಿ ಕೆಲವು ಹೀಗೆ ಪತ್ರಿಕೆಗಳಲ್ಲಿ, ಪುಸ್ತಕರೂಪದಲ್ಲಿ ಕೂಡ, ಹಿಂದೆಯೇ ಹೊರಬಿದ್ದಿದ್ದರೂ ಅಲ್ಲಿಂದೀಚೆಗೆ ಶ್ರೀಮಾನ್ ಡಿ.ವಿ. ಗುಂಡಪ್ಪನವರ 'ಕರ್ಣಾಟಕ ಜನಜೀವನ'ದ ಸಂಚಿಕೆಗಳಲ್ಲಿ ಮತ್ತೆ ಇಪ್ಪತ್ತುನಾಲ್ಕು ಪದ್ಯಗಳು ಪ್ರಕಾಶಗೊಂಡಿದ್ದರೂ ಈ ಗೀತಗಳ ಪ್ರಭಾವ ಸರ್ವರಿಗೂ ಮನವರಿಕೆಯಾದದ್ದು ಬಹುಶಃ ೧೯೨೬ರಲ್ಲಿ; ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದವರು ಸಚಿತ್ರವಾಗಿ ಸರ್ವಾಂಗಸುಂದರವಾಗಿ ಹೊರಡಿಸಿದ ಪೂರ್ಣಸಂಕಲನದಲ್ಲಿ. ಅದು ಪ್ರಕಾಶವಾದ ಕೂಡಲೆ ಕನ್ನಡ ಕಾವ್ಯಪ್ರಪಂಚದಲ್ಲಿ ಒಂದು ಕ್ರಾಂತಿಯೇ ಉಂಟಾಯಿತು. ತಿರುಳಾದ ಹೊಸಗನ್ನಡ ಮಾತು, ಮಿತವಾದ ಹಿತವಾದ ಅಲಂಕಾರಗಳಿಂದ ಕೂಡಿದ ನಿರೂಪಣೆ, ಇಂಗ್ಲಿಷಿನ ಭಾವಗೀತಗಳ ಅಚ್ಚುಕಟ್ಟು—ಇವುಗಳ ಮೇಲ್ಪಂಕ್ತಿ ದೊರೆತ ವಿಚಾರ ಹಾಗಿರಲಿ. ಛಂದಸ್ಸಿನಲ್ಲಿ ತೋರಿಸಿಕೊಟ್ಟ ಹೊಸ ದಾರಿಯ ಪ್ರಭಾವ ಅತಿಶಯ ವಾದದ್ದು. ಹಿಂದಿನ ವೃತ್ತ ಕಂದ ಷಟ್ಪದಿಗಳ ಅಡಕವಾದ ಚೌಕಟ್ಟಿನಲ್ಲಿ ವಿವಿಧ ಭಾವಗಳ ಅನುರೂಪ ನಿರೂಪಣೆಗೆ ಇಂಬುಗಾಣದೆ, ಹಳೆಯ ಕಟ್ಟುಗಳನ್ನು ಸಡಿಲಿಸಲು ಕಳಚಲು ಶಕ್ತಿ ಧೈರ್ಯಗಳು ಸಾಲದೆ, ಹೊಸ ಮಾರ್ಗದರ್ಶನಕ್ಕಾಗಿ ಹಾರೈಸುತ್ತಿದ್ದ ತರುಣ ಕವಿಗಳಿಗೆ ಈಗ ಕಣ್ಣು ತೆರೆಯಿತು. ಛಂದಸ್ಸಿನ ಜೀವಾಳವಾದ ಲಯವನ್ನು ಬಿಡದೆ, ಹಿಂದಿನ ಮಾತ್ರಾಗಣ ಅಂಶಗಣಗಳ ತಳಕಟ್ಟಿನಮೇಲೆ ಹೊಸ ಹೊಸ ಪದ್ಯರೂಪಗಳನ್ನು ನಿರ್ಮಿಸಬಹುದೆಂದು 'ಇಂಗ್ಲಿಷ್ ಗೀತ'ಗಳು ಚೆನ್ನಾಗಿ ನಿದರ್ಶನ ಮಾಡಿಕೊಟ್ಟುವು. ಭಾವಕ್ಕೆ ತಕ್ಕಂತೆ ಹಿಗ್ಗಿ, ಕುಗ್ಗಿ, ಬಳುಕಿ, ಪ್ರಾಸಾನುಪ್ರಾಸಗಳ ತೊಡವನ್ನು ಸಮಯಕ್ಕೆ ತಕ್ಕಂತೆ ತೊಟ್ಟು ಬಿಟ್ಟು ಸವಿಲಾಸವಾಗಿ ಗಂಭೀರವಾಗಿ ಸಾಗಬಲ್ಲ ಛಂದಸ್ಸು ಕನ್ನಡಿಗರಿಗೆ ಈಗ ಕರಗತವಾಯಿತು. ಛಂದಸ್ಸಿನ ಈ ಪ್ರಯೋಗಗಳಲ್ಲಿ ಶ್ರೀಯವರು ಸಾಧಕರು ಮಾತ್ರವಲ್ಲ, ಸಿದ್ಧಪುರುಷರೂ ಆಗಿದ್ದಾರೆ. ಹೊಸ ಪದ್ಯರೂಪಗಳನ್ನು ಬಳಸುತ್ತ ಬೆಳಸುತ್ತ ಇರುವ ಕವಿಗಳಿಗೆಲ್ಲ ಅವರು ಒಂದಲ್ಲ ಒಂದು ರೀತಿಯಲ್ಲಿ ಆಚಾರ್ಯರು. ಈ ಸಂದರ್ಭದಲ್ಲಿ ಇನ್ನೊಂದು ಮಾತು. ಶ್ರೀಯವರ ಪ್ರಯೋಗಗಳಲ್ಲಿ ಮುನ್ನೋಟದ ಸ್ವಾತಂತ್ರ್ಯ ಮಾತ್ರವಲ್ಲ, ಅಪೂರ್ವವಾದ ಸಂಯಮವೂ ಉಂಟು. ಎರಡಕ್ಕೂ ತಳಹದಿ ಯಾಗಿ ಜೀವಾವಧಿಯ ವ್ಯಾಸಂಗವುಂಟು, ತಲಸ್ಪರ್ಶಿಯಾದ ವಿಮರ್ಶೆಯುಂಟು. ಈಚೆಗೆ ಹೊಸ ಪ್ರಯೋಗಗಳನ್ನು ನಡಸುತ್ತಿರುವವರು ಶ್ರೀಯವರ ಮೇಲ್ಪಂಕ್ತಿಯನ್ನು ಈ ಭಾಗದಲ್ಲೂ ಹೆಚ್ಚುಹೆಚ್ಚಾಗಿ ಅನುಸರಿಸಿದರೆ ನಮ್ಮ ಸಾಹಿತ್ಯಕ್ಕೆ ಎಷ್ಟೋ ಅನುಕೂಲ.

'ಇಂಗ್ಲಿಷ್ ಗೀತಗಳು' ಪ್ರಕಟವಾದಾಗ ತರುಣರ ಕಿವಿಗಳು ಅವುಗಳ ಇಂಪಿಗೆ ಒಡನೆಯೇ ಮರುಳಾದರೂ ಹಳಬರಲ್ಲಿ ಕೆಲವರ ರುಚಿಗೆ ಅವು ಒಗ್ಗಲು ಸಹಜವಾಗಿಯೇ

ಕೆಲವು ದಿನ ಹಿಡಿಯಿತು. ಅಷ್ಟರಲ್ಲಿಯೇ ಇನ್ನೊಂದು ವಿಧದ ಪ್ರಯೋಗ ಜನದ ಮುಂದೆ ಬಂದಿತು. ಶ್ರೀಕಂಠಯ್ಯನವರು ಪಾಶ್ಚಾತ್ಯ ಸಾಹಿತ್ಯಗಳ ಸಾರವನ್ನು ಜೀವಮಾನದ ಉದ್ದಕ್ಕೂ ಸವಿದವರು. ಗ್ರೀಕ್ ಭಾಷೆಯ, ಇಂಗ್ಲಿಷ್ ಭಾಷೆಯ ರುದ್ರನಾಟಕಗಳ ಮಹಿಮೆಗೆ ಹೃದಯವನ್ನು ಮುಡಿಪಾಗಿ ಒಪ್ಪಿಸಿದವರು. ಅಲ್ಲಿಯ ರೀತಿಯನ್ನು ನೋಡಿ ತಿದ್ದಿದ ಅವರ ನೋಟಕ್ಕೆ ನಮ್ಮ ದೇಶದ ಸಾಹಿತ್ಯದಲ್ಲಿ, ಅದರಲ್ಲೂ ನಮ್ಮ ಜೈನಕವಿಗಳ ಕೃತಿಗಳಲ್ಲಿ, ಅನೇಕ ದುರಂತಕಥೆಗಳು ಹುದುಗಿರುವುದು ಆಗಲೇ ಗೋಚರವಾಗಿತ್ತು. ರನ್ನನ 'ಸಾಹಸಭೀಮವಿಜಯ'ದಲ್ಲಿ ಕಥಾನಾಯಕನಾದ ಭೀಮನಿಗಿಂತ ಪ್ರತಿನಾಯಕ ನಾದ ದುರ್ಯೋಧನನೇ ಹೆಚ್ಚು ಪ್ರಭಾವಶಾಲಿಯಾಗಿ ಉನ್ನತ ಮೂರ್ತಿಯಾಗಿ ಚಲದಂಕಮಲ್ಲನಾಗಿ ಅಭಿಮಾನಧನನಾಗಿ ನಿಂತು ನಮ್ಮ ಕಣ್ಣನ್ನು ಸೆಳೆದು ಹೃದಯವನ್ನು ಮರುಗಿಸಿ ಮೆಚ್ಚಿಕೆಯನ್ನು ಗಳಿಸುವುದನ್ನು ಅವರು ಮನಗಂಡಿದ್ದರು. ಆದಕಾರಣ ರನ್ನನ ಕಾವ್ಯವನ್ನು ಅವರು ರುಚಿಶುದ್ಧಿಯಿಂದ ಸಂಗ್ರಹಕೌಶಲದಿಂದ ಅಡಕವಾದ ನಾಟಕವಾಗಿ ಮಾರ್ಪಡಿಸಿದರು. ದುರ್ಯೋಧನನ ದುರಂತ ಕಥೆಯನ್ನು ಇಲ್ಲಿ ಎತ್ತಿಹಿಡಿದು "ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್" ಎಂದು ಅದಕ್ಕೆ ಸೂಕ್ತವಾದ ಮುಕ್ತಾಯ ಕೊಟ್ಟರು.

'ಗದಾಯುದ್ಧ ನಾಟಕ' ಮೊದಲು ಕಾಣಿಸಿಕೊಂಡದ್ದು ರಂಗಭೂಮಿಯ ಮೇಲೆ. ಅಲ್ಲಿ ವಿಜಯಗಳಿಸಿ ಆ ಬಳಿಕ ಓದುವ ಪುಸ್ತಕವಾಗಿ ಹೊರಬಿದ್ದಿತು. ಇದೇ ಮಾರ್ಗವನ್ನೇ ಶ್ರೀಯವರ ಕೃತಿಗಳಲ್ಲಿ ಅಗ್ರಪೂಜೆಗೆ ಅರ್ಹವೆನಿಸುವ 'ಅಶ್ವತ್ಥಾಮನ್' ನಾಟಕವೂ ಹಿಡಿಯಿತು. ಹದಿನೇಳು ವರ್ಷಗಳ ಹಿಂದೆ 'ಅಶ್ವತ್ಥಾಮನ್' ಕಾಣಿಸಿಕೊಂಡಾಗ ಟೀಕೆ ವಿಮರ್ಶೆ ಖಂಡನೆಗಳ ಒಂದು ಸುಂಟರಗಾಳಿಯೇ ಎದ್ದು ಕನ್ನಡ ಭೂಮಿಯನ್ನು ಕಲಕಿತೆಂಬುದು ಹಿರಿಯರ ನೆನಪಿನಲ್ಲಿರಬಹುದು. ಚಿರಂಜೀವಿಯೆಂದು ಜನರು ಸಾಮಾನ್ಯವಾಗಿ ಭಾವಿಸುವ ಅಶ್ವತ್ಥಾಮನು ಈ ನಾಟಕದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಭಾವುಕರ ಮನಸ್ಸು ಇದರಿಂದ ಕದಡಿಹೋಗಿ ಈ ಹೊಸ ಪ್ರಯೋಗದ ದೃಷ್ಟಿ, ಇಲ್ಲಿಯ ಮಾರ್ಪಾಡುಗಳ ಅರ್ಥ, ಇದರ ಕವಿತೆಯ ಪರಮೋತ್ಕರ್ಷ—ಇದೊಂದೂ ಅವರಿಗೆ ಗೋಚರವೇ ಆಗಲಿಲ್ಲ. ಆಗ ಟೀಕಾಕಾರರು ಎಬ್ಬಿಸಿದ ಎರಚಿದ ಧೂಳು ಈಗ ಉಡುಗಿದೆ. ಆಗಿನ ಕ್ಷೋಭೆ ಈಗ ಶಾಂತವಾಗಿದೆ. ಇಂದಿನ ಸ್ತಿಮಿತವಾತಾವರಣ ದಲ್ಲಿ 'ಅಶ್ವತ್ಥಾಮನ್' ನಾಟಕದ ಕಾಂತಿ ಎಲ್ಲ ಸಹೃದಯರ ನೋಟವನ್ನು ಸೆರೆ ಹಿಡಿಯುತ್ತದೆ.

ಗ್ರೀಕ್ ರುದ್ರನಾಟಕಸಾಹಿತ್ಯದ ತ್ರಿಮೂರ್ತಿಗಳಲ್ಲಿ ಒಬ್ಬನಾದ ಸೊಫೊಕ್ಲೀಸನ 'ಏಜಾಕ್ಸ್' ನಾಟಕವನ್ನು ಮಹಾಭಾರತದ ಸೌಪ್ತಿಕಪರ್ವದ ಕಥೆಗೆ ಹೊಂದಿಸಿಕೊಂಡು ಎರಡರ ಸಾರವನ್ನೂ ಸಮ್ಮಿಳನಮಾಡಿ ಸೊಗಸನ್ನು ಹೆಚ್ಚಿಸಿ ರಚಿಸಿದ ಕೃತಿ 'ಅಶ್ವತ್ಥಾಮನ್'. ಗ್ರೀಕ್ ಭಾಷೆಯನ್ನು ನಾನು ಅರಿಯೆ, ಆದರೆ 'ಏಜಾಕ್ಸ್' ನಾಟಕದ ಇಂಗ್ಲಿಷ್ ಭಾಷಾಂತರಗಳಲ್ಲಿ ಹಲವನ್ನು ಓದಿದ್ದೇನೆ. ಅದರಿಂದ 'ಅಶ್ವತ್ಥಾಮನ್' ನಾಟಕಕ್ಕೇ

ಮಿಾಸಲಾಗಿರುವ ಕಾವ್ಯೋನ್ನತಿ ಎಂಥದೆಂಬುದನ್ನು ಮನಗಂಡಿದ್ದೇನೆ. ಗ್ರೀಕ್ ನಾಟಕದ ರೀತಿಯನ್ನೇ ಅವಲಂಬಿಸಿದ್ದರೂ ಇದು ಭಾಷಾಂತರವಲ್ಲ, ರೂಪಾಂತರವೂ ಅಲ್ಲ; ಇದೊಂದು ಪುನಃಸೃಷ್ಟಿ. ಇದರಲ್ಲಿ ಶ್ರೀಯವರ ಪ್ರತಿಭೆ ಮುಗಿಲೆತ್ತರಕ್ಕೆ ಏರುತ್ತದೆ. ಇದರ ಮಹತ್ತ್ವವನ್ನು ಕುರಿತು ಒಂದು ಮಾತು. ಮೂಲ ಗ್ರೀಕ್ ಕಥೆಯಲ್ಲಿರುವಂತೆ ಇಲ್ಲಿ ನಾಯಕನು ತನಗೆ ಸಲ್ಲಬೇಕಾದ ಬಹುಮಾನ ಶಸ್ತ್ರಗಳನ್ನು ತನ್ನ ಎದುರಾಳಿಗೆ ಸಲ್ಲಿಸಿದರೆಂದು ಕನಲಿ ತನ್ನ ಪಾಳೆಯದ ಮುಖಂಡರನ್ನೇ ಇರುಳ ಕಳ್ಳಕೊಲೆಯಲ್ಲಿ ಇರಿಯಲು ಹೋಗುವುದಿಲ್ಲ. ಅದರ ಬದಲು ತನ್ನ ಸ್ವಾಮಿಯಾದ ದುರ್ಯೋಧನನಿಗೆ ಒದಗಿದ ಊರುಭಂಗಕ್ಕಿಂತಲೂ ಹೆಚ್ಚಾದ ಮಾನಭಂಗಕ್ಕೆ ಮುಳಿದು, ಅದರ ಸೇಡನ್ನು ತೀರಿಸಿ ಕೌರವನ ಆತ್ಮವನ್ನು ತಣಿಸುವುದಕ್ಕಾಗಿ, ಶತ್ರು ಪಕ್ಷದ ಕೃಷ್ಣ ಪಾಂಡವರನ್ನು ಇರುಳಲ್ಲಿ ಕೊಲ್ಲಲು ಮುನ್ನುಗ್ಗುವನು. ಇದೊಂದು ಮಾರ್ಪಾಡಿನಿಂದಲೇ ನಾಟಕದ ಭಾವ ಎಷ್ಟೋ ಉನ್ನತವಾಗುವುದು. ಇತ್ತ ಮಹಾಭಾರತದಲ್ಲಿರುವಂತೆ ಇಲ್ಲಿಯ ಅಶ್ವತ್ಥಾಮನು ಶಿಶುಹತ್ಯೆ ಮಾಡಿ ಮರುಗದ, ಭ್ರೂಣಹತ್ಯೆಗೂ ಹೇಸದ ಪಾಪಿಯಲ್ಲ. ದೈವದ ಮೋಸಕ್ಕೆ ಒಳಗಾಗಿ ಪಶುಗಳನ್ನು, ಹೆಂಗಸರನ್ನು, ಮಕ್ಕಳನ್ನು ಕಣ್ಣಾಣದೆ ಇರಿದೆನಲ್ಲಾ ಎಂದು ತನ್ನ ಅಕಾರ್ಯಕ್ಕೆ ಜುಗುಪ್ಸೆಪಟ್ಟು ಈ ಅವಮಾನದ ಕಳಂಕವನ್ನು ಹೊತ್ತು ಬಾಳಲೊಲ್ಲದೆ ತನ್ನ ಪ್ರಾಣವನ್ನು ಕೈಯ ಕತ್ತಿಗೆ ಒಪ್ಪಿಸುವ ಅಭಿಮಾನಿ. ತನ್ನ ಹಿಂದಿನ ಉನ್ನತಿಯನ್ನೂ ಇಂದಿನ ದುರ್ಗತಿಯನ್ನೂ ತೂಗಿ,

"ಸೊರ್ಕುನುಡಿ ನುಡಿವೆನ್—
ಇಂತಪ್ಪನ್ ಇಲ್ಲಮೆಂದಾದೆನ್
ಈಗಳೋ, ಇಂತಪ್ಪನ್ ಇಲ್ಲೆಮೆಂದೇ ಆದೆನ್!
ಪುಡಿಯೊಳಗೆ ಪುಡಿಯ ಪುಡಿಯಾದೆನ್—
ನಾಣ ನುಡಿಯಾದೆನ್."

ಎಂದು ಕುದಿದು—ಈ ಅಂತರಂಗದ ಕೊಳೆಯನ್ನು ತನ್ನ ಹೃದಯದ ನೆತ್ತರಿನಿಂದ ತೊಳೆದುಕೊಳ್ಳುವ ಕೆಚ್ಚೆದೆಯ ಕಲಿ! ಈ ನಾಟಕದ ಮಿಕ್ಕ ಪಾತ್ರಗಳೂ ಹಾಗೆಯೇ. ಪುರುಷೋತ್ತಮ ಕೃಷ್ಣನನ್ನೂ "ಅಟಿಲ ಮಗು"ವಾದರೂ "ತಾಳ್ಮೆತಾಯ್" ಆದ ಭಾರ್ಗವಿಯನ್ನೂ ಯಾರು ತಾನೆ ಮರೆಯಬಹುದು.

ಈ ಕೃತಿಯ ಭಾಷೆ ಹಳಗನ್ನಡ : ತಿರುಳಾದ, ಬಿಗಿಯಾದ, ಆದರೆ ಸರಳವಾದ ಸಜೀವವಾದ ಹಳಗನ್ನಡ. ಪಾತ್ರಗಳ ಸಂಭಾಷಣೆ ಜರುಗುವಾಗ ಇಲ್ಲಿಯ ಪದ್ಯಪಂಕ್ತಿಗಳು ಕಿಡಿ ಸಿಡಿದಂತೆ ಚಿಮ್ಮುತ್ತವೆ. ಇದರಲ್ಲಿ ಬರುವ ಮೇಳದವರ ಹಾಡುಗಳಲ್ಲಿ ಒಂದೊಂದೂ ಉತ್ಕೃಷ್ಟ ಭಾವಗೀತ. "ಚೆಲ್ವಿನ ನೆಲೆ, ಕಣ್ಗಳ ಬಲೆ, ಸುಖದೊಱತೆಯ ಬನವಾಸಿ"ಯನ್ನು ಕುರಿತು ಹಂಬಲಿಸುವ ಮಾತುಗಳಲ್ಲಿ ಕವಿಯ ಕನ್ನಡನಾಡಿನ ಅಭಿಮಾನ ಉಕ್ಕಿ ಹರಿದಿದೆ. ಯುದ್ಧ ಗೀತವಂತೂ ಅನುಪಮಕಾವ್ಯ. "ಓ ಪೊಲ್ಲಯುದ್ಧಮೇ ಎಂದು ನಿಲ್ವಯ್! ಓ ತಾಯೆ ಶಾಂತಿಯೇ ಎಂದು ಗೆಲ್ವಯ್!" ಎಂದು ನಾವೂ ಉದ್ಗಾರ

ತೆಗೆಯುತ್ತೇವೆ; "ಕರ್ಮಮ್ ಈ ಪರಿ ಮಱೆಗೆ ಮಱೆ ಇಕ್ಕುತಿರ್ಕುಂ. ಕ್ಷಮೆಯಿಂದೆ ಸಮೆಯದಿರೆ ಮಱುಕೊಳಿಸುತಿರ್ಕುಂ" ಎಂಬ ಶಾಶ್ವತ ತತ್ತ್ವವನ್ನು ಹೃದಯದಲ್ಲಿ ಹದಿಯುತ್ತೇವೆ; "ಭಾರತದೆ ಶಾಂತಿಯನ್ ನಿಲಿಸು ಬಾ, ಮುಂದೆ" ಎಂದು ಕೃಷ್ಣನಿಗೆ ಮೊರೆಯಿಡುತ್ತೇವೆ. . . . 'ಅಶ್ವತ್ಥಾಮನ್' ಕನ್ನಡ ಸಾಹಿತ್ಯದಲ್ಲಿ ಚಿರಂಜೀವಿ.

'ಅಶ್ವತ್ಥಾಮನ್' ನಾಟಕವನ್ನು ಬರೆದ ಕೆಲವು ವರ್ಷಗಳಲ್ಲಿ ಶ್ರೀಯವರು ಗ್ರೀಕ್ ಮಹಾಕವಿಗಳಲ್ಲಿ ಇನ್ನೊಬ್ಬನಾದ ಈಸ್ಕಿಲಸ್ಸನ ನಾಟಕವೊಂದನ್ನು 'ಪಾರಸಿಕರು' ಎಂಬ ಹೆಸರಿನಿಂದ ಕನ್ನಡಿಸಿದರು. ಇಲ್ಲಿ ಕಥಾವಸ್ತುವನ್ನಾಗಲಿ ಪಾತ್ರಗಳನ್ನಾಗಲಿ ನಮ್ಮ ಸನ್ನಿವೇಶಕ್ಕೆ ಸರಿಹೋಗುವಂತೆ ಮಾರ್ಪಡಿಸಿಲ್ಲ. ಮೂಲದಲ್ಲಿರುವಂತೆಯೇ ಉಳಿಸಿ ಕೊಂಡು ಅಲ್ಲಿಯ ಆವರಣದ ಯಥಾವತ್ತಾದ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಟ್ಟಿದ್ದಾರೆ. 'ಅಶ್ವತ್ಥಾಮನ್' ಕೃತಿಯ ಮಿಂಚುಸಿಡಿಲುಗಳು ಇಲ್ಲಿಲ್ಲವೆಂಬುದು ನಿಜ. ಆದರೆ ಅದಕ್ಕೆ ಭಾಷಾಂತರಕಾರರು ಹೊಣೆಗಾರರಲ್ಲ.

ಶ್ರೀಯವರ ದೇಶಭಕ್ತಿ ಭಾಷಾಭಕ್ತಿ ರಾಜಭಕ್ತಿಗಳನ್ನು ಹೊರಗೆಡಹುವ ಸ್ವತಂತ್ರ ಕವನಗಳು ಸಂದರ್ಭೋಚಿತವಾಗಿ ಹಿಂದಿನಿಂದಲೂ ಪ್ರಕಟಗೊಳ್ಳುತ್ತಿದ್ದುವು. ಅವೆಲ್ಲವನ್ನೂ 'ಹೊಂಗನಸುಗಳು' ಎಂಬ ಸಂಪುಟದಲ್ಲಿ ಸಂಗ್ರಹಿಸಿ ಶ್ರೀಯವರ ಷಷ್ಟಿಪೂರ್ತಿಶಾಂತಿಯ ವೇಳೆಯಲ್ಲಿ ಪ್ರಕಟಮಾಡಿದರು. 'ಭಾರತಮಾತೆಯ ನುಡಿ'ಯೂ 'ಕನ್ನಡತಾಯ ನೋಟ'ವೂ 'ಶ್ರೀ ಕೃಷ್ಣರಾಜ ರಜತಮಹೋತ್ಸವ ಪ್ರಗಾಥ'ವೂ ಇದರಲ್ಲಿ ಒಟ್ಟಿಗೆ ದೊರೆಯುತ್ತವೆ. ಶ್ರೀಯವರ ಜೀವನದರ್ಶನದ ಸಾರವನ್ನು ಗಂಭೀರವಾಣಿಯಲ್ಲಿ ರೂಪಿಸುವ 'ಶುಕ್ರಗೀತೆ'ಯೂ ಇದರಲ್ಲಿಯೇ ಇದೆ.

ಶ್ರೀಕಂಠಯ್ಯನವರ ಕೃತಿಗಳನ್ನು ಕುರಿತು ಮಾತಾಡುವಾಗ ಅವರ ಅಸಾಧಾರಣ ಪಾಂಡಿತ್ಯದ ವಿಚಾರವಾಗಿ ಒಂದೆರಡು ಮಾತನ್ನು ಹೇಳಲೇಬೇಕು. ಇಂಗ್ಲಿಷಿನಲ್ಲಿ ಹೇಗೋ ಹಾಗೆ ಕನ್ನಡದಲ್ಲಿಯೂ ಅವರಿಗೆ ಅನುಪಮವಾದ ಸರ್ವತೋಮುಖವಾದ ಪಾಂಡಿತ್ಯವಿತ್ತು. ಈ ಮಾತಿನ ಸತ್ಯವನ್ನು ಅವರ ಕೈಕೆಳಗೆ ಕನ್ನಡವನ್ನು ಓದಿದ ಭಾಗ್ಯಶಾಲಿಗಳೆಲ್ಲರೂ ಚೆನ್ನಾಗಿ ಬಲ್ಲರು. ಅಲ್ಲದೆ ತಮಿಳು, ಸಂಸ್ಕೃತ, ಗ್ರೀಕ್—ಈ ಭಾಷಾಸಾಹಿತ್ಯಗಳಲ್ಲೂ ಶ್ರೀಯವರಿಗೆ ವಿಶೇಷ ಪರಿಶ್ರಮವಿತ್ತು. ಅವರ ಪಾಂಡಿತ್ಯಕ್ಕೆ ಸರಿತೂಗುತ್ತಿದ್ದುದು ಅವರ ಪ್ರತಿಭಾನ್ವಿತವಾದ ದೃಷ್ಟಿ. ಕನ್ನಡ ಕವಿತೆಯ ವಾಹಿನಿಯನ್ನು ಹೇಗೋ ಹಾಗೆಯೇ ಕನ್ನಡ ವ್ಯಾಸಂಗದ ವಾಹಿನಿಯನ್ನೂ ಅವರು ಹೊಸ ಕಾಲುವೆಯಲ್ಲಿ ಹರಿಸಿದರು. ಹಿಂದಿನ ಕನ್ನಡದಲ್ಲಿ ಬರೆದ ಕವಿಗಳ ಗ್ರಂಥಗಳನ್ನೆಲ್ಲಾ—ಅಚ್ಚಿನ ಪುಸ್ತಕಗಳಲ್ಲಿ ಮಾತ್ರವಲ್ಲದೆ ಓಲೆಯಗರಿಯ ಮಾತೃಕೆಗಳಲ್ಲಿ ಕೂಡ—ಅಕ್ಕರೆಯಿಂದ ಓದಿ, ವಿಮರ್ಶೆಯಲ್ಲಿ ತೂಗಿ, ಅವುಗಳ ಹೃದಯವನ್ನು ಶಿಷ್ಯವರ್ಗಕ್ಕೂ ಶ್ರೋತೃವೃಂದಕ್ಕೂ ರಸವಾಣಿಯಲ್ಲಿ ಪರಿಚಯ ಮಾಡಿಕೊಟ್ಟರು. ಭಾಷಾಶಾಸ್ತ್ರದಲ್ಲಂತೂ ಅವರಿಗೆ ಅದ್ಭುತಪ್ರಜ್ಞೆಯಿತ್ತು. ಅವರ ಲೇಖನ, ವಿಮರ್ಶೆ ಮೊದಲಾದವುಗಳ ಸಂಖ್ಯೆ ಪರಿಮಿತವಾದರೂ ಒಂದೊಂದೂ ಕನ್ನಡದ ಅಭ್ಯಾಸಿಗಳಿಗೆ ಮಾರ್ಗದರ್ಶಕವಾಗಿದೆ.

ನಮ್ಮ ಪೂಜ್ಯಗುರುಗಳ ಕೀರ್ತಿಸ್ತಂಭವಾಗಿ ನಿಲ್ಲಲು ಅವರು ಬಿಟ್ಟು ಹೋಗಿರುವ ಕಾವ್ಯಗಳೂ ಲೇಖನಗಳೂ ಪ್ರಭಾವವೂ ಸಾಕು. ಆದರೆ ಅವರ ಪ್ರತಿಭೆ ಅಧ್ಯಯನ ಅನುಭವಗಳ ಪೂರ್ಣಫಲ ಕನ್ನಡಿಗರಿಗೆ ದೊರೆಯುವ ಮೊದಲೇ, ಅವರು ಸಂಕಲ್ಪಿಸಿದ್ದ ಮಹಾಕೃತಿಗಳು ಅಕ್ಷರರೂಪದಲ್ಲಿ ಕಾಗದದ ಮೇಲೆ ಅವತರಿಸುವ ಮೊದಲೇ, ಕಾಲಪುರುಷನು ಅವರನ್ನು ಅನಿರೀಕ್ಷಿತವಾಗಿ ಒಯ್ದನಲ್ಲ ಎಂಬ ಕೊರಗೇನೋ ಉಳಿದೇ ಇದೆ.

'ಇಂಗ್ಲಿಷ್ ಗೀತಗಳು'*

೧

ಮೂವತ್ತೆರಡು ವರ್ಷಗಳ ಹಿಂದಿನ ಮಾತು. ಹೈಸ್ಕೂಲಿನಲ್ಲಿ ಓದುತ್ತಿದ್ದ ನನ್ನ ಕೈಗೆ ಒಂದು ಮಾಸಪತ್ರಿಕೆ ಸಿಕ್ಕಿತು. ಅದರ ಹಾಳೆಗಳನ್ನು ತಿರುವಿ ಹಾಕುವಾಗ, ಸಾಲುಸಾಲಾಗಿ ಅಚ್ಚಾಗಿದ್ದ ಕವನ ವೊಂದು ಕಣ್ಣನ್ನು ಸೆಳೆಯಿತು; ಕುತೂಹಲದಿಂದ ಓದತೊಡಗಿದೆನು :

ಹಿಡಿದು ಮಂಜು ಬೀಳುತಿತ್ತು, ಚುಕ್ಕಿ ಕಣ್ಣುಮಿಟುಕುತಿತ್ತು ;
'ಕುಡಿಯೊ, ಕಂದ, ಕುಡಿಯೊ' ಎಂದು ನುಡಿವ
ಮಾತು ಕಿವಿಗೆ ಬಿತ್ತು ;
ತಿರುಗಿ ನೋಡಲೊಬ್ಬೆಯಾಚೆ, ಒಬ್ಬಳಲ್ಲಿ ಹೆಣ್ಣುಮಗಳು
ನೊರೆಯ ಬಿಳುಪು ಕುರಿಯ ಮರಿಯ ತಲೆಯ
ತಡವುತಿದ್ದಳು. . . .

ಚಿಕ್ಕಂದಿನ ಪಠ್ಯಪುಸ್ತಕಗಳಲ್ಲಿ ನಾವು ಓದಿ ಬಳಕೆಮಾಡಿಕೊಂಡಿದ್ದ ಷಟ್ಪದಿ, ಕಂದ, ವೃತ್ತ—ಈ ಯಾವೊಂದು ಪದ್ಯಜಾತಿಗೂ ಸೇರದಿದ್ದರೂ ತಾಳಕ್ಕೆ ಸರಿಯಾಗಿ ಓಡುವ ಚರಣಗಳು, ಕೇಳಿದಕೂಡಲೆ ಅರ್ಥವಾಗುವ ಆಡಂಬರವಿಲ್ಲದ ಹೊಸಗನ್ನಡ ಮಾತುಗಳು, ಹುಡುಗರ ಅನುಭವಕ್ಕೆ ಕೂಡ ನಿಲುಕುವ

---

* 'ಶ್ರೀ' : ಇಂಗ್ಲಿಷ್ ಗೀತಗಳು–೧೯೫೩ನೆಯ ಇಸವಿಯ ಮುದ್ರಣದ ಪ್ರಸ್ತಾವನೆ.

ವಿಷಯಸರಣಿ—ಇದನ್ನು ಕಂಡು ನನ್ನ ಎಳೆಯ ಮನಸ್ಸು ಈ ಪದ್ಯದ ಕಡೆಗೆ ಹೆಚ್ಚಾಗಿ ಹರಿಯಿತು. ಇಂಥ ಕವನಗಳು ಇನ್ನೂ ಉಂಟೆ? ಇದನ್ನು ಬರೆದವರು ಯಾರು?- ಎಂದು ತಿಳಿಯಲು ಆಸೆಪಟ್ಟೆನು. ಮುಂದೆ ನಾನು ಕಾಲೇಜಿಗೆ ಬಂದಾಗ, 'ಕರ್ಣಾಟಕ ಗ್ರಂಥಮಾಲೆ'ಯಲ್ಲಿ ೧೯೨೧ರಲ್ಲಿ ಪ್ರಕಟಿತವಾಗಿದ್ದ 'ಇಂಗ್ಲಿಷ್ ಗೀತಗಳು' ಎಂಬ ಹೆಸರಿನ ಚಿಕ್ಕ ಕವನ ಸಂಪುಟವು ಮೈಸೂರು ನಗರದ ಕಿರಾಣಿ ಅಂಗಡಿಯೊಂದರಲ್ಲಿ ದೊರೆಯಿತು; ಮೇಲೆ ಉಕ್ತವಾಗಿರುವ 'ಮುದ್ದಿನ ಕುರಿಮರಿ' ಎಂಬ ಕವನವೂ ಅದರಲ್ಲಿತ್ತು. ಅದನ್ನು ಬರೆದವರು ನಮ್ಮ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರೆಂದು ಗೊತ್ತಾಯಿತು.

ಗ್ರಂಥದ ಪ್ರಥಮಾವೃತ್ತಿಯ ಪ್ರತಿಗಳು ಈಗ ಅತ್ಯಂತ ದುರ್ಲಭ; ಅಂದು ನಾಲ್ಕಾಣೆ ಮಾತ್ರ ಬೆಲೆಕೊಟ್ಟು ಕೊಂಡ ಪ್ರತಿ ಸುದೈವದಿಂದ ಇದುವರೆಗೂ ನನ್ನ ಬಳಿ ಉಳಿದಿದೆ. ಇದರ ಹೊರಮೈಯ ಸೊಗಸು ಶೂನ್ಯವೆಂದೇ ಹೇಳಬೇಕು. ನಯವಿಲ್ಲದ ಕಾಗದ, ಅಂದವಿಲ್ಲದ ಮುದ್ರಣ, ಹೆಸರಿಗೆ ಮಾತ್ರ ಇರುವ ರಕ್ಷಾಪತ್ರ, ಅದರ ರಮ್ಯತೆಯೆಲ್ಲ ಒಳಗಿನ ಕಾವ್ಯಸಂಪತ್ತಿನಲ್ಲಿ. ನಿದರ್ಶನಕ್ಕಾಗಿ 'ಅಡವಿಮರದಡಿಯಲ್ಲಿ', 'ಬಿಂಕದ ಸಿಂಗಾರಿ', 'ಕನಕಾಂಗಿ', 'ದುಃಖಸೇತು' ಈ ನಾಲ್ಕು ಕವನಗಳನ್ನು ಹೆಸರಿಸಿದರೆ ಸಾಕು. ಜನ ಸಾಮಾನ್ಯದ ಕಣ್ಣಿಗೆ ಬೀಳದಿದ್ದರೂ, ಈ ಆಡಂಬರರಹಿತವಾದ ಸಂಪುಟ ತರುಣರ ಹೃದಯಗಳನ್ನು ಕುಣಿಸಿ ಕವಿತೆಯ ನೂತನಮಾರ್ಗದಲ್ಲಿ ಅವರಿಗೆ ಕೈದೀವಿಗೆಯಾದದ್ದು ಏನಾಶ್ಚರ್ಯ!

ತಮ್ಮ 'ಅರಿಕೆ'ಯಲ್ಲಿ ಕೃತಿಕಾರರೇ ತಿಳಿಸಿರುವಂತೆ 'ಕರ್ಣಾಟಕ ಜನ ಜೀವನ'ದ ಸಂಚಿಕೆಗಳಲ್ಲಿ ಮತ್ತೆ ಹಲವು ಅನುವಾದಗಳು ಬೆಳಕನ್ನು ಕಂಡವು; ಕನ್ನಡದ ಅಭ್ಯಾಸಿಗಳ ಕುತೂಹಲವನ್ನು ಮತ್ತುಷ್ಟು ಕೆರಳಿಸಿದುವು. ಅಲ್ಲಿಂದೀಚೆಗೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದವರು ಒಟ್ಟು ಅರವತ್ತು ಅನುವಾದಗಳನ್ನೂ 'ಕಾಣಿಕೆ', 'ಭರತಮಾತೆಯ ವಾಕ್ಯ', 'ಮೈಸೂರು ಮಕ್ಕಳು' ಈ ಸ್ವತಂತ್ರ ಕವನಗಳನ್ನೂ ಸಂಕಲನಮಾಡಿ ಸುಂದರವಾಗಿ ಸಚಿತ್ರವಾಗಿ ಅಚ್ಚುಮಾಡಿಸಿ ೧೯೨೬ ನೆಯ ಇಸವಿಯಲ್ಲಿ 'ಪ್ರಬುದ್ಧ ಕರ್ಣಾಟಕ'ದ ಚಂದಾದಾರರಿಗೆ ಉಡುಗೊರೆಯಾಗಿ ಓದಿಸಿದರು. 'ಇಂಗ್ಲಿಷ್ ಗೀತಗಳು' ಹೆಚ್ಚು ಪ್ರಕಾಶಕ್ಕೆ ಬಂದು ಕನ್ನಡಿಗರ ಕಣ್ಣು ಮನಸ್ಸುಗಳನ್ನು ಸೂರೆಗೊಂಡದ್ದು ಈ ಪರಿಷ್ಕರಣದಲ್ಲಿಯೇ.

'ಇಂಗ್ಲಿಷ್ ಗೀತಗಳ' ಈ ಸಮಗ್ರ ಸಂಪುಟ ಹೊರಬಿದ್ದ ಕೆಲವು ತಿಂಗಳಲ್ಲಿ— ಖಚಿತವಾಗಿ ಹೇಳಬೇಕಾದರೆ, ೧೯೨೭ನೆಯ ಜನವರಿಯ ಮೊದಲನೆಯ ವಾರದಲ್ಲಿ— ಮೈಸೂರು ಮಹಾರಾಜರ ಕಾಲೇಜಿನ ಕರ್ಣಾಟಕ ಸಂಘದ ಅಧಿಕಾರಿಗಳು ಒಂದು ಪರಿಮಿತಗೋಷ್ಠಿಯನ್ನು ಏರ್ಪಡಿಸಿದ್ದರು. ಆ ವೇಳೆಗೆ ಮೈಸೂರು ವಿಶ್ವವಿದ್ಯಾನಿಲಯದ ರೆಜಿಸ್ಟ್ರಾರ್ ಪದವಿಯನ್ನು ವಹಿಸಿದ್ದ 'ಶ್ರೀ'ಯವರ ಕೊಠಡಿಯಲ್ಲಿ ಸೇರಿ ಅವರ ಕಂಠದಿಂದಲೇ ಇಂಗ್ಲಿಷ್ ಗೀತಗಳಲ್ಲಿ ಕೆಲವನ್ನು ಕೇಳುವ ಅವಕಾಶ ನಮ್ಮಲ್ಲಿ ಕೆಲವರಿಗೆ

ಅಂದು ಲಭಿಸಿತು. ಆ ದಿನ ಏನು ನಡೆಯಿತೆಂಬುದನ್ನು ಕುರಿತು ಮಿತ್ರ ಪು. ತಿ. ನರಸಿಂಹಾಚಾರ್ಯರಿಗೆ ನಾನು ಆಗ ಬರೆದಿದ್ದ ಕಾಗದ ಹೇಗೋ ಇನ್ನೂ ಉಳಿದು ಈಗ ನನ್ನ ಕೈಗೇ ಹಿಂದಿರುಗಿದೆ. ಇಪ್ಪತ್ತೈದುವರ್ಷಗಳ ಹಿಂದಿನ ಕಾಗದದಲ್ಲಿ ಅಪಕ್ವತೆಯೂ ಅತಿರೇಕವೂ ಸಹಜವಾಗಿಯೇ ಇದ್ದರೂ, 'ಇಂಗ್ಲಿಷ್ ಗೀತಗಳ' ವಾಚಕರಿಗೆ ಅದರಲ್ಲಿ ಆಸಕ್ತಿಯುಂಟಾಗಬಹುದೆಂದು ಭಾವಿಸಿ ಅದರ ಕೆಲವು ಭಾಗಗಳನ್ನು ಸರಿಸುಮಾರು ಇದ್ದ ಹಾಗೆಯೇ ಈ ಕೆಳಗೆ ಎತ್ತಿಕೊಟ್ಟಿದ್ದೇನೆ :

ಇದು [=ಪದ್ಯವಾಚನ] ನಡೆಯಲು, ಮ॥ ರಾ॥ ಎ. ಆರ್. ಕೃಷ್ಣಶಾಸ್ತ್ರಿಗಳು ಎರಡು ತಿಂಗಳ ಕಾಲ ಶ್ರೀಕಂಠಯ್ಯನವರನ್ನು ಹೊಸೆಯಬೇಕಾಯಿತಂತೆ. [ಶ್ರೀ ಕೃಷ್ಣಶಾಸ್ತ್ರಿಗಳು ಆಗ ಮಹಾರಾಜರ ಕಾಲೇಜಿನಲ್ಲಿ ಕನ್ನಡದ ಮುಖ್ಯಾಧ್ಯಾಪಕರಾಗಿದ್ದರು.] ಏನೇ ಹೇಳಿ, ಶ್ರೀಕಂಠಯ್ಯನವರಿಗೆ ನಾಚಿಕೆ ಬಲು ಹೆಚ್ಚು. ಕೇಳಲು ಬಂದಿದ್ದವರು ಕೊಂಚ; ಕರ್ಣಾಟಕ ಸಂಘದ ಪ್ರತಿನಿಧಿಗಳು ಮಾತ್ರ . . . ಮೊದಲು ಚೆನ್ನಾಗಿ ತಿಂಡಿ ತಿಂದು— ಕೃಷ್ಣಶಾಸ್ತ್ರಿಗಳ ಆತಿಥ್ಯ—ರೆಜಿಸ್ಟ್ರಾರರ ಆಫೀಸಿಗೆ ಹೋಗಿ ಸುಖವಾಗಿ ಕುರ್ಚಿಯ ಮೇಲೆ ಕುಳಿತು ಕಿತ್ತಳೆಹಣ್ಣನ್ನು ಸವಿಯುತ್ತಾ ಶ್ರೀಕಂಠಯ್ಯನವರ ಗೀತಾಮೃತವನ್ನು ಪಾನ ಮಾಡಿದೆವು. ಪ್ರಾರಂಭದಲ್ಲಿ ಸ್ವಲ್ಪ ಬಿಗಿಯಿತ್ತು. ಕಡೆಕಡೆಗೆ ಎಲ್ಲವೂ ಸಡಿಲವಾಗಿ ಹೋಯಿತು. ಶ್ರೀಕಂಠಯ್ಯನವರು ರಾಗವಾಗಿ ಪದ್ಯಗಳನ್ನು ಹಾಡಿದ್ದುದೇ ಇದಕ್ಕೆ ಗುರುತು. . .

ನಿಮ್ಮ 'ಇಂಗ್ಲಿಷ್ ಗೀತಗಳ'ನ್ನು ಕೈಗೆ ತೆಗೆದುಕೊಳ್ಳಿ, ಒಂದೆರಡು ಸ್ವಾರಸ್ಯವನ್ನು ಹೇಳುತ್ತೇನೆ :

ಪು. ೬ 'ಹೊಳೆಕರೆ'—ಇದು ಅವರ 'First attempt'; ಅದರಿಂದಲೇ ಮೂಲಕ್ಕೂ ಇದಕ್ಕೂ ವ್ಯತ್ಯಾಸ ಬಲು ಹೆಚ್ಚಾಗಿದೆ. ನಿಮಗೆ ಗೊತ್ತು ತಾನೆ: ಈ ಪುಸ್ತಕದಲ್ಲೆಲ್ಲಾ ಇದೊಂದೇ 'Orthodox metre'ನಲ್ಲಿ (ಇಲ್ಲಿ, ಕುಸುಮಷಟ್ಪದಿ) ಬರೆದಿರುವುದು.

ಪು. ೧೬ 'ಕಾಳಗದ ಪದ'ವನ್ನು ಕೊಡಗರ ಕುಣಿತವೊಂದನ್ನು ನೋಡಿ ಬರೆದರಂತೆ.

ಪು. ೩೨. 'ಬ್ಲೆನ್‌ಹೀಮ್ ಕದನ'—ಇದರಲ್ಲಿ ಮೂರನೆಯ ಪದ್ಯ (Stanza)ದ ಎರಡನೆಯ ಪಂಕ್ತಿಯಲ್ಲಿ 'ನಿಂದ' ಎನ್ನುವುದನ್ನು 'ನಿಂತ' ಎಂದು ತಿದ್ದಿ. ಹಾಗೆಯೇ, ಪು. ೭೮, ಎರಡನೆಯ ಪಂಕ್ತಿ : 'ಪರಿಸು ಎಂದನು'–ಇದು 'ವರಿಸು ಎಂದನು' ಎಂದಾಗಬೇಕು. ೮೪ನೆಯ ಪುಟದಲ್ಲಿ ಎರಡನೆಯ ಪದ್ಯದ 'ನನ್ನ, ಮೇರಿ!'ಯು 'ನಿನ್ನ, ಮೇರಿ!' ಯಾಗಬೇಕು.[೧]

---

೧. ಇವುಗಳ ಜೊತೆಗೆ, ೬೭ನೆಯ ಪುಟದ ಕೊನೆಯ ಸಾಲನ್ನು 'ಒಂದು ತಬ್ಬಿತು ನಲ್ಲನ!' ಎಂದು ತಿದ್ದಿಕೊಳ್ಳಬೇಕು. ಈ ಎಲ್ಲ ತಿದ್ದುಪಡಿಗಳು ೧೯೫೩ರ ಮುದ್ರಣಕ್ಕೂ ಅನ್ವಯಿಸುತ್ತವೆ.

'ಬೇಟ' ಎಂದರೆ Wooing ಎಂದು ನಿಮಗೆ ಗೊತ್ತಷ್ಟೆ. ಇದು 'ಬೇಡು' ಧಾತುವಿನಿಂದ ಬಂದಿದೆ. ಶಬ್ದ ಸೊಗಸಾಗಿದೆ; ಹಳಗನ್ನಡದಲ್ಲಿಯೂ ಇದೆ. ಆದರೆ ಸಾಧಾರಣವಾಗಿ ಓದುವವರು 'ಬೇಟಕಾರ' ಎನ್ನುವುದನ್ನು 'ಬೇಟೆಕಾರ' ಎಂದು ಎಲ್ಲಿ ಓದಿಬಿಡುತ್ತಾರೋ ಎನ್ನುವ ಹೆದರಿಕೆ ನನಗೆ ಇನ್ನೂ ಸ್ವಲ್ಪ ಇದೆ.

'ಬೇಟ' ಎನ್ನುತ್ತಲೂ ಜ್ಞಾಪಕಕ್ಕೆ ಬಂತು; 'ಮಾದ, ಮಾದಿ'ಯನ್ನು ಬಲು ಚೆನ್ನಾಗಿ ಓದಿದರು. 'ಏನೊ ಎದೆಯೊಳಿರಿಯುತಿಹುದು' ಎನ್ನುವ ಚರಣವಂತೂ ಇನ್ನೂ ನನ್ನ ಹೃದಯದಲ್ಲಿ ನಟ್ಟಿದೆ.

'ಮುದಿಯ ರಾಮಗೌಡ' ಎಂಬ ಪದ್ಯವು ಬಲು ಚೆನ್ನಾಗಿಲ್ಲವೆ? Palgrave ಇದರ ವಿಚಾರವಾಗಿ ಹೇಳಿರುವುದನ್ನು 'Golden Treasury'ಯ ಟಿಪ್ಪಣಿಯಲ್ಲಿ ನೋಡಬಹುದು. ಈ ಪದ್ಯವನ್ನಂತೂ ಎದೆ ಕರಗಿ ಹೋಗುವಂತೆ ಓದಿದರು. "ಈ ಬಗೆಯ ವಿಷಯವನ್ನು ಕುರಿತು ಪದ್ಯ ಬರೆದಿರುವುದು ನಮ್ಮಲ್ಲಿ ಅಪೂರ್ವ. (This sort of feeling is rarely expressed in our poetry.) ರಾಮಗೌಡನ ಹೆಂಡತಿಯ ಒಲವು ಒಂದು ಕಡೆಗೆ ಹರಿಯುವುದು, ಕರ್ತವ್ಯ ಬೇರೊಂದು ಕಡೆಗೆ ಎಳೆಯುವುದು. ದುಃಖವನ್ನು ಅದುಮಿ, ಎದೆಯನ್ನು ಗಟ್ಟಿಮಾಡಿ, ತಪ್ಪುದಾರಿಗೆ ಹೋಗುತ್ತಿದ್ದ ಮನಸ್ಸನ್ನು ಹಿಂದಿರುಗಿಸುವಳಲ್ಲ! ಇದರ ವರ್ಣನೆ ಎಷ್ಟು ಸಹಜ! ಹೀಗೆ ತಾನೆ ಪ್ರಪಂಚದಲ್ಲಿ ನಮ್ಮ ಸುತ್ತಮುತ್ತ ನಡೆಯುವುದು! ಇದನ್ನೇ ಉತ್ತಮವಾದ ಕವನವಾಗಿ ಮಾಡಬಹುದಲ್ಲವೆ?"—ಹೀಗೆ ಒಂದೆರಡು ಮಾತನ್ನೂ ಆಡಿದರು. 'ಹೆದರುವೆನು ನಾ ನಿನ್ನ ಬಿನ್ನಾಣಕೆಲೆ ಹೆಣ್ಣೆ' ಎನ್ನುವುದನ್ನು ಈ ಪದ್ಯದೊಡನೆ ಹೋಲಿಸಿ.

'ನಿನ್ನೊಳೆನಗೊಲವಿಲ್ಲ'—ಈ ಕವನವು ಬಲು ಚೆಲುವಾಗಿದೆಯೆಂದು ನನ್ನೊಡನೆ ನೀವು ಹೇಳಿದ್ದಿರಿ. ಮೂಲವು ಚೆನ್ನಾಗಿದೆ; ಆದರೆ ಪರಿವರ್ತನವು ನನಗೊಪ್ಪಲಿಲ್ಲ. ನೀರಸವಾಗಿ (Prosaic) ಕಂಡಿತು. ಇದೇ ನನ್ನ ಮನಸ್ಸಿನಲ್ಲಿ ಕೊರೆಯುತ್ತಿತ್ತು. ಶ್ರೀಕಂಠಯ್ಯನವರೇ 'This may sound prosaic in some places' ಎಂದು ಹೇಳಿದ ಮೇಲೆ ಧೈರ್ಯವಾಯಿತು. ಆದರೆ 'But we are experimenting' ಎಂದು ಹೇಳಿ ತಮ್ಮ ಮಾರ್ಗವನ್ನು ಸಮರ್ಥನೆ ಮಾಡಿಬಿಟ್ಟರು.

'ದುಃಖಸಮಯ' ಹೇಗಿದೆ? ನನ್ನ ಮನಸ್ಸಂತೂ ಅದಕ್ಕೆ ಸೆರೆಯಾಗಿದೆ. ಅದನ್ನು ಓದುವುದನ್ನು ಕೇಳಿದ ಮೇಲೆ ಅದರ ಮೇಲಿನ ಮೋಹವು ಇಮ್ಮಡಿಯಾಯಿತು.

ಒಂದು ಗುಟ್ಟನ್ನು ಹೇಳುತ್ತೇನೆ. ಶ್ರೀಕಂಠಯ್ಯನವರಿಗೆ ಹೋಮರನ್ನು ಪರಿವರ್ತಿಸಿದ ಮೇಲೆ ಸಾಯಬೇಕೆಂದು ಆಸೆಯಿದೆಯಂತೆ.[೨] ಅದಕ್ಕಾಗಿ ಪ್ರಯೋಗಗಳನ್ನು (Experiments) ಮಾಡುತ್ತಿದ್ದಾರಂತೆ . . .

---

೨. ಅವರ ಈ ಆಸೆ ಕೈಗೂಡುವಷ್ಟು ಮಟ್ಟಿಗೆ ಕನ್ನಡಿಗರು ಭಾಗ್ಯಶಾಲಿಗಳಾಗಲಿಲ್ಲ.

ಇಲ್ಲಿಗೆ ವಿವರ ಮುಗಿಯಲಿ. ಆ ದಿನದ ಆನಂದವನ್ನು ಹೇಳಲು ಸಾಧ್ಯವಿಲ್ಲ. ನಾಲ್ಕೂವರೆ ಗಂಟೆಗೆ ಪ್ರಾರಂಭಿಸಿ ಏಳೂವರೆ ಗಂಟೆಗೆ ನಿಲ್ಲಿಸಿದರು—ಮುಗಿಸಲಿಲ್ಲ. ಅವರ ಬಾಯಿಂದಲೇ ಅವರ ಪದ್ಯಗಳನ್ನೂ ಹೆಚ್ಚಿನ ಸಂಗತಿಗಳನ್ನೂ ಕೇಳಿ ಕೇಳಿ ನಾವು ಮತ್ತರಾದೆವು. ಅಂದಿನ ಹುಚ್ಚು ಮಾರನೆಯ ದಿನ ಕೂಡ ನನ್ನ ತಲೆಗೆ ಅಂಟಿಕೊಂಡಿತ್ತು . . .

೨

'ಇಂಗ್ಲಿಷ್ ಗೀತಗಳು' ತಲೆದೋರುವುದಕ್ಕೆ ಹಿಂದೆ ಕನ್ನಡ ಕವಿತೆಯ ಸ್ಥಿತಿ ಹೇಗಿತ್ತೆಂದು ಸ್ವಲ್ಪಮಟ್ಟಿಗೆ ನೆನೆದರೆ ಅದರ ಪ್ರಭಾವ ಚೆನ್ನಾಗಿ ಮನದಟ್ಟಾಗುತ್ತದೆ. ಕನ್ನಡದಲ್ಲಿ ಪ್ರೌಢ ಕಾವ್ಯರಚನೆ ಸುಮಾರು ೧೭೦೦ ರ ವೇಳೆಗೆ, ಚಿಕ್ಕದೇವರಾಜ ಒಡೆಯರ ಆಳಿಕೆಯ ಕೊನೆಯ ಹೊತ್ತಿಗೆ, ನಿಂತು ಹೋಗಿತ್ತು. ಅಲ್ಲಿಂದ ಮುಂದೆ ದೌರ್ಬಲ್ಯ, ಅಸಾರತೆ, ಅನ್ಯಾಕ್ರಮಣ ಮೊದಲಾದವು ರಾಜಕೀಯ ಪ್ರಪಂಚದಲ್ಲಿ ಕಾಣಿಸಿಕೊಂಡಂತೆಯೇ ಸಾಹಿತ್ಯ ಪ್ರಪಂಚದಲ್ಲಿಯೂ ಕಾಣಿಸಿಕೊಂಡುವು. ಹತ್ತೊಂಬತ್ತನೆಯ ಶತಮಾನದ ಮೊದಲನೆಯ ಭಾಗದಲ್ಲಿ ಗದ್ಯವೂ ಕೊನೆಯ ಭಾಗದಲ್ಲಿ ನಾಟಕವೂ ಕೆಲವು ಮಟ್ಟಿಗೆ ಉಲ್ಲಾಸಗೊಂಡು ಅರಳಿದುವು. ಶ್ರೀ ಬಸವಪ್ಪಶಾಸ್ತ್ರಿಗಳಂಥ ಸರಸ ಕವಿಗಳು ಕೂಡ ನಾಟಕರಚನೆಯ ವ್ಯವಸಾಯದಲ್ಲೇ ಹೆಚ್ಚು ಪ್ರಸಿದ್ಧಿಗೆ ಬಂದರೆಂಬುದನ್ನು ಜ್ಞಾಪಿಸಿಕೊಳ್ಳಬಹುದು. ಅತ್ತ ಮುದ್ದಣಕವಿ 'ಪದ್ಯಂ ವದ್ಯಂ ಗದ್ಯಂ ಹೃದ್ಯಂ' ಎಂದು ನಿರ್ಧರಿಸಿ ಹಳಗನ್ನಡ ಗದ್ಯದಲ್ಲಿ ತನ್ನ ಪ್ರತಿಭಾವಿಲಾಸವನ್ನು ತೋರ್ಪಡಿಸಿದನು. ಪದ್ಯದ ಕಾಲ ಹಿಂದಕ್ಕಾಯಿತು. ಇನ್ನೆಲ್ಲ ಗದ್ಯಕಥೆ ನಾಟಕಗಳ ಏಳಿಗೆ ಎಂದು ಆಗಿನ ಸಾಹಿತ್ಯವ್ಯವಸಾಯಿಗಳು ಭಾವಿಸಿದ್ದಂತೆ ತೋರುತ್ತದೆ. ಪದ್ಯವನ್ನು ಬರೆಯುವವರು ಬಲು ಕಡಿಮೆ, ಓದಿ ಆದರಿಸುವವರು ಇನ್ನೂ ಕಡಮೆ—ಹೀಗಿತ್ತು.

ಬಿ. ಎಂ. ಶ್ರೀಕಂಠಯ್ಯನವರು ಜನ್ಮವೆತ್ತಿದ್ದು ೧೮೮೪ ರಲ್ಲಿ; ಎಂ. ಎ. ಪರೀಕ್ಷೆ ಕೊಟ್ಟದ್ದು ೧೯೦೭ ರಲ್ಲಿ. ಅವರು ಮದರಾಸಿನಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೌಢ ವ್ಯಾಸಂಗ ಮಾಡುತ್ತಿರುವಂದು, ಸಂಜೆಯ ವೇಳೆ ಇತರ ತರುಣ ವಿದ್ಯಾರ್ಥಿಗಳು ಕಡಲ ದಂಡೆಯಲ್ಲಿ ಹಾಯಾಗಿ ಹರಟೆಹೊಡೆಯುತ್ತಾ ಅಡ್ಡಾಡುತ್ತಿದ್ದರೆ, ತಾವು ಮಾತ್ರ ಕನ್ನಡದ ಚಿಂತೆಯನ್ನು ತಲೆಗೆ ಹತ್ತಿಸಿಕೊಂಡು, ಇಂಗ್ಲಿಷ್ ಸಾಹಿತ್ಯದಲ್ಲಿ ಕಾಣಬರುವಂಥ ಉಕ್ತಿವೈವಿಧ್ಯವೂ ಅರ್ಥಸಂಪತ್ತೂ ಕನ್ನಡದಲ್ಲಿ ಬರುವುದು ಎಂದಿಗೆ, ಇಂಗ್ಲಿಷಿನ ಸಂಪರ್ಕದಿಂದ ಕನ್ನಡ ಸಾಹಿತ್ಯವನ್ನು ಕಸಿಮಾಡಿ ಬೆಳಸುವುದು ಹೇಗೆ ಎಂದು ಆಲೋಚಿಸುತ್ತಿದ್ದರಂತೆ. ಈ ವಿಷಯವಾಗಿ ತಾರುಣ್ಯದಲ್ಲೇ ಅವರು ಖಚಿತವಾದ ನಿರ್ಧರಕ್ಕೆ ಬಂದರು. ೧೯೧೧ರಲ್ಲಿ ಅವರು ಧಾರವಾಡದ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಕೊಟ್ಟ 'ಕನ್ನಡಮಾತು ತಲೆಯೆತ್ತುವ ಬಗೆ' ಎಂಬ ಉಪನ್ಯಾಸವು ಅವರ ನಿಶಿತವಾದ ಆಲೋಚನೆಯನ್ನೂ ಪರಿಣತವಾದ ತಿಳಿವಳಿಕೆಯನ್ನೂ ಅಗ್ರಗಾಮಿಯಾದ ದೃಷ್ಟಿಯನ್ನೂ ಚೆನ್ನಾಗಿ ನಿದರ್ಶಿಸುತ್ತದೆ. ಜನ ಸಾಮಾನ್ಯಕ್ಕೆ ಅರ್ಥವಾಗುವಂತೆ, ಹಿತವಾಗುವಂತೆ,

ಸಾಹಿತ್ಯರಚನೆಯಾಗಬೇಕೆಂದು ಅವರಿಗಿದ್ದ ಸಂತತವಾದ ಹಂಬಲಿಕೆಯೂ ಅದರಲ್ಲಿ ಎದ್ದು ಕಾಣುತ್ತದೆ. ಕನ್ನಡದ ಪ್ರಾಚೀನ ಕಾವ್ಯಗಳ ಗುಣವನ್ನು ಗ್ರಹಿಸಿ ಅವುಗಳ ನ್ಯೂನತೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ. ಆದರೆ ಗದ್ಯವನ್ನು ಹೇಗೆ ಬೆಳಸಬೇಕು, ಪಾಂಡಿತ್ಯವನ್ನು ಹೇಗೆ ಕೃಷಿಮಾಡಬೇಕು ಎಂಬುದನ್ನು ಕುರಿತು ಸಾರವತ್ತಾದ ಸೂಚನೆಗಳನ್ನು ಕೊಟ್ಟಿರುವಂತೆ, ಪದ್ಯವನ್ನು ಹೇಗೆ ಸುಧಾರಿಸಬೇಕು ಎಂಬುದನ್ನು ಈ ಉಪನ್ಯಾಸದಲ್ಲಿ ಬೋಧಿಸಿಲ್ಲ. ಲಕ್ಷಣಕ್ಕಿಂತ ಲಕ್ಷ್ಯವೇ ಮೇಲು ಎಂದು ಭಾವಿಸಿಯೇ ಇರಬಹುದು, ಹೊಸ ಕವಿತೆಗೆ ಒಳ್ಳೆಯ ಮೇಲ್ಪಂಕ್ತಿಯನ್ನು 'ಇಂಗ್ಲಿಷ್ ಗೀತಗಳ'ಲ್ಲಿ ಅವರು ಹಾಕಿಕೊಟ್ಟರು.

ಬಿ. ಎಂ. ಶ್ರೀಕಂಠಯ್ಯನವರು ಹೊಸ ಮಾರ್ಗದ ಪದ್ಯರಚನೆಗೆ ಯಾವ ವರ್ಷ ತೊಡಗಿದರೆಂಬ ವಿಷಯ ಎಲ್ಲಿಯಾದರೂ ಉಲ್ಲಿಖಿತವಾಗಿರುವಂತೆ ನನಗೆ ತಿಳಿದಿಲ್ಲ; ಅವರನ್ನೇ ನೇರವಾಗಿ ಪ್ರಶ್ನಿಸಿ ಖಚಿತಮಾಡಿಕೊಳ್ಳಬೇಕೆಂಬ ಆಲೋಚನೆ ಯಾದರೂ ಅವರ ಶಿಷ್ಯರಾದ ನಮಗೆ ಆಗ ಹೊಳೆಯಲಿಲ್ಲ. ಹೊಸ ಛಂದಸ್ಸಿನಲ್ಲಿರುವ 'ಭರತಮಾತೆಯ ವಾಕ್ಯ'ವೆಂಬ ತಮ್ಮ ಸ್ವತಂತ್ರ ಕವನವು[೩] ೧೯೧೪ ನೆಯ ಇಸವಿಯಲ್ಲಿ ರಚಿತವಾದದ್ದೆಂದು ಕವಿಗಳೇ ನಿರ್ದೇಶಿಸಿರುವುದರಿಂದ ಅದೊಂದು ನಿರ್ವಿವಾದದ ಘಟ್ಟ. ಇದರ ರಚನೆಗಿಂತ ಹಲವು ವರ್ಷಗಳ ಹಿಂದೆಯೇ ಅವರು ಇಂಗ್ಲಿಷ್ ಗೀತಗಳ ಅನುವಾದಕ್ಕೆ ಕೈಹಾಕಿರಬೇಕೆಂದು ಊಹಿಸಲು ಅಡ್ಡಿ ತೋರುವುದಿಲ್ಲ. ಆದರೆ ಇಂಗ್ಲಿಷ್ ಕವಿತೆಯ ಆಸ್ವಾದ ಇನ್ನೂ ಮೊದಲೇ ಕನ್ನಡ ನುಡಿಜಾಣರಲ್ಲಿ ಹಲವರಿಗೆ ಒದಗಿತ್ತು. ಅದರಿಂದ ಸ್ಫೂರ್ತಿಪಡೆದು ಅನುವಾದಪಥದಲ್ಲಿ ಒಬ್ಬಿಬ್ಬರಾದರೂ ಆಗಲೇ ಹೆಜ್ಜೆಯಿಟ್ಟಿದ್ದರು. ಇಂಥ ಅಗ್ರಗಾಮಿಗಳಲ್ಲಿ ದಿವಂಗತ ಎಸ್. ಜಿ. ನರಸಿಂಹಾಚಾರ್ಯರ ಹೆಸರನ್ನು ಮೊದಲು ಸ್ಮರಿಸಬೇಕು. 'ಕರ್ಣಾಟಕ ಕವಿಚರಿತೆ'ಯ ಮೊದಲನೆಯ ಸಂಪುಟದ ರಚನೆಯಲ್ಲಿ ದಿವಂಗತ ರಾ. ನರಸಿಂಹಾಚಾರ್ಯರಿಗೆ ಬಲಭುಜವಾಗಿ ನಿಂತು ಕೆಲಸಮಾಡಿದ ರಸಿಕ ವಿದ್ವಾಂಸರು ಇವರು. ಇವರು ಬರೆದ ಸ್ವತಂತ್ರ ಕವನಗಳು ಬಲು ಕಡಿಮೆ.[೪] ಇವರ ಸಾಮರ್ಥ್ಯವೆಲ್ಲ ಅನುವಾದ ಕಾರ್ಯಕ್ಕೇ ಮುಖ್ಯವಾಗಿ

---

೩. 'ಇಂಗ್ಲಿಷ್ ಗೀತಗಳ' ೧೯೨೬ರ ಮುದ್ರಣದಲ್ಲಿ 'ಭರತಮಾತೆಯ ವಾಕ್ಯ', 'ಮೈಸೂರು ಮಕ್ಕಳು' ಎಂಬ ಸ್ವತಂತ್ರ ಕವನಗಳು ಗ್ರಂಥದ ಕೊನೆಯಲ್ಲಿ ಸೇರಿದ್ದವು. ಅವು ಈಚೆಗೆ 'ಹೊಂಗನಸಿ'ನಲ್ಲಿ ಮಿಕ್ಕ ಸ್ವತಂತ್ರ ಕವನಗಳ ಜೊತೆಗೆ ಸೇರಿ ಬಂದಿರುವುದರಿಂದ, 'ಇಂಗ್ಲಿಷ್ ಗೀತಗಳ' ೧೯೫೩ರ ಮುದ್ರಣದಲ್ಲಿ ಬಿಟ್ಟುಹೋಗಿವೆ.

೪. ಶ್ರೀ ಚಾಮರಾಜ ಒಡೆಯರು ೧೮೯೪ ನೆಯ ಇಸವಿಯಲ್ಲಿ ದಿವಂಗತರಾದಾಗ ಎಸ್. ಜಿ. ನರಸಿಂಹಾಚಾರ್ಯರು ಬರೆದ ಚರಮಗೀತವು ಒಂದು ಒಳ್ಳೆಯ ಕವನ. ಇದು ದಿವಂಗತ ಮಂ. ಆ. ರಾಮಾನುಜಯ್ಯಂಗಾರರ 'ಕವಿಸಮಯ'ದಲ್ಲಿ ಉದಾಹೃತವಾಗಿದೆ (ಪು. ೬೬-೭). ಇದರ ಒಂದು ಪದ್ಯಾರ್ಧವನ್ನು ಇಲ್ಲಿ ಎತ್ತಿಕೊಡಬಹುದು :

ವೀಣೆಗಳು ಮುಸುಕಿಟ್ಟು ಮೌನದಿ
ಕೋಣೆಯೊಳಗಡಗಿದವು ಬಿನ್ನನೆ
ಜಾಣಳಿದು ನಾಟಕಗಳುಳಿದುವು ತೆರೆಯ ಮರೆಯೊಳಗೆ!. . .

ವಿನಿಯೋಗವಾಯಿತು. ಸಂಸ್ಕೃತ 'ರಘುವಂಶ'ದಿಂದ ಇವರು ಕನ್ನಡಿಸಿದ 'ದಿಲೀಪಚರಿತೆ', 'ಅಜನೃಪ ಚರಿತೆ' ಎಂಬ ಕಾವ್ಯಖಂಡಗಳು ಇಂದಿಗೂ ರಮ್ಯವಾಗಿವೆ. ಮೈಸೂರು ದೇಶದಲ್ಲಿ ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ಪ್ರಚುರವಾಗಿದ್ದ ಕನ್ನಡ ಪಠ್ಯಪುಸ್ತಕಗಳಲ್ಲಿ ಸೇರಿದ್ದ ಇಂಗ್ಲಿಷ್ ಪದ್ಯಾನುವಾದಗಳಲ್ಲಿ ಬಹುಪಾಲು ಎಲ್ಲವೂ, ನಮಗೆ ತಿಳಿಯ ಬಂದ ಮಟ್ಟಿಗೆ, ಎಸ್. ಜಿ. ನರಸಿಂಹಾಚಾರ್ಯರವೇ ಎಂದು ತೋರುತ್ತದೆ.[೫] ಅವರು ನಡುಗನ್ನಡದಲ್ಲಿ ಪ್ರಚುರವಾಗಿದ್ದ ಚೌಪದಿ ಷಟ್ಪದಿ ಸಾಂಗತ್ಯಗಳನ್ನೇ ಹೊಸ ಭಾವಕ್ಕೂ ಭಾಷೆಗೂ ಹೊಂದಿಕೆಯಾಗುವಂತೆ ಬಳಸಿದರು. ಈ ಅನುವಾದಕರ ಶಕ್ತಿ ಸರಳತೆಗಳಿಗೆ ನಿದರ್ಶನವಾಗಿ ವರ್ಡ್ಸ್‌ವರ್ತ್ ಕವಿಯ 'To the Cuckoo' ಎಂಬುದರ ಅನುವಾದದಿಂದ ಒಂದು ನುಡಿಯನ್ನು ಇಲ್ಲಿ ಉದಾಹರಿಸಬಹುದು :

> ಬಾರೊ ಬಸಂತದ ಕಂದ ಬಾ ಬಾ ಬಾರೊ
> ಹಾರುವ ಹಕ್ಕಿ ನೀನಲ್ಲ ।
> ಸಾರುವ ದನಿ ಮಾಯದ ಗಂಟು ಕಣ್ಣಿಗೆ
> ತೋರದ ಹುರುಳಾಗಿ ಸುಳಿವೆ ॥
>
> (Thrice welcome, darling of the spring!
> Even yet thou art to me
> No bird, but an invisible thing,
> A voice, a mystery;)

ಇದರ ಛಂದಸ್ಸು ಸಾಂಗತ್ಯ; ಭಾಷೆ ಹೊಸಗನ್ನಡ. 'ಉತ್ತಮರಾಜ್ಯ' (Mrs. F. Hemans : 'The Better Land') ಮೊದಲಾದ ಇತರ ಕೆಲವು ಅನುವಾದಗಳೂ ಹೀಗೆಯೇ ಮುದ್ದಾಗಿವೆ. ಆದರೂ ಎಸ್. ಜಿ. ನರಸಿಂಹಾಚಾರ್ಯರು ಹಿಂದಿನ ಛಂದೋರೂಪಗಳನ್ನೇ ಉಪಯೋಗಿಸಿಕೊಂಡರೇ ಹೊರತು ಹೊಸದಾಗಿ ಯಾವುದನ್ನೂ ಕಟ್ಟಲಿಲ್ಲವೆಂಬುದನ್ನು ಮರೆಯಬಾರದು.

ದಿವಂಗತ ಪಂಜೆ ಮಂಗೇಶರಾಯರು ಮಕ್ಕಳಲ್ಲಿ, ಮಕ್ಕಳ ವಿದ್ಯಾಭ್ಯಾಸದಲ್ಲಿ ತಮಗಿದ್ದ ಅತಿಶಯ ಪ್ರೇಮದಿಂದ ತಿಳಿನುಡಿಯ ಲಲಿತಲಯದ ಹಲವು ಕವನಗಳನ್ನು ರಚಿಸಿದರು. ಅವರ 'ಉದಯರಾಗ', 'ಸಂಜೆಯ ಹಾಡು', 'ತೆಂಕಣ ಗಾಳಿಯಾಟ' ಮೊದಲಾದ ಕೃತಿಗಳಲ್ಲಿ ನವ್ಯಲಾಸ್ಯ ಕಾಣಬರುತ್ತದೆ. ಅವರು ಇಂಗ್ಲಿಷಿನ ಕೆಲವು ಕವನಗಳನ್ನು ಭಾಷಾಂತರಿಸಿದ್ದಾರೆ, ಅವಲಂಬಿಸಿದ್ದಾರೆ : 'ನಕ್ಷತ್ರ' ('Twinkle, twinkle, little star) 'ಅಣ್ಣನ ವಿಲಾಪ' (Mrs F. Hemans : 'O call my brother back to

---

೫. ಕೋಗಿಲೆ, ಉತ್ತಮರಾಜ್ಯ, ನಕ್ಷತ್ರ ಮೊದಲಾದವು ಈ ಅನುವಾದಗಳಲ್ಲಿ ಕೆಲವು. ಇವುಗಳಲ್ಲಿ ಯಾವುದರಲ್ಲೂ ಅನುವಾದಕರ ಹೆಸರು ಉಲ್ಲಿಖಿತವಾಗಿಲ್ಲ. ಆದರೂ ಇವುಗಳ ಕರ್ತೃ ಎಸ್. ಜಿ. ನರಸಿಂಹಾಚಾರ್ಯರೇ ಆಗಿರಬೇಕೆಂದು ಊಹಿಸಲು ತಕ್ಕಮಟ್ಟಿನ ಆಧಾರವುಂಟು.

me') ಈ ಮೊದಲಾದುವನ್ನು ಇಲ್ಲಿ ಉದಾಹರಿಸಬಹುದು.[೬] ಇವುಗಳಲ್ಲಿ 'ಸಂಜೆಯ ಹಾಡು' ೧೯೦೨ರಲ್ಲಿ ಕಟ್ಟಿದ್ದೆಂದು ತಿಳಿದುಬರುತ್ತದೆ; ಮಿಕ್ಕವು ಯಾವ ಯಾವ ವರ್ಷಗಳಲ್ಲಿ ರಚಿತವಾದವೆಂಬುದು ಖಚಿತವಾಗಿ ತಿಳಿಯದು. ಪಂಜೆಯವರು ಬಳಸಿದ ಪದ್ಯಧಾಟಿಗಳು ಬಲುಮಟ್ಟಿಗೆ ಷಟ್ಪದಿ, ಗೋವಿನ ಕಥೆಯ ಮಟ್ಟು, ಚೌಪದಿ ಇವನ್ನೇ ಅವಲಂಬಿಸಿದವು. ಸಾಂಪ್ರದಾಯಿಕವಾದ ಆದಿಪ್ರಾಸವನ್ನು ಬಿಡುವುದಕ್ಕೂ ಅವರ ಮನಸ್ಸು ಒಡಂಬಡಲಿಲ್ಲ.

ಆದಿಪ್ರಾಸ ಪರಿತ್ಯಾಗದ ಧೀರನಿರ್ಧಾರವನ್ನು ಪಂಜೆಯವರ ಶಿಷ್ಯರೂ ಬಿ.ಎಂ. ಶ್ರೀಯವರಿಗೆ ವಯಸ್ಸಿನಲ್ಲಿ ಒಂದು ವರ್ಷ ಹಿರಿಯರೂ ಈಗ [೧೯೫೩] ಮದರಾಸು ರಾಜ್ಯದ ರಾಷ್ಟ್ರಕವಿಗಳೂ ಆಗಿರುವ ಶ್ರೀ ಮಂ. ಗೋವಿಂದ ಪೈ ಅವರು ಕೈಕೊಂಡರು. '೧೯೦೩ ರಿಂದ ೧೯೧೦ರ ವರೆಗೆ ನಾನು ಪ್ರಾಸವನ್ನು ಇಟ್ಟೂ ಬಿಟ್ಟೂ ಬರೆಯುತ್ತಿದ್ದೆ . . . ೧೯೧೧ ನೆಯ ಏಪ್ರಿಲ್ ತಿಂಗಳಲ್ಲಿ ನಾನು ಸುಮಾರು ಒಂದು ತಿಂಗಳು ಬಡೋದಾರಾಜ್ಯದ ನವಸಾರಿ ಎಂಬಲ್ಲಿದ್ದೆ. ಆಗ್ಗೆ ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪದಗೆಯ್ಯುತ್ತಿದ್ದಾಗ ಹಠಾತ್ತಾಗಿ, ಆಗೋದು ಹೋಗೋದು ದೇವರ ಇಚ್ಛೆ, ಹೂಡೋದು ಬಿತ್ತೋದು ನನ್ನ ಇಚ್ಛೆ, ಇನ್ನ ಮಿಾನ ಮೇಷ ನೋಡದೆ 'ಪ್ರಾಸವನೀಗಲೆ ತೊರೆದುಬಿಡುವುದೆ ನಿಶ್ಚಯಂ' ಎಂದಾಯಿತು. . .' ಎಂದು ಅವರೇ ಹೇಳಿದ್ದಾರೆ.[೭] ಆದರೆ ಅವು ೧೯೦೩ ನೆಯ ಇಸವಿಯಲ್ಲಿ ಬರೆದ 'ಚಿಟ್ಟೆಗೆ' (Wordsworth : 'The Butterfly'), ೧೯೦೬ ರಲ್ಲಿ ಬರೆದ 'ಬಾನಕ್ಕಿಗೆ' (Shelley : 'To a Skylark')— ಇವುಗಳಲ್ಲಿ ಆದಿಪ್ರಾಸವಿದೆ. ಮೊದಲನೆಯದರ ಛಂದಸ್ಸು ಚೌಪದಿ, ಎರಡನೆಯದರದು ಕುಸುಮಷಟ್ಪದಿ. ('ಬಾನಕ್ಕಿಗೆ' ಎಂಬುದರೊಂದಿಗೆ ಅದೇ ಇಂಗ್ಲಿಷ್ ಕವನಕ್ಕೆ ಬಿ. ಎಂ. ಶ್ರೀಯವರ ಅನುವಾದವಾದ 'ಬಾನಾಡಿ'ಯನ್ನು ಹೋಲಿಸಬಹುದು.)

ಇಂಗ್ಲಿಷ್ ಕವಿತೆಯ ರುಚಿಯನ್ನು ಕನ್ನಡಿಗರಿಗೆ ಒದಗಿಸುವುದರಲ್ಲಿ ಪ್ರಾರಂಭದ ಪ್ರಯತ್ನಮಾಡಿ ಮುಂದುವರಿಸಿದ ಹಿರಿಯರಲ್ಲಿ ದಿವಂಗತ ಹಟ್ಟಿಯಂಗಡಿ ನಾರಾಯಣರಾಯರು ಒಬ್ಬರು. ಇವರು ಅನುವಾದ ಮಾಡುತ್ತಿದ್ದ ವಿಷಯವನ್ನು ಶ್ರೀ ಗೋವಿಂದ ಪೈ ಅವರು ೧೮೯೯-೧೯೦೦ ರಲ್ಲಿ ಎಫ್. ಎ. ತರಗತಿಯಲ್ಲಿದ್ದಾಗಲೆ ತಮ್ಮ ಗುರುಗಳಾದ ಪಂಜೆಯವರ ಬಾಯಿಂದ ಕೇಳಿದ್ದರಂತೆ. ಆದರೆ ಹ. ನಾರಾಯಣ

೬. ಈ ಕವನಗಳು ಪಂಜೆಯವರೇ ಸಂಪಾದಿಸಿದ 'ಕನ್ನಡ ಎರಡನೆಯ ಪದ್ಯ ಪುಸ್ತಕ'ದಲ್ಲಿ ದೊರೆಯುತ್ತವೆ. ಈಗಲಂತೂ 'ಶ್ರೀ ಪಂಜೆಯವರ ನೆನಪಿಗಾಗಿ' (ಹರ್ಷ ಮುದ್ರಣ, ಪ್ರಕಟಣಾಲಯ, ಪುತ್ತೂರು) ಎಂಬ ಗ್ರಂಥದಲ್ಲಿ ಅವರ ಅನೇಕ ಕೃತಿಗಳು ಒಟ್ಟಿಗೆ ಬಂದಿವೆ.
ಪಂಜೆಯವರ 'ಮಿನುಗೆಲೆ ಮಿನುಗೆಲೆ ನಕ್ಷತ್ರ' ಎಂಬುದನ್ನು 'ಮಿರುಮಿರುಗುವೆ ಹಾ ಕಿರುತಾರಗೆಯೇ' ಎಂಬುದರೊಡನೆ ಹೋಲಿಸಬಹುದು.

೭. 'ಕಂನಾಡ ಸಾಹಿತ್ಯಜ್ಞರ ಆತ್ಮಕಥನ' (ಮಿಂಚಿನ ಬಳ್ಳಿಯ ಗ್ರಂಥಮಾಲೆ), ಪು. ೫.

ರಾಯರ ಕವನಗಳು ಬಹುಕಾಲದವರೆಗೆ ಬೆಳಕಿಗೆ ಬರಲಿಲ್ಲ. ಪರಿಷತ್ಪತ್ರಿಕೆಯ ಮೂರನೆಯ ಸಂಪುಟದಲ್ಲಿ (೧೯೧೮-೧೯) ಪ್ರಕಟಿತವಾಗಿರುವ ತಮ್ಮ 'ಕನ್ನಡ ಕವಿತೆಯ ಭವಿತವ್ಯ', 'ಕವಿತಾವರ್ಧನ' ಎಂಬ ಲೇಖನಗಳಲ್ಲಿ ಅವರು ಉದಾಹರಣಾರ್ಥವಾಗಿ ತಮ್ಮ ಕೆಲವು ಅನುವಾದಗಳನ್ನು ಕೊಟ್ಟಿರು. (ಕನ್ನಡ ಕವಿತೆ ಬೆಳೆಯಬೇಕಾದ ದಾರಿಯನ್ನೂ ಕುರಿತು ಅವರು ಆಲೋಚಿಸಿದ್ದರೆಂಬುದು ಈ ಲೇಖನಗಳಿಂದ ಸ್ಪಷ್ಟವಾಗುತ್ತದೆ.) ಮುಂದೆ 'ಆಂಗ್ಲಕವಿತಾಸಾರ' ಎಂಬ ಅವರ ಕೃತಿಗಳ ಚಿಕ್ಕ ಸಂಕಲನ ಮುದ್ರಿತವಾಯಿತು. ಇದರ ಪ್ರತಿಗಳು ಈಗ ಪರಮದುರ್ಲಭ. ನಾನು ನೋಡಿದ ಪ್ರತಿಯಲ್ಲಿ ಮುಂಭಾಗದ ರಕ್ಷಾಪತ್ರ ನಷ್ಟವಾಗಿರುವುದರಿಂದ ಯಾವ ವರ್ಷ ಇದು ಅಚ್ಚಾಯಿತೆಂದು ನಿಷ್ಕರ್ಷಿಸಿ ಹೇಳಲು ಅಶಕ್ಯವಾಗಿದೆ.[೮] ಫೂಲ್ಸ್‌ಕ್ಯಾಪ್, ಷೋಡಶಪತ್ರದ ಆಕಾರದ ೨೨ ಪುಟಗಳುಳ್ಳ ಈ ಪುಸ್ತಕದಲ್ಲಿ ಷೇಕ್ಸ್‌ಪಿಯರ್, ಮಿಲ್ಟನ್, ಗ್ರೇ, ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್, ಕಾಲಿನ್ಸ್, ವಿಟಿಯರ್ ಈ ಮೊದಲಾದ ಕವಿಗಳಿಂದ ಆಯ್ದುಕೊಂಡ ಭಾಗಗಳ ಮತ್ತು ಗೀತಗಳ ಅನುವಾದಗಳಿವೆ. ನಿದರ್ಶನಕ್ಕಾಗಿ ಇದರಿಂದ ಕೆಲವು ಪಂಕ್ತಿಗಳನ್ನು ಎತ್ತಿಕೊಡಬಹುದು :

ನರಲೋಕವೆಲ್ಲ ನಾಟಕಶಾಲೆಯಂತಿರುತ ।
ಪುರುಷವನಿತೆಯರು ಬರಿಯಾಟದವರು ॥
ಮೆರೆದವರು ನಿಷ್ಕ್ರಮಿಸಿ ಹೆರರು ಪ್ರವೇಶಿಸುತ ।
ಪರಿಪರಿಯ ವೇಷಗಳ ನಟಿಸುತಿಹರು ॥ . . .(ಷೇಕ್ಸ್‌ಪಿಯರ್)

ತೊಲಗು ಹೃದಯವ ಮರುಳುಗೊಳಿಸುವಾಮೋದವೇ ।
ಸಲಹುವಳು ನಿನ್ನನೊಬ್ಬಳು ಜನನಿ ಮೋಹವೇ ॥
ಸ್ಥಿರಚಿತ್ತ ನಿನ್ನಾಟದೊಡವೆಗಳ ನೀಗುವುದು ।
ಬರಿಯ ಸೋಮಾರಿಗಳ ಬಗೆ ನಿನಗೆ ಸಲ್ಲುವುದು ॥ . . .(ಮಿಲ್ಟನ್)

ಅದೊ ಮಿಣುಗುಟ್ಟುತ ಭೂಮಿಯ ರೂಪವು ನೋಟಕೆ ಮಸುಳುವುದು ।
ಅದಿರದೆ ವಾತಾವರಣವು ಗಭೀರಶಾಂತತೆ ತಳೆದಿಹುದು ॥ . . .(ಗ್ರೇ)

---

೮. ಶ್ರೀ ಮಂ. ಗೋವಿಂದ ಪೈ ಅವರು ನನ್ನ ಕೋರಿಕೆಯನ್ನು ಮನ್ನಿಸಿ ನನ್ನ ಅವಲೋಕನಕ್ಕಾಗಿ ತಮ್ಮ ಬಳಿ ಇದ್ದ ಹ. ನಾರಾಯಣರಾಯರ ಕವನ ಸಂಕಲನವನ್ನು ಕೃಪೆಯಿಂದ ಕಳಿಸಿಕೊಟ್ಟರು. 'ಪಂಜೆಯವರು ನನಗೆ ಕೊಡುವಾಗ ಇದರ ರಟ್ಟು ಹರಿದುಹೋಗಿದೆ, ಬೇರೊಂದು ಪ್ರತಿ ಕೊಟ್ಟರೆ ಲೇಸೆಂದು ನಾನು ಹೇಳಿದುದಕ್ಕೆ, ಇದು ಕೊನೆಯ ಪ್ರತಿ. ಬೇರೆ ಇಲ್ಲ. ಇದು ಮಾರಾಟಕ್ಕೆ ಪ್ರಕಟಿಸಿದುದಲ್ಲದ ಕಾರಣ, ಬೆಲೆಗೂ ದೊರೆಯುವುದಿಲ್ಲ ಎಂದ ಅವರ ಮಾತಿನ ನೆನಪೋ, ನೆನಪಿನಂತೆಯೋ ಇದೆ' ಎಂದು ಶ್ರೀ ಗೋವಿಂದ ಪೈಯವರು ನನಗೆ ಬರೆದ ಕಾಗದದಲ್ಲಿ ತಿಳಿಸಿದ್ದಾರೆ.
ಹ. ನಾರಾಯಣರಾಯರ 'ಆಂಗ್ಲ ಕವಿತಾಸಾರ'ದ ಅಪೂರ್ವ ಪ್ರತಿಯನ್ನು ನನಗೆ ಕಳಿಸಿದ್ದಕ್ಕೂ ಪಂಜೆಯವರ ಮತ್ತು ತಮ್ಮ ಕವನಗಳ ವಿಷಯದಲ್ಲಿ ಅನೇಕ ಸಂಗತಿಗಳನ್ನು ನನಗೆ ತಿಳಿಸಿದ್ದಕ್ಕೂ ಶ್ರೀ ಗೋವಿಂದ ಪೈಯವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ವಾರಿಧಿ ನದಿಗಳಲೆದ್ದು ಕುಸುಮಗಳ ।
ಆರಿದ ಬಾಯಿಗೆ ಹೊಸಮಳೆಗರೆಯುವೆ ॥
ನಡುಹಗಲಲಿ ತೂಕಡಿಸುವ ಕುಡಿಗಳ ।
ಒಡಲಿನ ಹೊದಕೆಗೆ ನೆಳಲನು ಕವಿಸುವೆ ॥ . . .(ಷೆಲ್ಲಿ)

ಭಾವನೆಯ ಬಿಚ್ಚಿಬಿಡು, ಹೊರಗಂಣು ನೋಡಿದರೆ ।
ಆವ ರಮಣೀಯತೆಗೆ ತಪ್ಪುವುದು ನಿಯತ ಜರೆ ॥ . . .(ಕೀಟ್ಸ್)

ಹ. ನಾರಾಯಣರಾಯರ ಗ್ರಂಥದ ಮೊದಲ ನುಡಿಯಲ್ಲಿ ಈ ಕೆಲವು ವಾಕ್ಯಗಳಿವೆ:

"ಈ ಪದ್ಯಗಳಲ್ಲಿ ಆಂಗ್ಲರ ಕೆಲವು ಪ್ರಸಿದ್ಧ ಕೃತಿಗಳನ್ನು ಅನುವಾದಿಸಿ ಹಾಕಿದೆ. ಯುಕ್ತವಾಗಿ ಕಂಡಂತೆ ಅಲ್ಲಲ್ಲಿ ಕೆಲವು ಅಂಶಗಳನ್ನು ಲೋಪಿಸಿ ಇನ್ನು ಕೆಲವನ್ನು ಬದಲಿಸಿದೆ. ಕನ್ನಡದ ಛಂದಸ್ಸಿನಲ್ಲಿ ಪೂರ್ವಿಕರು ಆಗಾಗ್ಗೆ ನೂತನ ರೀತಿಗಳನ್ನು ಹುಟ್ಟಿಸಿದರು. ಈಗಲೂ ಹೊಸ ಮಾರ್ಗಗಳನ್ನೇಕೆ ತೆರೆಯಬಾರದೆಂದು ಸರಳ ಕಾವ್ಯಪ್ರಿಯರು ಕೇಳುತ್ತಾರೆ. ಈ ಪದ್ಯಗಳಲ್ಲಿ ಪ್ರಾಸವನ್ನು ತೊರೆಯದಿದ್ದರೂ, ಪೂರ್ವಕವಿಗಳ ನಿಯಮಗಳನ್ನು ಸೂಕ್ಷ್ಮವಾಗಿ ಅನುಸರಿಸಿಲ್ಲ. ಆದಕಾರಣ ವೃತ್ತಗಳಿಗೆ ಹೆಸರು ಹಾಕಿಲ್ಲ. ಬೇಕಾದರೆ ಶಿಥಿಲಕಂದ, ಶಿಥಿಲರಗಳೆ, ಎಂಬಂತೆ ಹೆಸರುಗಳನ್ನು ನಿರ್ಮಿಸಬಹುದು."

ಬಿ. ಎಂ. ಶ್ರೀಯವರ 'ಇಂಗ್ಲಿಷ್ ಗೀತಗಳ'ನ್ನು ಬಿಟ್ಟರೆ, ಕೇವಲ ಇಂಗ್ಲಿಷ್ ಕಾವ್ಯಾನುವಾದಕ್ಕೇ ಮೀಸಲಾಗಿದ್ದು ಆ ಕಾರ್ಯದಲ್ಲಿ ಹೊಸ ಮಾರ್ಗವನ್ನು ಹಿಡಿದ ಸರಿಸುಮಾರು ಸಮಕಾಲೀನ ಕೃತಿ[೯] ಹ. ನಾರಾಯಣರಾಯರ 'ಆಂಗ್ಲ ಕವಿತಾಸಾರ' ವೊಂದೇ ಎಂದು ತೋರುತ್ತದೆ. ಈ ಕಾರಣದಿಂದಲೂ ಅದರ ಪ್ರತಿಗಳು ಮೇಲೆ ಹೇಳಿದಂತೆ ಅತ್ಯಂತ ದುರ್ಲಭವಾಗಿರುವುದರಿಂದಲೂ ಅದರಿಂದ ಹೆಚ್ಚು ಪಂಕ್ತಿಗಳನ್ನು ಉದಾಹರಿಸುವುದು ಅವಶ್ಯವೆನಿಸಿತು. ಮೂಲದ ಛಂದಸ್ಸು ಯಾವುದೇ ಇರಲಿ, ಹ. ನಾರಾಯಣರಾಯರು ರಗಳೆ ಚೌಪದಿಗಳ ಕಟ್ಟನ್ನು ದಾಟಿಲ್ಲ. ಆದಿಪ್ರಾಸವನ್ನು ಅವರು ಎಲ್ಲಿಯೂ ಪೂರ್ಣವಾಗಿ ಬಿಟ್ಟಿಲ್ಲ. ಎರಡೆರಡು ಪಂಕ್ತಿಗಳಿಗಾದರೂ ಉಳಿಸಿಕೊಂಡಿದ್ದಾರೆ. 'ಇದುವರೆಗೆ ಪ್ರಾಸಮುಂಡನಕ್ಕೆ ನನ್ನ ಕಿವಿ ಒಗ್ಗಲಿಲ್ಲ' ಎಂದು ತಮ್ಮ 'ಕವಿತಾವರ್ಧನ'ದಲ್ಲಿಯೂ ಅವರು ಹೇಳಿದ್ದಾರೆ.

---

೯. ಪರಿಷತ್ಪತ್ರಿಕೆಯ ಲೇಖನಗಳು ಪ್ರಕಟನವಾಗುವ ಮೊದಲು ಹ. ನಾರಾಯಣರಾಯರ ಕೃತಿಗಳನ್ನು ಬಿ. ಎಂ. ಶ್ರೀಕಂಠಯ್ಯನವರಾಗಲಿ, ಶ್ರೀಕಂಠಯ್ಯನವರ ಕವನಗಳು 'ವಿದ್ಯಾದಾಯಿನಿ' ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗುವ ಮೊದಲು ಅವನ್ನು ಹ. ನಾರಾಯಣರಾಯರಾಗಲಿ ನೋಡಿದ್ದ ಸಂಭವ ಬಲು ಕಡಮೆ.
ವಾಟನ್ ಕವಿಯ 'Character of a Happy Life', ಥಾಮ್ಸನ್ ಕವಿಯ 'Rule Britannia' ಈ ಕವನಗಳನ್ನು ಈ ಇಬ್ಬರೂ ಕನ್ನಡಿಸಿದ್ದಾರೆ. ಇಬ್ಬರ ಅನುವಾದಗಳನ್ನೂ ಹೋಲಿಸಿ ನೋಡಿದರೆ ಅವರ ರೀತಿ ವೈವಿಧ್ಯವೂ ಸಿದ್ಧಿ ತಾರತಮ್ಯವೂ ಸ್ಪಷ್ಟವಾಗುತ್ತವೆ.

೨

ಈ ಎಲ್ಲ ಹಿರಿಯರ ಮತ್ತು ಸಮಕಾಲೀನರ ರಚನೆಗಳನ್ನೂ ಬಿ. ಎಂ. ಶ್ರೀಯವರ ರಚನೆಗಳನ್ನೂ ಹೋಲಿಸಿ ನೋಡಿದರೆ ಹೊಸಗನ್ನಡ ಕವಿತೆಗೆ ಬಿ. ಎಂ. ಶ್ರೀಯವರು ತಮ್ಮ 'ಇಂಗ್ಲಿಷ್ ಗೀತಗಳ'ಿಂದ ಎಂಥ ಮಹೋಪಕಾರ ಮಾಡಿದರೆಂಬುದು ಸ್ಪಷ್ಟವಾಗುತ್ತದೆ. ಸಾಂಪ್ರದಾಯಿಕ ದೃಷ್ಟಿಯಿಂದ ನೋಡಿದರೆ 'ಇಂಗ್ಲಿಷ್ ಗೀತಗಳ'ಲ್ಲಿ ಎಲ್ಲವೂ ಹೊಸದು; ಉದ್ದೇಶಪೂರ್ವಕವಾಗಿ ಅಮೂಲಾಗ್ರವಾಗಿ ಹೊಸದು; ಭಾಷೆ ಹೊಸದು, ರೀತಿ ಹೊಸದು, ಛಂದಸ್ಸು ಹೊಸದು. ಮನಸ್ಸು ಮಾಡಿದರೆ, ವ್ಯಾಕರಣಶುದ್ಧವಾದ ಹಳಗನ್ನಡದಲ್ಲಿ ಪ್ರಾಚೀನ ಕವಿಗಳಂತೆಯೇ ಪದ್ಯರಚನೆ ಮಾಡಬಹುದೆಂಬುದನ್ನು ಸೂಚಿಸುವುದಕ್ಕೋ ಎಂಬಂತೆ ಗ್ರಂಥದ ಮುಖಪತ್ರದಲ್ಲಿ ಬಂದಿರುವ 'ಆವಳ ನಿರ್ಮಲ ತೇಜಂ . . .' ಎಂಬ ಕಂದಪದ್ಯವನ್ನು ಬಿಟ್ಟರೆ ಮಿಕ್ಕದ್ದೆಲ್ಲವೂ ಹೊಸಗನ್ನಡದಲ್ಲಿಯೇ ಇದೆ. ಹಳಗನ್ನಡದ ನಾದವನ್ನೂ ಬಂಧವನ್ನೂ 'ಧ್ವನಿ'ಯನ್ನೂ ಹೊಸಗನ್ನಡದಲ್ಲಿ ತರುವುದು ಕಷ್ಟವೆಂಬುದು ನಿಜ. ಆದರೆ ಹಾಗೆಂದು, ಅರ್ಥವಾಗದ ಪ್ರಾಕ್ತನ ಭಾಷೆಯಲ್ಲಿ ಪದ್ಯಕಟ್ಟಿದರೆ ಜನತೆಯ ಗತಿಯೇನು? ಹರಿಹರ ಕುಮಾರವ್ಯಾಸಾದಿಗಳು ಹಳಗನ್ನಡವನ್ನು ಬಿಟ್ಟು ನಡುಗನ್ನಡಕ್ಕೆ ತಿರುಗಿ ಅದನ್ನು ಕಾವ್ಯಕ್ಕೆ ತಕ್ಕದ್ದಾಗುವ ಹಾಗೆ ಕಡೆದಂತೆ, ಹೊಸಗನ್ನಡವನ್ನೂ ಪಳಗಿಸಬೇಡವೆ?—ಇದೇ 'ಶ್ರೀ' ಯವರ ಮನಸ್ಸಿನ ಹಾರೈಕೆ, ಲೇಖನಿಯ ಸಾಧನೆ.

'ಇಂಗ್ಲಿಷ್ ಗೀತಗಳ' ಪ್ರಾರಂಭದಲ್ಲೇ ಬಂದಿರುವ 'ಕಾಣಿಕೆ'ಯ ಎರಡು ನುಡಿಗಳನ್ನು ಆಲಿಸಿ—

ಮೊದಲು ತಾಯ ಹಾಲ ಕುಡಿದು,
ಲಲ್ಲೆಯಿಂದ ತೊದಲಿ ನುಡಿದು,
ಕೆಳೆಯರೊಡನ ಬೆಳೆದು ಬಂದ
　　ಮಾತದಾವುದು—
ನಲ್ಲೆಯೊಲವ ತೆರೆದು ತಂದ
　　ಮಾತದಾವುದು—

ಸವಿಯ ಹಾಡ, ಕಥೆಯ, ಕಟ್ಟಿ,
ಕಿವಿಯಲೆರೆದು, ಕರುಳ ತಟ್ಟಿ,
ನಮ್ಮ ಜನರು, ನಮ್ಮ ನಾಡು,
　　ಎನಿಸಿತಾವುದು—
ನಮ್ಮ ಕವಿಗಳೆಂಬ ಕೋಡು
　　ತಲೆಗದಾವುದು—

ಇಂಪಿನಲ್ಲಾಗಲಿ, ಬಿಗಿಯಲ್ಲಾಗಲಿ, ಪುಷ್ಟಿಯಲ್ಲಾಗಲಿ ಇದು ಹಳಗನ್ನಡಕ್ಕೆ ಹೇಗೆ ಕಡಮೆ?

ಮೇಲಿನದು ಸ್ವತಂತ್ರಕೃತಿ. ಇಂಗ್ಲಿಷಿನ ಅನುವಾದಗಳಿಂದ ಆಯ್ದುಕೊಂಡ ಈ ಕೆಲವು ಚರಣಗಳನ್ನೂ ನೋಡಿ—

ಯೌವನಕೆ ಚೆಲ್ಲಾಟ
ಮುಪ್ಪಿಗುಸಿರೆಳೆದಾಟ
ಹುಲ್ಲೆನಗೆ ಯೌವನವು, ಹೆಳವು ಮುಪ್ಪು :
('ಮುಪ್ಪು ಯೌವನ')

ಹೇಳಲೆ ಹಕ್ಕಿ, ಚೆಲುವನು ಸಿಕ್ಕಿ,
ನನಗೆ ಮದುವೆಯೆಂದು?
ಆಳಿಬ್ಬಿಬ್ಬರು ಕೇರಿಯ ಸುತ್ತಿ
ಹೆಗಲಲಿ ಹೊತ್ತಂದು!
('ಬಿಂಕದ ಸಿಂಗಾರಿ')

ಕರುಣಾಳು, ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ
ಕೈಹಿಡಿದು ನಡಸೆನ್ನನು.
ಇರುಳು ಕತ್ತಲೆಯ ಗವಿ; ಮನೆ ದೂರ; ಕನಿಕರಿಸಿ,
ಕೈಹಿಡಿದು ನಡಸೆನ್ನನು.
ಹೇಳಿ ನನ್ನಡಿಯಿಡಿಸು; ಬಲುದೂರ ನೋಟವನು
ಕೇಳೆನೊಡನೆಯೆ—ಸಾಕು ನನಗೊಂದು ಹೆಜ್ಜೆ.
(ಪ್ರಾರ್ಥನೆ)

ಹೊಸಗನ್ನಡಕ್ಕೆ ಸೇರುವುದಿಲ್ಲವೆಂದು ದೂರೀಕರಿಸಬೇಕಾದ ಯಾವ ಪ್ರಯೋಗವೂ ಈ ಪಂದ್ಯಪಂಕ್ತಿಗಳಲ್ಲಿಲ್ಲ. ಆದರೆ ಕಾವ್ಯರಸವನ್ನು ಬತ್ತಿಸುವುದೆಂದು ಆಕ್ಷೇಪಿಸಬಹುದಾದ ಉಕ್ತಿಯೂ ಇಲ್ಲಿ ಏನೊಂದೂ ಇಲ್ಲ. 'ಇಂಗ್ಲಿಷ್ ಗೀತಗಳ'ಲ್ಲಿ ಬಂದಿರುವ ಎಲ್ಲ ಮಾತೂ ರಸಮಯುವೆಂದಾಗಲಿ, ಎಲ್ಲ ಅನುವಾದವೂ ಉತ್ಕೃಷ್ಟವೆಂದಾಗಲಿ ನನ್ನ ವಾದವಲ್ಲ. ಆದರೆ ಪಕ್ಷಪಾತವಿಲ್ಲದ ಕಿವಿಗಳಿಗೆ ಈ ಕೃತಿಯಲ್ಲಿ ಹೊಸಗನ್ನಡದ ವಿಜಯಘೋಷ ಸ್ಪಷ್ಟವಾಗಿ ಕೇಳಬರುತ್ತದೆ. ಬಿ. ಎಂ. ಶ್ರೀಕಂಠಯ್ಯನವರು ವರ್ಡ್ಸ್‌ವರ್ತ್ ಕವಿಯ ಭಕ್ತರು; ಕಾವ್ಯಶೈಲಿಯ ವಿಷಯದಲ್ಲಿ ಅವನ ಅಭಿಪ್ರಾಯವನ್ನು ಬಲುಮಟ್ಟಿಗೆ ಅನುಮೋದಿಸಿ, ಕವಿತೆಯ ಭಾಷೆಗೂ ಜನತೆಯ ಭಾಷೆಗೂ ಹೆಚ್ಚಿನ ಅಂತರವಿರಬಾರದೆಂದೂ, ಜನಸಾಮಾನ್ಯದ

ಮಾತನ್ನು ಶೋಧಿಸಿ ಆರಿಸಿಕೊಂಡರೆ ಕಾವ್ಯಭಾಷೆಯಾಗ ಬಲ್ಲದೆಂದೂ ನಂಬಿದ್ದವರು.[೧೦] ಆ ನಂಬಿಕೆಗೆ ಬಲುಮಟ್ಟಿನ ಸಮರ್ಥನೆ 'ಇಂಗ್ಲಿಷ್ ಗೀತಗಳ'ಲ್ಲಿ ದೊರೆಯುತ್ತವೆ.[೧೧]

ಕನ್ನಡದ ಹಿಂದಿನ ಪರಂಪರೆಯಲ್ಲಿ ದೀರ್ಘಕಾವ್ಯಗಳೇ ತುಂಬಿರುವುದನ್ನು ಕಂಡವರಿಗೆ ಇಂಗ್ಲಿಷಿನ ಅಡಕವಾದ ಭಾವಗೀತಗಳ ಮೇಲೆ ಮೋಹ ಅಧಿಕವಾಗುವುದು ಸಹಜ. ಇವಕ್ಕೆ ಸಂವಾದಿಯಾಗಿ ಭಾರತೀಯ ಸಾಹಿತ್ಯದಲ್ಲಿ—ಮುಖ್ಯವಾಗಿ ಸಂಸ್ಕೃತದಲ್ಲಿ—'ಮುಕ್ತಕ'ಗಳೆಂಬ ಬಿಡಿ ಪದ್ಯಗಳು ಇದ್ದರೂ ಅವು ಕನ್ನಡದಲ್ಲಿ ಹೆಚ್ಚು ಪ್ರಚುರವಾಗಿಲ್ಲ. ಅಂತೂ ಪ್ರೇಮ, ದೇಶಭಕ್ತಿ, ಶೌರ್ಯ, ಪ್ರಕೃತಿಸೌಂದರ್ಯ, ಸುಖ, ದುಃಖ, ರಾಗ, ದ್ವೇಷ, ಜಿಜ್ಞಾಸೆ, ಶ್ರದ್ಧೆ ಮೊದಲಾದ ವಿವಿಧ ವಿಷಯಗಳನ್ನು ಕುರಿತು ಆಯಾ ಸಮಯದ ಪ್ರಚೋದನೆಗೆ ಇಂಬುಗೊಟ್ಟು ಸ್ವತಂತ್ರ ರೀತಿಯಲ್ಲಿ ಇಂಗ್ಲಿಷ್ ಕವಿಗಳು ರಚಿಸಿದ ಭಾವಗೀತಗಳನ್ನು 'ಶ್ರೀ'ಯವರು ರಮ್ಯವಾದ ಅನುವಾದಗಳಲ್ಲಿ ನಮ್ಮ ಜನರ ಮುಂದಿಟ್ಟರು. ಈ ಮೊದಲೇ ಕನ್ನಡದಲ್ಲಿ ಕೆಲವು ಭಾವಗೀತಗಳು ಉದಿಸಿದ್ದುವು; ಇನ್ನು ಮುಂದಂತೂ ಭಾವಗೀತಗಳ ಯುಗವೇ ಪ್ರವರ್ತಿಸಿತು. ಹೃದಯಾಂತರಾಳದ ನೋವು ನಲವುಗಳನ್ನು ಒಂದೆರಡು ಗೀತಗಳಲ್ಲಾದರೂ ತೋಡಿಕೊಳ್ಳದಿರುವ ಕನ್ನಡ ಸಾಹಿತಿ ಈಗ ಯಾರುಂಟು?

ಎಲ್ಲಕ್ಕೂ ಮಿಗಿಲಾಗಿ 'ಶ್ರೀ'ಯವರಿಂದ ಕನ್ನಡಕ್ಕೆ ಆದ ಪರಮೋಪಕಾರವೆಂದರೆ, 'ಇಂಗ್ಲಿಷ್ ಗೀತಗಳ'ಲ್ಲಿ ಛಂದಸ್ಸಿನ ಹೊಸದೊಂದು ಹೆದ್ದಾರಿಯನ್ನೇ ತೆರೆದದ್ದು; ಕನ್ನಡ ಕಾವ್ಯದ ಚರಿತ್ರೆಯಲ್ಲಿ ಅವರ ಹೆಸರು ಚಿರಸ್ಮರಣೀಯವಾಗಿ ನಿಲ್ಲುವುದು ಮುಖ್ಯವಾಗಿ ಇದರಿಂದ. ಹಳಗನ್ನಡದ ಕಾಲಕ್ಕಾಗಲೆ ಸಂಸ್ಕೃತದ ಶಾರ್ದೂಲವಿಕ್ರೀಡಿತ ಮೊದಲಾದ ವೃತ್ತಗಳೂ ಪ್ರಾಕೃತದ ಕಂದವೂ ಕಾವ್ಯದಲ್ಲಿ ಮನೆ ಮಾಡಿಕೊಂಡು ಕನ್ನಡ ಛಂದಸ್ಸೆಂದರೆ ಇವೇ ಎನ್ನುವಂತೆ ಆಗಿದ್ದುವು. ದೇಶ್ಯಪದ್ಯಜಾತಿಗಳಾದ ತ್ರಿಪದಿ, ಪಿರಿಯಕ್ಕರ ಮೊದಲಾದವೂ ಮೂಲತಃ ಪ್ರಾಕೃತದಿಂದಲೇ ಬಂದ ರಗಳೆಗಳೂ ಎಲ್ಲೋ ಒಂದೊಂದು

---

೧೦. '. . . I answer that the language of such poetry as is here commended is, as far as possible, a selection of the language really spoken by men; that this selection, wherever it is made with true taste and feeling, will of itself form a distinction far greater than would at first be imagined, and will entirely separate the composition from the vulgarity and meannes of ordinary life;. . .'

(Wordsworth's Preface. 1800-1845)

೧೧. ಹೊಸಗನ್ನಡದ ಚೌಕಟ್ಟಿನಲ್ಲಿ ನಡುಗನ್ನಡದ, ಅಷ್ಟೇ ಸಾಲದೆಂಬಂತೆ ಕೇವಲ ಹಳಗನ್ನಡದ, ರೂಪಗಳನ್ನೂ ಮಾತುಗಳನ್ನೂ ಈಗಿನ ಕವಿಗಳು ಬೆರಸುತ್ತಿಲ್ಲವೆ; ಇದಕ್ಕೆ ಬಿ.ಎಂ. ಶ್ರೀಯವರೇ ಈಚೆಗೆ ಬರೆದ 'ಪಾರಸಿಕರು' ನಾಟಕದಿಂದ ಬೆಂಬಲ ದೊರೆತಿಲ್ಲವೆ—ಎಂಬ ಪ್ರಶ್ನೆ ಉದಿಸುವುದು ಸಹಜ. ಅದರ ಪರಿಶೀಲನೆಗೆ ಇದು ಸ್ಥಳವಲ್ಲ ಎಂದಿಷ್ಟು ಮಾತ್ರ ಇಲ್ಲಿ ಹೇಳಬಹುದು.

ಇಂಪಿನಲ್ಲಾಗಲಿ, ಬಿಗಿಯಲ್ಲಾಗಲಿ, ಪುಷ್ಟಿಯಲ್ಲಾಗಲಿ ಇದು ಹಳಗನ್ನಡಕ್ಕೆ ಹೇಗೆ ಕಡಮೆ?

ಮೇಲಿನದು ಸ್ವತಂತ್ರಕೃತಿ. ಇಂಗ್ಲಿಷಿನ ಅನುವಾದಗಳಿಂದ ಆಯ್ದುಕೊಂಡ ಈ ಕೆಲವು ಚರಣಗಳನ್ನೂ ನೋಡಿ—

ಯೌವನಕೆ ಚೆಲ್ಲಾಟ
ಮುಪ್ಪಿಗುಸಿರೆಳೆದಾಟ
ಹುಲ್ಲೆನಗೆ ಯೌವನವು, ಹೆಳವು ಮುಪ್ಪು :
('ಮುಪ್ಪು ಯೌವನ')

ಹೇಳಲೆ ಹಕ್ಕಿ, ಚೆಲುವನು ಸಿಕ್ಕಿ,
ನನಗೆ ಮದುವೆಯೆಂದು?
ಆಳಿಬ್ಬಿಬ್ಬರು ಕೇರಿಯ ಸುತ್ತಿ
ಹೆಗಲಲಿ ಹೊತ್ತಂದು!
('ಬಿಂಕದ ಸಿಂಗಾರಿ')

ಕರುಣಾಳು, ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ
ಕೈಹಿಡಿದು ನಡಸೆನ್ನನು.
ಇರುಳು ಕತ್ತಲೆಯ ಗವಿ; ಮನೆ ದೂರ; ಕನಿಕರಿಸಿ,
ಕೈಹಿಡಿದು ನಡಸೆನ್ನನು.
ಹೇಳಿ ನನ್ನಡಿಯಿಡಿಸು; ಬಲುದೂರ ನೋಟವನು
ಕೇಳೆನೊಡನೆಯೆ—ಸಾಕು ನನಗೊಂದು ಹೆಜ್ಜೆ.
(ಪ್ರಾರ್ಥನೆ)

ಹೊಸಗನ್ನಡಕ್ಕೆ ಸೇರುವುದಿಲ್ಲವೆಂದು ದೂರೀಕರಿಸಬೇಕಾದ ಯಾವ ಪ್ರಯೋಗವೂ ಈ ಪಂದ್ಯಪಂಕ್ತಿಗಳಲ್ಲಿಲ್ಲ. ಆದರೆ ಕಾವ್ಯರಸವನ್ನು ಬತ್ತಿಸುವುದೆಂದು ಆಕ್ಷೇಪಿಸಬಹುದಾದ ಉಕ್ತಿಯೂ ಇಲ್ಲಿ ಏನೊಂದೂ ಇಲ್ಲ. 'ಇಂಗ್ಲಿಷ್ ಗೀತಗಳ'ಲ್ಲಿ ಬಂದಿರುವ ಎಲ್ಲ ಮಾತೂ ರಸಮಯುವೆಂದಾಗಲಿ, ಎಲ್ಲ ಅನುವಾದವೂ ಉತ್ಕೃಷ್ಟವೆಂದಾಗಲಿ ನನ್ನ ವಾದವಲ್ಲ. ಆದರೆ ಪಕ್ಷಪಾತವಿಲ್ಲದ ಕಿವಿಗಳಿಗೆ ಈ ಕೃತಿಯಲ್ಲಿ ಹೊಸಗನ್ನಡದ ವಿಜಯಘೋಷ ಸ್ಪಷ್ಟವಾಗಿ ಕೇಳಬರುತ್ತದೆ. ಬಿ. ಎಂ. ಶ್ರೀಕಂಠಯ್ಯನವರು ವರ್ಡ್ಸ್‌ವರ್ತ್ ಕವಿಯ ಭಕ್ತರು; ಕಾವ್ಯಶೈಲಿಯ ವಿಷಯದಲ್ಲಿ ಅವನ ಅಭಿಪ್ರಾಯವನ್ನು ಬಲುಮಟ್ಟಿಗೆ ಅನುಮೋದಿಸಿ, ಕವಿತೆಯ ಭಾಷೆಗೂ ಜನತೆಯ ಭಾಷೆಗೂ ಹೆಚ್ಚಿನ ಅಂತರವಿರಬಾರದೆಂದೂ, ಜನಸಾಮಾನ್ಯದ

ಮಾತನ್ನು ಶೋಧಿಸಿ ಆರಿಸಿಕೊಂಡರೆ ಕಾವ್ಯಭಾಷೆಯಾಗ ಬಲ್ಲದೆಂದೂ ನಂಬಿದ್ದವರು.[೧೦] ಆ ನಂಬಿಕೆಗೆ ಬಲುಮಟ್ಟಿನ ಸಮರ್ಥನೆ 'ಇಂಗ್ಲಿಷ್ ಗೀತಗಳ'ಲ್ಲಿ ದೊರೆಯುತ್ತವೆ.[೧೧]

ಕನ್ನಡದ ಹಿಂದಿನ ಪರಂಪರೆಯಲ್ಲಿ ದೀರ್ಘಕಾವ್ಯಗಳೇ ತುಂಬಿರುವುದನ್ನು ಕಂಡವರಿಗೆ ಇಂಗ್ಲಿಷಿನ ಅಡಕವಾದ ಭಾವಗೀತಗಳ ಮೇಲೆ ಮೋಹ ಅಧಿಕವಾಗುವುದು ಸಹಜ. ಇವಕ್ಕೆ ಸಂವಾದಿಯಾಗಿ ಭಾರತೀಯ ಸಾಹಿತ್ಯದಲ್ಲಿ—ಮುಖ್ಯವಾಗಿ ಸಂಸ್ಕೃತದಲ್ಲಿ—'ಮುಕ್ತಕ'ಗಳೆಂಬ ಬಿಡಿ ಪದ್ಯಗಳು ಇದ್ದರೂ ಅವು ಕನ್ನಡದಲ್ಲಿ ಹೆಚ್ಚು ಪ್ರಚುರವಾಗಿಲ್ಲ. ಅಂತೂ ಪ್ರೇಮ, ದೇಶಭಕ್ತಿ, ಶೌರ್ಯ, ಪ್ರಕೃತಿಸೌಂದರ್ಯ, ಸುಖ, ದುಃಖ, ರಾಗ, ದ್ವೇಷ, ಜಿಜ್ಞಾಸೆ, ಶ್ರದ್ಧೆ ಮೊದಲಾದ ವಿವಿಧ ವಿಷಯಗಳನ್ನು ಕುರಿತು ಆಯಾ ಸಮಯದ ಪ್ರಚೋದನೆಗೆ ಇಂಬುಗೊಟ್ಟು ಸ್ವತಂತ್ರ ರೀತಿಯಲ್ಲಿ ಇಂಗ್ಲಿಷ್ ಕವಿಗಳು ರಚಿಸಿದ ಭಾವಗೀತಗಳನ್ನು 'ಶ್ರೀ'ಯವರು ರಮ್ಯವಾದ ಅನುವಾದಗಳಲ್ಲಿ ನಮ್ಮ ಜನರ ಮುಂದಿಟ್ಟರು. ಈ ಮೊದಲೇ ಕನ್ನಡದಲ್ಲಿ ಕೆಲವು ಭಾವಗೀತಗಳು ಉದಿಸಿದ್ದುವು; ಇನ್ನು ಮುಂದಂತೂ ಭಾವಗೀತಗಳ ಯುಗವೇ ಪ್ರವರ್ತಿಸಿತು. ಹೃದಯಾಂತರಾಳದ ನೋವು ನಲವುಗಳನ್ನು ಒಂದೆರಡು ಗೀತಗಳಲ್ಲಾದರೂ ತೋಡಿಕೊಳ್ಳದಿರುವ ಕನ್ನಡ ಸಾಹಿತಿ ಈಗ ಯಾರುಂಟು?

ಎಲ್ಲಕ್ಕೂ ಮಿಗಿಲಾಗಿ 'ಶ್ರೀ'ಯವರಿಂದ ಕನ್ನಡಕ್ಕೆ ಆದ ಪರಮೋಪಕಾರವೆಂದರೆ, 'ಇಂಗ್ಲಿಷ್ ಗೀತಗಳ'ಲ್ಲಿ ಛಂದಸ್ಸಿನ ಹೊಸದೊಂದು ಹೆದ್ದಾರಿಯನ್ನೇ ತೆರೆದದ್ದು; ಕನ್ನಡ ಕಾವ್ಯದ ಚರಿತ್ರೆಯಲ್ಲಿ ಅವರ ಹೆಸರು ಚಿರಸ್ಮರಣೀಯವಾಗಿ ನಿಲ್ಲುವುದು ಮುಖ್ಯವಾಗಿ ಇದರಿಂದ. ಹಳಗನ್ನಡದ ಕಾಲಕ್ಕಾಗಲೆ ಸಂಸ್ಕೃತದ ಶಾರ್ದೂಲವಿಕ್ರೀಡಿತ ಮೊದಲಾದ ವೃತ್ತಗಳೂ ಪ್ರಾಕೃತದ ಕಂದವೂ ಕಾವ್ಯದಲ್ಲಿ ಮನೆ ಮಾಡಿಕೊಂಡು ಕನ್ನಡ ಛಂದಸ್ಸೆಂದರೆ ಇವೇ ಎನ್ನುವಂತೆ ಆಗಿದ್ದುವು. ದೇಶ್ಯಪದ್ಯಜಾತಿಗಳಾದ ತ್ರಿಪದಿ, ಪಿರಿಯಕ್ಕರ ಮೊದಲಾದವೂ ಮೂಲತಃ ಪ್ರಾಕೃತದಿಂದಲೇ ಬಂದ ರಗಳೆಗಳೂ ಎಲ್ಲೋ ಒಂದೊಂದು

---

೧೦. '. . . I answer that the language of such poetry as is here commended is, as far as possible, a selection of the language really spoken by men; that this selection, wherever it is made with true taste and feeling, will of itself form a distinction far greater than would at first be imagined, and will entirely separate the composition from the vulgarity and meannes of ordinary life;. . .'

(Wordsworth's Preface. 1800-1845)

೧೧. ಹೊಸಗನ್ನಡದ ಚೌಕಟ್ಟಿನಲ್ಲಿ ನಡುಗನ್ನಡದ, ಅಷ್ಟೇ ಸಾಲದೆಂಬಂತೆ ಕೇವಲ ಹಳಗನ್ನಡದ, ರೂಪಗಳನ್ನೂ ಮಾತುಗಳನ್ನೂ ಈಗಿನ ಕವಿಗಳು ಬೆರಸುತ್ತಿಲ್ಲವೆ; ಇದಕ್ಕೆ ಬಿ.ಎಂ. ಶ್ರೀಯವರೇ ಈಚೆಗೆ ಬರೆದ 'ಪಾರಸಿಕರು' ನಾಟಕದಿಂದ ಬೆಂಬಲ ದೊರೆತಿಲ್ಲವೆ—ಎಂಬ ಪ್ರಶ್ನೆ ಉದಿಸುವುದು ಸಹಜ. ಅದರ ಪರಿಶೀಲನೆಗೆ ಇದು ಸ್ಥಳವಲ್ಲ ಎಂದಿಷ್ಟು ಮಾತ್ರ ಇಲ್ಲಿ ಹೇಳಬಹುದು.

ಕಡೆ—ಇಂದಿನ ಕರ್ಣಾಟಕ ಸಂಗೀತ ಕಛೇರಿಯಲ್ಲಿ ಕನ್ನಡ ಹಾಡುಗಳು ಒಮ್ಮೊಮ್ಮೆ ತಲೆಹಾಕುವಂತೆ—ಕಾಣಿಸಿಕೊಳ್ಳುತ್ತಿದ್ದುವು. ಇಷ್ಟಾದರೂ ಸಂಸ್ಕೃತ ವೃತ್ತಗಳು ಹಳಗನ್ನಡಕ್ಕೆ ಒಗ್ಗಲಿಲ್ಲ; ನಡುಗನ್ನಡದ ಕಾಲಕ್ಕಂತೂ ಕೈ ಬಿಟ್ಟುಹೋದುವು. ಕಂದವು ಅಪ್ರಚುರ ವಾಯಿತು. ಇನ್ನು ಮುಂದೆ ಮೂರು, ನಾಲ್ಕು, ಐದು ಮಾತ್ರೆಯ ಗಣಗಳು ಪ್ರಬಲಿಸಿ, ಮುಖ್ಯವಾಗಿ ಷಟ್ಪದಿಗಳು ರೂಪುಗೊಂಡವು; ರಗಳೆಗಳು ಹರಿಹರನ ಕೃತಿಗಳಲ್ಲಿ ವಿಶಾಲವಾಗಿ ಅರಳಿ ಮತ್ತೆ ಒಳಸರಿದಿದ್ದುವು. ಸಾಂಗತ್ಯವೊಂದು ಹಿಂದಿನ ದ್ರಾವಿಡ ಛಂದಸ್ಸಿನ ಕುರುಹಾಗಿ ನೆಲೆಗೊಂಡಿತು. ಯಕ್ಷಗಾನದಲ್ಲಿ ಒಂದೆರಡು ಹೊಸ ರೂಪಗಳು, 'ಗೋವಿನ ಕಥೆಯ ಹಾಡಿ'ನಲ್ಲಿ ಒಂದು ಹೊಸ ಮಟ್ಟು–ಹೀಗೆ ಅಲ್ಲಲ್ಲಿ ಕಾಣಿಸಿಕೊಂಡುವು. ಆದರೂ ಎಲ್ಲದರ ಪಡಿಯಚ್ಚೂ ಒಂದೇ. ಪದ್ಯಕ್ಕೆ ಆರು ಅಥವಾ ನಾಲ್ಕು ಪಾದದ ಕಟ್ಟು; ಒಂದೊಂದು ಪಾದಕ್ಕೂ ಇಷ್ಟಿಷ್ಟೇ ಗಣಗಳಿರಬೇಕೆಂಬ ನಿಯಮ; ಆದಿಪ್ರಾಸವಿದ್ದೇ ತೀರಬೇಕು, ಅದು ಪದ್ಯಕ್ಕೆಲ್ಲ ಏಕವಾಗಿರಬೇಕು ಎಂಬ ನಿರ್ಬಂಧ. ಪ್ರಾಸಗಣಗಳಲ್ಲೇ ನಾದರೂ ವ್ಯತ್ಯಾಸವಾದರೆ 'ಕಣ್ಗೆ ಕಾಲ್ಗೆ ಕೇಡು' ಎಂಬ ಬೆದರಿಕೆ ಬೇರೆ! ಇಂಥ ಇಕ್ಕಟ್ಟಿನ ಏಕನಾದದಲ್ಲಿ ಕವಿ ತನ್ನ ಭಾವವೈಖರಿಗೆ ತಕ್ಕ ರೂಪವೈವಿಧ್ಯವನ್ನು ಸಾಧಿಸುವುದು ಹೇಗೆ? ಭಾವಕ್ಕೆ ಸಹಜಕವಚವೋ ಎಂಬಂತೆ ಪದ್ಯರೂಪವು ಅಳವಟ್ಟು, ಅದರ ಗತಿಗೆ ಅನುಸಾರವಾಗಿ ತಾನೂ ಸಾಗಿ, ಇಲ್ಲಿ ಹ್ರಸ್ವವಾಗಿ ಅಲ್ಲಿ ದೀರ್ಘವಾಗಿ, ಇಲ್ಲಿ ಮೊರೆದು ಅಲ್ಲಿ ಸುಯ್ದು, ಇಲ್ಲಿ ನಟಿಯಂತೆ ಬಳುಕಿ ಅಲ್ಲಿ ಬಾಣದಂತೆ ಹಾಯ್ದು, ಇಲ್ಲಿ ಪ್ರಾಸದ ಸೊಂಪನ್ನು ಮುಡಿದು ಅಲ್ಲಿ ನಿರಾಭರಣಸೌಂದರ್ಯವನ್ನು ಮೆರೆದು, ಸೊಗಸನ್ನು ಬೀರಬೇಡವೆ?–ಇಂಗ್ಲಿಷ್ ಛಂದಸ್ಸಿನಲ್ಲಿ ಇದು ಎಷ್ಟು ಚೆನ್ನಾಗಿ ಸಾಧಿಸಿದೆ ಯೆಂಬುದನ್ನು ಸಹೃದಯರು ಬಲ್ಲರು. ಕನ್ನಡ ನುಡಿಯ ಜಾಯಮಾನಕ್ಕೆ ರಗಳೆ ಷಟ್ಪದಿಗಳ ಕಾಲದಿಂದಲೂ ಒಗ್ಗಿ ಹದವಾಗಿ ಪಳಗಿರುವ ಮಾತ್ರಾಗಣಗಳನ್ನೇ ಇಟ್ಟಿಗೆಯಾಗಿ ಉಪಯೋಗಿಸಿ, ಚರಣವಿನ್ಯಾಸ ಪ್ರಾಸವಿಲಾಸಗಳನ್ನು ಮಾತ್ರ ಬಗೆಬಗೆಯಾಗಿ ಏರ್ಪಡಿಸಿ, ಹೊಸ ಹೊಸ ಕಟ್ಟಡಗಳನ್ನು ಕಟ್ಟುವುದು ಸಾಧ್ಯ, ಉಚಿತ ಎಂಬುದು ಪಾಂಡಿತ್ಯದಿಂದ ಪರಿಪಕ್ವವಾದ 'ಶ್ರೀ'ಯವರ ಸ್ವತಂತ್ರ ದೃಷ್ಟಿಗೆ ಹೊಳೆಯಿತು. ಸಂಸ್ಕೃತ, ಕನ್ನಡ, ತಮಿಳು, ಇಂಗ್ಲಿಷ್–ಈ ಹಲವು ಭಾಷೆಗಳಲ್ಲಿ ಛಂದಸ್ಸು ಬೆಳೆದ ಬಗೆಯನ್ನು ಕೂಲಂಕಷವಾಗಿ ಅಭ್ಯಾಸಮಾಡಿ ಆಳವಾಗಿ ಸಂಶೋಧನೆ ಮಾಡಿದ್ದವರು ಅವರು; ಇದಕ್ಕೆ ಅವರ ಸಂಯೋಜಕ ಪ್ರತಿಭೆಯೂ ನೆರವಾಯಿತು.[೧೨]

---

೧೨. ಕನ್ನಡ ಛಂದಸ್ಸಿನ ಚರಿತ್ರೆಯನ್ನೂ ಅದರ ಅಭ್ಯಾಸಕ್ಕಾಗಿ ಬಿ. ಎಂ. ಶ್ರೀಯವರು ಪಟ್ಟಿರುವ ಪರಿಶ್ರಮವನ್ನೂ ತಿಳಿಯುವ ಅಪೇಕ್ಷೆಯುಳ್ಳವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆ ಯಾದ 'ಕನ್ನಡ ಕೈಪಿಡಿ'ಯ ಮೊದಲನೆಯ ಸಂಪುಟ (ಎರಡನೆಯ ಮುದ್ರಣ)ದಲ್ಲಿ 'ಕನ್ನಡ ಛಂದಸ್ಸಿನ ಚರಿತ್ರೆ' ಎಂಬ ಅಧ್ಯಾಯವನ್ನು ನೋಡಬಹುದು.
ಹೊಸ ಛಂದಸ್ಸನ್ನು ಕುರಿತು ಪ್ರಕೃತ ಲೇಖಕನ 'ಕನ್ನಡದಲ್ಲಿ ಹೊಸ ಮಟ್ಟುಗಳಿಗಿರುವ ಆವಶ್ಯಕತೆ' (ಪರಿಷತ್ಪತ್ರಿಕೆ, ೧೫.೪) 'ಹೊಸ ಛಂದಸ್ಸಿನ ಲಯಗಳು' ('ಸಂಭಾವನೆ')—

'ಇಂಗ್ಲಿಷ್ ಗೀತಗಳ'ಲ್ಲಿ ಎಷ್ಟೊಂದು ಸಂಖ್ಯೆಯ ಹೊಸ ಪದ್ಯಜಾತಿಗಳು ಹೊಸ ಅಚ್ಚಿನಲ್ಲಿ ಎರಕಹೊಯ್ದು ಇಂಗ್ಲಿಷ್ ಮೂಲದ ರೂಪಗಳಿಗೆ ಸರಿಯಾಗಿ ನಿಂತಿವೆ! ಅಲ್ಲಿಯ ಛಂದೋವಿಲಾಸಗಳು ಇಲ್ಲಿಯೂ ಬಲುಮಟ್ಟಿಗೆ ಯಥಾವತ್ತಾಗಿ ಪ್ರತಿಬಿಂಬಿತವಾಗಿವೆ; ಆದರೂ ಕನ್ನಡದ ಜಾಯಮಾನಕ್ಕೆ ಭಂಗ ಬಂದಿಲ್ಲ. ಇದು ಹೇಗೆ ಸಾಧ್ಯವಾಯಿತೆಂಬುದನ್ನು ಸುಲಭವಾಗಿ ಮನಗಾಣಬಹುದು. ಇಂಗ್ಲಿಷ್ ಛಂದಸ್ಸಿಗೆ ಮೂಲಭೂತವಾಗಿರುವ ಲಯಗಳು (Rhythms) ಕೂಡ ಕೆಲವು ಮಾತ್ರವೇ. ಆದರೆ ಗಣಗಳನ್ನೂ ಚರಣಗಳನ್ನೂ ಜೋಡಿಸುವುದರಲ್ಲಿ ವಿವಿಧತೆಯೂ ಪ್ರಾಸವಿಷಯದಲ್ಲಿ ಔಚಿತ್ಯವೂ ಅಲ್ಲಿ ಅತಿಶಯವಾಗಿ ವ್ಯಕ್ತವಾಗುವುದರಿಂದ ಇಂಗ್ಲಿಷಿನಲ್ಲಿ ಅನೇಕಾನೇಕ ಪದ್ಯಜಾತಿಗಳು ಏರ್ಪಟ್ಟು ಪ್ರಚುರವಾಗಿವೆ. ಈ ಎಲ್ಲ ಅನುಕೂಲವೂ ಕನ್ನಡಕ್ಕೂ ಉಂಟೆಂಬುದು 'ಇಂಗ್ಲಿಷ್ ಗೀತಗಳ'ಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ. ಇಲ್ಲಿಯ ಪದ್ಯಗಳಲ್ಲಿ ಮುಕ್ಕಾಲುಪಾಲಿಗೆಲ್ಲ ಮಾತ್ರಾಗಣಗಳೇ ತಳಹದಿ. ೩, ೪, ೫, ೩ + ೪ ಈ ಮಾತ್ರಾಗಣಗಳ ಪೂರ್ವಪರಿಚಿತ ಲಯಗಳೇ ಇವುಗಳಲ್ಲಿ ಮುಖ್ಯವಾಗಿ ಗೋಚರವಾಗುತ್ತವೆ; ಜೊತೆಗೆ ಇನ್ನೊಂದು ಲಯವೂ ಇಲ್ಲಿ ತಲೆಯೆತ್ತಿದೆ :

ಎಡಕೆ ಬಲಕೆ ಸರಿದೇಳು ಕನ್ನೆಯರು
ಹಳ್ಳತಿಟ್ಟಿನಲಿ ಸರಿವರು;
ನುಡಿಸಿ ಸೊಕ್ಕಿನಲಿ, ಬಿಡದೆ ಬೆನ್ನಿನಲಿ
ಕಳ್ಳಚೆನ್ನಿಗರು ಬರುವರು.

(ಚೋಳಕನ್ನೆಯರು)

ಇಲ್ಲಿರುವ ೩+೫ ಮಾತ್ರೆಗಳ ಲಯವನ್ನು ಕೇಳಬೇಕಾದರೆ ಒಂದು ಸಾವಿರ ವರ್ಷ ಹಿಂದಿನ 'ಪಂಪಭಾರತವನ್ನು ತೆರೆಯಬೇಕು:

ಅಲ್ಲಿ ಸೊಗಯಿಸುವ ಕೃತಕಗಿರಿಗಳಿಂ
ಕಲ್ಪತರುಗಳನೆ ಪೋಲ್ವ ಮರಗಳಿಂ
ನಂದನಂಗಳೊಳ್ ಸುಳಿವ ಬಿರಯಿಯಿಂ
ಕಂಪು ಕಣ್ಮಲೆಯೆ ಪೂತ ಸುರಯಿಯಿಂ । . . . (೩.೨೨)

'ಇಂಗ್ಲಿಷ್ ಗೀತಗಳ' ಪೆಡಸುದಾರಿ'ಯೂ ೩+೫ ಮಾತ್ರಾಗಣಲಯದಲ್ಲಿಯೇ ಇದೆ.

ಈ ಲೇಖನಗಳನ್ನೂ ಕುತೂಹಲಿಗಳು ನೋಡಬಹುದು. [ಈ ಲೇಖನಗಳು ಪ್ರಕೃತ 'ಸಮಾಲೋಕನ'ದಲ್ಲಿ ಕೊಂಚ ತಿದ್ದುಪಾಡಿನೊಡನೆ ಮುಂದೆ ಸೇರಿವೆ.] ಅವುಗಳಲ್ಲಿನ ಕೆಲವು ಅಭಿಪ್ರಾಯಗಳನ್ನೂ ವಾಕ್ಯಗಳನ್ನೂ ಈ ಪ್ರಸ್ತಾವನೆಯಲ್ಲಿ ಉಪಯೋಗಿಸಿಕೊಂಡಿದ್ದೇನೆ. ನನ್ನ 'ಶ್ರೀಯವರ ಕೃತಿಗಳು' ಎಂಬ ಲೇಖನದ ('ಪುಸ್ತಕ ಪ್ರಪಂಚ' ೧.೪) ಕೆಲವು ಭಾಗಗಳನ್ನೂ ಇದರಲ್ಲಿ ಬಳಸಿಕೊಂಡಿದ್ದೇನೆಂದೂ ಇಲ್ಲಿ ಸೂಚಿಸಿಬಿಡಬಹುದು.

ಈ ಮಾತ್ರಾಗಣಗಳಲ್ಲದೆ, ದ್ರಾವಿಡಛಂದಸ್ಸಿನ ವಿಷ್ಣು, ಬ್ರಹ್ಮ, ಮೊದಲಾದ 'ಅಂಶ' ಗಣಗಳ ಲಯವನ್ನೂ 'ಶ್ರೀ'ಯವರು ಇಲ್ಲಿಯ ಕೆಲವು ಕವನಗಳಲ್ಲಿ ಉಪಯೋಗಿಸಿದ್ದಾರೆ. ಉದಾಹರಣೆಗೆ, 'ವಸಂತ', 'ಸರ್ ಜಾನ್ ಮೂರನ್ನು ಹೂಳಿದ್ದು', 'ಬ್ಲೆನ್‌ಹೀಮ್ ಕದನ' ಮೊದಲಾದವನ್ನು ನೋಡಬಹುದು. 'ಕಾಳಗ ಪದ'ದಲ್ಲಿಯೂ ಅಂಶಗಣದ ಛಾಯೆಯಿದೆ. 'ವಸಂತ'ವಂತೂ ಅಂತ್ಯಪ್ರಾಸ ಮಧ್ಯಪ್ರಾಸಗಳ ಮೆರುಗಿನಿಂದ ಕೂಡಿ ಮನೋಹರವಾಗಿದೆ.

ಇಲ್ಲಿಯ ಪದ್ಯಜಾತಿಗಳ ವೈವಿಧ್ಯವನ್ನು ಲೆಕ್ಕಹಾಕುತ್ತಾ ಪ್ರಸ್ತಾರವನ್ನು ಪ್ರದರ್ಶಿಸುತ್ತಾ ಹೋಗುವುದು ಈ ಪ್ರಸ್ತಾವನೆಯ ಉದ್ದೇಶಕ್ಕೆ ಮೀರಿದ್ದು. ಸಮಗ್ರ ಕೃತಿಯನ್ನೇ ಅಭ್ಯಾಸಿಗಳು ತೆರೆದುನೋಡಬೇಕು. ಇವುಗಳಲ್ಲಿ ಕೆಲವಂತೂ ಹೊಸಗನ್ನಡದ ಬಳಕೆಯ ಪದ್ಯರೂಪಗಳಾಗಿ ಪರಿಣಮಿಸಿವೆ. ಉದಾಹರಣೆಗೆ 'ಕಾಣಿಕೆ'ಯ 'ನುಡಿ'ಯನ್ನೇ ನೋಡಿ. ಇದರ ತಳಕಟ್ಟು ಹಿಂದಿನ ಭೋಗಷಟ್ಪದಿ. ಅದರ ನಾಲ್ಕೈದನೆಯ ಚರಣಗಳನ್ನು ತೆಗೆದು ಹಾಕಿ, ಉಳಿದವುಗಳಲ್ಲಿ ದೀರ್ಘಚರಣಗಳನ್ನು ಎರಡೆರಡಾಗಿ ಒಡೆದು ಮೂರು ಅಂತ್ಯ ಪ್ರಾಸಗಳನ್ನು ಬಿಗಿದು ಅಂದವಾದ ಹೊಸ ಮಾಟವನ್ನು ಮುಂದಿಟ್ಟಿದ್ದಾರೆ:

ಇ.ಇ.ಇ.ಇ. }
ಇ.ಇ.ಇ.ಇ. }
{ —ಇ.ಇ.ಇ.ಇ.
{ ಇ.ಇ.ಗ— }
{ —ಇ.ಇ.ಇ.ಇ. }
ಇ.ಇ.ಗ— }

ಈ ಪದ್ಯರೂಪಕ್ಕೆ ಶ್ರೀ ಡಿ. ವಿ. ಗುಂಡಪ್ಪನವರು ಆದಿ ಪ್ರಾಸವನ್ನು ಜೊತೆಗೊಳಿಸಿ 'ಖಂಡಭೋಗಷಟ್ಪದಿ' ಎಂದು ಹೆಸರು ಕೊಟ್ಟು ತಮ್ಮ 'ನಿವೇದನ'ದಲ್ಲಿ ಉಪಯೋಗಿಸಿದ್ದಾರೆ. (ಬಿ.ಎಂ. ಶ್ರೀಯವರು ಇದನ್ನು ಇಂಗ್ಲಿಷಿನ 'Burns's stanza'ದ ಮಾದರಿಯ ಮೇಲೆ ರಚಿಸಿದ್ದಾಗಿ ಅವರೇ ಹೇಳಿದ್ದನ್ನು ನಾನು ಕೇಳಿಬಲ್ಲೆ.)

ಕನ್ನಡದ ಹಿಂದಿನ ಪ್ರಯೋಗಗಳನ್ನು 'ಶ್ರೀ'ಯವರು ಹೇಗೆ ಬಳಸಿಕೊಂಡಿರುವ ರೆಂಬುದಕ್ಕೆ ಒಂದು ಉದಾಹರಣೆ:

> ನಿಮ್ಮ ಪಿತೃಗಳು ಧೀರರು—ತೆರೆತೆರೆಗೆ
> ಹೊಮ್ಮುವರು ಹುರಿಗೊಳಿಸಲು;
>
> (ಇಂಗ್ಲೆಂಡ ನಾವಿಕರು)

ಈ ಚರಣಗಳನ್ನು 'ಅರ್ಜುನ ಜೋಗಿಯ ಹಾಡಿ'ನಲ್ಲಿ ಬರುವ,

> ಮಣಿಪುರಕೆ ಬಂದುವಾಗ—ಗಿಣಿಗಳು
> ದಣಿದು ಮಲಗಿದವು ಬೇಗ.

ಎಂಬ ಚರಣಗಳೊಡನೆ ಹೋಲಿಸಬಹುದು. ಪಾದದ ಮೂರನೆಯ ಚರಣದಲ್ಲಿ ಒಂದು ಗುರು ಮಾತ್ರ ನಿಂತು ಒಂದು ಗಣಕ್ಕೆ ಸಮಾನವಾಗಿರುವುದು ಹೊಸ ಪಲುಕನ್ನು ಕೊಡುತ್ತದೆ.

ಪದ್ಯದ ಒಟ್ಟುಗಣಗಳ ಸಂಖ್ಯೆಯೂ ವಿನ್ಯಾಸವೂ ಒಂದೇ ಆಗಿದ್ದರೂ, ಚರಣಗಳ ಅಳತೆ ಮತ್ತು ಸಂಖ್ಯೆ, ಪ್ರಾಸದ ನೆಲೆ ಇವುಗಳ ವ್ಯತ್ಯಾಸದಿಂದ ಅದರ ರೂಪ ಹೇಗೆ ಮಾರ್ಪಡಬಹುದೆಂಬುದಕ್ಕೆ ಒಂದು ನಿದರ್ಶನವನ್ನು ಕೊಡಬಹುದು:

ನೆಲವನೊಲ್ಲದೆ ಚಿಗಿದು ಚಿಮ್ಮುತ
ಮೇಲುಮೇಲಕ್ಕೋಡುವೆ;
ಒಲೆದು, ದಳ್ಳುರಿನೆಗೆದು, ಗಗನದ
ನೀಲಿಯಾಳದೊಳಾಡುವೆ;
ನಲಿದು ಹಾಡುತ ಹಾಡುತೇರುವೆ, ಏರುತೇರುತ ಹಾಡುವೆ.

(ಬಾನಾಡಿ)

ಕಂದ ಬಿದ್ದೆಯ ಎಂದು ಮುದ್ದಿಸಿ ನನಗೆ ಮರುಗುವರಿದ್ದರು;
ಅಂದಿನೋದಿನ ಸುಖದ ದಿನದಲಿ ಜತೆಗೆ ಕುಣಿಯುವರಿದ್ದರು.
ಎಲ್ಲ, ಎಲ್ಲಾ ಮಾಯವಾದುವು ಹಳೆಯ ಪಳಕೆಯ ಮುಖಗಳು.

(ಹಳೆಯ ಪಳಕೆಯ ಮುಖಗಳು)

ಮತ್ತೆ ಮತ್ತೊಡಹುಟ್ಟಿನೊಲುಮೆಯನೊರೆವ ಗುರುಗಳನಿಳುಹಿದೆ;
ಒತ್ತಿ ಗಡಿಗಳ ಹಲವು ನಾಡನು ಬೆಸೆವ ರಾಜರ ಕಳುಹಿದೆ;
ಮರುಗಿ ಆಗೆಚ್ಚತ್ತಿರಿ—ಮ
ತ್ತೊರಗಿ ಮುಸುಕನು ಹೊತ್ತಿರಿ.

(ಭರತಮಾತೆಯ ವಾಕ್ಯ)

ಈ ಮೂರು ಕಡೆಗಳಲ್ಲೂ ೩+೪ ಮಾತ್ರಾಗಣದ ಧಾಟಿಯೊಂದೇ ಇರುವುದು ಮಾತ್ರವಲ್ಲದೆ ಗಣಗಳ ಒಟ್ಟು ಸಂಖ್ಯೆಯೂ ಒಂದೇ ಆಗಿದೆ. ಆದರೆ ಪದ್ಯಗಳ ರುಚಿಯಲ್ಲಿ ಎಷ್ಟೊಂದು ಭೇದ![೧೩]

'ಶ್ರೀ'ಯವರು 'ಇಂಗ್ಲಿಷ್ ಗೀತಗಳ' ತರುವಾಯ ರಚಿಸಿದ 'ರಜತ ಮಹೋತ್ಸವ ಪ್ರಗಾಥ'ದಲ್ಲಿ (೧೯೨೭) ಇಂಗ್ಲಿಷಿನ 'Ode' ಎಂಬುದರ ಪ್ರತಿರೂಪವನ್ನು ಕಟ್ಟಿದರು; 'ಅಶ್ವತ್ಥಾಮನ್', 'ಪಾರಸಿಕರು' ಎಂಬ ನಾಟಕಗಳಲ್ಲಿ ಇಂಗ್ಲಿಷಿನ 'Blank verse'ಗೆ

---

೧೩. ಈ ವಿಷಯವನ್ನು ಶ್ರೀ ದ. ರಾ. ಬೇಂದ್ರೆಯವರು 'ಇಂಗ್ಲಿಷ್ ಗೀತಗಳು' ಎಂಬ ತಮ್ಮ ಲೇಖನದಲ್ಲಿ ('ಸಂಭಾವನೆ') ಆಗಲೇ ಗುರುತಿಸಿದ್ದಾರೆ. ಕಾವ್ಯಾಭ್ಯಾಸಿಗಳು ಅವರ ಒಟ್ಟು ಲೇಖನವನ್ನೇ ಓದಬೇಕು.

ಸಂವಾದಿಯಾಗಬಲ್ಲ ಧಾಟಿಗಳ ವಿಷಯಕವಾದ ಪ್ರಯೋಗಗಳನ್ನು ನಡಸಿದರು. ಆದರೆ ಅಷ್ಟಷಟ್ಪದಿಯ (Sonnet) ರಚನೆಗೆ ಮಾತ್ರ ಅವರು ಕೈಹಾಕಿದಂತೆ ತೋರುವುದಿಲ್ಲ.

ಛಂದಸ್ಸನ್ನು ಕುರಿತ ಈ ಪಾರಿಭಾಷಿಕ ವಿವರಣೆಯನ್ನು ಇಲ್ಲಿಗೆ ನಿಲ್ಲಿಸಿ, 'ಶ್ರೀ'ಯವರ ಕೃತಿಯಲ್ಲಿ ಮುನ್ನೋಟದ ಸ್ವಾತಂತ್ರ್ಯವೂ ವಿಹಿತವಾದ ಸಂಯಮವೂ ಹೆಣೆದುಕೊಂಡು ಹೊಸ ಕವಿಗಳಿಗೆ ಸವಿಚಾರವೂ ಸಾಧಾರವೂ ಉತ್ತಮವೂ ಆದ ಮೇಲ್ಪಂಕ್ತಿಯನ್ನು ಒದಗಿಸಿವೆಯೆಂದು ಹೇಳಿದರೆ ಸಾಕು.

೪

ಇಂಗ್ಲಿಷಿನಿಂದ ಅನುವಾದ ಮಾಡುವುದರಲ್ಲಿ 'ಶ್ರೀ'ಯವರು ಬಲುಮಟ್ಟಿಗೆ ಕಟ್ಟುನಿಟ್ಟಿನ ಮಾರ್ಗವನ್ನೇ ಅನುಸರಿಸಿದರು. ಅಕ್ಷರಶಃ ಭಾಷಾಂತರ ಮಾಡದೆ, ಮೂಲದ ಭಾವವೈಖರಿಯನ್ನು ಸಜೀವವಾಗಿ ಆದರೆ ಯಥಾವತ್ತಾಗಿ ಕನ್ನಡದಲ್ಲಿ ಪ್ರತಿಬಿಂಬಿಸಲು ಸರ್ವಪ್ರಯತ್ನವನ್ನೂ ಮಾಡಿದರು; ಈ ಕಾರ್ಯದಲ್ಲಿ ಹೆಚ್ಚಿನ ಯಶಸ್ಸನ್ನೂ ಪಡೆದರು. ಮೊದಮೊದಲ ಕವನಗಳಲ್ಲಿ ಅವರು ಮೂಲವನ್ನು ಬಿಟ್ಟು ಸ್ವಲ್ಪದೂರ ಚಲಿಸಿದ್ದುಂಟು. ಉದಾಹರಣೆಗೆ, ವರ್ಡ್ಸ್‌ವರ್ತ್‌ಕವಿಯ 'Written in March' ಎಂಬ ಕವನದ—

The cattle are grazing,
Their heads never raising,
There are forty feeding like one!

ಎಂಬ ಚರಣಗಳು ಕನ್ನಡದ ಅನುವಾದದಲ್ಲಿ

ಕೊರಳೆತ್ತಿ, ಮೈಮರೆತು,
ಹರಡಿದೆಳಹಸುರಾದ
ಗರುಕೆಯನು ಮೇಯದೆಯೆ ಮಂದೆ ಇಹುದು.

ಎಂದು ಭಾಷಾಂತರ ಹೊಂದಿವೆ. ಈ ಚರಣಗಳು ಅಂದವಾಗಿದ್ದರೂ ಇವು 'False to Wordsworth' ಎಂದು 'ಶ್ರೀ'ಯವರೇ ಟೀಕಿಸಿದ್ದುಂಟು. ಆ ಮುಂದಿನ ಕವನಗಳಲ್ಲಿ ಇಷ್ಟುಮಟ್ಟಿನ ಸ್ವಾತಂತ್ರ್ಯವನ್ನು ಅನುವಾದಕರು ವಹಿಸಿಲ್ಲ. ಮೂಲದ ಹೆಸರುಗಳನ್ನೂ ಸಂದರ್ಭಗಳನ್ನೂ ಉಕ್ತಿಗಳನ್ನೂ ನಮ್ಮ ಆವರಣಕ್ಕೆ ಹೊಂದಿಕೊಳ್ಳುವಂತೆ ಅಲ್ಲಲ್ಲಿ ಮಾರ್ಪಡಿಸಿರುವುದುಂಟು; ಆದರೂ ಮೂಲದ ತಿರುಳಿಗೆ ದ್ರೋಹವಾಗದಂತೆ ಎಚ್ಚರಿಕೆ ವಹಿಸಿದ್ದಾರೆ.

ಶ್ರೀಕಂಠಯ್ಯನವರು ಇಂಗ್ಲಿಷಿನ ಅನೇಕ ಉತ್ತಮ ಭಾವಗೀತಗಳನ್ನು ಇಲ್ಲಿ ಆರಿಸಿಕೊಂಡಿದ್ದಾರೆ. ಅವರಿಗೆ ರೊಮ್ಯಾಂಟಿಕ್ ಯುಗದ ಕವಿತೆಯಲ್ಲಿ ಒಲವು ಹೆಚ್ಚಾಗಿದ್ದ ಕಾರಣ ಅದರ ಕವನಗಳೇ ಇಲ್ಲಿ ಹೆಚ್ಚಾಗಿ ಬಂದಿವೆ. ವರ್ಡ್ಸ್‌ವರ್ತ್ ಅಂತೂ ಅವರ ಪ್ರೀತಿಯ ಕವಿ; ಆತನ 'ಲ್ಯೂಸಿ ಪದ್ಯ'ಗಳಲ್ಲಿ (Lucy poems) ಅವರಿಗೆ ಹೆಚ್ಚಿನ

ಮೆಚ್ಚಿಕೆಯಿದ್ದರೂ ಅವುಗಳಲ್ಲಿ ಒಂದಾದರೂ ಇಲ್ಲಿ ಬಂದಿಲ್ಲದಿರುವುದು ಸೋಜಿಗದ ವಿಷಯ. ಹಾಗೆಯೇ, ಪ್ರಮುಖಕವಿಗಳಲ್ಲಿ ಮಿಲ್ಟನ್ನಿಗೆ ಇಲ್ಲಿ ಪ್ರಾತಿನಿಧ್ಯವಿಲ್ಲದಿರುವುದು ಗಮನಾರ್ಹ. 'ಶ್ರೀ'ಯವರು ಸಾನೆಟ್ಟನ್ನು ಬರೆದಿದ್ದರೆ ಮಿಲ್ಟನ್ ಇಲ್ಲಿ ಬರುತ್ತಿದ್ದನೇನೊ.

ಎಲ್ಲ ಅನುವಾದಗಳೂ ಒಂದೇ ಮಟ್ಟದ ಸಫಲತೆಯನ್ನು ಪಡೆದಿವೆಯೆಂದು ಹೇಳಿದರೆ ಅಭಿಮಾನದ ಮಾತಾಗುತ್ತದೆ. ಹಾಗೆ ನೋಡಿದರೆ ಷೆಲ್ಲಿ, ಬರ್ನ್ಸ್ ಮೊದಲಾದವರ ಒಂದೆರಡು ಕೃತಿಗಳಿಗೆ ಅನುವಾದದಲ್ಲಿ ಇನ್ನೂ ಕೊಂಚ ಹದ ಬರಬೇಕಾಗಿತ್ತು ಎನಿಸುತ್ತದೆ. 'ಒಂದು ಮಾತನು ಲೋಕ ಹೊಲೆಗೆಡಿಸಿಕೊಂಡಿಹುದು' ಎಂಬುದನ್ನು ಕುರಿತು 'Translated with difficulty' ಎಂದು ಬಿ. ಎಂ. ಶ್ರೀಯವರೇ ಒಪ್ಪಿಕೊಂಡಿದ್ದನ್ನು ನಾನು ಕೇಳಿಬಲ್ಲೆ. 'ನನ್ನ ಪ್ರೇಮದ ಹುಡುಗಿ'ಯಲ್ಲಿ ಬರ್ನ್ಸ್ ಕವಿತೆಯ ಸರಳ ಮುಗ್ಧತೆ ಉಳಿದಿರುವಂತೆ ಕಾಣುವುದಿಲ್ಲ. ಆದರೆ, ಸಿದ್ಧಿ ದೊರೆತಿರುವ ಅನುವಾದಗಳು ಇಲ್ಲಿ ಬಹು ಸಂಖ್ಯೆಯಲ್ಲಿವೆ. ಉದಾಹರಣೆಗೆ ಮುಪ್ಪು-ಯೌವನ, ವಸಂತ, ಮುದ್ದಿನ ಕುರಿಮರಿ, ಕಾಳಗದ ಪದ, ಮಾದ ಮಾದಿ, ಕನಕಾಂಗಿ, ಬಿಂಕದ ಸಿಂಗಾರಿ, ಮುದಿಯ ರಾಮಗೌಡ, ದುಃಖಸೇತು, ಕಾರಿಹೆಗ್ಗಡೆಯ ಮಗಳು, ಚೋಳಕನ್ನೆಯರು, ಅರೆ ಯಾವುದಿಲ್ಲಿ, ನಿರಾಶೆ, ನನ್ನ ಮೇರಿ, ಕನಸು ಬೇಕು ಕನಸು, ಪ್ರಾರ್ಥನೆ—ಇವೂ ಇನ್ನು ಕೆಲವೂ ಉತ್ಕೃಷ್ಟವಾದ ಅನುವಾದಗಳು. ಇವುಗಳೆಲ್ಲದರ ಸೊಗಸು ಏನೆಂಬುದನ್ನು ವಿವರಿಸುವುದು ಇಲ್ಲಿಯ ಉದ್ದೇಶಕ್ಕೆ ಮಿರಿದ ವಿಷಯ. ಕೇವಲ ನಿದರ್ಶನಕ್ಕಾಗಿ 'ದುಃಖಸೇತು' ಒಂದನ್ನು ಮಾತ್ರ ಕುರಿತು ಎರಡು ಮಾತು ಹೇಳಬಹುದು. ಹುಡ್ ಕವಿಯ ಇಂಗ್ಲಿಷ್ ಮೂಲ ತುಂಬ ಪ್ರಾಸಬದ್ಧವಾಗಿದೆ; ಅದರಲ್ಲೂ, Scornfully-mournfully, undutiful-beautiful, ಹೀಗೆ ದೀರ್ಘ ಪ್ರಾಸಗಳು (Feminine rhymes) ಕವನದ ಉದ್ದಕ್ಕೂ ಬಂದಿರುವುದು ಕರುಣಾರಸಕ್ಕೆ ಕೆಲಮಟ್ಟಿಗೆ ಬಾಧಕವೆಂದೇ ತೋರುತ್ತದೆ. ಅನುವಾದದಲ್ಲಿ 'ಶ್ರೀ'ಯವರು ಪ್ರಾಸದ ಕಟ್ಟನ್ನು ಬೇಕೆಂದೇ ತೊರೆದಿದ್ದಾರೆ. ಆದರೆ,

ಏನು ಕೋಮಲಕಾಯ!
ಹೊಳಪು ಹೊಸಪ್ರಾಯ!—

ಇಂಥ ಕಡೆ ಅಂತ್ಯಪ್ರಾಸವೂ,

ಮೆಲ್ಲಗಿವಳನು ಮುಟ್ಟು,
ಮರುಗಿ ಹಿಡಿದೆತ್ತು,—

ಇಂಥ ಕಡೆ 'ವಡಿ'ಯ ವಿನ್ಯಾಸವೂ,

ಊರ ಮನೆಬೆಳಕುಗಳು
　　ದೂರ ಸರಿಯುತ್ತ,
ಕತ್ತಲೆಯ ಹೊಳೆ ಹರಿದು
　　ಹತ್ತಿರಕೆ ಬರುತ—

ಇಂಥ ಕಡೆ ಆದಿಪ್ರಾಸವೂ ಮನೋಹರವಾಗಿ ಅಪ್ರಯಾಸವಾಗಿ ಬರುತ್ತವೆ. ಈ ಕವನದ ಭಾಷೆಯಂತೂ ಬಲು ಲಲಿತ; ಅನುವಾದವೆಂದು ಎಳ್ಳಷ್ಟೂ ತೋರದಷ್ಟು ಸಹಜ, ಆದರೂ ರಸನಿರ್ಭರ. ಹೊಳೆಯಲ್ಲಿ ಮುಳುಗಿ ಜೀವ ತೊರೆದ ಈ ಹೆಣ್ಣಿಗೆ ತಾಯಿತಂದೆಗಳಾಗಲಿ, ಸೋದರಸೋದರಿಯರಾಗಲಿ ಇರಲಿಲ್ಲವೆ ಎಂದು ಕೇಳಿ,

ಇನ್ನು ಅಕ್ಕರೆಯಾತ,
ಇನ್ನು ಹತ್ತಿರದಾತ
ಮತ್ತೊಬ್ಬನಿಹನೊ?

ಎಂದು ಪ್ರಿಯನನ್ನು ಕುರಿತು ಪ್ರಶ್ನಿಸಿ, ಅಲ್ಲಿಗೇ ನಿಲ್ಲಿಸದೆ, ಮೂಲಕವನದಲ್ಲಿ ಆಧಾರವೇನೂ ಇಲ್ಲದ—

ನಿರಿಹಿಡಿದು ನಡುವೇರಿ,
ತೊದಳುಮಾತನು ಬೀರಿ,
ಕೊರಗ ನಗಿಸಲು ಬಲ್ಲ
ಮಗುವಿಲ್ಲವೇನೋ?

ಎಂಬ ವಾಕ್ಯವನ್ನು ಹೊಸದಾಗಿ ಸೇರಿಸಿ ನೆಯ್ದಿರುವುದು ಕರುಣರಸದ ಮಿನುಗನ್ನು ಹೆಚ್ಚಿಸಿದೆ. ಒಂದು ಮಗುವಿದ್ದಿದ್ದರೆ, ಆಕೆ ಹೀಗೆ ಜೀವತೊರೆಯುತ್ತಿರಲಿಲ್ಲವೇನೋ!

ಆ ಮುಂದಿನ ಚರಣಗಳನ್ನೂ ನೋಡಿ—

ಆಹ, ಎಲ್ಲಡಗಿತೋ
ಆರ್ಯಧರ್ಮದ ಕರುಣ,
ಆರ್ಯಜನಗಳ ಮರುಕ,
ಉರಿಯುವನೆ ಬಲ್ಲ!

Alsa! for the rarity
Of Christian charity
Under the sun!

—ಈ ಉಕ್ತಿಯ ಸಾರ ಎಷ್ಟು ಚೆನ್ನಾಗಿ ಕನ್ನಡದಲ್ಲಿ ಊರಿದೆ! 'ಉರಿಯುವನು' ಎಂದರೆ ಸೂರ್ಯ; ಹಳ್ಳಿಗರ ಮಾತಿನಲ್ಲಿ ಈಗಲೂ ಕೆಲವು ಕಡೆ ಇದು ಬಳಕೆಯಲ್ಲಿದೆ.

ಹುಡ್ ಕವಿಯ 'The Bridge of Sighs' ಕವನಕ್ಕೆ ಇಂಗ್ಲಿಷ್ ಸಾಹಿತ್ಯದಲ್ಲಿ ಯಾವುದೇ ಸ್ಥಾನವಿರಲಿ, ಕನ್ನಡ ಕಾವ್ಯ ಪ್ರಪಂಚದಲ್ಲೇನೋ 'ದುಃಖಸೇತು' ಉತ್ತಮ ಪದವಿಯನ್ನು ಪಡೆದಿದೆ.[೧೪]

---

೧೪. ಶ್ರೀ ಪಂಜೆ ಮಂಗೇಶರಾಯರು 'ದುಃಖಸೇತು'ವನ್ನು ಅತಿಶಯವಾಗಿ ಮೆಚ್ಚಿದ್ದರು. ಇದು ಅವರ ಮನಸ್ಸನ್ನು ಸೆಳೆದಿದ್ದಿತೆಂಬುದನ್ನು ಅವರ ಮಕ್ಕಳಾದ ಶ್ರೀ ಪಂಜೆ ರಾಮರಾಯರು 'ನಮ್ಮ ತಂದೆ' ಎಂಬ ಲೇಖನದಲ್ಲಿ ಸ್ಮರಿಸಿದ್ದಾರೆ ('ಶ್ರೀ ಪಂಜೆಯವರ ನೆನಪಿಗಾಗಿ',- ಪು.೮೨).

ಬಿ. ಎಂ. ಶ್ರೀಕಂಠಯ್ಯನವರು 'ಇಂಗ್ಲಿಷ್ ಗೀತಗಳ'ನ್ನು ರಚಿಸಿ ಕನ್ನಡದ ಕಾವ್ಯಸಂಪತ್ತನ್ನು ಬೆಳಸುವದರ ಜೊತೆಗೆ ಹೊಸಗನ್ನಡದ ಕವಿಕುಲವನ್ನೂ ಬೆಳೆಸಿದರು. ಹೊಸಕಾಲದ ಕವಿಗಳ ಮೇಲೆ ಈ ಗುರುಗಳ ವರ್ಚಸ್ಸು ಹೇಗೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಬಿದ್ದಿತು; ಅವರು ತೆರೆದ ಮಾರ್ಗದಲ್ಲಿ ಕನ್ನಡ ಕವಿತೆ ಹೇಗೆ ನೆರೆಗೊಂಡು ಹರಿಯಿತು ಎಂಬುದನ್ನು ವಿವೇಚಿಸಲು ಈಗಾಗಲೆ ನಿರೀಕ್ಷೆಗೆ ಮಿೂರಿ ಬೆಳೆದಿರುವ ಈ ಪ್ರಸ್ತಾವನೆಯಲ್ಲಿ ಸ್ಥಳವಿಲ್ಲ. 'ಶ್ರೀ' ಯವರ ಹಿರಿಯ ಶಿಷ್ಯರಲ್ಲಿ ಒಬ್ಬರಾದ 'ಶ್ರೀನಿವಾಸ'ರು ಇವರನ್ನು ಕುರಿತು ಬರೆದಿರುವ ಅಷ್ಟಷಟ್ಪದಿಯಲ್ಲಿ,

'. . . . ಕನ್ನಡದೊಳಿಂದಾವಾವ
ಕಲಕಂಠ ಕೇಳುತಿದೆ ಅದರ ಗಾನದೊಳೆಲ್ಲ
ತೋರುತಿದೆ ನೀವು ತೆರೆದಾ ನವ್ಯ ಅಕ್ಷುಲ್ಲ
ಧೀರಗತಿ, ಸುವಿಶಾಲ ವಿಶ್ವವಿಸ್ತರ ಭಾವ.
ನುಡಿದು ಕಲಿಸಿದಿರಿ; ನುಡಿಯದೆ ಮತ್ತೆ ಕಲಿಸಿದಿರಿ;
ದುಡಿದು ಕಲಿಸಿದಿರಿ; ಮನದರಕೆಗಳನೆಚ್ಚರಿಸಿ
ಎಳೆಯರೆದೆಯಲಿ ಹಾಡುವಾಸೆಯನು ಸುಳಿಸಿದಿರಿ. . . .'

[ಮಲಾರ, ಪು. ೪೩]

ಎಂದಿದ್ದಾರೆ. 'ಶ್ರೀ'ಯವರ ಮತ್ತೊಬ್ಬ ಪ್ರಖ್ಯಾತ ಶಿಷ್ಯರಾದ ಶ್ರೀ ಕೆ. ವಿ. ಪುಟ್ಟಪ್ಪನವರು 'ವಿಶ್ವಕರ್ಣಾಟಕ ಯುಗಾದಿ ಸಂಚಿಕೆ'ಯಲ್ಲಿ (೧೯೩೧) 'ಆಧುನಿಕ ಕನ್ನಡ ವಾಙ್ಮಯ'ದ ಪರಿಚಯಮಾಡಿಕೊಡುತ್ತಾ, " 'ಶ್ರೀ'ಯವರನ್ನು ನವಯುಗದ ಪ್ರವರ್ತಕರೆಂದರೆ ತಪ್ಪಾಗದು. ಅವರು ಬಯಲಿಗೆ ಬಂದುದೇನೋ 'ಇಂಗ್ಲಿಷ್ ಗೀತಗಳು' ಗ್ರಂಥರೂಪದಲ್ಲಿ ಹೊರಬಿದ್ದ ಮೇಲೆ. ಆದರೂ ಅವರ ಪ್ರಭಾವವು ಗುಪ್ತಗಾಮಿನಿಯಾದ ವಾಹಿನಿಯಂತೆ ಅನೇಕ ವೃಕ್ಷಗಳಿಗೆ ನೀರೆರೆದಿದೆ. . ." ಎಂದು ಬರೆದಿದ್ದಾರೆ. ಈ ಹೇಳಿಕೆಗಳು ಎಷ್ಟೊಂದು ನಿಜವೆಂಬುದನ್ನು ವಿಶದಪಡಿಸಬೇಕಾದರೆ ಹೊಸಗನ್ನಡ ಕವಿತೆಯ ಚರಿತ್ರೆಯ ಒಂದು ಅಧ್ಯಾಯವನ್ನೇ ಬರೆಯಬೇಕಾದೀತು.

ಶ್ರೀ ಪಂಜೆ ಮಂಗೇಶರಾಯರು ಸಂಪಾದಿಸಿದ 'ಕನ್ನಡ ಮೂರನೆಯ ಪದ್ಯಪುಸ್ತಕ'ದಲ್ಲೂ ಈ ಕವನ ಸೇರಿದೆ. 'ದುಃಖಸೇತು'ವಿನ ವಿಷಯವಾಗಿ ಶ್ರೀ ಪಂಜೆಯವರಿಂದಲೇ ಕೇಳಿದ್ದ ಒಂದು ಸಂಗತಿಯನ್ನು ಇಲ್ಲಿ ಉಲ್ಲೇಖಿಸುವುದು ಅನುಚಿತವಾಗಲಾರದು. ಅವರು ಒಮ್ಮೆ ಉಪನ್ಯಾಸಮಾಡುತ್ತಾ ತಮ್ಮ ಮೆಚ್ಚಿಕೆಯ ಈ ಕವನವನ್ನು ಪೂರ್ಣವಾಗಿ ಉದಾಹರಿಸಿದರಂತೆ. ಆಗ ಸಭೆಯಲ್ಲಿದ್ದ ಒಬ್ಬಾತನು ಇದ್ದಕ್ಕಿದ್ದ ಹಾಗೆ 'ಸ್ವಾಮಿ, ನಾನು ಅವಳ ಕೈಬಿಡುವುದಿಲ್ಲ' ಎಂದು ಕೂಗಿಕೊಂಡನಂತೆ! ಇದೇನು ಸಮಾಚಾರವೆಂದು ವಿಚಾರಿಸಿದಾಗ, ಆತನು ಒಲಿದ ಹೆಣ್ಣೊಬ್ಬಳಿಗೆ ಅನ್ಯಾಯಮಾಡಿದ್ದ ನೆಂದೂ, ಈ ಕವನವನ್ನು ಕೇಳಿ—ಇಲ್ಲಿ ಕವನದ ಉಜ್ವಲ ಪ್ರೇರಣೆಯ ಜೊತೆಗೆ ಪಂಜೆಯವರ ರಸಾರ್ದ್ರವೂ ನಾಟಕೀಯವೂ ಆದ ವಾಚನದ ಪ್ರಭಾವವೂ ಬೆರೆದಿರ ಬೇಕೆಂದು ತೋರುತ್ತದೆ-ಆತನ ಮನಸ್ಸು ಕರಗಿ ಬುದ್ಧಿ ತಿರುಗಿ, ಈ ರೀತಿಯ ಉದ್ಗಾರ ಅವನ ಬಾಯಿಂದ ಹೊರಟಿತೆಂದೂ ವ್ಯಕ್ತವಾಯಿತಂತೆ!

'ಇಂಗ್ಲಿಷ್ ಗೀತಗಳ'ಲ್ಲಿ ಒಂದಾದ 'ಕವಿಶಿಷ್ಯ' ಎಂಬುದರ ಕೊನೆಯಲ್ಲಿ ಈ ಪಂಕ್ತಿಗಳು ಬರುತ್ತವೆ:

'ನಡೆಯುತ್ತ ನೆಚ್ಚಿರುವೆನಿಲ್ಲಿ ನಾನೊಂದು
ಹುಡಿಯೊಳಳಿಯದ ಹೆಸರು ಬಿಟ್ಟಿರುವೆನೆಂದು.'

ಈ ಉಕ್ತಿ ಮೂಲಕವಿಗಿಂತಲೂ ಅನುವಾದಕಾರರಿಗೆ ಹೆಚ್ಚು ಉಚಿತವಾಗಿ ಅನ್ವಯಿಸುತ್ತದೆ. ಬಿ ಎಂ. ಶ್ರೀಯವರು ಉದ್ದಾಮಪಂಡಿತರು, ಸ್ಫೂರ್ತಿದಾಯಕ ಆಚಾರ್ಯರು, ಉತ್ಕೃಷ್ಟವಾಗ್ಮಿಗಳು, ಕನ್ನಡದ ರಕ್ಷಾಮಣಿಗಳು. ಇದೆಲ್ಲಕ್ಕೂ ಮಿಗಿಲಾಗಿ ಅವರು ಹೊಸಗನ್ನಡದ ಕವಿಕುಲಪತಿಗಳು. ಬಲುಮಟ್ಟಿಗೆ ಅವರ ಪ್ರಭಾವದಿಂದ ಕನ್ನಡದಲ್ಲಿ ಹೊಸಕವಿತೆ ಸೊಂಪಾಗಿ ಚಿಗುರಿ ಫಲಿಸಿದ್ದನ್ನು ನೆನೆದರೆ 'ಆಧುನಿಕ ಕರ್ಣಾಟಕವಿಚೂತವನ ಚೈತ್ರ' ಎಂದು ಅವರನ್ನು ನಿರ್ದೇಶಿಸಬೇಕೆನ್ನಿಸುತ್ತದೆ.

೧೯೫೨]

ಸಮಾಲೋಕನ : ೧೯೫೪

ಭಾವಗೀತ*

"ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸಾ" ಎಂದು ಪ್ರಾರಂಭವಾಗುವ ಬೇಂದ್ರೆಯವರ ಕವನವೊಂದುಂಟು. ಅದರ ಒಂದು ನುಡಿ ಹೀಗಿದೆ :

ಮಾತು ಮಾತು ಮಥಿಸಿ ಬಂದ ನಾದದ ನವನೀತಾ
ಹಿಗ್ಗ ಬೀರಿ ಹಿಗ್ಗಲಿತ್ತು ತನ್ನ ತಾನೆ ಪ್ರೀತಾ
ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ

ಇದರ ಸೊಗಸು ಚೆನ್ನಾಗಿ ಹಿಡಿಯಬೇಕಾದರೆ ಸುಸ್ವರದಿಂದ ಹಾಡಿ ತೋರಿಸಬೇಕು. ಬೇಂದ್ರೆಯವರ ತರುಣವಯಸ್ಸಿನ ಕಂಠದಿಂದ ಅದು ಹೊಮ್ಮಿಬಂದಾಗ ಅದನ್ನು ಕೇಳಿದವರು ತಮ್ಮ ಹೃದಯವನ್ನೇ ಅದಕ್ಕೆ ಸೂರೆಗೊಟ್ಟ ಪ್ರಸಂಗಗಳು ಉಂಟು. ಆ ವಿಷಯ ಹಾಗಿರಲಿ. ಈ ನುಡಿ ಭಾವಗೀತದ ಕೆಲವು ಲಕ್ಷಣಗಳನ್ನು ಎತ್ತಿ ಹಿಡಿಯುವುದಲ್ಲದೆ, ಒಟ್ಟು ಕವನವೇ ಆ ಲಕ್ಷಣಕ್ಕೆ ಒಳ್ಳೆಯ ನಿದರ್ಶನವೂ ಆಗಿದೆ.

ಭಾವಗೀತ ಎಂಬ ಕಾವ್ಯಪ್ರಕಾರ ಇತರ ಭಾಷೆಗಳಲ್ಲಿರುವಂತೆ ನಮ್ಮ ಭಾಷೆಯಲ್ಲೂ ಹಳೆಯದು. ಆದರೆ ಅದರ ಹೆಸರೂ ಕೆಲವು ರೂಪಗಳೂ ಹೊಸವು. ಪಾಶ್ಚಾತ್ಯರಲ್ಲಿ ಛಂದೋಬದ್ಧವಾದ ಕಾವ್ಯವನ್ನು 'ದಿ ಎಪಿಕ್' (The Epic, ಮಹಾಕಾವ್ಯ), 'ದಿ ಡ್ರಾಮ'

---

* ಆಕಾಶವಾಣಿಯಲ್ಲಿ ಪ್ರಸಾರ ಮಾಡಿದ ಭಾಷಣ.

(The Drama, ನಾಟಕ) ಮತ್ತು 'ದಿ ಲಿರಿಕ್' (The Lyric) ಎಂದು ಮೂರು ಬಗೆಯಾಗಿ ವಿಂಗಡಿಸುವುದು ಪ್ರಾಚೀನ ಸಂಪ್ರದಾಯ. 'ದಿ ಲಿರಿಕ್' ಎಂಬುದಕ್ಕೆ ಸಮಾನ ಪದವಾಗಿ ನಮ್ಮಲ್ಲಿ 'ಭಾವಗೀತ' ಎಂಬುದು ಬಳಕೆಗೆ ಬಂದಿದೆ. ಪಾಶ್ಚಾತ್ಯರಲ್ಲಿ 'ಲಿರಿಕ್'ಅನ್ನು ಮೊದಲಿಗೆ ಲೈರ್ (Lyre) ಎಂಬ ತಂತಿಯ ವಾದ್ಯವನ್ನು ಮಿಾಟಿಕೊಂಡು ಹಾಡುತ್ತಿದ್ದರು; ಈ ಗೇಯಾಂಶ ಅದರ ಒಂದು ಅವಶ್ಯ ಭಾಗವಾಗಿತ್ತು. ಬರಬರುತ್ತ ಗಾನದ ಹಿನ್ನೆಲೆ ಹಿಮ್ಮೆಟ್ಟಿತು. ಅಲ್ಲದೆ, ಕಾವ್ಯ, ಸಂಗೀತ ಇವೆರಡೂ ಸ್ವತಂತ್ರಕಲೆಗಳಷ್ಟೆ. ಅವೆರಡೂ ಮಾನವ ಜೀವನದಲ್ಲಿ ಮೊದಲು ಉದಿಸಿದಾಗ ಸಯಾಮಿನ ಅವಳಿ ಮಕ್ಕಳಂತೆ ಒಂದಕ್ಕೊಂದು ಅಂಟಿಕೊಂಡಿದ್ದಿರಬಹುದು. ಆದರೆ ಅವೆರಡನ್ನೂ ಬೇರ್ಪಡಿಸುವ ಶಸ್ತ್ರಚಿಕಿತ್ಸೆ ಎಂದೋ ನಡೆದುಹೋಯಿತು. ಗಾನದ ಸ್ವರವಿನ್ಯಾಸಕ್ಕೆ ಅಳವಟ್ಟು ರಾಗರಂಜಿತವಾಗಿಯೇ ಮೂಡುವ ಕವನಗಳು ಈಗಲೂ ಕೆಲವು ಉಂಟು. ಬೇಂದ್ರೆಯವರ 'ಕುಣಿಯೋಣು ಬಾರ' ಅಂಥದು. ಪು. ತಿ. ನರಸಿಂಹಾಚಾರ್ಯರ ಗೀತರೂಪಕಗಳಲ್ಲಿ ಬರುವ ಹಲವು ಹಾಡುಗಳಲ್ಲಿ ಗಾನಗುಣವೂ ಕಾವ್ಯಗುಣವೂ ನಾನು ಹೆಚ್ಚೋ ತಾನು ಹೆಚ್ಚೋ ಎಂದು ಸ್ಪರ್ಧಿಸುವಂತೆ ತೋರುತ್ತದೆ. ಉದಾಹರಣೆಗೆ, ಅವರ 'ಗೋಕುಲನಿರ್ಗಮನ'ದ ಕೊನೆಯ ಭಾಗದಲ್ಲಿ, ಕೃಷ್ಣನು ಬಿಸುಟುಹೋಗಿದ್ದ ಕೊಳಲನ್ನು ಕುರಿತು "ಯಮುನೆಯ ಬನದೊಳು. . ." ಎಂಬ ರಾಧೆಯ ಹಾಡು ಬರುತ್ತದೆ; ಅದರ "ಮನದೊಳಗಾಸೆಯ ಪಂಜನು ಹೊತ್ತಿಸಿ ಮನದನ್ನನಿವನೆಂದು ತೋರಿದ ಕೊಳಲೇ" ಎಂಬ ಚರಣಗಳಲ್ಲಿನ ಕಾವ್ಯಪ್ರತಿಮೆ ಒಟ್ಟು ಗೀತದ ರಸನಿರ್ಝರಿಯ ಮೇಲೆಯೇ ಅನುರಕ್ತಿಯ ಸುವರ್ಣಪ್ರಭೆಯನ್ನು ಹಾಯಿಸುತ್ತದೆ. ಹೀಗೆ ಎಷ್ಟೋ ವೇಳೆ ಗಾನದಿಂದ, ಗಮಕದಿಂದ ಕೆಲವು ಭಾವಗೀತಗಳ ಸವಿ, ಜೇನುತುಪ್ಪದಲ್ಲಿ ಮುಳುಗಿಸಿ ಇಟ್ಟಿದ್ದ ಹಣ್ಣಿನ ಹೋಳುಗಳಲ್ಲಿ ಆಗುವಂತೆ, ಹೆಚ್ಚಾಗಿ ಮನದಟ್ಟಬಹುದು. ಆದರೂ ಇಂದಿನ ಯುಗದಲ್ಲಿ ಭಾವಗೀತಕ್ಕೆ ಗೇಯತೆ ಅವಶ್ಯಗುಣವೆನಿಸಲಾರದು. ಸಂಗೀತಕ್ಕೆ ರಾಗದ ಸ್ವರ ಪ್ರಸ್ತಾರ, ತಾಳದ ಲಯಬದ್ಧತೆ ಈ ಎರಡೂ ಬೇಕು. ಭಾವಗೀತಕ್ಕೆ ಛಂದಸ್ಸಿನ ಗುಣವಾದ ಲಯವೊಂದೇ ಸಾಕು.

ಈ ಲಯವನ್ನು ಕೂಡ ಕೇವಲ ಲೆಕ್ಕಾಚಾರದಿಂದ ಅಳೆಯಬಾರದು. ನಮ್ಮ ಛಂದಸ್ಸಿನ ಚರಿತ್ರೆಯಲ್ಲಿ ಈ ವಿಷಯವಾಗಿ ಮಹಾಪರಿವರ್ತನಗಳು ನಡೆದು ಹೋಗಿವೆ. ಇಂದಿನ ಯುಗದಲ್ಲಿ ಪದ್ಯದಲ್ಲಿನ ಚರಣಸಂಖ್ಯೆ, ಚರಣದಲ್ಲಿನ ಗಣಸಂಖ್ಯೆ ಇವೆಲ್ಲ ನಿಬದ್ಧ ನಿಯಮಗಳಿಂದ ಬಲುಮಟ್ಟಿಗೆ ಮುಕ್ತವಾಗಿವೆ; ಮುಕ್ತಛಂದವೆಂಬ ಹೊಸಬಗೆಯೇ ಪ್ರಚಲಿತವಾಗುತ್ತಿದೆ. ಇಂದಿನ ಕವನಗಳ ವಿಷಯ ಹಾಗಿರಲಿ. ನಮ್ಮ ಹಿಂದಿನ ಸಾಹಿತ್ಯದಲ್ಲಿಯೇ ವಚನಗಳಿರಲಿಲ್ಲವೆ. "ತಾಳಮಾನ ಬಜಾವಣೆ"ಗಳಿಗೆ ಕಟ್ಟುಬೀಳದೆ ಮನಸ್ಸಿನ ಲಹರಿ ಹರಿದಂತೆ ಬಸವಣ್ಣ, ಮಹಾದೇವಿಯಕ್ಕ ಮೊದಲಾದವರು ಹಾಡಿದ ಅನೇಕ ವಚನಗಳು ನಿಜವಾದ ಭಾವಗೀತಗಳೇ ಅಲ್ಲವೆ?

ಭಾವಗೀತ ಎಂಬ ಹೆಸರಿನ ಕೆಳಗೆ ಯಾವ ಬಗೆಯ ವಸ್ತು ಬರುತ್ತದೆ? ಅದು ಸನ್ನಿವೇಶವನ್ನು ವರ್ಣಿಸಬಹುದೆ? ಕಥೆಯನ್ನು ಹೇಳಬಹುದೆ? ತತ್ತ್ವವನ್ನು ನಿರೂಪಿಸಬಹುದೆ? ಸಮಾಜವನ್ನು ಟೀಕಿಸಬಹುದೆ? ಹಾಸ್ಯವನ್ನು ಸೂಸಬಹುದೆ? ಈ ವಿಷಯದಲ್ಲಿ ಇಂಥ ಕಡೆಯಲ್ಲೇ ಗೆರೆಯೆಳೆಯಬೇಕೆಂದು ಯಾವ ಲಾಕ್ಷಣಿಕನೂ ವಿಧಿಸಲಾರ. ಅವನವನ ಮನೋಧರ್ಮ ಅವನವನಿಗೆ ನಿರ್ದೇಶಕವಾಗುತ್ತದೆ. ಹಿಂದೆ ಎಲ್ಲೋ ಓದಿದ ಒಂದು ಸಂಗತಿ ಇಲ್ಲಿ ನೆನಪಿಗೆ ಬರುತ್ತದೆ : ಒಬ್ಬ ವಿದ್ವಾಂಸನು ಇಂಗ್ಲಿಷ್ ಕವನಗಳ ಸಂಕಲನವೊಂದನ್ನು ಸಿದ್ಧಪಡಿಸಿದನಂತೆ. ಇದರಲ್ಲಿ ಗ್ರೇ ಕವಿಯ 'ಎಲಿಜಿ' (Gray's 'Elegy Written in a Country Churchyard') ಸೇರಿದೆಯೇ?" ಎಂದು ಆತನ ಸ್ನೇಹಿತ ಕೇಳಿದನಂತೆ. "ಇಲ್ಲ, ನಾನು ಅಲ್ಲಿಗೇ ಗೆರೆಯೆಳೆದಿರುವುದು. (No. That is where I have drawn the line)" ಎಂದು ಸಂಕಲನಕಾರ ಉತ್ತರಕೊಟ್ಟನಂತೆ. ಕಾವ್ಯವೆಂದರೆ ಏನು ಎಂಬುದನ್ನು ಕುರಿತೇ ಹೀಗಾದರೆ, ಭಾವಗೀತದ ವಿಷಯದಲ್ಲಿ ತೊಡಕು ಇನ್ನೂ ಹೆಚ್ಚು. ವೈಯುಕ್ತಿಕವಾದ ಅಭಿಪ್ರಾಯಭೇದ ಇನ್ನೂ ಹೆಚ್ಚು. ಮಹಾಕಾವ್ಯ, ಪದ್ಯನಾಟಕ ಇವೆರಡನ್ನೂ ಬಿಟ್ಟರೆ ಉಳಿದ ಕಾವ್ಯಸಮುದಾಯ ವೆಲ್ಲವೂ ಭಾವಗೀತವೇ ಎಂಬ ಸ್ಥೂಲಭಾವನೆ ಕೆಲವರದು. ಇನ್ನೂ ಕೊಂಚದೂರ ಹೋಗಿ, ಭಾವಗೀತವೊಂದೇ ಕಾವ್ಯ; ಮಹಾಕಾವ್ಯದಲ್ಲಾಗಲಿ ಪದ್ಯನಾಟಕದಲ್ಲಾಗಲಿ ಬರುವ ರಸನಿಮಿಷಗಳೆಲ್ಲ ಭಾವಗೀತಗಳೇ; ಹೀಗೆ ಅಲ್ಲಿ ನಡುಗಡ್ಡೆಗಳಂತೆ ತಲೆಯೆತ್ತಿ ನಿಲ್ಲುವ ಭಾವಗೀತಗಳನ್ನು ಒಂದಕ್ಕೊಂದಕ್ಕೆ ಕೂಡಿಸುವ ಕೊಂಡಿಗಳೆಲ್ಲ ನಿಜವಾಗಿ ಗದ್ಯ–ಎಂದು ಪ್ರತಿಪಾದಿಸುವರೂ ಉಂಟು. ಇತ್ತಕಡೆ, ಭಾವಗೀತವೆಂದರೆ ಕವಿಯ ಹೃದಯದ ಉತ್ಕಟಭಾವದ ನೇರವಾದ, ತೀವ್ರವಾದ ಉದ್ಗಾರ; ಇದೊಂದೇ ಇದರ ಶುದ್ಧ ಸ್ವರೂಪ–ಎಂದು ಸಾಧಿಸುವವರೂ ಉಂಟು.

ಈ ವಾದವಿವಾದಗಳ ತಾತ್ತ್ವಿಕ ವಿವೇಚನೆಗೆ ಇಲ್ಲಿ ಅವಕಾಶವಿಲ್ಲ. ಒಂದೆರಡು ಉದಾಹರಣೆಗಳನ್ನು ಮಾತ್ರ ಅವಲೋಕಿಸಬಹುದು. ವರ್ಣನೆಯನ್ನೇ ತೆಗೆದುಕೊಳ್ಳಿ. ಕುವೆಂಪು ಅವರ 'ಭಾದ್ರಪದದ ಸುಪ್ರಭಾತ' ಎಂಬ ಕವನ ಕವಿಗೆ ಕವಿಯನ್ನು ತೋರಿಸುತ್ತದೆ. ಅದು ವಸ್ತುಸ್ಥಿತಿಯ ನಿರೂಪಣೆಯಷ್ಟಕ್ಕೇ ನಿಲ್ಲದೆ ಅನುಭವದ ತರಂಗಗಳನ್ನು ಬಲುದೂರಕ್ಕೆ ಹಾಯಿಸುತ್ತದೆ; ಅದರಲ್ಲಿ ಬಂದಿರುವ "ಮುಗಿಲ ಗರಿಯ ಕಾಯಿಸಿತ್ತು ಗಗನ ಪಕ್ಷಿ" ಎಂಬ ಪ್ರತಿಮೆಯಂತೂ ಆ ಋತುವಿನ ಮುಂಬಿಸಿಲಿನ ಹಾಯಾದ ಬೆಚ್ಚನೆ ಹದವನ್ನು ಎಷ್ಟು ಚೆನ್ನಾಗಿ ಕಟ್ಟಿಕೊಡುತ್ತದೆ! ಇನ್ನು ಕಥನದ ವಿಚಾರ. ಬೇಂದ್ರೆಯವರ ಒಂದು ಕವನದ ಹೆಸರು 'ಕಥೆಯಾದಳು ಹುಡುಗಿ' ಎಂದೇ ಇದೆ. ಆದರೆ ಇಲ್ಲಿ ಕಥೆ ಹೇಳುವ ರೀತಿ ಎಷ್ಟೊಂದು ಹಗುರ. ಅದು ಬಲುಮಟ್ಟಿಗೆ ಪ್ರಾಸಾನುಪ್ರಾಸಗಳಲ್ಲಿ ಮಿಂಚಿ ಸಾಗುತ್ತದೆ. ಕವನ ಮೊದಲಾಗುವುದು "ಹಸಿಯಿದ್ದಳು ಬಿಸಿಯಾದಳು ಸಸಿಯಿದ್ದಾ ಹುಡುಗಿ" ಎಂದು. ಕಾಲಕ್ರಮದಲ್ಲಿ, "ವಧುವಾದಳು ಹುಡುಗಿ. ಒಗರಳಿದಿತು ಹುಳಿಯಿಳಿದಿತು ಬೆಡಗುಳಿದಿತು ಅಡಗಿ" . . . "ತಾಯಾದಳು ಹುಡುಗಿ ಹಾಯಾದಳು ಹುಡುಗಿ". . ."ಪಾಡಾದಳು ಹಣ್ಣಾದಳು ಮಣ್ಣಾದಳು"

. . ."ವ್ಯಥೆಯಾದಳು ಕಥೆಯಾದಳು ಎದೆಯಲ್ಲಿಯೆ ಮಡಗಿ." ಮುಗಿಯಿತು ಕಥೆ. ಆದರೆ ಬರಿಯ ಕಥೆಯಾಗಿ ಅಲ್ಲ; ವ್ಯಥೆಯಾಗಿ ಮುಗಿಯಿತು!

ಈಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಇಲ್ಲಿ ಹೆಸರಿಸಿರುವ ಭಾವಗೀತಗಳು, ಇಂಥ ಇನ್ನೆಷ್ಟೋ ಭಾವಗೀತಗಳು, ಕೇವಲ ವರ್ಣನೆಯಲ್ಲಿ, ಕೇವಲ ಕಥನದಲ್ಲಿ ತಮ್ಮ ಕೆಲಸವನ್ನು ಮುಗಿಸುವುದಿಲ್ಲ. ವರ್ಣನೆ ವಿಸ್ಮಯದಲ್ಲಿ, ಚಿತ್ತದ ಉನ್ನತಿಯಲ್ಲಿ ವಿಶ್ರಮಿಸುತ್ತದೆ. ಕಥೆ ವಿಶೇಷರೂಪದ ವ್ಯಥೆಯಲ್ಲಿ ಪರ್ಯವಸಾನ ಹೊಂದುತ್ತದೆ. ಹೀಗೆಯೆ . . . ಒಳಹೊಕ್ಕು ನೋಡಿದರೆ ಪ್ರತಿಯೊಂದು ಭಾವಗೀತವೂ ಯಾವುದೋ ಚಿತ್ತವೃತ್ತಿಯನ್ನು ಅಭಿವ್ಯಕ್ತಿಗೊಳಿಸುತ್ತದೆ, ರಸಾನುಭವದಲ್ಲಿ ನಿಲುಗಡೆಗೆ ಬರುತ್ತದೆ.

ತತ್ತ್ವ, ಭಕ್ತಿ ಮೊದಲಾದವುಗಳ ವಿಷಯವೂ ಅಷ್ಟೇ. ಇದಕ್ಕೆ ನಮ್ಮ ಹಿಂದಿನ ಹಿರಿಯ ಕವಿ ಪಂಪನಿಂದ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಆದಿತೀರ್ಥಂಕರನ ಬಳಿಗೆ ಭರತಚಕ್ರವರ್ತಿ ಬಂದು, ಆ ತ್ರೈಲೋಕ್ಯಗುರುವಿಗೆ ನಮಿಸಿ ಮಾಡುವ ಸ್ತುತಿ 'ಆದಿಪುರಾಣ'ದಲ್ಲಿ ಸೇರಿರುವ ಒಂದು ಒಳ್ಳೆಯ ಭಾವಗೀತ. "ಆಕುಳನೆನಾಗಿ ಸುಟಿದೆಂ ಅನಾಕುಳಮಪ್ಪೆಡೆಯನಱಸಿ ಕಾಣೆಂ" ಎಂಬ ಅವನ ಉದ್ವೇಗವೂ, "ಭವನಿಗಳದ ತೊಡರಂ ಕಳೆ, ಭವಜಳಧಿಯ ತಡಿಗೆ ಸಾರ್ಚು". ಎಂಬ ಮೊರೆಯೂ, "ಅಮರೇಂದ್ರೋನ್ನತಿ ಖೇಚರೇಂದ್ರವಿಭವಂ ಭೋಗೀಂದ್ರ ಭೋಗಂ ಮಹೇಂದ್ರಮಹೈಶ್ವರ್ಯಂ ಇವೆಲ್ಲಂ ಅಧ್ರುವಂ, ಇವಂ ಬೆಟ್ಟಿಂತು ಬೆಳ್ಳಲ್ಲಂ" ಎಂಬ ಕ್ಷಣಿಕತೆಯ ಅರಿವೂ ಈ ಚಕ್ರವರ್ತಿಯ ಹೃದಯಾಂತರಾಳದಿಂದ ಹೊಮ್ಮಿ ಸಹೃದಯರ ಹೃದಯಾಂತರಾಳದಲ್ಲಿ ಮಾರ್ಮಿಡಿಯುತ್ತವೆ. ಈಗ ಬೇರೊಂದು ಭಾವದ ಒಂದು ನಿದರ್ಶನ. ಪು. ತಿ. ನರಸಿಂಹಾಚಾರ್ಯರ 'ವಿಕಟಕವಿ ವಿಜಯ'ದಲ್ಲಿ "ಲೆಫ್ಟ್ ರೈಟ್ ಲೆಫ್ಟ್ ರೈಟ್ ಏನು ಗೆಣೆಯ ಕಾಳಗಕ್ಕೆ ಮನಮಾಡಿ ಮರೆ ಮನೆಯ" ಎಂಬ ಸಿಪಾಯಿಗಳ ಹಾಡೊಂದು ಬರುತ್ತದೆ. ಗೃಹಕೃತ್ಯದ ಕಾರ್ಪಣ್ಯಕ್ಕೆ ಬೇಸತ್ತು, ಬಂದೂಕ ಹಿಡಿದು ಕವಾಯತು ಮಾಡುವ ಜೀವನದಲ್ಲಿ ಸುಖ ಕಾಣಲು ಹೊರಟಿರುವ ಮುಗ್ಧ ಸಿಪಾಯಿಯ ಹುಮ್ಮಸ್ಸು ಅದು. ಅವನ ಉಕ್ತಿ ನಮ್ಮಲ್ಲಿ ಕೊನೆಗೆ ಉತ್ಸಾಹವನ್ನಲ್ಲ, ಕನಿಕರವನ್ನು ಉಕ್ಕಿಸುತ್ತದೆ. ಒಂದು ಸಮ್ಮಿಶ್ರರಸದ ಅನುಭವ ನಮಗೆ ಇಲ್ಲಿ ಒದಗುತ್ತದೆ . . . ಯೆಂಡ್ಕುಡಕ ರತ್ನನ 'ಯೆಂಡದ್ ತೊಂದ್ರೆ' ಎಂಬುದನ್ನು ವಿಕೃತೋತ್ಸಾಹದ ಉದಾಹರಣೆಯಾಗಿ ಇಲ್ಲಿ ಹೆಸರಿಸಬಹುದು.

ಇನ್ನು, ಪ್ರೇಮ, ಶೋಕ ಮೊದಲಾದ ವಿಶ್ವಸಾಧಾರಣವಾದ ಭಾವಗಳ ವಿಷಯದಲ್ಲಿ ಹೊಸದಾಗಿ ಹೇಳತಕ್ಕದ್ದು ಏನು ಉಳಿದಿದೆ? ಭಾವಗೀತ ಸಾಮ್ರಾಜ್ಯದಲ್ಲಿ ಪಟ್ಟಾಭಿಷೇಕ ಹೊಂದಿರುವ ವಸ್ತು ಇದು. ಕೆ. ಎಸ್. ನರಸಿಂಹಸ್ವಾಮಿ ಅವರ 'ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು', 'ಹತ್ತುವರ್ಷದ ಹಿಂದೆ ಸುತ್ತೂರ ತೇರಿನಲಿ' ಈ ಮೊದಲಾದ ಕವನಗಳನ್ನು ಒಳಗಂಟಲಿನಲ್ಲಾದರೂ ಹಾಡಿಕೊಳ್ಳದ ರಸಿಕ ತರುಣ ತರುಣಿಯರು ಯಾರಿದ್ದಾರೆ! ಪ್ರೇಮ ಎಂದು ಮಾನವಹೃದಯದಲ್ಲಿ ವಿವಿಧ ಮುಖಗಳನ್ನು ತಳೆದು

ಮೂಡಿತೋ ಅಂದೇ ವಿಯೋಗದ ಶೋಕವೂ ಮೂಡಿತು. ಅದನ್ನು ಕುರಿತ ಭಾವಗೀತಗಳೂ ಭಾಷೆಯಲ್ಲಿ ಬೇಕಾದಷ್ಟು. ಇನ್ನು, ವಿಷಯಲೋಕದಲ್ಲೇ ಮಗ್ನನಾಗಿದ್ದ ವ್ಯಕ್ತಿಗೆ ಬೇರೊಂದು ಬೃಂದಾವನದಿಂದ ದೂರದ ಮುರಳಿಯ ಕರೆ ಬರುವುದೂ ಉಂಟು; ಲೌಕಿಕ ತೃಪ್ತಿಯ ನಡುವೆ ಹೊಸ ಧ್ಯೇಯ ಕೆರಳಿಸುವ ಯಾತನೆ ಆತನನ್ನು ಆವರಿಸುವುದೂ ಉಂಟು. ಇದರ ಅನುಭವವನ್ನು ಗೋಪಾಕೃಷ್ಣ ಅಡಿಗರು ಮೋಹಕವಾದ ಒಂದು ಭಾವಗೀತದಲ್ಲಿ ರೂಪಿಸಿದ್ದಾರೆ.

ಈಗ ಪರಿಷ್ಕಾರದ ಒಂದು ಮಾತು. ಕರುಳಿನ ಕೂಗಾಗಿ ಹೊರಬಿದ್ದ ಭಾವಗೀತದಲ್ಲಿ ಕೂಡ ಅದರ ಅನುಭವ ಹಸಿಹಸಿಯಾಗಿ ಲೌಕಿದ ಮಟ್ಟದಲ್ಲಿ ರೂಪುಗೊಳ್ಳುವುದಿಲ್ಲ. ಕವಿ ಇನ್ನೊಬ್ಬರ ಸುಖದುಃಖಗಳನ್ನು ತನ್ನವೆಂಬಂತೆ ಒಳಹೊಕ್ಕು ಅರಿಯಬಲ್ಲ; ತನ್ನ ನೋವುನಲವುಗಳನ್ನು ತನ್ನಿಂದ ತಾನೇ ಸ್ವಲ್ಪ ಹೊರಗೆ ನಿಂತು ವೀಕ್ಷಿಸಬಲ್ಲ. ಹಾಗೆ ಮಾಡಿದಾಗಲೆ, ಭವದ ಮಟ್ಟದಿಂದ ಅವನ ಭಾವ ಮೇಲಕ್ಕೇರಿದಾಗಲೆ, ರಸನಿಷ್ಪತ್ತಿಯಾಗುವುದು; ನಿಜವಾದ ಭಾವಗೀತ ಮೈದೋರುವುದು.

ಒಟ್ಟಿನಮೇಲೆ, ಭಾರತೀಯ ಕಾವ್ಯಮೀಮಾಂಸೆಯ ಪರಿಭಾಷೆಯಲ್ಲಿ ಹೇಳಬಹುದಾದರೆ, ಭಾವಗೀತದಲ್ಲಿ ರಸಧ್ವನಿಯೇ ಪರಮಧ್ವನಿ. ಕೇವಲ ಅಲಂಕಾರಧ್ವನಿ ವಸ್ತುಧ್ವನಿಗಳ ನೆಲೆಯಲ್ಲಿ ಅದು ವಿರಮಿಸುವುದಿಲ್ಲ; ಗುಣೀ ಭೂತವ್ಯಂಗ್ಯ ಕಾವ್ಯವಂತೂ ಅದು ಸರ್ವಥಾ ಆಗುವುದಿಲ್ಲ. ಈ ಸೂತ್ರವನ್ನು ವಿವರಿಸಲು ಇಲ್ಲಿ ಅವಕಾಶವಿಲ್ಲ.

ಕೊನೆಯಲ್ಲಿ ಭಾವಗೀತದ ಸಂಕ್ಷಿಪ್ತತೆಯ ಕಡೆಗೆ ಒಂದಿಷ್ಟು ಕಣ್ಣು ಹಾಯಿಸೋಣ. ಭಾವತೀವ್ರತೆ ಭಾವಸಾಂದ್ರತೆಗಳೇ ಅದರ ಜೀವಾಳವಾದ ಕಾರಣ, ಅದು ಅಡಕವಾಗಿದ್ದಷ್ಟೂ ಫಲ ಹೆಚ್ಚು. ಇದಕ್ಕೆ ಒಳ್ಳೆಯ ಉದಾಹರಣೆಯೆಂದರೆ ನಮ್ಮ ಸಾಹಿತ್ಯದಲ್ಲಿ ಹಿಂದಿನಿಂದ ಪ್ರಚುರವಾಗಿರುವ 'ಮುಕ್ತಕ'ಗಳು—'ಬಿಡಿಮುತ್ತು'ಗಳು. ಇವು ಪ್ರೌಢ ಸಾಹಿತ್ಯದಲ್ಲಿ ಮಾತ್ರವಲ್ಲದೆ ಜನಪದ ಸಾಹಿತ್ಯದಲ್ಲೂ ಹೇರಳವಾಗಿ ಉಂಟು :

> ಕೂಸು ಇದ್ದ ಮನೆಗೆ ಬೀಸಣಿಗೆ ಯಾತಕೆ
> ಕೂಸು ಕಂದಯ್ಯ ಒಳಹೊರಗೆ-ಆಡಿದರೆ
> ಬೀಸಣಿಗೆ ಗಾಳಿ ಸುಳಿದಾವು

—ಈ ತ್ರಿಪದಿಯಲ್ಲಿ ದೊರೆಯುವ ರಸನಿರ್ಭರತೆ ಅನೇಕ ದೀರ್ಘಕವನಗಳಲ್ಲಿ ದೊರೆಯುವುದಿಲ್ಲ.

ಆದರೆ, ಒಂದು ಭಾವಗೀತ ಇಷ್ಟು ಪಂಕ್ತಿಗಳಿಗೆ ಮೀರಬಾರದು ಎಂದು ಪರಮಾವಧಿಯ ಸಂಕಲೆಯನ್ನು ಯಾರೂ ತೊಡಿಸುವಹಾಗಿಲ್ಲ. ಹರಿಹರ ಕವಿಯ 'ಪುಷ್ಪರಗಳೆ'ಯಲ್ಲಿ ಹತ್ತಿರಹತ್ತಿರ ಮುನ್ನೂರು ಚರಣಗಳಿವೆ. ಆದರೆ ಅದರ ಮೊದಲನೆಯ ಚರಣದಿಂದ ಹಿಡಿದು ಕೊನೆಯ ಚರಣದವರೆಗೂ ಭಕ್ತ್ಯುತ್ಸಾಹ ನಿರಂತರವಾಗಿ

ಸೂಸುತ್ತದೆ; ಭಕ್ತರಲ್ಲದವರನ್ನೂ ಪರವಶರನ್ನಾಗಿ ಮಾಡುತ್ತದೆ. ಕವಿಯಲ್ಲಿ ಭಾವ ತೀವ್ರವಾಗಿದ್ದರೆ ಸಾಕು; ಅದರಿಂದ ಅವನ ಕಲ್ಪನಾವಿಲಾಸ ಪ್ರಚೋದನೆಗೊಂಡು, ಲೌಕಿಕವಾದ ನೋಟಮಾಟಗಳನ್ನೆಲ್ಲ ತನ್ನ ಮಣಿಸ್ಪರ್ಶದಿಂದ ಬಂಗಾರವಾಗಿ ಬೆಳಗಿಸುತ್ತಾ, ಹೊಸ ಪ್ರತಿಮೆಗಳನ್ನು ಕಡೆದು ನಿಲ್ಲಿಸುತ್ತಾ, ಮುಂದುವರಿದರೆ ಸಾಕು; ಭಾವಗೀತ ಸಂಗೀತದ ಸಂಮಿಶ್ರಣವಿಲ್ಲದೆಯೆ ಜಗತ್ತನ್ನು ರಸಮಯವಾಗಿ ಮಾಡಬಲ್ಲುದು.

ಕಾವ್ಯಾನುಭವ : ೧೯೭೦

'ಗರಿ'*

೧

ಕನ್ನಡಕವಿತೆಯಲ್ಲಿ ಹೊಸಮಾರ್ಗವು ತೆರೆದು ಸುಮಾರು ಕಾಲುಶತಮಾನಕ್ಕೆ ಬಂದಿತೆನ್ನಬಹುದು. ಮೊದಮೊದಲು, ಜನತೆಯ ಮೆಚ್ಚಿಕೆ ದೊರಕೀತೋ ಇಲ್ಲವೋ ಎಂಬ ಅಳುಕಿನಿಂದ ಹೊಸಬಗೆಯ ಕವನಗಳು ಬಿಡಿಬಿಡಿಯಾಗಿ ಅಲ್ಲೊಂದು ಇಲ್ಲೊಂದು ಪತ್ರಿಕೆಯಲ್ಲಿ ತಲೆಹಾಕುತ್ತಿದ್ದುವು. ಭಾಷೆ, ವಿಷಯ, ಛಂದಸ್ಸು ಈ ಮೂರರಲ್ಲೂ ಹೊಸದಾದ ಇಂಥ ಕವನಗಳು ಕನ್ನಡಿಗರಿಗೆ ಒಗ್ಗಬೇಕಾದರೆ ಸಹಜವಾಗಿ ಕೆಲವು ಕಾಲ ಹಿಡಿಯಿತು; ಇಂದಿಗೂ (೧೯೩೩) ರಲ್ಲಿ ಕೂಡ ಅವುಗಳಲ್ಲಿ ಅಭಿರುಚಿ ಹುಟ್ಟದವರನ್ನು ಕಾಣಬಹುದು. ಈ ನಡುವೆ, ತಮ್ಮ ಲಾಭನಷ್ಟಗಳನ್ನು ಗಣಿಸದ ಪುಸ್ತಕ ಪ್ರಕಾಶಕರು ಕೆಲವರು ಮುಂದೆ ಬಂದರು; ಕವಿಗಳೂ ಧೈರ್ಯಮಾಡಿದರು. ಕವನಗಳು ಒಟ್ಟುಗೂಡಿ ಗ್ರಂಥರೂಪದಲ್ಲಿ ಹೊರಬೀಳುವುದಕ್ಕೆ ಮೊದಲಾಯಿತು. ಇದುವರೆಗೆ, ಹೊಸಮಾರ್ಗದ ಕವಿಗಳಲ್ಲಿ ಗಣ್ಯರಾದ ಹಲವರ ಕವನ ಸಂಗ್ರಹಗಳು ಪ್ರಕಟವಾಗಿವೆ. ಆದರೆ ಒಬ್ಬರು ಮಾತ್ರ ಹಕ್ಕಿಯಂತೆ ಹಾಡಿ, ಗರಿಗಳಂತೆ ತಮ್ಮ ಕವನಗಳನ್ನು ಆಗಾಗ ತೂರಬಿಡುತ್ತಿದ್ದರೇ ಹೊರತು ಪುಸ್ತಕ ನಿರ್ಬಂಧಕ್ಕೆ

---

* 'ಅಂಬಿಕಾತನಯದತ್ತ' : ಗರಿ (೧೯೩೨)-ವಿಮರ್ಶೆ ('ಜಯಕರ್ನಾಟಕ', ೧೯೩೩).

ಸಿಕ್ಕಿರಲಿಲ್ಲ. ಈ ಬಿಡಿಹಾಡುಗಳನ್ನು ಓದಿ, ಕೇಳಿ, ಮೋಹಗೊಂಡಿದ್ದ ರಸಿಕರು ಮಾತ್ರ ಅವನ್ನೆಲ್ಲಾ ಒಟ್ಟಿಗೆ ಸವಿಯುವ ಭಾಗ್ಯವನ್ನು ಉತ್ಸುಕತೆಯಿಂದ ನಿರೀಕ್ಷಿಸುತ್ತಿದ್ದರು. ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರರ ಮತ್ತು ಅವರ ಮಿತ್ರರ ವ್ಯವಸಾಯದಿಂದ ಅಂಬಿಕಾತನಯದತ್ತರ ಕವನಗಳು ಈಗ ಜೊತೆಗೂಡಿ ಒಂದು ಮುದ್ದಾದ ಸಂಪುಟದಲ್ಲಿ ಕನ್ನಡಿಗರಿಗೆ ದೊರೆತಿವೆ. ಈಗ ಕೂಡ, ಅವರು ಈಚೆಗೆ ಬರೆದ ಎಲ್ಲ ಕವನಗಳೂ ಇಲ್ಲಿ ಬಂದಿಲ್ಲವೆಂದು ತೋರುತ್ತದೆ.

'ಗರಿ'ಯಲ್ಲಿ ಐವತ್ತೈದು ಗೀತಗಳಿವೆ. ಎಂಟು ಚರಣಗಳಿಗೆ ಮೀರದ 'ಆಮಿಷ'ದಿಂದ ಹಿಡಿದು, ಏಳು ಪುಟಗಳನ್ನು ಪೂರ್ತಿ ಆಕ್ರಮಿಸುವ 'ಕುಣಿಯೋಣು ಬಾರಽ'ದವರೆಗೂ ಇಲ್ಲಿ ವಿಸ್ತಾರವನ್ನು ಕಾಣಬಹುದು. ವಿಷಯದಲ್ಲೂ ಹೀಗೆಯೇ ಅಂತರವುಂಟು. 'ಕರಿಮರಿ ನಾಯಿ'ಯಲ್ಲಿ ಭಟ್ಟರೊಬ್ಬರ ಮೈಲಿಗೆಯ ಭೀತಿಯನ್ನು ನಗುವ ವ್ಯಕ್ತಹಾಸ್ಯವಿದ್ದರೆ, 'ನಗೀ ನವಿಲಿ'ನಲ್ಲಿ ಒಂದು ಜೀವ ಮತ್ತೊಂದನ್ನು ಬಯಸಿ ಸುರಿಸುವ ಕಣ್ಣೀರಿನ ಬಣ್ಣದ ಹನಿಯಿದೆ, 'ತುತ್ತಿನ ಚೀಲ'ದಲ್ಲಿ ವಿಶ್ವವನ್ನೇ ತುತ್ತುಗೊಳ್ಳಲು ಹೊಂಚುತ್ತಿರುವ ಬಡಬಗ್ಗರ ಹಸಿವೆಯ ಭೀಷಣ ಗರ್ಜನೆಯಿದೆ. ಹದಿನಾಲ್ಕು ವರ್ಷಗಳ ಕಾಲದಲ್ಲಿ ರಚಿಸಿದ ಕವನಗಳನ್ನೆಲ್ಲ ಈ ಸಂಗ್ರಹದಲ್ಲಿ ಹೆಚ್ಚುಕಡಿಮೆ ಅನುಕ್ರಮವಾಗಿ ಕೊಟ್ಟಿರುವುದರಿಂದ, ಇನ್ನೊಂದು ಅಂತರವೂ ಒಡೆದು ಕಾಣಿಸುತ್ತದೆ. ಛಂದೋ ವೈವಿಧ್ಯದಲ್ಲಿಯೂ ಪದಬಂಧದಲ್ಲಿಯೂ ರಸಪುಷ್ಟಿಯಲ್ಲಿಯೂ ಮೊದಲಿನ ಕವನಗಳು ಈಚೆಯವುಗಳ ತೂಕಕ್ಕೆ ತುಂಬ ಕಡಮೆ ಬೀಳುತ್ತವೆ. ಇದು ಸಹಜವೇ ಸರಿ; ಪ್ರತಿಯೊಬ್ಬ ಕವಿಯ ಕೃತಿಗಳಲ್ಲೂ ಈ ತಾರತಮ್ಯವನ್ನು ನೋಡಬಹುದು. ಆದ್ದರಿಂದ, ಪ್ರಥಮ ಕೃತಿಗಳಲ್ಲಿ ಕೆಲವನ್ನು ಬಿಟ್ಟು, ಉಳಿದೆಲ್ಲವನ್ನೂ ವಿಷಯಾನುಗುಣವಾಗಿ ಜೋಡಿಸಿದ್ದರೆ, ಗ್ರಂಥದ ಆದಿಭಾಗದಲ್ಲಿ ವಾಚಕರಿಗೆ ಉಲ್ಲಾಸವು ಕಂಡಹಾಗೆ ಹೆಚ್ಚುತ್ತಿತ್ತು.

ಆದರೆ ಆಗ ಒಂದು ಪ್ರಯೋಜನವೂ ತಪ್ಪುತ್ತಿತ್ತು. ಕವನಗಳು ಈಗಿರುವ ಕ್ರಮದಲ್ಲಿ, ಅಂಬಿಕಾತನಯದತ್ತರ ವಾಣಿ ಮೊಳೆದೋರಿ, ಬೆಳೆದು, ಪಕ್ವವಾದ ರೀತಿಯನ್ನು ಚೆನ್ನಾಗಿ ಕಾಣಬಹುದು; ವಾರ್ಧಕಷಟ್ಪದಿಯ ಬಳಸುಧಾಟಿಯಲ್ಲಿ ಅವರಿಟ್ಟ ದಟ್ಟಡಿಗಳಿಗೂ ಹಳ್ಳಿಯ ಹಾಡಿನ ಮಟ್ಟುಗಳನ್ನು ಕೂಡ ಭಾವಕ್ಕೆ ತಕ್ಕಂತೆ ಬಳುಕಿಸಿ ಮಿಡಿಯತಕ್ಕ ಸ್ವಚ್ಛಂದ ನರ್ತನಕ್ಕೂ ಇರುವ ಮಹದಂತರವನ್ನು ಸುಲಭವಾಗಿ ಅರಿಯಬಹುದು.

> ಸತ್ಯಪ್ರೀತಗಳಿಲ್ಲದೇ ಬಣಗುಮಾತಿನೊಳು
> ವ್ರಾತ್ಯರಾಗಿದ್ದ ಭಟ್ಟಂಗಿಗಳ ಹಿಂಡಿಗೂ
> ಮರ್ತ್ಯರಾದಂಥ ನರ-ಕವಿಗಳಿಗು ಕಲಿಸಿದೆಯೊ
> ಚೆನ್ನಾಗಿ ಅಮರಕವಿಯೇ.

ಎಂದು ಮುದ್ದಣನ ಪ್ರಶಸ್ತಿಯನ್ನು ಹೇಳಲು ಹೊರಟು, ತನ್ನ ಆಕ್ಷೇಪಣೆಗೆ ತಾನೇ ಗುರಿಯಾಗಿ ನಿಂತ ಈ ನೀರಸಪದ ಸಮುಚ್ಚಯವೆಲ್ಲಿ;

ಚಿಗರ‍್ಯಾಗಿ
    ತಿಗರ‍್ಯಾಗಿ
        ನಿದ್ದಿಯ ಭಗರ‍್ಯಾಗಿ
ಗಾಳೀಗು ಹಗರಾಗಿ । ಕುಣಿಯೋಣು ಬಾ

ಎಂದು ಕರೆದು, ವಿಶ್ವ ನಾಟ್ಯಲಹರಿಯಲ್ಲಿ ತನ್ನೊಂದಿಗೆ ವಾಚಕರನ್ನೂ ಸೆಳೆದೊಯ್ಯುವ ಈ ಸಂಮೋಹನ ಮಂತ್ರವೆಲ್ಲಿ!—ಅಂಬಿಕಾತನಯದತ್ತರ ಮೊದಲ ಕವನಗಳಲ್ಲಿ ಭಾಷೆ ಭಾವಕ್ಕೆ ತಕ್ಕಷ್ಟು ಪಳಗಿದಂತೆ ತೋರುವುದಿಲ್ಲ; ಕೋರಿದ ಸ್ವರವನ್ನು ಥಟ್ಟನೆ ನುಡಿಸುವಂತೆ ತೋರುವುದಿಲ್ಲ; ಅಲ್ಲದೆ,

ಎಂದು ಮಲಗುವೆ ನೋವ ನೆನಪನು
ನಂದಿಸಿ ಪರಾನಂದದಲಿ ನಸು-
ಗುಂದಿರುವ ಚಂದಿರಗೆ ಹೊಂದಿಸಿ
    ಕಂದಿರುವ ಕದಪ . . . .
ಬಡಕ ದೇಹದ ಬುಡಕೆ ಒಡಕ ಮನಸಿಹುದು
ಕುಡುಕ ಬುದ್ಧಿಯ ಮುಂದೆ ಕೆಡುಕು ಕನಸಿಹುದು . . . .

— ಇಂಥ ಕಡೆಗಳಲ್ಲಿ ಪ್ರಾಸಾನುಪ್ರಾಸಗಳ ಮೇಲ್ಮೆರುಗಿನಲ್ಲಿ ಅರ್ಥವು ಮಸಕು ಮಸಕಾಗುತ್ತದೆ.

ತನಗೆ ವಾಣಿ ಇನ್ನೂ ವಶಳಾಗಿಲ್ಲವೆಂದು ಕವಿಗೂ ಗೊತ್ತಿಲ್ಲದೆ ಇರಲಿಲ್ಲ. ಅದರಿಂದಲೇ, 'ಆ ಸರಸ ಮಾತುಗಳ ಮಾತೆಯಾಗುವವರೆಗೆ ಏನುಂಡರೇನು ನನಗೆ' ಎಂದು ಹಂಬಲಿಸಿದನು;

ತುಸುವು ಕೇಳಲು ಕೂಡ ಸೊಲ್ಲ ಮರೆತಿರಬೇಕು
ರಸವ ಹೀರಲು ಕೂಡ ಎಲ್ಲ ಅರಿತಿರಬೇಕು
ಇಂಥ ಪದವನು ಹಾಡು ಹಾಡೊಮ್ಮೆನಲ್ಲೆ. . .
ಓ ಹಾಡೆ, ಓ ಹಾಡೆ ಓ ಹಾಡೇ!

ಎಂದು ವಾಣಿಗೆ ಮತ್ತೆ ಮತ್ತೆ ಮೊರೆಯಿಟ್ಟನು. ಈ ಪ್ರಾರ್ಥನೆಯ ಅಮೂಲ್ಯ ಫಲವೇ ಕವಿಯ ಈಚೆಯ ಕವನಗಳು.

೨

'ಗರಿ'ಯೊಳಗಿನ ಕವನಗಳನ್ನು ಸ್ಥೂಲವಾಗಿ ಮೂರು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು. ಇವುಗಳಲ್ಲಿ ರಚನೆಯ ಕಾಲದ ದೃಷ್ಟಿಯಿಂದ ಮೊದಲು ಗಣನೆಗೆ ಬರತಕ್ಕವು ರಾಷ್ಟ್ರೀಯಗೀತಗಳು. ಭರತಭೂಮಿಯಲ್ಲಿ ಈಗ ಎಲ್ಲ ಹೃದಯಗಳಲ್ಲೂ ಉಕ್ಕುತ್ತಿರುವ ಸ್ವಾತಂತ್ರ್ಯಪ್ರೇಮವೂ ದೇಶಭಕ್ತಿಯೂ ಇಲ್ಲಿಯ ಹಲವು ಕವನಗಳಲ್ಲಿ

ರೂಪುಗೊಂಡಿವೆ. ಗತವೈಭವದ ಸ್ಮರಣೆ ನವಜೀವನದ ಅಡಿಗಲ್ಲು. ಆದ್ದರಿಂದ ಕವಿ 'ನಾಡ ನಡುಮನೆ'ಯಾದ ಹಂಪೆ—ವಿಜಯನಗರವನ್ನು ದರ್ಶನ ಮಾಡುತ್ತಾನೆ; ಕ್ಷಾತ್ರಬಲ ಬ್ರಹ್ಮ ತೇಜಸ್ಸುಗಳ ಸಮನ್ವಯವನ್ನರಿತ ಪಂಪನನ್ನು ನೆನೆಯುತ್ತಾನೆ; ಕಲ್ಲಾಗಿದ್ದ ಕನ್ನಡಕ್ಕೆ ಜೀವಕಳೆಬರಿಸಿದ ಮುದ್ದಣನನ್ನು ಸುತ್ತಿಸುತ್ತಾನೆ. ಹಿಂದೆ ಕನ್ನಡನಾಡು ವೈಭವದ ಮೇರೆಯನ್ನು ಮುಟ್ಟಿತ್ತು, ಇಂದು ಏನಾಗಿದೆ ಎಂಬುದರ ಚಿತ್ರವು 'ಕನಸಿನೊಳಗೊಂದು ಕಣಸಿ'ನ ರೂಪದಲ್ಲಿ ಬಂದಿದೆ. ಇದು ತಾಯಿ ಮಕ್ಕಳಿಗೆ ನಡೆದ ಒಂದು ಸಂವಾದ. ತನ್ನ ತಾಯಿಯ ಅರಿವೇ ಮಗನಿಗೆ ಇಲ್ಲ. ಅದರಿಂದಲೇ "ಇರುವರೇ ಇದ್ದರೇ ಮಕ್ಕಳೆಂಬವರು?" ಎಂದು ಅವನು ಪ್ರಶ್ನಿಸಿದಾಗ, "ಇರುವರೆಂದರು ಕೂಡ ಯಾರು ನಂಬುವರು?" ಎಂದು ತಾಯಿ ಉತ್ತರ ಹೇಳುತ್ತಾಳೆ; ಆ ಸ್ಥಿತಿಗೆ ದೇಶ ಇಳಿದಿದೆ. ಕನ್ನಡದ ಮಕ್ಕಳಿಗೆ ಈಗ ಇರುವುದು ಒಂದೇ ಹಾದಿ: "ಆದಿ ಅಂತ್ಯವು ಇಲ್ಲದಂಥ ತ್ಯಾಗ!" ಈ ತ್ಯಾಗವನ್ನು ಕನ್ನಡ ಮಾತೆ ಬಯಸಿದರೆ—"ಗಂಡುಸಾದರೆ ನಿನ್ನ ಬಲಿ ಕೊಡುವಿಯೇನು?" ಎಂದು ಕೇಳಿದರೆ—ಆಗಲಿ ಎನ್ನುವ ಧೈರ್ಯ ಮಗನಿಗಿಲ್ಲ; "ಮನವು ನಡುಗಿತು ತನುವು ನವಿರಿಗೊಳಗಾಯ್ತು." ಅಂಜಿಕೆ ಅನಿಶ್ಚಯಗಳು ಹೀಗೆ ಕನ್ನಡಿಗನ ಮನಸ್ಸಿನಲ್ಲಿ ನೆಲಸಿರುವಾಗ ಅವನಿಂದ ಯಾವ ಮಹಾಕಾರ್ಯವಾದೀತು!

ಕನ್ನಡ ಮಾತೆಯ ದುರವಸ್ಥೆಯೇ ಭರತಮಾತೆಯದು ಕೂಡ; ಇನ್ನೂ ಒಂದು ಪಾಲು ಹೆಚ್ಚು ಘೋರವೆನ್ನಬಹುದು. ಆಕೆಯ ಶೋಕರೋಷಗಳ ಉದ್ಗಾರವು ಸ್ಪಷ್ಟಾಕ್ಷರಗಳಲ್ಲಿ, ಕರುಳು ಚುಚ್ಚುವ ದನಿಯಲ್ಲಿ, 'ಮೂವತ್ತು ಮೂರು ಕೋಟಿ' ಎಂಬ ನಾಚಿಕೆ ಹುಟ್ಟಿಸುವ ಪಲ್ಲವಿಯೊಡನೆ ಬಂದಿದೆ :

ಮಕ್ಕಳಿವರೇನಮ್ಮ? ಮಕ್ಕಳಿವರೇನಮ್ಮ
    ಮೂವತ್ತುಮೂರು ಕೋಟಿ? ॥ ಪಲ್ಲ ॥
ಮೂವ್ವತ್ತುಮೂರು ಕೋಟೀ, ಮೂವತ್ತುಮೂರು ಕೋಟೀ !
    ಮಕ್ಕಳಿವರೇನಮ್ಮ? ಮಕ್ಕಳಿವರೇನಮ್ಮ?
ಮೂವತ್ತುಮೂರು ಕೋಟಿ !
    ನಾ ಹಡೆದ
ಮೂವತ್ತುಮೂರು ಕೋಟಿ ॥ ಅನುಪಲ್ಲ ॥

ಇವರು ಮಕ್ಕಳಲ್ಲ; ಮೂವತ್ತುಮೂರು ಕೋಟಿ ಸೂಲುಗಳೂ ಶೂಲಗಳು! ಒಂದೊಂದು ಬಸಿರಿಗೂ ಒಂದೊಂದು ಬಯಕೆಯನ್ನು ಹಡೆದದ್ದಾಯಿತು; ಅದು ಹಿಂಗಿದ್ದೂ ಆಯಿತು. ಲೆಕ್ಕಕ್ಕೆ—ಹೆಸರಿಗೆ—ಮೂವತ್ತುಮೂರು ಕೋಟಿ. ಇವರಲ್ಲಿ ಎಷ್ಟು ಒಡಕು: ಹಿಂದುಗಳು ಮುಸಲ್ಮಾನರು, ಹೊಲೆಯರು, ಹೆಂಗಸರು! ದೇಶ ಹೋಳುಹೋಳಾಯಿತು; ಮನೆ ಮಲ್ಲಶಾಲೆಯಾಯಿತು; "ಹಂಗಿನರಮನೆಯ ನರಕ"ದಲ್ಲಿ "ಹಿಡಿಬೆರಳ ಹಿಡಿಯಲ್ಲಿ ಅಡಿಯೆರಡರಡಿಯಲ್ಲಿ" ಹೊರಳಿ ಒರಲುತ್ತಿದ್ದಾರೆ. ಆದರೂ ಚೈತನ್ಯವಿಲ್ಲ, ಒಕ್ಕಟ್ಟಿಲ್ಲ. ಇವರು ಎಂದಿಗೆ ಧೀರರಾಗುವುದು, ತಾಯಿಗೆ ಮಕ್ಕಳಾಗುವುದು, ಅವಳ ಗೋಳನ್ನು

ಪರಿಹರಿಸುವುದು! ಭರತಮಾತೆ **ಹಡೆದ** ಮೂವತ್ತು ಮೂರು ಕೋಟಿ, ಎಂದಿಗೆ ತಾನು **ಪಡೆದ** ಮೂವತ್ತುಮೂರು ಕೋಟಿಯಾಗುವುದು!—ಈ ಕವನಕ್ಕೆ ಆಯ್ದಿರುವ ಛಂದಸ್ಸೂ ಆರಿಸಿರುವ ಮಾತುಗಳೂ ತುಂಬ ಸಮಂಜಸವಾಗಿವೆ. ಭರತಮಾತೆಯ ಮೊದಲೆಗೆಳಂತೂ ಎದೆಯನ್ನು ಶೂಲದಂತೆ ಇರಿಯುತ್ತವೆ. 'ಮೂವತ್ತುಮೂರು ಕೋಟೀ! ಮೂವತ್ತುಮೂರು ಕೋಟೀ!' ಎಂದು ಸಂಖ್ಯೆಯ ಭಾರದ ಮುಂದೆ ಸ್ವರವನ್ನು ದೀರ್ಘವಾಗಿ ಎಳೆಯುವುದರಲ್ಲಿ ಎಷ್ಟು ತಿರಸ್ಕಾರ, ಎಷ್ಟು ಉದ್ವೇಗ, ಎಷ್ಟು ಸಂತಾಪ! ಅದನ್ನು ಕೇಳಿ ಯಾವ ಭಾರತೀಯನ ಕೆಚ್ಚು ಕೆರಳುವುದಿಲ್ಲ!

ಹಿಂದಿನ ವೈಭವವನ್ನು ನೆದೆದು ಇಂದಿನ ದುರ್ಗತಿಗೆ ಮರುಗಿದ ಕವಿಯ ಕಣ್ಣು ಮುಂದಿನ ಉನ್ನತಿಯ ಕಡೆಗೂ ಹರಿಯದೆ ಇಲ್ಲ. ವಿಜಯ ದಶಮಿಯ ದಿನ ವಿಜಯಯಾತ್ರೆಯ ಕುರುಹಾಗಿ ಗಡಿನಾಡನ್ನು ದಾಟುವ ಪದ್ಧತಿಯುಂಟಷ್ಟೆ. ನಮ್ಮ ಜೀವನಮಾರ್ಗದಲ್ಲೂ ಒಂದು ಗಡಿಯನ್ನು ದಾಟೋಣ, ಒಂದು 'ಸೀಮೋಲ್ಲಂಘನ' ಮಾಡೋಣ, "ಇಲ್ಲಸಲ್ಲದ ಕಾಲ ತೊಡರುಗಳ ಕಡಿದು", "ಒಂದೆ ತಾಯಿಯ ಮಕ್ಕಳಂತೆ ಒಂದಾಗಿ" ತಿರುಕತನ ಹರುಕತನಗಳನ್ನು ನೀಗಿ, ಹಿರಿದಾಗೋಣ—ಎಂದು ಕವಿ ಕರೆಯುತ್ತಾನೆ. ಇಲ್ಲಿಯ ಮಾತಿನಲ್ಲಿ ಮಾತ್ರ ಆವೇಶವು ಕೊಂಚ ಸಾಲದು.

೩

ಹಳ್ಳಿಯ ಲಾವಣಿ ಸಾಂಗತ್ಯಗಳನ್ನು ಉತ್ಸಾಹಶಾಲಿಗಳು ಹೊಸದಾಗಿ ಕೂಡಿಸಿ ಪ್ರಕಟಿಸಿದಾಗಲೆಲ್ಲ ಸಾಹಿತ್ಯದ ಬೆಳೆವಣಿಗೆಗೆ ಮಹೋಪಕಾರವಾಗಿದೆ. ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ ಈ ಬಗೆಯ ಕಾರ್ಯವು ಕವಿತೆಯ ಪುನರುಜ್ಜೀವನಕ್ಕೆ ಸಹಕಾರಿ ಯಾಯಿತು. ನಮ್ಮ ಸಾಹಿತ್ಯದಲ್ಲಿಯೂ ಅದಕ್ಕೆ ನಿದರ್ಶನವು ಆಗಲೇ ಅಂಬಿಕಾತನಯ ದತ್ತರ ಹಲವು ಪ್ರಣಯಗೀತಗಳಲ್ಲಿ ಕಾಣಬರುತ್ತಿದೆ. ಜನಪದ ಸಾಹಿತ್ಯದ ಸಂಗ್ರಹ ಪ್ರಕಟನ ಕಾರ್ಯಗಳಲ್ಲಿ ಧಾರವಾಡದ ಗೆಳೆಯರ ಗುಂಪಿಗೆ ಒಬ್ಬ ಪ್ರೇರಕರಾಗಿ ನಿಂತ ಈ ಕವಿಗಳು ಹಳ್ಳಿಯ ಪದಗಳ ಜೀವಾಳವನ್ನು ಚೆನ್ನಾಗಿ ಹೀರಿ, ಅದನ್ನೇ ತಮ್ಮ ವಾಣಿಯಲ್ಲಿ ಆಡಿಸುತ್ತಿರುವುದು ಆಶ್ಚರ್ಯವೇನೂ ಅಲ್ಲ.

ಶೃಂಗಾರವು ತುಂಬ ಕೋಮಲವಾದ ರಸ. ಅದಕ್ಕೆ ಒಪ್ಪುವ ಸಹಜ ಸರಳತೆ ಹಳ್ಳಿಗರ ಮಾತಿನಲ್ಲಿ ಸ್ವಾಭಾವಿಕವಾಗಿ ದೊರೆಯುತ್ತದೆ. ಬಹುಶಃ ಈ ಮರ್ಮವನ್ನರಿತೇ ನಮ್ಮ ಪ್ರಾಚೀನ ಕವಿಗಳು ಕೂಡ ಪ್ರೇಮಪದ್ಯಗಳನ್ನು ಪ್ರಾಕೃತಗಾಥೆಗಳಲ್ಲೇ ವಿಶೇಷವಾಗಿ ಬರೆದಂತೆ ತೋರುತ್ತದೆ. ಮಗುವಿನ ತೊದಲುನುಡಿಯಂತೆ, ಮುಗ್ಧೆಯ ಸರಳವಚನದಂತೆ ಗ್ರಾಮ್ಯಭಾಷೆಯಲ್ಲಿ ಮನಸ್ಸನ್ನು ಸೆರೆಗೊಳ್ಳುವ ಒಂದು ವಿಶೇಷ ಗುಣವಿದೆ. ಅದರ ರಹಸ್ಯವನ್ನು ಅಂಬಿಕಾತನಯದತ್ತರು ಚೆನ್ನಾಗಿ ವಶಮಾಡಿಕೊಂಡಿದ್ದಾರೆ. ಹಳ್ಳಿಗನ ಮಾತಿನಲ್ಲಿ ಹಳ್ಳಿಗರ ಪ್ರಣಯವನ್ನು ಅವರು ವರ್ಣಿಸಲೂ ಬಲ್ಲರು; ಕೃತಕತೆ ಎಳ್ಳಷ್ಟೂ ತೋರದಂತೆ, ಅದರೊಂದಿಗೆ ಕವಿಕಲ್ಪನೆಯ ತೆಳುಪೊರೆಯೊಂದನ್ನು ನೇಯಲೂ ಬಲ್ಲರು.

'ರಾಗರತಿ' ಒಂದು ಸಂಜೆಯ ಚಿತ್ರ. ಮುಗಿಲಿನ ಮುಖವು ಪ್ರಣಯಿಯ ಮುಖದಂತೆ—ರಾಗದಿಂದ ಕೆಂಪೇರಿದೆ;

> ನೆಲದ ಅಂಚಿಗೆ ಮಂಜಿನ ಮುಸುಕು ಹ್ಯಾಂಗೋ ಬಿದ್ದಿತ್ತs
> ಗಾಳಿಗೆ ಮ್ಯಾಲಕ್ಕೆದ್ದಿತ್ತs

ಪ್ರಿಯೆಯ ಮುಖದ ಮುಸುಕು ಓರೆಯಾಗುವುದೂ ಹೀಗೆಯೇ. ಮೇಲುಗಡೆ, ಬಿದಿಗೆಯ ಚಂದ್ರನ "ಚೋಗಚೀ"-ನಗೆಯ ಹೂವು ಮೂಡಿದೆ; ಇರುಳ ಹೆಣ್ಣಿನ ಹೆರಳಿನಿಂದ ಅರಳುಮಲ್ಲಿಗೆ ಉದುರಿದ ಹಾಗೆ ಅತ್ತಿತ್ತ ತಾರೆಗಳು ಮೂಡಿವೆ. ಈ ಸಮುಚಿತ ಸನ್ನಿವೇಶದಲ್ಲಿ, ಬಯಕೆಯ ಹೆಣ್ಣು ನೀರಿಗೆ ಹೋಗಿ ಹಿಂದಕ್ಕೆ ಬರುತ್ತಿದ್ದಾಳೆ; ಕಾಮಿ ಅವಳ ದಾರಿಯನ್ನೇ ಬೆಕ್ಕಿನ ಹಾಗೆ ಹೊಂಚುತ್ತಿದ್ದು ಈಗ ಹಿಂಬಾಲಿಸುತ್ತಿದ್ದಾನೆ. ಗಾಳಿ ಮೆಲ್ಲಗೆ ಸುಳಿದು ಅವಳ ಸೆರಗನ್ನು ಹಿಡಿಯುತ್ತಿದೆ, ಬಿಡುತ್ತಿದೆ; ಪ್ರಿಯನು ಅದರ ನೆರಳಿನಲ್ಲಿ ಆಕೆಯ ಬೆನ್ನಹಿಂದೆಯೇ ಬರುತ್ತಿದ್ದಾನೆ; ತನ್ನ ಮೈಯನ್ನೇ ಮರೆತಿದ್ದಾನೆ. ಇಷ್ಟೇ ಚಿತ್ರ. ಆದರೆ ಇದರ ಹಿನ್ನೆಲೆ ಮುನ್ನೆಲೆಗಳು ಎಷ್ಟು ಸಮಂಜಸವಾಗಿ ಹೊಂದಿಕೊಂಡಿವೆ! ಇದು ಯಾವ ಹಳ್ಳಿಯಲ್ಲಾದರೂ ನಡೆಯಬಹುದಾದ ದಿನಚರ್ಯೆ. ಆದರೆ ಕವಿಯ ಪ್ರತಿಭೆ ಅದಕ್ಕೆ ಎಂಥ ಮೆರಗುಕೊಟ್ಟಿದೆ! ಇಲ್ಲಿ ಒಂದು ವರ್ಣನೆಯೂ ಅಪ್ರಕೃತವಲ್ಲ; ಒಂದು ಧ್ವನಿಯೂ ಅನುಚಿತವಲ್ಲ. ಅದಕ್ಕೆ ಬದಲು ಪ್ರಕೃತಿಯ ರಾಗದ ಚಿತ್ರದಿಂದಲೇ ಈ ಕಾಮಿಗಳ ಪ್ರಣಯದ ವಸ್ತು ಇಷ್ಟು ಸುಂದರವಾಗಿರುವುದು. ಇಲ್ಲಿ ಪ್ರಕೃತಿ ಹೆಚ್ಚು ರಾಗಮುಗ್ಧವಾಗಿತ್ತೋ ಕಾಮಿ ಹೆಚ್ಚು ರಾಗ ಮುಗ್ಧನಾಗಿದ್ದನೋ ಹೇಳುವುದು ಕಷ್ಟ.[೧]

'ನಗೀ ನವಿಲಿ'ನಲ್ಲಿ ಪ್ರಣಯದ ಇನ್ನೊಂದು ಮುಖದ ರೂಪಣವಿದೆ. ನಾರಿಯ ಮುಖದ ಮೇಲೆ ನಗೆಯ ನವಿಲು ಆಡುತ್ತಿದೆ. ಎಂಥ ನಗೆ ಅದು :

---

೧. 'ರಾಗರತಿ'ಯ ಆಶಯವನ್ನು ಮೇಲೆ ವಿವರಿಸುವುದರಲ್ಲಿ ಕೆಲವುಮಟ್ಟಿಗೆ ತಪ್ಪಾಗಿದೆಯೆಂದು ಅಂಶ ಈಚೆಗೆ ನನಗೆ ಗೊತ್ತಾಯಿತು. "ಕಾಮಿಬೆಕ್ಕಿನ್ಹಾಂಗ ಭಾಂವೀಹಾದಿ ಕಾಲಾಗ ಸುಳಿತಿತ್ತs ಎರಗಿ ಹಿಂದಕ್ಕುತಿಳಿತ್ತ"—ಎಂಬುದರ ವಿವರಣೆಯನ್ನಂತೂ ತಿದ್ದಿಕೊಳ್ಳಲೇಬೇಕು. "ಕಾಮಿ" ಎಂದರೆ ಹೆಣ್ಣುಬೆಕ್ಕು; ಗಂಡು ಬೆಕ್ಕು "ಬಾವುಗ". (ಈ ಶಬ್ದಗಳು ಮೈಸೂರ ಕಡೆ ಪ್ರಚುರವಾಗಿಲ್ಲ). ಬೆಕ್ಕು ತನ್ನ ಪ್ರೀತಿಯವರ ಕಾಲಿಗೆ ಸುತ್ತಿಕೊಂಡು ಬಳಿಕ ಹಿಂದಕ್ಕೆ ನಿಲ್ಲುವುದುಂಟಷ್ಟೆ; ಬಾವಿಯ ದಾರಿಯೂ ಹಾಗೆ ಮಾಡುತ್ತಿತ್ತು ಎಂದು ಇಲ್ಲಿಯ ಅರ್ಥ. "ಕಾಮಿ ಬೆಕ್ಕಿನ್ಹಾಂಗ" ಎಂದು ಪದವಿಭಾಗ ಮಾಡಿಕೊಂಡದ್ದರಿಂದ ಮೊದಲಿನ ಅಪಾರ್ಥಕ್ಕೆ ಅವಕಾಶವಾಯಿತು; ಹಾಗೆ ಮಾಡುವುದಕ್ಕೆ, 'ಗರಿ'ಯ ಮುದ್ರಣಗಳಲ್ಲಿ—ಈಚಿನದರಲ್ಲಿ (೧೯೫೧) ಕೂಡ—ಈ ಎರಡು ಶಬ್ದಗಳನ್ನು ಬಿಡಿಸಿಯೇ ಅಚ್ಚು ಮಾಡಿರುವುದು ಕೆಲವುಮಟ್ಟಿಗಾದರೂ ಕಾರಣವೆಂಬುದನ್ನು ನೆನೆದು ಸಮಾಧಾನ ತಂದುಕೊಳ್ಳಬೇಕಾಗಿದೆ.

ಮಿನ ಮಿನ ಮಿನ ಮಿಂಚತಿತ್ತ
ಮೂಡತಿತ್ತ ಮುಳುಗತಿತ್ತ
ಮುಳುಗತಿತ್ತ ತೊಳಗತಿತ್ತ
ನೆಲಾ ಜಲಾ ಬೆಳಗತಿತ್ತ.

ಇದರ ಜೊತೆಗೆ "ಕಣ್ಣಿನಾಗ ಬಣ್ಣದ ನೋಟ." ಆದರೆ ಈ ನಗೆನೋಟವೆಲ್ಲ ಬೇಡಿ ಕಾಯುತ್ತಿರುವ ಪ್ರಿಯನ ಕಡೆಗಲ್ಲ; ಮುಗಿಲ ಕಡೆಗೆ. ಹೆಣ್ಣಿನ ಹೃದಯದಲ್ಲಿ ಇವನಿಗೆ ಎಡೆಯೇ ಸಿಕ್ಕಿಲ್ಲ. ಪಾಪ, ಈ ಜೀವ "ನೊಂದುಕೊಂಡು ಹಗಲಿರುಳು ಮಿಡುಕಾಡತಿತ್ತ;" ಕಣ್ಣೀರಿನ ಮಳೆ ಸುರಿಸಿ "ಬೇಡತಿತ್ತs, ದೊರಕದಕ್ಕೆ ಬಾಡತಿತ್ತ." ಮನದ ಕೋಗಿಲೆ ಹಾಡುವುದನ್ನು ಬಿಟ್ಟು ನಿರಾಶೆಯಿಂದ ಆ ನಗೆಯ ನವಿಲನ್ನೇ ಮಿಡುಕುತ್ತಾ ನೋಡುತ್ತಿದೆ.

ಪ್ರೇಮವು ಮಳೆ ಬಿಸಿಲುಗಳ ಆಟ. ಅಲ್ಲಿ ಈ ನಿರಾಶೆಯೂ ಸ್ಥಿರವಲ್ಲ. ಪ್ರಿಯನ ಪ್ರಯತ್ನ ದೃಢವಾಗಿದ್ದರೆ, ಪ್ರೇಯಸಿಯ ಹೃದಯ ಆರ್ದ್ರವಾಗಿದ್ದರೆ ಮಿಡುಕಾಟ ಮುಗಿಯಲೇ ಬೇಕು, ಇಬ್ಬರೂ ಒಂದುಗೂಡಲೇ ಬೇಕು. ಈ ನವಪ್ರಣಯಿಗಳು ಎಷ್ಟು ಉತ್ಸುಕತೆಯಿಂದ, ಉಲ್ಲಾಸದಿಂದ, ನಿರೀಕ್ಷೆಯಿಂದ ಸಂಸಾರವನ್ನು ಹೂಡುತ್ತಾರೆ! ಗಂಡಹೆಂಡಿರ ಪ್ರೇಮ ಕುಂದದಿರಬಹುದು, ಇಬ್ಬರ ಮನಸ್ಸೂ ಏಕವಾಗಿಯೇ ಇರಬಹುದು. ಆದರೆ, ಅಂದಿನ ಆ ನಗೆಯೆಲ್ಲಿ? ಚೆಲ್ಲಾಟವೆಲ್ಲಿ? ಕಣ್ಣ ಬೆಳಕೆಲ್ಲಿ? ಉಡಿಗೆಯ ಠೀವಿಯೆಲ್ಲಿ?

ಹಳ್ಳsದ ದಂಡ್ಯಾಗ ಮೊದಲಿಗೆ ಕಂಡಾಗ
ಏನೊಂದು ನಗಿ ಇತ್ತs
ಏನೊಂದು ನಗಿ ಇತ್ತ ಏಸೊಂದು ನಗಿ ಇತ್ತ
ಏರಿಕೆ ನಗಿ ಇತ್ತs
ನಕ್ಕೊಮ್ಮೆ ಹೇಳ ಚೆನ್ನಿ ಆ ನಗಿ ಇತ್ತಿತ್ತ
ಹೋಗೇತಿ ಎತ್ತೆತ್ತs

ಎಂದು ಗಂಡನು ಚೆನ್ನೆಯನ್ನು ಕೇಳುತ್ತಾನೆ. ಆ ಎಳೆತನದ ಉಲ್ಲಾಸವೂ ಬೆಡಗಿನ ನವನವೋನ್ಮೇಷವೂ—ಎಲ್ಲವೂ ಎಲ್ಲಿ ಹೋಯಿತು?

ಬಡತನದ ಬಲಿಯಾಗ ಕರುಳಿನ ಕೊಲಿಯಾಗ
ಬಾಳ್ವಿಯ ಒಲಿಮ್ಯಾಗ
ಸುಟ್ಟು ಹಪ್ಪಳದ್ಹಾಂಗ ಸೊರಗಿದಿ ಸೊಪ್ಪಾಂಗ
ಬಂತಂತ ಮುಪ್ಪು ಬ್ಯಾಗ ।

ಜೀವನದ ಒಲೆಯಲ್ಲಿ, ಬಡತನದ ಬೆಂಕಿಯಲ್ಲಿ ಕಂದಿಹೋಯಿತು—ಹಪ್ಪಳದಂತೆ ಸುಟ್ಟು ಹೋಯಿತು! (ಹಳ್ಳಿಗನ ಬಾಯಲ್ಲಿ ಈ ಅಡಿಗೆಮನೆಯ ಉಪಮಾನ ಲೋಕೋತ್ತರವಾಗಿದೆ.) ಮುಂಗಾರಿನ ಕಣ್ಣುಸನ್ನೆಯ ಮಿಂಚಿನಂತಿದ್ದ ಅವಳ ಆ

ನಗೆ—ನಗೆನವಿಲು—'ಬಿಸಿಲುಗುದರೆ'ಯನ್ನೇರಿ ಎಲ್ಲಿಗೋ ಸವಾರಿ ಹೊರಟುಹೋಯಿತು. ನಮ್ಮ ಸಂಸಾರಗಳಲ್ಲಿ ನೂರಕ್ಕೆ ತೊಂಬತ್ತು ಈ ಹದಕ್ಕೆ ಇಳಿದುಬಿಡುತ್ತವೆ. ಮದುವೆ ಆಗದ ಮುಖಕ್ಕೂ ಆದ ಮುಖಕ್ಕೂ ಎಷ್ಟು ಅಂತರ! ಬಡತನದ ಬಾಳು ಉಲ್ಲಾಸದ ಗೋರಿ.

ಆದರೆ ಹೀಗೆಂದು ಸುಮ್ಮನೆ ನಿಟ್ಟುಸಿರೆಳೆದರಾಗುತ್ತದೆಯೆ? ಇದ್ದುದರಲ್ಲಿಯೇ ಸರಿಮಾಡಿಕೊಳ್ಳಬೇಕು. ಗಂಡನು ತನ್ನ ಕೈಹಿಡಿದಾಕೆಯನ್ನು "ಅಳು ನುಂಗಿ ನಗು ಒಮ್ಮೆ, ನಾನೂನು ನಕ್ಕೇನಃ" ಎಂದು ಕೇಳುತ್ತಾನೆ. ಅವಳ ಮುಖ ಇವನ ಕನ್ನಡಿ. ಬಡತನ ಒಡೆತನಗಳು ಸ್ಥಿರವಲ್ಲ; ಎದೆ ಹಿಗ್ಗೊಂದೇ ಕಡೆಯತನಕ ಉಳಿಯತಕ್ಕದ್ದೆಂದು ಸಮಾಧಾನ ಹೇಳುತ್ತಾನೆ. ಆದರೆ ಒಂದೊಂದುಸಲ, ಈ ಹುಸಿನಗೆಯನ್ನು ಅವಳಿಂದ ಕೋರುವುದೂ ಅವನಿಗೆ ಎದೆಗಟುಕತನವೆನ್ನಿಸುತ್ತದೆ. "ಹುದುಗಲಾರದ ದುಃಖ"ವನ್ನು ನಗೆಯಲ್ಲಿ ಹುಗಿದಿರಿಸಿ ಅವಳು ಗಂಡನನ್ನು ಸಂತೈಸಲೆಂದು ನಸುನಗುತ್ತ ಬಂದರೆ ಅವನ ಕರುಳು ಬೇಯುತ್ತದೆ. ಈ ನಟನೆಯ ನಗೆ ಹೇಗೆತಾನೆ ಸುಖದ ಹೂವಾದೀತು?

ಅಂಬಿಕಾತನಯದತ್ತರ ಪ್ರಣಯಗೀತಗಳಲ್ಲಿ ಜೀವನದ ಉಲ್ಲಾಸವೂ ಇದೆ, ಜೀವನದ ಯಾತನೆಯೂ ಇದೆ. ಈ ಯಾತನೆಯ ಅನುಭವವು ಪ್ರೇಮಕ್ಕೆ ಒಂದು ಹೊಸ ಅರ್ಥವನ್ನು ಕೊಟ್ಟಿದೆ. ಈ ಪ್ರೇಮವು ಮುಗಿಲಿನ ಬಣ್ಣಗಳಲ್ಲಿ ಕಟ್ಟತಕ್ಕ ಗಾಳಿಗೋಪುರ ಮಾತ್ರವಲ್ಲ, ಬರಿಯ ಕಣ್ಣ ಬೆರಗು ಮಾತ್ರವಲ್ಲ. ಅದು ಬಾಳಿನ ಕೆಸರಿನಲ್ಲಿ ಆಳವಾಗಿ ಬೇರೂರಿದ್ದು. ಗಾಳಿ ಮಳೆ ಬಿಸಿಲುಗಳನ್ನು ತಡೆದದ್ದು. ಅದರಿಂದಲೇ ಕೊನೆತನಕ ನಿಲ್ಲತಕ್ಕದ್ದು. ಇನ್ನು ಅದರ ನಿರೂಪಣೆಯೋ!—ಮಾತು ಎಷ್ಟು ಸರಳ, ಛಂದಸ್ಸಿನ ಗತಿ ಎಷ್ಟು ಮಧುರ, ಭಾವ ಎಷ್ಟು ಆರ್ದ್ರ!

೪

ಬೆಳಗಾವಿಯ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಅಂಬಿಕಾತನಯದತ್ತರು 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಕವನವನ್ನು ಓದಿ ಕನ್ನಡ ನಾಡಿಗೆಲ್ಲಾ ಪರಿಚಿತರಾದರು. ಕನ್ನಡ ಕವಿತೆಯಲ್ಲಿ ಇದು ಒಂದು ಹೊಸ ತಂತಿಯನ್ನು ಮೀಟಿದೆ. ಇದುವರೆಗೂ ಕಾವ್ಯವು ಸಾಮಾನ್ಯವಾಗಿ ಭೂಮಿಯ ಮೇಲೆಯೇ ಮಾನವ ಹೃದಯದಲ್ಲಿಯೇ ಸಂಚರಿಸುತ್ತಿತ್ತು. ಕೇವಲ ವಿಶ್ವದ ಕಡೆಗೆ ಅದರ ದೃಷ್ಟಿ ಹರಿದಿರಲಿಲ್ಲ; ಒಂದೇ ಸಲಕ್ಕೆ ವಿಶ್ವವನ್ನೆಲ್ಲಾ ಒಳಕೊಳ್ಳುವಷ್ಟು ವಿಶಾಲವಾಗಿಯೂ ಇರಲಿಲ್ಲ. ಸೂರ್ಯ ಚಂದ್ರ ನಕ್ಷತ್ರಗಳ ಮಾತು ಬಂದರೂ ಆ ಪ್ರಸ್ತಾವಕ್ಕೆಲ್ಲಾ ಭೂಮಿಯೇ ಕೇಂದ್ರವಾಗಿತ್ತು. 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಕವನದಲ್ಲಿ ಈ ದೃಷ್ಟಿ ಹೊರಳಿತು. ಕಾವ್ಯದ ಸಂಕೋಲೆಗಳು ಮುರಿದುವು. ಅನಂತವಾದ ಕಾಲವನ್ನೇ ಒಂದು ಹಕ್ಕಿಯನ್ನಾಗಿ ರೂಪಿಸಿ ಅದಕ್ಕೆ ಬಣ್ಣ ಬಣ್ಣದ ಗರಿಗಳನ್ನು ಕೊಟ್ಟು, ಅಂಬಿಕಾತನಯದತ್ತರು ಅದರ ಗತಿಯನ್ನು ಉಚಿತವಾದ ಮಾತುಗಳಲ್ಲಿ ವರ್ಣಿಸಿದರು:

ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ!
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ . . . .

ಸೂರ್ಯಚಂದ್ರರಿಂದ ಕಾಲವನ್ನು ಅಳೆಯುವುದು ಹಾಗಿರಲಿ; ಈಗ "ಚಿಕ್ಕೆಯ ಮಾಲೆ"ಯೂ ಅವರ ಹಿಡಿತಕ್ಕೆ ಸಿಕ್ಕಿದೆ. ನಕ್ಷತ್ರಗಳ ಆಯುಸ್ಸು ಕೂಡ ಇಂದಿನವರ ಊಹೆಗೆ ಮೀರಿದ್ದಲ್ಲ.

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ-ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ ಖಂಡಗಳ . . . .
ಯುಗ-ಯುಗಗಳ ಹಣೆ-ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

ಕಾಲಪಕ್ಷಿಯ ಹಾರಾಟದಲ್ಲಿ, ಎಷ್ಟು ಸಾಮ್ರಾಜ್ಯಗಳು ಏರಿದುವು, ಉರುಳಿದುವು; ಎಷ್ಟು ಭೂಖಂಡಗಳು ಸಾಗರದ ಮೇಲೆ ತೇಲಿದುವು. ಸಾಗರದಲ್ಲಿ ಮುಳುಗಿದುವು! ಯುಗ ಯುಗಗಳು ಗತಿಸಿದುವು; ಹೊಸ ಜನಾಂಗಗಳು ಮುಂದಕ್ಕೆ ಬಂದುವು; ಹೊಸ ನಾಗರಿಕತೆ ಮೂಡಿತು. ಮಾನವನ ಕಲ್ಪನೆಯೇ ಎಷ್ಟು ಮುಂದಕ್ಕೆ ಚಾಚಿತು!

ಮುಟ್ಟಿದೆ ದಿಙ್ಮಂಡಲಗಳ ಅಂಚ
ಆಚೆಗೆ ಚಾಚಿದೆ ತನ್ನಯ ಚುಂಚ
ಬ್ರಹ್ಮಾಂಡಗಳನು ಒಡೆಯಲು ಎಂದೊ[೨] . . . .

ಆಧುನಿಕ ವೈಜ್ಞಾನಿಕರು ಹೇಳುತ್ತಾರೆ: ವಿಶ್ವವು ಕೂಡ ಅಪರಿಮಿತವಲ್ಲವೆಂದು; ಅದರ ಬಯಲಿಗೂ ಒಂದು ಅವಧಿಯುಂಟೆಂದು; ಒಂದು ನಿಯತಕಾಲದಲ್ಲಿ ಅದನ್ನು ಸುತ್ತು

---

೨. ಈ ಕೆಲವು ಪಂಕ್ತಿಗಳಿಗೆ ಸ್ಫೂರ್ತಿಯನ್ನು ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ಉದಾಹರಿಸಿರುವ 'ಕುಡಿದಂಭೋಧಿಗಳೇಟುಮಂ ತವಿಪುದೇ. . .।. . . । . . . ಆ ಬ್ರಹ್ಮಾಂಡಮಂ ಚಂಚುವಿಂ । ದೊದೆದೀಡಾಡುವುದೇ ವಿಹಂಗಮಮಿದೆಂದೇಕಬ್ಬ ನೀಮೇಳಿಪಿರ್ ॥ ಎಂಬ ಪದ್ಯದಿಂದ (೩೧೮) ಅಂಬಿಕಾತನಯದತ್ತರು ಪಡೆದಿರಬಹುದೆ? ಪದ್ಯ ಯಾವ ಕಾವ್ಯದ್ದು, 'ವಿಹಂಗಮ' ಯಾವುದು ಎಂಬುದು ತಿಳಿದಿಲ್ಲ. ಇದರ 'ವಿಹಂಗಮಮಿದೆಂದೇಕಬ್ಬ ನೀಮೇಳಿಪಿರ್' ಎಂಬ ಭಾಗವನ್ನು ಕೇಶಿರಾಜನು 'ಶಬ್ದಮಣಿದರ್ಪಣ'ದಲ್ಲಿ ಸೂತ್ರ ೧೨೫ ರ ಕೆಳಗೆ ಉದಾಹರಿಸಿದ್ದಾನೆ.

ಸುತ್ತಿಕೊಂಡು ಬರುವ ಕಲ್ಪನೆಯೂ ನಿರಾಧಾರವಲ್ಲವೆಂದು. ಈ ಅಭಿಪ್ರಾಯವೆಲ್ಲ ಮೇಲಿನ ಪದ್ಯದಲ್ಲಿ ಎಂಥ ಕಾವ್ಯವಾಗಿದೆ![1] ಇಲ್ಲಿಯದು ವಿಶ್ವದೃಷ್ಟಿ (The cosmic view). ಮಾನವನ ಭಾವವನ್ನು ಉನ್ನತೋನ್ನತವಾಗಿ ಹಿಗ್ಗಲಿಸುವುದೇ ಇದರ ಶಕ್ತಿ. ಕನ್ನಡ ಸಾಹಿತ್ಯದಲ್ಲಿ ಇದನ್ನು ಬಳಕೆಗೆ ತಂದವರು ಅಂಬಿಕಾತನಯದತ್ತರು.

'ತುತ್ತಿನ ಚೀಲ'ದಲ್ಲಿ ಈ ವಿಶ್ವದೃಷ್ಟಿಯ ಇನ್ನೊಂದು ಪ್ರಕಾರವನ್ನು ನಾವು ನೋಡಬಹುದು. ಹಿಂದಿನ ಕವನದಲ್ಲಿ, ಮಾನವನ ಭಾವನೆ ಹೃದಯದ ಸಂಕುಚಿತ ಮಂದಿರದಿಂದ ಹೊರಗೆ ಬಂದು ಕಾಲದ ಗರಿಗಳ ಮೇಲೇರಿ ವಿಶ್ವದ ಅಂಚುಗಳಿಗೆ ಮುಟ್ಟಿದ್ದರೆ, ಇದರಲ್ಲಿ, ಆ ಮಾನವ ಹೃದಯದ ಆರ್ತನಾದವೊಂದು ಉಬ್ಬಿ ಉಬ್ಬಿ ವಿಶ್ವದಗಲಕ್ಕೆ ಹೃದಯವನ್ನೇ ಹಿಗ್ಗಲಿಸಿದೆ. ಬಡಬಗ್ಗರ ಹಸಿವೆ ಬ್ರಹ್ಮಾಂಡಗಳನ್ನೇ ಆಪೋಶನಗೊಳ್ಳಲು ಹವಣಿಸಿದೆ. ಅದರ ಎದುರಿಗೆ ದೇವರು ದಿಂಡರು, ಧರ್ಮ ಕರ್ಮ, ನೋವು ಸಾವು—ಎಲ್ಲವೂ ಬೆಚ್ಚಿ ತಳಮಳಿಸುತ್ತಿವೆ. ಈ ವಿಶ್ವಸಂಕ್ಷೋಭೆಯ ವರ್ಣನೆಯನ್ನು ಎಂದಿನಂತೆ ಕವಿ ರೂಪಕಗಳ ಮೂಲಕ ಸಾಧಿಸಿದ್ದಾನೆ :

> ಅನ್ನಬ್ರಹ್ಮದ
> ದೇಗುಲದಲ್ಲಿ
> ಬೆಳಗೂ ಬೈಗೂ
> ಛಿಳಿ ಛಿಟ ಬೆಂಕಿ . . . .

ಹೊಟ್ಟೆಯೇ ಅನ್ನಬ್ರಹ್ಮದ ದೇಗುಲ. ಅಲ್ಲಿ ಹಸಿವೆಯ ಬೆಂಕಿ ನಿರಂತರವಾಗಿ ಧಗಧಗಿಸುತ್ತಿದೆ. ಇತ್ತ ನಾದಬ್ರಹ್ಮದ ಕಗ್ಗವಿಯಾದ ಹೃದಯದಲ್ಲಿ

> ಮೌನದ ವೀಣೆಗೆ
> ಕರುಳಿನ ತಂತಿ.

ಬಡತನದ ಮೂಗುಬ್ಬಸವನ್ನು ಇದಕ್ಕಿಂತ ಮೇಲಾಗಿ ವ್ಯಕ್ತಪಡಿಸುವುದು ಹೇಗೆ! ಇನ್ನು, ಶಬ್ದಬ್ರಹ್ಮದ ಗುಮ್ಮಟವಾದ ಬುದ್ಧಿಯಲ್ಲಿ ಪಾಪಪುಣ್ಯಗಳ ಚರ್ಚೆ ನಡೆಯುತ್ತದೆ. ಹೊಟ್ಟೆ ಬೊಬ್ಬೆಯಿಡುತ್ತಿದ್ದರೂ ಎದೆ ಮಿಡಿದು ಮಿಡುಕುತ್ತಿದ್ದರೂ ಈ ಒಣ ಚರ್ಚೆಗೆ ಮಾತ್ರ ಬಿಡುವಿಲ್ಲ; ಬಡವನ ಜೀವದ ಜೇಡವನ್ನು ಈ ವೇದವಾದದ ಬಲೆಯಲ್ಲಿ ಉಪಾಯದಿಂದ ನೇತುಹಾಕಿದ್ದಾರೆ.

ಭೂಮಿಯ ಮೇಲೆ ಎಲ್ಲರೂ ಬಡವರಲ್ಲ. ಒಂದು ಕಡೆ ಶ್ರೀಮಂತರ ಕಣಜ ಕಿಕ್ಕಿರಿದು ತುಂಬಿದೆ. ಇನ್ನೊಂದು ಕಡೆ ಬಡಬಗ್ಗರ ಒಡಲು ತಳಮಳಿಸುತ್ತದೆ. ಬಲ್ಲಿದರಿಗೆ

---

೧. 'ಹಕ್ಕಿ ಹಾರುತಿದೆ ನೋಡಿದಿರಾ!' ಎಂಬ ಕವನದ ಮೇಲೆ ಅಂಬಿಕಾತನಯದತ್ತರೇ 'ಬೆಕ್ಕು ಹಾರುತಿದೆ ನೋಡಿದಿರಾ?' ಎಂಬ ಅಣಕವಾಡವನ್ನೇಕೆ ಕಟ್ಟಿದರೋ! ವಿಡಂಬನಕ್ಕೆ ಇದು ಸ್ಥಳವಲ್ಲ; ಇದರ ಹಾಸ್ಯವಾದರೂ ಉತ್ತಮವೆಂದು ನನಗೆ ತೋರುವುದಿಲ್ಲ.

ದಯವಿಲ್ಲ, ದೇವತೆಗಳಿಗೆ ಕಣ್ಣಿಲ್ಲ. ಹಸಿವೆಯ ಕೂಗು ಅವರ ಕಿವಿಗೆ ಮುಟ್ಟಲೇ ಇಲ್ಲ. ಆದರೆ ಬರಿದಾದ ಈ ತುತ್ತಿನ ಚೀಲ ಎಷ್ಟು ದಿನ ತಾನೆ ಮೌನದ ವೀಣೆಯನ್ನು ಮೀಟಬಹುದು? ನಿರಾಶೆಯ ಉರಿ ಮೇಲೆ ಮೇಲೆ ಹಾಯುತ್ತಿದೆ :

ದೇವರದೊಂದು
ಗೋರಿಯ ಕಟ್ಟಿ,
ಧರ್ಮದ ಧೂಪಕೆ
ಬೆಂಕಿಯನಿಕ್ಕಿ,
ಗಣಗಣ ಬಾರಿಸಿ
ಪ್ರಾಣದ ಗಂಟೆಯ,
ಸಾವಿನ ನೋವಿಗೆ
ಕಲಮಲವೆದ್ದು
ನೆಲವನ್ನೆಲ್ಲಾ
ತುತ್ತುವೆನೆಂದು
ಗದರುತ್ತಿಹುದು—
ಗರ್ಜಿಸುತಿಹುದು—
ಬಡವರ ಬಗ್ಗರ
ತುತ್ತಿನ ಚೀಲದ
ಒಳಗಿನ ಒಳಗಿನ
ಒಳದನಿಯೊಂದು!

ಇಂದಿನ ಆರ್ಥಿಕ ಸಂಗ್ರಾಮದ ತತ್ತ್ವವು ಈ ಕವನದಲ್ಲಿ ಮೂರ್ತಿಗೊಂಡಿದೆ. ಅಲ್ಪಾವಕಾಶದ ಕಿರಿಯ ಚರಣಗಳಲ್ಲಿ, ಕಿರಿಯ ಮಾತುಗಳಲ್ಲಿ ಹಿರಿಯ ಘೋರ ಸತ್ಯವೊಂದು ವ್ಯಕ್ತವಾಗಿದೆ. ಇಲ್ಲಿಯ ನುಡಿ ಬಲು ಹಿಡಿತದಲ್ಲಿದೆ; ಹಲವು ಸಲ ಓದಿ ಮಗುಚಿದ ಹೊರತು ಕವನದ ಭಾವವನ್ನೆಲ್ಲಾ ಗ್ರಹಿಸುವುದು ಅಸಾಧ್ಯ. ಇಷ್ಟಾದರೂ ಭಾವಕ್ಕೆ ಭಾಷೆ ಅಪರ್ಯಾಪ್ತವಲ್ಲ. ಇದು ರೂಪಕಾಲಂಕಾರದ ಸಾಮರ್ಥ್ಯ. "ಅನ್ನಬ್ರಹ್ಮದ ದೇಗುಲ", "ನಾದಬ್ರಹ್ಮದ ಕಗ್ಗವಿ", "ಶಬ್ದಬ್ರಹ್ಮದ ಗುಮ್ಮಟ"—ಇಲ್ಲಿ ದೇಗುಲ, ಕಗ್ಗವಿ. ಗುಮ್ಮಟಗಳ ಪ್ರಯೋಗದ ಔಚಿತ್ಯವನ್ನೂ ಅವುಗಳಲ್ಲಿ ಹೊಳಲು ಕೊಡುತ್ತಿರುವ ಅನಂತ ಧ್ವನಿಯನ್ನೂ ಬೇರೆ ಮಾತಿನಲ್ಲಿ ಅಳೆಯುವುದು ಹೇಗೆ? "ಧರ್ಮದ ಧೂಪಕೆ ಬೆಂಕಿಯನಿಕ್ಕಿ" ಎಂದರೆ—ವಿಪ್ಲವದ ಪ್ರಥಮಾವೇಶದಲ್ಲಿ ಧರ್ಮಕ್ಕೆ ಬೆಂಕಿ ಬಡಿದರೂ, ಮುಂದೆ ಸಮತೆ ಲೋಕದಲ್ಲಿ ನೆಲೆಗೊಂಡಾಗ, ಬೆಂಕಿಗೆ ಹಾಕಿದ ಧೂಪದಂತೆ ಧರ್ಮದ ಪರಿಮಳವು ಸಮಾಜದಲ್ಲೆಲ್ಲಾ ವ್ಯಾಪಿಸುವುದು; ನಿಜವಾದ ಧರ್ಮ ಆಗ ನೆಲೆಗೊಳ್ಳುವುದು—ಹೀಗೆ ಕೂಡ ಅರ್ಥವಾಗಬಹುದು! ಅಂಬಿಕಾತನಯದತ್ತರ ಕವಿತೆ ಒಂದು ಚಿಲುಮೆಯಂತೆ. ನೋಡುವುದಕ್ಕೆ ಚಿಕ್ಕದಾಗಿ ಕಂಡರೂ, ತೋಡಿದಷ್ಟೂ

ಅರ್ಥವು ಉಕ್ಕುತ್ತಲೇ ಇರುತ್ತದೆ. ತೋಡುವ ಶ್ರಮ ಮಾತ್ರ ಒಂದೊಂದು ಸಲ ಸ್ವಲ್ಪ ಹೆಚ್ಚಾಗಬಹುದು.

'ಕುಣಿಯೋಣು ಬಾರs' ಎಂಬುದನ್ನು ಒಂದು ನಲ್ವಾಡೆಂದು ಕವಿಗಳು ಕರೆದಿದ್ದರೂ ನಾಡ ಹಾಡುಗಳ ಧಾಟಿಯಲ್ಲಿ, ಭಾಷೆಯಲ್ಲಿ ರಚಿಸಿದ್ದರೂ ಅದು ವಿಶ್ವದೃಷ್ಟಿಯ ಕವನಗಳ ಗುಂಪಿಗೇ ಸೇರಿದ ಒಂದು ಮಾಣಿಕ್ಯ. ಅದರ ಲಯ ಮಾಧುರ್ಯವನ್ನೂ ಶಬ್ದ ಸೌಂದರ್ಯವನ್ನೂ ಭಾವ ಗಾಂಭೀರ್ಯವನ್ನೂ ತಕ್ಕಷ್ಟು ಬಣ್ಣಿಸುವುದು ಅಸಾಧ್ಯ. ಕೇಳಿದವರ ಹೃದಯವನ್ನು ಮೋಹಗೊಳಿಸುವ ಶಕ್ತಿ ಈ ಹಾಡಿನ ತಾನವೊಂದರಲ್ಲಿಯೇ ಇದೆ.

ವಿಶ್ವಕ್ಕೆ ವಿಶ್ವವೇ ಕುಣಿಯುವ ಹುಚ್ಚಿಗೆ ಸಿಕ್ಕಿದೆ. ಮಾನವನು ಮಾತ್ರ ಇಲ್ಲದ ಗೋಳನ್ನು ಹತ್ತಿಸಿಕೊಂಡು ಈ ಆನಂದವನ್ನೇಕೆ ಕಳೆದುಕೊಳ್ಳಬೇಕು; ಕುಣಿಯೋಣು ಬಾರs—ಎಂಬುದೇ ಈ ಕವನದ ಸಂದೇಶ. ಒಂದು ದಿನ ಉರಿಯುವ ಬಿಸಿಲಿನಲ್ಲಿ ಕಾಗೆಯೊಂದು ಕುಣಿಯುತ್ತಿದ್ದುದನ್ನು ಕವಿ ನೋಡಿದನಂತೆ. ಸಾಮಾನ್ಯರಿಗೆ ಇದರಿಂದ ವಿನೋದವಾಗುತ್ತಿತ್ತೋ ಏನೊ. ಮೊದಲೇ ಕಾಗೆ; ಅದರ ಕುಣಿತ ಬೇರೆ; ಅದೂ ಉರಿ ಬಿಸಿಲಿನಲ್ಲಿ!—ಎಂದು ಅವರು ನಕ್ಕು ಬಿಡುತ್ತಿದ್ದರು. ಆದರೆ ಕವಿಗೆ ಹಾಗೆನ್ನಿಸಲಿಲ್ಲ. ಈ ಬಡ ಕಾಗೆಯ ಕುಣಿತ ವಿಶ್ವಜೀವನದ ಮೂಲಾಧಾರವನ್ನು ಅವನ ಕಣ್ಣಿಗೆ ಕಟ್ಟಿತು; ಅವನನ್ನೂ ಕುಣಿಯಲು ಎಬ್ಬಿಸಿತು;

ಇರಲಾರೆನೇಕಾಕಿ
    ಬಾ, ಬಾರs ನನ್ನಾಕಿ
ಕುಣಿಯೋಣು ಬಾರs
    ಕುಣಿಯೋಣು ಬಾ

ಎಂದು ತನ್ನ ನಲ್ಲೆಯನ್ನು ಕರೆಯಲು ಪ್ರೇರಿಸಿತು.

ವಾಳಿನ ಕರಕರೆಗಳು ಹಾಗಿರಲಿ. ಕಾಸಿನ ಕುಣಿಸಾಟವೂ ಲೋಕದ ಸೆಣಸಾಟವೂ ಸಾಕು. ನೆತ್ತರ ಹರಿಯಲಿ, ಆಳುವರು ಅಳಲಿ, ಸಾಯುವರು ಸಾಯಲಿ; ಕುಣಿಯೋಣು ಬಾ, ಅದೇ ನಮಗೆ ಆಸರೆ;

ತೀರದ
 ತೋರದ
  ಹಾಳು ಸಂಸಾರ್ ಅದ
   ಮೀರಿದ ಭಾರ್ ಅದ . . . .

ಇದೆ, ನಿಜ. ಆದರೆ ಈ ಬದುಕೂ ಬರಿಯ ಭ್ರಮೆ. ಈ ಸಂತೆಯ ಚಿಂತೆ ನಿಂತಲ್ಲಿ ನಿಂತಿರಲಿ;

ಕಣ್ ಒಳಗ ಹೊರಳಿಸಿ
ಎದೆ ಮುಗುಳನರಳಿಸಿ
ಹೂನೀರನುರುಳಿಸಿ । ಕುಣಿಯೋಣು ಬಾ.

ನಾಟ್ಯದ ಆವೇಶ ಎದೆಯಲ್ಲಿ ಏರಿತೆಂದರೆ ಸಾಕು; ನಾನು ನೀನು, ಸಾವು ನೋವು ಎಲ್ಲ ಮರೆಯುತ್ತದೆ. ಈ ಕುಣಿತಕ್ಕೆ

ಕೋಲ್ಯಾಕ
ಸಾಲ್ಯಾಕ
ಕಲಿಕಿಯ ಕಾಲ್ಯಾಕ . . . . . .

ತಾಳ್ಯಾಕ
ತಂತ್ಯಾಕ
ರಾಗದ ಚಿಂತ್ಯಾಕ
ಹೆಜ್ಜ್ಯಾಕ ಗೆಜ್ಜ್ಯಾಕ । ಕುಣಿ . . . .

ಎದೆಯೊಳಗೆ ಹಿಗ್ಗು ಒಂದಿದ್ದರೆ ಸಾಕು. ಕೋಲು ಬೇಡ, ಸಾಲು ಬೇಡ; ತಾಳ ಬೇಡ, ತಂತಿ ಬೇಡ. ಇನ್ನು ಭಯವೇಕೆ ನಾಚಿಕೆಯೇಕೆ! ಅದನ್ನೆಲ್ಲಾ ಆಚೆಗೆ ದೂಡಿ ದಿನದಿನದ ಹವ್ಯಾಸವನ್ನು ಮರೆತು ಈ ಸುಗ್ಗಿಯ ಸಿರಿಕುಣಿತವನ್ನು ಕುಣಿಯೋಣ. ಮಿಂಚಿನ ಗೊಂಚಲಂತೆ, ಹೊಂಗೇದಗೆಯ ಹೊಡೆಯಂತೆ, ಮಿಡಿನಾಗರ ಹೆಡೆಯಂತೆ ತೂಗಾಡೋಣ. ಗಾಳಿಗಿಂತ ಹಗುರವಾಗಿ ಮೈ ಕೈ ಸಡಿಲಬಿಟ್ಟು, ದಣಿವರಿಯದೆ ಕುಣಿಯೋಣ.

ಇಲ್ಲಿ ಕುಣಿಯುವುದು ನಾವಿಬ್ಬರೇ ಅಲ್ಲ, ವಿಶ್ವವೇ ನಾಟ್ಯಶಾಲೆ. ಈ ನರ್ತನಲೀಲೆಯಲ್ಲಿ ಭಾಗಿಯಾಗದ ವಸ್ತುವೇ ಇಲ್ಲ. ಸ್ಥಾವರ, ಜಂಗಮ; ದೊಡ್ಡದು, ಚಿಕ್ಕದು—ಎಲ್ಲವೂ ಒಂದರ ಹಿಂದೊಂದು ಕುಣಿಯುತ್ತಾ ಸಾಗಿವೆ;

ನೆಲದೊಡಲು
ಕುಣಿಯಲು
ಕುಣಿಕುಣಿದಿತು ಕಡಲು
ಮಿಡಿದಿತು ಸಿಡಿಸಿಡಿಲು । ಕುಣಿ . . .

ಹಗಲಿರಳ ತಾಳಕ್ಕ
ಮುಗಿಯದ ಕಾಳಕ್ಕ
ಜನುಮಗಳ ಮ್ಯಾಳಕ್ಕ । ಕುಣಿ . . .

ಚಂದ್ರನ ಆಕರ್ಷಣೆಗೆ ಭೂಮಿ ಲಯಬದ್ಧವಾಗಿ ಉಬ್ಬಿ ತಗ್ಗುತ್ತದೆ; ಅದರೊಂದಿಗೆ ಸಮತಾನವಾಗಿ ಕಡಲು ಕುಣಿಯುತ್ತದೆ. ಹಗಲೂ ಇರುಳೂ ಲಯಬದ್ಧವಾಗಿ

ಒಂದೊನ್ನೊಂದು ಹಿಂಬಾಲಿಸುತ್ತವೆ; ಅವುಗಳ ತಾಳಕ್ಕೆ ಸರಿಯಾಗಿ, ಅನಂತಕಾಲದಲ್ಲಿ ಜನ್ಮಗಳು ಒಂದರ ಹಿಂದೊಂದು ಹೆಜ್ಜೆ ಹಾಕುತ್ತಾ ಬರುತ್ತವೆ. ನೆಲ, ಜಲ, ರವಿ, ತಾರೆ, ಮುಗಿಲು, ಬಯಲು—ಎಲ್ಲವೂ ಅಷ್ಟೇ: "ಕುಣಿತಿಲ್ದ ಜಗ ಇಲ್ಲಾ"! ಆದಿಅಂತ್ಯ ಗಳಿಲ್ಲದ ಈ ನಾಟ್ಯಸಮಾಧಿಯಲ್ಲಿ ಮೈ ಮರೆತರೆ, ಭೂಮಿ ಆಕಾಶಗಳು ಒಂದಾಗುತ್ತವೆ; ಲೋಕನಿಯತವಾದ ಮೃತ್ಯುವೂ ಒಮ್ಮೆ ತಪ್ಪುತ್ತದೆ; ಆನಂದವು ತೆರೆತೆರೆಯಾಗಿ ಹರಿಯುತ್ತದೆ! ಕುಣಿಯೋಣು ಬಾರಽ!

ವಿಶ್ವದ ಮೂಲನಾಡಿಯನ್ನು ಹಿಡಿದಿರುವ ಈ ಹಾಡಿನಲ್ಲಿ ಯಾವ ಅಂಶವನ್ನು ಹೊಗಳುವುದು, ಯಾವುದನ್ನು ಬಿಡುವುದು! ಮೊದಮೊದಲಲ್ಲಿ, ಬಾಳಿನ ಗೋಳನ್ನು ಸಡಿಲಿಸಿ, ನಾಟ್ಯದ ನಾಚಿಕೆಯನ್ನು ತೊಲಗಿಸಿ, ಅದರ ಹುಚ್ಚು ಸೆಳೆತಕ್ಕೆ ತನುಮನ ಗಳನ್ನೊಪ್ಪಿಸಿ, ಬಳಿಕ ವಿಶ್ವತಾಂಡವದಲ್ಲೇ ನಮ್ಮನ್ನು ಒಂದುಗೂಡಿಸುವ ಈ ಹಾಡಿನ ಪ್ರೇರಣೆಯನ್ನು ಅನುಭವಿಸಿಯೇ ಅರಿಯಬೇಕು. ಇಲ್ಲಿ ಆನಂದವೇ ಸಂಸ್ಕಾರ, ಸಂಸ್ಕಾರವೇ ಆನಂದ; ಒಂದರೊಳಗೊಂದು ಲೀನವಾಗಿದೆ. ಇದು ಕಲೆಯ ಪರಮಾವಧಿ. 'ಕುಣಿಯೋಣು ಬಾರಽ' ವಿಶ್ವಸಾಹಿತ್ಯಕ್ಕೇ ಸೇರುವ ಕವನ.

೫

ಮಾನವನ ಹಕ್ಕು ಲೀಲೆ—ಆನಂದ. ಆದರೆ ಲೋಕಜೀವನದಲ್ಲಿ ಅದು ಆಕಾಶಕುಸುಮವಾಗಿದೆ. ಬಾಳಿನ ಕ್ಲೇಶಗಳನ್ನೆಲ್ಲಾ ಮರೆತು 'ಕುಣಿಯೋಣು ಬಾರಽ' ಎಂದು ಕರೆದ ಕವಿಗೂ ಇದು ಅನುಭವಕ್ಕೆ ಬಾರದೆ ಇಲ್ಲ. ಲೋಕದ ಸಂಕಟವು ಅವನ ಎದೆಯನ್ನು ತಲ್ಲಣಗೊಳಿಸಿದೆ; ಬಾಳಿನ ಹಲವು ಕೊರತೆಗಳು ಆತನಲ್ಲಿ ಖೇದವನ್ನು—ಒಮ್ಮೊಮ್ಮೆ ರೋಷವನು ಕೂಡ—ಉಕ್ಕಿಸಿವೆ. ಚಿಂತಾಂಗನೆಯ ಉಜ್ಜ್ವಲ ಚಿತ್ರಕ್ಕೇ ಆತನು ಒಂದು ಕವನವನ್ನು ನಿವೇದಿಸಿದ್ದಾನೆ.

'ಯುಗಾದಿ'ಯ ಹಬ್ಬ ಬಂದು ಕವಿಯ ಕಣ್ಣನ್ನು ಒಂದು ವಿಚಿತ್ರದ ಕಡೆಗೆ ತಿರುಗಿಸಿದೆ. ಅಖಿಲ ಜೀವಿಗಳಿಗೂ 'ವರುಷಕೊಂದು ಹೊಸತು ಜನ್ಮ!' ಅಗೋ, ಆ ಉಲ್ಲಾಸವನ್ನು ನೋಡಿ:

> ಹೊಂಗೆ ಹೂವ ತೊಂಗಲಲ್ಲಿ
> ಭೃಂಗದ ಸಂಗೀತ ಕೇಲಿ
> ಮತ್ತೆ ಕೇಳಬರುತಿದೆ.

ಮಾವಿನ ಮರದಲ್ಲಿ ಮತ್ತೆ ಹೂವು; ಮತ್ತೆ ಗಿಳಿವಿಂಡಿನ ತೋರಣ; ಮತ್ತೆ ಕಾಮನ ಸಂಚಾರ. ಬೇವಿನ ಕಹಿಬಾಳಿನಲ್ಲಿ ಕೂಡ, ಹೂವು ನಸುಗಂಪನ್ನು ಸೂಸಿ ಮತ್ತೆ ಜೀವಕಳೆಯನ್ನು ಉಕ್ಕಿಸುತ್ತಿದೆ. ಆದರೆ ಮಾನವನಿಗೋ! ಯುಗಾದಿಯ ಅರ್ಥ ಅವನೊಬ್ಬನ ಪಾಲಿಗೆ ಮಾತ್ರ ಇಲ್ಲ;

ಒಂದೆ ಒಂದು ಜನ್ಮದಲ್ಲಿ
ಒಂದೆ ಬಾಲ್ಯ ಒಂದೆ ಹರೆಯ
ನಮಗದಷ್ಟೆ ಏತಕೆ?

ಯುಗಾದಿಗಳು ಬಂದು ಹೋದ ಹಾಗೆಲ್ಲ ಮುಪ್ಪು ಚಿಂತೆಗಳು ಏರುತ್ತಾ ಹೋಗುತ್ತವೆ. ದೇವರು ಸುಗ್ಗಿಯ ಔತನದಲ್ಲಿ ಈ ಪಂಕ್ತಿಭೇದವನ್ನೇಕೆ ಮಾಡಿದನು? ತಾನೇ ಸನತ್ಕುಮಾರನಾಗಿದ್ದರೂ ಮಾನವನ ಜೀವನದಲ್ಲಿ ಮತ್ತೆ ಮತ್ತೆ ಕೌಮಾರ್ಯವನ್ನೇಕೆ ಕರುಣಿಸದೆಹೋದನು? ಅಂತೂ

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ.
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ
ನಮ್ಮನ್ನಷ್ಟೆ ಮರೆತಿದೆ!
'ನಮ್ಮನಷ್ಟೆ ಮರತಿದೆ'

'ನಮ್ಮನಷ್ಟೆ ಮರತಿದೆ' ಎಂದು ಎಷ್ಟು ಆಳವಾದ ನಿಟ್ಟುಸಿರು ಹೊರಡುತ್ತಿದೆ!—ಆದರೆ ಯುಗಾದಿ ಯುಗಾದಿಗೂ ತನ್ನ ಜೀವನಕ್ಕೆ ಹೊಸ ಕಳೆ ಕೊಡುವುದು ಮಾನವನ ಸಾಹಸಕ್ಕೆ ಮೀರಿದ್ದಲ್ಲ. ಅವನ ದೇಹಕ್ಕೆ ಮುಪ್ಪಡಸಬಹುದು; ಚೈತನ್ಯಕ್ಕೆ ಮುಪ್ಪಿಲ್ಲ. ಅವನ ಸತ್ತ್ವಪರೀಕ್ಷೆಗೆಂದೇ ದೇವರು ಈ ಭೇದವನ್ನು ಕಲ್ಪಿಸಿದನೇನೊ.

'ನರಬಲಿ'ಯಲ್ಲಿ ಕವಿಯ ಸಂಕಟವು ಕಟುವ್ಯಂಗ್ಯದ ರೂಪವನ್ನು ತಾಳುತ್ತದೆ. ನಾಗರಿಕತೆ ಬೆಳಗುವ ಕಾಲದಲ್ಲಿ, ಜೀವದಯಾಸಂಘಗಳು ಸುಳಿಯುತ್ತಿರುವ ಕಾಲದಲ್ಲಿ, ಬುದ್ಧಕ್ರಿಸ್ತರ ಬೋಧೆ ಹಬ್ಬಿರುವ ಕಾಲದಲ್ಲಿ, ಯುದ್ಧದ ಹೆಸರಿನಲ್ಲಿ ಅಸಂಖ್ಯಾತವಾದ ನರಬಲಿ ನಡೆದರೂ ಯಾರೂ ಲೆಕ್ಕಿಸುವರಿಲ್ಲ. 'ನೆಲದಗಲಕೆ ಮುಗಿಲುದ್ದಕೆ ಹೊತ್ತಿಹ ಈ ಬಂಜೆಬೆಂಕಿ'ಯ

ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು!
ಇದುವೇ ಕಾಳಿಯ ಪೂಜೆಯು ಶುದ್ಧ!
ಇದಕ್ಕೆ ಹುಂಬರು ಎಂಬರು ಯುದ್ಧ!

ಎಂಬ ಭೀಷಣ ಹಾಸ್ಯದಲ್ಲಿ ಕವಿ ಮೇಲಿನ ಅನ್ಯಾಯವನ್ನು ಎತ್ತಿತೋರಿಸುತ್ತಾನೆ. ಈ ಕವನದಲ್ಲಿ ಅವನ ಕ್ರೋಧಜ್ವಾಲೆ ಹೇಗೆ ರಾಚುತ್ತದೆಂದರೆ, ಅದರ ಹಬೆಯಲ್ಲಿ ಕವಿತಾಕುಸುಮವು ಬಾಡಿಹೋಗಿದೆ; ಮಾತಿನ ನಯ ನಾಜೂಕುಗಳೂ ಛಂದಸ್ಸಿನ ಅಂದಚೆಂದಗಳೂ ಮರೆಯಾಗಿವೆ; ಉದ್ವೇಗದ ಕಿಡಿಕಿಡಿಗಳೇ ಪದ್ಯದ ಚರಣಗಳಾಗಿ ನಿಂತಿವೆ.

ಕವಿಯಲ್ಲಿ ಆವೇಶವನ್ನು ಹುಟ್ಟಿಸಲಾರದ, ಕವನಕ್ಕೆ ವಿಷಯವಾಗಲಾರದ ವಸ್ತು ಲೋಕದಲ್ಲಿ ಇಲ್ಲ. ಆತನು ಒಂದೊಂದು ಕಾಲದಲ್ಲಿ ಒಂದೊಂದು ಭಾವಕ್ಕೆ ಅಧೀನವಾಗುತ್ತಾನೆ. ಆತನ ಜೀವನದ ಮೂಲ ರೇಖೆಗಳೇ ವಿಶೇಷವಾಗಿ ಕವನಗಳಲ್ಲಿ ಪ್ರತಿಬಿಂಬಿಸಿದರೂ, ಬೇರೆಯ ಕಲ್ಪನೆಗಳು ಆತನನ್ನು ಆಗಾಗ ನುಡಿಸದೆ ಇರುವುದಿಲ್ಲ. ಆದ್ದರಿಂದ ಯಾವ ಕವಿಯ ಕವನಗಳನ್ನೇ ಆಗಲಿ, ಒಂದೂ ಬಿಟ್ಟು ಹೋಗದಂತೆ ವಿಂಗಡಿಸುವುದು ಅಸಾಧ್ಯ. 'ಗರಿ'ಯಲ್ಲಿ ಮಗುವಿನ ಸೊಗಸನ್ನು ಚಿತ್ರಿಸುವುದಕ್ಕೇ ಕೆಲವು ಪದ್ಯಗಳು ಮೀಸಲಾಗಿವೆ. 'ಚೆಲುವ' ಎಂಬುದು ಯಾರ ಮನಸ್ಸನ್ನಾದರೂ ಸೆಳೆಯತಕ್ಕದ್ದು. ಗ್ರಂಥದ ಮೊದಲ ಪದ್ಯವಾದ 'ಬೆಳಗಿ'ನಲ್ಲಿ ಉದಯಕಾಲದ ವರ್ಣಮಯ ಚಿತ್ರವಿದೆ; ಇದು ಶಾಂತಿರಸದ ಅವತಾರ, "ಬರಿ—ಬೆಳಗಲ್ಲೋ ಅಣ್ಣಾ" ಎಂಬ ಅರಿವಿದೆ, ಅರಿಕೆಯಿದೆ.[೪] 'ಕೀರ್ತಿ'ಯಲ್ಲಿ, "ನಾಳಿನ ಒಡಲಿನ ಉಸಿರಿನಾ ಕಡಲಿನಲಿ" ನೀರುಗುಳ್ಳೆಯಂತೆ ತೇಲುವ ಕೀರ್ತಿಗಿಂತಲೂ ತನ್ನವರ ಹೃದಯದಲ್ಲುಕ್ಕುವ ಮರುಕ ಮಮತೆಗಳೇ ಲೇಸು ಎಂಬ ಉಪದೇಶವಿದೆ. 'ರುದ್ರವೀಣೆ'ಯಲ್ಲಿ ಭವಿಷ್ಯದ ವಾಣಿ ತನ್ನಷ್ಟಕ್ಕೆ ತಾನೆ ನುಡಿದು, ಇಂದು ಹರಿಯುತ್ತಿರುವ ಕೆನ್ನೀರನ್ನೂ, ಉರುಳುತ್ತಿರುವ ಸಿಂಹಾಸನ ಧರ್ಮಾಸನಗಳನ್ನೂ, ತೆರಳುತ್ತಿರುವ ಜಾತಿಪಂಥವನ್ನೂ ಮುಂದೆ ಕೆರಳಲಿರುವ ಹೋರಾಟಗಳನ್ನೂ ಸೂಚಿಸಿ ನಮ್ಮೆದೆಗಳನ್ನು ತಲ್ಲಣಗೊಳಿಸುತ್ತಿದೆ.— ಹೀಗೆಯೇ ಎಣಿಕೆಹಾಕುತ್ತಾ ಹೋಗಬಹುದು, ಇಷ್ಟಾದರೂ, ಇಲ್ಲಿ ಪ್ರಿಯವಾದ ಕವನಗಳ ಹೆಸರುಗಳನ್ನಾದರೂ ಪೂರ್ತಿಯಾಗಿ ಹೇಳಿದಂತೆ ಆಗಲಿಲ್ಲ; ಅದು ಪ್ರಕೃತದ ಉದ್ದೇಶವೂ ಅಲ್ಲ. ಈ ಅವಲೋಕನವು ವಾಚಕರಿಗೆ ಅಲ್ಲೊಂದು ಇಲ್ಲೊಂದು ಮಾದರಿಯ ರುಚಿ ತೋರಿಸಿ ಗ್ರಂಥದ ಕಡೆಗೆ ಅವರ ಗಮನವನ್ನೆಳೆಯುವ ಒಂದು ಸಾಧನ ಮಾತ್ರವೇ ಹೊರತು, ಅದರಲ್ಲಿರುವ ಕವನಗಳೆಲ್ಲದರ ವರ್ಣನೆಯ ಪಟ್ಟಿಯಲ್ಲ.

೬

ಅಂಬಿಕಾತನಯದತ್ತರ ಕವಿತೆ ತಳದಲ್ಲೆಲ್ಲಾ ಆಳವಾದ ವಿಚಾರವಿದೆ. ವಿಚಾರ ಪ್ರಧಾನವಾದ ಕವನಗಳಲ್ಲಿ ರಸಕ್ಕೆ ಕೊರತೆ ಬರತಕ್ಕದ್ದೇ ರೂಢಿ. ಅಂಬಿಕಾತನಯದತ್ತರ ಮೊದಮೊದಲಿನ ಕೃತಿಗಳೂ ಈ ಕಾರಣದಿಂದಲೇ ಕೊಂಚ ಬಡಕಲಾಗಿವೆ. ಆದರೆ, ಕವಿ ಬೇಗ ವಾಕ್ಸಿದ್ಧಿಯನ್ನು ಪಡೆದು, ಅನುಭವವನ್ನು ವಿಸ್ತರಿಸಿಕೊಂಡು, ಒಬ್ಬ ಮಾಂತ್ರಿಕನಾದನು. ಆತನ ಈಚೆಯ ಕವನಗಳಲ್ಲಿ ರಸವೂ ವಿಚಾರವೂ ಒಂದಕ್ಕೊಂದು

೪. 'ಬೆಳಗು' ಕವನದ ಸೊಗಸನ್ನು ನಾನು ಮೊದಲ ವಾಚನದಲ್ಲಿ ಚೆನ್ನಾಗಿ ಗ್ರಹಿಸಿ ಅದಕ್ಕೆ ತಕ್ಕ ಪ್ರಶಂಸೆಯನ್ನು ಇಲ್ಲಿ ಸಲ್ಲಿಸಿದ್ದೇನೆಂದು ಹೇಳಲಾರೆ.

ಗಿಡಗಂಟೆಯಾ ಕೊರಳೊಳಗಿಂದ
  ಹಕ್ಕೀಗಳ ಹಾಡು
ಹೊರಟಿತು–ಹಕ್ಕೀಗಳ ಹಾಡು

ಎಂಬ ಚರಣಗಳನ್ನಾದರೂ ಅಲ್ಲಿಂದ ಎತ್ತಿ ತೋರಿಸಬೇಕಾಗಿತ್ತು.

ಕಳೆಗೊಡುತ್ತವೆ. ಎಲ್ಲಕ್ಕೂ ಮೂಲವಾದ ಕವಿಯ ಪ್ರತಿಭೆ ಹೆಜ್ಜೆಹೆಜ್ಜೆಗೂ ಗೋಚರ ವಾಗುತ್ತದೆ.

"ಕಿಱಿದಱೊಳೆ ಪಿರಿದುಮರ್ಥಮನಱಿಪಲ್ ನೆಱೆವಾತಂ" ಎಂಬ 'ಕವಿರಾಜ ಮಾರ್ಗ' ಕಾರನ ನುಡಿಯನ್ನು ಅಂಬಿಕಾತನಯದತ್ತರಿಗೆ ಪೂರ್ಣವಾಗಿ ಅನ್ವಯಿಸ ಬಹುದು. ಇವರ ಕೃತಿಗಳಲ್ಲಿ ಪದ ಪದವೂ ಅರ್ಥದ ಭಾರದಿಂದ ಬಾಗಿರುತ್ತದೆ. ಅದರ ಹೊರಮೈಯ ಸಿರಿಗಿಂತ ಒಳಗಡೆಯ ಆಳವೇ ಹೆಚ್ಚು. ಇದಕ್ಕೆ ಹಿಂದೆ ನೋಡಿರುವ ನಿದರ್ಶನಗಳ ಜೊತೆಗೆ ಇನ್ನೊಂದನ್ನು ಕೊಡಬಹುದು. ಮೈಸೂರನ್ನು ವರ್ಣಿಸುತ್ತಾ ಕವಿ,

> ಮೈ ಚಿನ್ನ ನಗೆ ಮಿಂಚು ಬಾವನ್ನದುಸಿರು

ಎನ್ನುತ್ತಾನೆ. ಇದರ ಅರ್ಥ ಕೇವಲ ಲಾಕ್ಷಣಿಕವಲ್ಲ. ಈ ಒಂದು ಚರಣದಲ್ಲಿ ಗಣಿಯ ಚಿನ್ನವನ್ನೂ ವಿದ್ಯುತ್ತಿನ ದೀಪಮಾಲೆಯನ್ನೂ ಕಾಡುಕಾಡಿನ ಶ್ರೀಗಂಧವನ್ನೂ ಕವಿ ಅಡಕಿದ್ದಾನೆ. ಇದೇ ಬಗೆಯ ಉಕ್ತಿ ವೈಖರಿಯನ್ನು ಈ ಕವನದ ಉಳಿದ ಭಾಗಗಳಲ್ಲೂ ನೋಡಬಹುದು. ಈ ಧ್ವನಿಪೂರ್ಣತೆಯೂ ಅದರಿಂದ ಒದಗುವ ಬಿಗಿಕಟ್ಟೂ ಈತನ ಶೈಲಿಯ ವಿಶೇಷ ಲಕ್ಷಣ. ಪದ್ಯವು ಸಾಗುತ್ತಿರುವಾಗ, ಅಲ್ಲಲ್ಲೇ ಭಾವಗಳು ಬಿಗಿಯಾದ ಮಾತಿನಲ್ಲಿ ಎದ್ದು ನಿಲ್ಲುತ್ತವೆ; ಉಕ್ತಿಮುಕ್ತಾಫಲಗಳಾಗಿ ಬಿರಿಯತ್ತವೆ. 'ನರಬಲಿ' ಯಲ್ಲಿ,

> ಬಲವೆಂಬುದು ಇದು ಬೆವರಿನ ಬಳ್ಳಿ
> ಕಾಳೆಗವೆಂಬುದು ನೆತ್ತರ ಹೂವು
> ಬಿಡುಗಡೆಯೆಂಬುದು ಸಾವಿನ ಹಣ್ಣು

ಎಂದು ಮೂರು ಚರಣಗಳಲ್ಲಿ ಮೂರು ಸಮಸ್ಯೆಗಳನ್ನು ವಾಚಕರಿಗೊಡ್ಡಿ ಕವಿ ಮುಂದೆ ಸಾಗುತ್ತಾನೆ. ಮಾತಿನ ಈ ಬಿಗಿಕಟ್ಟಿಗೆ ಎಷ್ಟೋ ವೇಳೆ ಪ್ರಾಸಾನು ಪ್ರಾಸಗಳು—ಹಿಂದೆ ತೊಡರಾಗಿದ್ದುವು ಈಗ ತೊಡವಾಗಿ—ಸಹಾಯ ಮಾಡುತ್ತವೆ.

ರೂಪಕವು ತುಂಬ ಪ್ರಾಚೀನವಾದ ಕಾವ್ಯಾಲಂಕಾರ. ಎಷ್ಟೋ ಸಂದರ್ಭಗಳಲ್ಲಿ ಇದು ಬರಿಯ ಅಲಂಕಾರವಲ್ಲ, ಕಾವ್ಯದ ಶರೀರವೇ ಆಗಿರುತ್ತದೆ. ಅಂಬಿಕಾತನಯದತ್ತರ ವಾಣಿಯ ಅರ್ಥಸತ್ತ್ವವು ರೂಪಣಶಕ್ತಿಯಲ್ಲಿದೆ. ರೂಪಕವು ನುಡಿಗೆ ಬಿಗಿಯನ್ನು ಕೊಡುತ್ತದೆ, ಅರ್ಥಕ್ಕೆ ಆಳವನ್ನು ಕೊಡುತ್ತದೆ, ರಸಕ್ಕೆ ಪುಷ್ಟಿಯನ್ನು ಕೊಡುತ್ತದೆ. 'ನಗೀ ನವಿಲು', 'ಬಾಳ ಕರವಾಳ', 'ತುತ್ತಿನ ಚೀಲ' ಎಂಬೀ ಹೆಸರುಗಳೇ ಇದಕ್ಕೆ ಬೇಕಾದಷ್ಟು ನಿದರ್ಶನ. 'ತುತ್ತಿನ ಚೀಲ'ವಂತೂ, ಹಿಂದೆಯೇ ಹೇಳಿರುವ ಹಾಗೆ, ಒಂದು ರೂಪಕ ಪರಂಪರೆ. 'ಚಿಂತೆ'ಯ ವರ್ಣನೆ ಉಜ್ಜ್ವಲವಾಗಿರುವುದೂ ರೂಪಕಭೇದವಾದ ಚೇತನ ಧರ್ಮಾರೋಪ(Personification)ದಿಂದಲೇ. ಆಕೆಯನ್ನು ಕವಿ,

ಉರಿಯ ಸೀರೆಯನುಟ್ಟು
ಬೆಂಗಿಗುಪ್ಪಸದೊಟ್ಟ
ಧೀರೆ ಗಂಭೀರೆ ನೀನಾರೆ ಅನ್ಯೆ?

ಎಂದು ಸಂಬೋಧಿಸುತ್ತಾನೆ. ಆಕೆಯೂ ಅದೇ ಧಾಟಿಯಲ್ಲಿಯೇ

ಜಗದ ಜೀವಿಗಳುರವು
ನನ್ನ ಅಂತಃಪುರವು
ಅಲ್ಲಿ ಸೂಜೆಗಳಿಂದ ಹಣೆಯುತಿಹೆನು

ಎಂದು ತನ್ನ ನೆಲೆಯನ್ನೂ ಕಾರ್ಯವನ್ನೂ ವಿಶದಪಡಿಸುತ್ತಾಳೆ.

ಒಂದು ವಿಷಯವನ್ನು ಬಾಯಿಬಿಟ್ಟು ನೇರವಾಗಿ ಹೇಳುವುದಕ್ಕಿಂತ ವ್ಯಂಗ್ಯವಾಗಿ ಸೂಚಿಸುವುದೇ ಅಂಬಿಕಾತನಯದತ್ತರ ಪದ್ಧತಿಯೆಂದು ಮೇಲಿನ ವಿವೇಚನೆಯಿಂದ ಸ್ಫುಟವಾಗುತ್ತದೆ. ಇದು ಬಿಡಿಪದ ಬಿಡಿವೃತ್ತಗಳಿಗೆ ಮಾತ್ರವಲ್ಲ, ಪೂರ್ಣ ಕವನಗಳಿಗೂ ಎಷ್ಟೋ ಸಲ ಅನ್ವಯಿಸುತ್ತದೆ. ಉದಾಹರಣೆಗೆ 'ಪ್ರೀತಿ' ಎಂಬುದು ಒಂದು ದೀರ್ಘಪರ್ಯಾಯೋಕ್ತಿ. ಪ್ರೀತಿಯ ಕಣ್ಣಿಗೆ ಕುರೂಪವೇ ಸೌಂದರ್ಯಸಾರವಾಗಬಹುದು, ಅದೇ ಪ್ರೀತಿಯೇ ಪ್ರಿಯವಸ್ತುವಿನ ಮೃತ್ಯುವೂ ಆಗಬಹುದು ಎಂಬ ತತ್ತ್ವವನ್ನು ರುದ್ರ-ಕಾಳಿಯರ ನರ್ತನದ ಸಾಮ್ಯದಿಂದ ಕವಿ ಸೂಚಿಸಿದ್ದಾನೆ. ವಾಚ್ಯಮಾರ್ಗಕ್ಕಿಂತಲೂ ವ್ಯಂಗ್ಯಮಾರ್ಗವೇ ರಮ್ಯತರವೆಂಬುದು ನಿಜ. ಆದರೆ ಒಂದೊಂದು ವೇಳೆ ಅದರಿಂದ ಪಾಠಕನಿಗೆ ಕವಿಹೃದಯಗ್ರಹಣವು ತುಂಬ ಕಷ್ಟವಾಗುತ್ತದೆ. 'ಗರಿ'ಯೊಳಗಿನ ಎಲ್ಲ ಕವನಗಳೂ ಎಲ್ಲ ಚರಣಗಳೂ ತನಗೆ ಸರಿಯಾಗಿ, ಪೂರ್ಣವಾಗಿ ಅರ್ಥವಾದುವೆಂದು ಹೇಳುವ ಶಕ್ತಿ ಪ್ರಕೃತ ವಿಮರ್ಶಕನಿಗೂ ಸಾಲದು. ಉದಾಹರಣೆಗೆ, 'ಪಾತರಗಿತ್ತಿ ಪಕ್ಕ' ಎಂಬ ಕವನವು ಇಂದಿಗೂ ಅವನ ಸಂಗಡ ಕಣ್ಣುಮುಚ್ಚಾಲೆಯಾಡುತ್ತಿದೆ.[೫] ಒಂದೊಂದು ಸಲ ಕವಿಯನ್ನು ಕುರಿತು,

---

೫. ಈ ವಿಮರ್ಶೆಯನ್ನು ಬರೆದಾಗ "ಪಾತರಗಿತ್ತಿ" ಎಂಬ ಶಬ್ದಕ್ಕೆ ಚಿಟ್ಟೆ (A butterfly) ಎಂಬ ಅರ್ಥವು ಉತ್ತರ ಕರ್ನಾಟಕದಲ್ಲಿ ಪ್ರಚುರವಾಗಿದೆಯೆಂಬ ಅಂಶ ನನಗೆ ತಿಳಿದಿರಲಿಲ್ಲ; ಕಿಟೆಲ್ ಅವರ ನಿಘಂಟನ್ನು ಒಮ್ಮೆ ನೋಡಬೇಕೆಂಬುದೂ ಆಗ ಹೊಳೆಯಲಿಲ್ಲ. ಇದು ಚಿಟ್ಟೆಯ ಸ್ವಚ್ಛಂದವಿಲಾಸ ಗತಿಯನ್ನು ಕುರಿತು ಕವನವೆಂದು ಅರಿತ ಬಳಿಕ ಅದರ ಸ್ವಾರಸ್ಯಕ್ಕೆ ನನ್ನ ಮನಸ್ಸು ಸೂರೆಯಾಗಿದೆ. ಇದರ ಅಂತ್ಯದ ಚರಣಗಳಂತೂ ಅದ್ಭುತರಮ್ಯವಾಗಿದೆ :

"ಇನ್ನು ಎಲ್ಲಿಗೋಟ?
ನಂದನದ ತೋಟ!"

ಪಾತರಗಿತ್ತಿ ಭೂಮಿಯ ಮೇಲಿನ ತೋಟಗಳಲ್ಲಿ ಹಾರಾಡಿ, ಇನ್ನಷ್ಟು ಉಲ್ಲಾಸಕರವಾದ ಹೊಸದೊಂದು ಉದ್ಯಾನಕ್ಕೆ—'ನಂದನದ ತೋಟಕ್ಕೆ'—ಸಾಗುತ್ತದೆ. ಅದರ ಮರಣದ ಮಾತನ್ನೇ ಎತ್ತದೆ ಹೀಗೆ ದೇವಲೋಕದ ನಂದನವನದ ವಿಹಾರರೂಪವಾಗಿ ಅದನ್ನು ಮಾರ್ಪಡಿಸಿ ಕವನದ ಮುಖ್ಯಭಾವಕ್ಕೆ ಅತಿಶಯದ ಮೆರುಗಿನ ಮುಗಿತಾಯವನ್ನು ಕೊಟ್ಟಿರುವುದು ಕವಿಯ

"ನಿನ್ನ ಮಾತಿನಲಿಹುದು ಒಡಪಿನಂದ"

ಎಂದು ಹೇಳಬೇಕೆನ್ನಿಸುತ್ತದೆ. ಆದರೆ ಅದಕ್ಕೆ ಉತ್ತರ ಮಾತ್ರ, ಕನ್ನಡ ಮಾತೆ ಕೊಟ್ಟಂತೆ,

"ನನ್ನ ಹತ್ತಿರದೊಂದೆ ಉಳಿದಿಹುದು ಕಂದ"

ಎಂದು ಎಂದಿಗೂ ಅಲ್ಲ!

ಧ್ವನಿಯ ತಿರುಳನ್ನು ಚೆನ್ನಾಗಿ ಬಲ್ಲವರಾದರೂ ಅಂಬಿಕಾತನಯದತ್ತರು ಒಮ್ಮೊಮ್ಮೆ ವಿರಸ ಪ್ರಯೋಗಗಳನ್ನು ಮಾಡದೆಹೋಗಿಲ್ಲ. 'ಕುಣಿಯೋಣು ಬಾರs'ದಂಥ ಲೋಕೋತ್ತರವಾದ ಕವನದಲ್ಲಿ ಕೂಡ, 'ಎಣಿಸ್ಯಾಟ', 'ಕುಣಿಸ್ಯಾಟ' ಎನ್ನುವ ಅನುಚಿತ ರೂಪಗಳು ಬಂದು ಕ್ಷಣಕಾಲ ರಸಭಂಗವನ್ನುಂಟು ಮಾಡುತ್ತವೆ. ಮೂವತ್ತುಮೂರು ಕೋಟಿ'ಯಲ್ಲಿ, ಭರತಮಾತೆ ರೋಷ ಜುಗುಪ್ಸೆಗಳಿಂದಲೇ ನುಡಿದಿದ್ದರೂ, "ಜೀತ ನರಪೇತುಗಳಿರಾ! ಬಾತಂಥ ಪ್ರೇತಗಳಿರಾ!" ಎಂದು ತನ್ನ ಮಕ್ಕಳನ್ನು ಸಂಬೋಧಿಸುವುದು ಅಷ್ಟೇನೂ ರಸಪೋಷಕವೆಂದು ತೋರುವುದಿಲ್ಲ. ಇನ್ನು ಕೆಲವೆಡೆಗಳಲ್ಲಿ ಭಾಷೆಯೂ ಶಬ್ದರೂಪಗಳೂ ಪದ್ಯಕ್ಕಿಂತ ಗದ್ಯಕ್ಕೇ ಹೆಚ್ಚು ಉಚಿತವಾಗುವಂತೆ ತೋರುತ್ತದೆ. (ಈ ಮಾತು ವಿಶೇಷವಾಗಿ ಪ್ರಥಮ ಕವನಗಳಿಗೆ ಅನ್ವಯಿಸುತ್ತದೆ.)—ಇದೆಲ್ಲವೂ ಅಲ್ಪ ವಿಷಯ. ಆದರೆ ಬಿಳಿ ಬಟ್ಟೆಯ ಮೇಲೆ ಸಣ್ಣ ಮಸಿ ಕರೆಯೂ ಎದ್ದುಕಾಣಿಸುತ್ತದೆ.

ಅಂಬಿಕಾತನಯದತ್ತರು ಕನ್ನಡ ನಾಡಿನ ಪ್ರಮುಖ ಕವಿಗಳಲ್ಲಿ ಒಬ್ಬರು. ಅವರ ಕವನಗಳ ಸಂಖ್ಯೆ ಹೆಚ್ಚಿಲ್ಲದಿರಬಹುದು. ಆದರೆ, ಅವುಗಳಲ್ಲಿ ಹಲವು ಚಿರಕಾಲ ನಿಲ್ಲತಕ್ಕವು. ಕೆಲವಾದರೂ ವಿಶ್ವ ಸಾಹಿತ್ಯಕ್ಕೆ ಸೇರತಕ್ಕವು.

೧೯೩೩]

ಸಮಾಲೋಕನ : ೧೯೫೮

ಉಜ್ಜ್ವಲ ಪ್ರತಿಭೆಗೆ ಸಾಕ್ಷಿ. 'ರಘುವಂಶ'ದಲ್ಲಿ ಅಜ ಮಹಾರಾಜನು ಇಂದುಮತಿಯ ವಿಯೋಗದ ದುಃಖದಿಂದ ಮರಣಹೊಂದಿದನೆಂದು ಕಾಳಿದಾಸನು ಹೇಳದೆ, ಗಂಗಾಸರಯೂನದಿಗಳ ಸಂಗಮದ ತೀರ್ಥದಲ್ಲಿ 'ದೇಹನ್ಯಾಸ' ಮಾಡಿ ಅಮರರ ಗುಂಪಿಗೆ ಸೇರಿ ಕಾಂತೆಯೊಡಗೂಡಿದ ನೆಂದು ನಿರೂಪಿಸಿರುವುದೂ, ಅದರ ಸೊಗಸೇನೆಂಬುದನ್ನು ಅಭಿನವಗುಪ್ತನು 'ಧ್ವನ್ಯಾಲೋಕ ಲೋಚನ'ದಲ್ಲಿ ಮನಮುಟ್ಟುವಂತೆ ನಿರ್ದೇಶಿಸಿರುವುದೂ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತವೆ. ('ಭಾರತೀಯ ಕಾವ್ಯಮೀಮಾಂಸೆ', ಪು. ೩೭೮-೯ ನೋಡಿ.)

'ಸಖೀಗೀತ'*

ಹೊಸಗನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಶ್ರೀಮಾನ್ ಬೇಂದ್ರೆಯವರ ಕವನ ಸಂಗ್ರಹಗಳು ಒಂದಾದ ಮೇಲೊಂದು ಹೊರಬೀಳುತ್ತಿರುವುದು ಆಹ್ಲಾದದ ಸಂಗತಿ. ಅವರ ಹಾಡುಗಳು ಕನ್ನಡ ನಾಡಿನ ಒಂದು ಮೂಲೆಯಿಂದ ಹಿಡಿದು ಇನ್ನೊಂದು ಮೂಲೆಯ ತನಕ ಎಲ್ಲ ರಸಿಕರ ಕಿವಿಗೂ ಬಿದ್ದಿವೆ. ಅವರ ಕವಿತೆಯ ವಿಸ್ತಾರವಾದ ವಿಮರ್ಶೆ ಕನ್ನಡದಲ್ಲಿ ಮಾತ್ರವಲ್ಲದೆ ಇಂಗ್ಲಿಷಿನಲ್ಲಿಯೂ ಬಂದಿದೆ. ಆದ ಕಾರಣ ಈಚೆಗೆ ಪ್ರಕಟವಾಗಿರುವ ಅವರ 'ಸಖೀಗೀತ'ದ ವಿಮರ್ಶೆಯನ್ನು ದೀರ್ಘವಾಗಿ ಮಾಡುವ ಗೋಜಿಗೆ ಹೋಗದೆ, ಅದರಲ್ಲಿ ಮೆಚ್ಚಿಕೆಯಾದ ಕವನಗಳಲ್ಲಿ ಒಂದೆರಡನ್ನು ಮಾತ್ರ ಕುರಿತು ಕೆಲವು ಮಾತನ್ನು ಹೇಳಲು ಇಲ್ಲಿ ಉದ್ದೇಶಿಸಿದೆ.

ಶ್ರೀಮಾನ್ ಬೇಂದ್ರೆಯವರ ಪದ್ಯಗಳು ಬೇಗ ಅರ್ಥವಾಗುವುದಿಲ್ಲ; ಒಂದೊಂದು ಸಲ, ಅವರು ಏನನ್ನು ಹೇಳಲು ಹೊರಟಿದ್ದಾರೆ ಎಂಬುದೇ ತಿಳಿಯುವುದಿಲ್ಲ—ಎಂಬ ಪ್ರತೀತಿ ಉಂಟು. ಇದರಲ್ಲಿ ಸತ್ಯಾಂಶ ಸ್ವಲ್ಪಮಟ್ಟಿಗಾದರೂ ಉಂಟೆಂಬುದನ್ನು ಕವಿಗಳೂ ಬಲ್ಲರು. ಆದಕಾರಣ, ಈ ಗ್ರಂಥಕ್ಕೆ ಪ್ರಸ್ತಾವನೆಯಾಗಿ ಅವರು ಪ್ರತಿಯೊಂದು ಕವನದ 'ಸಂದರ್ಭ ಸೂಚನೆ'ಯನ್ನು ಕೊಟ್ಟಿದ್ದಾರೆ: ಇದರಿಂದ

* "ಅಂಬಿಕಾತನಯದತ್ತ" : ಸಖೀಗೀತ — (೧೯೪೦) ವಿಮರ್ಶೆ ('ಪ್ರಬುದ್ಧ ಕರ್ಣಾಟಕ', ೨೨.೪)

ವಾಚಕರಿಗೆ ಕವನಗಳ ಸ್ವಾರಸ್ಯವನ್ನು ಗ್ರಹಿಸಲು ಎಷ್ಟೋ ಸಹಾಯವಾಗಿದೆ; ವಿಮರ್ಶಕನ ಕಾರ್ಯ ಎಷ್ಟೋ ಹಗುರವಾಗಿದೆ.

ಈ ಸಂಕಲನಕ್ಕೆ ಹೆಸರು ಕೊಟ್ಟಿರುವ 'ಸಖೀಗೀತ'ವೆಂಬ ನೀಳ್ಗವನವನ್ನು ಬಿಟ್ಟರೆ ಇದರಲ್ಲಿ ೨೯ ಚಿಕ್ಕ ಚಿಕ್ಕ ಬಿಡಿ ಕವನಗಳಿವೆ. ಬೇಂದ್ರೆಯವರ ಮಿಕ್ಕ ಕಾವ್ಯ ಸಂಗ್ರಹಗಳಲ್ಲಿರುವಂತೆಯೇ ಇಲ್ಲಿ ಕೂಡ ಬೇರೆಬೇರೆ ಕಾಲಗಳಲ್ಲಿ ಅವರು ಬರೆದ ಕವನಗಳು ಒಟ್ಟುಗೂಡಿರುವಂತೆ ತೋರುತ್ತದೆ. ಅವರಿಗೆ ವಾರ್ಧಕ ಷಟ್ಪದಿಯ ಮೋಹ ಹಿಡಿದಿದ್ದಾಗ ಬರೆದ ಪದ್ಯಗಳೂ—ಬಹುಶಃ ಹಿಂದಿನ ಸಂಕಲನಗಳಲ್ಲಿ ಸೇರದೆ ಬಿಟ್ಟಿದ್ದವು—ಇಲ್ಲಿವೆ; ಇತ್ತೀಚೆಗೆ ಬರೆದ ಕುಣಿತದ ಹಾಡುಗಳೂ ಇಲ್ಲಿವೆ. ಬೇಂದ್ರೆಯವರ ಕವನಗಳನ್ನೆಲ್ಲಾ ಓದಿದರೆ, ಒಂದೇ ಹೆಸರಿನಲ್ಲಿ ಇಬ್ಬರು ಕವಿಗಳು ಬರೆಯುತ್ತಿರುವಂತೆ ಒಮ್ಮೊಮ್ಮೆ ಅನ್ನಿಸುತ್ತದೆ. ನಿಬದ್ಧವಾದ ಛಂದಸ್ಸಿನಲ್ಲಿ ಗ್ರಾಂಥಿಕ ಭಾಷೆಯಲ್ಲಿ ಅವರು ಬರೆದ ಕವನಗಳಿಗೂ, ಹಳ್ಳಿಯ ಸಾಂಗತ್ಯಗಳ ಧಾಟಿಯಲ್ಲಿ ಹಳ್ಳಿಗರ ಮಾತಿನಲ್ಲಿ ಅವರು ಕಟ್ಟಿದ ಹಾಡುಗಳಿಗೂ ತುಂಬ ಭೇದ ಕಾಣಿಸುತ್ತದೆ. ಎರಡರಲ್ಲೂ ಆಳವಾದ ವಿಚಾರವಿದೆ, ಸೂಕ್ಷ್ಮವಾದ ಅನುಭವವಿದೆ. ಆದರೆ ಇದರ ಅಭಿವ್ಯಕ್ತಿ ಮಾತ್ರ ಎರಡರಲ್ಲೂ ಬೇರೆಬೇರೆಯಾಗುತ್ತದೆ. ಎಷ್ಟೋ ಬಾರಿ ಒಂದು ಕಬ್ಬಿಣದ ಕಡಲೆಯಾದರೆ ಇನ್ನೊಂದು "ನಾದದ ನವನೀತ"ವಾಗುತ್ತದೆ. ಈ ಎರಡನೆಯ ಗುಂಪಿಗೆ ಸೇರಿದ ಗೀತದಲ್ಲಿ ಎಲ್ಲ ಭಾವವೂ ಒಮ್ಮೆಗೇ ಹೊಳೆಯದಿದ್ದರೂ ಅದರ ದನಿಯ ಇಂಪಿನಲ್ಲೇ ರಸಿಕನು ತಲ್ಲೀನನಾಗಿಬಿಡುತ್ತಾನೆ. ಮಾತಿನ ಶಕ್ತಿಗೆ ಸಾಮಾನ್ಯವಾಗಿ ಮೀರಿ ಗಾಯನದಲ್ಲಿ ಮಾತ್ರ ಛಾಯೆದೋರುವ ಅಪೂರ್ವ ಭಾವಗಳನ್ನು ತಮ್ಮ ಹಾಡುಗಳಲ್ಲಿ ಹಿಡಿದಿಡುವ ಶಕ್ತಿ ಬೇಂದ್ರೆಯವರಿಗೆ ವಿಶೇಷವಾಗಿ ಇದೆ. ಅವರ 'ನಾದಲೀಲೆ'ಯಲ್ಲಿ ಪ್ರಕಟವಾಗಿರುವ 'ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ' ಎಂಬ ಭಾವಗೀತವು ಈ ರಸಸಿದ್ಧಿಯ ಪರಾಕಾಷ್ಠೆ. ಇದರ ಮಟ್ಟಕ್ಕೆ ಏರದಿದ್ದರೂ ಈ ಜಾಡಿನಲ್ಲೇ ಸಾಗುವ ಕವನಗಳು 'ಸಖೀಗೀತ'ದಲ್ಲಿ ಕೆಲವು ಉಂಟು. 'ತುಂಬಿ ಬಂದಿತ್ತು' ಎನ್ನುವುದು "ಬಸವಣ್ಣನವರ ಜೀವನದ ಕೊನೆಯ ದಿನಗಳಿಗೆ ಸಂಬಂಧಿಸಿದ 'ತಲೆದಂಡ' ಎಂಬ ಇನ್ನೂ ಬೆಳಕಿಗೆ ಬಂದಿಲ್ಲದ ನಾಟಕದೊಳಗಿನದು." ಇದರಲ್ಲಿ ಮುದುಕ ಜಂಗಮನೊಬ್ಬನು ಹೇಳುವ ಸ್ವಾನುಭವದ ಮಾತುಗಳು ಬಿಜ್ಜಳ-ಬಸವಣ್ಣನವರ ಚರಿತೆಗೂ ಕಾಲಕ್ಕೂ ಅನ್ವಯಿಸುವಂತೆ ಹಾಡನ್ನು ಕಟ್ಟಿದ್ದಾರೆ.

ತುಮ್ ತುಮ್ ತುಮ್ ತುಮ್ ತುಮ್ ತುಮ್ ತುಮ್ ತುಮ್
ತುಂಬಿ ಬಂದಿತ್ತs ತಂಗೀ
ತುಂಬಿ ಬಂದಿತ್ತು ॥

ಎಂಬ ಪಲ್ಲವಿಯ ಝೇಂಕಾರವೇ ಸಾಕು; ಕೇಳುವವನ ಮನಸ್ಸನ್ನು ಎಲ್ಲಿಗೋ ಒಯ್ಯುತ್ತದೆ. ಒಟ್ಟು ಪದ್ಯವನ್ನೇ ಉಪಮೆಗಳ ಮೂಲಕ ನಿರ್ವಾಹ ಮಾಡಿದ್ದಾರೆ :

ಬೆಳಕಿಗಿಂತ ಬೆಳ್ಳಗೆ ಇತ್ತ
ಗಾಳಿಗಿಂತ ತೆಳ್ಳಗೆ ಇತ್ತ
ಜಡಿಯಿಂದಿಳಿದ ಗಂಗಿ ಹಾಂಗ
ಚಂಗನೆ ನೆಗೆದಿತ್ತ . . . .

ಬೇಂದ್ರೆಯವರ ಹೋಲಿಕೆಗಳು ಎಷ್ಟು ಅಪ್ರಯಾಸವಾಗಿ, ಆದರೂ ಅನಿವಾರ್ಯವಾಗಿ, ಪ್ರಾಸಾನುಪ್ರಾಸಗಳ ಗರಿಗಳ ಮೇಲೆ ಹಾದು ಬರುತ್ತವೆ! ಇದು ಇವರ ಕವಿತೆಯ ಅಸಾಧಾರಣ ಲಕ್ಷಣ: ಉಪಮೆಗಳ ಸುರಿಮಳೆಯನ್ನು 'ಮಾಯಾ ಕಿನ್ನರಿ' ಎಂಬ ಇನ್ನೊಂದು ರಮ್ಯವಾದ ಕವನದಲ್ಲಿಯೂ ನೋಡಬಹುದು.

ಈ ಸಂಗ್ರಹದಲ್ಲಿ ಬಂದಿರುವ ಚಿಕ್ಕ ಕವನಗಳಲ್ಲೆಲ್ಲ ಪರಮ ಸುಂದರವಾದದ್ದೆಂದರೆ ಬಹುಶಃ 'ಹುಬ್ಬಳ್ಳಿಯಾಂವಾ' ಎಂಬ ಹಾಡು. ಇದು ಬೇಂದ್ರೆಯವರು 'ಬರೆಯಬಹುದೆಂದು ಆಶಿಸಿರುವ ಇನ್ನೊಂದು ನಾಟಕದ ಭಾಗ. [—ಈ ನಾಟಕಗಳೆಲ್ಲ ಯಾವಾಗ ರೂಪುಗೊಂಡು ರಂಗದ ಮೇಲೆ ಬರುವುವೋ!] ಪ್ರಣಯ ಭಂಗದಿಂದ ಹುಚ್ಚುಹಿಡಿದ ಸೂಳೆಯೊಬ್ಬಳು ಈ ಹಾಡನ್ನು ಹೇಳುತ್ತಾಳೆ.' ಹುಬ್ಬಳ್ಳಿಯ ಸೆಟ್ಟರ ಹುಡುಗನೊಬ್ಬನು ಒಬ್ಬ ಜೋಗಿತಿಯೊಂದಿಗೆ ಕೆಲವು ಕಾಲ ಸಲಿಗೆಯನ್ನು ಬೆಳಸಿ ಆಮೇಲೆ ಅವಳನ್ನು ತೊರೆದು ಎಲ್ಲಿಗೋ ಹೋಗಿಬಿಡುತ್ತಾನೆ. ಇವಳು ಆ ವಿಯೋಗ ವ್ಯಥೆಯನ್ನು ತಾಳಲಾರದೆ, ಅವನ ರೂಪಗುಣಗಳನ್ನೂ ಸರಸ ಸಲ್ಲಾಪಗಳನ್ನೂ ನೆನೆಯುತ್ತಾ ಹಂಬಲಿಸುತ್ತಾ ಅವನನ್ನು ಹುಡುಕಿಕೊಂಡು ಅಲೆದಾಡುತ್ತಾಳೆ.

ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಂವಾ
ವಾರದಾಗ ಮೂರು ಸರತಿ ಬಂದು ಹೋದಾಂವಾ ॥

ಎಂಬುದೇ ಅವಳ ಹಂಬಲಿನ ಪಲ್ಲವಿ. ಆ 'ಹುಬ್ಬಳ್ಳಿಯಾಂವ' ಎಂಥವನು?—

ಭಾರಿ ಜರದ ವಾರಿ ರುಮ್ಮಾಲಾ ಸುತ್ತಿಕೊಂಡಾಂವಾ
ತುಂಬ-ಮಿಾಸಿ ತೀಡಿಕೋತ ಹುಬ್ಬ ಹಾರಸಾಂವಾ
ಮಾತು ಮಾತಿಗೂ ನಕ್ಕನಗಿಸಿ ಅಡಿಸ್ಯಾಡಾಂವಾ
ಏನೊ ಅಂದರೆ ಏನೋ ಕಟ್ಟಿ ಹಾಡ್ಕ ಹಾಡಾಂವಾ . . .

ಇರು ಅಂದರ ಬರತೇನಂತ ಎದ್ದು ಹೊರಡಾಂವಾ
ಮಾರೀ ತೆಳಗೆ ಹಾಕಿತೆಂದರೆ ಇದ್ದು ಬಿಡಾಂವಾ
ಹಿಡಿ ಹಿಡೀಲೆ ರೊಕ್ಕಾ ತಗದು ಹಿಡಿ ಹಿಡಿ ಅನ್ನಾಂವಾ
ಖರೇ ಅಂತ ಕೈಮಾಡಿದರೆ ಹಿಡ್ಕದ ಬಿಡಾಂವಾ . . .

ಈ ಸೆಟ್ಟರ ಹುಡುಗ ಎಷ್ಟು ಸೊಗಸುಗಾರ ಎಂದರೆ—"ಕಂಡ ಹೆಣ್ಣಿಲೆ ಪ್ರೀತೀ ವೀಳ್ಯೆ ಮಡಿಚಿಕೊಂಡಾವಾ." ಇಂಥವರು "ಕಸಬೇರ ಕಳೆದು ಬಸವೇರ ಬಿಟ್ಟು" ಈ

ಜೋಗಿತಿಯನ್ನು ಮೆಚ್ಚಿ ಬಂದು ಅವಳನ್ನು ತನ್ನ ಗೆಣತಿಯಾಗಿ ಮಾಡಿಕೊಂಡಿದ್ದಾನೆ. ನೀನು "ಚೌಡಿಯಲ್ಲ, ಚೂಡಾಮಣಿ" ಎಂದು ಅವಳನ್ನು ಹೊಗಳಿದ್ದಾನೆ. ಒಲಿಸಿ ಮರುಳುಗೊಳಿಸಿ ಈಗ ಬಿಟ್ಟುಹೋಗಿದ್ದಾನೆ.—ಅವನನ್ನು ಕುರಿತು ಹಲುಬುವ ಈ ವಿರಹಿಣಿಯ ಮಾತಿನಲ್ಲಿ ಅವನ ಸಿಸ್ತುಗಾರಿಕೆಯೂ ಇವಳ ಪ್ರೇಮವೂ ಒಟ್ಟೊಟ್ಟಿಗೆ ಹೇಗೆ ಹೊಮ್ಮುತ್ತವೆ! ಆಡುವ ಮಾತಿನ ನಡೆಯನ್ನು ಬಿಡದೆ, "ಚಹಾದ ಜೋಡಿಯ ಚೂಡಾ"ದಂಥ ಹೋಲಿಕೆಗಳನ್ನು ಕೊಡುವುದಕ್ಕೂ ಹಿಂಜರಿಯದೆ, ಈ ಸಾಮಾನ್ಯ ವಸ್ತುವಿನ ನಿರೂಪಣೆಯಲ್ಲಿ ಅತಿ ಮಧುರವಾದ ಕಾವ್ಯವನ್ನು ಕವಿಗಳು ನಮಗೆ ಒದಗಿಸಿಕೊಟ್ಟಿದ್ದಾರೆ.

'ಪುಟ್ಟ ವಿಧವೆ' ಎನ್ನುವುದು ಬೇಂದ್ರೆಯವರ ಕವನಗಳ ರಾಶಿಯಲ್ಲಿ ನಿಗಿ ನಿಗಿ ಉರಿಯುವ ಕೆಂಡ. ಇನ್ನೂ ಕಣ್ಣು ಬಿಡದ ಹೆಣ್ಣುಕೂಸಿಗೆ ಧರ್ಮದ ಹೆಸರಿನಲ್ಲಿ ಮದುವೆಯಾಗಿ ನಾಲ್ಕು ದಿನದಲ್ಲೇ ಆ ಪುಟ್ಟ ಮುತ್ತೈದೆಯ ಸಂಸಾರದ ಆಟವೆಲ್ಲ ಮುಗಿದು, ವೈಧವ್ಯಸಂಸ್ಕಾರಗಳೆಲ್ಲ ನಡೆದು, ಕಡೆಗೆ ಅವಳು ಗುಡಿಯ ಕಟ್ಟೆಯಲ್ಲಿ ಪುರಾಣ ಹೇಳುವ ಆಚಾರ್ಯರ ಮುಂದೆ ನಿಂತು, "ಜಾರ ಕೃಷ್ಣನ ಕಥೆಗೆ ಕೋಡುಮೂಡಿ"ದ ವರೆಗಿನ ನಿರೂಪಣೆ ಇಲ್ಲಿ ಬಂದಿದೆ. ಹಳ್ಳಿಗಳಲ್ಲಿ ಇಂದಿಗೂ ನಡೆಯುವ ಬಳಕೆಯ ಸಂಗತಿ; ಅಲಂಕಾರ ಚಮತ್ಕಾರಗಳನ್ನರಿಯದ ಬಳಕೆಯ ಮಾತು.—ಆದರೆ ಈ ಮಾತಿನ ಮೊನೆ ಮೊನೆಯಲ್ಲೂ ಇರಿಯುವ ತೀಕ್ಷ್ಣ ವಿಡಂಬನದ ರೀತಿಯನ್ನು ಇಡಿಯ ಕವನವನ್ನೇ ಓದಿ ಅರಿಯಬೇಕು. "ಕುರುಡು ಧರ್ಮಕ್ಕೆ ಸ್ಮಾರಕವು ನಿಂತಂತೆ" ಈ ಪುಟ್ಟ ವಿಧವೆ ನಿಂತ ಬಗೆಯನ್ನು ಅನ್ಯಾದೃಶವಾದ ರೀತಿಯಲ್ಲಿ ಕವಿಗಳು ಇಲ್ಲಿ ಪ್ರತಿಪಾದಿಸಿದ್ದಾರೆ.

ಈ ಸಂಗ್ರಹದಲ್ಲಿ ರಸಿಕರು ಮೆಚ್ಚುವ ಇನ್ನೂ ಎಷ್ಟೋ ಕವನಗಳಿವೆ. ಆದರೆ ಅವುಗಳ ವಿಚಾರವನ್ನು ಬೆಳಸಲು ಇಲ್ಲಿ ಅವಕಾಶವಿಲ್ಲ. 'ಪರಾಗ'ವೆಂಬ ಆಧುನಿಕ ಕವನಗಳ ಸಂಕಲನಕ್ಕೆ ಬೇಂದ್ರೆಯವರು ಬರೆದುಕೊಟ್ಟ ಪ್ರಸ್ತಾವನೆ ಇಲ್ಲಿ ಪುನರ್ಮುದ್ರಿತ ವಾಗಿದೆ; ಇದನ್ನು ಮಾತ್ರ ಕುರಿತು ಒಂದು ಮಾತನ್ನು ಹೇಳಬೇಕೆನ್ನಿಸುತ್ತದೆ. ಇಂಥ ಪ್ರಾಸಂಗಿಕ ಪದ್ಯಗಳನ್ನು ಕಾವ್ಯವಾಗುವಂತೆ ಬರೆಯುವುದು ಕಠಿನ. ಆದರೆ ಬೇಂದ್ರೆಯವರು ಈ ಕಾರ್ಯವನ್ನು ತುಂಬ ಜಾಣ್ಮೆಯಿಂದ ಸಾಧಿಸಿದ್ದಾರೆ. 'ಪರಾಗ' ಎಂಬ ಹೆಸರಿನ ಉಪಯೋಗವನ್ನು ಚೆನ್ನಾಗಿ ಮಾಡಿಕೊಂಡು, ರಸಿಕ-ಭೃಂಗವನ್ನು ಕವನಕೋಶದ ಬಳಿಗೆ ಕರೆದು,

"ನಿನ್ನ ಮುಖಸ್ಪರ್ಶವೂ ಸಾಕು; ಹೊಸ
ಸೃಷ್ಟಿಯೆ ಬರಬಹುದು ॥
ಬಾ, ಭೃಂಗವೆ, ಬಾ—"

ಎಂದು ಮುಕ್ತಾಯ ಮಾಡಿದ್ದಾರೆ. ಈ ಮಾತಿನಲ್ಲಿ, ಜೀವವಿಜ್ಞಾನದ ತತ್ತ್ವವೂ ಕಾವ್ಯಸೃಷ್ಟಿಯ ರಹಸ್ಯವೂ ಚೆನ್ನಾಗಿ ಹೊಂದಿ ಬಂದಿವೆ.[೧]

ಇನ್ನು ಕೊನೆಯದಾಗಿ, 'ಸಖೀಗೀತ'ವೆಂಬ ನೀಳ್ಗವನವನ್ನು ಕುರಿತು ಎರಡು ಮಾತುಗಳು. ಬೇಂದ್ರೆಯವರ ಕವಿತೆಗೆಲ್ಲ ಒಂದಲ್ಲ ಒಂದು ಬಗೆಯಲ್ಲಿ ಸ್ವಾನುಭವವೇ ಆಧಾರ. 'ಸಖೀಗೀತ'ದಲ್ಲಂತೂ ಅವರ ಜೀವನ ವೃತ್ತಾಂತ ಪ್ರತ್ಯಕ್ಷವಾಗಿ ಬಂದಿದೆ. ನಮ್ಮ ದೇಶದಲ್ಲಿ ಸತಿಪತಿಗಳ ಪ್ರಣಯವು ಮದುವೆಯಲ್ಲಿ ಮೊದಲಾಗಿ ಸಂಸಾರದಲ್ಲಿ ಹೇಗೆ ಪರಿಪಾಕಗೊಳ್ಳುವುದೆಂಬುದಕ್ಕೆ ತಮ್ಮ ದಾಂಪತ್ಯ ಜೀವನವನ್ನೇ ನಿದರ್ಶನವಾಗಿ ತೆಗೆದುಕೊಂಡು ಅವರು ಇಲ್ಲಿ ನಿರೂಪಿಸಿದ್ದಾರೆ. "ಸಂಸಾರವಂತರ ಮನೆಗಳಲ್ಲಿ . . . . ಅಗ್ನಿ ಸಾಕ್ಷಿಯಾಗಿ ದಾನವಾಗಿ ಬಂದ ಕನ್ಯೆಯನ್ನು ಸ್ನೇಹದ ಅಭ್ಯಾಸದಿಂದ, ಸುಖ ದುಃಖಗಳಲ್ಲಿ ಸಮಭಾಗಿಯಾಗುವ ಸಹಾನುಭೂತಿಯ ಅಂತಃಕರಣದಿಂದ ಸಖಿಯನ್ನಾಗಿ ಮಾಡುವ ಕ್ರಮವೊಂದು ಎಡೆಬಿಡದೆ ಸಾಗಿರುವದು. ಆ ಕ್ರಮದಲ್ಲಿ ಸ್ನೇಹದ ವಿವಿಧ ರೂಪಗಳೂ ತಮ್ಮ ತಮ್ಮ ಪಾತ್ರವನ್ನಾಡಿ ನಾಯಕ ಪಾತ್ರಕ್ಕೆ ರಸ ಭಾವಗಳ ಪ್ರಭಾವಲಯವನ್ನು ಕಟ್ಟುವವು. ಅಂತಹ ಚಿತ್ರವೊಂದು ಸಖೀಗೀತದಲ್ಲಿದೆ. ಕಾವ್ಯನಾಯಕನು ತನ್ನ ಸಖಿಗಾಗಿ ತಮ್ಮ ಜೀವನ-ಪೂರ್ವ ಭಾಗದ ಸ್ಮೃತಿಗಳನ್ನು ಹಾಡಲುದ್ಯುಕ್ತನಾಗಿದ್ದಾನೆ. ಮದುವೆಯ ದಿನದ ಸಂಜೆಯ ಸ್ಮೃತಿಯಿಂದ ಗೀತವು ಪ್ರಾರಂಭವಾಗುವದು . . ." ನಾಯಕನೂ ಅವನಿಗೆ "ವಿಧಿ ತಂದ ವಧು"ವೂ ಮೈಸಲಿಗೆ ಮನಸಲಿಗೆಗಳನ್ನು ಬೆಳಸಿ ಸಾವು ನೋವುಗಳನ್ನು ಜೊತೆಯಾಗಿ ಕಂಡು ಕಷ್ಟಸುಖಗಳನ್ನು ಒಟ್ಟಿಗೆ ಉಂಡು, ಇಷ್ಟಾದರೂ ಒಬ್ಬೊಬ್ಬರ ಬಾಲ್ಯ ಸಂಸಾರಗಳೂ ಮನಸ್ಸಿನ ಪರಿಪಾಕಗಳೂ ಬೇರೆ ಬೇರೆಯಾದದ್ದರಿಂದ ಗಂಡಿನ ಉತ್ಸಾಹ ಉದ್ಯಮಗಳು ಹೆಣ್ಣಿಗೆ ಅರ್ಥವಾಗದೆ ಹೆಣ್ಣಿನ ಮೌನ ಮುದ್ರೆಯನ್ನೊಡೆದು ಸಂತೈಸಲು ಗಂಡಿಗೆ ಸಾಗದೆ, ಒಟ್ಟಿಗೆ ಬಾಳುತ್ತಿದ್ದರೂ ಮನಸ್ಸುಗಳು ಕೆಲವು ಕಾಲ ಅಗಲಿ, ಈ ನಡುವೆ ಸತ್ಯಾಗ್ರಹದ ಚಳುವಳಿಯ ಕಾವು ನಾಯಕನಿಗೂ ತಟ್ಟಿ (—"ಹೆಳವನಿದ್ದಲ್ಲಿಗೆ ಹೊಳೆ ಬಂದಿತು"!) ಈತನು ಸೆರೆಮನೆ ವಿಪ್ರವಾಸಗಳೆಲ್ಲದರ ಬವಣೆಯನ್ನು ಪಡುವುದು; ಇನ್ನೊಂದು ಕಡೆ, ಈತನ ಕಾವ್ಯ ಕಲ್ಪನೆಯ ತುದಿಗೇರಿ "ಕೊಟ್ಟಿದ್ದೆ ರೂಪವು ಇಟ್ಟಿದ್ದೆ ಹುರುಳೆಂಬ" ರೀತಿಯಲ್ಲಿ ಸಾಗುವುದು; ಈ ಸತ್ತ್ವ ಪರೀಕ್ಷೆಯ ಕಥೆ—ಪ್ರಣಯದ

---

೧. ಉಳಿದ ಕವನಗಳಲ್ಲಿ 'ಚಿತ್ತಿಯ ಮಳೆಯ ಸಂಜೆ' ಒಂದನ್ನಾದರೂ ಹೆಸರಿಸಬೇಕಾಗಿತ್ತೆಂದು ಈಗ ನನಗೆ ತೋರುತ್ತದೆ. ಕವಿಯ ಬಾಯಿಂದ ಅದನ್ನು ಕೇಳಿದ ಬಳಿಕ ಅದರ ರಮ್ಯತೆ ಮನಮುಟ್ಟಿತು. ಬೆಳೆದ ಜೋಳದ ಹೊಲದಲ್ಲಿ ಹಾಯ್ದು ಬರುವ ಕೆಲಸಗಾರರ ಆಕೃತಿಗೆ ಕವಿಯ ಕಣ್ಣು ಇಲ್ಲಿಯ ಒಂದು "ನುಡಿ"ಯಲ್ಲಿ ಹೇಗೆ ಭವ್ಯತೆಯನ್ನು ಅಳವಡಿಸಿದೆ, ನೋಡಿ :

ದಿನಗೂಲಿಗೆ ದುಡಿದು ದಣಿದು
ತಣಿದು ಹೊರಟವರ ಮಾರಿ
ಎದಿಯೆತ್ತರ ಬೆಳೆಗೆ ಕಳಸ
ಇಟ್ಟಾಂಗ ಮೆರೆದಾವ.

ಎಲ್ಲ ಮುಖಗಳನ್ನೂ ಕಂಡು ಪರಿಪಾಕ ಹೊಂದುತ್ತಿರುವ ಜೀವಗಳ ಕಥೆ—ಇಲ್ಲಿ ಉದ್ದಕ್ಕೂ ಬಂದಿದೆ. ಇದು ಮುಗಿಯದ ಕಥೆ. ಈಗ ಅಚ್ಚುಮಾಡಿರುವ ಸುಮಾರು ಸಾವಿರ ಚರಣಗಳನ್ನುಳ್ಳ ಕಾವ್ಯವನ್ನು ಕವಿಗಳು 'ಪೂರ್ವಾನುರಾಗ'ವೆಂದು ಕರೆದಿದ್ದಾರೆ. ಇನ್ನು ಮುಂದಕ್ಕೆ ಇದು ಹೇಗೆ ತಿರುಗುವುದೋ, ಯಾವ ನೆಲೆಗೆ ಮುಟ್ಟುವುದೋ; ತನ್ನ ಕಾವ್ಯಕ್ಕೆ ತಾನೇ ನಾಯಕನಾದ ಕವಿಗೆ ತಾನೆ ಹೇಗೆ ತಿಳಿಯಬೇಕು! ಮೂರು ಮೂರು ನುಡಿಗಳಿಗೊಮ್ಮೆ ನಿನದಿಸುವ

ನಿನಗೂ ನನಗೂ ಅಂಟಿದ ನಂಟಿನ
ಕೊನೆಬಲ್ಲವರಾರು ಕಾಮಾಕ್ಷಿಯೇ ।—

ಎಂಬ ಪಲ್ಲವಿ ಈ ಭಾವವನ್ನೇ ಪ್ರಬಲಪಡಿಸುತ್ತದೆ.

ವಾಚಕರ ಮನಸ್ಸನ್ನು ಒಲಿಸಿಕೊಳ್ಳಲು ಕಥೆಯ ಪ್ರವೇಶವೇ ಸಾಕು. ಮದುವೆಯ ಕಾಲದಲ್ಲಿ ಪ್ರಕೃತಿ ಹೀಗಿತ್ತಂತೆ :

ಮಾಂದಳಿರ ತೋರಣ ಹೂಮಿಡಿ ಗುಡಿಗಟ್ಟಿ
ಮಧುಮಾಸ ಹೊರಟಿತ್ತು ನಿಬ್ಬಣಕೆ
ಚಂದಿರ ದೇವನ ಮುಗಿಲ ಮಂದಿರದಲ್ಲಿ
ಕಣ್ಣಿದಿರು ಕೌಮುದಿ ಕುಣಿಯುತಿರೆ . . .

ಹೀಗೆಯೇ, ಕಥೆಯ ಉದ್ದಕ್ಕೂ ದಂಪತಿಗಳ ಜೀವನದ ಕಷ್ಟಸುಖಗಳ ಚಿತ್ರದೊಡನೆ ಪ್ರಕೃತಿಯ ಬೇರೆಬೇರೆ ಮುಖಗಳ ಚಿತ್ರವೂ ರಮ್ಯವಾಗಿ ಬೆರೆದು ಬರುತ್ತದೆ. 'ಸಖೀಗೀತ'ದೊಳಗೆ ಒಂದು ಲಘು ಋತುಸಂಹಾರವೇ ಅಡಕವಾಗಿದೆಯೆನ್ನಬಹುದು.

ಆತ್ಮಕಥೆಯನ್ನು ಹದಗೆಡಿಸದೆ ಬರೆಯುವುದು ಕಠಿನ. ಅದನ್ನು ಗೀತವಾಗಿ ಹಾಡಿ ರಸವುಕ್ಕಿಸುವುದಂತೂ ಅತಿ ಕಠಿನ. ಇಂಥ ಕಾರ್ಯವನ್ನು 'ಸಖೀಗೀತ'ದಲ್ಲಿ ಬೇಂದ್ರೆಯವರು ಮನೋಹರವಾಗಿ ಸಾಧಿಸಿದ್ದಾರೆ. ತನ್ನ ಕೃತಿ ರಮ್ಯವಾಯಿತೆಂಬುದರ ಅರಿವು ಕವಿಗೂ ಉಂಟು :

"ಪಟ್ಟ ಪಾಡೆಲ್ಲವು ಹುಟ್ಟು-ಹಾಡಾಗುತ
ಹೊಸವಾಗಿ ರಸವಾಗಿ ಹರಿಯುತಿವೆ"

ಎಂದು ಗೀತದ ಮೊದಲಲ್ಲೂ,

"ಕುಣಿತದ ಹಾಡಿದು ಕುಣಿಯ ಹಚ್ಚಿತು ಜಗಕೆ
ಕಲ್ಲಾದ ಮನಗಳ ಕರಗಿಸಿತು"

ಎಂದು ಅದರ ಕೊನೆಯಲ್ಲೂ ಅವರು ಹೇಳಿದ್ದಾರೆ. ಕವಿಯ ಮಾತೇ ಆದರೂ ಇದೆಲ್ಲ ದಿಟ.

೧೯೪೧]

ಸಮಾಲೋಕನ, ೧೯೫೮

●

'ಅಹಲ್ಯೆ'*

ಕಾವ್ಯವಸ್ತುವನ್ನು ಹುಡುಕತಕ್ಕವರಿಗೆ ರಾಮಾಯಣ ಮಹಾಭಾರತಗಳು ಕೊರೆಬೀಳದ ಗಣಿಗಳ ಹಾಗೆ. ಮುಖ್ಯಕಥೆ, ಪ್ರಧಾನವ್ಯಕ್ತಿಗಳು–ಇವರ ಮಾತಿರಲಿ, ಈ ಆಕರಗ್ರಂಥಗಳಲ್ಲಿ ರಮ್ಯವಾದ ಬಗೆಬಗೆಯ ಉಪಾಖ್ಯಾನಗಳೇ ಪ್ರಸಂಗವಶದಿಂದ ಎಷ್ಟೋ ಬಂದಿರುತ್ತವೆ. ಇವುಗಳಲ್ಲಿ ಒಂದೊಂದನ್ನೂ ಅದರದರ ಸತ್ತ್ವಕ್ಕೆ ತಕ್ಕಂತೆ ವಿಸ್ತರಿಸಲು ಮೂಲಕವಿಗೆ ಆಗಿರುವುದಿಲ್ಲ. ಕೆಲವೇ ಮಾತುಗಳಲ್ಲಿ ಒಂದು ಸಂದರ್ಭವನ್ನು ಸೂಚಿಸಿ, ಒಬ್ಬ ವ್ಯಕ್ತಿಯನ್ನು ರೂಪಿಸಿ ಅವನು ಮುಂದೆ ಸಾಗಿರುತ್ತಾನೆ. ಆದರೆ ಆ ಮುಂದೆ ಬರುವ ಕವಿಗೆ ಇಷ್ಟು ದಿಗ್ದರ್ಶನ ಸಾಕು. ಮೂಲದಲ್ಲಿ ರೇಖಾಚಿತ್ರಗಳಂತೆ ಕಾಣಿಸುತ್ತಿದ್ದವು ಇವನ ಕನಸಿನಲ್ಲಿ ಜೀವ ತುಂಬಿದ ಹೆಣ್ಣುಗಂಡುಗಳಾಗುತ್ತವೆ. ಅಲ್ಲಿ ಬಹುಮಟ್ಟಿಗೆ ಗುಪ್ತಗಾಮಿನಿಯಾಗಿದ್ದ ರಸವಾಹಿನಿ ಇಲ್ಲಿ ತುಂಬುಹೊಳೆಯಾಗಿ ಹೊಮ್ಮುತ್ತದೆ. ಅಲ್ಲಿ ದೂರದ ಮಿಂಚಿನಂತೆ ಅಸ್ಫುಟವಾಗಿ ಸುಳಿದು ಬಯಲಾಗುವ ಜೀವನದರ್ಶನ ಇಲ್ಲಿ ಉಜ್ಜ್ವಲದೀಪವಾಗಿ ಉರಿದು ಒಟ್ಟು ಕಾವ್ಯವನ್ನು ಬೆಳಗುತ್ತದೆ. ಈ ಇಂದ್ರಜಾಲವನ್ನು ತನ್ನ ಪ್ರತಿಭಾಬಲದಿಂದ ನಿರ್ಮಿಸುವಾಗ ಮೂಲೋಪಾಖ್ಯಾನದ ಭಾವೋನ್ನತಿಗೆ ಹಾನಿ ಬಾರದಂತೆ, ಅಲ್ಲಿಯ ಪಾತ್ರಗಳ ಘನತೆ ಕುಂದದಂತೆ

---

* ಪು. ತಿ. ನರಸಿಂಹಾಚಾರ್ : ಅಹಲ್ಯೆ (೧೯೪೧) — ಪ್ರಸ್ತಾವನೆ.

ನೋಡಿಕೊಳ್ಳುವ ಭಾರ ಈ ಕವಿಯದು. ಅಷ್ಟನ್ನು ಅವನು ನಿರ್ವಹಿಸಿದರೆ ತೀರಿತು; ತನ್ನ ದೃಷ್ಟಿಗೆ ಅನುಸಾರವಾಗಿ ಮೂಲದ ವಸ್ತುಪಾತ್ರಗಳನ್ನು ಬೆಳಸುವ, ಮಾರ್ಪಡಿಸುವ ಸ್ವಾತಂತ್ರ್ಯ ಇವನಿಗುಂಟು. ಭಾಸ, ಕಾಳಿದಾಸ ಮೊದಲಾದ ಮಹಾಕವಿಗಳ ಕಾಲದಿಂದಲೂ ನಡೆದು ಬಂದಿರುವ ಪದ್ಧತಿಯೇ ಇದು. ಅಹಲ್ಯಾವೃತ್ತಾಂತವನ್ನು ಅವಲಂಬಿಸಿ ರಚಿತವಾಗಿರುವ ಈ ಗೀತರೂಪಕವನ್ನೂ ಸಹೃದಯರು ಇದೇ ದೃಷ್ಟಿಯಿಂದಲೇ ಅವಲೋಕಿಸಿ ಆದರಿಸುವರೆಂಬುದರಲ್ಲಿ ಸಂಶಯವಿಲ್ಲ.

ಇಂದ್ರ-ಅಹಲ್ಯೆಯರ ಸಂಗತಿ ಭಾರತೀಯ ಸಾಹಿತ್ಯಕ್ಕೆ ಚಿರಪರಿಚಿತವಾದದ್ದು. ಇಂದ್ರನಿಗೆ "ಅಹಲ್ಯಾಯ್ಯೆ ಜಾರಃ" ಎಂಬ ವಿಶೇಷಣ ವೇದದಲ್ಲಿಯೇ ದೊರೆತಿದೆ. ಇವರ ಕಥೆ ಖಚಿತವಾದ ಆಕಾರವನ್ನು ತಾಳಿ ಮೊದಲುಕಾಣಿಸಿಕೊಳ್ಳುವುದು ವಾಲ್ಮೀಕಿಯ ರಾಮಾಯಣದಲ್ಲಿ. ಇಲ್ಲಿ ಅದು ಕೇವಲ ವ್ಯಾಮೋಹದ ವೃತ್ತಾಂತವಾಗಿ ಮುಗಿದಿಲ್ಲ; ಅಲ್ಲಿಗೇ ನಿಲ್ಲುವುದಾಗಿದ್ದರೆ ಅದಕ್ಕೆ ರಾಮಾಯಣದಲ್ಲಿ ಬಹುಶಃ ಸ್ಥಾನವೇ ಇರುತ್ತಿರಲಿಲ್ಲ. ಶ್ರೀರಾಮನ ದರ್ಶನದಿಂದ ಅಹಲ್ಯೆ ಪರಿಶುದ್ಧಳಾದಳೆಂಬುದೇ ವಾಲ್ಮೀಕಿಗೆ ಮುಖ್ಯವಾದ ವಿಷಯ; ಅದರ ನಿರೂಪಣೆಗೆ ಪೂರ್ವಭಾವಿಯಾಗಿ ಈ ಕಾಮ ಕಥೆಯನ್ನೂ, ಅದರ ಫಲವಾಗಿ ಒದಗಿದ ಶಾಪವಿಚಾರವನ್ನೂ ಅವನು ಹೇಳ ಬೇಕಾಯಿತು. ಅಹಲ್ಯೋಪಾಖ್ಯಾನವು ನಮ್ಮ ಪೌರಾಣಿಕ ಕಥೆಗಳ ರಾಶಿಯಲ್ಲಿ ಎಲ್ಲೋ ಒಂದು ಮೂಲೆಯಲ್ಲಿ ಮರೆಯಾಗದೆ ವಿಶೇಷ ಪ್ರಸಿದ್ಧಿ ಹೊಂದಿದ್ದಕ್ಕೆ ಅದು ರಾಮನ ಮಹಿಮೆಗೆ ನಿದರ್ಶನವಾಗಿ ಬಂದದ್ದೇ ಕಾರಣವೆನ್ನಬಹುದು.

ಇಂದ್ರನು ಅಹಲ್ಯೆಯನ್ನು ಏಕೆ ಕಾಮಿಸಿದನೆಂಬುದನ್ನೂ ಅವನ ಮೋಹಕ್ಕೆ ಅವಳು ಹೇಗೆ ಒಳಗಾದಳೆಂಬುದನ್ನೂ ವಾಲ್ಮೀಕಿ ವಿಸ್ತರಿಸಿಲ್ಲ. ಮಿಥಿಲೆಗೆ ಹೋಗುವಾಗ ಆ ಊರಹತ್ತಿರದಲ್ಲಿ ಪಾಳುಬಿದ್ದ ಗೌತಮಾಶ್ರಮವನ್ನು ಕಂಡು ರಾಮನು ಕೇಳಿದ ಪ್ರಶ್ನೆಗೆ ಉತ್ತರವಾಗಿ ವಿಶ್ವಾಮಿತ್ರನು ಅಹಲ್ಯೆಯ ಸಂಗತಿಯನ್ನು ಹೇಳುತ್ತಾನೆ. ಚಿಕ್ಕವಯಸ್ಸಿನ ರಾಮಲಕ್ಷ್ಮಣರಿಗೆ ಅದನ್ನು ಬೆಳಸಿಹೇಳುವುದು ಅನುಚಿತವೆಂದು ಅವನು ಭಾವಿಸಿದನೋ ಏನೋ, ಅಂತೂ ಅದು ಇಲ್ಲಿ ಅತಿ ಸಂಕ್ಷಿಪ್ತವಾಗಿ ಬಂದಿದೆ. ಮುನಿವೇಷದಲ್ಲಿ ಇಂದ್ರನು ಬಂದು ಅಹಲ್ಯೆಯ ಸಹವಾಸವನ್ನು ಕೋರಿದನು. ಅವನು ವೇಷಧಾರಿ ಯೆಂಬುದುನ್ನು ಅರಿತೂ ಅರಿತೂ ಅವಳು ಒಪ್ಪಿದಳು. "ಮತಿಂ ಚಕಾರ ದುರ್ಮೇಧಾ ದೇವರಾಜಕುತೂಹಲಾತ್" ಎಂದು ಒಂದು ಮಾತಿನಲ್ಲಿ ಅವಳ ಮಹೋಭಾವವನ್ನು ವಾಲ್ಮೀಕಿ ಸೂಚಿಸುತ್ತಾನೆ. ಕಾಮಿಗಳಿಬ್ಬರ ಆಸೆಯೂ ಈಡೇರಿತು. ಇಲ್ಲಿಂದ ಬೇಗ ಹೊರಟುಹೋಗೆಂದು ಅಹಲ್ಯೆ ಈ "ಸುರಶ್ರೇಷ್ಠ"ನಿಗೆ ಎಚ್ಚರಿಕೆಕೊಟ್ಟಳು. ಗೌತಮನು ಬಂದುಬಿಟ್ಟಾನೆಂದು ಇಂದ್ರನೂ ಅಳುಕುತ್ತಾ ಆಶ್ರಮದಿಂದ ಹೊರಬಿದ್ದನು. ಆದರೆ ತಪೋನಿಧಿ ಗೌತಮನು ತೀರ್ಥೋದಕದಲ್ಲಿ ಮಿಂದು ದರ್ಭೆ ಸಮಿತ್ತುಗಳನ್ನು ಕೈಯಲ್ಲಿ ಹಿಡಿದು ಬೆಂಕಿಯಂತೆ ಬೆಳಗುತ್ತಾ ಎದುರಿಗೆ ಬಂದೇಬಿಟ್ಟನು. ಅವನನ್ನು ನೋಡಿ ಇಂದ್ರನು ಬೆದರಿದನು; ಅವನ ಮುಖ ಬಣ್ಣಗುಂದಿತು. ತನ್ನ ವೇಷವನ್ನು ತಾಳಿದ್ದ

ಈ ವಂಚಕನನ್ನು ಕಂಡು ಗೌತಮನು ರೋಷದಿಂದ, ನೀನು "ವಿಫಲ"ನಾಗೆಂದು ಶಪಿಸಿದನು. ಬಳಿಕ ಅಹಲ್ಯೆಯನ್ನು ಕುರಿತು,

> "ಇಹ ವರ್ಷಸಹಸ್ರಾಣಿ ಬಹೂನಿ ತ್ವಂ ನಿವತ್ಸ್ಯಸಿ
> ವಾಯುಭಕ್ಷಾ ನಿರಾಹಾರಾ ತಪ್ಯಂತೀ ಭಸ್ಮಶಾಯಿನೀ
> ಅದೃಶ್ಯಾ ಸರ್ವಭೂತಾನಾಮಾಶ್ರಮೇಽಸ್ಮಿನ್ ನಿವತ್ಸ್ಯಸಿ
> ಯದಾ ಚೈತದ್ವನಂ ಘೋರಂ ರಾಮೋ ದಶರಥಾತ್ಮಜಃ
> ಆಗಮಿಷ್ಯತಿ ದುರ್ಧರ್ಷಸ್ತದಾ ಪೂತಾ ಭವಿಷ್ಯಸಿ
> ತಸ್ಯಾತಿಥ್ಯೇನ ದುರ್ವೃತ್ತೇ ಲೋಭಮೋಹವಿವರ್ಜಿತಾ
> ಮತ್ಸಕಾಶೇ ಮುದಾ ಯುಕ್ತಾ ಸ್ವಂ ವಪುರ್ಧಾರಯಿಷ್ಯಸಿ"

ಹೀಗೆ ಶಾಪವನ್ನೂ ಅದರ ಪರಿಹಾರವನ್ನೂ ಒಂದೇ ಉಸಿರಿನಲ್ಲಿ ಹೇಳಿ ಆಶ್ರಮವನ್ನು ಬಿಟ್ಟು, ಹಿಮವತ್ಪರ್ವತದಲ್ಲಿ ತಪಸ್ಸು ಮಾಡುತ್ತಾ ನಿಂತನು.

ಇಷ್ಟನ್ನು ಕೇಳಿದ ಬಳಿಕ, ಇಂದ್ರನಿಗೆ ಶಾಪವಿಮೋಚನೆ ಹೇಗಾಯಿತೆಂಬುದನ್ನೂ ಸಂಗ್ರಹವಾಗಿ ರಾಮನು ಕೇಳಿ ಅಹಲ್ಯೋದ್ಧಾರಕ್ಕಾಗಿ ವಿಶ್ವಾಮಿತ್ರ ಲಕ್ಷ್ಮಣರೊಂದಿಗೆ ಆಶ್ರಮವನ್ನು ಪ್ರವೇಶಿಸುತ್ತಾನೆ. ಅದುವರೆಗೂ ಅದೃಶ್ಯಳಾಗಿದ್ದ ಅಹಲ್ಯೆ ರಾಮನ ದರ್ಶನದಿಂದ ಶಾಪವಿಮುಕ್ತಳಾಗಿ ಎಲ್ಲರ ಕಣ್ಣಿಗೂ ಕಾಣಿಸುತ್ತಾಳೆ. ರಾಮಲಕ್ಷ್ಮಣರು ಅವಳ ಪಾದಗಳಿಗೆ ನಮಸ್ಕರಿಸುತ್ತಾರೆ; ಗೌತಮನ ವಚನವನ್ನು ನೆನೆದು ಅವಳೂ ಪ್ರತಿನಮಸ್ಕಾರ ಮಾಡುತ್ತಾಳೆ. ದೇವದುಂದುಭಿ ಮೊಳಗುತ್ತದೆ; ಹೂವಿನ ಮಳೆ ಕರೆಯುತ್ತದೆ. ಗೌತಮನು ಪರಿಶುದ್ಧೆಯಾದ ಅಹಲ್ಯೆಯೊಡಗೂಡಿ ಸುಖಿಯಾಗುತ್ತಾನೆ. ಅವನಿಂದ ಅತಿಶಯವಾದ ಪೂಜೆಯನ್ನು ಸ್ವೀಕರಿಸಿ ರಾಮನು ಮಿಥಿಲೆಗೆ ತೆರಳುತ್ತಾನೆ.

ಹೀಗೆ ವಾಲ್ಮೀಕಿ ನಾಲ್ಕು ಮಾತುಗಳಲ್ಲಿ ರೇಖಿಸಿ ಕೈಬಿಟ್ಟ ಪ್ರಸಂಗ ವಾಚಕರ ಕುತೂಹಲವನ್ನು ಕೆರಳಿಸದೆ ಬಿಡುವುದಿಲ್ಲ. ಅಹಲ್ಯೆ, ಇಂದ್ರ, ಗೌತಮ—ಈ ಮೊದಲಾದವರ ನಡುವಳಿಕೆಯ ರೀತಿಯೇನು, ಅರ್ಥವೇನು? ಇವರನ್ನು ಉದ್ರೇಕಿಸಿದ ಭಾವಗಳೇನು? ಇವರ ಕಥೆಯಲ್ಲಿ ಅಡಕವಾಗಿರುವ ಸಮಸ್ಯೆಯೇನು?—ಈ ಪ್ರಶ್ನೆಗಳು ಮನಸ್ಸನ್ನು ಕೆಲವು ಕಾಲವಾದರೂ ಬಾಧಿಸುತ್ತವೆ. ವಾಲ್ಮೀಕಿಯಿಂದ ಈಚೆಗೆ ಅನೇಕ ಪುರಾಣಕಾರರು ಈ ಕಥೆಯನ್ನು ನಿರೂಪಿಸಿದ್ದೇನೋ ನಿಜ. ಆದರೆ ಅವರಿಗೆಲ್ಲ ಇಲ್ಲಿ ಮುಖ್ಯವಾಗಿ ಕಂಡದ್ದು ಶ್ರೀರಾಮನ ಮಹಿಮೆ. ವಾಲ್ಮೀಕಿಯ ಕಥೆಯಲ್ಲಿ ಮಹಿಮಾಕರನಾಗಿದ್ದರೂ ಇನ್ನೂ ಮಾನವನಾಗಿಯೇ ಉಳಿದಿರುವ ರಾಮನು ಇವರ ಕೈಯಲ್ಲಿ ಅಮಾನುಷ ದೈವವಾಗುತ್ತಾನೆ. ಅವನ ಅತಿಶಯವನ್ನು ಬಗೆಬಗೆಯ ವೈಖರಿಯಿಂದ ಬಣ್ಣಿಸುವುದರಲ್ಲೇ ಇವರಿಗೆ ಆಸಕ್ತಿ. ಆಧುನಿಕ ಯುಗದ ಕವಿಯೊಬ್ಬರಿಗೆ, ಕೊನೆಯಲ್ಲಿ ರಾಮನಿಂದ ನಡೆದ ಅದ್ಭುತದ ಜೊತೆಗೆ ಅದರ ಹಿಂದಿನ ಪ್ರಸಂಗಗಳೂ ರಸಭಾವಗರ್ಭಿತವಾಗಿ ಕಾಣಿಸಿದುವು. ಅವರ ಕಲ್ಪನೆಯ ರಂಗಮಂಟಪದಲ್ಲಿ ವಾಲ್ಮೀಕಿಯ

ಪಾತ್ರಗಳು ಜೀವಕಳೆ ತುಂಬಿ ನಿಂತರು; ತಮ್ಮ ಹಿಂದಿನ ಕಥೆಯನ್ನು ಸವಿಸ್ತರವಾಗಿ ಅಭಿನಯಿಸಿದರು. ಅದರ ರೀತಿ ಹೇಗೆಂಬುದನ್ನು ನಮ್ಮ ಮುಂದಿರುವ ಕೃತಿ ತೋರಿಸುತ್ತದೆ. ಇದನ್ನು ರಚಿಸುವಾಗ ನಾಟಕಕಾರರು ವಾಲ್ಮೀಕಿಯ ಕಾವ್ಯದಲ್ಲಿ ದೊರೆಯುವ ಪರಿಮಿತವಾದ ಸೂಚನೆಗಳನ್ನು ಎಚ್ಚರಿಕೆಯಿಂದ ಅನುಸರಿಸಿದ್ದಾರೆ; ಅಲ್ಲಿ ನಿಗೂಢವಾಗಿದ್ದ ಭಾವಗಳು ಪರಿಸ್ಫುಟವಾಗುವಂತೆ, ಉಜ್ವಲವಾಗುವಂತೆ ನೋಡಿಕೊಂಡಿದ್ದಾರೆ.

ನಾಟಕದ ಹೆಸರೇ ಸೂಚಿಸುವಂತೆ ಇದು ಅಹಲ್ಯೆಯ ಜೀವನ ಕಥೆ. ಅವಳು ದೇವೇಂದ್ರನ ಮಹಿಮೆಗೆ ಬೆರಗಾಗಿ, ಅವನ ವಿಭವಕ್ಕೆ ಬೆರಗಾಗಿ ಒಂದು ಗಳಿಗೆಯ ವಿಲಾಸ ವಿಭ್ರಮಕ್ಕೆ ತನ್ನ ಶೀಲಸರ್ವಸ್ವವನ್ನೇ ಸೂರೆಗೊಟ್ಟಳು. ಮಹಾಮುನಿಯ ಪತ್ನಿ ಹೀಗೆ ಕಾಮಚಾಪಲ್ಯಕ್ಕೆ ಒಳಗಾಗುವುದು ಸಾಮಾನ್ಯ ವಿಷಯವಲ್ಲ. ಅದರಲ್ಲೂ ಮಾನವರ ಆರಾಧ್ಯದೈವವಾಗಿ, ಅವರನ್ನು ಪಾಲಿಸತಕ್ಕವನಾದ ಇಂದ್ರನು ಹೀಗೆ ಮಾನವ ಮಹಿಳೆಯೊಬ್ಬಳ ಪತನಕ್ಕೆ ಕಾರಣವಾಗುವುದಂತೂ ಅತಿ ವಿಚಿತ್ರ. ಆದರೆ ಈ ಕಥೆಯೆಲ್ಲಕ್ಕೂ ಮೂಲಬೀಜ ಅವರವರ ಪ್ರವೃತ್ತಿಯಲ್ಲೆ ಹೇಗೆ ಇತ್ತೆಂಬುದು ನಾಟಕದಲ್ಲಿ ಸುಸ್ಪಷ್ಟವಾಗುತ್ತದೆ. ಅಹಲ್ಯೆ ಪತಿಯೊಂದಿಗೆ ಸಂಸಾರ ಹೂಡಿ ಇನ್ನೂ ಹೆಚ್ಚು ದಿನವಾಗಿಲ್ಲ. ಪ್ರಥಮಾನುರಾಗದ ಫಲವಾಗಿ ಮಗನೊಬ್ಬನು ಜನಿಸಿದ ಬಳಿಕ, ಇಬ್ಬರೂ ಒಂದಿಗೇ ಬಾಳುತ್ತಿದ್ದರೂ ಒಬ್ಬರ ಹಂಬಲನ್ನೊಬ್ಬರು ಅರಿತುಕೊಳ್ಳದೆ ಹೋಗುವರು. ಗೌತಮನು ಮೂರು ಲೋಕವನ್ನೂ ಗೆಲ್ಲುವಂಥ ಶಕ್ತಿಯನ್ನು ಸಾಧಿಸಬೇಕೆಂದು ಹಠತೊಟ್ಟು ಉಗ್ರತಪಸ್ಸಿನಲ್ಲಿ ಮಗ್ನನಾಗಿದ್ದಾನೆ; ಇದಕ್ಕಾಗಿ ತನ್ನ ಇಂದ್ರಿಯಗಳನ್ನೆಲ್ಲಾ ಅದುಮಿ, ಧರ್ಮಪತ್ನಿಯನ್ನು ಕೂಡ ಉಪೇಕ್ಷಿಸಿ ಶುಷ್ಕ ನಿಯಮಗಳನ್ನು ಪಾಲಿಸುತ್ತ ಒತ್ತಟ್ಟಿಗಿದ್ದಾನೆ. ಇತ್ತ ಅಹಲ್ಯೆ ಒಂಟಿ;-ಭೋಗದ ಆಸೆ ಇನ್ನೂ ತಣಿಯದ ಎಳಹರೆಯದಲ್ಲಿ ಒಂಟಿ. ಅಲ್ಲದೆ, ಈ ತಪಸ್ಸಿನಿಂದ ತನ್ನ ಗಂಡನು ಸಾಧಿಸುವ ಫಲದಲ್ಲಿ ಅವಳಿಗೆ ನೆಚ್ಚಿಕೆಯೂ ಕಡಿಮೆ. ಈ ಸಮಯದಲ್ಲಿ ದೇವತೆಗಳ ಬೇಹುಕಾತಿಯಾದ ರಂಭೆಯಿಂದ ಸ್ವರ್ಗಕ್ಕೂ ಭೂಮಿಗೂ ನಿಕಟಸಂಬಂಧವೊದಗುತ್ತದೆ. ಅವಳು ಗೌತಮನ ತಪಸ್ಸನ್ನು ಕೆಡಿಸಲು ಬಂದು ಅವನ ಕೋಪಕ್ಕೆ ಆಹುತಿಯಾಗುತ್ತಿರುವಾಗ, ಅವಳನ್ನು ಅಹಲ್ಯೆ ಸ್ತ್ರೀಸಹಜವಾದ ಕರುಣೆಯಿಂದಲೂ ದೇವತೆಗಳು ಇದಕ್ಕೆ ಪ್ರತೀಕಾರವನ್ನೆಸಗಬಹುದೆಂಬ ಭೀತಿಯಿಂದಲೂ ಉಳಿಸುತ್ತಾಳೆ. ತನ್ನ ರಂಭೆಗೂ ಸೋಲದ ಈ ಮಾನವ ತಪಸ್ವಿಯ ಆಳವನ್ನು ಅಳೆಯಬೇಕೆಂದು ಇನ್ನು ಇಂದ್ರನೇ ರಂಗಸ್ಥಳಕ್ಕೆ ಪ್ರವೇಶಿಸುತ್ತಾನೆ.

ಇಂದ್ರನು ಗಗನದ ಒಡೆಯ; ಮಳೆ ಮೋಡ ಗುಡುಗು ಮಿಂಚುಗಳು ಅವನ ಕಣ್ಣು ಸನ್ನೆಯನ್ನರಿತು ಆಡತಕ್ಕವು. ಅವನ ಇಷ್ಟದಂತೆ ಪ್ರಕೃತಿ ಒಂದು ಕ್ಷಣದಲ್ಲಿ ಕರಾಳದರ್ಶನೆಯಾಗಿ ಎಂಥವರ ಎದೆಯನ್ನಾದರೂ ತಲ್ಲಣಗೊಳಿಸಬಹುದು; ಇನ್ನೊಂದು ಕ್ಷಣದಲ್ಲಿ ಮುಗುಳುನಗೆಯನ್ನು ಬೀರಿ ಕಾಂತೆಯಂತೆ ನಲವುಕ್ಕಿಸಬಹುದು. ಸುರಸುಂದರಿಯರೆಲ್ಲ ದೇವೇಂದ್ರನ ಊಳಿಗದ ಹೆಣ್ಣುಗಳು; ಆದರೆ ಇದುವರೆಗೆ ಗಾಢಪ್ರೇಮವೆಂದರೆ ಏನೆಂಬುದನ್ನು ಅವನು ಅರಿತಿರಲಾರನು. ಅವನ ಮನಸ್ಸಿನಲ್ಲಿ

ಒಂದು ಬಯಕೆ ಸುಳಿಯುವುದೇ ತಡ, ಅದನ್ನು ಸಲ್ಲಿಸಲು ದೇವಾಂಗನೆಯರು ನುಗ್ಗಿ ಬರುವರು; ಇಂಥವರ ಸಹವಾಸದಲ್ಲಿ ಅವನಿಗೆ ಹೃದಯದ ಆಳವನ್ನು ಭೇದಿಸಿಕೊಂಡು ಮೂಡುವ ಒಲಮೆಯ ಅನುಭವ ಹೇಗೆ ತಾನೆ ಆಗಬೇಕು? ಆ ಅನುಭವವನ್ನು ಒದಗಿಸುವುದು ಅಹಲ್ಯೆಯ ಪಾಲಿಗೆ ಬಂದಿತು.

ರಂಭೆಯ ಬೆಡಗಿಗೆ ಸಗ್ಗದ ಗೌತಮನ ತಪಸ್ಸನ್ನು ಮನ್ಮಥನ ಸಹಾಯದಿಂದ ಮುರಿಯಬೇಕೆಂದು ಇಂದ್ರನು ಹವಣಿಸುತ್ತಾನೆ; ಅಹಲ್ಯೆಯನ್ನು ಕಂಡು ತಾನೇ ಮನ್ಮಥನ ಬಾಣಕ್ಕೆ ಗುರಿಯಾಗುತ್ತಾನೆ. ಪರಸತಿಯಲ್ಲಿ ಕುತೂಹಲಪಡುವುದು ತರವಲ್ಲವೆಂದು ಮೊದಲು ಅವನು ಅಂದುಕೊಂಡರೂ ಈ ನೀತಿಯ ಕಟ್ಟೆಲ್ಲಾ ಅರೆಕ್ಷಣದಲ್ಲಿ ಒಡೆದುಹೋಗುತ್ತದೆ. ಕುತೂಹಲವು ಆಸಕ್ತಿಯಾಗುತ್ತದೆ, ಆಸಕ್ತಿ ಅನುರಕ್ತಿಯಾಗುತ್ತದೆ. ಆಸೆ, ಚಿಂತೆ, ಈರ್ಷ್ಯೆ, ಹರ್ಷ, ವಿಷಾದ ಮೊದಲಾದ ಪ್ರೇಮಾನುಭವದ ಹಲವು ಮೆಟ್ಟಲುಗಳನ್ನು ಅವನು ಏರುತ್ತಾನೆ. ದೇವೇಂದ್ರನಿಗಿರಬೇಕಾದ ದಿವ್ಯದರ್ಪವೇ ಇಲ್ಲಿ ಉಡುಗಿ ಹೋಗುತ್ತದೆ. ಕಡೆಗೆ ಅಹಲ್ಯೆಯನ್ನು ಪಡೆಯಲು ಅವನು ಅವಳ ಪತಿಯ ವೇಷದಿಂದ ಆಶ್ರಮವನ್ನು ಹೊಗುವುದಕ್ಕೂ ಹಿಂಜರಿಯುವುದಿಲ್ಲ. "ಸತಿ ಮೊದಲೆ ಬೆಚ್ಚದೊಲು ಪತಿರೂಪವಾಂತೆ" ಎಂದು ತನಗೆ ತಾನೇ ಸಮಾಧಾನ ಹೇಳಿಕೊಳ್ಳುತ್ತಾನೆ. "ದಿಟವರಿಯಲೇನನೆಸಪಳೊ ಕಾಣೆ ಕಾಂತೆ" ಎಂದು ಶಂಕಿಸುತ್ತಲೇ ಬರುತ್ತಾನೆ.

ಆದರೆ ಅವನ ವ್ಯಾಮೋಹವನ್ನು ತನ್ನ ಸತೀತ್ವದ ಜ್ವಾಲೆಯಿಂದ ಸುಟ್ಟು ಬಿಡುವ ಶಕ್ತಿ ಅಹಲ್ಯೆಗೆ ಉಳಿದಿಲ್ಲ. ಭೋಗಾಪೇಕ್ಷೆಯ ಹಸಿ ಅವಳ ಹೃದಯದಲ್ಲಿ ಇದ್ದೇ ಇತ್ತು; ಪತಿಯ ಉಪೇಕ್ಷೆ ಅದನ್ನು ಇನ್ನಷ್ಟು ಹೆಚ್ಚಿಸಿತು. ಇದರ ಜೊತೆಗೆ, ತಾನೂ ಸಮಸ್ತರೂ ಅರ್ಚಿಸಿ ಆರಾಧಿಸುತ್ತಿದ್ದ ಇಂದ್ರನ ಸಿರಿ ಅವಳ ಮನಸ್ಸನ್ನು ಮರುಳು ಗೊಳಿಸಿತ್ತು. ಅವನ ಕೈಹಿಡಿದಿರುವ ಶಚಿಯ ಪುಣ್ಯವೇ ಪುಣ್ಯವೆಂದು ಅವಳು ಅಂದುಕೊಳ್ಳುತ್ತಿರುತ್ತಾಳೆ. ತಕ್ಕ ಕಾಲದಲ್ಲಿ ಗಂಡನು ಬಹಿಮುರ್ಖನಾಗಿ, ತನ್ನ ಬಳಿಗೆ ಬಂದಿದ್ದ ಅಹಲ್ಯೆಯನ್ನು ಲಲ್ಲೈಸಿ ತನ್ನ ಪ್ರೇಮದ ರಕ್ಷೆಯನ್ನು ಕಟ್ಟಿದ್ದರೆ,—ಅವಳು ಮುಂದಿನ ದುಃಖಕ್ಕೆ ಗುರಿಯಾಗುತ್ತಿರಲಿಲ್ಲ. ಆದರೆ ಕಥೆ ಬೇರೆ ರೀತಿಯಾಗಿ ನಡೆಯುವುದಿತ್ತು.

ನೂರು ಆಸೆಗಳಿಗೆ ಅಹಲ್ಯೆಯ ಹೃದಯ ಹೆದ್ದಾರಿಯಾಗಿರುವಾಗ ಇಂದ್ರನು ತಾನೇ ಪ್ರೇಮಭಿಕ್ಷೆಯನ್ನು ಬೇಡಿ ಬರುತ್ತಾನೆ. ಆದರೂ ಅಳಿಮನಸ್ಸಿನ ಸಂಗಡ ಅವಳು ಹೋರಾಡದೆ ಒಮ್ಮೆಯೇ ಬಿದ್ದವಳಲ್ಲ. ಎದುರಿಗೆ ನಿಂತವನು ತನ್ನ ಪತಿಯೆಂದು ಮೊದಲು ಭಾವಿಸಿ ಸಡಗರಪಡುತ್ತಾಳೆ; ಮಾಯಾವಿಯೆಂದು ಬೇಗನೆ ಅರಿತು ಬೆಚ್ಚಿ ಹಿಮ್ಮೆಟ್ಟುತ್ತಾಳೆ. ಆ ಬಳಿಕ, ತನ್ನ ಹೆಬ್ಬಯಕೆಯ ಇಂದ್ರನೇ ಇವನೆಂದು ಗೊತ್ತಾದಾಗಲೂ ಅವನನ್ನು ನಿವಾರಿಸುವಷ್ಟು ವಿವೇಕ ಅವಳಿಗುಂಟು. ನನ್ನ ಹೃದಯಮರ್ಮವನ್ನು ಹಿಡಿದು ಆಡಬೇಡ, ನನ್ನ ಆಸೆಯನ್ನು ಕೆರಳಿಸಬೇಡ—ಎಂದು ಅವನನ್ನು ಬೇಡಿಕೊಳ್ಳುವಳು; ಇಂದ್ರನು ಒಡ್ಡಿದ ಪ್ರಲೋಭನವು ತನ್ನ ಜೀವಸಾರವನ್ನೇ

ಸೆಳೆಯುತ್ತಿದ್ದರೂ ತಡೆದು ನಿಲ್ಲುವಳು. ಆದರೆ ಇಂದ್ರನು ಅವಳ ಅಶರಣಸ್ಥಿತಿಯನ್ನು ಬಲ್ಲನು. ಅವನ ಮನಸ್ಸಿನಲ್ಲಿ ಧರ್ಮಾಧರ್ಮಗಳ ಹೋರಾಟ ಯಾವುದೂ ಇಲ್ಲ. "ಮೊದಲಿಳೆಯ ಮಡದಿಯರು ಸಲುವರಮರರಿಗೆ"—ಎಂಬುದೇ ಅವನ ತತ್ತ್ವ. ತಾನು ಕೊಂಚಕಾಲ ಮರೆಯಾದರೆ ಅಹಲ್ಯೆಯ ಮನೋನಿಗ್ರಹ ಸಡಿಲುವುದೆಂದು ನಿರೀಕ್ಷಿಸಿ ಅದೃಶ್ಯನಾಗುತ್ತಾನೆ. ಈಗ ಅಹಲ್ಯೆಗೆ ಕಳವಳ ಮೊದಲಾಗುತ್ತದೆ. ಇಂದ್ರನ ಮಾಟದಿಂದ ಗಾಳಿ ದನಿಗಳು "ಮರುಳ ಹೆಣ್ಣೆ ಏನಗೈದೆ!" ಎಂದು ಹಂಗಿಸುತ್ತವೆ; ಅವಳ ಹೃದಯದ ದನಿಯೂ ಇದೇ. ಇನ್ನು ಅವಳು ತಡೆದಿರಲಾರಳು; ಆಸೆಗೆ ಮುಡುಪಾಗಿ ತನ್ನ ಸರ್ವಸ್ವವನ್ನೂ ಒಪ್ಪಿಸುವಳು. ಇಂದ್ರನ ಭುಜತಲ್ಪದಲ್ಲಿ, ಸುರಪಥ ವಿಹಾರದಲ್ಲಿ ಎಲ್ಲಕ್ಕೂ ಮಿಾರಿ ಎಲ್ಲವನ್ನೂ ಮುಳುಗಿಸುವ ಅನುರಾಗರಸವನ್ನು ಕೊಂಚ ಹೊತ್ತು ಅನುಭವಿಸುವಳು. ಆದರೆ ಮೋಹದ ಬಿರುಗಾಳಿಗೆ ಸಿಕ್ಕಿದ ಈ ತರಗೆಲೆಯ ಮೋದ ಎಷ್ಟುಕಾಲ ಇದ್ದೀತು! ಸುಖದ ಹಂಬಲಿಕೆಯೇನೋ ಹಿರಿದು; ಆದರೆ ಅದು ಕೈಗೂಡಿದ ಬಳಿಕ ನಿಲ್ಲುವುದು ಏನು?—

"ಮುಟ್ಟಲೊಡೆಯುವ ನೀರ ಹೊಳೆಗುಳ್ಳೆಯಂತೆ
ಮೋದವೆಂತಾಯಿತಹ; ಆದೆ ವಿಭ್ರಾಂತೆ!"

—ಹೀಗೆಂದು ಅಹಲ್ಯೆಗೆ ಜ್ಞಾನೋದಯವಾಗುತ್ತದೆ. ಇದರ ಜೊತೆಗೆ, ತನ್ನದು ಧರ್ಮಬಾಹಿರವಾದ ಸುಖ. ಈ ನಲವಿನ ನಡುವೆಯೇ ಮುನಿಗೌತಮನು ಕಂಡರೆ ನನ್ನ ಗತಿಯೇನು?—ಎಂಬ ಭೀತಿ ಅವಳ ಎದೆಯೊಳಗೆ ಬಲಿಯುತ್ತಿದೆ.

ಈ ವೇಳೆಗೆ ಗೌತಮನು ಆಶ್ರಮಕ್ಕೆ ಹಿಂದಿರುಗುತ್ತಾರೆ. ಅಹಲ್ಯೆ ತಾನಾಗಿಯೇ ಬಂದು ಅನುನಯಿಸಿದಾಗ ಅವನ ಧ್ಯಾನ ಸಡಿಲಲಿಲ್ಲ; ಕಾಮನ ಹಾಡನ್ನು ಕೇಳಿದಾಗ ಅದು ಭಂಗವಾಯಿತು. ಈಗ ತಪಸ್ಸೆಲ್ಲ ಅಸಾರವೆನಿಸಿತು. ಒಳಗೆ ಅದುಮಿದ್ದ ವಿಷಯಾಸಕ್ತಿ ಮೇಲಕ್ಕೆ ಚಿಮ್ಮಿ, ನಲ್ಮೆಯ ಕಡೆಗೆ ಮನಸ್ಸು ಹೊರಳಿತು. ಇಂದ್ರಾಣಿಯನ್ನು ಇಂದ್ರನು ಒಲಿಸುವಂತೆ ತಾನೂ ತನ್ನ ನಲ್ಲೆಯನ್ನು ಒಲಿಸಬೇಕೆಂದು ವ್ರತದ ಅವಧಿ ಮುಗಿಯುವ ಮೊದಲೇ ಅವನು ಬರುತ್ತಾನೆ. ಆದರೆ ಗಳಿಗೆ ಆಗಲೇ ಮಿಂಚಿಹೋಗಿತ್ತು. ಅಹಲ್ಯೆಯೊಂದಿಗೆ ತಾನು ಮೊದಲ ಪ್ರೇಮವನ್ನು ಬೆಳಸಿದ ಬಳ್ಳಿಯ ಚಪ್ಪರಕ್ಕೆ ಗೌತಮನು ಅವಳನ್ನು ಹುಡುಕಿಕೊಂಡು ಬಂದರೆ ಅಲ್ಲಿ ಕಾಣುವುದೇನು?–ಬೇರೊಬ್ಬನೊಂದಿಗೆ ಅವಳ ಸಲಿಗೆ! ಗೌತಮನು ಬಂದದ್ದು ತನ್ನ ಸತಿಯನ್ನು ತಣಿಸುವುದಕ್ಕಾಗಲಿಲ್ಲ, ಶಪಿಸುವುದಕ್ಕಾಯಿತು. ಅಲ್ಲಿ ವ್ರತಗೆಟ್ಟವನು ಇಲ್ಲಿ ಮತಿಗೆಟ್ಟು ರೋಷದ ಆವೇಶದಲ್ಲಿ ದೋಷಿಗಳಿಬ್ಬರಿಗೂ, ಘೋರ ಶಾಪವನ್ನಿತ್ತನು. ಬಳಿಕ ತನ್ನ ಅವಶತೆಗೆ ತಾನೇ ಸಂತಾಪಗೊಂಡು ಮನಸ್ಸಿನ ಎಲ್ಲ ಬೇಗೆಯನ್ನು ತಂಪುಗೊಳಿಸಲು ಹಿಮಾಚಲದ ಏಕಾಂತ ಗವಿಗೆ ನಡೆದನು. ಇಲ್ಲಿಗೆ ನಾಟಕದ ಒಂದು ಘಟ್ಟವಾಯಿತು.

ಇದು ಅಹಲ್ಯೆ ಬಿದ್ದ ಕತೆ ಮಾತ್ರವಲ್ಲ; ಮತ್ತೆ ಅವಳು ಎದ್ದ ಕಥೆಯೂ ಹೌದು. ಅವಳ ಉದ್ಧಾರದ ವೃತ್ತಾಂತ ನಾಟಕದ ಉತ್ತರಾಂಕದಲ್ಲಿ ವಿಶದವಾಗಿ ಬಂದಿದೆ.

ತನ್ನ ಹೃದಯದಲ್ಲೇ ಉರಿದೆದ್ದ ಅನುತಾಪದೊಂದಿಗೆ, ಗಂಡನ ಶಾಪವೂ ಬೆರೆದು,— ತನ್ನ ಪಾಪಕರ್ಮವನ್ನು ಕಂಡ ಆಶ್ರಮದಲ್ಲೇ ಅಹಲ್ಯೆ ಗಾಳಿಯೊಂದಿಗೆ ಗಾಳಿಯಾಗಿ ಯಾರ ಕಣ್ಣಿಗೂ ಬೀಳದೆ ಅಲೆಯುತ್ತಿರುತ್ತಾಳೆ. "ಹೂವೆಂದುವೆ ಹಾವಾಯಿತು, ಕಾವುದೆ ನನ್ನಂ ಕೊಂದಿತು" ಎಂದು ಹಲುಬುತ್ತಾ "ಕೊನೆ ಎಂದಿಗೆ ಈ ಶಾಪಕೆ, ತಂಪೆಂದಿಗೆ ಈ ತಾಪಕೆ" ಎಂದು ಹಂಬಲಿಸುತ್ತ ಅಲೆಯುತ್ತಿರುತ್ತಾಳೆ. (ಅಹಲ್ಯೆ ಅದೃಶ್ಯೆಯಾಗಿ ನರಳುವಳೆಂಬ ಸೂಚನೆ ವಾಲ್ಮೀಕಿಯ ಕಥೆಯಿಂದ ಬಂದದ್ದು. ಈಚಿನ ಪುರಾಣಕಾರರು ಅವಳನ್ನು "ಶಿಲಾಮಯಿ"ಯನ್ನಾಗಿ ಮಾರ್ಪಡಿಸುತ್ತಾರೆ. ಇಲ್ಲಿ ನಾಟಕಕಾರರು ವಾಲ್ಮೀಕಿಯನ್ನೇ ಅನುಸರಿಸಿದ್ದರಿಂದ ಅತ್ಯುತ್ತಮವಾದ ಭಾವಗೀತವೊಂದು ಫಲಿಸಿದೆ.) ವರ್ಷಗಳು ಸಾಗಿದಮೇಲೆ ಪರಿತಾಪದಿಂದ ಅಹಲ್ಯೆಯ ದೋಷ ದಹಿಸಿಹೋಗಿ ಅವಳ ಹೃದಯ ನಿರ್ಮಲವಾದ ಮೇಲೆ, ಬಿಡುಗಡೆಯ ಮುಹೂರ್ತ ಒದಗುತ್ತದೆ.

ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ಸೀತಾಸ್ವಯಂವರಕ್ಕಾಗಿ ಮಿಥಿಲೆಗೆ ಕರೆದುಕೊಂಡುಹೋಗುವಾಗ, ತಮ್ಮ ದಾರಿಯಲ್ಲಿ ನೇರವಾಗಿಲ್ಲದಿದ್ದರೂ ಈ ಪಾಳುಬಿದ್ದ ಆಶ್ರಮವನ್ನು ಪ್ರವೇಶಿಸುತ್ತಾನೆ. ಈ ಗಳಿಗೆಯಲ್ಲಿ ರಾಮನ ಮನಸ್ಸು ಉದ್ವೇಗದಿಂದ ಕೂಡಿದೆ. ಲೋಕಕಂಟಕಳಾದ ತಾಟಕೆಯನ್ನು ಅವನೇನೋ ಗುರುವಿನ ಅಪ್ಪಣೆಯಂತೆ ಕೊಂದಾಯಿತು; ಆದರೆ ಸ್ತ್ರೀವಧೆ ಮಾಡಿದೆನಲ್ಲಾ ಎಂಬ ಕೊರಗು ಚಿತ್ತವನ್ನು ವ್ಯಾಪಿಸಿತು. ಆ ಶೂನ್ಯ ವನದಲ್ಲೆಲ್ಲಾ ಅವನಿಗೆ ದುಃಖಿಗಳ ಮೊರೆಯೇ ಕೇಳಿಸುತ್ತಿದೆ. ಜೊತೆಯಲ್ಲಿ ಬರುತ್ತಿದ್ದ ಲಕ್ಷ್ಮಣನಿಗೆ ಬರಿಯ ಗಾಳಿಯ ಸುಯ್ಯಲಾಗಿ ಕೇಳಿಸಿದ ದನಿ ವೇದನೆಯಿಂದ ಚುರುಕಾದ ರಾಮನ ಕಿವಿಯಲ್ಲಿ ಅಹಲ್ಯೆಯ ಆಕ್ರಂದನವಾಗಿ ರೂಪುಗೊಳ್ಳುತ್ತದೆ. ಅದು ಕೇಳಿಬಂದ ಎಲೆವನೆಯ ಕಡೆಗೆ ರಾಮನು ಭಾವಪರವಶತೆಯಿಂದ ನುಗ್ಗುತ್ತಾನೆ. ಮುಂದೆ ನಡೆದ ಸೋಜಿಗವನ್ನು ಅಪ್ಸರೆಯರೇ ವರ್ಣಿಸಬೇಕು. ಪಾಪದ ಹೊರೆಯನ್ನು ನೀಗಿ ಮತ್ತೆ ಆಕಾರವನ್ನು ಪಡೆದು ತೇಜೋಮಯಿಯಾದ ಅಹಲ್ಯೆ "ಇದೆ ಕನಸೋ ಅದೇ ಕನಸೊ" ಎಂದು ಅಚ್ಚರಿಪಡುತ್ತಾ ಕಾಣಿಸಿಕೊಳ್ಳುತ್ತಾಳೆ. ಆಕೆಯ ಆವಿರ್ಭಾವವನ್ನು ಕಂಡ ರಾಮನಿಗೂ ಅದೇ ಬೆರಗು; ಅವನೂ "ಇದೆ ಕನಸೋ ಅದೆ ಕನಸೋ" ಎನ್ನುತ್ತಾನೆ. ಹೀಗೆ ಇಬ್ಬರೂ ಒಬ್ಬರನ್ನೊಬ್ಬರು ಸಂದರ್ಶಿಸುವ ಸನ್ನಿವೇಶ ಅತಿಮನೋಹರವಾಗಿದೆ. ತಾನು ಸ್ತ್ರೀಯನ್ನು ಕೊಂದನೆಂಬ ರಾಮನ ದುಗುಡ ಇನ್ನೊಬ್ಬ ಸ್ತ್ರೀಯ ಉದ್ಧಾರದಿಂದ ಹರಿಯಿತು.

ಅಹಲ್ಯೆ ವಾಸ್ತವಜೀವನಕ್ಕೆ ಮರಳಿದಳು; ಆದರೆ ತನ್ನ ಪತಿ ಸ್ವೀಕರಿಸಿದ ಹೊರತು ತನ್ನ ಕೊಳೆ ತೊಳೆಯಿತೆಂದು ನೆಚ್ಚಿಕೆ ಅವಳಿಗಿಲ್ಲ. ಈ ಕೊರತೆಯನ್ನು ಕಳೆಯಲು ಹೊತ್ತಿಗೆ ಸರಿಯಾಗಿ ಗೌತಮನು ಪ್ರವೇಶಿಸಿದನು. ಅವನು ಹಿಮಗಿರಿಯಲ್ಲಿ ಶಾಂತಿಯನ್ನು ಸಂಪಾದಿಸಿಕೊಂಡು ಆಗತಾನೆ ಹಿಂತಿರುಗಿದ್ದನು. (ಇದರ ವಿವರವೇ ಮಧ್ಯಮಾಂಕದ ಮುಖ್ಯ ವಸ್ತು.) ಈ ಕೊನೆಯ ಅನಿರೀಕ್ಷಿತದಿಂದ ಅಹಲ್ಯೆ ಬೆರಗಾಗಿ ನಿಂತಳು; ಗೌತಮನನ್ನು ಸಮೀಪಿಸಿ ಅವನ ಪಾದದ ಹತ್ತಿರ ಕುಸಿದುಬಿದ್ದಳು. ನಮ್ಮ ಆಶ್ರಮಕ್ಕೆ

ಬಂದಿರುವ ಈ ಮಹಾಪುರುಷನನ್ನು ಸತ್ಕರಿಸಲು ಅಣಿಯಾಗೆಂದು ಸಹಧರ್ಮ ಚಾರಿಣಿಯನ್ನು ಗೌತಮನು ಎಚ್ಚರಿಸಬೇಕಾಯಿತು. ಈ ಸ್ವೀಕಾರದಿಂದ ಹಿಂದಿನದೆಲ್ಲ ದುಃಸ್ವಪ್ನದಂತೆ ಮಾಯವಾಯಿತು. ಅಹಲ್ಯೆಯ ಹೃದಯ ಹಗುರವಾಯಿತು. ಆಗ ಅವಳ ಮನಸ್ಸು ಹೇಗಿತ್ತೆಂಬುದನ್ನು ಅವಳ ಮಾತಿನಲ್ಲೇ ಹೇಳಬೇಕು:

"ಬಯಸುವೆ ನಾ ಗಂಗೆಯ ತೆರ
ಪದದಿ ಕರಗಿ ಹರಿಯೆ,
ಇಲ್ಲದಿರಲು ಹಗುರವಾಗಿ
ಕಂಪಿಂತೆ ಸರಿಯೆ.

ಮೈಯೆ ಭಾರ ಮನವೆ ಭಾರ
ಬದುಕೆ ಭಾರವೆಂಬ
ಆಸರೆಯೇ ಬೇಡದಂಥ
ನಲವೆ ನನ್ನ ತುಂಬ."

ಅಗಲಿದ್ದವರೆಲ್ಲರ—ಸತಿಪತಿಗಳ, ಬಂಧುಮಿತ್ರರ, ಗುರುಶಿಷ್ಯರ–ಪುನಸ್ಸಮಾಗಮ, ಇಷ್ಟೆಲ್ಲ ಆನಂದಕ್ಕೂ ಕಾರಣನಾದ ರಾಮನ ಮಂಗಳಾಶಂಸೆ. ಇವುಗಳಿಂದ ಈ ದೃಶ್ಯ ಪೂರ್ಣವಾಗುತ್ತದೆ. ನಾಟಕವು ದೇವತೆಗಳ ವಿಲಾಸನೃತ್ಯದಿಂದ, "ನಿರ್ಜರರಾಮೆಮಗೇತರ ಭೀತಿ?" ಎಂಬ ಸೊಕ್ಕಿನ ಹಾಡಿನಿಂದ ಮೊದಲಾಗಿತ್ತು; ನಡುವೆ ಎಷ್ಟೆಷ್ಟೋ ಆಗಿಹೋಗಿ, ಕಡೆಗೆ ಶಾಂತಿಯೊದಗಿದ ಮೇಲೆ, ದೇವತೆಗಳ ಆನಂದನೃತ್ಯದಿಂದ ಮುಕ್ತಾಯ ಹೊಂದುತ್ತದೆ.

ಮೇಲಿನ ಕಥಾನಿರೂಪಣೆಯಿಂದ, ಈ ನಾಟಕದಲ್ಲಿ ಅಹಲ್ಯೆಯೇ ಕೇಂದ್ರ ವ್ಯಕ್ತಿಯೆಂಬುದು ಸ್ಪಷ್ಟವಾಗಬಹುದು. ಬೇರೆ ಬೇರೆ ರೀತಿಗಳಲ್ಲಿ ಅವಳ ಬಾಳನ್ನು ಪ್ರವೇಶಿಸಿ ಅವಳ ಸುಖ ದುಃಖ ಶಾಂತಿಗಳಿಗೆ ಕಾರಣರಾಗತಕ್ಕವರು ಗೌತಮ, ಇಂದ್ರ, ರಾಮ, ಮೊದಲಾದವರು. ಇವರ ಪ್ರಭಾವ ಎಷ್ಟೇ ಹಿರಿದಾಗಿದ್ದರೂ ಈ ನಾಟಕದಲ್ಲಿ ಇವರಿಗೆ ಪ್ರಥಮ ಸ್ಥಾನವಿಲ್ಲ. ಹೀಗೆ ಹೇಳಿದ ಮಾತ್ರಕ್ಕೆ ಇವರೆಲ್ಲರ ಚಿತ್ರ ಇಲ್ಲಿ ಸ್ಫುಟವಾಗಿಲ್ಲವೆಂದಾಗಲಿ, ಅವರ ಸ್ವಭಾವದ ಸೂಕ್ಷ್ಮಾಂಶಗಳನ್ನು ನಾಟಕಕಾರರು ಗ್ರಹಿಸಿಲ್ಲವೆಂದಾಗಲಿ ಅಭಿಪ್ರಾಯವಲ್ಲ. ರಾಮನ ಮೂರ್ತಿಯನ್ನಂತೂ ಇಲ್ಲಿ ಅತಿಸುಂದರವಾಗಿ ಕಡೆದಿದ್ದಾರೆ. ಉತ್ತರಾಂಕದ ಎರಡೇ ದೃಶ್ಯಗಳಲ್ಲಿ ಕಾಣಿಸಿಕೊಂಡರೂ, ಈತನ ಕಾಂತಿ ಬೆಳುದಿಂಗಳಂತೆ ಒಟ್ಟು ಅಂಕವನ್ನೇ ತುಂಬಿ ಎಲ್ಲರ ತಾಪವನ್ನೂ ಆರಿಸುತ್ತದೆ. ಅಪ್ರಯಾಸವಾಗಿ ರಾಮನು ಎಲ್ಲರ ಕಣ್ಣಮಣಿಯಾಗುತ್ತಾನೆ. ವಾಲ್ಮೀಕಿ ರಾಮಾಯಣದಲ್ಲಿರುವಂತೆ ಇಲ್ಲಿಯೂ ಅವನು ಮಾನವ ಮಹಾವೀರನಾಗಿಯೇ ನಿಲ್ಲುವನು. ಅವನ ಉದಾತ್ತವಿನಯಕ್ಕೆ ಎರಡು ಉದಾಹರಣೆಗಳು ಸಾಕು. ಅಹಲ್ಯೆ ರೂಪುಗೊಂಡು ಎದುರಿಗೆ ನಿಂತಾಗ "ಹೇ ಮಂಗಳೆ ಶರಣಾದೆಂ, ಹರಸವ್ವಾ ಮಗನಾದೆಂ" ಎಂದು ಅವಳಿಗೆ ಅವನೇ ಮೊದಲು ಮಣಿಯುವನು. ತನ್ನ

ಮಹಿಮೆಯನ್ನು ಎಲ್ಲರೂ ಬಾಯಿತುಂಬ ಹೊಗಳಿ "ಜಯ ದಾಶರಥೇ ಜಯ ರಾಮ!" ಎಂದು ಘೋಷಿಸುತ್ತಿರುವಾಗ, ಅವನು "ಜಯ ಗುರುದೇವ ಜಯ ಗುರುವೇ!" ಎನ್ನುತ್ತಾ ಆ ಗೌರವವನ್ನೆಲ್ಲ ವಿಶ್ವಾಮಿತ್ರರಿಗೆ ಅರ್ಪಿಸುವನು.

ಇತ್ತ ಇಂದ್ರನ ಪ್ರಭಾವ ಪೂರ್ವಾಂಕವನ್ನೆಲ್ಲಾ ಆವರಿಸುತ್ತದೆ. ಶಾಂತವೂ ಶುಭ್ರವೂ ಆದ ಆಶ್ರಮವನ್ನು ಕಾರ್ಮೋಡದಂತೆ ಕವಿದು ಅಲ್ಲಿಯವರ ಬದುಕಿನಲ್ಲಿ ತಳಮಳವೆಬ್ಬಿಸ ತಕ್ಕವನು ಇಂದ್ರ. ಆದರೆ ಮಾನವರ ಸಂಪರ್ಕದಿಂದ ಅವನೂ ಕೋಟಲೆಪಟ್ಟನು. ಇಂದ್ರನದು ಕಲುಷಿತ ಪ್ರೇಮವೆಂಬುದು ನಿಜ; ಆದರೆ ಅದು ಅದಮ್ಯವಾಗಿತ್ತೆಂದೂ ಅಷ್ಟೇ ನಿಜ. ಅದು ಇಂದ್ರನ ಹೃದಯದಲ್ಲಿ ಹೇಗೆ ಆಳವಾಗಿ ಬೇರೂರಿ ಹೆಮ್ಮರವಾಗಿ ಬೆಳೆಯಿತೆಂಬುದು ನಾಟಕದ ಪೂರ್ವಾಂಕದಲ್ಲಿ ಸುಸೂಕ್ಷ್ಮವಾಗಿ ರೂಪುಗೊಂಡಿದೆ. ಆದರೆ ಮೋಹದ ಮಡುವಿನೊಳಕ್ಕೆ ಅಹಲ್ಯೆಯನ್ನು ಎಳೆದುಕೊಂಡು ತಾನೂ ಬಿದ್ದ ಬಳಿಕ ಇಂದ್ರನ ಪ್ರಾಧ್ಯಾನ್ಯ ಮುಗಿಯಿತು. ಮುಂದೆ ಅವನು ಪಟ್ಟ ಸಂಕಟದ ರೀತಿಯೇನು, ಅದಕ್ಕೆ ಪರಿಹಾರ ದೊರೆತದ್ದು ಹೇಗೆ—ಎಂಬುದು ಈ ನಾಟಕದ ದೃಷ್ಟಿಯಿಂದ ಮುಖ್ಯವಲ್ಲ; ಅಲ್ಲದೆ ಅದರಲ್ಲಿ ರಸಪುಷ್ಟಿಯೂ ಇಲ್ಲ. ಆದಕಾರಣ ಪೂರ್ವಾಂಕವಾದ ಮೇಲೆ ಇಂದ್ರನು ಮತ್ತೆ ನಮ್ಮ ಕಣ್ಣಿಗೆ ಬೀಳುವುದಿಲ್ಲ. ಅವನ ಶಾಪಾನುಭವ ಮುಗಿಯಿತೆಂದೂ ಅಹಲ್ಯೆಯ ದುಃಸ್ಥಿತಿಯನ್ನು ನೆನೆದು ಅವನು ಕೊರಗಿನಲ್ಲಿರುವನೆಂದೂ ಮಧ್ಯಮಾಂಕದ ಮೊದಲಲ್ಲೇ ಕೇಳುತ್ತೇವೆ. ಅಹಲ್ಯೆಯೊಡನೆ ಅವನಿಗೆ ಉಂಟಾಗಿದ್ದ ದುರ್ದಮ್ಯವಾದ, ಆದರೆ ಕ್ಷಣಿಕವಾದ ಸಂಬಂಧ ಇಲ್ಲಿಗೆ ಮುಗಿಯಿತು. ಕಥೆಗೂ ಅವನ ಸಂಬಂಧ ಇಲ್ಲಿಗೆ ಹರಿಯಿತು.

ಗೌತಮನನ್ನು ಇಷ್ಟು ಸುಲಭವಾಗಿ ಬೀಳ್ಕೊಡಲು ನಾಟಕಕಾರರಿಗೆ ಆಗಿಲ್ಲ. ಬಾನಿನಲ್ಲಿ ಬಾಲಚುಕ್ಕಿ ಎದ್ದು ವಿಪ್ಲವವನ್ನು ಎಬ್ಬಿಸಿ ಪೂರ್ಣವಾಗಿ ಕಣ್ಣು ಮರೆಯಾಗುವಂತೆ ಅಹಲ್ಯೆಯ ಬಾಳಿನಲ್ಲಿ ಇಂದ್ರನ ಪ್ರವೇಶವಾದರೆ, ದಿನದಿನವೂ ಭೂಮಿಗೆ ಬೆಳಕು ಕೊಡುವ ಸೂರ್ಯನಂತೆ ಗೌತಮನ ಪಾತ್ರ. ನಡುವೆ ಮೋಡ ಮರೆಗೊಳಿಸಬಹುದು, ಇರುಳು ಕವಿಯಬಹುದು. ಆದರೆ ಇವರಿಬ್ಬರದು ಸ್ಥಿರವಾದ ಸಂಬಂಧ. ಶಾಪವೆನ್ನುವುದು ಎರಡಲಗಿನ ಕತ್ತಿಯಂತೆ; ಪಡೆದವರನ್ನು ಮಾತ್ರವಲ್ಲ, ಕೊಟ್ಟವರನ್ನೂ ಅದು ಛೇದಿಸುತ್ತದೆ. ತನ್ನ ಸಹಧರ್ಮಿಣಿಗೆ, ಅವಳ ಮೇಲಿದ್ದ ಉಪೇಕ್ಷೆ ತೊಲಗಿ ಒಲುಮೆ ಉಕ್ಕುಕ್ಕಿದ ಸಮಯದಲ್ಲಿ, ಶಾಪಕೊಡಬೇಕಾಗಿಬಂದ ಗೌತಮನ ದಾರುಣ ಸ್ಥಿತಿ ಅಷ್ಟಿಷ್ಟಲ್ಲ. ರೋಷ ಕಿಡಿಗೆದರಿದ ಉತ್ತರಕ್ಷಣದಲ್ಲೇ ಅಹಲ್ಯೆಯ ರಾಗ ಭ್ರಾಂತಿಯನ್ನು ಕುರಿತು ಅವನಿಗೆ ಮರುಕವುಂಟಾಗುತ್ತದೆ. ಆ ಬಳಿಕ ಹಿಮಾಚಲದ ಗವಿಯಲ್ಲಿ ತಪಸ್ಸು ಮಾಡಿ ಅವನು ತತ್ತ್ವದ ತಿರುಳನ್ನು ಕಂಡು ಶಾಂತಿಯನ್ನು ಗಳಿಸಿ ಪತ್ನಿಯನ್ನು ಸ್ವೀಕರಿಸಲು ಹಿಂದಿರುಗಿದನಷ್ಟೆ. ಗೌತಮನಿಗೆ ಈ ಶಾಂತಿಮಾರ್ದವಗಳು ಬಂದ ಬಗೆಯನ್ನು ಒಂದೆರಡು ಮಾತಿನಲ್ಲಿ ಸೂಚಿಸಿದರೆ ಸಾಲದೆಂದು ಭಾವಿಸಿ ನಾಟಕಕಾರರು ಅದರ ನಿರೂಪಣೆಗೆ ಮಧ್ಯಮಾಂಕದ ಒಂದು ವಿಸ್ತಾರವಾದ ದೃಶ್ಯವನ್ನೇ

ಮಿಾಸಲಾಗಿರಿಸಿದ್ದಾರೆ. ಗೌತಮನ ಜ್ಞಾನೋದಯಕ್ಕೆ ಇಲ್ಲಿ ಇಷ್ಟು ಪ್ರಾಮುಖ್ಯವನ್ನು ಕೊಟ್ಟಿದ್ದರಿಂದ ನಾಟಕದ ಏಕಮುಖವಾದ ಗತಿಗೆ ತಡೆಯುಂಟಾಗಿಲ್ಲವೆ ಎಂಬ ಪ್ರಶ್ನೆ ಏಳುವುದು ಅಸಂಭವವಲ್ಲ. ಆದರೆ ಕಥೆಯ ಹೃದಯದ ದೃಷ್ಟಿಯಿಂದ ಈ ಭಾಗಕ್ಕೆ ಪ್ರಯೋಜನವಿಲ್ಲದೆ ಇಲ್ಲ. ಅದರ ವಿಷಯವಾಗಿ ಎರಡು ಮಾತನ್ನು ಹೇಳುವುದು ಆವಶ್ಯಕ.

ಕಾಮ ಪ್ರಜ್ವಲಿಸಿತೆಂದರೆ ಎಷ್ಟು ಸಂಕ್ಷೋಭೆ, ಎಷ್ಟು ಅನರ್ಥ! ಮದನನ ಬಾಣಕ್ಕೆ ಈಡಾಗಿ, ಅವನ ದನಿಗೆ ಮರುಳಾಗಿ, ಇಂದ್ರನು ಗಳಿಸಿದ್ದೇನು, ಗೌತಮನು ಸವಿದದ್ದೇನು! ಈ ತುಂಟನ ಹಾವಳಿಯಿಂದ ಸೃಷ್ಟಿಗೆ ಏನು ಪ್ರಯೋಜನ? "ನಿದ್ದಿಪುದೇ ಲೇಸು ಲೇಸು ಈ ಕುಚೋದ್ಯಗಾರನು" ಎನ್ನಿಸೀತಲ್ಲವೆ! ಕೈಸುಟ್ಟುಕೊಂಡ ಗೌತಮನಿಗಂತೂ ತಪಸ್ಸಿನ ಕೊನೆ ಕೊನೆಯಲ್ಲಿ, ಇದೇ ಚಿಂತನೆಯ ವಸ್ತುವಾಯಿತು :

"ವಿಧಿಗೆಂತಿವನುಪಯೋಗಂ
ಎಂತಿವನಿಂ ಶಿವಯೋಗಂ
ಸೃಷ್ಟಿಯ ಕರ್ಮಕೆ!—"

ಇತ್ತ ತನ್ನ ದಾಳಿಯ ಫಲವಾಗಿ ಗೌತಮಾಶ್ರಮದಲ್ಲಿ ಅನಾಹುತ ನಡೆದ ಮೇಲೆ, ಅನುತಾಪದಿಂದಲೋ ಏನೋ ಮದನನು ಮಲಗಿಬಿಟ್ಟನು. ಕಾಮದೊಂದಿಗೆ ಪ್ರೇಮವೂ ಕಣ್ಮರೆಯಾಯಿತು. ಸೃಷ್ಟಿಗೆಲ್ಲ ನೀರಸತೆಯ ಗ್ರಹಣ ಹಿಡಿಯಿತು. ಸೌಂದರ್ಯ ವ್ಯರ್ಥವಾಯಿತು. ಹೀಗೆ ವರ್ಷಗಳು ಕಳೆದಮೇಲೆ, ಇಂದ್ರನ ಶಾಪ ಪರಿಹಾರವಾಗಿ ಅಹಲ್ಯೆಯ ಶಾಪವಿಮೋಚನೆಯೂ ಹತ್ತಿರಕ್ಕೆ ಬಂದಮೇಲೆ, ವಸಂತ ತಲೆದೋರಿದ ಒಂದು ಬೆಳಗ್ಗೆ, ಅಪ್ಸರೆಯರ ಉದಯರಾಗವನ್ನು ಕೇಳಿ "ಮೂಜಗದ ಸಿಂಗಾರ— ಮನಮನದ ಬಂಗಾರ" ಮನ್ಮಥನು ಎಚ್ಚತ್ತನು. ಧರ್ಮದ ಗೆರೆಯನ್ನು ದಾಟದ ಒಲುಮೆಗೆ ಸುಂದರ ಮಂಗಳ ಸುಪ್ರಭಾತವಾಯಿತು.

ತನ್ನ ಗವಿಯ ಮುಂದೆ ನಿಂತು ಗೌತಮನು ಅವಲೋಕಿಸುತ್ತಿದ್ದಾನೆ. ಮಾಗಿ ಸಾಗಿ, ವಸಂತವೊದಗಿದೆ. ಹಿಮಗಿರಿ ತನಗೆ ಹೊದಿಸಿದ್ದ ಗೂಢಶಾಂತಿಯನ್ನು ನದಿ ನಿರಾಕರಿಸಿ ಸವಿಲಾಸಗಮನದಿಂದ ಹೊರಹೊರಟಿದೆ; ಮರ ಚಿಗುರಿ, ಅರಳಿ, ಕಂಪುಬೀರಿ ದುಂಬಿಗಳನ್ನು ಹತ್ತಿರಕ್ಕೆ ಕರೆಯುತ್ತಿದೆ; ವಿಶ್ವದ ಯಾವ ವಸ್ತುವೂ ತನ್ನಷ್ಟಕ್ಕೆ ತಾನಿರಲಾರದೆ, ಒಂಟಿತನಕ್ಕೆ ಬೇಸರಗೊಂಡಿದೆ. ಒಂದರ ಹಂಗನ್ನು ಒಂದು ಕೋರಿ, ಒಂದರೊಡನೊಂದು ಹೊಂದಿಕೊಂಡು ಎಲ್ಲವೂ ಈ ಸಮ್ಮೇಳನದಲ್ಲೇ ಸುಖಕಾಣುತ್ತಿವೆ. ಇದರ ಅರ್ಥವೇನು? ವಿರಕ್ತಿಯನ್ನು ತೊರೆದು ಅನುರಾಗಕ್ಕೆಳಸುತ್ತಿರುವ ಸೃಷ್ಟಿಯ ಮರ್ಮವೇನು?—ಎಂದು ಗೌತಮನು ಚಿಂತಿಸುತ್ತಾನೆ. ಆಗ ಮನ್ಮಥನು ಅವನೆದುರಿಗೆ ಮೂಡುತ್ತಾನೆ, ಹಾಡುತ್ತಾನೆ. ಹಿಂದೆ ಗೌತಮನು ಆಸೆಯನ್ನು ಕೆರಳಿಸಿ, ಅವನ ತಪಸ್ಸನ್ನು ಕೆಡಿಸಲು ಹಾಡಿದಂತೆ ಅಲ್ಲ; ಅವನ ಹೊಸ ತಪಸ್ಸಿನಲ್ಲಿ ಮಥಿಸಿ ಬಂದ ತತ್ತ್ವವನ್ನೇ

ದೃಢಪಡಿಸಿ, ಸಂಶಯದ ಉಯ್ಯಾಲೆಯಲ್ಲಿ ತೂಗುತ್ತಿದ್ದ ಅವನ ಮನಸ್ಸನ್ನು ಸಮರಸದ ನಿಲುಗಡೆಗೆ ತರಲು ಹಾಡುತ್ತಾನೆ.

ರಾಗವೂ ಕೊನೆಯ ಗುರಿಯಲ್ಲ; ತ್ಯಾಗವೂ ಕೊನೆಯ ಗುರಿಯಲ್ಲ. ಇವೆರಡೂ ಆನಂದಕ್ಕೆ ಸೋಪಾನಗಳು.

'ರಾಗದಿ ತುಸ ನಡೆ, ತ್ಯಾಗದಿ ತುಸ ನಡೆ
ಹಿರಿಯಿರವಿನ ನಲವೆಲ್ಲರ ನಿಲುಗಡೆ
ರಾಗದ ಹಂಬಲವೂ ಇರವೇ—ಅಂತೆಯೆ
ತ್ಯಾಗದ ಹಂಬಲವೂ ಇರವೇ.'

ಆಸಕ್ತಿ, ವಿರಕ್ತಿ—ಇವೆರಡರ ಕಟ್ಟನ್ನೂ ಒಡೆದು ವಿಶ್ವವನ್ನೇ ತುಂಬುವ ಪ್ರೇಮದಲ್ಲಿ ತಾನು ಲೀನವಾಗಬೇಕು. ಪ್ರೇಮವೇ ಜೀವನಧರ್ಮ; ಅದನ್ನುಳಿದ ಇರವೇ ಸಾಧ್ಯವಿಲ್ಲ.

'ಪ್ರೇಮ ಶ್ರುತಿ, ರತಿ ವಿರತಿಯೆ ತಾನಂ,
ವ್ಯಷ್ಟಿ ವ್ಯಷ್ಟಿ ಸ್ವರ, ಸೃಷ್ಟಿಯೆ ಗಾನಂ.
ಇಂತು ಹರಿಯಿತೋ ಶಿವದ ಸುಮಾನಂ,
ಇರುವಾನಂದವೆ ಇದರವಸಾನಂ.'

ಕಟ್ಟಿಗೆಯಲ್ಲಿ ಹಸಿ ಇರುವಾಗ ಏಳುವ ಹೊಗೆಯಂತೆ, ಕಾಮವು ಜೀವನವನ್ನು ಕಳಂಕಗೊಳಿಸುತ್ತದೆ. ಅದನ್ನು ದಹಿಸಿ, ಆತ್ಮವನ್ನು ಸಂಸ್ಕರಿಸಿ, ಪ್ರೇಮವನ್ನು ಬೆಳಸಿ ಸೃಷ್ಟಿಯೊಂದಿಗೆ ಸಮರಸವಾಗಿ ಬಾಳುವುದೇ ಪೂರ್ಣಾನಂದ. ಇದರ ಅರಿವು ಈಗ ಗೌತಮನಿಗೆ ದೃಢವಾಗುತ್ತದೆ. ಈಗ ಸಂಸಾರಕ್ಕೆ ಹೆದರಿ ಬೆನ್ನುಕೊಟ್ಟು ಓಡದೆ, ನಿಷ್ಕಂಪವಾದ ಪ್ರೇಮಾರ್ದ್ರವಾದ ಮನಸ್ಸಿನಿಂದ ತನ್ನ ಸಹಧರ್ಮಿಣಿಯನ್ನು ಮತ್ತೆ ಸ್ವೀಕರಿಸಲು ಅವನು ಸಿದ್ಧನಾಗುತ್ತಾನೆ.

ಮೊದಲು "ಮಾರ"ನಾಗಿದ್ದವನು, ಮುಂದೆ ಮಂಗಳಕರನಾಗುವುದೇ ಈ ನಾಟಕದ ತಿರುಳು. ಇದರ ನಾಂದೀಪದ್ಯದಲ್ಲೇ ಅರ್ಥಗರ್ಭಿತವಾದ ಹೋಲಿಕೆಗಳ ಮೂಲಕ ಕಾಮ ಪ್ರೇಮಗಳಿಗಿರುವ ಅಂತರವು ಸೂಚಿತವಾಗುತ್ತದೆ. ಅದರ ವಿಶದವಾದ ನಿರೂಪಣೆಗಾಗಿ ಮಧ್ಯಮಾಂಕ ಬಂದಿದೆ.

ಮಧ್ಯಮಾಂಕದ ಪ್ರಯೋಜನ ಇನ್ನೊಂದುಂಟು. ಪೂರ್ವಾಂಕದ್ದು ಪ್ರಕ್ಷುಬ್ಧವಾದ ಆವರಣ; ದೃಶ್ಯಗಳು ಮುಂದುವರಿದ ಹಾಗೆಲ್ಲ ಸನ್ನಿವೇಶವು ಭೀಷಣತರವಾಗುತ್ತಾ ಬಂದು ಕಡೆಗೆ ಸಿಡಿಲೇಟಿನಲ್ಲಿ ಮುಗಿಯುತ್ತದೆ. ಉತ್ತರಾಂಕವಾದರೆ "ಶಾಪಾಂತದ ಪುನರಾಗಮನಾಕಾಂಕ್ಷೆ"ಯಿಂದ ಮಂಗಳದ ನಿರೀಕ್ಷೆಯಿಂದ ಮೊದಲಾಗುತ್ತದೆ. ಇಲ್ಲಿ, ಕದಡಿದ ಮನಸ್ಸುಗಳು ತಿಳಿಯಾಗುತ್ತವೆ, ಅಳಿದ ಸೌಭಾಗ್ಯ ಮತ್ತೆ ಕೈಗೂಡುತ್ತದೆ; ಆವರಣವನ್ನೆಲ್ಲಾ ಪವಿತ್ರಶಾಂತಿ ತುಂಬುತ್ತದೆ. ಹೀಗೆ ಈ ಎರಡು ಅಂಕಗಳನ್ನು

ಪ್ರತ್ಯೇಕಿಸುವುದು ಅನೇಕ ವರ್ಷಗಳಷ್ಟು ನಿಡಿದಾದ ಕಾಲದ ಕಮರಿಯೊಂದೇ ಅಲ್ಲ; ಇವೆರಡರ ಆವರಣದಲ್ಲೇ ಪೂರ್ವ ಪಶ್ಚಿಮಗಳಷ್ಟು ಅಂತರವುಂಟು. ಇವಕ್ಕೆ ನಡುವೆ ಮಧ್ಯಮಾಂಕ ಸೇತುವೆಗಟ್ಟುತ್ತದೆ.

ಪ್ರಕೃತಿಸೌಂದರ್ಯ, ಮಾನವಹೃದಯ ಈ ಎರಡರ ರಹಸ್ಯವನ್ನೂ ಶ್ರೀಮಾನ್ ನರಸಿಂಹಾಚಾರ್ಯರು ಮರೆಯಲಾಗದ ಮಾತುಗಳಲ್ಲಿ ಬಣ್ಣಿಸಬಲ್ಲರೆಂದೂ, ಜಡಪ್ರಪಂಚದಲ್ಲಿ ಸಚೇತನ ವರ್ತನೆಯನ್ನು ಮನಗಾಣಿಸಿ, ಚೇತನಾಚೇತನವೆಂಬ ಬಳಕೆಯ ಭೇದಭಾವನೆ ವಾಚಕರಿಗೆ ವಿಗಳಿತವಾಗುವಂತೆ ಮಾಡಬಲ್ಲರೆಂದೂ ಪ್ರೊ. ಹಿರಿಯಣ್ಣನವರು "ಮಾಂದಳಿರಿ"ನ ಮುನ್ನುಡಿಯಲ್ಲಿ ನಿರೂಪಿಸಿರುವರು. ಸತ್ಯವಾದ ಈ ಪ್ರಶಂಸೆ ಈ ಕವಿಗಳ ಬಿಡಿಪದ್ಯಗಳಿಗೆ ಮಾತ್ರವಲ್ಲ, ದೀರ್ಘಕೃತಿಗೂ ಎಷ್ಟು ಚೆನ್ನಾಗಿ ಅನ್ವಯಿಸುವುದೆಂಬುದು ಈ ನಾಟಕವನ್ನು ಓದಿದವರಿಗೆಲ್ಲ ಗೊತ್ತಾಗದಿರದು. ಇದರಲ್ಲಿ ಹಿನ್ನೆಲೆ ಮುನ್ನೆಲೆಯೆಂಬ ಭೇದವಿಲ್ಲದೆ, ಪ್ರಕೃತಿಯೊಂದಿಗೆ ಪಾತ್ರಗಳೂ ಪಾತ್ರಗಳೊಂದಿಗೆ ಪ್ರಕೃತಿಯೂ ಸಮತಾನವಾಗಿ ಎದೆ ಮಿಡಿಯುವುದನ್ನು ನೋಡಬಹುದು. ಈ ನಾಟಕದ ಉದ್ದಕ್ಕೂ ಬರುವ ವರ್ಣನೆಗಳಂತೂ ಉಜ್ಜ್ವಲ ಪ್ರತಿಭೆಯಿಂದಲ್ಲದೆ ಹೊಮ್ಮುವುದು ಅಸಂಭವ. ಅದರಲ್ಲೂ, ಪೂರ್ವಾಂಕದ ನಾಲ್ಕನೆಯ ದೃಶ್ಯದಲ್ಲಿ ಅದರ ಕ್ರಿಯೆಗೆ ಸಮುಚಿತವಾದ ಹಿನ್ನೆಲೆಯಾಗಿ ಬರುವ ಕಾರ್ಗತ್ತಲೆಯ ವರ್ಣನೆಯೂ, ಇದಕ್ಕೆ ಪ್ರತಿಚಿತ್ರವಾಗಿ ಐದನೆಯ ದೃಶ್ಯದಲ್ಲಿ ಕಲ್ಪನೆಯ ಪರಾಕಾಷ್ಠೆಯನ್ನು ಮುಟ್ಟಿ ಬಂದಿರುವ ಚಂದ್ರೋದಯದ ವರ್ಣನೆಯೂ ಯಾರನ್ನೂ ತಾನೆ ಬೆರಗುಪಡಿಸುವುದಿಲ್ಲ!

ಇನ್ನು, ಅವಿರತವಾಗಿ ಗೋಚರಿಸುವ ನಾಟಕಕಾರರ ಸೂಕ್ಷ್ಮದೃಷ್ಟಿ, ಧ್ವನಿಪೂರ್ಣವಾಗಿ ಮಾತುಗಳನ್ನು ಸಂಗತಿಗಳನ್ನೂ ಜೋಡಿಸುವ ಶಕ್ತಿ, ಛಂದಸ್ಸಿನಲ್ಲಿ ಬಗೆಬಗೆಯ ಪ್ರಯೋಗಗಳನ್ನು ನಡೆಸಿ ಹೊಸಸೊಗಸುಗಳನ್ನು ಹಲವೆಡೆಗಳಲ್ಲಿ ಸಾಧಿಸಿರುವ ಕೌಶಲ,—ಈ ಮೊದಲಾದದ್ದನ್ನೆಲ್ಲಾ ಇಲ್ಲಿ ವಿವರಿಸಲು ಅವಕಾಶವಿಲ್ಲ; ವಾಚಕರು ಒಟ್ಟು ಕೃತಿಯನ್ನೇ ಓದಬಹುದಾಗಿರುವುದರಿಂದ ಅವಶ್ಯಕತೆಯೂ ಇಲ್ಲ. ಇದರ ರೂಪವನ್ನು ಕುರಿತು ಒಂದೆರಡು ಅಂಶಗಳನ್ನು ಹೇಳಿಬಿಟ್ಟರೆ ಈಗಾಗಲೆ ದೀರ್ಘವಾಗಿ ಬೆಳೆದಿರುವ "ಪ್ರಸ್ತಾವನೆ"ಯ ಉದ್ದೇಶ ತೀರಿತು.

ನಮ್ಮ ಹಿಂದಿನ ನಾಟಕಗಳಲ್ಲಿ ಪದ್ಯಗಳು ಬೇಕಾದಷ್ಟು ಇರುತ್ತಿದ್ದುವು; ಅವುಗಳಲ್ಲಿ ಎಲ್ಲವನ್ನೂ ಅಲ್ಲದಿದ್ದರೆ ಕೆಲವನ್ನಾದರೂ ಹಾಡುತ್ತಲೂ ಇದ್ದರು. ಆದರೆ ಈ ಪದ್ಯಭಾಗದೊಂದಿಗೆ ಗದ್ಯವೂ ತಪ್ಪದೆ ಸೇರಿರುತ್ತಿದ್ದಿತು. ನಾಟಕದ ಕ್ರಿಯೆಯನ್ನು ಮುಂದುವರಿಸುವ ಸಾಮಾನ್ಯ ಸಂಭಾಷಣೆಗೆ ಗದ್ಯವನ್ನು ಉಪಯೋಗಿಸುವುದೇ ರೂಢಿಯಾಗಿತ್ತು. ಇಂಗ್ಲಿಷ್ ಸಾಹಿತ್ಯದ ಬಳಕೆ ಹೆಚ್ಚಿದೀಚೆಗೆ ನಾಟಕದ ರೀತಿಭಾಷೆಗಳು ಲೋಕವ್ಯವಹಾರಕ್ಕೆ ಆದಷ್ಟು ಹತ್ತಿರವಾಗಿರಬೇಕೆಂಬ ಭಾವನೆ ಬೆಳೆದು, ಕೇವಲ ಗದ್ಯದಲ್ಲಿ ನಾಟಕ ರಚನೆ ಮಾಡುವುದೇ ಸಾಹಿತಿಗಳ ಪದ್ಧತಿಯಾಗುತ್ತದೆ. ಕೇವಲ ಪದ್ಯದ ನಾಟಕಗಳು ಇಲ್ಲವೆಂದಲ್ಲ; ಆದರೆ ಅವು ಅತಿ ವಿರಳ. ಇರುವವುಗಳಲ್ಲಿ ಕೂಡ

ಹಾಡುವ ಪದ್ಯಗಳು ಕಡಮೆ; ವಾಚಿಸತಕ್ಕವೇ ಪ್ರಚುರ. ಈ ಪರಿಸ್ಥಿತಿಯಲ್ಲಿ, 'ಅಹಲ್ಯೆ' ಹೊಸಮಾರ್ಗವನ್ನು ಹಿಡಿಯುತ್ತದೆ. ನಾಟಕಕಾರರೇ ಹೇಳಿರುವಂತೆ ಇದೊಂದು "ಗೀತರೂಪಕ". ಇದರ ತುಂಬ ಬರಿಯ ಪದ್ಯವೇ. ಈ ಪದ್ಯಗಳಲ್ಲಿ ಕೆಲವನ್ನು ಹಾಡಲೇಬೇಕು : ಮಿಕ್ಕ ಭಾಗಗಳನ್ನು ಕೂಡ ರಾಗದ ಛಾಯೆಯನ್ನು ತಂದು ಹೇಳಿದರೆ ಸೊಗಸು ಹೆಚ್ಚು. ನರ್ತನದ ನೆರವನ್ನು ಕೋರುವ ಭಾಗಗಳೂ ಇಲ್ಲಿ ಉಂಟು. ಹೀಗೆ ಇದು ಪಾಶ್ಚಾತ್ಯದೇಶಗಳಲ್ಲಿ ಪ್ರಸಿದ್ಧವಾಗಿರುವ "ಆಪೆರ" (Opera)ವನ್ನು ಕೆಲವು ಮಟ್ಟಿಗೆ ಹೋಲುತ್ತದೆ. ಆದರೆ ಆಪೆರದಲ್ಲಿ ಗಾಯನಕ್ಕೆ ಪ್ರಥಮಸ್ಥಾನ; ಕಾವ್ಯಾಂಶ ಏನಾದರೂ ಇದ್ದರೆ ಅದು ಗಾಯನಕ್ಕೆ ಅಂಗವಾಗಿ ಬರುತ್ತದೆ. ಆಪೆರವನ್ನು ರಚಿಸತಕ್ಕವರು ಗಾಯನಕೋವಿದರೇ ಆಗಿರುತ್ತಾರೆ. ಇಲ್ಲಾದರೆ, ಹಾಲಿಗೆ ಸಕ್ಕರೆ ಬೆರಸಿದಂತೆ ಉತ್ಕೃಷ್ಟವಾದ ಕಾವ್ಯಭಾಗದ ಸವಿಯನ್ನು ಅದಕ್ಕೆ ಅನುಗುಣವಾಗಿ ಜೋಡಿಸಿದ ಹಾಡುಗಾರಿಕೆ ಇನ್ನಷ್ಟು ಹೆಚ್ಚಿಸುತ್ತದೆ. ಈ ಮಧುರ ಸಮ್ಮಿಳನಕ್ಕೆ ಮತ್ತಷ್ಟು ಪುಷ್ಟಿಕೊಡಲು ರಂಗಸ್ಥಳವನ್ನು ವಿನ್ಯಾಸಗೊಳಿಸುವುದಕ್ಕೂ ಅವಕಾಶವುಂಟು. ಪ್ರಾಚೀನ ಯುಗದ ಐತಿಹ್ಯವೊಂದನ್ನು ಅವಲಂಬಿಸಿ, ದೇವಮಾನವರ ಸತತ ಸಾಹಚರ್ಯದಿಂದ ಕೂಡಿ ಸ್ವರ್ಗದಿಂದ ಭೂಮಿಗೂ ಭೂಮಿಯಿಂದ ಸ್ವರ್ಗಕ್ಕೂ ಹಾಯ್ದಾಡುತ್ತಿರುವ ಈ ನಾಟಕದ ವಸ್ತುವಿಗೆ ಈ ರೀತಿ ಎಷ್ಟು ಸರಿಯಾಗಿ ಒಪ್ಪುತ್ತದೆಂದು ವಿವರಿಸಬೇಕಾಗಿಲ್ಲ. ಇಂಥ ಆವರಣವನ್ನು ಕಲ್ಪಿಸುವ ಶಕ್ತಿ ದಿನಬಳಕೆಯ ಗದ್ಯಕ್ಕೆ ಸಾಲದು; ಇಲ್ಲಿ ಪದ್ಯದ ಲಯಬದ್ಧತೆಯೇ ಬೇಕು; ಗಾಯನದ ಸಂಮೋಹನವೇ ಬೇಕು.

ಹಾಡುಗಾರಿಕೆಗೆ ಪ್ರಶಸ್ತಿ ದೊರತಕಡೆ ಸಾಹಿತ್ಯ ಬೀಳಾಗುವುದುಂಟು. ಈ ಅಪಖ್ಯಾತಿಯನ್ನು "ಅಹಲ್ಯೆ" ಸಂಪೂರ್ಣವಾಗಿ ನಿವಾರಿಸುತ್ತದೆ. ಹೊಸಗನ್ನಡದ ಕಾವ್ಯಪ್ರಪಂಚದಲ್ಲಿ ಉತ್ತಮಸ್ಥಾನವನ್ನು ಈಗಾಗಲೇ ಗಳಿಸಿರುವ ಕವಿಯೊಬ್ಬರ ನಾಟಕ ಇದು. ಇಲ್ಲಿ ಅವರ ಶಕ್ತಿ ಇನ್ನೂ ಪರಿಪಾಕಹೊಂದಿ ಕನ್ನಡಿಗರಿಗೆ ಅತಿ ಸವಿಯಾದ ಫಲವನ್ನು ಕೊಟ್ಟಿದೆ. ಶ್ರೀಮಾನ್ ನರಸಿಂಹಾಚಾರ್ಯರ ಎಲ್ಲ ಕವನಗಳೂ ಭಾವಗರ್ಭಿತ ವಾದವು; ರೀತಿಯಲ್ಲಿ ಮಾತಿನಲ್ಲಿ ಒಮ್ಮೊಮ್ಮೆ ಕ್ಲೇಶ ತೋರಿದರೂ, ಒಳಗಿನ ತಿರುಳುಮಾತ್ರ ಯಾವಾಗಲೂ ರಮ್ಯವೇ. ಇಲ್ಲಿಯ ಹಾಡುಗಳಲ್ಲಿ ಭಾವಪುಷ್ಟಿಯ ಜೊತೆಗೆ ಮಾತಿನ ಹೊದಿಕೆಯೂ ಮೃದುವಾಗಿ ಕಾಂತಿಮಯವಾಗಿ ಬಂದಿದೆ. ಇವು ಒಳ್ಳೆಯ ಗೀತೆಗಳು ಮಾತ್ರವಲ್ಲ, ನಾಟಕದ ಸಾರವೂ ಆಗಿರತಕ್ಕವು. ಉದಾಹರಣೆಗಾಗಿ ಒಂದೊಂದು ಅಂಕದಿಂದ ಒಂದೊಂದನ್ನು ಆರಿಸುವ ಪಕ್ಷಕ್ಕೆ,—ಪೂರ್ವಾಂಕದಲ್ಲಿ ಗೌತಮನನ್ನು ಮದನನು ಎಚ್ಚರಿಸುವ ಹಾಡು, ಮಧ್ಯಮಾಂಕದಲ್ಲಿ ಮದನನನ್ನೇ ಅಪ್ಸರೆಯರು ಎಚ್ಚರಗೊಳಿಸುವ ಹಾಡು, ಉತ್ತರಾಂಕದಲ್ಲಿ ಅಹಲ್ಯೆಯ ಆರ್ತಗಾನ—ಇವನ್ನು ಹೆಸರಿಸಬಹುದು. ಆದರೆ ಹೀಗೆ ಎರಡು ಮೂರನ್ನು ಪ್ರತ್ಯೇಕಿಸುವುದು ಅನುಚಿತ. ಇಷ್ಟೇ ಮಧುರವಾದ ಗೀತಗಳು ಇನ್ನೂ ಹಲವು ಈ ನಾಟಕದಲ್ಲಿವೆ.

"ಅಹಲ್ಯೆ"ಯ ಪೂರ್ವಾಂಕವು ರಚಿತವಾದ ಸ್ವಲ್ಪ ದಿನಗಳಲ್ಲೇ, ಒಬ್ಬಿಬ್ಬರು ಮಿತ್ರರೊಂದಿಗೆ ಕುಳಿತು, ಕವಿಯ ಬಾಯಿಂದಲೇ ಓದಿಸಿ ಹಾಡಿಸಿ ಕೇಳಿ, ಎಲ್ಲರಿಗೂ,

ಮೊದಲು ಇದರ ಅಪೂರ್ವ ಸೌಂದರ್ಯವನ್ನು ಆಸ್ವಾದಿಸುವ ಭಾಗ್ಯ ನನಗೆ ದೊರೆಯಿತು. ಆ ಬಳಿಕ ಉಳಿದ ಅಂಕಗಳನ್ನೂ ಯಥಾಕಾಲದಲ್ಲಿ ಕೇಳಿ ಸಂತೋಷಪಟ್ಟೆನು. ಈ ಎಲ್ಲ ಆನಂದದ ಗುರುತಾಗಿ, ಈ ಉತ್ಕೃಷ್ಟ ಕೃತಿಗೆ ನನ್ನ ಅಲ್ಪಾರಾಧನೆಯ ಕಾಣಿಕೆಯಾಗಿ— ಒಂದು 'ಪ್ರಸ್ತಾವನೆ'ಯನ್ನು ಬರೆಯುತ್ತೇನೆಂದು ಉತ್ಸಾಹದ ಗಳಿಗೆಯೊಂದರಲ್ಲಿ, ಸ್ವಯಂಪೂರ್ಣವಾದ ಈ ಗ್ರಂಥಕ್ಕೆ ಈ ಊರೆಗೋಲಿನ ಅಗತ್ಯವೇ ನಿಜವಾಗಿ ಇಲ್ಲದಿದ್ದರೂ, ಒಪ್ಪಿಕೊಂಡೆನು. ಆಡಿದಮಾತನ್ನು ನಡೆಸಿಕೊಟ್ಟು ಎಷ್ಟೋ ದಿನಗಳಾಗ ಬೇಕಾಗಿತ್ತು. ಗ್ರಂಥವು "ಪ್ರಬುದ್ಧ ಕರ್ಣಾಟಕ"ದಲ್ಲಿ ಭಾಗ ಭಾಗಗಳಾಗಿ ಪ್ರಕಟನೆ ಹೊಂದುತ್ತಾ ಬಂದು, ಕೊನೆಯ ಅಂಕ ಹೊರಬಿದ್ದೇ ಒಂದು ವರ್ಷಕ್ಕೆ ಬಂದಿತು. ಆದರೆ ಪ್ರಸ್ತಾವನೆಯ ಪುಷ್ಪಾಂಜಲಿಯಿಲ್ಲದೆ, ಈ ನಾಟಕವು ಪುಸ್ತಕರೂಪದಲ್ಲಿ ಕಾಣಿಸಿಕೊಳ್ಳ ಕೂಡದೆಂದು ಗೊತ್ತಾಗಿದ್ದುದರಿಂದ, ಅದು ಅಚ್ಚಿನ ಮನೆಯ ತೆರೆಮರೆಯಲ್ಲೇ ಇದುವರೆಗೂ ಉಳಿಯಬೇಕಾಯಿತು. ನನ್ನಿಂದ ಇಷ್ಟು ತಡವಾದುದಕ್ಕೆ ಕವಿಗಳ, ಪ್ರಕಾಶಕರ ಮತ್ತು ಮುದ್ರಣಕಾರರ ಕ್ಷಮೆಯನ್ನು ಬೇಡುತ್ತೇನೆ; ವಾಚಕರ ಆನಂದಕ್ಕೆ ಇಷ್ಟು ಕಾಲ ಅಡ್ಡಿಯಾಗಿ ನಿಂತದ್ದಕ್ಕಾಗಿ ಅವರ ಕ್ಷಮೆಯನ್ನೂ ಬೇಡುತ್ತೇನೆ.

ಒಂದು ನಾಟಕವು ಉತ್ತಮ ಕಾವ್ಯವಾಗಿರಬಹುದು; ಸಹೃದಯರು ಅವರ ವಾಚನದಿಂದಲೇ ರಸಾನುಭವವನ್ನು ಪಡೆಯಬಹುದು. ಆದರೆ, ಪುಸ್ತಕದೊಳಗಿನ ನಾಟಕ ಅಷ್ಟಮಿಯ ಚಂದ್ರನಂತೆ. ಸುಸಜ್ಜಿತವಾದ ನಾಟಕರಂಗದಲ್ಲಿ ರಸಜ್ಞರೂ ಸಮರ್ಥರೂ ಆದ ನಟರು ಅಭಿನಯಿಸಿದ ಹೊರತು ಅದಕ್ಕೆ ಪೂರ್ಣಕಳೆ ಬರುವುದಿಲ್ಲ. "ಅಹಲ್ಯೆ"ಯ ಅಭಿನಯವನ್ನು ನಾವು ಬೇಗ ನೋಡುವಂತಾಗಿ, ಅದರ ತುಂಬುಸವಿ ನಮಗೆ ದೊರೆಯಲೆಂದು ಹಾರೈಸುತ್ತೇನೆ.

ಸಮಾಲೋಕನ : ೧೯೫೮

ಸಮುದ್ರದಾಚೆಯಿಂದ*

ಪ್ರೊ. ಗೋಕಾಕರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿ ಉಚ್ಚಪ್ರಶಸ್ತಿಯೊಡನೆ ಸ್ವದೇಶಕ್ಕೆ ಹಿಂದಿರುಗಿ ಆಗಲೇ ಒಂದು ವರ್ಷಕ್ಕೆ ಬಂದಿತು. ಅವರ ಗ್ರಂಥದ ಎರಡು ಭಾಗಗಳೂ ಅವರಿನ್ನೂ ಸಮುದ್ರದಾಚೆಗೆ ಇದ್ದಾಗಲೇ ಪ್ರಕಟವಾದವು. ಬರವಣಿಗೆ ಬಿಸಿಬಿಸಿಯಾಗಿರುವಾಗ ಅದರ ಪರಿಚಯ ಮಾಡಿಕೊಡದೆ, ಈಗ ವಿಮರ್ಶೆಗೆ ತೆಗೆದುಕೊಂಡಿರುವುದು ಅಸಮಂಜಸವೆಂದು ಲೇಖಕ ವಾಚಕರಿಬ್ಬರಿಗೂ ತೋರಬಹುದು. ಈ ಸಂದರ್ಭದಲ್ಲಿ, ತಡವಾದದ್ದು ತಪ್ಪೆಂದು ಮೊದಲಿಗೇ ಒಪ್ಪಿಕೊಂಡು ಬಿಡುವುದು ವಾಸಿ. ಆದರೆ ಗ್ರಂಥ ಹೊರಬಿದ್ದು ತುಂಬ ದಿನಗಳಾಗಿದ್ದರೂ ಅದರ ಸ್ವಾರಸ್ಯ ಎಷ್ಟು ಮಾತ್ರಕ್ಕೂ ತಂಗಳಾಗಿಲ್ಲ. ಅಚ್ಚಾದ ಹೊಸದರಲ್ಲಿ ಓದಿದಾಗ ಯಾವ ಸವಿ ಅದರಲ್ಲಿ ಕಾಣಬಂದಿತೋ ಅದೇ ಸವಿಯನ್ನು ಈಗ—ವಿಮರ್ಶಕನ ದೃಷ್ಟಿಯಿಂದ—ಮತ್ತೆ ಓದಿದಾಗಲೂ ಈ ಲೇಖಕನು ಅನುಭವಿಸಿದನು. ಮುಂದಿನ ಕೆಲವು ಮಾತುಗಳನ್ನು ಬರೆಯಲು ಕಾಲ ಇನ್ನೂ ಮೀರಿಲ್ಲವೆನ್ನುವುದಕ್ಕೆ ಇದೇ ಸಮರ್ಥನೆಯಾಗಬಹುದು.

---

* ವಿ. ಕೃ. ಗೋಕಾಕ : ಸಮುದ್ರದಾಚೆಯಿಂದ, ಭಾಗಗಳು ೧, ೨ (೧೯೩೭-೧೯೩೮)—ವಿಮರ್ಶೆ ('ಪ್ರಬುದ್ಧ ಕರ್ಣಾಟಕ', ೨೧.೧)

ನಮ್ಮ ದೇಶದಿಂದ ವರ್ಷವರ್ಷವೂ ಪ್ರೌಢ ಶಿಕ್ಷಣಕ್ಕಾಗಿ ಪಶ್ಚಿಮದೇಶಗಳಿಗೆ ಹೋಗುವವರಲ್ಲಿ ಇನ್ನೂ ಚೆನ್ನಾಗಿ ಕಣ್ಣು ತೆರೆಯದವರೇ ಹೆಚ್ಚು ಮಂದಿ. ಹಿಂದೂ ದೇಶದಲ್ಲೇ ಇನ್ನೂ ಕಲಿಯಲು ವಿಷಯವೂ ಅವಕಾಶವೂ ಇದ್ದರೂ ಹಿತ್ತಲ ಮದ್ದೆಂದು ಅದನ್ನು ಉಪೇಕ್ಷಿಸಿ, ಪಾಶ್ಚಾತ್ಯಪ್ರಶಸ್ತಿಗಳ ವ್ಯಾಮೋಹದಿಂದ, ದುಡ್ಡಿನ ಬಲದಿಂದ ಅವರು ಸಮುದ್ರವನ್ನು ದಾಟುತ್ತಾರೆ. ಶ್ರೀಮಾನ್ ಗೋಕಾಕರು ಹೀಗೆ ಮಾಡಿದವರಲ್ಲ. ಅವರು ಮುಂಬಯಿ ವಿಶ್ವವಿದ್ಯಾಲಯದ ಎಂ. ಎ. ಪರೀಕ್ಷೆಯಲ್ಲಿ ಪ್ರಥಮಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು; ಡೆಕನ್ ಎಜುಕೇಷನ್ ಸೊಸೈಟಿಯಂಥ ಪ್ರಸಿದ್ಧ ವಿದ್ಯಾಸಂಸ್ಥೆಯ ಸದಸ್ಯರಾಗಿ ಸೇರಿ, ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕರಾಗಿ ಕೆಲಸಮಾಡಿ ಒಳ್ಳೆಯ ಹೆಸರನ್ನು ಗಳಿಸಿದರು. ಸೊಸೈಟಿಯವರು ಇವರ ಸಾಮರ್ಥ್ಯವನ್ನು ಮನಗಂಡು, ಇಂಗ್ಲಿಷ್ ಭಾಷಾ ಸಾಹಿತ್ಯಗಳ ವಿಶೇಷ ವ್ಯಾಸಂಗಕ್ಕಾಗಿ ವೇತನ ಕೊಟ್ಟು ಇವರನ್ನು ಆಕ್ಸ್‌ಫರ್ಡಿಗೆ ಕಳುಹಿಸಿದರು. ಮೊದಲಿನಿಂದಲೂ ಮೇಧಾವಿಗಳಾಗಿ ಇಂಗ್ಲಿಷ್ ಸಾಹಿತ್ಯವನ್ನು ಓದಿ ಓದಿಸಿ ನಿಷ್ಣಾತರೂ ಅನುಭವಿಗಳೂ ಆಗಿದ್ದ ಪ್ರೊ. ಗೋಕಾಕರಿಗೆ ಈ ಇಂಗ್ಲೆಂಡಿನ ಪ್ರವಾಸವು ವಿದ್ವತ್ತಿನ ಸೌಧಕ್ಕೆ ಕಳಸವಿಟ್ಟಂತೆ ಒದಗಿತು. ಇಲ್ಲಿಂದ ಹೊರಡುವ ವೇಳೆಗೆ ಅವರು ರೂಢಿಸಿಕೊಂಡಿದ್ದ ಸಾಹಿತ್ಯಜ್ಞಾನವೂ, ಅದರ ತಳಹದಿಯಾದ ಲೋಕಾನುಭವವೂ ಇಂಗ್ಲೆಂಡಿನ ಹೊಸ ಆವರಣದಲ್ಲಿ ಪರಿಪಾಕ ಹೊಂದಿದುವು. ಇದರ ಫಲವನ್ನು ಸಮುದ್ರದಾಚೆಯಿಂದ ಅವರು ಬರೆದ ಕಾಗದ ಪತ್ರಗಳಲ್ಲಿ ಕನ್ನಡಿಗರೆಲ್ಲರೂ ರುಚಿನೋಡಬಹುದಾಗಿದೆ.

'ಸಮುದ್ರದಾಚೆಯಿಂದ' ಎನ್ನುವುದು ಆರಂಭ ಮುಕ್ತಾಯಗಳನ್ನೊಳಕೊಂಡು ಒಂದು ನಿರ್ದಿಷ್ಟ ವಿಷಯದಮೇಲೆ ಅಧ್ಯಾಯ ಅಧ್ಯಾಯವಾಗಿ ಬರೆದ ಗ್ರಂಥವಲ್ಲ; ಈ ಪ್ರವಾಸಿಗಳು ಆಗಿಂದಾಗ ತಮ್ಮ ಇಷ್ಟಮಿತ್ರರಿಗೆ ಬರೆಯುತ್ತಿದ್ದ ಕಾಗದಗಳಿಂದಲೂ, ತಮ್ಮ ವ್ಯಾಸಂಗದ ನಡುವೆ ಬಿಡುವು ಮಾಡಿಕೊಂಡು ಗುರುತು ಹಾಕಿ ಇಡುತ್ತಿದ್ದ ದಿನಚರಿಯ ಹಾಳೆಗಳಿಂದಲೂ ಸಂಗ್ರಹಿಸಿದ ಬಿಡಿಬಿಡಿಯ ಬರೆಹಗಳ ಕಟ್ಟು. ಹೀಗಿರುವುದರಿಂದಲೇ ಈ ಕೃತಿಗೆ ಒಂದು ಹೊಸತನವೂ ಸೊಗಸೂ ಬಂದಿದೆ. ತಾವು ಕಂಡ ಹಲವು ಸಂಗತಿಗಳನ್ನೂ ಸಂದರ್ಭವಶದಿಂದ ತಮ್ಮ ಮನಸ್ಸಿನಲ್ಲಿ ಮೂಡಿದ ಹಲವು ವಿಚಾರಗಳನ್ನೂ ಅನುಭವದ ಕಾವು ಇಳಿಯುವುದಕ್ಕೆ ಮುಂಚೆಯೇ ಆಡಂಬರವಿಲ್ಲದ ಮಾತಿನಲ್ಲಿ ಬರಹಗಾರರು ನಿರೂಪಿಸುವುದಕ್ಕೆ ಈ ಪದ್ಧತಿಯಲ್ಲಿ ಸಾಧ್ಯವಾಯಿತು. ಇಂಗ್ಲಿಷನ್ನು ಬಲ್ಲ ಗೆಳೆಯರು ಕಾಗದ ಪತ್ರಗಳನ್ನು ಒಬ್ಬರಿಗೊಬ್ಬರು ಕನ್ನಡದಲ್ಲಿ ಬರೆಯುವುದು ಭಾಷಾಭಿಮಾನ ಉಕ್ಕುತ್ತಿರುವ ಈ ಕಾಲದಲ್ಲಿ ಕೂಡ ವಿರಳವೇ; ದಿನಚರಿಯನ್ನು ಕನ್ನಡದಲ್ಲಿ ಬರೆಯುವುದಂತೂ ಅತಿ ವಿರಳ. ಶ್ರೀಮಾನ್ ಗೋಕಾಕರು ಈ ಎರಡನ್ನೂ ಇಷ್ಟು ಶ್ರದ್ಧೆಯಿಂದ, ಇಷ್ಟು ಸ್ವಾರಸ್ಯವಾಗಿ ನಿರ್ವಹಿಸಿದ್ದರಿಂದ ಈ ಪ್ರವಾಸದ ಅನುಭವಗಳಲ್ಲಿ ಅವರ ಆಪ್ತಮಿತ್ರರು ಮಾತ್ರವಲ್ಲದೆ ಕನ್ನಡಿಗರೆಲ್ಲರೂ ಭಾಗಿಗಳಾಗಲು ಅವಕಾಶ ದೊರೆಯಿತು.[೧] ಈ

೧. ಶ್ರೀಮಾನ್ ಗೋಕಾಕರ ಗ್ರಂಥಕ್ಕಿಂತ ಮುಂಚೆಯೇ ಕನ್ನಡದಲ್ಲಿ ಪಶ್ಚಿಮ ದೇಶದ ಪ್ರವಾಸವನ್ನು ಕುರಿತು ಪ್ರಕಟವಾಗಿದ್ದ ಶ್ರೀಮಾನ್ ಬಿ. ಪುಟ್ಟಯ್ಯನವರ 'ಅಭಿವೃದ್ಧಿ ಸಂದೇಶ'ವನ್ನೂ ಕೀರ್ತಿಶೇಷ

ಸಂದರ್ಭದಲ್ಲಿ ಪ್ರೊ. ಗೋಕಾಕರ "ಪತ್ರ-ದಿನಚರಿಗಳನ್ನು ಒಂದು ಕ್ರಮಕ್ಕೆತಂದು ಅವಶ್ಯವಿದ್ದಲ್ಲಿ ಭಾಷಾಂತರ ಮಾಡಿ ಸಂಪಾದನಗೊಳಿಸಿದ್ದಕ್ಕಾಗಿ ಪ್ರೊ. ಮುಗುಳಿಯ ವರಿಗೂ" ಮನೋಹರ ಗ್ರಂಥ ಮಾಲೆಯ ಸಂಪಾದಕರಂತೆ ಈ ಗ್ರಂಥದ ವಾಚಕರೂ ತಮ್ಮ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ.

ಪ್ರೊ. ಗೋಕಾಕರು ಇಂಗ್ಲೆಂಡಿಗೆ ಹೋದದ್ದು ಇಂಗ್ಲಿಷ್ ಸಾಹಿತ್ಯದ ಪ್ರೌಢ ವ್ಯಾಸಂಗಕ್ಕಾಗಿ. ಇಲ್ಲಿ ಕಾವ್ಯದ ಮೂಲಕ ಅರಿತಿದ್ದ ಅನೇಕ ಇಂಗ್ಲಿಷ್ ಕವಿಗಳ ಕವಿತೆಯ ಆವರಣವನ್ನು ಅಲ್ಲಿ ಪರಿಚಯ ಮಾಡಿಕೊಂಡರು. ಕೀಟ್ಸ್ ಕವಿ ಇದ್ದ ಮನೆ, ಷೇಕ್ಸ್‌ಪಿಯರ್ ಹುಟ್ಟಿದ ಹಳ್ಳಿ—ಇವನ್ನು ನೋಡಿದಾಗ ತಮಗುಂಟಾದ ಭಾವಗಳ ನಿರೂಪಣೆಯನ್ನು ಅವರು ವಿಸ್ತಾರವಾಗಿ ಕೊಟ್ಟಿದ್ದಾರೆ. ಇಂಗ್ಲಿಷ್ ರಂಗಭೂಮಿಯನ್ನು ಅವರು ವಿಶೇಷ ಆಸಕ್ತಿಯಿಂದ ಪರಿಶೀಲಿಸಿದಂತೆ ಕಾಣುತ್ತದೆ. Fantasy, Pantomime, Opera, ಷೇಕ್ಸ್‌ಪಿಯರಿನ ನಾಟಕಗಳು, ಹೊಸಜಾತಿಯ ಪ್ರಯೋಗಗಳು—ಇವನ್ನೆಲ್ಲಾ ಆಸ್ಥೆಯಿಂದ ನೋಡಿ, ಅವುಗಳ ಸ್ವರೂಪದ ದಿಗ್ದರ್ಶನ ಮಾಡಿದ್ದಾರೆ. ಅವುಗಳನ್ನು ಕುರಿತು ಇವರು ಹೇಳುವ ಮಾತಿನಲ್ಲೆಲ್ಲಾ ಕನ್ನಡದ ರಂಗಭೂಮಿ ಹೇಗೆ ಸುಧಾರಿಸಬೇಕು, ವಿಕಾಸಗೊಳ್ಳಬೇಕು ಎಂಬುದು ಹಿನ್ನೆಲೆಯಲ್ಲಿ ಶ್ರುತಾಶ್ರುತವಾಗಿ ದನಿಗೊಡುತ್ತಲೇ ಇದೆ.

ಪ್ರೊ. ಗೋಕಾಕರು ಒಳ್ಳೆಯ ವಾಗ್ಮಿಗಳು; ಚತುರೋಕ್ತಿಯ ಸ್ವಾರಸ್ಯವನ್ನು ಸವಿಯಬಲ್ಲವರು, ಸೂಸಬಲ್ಲರು. ತಾವು ಕೇಳಿದ, ಭಾಗವಹಿಸಿದ ಅನೇಕ ಚರ್ಚಾಗೋಷ್ಠಿ, ಉಪನ್ಯಾಸ ಮೊದಲಾದವುಗಳ ಲಘು ಚಿತ್ರವನ್ನು ಈ ಗ್ರಂಥದ ಉದ್ದಕ್ಕೂ ಕೊಟ್ಟಿದ್ದಾರೆ. ಇದರಿಂದ ಈ ಗ್ರಂಥಕ್ಕೆ ಅತಿಶಯವಾದ ಮೆರಗು ಬಂದಿದೆ: That this house prefers its shirt to its tie'[೨] ಎಂಬ ವಿಷಯದ ಮೇಲಿನ ಚರ್ಚೆಯಲ್ಲಿ (ಈ ವಿಷಯವೇ ಎಷ್ಟು ಹಗುರವಾಗಿ ಹಾಸ್ಯಪ್ರಚೋದಕವಾಗಿದೆ! ನಮ್ಮ ಕಾಲೇಜ್ ಯೂನಿಯನ್ನುಗಳ ಚರ್ಚೆಗಳಿಗೆ ಇಂಥ ವಿಷಯಗಳನ್ನು ಆರಿಸಿಕೊಂಡು ಸರಸವಾಗಿ ವಾದಮಾಡುವ ಕಾಲ ಯಾವಾಗ ಬರುತ್ತದೆಯೋ!) ಭಾಗವಹಿಸಿದ ಒಬ್ಬರು "I can, then, be comfortable with my shirt, but the opposer can only hang himself with his tie!" ಎಂದನಂತೆ . . . . ಪ್ರೊ. ಬರ್‌ಟ್ರೆನ್‌ಡ್ ರಸೆಲ್ ಅವರು ಒಂದು ಚರ್ಚೆಯಲ್ಲಿ ಮಾತನಾಡುತ್ತಾ ಹೀಗೆಂದರು : "We believe that we are virtuous and that the other people are wicked; which, I think, is

ಭಾಸ್ಕರರಾವ್ ಮಾಲೂರ್‌ಕರ್ ಅವರು ತಮ್ಮ ತಾಯಿಯವರಿಗೆ ಬರೆಯುತ್ತಿದ್ದು, ಅವರ ಅಕಾಲ ಮರಣದಿಂದ ಕಡಿದುಹೋದ ಪತ್ರಗಳ ಮಾಲೆಯನ್ನೂ ಇಲ್ಲಿ ಸ್ಮರಿಸುವುದು ಅನುಚಿತವಾಗಲಾರದು.

೨. ಗ್ರಂಥದಲ್ಲಿ ಉದಾಹರಿಸಿರುವ ಇಂಗ್ಲಿಷ್ ವಾಕ್ಯಗಳಿಗೆಲ್ಲ ಕನ್ನಡದ ಅರ್ಥವನ್ನು ಮಗ್ಗುಲಲ್ಲಿ ಕೊಟ್ಟಿದ್ದಾರೆ. ಆದರೆ ವಿಮರ್ಶೆ ಹೆಚ್ಚು ಜಾಗವನ್ನು ಆಕ್ರಮಿಸುವುದೆಂಬ ಭಯದಿಂದ ಈ ಅನುವಾದಗಳನ್ನು ಇಲ್ಲಿ ಬಿಡಬೇಕಾಯಿತು.

a half-truth.". . . ."ಇಲ್ಲಿಯೂ ಸಭೆಯಲ್ಲಿ ಕೆಲವು ಮಂಗನಂಥ ಹುಡುಗರಿರುತ್ತಾರೆ. ಒಬ್ಬನು ಯಾವಾಗಲೂ 'On a point of law, sir' ಎಂದು ಸುರುವು ಮಾಡುತ್ತಾನೆ.. ಕಡೆಗೆ ಅಧ್ಯಕ್ಷನು 'You will never rise in this house, sir, whether on a point of law or otherwise' ಎಂದು ಹೇಳಿ ಕೂಡಿಸಬೇಕಾಯಿತು!" . . . "ಒಬ್ಬ ಸದಸ್ಯನು ಇಂದು ಪ್ರಶ್ನೆಯೆತ್ತಿದ : 'The emergency exit, to be used in case of fire, is out of order. The matter should be looked into'. ತತ್‌ಕ್ಷಣ ಅಧ್ಯಕ್ಷರ ಉತ್ತರ ಬಂತು : 'The oratory of this house is not so fiery as to necessitate it'.

ಇದರಂತೆಯೇ ಸ್ವಾರಸ್ಯವುಳ್ಳ ಮಾತುಕತೆಗಳ, ಸಂಗತಿಗಳ ಉಲ್ಲೇಖವೂ ಈ ಗ್ರಂಥದಲ್ಲಿ ಬೇಕಾದಷ್ಟು ಬಂದಿದೆ. ಬೋಸ್ ಎಂಬ ಮೃದು ಸ್ವಭಾವದ ಪ್ರೊಫೆಸರೊಬ್ಬರು ಪ್ರೊ. ಗೋಕಾಕರ ಸಂಗಡ ಮಾತಾಡುತ್ತಾ "India must be a wonderful country" ಎಂದು ಹೊಗಳಿದರಂತೆ. ಅದಕ್ಕೆ ಇವರು "It is fast becoming one" ಎಂದು ಉತ್ತರಕೊಟ್ಟರಂತೆ! . . ."ಪ್ರೊ. ರೆನ್ (ಅವರು ಹಿಂದೆ ಮದ್ರಾಸಿನಲ್ಲಿ ಕೆಲವುಕಾಲ ಇದ್ದರು) ಇಂದು ಹೇಳುತ್ತಿದ್ದರು. ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ 'motto' ಏನಿರಬೇಕೆಂಬುದರ ಬಗ್ಗೆ ಒಮ್ಮೆ ಚರ್ಚೆಗೆ ಪ್ರಾರಂಭವಾಗಿತ್ತಂತೆ. ಹಿಂದೂ ಸದಸ್ಯರು ಸಂಸ್ಕೃತದಲ್ಲಿರಬೇಕೆಂದರು; ಮಹಮ್ಮದೀಯರು 'ಅರಬ್ಬಿ'ಯಲ್ಲಿ ಯೆಂದರು. ಆಗ 'Got help us' ಎಂಬುದೇ motto ಇರಲೆಂದು ಇವರು ಸೂಚಿಸಿದರಂತೆ!" . . . "ತಾಸಿಗೆ ಎರಡೂವರೆ ಶಿಲಿಂಗ್ ಕೊಟ್ಟು ಒಬ್ಬ ಹಿಂದೂ ಯುವಕನು ಆಂಗ್ಲ ಸ್ತ್ರೀಯೊಬ್ಬಳ ಕಡೆಯಿಂದ 'General Etiquette' ಕಲಿಯುತ್ತಿದ್ದಾನೆ. ಮನೆಯಿಂದ ಶ್ರೀಮಂತ. ಮ್ಯಾಟ್ರಿಕ್ ಸಹ ಆಗಿಲ್ಲ. ಇಲ್ಲಿ ಪಾಸಾಗಿ ಮುಂದೆ 'ಬಾರ್' ಮಾಡಬೇಕೆನ್ನುತ್ತಾನೆ. ತನ್ನ ಸ್ಥಿತಿಯನ್ನು ಜವಾಹರಲಾಲ ನೆಹರೂ ಅವರಿಗೆ ಹೇಳಿ 'ನಾನು ಇಂಗ್ಲೆಂಡಕ್ಕೆ ಹೋಗಬೇಕೆನ್ನುತ್ತೇನೆ. ಏನು ಮಾಡಲಿ?' ಎಂದು ಹೇಳಿದನಂತೆ. 'ಬಂದ ಮೇಲಾದರೂ ಹಿಂದೂಸ್ಥಾನದ ಸೇವೆಮಾಡು' ಎಂದು ಅವರು ಹೇಳಿದರು!" . . . .

ಈ ವಿನೋದದ ಸುಗ್ಗಿಯಲ್ಲಿ ವಿಷಾದವನ್ನು ಕೆರಳಿಸುವ ಸಂಗತಿಗಳೂ ನಡುನಡುವೆ ಬರುತ್ತವೆ. ಊರುಮನೆಗಳನ್ನು ಬಿಟ್ಟು ಇಂಗ್ಲೆಂಡಿನಲ್ಲಿ ಒಂಟಿಯಾಗಿ ಕಾಲಕಳೆಯುವ ಭಾರತೀಯ ವಿದ್ಯಾರ್ಥಿಗಳೂ ಇತರರೂ ಎಷ್ಟು ಸುಲಭವಾಗಿ ಅಡ್ಡಹಾದಿಯನ್ನು ತುಳಿಯುತ್ತಾರೆ, ನೀತಿಯನ್ನು ಕೆಡಿಸಿಕೊಳ್ಳುತ್ತಾರೆ, ಇಂಗ್ಲಿಷ್ ಜನತೆಯ ತಿರಸ್ಕಾರಕ್ಕೆ ಗುರಿಯಾಗುತ್ತಾರೆ ಎಂಬುದನ್ನು ನಿದರ್ಶಿಸುವ ಹಲವು ಸಂಗತಿಗಳನ್ನು ಪ್ರೊ. ಗೋಕಾಕರು ತಮ್ಮ ಗ್ರಂಥದಲ್ಲಿ ಸಂಕಟದೊಡನೆ ಉಲ್ಲೇಖಿಸಿದ್ದಾರೆ. ಈ ಎಲ್ಲ ವಿಷಯವನ್ನೂ ವಿಚಾರಮಾಡಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಲಂಡನ್ನಿನ ಮಹಾರಾಷ್ಟ್ರ ಮಂಡಲದ ಸಭೆಯೊಂದರಲ್ಲಿ ನಿರ್ಣಯವಾಯಿತಂತೆ. ಇದರ ಕಾರ್ಯ ಏನಾದರೂ ಫಲಕಾರಿಯಾಯಿತೋ, ಸಮಿತಿಯನ್ನು ನೇಮಕಮಾಡಿದ್ದರಲ್ಲೇ ಮುಕ್ತಾಯವಾಯಿತೋ

ತಿಳಿಯದು. "ಸ್ವದೇಶದಿಂದ ಇಲ್ಲಿಗೆ ಒಂದೊಡನೆ ನಮ್ಮಲ್ಲಿದ್ದ ಉಚ್ಚನೀಚ ಭಾವನೆಗಳೆಲ್ಲ ಜಾಗೃತವಾಗುತ್ತವೆ. ಇಲ್ಲಿರುವದೆಂದರೆ ನಮ್ಮ ಜೀವನವನ್ನು ಒರೆಗೆ ಹಚ್ಚಿದಂತೆ. ಅನೇಕ ಪರೀಕ್ಷಾ ಸಮಯಗಳು ಇಲ್ಲಿ ಬರುವುದು ನಿಜ." ಈ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೇನೆಂದರೆ, ಇಂಗ್ಲೆಂಡಿನಲ್ಲಿ ಪ್ರವಾಸಮಾಡುವ ಕೆಲಮಂದಿ ಭಾರತೀಯರ ನಡೆನುಡಿಗಳಿಂದ ಅಲ್ಲಿನ ಜನರು ಭಾರತೀಯ ಸಂಸ್ಕೃತಿಯನ್ನೇ ಅಳೆದುಬಿಡುತ್ತಾರೆ. ತಾವು ಇಂಗ್ಲೆಂಡಿನಲ್ಲಿರುವಷ್ಟು ಕಾಲದ ಮಟ್ಟಿಗಾದರೂ ಭರತಖಂಡದ ಪ್ರತಿನಿಧಿಗಳಾಗಿರುತ್ತೇವೆಂದು ನಮ್ಮವರು ತಿಳಿದು ವಿಶೇಷ ಜವಾಬುದಾರಿಯಿಂದ ನಡೆದುಕೊಳ್ಳಬೇಕು. ಆದರೆ ಹಲವರು ಹಾಗೆ ಮಾಡುತ್ತಿಲ್ಲವೆಂದು ಕೇಳಿ ವ್ಯಥೆ ಯುಂಟಾಗುತ್ತದೆ.

ಭಾರತೀಯರನ್ನು ಕೆಲವು ಜನ ಇಂಗ್ಲಿಷರು ಆದರಿಸಿ ಗೌರವಿಸಿದರೂ, ಜನಸಾಮಾನ್ಯಕ್ಕೆ ಇವರ ವಿಷಯದಲ್ಲಿ ತಿರಸ್ಕಾರವೇ ಹೆಚ್ಚು. ಪ್ರೊ. ಗೋಕಾಕರಿಗೂ ಇದು ತಟ್ಟದೆ ಇರಲಿಲ್ಲ. "ಆಂಗ್ಲ ವಾಙ್ಮಯ ಪ್ರೇಮಿಗಳು—ಷೇಕ್ಸ್‌ಪಿಯರನ ಭಕ್ತರು—ಇದನ್ನು ನೆನಪಿನಲ್ಲಿಡಬೇಕು. ಷೇಕ್ಸ್‌ಪಿಯರನ ದೇಶದಲ್ಲಿ ಬರಿ ಕಾವ್ಯವಿಲ್ಲ. ಸುಶ್ರಾವ್ಯವಾದ 'Nigger' ಎಂಬ ಶಬ್ದವು ಕೇರಿ ಕೇರಿಗಳಲ್ಲಿ ನಿನದಿಸುತ್ತದೆ." . . . ಸಾಮ್ರಾಜ್ಯವಾದಿ ಜನಾಂಗದ ಮನೋಭಾವವನ್ನೂ ಅದರ ಗುಣಾವಗುಣಗಳನ್ನೂ ಪ್ರೊ. ಗೋಕಾಕರು ಚೆನ್ನಾಗಿ ಅರಿತು ಈ ಗ್ರಂಥದಲ್ಲಿ ಅಲ್ಲಲ್ಲೇ ಸೂಚಿಸಿದ್ದಾರೆ.

ಇದುವರೆಗೆ ಬಂದ ಕೆಲವು ಮಾತುಗಳಿಂದ 'ಸಮುದ್ರದಾಚೆಯಿಂದ'ದ ಸೊಗಸು ತಕ್ಕಮಟ್ಟಿಗೆ ವ್ಯಕ್ತವಾಗಿರಬೇಕು. ಇದರ ವಿಶದವಾದ ಪರಿಚಯವನ್ನು ಮಾಡಿಕೊಡುವು ದಿರಲಿ; ಇಲ್ಲಿಯ ವಿಷಯ ವೈವಿಧ್ಯವನ್ನು ತೋರಿಸುವುದು ಕೂಡ ಈ ವಿಮರ್ಶೆಯ ಎಲ್ಲೆಗೆ ಮೀರಿದ ಕೆಲಸ. ಇದಕ್ಕಾಗಿ ಗ್ರಂಥವನ್ನೇ ಓದಬೇಕು. ಹಾಗೆ ಓದುವುದರಲ್ಲಿ ವಿನೋದವುಂಟು, ಲಾಭವುಂಟು.

"ಇಲ್ಲಿಗೆ ಬಂದು ಒಂಭತ್ತು ತಿಂಗಳಾಯಿತು. ಇನ್ನೂ ನನಗೆ ಆಂಗ್ಲರ ಹೃದಯವು ತಿಳಿದಿಲ್ಲವಲ್ಲ!" ಎಂದು ತಮ್ಮ ವೆಲ್ಷ್ ಸ್ನೇಹಿತನೊಬ್ಬನನ್ನು ಗೋಕಾಕರು ಕೇಳಿದರಂತೆ. ಎರಡು ವರ್ಷ ಕಾಲವನ್ನು ಇಂಗ್ಲೆಂಡಿನಲ್ಲಿ ಕಳೆದ ಮೇಲೆ ಕೂಡ ಪೂರ್ಣವಾಗಿ ಅರಿಯುವುದಕ್ಕಾಯಿತೋ ಇಲ್ಲವೋ! ಜಗತ್ತಿನಲ್ಲಿ ಆಂಗ್ಲರಷ್ಟು ಏಕಾಂತಪ್ರಿಯ ಜನಾಂಗ ಇನ್ನೊಂದಿಲ್ಲ." ಹೋಟೆಲ್, ಬೋರ್ಡಿಂಗ್ ಹೌಸ್ ಮೊದಲಾದ ಕಡೆಗಳಲ್ಲಿ ಇದ್ದುಕೊಂಡು ವ್ಯಾಸಂಗವನ್ನು ಮುಗಿಸಿ ಬಂದುಬಿಡತಕ್ಕವರಿಗೆ ಇಂಗ್ಲಿಷ್ ಸಭ್ಯ ಸಮಾಜದೊಳಕ್ಕೆ ಪ್ರವೇಶ ದೊರೆಯುವುದು ಕಠಿನ. ಇಂಗ್ಲಿಷರ ಮನೆಗಳಲ್ಲಿ ಸಮಾನ ಸ್ಕಂಧರಂತೆ ಹೊಕ್ಕು ಬಳಸುವ ಅವಕಾಶವೊದಗಿದ ಹೊರತು ಅವರ ಹೃದಯದ ನೆಲೆ ಸಿಕ್ಕುವುದಿಲ್ಲವೆಂದೂ, ಆದರೆ ಹಾಗೆ ಪ್ರವೇಶ ಪಡೆದವರಿಗೆ ತುಂಬ ಬೆಲೆಯುಳ್ಳ ಅನುಭವಗಳು ದೊರೆಯುತ್ತವೆಂದೂ—ಅಲ್ಲಿ ದೀರ್ಘಕಾಲ ವಾಸಮಾಡಿ ಬಂದವರು

ಹೇಳುತ್ತಾರೆ. ಇಂಥವರು ಶ್ರೀಮಾನ್ ಗೋಕಾಕರಂತೆ ಮರ್ಮಜ್ಞತೆಯಿಂದಲೂ ರಸಿಕತೆಯಿಂದಲೂ ಇಂಗ್ಲಿಷ್ ಸಮಾಜದ ಹೃದಯವನ್ನು ಕುರಿತು ಬರೆದ ಗ್ರಂಥವೊಂದು ಕನ್ನಡದಲ್ಲಿ ಬಂದು, 'ಸಮುದ್ರದಾಚೆಯಿಂದ' ಹುಟ್ಟಿಸಿರುವ ಆಕಾಂಕ್ಷೆಯನ್ನು ಯಾವಾಗ ಪೂರ್ಣಮಾಡುವುದೋ!

೧೯೩೯]

ಸಮಾಲೋಕನ : ೧೯೫೮

ಯೆಂಡ್ಮುಡ್ಕ ರತ್ನ*

ಮದ್ಯವು ಲೋಕದಲ್ಲಿ ಹಲವು ಪಾಪಕಾರ್ಯಗಳಿಗೂ ಘೋರಕೃತ್ಯಗಳಿಗೂ ಪ್ರೇರಕವಾಗಿರುವುದು ನಿಜ; ಆದರೆ ಅದು ಎಷ್ಟೋ ಸಲ ಕಾವ್ಯಕ್ಕೂ ಪ್ರೇರಕವಾಗಿದೆಯೆಂಬುದನ್ನು ಒಪ್ಪಿಕೊಳ್ಳಬೇಕು. ಹಿಂದೆ ಒಂದು ಕಾಲದಲ್ಲಿ ನಮ್ಮ ದೇಶದಲ್ಲಿ ಶಿಷ್ಟರು ಕೂಡ ಮದಿರಾಮಹಾದೇವಿಯನ್ನು ಆದರದಿಂದ ಸೇವಿಸುತ್ತಿದ್ದರು. ಮಧುಪಾನವು ವಿಲಾಸಿಗಳ ಒಂದು ಮುಖ್ಯ ಭೋಗವಾಗಿದ್ದಿತು; ಅಂಥ ಪಾನಗೋಷ್ಠಿಯ ವರ್ಣನೆಯಿಲ್ಲದಿದ್ದರೆ ಮಹಾಕಾವ್ಯವು ಒಂದು ಅಂಶದಲ್ಲಿ ಮುಕ್ಕಾಗುತ್ತಿದ್ದಿತು. "ಪೇಯಾ ಸುರಾ ಪ್ರಿಯತಮಾ ಮುಖಮೀಕ್ಷಿತವ್ಯಂ" ಎಂದು ಉಲ್ಲಾಸದಿಂದ ಹಾಡುವವರು ಆ ಕಾಲದಲ್ಲಿ ಅನೇಕರಿದ್ದಿರಬೇಕು.

ಕಾಲವು ಬದಲಾಯಿಸಿತು. ಶಿಷ್ಟವರ್ಗದಲ್ಲಿ—ಒಟ್ಟಿನ ಮೇಲೆ ಸಮಾಜದ ಸುದೈವದಿಂದಲೇ ಎಂದು ಹೇಳಬೇಕು—ಮದ್ಯಪಾನವು ಹೇಯವೆನ್ನಿಸಿತು. ಆದರೂ ಸಮಾಜದ ಕೆಳಗಿನ ದರ್ಜೆಗಳಲ್ಲಿ ಮಾತ್ರ ಅದರ ಸೇವೆಯೇನೂ ಕಡಮೆಯಾಗಲಿಲ್ಲ. ಹೆಂಡವನ್ನು ಹೀರಿ ಅದರ ಆವೇಶದಿಂದ "ಈಚಲಮರದವ್ವ"ನನ್ನು ಹೊಗಳುವವರು ಇಂದಿಗೂ ಇದ್ದಾರೆ. ಆದರೆ ಅವರ ಹಾಡುಗಳು ಸುಶಿಕ್ಷಿತರ ಕಿವಿಗೆ ಬೀಳುವುದು ಮಾತ್ರ ತುಂಬ ಕಡಮೆಯಾಗಿದೆ.

---

* "ಜೇಪಿ ರಾಜ್ರತ್ನ" : ಯೆಂಡ್ಮುಡ್ಕ ರತ್ನ (೧೯೩೨)—'ವಿಮರ್ಶೆ ('ಪ್ರಬುದ್ಧ ಕರ್ಣಾಟಕ, ೧೪.೪)

"ಯೆಂಡ್ಕುಡ್ಕ ರತ್ನ"ನು ತನ್ನ ಪದಗಳನ್ನು ಹಾಡಿ ನಮ್ಮ ಸಾಹಿತ್ಯ ಪ್ರಪಂಚದಲ್ಲಿ ಒಂದು ಕ್ರಾಂತಿಯನ್ನುಂಟುಮಾಡಿದ್ದಾನೆ. ಇವನ ಪದಗಳೇ ಒಂದು ಜಾತಿ. ಹಿಂದಿನ ಕಾವ್ಯಗಳ ಮಧುವ್ಯಸನಿಗಳು ರಾಜರು, ಅವರ ಮನಃಪ್ರಿಯೆಯರು; ಅವರ ವೈಭವ ವಿಲಾಸಗಳೂ ಸುಸಂಸ್ಕೃತವಾಣಿಯೂ "ರತ್ನ"ನಿಗಿಲ್ಲ. ಈಗ ಹೆಂಡದಂಗಡಿಗಳಲ್ಲಿ ಅಮಲೇರಿದಾಗ ಹಾಡುವವರು ನಿಕೃಷ್ಟ ಸ್ಥಿತಿಯಲ್ಲಿರುವ ಪಾಮರರು; ಅವರ ಗುಂಪಿಗೇ "ರತ್ನ"ನು ಸೇರಿದ್ದರೂ ಅವರ ಒರಟುತನವಾಗಲಿ ಅಶ್ಲೀಲತೆಯಾಗಲಿ ಇವನಿಗಿಲ್ಲ. ಇವನು ಕೆಸರಿನಲ್ಲಿ ಹುಟ್ಟಿದ ಕಮಲ; ಸುರಾಯೋಗಿ.

ಎಲ್ಲರಂತೆಯೇ "ರತ್ನ"ನಿಗೂ ಹೆಂಡದ ಮೇಲೆ ತುಂಬ ಮಮತೆ.

ಯೆಂಡಾನೆ ನಮ್ದೇವ್ರು!
ತ್ರಿಮೂರ್ತಿ ಯೆಂಡ!
ನಮುಟ್ಸಿ ಬದ್ಸೋದು
ಸಾಯ್ಸೋದು ಯೆಂಡ!

ಎಂದು ಇವನ ಮತ. ಇವನು ಹೆಂಡವನ್ನು ಬಿಟ್ಟು ಒಂದು ದಿನವಾದರೂ ಇರಲಾರದವನು. ಕೈಯಲ್ಲಿ ಹಣವಿಲ್ಲದ್ದರಿಂದ ಅದು ದೊರೆಯದೆ ಬಾಳಿನಲ್ಲಿ ಬೇಸರ ವುಂಟಾದಾಗ,—ಬದುಕಿದ್ದರೆ ಎಂದಾದರೂ ಹೆಂಡದಂಗಡಿಯ ಮುಖವನ್ನು ಪುನಃ ನೋಡಬಹುದು; ಸತ್ತಮೇಲೇನಿದೆ ಎಂದು ಜೀವಧಾರಣೆ ಮಾಡತಕ್ಕವನು. ಹೆಂಡ ಕುಡಿಯುವುದು ಕೆಟ್ಟದೆಂದು ತನಗೂ ಗೊತ್ತಿದ್ದರೂ ಆ ಮಾತನ್ನು ಯಾರಾದರೂ ಎತ್ತಿದರೆ ಅವರ ಮೇಲೆ ಒಡನೆಯೇ ರೇಗತಕ್ಕವನು.

ಇಷ್ಟಾದರೂ "ರತ್ನ"ನ ಮನಸ್ಸು ಮದ್ಯಸುಖದಲ್ಲೇ ವಿಶ್ರಾಂತಿ ಹೊಂದುವುದಿಲ್ಲ. ಅವನು ಹುಟ್ಟು ವೇದಾಂತಿ. ತಾನು ನಿತ್ಯವೂ ನೋಡುತ್ತಿರುವ ಹೆಂಡದಂಗಡಿಯ ವ್ಯವಹಾರವನ್ನೇ ಲೋಕವ್ಯವಹಾರಕ್ಕೂ ಅನ್ವಯಿಸಿ ತಿರುಳನ್ನು ಶೋಧಿಸುವ ಶಕ್ತಿ ಅವನಿಗಿದೆ. ದೇವರ ಗುಡಿಗೂ "ಪಡ್ಕಾನೆ" (ಪಡಖಾನೆ=ಹೆಂಡದಂಗಡಿ)ಗೂ ಏನು ವ್ಯತ್ಯಾಸವೆಂದು ಅವನು "ಸವಾಲು" ಮಾಡುತ್ತಾನೆ.

ಗುಡೀಲಿ ಪೂಜಾರಿ ಕಸ್ಕೋತ್ತಾನಾರ್ಕಾಸ
ಪಡ್ಕಾನೆ ಮುನ್ಯಪ್ಪನಂಗೆ!
ದೇವರ್ನ ಕಂಡವ್ರು ಸುಕ್ಪಡೋ ಮಾದ್ರೀಲಿ
ನಾವೂನ ಸುಕ್ಪಡ್ತೀವ್ನಡ್ಡು!
ನಮ್ನೋಡಿ ನೆಗ್ತಾರೆ! ಬಕ್ತರ್ಗೆ ಬೊಗ್ತಾರೆ!
ಯತ್ಯಾಸ ಯೇನ್ನಮ್ಗು ಔರ್ಗು? . . . .

ಕಾಸುಕೊಟ್ಟರೆ ದೇವರು ವರ ಕೊಡುತ್ತಾನೆ; ಕಾಸುಕೊಟ್ಟರೆ "ಮುನ್ಯಪ್ಪ" ಹೆಂಡಬಿಡುತ್ತಾನೆ. ಇಬ್ಬರಿಗೂ ಏನು ವ್ಯತ್ಯಾಸ? "ಅಡ್ಡಿದ್ರೆ ಕಲ್ಲೆಲ್ಲ ದೇವ್ರೆ!"

ಹೆಂಡ ಕುಡಿದ ಮಾತ್ರಕ್ಕೆ ನ್ಯಾಯವನ್ನೇಕೆ ತಪ್ಪಬೇಕೆಂದು "ರತ್ನ"ನ ಮನಸ್ಸು. ಆದ್ದರಿಂದ ಹಗಲೆಲ್ಲಾ ದುಡಿದು ತಂದ ಕೂಲಿಯನ್ನು ಹೆಂಡತಿಗೊಪ್ಪಿಸಿ—ತಾನು ಒಪ್ಪಿಸುವ ಮೊದಲು ಅವಳೇ ಜೇಬನ್ನು ಝಡತಿಮಾಡುತ್ತಾಳೆ—ಬಳಿಕ ಹೆಂಡಕ್ಕೆ ಒಂಬತ್ತು ಕಾಸನ್ನು ಕೇಳುತ್ತಾನೆ. ಆದರೆ ಅವಳು ಪ್ರಚಂಡೆ; ಕಾಸುಕೊಡುವ ಬದಲು,

ಪೊರ್ಕೇನೆತ್ತಿದ್ಲು
ಬಡ್ದಳ್ನೆಡ್ತಿ!

ಸಾಚಾ ಮನುಷ್ಯರಿಗೆ ಉಳಿಗಾಲವಿಲ್ಲವೆಂದು "ರತ್ನ"ನಿಗೆ ಗೊತ್ತಾಯಿತು. ಇನ್ನು ಮುಂದೆ ಜೀತದಿಂದ ಮನೆಗೆ ಬರುವಾಗ ಕೂದಲಲ್ಲಿ ಹೆಂಡಕ್ಕೆ ಎರಡಾಣೆಯನ್ನು ಸೆಕ್ಕಿಕೊಂಡು, ಹಟ್ಟಿಗೆ ಬಂದು ಜೇಬನ್ನು ಹೆಂಡತಿಯೆದುರಿಗೆ ತಾನೇ ಕೊಡವಿಬಿಡುತ್ತಾನೆ. ಹೀಗೆ ಮೋಸಮಾಡಿದರೇ ಅವಳಿಗೆ ತೃಪ್ತಿ! ಈ ಮೋಸ ದೋಷವಲ್ಲ :

ಮೋಸ ನಂಗ್ಮಾಡಂತ
ಬೇಡ್ತಜ್ಜಗತ್ತು!

ತನ್ನಂಥವರನ್ನು ಹೆಂಡಕುಡುಕರೆಂದು ಜನರು ಹೀನಾಯವಾಗಿ ಕರೆದರೂ, ದಯೆಧರ್ಮಗಳು ತಮ್ಮಲ್ಲೇ ಹೆಚ್ಚೆಂದು "ರತ್ನ"ನಿಗೆ ನ್ಯಾಯವಾದ ಹೆಮ್ಮೆಯಿದೆ. ಲೋಕದಲ್ಲಿ ಮನುಷ್ಯನೇ ಮನುಷ್ಯನ ಜೀವವನ್ನು ಪೂರ ಹಿಂಡುತ್ತಿರುವಾಗ,

ಯೆಂಡಕುಡ್ಯೋರ್ನಾವಿಂಗಲ್ಲ :
    ಬುಂಡೆ ಪೂರ ತಂದಿ
ಪಕ್ದೋನ್ಕೈಲಿ ಕಾಸಿಲ್ದಿದ್ರೆ
    ಔನ್ಗು ಕೊಡ್ತೀವ್ಯೆಂದಿ!

ಎಂದು ಸಾರುತ್ತಾನೆ. ನಮ್ಮ ಬಳಿಗೆ ಬಂದು ದಾನಧರ್ಮಕ್ಕೆ ಅರ್ಥ ತಿಳಿದುಕೊಳ್ಳಿ ಎಂದು ಸಂಭಾವಿತರನ್ನು ಕೊಂಚ ಹಾಸ್ಯಮಾಡುತ್ತಾನೆ. ಒಳ್ಳೆಯ ನಡತೆ ಎಂಥದೆಂದು ವಿವರಿಸುತ್ತಾನೆ. ಈ ನೀತಿ ಸಾಮಾನ್ಯವಾಗಿ ಅವನ ಅನುಭವದ ಸಾರವಾಗಿ ಹೊರಹೊಮ್ಮುವುದರಿಂದ ಕೇಳತಕ್ಕ ನಮಗೂ ಇಂಪಾಗಿಯೇ ಇರುತ್ತದೆ. ಆದರೆ, ಇದೇ ರೂಢಿಬಿದ್ದು "ರತ್ನ"ನು ಎಲ್ಲಿ ಒಣ ಉಪದೇಶಕನಾಗಿ ತಿರುಗಿಬಿಡುತ್ತಾನೋ ಎಂಬ ಹೆದರಿಕೆಯೂ ಒಂದೊಂದು ಸಲ ಹುಟ್ಟದೆ ಇಲ್ಲ.

"ರತ್ನ"ನ ವ್ಯವಹಾರವೆಲ್ಲಾ ವಿಶೇಷವಾಗಿ "ಪಡ್ಡಾನೆ ಮುನ್ಯ"ನ ಸಂಗಡ. "ರತ್ನ"ನ ವರ್ಣನೆಯಿಂದಲೂ ಬುದ್ಧಿವಾದಗಳಿಂದಲೂ ಮುನಿಯನ ಚಿತ್ರ ನಮ್ಮ ಕಣ್ಣಿಗೆ ಚೆನ್ನಾಗಿ ಕಟ್ಟುತ್ತದೆ. "ಬಲ್ಜಿಪ್ಣ ಮುನ್ಯ!" ತಿರುಕರು ಬಂದು ಬೇಡುವ ಮುಂಚೆಯೇ ಬಾಗಿಲು ಮುಚ್ಚಿಕೊಳ್ಳುವವನು; ಗಿರಾಕಿಗಳು ಹೆಚ್ಚಳತೆ ಹೆಂಡವನ್ನು ಕೇಳಿದರೆ ತಲೆ ಕೊಚ್ಚುತ್ತೇನೆಂದು ಗದರಿಸುವವನು;

ಕಾಸಿಕ್ಕಾಸ್ಗಂಟಾಕಿ
ವೊಟ್ಟೀಗ್ಸೆನಂಟಾಕಿ

ಥೈಲಿ ಥೈಲಿ ದುಡ್ಡು ಮಾಡಿಟ್ಟಿರುವವನು. ಆದರೆ ತಾನೂ ತಿನ್ನಲೊಲ್ಲ ಪರರಿಗೂ ಕೊಡಲೊಲ್ಲ. ಇವನ ನಡತೆಗೆ "ರತ್ನ"ನಿಗೆ ಒಂದು ಸಲ ಕೋಪ ಬರುತ್ತದೆ; ಒಂದು ಸಲ ಕನಿಕರ ಹುಟ್ಟುತ್ತದೆ : ನಿನ್ನ ಮಕ್ಕಳು ಈ ಹಣವನ್ನೆಲ್ಲಾ ಪೋಲು ಮಾಡಿದರೆ ನಿನಗೇನು ಬಂತು? "ಸತ್ಮೇಲೆ ಸೂನ್ಯ" ಎಂದು ಹೇಳುತ್ತಾನೆ;

ಸಾಸ್ವತ್ವ ನೀನು
ಬುಟ್ಟ್ಗಿದ್ದೀನು!

ಎಂದು ಸಾಮತಿಗಳ ಮೂಲಕ ಕೇಳುತ್ತಾನೆ. ದಾನಧರ್ಮದ ಅರ್ಥವನ್ನು ತಿಳಿದು ಮುನಿಯನು ಹೆಚ್ಚಳತೆ ಹೆಂಡ ಬಿಡುತ್ತಾನೇನೋ ಎಂದು "ರತ್ನ"ನ ಚಪಲ. ಆದರೆ ಮುನಿಯನೇನೂ ಕದಲುವಂತೆ ಕಾಣಿಸುವುದಿಲ್ಲ.

ಈ ನೀತಿಬೋಧೆಯನ್ನು ಕೂಡ ಮರೆತು "ರತ್ನ"ನು ಹೆಂಡದ ಅಮಲಿನಲ್ಲಿ ಹಾಡಿದ ಪದಗಳೇ ಎಲ್ಲಕ್ಕಿಂತ ಹೆಚ್ಚಾಗಿ ನಮ್ಮನ್ನು ಮೆಚ್ಚಿಸತಕ್ಕವು. "ರತ್ನ"ನ ಪದಗಳಲ್ಲಿ 'ಯೆಂಡತ್ತೊಂದ್ರೆ' ಅದ್ವಿತೀಯವಾಗಿದೆ. ಹೆಂಡದಂಗಡಿಯಿಂದ ಹೊರಟುಬಂದ "ರತ್ನ"ನಿಗೆ, ಜಗತ್ತೇ ಹೆಂಡದ ಅಮಲಿನಲ್ಲಿರುವಂತೆ ತೋರುತ್ತದೆ : ರಸ್ತೆ "ಅವ್ಯವಸ್ತೆ"ಯಿಂದ ಮೈಕೈಯೆಲ್ಲಾ ಮುದುರಿ ಕುಣಿಯುತ್ತಿದೆ. ಚಂದ್ರನ ಮುಖ ಸೊಟ್ಟು; "ಅದು! ಬಲಗಣ್ಣಟ್ಟು!" ಅವನಿಗೂ ನಾಚಿಕೆಯಿಲ್ಲದೆಹೋಯಿತೆ? ಅಗೊ, ಬೀದಿಯ ದೀಪ "ಗಿರ್ಕಿ" ಹೊಡೆಯುತ್ತಿದೆ;

ತಿರ್ತಿರ್ತಿರ್ತಿರ್ತಿರ್ಗ್ತಾ
ತೂರಾಡ್ತದೆ ತ್ತೂಗ್ತಾ!

ಒಂದಕ್ಕಾದರೂ ಸ್ವಾಧೀನವಿಲ್ಲ ಜ್ಞಾನ. ಇಂಥ ಕುಡುಕರ ಮಧ್ಯದಲ್ಲಿ ಶುದ್ಧನಾದ "ರತ್ನ" ಹೇಗಿರುವುದು? ಮಾನಕ್ಕೆ ಕಡಮೆಯಲ್ಲವೆ! ಆದ್ದರಿಂದ ಮತ್ತೆ ಹೆಂಡಂದಗಡಿಗೇ ಹಿಂದಿರುಗಬೇಕೆಂದು ನಿರ್ಣಯಿಸುತ್ತಾನೆ.—ಈ ಪದ್ಯದಲ್ಲಿ ಉತ್ತಮವಾದ ಹಾಸ್ಯಧ್ವನಿಯಿದೆ. ಪದಪ್ರಯೋಗವಂತೂ ಆವೇಶಕ್ಕೂ ಸನ್ನಿವೇಶಕ್ಕೂ ಅತ್ಯುಚಿತವಾಗಿದೆ. ಇಲ್ಲಿರುವಂತೆಯೇ ಇನ್ನೂ ಹಲವು ಪದ್ಯಗಳಲ್ಲಿ "ರತ್ನ"ನ ಕಲ್ಪನಾಶಕ್ತಿ ಒಟ್ಟಿನಮೇಲೆ ಔಚಿತ್ಯವನ್ನು ಮೀರದೆ ಸನ್ನಿವೇಶಕ್ಕನುಗುಣವಾಗಿ ಹೊರಹೊಮ್ಮುತ್ತದೆ. ಅದರಿಂದಲೇ ಅಷ್ಟು ರಮಣೀಯ ವಾಗುತ್ತದೆ. 'ಸಮಾಧಾನ'ವೆಂಬ ಪದದಲ್ಲಿ, ಸೂರ್ಯನು ಹಗಲೆಲ್ಲಾ "ಗ್ರಾಸ್ನಂತೆ" ತಿರುಗಾಡಿ ಸಂಜೆಯಾಗುತ್ತಲೆ ಪಶ್ಚಿಮದೂರಾಚೆಯ ಹೆಂಡದಂಗಡಿಗೆ ಓಡಿ, ಅಲ್ಲಿ ಕುಡಿದು ಕಣ್ಣು ಕೆಂಪು ಮಾಡಿಕೊಂಡು, ಮೋರಿಗೆ ಬಿದ್ದು ಕತ್ತಲೆಯ ಕೆಸರನ್ನು ಮೇಲಕ್ಕೆ ಚಿಮ್ಮುವ ಕಲ್ಪನೆಯನ್ನು ಇಲ್ಲಿ ಉದಾಹರಿಸಬಹುದು.

"ರತ್ನ"ನಿಗೆ ಅದ್ಭುತವಾದ ಕವನಶಕ್ತಿ ಇದೆ. ಅವನ ಬಾಯಿಂದ ಹೊರ ಬಿದ್ದ ಮಾತೆಲ್ಲಾ ಛಂದೋಬದ್ಧವಾಗುತ್ತದೆ. ಪ್ರಾಸಗಳನ್ನು ಜೋಡಿಸುವುದರಲ್ಲಂತೂ ಅವನನ್ನು

ಮೀರಿಸುವವರು ದುರ್ಲಭ. ಹಿಂದೆ ಉದಾಹರಿಸಿದ ಪದ್ಯಖಂಡಗಳೇ ಇದಕ್ಕೆ ನಿದರ್ಶನವಾಗಬಹುದು. ಇದನ್ನು ನೋಡಿ :

ತಿತಿ ಮಾಡ್ಸೋರ್ಗೇನ್ಗೊತ್ತೈತೆ
ಚೆಡ್ಡೀ ವೊಲ್ಯೊ ಕೆಲ್ಸ?
ಓದ್ಲೊ ಐಗಳ್ಕಟ್ಕೊಂತಾರ
ಸೂಳೆ ಕಾಲಿನ್ಗೊಲ್ಸ?

ಇಲ್ಲಿ ಅನಿರೀಕ್ಷಿತವಾದ ಪ್ರಾಸಯೋಜನೆಯಂತೆಯೇ ಅತಿವಿರುದ್ಧ ವಸ್ತುಗಳ ಸಮಾವೇಶವೂ ತುಂಬ ಕೌತುಕಪ್ರದವಾಗಿದೆ : ಇದು "ರತ್ನ"ನ ಶೈಲಿಯ ವಿಶೇಷ ಲಕ್ಷಣ. ಇಲ್ಲಿ ಕೇಳಿರುವ ಪ್ರಶ್ನೆ ಮಾತ್ರ ಒಂದು ಸಂದರ್ಭಕ್ಕೆ ಅನ್ವಯಿಸಲಾರದು. ಅದು "ರತ್ನ"ನ ಸ್ವವಿಷಯವಲ್ಲ. "ತಿತಿ ಮಾಡ್ಸೋರ" ಕುಲದಲ್ಲೇ ಹುಟ್ಟಿದ ಶ್ರೀಮಾನ್ ಜಿ. ಪಿ. ರಾಜರತ್ನಂ ಅವರು ಹೆಂಡಗುಡುಕರ ಜೀವನವನ್ನೂ ಭಾಷೆಯನ್ನೂ ಇಷ್ಟು ಚೆನ್ನಾಗಿ ಪರಿಶೀಲಿಸಿ, ಇಷ್ಟು ತಾದಾತ್ಮ್ಯದಿಂದ ಅವರ ಹಾಡುಗಳನ್ನು ಹಾಡಿರುವುದು ತುಂಬ ಶ್ಲಾಘ್ಯವಾದ ವಿಷಯ. ಈ ಪದಗಳ ಮೂಲಕ ಕನ್ನಡ ಸಾಹಿತ್ಯದಲ್ಲೇ ಒಂದು ಹೊಸ ಮಾರ್ಗವನ್ನು ಅವರು ತೆರೆದಿದ್ದಾರೆ.

ವ್ಯಾಸನಿಗೆ ವಿನಾಯಕನು ದೊರೆತಂತೆ, ಇಷ್ಟು ಶಕ್ತವಾದ 'ಬೇವಾರ್ಸಿ'ಯ ಲೇಖನಿಯ ಸಹಾಯವು ಸಿಕ್ಕಿರುವಾಗ "ರತ್ನ"ನು ಇನ್ನೂ ತುಂಬ ಪದಗಳನ್ನು ಹಾಡಬಹುದು; ಹಾಡಿಯೂ ಇದ್ದಾನೆ. ಅವೆಲ್ಲವನ್ನೂ ಒಟ್ಟುಗೂಡಿಸಿ ಬೇಗ ಮತ್ತೆ ಅಚ್ಚು ಹಾಕಿಸಲೆಂದು ನಮ್ಮ ಹಾರೈಕೆ. ಆದರೆ ಒಂದೇ ಒಂದು ಕೋರಿಕೆ : "ರತ್ನ"ನು ಹಾಡಿದಾಗ ಕೇಳುವುದಕ್ಕೆ ಬಲು ಚೆನ್ನಾಗಿರುತ್ತದೆ; ಬರವಣಿಗೆಯಲ್ಲಿ ಮಾತ್ರ, ಹಲವು ಅಕ್ಷರಗಳು ನುಂಗಿ ಹೋಗಿ ಉಳಿದವು ಒಂದಕ್ಕೊಂದು ಅಂಟಿಕೊಂಡಿರುವುದರಿಂದ, ಓದಿಕೊಳ್ಳುವವರಿಗೆ ಪದಸ್ವರೂಪಗ್ರಹಣವೂ ಅರ್ಥಗ್ರಹಣವೂ ತೊಂದರೆ ಕೊಡುತ್ತವೆ. ಆದ್ದರಿಂದ ಮುಂದಿನ ಮುದ್ರಣದಲ್ಲಿ, "ರತ್ನ"ನ ಭಾಷೆಯ ವಿಶಿಷ್ಟತೆಗೆ ಭಂಗ ಬಾರದಂತೆ, ಸಾಧ್ಯವಾದ ಮಟ್ಟಿಗೆ ಅಕ್ಷರಗಳನ್ನು ಸಡಿಲಿಸಿ, ಬಿಡಿಸಿ ಅಚ್ಚು ಹಾಕಿಸಿದರೆ ಪಾಠಕರು ತುಂಬ ಕೃತಜ್ಞರಾಗಿರುತ್ತಾರೆ.[೧]

೧೯೩೩]

ಸಮಾಲೋಕನ : ೧೯೫೮

---

೧. ೧೯೩೪ರಲ್ಲಿ ಪ್ರಕಟವಾದ 'ರತ್ನನ ಪದಗಳು' ಎಂಬ ಸಂಕಲನದಲ್ಲಿ ಒಟ್ಟು ೭೭ ಕವನಗಳಿವೆ. ಅದರಲ್ಲಿ ಪದ್ಯಗಳನ್ನು ಆಡುವ ಮಾತಿನ ರೂಪದಲ್ಲಿಯೇ ಅಚ್ಚು ಮಾಡಿದ್ದರೂ 'ರತ್ನನ ಪದಕ್ಕೆ ಕನ್ನಡಿ' ಎಂಬ ಅನುಬಂಧದಲ್ಲಿ ಪ್ರತಿಯೊಂದು ಕವನದ ವಾಕ್ಯಗಳನ್ನೂ ಬಿಡಿಸಿ ಬರೆದು, ಸಮಯೋಚಿತವಾಗಿ "ಅಧ್ಯಾಹಾರ"ಗಳನ್ನೂ "ಅರ್ಥವಿಸ್ತರ"ಗಳನ್ನೂ ಉಲ್ಲೇಖಿಸಿ ಗ್ರಂಥಕರ್ತರು ವಾಚಕರಿಗೆ ಮಹೋಪಕಾರ ಮಾಡಿದ್ದಾರೆ.

ತುತ್ತೂರಿ, ಕಡಲೆಪುರಿ*

ಮಕ್ಕಳಿರುವ ಮನೆಗಳಲ್ಲಿ ಈಗ ನಾಲ್ಕೈದು ತಿಂಗಳಿಂದೀಚೆಗೆ,

ಬಣ್ಣದ ತಗಡಿನ
ತುತ್ತೂರಿ
ಕಾಸಿಗೆ ಕೊಂಡನು
ಕಸ್ತೂರಿ

ಎಂದು ಹೇಳಿಕೊಂಡು ಕುಣಿದಾಡುವ ಗದ್ದಲ ಕಿವಿಗೆ ಬೀಳದಿರುವುದು ಅಪೂರ್ವ. ಅವರ ಉಲ್ಲಾಸಕ್ಕೆ 'ತುತ್ತೂರಿ'ಯೊಂದೇ ಸಾಕಾಗಿತ್ತು; ಅದನ್ನು ಎಷ್ಟು ಸಲ ಓದಿದರೂ, "ಊದಿ"ದರೂ ಅವರು ದಣಿದದ್ದು ಕಾಣಿಸಿರಲಿಲ್ಲ. ಈಗ ಅದರ ಜೊತೆಗೆ 'ಕಡಲೆಪುರಿ' ಬೇರೆ ಕೈಗೆ ಬಂದಿದೆ. ಶ್ರೀಮಾನ್ ಜಿ. ಪಿ. ರಾಜರತ್ನಂ ಅವರು ಈ ಎರಡು ಉಡುಗೊರೆಗಳನ್ನು "ಕನ್ನಡ ನಾಡಿನ ಕಂದನಿಗೆ" ಓದಿಸಿ ಅವನಿಗೊಂದು ಹಿರಿಯ ಹಬ್ಬವನ್ನು ಉಂಟುಮಾಡಿದ್ದಾರೆ.

ಕನ್ನಡದಲ್ಲಿ ಹಿರಿಯರು ಓದಿ, ಅರ್ಥಮಾಡಿಕೊಂಡು, ಆನಂದಿಸಬಹುದಾದ ಕವನಗಳೇ ಕಡಿಮೆ. ಇನ್ನು ಕಿರಿಯರ ಮಾತೇಕೆ? ಮನೆಯಲ್ಲಿ ಹೆಂಗಸರು ಹಾಡುವ ಜೋಗುಳದ ಹಾಡುಗಳು ಕೂಡ ಮಕ್ಕಳನ್ನು

---

* ಜಿ. ಪಿ. ರಾಜರತ್ನಂ : ತುತ್ತೂರಿ. ಕಡಲೆಪುರಿ (ಮೊದಲನೆಯ ಮುದ್ರಣ, ೧೯೩೨)—ವಿಮರ್ಶೆ ('ಪ್ರಬುದ್ಧ ಕರ್ನಾಟಕ', ೧೪.೪)

ಕುರಿತು ಕಟ್ಟಿದವೇ ಹೊರತು, ಮಕ್ಕಳೇ ಹೇಳಿಕೊಳ್ಳುವುದಕ್ಕಾಗಿ ಹುಟ್ಟಿದವುಗಳಲ್ಲ. ಆಧುನಿಕ ಸಾಹಿತ್ಯವು ತಲೆದೋರಿದೀಚೆಗೆ, ಅಲ್ಲೊಂದು ಇಲ್ಲೊಂದು ಮಕ್ಕಳ ಪದ್ಯವು ಪದ್ಯಪುಸ್ತಕಗಳಲ್ಲೂ ಮಾಸಪತ್ರಿಕೆಗಳಲ್ಲೂ ಇಣಿಕುವುದಕ್ಕೆ ಮೊದಲಾಯಿತು. ಕೆಲವು ವರ್ಷಗಳ ಹಿಂದೆ ಶ್ರೀಮಾನ್ ಹೊಯಿಸಳರ ಉತ್ಕೃಷ್ಟವಾದ 'ಮಗುವಿನ ಕೂಗು' ಹೊರಬಿದ್ದಿತು. ಆದರೆ ಇದು ಹೆಚ್ಚು ಬಳಕೆಗೆ ಬಂದಂತೆ ತೋರುವುದಿಲ್ಲ; ಬಹುಶಃ ಕಾಲವಿನ್ನೂ ಹದವಾಗಿರಲಿಲ್ಲವೇನೋ. ಈಗ ಶ್ರೀಮಾನ್ ರಾಜರತ್ನಂ ಅವರ ಕವನಗಳು ಇಷ್ಟು ಜನಪ್ರಿಯವಾಗುತ್ತಿರುವುದು ತುಂಬ ಸಂತೋಷಕರವಾದ ವಿಷಯ.

ಮಕ್ಕಳಿಗಾಗಿ ಹುಟ್ಟುವ ಕವನಗಳಲ್ಲಿ ಎರಡು ಜಾತಿಗಳನ್ನು ವಿಂಗಡಿಸಬಹುದು. ಕವಿ ತಾನೂ ಮಗುವಾಗಿ ಅದರ ದೃಷ್ಟಿಯಿಂದ ಸಂಗತಿಗಳನ್ನು ನೋಡಿ, ಅದಕ್ಕೆ ತಿಳಿಯುವ ಭಾಷೆಯಲ್ಲಿ, ಅದರ ಹೃದಯಕ್ಕೆ ಮುಟ್ಟುವಂತೆ ಬರೆದ ಕವನಗಳು ಒಂದು ಜಾತಿ. ಇವೇ ನಿಜವಾದ ಮಕ್ಕಳ ಪದ್ಯಗಳು. ಇವನ್ನು ಬರೆಯುವಾಗ ಕವಿಯ ಕಲ್ಪನೆ ಮಗುವಿನ ಕಲ್ಪನೆಯಂತೆಯೇ ತಿಳಿಯಾಗಬೇಕು; ಮನಸ್ಸು ಮಗುವಿನ ಮನಸ್ಸಿನಂತೆಯೇ ಕೌತುಕಪೂರ್ಣವಾಗಬೇಕು. ಆಗ ಕವಿಗೆ, ಭಾವನಿಗೂ ಅಕ್ಕನಿಗೂ ಇರುವ ಸಂಬಂಧವನ್ನೇ ಚಂದ್ರ ಸೂರ್ಯರಲ್ಲೂ ಕಾಣುವ ಶಕ್ತಿ ಬರುವುದು;

> "ಚಂದ್ರನು ಗಗನಕೆ ಬಂದರೆ ಸಾಕು
> ಸೂರ್ಯನು ಮರೆಯಲಿ ಅಡಗುವನು.
> ಭಾವನು ಊರಿಗೆ ಬಂದರೆ ಸಾಕು
> ಅಕ್ಕನು ಮರೆಯಲಿ ಅಡಗುವಳು . . ."
>
> (ತುತ್ತೂರಿ : ಮಗುವಿನ ಮನಸ್ಸು)

ಎಂದು ಮೊದಲಾಗಿ ಹಾಡುವ ಶಕ್ತಿ ಬರುವುದು. ಇದೇ ರೀತಿಯಲ್ಲಿಯೇ 'ನಮ್ಮ ಮನೆಯ ಸಣ್ಣಪಾಪ'ನ ಗುಟ್ಟು ಗೊತ್ತಾಗುವುದು; ಕುದುರೆಯ ಸವಾರಿ'ಯ ಸೊಗಸು ಮನದಟ್ಟಾಗುವುದು—ಈ ಪದ್ಯಗಳೆಲ್ಲ ಉತ್ತಮ ವರ್ಗಕ್ಕೆ ಸೇರಿದವು.

ಇನ್ನೊಂದು ಜಾತಿಯ ಪದ್ಯಗಳಲ್ಲಿ, ಮಕ್ಕಳನ್ನು ಉಲ್ಲಾಸಪಡಿಸುವುದರ ಜೊತೆಗೆ, ಅದರ ಮೂಲಕ ವಿಷಯ ಜ್ಞಾನವನ್ನಾಗಲಿ ನೀತಿಬೋಧೆಯನ್ನಾಗಲಿ ಮಾಡಿಕೊಡಬೇಕೆಂಬ ಉದ್ದೇಶವೂ ಇರುತ್ತದೆ. ಉದಾಹರಣೆಗೆ, 'ಗಡಿಯಾರದ ಸಡಗರ'ಕ್ಕೆ ಮಗುವಿನ ದಿನಚರ್ಯೆಯನ್ನು ಬೋಧಿಸುವುದೇ ನಿಜವಾದ ಕಾರಣ. 'ಊಟದ ಆಟ'ದಲ್ಲಿ ಎಣಿಕೆಯೂ, 'ಹತ್ತು ಮಕ್ಕಳು' ಎನ್ನುವುದರಲ್ಲಿ ಕಳೆಯುವ ಲೆಕ್ಕವೂ, 'ಹತ್ತು ಹತ್ತು ಇಪ್ಪತ್ತು', 'ಒಂದು ಒಂದು ಎರಡು' ಎಂಬ ಪದ್ಯಗಳಲ್ಲಿ ಕೂಡುವ ಲೆಕ್ಕವೂ ಪ್ರಾಸದ ಮರೆಯಲ್ಲಿ ನಿಂತಿವೆ. ಇಂಥ ಗದ್ಯಗಳು ಕಿಂಡರ್‌ಗಾರ್ಟನ್ ಕ್ರಮಕ್ಕೆ ತುಂಬ ಸಹಾಯ ಮಾಡಬಹುದು; ಆದರೆ ಇವು ಮೊದಲನೆಯ ಜಾತಿಯ ಪದ್ಯಗಳ ಮಟ್ಟಕ್ಕೆ ಏರಲಾರವು. ಇವುಗಳಲ್ಲೂ ವಿಷಯಜ್ಞಾನವನ್ನು ಮಾಡಿಕೊಡುವ ಗಣಿತದ ಲೆಕ್ಕಗಳೇ ನೀತಿಬೋಧೆಯ 'ಗಡಿಯಾರದ ಸಡಗರ'ಕ್ಕಿಂತ ಮನೋರಂಜನೆಯಲ್ಲಿ ಮೇಲಾಗಿವೆ; ಏಕೆಂದರೆ ಅವುಗಳಲ್ಲಿ ಊಟದ,

ಆಟದ, ಕಥೆಯ ಸ್ವಾರಸ್ಯವಿದೆ. ಒಟ್ಟಿನ ಮೇಲೆ, ಈ ಬಗೆಯ ಪದ್ಯಗಳಲ್ಲಿ ಕಲ್ಪನಾಶಕ್ತಿ ಮೇಲಿನ ಮಟ್ಟಕ್ಕೆ ಏರದಿದ್ದರೆ ಅವು ನೀರಸವಾಗತಕ್ಕ ಸಂಭವವೇ ಹೆಚ್ಚು. 'ನೀರು ಎಳೆಯುವ' ಮೊದಲಾದುವು ಈ ಕಾರಣದಿಂದ ಸಪ್ಪೆಯಾಗಿರುವಂತೆ ತೋರುತ್ತದೆ.

'ತುತ್ತೂರಿ'ಯ ಕೊನೆಯಲ್ಲಿ, 'ಕೋಗಿಲೆ', 'ಕುರುಬರ ಹೈದ' ಮೊದಲಾದ ಪದ್ಯಗಳು ಏಕೆ ಸೇರಿವೆಯೋ ತಿಳಿಯುವುದು ಕಷ್ಟ. ಇವು ಮಕ್ಕಳ ಪದ್ಯಗಳೇ ಅಲ್ಲ. ಕವಿ ತನ್ನ ಬಾಲ್ಯವನ್ನೂ ಹಳ್ಳಿಯ ಜೀವನದ ಸೊಗಸನ್ನೂ ನೆನೆದು ಹಂಬಲಿಸುವ ಬಯಕೆಯ ಪದ್ಯಗಳು ಇವು. 'ನಮ್ಮ ಧನಂ ಬಡತನಂ' ಎನ್ನುವುದಂತೂ ಮಕ್ಕಳ ಪುಸ್ತಕದಲ್ಲಿ ಖಂಡಿತ ಇರತಕ್ಕದ್ದಲ್ಲ. ವಯಸ್ಸು ಬಂದಮೇಲೆ ಬಡತನದ ಸವಿಯ ತತ್ತ್ವವನ್ನು ಅರಿತುಕೊಳ್ಳುವುದು ಅವರ ಹಣೆಯಲ್ಲಿ ಬರೆದೇ ಇದೆ. ಈಗಿನಿಂದಲೇ ಅದನ್ನೇಕೆ ಅವರಿಗೆ ಅರದು ಹೊಯ್ಯಬೇಕು?[೧]

ಮಕ್ಕಳಿಗೆ ಅರ್ಥಕ್ಕಿಂತಲೂ ಶಬ್ದದ ಮೇಲೆ, ನಾದದ ಮೇಲೆ ಪ್ರೀತಿ ಹೆಚ್ಚು. ಆದ್ದರಿಂದಲೇ ಈ ಬಗೆಯ ಕವನಗಳಲ್ಲಿ ಪ್ರಾಸವು—ವಿಶೇಷವಾಗಿ ಅಂತ್ಯ ಪ್ರಾಸವು—ನಿಯತವೆಂದೇ ಹೇಳಬೇಕು :

"ಬಣ್ಣದ ತಗಡಿನ
ತುತ್ತೂರಿ
ಕಾಸಿಗೆ ಕೊಂಡನು
ಕಸ್ತೂರಿ"

"ಹತ್ತು ಹತ್ತು ಇಪ್ಪತ್ತು
ತೋಟಕೆ ಹೋದನು ಸಂಪತ್ತು"

ಈ ಮೊದಲಾದ ಚರಣಗಳು ಮಕ್ಕಳನ್ನು ಮೋಹಿಸಿರುವುದು ಪ್ರಧಾನವಾಗಿ ಪ್ರಾಸಸಂಪತ್ತಿನಿಂದಲೇ. ಪ್ರಾಸಯೋಜನೆಯಲ್ಲಿ ಈ ಲೇಖಕರಿಗೆ ತುಂಬ ಸಾಮರ್ಥ್ಯವಿದೆ. ಆದರೆ ಕಥೆಯ ಪದ್ಯಗಳಲ್ಲಿ ಮಾತ್ರ ಅವರು ಪ್ರಾಸದ ಕಡೆಗೆ ಅಷ್ಟು ಗಮನಕೊಟ್ಟಂತಿಲ್ಲ. ಕೆಲವು ವೇಳೆ ಪದ್ಯವನ್ನು ಪ್ರಾಸಸಹಿತವಾಗಿ ಪ್ರಾರಂಭಿಸಿದರೆ ಅದೇ ರೀತಿಯಲ್ಲೇ ಕೊನೆಯವರೆಗೂ ತಪ್ಪದೆ ನಿರ್ವಾಹ ಮಾಡಿದಂತಿಲ್ಲ. ಇನ್ನು ಒಂದೆರಡರಲ್ಲಿ ಪ್ರಾಸವೇ ಇಲ್ಲದೆ ಪದ್ಯವು ಶಿಥಿಲವಾಗಿದೆ. ಉದಾಹರಣೆಗೆ 'ಅತಿ ಆಸೆ ಗತಿ ಕೇಡು' ಎಂಬ ಕಥೆ ರಮ್ಯವಾಗದಿರುವುದಕ್ಕೆ ಅದರಲ್ಲಿ ಪ್ರಾಸವಿಲ್ಲದ್ದೇ ಮುಖ್ಯ ಕಾರಣವೆಂದು ತೋರುತ್ತದೆ.

---

೧. ಮೇಲಿನ ವಾಕ್ಯಗಳು 'ತುತ್ತೂರಿ'ಯ ಮೊದಲನೆಯ ಮುದ್ರಣಕ್ಕೆ ಮಾತ್ರ ಅನ್ವಯಿಸುತ್ತವೆ. ಅಲ್ಲಿದ್ದ 'ಕೋಗಿಲೆ', 'ಕುರುಬರ ಹೈದ', 'ನಮ್ಮ ಧನಂ ಬಡತನಂ' ಎಂಬ ಕವನಗಳನ್ನೂ ಇನ್ನು ಕೆಲವನ್ನೂ ಇತ್ತೀಚಿನ ಮುದ್ರಣಗಳಲ್ಲಿ ಬಿಟ್ಟಿದ್ದಾರೆ; ಕೆಲವು "ಚುಟುಕ"ಗಳನ್ನು ಹೊಸದಾಗಿ ಸೇರಿಸಿದ್ದಾರೆ.

ಪ್ರಾಸದಂತೆಯೇ ಅನುಕರಣ ಶಬ್ದಗಳೂ ಮಕ್ಕಳಿಗೆ ಪ್ರಿಯವಾದವು. 'ಕಿಟ್ಟನ ಕುಣಿತ'ದ ಸ್ವಾರಸ್ಯವೆಲ್ಲವೂ ಅದರಲ್ಲಿ ಬರುವ "ಥ್ರೂಂ! ಥ್ರೂ! ಥ್ರೂಂ!" "ಢಂ! ಢಂ! ಢಂ!" "ಫಣ್! ಫಣ್! ಫಣ್!" ಮೊದಲಾದ ವಾದ್ಯಧ್ವನಿಗಳಲ್ಲಿದೆ. ಅನುಕರಣಶಬ್ದಗಳನ್ನು ಪಲ್ಲವಿಯಾಗಿ ಉಪಯೋಗಿಸುವುದರ ಗುಣವನ್ನು ಈ ಲೇಖಕರು ಚೆನ್ನಾಗಿ ಬಲ್ಲರು. ಆದರೆ ಸಿಹಿಯೋ ಕಾರವೋ ತುಂಬ ಹೆಚ್ಚಾದಾಗ ಅಡಿಗೆಯ ರುಚಿಯನ್ನು ಕೆಡಿಸುವ ಹಾಗೆ, ಇವುಗಳ ಉಪಯೋಗವೂ ಒಂದೆರಡು ಕಡೆ ಸ್ವಾರಸ್ಯದ ಎಲ್ಲೆಯನ್ನು ಮೀರಿರುವಂತೆ ತೋರುತ್ತದೆ.

ದೋಷರಹಿತವಾದ ವಸ್ತುವೇ ಲೋಕದಲ್ಲಿ ಇಲ್ಲ. ಆದ್ದರಿಂದ ಈ ಗ್ರಂಥಗಳಲ್ಲೂ ಹಾಗೆಯೇ. 'ಭಟ್ಟನ ಹೊಟ್ಟೆ'ಯ ಹಾಸ್ಯವು ಇನ್ನೂ ಸ್ವಲ್ಪ ನಯವಾಗಬಹುದಾಗಿತ್ತು; 'ಓಬಿರಾಯನ ಕಾಲದಲ್ಲಿ' ಎಂಬ ಪದ್ಯದ ಭಾವವು ಹೆಚ್ಚು ಆಳವೂ ಸಮಂಜಸವೂ ಆಗಬಹುದಾಗಿತ್ತು—ಎಂದು ಈ ರೀತಿ ಅಲ್ಲಲ್ಲಿ ದೋಷಗಳನ್ನು ಬೆದಕಬಹುದು. ಆದರೆ ಇವೆಲ್ಲವೂ ಈ ಕವನಗಳ ಒಟ್ಟು ಸ್ವಾರಸ್ಯದ ಮುಂದೆ ಕಣ್ಣುಮರೆಯಾಗುತ್ತವೆ. ಉತ್ತಮವಾದ ಕಾಗದದ ಮೇಲೆ ಅಂದವಾದ ದಪ್ಪವಾದ ಅಕ್ಷರಗಳಲ್ಲಿ ಇಂಥ ರಮ್ಯವಾದ ಕವನಗಳನ್ನು ಮಕ್ಕಳಿಗೆ ಒದಗಿಸಿರುವುದಕ್ಕಾಗಿ ಗ್ರಂಥಕರ್ತರನ್ನೂ ಪ್ರಕಾಶಕರನ್ನೂ ತುಂಬ ಶ್ಲಾಘಿಸತಕ್ಕದ್ದಾಗಿದೆ. ಅಲ್ಲಲ್ಲಿ ಚಿತ್ರಗಳೂ ಇದ್ದಿದ್ದರೆ ಚೆನ್ನಾಗಿತ್ತು ಎನ್ನಿಸಬಹುದು. ಕನ್ನಡಿಗರ ಉದಾರ ಪ್ರೋತ್ಸಾಹವು ಬಂದರೆ, ಮುಂದೆ ಅವನ್ನೂ ಸೇರಿಸುವುದು ಏನೂ ಕಷ್ಟವಾಗಲಾರದು. ಆದ್ದರಿಂದ, ಸದ್ಯಕ್ಕೆ ಮಕ್ಕಳೆಲ್ಲರೂ ಸವಿದು ಆನಂದಿಸಲಿ : ಇಲ್ಲಿದೆ—

"ಮಕ್ಕಳಿಗೆ ತಕ್ಕ ಪುರಿ
ಗರಂ ಗರಂ ಕಡಲೆಪುರಿ!"

೧೯೩೩]

ಸಮಾಲೋಚನ : ೧೯೫೮

ಉಷಃಕಾಲ*

೧

ಕನ್ನಡದಲ್ಲಿ ಈಗ ಪದ್ಯಗಳು ಬಹುಮುಖವಾಗಿ ಹೆಚ್ಚುತ್ತಿವೆ; ಅವುಗಳನ್ನು ಓದಿ ಆನಂದಿಸತಕ್ಕ ಸಹೃದಯರ ಸಂಖ್ಯೆಯೂ ಹೆಚ್ಚುತ್ತಿದೆ. ಆದರೆ ಈ ಸಂದರ್ಭದಲ್ಲಿ ಮಕ್ಕಳಿಗೂ ಹುಡುಗರಿಗೂ ಸಲ್ಲಬೇಕಾದ ಪ್ರಾಧಾನ್ಯವು ಕವಿಗಳನೇಕರ ಮನಸ್ಸಿಗೆ ಬಂದಂತೆ ತೋರುವುದಿಲ್ಲ. ಮಕ್ಕಳೂ ಹುಡುಗರೂ ಓದಿ ಆನಂದಿಸಬಹುದಾದ ಕವನಗಳ ಸಂಖ್ಯೆ ಕನ್ನಡದಲ್ಲಿ ಬಹಳ ಕಡಮೆ. ಕಾವ್ಯದ ಪೂರ್ಣಸ್ವಾರಸ್ಯವನ್ನು ಆಸ್ವಾದಿಸುವುದು ಜೀವನದಲ್ಲಿ ಅನುಭವಶಾಲಿಯಾದ ಸುಸಂಸ್ಕೃತನಿಗೆ ಮಾತ್ರ ಸಾಧ್ಯವಾದರೂ, ಮಕ್ಕಳೂ ಪದ್ಯಗಳನ್ನು ಕೇಳಿ, ಹಾಡಿ ಆನಂದಪಡದೆ ಇರುವುದಿಲ್ಲ. ಹಾಗೆ ನೋಡಿದರೆ ಪದ್ಯಗಳಲ್ಲೂ ಹಾಡುಗಳಲ್ಲೂ ಅವರಿಗಿರುವ ಸಹಜ ಪ್ರೀತಿ ಹಲವು ಮಂದಿ ದೊಡ್ಡವರಿಗಿರುವುದಿಲ್ಲ. ಪದ್ಯದಲ್ಲಿ ಸ್ಪಷ್ಟವಾದ ಲಯವೂ (Rhythm) ಶ್ರಾವ್ಯವಾದ ಪದಗಳೂ ಇದ್ದರೆ ಸಾಕು; ಅರ್ಥವನ್ನು ಗಮನಿಸದೆಯೇ ಅದನ್ನು ಹಾಡಿಕೊಂಡು ಮಕ್ಕಳು ಕುಣಿದಾಡುವರು. ಎಷ್ಟೋ ಸಲ ತಾವೇ ಅಂಥ ಪದ್ಯಗಳನ್ನು ಕೂಡ ಕಟ್ಟುವರು.

* ವಿದ್ಯಾದಾಯಿನಿ : ನವಂಬರ್ ೧೯೩೧.

ಎಲ್ಲ ಮಕ್ಕಳ ತಿಳಿವಳಿಕೆಯೂ ಒಂದೇ ಮಟ್ಟಕ್ಕಿರುವುದಿಲ್ಲ. ತುಂಬ ಚಿಕ್ಕವರಿಗೆ ಕೇವಲ ಲಯ, ಕೇವಲ ಶಬ್ದ ಇಷ್ಟರಿಂದ ಮಾತ್ರ ಉಲ್ಲಾಸವುಂಟಾಗುತ್ತದೆ. ಅವರಿಗೆ ಪದ್ಯದ ಅರ್ಥವು ಅಷ್ಟು ಮುಖ್ಯವಲ್ಲ; ಅದು ಅವರಿಗೆ ಚೆನ್ನಾಗಿ ತಿಳಿಯುವುದೂ ಇಲ್ಲ. ಇಂಥ ಶಿಶುಗಳಿಗೆ ಉಚಿತವಾದ ಪದ್ಯಗಳೇ ಬೇರೆ. ಇನ್ನು ಕೊಂಚ ವಯಸ್ಸಾದವರಿಗೆ ಇಷ್ಟು ಮಾತ್ರದಿಂದಲೇ ಪೂರ್ಣತೃಪ್ತಿಯೊದಗಲಾರದು. ಅವರು ಅರ್ಥವನ್ನೂ ಗಮನಿಸಬಲ್ಲರು; ಬಹುಶಃ ಗಮನಿಸತಕ್ಕವರು. ಅವರಿಗಾಗಿ ಬರೆದ ಪದ್ಯಗಳಲ್ಲಿ ಲಯಸೌಷ್ಠವ ಶಬ್ದಸೌಂದರ್ಯಗಳ ಜೊತೆಗೆ ಅರ್ಥಗೌರವವೂ ಮಿಳಿತವಾಗಿರಬೇಕು.

ಈ ದರ್ಜೆಯವರು ಶಿಶುಗಳೂ ಅಲ್ಲ, ಪ್ರಬುದ್ಧರೂ ಅಲ್ಲ. ಆಗ ತಾನೆ ಅವರ ಮನಸ್ಸು ಅರಳುತ್ತಿರುತ್ತದೆ; ಅನುಭವದ ಎಲ್ಲೆ ವಿಸ್ತರಿಸುತ್ತಿರುತ್ತದೆ. ಅವರಿಗೆ ಹೊಸ ಹೊಸ ಅಂಶಗಳನ್ನು ಹುಡುಕಿ ತಿಳಿದುಕೊಳ್ಳುವ ಕುತೂಹಲವೂ ಶಕ್ತಿಯೂ ಉಂಟು. ಈ ಕುತೂಹಲವನ್ನು ಪೂರ್ಣಗೊಳಿಸಿ, ಶಕ್ತಿಯನ್ನು ಪುಷ್ಟೀಕರಿಸುವ ಪದ್ಯಗಳು ಈಗ ಬೇಕಾಗುತ್ತವೆ. ಆದರೆ ಈ ಪದ್ಯಗಳ ವಿಷಯವು ಅತಿಗಹನವಾಗಿರಬಾರದು. ಅದು ಸೂಕ್ಷ್ಮವಾದ ಮನೋಭಾವಗಳ ಪರಾಮರ್ಶವಾಗಿರಬಾರದು. ವಯಸ್ಕರಿಗೆ ಮಾತ್ರ ಉಂಟಾಗಬಹುದಾದ ಅನುಭವಗಳ ನಿರೂಪಣೆಯಾಗಿರಬಾರದು. ಇಂಥ ಅಂಶಗಳು ಅವರ ಮನಸ್ಸಿಗೆ ಹಿಡಿಯುವುದಿಲ್ಲ. ಈ ವಯಸ್ಸಿನ ಬಾಲಕರಿಗೆ ಮನೋರಾಜ್ಯಕ್ಕಿಂತಲೂ ಪ್ರಕೃತಿ ಸಾಮ್ರಾಜ್ಯದ ಬಳಕೆ ಹೆಚ್ಚು; ಆತ್ಮಶೋಧನೆಗಿಂತಲೂ ಕಥಾಶ್ರವಣದಲ್ಲಿ ಆಸಕ್ತಿ ಹೆಚ್ಚು. ಆದ್ದರಿಂದ ಈ ದೃಷ್ಟಿಗೆ ಅನುಸಾರವಾಗಿ ಬರೆದ ಪದ್ಯಗಳೇ ಅವರ ಮೆಚ್ಚಿಕೆಯನ್ನು ಪಡೆಯತಕ್ಕವು.

ಇಂಥ ಪದ್ಯಗಳು ನಮ್ಮಲ್ಲಿ ವಿಶೇಷವಾಗಿಲ್ಲ. ಆದರೆ ಅವು ಹೆಚ್ಚಾಗಿ ಕ್ಷಿಪ್ರದಲ್ಲಿಯೇ ಹೊರಬೀಳಬೇಕಾಗಿದೆ. ಏಕೆಂದರೆ ಸರಿಯಾದ ಕಾವ್ಯಪ್ರೇಮಕ್ಕೆ ತಳಹದಿ ಬಾಲಕರಿಗೆ ಈ ವಯಸ್ಸಿನಲ್ಲೇ ಬೀಳಬೇಕು. ಇದಕ್ಕೆ ಉತ್ತಮಪದ್ಯಗಳ ರಸಾಸ್ವಾದನವೊಂದೇ ಸಾಧನ. ಬಾಲಕರಿಗೋಸ್ಕರವೇ ಹುಟ್ಟಿದ ಅಂಥ ಪದ್ಯಗಳು ಇಂಗ್ಲಿಷ್ ಮೊದಲಾದ ಭಾಷೆಗಳಲ್ಲಿ ಹೇರಳವಾಗಿವೆ; ಅವರಿಗೋಸ್ಕರವೇ ಸಿದ್ಧವಾದ ಅನೇಕ ಕಾವ್ಯ ಸಂಗ್ರಹಗಳೂ ಅಲ್ಲಿ ದೊರೆಯುತ್ತವೆ. ಪಾಠಶಾಲೆಗಳಲ್ಲಿ ಈ ಬಗೆಯ ಪದ್ಯಗಳನ್ನು ಓದಿಸಿ ಅವುಗಳ ಸೌಂದರ್ಯವನ್ನು ಬಾಲಕರಿಗೆ ಮಂದಟ್ಟು ಮಾಡಿಕೊಡುತ್ತಾರೆ. ಇಂಥ ಪದ್ಯಗಳಲ್ಲಿ ಒಂದರ ಭಾವಾನುವಾದವನ್ನು ಈ ಕೆಳಗೆ ಕೊಟ್ಟು, ಅದರ ಸ್ವಾರಸ್ಯವನ್ನು ಹುಡುಗರಿಗೆ ಹೇಗೆ ಬೋಧಿಸಬಹುದೆಂಬುದನ್ನು ಸೂಚಿಸಲು ಇಲ್ಲಿ ಪ್ರಯತ್ನಿಸಿದೆ.

೨

ಉಷಃಕಾಲ

ಕಡಲ ಹಾಸಿಗೆಯಿಂದ ಮೇಲೆದ್ದು ಗಾಳಿ
ನುಡಿದುದಿಂ"ತೆಲೆ ಮಂಜೆ, ದಾರಿ ಬಿಡು ನನಗೆ."

ಹಡಗುಗಳನಾದರಿಸಿ ಕೂಗಿದುದು : "ಮುಂದೆ
ನಡೆಸಿರೈ ನಾವಿಕರೆ, ಇರುಳು ಜಾರಿಹುದು."

ದೂರದೂರದ ನೆಲದ ಕಡೆಗೆ ನುಗ್ಗುತ್ತ
ಸಾರಿದುದು : "ಏಳೇಳಿ, ಬೆಳಕು ಹರೆದಿಹುದು."

ಅಲೆಯುತ್ತ ಕಾಡಿನಲಿ ಮೊರೆದುದದರೊಡನೆ :
"ಎಲೆಯ ಬಾವುಟಗಳನು ಹೊರಚಾಚು ನೀನು."

ಕೋಗಿಲೆಯ ಮುದುರಿದಾ ಗರಿಗಳನು ಕೆದರಿ
ಕೂಗಿದುದು : "ಎಲೆ ಹಕ್ಕಿ, ಏಳು, ಹಾಡೇಳು."

ಹಳ್ಳಿ ಬಯಲಲಿ ಸಾಗಿ ಕರೆದು "ದೆಲೆ ಹುಂಜ,
ಎಲ್ಲಿ ನಿನ್ನಾ ಕಹಳೆ? ಹಗಲು ಬರುತಿಹುದು."

ಹೊಲದ ಪಯಿರಿನ ತೆನೆಯ ಕಿವಿಗೆ ಸೋಕಿದುದು :
"ನೆಲಕೆ ಬಾಗಿರಿ, ಬರುವ ಹಗಲನೆದುರ್ಗೊಳಿರಿ."

ಗುಡಿಯ ಘಂಟೆಗೆ ತಾಗಿ ಘಟ್ಟಿಸಿದುದಿಂತು :
"ಬಿಡು ಮೌನವನು; ಸಾರು ಹಗಲ ಬಿಜಯವನು."

ಮಸಣದೆಡೆಯಲಿ ಕಡೆಗೆ ಹಾಯ್ದು ಬಿಸುಸುಯ್ದು
ಉಸಿರಿದುದು : "ನಿಮಗಲ್ಲ! ಮಲಗಿ ಶಾಂತಿಯಲಿ."

– ಎಚ್.ಡಬ್ಲ್ಯು ಲಾಂಗ್‌ಫೆಲೊ. – "ಡೇಬ್ರೇಕ್".

೩

ಈ ಪದ್ಯದಲ್ಲಿ ಉಷಃಕಾಲದ ವರ್ಣನೆಯಿದೆ; ಸಾಮಾನ್ಯವಾಗಿ ಹುಡುಗರ ಅನುಭವಕ್ಕೆ ಬಂದಿರತಕ್ಕ ಅಂಶಗಳ ವರ್ಣನೆಯೇ ಇದೆ. ಆದರೆ ಅದನ್ನು ಕವಿ ಪ್ರತ್ಯಕ್ಷವಾಗಿ ಮಾಡಿಲ್ಲ. ಬೆಳಗಿನ ಹೊತ್ತು ಬೀಸುವ ತಂಗಾಳಿಯ ಚರ್ಯೆಯನ್ನು ವರ್ಣಿಸಿದಂತೆ ಮಾಡಿ ಅದರ ಮೂಲಕ ಉಷಃಕಾಲದ ಪರಿಸ್ಥಿತಿಯನ್ನು ಸೂಚಿಸಿದ್ದಾನೆ. ಈ ತಂಗಾಳಿಯ ವರ್ಣನೆಯಲ್ಲಿ ಕೂಡ ಒಂದು ವಿಶೇಷವಿದೆ. ಅದನ್ನು ಸಚೇತನ ವಸ್ತುವೆಂದು ಕವಿ ಚಿತ್ರಿಸಿರುವುದು ಮಾತ್ರವಲ್ಲ; (ಹೀಗೆ ಭಾವಿಸುವುದು ಕವಿಗಳ ದಿನಚರ್ಯೆ)—ಈ ತಂಗಾಳಿ ಹಗಲಿನ ಆಗಮನವನ್ನು ಲೋಕಕ್ಕೆ ಸಾರುವ ಚಾರನೆಂದೂ, ಅದು ಮುಂದಾಗಿ ಹೊರಟು, ಹಗಲನ್ನು ಎದುರುಗೊಳ್ಳುವುದಕ್ಕೆ ಲೋಕವನ್ನು ಸಿದ್ಧಪಡಿಸುವುದೆಂದೂ ಅರ್ಥ ಬರುವಂತೆ ಕವಿ ನಿರೂಪಿಸಿದ್ದಾನೆ. ಈ ಅಂಶವನ್ನು ಅವನು ಬಾಯಿಬಿಟ್ಟು ಹೇಳಿಲ್ಲ; ಪದ್ಯದ ಉದ್ದಕ್ಕೂ ಅದರ ಧ್ವನಿ ಬರುವಂತೆ ಮಾಡಿದ್ದಾನೆ. ಇದೇ ಈ ಪದ್ಯದ ಮುಖ್ಯ ಸ್ವಾರಸ್ಯ. ಇದನ್ನು ಹುಡುಗರು ಗ್ರಹಿಸುವಂತೆ ಮಾಡುವುದೇ ಬೋಧನೆಯ ಪ್ರಯೋಜನ.

ಪದ್ಯವು ಹೊಸಗನ್ನಡದಲ್ಲಿರುವುದರಿಂದ ಹುಡುಗರಿಗೆ ಪದಗಳೆಲ್ಲವೂ ಬಹುಶಃ ಅರ್ಥವಾಗುತ್ತವೆ; ಅಲ್ಲಲ್ಲಿರುವ ಒಂದೆರಡು ಕಠಿನ ಪದಗಳನ್ನು ವಿವರಿಸುವುದೂ ಶ್ರಮಕರವಲ್ಲ. ಆದರೆ ಇದರ ಭಾವವು ಸ್ವಲ್ಪ ಗೂಢವಾಗಿರುವುದರಿಂದ ಇದರ ಸ್ವಾರಸ್ಯವು ತುಂಬ ಚಿಕ್ಕವರಿಗೆ ಗೋಚರಿಸಲಾರದು. ಮಾಧ್ಯಮಿಕ ಮೂರುನಾಲ್ಕನೆಯ ತರಗತಿಯ ಹುಡುಗರಿಗೆ ಈ ಪದ್ಯವು ಬಹುಶಃ ಸರಿಹೋಗುವಂತೆ ತೋರುತ್ತದೆ. ಈ ದರ್ಜೆಯ ಬಾಲಕರಲ್ಲಿ ಒಬ್ಬನಿಗೆ ಇದನ್ನು ಬೋಧಿಸಿದ್ದರ ಅನುಭವವನ್ನು ಇಲ್ಲಿ ಕೊಟ್ಟಿದೆ. ದೊಡ್ಡ ತರಗತಿಗಳಿಗೆ ಹೇಳುವಾಗ ಈ ಕ್ರಮದಲ್ಲಿ ಹಲವು ಮಾರ್ಪಾಡುಗಳನ್ನು ಮಾಡಿಕೊಳ್ಳ ಬೇಕಾಗಬಹುದು.

ಮೊದಲು ಪದ್ಯವನ್ನು ಹುಡುಗನಿಂದಲೇ ಓದಿಸಿದೆನು. ಛಂದಸ್ಸು (ದ್ವಿಪದಿಯ ಮಟ್ಟು) ಸರಳವಾಗಿರುವುದರಿಂದ ಅದರ ಧಾಟಿಯನ್ನು ಕಂಡುಕೊಳ್ಳುವುದು ಅವನಿಗೆ ಅಷ್ಟು ಕಷ್ಟವಾಗಲಿಲ್ಲ. ಮೊದಲನೆಯ ಸಲ ಅವನು ಅದನ್ನು ಉದ್ದಕ್ಕೆ ಓದಿದನು. "ಒಟ್ಟು ಅರ್ಥವೇನು?" ಎಂದು ಕೇಳಿದಾಗ, "ಬೆಳಗಿನ ಹೊತ್ತು ಗಾಳಿ ಬೀಸಿ ಏನೇನು ಕೆಲಸ ಮಾಡುತ್ತದೆ ಎನ್ನುವುದನ್ನು ಈ ಪದ್ಯದಲ್ಲಿ ಹೇಳಿದೆ" ಎಂದು ಅವನು ಉತ್ತರ ಕೊಟ್ಟನು. ಅದಕ್ಕಿಂತ ಹೆಚ್ಚು ಭಾವ ಅವನಿಗೆ ಗೊತ್ತಾಗಲಿಲ್ಲ. ಬಳಿಕ ಪದ್ಯದ ಪ್ರತಿ ವೃತ್ತ (Stanza) ವನ್ನು ಬಿಡಿಬಿಡಿಯಾಗಿ ಓದಿಸಿ, ಓದಿ, ಪ್ರಶ್ನಿಸಿ, ವಿವರಿಸುವುದಕ್ಕೆ ಪ್ರಾರಂಭಿಸಿದೆನು. ಪದ್ಯದ ಒಟ್ಟು ಭಾವಕ್ಕೆ ಸೂಚನೆ ಮೊಟ್ಟಮೊದಲನೆಯ ಚರಣದಲ್ಲಿಯೇ ಇದೆ :

"ಕಡಲ ಹಾಸಿಗೆಯಿಂದ ಮೇಲೆದ್ದು ಗಾಳಿ"—

ಗಾಳಿಗೆ ಸಮುದ್ರವೇ ಹಾಸಿಗೆ. ರಾತ್ರಿಯಲ್ಲಿ ಮನುಷ್ಯರಂತೆಯೇ ಮಲಗಿ ವಿಶ್ರಮಿಸಿ ಕೊಳ್ಳುತ್ತಿದ್ದ ಅದು ಉಷಃಕಾಲದಲ್ಲಿ ತನ್ನ ಹಾಸಿಗೆಯನ್ನು ಬಿಟ್ಟು ಮೇಲಕ್ಕೆ ಎದ್ದಿತು. ಎದ್ದು, ಸುತ್ತಲೂ ಕವಿದಿದ್ದ ಮಂಜನ್ನು ಚೆದರಿಸುತ್ತಾ ದಾರಿ ಬಿಡಿಸಿಕೊಂಡು ಹೊರಟಿತು. ಎರಡನೆಯ ವೃತ್ತದಲ್ಲಿ ಹೇಳಿರುವ ವಿಷಯದ ಅನುಭವವು ನಮ್ಮಲ್ಲಿ ಹುಡುಗರಿಗೇಕೆ?— ದೊಡ್ಡವರಿಗೇ ಇರುವುದಿಲ್ಲ. ಆದ್ದರಿಂದ ಅದನ್ನು ವಿವರಿಸಬೇಕಾಯಿತು. ರಾತ್ರಿಯ ಕತ್ತಲೆಯಲ್ಲಿ ಎಲ್ಲಾ ಬಗೆಯ ಪ್ರಯಾಣಕ್ಕೂ ತೊಂದರೆ; ದಾರಿ ಗೊತ್ತಾಗುವುದಿಲ್ಲ. ಆ ಕತ್ತಲೆ ಹರಿಯಿತು. ಇನ್ನು ನಾವಿಕರು ಹಡಗುಗಳನ್ನು ನಿರ್ಭಯವಾಗಿ ನಡೆಸಬಹುದು. ಹೀಗೆ ಹಡಗುಗಳಿಗೆ ಪ್ರೋತ್ಸಾಹವನ್ನು ಕೊಟ್ಟು, ಬಳಿಕ (ಮೂರನೆಯ ವೃತ್ತ) ಈ ಗಾಳಿ ಭೂಮಿಯ ಕಡೆಗೆ ಹರಿದು ಎಲ್ಲೆಲ್ಲೂ ವೇಗದಿಂದ ನುಗ್ಗುತ್ತಾ ಜನಗಳನ್ನು ಎಬ್ಬಿಸುತ್ತದೆ. ಇಲ್ಲಿ, ಮಲಗಿದ್ದವರ ಮೇಲೆ ನಸುಕಿನ ತಂಗಾಳಿ ಸ್ವಲ್ಪ ಕೊರೆಯುವಂತೆ ಬೀಸಿ ಅವರನ್ನು ಎಚ್ಚರಗೊಳಿಸುವ ಸಾಮಾನ್ಯಾನುಭವವನ್ನು ಜ್ಞಾಪಿಸಬಹುದು. ಮುಂದೆ ನಾಲ್ಕನೆಯ ವೃತ್ತದಲ್ಲಿ ಗಾಳಿ ಬೀಸಿದಾಗ ಮರದ ಎಲೆಗಳು ಶಬ್ದದೊಡನೆ ಅಲ್ಲಾಡುವ ಸಂಗತಿಯನ್ನು ಬಾವುಟ ಬಿಚ್ಚಿದಂತೆ ಕವಿ ನಿರೂಪಿಸಿದ್ದಾನೆ. ಐದನೆಯ ವೃತ್ತದಲ್ಲಿ, ಕೋಗಿಲೆ ಮೊದಲಾದ ಪಕ್ಷಿಗಳು ಗರಿಗಳನ್ನು ಕೊಡಹಿಕೊಂಡು ಎದ್ದು ತಮ್ಮ ಹಾಡನ್ನು ಪ್ರಾರಂಭಿಸುವುದರ ಸೂಚನೆಯಿದೆ. ಆರನೆಯದರಲ್ಲಿ ಹುಂಜವು ಕೂಗುವುದರ ವಿಷಯ.

ಇಷ್ಟು ದೂರ ಬರುವ ಹೊತ್ತಿಗೆ ಹುಡುಗನ ಮನಸ್ಸಿಗೇ ಒಂದು ಹೊಸ ಭಾವವು ಅಸ್ಪಷ್ಟವಾಗಿ ಗೋಚರಿಸುತ್ತಿರುತ್ತದೆ. ಗಾಳಿ ಹುಂಜಕ್ಕೆ "ನೀನು ಕೂಗು" ಎಂದು ಹೇಳುವುದನ್ನು ಬಿಟ್ಟು,

"ಎಲ್ಲಿ ನಿನ್ನಾ ಕಹಳೆ? ಹಗಲು ಬರುತಿಹುದು"

ಎಂದೇಕೆ ಹೇಳಿತು? ಕಹಳೆಯನ್ನು ಊದುವುದು ಯಾವಾಗ? ದೇವರ ಉತ್ಸವ, ಮೆರವಣಿಗೆ ಮೊದಲಾದದ್ದು ಬರುವಾಗ. ಇಲ್ಲಿ ಯಾರ ಉತ್ಸವ? ...... "ಹಗಲು ಬರುತಿಹುದು" ಎಂದು ಹೇಳಿದೆ. ಹಗಲಿನ ಉತ್ಸವ. ಆಹಾ! ಇಲ್ಲಿ ಹಗಲೇ (ಸೂರ್ಯನೇ)* ದೇವರು. ಸೂರ್ಯನ ಉತ್ಸವವು ಬರುತ್ತಿದೆ. "ಅದಕ್ಕೆ ಸಿದ್ಧ ಮಾಡಿಕೊ" ಎಂದು ಹುಂಜಕ್ಕೆ ಗಾಳಿ ಹೇಳುತ್ತಿದೆ. ಸರಿ, ಈಗ ಅರ್ಥವಾಯಿತು. ಹಾಗಾದರೆ ಹಿಂದೆ ಹೇಳಿದ ಸಂದರ್ಭಗಳಲ್ಲೂ ಇದೇ ರೀತಿಯಲ್ಲೇ ಗಾಳಿ ಎಚ್ಚರಿಕೆ ಕೊಟ್ಟಿದೆಯೋ? ನೋಡೋಣ......ನಿಜ, ಕೊಟ್ಟಿದೆ! ಮೂರನೆಯ ವೃತ್ತದಲ್ಲಿ, ದೇಶದೇಶದಲ್ಲೆಲ್ಲಾ ಸಂಚರಿಸಿ, ಬೆಳಕು ಹರೆಯಿತೆಂದು ಸಾರಿ ಜನರನ್ನು ಎಬ್ಬಿಸಿತು. ನಾಲ್ಕನೆಯದರಲ್ಲಿ, ಮರಕ್ಕೆ ತನ್ನಲ್ಲಿರುವ ಎಲೆಯ ಬಾವುಟಗಳನ್ನು ಎತ್ತುವಂತೆ ಹೇಳಿತು. ಉತ್ಸವಕಾಲದಲ್ಲಿ ಬಾವುಟಗಳನ್ನು ಏರಿಸುತ್ತಾರಲ್ಲವೆ?—ಬಳಿಕ ಕೋಗಿಲೆಗೆ ಹಾಡುವಂತೆ ಅಪ್ಪಣೆಮಾಡಿತು. ಉತ್ಸವಕಾಲದಲ್ಲಿ ಓಲಗಮಾಡುತ್ತಾರೆ. ಇಲ್ಲಿ ಪಕ್ಷಿಗಳ ಚಿಲಿಪಿಲಿಧ್ವನಿಯೇ ಓಲಗ... ಚೆನ್ನಾಗಿದೆ. ಮುಂದೆ ನೋಡೋಣ.—ಈ ವೇಳೆಗೆ ಪದ್ಯದಲ್ಲಿ ಹುಡುಗನಿಗೆ ಪೂರ್ಣವಾದ ಆಸಕ್ತಿ ಹುಟ್ಟಿರುತ್ತದೆ.

ಗಾಳಿ ಸಮುದ್ರದ ಮೇಲಿನಿಂದ ಹೊರಟು ಪಟ್ಟಣಗಳನ್ನು ದಾಟಿ ಕಾಡಿನಲ್ಲಿ ತೂರಿ ಈಗ ಹಳ್ಳಿಗಳಮೇಲೆ ನಡೆಯುತ್ತಿದೆ. ಹೊಲದ ಪೈರಿನ ಮೇಲೆ ಹಾಯ್ದು ತೆನೆಗಳನ್ನು ಬಾಗಿಸುತ್ತಿದೆ. ಇಲ್ಲಿ ಒರಟು ಧ್ವನಿಯಿಂದ "ಅಡ್ಡಬೀಳಿ" ಎಂದು ಕೂಗದೆ, ನಯವಾಗಿ ಪಿಸುಮಾತಿನಲ್ಲಿ ತೆನೆಗಳಿಗೆ "ಬಾಗಿರಿ" ಎಂದು ಹೇಳಿ ತನ್ನ ಸಭ್ಯತನವನ್ನು ತೋರಿಸುತ್ತದೆ. ಇದರಿಂದ ಪೈರಿನ ಮೇಲೆ ಗಾಳಿ ಬೀಸುವಾಗ ಉಂಟಾಗುವ ಅಸ್ಫುಟವಾದ ಮೃದುಧ್ವನಿ ನಮಗೆ ಜ್ಞಾಪಕಕ್ಕೆ ಬರುತ್ತದೆಯಲ್ಲವೆ? ಗಾಳಿ ಮರದ ಎಲೆಗಳಲ್ಲಿ ಮೊರೆಯುವುದಕ್ಕೂ ಇಲ್ಲಿ ತೆನೆಗೆ ಸೋಕುವುದಕ್ಕೂ ಎಷ್ಟೊಂದು ವ್ಯತ್ಯಾಸ!—ದೇವರು ಬರುವಾಗ ನೆಲಕ್ಕೆ ಬಗ್ಗಿ ನಮಸ್ಕಾರಮಾಡುವ ಭಕ್ತರಂತೆ ಪೈರುಗಳು ಸೂರ್ಯನನ್ನು ಎದುರುಗೊಳ್ಳುತ್ತವೆ. ಮುಂದೆಯೇ ಗುಡಿ. ಅಲ್ಲಿ ಬೆಳಗಿನ ದೇವತಾರ್ಚನೆಗಾಗಿ ಘಂಟೆಯ ಸದ್ದಾಗುವುದಕ್ಕೂ ಹಗಲು ಬಿಜಯ ಮಾಡುವುದಕ್ಕೂ ಸರಿಹೋಗುತ್ತದೆ. ಆ ಘಂಟೆಯ ಸದ್ದೇ ಸೂರ್ಯನ ಆಗಮನವನ್ನು ಸಾರಿದಂತಾಗುತ್ತದೆ.

---

* "ಹಗಲೇ ದೇವರು" ಎಂಬ ಮಾತು ಹುಡುಗರಿಗೆ ಅರ್ಥವಾಗುವುದು ಕಷ್ಟ. ಅಮೂರ್ತವಾದ ಹಗಲಿನ ಬದಲು ಅದಕ್ಕೆ ಕಾರಣಕರ್ತನಾದ ಸೂರ್ಯನ ಆಗಮನವೇ ಇಲ್ಲಿಯ ವಿಷಯವೆಂದು ವಿವರಿಸುವುದು ಉತ್ತಮವೆಂದು ತೋರುತ್ತದೆ.

ಇಲ್ಲಿಯವರೆಗೂ ಈ ಉಷಃಕಾಲದ ಚಾರನು ಎಲ್ಲೆಲ್ಲೂ ಸುತ್ತಾಡಿ ಎಲ್ಲರನ್ನೂ ಎಚ್ಚರಿಸಿ ಹಗಲಿನ ಉತ್ಸವವನ್ನು ಎದುರುಗೊಳ್ಳುವುದಕ್ಕೆ ಅಣಿಮಾಡಿದನು. ಇಷ್ಟಕ್ಕೇ ಪದ್ಯವನ್ನು ನಿಲ್ಲಿಸಿದ್ದರೆ ಹೇಗಿರುತ್ತಿತ್ತು? ಆಗಲೂ ಚೆನ್ನಾಗಿರುತ್ತಿತ್ತು; ಆದರೆ ಪೂರ್ಣವಾಗುತ್ತಿರಲಿಲ್ಲ. ಸ್ವಲ್ಪವೂ ಅಡ್ಡಿಯಿಲ್ಲದೆ ಇಷ್ಟು ನಿರಾಳವಾಗಿ ಹರಿದು ಎಲ್ಲರನ್ನೂ ಎಚ್ಚರಿಸುವ ಈ ಪ್ರಬಲನಾದ ಚಾರನಿಗೂ ಕೆಲವರನ್ನು ಎಚ್ಚರಿಸುವ ಶಕ್ತಿಯೂ ಅಧಿಕಾರವೂ ಇಲ್ಲವೆಂದು ಕೇಳಿದರೆ ಈ ಪದ್ಯದ ಸ್ವಾರಸ್ಯವು ಇನ್ನೂ ಹೆಚ್ಚುವುದಿಲ್ಲವೆ? ಕೊನೆಗೆ ಗಾಳಿ ಎಲ್ಲಿ ಸುಳಿಯಿತು? ಶ್ಮಶಾನದ ಬಳಿ. ಅಲ್ಲಿ ಹಾಯುವಾಗ ಅದು ನಿಟ್ಟುಸಿರು ಬಿಟ್ಟಿತು. ಮರಣಕ್ಕೆ ತುತ್ತಾಗಿ ಆ ಶ್ಮಶಾನದಲ್ಲಿ ದೀರ್ಘ ನಿದ್ರೆಮಾಡುತ್ತಿರುವವರನ್ನು ಎಲ್ಲರಂತೆ ಎಬ್ಬಿಸಿ, "ಈ ಉತ್ಸವದಲ್ಲಿ ನೀವೂ ಸೇರಿ ಆನಂದಪಡಿರಿ" ಎಂದು ಹೇಳುವುದಕ್ಕೆ ಸಾಧ್ಯವಿಲ್ಲವಲ್ಲಾ ಎಂದು ಗಾಳಿ ನಿಟ್ಟುಸಿರುಬಿಟ್ಟಿತು. ಲೋಕಕ್ಕೆಲ್ಲಾ ಬೆಳಗಾದರೂ ಸತ್ತಿರುವವರಿಗೆ ಮಾತ್ರ ಎಂದೆಂದಿಗೂ ನಿದ್ದೆಯೇ. ಆದ್ದರಿಂದ ಗಾಳಿ ಅವರನ್ನು ಕುರಿತು, "ಈ ಉತ್ಸವದಲ್ಲಿ ಸೇರುವ ಭಾಗ್ಯ ನಿಮಗಿಲ್ಲ. ಈಗ ನಾನು ಕೊಡುತ್ತಿರುವ ಎಚ್ಚರಿಕೆ ನಿಮಗಿಲ್ಲ. ನೀವು ಶಾಂತಿಯಲ್ಲಿ ಮಲಗಿಕೊಂಡಿರಿ" ಎಂದು ಹೇಳಿತು.—ಈ ಅಂಶವನ್ನು ಕೊನೆಯಲ್ಲಿ ಸೇರಿಸಿರುವುದರಿಂದ ಪದ್ಯಕ್ಕೆ ಒಂದು ಹೊಸ ಕಳೆ ಕಟ್ಟಿದೆ.

ಮೇಲಿನ ನಿರೂಪಣೆ ದಿಕ್ಸೂಚನಕ್ಕಾಗಿ ಮಾತ್ರ. ಇನ್ನು ವಿವರಿಸಬೇಕಾದ ಅಂಶಗಳು ಹಲವುಂಟು. ಅವುಗಳನ್ನು ಔಚಿತ್ಯವರಿತು ತಿಳಿಸಿ ಬಾಲಕರಿಗೆ ಆಹ್ಲಾದವನ್ನು ಹೆಚ್ಚಿಸಬಹುದು. ಮುಖ್ಯವಾಗಿ, ಹುಡುಗರಲ್ಲಿ ಕಾವ್ಯಾಭಿರುಚಿಯನ್ನು ಉದ್ದೀಪಿಸಬೇಕೆಂದು ಪ್ರಯತ್ನಿಸುತ್ತಿರುವವರಿಗೆ ಈ ಲೇಖನದಿಂದ ಕೊಂಚವಾದರೂ ಉಪಯೋಗವಾದಲ್ಲಿ ಇದರ ಉದ್ದೇಶವು ನೆರವೇರಿತು.

ಕೆರೆಗೆ ಹಾರ*

ಯಾವ ಗಣಿಯಲ್ಲಿ ಎಂಥ ಮಣಿ ಅಡಗಿರುವುದೋ! ಹಳ್ಳಿಯವರ ಹಾಡುಗಳನ್ನು ಕುರಿತು ಸುಶಿಕ್ಷಿತರಲ್ಲಿ ಮೊದಲಿಗೆ ಅನಾದರವೂ ತಿರಸ್ಕಾರವೂ ಇದ್ದುವು. ಅಕ್ಷರ ಕಲಿಯದವರು, ನಾಗರಿಕ ಜೀವನವನ್ನು ತಿಳಿಯದವರು, ವ್ಯಾಕರಣಬದ್ಧವಾಗಿ ಮಾತಾಡಲು ಅರಿಯದವರು—ಇಂಥವರು ತಮ್ಮ ಹೃದಯವನ್ನು ಹಗುರಮಾಡಿಕೊಳ್ಳುವುದಕ್ಕಾಗಿ ಆಗಾಗ ಹಾಡಿಕೊಂಡ ಹಾಡುಗಳಲ್ಲಿ ಏನು ತಿರುಳಿದ್ದೀತೆಂದು ವಿದ್ವಾಂಸರು ಅಸಡ್ಡೆಮಾಡುತ್ತಿದ್ದ ಕಾಲವೊಂದಿತ್ತು. ಆದರೆ ಆ ಭಾವ ಈಗ ಬಲುಮಟ್ಟಿಗೆ ತೊಲಗಿದೆ. ಪ್ರೌಢಿಮೆಯುಳ್ಳವರು ಕೂಡ ಈ ಹಾಡುಗಳ ರುಚಿಯನ್ನು ಮನಗಾಣುತ್ತಿದ್ದಾರೆ. ಸಹೃದಯರಾದ ವಿಮರ್ಶಕರ ನಿರೀಕ್ಷೆಗೂ ಮೀರಿ ಬಗೆಯನ್ನು ಸೂರೆಗೊಳ್ಳುವ ಕೃತಿಗಳು ಈ ಕ್ಷೇತ್ರದಲ್ಲಿ ಹಲವುಬಾರಿ ದೊರೆಯುತ್ತವೆ. ಅಂಥವನ್ನು ಸಂಧಿಸಿದಾಗ, "ಇದು ಹಳ್ಳಿಯಹಾಡು; ಗುಣವನ್ನು ಗ್ರಹಿಸಬೇಕು" ಎಂಬ ಕೃಪಾದೃಷ್ಟಿ ತೊಲಗಿ, "ಇದು ಒಳ್ಳೆಯ ಕಾವ್ಯ, ಉತ್ತಮೋತ್ತಮ ಕಾವ್ಯ; ಇದರ ರಸವನ್ನು ಸವಿದು, ಹೃದಯವನ್ನು ಸಂಸ್ಕರಿಸಿಕೊಳ್ಳಬೇಕು" ಎಂಬ ನಮ್ರ ಬುದ್ಧಿ ಮೊಳೆಯುತ್ತದೆ.

---

* 'ಪೌರವಾಣಿ' ವಿಶೇಷಸಂಚಿಕೆ, ಬೆಂಗಳೂರು, ೧೯೪೮.

ಇಂಥ ಒಂದು ಹಾಡನ್ನು ಹದಿನೈದು ಹದಿನಾರು ವರ್ಷಗಳ ಕೆಳಗೆ "ಜಯ ಕರ್ನಾಟಕ"ದಲ್ಲಿ ನಾನು ಓದಿದೆನು. ಶ್ರೀಮಾನ್ ಬೆಟಗೇರಿ ಕೃಷ್ಣ ಶರ್ಮರು ಹಳ್ಳಿಯ ಕಡೆ ಕೇಳಿ ಸಂಗ್ರಹಿಸಿದ "ಕೆರೆಗೆ ಹಾರ" ಎಂಬ ಕೋಲಾಟದ ಪದವೇ ಅದು. (ಈಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡದ ಬಾವುಟ'ದ ಎರಡನೆಯ ಮುದ್ರಣ ದಲ್ಲಿಯೂ ಅದು ಸೇರಿದೆ.) ಈ ಹಾಡನ್ನು ಓದುತ್ತಾ ಓದುತ್ತಾ, ನಮ್ಮ ಕಾವ್ಯಾಕಾಶದಲ್ಲಿ ಹೊಳಪಿನ ನಕ್ಷತ್ರವೊಂದನ್ನು ಹೊಸದಾಗಿ ಕಂಡಂತೆ ನನಗೆ ಅನುಭವವಾಯಿತು. ನಾನೊಬ್ಬನೇ ಅದನ್ನು ಸವಿದು ತೃಪ್ತಿಪಡದೆ, ಮಿಕ್ಕ ಕನ್ನಡಿಗರಿಗೂ ಅದರ ಸೊಗಸನ್ನು ಸಾರಿ ಹೇಳಬೇಕೆಂಬ ಆಸೆಯುಂಟಾಯಿತು. ಉತ್ತರ ಕರ್ನಾಟಕದ ಹಳ್ಳಿಯ ಜನ ಇದನ್ನು ಹೇಗೆ ಹಾಡುತ್ತಾರೋ ಕೇಳಿ ಅರಿತುಕೊಳ್ಳುವ ಭಾಗ್ಯ ನನಗಿನ್ನೂ ಒದಗಿಲ್ಲ. ಇನ್ನು ಮುಂದೆ ಕೇಳಿದರೂ ನನ್ನ ಒಣದನಿಯಲ್ಲಿ ಅದರ ಪಲುಕುಗಳನ್ನು ತರಬಲ್ಲ ಶಕ್ತಿಯೂ ಇಲ್ಲ. ರಾಗವಿಲ್ಲದೆ ಪದ್ಯಗಳನ್ನು ಓದುವ ಧಾಟಿಯೊಂದು ಉಂಟಷ್ಟೆ. ಆ ಬಗೆಯಲ್ಲಿ ಈ ಕವನವನ್ನು ಮೈಸೂರು ದೇಶದ ಸಭೆಗಳಲ್ಲಿ ಆಗಾಗ ಓದಿ ವಿವರಿಸಿದ್ದೇನೆ. ಹುಡುಗರು ದೊಡ್ಡವರು ಹೆಂಗಸರು ಗಂಡಸರು ಸಾಮಾನ್ಯರು ವಿದ್ವಾಂಸರು—ಎಲ್ಲರ ಮೇಲೂ ಇದು ಉಂಟುಮಾಡುವ ಗಾಢಪರಿಣಾಮವನ್ನು ಕಂಡು ಈ ಕೃತಿರತ್ನದ ಮಹಿಮೆ ದಿನದಿನಕ್ಕೆ ಹೆಚ್ಚಾಗಿ ನನಗೆ ಮನದಟ್ಟಾಗಿದೆ. ಇದನ್ನು ಕುರಿತು ನಾಲ್ಕು ಮಾತು ಹೇಳಿ ಪರಿಚಯಮಾಡಿಕೊಡಬೇಕೆನ್ನುವುದೇ ಇಲ್ಲಿನ ನನ್ನ ಉದ್ದೇಶ.

ಊರಿನ ಹಿತಕ್ಕಾಗಿ ನಾಡಿನ ಕ್ಷೇಮಕ್ಕಾಗಿ ಕೆಲಸಗಳನ್ನು ಕೈಕೊಂಡಾಗ ಅಡ್ಡಿತಡೆಗಳು ಒದಗುವುದು ಸಹಜ. ದನಕರುಗಳಿಗೂ ಪೈರುಪಚ್ಚೆಗಳಿಗೂ ನೀರು ಒದಗಲೆಂದು ಬಲುವೆಚ್ಚದಿಂದ ಕೆರೆಯನ್ನು ಕಟ್ಟಿಸಿದರೆ ನೀರೇ ಬೀಳದಿರಬಹುದು. ಪ್ರಜೆಗಳು ಸುರಕ್ಷಿತವಾಗಿರಲೆಂದು ಕೋಟೆಯನ್ನು ಎಬ್ಬಿಸಿದರೆ ಗೋಡೆಯೇ ಭದ್ರವಾಗಿ ನಿಲ್ಲದಿರಬಹುದು. ಇಂಥ ಸಂದರ್ಭದಲ್ಲಿ ನಮ್ಮ ಹಿಂದಿನವರು ಇಲ್ಲೇನೋ ದೈವಿಕವಾದ ಕಾರಣವಿರಬೇಕೆಂದು ನಂಬಿ ಜೋಯಿಸರನ್ನು ವಿಚಾರಿಸುತ್ತಿದ್ದರು. ಗ್ರಹಶಾಂತಿಯನ್ನೋ ಭೂತಬಲಿಯನ್ನೋ ನಡೆಸಿ ಮುಂದುವರಿಯುತ್ತಿದ್ದರು. ಅಂತೂ ಊರೊಟ್ಟಿನ ಹಿತಕ್ಕಾಗಿ ಆಗಿನ ಬಲ್ಲವರು ಹೇಳಿದ ತ್ಯಾಗಕಾರ್ಯವನ್ನು—ಅದು ಎಷ್ಟೇ ಕಠಿನವಾಗಿದ್ದರೂ— ಕೈಕೊಳ್ಳಲು ಅವರು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಇಂಥ ಒಂದು ಸನ್ನಿವೇಶವೇ "ಕೆರೆಗೆ ಹಾರ"ದ ಕಥೆಯ ಹಿನ್ನೆಲೆ;

> ಕಲ್ಲನಕೇರಿ ಮಲ್ಲನಗೌಡಾ ಕೆರೆಯೊಂದ ಕಟ್ಟಿಸ್ಯಾನು
> ಕೆರೆಯೊಂದ ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ
> ಸೆರೆಮುಕ್ಕ ನೀರಿಲ್ಲ ಹೊತ್ತಿಗೆ ತಗಸ್ಯಾರು
> ಹೊತ್ತಿಗೆ ತಗಸ್ಯಾರು ಜೋಯಿಸ ಕೇಳ್ಯಾರು—

ಹಳ್ಳಿಯ ಹಾಡಿನ ಒಂದು ವಿಶಿಷ್ಟರೀತಿಯ ಪುನರುಕ್ತಿ ಪ್ರಾರಂಭದಲ್ಲೇ ಗೋಚರ ವಾಗುತ್ತದೆ. ಅನೇಕ ಹೇಳಿಕೆಗಳು ಎರಡೆರಡು ಸಲ ಬಂದು ವಿಷಯವನ್ನು ಕೇಳುವವರ

ಮನಸ್ಸಿನಲ್ಲಿ ಚೆನ್ನಾಗಿ ಹದಿಯುತ್ತವೆ. "ಹೊತ್ತಿಗೆ"ಯನ್ನು ತೆಗೆಯಿಸಿ ಪ್ರಶ್ನೆಮಾಡಿದಾಗ ಜೋಯಿಸರು ಏನು ಹೇಳಿದರು?—ಇದು ದೇವರ ಕಾಟ, ದೆವ್ವದ ಕಾಟ ಯಾವುದೂ ಅಲ್ಲ. "ಹಿರಿಸೊಸೆ ಮಲ್ಲವನ ಹಾರವ ಕೊಡಬೇಕು." ಆಕೆಯನ್ನು ಆಹಾರವಾಗಿ ಒಪ್ಪಿಸಿದರೆ ಕೆರೆಯಲ್ಲಿ ನೀರು ಬೀಳುತ್ತದೆ ಎಂದರು. (ಉತ್ತರ ಕರ್ನಾಟಕದ ಜನರ ಮಾತಿನಲ್ಲಿ "ಆಹಾರ" ಎಂಬುದು "ಹಾರ" ಎಂದಾಗಿದೆ.) ಗೌಡನ ಮನೆಯಲ್ಲಿ ಆಲೋಚನೆಗಿಟ್ಟಿತು. ಹಿರಿಯ ಸೊಸೆಯನ್ನು ಹಾರವಾಗಿ ಕೊಟ್ಟರೆ ಹೇಗೆ? ಮನೆತನದ ಹಿರಿಯ ಸಂತತಿ ಮುಂದುವರಿಯಬೇಡವೆ? ಬಲಿಯನ್ನಂತೂ ಕೊಡಲೇಬೇಕು; ಇಲ್ಲವಾದರೆ ಕೈಹಿಡಿದ ಧರ್ಮಕಾರ್ಯ ಕೆಟ್ಟುಹೋಗುತ್ತದೆ. ಹಾಗಾದರೆ—

'ಕಡೆಸೊಸೆ ಭಾಗೀರತಿನ್ನ ಹಾರವ ಕೊಡಬೇಕು'
ಹಾರ ಕೊಡಬೇಕಂತ ಮಾತಾತು ಮನೆಯಾಗ.

ಅಂತೂ ಹೀಗೆ ನಿಷ್ಕರ್ಷೆಯಾಯಿತು. ಬಳಿಕ?—

ಸಣ್ಣ ಸೊಸೆ ಭಾಗೀರತಿ ತವರಮನೆಗೆ ಹೊಂಟಾಳು
'ಅತ್ತೆವ್ವಾ ನಾ ನಮ್ಮ ತವರಮನೆಗೆ ಹೋಗುತೀನಿ'
'ಸರ್ರನೆ ಹೋಗವ್ವಾ ಭರ್ರನೆ ಬಾರವ್ವಾ'

ಕಥೆಯಲ್ಲಿ ನಡುವಣ ಎಷ್ಟೊಂದು ವಿಷಯವನ್ನು ಜಾಣನಾದ ಕವಿ ನಮ್ಮ ಊಹೆಗೇ ಬಿಡುತ್ತಾನೆ! ಮನೆಯಲ್ಲಿ ಆದ ಮಾತುಕತೆ ಕೊನೆಯ ಸೊಸೆ ಭಾಗೀರಥಿಯ ಕಿವಿಗೆ ಬೀಳದಿರುತ್ತದೆಯೆ? ಅವಳ ಸಂಗಡ ಹಿರಿಯರು ನೇರವಾಗಿ ಪ್ರಸ್ತಾವಿಸಿರಲಾರರು; ಇವಳೂ ಎದುರಿಗೆ ನಿಂತು ಪ್ರಶ್ನಿಸಿರಲಾರಳು. ಹಾಗೆ ಮಾಡುವುದು ಹಿರಿಯ ಸಂಪ್ರದಾಯಕ್ಕೆ ವಿರೋಧ. ಆದರೆ ತಾನು ಜೀವ ಒಪ್ಪಿಸಿಕೊಳ್ಳಬೇಕಾದ ಸಂದರ್ಭ ಬಂದಾಗ ಈ ಎಳೆಯಳ ಮನಸ್ಸಿನಲ್ಲಿ ಕಳವಳ ಹುಟ್ಟಿ, ತವರುಮನೆಗೆ ಒಮ್ಮೆ ಹೋಗಿರಬೇಕೆಂಬ ಆಸೆ ಚಿಮ್ಮುವುದು ಅತಿಸಹಜವಲ್ಲವೆ! ಅತ್ತೆಮಾವಂದಿರು ಕೆಟ್ಟವರೇನಲ್ಲ. ಅವಳ ಹೃದಯದ ವೇದನೆಯನ್ನು ಅರಿಯಬಲ್ಲರು. ಆದರೆ ಅವರು ತಾನೆ ಏನು ಮಾಡಿಯಾರು? "ತ್ಯಜೇತ್ ಕುಲಾರ್ಥೇ ಪುರುಷಂ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್!" ಅವರ ಕೈ ಕಟ್ಟಿಹೋಗಿದೆ. ಸೊಸೆ ತವರೂರಿಗೆ ಹೋಗಿಬರಲು ಒಪ್ಪಿಗೆ ಕೊಟ್ಟು, ಸರ್ರನೆ ಹೋಗಿ ಭರ್ರನೆ ಬಾರವ್ವಾ ಎಂದು ಹೇಳಿ ಕಳಿಸಿದರು.

ಸಣ್ಣಸೊಸೆ ಭಾಗೀರತಿ ತವರುಮನೆಗೆ ಹೋದಾಳು
ಮನೆ ಮುಂದೆ ಹೋಗುದಕ ಅವರಪ್ಪ ಬಂದಾನು
'ಎಂದಿಲ್ಲದೆ ಭಾಗೀರತಿ ಇಂದ್ಯಾಕ ಬಂದವ್ವ
ಬಾಡಿದ ಮಾರ್‍ಯಾಕ ಕಣ್ಣಾಗ ನೀರ್‍ಯಾಕ?'

ಭಾಗೀರಥಿಗೆ ವಿಷಯವನ್ನು ನೇರವಾಗಿ ಬಿಡಿಸಿ ಹೇಳಲು ಬಾಯಿ ಬರಲಿಲ್ಲ; ಪ್ರಕಾರಾಂತರವಾಗಿ, ನಮ್ಮ ಮಾವ ಅತ್ತೆ ನನ್ನನ್ನು ಬೇರೆ ಇಡುತಾರಂತೆ ಎಂದು

ಉತ್ತರಕೊಟ್ಟಳು. "ಇಟ್ಟರೆ ಇಡಲೇಳು ಹೊಲಮನಿ ಕೊಡತೇನು" ಎಂದು ತಂದೆ ದಿಟ್ಟತನದಿಂದ ಭರವಸೆಕೊಟ್ಟನು. ಮಗಳ ಸಂಕೋಚ ತುಂಬಿದ ಸುಕುಮಾರವಾದ ಹೃದಯ ಅವನಿಗೆ ಅರ್ಥವಾಗಲಿಲ್ಲ; ಅವನ ದರ್ಪದ ನಿಸೂರುಗಾರಿಕೆ ಇವಳಿಗೂ ಸರಿತೋರಲಿಲ್ಲ. ಅವಳು ತನ್ನ ಮನಸ್ಸನ್ನು ಬಿಚ್ಚಿಹೇಳದೆ "ಹೊಲಮನೆ ಒಯ್ದು ಹೊಳೆದಂಡ್ಯಾಗ್ಹಾಕಪ್ಪ" ಎಂಬ ನೋವಿನ ಬೇಸರದ ಉದ್ಗಾರವನ್ನು ಹೊರಗೆಡಹಿ ಮುಂದುವರಿದು ತಾಯನ್ನು ಸಂಧಿಸಿದಳು. ಅಲ್ಲೂ ಅದೇ ಬಗೆಯ ಪ್ರಶ್ನೆ; "ನಮ್ಮತ್ತೆ ನಮ್ಮಾವ ಬ್ಯಾರೆ ಇಡುತಾರಂತೆ" ಎಂಬ ಇವಳ ಅದೇ ಉತ್ತರ. ತಂದೆ ಹೊಲ ಮನೆ ಕೊಡುತ್ತೇನೆ ಎಂದನು; ತಾಯಿ ಓಲೆಯ ಜೋಡನ್ನು ಕೊಡುತ್ತೇನೆ ಎಂದು ಸಮಾಧಾನ ಹೇಳಿದಳು. ಭಾಗೀರಥಿಗೆ ನೆಮ್ಮದಿ ದೊರೆಯಲಿಲ್ಲ. "ವಾಲೀಯ ಜೋಡೊಯ್ದು ಒಲಿಯಾಗ ಹಾಕವ್ವ" ಎಂದು ಮಾತನ್ನು ಮುಗಿಸಿದಳು. ಬಳಿಕ ಅಕ್ಕನ ಸಂಗಡವೂ ಇದೇ ಮಾತಾಗಿ, ನಿನ್ನ ರಕ್ಷಣೆಗೆ ನನ್ನ ಮಕ್ಕಳನ್ನು ಕಳಿಸುತ್ತೇನೆ ಎಂದು ಆಶ್ವಾಸನ ಪಡೆದಳು. ಹೊಲ ಮನೆ ಬೆಳ್ಳಿಬಂಗಾರ ಇದನ್ನೆಲ್ಲಾ ಅಕ್ಕ ಹೇಗೆ ಕೊಟ್ಟಾಳು! ಆದಕಾರಣ, ಮಕ್ಕಳನ್ನು ಜೊತೆಗೆ ಕಳಿಸುತ್ತೇನೆ ಎಂದು ತನ್ನ ಕೈಯಲ್ಲಾಗುವುದನ್ನು ಹೇಳಿದಳು. (ಪಾಪ, ಚಿಕ್ಕ ಪ್ರಾಯದ ಭಾಗೀರಥಿಗೆ ಇನ್ನೂ ಒಂದು ಮಗು ಕೂಡ ಆಗಿರಲಿಲ್ಲವೆಂದು ತೋರುತ್ತದೆ.) ಜೊತೆಗೆ ಮಕ್ಕಳಿದ್ದ ಮಾತ್ರಕ್ಕೆ ದುಃಖ ಕಳೆದೀತೆ?

ಭಾಗೀರಥಿಯ ತಂದೆ ತಾಯಿ ಅಕ್ಕ ಎಲ್ಲರೂ ಪ್ರೀತಿವಂತರೇ. ಆದರೆ ಈ ನವಿರುಮನಸ್ಸಿನ ತುಸುಮಾತಿನ ತರಳೆಯ ಒಳಹೃದಯವನ್ನು ಹೊಕ್ಕು ಅದರ ತಳಮಳವನ್ನು ಅರಿಯಲು ಅವರಿಗೆ ಸಾಧ್ಯವಾಗಲಿಲ್ಲ. ಅಂತೂ ತವರುಮನೆಯಲ್ಲಿ ಭಾಗೀರಥಿಗೆ ಸಮಾಧಾನ ದೊರೆಯಲಿಲ್ಲ, ಅವಳ ಸಮಸ್ಯೆ ಹರಿಯಲಿಲ್ಲ.

ಸಣ್ಣ ಸೊಸೆ ಭಾಗೀರತಿ ತವರಮನಿಯ ಬಿಟ್ಟು
ತವರಮನಿಯ ಬಿಟ್ಟು ಗೆಣತಿ ಮನೆಗೆ ನಡೆದಳು
ತಲಬಾಗಿಲದಾಗ ಗೆಳತಿನ್ನ ಕಂಡಳು.

"ಎಂದಿಲ್ಲದೆ ಭಾಗೀರತಿ ಇಂದ್ಯಾಕ ಈ ಅಳುವು" ಎಂದು ಗೆಳತಿ ಕೇಳುತ್ತಾಳೆ. ಅದಕ್ಕೆ ಭಾಗೀರಥಿ ಅಂಜುತ್ತಾ ಅಳುಕುತ್ತಾ "ಹೇಳಲೆ ಗೆಳತಿ, ಹೇಳಲೆ ಗೆಳತಿ" ಎನ್ನುತ್ತಾಳೆ. "ಅಂಜಬೇಡ ಗೆಳತಿ, ಅಳುಕಬೇಡ ಗೆಳತಿ!" ಎಂಬುದು ಗೆಳತಿಯ ಧೈರ್ಯದ ಆಶ್ವಾಸನ. ಅಕ್ಕನ ಮಾತು ಹಾಗಿರಲಿ, ತಾಯಿ ತಂದೆಗಳಲ್ಲಿ ಕೂಡ ಕಾಣದಿದ್ದ ಆತ್ಮೀಯತೆಯನ್ನೂ ನಿರಾವರಣ ಭಾವವನ್ನೂ ಭಾಗೀರಥಿ ಗೆಳತಿಯಲ್ಲಿ ಕಂಡಳು. ತನ್ನ ಹೃದಯವನ್ನು ಮೊದಲು ಬಾರಿ ಇವಳೆದುರಿಗೆ ತೆರೆದು, ನೇರವಾದ ಮಾತಿನಲ್ಲಿ "ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡತಾರಂತ!" ಎಂದು ಇದ್ದ ವಿಷಯವನ್ನು ಇದ್ದ ಹಾಗೆ ಹೊರಗೆಡಹುತ್ತಾಳೆ. ಇವಳ ಈ ನಂಬಿಕೆಗೆ ಶ್ರದ್ಧೆಗೆ ಆ ಗೆಳತಿ ಎಷ್ಟೊಂದು ಅರ್ಹಳು! "ಕೊಟ್ಟರೆ ಕೊಡಳೇಳು ಇಟ್ಹಾಂಗ ಇರಬೇಕ!" ಎಂಬುದೇ ಅವಳ ನಿರ್ಧರವಾದ ಬುದ್ಧಿವಾದ. ಇದು

ಕಷ್ಟವಚನವಾಗಿ ತೋರಬಹುದು. ಆದರೆ ಆಗಿನ ಸನ್ನಿವೇಶದಲ್ಲಿ ಅದೊಂದೇ ಭಾಗೀರಥಿಗೆ ಕರ್ತವ್ಯ. ಭಾಗೀರಥಿಯ ಮನಸ್ಸಿನ ಒಳತೋಟಿಯನ್ನು ಸರಿಯಾಗಿ ಅರ್ಥ ಮಾಡಿ ಕೊಂಡವಳು ಈ ಗೆಳತಿಯೊಬ್ಬಳೇ. ಈ ತರಳೆಯ ದುಗುಡವನ್ನು ಅಣಗಿಸಿ, ನಿಶ್ಚಯವನ್ನು ನೆಲೆಗೊಳಿಸಿ ಮುಂದಿನ ದಾರಿಯನ್ನು ಸ್ಪಷ್ಟೋಕ್ತಿಯಲ್ಲಿ ಆಕೆ ತೋರಿಸಿಕೊಟ್ಟಳು. ಗೆಳತಿಗೆ ಭಾಗೀರಥಿಯಲ್ಲಿ ಅವ್ಯಾಜವಾದ ಪ್ರೇಮವೂ ಅವಳ ಶ್ರೇಯಸ್ಸಿನಲ್ಲಿ ಅಪರಿಮಿತವಾದ ಆಕಾಂಕ್ಷೆಯೂ ಇದ್ದ ಕಾರಣದಿಂದಲೇ ಅವಳು ಹೀಗೆ ಖಂಡಿತವಾಗಿ ಹೇಳಲು ಸಾಧ್ಯವಾಯಿತು. ಅಂತೂ ಭಾಗೀರಥಿಯ ಮನಸ್ಸಿನ ಹೊಯ್ದಾಟ ನಿಂತಿತು. ಬಲಿದಾನಕ್ಕಾಗಿ ಎದೆಯನ್ನು ಗಟ್ಟಿಮಾಡಿಕೊಂಡು ಈ ಸಣ್ಣಸೊಸೆ ಅತ್ತೆಯ ಮನೆಗೆ ಹಿಂದಿರುಗಿದಳು. "ಸರ್ರನೆ ಹೋದಳು ಭರ್ರನೆ ಬಂದಳು!"

ನಡುವಣ ಸಂಗತಿಗಳನ್ನು ಎಂದಿನಂತೆ ನಮ್ಮ ಊಹೆಗೇ ಕವಿ ಬಿಡುತ್ತಾನೆ. ಮುಂದಿನ ದೃಶ್ಯ ಆ ಮಹಾತ್ಯಾಗದ ದಿನದ್ದು. ಗಂಗವ್ವನ ಪೂಜೆಗಾಗಿ ಏರ್ಪಾಡು ನಡೆಯುತ್ತಿದೆ :

ಬ್ಯಾಳಿಯ ಹಸಮಾಡ್ತ ಬಿಟ್ಟಾಳು ಕಣ್ಣೀರ
'ಎಂದಿಲ್ಲದ ಭಾಗೀರತಿ ಇಂದ್ಯಾಕ ಕಣ್ಣೀರು'
'ಬ್ಯಾಳ್ಯಾಗಿನ ಹಳ್ಳು ಬಂದು ಕಣ್ಣಾಗೆರಚಿದವು ಮಾವಾ.'

ಕವಿ ಎಷ್ಟೊಂದು ಸಂಗ್ರಹವಾಗಿ, ಆದರೆ ಸಮಗ್ರವಾಗಿ, ವಿಷಯವನ್ನು ತಿಳಿಸಬಲ್ಲ! ಸಂಭಾಷಣೆ ಮಾವನಿಗೂ ಸೊಸೆಗೂ ನಡೆದಿದೆಯೆಂದೂ, ಭಾಗೀರಥಿಯ ಮನಸ್ಸು ಗಟ್ಟಿಯಾದರೂ ಮುಂದೆ ಕಾದಿರುವ ಸಾವನ್ನು ನೆನೆದು ಕಣ್ಣೀರು ಸಹಜವಾಗಿ ಉಕ್ಕುತ್ತಿದೆಯೆಂದೂ, ಆಕೆಯಲ್ಲಿ ಕನಿಕರಗೊಂಡು, ನೇರವಾಗಿ ಸಮಾಧಾನವೇನನ್ನೂ ಹೇಳಲರಿಯದೆ ಮಾವನು ಹೀಗೆ ಅಶರಣನಾಗಿ ಮಾತಾಡುತ್ತಿದ್ದಾನೆಂದೂ, ಧೀರೆ ಭಾಗೀರಥಿ ಏನೋ ನೆವ ಹೇಳಿ ತನ್ನ ಮನೋದಾರ್ಢ್ಯವನ್ನು ಸ್ಥಿರಪಡಿಸಿ ಕೊಳ್ಳುತ್ತಿದ್ದಾಳೆಂದೂ ಮೂರೇ ಸಾಲಿನಲ್ಲಿ ಎಷ್ಟು ಚೆನ್ನಾಗಿ ಕವಿ ಸೂಚಿಸಿದ್ದಾನೆ!—ಅತ್ತೆಯೂ ಹೀಗೆಯೇ ಪ್ರಶ್ನೆ ಕೇಳುತ್ತಾಳೆ. ಅಕ್ಕಿಯೊಳಗಿನ ಹರಳು ಬಂದು ಕಣ್ಣಿಗೆ ಬಿತ್ತೆಂದು ಸೊಸೆ ಮಾತನ್ನು ತೇಲಿಸುತ್ತಾಳೆ. ಆ ದಿನ ದೊಡ್ಡ ಹಬ್ಬದ ಅಡಿಗೆ. ಜಳಕಕ್ಕಾಗಿ ಹತ್ತು ಕೊಪ್ಪರಿಗೆ ನೀರು ಉಕ್ಕಿ ಮರಳುತ್ತಿದೆ. ನಿಂಗವ್ವ ನೀಲವ್ವ ಮೊದಲಾದ ದೊಡ್ಡ ಸೊಸೆಯರನ್ನೆಲ್ಲಾ ಕ್ರಮವಾಗಿ ಕರೆದು, ನೀನು ಜಳಕಮಾಡು, ನೀನು ಜಳಕಮಾಡು ಎಂದು ಹಿರಿಯರು ಹೇಳುತ್ತಿದ್ದಾರೆ. ಆದರೆ ಆ ದಿನ ನೀರೆರೆದುಕೊಂಡು ಸಿಂಗರಿಸಿಕೊಂಡು ತನ್ನಲ್ಲಿಗೆ ಬಂದವರನ್ನೇ ಗಂಗಾದೇವಿ ಆರಿಸಿಕೊಳ್ಳುವಳೆಂದು ಎಲ್ಲರೂ ಬಲ್ಲರು. ಆದ ಕಾರಣ ಹಿರಿಯ ಸೊಸೆಯರೆಲ್ಲ ಹಿಂಜರಿದರು: "ನಿಂಗವ್ವ—ನಾವೊಲ್ಲೆ; ನೀಲವ್ವ—ನಾವೊಲ್ಲೆ; ಗಂಗವ್ವ—ನಾವೊಲ್ಲೆ; ಗವರವ್ವ—ನಾವೊಲ್ಲೆ."

'ಸಣ್ಣ ಸೊಸಿ ಬಾಗವ್ವ ನೀನರೆ ಜಳಕಮಾಡು'
ಸಣ್ಣ ಸೊಸಿ ಭಾಗೀರತಿ ಜಳಕನ ಮಾಡ್ಯಾಳು

ಜಳಕನ ಮಾಡ್ಯಾಳು ಬಂಗಾರಬುಟ್ಟಿ ತುಂಬ್ಯಾಳು
ಬಂಗಾರಬುಟ್ಟಿ ತುಂಬ್ಯಾಳು ಸಿಂಗಾರಸಿಂಬಿ ಮಾಡ್ಯಾಳು
ಸಿಂಗಾರಸಿಂಬಿ ಮಾಡ್ಯಾಳು ಮುಂದ ಮುಂದ ಹೊಂಟಾಳು
ಮುಂದ ಮುಂದ ಭಾಗೀರತಿ ಹಿಂದ್ಹಿಂದ ಎಲ್ಲರೂ!

ಸರಿ. ಇನ್ನೂ ಬಯಲಾಗಿಯೇ ಒಣಗಿದ್ದ ಕೆರೆಯ ಅಂಗಳದಲ್ಲಿ ಪೂಜೆಯಾಯಿತು; ನೈವೇದ್ಯವಾಯಿತು; ಊಟವಾಯಿತು. ಪಾತ್ರೆ ಪದಾರ್ಥಗಳನ್ನು ಕಟ್ಟಿಕೊಂಡರು; ಹಿಂದಕ್ಕೆ ಹೊರಟರು. ಹೊರಟು ಬರುವಾಗ, ಉದ್ದೇಶಪೂರ್ವಕವಾಗಿಯೇ ಇರಬೇಕು, ಬಂಗಾರದ ಬಟ್ಟಲನ್ನು ಕೆರೆಯಲ್ಲೇ ಮರೆತುಬಿಟ್ಟರು. ಸ್ವಲ್ಪದೂರ ಎಲ್ಲರೂ ನಡೆದಮೇಲೆ ಜ್ಞಾಪಿಸಿಕೊಂಡು, "ಗಂಗವ್ವ ನೀ ಹೋಗ, ಗೌರವ್ವ ನೀ ಹೋಗ" ಎಂದು ಮುಂತಾಗಿ ಒಬ್ಬೊಬ್ಬ ಸೊಸೆಗೂ ಬಟ್ಟಲನ್ನೂ ತರಲು ಹೇಳಿದರು. ಆದರೆ ಈ ದಿನ ಸೊಸೆಯರೆಲ್ಲ ಜಳಕವನ್ನು ಒಲ್ಲೆ ಎಂದಂತೆಯೇ ಈ ಕೆಲಸವನ್ನೂ ಒಲ್ಲದೆ ಹೋದರು.

'ಸಣ್ಣಸೊಸಿ ಭಾಗೀರತಿ ನೀ ತರಹೋಗವ್ವ'
ಸಣ್ಣ ಸೊಸಿ ಭಾಗೀರತಿ ಬಿರಿ ಬಿರಿ ನಡೆದಾಳು
ಬಿರಿ ಬಿರಿ ಹೋದಾಳು ಬಂಗಾರ ಬಟ್ಲ ತಗೊಂಡಳು
ಒಂದು ಮೆಟ್ಲೇರುದಕ ಪಾದಕ ಬಂದಾಳು ಗಂಗಿ
ಎರಡು ಮೆಟ್ಲೇರುದಕ ಪಾದ ಮುಣಿಗಿಸ್ಯಾಳು ಗಂಗಿ
ಮೂರು ಮೆಟ್ಲೇರುದಕ ಮೊಣಕಾಲಿಗೆ ಬಂದಾಳು ಗಂಗಿ
ನಾಕು ಮೆಟ್ಲೇರುದಕ ನಡುಮಟ ಬಂದಳು ಗಂಗಿ
ಐದು ಮೆಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣಸೊಸಿ ಭಾಗೀರತಿ ಕೆರಿಗ್ಹಾರವಾದಳು.

ಆಯಿತು. ಈ ಧೀರೆಯಾದ ಕುಲಪಾಲಿಕೆಯನ್ನು ಗಂಗವ್ವ ಮೃದುವಾಗಿ ತನ್ನ ಮಡಿಲಿನಲ್ಲಿ ಸೇರಿಸಿಕೊಂಡಳು! ಬಲಿಸಮರ್ಪಣೆ ಎಷ್ಟು ನಯವಾಗಿ ನಡೆಯಿತೋ ಬಲಿಸ್ವೀಕಾರವೂ ಅಷ್ಟೇ ನಯವಾಗಿ ನೆರವೇರಿತು.

ಇಷ್ಟೆಲ್ಲಾ ಆಗುವಾಗ ಭಾಗೀರಥಿಯ ಗಂಡ ಏನು ಮಾಡುತ್ತಿದ್ದ? ಅವನು "ಬೇಕು ಬೇಡ" ಎನ್ನಲೇ ಇಲ್ಲವೇ? ಹೆಂಡತಿಯೊಡನೆ ಒಂದು ಸಮಾಧಾನದ ಮಾತನ್ನಾದರೂ ಆಡಲೇ ಇಲ್ಲವೇ? ನಮ್ಮ ನೊಂದ ಕರುಳಿನ ಪ್ರಶ್ನೆಯನ್ನು ಕವಿ ಬಲ್ಲ; ಮುಂದಿನ ಸಂಗತಿಯನ್ನು ಈಗ ಎತ್ತಿಕೊಳ್ಳುತ್ತಾನೆ. ಭಾಗೀರಥಿಯ ಗಂಡ ಊರಿನಲ್ಲಿರಲಿಲ್ಲ. "ಗಂಡ ಮಾದೇವರಾಯ ದಂಡಿನಾಗ್ಯೆದಾನು." ಎಷ್ಟು ದೂರ ದಲ್ಲಿದ್ದನೋ, ಊರುಬಿಟ್ಟು ಎಷ್ಟು ದಿನವಾಗಿತ್ತೋ! ದಂಡಿನಲ್ಲಿದ್ದವನಿಗೆ ತನ್ನ ಮಡದಿಯ ಜಲಸಮಾಧಿಯ ವೃತ್ತಾಂತ ಕನಸಿನ ರೂಪದಲ್ಲಿ ಅರಿವಾಯಿತು—"ಕಂಡನು ಕೆಟ್ಟ ಕನಸ" :

ಸೆಲ್ಯ ಸುಟ್ಟಾಂಗಾತು ಕೋಲು ಮುರಿದ್ಹಾಂಗಾತು
ಕಟ್ಟಿಸಿದ ಮಾಲೆಲ್ಲಾ ತಟ್ಟನೆ ಬಿದ್ಹಾಂಗಾತು.

ಆಹ, ಮಡದಿ ಮಡಿದಮೇಲೆ, ಕಟ್ಟಿಸಿದ ಮಹಲು ಕುಸಿದು ಬಿದ್ದಹಾಗೆಯೇ ತಾನೇ!

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಒತ್ತರಬಂದಾನ ಮನಿಗೆ

ಮಾದೇವರಾಯನ ಆತಂಕವನ್ನೂ ತವಕವನ್ನೂ ಅವನು ಬತ್ತಲೆಕುದುರೆ ಹತ್ತಿದ್ದು ಎಷ್ಟು ಗಾಢವಾಗಿ ವ್ಯಕ್ತಪಡಿಸುತ್ತದೆ! ಕುದುರೆಗೆ ಜೀನು ಹಾಕುವಷ್ಟು ಕಾಲವಿಳಂಬ ಮಾಡಲೂ ಅವನ ಹೃದಯ ಒಪ್ಪಲಿಲ್ಲ. ಕನಸು ಕಂಡವನೇ ದಿಗಿಲುಗೊಂಡು ಕುದುರೆಯ ಬರಿ ಬೆನ್ನಿಗೆ ಹಾರಿ ಒಂದೇ ಸಮನೆ ನಾಗಾಲೋಟದಲ್ಲಿ ತನ್ನ ಊರಿಗೆ ಬಂದಿದ್ದಾನೆ.

ಬಂದ ಮಾದೇವನ ತಂದೆತಾಯಿ ನೋಡಿದರು
"ಗಂಗವ್ವ ನೀರ ಕೊಡ ಗವರವ್ವ ನೀರ ಕೊಡ"
"ಗಂಗವ್ವ ನೀರ ಕೊಡುದ್ಯಾಕ ಗವರವ್ವ ನೀರ ಕೊಡುದ್ಯಾಕ
ನನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳವ್ವ"
"ನಿನ ಮಡದಿ ಭಾಗೀರತಿ ತವರಿಗೆ ಹೋಗ್ಯಾಳಪ್ಪ."

ಹೊರಗಿನಿಂದ ಮನೆಗೆ ಬಂದ ಗಂಡನಿಗೆ ಕೈಕಾಲು ತೊಳೆದುಕೊಳ್ಳಲು ನೀರನ್ನು ಅವನ ಹೆಂಡತಿ ಕೊಡತಕ್ಕದ್ದು ಸಂಪ್ರದಾಯ. ನೀರುಕೊಡುವಂತೆ ತನ್ನ ಅತ್ತಿಗೆಯರಿಗೆ ತಾಯಿ ಹೇಳುತ್ತಲೂ ಮಾದೇವರಾಯನ ಆತಂಕ ಇಮ್ಮಡಿಸಿತು. ತನ್ನ ಹೆಂಡತಿ ಕೊಡದಿರುವಂತೆ ಎಲ್ಲಿಗೆ ಹೋಗಿದ್ದಾಳೆ ಎಂದು ಧೈರ್ಯಮಾಡಿ ಕೇಳಿದನು. ಉತ್ತರ ಕೊಡಲು ತಾಯಿಗೆ ಬಾಯಿಲ್ಲ. ತವರಿಗೆ ಹೋಗಿದ್ದಾಳೆ ಎಂದು ಪ್ರಕಾರಾಂತರವಾಗಿ ಹೇಳಿದಳು. ದಿಟ. ಭಾಗೀರಥಿಯನ್ನು ಹಿರಿಯ ತವರಿಗೇ ಕಳಿಸಿಬಿಟ್ಟಿದ್ದಾರೆ!

ಮಾದೇವರಾಯ ಹಾಗಿಂದ ಹಾಗೆಯೇ ಬತ್ತಲೆಕುದುರೆ ಮೇಲೆ ಅತ್ತೆಯ ಮನೆಗೆ ಹೋದನು. ಅಲ್ಲಿ ನೀರುಕೊಡಲು ನಿಂಬೆವ್ವ ನೀಲವ್ವರಿಗೆ ಅತ್ತೆ ಹೇಳಿದಳು. (ಈ ವೇಳೆಗೆ ತವರುಮನೆಗೂ ಭಾಗೀರಥಿಯ ಕೊನೆಯ ವರ್ತಮಾನ ಮುಟ್ಟಿ ಗತ್ಯಂತರವಿಲ್ಲದೆ ಇವರೂ ಸಮಾಧಾನಗೊಂಡಿದ್ದಂತೆ ತೋರುತ್ತದೆ.) ನನ್ನ ಮಡದಿ ಎಲ್ಲಿ ಎಂದು ಹಿಂದಿನಂತೆ ಇಲ್ಲೂ ಅಳಿಯ ಕೇಳಿದ್ದಕ್ಕೆ, "ನಿನ್ನ ಮಡದಿ ಭಾಗೀರಥಿ ಗೆಳತಿ ಮನೆಗೆ ಹೋಗ್ಯಾಳಪ್ಪ" ಎಂದು ಅತ್ತೆಯಿಂದ ಉತ್ತರ ಬಂದಿತು. ಸರಿ; ಗೆಳತಿಯ ಮನೆಯಲ್ಲಿ "ಬಾಳವ್ವ ನೀರ ಕೊಡ ಬಸವ್ವ ನೀರ ಕೊಡ" ಎಂಬ ಮಾತು ಕೇಳಿ ಮತ್ತೆ ಅದೇ ಪ್ರಶ್ನೆ ಹಾಕುತ್ತಾನೆ. ಆಗ, ಭಾಗೀರಥಿಯ ಅತ್ತೆಗಾಗಲಿ ತಾಯಿಗಾಗಲಿ ಇಲ್ಲದ ಧೈರ್ಯದಿಂದ, ಸರಳತೆಯಿಂದ ಗೆಳತಿ ಉತ್ತರ ಕೊಡುತ್ತಾಳೆ :

'ನಿನ್ನ ಮಡದಿ ಭಾಗೀರತಿದು ಏನು ಹೇಳಲಿ ಸೂರಿ
ನಿಮ್ಮಪ್ಪ ನಿಮ್ಮವ್ವ ಕೆರಿಗ್ಹಾರ ಕೊಟ್ಟರಂತ.'

ಸಂದೇಹ ದೃಢವಾಯಿತು; ಹೃದಯ ಬರಿದಾಯಿತು.

ಈಗ ಮಾದೇವರಾಯ ಏನು ಮಾಡಬೇಕು? ತಂದೆತಾಯಿಗಳನ್ನು ನಿಷ್ಠುರಪಡಿಸ ಲಾದೀತೆ? ಕಾಂತೆಯ ಅಗಲಿಕೆಯನ್ನು ಸಹಿಸಿಕೊಳ್ಳಲಾದೀತೇ? ತನ್ನ ಎದೆಯಲ್ಲಿ ಧಗಧಗಿಸುತ್ತಿದ್ದ ಬೆಂಕಿಯನ್ನು ನಂದಿಸಲು ಅವನಿಗೆ ಈಗ ಒಂದೇ ದಾರಿ ತೋರಿತು.

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಹೊಂಟಾನು ಹೌಹಾರಿ
ಕೆರೆಯ ದಂಡೆಗೆ ಬಂದು ಕಣ್ಣೀರು ಇಟ್ಟಾನು
ಕಣ್ಣೀರು ಇಟ್ಟಾನು ನಿಟ್ಟುಸುರು ಬಿಟ್ಟಾನು
'ಸಾವಿರ ವರಹ ಕೊಟ್ಟರು ಸಿಗಲಾರದ ಸತಿ ನೀನು
ಸಿಗಲಾರದ ಸತಿ ನೀನು ನನ್ನ ಬಿಟ್ಟು ಎಲ್ಲಿ ಹೋದೆ
ಮುನ್ನೂರು ವರಹಾ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ
ಮುತ್ತಿನೋಲೆ ಇಟಗೊಳ್ಳೊ ಮುತ್ತೈದೆ ಎಲ್ಲಿಗ್ಹೋದೆ'
ಇಷ್ಟು ಮಾತಾಡಿ ಮಾದೇವ ಬಿಟ್ಟಾನು ಕಣ್ಣೀರು
ಬಿಟ್ಟಾನು ಕಣ್ಣೀರ ಹಾರಿದ ಕೆರೆ ನೀರಾಗ!

ಅಲ್ಲಿಗೆ ಕಥೆ ಮುಗಿಯಿತು! . . .

ಮಾದೇವರಾಯ ಇನ್ನೇನು ಮಾಡಬಹುದಾಗಿತ್ತು? ಅವನ ಪ್ರೇಮ ಬೇರೆ ಯಾವ ದಾರಿಯನ್ನು ಹಿಡಿಯಬಹುದಾಗಿತ್ತು! ಮಡದಿಯ ಬಲಿದಾನದಿಂದ ನೀರು ತುಂಬಿ ತುಳುಕುತ್ತಿದ್ದ ಕೆರೆಯೊಳಕ್ಕೆ ಹಾರಿ ಅವಳನ್ನು ಮತ್ತೆ ಕೂಡಿದನು; ಹೃದಯದ ಬೇಗೆಯನ್ನು ತಂಪಿಸಿಕೊಂಡನು. ಅವನ ಈ ಕೊನೆ ಎಷ್ಟು ಅನಿರೀಕ್ಷಿತವೋ ಅಷ್ಟೇ ಅನಿವಾರ್ಯ.

'ಕೆರೆಗೆ ಹಾರದ' ಉದ್ದಕ್ಕೂ ಅಷ್ಟೆ. ಪದ್ಯದ ಒಂದೊಂದು ಸಾಲಿನಲ್ಲೂ ಕ್ರಿಯೆಯ ಒಂದೊಂದು ಹೆಜ್ಜೆಯಲ್ಲೂ ಮಹಾಕೃತಿಯಲ್ಲಿ ಮಾತ್ರ ಕಾಣಬರುವ ಅನಿವಾರ್ಯತೆ ಇದೆ. ಆಗಿನ ಸಾಮಾಜಿಕ ಸಂಪ್ರದಾಯದಲ್ಲಿ, ಆ ಸಂಸ್ಕಾರವಂತರ ಬಾಳಿನಲ್ಲಿ ಕಥೆ ಹೀಗೆಯೆ ಸಾಗಿರಬೇಕಲ್ಲವೆ. ಇವರೆಲ್ಲರ ನುಡಿ ಎಷ್ಟು ಮಿತ, ನಡೆ ಎಷ್ಟು ನಯ! ಭಾಗೀರಥಿಯ ಮನೋದಾರ್ಢ್ಯ ಎಷ್ಟು ಉದಾತ್ತ, ಮಾದೇವರಾಯದ ಪ್ರೇಮ ಎಷ್ಟು ಅಪರಿಮಿತ! ಇನ್ನೊಂದು ವಿಷಯ. ಇಲ್ಲಿಯ ಬಾಳಿನಲ್ಲಿ ಗೆಳತಿಗೆ ದೊರೆತಿರುವ ಅಪೂರ್ವ ಸ್ಥಾನವನ್ನು ನೋಡಿ : ಕರುಳಿನ ಬಾಂಧವ್ಯಕ್ಕಿಂತಲೂ ಈಕೆಯ ಸ್ನೇಹ ಭಾಗೀರಥಿಯ ಹೃದಯಕ್ಕೆ ಹೆಚ್ಚು ಹತ್ತಿರವಾಗಿದೆ. ಬಂಧುಗಳು ಬಾಯಿ ಬಿಟ್ಟು

ಹೇಳಲಾರದ್ದನ್ನು ಈ ಗೆಳತಿ ಹೇಳಬಲ್ಲಳು; ಅವರಿಂದ ದೊರೆಯದ ಸಮಾಧಾನವನ್ನು ಈಕೆ ಕೊಡಬಲ್ಲಳು.

ಈ ಕೃತಿಯ ಸೊಗಸುಗಳಲ್ಲಿ ಯಾವುದನ್ನು ವರ್ಣಿಸುವುದು, ಯಾವುದನ್ನು ಬಿಡುವುದು! ಜೀವರತ್ನಕ್ಕೆ ಇಷ್ಟೆಲ್ಲ ಪ್ರಶಂಸೆಯ ಹಂಗು ತಾನೆ ಏಕೆ? ಅದು ಸ್ವಯಂ ಪ್ರಕಾಶದಿಂದ ಬೆಳಗಬಲ್ಲದು. ಈ ಕೃತಿಯನ್ನು ಕಟ್ಟಿದ ಹಳ್ಳಿಯ ಅಜ್ಞಾತ ವ್ಯಕ್ತಿ ಒಬ್ಬ ಶ್ರೇಷ್ಠಕವಿ. 'ಕೆರೆಗೆ ಹಾರ' ಕನ್ನಡ ಕಾವ್ಯಶ್ರೀಯ ಕಂಠದ ಹಾರ!

೧೯೪೮]

ಸಮಾಲೋಕನ : ೧೯೫೮

ಮಕ್ಕಳಿಗೆ ಹೇಳುವ ಕಥೆಗಳು*

"ಅಜ್ಜಿ, ನನಗೊಂದು ಕಥೆ ಹೇಳು" ಎಂದು ಒಂದಲ್ಲ ಒಂದು ಸಲವಾದರೂ ಕಥೆ ಕೇಳಲು ತುಡಿಯದಿದ್ದ ಮಗುವೇ ಇದ್ದಿರಲಾರದು. ಮಕ್ಕಳಿಗೆ ಕಥೆಯೆಂದರೆ ಪ್ರಾಣ. ಅದನ್ನು ಕೇಳುವುದಕ್ಕಾಗಿ ಊಟ ನಿದ್ದೆಗಳನ್ನಾದರೂ ಅವರು ನಿರಾತಂಕವಾಗಿ ತೊರೆದು ಬಿಡುತ್ತಾರೆ. ಅವುಗಳಷ್ಟೇ ಅನಿವಾರ್ಯವೂ ಅವುಗಳಿಗಿಂತಲೂ ಪ್ರಿಯವೂ ಆದ ಚೇಷ್ಟೆಯನ್ನು ಕೂಡ ಹೇಗೋ ಮರೆತು, ಕೈಕಟ್ಟಿಕೊಂಡು ಕಣ್ಣರಳಿಸಿಕೊಂಡು ಗಂಭೀರವಾಗಿ ಕುಳಿತು, ಅಜ್ಜಿ ಹೇಳುವ ಕಥೆಯನ್ನು ಆಲಿಸುತ್ತಾರೆ. ಕಥೆಯ ಆಸೆಯನ್ನು ತೋರಿಸಿದರೆ ಮಾತುಕೇಳದಿರುವ ಮಕ್ಕಳೇ ಇಲ್ಲ. ಕಥೆಯೇ ಶಿಶುವಶೀಕರಣ ಮಂತ್ರ.

ಮಕ್ಕಳಿಗೆ ಕಥೆ ಹೇಳಲು ಅಜ್ಜಿಯೇ ತಕ್ಕ ವ್ಯಕ್ತಿ. ಅಷ್ಟಲ್ಲದೆ, ಮನೆಯಲ್ಲಿ ಒಂದು ಮುದಿತಲೆಯಿರಬೇಕೆಂದು ಹೇಳುತ್ತಾರೆಯೆ! ಮಕ್ಕಳಿಗೆ ಸಲಿಗೆ ನಂಬಿಕೆಗಳು ಆಕೆಯಲ್ಲಿ ಹುಟ್ಟುವಂತೆ ಮತ್ತೊಬ್ಬರಲ್ಲಿ ಹುಟ್ಟುವುದಿಲ್ಲ. ಕಥೆ ಹೇಳುವುದಕ್ಕೆ ಅಜ್ಜಿ, ಪ್ರಶ್ನೆ ಕೇಳುವುದಕ್ಕೆ ಅಜ್ಜಿ, ತೊಡಕುಗಳೂ ಜಗಳಗಳೂ ಬಿದ್ದರೆ ಪರಿಹಾರಮಾಡುವುದಕ್ಕೆ ಅಜ್ಜಿ, ಹಿರಿಯರಾಗಲಿ ಹುಡುಗರಾಗಲಿ ಮಗುವಿನ ಚೇಷ್ಟೆಗೆ ಕೋಪಿಸಿ

* 'ವಿದ್ಯಾದಾಯಿನಿ', ಮೈಸೂರು, ಫೆಬ್ರುವರಿ ೧೯೩೧.

ಅಟ್ಟಿಸಿಕೊಂಡು ಬಂದರೆ ಮರೆಹಾಕಿಕೊಳ್ಳುವುದಕ್ಕೆ ಅಜ್ಜಿ! ಅಜ್ಜಿಯಿಲ್ಲದ ಮನೆ ಮಕ್ಕಳ ಪಾಲಿಗೆ ಮನೆಯೇ ಅಲ್ಲ. ತಾಯಿಗೆ ಮಗುವಿನ ಮೇಲೆ ಅಮಿತ ಪ್ರೀತಿಯಿರಬಹುದು. ಆದರೆ ಮಗುವಿನ ಕಾಡು ಹರಟೆಯನ್ನೆಲ್ಲಾ ಕೇಳುವುದಕ್ಕೂ ಅದರ ವಿಚಿತ್ರ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಡುವುದಕ್ಕೂ ಅವಳಿಗೆ ಅವಕಾಶ ಕಡಿಮೆ, ಸಹನೆಯೂ ಕಡಿಮೆ. ಆದ್ದರಿಂದ ಆ ಕೆಲಸ ಅಜ್ಜಿಯ ಪಾಲಿಗೆ ಬೀಳುತ್ತದೆ; ಅವಳೂ ಅದನ್ನು ಉತ್ಸಾಹದಿಂದ ಕೈಕೊಳ್ಳುತ್ತಾಳೆ. ಏಕೆಂದರೆ, ಅವಳೂ ಮಕ್ಕಳೂ ಹೊಂದಿಕೊಂಡು ಹೋಗುವ ಹಾಗೆ, ಒಬ್ಬರ ಹೃದಯವನ್ನು ಒಬ್ಬರು ಅರಿತುಕೊಳ್ಳುವ ಹಾಗೆ, ಮಿಕ್ಕವರಿಗೆ ಮಕ್ಕಳೊಂದಿಗಾಗಲಿ ಅಜ್ಜಿಯೊಂದಿಗಾಗಲಿ ಇರುವುದು ಸಾಧ್ಯವಲ್ಲ. ಜೊತೆಗೆ ಇನ್ನೊಂದು ಕಾರಣವುಂಟು. ವಯಸ್ಸು ಗತಿಸಿದಂತೆಲ್ಲ ಅಜ್ಜಿಗೆ ಮಾತಾಡುವ ಚಾಪಲ್ಯ ಹೆಚ್ಚುತ್ತದೆ. ಅವಳ ಮಾತನ್ನು ಸಾವಕಾಶವಾಗಿ ಇಚ್ಛೆಪಟ್ಟು ಕೇಳುವವರು ಮಕ್ಕಳಲ್ಲದೆ ಮತ್ತೆ ಯಾರು? ಮಕ್ಕಳು ಅಜ್ಜಿಯನ್ನು ಹುಡುಕಿಕೊಂಡು ಹೋಗುವಂತೆಯೇ ಅಜ್ಜಿಯೂ ಮಕ್ಕಳನ್ನು ಹುಡುಕಿಕೊಂಡು ಹೋಗುತ್ತಾಳೆ.

ರಾತ್ರಿಯ ಹೊತ್ತು ಮಕ್ಕಳನ್ನು ಸುತ್ತಲೂ ಕುಳ್ಳಿರಿಸಿಕೊಂಡಾಗಲಿ ಮಗ್ಗುಲಲ್ಲಿ ಮಲಗಿಸಿಕೊಂಡಾಗಲಿ ಅಜ್ಜಿಯರು ಕಥೆ ಹೇಳುವ ಈ ಅಭ್ಯಾಸ ನಮ್ಮ ಕಾಲಕ್ಕೆ ತಪ್ಪುತ್ತಾ ಬರುತ್ತಿದೆ : ಪಟ್ಟಣಗಳ ಗಲಿಬಿಲಿಯಲ್ಲಂತೂ ಅದು ಅಡಗಿಹೋದಂತೆಯೇ ತೋರುತ್ತದೆ. ಅಲ್ಲದೆ, ಮಕ್ಕಳ ದುರದೃಷ್ಟದಿಂದ ಅಜ್ಜಿಯಿಲ್ಲದ ಮನೆಗಳಲ್ಲಿ ಅವರೇನಾದರೂ ಆಸೆಯಿಂದ ದೊಡ್ಡವರ ಬಳಿಗೆ ಹೋಗಿ, ಒಂದು ಕಥೆ ಹೇಳೆಂದು ಕೇಳಿದರೆ ಅವರು ಗದರಿಸಿಬಿಡುವುದೇ ಹೆಚ್ಚು; ಇದೇನು ಪೀಡೆ ಎಂದು ಜುಗುಪ್ಸೆಯಿಂದ ಮಕ್ಕಳ ಉತ್ಸಾಹವನ್ನು ಬತ್ತಿಸಿಬಿಡುವುದೇ ಹೆಚ್ಚು. ಈ ದೊಡ್ಡವರು ತಮ್ಮ ಬಾಲ್ಯದಲ್ಲಿ ಕೇಳಿದ ಕಥೆಗಳನ್ನೂ ಅವುಗಳ ಆನಂದವನ್ನೂ ನಿಶ್ಶೇಷವಾಗಿ ಮರೆತಿರುತ್ತಾರೆ. ಮಕ್ಕಳ ಪ್ರಪಂಚದ ಸುಖಸಂತೋಷಗಳು ಅವರಿಗೆ ಅರ್ಥವಾಗುವ ಬಗೆ ಹೇಗೆ?—ಈ ರೀತಿಯಲ್ಲಿ ಮಕ್ಕಳ ಶಿಕ್ಷಣದ ಅಮೂಲ್ಯ ಸಾಧನವೊಂದು ತುಕ್ಕುಹಿಡಿದು ನಶಿಸಿ ಹೋಗುತ್ತಿರುವುದರಿಂದ ಅದರ ಉಪಯೋಗವನ್ನೂ ಸ್ವರೂಪವನ್ನೂ ನಾವು ಅರಿತು ಎಚ್ಚತ್ತುಕೊಳ್ಳುವುದು ಆವಶ್ಯಕ.

ಕಥೆಯ ಮೇಲಿನ ಪ್ರೀತಿ ಮಾನವಜಾತಿಯ ಹುಟ್ಟುಗುಣ. ಮನುಷ್ಯನಿಗೆ ಮಾತಾಡುವ ಶಕ್ತಿ ಬಂದಂದಿನಿಂದಲೂ ಕಥೆಗಳು ಹುಟ್ಟುತ್ತಲೇ ಇವೆ. ಅವುಗಳನ್ನು ಕೇಳುವವರು ದೊರೆಯುತ್ತಲೇ ಇದ್ದಾರೆ. ಈ ಹುಟ್ಟುಗುಣವನ್ನು ಚಾತುರ್ಯದಿಂದ ಉಪಯೋಗಿಸಿಕೊಂಡರೆ ಮಕ್ಕಳ ಶಿಕ್ಷಣವು ಎಷ್ಟೋ ಸುಲಭವಾಗುತ್ತದೆ. ಕಥೆ ಹೇಳುವುದು ಮಕ್ಕಳ ಚೇಷ್ಟೆಯನ್ನು ಕಡಿಮೆ ಮಾಡುವುದಕ್ಕೆ ಮಾತ್ರ ಸಾಧನವಲ್ಲ. ಕಥೆಗಳು ಮಕ್ಕಳಲ್ಲಿ ಕುತೂಹಲವನ್ನು ಎಬ್ಬಿಸುತ್ತವೆ. ಮುಂದೇನಾಯಿತು? ಮುಂದೇನಾಯಿತು? ಎಂದು ಕೇಳುವ ಈ ಕುತೂಹಲವೇ ಅವಧಾನದ ತವರುಮನೆ. ಈ ಕುತೂಹಲವು ಗಮನವನ್ನೆಲ್ಲಾ ಒಮ್ಮುಖವಾಗಿ ಸೆಳೆಯುತ್ತದೆ. ಕಥೆ ಕೇಳಿ ಕೇಳಿ ಮಕ್ಕಳಿಗೆ ಚಿತ್ತೈಕಾಗ್ರತೆ ಶ್ರಮವಿಲ್ಲದೆಯೆ ಅಭ್ಯಾಸವಾಗುತ್ತದೆ.

ಕಥೆ ಮಕ್ಕಳ ಜ್ಞಾಪಕಶಕ್ತಿಯನ್ನೂ ಚೆನ್ನಾಗಿ ವಿಕಾಸಗೊಳಿಸಬಲ್ಲುದು. ಹೇಳಬೇಕಾದ ರೀತಿಯಲ್ಲಿ ಅವರಿಗೆ ಕಥೆಯನ್ನು ಹೇಳಿನೋಡಿ. ಒಂದೆರಡು ಸಲ ಕೇಳುವುದರೊಳಗಾಗಿ ಅದನ್ನು ನಿಮಗೇ ಹಿಂದಿರುಗಿಸಿ ಹೇಳಿಬಿಡುತ್ತಾರೆ. ಕಥೆಯ ಮಾತುಗಳನ್ನೂ ಸಂದರ್ಭಗಳನ್ನೂ ಅವರು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಲ್ಲರು. ಕಥೆ ಸ್ವಾರಸ್ಯವಾಗಿದ್ದರಂತೂ ಜೊತೆಯವರಿಗೆ ಹೇಳಿ ಹೇಳಿ ಅದು ಅವರಿಗೆ ಕಂಠಪಾಠವಾಗಿಬಿಡುತ್ತದೆ. ತಾವು ಕೇಳಿದ ಕಥೆಗಳನ್ನು ನಾಲ್ಕು ವರ್ಷದ, ಐದು ವರ್ಷದ ಮಕ್ಕಳು ಮತ್ತೆ ನಿರೂಪಿಸುವ ಸರಣಿಯನ್ನು ನೋಡಿದರೆ ದೊಡ್ಡವರಿಗೇ ಎಷ್ಟೋ ಸಲ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಾಗುತ್ತದೆ.

ಹೀಗೆ ಕೇಳಿದ ಕಥೆಯನ್ನು ತಿರುಗಿಸಿ ಹೇಳುವಾಗ ಜ್ಞಾಪಕಶಕ್ತಿಯ ಜೊತೆಯಲ್ಲಿ ಕಲ್ಪನಾಶಕ್ತಿಯೂ ಕೊಂಚ ಕುದುರುತ್ತದೆ. ಸಂಭಾಷಣೆ, ನಡೆದ ಸಂಗತಿ ಮೊದಲಾದವುಗಳನ್ನು ಮನಸ್ಸಿನಲ್ಲಿ ಚೆನ್ನಾಗಿ ಚಿತ್ರಿಸಿಕೊಂಡ ಹೊರತು ಅವನ್ನು ಸಹಜವಾಗಿ ನಿರೂಪಿಸುವುದು ಸಾಧ್ಯವಲ್ಲ. ಎಷ್ಟೋ ಮಕ್ಕಳು ಕಥೆಯ ಸಂಗತಿಯನ್ನು ಕಣ್ಣಾರ ನೋಡಿದಂತೆ, ಅದರಲ್ಲಿ ತಾವೇ ಭಾಗಿಗಳಾದಂತೆ ಹೇಳುತ್ತಾರೆ. ಈ ಮಾತು ಕೆಲವರಿಗೆ ನಂಬಲಾರದಷ್ಟು ಸೋಜಿಗವಾಗಿ ಕಾಣಿಸಬಹುದು. ಮಕ್ಕಳಿಂದ ಕಥೆ ಹೇಳಿಸುವ ಚಾತುರ್ಯ ಅಂಥವರಿಗೆ ಇಲ್ಲವೆಂದು ಹೇಳಬೇಕಾಗುತ್ತದೆ. ಮಕ್ಕಳ ಕಥೆಯನ್ನು ಕೇಳುವಾಗ ಅವರ ಜೊತೆಗೆ ನಾವೂ ಮಕ್ಕಳಾಗಬೇಕು. ಆಗ ಅವರಿಗೆ ನಮ್ಮಲ್ಲಿ ನಂಬಿಕೆ ಹುಟ್ಟುತ್ತದೆ; ಸಂಕೋಚ ಮುರಿಯುತ್ತದೆ.

ಈ ಸಂದರ್ಭದಲ್ಲಿ ನಮ್ಮ ಪಾಠಶಾಲೆಗಳಿಗೆ ಸಂಬಂಧಿಸಿದ ಒಂದು ಮಾತನ್ನು ಹೇಳಬೇಕೆನ್ನಿಸುತ್ತದೆ. ಪ್ರಾಥಮಿಕ ಪಾಠಶಾಲೆಗಳಲ್ಲಿ ಈಗ "ಕಥೆ"ಯ ಪಾಠವನ್ನೂ ಇಟ್ಟಿದ್ದಾರೆ; ಅದು ಚೆನ್ನಾಗಿ ನಡೆಯುತ್ತಲೂ ಇರಬಹುದು. ನಮ್ಮ ಕಾಲದಲ್ಲಿ ಆ ಪಾಠವೇ ಇರಲಿಲ್ಲ; ಪಠ್ಯಪುಸ್ತಕಗಳಲ್ಲಿ ಬರತಕ್ಕ ಕಥೆಗಳನ್ನು ಹೇಳಿಕೊಡುವ ರೀತಿ ಕೂಡ ಅಸಹ್ಯವಾಗಿರುತ್ತಿತ್ತು. ಕಥೆಯ ಪಾಠವೆಂದರೆ ಮಿಕ್ಕ ಎಲ್ಲಾ ಪಾಠಗಳಿಗಿಂತಲೂ ಮಕ್ಕಳಿಗೆ ಹೆಚ್ಚು ಹೆದರಿಕೆ. ಏಕೆ? ಆ ಕಥೆಯನ್ನು ಮೊದಲಿನಿಂದ ತುದಿಯ ನೀತಿಯವರೆಗೂ ಅವರು ಸ್ವಲ್ಪವೂ ತಪ್ಪದಂತೆ ಬಾಯಿಗೆ ಗಟ್ಟಿಮಾಡಿ ಒಪ್ಪಿಸಬೇಕಾಗುತ್ತಿತ್ತು. ಉಲ್ಲಾಸದಿಂದ ಕೇಳಿದ ಕಥೆಯನ್ನು ಜೊತೆಯ ಹುಡುಗರಿಗೆ ಸರಸವಾಗಿ ಹೇಳುವುದೆಲ್ಲಿ, ಒಣಪುಸ್ತಕದಲ್ಲಿ ಓದಿಕೊಂಡುಬಂದು ಉಪಾಧ್ಯಾಯರ ಎದುರಿಗೆ ಅಪರಾಧಿಯಂತೆ ಕೈಜೋಡಿಸಿ ನಿಂತು ಮಂತ್ರ ಹೇಳಿದಂತೆ ಗೊಣಗುವುದೆಲ್ಲಿ? ಈ ಪದ್ಧತಿಯಿಂದ ಹುಡುಗರ ವಾಚಾಲತೆಯೇ ಉಡುಗಿಹೋಗುತ್ತಿತ್ತು. ಹುಡುಗನು ಪುಸ್ತಕದ ಮಾತಿನಲ್ಲಿ ಕಥೆಯನ್ನು ಹೇಳುತ್ತಿದ್ದನೇ ಹೊರತು ಮನೆಮಾತಿನಲ್ಲಿ ಹೇಳಲು ಪ್ರಯತ್ನಪಟ್ಟರೂ ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಮನೆಮಾತಿನಲ್ಲಿ ಹೇಳೆಂದು ಯಾರಾದರೂ ಬಲಾತ್ಕರಿಸಿದರೆ ಅವನಿಗೆ ಮಂಕು ಕವಿದುಬಿಡುತ್ತಿತ್ತು. ಹೀಗೆ ಕಥೆಯ ಜೀವನವೇ ಅವನ ಪಾಲಿಗೆ ಮಾಯವಾಗುತ್ತಿತ್ತು. ಈ ಕೊಲೆಪಾತಕಪದ್ಧತಿ ಎಷ್ಟು ಬೇಗ ತಪ್ಪಿಹೋದರೆ

ನಮ್ಮ ವಿದ್ಯಾಭ್ಯಾಸಕ್ಕೆ ಅಷ್ಟು ಕ್ಷೇಮ. ಪಟ್ಟಣಗಳಲ್ಲಾದರೂ ಈ ವೇಳೆಗೆ ಅದು ನಿಂತು ಹೋಗಿರಬಹುದು.

ಇನ್ನು ಈ ಕಥೆಗಳ ಸ್ವರೂಪದ ಕಡೆಗೆ ತಿರುಗೋಣ. ಮಕ್ಕಳಿಗೆ ಹೇಳುವ ಕಥೆಗಳು ಹೇಗಿರಬೇಕು? ಅವರಿಗೆ ಅಚ್ಚುಮೆಚ್ಚಾದ ಕೆಲವು ಅಜ್ಜಿಯ ಕಥೆಗಳನ್ನು ನೋಡಿದರೆ ಈ ಪ್ರಶ್ನೆಗೆ ಉತ್ತರ ಸಿಕ್ಕುತ್ತದೆ. ಇಂಥ ಕಥೆಗಳಲ್ಲಿ 'ಕೋತಿಯ ಕಥೆ' ಒಂದು :

"ಬಾಲ ಹೊಯ್ತು ಚಾಕು ಬಂತು ಡುಂಡುಂ
ಚಾಕು ಹೋಯ್ತು ಕಬ್ಬು ಬಂತು ಡುಂಡುಂ
ಕಬ್ಬು ಹೋಯ್ತು ಎತ್ತು ಬಂತು ಡುಂಕುಂ
ಎತ್ತು ಹೋಯ್ತು ಎಣ್ಣೆ ಬಂತು ಡುಂಡು
ಎಣ್ಣೆ ಹೋಯ್ತು ದೋಸೆ ಬಂತು ಡುಂಡುಂ
ದೋಸೆ ಹೋಯ್ತು ತಮಟೆ ಬಂತು ಡುಂಡುಂ
ಡುಂಡುಂ ಡುಂಡುಂ ಡುಮಡುಮ ಡುಂಡುಂ"

ಎಂದು ಕೇಳಿ, ಹೇಳಿ, ಯಾವ ಮಗು ನಲಿದಾಡಿಲ್ಲ : ಇದನ್ನು ನಮ್ಮ ಅಜ್ಜಿಯರು ತಮ್ಮ ಅಜ್ಜಿಯರಿಂದ ಕೇಳಿದ್ದರು; ನಮ್ಮ ಮೊಮ್ಮಕ್ಕಳು ತಮ್ಮ ಮೊಮ್ಮಕ್ಕಳಿಗೂ ಹೇಳುವರೆಂದು ತೋರುತ್ತದೆ. ಈ ಕಥೆ ಕನ್ನಡದಲ್ಲಿ ಮಾತ್ರವೇ ಅಲ್ಲ, ತಮಿಳು ಹಿಂದಿ ಮೊದಲಾದ ಅನೇಕ ಭಾಷೆಗಳಲ್ಲಿ ಅನೇಕ ರೂಪಗಳಲ್ಲಿದೆ. ಇದರಲ್ಲಿ ಮಕ್ಕಳ ಮನಸ್ಸನ್ನು ಹಿಡಿಯುವ ಸ್ವಾರಸ್ಯ ಯಾವುದು?

ಈ ಕಥೆಯ ಸ್ವಾರಸ್ಯಕ್ಕೆ ಅದರ ವೇಗವೂ ಸರಳತೆಯೂ ದೊಡ್ಡ ಕಾರಣವೆಂದು ತೋರುತ್ತದೆ. ಕಥೆ ಎಲ್ಲಿಯೂ ನಿಲ್ಲುವುದಿಲ್ಲ. ಹರಿಯುವ ಹೊಳೆಯಂತೆ ಮುಂದೆ ಸಾಗುತ್ತಿರುತ್ತದೆ. ಒಂದು ಕೋತಿಯಿತ್ತು. ಅದು ಬೇಲಿಯ ಮೇಲೆ ನೆಗೆಯುತ್ತಿದ್ದಾಗ ಅದರ ಬಾಲಕ್ಕೆ ಮುಳ್ಳು ಚುಚ್ಚಿತು. ಚಾಕು ಹಿಡಿದುಕೊಂಡು ಒಬ್ಬ ಮನುಷ್ಯ ಎದುರಿಗೆ ಬಂದ. "ಮುಳ್ಳು ತೆಗೆಯುತ್ತೀಯೇನಯ್ಯ" ಎಂದು ಕೋತಿ ಕೇಳಿತು. ಅವರು "ಹುಂ" ಎಂದು ಮುಳ್ಳು ತೆಗೆಯುವುದಕ್ಕೆ ಹೋಗಿ ಕೋತಿಯ ಬಾಲವನ್ನೇ ಕತ್ತರಿಸಿಬಿಟ್ಟ. ಕೋತಿ ಸುಮ್ಮನಿರುತ್ತದೆಯೇ? "ನನ್ನ ಬಾಲವನ್ನು ಮೊದಲಿನಂತೆ ಅಂಟಿಸುತ್ತೀಯೋ, ಇಲ್ಲ, ಚಾಕು ಕೊಡುತ್ತೀಯೋ?" ಎಂದು ಕೇಳಿತು. ಅವನು ಚಾಕು ಕೊಟ್ಟ. ಅದನ್ನು ತೆಗೆದುಕೊಂಡು ಅದು ಮುಂದೆ ಹೋಗುತ್ತಿದ್ದಾಗ, ದಾರಿಯಲ್ಲಿ ಯಾರೋ ಒಬ್ಬ ಕಬ್ಬಿನ ಜಲ್ಲೆಯನ್ನು ಬಾಯಲ್ಲಿ ಸಿಗಿಯುತ್ತಿದ್ದ. "ಚಾಕು ಬೇಕೇ" ಎಂದು ಕೇಳಿ ಕೋತಿ ಕೊಟ್ಟಿತು. ಅದನ್ನು ತೆಗೆದುಕೊಂಡು ಅವನು ಹೆರೆಯುವಾಗ ಚಾಕು-ಹಳೆಯದು-ಮುರಿದುಹೋಯಿತು. ಸರಿ, "ನನ್ನ ಚಾಕು ಕೊಡು, ಇಲ್ಲ, ಕಬ್ಬಿನ ಜಲ್ಲೆ ಕೊಡು" ಎಂದು ಹಠ ಹಿಡಿಯಿತು. ಹೀಗೆ ಕಥೆ ಕೂಡ ಕೋತಿಯಂತೆಯೇ ನಿಂತಲ್ಲಿ ನಿಲ್ಲದೆ ಮುಂದುಮುಂದಕ್ಕೆ ಹಾರುತ್ತದೆ. ಇದರಲ್ಲಿ ಸೂಕ್ಷ್ಮವಾದ ಮನೋಧರ್ಮದ

ವಿವೇಚನೆಯಿಲ್ಲ, ಶುಷ್ಕಚರ್ಚೆಯಿಲ್ಲ, ತತ್ತ್ವವೇದಾಂತಗಳಿಲ್ಲ. ಮಕ್ಕಳಿಗೆ ಯಾವುದು ಅರ್ಥವಾಗುವುದಿಲ್ಲವೋ ಯಾವುದು ಬೇಕಿಲ್ಲವೊ ಅದೊಂದೂ ಇಲ್ಲ. ಇರತಕ್ಕ ವಿಷಯ ಸುಲಭವಾಗಿ ತಿಳಿಯುತ್ತದೆ. ಕೋತಿಯ ಚಪಲಸ್ವಭಾವದ ಚಿತ್ರ ಚೆನ್ನಾಗಿ ಬಂದಿದೆ. ಇದು ಮಕ್ಕಳಿಗೆ ಅರ್ಥವಾಗುವ ಸಂಗತಿ. ಕೋತಿ ಒಂದಾದ ಮೇಲೊಂದು ವಸ್ತುವನ್ನು ಸಂಪಾದಿಸಿದ ವಿಷಯವನ್ನು ಕೇಳಿದಾಗಲೆಲ್ಲಾ ಮಕ್ಕಳು ಹೊಟ್ಟೆ ಹುಣ್ಣಾಗುವಂತೆ ನಗುತ್ತಾರೆ.

ಇದರ ಜೊತೆಗೆ ಮತ್ತೊಂದು ಸ್ವಾರಸ್ಯವುಂಟು. ಕಥೆಯ ಕೊನೆಯಲ್ಲಿ ಬರುವ, ಮೇಲೆ ಕೊಟ್ಟಿರುವ "ಡುಂಡುಂ" ಪದ್ಯವೇ ಅದು. ಇದು ಲಯಬದ್ಧವಾಗಿರುವುದರಿಂದ ಮಕ್ಕಳ ಮನಸ್ಸಿನಲ್ಲಿ ಚೆನ್ನಾಗಿ ನಿಲ್ಲುತ್ತದೆ; ಕಥೆಯನ್ನೆಲ್ಲಾ ಸಂಕ್ಷೇಪವಾಗಿ ಸುಲಭದಲ್ಲಿ ತಿಳಿಸುತ್ತದೆ. ಈ ಬಗೆಯ ಪದ್ಯಭಾಗ ಅನೇಕ ಮಕ್ಕಳ ಕಥೆಗಳಲ್ಲಿ ಕಂಡುಬರುತ್ತವೆ. ಅದು ಕಥೆಗೆ ಒಗ್ಗರಣೆಯ ಹಾಗೆ.

ಈ ಸಂದರ್ಭದಲ್ಲಿ ಗಮನಿಸತಕ್ಕ ಅಂಶ ಮತ್ತೊಂದುಂಟು. ಕೋತಿ ಮಾತಾಡಿತೆಂದು ಕಥೆ ಹೇಳಿದರೆ "ಅದೆಲ್ಲಿ ಮಾತಾಡುತ್ತದೆ?" ಎಂದು ಸಂಶಯದ ಪ್ರಶ್ನೆಹಾಕುವ ಮಗುವನ್ನು ನಾನು ಇದುವರೆಗೂ ಕಂಡಿಲ್ಲ. ಮಕ್ಕಳ ಪ್ರಪಂಚ ಯಕ್ಷಿಣಿಯ (Fairy) ಪ್ರಪಂಚ. ನಮ್ಮ ಪ್ರಪಂಚದಲ್ಲಿ ಅಸಂಭವವಾದ ಸಂಗತಿಗಳೆಲ್ಲ ಅಲ್ಲಿ ಸುಲಭವಾಗಿ ನಡೆದುಬಿಡುತ್ತವೆ. ಅದರಲ್ಲಿ ಮೃಗಪಕ್ಷಿಗಳು ಮಾತಾಡುತ್ತವೆ; ಬೇಕಾದಷ್ಟು ಜನ ರಾಕ್ಷಸರು ಸಂಚರಿಸುತ್ತಾರೆ; ಅವರನ್ನು ಪುಟ್ಟರಾಜಕುಮಾರರು ನಿಮಿಷಮಾತ್ರದಲ್ಲಿ ಸಂಹರಿಸಿಬಿಡುತ್ತಾರೆ. ಒಬ್ಬನ ಪ್ರಾಣ ಅವನ ಹೃದಯದಲ್ಲಿರದೆ, ದ್ವೀಪಾಂತರದಲ್ಲಿರುವ ಯಾವುದೋ ಒಂದು ಪಂಜರದ ಪಕ್ಷಿಯಲ್ಲಿರುತ್ತದೆ. ಇಂಥ ಅದ್ಭುತಗಳೇ ಮಕ್ಕಳ ರಾಜ್ಯದ ದಿನಚರ್ಯೆ. ಯಾವ ನಿಜವಾದ ಮಗುವಿಗೂ ಇವುಗಳಲ್ಲಿ ಸಂದೇಹ ಹುಟ್ಟುವುದಿಲ್ಲ.

ಈಗ, ಕೋತಿಯ ಕಥೆಯಷ್ಟು ಪ್ರಸಿದ್ಧವಲ್ಲದ ಇನ್ನೊಂದು ಕಥೆಯನ್ನು ತೆಗೆದುಕೊಳ್ಳೋಣ. ಈ ಕಥೆಯನ್ನು ನಮ್ಮ ಅಜ್ಜಿಯ ಬಾಯಿಂದ ನಾನು ಕೇಳಲಿಲ್ಲ; ಐದು ವರ್ಷದ ಒಬ್ಬ ಹುಡುಗಿಯ ಬಾಯಿಂದ ಕೇಳಿದೆನು. ಕಥೆಯನ್ನು ಹೆಚ್ಚುಕಡಮೆ ಅವಳು ಹೇಳಿದ ಹಾಗೆಯೇ ಬರೆದಿದ್ದೇನೆ.

ಒಂದಾನೊಂದು ಊರಿನಲ್ಲಿ ಒಬ್ಬ ಅಡುಗೂಲಜ್ಜಿ ಇದ್ದಳು. ಅವಳ ಹತ್ತಿರ ಒಂದು ಬೆಕ್ಕು ಇತ್ತು. ಆ ಬೆಕ್ಕಿಗೆ ಒಬ್ಬ ಅಕ್ಕ ಇನ್ನೊಂದೂರಿನಲ್ಲಿ ಇತ್ತು. ಅದನ್ನು ನೋಡಬೇಕೆಂದು ಈ ಬೆಕ್ಕಿಗೆ ಆಸೆಯಾಯಿತು. ಅಜ್ಜಿಗೆ ಹೇಳಿ ಈ ಬೆಕ್ಕು ಹೊರಟಿತು. ದಾರಿಯಲ್ಲಿ ಒಂದು ಕರಡಿ ಸಿಕ್ಕಿತು. ಕರಡಿ ಬೆಕ್ಕನ್ನು ಅಡ್ಡಗಟ್ಟಿ "ಬೆಕ್ಕುರಾಜ, ಬೆಕ್ಕುರಾಜ, ನಿನ್ನ ನಾನು ತಿನ್ನಬೇಕು" ಎಂದಿತು. ಅದಕ್ಕೆ ಬೆಕ್ಕು "ಅಕ್ಕನಮನೆಗೆ ಹೋಗಿ ಪುಟ್ಟಗೂಡೆಯಾಗಿ ಬರುತ್ತೇನೆ. ಆಗ ತಿನ್ನುವೆಯಂತೆ" ಎಂದಿತು. ಅದಕ್ಕೆ ಕರಡಿ ಒಪ್ಪಿಕೊಂಡಿತು. ಬೆಕ್ಕು ಮುಂದಕ್ಕೆ ಸ್ವಲ್ಪದೂರ ಹೋಯಿತು. ಅಲ್ಲಿ ಒಂದು ಹುಲಿ ಸಿಕ್ಕಿತು; ಅದು ಬೆಕ್ಕನ್ನು ಅಡ್ಡಗಟ್ಟಿ "ಬೆಕ್ಕುರಾಜ, ಬೆಕ್ಕುರಾಜ, ನಿನ್ನ ನಾನು ತಿನ್ನ

ಬೇಕು" ಎಂದಿತು. ಅದಕ್ಕೆ ಬೆಕ್ಕು "ಅಕ್ಕನ ಮನೆಗೆ ಹೋಗಿ ಪುಟ್ಟಗೂಡೆಯಾಗಿ ಬರುತ್ತೇನೆ. ಆಗ ತಿನ್ನುವೆಯಂತೆ" ಎಂದಿತು. ಹುಲಿ ಬಿಟ್ಟಿತು. ಬೆಕ್ಕು ಅಕ್ಕನ ಮನೆಗೆ ಸೇರಿ ಅಲ್ಲಿ ಆರು ತಿಂಗಳು ಸುಖವಾಗಿತ್ತು. ತಿರುಗಿ ಊರಿಗೆ ಹೊರಡುವಾಗ ಒಂದು ಬುರುಡೆಯೊಳಗೆ ಕೂತುಕೊಂಡು ಅಕ್ಕನಿಗೆ "ಉರುಡಿಸು" ಎಂದಿತು. ಅಕ್ಕ ಉರುಡಿಸಿದಳು. ಬುರುಡೆ ಉರುಡಿಕೊಂಡು ಮೂರುಗಾವುದ ಬಂತು. ಅಲ್ಲಿ ಹುಲಿಯಿತ್ತು. ಅದು "ಬುರುಡೆರಾಜ, ಬುರುಡೆರಾಜ, ಬೆಕ್ಕುರಾಜನ್ನ ಕಾಣೆಯಾ" ಎಂದಿತು. ಅದಕ್ಕೆ ಬೆಕ್ಕು "ಬೆಕ್ಕುರಾಜನನ್ನೂ ಕಾಣೆ, ಕುಕ್ಕರಾಜನನ್ನೂ ಕಾಣೆ, ಉರುಡಿಸು ಬುರುಡೆ ಮೂರುಗಾವುದ" ಎಂದಿತು. ಹುಲಿ ಉರುಡಿಸಿತು. ಬುರುಡೆ ಕರಡಿಯ ಬಳಿಗೆ ಬಂತು. ಕರಡಿ "ಬುರುಡೆರಾಜ, ಬುರುಡೆರಾಜ, ಬೆಕ್ಕುರಾಜನ್ನ ಕಾಣೆಯಾ" ಎಂದಿತು. ಅದಕ್ಕೆ ಬೆಕ್ಕು "ಬೆಕ್ಕುರಾಜನನ್ನೂ ಕಾಣೆ, ಕುಕ್ಕ ರಾಜನನ್ನೂ ಕಾಣೆ, ಉರುಡಿಸು ಬುರುಡೆ ಮೂರುಗಾವುದ" ಎಂದಿತು. ಕರಡಿ ಉರುಡಿಸಿತು. ಬುರುಡೆ ಅಡುಗೂಲಜ್ಜಿಯ ಊರಿನ ಕೋಟೆಯ ಹತ್ತಿರಕ್ಕೆ ಬಂತು. ಬೆಕ್ಕು ಹೊರಕ್ಕೆ ಬಂದು ಬುರುಡೆಯನ್ನು ಒಡೆದುಹಾಕಿ ಊರೊಳಕ್ಕೆ ಹೋಗಿ ಅಡುಗೂಲಜ್ಜಿಯ ಹತ್ತಿರ ಸುಖವಾಗಿತ್ತು.

ಇದೇ ಕಥೆ. ಇದರಲ್ಲಿ ನಾವು ಗ್ರಹಿಸತಕ್ಕ ಅಂಶಗಳು ಒಂದೆರಡಿವೆ. ಮಕ್ಕಳಿಗೆ ಹೇಳುವ ಕಥೆಯಲ್ಲಿ ಮೊದಲಿನಿಂದ ಕೊನೆಯವರೆಗೆ ಎಲ್ಲ ವಾಕ್ಯಗಳೂ ಹೊಸದಾಗಿರ ಬಾರದು. ಪುನರುಕ್ತಿಯಲ್ಲಿ ಮಕ್ಕಳಿಗೆ ಹಿತವುಂಟು. ಈ ಕಥೆಯ ಸ್ವಾರಸ್ಯವೆಲ್ಲಾ ಅದರ ಪುನರುಕ್ತಿಯಲ್ಲಿದೆ. ಕರಡಿ, ಹುಲಿ, ಎರಡೂ ಬೆಕ್ಕನ್ನು ಒಂದೇ ರೀತಿಯಲ್ಲಿ ಹೆದರಿಸುತ್ತವೆ, ಪ್ರಶ್ನಿಸುತ್ತವೆ. ಬೆಕ್ಕು ಎರಡಕ್ಕೂ ಒಂದೇ ರೀತಿಯಲ್ಲಿ ಆಸೆ ತೋರಿಸಿ ತಪ್ಪಿಸಿಕೊಳ್ಳುತ್ತದೆ. ಹಾಗಾದರೆ ಕರಡಿಯೋ ಹುಲಿಯೋ ಒಂದೇ ಸಾಲದೆ? ಎಂದು ಪ್ರಶ್ನೆ ಬರಬಹುದು. ಮಿತಭಾಷಣದ ದೃಷ್ಟಿಯಿಂದ ಹುಲಿಯನ್ನೋ ಕರಡಿಯನ್ನೋ ಕಿತ್ತುಹಾಕಿದರೆ ಕಥೆಯ ಸ್ವಾರಸ್ಯದಲ್ಲಿ ಅರ್ಧ ಮಾಯವಾಗುತ್ತದೆ. ಇದಲ್ಲದೆ, ಒಂದೇ ಮಾತಾಗಲಿ ಸಂದರ್ಭ ವಾಗಲಿ ಎರಡು ಮೂರು ಸಲ ಬರುವುದರಲ್ಲಿ ಮತ್ತೊಂದು ಪ್ರಯೋಜನವುಂಟು. ಅವು ಮಕ್ಕಳಿಗೆ ಕಥೆಯನ್ನು ಜ್ಞಾಪಕದಲ್ಲಿ ನಿಲ್ಲಿಸುವ ಹೆಗ್ಗುರುತುಗಳಾಗಿರುತ್ತವೆ.

ಮಕ್ಕಳ ಮಾತನ್ನು ಆಲಿಸಿರುವವರ ಅನುಭವದ ವಿಷಯವೊಂದನ್ನು ಕೋತಿಯ ಕಥೆಯೂ ಬೆಕ್ಕಿನ ಕಥೆಯೂ ಪುಷ್ಟೀಕರಿಸುತ್ತವೆ. ಮಕ್ಕಳಿಗೆ ಸಂವಾದರೂಪದ ಕಥೆಯಲ್ಲಿ ಪ್ರೀತಿ ಹೆಚ್ಚು. ಕಥೆಯ ಪಾತ್ರಗಳು ಆಡಿದ ಮಾತನ್ನು ಆಡಿದಂತೆಯೇ ಅನುವದಿಸಿ ಹೇಳಿದರೆ ಮಕ್ಕಳಿಗೆ ಬೇಗ ತಿಳಿಯುತ್ತದೆ. ಅವರೂ ಮತ್ತೊಬ್ಬರ ಮಾತುಗಳನ್ನು ಅದೇ ಧ್ವನಿಯಲ್ಲೇ ಅನುವಾದ ಮಾಡುತ್ತಾರೆ. ಮಕ್ಕಳ ಸಹಜವಾದ ಅನುಕರಣಶಕ್ತಿಗೆ ಇದು ಒಂದು ಒಳ್ಳೆಯ ಉದಾಹರಣೆ. ಆದ್ದರಿಂದ ಮಕ್ಕಳಿಗೆ ಹೇಳುವ ಕಥೆಗಳಲ್ಲೂ ಸಂವಾದಗಳು ಹೆಚ್ಚಾಗಿರಬೇಕು.

ಮೇಲೆ ಕೊಟ್ಟಿರುವ ಎರಡು ಕಥೆಗಳೂ ಚಿಕ್ಕವು. ಮಕ್ಕಳಿಗೆ ಪ್ರಿಯವಾದ ಅನೇಕ ದೊಡ ಕತೆಗಳೂ ನಮ್ಮಲ್ಲಿ ಬೇಕಾದಷ್ಟಿವೆ. ಈ ಅಡುಗೂಲಜ್ಜಿಯ ಕಥೆಗಳು ಎಷ್ಟೇ

ಉದ್ದವಾಗಿದ್ದರೂ ಅವುಗಳ ವಿಷಯ ಸರಳವಾಗಿರುತ್ತದೆ; ಕಥೆಯ ರಚನೆಯಲ್ಲಿ ಹೆಚ್ಚು ತೊಡಕಿರುವುದಿಲ್ಲ. ರಾಕ್ಷಸರು, ರಾಜಪುತ್ರರು, ರಾಜಪುತ್ರಿಯರು ಇವರ ವೃತ್ತಾಂತವೇ ಈ ಕಥೆಗಳ ತುಂಬ ಇರುತ್ತದೆ. ಕಥೆಗಳೆಲ್ಲವೂ ಸಂತೋಷದಲ್ಲಿಯೇ ಮುಗಿಯುತ್ತವೆ. ಇವುಗಳಲ್ಲಿ ಯಾವುದನ್ನೂ ಇಲ್ಲಿ ವಿವರವಾಗಿ ಪರಿಶೀಲಿಸಲು ಅವಕಾಶವಿಲ್ಲ. ಆದರೆ ಒಂದು ಅಂಶವನ್ನು ಮಾತ್ರ ಹಾಗೆಯೇ ಗಮನಿಸಬಹುದು. ಎಲ್ಲಾ ಜನಾಂಗಗಳಲ್ಲೂ ಮಕ್ಕಳ ಕಥೆಗಳು ನಡೆಯುವುದು ಒಂದೇ ಕಾಲದಲ್ಲಿ, ಪ್ರಾರಂಭಿಸುವುದು ಒಂದೇ ರೀತಿಯಲ್ಲಿ. ಈ ಕಥೆಗಳಲ್ಲಿ ಯಾವುವೂ ಈಗಿನವಲ್ಲ. ಎಲ್ಲವೂ ಪುರಾತನ ಕಾಲದಲ್ಲಿ ನಡೆದವುಗಳು. "ಒಂದಾನೊಂದು ಪಟ್ಟಣ. ಅದಕ್ಕೊಬ್ಬ ದೊರೆ ಅವನಿಗೆ ರಾಣಿ, ಮಂತ್ರಿ, ಸೇನಾಪತಿ, ಎಲ್ಲರೂ ಇದ್ದರು". . . . ಸೃಷ್ಟಿಯ ಪ್ರಾರಂಭದಿಂದಲೇ ಕಥೆ ಪ್ರಾರಂಭಿಸಬೇಕು. ಈಗಿನ ಕಾದಂಬರಿಗಳಲ್ಲಿರುವಂತೆ, ಎಲ್ಲೋ ನಿರ್ಜನಾರಣ್ಯದಲ್ಲಿ, ಮಟಮಟ ಮಧ್ಯಾಹ್ನದಲ್ಲಿ ಕಥೆ ಮೊದಲಾದರೆ ಮಕ್ಕಳಿಗೆ ಅದು ಅರ್ಥವಾಗುವುದಿಲ್ಲ.

ಇದುವರೆಗೆ ನಿರೂಪಿಸಿರುವ ಅಂಶಗಳಿಂದ ಮಕ್ಕಳ ಕಥೆಗಳ ಸ್ವರೂಪವೂ ಸ್ವಾರಸ್ಯವೂ ಕೊಂಚವಾದರೂ ಸ್ಪಷ್ಟವಾಗಿರಬೇಕು. ಇಷ್ಟು ಅವಶ್ಯಕವಾದ ಪೂರ್ವಕಾಲದ ಕಥೆಗಾರಿಕೆ ನಮ್ಮಲ್ಲಿ ಖಿಲವಾಗುತ್ತಿರುವುದು ಶೋಚನೀಯವಾದ ಸಂಗತಿ. ನಮ್ಮ ಅಜ್ಜಿಯರ ಜೊತೆಯಲ್ಲೇ ಅವರು ಹೇಳುತ್ತಿದ್ದ ಕಥೆಗಳೂ ಮಣ್ಣುಪಾಲಾಗುತ್ತಿವೆ. ಅಷ್ಟು ಮನೋಹರವಾದ ಕಥೆಗಳನ್ನು ಹೊಸದಾಗಿ ನಿರ್ಮಿಸಬಲ್ಲ ಪ್ರತಿಭಾಶಾಲಿಗಳು ಬೇಕೆಂದಾಗ ದೊರೆಯುವುದಿಲ್ಲ. ಆದ್ದರಿಂದ ಪುನರುಜ್ಜೀವನ ಕಾರ್ಯವು ಈಗ ಎರಡು ರೂಪದಲ್ಲಿ ನಡೆಯಬೇಕಾಗಿದೆ. ಹಳಬರಿಂದ ಈ ಬಗೆಯ ಕಥೆಗಳನ್ನೆಲ್ಲಾ ಸಂಗ್ರಹಿಸಿ, ಮಕ್ಕಳು ಒಪ್ಪುವ ರೀತಿಯಲ್ಲಿ ಬರೆದು, ಸುಂದರವಾದ ಪುಟ್ಟ ಪುಸ್ತಕಗಳಲ್ಲಿ ದಪ್ಪ ಅಕ್ಷರಗಳಲ್ಲಿ ಚಿತ್ರಗಳೊಡನೆ ಅಚ್ಚುಹಾಕಿಸಿ ಹರಡಬೇಕಾದದ್ದು ನಮ್ಮ ಪ್ರಥಮ ಕರ್ತವ್ಯ. ಇಂಗ್ಲಿಷ್ ಮೊದಲಾದ ಪಾಶ್ಚಾತ್ಯ ಭಾಷೆಗಳಲ್ಲಿ ಮಕ್ಕಳಿಗಾಗಿಯೇ ಸೊಗಸಾದ ಕಥೆಯ ಪುಸ್ತಕಗಳು ಎಷ್ಟೊಂದು ಹುಟ್ಟಿವೆ! ಆಗತಾನೆ ಅಕ್ಷರಕಲಿತ ಕೂಸು ಕೂಡ ಓದಬಹುದಾದ ಕಥೆಯ ಪುಸ್ತಕಗಳು ಅಲ್ಲಿ ಉಂಟು. ಅಜ್ಜಿಯ ಕಥೆಗಳನ್ನು ಅಲ್ಲಿಯವರು ನಮ್ಮ ಹಾಗೆ ತಾತ್ಸಾರ ಮಾಡುವುದಿಲ್ಲ. ಈ ಅಜ್ಜಿಯ ಕಥೆಗಳನ್ನೇ ಕೂಡಿಸಿದ, ಕಟ್ಟಿದ ಗ್ರಿಮ್, ಹ್ಯಾನ್ಸ್ ಆ್ಯನ್‌ಡರ್ಸನ್ ಮೊದಲಾದವರು ಲೋಕಪ್ರಸಿದ್ಧರಾಗಿದ್ದಾರೆ. ಅವರಂತೆ ನಾವೂ ಈ ಕಥೆಗಳಿಗೆ ಗೌರವ ಕೊಡುವುದು ಎಂದಿಗೆ? ಅಂಥ ಕಥೆಯ ಪುಸ್ತಕಗಳು ಸುಲಭಕ್ರಯಕ್ಕೆ ಉತ್ತಮ ರೂಪದಲ್ಲಿ ದೊರೆಯುವ ಹಾಗಾದರೆ ನಮ್ಮ ಮಕ್ಕಳು ಬಲಾತ್ಕಾರವಿಲ್ಲದೆಯೆ ಉಲ್ಲಾಸದಿಂದ ಓದು ಕಲಿತಾರು. ಮನೆಯಲ್ಲಿ ಮಕ್ಕಳು "ಕಥೆ ಪುಸ್ತಕ ಕೊಡು, ಕಥೆ ಪುಸ್ತಕ ಕೊಡು" ಎಂದು ಸುತ್ತಿ ಪೀಡಿಸುವಾಗ ಅವರಿಗೆ ಎಲ್ಲಿಂದ ಒದಗಿಸುವುದು? ಅವರಿಗೆ ತಕ್ಕ ಪುಸ್ತಕಗಳನ್ನು ಸಿದ್ಧಪಡಿಸುವ ಪ್ರಯತ್ನಗಳು ಸರಿಯಾಗಿ ನಡೆದ ಹೊರತು ನಮ್ಮ ವಿದ್ಯಾಭ್ಯಾಸ ಸಮರ್ಪಕವಾಗುವುದಿಲ್ಲ.

ಇಷ್ಟು ಮಾತ್ರವೇ ಸಾಲದು. ಮಕ್ಕಳಿಗೆ ಕಥೆ ಹೇಳುವ ಕಲೆಯನ್ನು ಎಲ್ಲರೂ ಅಭ್ಯಾಸಮಾಡಬೇಕು. ಆ ಕೆಲಸಕ್ಕೆ ಪಾಲುಮಾರಬಾರದು, ಜುಗುಪ್ಸೆಪಡಬಾರದು.

ಕಥೆಯನ್ನು ಕೇಳುವವರ ಮಾತಿರಲಿ; ಹೇಳುವವರಿಗೇ ಎಷ್ಟೊ ವಿನೋದವುಂಟು. ಹೊಸ ಕಥೆಯನ್ನು ಹೇಳುತ್ತೇನೆಂದು ಪ್ರಾರಂಭಿಸಿ, "ಒಂದಾನೊಂದು ಊರಿತ್ತು. ಆ ಊರಿಗೆ ಶಾನಭೋಗರಿದ್ದರು. ಅವರಿಗೆ ಇಬ್ಬರು ಮಕ್ಕಳಿದ್ದರು. ಅವರ ಕಿರಿಯ ಮಗನಿಗೆ ಒಬ್ಬಳು ತುಂಟ ಮಗಳಿದ್ದಳು. ಅವಳು ಯವಾಗಲೂ 'ಕಥೆ ಹೇಳು ಕಥೆ ಹೇಳು' ಎಂದು ಪೀಡಿಸುತ್ತಿದ್ದಳು. ಅವಳ ಹೆಸರೇನು ನಿನಗೆ ಗೊತ್ತೆ?" ಎಂದು ನಿಮ್ಮ ಶ್ರೋತೃವನ್ನು ಕೇಳಿದರೆ, ಆ ಐದುವರ್ಷದ ಚದುರೆ "ಲಲಿತ,—ಉಂ" ಎಂದು ಉತ್ತರ ಕೊಟ್ಟು ಕೋಪಮಿಶ್ರವಾದ ನಾಚಿಕೆಯನ್ನು ಸೂಚಿಸಿದಾಗ ನೀವು ನಕ್ಕ ನಗುವನ್ನು ಜ್ಞಾಪಿಸಿಕೊಳ್ಳಿ. ಜೊತೆಯಲ್ಲಿದ್ದ ಮಿಕ್ಕ ಮಕ್ಕಳೂ, ಕೊನೆಯಲ್ಲಿ ಈ ಹುಡುಗಿ ಕೂಡ ಎಷ್ಟೊಂದು ನಕ್ಕರು! ಈ ವಿನೋದ ಮತ್ತೆ ಯಾವ ವಿನೋದಕ್ಕೂ ಕಡಮೆ?

೧೯೩೧]

ಸಮಾಲೋಕನ : ೧೯೫೮

ಸಣ್ಣ ಕಥೆಯಲ್ಲಿ ವಾಸ್ತವಿಕತೆಯ ಸ್ಥಾನ*

ಇಂದಿನ ವಿಚಾರಗೋಷ್ಠಿಗೆ ಯಾವ ವಿಷಯವನ್ನು ಆರಿಸಬೇಕು ಎಂಬುದನ್ನು ಕುರಿತು ಕೆಲವು ದಿನಗಳ ಹಿಂದೆ ಒಂದು ದೀರ್ಘ ವಿಚಾರ ನಡೆದಿತ್ತು. ನಡುವೆ ಬಂದು ಸೇರಿದ ನಾನು ಸುಮ್ಮನಿರದೆ ನಡುವೆ ಬಾಯಿ ಹಾಕಿದೆನು. "ಸಣ್ಣಕಥೆಯಲ್ಲಿ ವಾಸ್ತವಿಕತೆಯ ಸ್ಥಾನವನ್ನು ಕುರಿತು ಏಕೆ ಆಲೋಚನೆ ಮಾಡಬಾರದು?" ಎಂದೆನು. ಅದುವರೆಗೆ ಚರ್ಚಿಸಿ ಚರ್ಚಿಸಿ ಬೇಸತ್ತಿದ್ದ ಮಿತ್ರರಿಗೂ "ಏಕಾಗಬಾರದು?" ಎನ್ನಿಸಿತು. ಸರಿ, ವಿಷಯವನ್ನು ಪ್ರವೇಶಗೊಳಿಸುವ ಕೆಲಸವನ್ನು, ಒಲ್ಲೆನೆಂದರೂ ಬಿಡದೆ, ನನ್ನ ತಲೆಗೇ ಕಟ್ಟಿದರು. ಅವರ ಹಿಡಿತದಿಂದ ತಪ್ಪಿಸಿಕೊಳ್ಳಲಾರದೆ ಈ ವೇದಿಕೆಯ ಮೇಲೆ ನಿಂತಿದ್ದೇನೆ.

ಇದು ಸಣ್ಣಕಥೆಗೆ ಮಾತ್ರ ಸಂಬಂಧಿಸಿದ ಪ್ರಶ್ನೆ ಅಲ್ಲ; ಒಟ್ಟು ಸಾಹಿತ್ಯಕ್ಕೇ—ಅಷ್ಟೇಕೆ, ಒಟ್ಟು ಕಲಾ ಪ್ರಪಂಚಕ್ಕೇ—ಅನ್ವಯಿಸತಕ್ಕದ್ದು. ಎಂದರೆ, ನಿಜವಾಗಿ ಇದು ಸೌಂದರ್ಯಮೀಮಾಂಸೆಗೆ ಸೇರಿದ ಒಂದು ಸಮಸ್ಯೆ. ಸಣ್ಣ ಕಥೆಗಾರಿಕೆಯೂ ಒಂದು ಲಲಿತ ಕಲೆಯಾಗಿರುವುದರಿಂದಲೂ, ಅದರ ಇಂದಿನ ರೀತಿಯಲ್ಲಿ, ಕನ್ನಡದಲ್ಲಿ ಕೂಡ, ವಾಸ್ತವಿಕತೆಯ ಪರಿಣಾಮ ತಕ್ಕ ಮಟ್ಟಿಗೆ ಗೋಚರಿಸುತ್ತಿರುವುದರಿಂದಲೂ, ಈ

---

* ಸಣ್ಣಕಥೆ ಬರಹಗಾರರ ಮೂರನೆಯ ಸಮ್ಮೇಳನ, ಬೆಂಗಳೂರು, ೧೯೪೫ ('ಜೀವನ', ೧೯೪೫).

ಸಮ್ಮೇಳನದ ಅಂಗವಾಗಿ ಈ ವಿಷಯವನ್ನು ಆಲೋಚನೆಮಾಡುವುದು ಅನುಚಿತ ವಲ್ಲವೆಂದೇ ನನ್ನ ನಂಬಿಕೆ. ಇದರ ಪರಿಶೀಲನೆ ತಕ್ಕಮಟ್ಟಿಗೆ ನಡೆದರೆ, ನಮ್ಮ ಸಾಹಿತ್ಯಕ್ಕೂ ನಮ್ಮ ಜನಕ್ಕೂ ಒಳ್ಳೆಯ ಪ್ರಯೋಜನವೂ ಆದೀತು. ವಿಷಯವನ್ನು ಗೋಷ್ಠಿಯ ಮುಂದಿಡುವುದಷ್ಟೇ ನನ್ನ ಕೆಲಸ; ವಿಚಾರ ಬಹುಮುಖವಾಗಿ ನಡೆಯಲಿ.

ವಾಸ್ತವಿಕತೆ ಎಂದರೇನೆಂಬುದನ್ನು ಮೊದಲು ಪರಿಷ್ಕಾರಮಾಡಿಕೊಳ್ಳಬೇಕಾಗಿದೆ ಈ ಆಧುನಿಕ ಯುಗದಲ್ಲಿ ನಮ್ಮ ಸಾಹಿತ್ಯದ ಅನೇಕ ಪ್ರಕಾರಗಳು ಇಂಗ್ಲಿಷಿನಿಂದ ಪ್ರೇರಣೆ ಪಡೆದು ಬೆಳೆಯುತ್ತಿರುವಂತೆಯೇ ನಮ್ಮ ಸಾಹಿತ್ಯ ವಿಮರ್ಶೆಯೂ ಇಂಗ್ಲಿಷಿನ ಜಾಡನ್ನೇ ಬಲುಮಟ್ಟಿಗೆ ಹಿಡಿಯುತ್ತಿದೆ. ಅಲ್ಲಿಯ ಸಮಸ್ಯೆಗಳ ಛಾಯೆ ಇಲ್ಲಿಯೂ ಸುಳಿದಾಡುತ್ತಿದೆ. ಇಂಗ್ಲಿಷಿನ "Realism" ಎಂಬುದಕ್ಕೆ ಸಮಾನಪದ ನಮ್ಮ "ವಾಸ್ತವಿಕತೆ". ಇದಕ್ಕಿಂತ ಸರಳವಾದ ಪದವಿಲ್ಲವೆ, ನಮ್ಮ ಆಶಯಗಳನ್ನೆಲ್ಲ ಇದು ತಿಳಿಸಬಲ್ಲುದೆ?—ಎಂದು ಸಂದೇಹ ಹುಟ್ಟಲು ಅವಕಾಶವುಂಟು. ಇದಕ್ಕಿಂತ ಉತ್ತಮವಾದ ಪದ ಇನ್ನು ಮುಂದೆ ಯಾರಿಗಾದರೂ ಹೊಳೆದು, ಅದೇ ರೂಢಿಗೆ ಬಂದರೂ ಬರಬಹುದು. ಆದರೆ ಸದ್ಯಕ್ಕೆ ಇದನ್ನು ಅಂಗೀಕರಿಸೋಣ; ಇಂಗ್ಲಿಷಿನ "Realism" ಎಂಬುದರ ಅರ್ಥವನ್ನೆಲ್ಲಾ ಇದಕ್ಕೆ ಅನ್ವಯಿಸೋಣ. ನಾನಂತೂ ಈ ಅರ್ಥದಲ್ಲೇ ಇದನ್ನು ಬಳಸುತ್ತಿದ್ದೇನೆ. ಇಂದಿನ ವಿಚಾರಸರಣಿಯಲ್ಲಿ ಇದೇ ಅರ್ಥವೇ ಗಮನದಲ್ಲಿರಬೇಕೆಂದು ನನ್ನ ಕೋರಿಕೆ.

ವಾಸ್ತವಿಕತೆ ಎಂದರೇನು?—ತನ್ನ ಎದುರಿಗಿರುವ ಜಗತ್ತಿನಲ್ಲಿ ಲೇಖಕನು ಏನೇನನ್ನು ಕಾಣುವನೋ ಅದೆಲ್ಲವನ್ನೂ ತನಗೆ ಗೋಚರವಾದಂತೆಯೇ ನಿರೂಪಿಸುವುದು; ಅದರಲ್ಲಿ ಕಾಣಬರುವ ಅಂಶಗಳು ವಿಕೃತವೆಂದಾಗಲಿ ವಿರೂಪವೆಂದಾಗಲಿ ಜುಗುಪ್ಸಿತವೆಂದಾಗಲಿ ಜಘನ್ಯವೆಂದಾಗಲಿ ಕೈಬಿಡದೆ, ತನ್ನ ಕಾಣ್ಕೆಗೆ ಕಲ್ಪಿತಾಂಶಗಳನ್ನು ಸೇರಿಸಿ ಒಪ್ಪವಿಡದೆ, ಇದ್ದಂತೆಯೇ ಚಿತ್ರಿಸುವುದು. ಎಂದರೆ, ಒಂದು ಸಂದರ್ಭದಲ್ಲಿ ಲೇಖಕನ ಕರಣಗಳಿಗೆ ಏನೇನು ಗೋಚರವಾಗುವುದೋ ಅದಷ್ಟನ್ನೂ ಮತ್ತು ಅದಷ್ಟನ್ನೇ ನಿರೂಪಿಸುವುದೇ ವಾಸ್ತವಿಕತೆಯ ತಿರುಳೆಂದು ಸಂಗ್ರಹವಾಗಿ ಹೇಳಬಹುದು.

ವಾಸ್ತವಿಕತೆಯ ಗುರಿ ಗ್ರಾಹ್ಯವೆಂದೇ ಮೇಲುನೋಟಕ್ಕೆ ತೋರುತ್ತದೆ. ಅತ್ಯುಕ್ತಿ ಉತ್ಪ್ರೇಕ್ಷೆಗಳ ಹುಚ್ಚು ಕುಣಿತದಿಂದ ತುಂಬಿರುವ ಕಾವ್ಯಗಳನ್ನು ಓದಿ ಬೇಸರಪಟ್ಟವರಿಗೆ, ಕವಿಕಲ್ಪನೆಯ ರೆಕ್ಕೆಗುದುರೆಯನ್ನೇರಿ ಹೊರಟು ಮೋಡಗಳ ನಡುವೆಯೇ ತೊಳಲಾಡಿ ನೆಲದ ಮುಖವನ್ನು ಕಂಡೇವೇ ಎನ್ನಿಸಿದವರಿಗೆ, ವಾಸ್ತವಿಕತೆಯೇ ಕಲೆಯ ಜೀವಾಳವೆಂದು ತೋರುವುದು ಅಸಹಜವಲ್ಲ. "ಪ್ರಕೃತಿಯ ಮುಖಕ್ಕೆ ಹಿಡಿದ ಕನ್ನಡಿಯೇ ಕಲೆ", "ತಸಬೀರುಪೆಟ್ಟಿಗೆ, ಗ್ರಾಮಫೋನ್—ಇವೆರಡರ ಉಪಯೋಗವೇ ನನ್ನ ಕಲೆಯ ಆದ್ಯಂತ"—ಈ ಬಗೆಯ ಆಕರ್ಷಕವಾದ ಉಕ್ತಿಗಳೂ ವಾಸ್ತವಿಕತೆಯ ವಾದಕ್ಕೆ ಬೆಂಬಲವಾಗಿ ನಿಲ್ಲುತ್ತವೆ. ಆದರೆ ಕಲೆಯ ಪರಮಾರ್ಥ ಇಷ್ಟೇ ಅಲ್ಲ; ಇದೇ ಅಲ್ಲ. ತನ್ನ ಕಣ್ಣಮುಂದಿರುವುದನ್ನೆಲ್ಲಾ ಚಾಚೂ ತಪ್ಪದಂತೆ ಕಲೆಯಲ್ಲಿ ಅಳವಡಿಸುತ್ತೇನೆಂದು

ಪ್ರತಿಜ್ಞೆಮಾಡಿದ ಯಾವ ಲೇಖಕನೂ ಜಯಶಾಲಿಯಾಗಲಾರನು. ಒಂದು ಸಂಜೆ ರಸ್ತೆಯ ಮುಂದೆ ನಿಂತು, ಐದೇ ಐದು ನಿಮಿಷ ಕಾಲದಲ್ಲಿ ಅಲ್ಲಿ ಕಾಣುವುದು ನಡೆಯುವುದೆಲ್ಲವನ್ನೂ ತದ್ವತ್ತಾಗಿ ಚಿತ್ರಿಸಲು ಅವನು ತೊಡಗುತ್ತಾನೆಂದು ಭಾವಿಸೋಣ. ಆದರೆ, ಆ ರಸ್ತೆಯ ಉದ್ದಗಲ, ಅದರ ಹಳ್ಳತಿಟ್ಟುಗಳು, ಬೆಳಕುನೆಳಲುಗಳು, ಕ್ಷಣಕ್ಷಣದಲ್ಲೂ ಅಲ್ಲಿಗೆ ಸುಳಿದು ದೂರವಾಗುವ ಜನರು, ಅವರಲ್ಲಿ ಒಬ್ಬೊಬ್ಬರ ವೈವಿಧ್ಯಮಯವಾದ ಆಕೃತಿಗಳು, ಅವರೆಲ್ಲರ ಎಲ್ಲ ಮಾತುಕತೆಗಳು, ವಿಶೇಷ ರೀತಿಗಳು, ವಿಪರೀತ ಚರ‍್ಯೆಗಳು—ಇದೆಲ್ಲವನ್ನೂ ಒಂದೂ ಬಿಡದಂತೆ ಯಾರು ತಾನೆ ಚಿತ್ರಿಸಬಲ್ಲರು? ಇಂಥ ಸಂದರ್ಭಗಳಲ್ಲೆಲ್ಲಾ, ಗಮನಾರ್ಹವೆಂದು ಅರ್ಥಪೂರ್ಣವೆಂದು ತನಗೆ ತೋರಿದ ಅಂಶಗಳನ್ನು ಮಾತ್ರ ಲೇಖಕನು ತಿಳಿದೋ ತಿಳಿಯದೆಯೋ ಆರಿಸಿಕೊಳ್ಳುತ್ತಾನೆ; ಹಾಗೆ ತನ್ನ ಮನಸ್ಸಿಗೆ ಹಿಡಿದ ಅಂಶಗಳನ್ನು ಜೋಡಣೆಮಾಡಿ ಒಂದು ಚಿತ್ರ ಪರಂಪರೆಯನ್ನು ರಚನೆಮಾಡುತ್ತಾನೆ. ಈ ಬಗೆಯ ಆಯ್ಕೆಯೂ ಅದರ ಬೆನ್ನಂಟಿದ ಸಂಯೋಜನೆಯೂ ಇಲ್ಲದೆ ಕಲಾಕರ್ಮವೇ ಶಕ್ಯವಲ್ಲ. ಅನಿವಾರ್ಯವಾಗಿ ನಡೆಯುವ ಈ ಆಯ್ಕೆಯಿಂದ ಮೂಲದೃಶ್ಯದ ಎಷ್ಟೋ ಅಂಶಗಳು ಬಿಟ್ಟು ಹೋಗುತ್ತವೆ; ಉಳಿದವುಗಳಿಗೆ ಜೋಡಣೆಯಲ್ಲಿ ಹೊಸ ಸಂಬಂಧವೊದಗುತ್ತದೆ, ಹೊಸ ಅರ್ಥ ಮೂಡುತ್ತದೆ. ಒಂದೇ ಮೂಲದೃಶ್ಯವನ್ನು ನಾಲ್ಕು ಮಂದಿ ಕಲೆಗಾರರು ಚಿತ್ರಿಸ ಹೊರಟರೆ ಅವರವರ ಶಕ್ತಿದೃಷ್ಟಿಗಳಿಗೆ ಅನುಗುಣವಾಗಿ ಅವರ ಕೃತಿಗಳೂ ಭಿನ್ನರೂಪಿಗಳಾಗುತ್ತವೆ. ಕವಿರಚನೆ ಮೂಲ ದೃಶ್ಯಕ್ಕಿಂತ ಉತ್ತಮವಾಗಬಹುದು, ಹೆಚ್ಚು ಅರ್ಥವತ್ತಾಗಬಹುದು. ಆದರೆ ಕೇವಲ ಅದರ ಪ್ರತಿಬಿಂಬವಾಗಿ ನಿಲ್ಲುವುದು ಅಸಾಧ್ಯ. ಪ್ರಕೃತಿಯ ಅಥವಾ ಜೀವನದ ಪ್ರತಿಬಿಂಬವೊ ಪಡಿಯಚ್ಚೋ ಅಲ್ಲ ಕಲೆ. ಅವನ್ನು ಆಧಾರ ಸಾಮಗ್ರಿಯಾಗಿ ಬಳಸಿಕೊಂಡು ಹೊಸದೊಂದು ಜಗತ್ತನ್ನೇ ಕಲೆಗಾರನು ನಿರ್ಮಾಣ ಮಾಡುತ್ತಾನೆ.

ಕವಿಯ ಪ್ರತಿಭೆ ಒಂದು ಸಾದಾ ಕನ್ನಡಿಯಲ್ಲ. ಅದೊಂದು ಸೂಕ್ಷ್ಮ ದರ್ಶಿನಿ : ಜೀವನದಲ್ಲಿ ಅಣುರೂಪದಲ್ಲಿ ಅಡಗಿರುವ ಅಂಶಗಳನ್ನು ಬೃಹದಾಕಾರವಾಗಿ ಪ್ರಕಾಶಪಡಿಸುತ್ತದೆ. ಅದೊಂದು ದೂರದರ್ಶಿನಿ : ಕಾಲಾಂತರದ, ದೇಶಾಂತರದ, ಲೋಕಾಂತರದ ಸಂಗತಿಗಳನ್ನು ಹತ್ತಿರಕ್ಕೆ ತಂದು ಕಣ್ಣಿಗೆ ಕಟ್ಟಿ ನಿಲ್ಲಿಸುತ್ತದೆ. ಅದೊಂದು ವರ್ಣವಿಶ್ಲೇಷಿಣಿ : ಲೋಕದಲ್ಲಿ ಸಾಮಾನ್ಯವೆಂದೋ ರಸವೆಂದೂ ತೋರುವ ವಿಷಯಗಳನ್ನು ಬಿಡಿಸಿ ತೋರಿಸಿ ಬಣ್ಣಬಣ್ಣದ ಸೊಗಸನ್ನು ಅಲ್ಲಿ ಕಾಣಿಸುತ್ತದೆ. ಇಷ್ಟೇ ಅಲ್ಲ; ಅದೊಂದು ದೀಪ ಶಿಖೆ : ತಾನು ಕಂಡ ಸಂಗತಿಗಳ ಮೇಲೆ, ನೆಲದಲ್ಲಿ ಜಲದಲ್ಲಿ ಮುಗಿಲಲ್ಲಿ—ಎಲ್ಲಿಯೂ ಗೋಚರಿಸದ ನವೀನ ಕಾಂತಿಯನ್ನು ಬೀರುತ್ತದೆ.

ಹೀಗೆ ಬ್ರಹ್ಮಸೃಷ್ಟಿಯ ರೂಪಪರಿವರ್ತನೆ ಕಲೆಗಾರರ ಅನಿವಾರ್ಯ ಕಾರ್ಯ, ಅತಿಶಯ ಮಹಿಮೆ. ತನ್ನ ಮುಂದಿರುವ ಅನಂತಸಾಮಗ್ರಿಯಲ್ಲಿ ಅವನು ಯಾವುದನ್ನು ಆರಿಸಿಕೊಳ್ಳುತ್ತಾನೆ, ಹೇಗೆ ನಿರೂಪಿಸುತ್ತಾನೆ, ಯಾವ ಭಾವಕ್ಕೆ ಪ್ರಾಮುಖ್ಯ ಕೊಡುತ್ತಾನೆ, ಯಾವ ಉದ್ದೇಶ ಸಾಧನೆಗೆ ಇದನ್ನೆಲ್ಲಾ ಒಳಪಡಿಸುತ್ತಾನೆ—ಎಂಬುದು ಮುಖ್ಯವಾಗಿ

ಅವನ ದೃಷ್ಟಿಯನ್ನು ಅವಲಂಬಿಸುತ್ತದೆ. ಅಂತಃಶಕ್ತಿಯನ್ನು, ಪ್ರತಿಭಾತಾರತಮ್ಯವನ್ನು ಇಲ್ಲಿ ಗಣಿಸದೆ ಬಿಟ್ಟರೆ, ಒಬ್ಬ ಕಲೆಗಾರನನ್ನು ಮತ್ತೊಬ್ಬನಿಂದ ಬೇರ್ಪಡಿಸಿ ಬೇರೆ ಬೇರೆ ವರ್ಗಗಳಾಗಿ ವಿಂಗಡಿಸುವುದು ಈ ದೃಷ್ಟಿಯಲ್ಲದೆ ಬೇರೊಂದಲ್ಲ.

ಅಂತೂ, ವಾಸ್ತವಿಕ ಮಾರ್ಗದ ಕಥೆಗಾರರು ಕೂಡ ವಿಷಯವನ್ನು ತಮ್ಮ ಒಲವಿಗೆ ಅನುಸಾರವಾಗಿ ಆರಿಸಿಕೊಳ್ಳುತ್ತಾರೆ; ವಿವರಗಳನ್ನು ಕೆಲವು ಕಡೆ ಬೆಳೆಸುತ್ತಾರೆ, ಮತ್ತೆ ಕೆಲವು ಕಡೆ ತೇಲಿಸುತ್ತಾರೆ; ವಿಶಿಷ್ಟರೀತಿಯ ಸಮಸ್ಯೆಗಳನ್ನೇ ಎತ್ತಿಹಿಡಿಯುತ್ತಾರೆ. ಸಾಮಾನ್ಯವಾಗಿ ಈ ಮಾರ್ಗದ ಕೃತಿಯಲ್ಲಿ ಸ್ತ್ರೀಪುರುಷ ಸಂಬಂಧದ ಕೆಲಕೆಲವು ಮುಖಗಳು ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ. ಕಾಮಿಗಳ ನಡೆವಳಿಕೆಯಲ್ಲಿ ಯಾವುದು ಮರೆಯಾಗಿದ್ದರೆ ಮೇಲೆಂದು ಹಿಂದಿನವರು ಭಾವಿಸಿದ್ದರೋ, ಯಾವುದನ್ನು ಅಶ್ಲೀಲವೆಂದು ನಿಷೇಧಿಸಿದ್ದರೋ ಅದರ ನಿರೂಪಣೆ ಇಲ್ಲಿ ಹೆಚ್ಚು ಹೆಚ್ಚಾಗಿ ಬರುತ್ತದೆ. ಜೀವನದ ಮಿಕ್ಕ ಭಾಗಗಳ ವಿಚಾರದಲ್ಲಿಯೂ ಹೀಗೆಯೇ. ದಾರಿದ್ರ್ಯ, ಕ್ರೌರ್ಯ, ರೋಗರುಜಿನ–ಈ ಮೊದಲದವುಗಳ ನಗ್ನತಾಂಡವದ ಭೀಕರದೃಶ್ಯಗಳು ಸಪರಿಕರವಾಗಿ ಬರುತ್ತವೆ; ಸೃಷ್ಟಿಯೊಳಗೆ ಇದೊಂದು ಹೊರತು ಬೇರೇನೂ ಇಲ್ಲವೇ ಇಲ್ಲವೋ ಎನ್ನುವ ಮಟ್ಟಿಗೆ ಭೂಮ್ಯಾಕಾಶಗಳನ್ನು ತುಂಬಿ ಬರುತ್ತವೆ. ಒಟ್ಟಿನಲ್ಲಿ, ಹಿಂದಿನವರು ಯಾವುದನ್ನು ಗ್ರಾಮ್ಯವೆಂದು, ಅನುದಾತ್ತವೆಂದು ಕಡೆಗಣಿಸುತ್ತಿದ್ದರೋ ಅದಕ್ಕೆ ಪ್ರಧಾನ ಪಟ್ಟವನ್ನು ಕಟ್ಟುವ ನೂತನ ವಿಶ್ವಾಮಿತ್ರ ಸೃಷ್ಟಿಯಂತೆ ಈ ಮಾರ್ಗದ ಅನೇಕ ಕೃತಿಗಳು ಕಾಣಿಸುತ್ತವೆ.

ಕಲೆಗೆ ಇಂಥ ವಸ್ತುವೇ ಇರಬೇಕು, ಇಂಥದು ಕೂಡದು ಎಂದು ಅನುಶಾಸನ ಮಾಡುವ ಅಧಿಕಾರ ಯಾರಿಗೂ ಇಲ್ಲ; ಹಾಗೆ ಮಾಡಿದರೆ ಸರ್ವಸ್ವತಂತ್ರರಾದ ಕಲೆಗಾರರು ಅದನ್ನು ಲಕ್ಷಿಸುವುದೂ ಇಲ್ಲ. ಎಲ್ಲ ವಸ್ತುವೂ ಕಲೆಯ ಸಾಮಾಗ್ರಿಯಾಗ ಬಹುದು, ಎಲ್ಲ ಬಗೆಯ ವಿವರಗಳೂ ಕಲೆಯಲ್ಲಿ ತಲೆದೋರಬಹುದು. ಆದರೆ ಅವು ಕವಿ ಪ್ರತಿಭೆಯಲ್ಲಿ ಮೊದಲು ಲೀನವಾಗಿ ಹದವಾದ ಪಾಕಕ್ಕೆ ಬಂದು ರಸಮಯವಾಗಿ ಹೊರಬೀಳಬೇಕು. ಅನೇಕ ಮಂದಿ ಲೇಖಕರಿಗೆ ಈ ರಹಸ್ಯ ಅರಿವಾದಂತೆ ತೋರುವುದಿಲ್ಲ. ಎಷ್ಟೋ ವೇಳೆ ಅವರ ಕಥೆಗಳು ಶಸ್ತ್ರಚಿಕಿತ್ಸಾಲಯದ ವರದಿಗಳಂತೆ, ಮನೋರೋಗದ ಆಸ್ಪತ್ರೆಯ ದಾಖಲೆಗಳಂತೆ, ಪೋಲೀಸು ಇಲಾಖೆಯ ತನಿಖೆಪಟ್ಟಿಗಳಂತೆ, ವೃತ್ತಪತ್ರಿಕೆಗಳ ವಾರ್ತಾಸಂಗ್ರಹಗಳಂತೆ ಕಾಣಬರುತ್ತವೆ. ಇವನ್ನು ಓದಿದಾಗ, ಇಲ್ಲಿ ಕಥೆಗೆ ತಕ್ಕ ಸಾಮಗ್ರಿಯಿದೆಯೇ ಹೊರತು ಸಾಂಗವಾದ "ಕಥೆ" ಯಾಗಲಿಲ್ಲವಲ್ಲಾ ಎಂದು ವ್ಯಥೆಯಾಗುತ್ತದೆ. ಅಕ್ಕಿ ಬೇಳೆಗಳನ್ನು, ಕಲ್ಲು ಕಸ ಕೂಡ ತೆಗೆದುಹಾಕದೆ, ಅಂಗಡಿಯಿಂದ ತಂದ ಹಾಗೆಯೇ ಮುಂದಿಟ್ಟು, ಊಟಕ್ಕೇಳಿ ಎಂದರೆ ಹೇಗೋ ಹಾಗೆ.

ಕಂಡ ಕಂಡ ವಿವರಗಳನ್ನು ವರದಿಯೊಪ್ಪಿಸಿದ ಮಾತ್ರಕ್ಕೆ ಕಥೆಯಾಗುವುದಿಲ್ಲ. ಲೈಂಗಿಕ ಜೀವನದ ರಹಸ್ಯಗಳನ್ನೂ ಕೊಲೆಗಾರನ ಮನಶ್ಚರ್ಯೆಯನ್ನೂ ಅರಿತುಕೊಳ್ಳುವ

ಮುಖ್ಯೋದ್ದೇಶದಿಂದ ಯಾರೂ ಕಥೆಯನ್ನು ಓದುವುದಿಲ್ಲ. ಅಂಥ ಜ್ಞಾನಪಿಪಾಸೆಯುಳ್ಳವನು ಈ ಕಥೆಗಳನ್ನು ನೆಚ್ಚದೆ, ಇಲ್ಲಿಗಿಂತಲೂ ಹೆಚ್ಚು ವಿಶದವಾದ ಆಧಾರ ಸಮೇತವಾಗಿ ವಿಷಯಪ್ರತಿಪಾದನೆ ಮಾಡಿರುವ ಶಾಸ್ತ್ರಗ್ರಂಥಗಳನ್ನು ನೋಡಿಕೊಳ್ಳುತ್ತಾನೆ. ಕಥೆಗಾರನು ಹೊಸ ಸಂಗತಿಗಳನ್ನು ತಿಳಿಸಿದರೆ ನಾವು ಬೇಡವೆನ್ನುವುದಿಲ್ಲ; ಆದರೆ ರಸಪಾಕದಲ್ಲಿ ಅವನ್ನು ನಮಗೆ ಸವಿಸಲಿ. ಹಾಗೆಯೇ, ಅವನು ಹೊಸ ತತ್ತ್ವಗಳನ್ನು ಬೋಧಿಸಲಿ, ಕ್ರಾಂತಿಯನ್ನೇ ಕೆರಳಿಸಲಿ—ಆದರೆ ಇದೆಲ್ಲ ನಮ್ಮ ಮನಸ್ಸು ರಸಾರ್ದ್ರವಾಗಿದ್ದಾಗ, ಗುರುತು ಸಿಕ್ಕದಂತೆ ಹೃದಯವನ್ನು ಪ್ರವೇಶಿಸಲಿ. ಹೀಗೆ ಬಂದರೆ, ಅವುಗಳ ಪ್ರಭಾವ ಶತಾಧಿಕವಾಗುತ್ತದೆ.

ಇನ್ನೊಂದು ಮಾತು. ಹೆಚ್ಚು ಹೆಚ್ಚಾಗಿ ವಿವರಗಳನ್ನು ರಾಶಿಗೂಡಿಸಿದರೇ ಬರೆಹ ಹೆಚ್ಚು ಪರಿಣಾಮಕಾರಿಯಾಗುವುದೆಂದು ಭಾವಿಸಬಾರದು. ಶಬ್ದಕ್ಕಿರುವುದು ವಾಚ್ಯಾರ್ಥವೊಂದೇ ಅಲ್ಲ; ಅದಕ್ಕಿಂತಲೂ ಮಿಗಿಲಾದ ಸೂಚ್ಯಾರ್ಥಕ್ಕೇ, "ಧ್ವನಿ"ಗೇ, ಕಲೆಯಲ್ಲಿ ಪರಮ ಪ್ರಾಶಸ್ತ್ಯ. ನೂರಾರು ವಿವರಗಳನ್ನು ಒಳಗೊಂಡ ಒಂದು ವರ್ಣನೆ ಚಹರೆಪಟ್ಟಿಯಂತೆ ಬೇಸರಪಡಿಸಬಹುದು. ವರ್ಣನೆಯ ಭಾಗವೇ ಅಲ್ಲವೆಂದು ತೋರುವ ಯಾವುದೋ ಒಂದು ಅರ್ಥವತ್ತಾದ ಸೂಕ್ಷ್ಮಾಂಶದಿಂದ ಒಟ್ಟು ದೃಶ್ಯವೇ ಕಣ್ಣ ಮುಂದೆ ಹೊಳೆಯಬಹುದು; ಈ ದೃಶ್ಯವನ್ನು ಹೊರಗಣ್ಣಿನಿಂದಲೋ ಒಳಗಣ್ಣಿನಿಂದಲೋ ನೋಡಿ ಕವಿ ಪಡೆದ ಅನುಭವ ಈ "ವ್ಯಂಜಕ"ದ ಮೂಲಕ ಸುಲಲಿತವಾಗಿ ನಮಗೆ ಹೃದ್ಗತವಾಗಬಹುದು. ಸಂಕ್ಷೇಪಸಿದ್ಧಿಗೆ ಹೆಚ್ಚು ಬೆಲೆ ಕೊಡುವ ಸಣ್ಣಕಥೆಯಲ್ಲಿ ಇದು ಅತ್ಯಂತ ಮುಖ್ಯವಾದ ವಿಷಯ. ಇದನ್ನು ಉದಾಹರಣೆಗಳ ಮೂಲಕ ಸಮರ್ಥಿಸಲು ಇಲ್ಲಿ ಅವಕಾಶ ಸಾಲದು. ಭಾರತೀಯ ಕಾವ್ಯಮೀಮಾಂಸೆಯನ್ನು ನಿರೂಪಿಸುವ ಯಾವುದಾದರೂ ಒಳ್ಳೆಯ ಗ್ರಂಥದಿಂದ ಧ್ವನಿಸ್ವರೂಪವನ್ನು ಅರಿತುಕೊಳ್ಳಬಹುದು. ಕಥೆಗಾರರು ಹಾಗೆ ಮಾಡಿದರೆ ಅವರಿಗೂ ಕ್ಷೇಮ, ಜನತೆಗೂ ಹಿತ.

ತನಗೆ ಗೋಚರವಾದಷ್ಟನ್ನೂ ಕಥೆಗಾರನು ಚಿತ್ರಿಸಲು ಶಕ್ಯವಿಲ್ಲ; ಹಾಗೆ ಚಿತ್ರಿಸುವುದೂ ಇಲ್ಲ; ಒಳ್ಳೆಯ ಕಲೆಯಲ್ಲಿ ಹಾಗೆ ಚಿತ್ರಿಸಬೇಕಾಗಿಯೂ ಇಲ್ಲ ಎಂಬುದನ್ನು ಇದುವರೆಗೆ ಗಮನಕ್ಕೆ ತಂದುಕೊಂಡದ್ದಾಯಿತು. ಇನ್ನು, ವಾಸ್ತವಿಕತೆ ಮಾತ್ರವೇ ಕಲಾಮಾರ್ಗವಲ್ಲ; ಲೇಖಕನ ಕಣ್ಣು ಕಿವಿಗಳಿಗೆ ನಿಲುಕಿದ್ದನ್ನು ನಿರೂಪಿಸುವುದಷ್ಟೇ ಕಲೆಯ ಕೊನೆಮಾತಲ್ಲ—ಎಂಬುದನ್ನು ನಿರ್ದೇಶಿಸಬೇಕಾಗಿದೆ. ಕವಿ ಪ್ರತಿಭೆ ನೆಲದಮೇಲೆ ನಡೆಯುವಂತೆಯೇ ಗಗನಕ್ಕೂ ಏರಬಲ್ಲದು, ಅಲ್ಲಿ ಹಾರಾಡಲೂ ಬಲ್ಲುದು. ವಸ್ತುಸ್ಥಿತಿಯನ್ನು ಮರೆಯದೆ ಅದರ ತಳಹದಿಯ ಮೇಲೆಯೇ ಕಲ್ಪನೆಯ ಕೊತ್ತಳಗಳನ್ನು ಕಟ್ಟಬಲ್ಲುದು, ಸೌಂದರ್ಯದ ಸೌಧಗಳನ್ನು ನಿರ್ಮಿಸಬಲ್ಲದು. ನಮ್ಮ ಕಥೆಗಾರರು ವಾಸ್ತವಿಕತೆಯ ಸಂಕಲೆಗಳನ್ನು ಕೈಕಾಲುಗಳಿಗೆ ಕಟ್ಟಿಕೊಂಡು, ಅದಕ್ಕೂ ಮಿಗಿಲಾಗಿ ವಾಸ್ತವಿಕತೆಯ ಕಣ್ಣಡೆಗಳನ್ನು ಬಿಗಿದುಕೊಂಡು, ದಿನಬಳಕೆಯ ಸಂಕುಚಿತ ಜೀವನದ ಸೆರೆಮನೆಯಲ್ಲಿ ಯಾವಾಗಲೂ ಕುಳಿತುಬಿಡಬಾರದು. ಕಲೆಯಲ್ಲಿ ರಮ್ಯವಾದ

ಸ್ವಭಾವೋಕ್ತಿಗೆ ಸ್ಥಾನವಿರುವಂತೆಯೇ ಮಿತವಾದ ಅತಿಶಯೋಕ್ತಿಗೂ ಹಿತವಾದ ಉತ್ಪ್ರೇಕ್ಷೆಗೂ ಉಂಟು. ಅಸಾಧ್ಯವೆಂದು ತೋರುವ ಸಂಗತಿಗಳನ್ನು ಸಂಭವವೆನ್ನುವಂತೆ ಸಹಜವೆನ್ನುವಂತೆ ಕವಿಪ್ರತಿಭೆ ನಿರೂಪಿಸಬಲ್ಲದು; ಅದರಿಂದ ಹೊಸ ಹೊಸ ಸೊಗಸುಗಳನ್ನು ಸಾಧಿಸ ಬಲ್ಲದು. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಒಂದು ಸಾಕು. ಅದನ್ನು ಉದ್ದೇಶಪೂರ್ವಕವಾಗಿ ಅನ್ಯ ಸಾಹಿತ್ಯದಿಂದ ತೆಗೆದುಕೊಳ್ಳುತ್ತೇನೆ. ಡಿಸ್ರೇಲಿ ಬರೆದ 'Ixion, in Heaven' ಎಂಬ ಸಣ್ಣ ಕಥೆಯನ್ನು ನೋಡಿ. ಇಲ್ಲಿ ವಸ್ತು ಪೌರಾಣಿಕ; ದೇವತೆಗಳ ದಿನಚರ್ಯೆ ಇಲ್ಲಿಯ ವಿಷಯ. ಮಾನವ ಜೀವನದ ಅಂಶಗಳನ್ನು ಅಲ್ಲಿಗೆ ಆರೋಪಿಸಿ, ಹೊಸಬಗೆಯಲ್ಲಿ ನಿರೂಪಿಸಿ ಹೇಗೆ ಬಣ್ಣಗೂಡಿಸಿದ್ದಾನೆ! ನಮ್ಮ ಪೌರಾಣಿಕ ಕಥೆಗಳನ್ನೂ ಹೀಗೆ ಹೊಸ ರೀತಿಯಲ್ಲಿ ನೋಡಿ ಉತ್ತಮ ಕಥೆಗಳನ್ನು ಬರೆಯಲು ಶಕ್ಯವಿಲ್ಲವೆ?

ಇದಕ್ಕೆಲ್ಲ ಹದವಾದ ದೃಷ್ಟಿ—ಕಲೆಗಾರನ ದೃಷ್ಟಿ—ಬೇಕು; ಅಷ್ಟೆ. ಅದೊಂದಿದ್ದರೆ, ಅತಿ ಸಾಮಾನ್ಯವಾದ, ಮೇಲುನೋಟಕ್ಕೆ ಅಸುಂದರವೆಂದು ತೋರಬಹುದಾದ ವಸ್ತುವನ್ನು ಕೂಡ ಕಳೆಗಟ್ಟುವಂತೆ ಪ್ರತಿಪಾದಿಸಬಹುದು. ಪೆನ್‌ಗ್ವಿನ್ ಕಥಾವಳಿಯೊಂದರಲ್ಲಿ ಓದಿದ 'A Posteriori' ಎಂಬ ಕಥೆ ಇಲ್ಲಿ ನೆನಪಾಗುತ್ತದೆ. ಇದರ ವಸ್ತು, ರೀತಿ—ಎರಡೂ "ವಾಸ್ತವಿಕ". ಆದರೆ ಇದನ್ನು ಬರೆದವರ ದೃಷ್ಟಿ ಕಲಾಮಯವಾಗಿರುವುದರಿಂದ ಉತ್ಕೃಷ್ಟವಾದ ಕಥೆಯಾಗಿದೆ; ಸಂಪ್ರದಾಯಶರಣರು ಕೂಡ ಇದರ ಒಗಚು ರುಚಿಯನ್ನು ಮೆಚ್ಚುವಂತಿದೆ.

ನಮ್ಮ ಕಥೆಗಾರರು ಅನ್ಯಸಾಹಿತ್ಯಗಳ ಉತ್ತಮ ಕೃತಿಗಳನ್ನು ಹೆಚ್ಚು ಹೆಚ್ಚಾಗಿ ಓದಬೇಕು. ರಸಾನುಭವವೇ ಕಲೆಯ ಹೃದಯವೆಂಬುದನ್ನು ಮನನಮಾಡಬೇಕು. ಜೀವನವನ್ನು ಸಮಗ್ರದೃಷ್ಟಿಯಿಂದ ನೋಡಿ ಪ್ರತಿಭೆಯಿಂದ ಸಂಯೋಜಿಸಿ ಹೃದಯ ಪರಿಪಾಕದಿಂದ ಬರೆಯುವುದನ್ನು ಅಭ್ಯಾಸ ಮಾಡಬೇಕು. ಇದರಿಂದ ಒಳ್ಳೆಯ ಸಾಹಿತ್ಯ ಕನ್ನಡದಲ್ಲಿ ಹೆಚ್ಚು ಹೆಚ್ಚಾಗಿ ಬರುವಂತಾಗಲಿ; ಕನ್ನಡ ಜನದ ಆನಂದವೂ ಸಂಸ್ಕೃತಿಯೂ ಹುಲುಸಾಗಿ ಬೆಳೆಯಲಿ.

೧೯೪೫]

ಮಾಸ್ತಿ ವೆಂಕಟೇಶ ಅಯ್ಯಂಗಾರರ ಸಾಹಿತ್ಯ ವಿಮರ್ಶೆ*

ವೈದ್ಯನ ಅಥವಾ ಶಿಲ್ಪಿಯ ಕೆಲಸದ ಬೆಲೆ ಜನದ ಕಣ್ಣಿಗೆ ಕಟ್ಟುವಹಾಗೆ, ಮನಸ್ಸಿಗೆ ಮುಟ್ಟುವಹಾಗೆ, ಕವಿಯ ಕೆಲಸದ ಬೆಲೆ ಗೋಚರವಾಗುವುದಿಲ್ಲ. ಕವಿಯೊಬ್ಬ ಅಭಿನವಬ್ರಹ್ಮನೆಂದೂ, ಅವನ ಕೃತಿ ದೈವಸೃಷ್ಟಿಯನ್ನು ಮೆಟ್ಟಿ ನಿಲ್ಲುವುದೆಂದೂ ಕೆಲಮಂದಿ ಉತ್ಸಾಹ ಶಾಲಿಗಳು ಕೊಂಡಾಡಬಹುದು. ಆದರೆ ಸಾಮಾನ್ಯ ಮನುಷ್ಯನನ್ನು ವಿಚಾರಿಸಿನೋಡಿ : ಕವಿಯಿಂದ ಲೋಕಕ್ಕೆ ಏನು ಉಪಕಾರವೆಂದು ಅವನಿಗೆ ಬೇರೆ ತಿಳಿಯದು : ಕಾವ್ಯವಿಲ್ಲದಿದ್ದರೂ ಜಗತ್ತು ಎಂದಿನಂತೆ ಸಾಗುವುದೆಂದೇ ಅವನ ಭಾವನೆ. (ಒಂದೊಂದು ವೇಳೆ ತನ್ನ ಬದುಕಿನ ಸಾಫಲ್ಯವನ್ನು ಕುರಿತು ಕವಿಗೇ ಸಂಶಯಹುಟ್ಟಬಹುದು!) ಇದರ ಮೇಲೆ ಯುಗವು ಬದಲಾಯಿಸುತ್ತಿರುವಾಗ, ಹೊಸ ಮಾರ್ಗದ ಕೃತಿಗಳು ಹುಟ್ಟಿ, ಅವಕ್ಕೆ ಬೆಲೆ ಕಟ್ಟುವುದು ಬಲ್ಲವರಿಗೇ ಕಷ್ಟವಾಗುತ್ತಿರುವಾಗ, ಸಾಹಿತ್ಯದ ಪ್ರಯೋಜನವನ್ನೂ ಮಹತ್ತ್ವವನ್ನೂ ಆದರ್ಶವನ್ನೂ ಕವಿಯೇ ಮುಂದೆಬಂದು ಸಾರಬೇಕಾಗುತ್ತದೆ; ಇತ್ತ ಕಡೆಗೆ ಜನತೆಯ ಒಲವನ್ನು ತಿರುಗಿಸಬೇಕಾಗುತ್ತದೆ. ಹೀಗಾಗಿ, ಹೊಸಗನ್ನಡ ಸಾಹಿತ್ಯದ ಈ ಅರುಣೋದಯ ಕಾಲದಲ್ಲಿ ಕವಿಗಳೂ ಕತೆಗಾರರೂ ಸೃಷ್ಟಿಕಾರ್ಯವಷ್ಟಕ್ಕೇ ಕೈನಿಲ್ಲಿಸದೆ ವಿಮರ್ಶಕಾರರೂ ಆಗಿರುವುದನ್ನು ನಾವು ನೋಡುತ್ತಿದ್ದೇವೆ.

---

* ಜೀವನ : ಸಂಪುಟ ೧ : ಸಂಚಿಕೆ ೫, ೧೯೪೦.

ಮಾಸ್ತಿ ವೆಂಕಟೇಶ ಅಯ್ಯಂಗಾರರು ಕನ್ನಡ ಸಾಹಿತ್ಯದ ಅನೇಕ ಪ್ರಾಂತಗಳಲ್ಲಿ ಹೊಸ ದಾರಿಯನ್ನು ತೆರೆದು ಮುಂದಾಳಾಗಿ ನಡೆದಿರತಕ್ಕವರು; ಅವರು ವ್ಯಾಖ್ಯಾನದ ಕಾರ್ಯಕ್ಕೂ ಮೊದಲೇ ಕೈಹಾಕಿ ಆ ಭಾಗದಲ್ಲಿಯೂ ತರುಣರಿಗೆ ಆಚಾರ್ಯರಾಗಿದ್ದಾರೆ. ಕಥೆಗಳನ್ನು ಕಟ್ಟಿದ್ದರಿಂದ, ಗೀತಗಳನ್ನು ಹಾಡಿದ್ದರಿಂದ ಅವರಿಗೆ ಬಂದಿರುವಷ್ಟು ಕೀರ್ತಿ ವಿಮರ್ಶಲೇಖನಗಳನ್ನು ರಚಿಸಿದ್ದರಿಂದ ಅವರಿಗೆ ಬಾರದಿರಬಹುದು. ಆದರೆ ನಿಜವಾಗಿ, ಕನ್ನಡ ಸಾಹಿತ್ಯದಲ್ಲಿ ಒಂದು ಒಳ್ಳೆಯ ಹೆಸರನ್ನು ಸ್ಥಾಪಿಸಿಕೊಡುವಷ್ಟು ಬರೆವಣಿಗೆ ಈ ವ್ಯಾಖ್ಯಾನ ಸಾಹಿತ್ಯ ಭಾಗವೊಂದರಲ್ಲೇ ಅವರ ಲೇಖನಿಯಿಂದ ಹೊರಬಿದ್ದಿದೆ. ಇಲ್ಲಿ ಚಿಕ್ಕ ಲೇಖನವಿದೆ, ದೀರ್ಘಪ್ರಬಂಧವಿದೆ; ಮುನ್ನುಡಿಯಿದೆ, ಕಾವ್ಯ ಪರಿಚಯವಿದೆ, ಸಾಹಿತ್ಯ ಚರಿತ್ರೆಯಿದೆ, ಸ್ವತಂತ್ರವಾದ ಕಾವ್ಯ ಮಿಾಮಾಂಸೆಯಿದೆ, ಸಾಹಿತ್ಯಕ್ಕೆ ತಾಯಿ ಬೇರಾದ ಜನಜೀವನದ ವಿಚಾರವಿದೆ. ಇಷ್ಟು ದೀರ್ಘಕಾಲ, ಇಷ್ಟು ವೈವಿಧ್ಯಮಯವಾಗಿ ಬರೆದ ಲೇಖನ ಮಾಲೆಯಾದರೂ ಇದನ್ನೆಲ್ಲಾ ಒಂದೇ ಜೀವಸೂತ್ರ ಬಿಗಿದಿದೆ : ಸಾಹಿತ್ಯದ ಅಡಿಗಟ್ಟು ಜೀವನದಲ್ಲಿ; ಸಾಹಿತ್ಯದ ಸಾರ್ಥಕತೆ ಜೀವನ ವಿಕಾಸದಲ್ಲಿ. "ಕವಿತೆಯು ಜೀವನದ ನಿಸರ್ಗಕುಸುಮ; ಪಾಂಡಿತ್ಯದ ಕೃತಕ ಫಲವಲ್ಲ." ಈ ಒಂದು ಅಚಲ ತತ್ತ್ವವೇ ಒಂದುಕಡೆ ಮಾಸ್ತಿಯವರ ಕಥೆ ಕವನ ನಾಟಕಗಳನ್ನೂ ಮತ್ತೊಂದುಕಡೆ ಅವರ ವಿಮರ್ಶೆಗಳನ್ನೂ ಪ್ರೇರಿಸಿದೆ.

ಸಾಹಿತ್ಯ ಕಲೆಯ ವಿವೇಚನೆಗೆ ಮಿಾಸಲಾಗಿ ಹುಟ್ಟಿದ ಸ್ವತಂತ್ರ ಗ್ರಂಥ ಇವರ 'ಸಾಹಿತ್ಯ'. ಮಾಸ್ತಿಯವರು ಬಹುಶ್ರುತರು, ಆಲೋಚನಾಪರರು; ನಮ್ಮ ದೇಶದ ಸಾಹಿತ್ಯದಂತೆಯೇ ಪಾಶ್ಚಾತ್ಯ ಸಾಹಿತ್ಯವನ್ನೂ ಶೋಧಿಸಿ ನೋಡಿರತಕ್ಕವರು. 'ಸಾಹಿತ್ಯ'ದಲ್ಲಿ ಪಾಶ್ಚಾತ್ಯ ಕಾವ್ಯ ಮಿಾಮಾಂಸೆಯ ಸಾರವನ್ನು ಸ್ವಯಂ ಕವಿಗಳಾದ ಇವರು ತಮ್ಮ ಅನುಭವದೊಂದಿಗೆ ಸಮನ್ವಯಗೊಳಿಸಿ ಕೊಟ್ಟಿದ್ದಾರೆ. ಇದರಲ್ಲಿ ಜನತೆಯೂ ಕವಿಯೂ ಜೊತೆ ಜೊತೆಗೇ ತಿಳಿಯಬೇಕಾದ ಹಲವು ವಿಷಯಗಳು ಅಡಗಿವೆ : ಉತ್ತಮವಾದ ಸಾಹಿತ್ಯವಿಲ್ಲದೆ ಜನದ ಬಾಳು ಸಂಸ್ಕಾರಹೊಂದದು; ಒಳ್ಳೆಯ ಬಾಳನ್ನು ಬಾಳಿದಲ್ಲದೆ ಒಬ್ಬನು ಒಳ್ಳೆಯ ಕವಿಯಾಗಲಾರನು. ಹೀಗೆಯೇ, ಸತ್ಯ ಸೌಂದರ್ಯಗಳಿಗಿರುವ ಸಂಬಂಧ, ಕಾವ್ಯ–ನೀತಿಗಳ ಸಮಸ್ಯೆ ಈ ಮೊದಲಾದ ತೊಡಕಿನ ವಿಚಾರಗಳೂ ಇಲ್ಲಿ ಸರಸವಾದ ಸಂಮಜಸವಾದ ರೀತಿಯಲ್ಲಿ ಚರ್ಚೆಯಾಗಿವೆ.

ಇನ್ನುಳಿದ ಬರೆವಣಿಗೆ ಮುಖ್ಯವಾಗಿ ಮಹಾಕೃತಿಗಳ ಸಾರ ಪರಿಚಯ. ಮಾಸ್ತಿಯವರು ಕನ್ನಡಿಗರು. ಆದರೆ ಇವರ ದೃಷ್ಟಿ ಕನ್ನಡ ನಾಡಿನ ಮೇಲೆ ಮಾತ್ರವಲ್ಲ, ಹಿಂದೂಸ್ಥಾನದ ಮೇಲೆ ಮಾತ್ರವಲ್ಲ, ಇಡಿಯ ಜಗತ್ತಿನ ಮೇಲೆಯೇ ಇದೆ. ಸಾಹಿತ್ಯೋಪಾಸಕನಿಗೆ ಜಾತಿ ಮತ ದೇಶಕಾಲಗಳ ಎಲ್ಲೆ ಕಟ್ಟಿಲ್ಲವೆಂಬುದನ್ನು ಇವರು ನಿದರ್ಶಿಸಿದ್ದಾರೆ. ಬೆಳಕು ಎಲ್ಲೇ ಮಿನುಗುತ್ತಿರಲಿ, ಅತ್ತ ಇವರ ನೋಟ ಹೊರಳುತ್ತದೆ. ಕಲಾಭಕ್ತರಾದ ಇವರು ಜಗತ್ತಿನ ಮಹಾಕೃತಿಗಳನ್ನು ತಾವು ಓದಿ ಮೆಚ್ಚಿದಷ್ಟಕ್ಕೇ ತೃಪ್ತಿ ಹೊಂದದೆ, ನಮ್ಮ ಜನವೂ ಇದನ್ನು ಕೇಳಬೇಕು, ತಿಳಿಯಬೇಕು, ಇದರಿಂದ ತನ್ನ

ಬಾಳನ್ನು ತಿದ್ದಿಕೊಳ್ಳಬೇಕು—ಎಂಬ ಹಿರಿಯ ಆಸೆಯಿಂದ ಅವುಗಳ ಸಾರ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡಲು ಸಂತತವಾಗಿ ಶ್ರಮಿಸುತ್ತಿದ್ದಾರೆ.

ಈ ಲೇಖನಗಳ ವಿಷಯವೈವಿಧ್ಯವೇ ಸಾಕು, ಯಾರನ್ನಾದರೂ ಬೆರಗುಪಡಿಸುತ್ತದೆ. ನಮ್ಮ ವೈಷ್ಣವದಾಸರ ಕೀರ್ತನೆಗಳು, ಕನ್ನಡದ ಲಾವಣಿ ಸಾಂಗತ್ಯಗಳು, ಠಾಕೂರರ ಗೀತಾಂಜಲಿ, ಕಾಳಿದಾಸನ ಮೇಘಸಂದೇಶ, ಇರಾನಿನ ಹಾಫಿಸ್ ಕವಿಯ ಪ್ರೇಮಗೀತಗಳು, ಪ್ರಾಚೀನ ಯೆಹೂದ್ಯರ ಡೇವಿಡ್ ಮಹಾರಾಜನ ಕೀರ್ತನೆಗಳು, ವ್ಯವಹಾರ ಜೀವನದಲ್ಲಿ ಗುಲಾಮನಾಗಿದ್ದರೂ ಅರಿವಿನಲ್ಲಿ ಗುರುಗಳಿಗೆ ಗುರುವಾಗಿದ್ದ ಎಪಿಕ್ಟಿಟಸನ ಉಪದೇಶಗಳು, ಚಕ್ರವರ್ತಿ ಪದವಿಯ ಕರ್ತವ್ಯಗಳನ್ನು ತತ್ತ್ವಜ್ಞಾನದ ಬೆಳಕಿನಲ್ಲಿ ನಡಸಿದ ಮಾರ್ಕಸ್ ಆರೇಲಿಯಸನ ಆಲೋಚನೆಗಳು, ಕೆಸರಿನಿಂದ ಉದ್ಧಾರ ಹೊಂದಿ ಕ್ರೈಸ್ತಸಂತನಾಗಿ ಬಾಳಿದ ಅಗಸ್ಟೀನ್ ಸಾಧುವಿನ ಬಿನ್ನಪಗಳು, ಕವಿಗಳಲ್ಲಿ ಕವಿಯಾಗಿ ಜ್ಞಾನಿಗಳಲ್ಲಿ ಜ್ಞಾನಿಯಾಗಿ ತೇಜೋಮೂರ್ತಿಯಾಗಿ ಬೆಳಗಿದ ಗಯಟೆ ಮಹಾಶಯನ ಸಂವಾದಗಳು (ಈ ಪಟ್ಟಿ ಪೂರ್ಣವಲ್ಲ)—ಹೀಗೆ ಎಷ್ಟು ಬಗೆಯ ಗ್ರಂಥಗಳು ಮಾಸ್ತಿಯವರ ಮನೋಮುಕುರದಲ್ಲಿ ಪ್ರತಿಫಲಿಸಿವೆ! ಇಲ್ಲಿ ನಾವು ಗಮನಿಸತಕ್ಕದ್ದು ಇವುಗಳ ವೈವಿಧ್ಯವೊಂದೇ ಅಲ್ಲ. ಇವೆಲ್ಲಾ ವಿಶ್ವಸಾಹಿತ್ಯದ ಉತ್ತಮ ಕೃತಿಗಳು. ಇವು ಎರಡು ಘಳಿಗೆಯ ಕಾಲ ಆಹ್ಲಾದಕೊಟ್ಟು ಬಳಿಕ ನೆನಪಿನಿಂದ ಮರೆಯಾಗತಕ್ಕುವಲ್ಲ, ಓದಿ ಮನನಮಾಡಿದವನ ಬದುಕನ್ನೇ ಸಂಸ್ಕರಿಸತಕ್ಕುವು. ಮಾಸ್ತಿ ವೆಂಕಟೇಶ ಅಯ್ಯಂಗಾರರು ಈ ಶ್ರೇಷ್ಠ ಗ್ರಂಥಗಳನ್ನೆಲ್ಲಾ ಮತ್ತೆ ಮತ್ತೆ ಓದಿದ್ದಾರೆ; ವರ್ಷಗಟ್ಟಳೆ ಮನಸ್ಸಿನಲ್ಲಿ ತಿರುವಿಹಾಕಿದ್ದಾರೆ; ಅವುಗಳ ಸಾರ ಪಾಕಗೊಂಡು ಒಂದು ಹದಕ್ಕೆ ಬಂದಮೇಲೆ ತಮ್ಮ ಲೇಖನಗಳಲ್ಲಿ ಕನ್ನಡಿಗರಿಗೆ ನೀಡಿದ್ದಾರೆ. ಇದು ಉದ್ದಕ್ಕೂ ನಡೆದು ಬಂದಿರುವ ಕಾರ್ಯ. ಎಷ್ಟೋ ವರ್ಷಗಳ ಹಿಂದೆ 'ವಿಮರ್ಶೆ—೧' ಹೊರಬಿದ್ದಿತು. 'ವಿಮರ್ಶೆ—೨' ಬಂದಿತು; "ಇಲ್ಲಿ ಹಾಕಿರುವ ಅಂಕಕ್ಕೆ ಸದ್ಯದಲ್ಲಿ ಮುಂದಣ ದೃಷ್ಟಿಯಿಲ್ಲ" ಎಂದು ಮಾಸ್ತಿಯವರು ಅದರ ಮುನ್ನುಡಿಯಲ್ಲಿ ಸೂಚಿಸಿದರು. ಆದರೆ, ಮುಂದೆ ಲೇಖನಗಳು ಮತ್ತೆ ಜೊತೆಗೂಡಿ ಪುಸ್ತಕಗಳಾಗಿ ಬರುವುದು ಮಾತ್ರ ನಿಲ್ಲಲಿಲ್ಲ. ವಿಮರ್ಶೆಯ ಮೂರನೆಯ ಸಂಪುಟವಷ್ಟೇ ಅಲ್ಲದೆ ನಾಲ್ಕನೆಯದೂ ಈಗ ತಾನೆ ಹೊರಬಿದ್ದಿದೆ. ಈ ಧಾರೆ ಇಲ್ಲಿಗೇ ನಿಲ್ಲದೆ ಇನ್ನೂ ಮುಂದುವರಿಯುವುದೆಂಬ ನಿರೀಕ್ಷೆಯೂ ಇದೆ.

ಮಾಸ್ತಿಯವರ ವ್ಯಾಸಂಗದ ಫಲ ಒಂದು ಲೇಖನಕ್ಕೇ ಮುಕ್ತಾಯವಾಗದೆ ಒಂದು ಪುಸ್ತಕದ ಆಕಾರಕ್ಕೆ ಬೆಳೆದಿರುವುದೂ ಉಂಟು. 'ಕರ್ಣಾಟಕದ ಜನಪದ ಸಾಹಿತ್ಯ'ವನ್ನೂ 'ರವೀಂದ್ರನಾಥ ಠಾಕೂರ'ರನ್ನು ಕುರಿತ ಗ್ರಂಥವನ್ನೂ ಇದಕ್ಕೆ ನಿದರ್ಶನವಾಗಿ ಸೂಚಿಸಬಹುದು. ಲಾವಣಿ ಸಾಂಗತ್ಯಗಳ ಮೇಲಿನ ಹುಚ್ಚು ವೆಂಕಟೇಶ ಅಯ್ಯಂಗಾರರಿಗೆ ವಿದ್ಯಾರ್ಥಿದೆಶೆಯಲ್ಲೇ ಹಿಡಿಯಿತು. ಮುಂದೆ ಅಧಿಕಾರ ನಿಮಿತ್ತದಿಂದ ಅವರು ದೇಶದ ಮೂಲೆ ಮೂಲೆಗಳಲ್ಲೂ ಸುತ್ತಿದಾಗ ನಾಡ ಹಾಡುಗಳನ್ನು ಇನ್ನಷ್ಟು

ಸಂಗ್ರಹಿಸಿದರು. ಈ ವಿಷಯವಾಗಿ ಅವರು ಪರಿಷತ್ಪತ್ರಿಕೆಯಲ್ಲಿ ಮೊದಲು ಪ್ರಕಟಿಸಿದ ಒಂದು ಲೇಖನದಿಂದ ಹುರುಪುಗೊಂಡವರಲ್ಲಿ ನಾನೂ ಒಬ್ಬ. ಮಾಸ್ತಿಯವರು ಈ ಲೇಖನವನ್ನು ಬರೆದೀಚೆಗೆ ಜನಪದ ಸಾಹಿತ್ಯವನ್ನು ಕೂಡಿಸುವ ಕಾರ್ಯ ನಮ್ಮ ದೇಶದಲ್ಲಿ ಬಹುಮುಖವಾಗಿ ನಡೆದಿದೆ. ಈಚೆಗೆ, ಈ ರಾಶಿಯನ್ನು ಒಟ್ಟು ದೃಷ್ಟಿಯಿಂದ ನೋಡಿ ಅದರ ಗಟ್ಟಿಯನ್ನು ಆರಿಸುವ ಒಂದು ದೀರ್ಘ ಪ್ರಬಂಧವನ್ನೇ ಮಾಸ್ತಿಯವರು ಬರೆದಿದ್ದಾರೆ. ಠಾಕೂರರ ವಿಷಯದಲ್ಲೂ ಹೀಗೆಯೇ. 'ಗೀತಾಂಜಲಿ'ಯ ಸವಿಯನ್ನು ತೋರಿಸುವ ಲೇಖನವೊಂದು ಮೊದಲು ಬಂದಿತು. ಆ ಬಳಿಕ ಮೈಸೂರು ವಿಶ್ವವಿದ್ಯಾನಿಲಯದವರ ಕೋರಿಕೆಯಂತೆ ಠಾಕೂರರ ಜೀವನ, ಕಾವ್ಯ, ಕಥೆ, ನಾಟಕ, ವಿವಿಧ ಲೇಖನಗಳು, ಮಹಾಕಾವ್ಯಗಳು—ಇದನ್ನೆಲ್ಲಾ ಸಮಾಲೋಚನೆ ಮಾಡುವ ವಿಸ್ತಾರವಾದ ಗ್ರಂಥವನ್ನೇ ಮಾಸ್ತಿಯವರು ಬರೆದರು. ದೊಡ್ಡ ಕವಿಯೊಬ್ಬನ ಕೃತಿ ವಿಮರ್ಶೆಯನ್ನು ಪ್ರಶಂಸೆಯೊಂದರಲ್ಲೇ ಮುಗಿಸದೆ, ಗೌರವಕುಂದದ ರೀತಿಯಲ್ಲಿ ಅವಶ್ಯವಾದ ಕಡೆ ಟೀಕೆ ಮಾಡುವುದನ್ನೂ ಬಿಡದೆ, ಆತನ ಬರವಣಿಗೆಯ ಮಹತ್ತ್ವವನ್ನು ಮನಗಾಣಿಸುವುದು ಹೇಗೆಂಬುದಕ್ಕೆ ಈ ಗ್ರಂಥ ಒಳ್ಳೆಯ ನಿದರ್ಶನ.

ಮಾಸ್ತಿಯವರು ವಿಮರ್ಶೆಗಾಗಿ ಆರಿಸಿಕೊಂಡಿರುವ ವಿಷಯಗಳನ್ನು ನೋಡಿದರೆ ಅವರ ಒಲವು ಎತ್ತಕಡೆಗೆ ಎಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಈ ಲೇಖನಗಳಲ್ಲಿ ಹಲವು ಭಕ್ತಜೀವನವನ್ನೇ ಮುಖ್ಯವಾಗಿ ನಿರೂಪಿಸುತ್ತವೆ. ವೈಷ್ಣವದಾಸರು, ಆಳ್ವಾರರು, ಠಾಕೂರರು, ಡೇವಿಡ್, ಅಗಸ್ಟೀನ್ — ಈ ಮೊದಲಾದ ಭಕ್ತರ ಭಾವಪೂರ್ಣವಾದ ಬಿನ್ನಹಗಳು 'ಬಿನ್ನಹ'ಕಾರರಾದ ಮಾಸ್ತಿಯವರ ಹೃದಯದ ತಂತಿಯನ್ನು ಮಿಾಟಿ ಈ ಲೇಖನಗಳನ್ನು ಹೊರಡಿಸಿವೆ. ಭಕ್ತಿಯೋಗದ ತಿರುಳನ್ನು ಇವುಗಳಲ್ಲಿ ನಾವು ಕಾಣಬಹುದು. ಆದರೆ, ಭಕ್ತಿಯಿಂದ ಮಾತ್ರಕ್ಕೆ ಇವರ ದೃಷ್ಟಿ ಸಂಕುಚಿತವಾಗಿದೆಯೆಂದಾಗಲಿ ಮತದ ಕಟ್ಟಿಗೆ ಸಿಕ್ಕಿದೆಯೆಂದಾಗಲಿ ಎಷ್ಟುಮಾತ್ರಕ್ಕೂ ಭಾವಿಸಕೂಡದು. ತಾವೇ ಕವಿಗಳೂ ಕತೆಗಾರರೂ ಆಗಿರುವಾಗ ಮಾಸ್ತಿಯವರು ಇಂಥ ತಪ್ಪನ್ನು ಮಾಡುವ ಸಂಭವವೆಲ್ಲಿ? ಅವರದು ಸಾಹಿತಿಯ ಉದಾರವಾದ ದೃಷ್ಟಿ. ಹಾಫಿಸ್ ಕವಿಯನ್ನು ಕುರಿತು ಬರೆಯುತ್ತಾ, ಧರ್ಮಾಂಧವಾದ ಅನುಚಿತ ವ್ಯಾಖ್ಯಾನವನ್ನು ಅವರು ಸ್ಪಷ್ಟವಾಗಿ ಖಂಡಿಸಿದ್ದಾರೆ. ನೀತಿಯಿಂದ ಜಾರಿದ ಹಾಡು ಲಾವಣಿಗಳ ಕಾವ್ಯಸಂಪತ್ತನ್ನು ತಾವೂ ಆಸ್ವಾದಿಸಿ ವಾಚಕರಿಗೂ ಒದಗಿಸಿಕೊಟ್ಟಿದ್ದಾರೆ. ಸಾಹಿತ್ಯದಲ್ಲೂ ಅಷ್ಟೆ, ಜೀವನದಲ್ಲೂ ಅಷ್ಟೆ; ಅವರ ಮನಸ್ಸನ್ನು ಮುಖ್ಯವಾಗಿ ಸೆಳೆಯುವುದು ಮಾನವಸಂಬಂಧ. ಅಗಸ್ಟೀನ್ ಸಾಧುವಿನ ವೃತ್ತಾಂತದಲ್ಲಿ ಅವನಿಗೂ ಅವನ ತಾಯಿಗೂ ಇದ್ದ ಪ್ರೇಮಾರ್ದ್ರವಾದ ಸಂಬಂಧವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. "ಕವಿಯ ಕರ್ತವ್ಯವೇನೆಂದರೆ, ಪ್ರಪಂಚದ ಸೌಂದರ್ಯವನ್ನು ವರ್ಣಿಸುವುದು, ಮನಸ್ಸು ಮನಸ್ಸಿಗೆ ಬೆರೆಯುವಂತೆ ಸಹಾಯಮಾಡುವುದು, ಜೀವನದ ಉತ್ಸವದಲ್ಲಿ ವಂದಿಯಾಗಿ ಮಾಗಧನಾಗಿ ತುತೂರಿಕಾರನಾಗಿರುವುದು"—ಠಾಕೂರರ ವಿಷಯಕ್ಕೆ ಹೇಳಿದ ಈ ಮಾತನ್ನು ಮಾಸ್ತಿಯವರ ವಿಮರ್ಶೆಗೇ ನಾವು ಅನ್ವಯಿಸಬಹುದು.

ಇವರ ಮುನ್ನುಡಿಗಳನ್ನು ಕುರಿತು ಒಂದು ಮಾತನ್ನು ಇಲ್ಲೇ ಹೇಳಿಬಿಡಬಹುದು. ಈಚೀಚೆಗೆ ಕನ್ನಡದಲ್ಲಿ, ಹಿರಿಯರೊಬ್ಬರ ಅವಲಂಬನ ವಾಕ್ಯಗಳಿಲ್ಲದೆ ಗ್ರಂಥಗಳು ಹೊರಬೀಳುವುದು ವಿರಳವಾಗುತ್ತಿದೆ. ಗ್ರಂಥಕ್ಕೆ ಮುನ್ನುಡಿಯಿಂದ ಅಲಂಕಾರವೇ ಅಪಕಾರವೇ ಎಂಬ ವಿಷಯದಲ್ಲಿ ವಾದಗಳೂ ನಡೆದಿವೆ. ಇದು ಹೇಗೇ ಇರಲಿ; ಶ್ರೀಮಾನ್ ಪು.ತಿ. ನರಸಿಂಹಾಚಾರ್ಯರ 'ಹಣತೆ'ಗೆ ಮುನ್ನುಡಿ ಬರೆಯುತ್ತಾ, ಹೊಸಲೇಖಕನ ಅಧೈರ್ಯವನ್ನು ಬಿಡಿಸುವುದಕ್ಕೂ, ಸಾಹಿತ್ಯ ಸೇವಕರಲ್ಲಿ ಒಬ್ಬರೊಬ್ಬರಿಗಿರುವ ಗೆಳೆತನವನ್ನು ಸಾರುವುದಕ್ಕೂ ಸದ್ಯದಲ್ಲಿ ಈ ಬಗೆಯ ಬೆಂಬಲ ಅಗತ್ಯವೆಂದು ಮಾಸ್ತಿಯವರು ಪ್ರತಿಪಾದನೆ ಮಾಡಿರುವುದನ್ನು ಓದಿದರೆ ಆಕ್ಷೇಪಕನ ಬಾಯಿ ಕಟ್ಟಿ ಹೋಗುತ್ತದೆ. ಹೀಗೆ ಬೆನ್ನು ತಟ್ಟುವುದರಲ್ಲೇ ಮಾಸ್ತಿಯವರ ಮುನ್ನುಡಿಗಳ ಉಪಯೋಗ ಮುಗಿಯುವುದಿಲ್ಲ. ಲೇಖಕನ ನಿಜವಾದ ಸಾಮರ್ಥ್ಯವೇನೆಂಬುದನ್ನು ಅವರು ಎತ್ತಿ ಹಿಡಿದು, ಅನುಭವಪೂರ್ಣವಾದ ಮಾತುಗಳನ್ನೂ ಆಡಿ, ಈ ಮುನ್ನುಡಿಗಾರರು ವಾಚಕನಿಗೂ ತುಂಬ ಸಹಾಯಮಾಡುತ್ತಾರೆ.

ವೆಂಕಟೇಶ ಅಯ್ಯಂಗಾರರದು ಗಲಭೆಯಿಲ್ಲದ ಶೈಲಿ. ವಾಕ್ಯಗಳು ಹಿತಮಿತವಾಗಿ ಆಡಂಬರವಿಲ್ಲದೆ ರೂಢಿಯ ಮಾತಿನ ಧಾಟಿಯಲ್ಲೇ ಸಾಗುತ್ತಿರುತ್ತವೆ. ಅಲ್ಲಲ್ಲೇ, ಆಳವಾದ ಅನುಭವವೋ ಸೂಕ್ಷ್ಮವಾದ ಆಲೋಚನೆಯೋ ಒಂದೆರಡು ವಾಕ್ಯದಲ್ಲಿ ಸದ್ದಿಲ್ಲದೆ ಅರಳುತ್ತದೆ : ಸರಸವಾದ ಹೋಲಿಕೆಯ ಮೂಲಕ ವಿಷಯವು ರಮ್ಯವಾಗಿ ರೂಪುಗೊಳ್ಳುತ್ತದೆ. ಆರಿಸಿ ತೆಗೆಯಬಹುದಾದ ಇಂಥ ವಾಕ್ಯಗಳು ಇವರ ಬರವಣಿಗೆಯಲ್ಲಿ ಉದ್ದಕ್ಕೂ ದೊರೆಯುತ್ತವೆ. ಇಲ್ಲಿ ಮಾದರಿಗಾಗಿ ಕೆಲವನ್ನು ಮಾತ್ರ ಎತ್ತಿಕೊಟ್ಟಿದೆ :

ಠಾಕೂರರ ಗ್ರಂಥಗಳ ವಿಷಯವಾಗಿ ಬರೆಯುತ್ತಾ ಹೀಗೆಂದಿದ್ದಾರೆ : "ಇಂಗ್ಲೀಷನ್ನು ಬಲ್ಲ ಪಾಶ್ಚಾತ್ಯ ಪ್ರಪಂಚವು ಈ ಗ್ರಂಥಗಳನ್ನು ಓದಿ ಸಂತೋಷಪಟ್ಟಿದೆ. ನಾವಾದರೋ ಗೌಳಿಗನ ಮನೆಯ ಮಕ್ಕಳು ಹಾಲಿನ ರುಚಿಯನ್ನು ಕಾಣದಂತೆ ಠಾಕೂರವರ ಈ ಗ್ರಂಥಗಳ ರುಚಿಯನ್ನು ಅರಿಯಲಾರದೆ ಇದ್ದೇವೆ." (ಈ ಸಂಕಟವೇ ಮಾಸ್ತಿಯವರನ್ನು ವಿಮರ್ಶೆಯ ಕಡೆಗೆ ತಿರುಗಿಸಿರಬೇಕು.)

"ಎಷ್ಟು ಹೇಳಿದರೂ ಸ್ವರ್ಗದಲ್ಲಿ ಒಂದು ಹೊಲಗೇರಿ ಇರಬೇಕೆಂಬ ಭಾವನೆ ನಮ್ಮ ಮನಸ್ಸಿನಿಂದ ಹೋಗುವುದಿಲ್ಲ."

"ದೀಪದಿಂದ ಇನ್ನೊಂದು ದೀಪವನ್ನು ಹಚ್ಚಿಸಿಕೊಳ್ಳಬಹುದು; ನಕ್ಷತ್ರದಿಂದ ಇನ್ನೊಂದನ್ನು ಹಚ್ಚಿಕೊಳ್ಳುವ ಆಸೆ ಇಲ್ಲ."

"ಸಾಮಾನ್ಯವಾಗಿ ನಾವು ಪ್ರಪಂಚದಲ್ಲಿ ಸಂತೆಗೆ ಬಂದವರಂತೆ ನಡೆದುಕೊಳ್ಳುತ್ತೇವೆ .... ನಿಜವಾಗಿ ನೋಡಿದರೆ ನಾವು ಬಂದಿರುವುದು ಸಂತೆಗಲ್ಲ; ಒಂದು ಕೇಳೀಗೃಹಕ್ಕೆ, ಒಂದು ವಿವಾಹಮಂಟಪಕ್ಕೆ, ಒಂದು ದೇವಾಲಯಕ್ಕೆ. ನಾವು ಪ್ರಪಂಚದಲ್ಲಿ ಮಾಡಬೇಕಾಗಿರುವುದು ಬರಿಯ ವ್ಯಾಪಾರವಲ್ಲ. ನಾವು ಇಲ್ಲಿಯ ಆಟದಲ್ಲಿ

ಸೇರಬೇಕಾಗಿದೆ, ಇಲ್ಲಿಯ ಉತ್ಸವದಲ್ಲಿ ಭಾಗಿಯಾಗಬೇಕಾಗಿದೆ, ಇಲ್ಲಿಯ ಪೂಜೆಯಲ್ಲಿ ಕಲೆಯಬೇಕಾಗಿದೆ."

ಸಾಹಿತ್ಯದಲ್ಲಿ ಮಾಸ್ತಿಯವರ ದೃಷ್ಟಿ ವಿಶ್ವಕುತೂಹಲಿಯಾದದ್ದೆಂದು ಮೇಲೆ ನೋಡಿದೆವು. ದೇಶ ದೇಶಗಳನ್ನೆಲ್ಲಾ ಸುತ್ತಿಬಂದವರಿಗೆ ಊರಿನ ಮಮತೆ ಮತ್ತಷ್ಟು ಹೆಚ್ಚುತ್ತದೆ. ಹೊರಗಿನ ಹಿರಿಯ ವಸ್ತುಗಳ ಬೆಲೆಯನ್ನು ಅರಿತವರಿಗೆ ತಮ್ಮಲ್ಲೇ ಇರುವ ರತ್ನಗಳ ಮಹಿಮೆ ಮತ್ತಷ್ಟು ಖಚಿತವಾಗಿ ಗೊತ್ತಾಗುತ್ತದೆ. ವೆಂಕಟೇಶ ಅಯ್ಯಂಗಾರರು ತಮ್ಮ ನೋಟವನ್ನು ಈಗ ಭರತಖಂಡದ ಆದಿಕಾವ್ಯವೆನಿಸಿದ ರಾಮಾಯಣದ ಕಡೆಗೆ ತಿರುಗಿಸಿ, ವಾಲ್ಮೀಕಿಯ ಅಸದೃಶ ಕವಿತಾಶಕ್ತಿಯನ್ನು ಒರೆಹಚ್ಚಿ ನೋಡಿದ್ದಾರೆ. ವಿಮರ್ಶಕರ ಅರಿವೂ ಅನುಭವವೂ ಸಮಪಾಕಕ್ಕೆ ಬಂದಿರುವಾಗ ರಚಿತವಾದ ಕೃತಿ—ಆದಿಕವಿ ವಾಲ್ಮೀಕಿ. ಇದರ ಸೊಗಸನ್ನು ನಿರೂಪಿಸುವ ಭಾಗ್ಯ ನನ್ನ ಮಿತ್ರರಾದ ಶ್ರೀಮಾನ್ ಕೆ.ವಿ. ಪುಟ್ಟಪ್ಪನವರದು.

●

ತಾರಾಪ್ಯಾರಿ*

ಸಾಹಿತ್ಯದ ಧ್ಯೇಯವು ಯಾವುದು : ನೀತಿಯನ್ನು ಬೋಧಿಸುವುದೆ, ಆನಂದವನ್ನು ಕೊಡುವುದೆ? ಉಪದೇಶ ಮಾಡುವುದಕ್ಕೆಂದೇ ಕಾವ್ಯನ್ನಾಗಲಿ ಕಾದಂಬರಿಯನ್ನಾಗಲಿ ರಚಿಸಬಹುದೆ? ಈ ವಿಷಯವನ್ನು ಕುರಿತು ಅನೇಕ ಚರ್ಚೆಗಳು ಇದುವರೆಗೆ ನಡೆದು ಹೋಗಿವೆ. ತಿಳಿದವರು ಯಾರೂ ಕಾವ್ಯದಲ್ಲಿ ನೀತಿಯ ಸೆಲೆಯೇ ಇರಕೂಡದು ಎಂದು ಹೇಳುವುದಿಲ್ಲ. ಹಾಗೆ ನೋಡಿದರೆ, ಉದಾತ್ತವಾದ ಭಾವಗಳನ್ನು ಒಳಕೊಳ್ಳದ ಕವನವಾಗಲಿ, ನಾಟಕವಾಗಲಿ ಕಾದಂಬರಿಯಾಗಲಿ ಉತ್ತಮವಾದ ಸಾಹಿತ್ಯವೆನ್ನಿಸಿಕೊಳ್ಳುವುದಿಲ್ಲವೆಂದೇ ಹೇಳಬೇಕು; ಪೊಳ್ಳುಹರಟೆಗೆ ಯಾರೂ ಗೌರವ ಕೊಡುವುದಿಲ್ಲ. ಆದರೆ ಒಂದು ಅಂಶವನ್ನು ಮಾತ್ರ ಮರೆಯಕೂಡದು. ಸಾಹಿತ್ಯದ ಗುರಿಯು ಆನಂದವೇ ಹೊರತು ಬೇರೆಯಲ್ಲ. ಒಂದು ಗ್ರಂಥವು ಓದುವವರಿಗೆ ಹೊಸ ಸಂಗತಿಗಳನ್ನು ತಿಳಿಸಲಿ, ಧರ್ಮಮಾರ್ಗವನ್ನು ಬೋಧಿಸಲಿ, ಮಿಕ್ಕ ಯಾವ ಕಾರ್ಯವನ್ನಾದರೂ ಮಾಡಲಿ,—ಅವರಿಗೆ ಆನಂದವನ್ನು ಮಾತ್ರ ಕೊಡದೆ ಇದ್ದರೆ ಅದು ಸಾಹಿತ್ಯವಾಗುವುದಿಲ್ಲ. ಕಾವ್ಯದಲ್ಲಿ ಉಪದೇಶವು ಬರುವುದು ತಪ್ಪೆಂದು ನಾವು ಹೇಳುವುದಿಲ್ಲ; ಬೇಕಾದಷ್ಟು ಬರಲಿ. ಅದು ಬಂದುದರಿಂದ

---

* ಲೇಖಕರು : ಮ॥ ರಾ॥ ನರಶೀಪುರದ ಶೇಷಗಿರಿರಾವ್ : (೧೯೩೬) : ವಿಮರ್ಶೆ (ಪ್ರಬುದ್ಧ ಕರ್ನಾಟಕ ೧೪.೪)

ಗ್ರಂಥವು ಕೊಡುವ ಆಹ್ಲಾದಕ್ಕೆ ಮಾತ್ರ ಹಾನಿ ತಟ್ಟಕೂಡದು. ಎಂದರೆ, ರಸಿಕರು ಆನಂದದಿಂದ ಮೈಮರೆತಾಗ ಉಪದೇಶವು ತನ್ನ ಸುಳಿವು ಸಿಕ್ಕದಂತೆ ಅವರ ಹೃದಯವನ್ನು ಪ್ರವೇಶಿಸಬೇಕು; ಅಷ್ಟೇ ಹೊರತು, ಆನಂದವಾಹಿನಿಯನ್ನು ಬತ್ತಿಸಿ ಅದರ ಸ್ಥಾನವನ್ನು ತಾನು ಆಕ್ರಮಿಸಕೂಡದು.

"ತಾರಾಪ್ಯಾರಿ"ಯನ್ನು ಓದಿದರೆ ಈ ವಿಧವಾದ ಆಲೋಚನೆಗಳು ತಲೆದೋರುತ್ತವೆ. ಮ॥ ಶೇಷಗಿರಿರಾಯರ ಉದ್ದೇಶವು ಘನವಾದುದು. "ನಾವು ಅನುಮೋದಿಸಬಹುದಾದ ಪಾಶ್ಚಾತ್ಯರ ಸದ್ಗುಣಗಳ್ಯಾವವು ಮತ್ತು ನಮಗೆ ಅನುಗುಣವಲ್ಲದ ಅವರ ಇತರ ಗುಣಗಳ್ಯಾವುವೆಂಬುದನ್ನು ಸೂಕ್ಷ್ಮವಾಗಿ ತಿಳಿಸುವ ಪ್ರಯತ್ನವನ್ನು" (ಪು. ೨೫೨) ಅವರು ಇಲ್ಲಿ ಮಾಡಿದ್ದಾರೆ. ನೀತಿಯನ್ನು ಬೋಧಿಸುವುದಕ್ಕೆಂದೇ ಅವರು ಹೊರಟಿರುವುದು ಗ್ರಂಥಕ್ಕೆ ಕಾದಂಬರಿಯ ಸ್ವರೂಪವನ್ನು ಕೊಟ್ಟಿರುವುದು "ಶಿಕ್ಷಣವು ಔಷಧಿಯಂತೆ ಕಹಿಯಾಗದಿರಲಿ, ಸಕ್ಕರೆಯ ಗುಳಿಗೆಯಂತೆ ರುಚಿಕರವಾಗಲಿ" ಎಂಬ ಅಭಿಪ್ರಾಯದಿಂದ ಎಂದು ತೋರುತ್ತದೆ. ಗ್ರಂಥವೇನೋ ಹೆಸರಿಗೆ ಕಾದಂಬರಿಯಾಯಿತು; ಆದರೆ ನೀತಿಯ ಭಾರವನ್ನು ತಡೆಯಲಾರದೆ, ಉಪದೇಶವನ್ನು ಅರಗಿಸಿಕೊಳ್ಳಲಾರದೆ, ಬಡಕಲಾಗಿ ಹೋಯಿತು. "ಕಾಂತಾ ಸಂಮಿತತಯೋಪದೇಶಯುಜೇ" ಎಂಬ ಕಾವ್ಯೋದ್ದೇಶವು ಇಲ್ಲಿ ಫಲಿಸದೆಹೋಯಿತು. ಹೀಗೆ ಕಾದಂಬರಿಗಳನ್ನು ಬರೆಯುವುದು ಇಬ್ಬರು ಧಣಿಗಳ ಸೇವೆ ಮಾಡಿದ ಹಾಗೆ. ನೀತಿಯ ಕಡೆಗೆ ಗಮನವು ಹೋದ ಹಾಗೆಲ್ಲ ಕಾದಂಬರಿಯ ಬಿಕ್ಕಟ್ಟೂ ಸ್ವಾರಸ್ಯವೂ ಕೆಟ್ಟುಹೋಗುತ್ತವೆ. ಕಥೆಯಮೇಲೆ ಗೀಳು ಹೋದರೆ ಉಪದೇಶಕ್ಕೆ ಮುನಿಸುಬರುತ್ತದೆ.

ಗ್ರಂಥಕ್ಕೆ ಇಟ್ಟಿರುವ "ತಾರಾಪ್ಯಾರಿ" ಎಂಬ ಹೆಸರು ವಾಚಕರಿಗೆ ಸ್ವಲ್ಪ ಭ್ರಾಂತಿಯನ್ನುಂಟುಮಾಡಬಹುದು. ತಾರೆಯೂ ಪ್ಯಾರಿ (ಪಾರ್ವತಿ)ಯೂ ಬೇರೆ ಬೇರೆ ವ್ಯಕ್ತಿಗಳು. ತಾರೆ ಗಂಗಾಶಂಕರನ ಪತ್ನಿ; ಪ್ಯಾರಿ ಅವನ ತಮ್ಮನಾದ ಗೌರೀಶಂಕರನ ಹೆಂಡತಿ. ಪ್ಯಾರಿಯೂ ಅವಳ ಗಂಡನೂ ನವನಾಗರಕತೆಯ ಬಲೆಗೆ ಬಿದ್ದು ಕೆಟ್ಟುಹೋಗಿರುವರು. ತನ್ನ ವಿದ್ಯಾಭ್ಯಾಸಕ್ಕಾಗಿಯೇ ಹಣವನ್ನು ವೆಚ್ಚಮಾಡಿ ಅಣ್ಣನು ಬಡವನಾಗಿದ್ದರೂ ಅವನ ಮೇಲೆ ಈಗ ಗೌರೀಶಂಕರನಿಗೆ ಪ್ರೀತಿಯಿಲ್ಲ. "ತಾರಾದೇವಿಯ ಜಾತಕದಂತೆ ಅವಳಿಗೆ ಇಪ್ಪತ್ತೈದನೆಯ ವರ್ಷಕ್ಕೆ ಮರಣ. ಅದಕ್ಕೆ ಶಾಂತಿಯನ್ನು ಮಾಡಲು ಹಣವನ್ನು ಕೊಡು" ಎಂದು ಗಂಗಾಶಂಕರನೇ ಬೇಡಿಕೊಂಡರೂ ಗೌರೀಶಂಕರನು ಅವನ ಮೌಢ್ಯಕ್ಕೆ ನಕ್ಕು ಧಿಕ್ಕರಿಸಿಬಿಡುವನು. ತನ್ನ ಗುರುವಾದ ರಮಾನಂದನು ಸಹಾಯಮಾಡುವೆನೆಂದು ಹೇಳಲು ಗಂಗಾಶಂಕರನು ಒಪ್ಪುವುದಿಲ್ಲ. ಈಚೆಗೆ ಜ್ಞಾನಾನಂದ ಎಂಬ ಹೆಸರನ್ನು ತಾಳಿ ರಾಮಾನಂದನ ಆಶ್ರಮದಲ್ಲಿದ್ದ ಜಾರ್ಜ್ ಎಂಬ ಮಹನೀಯನು ಉದಾರಬುದ್ಧಿಯಿಂದ ದ್ರವ್ಯ ಸಹಾಯ ಮಾಡಲು ಇಚ್ಛೆಪಟ್ಟು ತಾರಾದೇವಿಗೆ ಹಣವನ್ನು ಕೊಡುವಂತೆ ವಿಶಾಲ ನಗರದಲ್ಲಿರುವ ತನ್ನ ಏಜಂಟಿಗೆ ಕಾಗದ ಬರೆಯುವನು. ತಾರೆ ಅದನ್ನು ಮುಟ್ಟದಿದ್ದರೂ ದುಷ್ಟೆಯಾದ ಪ್ಯಾರಿಯು ಆ

ಹಣವನ್ನು ತನ್ನ ಪ್ರಿಯನಾದ ಏಜಂಟಿನಿಂದ ಪಡೆದು ತಾರಾದೇವಿಯ ಮೇಲೆ ಸಲ್ಲದ ಅಪವಾದವನ್ನು ಹೊರಿಸುವಳು. ಇಷ್ಟರೊಳಗೆ ಪ್ಯಾರಿಯೂ ಅವಳ ಗಂಡನೂ ಕ್ರೈಸ್ತರಾಗಿರುವರು. ಗಂಗಾಶಂಕರನೂ ತಾರೆಯೂ ತಮ್ಮ ಎರಡು ವರ್ಷದ ರಾಮೇಶನೆಂಬ ಮಗುವಿನೊಡನೆ ತಾರೆಯ ತಂದೆಯ ಊರಿಗೆ ಹೋಗುವರು. ಗರ್ಭಿಣಿಯಾದ ಪತ್ನಿಯನ್ನು ಅಲ್ಲಿ ಬಿಟ್ಟು ಗಂಗಾಶಂಕರನು ದೇಶದಲ್ಲೆಲ್ಲಾ ಅಲೆಯುವನು. ಜಾರ್ಸ್ ಸಾಹೇಬನೂ ರಮಾನಂದನೂ ಅವನಿಗೆ ಹೇಳದೆ ಶಾಂತಿಯನ್ನು ನೆರವೇರಿಸುವರು. ಇಷ್ಟರಲ್ಲಿ ತಾರೆ ಸತ್ತಳೆಂದು ಸುದ್ದಿಹುಟ್ಟುವುದು. ಇದನ್ನು ಹರಡಿದವಳು ನೀಚಳಾದ ಪ್ಯಾರಿಯೇ. ಗಂಗಾಶಂಕರನೂ ತಾರಾದೇವಿಯೂ ಬಹುಕಾಲದ ಬಳಿಕ ಒಟ್ಟುಗೂಡುವರು. ಅವರ ಮಗು ರಾಮೇಶನು ಯಾರಿಗೂ ಗೊತ್ತಿಲ್ಲದಂತೆ ಜಾರ್ಸ್ ಸಾಹೇಬನ ಪೋಷಣೆಯಲ್ಲಿರುವನು. ಅವರ ಮಗಳಿಗೆ ಒಬ್ಬ ಕ್ರೈಸ್ತಗಂಡನನ್ನು ಗಂಟು ಹಾಕಬೇಕೆಂದು ಪ್ಯಾರಿ ತಂತ್ರಮಾಡುವಳು. ಆದರೆ ಶ್ವೇತನಗರದಲ್ಲಿ ನಡೆದ ಕ್ರೈಸ್ತ ಮಹಾಸಭೆಯಲ್ಲಿ ಅವಳಿಗೆ ಅವಮಾನವಾಗುವುದಲ್ಲದೆ, ಗಂಡನಿಗೂ ತನಗೂ ಮನಸ್ತಾಪವು ಬರುವುದು. ಕೆಲವು ಕಾಲ ಕಳೆದ ಮೇಲೆ ಇದುವರೆಗೂ ಇಂಗ್ಲೆಂಡಿನಲ್ಲಿ ಸರಿಯಾದ ಆಚಾರದಲ್ಲಿದ್ದ ರಾಮೇಶನು ರಾಮಸೆ ಎಂಬ ಹೆಸರಿನಿಂದ ಜಾರ್ಸ್ ಸಾಹೇಬನ ಹೊಸ ಏಜಂಟಾಗಿ ವಿಶಾಲನಗರಕ್ಕೆ ಬರುವನು. ಪ್ಯಾರಿ ಅವನನ್ನು ಮೋಹಿಸುವಳು. ಆದರೆ ವಿವೇಕಶಾಲಿಯಾದ ಆತನ ಉಪದೇಶದಿಂದ ಇವಳ ಬುದ್ಧಿ ತಿರುಗುವುದು. ತನ್ನ ಮಗಳು ಸುಮಿತ್ರೆಯನ್ನು ಆತನಿಗೆ ಕೊಡಬೇಕೆಂದು ಈಗ ಪ್ರಯತ್ನ ಮಾಡುವಳು. ರಾಮಸೆಯು ತನ್ನ ಮಗನೆಂದೇ ಗೊತ್ತಿಲ್ಲದಿದ್ದರೂ ಗಂಗಾಶಂಕರನಿಗೆ ಸಂಶಯವುಂಟಾಗಿ ಅವನು ರಮಾನಂದನನ್ನು ವಿಚಾರಿಸಲು ರಹಸ್ಯವೆಲ್ಲಾ ಆಗ ಬಯಲಾಗಿ ರಾಮೇಶನು ತನ್ನ ತಂಗಿಯಾದ ಸುಮಿತ್ರೆಯನ್ನೇ ವರಿಸುವ ಘಟನೆ ತಪ್ಪುವುದು. ರಾಮಾನಂದನು ಒಂದು ಗುರುಕುಲವನ್ನು ಸ್ಥಾಪಿಸಿ ಸ್ವತಂತ್ರಜೀವನದ ಮಾರ್ಗವನ್ನು ಬೋಧಿಸುವನು.—ಇದೇ ತೊಡಕಾದ ಈ ಕಥೆಯ ಸಾರಾಂಶ.

ನಮ್ಮ ಸಮಾಜದಲ್ಲಿ ಬೆಳಗಾದರೆ ಚರ್ಚೆಗೆ ಬೀಳುವ ಹಲವು ಧರ್ಮಸಮಸ್ಯೆಗಳನ್ನು ಬಿಡಿಸಲು ಗ್ರಂಥಕರ್ತರು ಇಲ್ಲಿ ಪ್ರಯತ್ನಮಾಡಿದ್ದಾರೆ. ಸ್ತ್ರೀಸ್ವಾತಂತ್ರ್ಯ, ಮಾಂಸಾಹಾರ, ವಿಗ್ರಹಾರಾಧನೆ, ಮೊದಲಾದ ವಿಷಯಗಳ ಮೇಲೆ ದೊಡ್ಡದೊಡ್ಡ ಉಪನ್ಯಾಸಗಳೇ ಇವೆ. ಗ್ರಂಥದ ಕೊನೆಕೊನೆಗೆ ಉಪನ್ಯಾಸಗಳು ಹೆಚ್ಚಿಹೋಗಿವೆ.

ಒಂದು ಅಂಶದಲ್ಲಿ ಮಾತ್ರ ಗ್ರಂಥಕರ್ತರನ್ನು ಹೊಗಳಬೇಕು. ಕ್ರೈಸ್ತ ಸಮಾಜ, ಹಿಂದೂ ಸಮಾಜ, ನಾಸ್ತಿಕರು, ಧರ್ಮಾಂಧರು, ಸಂನ್ಯಾಸಿಗಳು, ಸಾಧುಗಳು, ಸತ್ಪುರುಷರು —ಎಲ್ಲಾ ಬಗೆಯವರನ್ನೂ ತಂದು ನಮ್ಮ ಮುಂದುಗಡೆ ಅವರು ನಿಲ್ಲಿಸಿದ್ದಾರೆ. ಹೀಗೆ ಧೈರ್ಯವಾಗಿ ಆಧುನಿಕ ಸಮಾಜದ ತೊಡಕನ್ನು ಚಿತ್ರಿಸಲು ಹೊರಟ ಕಾದಂಬರಿಗಳು ಕನ್ನಡದಲ್ಲಿ ಅಪೂರ್ವ. "ತುಚ್ಛವಾದ ಕಾರಣಗಳನ್ನೇ ಮುಂದಿಟ್ಟುಕೊಂಡು, ಅನಾದಿ ಯಿಂದಲೂ ನಮ್ಮ ದೇಶದಲ್ಲಿ ನೆಲೆಸಿರುವ ಆಚಾರ, ಆಹಾರ, ನಡತೆ, ಉಡುಪು

ಮುಂತಾದವುಗಳನ್ನು ಬದಲಾಯಿಸಬಾರ"ದೆನ್ನುವುದೇ (ಪೀಠಿಕೆ) ಗ್ರಂಥಕರ್ತರ ಸಿದ್ಧಾಂತ. ಇದನ್ನು ಮನಸ್ಸಿಗೊಪ್ಪುವ ಹಾಗೆ ಉಪಪಾದಿಸಿರುವರೇ ಎನ್ನುವುದನ್ನು ಪ್ರತಿಯೊಬ್ಬ ಪಾಠಕನ ಸ್ವತಂತ್ರವಿಚಾರಕ್ಕೆ ಬಿಡುವುದುಯುಕ್ತವಾಗಿದೆ.

ಒಂದು ಸಣ್ಣ ಮಾತು. ಬರವಣಿಗೆಯ ಭಾಷೆಯ ಸ್ವರೂಪವು ಇನ್ನೂ ನಿಶ್ಚಿತವಾಗಿಲ್ಲದ ಈ ಕಾಲದಲ್ಲಿ "ಈ ಶಬ್ದದ ರೂಪವು ತಪ್ಪು" ಎಂದು ಖಂಡನೆ ಮಾಡುವುದು ಸಾಹಸವೇ ಸರಿ. ಆದರೂ ಯಾವ ಕಟ್ಟಿಗೂ ಒಳಪಡದೆ, ಸಿಕ್ಕಿದ ರೂಪಗಳನ್ನು ಪ್ರಯೋಗಿಸುವುದು ಸರಿಯಲ್ಲವೆಂದು ತೋರುತ್ತದೆ. ಕೆಲವು ಶಬ್ದಗಳಂತೂ ಹೀಗೆಯೇ ಇರಬೇಕೆಂದು ಸಾಮಾನ್ಯವಾಗಿ ಎಲ್ಲರೂ ಒಪ್ಪುವರು. 'ಶೇವಕ' (ಪುಟ ೧೯), 'ಪುಸ್ತುಕ' (ಪೀಠಿಕೆ), 'ನಿಮಿತ್ಯ' (ಪುಟ ೨೮), ನನಿಗೆ, ನಿಮಿಗೆ (ಗ್ರಂಥದಲ್ಲೆಲ್ಲಾ),— ಇವೇ ಮೊದಲಾದ ರೂಪಗಳು ಅವ್ಯುತ್ಪನ್ನವೆಂದು ಹೇಳಬೇಕಾಗುತ್ತದೆ. 'ಭಾರತ ಭೂಮಿಾಗೆ' (ಪು. ೩೬), 'ಪ್ರೀತೀಗೆ', 'ಧಣೀಗೂ', (ಪು. ೩೯)—ಈ ರೀತಿಯಾಗಿ ಚತುರ್ಥೀವಿಭಕ್ತಿಯ ಪದಗಳು ದೀರ್ಘದೊಡನೆ ಬಲುಕಡೆಗಳಲ್ಲಿ ಬಂದಿರುವುದು ಮುದ್ರಣದ ತಪ್ಪಿನಿಂದಲೋ ವ್ಯಾಕರಣದ ಹೊಸನಿಯಮದಂತೆಯೋ ಸರಿಯಾಗಿ ಗೊತ್ತಾಗುವುದಿಲ್ಲ.

ಭಾಗ ೪

ಭಾಷೆ ಮತ್ತು ಭಾಷಾವಿಜ್ಞಾನ

"ಕುದುರೆ"*

ವಾಲ್ಮೀಕಿಮುನಿಯ ಆಶ್ರಮದ ವಟುಗಳು (ಅಲ್ಲಿ ಹುಟ್ಟಿ ಬೆಳೆಯುತ್ತಿದ್ದ ಕುಶಲವರು ಕೂಡ) "ಕುದುರೆ" ಎಂಬ ಪ್ರಾಣಿಯನ್ನು ನೋಡಿಯೇ ಇರಲಿಲ್ಲವಂತೆ. ಅದರ ಹೆಸರನ್ನು ಮಾತ್ರ ಜನರ ಬಾಯಿಂದ ಕೇಳಿದ್ದರು; ಪಶುಗಳ ಪಟ್ಟಿ, ಚತುರಂಗಬಲದ ಪಟ್ಟಿ ಇವುಗಳಲ್ಲಿ ಪಠಿಸಿದ್ದರು. ಶ್ರೀರಾಮನ ಯಾಗದ ಕುದುರೆ ಆಶ್ರಮಕ್ಕೆ ಬಂದಾಗ ಈ ಜಾತಿಯ ಪ್ರಾಣಿಯನ್ನು ವಟುಗಳು ಮೊಟ್ಟಮೊದಲನೆಯ ಸಲ ಕಂಡು ಆ ಸಡಗರದಲ್ಲಿ ಲವನ ಬಳಿಗೆ ಬಂದು,

ಪಶ್ಚಾತ್ ಪುಚ್ಛಂ ವಹತಿ ವಿಪುಲಂ ತಚ್ಚ
ಧೂನೋತ್ಯಜಸ್ರಂ
ದೀರ್ಘಗ್ರೀವಃ ಸ ಭವತಿ ಖುರಾಸ್ತಸ್ಯ ಚತ್ವಾರ ಏವ।
ಶಷ್ಪಾಣ್ಯತ್ತಿ ಪ್ರಕಿರತಿ ಶಕೃತ್ಪಿಂಡಕಾನಾಮ್ರ ಮಾತ್ರಾನ್
ಕಿಂ ವ್ಯಾಖ್ಯಾತೈರ್ವ್ರಜತಿ ಸ ಪುನರ್ದೂರಮೇಹ್ಯೇಹಿ
ಯಾಮಃ ॥

"ಅದಕ್ಕೆ ಹಿಂದುಗಡೆ ತುಂಬುಬಾಲ, ಅದನ್ನು ಸುಮ್ಮನೆ ಅಲ್ಲಾಡಿಸುತ್ತಿರುತ್ತದೆ; ಅದರ ಕತ್ತು ನೀಳ, ಗೊರಸುಗಳು ನಾಲ್ಕೇ ನಾಲ್ಕು; ಗರಿಕೆಯನ್ನು ಮೇಯುತ್ತದೆ; ಮಾವಿನಕಾಯ ಗಾತ್ರದ ಲದ್ದಿಯನ್ನು ಹಾಕುತ್ತದೆ. ವಿವರಿಸುವುದೇನು? ಅದು ದೂರ ಹೋಗಿ ಬಿಡುತ್ತದೆ, ಬಾ, ಬಾ; ನಾವು ಹೋಗುತ್ತೇವೆ!" ಎಂದು

* 'ಪ್ರಬುದ್ಧ ಕರ್ಣಾಟಕ' ೧೭೧.

ಅದನ್ನು ನೋಡಲು ಅವನನ್ನು ಎಳೆದುಕೊಂಡು ಹೋದಂತೆ ಭವಭೂತಿ 'ಉತ್ತರ ರಾಮಚರಿತ'ದಲ್ಲಿ (೪.೨೬) ಚಿತ್ರಿಸಿದ್ದಾನೆ. ಹೀಗೆ ಆಶ್ರಮದ ವಟುಗಳಿಗೆ ಮಾತ್ರವಲ್ಲ, ಮಾನವ ಜಾತಿಗೇ ಹಿಂದೊಮ್ಮೆ—ಅಷ್ಟೇನೂ ದೂರವಲ್ಲದ ಕಾಲದಲ್ಲಿ—ಕುದುರೆ ಬೆರಗಿನ ವಸ್ತುವಾಗಿದ್ದಿತು. ಮನುಷ್ಯನು ಕುದುರೆಯನ್ನು ಪಳಗಿಸಿದ್ದು ಇತ್ತೀಚೆಗೆ; ಹಸು, ಕುರಿ, ಆಡು, ನಾಯಿ, ಹಂದಿ ಮೊದಲಾದ ಪ್ರಾಣಿಗಳನ್ನು ಪಳಗಿಸಿ ಎಷ್ಟೋ ಕಾಲವಾದ ಮೇಲೆ. ಕುದುರೆಯ ಸವಾರಿಗೆ ಮನುಷ್ಯನು ಮೊಟ್ಟಮೊದಲು ಪ್ರಾರಂಭಿಸಿದ್ದು ಬಹುಶಃ ಮಧ್ಯಏಷ್ಯದಲ್ಲೆಂದೂ ಬೆಬಿಲೋನಿಯಲ್ಲಿ ಅದು ಕಾಣಿಸಿಕೊಂಡಿದ್ದು ಕ್ರಿ.ಪೂ. ೨೦೦೦ದ ಸುಮಾರಿನಲ್ಲೆಂದೂ ತಿಳಿಯಬರುತ್ತದೆ. ಅಂತೂ ಈಜಿಪ್ಟ್ ಮೊದಲಾದ ದೇಶಗಳಲ್ಲಿ ನಾಗರಿಕತೆ ಪ್ರಬಲಿಸಿ ಎಷ್ಟೋ ಕಾಲವಾಗಿದ್ದಾಗಲೂ ಈ ಪ್ರಾಣಿ ಮಾತ್ರ ಕಡಿವಾಣಕ್ಕೆ ಸಿಕ್ಕದೆ, ಜೀನಿನ ಭಾರವನ್ನರಿಯದೆ, ಕಾಡುಮೇಡುಗಳಲ್ಲೇ ವಿಹರಿಸುತ್ತ ಆಕಸ್ಮಿಕವಾಗಿ ಜನರ ಕಣ್ಣಿಗೆ ಕಾಣಿಸಿಕೊಂಡು ಮಿಂಚಿನಂತೆ ಮಾಯವಾಗುತ್ತಿದ್ದಿರಬೇಕು.

ಇದರ ಹೆಸರಂತೂ ತುಂಬ ಕುತೂಹಲಕರವಾಗಿದೆ; ಭಾಷೆಗಳ ಸಂಪರ್ಕದ ತೊಡಕನ್ನು ಎತ್ತಿ ತೋರಿಸುವ ಸಾಧನವಾಗಿದೆ. ಇಂಡೋ-ಯೂರೋಪಿಯನ್ ಮೂಲಭಾಷೆಯಲ್ಲಿ ಇದಕ್ಕಿದ್ದ ಹೆಸರು ಸಂಸ್ಕೃತದಲ್ಲಿ "ಅಶ್ವ" ಎಂಬ ರೂಪದಲ್ಲಿ ನಿಂತಿತು. ಆದರೆ ಒಂದೆರಡು "ಕ್ಷುಲ್ಲಕ" ಭಾಷೆಗಳನ್ನು ಬಿಟ್ಟರೆ, ಭರತಖಂಡದಲ್ಲಿ ವ್ಯವಹಾರದಲ್ಲಿರುವ ಯಾವ ಆರ್ಯ ಭಾಷೆಗೂ ಈ ಅಶ್ವ ಎಂಬ ಶಬ್ದವು ಕ್ರಮಾಗತವಾಗಿ ಇಳಿಯಲಿಲ್ಲ. ಹಿಂದಿ, ಬಂಗಾಳಿ, ಮರಾಠಿ ಮೊದಲಾದ ಭಾಷೆಗಳಲ್ಲೆಲ್ಲಾ ಬಳಕೆಯಲ್ಲಿರುವ ಶಬ್ದ "ಘೋಡಾ", "ಘೋಡಾ" ಇತ್ಯಾದಿ; ಅಶ್ವ ಎಂದಲ್ಲ.[೧] ಈ ಘೋಡಾ ಎನ್ನುವುದಕ್ಕೆ ಮೂಲ ಸಂಸ್ಕೃತದ "ಘೋಟ" ಎಂಬ ಶಬ್ದ. ಇದಕ್ಕೆ ಜ್ಞಾತಿಶಬ್ದ (Cognate word) ಯಾವುದೂ ಇಂಡೋ-ಯೂರೋಪಿಯನ್ ವರ್ಗದ ಬೇರೆ ಭಾಷೆಗಳಲ್ಲಿ ದೊರೆಯುವುದಿಲ್ಲ. ಅದು ಹೊರಭಾಷೆಯ ಶಬ್ದವೆಂಬುದು ಖಂಡಿತ.

ಹೀಗೆ ಅಶ್ವವನ್ನು ಮೂಲೆಗೊತ್ತಿ, ಅದರ ಸ್ಥಾನವನ್ನು ಆಕ್ರಮಿಸಿದ ಘೋಟ ಎಂಬುದರ ಬಾಂಧವ್ಯ ಏನು? ಈಗ ನಮ್ಮ ಕನ್ನಡದ ಕುದುರೆ ತಮಿಳು ತೆಲುಗುಗಳ ಕುತಿ(ದಿ) ರೈ, ಗುರ್ರ-ಮು ಎಂಬವನ್ನು ನೋಡಬಹುದು. ಇವೆಲ್ಲಕ್ಕೂ ಮೂಲ ಒಂದೇ. ಅದು ಬಹುಶಃ *ಘುತ್ರ ಎಂದು ಇದ್ದಿರಬೇಕು; ಅದರಿಂದಲೇ ಒಂದು ಕಡೆ *ಘುತ್ರ> *ಘೋತ್ರ>ಘೋಟ—ಹೀಗೆ ಘೋಟ ಘೋಡಾ ಮೊದಲಾದವೂ ಮತ್ತೊಂದು ಕಡೆ, ಶಬ್ದದ ಆದಿಯ ಮಹಾಪ್ರಾಣವು ಅಳಿದು "ತ್ರ" ಎಂಬ ಕಡೆ ನಡುವೆ ಸ್ವರ ಸೇರಿ ಕುದುರೆ ಮೊದಲಾದವೂ ಉದಿಸಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ.[೨] ಮೂಲ

---

೧. ಭರತಖಂಡದ ಎಲ್ಲಾ ಭಾಷೆಗಳಲ್ಲೂ ಕುದುರೆಗಿರುವ ಹೆಸರುಗಳ ಪಟ್ಟಿಯನ್ನು *Linguistic Survey of India, Vol. I-part* **2**, ಪುಟ. ೧೬೦-೧೬೧ರಲ್ಲಿ ನೋಡಿ.

೨. ಈ ವಿಷಯದಲ್ಲಿ ಪ್ರೊ. ಜೆ. ಬ್ಲಾಕ್ ಅವರ 'Aryan and Dravidian' ಎಂಬ ಲೇಖನವನ್ನು ನೋಡಿ (*Pre-Aryan and Pre-Dravidian in India*, translated by P. C. Bagchi).

ದ್ರಾವಿಡದಲ್ಲಿ *"ಘುತ್ರ" ಎಂದೇ ಇದ್ದಿರಬಹುದು; ಅಲ್ಲಿಂದಲೇ ಅದು ಆರ್ಯಭಾಷೆಗಳಿಗೆ ಹರಿದಿರಬಹುದು.

ಈ ಹೆಸರಿನ ವ್ಯಾಪ್ತಿ ಭರತಖಂಡಕ್ಕೇ ಮುಗಿಯುವುದಿಲ್ಲ. ಪ್ರಾಚೀನ ಈಜಿಪ್ಷಿಯನ್ ಭಾಷೆಯಲ್ಲಿ ಕುದುರೆಗೆ "ಹ್‌ತ್‌ರ್" (htr) ಎಂದು ಹೆಸರು. ಆಧುನಿಕ ಗ್ರೀಕಿನಲ್ಲಿ ಕತ್ತೆಯನ್ನು "ಗದೈರೋಸ್" (gadairos) ಎಂದು ಕರೆಯುತ್ತಾರೆ; ತುರ್ಕೀ ಭಾಷೆಯಲ್ಲಿ "ಕತಿರ್" (katyr) ಎಂದರೆ ಹೇಸರಗತ್ತೆ. ಈ ಶಬ್ದಗಳೆಲ್ಲಾ ನಮ್ಮ "ಕುದುರೆ"ಯ ಕುಲಕ್ಕೇ ಸೇರಿದವೆಂದು ತೋರುತ್ತದೆ. ಅಂತೂ *ಘುತ್ರ ಎಂಬುದು ಒಂದಲ್ಲ ಒಂದು ರೂಪದಲ್ಲಿ ಮೆಡಿಟರೇನಿಯನ್ ಸಮುದ್ರದ ಪೂರ್ವಪ್ರದೇಶ (The Near East)ದಲ್ಲೆಲ್ಲಾ ನೆಲಸಿದೆ. ಅದು ಏಷ್ಯಾ ಮೈನರ್ ಅಥವಾ ಮೆಸಪೊಟೇಮಿಯದಲ್ಲಿ ಮೊದಲು ತಲೆಯೆತ್ತಿರಬಹುದು. ಮೂಲದ್ರಾವಿಡರ ಜನ್ಮಭೂಮಿ ಮೆಡಿಟರೇನಿಯನ್ ಪ್ರಾಂತವೆಂಬ ವಾದವನ್ನು ಜ್ಞಾಪಿಸಿಕೊಂಡರೆ ಈ ಶಬ್ದವು ಮೂಲದ್ರಾವಿಡವೇ ಆಗಿರಬಹುದೆಂಬ ಊಹೆಗೆ ಪುಷ್ಟಿ ದೊರೆಯುತ್ತದೆ.

ಸಂಸ್ಕೃತದಲ್ಲಿ "ಸಾದ, ಸಾದಿ, ಅಶ್ವ–ಸಾದಿ" (=ಆಶ್ವಾರೋಹಕ) ಎಂಬ ಶಬ್ದಗಳಿವೆ; ಶಾತವಾಹನ ಅಥವಾ ಶಾಲಿವಾಹನ ಎಂಬ ಹೆಸರಂತೂ ಪ್ರಸಿದ್ಧವಾಗಿದೆ. ಸಾದ–ಶಾತ–ಶಾಲಿ ಎಂಬುದು ಆದಿಯಲ್ಲಿ ಕುದುರೆ ಎಂಬಷ್ಟೇ ಅರ್ಥವನ್ನು ಕೊಡುತ್ತಿದ್ದಂತೆ ತೋರುತ್ತದೆ. ಇದೂ ಕೂಡ ಇಂಡೋ–ಯೂರೋಪಿಯನ್ ಶಬ್ದವಲ್ಲ. ಭರತಖಂಡದಲ್ಲಿ ದ್ರಾವಿಡರು ಬರುವುದಕ್ಕಿಂತಲೂ ಮುಂಚೆ ಇದ್ದ ಪೂರ್ವನಿವಾಸಿಗಳ (ಈಗಿನ ಕೋಲರು, ಸಂತಾಲರು ಮೊದಲಾದವರು ಇವರ ಸಂತತಿಯವರು) ಭಾಷೆಯಿಂದ ಇದು ಬಂದದ್ದು. ಕುದುರೆಗೆ ಸಂತಾಲಿ ಭಾಷೆಯಲ್ಲಿರುವ "ಸದೊಮ್" (Sad-om), ಮುಂಡಾರಿ ಭಾಷೆಯ "ಸಾದೊಮ್" (Sād-om) ಎಂಬ ಹೆಸರುಗಳನ್ನು ಇಲ್ಲಿ ಹೋಲಿಸಿ ನೋಡಬಹುದು.

ಕೊನೆಯಲ್ಲಿ "ಶಾಲಿಹೋತ್ರ" ಎಂಬ ಹೆಸರಿನ ಕಡೆಗೆ ತಿರುಗೋಣ. ಇದು ಅಶ್ವಾಯುರ್ವೇದವನ್ನು ನಿರೂಪಿಸಿದವನೆಂದು ಪ್ರಸಿದ್ಧನಾದ ಒಬ್ಬ ಋಷಿಯ ಹೆಸರು.[೧] ಈಗಲೂ ಹಿಂದೂದೇಶದ ಸೈನ್ಯದ ಇಲಾಖೆಯಲ್ಲಿ ಅಶ್ವವೈದ್ಯನನ್ನು "ಸೋಲುತ್ರಿ" (Solutri) ಎಂದು ಕರೆಯುತ್ತಾರೆ. ಶಾಲಿಹೋತ್ರ ಎಂಬ ಈ ಪೂಜ್ಯನಾಮವನ್ನು ಒಡೆದು ನೋಡಿದರೆ ನಮಗೆ ಕಾಣುವುದೇನು? ಅದರ ಮೊದಲನೆಯ ಭಾಗ ಕೋಲ್ (ಅಥವಾ ಮುಂಡ) ವರ್ಗದ ಶಬ್ದ; ಎರಡನೆಯದು ಬಹುಶಃ ದ್ರಾವಿಡ : *ಘುತ್ರ> *ಘೋತ್ರ ಎಂಬುದರ ರೂಪಾಂತರ. ಎರಡರ ಅರ್ಥವೂ ಒಂದೇ : ಶಾಲಿ=ಹೋತ್ರ. ಈ ಎರಡು ಶಬ್ದಗಳು ಬೇರೆ ಬೇರೆ ದಿಕ್ಕುಗಳಿಂದ ಬಂದು ಸಂಸ್ಕೃತ ಸಮಾಸವಾಗಿ ಸೇರಿ ಒಬ್ಬ ಋಷಿಯ ಹೆಸರಾಗಿ ಪರಿಣಮಿಸಿವೆ!

---

೧. ಇದಕ್ಕೆ "ಕುದುರೆ" ಎಂಬ ಅರ್ಥವೂ ಉಂಟು.

ಇಂಥ "ಭಾಷಾಂತರ ದ್ವಂದ್ವ"ಗಳು ಸಂಸ್ಕೃತದಲ್ಲಿ ಇನ್ನೂ ಉಂಟು. ಕುತೂಹಲಿಗಳು ಡಾ. ಎಸ್. ಕೆ. ಚಟರ್ಜಿಯವರ 'Polyglottism in Indo-Aryan' (*Proceedings and Transactions of the Seventh Oriental Conference*, Baroda, pp. 117-189) ಎಂಬ ಲೇಖನವನ್ನು ನೋಡಬಹುದು. ಈ ಟಿಪ್ಪಣಿಯಲ್ಲಿ ಕೊಟ್ಟಿರುವ ಭಾಷಾವಿಷಯಕವಾದ ಅಂಶಗಳಿಗೆಲ್ಲಾ ಅದೇ ಮುಖ್ಯವಾದ ಆಧಾರ.

೧೯೩೬]

ಪರಿಶಿಷ್ಟ

ಪೂರ್ವದ್ರಾವಿಡದಲ್ಲಿ (Proto-Dravidian) ಶಬ್ದಾದಿಯಲ್ಲಿ ಗ, ದ, ಬ ಎಂಬಂಥ ಘೋಷಸ್ಪರ್ಶಗಳು (Voiced plosives) ಇದ್ದುವೆ ಎಂಬ ವಿಷಯವಾಗಿ ಈಚೆಗೆ ಪ್ರಬಲವಾದ ಚರ್ಚೆ ನಡೆದಿದೆ, ನಡೆಯುತ್ತಿದೆ. ಅವು ಸ್ವತಂತ್ರ "ಧ್ವನಿಮ" (phoneme) ಗಳಾಗಿ ಇದ್ದಿರಲಾರವೆಂಬುದೇ ಇಂದಿನ ಪ್ರಬಲವಾದ ಅಭಿಪ್ರಾಯ. ಪೂರ್ವದ್ರಾವಿಡದಲ್ಲಿ ಮಹಾಪ್ರಾಣಸ್ಪರ್ಶಗಳು (Aspirated plosives) ಇದ್ದುವೆಂಬುದಕ್ಕಂತೂ ಆಧಾರ ದುರ್ಲಭ. ಹೀಗಿರುವುದರಿಂದ *ಘುತ್ರ ಎಂಬ ರೂಪ ಪೂರ್ವದ್ರಾವಿಡದಲ್ಲಿ ಇದ್ದಿತೆ ಎಂಬ ಪ್ರಶ್ನೆಗೆ "ಇದ್ದಿರಬಹುದು" ಎಂದು ಉತ್ತರ ಹೇಳುವುದೂ ಈಗ ಕಷ್ಟವಾಗಿದೆ. ಈ ದೃಷ್ಟಿಯಿಂದ ಮೇಲಿನ ನಿರೂಪಣೆ ಕೆಲಮಟ್ಟಿಗೆ ದುರ್ಬಲವಾಗುತ್ತದೆ. ಆದರೆ, ಘೋಟ, ಘೋಡಾ, ಕುದುರೆ, ಗುರ್ರಮು—ಈ ಮೊದಲಾದವುಗಳಿಗೆ ಮೂಲಸಂಬಂಧ ವಿರುವುದೇನೂ ಅಸಂಭವವಲ್ಲ. ಮೂಲಭಾಷೆ ಯಾವುದು ಎಂಬುದು ಮಾತ್ರ ಇನ್ನೂ ವಿಚಾರಣೀಯವಾಗಿ ಉಳಿಯುತ್ತದೆ.

೧೯೫೮]

ಸಮಾಲೋಕನ : ೧೯೫೮

"ಮುನ್ನೀರು ಮುಂತಾಗಿ..."

'ಜೈಮಿನಿಭಾರತ'ದ ಸೀತಾಪರಿತ್ಯಾಗದ ಪ್ರಸಂಗದಲ್ಲಿ, ಲಕ್ಷ್ಮಣನು ಸೀತೆಯನ್ನು ಅಯೋಧ್ಯೆಯಿಂದ ಕರೆದುಕೊಂಡು ಹೋಗುತ್ತಿರುವಾಗ ದಾರಿಯಲ್ಲಿ ಗಂಗಾನದಿ ಸಿಕ್ಕುತ್ತದೆ. ಸೀತೆಯ ಕಣ್ಣಿಗೆ ಅದು ಹೇಗೆ ಕಾಣಿಸಿತೆಂಬುದನ್ನು ಲಕ್ಷ್ಮೀಶನು ಹೀಗೆ ವರ್ಣಿಸುತ್ತಾನೆ:

ಅನ್ನೆಗಂ ಜಾನಕಿಯ ಕಣ್ಗೆ ತೋಜಿತು ಮುಂದೆ
ಸನ್ನುತರಘೂದ್ವಹನ ಕೀರ್ತಿಯೆನೆ ಮೂವಟ್ಟೆ
ಯನ್ನಡೆದು ಮುಕ್ಕಣ್ಣನಂ ಸಾರ್ದು ಮೂಜಗದ
ಪಾಪಮಂ ಮುಜಿದು ಮುಕ್ಕಿ ।
ಮುನ್ನೀರು ಮುಂತಾಗಿ ಮೂದೇವರೊಳಗಾದ
ಮುನ್ನುಳ್ಳ ಮೂವತ್ತುಮೂರ್ಕೋಟಿ ವಿಬುಧರಂ
ತನ್ನೊಳ್ ಮುಳುಗಿದರಣಕಿಪ ಪೆಂಪೊದವಿ ಪರಿವ
ಬೆಳ್ಪೊನಲ್ ದಿವಿಜನದಿಯ ॥ (೧೯.೪)

ಈ ದೇವನದಿಯ ಬೆಳ್ಳನೆ ಪ್ರವಾಹ ರಾಮನ ಕೀರ್ತಿಯಂತೆ ಕಾಣಿಸಿತಂತೆ. ರಾಮನ ಧ್ಯಾನವನ್ನೇ ತುಂಬ ತುಂಬಿಕೊಂಡಿದ್ದ ಪತಿಪರಾಯಣೆಯಾದ ಸೀತೆಗೆ ಎಲ್ಲೆಲ್ಲೂ ಅವನ ಕೀರ್ತಿಯ ಹೋಲಿಕೆಯೇ ಗೋಚರವಾದದ್ದು ಸೋಜಿಗವಲ್ಲ. ಅವನು ಆಕೆಯನ್ನು ಕಾಡಿಗೆ ಮರೆಮಾಜಿ ಅಟ್ಟಿ ತನ್ನ ಕೀರ್ತಿಗೆ ಕಳಂಕವನ್ನು ಹತ್ತಿಸಿಕೊಳ್ಳುವ ಸಂದರ್ಭದಲ್ಲೂ ಆ ಅರಿಯದ ಮುಗ್ಧೆಗೆ ರಾಮನ ಕೀರ್ತಿ ಗಂಗೆಯ ಜಲದಂತೆ ಶುಭ್ರವೆಂದೇ ತೋರಿತೆಂದು ಲಕ್ಷ್ಮೀಶನು ನಿರೂಪಿಸಿ

ಈ ವೈಷಮ್ಯದ ಧ್ವನಿಯಿಂದ ಪದ್ಯದ ಸೊಬಗನ್ನು ಹೆಚ್ಚಿಸಿದ್ದಾನೆ. ಆದರೆ ಗಂಗಾನದಿಯ ಪರಿಶುದ್ಧತೆಯನ್ನು ವರ್ಣಿಸುವಲ್ಲಿ ಮಾತ್ರ ಮುಮೂಕಾರಗಳ ಅನುಪ್ರಾಸಕ್ಕೆ ಮನಸೋತಿದ್ದಾನೆ. ಗಂಗೆ ಮೂರು ದಾರಿಗಳಲ್ಲಿ, ಎಂದರೆ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿ ಹರಿದವಳು—ತ್ರಿಪಥೆಗೆ; ಮುಕ್ಕಣ್ಣನ ನೆತ್ತಿಯನ್ನು ಮುಟ್ಟಿದವಳು; ಮೂರು ಲೋಕಗಳ ಪಾಪವನ್ನು ಧ್ವಂಸಮಾಡಿದವಳು; . . .; ತನ್ನಲ್ಲಿ ಮುಳುಗಿ ಸ್ನಾನಮಾಡಿದವರು ಮೂದೇವರನ್ನು, ಎಂದರೆ ತ್ರಿಮೂರ್ತಿಗಳನ್ನು, ಒಳಕೊಂಡ ಮೂವತ್ತು ಮೂರುಕೋಟಿ ದೇವತೆಗಳೆಲ್ಲರನ್ನೂ ಅಣಕಿಸುವಂತೆ, ಎಂದರೆ ಸಮಸ್ತ ದೇವತೆಗಳಿಗಿಂತಲೂ ಹೆಚ್ಚಿನ ವಿಭವವನ್ನು ಪಡೆದು ಮೆರೆಯುವಂತೆ, ಮಾಡುವ ಮಹಿಮೆಯುಳ್ಳವಳು—ಹೀಗೆ ಗಂಗಾನದಿಯ ಪ್ರಶಸ್ತಿ ಈ ಪದ್ಯದಲ್ಲಿ ಬೆಳೆದಿವೆ.

ಈ ಪದ್ಯದ ಅಭಿಪ್ರಾಯ ಒಟ್ಟಿನಲ್ಲಿ ಸುಗಮವಾಗಿದ್ದರೂ "ಮುನ್ನೀರು ಮುಂತಾಗಿ" ಎಂಬ ಪದಸಮುಚ್ಚಯ ಮಾತ್ರ ಅರ್ಥಕಾರರನ್ನೂ ಅಧ್ಯಾಪಕರನ್ನೂ ಕ್ಲೇಶಪಡಿಸಿದೆ. "ಮುನ್ನೀರು" ಎಂದರೆ ಧ್ರುವಜಲ, ನದೀಜಲ, ಮೇಘಜಲ ಎಂಬ ಮೂರು ಜಲಗಳನ್ನುಳ್ಳ ಸಮುದ್ರ, "ಸಮುದ್ರ ಮುಂತಾಗಿ" ಎಂದರೆ ಅರ್ಥವೇನು? ಮುಂತಾದ= ಮೊದಲಾದ ಎಂಬುದರ ಸಾಮ್ಯದಿಂದ "ಸಮುದ್ರ ಮೊದಲಾಗಿ" ಎಂದು ಅರ್ಥ ಮಾಡಿದರೆ ಅನ್ವಯವೇ ಆಗುವುದಿಲ್ಲ. ದೇವಗಂಗೆಯ ಪ್ರವಾಹ ಸಮುದ್ರವನ್ನು ಪ್ರವೇಶಿಸುವುದು ಕೊನೆಯಲ್ಲಿ, ಮೊದಲಲ್ಲಿ ಅಲ್ಲ. "ಮುಂತಾಗಿ" ಎಂಬುದನ್ನು "ಮುನ್+ತಾಗಿ" (=ಮೊದಲು ಸ್ಪರ್ಶಿಸಿ, ಸೇರಿ) ಎಂದು ಬಿಡಿಸಬೇಕೆಂಬ ಒಂದು ಸೂಚನೆಯುಂಟು. ಮೇಲಿನ ಆಕ್ಷೇಪಣೆ ಇದಕ್ಕೂ ಯಥೋಚಿತವಾಗಿ ಸಲ್ಲುತ್ತದೆ; ಅಲ್ಲದೆ ವ್ಯಾಕರಣದ ಕ್ಲೇಶವೂ ಉಂಟು. ಈ ತೊಡಕುಗಳನ್ನು ಪರಿಹರಿಸಲೆಂದು, ಅನೇಕ ವರ್ಷಗಳ ಹಿಂದೆ, "ಮುನ್ನಿರುಮಂ ತಾಗಿ" (=ಮುನ್ನೀರನ್ನೂ ಮುಟ್ಟಿ, ಸೇರಿ) ಎಂದು ಪಾಠವನ್ನು ತಾತ್ಕಾಲಿಕವಾಗಿ ತಿದ್ದಿಕೊಂಡು ಹೇಗೋ ಪಾಠ ಹೇಳಿದ ಅನುಭವ ಪ್ರಕೃತ ಲೇಖಕನಿಗೆ ಉಂಟು.[೧] ಆದರೆ ಕವಿಯ ಆಶಯ ಇದೇ ಸರಿ ಎಂಬ ನಿಶ್ಚಯ ಒದಗಲಿಲ್ಲ; ಒಳಮನಸ್ಸಿಗೆ ಸಮಾಧಾನವಾಗಲಿಲ್ಲ.

---

೧. ಮೈಸೂರು ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ 'ಜೈಮಿನಿಭಾರತ'ದ ಹಸ್ತಲಿಖಿತ ಪ್ರತಿಗಳಲ್ಲಿ, "ಮು(ಂ)ನೀರು ಮುಂತಾಗಿ" ಎಂದು K 25, K 84/1, K 224/1, K 294, K A 225 ಇವುಗಳಲ್ಲಿಯೂ, "ಮುಂನೀರು ಮುಂತ್ತಾಗಿ" ಎಂದು K A 224 ರಲ್ಲಿಯೂ, "ಮು(ಂ)ನೀರ ಮುಂತಾಗಿ" ಎಂದು K 219, K 272, K B 293 ಇವುಗಳಲ್ಲಿಯೂ, "ಮುಂನ್ನೂರು ಮುಂತ್ತಾದ" ಎಂದು K 264 ರಲ್ಲಿಯೂ ಪಾಠಗಳಿವೆ. "ಮುನ್ನೀರು ಮುಂತಾಗಿ" ಎಂದು ಯಾವ ಹಸ್ತಲಿಖಿತ ಪ್ರತಿಯಲ್ಲೂ ಕಾಣಬರುವುದಿಲ್ಲ.
"ಮುನ್ನೀರುಮಂ ತಾಗಿ" ಎಂಬ ಪಾಠವನ್ನು ಅಂಗೀಕರಿಸಿ, ಅದಕ್ಕೆ "ಸಮುದ್ರವನು ಸೇರಿ" ಎಂದು ಅರ್ಥಮಾಡಿರುವುದು ಪಂಡಿತ ನಂಜುಂಡಶಾಸ್ತ್ರಿಗಳ ಟೀಕೆಯಲ್ಲಿ ಗೋಚರಿಸುತ್ತದೆ. (ಓ. ರಿ. ಇ. K. 2668; ೧೯೩೦ನೆಯ ಇಸವಿಯ ಮುದ್ರಣ, ಪು. ೪೮೧).
ಓ. ರಿ. ಇ. ಯಲ್ಲಿರುವ 'ಜೈಮಿನಿಭಾರತ'ದ ಹಸ್ತಲಿಖಿತ ಪ್ರತಿ ಮುದ್ರಿತ ಪ್ರತಿಗಳಿಂದ ಈ ಪಾಠಗಳನ್ನು ಗುರುತಿಸಿಕೊಟ್ಟು ಶ್ರೀಮಾನ್ ಬಿ. ಎಸ್. ಸಣ್ಣಯ್ಯನವರು ಉಪಕಾರ ಮಾಡಿದ್ದಾರೆ.

ಕೆಲವು ವರ್ಷಗಳ ಹಿಂದೆ ಮಾನ್ಯ ಮಿತ್ರರೊಬ್ಬರು (ಶ್ರೀಮಾನ್ ಗೊರೂರು ರಾಮಸ್ವಾಮಿ ಅಯ್ಯಂಗಾರರು) ಯಾವುದೋ ಘಟನೆಯನ್ನು ವರ್ಣಿಸುತ್ತಾ "ನಾನು ಆ ಬೆಳಗ್ಗೆ ನಮ್ಮೂರಿನಿಂದ ಹಾಸನ ಮುಂದಾಗಿ ಹೊರಟೆ" ಎಂದರು. ಕೇಳಿ ನನ್ನ ಕಿವಿ ನೆಟ್ಟಗಾಯಿತು. ಇಲ್ಲಿ "ಹಾಸನ ಮುಂದಾಗಿ" ಎಂದರೆ "ಹಾಸನವನ್ನು ಮುಂದಾಗಿ ಮಾಡಿಕೊಂಡು, ಹಾಸನಕ್ಕೆ ಅಭಿಮುಖವಾಗಿ, ಹಾಸನದ ಕಡೆಗೆ" ಎಂದು ಅರ್ಥ. ಪ್ರಯೋಗಕಾರರು ನನ್ನ ಮುಂದೆಯೇ ಇದ್ದಕಾರಣ, ಅವರ ಮಾತಿನ ಅರ್ಥವೇ ನೆಂಬುದನ್ನು ಪ್ರತ್ಯಕ್ಷವಾಗಿಯೇ, ಯಾವ ಊಹಾಪೋಹಗಳನ್ನೂ ಅವಲಂಬಿಸದೆಯೇ, ತಿಳಿದುಕೊಳ್ಳಲು ಸಾಧ್ಯವಾಯಿತು. "ಹಾಸನ ಮುಂದಾಗಿ" ಎಂಬುದಕ್ಕೂ "ಮುನ್ನೀರು ಮುಂತಾಗಿ" ಎಂಬುದಕ್ಕೂ ಅರ್ಥಸಾಮ್ಯವಿರುವುದು ಸ್ಪಷ್ಟವಾಯಿತು. "ಮುನ್ನೀರು ಮುಂತಾಗಿ . . . ಪರಿವ" ಎಂದರೆ "ಸಮುದ್ರಾಭಿಮುಖವಾಗಿ . . . ಹರಿಯುವ" ಎಂಬ ಅರ್ಥ ಹೊಳೆದು ಲಕ್ಷ್ಮೀಶನ ಪ್ರಯೋಗ ಸುಸಮಂಜಸವಾಯಿತು. ಲಕ್ಷ್ಮೀಶನು "ಮುಂತಾಗಿ" ಎಂಬುದರ ಬದಲು "ಮುಂದಾಗಿ" ಎಂದು ಬರೆದಿದ್ದರೆ ಈ ಕ್ಲೇಶ ಇನ್ನಷ್ಟು ಸುಲಭವಾಗಿ ಪರಿಹಾರವಾಗುತ್ತಿತ್ತೋ ಏನೋ ಎಂದೂ ತೋರದಿರಲಿಲ್ಲ.

ಆದರೆ ಇಂಥ ಸಂದರ್ಭಗಳಲ್ಲಿ "ಮುಂತಾಗಿ", "ಮುಂದಾಗಿ" ಎಂಬ ಎರಡಕ್ಕೂ ರೂಢಿಯುಂಟು ಎಂಬುದು ಈಚೆಗೆ ಕಣ್ಣಿಗೆ ಬಿದ್ದ ಕೆಲವು ಶಾಸನಗಳ ಪ್ರಯೋಗಗಳಿಂದ ದೃಢಪಟ್ಟಿದೆ. ಸಾಮಾನ್ಯವಾಗಿ ಜಮಿನುಗಳ ಎಲ್ಲೆಕಟ್ಟನ್ನು ("ಚತುಃಸೀಮೆ"ಯನ್ನು) ನಿರ್ದೇಶಿಸುವಾಗ ಇಲ್ಲಿ ಅಲ್ಲಲ್ಲಿ ಕಾಣಿಸುತ್ತವೆ.

ಮುಂತಾಗಿ :

> ೧. "ಹಿರಿಯ ಕೆಱೆಯ ಪಡುವಣ ಕೋಡಿಯ ಮಡಿಕಟ್ಟಿನ ಏರಿಯ ಕೆಳಗೆ ಕೋಡಿಯ ಹತ್ತಿರ **ಬಡಗ ಮುಂತಾಗಿ** ಹೋ[ೇ]ದ ಭಂಡೀ ದಾರಿಯ ಹಿರಿಯ ಓಣಿಯಿಂದವುಂ ಮೂಡಲು ಆ ಕೋಡಿಯ ಮಡಿಕಟ್ಟಿನ ಏರಿಯಿಂದವುಂ ಪಡುವಲು ಪೂರ್ವ್ವದಲು **ಪಡುವ ಮುಂತಾಗಿ** ಹೋದ ಏರಿಯಿಂದವುಂ ತೆಂಕಲು **ಪಡುವ ಮುಂತಾಗಿ** ಹೋದ ಕೋಡಿಯಿಂದವುಂ ಬಡಗಲು ಇಂತೀ ಚತುಸ್ಸೀಮೆಯೊಳಗುಳ್ಳ ಕ್ಷೇತ್ರವನೂ"
>
> (ಎಪಿಗ್ರಾಫಿಯ ಕರ್ನಾಟಕ, XII, ಚಿಕ್ಕನಾಯಕನಹಳ್ಳಿ, ೨, ಪಂಕ್ತಿ ೧೪-೪೩; ಕಾಲ ಕ್ರಿ.ಶ. ೧೨೬೧)
>
> ೨. "ಕೋಡಿಯ ಹಿರಿಯ ಹಳ್ಳದಿಂ ಮೂಡಲು ಹಾಲ ಗೊಂಡಿಯಿಂ ಬಡಗಲು ಗೂಳ ಸಮುದ್ರದ ಹಿಂದೆ **ಪಡುವ ಮುಂತಾಗಿ** ಹೋದ ಚಂಟರಿವಳ್ಳದ ಓಣಿಯಂ ತೆಂಕಲು"
>
> (ಅದೇ ಶಾಸನ ಪಂಕ್ತಿ ೫೭-೬೮)

೩. "ಆ ಹಳ್ಳವನ್ನು ದಾಟಿ ರಂಗಸಮುದ್ರದ ಬಡಗಣ ಕೋಡಿಯ ಹಳ್ಳ ಮೇರೆಯಾಗಿ **ಬಡಗು ಮುಂತಾಗಿ ನಡದು** ನಾಗನಾಗನ ಕಟ್ಟೆ ಮೇರೆಯಾಗಿ ಹಂದೀಯ ಗುಂಡಿಯ ಪಡುವಣ ತೆವರನು ಬಲದಲಿ ಹಾಯಿಕಿಕೊಂಡು **ತೆಂಕ ಮುಂತಾಗಿ ತಿರಿಗಿ** ನಾಗನಾಗನ ಕಟ್ಟೆಯಂನೂ ಬಲದಲಿ ಹಾಯಿಕಿ ಕೊಂಡು . . . ಆ ಕಾಲುವೆ ಮೇರೆಯಾಗಿ **ಮೂಡ ಮುಂತಾಗಿ** ಆ ಕಾಲುವೆಯಂ ಬಳಿಯಾಗಿ ಯಿಶಾನ್ಯಾಭಿಮುಖವಾಗಿ ಆ ಕಾಲುವೆ ಮೇರೆ ಯಾಗಿ ನಡದು .ಲೋಕಪಾವನಿಯಂಬ ಸಾಗರವ ಕೂಡಿತ್ತು . . . **ಬಡೆಗ ಮುಂತಾಗಿ** . . . ಅಲ್ಲಿಂದ ಬಡಗ ಮುಖವಾಗಿ ನಡದು . . . ತೆಂಕಮುಖವಾಗಿ ಆ ಹೆದ್ದಾರಿಯೇ ಮೇರೆಯಾಗಿ ನಡದು"

(ಎಪಿ. ಕ., III, ಶ್ರೀರಂಗಪಟ್ಟಣ, ೧೩೩ ಪಂಕ್ತಿ ೪೩–೬೪;
ಕಾಲ ಕ್ರಿ.ಶ. ೧೪೫೮)

ಮುಂದಾಗಿ :

೧. "ತೆಂಕಲು ಬೆಂಡೆಯ ಕೆಱೆಯ ಕೋಡಿಯಿಂ **ಪಡುವ ಮುಂದಾಗಿ** ಪರಿದ ಜಲಪ್ರವಾಹವೇ ಮೇರೆ"

(ಎಪಿ. ಕ., VII, ಷಿಕಾರಿಪುರ, ೧೧೮, ಪಂಕ್ತಿ ೧೮–೧೯;
ಕಾಲ ಕ್ರಿ.ಶ. ೧೦೫೪)

೨. "ದಕ್ಷಿಣ ದಿಶಾಭಾಗಕ್ಕೆ ಅಲ್ಲಿಂದ ಪಶ್ಚಿಮಾಭಿಮುಖಮಾಗಿ ಬನ್ದ ನೆತ್ತಿದೊಱೆ ಮೇರೆಯಾಗಿ . . . ಕಡಪಿನ ಕೂಂಟೆಯಿಂ **ಪಡುವ ಮುಂದಾಗಿ** ಬನ್ದು ಇಲಿಯಿನ್ದೆಯ ಮರನುಂ ಪುತ್ತುಂ ಮೇರೆ"

(ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, IX–, ೧೧೯,
ಪಂಕ್ತಿ ೪೪–೪೮; ಕಾಲ ಕ್ರಿ.ಶ. ೧೦೫೭)

ಈ ಪ್ರಯೋಗಗಳಲ್ಲಿರುವ "ಬಡಗ ಮುಂತಾಗಿ ಹೋದ," "ಪಡವ ಮುಂತಾಗಿ ಹೋದ," "ಬಡಗ ಮುಂತಾಗಿ ನಡದು," "ತೆಂಕ ಮುಂತಾಗಿ ತಿರಿಗಿ," "ಪಡುವ ಮುಂದಾಗಿ ಪರಿದ," "ಪಡುವ ಮುಂದಾಗಿ ಬನ್ದು"—ಈ ಮೊದಲಾದ ಉಕ್ತಿಗಳಲ್ಲಿ "ಮುಂತಾಗಿ" "ಮುಂದಾಗಿ" ಎಂಬ ಮಾತುಗಳಿಗೆ "ಎದುರಾಗಿ, ಅಭಿಮುಖವಾಗಿ" ಎಂಬುದೇ ಅರ್ಥವೆಂಬುದು ಸ್ಪಷ್ಟ. ಶ್ರೀರಂಗಪಟ್ಟಣ ೧೩೩ರಲ್ಲಿ "ತೆಂಕ ಮುಂತಾಗಿ" ಮೊದಲಾದವುಗಳ ಜೊತೆಗೆ "ಯಿ[ಈ]ಶಾನ್ಯಾಭಿಮುಖವಾಗಿ," "ಬಡಗ ಮುಖವಾಗಿ," "ತೆಂಕ ಮುಖವಾಗಿ" ಎಂಬ ಮಾತುಗಳೂ ಬಂದು ಈ ಹೇಳಿಕೆಯನ್ನು ದೃಢಪಡಿಸುತ್ತವೆ. ಷಿಕಾರಿಪುರ ೧೧೮ನೆಯ ಶಾಸನದ "ಪಡುವ ಮುಂದಾಗಿ ಹರಿದ ಜಲಪ್ರವಾಹವೇ ಮೇರೆ" ಎಂಬುದಂತೂ 'ಜೈಮಿನಿಭಾರತ'ದ "ಮುನ್ನೀರು ಮುಂತಾಗಿ . . . ಪರಿವ ಬೆಳ್ದೊರೆಗಳ್" ಎಂಬುದಕ್ಕೆ ತುಂಬ ಸಂವಾದಿಯಾಗಿರುವುದನ್ನು ಇಲ್ಲಿ ಲಕ್ಷಿಸಬಹುದು.'

"ತೆಂಕ ಮುಂತಾಗಿ ತಿರಿಗಿ," "ಪಡುವ ಮುಂದಾಗಿ ಬನ್ದು"—ಇಂಥ ಪ್ರಯೋಗಗಳು ಮಾತ್ರವಲ್ಲದೆ, "ಅಲ್ಲಿಂದ ತೆಂಕಲಾಗಿ ನಡದು," "ಅಲ್ಲಿಂದ ಪಡುವಲಾಗಿ ನಡದು," "ಅಲ್ಲಿಂದ ಪಡುವಲು ನಡದು" (ಎಪಿ. ಕ., IV, ಗುಂಡ್ಲುಪೇಟೆ, ೧೧, ಪಂಕ್ತಿ ೧೪–೨೦; ಕಾಲ ಕ್ರಿ.ಶ. ೧೪೯೭), "ಅಲ್ಲಿ ಪಡುವಲು ನಡದು," "ಅಲ್ಲಿಂ ಪಡುವ ನಡದು" (ಎಪಿ. ಕ., IV, ಗುಂಡ್ಲುಪೇಟೆ; ೬೯, ಪಂಕ್ತಿ ೪೪; ಕಾಲ ಕ್ರಿ.ಶ. ೧೩೨೧); "ಅಲಿಂದಂ ತೆಂಕ ನಡದು" (ಎಪಿ. ಕ., XII, ತಿಪಟೂರು ೧೩೯, ಪಂಕ್ತಿ ೫೦; ಕಾಲ ಕ್ರಿ.ಶ. ?)—ಈ ಮೊದಲಾದ ಪ್ರಯೋಗಗಳೂ ದೊರೆಯುತ್ತವೆ. ಇಲ್ಲೆಲ್ಲಾ, ತೆಂಕಲಾಗಿ=ತೆಂಕ ಮುಂತಾಗಿ=ತೆಂಕ ಮುಖವಾಗಿ=ದಕ್ಷಿಣಾಭಿಮುಖವಾಗಿ ಎಂದೇ ಅರ್ಥ. "ತೆಂಕ ನಡದು," "ಪಡುವಲು ನಡದು" ಈ ಮೊದಲಾದ ಕಡೆಗಳಲ್ಲಿ—ಆಗಿ ಎಂಬುದು ಕೂಡ ಸೇರಿಲ್ಲದೆ ದಿಗ್ವಾಚಕ ಶಬ್ದವಷ್ಟೇ ಪ್ರಯೋಗವಾಗಿದೆ.

ಇಂದಿನ ವ್ಯಾವಹಾರಿಕ ಭಾಷೆಯಲ್ಲಿ "ಮುಂತಾಗಿ" ಸಮೇತವಾದ ನುಡಿಗಟ್ಟು ಉಳಿದಿರುವ ಸಂಭವ ಕಡಮೆ. "ಮುಂದಾಗಿ" ಎಂಬುದು ಹಾಸನದ ಸಮೀಪದಲ್ಲಿ ಇನ್ನೂ ರೂಢಿಯಲ್ಲಿದೆ ಎಂಬುದು ಮೇಲಿನ ನಿರೂಪಣೆಯಿಂದಲೇ ಗೊತ್ತಾಗುತ್ತದೆ. ಅದು ಕನ್ನಡನಾಡಿನ ಬೇರೆ ಯಾವ ಪ್ರದೇಶಗಳಲ್ಲಿ ಇನ್ನೂ ಕೇಳಬರುತ್ತದೆ? ಹಿಂದಿನ ಕಾಲದಲ್ಲಿ "ಮುಂತಾಗಿ" "ಮುಂದಾಗಿ"ಗಳು ಅಭಿಮುಖಾರ್ಥದಲ್ಲಿ ದೇಶದ ಹಲವು ಕಡೆಗಳಲ್ಲಿ ಪ್ರಚುರವಾಗಿದ್ದುವು ಎಂಬುದಕ್ಕೆ ಶಾಸನಗಳು ಸಾಕ್ಷಿ. ಈಗ ಆ ವ್ಯಾಪ್ತಿ ಎಷ್ಟರಮಟ್ಟಿಗೆ ಸಂಕುಚಿತವಾಗಿದೆ? "ಮುಂದಾಗಿ" ಎಂಬುದರ ಇಂದಿನ ಸೀಮಾರೇಖೆ (isogloss) ಎಲ್ಲೆಲ್ಲಿ ಹಾದುಬರುತ್ತದೆ? ಇದರ ಅನ್ವೇಷಣೆ ಸ್ವಾರಸ್ಯವುಳ್ಳ ಸಂಗತಿ.

ಕಾವ್ಯಾನುಭವ : ೧೯೭೦

●

"ಎನಿತ್ತೆನಿತ್ತಂಬುಜಪತ್ರನೇತ್ರೆಯಾ"....*

ಶಬ್ದಮಣಿದರ್ಪಣದಲ್ಲಿ ಕೇಶಿರಾಜನು ಸ್ವಾರಸ್ಯವುಳ್ಳ ಹಲವು ಪದ್ಯಗಳನ್ನು ತುಣುಕುಗಳನ್ನೂ ಉದಾಹರಿಸಿರುವನಷ್ಟೆ. ೧೧೮ನೆಯ ಸೂತ್ರದ ಕೆಳಗೆ ಬಂದಿರುವ ಒಂದು ಪದ್ಯವು ಅನೇಕ ಕಾರಣಗಳಿಂದ ಗಮನವನ್ನು ಸೆಳೆಯುತ್ತದೆ. ಸಾಹಿತ್ಯ ಪರಿಷತ್ತಿನ ಮುದ್ರಣದಲ್ಲಿ (ಪು. ೧೦೩) ಅದು ಹೀಗಿದೆ :

ವಂಶಸ್ಥಂ॥ ಎನಿತ್ತೆನಿತ್ತಂಬುಜಪತ್ರನೇತ್ರೆಯಾ ।
ಘನಸ್ತನಂಗಳ್ ಬಳೆಗುಂ ಕಿರಾತೆಯಾ ॥
ಅನಿತ್ತನಿತ್ತಂ ವನದೊಳ್ ವನೇಚರಂ ।
ತನತ್ತು ಬಿಲ್ಲಾನದನಂತೆ ಕೀಸುವಂ ॥

ಪದ್ಯವು ಶೃಂಗಾರಪರವೆಂಬುದೇನೋ ಸ್ಪಷ್ಟವಾಗಿದೆ. ಆದರೆ ಅರ್ಥವಷ್ಟೂ ಖಚಿತವಾಗಿ ನಿಸ್ಸಂದೇಹವಾಗಿ ಮೇಲುನೋಟಕ್ಕೆ ಹೊಳೆಯುವುದು ಕಷ್ಟ; ಕೊನೆಯ ಪಾದದ ಪಾಠದಲ್ಲಿಯೇ ತೊಡಕಿದೆ. ಇದನ್ನು ಬಿಡಿಸಬೇಕೆಂಬ ಆಸಕ್ತಿಯ ಜೊತೆಗೆ, ಇದು ಯಾರ ಯಾವ ಕೃತಿಯಿಂದ ಎತ್ತಿಕೊಂಡದ್ದೆಂಬುದನ್ನು ತಿಳಿಯುವ ಅಪೇಕ್ಷೆಯೂ ಹುಟ್ಟುತ್ತದೆ. ಅಲ್ಲದೆ, ಕನ್ನಡ ಕಾವ್ಯಗಳಲ್ಲಿ ಅಪೂರ್ವವಾದ ವಂಶಸ್ಥ ವೃತ್ತದ ಪ್ರಯೋಗವೂ, "ಬಿಲ್ಲಾನ್" ಎಂಬ ಪೂರ್ವದ ಹಳಗನ್ನಡದ ಛಾಯೆಯುಳ್ಳ ರೂಪವೂ ಈ ಪದ್ಯದ ಪ್ರಾಚೀನತೆಗೆ ಪೋಷಕವಾಗಿ ಕುತೂಹಲವನ್ನು ಬಲಪಡಿಸುತ್ತವೆ.

---

* 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' ೩೧.೨.

ಈ ಪದ್ಯವನ್ನೊಳಕೊಂಡಿದ್ದ ಕಾವ್ಯವು ಈಗ ದೊರೆಯುವುದಿಲ್ಲವೆಂಬುದೇನೋ ವಿಷಾದದ ಸಂಗತಿ. ಆದರೆ ಇಷ್ಟರಿಂದ ನಾವು ನಿರಾಶೆಪಡಬೇಕಾಗಿಲ್ಲ. ಹಿಂದಿನಿಂದಲೂ ಕನ್ನಡ ಲಾಕ್ಷಣಿಕರ ದೃಷ್ಟಿ ಇದರ ಮೇಲೆ ಬಿದ್ದಿದೆ. ಇದು ಮೊದಲು ಕಾಣಿಸಿಕೊಳ್ಳುವುದು ಎರಡನೆಯ ನಾಗವರ್ಮನ (ಕಾಲ ಕ್ರಿ.ಶ. ಸು. ೧೧೪೫) ಕಾವ್ಯಾವಲೋಕನದಲ್ಲಿ. ಅನಿತು, ಇನಿತು, ಎನಿತು ಎಂಬ ಪರಿಮಾಣವಾಚಕಗಳಿಗೆ ಅನಿತ್ತು, ಇನಿತ್ತು, ಎನಿತ್ತು ಎಂಬ ದ್ವಿತ್ವಸಹಿತವಾದ ಪ್ರಯೋಗವೂ ಉಂಟೆಂದು ತೋರಿಸಲು ಈ ಪದ್ಯವನ್ನು ಅವನು ಉದಾಹರಿಸುತ್ತಾನೆ (೭೯ನೆಯ ಸೂತ್ರದ ಕೆಳಗೆ : ಪದ್ಯ ೩೫೯). ಅವನ ಭಾಷಾಭೂಷಣದಲ್ಲಿ ಇದಕ್ಕೆ ಸಂವಾದಿಯಾದ ಸೂತ್ರದ (೧೮೧) ಕೆಳಗೆ ಬಂದಿರುವುದು[೧] ಮಾತ್ರವಲ್ಲದೆ, ಸ್ವರವು ಪರವಾದಾಗ ದ್ವಿತೀಯಾ ವಿಭಕ್ತಿ ಪ್ರತ್ಯಯದ ಸ್ವರವು ವಿಕಲ್ಪವಾಗಿ ದೀರ್ಘವಾಗುವುದೂ ಉಂಟೆಂಬುದಕ್ಕೆ ನಿದರ್ಶನವಾಗಿ[೨] ಇನ್ನೂ ಹಿಂದೆಯೇ (ಸೂತ್ರ ೬೮ರ ಕೆಳಗೆ) ಈ ಪದ್ಯ ಬಂದು–ಅಂತೂ ಒಂದೇ ಗ್ರಂಥದಲ್ಲಿ ಎರಡು ಕಡೆ ಸಿಕ್ಕುತ್ತದೆ.[೩] ಬಳಿಕ ಕೇಶಿರಾಜನ ಸರದಿ (ಕಾಲ : ಕ್ರಿ. ಶ. ಸು. ೧೨೬೦). ಭಾಷಾಭೂಷಣದ ೬೮ನೆಯ ಸೂತ್ರಕ್ಕೆ ಸಂವಾದಿಯಾದದ್ದು ಶಬ್ದಮಣಿದರ್ಪಣದ ೧೧೮ನೆಯ ಸೂತ್ರ. ವಾಚಕರಿಗೆ ಪ್ರಸ್ತುತ ಪದ್ಯದ ಮೊದಲ ಪರಿಚಯವು ಸಾಮಾನ್ಯವಾಗಿ ಆಗುವುದು ಇಲ್ಲಿಯೇ. ಈಚೆಗೆ ಬಂದ ಭಟ್ಟಾಕಳಂಕನೂ (ಕಾಲ : ಕ್ರಿ. ಶ. ೧೬೦೪) ಕೇಶಿರಾಜನನ್ನೇ ಅನುಸರಿಸಿ, ಶಬ್ದಾನುಶಾಸನದ ೨೫೬ನೆಯ ಸೂತ್ರದ ಕೆಳಗೆ ಇದನ್ನು ಉದಾಹರಿಸುತ್ತಾನೆ.[೪] ಈ ಪದ್ಯವು ವಿದ್ವತ್ಪ್ರಿಯವೆಂಬುದಕ್ಕೆ ಇಷ್ಟೇ ಸಾಕ್ಷಿ ಸಾಕು; ಆದರೆ ಇನ್ನೂ ಒಂದು ಉಂಟು. ಈ ಸಲ ಆಕರಗ್ರಂಥ ವ್ಯಾಕರಣವಲ್ಲವೆಂಬುದೊಂದೇ ವಿಶೇಷ. ಅಭಿನವವಾದಿ ವಿದ್ಯಾನಂದನು (ಕಾಲ : ಕ್ರಿ. ಶ. ೧೫೩೩) ಕಾವ್ಯಸಾರವೆಂಬ ಪದ್ಯಸಂಕಲನದಲ್ಲಿ

---

೧. ಈ ದ್ವಿತ್ವವಿಚಾರವು ಕಾವ್ಯಾವಲೋಕನ ಭಾಷಾಭೂಷಣಗಳೆರಡರಲ್ಲೂ ಸೂತ್ರದೊಳಗೇ ಸೇರಿಲ್ಲ; ಸೂತ್ರದ ಕೆಳಗೆ ವೃತ್ತಿ ಪ್ರಯೋಗಗಳಲ್ಲಿ ಹೆಚ್ಚಿನ ಹೇಳಿಕೆಯಾಗಿ ಬರುತ್ತದೆ.

೨. ಪೂರ್ವದ ಹಳಗನ್ನಡದಲ್ಲಿ–ಆನ್ ಎಂಬ ದೀರ್ಘರೂಪವು ಸ್ವರಾದಿ ಪದಗಳು ಪರವಾದಾಗ ಮಾತ್ರವೇ ಅಲ್ಲದೆ ಎಲ್ಲ ಸಂದರ್ಭಗಳಲ್ಲೂ ಕಾಣಿಸಿಕೊಳ್ಳುತ್ತದೆ. ಉದಾ.—"ಪ್ರಾಸಾದಾನ್ತರಮಾನ್ ವಿಚಿತ್ರಕನಕಪ್ರಜ್ವಲ್ಯದಿನ್ ಮಿಕ್ಕುದಾನ್" (ಶ್ರವಣಬೆಳ್ಗೊಳ, ೭೮). ನೋನ್ತೆಯ್ದಿದೊರ್ ಸಿದ್ಧಿಯಾನ್ (ಶ್ರವಣಬೆಳ್ಗೊಳ, ೨೨) ಹಳಗನ್ನಡದ ವ್ಯಾಕರಣಕಾರರು "ಬಿಲ್ಲಾನದಂ" ಎಂಬಂಥ ಪ್ರಯೋಗಗಳನ್ನು ಮಾತ್ರ, ಅದೂ ವೈಕಲ್ಪಿಕವಾಗಿ, ಅಂಗೀಕರಿಸುತ್ತಾರೆ. ಇದರ ವಿವೇಚನೆ ಕವಿರಾಜಮಾರ್ಗದಲ್ಲಿಯೇ ಮೊದಲಾಗಿದೆ (೨. ೧೫-೧೮ ನೋಡಿ)

೩. ಸ್ವರವು ಪರವಾದಾಗ ದ್ವಿತೀಯೆಯ ಸ್ವರಕ್ಕೆ ದೀರ್ಘವನ್ನು ಅಂಗೀಕರಿಸುವ ಸೂತ್ರ ಕಾವ್ಯಾವಲೋಕನದಲ್ಲಿಯೂ ಉಂಟು (೩೧); ಆದರೆ ಉದಾಹರಣೆ ಬೇರೆಯಾಗಿವೆ. "ಪುರಾತನೋಕ್ತಿಗಳೊಳಂತದಲ್ಲಿ ಯಥೇಷ್ಟಂ" ಎಂದು ನಾಗವರ್ಮನು ಸೂತ್ರದಲ್ಲಿಯೇ ಹೇಳಿದ್ದಾನೆ.

೪. ಅನಿತು, ಇನಿತು, ಎನಿತು ಎಂಬವಕ್ಕೆ ವಿಶಿಷ್ಟವಾಗಿ ದ್ವಿತ್ವವನ್ನು ವಿಧಿಸುವ ಸೂತ್ರ ಶಬ್ದಮಣಿದರ್ಪಣದಲ್ಲಿಲ್ಲ; ಶಬ್ದಾನುಶಾಸನದಲ್ಲಿಯೂ ಇಲ್ಲ. ಆದಕಾರಣ ನಮ್ಮ ಪದ್ಯ ಇವೆರಡು ಗ್ರಂಥಗಳಲ್ಲೂ ಮತ್ತೊಮ್ಮೆ ಬರಲು ಅವಕಾಶವಿರಲಿಲ್ಲ.

ಶಬರವರ್ಣನೆಯ ಪ್ರಸಂಗದಲ್ಲಿ ಇದನ್ನು ಉದ್ಧರಿಸಿದ್ದಾನೆ (ಪದ್ಯ ೧೮೧). ಅಂತೂ ಹೀಗೆ ಬೇರೆ ಬೇರೆ ಆರು ಕಡೆಗಳಲ್ಲಿ ಎತ್ತಿಕೊಟ್ಟಿರುವ ಕನ್ನಡ ಪದ್ಯಗಳು ಅಪೂರ್ವ.

ಇಷ್ಟೊಂದು ಕಡೆ ಈ ಪದ್ಯ ದೊರೆಯುವುದರಿಂದ, ಸಹಜವಾಗಿ ಇದರಲ್ಲಿ ಅನೇಕ ಪಾಠಭೇದಗಳೂ ಉಂಟಾಗಿವೆ. ಅವುಗಳ ವಿಮರ್ಶೆಗೆ ತೊಡಗುವ ಮೊದಲು ಪದ್ಯದ ಆಶಯವೇನೆಂಬುದನ್ನು ಪರಿಷ್ಕಾರಮಾಡಿಕೊಳ್ಳುವುದು ಅಗತ್ಯ. ಅರಣ್ಯವಾಸಿಗಳಾಗಿ ಬಿಲ್ಲಿನ ಬೇಟೆಯಿಂದ ಜೀವನನಡೆಸುವ ಬೇಡರಿಗೆ ಸಂಬಂಧಿಸಿದ ಒಂದು ಸಂಗತಿಯನ್ನು ಇಲ್ಲಿ ಕವಿ ಚಮತ್ಕಾರವಾಗಿ ಚಿತ್ರಿಸಿದ್ದಾನೆ. ಚೆಲುವೆಯಾದ ಬೇಡಿತಿಯ ಯೌವನವು ವರ್ಧಿಸಿದ ಹಾಗೆಲ್ಲ ಅವಳಲ್ಲಿ ಬೇಡನು ಅತ್ಯಾಸಕ್ತನಾಗಿ ದುರ್ಬಲನಾಗುತ್ತಾನೆ. ಮೊದಲು ಲೀಲಾಜಾಲವಾಗಿ ಅವನು ಬಾಗಿಸುತ್ತಿದ್ದ ಬಿಲ್ಲು ಈಗ ಅವನ ಅಳವಿಗೆ ಮೀರುತ್ತದೆ. ಅದನ್ನು ಆಗಿಂದಾಗ ಕೆತ್ತಿ ತೆಳ್ಳತೆಳ್ಳಗೆ ಮಾಡಿಕೊಂಡ ಹೊರತು ಅವನು ಉಪಯೋಗಿಸಲಾರನು. ಹೀಗೆ, ಬೇಡಿತಿಯ ಎದೆ ಎಷ್ಟೆಷ್ಟು ತುಂಬಿಕೊಳ್ಳುವುದೋ ಅಷ್ಟಷ್ಟೂ ತನ್ನ ಬಿಲ್ಲನ್ನು ಬೇಡನು ಹೆರೆಹೆರೆದು ತೆಳುವಾಗಿಸುತ್ತಾನೆ ಎಂಬುದೇ ಇಲ್ಲಿಯ ಅರ್ಥಚಮತ್ಕಾರ.

ಈ ಬಗೆಯ ಭಾವ ಭರತಖಂಡದ ಪ್ರಾಚೀನ ಸಾಹಿತ್ಯದಲ್ಲಿ ಅಪೂರ್ವವೇನೂ ಅಲ್ಲ. ಹಾಲ (ಅಥವಾ ಶಾಲಿವಾಹನ) ನಿಂದ (ಕಾಲ : ಕ್ರಿ. ಶ. ೫ನೆಯ ಶತಮಾನ?) ಸಂಕಲಿತವಾದ ಗಾಥಾಸಪ್ತಶತಿಯಲ್ಲಿ ದೊರೆಯುವ ಎರಡು (ಪ್ರಾಕೃತ) ಪದ್ಯಗಳು ಮೇಲಿನ ನಮ್ಮ ವಿವರಣೆಗೆ ಪರಿಪೋಷಕವಾಗುತ್ತವೆ. ಬೇಡನು ಬಿಲ್ಲನ್ನು ಕೆತ್ತಿ ಬೀಳಿಸಿದ ತೆಳುಹೆರೆಗಳು ತನ್ನ ತರುಣಿಯಲ್ಲಿ ಅವನಿಗಿರುವ ಅಮಿತಾಸಕ್ತಿಯ ನಿದರ್ಶನವಾಗಿ, ಅವಳ ಸೌಭಾಗ್ಯಾತಿಶಯದ ಪ್ರತೀಕವಾಗಿ ಕವಿಯ ಕಣ್ಣಿಗೆ ತೋರುತ್ತವೆ. ಈ ಎರಡು ಪದ್ಯಗಳೂ ಶಾಲಿವಾಹನನೇ ಬರೆದುವಂತೆ :

(೧) ಅಜ್ಜಕಇಮೋ ವಿ ದಿಅಹೋ ವಾಹವಹೂ ರೂವಜೊವ್ವಣುಮ್ಮತ್ತಾ ।
ಸೋಹಗ್ಗಂ ಧಣುರುಂಪಚ್ಛಲೇಣ ರಚ್ಛಾಸು ವಿಕ್ಕಿರಇ ॥ (೨.೧೯)
[ಅದ್ಯ ಕತಮೋऽಪಿ ದಿವಸೋ ವ್ಯಾಧವಧೂ ರೂಪಯೌವನೋನ್ಮತ್ತಾ ।
ಸೌಭಾಗ್ಯಂ ಧನುಸ್ತಷ್ಟತ್ವಕ್‌ಛಲೇನ ರಥ್ಯಾಸು ವಿಕಿರತಿ ॥
ಎನಿತನೆ ದಿನವೊ ತಾನಿಂದಿಗೆ—ಬೇಡಿತಿ
ರೂಪಯೌವನದಿಂದ ಸೊಕ್ಕಿ,
ಬಿಲ್ಲ ಹೆರೆಯ ನೆವದಿಂದ ಸೌಭಾಗ್ಯವ
ಬೀದಿಬೀದಿಯಲಿ ಬೀರುವಳು.]

(೨) ಉಕ್ಖಿಪ್ಪಇ ಮಂಡಲಿಮಾರುಏಣ ಗೇಹಂಗಣಾಹಿ ವಾಹೀಏ ।
ಸೋಹಗ್ಗಧಅವಡಾಅ ವ್ವ ಉವಹ ಧನುರುಂಪರಿಂ ಛೋಲೀ ॥ (೨.೨೦)
[ಉತ್ಕ್ಷಿಪ್ಯತೇ ಮಂಡಲೀಮಾರುತೇನ ಗೇಹಾಂಗಣಾದ್ವ್ಯಾಧಸ್ತ್ರಿಯಾಃ ।
ಸೌಭಾಗ್ಯಧ್ವಜಪತಾಕೇವ ಪಶ್ಯತ ಧನುಃಸೂಕ್ಷ್ಮತ್ವಕ್‌ಪಂಕ್ತಿಃ ॥

ನೋಡಿ : ಸುಟ್ಟುರೆಗಾಳಿ ಬೇಡವೆಣ್ಣಿನ ಹಟ್ಟಿ
ಯಂಗಳದಿಂದೆತ್ತುತಿಹುದು
ಬಿಲ್ಲಿನ ತೆಳುಹೆರೆ ಸಾಲನು ಮೇಲಕೆ
ಸೌಭಾಗ್ಯಧ್ವಜದಂಡದಂತೆ.]

ಇನ್ನು ನಮ್ಮ ಪದ್ಯದ ಪಾಠಶೋಧನೆಗೆ ಗಮನಕೊಡಬಹುದು. ಇದಕ್ಕಾಗಿ ಉಪಯೋಗಿಸಿಕೊಂಡಿರುವ ಆಕರಗಳನ್ನೂ ಅವುಗಳಿಗೆ ಕೊಟ್ಟಿರುವ ಸಂಕೇತಗಳನ್ನೂ ಕೆಳಗಿನ ಪಟ್ಟಿಯಲ್ಲಿ ಗುರುತಿಸಿದೆ :

ಕಾವ್ಯ ೧—ಕಾವ್ಯಾವಲೋಕನ	ರಾ. ನರಸಿಂಹಾಚಾರ್ಯರ ಮುದ್ರಣ (ಬೆಂಗಳೂರು, ಕ್ರಿ.ಶ. ೧೯೦೩)
ಕಾವ್ಯಾ ೨ "	ಎಚ್. ಆರ್. ರಂಗಸ್ವಾಮಿ ಅಯ್ಯಂಗಾರರ ಮುದ್ರಣ (ಮೈಸೂರು ಓರಿಯಂಟಲ್ ಲೈಬ್ರರಿ, ಕ್ರಿ. ಶ. ೧೯೩೯)
ಕಾವ್ಯಾ ೩	ಶಿ. ಶಿ. ಬಸವನಾಳ ಮತ್ತು ಕೇಪು ಶಂಕರ ನಾರಾಯಣ ಅವರ ಮುದ್ರಣ, (ಧಾರವಾಡ, ಕ್ರಿ. ಶ. ೧೯೩೯)
ಭಾಷಾ ೧—ಭಾಷಾಭೂಷಣ	ಲೂಯಿ ರೈಸರ ಮುದ್ರಣ (ಬೆಂಗಳೂರು, ಕ್ರಿ. ಶ. ೧೮೮೪)
ಭಾಷಾ ೨ ಕ— "	ರಾ. ನರಸಿಂಹಾಚಾರ್ಯರ ಮುದ್ರಣ (ಬೆಂಗಳೂರು, ಕ್ರಿ. ಶ. ೧೯೦೩)-೬೮ನೆಯ ಸೂತ್ರದ ಕೆಳಗೆ
ಭಾಷಾ ೨ ಖ— "	.. " ೧೮೧ನೆಯ ಸೂತ್ರದ ಕೆಳಗೆ"
ಶಬ್ದ ೧— ಶಬ್ದಮಣಿದರ್ಪಣ	ಎಫ್. ಕಿಟ್ಟೆಲರ ಮೊದಲನೆಯ ಮುದ್ರಣ (ಮಂಗಳೂರು, ಕ್ರಿ. ಶ. ೧೮೭೨)
ಶಬ್ದ ೨— "	" ಮೂರನೆಯ ಮುದ್ರಣ (ಪಂ. ಮಂಗೇಶರಾಯರು ಪರಿಷ್ಕರಿಸಿದ್ದು : ಮಂಗಳೂರು, ಕ್ರಿ. ಶ. ೧೯೨೦)
ಶಬ್ದ ೩— ಶಬ್ದಮಣಿದರ್ಪಣ	ಕ. ಸಾ. ಪರಿಷತ್ತಿನ ಮುದ್ರಣ (ಬೆಂಗಳೂರು, ಕ್ರಿ. ಶ. ೧೯೨೦)

೫. ಬಿ. ಎಲ್. ರೈಸರು ಮುದ್ರಿಸಿರುವ ಭಾಷಾಭೂಷಣದಲ್ಲಿ ಈ ಎರಡನೆಯ ಸಲ ನಮ್ಮ ಪದ್ಯ ಉದಾಹೃತವಾಗಿಲ್ಲ. ಪರಿಶಿಷ್ಟದಲ್ಲಿ ಮಾತ್ರ—"L. & B. *add The quotation given under Sutra* 69." ಎಂದು ತಿಳಿಸಿದ್ದಾರೆ; ಪಾಠಾಂತರಗಳೇನನ್ನೂ ಸೂಚಿಸಿಲ್ಲ. ರೈಸರ ಮುದ್ರಣದಲ್ಲಿ ಈ ಸೂತ್ರದ ಸಂಖ್ಯೆ ೧೮೭; ರಾ. ನರಸಿಂಹಾಚಾರ್ಯರ ಮುದ್ರಣದಲ್ಲಿರುವಂತೆ ೧೮೧ ಅಲ್ಲ.

ಶಬ್ದ ೪—	ಲಿಂಗಣಾರಾಧ್ಯವೃತ್ತಿಯೊಡನೆ ಎ. ವೆಂಕಟರಾವ್ ಮತ್ತು ಎಚ್. ಶೇಷಯ್ಯಂಗಾರ್ ಮುದ್ರಿಸಿದ್ದು (ಮದರಾಸು, ಕ್ರಿ. ಶ. ೧೯೩೯)
ಶಬ್ದಾನು ೧— ಶಬ್ದಾನುಶಾಸನ	ಲೂಯಿ ರೈಸರ ಮುದ್ರಣ (ಬೆಂಗಳೂರು, ಕ್ರಿ. ಶ. ೧೮೯೦)
ಶಬ್ದಾನು ೨— "	ರಾ. ನರಸಿಂಹಾಚಾರ್ಯರ ಮುದ್ರಣ (ಬೆಂಗಳೂರು, ಕ್ರಿ. ಶ. ೧೯೨೩)
ಕಾವ್ಯಸಾ—ಕಾವ್ಯಸಾರ	ಎಸ್. ಜಿ. ನರಸಿಂಹಾಚಾರ್ ಮತ್ತು ಮ. ಆ. ರಾಮಾನುಜಅಯ್ಯಂಗಾರ್ ಅವರ ಮುದ್ರಣ (ಮೈಸೂರು, ೧೮೯೮)

ಈ ಮುದ್ರಣಗಳಲ್ಲಿ ಸಂಪಾದಕರು ಉಲ್ಲೇಖಿಸಿರುವ ಪಾಠಾಂತರಗಳನ್ನು ಆಯಾ ಗ್ರಂಥದ ಸಂಕೇತದ ಮುಂದೆ "—ಪಾ" ಎಂದು ಬರೆದು ಗುರುತಿಸಲಾಗಿದೆ.[೬] ಉದಾ.— ಕಾವ್ಯಾ ೩—ಪಾ, ಭಾಷಾ ೨ ಖ—ಪಾ, ಇತ್ಯಾದಿ.

ನಮ್ಮ ಪದ್ಯದ ಮೊದಲ ಮೂರು ಪಾದಗಳಲ್ಲಿ ಲೇಖಕರ ಪ್ರಮಾದಗಳೆಂದೋ ಅಚ್ಚಿನ ತಪ್ಪುಗಳೆಂದೋ ನಿಸ್ಸಂದೇಹವಾಗಿ ತೋರುವ ಎರಡು ಮೂರು ಪಾಠಾಂತರ ಗಳನ್ನು ಇಲ್ಲಿ ಗಣನೆಗೆ ತೆಗೆದುಕೊಂಡಿಲ್ಲ; ಅವನ್ನು ಉಲ್ಲೇಖಿಸುವುದೂ ಅನಾವಶ್ಯಕ. ಎರಡನೆಯ ಪಾದದ "ಬಳೆಗುಂ" ಎಂಬುದಕ್ಕೆ—ಬಳೆಯೆಳ್ (ಭಾಷಾ ೧), ಬಳೆಗಳ್ (ಶಬ್ದ ೪—ಪಾ), ಬಳೆಯಲ್ (ಶಬ್ದಾನು ೧.೨) ಎಂಬ ಪಾಠಾಂತರಗಳುಂಟು. ಇವೂ ಪ್ರಮಾದಜನ್ಯಗಳೆಂದೇ ಧೈರ್ಯವಾಗಿ ಹೇಳಿ ಕೈಬಿಡಬಹುದು. ನಿಜವಾದ ಕ್ಲೇಶವಿರುವುದು ನಾಲ್ಕನೆಯ ಪಾದದಲ್ಲಿ. ಅಲ್ಲಿ ದೊರೆಯುವ ಪಾಠ್ಯವೈಪುಲ್ಯ ಬೆರಗು ತರುವಂಥದು :

ತನತ್ತು[೭] ಬಿಲ್ಲಾನದನಂತೆ ಕೀಸುವಂ

(೧) ನಸ್ತು (ಕಾವ್ಯ ೧); ನಂತು (ಕಾವ್ಯಾ ೨.೩, ಭಾಷಾ ೧); ನೆಂತೆ (ಕಾವ್ಯಾ ೩—ಪಾ, ಭಾಷಾ ೨ ಖ, ಶಬ್ದ ೨.೩.೪); ನೆಂತು (ಶಬ್ದಾನು ೧.೨); ನೆಂತೆ (ಶಬ್ದಾನು ೨—ಪಾ; ನೆತ್ತು (ಶಬ್ದ ೧); ನೆತ್ತೆ (ಕಾವ್ಯಸಾ); ನೊತ್ತಿ (ಭಾಷಾ ೨ ಖ); ನೇಕೆ.[೮]

೬. ಆಯಾ ಸಂಪಾದಕರು ಉಪಯೋಗಿಸಿಕೊಂಡು ಗುರುತಿಸಿರುವ ಮೂಲ ಮಾತೃಕೆಗಳ ಪಾಠಭೇದಗಳನ್ನು ಮಾತ್ರ ಇಲ್ಲಿ ಕೊಟ್ಟಿದ್ದೇವೆ. ಅಚ್ಚಿನ ಪುಸ್ತಕಗಳಲ್ಲಿ ಉಂಟೆಂದು ಅವರು ಉದ್ಧರಿಸಿರುವ ಪಾಠಭೇದಗಳನ್ನು, ಅವು ನಮ್ಮ ಪಟ್ಟಿಯಲ್ಲಾಗಲೆ ಸ್ವಸ್ಥಳದಲ್ಲಿ ಸೇರಿರುವುದರಿಂದ, ಮತ್ತೆ ಉಲ್ಲೇಖಿಸಿಲ್ಲ.

೭. ತನಿತ್ತು (ಕಾವ್ಯಾ ೨—ಪಾ); ಇದು ಲೇಖಕನ ಪ್ರಮಾದದಿಂದ ಉಂಟಾದ ಅಪಪಾಠವೆಂದು ಎದ್ದು ಕಾಣಿಸುತ್ತದೆ. ತನತ್ತು=ತನ್ನದು.

೮. ನನ್ನ ವಶದಲ್ಲಿರುವ ಶಬ್ದಮಣಿದರ್ಪಣದ ಓಲೆಗರಿಯ ಪ್ರತಿಯೊಂದರಲ್ಲಿ ಇದು ಗೋಚರ ವಾಗುತ್ತದೆ. ಈ ಪ್ರತಿಯಲ್ಲಿ "ತನತ್ತು ಬಿಲ್ಲಾನದನೇಕೆ ಕೀಸುವಂ" ಎಂಬ ಭಾಗ ಮಾತ್ರ

(೨) ಕೀಸುಗುಂ (ಕಾವ್ಯಾ ೧.೨.೩, ಭಾಷಾ ೧.೨ ಕ); ಕೀಸುವಂ (ಕಾವ್ಯಾ ೧—ಪಾ, ಕಾವ್ಯಾ ೨—ಪಾ, ಕಾವ್ಯಾ ೩—ಪಾ, ಭಾಷಾ ೨ ಖ—ಪಾ, ಶಬ್ದ ೧.೨.೩.೪, ಶಬ್ದಾನು ೧.೨, ಕಾವ್ಯಸಾ); ಕೆತ್ತುಗುಂ (ಭಾಷಾ ೨ ಖ), ಕೆತ್ತುವಂ (ಭಾಷಾ ೨ ಖ—ಪಾ).

ಈ ಪಾಠಾಂತರಗಳ ಪಟ್ಟಿಯಲ್ಲಿ ಎರಡನೆಯದನ್ನು ಮೊದಲು ತೆಗೆದುಕೊಳ್ಳೋಣ. "ಕೀಸು", "ಕೆತ್ತು" ಈ ಎರಡು ಧಾತುಗಳಲ್ಲಿ ಮೂಲ ಪಾಠಕ್ಕೆ ಸೇರಿದ್ದು ಯಾವುದೆಂದು ನಿರ್ಣಯಿಸುವುದು ಸುಲಭ. "ಕೀಸು" ಎಂದರೆ "ತೆಳ್ಳಗೆ ಮಾಡು, ಹೆರೆ, ಎಂದು ಅರ್ಥ.[೯] ಈ ಧಾತುವಿನ ಪ್ರಾಚುರ್ಯ ಕಡಮೆಯಾದಾಗ, ಇದಕ್ಕೆ ಬಲುಮಟ್ಟಿಗೆ ಸಮಾನಾರ್ಥಕವಾಗಿ ಇಂದಿಗೂ ಬಳಕೆಯಲ್ಲಿರುವ "ಕೆತ್ತು" ಎಂಬುದು ಇದರ ಸ್ಥಾನವನ್ನು ಒಂದೆರಡು ಮಾತೃಕೆಗಳಲ್ಲಿ ಆಕ್ರಮಿಸಿದಂತೆ ತೋರುತ್ತದೆ. ಇನ್ನು, "ಕೀಸುಗುಂ", "ಕೀಸುವಂ"—ಎಂಬೆರಡಕ್ಕೂ ಒಂದೇ ಅರ್ಥವಾದರೂ, ಪದ್ಯದ ಎರಡನೆಯ ಪಾದದಲ್ಲಿರುವ "ಬಳೆಗುಂ" ಎಂಬುದಕ್ಕೆ ಸಮತೂಕವಾಗಿ ನಿಲ್ಲುವ "ಕೀಸುಗುಂ" ಎಂಬುದೇ ಪ್ರಾಕ್ತನವೆಂದು ಊಹಿಸಬಹುದು.

ಮೊದಲನೆಯ ಪಟ್ಟಿಯಲ್ಲಿ, ಎಲ್ಲ ಪದಗಳಿಗೂ "ಅದನ್" ಎಂಬ ಹಿಂದಿನ ಪದದ ಅಂತ್ಯದ ನಕಾರವು ಅಂಟಿಕೊಂಡಿದೆಯಷ್ಟೆ. ಅದನ್ನು ತೆಗೆದರೆ ನಿಲ್ಲುವವು : ಅಂತು (ಅನ್ತು)—ಅಂತೆ—ಎಂತು—ಎತ್ತು—ಎತ್ತೆ—ಒತ್ತಿ—ಏಕೆ. ಈ ಪಾಠಭೇದಗಳ ಸಂತೆಯಲ್ಲಿ ಯಾವುದು ಸರಿ? "ಏಕೆ" ಎಂಬುದನ್ನು ಬಿಟ್ಟರೆ, ಮಿಕ್ಕವುಗಳಿಗೆಲ್ಲ ರೂಪದಲ್ಲಿ ಅಲ್ಪಭೇದ ಮಾತ್ರ : ಯಾವುದೊಂದನ್ನಾದರೂ ಮೂಲರೂಪವೆಂದು ಅಂಗೀಕರಿಸಿ, ಉಳಿದವು ಅದಶ "ಅಪಪಾಠ"ಗಳೆಂದು ಹೆಚ್ಚು ಶ್ರಮವಿಲ್ಲದೆ ವಾದಮಾಡಬಹುದು. ಆದಕಾರಣ, ಗ್ರಂಥ ಸಂಪಾದನಶಾಸ್ತ್ರದ ನಿಯಮವೊಂದನ್ನು ಇಲ್ಲಿಗೆ ಅನ್ವಯಿಸಲು ಅವಕಾಶ ಕಡಮೆ. ಹೆಚ್ಚು ಪ್ರಾಮಾಣಿಕವಾದ ಮಾತೃಕೆಯ ಅಥವಾ ಮಾತೃಕೆಗಳ ಗುಂಪಿನ ಪಾಠವನ್ನು ಸ್ವೀಕರಿಸೋಣ ಎನ್ನುವ ಹಾಗೂ ಇಲ್ಲ. ಶಬ್ದಮಣಿದರ್ಪಣವೇ ಮೊದಲಾದ ಈಚಿನ ಕೃತಿಗಳನ್ನು ಬಿಟ್ಟರೂ ಕಾವ್ಯಾವಲೋಕನ ಭಾಷಾಭೂಷಣಗಳ ಕೈಬರೆಹದ ಮಾತೃಕೆಗಳಿಗೇ ಏಕಕಂಠತೆಯಿಲ್ಲ.[೧೦] ಅಲ್ಲದೆ, ಕಾಲದ ದೃಷ್ಟಿಯಿಂದ

ಉಂಟು; ಪದ್ಯದ ಮಿಕ್ಕ ಮೂರು ಪಾದಗಳು ಇಲ್ಲಿ ಉದ್ಧೃತವಾಗಿಲ್ಲ ವೆಂಬುದು ಗಮನಾರ್ಹವಾದ ಅಂಶ. ಶಬ್ದಮಣಿದರ್ಪಣದ ಬೇರೆ ಬೇರೆ ಮಾತೃಕೆಗಳಲ್ಲಿ ಹುಡುಕಿದರೆ ಇನ್ನೂ ಪಾಠಾಂತರಗಳು ದೊರೆಯಬಹುದು!

೯. "ಕೀಸು—ಕೃಶೀಕರಣೇ" (ಶಬ್ದಮಣಿದರ್ಪಣ : ಧಾತುಪಾಠ). "ಕೀಸುಳಿ" ಎಂಬ ಉಪಕರಣದ ಹೆಸರನ್ನೂ ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.

೧೦. ಇನ್ನೊಂದು ವಿಷಯ. ನಾವು ಈ ಲೇಖನಕ್ಕಾಗಿ ಉಪಯೋಗಿಸಿಕೊಂಡಿರುವ ಹಲವು ಅಚ್ಚಿನ ಪುಸ್ತಕಗಳಲ್ಲಿ ಸಂಪಾದಕರು ಪಾಠಾಂತರಗಳನ್ನು ನಿರ್ದೇಶಿಸಿಲ್ಲ; ಹಾಗೆ ನಿರ್ದೇಶಿಸಿರುವವರಲ್ಲಿ ಕೂಡ ಒಬ್ಬಿಬ್ಬರನ್ನು ಬಿಟ್ಟರೆ, ಉಳಿದವರು ಯಾವ ಮಾತೃಕೆಯ ಪಾಠ ಯಾವುದು ಎಂಬುದನ್ನು ಸ್ಫುಟಪಡಿಸಿಲ್ಲ. ಆದಕಾರಣ, ಈ ಚರ್ಚೆಗೆ ಆಧಾರವಾಗಿರುವ ಮೂಲಮಾತೃಕೆಗಳು ಇಂಥಿಂಥವು; ಇವುಗಳಲ್ಲಿ ದೊರೆಯುವ ಪಾಠಗಳು ಇಂಥಿಂಥವು ಎಂಬುದನ್ನು ನಿಷ್ಕರ್ಷೆಯಾಗಿ ಹೇಳಲು ಸಾಧ್ಯವಿಲ್ಲವಾಗಿದೆ.

ಇವಕ್ಕೂ ಮೂಲಪದ್ಯಕ್ಕೂ ಅನೇಕ ಶತಮಾನಗಳ ಅಂತರವುಂಟು. ಆದಕಾರಣ, ಅರ್ಥಸಾಮಂಜಸ್ಯವನ್ನೇ ಮುಖ್ಯಾಧಾರವಾಗಿಟ್ಟುಕೊಂಡು ಮೂಲಪಾಠವನ್ನು ನಿರ್ಣಯಿಸಬೇಕಾಗಿದೆ.

ಈ ಪಾಠಾಂತರಗಳಲ್ಲಿ, "ಎತ್ತು", "ಎಂತೆ" ಎಂಬವನ್ನು ವಾಕ್ಯದಲ್ಲಿ ಅನ್ವಯ ಮಾಡುವುದೇ ಶಕ್ಯವಿಲ್ಲ; ಇವು ಪ್ರಮಾದಜನ್ಯಗಳೇ ಸರಿ. ಆಗಲೇ ವಿವರಿಸಿರುವಂತೆ ಪದ್ಯದ ಆಶಯವನ್ನು ನೆನಪುಮಾಡಿಕೊಂಡಲ್ಲಿ, "ಎಂತು", "ಏಕೆ" ಎಂಬ ಪ್ರಶ್ನಾರ್ಥಕಗಳಿಗೂ ಇಲ್ಲಿ ಸ್ಥಾನವಿಲ್ಲ. ಇನ್ನುಳಿದವು ಅಂತು", "ಅಂತೆ", "ಎತ್ತೆ", "ಒತ್ತಿ" ಎಂಬ ಪ್ರತಿಸ್ಪರ್ಧಿಗಳು. "ಅನಿತನಿತ್ತಂ ವನದೊಳ್ ವನೇಚರಂ . . ." ಎಂದು ಆಗಲೇ ಪರಿಮಾಣವಾಚಕವು ಬಂದಿರುವಾಗ ಅಂತು (ಅಥವಾ ಅಂತೆ) ಎಂಬ ರೀತಿವಾಚಿಯಾದ ಪದವು ಕೇವಲ ಪಾದಪೂರಕವಾಗಿ ನಿಲ್ಲುತ್ತದೆ. ಮೂಲಪದ ವೇನೆಂಬುದು ಸರಿಯಾಗಿ ಗೊತ್ತಾಗದೆ, ನಿರರ್ಥಕವಾದರೂ ಚಿಂತೆಯಿಲ್ಲ, ಅಪಾರ್ಥಕ ವಾಗದಿದ್ದರೆ ಸಾಕೆಂದು ಈ ಪದಗಳಿಗೆ ಹಲವು ಮಾತೃಕೆಗಳಲ್ಲಿ ಎಡೆ ದೊರೆತಂತೆ ತೋರುತ್ತದೆ. "ಎತ್ತೆ" ಎಂಬುದಕ್ಕೇನೋ ಸಂಭಾವ್ಯತೆಯಿಲ್ಲದಿಲ್ಲ. ಅದನ್ನು ಅಂಗೀಕರಿಸಿ ದರೆ, ವನೇಚರನು ಎಷ್ಟು ದುರ್ಬಲನಾದನೆಂದರೆ, ತನ್ನ ಬಿಲ್ಲನ್ನು ಬಾಗಿಸುವುದಿರಲಿ; ಅದನ್ನು ಎತ್ತುವ ಸಲುವಾಗಿ ಕೂಡ ಕೆತ್ತಬೇಕಾಯಿತು ಎಂಬ ಅರ್ಥ ಹೊರಡುತ್ತದೆ. ಅದರ ಹಿಂದೆಯೇ, ಬಿಲ್ಲನ್ನು ಎತ್ತುವುದಕ್ಕೇ ಆಗದವನಿಗೆ ಅದನ್ನು ಕೆತ್ತಲು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಯೂ ಹುಟ್ಟುತ್ತದೆ. ಇದಕ್ಕೆ ಹೇಗೋ ಸಮಾಧಾನ ಹೇಳಬಹುದು. ಇನ್ನೂ ಪ್ರಬಲವಾದ ಆಕ್ಷೇಪಣೆಯೇನೆಂದರೆ, ಪದ್ಯದಲ್ಲಿ ಸೂಚ್ಯವಾಗಿರ ಬೇಕಾದ ಅಂಶವು ಇಲ್ಲಿ ವಾಚ್ಯವೇ ಆಗಿಬಿಟ್ಟು ಕವಿಗೆ ಇಲ್ಲಿ ಪರಮೋದ್ದೇಶವಾಗಿರುವ ಚಮತ್ಕಾರ ಕೆಲಮಟ್ಟಿಗಾದರೂ ಕಡಮೆಯಾಗುತ್ತದೆ. ಇದನ್ನೆಲ್ಲ ಪರಿಭಾವಿಸಿದರೆ, "ಒತ್ತಿ" ಎಂಬ ಪದವೇ ಇಲ್ಲಿಗೆ ಸಮುಚಿತವೆಂದು ಮನವರಿಕೆ ಯಾಗದಿರದು. ". . . ಅಷ್ಟಷ್ಟೂ ತನ್ನ ಆ ಬಿಲ್ಲನ್ನು (ಬಿಲ್ಲಾನ್ ಅದನ್) ಬೇಡನು [ಇನ್ನೂ ಇನ್ನೂ ತೆಳುವಾಗುವಂತೆ] ಒತ್ತಿ ಹೆರೆಯುವನು"—ಇಲ್ಲಿ "ಒತ್ತಿ" ಎಂಬುದಕ್ಕೆ ಪದಪ್ರಯೋಜನ ಯಥೇಚ್ಛವಾಗಿ ಉಂಟಲ್ಲವೆ? ಕವಿಯ ಆಶಯ ಇಲ್ಲಿ ವ್ಯಂಗ್ಯವಾಗಿಯೇ ಉಳಿಯುವುದ ರಿಂದ ಪದ್ಯದ ಸೊಗಸು ಎಳ್ಳಷ್ಟೂ ಕುಗ್ಗುವುದಿಲ್ಲ.

ಅಂತೂ ಈ ವಿಚಾರದ ಫಲಿತಾಂಶವಾಗಿ ನಮ್ಮ ಪದ್ಯದ ಮೂಲಪಾಠವನ್ನು ಹೀಗೆ ನಿರ್ದೇಶಿಸಬಹುದು :

ಎನಿತ್ತೆನಿತ್ತಂಬುಜಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ ।
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದನೊತ್ತಿ ಕೀಸುಗುಂ ॥

(ಭಾಷಾ ೨) ರಲ್ಲಿ ೬೮ನೆಯ ಸೂತ್ರದ ಕೆಳಗೆ ಉದಾಹರಿಸಿರುವ ಪಾಠವೇ ಇದು.

ಇದು ಯಾರ ಪದ್ಯ? ಯಾವ ಕಾವ್ಯದ್ದು?—ಕಾವ್ಯಾವಲೋಕನದಲ್ಲಿ ಇದಕ್ಕೆ ಉತ್ತರ ಸಿಕ್ಕುವುದಿಲ್ಲ. ಅಲ್ಲಿ ಉದಾಹರಿಸಿರುವ ಪದ್ಯಗಳಿಗೆ ಆಕರವನ್ನು ಹೇಳುವುದು ನಾಗವರ್ಮನ ಪದ್ಧತಿಯಲ್ಲ. ಭಾಷಾಭೂಷಣದಲ್ಲಿಯೂ ಇದೇ ಅವನ ಸಾಮಾನ್ಯ ಪದ್ಧತಿ; ಅಲ್ಲದೆ ಅದರಲ್ಲಿ ಪದ್ಯಗಳನ್ನು ಅವನು ಉದಾಹರಿಸಿರುವುದೇ ಬಲು ಕಡಮೆ. ಆದರೆ, ವಾಚಕರ ಸುದೈವದಿಂದ, ಭಾಷಾಭೂಷಣದ ೬೮ನೆಯ ಸೂತ್ರದ ಕೆಳಗೆ, "ದ್ವಿತೀಯಾಂತಸ್ಯ ಪದಸ್ಯ ಸ್ವರೇ ಪರೇ ವಾ ದೀರ್ಘೋ ಭವತಿ" ಎಂಬ ವೃತ್ತಿವಾಕ್ಯವಾದ ಬಳಿಕ ಈ ಮಾತುಗಳು ಬಂದಿವೆ :

> "ಹರಿಪಾಲಪ್ರಯೋಗಃ—ಕಲ್ಲಾನೇಱಿದಂ ಕಲ್ಲನೇಱಿದಂ; ಬಿಲ್ಲಾನೇಱಿಸಿದಂ, ಬಿಲ್ಲನೇಱಿಸಿದಂ. ತಥಾ ಗುಣವರ್ಮಕವಿಪ್ರಯೋಗಃ—
> ಎನಿತ್ತೆನಿತ್ತಂಬುಜ . . ."

ಇದರಿಂದ ಈ ಪದ್ಯ ಮೊದಲನೆಯ[೧೧] ಗುಣವರ್ಮನದೆಂದು ಸ್ಪಷ್ಟವಾಗುತ್ತದೆ.[೧೨] "ಒಂದು ಪ್ರತಿಯಲ್ಲಿ ಹರಿಪಾಲಪ್ರಯೋಗಃ—ಎಂಬುದೂ, ತಥಾ ಗುಣವರ್ಮಕವಿ ಪ್ರಯೋಗಃ—ಎಂಬುದೂ ಅದರ ಕೆಳಗೆ ಕೊಟ್ಟಿರುವ ಉದಾಹರಣ ಪದ್ಯವೂ ಇಲ್ಲ" ಎಂದು ಗ್ರಂಥಸಂಪಾದಕರಾದ ರಾ. ನರಸಿಂಹಾಚಾರ್ಯರು ಅಡಿಟಿಪ್ಪಣಿಯಲ್ಲಿ ಹೇಳಿದ್ದಾರೆ. ಎಂದರೆ ಈ ಪರಿಷ್ಕರಣಕ್ಕಾಗಿ ಅವರು ಉಪಯೋಗಿಸಿದ ಮೂರು ಮಾತೃಕೆಗಳಲ್ಲಿ ಒಂದರ ಬೆಂಬಲ ಈ ಪದ್ಯವು ಗುಣವರ್ಮಕೃತವೆಂಬ ಹೇಳಿಕೆಗೆ ಇಲ್ಲವೆಂದಾಯಿತು. ಆದರೆ, ಇದೇ ಸೂತ್ರವನ್ನು ಕುರಿತ ಕನ್ನಡ ಟೀಕೆಯಲ್ಲಿ "ಇದರ್ಕೆ ಗುಣವರ್ಮನ ಪ್ರಯೋಗಂ—(ವೃ.ನೋ.)"[೧೩] ಎಂಬ ಭಾಗವಿರುವುದರಿಂದ, ಈ ಗ್ರಂಥದ ಪ್ರಾಚೀನ ಟೀಕಾಕಾರನು ಉಪಯೋಗಿಸಿದ ಮಾತೃಕೆಯಲ್ಲಿ ಕೂಡ ಈ ಪದ್ಯವು ಗುಣವರ್ಮ

---

೧೧. ನಮ್ಮ ಗುಣವರ್ಮನು ಕ್ರಿ. ಶ. ಸು. ೯೦೦ ರಲ್ಲಿದ್ದ ಮೊದಲನೆಯ ಗುಣವರ್ಮನೆಂಬುದನ್ನು ರಾ. ನರಸಿಂಹಾಚಾರ್ಯರು ಕವಿಚರಿತೆಯಲ್ಲಿ (I, ಪು. ೨೪—೨೬) ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ; ಆ ವಿಚಾರಕ್ಕೆ ಮತ್ತೆ ಕೈಹಾಕುವುದು ಅನಾವಶ್ಯಕ.

೧೨. ರೈಸರು ಭಾಷಾಭೂಷಣದ ತಮ್ಮ ಪರಿಷ್ಕರಣಕ್ಕಾಗಿ ಉಪಯೋಗಿಸಿಕೊಂಡು A ಎಂದು ಸಂಕೇತಿಸಿರುವ ಮಾತೃಕೆಯಲ್ಲಿ "ತಥಾ ಗುಣವರ್ಮಕ ವೇಭುರ್ನೈವಕವೀರಸ್ಯ ಪ್ರಯೋಗಃ" ಎಂದು ಇದ್ದಂತೆ ಗೊತ್ತಾಗುತ್ತದೆ (ಪು. ೨೬ ಮತ್ತು ಪರಿಶಿಷ್ಟ ೧ ನೋಡಿ); ಇದನ್ನೇ ಅವರು ಮೂಲಪಾಠವಾಗಿ ಅಂಗೀಕರಿಸಿದ್ದಾರೆ. ಆದರೆ ರಾ. ನರಸಿಂಹಾಚಾರ್ಯರ ಪರಿಷ್ಕರಣದಲ್ಲಿ "ಭುವನೈಕ ವೀರಸ್ಯ" ಎಂಬುದು ಪಾಠಾಂತರಗಳಲ್ಲಿ ಕೂಡ ಬಂದಿಲ್ಲ. "ನಾಗವರ್ಮನು ಹೇಳುವುದನ್ನು ನೋಡಿದರೆ ಇವನಿಗೆ ಭುವನೈಕವೀರ ಎಂಬ ಬಿರುದೂ ಇದ್ದಂತೆ ತಿಳಿಯುತ್ತದೆ" ಎಂದು ಕವಿಚರಿತೆಯಲ್ಲಿ ಗುಣವರ್ಮನ ಪ್ರಸ್ತಾವದಲ್ಲಿ (I, ಪು. ೨೪) ಅವರೇ ಹೇಳಿ, ಇಲ್ಲೇಕೆ ಬಿಟ್ಟರೋ! ತಮ್ಮ ಪರಿಷ್ಕರಣಕ್ಕಾಗಿ ಅವರು ಉಪಯೋಗಿಸಿಕೊಂಡ ಯಾವ ಮಾತೃಕೆಯಲ್ಲೂ ಈ ಭಾಗವಿರಲಿಲ್ಲವೇನೋ.

೧೩. ಇಲ್ಲಿ "(ವೃ. ನೋ.)" ಎಂದರೆ ವೃತ್ತಿಯನ್ನು ನೋಡಿ ಎಂದು ಅರ್ಥ. ಟೀಕಾಕಾರನೂ ಪದ್ಯವನ್ನು ಉದಾಹರಿಸಿದ್ದನೆ, ಇಲ್ಲವೇ ವೃತ್ತಿಯ ಕಡೆಗೆ ಬೆರಳು ತೋರಿಸಿ ಮುಗಿಸಿದ್ದನೆ ಎಂಬುದು ಸ್ಫುಟವಾಗಿ ಗೊತ್ತಾಗುವುದಿಲ್ಲ.

ಕೃತವೆಂದೇ ಉಕ್ತವಾಗಿದ್ದಿತೆಂದು ನಂಬಬಹುದು. ಭಾಷಾಭೂಷಣದ ೧೮೧ನೆಯ ಸೂತ್ರದ ಕೆಳಗೆ ಮಾತ್ರ ಇದು ಬಂದಿದೆಯಷ್ಟೆ; ಅಲ್ಲಾಗಲಿ ಕೇಶಿರಾಜ ಭಟ್ಟಾಕಳಂಕರ ಗ್ರಂಥಗಳಲ್ಲಾಗಲಿ ಇದು ಯ್ಯಾರದು, ಎಲ್ಲಿಯದು ಎಂಬುದನ್ನು ನಿರ್ದೇಶಿಸಿಲ್ಲ. ಕಾವ್ಯಸಾರ ದಲ್ಲಿ ಮಾತ್ರ ಈ ಪದ್ಯದ ಕೆಳಗೆ "ಹರಿವಂಶಂ" ಎಂದು ಆಕರ ಗ್ರಂಥದ ಹೆಸರು ಕೊಟ್ಟಿದೆ. ಭಾಷಾಭೂಷಣದ ಹೇಳಿಕೆಯನ್ನೂ ಕಾವ್ಯಸಾರದ ಹೇಳಿಕೆಯನ್ನೂ ಜೊತೆ ಗೂಡಿಸಿ ಇದು ಗುಣವರ್ಮನ ಹರಿವಂಶಕ್ಕೆ ಸೇರಿದ್ದೆಂದು ನಿರ್ಧರಿಸಿ ಬಿಡಬೇಕೆನ್ನಿಸುವುದು ಸಹಜ. ಆದರೆ ಇಲ್ಲಿ ತೊಡಕಿಲ್ಲದೆ ಇಲ್ಲ.

ಗುಣವರ್ಮನು ಹರಿವಂಶವನ್ನು ರಚಿಸಿದ್ದನೆಂಬುದಕ್ಕೆ ಅಬಾಧಿತವಾದ ಪ್ರಮಾಣ ವೇನೋ ಉಂಟು. ಶಬ್ದಮಣಿದರ್ಪಣದಲ್ಲಿ "ಎನಿತ್ತೆನಿತ್ತಂಬುಜ . . ." ಎಂಬೀ ಪದ್ಯದ ಕೆಳಗೆಯೇ, "ವೋಲ್ ಪರಮಾದಲ್ಲಿಯುಂ ದೀರ್ಘಮುಂಟು—ಈಂದ ಪುಲಿಯಾವೋಲಿರ್ದಳೆಂದು ಗುಣವರ್ಮನ ಹರಿವಂಶ ಪ್ರಯೋಗಂ"[೧೪] ಎಂದು ಸ್ಪಷ್ಟವಾಗಿ ಹೇಳಿದೆ. ಇತ್ತ ಅಭಿನವವಾದಿ ವಿದ್ಯಾನಂದನು ತನ್ನ ಸಂಕಲನದಲ್ಲಿ ಉದ್ಧರಿಸಿದರುವ ಅನೇಕ ಪದ್ಯಗಳಿಗೆ ಆಕರಗಳನ್ನು ಸೂಚಿಸಿದ್ದಾನೆ. ಅವುಗಳಲ್ಲಿ ೩೦ ಕ್ಕಿಂತ ಹೆಚ್ಚು ಸಂಖ್ಯೆಯ ಪದ್ಯಗಳು ಇದೇ ಗುಣವರ್ಮನ ಶೂದ್ರಕ ಕಾವ್ಯದಿಂದ ತೆಗೆದವೆಂದು ಅವನು ನಿರ್ದೇಶಿಸುತ್ತಾನೆ. ಆದರೆ ಹರಿವಂಶದ್ದೆಂದು ಅವನು ಉದ್ಧರಿಸಿ ರುವುದು ಇದೊಂದೇ ಪದ್ಯ. ಶೂದ್ರಕದಿಂದ ಹಲವಾರು ಪದ್ಯಗಳನ್ನು ಆರಿಸಿಕೊಂಡಿರುವ ವಿದ್ಯಾನಂದನಿಗೆ ಹರಿವಂಶ ಕಾವ್ಯದ ಪ್ರತ್ಯಕ್ಷ ಪರಿಚಯವಿದ್ದ ಪಕ್ಷದಲ್ಲಿ, ಅವನು ಅದರಿಂದ ಒಂದೇ ಪದ್ಯವನ್ನು ಎತ್ತಿಕೊಟ್ಟು ತೃಪ್ತಿಪಡುತ್ತಿದ್ದನೆ? ಹರಿವಂಶವನ್ನು ಅವನು ಕಣ್ಣಾರ ಕಂಡಿರಲಿಲ್ಲವೆಂಬ ಸಂದೇಹವೇನೋ ಪ್ರಬಲವಾಗಿಯೇ ಹುಟ್ಟುತ್ತದೆ. ಹೀಗಿರುವಾಗ, ಶಬ್ದಮಣಿದರ್ಪಣದಲ್ಲಿ ಪ್ರಸಕ್ತ ಪದ್ಯದ ಮುಂದೆ ಅಲ್ಪಾಂತರದಲ್ಲಿಯೇ "ಗುಣವರ್ಮನ ಹರಿವಂಶ ಪ್ರಯೋಗಂ" ಎಂಬ ಮಾತನ್ನು ಕಂಡು ಅದೇ ಕಾವ್ಯವೇ ಈ ಪದ್ಯಕ್ಕೂ ಆಕರವೆಂದು ಒಂದು ವೇಳೆ ಭ್ರಮೆಯಿಂದೇನಾದರೂ ವಿದ್ಯಾನಂದನು ಭಾವಿಸಿರಬಹುದೆ? ಇಲ್ಲವೇ, ಇದು ಗುಣವರ್ಮನ ಪದ್ಯವೆಂಬ ಭಾಷಾಭೂಷಣದ ಹೇಳಿಕೆಯನ್ನೂ, ತನಗೆ ಪರಿಚಿತವಾಗಿದ್ದ ಶೂದ್ರಕ ಕಾವ್ಯದಲ್ಲಿ ಇದರ ಅಭಾವವನ್ನೂ ಒಟ್ಟಿಗೆ ಗಮನಿಸಿ, ಗುಣವರ್ಮನ ಇನ್ನೊಂದು ಕೃತಿಯಾದ ಹರಿವಂಶದಿಂದ ಇದು ಬಂದಿರಬೇಕೆಂದು ಅವನು ಊಹಿಸಿರಬಹುದೆ? ಎರಡನೆಯ ಪಕ್ಷವೇ ಹೆಚ್ಚು ಸಂಭವ. ಅಂತೂ ಗುಣವರ್ಮನ ಕೃತಿ ಕಾಲಪುರುಷನ ಕೃಪೆಯಿಂದ ನಮಗೆ ದೊರೆತಲ್ಲದೆ ಕೊನೆಮಾತನ್ನು ಹೇಗೆತಾನೆ ಹೇಳಬಹುದು?

೧೯೪೬]

"ಕರ್ನಾಟಕ" ಎಂಬ ರೂಪವು ಅಸಾಧುವೆ?*

"ಕಣಾ(ನಾ)ೞಟಕ" ಶಬ್ದದ ಅನುನಾಸಿಕವು ಮೂರ್ಧನ್ಯವೆ, ದಂತ್ಯವೆ? ಎಂಬ ವಿಷಯದಲ್ಲಿ ಈಗ [೧೯೩೭] ವಿಶೇಷವಾಗಿ ಚರ್ಚೆ ನಡೆಯುತ್ತಿದೆಯಷ್ಟೆ. ಇದು ಮುಖ್ಯವಾಗಿ ಶಿಕ್ಷಾಶಾಸ್ತ್ರಕ್ಕೆ (Phonetics) ಸಂಬಂಧಪಟ್ಟ ಪ್ರಶ್ನೆ. ಆ ಶಾಸ್ತ್ರದ ದೃಷ್ಟಿಯಿಂದ ಈ ಚರ್ಚೆಗೆ ಅನ್ವಯಿಸುವ ಕೆಲವು ಅಂಶಗಳನ್ನು ವಿದ್ವಾಂಸರ ಗಮನಕ್ಕೆ ತರಬೇಕೆಂಬುದೇ ಈ ಲೇಖನದ ಉದ್ದೇಶ.

ಮೊದಲು, "ಕಣಾ(ನಾ)ೞಟ" "ಕಣಾ(ನಾ)ೞಟಕ" ಶಬ್ದಗಳ ವ್ಯುತ್ಪತ್ತಿಯನ್ನು ಕುರಿತು ಒಂದು ಮಾತು. ಇವು ಮೂಲತಃ ಸಂಸ್ಕೃತ ಶಬ್ದಗಳಲ್ಲ. "ಪುನ್ನಾಡು" ಎಂಬುದು ಸಂಸ್ಕೃತಕ್ಕೆ ಬರುವಾಗ "ಪುನ್ನಾಟ" ಎಂದು ಆದಂತೆ, "ಕರ್ನಾಡು" ಎಂಬ ದೇಶ್ಯಶಬ್ದವು ಸಂಸ್ಕೃತಜ್ಞರ ಉಚ್ಚಾರಣೆಯಲ್ಲಿ "ಕಣಾ(ನಾ)ೞಟ" ಎಂಬ ರೂಪವನ್ನು ತಾಳಿರಬೇಕು. ಅನ್ಯಭಾಷೆಯ ಅಥವಾ ಜನಾಂಗದ ಹೆಸರುಗಳನ್ನು ಹೀಗೆ ಮಾರ್ಪಡಿಸಿ ಸ್ವೀಕರಿಸುವುದು ಯಾವ ಭಾಷೆಗೂ ಹೊಸದಲ್ಲ. ಸಂಸ್ಕೃತಭಾಷೆಯ ಚರಿತ್ರೆಯಲ್ಲಿ ಈ ಕಾರ್ಯವು ಉದ್ದಕ್ಕೂ ನಡೆದಿದೆ : ದ್ರಮಿಡ, ಯವನ, ತುರುಷ್ಕ, ಆಂಗ್ಲ ಮೊದಲಾದ ಶಬ್ದಗಳು ಈ ಮಾತಿಗೆ ನಿದರ್ಶನ.

---

* ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ೨೩.೩

ಕಣಾ(ನಾ)ರ್ಟ+ಕ=ಕಣಾ(ನಾ)ರ್ಟಕ. (ಕರ್ಣಾಟಕ ಶಬ್ದಕ್ಕೆ ಬೇರೆ ರೀತಿಯ ವ್ಯುತ್ಪತ್ತಿಯನ್ನು ಹೇಳುವುದೂ ಉಂಟು; ಆದರೆ ಆ ಪ್ರಸ್ತಾವಕ್ಕೆ ಇಲ್ಲಿ ಕೈಹಾಕುವುದಿಲ್ಲ). ಕಣಾ(ನಾ)ರ್ಟ ಎಂಬುದರ ಉಚ್ಚಾರಣೆಗೆ ಅನ್ವಯಿಸುವ ಮಾತುಗಳೇ ಕಣಾ(ನಾ)ರ್ಟಕಕ್ಕೂ ಅನ್ವಯಿಸುವುದರಿಂದ, ನಿರೂಪಣೆಯ ಸೌಕರ್ಯಕ್ಕಾಗಿ ಈ ಮುಂದೆ ಕಣಾ(ನಾ)ರ್ಟ ಎಂಬ ಶಬ್ದದ ಮಾತನ್ನೇ ಮುಖ್ಯವಾಗಿ ಹೇಳಿದೆ.

ಕರ್ನಾಡು ಎಂಬುದರಲ್ಲಿ ಅನುನಾಸಿಕವು ದಂತ್ಯವಷ್ಟೆ. ಕರ್ಣಾಟ ಎಂಬ ಸಂಸ್ಕೃತರೂಪದಲ್ಲಿ ಇದು ಏಕೆ ಮೂರ್ಧನ್ಯವಾಯಿತು ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. "ರಷಾಭ್ಯಾಂ ನೋ ಣಃ ಸಮಾನಪದೇ" (ಒಂದೇ ಪದದಲ್ಲಿ ರೇಫದ ಅಥವಾ ಷಕಾರದ ಮುಂದಿನ ನಕಾರವು ಣಕಾರವಾಗುತ್ತದೆ) ಎಂಬ ಪಾಣಿನೀಯ ಸೂತ್ರದಂತೆ (೮. ೪. ೧) ಕರ್‌ನಾಟ ಎಂದು ನಿಲ್ಲದೆ ಕರ್‌ಣಾಟ ಎಂದೇ ಆಗಬೇಕೆನ್ನುವುದು ಸಾಂಪ್ರದಾಯಿಕವಾದ ಉತ್ತರ. ಭಾಷೆಯಲ್ಲಿ ಹೀಗೆ ವರ್ಣವಿಕಾರಗಳು ಶಿಕ್ಷಾಶಾಸ್ತ್ರವಿಹಿತವಾದ ಕಾರಣಗಳಿಲ್ಲದೆ ನಡೆಯುವುದಿಲ್ಲ. ಪಾಣಿನೀಯ ಶಿಕ್ಷೆಯಂತೆ ಋ ೠ ಟವರ್ಗ ರೇಫ ಷಕಾರಗಳು ಮೂರ್ಧನ್ಯಗಳು. ("ಸ್ಯುರ್ಮೂರ್ಧನ್ಯಾ ಋಟುರಷಾಃ.") ರೇಫವು ಮೂರ್ಧನ್ಯವಾದ ಪಕ್ಷದಲ್ಲಿ, ಅದರ ಮುಂದೆ ದಂತ್ಯ ನಕಾರಕ್ಕಿಂತಲೂ ಮೂರ್ಧನ್ಯ ಣಕಾರವನ್ನು ಉಚ್ಚರಿಸುವುದು ಸುಕರ. ಕರ್ಣಾಟ ಎಂಬ ಮೂರ್ಧನ್ಯವಿಶಿಷ್ಟವಾದ ರೂಪವು ಪಾಣಿನಿಸಮ್ಮತವಾಗುವುದಕ್ಕೆ ಇದೇ ನಿಜವಾದ ಆಧಾರ.

ಹೀಗೆ ಶಿಕ್ಷಾಶಾಸ್ತ್ರದ ದೃಷ್ಟಿಯಿಂದ ನೋಡಿದರೆ, ಕಣಾ(ನಾ)ರ್ಟ ಶಬ್ದದಲ್ಲಿ ಮೂರ್ಧನ್ಯ ಣಕಾರವು ಉಪಾದೇಯವಾಗಬೇಕಾದರೆ ರೇಫವೂ ಮೂರ್ಧನ್ಯವಾಗಿರಬೇಕು. ಆದರೆ ನಮ್ಮ ರೇಫವು[೧] ಮೂರ್ಧನ್ಯವೆ ಎಂಬ ವಿಷಯದಲ್ಲಿ ಪ್ರಬಲವಾದ ಸಂದೇಹವುಂಟು :

(೧) ನಮ್ಮ ಇಂದಿನ ಉಚ್ಚಾರಣೆಯಲ್ಲಂತೂ ರೇಫವು ಎಷ್ಟು ಮಾತ್ರಕ್ಕೂ ಮೂರ್ಧನ್ಯವಲ್ಲ. ಮೂರ್ಧನ್ಯವರ್ಣದ ಉಚ್ಚಾರಣೆಯಲ್ಲಿ ನಾಲಗೆಯ ತುದಿ ಅಂಗಳಿನ ಬಳಿಗೆ ಎದ್ದು ಅಲ್ಲಿ ಮೇಲಕ್ಕೆ ಸುರುಳಿಯಾಗಿ ಬಾಗುತ್ತದೆ. ಟ್, ಣ್, ಷ್, ಳ್

---

೧. ರೇಫದಲ್ಲಿ ಹಲವು ಬಗೆಗಳುಂಟು; ಉತ್ಪತ್ತಿ ಸ್ಥಾನವೂ ಪ್ರಯತ್ನವೂ ಬೇರೆ ಬೇರೆಯಾದಂತೆ ಅದರ ಬಗೆಗಳೂ ಬೇರೆ ಬೇರೆಯಾಗುತ್ತವೆ. (ಕನ್ನಡದಲ್ಲೇ ಹಿಂದೆ 'ಱ' ಎಂಬ ವರ್ಣವಿರಲಿಲ್ಲವೆ?) ಡ್ಯಾನಿಯಲ್ ಜೋನ್ಸ್ ಎಂಬ ಪ್ರಖ್ಯಾತ ಶಿಕ್ಷಾ ಶಾಸ್ತ್ರಜ್ಞನು ಕನಿಷ್ಠ ಪಕ್ಷ ಆರು ಬಗೆಯ ರೇಫಗಳನ್ನು ವಿಂಗಡಿಸುತ್ತಾನೆ. (Daniel Jones ; *An Outline of English Phonetics*, IV End., § 746.) ಮೂರ್ಧನ್ಯರೇಫವೂ (Retroflex flap) ಉಂಟು. ಆದರ ಉಚ್ಚಾರಣೆ ಹಿಂದೀ ಭಾಷೆಯ "ಏಡೀ ಬೋಲೀ" "ಘೋಡಾ" ಮೊದಲಾದ ಶಬ್ದಗಳಲ್ಲಿ ಸಿಕ್ಕುತ್ತದೆ. (ಕನ್ನಡದಲ್ಲಿ ಎರಡು ಸ್ವರಗಳ ನಡುವೆ ಉಚ್ಚಾರವಾಗುವ ಒಂಟಿ ಡಕಾರವೂ ಈ ಜಾತಿಯದೇ.) ಈ "ಢ"ಕ್ಕೂ ನಮ್ಮ "ರ"ಕ್ಕೂ ಯಾವ ಸಂಬಂಧವೂ ಇಲ್ಲವೆನ್ನುವುದು ಸ್ಪಷ್ಟ. (ಱಕಾರವು ಇನ್ನೊಂದು ಜಾತಿಯ ಮೂರ್ಧನ್ಯ ರೇಫ.)

ಮೊದಲಾದ ಮೂರ್ಧನ್ಯಗಳನ್ನು ಉಚ್ಚರಿಸಿ ನೋಡಿದರೆ, ಈ ಮಾತು ಸ್ಪಷ್ಟವಾಗುತ್ತದೆ. ರೇಫದ ಉಚ್ಚಾರಣೆಯಲ್ಲಾದರೆ, ನಾಲಗೆಯ ತುದಿ ಹಲ್ಲುಸಾಲಿನಮೇಲೆ ಒಸಡಿಗೆ ತಾಗುತ್ತದೆ. ತ್, ನ್, ಲ್, ಸ್ ಮೊದಲಾದ ದಂತ್ಯವರ್ಣಗಳ ಜೊತೆಗೆ ರೇಫವನ್ನೂ ಉಚ್ಚರಿಸಿ ನೋಡಿದರೆ, ಇವೆಲ್ಲ ವರ್ಣಗಳ ಉತ್ಪತ್ತಿ ಸ್ಥಾನಗಳು ಅತಿ ಸಮೀಪ ಅಥವಾ ಒಂದೇ ಎಂಬುದು ಗೊತ್ತಾಗುತ್ತದೆ. ಆದಕಾರಣ ರೇಫವನ್ನು ದಂತ್ಯವೆಂದೋ ದಂತಮೂಲೀಯವೆಂದೋ ನಿರ್ದೇಶಿಸಬೇಕೇ ಹೊರತು ಮೂರ್ಧನ್ಯವೆಂದು ಎಂದಿಗೂ ಹೇಳಲಾಗುವುದಿಲ್ಲ. (ಇಲ್ಲಿ ದಂತ್ಯಕ್ಕೂ ದಂತಮೂಲೀಯಕ್ಕೂ ಇರುವ ಸೂಕ್ಷ್ಮ ವ್ಯತ್ಯಾಸವನ್ನು ಗಮನಿಸಿಲ್ಲ.) ಅದು ಮೂರ್ಧನ್ಯವಲ್ಲವೆಂದು ಅರಿತುಕೊಳ್ಳುವುದಕ್ಕೆ ಇನ್ನೊಂದು ಸುಲಭವಾದ ಪ್ರಯೋಗವನ್ನು ಮಾಡಬಹುದು. 'ಆರ್‌ಷ', 'ದಾರ್‌ಢ್ಯ'— ಈ ಶಬ್ದಗಳನ್ನು ಸಾವಕಾಶವಾಗಿ ಉಚ್ಚರಿಸಿ ನೋಡಿದರೆ, ರೇಫವನ್ನು ಒಸಡಿನ ಬಳಿ ಉಚ್ಚರಿಸಿದ ಬಳಿಕ ಷ್, ಡ್ ಎಂಬ ಮೂರ್ಧನ್ಯಗಳನ್ನು ಉಚ್ಚರಿಸುವುದಕ್ಕಾಗಿ ನಾಲಗೆ ಮೇಲಕ್ಕೆ ಹಾದು ಹೋಗಿ ಸುರುಟಿಕೊಳ್ಳಬೇಕಾಗುವುದೆಂಬುದು ಗೊತ್ತಾಗುತ್ತದೆ.

ನಮ್ಮಲ್ಲಿ ರೇಫವು ಹೀಗೆ ದಂತ್ಯವಾಗಿರುವುದರಿಂದಲೇ, ಎಷ್ಟೋ ಮಂದಿ "ಕರ್ಣ", "ವರ್ಣ" ಮೊದಲಾದ ಸಂಸ್ಕೃತ ಶಬ್ದಗಳನ್ನು "ಕರ್ನ", "ವರ್ನ" ಎಂದು ಬರೆದು ಹಾಗೆಯೇ ಉಚ್ಚರಿಸುತ್ತಾರೆ.

(೨) ಕನ್ನಡದ ಸೋದರಭಾಷೆಯಾದ ತಮಿಳಿನಲ್ಲಿ ರೇಫವು ದಂತ್ಯವೇ ಆಗಿದೆ.[೨] ತೆಲುಗು ಮಲಯಾಳಗಳಲ್ಲೂ ಹೀಗೆಯೇ.

(೩) ಕನ್ನಡ, ತಮಿಳು ಮೊದಲಾದ ದ್ರಾವಿಡ ಭಾಷೆಗಳ ಮಾತಿರಲಿ. ಸಂಸ್ಕೃತ ಭಾಷೆಯಲ್ಲೇ ರೇಫದ ಉಚ್ಚಾರಣೆಯ ವಿಷಯದಲ್ಲಿ ಗಮನಾರ್ಹವಾದ ಅಂಶಗಳುಂಟು. ಇಂದಿನ ಉಚ್ಚಾರಣೆಯಲ್ಲಂತೂ ಅದು ಮೂರ್ಧನ್ಯವಲ್ಲ; ದಂತ್ಯ ಅಥವಾ ದಂತಮೂಲೀಯವಾಗಿದೆ.[೩] ಬಹಳ ಹಿಂದೆ ಕೂಡ ಅದಕ್ಕೆ ದಂತ್ಯೋಚ್ಚಾರಣಯಿದ್ದಿತೆಂಬುದಕ್ಕೆ ಪ್ರಮಾಣ ಬೇಕಾದಷ್ಟಿದೆ. ವೇದಗಳ ಉಚ್ಚಾರಣೆಯನ್ನು ವಿಧಿಸುವ ಹಲವು ಪ್ರಾತಿಶಾಖ್ಯಗಳುಂಟಷ್ಟೆ ಇವೆಲ್ಲ ರೇಫದ ಉತ್ಪತ್ತಿಸ್ಥಾನವು ದಂತ ಅಥವಾ ದಂತಮೂಲವೆಂದೇ ಗೊತ್ತುಮಾಡುತ್ತವೆ; ಯಾವ ಪ್ರಾತಿಶಾಖ್ಯದಲ್ಲೂ ಅದನ್ನು ಮೂರ್ಧನ್ಯವೆಂದು ಕರೆದಿಲ್ಲ :

---

೨. J. R. Firth : *A Short Outline of Tamil Pronunciation* (Appendix to *A. H. Arden's Progressive Grammar of Common Tamil*, 1934, End.,); viನೆಯ ಪುಟದಲ್ಲಿರುವ ಪಟ್ಟಿಯನ್ನು ನೋಡಿ.

೩. "The ర as usually pronounced in Sanskrit to-day is more the trilled variety, where the tongue touches the teeth-ridge and delivers a rapid series of taps there-on . . ." I.J.S. Taraporewala : *Elements of the Science of Language* p. 244.

"As regards *r*, all the Prātiśākhyas state that its place of origin is either the teeth, the roots of the teeth, or the teeth ridge . . . we see, then, that, according to all the Prātiśākhyas, *r* was either dental or alveolar; but according to the pān Sik., it was cerebral."[೪]

ಹೀಗೆ ಸಂಸ್ಕೃತ ಭಾಷೆಯ ಉಚ್ಚಾರಣೆಯಲ್ಲೇ ರೇಫವು ಎಷ್ಟೋ ಹಿಂದಿನ ಕಾಲದಲ್ಲೇ ದಂತ್ಯವೋ ದಂತಮೂಲೀಯವೋ ಆಗಿತ್ತು. ಅದು ಮೂರ್ಧನ್ಯವೆಂದು ಭಾವಿಸಿದ್ದವರು (ಅಥವಾ ಅದನ್ನು ಮೂರ್ಧನ್ಯವಾಗಿ ಉಚ್ಚರಿಸುತ್ತಿದ್ದವರು) ಪಾಣಿನೀಯರು ಮಾತ್ರ. ನಮ್ಮಲ್ಲಂತೂ ಈಗ ಅದರ ಉಚ್ಚಾರಣೆ ದಂತ್ಯಕ್ಕೇ ಅತಿ ಸಮೀಪ. ಹೀಗಿರುವಲ್ಲಿ, ದಂತ್ಯರೇಫದ ಮುಂದೆ ದಂತ್ಯ ನಕಾರವು ಬಂದರೆ ಆ ನಕಾರವನ್ನು ಮೂರ್ಧನ್ಯವಾಗಿ ಮಾರ್ಪಡಿಸಬೇಕಾದ ನಿಮಿತ್ತವೇ ತಪ್ಪಿಹೋಯಿತು. ಆದ್ದರಿಂದ ಸಂಸ್ಕೃತಭಾಷೆಯ ಉಚ್ಚಾರಣೆಯಲ್ಲೇ ಕರ್ನಾಟ, ಕರ್ನಾಟಕ ಎಂಬ ರೂಪಗಳು ಶಿಕ್ಷಾಶಾಸ್ತ್ರದ ದೃಷ್ಟಿಯಿಂದ ಅಶಾಸ್ತ್ರೀಯ, ಅಸಾಧು ಎಂದು ಹೇಳಲಾಗುವುದಿಲ್ಲ. ಅವು ಅಪಾಣಿನೀಯವೆಂಬುದೇನೋ ನಿಜ. ಆದರೆ ಪಾಣಿನಿಗೆ ಒಪ್ಪಿತವಲ್ಲದ ಪ್ರಯೋಗಗಳನ್ನು ಸಂಸ್ಕೃತ ಮಹಾಕವಿಗಳೇ ರೂಢಿಗೆ ತಂದಿಲ್ಲವೆ? ಉದಾಹರಣೆಗೆ, "ವಿಶ್ರಾಮ" ಎಂಬ ಅಪಾಣಿನೀಯ ರೂಪವನ್ನು ಕಾಳಿದಾಸ (ಶಾಕುಂ., ೨. ೬ ,) ಭವಭೂತಿ (ಉತ್ತರರಾಮ., ೧. ೩೯)—ಇಬ್ಬರೂ ಉಪಯೋಗಿಸಿದ್ದಾರಷ್ಟೆ.

ಇದಿಷ್ಟೂ ಶಿಕ್ಷಾಶಾಸ್ತ್ರದ ಮಾತಾಯಿತು. ದಂತ್ಯಸಹಿತವಾದ ರೂಪವನ್ನು ಹಿಂದಿನ ಕಾಲದಲ್ಲೇ ಕೆಲಕೆಲವು ವೇಳೆ ಪ್ರಯೋಗಿಸುತ್ತಿದ್ದರೆಂಬುದಕ್ಕೆ ಒಂದು ಪ್ರಾಚೀನ ಸಂಸ್ಕೃತ ಶಾಸನದಲ್ಲಿ (ಕಾಲ : ಶಾಲಿವಾಹನ ಶಕ ೬೯೦)[೫] ಆಧಾರವುಂಟು :

> ಕಾಞ್ಚೀಶ ಕೇರಲ ನರಾಧಿಪ ಚೋಲ ಪಾಣ್ಡ್ಯ
> ಶ್ರೀಹರ್ಷ ವಜ್ರಟ ವಿಭೇದ ವಿಧಾನದಕ್ಷಂ
> ಕಾರ್ನ್ನಾಟಕಂ ವಲಮನನ್ತಮಜೇಯಮನ್ಯೈ
> ರ್ಭೃತ್ಯೈಃ ಕಿಯದ್ಭಿರಪಿ ಯತ್ಸಹಸಾ ಜಿಗಾಯ ॥

೪. Siddheshwar Varma, *Critical Studies in the Phonetic Observation of Indian Grammarians*, PP. 6-7. ಪ್ರಾತಿಶಾಖ್ಯಗಳ ಕಾಲ ಪಾಣಿನೀಯ ಶಿಕ್ಷೆಯ ಕಾಲ ಮತ್ತು ಕರ್ತೃತ್ವದ ವಿಚಾರ—ಈ ಮೊದಲಾದ ವಿವರಗಳಿಗೆಲ್ಲ ಈ ಗ್ರಂಥವನ್ನು ನೋಡಬಹುದು. ರೇಫಕ್ಕೆ ದೇಶದ ಕೆಲವು ಭಾಗಗಳಲ್ಲಿ ದಂತ್ಯೋಚ್ಚಾರಣೆಯೂ, ಕೆಲವು ಭಾಗಗಳಲ್ಲಿ ಮೂರ್ಧನ್ಯೋಚ್ಚಾರಣೆಯೂ ಇದ್ದಿರಬೇಕೆಂದು ಡಾ. ಸಿದ್ಧೇಶ್ವರ ವರ್ಮರು ಅಭಿಪ್ರಾಯಪಡುತ್ತಾರೆ (Ibid, p. 8) [ಈ ವಿಷಯವಾಗಿ, W.S. Allen, *Phonetics in Ancient India* (1953) ಎಂಬ ಗ್ರಂಥದ ೫೩-೫ ಪುಟಗಳನ್ನೂ ಕುತೂಹಲಿಗಳು ನೋಡಬಹುದು.]

೫. The Talegaon Plates of Krishnaraja (*Epigraphia Indica* Vol. XIII, P. 279). ಇದೇ ಪದ್ಯವು ಶಾ. ಶ ೬೭೫ರ ಇನ್ನೊಂದು ಶಾಸನದಲ್ಲಿ ಒಂದೆರಡು ವ್ಯತ್ಯಾಸಗಳೊಡನೆ ದೊರೆಯುತ್ತದೆ. Samangad Grant of Dantidurga Khadgavaloka (*Indian Antiquary*, Vol. XI, P. 112) ಇಲ್ಲಿ "ಕರ್ಣ್ಣಾಟಕಂ" ಎಂಬ ಪಾಠವಿದೆ.

ಹೀಗೆ ಕ್ರಿ. ಶ. ೮ ನೆಯ ಶತಮಾನದಲ್ಲೇ ಕಾರ್ನ್ನಾಟಕಂ ಎಂಬ ರೂಪವು ಕಾಣಿಸಿಕೊಂಡಿರುವುದು ಗಮನಾರ್ಹವಾಗಿದೆ. ಇಲ್ಲಿ "ರ್ಣ್ಣಾ" ಎಂಬುದಕ್ಕೆ ಬದಲಾಗಿ "ರ್ನ್ನಾ" ಎಂಬುದು ಪ್ರಮಾದದಿಂದ ಬಿದ್ದಿರಬೇಕೆಂದು ಯಾರಾದರೂ ಆಕ್ಷೇಪಿಸಬಹುದು. (ಈ ಶಾಸನವನ್ನು ಸಂಪಾದಿಸಿರುವ ಸ್ಟೆನ್‌ಕೋನೋ ಪಂಡಿತನೇ ಹೀಗೆ ಭಾವಿಸಿದ್ದಾನೆ.) ಆದರೆ ಶಾಸನವನ್ನು ಬರೆಯಹೇಳಿದವನಿಗೂ ಕೊರೆದವನಿಗೂ ರೇಫದ ಮುಂದೆ ನಕಾರದ ಉಚ್ಚಾರವೇ ಸುಕರವಾಗಿರಬೇಕೆಂಬುದು ಇದರಿಂದ ಗೊತ್ತಾಗುವುದಿಲ್ಲವೆ?

ಒಂದು ಶಬ್ದರೂಪವು ಸಾಧುವೆ ಅಸಾಧುವೆ ಎಂದು ನಿರ್ಣಯಿಸುವುದರಲ್ಲಿ ಶಿಕ್ಷಾಶಾಸ್ತ್ರ, ಭಾಷಾಗತಿ, ಶಿಷ್ಟಸಮ್ಮತಿ—ಇವೆಲ್ಲವನ್ನೂ ಗಮನಕ್ಕೆ ತಂದುಕೊಳ್ಳಬೇಕು. ಕರ್ಣಾಟಕ ಎಂಬ ಮೂರ್ಧನ್ಯಸಹಿತ ರೂಪವು ಪಾಣಿನಿಸಮ್ಮತವಾದದ್ದು, ಕನ್ನಡನಾಡಿನ ಒಂದು ಭಾಗದಲ್ಲಿ ಮುಖ್ಯವಾಗಿ, ಮೈಸೂರಿನಲ್ಲಿ ಬಹುಮಟ್ಟಿಗೆ ಬಳಕೆಯಲ್ಲಿರತಕ್ಕದ್ದು. ಆದಕಾರಣ ಅದರ ಉಚ್ಚಾರಣೆ ಕಠಿನವಾದರೂ ಶಿಕ್ಷಾಶಾಸ್ತ್ರದ ಬೆಂಬಲವು ಅದಕ್ಕಿಲ್ಲದೆ ಹೋದರೂ ಅದು ಸರ್ವಥಾ ತ್ಯಾಜ್ಯವೆಂದು ಹೇಳಲಾಗುವುದಿಲ್ಲ. "ಕರ್ನಾಟಕ" ಎಂಬ ರೂಪವಾದರೋ ಹೆಚ್ಚು ಯುಕ್ತಿಯುಕ್ತವಾದದ್ದು, ಉಚ್ಚಾರಣೆಗೆ ಸುಲಭವಾದದ್ದು, ಕನ್ನಡ ನಾಡಿನ ಉತ್ತರ ಭಾಗದಲ್ಲೆಲ್ಲಾ ರೂಢಿಯಾಗಿರತಕ್ಕದ್ದು. ಇದನ್ನು ಅಸಾಧುವೆಂದು ಹೊರದೂಡುವುದು ಹಾಗಿರಲಿ; ಮೂರ್ಧನ್ಯ ಸಹಿತ ರೂಪಕ್ಕಿಂತ ಹೆಚ್ಚು ಉಪಾದೇಯವೆಂದು ಹೇಳಲು ಮನಸ್ಸಿಲ್ಲದಿದ್ದರೆ ಅದರಷ್ಟೇ ಸಾಧುವೆಂದಾದರೂ ಒಪ್ಪಲೇಬೇಕು. ಸದ್ಯಕ್ಕೆ ಎರಡು ರೂಪಗಳನ್ನೂ ಅಂಗೀಕರಿಸೋಣ. ಸಂಸ್ಕೃತದಲ್ಲೇ ಕೋಷ—ಕೋಶ, ಪೃಥ್ವೀ—ಪೃಥಿವೀ ಮೊದಲಾದ ಜೋಡಿಗಳಿಲ್ಲವೆ? ಕರ್ಣಾಟಕ—ಕರ್ನಾಟಕಗಳಲ್ಲಿ ಕೊನೆಗೆ ಯಾವುದು ನಿಲ್ಲಬೇಕೆಂಬುದನ್ನು ಕಾಲಪುರುಷನು ನಿರ್ಣಯಿಸಲಿ.

೧೯೩೮]

ಸಮಾಲೋಕನ : ೧೯೫೮

"ಗೊಮ್ಮಟ" ಶಬ್ದದ ನಿಷ್ಪತ್ತಿ—ಒಂದು ಸೂಚನೆ*

ಚಾಮುಂಡರಾಯನ ಅಪ್ರತಿಮ ಭಕ್ತಿಯ ಫಲವಾಗಿ ಶ್ರವಣಬೆಳ್ಗೊಳದ ವಿಂಧ್ಯಗಿರಿಯ ಮೇಲೆ ಗೊಮ್ಮಟೇಶ್ವರನ ಲೋಕಮನೋಹರವಾದ ಮಹಾ ಮೂರ್ತಿ ರೂಪುಗೊಂಡು ಸುಮಾರು ಒಂದುಸಾವಿರ ವರ್ಷಕ್ಕೆ ಬಂದಿತು. ಪ್ರಥಮ ಚಕ್ರವರ್ತಿಯಾದ ತನ್ನ ಅಣ್ಣ ಭರತನೊಡನೆ ಯುದ್ಧ ಮಾಡಿದಾಗ ವಿಜಯ ದೊಡನೆಯೇ ವೈರಾಗ್ಯವೂ ತನಗೆ ಕೈಗೂಡಲು ತಪಸ್ಸಿಗೆ ನಡೆದು ನಿಂತ ಅಂದಿನ ಕಾಮದೇವನಾದ ಬಾಹು ಬಲಿಯ ಮೂರ್ತಿ ಇದಾದರೂ, ಪುರಾಣ ಪ್ರಸಿದ್ಧ ವಾದ ಬಾಹುಬಲಿ, ಭುಜಬಲಿ ಎಂಬ ಹೆಸರುಗಳಿಗಿಂತ ಗೊಮ್ಮಟೇಶ್ವರ, ಗೊಮ್ಮಟಜಿನ, ಗೊಮ್ಮಟನಾಥ— ಈ ಬಗೆಯ ಹೆಸರುಗಳೇ ಈ ಸ್ವಾಮಿಗೆ ರೂಢಿ ಯಾಗಿವೆ. ಘಟ್ಟದ ಕೆಳಗಿನ ಕಾರ್ಕಳ ವೇಣೂರು ಗಳಲ್ಲಿಯ ಭುಜಬಲಿ ವಿಗ್ರಹಗಳು ಕೂಡ ಇದೇ ಹೆಸರಿನಿಂದಲೇ ಪ್ರಸಿದ್ಧವಾಗಿವೆ. ಇಲ್ಲಿಯ ಗೊಮ್ಮಟ ಅಥವಾ ಗುಮ್ಮಟ (ಈಚೆಗೆ ಗೋಮಟ) ಎಂಬ ರೂಪ ಹೇಗೆ ಸಿದ್ಧಿಸುತ್ತದೆ, ಇದರ ಅರ್ಥವೇನು, ಭುಜಬಲಿಯ ಬಿಂಬವನ್ನು ಈ ಹೆಸರಿನಿಂದ ಕರೆಯುವ ಔಚಿತ್ಯವೇನು ಎಂಬ ವಿಷಯದಲ್ಲಿ ವಿಪುಲವಾಗಿ ಚರ್ಚೆ ನಡೆದಿದೆ, ನಡೆಯುತ್ತಿದೆ. ಕನ್ನಡದಲ್ಲಿಯೇ ಈ ಕೆಲವು ಮುಖ್ಯಲೇಖನಗಳನ್ನು ನಿರ್ದೇಶಿಸಬಹುದು—

* *'Mahamastakabhisheka Souvenir-1953'*, Sravanabelagola.

ಶ್ರೀ ಕೆ. ಜಿ. ಕುಂದಣಗಾರ ಮತ್ತು ಡಾ. ಆ. ನೇ. ಉಪಾಧ್ಯೇ : 'ಗಮ್ಮಹ—ವಮ್ಮಹ ವಿಚಾರ' (ಪರಿಷತ್ಪತ್ರಿಕೆ, ೨೫.೨); ಶ್ರೀ ಮಂ. ಗೋವಿಂದ ಪೈ : 'ಗೊಮ್ಮಟ= ಮನ್ಮಥ' (ಪರಿಷತ್ಪತ್ರಿಕೆ ೨೭.೨); ಶ್ರೀ ಮಂ. ಗೋವಿಂದಪೈ : 'ಕರ್ನಾಟಕದಲ್ಲಿಯ ಗೊಮ್ಮಟ ಮಹಾಮೂರ್ತಿಗಳು', (ವಿವೇಕಾಭ್ಯುದಯ ವಿಶೇಷ ಸಂಚಿಕೆ, ೧೯೫೧); ಶ್ರೀ ಕೆ. ಜಿ. ಕುಂದಣಗಾರ : 'ಗೊಮ್ಮಟ ಶಬ್ದದ ವ್ಯುತ್ಪತ್ತಿ' (ಪ್ರಬುದ್ಧ ಕರ್ಣಾಟಕ, ೩೩. ೨, ವಸ್ತುಕೋಶ).—ಇದೆಲ್ಲದರ ವಿವರಣೆ ವಿಮರ್ಶೆಗಳಿಗೆ ಕೈ ಹಾಕಲು ಇಲ್ಲಿ ಎಡೆಯಿಲ್ಲ. ಪ್ರಕೃತಕ್ಕೆ ಆವಶ್ಯಕವಾದ ಕೆಲವು ವಿಚಾರಗಳನ್ನು ಅಲ್ಲಿಂದ ಸಂಗ್ರಹಿಸಿ, ಇದುವರೆಗೆ ವಿದ್ವಾಂಸರ ಗಮನಕ್ಕೆ ಬಾರದಿದ್ದ ಒಂದೆರಡು ಅಂಶಗಳನ್ನು ಎತ್ತಿಹಿಡಿದು ಕೆಲಮಟ್ಟಿಗೆ ಹೊಸದೆನಿಸುವ ಒಂದು ಸೂಚನೆಯನ್ನು ಮುಂದಿಡುವುದು ಈ ಲೇಖನದ ಉದ್ದೇಶ.[೧]

ಈಗ ನಿಸ್ಸಂದೇಹವಾಗಿ ತಿಳಿದಿರುವ ಮಟ್ಟಿಗೆ, "ಗೊಮ್ಮಟ" ಎಂಬ ಶಬ್ದವು ಮೊಟ್ಟಮೊದಲು ಕಾಣಿಸಿಕೊಳ್ಳುವುದು ಚಾಮುಂಡರಾಯನ ಗುರುವಾದ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಯ 'ಗೊಮ್ಮಟಸಾರ'ದಲ್ಲಿ. ಈ ಗ್ರಂಥವು ರಚಿತವಾದದ್ದು ಶ್ರವಣಬೆಳ್ಗೊಳದ ಮೂರ್ತಿ ನಿರ್ಮಿತವಾದ ಈಚೆಗೆ. ಗೊಮ್ಮಟಸಾರದ ಕರ್ಮಕಾಂಡದ ಕೊನೆಯ ಕೆಲವು ಪದ್ಯಗಳಲ್ಲಿ (೯೬೫—೯೭೨) ಗೊಮ್ಮಟ, ಗೊಮ್ಮಟರಾಯ, ಗೊಮ್ಮಟದೇವ, ಗೊಮ್ಮಟಜಿನ ಈ ಮೊದಲಾದ ಶಬ್ದಗಳು ಬರುತ್ತವೆ. ಗೊಮ್ಮಟ ಅಥವಾ ಗೊಮ್ಮಟರಾಯ ಎಂಬುದೇನೋ ಚಾಮುಂಡರಾಯನ ಹೆಸರೆಂಬುದು ನಿರ್ವಿವಾದ. "ಗೊಮ್ಮಟರಾಯ ವಿಣೆಮ್ಮಿಯ ದಕ್ಷಿಣಕುಕ್ಕುಟಜಿಣೋ ಜಯಉ" (=ಗೊಮ್ಮಟರಾಯವಿನಿರ್ಮಿತ ದಕ್ಷಿಣಕುಕ್ಕುಟಜಿನೋ ಜಯತು; ದಕ್ಷಿಣ ಕುಕ್ಕಟಜಿನ ಎಂದರೆ ಶ್ರವಣ ಬೆಳ್ಗೊಳದ ಬಾಹುಬಲಿಸ್ವಾಮಿ) ಎಂಬ ಇಲ್ಲಿಯ ಒಂದು ವಾಕ್ಯ ಸಾಕು ಇದರ ಸಮರ್ಥನೆಗೆ. ಆದರೆ ಇಲ್ಲಿ ಗೊಮ್ಮಟದೇವ ಎಂದರೆ ವರ್ಧಮಾನ ತೀರ್ಥಂಕರ ಎಂದೂ ಗೊಮ್ಮಟಜಿನ ಎಂದರೆ ನೇಮಿನಾಥಜಿನಬಿಂಬ ಎಂದೂ ಈಚಿನ ವ್ಯಾಖ್ಯಾನಕಾರರು ಅರ್ಥ ಮಾಡುತ್ತಾರೆ. ಇದಕ್ಕೆ ಸಾಂಪ್ರದಾಯಿಕವಾದ ಆಧಾರ ಎಷ್ಟರಮಟ್ಟಿಗಿದೆಯೋ ತಿಳಿಯದು. ಗೊಮ್ಮಟಸಾರಕ್ಕೆ ಚಾವುಂಡರಾಯನೇ ದೇಶಿಯಲ್ಲಿ (ಎಂದರೆ ಬಹುಶಃ ಕನ್ನಡ ಭಾಷೆಯಲ್ಲಿ) 'ವೀರಮಾರ್ತಂಡೀ' ಎಂಬ ವ್ಯಾಖ್ಯಾನವನ್ನು ರಚಿಸಿದ್ದನೆಂದು ೯೭೨ನೆಯ ಪದ್ಯದಿಂದ ಸೂಚಿತವಾಗುತ್ತದೆ. ಇದು ದೈವಯೋಗದಿಂದ ದೊರೆತರೆ ಅನೇಕ ಸಂದೇಹಗಳು ಪರಿಹಾರವಾಗಬಹುದು.

---

೧. ನಮ್ಮ ಲೇಖನದ ವಸ್ತು ಸಿದ್ಧವಾದೀಚೆಗೆ, ಶ್ರೀ ದಾ. ರಾ. ಬೇಂದ್ರೆಯವರ 'ಗೊಮ್ಮಟ ಶಬ್ದಾಚೀ ನವೀ ಮೀಮಾಂಸಾ' ಎಂಬ ಮರಾಠೀ ಲೇಖನವು ನೋಡಲು ದೊರೆಯಿತು (ಸನ್ಮತಿ, ೨. ೮-೯). ಇದರಲ್ಲಿ ಹಲವು ನಿಷ್ಪತ್ತಿಗಳನ್ನು ಸಂಕ್ಷೇಪವಾಗಿ ಪರಿಶೀಲಿಸಿದ್ದಾರೆ. "ಬ್ರಹ್ಮ"ದ ತದ್ಭವ "ಗೊಮ್ಮ" ಎಂದಾಗಿರಬಹುದೆಂಬುದರ ಕಡೆಗೆ ಬೇಂದ್ರೆಯವರ ಒಲವು. ಇದನ್ನು ಒಪ್ಪುವುದರಲ್ಲೂ ಕಷ್ಟವುಂಟು.

ಗೊಮ್ಮಟಸಾರದಲ್ಲಿ ಬರುವ ಗೊಮ್ಮಟದೇವ (ಅಥವಾ ಗೊಮ್ಮಟ ಜಿನ) ಎಂಬ ಪದಕ್ಕೆ ಬಾಹುಬಲಿ ಎಂಬ ಅರ್ಥ ಉಂಟೆಂದು ಹೇಳಲು ಆಗದಿದ್ದರೂ ಶ್ರವಣಬೆಳ್ಗೊಳದ ಶಾಸನಗಳಲ್ಲಿ ಕ್ರಿ. ಶ. ಸು. ೧೧೦೦ರಿಂದೀಚೆಗೆ ಈ ಅರ್ಥದಲ್ಲಿ ಈ ಶಬ್ದದ ಪ್ರಯೋಗವು ವಿಪುಲವಾಗಿ ಗೋಚರವಾಗುತ್ತದೆ. ಕ್ರಿ. ಶ. ಸು. ೧೧೮೦ ರಲ್ಲಿ ಬೊಪ್ಪಣ ಪಂಡಿತನು ರಚಿಸಿದ ಸ್ತುತಿ ಪದ್ಯ ಮಾಲಿಕೆಯಂತೂ "ಶ್ರೀ ಗೊಂಮಟ ಜಿನನಂ . . ." ಎಂದೇ ಮೊದಲಾಗುತ್ತದೆ (ಶಾಸನ ಸಂಖ್ಯೆ ೨೩೪). ಇದರಲ್ಲಿ ಬರುವ ". . . ಮಾಡಿಸಿದನಿನ್ತೀ ದೇವನಂ ಗೋಮಟಂ", ". . . . ಚಾವುಂಡರಾಯಂ ಮನುಪ್ರತಿಮಂ ಗೊಮ್ಮಟನಲ್ತೆ ಮಾಡಿಸಿದನಿನ್ತೀ ದೇವನಂ ಯತ್ನದಿಂ" ಎಂಬ ವಾಕ್ಯಗಳಿಂದ ಗೊಮ್ಮಟ ಎಂದರೆ ಚಾಮುಂಡರಾಯನೆಂಬ ಅರ್ಥಕ್ಕೆ ನಿರ್ಣಾಯಕವಾದ ಪುಷ್ಟಿ ದೊರೆಯುತ್ತದೆ.

ಗೊಮ್ಮಟ ಶಬ್ದಕ್ಕೆ ಇನ್ನೊಂದು ಅರ್ಥವುಂಟು. ಅದು ಕೂಡ ಬೊಪ್ಪಣ ಪಂಡಿತನ ಶಾಸನದಲ್ಲಿಯೇ ಗೋಚರವಾಗುತ್ತದೆ : "ದೀಕ್ಷೆಗೊಂಡೆ ನೀಂ ಗೊಮ್ಮಟದೇವ ನಿನ್ನ ತಜಿಸಂದಳವಾರ್ಯ್ಯಜನಕ್ಕೆ ಗೊಂಮಟಂ." ಇಲ್ಲಿ "ಗೊಮ್ಮಟದೇವ" ಎಂಬುದು ಭುಜಬಲಿಯನ್ನು ಕುರಿತ ಸಂಬೋಧನೆ. "ಗೊಂಮಟಂ" ಎಂದರೆ "ಮನೋಹರ, ಸುಂದರ" ಎಂದು ಅರ್ಥವೆಂದು ತೋರುತ್ತದೆ. ಈ ಕೊನೆಯ ಭಾಗವನ್ನು "Your heroic resolution is pleasing to the wise" ಎಂದು ಶ್ರೀ ರಾ. ನರಸಿಂಹಾಚಾರ್ಯರು *Epigraphia Carnatica*ದಲ್ಲಿ ಭಾಷಾಂತರಿಸಿದ್ದಾರೆ. ಬಹುಶಃ ಇದೇ ಅರ್ಥದಲ್ಲಿಯೇ ಗೊಂಮಟ ಶಬ್ದವು ಶ್ರವಣಬೆಳ್ಗೊಳದ ಇನ್ನೂ ಕೆಲವು ಶಾಸನಗಳಲ್ಲಿ ದೊರೆಯುತ್ತದೆ. ಉದಾಹರಣೆಗೆ,

> ಗೊಂಮಟಮೆನೆ ಮುನಿಸಮುದಾ
> ಯಂ ಮನದೊಳ್ಮೆಚ್ಚಿ ಮೆಚ್ಚಿ ಬಿಚ್ಚಳಿಸುತ್ತುಂ ।
> ಗೊಮ್ಮಟದೇವರ ಪೂಜೆಗ
> ದಂ ಮುದದಿಂ ಬಿಟ್ಟನಲ್ತೆ ಧೀರೋದಾತ್ತಂ ॥

ಎಂಬೀ ಪದ್ಯವು ಮೂರು ಬೇರೆ ಬೇರೆ ಶಾಸನಗಳಲ್ಲಿ ಬಂದಿದೆ (ಸಂಖ್ಯೆ ೨೪೦, ೨೫೧, ೩೯೭). ಇವುಗಳಲ್ಲಿ ೨೫೧ನೆಯ ಶಾಸನ ಕ್ರಿ. ಶ. ಸು. ೧೧೧೮ರಲ್ಲಿ ರಚಿತವಾದದ್ದು. ಇಲ್ಲಿ 'ಗೊಂಮಟಂ' ಎಂಬುದನ್ನು ಶ್ರೀ ರಾ. ನರಸಿಂಹಾಚಾರ್ಯರು "excellent" ಎಂದು ಭಾಷಾಂತರಿಸಿದ್ದಾರೆ. ಕನ್ನಡದಲ್ಲಿ ಈಚೆಗೆ ಕಾಣಿಸಿಕೊಳ್ಳದಿದ್ದರೂ ಈ ಶಬ್ದವು ಮರಾಠಿಯಲ್ಲೂ (ಗೋಮಟಾ) ಕೊಂಕಣಿಯಲ್ಲೂ (ಗೋಮಟೋ) ಇಂದಿಗೂ ಪ್ರಚುರವಾಗಿದೆಯೆಂದು ತಿಳಿಯ ಬರುತ್ತದೆ. ಮರಾಠಿಯಲ್ಲಂತೂ ಕ್ರಿ. ಶ. ೧೨೯೦ರಲ್ಲಿ ರಚಿತವಾದ ಜ್ಞಾನೇಶ್ವರಿಯಲ್ಲೇ "ಮನೋಹರ ಮತ್ತು ಉತ್ತಮ" ಎಂಬ ಅರ್ಥದಲ್ಲಿ ಇದು ದೊರೆಯುತ್ತದೆ.[೨]

---

೨. ಮೇಲೆ ಉಕ್ತವಾದ ಗೊಮ್ಮಟಸಾರದ ಕರ್ಮಕಾಂಡದ ೯೬೫ನೆಯ ಪದ್ಯದಲ್ಲಿ "ಗೊಮ್ಮಟಸಂಗಹಸುತ್ತಂ ಗೊಮ್ಮಟ ದೇವೇಣ ಗೊಮ್ಮಟಂ ರಇಯಂ" ಎಂಬ ಕಡೆ "ಗೊಮ್ಮಟಂ

ಈಗ ಗೊಮ್ಮಟ ಶಬ್ದದ ನಿಷ್ಪತ್ತಿಯ ಕಡೆಗೆ ತಿರುಗೋಣ; ಬಾಹುಬಲಿ ಆದಿತೀರ್ಥಂಕರನ ಕಾಲದ ಮನ್ಮಥನಷ್ಟೆ. ಮನ್ಮಥ ಎಂಬ ಶಬ್ದವೇ ರೂಪಾಂತರ ಹೊಂದಿ ಗೊಮ್ಮಟ ಎಂದಾಗಿದೆಯೆಂದು ಶ್ರೀ ಗೋವಿಂದ ಪೈಯವರ ಅಭಿಪ್ರಾಯ. ಆದರೆ ಇಲ್ಲಿ ಮಕಾರವು ಗೊಕಾರವಾಗಿ ತಿರುಗಿದೆಯೆಂದು ಭಾವಿಸಲು ಶಿಕ್ಷಾಶಾಸ್ತ್ರದ ದೃಷ್ಟಿಯಿಂದ ತೊಡಕುಗಳಿವೆ. (ಒಕಾರವು ಅಕಾರಕ್ಕೆ ತಿರುಗುವುದು ಸಾಮಾನ್ಯವೇ ಹೊರತು ಅಕಾರವು ಒಕಾರವಾಗುವುದು ಅಷ್ಟು ಪ್ರಚುರವಲ್ಲ. ಅಲ್ಲದೆ ಪದದ ಆದಿಯ ಮಕಾರವು ಗಕಾರವಾಗುವ ಸಂದರ್ಭಗಳು ಎಷ್ಟುಂಟು? ಇದರ ಜೊತೆಗೆ, ಗೊಮ್ಮಟ ಎಂಬುದಕ್ಕೆ ಮನ್ಮಥ ಎಂಬ ಅರ್ಥವಿರುವ ಬೇರೆ ಯಾವ ನಿದರ್ಶನವೂ ಇದುವರೆಗೆ ದೊರೆತಿಲ್ಲ.

ಪ್ರಾಕೃತಭಾಷೆಯಲ್ಲಿ "ಮುಹೇರ್ಗುಮ್ಮಗುಮ್ಮಡೌ" ಎಂಬ ವ್ಯಾಕರಣ ಸೂತ್ರಕ್ಕೆ ಅನುಸಾರವಾಗಿ (ಹೇಮಚಂದ್ರ, ೮. ೪. ೨೦೭) ಮೋಹಗೊಳಿಸು ಎಂಬ ಅರ್ಥದಲ್ಲಿ ಗುಮ್ಮಡ ಎಂಬ ಆದೇಶವುಂಟು; ಇದರಿಂದ ಗೊಮ್ಮಟ ಎಂಬುದು ನಿಷ್ಪನ್ನವಾಗುತ್ತದೆ ಎಂದು ಮತ್ತೆ ಕೆಲವು ಮಂದಿ ವಿದ್ವಾಂಸರ ಅಭಿಪ್ರಾಯ. ಆದರೆ ಮುಹ್ ಎಂಬ ಧಾತುವಿಗೆ ಗುಮ್ಮಡ ಎಂಬುದು ಆದೇಶವಾಗುತ್ತದೆಂದು ಸೂತ್ರದ ಕಡೆಗೆ ಬೆರಳು ತೋರಿಸಿದ ಮಾತ್ರಕ್ಕೆ ಅದರ ಮೂಲವನ್ನು ಬಿಡಿಸಿ ಹೇಳಿದಂತಾಗಲಿಲ್ಲ. "ಗುಮ್ಮಡ"ದ ನಿಷ್ಪತ್ತಿ ಒಗಟಾಗಿಯೇ ನಿಲ್ಲುತ್ತದೆ. ಅಲ್ಲದೆ "ಗೊಮ್ಮಟ" ಎಂಬುದಕ್ಕೆ ಸುಂದರ ಎಂಬ ಅರ್ಥ ಹೇಗೆ ಬಂದಿತೆಂಬುದೂ ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಬಹುಶಃ ಈ ಗಂಟನ್ನು ಭೇದಿಸುವುದಕ್ಕಾಗಿಯೇ ಹೇಮಚಂದ್ರನ ವ್ಯಾಕರಣ ಸೂತ್ರವು ಹುಟ್ಟಿರಬಹುದೆಂಬ ಅಭಿಪ್ರಾಯವೂ ಉಂಟು. "ಗುಮ್ಮ-ಗುಮ್ಮಡ ಎಂಬ ಧಾತುಗಳು ಗೊಮ್ಮಟವನ್ನು ಹುಟ್ಟಿಸಿದ ಬೇರಲ್ಲ, ಗೊಮ್ಮಟದಿಂದ ಹುಟ್ಟಿದ ಬೀಳಲು ಎಂದು ತೋರುತ್ತದೆ."

ಬಾಹುಬಲಿಯ ದಿಕ್ಕಿನಿಂದ "ಗೊಮ್ಮಟ" ಶಬ್ದವನ್ನು ವೀಕ್ಷಿಸಿ, ಮನ್ಮಥ ಎಂಬ ಶಬ್ದದೊಂದಿಗಾಗಲಿ ಮನೋಹರ ಎಂಬ ಅರ್ಥದೊಂದಿಗಾಗಲಿ ಸಂಬಂಧ ಕಲ್ಪಿಸಿ ನಿಷ್ಪತ್ತಿ ಹೇಳುವುದಕ್ಕೆ ಪ್ರತಿಯಾಗಿ ಈ ವಿಗ್ರಹದ ನಿರ್ಮಾಪಕನಾದ ಚಾವುಂಡರಾಯನ ದಿಕ್ಕಿನಿಂದ ಪರಿಶೀಲಿಸುವುದರಲ್ಲಿ ಹೆಚ್ಚು ಪ್ರಯೋಜನವುಂಟೆಂದು ತೋರುತ್ತದೆ. ಈ ಆಲೋಚನೆ ಒಬ್ಬಿಬ್ಬರು ವಿದ್ವಾಂಸರ ಮುಂದೆ ಸುಳಿದಿದ್ದರೂ, ಅದಕ್ಕೆ ತಕ್ಕಷ್ಟು ಪುರಸ್ಕಾರ ದೊರೆತಿಲ್ಲ. ಆದರೆ ಇದು ಅಷ್ಟೇನೂ ಅಲ್ಪಸಾರವಾದ ಸೂಚನೆಯಲ್ಲವೆಂಬುದು ಕೆಳಗಿನ ಪ್ರತಿಪಾದನೆಯಿಂದ ವಿದಿತವಾಗಬಹುದು.

ರಇಯಂ" ಎಂದರೆ ಸುಂದರವಾಗಿ ರಚಿತವಾಯಿತು ಎಂದು ಅರ್ಥವಾಗುತ್ತದೆ. ಹೀಗೆ ಮನೋಹರ ಎಂಬ ಅರ್ಥವೂ ಗೊಮ್ಮಟ ಶಬ್ದದಷ್ಟೇ ಹಳೆಯದು.

ಚಾಮುಂಡರಾಯನಿಗೆ ಗೊಮ್ಮಟ ಅಥವಾ ಗೊಮ್ಮಟರಾಯ ಎಂಬ ಹೆಸರಿದ್ದಿತೆಂಬುದನ್ನೂ ಅವನು ಕಡೆಯಿಸಿದ ಬಳಿಕವೇ ಬಾಹುಬಲಿ ಮೂರ್ತಿಗೆ ಗೊಮ್ಮಟೇಶ್ವರ, ಗೊಮ್ಮಟನಾಥ ಈ ಬಗೆಯ ಹೆಸರು ರೂಢಿಗೆ ಬಂದಿತೆಂಬುದನ್ನೂ ನೆನಪಿಗೆ ತಂದುಕೊಳ್ಳಬೇಕು. ಶ್ರವಣಬೆಳ್ಗೊಳದ ನೂರಾರು ಶಾಸನಗಳಲ್ಲಿ ಒಂದರೊಳಗಾದರೂ ಬಾಹುಬಲಿಯನ್ನು ಕೇವಲ "ಗೊಮ್ಮಟ" ಎಂದು ಕರೆದಂತೆ ಕಾಣುವುದಿಲ್ಲ. ಈ ಸ್ವಾಮಿಯನ್ನು ನಿರ್ದೇಶಿಸುವಾಗ, ಈಶ್ವರ, ನಾಥ, ಸ್ವಾಮಿ, ಜಿನ ಈ ಬಗೆಯ ಶಬ್ದ ಜೊತೆಗೆ ಸೇರಿಯೇ ಬರುತ್ತದೆ. (ಶೈವ ಸಂಪ್ರದಾಯದಲ್ಲಿ ಪ್ರತಿಷ್ಠಾಪಕನ ಹೆಸರಿನ ಮುಂದೆ ಈಶ್ವರ ಶಬ್ದವನ್ನು ಸೇರಿಸಿ ರಾಮೇಶ್ವರ, ಲೋಕೇಶ್ವರ ಎಂದು ಮುಂತಾಗಿ ಶಿವಲಿಂಗವನ್ನು ಹೆಸರಿಸುವುದನ್ನು ಇಲ್ಲಿ ಸೂಚಿಸಬಹುದು.) ಗೊಮ್ಮಟರಾಯನು ಪ್ರತಿಷ್ಠಾಪಿಸಿದ, ಅವನಿಗೆ ಆರಾಧ್ಯದೈವವಾದ ಮೂರ್ತಿಯೇ ಗೊಮ್ಮಟೇಶ್ವರ ಎಂದು ಹೆಸರು ಪಡೆಯಿತೆಂದು ಭಾವಿಸಿದರೆ ರೂಢಿಗಾಗಲಿ ಯುಕ್ತಿಗಾಗಲಿ ವಿರುದ್ಧವಾಗಲಾರದು.

ಚಾಮುಂಡರಾಯನಿಗೇಕೆ ಗೊಮ್ಮಟ ಎಂದು ಹೆಸರು ಬಂದಿತು, ಇದರ ಅರ್ಥವೇನು ಎಂಬ ಪ್ರಶ್ನೆ ಈಗ ಉದಿಸುತ್ತದೆ. ಇಪ್ಪತ್ತೆರಡನೆಯ ತೀರ್ಥಂಕರ ನೇಮಿನಾಥನ ಯಕ್ಷಿಯಾದ ಕೂಷ್ಮಾಂಡಿಯನ್ನು ಇಲ್ಲಿ ಸ್ಮರಿಸಬೇಕು. ಚಾಮುಂಡರಾಯನು ಬಾಹುಬಲಿ ವಿಗ್ರಹವನ್ನು ಸಂದರ್ಶಿಸಲು ತನ್ನ ಮೊದಲಿನ ಉದ್ದೇಶದಂತೆ ಉತ್ತರದಿಕ್ಕಿನ ದೂರದ ಪೌದನಪುರಕ್ಕೆ ಹೋಗದೆ ವಿಂಧ್ಯಗಿರಿಯ ಮೇಲೆಯೇ ಏಕೆ ಮೂರ್ತಿಯನ್ನು ಪ್ರತಿಷ್ಠಾಪಿಸಿದನೆಂಬುದನ್ನು ತಿಳಿಸಲು ಹಳೆಯ ಕಥೆಗಳಿವೆ. ದೊಡ್ಡಯ್ಯನ 'ಭುಜಬಲಿ ಚರಿತ' (ಕ್ರಿ.ಶ.ಸು. ೧೫೫೦), ಅನಂತಕವಿಯ 'ಬೆಳ್ಗೊಳದ ಗೊಮ್ಮಟೇಶ್ವರ ಚರಿತ್ರೆ' (ಕ್ರಿ.ಶ.ಸು. ೧೭೮೦), ದೇವಚಂದ್ರನ 'ರಾಜಾವಳೀ ಕಥೆ' (ಕ್ರಿ.ಶ. ೧೮೩೮) ಈ ಮೊದಲಾದ ಗ್ರಂಥಗಳಲ್ಲಿ ಈ ವಿಷಯ ಬರುತ್ತದೆ. ತನ್ನ ಯಾತ್ರೆಯ ಕಾಲದಲ್ಲಿ ಚಾಮುಂಡರಾಯನು ಶ್ರವಣಬೆಳ್ಗೊಳದಲ್ಲಿ ಬೀಡುಬಿಟ್ಟು ಚಿಕ್ಕಬೆಟ್ಟದ ಮೇಲಿನ ಒಂದು ಜಿನಗೃಹದಲ್ಲಿ ತನ್ನ ಗುರುವಾದ ನೇಮಿಚಂದ್ರಮುನಿಯೊಡನೆ ರಾತ್ರಿ ಮಲಗಿರುವಾಗ, ಕೂಷ್ಮಾಂಡಿಯೆಂಬ ಯಕ್ಷಿ ಆ ಮುನಿಯ, ಈ ನೃಪನ ಮತ್ತು ಅವನ ತಾಯ ಸ್ವಪ್ನದಲ್ಲಿ ಕಾಣಿಸಿಕೊಂಡು,—ಮುಂದಿನ ಮಾರ್ಗವು ಕಠಿನ, ರಾವಣ ಪೂಜಿತವಾದ ಭುಜಬಲಿ ಬಿಂಬವು ಇಲ್ಲಿಯ ಬೆಟ್ಟದಲ್ಲೇ ಶಿಲೆಯಿಂದ ಮುಚ್ಚಿಹೋಗಿದೆ, ಚಿನ್ನದ ಬಾಣದಿಂದ ಅದನ್ನು ಬಿಡಿಸಿ ಹೊರತೋರಿಸಬೇಕು ಎಂದು ಬೋಧಿಸಿದಳಂತೆ. ಅದೇ ರೀತಿ ಚಾಮುಂಡರಾಯನು ಮಾಡಿದನಂತೆ. ಹೀಗೆಂಬುದು ದೊಡ್ಡಯ್ಯನ ಹೇಳಿಕೆ. ("ಕೂಷ್ಮಾಂಡೀ ತನ್ಮುನೀಶಸ್ಯ ಚ ತದವನಿಪಾಲಸ್ಯ ತಸ್ಯಾಂಬಿಕಾಯಾಃ...", ಪದ್ಯ ೩೭). ಮುಂದೆ ತನ್ನ ಪ್ರಭುವಾದ ರಾಚಮಲ್ಲನಿಗೆ ಚಾಮುಂಡರಾಯನು ವರದಿಯೊಪ್ಪಿಸುವಾಗ "ಕೂಷ್ಮಾಂಡಿಕಾರುಣ್ಯ"ದಿಂದ ಬೆಳ್ಗೊಳದಲ್ಲಿ ಈ ಸ್ವಾಮಿ ತನಗೆ ಸುಪ್ರಸನ್ನನಾದನೆಂದು ಹೇಳುತ್ತಾನೆ (ಪದ್ಯ ೬೪). ಅನಂತಕವಿಯ ಗ್ರಂಥದ ಮೇರೆಗೆ, ಸ್ವಪ್ನದಲ್ಲಿ ಕೂಷ್ಮಾಂಡಿ, ಪದ್ಮಾಂಬಿಕೆ ಎಂಬ ಇಬ್ಬರು ಯಕ್ಷಿಯರು ಕಾಣಿಸಿಕೊಂಡರೂ (ಪದ್ಮಾಂಬಿಕೆ ಅಥವಾ ಪದ್ಮಾವತಿ ಇಪ್ಪತ್ತುಮೂರನೆಯ ಪಾರ್ಶ್ವ ತೀರ್ಥಂಕರನ ಯಕ್ಷಿ).

ಮುಂದೆ "ನೇಮಿತೀರ್ಥಂಕರೆಕ್ಷಿಯರು ಸ್ವಪ್ನದಿ ಪೇಳೆ" ಎಂಬ ಉಕ್ತಿ ಬಂದು (೩.೨೫) ಕೂಷ್ಮಾಂಡಿಯೇ ಮುಖ್ಯ ಪ್ರೇರಕಳೆಂಬುದನ್ನು ದೃಢಪಡಿಸುತ್ತದೆ. ದೇವಚಂದ್ರನ ರಾಜಾವಳೀ ಕಥೆಯ ಪ್ರಕಾರ ಸ್ವಪ್ನದಲ್ಲಿ ಕಾಣಿಸಿಕೊಳ್ಳುವವಳು ಪದ್ಮಾವತೀ ದೇವಿ. ಆದರೆ ಮುಂದೆ "ಕೂಷ್ಮಾಂಡಿನೀ ದೇವಿ ವೃದ್ಧರೂಪಾಂತು ಗುಳ್ಳಕಾಯ ಪೋಳೊಳು ಕ್ಷೀರಮಂ ತಂದು" ಅಭಿಷೇಕ ಮಾಡಿ ಹಾಲಿನ ಕೋಡಿ ಹರಿಸುತ್ತಾಳೆ. ಶ್ರವಣಬೆಳ್ಗೊಳ ದಲ್ಲಿರುವ ಗುಳ್ಳಕಾಯಜ್ಜಿಯ ವಿಗ್ರಹವು ನಿಜವಾಗಿ ಕೂಷ್ಮಾಂಡಿ ಯಕ್ಷಿಯದೇ ಎಂಬ ಭಾವನೆಯನ್ನು ಇಲ್ಲಿ ಸ್ಮರಿಸಬಹುದು. ಈ ಎಲ್ಲ ಸಾಮಗ್ರಿಯನ್ನು ನೋಡಿದರೆ, ಚಾಮುಂಡರಾಯನು ಕೂಷ್ಮಾಂಡಿ ಯಕ್ಷಿಯ ಆರಾಧಕನಾಗಿದ್ದಿರಬೇಕೆಂದೂ ಬಾಹುಬಲಿ ವಿಗ್ರಹ ನಿರ್ಮಾಣ ಮೊದಲಾದ ಕಾರ್ಯದಲ್ಲಿ ಆಕೆಯಿಂದ ಪ್ರೇರಣೆ ಪಡೆದನೆಂಬ ವಾರ್ತೆ ಜನಜನಿತವಾಗಿತ್ತೆಂದೂ ತೋರುತ್ತದೆ.

ಕೂಷ್ಮಾಂಡ ಶಬ್ದದ ಕಡೆಗೆ ಈಗ ಸ್ವಲ್ಪ ತಿರುಗೋಣ. ಕನ್ನಡದಲ್ಲಿ ಇದರ ತದ್ಭವ "ಕುಂಬಳ" ಎಂದಾದರೂ ತೆಲುಗಿನಲ್ಲಿ ಇದು "ಗುಮ್ಮಡಿ". (ಅಲ್ಲಿ ಈ ಶಬ್ದಕ್ಕೆ ಪ್ರಾಚೀನ ಪ್ರಯೋಗವುಂಟು: ಕೃಷ್ಣದೇವರಾಯನ 'ಆಮುಕ್ತಮಾಲ್ಯದ'ದಲ್ಲಿ ಇದು ದೊರೆಯುವುದೆಂದು ತಿಳಿಯಬರುತ್ತದೆ.) ಇತ್ತ ಕನ್ನಡನಾಡಿನಲ್ಲಿ "ಗುಮ್ಮಡಿ"ಯೆಂಬುದು ಒಂದು ದೇವತೆಯ ಹೆಸರಾಗಿ ಪ್ರಚುರವಾಗಿದ್ದಿತೆಂಬುದು ಬಸವಣ್ಣನವರ ಒಂದು ವಚನದಿಂದ ವ್ಯಕ್ತವಾಗುತ್ತದೆ—

> ಗುಮ್ಮಡಿಯಂತಪ್ಪ ತಾಯಿ ನೋಡೆನಗೆ,
> ಕಲಕೇತನಂತಪ್ಪ ತಂದೆ ನೋಡೆನಗೆ.
> ಮೋಟನಂತಪ್ಪ ಗಂಡ ನೋಡೆನಗೆ!
> ಮರಗಾಲಲಟ್ಟಿ ಸದೆದು ನೋಡಯ್ಯ:
> ಇಂದೆನ್ನ ಒಕತನ ಹೋದರೆ ಹೋಗಲಿ
> ಮರಗಾಲ ಬಿಟ್ಟೆನಾದರೆ, ಕೂಡಲಸಂಗಾ, ನಿಮ್ಮಾಣೆ!
>
> (ಬಸವಣ್ಣನವರ ಷಟ್‌ಸ್ಥಳದ ವಚನಗಳು, ಸಂಖ್ಯೆ ೭೨೦)

ಕೂಷ್ಮಾಂಡಿಯೆಂಬ ಒಬ್ಬ ದೇವತೆ ಹಿಂದೂ ಗ್ರಂಥಗಳಲ್ಲೂ ಉಂಟು. ಆಕೆಯ ಪ್ರಾಕೃತಾವತಾರವೇ ಈ "ಗುಮ್ಮಡಿ". ಇದರಂತೆಯೇ ಜೈನ ಕೂಷ್ಮಾಂಡಿ ಯಕ್ಷಿಯ ಹೆಸರೂ ನಮ್ಮ ನಾಡಿನಲ್ಲಿ "ಗುಮ್ಮಡಿ" ಎಂಬ ರೂಪದಲ್ಲಿ ಪ್ರಚುರವಾಗಿದ್ದಿರಬೇಕೆಂದು ತೋರುತ್ತದೆ. ಕೂಷ್ಮಾಂಡಿ ಎಂಬುದರಿಂದ ಗುಮ್ಮಡಿ ಎಂಬ ತದ್ಭವವನ್ನು ಏನೊಂದು ಕ್ಲೇಶವೂ ಇಲ್ಲದೆ ನೇರವಾಗಿ ಸಾಧಿಸಬಹುದು. ಚಾಮುಂಡರಾಯನಿಗೆ ಗೊಮ್ಮಟ ಎಂಬ ಹಸರು ಬಂದದ್ದು ಈ ಗುಮ್ಮಡಿಯಕ್ಷಿಯ ಅನುಗ್ರಹದಿಂದ ಇರಲೇಬೇಕು. ಯಾವುದೋ ವಿಶೇಷ ಸಂದರ್ಭದಲ್ಲಿಯ ಈ ಯಕ್ಷಿಗೆ ಹರಿಸಿಕೊಂಡದ್ದಕ್ಕಾಗಿಯೋ ಆಕೆಯ ವಿಶೇಷ ಪ್ರಸಾದಕ್ಕೆ ಈತನು ಪಾತ್ರನಾದದ್ದಕ್ಕಾಗಿಯೋ ಗೊಮ್ಮಟ ಎಂಬ ಹೆಸರು ಈತನಿಗೆ ಲಭಿಸಿತೆಂದು ಭಾವಿಸಬಹುದು. ಹೀಗೆ ಹೆಣ್ಣು ದೇವತೆಯ ಹೆಸರನ್ನು

ಗಂಡಸರಿಗೆ ಇಡುವುದು ಅಪೂರ್ವವೇನೂ ಅಲ್ಲ. ಇದಕ್ಕೆ ನಿದರ್ಶನ "ಚಾಮುಂಡರಾಯ" ಎಂಬ ಶಬ್ದದಲ್ಲಿಯೇ ಇದೆ. ಕೂಷ್ಮಾಂಡಿ ನೇಮಿ ತೀರ್ಥಂಕರನ ಯಕ್ಷಿಯಾದರೆ ಚಾಮುಂಡಿ ಆತನಿಗೆ ಹಿಂದಿನ ನಮಿನಾಥನೆಂಬ ಇಪ್ಪತ್ತೊಂದನೆಯ ತೀರ್ಥಂಕರನ ಯಕ್ಷಿ.

ಕೂಷ್ಮಾಂಡಿ (ಅಥವಾ ಗುಮ್ಮಡಿ) ಯಕ್ಷಿಯ ಅನುಗ್ರಹಕ್ಕೆ ಪಾತ್ರನಾದ ಗೊಮ್ಮಟರಾಯನು ಆಕೆಯ ಪ್ರೇರಣೆಯಿಂದ ಪ್ರತಿಷ್ಠಾಪಿಸಿದ ಬಾಹುಬಲಿ ಮಹಾಮೂರ್ತಿಗೆ ಗೊಮ್ಮಟೇಶ್ವರ ಎಂಬ ಹೆಸರು ಬಳಕೆಯಾಗಿ ನಿಂತದ್ದು ಏನಾಶ್ಚರ್ಯ!

೧೯೫೩]

ಪರಿಶಿಷ್ಟ

"ಗೊಮ್ಮಟ" ಶಬ್ದವನ್ನು ಕುರಿತ ವಿಪುಲವಾದ, ಸಾಧಾರವಾದ ವಿಷಯ ಸಂಗ್ರಹಕ್ಕಾಗಿ ಡಾ. ಉಪಾಧ್ಯೇ ಅವರ 'Gommata' (*Bahratiya Vidya*, Vol. 2—part 1), 'Materials for the interpretation of the term Gommata' (*Indian Historical Quarterly*, Vol. 16, pp. 819-826)—ಈ ಲೇಖನಗಳನ್ನು ಅವಶ್ಯವಾಗಿ ನೋಡಬೇಕು. (ಎರಡೂ ೧೯೪೦ನೆಯ ಇಸವಿಯಲ್ಲೇ ಪ್ರಕಟವಾದುವು.) ನನ್ನ ಲೇಖನ ಪ್ರಕಟವಾದ ಬಳಿಕ ಅದನ್ನು ಓದಿ ನೋಡಿ, ತಮ್ಮ ಈ ಲೇಖನಗಳ ಕಡೆಗೆ ಡಾ. ಉಪಾಧ್ಯೇ ಅವರು ನನ್ನ ಗಮನವನ್ನು ಎಳೆದರು. ಚಾಮುಂಡರಾಯನಿಗಿದ್ದ "ಗೊಮ್ಮಟ" ಎಂಬ ಹೆಸರಿನ ಮೂಲಕವೇ ಅವನು ಸ್ಥಾಪಿಸಿದ ಬಾಹುಬಲಿ ವಿಗ್ರಹಕ್ಕೆ "ಗೊಮ್ಮಟೇಶ್ವರ" (ಗೊಮ್ಮಟಸ್ಯ ಈಶ್ವರಃ") ಎಂಬ ಹೆಸರು ಬಂದಿರಬೇಕೆಂಬುದೇ ಅವರ ಅಭಿಪ್ರಾಯ ಕೂಡ. ಆದರೆ "ಗೊಮ್ಮಟ" ಶಬ್ದದ ನಿಷ್ಪತ್ತಿಯನ್ನು "ಕೂಷ್ಮಾಂಡಿನಿ"ಗೆ ಜೋಡಿಸಬಹುದೆ ಎಂಬ ವಿಷಯದಲ್ಲಿ ಅವರು ಸಂದೇಹಪಡುತ್ತಾರೆ. "Your suggestion to connect Gommata with Kūṣmāṇdini presumes possibly that the word gommaṭa is not older than Chāmuṇḍa Raja—a very embarrassing presumption. I am in a mood to keep the etymology of gommata still an open question." ಎಂದು ನನಗೆ ಬರೆದ ಪತ್ರದಲ್ಲಿ (೨೫-೩-೧೯೫೩) ತಿಳಿಸಿದ್ದಾರೆ.

"ಗೊಮ್ಮಟ"ದ ಮೂಲ "ಕೂಷ್ಮಾಂಡಿ" (>"ಗುಮ್ಮಡಿ") ಯಲ್ಲಿದೆ ಎಂದು ಅಂಗೀಕರಿಸಿದ ಮಾತ್ರಕ್ಕೆ, ಈ ಶಬ್ದ ಚಾಮುಂಡರಾಯನಿಗಿಂತ ಪ್ರಾಚೀನವಲ್ಲ ಎಂದು ಹೇಳಿದಂತೆ ಆಗುವುದಿಲ್ಲ. "ಗುಮ್ಮಡಿ" ಎಂಬ ತದ್ಭವ ಇನ್ನೂ ಹಳೆಯದಾಗಿರಬಹುದು; "ಗುಮ್ಮಡಿ" ದೇವತೆಯ ಭಕ್ತರಲ್ಲಿ "ಗೊಮ್ಮಟ" ಎಂಬ ಹೆಸರು ಹಿಂದಿನಿಂದಲೂ ಪ್ರಚುರವಾಗಿದ್ದಿರಬಹುದು. "ಚಾಮುಂಡ" ಎಂಬ ಹೆಸರು ನಮ್ಮ "ಚಾಮುಂಡರಾಯ"ನಿಗಿಂತ ಪ್ರಾಚೀನವಾಗಿರಬಹುದಾದರೆ, "ಗೊಮ್ಮಟ" ಎಂಬುದೂ ಅವನ ಇನ್ನೊಂದು ಹೆಸರಾದ "ಗೊಮ್ಮಟರಾಯ" ಎಂಬುದಕ್ಕಿಂತ ಪ್ರಾಚೀನವಾಗಿರಬಹುದಷ್ಟೆ.

"ಗೊಮ್ಮಟ" ಎಂಬುದರ ಇನ್ನೊಂದು ಅರ್ಥವಾದ "ಸುಂದರ, ಮನೋಹರ" ಎಂಬುದು ಪ್ರಾಚೀನ ಕಾಲದಲ್ಲೇ ಹೇಗೆ ಬಂದಿತು ಎಂಬುದು ಇಂದಿಗೂ ತೊಡಕಿನ ಪ್ರಶ್ನೆಯಾಗಿಯೇ ನಿಂತಿದೆ. ಈ ಅರ್ಥಕ್ಕೆ ಹೊಂದಿಕೆಯಾಗುವಂತೆ ಯಾವ ಸಮರ್ಪಕವಾದ ನಿಷ್ಪತ್ತಿಯೂ ಈ ಶಬ್ದಕ್ಕೆ ಇದುವರೆಗೆ ಸೂಚಿತವಾಗಿಲ್ಲದ ಕಾರಣ, ಇಲ್ಲಿಯೂ "ಗುಮ್ಮಡಿ"ಯನ್ನೇ ಆಶ್ರಯಿಸಬೇಕೋ ಏನೋ. ಸೌಂದರ್ಯವಾಚಕ ಶಬ್ದಗಳು ಹಲವು ರೀತಿಗಳಲ್ಲಿ ತಲೆದೋರುತ್ತವೆ. "ಒಳ್ಳೆಯ ರೂಪವುಳ್ಳ, ಆಕೃತಿಯುಳ್ಳ" ಎಂಬಂಥ ಮೂಲಾರ್ಥವುಳ್ಳವು ಇವುಗಳಲ್ಲಿ ಒಂದು ಗುಂಪು. ಎಲ್ಲಕ್ಕಿಂತ ಮುಖ್ಯವಾಗಿ, ದುಂಡಾದ ವರ್ತುಲವಾದ ಆಕೃತಿ ಸುಂದರವೆಂಬ ಭಾವನೆ ಹಲವೆಡೆಗಳಲ್ಲಿ ಪ್ರಚುರವಾಗಿದೆ. ಇಂಗ್ಲಿಷಿನಲ್ಲಿ "round" ಎಂಬುದಕ್ಕೆ "well-balanced and finished" ಎಂಬ ಲಾಕ್ಷಣಿಕಾರ್ಥವಿರುವುದನ್ನು ಇಲ್ಲಿ ಜ್ಞಾಪಿಸಬಹುದು. ಕನ್ನಡದಲ್ಲಿಯೇ "ಉರಟು" (=round) ಎಂಬ ಪ್ರಾದೇಶಿಕ ಶಬ್ದವನ್ನು ಇದೇ ಬಗೆಯಾಗಿ ಬಳಸುವುದುಂಟು. (ಉದಾ—"ಈ ಮಾತು ಉರುಟಾಗಿ ಅದೆ.") ಕೂಷ್ಮಾಂಡ (>ಗುಮ್ಮಡಿ) ಎಂಬ ಶಬ್ದ "ದುಂಡಾಗಿ ಇರುವ ವಸ್ತು" ಎಂಬ ಲಾಕ್ಷಣಿಕಾರ್ಥದಲ್ಲಿ ಹಿಂದೆ ಪ್ರಯೋಗವಾಗುತ್ತಿದ್ದರೆ ಆಶ್ಚರ್ಯವೇನೂ ಇಲ್ಲ. ಅಲ್ಲಿಂದ ಮುಂದಕ್ಕೆ "ಸುಂದರ" ಎಂಬ ಅರ್ಥವೂ ಅದಕ್ಕೆ ಬಂದಿರಬಹುದು.—ಆದರೆ ಇದೆಲ್ಲವೂ ಊಹೆಯೆಂಬುದನ್ನೂ, ಇದರ ದೃಢಸಮರ್ಥನೆಗೆ ಹೆಚ್ಚಿನ ಆಧಾರಗಳು ದೊರೆಯಬೇಕೆಂಬುದನ್ನೂ ಮರೆಯುವ ಹಾಗಿಲ್ಲ.

೧೯೫೮]

ಸಮಾಲೋಕನ : ೧೯೫೮

ಉಳ್-, ಒಳಗು*

ಪೊಱಗು, ಒಳಗು, ಪೊಸತು, ಪೞದು, ಎಳದು —ಎಂಬಿವು ಸಮಾಸದಲ್ಲಿ ಪೂರ್ವಪದವಾಗಿ ನಿಂತಾಗ ಅವಕ್ಕೆ ಅನುಕ್ರಮವಾಗಿ ಪೊಱ-, ಒಳ-, ಪೊಸ-, ಪೞ-, ಎಳ- ಎಂಬ ರೂಪಗಳು ಒದಗುತ್ತವೆಯೆಂದು ಹಳಗನ್ನಡದ ವ್ಯಾಕರಣಗಳಲ್ಲಿ ನಿರೂಪಿಸಿದ್ದಾರೆ. ಈ ಶಬ್ದಗಳಲ್ಲಿ ಒಳಗು ಎಂಬುದಕ್ಕೆ ಬರುವ "ಆದೇಶ"ದ ವಿಚಾರವಾಗಿ ಗಮನಿಸತಕ್ಕ ಒಂದೆರಡು ಅಂಶಗಳುಂಟು.

ನಾಗವರ್ಮನು ಒಳಜಗಳಂ, ಒಳಅಟ್ಟಂ ಮೊದಲಾದವನ್ನು ಈ ಸಂದರ್ಭದಲ್ಲಿ ಉದಾಹರಣೆಯಾಗಿ ಕೊಡುತ್ತಾನೆ. ಆದರೆ ಅಷ್ಟಕ್ಕೇ ನಿಲ್ಲಿಸದೆ,

"ಒಳಗಿಂಗಸಂಗದಿಂ ಸಮನಿಸಿರ್ಕುಮುಳ್ಳಾದೇಶಂ"
(ಶಬ್ದಸ್ಮೃತಿ, ೫೩)

"ಕೇಚಿತ್ ಒಳಸ್ಯ ಉಳ್ಳಾದೇಶಮಪೀಚ್ಛಂತಿ"
(ಭಾಷಾಭೂಷಣ, ೧೪೪ ರ ವೃತ್ತಿ)

ಎಂದು ಹೇಳಿ, ಒಳಗು ಎಂಬುದಕ್ಕೆ ಸಮಾಸದಲ್ಲಿ "ಉಳ್" ಎಂಬ ಆದೇಶವೂ ಕೆಲವು ಕಡೆಗಳಲ್ಲಿ ಉಂಟೆಂಬುದನ್ನು ನಮ್ಮ ಗಮನಕ್ಕೆ ತಂದಿರುತ್ತಾನೆ. ಇದಕ್ಕೆ ನಿದರ್ಶನವಾಗಿ ಉಳ್ಳೋವಣಂ (=ಉಳ್+ ಓವಣಂ), ಉಳ್ವಕ್ಕಂ, ಉಳ್ಳಾಳ್, ಉಳ್ಳುಡೆ—ಎಂಬ ಪ್ರಯೋಗಗಳನ್ನೂ ತೋರಿಸಿದ್ದಾನೆ. ಇವುಗಳಲ್ಲಿ ಉಳ್ಳುಡೆ ಎಂಬುದಂತೂ ಹಳಗನ್ನಡ ಸಾಹಿತ್ಯದಲ್ಲಿ ಪ್ರಚುರವಾಗಿದೆ:

---

* 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೨೪.೨

ಅವಯವದಿಂದಮ ದೇವಾಂ-
ಗವಸ್ತ್ರದುಳ್ಳುಡೆಯನಾಕೆಯೋಸರಿಸುವ ಸೂ
ಸುವ ಹಾರಲತೆಯೆನಳವಡಿ
ಸುವ ಭಂಗಿಯೆ ಮದನರಾಜರಾಜ್ಯ ವಿಳಾಸಂ ॥

(ಆದಿಪುರಾಣ, ೯, ೩೬)

ಎಂಬ ಪಂಪನ ಪ್ರಯೋಗವನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.

"ಉಳ್-" ಎಂಬುದು ನಾಮಪದಗಳಲ್ಲಿ ಮಾತ್ರವೇ ದೊರೆಯುವುದಿಲ್ಲ; ಉಳ್ಳಂಜಿಸು, ಉಳ್ಳಲರ್, ಉಳ್ಳಳ್ಕು ಇವೇ ಮೊದಲಾದ ಕಡೆಗಳಲ್ಲಿ ಅದು ಧಾತುವಿನ ಪೂರ್ವದಲ್ಲಿ ಹತ್ತಿರುವುದನ್ನೂ ಕಾಣುತ್ತೇವೆ.

ಕೇಶಿರಾಜನು ನಾಗವರ್ಮನ ವ್ಯಾಕರಣಗ್ರಂಥಗಳನ್ನು ತುಂಬ ಜಾಗರೂಕತೆಯಿಂದ ಉಪಯೋಗಿಸಿಕೊಂಡಿರತಕ್ಕವನು; ಪ್ರಾಚೀನಕವಿ ಪ್ರಯೋಗಗಳನ್ನು ಶ್ರದ್ಧೆಯಿಂದ ನಿರ್ದೇಶಿಸತಕ್ಕವನು, ಇಂಥವನು ಈ ಉಳ್-ಎಂಬ ಆದೇಶವನ್ನು ಏಕೆ ಗುರುತಿಸ ಲಿಲ್ಲವೋ. (ಕೇಶಿರಾಜನೇ ಕೈಬಿಟ್ಟಮೇಲೆ, ಭಟ್ಟಾಕಳಂಕನ ದೃಷ್ಟಿಗೇ ಇದು ನಿಲುಕಲಿಲ್ಲ ವೆಂದು ತೋರುತ್ತದೆ.)

ಕೇಶಿರಾಜನ ಈ ಮೌನವನ್ನೂ, ಹಳಗನ್ನಡ ಕಾಲಕ್ಕೇ "ಒಳ-" ಸಹಿತವಾದ ರೂಪಗಳು ರೂಢಿಗೆ ಬಂದು "ಉಳ್-" ಸಹಿತವಾದ ರೂಪಗಳು ಹಿಮ್ಮೆಟ್ಟಿದ್ದುದನ್ನೂ ನೋಡಿದರೆ, ಇವು ಕನ್ನಡದಲ್ಲಿ ತುಂಬ ಪ್ರಾಚೀನವಾಗಿರಬೇಕೆನ್ನಿಸುತ್ತದೆ. ತಮಿಳಿನಲ್ಲಿ ಈ ಬಗೆಯ ಸಮಾಸಗಳು ಹೆಚ್ಚಾಗಿ ಬಳಕೆಯಲ್ಲಿವೆ. ಉದಾಹರಣೆಗೆ ಉಟ್‌ಚೀಲೈ (=ಉಳ್+ಶೀಲೈ: ಒಳಗೆ ಹಾಕಿಕೊಳ್ಳುವ ವಸ್ತ್ರ; ಇದರೊಂದಿಗೆ ಕನ್ನಡದ ಉಳ್ಳುಡೆ ಎಂಬುದನ್ನು ಹೋಲಿಸಬಹುದು), ಉಟ್‌ಪಡ (=ಒಳಪಡು), ಉಳ್‌ವಾಯ್ (=ಬಾಯ ಒಳಭಾಗ), ಉಳ್ಳಗಂ (=ಮನಸ್ಸು) ಇತ್ಯಾದಿ. ಕ್ರಿ.ಶ. ೯ನೆಯ ಶತಮಾನಕ್ಕೆ ಹಿಂದೆ ಕನ್ನಡದಲ್ಲಿ "-ಉಳ್" ಎಂಬುದು ಸಪ್ತಮೀ ವಿಭಕ್ತಿಯ ಪ್ರತ್ಯಯವಾಗಿದ್ದಿತೆಂಬುದನ್ನೂ ಇಲ್ಲಿ ಸ್ಮರಿಸಬಹುದು. ಉದಾಹರಣೆಗೆ—ಕಟ್ವಪ್ಪಿನಾವೆಟ್ಟದುಳ್ (ಕ್ರಿ.ಶ. ಸು. ೭೦೦), ಜಲದುಳಂ ಸ್ಥಲದುಳಂ (ಕ್ರಿ.ಶ. ಸು. ೮೦೦), ಇತ್ಯಾದಿ. ಈ-ಉಳ್ ಪ್ರತ್ಯಯವೇ ಮುಂದೆ ಹಳಗನ್ನಡದಲ್ಲಿ-ಒಳ್ ಎಂಬ ರೂಪಕ್ಕೆ ತಿರುಗಿತು.

ಭಾಷಾಚರಿತ್ರೆಯ ದೃಷ್ಟಿಯಿಂದ ಒಳಗು ಎಂಬುದಕ್ಕೆ ಉಳ್ ಎಂಬುದು "ಆದೇಶ" ವಲ್ಲ; ಇರ್>ಎರಡು ಎಂಬಲ್ಲಿರುವಂತೆ ಉಳ್ ಎಂಬುದೇ ಪ್ರಕೃತಿಯ ಮೂಲರೂಪ. ಉಳ್>ಒಳಗು: ಇಲ್ಲಿ ಉಕಾರವು ಏಕೆ ಒಕಾರವಾಯಿತೆಂಬುದು ಕುತೂಹಲಜನಕವಾದ ಪ್ರಶ್ನೆ; ಅದರ ವಿವೇಚನೆಯನ್ನು ಮಾಡಲು ಇಲ್ಲಿ ಅವಕಾಶವಿಲ್ಲ.

೧೯೩೯]

ಸಮಾಲೋಕನ : ೧೯೫೮

‘ಇದೆ’, ‘ಇವೆ’ ಮೊದಲಾದ ಕೆಲವು ಕ್ರಿಯಾರೂಪಗಳ ವಿಚಾರ*

೧

ಹೊಸಗನ್ನಡದಲ್ಲಿ ‘ಇರ್’ ಧಾತುವಿಗೆ ವರ್ತಮಾನ ಕಾಲದಲ್ಲಿ ‘ಇರುತ್ತದೆ’, ‘ಇರುತ್ತವೆ’ ಎಂಬ ಪ್ರಥಮ ಪುರುಷ ನಪುಂಸಕ ರೂಪಗಳುಂಟಷ್ಟೆ! ಹೆಚ್ಚುಕಡಿಮೆ ಅದೇ ಅರ್ಥದಲ್ಲಿ ‘ಇದೆ’, ‘ಇವೆ’ ಎಂಬ ರೂಪಗಳೂ ಆಡುವ ಮಾತಿನಲ್ಲಿ ತುಂಬ ಬಳಕೆಯಲ್ಲಿವೆ; ಬರೆವಣಿಗೆಯಲ್ಲೂ ಅವುಗಳನ್ನು ಸಾಮಾನ್ಯವಾಗಿ ಎಲ್ಲರೂ ಉಪಯೋಗಿಸುತ್ತಾರೆ. ಈ ಪರ್ಯಾಯ ರೂಪಗಳ ಮೂಲವು ಯಾವುದು?

‘ಇದೆ’, ‘ಇವೆ’ ಎಂಬುವು ನೋಡುವುದಕ್ಕೆ ಹೊಸ ರೂಪಗಳಂತೆ ತೋರುತ್ತವೆ. ಆದರೆ ಅವಕ್ಕೆ ವಯಸ್ಸು ಬಹಳವಾಗಿದೆ. ಈ ರೂಪಗಳು ‘ಹರಿಶ್ಚಂದ್ರ ಕಾವ್ಯ’ (IX.೧೦) ‘ಬಸವ ಪುರಾಣ’ (XV. ೨೨) ‘ಜೈಮಿನಿ ಭಾರತ’ (III. ೨೦, ೨೭) ಮೊದಲಾದ ಷಟ್ಪದೀ ಕಾವ್ಯಗಳಲ್ಲಿ ಸಿಕ್ಕುವುದು ಹಾಗಿರಲಿ; ಹಳಗನ್ನಡದಲ್ಲಿಯೇ, ಪ್ರಸಿದ್ಧ ಚಂಪೂ ಕಾವ್ಯಗಳಲ್ಲಿಯೇ ದೊರೆಯುತ್ತವೆ. ಉದಾಹರಣೆಗೆ, ‘ಕಬ್ಬಿಗರ ಕಾವ’ದಲ್ಲಿ ಈ ಪದ್ಯವಿದೆ :—

* ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆ, ಜನವರಿ, ೧೯೩೧.

ಮಲ್ಲಿಗೆಯಲ್ಲಿ ತುಂಬಿ ಮೊರೆಯುತ್ತಿದೆ ಕಂಪಿನೊಳೊಂದಿ ತೆಂಕಣಿಂ ।
ಮೆಲ್ಲನೆ ಗಾಳಿ ತೀಡುತಿದೆ ಕೋಗಿಲೆಗಳ್ ಪೊಸ ಮಾಮರಂಗಳೊಳ್ ॥
ಬಲ್ಲುಲಿಯಿಂದೆ ಬಗ್ಗಿಸುತಮಿಂತಿದೆ ಬಂದುದು ಸುಗ್ಗಿ ತಳ್ವಿದಂ ।
ನಲ್ಲನೆನುತ್ತದೊರ್ವಳೆಳವೆಣ್ ಸುರಿದಳ್ ಮಿಗೆ ಕಣ್ಣ ನೀರ್ಗಳಂ ॥ (೬೩)

'ಗಿರಿಜಾ ಕಲ್ಯಾಣ'ದಲ್ಲಿ ಈ ಪದ್ಯವು ದೊರೆಯುತ್ತದೆ :—

ಒತ್ತುವ ಪದ್ಮಪತ್ರ ಕದಳೀದಳ ಸಂಕುಳಮೆಯ್ದೆ ಬೆಂದು ಸೀ ।
ಯುತ್ತಿವೆ ದೂರದಿಂದೆ ಸಖಿಯರ್ ತವೆ ಚೆಲ್ಲುವ ಶೀತ ವಾರಿಯು ॥
ರ್ಕುತ್ತಿವೆ ಬೀಸುತಿರ್ಪ ಕುಸುಮೋಜ್ಜ್ವಳ ವೀಜನ ವೃಂದಮೋವೊ ಪೊ ।
ತ್ತುತ್ತಿವೆ ತನ್ವಿಯೋ ವಿರಹ ವಹ್ನಿಗೆ ಪುಟ್ಟಿದದೊಂದು ಮೂರ್ತಿಯೋ ॥
(iv. ೧೧೫)

ಈ ಎರಡು ಪದ್ಯಗಳಲ್ಲಿ 'ಇದೆ', 'ಇವೆ' ಎಂಬ ರೂಪಗಳು ಒಂದೊಂದರಲ್ಲಿ ಒಂದೊಂದು ತೆಕ್ಕೆತೆಕ್ಕೆಯಾಗಿ ಬರುತ್ತವೆ. ಆದರೆ ಇಲ್ಲಿ ಇವುಗಳಿಗೆ ಸ್ವತಂತ್ರ ಪ್ರಯೋಗವಿಲ್ಲವೆಂದೂ, 'ಮೊರೆಯುತ್ತಿದೆ'=(ಮೊರೆಯುತ್ತೆ+ಇದೆ), 'ಸೀಯುತ್ತಿವೆ' (ಸೀಯುತ್ತೆ+ಇವೆ) ಎಂಬ ರೀತಿಯಲ್ಲಿ ಇವು ಕೃದಂತದೊಡನೆಯೇ ಬಂದಿವೆ ಯೆಂದೂ ಯಾರಾದರೂ ಆಕ್ಷೇಪಿಸಿದರೆ, ಮೇಲಿನ ಎರಡು ಕಾವ್ಯಗಳಿಗಿಂತಲೂ ಪ್ರಾಚೀನವಾದ ನಾಗವರ್ಮನ 'ಕರ್ಣಾಟಕ ಕಾದಂಬರಿ'ಯಲ್ಲಿ ಬರುವ ಈ ಪದ್ಯಕ್ಕೆ ಏನು ಹೇಳಲಾದೀತು? :—

ಆವಿರ್ಪೆವು ತನುವಿದೆ ಮೇಣ್ ।
ಜೀವಿತಮಿರ್ದಪ್ಪುದವಯವಂಗಳುಮಿವೆ ಮೆ ॥
ಚ್ಚಾವುದನಾತ್ಮೀಕರಿಪರೊ ।
ದೇವಿಯರಿಂದೀಗಳಿವಱೊಳದುವೆ ಕೃತಾರ್ಥಂ ॥ (II. ೧೫೬)

ಇಲ್ಲಿ 'ಇದೆ', 'ಇವೆ' ಎಂಬ ಎರಡು ಕ್ರಿಯೆಗಳೂ, 'ಇರ್ದಪುದು', 'ಇರ್ದಪುವು' ಎಂಬ ಅರ್ಥದಲ್ಲಿ ಸ್ವತಂತ್ರವಾಗಿ ಬಂದಿವೆ. ಇದನ್ನು ನೋಡಿದರೆ 'ಇರುತ್ತದೆ', 'ಇರುತ್ತವೆ' ಎಂಬ ಹೊಸಗನ್ನಡದ ರೂಪಗಳಿಗಿಂತಲೂ ಇವೇ ಪ್ರಾಚೀನವೆಂದು ಧೈರ್ಯವಾಗಿ ಹೇಳಬಹುದು.

ಇವು ಯಾವ ಧಾತುವಿನ ರೂಪಗಳು? 'ಇರ್' ಧಾತುವಿನಿಂದಲೇ ಬಂದಿರ ಬಹುದೆ? ಹಾಗಾದರೆ ರೂಪ ನಿಷ್ಪತ್ತಿ ಹೇಗೆ? ಹಳಗನ್ನಡದ 'ಇರ್ದಪುದು' ಎನ್ನುವುದೆ 'ಇದೆ' ಎಂಬ ರೂಪಕ್ಕೆ ಕುಗ್ಗಿತೆಂದು ಹೇಳಲಾಗುತ್ತದೆಯೆ? 'ಇರುತ್ತದೆ' ಎಂಬ ಹೊಸ ರೂಪದಿಂದಲಂತೂ ಇದು ಎಂದಿಗೂ ಹೊರಟಿರಲಾರದು.

ಇಲ್ಲಿ ಗಮನಿಸತಕ್ಕ ಅಂಶವೊಂದುಂಟು : 'ಇದೆ', 'ಇವೆ' ಎಂಬ ರೂಪಗಳು ರೂಢಿಯಲ್ಲಿರುವಂತೆಯೇ, ಅವುಗಳ ಅರ್ಥವನ್ನೇ ಕೊಡುವ 'ಅದೆ', 'ಅವೆ' ಎಂಬ

ರೂಪಗಳೂ, ಆಡುವ ಮಾತಿನಲ್ಲಿ, ಮುಖ್ಯವಾಗಿ ಉತ್ತರ ಕರ್ಣಾಟಕದಲ್ಲಿ, ಪ್ರಚುರವಾಗಿವೆ. ಆದರೆ ಅವುಗಳಿಗೆ 'ಇದೆ, ಇವೆ'ಗಳ ಅದೃಷ್ಟವಿಲ್ಲದೆ ಹೋದುದರಿಂದ ಗ್ರಂಥಗಳಲ್ಲಿ ಅವು ನೆಲೆಗೊಳ್ಳಲಿಲ್ಲ. ಆದರೂ ನಮ್ಮ ಕವಿಗಳು ಅವನ್ನು ಪೂರ್ಣವಾಗಿ ಕೈಬಿಟ್ಟಿಲ್ಲ. 'ಹರಿಶ್ಚಂದ್ರ ಕಾವ್ಯ'ದಲ್ಲಿ ಈ ಪದ್ಯವುಂಟು :—

ಕಡೆಗಣಿಸಿ ನಗಲೇಕೆ ತಂದೆಯೆನೆ ಧಾರೆಯಂ ।
ಕೊಡುವಾಗ ದಕ್ಷಿಣೆಯ ಧನವದಱಿೊಳಿದೆಯೆಂದು ।
ನುಡಿದುದುಂಟೇಯೆನಲು ಹೇಱಿನೊಪ್ಪಿಸಿದವಂಗೆಲ್ಲಿಯದು ಸುಂಕವೆನಲು ॥
ಒಡಲಳಿದಡಂ ಸಾಲವಳಿಯದೆನಲೀ ಧರಣಿ ।
ಯೊಡೆತನಂ ಹೋದಡೇಂ ಸಾಲ ಹೋಹುದೆ ಮುನ್ನಿ ।
ನೊಡವೆಯಂ ಕೊಡು ಕೊಡದಡೆಲ್ಲವಂ ಮರಳಿ ಕೈಕೊಳು ಬಱಿದೆ
ಬಿಡೆನೆಂದನು ॥[೧]

ಇದರಲ್ಲಿ ಅಚ್ಚಿನ ಪ್ರತಿಯ ಪಾಠವು 'ಇದೆ' ಎಂದಿದ್ದರೂ ಅದಕ್ಕೆ ಆಧಾರವಾದ ನಾಲ್ಕು ಓಲೆಯ ಪ್ರತಿಗಳಲ್ಲಿಯೂ (ಕ.ಖ.ಗ.ಫ.) 'ಅದೆ' ಎಂಬ ಪಾಠವೇ ಉಂಟು. ಈ ಪಾಠವು ತಪ್ಪೆಂದು ಹೇಳಲು ನಮಗೆ ಯಾವ ಕಾರಣವೂ ಇಲ್ಲ. ಇಷ್ಟೇ ಅಲ್ಲ, 'ಬಸವ ಪುರಾಣ'ದಲ್ಲಿಯೂ 'ಅದೆ' ಎಂಬ ರೂಪದ ಪ್ರಯೋಗವು ದೊರೆಯುತ್ತದೆ. (ಉದಾ.–XIV ೧೧, ೧೩). 'ಇದೆ' ಎಂಬ ರೂಪವು ಎಷ್ಟು ಗ್ರಾಹ್ಯವೋ 'ಅದೆ' ಎಂಬುದೂ ಆ ಕಾಲದಲ್ಲಿ ಅಷ್ಟೇ ಗ್ರಾಹ್ಯವಾಗಿರಬಹುದು.

ಗ್ರಾಮ್ಯ ಭಾಷೆಯಲ್ಲಿ ಇನ್ನು ಕೆಲವು ಸ್ವಾರಸ್ಯವುಳ್ಳ ರೂಪಗಳು ದೊರೆಯುತ್ತವೆ :—

ಅವನು "ಬರ್‌ತವ್‌ನೆ", "ಬಂದವ್‌ನೆ"
ಅವಳು "ಬರ್‌ತವ್‌ಳೆ", "ಬಂದವ್‌ಳೆ"
ಅದು "ಬರ್‌ತದೆ" "ಬಂದದೆ"
"ಅವ ಆವೂರಾಗೇ ಅವ್‌ನೆ"
"ನಿಮ್ಮ್ ಮನೆಯೋರೆಲ್ಲಾ ಎಲ್ಲವ್‌ರೆ"
"ಕುರಿ ರೊಪ್ಪದೊಳಗೇ ಅವೆ"

---

೧. ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಲಿರುವ 'ಹರಿಶ್ಚಂದ್ರ ಕಾವ್ಯ ಸಂಗ್ರಹ', V. ೨೮. ಈ ಪದ್ಯದ ಪಾಠವನ್ನು ಉಪಯೋಗಿಸಿಕೊಳ್ಳಲು ಅವಕಾಶಕೊಟ್ಟದ್ದಕ್ಕಾಗಿ ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯ, ಎಂ.ಎ. ಅವರಿಗೆ ನಾನು ಕೃತಜ್ಞನಾಗಿದ್ದೆನೆ. (ಶ್ರೀಮಾನ್ ಮಂ.ಆ. ರಾಮಾನುಜಯ್ಯಂಗಾರ್ಯರು ಅಚ್ಚುಹಾಕಿಸಿರುವ 'ಹರಿಶ್ಚಂದ್ರ ಕಾವ್ಯ'ದಲ್ಲಿ ಈ ಪದ್ಯದ ಸಂಖ್ಯೆ VIII. ೫೪; ಪಾಠ ಭೇದಗಳುಂಟು.) ೧. ಳ (ಕ.ಖ.ಗ.ಫ.)

ಮೊದಲಿನ ಮೂರು ಉದಾಹರಣೆಗಳಲ್ಲಿ 'ಅವನೆ', 'ಅವಳೆ', 'ಅದೆ' ಎಂಬ ಪದಗಳು ಕೃದಂತಗಳೊಡನೆ ಕ್ರಿಯಾಪದಗಳಂತೆ ಸೇರಿಕೊಂಡಿವೆ. ಕೊನೆಯ ಮೂರು ಉದಾಹರಣೆಗಳಲ್ಲಿ 'ಅವನೆ', 'ಅವರೆ', 'ಅವೆ' ಎಂಬುವು ಸ್ವತಂತ್ರ ಕ್ರಿಯಾಪದಗಳಾಗಿಯೇ ನಿಂತಿವೆ.

ಹೀಗೆ, 'ಇದೆ', 'ಇವೆ', 'ಅದೆ', 'ಅವೆ', 'ಅವನೆ', 'ಅವಳೆ', 'ಅವರೆ'—ಎಂಬೀ ರೂಪಗಳೆಲ್ಲವೂ 'ಇರ್' ಧಾತುವಿನ ಅರ್ಥದಲ್ಲಿ ಸ್ವತಂತ್ರ ಕ್ರಿಯಾಪದಗಳಂತೆ ಪ್ರಯೋಗ ಹೊಂದುವುದನ್ನು ನೋಡಿದರೆ ಇವುಗಳ ಮೂಲವನ್ನು ಹುಡುಕುವುದು ಕಷ್ಟವಲ್ಲವೆಂದು ತೋರುತ್ತದೆ. 'ಇದು', 'ಇವು', 'ಅದು', 'ಅವು', 'ಅವನು', 'ಅವಳು', 'ಅವರು',– ಇವೆಲ್ಲವೂ ನಿರ್ದೇಶಕ ಸರ್ವನಾಮಗಳು (Demonstrative Pronouns). ಇವಕ್ಕೆ 'ಎ' ಎಂಬ ನಿರ್ಧಾರಣೆಯ ಪ್ರತ್ಯಯವು ಹತ್ತಿ ಮೇಲಿನ ರೂಪಗಳು ಸಿದ್ಧಿಸಿರಬೇಕು. ಈ ರೂಪಗಳು ಯಾವ ಧಾತುವಿನಿಂದಲೂ ಹುಟ್ಟಿರಲಾರವು.

ದ್ರಾವಿಡ ಭಾಷೆಗಳಲ್ಲಿ ಸರ್ವನಾಮಗಳೇ ಆಖ್ಯಾತ ಪ್ರತ್ಯಯಗಳಾಗುವುವೆಂಬುದು ವಿದ್ವತ್ಸಮ್ಮತವಾದ ವಿಷಯ. ಉದಾಹರಣೆಗೆ, 'ಬಂದೆನ್', 'ಬಂದುದು'—ಈ ಎರಡು ಕಡೆಗಳಲ್ಲೂ ಅನುಕ್ರಮವಾಗಿ 'ಎನ್', 'ಉದು' ಎಂಬ ಉತ್ತಮ ಪುರುಷ ಪ್ರಥಮ ಪುರುಷದ ಸರ್ವನಾಮಗಳೇ ಆಖ್ಯಾತ ಪ್ರತ್ಯಯಗಳಾಗಿ ಪರಿಣಮಿಸಿವೆ. ಹೀಗಿರುವಾಗ, 'ಇದು', 'ಇವು', 'ಅದು', 'ಅವು', 'ಅವನು', 'ಅವರು' ಮೊದಲಾದ ಸರ್ವನಾಮಗಳು 'ಎ' ಎಂಬ ಪ್ರತ್ಯಯದ ಮುಸುಕನ್ನು ಹಾಕಿಕೊಂಡು ಕ್ರಿಯಾರ್ಥವನ್ನು ಕೊಡುವುದೇನೂ ಆಶ್ಚರ್ಯಕರವಲ್ಲ.[೨] ಇಲ್ಲಿ ನಿಜವಾದ ಆಶ್ಚರ್ಯವೇನೆಂದರೆ, ಇವು ಸ್ವತಂತ್ರ ಕ್ರಿಯಾಪದ ಗಳಾಗಿಬಿಟ್ಟಿರುವುದು. ಮಿಕ್ಕ ಕಡೆಗಳಲ್ಲಿ ಸರ್ವನಾಮಗಳು ಎಷ್ಟೋ ವಿಕಾರ ಹೊಂದಿ ಕೂಡ (ಉತ್ತಮ ಪುರುಷ ಬಹುವಚನದ 'ಆಂ' ಎಂಬ ಸರ್ವನಾಮವನ್ನೂ, 'ಎವು' ಎಂಬ ಆಖ್ಯಾತ ಪ್ರತ್ಯಯವನ್ನೂ ಹೋಲಿಸಿ.) ಪ್ರತ್ಯಯವಾಗಿಯೇ ಮುಗಿಯುತ್ತವೆ. ಇಲ್ಲಿ ಮಾತ್ರ ಸ್ವಸ್ವರೂಪದಲ್ಲಿಯೇ ಧಾತುವಿನ ಹಂಗಿಲ್ಲದೆ ಸ್ವತಂತ್ರ ಕ್ರಿಯಾಪದಗಳ ಪದವಿಯನ್ನು ಗಳಿಸಿಕೊಂಡಿವೆ.

ಈ ಅಭಿಪ್ರಾಯವನ್ನು ಅಂಗೀಕರಿಸಿದರೆ, ಹೊಸಗನ್ನಡದಲ್ಲಿ ವರ್ತಮಾನ ಕಾಲದ ರೂಪಗಳು ಬಂದ ಬಗೆಯನ್ನು ನಿರ್ಧರಿಸುವುದೂ ಸುಲಭವಾಗಬಹುದು. 'ಬರುತ್ತಾನೆ', 'ಬರುತ್ತಾರೆ' ಎಂಬ ಗ್ರಾಂಥಿಕ ರೂಪಗಳಿಗೂ, 'ಬರ್‌ತವ್‌ನೆ', 'ಬರ್‌ತವ್‌ರೆ' ಎಂಬ

---

೨. "ತನುವಿದೆ" ಎಂಬ ವಾಕ್ಯವೇ ಬಿಡಿಯಾಗಿ ಸಿಕ್ಕಿದ್ದಲ್ಲಿ, ಅದರಲ್ಲಿರುವ 'ಇದೆ' ಎಂಬ ಪದವನ್ನು ನಿರ್ದೇಶಕ ಸರ್ವನಾಮವೆಂದು ಭಾವಿಸಿ ಅದಕ್ಕೆ 'ಎ' ಎಂಬ ನಿರ್ಧಾರಣೆಯ ಪ್ರತ್ಯಯವು ಹತ್ತಿದೆಯೆನ್ನಬಹುದಷ್ಟೆ! (ತನು+ಇದೆ=ಶರೀರವು ಇದೇ ಸರಿ). ಈ ಸರ್ವನಾಮಗಳು ಮೊದಲು ಹೀಗೆಯೇ ಪ್ರಯೋಗಹೊಂದುತ್ತಿದ್ದು ಬಳಿಕ ನಿರ್ಧಾರಣೆಯ ಭಾವವು ಲುಪ್ತವಾಗಿ ಬರಿಯ ಅಸ್ತಿತ್ವವನ್ನು ಹೇಳುವ ಸ್ಥಿತಿಗೆ ಅವು ಇಳಿದಿರಬಹುದು. ಆ ಬಳಿಕ, ಅವುಗಳನ್ನು ಕ್ರಿಯಾಪದಗಳಂತೆ ಪ್ರಯೋಗಿಸುವ ಪದ್ಧತಿ ತಲೆದೋರಿರಬಹುದು.

ಗ್ರಾಮ್ಯ ರೂಪಗಳಿಗೂ ಅತ್ಯಂತ ಸಾಮ್ಯವಿದೆ. 'ಬರುತ್ತೆ' ಎಂಬ ವರ್ತಮಾನ ಕೃದಂತಕ್ಕೆ 'ಅವನೆ' ಎಂಬ ಸರ್ವನಾಮ ಕ್ರಿಯೆ ಸೇರಿ, ಬರುತ್ತೆ+ಅವನೆ=ಬರುತ್ತವನೆ, ಬರುತ್ತಾನೆ— ಎಂದು ಈ ರೀತಿ ಪರಿಣಮಿಸಿರಬಹುದೆ? "ನಾನ್ ಬರ್‌ತಿವ್‌ನಿ", "ನೀವ್ ಬಂದಿವ್‌ರಿ" ಎಂಬ ಪ್ರಯೋಗಗಳಿಗೂ ಗ್ರಾಮ್ಯ ಭಾಷೆಯಲ್ಲಿ ಉಂಟು. 'ಬರ್‌ತಿವ್‌ನಿ' ಎನ್ನುವುದು ನಮ್ಮ 'ಬರ್‌ತೀನಿ' (=ಬರುತ್ತೇನೆ) ಎಂಬುದರ ಮೂಲ ರೂಪವಾಗಿರಬಹುದು. ಇದರಲ್ಲಿ 'ಇವನ್+ಇ' ಎಂಬ ಪ್ರತ್ಯಯ(?)ವು ಸಿಕ್ಕುತ್ತದೆ. ಮಿಕ್ಕ ಕಡೆಗಳಲ್ಲಿರುವ ಅಂತ್ಯದ 'ಎ'ಗೆ ಬದಲಾಗಿ ಇಲ್ಲಿ ಸ್ವರಸಾಮ್ಯ ವಿಧಿಯಿಂದ 'ಇ' ಬಂದಂತೆ ತೋರುತ್ತದೆ. 'ಬಂದಿವ್‌ರಿ' ಎಂಬಲ್ಲಿಯೂ 'ಇವರ್+ಇ' ಎಂಬ ಪ್ರತ್ಯಯವಿದೆ. ಆದ್ದರಿಂದ, 'ಬರುತ್ತೀರಿ' ಎಂಬುದರ ಮೂಲ ರೂಪವು 'ಬರ್‌ತಿವ್‌ರಿ' ಎಂದು ಇರಬಹುದು. ಈ 'ಇವನ್', 'ಇವರ್' ಎಂಬುವೂ ಸರ್ವನಾಮ ಕ್ರಿಯೆಗಳೇ ಸರಿ.

ಈ ದೃಷ್ಟಿಯಿಂದ ಉತ್ತಮ ಪುರುಷ ಮಧ್ಯಮ ಪುರುಷಗಳ ಎಲ್ಲ ವರ್ತಮಾನ ರೂಪಗಳಿಗೂ ನಿಷ್ಪತ್ತಿಯನ್ನು ತೊಡಕಿಲ್ಲದೆ ಹೇಳುವುದು ಕಷ್ಟ. ಆದರೆ ಹೊಸಗನ್ನಡದಲ್ಲಿ ವರ್ತಮಾನಕಾಲ ರೂಪದ ಬೆಳವಣಿಗೆಗೆ ಒಂದೇ ಸಾಧನವಿದ್ದಿರಲಾರದು. ಸಾಮ್ಯ (Analogy), ಸ್ವರ ಸಾಮ್ಯ (Vocalic Harmony) ಗಳ ಪ್ರಭಾವವು ಅದರಲ್ಲಿ ಬಹಳ ಮಟ್ಟಿಗೆ ತೋರಿರಬೇಕು. ಆದರೆ ಈ ಚರ್ಚೆ ಇಲ್ಲಿ ಅಪ್ರಕೃತ.

ಇಲ್ಲಿ ನಮ್ಮ ಚರ್ಚೆಗೆ ವಿಷಯವಾದ 'ಇದೆ', 'ಇವೆ', 'ಅದೆ', 'ಅವೆ', 'ಅವನೆ', 'ಅವಳೆ', 'ಅವರೆ' (*'ಇವೆನ' *'ಇವಳೆ' *'ಇವರೆ')—ಎಂಬೀ ಸರ್ವನಾಮ ಕ್ರಿಯೆಗಳಲ್ಲಿ ಎಲ್ಲವೂ ಮೊದಮೊದಲು ಬಳಕೆಯಲ್ಲಿದ್ದಿರಬಹುದು. ಇವುಗಳಲ್ಲಿ 'ಇದೆ', 'ಇವೆ'— ಈ ಎರಡು ಮಾತ್ರ ಗ್ರಂಥಗಳಲ್ಲೂ ಪ್ರಚುರವಾಗಿ ಮಿಕ್ಕವು ಆಡುವ ಮಾತಿನಲ್ಲೇ ಅಲ್ಲಲ್ಲಿ ಉಳಿದುಹೋಗಿರಬೇಕು.

ಈ 'ಇದೆ', 'ಇವೆ' ಎಂಬುವು ಸ್ವತಂತ್ರವಾಗಿ ಬಂದಾಗ 'ಉಂಟು' ಎಂಬ ಅರ್ಥವನ್ನು ಕೊಡುತ್ತವೆ. ವರ್ತಮಾನ ಕೃದಂತ, ಭೂತ ಕೃದಂತಗಳೊಡನೆ, 'ಬರುತ್ತಿದೆ', 'ಬಂದಿವೆ'—ಈ ರೀತಿಯಾಗಿ ಬಂದಾಗ ಅನುಕ್ರಮವಾಗಿ ಇಂಗ್ಲಿಷಿನ Present Imperfect (="Is coming"), Present Perfect (="Have come") ಎಂಬ ಕಾಲಗಳ ಅರ್ಥವನ್ನು ಕೊಡುತ್ತವೆ.

೨

'ಇದೆ', 'ಇವೆ' ಮೊದಲಾದ ಕ್ರಿಯಾರೂಪಗಳ ನಿಷ್ಪತ್ತಿ—ಪ್ರತ್ಯುತ್ತರ*

೧. 'ಇದೆ', 'ಇವೆ' ಮೊದಲಾದ ಕೆಲವು ಕ್ರಿಯಾರೂಪಗಳ ವಿಚಾರ—(ಕ. ಸಾ. ಪರಿಷತ್ಪತ್ರಿಕೆ, XV. ೪ : ಜನವರಿ ೧೯೩೧)

---

* ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆ, ಜನವರಿ, ೧೯೩೨.

೨. ಇದೆ, ಇವೆ ಮೊದಲಾದ ಕ್ರಿಯಾರೂಪಗಳ ಹುಟ್ಟು ಯಾವುದು?—ಲೇಖಕರು : ಶ್ರೀಮರ್ಾ ವೆಂಕಟೇಶ ಪ್ರಭು (ಕ. ಸಾ. ಪರಿಷತ್ಪತ್ರಿಕೆ, XVI. ೨ : ಜೂಲೈ ೧೯೩೧)

ಮೇಲೆ ಕಂಡ ಲೇಖನಗಳಲ್ಲಿ ಮೊದಲನೆಯದರೊಳಗೆ ನಾನು ಸ್ಥಾಪಿಸಲು ಹೊರಟ ಅಂಶವನ್ನೂ, ಪ್ರಾಸಂಗಿಕವಾಗಿ ನಿರೂಪಿಸಿದ ಕೆಲವು ಅಭಿಪ್ರಾಯಗಳನ್ನೂ ವಿರೋಧಿಸಿ ಶ್ರೀಮಾನ್ ವೆಂಕಟೇಶ ಪ್ರಭುಗಳು ತಮ್ಮ ಲೇಖನವನ್ನು ಬರೆದಿದ್ದಾರೆ. ನನ್ನ ವಾದದ ಮೇಲೆ ಅವರು ತಂದಿರುವ ಆಕ್ಷೇಪಣೆಗಳಿಗೆ ಸಮಾಧಾನವನ್ನು ಹೇಳುವುದೇ ಈ ಪ್ರತ್ಯುತ್ತರದ ಮುಖ್ಯೋದ್ದೇಶ. ವ್ಯಾಕರಣವನ್ನು ಕುರಿತ ಚರ್ಚೆಗಳು ಶುಷ್ಕವಾಗತಕ್ಕ ಸಂಭವವೇ ಹೆಚ್ಚು. ಆದರೂ ಶ್ರೀಮಾನ್ ಪ್ರಭುಗಳ ಖಂಡನೆಯಲ್ಲಿ ನನ್ನ ಪಕ್ಷವನ್ನು ಬಾಧಿಸುವಷ್ಟು ಕಾರಣಗಳಿಲ್ಲವೆಂದು ಮನವರಿಕೆಯಾದದ್ದರಿಂದಲೂ, ಅವರು ಪ್ರತಿಪಾದಿಸಿರುವ ಅಂಶಗಳಲ್ಲಿ ಹಲವು ಚರ್ಚಾಸ್ಪದವೆಂದು ತೋರಿದ್ದರಿಂದಲೂ ನಾನು ತಟಸ್ಥಭಾವವನ್ನು ವಹಿಸದೆ ಈ ಉತ್ತರವನ್ನು ಕೊಡಬೇಕಾಯಿತು. ಶ್ರೀಮಾನ್ ಪ್ರಭುಗಳ ವಿಮರ್ಶೆಯನ್ನು ಪ್ರೇರಿಸಿದ "ಜಿಜ್ಞಾಸಾ ತೃಪ್ತಿ"ಯೇ ಈಗ ನನ್ನ ಲೇಖನಿಯನ್ನೂ ಚೋದಿಸುತ್ತಿದೆ. ಅವರಿಗೂ ನನಗೂ ಅಭಿಪ್ರಾಯಭೇದವು ವಿಶೇಷವಾಗಿ ಉಂಟು; ದೃಷ್ಟಿ ಭೇದವು ಕೂಡ ಉಂಟು. ಆದರೆ ಅವರ ಲೇಖನದಲ್ಲೆಲ್ಲಾ ವ್ಯಕ್ತವಾಗುವ ಸೌಜನ್ಯವನ್ನೂ ಶಾಸ್ತ್ರಪ್ರೇಮವನ್ನೂ ನಾನು ಮೊದಲಲ್ಲಿ ಮನಮುಟ್ಟಿ ಶ್ಲಾಘಿಸದೆ ಇರಲಾರೆ. ಇನ್ನು, ಈ ಲೇಖನದಲ್ಲಿ ನಾನು ತರಬಹುದಾದ ಟೀಕೆ ಖಂಡನೆಗಳು ಶಾಸ್ತ್ರ ವಿಚಾರವನ್ನು ಕುರಿತುವೇ ಹೊರತು ಅವುಗಳ ಉದ್ದೇಶ ವ್ಯಕ್ತಿ ವಿಮರ್ಶೆಯಲ್ಲವೆಂದು ಅವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಇದು, ಇವು, ಅದು ಮೊದಲಾದ ನಿರ್ದೇಶಕ ಸರ್ವನಾಮಗಳಿಗೆ (Demonstrative Pronouns) ನಿರ್ಧಾರಣಾರ್ಥದ – ಎ ಪ್ರತ್ಯಯವು ಹತ್ತಿ ಇದೆ, ಇವೆ, ಅದೆ ಮೊದಲಾದ ಕ್ರಿಯಾ ರೂಪಗಳು ತಲೆದೋರಿರಬೇಕು. ಇವು ಯಾವ ಕ್ರಿಯಾ ಧಾತುವಿನಿಂದಲೂ (ಉದಾ.—ಇರ್) ಹುಟ್ಟಿರಲಾರವು—ಎನ್ನುವುದೇ ನನ್ನ ವಾದದ ಸಾರಾಂಶ. ಶ್ರೀಮಾನ್ ಪ್ರಭುಗಳ ಅಭಿಪ್ರಾಯವು ಇದಕ್ಕೆ ಪೂರ್ಣ ವಿರುದ್ಧವಾಗಿದೆ. ಅವರ ಮತದಂತೆ, 'ಇದೆ' ಮೊದಲಾದ ರೂಪಗಳು ಸರ್ವನಾಮಗಳಿಂದ ಹುಟ್ಟುವುದು ಅಸಂಭವ; ಇರ್ ಧಾತುವಿನಿಂದ ನಿಷ್ಪನ್ನವಾದ ಇರ್ದಪುದು ಮೊದಲಾದ ಕ್ರಿಯಾಪದ ಗಳಿಂದ ಇವು ಪರಿಣಮಿಸಿರಬೇಕು.

ಶ್ರೀಮಾನ್ ಪ್ರಭುಗಳು ವೈಯಾಕರಣ ಸಂಪ್ರದಾಯವನ್ನು ತುಂಬ ಗೌರವಿಸ ತಕ್ಕವರು; ಅವರ ಲೇಖನವನ್ನು ಓದಿದ ಯಾರಿಗಾದರೂ ಇದು ವೇದ್ಯವಾಗುತ್ತದೆ. ಧಾತುವಿನ ಹಂಗೇ ಇಲ್ಲದೆ, ಸರ್ವನಾಮದಿಂದ ನೇರವಾಗಿ ಒಂದು ಕ್ರಿಯಾಪದವು ಸಿದ್ಧವಾಗುವುದು ಸಂಪ್ರದಾಯಕ್ಕೆ ಅಪರಿಚಿತವಾದ ವಿಷಯ. ನಾನು ಸೂಚಿಸಿರುವ ಈ ಬಗೆಯ ನಿಷ್ಪತ್ತಿ ಶ್ರೀಮಾನ್ ಪ್ರಭುಗಳಿಗೆ ಅಗ್ರಾಹ್ಯವಾಗುವುದಕ್ಕೆ ಅದರ ಸಂಪ್ರದಾಯ

ಬಾಹಿರತೆ ಸ್ವಲ್ಪ ಮಟ್ಟಿಗಾದರೂ ಕಾರಣವೆಂದು ತೋರುತ್ತದೆ. ಆದರೆ, ಸರ್ವನಾಮಗಳು ಕ್ರಿಯಾರ್ಥಕಗಳಾಗುವ ಸಂಗತಿ ಇದುವರೆಗೆ ವೈಯಾಕರಣರ ದೃಷ್ಟಿಗೆ ಬೀಳದ ಮಾತ್ರದಿಂದಲೇ ನನ್ನ ನಿಷ್ಪತ್ತಿ ಅಶಾಸ್ತ್ರೀಯವಾಗುತ್ತದೆಯೆ? ಭಾಷೆಯಲ್ಲಿರುವ ಪದ ರೂಪಗಳಿಗೆ ನಿಷ್ಪತ್ತಿಯನ್ನು ಕಲ್ಪಿಸುವುದು ವ್ಯಾಕರಣದ ಮುಖ್ಯ ಕಾರ್ಯಗಳಲ್ಲಿ ಒಂದು. ಪ್ರಯೋಗದಲ್ಲಿರುವ ರೂಪಗಳನ್ನು ಶೇಖರಿಸಿ, ವಿಂಗಡಿಸಿ, ಪರಸ್ಪರ ಸಂಬಂಧವನ್ನು ಗಮನಿಸಿ ವೈಯಾಕರಣನು ಅವುಗಳ ನಿಷ್ಪತ್ತಿಯನ್ನು ಊಹಿಸಬೇಕು. ಭಾಷೆಯ ಚರಿತ್ರೆ ಗೊತ್ತಿದ್ದರೆ—ಭಾಷೆಯಲ್ಲಿರುವ ವರ್ಣಗಳೂ ರೂಪಗಳೂ ಮೊದಲು ಹೇಗಿದ್ದುವು, ಮುಂದೆ ಹೇಗೆ ತಿರುಗಿದುವು, ಮತ್ತೆ ಹೇಗೆ ಪರಿಣಮಿಸಿದುವು ಎಂದು ಬೇರೆ ಬೇರೆಯ ಕಾಲಗಳಲ್ಲಿ ಭಾಷೆಗಿದ್ದ ಸ್ವರೂಪವು ಗೊತ್ತಿದ್ದರೆ—ಅವನ ತರ್ಕಕ್ಕೆ ಹೆಚ್ಚು ಸಾಧನವು ದೊರೆಯುತ್ತದೆ; ಅವನ ಊಹೆ ದೃಢವಾಗುತ್ತದೆ. ಇಷ್ಟಾದರೂ ಅವನ ಮಾರ್ಗ ಊಹೆಯೇ. ಒಂದು ರೂಪವು ಹೀಗೆಯೇ ಹುಟ್ಟಿತೆನ್ನುವುದನ್ನು ಕಣ್ಣಾರೆ ಕಂಡವರು ಯಾರುಂಟು? ಪ್ರಾಚೀನ ವೈಯಾಕರಣರು ತಮ್ಮ ಸಿದ್ಧಾಂತಗಳನ್ನು ಅಧಿಕಾರಯುಕ್ತವಾದ ವಾಣಿಯಿಂದ ಸೂತ್ರಿಸಿದ್ದರೂ ಅವರು ಅವಲಂಬಿಸಿದ ಮಾರ್ಗವೂ ಊಹೆಯೇ. ಹಿಂದಿನವರ ಯುಕ್ತಿಗೂ ಪಾಂಡಿತ್ಯಕ್ಕೂ ಪೂರ್ಣ ಗೌರವವನ್ನು ಕೊಡೋಣ; ಆದರೆ ಹೊಸ ಅಂಶಗಳು ಗೋಚರಿಸಿ, ಹೊಸ ಬೆಳಕು ನಮ್ಮ ಕಣ್ಣನ್ನು ತೆರೆದಲ್ಲಿ ಅವರ ಸಿದ್ಧಾಂತಗಳನ್ನು ಮೀರಿ ಹೋಗುವುದಕ್ಕೂ ಹಿಂಜರಿಯದಿರೋಣ. ಶಾಸ್ತ್ರವು ಬೆಳೆಯುವುದು ಹೀಗೆ ತಾನೆ. ಅಲ್ಲದೆ, ಪ್ರಾಚೀನರು ರೂಪ ನಿಷ್ಪತ್ತಿಯಲ್ಲೂ ಶಬ್ದ ವರ್ಗೀಕರಣದಲ್ಲೂ ಕೆಲವು ಕಡೆಯಾದರೂ ತಪ್ಪು ಮಾಡಿಲ್ಲವೆ? ಸಂಸ್ಕೃತದ ಪಾಣಿನೀಯ ಸೂತ್ರಗಳಿಗೆ ಕೂಡ ಆಧುನಿಕ ವಿಮರ್ಶೆಯ ಕಾವು ತಟ್ಟದೆ ಹೋಗಿಲ್ಲ. ಆದ್ದರಿಂದ ಪ್ರಾಚೀನ ಪ್ರಕ್ರಿಯೆಗಳನ್ನು ಅಂಗೀಕರಿಸದಿದ್ದ ಮಾತ್ರಕ್ಕೆ "ವ್ಯಾಕರಣಮರ್ಯಾದೆಯ ಅವಹೇಳನ"ವಾಯಿತೆಂದು ಅಂಜದೆ, ಸಂಪ್ರದಾಯಕ್ಕೆ ಮೆಚ್ಚುವ ನಿಷ್ಪತ್ತಿಗಳನ್ನು ಕ್ಲೇಶಪಟ್ಟಾದರೂ ಹುಡುಕದೆ, ಯುಕ್ತಿ ಸಮ್ಮತವಾದ ವಿಚಾರ ಸರಣಿಯನ್ನು ಅವಲಂಬಿಸೋಣ. ಹಾಗೆ ನಾವು ಕಂಡುಹಿಡಿಯುವ ನಿಷ್ಪತ್ತಿ ಪ್ರಕ್ರಿಯೆಗಳು ದೊರೆತಿರುವ ಪ್ರಯೋಗಗಳಿಗೆ ಅನ್ವಯಿಸಿ, ಭಾಷೆಯ ಗತಿಗೂ ಚರಿತ್ರೆಗೂ ಅನುಗುಣವಾಗಿ, ವಿಚಾರಕ್ಕೆ ಒಪ್ಪುವಂತಿದ್ದರೆ ಸರಿ.

ಇನ್ನು ಪ್ರಕೃತ ಚರ್ಚೆಯ ಕಡೆಗೆ ತಿರುಗಬಹುದು. ದ್ರಾವಿಡ ಭಾಷೆಗಳು ಸಂಯೋಜಕ ಭಾಷೆಗಳು (Agglutinative Languages). ಇವುಗಳಲ್ಲಿ ಪ್ರಕೃತಿ ಪ್ರತ್ಯಯಗಳಿಗೆ ನೀರ ಕ್ಷೀರ ಸಂಬಂಧವಿಲ್ಲ; ಅವರೆಡನ್ನೂ ಸುಲಭವಾಗಿ ಪ್ರತ್ಯೇಕಿಸಬಹುದು. ಅಲ್ಲದೆ, ಪ್ರತ್ಯಯಗಳಿಗೂ ಮೊದಲಲ್ಲಿ ಸ್ವತಂತ್ರವಾದ ಅರ್ಥ ಪ್ರಯೋಗಗಳಿದ್ದುವು. ಈ ಅಂಶವನ್ನು, ದ್ರಾವಿಡ ಭಾಷೆಗಳಲ್ಲಿ ಸರ್ವನಾಮ ಪ್ರಕೃತಿಗಳೇ ಯಥಾ ಸಂಭವವಾಗಿ ಆಖ್ಯಾತ ಪ್ರತ್ಯಯಗಳಾಗಿರುವುದರ ಜೊತೆಗೆ ನೆನೆಯಬೇಕು. (ಉದಾಹರಣೆಗೆ, ನಮ್ಮ ಚರ್ಚೆಗೆ ವಿಷಯವಾಗಿರುವ 'ಅದೆ, ಅವೆ' ಎಂಬಿವೇ ಹೊಸಗನ್ನಡದಲ್ಲಿ ವರ್ತಮಾನ ಕಾಲಕ್ಕೆ ನಪುಂಸಕ ಲಿಂಗದ ಪ್ರತ್ಯಯಗಳೂ ಆಗಿಲ್ಲವೆ?) ಇಷ್ಟೇ ಅಲ್ಲ. ಈ ವರ್ಗದ

ಭಾಷೆಗಳಲ್ಲಿ ನಿಜವಾದ ಕ್ರಿಯಾ ಪದವಿಲ್ಲವೆಂದೂ, 'ಬಂದನ್' ಎಂಬ ಕ್ರಿಯಾಪದಕ್ಕೆ ನ್ಯಾಯವಾಗಿ 'ಬಂದ ಅವನ್' (=ಬಂದ ವ್ಯಕ್ತಿ) ಎಂದು ಮೂಲಾರ್ಥವೆಂದೂ ಭಾಷಾತತ್ತ್ವಜ್ಞರು ಹೇಳುತ್ತಾರೆ. ಬಂದುದು, ಬರ್ಪುದು ಮೊದಲಾದುವು ಏಕ ರೀತಿಯಲ್ಲಿ ಕ್ರಿಯಾಪದವೂ ಆಗುತ್ತವೆ; ಕೃದಂತವೂ ಆಗುತ್ತವೆ. ಇದೆಲ್ಲವನ್ನೂ ಪರ್ಯಾಲೋಚಿಸಿದರೆ ನನ್ನ ವಾದವು ಭಾಷಾ ಸಂಪ್ರದಾಯಕ್ಕೆ ವಿರುದ್ಧವೆನಿಸಲಾರದು, "ವಸ್ತು ಸ್ಥಿತಿಯನ್ನು ಬಿಟ್ಟು ದೂರ ಹೋಗುವಂತೆ" ತೋರಲಾರದು. ಧಾತುವಿಗೆ ಲಿಂಗ ಪುರುಷ ಸಂಜ್ಞೆಗಳನ್ನು ಕೊಟ್ಟು ಅದನ್ನು ಕ್ರಿಯಾಪದವನ್ನಾಗಿ ಮಾಡತಕ್ಕ ಸರ್ವನಾಮವು ಸ್ವತಂತ್ರವಾಗಿ ನಿಂತು ಕೇವಲ ಅಸ್ತಿತ್ವವನ್ನು ಸೂಚಿಸುವುದು ಅಷ್ಟು ಅಸಂಭವವೆ? ಇದೆ, ಇವೆ, ಅದೆ, ಅವೆ, ಅವನೆ, ಅವಳೆ, ಅವರೆ, *ಇವನೆ, *ಇವಳೆ, *ಇವರೆ ಎಂಬೀ ಕ್ರಿಯಾರ್ಥಕಗಳಿಗೂ ಇದು, ಇವು, ಅದು, ಅವು, ಅವನ್ (ನು), ಅವಳ್ (ಳು), ಅವರ್ (ರು), ಇವನ್ (ನು), ಇವಳ್ (ಳು), ಇವರ್ (ರು) ಎಂಬೀ ನಿರ್ದೇಶಕ ಸರ್ವನಾಮಗಳಿಗೂ ಇರತಕ್ಕದ್ದು "ಬರಿಯ ರೂಪ ಸಾದೃಶ್ಯ"ವಲ್ಲ; ಪೂರ್ಣವಾದ ಅರ್ಥಸಾದೃಶ್ಯವೂ ಇದೆ. 'ಇದು' ಎಂಬ ಸರ್ವನಾಮಕ್ಕೆ –ಎ ಎಂಬ ನಿರ್ಧಾರಣಾರ್ಥದ ಪ್ರತ್ಯಯವು ಹತ್ತಿ ಉಂಟಾದ 'ಇದೆ' ಎಂಬ ರೂಪವು ಸಹಜವಾಗಿ ಕ್ರಿಯಾರ್ಥಕವಾಗಬಹುದು. 'ಮನೆ ಇದು' ಎಂದು ನಿರ್ದೇಶಿಸುವಾಗ ಅರ್ಥವನ್ನು ದೃಢಪಡಿಸುವುದಕ್ಕಾಗಿ –ಎ (ಏ) ಎಂಬ ನಿರ್ಧಾರಣಾ (ಅವಧಾರಣಾ) ವಾಚಿ ಹತ್ತಿ 'ಮನೆ ಇದೆ (ಇದೇ)' ಎಂದಾಗುವುದಷ್ಟೆ. ಈ ನಿರ್ಧಾರಣಾ ವಾಚಿಗಳು ಅರ್ಥ ಹೀನವಾಗುವುದು ಬಲು ಸಾಮಾನ್ಯ. ಹಳಗನ್ನಡದ ಅಂತು ಎಂಬುದರ ಸಾಮಾನ್ಯಾರ್ಥ ವನ್ನೇ ಹೊಸಗನ್ನಡದಲ್ಲಿ 'ಅಂತೆ' (=ಅಂತು+ಎ) ಕೊಡುತ್ತಿದೆ. ಅವನೇಯೆ, ಅದೇಯೆ ಎಂಬ ಕಡೆಗಳಲ್ಲಿ ಎರಡೆರಡುಸಲ ಅವಧರಿಸಿದರೂ ನಮಗೆ ತೃಪ್ತಿ ಇನ್ನೂ ಸಾಲದು. ತಮಿಳಿನಲ್ಲಿ –ಏ ಎಂಬುದು ಎಷ್ಟೋ ಕಡೆ ಹೊಸಗನ್ನಡದ –ಉಕಾರದಂತೆ ಸುಖೋಚ್ಚಾರಣೆಯ ಸಾಧನವಾಗಿಬಿಟ್ಟಿದೆ. ಹೀಗೆಯೇ, 'ಮನೆ ಇದೆ' ಎಂಬ ವಾಕ್ಯದಲ್ಲಿ ಅವಧಾರಣೆಯ ಭಾವ ಬೇಗ ಲುಪ್ತವಾಗಿರಬೇಕು. ಇನ್ನು, ಈ ವಾಕ್ಯದಲ್ಲಿ ಉಳಿದದ್ದು ನಿರ್ದೇಶನದ ಭಾವ ಮಾತ್ರ, ನಿರ್ದೇಶನದ ಉದ್ದೇಶ ಅಸ್ತಿತ್ವ ಸ್ಥಾಪನೆ ತಾನೆ. ಈ ರೀತಿಯಲ್ಲಿ ಇದೆ ಎಂಬುದು ಕಾಲಕ್ರಮದಲ್ಲಿ ಕೇವಲ ಅಸ್ತಿತ್ವ ವಾಚಕವಾಗುವುದು ಅಶಕ್ಯವಲ್ಲ.—ಈ ವಿವರಣೆ ಸಹಜವೆಂದು ತೋರುವ ಪಕ್ಷದಲ್ಲಿ, ಇದೆ, ಇವೆ ಮೊದಲಾದುವುಗಳ ತಳಕ್ಕೆ ಒಂದು ಧಾತು ಇರತಕ್ಕದ್ದು ಅನಾವಶ್ಯಕವಾಗುತ್ತದೆ.

ಇದೆ, ಇವೆ, ಅದೆ, ಅವೆ ಮೊದಲಾದ ಉದಾಹೃತ ರೂಪಗಳೆಲ್ಲವೂ ಪ್ರಥಮ ಪುರುಷವಾಚಕಗಳು. ಮಧ್ಯಮ ಪುರುಷಕ್ಕೂ ಉತ್ತಮ ಪುರುಷಕ್ಕೂ (ಇವ್‌ರಿ, ಇವ್‌ನಿ ಎಂಬ ಗ್ರಾಮ್ಯರೂಪಗಳನ್ನು ಬಿಟ್ಟರೆ) ಅದೇ ತೂಕದ ರೂಪಗಳಿಲ್ಲ. "ಇದರಿಂದಲೂ ಇವು ಸರ್ವನಾಮ ಕ್ರಿಯೆಗಳೆಂದು ಹೇಳಲಿಕ್ಕೆ ಬಲ ಸಾಲದು" ಎಂದು ಶ್ರೀಮಾನ್ ಪ್ರಭುಗಳು ನಿರ್ಣಯಿಸುತ್ತಾರೆ. ಆದರೆ ಇದು ಸಂಗತವಲ್ಲ. ಈ ಕ್ರಿಯಾರ್ಥಕಗಳೆಲ್ಲ ನಿರ್ದೇಶಕ ಸರ್ವನಾಮಗಳಿಂದ (Demonstrative Pronouns) ಮಾತ್ರ ಹುಟ್ಟಿವೆ;

ವ್ಯವಹಾರದಲ್ಲಿರುವ ಪ್ರತಿಯೊಂದು ನಿರ್ದೇಶಕ ಸರ್ವನಾಮಕ್ಕೂ ಸಂವಾದಿಯಾಗಿ ಒಂದೊಂದು ಕ್ರಿಯಾರೂಪವು ದೊರೆತಿದೆ. ಪ್ರಥಮ ಪುರುಷದ ಸರ್ವನಾಮಗಳು ಮಾತ್ರ ನಿರ್ದೇಶಕಗಳು. ಉತ್ತಮ ಮಧ್ಯಮ ಪುರುಷಗಳ ಆನ್, ನೀನ್ ಮೊದಲಾದುವಕ್ಕೆ ಈ ಪ್ರಯೋಗವಿಲ್ಲ; ಅವು ಕೇವಲ ಪುರುಷ ವಾಚಕಗಳು (Personal Pronouns). ಆದ್ದರಿಂದಲೇ ಕ್ರಿಯಾರ್ಥಕಗಳು ಅವುಗಳಿಂದ ಹುಟ್ಟುವುದು ಅಸಂಭವವಾಯಿತು. ಇವ್‌ನಿ, ಇವ್‌ರಿ ಎಂಬ ರೂಪಗಳು ಕೂಡ ಇವನ್, ಇವರ್ ಎಂಬ ನಿರ್ದೇಶಕ ಸರ್ವನಾಮಗಳಿಂದಲೇ ಬಂದಿವೆ.[೧] ಇವುಗಳ ಜೊತೆಗೆ ಇವ್ವಿಲಿ ಎಂಬ ಉತ್ತಮ ಪುರುಷ ಬಹುವಚನಾರ್ಥದ ರೂಪವೂ ಗ್ರಾಮ್ಯ ಭಾಷೆಯಲ್ಲಿ ಉಂಟೆಂದು ಈಚೆಗೆ ತಿಳಿಯಿತು. ಇದರಂತೆಯೇ ಮಧ್ಯಮ ಪುರುಷದ ಏಕವಚನಕ್ಕೂ ಸದ್ಯಕ್ಕೆ ನಮಗೆ ತಿಳಿಯದ ಒಂದು ರೂಪವಿದ್ದೀತು.

ಇದೆ, ಇವೆ ಮೊದಲಾದುವು ಸರ್ವನಾಮಗಳಿಂದ ನಿಷ್ಪನ್ನವೆನ್ನುವ ಪಕ್ಷದಲ್ಲಿ ಅವುಗಳನ್ನು ಯಾವ ವರ್ಗಕ್ಕೆ ಸೇರಿಸಬೇಕೆಂಬ ಪ್ರಶ್ನೆ ಶ್ರೀಮಾನ್ ಪ್ರಭುಗಳಿಗೆ ತುಂಬ ಚಿಂತೆಯನ್ನು ಕೊಟ್ಟಿದೆ : ಸರ್ವನಾಮಗಳು ನಾಮವಾಚಕಗಳಲ್ಲಿ ಸೇರುವುದರಿಂದ ಈ ರೂಪಗಳನ್ನು "ನಾಮಧಾತು-ಘಟಿತ ಕ್ರಿಯಾಪದ"ಗಳೆಂದು ಕರೆಯಬಹುದಾದರೂ, ಇಲ್ಲಿ ಧಾತು ಯಾವುದು? ಪ್ರತ್ಯಯ ಯಾವುದು? ಹಾಗೆ ವಿಭಜಿಸುವುದು ಕಷ್ಟವಾದದ್ದರಿಂದ ಇವನ್ನು "ಅವ್ಯಯ ಕ್ರಿಯಾಪದ"ಗಳೆಂದು ಕರೆದರೆ, ಅವ್ಯಯದ ಮೂಲ ಶೋಧನೆ ಅಪ್ರಯೋಜಕವಾದ ಕಾರಣ,[೨] ಈ ವಾದವೇ ನಿರರ್ಥಕ

---

೧. *ಇವನೆ, *ಇವಳೆ, *ಇವರೆ—ಎಂಬೀ ರೂಪಗಳಿಗೆ ಪ್ರಯೋಗವಿನ್ನೂ ದೊರೆತಿಲ್ಲವಷ್ಟೆ. ಪ್ರಥಮ ಪುರುಷದ ಅರ್ಥವನ್ನು ಕೊಡಲು ಅವನೆ, ಅವಳೆ, ಅವರೆ ಮೊದಲಾದುವು ಇದ್ದುದರಿಂದ, ಮೇಲಿನ ರೂಪಗಳಿಗೆ ಆ ಕೆಲಸವು ಬೀಳದೆ, ಅವುಗಳನ್ನು ಉತ್ತಮ ಮಧ್ಯಮ ಪುರುಷಗಳ ಅರ್ಥದಲ್ಲಿ ಉಪಯೋಗಿಸುವ ಪ್ರವೃತ್ತಿ ಕೆಲವು ಕಡೆ ಹುಟ್ಟಿರಬಹುದು. *ಇವನೆ>ಇವ್‌ನಿ; *ಇವರೆ>ಇವ್‌ರಿ, ಇವ್ವಿ ಎಂಬುದರ ನಿಷ್ಪತ್ತಿ ಇಷ್ಟು ಸುಗಮವಲ್ಲ.

೨. ಆದರೆ, ವೈಯಾಕರಣರು ಅವ್ಯಯಗಳನ್ನು "ಅಖಂಡಕೋಟಿಗೆ" ಸೇರಿಸಿದ ಮಾತ್ರಕ್ಕೆ ಅವುಗಳಲ್ಲಿ ಒಂದಕ್ಕೂ ನಿಷ್ಪತ್ತಿಯೇ ಇಲ್ಲವೆ; ಅದನ್ನು ಹುಡುಕುವುದು ಅಪ್ರಯೋಜಕವೆ? ಕೇಶಿರಾಜನು ಅವ್ಯಯವೆಂದು ಕರೆಯುವ ಎಯ್ದೆ, ಮಿಗೆ ಎಂಬಿವಕ್ಕೆ ಎಯ್ದು, ಮಿಗು ಧಾತುಗಳು ಮೂಲವಲ್ಲವೆ? ಹೊಸಗನ್ನಡದಲ್ಲಿ ಅವ್ಯಯವೆನಿಸುವ ಸಾಕು, ಬೇಕುಗಳು ಸಾಲ್, ಬೇಡು ಧಾತುಗಳಿಂದ ಸಾಲ್ಗುಂ (ಬಹುಶಃ ಸಾಲ್ಕುಂ), ಬೇಟ್ಕುಂ ಎಂಬಿವುಗಳ ಮೂಲಕ ಬಂದಿಲ್ಲವೆ?

೩. ಇಲ್ಲಿ ಲಿಂಗ ವಚನ ಭೇದಗಳೆಂದರೆ ಏನು? ಇದೆ, ಇವೆ ಮೊದಲಾದ ರೂಪಗಳಲ್ಲಿ ಪ್ರತಿಯೊಂದರ ಮೂಲವೂ ಬೇರೆ ಬೇರೆ. ಈ ಮೂಲ ಸರ್ವನಾಮಗಳಿಗೆ ಲಿಂಗ ವಚನ ಭೇದಗಳುಂಟು. ಅಷ್ಟೇ ಹೊರತು, ಇದೆ ಎಂಬುದು ಉದಾಹರಣೆಗೆ ಮೂಲರೂಪವಾಗಿದ್ದು, ಅದು ಲಿಂಗ ವಚನ ವಶದಿಂದ ಮಿಕ್ಕ ರೂಪಗಳಾಗಿ ಪರಿಣಮಿಸುವುದಿಲ್ಲ. ಆದ್ದರಿಂದ ಈ ರೂಪಗಳನ್ನೆಲ್ಲ ಅವ್ಯಯಗಳೆಂದು ಕರೆಯಲು ಏನು ಅಡ್ಡಿ?
ಅಲ್ಲದೆ, ಅವ್ಯಯಗಳಿಗೆ ವಿಭಕ್ತಿ ಭೇದವೂ ಕೂಡದಷ್ಟೆ. ಹಾಗಾದರೆ, ಕೇಶಿರಾಜ ಭಟ್ಟಾಕಳಂಕ ರಿಬ್ಬರೂ ಅವ್ಯಯ ವರ್ಗದಲ್ಲಿ ಪರಿಗಣಿಸಿರುವ ಆಗಳಿಂಗೆ, ಆಗಳಿನ ಮೊದಲಾದ ರೂಪಗಳಲ್ಲಿ

ವಾಗುವುದಿಲ್ಲವೆ? ಅಲ್ಲದೆ, ಈ ರೂಪಗಳಲ್ಲಿ ಲಿಂಗ ವಚನ ಭೇದಗಳಿರುವಾಗ[1] ಇವನ್ನು ಅವ್ಯಯವೆಂದು ಕರೆಯುವುದು ತಾನೆ ಹೇಗೆ?—ಈ ನಾಮಕರಣದ ಚರ್ಚೆ ಹೇಗೆ ಫಲಿಸಿದರೂ ನನಗೆ ಚಿಂತೆಯಿಲ್ಲ. ಪ್ರಸಕ್ತ ರೂಪಗಳನ್ನು "ಸರ್ವನಾಮ ಧಾತುಕ" ಗಳೆಂದಾದರೂ ಕರೆಯಿರಿ, "ಅವ್ಯಯ ಕ್ರಿಯಾಪದ"ಗಳೆಂದಾದರೂ ಕರೆಯಿರಿ; ಎರಡೂ ಒಪ್ಪದಿದ್ದರೆ ಸುಮ್ಮನೆ "ಕ್ರಿಯಾರ್ಥಕ", "ಕ್ರಿಯಾ ಸ್ಥಾನೀಯ" (Pro-verb) ಎನ್ನಿರಿ. ನಮಗೆ ಮುಖ್ಯವಾದದ್ದು ಮೂಲವೇ ಹೊರತು ಹೆಸರಲ್ಲ.

ಇದುವರೆಗೆ, ಉದಾಹೃತ ರೂಪಗಳು ಸರ್ವನಾಮಗಳಿಂದ ಬಂದಿಲ್ಲವೆಂಬ ಆಕ್ಷೇಪಣೆಗೆ ಉತ್ತರ ಕೊಟ್ಟದ್ದಾಯಿತು. ಚರ್ಚೆ ಇಲ್ಲಿಗೆ ಮುಗಿಯಲಿಲ್ಲ. ಈ ರೂಪಗಳೆಲ್ಲವೂ 'ಇರ್' ಧಾತುವಿನಿಂದ ನಿಷ್ಪನ್ನವಾದುವೆಂದು ಸ್ಥಾಪಿಸಲು ಶ್ರೀಮಾನ್ ಪ್ರಭುಗಳು ಪ್ರಯತ್ನಮಾಡಿದ್ದಾರೆ. ಅವರ ವಾದವನ್ನು ಇನ್ನು ವಿಮರ್ಶಿಸಬೇಕಾಗಿದೆ.

ಅಸ್ತಿತ್ವವಾಚಿಗಳಾದ ಇನ್ನೂ ಹಲವು ರೂಪಗಳು ಭಾಷೆಯ ಹೊಳೆಯ ಮೇಲೆ ನಿಲುಗಡೆಯಿಲ್ಲದೆ ತೇಲುತ್ತಿವೆ. ಉದಾ.—ಇದ್ಧಾನೆ, ಇದ್ದಾನೆ, ಅಧಾನೆ, ಐದಾನೆ, ಅಯ್ತಿ— ಇತ್ಯಾದಿ. ಇವು ಸಕಲ ಲಿಂಗ ಪುರುಷ ವಚನಗಳಲ್ಲೂ ಉಂಟು. ಶ್ರೀಮಾನ್ ಪ್ರಭುಗಳು ಇವೆಲ್ಲವನ್ನೂ ಸಂಗ್ರಹಿಸಿ, ಇದೆ, ಇವೆ ಮೊದಲಾದುವುಗಳ ಜೊತೆಗೆ ಸೇರಿಸಿ ಎಲ್ಲವಕ್ಕೂ ಇರ್ ಧಾತುವೇ ಮೂಲವೆಂದು ತೋರಿಸಲು ಹೋಗಿದ್ದಾರೆ. 'ಇದೆ, ಇವೆ' ಮೊದಲಾದ ರೂಪಗಳಿಗೆ ಹಳಗನ್ನಡದಲ್ಲೇ ಪ್ರಯೋಗವುಂಟೆಂದು ಗೊತ್ತಾಗಿರುವುದರಿಂದ, 'ಇರುತ್ತದೆ, ಇರುತ್ತವೆ' ಮೊದಲಾದ ಹೊಸಗನ್ನಡದ ಕ್ರಿಯಾಪದಗಳ ಪ್ರಸಕ್ತಿಯನ್ನು ಬಿಟ್ಟು, ಇರ್ದಪುದು, ಇರ್ದಪುವು ಮೊದಲಾದ ಹಳಗನ್ನಡ ವರ್ತಮಾನ ಕ್ರಿಯೆಗಳಿಂದಲೇ ಶ್ರೀಮಾನ್ ಪ್ರಭುಗಳು ಈ ಎಲ್ಲ ರೂಪಗಳನ್ನೂ ಸಾಧಿಸಬೇಕಾಯಿತು. ಅವರು ಕೊಟ್ಟಿರುವ ರೂಪ ನಿಷ್ಪತ್ತಿಗಳನ್ನು ಪರಿಶೀಲಿಸೋಣ :—

(ಕ) **ಇರ್ದಪ್ಪನ್ ಎಂಬುದರಿಂದ ಇವನೆ**
ಇರ್ದಪ್ಪನ್>ಇರ್ಧಪನ್>ಇದ್ಧಪನ್,
ಇದ್ಧಪನ್>ಇದ್ಧವನ್>ಇವನ್,
ಇವನ್+ಎ=ಇವನೆ.

ಇಲ್ಲಿ ಹಲವು ಶಂಕೆಗಳು ಹುಟ್ಟುತ್ತವೆ. ಮೊದಲು, ಇರ್ದಪ್ಪನ್ ಎಂಬುದರ 'ದ'ಕಾರಕ್ಕೆ ಪದಮಧ್ಯದಲ್ಲಿ ಒಮ್ಮಿಂದೊಮ್ಮೆ ಮಹಾಪ್ರಾಣತ್ವವು (Aspiration) ಹೇಗೆ ಬಂದಿತು? 'ಪ್ಪ'ಕಾರದ ದ್ವಿತ್ವವು ಆಳಿದಾಗ ಅದಕ್ಕೆ ನಿಷ್ಕೃತಿ (Compensation)ಯಾಗಿ

ವಿಭಕ್ತಿ ಭೇದವಿಲ್ಲವೆ?—ಕನ್ನಡಕ್ಕೆ ಅನ್ವಯಿಸುವಾಗ ಅವ್ಯಯ ಶಬ್ದದ ಅರ್ಥವನ್ನು ಹಿಗ್ಗಲಿಸಬೇಕು. ಇಲ್ಲವಾದರೆ ಅನೇಕ ಪದಗಳನ್ನು ಅವ್ಯಯಗಳ ಪಟ್ಟಿಯಿಂದ ಕಿತ್ತುಹಾಕಬೇಕು. ಆಗಳಂಗೆ, ಆಗಳಿನ ಮೊದಲಾದುವನ್ನು ಭಟ್ಟಾಕಳಂಕನು ಸುಬಂತ ಪ್ರತಿರೂಪಕಾವ್ಯಯಗಳೆಂದು ಕರೆಯಬಹುದಾದರೆ, ಇದೆ, ಇವೆ ಮೊದಲಾದುವಕ್ಕೆ ತಿಙಂತ ಪ್ರತಿರೂಪಕಾವ್ಯಯಗಳೆಂಬ ಹೆಸರನ್ನು ನಾವು ಧೈರ್ಯದಿಂದ ಕೊಡಬಹುದಲ್ಲವೆ?

'ದ'ಕಾರವು ಮಹಾಪ್ರಾಣವಾಯಿತೆಂದು ಭಾವಿಸುವುದಕ್ಕೆ ಪ್ರತಿಬಂಧಕವಾಗಿ ಇರ್ದಪನ್ ಎಂಬ ರೂಪವು ಹಳಗನ್ನಡದಲ್ಲಿಯೇ ಇದೆ. ಅದಿರಲಿ; ಇರ್ಪನ್ ಎಂಬ ಹಳಗನ್ನಡದ ರೂಪವು ನಡುಗನ್ನಡದಲ್ಲಿ ಇಪ್ಪನು>ಇಹನು ಎಂದಾಗುವಂತೆ ಇರ್ದಪ್ಪನ್ ಎಂಬುದು ಇದ್ದಹನು ಎಂದು ತಿರುಗುವುದು ಸಾಧ್ಯವೇ ಹೊರತು ಅದು ಇದ್ಧವನ್ ಎಂದು ಆಗಿರಲಾರದು; ಇಂಥ ಪ್ರಯೋಗ ಎಲ್ಲಿಯೂ ದೊರೆತಿಲ್ಲ. ಆದರೆ, ಇದೂ ಹೋಗಲಿ. ಈ ಇದ್ಧವನ್ ಎಂಬುದರಿಂದ ಇವನ್ ಹೇಗೆ ಬಂದಿತು? 'ದ್ಧ' ಎಂಬ ಸಂಯುಕ್ತ ವ್ಯಂಜನವು ಗುರುತಿಲ್ಲದಂತೆ ಹೇಗೆ ಮಾಯವಾಯಿತು? ಭಾಷೆಗೆ ವ್ಯತ್ಯಾಸವು ಸಹಜ; ಆದರೆ ಆ ವ್ಯತ್ಯಾಸವು ವಿಶೃಂಖಲವಲ್ಲ. ಲೋಪಾಗಮಾದೇಶ ಪ್ರಕ್ರಿಯೆಗಳು ಅರ್ಥ ಪೂರ್ಣವಾದ ಸಮಂಜಸವಾದ ವಿಧಿಗಳಿಗೆ ಒಳಪಟ್ಟು ನಡೆಯುತ್ತವೆ. ಇಲ್ಲದಿದ್ದರೆ ಭಾಷಾಚರಿತ್ರೆ ಒಂದು ಶಾಸ್ತ್ರೀಯ ವಿಷಯವಾಗುತ್ತಿರಲಿಲ್ಲ. ಪ್ರಕೃತದ 'ದ್ಧ'ಕಾರವು ಪದಮಧ್ಯದಲ್ಲಿ ಸುರಕ್ಷಿತವಾಗಿದ್ದರೂ ಅದಕ್ಕೆ ಯಾವ ಭಾಷಾ ನಿಯಮದ ಸಿಡಿಲೆರಗಿ ದಗ್ಧವಾಯಿತು? ಇದು ಸ್ಪಷ್ಟವಾದ ಹೊರತು ಈ ವ್ಯುತ್ಪತ್ತಿಯನ್ನು ಅಂಗೀಕರಿಸುವುದು ಅಸಾಧ್ಯ.

(ಖ) **ಇರ್ದಪ್ಪನ್** ಎಂಬುದರಿಂದ **ಐಧಾನೆ, ಅಧಾನೆ** ಇತ್ಯಾದಿಗಳು—ಇರ್ದಪ್ಪನ್> ಇಧಾನೆ. ಈ ನಿಷ್ಪತ್ತಿಯನ್ನು ಶ್ರೀಮಾನ್ ಪ್ರಭುಗಳು ವಿಶದಪಡಿಸಿಲ್ಲ. ಆದರೂ ಅದನ್ನು ಒಪ್ಪಿಕೊಂಡು—ಇದು ಸರಿಯೆಂಬುದನ್ನು ಮುಂದೆ ತೋರಿಸಿದೆ—ಸಾಗೋಣ :

ಇಧಾನೆ>ಅ (ಉಚ್ಚಾರದ <u>ಬೆಂಬಲಕ್ಕಾಗಿ</u> ಆಗಮ)+ಇಧಾನೆ,
= ಅಇಧಾನೆ>ಐಧಾನೆ>ಐಧನೆ,
>ಐದನೆ (<u>ಗ್ರಾಂಥಿಕ ರೂಪ</u> : 'ಗೋವಿನ ಕಥೆ'ಯಲ್ಲಿ);
ಅಇಧಾನೆ>ಅಧಾನೆ (ಅಕಾರವು <u>ಇಕಾರವನ್ನು</u> ನುಂಗಿತು);
>ಹಾನೆ (ಇಲ್ಲಿ <u>ಅಕಾರಕ್ಕೂ</u> ಲೋಪ).

ಇಲ್ಲಿ, 'ಇಧಾನೆ' ಎಂಬುದನ್ನು ಉಚ್ಚರಿಸುವಾಗ 'ಇ'ಕಾರಕ್ಕೆ ಬೆಂಬಲವಾಗಿ 'ಅ'ಕಾರವು ಪದದ ಆದಿಯಲ್ಲಿ ಬರಲು ಏನು ಕಾರಣ? ಪದಾದಿಯ ಸ್ವರವು ಉರುಳುವ ಸಂಭವವೇ ಹೆಚ್ಚು. (ಉದಾ.—ಅಧಾನೆ>ಧಾನೆ>ಹಾನೆ.) ದ್ರಾವಿಡ ಭಾಷೆಗಳಲ್ಲಿ ಇ, ಉ ಮೊದಲಾದ ಸ್ವರಗಳು ಪದಾದಿಯಲ್ಲಿ ಬೆಂಬಲವನ್ನೇನೋ ಪಡೆಯುತ್ತವೆ. ಆದರೆ ಹಾಗೆ ಬರತಕ್ಕ ಆದ್ಯಾಗಮವು ಪ್ರಕೃತೋಚಿತವಾದ ಯ್ ಅಥವಾ ವ್ ಎಂಬ ವ್ಯಂಜನವೇ ಹೊರತು, (ಉದಾ.—ಇದು, ಊರು ಎಂಬುದನ್ನು ಯಿದು, ವೂರು ಎಂದು ಉಚ್ಚರಿಸುವುದನ್ನೂ, ಕೆಲವರು ಹೀಗೆಯೇ ಬರೆಯುವುದನ್ನೂ ಗಮನಿಸ ಬಹುದು.) ಎಂದಿಗೂ ಸ್ವರವಲ್ಲ; ಅದರಲ್ಲೂ 'ಅ'ಕಾರದಂಥ ವಿಜಾತೀಯ ಸ್ವರವಲ್ಲ. ಹೀಗೆ ಅಇಧಾನೆ ಎಂಬ ರೂಪದ ವ್ಯುತ್ಪತ್ತಿ ಅಸಿದ್ಧವಾಯಿತು.[೪]

---

೪. ಭಾಷೆಯಲ್ಲಿ ಅಇಧಾನೆ ಎಂಬ ರೂಪವೇ ಇದ್ದಂತಿಲ್ಲ; ಇದು ಕೇವಲ ವ್ಯಾಕರಣ ಜನ್ಯವೆಂದು ತೋರುತ್ತದೆ. ಅಯ್ದಾನೆ, ಐದಾನೆ ಎಂಬುವು ರೂಢಿಯ ರೂಪಗಳು; ಹಿಂದೆ ಗ್ರಾಂಥಿಕವಾಗಿದ್ದ ರೂಪ ಐದನೆ. ಇವುಗಳ ಮಾತು ಮುಂದೆ ಬಂದಿದೆ.

ಇನ್ನು ಈ ಅಇಧಾನೆ ಎಂಬುದರಿಂದ ಇಕಾರವು ಸಿಡಿದುಹೋಗಿ ಅಧಾನೆ ಮೊದಲಾದ ರೂಪಗಳು ಸಿದ್ಧಿಸುವುದೂ ಹೆಚ್ಚುಕಡಿಮೆ ಇಷ್ಟೇ ಅಸಂಭವ. ಅಕಾರವು ಇಕಾರವನ್ನು ನುಂಗುವುದು ಹೇಗೆ? ಒಂದು ವೇಳೆ, ಐದಾನೆ ಎಂಬುದೇ ಮೂಲ ರೂಪ, ಇದರ ಐಕಾರವು ಅಕಾರವಾಗಿ ಪರಿಣಮಿಸಿತು ಎಂದು ಹೇಳಿದರೆ, ಪದಾದಿಯಲ್ಲಿ ಐಕಾರದಿಂದ ಅಕಾರವು ಹುಟ್ಟುವುದಕ್ಕೆ ಭಾಷೆಯಲ್ಲಿ ಎಲ್ಲೂ ನಿದರ್ಶನವಿಲ್ಲ. ಹೀಗೆ, ಅಧಾನೆ ಮೊದಲಾದ ರೂಪಗಳು ಬಂದ ಬಗೆಯನ್ನು ಒಪ್ಪುವುದೂ ಅಸಾಧ್ಯ. ಇದೇ ತರ್ಕವನ್ನನುಸರಿಸಿ ಇವನೆ, ಇದೆ ಮೊದಲಾದುವುಗಳಿಂದ ಅವನೆ, ಅದೆ ಎಂಬುವನ್ನು ಸಾಧಿಸುವುದೂ ಅಸಮ್ಮತವಾಗುತ್ತದೆ. ಸಾಲದ್ದಕ್ಕೆ, ಇವನೆ, ಇದೆ ಗಳಿಂದ ಹೊರಡಬೇಕಾದ ಅಇವನೆ, ಅಇದೆ ಗಳಿಗೆ ಪ್ರಯೋಗದ ಸೆಲೆಯಾದರೂ ಎಲ್ಲಿದೆ?

(ಗ) **ಇರ್ದಪುದು** ಎಂಬುದರಿಂದ **ಇಧೆ**, ಇದೆ ಇತ್ಯಾದಿಗಳು—

ಇರ್ದಪುದು>ಇದ್ದುದು,

ಇದ್ದುದು>ಇದ್ದದೆ (ಉದು **ಪ್ರತ್ಯಯಕ್ಕೆ** ಬದಲು-ಅದೆ),

ಇದ್ದದೆ>ಇಧೆ>ಇದೆ, ಅದೆ.

ಇಲ್ಲಿ, ಮೇಲಿನ ಆಕ್ಷೇಪಣೆಗಳು ಮತ್ತೆ ತಲೆಯೆತ್ತುತ್ತವೆ. ಇದ್ದುದು, ಇದ್ದದೆ ಎಂಬ ರೂಪಗಳಿಗೆ ಎಲ್ಲಿಯಾದರೂ ಪ್ರಯೋಗವುಂಟೆ ಎಂದು ಮೊದಲು ಕೇಳಬೇಕಾಗುತ್ತದೆ. ಇದ್ದುದು ಪ್ರಯೋಗದಲ್ಲಿದ್ದು ಲುಪ್ತವಾಗಿರಬಹುದೆಂದು ವಾದಕ್ಕಾಗಿ ಒಪ್ಪಿದರೂ ಅದರಿಂದ ಇದ್ದದೆ ಎಂಬುದು ಬರಲು ತಕ್ಕ ಕಾರಣವೇನು? ಹಳಗನ್ನಡದ - ಉದು ಪ್ರತ್ಯಯದ ಸ್ಥಾನದಲ್ಲಿ "ನುಡಿಗನ್ನಡ"ದ -ಅದೆ ಬಂದಿತು ಎಂದರೆ ಸಾಕೆ?

-ಅದೇ ಎಂಬ ಹೊಸಗನ್ನಡದ ಪ್ರತ್ಯಯದ ಹಿಂದೆ -ಉತ್ತ ಎಂಬ ಹೊಸ ವಿಕರಣವೂ ಬರಬೇಡವೆ? ಅಲ್ಲದೆ, ಇದ್ದವನ್>ಇವನ್ ಎಂಬ ನಿಷ್ಪತ್ತಿಯಲ್ಲಿರುವಂತೆಯೇ ಇದ್ದದೆ>ಇದೆ ಎಂಬಲ್ಲಿಯೂ 'ದ್ದ' ಏಕೆ ಉರುಳಿತೆಂದು ಮತ್ತೆ ಪ್ರಶ್ನೆ ಬರುವುದಿಲ್ಲವೆ? ಕೊನೆಗೆ, ಇದೆ>ಅದೆ ಎಂಬುದನ್ನು ಕುರಿತು ಈ ಮೊದಲೇ ಹೇಳಿದೆ.

ಹೀಗೆ ಹಿಂಡು ಹಿಂಡಾಗಿ ಹುಟ್ಟುತಕ್ಕ ಸಂಶಯಗಳನ್ನು ನೋಡಿದರೆ, ಈ ನಿಷ್ಪತ್ತಿಗಳು ಕ್ಲೇಶಜನ್ಯಗಳೆಂದೂ ಭಾಷಾ ಚರಿತ್ರೆಯ ದೃಷ್ಟಿಯಿಂದ ಅನುಪಾದೇಯಗಳೆಂದೂ ಹೇಳಬೇಕಾಗುತ್ತದೆ. ಶ್ರೀಮಾನ್ ಪ್ರಭುಗಳು ಈ ವಿವಿಧ ರೂಪಗಳಿಗಿರುವ ಅರ್ಥ ಸಾಮ್ಯದಿಂದ ಭ್ರಮಿಸಿ ಎಲ್ಲವನ್ನೂ ಒಂದೇ ಗುಡ್ಡೆಮಾಡಿ ಒಂದೇ ಮೂಲಕ್ಕೆ ಆರೋಪಿಸಿರುವುದು ಯುಕ್ತವಲ್ಲವೆಂದು ತೋರುತ್ತದೆ. ವಸ್ತುತಃ ಇವುಗಳನ್ನೆಲ್ಲ ವಿಂಗಡಿಸಿ ಕೆಳಗೆ ಕಂಡ ಮೂರು ವರ್ಗಗಳಿಗೆ ಸೇರಿಸುವುದು ಉಚಿತವೆನಿಸುತ್ತದೆ :—

		ಏಕವಚನ	ಬಹುವಚನ
I.	ಪ್ರಥಮ ಪು. ಪುಲ್ಲಿಂಗ	ಅವನೆ, * ಇವನೆ	ಅವರೆ, * ಇವರೆ
	ಸ್ತ್ರೀ.	ಅವಳೆ, * ಇವಳೆ	
	ನಪುಂ.	**ಅದೆ**, ಅಧೆ	**ಅವೆ**[೫]
		ಇದೆ, ಇಧೆ	**ಇವೆ**
	ಮಧ್ಯಮ ಪು.	. .	ಇವ್‌ರಿ
	ಉತ್ತಮ ಪು.	ಇವ್‌ನಿ	ಇವ್ವೀ

		ಏಕವಚನ	ಬಹುವಚನ
II.	ಪ್ರಥಮ ಪು. ಪುಲ್ಲಿಂಗ	**ಇದ್ದಾನೆ**, ಇದ್ಧಾನೆ ಇಧಾನೆ, ಇದಾನೆ ಅಧಾನೆ, ಅದಾನೆ ಹಾನೆ	**ಇದ್ದಾರೆ**, ಇದಾರೆ. ಅದಾರೆ ಹಾರೆ
	ಸ್ತ್ರೀ.	**ಇದ್ದಾಳೆ**, ಇದಾಳೆ[೬] ಅದಾಳೆ (ಹಾಳೆ)	
	ನಪುಂ.	ಹೌದು?	ಇದ್ದಾವೆ, ಇದಾವೆ ಹಾವು?
	ಮಧ್ಯಮ ಪು.	**ಇದ್ದೀಯೆ**, ಇದೀಯೆ (ಯ) ಇದ್ದೀ (ದ್ದಿ), ಇದೀ (ದಿ) ಅದೀ (ದಿ)	**ಇದ್ದೀರಿ**, ಇದೀರಿ ಅದೀರಿ
	ಉತ್ತಮ ಪು.	**ಇದ್ದೇನೆ**, ಇದೇನೆ ಅದೇನೆ ಇದೀನಿ, ಅದೀನಿ	**ಇದ್ದೇವೆ**, ಇದೇವೆ ಅದೇವೆ ಇದೀವಿ, ಅದೀವಿ
III.	ಪ್ರಥಮ ಪು. ಪುಲ್ಲಿಂಗ	ಅಯ್ದಾನೆ, ಐದಾನೆ ಐದನೆ	ಅಯ್ದಾದೆ, ಐದಾರೆ * ಐದರೆ
	ಸ್ತ್ರೀ.	ಅಯ್ದಾಳೆ, ಐದಾಳೆ ಐದಳೆ	
	ನಪುಂ.	ಅಯ್ತು, ಐತೆ ಅಯ್ತಿ, ಐತಿ	ಅಯ್ದಾವೆ, ಐದಾವೆ

---

೫. ಈ ಪಟ್ಟಿಗಳಲ್ಲಿ ಗ್ರಂಥ ಪ್ರಚುರವಾದ (ಹಿಂದೆ ಮತ್ತು ಈಗ) ರೂಪಗಳನ್ನು ದೊಡ್ಡ ಅಕ್ಷರದಲ್ಲಿ ಕೊಟ್ಟಿದೆ. ಅವೆ ಎಂಬುದಕ್ಕೂ ಗ್ರಾಂಥಿಕ ಪ್ರಯೋಗವುಂಟು :
"... ಶುಕಪಿಕಂ । ತೊಂಡುಗೆಡೆದುಱ್ ಕೂಗಲಳ್ಕಿ ನಮಿಸುತೆ ಭಯಂ ।
ಗೊಂಡು ಪಲ್ಗಿಱಿಯುತ್ತವೆ ದಾಳಿಂಬವಿನ್ನಾವಸಂತವೇಳೇಳೆಂದನು ॥"
(ಭಾವಚಿಂತಾರತ್ನ, iv. ೧೭)
ಇದೆ, ಇವೆ ಎಂಬುವಕ್ಕೆ 'ಗಿರಿಜಾ ಕಲ್ಯಾಣ'ದಲ್ಲಿ (ಉದಾ.— iv. ೬, ೭) ಸ್ವತಂತ್ರ ಪ್ರಯೋಗವೂ ದೊರೆಯುತ್ತವೆ. 'ಭಾವಚಿಂತಾರತ್ನ' ದಲ್ಲಿಯೂ ಉಂಟು (vii ೧೬.)

೬. ಪ್ರಥಮ ಪುರುಷ ಪುಲ್ಲಿಂಗದಲ್ಲಿ ಮಾತ್ರ ಎಲ್ಲ ರೂಪಗಳನ್ನೂ ಕೊಟ್ಟಿದೆ. ಮಿಕ್ಕ ಕಡೆಗಳಲ್ಲಿ, ವಿಸ್ತರ ಭಯದಿಂದ ಮಹಾಪ್ರಾಣ ಯುಕ್ತವಾದ ರೂಪಗಳನ್ನು ಬಿಟ್ಟು ಅಲ್ಪಪ್ರಾಣವುಳ್ಳವುಗಳನ್ನೇ ಕೊಡಲಾಗಿದೆ. ಬಿಟ್ಟಿರುವ ರೂಪಗಳನ್ನು ಪ್ರಥಮ ಪುರುಷ ಪುಲ್ಲಿಂಗದಲ್ಲಿರುವಂತೆ ಊಹಿಸಿಕೊಳ್ಳಬಹುದು.

I. ಇವುಗಳಲ್ಲಿ ಮೊದಲನೆಯ ವರ್ಗಕ್ಕೆ ಸೇರಿಸಿರುವ ರೂಪಗಳ ನಿಷ್ಪತ್ತಿಯೇ ಈ ನಮ್ಮ ಚರ್ಚೆಗೆಲ್ಲಾ ಮೂಲ. ಇದನ್ನು ಕುರಿತು ದೀರ್ಘವಾಗಿ ನಿರೂಪಿಸಿದ್ದಾಗಿದೆ. ಈ ರೂಪಗಳಲ್ಲಿ ಯಾವುದೂ ಕ್ರಿಯಾಧಾತುವಿನಿಂದ ಹುಟ್ಟಿದ್ದಲ್ಲ; ಎಲ್ಲವೂ ನಿರ್ದೇಶಕ ಸರ್ವನಾಮಜನ್ಯಗಳು. (ಇಧೆ, ಅಧೆ ಎಂಬಲ್ಲಿಯ ಮಹಾಪ್ರಾಣವನ್ನು ಕುರಿತು ಮುಂದೆ ಹೇಳಿದೆ.)

II. ಎರಡನೆಯ ವರ್ಗದ ರೂಪಗಳು ಮಾತ್ರ ಇರ್ ಧಾತುವಿನಿಂದಲೇ ಬಂದಿರ ತಕ್ಕವು. ಇವುಗಳ ನಿಷ್ಪತ್ತಿ ಸ್ವಾರಸ್ಯವಾಗಿದೆ. ಹೊಸಗನ್ನಡದ ಭೂತ ಭವಿಷ್ಯತ್ಕಾಲ ರೂಪಗಳು ಹಳಗನ್ನಡದ ಆಯಾ ರೂಪಗಳಿಂದ ಜನಿಸಿರುವಂತೆ ವರ್ತಮಾನ ಕಾಲದ ರೂಪಗಳು ಜನಿಸಿಲ್ಲವೆಂಬುದು ಭಾಷಾ ಚರಿತ್ರೆಯಲ್ಲಿ ಪ್ರಸಿದ್ಧವಾದ ವಿಷಯ. ಉದಾಹರಣೆಗೆ, ಇರ್ದುದು=ಇದ್ದುದು>ಇದ್ದಿತು; ಇರ್ಪುದು=ಇರುವುದು. ಆದರೆ, ಇರ್ದಪನ್ ಹಳಗನ್ನಡದ ವರ್ತಮಾನ ರೂಪ, ಇರುತ್ತಾನೆ ಹೊಸಗನ್ನಡದ ರೂಪ; ಇವೆರಡಕ್ಕೆ ಸಾದೃಶ್ಯವಿಲ್ಲ : –ದಪ ಎಂಬ ಹ.ಗ. ವರ್ತಮಾನ ವಿಕರಣಕ್ಕೂ, –ಉತ್ತ (–ಉತ) ಎಂಬ ಹೊ.ಗ. ವಿಕರಣಕ್ಕೂ ಯಾವ ಸಂಬಂಧವೂ ಇಲ್ಲ. ಹಾಗಾದರೆ, ಹಳಗನ್ನಡದ ವರ್ತಮಾನ ರೂಪದ ಸಂತತಿ ವಿಚ್ಛಿನ್ನವಾಯಿತೆ? "ಇಲ್ಲ" ಎಂದು ಭಾಷಾಚರಿತ್ರಜ್ಞರು ಉತ್ತರ ಕೊಡುತ್ತಾರೆ. ಹಳಗನ್ನಡದಲ್ಲಿಲ್ಲದ ಸಂಭಾವನಾ (ಸಂಶಯಾ)ರ್ಥವೆನ್ನುವುದು ಹೊಸಗನ್ನಡದಲ್ಲಿ ಪ್ರಚುರವಾಗಿದೆಯಷ್ಟೆ. ಇದೇ ಹಳಗನ್ನಡದ ವರ್ತಮಾನಕಾಲ ರೂಪದ ನಿಜವಾದ ಸಂತಾನ; ಅರ್ಥದಲ್ಲಿ ಮಾತ್ರ ಮೊದಲಿನ ನಿಶ್ಚಯವು ಕುಗ್ಗಿ ಸಂಶಯವು ಮೂಡಿದೆ, ಅಷ್ಟೆ. ಉದಾಹರಣೆಗೆ.—

ಇರ್ದಪನ್>ಇದ್ದಪನ್>ಇದ್ದಹನ್ (ನು) (ಪ>ಹ)
ಇದ್ದಹನು>*ಇದ್ಧಅನು (ಮಹಾಪ್ರಾಣತ್ವ ವಿಪರ್ಯಯದಿಂದ),
*ಇದ್ಧಅನು>ಇದ್ಧಾನು (ಅ+ಅ=ಆ)
ಇದ್ಧಾನು>**ಇದ್ದಾನು** (ಮಹಾಪ್ರಾಣತ್ವ **ಲೋಪವು** ಕನ್ನಡಕ್ಕೆ ಸಹಜ.)

ಹೀಗೆಯೇ ಬಂದಪನ್>ಬಂದಾನು, ಕಂಡಪೆವು>ಕಂಡೇವು; ಇತ್ಯಾದಿ. ಈ ರೀತಿಯಲ್ಲಿ, ಹಳಗನ್ನಡದ ವರ್ತಮಾನಕಾಲ ರೂಪವು ಬೇರೆಯ ಕಾಲುವೆಗೆ ತಿರುಗಲಾಗಿ,[೭] –ಉತ್ತ (–ಉತ) ಎಂಬ ವರ್ತಮಾನ ಕೃತ್ಪ್ರತ್ಯಯವನ್ನು ವರ್ತಮಾನ ವಿಕರಣವನ್ನಾಗಿಯೂ ಮಾಡಿಕೊಂಡು ಹೊಸಗನ್ನಡಕ್ಕೆ ಹೊಸ ವರ್ತಮಾನ ಕ್ರಿಯಾ ರೂಪಗಳನ್ನು ಕಲ್ಪಿಸಿಕೊಳ್ಳಬೇಕಾಯಿತು. (ಉದಾ: ಇರುತ್ತಾನೆ, ಬರುತ್ತೇನೆ, ಇತ್ಯಾದಿ.) ಈ ವಿಷಯವನ್ನು ಇನ್ನು ವಿವರಿಸುವುದು ನಮಗೆ ಅಪ್ರಕೃತ.

---

೭ ಹಳಗನ್ನಡದಲ್ಲಿಯೇ ಇರ್ದಪನ್ ಮೊದಲಾದುವುಗಳಲ್ಲಿ ಸಂಭಾವನಾರ್ಥದ ಧ್ವನಿಯಿದ್ದಿತೆಂದು ಕೆಲವರ ಅಭಿಪ್ರಾಯ.

ಹೊಸಗನ್ನಡಕ್ಕೆ ಇದೇ ಸಾಮಾನ್ಯ ನಿಯಮವಾದರೂ, ಇರ್ ಧಾತುವಿಗೆ ಮಾತ್ರ ಹಳೆಯ ವಾಸನೆ ಪೂರ್ಣವಾಗಿ ಬಿಡಲಿಲ್ಲ. ಇದ್ದಾನು, ಇದ್ದಾರು, ಇದ್ದೀರಿ, ಇದ್ದೇವು ಮೊದಲಾದ ಸಂಭಾವನಾ ರೂಪಗಳೂ, ಇರುತ್ತಾನೆ, ಇರುತ್ತಾರೆ, ಇರುತ್ತೀರಿ, ಇರುತ್ತೇವೆ ಮೊದಲಾದ ವರ್ತಮಾನ ರೂಪಗಳೂ ಮಿಕ್ಕ ಧಾತುಗಳಿಗಿರುವಂತೆಯೇ ಇಲ್ಲಿಯೂ ಕಾಣಬರುತ್ತವೆ. ಆದರೆ ವರ್ತಮಾನ ಕಾಲಕ್ಕೆ ಇದ್ದಾನೆ, ಇದ್ದಾರೆ, ಇದ್ದೀರಿ, ಇದ್ದೇವೆ ಮೊದಲಾದ ಪರ್ಯಾಯ ರೂಪಗಳೂ ಹೆಚ್ಚಾಗಿ ಇವೆ. ಇವು ಹಳಗನ್ನಡದ ಇರ್ದಪನ್ ಪ್ರಭೃತಿಗಳ ಔರಸ ಸಂತತಿಯೆನ್ನುವುದಕ್ಕೆ ಸಂದೇಹವೇ ಇಲ್ಲ. ಇದ್ದಾನು ಮೊದಲಾದ ರೂಪಗಳಿಗೆ ಸಂಶಯಾರ್ಥವೇ ಪ್ರಧಾನವಾಗುತ್ತಿದ್ದ ಕಾಲದಲ್ಲಿ ಅವುಗಳಿಂದ ನಿಶ್ಚಿತ ಕ್ರಿಯಾರ್ಥವನ್ನು ಮತ್ತೆ ಹೇಳಿಸಲು –ಎ ಎಂಬ ನಿರ್ಧಾರಣೆಯ ಪ್ರತ್ಯಯವು ಹತ್ತಿ ಇದ್ದಾನೆ (=ಇದ್ದಾನು+ಎ) ಮೊದಲಾದ ವರ್ತಮಾನ ಕ್ರಿಯಾ ರೂಪಗಳು ಹುಟ್ಟಿರಬೇಕು. ಇದ್ದೀಯೆ (ಇದ್ದೀ), ಇದ್ದೀರಿ ಎಂಬ ಮಧ್ಯಮ ಪುರುಷದ ರೂಪಗಳು ವರ್ತಮಾನ ಕಾಲ ಸಂಭಾವನಾರ್ಥಗಳೆರಡಕ್ಕೂ ಸಮಾನವಾಗಿವೆ. ಅಂತ್ಯ ಕಾಕುವಿನಿಂದ ಮಾತ್ರ ಕಾಲಾರ್ಥ ಭೇದವನ್ನು ಗ್ರಹಿಸಬೇಕಾಗಿದೆ.

ಇನ್ನು ನಮ್ಮ ಎರಡನೆಯ ವರ್ಗದ ರೂಪಗಳಿಗೆ ನಿಷ್ಪತ್ತಿಯನ್ನು ತೊಡಕಿಲ್ಲದೆ ಹೇಳಬಹುದು. ಉದಾಹರಣೆಗೆ—

ಇರ್ದಪನ್>ಇದ್ದಾನು>ಇದ್ದಾನು (ವಿವರವನ್ನು ಹಿಂದೆಯೇ ಕೊಟ್ಟಿದೆ),
  ಇದ್ದಾನು+ಎ=ಇದ್ದಾನೆ>ಇಧಾನೆ (ದ್ವಿತ್ವ ಶೈಥಿಲ್ಯದಿಂದ);
  ಇದ್ದಾನು+ಎ=ಇದ್ದಾನೆ>ಇದಾನೆ (");

ಇರ್ದಪಯ್>ಇದ್ದಪಯ್>ಇದ್ದಹಯ್, (ಇದ್ದಹ್ಯೆ, ಇದ್ದಹೆ),
  ಇದ್ದಹಯ್>*ಇದ್ದಅಯ್>*ಇದ್ದಾಯ್,
  *ಇದ್ದಾಯ್>*ಇದ್ದೀಯ್ (ಇಲ್ಲಿ ಯಕಾರ ಸಾಹಚರ್ಯದಿಂದ ಆ>ಈ; ಕಂಡೀಯೆ, ಬಂದೀಯೆ ಮೊದಲಾದ ರೂಪಗಳನ್ನು ಹೋಲಿಸಿ),
  *ಇದ್ದೀಯ್+ಎ>ಇದ್ದೀಯೆ>**ಇದ್ದೀಯೆ**;
  ಇದ್ದೀಯೆ>ಇದ್ದೀಯ (ಎ>ಅ);
    >ಇದ್ದೀ (ಯಕಾರ ಲೋಪ), ಇತ್ಯಾದಿ.

ಇರ್ದಪಿರ್>ಇದ್ದೀರಿ (ಇಲ್ಲಿ ಸ್ವರಸಾಮ್ಯದಿಂದ ಅಂತ್ಯದ–ಎಕಾರವು 'ಇ' ಆಗಿದೆ.)

ಈ ವರ್ಗದಲ್ಲಿ ಒಂದು ವಿಶೇಷವು ಕಣ್ಣಿಗೆ ಬೀಳುತ್ತದೆ : ಪ್ರಥಮ ಪುರುಷ ನಪುಂಸಕೈಕ ವಚನದಲ್ಲಿ ಹಾದು (?) ಎಂಬ ಅಪ್ರಚುರವಾದ ಗ್ರಾಮ್ಯ ರೂಪವನ್ನು ಬಿಟ್ಟರೆ ಬೇರೆ ಯಾವ ರೂಪವೂ ಇಲ್ಲ.[೮] ಬಹುವಚನದ ಇದ್ದಾವೆ ಮೊದಲಾದುವಕ್ಕೆ

೮. ಸಂಭಾವನಾರ್ಥದಲ್ಲಿ ಇದ್ದಾತು, ಇದ್ದೀತು ಎಂಬಿವು ಕ್ರಮವಾಗಿ ಗ್ರಾಮ್ಯ ಗ್ರಾಂಥಿಕ ರೂಪಗಳು. ಇವಕ್ಕೆ ಸಂವಾದಿಯಾಗಿ ವರ್ತಮಾನ ಕಾಲದಲ್ಲಿ ಗ್ರಾಮ್ಯ ರೂಪಗಳಾದರೂ ನಿಲ್ಲದಿರುವುದು ಅಶ್ಚರ್ಯಕರ.

ಕೂಡ ಗ್ರಾಂಥಿಕ ಪ್ರಯೋಗವಿಲ್ಲ; ಅವು ಗ್ರಾಮ್ಯ ಭಾಷೆಯಲ್ಲಿ ಕ್ವಚಿತ್ತಾಗಿ ಉಳಿದಿವೆ. ಮಿಕ್ಕ ಎಲ್ಲಾ ಲಿಂಗ ವಚನ ಪುರುಷಗಳಲ್ಲಿಯೂ ಗ್ರಾಂಥಿಕ ರೂಪಗಳುಂಟು. ಈ ವ್ಯತ್ಯಾಸಕ್ಕೇನು ಕಾರಣ? ಈಗ ಮೊದಲನೆಯ ವರ್ಗದ ಕಡೆಗೆ ಸ್ವಲ್ಪ ತಿರುಗೋಣ. ಅಲ್ಲಿ ಇದೆ (ಅದೆ), ಇವೆ (ಅವೆ) ಎಂಬ ನಪುಂಸಕ ಲಿಂಗದ ಏಕ ಬಹುವಚನ ರೂಪಗಳು ಮಾತ್ರ ಗ್ರಾಂಥಿಕಗಳು[೯]; ಮಿಕ್ಕವು ಗ್ರಾಮ್ಯವಾಗಿ ಮಾತ್ರ ಉಳಿದಿವೆ. ಈಗ ಈ ಎರಡು ವರ್ಗಗಳಿಂದಲೂ ಗ್ರಾಂಥಿಕ ರೂಪಗಳನ್ನು ಮಾತ್ರ ಬೇರ್ಪಡಿಸಿಕೊಂಡು ಜೋಡಿಸಿದರೆ ಪಟ್ಟಿ ಹೀಗೆ ತುಂಬಿಕೊಳ್ಳುತ್ತದೆ :—

	ಏಕವಚನ	ಬಹುವಚನ
ಪ್ರಥಮ ಪು. ಪುಲ್ಲಿಂಗ	ಇದ್ದಾನೆ	ಇದ್ದಾರೆ (II)
ಸ್ತ್ರೀ.	ಇದ್ದಾಳೆ	
ನಪುಂ.	ಇದೆ	ಇವೆ (I)
ಮಧ್ಯಮ ಪು.	ಇದ್ದೀಯೆ	ಇದ್ದೀರಿ (II)
ಉತ್ತಮ ಪು.	ಇದ್ದೇನೆ	ಇದ್ದೇವೆ (II)

ಸಂದರ್ಭ ಹೇಗೆ ನಡೆದಿರಬೇಕೆಂಬುದನ್ನು ಊಹಿಸುವುದು ಇನ್ನು ಕಷ್ಟವಲ್ಲ. ಎರಡನೆಯ ವರ್ಗದಲ್ಲಿ ಪ್ರಥಮ ಪುರುಷ ನಪುಂಸಕ ಲಿಂಗದ ರೂಪಗಳು ಮಾತ್ರ ವಿರಳ ಪ್ರಯೋಗದಿಂದಲೋ ಏಕ ಪ್ರಾಂತೀಯತೆಯಿಂದಲೋ ಗ್ರಾಮ್ಯವಾಗಿ ಪರಿಣಮಿಸಿದುವು. ಏಕವಚನದ ರೂಪಗಳಿಗೆ ಹಾಗೆ ನಿಲ್ಲುವ ಅದೃಷ್ಟವೂ ಇಲ್ಲದೆ ಹೋಯಿತು; ಅವುಗಳ ಸ್ಥಾನಕ್ಕೆ ಸಮಂಜಸವಾದ ಬೇರೆಯ ರೂಪಗಳು ಬರಬೇಕಾಯಿತು. ಈ ಗೌರವಕ್ಕೆ ಇದೆ, ಇವೆ ಎಂಬುದಕ್ಕಿಂತ ಹೆಚ್ಚು ಹಕ್ಕು ಮಿಕ್ಕ ಯಾವ ರೂಪಗಳಿಗೆ ಉಂಟು? ಇವು ಹೀಗೆ ಎರಡನೆಯ ವರ್ಗದ ಜೊತೆಯನ್ನು ಕಟ್ಟಿಕೊಂಡು ದೂರ ವಾದದ್ದರಿಂದ, ಮೊದಲೇ ದುರ್ಬಲವಾಗಿದ್ದ ಮೊದಲನೆಯ ವರ್ಗದ ಮಿಕ್ಕ ರೂಪಗಳಿಗೆ ಪುರಸ್ಕಾರವು ಎಂದಾದರೂ ಬರತಕ್ಕ ಆಶೆಯೇ ಉಳಿಯಲಿಲ್ಲ; ಅವು ಗ್ರಾಮ್ಯವಾಗಿಯೇ ನಿಂತುವು, ಸವೆಯುತ್ತಾ ಬಂದುವು, ಕೆಲವು ಅಳಿದೂಹೋದುವು. ಅಂತೂ, ವರ್ತಮಾನ ಕಾಲದಲ್ಲಿ ಅಸ್ತಿತ್ವವನ್ನು ಸೂಚಿಸಲು ಗ್ರಾಂಥಿಕ ರೂಪಗಳ ಒಂದು ಜೊತೆ (Set) ಎರಡು ವರ್ಗಗಳ ಸಹಕಾರದಿಂದ ಹೀಗೆ ಭರ್ತಿಯಾದ ಕೂಡಲೆ, ಉಳಿದ ಚಿಲ್ಲರೆಯ ರೂಪಗಳಿಗೆ ಎರಡರಲ್ಲೂ ಆವಶ್ಯಕತೆ ಕಡಮೆಯಾಯಿತು : ಅವುಗಳ ಪ್ರಾಬಲ್ಯ ಮಸುಳಿತು. ಊನವೋ ಅಪೂರ್ಣವೋ ಆದ ಬೇರೆ ಬೇರೆಯ ವರ್ಗಗಳಿಂದ ಹೀಗೆ ಹೊಸದೊಂದು ಜೊತೆಯನ್ನು ಕಟ್ಟುವುದು ಭಾಷಾ ಚರಿತ್ರೆಯಲ್ಲಿ ಅಪೂರ್ವವಲ್ಲ. ಸಂಸ್ಕೃತದಲ್ಲಿ ದೃಶ್, ಸ್ಪಶ್ (ಪಶ್ಯ್) ಧಾತು ರೂಪಗಳ ಸ್ಥಿತಿ ಹೀಗಾಗಿದೆ. ಇಂಗ್ಲಿಷಿನಲ್ಲಿ "to Be" ಧಾತ್ವರ್ಥವನ್ನು ಕೊಡುವ ರೂಪಗಳಲ್ಲಂತೂ ಒಂದೊಂದು ಒಂದೊಂದು ದಿಕ್ಕಿನಿಂದ ಬಂದದ್ದು.—ಹೀಗೆ, ಇರ್ ಧಾತು ನಿಷ್ಪನ್ನವಾದ ಇದ್ದಾನೆ, ಇದ್ದಾರೆ

೯. 'ಅದೆ, ಅವೆ' ಎಂಬಿವು ಕೂಡ ಹೊಸಗನ್ನಡದಲ್ಲಿ ಕೇವಲ ಗ್ರಾಮ್ಯಗಳಾಗಿವೆ.

ಮೊದಲಾದವುಗಳ ಜೊತೆಗೆ ಇದೆ, ಇವೆ ಎಂಬ ರೂಪಗಳು ಸೇರಿದ್ದರಿಂದಲೇ ಇವೂ ಇರ್ ಧಾತುವಿನಿಂದ ಬಂದಿರಬಹುದೆಂಬ ಭ್ರಮೆಯಾದರೂ ಹುಟ್ಟಲು ಆಸ್ಪದವಾಯಿತು.

ಇನ್ನು ಅಧಾನೆ, ಅದೇವೆ ಮೊದಲಾದ ಅಕಾರಾದಿ ರೂಪಗಳ ಬಗೆ ಹೇಗೆ? ಇವೆಲ್ಲವೂ ಇಧಾನೆ, ಇದೇವೆ ಮೊದಲಾದುವಕ್ಕೆ ಪರ್ಯಾಯ ರೂಪಗಳೆಂದು ತೋರುತ್ತದೆ. ಇದ್ಧಾನೆ, ಇದ್ದಾನೆ, ಇದ್ಧೇವೆ, ಇದ್ದೇವೆ ಎಂಬಿವು ಪ್ರಾಚೀನತರ ರೂಪಗಳೆಂದು ನೋಡಿದೆವಷ್ಟೆ. ಇವಕ್ಕೆ ಸಮನಾಗಿ ಅದ್ದಾನೆ, ಅದ್ದೇವೆ ಮೊದಲಾದುವು ಕಾಣಬರುವುದಿಲ್ಲ. ಅದಾನೆ, ಅದೇವೆ ಮೊದಲಾದುವೇ ಅಕಾರಾದಿಗಳಲ್ಲಿ ನಮಗೆ ಗೊತ್ತಿರತಕ್ಕ ಪ್ರಾಚೀನತಮ ರೂಪಗಳು. ಇದ್ಧಾನೆ, ಇದ್ಧೇವೆ ಎಂಬುವುಗಳ ವ್ಯಂಜನ ದ್ವಿತ್ವವು ಉಚ್ಚಾರ ಶೈಥಿಲ್ಯದಿಂದ ಏಕತ್ವಕ್ಕೆ ಆಡುವ ಭಾಷೆಯಲ್ಲಿ ತಿರುಗಿದ ಬಳಿಕ ಈ ಅಕಾರಾದಿ ರೂಪಗಳೆಲ್ಲ ತಲೆಯಿಟ್ಟಂತೆ ತೋರುತ್ತದೆ. ಹೀಗೆ ಊಹಿಸಲು ಅವಕಾಶ ವುಂಟು. ಇದೆ, ಇವೆ ಎಂಬ ರೂಪಗಳ ಸಂಪರ್ಕ ಸಾಹಚರ್ಯಗಳೇ ಇದ್ದಾನೆ, ಇದ್ದಾರೆ ಮೊದಲಾದುವುಗಳ ಶಿಥಿಲೋಚ್ಚಾರಣೆಗೆ ತಕ್ಕಮಟ್ಟಿಗೆ ಕಾರಣವಾಗಿರಬೇಕು; ಇದ್ದಾನೆ-ಇದ್ದಾಳೆ-ಇದೆ ಎಂಬ ಶ್ರೇಣಿಗಿಂತ ಇದಾನೆ-ಇದಾಳೆ-ಇದೆ ಎಂಬುದರಲ್ಲಿ ಧ್ವನಿ ಸಾಮರಸ್ಯವು ಹೆಚ್ಚಾಗಿದೆ. ಇನ್ನು, ಇದೆ, ಇವೆಗಳ ಬೆನ್ನಹಿಂದೆ ಅದೆ, ಅವೆಗಳೂ ಇದ್ದುವಷ್ಟೆ. ಅವುಗಳ ಸಾಮ್ಯದ (Analogy) ಮೇಲೆ ಎರಡನೆಯ ವರ್ಗದಲ್ಲೂ ಇದಾನೆ, ಇದಾರೆ ಎಂಬಿವಕ್ಕೆಲ್ಲಾ ಅದಾನೆ, ಅದಾರೆ ಮೊದಲಾದ ಅಕಾರಾದಿ ಪರ್ಯಾಯ ರೂಪಗಳು ಹುಟ್ಟಿರಬೇಕು. ಈ ಸಂಪರ್ಕದ ಪರಿಣಾಮವು ಇದೆ, ಅದೆಗಳಿಗೂ ತಟ್ಟದೆ ಹೋಗಲಿಲ್ಲ. ಇಧಾನೆ, ಅಧಾರೆ ಎಂಬ ಮಹಾಪ್ರಾಣ ಸಮೇತವಾದ ರೂಪಗಳಿಗೆ ಸರಿತೂಗುವುದಕ್ಕಾಗಿ ಇದೆ, ಅದೆಗಳಿಗೂ ಹೊಕ್ಕುಳು ಸೀಳಿ ಇಧೆ ಅಧೆಗಳು[೧೦] ಉದಿಸಿರಬೇಕು. ಹೀಗೆ ಸಾಮ್ಯ ವಿಧಿಗೆ ಅವಕಾಶವು ಹೆಚ್ಚಾಗಿ ದೊರೆತದ್ದೇ ಇಲ್ಲಿಯ ರೂಪಗಳ ಅತಿ ವೃದ್ಧಿಗೆ ಕಾರಣವೆಂದು ತೋರುತ್ತದೆ. ಸಾಮ್ಯಕ್ಕೆ ಕಣ್ಣುಂಟೇ ಹೊರತು ಮತಿಯಿಲ್ಲ; ಶಬ್ದಮೂಲವನ್ನು ಶೋಧಿಸಿ ವಿಚಾರಿಸಿ ಅದಕ್ಕೆ ಅನುಗುಣವಾಗಿ ಸಾಮ್ಯವು ಪ್ರವರ್ತಿಸುವುದಿಲ್ಲ : ರೂಪ ಸಾದೃಶ್ಯವೊಂದರ ಕಡೆಗೇ ಅದರ ದೃಷ್ಟಿ—ಮೇಲಿನ ವಿವರಣೆಯಲ್ಲಿ ಊಹೆಗೆ ಕಡಿವಾಣವು ಸ್ವಲ್ಪ ಸಡಿಲಿರುವಂತೆ ತೋರಬಹುದು; ಆದರೆ ಅಕಾರಾಗಮ ಇಕಾರ ಲೋಪಗಳ ವಿಧಿಗಿಂತ ಸಾಮ್ಯವಿಧಿಯಲ್ಲಿ ಸಂಭಾವ್ಯತೆ ಹೆಚ್ಚು.

---

೧೦. ಮಹಾಪ್ರಾಣವು ಅಲ್ಪಪ್ರಾಣಕ್ಕೆ ತಿರುಗುವುದೇ ದ್ರಾವಿಡ ಭಾಷೆಗಳ ಪದ್ಧತಿ. ಆದರೆ ಸಾಮ್ಯದ ಮೇಲೂ ಅವಧಾರಣೆಗಾಗಿಯೂ ಅಲ್ಪಪ್ರಾಣವಿದ್ದ ಕಡೆ ಮಹಾಪ್ರಾಣವು ತಲೆದೋರುವುದು ಅಪರಿಚಿತವಲ್ಲ. ಉದಾಹರಣೆಗೆ, ಗಾಳಿ>ಘಾಳಿ; ವಾಪೀ>ಬಾವಿ> <u>ಭಾವಿ</u>; ದೊರೆ>ಧೊರೆ. ಮಹಾಪ್ರಾಣವನ್ನು ಹೆಚ್ಚಾಗಿ ಉಪಯೋಗಿಸುವುದು ಸಿಸ್ತುಗಾರಿಕೆ ಯೆಂಬ ಭಾವ ಜನಸಾಮಾನ್ಯಕ್ಕೆ ಅಲ್ಲಲ್ಲಿ ಉಂಟು. ಇಧೆ, ಅಧೆ ಎಂಬ ರೂಪಗಳ ಬಳಕೆಗೆ ಇದೂ ಕಾರಣವಾಗಿರಬಹುದು. ಆದರೆ ವಾಸ್ತವವಾಗಿ, ಇಲ್ಲಿ ಚರ್ಚಿತವಾಗಿರುವ ಯಾವ ಮಹಾಪ್ರಾಣಯುಕ್ತ ರೂಪಕ್ಕೂ ರೂಢಿಯಲ್ಲಿ ಪ್ರಯೋಗವು ಅತಿ ವಿರಲ. ಸಂಭಾವನಾರ್ಥದಲ್ಲಿ ಕೂಡ ಕಂಡಾನು, ಬಂದೇವು ಎಂಬಂತೆ ರೂಪಗಳು ನಿಂತಿವೆಯೇ ಹೊರತು * 'ಕಂಧಾನು, ಬಂಧೇವು' ಎಂದು ಉಳಿದಿಲ್ಲ.

ಮತ್ತೊಂದು ಅಂಶವನ್ನು ಇಲ್ಲಿ ಸೂಚಿಸಬಹುದು. ಇರ್ ಧಾತುವಿಗೆ ಇದ್ದಾನೆ, ಇದ್ದಾರೆ ಮೊದಲಾದವುಗಳೇ ನಿಜವಾದ ವರ್ತಮಾನ ಕ್ರಿಯಾಪದಗಳಾಗಿ ಪರಿಣಮಿಸಿವೆ; ಇರುತ್ತಾನೆ, ಇರುತ್ತಾರೆ ಮೊದಲಾದುವು ಭವಿಷ್ಯತ್ಕಾಲಾರ್ಥಕ್ಕೇ ನಿಯತವಾಗುತ್ತಿರುವುದು ಆಡುವ ಭಾಷೆಯಲ್ಲಿ ಸ್ಫುಟವಾಗಿದೆ. ಉದಾಹರಣೆಗೆ, ಅವನು ಅಲ್ಲಿ ಇದ್ದಾನೆ=He is there; ಅವನು ಅಲ್ಲಿ ಇರುತ್ತಾನೆ=He will be there. ಮಿಕ್ಕ ಧಾತುಗಳಿಂದ ಹುಟ್ಟಿದ ಬರುತ್ತಾನೆ ಮೊದಲಾದ ರೂಪಗಳು ವರ್ತಮಾನ ಭವಿಷ್ಯತ್ಕಾಲಗಳೆರಡನ್ನೂ ಸೂಚಿಸುತ್ತವೆ. ಇರ್ ಧಾತುವಿಗೆ ಮಾತ್ರ ಎರಡು ಜೊತೆ ಗ್ರಾಂಥಿಕ ರೂಪಗಳಿರುವುದರಿಂದ ಅವೆರಡಕ್ಕೆ ಈ ಕೆಲಸವು ಹಂಚಿಕೆಯಾಗುತ್ತಿರುವಂತೆ ತೋರುತ್ತದೆ. ಭಾಷೆಗೆ ಮಿತವ್ಯಯದ ದೃಷ್ಟಿಯುಂಟು. ಒಂದೇ ಕೆಲಸಕ್ಕೆ ಹಲವು ಮಂದಿ ಕೆಲಸಗಾರರು ನಿಲ್ಲುವುದನ್ನು ಅದು ಬಹು ಕಾಲ ಸಹಿಸುವುದಿಲ್ಲ.

III. ಇನ್ನು ಉಳಿದದ್ದು ಮೂರನೆಯ ವರ್ಗ. ಇಲ್ಲಿಯ ರೂಪಗಳಲ್ಲಿ ಐದನೆ ಎಂಬುದು ದೊರೆಯತಕ್ಕದ್ದು 'ಗೋವಿನ ಕಥೆ'ಯಲ್ಲಿ ಮಾತ್ರವಲ್ಲ; 'ಹರಿಶ್ಚಂದ್ರ ಕಾವ್ಯ'ದಲ್ಲಿ,

> ಜನಪತಿ ಹರಿಶ್ಚಂದ್ರ ಬಂದು ನಮ್ಮಯ ತಪೋ
> ವನದೊಳ್ಕೆದನೆ. . . . (ಹ.ಕಾ. ಸಂಗ್ರಹ, iv. ೨೬)

ಎಂದು ಪ್ರಾಚೀನತರ ಪ್ರಯೋಗವಿದೆ. 'ಭಾವಚಿಂತಾರತ್ನ'ದಲ್ಲಿ,

> ಜೀಯ ಬಿನ್ನಪಮರಿದ ತಲೆಯ ಪಿಡಿದೊರ್ವಬಳ
> ಕಾಯಜ ವಿನಾಶನಂ ನೆನೆದು ಮೋಹಿಯಿಟ್ಟೊರಲಿ
> ಬಾಯಟಿಯುತ್ತೈದಳೆ ದಯಾಭರಿತ. . . . (ಭಾವಚಿಂ., viii. ೩೨)

ಎಂದು ಐದಳೆ ಎಂಬ ಸ್ತ್ರೀಲಿಂಗ ರೂಪವು ದೊರೆಯುತ್ತದೆ. ಬಹುಶಃ 'ಐದರೆ' ಎಂಬುದೂ ಗ್ರಾಂಥಿಕವಾಗಿದ್ದಿರಬಹುದು. ಮಿಕ್ಕುವು ಗ್ರಾಮ್ಯವೆಂದು ತೋರುತ್ತದೆ.

ಈ ರೂಪಗಳೆಲ್ಲಕ್ಕೂ ಮೂಲವು ಏನೆಂದು ಸರಿಯಾಗಿ ಗೊತ್ತಾಗಿಲ್ಲ. ಶ್ರವಣಬೆಳ್ಗೊಳದ ಪ್ರಾಚೀನ ಶಾಸನವೊಂದರಲ್ಲಿ (ಶ್ರ. ಬೆ. ಶಾಸನಗಳು, ದ್ವಿತೀಯ ಮುದ್ರಣ, ಸಂ. ೧೨)

> . . . . ಚರಿತ ಶ್ರೀ ನಾಮಧೇಯ ಪ್ರಭು ಮುನಿನ್ವ್ರತಗಳ್ನೋನ್ತು
> ಸೌಖ್ಯಸ್ಥನಾಯ್ದಾನ್

ಎಂಬ ಕಡೆ ಆಯ್ದಾನ್ ಎಂಬ ರೂಪವು ದೊರೆಯುತ್ತದೆ. ಈ ಆಯ್ದಾನ್ ಎಂಬುದರಿಂದಲೇ ಬಹುಶಃ ನಮ್ಮ ಐದನೆ ಬಂದಿರಬೇಕೆಂದು ಕೆಲವರು ಊಹಿಸುತ್ತಾರೆ. ಸಂಸ್ಕೃತದ 'ಭೂ' ಧಾತುವಿಗೆ ಇರು, ಆಗು ಎಂಬ ಅರ್ಥಗಳೆರಡೂ ಇರುವಂತೆ, ನಮ್ಮ 'ಆಗು' ಧಾತು ಇರ್ ಧಾತುವಿನ ಅರ್ಥವನ್ನು ಕೊಡಬಹುದೆಂದು ಒಪ್ಪೋಣ. ಆದರೆ ಅಯ್ದಾನ್ ಎಂಬುದು ಭೂತಕಾಲದ ರೂಪ (ನಪುಂಸಕ ಲಿಂಗದ ಆಯ್ತು ಎಂಬುದನ್ನು ಹೋಲಿಸಿ). ಇದು ಐದನೆ ಎಂಬ ವರ್ತಮಾನಕ್ರಿಯೆಯಾಗಿ ಹೇಗೆ ಮಾರ್ಪಡಬಲ್ಲುದು?

ಹಳಗನ್ನಡದಲ್ಲಿ ಎಯ್ದು (ಐದು), ಎಯ್ತರ್ (ಐತರ್) ಎಂಬ ಧಾತುಗಳಿವೆ; ಈ ಧಾತುಗಳ ಆದ್ಯ ಭಾಗವಾದ 'ಎಯ್' ಎಂಬುದೇ ಮೊದಲು ಸ್ವತಂತ್ರ ಧಾತುವಾಗಿದ್ದಿರಬಹುದು. (ಹ.ಗ. ದಲ್ಲಿರುವ ತಾಳ್, ತಾಳ್ದು; ತೂಳ್, ತೂಳ್ದು ಎಂಬೀ ಧಾತು ಯುಗ್ಮಗಳನ್ನು ಹೋಲಿಸಿ.) ಈ ಎಯ್ ಧಾತುವಿಗೆ ಆಗು, ಇರು ಎಂಬ ಅರ್ಥಗಳಿದ್ದಿರಬಹುದು. (ತಮಿಳಿನಲ್ಲಿ ಎಯ್ದು ಧಾತುವಿಗೆ 'ಸಂಭವಿಸು', 'ಉಂಟಾಗು' ಎಂಬ ಅರ್ಥಗಳುಂಟು; ಆ ಭಾಷೆಯಲ್ಲಿ ಎಯ್ ಎಂಬ ಧಾತುವೂ ಇದ್ದಂತಿದೆ.) ಒಂದು ವೇಳೆ, ಈ ಎಯ್ (ಅಯ್, ಐ) ಎಂಬ ಧಾತುವಿನಿಂದ ನಮ್ಮ ಐದಾನೆ (ಐದನೆ), ಐದಾಳೆ (ಐದಳೆ) ಮೊದಲಾದ ರೂಪಗಳು ಉದಿಸಿರಬಹುದೆ? (*ಎಯ್ದಪನ್>ಎಯ್ದಾನು+ಎ=ಎಯ್ದಾನೆ>ಅಯ್ದಾನೆ>ಐದಾನೆ>ಐದನೆ.) ಇದು ಬರಿಯ ಊಹೆ. ಸದ್ಯದಲ್ಲಿ ನಿಶ್ಚಿತವಾದ ಯಾವ ಅಭಿಪ್ರಾಯವನ್ನು ಪಡುವುದಕ್ಕೂ ಆಧಾರ ಸಾಲದು.

ಚರ್ಚೆಗೆ ತೆಗೆದುಕೊಂಡ ಕ್ರಿಯಾರೂಪಗಳ ಮೂಲವನ್ನೆಲ್ಲಾ ಯಥಾ ಮತಿ ಶೋಧಿಸಿದ್ದಾಯಿತು. ಇನ್ನು ಕೊನೆಯ ಎರಡು ಮಾತುಗಳು.—ಇವಳೆ, ಇವರೆ (ಅವಳೆ, ಅವರೆ) ಈ ಮೊದಲಾದ ಕಡೆಗಳಲ್ಲಿ "ಕೊನೆಗೆ ಸೇರಿದ 'ಎ'ಕಾರವು ನಿರ್ಧಾರಣಾರ್ಥಕವೇ ಎಂದು ಖಂಡಿತವಾಗಿ ಹೇಳುವುದಕ್ಕೆ ಧೈರ್ಯವಾಗದು. ಕನ್ನಡದಲ್ಲಿ ಎಲ್ಲ ಕ್ರಿಯಾಪದಗಳ ತುದಿಗೆ ಸೇರುವ ಐ (ಅಯ್, ಎಯ್) ಕಾರವೇ (ಉದಾ.—ಬಂದಪೆನ್ಯೆ, ಬಂದನ್ಯೆ, ಬರ್ಪನ್ಯೆ, ಬಾರ್‍ಯೆ, ಬಾರೆನ್ಯೆ) 'ಎ'ಕಾರವಾಗಿ ನಿಲ್ಲುವುದು ಅಸಂಭವನೀಯವಲ್ಲ" ಎಂದು ಶ್ರೀಮಾನ್ ಪ್ರಭುಗಳು ಬರೆದಿದ್ದಾರೆ. ಇದನ್ನು ಒಪ್ಪಲು ತೊಂದರೆಯುಂಟು. ಬಂದಪೆನ್ಯೆ, ಬಾರ್‍ಯೆ ಎಂಬಂತೆಯೇ ಬಂದಪೆನೌ, ಬಾರೌ ಎಂಬ ರೂಪಗಳಿಗೂ ಪ್ರಯೋಗವಿದೆ. ಇಲ್ಲಿ, ಶ್ರೋತೃ ಪುಂವಾಚಕವಾಗಿದ್ದಾಗ –ಐ (ಅಯ್) ಎಂಬುದೂ, ಸ್ತ್ರೀವಾಚಕವಾಗಿದ್ದಾಗ –ಔ (ಅವ್) ಎಂಬುದೂ ಕ್ರಿಯಾಪದಕ್ಕೆ ಹತ್ತತಕ್ಕದ್ದು ಸ್ಪಷ್ಟವಾಗಿದೆ. ಹೀಗಿರುವುದರಿಂದ ಶ್ರೋತೃವಿನ ಲಿಂಗ ವಿವಕ್ಷೆಯಿಲ್ಲದೆ ಸಾರ್ವತ್ರಿಕವಾಗಿ ಅವನೆ, ಅವಳೆ, ಇದೆ, ಇವೆ ಮೊದಲಾದುವುಗಳಲ್ಲಿ ಹತ್ತಿರುವ –ಎ ಪ್ರತ್ಯಯವು –ಐ ಎಂಬ ಪುಲ್ಲಿಂಗವಾಚಿಯಿಂದ ಬಂದಿರತಕ್ಕ ಸಂಭವ ಕಡಮೆ. ನಿರ್ಧಾರಣಾ(ಅವಧಾರಣಾ)ರ್ಥದ –ಎಕಾರವು ಹಳಗನ್ನಡದಲ್ಲಿ, ಹೊಸಗನ್ನಡದಲ್ಲಿ, ನಾಮಪದಕ್ಕೆ, ಗುಣವಚನಕ್ಕೆ, ಸರ್ವನಾಮಕ್ಕೆ, ಕಡೆಗೆ ಕ್ರಿಯಾಪದಕ್ಕೆ ಎಲ್ಲ ಕಡೆಯೂ ಭೇದವಿಲ್ಲದೆ ಹತ್ತುತ್ತದೆ. ಆದ್ದರಿಂದ ಮೇಲೆ ಕಂಡ ಸ್ಥಳಗಳಲ್ಲಿರುವುದು ನಿರ್ಧಾರಣಾರ್ಥದ –ಎಕಾರವೆಂದು ಭಾವಿಸುವುದೇ ವಿಹಿತ.

ಬರ್‌ತಿವ್‌ನಿ ಎಂಬುದಕ್ಕೆ ಅಪೂರ್ಣ ವರ್ತಮಾನ ಕಾಲದ (Present Imperfect) ಅರ್ಥವೂ ಬರ್‌ತೀನಿ ಎಂಬುದಕ್ಕೆ ಸಾಮಾನ್ಯ ವರ್ತಮಾನ ಕಾಲದ (Present Indefinite) ಅರ್ಥವೂ ಇರುವ ಕಾರಣ, ಬರ್‌ತಿವ್‌ನಿ > ಬರ್‌ತೀನಿ ಎಂಬ ಊಹೆ ಸರಿಯಲ್ಲವೆಂದು ಶ್ರೀಮಾನ್ ಪ್ರಭುಗಳು ಭಾವಿಸುತ್ತಾರೆ. ಆದರೆ


ಬರ್‌ತಿವ್‌ನಿ ಎಂಬುದರ ಅರ್ಥವನ್ನು ಹೀಗೆ ವ್ಯವಸ್ಥೆ ಮಾಡುವುದಕ್ಕೆ ರೂಢಿಯ ಮಾತಿನಲ್ಲಿ ಯಾವ ಆಧಾರವೂ ಕಾಣಿಸುವುದಿಲ್ಲ. ಬರ್‌ತಿವ್‌ನಿ, ಬರ್‌ತೀನಿ ಎಂಬುವುಗಳಲ್ಲಿ ಒಂದೊಂದನ್ನು ಜನಸಮುದಾಯದಲ್ಲಿ ಒಂದೊಂದು ವರ್ಗದವರು ಪ್ರಯೋಗಿಸುತ್ತಾರೆ; ಆದರೆ ಎರಡನ್ನೂ ಸಾಮಾನ್ಯ ವರ್ತಮಾನ ಕಾಲದ ಅರ್ಥದಲ್ಲಿ (=I come) ಪ್ರಯೋಗಿಸುವುದೇ ವಾಡಿಕೆ. ಬರುತಿರ್ದಪೆಂ (=I am coming) ಎಂಬುದರಿಂದ ಬರ್‌ತಿವ್‌ನಿ ಇಳಿಯಿತೆಂದು ನಂಬಿ, ಅದಕ್ಕೆ ಸರಿಹೋಗುವಂತೆ ಬರ್‌ತಿವ್‌ನಿ ಎಂಬುದರ ಅರ್ಥವನ್ನು ನಿಯಮಿಸುವುದು ಉಚಿತವಲ್ಲ. ವೈಯಾಕರಣನಿಗೆ ಪ್ರಯೋಗವೇ ಶರಣು.

●

ಕನ್ನಡ ಭಾಷೆಯ "ಅ-" ಸ್ವನಗಳು

ನಾನು ಇಲ್ಲಿ ಮುಖ್ಯವಾಗಿ ಮೈಸೂರು ಪ್ರಾಂತದ ಪದಾದಿಯ ಅ-ಕಾರವನ್ನು ಕುರಿತು ಪ್ರಸ್ತಾಪಿಸುತ್ತೇನೆ.

ನನ್ನ ಮಾತುಗಳು ಸ್ಪಷ್ಟವಾಗಬೇಕಾದರೆ ಡೇನಿಯಲ್ ಜೋನ್ಸ್ ಎಂಬ ಸ್ವನವಿಜ್ಞಾನಿಯು ಮಾನಸ್ವರಗಳೆಂದು ಹೆಸರಿಸಿರುವ ಸ್ವನಗಳ ಕೆಳಗಿನ ಚಿತ್ರವನ್ನು ಗಮನಿಸಬೇಕು.



ಇವುಗಳಲ್ಲಿ i—a ಸಾಲಿನಲ್ಲಿರತಕ್ಕುವು ಪೂರ್ವ ಸ್ವರಗಳೆಂದೂ u—a ಸಾಲಲ್ಲಿರತಕ್ಕುವು ಪಶ್ಚಸ್ವರಗಳೆಂದೂ, ಸಂವೃತ ಇತ್ಯಾದಿಗಳು ಆಯಾ ಸಾಲಲ್ಲಿ ಕಂಡುಬರುವ ಸ್ವರಗಳ ಹೆಸರೆಂದೂ ತಿಳಿಯಬೇಕು. ಉದಾಹರಣೆಗೆ ɔ ಎಂಬುದು ಅರ್ಧವಿವೃತ ಪಶ್ಚ ಸ್ವರ. ə ಇದನ್ನು neutral vowel ಅಥವಾ ತಟಸ್ಥ ಸ್ವರವೆನ್ನುತ್ತಾರೆ. ʌ ಇದರ ಉಚ್ಚಾರಣೆಯ ವಿಧಾನ,

---

* ಸಾಧನೆ ೧.೧ (ಜನವರಿ–ಮಾರ್ಚ್ ೧೯೭೨)

ನಾಲಗೆಯ ಎತ್ತರದ ದೃಷ್ಟಿಯಿಂದ, ೨ ಇದ್ದಂತೆಯೇ. ೨ ಹೇಳುವಾಗ ತುಟಿಗಳು ಗುಂಡಗಿದ್ದರೆ ʌ ಹೇಳುವಾಗ ತುಟಿಗಳು ಸ್ವಲ್ಪ ಹರಡಿಕೊಳ್ಳುತ್ತವೆ. (ಹೆಚ್ಚಿನ ವಿವರಗಳಿಗೆ ಹೆಫ್ನರ್, ಜೋನ್ಸ್ ಮುಂತಾದವರ ಸ್ವನವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳನ್ನು ನೋಡಬಹುದು).

ಈಗ ಕೆಳಗಿನ ಯುಗ್ಮಗಳನ್ನು ನೋಡಿ :

{ ಕದ
ಕದಿ

{ ಮಗ
ಮಗು

ಇಲ್ಲೆಲ್ಲಾ ಪದಾರಂಭದಲ್ಲಿ ಕನ್ನಡ ಲಿಪಿಯ ಅಕಾರವನ್ನೇ ಬರೆದಿದ್ದರೂ, ಸ್ವನ ವಿಜ್ಞಾನದ ದೃಷ್ಟಿಯಿಂದ ಮೇಲಿನ ಎರಡು ಜೋಡಿಗಳಲ್ಲೂ ಮೊದಲನೆಯ ಮತ್ತು ಎರಡನೆಯ ಪದಗಳ ಪ್ರಥಮ ಸ್ವರ ಒಂದೇ ಅಲ್ಲ. "ಕದ", "ಮಗ" ಎಂಬಲ್ಲಿನ ಆದಿಸ್ವರ ʌ ; "ಕದಿ", "ಮಗು" ಎಂಬಲ್ಲಿನ ಆದಿಸ್ವರ ɘ.

ɘ – ಉಚ್ಚ, ಮಧ್ಯಸ್ವರ (ಇಂಗ್ಲಿಷಿನ data ಎಂಬಲ್ಲಿನ ಕೊನೆಯ ಸ್ವರ).

ʌ – ಇನ್ನೂ ಕೆಳಗಿನ ಪಶ್ಚ ಸ್ವರ (ಇಂಗ್ಲಿಷಿನ but ಎಂಬಲ್ಲಿನ ಸ್ವರ).

ಮೇಲಿನ ಎರಡು ಜೋಡಿಗಳಲ್ಲೀ ಕಂಡು ಬರುವ ʌ, ɘ ಸ್ವರಗಳು ಕಂಡು ಬರುವ ಇನ್ನೂ ಕೆಲವು ಯುಗ್ಮಗಳನ್ನು ನೋಡಿ—

ʌ ಅಕ್ಕ }
ɘ ಅಕ್ಕಿ

ʌ ತಟ್ಟೆ }
ɘ ತಟ್ಟಿ

ʌ ಅನ್ನ }
ɘ ಅನ್ನು

ʌ ಅಪ್ಪ }
ɘ ಅಪ್ಪು

ʌ ಕಕ್ಕೆ }
ɘ ಕಕ್ಕು

[ಪಟ್ಟಿ ೧]

ə ಕಂಡುಬರುವ ಮೇಲಿನ ಮತ್ತು ಅಂತಹ ಇನ್ನೂ ಹಲವಾರು ಪದಗಳನ್ನು ಗಮನಿಸಿ ನೋಡಿದರೆ, ಆ ಪದಗಳ ಎರಡನೆಯ ಸ್ವರ i ಅಥವಾ u ಎಂಬ ಸಂವೃತ ಸ್ವರಗಳೇ ಆಗಿರುವುದನ್ನು ಗುರುತಿಸಬಹುದು. ^ ಕಂಡುಬರುವ ಪದಗಳನ್ನೆಲ್ಲ ಪರಿಶೀಲಿಸಿದರೆ, ಅಂತಹ ಪದಗಳ ಸ್ವರಗಳೆಲ್ಲ ಸಂವೃತೇತರಗಳಾಗಿರುವುದನ್ನೂ ಗುರುತಿಸಬಹುದು. ಇದನ್ನೇ ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು.

ಎರಡನೆಯ ಸ್ವರ ಸಂವೃತವಾಗಿದ್ದರೆ ə ಸಾಧ್ಯ.
ಎರಡನೆಯ ಸ್ವರ ಸಂವೃತೇತರವಾಗಿದ್ದರೆ ʌ ಸಾಧ್ಯ.

ʌ, ə ಗಳೆರಡೂ ಒಂದೇ ಪರಿಸರದಲ್ಲಿ ಕಾಣಿಸಿಕೊಂಡಿಲ್ಲ. ಅವು ಪರಿಸರದ ದೃಷ್ಟಿಯಿಂದ ಒಂದು ಇನ್ನೊಂದನ್ನು ಹೊರತುಪಡಿಸಿ ಬರುವುದರಿಂದ ಅವೆರಡೂ ಪೂರಕ ಪ್ರಸಾರದಲ್ಲಿವೆಯೆಂದು (Complementary distribution) ಭಾವಿಸ ಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ಸ್ವನಶಾಸ್ತ್ರೀಯವಾಗಿ ಕದ, ಕದಿ ಮುಂತಾದ ಕಡೆಗಳಲ್ಲಿ ಎರಡು ಭಿನ್ನಸ್ವರಗಳಿದ್ದರೂ, ಅವೆರಡೂ ಒಂದೇ ಸ್ವನಿಮದ ರೂಪಗಳಾಗಿರುವುದರಿಂದ, ಒಂದನೇ ಪಟ್ಟಿಯಲ್ಲಿ ಎರಡು ಕಡೆಯಲ್ಲೂ ಬರವಣಿಗೆಯಲ್ಲಿ ಅವುಗಳನ್ನು ಬರೆಯಲು ಒಂದೇ ಚಿಹ್ನೆಯನ್ನು (ಆಕಾರ) ಬಳಸುತ್ತಿರುವುದು ಸಮರ್ಥನೀಯವಾಗುತ್ತದೆ.

ಆದರೆ ಅದಕ್ಕಿಂತ ಸ್ವಾರಸ್ಯ ಸಂಗತಿ ಮತ್ತೊಂದಿದೆ. ಕೆಳಗಿನ ಯುಗ್ಮವನ್ನು ನೋಡಿ:

{ ʌ ಕರಿ 'to milk', 'to call'
{ ə ಕರಿ 'to fry', 'black'

ಇಲ್ಲಿ ʌ, ə ಗಳು ಕಾಣಿಸಿಕೊಳ್ಳುವ ಪರಿಸರಗಳು ಒಂದೇ ಆಗಿವೆ; ಇಂತಹ ಇನ್ನೂ ಕೆಲವು ಉದಾಹರಣೆಗಳು :

{ ʌ ಬರಿ 'go write' (ಕಾಗದ ಬರಿ).
{ ə ಬರಿ 'bare' (ಬರೀ ಮೈ)

{ ʌ ಅಂದ 'beautiful'.
{ ə ಅಂದ 'he said'.

{ ʌ ಅತ್ತೆ 'mother-in-law'.
{ ə ಅತ್ತೆ 'I cried'.

{ ʌ ತಂದೆ 'father'. (ನನ್ನ ತಂದೆ)
{ ə ತಂದೆ 'brought'. (ನಾನು ಸಾಮಾನು ತಂದೆ)

{ ʌ ತಡಿ 'wait'.
{ ə ತಡಿ 'saddle'.

[ಪಟ್ಟಿ ೨]

ಇಲ್ಲಿ ʌ, ə ಗಳು ಸ್ಪಷ್ಟವಾಗಿ ವಿರೋಧ ಪ್ರಸಾರದಲ್ಲಿವೆ (contrast). ಎಂದರೆ, ಎರಡು ಸ್ವನಗಳೂ ಒಂದೇ ಪರಿಸರದಲ್ಲಿ ಬಂದಿದ್ದು ಅರ್ಥವ್ಯತ್ಯಾಸಕ್ಕೆ ಕಾರಣವಾಗಿರುವುದರಿಂದ ಎರಡೂ ಸ್ವತಂತ್ರ ಸ್ವನಿಮಗಳೆಂದು ಕರೆಯಿಸಿಕೊಳ್ಳುತ್ತವೆ. ಸಾರಾಂಶ— ಅವೆರಡೂ ಸ್ವತಂತ್ರ ಸ್ವನಿಮಗಳಾಗಿರುವುದರಿಂದ, (ಎರಡನೇ ಪಟ್ಟಿಯಲ್ಲಿ) ಕನ್ನಡದಲ್ಲಿ ಅವೆರಡಕ್ಕೂ ಬರವಣಿಗೆಯಲ್ಲಿ ಒಂದೇ ಚಿಹ್ನೆಯನ್ನು (ಅ ಕಾರ) ಬಳಸುತ್ತಿರುವುದು ಸಮರ್ಥನೀಯವಾಗುವುದಿಲ್ಲ.

ಹಿಂದೆ ನೋಡಿದಂತೆ (ಪಟ್ಟಿ ೧) ʌ, ə ಗಳು ಒಂದು ಸ್ವನಿಮದ ಎರಡು ಉಪಸ್ವನಗಳು; ಮೇಲೆ ನೋಡಿದಂತೆ (ಪಟ್ಟಿ ೨) ಅವೆರಡೂ ಪ್ರತ್ಯೇಕ ಸ್ವನಿಮಗಳು. ಇದು ಏಕೆ ಹೀಗಾಯ್ತು? ಈ ಗೊಂದಲ, ಗೋಜುಗಳಿಗೆ ಐತಿಹಾಸಿಕ ಕಾರಣವಿದೆ.

ಹಳಗನ್ನಡದ ಬಳಿಕ (ನಡುಗನ್ನಡವಾದ ಮೇಲೂ), ಮೈಸೂರು ಮತ್ತು ದಕಿಣ ಕನ್ನಡ ಜಿಲ್ಲೆಯ ವ್ಯಾವಹಾರಿಕ ಕನ್ನಡದಲ್ಲಿ ಪದಾಂತ್ಯದ–ಎ ಕಾರವು – ಇ ಕಾರವಾಗಿ ಮಾರ್ಪಾಟಾಯಿತು[೧]. ಹಳಗನ್ನಡದಲ್ಲಿ ಈಗಿನಂತೆಯೇ (ಪಟ್ಟಿ ೧) ʌ, ə ಗಳು ಭಿನ್ನ ಭಿನ್ನ ಭಿನ್ನ ಪರಿಸರದಲ್ಲಿ ಕಾಣಿಸಿಕೊಂಡು ಉಪಸ್ವನಗಳಾಗಿದ್ದುವು. ಆದರೆ, ಪದಾಂತ್ಯದ–ಎಕಾರವು–ಇಕಾರವಾದಾಗ, ಎಂದರೆ ಪರಿಸರ ವ್ಯತ್ಯಾಸವಾದಾಗ ಮೊದಲ ಸ್ವರ ಆ ಪರಿಸರಕ್ಕನುಗುಣವಾಗಿ ವ್ಯತ್ಯಾಸ ಹೊಂದಲಿಲ್ಲ. "ಬರೆ" '(to write') ಎಂಬಲ್ಲಿ ʌ – ಇದ್ದು, ಬರೆ > ಬರಿ ಆದಾಗ, ನ್ಯಾಯವಾಗಿ ʌ –> ə –ಆಗಬೇಕಾಗಿತ್ತು. ಆದರೆ ಹಾಗಾಗದೆ ʌ –> ʌ –ಆಗಿಯೇ ಉಳಿದಿದ್ದರಿಂದ ಬರಿ 'to write'ə ಬರಿ ಎಂಬ ಪದಗಳಲ್ಲಿ ʌ, ə ಗಳೆರಡೂ ವಿರೋಧ ಪ್ರಸಾರದಲ್ಲಿರಲು ಕಾರಣವಾಯ್ತು.

'to call' ಎಂಬರ್ಥದ "ಕರೆ" ಎಂಬಲ್ಲಿಯೂ ʌ ಕರಿ 'to call', ಕರಿ 'to fry' ಎಂಬುವುಗಳಿಗೆ ವಿರೋಧ ಕಂಡುಬರಲು ಮೊದಲಿನದೇ ಕಾರಣ. ಎಂದರೆ ಹಿಂದೆ ಒಂದು ಸ್ವನಿಮ (ಅದನ್ನು /ʌ/ ಎಂದಾದರೂ ಕರೆಯಬಹುದು, /ə/ ಎಂದಾದರೂ ಕರೆಯಬಹುದು) ಇದ್ದು ಅದು, ಆಮೇಲೆ /ʌ/, /ə/ ಎಂಬ ಎರಡು ಪ್ರತ್ಯೇಕ ಸ್ವನಿಮಗಳಾಗಿ ಒಡೆಯಿತು. ಇದನ್ನು 'Phonemic split' ಎಂದು ಕರೆಯುತ್ತಾರೆ.[೨]

ಹೀಗೆ ಒಂದು ಸ್ವನಿಮದ ಉಪಸ್ವನಗಳಾಗಿದ್ದ [ʌ], [ə] ಗಳು ತಾವೇ ಸ್ವತಂತ್ರ ಸ್ವನಿಮಗಳಾದರೂ (ಪಟ್ಟಿ ೨), ಹಿಂದಿನ ಉಪಸ್ವನೀಯ ಲಕ್ಷಣಗಳನ್ನು (ಪಟ್ಟಿ ೧) ಉಳಿಸಿಕೊಂಡೇ ಬಳಕೆಗೆ ಬಂದುವು. ಹಿಂದೆ [ʌ], [ə] ಗಳು ಉಪಸ್ವನಗಳಾಗಿದ್ದಾಗ ಅವುಗಳ ಪರಿಸರ ಸ್ಪಷ್ಟವಾಗಿದ್ದಿತು ಮತ್ತು ಅವುಗಳ ಬಳಕೆಯ ವಿಷಯದಲ್ಲಿ

೧. ಉತ್ತರ ಕರ್ನಾಟಕ ಕನ್ನಡದಲ್ಲಿ ಮನೆ, ಕತ್ತೆ, ಒಂಟೆ ಇತ್ಯಾದಿ ಪದಗಳನ್ನು ಮನಿ, ಕತ್ತಿ, ಒಂಟಿ ಎಂದೇ ಹೇಳುತ್ತಾರೆ.

೨. ಇದಕ್ಕೆ ಪ್ರತಿಯಾದುದು 'Phonemic merger'— ಒಂದು ಸ್ವನಿಮ ಬೇರೆ ಸ್ವನಿಮಗಳಲ್ಲಿ ವಿಲೀನ ಹೊಂದುವುದು. ಹಳಗನ್ನಡ /ಱ/ ಎಂಬ ಸ್ವನಿಮ ಬೇರೆ ಬೇರೆ ಪರಿಸರಗಳಲ್ಲಿ /ಳ/, /ರ/ ಎಂಬ ಸ್ವನಿಮಗಳಲ್ಲಿ ವಿಲೀನ ಹೊಂದಿದ್ದು ಸುಪ್ರಸಿದ್ಧ ಸಂಗತಿಯಾಗಿದೆ.

ಖಚಿತತೆಯಿದ್ದಿತು. ಎಂದರೆ, [ʌ], [ə] ಎಲ್ಲೆಲ್ಲಿ ಬರಬೇಕು ಎಂಬುದರ ಬಗ್ಗೆ ಸ್ಪಷ್ಟ ಅರಿವು ಇದ್ದಿತು. ಇದು ಸಂಸ್ಕೃತದಿಂದ ಬಂದ ಪದಗಳಿಗೂ ಅನ್ವಯವಾಗುತ್ತಿದ್ದಿತೆಂದು ಕಾಣುತ್ತದೆ – ಈಗಿನ ಉಚ್ಚಾರವನ್ನು ನೋಡಿದರೆ.

{ ʌ ಭಕ್ತ 'devotee'
{ ə ಭಕ್ತಿ 'devotion'

{ ʌ ಅಕ್ಷರ 'letter'
{ ə ಅಕ್ಷಿ 'eye'

{ ʌ ಪಕ್ಷ 'wing'
{ ə ಪಕ್ಷಿ 'bird'

ಆದರೆ /ʌ/,/ə/ ಗಳು ಸ್ವತಂತ್ರ ಸ್ವನಿಮಗಳಾದ ಮೇಲೆ, ಎಂದರೆ ಅವು ಪರಿಸರ ಬದ್ಧವಾಗಿ ಕಾಣಿಸಿಕೊಳ್ಳುವುದು ಕೆಲವು ಕಡೆ ನಿಂತುಹೋಗಿ, ಕೆಲವು ಕಡೆ ಉಳಿದುಕೊಂಡು ಬಂದು ಅವುಗಳ ಬಳಕೆಯ ವಿಷಯದಲ್ಲಿ ಅವ್ಯವಸ್ಥೆ ಕಾಣಿಸಿಕೊಂಡಿತು. ಉದಾಹರಣೆಗೆ "ಅದು" ಎಂಬ ಪದದ ಮೊದಲ ಸ್ವರದ ಉಚ್ಚಾರಣೆಯಲ್ಲಿ ಕೆಲವೆಡೆ ʌ ಇದ್ದರೆ, ಮಲೆನಾಡಿನಲ್ಲಿ ə ಕಾಣಿಸಿಕೊಳ್ಳುತ್ತದೆ. ಕೆಲವರ ಉಚ್ಚಾರಣೆಯಲ್ಲಿ "ಕರ್ಮ" ಎಂಬ ಪದದ ಮೊದಲ ಸ್ವರದ ಉಚ್ಚಾರಣೆಯಲ್ಲಿ ʌ , ə ಗಳೆರಡರಲ್ಲಿ ಯಾವುದು ಬೇಕಾದರೂ ಬರಬಹುದು. ನನ್ನ ಉಚ್ಚಾರಣೆಯಲ್ಲಿ ಮೊದಲ ಸ್ವರವಾಗಿ "ಸರ್ಪ", "ಗರ್ಭ", "ಧರ್ಮ" ಎಂಬಲ್ಲಿ ʌ ಎಂಬುದೂ, "ಗರ್ವ", "ಕರ್ಮ" ಎಂಬಲ್ಲಿ ə ಎಂಬುದೂ ಕಾಣಿಸಿಕೊಳ್ಳುತ್ತದೆ. ಈ ಅವ್ಯವಸ್ಥೆ ಕಾರಣವಾಗಿ, ಕೆಲವು ಸಾರಿ ಅಪಾರ್ಥಗಳಿಗೂ ತಪ್ಪುಗಳಿಗೂ ಕಾರಣವಾಗಬಹುದು.

/ʌ/,/ə/ ಗಳು ಸ್ವತಂತ್ರ ಸ್ವನಿಮಗಳಾಗಿದ್ದರೂ, ಅವುಗಳನ್ನು ಬರೆಯಲು ಒಂದೇ ಚಿಹ್ನೆಯನ್ನು ಬಳಸುತ್ತಿದ್ದೇವೆ ತಾನೆ! ನ್ಯಾಯವಾಗಿ, "ತಂದೆ" 'father' "ತಂದೆ" 'I brought' ಎಂಬ ಎರಡು ಪದಗಳ ಮೊದಲ ಸ್ವರಗಳಿಗೆ ಬೇರೆ ಬೇರೆ ಚಿಹ್ನೆಗಳನ್ನು ಕಲ್ಪಿಸಬೇಕಾಗಿತ್ತು. ಹಾಗಾಗದಿರಲು ಕಾರಣ, ಬರವಣಿಗೆಯ ವ್ಯಾವಹಾರಿಕ ಭಾಷೆಯ ಜೊತೆಗೆ ಹೆಜ್ಜೆ ಹಾಕದೆ ಹಿಂದುಳಿದಿರುವುದೇ ಕಾರಣ. ಭಾಷೆಗಿಂತ ಬರಹ ಸಂಪ್ರದಾಯ ನಿಷ್ಠವಾದುದು ಎಂಬುದನ್ನು ಇಲ್ಲಿ ನೆನೆಯಬಹುದು.[೩]

[ಸಂಗ್ರಾಹಕ : ಎಂ. ಚಿದಾನಂದಮೂರ್ತಿ]

---

೩. ಸಂಗ್ರಾಹಕನ ಕೆಲವು ಮಾತುಗಳು :
೧೯೫೯ರ ಸರಿಸುಮಾರಿನಲ್ಲಿ ಮೈಸೂರಿನ Linguistic Circle ಆಶ್ರಯದಲ್ಲಿ ಮಾಡಿದ ಉಪನ್ಯಾಸವನ್ನು ನಾನು ಆ ದಿನ ತೆಗೆದುಕೊಂಡ ಟಿಪ್ಪಣಿಗಳ ಸಹಾಯದಿಂದ ಸಿದ್ಧಪಡಿಸಿದ್ದೇನೆ. ಅಲ್ಲಿ ಇಲ್ಲಿ ಒಂದೆರಡು ನನ್ನ ಮಾತುಗಳು ನುಸುಳಿಕೊಂಡಿರಬಹುದು. ಕೆಲವೆಡೆ ವಿವರಣೆಗಾಗಿ ಎರಡು ಮಾತು ಸೇರಿಸಿರಬಹುದು. ಆದರೆ ಆ ದಿನದ ಅವರ ಉಪನ್ಯಾಸವನ್ನು ಪ್ರತಿನಿಧಿಸುವಂತಿದೆ ಈ ಪ್ರಬಂಧ ಎಂಬ ವಿಶ್ವಾಸ ತಕ್ಕಮಟ್ಟಿಗೆ ನನಗಿದೆ. ಆದರೆ ನನಗರಿವಿಲ್ಲದಂತೆ ಅವರ ಅಭಿಪ್ರಾಯ ಗಳನ್ನು ತಪ್ಪಾಗಿ ನಿರೂಪಿಸಿದ್ದರೆ ಅದಕ್ಕೆ ನಾನೇ ಪೂರ್ಣ ಜವಾಬ್ದಾರ. ಹಾಗೇನಾದರೂ ಆಗಿದ್ದರೆ ನಾನು ವಿಷಾದಿಸುತ್ತೇನೆ. ಆ ವಿದ್ವಾಂಸರ ಉಪನ್ಯಾಸ ಹಾಗೇ ಹಾಳಾಗಿ ಹೋಗುವುದಲ್ಲ ಎಂಬ ಕೊರಗು ಈ ಪ್ರಬಂಧವನ್ನು ಸಿದ್ಧಪಡಿಸಲು ಪ್ರೇರೇಪಿಸಿತು.

ಏನಿ-ಗಡಿಂ-ರೀ*

ಹರಿಹರ ಕವಿ ರಚಿತವಾದ 'ನಂಬಿಯಣ್ಣನ ರಗಳೆ'ಯ ಏಳನೆಯ ಸ್ಥಲದಲ್ಲಿ ವೃದ್ಧಮಾಹೇಶ್ವರ ಲೀಲೆಯ ಪ್ರಸಂಗದಲ್ಲಿ ಈ ಕೆಳಗಿನ ಪಂಕ್ತಿಗಳು ಬರುತ್ತವೆ:

ನಡುವೆ ಮೂಡಿದನಲ್ಲಿ ಜಗಳದ ಮಹೇಶ್ವರಂ
ಕೊಡೆ ಪಾದರಕ್ಷೆ ನರೆದಲೆ ಗಡ್ಡದೀಶ್ವರಂ ।
ಬರುತೆ ಶಿವಶಿವ ಕುಶಲವೇ ರುದ್ರಭಟ್ಟರೇ
ಹರಹರ ಕ್ಷೇಮವೇ ಈಶಾನಭಟ್ಟರೇ ।
ಇವರ್ಥಾರ್ ಸಹಸ್ರವೇದಿಗಳೇ ಮಹಾದೇವ
ಇವರಾರ್ ಶಿವಾನಂದರೇ ಶಿವ ಮಹಾದೇವ ।
ಏನಿ ಪಶುಪತಿಭಟ್ಟರೇ ಸುಖದೊಳಿರ್ದಿರೇ
ಏನಿ ಶಂಕರಭಟ್ಟರೇ ಹದುಳಿವಿರ್ದಿರೇ ॥
ಎಂದವರ ಕುಲಗೋತ್ರದನ್ವಯಂಗಳು ವೆರಸಿ
ಬಂದು ನುಡಿವುತ್ತುಮಿರೆ ಸಭೆ ಕೌತುಕಂ ಬೆರಸಿ ।
....(ಪಂ.೩೧-೪೦)

ಊರ ಹೊಱಗಣ ಮಸಣವಟ್ಟಿಗೆಯೊಳಿರಲಂದು
ಹಾರೈಸುತೆಮ್ಮ ಮಯ್ದುನನೊಲ್ದು ನಗುತಂದು ।
ಏನಿ ಶ್ಮಶಾನಶಯನರೆ ಎಂದು ಕರೆದಂದು
ತಾನಾಯ್ತು ಬಳಿಕವಾ ಪೆಸರೆಮಗೆ ಸಲೆ ಸಂದು ।
...(ಪಂ. ೫೫-೮)

• 'ಪ್ರಬುದ್ಧ ಕರ್ಣಾಟಕ', ೨೮.೩

ಈ ಭಾಗದ ಪಾಠಶೋಧನೆಯನ್ನು ಮಾಡುವಾಗ, ಇಲ್ಲಿ ಮೂರು ಬಾರಿ ಕಾಣಿಸಿಕೊಳ್ಳುವ "ಏನಿ" ಎಂಬ ರೂಪದ ಕಡೆಗೆ ಗಮನ ಸಹಜವಾಗಿಯೇ ಹರಿಯಿತು. ಇದು "ಏನು" ಎಂದಿರಬೇಡವೇ ಎಂಬ ಸಂದೇಹವೂ ಮೊದಲಲ್ಲಿ ತೋರಿತು. ಮೂವತ್ತೇಳನೆಯ ಪಂಕ್ತಿಯ "ಏನಿ" ಎಂಬುದಕ್ಕೆ ಪ್ರತಿಯಾಗಿ ಎರಡು ಮಾತೃಕೆಗಳಲ್ಲಿ (ಚ ಜ) "—ನು" ಎಂಬ ಪಾಠವೇ ಇದೆ. ಆದರೆ ಮುಂದಿನ ಪಂಕ್ತಿಯಲ್ಲೂ, ಮತ್ತೆ ೫೭ನೆಯ ಪಂಕ್ತಿಯಲ್ಲೂ, "—ನಿ" ಎಂದೇ ಈ ಮಾತೃಕೆಗಳಲ್ಲಿ ಕೂಡ ಇದೆ. ಆದಕಾರಣ ಎಲ್ಲ ಕಡೆಗಳಲ್ಲೂ "ಏನಿ" ಎಂಬುದೇ ಮೂಲಪಾಠವಾಗಿರಬೇಕು; ಇತ್ತೀಚೆಗೆ ಲಿಪಿಕಾರರಲ್ಲಿ ಒಬ್ಬಿಬ್ಬರು ಇದರ ಸುಷ್ಠುತ್ವವನ್ನು ಕುರಿತು ಶಂಕೆಪಟ್ಟು ೩೭ನೆಯ ಪಂಕ್ತಿಯಲ್ಲಿ "—ನು" ಎಂದು ತಿದ್ದಿರಬಹುದು; ಆ ಬಳಿಕ ಮತ್ತೆ ಮತ್ತೆ "—ನಿ" ಎಂದೇ ಮೂಲದಲ್ಲಿ ಕಾಣಿಸಿಕೊಂಡದ್ದರಿಂದ, ತಮ್ಮ ಸಾಹಸಕ್ಕೆ ತಾವೇ ದಿಗಿಲುಪಟ್ಟು ತಿರುಗಿ ಕೈಯಾಡಿಸದೆ "ಏನಿ" ಎಂಬ ರೂಪವನ್ನೇ ಒಪ್ಪಿ ಉಳಿಸಿಕೊಂಡಿರಬಹುದು—ಹೀಗೆ ಆಲೋಚಿಸಲು ಅವಕಾಶವಾಯಿತು.

ಈ ಪ್ರಯೋಗವನ್ನು ಕುರಿತು ಚಿಂತಿಸುತ್ತಿರುವಾಗ, 'ಕುಮಾರವ್ಯಾಸ ಭಾರತ'ದ ಪೇಟೆಯ ಮುದ್ರಣವೊಂದರಲ್ಲಿ "ಏನಿ" ಎಂಬ ರೂಪವನ್ನು ಎರಡು ಸಲ ಸಂಧಿಸಿದ್ದ ನೆನಪು ಮರಳಿತು : (೧) ದ್ರೌಪದೀ ಸ್ವಯಂವರದ ವೇಳೆಯಲ್ಲಿ ಮತ್ಸ್ಯಯಂತ್ರವನ್ನು ಭೇದಿಸಲಾರದೆ ಕ್ಷತ್ರಿಯ ವೀರರೆಲ್ಲರೂ ಕೈಸಾರಿಬಿಟ್ಟಾಗ, ಬ್ರಾಹ್ಮಣರ ಗುಂಪಿನಿಂದ ವಿಪ್ರವೇಷದ ಅರ್ಜುನನು ಎದ್ದು ನಿಲ್ಲುತ್ತಾನೆ. ಆಗ ಸುತ್ತಲಿರುವವರು ಹೀಗೆ ಉಪಹಾಸ ಮಾಡುತ್ತಾರೆ :

ಏನಿ ಸಿದ್ಧಿಯುಪಾಧ್ಯರೆದ್ದಿರಿ
ದೇನು ಧನುವಿಂಗಲ್ಲಲೇ ತಾ
ನೇನು ಮನದಂಗವಣೆ ಬಯಸಿದಿರೇ ನಿತಂಬಿನಿಯ । ...

(೧. ೧೫. ೧೦)

(೨) ಅರಣ್ಯಪರ್ವದಲ್ಲಿ, ಅರ್ಜುನನು ಇಂದ್ರನ ಅತಿಥಿಯಾಗಿರುವಾಗ ಊರ್ವಶಿ ಅವನನ್ನು ಬಯಸಿ ಬರುತ್ತಾಳಷ್ಟೆ. ಆಗ ಅರ್ಜುನನು ಆಕೆಯನ್ನು ಹೀಗೆ ಸಂಬೋಧಿಸುತ್ತಾನೆ:

ಏನಿ ಬಿಜಯಂಗೈದಿರಿತ್ತಲು
ಮಾನನಿಧಿ ಕುಳ್ಳಿರಿ ಸುರೇಂದ್ರನ
ಮಾನಿನಿಯರಭಿವಂದನೀಯರು ನಾವ್ ಕೃತಾರ್ಥರಲಾ ।
ಏನು ಬೆಸನೆನಗೇನು ಹದ ನಿಮ
ಗಾನು ಮಗನುಪಚಾರವೇಕೆ ಮ
ನೋನುರಾಗದಲಜುಹಿಯೆಂದನು ಪಾರ್ಥನುರ್ವಶಿಗೆ ॥ (೩. ೮. ೧೯)

ಈ ಎರಡು ಕಡೆಗಳಲ್ಲೂ ಮೈಸೂರು ಓರಿಯಂಟಲ್ ಲೈಬ್ರರಿಯ ಮುದ್ರಣದಲ್ಲಿ "ಏನು" ಎಂಬ ಪಾಠವಿದೆ : "ಏನು ಸುದ್ದಿಯುಪಾಧ್ಯರೆದ್ದಿರಿ..."(೧.೩೧.೧೧), ಏನು ಬಿಜಯಂಗೈದಿರಿತ್ತಲು" (೩. ೯. ೧೯) ಆದರೆ ಕೈಬರೆಹದ ಮಾತೃಕೆಗಳಲ್ಲಿ "ಏನಿ" ಎಂಬ ರೂಪಕ್ಕೆ ಸ್ಪಷ್ಟವಾದ ಆಧಾರವಿದೆ. ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ K ೨೦೫ ಸಂಖ್ಯೆಯುಳ್ಳ ಓಲೆಗರಿಯ ಪ್ರತಿ ಕನ್ನಡ ಭಾರತದ ಪ್ರಾಚೀನ ಮಾತೃಕೆಗಳಲ್ಲಿ ಒಂದು. ಇದರಲ್ಲಿ "ಏನಿ ಸಿದ್ಧಿಯುಪಾದ್ಯರೆದ್ದಿರಿ" (೧. ೧೪. ೧೦), "ಯೆನಿ ಬಿಜಯಂಗೈದಿರಿತ್ತಲು" (೩. ೭. ೧೯) —ಹೀಗೆ ಪಾಠವುಂಟು. ಆದಕಾರಣ 'ಕುಮಾರವ್ಯಾಸ ಭಾರತ', 'ನಂಬಿಯಣ್ಣನ ರಗಳೆ'—ಇವುಗಳ ಮಾತೃಕೆಗಳ ಸಾಕ್ಷ್ಯವನ್ನು ಅವಲಂಬಿಸಿ, "ಏನಿ" ಎಂಬ ಪ್ರಯೋಗ ನಡುಗನ್ನಡದಲ್ಲಿ ಪ್ರಚುರವಾಗಿದ್ದಿತೆಂದು ನಂಬಬಹುದು.[೧]

ಇದರ ನಿಷ್ಪತ್ತಿಯ ಮೇಲೆ ಬೆಳಕು ಬೀರುವ ಇನ್ನೊಂದು ಪ್ರಯೋಗದ ಕಡೆಗೆ ಈಗ ತಿರುಗೋಣ. ಕರ್ಣಪಾರ್ಯನ 'ನೇಮಿನಾಥ ಪುರಾಣ'ದಲ್ಲಿ, ಜರಾಸಂಧ ಚಕ್ರವರ್ತಿಗೆ ಎದುರೊಡ್ಡಿ ನಿಂತ ಜನಾರ್ದನನ ಆಸ್ಥಾನಕ್ಕೆ ಆ ಚಕ್ರವರ್ತಿಯ ದೂತರು ಬಂದು ಇವನ ಸಹಾಯಕರನ್ನೆಲ್ಲ ಹಳಿದು ಮಾತನಾಡುತ್ತಾರೆ. ಆಗ ಜನಾರ್ದನ ಪಕ್ಷದ ವಸುಪಾಳನೆಂಬ ದೊರೆ ಅವರನ್ನು ಕುರಿತು ಹೀಗೆ ನುಡಿಯುತ್ತಾನೆ.

ಏನಿಂ ಗಳ ನೀಮಿನಿತಂ
ಪೀನಂ ಗಱಿಪುತ್ತುಮಿರ್ಪಿರೀ ಹರಿ ಧುರದೊಳ್ ।
ತಾನೆೞ್ದು ಗರ್ಜಿಸುತ್ತಿರ
ಲೇನಾ ಮಾಗಧಮದೇಭಮಿದಿರಾಂತಪುದೇ ॥(೧೧.೧೦೫)

ಪ್ರಯೋಗದ ರೀತಿಯನ್ನು ಹೋಲಿಸಿದಲ್ಲಿ, ಇಲ್ಲಿಯ "ಏನಿಂ" ಎಂಬುದು ನಮ್ಮ ಏನಿ ಎಂಬುದರ ಹಿಂದಿನ ಅವಸ್ಥಾನವೆಂದು ಸ್ಪಷ್ಟವಾಗುತ್ತದೆ. ನಿಷ್ಪತ್ತಿಯೂ ಕಷ್ಟವಿಲ್ಲದೆ ಹೊಳೆಯುತ್ತದೆ : ಏನ್ + ಇಂ=ಏನಿಂ>ಏನಿ. ಹಳಗನ್ನಡದ ಅಂತ್ಯಬಿಂದು ನಡುಗನ್ನಡದಲ್ಲಿ ಲೋಪವಾಗುವುದು ಅತಿ ಸಾಮಾನ್ಯ.

ಈ ರೂಪದ ವೈಶಿಷ್ಟ್ಯವನ್ನು ಕುರಿತು ವಿಚಾರ ಮಾಡುವ ಮೊದಲು ಇದೇ ರೀತಿಯ ಇನ್ನೊಂದರ ಕಡೆಗೆ ಗಮನವೆಳೆಯುವುದು ಅವಶ್ಯಕ. "ಗಡಿಂ" ಎಂಬುದೇ ಆ ಪ್ರಯೋಗ. ದೃಷ್ಟಿಗೆ ಬಿದ್ದ ಕೆಲವು ಉದಾಹರಣೆಗಳನ್ನು ಈ ಕೆಳಗೆ ಸಂಗ್ರಹಿಸಿದೆ. ಎಲ್ಲವೂ ಹಳಗನ್ನಡದವು.

---

೧. [ಇನ್ನೊಂದು ಉದಾಹರಣೆ 'ಕನ್ನಡ ಜೈಮಿನಿ ಭಾರತ'ದಲ್ಲಿ ಈಚೆಗೆ ಗಮನಕ್ಕೆ ಬಂದಿತು :

ಏನಿ ಬಿಜಯಂಗೈದಿರನಲಟ್ಟಹಾಸದಿಂ
ದಾನವಂಗೆಂದನೇತಕೆ ಸುಮ್ಮನಿರ್ದಪೆ ನಿ
ಧಾನವನೆಡಹಿ ಕಂಡೊಲಾಯ್ತು... ।

(ಶ್ರೀ ಪಿ.ಆರ್. ಕರಿಬಸವಶಾಸ್ತ್ರಿಗಳ ಪರಿಷ್ಕರಣ, ೧೭೨೫)

(೧) ಇದು ಪಂಪನ 'ಆದಿಪುರಾಣ'ದ ಆರಂಭದ ಪದ್ಯಗಳಲ್ಲಿ ಒಂದು—

ಹೇಯಂಗಳ್ ಖಳಕರ್ಮಬಂಧನಕರಕ್ರೋಧಾದಿಗಳ್ ಮತ್ತುಪಾ
ದೇಯಂಗಳ್ ದುರಿತೇಂಧನಾನಳಲಸದ್ರತ್ನತ್ರಯಂಗಳ್ ಸುಖೋ ।
ಪಾಯಂಗಳ್ **ಗಡಿ**ಮೆಂದು ಭವ್ಯಜನಮಂ ಕಣ್ಣಾಜಿ ಕಲ್ಪಿಪ್ಪುಪಾ
ಧ್ಯಾಯರ್ ಜ್ಯೋತಿಸುಗೆಮ್ಮ ಚಿತ್ರಗೃಹದೊಳ್ ರತ್ನತ್ರಯಜ್ಯೋತಿಯಂ॥
(೧.೪)

(೨) ಮತ್ತೆ 'ಆದಿಪುರಾಣ'ದಲ್ಲಿ ಗರ್ಭಿಣಿಯಾದ ಯಶಸ್ವತೀ ಮಹಾದೇವಿಯನ್ನು ವರ್ಣಿಸವು ಒಂದು ಗದ್ಯ ಹೀಗಿದೆ—

ಚತುರಂತಕ್ಷಿತಿ ಗರ್ಭ
ಸ್ಥಿತನದು **ಗಡಿ**ಮೆಂದು ಮುದ್ರಿಪಂತಾಯ್ತು ಯಶ ।
ಸ್ವತಿಯ ಪದನ್ಯಾಸಂ ವಿಳ
ಸಿತಲಾಕ್ಷಾರಸಮಪೂರ್ವಮಣಿಕುಟ್ಟಿಮದೊಳ್ ॥ (೮.೩೨)

(೩) 'ಪಂಪಭಾರತ'ದಲ್ಲಿ, ನೆಲಮುಟ್ಟದ ಶರಪಂಜರದ ಮೇಲೆ ಬಿದ್ದಿದ್ದ ಭೀಷ್ಮನನ್ನು ಕವಿ ಹೀಗೆ ಶ್ಲಾಘಿಸುತ್ತಾನೆ—

ನಡೆದುದು ಬಾಳಕಾಲೊದೊಳೆ ತೊಟ್ಟಿನಗಂಕದ ಶೌಚವೀಗಳೋ
ಗಡಿಪುದೆ ಮುಟ್ಟಿ ನಾಂ ನೆಲನನೇಕದು ಪೆಣ್ **ಗಡಿ**ಮೆಂದು ಮೆಯ್ಯೊಳ।
ಟ್ಟಿಡಿದ ವಿಕರ್ಣಕೋಟಿಯೊಳಣಂ ನೆಲಮುಟ್ಟದೆ ನೋಡೆ ಬಿಜ್ಜೊಡಂ
ಬಡಿಸಿದನಯ್ಯ ಶೌಚಗುಣದುನ್ನತಿಯಂ ಸುರಸಿಂಧುನಂದನಂ ॥ (೧೧.೪೭)

(ಇಲ್ಲಿ "ಗಡಿ-" ಎಂಬುದಕ್ಕೆ ಕ ಪ್ರತಿಯಲ್ಲಿ "ಗಡ-" ಎಂದು ಪಾಠಾಂತರವುಂಟು.)

(೪) ರನ್ನನ 'ಗದಾಯುದ್ಧ'ದಲ್ಲಿ, ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಅಡಗಿರುವಾಗ, ಅವನ ನೆಲೆಯನ್ನು ಇನ್ನೂ ಕಾಣದ ಭೀಮನು ಹೀಗೆ ಪ್ರತಿಜ್ಞೆ ತೊಡುತ್ತಾನೆ—

ಚತುರಂತಕ್ಷಿತಿಕಾಂತೆ ಕೇಳ್ ಜಲಧಿ ಕೇಳ್ ಸಪ್ತಾರ್ಚಿ ಕೇಳ್ ತಾತ ಮಾ
ರುತ ಕೇಳ್ ಮಾರುತಮಾರ್ಗ ಕೇಳ್ ಪಗೆವನಂ ಕೊಂದೆನ್ನ ಕೋಪಾಗ್ನಿಗಾ।
ಹುತಿ ಮಾಟ್ಪೆಂ ಕೊಲಲಾಜಿದಂದು ತಜಿಸಂದಾನೆನ್ನನಿಂದಗ್ನಿಗಾ
ಹುತಿ ಮಾಟ್ಪೆಂ **ಗಡಿ**ಮೆಂದು ಪೂಣ್ದೊದಜಿದಂ ಕೌರವ್ಯಕೋಳಾಹಳಂ ॥
(ಗದಾ., ೬. ೨೩ = ಕಾವ್ಯಾವ., ೧೨೭)

(ಗದಾಯುದ್ಧ'ದ ಮುದ್ರಿತ ಪ್ರತಿಯಲ್ಲಿ "ಗಡಮೆಂದು" ಎಂಬ ಪಾಠವಿದೆ. ಮೇಲೆ ಅಂಗೀಕರಿಸಿರುವುದು 'ಕಾವ್ಯಾವಲೋಕನ'ದಲ್ಲಿ ಉದಾಹೃತವಾಗಿರುವ ಪಾಠ.)

(೫–೬) ಮುಂದಿನ ಎರಡು ಪದ್ಯಗಳೂ 'ಕಾವ್ಯಾವಲೋಕನ'ದಲ್ಲಿ ಉದಾಹೃತವಾಗಿ ದೊರೆಯತಕ್ಕವು ; ಆಕರ ತಿಳಿಯದು—

ಎಳಮಾವೇ ತಳಿರುಯ್ಯಲೇ ಕೊಳೆ ತಗುಳ್ದಿಂದೋಳಮೇ ಕೋಗಿಲೇ
ಗಿಳಿಯೇ ತುಂಬಿಯ ಬಂಬಲೇ ಪುಳಿನಮೇ ಬೆಳ್ದಿಂಗಳೇ ಚಂದ್ರನೇ ।
ಕೊಳನೇ ನಂದನಮೇ ಲತಾಭವನಮೇ ಸುಗ್ಗೀ ಕರಂ ಬರ್ದಿದೆಂ
ಗಳ ನೀಮೆಲ್ಲರುಮೆನ್ನ ಬರ್ದುರ್ಗೆಯನಾ ನಲ್ಲಂಗೆ ಪೇಟಿಂ **ಗಡಿಂ** ॥
(ಪ. ೧೨೯)

(ಇಲ್ಲಿ "ಗಡಿಂ" ಎಂಬುದಕ್ಕೆ "ಗಡಾ" ಎಂಬ ಪಾಠಾಂತರವುಂಟು.)

ಮಡದೊಳೊಂಧುವುದೆತ್ತ ಕಿತ್ತಡಿಗಳ್ಗೆನಿಪ್ಪ ತೊಳಪ್ಪುವಾ
ಮಡದೊಳೊಂದಿಯೆ ನಿಂದ ಕಿತ್ತಡಿಗಳ್ಗೆ ನಿತ್ಯನಿಯಾಮದಿಂ ।
ಪೊಡೆವಡಿಂ ಗಡಿಮೆಂದು ನೀಱಿರನೂಱಿ ಸಾಱುವ ಮಾಟ್ಕೆಯಿಂ
ಪೊಡೆವ ಡಿಂಡಿಮಮೆಂಬಿನಂ ಕಳನೂಪುರಧ್ವನಿ ಪೊಣ್ಮುಗಂ ॥ (ಪ. ೨೨೬)

"ಏನ್+ಇಂ=ಏನಿಂ" ಆಗಿರುವಂತೆ "ಗಡ" ಎಂಬ ಹಳಗನ್ನಡದ ಅವ್ಯಯಕ್ಕೆ "–ಇಂ" ಸೇರಿ ಮೇಲಿನ ಉದಾಹರಣೆಗಳ "ಗಡಿಂ" ಆಗಿದೆ. "ಏನಿ, ಗಡಿಂ" ಎಂಬ ಪ್ರಯೋಗಗಳು ಕೆಲವು ಮಟ್ಟಿಗೆ ವಿಲಕ್ಷಣವಾಗಿ ತೋರುವುದರಿಂದ, ಪ್ರತಿಕಾರರು ಅನೇಕ ಸಂದರ್ಭಗಳಲ್ಲಿ ಅವಕ್ಕೆ ಹತ್ತರಿ ಹಿಡಿದು "ಏನು, ಗಡಾ (ಗಡಂ)" ಎಂದು ಬಳಕೆಯ ರೂಪಗಳಿಗೆ ಮಾರ್ಪಡಿಸಿದ್ದರೆ ಅದೇನೂ ಆಶ್ಚರ್ಯವಲ್ಲ. ಮೇಲೆ ಉಲ್ಲೇಖಿಸಿರುವ ಪಾಠಾಂತರಗಳು ಈ ಹೇಳಿಕೆಗೆ ಪೋಷಕವಾಗಿವೆ. ಈಗ ಕಣ್ಣಿಗೆ ಬೀಳುವಷ್ಟು ಕಡೆಗಳೆಲ್ಲಾದರೂ ಈ ಅಸಾಮಾನ್ಯ ರೂಪಗಳನ್ನು ಉಳಿಸಿಕೊಟ್ಟಿರುವುದಕ್ಕಾಗಿ ನಾವು ಪ್ರತಿಕಾರರಿಗೆ ಕೃತಜ್ಞರಾಗಿರಬೇಕು !

ಈಗ ಈ ರೂಪಗಳು ಬರುವ ಸಂದರ್ಭಗಳನ್ನು ಪರಿಶೀಲಿಸಬಹುದು. ಪ್ರತಿಯೊಂದೂ ಸಂಬೋಧನೆಯ ಸನ್ನಿವೇಶ. "ಏನಿ" (ಏನಿಂ) ಎಂಬುದಂತೂ ಶ್ರೋತೃಗಳ ಗಮನವನ್ನು ಸೆಳೆಯುವುದಕ್ಕಾಗಿಯೇ ಬಂದಂತಿದೆ; ಇಲ್ಲೆಲ್ಲಾ ಬಹುವಚನದಲ್ಲೇ ಸಂಬೋಧನೆಯಿರುವುದನ್ನೂ[೨] ಮುಖ್ಯವಾಗಿ ಗಮನಿಸಬೇಕು. ಇದು ಹೊಸಗನ್ನಡದಲ್ಲಿ "ಏನ್ರೀ, ಪಶುಪತಿಭಟ್ಟರೆ!", "ಏನು ಸ್ವಾಮಿ!..." ಎಂದು ಹಾಗೆ. "ಗಡಿಂ"

---

೨. ಸಂಬೋಧನೆಗೆ ಏಕವಚನವು ವಿಷಯವಾದಾಗ "ಏನು, ಗಡ" ಎಂಬ ರೂಪಗಳೇ ದೊರೆಯುತ್ತವೆ. ಒಂದೊಂದು ಉದಾಹರಣೆ ಸಾಕು: "ಏನುಸಾರಥಿ ಮರಳು ಪಾಂಡವ । ಸೇನೆಯನು ಗೆಲಲಹುದೆ..." (ಕುಮಾರವ್ಯಾಸ ಭಾರತ, ೮.೨೫. ೩೧; K ೨೦೫ ಸಂಖ್ಯೆಯ ಓಲೆಯ ಪ್ರತಿಯಲ್ಲೂ "ಏನು" ಎಂದೇ ಇದೆ); "ಬಗೆಯೊಳ್ ಬೇಱೊಂದನಣಂ । ಬಗೆಯಲ್ ಗಡ ನಿನಗೆ ಸುಮತಿ ಬೇಱಾಂ ಬೇಱೆ ॥" (ಕಾವ್ಯಾವಲೋಕನ, ೪೧೨).

ಎಂಬ ಪ್ರಯೋಗವೂ ಇಲ್ಲಿಗೇ ಮುಟ್ಟುತ್ತದೆ. "ಗಡ" ಎಂಬ ಅವ್ಯಯಕ್ಕೆ ಲಿಂಗವಚನ ಪುರುಷಗಳ ವಿವಕ್ಷೆಯಿಲ್ಲ. ಆದರೆ "ಗಡಿಂ" ಎಂಬುದು ಅನೇಕ ಶ್ರೋತೃಗಳನ್ನು ನೇರವಾಗಿ ಉದ್ದೇಶಿಸಿ ಹೇಳುವ ಸಂದರ್ಭಗಳಲ್ಲಿ ಬಂದಂತಿದೆ. ಮೇಲಿನ ೪, ೫, ೬ನೆಯ ಉದಾಹರಣೆಗಳಲ್ಲಿ ಸಂಬೋಧನೆಗೆ ವಿಷಯವಾಗಿರುವವರನ್ನೂ ನಿರ್ದಿಷ್ಟವಾಗಿ ಉಲ್ಲೇಖಿಸಿರುವುದರಿಂದ ಬಹುವಚನ ವಿವಕ್ಷೆ ಎದ್ದು ತೋರುತ್ತದೆ. ೧, ೨, ೩ನೆಯ ಉದಾಹರಣೆಗಳಲ್ಲಿ ಉಕ್ತಿ ಜನಸಾಮಾನ್ಯವನ್ನು ಕುರಿತದ್ದು. (೧ನೆಯ ಉದಾಹರಣೆಯಲ್ಲಿ ಭವ್ಯಜನಮಂ ಎಂಬ ಮಾತೇ ಇದೆ.) ಆದಕಾರಣ ಇಲ್ಲಿ ಕೂಡ ಬಹುವಚನಾರ್ಥ ಅಪ್ರಸಕ್ತವಲ್ಲ; ವಿವಕ್ಷಿತವೆಂದೇ ಒಪ್ಪಬಹುದು.

ಅಂತೂ "ಇಂ (>ಇ)" ಎಂಬುದು "ಏನ್ (>ಏನು), ಗಡ" ಎಂಬ ಶಬ್ದಗಳಿಗೆ ಸೇರಿ, "ನೀಮ್ (>ನೀವು)" ಎಂಬ ಮಧ್ಯಮಪುರುಷ ಬಹುವಚನದ ಸರ್ವನಾಮಕ್ಕೆ ಒಂದುವೇಳೆ ಸಂಬೋಧನ ವಿಭಕ್ತಿ ಇದ್ದಿದ್ದರೆ ಹೇಗೋ ಹಾಗೆ ಅರ್ಥ ಕೊಡುತ್ತದೆ. ಇಂಗ್ಲಿಷಿನಲ್ಲಿ "You ! Hear me' ಎಂದಿರುವಂತೆ ಕನ್ನಡದಲ್ಲಿ ಸರ್ವನಾಮಕ್ಕೆ ಸಂಬೋಧನ ವಿಭಕ್ತಿಯಲ್ಲಿ ಪ್ರಯೋಗವಿಲ್ಲದ ಕಾರಣದಿಂದಲೇ ಈ ಬಗೆಯ ಮಾತಿನ ರೂಢಿ ತಲೆಹಾಕಿತೋ ಏನೋ.

"ಇಂ (>ಇ)" ಎಂಬುದಕ್ಕೆ ಹೀಗೆ ಮಧ್ಯಪುರುಷ ಬಹುವಚನದ ಅರ್ಥವನ್ನು ಕೊಡುವ ಶಕ್ತಿ ಎಲ್ಲಿಂದ ಬಂದಿತು? ಹಳಗನ್ನಡದಲ್ಲಿ "-ಇಂ" ಮಧ್ಯಮಪುರುಷ ಬಹುವಚನದ ಪ್ರತ್ಯಯಗಳಲ್ಲೊಂದು. ವಿಧ್ಯರ್ಥದಲ್ಲಿಯೂ ಇದು ಧಾತುವಿಗೆ ಹತ್ತುತ್ತದೆ. "ನಂಬಿಂ ನಂಬಲಿಮಿಂದಿಂ । ಗೊಂಬತ್ತುದಿನಂ ದಲೆಮ್ಮ ಬೆನ್ನಲೆ ನಿಂದಿರ್" ಎಂದು ಯುದ್ಧ ಕಾಲದಲ್ಲಿ ಯುಧಿಷ್ಠರನು ಭೀಷ್ಮನಿಗೆ ಹೇಳುವ ಮಾತನ್ನು 'ಪಂಪಭಾರತ'ದಿಂದ (೧೧.೨೯) ಇದಕ್ಕೆ ನಿದರ್ಶನವಾಗಿ ಎತ್ತಿಕೊಡಬಹುದು. ನಡುಗನ್ನಡದಲ್ಲಿ "-ಇಂ" ಎಂಬುದರ ಅಂತ್ಯಬಿಂದು ಲೋಪವಾಗಿ, "ನಂಬಿ (>ನಂಬಿಂ), ಮಾಡಿ (>ಮಾಡಿಂ), ನುಡಿಯಿ (>ನುಡಿಯಿಂ)" ಎಂಬಂತೆ ರೂಪಗಳಾಗುತ್ತವೆ. "ಗಡಿಂ, ಏನಿಂ (>ಏನಿ)"— ಎಂಬೆಡೆಗಳಲ್ಲಿರುವ "-ಇಂ (> ಇ)" ಈ ಮಧ್ಯಮಪುರುಷ ಬಹುವಚನ ಪ್ರತ್ಯಯವಲ್ಲದೆ ಬೇರೆಯಲ್ಲ. ಹಳಗನ್ನಡದಲ್ಲಿ "-ಅಯ್.-ಇರ್,-ಎನ್,-ಎವು" ಮೊದಲಾದ ಆಖ್ಯಾತಪ್ರತ್ಯಯಗಳು ಧಾತುಗಳಿಗೆ ಮಾತ್ರವಲ್ಲದೆ, ಗುಣವಚನ, ಸಂಖ್ಯಾವಾಚಕ, ನಾಮಪದ ಮೊದಲಾದವಕ್ಕೆ[೩] ನೇರವಾಗಿ

---

೩. ಸರ್ವನಾಮವನ್ನೂ ಈ ಪಟ್ಟಿಯಲ್ಲಿ ಕೇಶಿರಾಜನು ಸೇರಿಸಿ, "ಪೆಱಯ್, ಪೆಱರಿರ್, ಪೆಱುವು"— ಈ ಮೊದಲಾದ ಉದಾಹರಣೆಗಳನ್ನು ಕೊಡುತ್ತಾನೆ. ಆದರೆ "ಪೆಱ" ಎಂಬುದನ್ನು "ನಾನ್, ನೀನ್, ತಾನ್" ಎಂಬಂತೆ ಸರ್ವನಾಮವೆಂದು ಭಾವಿಸಬಹುದೆ? ಇದು ವಿಚಾರಾರ್ಹವಾದ ವಿಷಯ.

ಸೇರುವ ವಿಷಯ ಪ್ರಸಿದ್ಧವಾಗಿದೆ[೪]. (ಶಬ್ದಮಣಿದರ್ಪಣ, ಸೂ. ೧೧೯). "ಒಳ್ಳಿದನಯ್, ಒರ್ವಿರ್, ಕವಿಕೇಶವನೆಂ, ಉದ್ಧತರೆವು"—ಹೀಗೆ ಉದಾಹರಣೆಗಳನ್ನು ಕೇಶಿರಾಜನ ಪಟ್ಟಿಯಿಂದಲೇ ಎತ್ತಿಕೊಡಬಹುದು. ಪ್ರಕೃತದಲ್ಲಾದರೆ "ಗಡಿಂ" ಎಂಬಲ್ಲಿ "ಗಡ" ಎಂಬ ಅವ್ಯಯಕ್ಕೆ[೫] ಆಖ್ಯಾತಪ್ರತ್ಯಯ ಹತ್ತಿದೆ; ಈ ಬಗೆಯ ಬೇರೆ ನಿದರ್ಶನಗಳು ಗೋಚರವಾಗಿಲ್ಲ. ಅಲ್ಲದೆ ಆ ಧಾತುಗಳಿಗೆ ಮಧ್ಯಮ ಪುರುಷ ಬಹುವಚನದಲ್ಲಿ "-ಇರ್" ಎಂಬ ಪ್ರತ್ಯಯ ಹತ್ತುವುದೇ ರೂಢಿ. "-ಇಂ" ಎಂಬುದೂ ಅಪೂರ್ವ. ಇದು ನಮ್ಮ ರೂಪಗಳ ಮತ್ತೊಂದು ವೈಲಕ್ಷಣ್ಯ.

---

೪. ಕನ್ನಡದಲ್ಲಿ ಮಾತ್ರವಲ್ಲ ; ತಮಿಳು, ತೆಲುಗು ಮೊದಲಾದ ಇತರ ದ್ರಾವಿಡ ಭಾಷೆಗಳಲ್ಲೂ ಈ ಬಗೆಯ ಪ್ರಯೋಗವುಂಟು. [ಈ ವಿಷಯವಾಗಿ ಹೆಚ್ಚಿನ ವಿವರ ವಿಚಾರಗಳಿಗೆ Jules Bloch : *The Grammatical Structure of Dravidian Languages* (English Translation)—ಈ ಗ್ರಂಥದ ನಾಲ್ಕನೆಯ ಅಧ್ಯಾಯವನ್ನು ನೋಡಬಹುದು.]
ಹೀಗೆ ನಾಮಪದ, ಗುಣವಚನ ಮೊದಲಾದವಕ್ಕೆ ಆಖ್ಯಾತಪ್ರತ್ಯಯಗಳು ಹತ್ತಿ ಆಯಾ ಪುರುಷದಲ್ಲಿ ಕ್ರಿಯಾರ್ಥವನ್ನು ಕೊಡುವುವೆಂದೇ ಸಾಮಾನ್ಯ ಭಾವನೆ. "ಒಳ್ಳಿದನಯ್= (ನೀನು) ಒಳ್ಳೆಯವನಾಗಿರುವೆ; ಉದ್ಧತರೆವು=(ನಾವು) ಉದ್ಧತರಾಗಿದ್ದೇವೆ"—ಹೀಗೆ ಅರ್ಥ ಹೇಳುವುದು ರೂಢಿಯಾಗಿದೆ. ಆದರೆ "....ಲಲಿತಾಂಗ ದೇವಂಗೆ ದೇವಿಯೆಂ ಸ್ವಯಂಪ್ರಭೆಯೆನಾಗಿ... ದೇವಾಗಮನಮಂ ಕಂಡು ಜಾತಿ ಸ್ಮರೆಯೆನಾಗಿ...ಮೂರ್ಛೆಗೆ ಸಂದೆಂ" (ಚಾವುಂಡರಾಯ ಪುರಾಣ— ಆದಿಪುರಾಣ, ಪು. ೨೭); "...ತಂದೆಯ ಶೋಕಮುನಿರ್ವೆಮುಂ ಮುನಿವರಂ ತವೆ ಕೊಂದೊಡನೀಗುವಂ" [ಪಂಪಭಾರತ, ೧೨. ೩೬ : ಕಾವ್ಯಾವಲೋಕನ, ೧೫೫೮ ಪಾಠ]—ಇಂಥ ಕಡೆಗಳಲ್ಲಿ ಮೇಲಿನ ವಿವರಣೆ ಹೊಂದುವುದಿಲ್ಲ. ಉದಾಹರಣೆಗೆ, "ಇರ್ವೆಮುಂ" ಎಂಬುದಕ್ಕೆ "ನಾವಿಬ್ಬರೂ" ಎಂದು ಅರ್ಥ. ಈ ಬಗೆಯ ಪ್ರಯೋಗದಲ್ಲಿ ಕ್ರಿಯಾರ್ಥವಿರಲೇಬೇಕೆ ಹೇಗೆ ಎಂಬುದನ್ನು ಕುರಿತು ಕೇಶಿರಾಜನು ಏನನ್ನು ಹೇಳಿಲ್ಲ...ಈ ಪ್ರಶ್ನೆಯ ವಿವೇಚನೆಗೆ ಇಲ್ಲಿ ಅವಕಾಶವಿಲ್ಲ.
ತಮಿಳಿನಲ್ಲಿ ಮಧ್ಯಮಪುರುಷವಾಚಕಪ್ರತ್ಯಯವು ಗುಣವಚನಾದಿಗಳಿಗೆ ಹತ್ತಿ ಸಂಬೋಧ ನಾರ್ಥವನ್ನೂ ಕೊಡುತ್ತದೆ. ಉದಾ—"ನಲ್ಲೀರ್"=ಒಳ್ಳೆಯವರೇ! "ಪೆರಿಯಾಯ್" ಹಿರಿಯವನೇ(ಳೇ)! ಈ ಬಗೆಯ ಪ್ರಯೋಗ ಕನ್ನಡದಲ್ಲಿ "ಶ್ರೀ"ಯವರ 'ಅಶ್ವತ್ಥಾಮನ್' ನಾಟಕದಲ್ಲಿ, ತಮಿಳಿನ ರೂಢಿಯನ್ನು ಅನುಸರಿಸಿಯೇ ಇರಬಹುದು, ಕಾಣಿಸಿಕೊಳ್ಳುತ್ತದೆ. ಮೇಳದವರನ್ನು ಭಾರ್ಗವಿ ತ್ವರೆಗೊಳಿಸುತ್ತಿದ್ದಾಳೆ :

ನಿಲ್ಲದಿರಿಂ, ಅಣ್ಣಂದಿರ್, ಓಡಿಂ. ತಡೆಯೆ ಪೊಟ್ಟಲ್ಲು, ಓ ನಲ್ಲಿರ್.
ಪಿಡಿಯಲ್ಕೆವೇಟ್ಟುಮೇ ಸಾಯಲ್ ಓಡುವವನ್ ! (ಪಂ. ೬೩೭-೮)

ಮೇಳನಾಯಕನು ಭಾರ್ಗವಿಯನ್ನು ಕುರಿತು ಆಡುವ "ಭಾರ್ಗವಕುಲದಾ ರತ್ನಮೆ, ನಲ್ಲಯ್, । ದ್ರೋಣನ ತಾಯೇ ಅಱಿಯದಳಲ್ಲಯ್..." ಎಂಬ ಕಡೆ (ಪಂ. ೧೮೬-೭) "ನಲ್ಲಯ್= ಒಳ್ಳೆಯವಳೇ!" ಎಂದೇ ಅರ್ಥವೆಂದು ತೋರುತ್ತದೆ. ಆ ಪಕ್ಷಕ್ಕೆ ಇದು ಏಕವಚನದ ಪ್ರಯೋಗಕ್ಕೆ ಉದಾಹರಣೆ.

೫. ವ್ಯಾಕರಣದ ಹೇಳಿಕೆಯಂತೆ "ಏನ್" ಸರ್ವನಾಮ, ಆದರೆ "ಏನಿಂ (ಏನಿ)" ಎಂಬಲ್ಲಿ ಅದು ಅವ್ಯಯದಂತೆಯೇ ವರ್ತಿಸುತ್ತದೆ.

ಹೊಸಗನ್ನಡದ "ಏನ್ರೀ" ಎಂಬುದು ಏನಿಂ (ಏನಿ) ಎಂಬ ರೂಪಕ್ಕೆ ಸಮಾನವೆಂದು ಮೇಲೆ ಸೂಚಿಸಿದೆಯಷ್ಟೇ. ಅರ್ಥದಲ್ಲಿ ಮಾತ್ರವಲ್ಲ, ವ್ಯಾಕರಣದಲ್ಲೂ ಸಮಾನತೆಯುಂಟು. ಹೊಸಗನ್ನಡದ ಬಳಕೆ ಮಾತಿನಲ್ಲಿ, "ಏನ್ರೀ" ಎಂಬಂತೆಯೇ "ಯಾಕ್ರೀ, ಎಲ್ರೀ, ಹ್ಯಾಗ್ರೀ, ಸಾಕ್ರೀ, ಬೇಕ್ರೀ" ಈ ಮೊದಲಾದ ಪ್ರಯೋಗಗಳು ಕೇಳಿಬರುತ್ತವೆ. ಇಲ್ಲೆಲ್ಲ .ಯಾಕೆ, ಎಲ್ಲಿ, ಹ್ಯಾಗೆ, ಸಾಕು, ಬೇಕು—ಎಂಬುದಕ್ಕೆ ಮಧ್ಯಮಪುರುಷ ಬಹುವಚನಾರ್ಥದಲ್ಲಿ "-ರೀ" ಎಂಬುದು ಸೇರಿರುವುದು ಸ್ಪಷ್ಟ. ಇಷ್ಟೇ ಅಲ್ಲ."ರೀ" ಎಂಬುದನ್ನೇ ಸ್ವತಂತ್ರವಾಗಿ ಸಂಬೋಧನಾರ್ಥದಲ್ಲಿ ಪ್ರಯೋಗಿಸುವುದೂ ಉಂಟು. ಉದಾಹರಣೆಗೆ—"ರೀ, ರೀ! ಇಲ್ಲಿ ಸ್ವಲ್ಪ ಬನ್ನಿ." ಹೀಗೆ ಹೊಸಗನ್ನಡದಲ್ಲಿ "ರೀ" ಎಂಬುದು ಹಳಗನ್ನಡದ ನಡುಗನ್ನಡಗಳ "-ಇಂ (ಇ)"ಗೆ ಪ್ರತಿನಿಧಿಯಾಗಿ ವರ್ತಿಸುವುದಲ್ಲದೆ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗುತ್ತದೆ.

"ರೀ"ಯ ಮೂಲವನ್ನು ಹುಡುಕಲು ಈಗ ಹಳಗನ್ನಡದ ಕಡೆಗೇ ತಿರುಗೋಣ. "-ಇರ್" ಎಂಬುದು ನಾವು ಹಿಂದೆಯೇ ನೋಡಿರುವಂತೆ ಮಧ್ಯಮಪುರುಷ ಬಹುವಚನದ ಇನ್ನೊಂದು ಪ್ರತ್ಯಯ; ಇದು ಅಲ್ಲಿ ಅಧಾತುಗಳಿಗೂ ಹತ್ತಬಲ್ಲುದು. ಈಚಿನ ಕನ್ನಡದಲ್ಲಿ "-ಇರ್" ಸ್ವರಾಂತವಾಗಿ "-ಇರಿ" ಎಂದಾಗುತ್ತದೆ. ಉದಾ.—ಬಂದಿರ್>ಬಂದಿರಿ. ಅಷ್ಟೇ ಅಲ್ಲ. ವಿಧ್ಯರ್ಥದಲ್ಲಿ ಕೂಡ "-ಇಂ" ಎಂಬುದರ ಸ್ಥಾನವನ್ನು ಬಲುಮಟ್ಟಿಗೆ ಆಕ್ರಮಿಸುತ್ತದೆ. ಉದಾ.—ಹ. ಗ. ಮಾಡಿಂ: ನ. ಗ. ಮಾಡಿ: ಹೊ. ಗ. ಮಾಡಿ, ಮಾಡಿರಿ ; ಹ. ಗ. ತಿಳಿಯಿಂ : ನ. ಗ. ತಿಳಿಯಿ : ಹೊ. ಗ. ತಿಳಿಯಿರಿ; ಇತ್ಯಾದಿ. ಹೀಗೆ ಪ್ರಚುರವಾಗಿರುವ "-ಇರ್ (ಇರಿ)" ಎಂಬುದರ ಜೊತೆಗೆ, ಸಂಬೋಧನ ವಿಭಕ್ತಿಯಲ್ಲಿ ಬಹುವಚನದ ನಾಮಪದಗಳ ಮೇಲೆ ಸೇರುವ "-ಇರ (ಇರಾ)" ಎಂಬೊಂದು ಆಗಮ ಬೇರೆ ಉಂಟು (ಶಬ್ದಮಣಿದರ್ಪಣ, ಸೂ. ೧೨೫). ಉದಾಹರಣೆಗೆ—ನಂಟರಿರ, ಬುಧರ್ಕಳಿರ, ಸುರತರುನಂದನಂಗಳಿರ, ಸೌಂದರಪರಿವಾರ ದೇವಿಯರಿರಾ! ಇತ್ಯಾದಿ. ಈ "-ಇರ್ (ಇರಿ)" "-ಇರ (ಇರಾ)"ಗಳ ಮೂಲ ಒಂದೇ ಆಗಿರಬೇಕೆಂದೂ ಹೊಸಗನ್ನಡದ "ರೀ" ಇವುಗಳ ಸಂತತಿಯಲ್ಲೇ ಉದಿಸಿರಬೇಕೆಂದೂ ಅರ್ಥರೂಪಗಳ ಸಾದೃಶ್ಯದಿಂದ ಚೆನ್ನಾಗಿ ಮನವರಿಕೆಯಾಗುತ್ತದೆ.[೬]

---

೬. ಬೇಡ, ಸಲ್ಲ, ಆಗ—ಈ ಮೊದಲಾದ ನಿಷೇಧ ರೂಪಗಳು ಹಳಗನ್ನಡದಲ್ಲಿ ಲಿಂಗ ವಚನಾದಿ ವಿವಕ್ಷೆಯಿಲ್ಲದೆ ಅವ್ಯಯದಂತೆ ಪ್ರಯೋಗ ಹೊಂದುತ್ತವೆ. ಆದರೆ ಹೊಸಗನ್ನಡದಲ್ಲಿ "ನೀನು ಮಾಡಬೇಡ" ಎಂಬುದು ಏಕವಚನವಾದರೆ ಬಹುವಚನದಲ್ಲಿ "ನೀವು ಮಾಡಬೇಡಿ, ಮಾಡಿಬೇಡಿರಿ" ಎಂಬಂತೆ ಪ್ರಯೋಗವುಂಟು. ಇಲ್ಲಿ "-ಇ. -ಇರಿ" ಎಂಬವು "ಬೇಡ" ಎಂಬುದಕ್ಕೆ ಬಹುವಚನಾರ್ಥದಲ್ಲಿ ಸೇರಿರುವುದು ಗಮನಾರ್ಹವಾಗಿದೆ. "ಏನಿಂ, ಗಡಿಂ" ಎಂಬವಕ್ಕೂ ಇದಕ್ಕೂ ಸ್ಪಷ್ಟವಾದ ಹೋಲಿಕೆಯುಂಟು. ಆದರೆ ಈ ಪ್ರಯೋಗಗಳು ನಮಗೆ ತಿಳಿದಮಟ್ಟಿಗೆ ಹೊಸಗನ್ನಡದಲ್ಲಿ ಮಾತ್ರ ಕಾಣಿಸಿಕೊಳ್ಳುವುದರಿಂದ "ಹೋಗು, ಹೋಗಿ, ಹೋಗಿರಿ"— ಈ ಬಗೆಯ ಮಧ್ಯಪುರುಷ ವಿಧಿಬಹುವಚನದ ರೂಪಗಳ ಸಾಮ್ಯದಿಂದ ಇವು ಸಿದ್ಧಿಸಿರುವ ಸಂಭವವೇ ಹೆಚ್ಚು.

ದ್ರಾವಿಡ ಭಾಷೆಗಳಲ್ಲಿ ಧಾತುಗಳಿಗೆ ಹತ್ತುವ ಪುರುಷವಾಚಕ ಪ್ರತ್ಯಯಗಳು (ಎಂದರೆ ಆಖ್ಯಾತ ಪ್ರತ್ಯಯಗಳು) ಪುರುಷವಾಚಕ ಸರ್ವನಾಮಗಳ ರೂಪಾಂತರ ವೆಂಬುದು ಪ್ರಸಿದ್ಧವಾದ ವಿಷಯ. ಈಗ ನಮಗೆ ಪ್ರಸಕ್ತವಾಗಿರುವ "–ಇಮ್, –ಇರ್"ಗಳಲ್ಲಿ "–ಇಮ್" ಎಂಬುದನ್ನು ಕುರಿತು ಸಂದೇಹ ಲೇಶವೂ ಇಲ್ಲ. "–ಇಮ್, ನೀಮ್" ಈ ಜೋಡಿಯ ಪರಸ್ಪರ ಸಂಬಂಧ ಯಾರಿಗಾದರೂ ಹೊಳೆಯುತ್ತದೆ. "–ಇರ್" ಎಂಬುದರ ವಿಷಯ ಹೇಗೆ? ಕನ್ನಡದಲ್ಲೇನೋ ಇದನ್ನು ಹೋಲುವ ಮಧ್ಯಮಪುರುಷ ಬಹುವಚನದ ಸರ್ವನಾಮರೂಪ ಯಾವುದೂ ಇಲ್ಲ. ಆದರೆ ಸೋದರ ಭಾಷೆಗಳಲ್ಲಿ ಉಂಟು. ಉದಾಹರಣೆಗೆ—ನೀರ್, ನೀಯಿರ್, ನೀವಿರ್ (ತಮಿಳು), ಈರು, ಮೀರು (ತೆಲುಗು), ಈರ್ (ತುಳು), ಈರು (ಕುಇ); ಇತ್ಯಾದಿ. ಅಲ್ಲದೆ ಇವಕ್ಕೆ ಸಮಾನವಾಗಿ, ಇರ್, ಈರ್ (ತಮಿಳು), –ರು, –ರಿ (ತೆಲುಗು) ಆರ್ (ತುಳು,) ಏರು (ಕುಇ)—ಇತ್ಯಾದಿ ಆಖ್ಯಾತಪ್ರತ್ಯಯಗಳೂ ಉಂಟು.[೭] ಇದನ್ನೆಲ್ಲ ನೋಡಿದರೆ, ಕನ್ನಡದ "–ಇರ್" ಈ ಶಾಖೆಗೇ ಸೇರಿದ್ದೆಂದು ಸ್ಪಷ್ಟಪಡುವುದಿಲ್ಲವೆ? ಇದಕ್ಕೆ ಸಮಾನವಾಗಿ ಪೂರ್ವ–ಕನ್ನಡದಲ್ಲಿ *ನೀರ್ ಎಂಬ ಮಧ್ಯಮಪುರುಷ ಬಹುವಚನ ಸರ್ವನಾಮ ರೂಪ ಇದ್ದಿರುವುದೂ ಅಸಂಭವವಲ್ಲ.[೮]

ಅಂತೂ "ನೀಮ್:–ಇಮ್; *ನೀರ್:–ಇರ್"—ಹೀಗೆ ಮಧ್ಯಮ ಪುರುಷ ಬಹುವಚನದ ಸರ್ವನಾಮವು (ಆಖ್ಯಾತಪ್ರತ್ಯಯರೂಪ ಸಮೇತವಾಗಿ) ಹಿಂದಿನಿಂದ ಎರಡು ಕವಲಾಗಿದೆ. ಇಲ್ಲಿ ಮತ್ತೆ ಸರ್ವನಾಮರೂಪವು ನಕಾರಸಹಿತವಾಗಿಯೂ ಆಖ್ಯಾತಪ್ರತ್ಯಯರೂಪವು ನಕಾರರಹಿತವಾಗಿಯೂ ಕಾಣಿಸಿಕೊಳ್ಳುತ್ತದೆ. ಆಖ್ಯಾತಪ್ರತ್ಯಯವು ಅಧಾತುಗಳಿಗೂ ಹತ್ತುವುದು ಅಪ್ರಚುರವಲ್ಲವಾದರೂ "ಗಡಿಂ, ಏನಿ"–ಎಂಬ ಕಡೆಗಳಲ್ಲಿ ಸೇರಿರುವುದು "–ಇಮ್ (ಇ)" ಎಂಬ ಪ್ರತ್ಯಯ; ರೂಢಿಯಾದ "–ಇರ್" ಅಲ್ಲ. ಅಲ್ಲದೆ ಇದು ಇಲ್ಲಿ ಅವ್ಯಯಗಳಿಗೆ ಸೇರಿ, ಸಂಬೋಧನ ವಿಭಕ್ತಿಯ ಅರ್ಥವನ್ನು ಕೊಡುವುದು ವಿಶೇಷಾಂಶ. "ರೀ" ಎಂಬುದು ಕಡೆಯಲ್ಲಂತೂ "–ಇರ್" ಪ್ರತ್ಯಯದ ರೂಪಾಂತರ ಸ್ವತಂತ್ರವಾಗಿಯೇ ನಿಂತುಬಿಟ್ಟಿದೆ. ಹಳಗನ್ನಡ,

---

೭ ನೀಯಿರ್, ನೀವಿರ್—ಮೊದಲಾದ ರೂಪಗಳಲ್ಲಿ ಕಾಣಬರುವ "–ಇರ್" ಎಂಬುದು ಬಹುವಚನಾರ್ಥದ ಉಕ್ತಿ; ನೀಯಿರ್=ನೀನು+ಇವರು. ಇಲ್ಲವೇ, "ಇರ್" ಎಂಬುದು ದ್ವಿಸಂಖ್ಯಾವಾಚಕ; ನೀಯಿರ್=ನೀವಿಬ್ಬರು (ಇದೇ ಮುಂದೆ ಬಹುವಚನಾರ್ಥವನ್ನೂ ಕೊಡುವಂತಾಗಿರಬೇಕು). ಹೀಗೆಂದು ಡಾ. ಕಾಲ್ಡ್‌ವೆಲ್ ಅವರ ಅಭಿಪ್ರಾಯ (Caldwell : *Comp. Drav. Gram.*, Pp. 406-7). ಆದರೆ ಮೂಲದ್ರಾವಿಡ ಭಾಷೆಯಲ್ಲಿ "ನೀಮ್ (ಇಮ್): ನೀರ್ (ಇರ್)"—ಈ ರೀತಿಯಾಗಿ ಮಧ್ಯಮಪುರುಷದ ಜೊತೆ ರೂಪಗಳು ಇದ್ದಿರುವುದು ಅಸಂಭವವೇ? ಇದು ವಿಚಾರರ್ಹವಾದ ಪ್ರಶ್ನೆ. ಅಲ್ಲದೆ ಮೂಲತಃ ಸರ್ವನಾಮರೂಪವು ನಕಾರ ಸಹಿತವಾಗಿದ್ದಿತೆ, ಇಲ್ಲವೇ ನಕಾರ ರಹಿತವಾಗಿದ್ದಿತೆ, ಎಂಬುದೂ ಪರಿಶೀಲನೆಗೆ ತಕ್ಕ ಸಮಸ್ಯೆ

೮. ಕನ್ನಡ ಕೈಪಿಡಿ, ಸಂ. ೧, ಪು. ೪೩೭–೮ನ್ನು ಹೋಲಿಸಿ.

ನಡುಗನ್ನಡ, ಹೊಸಗನ್ನಡ—ಈ ಮೂರು ಅವಸ್ಥಾನಗಳಲ್ಲೂ ಈ ಬಗೆಯ ಪ್ರಯೋಗ ವಿರಳವಾಗಿಯಾದರೂ ಕಾಣಿಸಿಕೊಂಡಿರುವುದು ಮತ್ತೊಂದು ಗಮನಾರ್ಹವಾದ ಅಂಶ. ಮಧ್ಯಮಪುರುಷದ ಸರ್ವನಾಮಕ್ಕೆ ಸಂಬೋಧನ ವಿಭಕ್ತಿಯ ಆವಶ್ಯಕತೆ ಎಷ್ಟೆಂಬುದು ಇದರಿಂದ ವಿಶದವಾಗುತ್ತದೆ.

ಮಿಕ್ಕ ಮಾತು—"ಏನಿ" ಎಂಬ ರೂಪ ಇಂದಿನ ಮಾತಿನಲ್ಲೂ ಅಲ್ಲಲ್ಲಿ ಉಳಿದಿದೆ ಯೆಂದು ಈ ಲೇಖನವನ್ನು ಅಚ್ಚಿಗೆ ಕಳಿಸಿದೀಚೆಗೆ ತಿಳಿಯಬಂದಿತು. ಹಿರಿಯರನ್ನಾಗಲಿ ಗೌರವಸ್ಥರನ್ನಾಲಿ ಉದ್ದೇಶಿಸಿ ಮಾತಾಡುವಾಗ, ಬೆಂಗಳೂರು ಜಿಲ್ಲೆಯ ಮತ್ತು ಮಲೆನಾಡಿನ ಕೆಲವು ಭಾಗಗಳಲ್ಲಿ ಹಳ್ಳಿಯ ಜನರಲ್ಲಿ ಕೆಲವು ವರ್ಗದವರು "ಏನಿ" ಎಂದು ಈಗಲೂ ಹೇಳುವುದುಂಟಂತೆ. ಕನ್ನಡನಾಡಿನ ಇತರ ಕೆಲವು ಭಾಗಗಳಲ್ಲು ಇದು ರೂಢಿಯಲ್ಲಿರುವುದು ಅಸಂಭವವಲ್ಲ.

"ರೀ" ಎಂಬುದಕ್ಕೆ ಸಂಬಂಧಿಸಿದ ಗಮನಾರ್ಹವಾದ ಪ್ರಯೋಗವೊಂದನ್ನು ಇಲ್ಲಿಯೇ ಉಲ್ಲೇಖಿಸಬಹುದು. "ಕೆಲಸ ಆಯಿತ್ರು", "ಅವರು ಮನೇಲಿ ಇಲ್ರ"—ಈ ರೀತಿಯಾಗಿ ಗೌರವಸ್ಥರೊಂದಿಗೆ ಹಳ್ಳಿಯ ಕೆಲವು ಜನ ಮಾತಾಡುವುದುಂಟು. ಇಲ್ಲಿ ಕ್ರಿಯಾವಾಚಿಗಳಾದ "ಆಯಿತು; ಇಲ್ಲ" ಎಂಬುದಕ್ಕೆ ಬಹುವಚನಾರ್ಥದಲ್ಲಿ '-ರ್-' ಸೇರಿದೆಯೆಂಬುದು ಸ್ಪಷ್ಟ ಇಲ್ಲಿಯ ಹೆಚ್ಚಿನ ವಿಶೇಷವೇನೆಂದರೆ, ಕ್ರಿಯಾವಾಚಿಯ ಅಂತ್ಯಸ್ವರ ಸ್ವಸ್ಥಾನವನ್ನು ಬಿಟ್ಟು "-ರ್-" ಎಂಬುದರ ಮುಂದೆ ಕಾಣಿಸಿಕೊಳ್ಳುತ್ತದೆ.

೧೯೪೭]

ಸಮಾಲೋಕನ : ೧೯೫೮

---

೯. ಈ ಲೇಖನದಲ್ಲಿ ಸಂದರ್ಭವಶದಿಂದ ಮಧ್ಯಮಪುರುಷ ಬಹುವಚನವನ್ನೇ ಮುಖ್ಯವಾಗಿ ಕುರಿತು ಪ್ರಸ್ತಾವಿಸಿದೆ. ಏಕವಚನದ ವಿಷಯವಾಗಿ ಪ್ರತ್ಯೇಕ ವಿಚಾರ ಆವಶ್ಯಕ.

'ಅಮರವಾಣಿ'*

ಈಗ ನಡೆಯುತ್ತಿರುವ ನಾಡಹಬ್ಬದ ಮಂಗಳ ಮಹೋತ್ಸವದ ಸಮಯದಲ್ಲಿ ನೂತನ ಪದವೀಧರರು ಸಂಸ್ಕೃತ ವಿದ್ವತ್ ಪ್ರಶಸ್ತಿಗಳನ್ನು ಪಡೆಯುವ ಸಮಾರಂಭದಲ್ಲಿ ಪ್ರಾಸ್ತಾವಿಕವಾದ ನಾಲ್ಕು ಮಾತು ಗಳನ್ನು ಹೇಳಬೇಕೆಂದು ನನಗೆ ಕರೆ ಬಂದಾಗ ಮನಸ್ಸಿನಲ್ಲಿ ಮೊದಲು ಮೂಡಿದ ಭಾವಗಳೆಂದರೆ ಆಶ್ಚರ್ಯ ಮತ್ತು ಅಧೈರ್ಯ. ನಾನು ಶಾಲಾಕಾಲೇಜುಗಳಲ್ಲಿ ಮಿಕ್ಕ ವಿಷಯಗಳ ಜೊತೆಗೆ ಸಂಸ್ಕೃತವನ್ನು ಕೆಲಮಟ್ಟಿಗೆ ಕಲಿತವನೇ ಹೊರತು ಅದನ್ನೇ ಏಕನಿಷ್ಠೆಯಿಂದ ಪ್ರಾಚೀನ ಸಂಪ್ರದಾಯದ ಮೇರೆಗೆ ಅಧ್ಯಯನ ಮಾಡಿದವನಲ್ಲ; ನನ್ನ ಆಧ್ಯಾಪನದ ವಿಷಯವಾದರೂ ಸಂಸ್ಕೃತದ ಸಾಕು ಮಗಳೆನ್ನಬಹುದಾದ ಕನ್ನಡವಲ್ಲದೆ ಪ್ರತ್ಯಕ್ಷವಾಗಿ ಸಂಸ್ಕೃತವಲ್ಲ. ಹೀಗಿರುವಲ್ಲಿ ನನಗೆ ಈ ಗೌರವ ಹೇಗೆ ಲಭಿಸಿತು ಎಂದು ಆಶ್ಚರ್ಯವಾಯಿತು. ನನಗೆ ಅಜ್ಞಾತವಾದ ಯಾವ ಸುಕೃತದಿಂದಲೋ ಒದಗಿರುವ ಈ ಗುರುಭಾರವನ್ನು ಹೇಗೆ ನಿರ್ವಹಿಸಿ ಯೇನು ಎಂದು ಅಧೈರ್ಯವೂ ಸುಳಿಯಿತು. ಆದರೂ

---

* ಹೇವಿಳಂಬಿನಾಮ ಸಂವತ್ಸರದ ಆಶ್ವಯುಜ ಶುದ್ಧ ನವಮಿ ಬುಧವಾರದಂದು (ತಾ॥ ೨-೧೦-೧೯೫೭) ಮೈಸೂರು ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಡೆದ ಸಂಸ್ಕೃತ ವಿದ್ವತ್ ಪ್ರಶಸ್ತಿ ವಿತರಣ ಮಹೋತ್ಸವ ಸಂದರ್ಭದಲ್ಲಿ ಮಾಡಿದ ಸಮಾರಂಭ ಭಾಷಣ.

ಸಂಸ್ಕೃತದಲ್ಲಿ ನನಗಿರುವ ಅಮಿತವಾದ ಪ್ರೀತಿಯಿಂದ ಪ್ರಚೋದನೆ ಪಡೆದು, ಅದರ ಮಹಿಮೆಯ, ಸೊಬಗಿನ ನಾಲ್ಕು ಎಳೆಗಳನ್ನಾದರೂ ಗುರುತಿಸುವಂತೆ ನನ್ನ ಕಣ್ಣು ತೆರೆದ ಕೀರ್ತಿಶೇಷ ಆಚಾರ್ಯ ಎಂ. ಹಿರಿಯಣ್ಣನವರನ್ನು ಭಕ್ತಿಯಿಂದ ನೆನೆದು, ಈ ವಿದ್ವತ್ಸಭೆಯನ್ನು ಸಂಬೋಧಿಸಲು ದಿಟ್ಟತನದಿಂದ ಎದ್ದು ನಿಂತಿದ್ದೇನೆ. ನನ್ನ ಆಲೋಚನೆಯ ಸರಣಿಯಲ್ಲಿ ಅಸಾಂಗತ್ಯವೇನಾದರೂ ಇದ್ದರೆ, ಆಧುನಿಕ ದೃಷ್ಟಿಯಿಂದ ನಿರೂಪಿಸುವಾಗ ನನ್ನ ಮಾತು ಒಮ್ಮೊಮ್ಮೆ ಯಾರೊಬ್ಬರ ಶ್ರದ್ಧೆಯನ್ನಾದರೂ ಕೆಣಕಿದರೆ, ಅದನ್ನೆಲ್ಲ ದಯವಿಟ್ಟು ಕ್ಷಮಿಸಬೇಕೆಂದು ಬೇಡುತ್ತೇನೆ.

ಮಾನವ ವ್ಯವಹಾರವು ಲೋಕದಲ್ಲಿ ತೊಡಗಿದಂದಿನಿಂದ ಎಷ್ಟೋ ಭಾಷೆಗಳು ಮೈದೋರಿವೆ, ಜನರ ನಾಲಗೆಗಳಲ್ಲಿ ನರ್ತಿಸಿವೆ, ಕಿವಿಗಳಲ್ಲಿ ಝೇಂಕರಿಸಿವೆ, ಸಾಹಿತ್ಯದಲ್ಲಿ ಉಲ್ಲೇಖಗೊಂಡಿವೆ, ಕಡೆಗೆ ಹೆಸರನ್ನು ಮಾತ್ರ ಉಳಿಸಿ ಒಮ್ಮೊಮ್ಮೆ ಆ ಅವಶೇಷವೂ ಇಲ್ಲದೆ, ಗತಿಸಿವೆ. ಈ ಸಾವಿರಾರು ಭಾಷೆಗಳಲ್ಲಿ ಸಂಸ್ಕೃತದ ಸ್ಥಾನ ಬಲುಮಟ್ಟಿಗೆ ಅಪೂರ್ವದ್ದೆಂಬುದನ್ನು ಅದರ ವಿಷಯವಾಗಿ ಹೆಚ್ಚು ಶ್ರದ್ಧೆಯಿಲ್ಲದವರು ಕೂಡ ಒಪ್ಪಬೇಕೆಂದು ನನಗೆ ತೋರುತ್ತದೆ. ಸಂಸ್ಕೃತವು ಭರತಭೂಮಿಯಲ್ಲಿ ಜನರು ಆಡುವ ಮಾತಾಗಿ, ಸಮಾಜದ ಕೆಲವು ವರ್ಗಗಳಲ್ಲಾದರೂ ಮಕ್ಕಳು ಎಳೆತನದಿಂದ ತಾಯ ಮಡಿಲಲ್ಲಿ ಕಲಿತ ನುಡಿಯಾಗಿ, ವಿಜೃಂಭಿಸಿದ ಕಾಲವೊಂದಿತ್ತು. ಸಂಸ್ಕೃತದ ಈ ಭಾಷಿತ ರೂಪ ಹೇಗಿದ್ದಿರಬಹುದೆಂದು ಆಧಾರ ಸಮೇತವಾಗಿ ವಿದ್ವಾಂಸರು ಪ್ರತಿಪಾದಿಸಿರುವುದೂ ಉಂಟು. ಆದರೆ ಸಂಸ್ಕೃತದ ಈ ಅವಸ್ಥಾನ ವಿಶೇಷವು ಮುಗಿದು ಬಹುಶಃ ಇಪ್ಪತ್ತು ಇಪ್ಪತ್ತೈದು ಶತಮಾನಗಳು ಕಳೆದಿರಬೇಕು. ಕಾಲಚಕ್ರದ ಪರಿವರ್ತನೆ ಯಲ್ಲಿ ಯಾವುದೊಂದು ಸ್ಥಿತಿಗೂ ಸ್ಥಿರತೆಯಿಲ್ಲ. ಮಹರ್ಷಿ ಪಾಣಿನಿಯ ಶಬ್ದಾನುಶಾಸನದ ರಕ್ಷಾಬಂಧನವಿದ್ದರೂ ಭಾಷಾಗತಿ ನಿಲ್ಲಲಿಲ್ಲ. ಪ್ರಾಕೃತಗಳು ಬೆಳೆದುವು; ಅಪಭ್ರಂಶಗಳು ಆವಿರ್ಭವಿಸಿದುವು; ಇಂದಿನ ಹಿಂದಿ, ಬಂಗಾಳಿ, ಮರಾಠಿ ಮೊದಲಾದ ಹತ್ತಾರು ಶಾಖೆಗಳಾಗಿ ಭಾರತೀಯ-ಆರ್ಯ ಮೂಲಭಾಷೆ ಹರಡಿಕೊಂಡಿತು. ಇತ್ತ ತಮಿಳು, ತೆಲುಗು, ಕನ್ನಡ ಮೊದಲಾದ ದ್ರಾವಿಡ ಭಾಷೆಗಳಂತೂ ತಮ್ಮ ದಾರಿಯಲ್ಲಿ ಹರಿದುವು. ಹೀಗಾಗಿ ಇಂದಿನ ಭಾರತದಲ್ಲಿ ಬಹುಶಃ ಯಾವ ವರ್ಗದಲ್ಲಿ ಕೂಡ ಸಂಸ್ಕೃತವು ಪರಂಪರಾಗತವಾದ ಮನೆಮಾತಾಗಿ ಉಳಿದಿಲ್ಲ.

ಹೀಗೆಂದ ಮಾತ್ರಕ್ಕೆ ಸಂಸ್ಕೃತವು ಅಳಿಯಿತೆಂದು ಸರ್ವಾತ್ಮನಾ ಅಭಿಪ್ರಾಯವಲ್ಲ. "ಸಂಸ್ಕೃತವು ಮೃತಭಾಷೆ" ಎಂಬ ಹೇಳಿಕೆ ಕೆಲವರ ಬಾಯಿಂದ ಒಮ್ಮೊಮ್ಮೆ ಹೊರಬೀಳುವುದುಂಟು. ಅದರಲ್ಲಿ ಒಂದು ವಕ್ರ ಧ್ವನಿಯನ್ನು ಗುರುತಿಸಿ ಅಭಿಮಾನಿಗಳು ಸಹಜವಾಗಿ ಕೆರಳುವುದೂ ಉಂಟು. "ಮೃತಭಾಷೆ" ಎಂಬುದರ ಸರಿಯಾದ ಅರ್ಥವನ್ನು ಗ್ರಹಿಸಿದರ ಇಲ್ಲಿಯ ವಿವಾದ ಬಲುಮಟ್ಟಿಗೆ ಪರಿಹಾರವಾಗಬಹುದೆಂದು ತೋರುತ್ತದೆ. ಇದೊಂದು ಲಾಕ್ಷಣಿಕೋಕ್ತಿ. ಒಂದು ಭಾಷೆ ಸಮಾಜದ ಯಾವುದಾದರೂ ಒಂದು ಭಾಗದ ಮನೆಮಾತಾಗಿ, ಅದರ ಸಾಮಾನ್ಯ ವ್ಯವಹಾರದ ಸಾಧನವಾಗಿ ಉಳಿದಿಲ್ಲ

ಎಂಬುದಿಷ್ಟೇ ಈ ಚರ್ಚಾಸ್ಪದವಾದ ಮಾತಿನ ಸರಳಾರ್ಥ. ಈ ಅರ್ಥದಲ್ಲಿ—ಈ ಅರ್ಥದಲ್ಲಿ ಮಾತ್ರ—ಪ್ರಾಚೀನ ಗ್ರೀಕ್, ಲ್ಯಾಟಿನ್ ಮೊದಲಾದವುಗಳಂತೆ ಸಂಸ್ಕೃತವೂ ಮೃತಭಾಷೆ ಎಂದು ಯಾರಾದರೂ ಹೇಳಿದರೆ, ಅಭಿಮಾನಿಗಳು ಅದರಿಂದ ಮನಸ್ಸಿಗೆ ಖೇದ ಹತ್ತಿಸಿಕೊಳ್ಳಬೇಕಾಗಿಲ್ಲ. ಇನ್ನೊಂದು ರೀತಿಯಲ್ಲಿ ಸಂಸ್ಕೃತವು ಪ್ರಪಂಚದ ಅನೇಕ ಜೀವಂತ ಭಾಷೆಗಳಿಗಿಂತ ಹೆಚ್ಚು ಜೀವಂತವಾಗಿ, ಅಮೃತವಾಣಿಯಾಗಿ ಕಂಗೊಳಿಸುತ್ತಿದೆಯೆಂಬುದನ್ನು ಅಷ್ಟೇನೂ ಕಷ್ಟವಿಲ್ಲದೆ ಮನಗಾಣಿಸಬಹುದು.

ನಮ್ಮ ಹಿರಿಯರ ನಂಬಿಕೆಯಂತೆ ಸಂಸ್ಕೃತವು ದೇವತೆಗಳ—ಅಮರರ—ಭಾಷೆ ಹೌದೆ ಅಲ್ಲವೆ ಎಂಬುದು ನಮ್ಮ ಸಾಮಾನ್ಯ ಪ್ರಜ್ಞೆಗೆ ನಿಲುಕದಿರುವ ವಿಷಯವಾದ ಕಾರಣ ಅದನ್ನು ಕುರಿತು ನಾನು ಏನನ್ನೂ ಹೇಳಲು ಇಷ್ಟಪಡುವುದಿಲ್ಲ. ಹಿಂದೂ ಧರ್ಮದ ಶ್ರುತಿಸ್ಮೃತಿಗಳು; ಇತಿಹಾಸ ಪುರಾಣಗಳು ಸಂಸ್ಕೃತದಲ್ಲೇ ರೂಪು ತಳೆದಿರುವುದರಿಂದ ಅದು ನಮ್ಮ ಜನಜೀವನದ ಪೂಜ್ಯವೂ ಅವಿಭಾಜ್ಯವೂ ಆದ ಅಂಶವಾಗಿ ನೆಲೆಗೊಂಡು, ಆ ಮಟ್ಟಿಗಾದರೂ "ಅಮರ"ವಾಗಿ ಪ್ರತಿಷ್ಠಿತವಾಗಿರುವುದು ನಿಜ. ಎಲ್ಲರೂ ಬಲ್ಲ ಈ ವಿಷಯವನ್ನು ವಿಸ್ತರಿಸುವ ಉದ್ದೇಶವೂ ಇಂದು ನನಗಿಲ್ಲ. ಲೌಕಿಕ ದೃಷ್ಟಿಗೆ ಕೂಡ ಈ ಭಾಷೆಯಲ್ಲಿ ಗೋಚರವಾಗುವ ಇನ್ನೊಂದು ಅಮರತ್ವವನ್ನು ಇಲ್ಲಿ ಸ್ವಲ್ಪ ಮಟ್ಟಿಗೆ ಪ್ರಸ್ತಾವಿಸಬೇಕೆನ್ನಿಸುತ್ತದೆ. ಸಂಸ್ಕೃತದ ಶಬ್ದಕೋಶವನ್ನು ತೆಗೆದುಕೊಳ್ಳೋಣ. ಸಂಸ್ಕೃತದ ಪ್ರಾಚೀನಾವಸ್ಥಾನದಿಂದ ಈಚೆಗೆ ಪ್ರಾಕೃತಗಳೂ ಅಪಭ್ರಂಶಗಳೂ ಭಾರತೀಯರನೇಕರ ನಾಲಗೆಗಳಲ್ಲಿ ತಾಂಡವವಾಡಿದುವಷ್ಟೆ. ಆದರೆ ಅವುಗಳಲ್ಲಿ ರೂಪುಗೊಂಡ ಅನೇಕ ತದ್ಭವಗಳು ಈಗ ಎಲ್ಲಿ? "ಕಿದ", "ಖೀಣ", "ದಲಿದ್ದ" "ಪುಪ್ಫ" ಎಂದು ಕಿವಿಗೆ ಬಿದ್ದರೆ ಅಪ್ರವೀಣರು ಕ್ಷಣಕಾಲವಾದರೂ ಭ್ರಮೆಗೊಳ್ಳುತ್ತಾರೆ. "ಕೃತ", "ಕ್ಷೀಣ", "ದರಿದ್ರ", "ಪುಷ್ಪ" ಮೊದಲಾದ ಸಂಸ್ಕೃತ ರೂಪಗಳನ್ನು ಕೇಳಿದಾಗ ಆ ತೊಡಕು ಪರಿಹಾರವಾಗುತ್ತದೆ. ಸಂಸ್ಕೃತ ನಾಟಕಗಳನ್ನು ಓದುವವರಲ್ಲಿ ಎಷ್ಟು ಮಂದಿ ಪ್ರಾಕೃತದ ವಾಕ್ಯಗಳನ್ನು ಅವುಗಳ ಪಾಡಿಗೇ ಬಿಟ್ಟು ಸಂಸ್ಕೃತಚ್ಛಾಯೆಯನ್ನೇ ಸೌಲಭ್ಯಕ್ಕಾಗಿ ಆಶ್ರಯಿಸುವುದಿಲ್ಲ! ಕಾಲಗತಿಯಲ್ಲಿ ಈಚೆಗೆ ಬಂದ ತದ್ಭವಗಳಿಗಿಂತ ಮೂಲ ಸಂಸ್ಕೃತ ರೂಪಗಳೇ ಇಂಥ ಅನೇಕ ಸಂದರ್ಭದಲ್ಲಿ ದೃಢಸತ್ತ್ವವುಳ್ಳವುಗಳಂತೆ ವರ್ತಿಸಿವೆ.

ಕನ್ನಡದ ದಿಕ್ಕಿನಿಂದಲೂ ಈ ವಿಷಯವನ್ನು ಸಮರ್ಥಿಸಬಹುದು. ಕನ್ನಡದ ಪ್ರಾಚೀನಾವಸ್ಥೆಯಲ್ಲಿ ಸಾವಿರ ವರ್ಷಗಳಿಗೆ ಹಿಂದೆ, ಅದಕ್ಕೂ ಹಿಂದೆ, ನೂರಾರು ಸಂಸ್ಕೃತ ಶಬ್ದಗಳು ಭಾಷೆಗೆ ಸೇರಿದಂತೆಯೇ, ನೂರಾರು ತದ್ಭವಗಳೂ—ಬಲುಮಟ್ಟಿಗೆ ಪ್ರಾಕೃತಗಳ ಮೂಲಕ—ಬಳಕೆಗೆ ಬಂದವು. ಇವುಗಳಲ್ಲಿ ಕೆಲವು ಕೇವಲ ವೈದುಷ್ಯದ ಶಬ್ದಗಳಾಗಿರಬಹುದು. ಆದರೆ ಬೆಜ್ಜ, ಮಿಟ್ಟು, ಅಂಚೆ, ಸಕ್ಕಿ—ಇಂಥವು ಜನರೂಢಿಯ ಮಾತಿನಲ್ಲೂ ಹರಡಿದ್ದುವೆಂಬುದರಲ್ಲಿ ಸಂದೇಹವಿಲ್ಲ. ಈಗ ಅವು ವಿದ್ವಾಂಸರಲ್ಲದ ಯಾರಿಗೆ ಅರ್ಥವಾಗುತ್ತವೆ? ವೈದ್ಯ, ಮೃತ್ಯು, ಹಂಸ, ಸಾಕ್ಷಿ ಎಂಬ ಸಂಸ್ಕೃತ ರೂಪಗಳನ್ನೇ

ಈಗ ಸಾಮಾನ್ಯರೂ ಬಳಸುತ್ತಾರೆ. ಇಷ್ಟೇ ಅಲ್ಲ. ಕನ್ನಡದಲ್ಲಿ ಆದಿಯಿಂದ ರೂಢಿಯಲ್ಲಿದ್ದ ಅನೇಕ ದ್ರಾವಿಡ ಶಬ್ದಗಳನ್ನು ಕೂಡ ಸಂಸ್ಕೃತ ಶಬ್ದಗಳು ಮೂಲೆಗೊತ್ತಿ ಅವುಗಳ ಸ್ಥಾನವನ್ನು ಜನತೆಯ ನುಡಿಯಲ್ಲಿ ಆಕ್ರಮಿಸಿವೆ. ಬಾನ್, ನೇಸಱ್, ಪೆಱ್, ಅಜಿಲ್ ಎಂದರೆ ಏನೆಂದು ತಿಳಿಯಬೇಕಾದರೆ ಹಳಗನ್ನಡದ ನಿಘಂಟಿಗೆ ಶರಣು ಹೋಗಬೇಕು. ಆಕಾಶ, ಸೂರ್ಯ, ಚಂದ್ರ, ನಕ್ಷತ್ರ ಎಂದು ಕ್ರಮವಾಗಿ ಇವುಗಳ ಅರ್ಥವೆಂದು ಸಂಸ್ಕೃತದ ಮಾತಿನ ಮೂಲಕ ತಿಳಿದುಕೊಳ್ಳಬೇಕು. ಕನ್ನಡಿಗರ ಮಾತಿನಲ್ಲೇ ಹಳಗನ್ನಡದ ಹಲವು ಶಬ್ದಗಳು ಅಳಿದು ಅವುಗಳ ಸ್ಥಾನದಲ್ಲಿ ಸಂಸ್ಕೃತ ಶಬ್ದಗಳು ಸಜೀವವಾಗಿ ಪ್ರಯೋಗದಲ್ಲಿವೆಯೆಂಬುದು ಇದರಿಂದ ಸ್ಫುಟವಾಗುವುದಿಲ್ಲವೆ?

ಬಳಕೆಯ ಪದಾರ್ಥಗಳನ್ನು ಕುರಿತೇ ಹೀಗಾದಮೇಲೆ ಶಾಸ್ತ್ರವಿಷಯವನ್ನು ಕುರಿತು ಏನನ್ನು ಹೇಳುವುದು! 'ಕಾವ್ಯಾದರ್ಶ'ದಲ್ಲಿ ದಂಡಿ ಬೇರೊಂದು ಪ್ರಸಂಗದಲ್ಲಿ ಹೇಳಿದ "ಶಾಸ್ತ್ರೇಷ್ವಸ್ಯೈವ ಸಾಮ್ರಾಜ್ಯಂ" ಎಂಬ ಮಾತನ್ನು ಸಂಸ್ಕೃತಕ್ಕೆ ಅನ್ವಯಿಸ ಬೇಕೆನ್ನಿಸುತ್ತದೆ. ಪ್ರಾಚೀನಕಾಲದಲ್ಲಂತೂ ನಮ್ಮ ದೇಶದಲ್ಲಿ ಸಂಸ್ಕೃತವೊಂದೇ ಶಾಸ್ತ್ರಭೂಮಿಕೆಯಾಗಿತ್ತು. ಸೂಕ್ಷ್ಮವಾದ, ಗಹನವಾದ ಸಮಸ್ತ ವಿಚಾರಸರಣಿಗೂ ಅದೇ ಪಾರಿಭಾಷಿಕ ಶಬ್ದಕೋಶವನ್ನು ಒದಗಿಸಿತು. ಹಿಂದಿನ ಶಾಸ್ತ್ರಗಳು ಹಾಗಿರಲಿ. ಇಂದಿನ ಅತ್ಯಾಧುನಿಕ ವಿಜ್ಞಾನಗಳ ನಿರೂಪಣೆಗೆ ಕೂಡ ಈ ಶಬ್ದಭಂಡಾರವನ್ನು ಅಳವಡಿಸಿ ಕೊಳ್ಳಬಹುದು. ಇತ್ತ ಉಪಸರ್ಗಗಳು, ಅತ್ತ ಪ್ರತ್ಯಯಗಳು, ನಡುವೆ ಧಾತುಗಳು : ಇವನ್ನು ಹದವರಿತು ಜೋಡಿಸಿಕೊಂಡರೆ ಯಾವುದೇ ಭಾವವನ್ನಾದರೂ ಅಡಕವಾಗಿ ಧಾರಣೆ ಮಾಡಬಲ್ಲ, ಎಂಥ ಸೂಕ್ಷ್ಮ ಭೇದಗಳನ್ನಾದರೂ ಪ್ರತ್ಯೇಕಿಸಬಲ್ಲ ಶಬ್ದರಾಶಿಯನ್ನು ಸೃಷ್ಟಿಮಾಡಬಹುದು. ಆದರೆ ಅಂಥ ಶಬ್ದಗಳು ಕ್ಲಿಷ್ಟವಾಗದಂತೆ, ಕೇವಲ ವಿದಗ್ಧಪ್ರಿಯವಾಗದಂತೆ ಮಾತ್ರ ಎಚ್ಚರಿಕೆ ವಹಿಸಬೇಕು. ಆರ್ಯವರ್ಗ ದ್ರಾವಿಡವರ್ಗಗಳಿಗೆ ಸೇರಿದ ಎಲ್ಲ ಭಾರತೀಯ ಭಾಷೆಗಳೂ—ಒಂದೆರಡನ್ನು ಬಿಟ್ಟರೆ—ಸಂಸ್ಕೃತದಿಂದಲೇ ತಮ್ಮ ಶಾಸ್ತ್ರೀಯ ಶಬ್ದಸಂಪತ್ತನ್ನು ಮುಖ್ಯವಾಗಿ ಪಡೆದಿರತಕ್ಕವು, ಇನ್ನು ಮುಂದೆಯೂ ಪಡೆಯತಕ್ಕವು. ಮೊನ್ನೆ ತಾನೆ ಹೊರಬಿದ್ದ ಕನ್ನಡ ಭೌತವಿಜ್ಞಾನ ಗ್ರಂಥವೊಂದರ 'ಪರಿಭಾಷೆಯ ಶಬ್ದಕೋಶ'ವನ್ನು ಹಾಗೆಯೇ ತೆರೆದು ನೋಡಿದೆನು. ಅದರ ಮೊದಲನೆಯ ಪುಟದಲ್ಲಿ—ಅಕ್ಷ, ಅಗ್ನಿಮಾಪಕ, ಅಡಿ, ಅಡಿಬತ್ತಿ, ಅಡ್ಡಲೆ, ಅಣುಗಣಿತ, ಅಣುಗಳು, ಅಣುಚಲನಮತ, ಅತಿಕೇಂದ್ರತೆ, ಅತಿನೀಲ, ಅತಿಶ್ರುತಿ, ಅತ್ಯಲ್ಪ ದಿಕ್ಪಲ್ಲಟ, ಅಧಶ್ಚರ, ಅಧಿಪತಿತರಶ್ಮಿ, ಅಧಿಪಾತಕೋನ, ಅಧಿಪಾತಸಮತಲ, ಅಧೀನ ತರಂಗಮುಖ, ಅಧೋವಾಟ, ಅನಿಲತಾಪಮಾಪಕ, ಅನುಕಾಂತೀಯ ವಸ್ತುಗಳು, ಅನುಪಾತಕ ಸೂಚಕಸಂಖ್ಯೆ—ಇಷ್ಟು ಶಬ್ದಗಳಿವೆ. ಈ ಇಪ್ಪತ್ತೊಂದು ಶಬ್ದಗಳಲ್ಲಿ ಮೂರು ಹೊರತು ಮಿಕ್ಕೆಲ್ಲವೂ ಕೇವಲ ಸಂಸ್ಕೃತದವು! ಆ ಪುಸ್ತಕದ ಮಿಕ್ಕ ಪುಟಗಳಲ್ಲೂ ಈ ಪರಿಮಾಣ ಹೆಚ್ಚು ಕಡಿಮೆ ಹೀಗೆಯೇ ಇರಬೇಕೆಂದು ನಂಬಬಹುದು.

ಪರಿಭಾಷೆಯ ವಿಚಾರ ಹಾಗಿರಲಿ "ರೇಡಿಯೋ" ಎಂಬುದಕ್ಕೆ ನಮ್ಮ ದೇಶಭಾಷೆಗಳಲ್ಲಿ ಸಮಾನಪದ ಏನಾಗಿರಬೇಕೆಂಬ ವಿಚಾರ ಕೆಲವು ವರ್ಷಗಳ ಹಿಂದೆ

ಹೊರಟಾಗ "ಆಕಾಶವಾಣಿ" ಎಂಬ ಸಂಸ್ಕೃತ ಶಬ್ದವನ್ನು ಕುಶಲಮತಿಗಳೊಬ್ಬರು ಎತ್ತಿಹಿಡಿದರು. ಅಶರೀರವಾದ ದೈವೀವಾಣಿಯೆಂಬ ಹಳೆಯ ಅರ್ಥಕವಚವನ್ನು ಅದು ಕಳಚಿಬಿಟ್ಟು ಹೊಸ ಅರ್ಥದಲ್ಲಿಯೇ ಈಗ ರೂಢಿಗೊಂಡಿದೆ. "ಬಾನುಲಿ" ಎಂಬ ಅದಕ್ಕೆ ಸಮನಾದ ಕನ್ನಡ ಶಬ್ದವನ್ನು ಪ್ರಖ್ಯಾತ ವಿದ್ವಾಂಸರೊಬ್ಬರು ಸೂಚಿಸಿದರೂ ಅದನ್ನು ನಮ್ಮ ಜನತೆ ಬಳಕೆಗೆ ತರಲಿಲ್ಲ. (ತಮಿಳಿನಲ್ಲಿ ಮಾತ್ರ "ವಾನೋಲಿ" ಎಂಬುದು ಪ್ರಚುರವಾಗಿದೆ.) ನಮ್ಮ ದೇಶಭಾಷೆಯಲ್ಲಿ ವೈಜ್ಞಾನಿಕ ಶಾಸ್ತ್ರಗಳನ್ನು ಪ್ರೌಢ ತರಗತಿಗಳಿಗೆ ಬೋಧಿಸಬೇಕಾದರೆ, ಆ ವಿಷಯದ ಗ್ರಂಥರಾಶಿ ಬೆಳೆಯಬೇಕಾದರೆ, ಅಖಿಲ ಭಾರತಕ್ಕೆ ಅನ್ವಯಿಸಬಲ್ಲ ಪಾರಿಭಾಷಿಕ ಶಬ್ದಕೋಶವು ನಿರ್ಮಾಣವಾಗಿ ಅಂಗೀಕಾರ ಪಡೆಯಬೇಕಾದದ್ದು ಅತ್ಯವಶ್ಯ. ಕೆಲವು ಜಟಿಲ ಸಮಸ್ಯೆಗಳನ್ನು ಇಲ್ಲಿ ಎದುರಿಸಬೇಕಾಗಿರುವುದು ನಿಜವಾದರೂ, ಈ ಕೋಶದ ಬಹುಭಾಗ ಸಂಸ್ಕೃತವನ್ನೇ ಅವಲಂಬಿಸಬೇಕೆಂಬುದು ಮಾತ್ರ ನಿರ್ವಿವಾದ.

"ಶಾಸ್ತ್ರೇಷ್ವಸ್ಯೈವ ಸಾಮ್ರಾಜ್ಯಂ" ಎಂಬ ಶ್ಲೋಕಪಾದವನ್ನು ಸಂಸ್ಕೃತಕ್ಕೆ ಅನ್ವಯಿಸಿ ಮಾತಾಡಿದೆನಷ್ಟೆ. "ಕಾವ್ಯೇಷ್ವಪ್ಯೇತದೀಪ್ಸಿತಂ" ಎಂಬ ಅದರ ಮುಂದಿನ ಪಾದವೂ ಇಲ್ಲಿಗೆ ಅಪ್ರಕೃತವಲ್ಲ. ಕನ್ನಡ, ತೆಲುಗು, ಮಲಯಾಳ ಮೊದಲಾದ ದ್ರಾವಿಡ ಭಾಷೆಗಳ ಪ್ರಾಚೀನ ಸಾಹಿತ್ಯವನ್ನೇ ನೋಡಬಹುದು. ಇಲ್ಲಿಯ ಕವಿಗಳು ಸ್ವಭಾಷೆಯಲ್ಲಿ ಹೇಗೋ ಹಾಗೆ ಸಂಸ್ಕೃತದಲ್ಲೂ ನಿಷ್ಣಾತರಾಗಿದ್ದವರು; ಸಂಸ್ಕೃತದ ಶಬ್ದಕೋಶವೆಲ್ಲ ತಮ್ಮ ಆಸ್ತಿಯೆಂದು ನಂಬಿದ್ದವರು. ಕನ್ನಡದ ಚಂಪೂಕಾವ್ಯವೊಂದನ್ನು ಕೈಗೆ ತೆಗೆದುಕೊಂಡಾಗ ಅಲ್ಲಿ ಕಾಣಬರುವ ಸಂಸ್ಕೃತ ಶಬ್ದಗಳನ್ನೆಲ್ಲ ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ 'ಅಮರಕೋಶ'ದ ಸಹಾಯವೂ ಒಮ್ಮೊಮ್ಮೆ ಸಾಲದೆ ಹೋಗುತ್ತದೆ. ಉದಾಹರಣೆಗೆ, "ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನೀಸುವೆಂ" ಎಂಬುದು 'ಪಂಪಭಾರತ'ದ ಒಂದು ವಾಕ್ಯ. ಇಲ್ಲಿ ಸಮಾಸಮಧ್ಯದಲ್ಲಿ ಬಂದಿರುವ "ರುಂದ್ರ" ಎಂಬ ಶಬ್ದ 'ಅಮರಕೋಶ'ದಲ್ಲಿಲ್ಲ; ಮೋನಿಯರ್ ವಿಲಿಯಮ್ಸ್ ಅವರ ಸಂಸ್ಕೃತ—ಇಂಗ್ಲಿಷ್ ನಿಘಂಟಿನಲ್ಲಿ "ಸಮೃದ್ಧಿ" ಎಂದು ಯಾವುದೋ ಕೋಶದ ಆಧಾರದಿಂದ ಅರ್ಥ ಕೊಟ್ಟಿದೆ; ಸಾಹಿತ್ಯದಲ್ಲಿ ಇದರ ಪ್ರಯೋಗ ಕಾಣಬಂದಿಲ್ಲವೆಂಬ ಸೂಚನೆಯಿದೆ. ("ರುಂದ್ರಃ ಪರಿಪೂರ್ಣಃ" ಎಂದು ನನ್ನ ಗುರುಗಳಾಗಿದ್ದ ಕೀರ್ತಿಶೇಷ ಪಂಡಿತ ಕಾನಕಾನಹಳ್ಳಿ ವರದಾಚಾರ್ಯರ ಬಾಯಿಂದ ಹಿಂದೆ ಕೇಳಿದ್ದು ಇಲ್ಲಿ ನೆನಪಿಗೆ ಬರುತ್ತದೆ; ಇದು ಎಲ್ಲಿಯ ಉಕ್ತಿಯೋ ನನಗೆ ತಿಳಿಯದು.) ಆದರೆ "ರುಂದ್ರ" ಎಂಬುದು ಸಂಸ್ಕೃತ ಭಾಷೆಯಲ್ಲಿ ಭಾರತದ ಕೆಲವು ಪ್ರದೇಶಗಳಲ್ಲಾದರೂ ಪ್ರಚುರವಾಗಿತ್ತೆಂದು ನಂಬಬಹುದು; ಉದಾಹರಣೆಗೆ, ಅದು ಕ್ರಿ.ಶ. ಸುಮಾರು ಐದನೆಯ ಶತಮಾನದಷ್ಟು ಹಿಂದೆಯೇ ಕದಂಬರ ಕೆಲವು ಸಂಸ್ಕೃತ ಶಾಸನಗಳಲ್ಲಿ ಗೋಚರವಾಗುತ್ತವೆ. ("ಜಯತಿ ಭಗವಾನ್ ಜಿನೇಂದ್ರೋ ಗುಣರುಂದ್ರಃ ಪ್ರಥಿತಿಪರಮಕಾರುಣಿಕಃ"). "ಅಗಲವಾದ, ವಿಸ್ತಾರವಾದ" ಎಂಬುದು ಬಹುಶಃ ಇದರ ಮೂಲಾರ್ಥವೆಂದು ನಿರ್ಧರಿಸಬೇಕಾದರೆ,

"ಲಾಂಬಿ" "ರುಂದಿ" ಎಂದು ಇಂದಿಗೂ ಮರಗೆಲಸದವರ ಮಾತಿನಲ್ಲಿ ಕೇಳಿಬರುವ ರೂಢಿಯ ಶಬ್ದಗಳನ್ನು ಜ್ಞಾಪಿಸಿಕೊಳ್ಳಬೇಕು.

ಅಪ್ರಚುರವಾದ ಸಂಸ್ಕೃತ ಶಬ್ದಗಳನ್ನು ಹಿಡಿತವಿಲ್ಲದೆ ಕನ್ನಡದಲ್ಲಿ ಬಳಸಬಾರದೆಂಬ ಭಾವನೆ ಸಹಜವಾಗಿ ಹಿಂದಿನ ಕಾಲದಲ್ಲೇ ತಲೆಯೆತ್ತಿತ್ತು. ಅದು ಎಲ್ಲರೂ ಒಪ್ಪಬೇಕಾದ ವಿಚಾರವೇ ಸರಿ. ಆದರೆ ಮಿತವಾಗಿ ವಿಹಿತವಾಗಿ ಪದಮೈತ್ರಿಯನ್ನರಿತು ಸಂಸ್ಕೃತ ಶಬ್ದಗಳನ್ನು—ಸಮಾಸಗಳನ್ನು ಕೂಡ—ಉಪಯೋಗಿಸಿದರೆ ಅದರಿಂದ ಅರ್ಥ ದರ್ಶನವೂ ರಸಪೋಷಣೆಯೂ ಮಿಗಿಲಾಗಿ ಒದಗುವುವೆಂಬುದನ್ನು ಕನ್ನಡದ ಹಿಂದಿನ ಕಾವ್ಯಗಳಲ್ಲಿ ಮಾತ್ರವಲ್ಲದೆ ಇಂದಿನ ಕವಿಕೃತಿಗಳಲ್ಲೂ ಅಲ್ಲಲ್ಲಿ ನೋಡಿ ಮೆಚ್ಚಬಹುದು.

ಸಂಸ್ಕೃತ ವಿದ್ವಾಂಸರ ಸಭೆಯಲ್ಲಿ ಹೀಗೆ ದೇಶಭಾಷೆಗಳ ಮಾತನ್ನೇ ಹೆಚ್ಚಾಗಿ ನಾನು ಎತ್ತಿದ್ದು ಸಮುಚಿತವೆ ಎಂಬ ಸಂದೇಹ ತಮ್ಮಲ್ಲಿ ಕೆಲವರಿಗೆ ಉಂಟಾಗಿರಬಹುದು. ಆದರೆ ಇದು ನನ್ನಿಂದ ಉದ್ದೇಶಪೂರ್ವಕವಾಗಿ ಆದ ವಿಷಯಾಂತರ. ಇದರ ಮೇಲೆ ಇದು ಅಂಥ ವಿಷಯಾಂತರವೂ ಅಲ್ಲ. ಸಂಸ್ಕೃತವಾಣಿ ಇಂದಿಗೂ ಹೇಗೆ ಸಜೀವವಾಗಿ ನಮ್ಮ ಜನತೆಯ ನುಡಿಯಲ್ಲಿ ಹಾಸುಹೊಕ್ಕಾಗಿ ವಿರಜಿಸುತ್ತಿದೆ, ಅದರ ಸುವರ್ಣಸಂಪತ್ತು ನಮ್ಮ ದೇಶಭಾಷೆಗಳನ್ನು ಇಂದಿಗೂ ಹೇಗೆ ಅಲಂಕರಿಸುತ್ತಿದೆ, ಅದರ ಅಮೃತಸರವು ಆಧುನಿಕ ಶಾಸ್ತ್ರ ಸಾಹಿತ್ಯಗಳಿಗೆ ಇಂದಿಗೂ ಹೇಗೆ ತ್ರಾಣದಾಯಕವಾಗಿದೆ ಎಂಬುದನ್ನು ಕೆಲವು ಮಟ್ಟಿಗೆ ವಿಶದಪಡಿಸಿ, ಸಂಸ್ಕೃತ ವಿದ್ವಾಂಸರ ಗಮನವನ್ನು ಸಂಸ್ಕೃತದ ಈ "ಸೀಮೋಲ್ಲಂಘನ"ದ ಕಡೆಗೆ—ಈ ವಿಜಯಯಾತ್ರೆಯ ಕಡೆಗೆ—ಸೆಳೆಯುವುದು ನನ್ನ ಇಂದಿನ ಉದ್ದೇಶಗಳಲ್ಲಿ ಒಂದು. ಅಲ್ಲದೆ ದೇಶಭಾಷೆಗಳಲ್ಲಿ ಹೀಗೆ ಸಂಸ್ಕೃತವು ಕಾಲದಿಂದ ಕಾಲಕ್ಕೆ ಅಭಿನವ ರೂಪಗಳಲ್ಲಿ ಅವತರಿಸುತ್ತಿರುವಾಗ ಆ ವಿಷಯವಾಗಿ ಸಂಸ್ಕೃತ ವಿದ್ವಾಂಸರು ಆಸಕ್ತಿ ತಳೆಯುವುದು ಅವಶ್ಯವೆಂದು ಸೂಚಿಸುವುದೂ ನನ್ನ ಮನಸ್ಸಿನ ಆಶಯ.

ಆದರೂ, ಈ ದಿನ ಇಲ್ಲಿ ನೆರೆದಿರುವುದು ಸಂಸ್ಕೃತ ವಿದ್ಯೆಯನ್ನೇ ಮುಖ್ಯ ವಿಷಯವಾಗಿ ಆರಿಸಿಕೊಂಡು ಅದರ ಸಾಧನೆಗಾಗಿ ಹಲವು ವರ್ಷಗಳ ವ್ಯಾಸಂಗ ದೀಕ್ಷೆಯನ್ನು ಕೈಕೊಂಡವರ ಸಭೆ, ಬಹುಮುಖವಾದ ಅದರ ಶಾಸ್ತ್ರ ಸಾಹಿತ್ಯಗಳಲ್ಲಿ ಒಂದು ಶಾಖೆಯಲ್ಲಾದರೂ ಪರಿಣತರೆನಿಸಿ ಪದವೀಧರರಾಗಿರುವವರ ಸಭೆ. ಇಷ್ಟು ಮಂದಿ ವಿದ್ವಾಂಸರು ತಮ್ಮ ತಾರುಣ್ಯದ ಇಷ್ಟೊಂದು ಕಾಲವನ್ನು ಇದಕ್ಕೆ ಮುಡಿಪಾಗಿ ಸಲ್ಲಿಸಿರುವುದು ಯಾವ ಲಾಭಕ್ಕಾಗಿ? ಹಾಗೆ ದೃಢವ್ರತದಿಂದ ಅಭ್ಯಾಸ ಮಾಡದ ನಮ್ಮಂಥವರು ಕೂಡ ಇದರಿಂದ ಯಾವ ಫಲವನ್ನು ನಿರೀಕ್ಷಿಸಿ ಇದರ ಅನುಶೀಲನೆಯಲ್ಲಿ ಹಲವು ದಿನಗಳನ್ನು ಕಳೆದಿದ್ದೇವೆ?

ಇದಕ್ಕೆ ಉತ್ತರ ಸ್ಪಷ್ಟವಾಗಿಯೇ ಇದೆ! ವ್ಯಾವಹಾರಿಕವಾದ ಯಾವ ಪ್ರಯೋಜನ ವನ್ನಾಗಲಿ, ಆರ್ಥಿಕವಾದ ಯಾವ ಲಾಭವನ್ನಾಗಲಿ ಇದರಿಂದ ಗಳಿಸುವ ಆಸೆ ಬಹುದೂರ. ಸಂಸ್ಕೃತ ಕಲಿತು ಹಣವನ್ನು ಗಳಿಸುತ್ತೇನೆ, ಮನೆಯನ್ನು ಕಟ್ಟಿಸುತ್ತೇನೆ,

ಹೆಂಡತಿಗೆ ಒಡವೆ ಮಾಡಿಸಿಕೊಡುತ್ತೇನೆ, ಮಕ್ಕಳನ್ನು ಅಭಿವೃದ್ಧಿಗೆ ತರುತ್ತೇನೆ—ಎಂಬ ಉದ್ದೇಶದಿಂದ ಹೊರಡುವವನು ಅನಭಿಜ್ಞನೆಂದು ಹೇಳದೆ ವಿಧಿಯಿಲ್ಲ. ಈ ಯುಗದಲ್ಲಿ "ಅರ್ಥಕರಿ"ಯಾದ ವಿದ್ಯೆ ಇದಲ್ಲ. ಮೇಲುಗಳಿಕೆಯ ಮಾತಿರಲಿ. ಕಾರ್ಪಣ್ಯವಿಲ್ಲದೆ ಹೊಟ್ಟೆ ಹೊರೆಯುವುದೇ ಇದರಿಂದ ಕಠಿನ. ಕೈಸುಟ್ಟುಕೊಂಡ ಅನುಭವಿಯೊಬ್ಬನು ಈ ವಿದ್ಯೆಯ ಆಕರ್ಷಣೆಗೆ ಹೇಗೋ ಒಳಗಾದವರನ್ನು ಕುರಿತು ಎಷ್ಟೋ ಹಿಂದೆ ಹೇಳಿದ ಒಂದು "ಸುಭಾಷಿತ" ಇಂದಿಗೂ ನಮ್ಮ ಕಿವಿಯಲ್ಲಿ ಮೊರೆಯುತ್ತಿದೆ :

"ಬುಭುಕ್ಷಿತೈರ್ವ್ಯಾಕರಣಂ ನ ಭುಜ್ಯತೇ
ಪಿಪಾಸಿತೈಃ ಕಾವ್ಯರಸೋ ನ ಪೀಯತೇ ।
ನ ಛಂದಸಾ ಕೇನಚಿದುದ್ಧೃತಂ ಕುಲಂ
ಹಿರಣ್ಯಮೇವಾರ್ಜಯ ನಿಷ್ಫಲಾಃ ಕಲಾಃ ॥

[ವ್ಯಾಕರಣವನು ಭುಜಿಸರಯ್ಯ ಹಸಿದವರು
ಕಾವ್ಯರಸವೀಂಟರ್ರೆ ಬಾಯಾರಿದವರು–
ಛಂದಸ್ಸಿನಿಂದಾರು ಕುಲವನೆತ್ತಿದರು?
ಹಣವನೊಂದನೆ ಗಳಿಸು, ಫಲವಿಲ್ಲ ಕಲೆಗೆ!]

ಇದು ಮಾಘಕವಿಯ ಉದ್ಗಾರವೆಂದು ಕ್ಷೇಮೇಂದ್ರನು ನಿರ್ದೇಶಿಸುತ್ತಾನೆ. ಇದ್ದರೂ ಇರಬಹುದು! ವ್ಯಾಕರಣ, ಛಂದಸ್ಸು ಮೊದಲಾದವಕ್ಕೆ ಮಾತ್ರವಲ್ಲದೆ ನ್ಯಾಯ, ಮೀಮಾಂಸಾ ಮೊದಲಾದ ಇತರ ಶಾಸ್ತ್ರಗಳಿಗೂ ಈ ಉಕ್ತಿಯನ್ನು ಅನ್ವಯಿಸಬಹುದು.

ಹಣದ ವಿಷಯ ಹೋಗಲಿ. ಗಣ್ಯತೆ, ಗೌರವ ಇವುಗಳಾದರೂ ವಿದ್ವತ್ತಿನಿಂದ ನಿಶ್ಚಿತವಾಗಿ ಲಭಿಸುತ್ತವೆಯೆ? ಎಲ್ಲೋ ಒಬ್ಬಿಬ್ಬರ ಹೆಸರುಗಳು ಮಾತ್ರ ತಮ್ಮ ಪಾಠಶಾಲೆಯ ಅಥವಾ ಊರಿನ ಎಲ್ಲೆಯನ್ನು ದಾಟಿ ಆಚೆಗೂ ನಾಲ್ಕು ದಿನದ ಮಟ್ಟಿಗೆ ಕೇಳಿಸ ಬಹುದೇನೋ. ನೂರಕ್ಕೆ ಒಬ್ಬರು ಮಹಾವಿದ್ವಾಂಸರೆಂದು, ಸಾವಿರಕ್ಕೆ ಒಬ್ಬರು ಮಹಾಮಹೋಪಾಧ್ಯಾಯರೆಂದು ಪ್ರಶಸ್ತಿ ಪಡೆಯಬಹುದೇನೋ. ಇಂಥ ಗೌರವ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಕಾಲವೂ ಈಗ ಹಿಂದೆ ಬಿದ್ದಿತಲ್ಲವೆ? ಗೌರವದ ಮಾತು ಹಾಗಿರಲಿ. ಕೇವಲ ಸಂಸ್ಕೃತಾಭ್ಯಾಸದಲ್ಲಿಯೇ ನಿರತರಾದವರಿಗೆ ಲೌಕಿಕ ವ್ಯವಹಾರ ತಿಳಿಯದೆಂದು ದೂರತಕ್ಕವರು ಕೂಡ ಲೋಕದಲ್ಲಿ ಉಂಟು. ಪಂಡಿತರ ಹಳೆಯ ರೀತಿಯ ವೇಷಭೂಷಣ ಭಾಷಿತಗಳನ್ನು ಹಾಸ್ಯ ಮಾಡುವವರೂ ಇಲ್ಲದಿಲ್ಲ.

ಹೀಗೆ ವ್ಯಾವಹಾರಿಕ ದೃಷ್ಟಿಯಿಂದ ಬೇಕೆನ್ನಿಸುವ ಫಲಗಳು ಸಂಸ್ಕೃತ ವಿದ್ಯೆಯಲ್ಲಿ ದುರ್ಲಭವೆಂದೇ ತೋರುವಾಗಲೂ, ಕೆಲವು ಮಂದಿಯಾದರೂ ಇದರ ಹಂಬಲವನ್ನು ಹತ್ತಿಸಿಕೊಂಡಿರುವುದು ದಿಟವಷ್ಟೆ. ಹಾಗಾದರೆ ಇದರ ಉಪಾಸನೆಯಿಂದ ಪಡೆಯ ಬಹುದಾದ ಅಲೌಕಿಕ ಪ್ರಯೋಜನಗಳು ಯಾವುವು?—ನಿಷ್ಕೃಷ್ಟಜ್ಞಾನ, ಮನಃಪರಿಪಾಕ, ಆತ್ಮೋದ್ಧಾರ ಎಂದು ಸಂಗ್ರಹಿಸಿ ಹೇಳಬಹುದು. ಶಾಸ್ತ್ರವ್ಯವಸಾಯವು ಭಾರತವೊಂದಕ್ಕೇ

ದುಡಿಯುತ್ತಾ ಹೋಗಬೇಕು. ಈ ಮನೋಧರ್ಮವನ್ನು ನಮಗೆ ಅಭ್ಯಾಸ ಮಾಡಿಸುವುದು ಸಂಸ್ಕೃತ ವಿದ್ಯೆಯ ಮುಖ್ಯಪ್ರಯೋಜನಗಳಲ್ಲಿ ಒಂದು.

ಕೆಲವು ಹೊಳೆಗಳುಂಟು. ಅವು ಹರಿಯುವ ಪಾತ್ರದ ಮೃತ್ತಿಕೆಯಲ್ಲಿ ಕಣ್ಣಿಟ್ಟು ಹುಡುಕುವವರಿಗೆ ಚಿನ್ನದ ಕಣಗಳು ಆಗಾಗ ದೊರೆಯುತ್ತವೆ. ಅದೃಷ್ಟ ಚೆನ್ನಾಗಿದ್ದರೆ ಒಮ್ಮೊಮ್ಮೆ ಚಿನ್ನದ ಚೊಕ್ಕಗಟ್ಟಿಯೇ ಕರವಶವಾಗುವುದುಂಟು. ಸಂಸ್ಕೃತ ವಾಙ್ಮಯದಲ್ಲಿ ಮಾರ್ಗಶೋಧನೆ ಮಾಡಿಕೊಂಡು ಸಂಚರಿಸುವಾಗ ಒಮ್ಮೊಮ್ಮೆ ಬಿಡಿ ಶ್ಲೋಕಗಳು ಕಣ್ಣನ್ನು ಹಿಡಿಯುತ್ತವೆ. ಘನಿಸಿದ ಅನುಭವ ಎಂದು ಅವನ್ನು ಕರೆಯಬಹುದು. ಸೂಕ್ಷ್ಮದೃಷ್ಟಿಯ ವಿಚಾರಕನೊಬ್ಬನು ಜೀವಮಾನದ ಅನುಭವವನ್ನೇ ಭಟ್ಟಿಯಿಳಿಸಿ ಒಂದು ಆಣಿಮುತ್ತಿನಲ್ಲಿ ಅಡಕಮಾಡಿ ಕೊಟ್ಟಂತೆ ಅವು ಹೊಳೆಯುತ್ತವೆ. ಸದ್ಯದಲ್ಲಿ ನೆನಪಿಗೆ ಬಂದ ಈ ಮುಕ್ತಕವನ್ನು ನೋಡಿ :

"ಪುರುಷೇ ಹಿತಮನ್ವೇಷ್ಯಂ
ತಚ್ಚೇನ್ನಾಸ್ತಿ ವಿಷಂ ಹಿ ತತ್ ।
ಮಧುರೇ ಶಾಠ್ಯಮನ್ವೇಷ್ಯಂ
ತಚ್ಚೇನ್ನಾಸ್ತ್ಯಮೃತಂ ಹಿ ತತ್ ॥"

[ಬಿರುಸಾದುದರಲ್ಲಿ ಹಿತವುಂಟೆ ಎಂದು ಹುಡುಕಬೇಕು; ಅದಿಲ್ಲವಾದರೆ ಇದು ವಿಷವೇ ಸರಿ. ಸವಿಯಾದುದರಲ್ಲಿ ಮೋಸವುಂಟೆ ಎಂದು ಹುಡುಕಬೇಕು; ಅದಿಲ್ಲವಾದರೆ ಇದು ಅಮೃತವೇ ಸರಿ.]

ಬಿರುನುಡಿ ಸವಿನುಡಿಗಳ ಒಳಗುಟ್ಟನ್ನು ಇದು ಎಷ್ಟು ಹೃದ್ಯವಾಗಿ ಮನದಟ್ಟು ಮಾಡಿಕೊಡುತ್ತದೆ! ಹಾಗೆಯೇ, ಜ್ಞಾನಾರ್ಜನೆಯ ಹಂತಗಳನ್ನು ವಿಭಾಗಿಸಿ ತೋರಿಸುವ ಈ ನಾಲ್ಕು ಪಾದಗಳು :

"ಆಚಾರ್ಯಾತ್ ಪಾದಮಾದತ್ತೇ
ಶಿಷ್ಯಃ ಪಾದಂ ಸ್ವಮೇಧಯಾ ।
ಪಾದಂ ಸಬ್ರಹ್ಮಚಾರಿಭ್ಯಃ
ಪಾದಂ ಕಾಲಕ್ರಮೇಣ ತು ॥"

[(ಜ್ಞಾನದ) ಪಾದಾಂಶವನ್ನು ಶಿಷ್ಯನು ಆಚಾರ್ಯನಿಂದ ಗ್ರಹಿಸುತ್ತಾನೆ; ಪಾದಾಂಶವನ್ನು ಸ್ವಂತ ಬುದ್ಧಿಯಿಂದ ; ಪಾದಾಂಶವನ್ನು ಜೊತೆಯ ವಿದ್ಯಾರ್ಥಿಗಳಿಂದ; ಪಾದಾಂಶವನ್ನಾದರೆ ಕಾಲಕ್ರಮದಿಂದ.]

ಈ ಒಂದು ಶ್ಲೋಕದ ಭಾವವಿಸ್ತರಣಕ್ಕೆ ಒಂದು ಉಪನ್ಯಾಸವನ್ನೇ ವಿನಿಯೋಗಿಸಬಹುದು. ಇಂಥ ಉಕ್ತಿಮುಕ್ತಾಫಲಗಳು ನಮ್ಮ ಸುಭಾಷಿತ ಗ್ರಂಥಗಳಲ್ಲಿ ಸೂರೆಯಾಗಿವೆ. ಇವುಗಳನ್ನು ಮನನ ಮಾಡಿ ಜೀವನ ಕ್ರಮದಲ್ಲಿ ಮಾರ್ಗದರ್ಶನ ಪಡೆದರೆ ಧರ್ಮಾರ್ಥ ಕಾಮಗಳೆಂಬ ಪುರುಷಾರ್ಥತ್ರಯವನ್ನೂ ಸಾಧಿಸಿಕೊಳ್ಳಬಹುದು.

ಮಿಾಸಲೇನೂ ಅಲ್ಲ. ದರ್ಶನ, ವಿಜ್ಞಾನ—ಇವುಗಳ ಹಲವು ಶಾಖೆಗಳಲ್ಲಿ ಪ್ರಪಂಚದ ಜ್ಞಾನವನ್ನು ಬೆಳೆಸಿರುವ ಮಹಾಕೃತಿಗಳು ಸಂಸ್ಕೃತದಲ್ಲಿರುವಂತೆಯೇ ಪಾಶ್ಚಾತ್ಯ ಭಾಷೆಗಳಲ್ಲೂ ದೊರೆಯುತ್ತವೆ. ಇದನ್ನು ಅಲ್ಲಗಳೆದರೆ ನಮ್ಮ ಸಂಕುಚಿತ ದೃಷ್ಟಿಯನ್ನು ಮಾತ್ರ ವ್ಯಕ್ತಪಡಿಸಿದಂತಾಗುತ್ತದೆ. ಆದರೆ ಒಂದು ಅಂಶದಲ್ಲೇನೋ ಸಂಸ್ಕೃತದ ಅಪೂರ್ವತೆ ಎದ್ದು ಕಾಣಿಸುತ್ತದೆಂದು ನನ್ನ ನಂಬಿಕೆ. ಅದು ಯಾವುದೆಂದರೆ, ವಿಷಯ ವಿನ್ಯಾಸದಲ್ಲೂ ಪ್ರತಿಪಾದನೆಯಲ್ಲೂ ನಮ್ಮವರು ಅನುಸರಿಸಿದ ಸರಣಿ. ಉಪನ್ಯಾಸ ಮಾಲಿಕೆಯಂತೆ ಒಂದು ಗ್ರಂಥವನ್ನು ರಚಿಸಿದರೆ, ಓದುವಾಗ ಅದು ಸರಳವೆಂದು ತೋರಿದರೂ ವಿಷಯ ಹಿಡಿತಕ್ಕೆ ಸಿಕ್ಕುವುದಿಲ್ಲ. ಎಷ್ಟೋ ವೇಳೆ ಹೊಳಪುಳ್ಳ ಬಿಳಿಮಂಜನ್ನು ನೋಡಿದಂತೆ ಆಗುತ್ತದೆ; ಪರಿಭಾವಿಸುವಷ್ಟರಲ್ಲಿ ಅದು ಚೆದರಿಬಿಡುವುದೂ ಉಂಟು. ಸೂತ್ರ—ವೃತ್ತಿ— ವ್ಯಾಖ್ಯಾನ : ಈ ಕ್ರಮವನ್ನು ಅನುಸರಿಸಿದರೆ, ಅರ್ಥ ಮಾಡಿಕೊಂಡದ್ದೆಲ್ಲ ಗಟ್ಟಿಮುಟ್ಟಾಗಿ ನೆನಪಿನಲ್ಲಿ ನೆಲಸುತ್ತದೆ. ಶಾಸ್ತ್ರಗಳ ಸಂಕ್ಷಿಪ್ತಶೈಲಿ ಇದಕ್ಕೆ ಎಷ್ಟರಮಟ್ಟಿಗೇ ಕಾರಣವೋ ಸಂಸ್ಕೃತ ಭಾಷೆಯ ಪಾರದರ್ಶಕತೆಯೂ ಅಷ್ಟರಮಟ್ಟಿಗೆ ಕಾರಣವಾಗಿರ ಬಹುದು. ಅಲ್ಪಾಕ್ಷರವೂ ಅಸಂದಿಗ್ಧವೂ ಸಾರಗ್ರಾಹಿಯೂ ಆದ ಸಂಸ್ಕೃತ ಸೂತ್ರ ಶೈಲಿಯ ಪ್ರಯೋಜನವನ್ನು ಮನಗಂಡು ಈಚೆಗೆ ಕೆಲಮಂದಿ ಪಾಶ್ಚಾತ್ಯ ವಿದ್ವಾಂಸರು ಕೂಡ ಅದನ್ನು ಅನುಸರಿಸಿರುವುದುಂಟು. ಉದಾಹರಣೆಗೆ, ಭಾಷಾಶಾಸ್ತ್ರದಲ್ಲಿ ಈ ಬಗೆಯ ಕೆಲವು ಕೃತಿಗಳು ರಚಿತವಾಗಿವೆ.

ರೀತಿಯಲ್ಲಿ ಮಾತ್ರವೇ ಅಲ್ಲ, ವಸ್ತುವಿನಲ್ಲೂ ನಮ್ಮ ಶಾಸ್ತ್ರಕಾರರು ವಿಶೇಷ ಸಿದ್ಧಿಗಳನ್ನು ಪಡೆದು ಕೆಲಕೆಲವು ಕಡೆಗಳಲ್ಲಂತೂ ಮೇರುವನ್ನು ಮುಟ್ಟಿದ್ದಾರೆನ್ನಬಹುದು. ನನಗೆ ಕೊಂಚಮಟ್ಟಿಗೆ ಪ್ರವೇಶವಿರುವ ಕಾವ್ಯಮಿಾಮಾಂಸಾಶಾಸ್ತ್ರದಿಂದ ಇದನ್ನು ನಿದರ್ಶಿಸುವುದು ಸಾಧ್ಯ. ಕಾವ್ಯದ ಜೀವಾಳವೇನೆಂಬುದನ್ನು ಕುರಿತ ಚರ್ಚೆ ಪ್ರಪಂಚದ ಹಲವು ಭಾಗಗಳ್ಲಿ ಅನೇಕಾನೇಕ ಶತಮಾನಗಳಿಂದ ನಡೆದಿದೆ. ಆದರೆ ರಸ—ಧ್ವನಿ ತತ್ತ್ವವು ಮೊದಲು ರೂಪಿತವಾದದ್ದು ಭಾರತ ಭೂಮಿಯಲ್ಲಿ, ಸಾವಿರ ವರ್ಷಗಳಿಗಿಂತ ಇನ್ನೂ ಹಿಂದೆ. ಇಂದಿಗೂ ಅದು ಅಬಾಧಿತವೆಂದೇ ನನ್ನ ತಿಳಿವಳಿಕೆ. "ಅನುಭಾವ ವಿಭಾವಾನಾಂ ವರ್ಣನಾ ಕಾವ್ಯಮುಚ್ಯತೇ" ಎಂಬ ಒಂದು ಮಹಾವಾಕ್ಯ ಸಾಕು; ಇದರ ಅರ್ಥವ್ಯಾಪ್ತಿಯನ್ನು ಅರಿತುಕೊಂಡರೆ ಕಾವ್ಯತತ್ತ್ವವನ್ನೂ ಬಲುಮಟ್ಟಿಗೆ ಅರಿತಂತೆಯೇ ಸರಿ. ಮಿಕ್ಕ ಶಾಸ್ತ್ರಗಳಲ್ಲೂ ಹೀಗೆಯೇ ಇದೆಯಲ್ಲವೆ?

ಇಂಥ ನಿಶ್ಚಿತ ಜ್ಞಾನವನ್ನು ಸಾಧಿಸುವ ಪರಿಶ್ರಮದಿಂದಲೇ ವಿದ್ವಾಂಸನಿಗೆ ಆವಶ್ಯಕವಾದ ಮನಃಪರಿಪಾಕವೂ ಸಿದ್ಧಿಸುತ್ತದೆ. ಸದ್ಯಃಕ್ಷಣದ ಶೃಂಖಲೆಯಿಂದ ಬಿಡುಗಡೆ ಹೊಂದಿ, ಲಘುರುಚಿಗಳಿಗೂ ಅಲ್ಪವಾದ ಆಶೋತ್ತರಗಳಿಗೂ ಮೋಹಗೊಳ್ಳದೆ, ಉನ್ನತ ತತ್ತ್ವದ ಶೋಧನೆಯಲ್ಲಿ ಸಂತತವೂ ನಿರತವಾಗುವ ಚಿತ್ತಶುದ್ಧಿ ಅದು. ಜ್ಞಾನವನ್ನು ಒಂದೊಂದು ಕಣವಾಗಿ ಹುಡುಕಿ, ತಿಕ್ಕಿತೊಳೆದು, ಕೂಡಿಡಬೇಕು. ಆತುರವಿಲ್ಲದೆ ಬೇಸರವಿಲ್ಲದೆ, ಕಾಲ ಚಕ್ರದ ಚೀತ್ಕಾರಕ್ಕೆ ಭಯಪಡದೆ, ಅಜರರಂತೆ ಅಮರರಂತೆ

ಪರಮಪುರುಷಾರ್ಥವಾದ ಮೋಕ್ಷವೆಂಬುದೂ ಉಂಟಷ್ಟೆ. ಈ ಜನ್ಮದಲ್ಲಿ ಅಲ್ಲದಿದ್ದರೆ ಇನ್ನು ನಾಲ್ಕು ಜನ್ಮಗಳ ಅನಂತರವಾದರೂ ಇದನ್ನು ಪಡೆಯಬೇಕೆಂಬ ಒಳ ಆಸೆ ಯಾವ ಭಾರತೀಯನ ಹೃದಯದಲ್ಲಿಲ್ಲ! ಮೋಕ್ಷಕ್ಕೆ ಅಭಿಮುಖವಾಗುವುದೇ ಆತ್ಮೋದ್ಧಾರ. ಇದರ ಸಾಧನೆಗೆ ಸಹಾಯಕವಾಗುವ ಸಾಮಗ್ರಿ ಸಂಸ್ಕೃತದಲ್ಲಿ ದೊರೆಯುವಷ್ಟು, ದೊರೆಯುವ ಹಾಗೆ, ಇನ್ನೆಲ್ಲೂ ನಮಗಂತೂ ಕಾಣಬರುವುದಿಲ್ಲ. ಸಂಸ್ಕೃತವಿದ್ಯೆ, ಅಧ್ಯಾತ್ಮ ವಿದ್ಯೆ ಇವೆರಡೂ ಪರ್ಯಾಯಪದಗಳೆಂದು ಗಣಿಸುವಷ್ಟು ದೂರ ಕೂಡ ಕೆಲವರು ಹೋಗಬಹುದು. ಇದನ್ನು ಕುರಿತು ಪ್ರಸಂಗಿಸಲು ನನಗೆ ಅವಕಾಶವಿಲ್ಲ, ಅಧಿಕಾರವೂ ಇಲ್ಲ. "ಸಾ ವಿದ್ಯಾ ಯಾ ವಿಮುಕ್ತಯೇ" ಎಂಬ ಉಕ್ತಿಯನ್ನು ಸಂಸ್ಕೃತದ ಪ್ರಸಂಶೆಗಾಗಿ ತಿರುಗಿಸಿಕೊಂಡರೆ ಅಷ್ಟೇನೂ ಅನುಚಿತವಾಗಲಾರದೆಂದು ಮಾತ್ರ ಸೂಚಿಸಿ ಮುಂದುವರಿಯುತ್ತೇನೆ.

ಇಂದಿನ ವಿದ್ವತ್ಸಭೆಯಲ್ಲಿ ಪ್ರಶಸ್ತಿ ಪಡೆಯುವವರು ಸಂಸ್ಕೃತದಲ್ಲಿ ಪ್ರೌಢಾಭ್ಯಾಸ ಮಾಡಿರತಕ್ಕವರು, ಈ ಆಧುನಿಕ ಯುಗದಲ್ಲೂ ತಕ್ಕಮಟ್ಟಿಗೆ ಅದರ ಪ್ರಾಚೀನ ಪದ್ಧತಿಗಳನ್ನು ಪಾಲಿಸಿಕೊಂಡು ಬಂದಿರತಕ್ಕವರು. ಆ ಮಾರ್ಗದಲ್ಲಿ ನಡೆದು ಪಂಡಿತ ನಾಗುವ ಅವಕಾಶ, ನಾನು ಹಿಂದೆಯೇ ಅರಿಕೆ ಮಾಡಿಕೊಂಡಂತೆ, ನನ್ನದಾಗಲಿಲ್ಲ. ಆದರೂ ಸುಮಾರು ನಲವತ್ತು ವರ್ಷಗಳ ಕೆಳಗೆ ಹಿಂದಿನ ರೀತಿಯ ಗುರುಗಳೊಬ್ಬರ ಬಳಿ ನನಗೆ ಮೊಟ್ಟಮೊದಲ ಕಾವ್ಯಪಾಠವಾದದ್ದು ಇನ್ನೂ ನೆನಪಿನಲ್ಲಿದೆ. ಅವರು 'ರಘುವಂಶ'ದ ಎರಡನೆಯ ಸರ್ಗದಿಂದ ನೇರವಾಗಿ ಪ್ರಾರಂಭಿಸಿದರು. ಮುದ್ರಿತ ಗ್ರಂಥವನ್ನು ಸಂಪಾದಿಸಿಕೊಳ್ಳುವಷ್ಟು ಅನುಕೂಲ ನನ್ನ ಸಹಪಾಠಿಗಳಿಗೂ ನನಗೂ ಇರಲಿಲ್ಲ. ಮರುದಿನದ ಪಾಠದ ಪದ್ಯಗಳನ್ನು ಸ್ವಹಸ್ತಾಕ್ಷರದಲ್ಲೇ ಬರೆದುಕೊಳ್ಳಬೇಕಾಗಿತ್ತು. ತರಗತಿಯಲ್ಲಿ ಗುರುಗಳು ಪದ್ಯಗಳನ್ನು ನೆನಪಿಸಿನಿಂದಲೇ ಹೇಳಿ, ಪದವಿಭಾಗ, ಶಬ್ದ ಸ್ವರೂಪ, ಅನ್ವಯ, ಅರ್ಥ, ಆಕಾಂಕ್ಷೆ ಮೊದಲಾದವನ್ನು ಕ್ರಮವಾಗಿ ಬೋಧಿಸುತ್ತಿದ್ದರು. ಆದರೆ ಕೇಳಿದ ಪಾಠದಿಂದ ಯಾವ ಟಿಪ್ಪಣಿಯನ್ನೇ ಆಗಲಿ ಪುಸ್ತಕದಲ್ಲಿ ಗುರುತು ಹಾಕಿಕೊಳ್ಳಲು ಅವರು ಅವಕಾಶ ಕೊಡುತ್ತಿರಲಿಲ್ಲ. ಗುರುಗಳ ಮುಖವನ್ನೇ ನೋಡುತ್ತಾ, ಕಿವಿಯಿಂದಲೇ ಎಲ್ಲವನ್ನೂ ಗ್ರಹಿಸುತ್ತಾ, ಕೇಳಿದ ಹಾಗೆಯೇ ಹೃದ್ಗತ ಮಾಡಿಕೊಳ್ಳಬೇಕು; ಮರುದಿನದ ವೇಳೆಗೆ ಆದಷ್ಟೂ ನಮಗೂ ಮುಖೋದ್ಗತವಾಗಿರಬೇಕು. ಈ ಕಟ್ಟುನಿಟ್ಟಿನ ಪಾಠ ಪದ್ಧತಿ ಹೆಚ್ಚುದಿನ ಸಾಗಲಿಲ್ಲ. ಆದರೂ ಅದರಿಂದ ಪ್ರಯೋಜನ ಪಡೆದೆನೆಂದು ಈಗ ನನಗೆ ತೋರುತ್ತದೆ.

ಪ್ರಾಚೀನ ಪಾಠಕ್ರಮದಲ್ಲಿ ಜ್ಞಾಪಕಶಕ್ತಿಗೆ ಅತಿಶಯವಾದ ಪ್ರಾಮುಖ್ಯವಿತ್ತು. ಪುಸ್ತಕಗತವಾದ ವಿದ್ಯೆ ವಿದ್ಯೆಯೇ ಅಲ್ಲ; ಕಂಠಗತವಾಗಿದ್ದರೇ ಅದಕ್ಕೆ ಬೆಲೆ ಎಂಬ ಅಭಿಪ್ರಾಯವಿತ್ತು. ಇದರಲ್ಲಿ ಸತ್ಯಾಂಶ ಬಲುಮಟ್ಟಿಗೆ ಇರುವುದು ನಿಜ. ಆದರೆ ಹಿಂದೆ ಹತ್ತು ಪುಸ್ತಕಗಳಿದ್ದ ಕಡೆ ಈಗ ನೂರು ಬಂದಿವೆ; ಯಾವುದನ್ನೂ ಕಡೆಗಣಿಸುವ ಹಾಗಿಲ್ಲ. ಎಲ್ಲವನ್ನೂ ಕಂಠಪಾಠ ಮಾಡುವುದು ಸಾಧ್ಯವೆ? ಬೇಕೆಂದಾಗ ಪುಸ್ತಕವು ಸರಸ್ವತೀ ಭಂಡಾರದಲ್ಲೋ ವಿದ್ವಾಂಸನ ಸ್ವಕೀಯ ಸಂಗ್ರಹದಲ್ಲೋ ದೊರೆಯುವಾಗ

ಎಲ್ಲವನ್ನೂ ಕಂಠಪಾಠ ಮಾಡುವುದು ಅವಶ್ಯವೆ? ಇದಲ್ಲದೆ ಒಂದು ಶ್ಲೋಕವನ್ನೋ ವಾಕ್ಯವನ್ನೋ ತಪ್ಪಿಲ್ಲದಂತೆ ಸಮಗ್ರವಾಗಿ ಉದ್ಧರಿಸಲು ನೆನಪಿನ ಹಾಳೆಗಳನ್ನು ಅಂತರ್ದೃಷ್ಟಿಯಿಂದ ಈಗ ತಿರುಗಿಹಾಕಬೇಕಾಗಿಲ್ಲ. ಸಾನುಬಂಧವಾಗಿ ಮುದ್ರಿತವಾಗಿರುವ ಗ್ರಂಥದ ಅಕಾರಾದಿಯನ್ನು ನೋಡಿದರೆ ಸಾಕು. ಎಂಥ ಮೇಧಾವಂತನಿಗಾದರೂ ಒಂದು ಶಬ್ದದ ನಾಲ್ಕು ಪ್ರಯೋಗಗಳು ಮಾತ್ರ ನೆನಪಾಗಬಹುದು. ಆದರೆ ಒಳ್ಳೆಯ ಆಧುನಿಕ ನಿಘಂಟನ್ನು ತೆರೆದರೆ, ಅದರಲ್ಲಿ ಅಂಥ ಹತ್ತಾರು ಪ್ರಯೋಗಗಳನ್ನು ಅರ್ಥವೈವಿಧ್ಯ ಕಾಲಕ್ರಮಗಳಿಗೆ ಅನುಗುಣವಾಗಿ ವಿಂಗಡಿಸಿಕೊಟ್ಟಿರುತ್ತಾರೆ. ಇದರ ಮೇಲೆ ಪ್ರೌಢವ್ಯಾಸಂಗ ಮಾಡುವವರಿಗೂ ಸಂಶೋಧನ ಮಾಡುವವರಿಗೂ ಈಗ ದೊರೆಯುವ ಸಹಾಯ ಸಾಮಗ್ರಿ ಎಷ್ಟು ! ಶಬ್ದಕೋಶಗಳೇನು, ವಿಶ್ವಕೋಶ ಗಳೇನು, ಸಂವಾದೋಲ್ಲೇಖ (ಕನ್‌ಕಾರ್ಡೆನ್ಸ್) ಗಳೇನು, ಸಂಕಲನ ಗ್ರಂಥಗಳೇನು! ಇದನ್ನೆಲ್ಲ ವಿದ್ವತ್‌ಪ್ರಪಂಚದ "ಸಾಮೂಹಿಕ ಸ್ಮೃತಿಕೋಶ"ವೆಂದು ಕರೆಯಬಹುದು. ಎಂಥ ಮಹಾಪಂಡಿತನಾದರೂ ಮರೆತಿರಬಹುದಾದ ಅಂಶಗಳು ಈ ಗ್ರಂಥಗಳ ಯಾವುದೋ ಮೂಲೆಯಲ್ಲಿ ಕುಳಿತಿರುತ್ತವೆ. ಇದರ ಜೊತೆಗೆ, ಪ್ರತಿಯೊಬ್ಬ ವಿದ್ವಾಂಸನೂ ತನ್ನ ತನ್ನ ಅವಶ್ಯಕತೆಗೆ ಅನುಗುಣವಾಗಿ ಸಿದ್ಧಪಡಿಸಿಕೊಳ್ಳಬಹುದಾದ ಸೂಚೀಪತ್ರ (ಕಾರ್ಡ್ ಇನ್‌ಡೆಕ್ಸ್) ವಿಧಾನ ಬೇರೆ ಇದೆ. ನಮ್ಮ ವಿದ್ವಾಂಸರ ಗಮನ ಇತ್ತ ಕಡೆ ಹರಿಯಬೇಕೆಂದು ನಾನು ಕೋರುತ್ತೇನೆ. ಈ ಪರಿಕರಗಳೆಲ್ಲ ನೆರವಿಗಿದ್ದರೆ ಸ್ಮೃತಿದಿಗ್ಗಜ ನಲ್ಲದವನು ಕೂಡ ಪರಿಮಿತ ಕಾಲದಲ್ಲಿಯೆ ಪಾಂಡಿತ್ಯವನ್ನು ದೃಢಪಡಿಸಿಕೊಳ್ಳಬಹುದು; ಸಂಯೋಜನ ಕೌಶಲವುಳ್ಳವನಾದರೆ ವಿದ್ವತ್ತಿನ ಎಲ್ಲೆಯನ್ನು ವಿಸ್ತರಿಸಬಹುದು. ಪಾಶ್ಚಾತ್ಯ ವಿದ್ವಾಂಸರು ಈ ಆಧುನಿಕ ಸೌಕರ್ಯಗಳ ಬಲದಿಂದ ಭಾರತೀಯ ಶಾಸ್ತ್ರ ಸಾಹಿತ್ಯಗಳ ಪ್ರೌಢ ವ್ಯಾಸಂಗವನ್ನು ಮಾಡಿ, ಎಷ್ಟೋ ಹೊಸ ವಿಷಯಗಳನ್ನು ಕಂಡುಹಿಡಿದು, ಕೆಲವು ವಿಷಯಗಳಲ್ಲಿ ಈಗ ನಮಗೇ ಬೋಧಕರಾಗಿರುವ ಅಂಶವನ್ನು ಗಮನಿಸಬೇಕು.

ಪಾಶ್ಚಾತ್ಯರ ಸಂಸರ್ಗದಿಂದ ನಮ್ಮ ಅಭ್ಯಾಸ ವಿಧಾನಗಳಲ್ಲೂ ಹೊಸ ಮಾರ್ಗಗಳು ಹೊರಟಿವೆ. ಐತಿಹಾಸಿಕ ದೃಷ್ಟಿ ಇವುಗಳಲ್ಲಿ ಮುಖ್ಯವಾದ ಒಂದು. ಯೂರೋಪಿನಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಪರಿಣಾಮವಾದವು ರೂಪುಗೊಂಡು ವಿದ್ವತ್ ಪ್ರಪಂಚದಲ್ಲಿ ಮಹಾಕ್ರಾಂತಿಯನ್ನೆಬ್ಬಿಸಿದ ಬಳಿಕ ಇದು ಸರ್ವವ್ಯಾಪಿಯಾಗಿ ಪರಿಣಮಿಸಿತು. ಜಗತ್ತಿನಲ್ಲಿ ತಲೆದೋರಿದ ಸಮಸ್ತದಲ್ಲೂ ವ್ಯತ್ಯಾಸ ವಿಕಾಸ ವಿಪರಿಣಾಮಗಳು ಸಂತತವಾಗಿ ನಡೆಯುತ್ತಿರುತ್ತವೆ. ಜೀವಿವರ್ಗದ ಶರೀರಗಳಲ್ಲಿ ಮಾತ್ರವಲ್ಲ, ಜೀವಿಗಳ ನಂಬಿಕೆ ತಿಳಿವಳಿಕೆಗಳಲ್ಲೂ ಈ ರೂಪಾಂತರವುಂಟು. ಒಟ್ಟು ಜಗತ್ತಿಗೇ ಇಂಥ ಚರಿತ್ರೆ ಉಂಟೆಂದ ಮೇಲೆ ಭಾಷೆ, ಸಾಹಿತ್ಯ, ಶಾಸ್ತ್ರ ಮತ್ತು ದರ್ಶನ–ಎಲ್ಲಕ್ಕೂ ಚರಿತ್ರೆಯಿರುವುದರಲ್ಲಿ ಏನಾಶ್ಚರ್ಯ! ಈ ದೃಷ್ಟಿಯಿಂದ ನಮ್ಮ ಶಾಸ್ತ್ರವಿಷಯಗಳನ್ನು ಅವಲೋಕಿಸಿದರೆ ಹೊಸ ಅರ್ಥಗಳು ಸ್ಫುರಿಸುತ್ತವೆ, ಜಟಿಲಗ್ರಂಥಿಗಳು ಸಡಿಲವಾಗುತ್ತವೆ, ಪೂರ್ವಾಪರ ಸಂಬಂಧ ಗಳು ಪರಿಷ್ಕಾರವಾಗುತ್ತವೆ, ಜ್ಞಾನ ಕುತೂಹಲವೂ ಅಭಿವೃದ್ಧಿಯಾಗುತ್ತದೆ.

ಇಂಥ ಇನ್ನೊಂದು ವಿಧಾನವೆಂದರೆ ತುಲನದ ಮಾರ್ಗ. ಎರಡು ವಸ್ತುಗಳನ್ನೋ ವಿಷಯಗಳನ್ನೋ ಹೋಲಿಸಿ ನೋಡಿದರೆ ಅವುಗಳ ಸಾಮ್ಯ ವೈಷಮ್ಯಗಳು, ಹಾಗೆಯೇ ಗುಣದೋಷಗಳು, ಎದ್ದುಕಾಣಿಸುತ್ತವೆ. ಈಗ ವಿಭಿನ್ನವೆಂದು ತೋರುವವುಗಳಿಗೆ ಹಿಂದೆ ಒಂದೇ ಮೂಲವೇನಾದರೂ ಇದ್ದಿದ್ದರೆ ಅದು ಗೋಚರವಾಗುತ್ತದೆ. ಲ್ಯಾಟಿನ್, ಗ್ರೀಕ್ ಮೊದಲಾದ ಅನೇಕ ಪಾಶ್ಚಾತ್ಯ ಭಾಷೆಗಳಲ್ಲಿ ಆಗಲೇ ಪಂಡಿತನಾಗಿದ್ದ ಸರ್ ವಿಲಿಯಮ್ ಜೋನ್ಸ್ ಎಂಬ ವಿದ್ವಾಂಸನು ಹದಿನೆಂಟನೆಯ ಶತಮಾನದ ಉತ್ತರಭಾಗದಲ್ಲಿ ನಮ್ಮ ದೇಶಕ್ಕೆ ಬಂದು ಸಂಸ್ಕೃತವನ್ನು ಅಭ್ಯಾಸ ಮಾಡಿದ ಬಳಿಕ ಅವನ ಸೂಕ್ಷ್ಮದೃಷ್ಟಿಗೆ ಈ ಅನೇಕ ಭಾಷೆಗಳಿಗಿರುವ ಮೂಲಸಾದೃಶ್ಯವು ಗೋಚರವಾಯಿತೆಂಬುದೂ ಮುಂದೆ ಹತ್ತೊಂಬತ್ತನೆಯ ಶತಮಾನದಲ್ಲಿ ತೌಲನಿಕ ಭಾಷಾಶಾಸ್ತ್ರವೆಂಬ ಹೊಸ ಶಾಸ್ತ್ರವೇ ವಿಸ್ತಾರವಾಗಿ ಹಬ್ಬಿತೆಂಬುದು ಈಗ ಸರ್ವರಿಗೂ ವಿದಿತವಾಗಿದೆ. ಈ ತುಲನಾತ್ಮಕ ವಿಚಾರವು ನಮ್ಮ ಎಲ್ಲ ವಿದ್ವಾಂಸರಿಗೂ ಅವಶ್ಯವೆಂದು ನನ್ನ ದೃಢವಾದ ನಂಬಿಕೆ. ತುಲನವು ನಿರ್ಮಲೀಕರಣದ, ನವೀಕರಣದ ಒಂದು ಪ್ರಬಲ ಸಾಧನ.

ಈ ಐತಿಹಾಸಿಕದೃಷ್ಟಿ ತೌಲನಿಕ ದೃಷ್ಟಿಗಳ ದಾರಿ ಹೇಗೆ, ಗುರಿ ಏನು, ಸಿದ್ಧಿ ಯಾವುದು ಎಂಬುದನ್ನು ಕೆಲಕೆಲವು ವಿಷಯಗಳಿಗೆ ಅನ್ವಯಿಸಿ ತೋರಿಸಬೇಕೆಂಬ ಆಸೆ ನನಗಿದ್ದರೂ, ಈಗಾಗಲೇ ದೀರ್ಘ ಭಾಷಣ ಮಾಡಿ ತಮ್ಮನ್ನು ಬೇಸರಪಡಿಸಿರುವುದಿಂದ ಇನ್ನೂ ಅತಿಕ್ರಮಿಸಲು ಇಷ್ಟಪಡುವುದಿಲ್ಲ. ಆದರೆ ಈ ವಿಚಾರದಿಂದ ಹೊರಪಡುವ ಒಂದು ಮುಖ್ಯಾಂಶವನ್ನು ಕುರಿತು ಒಂದು ಮಾತನ್ನು ನಾನು ಹೇಳಲೇಬೇಕಾಗಿದೆ. ಅದು ತಮ್ಮಲ್ಲಿ ಕೆಲವರಿಗೆ ಅಪ್ರಿಯವಾಗಬಹುದೋ ಏನೋ. ಆದರೂ ಅದು ತಥ್ಯವೆಂದು ನಾನು ನಂಬಿರುವುದರಿಂದ ಆ ಮಾತನ್ನು ನಾನು ಆಡದೆ ಹೋದರೆ ತಮ್ಮ ಹಿತೈಷಿಯೆನಿಸಿಕೊಳ್ಳಲಾರೆ.

ಸಂಸ್ಕೃತ ವಿದ್ಯೆಯನ್ನು ಕಲಿಯಲು ಎರಡು ಮಾರ್ಗಗಳಿವೆ: ಒಂದು ಪ್ರಾಚೀನ ಪದ್ಧತಿಯ ಪಾಠಶಾಲೆಗಳಲ್ಲಿ, ಇನ್ನೊಂದು ಆಧುನಿಕ ಪದ್ಧತಿಯ ಕಾಲೇಜುಗಳಲ್ಲಿ: ಈ ಎರಡರಿಂದ ಎರಡು ಬಗೆಯ ವಿದ್ವಾಂಸರು ಹೊರಬೀಳುತ್ತಾರೆ; ಒಬ್ಬರ ಜ್ಞಾನದಲ್ಲಿ ಆಳ ಹೆಚ್ಚು; ಇನ್ನೊಬ್ಬರದರಲ್ಲಿ ಅಗಲ ಹೆಚ್ಚು; ಇವರದು ಉಪರಿಪ್ಲವನ, ಅವರದು ಗಾಢಾವಗಾಹನ–ಹೀಗೆನ್ನುವುದು ನಮ್ಮಲ್ಲಿ ಸಾಮಾನ್ಯವಾಗಿ ಹರಡಿಕೊಂಡಿರುವ ಭಾವನೆ. ಆದರೆ ನಿಜವಾದ ವಿದ್ವತ್ತು ಹೀಗೆ ಎರಡು ಬಗೆಯಾಗಿರಬಲ್ಲದು ಎಂಬುದರಲ್ಲೇ ನನಗೆ ಪ್ರಬಲ ಸಂದೇಹ. ಜಗತ್ತಿನಲ್ಲಿ ಕೋಲಾಹಲವೆಬ್ಬಿಸಿರುವ, ನಾಗರಿಕತೆಯ ಮೂಲಸ್ವರೂಪವನ್ನೇ ಗುರುತು ಸಿಕ್ಕದಂತೆ ರೂಪಾಂತರಗೊಳಿಸುತ್ತಿರುವ ಭೌತವಿಜ್ಞಾನ, ರಸಾಯನವಿಜ್ಞಾನ ಮೊದಲಾದುವುಗಳಲ್ಲಾಗಲಿ ಪಾಶ್ಚಾತ್ಯರ ತತ್ತ್ವಶಾಸ್ತ್ರ ರಾಜ್ಯನೀತಿಶಾಸ್ತ್ರ ಮೊದಲಾದವುಗಳಲ್ಲಾಗಲಿ ಈ ದಾಯ ಭಾಗವಿಲ್ಲ. ಗ್ರೀಕ್, ಲ್ಯಾಟಿನ್ ಮೊದಲಾದ ಪ್ರಾಚೀನ ಭಾಷೆಗಳ, ಇಂಗ್ಲಿಷ್, ಜರ್ಮನ್ ಮೊದಲಾದ ಪ್ರಚಲಿತ ಭಾಷೆಗಳ ವ್ಯಾಸಂಗದಲ್ಲೂ ಇದು ಕಾಣಬರುವುದಿಲ್ಲ. ನಮ್ಮ ದೇಶದಲ್ಲಾದರೆ, ಮುಖ್ಯವಾಗಿ

ಐತಿಹಾಸಿಕ ಮತ್ತು ರಾಜಕೀಯ ಕಾರಣಗಳಿಂದ, ಸಂಸ್ಕೃತದಲ್ಲೂ ಕನ್ನಡ ಮೊದಲಾದ ಕೆಲವು ದೇಶಭಾಷೆಗಳಲ್ಲೂ ಈ ವಿದ್ವದ್ವಿಭಾಗ ಎರಡು ಮೂರು ತಲೆಮಾರುಗಳಿಂದ ತಲೆಯೆತ್ತಿದ. ಆದರೆ ಒಬ್ಬ ವಿದ್ವಾಂಸನ ಜ್ಞಾನವು ಸಮಗ್ರವಾಗಬೇಕಾದರೆ, ಸಮರ್ಪಕ ವಾಗಬೇಕಾದರೆ, ಅದು ಗಾಢವೂ ಆಗಿರಬೇಕು, ವಿಶಾಲವೂ ಆಗಿರಬೇಕು. ಅವನು ಮೂಲಗ್ರಂಥಗಳನ್ನು ಪಂಕ್ತಿ ಹಿಡಿದು ಓದಿ ಸವಿಮರ್ಶವಾಗಿ ಮನನ ಮಾಡಿಕೊಂಡಿರ ಬೇಕು; ಜೊತೆಗೆ ತನ್ನ ಶಾಸ್ತ್ರದಲ್ಲಿ ನಡೆದಿರುವ ಇತ್ತೀಚಿನ ಶೋಧನೆಗಳನ್ನೂ–ಅವು ಯಾವ ಭಾಷೆಯಲ್ಲೇ ಆಗಿರಲಿ–ಅವಗತ ಮಾಡಿಕೊಂಡಿರಬೇಕು. ಇಂಥ ವಿದ್ವಾಂಸರು ಯಾವಾಗಲೂ ವಿರಳವೇ. ಆದರೆ ಅವರು ಅಸಂಭಾವ್ಯರಲ್ಲ. ಭಾರತೀಯ ವಿದ್ವತ್ತಿಗೆ ಜಗತ್ತಿನಲ್ಲೇ ಕೀರ್ತಿ ತಂದ ಮಹಾರಾಷ್ಟ್ರದ ಡಾ. ರಾಮಕೃಷ್ಣಗೋಪಾಲ ಭಾಂಡಾರಕರರನ್ನು ಇಲ್ಲಿ ಸ್ಮರಿಸಬಹುದು; ನಮ್ಮವರೇ ಆಗಿದ್ದ ಆಚಾರ್ಯ ಎಂ. ಹಿರಿಯಣ್ಣನವರನ್ನೂ ಸ್ಮರಿಸಬಹುದು. ನಮಗೆ ಇಂದು ಬೇಕಾಗಿರುವುದು ಇಂಥ ಹಿರಿಯರ ಮೇಲ್ಪಂಕ್ತಿ. ಅವರ ವಿದ್ವತ್ತಿನಲ್ಲಿ ಪ್ರಾಚ್ಯ ಪಾಶ್ಚಾತ್ಯ ಎಂಬ ಕಲ್ಪಿತ ಭೇದವಿರಲಿಲ್ಲ. ಈ ಬಗೆಯ ವಿದ್ವಾಂಸರು ಹೆಚ್ಚು ಸಂಖ್ಯೆಯಲ್ಲಿ ನಮ್ಮ ದೇಶದಲ್ಲಿ ಆವಿರ್ಭವಿಸಬೇಕಾದರೆ ನಮ್ಮ ಅಭ್ಯಾಸಕ್ರಮದಲ್ಲಿ ಯಾವ ಮಾರ್ಪಾಡುಗಳು ಆಗಬೇಕು? ಪಾಠಶಾಲೆಗಳನ್ನೂ ಕಾಲೇಜುಗಳನ್ನೂ ಈಗಿರುವ ರೀತಿಯಲ್ಲೇ ಮುಂದುವರಿಸಿಕೊಂಡು ಹೋಗಬೇಕೆ? ಎರಡನ್ನೂ ಸಮನ್ವಯಗೊಳಿಸುವುದು ಅಸಾಧ್ಯವೆ?–ಈ ಎಲ್ಲದರ ವಿಚಾರ ಕ್ಷಿಪ್ರದಲ್ಲೇ ನಡೆದು ನಿರ್ಣಯವಾಗಬೇಕಾಗಿದೆ.

ಭಾರತ ಸರ್ಕಾರದವರು ಸಂಸ್ಕೃತ ವಿದ್ಯೆಯ ಯೋಗಕ್ಷೇಮ ಚಿಂತನೆಗಾಗಿ "ಸಂಸ್ಕೃತ ಆಯೋಗ"ವನ್ನು ಡಾ. ಸುನೀತಿ ಕುಮಾರ ಚಟರ್ಜಿಯವರಂಥ ವಿಖ್ಯಾತ ವಿದ್ವಾಂಸರ ಅಧ್ಯಕ್ಷತೆಯಲ್ಲಿ ನೇಮಿಸಿರುವುದು ನಮ್ಮ ಅಭಿನಂದನೆಗೆ ಪಾತ್ರವಾದ ಸಂಗತಿ. ಈ ಆಯೋಗದವರು ದೇಶದ ಆದ್ಯಂತವೂ ಸಂಚರಿಸಿ ಇತ್ತೀಚೆಗೆ ನಮ್ಮ ರಾಜ್ಯಕ್ಕೂ ಈ ನಗರಕ್ಕೂ ಬಂದು, ಪ್ರಮುಖರ ಅಭಿಪ್ರಾಯಗಳನ್ನು ಸಂಗ್ರಹಿಸಿ ತೆರಳಿದ ವಿಷಯವು ಎಲ್ಲರಿಗೂ ತಿಳಿದಿದೆ. ಅವರ ವರದಿ ಇಷ್ಟರಲ್ಲೇ ಸಿದ್ಧವಾಗಿ ಹೊರಬೀಳುವು ದೆಂಬ ನಿರೀಕ್ಷೆಯೂ ಇದೆ. ಆ ಮಹನೀಯವೃಂದದ ಪರಿಶೀಲನವೂ ಸದ್ವಿಚಾರವೂ ಸಂಸ್ಕೃತ ವಿದ್ಯೆಗೆ ಪೋಷಕವಾಗಲಿ, ಅದರಿಂದ ದೇಶಕ್ಕೆ ಹಿತವಾಗಲಿ ಎಂದು ಹಾರೈಸೋಣ.

ಸಂಸ್ಕೃತ ವಿದ್ವಾಂಸರನ್ನು–ಜೊತೆಗೆ ಕನ್ನಡದವರನ್ನೂ ಸೇರಿಸಿಕೊಂಡರೆ ನಾನು ಬೇಡವೆನ್ನುವ ಹಾಗಿಲ್ಲ–ಸಾಮಾನ್ಯ ಲೋಕವು ಕಡೆಗಣ್ಣಿನಿಂದ ನೋಡುವುದೆಂಬ ಅಂಶವನ್ನು ನಾನು ಆಗಲೇ ಸೂಚಿಸಿದೆನಷ್ಟೆ ಭಾಷಾ ವಿದ್ವಾಂಸರೂ ಮಾನವ ಸಮಾಜದ ಒಂದು ಅಂಗ; ಅದರ ಸುಖದುಃಖಗಳಲ್ಲಿ ಇವರೂ ಅನಿವಾರ್ಯವಾಗಿ ಭಾಗಿಗಳು; ಅದರ ಲಾಭನಷ್ಟಗಳು ಇವರಿಗೂ ತಟ್ಟದೆ ಬಿಡುವುದಿಲ್ಲ. ಸಮಾಜದಲ್ಲಿ ಇವರಿಗೆ ಸಮೂಲ್ಯವಾದ– ಅಮೂಲ್ಯವಲ್ಲದಿದ್ದರೆ ಹೋಗಲಿ–ಒಂದು ಸ್ಥಾನವುಂಟೆಂಬ ಅರಿವು ಎಲ್ಲರಿಗೂ ಉಂಟಾಗಬೇಕು. ಇವರು ಕೇವಲ ಪ್ರದರ್ಶನಾಲಯದ ಅಲಂಕರಣ

ವಸ್ತುಗಳೆಂಬ ಭಾವನೆ ತೊಲಗಬೇಕು. ಹಾಗಾದರೆ ಇವರಿಗೂ ಆತ್ಮವಿಶ್ವಾಸ ಬೆಳೆಯುತ್ತದೆ; ತಮ್ಮ ಸಾಮಾಜಿಕ ಜೀವನವು ಸಾರ್ಥಕವೆಂಬ ನಂಬಿಕೆ ಬಲಿಯುತ್ತದೆ.

ಈ ಹಾರೈಕೆ ಸಿದ್ಧಿಸಬೇಕಾದರೆ ನಮ್ಮ ವಿದ್ವಾಂಸರೂ ಇಂದಿನ ಜೀವನಕ್ಕೆ ಹೊಂದಿಕೊಳ್ಳಬೇಕೆಂದು ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಅವರು "ಮಡಿವಂತಿಕೆ"ಯ ಮನೋಭಾವವನ್ನು ಲೋಕವ್ಯವಹಾರದ ಮಟ್ಟಿಗಾದರೂ ಸಡಿಲಿಸಬೇಕಾಗುತ್ತದೆ. ಮುಖ್ಯವಾಗಿ, ಸುತ್ತುಮುತ್ತಿನ ಜಗತ್ತಿನ ಸಮಸ್ಯೆಗಳನ್ನು ತೆರೆದ ಕಣ್ಣಿನಿಂದ, ತೆರೆದ ಮನಸ್ಸಿನಿಂದ ಪರಿಸೀಲಿಸಬೇಕು. ಆಧುನಿಕ ಸಮಾಜದ ಚಲನವಲನಗಳನ್ನು ಅನುಸರಿಸದಿದ್ದರೂ ಅರ್ಥಮಾಡಿಕೊಳ್ಳಬೇಕು. ಇದಕ್ಕೆ ಸಹಾಯಕವಾಗುವಂತೆ ತಮ್ಮ ವ್ಯಾಸಂಗವನ್ನು ವಿಶಾಲಪಡಿಸಿಕೊಳ್ಳಬೇಕು, ನವೀಕರಣ ಮಾಡಿಕೊಳ್ಳಲೂ ಬೇಕು.

ಜೊತೆಗೆ ಇನ್ನೊಂದು ಕರ್ತವ್ಯವೂ ಉಂಟು. ಸಂಸ್ಕೃತವು ಈಗ ಎಷ್ಟೋ ಮಟ್ಟಿಗೆ ದೇಶಭಾಷೆಗಳಲ್ಲೂ ದೇಶ್ಯವಾಙ್ಮಯಗಳಲ್ಲೂ ಉಜ್ಜೀವಿಸಿದೆಯೆಂಬುದನ್ನು ಆಗಲೇ ಗಮನಿಸಿದೆವು. ಸಂಸ್ಕೃತವು ದೃಢಮೂಲವಾಗಿ ಉಳಿಯಬೇಕಾದರೆ ಇವು ಬೆಳೆಯಬೇಕು. ಯಾವ ಕಾಲದಲ್ಲೇ ಆಗಲಿ, ಸಂಸ್ಕೃತದ ಪ್ರೌಢವಿದ್ವಾಂಸರ ಸಂಖ್ಯೆ ವಿಪುಲವಾಗಿರಲಿಲ್ಲ. ಇನ್ನು ಮುಂದಾದರೂ ಅದು ಹಚ್ಚೀತೆಂಬ ನಿರೀಕ್ಷೆಗೆ ಆಧಾರವಿಲ್ಲ. ಈ ಮಿತಸಂಖ್ಯೆಯ ವಿಶಾರದರು ಶಾಸ್ತ್ರ ಸಾಹಿತ್ಯಗಳನ್ನು ಸಂಸ್ಕೃತದಲ್ಲಿ ತಮ್ಮ ಮಟ್ಟಿಗೆ ತಾವು ಓದಿಕೊಳ್ಳುತ್ತಾ ತೆಪ್ಪಗೆ ಕುಳಿತರೆ ಸಾಲದು. ಜನತೆ ಇವರಿಂದ ಹೆಚ್ಚಿನ ಸೇವೆಯನ್ನು ನಿರೀಕ್ಷಿಸುತ್ತದೆ. ಸಂಸ್ಕೃತದ ಜ್ಞಾನರಾಶಿಯನ್ನು ಕೃಷ್ಣರಾಜ ಸಾಗರದ ಜಲರಾಶಿಗೆ ಹೋಲಿಸಬಹುದು. ಅದು ನಿಂತಲ್ಲೇ ನಿಂತುಬಿಟ್ಟರೆ ಏನು ಸಾರ್ಥಕ? ಕಟ್ಟೆಯ ಮುಂದಿನ ಬೃಂದಾವನದಲ್ಲಿ ಬಣ್ಣಬಣ್ಣದ ಬುಗ್ಗೆಗಳನ್ನು ಚಿಮ್ಮಿಸುವುದರಿಂದಲೂ ಅದಕ್ಕೆ ಹೆಚ್ಚಿನ ಗುಣ ಬರುವುದಿಲ್ಲ. ಇಲ್ಲಿ ಅಪರಿಮಿತವಾಗಿ ಕೂಡಿಟ್ಟ ಕಾವೇರಿಯ ನೀರು ಕಾಲುವೆಗಳ ಮೂಲಕ ನಾಡಿನಲ್ಲೆಲ್ಲ ಹರಿದು, "ಪಯಿರುಗಳ ಬದುಕಾಗಿ ಹೊಲಗಳ ಬೆಳಕಾಗಿ ಕಣ್ಣುಗಳ ಬೆರಗಾಗಿ" ಎಲ್ಲ ಕಡೆಯಲ್ಲೂ ವ್ಯಾಪಿಸಿದಾಗಲೆ ಅದರ ಪೂರ್ಣಫಲ. ಹೀಗೆಯೇ ಸಂಸ್ಕೃತದ ಜ್ಞಾನತೀರ್ಥವನ್ನು ದೇಶಭಾಷೆಗಳಿಗೆ ಹರಿಸಿ ಜನಸಾಮಾನ್ಯಕ್ಕೆ ಪುಷ್ಟಿತುಷ್ಟಿಗಳನ್ನು ನೀಡುವ ಕಾಲುವೆಗಳಾಗಬೇಕು ತಮ್ಮಂಥ ವಿದ್ವಾಂಸರು. ತಾವು ಸಂಸ್ಕೃತದ ಶಾಸ್ತ್ರ ಸಾಹಿತ್ಯಗಳನ್ನು ಕುರಿತು ಪಾಠಪ್ರವಚನಗಳನ್ನು ಎಲ್ಲರಿಗೂ ಎಟಕುವಂತೆ ಕನ್ನಡದಲ್ಲಿ ನಡೆಸಬೇಕು. ಸಂಸ್ಕೃತದ ಉದ್ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸಬೇಕು. ಅಲ್ಲಿಯ ವಿಚಾರಸಾರವನ್ನು ಸರಳವಾದ ಕನ್ನಡ ಪುಸ್ತಕಗಳಲ್ಲಿ ಒದಗಿಸಬೇಕು. ಸಂಸ್ಕೃತದ ಪಾವನೋದಕದಿಂದ ಜನತಾಜನಾರ್ದನನಿಗೆ ಕನ್ನಡದ ಶಂಖದಲ್ಲಿ ಅಭಿಷೇಕ ಮಾಡಿ ಅವನ ಸೇವೆಯಿಂದ ತಾವೂ ಪುನೀತರಾಗಬೇಕು. ಅಂಥ ಶಕ್ತಿ ಸಂಕಲ್ಪಗಳು ತಮಗೆಲ್ಲ ಅಧಿಕ ಪ್ರಮಾಣದಲ್ಲಿ ಒದಗಲೆಂದೂ ಜೀವನದಲ್ಲಿ ಸುಖವೂ ಶ್ರೇಯಸ್ಸೂ ಕ್ಲೇಶವಿಲ್ಲದೆ ಕೈಗೂಡಲೆಂದೂ ನನ್ನ ಹಾರೈಕೆ.

"ತೇಜಸ್ವಿ ನಾವಧೀತಮಸ್ತು!"

ಪರಿಶಿಷ್ಟ

"ರುಂದ್ರ" ಎಂಬ ಶಬ್ದ ಅಮರಕೋಶದಲ್ಲಿ ಇಲ್ಲವೆಂದು ಮೇಲೆ ೪೨೯ನೆಯ ಪುಟದಲ್ಲಿ ಹೇಳಿರುವುದಕ್ಕೆ ಭಟ್ಟಕ್ಷೀರಸ್ವಾಮಿಯ ಪ್ರಖ್ಯಾತವೂ ಪ್ರಮಾಣಭೂತವೂ ಆದ ವ್ಯಾಖ್ಯಾನದಿಂದ ಕೂಡಿದ ಅಮರಕೋಶದ ಪಾಠವು ಆಧಾರ. ನಮ್ಮ ಕಡೆ ಪ್ರಚುರವಾಗಿರುವ ಪಾಠದಲ್ಲಿ, ಉದಾಹರಣೆಗೆ ಮೈಸೂರು ವಿದ್ಯಾಶಾಖೆಯವರು ಇಂಗ್ಲಿಷ್ ಕನ್ನಡ ಟಿಪ್ಪಣಿಗಳೊಡನೆ ಪ್ರಕಟಿಸಿರುವ ಪಾಠದಲ್ಲಿ, "ರುಂದ್ರ" ಎಂಬುದು ಕಾಣಬರುತ್ತದೆ: "ರುಂದ್ರೋರುವಿಪುಲಂ..." (೩.೬೧); ಇದಕ್ಕೆ "ಅಗಲವಾದ ಅಥವಾ ದೊಡ್ಡದಾದ" ಎಂದು ಕನ್ನಡದಲ್ಲಿ ಅರ್ಥಕೊಟ್ಟಿದೆ. ಈ ಭಾಗಕ್ಕೆ ಸಂವಾದಿಯಾದ ಕ್ಷೀರಸ್ವಾಮಿಯ ಪಾಠ "ವಡ್ರೋರುವಿಪುಲಂ" ಎಂದು; ಇಲ್ಲಿಯ "ವಡ್ರ" ಎಂಬುದಕ್ಕೆ "ವಲತೇ ವಡ್ರಂ" ಎಂದು ಕ್ಷೀರಸ್ವಾಮಿ ನಿಷ್ಪತ್ತಿ ಹೇಳುತ್ತಾನೆ.

ಸಮಾಲೋಕನ : ೧೯೫೮

ಕನ್ನಡ – ಸಂಸ್ಕೃತ : ವಾದಭೂಮಿ

ವಾದಕ್ಕೆ ನಿಲ್ಲಬೇಕಾದರೆ ಯಾರಿಗೂ ಉತ್ಸಾಹ ಕಡಿಮೆ. ಇಬ್ಬರು ಹೇಳಿದ್ದು ಸೂಕ್ತವಲ್ಲವೆಂದು ತೋರಿದರೂ ಅದನ್ನು ಎದುರಿಸಿ ಒಂದು ಮಾತನ್ನು ಆಡುವ ಮುಂಚೆ ಎರಡು ಸಲ ಯೋಚಿಸುವುದೇ ಮನುಷ್ಯ ಸ್ವಭಾವ. ಚರ್ಚೆಯ ವಿಷಯವು ಶಾಸ್ತ್ರ ಸೂತ್ರಗಳಿಗೆ ಸಂಬಂಧಿಸಿದ್ದರೆ ವಾಸಿ. ಅದನ್ನು ಕುರಿತು ಪಕ್ಷ–ಪ್ರತಿಪಕ್ಷದವರಿಬ್ಬರೂ ಮನಃಖೇದವಿಲ್ಲದೆ ವಾದಿಸ ಬಹುದು. ಆದರೆ ಚರ್ಚೆಯಲ್ಲಿ ಅಭಿಪ್ರಾಯಗಳೇ ಪ್ರಧಾನವಾಗಿ, ವ್ಯಕ್ತಿಗಳ ಮೇಲಿನ ಟೀಕೆ ಖಂಡನೆಗಳು ತಲೆಹಾಕಿದಲ್ಲಿ ವಾದಮಾರ್ಗವು ಪಡೆಸಾಗುತ್ತದೆ; ಅಹಿತವಾಗುತ್ತದೆ. ಅದರಲ್ಲಿ ಪ್ರವೇಶ ಮಾಡಲು ಮನಸ್ಸು ತುಂಬ ಹಿಂಜರಿಯುತ್ತದೆ. ಆದರೂ ಕೆಲವು ಸಂದರ್ಭಗಳಲ್ಲಿ, ಹಾಗೆ ತಟಸ್ಥವಾಗಿ ನಿಲ್ಲುವುದು ಸರಿಯಲ್ಲವೆಂದೂ ಎನ್ನಿಸುತ್ತದೆ. ಆಗ ಸಂಕೋಚವನ್ನು ದೂರಮಾಡಿ 'ವಾದಭೂಮಿ'ಗೆ ಇಳಿಯಲೇಬೇಕು.

'ಜಯಕರ್ನಾಟಕ'ದ ಜೂನ್ ತಿಂಗಳ ಸಂಚಿಕೆಯಲ್ಲಿ ಶ್ರೀಮಾನ್ ಜಿ.ಆರ್. ಜೋಸ್ಯರ್, ಎಂ.ಎ.,ಎಫ್.ಆರ್.ಇ.ಎಸ್. ಅವರು ಬರೆದಿರುವ 'ಕನ್ನಡವೂ ಸಂಸ್ಕೃತವೂ' ಎಂಬ ಲೇಖನವನ್ನು ಓದಿದಾಗ ಈ ಬಗೆಯ ವಿಚಾರಗಳು ಮನಸ್ಸಿನಲ್ಲಿ ಉದಿಸಿದವು. ಲೇಖನದ ಹೆಸರು ಎಷ್ಟು ಸೌಮ್ಯವೋ ಒಳಗಿನ ವಿಷಯವೂ ಅಷ್ಟು ಸೌಮ್ಯವಲ್ಲ. ಕನ್ನಡ–ಸಂಸ್ಕೃತ ಭಾಷೆಗಳ ಪರಸ್ಪರ ಸಂಬಂಧವನ್ನೂ,

ಅವುಗಳಿಗೆ ಮೈಸೂರು ವಿಶ್ವವಿದ್ಯಾಲಯದ ಪಾಠಕ್ರಮದಲ್ಲಿರಬೇಕಾದ ಸ್ಥಾನವನ್ನೂ ಪರಿಷ್ಕಾರಗೊಳಿಸುವುದೇ ಶ್ರೀಮಾನ್ ಜೋಸ್ಯರವರ ತಾತ್ಪರ್ಯವಾಗಿರಬಹುದು. ಆದರೆ ಅದರ ಪರ್ಯವಾಸನವು ಮಾತ್ರ ಭಿನ್ನವಾಗಿದೆ. ಲೇಖನದಲ್ಲಿ ವಿಷಯ ಪರಿಷ್ಕಾರಕ್ಕಿಂತಲೂ ವ್ಯಕ್ತಿ ವಿಮರ್ಶೆಯೇ ಪ್ರಮುಖವಾಗಿರುವಂತೆ ತೋರುತ್ತದೆ. ಅಷ್ಟೆ ಅಲ್ಲ ; ಸಭ್ಯಚರ್ಚೆಗೆ ಅಪ್ರಕೃತವಾದ ಅವಹೇಳನದ ಧ್ವನಿ-ಲೇಖಕರಿಗೆ ತಿಳಿಯದಂತೆಯೇ ಇರಬಹುದು-ಅಲ್ಲಲ್ಲೇ ಕಿವಿಗೆ ಬೀಳುತ್ತದೆ. 'ಕನ್ನಡ-ಸಂಸ್ಕೃತ ವಾದದ'ದ ನಿಜಸ್ವರೂಪವೂ ಶ್ರೀಮಾನ್ ಜೋಸ್ಯರವರ ಲೇಖನದಲ್ಲಿ ಸ್ಪಷ್ಟವಾಗಿ ತಿಳಿಯುವಂತಿಲ್ಲ. ಅವರ ಕೆಲವು ವಾಕ್ಯಗಳು 'ಕನ್ನಡ' ಪಕ್ಷದವರ ಹೇಳಿಕೆಗಳಿಗೆ ಅಪಾರ್ಥವನ್ನು ಕಲ್ಪಿಸುತ್ತವೆ.* ಹೀಗಿರುವುದರಿಂದ, 'ಕನ್ನಡ' ಪಕ್ಷದವರ ಮೇಲೆ ಅವರು ಹೊರಿಸಿರತಕ್ಕ ದೂರನ್ನು ಪರಿಹರಿಸುವ ಪ್ರಯತ್ನವೊಂದು ಅನಿವಾರ್ಯವಾಯಿತು. ಕರ್ಣಾಟಕ ಪಾಠಕ ಪ್ರಪಂಚವು "ಮ.ರಾ.ಬಿ.ಎಂ. ಶ್ರೀಕಂಠಯ್ಯನವರ ಪ್ರಚಂಡ ನಿಯಮಗಳನ್ನು ಖಂಡಿಸಲೇಬೇಕು" ಎಂದು ಶ್ರೀಮಾನ್ ಜೋಸ್ಯರವರು ವಿಧಿಸಿದ್ದಾರೆ. ಹಾಗೆ ಕರ್ಣಾಟಕ ಪ್ರಪಂಚವು ಮಾಡುವುದಕ್ಕೆ ಮೊದಲು, ಅದಕ್ಕೆ ಅವರ ಲೇಖನದಲ್ಲಿ ಗೋಚರವಾಗದ ಕೆಲವು ಪ್ರಸಕ್ತ ವಿಚಾರಗಳನ್ನು ನಿವೇದಿಸುವುದು ಅಗತ್ಯವಾಯಿತು. ಇಂತಹ ಪ್ರಯತ್ನವನ್ನು 'ಜಯಕರ್ಣಾಟಕ'ದ ಸಂಪಾದಕರೂ ಕೋರಿರುವುದರಿಂದ ಪ್ರಸ್ತುತ ಲೇಖನಕ್ಕೆ ಉದಾರಾಶ್ರಯವು ಸಿಕ್ಕಿತು.

ಈ 'ಕನ್ನಡ-ಸಂಸ್ಕೃತ ವಾದ'ದ ಮೂಲ ತತ್ತ್ವವನ್ನು ಕುರಿತು ಮುಂದೆ ವಿಚಾರ ಮಾಡೋಣ. ಇದು ಹೇಗೆ ಮೊದಲಯಿತೆಂಬುದನ್ನು "ಶ್ರೀಮಾನ್ ಜೋಸ್ಯರವರೇ ಸೂಚಿಸಿದ್ದಾರೆ. ಅವರು ಸ್ಫುಟಪಡಿಸದಿರುವ ಅಂಶವೊಂದನ್ನು ಇಲ್ಲಿ ತಿಳಿಸಬೇಕು. ಈಗ ಆರೇಳು ವರ್ಷಗಳ ಹಿಂದೆ ಸರ್ ಬ್ರಜೇಂದ್ರನಾಥ ಶೀಲರೂ ಅವರ ಸಹಾಯ ಸಮಿತಿಯೂ ಸಿದ್ಧಪಡಿಸಿದ್ದ ಪಾಠ ಪರಿಷ್ಕರಣದ ವರದಿಯನ್ನು ಅಂದಿನ ಸೆನೆಟ್ ಸಭೆಯವರು ತುಂಬ ವಿಮರ್ಶಿಸಿ, ಕನ್ನಡ ಉರ್ದುಗಳೇ ಒಂದು ದ್ವಿತೀಯ ಭಾಷೆಯಾಗಿರಬೇಕೆಂದು ಹೆಚ್ಚು ಕಡಿಮೆ ಸರ್ವಾನುಮತಿಯಿಂದ ವಿಧಿಸಿದರು. ಅದೇ ಸಭೆಯಲ್ಲಿ, ಸಂಸ್ಕೃತವನ್ನೂ ದ್ವಿತೀಯಭಾಷೆಯಾಗಿ ತೆಗೆದುಕೊಳ್ಳಲು ಅವಕಾಶವಿರಬೇಕೆಂದು ಬಂದ ಸೂಚನೆಗೆ ಸ್ವಲ್ಪವೂ ಪುರಸ್ಕಾರ ದೊರೆಯಲಿಲ್ಲ. ಇದು ನೆನಪಿನಲ್ಲಿಡಬೇಕಾದ ಸಂಗತಿ. ಅಂತೂ ಪರಿಷ್ಕರಣದ ನಿಬಂಧನೆಗಳ ಪ್ರಕಾರ ಕನ್ನಡ (ಅಥವಾ ಉರ್ದು) ಮಾತ್ರ ದ್ವಿತೀಯ ಭಾಷೆಯಾಗಿರಬೇಕೆಂಬ ನಿಯಮವು ೧೯೩೨-೩೩ನೆಯ ವರ್ಷದಿಂದ ಜಾರಿಗೆ ಬರಬೇಕಾಗಿದ್ದಿತು. ಅಲ್ಲಿಯವರೆಗೆ ಎಂದರೆ ಇದುವರೆಗೂ ಸಂಸ್ಕೃತ, ತೆಲುಗು, ತಮಿಳು, ಪಾರ್ಸಿ, ಫ್ರೆಂಚ್ ಮೊದಲಾದ ಭಾಷೆಗಳಿಗೆಲ್ಲಾ ದ್ವಿತೀಯ

---

* ವಿಶ್ವವಿದ್ಯಾನಿಲಯದಲ್ಲಿ ಕನ್ನಡವೊಂದೇ ದ್ವಿತೀಯ ಭಾಷೆಯಾಗಿರಬೇಕೆನ್ನುವವರನ್ನು 'ಕನ್ನಡ' ಪಕ್ಷದವರೆಂದೂ, ಸಂಸ್ಕೃತವೂ ದ್ವಿತೀಯ ಭಾಷೆಯಾಗಿರಬೇಕೆನ್ನುವವರನ್ನು 'ಸಂಸ್ಕೃತ' ಪಕ್ಷದವರೆಂದೂ ಇಲ್ಲಿ ಲಾಘವಕ್ಕಾಗಿ ಕರೆದಿದೆ.

ಭಾಷಾವರ್ಗದಲ್ಲಿ ಸ್ಥಾನವಿದ್ದೇ ಇತ್ತು. ೧೯೩೨ನೆಯ ಇಸವಿ ಸಮೀಪಿಸುತ್ತಲೂ ಸಂಸ್ಕೃತ ಮೊದಲಾದ ಭಾಷೆಗಳ ಅಭಿಮಾನಿಗಳಿಗೆ ಆಂತಕವು ಪ್ರಬಲವಾದಂತೆ ತೋರುತ್ತದೆ. ದೇಶದಲ್ಲಿ ಅನೇಕ ಸಭೆಗಳು ನಡೆದವು. ಸೆನೆಟ್ ಸದಸ್ಯರಲ್ಲಿ ಹಲವರು ಸಂಸ್ಕೃತದ ರಕ್ಷಣೆಗೆ ನಿಂತರು. ಈ ಪ್ರಯತ್ನಗಳ ಫಲವಾಗಿ, ೧೯೩೧ನೆಯ ಇಸವಿಯ ಅಂತ್ಯದಲ್ಲಿ ಸೇರಿದ ಸೆನೆಟ್ ಸಭೆಯಲ್ಲಿ, ಇನ್ನೂ ಎರಡು ವರ್ಷಗಳ ಕಾಲ ಸಂಸ್ಕೃತ ಮೊದಲಾದ ಭಾಷೆಗಳಿಗೆ ದ್ವಿತೀಯ ಭಾಷಾವರ್ಗದಲ್ಲಿ ಅವಕಾಶವಿರಬೇಕೆಂದೂ, ಈ ನಡುವೆ ಶೀಲರವರ ನಿಬಂಧನೆಯನ್ನು ಮತ್ತೆ ಚರ್ಚಿಸಿ ಒಂದು ನಿಷ್ಕರ್ಷೆಗೆ ಬರಬೇಕೆಂದೂ ಗೊತ್ತಾಯಿತು. ಅದರ ಮುಂದಿನ ಸಭೆಯಲ್ಲೇ ಎಂದರೆ ಮೊನ್ನೆ ಮಾರ್ಚಿ ತಿಂಗಳಲ್ಲಿ ಸೆನೆಟ್ ಸಭೆ ಸೇರಿದಾಗ, ಸಂಸ್ಕೃತದ ಮತ್ತು ಇತರ ಭಾಷೆಗಳ ಸ್ಥಾನವನ್ನು ಕುರಿತು ಪ್ರಚಂಡವಾದ ಚರ್ಚೆಯಾಯಿತು; ಚರ್ಚೆ ನಡೆದದ್ದು ಮುಖ್ಯವಾಗಿ ಸಂಸ್ಕೃತದ ಸ್ಥಾನವನ್ನು ಕುರಿತೇ ಎಂಬುದರಲ್ಲಿ ಸಂಶಯವಿಲ್ಲ. ಸಂಸ್ಕೃತಕ್ಕೆ ಅವಕಾಶವಿರಬೇಕೆಂದು ನಿರ್ಣಯ ವಾಗುತ್ತಲೂ ಅದರ ಬೆನ್ನ ಹಿಂದೆ ಉಳಿದ ಭಾಷೆಗಳೂ ಬಂದವು.

೧೯೩೧-೩೨ನೆಯ ವರ್ಷದಲ್ಲೆಲ್ಲ ಈ ವಾದವು ಮೈಸೂರಿನಲ್ಲಿ ಸೆನೆಟ್ ರಂಗವನ್ನು ಮಾತ್ರವಲ್ಲ, ಮಿಕ್ಕ ವಾದಭೂಮಿಗಳನ್ನು ಆವರಿಸಿತ್ತೆಂದು ಹೇಳಬಹುದು. ಆದರೂ ವಿಷಯವಿನ್ನೂ ವಾದದಶೆಯಲ್ಲಿದ್ದಾಗ ಕರ್ಣಾಟಕದ ಪ್ರಸಿದ್ಧ ಪತ್ರಿಕೆಗಳಲ್ಲಿ ಇದನ್ನು ಕುರಿತು ಹೆಚ್ಚು ಚರ್ಚೆಯಾದಂತೆ ತೋರುವುದಿಲ್ಲ. ಸೆನೆಟಿನ ತೀರ್ಮಾನವು ಬರುವ ಕಾಲಕ್ಕೇನೋ ವಿಶ್ವಕರ್ಣಾಟಕವೇ ಮೊದಲಾದ ವೃತ್ತಪತ್ರಿಕೆಗಳಲ್ಲಿ ತಕ್ಕಮಟ್ಟಿಗೆ ಇದರ ಮಾತು ಬಂದಿತು. ಆದರೆ ಆಗಲೂ ಪತ್ರಿಕಾಕರ್ತರು ಈ ವಿಷಯವನ್ನು ಕುರಿತು ಬರೆದದ್ದೇ ಹೊರತು 'ಸಂಸ್ಕೃತ' ಪಕ್ಷದವರಾಗಲಿ, 'ಕನ್ನಡ' ಪಕ್ಷದವರಾಗಲಿ ತಾವೇ ಈ ಸಾಧನವನ್ನು ಉಪಯೋಗಿಸಿಕೊಂಡಂತೆ ಕಾಣಲಿಲ್ಲ. ಸೆನೆಟ್ ಸಭೆ ಮಾರ್ಚಿಯ ಕೊನೆಯಲ್ಲಿ ನೆರೆಯಿತು; ಒಂದು ನಿಷ್ಕರ್ಷೆಗೆ ಬಂದಿತು; ಸಂಸ್ಕೃತವೂ ಒಂದು ದ್ವಿತೀಯ ಭಾಷೆಯಾಗಿ ಉಳಿಯಬೇಕೆಂದು ತೀರ್ಮಾನಿಸಿತು. 'ಸಂಸ್ಕೃತ' ಪಕ್ಷದವರು ಜಯಶೀಲರಾದರು. ಅವರು ಚರ್ಚೆಗಾಗಲಿ ವಾದಕ್ಕಾಗಲಿ ಮತ್ತೆ ಕೈಹಾಕುವ ಅವಶ್ಯಕತೆ ಅಷ್ಟು ಉಳಿಯಲಿಲ್ಲವೆನ್ನಬಹುದು. ಅಲ್ಲಿಂದೀಚೆಗೆ ಸಂಸ್ಕೃತದ ಉತ್ಕರ್ಷವನ್ನು ಸ್ಥಾಪಿಸುವ ಲೇಖನಗಳು ಹೊರಬಿದ್ದರೆ, ವಿಜಯದುಂದುಭಿಯ ಅನುರಣನ ಧ್ವನಿಯನ್ನು ಕೇಳಿದಂತಾಗುತ್ತದೆ.

ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು ಕನ್ನಡವೊಂದೇ ದ್ವಿತೀಯ ಭಾಷೆಯಾಗಿರ ಬೇಕೆಂದು ಹೇಳುತ್ತಿದ್ದವರಲ್ಲಿ ಪ್ರಮುಖರು; ಕರ್ಣಾಟಕ ವಿದ್ವತ್ಪ್ರಪಂಚದಲ್ಲಿ ಗಣ್ಯಸ್ಥಾನವನ್ನು ಪಡೆದರು. ಇಂಥವರು ಸಂಸ್ಕೃತ ಕನ್ನಡ ಭಾಷೆಗಳಿಗಿರತಕ್ಕ ಸಂಬಂಧವನ್ನು ಕುರಿತು ಒಂದು ಮಾತನ್ನಾಡಿದರೆ ಅದನ್ನು ಹಲವರು ನಂಬಿಯಾರು, ಅದರಿಂದ ಜನಗಳಲ್ಲಿ ತಪ್ಪು ತಿಳಿವಳಿಕೆ ಬೆಳೆದೀತು-ಎಂಬ ಭಾವನೆಯಿಂದ ಶ್ರೀಮಾನ್ ಜೋಸ್ಯರವರು ಪ್ರಸ್ತುತ ಖಂಡನೆಗೆ ಕೈಹಾಕಿದರೆಂದು ಊಹಿಸಬಹುದು. ಅವರು ಹಾಗೆ ಮಾಡಿದ್ದು ತಪ್ಪಲ್ಲ.

ಸೆನೆಟ್ ಸಭೆಯಲ್ಲಿ ಶ್ರೀಮಾನ್ ಶ್ರೀಕಂಠಯ್ಯನವರಾಗಲೀ ಬೇರೆಯ ಸದಸ್ಯರಾಗಲಿ ಪಟ್ಟ ಅಭಿಪ್ರಾಯಗಳು ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿಲ್ಲದಿದ್ದರೂ, ಜನಸಮುದಾಯಕ್ಕೆ ಅವು ತಿಳಿಯತಕ್ಕ ಸಂಭವ ಅಲ್ಪವಾಗಿದ್ದರೂ, ಆ ಅಭಿಪ್ರಾಯಗಳು ಸಂಗತವಲ್ಲವೆಂದು ತೋರಿದರೆ ಅವನ್ನು ಖಂಡಿಸುವುದು ತಪ್ಪಲ್ಲ. ಆ ರೀತಿ ಮಾಡುವುದರಿಂದ, ಅವುಗಳ ಬಲೆಗೆ ಬೀಳಬಹುದಾಗಿದ್ದ ಕೆಲವರು ಕೂಡ ಎಚ್ಚರಗೊಳ್ಳಲು ಸಹಾಯ ಮಾಡಿ ದಂತಾಗುತ್ತದೆ. ಆದರೆ ಹಾಗೆ ಮಾಡುವಾಗ ಸೌಜನ್ಯವು ಆವಶ್ಯಕವಲ್ಲವೆಂದು ಹೇಳಲಾದೀತೆ? ಶ್ರೀಮಾನ್ ಜೋಸ್ಯರವರ ಲೇಖನವನ್ನು ಓದಿದವರಿಗೆಲ್ಲಾ, 'ಜಯ ಕರ್ಣಾಟಕ'ದ ಸಂಪಾದಕರಿಗೆ ತೋರಿದಂತೆಯೇ ಕೆಲವು "ವಾಕ್ಯಗಳಲ್ಲಿ ಇರುವ ಭಾವನೆಯ ರೀತಿ ಸರಿಯಲ್ಲವೆಂದು" ತೋರುತ್ತದೆ. ಶ್ರೀಮಾನ್ ಶ್ರೀಕಂಠಯ್ಯನವರ ಅಧಿಕಾರ ಪದವಿಯನ್ನು ಲೇಖಕರು ಎಷ್ಟು ಕಡೆ ಎಷ್ಟು ಬಗ್ಗೆಯಾಗಿ ಉದ್ಘೋಷಿಸಿದ್ದಾರೆ! "ಇಂಗ್ಲಿಷ್ ಮತ್ತು ಕನ್ನಡಗಳಲ್ಲಿ ಉಚ್ಚೋಪಾಧ್ಯಾಯರೂ ಕರ್ಣಾಟಕ ಸಾಹಿತ್ಯ ಪರಿಷತ್ತಿನ (ಸಮ್ಮೇಳನದ) ಮಾಜಿ ಅಧ್ಯಕ್ಷರೂ ಕನ್ನಡ ಗ್ರಂಥಕರ್ತರ ಆಶ್ರಯದಾತರೂ ಆದ...ಕನ್ನಡದ ಟೆಕ್ಸ್ಟ್‌ಬುಕ್ ಕಮಿಟಿಗಳಿಗೂ ಬೋರ್ಡ್ ಆಫ್ ಸ್ಟಡಿಗಳಿಗೂ ಪಬ್ಲಿಕೇಶನ್ ಕಮಿಟಿಗೂ ಅಧ್ಯಾಪಕ ವರ್ಗಕ್ಕೂ ಪರೀಕ್ಷಕ ವರ್ಗಕ್ಕೂ ನಾಯಕರಾದ ಮ.ರಾ. ಶ್ರೀಕಂಠಯ್ಯನವರು!" ಸರಿಯೆ, ಶ್ರೀಮಾನ್ ಶ್ರೀಕಂಠಯ್ಯನವರ ಸ್ಥಾನ ಮಾಹಾತ್ಮ್ಯವನ್ನು ಅನುಪಮವಾಗಿ ನಿರೂಪಿಸಿದಂತಾಯಿತು. ಆದರೆ ಇಷ್ಟು ವಿವರವೇತಕ್ಕೆ? ಶ್ರೀಮಾನ್ ಶ್ರೀಕಂಠಯ್ಯನವರ ಅಭಿಪ್ರಾಯಗಳಲ್ಲಿರುವ ಅನನ್ವಯವನ್ನು ಉತ್ತರಕ್ಷಣದಲ್ಲಿಯೇ ಎತ್ತಿಹಿಡಿದು ಅಲ್ಲಗೆಳೆಯುವುದಕ್ಕೆ. ವಾಙ್ಮಯ ತೀಕ್ಷ್ಣಾಯುಧವಾದ ವಿಷಮಾಲಂಕಾರವನ್ನು ಶ್ರೀಮಾನ್ ಜೋಸ್ಯರವರು ಅನಿಯಂತ್ರಿತವಾಗಿ ಉಪಯೋಗಿಸಿದ್ದಾರೆ.

ಇದರ ಜೊತೆಗೆ, ಪುರಾಣೇತಿಹಾಸಗಳಿಂದ ತಂದ ಉಪಮಾನಗಳು : ಶ್ರೀಕೃಷ್ಣನಿಗೆ ಶಿಶುಪಾಲನು ಮಾಡಿದಂತೆ ಸಂಸ್ಕೃತಕ್ಕೆ ಇವರು (ಶ್ರೀಮಾನ್ ಶ್ರೀಕಂಠಯ್ಯನವರು) ಮಾಡಿದ ಅವಹೇಳನ....ಜಯಚಂದ್ರ ಮಹಮ್ಮದ ಘೋರಿಗಳ ನೀಚಸಖ್ಯ. ಲೇಖನವೇನೋ ಸರಸವಾಯಿತು; ಆದರೆ ಅದರ ಹೃದಯವು ವಿರಸವಾಗಲಿಲ್ಲವೆ?

ಇದೆಲ್ಲವನ್ನೂ ಒಂದು ವೇಳೆ ಅಲಕ್ಷಿಸಬಹುದು. ಆದರೆ ಶ್ರೀಮಾನ್ ಜೋಸ್ಯರವರ ಲೇಖನದಲ್ಲಿ ಒಂದು ವಾಕ್ಯ ಮಾತ್ರ ಸರ್ವಥಾ ಅನರ್ಥಕವೆಂದು ಹೇಳಬೇಕಾಗಿದೆ. "...ಕನ್ನಡ ಸಾಹಿತ್ಯಾಭಿಮಾನಿಗಳಿಗೂ ಆ (ಹಳಗನ್ನಡದ) ಗ್ರಂಥಗಳೆಲ್ಲವನ್ನೂ ಬಿಟ್ಟು ಬಿಟ್ಟು ಮ.ರಾ. ಬಿ.ಎಂ. ಶ್ರೀಕಂಠಯ್ಯ, ಟಿ.ಎಸ್. ವೆಂಕಣ್ಣಯ್ಯ ಇವರುಗಳು ಮತ್ತು ಇವರ ಅನುಚರರು ಬರೆಯತಕ್ಕ ಗ್ರಂಥಗಳನ್ನೇ ಓದಿ ತೃಪ್ತರಾಗಬೇಕೆಂದು ಇವರ ಭಾವನೆಯೇ?" ಎಂದು ಶ್ರೀಮಾನ್ ಜೋಸ್ಯರವರು ತರ್ಕಿಸುತ್ತಾರೆ. ನೋಡಿದ ಕೂಡಲೆ ಅಸಮಂಜಸವೆಂದು ಹೊಳೆಯುವ ಇಂಥ ಅಭಿಪ್ರಾಯವನ್ನು ಶ್ರೀಮಾನ್ ಶ್ರೀಕಂಠಯ್ಯನವರಿಗೇ ಏಕೆ, ಯಾವ ವಿದ್ವಾಂಸರಿಗಾದರೂ ಆರೋಪಿಸುವುದು ಅನುಚಿತವೆಂದು ಒತ್ತಿ ಹೇಳಬೇಕಾಗಿದೆ. ಬರಿಯ ಹೊಸ ಸಾಹಿತ್ಯವೇ ಕನ್ನಡಿಗರಿಗೆ ಸಾಕೆಂದು ಯಾರು

ತಾನೇ ಹೇಳಬಹುದು? ಅಲ್ಲದೆ ಹೊಸ ಸಾಹಿತ್ಯವನ್ನು ಬೆಳೆಸುತ್ತಿರುವವರು ಶ್ರೀಮಾನ್ ಶ್ರೀಕಂಠಯ್ಯನವರು, ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯನವರು, ಇವರ ಅನುಚರರು– ಇಷ್ಟು ಜನ ಮಾತ್ರವೇ ಅಲ್ಲ.* ಅಭಿನವ ಚೈತನ್ಯವು ಈ ವರ್ಗದಿಂದ ಹೊರಪಟ್ಟವರನ್ನೂ ಪೂರ್ಣವಾಗಿ ಆವರಿಸಿದೆ. ಉದಾಹರಣೆಗೆ, ಶ್ರೀಗಳಾದ ಚ. ವಾಸುದೇವಯ್ಯನವರನ್ನೂ, ಪಂಜೆ ಮಂಗೇಶರಾಯರನ್ನೂ, ವೇ.ತಿ. ಗಳಗನಾಥರನ್ನೂ, ಮಾಸ್ತಿ ವೆಂಕಟೇಶ ಐಯಂಗಾರ್ಯರನ್ನೂ, ಡಿ.ವಿ. ಗುಂಡಪ್ಪನವರನ್ನೂ, ದ.ರಾ. ಬೇಂದ್ರೆಯವರನ್ನೂ, ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರ ಅನುಚರರೆಂದು ಯಾರಾದರೂ ಕರೆಯ ಬಹುದೇ? ಇವರೆಲ್ಲರೂ ಆಧುನಿಕ ಮಾರ್ಗದ ಲೇಖಕರಲ್ಲವೇ? ಇವರಿಂದ ಕನ್ನಡ ಸಾಹಿತ್ಯ ಸಂಪತ್ತು ಬೆಳೆದಿಲ್ಲವೆ? ಇವರೆಲ್ಲರೂ ಬರೆಯುತ್ತಿರುವಾಗ ಹೊಸಗನ್ನಡದ ಸಾಹಿತ್ಯವನ್ನು ಅಷ್ಟು ಕೀಳಾಗಿ ಎಣಿಸುವುದಾದರೂ ಸರಿಯೇ?

ಶ್ರೀಮಾನ್ ಜೋಸ್ಯರವರ ಲೇಖನವೆಲ್ಲಾ, ಶ್ರೀಮಾನ್ ಶ್ರೀಕಂಠಯ್ಯನವರು ಸೆನೆಟ್ ಸಭೆಯಲ್ಲಿ ಆಡಿದ ಒಂದೆರಡು ಮಾತುಗಳ ಮೇಲಿನ ವ್ಯಾಖ್ಯಾನವೆನ್ನಬಹುದು. ಆ ಮಾತುಗಳನ್ನು ಶ್ರೀಮಾನ್ ಜೋಸ್ಯರವರು ಈ ರೀತಿ ಉದ್ಧರಿಸಿದ್ದಾರೆ :

"Sanskrti has crushed us, cramped us, stifled us. Kannada does not want the help of Sanskrit hereafter. It must go to English for help henceforward."

ಇದೇ ಪದಗಳನ್ನುಪಯೋಗಿಸಿ ಇದೇ ಅನುಪೂರ್ವಿಯಲ್ಲೇ ಶ್ರೀಮಾನ್ ಶ್ರೀಕಂಠಯ್ಯನವರು ಆಡಿದರೆ, ಇಲ್ಲವೆ ಎಂಬುದನ್ನು ನಿರ್ಣಯಿಸುವುದು ಕಷ್ಟ. ಅವರಾಗಲಿ ಇತರರಾಗಲಿ ಸೆನೆಟ್ ಸಭೆಯಲ್ಲಿ ಮಾಡಿದ ಭಾಷಣಗಳ ಸಮಗ್ರ ವರದಿ ಎಲ್ಲೂ ಬಂದಂತೆ ತಿಳಿದಿಲ್ಲ. ಆದರೂ, ಶ್ರೀಮಾನ್ ಜೋಸ್ಯರವರ ಸೆನೆಟಿನ ಸದಸ್ಯರಾದ್ದರಿಂದ ಒಂದು ವೇಳೆ ಲಘುಲಿಪಿಯಲ್ಲಿ ಈ ವಾಕ್ಯಗಳನ್ನು ಕೆಲಮಟ್ಟಿಗಾದರೂ ಅವರು ಗುರುತು ಹಾಕಿಕೊಂಡಿದ್ದಾರು. ಆದ್ದರಿಂದ ಪಾಠಶೋಧನೆಯ ಗೋಜಿಗೆ ಹೋಗದೆ ಶ್ರೀಮಾನ್ ಶ್ರೀಕಂಠಯ್ಯನವರು ಈ ಮಾತುಗಳನ್ನೇ ಆಡಿದ್ದರೆ ಅವರ ಆಶಯವೇನಿರಬಹುದೆಂದು ವಿಚಾರಮಾಡೋಣ.

ಒಂದು ಮಾತನ್ನು ಆಡಿದ ಸನ್ನಿವೇಶ ಯಾವುದು, ಅದರ 'ಪ್ರಕರಣ'ವೇನು ಎಂಬುದನ್ನು ಸರಿಯಾಗಿ ತಿಳಿದ ಹೊರತು ಅದರ ಅಭಿಪ್ರಾಯವನ್ನು ತಪ್ಪಿಲ್ಲದೆ ನಿರ್ಧರಿಸುವುದು ಕಷ್ಟ. ಅಲ್ಲದೆ ಎಷ್ಟೋ ವೇಳೆ ಆ ಮಾತನ್ನು ವಕ್ತೃವಿನ ಮಿಕ್ಕ ನಡೆನುಡಿಗಳಿಗೆ ಅನ್ವಯಿಸಿ ನೋಡಿ ಅವಕ್ಕೆ ಹೊಂದತಕ್ಕ ಅರ್ಥವನ್ನು ಈ ಮಾತಿಗೆ

---

* ಶ್ರೀಮಾನ್ ಟಿ.ಎಸ್. ವೆಂಕಣ್ಣಯ್ಯನವರು ಹಳಗನ್ನಡದ ಪ್ರಾಚೀನ ಕಾವ್ಯಗಳನ್ನೇ ಹೆಚ್ಚಾಗಿ ಶೋಧಿಸಿ ಪ್ರಕಟಿಸಿರತಕ್ಕವರು; ಸೆನೆಟಿನ 'ಕನ್ನಡ–ಸಂಸ್ಕೃತ ವಾದ'ದಲ್ಲಿ ಭಾಗಿಗಳಾಗದಿರು ವವರು. ಇವರ ಹೆಸರು ಉಪಹಾಸಕ್ಕೆ ಪಾತ್ರವಾಗಲು ಏನು ಔಚಿತ್ಯವೋ ತಿಳಿಯುವುದು ಕಷ್ಟ.

ಕಟ್ಟಬೇಕಾಗುತ್ತದೆ. ಮಾತಿನ ವಾಚಾರ್ಥವು ಅಸಾಧಾರಣವಾಗಿಯೂ ವಾದಜನಕವಾಗಿಯೂ ಇದ್ದರಂತೂ ಈ ಬಗೆಯ ವಿವೇಚನೆ ಟೀಕಾಕಾರನ ಪ್ರಥಮಕರ್ತವ್ಯವಾಗುತ್ತದೆ. ಅದರಿಂದ, ಶ್ರೀಮಾನ್ ಶ್ರೀಕಂಠಯ್ಯನವರು ಮೇಲಿನ ವಾಕ್ಯಗಳನ್ನು ಆಡುವುದರಲ್ಲಿ ಅವರ ಅಭಿಪ್ರಾಯವೇನೆಂದು ತಿಳಿಯಬೇಕಾದರೆ, ಅವರು ಭಾಷಣ ಮಾಡಿದ ಸನ್ನಿವೇಶವೆಂಥದೆಂಬುದನ್ನು ಗ್ರಹಿಸುವುದು ಅಗತ್ಯ.

ಮೊನ್ನೆ ಮಾರ್ಚಿ ತಿಂಗಳಲ್ಲಿ ಸೆನೆಟ್ ಸಭೆ ನೆರೆದಾಗ ಸಂಸ್ಕೃತಾದಿ ಭಾಷೆಗಳ ಸ್ಥಾನ ನಿರ್ಣಯಕ್ಕೇ ಮೊದಲನೆಯ ದಿನವೆಲ್ಲಾ ಹಿಡಿಯಿತು. ಆದಿಯಲ್ಲಿ, 'ಸಂಸ್ಕೃತ' ಪಕ್ಷದವರ ಭಾಷಣಗಳೂ, ಅವರಿಗೆ ಬೆಂಬಲವಾಗಿ ತಮಿಳು, ತೆಲುಗು, ಪಾರ್ಸಿ, ಅರಬ್ಬಿ ಮೊದಲಾದ ಭಾಷೆಗಳ ಪಕ್ಷದವರ ಭಾಷಣಗಳೂ ಜರುಗಿದವು. 'ಸಂಸ್ಕೃತ' ಪಕ್ಷದವರು ಸಂಸ್ಕೃತದ ಮಹತ್ವವನ್ನು ವಿವರಿಸಿದ್ದು ಮಾತ್ರವಲ್ಲದೆ, ಕನ್ನಡಕ್ಕೆ ಸಂಸ್ಕೃತದಿಂದ ಹಿಂದೆಲ್ಲ ಅತಿಶಯವಾದ ಉಪಕಾರವಾಗಿದೆ, ಮುಂದೆಯು ಆಗತಕ್ಕದ್ದಿದೆ ಎಂದು ನಿರೂಪಿಸಿದರು; ಸಂಸ್ಕೃತವನ್ನು ಬಿಟ್ಟರೆ ಕನ್ನಡಕ್ಕೆ ಮಾರ್ಗವೇ ಇಲ್ಲ–ಎಂದು ಸಾಧಿಸಿದರು. ಇದುವರೆಗೆ ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತ ಸಾಹಿತ್ಯದ ಪ್ರಭಾವ ಪರಿಣಾಮಗಳೇನೇನಾಗಿರುವುವೆಂಬುದನ್ನು ನಿರ್ಧರಿಸಿ ಸಂಸ್ಕೃತದ ಸಂಪರ್ಕವಿಲ್ಲದ ಕನ್ನಡ ಸಾಹಿತ್ಯಭಾಗವೇ ಇಲ್ಲವೆಂಬುದನ್ನು ಸೂಚಿಸುವ ದೊಡ್ಡ ಪಟ್ಟಿಯೊಂದನ್ನು ಅಚ್ಚುಮಾಡಿಸಿ ಸದಸ್ಯರಿಗೆಲ್ಲಾ ಹಂಚಿದರು. ಹೀಗೆ ಆ ದಿನದ ಬಹುಭಾಗವು ಸಂಸ್ಕೃತದ ಪ್ರಶಂಸೆಯಲ್ಲೇ ಕಳೆಯಿತು. ಕನ್ನಡವೊಂದೇ ದ್ವಿತೀಯಭಾಷೆಯಾಗಿರಬೇಕೆಂದೂ ಹೇಳತಕ್ಕವರು ಯಾರೂ ಬೇಗ ಏಳಲಿಲ್ಲ.'ಕನ್ನಡ' ಪಕ್ಷದವರು ಮೌನವ್ರತವನ್ನು ಹಿಡಿದರೆಂಬ ಧ್ವನಿ ಕೂಡ ಅಲ್ಲಲ್ಲೇ ಹೊರಟಿತು. ಆಗ 'ಕನ್ನಡ' ಪಕ್ಷದ ಅಭಿಪ್ರಾಯವನ್ನು ಅನುಮೋದಿಸಿ ಒಬ್ಬಿಬ್ಬರು ಮಾತಾಡಿದ ಬಳಿಕ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರು ಎದ್ದು ನಿಂತರು. ಅವರು ಮಾತಿಗೆ ಪ್ರಾರಂಭಿಸುತ್ತಿರುವಾಗಲೆ ಒಬ್ಬ ಸದಸ್ಯರು–ಶ್ರೀಮಾನ್ ಜೋಸ್ಯರವರೇ ಎಂದು ತೋರುತ್ತದೆ–"ವಿಷಯವೆಲ್ಲವೂ ಆಗಲೆ ಚರ್ಚೆಯಾಗಿದೆ. ಭಾಷಣಗಳು ಸಾಕು. ಇನ್ನು ಅಭಿಮತಗಳನ್ನು ತೆಗೆದುಕೊಳ್ಳಬಹುದು" ಎಂದು ಕೂಡ ಅಧ್ಯಕ್ಷರಿಗೆ ಸೂಚಿಸಿದರು. ಅಧ್ಯಕ್ಷರು ಈ ಸೂಚನೆಯನ್ನು ಅಂಗೀಕರಿಸಲಿಲ್ಲವಾದ್ದರಿಂದ ಶ್ರೀಮಾನ್ ಶ್ರೀಕಂಠಯ್ಯನವರ ಭಾಷಣವು ಮುಂದೆ ಸಾಗಿತು. ಅವರು ಪ್ರತಿಪಾದಿಸಿದ ಅಂಶಗಳಲ್ಲಿ ಮುಖ್ಯವಾದುವು ಎರಡು: "ಸರ್ ಬ್ರಜೇಂದ್ರನಾಥ ಶೀಲರ ಪರಿಷ್ಕರಣಕಾರ್ಯವು ಆತುರದಲ್ಲೇನೂ ನಡೆಯಲಿಲ್ಲ. ಅದರ ಮೂಲದಲ್ಲಿ ಪರಿಣತವಾದ ಉದ್ದೇಶವುಂಟು. ಕನ್ನಡ ಅಥವಾ ಉರ್ದು ಮಾತ್ರ ದ್ವಿತೀಯ ಭಾಷೆಯಾಗಿರಬೇಕೆಂಬ ತತ್ತ್ವವನ್ನು ಅವರ ಕಾಲದಲ್ಲಿ ಇದೇ ಸೆನೆಟಿನವರೇ ವಿಚಾರಮಾಡಿ ಅಂಗೀಕರಿಸಿದರು. ಆ ವಿಧಿ ಇನ್ನು ಮುಂದೆ ಜಾರಿಗೆ ಬರಬೇಕಾಗಿದೆ. ನಾಲ್ಕು ವರ್ಷ ಕಾಲ ಆ ರೀತಿ ನಡೆಯಲಿ. ಅದರಿಂದ ನಮ್ಮ ವಿದ್ಯಾಭ್ಯಾಸ ಕ್ರಮಕ್ಕೂ ಮಿಕ್ಕ ಭಾಷೆಗಳಿಗೂ ಹಾನಿ ತಟ್ಟುವಂತೆ ತೋರಿದರೆ, ಆ ನಿಯಮವನ್ನು ಬದಲಾಯಿಸುವ ಅಧಿಕಾರ ಇದೇ ಸೆನೆಟಿನ ಕೈಯಲ್ಲೇ ಇದೆ. ಪ್ರಯೋಗ ಮಾಡಿ ಪರೀಕ್ಷಿಸುವ ಮುಂಚೆಯೇ ದುಡುಕಿ, ನಮ್ಮ ನಿಯಮಗಳನ್ನು

ನಾವೇ ತಳ್ಳಿಬಿಡುವುದು ಹಿತವಲ್ಲ...." ಎರಡನೆಯದು : "ದೇಶಭಾಷೆಯೇ ಎಲ್ಲರಿಗೂ ದ್ವಿತೀಯ ಭಾಷೆಯಾಗಬೇಕೆನ್ನುವುದರಲ್ಲಿ ಒಂದು ತತ್ವವಿದೆ. ನಮ್ಮ ವಿದ್ಯಾವಂತರು ಕಾಲೇಜಿನಲ್ಲಿ ತಾವು ಪಡೆದ ಜ್ಞಾನವನ್ನು ಜನಸಮುದಾಯಕ್ಕೆ ಎರೆದರೆತಾನೆ ದೇಶದ ಉದ್ಧಾರವಾಗುವುದು. ಹಾಗೆ ಮಾಡಲು ಸಾಧನ ದೇಶಭಾಷೆಯಲ್ಲದೆ ಮತ್ತೊಂದಿಲ್ಲ. ಆದ್ದರಿಂದ ಪ್ರತಿಯೊಬ್ಬ ಕಾಲೇಜು ವಿದ್ಯಾರ್ಥಿಯೂ ದೇಶಭಾಷೆಯಾದ ಕನ್ನಡವನ್ನು ವ್ಯಾಸಂಗ ಮಾಡುವುದು ಅತ್ಯಗತ್ಯ. ಕನ್ನಡಕ್ಕೆ ಪ್ರತಿಯಾಗಿ ಸಂಸ್ಕೃತವನ್ನೋ ತಮಿಳನ್ನೋ ಫ್ರೆಂಚನ್ನೋ ತೆಗೆದುಕೊಂಡರೆ ಈ ಉದ್ದೇಶ ನೆರವೇರುವುದಿಲ್ಲ. ಆದ್ದರಿಂದ ಈ ಮಿಕ್ಕ ಭಾಷೆಗಳಿಗೆ ದ್ವಿತೀಯ ಭಾಷಾಸ್ಥಾನವನ್ನು ನಿಷೇಧಿಸಬೇಕಾಯಿತು. ಇದು ಸಂಸ್ಕೃತ ದ್ವೇಷದಿಂದ, ಸಂಸ್ಕೃತವನ್ನು ಕೊಲ್ಲಬೇಕೆಂಬ ಆಶಯದಿಂದ ಮಾಡಿದ ಕೆಲಸವಲ್ಲ. ಕನ್ನಡವನ್ನು ಬದುಕಿಸುವುದಕ್ಕಾಗಿ ಸಂಸ್ಕೃತದ ಕೊಲೆಯಾಗತಕ್ಕ ಸಂದರ್ಭವೊದಗಿದರೆ ಮೊದಲು ಕನ್ನಡವನ್ನೇ ಬಲಿ ಕೊಡೋಣ. ಕನ್ನಡವು ಸಾರ್ವತ್ರಿಕ ದ್ವಿತೀಯ ಭಾಷೆಯಾದ ಮಾತ್ರದಿಂದ, ಸಂಸ್ಕೃತಕ್ಕೆ ದ್ವಿತೀಯ ಭಾಷಾಪದವಿ ತಪ್ಪಿದ ಮಾತ್ರದಿಂದ ಸಂಸ್ಕೃತಕ್ಕೆ ಖಂಡಿತ ಚ್ಯುತಿ ಬರುವುದಿಲ್ಲ. ಬೇಕಾದವರು ಅದನ್ನು ಮುಂದಕ್ಕೂ ಈಗ ಮಾಡುವ ಹಾಗೆಯೇ ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಅದರಲ್ಲಿ ಪ್ರವೀಣರಾಗಬಹುದು. ಕನ್ನಡಿಗರು ಸಂಸ್ಕೃತದ್ವೇಷಿಗಳಲ್ಲ..." ಇದೇ ಶ್ರೀಮಾನ್ ಶ್ರೀಕಂಠಯ್ಯನವರ ವಾದಸರಣಿ* ಈ ರೀತಿ ಮಾತಾಡುವಾಗ ಅವರು ಸಂಸ್ಕೃತ-ಕನ್ನಡಗಳ ಪರಸ್ಪರ ಸಂಬಂಧವನ್ನು ನಿರ್ದೇಶಿಸುವುದು ಅಗತ್ಯವಾಯಿತು. ಅವರ ಹಿಂದೆ ಭಾಷಣ ಮಾಡಿದ್ದವರಲ್ಲಿ ಅನೇಕ ಮಂದಿ ಸಂಸ್ಕೃತದಿಂದ ಕನ್ನಡಕ್ಕೆ ಅನಂತೋಪಕಾರವಾಗಿದೆ, ಆಗಬೇಕಾಗಿದೆ ಎಂದು ಸಾರಿ ಹೇಳಿದ್ದರು. ಸಂಸ್ಕೃತವನ್ನು ಬಿಟ್ಟರೆ ಕನ್ನಡದಲ್ಲೇನಿದೆ ಎಂದು ತಿರಸ್ಕಾರದ ಧ್ವನಿ ಕೂಡ ಅವರ ಮಾತಿನಲ್ಲಿ ಇಣುಕುತ್ತಿತ್ತು. ಈ ಅಭಿಪ್ರಾಯ ಪೂರ್ಣವಾಗಿ ಸಾಧುವೆ? ಸಂಸ್ಕೃತದಿಂದ ಉಪಕಾರವಾಗಿರುವುದು ನಿಜ; ಆದರೆ ಅದು ಮಾತ್ರ ಆಗಿ, ಅಪಕಾರವೇನೂ ಆಗಿಯೇ ಇಲ್ಲವೆ? ಹಿಂದೆ ಹೀಗೆ ಸಂಸ್ಕೃತವನ್ನು ಅವಲಂಬಿಸಿಕೊಂಡು ಕನ್ನಡವು ಬಾಳಿತೋ ಮುಂದೆಯೂ ಅದು ಹಾಗೆಯೇ ಮಾಡುವುದು ಸಾಧ್ಯವೆ, ಯುಕ್ತವೆ? ಎಂಬುದನ್ನು ವಿವೇಚಿಸುವುದು ಅಗತ್ಯವಾಯಿತು. ಆ ಕಾರ್ಯವನ್ನು ಶ್ರೀಮಾನ್ ಶ್ರೀಕಂಠಯ್ಯನವರು ಮಾಡಿದರು. ಅವರ ಭಾಷಣದ ಈ ಭಾಗದಿಂದ ಮೂರು ವಾಕ್ಯಗಳನ್ನು ಮಾತ್ರ ಪೂರ್ವಾಪರ ಸಂಬಂಧದಿಂದ ಬಿಡಿಸಿ ಶ್ರೀಮಾನ್ ಜೋಸ್ಯರವರು ಉದ್ಧರಿಸಿದ್ದಾರೆ. ಈ ವಾಕ್ಯಗಳಲ್ಲಿ ಕಟುತ್ವವುಂಟೆಂಬುದು ನಿಜ. ಮಧ್ಯದ ವಾಕ್ಯವಂತೂ ನಿಷ್ಠುರವಾಗಿದೆ. ಅದನ್ನು ಶ್ರೀಮಾನ್ ಶ್ರೀಕಂಠಯ್ಯನವರು ಇದೇ ರೂಪದಲ್ಲೇ ಉಚ್ಚರಿಸಿದರೇ-ಎಂಬ ವಿಷಯದಲ್ಲಿ ಪ್ರಬಲ ಸಂದೇಹವಿದೆ. ಅದರಲ್ಲಿ ಕೊಂಚ ಶಬ್ದವ್ಯತ್ಯಾಸವಾದರೂ ಸಾಕು; ಅರ್ಥವು ಇಷ್ಟು ಕಠೋರವಾಗುವುದಿಲ್ಲ. ಆದರೆ ವಾಕ್ಯಗಳು

---

* ಮೇಲೆ ಕೊಟ್ಟಿರುವುದು ಅವರ ಭಾಷಣದ 'ವರದಿ'ಯಲ್ಲ; ಪ್ರಕೃತಕ್ಕೆ ಅವಶ್ಯಕವಾದ ಅವರ ಕೆಲವು ಅಭಿಪ್ರಾಯಗಳನ್ನು ಮಾತ್ರ ಇಲ್ಲಿ ಸೂಚಿಸಲಾಗಿದೆ. ಇದು ಅಕ್ಷರಶಃ ಅನುವಾದವಲ್ಲ.

ಈಗ ಇರುವ ರೂಪದಲ್ಲಿ ಕೂಡ ಅವುಗಳ ಹೃದಯವೇನೆಂಬುದನ್ನು ಗ್ರಹಿಸುವುದು ಕಷ್ಟವಲ್ಲ.

ಸಂಸ್ಕೃತದಿಂದ ಕನ್ನಡಕ್ಕೆ ವಿಪುಲವಾದ ಶಬ್ದಸಂಪತ್ತು ದೊರೆಯಿತು. ಸಾಹಿತ್ಯ ಕ್ಷೇತ್ರದಲ್ಲಿ ಚಂಪೂ, ಪದ್ಯಕಾವ್ಯ ಮೊದಲಾದ ಮಾದರಿಗಳು ದೊರೆತುವು. ಸಂಸ್ಕೃತದ ಅಲಂಕಾರ ಶಾಸ್ತ್ರವೇ ಕನ್ನಡಕ್ಕೂ ಅಲಂಕಾರಶಾಸ್ತ್ರವಾಯಿತು. ಬಾಣ–ಮಾಘಾದಿ ಸಂಸ್ಕೃತ ಕವಿಗಳ ಕೃತಿಗಳಿಂದ ಕನ್ನಡ ಕವಿಗಳು ಎಷ್ಟೋ ಕಾವ್ಯಸಾಮಗ್ರಿಯನ್ನು ಒದಗಿಸಿಕೊಂಡರು. ಹೀಗೆ ಸಂಸ್ಕೃತದ ಬೆಂಬಲದಿಂದ ಕನ್ನಡ ಸಾಹಿತ್ಯದ ಬೆಳವಣಿಗೆಗೆ ತುಂಬ ಸಹಾಯವಾಯಿತು. ಆದರೆ ಈ ಬೆಂಬಲವೇ ಹಳಗನ್ನಡದ ಸಾಹಿತ್ಯಕ್ಕೆ ಬಂಧನವೂ ಆಯಿತೆಂಬುದನ್ನು ಕನ್ನಡ ವಿದ್ವಾಂಸರೆಲ್ಲರೂ ಒಪ್ಪಿಕೊಳ್ಳಬೇಕು. ಸಂಸ್ಕೃತ ಅಲಂಕಾರಿಕರ ಸೂತ್ರಗಳು ಕನ್ನಡಸಾಹಿತ್ಯದ ಸಹಜಗತಿಗೆ ತಡೆಯನ್ನು ಕಟ್ಟಿದುವು. ಕನ್ನಡ ಕಾವ್ಯಪ್ರಪಂಚದಲ್ಲಿ ಬಹುಭಾಗ ಚರ್ವಿತಚರ್ವಣವಾಯಿತು. ಯಾವ ಕಾವ್ಯದಲ್ಲೂ ಅದೇ ವರ್ಣನೆ, ಅದೇ ಕವಿಸಮಯ, ಅದೇ ಚಮತ್ಕಾರ. ಹೀಗೇ ಬರೆದರೇ ಮಹಾಕಾವ್ಯ ವಾಗುವುದೆಂದು ಕನ್ನಡ ಕವಿಗಳು ಭ್ರಮಿಸಿದರು. ಆದ್ದರಿಂದ, ತಮ್ಮ ಪ್ರತಿಭೆ ಸಹಜ ರೀತಿಯಲ್ಲಿ, ನೂತನ ಗತಿಯಲ್ಲಿ ಉಕ್ಕುವುದಕ್ಕೆ ತೊಡಗಿದರೂ ಅದನ್ನು ಅದುಮಿ, ಪುರಾತನ ಮಾರ್ಗದಲ್ಲೇ ಕಣ್ಣು ಮುಚ್ಚಿಕೊಂಡು ಸಾಗಿದರು. ಹೀಗಾಗಿ ಕನ್ನಡ ಸಾಹಿತ್ಯದಲ್ಲಿ ಜೀವಕಳೆಯೂ ವೈವಿಧ್ಯವೂ ಉಲ್ಲಾಸವೂ ಎಷ್ಟರಮಟ್ಟಿಗೆ ಇರಬಹು ದಾಗಿತ್ತೋ ಅಷ್ಟು ಇಲ್ಲದೆಹೋಯಿತು. ಆದರೆ ಕೆಲವು ಮಂದಿ ಕವಿಗಳು ಸಂಪ್ರದಾಯದ ಕಟ್ಟನ್ನು ಸಡಿಲಿಸಿಕೊಂಡು ಆದಷ್ಟು ಸಹಜವಾಗಿ ಬರೆದರೆಂದರೆ ಅದು ಕನ್ನಡಿಗರ ಪುಣ್ಯ. ಹೀಗೆ ಸಂಸ್ಕೃತ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ಪ್ರೇರಕವೂ ಪೋಷಕವೂ ಆದಂತೆಯೇ ಬಲುಮಟ್ಟಿಗೆ ಮಾರಕವೂ ಆಯಿತು. ಇದು ಯಾರ ತಪ್ಪು! ಪರಾವಲಂಬಿಗಳಾದ ಕನ್ನಡ ಕವಿಗಳದ್ದೇ ಮೇಲುಪಂಕ್ತಿಯಾಗಿ ನಿಂತ ಸಂಸ್ಕೃತ ಸಾಹಿತ್ಯದ್ದೇ ಎಂಬ ವಿಷಯದಲ್ಲಿ ಚರ್ಚೆ ಬರಬಹುದು. ಆದರೂ ಸಂಸ್ಕೃತದ ಅನುಕರಣ ದಿಂದ ಕನ್ನಡ ಸಾಹಿತ್ಯಕ್ಕೆ ಉಪಕಾರವಾದಂತೆಯೆ ಅಪಕಾರವೂ ಆಯಿತೆಂಬ ಅಂಶ ಮಾತ್ರ ನಿರ್ವಿವಾದವಾಗಿದೆ. "Sanskrit has crushed us, cramped us, stifled us" ಎಂದು ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದಾಗ ಅವರ ಆಶಯವು ಇದೇ. ಸಂಸ್ಕೃತದ ಗುಣಗಾನವನ್ನು ಮೊದಲೇ ಹಲವರು ಮಾಡಿದ್ದರಿಂದ, ಸಂಸ್ಕೃತದ ದುಷ್ಪರಿಣಾಮಗಳನ್ನು ಇವರು ಒತ್ತಿ ಹೇಳಬೇಕಾಯಿತು. ಇನ್ನು ಇಂಗ್ಲಿಷಿನ ಸಹಾಯವೇ ಮುಂದೆ ಕನ್ನಡಕ್ಕೆ ಅವಶ್ಯಕವೆಂದು ಅವರು ಹೇಳಿದ್ದರಲ್ಲಿ ಯಾವ ಚರ್ಚೆಗೂ ಆಸ್ಪದ ಕಾಣಿಸುವುದಿಲ್ಲ. ಇಂಗ್ಲಿಷಿನ ವಿಶಾಲವಾದ ಸಾಹಿತ್ಯಕ್ಷೇತ್ರದಲ್ಲಿ ವಿಹರಿಸಿದವರು ಯಾರು ತಾನೆ ಕನ್ನಡವೂ ಅದೇ ರೀತಿ ಬೆಳೆಯಬೇಕೆಂದು ಹಾರೈಸುವುದಿಲ್ಲ! ಇಂಗ್ಲಿಷಿನಲ್ಲಿರುವ ಸಾಹಿತ್ಯದ ಮಾದರಿಗಳು ನಮ್ಮ ಕನ್ನಡಕ್ಕೆ ಮಾತ್ರ ಏಕೆ, ಹಿಂದೂದೇಶದ ಸಮಸ್ತ ಭಾಷೆಗಳಿಗೂ ಅನುಕರಣೀಯವಾಗಿವೆ. ಕಾದಂಬರಿ, ಸಣ್ಣಕಥೆ, ಪ್ರಬಂಧ, ಲಘುಗೀತ– ಈ ಮೊದಲಾದ ಸಾಹಿತ್ಯ ರೂಪಗಳೆಲ್ಲವೂ ಇಂಗ್ಲಿಷಿನ ಸಂಪರ್ಕದಿಂದಲೇ ನಮ್ಮಲ್ಲಿ

ಪ್ರಚುರವಾದದ್ದು. ಇವುಗಳ ಲೇಖಕರನ್ನು ಇಂದಿಗೂ ಚೋದಿಸುತ್ತಿರುವುವು ಇಂಗ್ಲಿಷಿನ ಮಾದರಿಗಳೇ. ಇಂಗ್ಲಿಷಿನಿಂದ ಕನ್ನಡಿಗರು ಕಲಿಯತಕ್ಕದ್ದು ಇನ್ನೂ ಬಹಳವಿದೆ. ವಿಜ್ಞಾನಾದಿ ಆಧುನಿಕ ಶಾಸ್ತ್ರಗಳ ಸಾರವೆಲ್ಲಾ ಕನ್ನಡಕ್ಕೆ ಇಂಗ್ಲಿಷಿನಿಂದಲೇ ಇಳಿಯ ಬೇಕಾಗಿದೆ. ವಸ್ತುಸ್ಥಿತಿಯನ್ನು ಒಪ್ಪಿಕೊಂಡರೆ ತಪ್ಪೇನು?

ಇನ್ನು ಉಳಿದದ್ದು ಮಧ್ಯದ ವಾಕ್ಯ : "Kannada does not want the help of sanskrit hereafter" ಇದನ್ನು ಶ್ರೀಮಾನ್ ಶ್ರೀಕಂಠಯ್ಯನವರು ಆಡಿದ್ದ ಪಕ್ಷದಲ್ಲಿ ಇದರ ವಾಚ್ಯಾರ್ಥವೆಂದಿಗೂ ಅವರ ಆಶಯವಾಗಿರಲಾರದು. ಅವರು "ಪಬ್ಲಿಕೇಷನ್ ಕಮಿಟಿ"ಗೆ ನಾಯಕರೆಂದು ಶ್ರೀಮಾನ್ ಜೋಷ್ಯರವರು ಸೂಚಿಸಿದ್ದಾರಷ್ಟೇ. ಶ್ರೀಮಾನ್ ಶ್ರೀಕಂಠಯ್ಯನವರಿಗೆ "ಸಂಸ್ಕೃತವನ್ನು ಬಹಿಷ್ಕರಿಸಿರಬೇಕೆ"ಂಬ ಆಶಯವಿದ್ದಲ್ಲಿ, ವಿಶ್ವವಿದ್ಯಾನಿಲಯದ ಕನ್ನಡ ಪ್ರಕಟನ ಶಾಖೆಗಾಗಿ 'ವೇದಗಳು' 'ಸಂಸ್ಕೃತ ನಾಟಕಗಳು' ಮೊದಲಾದ ವಿಷಯಗಳ ಮೇಲೆ ಗ್ರಂಥಗಳನ್ನು ಸಮರ್ಥವಿದ್ವಾಂಸರಿಂದ ಬರೆಯಿಸುವ ಏರ್ಪಾಡನ್ನು ಅವರು ಖಂಡಿತ ಮಾಡುತ್ತಿರಲಿಲ್ಲ. ಮೈಸೂರಿನ ಕರ್ಣಾಟಕ ಸಂಘದಲ್ಲಿ ಭಾಷಣ ಮಾಡಿದಾಗ ಅರ್ಧಘಂಟೆಗಿಂತ ಹೆಚ್ಚು ಕಾಲ ಕಠೋರಪನಿಷತ್ತಿನ ಸ್ವಾರಸ್ಯವನ್ನು ವಿವರಿಸಿ, ಅದನ್ನು ಎಲ್ಲರೂ ಓದಬೇಕೆಂದು ಸದಸ್ಯರಿಗೆ ಉಪದೇಶ ಮಾಡುತ್ತಿರಲಿಲ್ಲ. ಇನ್ನು, "೧೧ನೆಯ ಶತಮಾನದಿಂದ ೧೯ನೆಯ ಶತಮಾನದವರೆಗಿನ ಕನ್ನಡ ಸಾಹಿತ್ಯ"ವಷ್ಟನ್ನೇ ಅಲ್ಲ, ಒಂಬತ್ತು ಹತ್ತನೆಯ ಶತಮಾನಗಳಲ್ಲಿ ಹುಟ್ಟಿ ಕನ್ನಡವನ್ನು ಬೆಳಗಿದ ಗ್ರಂಥರಾಶಿಯನ್ನು ಕೂಡ "ಸಂಸ್ಕೃತದ ಗಂಧವೇ ಇಲ್ಲದೆ" ತಿಳಿದುಕೊಳ್ಳ ಬಹುದೆಂಬ ಭಾವನೆಯಾದರೂ ಅವರಿಗೆ ಇದ್ದಂತೆ ತೋರುವುದಿಲ್ಲ. ಹಾಗಿದ್ದಲ್ಲಿ, ಮೈಸೂರು ವಿಶ್ವವಿದ್ಯಾಲಯದಲ್ಲಿ, ಕನ್ನಡದ "ಬೋರ್ಡ್ ಆಫ್ ಸ್ಟಡಿ"ಗೂ "ಪರೀಕ್ಷಕ ವರ್ಗಕ್ಕೂ" ಅಧ್ಯಕ್ಷರಾದ ಅವರು ಕನ್ನಡ ಎಂ.ಎ. ಮತ್ತು ಬಿ.ಎ. (ಆನರ್ಸ್) ಪರೀಕ್ಷೆಗಳಿಗೆ ಸಂಸ್ಕೃತದ ವ್ಯಾಸಂಗವು ಅತ್ಯಾವಶ್ಯಕವೆಂದು ಭಾವಿಸುತ್ತಿರಲಿಲ್ಲ. ಅದೂ ಅಲ್ಲದೆ ಅವರು ಸಂಸ್ಕೃತದ ಶತ್ರುಗಳಾಗಿದ್ದರೆ, ಮೊನ್ನೆ ಸೆನೆಟ್ ಸಭೆಯಲ್ಲಿ ಮಾಡಿದ ಭಾಷಣದಲ್ಲೇ "ಕನ್ನಡವನ್ನು ಬದುಕಿಸುವುದಕ್ಕಾಗಿ ಸಂಸ್ಕೃತದ ಕೊಲೆಯಾಗತಕ್ಕ ಸಂದರ್ಭವೊದಗಿದರೆ ಮೊದಲು ಕನ್ನಡವನ್ನೆ ಬಲಿಕೊಡೋಣ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರಲಿಲ್ಲ.

ಇದೆಲ್ಲದರ ದೃಷ್ಟಿಯಿಂದ ಶ್ರೀಮಾನ್ ಶ್ರೀಕಂಠಯ್ಯನವರ ವಾಕ್ಯವನ್ನು ಪರಿಶೀಲಿಸಿದರೆ, ಅದರ ಅರ್ಥ ಇಷ್ಟಕ್ಕೆ ಇಳಿಯುತ್ತದೆ: "ಸಂಸ್ಕೃತ ಸಾಹಿತ್ಯದ ಮಾದರಿ ಗಳನ್ನು ಕನ್ನಡವು ಇದುವರೆಗೆ ಅನುಕರಿಸಿದ್ದು ಸಾಕು, ಇನ್ನು ಮುಂದೆ ಹೊಸಗನ್ನಡಕ್ಕೆ ಬೇರೆಯ ಮಾದರಿ ಬೇಕು. ಅದು ಇಂಗ್ಲಿಷ್ ಸಾಹಿತ್ಯವಾಗಲಿ" ಇದೇ ಶ್ರೀಮಾನ್ ಶ್ರೀಕಂಠಯ್ಯನವರ ಆಶಯ. ಇಷ್ಟೇ ಹೊರತು, ಕನ್ನಡಕ್ಕೆ ಇನ್ನೂ ಪರಿವರ್ತನೆಯಾಗದಿರುವ ವೇದ, ಉಪನಿಷತ್ತು, ಶಾಸ್ತ್ರಗಳು ಮೊದಲಾದ ಎಲ್ಲವನ್ನೂ ತ್ಯಜಿಸಬೇಕು; ಅವುಗಳ ಉಪಯೋಗವೆ ಕನ್ನಡಿಗರಿಗೆ ಬೇಡ ಎಂದು ಅವರು ಖಂಡಿತ ಹೇಳತಕ್ಕವರಲ್ಲ. ಇದಕ್ಕೆ ಅವರ ಕಾರ್ಯಗಳೇ ಸಾಕ್ಷಿ. ಈ ಅಂಶವು ಮಂದಟ್ಟಾದಲ್ಲಿ ಶ್ರೀಮಾನ್ ಶ್ರೀಕಂಠಯ್ಯನವರ ಅಭಿಪ್ರಾಯಗಳು "ವಿಶ್ವಾಮಿತ್ರ ಸೃಷ್ಟಿ"ಯಂತೆ ತೋರಲಾರವು.

'ಕನ್ನಡ' ಪಕ್ಷದ ಅಭಿಪ್ರಾಯಗಳನ್ನು ಶ್ರೀಮಾನ್ ಜೋಸ್ಯರವರು ತಮ್ಮ ಲೇಖನದಲ್ಲಿ ಎಲ್ಲೂ ಪಕ್ಷಪಾತವಿಲ್ಲದೆ ನಿರೂಪಿಸಿದಂತಿಲ್ಲ. ಅವು ಗೊತ್ತಾಗದಿದ್ದರೆ, 'ಕನ್ನಡ' ಪಕ್ಷದವರ ನೆಲೆಯೇ ವಾಚಕರಿಗೆ ಹತ್ತುವುದಿಲ್ಲ; ಅವರ ಮಾತುಗಳಿಗೆಲ್ಲಾ ಅಪಾರ್ಥವನ್ನು ಕಲ್ಪಿಸುವುದು ಸುಲಭವಾಗುತ್ತದೆ. ಆದ್ದರಿಂದ, ಹಿಂದೆ ಪ್ರಸಂಗ ವಶದಿಂದ ಸೂಚಿಸಿರುವ ಅಂಶಗಳನ್ನೂ ಮತ್ತೆ ಕೆಲವನ್ನು ಇಲ್ಲಿ ನಿರೂಪಿಸುವುದು ಅಪ್ರಸಕ್ತವಾಗಲಾರದು.

ಇಲ್ಲಿ ಮೊದಲು ಗ್ರಹಿಸಬೇಕಾದ ವಿಷಯವೊಂದಿದೆ. ಕನ್ನಡವೇ ಸಾರ್ವತ್ರಿಕ ದ್ವಿತೀಯ ಭಾಷೆಯಾಗಬೇಕೆಂದು ಹೇಳತಕ್ಕವರಿಗೆ ಸಂಸ್ಕೃತದ ಮೇಲೆ ಖಂಡಿತ ದ್ವೇಷವಿಲ್ಲ. ಮಿಕ್ಕವರಿಗಿರುವಂತೆಯೇ ಅವರಿಗೂ ಸಂಸ್ಕೃತದಲ್ಲಿ ಮನಃಪೂರ್ವಕವಾದ ಗೌರವವಿದೆ, ಅಭಿಮಾನವಿದೆ; ಅವರಲ್ಲಿ ಕೆಲವರಿಗಾದರೂ ಅವರ ಪರಿಚಯವೂ ತಕ್ಕಮಟ್ಟಿಗಿದೆ. ಸಂಸ್ಕೃತದಿಂದ ಹಿಂದೆ ಕನ್ನಡಕ್ಕೆ ಎಷ್ಟೋ ಉಪಕಾರವಾಯಿತು; ಮುಂದೆಯೂ ವಿಹಿತವಾದ ರೀತಿಯಲ್ಲಿ ಆಗತಕ್ಕದ್ದಿದೆ-ಎಂದು ಅವರು ಒಪ್ಪಿಕೊಳ್ಳುತ್ತಾರೆ. ಸಂಸ್ಕೃತವು ತನ್ನ ನೆಲೆವೀಡಿನಲ್ಲಿಯೇ ಗತಿಸಿ ಹೋಗಲಿ-ಎಂದು ಸರ್ವಾತ್ಮನಾ ಅವರು ಕೋರುವುದಿಲ್ಲ. ಆದ್ದರಿಂಡ ಸಂಸ್ಕೃತವು ದ್ವಿತೀಯ ಭಾಷೆಯಾಗಿರುವುದನ್ನು ಅವರು ವಿರೋಧಿಸುವುದು ಒಂದು ತತ್ತ್ವಕ್ಕಾಗಿಯೇ ಹೊರತು ಸಂಸ್ಕೃತದ ಮೇಲಿನ ದ್ವೇಷದಿಂದಲ್ಲ. ಸಂಸ್ಕೃತವನ್ನು ವಿರೋಧಿಸುವಂತೆಯೇ ತೆಲುಗು, ತಮಿಳು, ಫ್ರೆಂಚ್, ಪಾರ್ಸಿ ಮೊದಲಾದ ಭಾಷೆಗಳನ್ನು ಅವರು ವಿರೋಧಿಸುತ್ತಾರೆ. ಹಾಗಾದರೆ ಅವುಗಳ ಮೇಲೆಯೂ ಅವರಿಗೆ ದ್ವೇಷವೆನ್ನ ಬಹುದೆ?

ದೇಶಭಾಷೆಗೆ ನಮ್ಮ ವಿದ್ಯಾಭ್ಯಾಸಕ್ರಮದಲ್ಲಿ ಯಾವ ಸ್ಥಾನವಿರಬೇಕು-ಎನ್ನುವುದೇ ಅವರ ಸಮಸ್ಯೆ. ಎಲ್ಲ ವಿದ್ಯಾರ್ಥಿಗಳೂ ಅದನ್ನು ದ್ವಿತೀಯ ಭಾಷೆಯ ರೂಪದಲ್ಲಾದರೂ ಕಲಿಯಬೇಕು; ಸಂಸ್ಕೃತವನ್ನೋ ಮತ್ತೊಂದು ಭಾಷೆಯನ್ನೋ ಅದಕ್ಕೆ ಪ್ರತಿಯಾಗಿ ಓದುತ್ತೇವೆಂದು ಹೇಳಿ, ದೇಶಭಾಷೆಯ ವ್ಯಾಸಂಗದಿಂದ ಯಾರೂ ತಪ್ಪಿಸಿಕೊಳ್ಳಕೂಡದು ಎನ್ನುವುದೇ ಅವರ ತತ್ತ್ವ. ಇಂಗ್ಲಿಷ್ ಭಾಷೆ ಸಾರ್ವತ್ರಿಕವಾಗಿ ಪ್ರಥಮ ಭಾಷೆಯಾಗಿದೆ, ಇನ್ನೂ ಕೆಲವು ಕಾಲ ಅದರ ಪ್ರಾಶಸ್ತ್ಯ ಕಡಿಮೆಯಾಗುವಂತಿಲ್ಲ; ಅದರಿಂದ ನಮಗೆ ಎಷ್ಟೋ ಸೇವೆ ಇನ್ನೂ ಸಲ್ಲಬೇಕಾಗಿರುವಾಗ ಹಾಗಾಗುವುದು ಹಿತವೂ ಅಲ್ಲ. ಇನ್ನು ಉಳಿದದ್ದು ದ್ವಿತೀಯ ಭಾಷೆ. ೧೯೨೫-೨೬ನೆಯ ವರ್ಷದ ಪರಿಷ್ಕರಣದಂತೆ ವಿಶ್ವವಿದ್ಯಾನಿಲಯದಲ್ಲಿ ದ್ವಿತೀಯ ಭಾಷೆಯೆನ್ನುವುದಕ್ಕೆ ಲೋಪ ಬರುವುದರಲ್ಲಿತ್ತು. ಕನ್ನಡದ ಅಭಿಮಾನಿಗಳು ಅದನ್ನು ತಪ್ಪಿಸಿ, ದೇಶಭಾಷೆಯಾದ ಕನ್ನಡವೊಂದು*

---

* ಅದರ ಜೊತೆಗೆ, ಮಹಮ್ಮದೀಯರ ಮಾತೃಭಾಷೆಯಾದ ಉರ್ದುವೂ ಕಾರಣಾಂತರ ಗಳಿಂದ ಸೇರಿತು. ಮಹಮ್ಮದೀಯರೂ ಕನ್ನಡವನ್ನು ಓದಬೇಕೆಂಬ ಆಶಯವು 'ಕನ್ನಡ' ಪಕ್ಷದವರಿಗೆ ಉಂಟು, ಪ್ರಬಲವಾಗಿಯೇ ಉಂಟು. ಆದರೆ ಭಾಷಾಸಂಸ್ಕೃತಿಗಳಲ್ಲಿ ಹಿಂದುಗಳಿಗಿಂತ ತುಂಬ ಭಿನ್ನರಾದ ಮಹಮ್ಮದೀಯರಿಗೆ ಕನ್ನಡವನ್ನು ಕಲಿಸುವ ಉದ್ದೇಶವು ಫಲಿಸುವುದಕ್ಕೆ ಇನ್ನೂ ಕೆಲವು ಕಾಲ ಬೇಕೆಂದು ತೋರುತ್ತದೆ.

ದ್ವಿತೀಯ ಭಾಷೆಯಾಗಿರಲೇಬೇಕೆಂದು ಸ್ಥಾಪಿಸಿದರು. ಮೈಸೂರು ಕನ್ನಡ ದೇಶ. ಇಲ್ಲಿಯ ಪ್ರಜೆಗಳಲ್ಲಿ ತುಂಬ ಮಂದಿ ಕನ್ನಡವನ್ನೇ ಆಡತಕ್ಕವರು; ಮಿಕ್ಕವರೂ ಕನ್ನಡವನ್ನು ಅರ್ಥಮಾಡಿಕೊಳ್ಳಬಲ್ಲವರು. ಇಂಥ ಭಾಷೆಗೆ ವಿದ್ಯಾಭ್ಯಾಸ ಕ್ರಮದ ಎಲ್ಲಾ ದರ್ಜೆಗಳಲ್ಲೂ ಒಂದು ನಿಯತಸ್ಥಾನವು ಇದ್ದೇ ತೀರಬೇಕಲ್ಲವೇ? ಕನ್ನಡವನ್ನು ಕಲಿಯದೆಯೇ ವಿಶ್ವವಿದ್ಯಾನಿಲಯದಿಂದ ಒಬ್ಬ ವಿದ್ಯಾರ್ಥಿ ಪಾರಾಗುವುದು ಅನುಚಿತವಲ್ಲವೆ?

ಕಾಲೇಜಿನ ವಿದ್ಯಾರ್ಥಿಗಳೆಲ್ಲರೂ ಕನ್ನಡವನ್ನು ಓದಲೇಬೇಕೆನ್ನುವುದಕ್ಕೆ ಕನ್ನಡದ ಮೇಲಿನ ಮಮತೆಯೊಂದೇ ಪ್ರೇರಕವಲ್ಲ; ಅದಕ್ಕೆ ಸಂಗತವಾದ ಕಾರಣಗಳೂ ಉಂಟು. ನಮ್ಮಲ್ಲಿ ಪ್ರೌಢವಿದ್ಯಾಭ್ಯಾಸವನ್ನು ಮಾಡತಕ್ಕವರು ಎಲ್ಲೋ ಕೆಲವು ಮಂದಿ. ಇವರ ವಿದ್ಯೆಯೆಲ್ಲಾ ಇವರ ಅಂಗದಲ್ಲೇ ಜೀರ್ಣವಾಗಬೇಕೋ ಅಥವಾ ಅವರಿಂದ ದೇಶದ ಮಿಕ್ಕ ಪ್ರಜೆಗಳಿಗೆ ಉಪಕಾರವಾಗಬೇಕೋ? ನಮ್ಮ ಪ್ರೌಢವಿದ್ವಾಂಸರು ಜ್ಞಾನಪ್ರಚಾರ ಕಾರ್ಯವನ್ನು ಕೈಗೊಂಡ ಹೊರತು ಜನಜೀವನವು ಸಮರ್ಪಕವಾಗುವುದಿಲ್ಲ. ಇದು ಯಾವ ರೀತಿ ನಡೆಯಬೇಕು? ನಮ್ಮ ದೇಶದಲ್ಲಿ ಇಂಗ್ಲಿಷನ್ನು ಬಲ್ಲವರು ನೂರಕ್ಕೆ ಒಬ್ಬರಾದರೂ ಇದ್ದಾರೋ ಇಲ್ಲವೋ ತಿಳಿಯದು. ಮಿಕ್ಕವರಿಗೆ ಗೊತ್ತಾಗುವ ಭಾಷೆ ಕನ್ನಡವೊಂದೇ. (ಅದನ್ನೂ ಹಲವರು ಓದಿ ಬರೆಯಲಾರರು). ವಿದ್ವಾಂಸರ ಜ್ಞಾನವು ಇವರಿಗೆ ಮುಟ್ಟಬೇಕಾದರೆ ಕನ್ನಡದ ಮೂಲಕವೇ ಹರಿಯಬೇಕು. ಈ ಜ್ಞಾನಪ್ರದಾನಕ್ಕೆ ದೇಶದಲ್ಲಿರುವ ವಿದ್ಯಾವಂತರೆಲ್ಲರೂ ತೊಡಗಿದರೂ ಸಾಲದಿರುವಾಗ ಇವರಲ್ಲಿ ಅನೇಕರಿಗೆ ಅದರ ಸಾಧನವಾದ ಕನ್ನಡದಲ್ಲಿ ಸಾಕಾದಷ್ಟು ವ್ಯುತ್ಪತ್ತಿಯಿಲ್ಲದಿದ್ದರೆ ದೇಶಕ್ಕೆ ಎಷ್ಟು ನಷ್ಟ!

ಇಲ್ಲಿ ಗಮನಿಸತಕ್ಕ ಅಂಶ ಇನ್ನೂ ಒಂದುಂಟು. ಇಂಗ್ಲಿಷಿನ ಜ್ಞಾನವೇನೋ ಸದ್ಯದಲ್ಲಿ ನಮಗೆ ಅಗತ್ಯವಾಗಿದ್ದರೂ ಇಂಗ್ಲಿಷ್ ಭಾಷೆಯ ಮೂಲಕವೇ ಹೈಸ್ಕೂಲು ಕಾಲೇಜುಗಳಲ್ಲಿ ಪಾಠಗಳು ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳ ಕಾಲವೂ ಶಕ್ತಿಯೂ ತುಂಬ ಅಪವ್ಯಯವಾಗುತ್ತಿದೆ. ಸದ್ಯಕ್ಕೆ ಹೈಸ್ಕೂಲುಗಳಲ್ಲಾದರೂ ದೇಶಭಾಷೆಯಾದ ಕನ್ನಡದ ಮೂಲಕ ಶಿಕ್ಷಣವನ್ನು ಕೊಡುವುದು ಅತ್ಯಗತ್ಯ. ಇದನ್ನು ವಿದ್ಯಾವಿಧಾಯಕರೆಲ್ಲರೂ ಒಪ್ಪುತ್ತಾರೆ. ಹೈಸ್ಕೂಲುಗಳಲ್ಲಿ ಪಾಠ ಹೇಳತಕ್ಕ ಉಪಾಧ್ಯಾಯರು ವಿಶ್ವವಿದ್ಯಾನಿಲಯದ ಪದವೀಧರರು. ಕನ್ನಡ ಚೆನ್ನಾಗಿ ಬಾರದಿದ್ದರೆ ಇವರು ಕನ್ನಡದಲ್ಲಿ ಶಾಸ್ತ್ರೀಯ ವಿಷಯಗಳನ್ನು ಹುಡುಗರಿಗೆ ಬೋಧಿಸುವುದು ಹೇಗೆ? ದೇಶಭಾಷೆಯಲ್ಲೇ ಹೈಸ್ಕೂಲಿನ ಶಿಕ್ಷಣವನ್ನು ಕೊಡಲು ಇನ್ನೂ ಪ್ರಾರಂಭಿಸದಿರುವುದಕ್ಕೆ, ಉಪಾಧ್ಯಾಯರಲ್ಲಿ ಹಲವರು ಕನ್ನಡವನ್ನು ವ್ಯಾಸಂಗ ಮಾಡದಿರುವುದೂ ಒಂದು ಕಾರಣವಾಗಿರಬಹುದು. ಇನ್ನಾದರೂ ಈ ಅಡಚಣೆ ತಪ್ಪುವಂತೆ, ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು ಎಲ್ಲ ವಿದ್ಯಾರ್ಥಿಗಳಿಗೂ ದ್ವಿತೀಯ ಭಾಷೆಯಾಗಿ ಕಲಿಸುವುದು ಅವಶ್ಯಕ.

ಈ ಅಂಶವನ್ನು 'ಸಂಸ್ಕೃತ' ಪಕ್ಷದವರಲ್ಲೂ ಅನೇಕರು ಒಪ್ಪಿಕೊಳ್ಳುತ್ತಾರೆ; ಆದರೆ ಮುಂದಕ್ಕೆ ಹೀಗೆ ವಾದಿಸುತ್ತಾರೆ. ಕನ್ನಡದಲ್ಲಿ ಗ್ರಂಥ ಬರೆಯಬೇಕಾದರೆ, ಪಾಠ

ಹೇಳಬೇಕಾದರೆ ಕನ್ನಡವನ್ನೇ ಓಧಬೇಕಾಗಿಲ್ಲ. ಸಂಸ್ಕೃತವನ್ನು ಓದಿದ್ದರೂ ಸಾಕು; ಸಂಸ್ಕೃತ ಬಂದರೆ ಕನ್ನಡ ಬಂದಂತೆಯೇ. ಆದ್ದರಿಂದ ಸಂಸ್ಕೃತವನ್ನು ದ್ವಿತೀಯ ಭಾಷೆಯಾಗಿ ತೆಗೆದುಕೊಂಡವರೂ ಕನ್ನಡವನ್ನು ತೆಗೆದುಕೊಂಡವರೂ ಹೆಚ್ಚು ಕಡಮೆ ಒಂದೇ. ಸಂಸ್ಕೃತವನ್ನು ಓದಿದವನಿಗೆ ಸಂಸ್ಕೃತ ಕನ್ನಡ ಭಾಷೆಗಳೆರಡರ ಪರಿಚಯವೂ ಆಗುತ್ತದೆ. ಬರಿಯ ಕನ್ನಡದವನಿಗೆ ಸಂಸ್ಕೃತ ಬರುವುದಿಲ್ಲ. ಇಷ್ಟೇ ವಿಶೇಷ–ಎಂದು ಅವರ ಅಭಿಪ್ರಾಯವಾಗಿರುವಂತೆ ತೋರುತ್ತದೆ. ಆದರೆ ಈ ಭಾವ ಸರಿಯಲ್ಲ. ಕನ್ನಡ ಭಾಷೆ ಅಕ್ಷರ ಮಟ್ಟಿಗೆ ಸಂಸ್ಕೃತದ ಛಾಯೋಪಜೀವಿಯಲ್ಲ. ಅದಕ್ಕೆ ವ್ಯಕ್ತಿತ್ವವುಂಟು, ವೈಶಿಷ್ಟ್ಯವುಂಟು. ಕನ್ನಡದಲ್ಲಿ ಲೇಖನಶಕ್ತಿ ಕುದುರಬೇಕಾದರೆ, ಭಾಷೆಯ ಮರ್ಮವನ್ನು ತಿಳಿಯಬೇಕಾದರೆ ಕನ್ನಡವನ್ನು ಪ್ರತ್ಯೇಕವಾಗಿ ವ್ಯಾಸಂಗ ಮಾಡಲೇಬೇಕು. ಭಾಷಾಜ್ಞಾನವು ಪೂರ್ಣವಾಗಬೇಕಾದರೆ ಸಾಹಿತ್ಯ ಪರಿಚಯವು ಚೆನ್ನಾಗಿರಬೇಕಷ್ಟೆ. ಇದು ಸಂಸ್ಕೃತವನ್ನು ಓದಿಕೊಂಡ ಮಾತ್ರದಿಂದ ಬಂದು ಬಿಡುತ್ತದೆಯೆ? ಆದ್ದರಿಂದಲೇ ವಿದ್ಯಾರ್ಥಿಗಳೆಲ್ಲರೂ ಕನ್ನಡವನ್ನೇ ಪ್ರತ್ಯೇಕವಾಗಿ ಕಲಿಯಬೇಕಾಗಿರುವುದು. ಸಂಸ್ಕೃತದ ಮಹತ್ವ ಎಷ್ಟೇ ಇರಲಿ, ಅದು ಕನ್ನಡದ ಸ್ಥಾನವನ್ನು ಆಕ್ರಮಿಸುವುದು ಯುಕ್ತವಲ್ಲ; ಕನ್ನಡದ ಕೆಲಸವನ್ನು ಅದು ಮಾಡಲಾರದು.

ಕನ್ನಡವೊಂದನ್ನೇ ದ್ವಿತೀಯ ಭಾಷೆಯಾಗಿ ಮಾಡಿದರೆ ಸಂಸ್ಕೃತದ ವ್ಯಾಸಂಗಕ್ಕೆ ವಿದ್ಯಾಲಯಗಳಲ್ಲಿ ಅವಕಾಶ ತಪ್ಪಿಹೋಗುವುದಕ್ಕಾಗಿ ಶ್ರೀಮಾನ್ ಜೋಸ್ಯರವರು ಸೂಚಿಸಿರುತ್ತಾರೆ. ಇದು ದಿಟವಲ್ಲ. ಸಂಸ್ಕೃತಕ್ಕೆ ದ್ವಿತೀಯ ಭಾಷಾಸ್ಥಾನವು ತಪ್ಪಿದ್ದ ಮಾತ್ರಕ್ಕೆ ಅದು ವಿಶ್ವವಿದ್ಯಾನಿಲಯದಿಂದಲೇ ಲುಪ್ತವಾಗುತ್ತಿರಲಿಲ್ಲ. ವಿದ್ಯಾರ್ಥಿಗಳು ಆಗಲೂ ಅದನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ವ್ಯಾಸಂಗ ಮಾಡಬಹುದಾಗಿತ್ತು. ಸಂಸ್ಕೃತದಲ್ಲಿ ಎಂ.ಎ., ಬಿ.ಎ. (ಆನರ್ಸ್) ಪರೀಕ್ಷೆಗಳು ಇರುತ್ತಲೇ ಇದ್ದುವು. ಈಗ ಯಾರು ಸಂಸ್ಕೃತ ವಿದ್ಯೆಯನ್ನು ಕಾಪಾಡುತ್ತಾರೋ ಅದರ ಗೌರವವನ್ನು ಬೆಳೆಸುತ್ತಾರೋ ಆ ವಿದ್ವಾಂಸರನ್ನು ವಿಶ್ವವಿದ್ಯಾನಿಲಯವು ಮುಂದೆಯೂ ತಯಾರು ಮಾಡುತ್ತಲೇ ಇತ್ತು. ಹೆಚ್ಚು ಸಂಖ್ಯೆಯ ಜನಕ್ಕೆ ಕೊಂಚಮಟ್ಟಿನ ಸಂಸ್ಕೃತದ ಪರಿಚಯವಾಗುವುದು ಆಗ ತಪ್ಪುತ್ತಿತ್ತು, ನಿಜ. ಆದರೆ ಅದರಿಂದ ದೇಶಕ್ಕೆ ಆಗುತ್ತಿದ್ದ ಹಾನಿಗಿಂತಲೂ ಅವರಿಗೆ ದೇಶಭಾಷಾಜ್ಞಾನವಿಲ್ಲದೆ ಆಗುತ್ತಿದ್ದ ಹಾನಿಯೇ ಹೆಚ್ಚು.

ಕೊನೆಯಲ್ಲಿ ಒಂದು ಮುಖ್ಯ ವಿಷಯವನ್ನು ಗಮನಿಸಬೇಕು. ಸಂಸ್ಕೃತದಲ್ಲಿ ಭಾರತೀಯರೆಲ್ಲರಿಗೂ ಅಪಾರವಾದ ಅಭಿಮಾನವಿದೆ. ಅದು ನಮ್ಮ ಪ್ರಾಚೀನ ಸಂಸ್ಕೃತಿಯ ನಿಧಿ. ಈ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರವೇ ಸಂಸ್ಕೃತವನ್ನು ಇಷ್ಟು ಎಚ್ಚರಿಕೆಯಿಂದ ಪೋಷಿಸಿಕೊಂಡು ಬಂದಿರುವುದು. ಸಂಸ್ಕೃತವು ದಿವ್ಯಭಾಷೆ, ಆದರೆ ಅದು ಕ್ಲಿಷ್ಟಭಾಷೆ, ಜನಸಾಮಾನ್ಯರಲ್ಲಿ ಬಳಕೆಯಿಲ್ಲದ ಭಾಷೆ. ಇದನ್ನು ಚೆನ್ನಾಗಿ ಕಲಿತು, ಆ ಮೂಲಕ ಗೀರ್ವಾಣಸಂಸ್ಕೃತಿಯನ್ನು ಗ್ರಹಿಸತಕ್ಕವರ ಸಂಖ್ಯೆ ಅತ್ಯಲ್ಪ. ಇವರೇ ಎಂ.ಎ., ಬಿ.ಎ. (ಆನರ್ಸ್) ಮೊದಲಾದ ಪರೀಕ್ಷೆಗಳಿಗೆ ಸಂಸ್ಕೃತವನ್ನು

ತೆಗೆದುಕೊಂಡು ಓದತಕ್ಕವರು. ಮಿಕ್ಕವರು–ವಿದ್ಯಾವಂತರು ಕೂಡ–ಈ ಸಂಸ್ಕೃತಿಯನ್ನು ಸ್ವಭಾಷೆಯ ಮೂಲಕವೋ ಇಂಗ್ಲಿಷಿನ ಮೂಲಕವೊ ಗ್ರಹಿಸಬೇಕು. ಜನಸಾಮಾನ್ಯಕ್ಕಂತೂ ಅಗತ್ಯವಾದದ್ದು ಈ ಸಂಸ್ಕೃತಿಯೇ ಹೊರತು ಅದರ ಹೊದಿಕೆಯಾದ ಸಂಸ್ಕೃತ ಭಾಷೆಯಲ್ಲ. ಅದನ್ನು ಅವರು ಪಡೆಯಬೇಕಾದರೆ ದೇಶಭಾಷೆಯೊಂದೇ ಗತಿ. ಸಂಸ್ಕೃತಾಭಿಮನಿಗಳು ಈ ತತ್ತ್ವವನ್ನರಿತು, ಇನ್ನು ಮುಂದೆ ಕನ್ನಡವನ್ನು ತಿರಸ್ಕಾರದಿಂದ ನೋಡದೆ ಸಂಸ್ಕೃತದ ತಿರುಳನ್ನು ಕನ್ನಡಕ್ಕೆ ಒದಗಿಸಿದರೆ, ಸಂಸ್ಕೃತದ ಸಾರವೂ ಉಳಿಯುತ್ತದೆ; ಕನ್ನಡಭಾಷೆಯೂ ಬೆಳೆಯುತ್ತದೆ. ಇತ್ತ ಕಡೆಗೆ ಅವರ ಗಮನವಿನ್ನೂ ಹರಿಯದೆ, ಸಂಸ್ಕೃತದ ಉತ್ಕರ್ಷವನ್ನೂ ಕನ್ನಡದ ಋಣವನ್ನೂ ಸ್ಥಾಪಿಸುವ ಸಿದ್ಧಸಾಧನ ಕಾರ್ಯದಲ್ಲೇ ಅವರು ನಿರತರಾಗಿರುವುದು ಶೋಚನೀಯವಾದ ಸಂಗತಿ.*

ಕಾವ್ಯಾನುಭವ : ೧೯೩೦

---

* ಮ.ರಾ. ಜೋಸ್ಯರವರು ಕಳೆದ ತಿಂಗಳ ಜಯಕರ್ಣಾಟಕದಲ್ಲಿ ಪ್ರಕಟವಾದ ಲೇಖನದಲ್ಲಿ ಕೆಳಗಿನ ತಿದ್ದುಪಡೆಗಳಾಗಬೇಕೆಂದು ಕೋರುತ್ತಾರೆ :
೫೦೩ನೇ ಪೇಜಿನ ೨ನೆಯ ಕಾಲಮಿನಲ್ಲಿ "ಅಂದರೆ ಕಾಲೇಜುಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಕನ್ನಡವನ್ನೂ ಸಂಸ್ಕೃತವನ್ನೂ ಅಭ್ಯಾಸಿಸಬೇಕು," ಎಂಬ ವಾಕ್ಯವು "ಕಾಲೇಜುಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಕನ್ನಡವನ್ನಾಗಲಿ ಉರ್ದುವನ್ನಾಗಲಿ ಅಭ್ಯಾಸಿಸಬೇಕು" ಎಂದಿರಬೇಕು.
೫೦೮ನೆಯ ಪೇಜಿನ ೨ನೆಯ ಕಾಲಮಿನಲ್ಲಿ "ಅವರುಗಳೂ ಕರ್ನಾಟಕದ ಪಾಠಕ ಪ್ರಪಂಚಕವೂ ಮ.ರಾ. ಶ್ರೀಕಂಠಯ್ಯನವರ ಪ್ರಚಂಡನಿಯಮಗಳನ್ನು ಖಂಡಿಸಲೇಬೇಕು", ಎಂಬ ಕಡೆ ಖಂಡಿಸಲೊ ಮಂಡಿಸಲೊ ಬೇಕು" ಎಂದಿರಬೇಕು.

ಕನ್ನಡದ ಈಗಿನ ವ್ಯಾಪ್ತಿ*

ಕನ್ನಡನಾಡಿನ ಎಲ್ಲೆಗಳನ್ನು ಕುರಿತು ಮಾತಾಡುವಾಗಲೆಲ್ಲ "ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡು" ಎಂಬ 'ಕವಿರಾಜಮಾರ್ಗ'ದ ವಾಕ್ಯವನ್ನು ಸ್ಮರಿಸುವುದು ಸಂಪ್ರದಾಯವಾಗಿದೆ. ಪ್ರಾಚೀನ ಕಾಲದಲ್ಲಿ ಗೋದಾವರಿಯ ಉತ್ತರಕ್ಕೂ ಕನ್ನಡದ ವ್ಯಾಪ್ತಿಯಿದ್ದಿತು ; ಕನ್ನಡದ ಮೂಲಸ್ಥಾನವನ್ನು ಅಲ್ಲಿಯೇ ಹುಡುಕಬೇಕು ಎಂದು ಹೇಳತಕ್ಕವರೂ ಉಂಟು. ಈ ಹೇಳಿಕೆಯನ್ನು ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್ಯರು 'ಪ್ರಬುದ್ಧ ಕರ್ಣಾಟಕ'ದ ಕಳೆದ ಸಂಚಿಕೆಯಲ್ಲಿ (ಭಾವ— ದೀಪಾವಳಿಯ ಸಂಚಿಕೆ : 'ಕಣ್ಮರೆಯಾದ ಕನ್ನಡ'ದ ಮೇಲಿನ ವಿಮರ್ಶೆಯಲ್ಲಿ) ವಿಶದವಾಗಿ ಪರಿಶೀಲಿಸಿ, ಅದಕ್ಕೆ ಆಧಾರಗಳು ಸಾಲವೆಂದು ಸ್ಪಷ್ಟಪಡಿಸಿರುವುದಲ್ಲದೆ, ಗೋದಾವರಿಯ ದಕ್ಷಿಣದಲ್ಲಿ ಕೂಡ ಪೂರ್ವಭಾಗದ ನಾಡು ತೆಲುಗಿಗೆ ಹಿಂದಿನಿಂದಲೂ ಸೇರಿದ್ದಿತೆಂದು ಸಪ್ರಮಾಣವಾಗಿ ತೋರಿಸಿದ್ದಾರೆ. ಇದು ಪ್ರಾಚೀನ ಕಾಲದ ಗಡಿಗಳ ಮಾತಾಯಿತು. ಕನ್ನಡಿಗರಿಗೆ ತಮ್ಮ ಭಾಷೆಯ ಈಗಿನ ವಿಸ್ತಾರ ಸಂಕೋಚಗಳನ್ನೂ ಕುರಿತು ಕುತೂಹಲ ಹುಟ್ಟುವುದು ಸಹಜವಾಗಿದೆ. ಇದರ ನಿರ್ಣಯ ಹಿಂದಿನದರಷ್ಟು ಚರ್ಚಾಸ್ಪದವಲ್ಲ; ಅಷ್ಟು ಕಷ್ಟವೂ ಅಲ್ಲ. ಇದಕ್ಕೆ ೧೯೩೧ನೆಯ ಇಸವಿಯ ಪ್ರಜಾಗಣಿತಿಯ (census) ಹಲವು ವರದಿಗಳನ್ನು

* ಪ್ರಬುದ್ಧ ಕರ್ಣಾಟಕ, ಸಂಪುಟ ೧೬-೩

ತಿರುವಿಹಾಕಿ ಅಲ್ಲಿಂದ ಅಂಕೆಗಳನ್ನು ಕೂಡಿಸುವ ತಾಳ್ಮೆ ಬೇಕು, ಅಷ್ಟೆ. ಈ ವಿಷಯಕ್ಕೆ ಸಂಬಂಧಪಟ್ಟ ಕೆಲವು ಅಂಶಗಳನ್ನೂ ಅವುಗಳಿಂದ ಹೊರಡುವ ಸೂಚನೆಗಳನ್ನು ಕನ್ನಡಿಗರ ಅವಗಾಹನೆಗೆ ತರಲು ಇಲ್ಲಿ ಪ್ರಯತ್ನಿಸಲಾಗಿದೆ.

ಕನ್ನಡವನ್ನು ಮಾತೃಭಾಷೆಯಾಗಿ ಉಳ್ಳವರ ಒಟ್ಟು ಸಂಖ್ಯೆ ೧,೧೨,೦೬,೩೮೦ ಇದರ ವಿವರ[೧]—

ಬೊಂಬಾಯಿ ಆಧಿಪತ್ಯ (ಏಡನ್ ಸೇರಿ)	....	೨೫,೯೮,೩೪೯
ಬೊಂಬಾಯಿ ದೇಶೀಯ ಸಂಸ್ಥಾನಗಳು	....	೫,೯೯,೦೮೯
ಮದರಾಸು ಆಧಿಪತ್ಯ		೧೭,೧೫,೧೯೧
ಮದರಾಸು ದೇಶೀಯ ಸಂಸ್ಥಾನಗಳು		೧೯,೩೨೮
ಮಧ್ಯಪ್ರಾಂತಗಳು ಮತ್ತು ಬೀರಾರ್		೯,೧೨೬
ಕೊಡಗು		೬೫,೧೬೩
ಹೈದರಾಬಾದು ಸಂಸ್ಥಾನ	....	೧೬,೨೦,೧೯೪
ಮೈಸೂರು ಸಂಸ್ಥಾನ	....	೪೫,೭೮,೯೦೧

ಕನ್ನಡದ ಪ್ರಜಾಸಂಖ್ಯೆಯೊಂದಿಗೆ ಕೆಲವು ಮುಖ್ಯ ದ್ರಾವಿಡ ಭಾಷೆಗಳನ್ನಾಡುವರ ಸಂಖ್ಯೆಯನ್ನು ಹೋಲಿಸಿ ನೋಡಬಹುದು. (ದ್ರಾವಿಡ ಭಾಷೆಗಳನ್ನಾಡುವವರ ಒಟ್ಟು ಸಂಖ್ಯೆ ೭,೧೬,೪೪,೭೮೭.)—

ತೆಲುಗು	೨,೬೩,೭೩,೭೨೭
ತಮಿಳು	೨,೦೪,೧೧,೬೫೨
ಕನ್ನಡ	೧,೧೨,೦೬,೩೮೦
ಮಲಯಾಳ	೯೧,೩೭,೬೧೫
ತುಳು	೬,೫೧,೮೪೨
ಬ್ರಾಹೂಈ	೨,೦೭,೦೪೯
ಕೊಡಗು	೪೫,೩೬೮

ತೆಲುಗು, ತಮಿಳು, ಕನ್ನಡ ಭಾಷೆಗಳು ಕೋಟಿಯ ಲೆಕ್ಕಕ್ಕೆ ಮಿಾರುತ್ತದೆ. ತೆಲುಗರ ಮತ್ತು ತಮಿಳರ ಸಂಖ್ಯೆಗಳು ಕನ್ನಡಿಗರ ಸಂಖ್ಯೆಗೆ ಕ್ರಮವಾಗಿ ಸುಮಾರು ಎರಡೂವರೆ ಯಷ್ಟು ಮತ್ತು ಎರಡಷ್ಟು ಹೆಚ್ಚು. ದ್ರಾವಿಡ ಭಾಷೆಗಳಲ್ಲೆಲ್ಲಾ ತೆಲುಗು ಸಂಖ್ಯೆಯಲ್ಲೂ ವ್ಯಾಪ್ತಿಯಲ್ಲೂ ಪ್ರಥಮ ಸ್ಥಾನವನ್ನು ಪಡೆದಿದೆ. ಮಲಯಾಳವು ಇನ್ನೂ ಒಂದು ಕೋಟಿಯನ್ನು ಮುಟ್ಟದಿದ್ದರೂ ಅದರ ಜನಸಂಖ್ಯೆ ಕನ್ನಡವನ್ನು ಎಟಕಿಸಿಕೊಳ್ಳುವಷ್ಟು ಹತ್ತಿರಕ್ಕೆ ಏರುತ್ತಿದೆ.

---

೧. ಸಾವಿರಕ್ಕೆ ಕಡಮೆ ಕನ್ನಡಿಗರಿರುವ ಪ್ರಾಂತಗಳ ವಿವರವನ್ನು ಇಲ್ಲಿ ಕೊಟ್ಟಿಲ್ಲ.

ಹಿಂದೂದೇಶದ ಆರ್ಯಭಾಷೆಗಳಲ್ಲಿ ಹಿಂದಿ, ಬಂಗಾಳಿ, ಮರಾಠಿ ಮೊದಲಾದುವೆಲ್ಲ ತುಂಬ ಪ್ರಬಲ ಭಾಷೆಗಳು; ಕನ್ನಡದ ಸಂಖ್ಯೆಯನ್ನು ಎಷ್ಟೋ ಪಾಲು ಮೀರಿಸಿವೆ. ಗುಜರಾತಿ, ಉರಿಯ ಭಾಷೆಗಳು ಕನ್ನಡದ ಕೆಳಗೆ ಬರುತ್ತವೆ. ಆದರೆ ಆಧುನಿಕ ಸಾಹಿತ್ಯದಲ್ಲಿ ಗುಜರಾತಿಯಷ್ಟು ಕನ್ನಡವು ಮುಂದುವರಿದಿಲ್ಲವೆನ್ನುತ್ತಾರೆ. ಉರಿಯದವರು ಸ್ವಸಾಹಸದಿಂದ ಒಂದು ಪ್ರತ್ಯೇಕ ಪ್ರಾಂತವನ್ನು ಇನ್ನೇನು ಗಳಿಸಿಕೊಳ್ಳುವುದರಲ್ಲಿದ್ದಾರೆ; ಕರ್ಣಾಟಕ ಪ್ರಾಂತವಾದರೆ ಕನಸಿನ ಗಂಟಾಗಿಯೇ ಉಳಿದಿದೆ.

ಸ್ಥಾನದ ದೃಷ್ಟಿಯಿಂದ ಕನ್ನಡವು ಹಿಂದೂದೇಶದ ಭಾಷೆಗಳಲ್ಲಿ ಒಂಬತ್ತನೆಯದು. ಭಾರತೀಯರಲ್ಲಿ ೩.೨% ಜನ ಕನ್ನಡಿಗರು. ಪ್ರಾಂತಪ್ರಾಂತದಲ್ಲೂ ಕನ್ನಡಿಗರ ಸ್ಥಾನಮಾನಗಳು ಹೇಗಿವೆಯೆಂಬುದನ್ನು ಕೆಳಗಿನ ಪಟ್ಟಿ ತೋರಿಸುತ್ತದೆ—

ಪ್ರಾಂತ	ಕನ್ನಡದ ಸ್ಥಾನ	ಒಟ್ಟು ಪ್ರಜಾಸಂಖ್ಯೆಯಲ್ಲಿ
ಬೊಂಬಾಯಿ (ಸಂಸ್ಥಾನಗಳು ಸೇರಿ)	IV	೧೨.೧೫%
ಮದರಾಸು (")	V	೩.೬೬%
ಕೊಡಗು	I	೩೯.೯೦%
ಹೈದರಾಬಾದು	III	೧೧.೨೨%
ಮೈಸೂರು	I	೬೯.೮೩%

ಬೊಂಬಾಯಿ ಆಧಿಪತ್ಯದಲ್ಲಿ ಮರಾಠಿ, ಗುಜರಾತಿ, ಸಿಂಧಿ—ಈ ಮೂರು ಭಾಷೆಗಳಾದ ಮೇಲೆ ಕನ್ನಡ ಬರುತ್ತದೆ. ಅಲ್ಲಿ ಅದು ನೆಲಸಿರುವುದು ಮುಖ್ಯವಾಗಿ ನಾಲ್ಕು ಜಿಲ್ಲೆಗಳಲ್ಲಿ : ಬಿಜಾಪುರ (೮೨%), ಧಾರವಾಡ (೭೮%), ಬೆಳಗಾವಿ (೬೫%), ಉತ್ತರ ಕನ್ನಡ (೫೫%)–ಇಲ್ಲೆಲ್ಲಾ ಕನ್ನಡವೇ ಮುಖ್ಯಭಾಷೆ.[೨] (ಉತ್ತರ ಕನ್ನಡ ಜಿಲ್ಲೆಯಲ್ಲಿ ಕನ್ನಡಿಗರ ಸಂಖ್ಯೆಯ ಅರ್ಧಕ್ಕೆ ಮೀರಿ ಕೊಂಕಣಿಯನ್ನಾಡುವ ಜನರಿದ್ದಾರೆ.) ಸೊಲ್ಲಾಪುರ ಜಿಲ್ಲೆಯಲ್ಲಿ ೭%ಕ್ಕೆ ಮೇಲ್ಪಟ್ಟ ಜನರು ಕನ್ನಡವನ್ನಾಡುತ್ತಾರೆ; ಸತಾರಾ ಜಿಲ್ಲೆಯಲ್ಲೂ ಕನ್ನಡಿಗರುಂಟು. ಈ ಆಧಿಪತ್ಯದ ದೇಶೀಯ ಸಂಸ್ಥಾನಗಳಲ್ಲಿ ಅಕ್ಕಲಕೋಟೆ, ಜಮಖಂಡಿ, ಮುಧೋಳ್ (ರನ್ನನ ಮುದವೊಳಲ್), ರಾಮದುರ್ಗ, ಸವಣೂರು, ವಾಡಿ—ಇಲ್ಲಿ ಕನ್ನಡವೇ ಮುಖ್ಯಭಾಷೆ. ಕೊಲ್ಲಾಪುರದಲ್ಲಿ ಸುಮಾರು ಒಂದೂವರೆ ಲಕ್ಷವೂ (೧೫%) ಸಾಂಗ್ಲಿಯಲ್ಲಿ ಒಂದು ಲಕ್ಷವೂ (೧೦%) ಕನ್ನಡಿಗರಿದ್ದಾರೆ. ಕುರುಂದವಾಡ, ಮಿರಜ್, ಜಾತ್—ಈ ಸಂಸ್ಥಾನಗಳ ಕನ್ನಡ ಪ್ರಜೆಗಳ ಒಟ್ಟು ಸಂಖ್ಯೆ ಒಂದು ಲಕ್ಷಕ್ಕೆ ಮೀರುತ್ತದೆ.

ಮದರಾಸು ಆಧಿಪತ್ಯದಲ್ಲಿ ಕನ್ನಡದ ಸ್ಥಾನವು ತುಂಬ ಕೀಳು. ತೆಲುಗು, ತಮಿಳು, ಮಲಯಾಳಗಳ ಮಾತಿರಲಿ; ಆರ್ಯಭಾಷೆಯಾದ ಉರಿಯಕ್ಕಿಂತಲೂ ಕನ್ನಡವು ಕೆಳಗೆ ಬರುತ್ತದೆ. ಇಲ್ಲಿಯ ಕನ್ನಡಿಗರು ಒಟ್ಟು ಪ್ರಜಾಸಂಖ್ಯೆಯ ೩.೬೬%ರಷ್ಟು ಮಾತ್ರ

---

೨. ಮುಖ್ಯಭಾಷೆಯೆಂದರೆ, ಒಂದು ಪ್ರದೇಶದ ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚುಪಾಲು ಮಂದಿಯ ಮಾತೃಭಾಷೆಯಾಗಿರತಕ್ಕದ್ದು.

ಇದ್ದಾರೆಂದು ನೋಡಿ ಆಶ್ಚರ್ಯವಾಗಬಹುದು. ಇದಕ್ಕೆ ಮದರಾಸು ಆಧಿಪತ್ಯದ ಅಧಿಕ ವಿಸ್ತಾರವು ಒಂದು ಮುಖ್ಯ ಕಾರಣ. ಶೇಕಡ ಲೆಕ್ಕವನ್ನು ಬಿಟ್ಟು ಜನಸಂಖ್ಯೆಯನ್ನು ಹೋಲಿಸಿದರೆ, ಹೈದರಾಬಾದಿಗಿಂತಲೂ ಮದರಾಸಿನಲ್ಲಿಯೇ ಕನ್ನಡಿಗರ ಸಂಖ್ಯೆ ಹೆಚ್ಚೆಂಬುದು ವ್ಯಕ್ತವಾಗುತ್ತದೆ. ಈ ಆಧಿಪತ್ಯದಲ್ಲಿ ಬಳ್ಳಾರಿ ಜಿಲ್ಲೆಯೊಂದನ್ನು ಬಿಟ್ಟರೆ ಕನ್ನಡವು ಪ್ರಚುರವಾಗಿರುವುದು ಮುಖ್ಯವಾಗಿ ಮೈಸೂರು ಸಂಸ್ಥಾನದ ಅಂಚಿನ ಪ್ರದೇಶಗಳಲ್ಲಿ. ಸಂಡೂರು ಸಂಸ್ಥಾನದಲ್ಲೂ ಬಳ್ಳಾರಿಯ ಪಶ್ಚಿಮಭಾಗದ ಆರೇಳು ತಾಲ್ಲೂಕುಗಳಲ್ಲೂ ಕನ್ನಡವೇ ಮುಖ್ಯಭಾಷೆ.[೩] (ಬಳ್ಳಾರಿ ಜಿಲ್ಲೆಯ ೯,೬೯,೭೭೪ ಪ್ರಜೆಗಳಲ್ಲಿ ೫,೩೩,೫೩೮ ಜನ ಕನ್ನಡಿಗರು, ೩,೦೫,೭೭೫ ಜನ ತೆಲುಗರು. ಕನ್ನಡಿಗರ ಸಂಖ್ಯೆ ತೆಲುಗರ ಸಂಖ್ಯೆಗೆ ಕಡಮೆಯಾಗಿರುವುದು ಇಲ್ಲಿಯ ಆಲೂರು, ಆದವಾನಿ ತಾಲ್ಲೂಕುಗಳಲ್ಲಿ ಮಾತ್ರ.) ಅನಂತಪುರ ಜಿಲ್ಲೆಯ ಸುಮಾರು ಹತ್ತು ಲಕ್ಷ ಪ್ರಜೆಗಳಲ್ಲಿ ಒಂದು ಲಕ್ಷ ಜನ (ಮುಖ್ಯವಾಗಿ ಮಡಕಸಿರ, ಕಲ್ಯಾಣದುರ್ಗ ತಾಲ್ಲೂಕುಗಳಲ್ಲಿ) ಕನ್ನಡವನ್ನಾಡುತ್ತಾರೆ. ಈ ಉತ್ತರ ಭಾಗದಲ್ಲಿ ಹಗರಿ ಚಿನ್ನಹಗರಿ ನದಿಗಳು ತೆಲುಗನ್ನೂ ಕನ್ನಡವನ್ನೂ ಪ್ರತ್ಯೇಕಿಸುತ್ತವೆಂದು ಮದರಾಸು ಆಧಿಪತ್ಯದ ಸೆನ್‌ಸಸ್ ವರದಿಯಲ್ಲಿ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿ ಗಮನಾರ್ಹವಾಗಿದೆ. ಇದರ ಹೆಸರು "ಕನ್ನಡ"ವಾದರೂ ಇಲ್ಲಿಯ ಹದಿಮೂರೂ ಮುಕ್ಕಾಲು ಲಕ್ಷ ಪ್ರಜೆಗಳಲ್ಲಿ ಸುಮಾರು ಎರಡೂವರೆ ಲಕ್ಷ ಜನ ಮಾತ್ರ ಕನ್ನಡವನ್ನು ಮಾತೃಭಾಷೆಯಾಗಿ ಉಳ್ಳವರು. ಇಲ್ಲಿನ ಮಲಯಾಳಿಗಳ ಸಂಖ್ಯೆ ಮೂರು ಲಕ್ಷದ ಹತ್ತಿರಕ್ಕೆ ಬರುತ್ತದೆ. (ಕಾಸರಗೋಡು ತಾಲ್ಲೂಕು ಕೇರಳಕ್ಕೆ ಸೇರುವುದೆಂದು ಹೇಳುತ್ತಾರೆ.) ತುಳುವರ ಸಂಖ್ಯೆ ಎಲ್ಲಕ್ಕೂ ಹೆಚ್ಚು: ಐದೂವರೆ ಲಕ್ಷಕ್ಕೆ ಮೀರಿದೆ. (ಸ್ವರ್ಣನದಿ ನೇತ್ರಾವತಿಗಳ ನಡುವೆ ಇರುವುದು ತುಳುನಾಡು.) ಇಷ್ಟಾದರೂ ತುಳುವರು ಗ್ರಾಂಥಿಕ ವ್ಯವಹಾರಕ್ಕೆ ಕನ್ನಡವನ್ನೇ ಉಪಯೋಗಿಸುವುದರಿಂದ ಈ ಜಿಲ್ಲೆಯಲ್ಲಿ ಕನ್ನಡವೇ ಅಗ್ರಭಾಷೆಯೆನ್ನಬಹುದು. ಮದರಾಸು ಆಧಿಪತ್ಯದ ಮಿಕ್ಕ ಜಿಲ್ಲೆಗಳಲ್ಲಿ ಕನ್ನಡವು ಮೈಸೂರಿನ ದಕ್ಷಿಣದ ಅಂಚಿನಲ್ಲಿದೆಯೆಂದ ಮಾತ್ರಕ್ಕೆ ಜಿಲ್ಲೆ ಜಿಲ್ಲೆಗೂ ಕನ್ನಡಿಗರ ಸಂಖ್ಯೆ ಅಲ್ಪವೇನೂ ಅಲ್ಲ. ಶಿವನಸಮುದ್ರದ ಆಚೆಗೆ ಕಾವೇರಿಯ ದಕ್ಷಿಣಮುಖದ ರೇಖೆಯೂ ಅದರ ಉಪನದಿಯಾದ ಭವಾನಿಯೂ ಈ ಪ್ರಾಂತದಲ್ಲಿ ಕನ್ನಡಕ್ಕೆ ವಾಯವ್ಯದ ಮೂಲೆಯ ಮೇರೆಯಾಗಬಹುದು. ಕೊಯಿಮತ್ತೂರಿನಲ್ಲಿ (ಕೊಳ್ಳೇಗಾಲ ಮೊದಲಾದ ತಾಲ್ಲೂಕುಗಳಲ್ಲಿ) ಮೂರು ಲಕ್ಷ, ಸೇಲಮ್ಮಿನಲ್ಲಿ ಒಂದು ಲಕ್ಷದ ಮೂವತ್ತೆಂಟು ಸಾವಿರ, ಮಧುರೆಯಲ್ಲಿ ಒಂದು ಲಕ್ಷದ ಮೂವತ್ತೆಂಟು ಸಾವಿರ—ಹೀಗೆ ಕನ್ನಡಿಗರಿದ್ದಾರೆ. ತಿರುಚಿನಾಪಳ್ಳಿಯಲ್ಲಿ ನಾಲ್ವತ್ತು ಸಾವಿರ. ನೀಲಗಿರಿಯಲ್ಲಿ ಮೂವತ್ತು ಸಾವಿರ,

೩. ತಾಲ್ಲೂಕುಗಳ ಪ್ರಜಾಸಂಖ್ಯೆಯನ್ನು ಭಾಷಾದೃಷ್ಟಿಯಿಂದ ವಿಂಗಡಿಸಿಕೊಡುವ ಪಟ್ಟಿಗಳು ಸೆನ್‌ಸಸ್ ವರದಿಗಳಲ್ಲಿ ದೊರೆಯಲಿಲ್ಲ; ಆದ್ದರಿಂದ ಆ ವರದಿಗಳಿಂದ ಗೊತ್ತಾಗುವ ಸ್ಥೂಲಾಂಶಗಳನ್ನೇ ಇಲ್ಲಿ ಕೊಡಲಾಗಿದೆ. ತಾಲ್ಲೂಕುವಾರು ಪಟ್ಟಿಗಳು ದೊರೆತಿದ್ದರೆ ಕನ್ನಡದ ಎಲ್ಲೆಯನ್ನು ಇನ್ನೂ ನಿರುಕಾಗಿ ಗುರುತಿಸಲು ಸಾಧ್ಯವಾಗುತ್ತಿದ್ದಿತು.

ರಾಮನಾಡು, ಚಿತ್ತೂರು, ಉತ್ತರ ಆರ್ಕಾಟು ಜಿಲ್ಲೆಗಳಲ್ಲಿ ಒಂದೊಂದರಲ್ಲೂ ಇಪ್ಪತ್ತು ಸಾವಿರದ ಮೇಲೆ—ಹೀಗೆ ಕನ್ನಡಿಗರು ಹಂಚಿಹೋಗಿದ್ದಾರೆ. ಮಲಬಾರಿನಲ್ಲಿ ಕೂಡ ಕನ್ನಡವನ್ನಾಡುವವರ ಸಂಖ್ಯೆ ಹದಿನಾರು ಸಾವಿರದ ಹತ್ತಿರಕ್ಕೆ ಬರುತ್ತದೆ.

ಕೊಡಗಿನ ಸೆನ್ಸಸ್ ವರದಿಯನ್ನು ಬರೆದವರು ಕನ್ನಡವನ್ನು ಹೊರಗಿನ ಭಾಷೆಯೆಂದು ಭಾವಿಸಿದ್ದರೂ, ಅಲ್ಲಿ ಕನ್ನಡವೇ ಪ್ರಥಮ ಭಾಷೆ. ಕೊಡವರ ಭಾಷೆ ಇದಕ್ಕೆ ಎರಡನೆಯದು (೨೭.೩೦%); ಇದನ್ನು ಆಡುವವರಲ್ಲಿ ಕೂಡ ಅರ್ಧಪಾಲು ಜನಕ್ಕೆ ಕನ್ನಡ ಬಳಕೆಯಲ್ಲಿದೆ. ಕೊಡಗು ಗ್ರಾಂಥಿಕ ಭಾಷೆಯಲ್ಲದ ಕಾರಣ ದಕ್ಷಿಣ ಕನ್ನಡದಲ್ಲಿರುವಂತೆಯೇ ಇಲ್ಲಿಯೂ ಕನ್ನಡವು ಸರ್ವತ್ರ ವ್ಯವಹಾರದಲ್ಲಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ಹೈದರಾಬಾದಿನಲ್ಲಿ ಪ್ರಧಾನ ಭಾಷೆಗಳು ನಾಲ್ಕು : ತೆಲುಗು, ಮರಾಠಿ, ಕನ್ನಡ, ಉರ್ದು (ಹಿಂದೂಸ್ತಾನಿ). ತೆಲುಗು ಮರಾಠಿಗಳಿಗೆ ಬಹಳ ಹಿಂದೆ ಕನ್ನಡ ಬರುತ್ತದೆ. ಇದು ಪ್ರಚುರವಾಗಿರುವುದು ಮುಖ್ಯವಾಗಿ ರಾಯಚೂರು (೬೩.೮೪%) ಗುಲ್ಬರ್ಗ (೪೯.೩೪%) ಜಿಲ್ಲೆಗಳಲ್ಲಿ. ಬೀದರ್ ಜಿಲ್ಲೆ ಮರಾಠಿ ಕನ್ನಡ ತೆಲುಗು ಭಾಷೆಗಳ ಸಂಧಿಸ್ಥಾನ; ಇಲ್ಲಿ ಎರಡು ಲಕ್ಷದ ಅರುವತ್ತು ಸಾವಿರ ಮಂದಿ (ಸುಮಾರು ೩೦%) ಕನ್ನಡಿಗರಿದ್ದಾರೆ; ಇಲ್ಲಿಯ ಮರಾಠರ ಸಂಖ್ಯೆ ಕನ್ನಡಿಗರದಕ್ಕಿಂತ ಐವತ್ತು ಸಾವಿರ ಮಾತ್ರ ಹೆಚ್ಚು. ಹೈದರಾಬಾದು ಜಿಲ್ಲೆಯಲ್ಲಿ ಕನ್ನಡವನ್ನಾಡುವವರು ಒಂದು ಲಕ್ಷದ ಅರುವತ್ತೆರಡು ಸಾವಿರ ಮಂದಿ. ಉಸ್ಮಾನಾಬಾದ್, ನಂದೇರ್ ಜಿಲ್ಲೆಗಳಲ್ಲಿ ಒಂದೊಂದರಲ್ಲೂ ಕನ್ನಡಿಗರ ಸಂಖ್ಯೆ ನಾಲ್ವತ್ತು ಸಾವಿರದ ಹತ್ತಿರಕ್ಕೆ ಬರುತ್ತದೆ. ಹೈದರಾಬಾದು ಸಂಸ್ಥಾನದಲ್ಲಿ ಗಮನಿಸಬೇಕಾದ ಒಂದು ಅಂಶವೇನೆಂದರೆ, ಅಲ್ಲಿಯ ರಾಜಭಾಷೆಯಾದ ಉರ್ದುವಿನ ಜನಸಂಖ್ಯೆ (೧೫,೦೭,೨೭೨) ಕನ್ನಡಕ್ಕಿಂತಲೂ ಒಂದು ಲಕ್ಷ ಕಡಮೆ.

ಕಡೆಗೆ ಮೈಸೂರಿಗೆ ಬರುತ್ತೇವೆ. ಸದ್ಯಕ್ಕೆ ಕನ್ನಡವು ಸಂಖ್ಯೆಯಲ್ಲೂ ಸ್ಥಿತಿಯಲ್ಲೂ ಪ್ರಮುಖವಾಗಿರುವುದು ಇದೊಂದೇ ಪ್ರಾಂತದಲ್ಲಿ ಎನ್ನಬೇಕು. ಇಲ್ಲಿಯ ಭಾಷೆಗಳ ಸ್ಥಾನತಾರತಮ್ಯವನ್ನು ಕೆಳಗಿನ ಪಟ್ಟಿ ತೋರಿಸುತ್ತದೆ—

ಕನ್ನಡ	೬೯.೮೩%
ತೆಲುಗು	೧೫.೭೨%
ಉರ್ದು (ಹಿಂದೂಸ್ತಾನಿ)	೫.೮೪%
ತಮಿಳು	೪.೭೮%
ಇತರ ಭಾಷೆಗಳು	೩.೮೩%

ಮೈಸೂರು ಸಂಸ್ಥಾನದ ಒಟ್ಟು ೬೫,೫೭,೩೦೨ ಪ್ರಜೆಗಳಲ್ಲಿ ೪೫,೭೮,೮೦೧ ಜನರ ಮನೆಮಾತು ಕನ್ನಡ; ಉಳಿದ ಪ್ರಜೆಗಳಲ್ಲಿ ಅರ್ಧ ಜನಕ್ಕೆ ಮಾತೃಭಾಷೆ ತೆಲುಗು.

ಮೈಸೂರು ಸಂಸ್ಥಾನದ ಪೂರ್ವಭಾಗವೆಲ್ಲ ಬಹುಮಟ್ಟಿಗೆ ತೆಲುಗಿಗೆ ಸೇರಿದ್ದು. ಪಾವಗಡ, ಚಿಕ್ಕಬಳ್ಳಾಪುರ, ಶ್ರೀನಿವಾಸಪುರ, ಮುಳಬಾಗಿಲು, ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿ, ಗುಡಿಬಂಡೆ, ಗೋರಿಬಿದನೂರು—ಈ ತಾಲ್ಲೂಕುಗಳಲ್ಲಿ ತೆಲುಗೇ ಮುಖ್ಯಭಾಷೆ. ಇದರ ಜೊತೆಗೆ ಚಿತ್ರದುರ್ಗ, ತುಮಕೂರು, ಬೆಂಗಳೂರು, ಕೋಲಾರ ಡಿಸ್ಟ್ರಿಕ್ಟುಗಳ ಇನ್ನೂ ಹಲವು ತಾಲ್ಲೂಕುಗಳಲ್ಲಿ ತೆಲುಗರ ಸಂಖ್ಯೆ ವಿಶೇಷವಾಗಿದೆ. ಹಿಂದೂಪುರದಿಂದ ಕುಪ್ಪಂವರೆಗೆ ಒಂದು ಗೆರೆಯನ್ನೆಳೆದರೆ ಅದರ ಪೂರ್ವಕ್ಕೆ ಬರುವ ಮೈಸೂರಿನ ಪ್ರದೇಶವೆಲ್ಲಾ ಬಹುಶಃ ತೆಲುಗಿನದೆಂದು ಮದರಾಸು ಆಧಿಪತ್ಯದ ಸೆನ್ಸಸ್ ವರದಿಯಲ್ಲಿ ಹೇಳಿದೆ. ಹೀಗೆ ಮೈಸೂರಿನಲ್ಲಿ ತೆಲುಗು ಒಂದು ಮುಖ್ಯವಾದ ಸಹಭಾಷೆಯಾಗಿದ್ದರೂ ಇಲ್ಲಿಯ ತೆಲುಗರಲ್ಲಿ ಸುಮಾರು ೪೦% ಜನಕ್ಕೆ ಕನ್ನಡವೂ ಬರುತ್ತದೆ. ಉರ್ದು ಭಾಷೆ ತೆಲುಗಿನಷ್ಟು ಕೂಡ ಪ್ರಮುಖವಲ್ಲ; ಅದನ್ನು ಮಾತೃಭಾಷೆಯಾಗಿ ಉಳ್ಳವರು ಮೈಸೂರಿನಲ್ಲಿ ಬಹಳ ಕಡಮೆ (೩,೮೨,೮೭೬ ಮಂದಿ.) ಅವರಲ್ಲಿ ಕೂಡ ಸುಮಾರು ೪೮% ಜನ ಕನ್ನಡವನ್ನೂ ಆಡಬಲ್ಲವರು, ಆಡುವವರು. ಇದಲ್ಲದೆ ಬೆಂಗಳೂರು ದಂಡೊಂದನ್ನು ಬಿಟ್ಟರೆ (ಇಲ್ಲಿ ೨೮,೦೮೭ ಮಂದಿಗೆ ಉರ್ದು ಮಾತೃಭಾಷೆ) ಮಿಕ್ಕ ಯಾವ ಕಡೆಯಲ್ಲೂ ಉರ್ದು ಮಾತಾಡುವವರು ಕೋಲಾರ ಡಿಸ್ಟ್ರಿಕ್ಟಿನಲ್ಲಿ ತೆಲುಗರಿರುವಂತೆ ಗುಂಪಾಗಿ ಕೂಡ ಇಲ್ಲ; ದೇಶದ ಎಲ್ಲಾ ಭಾಗಗಳಲ್ಲೂ ಹರಡಿ ಹೋಗಿದ್ದಾರೆ. ಆದ್ದರಿಂದ ಅವರು ಕನ್ನಡವನ್ನು ಅನಿವಾರ್ಯವಾಗಿ ಕಲಿತಿರಬೇಕಾಗಿದೆ. ಹೀಗೆ ಮೈಸೂರು ದೇಶದಲ್ಲಿ ಒಟ್ಟು ಐವತ್ತು ನಾಲ್ಕು ಲಕ್ಷದ ಇಪ್ಪತ್ತಾರು ಸಾವಿರ ಮಂದಿ ಎಂದರೆ ೮೨.೭% ಜನರು ಕನ್ನಡವನ್ನು ನಿತ್ಯದ ವ್ಯವಹಾರದಲ್ಲಿ ಇಟ್ಟುಕೊಂಡಿದ್ದಾರೆ.

ಮೇಲಿನ ಅಂಕೆಗಳನ್ನೆಲ್ಲಾ ನೋಡಿದವರಿಗೆ ಒಂದು ಮುಖ್ಯವಾದ ಅಂಶವು ತಾನಾಗಿಯೇ ಸ್ಫುಟವಾಗುತ್ತದೆ. ಸ್ಥಾನದ ದೃಷ್ಟಿಯಿಂದ ಕನ್ನಡವು ಹಿಂದೂದೇಶದ ಭಾಷೆಗಳಲ್ಲಿ ಒಂಬತ್ತನೆಯದಾದರೂ ಮೈಸೂರನ್ನು ಬಿಟ್ಟರೆ ಬೇರೆ ಯಾವ ಪ್ರಾಂತದಲ್ಲೂ ಅದಕ್ಕೆ ಮುಖ್ಯಸ್ಥಾನವಿಲ್ಲ. ಆದರೆ ಮೈಸೂರು ಕನ್ನಡಿಗರ ಒಟ್ಟು ಸಂಖ್ಯೆಯಲ್ಲಿ ಸುಮಾರು ೨/೫ ರಷ್ಟನ್ನು ಮಾತ್ರ ಒಳಕೊಂಡಿದೆ. ಉಳಿದ ಜನವೆಲ್ಲ—ಎಂದರೆ ಸುಮಾರು ಅರುವತ್ತಾರು ಲಕ್ಷ ಮಂದಿ—ಮೂರು-ನಾಲ್ಕು ದೊಡ್ಡ ಸರಕಾರಗಳ ನಡುವೆ ಹರಿಹಂಚಾಗಿದ್ದಾರೆ. ಹೀಗೆ ಹೋಳಾಗಿ ಒಗ್ಗಟ್ಟಿಲ್ಲದಿರುವುದೇ ಕನ್ನಡದ ದುಃಸ್ಥಿತಿಗೆ ಮುಖ್ಯ ಕಾರಣವೆಂಬುದು ಸ್ಪಷ್ಟವಾಗಿದೆ. ಬೊಂಬಾಯಿ ಆಧಿಪತ್ಯದಲ್ಲೇನೋ ಕನ್ನಡವನ್ನು ಆಡುವ ಭಾಗಗಳು ಒಟ್ಟಿಗಿರುವುದರಿಂದಲೂ ಅಲ್ಲಿಯ ಕನ್ನಡಿಗರಲ್ಲಿ ಜಾಗೃತಿ ಚೆನ್ನಾಗಿ ಹುಟ್ಟಿರುವುದರಿಂದಲೂ ಪರಭಾಷೆಗಳ ದಾಳಿಗೆ ಕನ್ನಡವು ಇನ್ನು ಮುಂದೆ ಅಲ್ಲಿ ಹಿಮ್ಮೆಟ್ಟಲಾರದೆಂಬ ಭರವಸೆಯುಂಟು. "Kanarese is a main language well established racially, culturally, socially and geographically and there is no likelihood of its failing to keep its place" ಎಂದು ಬೊಂಬಾಯಿ ಆಧಿಪತ್ಯದ ಸೆನ್ಸಸ್ ವರದಿಯಲ್ಲಿ ಹೇಳಿದ್ದಾರೆ. ಬೊಂಬಾಯಲ್ಲಿರುವಂತೆ ಹೈದರಾಬಾದಿನಲ್ಲೂ ಕನ್ನಡವನ್ನಾಡುವ ಭಾಗಗಳು ಒಂದರ ಮಗ್ಗುಲಲ್ಲಿ ಒಂದು ಇವೆ. ಆದರೆ ಅಲ್ಲಿ

ಉರ್ದು ಭಾಷೆಗಿರುವ ಪುರಸ್ಕಾರದಿಂದ[೪] ತೆಲುಗು ಮರಾಠಿಗಳಂಥ ಪ್ರಬಲ ಭಾಷೆಗಳೇ ಮೂಲೆಗೆ ಬಿದ್ದಿರುವಾಗ ಕನ್ನಡವನ್ನು ಕೇಳುವವರು ಯಾರು? ಮೊನ್ನೆ ಮೊನ್ನೆಯ ತನಕ ಹೈದರಾಬಾದಿನ ಕನ್ನಡದ ಹುಡುಗರಿಗೆ ಪ್ರಾಥಮಿಕ ವಿದ್ಯಾಭ್ಯಾಸವು ಕೂಡ ಕನ್ನಡದಲ್ಲಿ ನಡೆಯುತ್ತಿರಲಿಲ್ಲ. ಮನೆಯಲ್ಲಿ ಮಾತಾಡುವುದು ಕನ್ನಡ; ಹೊರಗೆ ಓದಿಬರೆಯುವುದು ಉರ್ದು ಅಥವಾ ಮರಾಠಿಯಲ್ಲಿ—ಹೀಗಿತ್ತು. ಈಗ ಕೂಡ ಮಾತೃಭಾಷೆಯ ವ್ಯಾಸಂಗಕ್ಕೂ ಬೆಳವಣಿಗೆಗೂ ಅಲ್ಲಿ ಹಲವು ತೊಂದರೆಗಳುಂಟು ಇದರ ಮೇಲೆ ಆತಂಕವನ್ನು ಹುಟ್ಟಿಸುವ ಇನ್ನೊಂದು ಅಂಶವಿದೆ. ೧೯೨೧ನೆಯ ಸೆನ್ಸಸ್ಸಿನಿಂದ ಈಚಿನ ಹತ್ತು ವರ್ಷಗಳಲ್ಲಿ ಬೊಂಬಾಯಿ ಮೈಸೂರು ಪ್ರಾಂತಗಳಲ್ಲಿ ಕನ್ನಡಿಗರ ಸಂಖ್ಯೆ ಸಹಜವಾಗಿ ಏರಿರುವಾಗ, ಹೈದರಾಬಾದು[೫] ಮದರಾಸು ಕೊಡಗು ಗಳಲ್ಲಿ ಕುಗ್ಗಿಹೋಗಿದೆ. ಕೊಡಗಿನಲ್ಲಿ ಇದು ಯೋಚನೆಗೆ ಅಷ್ಟು ಕಾರಣವಾಗದಿರಬಹುದು; ಹೈದರಾಬಾದಿನಲ್ಲಿಯೂ ಮದರಾಸಿನಲ್ಲಿಯೂ ಇದಕ್ಕೆ ಪರಿಹಾರಗಳನ್ನು ಆಲೋಚಿಸಲೇ ಬೇಕಾಗಿದೆ. ಹೈದರಾಬಾದಿನ ಕನ್ನಡಿಗರು ಉರ್ದು, ಮರಾಠಿ—ಈ ಎರಡರ ಒತ್ತಡದಿಂದ ಪಾರಾಗಬೇಕು. ಅವರು ವಿಶೇಷ ಪ್ರಯತ್ನಪಟ್ಟ ಹೊರತು ಕನ್ನಡವು ಅಲ್ಲಿ ತಲೆಯೆತ್ತುವುದು ಕಷ್ಟ.

ಮದರಾಸು ಭಾಷೆಗಳ ಒಂದು ಸಂತೆ. ಇಲ್ಲಿ ಕನ್ನಡದ ಕೂಗು ಮೇಲಕ್ಕೆ ಮುಟ್ಟುವುದು ಬಹಳ ಕಷ್ಟವಾಗಿದೆ. ಒಟ್ಟು ಪ್ರಾಂತದ ಮುಖ್ಯಭಾಷೆಯಾಗುವುದಿರಲಿ, ಬಳ್ಳಾರಿಯನ್ನು ಬಿಟ್ಟರೆ ಒಂದು ಜಿಲ್ಲೆಯಲ್ಲಿ ಕೂಡ ಕನ್ನಡವು ಮುಖ್ಯಭಾಷೆಯಾಗಿಲ್ಲ. ಆದರೂ ಮದರಾಸು ಆಧಿಪತ್ಯದಲ್ಲಿ ಕನ್ನಡವು ಈಗ ಏಳಿಗೆಯಲ್ಲಿರುವುದು ಬಳ್ಳಾರಿಯಲ್ಲಲ್ಲ,[೬] ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಅಲ್ಲಿ ತುಳುವರೂ ಕೊಂಕಣಿಗರೂ ಕನ್ನಡವನ್ನು ತಮ್ಮ ಗ್ರಾಂಥಿಕ ಭಾಷೆಯಾಗಿ ಸ್ವೀಕರಿಸಿ ಬೆಳಸಿಕೊಂಡು ಬಂದಿರುವುದೇ

---

೪. ಅಲ್ಲಿ ಉರ್ದು ರಾಜಮನೆತನದ ಭಾಷೆ, ರಾಜ್ಯಭಾರದ ಭಾಷೆ, ಅಧಿಕಾರಸಂಪನ್ನರ ಭಾಷೆ, ಪ್ರಾಥಮಿಕ ತರಗತಿಯಿಂದ ಹಿಡಿದು ವಿಶ್ವವಿದ್ಯಾನಿಲಯ ಸೇರಿ ಎಲ್ಲ ದರ್ಜೆಗಳ ಶಿಕ್ಷಣದ ಭಾಷೆ.

೫. ೧೯೨೧ರಲ್ಲಿ ಹೈದರಾಬಾದಿನ ಪ್ರಜೆಗಳಲ್ಲಿ ೧೨.೩% ಮಂದಿ ಕನ್ನಡವನ್ನಾಡುತ್ತಿದ್ದರು. ಈಗ ಅವರ ಪರಿಮಿತಿ ೧೧.೨%ಕ್ಕೆ ಇಳಿದಿದೆ. ಗುಲ್ಬರ್ಗ ಜಿಲ್ಲೆ ಈ ಇಳಿತಕ್ಕೆ ಭಯಾವಹವಾದ ನಿದರ್ಶನ : ೧೯೧೧ರಲ್ಲಿ ಕನ್ನಡವು ಅಲ್ಲಿಯ ಪ್ರಜಾಸಂಖ್ಯೆಯಲ್ಲಿ ೫ರಲ್ಲಿ ೩ರರ ಮಾತೃಭಾಷೆಯಾಗಿತ್ತು; ಅಲ್ಲಿ ಕನ್ನಡಿಗರು ಈಗ ಅರ್ಧಕ್ಕೂ ಕಡಮೆ ಜನ. ರಾಯಚೂರಿನಲ್ಲೂ ಕನ್ನಡಿಗರ ಸಂಖ್ಯೆ ಕಡಮೆಯಾಗುತ್ತಿದೆ. ಇಲ್ಲಿಯ ಜನರಲ್ಲಿ ಹಲವರು ಜಿಲ್ಲೆಗಳಿಗೆ ಹೋಗಿ ನೆಲಸುತ್ತಿದ್ದಾರೆ.

೬. ಉದಾಹರಣೆಗೆ, ಈ ಪ್ರಾಂತದ ಹಳ್ಳಿಗಳಲ್ಲಿ ಕನ್ನಡವೇ ಜನದ ಮಾತಾಗಿದ್ದರೂ ರೈಲ್ವೆ ಸ್ಟೇಷನ್ನುಗಳಲ್ಲಿ ಊರಿನ ಹೆಸರನ್ನು ಕೂಡ ತೆಲುಗಿನಲ್ಲಿಯೇ ಬರೆದಿರುತ್ತಾರೆ. ಬಳ್ಳಾರಿಯ ಪಟ್ಟಣದಲ್ಲಿ ಕನ್ನಡ ಅಕ್ಷರದಲ್ಲಿ ಬರೆದಿರುವ ಪ್ರಕಟನೆಯ ಹಲಗೆಯನ್ನು ಕಾಣುವುದೇ ದುರ್ಲಭ.

ಇದಕ್ಕೆ ಕಾರಣ. ಬಳ್ಳಾರಿಯಲ್ಲೂ ಅನಂತಪುರದ ಕನ್ನಡ ಭಾಗಗಳಲ್ಲೂ ಕನ್ನಡವು ತಲೆಯೆತ್ತುವ ಚಿಹ್ನೆಗಳು ಈಚೀಚೆಗೆ ಕಾಣುತ್ತಿವೆ. ಆದರೆ ತಮಿಳಿನ ಪ್ರಾಬಲ್ಯವಿರುವ ಕೊಯಿಮತ್ತೂರು, ಸೇಲಂ ಮೊದಲಾದ ಜಿಲ್ಲೆಗಳಲ್ಲಿ ಹೇಗೆ ಪರಿಣಮಿಸುತ್ತದೆಯೋ ಹೇಳುವುದು ಕಷ್ಟ.

ಈ ದಕ್ಷಿಣ ಕರ್ಣಾಟಕದ ವಿಷಯಕ್ಕೆ ಬರುವ ಮೊದಲು ಭಾಷಾಸಮಸ್ಯೆಯೊಂದರ ವಿಚಾರವಾಗಿ ಕೆಲವು ಅಂಶಗಳನ್ನು ಗಮನಿಸಬೇಕಾಗಿದೆ. ಎರಡು ಭಾಷೆಗಳು ಸಂಧಿಸಿದ ಕಡೆಗಳಲ್ಲೆಲ್ಲಾ ಜನರು ತಮ್ಮ ಮಾತೃಭಾಷೆಯೊಂದಿಗೆ ಇನ್ನೊಂದು ಭಾಷೆಯನ್ನೂ ಕಲಿತು ಬಳಕೆಯಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ದ್ವಿಭಾಷಿತ್ವವು ಹಲವು ರೀತಿಗಳಲ್ಲಿ ಸಂಭವಿಸಬಹುದು. ಉದಾಹರಣೆಗೆ, ಒಂದು ಭಾಷೆಯ ಜನರು ಅನ್ಯದೇಶಕ್ಕೆ ಜೀವನೋಪಾಯಕ್ಕಾಗಿಯೋ ಮತಸ್ವಾತಂತ್ರ್ಯಕ್ಕಾಗಿಯೋ ಬೇರೆ ಕಾರಣಕ್ಕಾಗಿಯೋ ಹೋಗಿ ನೆಲಸಿದರೆ ತಮ್ಮ ಭಾಷೆಯ ಜೊತೆಗೆ ಅಲ್ಲಿಯ ಭಾಷೆಯನ್ನೂ ಕಲಿಯ ಬೇಕಾಗುತ್ತದೆ. "ಸ್ವಭಾಷೆಯನ್ನು ಕಳೆದುಕೊಳ್ಳುವುದಕ್ಕೆ ದ್ವಿಭಾಷಿತ್ವವು ಮೊದಲನೆಯ ಮೆಟ್ಟಲು." ಹೀಗೆ ಪ್ರವಾಸಿಗಳಾದವರ ಸಂತತಿಯವರು ಎರಡು-ಮೂರು ತಲೆಮೊರೆಗಳಲ್ಲಿ ತಮ್ಮ ಮೂಲಭಾಷೆಯನ್ನು ಮರೆತು ದೇಶಭಾಷೆಯನ್ನೇ ತಮ್ಮದಾಗಿ ಅಂಗೀಕರಿಸುವ ಸಂಭವಗಳು ಹೆಚ್ಚು. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಇದು ದಿನದಿನವೂ ನಡೆಯುತ್ತಿದೆ. ಇಟಲಿ, ಜರ್ಮನಿ ಮೊದಲಾದ ದೇಶಗಳಿಂದ ಬಂದು ಅಲ್ಲಿ ನೆಲಸಿದವರ ಮಕ್ಕಳು ಮೊಮ್ಮಕ್ಕಳು ಇಂಗ್ಲಿಷನ್ನೇ ಮನೆಯಲ್ಲೂ ಆಡಲು ತೊಡಗುತ್ತಾರೆ. ನಮ್ಮ ದೇಶದಲ್ಲಿ ಭಾಷೆ ಇಷ್ಟು ಶೀಘ್ರವಾಗಿ ಬಿಟ್ಟುಹೋಗುವುದಿಲ್ಲ. ಆದರೂ ಅದು ಹೆಚ್ಚು ಬಳಕೆಯಲ್ಲಿ ನಿಲ್ಲಲಾರದೆನ್ನುವುದಕ್ಕೆ ಮೈಸೂರಿನ ಶ್ರೀವೈಷ್ಣವರೂ ಸಂಕೇತಿಗಳೂ ಸಾಕ್ಷಿ. ಇವರ ಮನೆಮಾತು ಹೆಸರಿಗೆ ತಮಿಳು ಅಥವಾ ಅದರ ಅಪಭ್ರಂಶ. ಮನೆಯಲ್ಲಿ ಕೂಡ ತಾಯಿಯೊಂದಿಗೆ ತಮಿಳನ್ನೂ ತಂದೆಯೊಂದಿಗೆ ಕನ್ನಡವನ್ನೂ ಆಡುವವರುಂಟು. ಹೊರಗಿನ ಎಲ್ಲ ವ್ಯವಹಾರಕ್ಕೂ ಗ್ರಂಥರಚನೆ ಮೊದಲಾದುವುಗಳಿಗೂ ಇವರು ಕನ್ನಡವನ್ನೇ—ಇಂಗ್ಲಿಷಿನ ಆವಶ್ಯಕತೆಯಿಲ್ಲದ ಕಡೆಗಳಲ್ಲೆಲ್ಲಾ—ಉಪಯೋಗಿಸುತ್ತಾರೆ. ನಿಜವಾಗಿ ಇವರಿಗೆ ಕನ್ನಡವೇ ಸ್ವಭಾಷೆ. ಹೀಗಾಗುವುದು ಅನಿವಾರ್ಯ. ಈ ಬಗೆಯ ದ್ವಿಭಾಷಿತ್ವವು ಒಂದು ಭಾಷೆಯ ಸಂಖ್ಯಾಬಲ ಕುಗ್ಗುವುದಕ್ಕೆ ಕಾರಣವಾದರೂ ಕನ್ನಡದ ವಿಷಯಕ್ಕೆ ಅದು ಹೆಚ್ಚಾಗಿ ಅನ್ವಯಿಸುವುದಿಲ್ಲ. ಏಕೆಂದರೆ, ಜೀವನೋಪಾಯಕ್ಕಾಗಿ ಗುಂಪು ಕಟ್ಟಿಕೊಂಡು ದೇಶವನ್ನು ದಾಟಿಹೋಗುವ ದಾಕ್ಷಿಕ ಕನ್ನಡಿಗನಿಗೆ ಅತ್ಯಲ್ಪ. ಅವನು ಎಷ್ಟು ಕಷ್ಟ ಬಂದರೂ ಹುಟ್ಟಿದ ನೆಲವನ್ನು ಬಿಡದೆ, ಅಪ್ಪ ಹಾಕಿದ ಆಲದ ಮರವನ್ನೇ ನೆಚ್ಚತಕ್ಕವನು. ಆದ್ದರಿಂದ ಕನ್ನಡಿಗರ ಸಂಖ್ಯೆ ಈ ರೀತಿ ಚೆದರಿರತಕ್ಕ ಸಂಭವ ಕಡಮೆ.

ದ್ವಿಭಾಷಿತ್ವಕ್ಕೆ ಇನ್ನೊಂದು ಮುಖ್ಯ ಕಾರಣ ಪರಭಾಷೆಯವರ ಆಧಿಪತ್ಯ. ಸೋತ ನಾಡಿನವರು ತಮ್ಮ ದಣಿಗಳ ಪ್ರಭುತ್ವದ ಜೊತೆಗೆ ಅವರ ಭಾಷೆಯನ್ನೂ ಎಷ್ಟೋ

ಸಲ ಅಂಗೀಕರಿಸಬೇಕಾಗುತ್ತದೆ. ಹೀಗಾಗಿ ಸ್ವಭಾಷೆ ಮೂಲೆಗೆ ಬೀಳಬಹುದು. ಹೈದರಾಬಾದಿನಲ್ಲಿ ನಮ್ಮ ಕಣ್ಣೆದುರಿಗೇ ಉರ್ದುವಿನ ಪ್ರಾಬಲ್ಯ ಈ ರೀತಿ ಬೆಳೆಯುತ್ತಿದೆ. ಆದರೆ ಹಿಂದುಗಳು ಕನ್ನಡವನ್ನು ಪೂರ್ಣವಾಗಿ ಕೈಬಿಟ್ಟು ಉರ್ದುವನ್ನು ಮಾತೃಭಾಷೆಯಾಗಿ ಸ್ವೀಕರಿಸುವ ಸಂಭವವು ಅಲ್ಪವಾದ್ದರಿಂದ, ಈ ವಿಷಯವನ್ನು ಬಿಟ್ಟು ದ್ವಿಭಾಷಿತ್ವದ ಮತ್ತೊಂದು ಮುಖ್ಯ ಕಾರಣದ ಕಡೆಗೆ ತಿರುಗಬಹುದು.

ಇದು ಗಡಿನಾಡುಗಳ ಸಮಸ್ಯೆ. ಎರಡು ಭಾಷೆಗಳು ಒಂದನ್ನೊಂದು ಸಂಧಿಸುವ ಕಡೆಗಳಲ್ಲಿ ಒಂದು ಗೆರೆಯೆಳೆದು ಎರಡರ ಎಲ್ಲೆಗಳನ್ನೂ ಪ್ರತ್ಯೇಕಿಸುವುದು ಸಾಧ್ಯವಲ್ಲ. ಈ ಭಾಷೆಗಳು ಒಂದರೊಡನೊಂದು ಬಲೆಯಂತೆ ಹೆಣೆದುಕೊಂಡಿರುತ್ತವೆ. ಗಡಿನಾಡಿನ ಒಂದು ಹಳ್ಳಿಯಲ್ಲಿ ಈ ಭಾಷೆಯವರೂ ಆ ಭಾಷೆಯವರೂ ಸಮಾನ ಸಂಖ್ಯೆಯಲ್ಲಿ ಸಿಕ್ಕಬಹುದು. ಅಲ್ಲಿಂದ ಮೇಲಕ್ಕೆ ಹೋದ ಹಾಗೆ ಈ ಭಾಷೆಯವರ ಸಂಖ್ಯೆ ಇಳಿಯುತ್ತಾ ಆ ಭಾಷೆಯವರದು ಏರುತ್ತಾ ಹೋಗುತ್ತದೆ. ಹೀಗೆ ಒಬ್ಬರೊಡನೊಬ್ಬರಿಗೆ ವಿಶೇಷ ಸಂಪರ್ಕವಿರುವುದರಿಂದ ಗಡಿಯಲ್ಲಿ ಎರಡು ಭಾಷೆಯವರೂ ಸಾಮಾನ್ಯವಾಗಿ ದ್ವಿಭಾಷಿಗಳಾಗಿರುತ್ತಾರೆ. ಇಂಥ ಪ್ರದೇಶಗಳಲ್ಲಿ ರಾಜಕೀಯ ಅಥವಾ ಸಾಮಾಜಿಕ ಕಾರಣಗಳಿಂದ ಒಂದು ಭಾಷೆ ಪ್ರಾಬಲ್ಯಕ್ಕೆ ಬಂದರೆ, ಅದನ್ನು ಆಡುವವರಿಗೆ ಹೆಚ್ಚು ಪುರಸ್ಕಾರವೂ ಕಲಿಯುವವರಿಗೆ ಉತ್ತೇಜನವೂ ದೊರೆತರೆ, ಕೆಳಗಿನ ಭಾಷೆ ಹೇಗೆ ಕೃಶವಾಗುತ್ತದೆಂಬುದನ್ನು ಸುಲಭವಾಗಿ ಊಹಿಸಬಹುದು. ಇಂಥ ಸಂದರ್ಭಗಳಲ್ಲಿ ಕೆಳಗಿನ ಭಾಷೆಯವರಿಗೆ ತಮ್ಮ ಭಾಷೆ ಕೀಳೆಂಬ ಅಭಿಪ್ರಾಯವೂ ಎಷ್ಟೋ ಸಲ ಹುಟ್ಟುತ್ತದೆ. ಆಗ ಅವರು ತಮ್ಮ ಮಾತೃಭಾಷೆಯನ್ನು ಕಡೆಗಣಿಸಿ ಅಥವಾ ಕೈಬಿಟ್ಟು ಪ್ರಬಲವಾದ ಮೇಲಿನ ಭಾಷೆಯನ್ನೇ ಮನೆಯಲ್ಲೂ ಉಪಯೋಗಿಸುವ ಸಂಭವವುಂಟು. ಹೀಗೆ ಕಾಲಾನುಕಾಲಕ್ಕೆ ಅವರು ಮೇಲಿನ ಭಾಷೆಗೇ ಸೇರಿಹೋಗುತ್ತಾರೆ. ಮಧ್ಯಪ್ರಾಂತಗಳಲ್ಲಿ ಗೊಂಡಿ ಎಂಬ ದ್ರಾವಿಡ ಭಾಷೆಯ ಪರಿಸ್ಥಿತಿ ಈಗ ಇಲ್ಲಿಗೆ ಇಳಿಯುತ್ತಿದೆ. ಗೊಂಡರಲ್ಲಿ ಗಂಡಸರು ಕೋರ್ಟು ಕಛೇರಿಗಳಿಗೆ ಹೋದಾಗ—ತಮ್ಮ ಭಾಷೆ ಹಳಬಿ (ಇದು ಮರಾಠಿಯ ಒಂದು ಉಪಭಾಷೆ), ತಮಗೆ ಗೊಂಡಿ ಬರುವುದೇ ಇಲ್ಲ ಎಂದು ಹೇಳುತ್ತಾರಂತೆ. ಆದರೆ ಅಲ್ಲಿಗೆ ಸಾಕ್ಷಿ ಹೇಳುವುದಕ್ಕಾಗಿ ಅವರ ತಾಯಂದಿರೂ ಹೆಂಡಿರೂ ಬಂದು ಗೊಂಡಿಯಲ್ಲೇ ಮಾತಾಡುತ್ತಾರೆ. ಇದು ಹೇಗೆ ಎಂದು ಕೋರ್ಟಿನವರು ಕೇಳಿದಾಗ ಗೊಂಡ ಗಂಡಸರು 'ಮನೆಯಲ್ಲಿ ಮಾತ್ರ ಗೊಂಡಿಯನ್ನಾಡುವುದುಂಟು' ಎಂದು ಉತ್ತರ ಕೊಡುತ್ತಾರಂತೆ. ತಮಗೆ ಗೊಂಡಿ ಬರುತ್ತದೆ ಎಂದು ಹೇಳಿಕೊಳ್ಳುವುದಕ್ಕೇ ಅವರಿಗೆ ನಾಚಿಕೆ. ಗಡಿನಾಡುಗಳಲ್ಲಿ ಕನ್ನಡಕ್ಕೆ ಇಷ್ಟು ದುರವಸ್ಥೆ ಯಾವಾಗಲೂ ತಟ್ಟಿರಲಾರದು. ಆದರೆ ಮರಾಠಾ ರಾಜ್ಯಗಳ ಪ್ರಾಬಲ್ಯದ ಕಾಲದಲ್ಲಿ ಮರಾಠಿಯ ಹೊಡೆತಕ್ಕೆ ಸಿಕ್ಕಿ ಕನ್ನಡದ ಗಡಿ ಬಲುಮಟ್ಟಿಗೆ ಹಿಮ್ಮೆಟ್ಟಿರುವುದರಲ್ಲಿ ಸಂಶಯವಿಲ್ಲ. ಕೊಲ್ಲಾಪುರ, ಸೊಲ್ಲಾಪುರ ಮೊದಲಾದ ಪ್ರದೇಶಗಳಲ್ಲಿ ಕನ್ನಡಿಗರ ಸಂಖ್ಯೆ ತುಂಬ ಕುಗ್ಗಿರುವುದಕ್ಕೆ ಇದೇ ಕಾರಣವಾಗಿರಬೇಕು. ಹಿಂದೆ ಗೋದಾವರಿಯನ್ನು ಮುಟ್ಟಿದ್ದ ಭಾಷೆ ಈಗ ಕೃಷ್ಣಾನದಿಯ ಹತ್ತಿರಕ್ಕೆ ಅರ್ಧದಾರಿ ಇಳಿದು ಬಂದಿದೆ.

ಈಗಲೇನೋ ಉತ್ತರ ಕರ್ಣಾಟಕದ ಎಲ್ಲೆ ಒಂದು ನಿಲುಗಡೆ ಬರುತ್ತಿದೆ. ಆದರೆ ಪೂರ್ವ ದಕ್ಷಿಣ ಕರ್ಣಾಟಕಗಳ ರೀತಿ ಹಾಗಿಲ್ಲ. ಒಂದು ಕೋಟಿ ಹನ್ನೆರಡು ಲಕ್ಷ ಮಂದಿ ಕನ್ನಡಿಗರಲ್ಲಿ ಸುಮಾರು ಹದಿಮೂರು ಲಕ್ಷದ ಎಪ್ಪತ್ತೆಂಟು ಸಾವಿರ ಮಂದಿ (ಸುಮಾರು ೧೨%) ದ್ವಿಭಾಷಿಗಳು. ಇವರಲ್ಲಿ (ಕನ್ನಡದ ಜೊತೆಗೆ) ತೆಲುಗನ್ನು ಬಲ್ಲವರ ಸಂಖ್ಯೆ ಸುಮಾರು ೪,೮೭,೦೦೦; ತಮಿಳನ್ನು ಬಲ್ಲವರ ಸಂಖ್ಯೆ ಸುಮಾರು ೮,೬೩,೦೦೦. ಇನ್ನು ಕೆಲವು ತಲೆಮೊರೆಗಳೊಳಗೆ ಇವರಲ್ಲಿ ಎಷ್ಟು ಮಂದಿಯ ಮಾತೃಭಾಷೆ ಕನ್ನಡದಿಂದ ತೆಲುಗು ತಮಿಳುಗಳಿಗೆ ತಿರುಗಿಬಿಡುತ್ತದೆಯೋ! ಒಂದು ವೇಳೆ ಕನ್ನಡವು ಹೆಸರಿಗೆ ಮಾತೃಭಾಷೆಯಾಗಿ ಉಳಿದಿದ್ದರೂ ದಿನಚರ್ಯೆಯ ವ್ಯವಹಾರಗಳಲ್ಲೂ ವಿದ್ಯಾಭ್ಯಾಸದಲ್ಲೂ ಅದಕ್ಕೆ ಸ್ಥಾನವು ತಪ್ಪಿದ ಬಳಿಕ ಅದು ಅಳಿದಂತೆಯೇ ಸರಿ. (ಒಂದು ಜನದ ಪಾಲಿಗೆ ಭಾಷೆ ಜೀವಿಸಿರಬೇಕಾದರೆ, ಆ ಭಾಷೆಯ ಮೂಲಕ ಅವರಿಗೆ ಸಂಸ್ಕೃತಿ ಒದಗಬೇಕು; ಅವರ ಜೀವನದ ಸತ್ತ್ವ ಅದರಲ್ಲಿ ಪ್ರತಿಬಿಂಬಿತವಾಗಬೇಕು.) ಈ ವಿಷಯದಲ್ಲಿ ಕನ್ನಡಕ್ಕೆ ತೆಲುಗಿಗಿಂತಲೂ ತಮಿಳಿನ ಭಯ ಹೆಚ್ಚು. ಏಕೆಂದರೆ, ಆಂಧ್ರಪ್ರದೇಶದ ಅಂಚಿನಲ್ಲಿ ಕನ್ನಡದ ಭಾಗವು ಉಂಡೆಯಾಗಿದೆ; ಅಲ್ಲದೆ ಅಲ್ಲಿಯ ಕನ್ನಡಿಗರು ಎಚ್ಚತ್ತುಕೊಳ್ಳುತ್ತಲೂ ಇದ್ದಾರೆ. ತಮಿಳುನಾಡಿನ ನೆರೆಯಲ್ಲಾದರೆ ಈ ಶೋಚನೀಯ ಪರಿಸ್ಥಿತಿಯಿದೆ ಎಂಬುದರ ಕಡೆಗೇ ನಮ್ಮ ಗಮನವು ಇನ್ನೂ ತಿರುಗಿಲ್ಲ. ಸಾಲದ್ದಕ್ಕೆ ತಮಿಳು ಜಿಲ್ಲೆಗಳಲ್ಲಿ ಕನ್ನಡವು ಅಲ್ಲಷ್ಟು ಇಲ್ಲಷ್ಟು ವಿಭಾಗವಾಗಿ ಒಂದು ಕಡೆಯೂ ಒಟ್ಟುಗೂಡದಿರುವುದರಿಂದ ಅಲ್ಲಿಯ ಕನ್ನಡಿಗರು ಒಗ್ಗಟ್ಟಾಗುವುದಕ್ಕೆ ಮಾರ್ಗವಿಲ್ಲ. ತಮಿಳು ಭಾಷೆಯನ್ನೇ ತಮ್ಮ ರಾಜಕೀಯ ಸಾಮಾಜಿಕ ವ್ಯವಹಾರಗಳಿಗೆಲ್ಲ ಅವರು ಉಪಯೋಗಿಸಬೇಕಾಗಿದೆ. ಮಧುರೆಯಲ್ಲಿರುವ ಒಂದು ಲಕ್ಷದ ಮೂವತ್ತೆಂಟು ಸಾವಿರ ಕನ್ನಡಿಗರಲ್ಲಿ ಒಂದು ಲಕ್ಷದ ಹದಿನೇಳು ಸಾವಿರ ಜನಕ್ಕೆ ತಮಿಳು ದ್ವಿತೀಯ ಭಾಷೆ. ತಿರುಚಿನಾಪಳ್ಳಿಯ ಕನ್ನಡಿಗರಲ್ಲಿ ಹೆಚ್ಚು ಕಡಮೆ ಎಲ್ಲರೂ ತಮಿಳನ್ನು ಬಲ್ಲವರು. ಕನ್ನಡದ ಈ ನಡುಗಡ್ಡೆಗಳು ತಮಿಳಿನ ಸಮುದ್ರದೊಳಗೆ ಇಂದಲ್ಲ ನಾಳೆ ಕರಗಿಹೋಗುವುದು ಖಂಡಿತ. ಕೊಯಿಮತ್ತೂರು, ಸೇಲಂ ಜಿಲ್ಲೆಗಳಲ್ಲಿ ಕೂಡ ಕನ್ನಡದ ಗತಿ ಏನಾಗುತ್ತದೆಯೋ!

ಈ ದುಸ್ಥಿತಿಯ ಕಡೆಗೆ ಭಾಷಾಭಿಮಾನಿಗಳ ದೃಷ್ಟಿ ಅಗತ್ಯವಾಗಿ ಹರಿಯಬೇಕು. ಈ ಪ್ರಾಂತಗಳ ಕನ್ನಡಿಗರಲ್ಲಿ ಮೊದಲು ಜಾಗ್ರತಿಯನ್ನು ಹುಟ್ಟಿಸುವ ಪ್ರಯತ್ನಗಳು ನಡೆಯಬೇಕು. ಕನ್ನಡದ ಮಧ್ಯರಾಷ್ಟ್ರದ ಹಳ್ಳಿಹಳ್ಳಿಯಲ್ಲೂ ಕರ್ಣಾಟಕ ಸಂಘಗಳು ಈಗ ಹುಟ್ಟುತ್ತವೆ. ಪುಣೆ, ಕಾಶಿ ಮೊದಲಾದ ಹೊರನಾಡಿನ ಪ್ರದೇಶಗಳಲ್ಲಿ ಕೂಡ, ನಾಲ್ಕು ಜನ ಕನ್ನಡಿಗರು ಸೇರಿದ ಕಡೆ, ಕರ್ಣಾಟಕ ಸಂಘಗಳು ಕೆಲಸ ಮಾಡುತ್ತಿವೆ. ಆದರೆ ಕೊಳ್ಳೇಗಾಲದಲ್ಲಾಗಲಿ, ಹೊಸೂರಿನಲ್ಲಾಗಲಿ ಕರ್ಣಾಟಕ ಸಂಘಗಳು ಕೆಲಸ ಮಾಡುತ್ತಿರುವ ಸುದ್ದಿ ಇನ್ನೂ ಬಂದಿಲ್ಲ. ಒಂದೊಂದು ಕರ್ಣಾಟಕ ಸಂಘವೂ ಕನ್ನಡದ ಒಂದೊಂದು ಜೀವನಾಡಿಯಂತೆ. ಇದರ ಮೇಲೆ ಸಾಹಿತ್ಯ ಸಮ್ಮೇಳನವು ಈ ಪ್ರಾಂತದಲ್ಲೂ ಒಮ್ಮೆ ಏಕೆ ನೆರೆಯಬಾರದು? ಅದರಿಂದ ಕನ್ನಡಿಗರಲ್ಲಿ ಚೈತನ್ಯ

ಎಷ್ಟೋ ಉಕ್ಕಬಹುದು. ಎಲ್ಲಕ್ಕಿಂತ ಮೊದಲು ಈ ಕೆಳನಾಡಿನ ಭಾಷಾಪರಿಸ್ಥಿತಿ ನಮಗೆ ಮನದಟ್ಟಾಗಬೇಕು. ಈಗ ಸೆನ್ಸಸ್ ವರದಿಗಳಿಂದ ದೊರೆಯುವ ಚೂರುಗಳೇ ನಮ್ಮ ಜ್ಞಾನಭಂಡಾರವಾಗಿದೆ. ಈ ಪ್ರಾಂತದಲ್ಲಿ ಕನ್ನಡವನ್ನು ಆಡುವವರು ಆ ಭಾಷೆಯನ್ನು ಎಷ್ಟರ ಮಟ್ಟಿಗೆ ಬಳಕೆಯಲ್ಲಿಟ್ಟುಕೊಂಡಿದ್ದಾರೆ; ಕನ್ನಡದ ನಿಜವಾದ ವ್ಯಾಪ್ತಿ ಎಲ್ಲೆಲ್ಲಿ, ಎಷ್ಟುಮಟ್ಟಿಗೆ—ಈ ಮೊದಲಾದ ಅಂಶಗಳನ್ನೆಲ್ಲಾ ಸಂಗ್ರಹಿಸಬೇಕಾಗಿದೆ. ಇದಕ್ಕಾಗಿ ಕರ್ಣಾಟಕ ಸಾಹಿತ್ಯ ಪರಿಷತ್ತಿನವರು ಒಬ್ಬರನ್ನು ಗೊತ್ತುಮಾಡಿ ಕಳುಹಿಸಿ ಕೊಡಲು ಸಾಧ್ಯವಾದರೆ ದಕ್ಷಿಣ ಕರ್ಣಾಟಕದ ಭಾಷಾಸಮಸ್ಯೆಯ ಸ್ವರೂಪವಾದರೂ ನಮಗೆ ಸರಿಯಾಗಿ ತಿಳಿದೀತು.

ಕನ್ನಡ ಭಾಷೆಯ ವ್ಯಾಪ್ತಿಯನ್ನು ನಿಶ್ಚಿತವಾಗಿ ಅರಿಯುವುದಕ್ಕೆ ಇರುವ ಒಂದು ಕೊರತೆಯನ್ನು ಕೊನೆಯಲ್ಲಿ ಸೂಚಿಸಬೇಕಾಗಿದೆ. ಕರ್ಣಾಟಕ ದೇಶವನ್ನು ನಿರುಕಾಗಿ ವಿವರಗಳೊಡನೆ ತೋರಿಸುವ ಭೂಪಟವೊಂದು ಇ.ಪಿ. ರೈಸ್ ಅವರ *A History of Kanarese Literature* ಎಂಬ ಪುಸ್ತಕದಲ್ಲಿಯೂ 'ಕರ್ಣಾಟಕದ ಕೈಪಿಡಿ'ಯಲ್ಲೂ ಸೇರಿಸಿರುವ ಎರಡು ನಕಾಸೆಗಳು—ಇಷ್ಟು ಈಗ ದೊರೆಯುತ್ತವೆ. ಆದರೆ ಇವುಗಳಲ್ಲಿ ಯಾವುದನ್ನೂ ಸರ್ವಸಮರ್ಪಕವೆಂದು ಕರೆಯುವ ಹಾಗಿಲ್ಲ. ಕರ್ಣಾಟಕದ ಎಲ್ಲೆಯೇ ಮೊದಲು ನಿಶ್ಚಿತವಾಗಿ ನಿರ್ಣಯ ಹೊಂದಿಲ್ಲ. ಈ ಎಲ್ಲೆಯನ್ನು ಗುರುತಿಸುವಾಗ ದ್ವಿಭಾಷಿತ್ವದ ಪ್ರಾಬಲ್ಯವಿರುವ ಪ್ರದೇಶಗಳನ್ನೂ ಅಗತ್ಯವಾಗಿ ತೋರಿಸಬೇಕು; ಇಲ್ಲದಿದ್ದರೆ ಗಡಿನಾಡಿನ ಸ್ವರೂಪವು ಸರಿಯಾಗಿ ಗೊತ್ತಾಗುವುದಿಲ್ಲ. ದೇಶದೊಳಗೆ ಇತರ ಭಾಷೆಗಳ ಪ್ರಾಚುರ್ಯದ ಪರಿಮಾಣವನ್ನು ನಿಷ್ಪಕ್ಷಪಾತವಾಗಿ ತೋರಿಸಬೇಕು. ಇದಕ್ಕೆಲ್ಲಾ ಹಿನ್ನೆಲೆಯಾಗಿ ಹಿಂದೆ ಕನ್ನಡಕ್ಕಿದ್ದ ವ್ಯಾಪ್ತಿಯನ್ನು ಕಾಣಿಸಬಹುದು. ಇಷ್ಟರ ಜೊತೆಗೆ ಕನ್ನಡದ ಪ್ರಾಂತೀಯ ವೈಲಕ್ಷಣ್ಯಗಳನ್ನು ವಿಭಾಗಿಸುವುದು ಸಾಧ್ಯವಾದರೆ ಭಾಷಾ ವ್ಯಾಸಂಗಿಗಳಿಗೆ ತುಂಬ ಉಪಕಾರವಾಗುತ್ತದೆ.

●

ಭಾಷೆಗಳು*

ಮೈಸೂರು ರಾಜ್ಯ ೧೯೫೬ ರಲ್ಲಿ ಅಸ್ತಿತ್ವಕ್ಕೆ ಬಂತು. ಕನ್ನಡವೇ ಪ್ರಧಾನವಾಗಿ ಆಡುನುಡಿಯಾಗಿರುವ ಎಲ್ಲ ಭಾಗಗಳೂ ಹೆಚ್ಚು ಕಡಮೆ ಮೈಸೂರು ರಾಜ್ಯದಲ್ಲಿ ಸೇರಿವೆ. ಆದುದರಿಂದ ರಾಜ್ಯದ ಈಗಿನ ಗಡಿಗಳು ಇಂದಿನ ಕರ್ಣಾಟಕದ ಗಡಿಗಳು ಎಂದು ಹೇಳಬಹುದು. ಕನ್ನಡ ಆಡುನುಡಿಯಾಗಿರುವ ಕೆಲವು ನೆರೆ ಪ್ರದೇಶಗಳು ಈ ಗಡಿಯ ಆಚೆಗೆ ಉಳಿದಿವೆ ಎಂಬುದು ನಿಜ. ಆದರೆ ರಾಜ್ಯದ ಈಗಿನ ಗಡಿಯೊಳಗಿರುವ ಕೆಲವು ಪ್ರದೇಶಗಳ ಬಗ್ಗೆ ಅನ್ಯ ಭಾಷೆಗಳ ಪರವಾಗಿಯೂ (ವಿಶೇಷವಾಗಿ ಮರಾಠಿ ತೆಲುಗುಗಳ ಪರವಾಗಿ) ಇಂಥದೇ ನ್ಯಾಯದ ಮಾತು ಎದ್ದಿದೆ. ಅನೇಕ ಭಾಷೆಗಳಿರುವ ಭಾರತದಂಥ ವಿಶಾಲ ರಾಷ್ಟ್ರದಲ್ಲಿ ಇಂಥ ಪರಿಸ್ಥಿತಿ ತೀರ ಅನಿವಾರ್ಯವಾದುದು. ಭಾವೇತರವಾದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆಯೇ ಪ್ರಾಂತ್ಯ ನಿರ್ಮಾಣಮಾಡಿದರೂ ಭಾಷೆಯ ಗಡಿಗಳನ್ನು ಅಡ್ಡಹಾಯುವ ದ್ವಿಭಾಷಾ ಪ್ರದೇಶಗಳು ಇದ್ದೇ ಇರುತ್ತವೆ.

ಭಾಷಾವಾರು ಪ್ರಾಂತ್ಯ ಯೋಜನೆಯ ಪ್ರಕಾರ ರಚಿತವಾದ ಮೈಸೂರು ರಾಜ್ಯದಲ್ಲಿ ಸುಮಾರು ೧೭೦ ಭಾಷೆಗಳಿರುವುದಾಗಿ ೧೯೬೧ರ ಭಾರತೀಯ ಜನಗಣತಿ ತಿಳಿಸುತ್ತದೆ. ಈ ಭಾಷೆಗಳನ್ನು ಆಡುವ

* ಕರ್ಣಾಟಕ ಪರಂಪರೆ, ಸಂಪುಟ–೧, ೧೯೭೦

ಜನರೇ ಅವುಗಳ ಹೆಸರುಗಳನ್ನು ತಿಳಿಸಿದ್ದಾರೆ. ಜನಗಣತಿಯಲ್ಲಿರುವ ಪ್ರಾದೇಶಿಕ ಭಾಷೆಗಳ ಪಟ್ಟಿಯಲ್ಲಿ 'ಬುಡುಬುಡಿಕೆ', 'ಉಡುಪಿ' ಇಂಥ ಹೆಸರುಗಳೆಲ್ಲ ಸೇರಿವೆ. ಇವೆರಡೂ ಕ್ರಮವಾಗಿ ಕನ್ನಡ ಮತ್ತು ತುಳು ಭಾಷೆಗಳ ಬೇರೆ ಬೇರೆ ಭೇದಗಳೇ ಹೊರತು ಸ್ವತಂತ್ರಭಾಷೆಗಳಲ್ಲ. ವಿಭಾರತೀಯ (Non-Indian) ಭಾಷೆಗಳಾದ ಬರ್ಮೀಸ್, ಜೆಕ್, ಹೀಬ್ರೂ, ಟರ್ಕಿಷ್ ಮತ್ತು ಯುಗೋಸ್ಲಾವಿಯನ್ ಭಾಷೆಗಳೂ ಅದರಲ್ಲಿ ತಪ್ಪಾಗಿ ಸೇರಿಬಿಟ್ಟಿವೆ. ಈ ಭಾಷಾಸಮೂಹದಲ್ಲಿ ನಮ್ಮ ದೃಷ್ಟಿಯಿಂದ ಮುಖ್ಯವೆನಿಸುವ ಹನ್ನೊಂದು ಭಾಷೆಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು. ಇವುಗಳಲ್ಲಿ ಒಂದೊಂದು ಭಾಷೆಯನ್ನೂ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಜನರು ಆಡುತ್ತಾರೆ. ಕೆಲವು ಭಾಷೆಗಳಲ್ಲಿಯಂತೂ ಆಡುವವರ ಸಂಖ್ಯೆ ಅನೇಕ ಲಕ್ಷಗಳಿಗೆ ಮೀರುತ್ತದೆ.

೧೯೬೧ರ ಜನಗಣತಿಯ ಪ್ರಕಾರ ಮೈಸೂರು ರಾಜ್ಯದ ಒಟ್ಟು ಜನಸಂಖ್ಯೆ ೨,೩೫,೮೬,೭೭೨. ಕೆಳಗೆ ಕೆಲವು ಭಾಷೆಗಳ ಹೆಸರುಗಳನ್ನೂ ಅವುಗಳನ್ನು ಮಾತನಾಡುವ ಜನರ ಸಂಖ್ಯೆಯನ್ನೂ ತೋರಿಸಿದೆ.

ಭಾಷೆ	ಮಾತನಾಡುವ ಜನರ ಸಂಖ್ಯೆ
ಕನ್ನಡ	೧,೫೩,೭೧,೭೫೩
ತೆಲುಗು	೨೦,೪೭,೩೭೯
ಉರ್ದು	೨೦,೩೪,೪೮೨
ಮರಾಠಿ	೧೦,೫೬,೪೯೮
ತಮಿಳು	೮,೫೪,೨೨೭
ತುಳು	೮,೫೦,೪೭೪
ಕೊಂಕಣಿ	೪,೯೧,೫೩೫
ಮಲಯಾಳಂ	೨,೯೦,೫೮೬
ಬಂಜಾರಿ	೨,೮೮,೦೧೨
ಹಿಂದಿ-ಹಿಂದೂಸ್ಥಾನಿ	೯೩,೮೩೦
ಕೊಡಗು	೭೮,೧೯೨

ಇವುಗಳಲ್ಲಿ ಕನ್ನಡ, ತುಳು ಮತ್ತು ಕೊಡಗು ಭಾಷೆಗಳು—ಮೂರೂ ದ್ರಾವಿಡ ಭಾಷಾವಂಶಕ್ಕೇ ಸೇರಿದ ಭಾಷೆಗಳಾಗಿದ್ದು—ರಾಜ್ಯದಲ್ಲಿ ಹೆಚ್ಚು ವ್ಯಾಪಕವಾಗಿ ಬಳಕೆಯಲ್ಲಿವೆ. ಆಗಲೇ ತಿಳಿಸಿದಂತೆ ಈ ಭಾಷೆಗಳನ್ನಾಡುವ ಜನರು ಮೈಸೂರು ರಾಜ್ಯದ ಹೊರಭಾಗದಲ್ಲಿಯೂ (ವಿಶೇಷವಾಗಿ ಮದರಾಸು, ಆಂಧ್ರಪ್ರದೇಶ, ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿಪ್ರದೇಶಗಳಲ್ಲಿ) ಇದ್ದಾರೆ. ಆದರೆ ಮೈಸೂರಿನಲ್ಲಿ ಇರುವವರ ಸಂಖ್ಯೆಗೆ ಹೋಲಿಸಿದರೆ ಅವರ ಸಂಖ್ಯೆ ಹೆಚ್ಚಿನದೇನಲ್ಲ. ಕನ್ನಡ ಭಾಷೆಯ ವಿಷಯಕ್ಕೆ ಮೈಸೂರಿನ ಅನಂತರ ಮದರಾಸು ರಾಜ್ಯವನ್ನು ಗಣಿಸಬೇಕಾಗುತ್ತದೆ.

ಅಲ್ಲಿ ೯,೪೭,೮೨೮ ಜನ ಕನ್ನಡಿಗರಿದ್ದರೆ—ಅನಂತರದ ಸ್ಥಾನಗಳಿಸುವ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳಲ್ಲಿ ಕ್ರಮವಾಗಿ ೬,೩೩,೨೪೪ ಮತ್ತು ೩,೮೨,೧೪೨ ಜನ ಕನ್ನಡಿಗರಿದ್ದಾರೆ. ಉಳಿದ ರಾಜ್ಯಗಳಲ್ಲಿರುವ ಕನ್ನಡಿಗರ ಸಂಖ್ಯೆ ತೀರ ಅಲ್ಪ. ಭಾರತದಲ್ಲಿ ಕನ್ನಡ ಮಾತನಾಡುವವರ ಒಟ್ಟು ಸಂಖ್ಯೆ ೧,೭೪,೧೫,೮೨೭. ಇವರಲ್ಲಿ ಶೇಕಡ ೮೮.೨ ಈಗಿನ ಮೈಸೂರು ರಾಜ್ಯದಲ್ಲಿಯೇ ಇದ್ದಾರೆ. ಹೊರದೇಶಗಳಲ್ಲಿರುವ ಕನ್ನಡಿಗರ ಸಂಖ್ಯೆ ಎಷ್ಟೆಂದು ತಿಳಿದಿಲ್ಲ.

ಕನ್ನಡದ ವ್ಯಾಪ್ತಿಯನ್ನು ಕುರಿತು ಮಾತನಾಡುವಾಗ ಮದರಾಸು ರಾಜ್ಯಕ್ಕೆ ಸಂಬಂಧಿಸಿದಂತೆ ಒಂದು ಸ್ವಾರಸ್ಯವಾದ ಸಂಗತಿಯನ್ನು ಪ್ರಸ್ತಾವಿಸಬಹುದು. ಕೆಲವು ಶತಮಾನಗಳ ಹಿಂದೆ ಕನ್ನಡದಿಂದ ಬೇರ್ಪಟ್ಟ, ನಿಸ್ಸಂದೇಹವಾಗಿ ಕನ್ನಡದ ಉಪಭಾಷೆಯಾದ ಬಡಗಭಾಷೆಯನ್ನು ಆಡುವ ಜನರು ಹೆಚ್ಚುಕಡಮೆ ಪೂರ್ಣವಾಗಿ ನೀಲಗಿರಿ ಜಿಲ್ಲೆಯಲ್ಲಿಯೇ ಇದ್ದಾರೆ. ಬಡಗಭಾಷೆಯನ್ನಾಡುವ ಒಟ್ಟು ೮೫,೪೬೩ ಜನರಲ್ಲಿ ಮದರಾಸು ರಾಜ್ಯದ ಹೊರಗಿರುವವರು ನೂರಕ್ಕೂ ಕಡಮೆ.

ತುಳು ಮಾತನಾಡುವ ೯,೩೪,೮೪೯ ಜನರಲ್ಲಿ ಶೇಕಡ ಸುಮಾರು ೯೧ರಷ್ಟು ಜನರು ಮೈಸೂರು ರಾಜ್ಯದಲ್ಲಿ, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದ್ದಾರೆ. ೫೮,೨೮೪ ಜನ ತುಳುವರು ಕೇರಳದಿಂದ ವಾಪಸ್ಸಾಗಿದ್ದಾರೆ. ಇವರಲ್ಲಿ ಬಹುಪಾಲು ಜನರು ೧೯೫೬ರಲ್ಲಿ ನಡೆದ ರಾಜ್ಯಪುನರ್ವಿಂಗಡಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಕೇರಳಕ್ಕೆ ಸೇರಿಹೋದ ಕಾಸರಗೋಡು ತಾಲೂಕಿನಲ್ಲಿ ಇದ್ದಾರೆಂದು ಹೇಳಬಹುದು.

ಕೊಡಗು ಭಾಷೆಯನ್ನು ಆಡುವವರ ಬಗ್ಗೆ ಹೇಳುವುದಾದರೆ ಹೊರ ಸಂಸ್ಥಾನಗಳಲ್ಲಿ ನೆಲಸಿರುವ ಎಲ್ಲೋ ಕೆಲವರನ್ನು ಬಿಟ್ಟು ಉಳಿದವರೆಲ್ಲ ಮೈಸೂರುರಾಜ್ಯದ ಕೊಡಗು ಜಿಲ್ಲೆಯಲ್ಲಿಯೇ ಇದ್ದಾರೆ.

ತೆಲುಗು, ತಮಿಳು ಮತ್ತು ಮಲಯಾಳ ಭಾಷೆಗಳು ವಿಶಾಲವಾದ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದು ಅವುಗಳಿಗೆ ಸುದೀರ್ಘವಾದ ಇತಿಹಾಸವಿದೆ. ಕನ್ನಡದಂತೆ ಅವುಗಳೂ ದ್ರಾವಿಡಭಾಷೆಗಳಾಗಿವೆ. ಇವುಗಳು ಮೈಸೂರಿನ ನೆರೆಯಲ್ಲಿರುವ ರಾಜ್ಯಗಳ (ಕ್ರಮವಾಗಿ ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳಗಳ) ಮುಖ್ಯವಾದ ಆಡುನುಡಿಯಾಗಿದ್ದು ಲಕ್ಷಗಟ್ಟಲೆ ಜನರು ಈ ಭಾಷೆಗಳಲ್ಲಿ ಮಾತನಾಡುತ್ತಾರೆ. ಅವರಲ್ಲಿ ಗಮನಾರ್ಹ ಸಂಖ್ಯೆಯ ಜನ ಮೈಸೂರಿನ ಗಡಿಯೊಳಗೂ ವಾಸಿಸುತ್ತಿದ್ದಾರೆ. ಈ ಭಾಷೆಗಳಲ್ಲಿ ತೆಲುಗಿಗೆ ವಿಶಿಷ್ಟಸ್ಥಾನ ಸಲ್ಲುತ್ತದೆ. ಏಕೆಂದರೆ ಅದನ್ನು ಆಡುವ ಜನರು ಶೇಕಡಾ ೯ರಷ್ಟು ಇದ್ದು ಸಂಖ್ಯೆಯಲ್ಲಿ ಕನ್ನಡಿಗರಿಗೆ ಎರಡನೆಯವರಾಗಿದ್ದಾರೆ. ರಾಜ್ಯದ ಪೂರ್ವ ಪ್ರದೇಶಗಳಲ್ಲಿ ತೆಲುಗು ಹೆಚ್ಚು ಬಳಕೆಯಲ್ಲಿದೆ.

ಇಂಡೋ-ಆರ್ಯನ್ ಭಾಷೆಗಳಲ್ಲಿ ಮೊದಲು ನಮ್ಮ ಗಮನ ಸೆಳೆಯುವ ಭಾಷೆಯೆಂದರೆ ಕೊಂಕಣಿ ಭಾಷೆ. ಭಾರತದಲ್ಲಿರುವ ಒಟ್ಟು ೧೩,೫೨,೩೬೩ ಜನ

ಕೊಂಕಣಿ ಮಾತನಾಡುವ ಜನರಲ್ಲಿ ೪,೯೧,೩೫೫ (ಎಂದರೆ ಶೇಕಡ ೩೭.೧ರಷ್ಟು) ಜನರು ಮೈಸೂರು ರಾಜ್ಯದಲ್ಲಿ ಇದ್ದಾರೆ. ಮಹಾರಾಷ್ಟ್ರದಲ್ಲಿ ೨,೧೪,೬೮೬ ಜನರು ಕೊಂಕಣಿಗರಿದ್ದರೆ, ಕೇರಳದಲ್ಲಿ ಇನ್ನೂ ಕಡಮೆ (ಎಂದರೆ ೭೭,೫೯೩) ಜನರಿದ್ದಾರೆ. ಗೋವಾದಲ್ಲಿ ಮಾತ್ರ ೫,೫೬,೫೫೭ ಜನ ಕೊಂಕಣಿಗರಿದ್ದು ಸ್ವಾಭಾವಿಕವಾಗಿಯೇ ಅವರ ಸಂಖ್ಯೆ ಮೈಸೂರಿನ ಕೊಂಕಣಿಗರ ಸಂಖ್ಯೆಯನ್ನು ಮೀರಿಸಿದೆ. ಭಾರತದಲ್ಲಿರುವ ಒಟ್ಟು ಕೊಂಕಣಿಗರ ಸಂಖ್ಯೆಯಲ್ಲಿ (ಗೋವಾದವರನ್ನು ಬಿಟ್ಟು) ಶೇಕಡ ೯ರಷ್ಟು ಜನರು ಕನ್ನಡವನ್ನು ಮರುಭಾಷೆಯಾಗಿ ಬಳಸುತ್ತಿರುವುದಾಗಿ ತಿಳಿಸಿದ್ದಾರೆ. (ಗೋವಾದಲ್ಲಿ ಎರಡೂ ಭಾಷೆಯಾಡುವ ಜನರ ಸಂಖ್ಯೆ ಎಷ್ಟಿದೆಯೆಂಬುದನ್ನು ಸಂಗ್ರಹಿಸಿಲ್ಲ).

ಇದಾದಮೇಲೆ ರಾಜ್ಯದ ಎಲ್ಲೆಡೆಯಲ್ಲಿಯೂ ಹರಡಿದ್ದು ಮೂರನೆಯ ಸ್ಥಾನ ಪಡೆಯುವ ಉರ್ದು ಭಾಷೆಯನ್ನು ಉಲ್ಲೇಖಿಸಬೇಕು. ಹಿಂದೂಸ್ಥಾನಿ ತಮ್ಮ ಮಾತೃಭಾಷೆ ಎಂದು ತಿಳಿಸಿರುವ ಜನರ ಸಂಖ್ಯೆ ಬಹಳ ಸ್ವಲ್ಪ. ಈ ಹಿಂದೂಸ್ಥಾನಿಯು ಉರ್ದು ಮತ್ತು ಹಿಂದಿ ಭಾಷೆಗಳಲ್ಲಿ ಯಾವುದಕ್ಕೆ ಹೆಚ್ಚು ಸಮೀಪವಾದದ್ದು ಎಂಬುದು ಸ್ಪಷ್ಟವಾಗಿಲ್ಲ. ಮೇಲೆ ಮಾಡಿರುವಂತೆ ನಾವು ಅದನ್ನು ಹಿಂದಿಯ ಜೊತೆಗೇ ಸೇರಿಸಿದರೂ ಹಿಂದಿ ಮಾತೃಭಾಷೆಯಾಗಿರುವವರ ಸಂಖ್ಯೆ ಒಂದು ಲಕ್ಷವೂ ಆಗುವುದಿಲ್ಲ.

ರಾಜಾಸ್ಥಾನಿಯ ಉಪಭಾಷೆಗಳಲ್ಲಿ ಒಂದಾದ ಬಂಜಾರಿಯು ಬಹುಮುಖ್ಯವಾದ ಗಿರಿಜನಾಂಗವೊಂದರ ಭಾಷೆಯಾಗಿದೆ. ಭಾರತದಲ್ಲಿರುವ ಬಂಜಾರಿಗಳ ಒಟ್ಟು ಜನಸಂಖ್ಯೆ ೫,೯೨,೬೫೪. ಇದರ ಶೇಕಡ ೪೮.೯ ರಷ್ಟು ಜನರು ಮೈಸೂರಿನಲ್ಲಿಯೇ ಇದ್ದಾರೆ. ಭಾರತದ ಜನಗಣತಿಯು ಲಮಾಣಿ/ಲಂಬಾಡಿಯನ್ನು ರಾಜಾಸ್ಥಾನಿಯ ಇನ್ನೊಂದು ಉಪಭಾಷೆಯೆಂದು ಪಟ್ಟಿಮಾಡಿದೆ. ಮೈಸೂರಿನ ಬಹು ಭಾಗಗಳಲ್ಲಿ ಬಂಜಾರರನ್ನು ಲಂಬಾಣಿಗಳೆಂದೇ ಕರೆಯುತ್ತಾರೆ. ಬಂಜಾರಿ ಮತ್ತು ಲಂಬಾಣಿಗಳೆರಡೂ ವಾಸ್ತವವಾಗಿ ಒಂದೇ ಭಾಷೆಗೆ ಕೊಟ್ಟ ಎರಡು ಹೆಸರುಗಳಾಗಿದ್ದು ಅವುಗಳ ನಡುವೆ ಕೇವಲ ಔಪಭಾಷಿಕ ವ್ಯತ್ಯಾಸಗಳಿರುವಂತೆ ತೋರುತ್ತದೆ. ಲಂಬಾಣಿ ಭಾಷೆ ಮೈಸೂರು ರಾಜ್ಯದಲ್ಲಿ ಇದೆಯೆನ್ನುವ ವಿಷಯ ಜನಗಣತಿಯ ವರದಿಯಲ್ಲಿ ಇಲ್ಲದಿರುವುದು ಲಕ್ಷಿಸಬೇಕಾದ ಸಂಗತಿಯಾಗಿದೆ.

ಮರಾಠಿಯು ತೆಲುಗು ತಮಿಳು ಮತ್ತು ಮಲಯಾಳಂ ಮೊದಲಾದ ದ್ರಾವಿಡ ಭಾಷೆಗಳಂತೆ ಮೈಸೂರು ರಾಜ್ಯದ ಗಣನೀಯ ಗಡಿ ಭಾಗಕ್ಕೆ ಒತ್ತಿನಲ್ಲಿದೆ. ಮೈಸೂರು ರಾಜ್ಯದಲ್ಲಿ ಅದನ್ನು ಆಡುವವರ ಸಂಖ್ಯೆ ಹತ್ತುಲಕ್ಷಕ್ಕಿಂತ ಹೆಚ್ಚಿಗೆ ಇದೆ. ಅದು ಮಹಾರಾಷ್ಟ್ರದ ಮುಖ್ಯ ಭಾಷೆಯಾಗಿದ್ದು ಅನೇಕ ಶತಮಾನಗಳಿಂದಲೂ ಉತ್ತರ ಕರ್ನಾಟಕ ಪ್ರದೇಶದ ಜೊತೆ ಸಾಂಸ್ಕೃತಿಕ ಸಂಪರ್ಕ ಬೆಳಸಿಕೊಂಡಿದೆ.

ಈ ಭಾಗವನ್ನು ಮುಗಿಸುವ ಮುಂಚೆ ಸಂಸ್ಕೃತವನ್ನು ಕುರಿತು ಪ್ರತ್ಯೇಕವಾಗಿ ಹೇಳಬೇಕು. ಸಂಸ್ಕೃತವು ಸಾಮಾನ್ಯ ಜನರ ಆಡುನುಡಿಯ ಸ್ಥಾನದಿಂದ ಸರಿದು ಎರಡು ಸಾವಿರ ವರ್ಷಗಳ ಮೇಲಾಗಿದ್ದರೂ ದ್ರಾವಿಡ ಭಾಷೆಗಳೂ ಸೇರಿ ಭಾರತದ

ಎಲ್ಲ ಭಾಷೆಗಳ ಮೇಲೆ ಅದು ಉದ್ದಕ್ಕೂ ಪ್ರಭಾವ ಬೀರಿಕೊಂಡು ಬಂದಿದೆ. ೧೯೬೧ರ ಜನಗಣತಿಯಲ್ಲಿ ಸಂಸ್ಕೃತಕ್ಕೆ ಸಂಬಂಧಿಸಿದ ಕುತೂಹಲಕರವಾದ ಅಂಶವೊಂದಿದೆ. ಅದೆಂದರೆ ಮೈಸೂರು ರಾಜ್ಯದ ೭೯ ಜನ ಗಂಡಸರು ಮತ್ತು ೪೬ ಜನ ಹೆಂಗಸರು ಸಂಸ್ಕೃತವನ್ನು ತಮ್ಮ ಮಾತೃಭಾಷೆಯೆಂದು ತಿಳಿಸಿದ್ದಾರೆ. ಭಾರತದಲ್ಲಿ ಸಂಸ್ಕೃತವನ್ನು ತಮ್ಮ ಮಾತೃಭಾಷೆಯಾಗಿ ಬರೆಸಿದವರ ಒಟ್ಟು ಸಂಖ್ಯೆ ೨,೫೪೪. ಇವರಲ್ಲಿ ೧೮೪೯ ಜನ ಗಂಡಸರು, ೬೯೫ ಜನ ಹೆಂಗಸರು. ಮೇಲೆ ತಿಳಿಸಿದ ಜನರೆಲ್ಲ ಪರಂಪರಾಗತವಾಗಿ ಬಂದ ಬೇರೆ ಯಾವ ಭಾಷೆಯನ್ನೂ ಮಾತೃಭಾಷೆಯಾಗಿ ಬಳಸದೆ ಸಂಸ್ಕೃತವನ್ನೆ ಆಡುವರೇ ಎಂಬುದು ಪರಿಶೀಲಿಸಿ ತಿಳಿಯಬೇಕಾದ ಅಂಶ.

ಮುಂಡಾ ಅಥವಾ ಟಿಬೆಟೊ—ಬರ್ಮನ್ ಭಾಷಾವರ್ಗಕ್ಕೆ ಸೇರಿದ ಯಾವ ಭಾಷೆಯೂ ಮೈಸೂರಲ್ಲಿ ನೆಲೆಗೊಂಡಿಲ್ಲ. ಈಚೆಗೆ ಕೆಲವು ನೂರುಮಂದಿ ಟಿಬೆಟನ್ನರು ಮೈಸೂರು ಜಿಲ್ಲೆಯಲ್ಲಿ ವಾಸ ನಿಂತಿದ್ದಾರೆ.

೧೮,೨೯೭ ಜನರು ಇಂಗ್ಲಿಷ್ ತಮ್ಮ ಮಾತೃಭಾಷೆಯೆಂದು ತಿಳಿಸಿದ್ದಾರೆ.

೨

ತಮಿಳು, ಮಲಯಾಳಂ, ತೆಲುಗು, ತುಳು, ಕೊಡಗು, ತೊದ, ಗೊಂಡಿ, ಕೋಲಾಮಿ, ಕೂಈ, ಕುರುಖ್, ಮಲ್ತೊ, ಬ್ರಾಹೂಈ ಮತ್ತು ಇತರ ಕೆಲವು ಭಾಷೆಗಳಂತೆ ಕನ್ನಡವೂ ಒಂದು ದ್ರಾವಿಡ ಭಾಷೆ. ಇವುಗಳ ಮೂಲಭಾಷೆಯಾದ ಪೂರ್ವ ದ್ರಾವಿಡಭಾಷೆಯು ಇತಿಹಾಸ ಪೂರ್ವಕಾಲದಲ್ಲಿ, ಅನೇಕ ಸಹಸ್ರ ವರ್ಷಗಳ ಹಿಂದೆ ಹೊರಗಿನಿಂದ ಭಾರತಕ್ಕೆ ಬಂತೆಂದು ಭಾವಿಸಲಾಗಿದೆ. ಕೆಲವರು ವಿದ್ವಾಂಸರು ಸಿಂಧೂ ಸಂಸ್ಕೃತಿಯ ಭಾಷೆಯೂ ಒಂದು ಬಗೆಯ ದ್ರಾವಿಡಭಾಷೆಯಾಗಿತ್ತೆಂದು ಅಭಿಪ್ರಾಯಪಡುತ್ತಾರೆ. ಆದರೆ ಸಿಂಧೂಲಿಪಿಯನ್ನು ತೃಪ್ತಿಕರವಾಗಿ ಓದುವವರೆಗೆ ಈ ಬಗ್ಗೆ ನಿಶ್ಚಿತವಾಗಿ ಏನನ್ನೂ ಹೇಳುವಂತಿಲ್ಲ. ಈಗ ಪಾಕಿಸ್ಥಾನದಲ್ಲಿರುವ ಬ್ರಾಹೂಈ ಭಾಷೆಯೂ ಸೇರಿ ಎಲ್ಲ ದ್ರಾವಿಡ ಭಾಷೆಗಳೂ ಭಾರತದಲ್ಲಿಯೇ ಬೆಳೆದುವು. ಅಷ್ಟೇ ಅಲ್ಲ, ಚಾರಿತ್ರಿಕ ಯುಗದಲ್ಲಿ ಸಿಲೋನಿಗೆ ಮತ್ತು ಇನ್ನು ಕೆಲವು ಹೊರದೇಶಗಳಿಗೆ ಹೋದ ತಮಿಳು ಮಾತನಾಡುವ ಕೆಲವು ಜನರನ್ನು ಬಿಟ್ಟರೆ ಈ ಭಾಷೆಗಳೆಲ್ಲ ಭಾರತಕ್ಕೇ ಸೀಮಿತವಾಗಿವೆ. ದ್ರಾವಿಡ ಭಾಷೆಗಳಿಗೆ ಸ್ವವಿಶಿಷ್ಟವಾದ ಕೆಲವು ಸಾಮಾನ್ಯ ಲಕ್ಷಣಗಳಿದ್ದು ಜಗತ್ತಿನ ಬೇರೆ ಯಾವ ಭಾಷಾವಂಶಗಳ ಜೊತೆಗೂ ಅವುಗಳಿಗೆ ವಂಶಸಂಬಂಧ ವಿರುವಂತೆ ಕಾಣುವುದಿಲ್ಲ. ಮುಂದುವರಿದ ದ್ರಾವಿಡ ಭಾಷೆಗಳಲ್ಲಿ ಕನ್ನಡ ಮತ್ತು ತಮಿಳುಗಳಿಗೆ ಆಪ್ತಸಂಬಂಧವಿದೆ. ಈ ಎರಡು ಭಾಷೆಗಳೂ ತೊದ, ತುಳು, ಕೊಡಗು, ಮೊದಲಾದ ಭಾಷೆಗಳ ಜೊತೆ ದಕ್ಷಿಣ ದ್ರಾವಿಡಭಾಷಾವರ್ಗಕ್ಕೆ ಸೇರುತ್ತವೆ. ತಮಿಳು ಕನ್ನಡಗಳು ಯಾವಾಗ ಬೇರ್ಪಟ್ಟು ಪ್ರತ್ಯೇಕ ಭಾಷೆಗಳಾದುವು ಎನ್ನುವುದು ತಿಳಿದಿಲ್ಲ. ಆದರೆ ಕ್ರಿ.ಪೂ. ಮೊದಲ ಸಹಸ್ರ ವರ್ಷಗಳ ಮಧ್ಯಭಾಗ ತೀರ ದೂರದ ಕಾಲ ಎನ್ನುವಂತಿಲ್ಲ.

ಕನ್ನಡ ಶಬ್ದವನ್ನು ಕುರಿತು ಅನೇಕ ನಿಷ್ಪತ್ತಿಗಳನ್ನು ಹೇಳಲಾಗಿದೆ. ಭಾಷಾಶಾಸ್ತ್ರದ ದೃಷ್ಟಿಯಿಂದ ಹೆಚ್ಚು ಸಂಭಾವ್ಯವಾದ ಮೂಲರೂಪವೆಂದರೆ ಕರಿಯ ನೆಲ ಎಂಬ ಅರ್ಥಕೊಡುವ ಕರ್-ನಾಡು ಎಂಬ ಪದ. ಇದೇ ಸಂಸ್ಕೃತೀಕರಣಗೊಂಡು ಕರ್ನಾಟ ಎಂಬುದಾಗಿ, ನಾಡು, ನುಡಿ ಎರಡನ್ನೂ ಸೂಚಿಸುವ ಪದವಾಯಿತು. ಕನ್ನಡ ಎಂಬುದು ಕರ್ನಾಟ ಎಂಬ ಪದದ ಕ್ರಮಬದ್ಧ ಬೆಳವಣಿಗೆಯಾಗುತ್ತದೆ.

ಕನ್ನಡ ಒಂದು ಸ್ವತಂತ್ರಭಾಷೆಯಾಗಿ ಬೆಳೆದ ಮೇಲೆ ಅನೇಕ ಶತಮಾನಗಳ ಕಾಲ ಲಿಖಿತ ರೂಪಕ್ಕಿಳಿಯದೆ ಕೇವಲ ಆಡುನುಡಿಯಾಗಿಯೇ ಉಳಿದಿದ್ದಂತೆ ತೋರುತ್ತದೆ. ಸು. ಕ್ರಿ.ಶ. ೪೫೦ರ ಹಲ್ಮಿಡಿ ಶಾಸನವು ಸದ್ಯಕ್ಕೆ ಲಭ್ಯವಾಗಿರುವ ಅತ್ಯಂತ ಪ್ರಾಚೀನವಾದ ಕನ್ನಡ ಲೇಖನವಾಗಿದೆ. ಆದರೆ ಕೆಲವರು ವಿದ್ವಾಂಸರು ಇನ್ನೂ ಪ್ರಾಚೀನವಾದ ಪ್ರಾಕೃತ ಮತ್ತು ಸಂಸ್ಕೃತ ಶಾಸನಗಳಿಂದಲೂ ಕೆಲವು ವಿದೇಶೀ ಮೂಲಗಳಿಂದಲೂ ಕನ್ನಡದ ಕೆಲವಾದರೂ ರೂಪಗಳನ್ನು ಪಡೆಯುವುದು ಸಾಧ್ಯವಿದೆ ಯೆಂದು ಅಭಿಪ್ರಾಯಪಡುತ್ತಾರೆ. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ (ಕ್ರಿ.ಪೂ. ಮೂರನೆಯ ಶತಮಾನ) ದೊರೆಯುವ 'ಇಸಿಲ' ಅಂಥ ಒಂದು ಶಬ್ದ. ಇಸಿಲ ಎನ್ನುವುದು ಈಗ ಕನ್ನಡ ಆಡುನುಡಿಯಾಗಿರುವ ಪ್ರದೇಶದೊಳಗೇ ಇದ್ದ ಒಂದು ಸ್ಥಳದ ಹೆಸರು. ಕೆಲವರು ವಿದ್ವಾಂಸರು ಅದು ಚಿತ್ರದುರ್ಗ ಜಿಲ್ಲೆಯಲ್ಲಿರುವ ಸಿದ್ದಾಪುರ ಎಂಬುದಾಗಿ ಹೇಳುತ್ತಾರೆ. ಇಸಿಲ ಶಬ್ದವನ್ನು ಪ್ರಾಕೃತವೆಂದು ಹೇಳಿ ರಿಸಿ ಎಂಬ ಶಬ್ದದಿಂದ ನಿಷ್ಪನ್ನವಾಗಿದೆಯೆಂದು ಹೇಳುವುದು ರೂಢಿ. ಆದರೆ ಈ ನಿಷ್ಪತ್ತಿಯಲ್ಲಿ ಕೆಲವು ತೊಂದರೆಗಳಿವೆ. ಪ್ರೊ. ಡಿ.ಎಲ್. ನರಸಿಂಹಾಚಾರ್ಯರು (ಖಚಿತಕಾಲದ ಪ್ರಾಚೀನತಮ ಕನ್ನಡ ಶಬ್ದ ಎಂಬ ತಮ್ಮ ಅಪ್ರಕಟಿತ ಲೇಖನದಲ್ಲಿ) ತಮಿಳಿನ ಎಯಿಲ್ ಎಂಬ ಶಬ್ದಕ್ಕೆ ಕೋಟೆ ಎಂಬ ಅರ್ಥವಿದ್ದು ಅದರ ಜ್ಞಾತಿ ಶಬ್ದವಾದ ಕನ್ನಡದ ಎಸಿಲ್ ಎಂಬ ಶಬ್ದವೇ ಆರ್ಯೀಕರಣಗೊಂಡು 'ಇಸಿಲ' ಎಂಬ ರೂಪ ತಾಳಿದೆ ಎಂದು ಪ್ರತಿಪಾದಿಸಿದ್ದಾರೆ. ಪ್ರೊ. ಡಿ.ಎಲ್. ನರಸಿಂಹಾಚಾರ್ಯರ ವಿದ್ವತ್ಪೂರ್ಣ ವಾದ ಊಹೆ ಸರಿಯಾಗಿದ್ದ ಪಕ್ಷದಲ್ಲಿ (ಇದನ್ನು ಅಲ್ಲಗಳೆಯುವ ಬೇರಾವುದಾದರೂ ಸಮರ್ಥ ಪ್ರತಿಪಾದನೆಗಳಿರುವುದು ಈ ಲೇಖಕನಿಗೆ ತಿಳಿಯದು) ಎಸಿಲ್ ಎನ್ನುವುದು ವಿಶ್ವಾಸಾರ್ಹವಾದ ಮೊದಲ ಕನ್ನಡ ಪದಗಳಲ್ಲಿ ಒಂದೆಂದು ಹೇಳಬಹುದು.

೧೯ನೆಯ ಶತಮಾನದ ಕೊನೆಯಲ್ಲಿ ಈಜಿಪ್ಟಿನ ಆಕ್ಸಿರಿಂಖಸ್ ಎಂಬ ಸ್ಥಳದಲ್ಲಿ ನಡೆದ ಸಂಶೋಧನೆಗಳ ಫಲವಾಗಿ 'ಆಕ್ಸಿರಿಂಖಸ್ ಲೇಖನಗಳು' (Oxyrhynchus Papyri) ಎಂದು ಕರೆಯಲಾಗಿರುವ ಕೆಲವು ಹಸ್ತ ಪ್ರತಿಗಳು ಬೆಳಕಿಗೆ ಬಂದುವು. ಇವುಗಳಲ್ಲಿ ಒಂದು ಹಸ್ತಪ್ರತಿಯಲ್ಲಿ (ಕ್ರಿ.ಶ. ೨ನೆಯ ಶತಮಾನದಲ್ಲಿ ರಚಿತವಾದ) ಗ್ರೀಕ್ ಪ್ರಹಸನವೊಂದಿದ್ದು ಅದರಲ್ಲಿ ವಿದೇಶೀ ಭಾಷೆಯೊಂದರ ಅನೇಕ ವಾಕ್ಯಗಳಿವೆ. ಪ್ರಹಸನದಲ್ಲಿ ವರ್ಣಿತವಾದ ಸ್ಥಳ ಭಾರತದ ಪಶ್ಚಿಮ ಕರಾವಳಿಯಾಗಿದ್ದು ಮೇಲೆ ತಿಳಿಸಿದ ವಾಕ್ಯಗಳನ್ನು ಭಾರತದ ಪಾತ್ರಗಳು ಆಡುತ್ತವೆ. ಪ್ರಖ್ಯಾತ ಲಿಪಿಶಾಸ್ತ್ರಜ್ಞರಾದ

ಡಾ. ಹುಲ್ಷ್ ಅವರು ೧೯೦೪ರಲ್ಲಿ ಈ ಕೆಲವು ವಾಕ್ಯಗಳನ್ನು ಕನ್ನಡದ ವಾಕ್ಯಗಳಾಗಿ ಓದಿದಾಗಿನಿಂದ ವಿದ್ವಾಂಸರು ಈ ಪ್ರಹಸನದಲ್ಲಿ ಮತ್ತು ಅದರಲ್ಲಿ ಸೇರಿರುವ ವಿದೇಶೀ ಭಾಷೆಯ ವಾಕ್ಯಗಳಲ್ಲಿ ವಿಶೇಷ ಆಸಕ್ತಿ ತೋರಿಸಿದ್ದಾರೆ. ಈ ವಿಷಯವನ್ನು ಕುರಿತು ಅನೇಕರು ಅಭ್ಯಾಸ ನಡೆಸಿದ್ದಾರೆ. ಅವರಲ್ಲಿ ಎಂ. ಗೋವಿಂದ ಪೈಯವರ ಅಭ್ಯಾಸ ಬಹು ಬೆಲೆಯುಳ್ಳದ್ದಾಗಿದೆ. ಆದರೆ ಅವರ ನಿರ್ಣಯಗಳನ್ನು ಒಪ್ಪುವುದಕ್ಕೂ ಅನೇಕ ದೊಡ್ಡ ಅಡಚಣೆಗಳಿವೆ. ವಿಸ್ತಾರಭಯದಿಂದಾಗಿ ಅವುಗಳನ್ನೆಲ್ಲ ಇಲ್ಲಿ ಹೇಳುವುದು ಸಾಧ್ಯವಿಲ್ಲ. ಇದನ್ನು ಕುರಿತು ಎಲ್.ಡಿ. ಬಾರ್ನೆಟ್ ಅವರು 'ತಿಳಿಯದ ಭಾಷೆಯದೆಂದು ಹೇಳಲಾದ ಭಾಗಗಳ ಪುನಾರಚನೆಯು ಕನ್ನಡದ ಪ್ರಾಚೀನತಮ ಶಬ್ದರೂಪಗಳಿಂದ ಕೂಡಿರಬೇಕು; ಆ ಭಾಗಗಳಿಗೆ ಮಾಡಿದ ವ್ಯಾಖ್ಯಾನಕ್ಕೆ ಸಮಂಜಸವಾದ ಅರ್ಥವಿದ್ದು ಆ ಅರ್ಥ ಪ್ರಯತ್ನದಿಂದ ಹೇರಿದ್ದಾಗಿರದೆ ಸಹಜವಾಗಿ ಹೊರಡುವಂತಿರಬೇಕು' ಎಂದು ಹೇಳಿ ಆ ಭಾಗಗಳ ಸ್ವರೂಪ ನಿರ್ಣಯಕ್ಕೆ ಕೆಲವು ಮಾನದಂಡಗಳನ್ನು ಒದಗಿಸುತ್ತಾರೆ. ಅವು ತುಂಬ ಉಚಿತವಾದುವೇ ಆಗಿವೆ. ಈ ಬಗ್ಗೆ ಬಾರ್ನೆಟ್ ಅವರೇ ಹೇಳುವ ಮಾತು ಹೀಗಿದೆ. "ಇವು ಕನ್ನಡದ ಪಾಠಗಳೆಂಬುದೇ ತುಂಬ ಅನುಮಾನದ ವಿಷಯ. ಇದನ್ನು ಕುರಿತ ವ್ಯಾಖ್ಯಾನದ ರೀತಿಗಳಲ್ಲಿ ತುಂಬ ಅಂತರವಿರುವುದಲ್ಲದೆ ವ್ಯಾಖ್ಯಾನಕಾರರನ್ನು ಬಿಟ್ಟು ಬೇರೆ ಯಾರಿಗೂ ವಿಶ್ವಾಸಾರ್ಹವಾಗಿ ಕಾಣುವುದಿಲ್ಲ. ...." ಮೇಲಿನ ಪಾಠಕ್ಕೆ ಸಂಬಂಧಿಸಿದಂತೆ ಈ ಮಾತೇ ಕೊನೆಯದೆನ್ನಬಹುದು. (ಪ್ರಹಸನದಲ್ಲಿ ಕಾಣುವ ಭಾಷೆ ನಿಜವಾಗಿಯೂ ಅನ್ಯಭಾಷೆಯಾಗಿದ್ದು, ಆ ಅನ್ಯಭಾಷೆ ಭಾರತೀಯ ಭಾಷೆಯೇ ಆಗಿದ್ದರೆ ಅದು ಪ್ರಾಚೀನ ಕನ್ನಡವಾಗಿರುವುದಕ್ಕಿಂತ ಪ್ರಾಚೀನ ತುಳುವಾಗಿರುವ ಸಂಭವವೇ ಜಾಸ್ತಿ ಎಂಬ ಸಾಹಸದ ಅಭಿಪ್ರಾಯವೂ ಸಾಧ್ಯವಿದೆ.)

ಮೊದಲೇ ತಿಳಿಸಿದಂತೆ ಸದ್ಯಕ್ಕೆ ಲಭ್ಯವಿರುವ ಕನ್ನಡದ ಪ್ರಾಚೀನತಮ ಲೇಖನವೆಂದರೆ ಹಲ್ಮಿಡಿ ಶಾಸನ. ಶಾಸನದಲ್ಲಿ ಕಾಲವನ್ನು ಹೇಳಿರದಿದ್ದರೂ ಅದರಲ್ಲಿ ಬರುವ ರಾಜರ ಹೆಸರುಗಳ ಮೇಲೆ ಮತ್ತು ರಾಜವಂಶಗಳ ಆಧಾರದ ಮೇಲೆ ಅದನ್ನು ಕ್ರಿ.ಶ. ಐದನೆಯ ಶತಮಾನದ ಮಧ್ಯಭಾಗದ್ದೆಂದು ಸಾಮಾನ್ಯವಾಗಿ ಗಣಿಸಲಾಗುತ್ತದೆ. ಭಾಷಾಧ್ಯಯನದ ದೃಷ್ಟಿಯಿಂದ ಇದು ಅತ್ಯಂತ ಮುಖ್ಯವಾದ ಕನ್ನಡದ ಲೇಖನ. ಇದರ ಪ್ರಾರ್ಥನಾಪದ್ಯ ಸಂಸ್ಕೃತದಲ್ಲಿದೆ; ಉಳಿದ ಪಾಠ ಹೇರಳ ಸಂಸ್ಕೃತ ಶಬ್ದಗಳಿಂದಲೂ, ಸಮಾಸಗಳಿಂದಲೂ ಕೂಡಿದ ಕನ್ನಡದಲ್ಲಿದೆ. ಇದರಿಂದ ಆ ಕಾಲದ ಗ್ರಾಂಥಿಕ ಕನ್ನಡದಲ್ಲಿ ಸಂಸ್ಕೃತ ಎಷ್ಟು ಬಲವಾಗಿ ಕಾಲೂರಿತ್ತು ಎನ್ನುವುದು ತಿಳಿಯುತ್ತದೆ. ಇದು ಕೇವಲ ಕನ್ನಡ ಪದಗಳ ವಿಷಯಕ್ಕೇ ಸೀಮಿತವಾಗಿರಲಿಲ್ಲ. ಶಾಸನದಲ್ಲಿ "(ದಾನ) ಪಶುಪತಿಯೆಂದು ಪೊಗಳೆಪ್ಪೊಟ್ಟನ" ಎಂಬ ಮಾತಿದ್ದು, ಅದು ಪೊಗಳೆಪ್ಪಟ್ಟನ (ಹೊಗಳಲ್ಪಟ್ಟವನ) ಎಂಬುದರ ಅಪಪ್ರಯೋಗವಾಗಿದೆ. ಪೊಗಳೆಪ್ಪಟ್ಟನ ಎಂಬ ಪದ ಕರ್ಮಣೀಪ್ರಯೋಗದಲ್ಲಿದೆಯೆಂಬುದನ್ನು ಗಮನಿಸಬೇಕು. ಇಂದಿಗೂ ದ್ರಾವಿಡ ಭಾಷೆಗಳಲ್ಲಿ ಕರ್ಮಣೀಪ್ರಯೋಗದ ಬಳಕೆಯಿಲ್ಲವೆಂಬುದು ಸ್ಪಷ್ಟವಾದ ವಿಷಯ

ಗ್ರಾಂಥಿಕ ಕನ್ನಡದಲ್ಲಿಯೂ ಅದು ಬಹಳ ವಿರಳ. ಇಷ್ಟಾಗಿಯೂ ಕನ್ನಡದ ಪ್ರಾಚೀನತಮ ಲೇಖನದಲ್ಲಿಯೇ ಅದು ಕಾಣಿಸಿಕೊಂಡಿದೆಯೆಂದರೆ ಸಂಸ್ಕೃತದ ಪ್ರಭಾವ ಎಷ್ಟು ವ್ಯಾಪ್ತವಾದದ್ದಾಗಿರಬೇಕು! ಈ ಶಾಸನದಲ್ಲಿ ಕನ್ನಡ ವ್ಯಾಕರಣದ ದೃಷ್ಟಿಯಿಂದ ಗಮನಾರ್ಹವಾದ ಕೆಲವು ರೂಪಗಳಿವೆ. ಎರಿದು, ಕೊಟ್ಟಾರ್, ಅದಾನ್, ಮೊದಲಾದುವು ಹಳಗನ್ನಡದಲ್ಲಿ ಅವುಗಳ ಸಂವಾದಿ ರೂಪಗಳಾದ ಇರಿದು, ಕೊಟ್ಟರ್, ಅದಂ— ಮೊದಲಾದುವುಗಳಿಂದ ಭಿನ್ನವಾಗಿವೆ. ವಿದ್ವಾಂಸರು 'ಪೂರ್ವದ ಹಳಗನ್ನಡ' ಅಥವಾ 'ಪೂರ್ವದ ಕನ್ನಡ' ಎಂದು ಕರೆಯುವ ಕನ್ನಡದ ಪ್ರಾಚೀನ ಭಾಷಾವಸ್ಥೆಯೊಂದನ್ನು ಇವು ಪ್ರತಿನಿಧಿಸುತ್ತವೆ.

ಲಭ್ಯವಾಗಿರುವ ಅತ್ಯಂತ ಪ್ರಾಚೀನ ಕನ್ನಡ ಗ್ರಂಥವೆಂದರೆ ಕವಿರಾಜಮಾರ್ಗ. ಇದನ್ನು ರಚಿಸಿದವನು ರಾಷ್ಟ್ರಕೂಟ ಚಕ್ರವರ್ತಿಯಾಗಿದ್ದ ಅಮೋಘವರ್ಷ ನೃಪತುಂಗ ನೆಂದು (ಕ್ರಿ.ಶ. ೮೧೪–೮೭೭) ಈ ಗ್ರಂಥ ಅಧಿಕೃತವಾಗಿ ತಿಳಿಸುತ್ತದೆಯಾದರೂ ನೃಪತುಂಗನ ಆಸ್ಥಾನ ಕವಿಯಾದ ಶ್ರೀವಿಜಯನೇ ಇದನ್ನು ಬರೆದಿರುವ ಸಂಭಾವ್ಯವೆ ಹೆಚ್ಚು. ಕವಿರಾಜಮಾಗವು ತನಗೆ ಮುಂಚೆ ಗದ್ಯಪದ್ಯಗಳಲ್ಲಿ ರಚಿತವಾಗಿದ್ದ ಕೃತಿಗಳನ್ನು ಪ್ರಸ್ತಾವಿಸುತ್ತದೆ; ಆದರೆ ಅವುಗಳಲ್ಲಿ ಒಂದೂ ದೊರೆತಿಲ್ಲ. 'ಹಳಗನ್ನಡದ' ಕೆಲವು ವ್ಯಾಕರಣ ರೀತಿಗಳು, ಮಾತಿನ ರೀತಿಗಳು ಆ ಕಾಲಕ್ಕೆ ಮರೆಯಾಗಿರುವುದನ್ನು ತಿಳಿಸಿ ಅದನ್ನು ಬಳಸುವುದರ ವಿರುದ್ಧ ಸಾಹಿತ್ಯಾಭ್ಯಾಸಿಗಳಿಗೆ ಎಚ್ಚರಿಕೆ ಕೊಡುತ್ತದೆ. ಕವಿರಾಜಮಾರ್ಗ ತಿಳಿಸುವ 'ಹಳಗನ್ನಡದ' ಕೃತಿಗಳು ದೊರೆತಿಲ್ಲವಾದರೂ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಿಂದ ಹಿಡಿದು ಸುಮಾರು ಕ್ರಿ.ಶ. ೭೫೦ರ ವರೆಗೆ ಉದ್ದಕ್ಕೂ ರಚಿತವಾಗಿರುವ ಅನೇಕ ಶಾಸನಗಳು ದೊರೆಯುತ್ತವೆ. ಈ ಶಾಸನಗಳ ಪಾಠ ಕವಿರಾಜಮಾರ್ಗ ತಿಳಿಸುವ ಹಳಗನ್ನಡದ ಭಾಷಾವಸ್ಥೆಯನ್ನು ಪ್ರತಿನಿಧಿಸುತ್ತದೆ. ಅದರ ಕೆಲವು ವಿಶಿಷ್ಟ ಲಕ್ಷಣಗಳನ್ನು ಇಲ್ಲಿ ಹೇಳಬಹುದು. ಪೂರ್ವದ್ರಾವಿಡಭಾಷೆಯ 'ವ' ಕಾರವು ಪ್ರಾಚೀನ ಕನ್ನಡದಲ್ಲಿ ಕಾಣುವುದು ಬಹು ಗಮನಾರ್ಹವಾದ ಅಂಶ. ಸಾಮಾನ್ಯವಾಗಿ ಶಾಸನಗಳ ಅಂತ್ಯದಲ್ಲಿ ಇರುವ ವಿತ್ತಿದಲ್ಲಿ ವೆಳೆಯಾದೆ ಕೆಡುಗೆ (ಬಿತ್ತಿದ ಕಡೆ ಬೆಳೆ ಏಳದೆ ಹಾಳಾಗಲಿ) ಎಂಬ ಶಾಪವಾಕ್ಯದಲ್ಲಿ ಇದನ್ನು ಕಾಣಬಹುದು. ಹಳಗನ್ನಡದ ಶಿಷ್ಟಭಾಷೆಯಲ್ಲಿ ಇದು ಬಿತ್ತಿದಲ್ಲಿ ಬೆಳೆಯದೆ ಕಿಡುಗೆ ಎಂಬ ರೂಪ ತಾಳುತ್ತದೆ. ಕೆಡು ಎಂಬ ರೂಪವನ್ನು ಗಮನಿಸಬಹುದು. ಆರಂಭದ ಉಚ್ಚಾರಾಂಶ ದಲ್ಲಿರುವ ಎ ಕಾರ ಇ ಕಾರಕ್ಕೆ ತಿರುಗಿ ಹಳಗನ್ನಡದಲ್ಲಿ ಅದು ಕಿಡು ಎಂದಾಯಿತು (ಅನಂತರದ ಕನ್ನಡದಲ್ಲಿ ಪುನಃ ಕೆಡು ಎಂಬ ರೂಪಕ್ಕೆ ತಿರುಗಿತು). ಇದೇ ರೀತಿ ಒ ಕಾರ ಉಕಾರಕ್ಕೆ ತಿರುಗಿತು (ಈ ಎರಡೂ ಧ್ವನಿವ್ಯತ್ಯಾಸಗಳು ನಿರ್ದಿಷ್ಟ ಕಾಲದೇಶಗಳಲ್ಲಿ ನಿರ್ದಿಷ್ಟ ಧ್ವನಿಸ್ಥಾನದಲ್ಲಿ ಆದುವು). ಇಲ್ಲಿ ಕೆಲವು ನಿದರ್ಶನಗಳಿವೆ. ಹಳ್ಳಿಯೊಂದರ ಹೆಸರಾದ 'ಕೆಸುಗೊಳ' ಎಂಬ ಶಬ್ದದಲ್ಲಿ ಕೆಂಪು ಎಂಬ ಅರ್ಥದಲ್ಲಿ ನಿಂತಿರುವ ಕೆಸು ಹಳಗನ್ನಡದಲ್ಲಿ ಕಿಸು ಎಂದಾಯಿತು. ಹಾಗೆಯೇ ಎರಿ (ಹ. ಗ. ಇರಿ); ತೊರು (ಹ. ಗ. ತುರು); ಪೋಗು (ಹ. ಗ. ಪುಗು); ಕೊರಿ (ಹ. ಗ. ಕುರಿ). ಕೆಲವು

ಶಬ್ದರೂಪಗಳಲ್ಲಿದ್ದ ಆ ಕಾರ ಅ ಕಾರವಾಗುವುದೂ ಗಮನಾರ್ಹವಾದ ಬದಲಾವಣೆ. ಉದಾ : ಏರಿದಾರ್ (ಹ. ಗ. ಏರಿದರ್); ವೆಳೆಯಾದೆ (ಹ. ಗ. ಬೆಳೆಯದೆ); ಅದಾನ್ (ಹ. ಗ. ಅದಂ); ಏಳನೆಯಾ (ಹ. ಗ. ಏಳನೆಯ)–ಇತ್ಯಾದಿ.

ಪೂರ್ವದ ಹಳಗನ್ನಡದ ಅದಾನ್ ಎಂಬ ರೂಪ ಹಳಗನ್ನಡದಲ್ಲಿ ಅದಂ ಎಂದಾಗುವ ನಿದರ್ಶನದಿಂದ ಪೂ. ಹ. ಗ. ದ ಇನ್ನೊಂದು ವೈಲಕ್ಷಣ್ಯ ಸ್ಪಷ್ಟವಾಗುತ್ತದೆ. ಪೂ.ಹ.ಗ.ದ ಪ್ರಕಾರ ಕೆಲವು ವಿಭಕ್ತಿ ರೂಪಗಳಲ್ಲಿ ಮತ್ತು ಕ್ರಿಯಾಪದದ ಪುರುಷಪ್ರತ್ಯಯಗಳಲ್ಲಿ 'ನ್' ಇದ್ದರೆ ಹ. ಗ. ದಲ್ಲಿ ಅದೇ ಸ್ಥಳದಲ್ಲಿ 'ಮ್' ಕಾಣಿಸಿಕೊಳ್ಳುತ್ತದೆ. ಇನ್ನೂ ಕೆಲವು ನಿದರ್ಶನಗಳನ್ನು ಕೊಡುವುದಾದರೆ : ಪೂ. ಹ. ಗ. ಮಗನ್–ಹ. ಗ. ಮಗಂ; ಪೂ. ಹ. ಗ. ದೇಗುಲಮಾನ್–ಹ. ಗ. ದೇಗುಲಮಂ; ಪೂ. ಹ. ಗ. ಪಡೆದಾನ್–ಹ. ಗ. ಪಡೆದಂ. ಪಾರಿಭಾಷಿಕವಾಗಿ ಹೇಳುವುದಾದರೆ ಹ. ಗ. ದಲ್ಲಿ ಕೆಲವು ಪದಾಂತ್ಯ ಸ್ಥಾನಗಳಲ್ಲಿ ನ್ ಮತ್ತು ಮ್ ಗಳ ಭೇದ ಸ್ಪಷ್ಟವಾಗುವುದಿಲ್ಲ. ಆದರೆ ಪೂ. ಹ. ಗ.ದಲ್ಲಿ ಈ ಅಸ್ಪಷ್ಟತೆಯಿಲ್ಲ.

ಪೂರ್ವದ ಹಳಗನ್ನಡದ ಇನ್ನೂ ಕೆಲವು ವೈಲಕ್ಷಣ್ಯಗಳಿವೆಯಾದರೂ ಅವುಗಳನ್ನೆಲ್ಲ ಇಲ್ಲಿ ಹೇಳುವುದು ಸಾಧ್ಯವಾಗದು. ಒಂದೇ ಒಂದು ಮುಖ್ಯ ವೈಲಕ್ಷಣ್ಯವನ್ನು ಮಾತ್ರ ಇಲ್ಲಿ ಹೇಳಬಹುದು. ವೆಟ್ಟದುಳ್ ಎಂಬ ರೂಪದಲ್ಲಿ ಕಾಣುವ ಪೂ. ಹ. ಗ. ದ ಉಳ್ ಎಂಬ ಸಪ್ತಮೀ ವಿಭಕ್ತಿ ಪ್ರತ್ಯಯ ಹ. ಗ. ದಲ್ಲಿ (ಬೆಟ್ಟದೊಳ್ ಎಂಬಲ್ಲಿ ಕಾಣುವಂತೆ) ಒಳ್ ಎಂದಾಗುತ್ತದೆ.

ಮೇಲೆ ತಿಳಿಸಿದ ಅನೇಕ ಅಂಶಗಳಲ್ಲಿ ಪೂರ್ವದ ಹಳಗನ್ನಡಕ್ಕೆ ತಮಿಳಿನೊಡನೆ ಹೆಚ್ಚು ಸಾದೃಶ್ಯವಿರುವುದು ಸ್ವಾರಸ್ಯಕರವಾದ ವಿಷಯ. ಈ ಸಾದೃಶ್ಯ ತಮಿಳು ಮತ್ತು ಕನ್ನಡಗಳು ಒಂದೇ ಭಾಷೆಯ ಎರಡು ಉಪಭಾಷೆಗಳಾಗಿದ್ದ–ಕಾಲವೊಂದನ್ನು ಸೂಚಿಸುತ್ತದೆ. ಪೂರ್ವದ ಹಳಗನ್ನಡಕಾಲದ ಶಾಸನಗಳು ಕಾಲದಲ್ಲಿ ಈಚಿನವಾಗುತ್ತ ಹೋದಂತೆ ಅವುಗಳಲ್ಲಿ ಹಳೆಯ ಭಾಷಾವೈಲಕ್ಷಣ್ಯಗಳೂ ಕಡಮೆಯಾಗುತ್ತ ಹೋಗುತ್ತವೆ. ಕೆಲವು ಶಾಸನಗಳಲ್ಲಿಯಂತೂ ಎರಿ ಮತ್ತು ಕೆಡು ಇಂಥ ರೂಪಗಳು ಹಳಗನ್ನಡದ ಇರಿ ಮತ್ತು ಕಿಡುಗಳ ಜೊತೆಜೊತೆಗೇ ಸಿಗುತ್ತವೆ. ಇದರಿಂದ ಪೂರ್ವದ ಹಳಗನ್ನಡ ಎನ್ನುವುದು ಕ್ರಿ.ಶ. ಆರಂಭದ ಶತಮಾನಗಳಲ್ಲಿದ್ದ 'ಪ್ರಾಚೀನ ಕನ್ನಡ' ಹಳಗನ್ನಡಕ್ಕೆ ತಿರುಗುತ್ತಿದ್ದ ಸಂಧಿಕಾಲದ ಭಾಷೆಯೆಂದು ಹೇಳಬಹುದು. ಈ ವಿಷಯದಲ್ಲಿ ಪೂರ್ವದ ಹಳಗನ್ನಡವು ಹಳಗನ್ನಡ ಮತ್ತು ಹೊಸಗನ್ನಡಗಳ ಸಂಧಿ ಕಾಲದ ಭಾಷೆಯಾದ ನಡುಗನ್ನಡವನ್ನು ಹೋಲುತ್ತದೆಯೆನ್ನಬಹುದು. ನಡುಗನ್ನಡದ ವಿಷಯ ಮುಂದೆ ಹೇಳಿದೆ.

ಪೂರ್ವದ ಹಳಗನ್ನಡದ ಸ್ಥಿತಿಯಿಂದ ಭಾಷೆಯು ಕ್ರಮೇಣ ಬದಲಿಸುತ್ತ ಹೋಯಿತು. ತೀರ ಮುಂಚೆಯಲ್ಲದಿದ್ದರೂ ಸುಮಾರು ಎಂಟನೆಯ ಶತಮಾನದ ವೇಳೆಗೆ ಅದು ಬಹುಮಟ್ಟಿನ ಹಳೆಯ ವೈಲಕ್ಷಣ್ಯಗಳನ್ನೆಲ್ಲ ಕೊಡವಿಕೊಂಡು ಸಾಮಾನ್ಯ

ಹಳಗನ್ನಡವಾಗಿ ಬಳಕೆಗೆ ಸಂದಿತ್ತೆನ್ನಬಹುದು. ಈ ಮುಂಚೆ ತಿಳಿಸಿರುವಂತೆ ಕವಿರಾಜ ಮಾರ್ಗ (ಸು. ಕ್ರಿ.ಶ. ೮೫೦) ಕ್ಕಿಂತ ಮುಂಚಿನ ಯಾವ ಗ್ರಂಥವೂ ಉಳಿದುಬಂದಿಲ್ಲ. ಕವಿರಾಜಮಾರ್ಗವೇ ಹಳಗನ್ನಡ ಸಾಹಿತ್ಯದ ವೈಭವಪೂರ್ಣಯುಗಕ್ಕೆ ನಾಂದಿ ಹಾಡಿತು ಎನ್ನಬಹುದು.

ಹತ್ತನೆಯ ಶತಮಾನ : ವಾಸ್ತವವಾಗಿ ಪ್ರಾಚೀನಸಾಹಿತ್ಯಯುಗದ ಅತ್ಯಂತ ಉಚ್ಛ್ರಾಯಕಾಲವಾಗಿತ್ತು. ವಿಶೇಷ ಪ್ರತಿಭಾಸಂಪನ್ನರಾದ ಪಂಪ (ಜನನ ೯೦೨), ರನ್ನ (ಜನನ ೯೪೯) ರಂಥ ಕವಿಗಳು ಹಳಗನ್ನಡದಲ್ಲಿ ತಮ್ಮ ಉದ್ಧಕೃತಿಗಳನ್ನು ರಚಿಸಿದರು; ವಡ್ಡಾರಾಧನೆಯಂಥ ಉತ್ಕೃಷ್ಟ ಗದ್ಯ ಕೃತಿ (ಸು. ೯೩೦) ಹಳಗನ್ನಡದಲ್ಲಿ ರಚಿತವಾಯಿತು.

ಹನ್ನೆರಡನೆಯ ಶತಮಾನದ ಮಧ್ಯಭಾಗಕ್ಕಿಂತ ಮುಂಚೆ ಪೂರ್ಣರೂಪದ ವ್ಯಾಕರಣವೊಂದು ರಚಿತವಾದಂತೆ ಕಂಡುಬರದಿರುವುದು ಆಶ್ಚರ್ಯಕರವಾದ ವಿಷಯ. ಹನ್ನೆರಡನೆಯ ಶತಮಾನದ ನಡುಗಾಲಕ್ಕಾಗಲೇ ಹಳಗನ್ನಡವು ಭಾಷೆಯಲ್ಲಿ ಪೂರ್ತಿಯಾಗಿ ಮತ್ತು ಬರೆವಣಿಗೆಯಲ್ಲಿ ಭಾಗಶಃ ನಡುಗನ್ನಡಕ್ಕೆ ತಿರುಗಿಬಿಟ್ಟಿತ್ತು. ವೈಯಾಕರಣ, ಅಲಂಕಾರ ಶಾಸ್ತ್ರಜ್ಞ, ಛಾಂದಸಿಕ, ನಿಘಂಟುಕಾರ (ಜೊತೆಗೆ ಕವಿ!) ಈ ಎಲ್ಲವೂ ಆಗಿದ್ದ ನಾಗವರ್ಮ ಮೊದಲ ಬಾರಿಗೆ ಹಳಗನ್ನಡ ವ್ಯಾಕರಣವನ್ನು ತನ್ನ ಕಾವ್ಯವಲೋಕನದ (ಶಬ್ದಸ್ಮೃತಿ ಎಂಬ) ಒಂದು ದೀರ್ಘ ಅಧ್ಯಾಯದಲ್ಲಿಯೂ, ಸಂಸ್ಕೃತದಲ್ಲಿ ರಚಿಸಿದ ಕರ್ಣಾಟಕ ಭಾಷಾಭೂಷಣವೆಂಬ ಮತ್ತೊಂದು ಸ್ವತಂತ್ರ ಕೃತಿಯಲ್ಲಿಯೂ ಬಹುಮಟ್ಟಿಗೆ ಪೂರ್ಣವಾಗಿ ನಿರೂಪಿಸಿದ್ದಾನೆ. ಇವನಾದ ಸುಮಾರು ಒಂದು ಶತಮಾನದ ಅನಂತರ ಕೇಶಿರಾಜನೆಂಬ ವೈಯಾಕರಣ ವ್ಯಾಕರಣಕ್ಷೇತ್ರದಲ್ಲಿನ ಅತ್ಯುಚ್ಚ ಕೃತಿಗಳಲ್ಲಿ ಒಂದಾದ ಶಬ್ದಮಣಿದರ್ಪಣವೆಂಬ ವ್ಯಾಕರಣ ಕೃತಿಯನ್ನು ರಚಿಸಿದ. ಕೇಶಿರಾಜನ ಹೇಳಿಕೆಗಳು ಕೆಲವು ಸಲ ಅಷ್ಟೊಂದು ಖಚಿತವೆನಿಸದಿದ್ದರೂ ಶಬ್ದಮಣಿದರ್ಪಣವು ಹಳಗನ್ನಡವನ್ನು ಕುರಿತು ಬರೆದ ಬಹು ಸಮಗ್ರವಾದ ವ್ಯಾಕರಣಗ್ರಂಥ. ವ್ಯಾಕರಣದ ಲಕ್ಷಣಗಳಿಗೆ ಅವನು ನೀಡುವ ಲಕ್ಷ್ಯಪ್ರಯೋಗಗಳು ಅನ್ಯಾದೃಶವಾಗಿವೆ. ಇದಾದ ಸಾಕಷ್ಟು ಕಾಲದ ಮೇಲೆ ಕ್ರಿ.ಶ. ೧೬೦೪ರಲ್ಲಿ ಭಟ್ಟಾಕಳಂಕನ ಶಬ್ದಾನುಶಾಸನ ರಚಿತವಾಯಿತು. ಇದನ್ನು ಪಾಣಿನೀಯ ಶೈಲಿಯಲ್ಲಿ ಬಹಳ ಅಡಕವಾದ ಸಂಸ್ಕೃತ ಸೂತ್ರಗಳಲ್ಲಿ ಬರೆದಿದೆ. ಆದರೆ ಹಳಗನ್ನಡಭಾಷೆಯ ನಿಷ್ಕಾಪೂರ್ಣ ವಿವರಣೆಯಾಗುವಲ್ಲಿ ಇದು ಶಬ್ದಮಣಿದರ್ಪಣವನ್ನು ಮೀರುವುದಿರಲಿ, ಅದರ ಮಟ್ಟಕ್ಕೆ ತಲಪುವುದಿಲ್ಲ. ಅಲ್ಲದೆ ೧೬ನೆಯ ಶತಮಾನದ ಹೊತ್ತಿಗೆ ಭಾಷೆಯಲ್ಲಾಗಿದ್ದ ದೊಡ್ಡ ವ್ಯತ್ಯಾಸಗಳನ್ನು ಶಬ್ದಾನುಶಾಸನ ಲಕ್ಷ್ಯಕ್ಕೇ ತೆಗೆದುಕೊಳ್ಳುವುದಿಲ್ಲ.

ಹಳಗನ್ನಡದ ಬಹು ಸಂಕ್ಷಿಪ್ತವಾದ ಸ್ವರೂಪ ಚಿತ್ರಣಕ್ಕೂ ಇಲ್ಲಿ ಸ್ಥಳ ಸಾಲುವುದಿಲ್ಲ. ಆದುದರಿಂದ ನಾವು ಮಾಡಬಹುದಾದುದು ಏನಿದ್ದರೂ ಹಳಗನ್ನಡ ಭಾಷೆಗೇ ವಿಶಿಷ್ಟವಾದ ಕೆಲವು ಧ್ವನಿ ವೈಲಕ್ಷಣ್ಯಗಳನ್ನೂ ಮುಂದಿನ ಶತಮಾನಗಳಲ್ಲಿ ಅವುಗಳಲ್ಲಾದ

ವ್ಯತ್ಯಾಸಗಳನ್ನೂ ಕುರಿತು ಹೇಳಿದೆ. ತಟ್ಟನೆ ಮನಸ್ಸಿಗೆ ಹೊಳೆಯುವ ಧ್ವನಿವೈಲಕ್ಷಣ್ಯವೆಂದರೆ ೞ (Azure ಎಂಬ ಪದದಲ್ಲಿರುವ 'Zh' ಧ್ವನಿಗೆ ಸಮಾನವಾದದ್ದು) ಎಂಬ ಧ್ವನಿಮಾ. ಸಾಮಾನ್ಯರ ದೃಷ್ಟಿಯಲ್ಲಿ ಈ ಧ್ವನಿಮಾ (ಇತರ ಕೆಲವು ವ್ಯಂಜನಾಂತಗಳೊಡನೆ) ಹಳಗನ್ನಡವನ್ನು ಪ್ರತಿನಿಧಿಸುತ್ತದೆ. ಬಾೞ್ ಮತ್ತು ಬಾಳೆಗಳು ಹಳಗನ್ನಡದಲ್ಲಿ ಭಿನ್ನಾರ್ಥಕಗಳಾಗಿವೆ, ಮೊದಲನೆಯದಕ್ಕೆ (ಸಸ್ಯ) ಬಾಳೆಯೆಂದೂ ಎರಡನೆಯದಕ್ಕೆ ಒಂದು ಬಗೆಯ ಮೀನೆಂದೂ ಅರ್ಥವಿದೆ. ಇದು ಪೂರ್ವದ್ರಾವಿಡದಲ್ಲಿದ್ದ ಒಂದು ಧ್ವನಿಮಾ. ಇದನ್ನು ಹೆಚ್ಚು ಕಡಮೆ ಪ್ರತಿವೇಷ್ಟಿತ 'ರ್' ಧ್ವನಿಮಾ ಎಂಬುದಾಗಿ ವಿವರಿಸಬಹುದು. ಈಗಲೂ ತಮಿಳು ಮತ್ತು ಮಲಯಾಳ ಭಾಷೆಗಳಲ್ಲಿ ಈ ಧ್ವನಿಮಾ ಇದೆ. ಆದರೆ ಅವುಗಳ ಉಪಭಾಷೆಗಳಲ್ಲಿ ಒಂದರಿಂದ ಮತ್ತೊಂದಕ್ಕೆ ಈ ಧ್ವನಿಮಾದ ಉಚ್ಚಾರಣೆ ವ್ಯತ್ಯಾಸಗೊಳ್ಳುತ್ತದೆ. ಕ್ರಿ.ಶ. ೯ನೆಯ ಶತಮಾನದ ಮಧ್ಯದವರೆಗಿನ ತೆಲುಗು ಶಾಸನಗಳಲ್ಲಿಯೂ ಇದು ಕಂಡುಬರುತ್ತದೆ. ಅನಂತರ 'ಡ' ಧ್ವನಿಮಾ ಇದರ ಸ್ಥಾನವನ್ನು ಆಕ್ರಮಿಸಿಬಿಟ್ಟಿದೆ. ಈ 'ೞ' ಧ್ವನಿಮಾ ಹಳಗನ್ನಡದ ವಿಶಿಷ್ಟ ಧ್ವನಿಯಾಗಿದ್ದು ಇದನ್ನೂ ಇನ್ನೊಂದು ಪ್ರತಿವೇಷ್ಟಿತ ಧ್ವನಿಯಾದ ಪಾರ್ಶ್ವಿಕ 'ಲ'ವನ್ನೂ ಕವಿಗಳು (ಆದಿ) ಪ್ರಾಸಸ್ಥಾನದಲ್ಲಿ ಬಹಳ ಎಚ್ಚರದಿಂದ ಬಳಸುತ್ತಿದ್ದರು.

ಆದರೆ 'ೞ' ಧ್ವನಿಮಾ ಜನಗಳ ಮಾತಿನಲ್ಲಿ ಹಳಗನ್ನಡ ಕಾಲದಲ್ಲಿಯೇ ಬದಲಾವಣೆಗೊಳ್ಳತೊಡಗಿತು. ಇದಕ್ಕೆ ಆ ಕಾಲದ ಶಾಸನಗಳಲ್ಲಿ ಬೇಕಾದಷ್ಟು ನಿದರ್ಶನಗಳು ದೊರೆಯುತ್ತವೆ. ಸಂಯುಕ್ತಾಕ್ಷರದಲ್ಲಿ ಬಂದಾಗ ಅದು 'ರ' ಧ್ವನಿಗೆ ಎಡೆಗೊಟ್ಟು ತಾನು ಮರೆಯಾಗತೊಡಗಿತು. 'ಗೞ್ದೆ' ಎಂಬುದ 'ಗರ್ದೆ' ಯಾಗಿ ಹೊಸಗನ್ನಡದಲ್ಲಿ ಅದೇ ಗದ್ದೆಯಾಯಿತು. 'ಅೞ್ತಿ' ಎಂಬುದು 'ಅರ್ತಿ'ಯಾಯಿತು. ಸ್ವರಗಳ ನಡುವೆ ಇದ್ದಾಗ ಅದು 'ಳ' ಆಗಿ ಪರಿವರ್ತನೆಗೊಂಡಿತು, ಉದಾ, 'ಇೞಿ' ಎಂಬುದು 'ಇಳಿ'ಯಾಗಿ 'ಮೞೆ' ಎಂಬುದು 'ಮಳೆ' ಯಾಯಿತು. ಜನರ ಉಚ್ಚಾರಣೆಯಲ್ಲಿ ಈ ಎರಡು ಧ್ವನಿಗಳಿಗಿದ್ದ ವ್ಯತ್ಯಾಸ ಅಳಿಸಿಹೋದ ಮೇಲೂ ಬಹುಕಾಲದವರೆಗೆ ಕವಿಗಳು ಇವುಗಳನ್ನು ಬೆರಸಬಾರದೆಂಬ ನಿಯಮವನ್ನು ಪಾಲಿಸುತ್ತ ಹೋದರು. ಆದರೆ ಹರಿಹರ ಕವಿ (ಸು. ಕ್ರಿ. ಶ. ೧೨೦೦) ಈ ಧ್ವನಿಗಳು ಒಂದಾಗಿ ಬಿಟ್ಟಿರುವುದರಿಂದಲೂ 'ೞ'ವನ್ನು ಉಚ್ಚರಿಸುವುದು ಕಷ್ಟವಾದುದರಿಂದಲೂ ಅವುಗಳ ನಡುವಿನ ವ್ಯತ್ಯಾಸವನ್ನು ತಾನು ಪಾಲಿಸುವುದಿಲ್ಲವೆಂದು ಸಾರಿದನು. ಈ ನಿರಾಕರಣೆ ಸಾಹಿತ್ಯದಲ್ಲಿಯೂ 'ೞ'ಕ್ಕೆ ಸಮಾಪ್ತಿ ಹಾಡಿತು. ಪ್ರಾಚೀನ ರೂಪಗಳ ಬಗ್ಗೆ ತುಂಬ ಆಸ್ಥೆಯುಳ್ಳ ವೈಯಾಕರಣ ಕೇಶಿರಾಜನು 'ೞ' ಧ್ವನಿಯಿರುವ ಪ್ರಾಚೀನ ಪದಗಳ ದೀರ್ಘಪಟ್ಟಿಯನ್ನೇ ಕೊಟ್ಟು ಇಂಥಿಂಥ ಕಡೆ 'ೞ' ಧ್ವನಿಯೇ ಬರಬೇಕು, 'ಳ' ಬರಬಾರದು ಎಂದು ತೋರಿಸಿಕೊಟ್ಟು 'ೞ'ವನ್ನು ಉಳಿಸಿಕೊಳ್ಳಲು ಹೋರಾಡಿದರೂ ಅವನ ಶ್ರಮವೆಲ್ಲ ವ್ಯರ್ಥವಾಯಿತು. ಈಗ ಆ ಅಕ್ಷರಗಳ ನಡುವಿನ ವ್ಯತ್ಯಾಸವನ್ನು ಗಮನಿಸುವವರೇನಿದ್ದರೂ ಕೇವಲ ವಿದ್ವಾಂಸರು ಮತ್ತು ಹಳಗನ್ನಡ ಗ್ರಂಥಗಳನ್ನು ಸಂಪಾದಿಸುವವರು ಮಾತ್ರ.

'ೞ'ದ ಗತಿಯನ್ನೆ ಅನುಸರಿಸಿದ ಇನ್ನೊಂದು ಧ್ವನಿಮಾ ಎಂದರೆ 'ಱ'. ಆದರೆ ಇದು 'ೞ' ಕ್ಕಿಂತ ಕೆಲವು ಶತಮಾನಗಳ ಕಾಲ ಹೆಚ್ಚು ಬಾಳಿತು (೧೬ನೆಯ ಶತಮಾನದಲ್ಲಿ ಅದು ಮರೆಯಾದ ಕಾಲವನ್ನು ನಡುಗನ್ನಡ ಕಾಲದ ಕೊನೆಯೆಂದು ಗುರುತಿಸಬಹುದು). ಈ ಧ್ವನಿಯ ಮೂಲರೂಪ ಪೂರ್ವದ್ರಾವಿಡದಲ್ಲಿ ವರ್ತ್ಸ್ಯಸ್ಪರ್ಶವಾಗಿ (Tin, Tip ಗಳಲ್ಲಿ ಕಾಣುವ ಇಂಗ್ಲಿಷಿನ T ಯಂತೆ) ಉಚ್ಚರಿತವಾಗುತ್ತಿತ್ತೆಂದು ತೋರುತ್ತದೆ. ಪಂದಿ ಎಂಬಲ್ಲಿ ನೋಡುವಂತೆ (ತಮಿಳಿನ ಪನ್ಱಿ ಹೋಲಿಸಿ) ಪೂರ್ವದ್ರಾವಿಡ 'ನ್ಱ' ಧ್ವನಿಯು ಕನ್ನಡದಲ್ಲಿ ಆಗಲೇ 'ನ್ದ' ಆಗಿ ಪರಿಣಮಿಸಿತ್ತು. 'ಱ್ಱ' ಎನ್ನುವುದು ನೆತ್ತಿ (ತಮಿಳಿನ 'ನೆಱ್ಱಿ'ಯನ್ನು ಹೋಲಿಸಿ) ಎಂಬಲ್ಲಿ ಕಾಣುವಂತೆ 'ತ್ತ' ಆಗಿತ್ತು. ಬಿಡಿ 'ಱ' ಕಾರವು ಹಳಗನ್ನಡದಲ್ಲಿ ಸ್ವಲ್ಪ ಕಠಿನವಾದ 'ರ' ಆಗಿದ್ದು ಸಾಮಾನ್ಯ 'ರ' ಕಾರದಿಂದ ಅದನ್ನು ಜಾಗರೂಕತೆಯಿಂದ ಪ್ರತ್ಯೇಕಿಸಲಾಗುತ್ತಿತ್ತು. ಅಱಿ=ತಿಳಿ, ಅರಿ=ಕತ್ತರಿಸು; ಪಱಿ=ಸೀಳು, ಪರಿ=ಸಾಗು—ಇತ್ಯಾದಿ ರೂಪಗಳನ್ನು ಗಮನಿಸಬೇಕು. ಆಗಲೇ ತಿಳಿಸಿದಂತೆ ಈ ಎರಡೂ ಕನ್ನಡ ಧ್ವನಿಮಾಗಳು ನಡುಗನ್ನಡದ ಕೊನೆಯ ಹೊತ್ತಿಗೆ ಒಂದಾಗಿಬಿಟ್ಟುವು. ಆಧುನಿಕ ಕನ್ನಡದಲ್ಲಿ ಹರಿ (ಹಳಗನ್ನಡದ ಪಱಿ ಮತ್ತು ಪರಿ) ಎನ್ನುವುದು ಸೀಳು ಮತ್ತು ಸಾಗು ಎಂಬ ಎರಡು ಅರ್ಥಗಳನ್ನೂ ಕೊಡುತ್ತದೆ.

ಪರಿ ಮತ್ತು ಅದರ ಈಗಿನ ರೂಪವಾದ ಹರಿಗಳನ್ನು ಸ್ವಲ್ಪ ಗಮನಿಸೋಣ. ಇಲ್ಲಿ ಪಕಾರ ಹಕಾರಕ್ಕೆ ತಿರುಗಿರುವ ಮತ್ತೊಂದು ಧ್ವನಿವ್ಯತ್ಯಾಸವನ್ನು ಕಾಣುತ್ತೇವೆ. ಪಕಾರವು ಪದದ ಪ್ರಥಮಾಕ್ಷರವಾಗಿ. ಪಾಲ್, ಪಿಡಿ, ಪೆಣೆ, ಪೊಗೆ ಮೊದಲಾದ ಅನೇಕ ಶಬ್ದಗಳಲ್ಲಿತ್ತು. ಆದರೆ ಕ್ರಮೇಣ ಪಕಾರ ಹಕಾರಕ್ಕೆ ಎಡೆಕೊಟ್ಟು ಮೇಲೆ ಹೇಳಿದ ಪದಗಳು ಕ್ರಮವಾಗಿ ಹಾಲು, ಹಿಡಿ, ಹೆಣೆ, ಹೊಗೆ ಇತ್ಯಾದಿ ರೂಪ ತಾಳಿದುವು. ಹಳಗನ್ನಡದ ಕೊನೆಗಾಲದ ಹೊತ್ತಿಗೆ ಈ ವ್ಯತ್ಯಾಸ ಒಂದು ಸ್ಥಿರತೆಯನ್ನು ಪಡೆಯಿತು. ಆಡುಮಾತಿನಲ್ಲಿ ಕ್ರಿ.ಶ. ೧೦೦೦ದ ಹೊತ್ತಿಗೆ ಈ ಬದಲಾವಣೆ ಸಮಗ್ರವಾಗಿ ಆಗಿಹೋಗಿತ್ತು. ಧ್ವನಿ ವ್ಯತ್ಯಾಸಗಳ ಪ್ರಸಂಗದಲ್ಲಿ ಸಾಮಾನ್ಯವಾಗಿ ಆಗುವಂತೆ ಈ ವ್ಯತ್ಯಾಸಕ್ಕೆ ಮುಂಚೆಯೇ ಕನ್ನಡವನ್ನು ಪ್ರವೇಶಿಸಿ ಅದರಲ್ಲಿ ಮಿಳಿತವಾಗಿ ಹೋಗಿದ್ದ ಕೆಲವು ಸಂಸ್ಕೃತ ಪದಗಳೂ ಈ ಧ್ವನಿಕ್ರಾಂತಿಯ ಪ್ರಭಾವಕ್ಕೆ ಸಿಕ್ಕಿದವು. ಧ್ವನಿವ್ಯತ್ಯಾಸದ ಪ್ರಸಂಗಗಳಲ್ಲಿ ಇಂಥ ಘಟನೆಗಳು ಸಾಮಾನ್ಯ. ಹ. ಗ. ಪಸು (ಸಂ. ಪಶು); ಹೊ. ಗ. ಹಸು. ಹ. ಗ. ಪಗ್ಗ (ಸಂ. ಪ್ರಗ್ರಹ); ಹೊ. ಗ. ಹಗ್ಗ.

ಕನ್ನಡದ ದೇಸಿ ಶಬ್ದಕೋಶದಲ್ಲಿ ಈ ಮಹಾಪ್ರಾಣೋಚ್ಚಾರದ ಹಕಾರ (ಪಾರಿಭಾಷಿಕವಾಗಿ ಹೇಳುವುದಾದರೆ ಕಾಕಲ್ಯಘರ್ಷ) ಕಾಣಿಸಿಕೊಂಡುದು ಒಂದು ಅನಿರೀಕ್ಷಿತ ವೈಚಿತ್ರ್ಯ. ಏಕೆಂದರೆ (ತಮಿಳು ಮತ್ತು ಇತರ ದ್ರಾವಿಡ ಭಾಷೆಗಳಂತೆ) ಕನ್ನಡದಲ್ಲಿಯೂ ಮಹಾಪ್ರಾಣದ ಉಚ್ಚಾರಣೆ ಇರಲಿಲ್ಲ, ಹನುಮಾನ್ ಮತ್ತು ಹಾರ—ಇಂಥ ಸಂಸ್ಕೃತ ಶಬ್ದಗಳು ಆರಂಭದಲ್ಲಿ ಹಳಗನ್ನಡವನ್ನು ಪ್ರವೇಶಿಸಿದಾಗ ತಮ್ಮ ಹಕಾರವನ್ನು ಕಳೆದುಕೊಂಡು ಆಣುವ ಮತ್ತು ಆರ ಗಳಾಗಿದ್ದುವು. ಆದರೆ

ಹಳಗನ್ನಡದಿಂದ ನಡುಗನ್ನಡಕ್ಕೆ (ಹೊಸಗನ್ನಡಕ್ಕೆ) ದಾಟುವಾಗ ಹಕಾರ ದೇಶಿಯ ಧ್ವನಿವ್ಯವಸ್ಥೆಯಲ್ಲಿ ಸ್ಥಾನ ಪಡೆಯಿತು. (ಹೀಗಿದ್ದರೂ ಖ, ಫ, ಥ, ಧ—ಇತ್ಯಾದಿ ಧ್ವನಿಗಳು ಸಂಸ್ಕೃತ ಶಬ್ದಗಳಲ್ಲಿ ಮಾತ್ರವೇ ಉಳಿದುವು) ಈ ಹಕಾರ ಎಲ್ಲ ವರ್ಗದ ಜನರ ಬಾಯಿಯಲ್ಲಿ ಬಹಳಕಾಲ ಉಳಿಯಲಿಲ್ಲ. ಕೆಲವು ಉಪಭಾಷೆಗಳಲ್ಲಿ ಈ ಹಕಾರ ಅಕಾರಕ್ಕೆ ಸ್ಥಳ ತೆರವು ಮಾಡಿ ತಾನು ಮಾಯವಾಯಿತು. ಉದಾ : ಅಣ್ಣು (ಹಣ್ಣು<ಪಣ್); ಆಲು (ಹಾಲು<ಪಾಲ್); ವುಲಿ (ಹುಲಿ<ಪುಲಿ) ಇತ್ಯಾದಿ. ಆದರೆ ಅದು ಇಂದಿಗೂ ಗ್ರಾಂಥಿಕ ಭಾಷೆಯಲ್ಲಿ ಮತ್ತು ಶಿಷ್ಟ ವ್ಯಾವಹಾರಿಕ ಭಾಷೆಯಲ್ಲಿ ಉಳಿದುಬಂದಿದೆ.

ಹಳಗನ್ನಡದಲ್ಲಿ ಶಬ್ದಗಳು ಕ್, ಚ್, ಟ್, ಲ್, ಪ್, ವ್ ಮತ್ತು ಸ್—ಇಂಥ ವ್ಯಂಜನಗಳನ್ನು ಅಂತ್ಯದಲ್ಲಿ ಪಡೆಯದಿದ್ದರೂ ನ್, ಮ್, ಯ್, ರ್, ೞ್, ಳ್ ಮೊದಲಾದ ವ್ಯಂಜನಗಳನ್ನು ಕಡೆಯಲ್ಲಿ ಪಡೆಯುತ್ತಿದ್ದವು. (ನೇಸರ್, ಬಸಿರ್, ಮೊದಲಾದ ಪದಗಳಲ್ಲಿ ಕಾಣುವಂತೆ ರ್ ಕೂಡ ಕೆಲವೆಡೆ ಅಂತ್ಯ ವ್ಯಂಜನವಾಗಿರುತ್ತಿತ್ತು). ಆದರೆ ನಡುಗನ್ನಡದಲ್ಲಿ ಈ ವೈಲಕ್ಷಣ್ಯ ಮಾಯವಾಗಿ ಪ್ರತಿ ಶಬ್ದವೂ ಅಂತ್ಯದಲ್ಲಿ ಸ್ವರವನ್ನು ವಿಶೇಷವಾಗಿ 'ಉ'ಕಾರವನ್ನು ಪಡೆಯತೊಡಗಿತು. ಈ ಕೆಲವು ನಿದರ್ಶನಗಳನ್ನು ಹೋಲಿಸಿ ನೋಡಬಹುದು. ಕಣ್—ಕಣ್ಣು; ಕಾಣ್—ಕಾಣು; ಪೊನ್—ಹೊನ್ನು; ಮೀನ್—ಮೀನು; ಉಸಿರ್—ಉಸಿರು; ಕಲ್—ಕಲ್ಲು; ಕಾಲ್—ಕಾಲು; ಮುಳ್—ಮುಳ್ಳು; ಎಳ್—ಎಳು—ಇತ್ಯಾದಿ. ಅಂತ್ಯದಲ್ಲಿ ಯ್ ಇದ್ದ ಅಕ್ಷರಗಳು ಇಕಾರಾಂತ ವಾದುವು. ಉದಾ : ಬಯ್—ಬಯ್ಯಿ; ಬಾಯ್—ಬಾಯಿ ಇತ್ಯಾದಿ.

ಉಚ್ಚಾರಾಂಶಗಳ ಓಟಕ್ಕೆ ವೈವಿಧ್ಯವನ್ನು ನೀಡುವ ಮತ್ತೊಂದು ವೈಲಕ್ಷಣ್ಯ ಹಳಗನ್ನಡದಲ್ಲಿತ್ತು. ಪದಮಧ್ಯದಲ್ಲಿ ಸಂಯುಕ್ತ ವ್ಯಂಜನಗಳು ಬರುತ್ತಿದ್ದವು. ಉದಾ : ಕರ್ತ್ರೆ, ಚೆಲ್ವು—ಇತ್ಯಾದಿ. ನಡುಗನ್ನಡ ಮತ್ತು ಹೊಸಗನ್ನಡಗಳಿಗೆ ಭಾಷೆ ಹೊರಳುತ್ತಿದ್ದಂತೆ ನಡುವಿನ ವ್ಯಂಜನ (ಕರ್ತೆಯ ಮೂಲಕ) ಕತ್ತೆ ಎಂಬಲ್ಲಿರುವಂತೆ ದ್ವಿತ್ವವಾಯಿತು, ಇಲ್ಲವೆ ಚೆಲುವು ಎಂಬ ರೂಪದಲ್ಲಿರುವಂತೆ ಸ್ವರವನ್ನು ಸೇರಿಸಿಕೊಂಡಿತು. ಹಳಗನ್ನಡ ಭಾಷಾವಸ್ಥಾನದಿಂದ ನಡುಗನ್ನಡ (ಹೊಸಗನ್ನಡ)ಕ್ಕೆ ಅನೇಕ ಧ್ವನಿ ಪರಿವರ್ತನೆಗಳಾದುವು. ಅಂಟುಪ್ರತ್ಯಯ ಹಾಗೂ ನಿಷ್ಪನ್ನ ಪ್ರತ್ಯಯಗಳಲ್ಲಿ, ವಾಕ್ಯರಚನಾಕ್ರಮದಲ್ಲಿ, ಶಬ್ದಕೋಶದಲ್ಲಿ —ಇನ್ನೂ ಅನೇಕ ಅಂಶಗಳಲ್ಲಿ ಬದಲಾವಣೆಗಳಾದುವು. ಇವುಗಳೆಲ್ಲದರ ಒಟ್ಟು ಪರಿಣಾಮವಾಗಿ ಹಳಗನ್ನಡದ ಬರೆಹ ಇಂದಿನವರೆಗೆ ತೀರ ಭಿನ್ನವಾಗಿ ಕಾಣುತ್ತದೆ. ಆದರೆ ಆ ಪರಿವರ್ತನೆಗಳನ್ನೆಲ್ಲ ಇಲ್ಲಿ ಹೆಸರಿಸುವುದೂ ಸಾಧ್ಯವಿಲ್ಲ.

ಕ್ರಿ. ಶ. ೧೨ನೆಯ ಶತಮಾನದ ಮಧ್ಯಭಾಗವು ಕರ್ಣಾಟಕದ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ದೊಡ್ಡ ಕ್ರಾಂತಿಕಾಲವಾಗಿದ್ದು ಅದು ಸಾಮಾನ್ಯರು, ಉಚ್ಚವರ್ಗದವರು ಎಲ್ಲರನ್ನೂ ತಟ್ಟಿತು. ಭಾಷೆಯ ಮೇಲೂ ಅದರ ಪರಿಣಾಮ ವಾಯಿತು. ಬಸವೇಶ್ವರ, ಅಲ್ಲಮಪ್ರಭು, ಅಕ್ಕಮಹಾದೇವಿಯರಂಥ ವೀರಶೈವ

ಅನುಭಾವಿಗಳು ಹಾಗೂ ಸಮಾಜಸುಧಾರಕರು ತಮ್ಮ ಆಧ್ಯಾತ್ಮಿಕ ಹಂಬಲಗಳನ್ನು ಮತ್ತು ತಾತ್ವಿಕ ಚಿಂತನೆಗಳನ್ನು ವಚನಗಳ ರೂಪದಲ್ಲಿ ಹೊರಹರಿಸಿದರು. ಆ ಹೊತ್ತಿಗೆ ಕನ್ನಡ ಭಾಷೆಯಲ್ಲಿ ಘಟಿಸಿದ್ದ ಪರಿವರ್ತನೆಗಳೆಲ್ಲ ಈ ವಚನ ಸಾಹಿತ್ಯದಲ್ಲಿ ಪ್ರತಿಫಲಿತವಾಗಿವೆ. ಅದು ಪರಿಪೂರ್ಣವಾಗಿ ಬೆಳೆದುನಿಂತ ನಡುಗನ್ನಡವಾಗಿದ್ದು ಒಂದೆರಡು ತಲೆಮಾರುಗಳ ಅನಂತರ ಬಂದ ಹರಿಹರ ಮತ್ತು ರಾಘವಾಂಕರಂಥ ಕವಿಗಳ ಕಾವ್ಯಸೃಷ್ಟಿಗೆ ಹದವಾದ ಮಾಧ್ಯಮವಾಗಿ ಪರಿಣಮಿಸಿತು. ಈ ಭಾಷಾಸ್ವರೂಪ ಅನಂತರದ ಕನ್ನಡವನ್ನು ಕೆಲವು ಶತಮಾನಗಳವರೆಗೆ ತನ್ನ ಅಂಕೆಯಲ್ಲಿಟ್ಟುಕೊಂಡಿತು. ಮಹಾಕಾವ್ಯವಾದ ಕುಮಾರವ್ಯಾಸ ಭಾರತವು (ಸು. ಕ್ರಿ.ಶ. ೧೪೩೦) ಅದರಲ್ಲಿ ರಚಿತವಾಯಿತು. ಅಲ್ಲದೆ ಬೃಹತ್ತು ಮಹತ್ತುಗಳೆರಡರಲ್ಲೂ ದೊಡ್ಡದೆನಿಸಿದ ಇನ್ನೂ ಕೆಲವು ಕಾವ್ಯಗಳು ಅದೇ ಭಾಷೆಯನ್ನು ಬಳಸಿದುವು.

ನಡುಗನ್ನಡ ಹೊಸಗನ್ನಡಗಳ ನಡುವಿನ ಸಂಧಿಕಾಲ ಸಹಜವಾಗಿಯೇ ತುಂಬ ದೀರ್ಘವಾದದ್ದಾಗಿದೆ. ನಡುಗನ್ನಡ ಯಾವಾಗ ಹೊಸಗನ್ನಡವಾಯಿತೆಂದು ಥಕ್ಕನೆ ಗುರುತಿಸುವಂತಿಲ್ಲ. ಎರಡು ರಕಾರಗಳ (ಱ, ರ) ಏಕೀಕರಣ ಈ ಕಾಲದ ಹಲವು ಭಾಷಾವೈಲಕ್ಷಣ್ಯಗಳಲ್ಲಿ ಕೇವಲ ಒಂದು ಮಾತ್ರವೇ ಆದರೂ ಅದು ಒಂದು ಹಿರಿಯ ಧ್ವನಿವೈಲಕ್ಷಣ್ಯವೆಂಬುದು ನಿಜ. ನಡುಗನ್ನಡ, ಕೆಲವುಸಲ ಹೊಸಗನ್ನಡವೂ— ಚಿಕ್ಕದೇವರಾಜ ಒಡೆಯರ (೧೬೭೨–೧೭೦೪) ಕಾಲದ ಕೃತಿಗಳಲ್ಲಿ ಕಾಣುವಂತೆ, ಅವುಗಳನ್ನು ಸಾಹಿತ್ಯದಲ್ಲಿ ಪ್ರತ್ಯೇಕಾಕ್ಷರಗಳಾಗಿ ಬಳಸಿದುವು. ಆದರೆ ಆಡುನುಡಿಯಲ್ಲಿ ಮಾತ್ರ ತುಂಬಾ ಬೆಳವಣಿಗೆಯಾಯಿತೆಂಬುದು ಅನಂತರದ ಶಾಸನಗಳಿಂದಲೂ, ಚಾರಿತ್ರಿಕ ದಾಖಲೆಗಳಿಂದಲೂ ಸಾಹಿತ್ಯಕೃತಿಗಳಲ್ಲಿ ಘಟಿಸಿರುವ ಆಕಸ್ಮಿಕ 'ತಪ್ಪು' ಗಳಿಂದಲೂ ತಿಳಿದು ಬರುತ್ತದೆ.

ಕ್ರಿ.ಶ. ೧೭೯೯ರಲ್ಲಿ ಟಿಪ್ಪೂಸುಲ್ತಾನನ ಪತನವಾಗಿ ಮೈಸೂರು ಸಿಂಹಾಸನ ಮುಮ್ಮಡಿ ಕೃಷ್ಣರಾಜ ಒಡೆಯರ ವಶಕ್ಕೆ ಬಂದಮೇಲೆ ಅವರ ಆಸ್ಥಾನದಲ್ಲಿ ಹೊಸಗನ್ನಡದ ಗ್ರಾಂಥಿಕ ಭಾಷೆಯೊಂದು ರೂಪುಗೊಳ್ಳತೊಡಗಿತು. ಕೃಷ್ಣಮಾಚಾರ್ಯನು ತನ್ನ '**ಹೊಸಗನ್ನಡ ನುಡಿಗನ್ನಡಿ**'ಯಲ್ಲಿ (೧೮೩೮) ತನ್ನ ಕಾಲದ ಹಿರಿಯರ ಆಡುಮಾತನ್ನೇ ಆಧರಿಸಿ ಮೊದಲ ಬಾರಿಗೆ ಹೊಸಗನ್ನಡದ ಚಿತ್ರವೊಂದನ್ನು ಕೊಡುವ ಪ್ರಯತ್ನ ಮಾಡಿದನು. ಕೆಲವು ಸಲ ಅವನು 'ಹನ್ನಿಬ್ಬರು' (ಹನ್ನೆರಡುಜನ) ಮತ್ತು ಮಿಳಿರ್ತು (ಸುತ್ತಾಡಿ)— ಇಂಥ ಹಳೆಯ ರೂಪಗಳನ್ನು ಒಪ್ಪಿಬಿಡುತ್ತಾನಾದರೂ ಇಂದಿಗೂ ಆಡುಮಾತಲ್ಲಿ ಮಾತ್ರ ಇದ್ದು ಗ್ರಾಂಥಿಕ ಭಾಷೆಯಲ್ಲಿ ಬಳಕೆಯಾಗದಿರುವ 'ತಿಂತಾನೆ' ಕೆಟ್ಹೋಯ್ತು— ಎಂಬಂಥ ರೂಪಗಳನ್ನೂ ಕೊಡುತ್ತಾನೆ. ಇವುಗಳಿಗೆ ಕ್ರಮವಾಗಿ 'ತಿನ್ನುತ್ತಾನೆ', 'ಕೆಟ್ಟುಹೋಯಿತು' ಎಂಬವು ಶಿಷ್ಟ ಗ್ರಾಂಥಿಕ ರೂಪಗಳು. ಆಡುನುಡಿ ಮತ್ತು ಉಪಭಾಷೆಗಳಲ್ಲಿ ಕಾಣುವ ರೂಪಗಳನ್ನು ಆಧುನಿಕ ಬರವಣಿಗೆಯಲ್ಲಿ ಸಾಮಾಜಿಕನಾಟಕ, ಕಾದಂಬರಿ ಮತ್ತು ಸಣ್ಣಕಥೆಗಳಿಂದ ಸಾಹಿತ್ಯಪ್ರಕಾರಗಳ ಸಂಭಾಷಣೆಗಳಲ್ಲಿ ಯಥೇಚ್ಛವಾಗಿ ಬಳಸುತ್ತಾರೆ.

ಕನ್ನಡನಾಡು ವಿಶಾಲ ಪ್ರದೇಶದ ಉದ್ದಗಲಕ್ಕೆ ಹರಡಿದೆ. ಈಗಿನ ಮೈಸೂರು ರಾಜ್ಯದ ವಿಸ್ತೀರ್ಣ ೭೪,೮೬೧ ಚದರ ಮೈಲಿಗಳು. ಇಂಥ ಸನ್ನಿವೇಶದಲ್ಲಿ ಭಾಷಾ ಪ್ರಭೇದಗಳು ಬೆಳೆಯುವುದು ಅನಿವಾರ್ಯ. ಅಲ್ಲದೆ ಇವು ಬಹು ಪ್ರಾಚೀನ ಕಾಲದಿಂದಲೂ ಇರುವುದಾಗಿ ತೋರುತ್ತದೆ. ಕವಿರಾಜಮಾರ್ಗವು ಕರ್ಣಾಟಕದ ದಕ್ಷಿಣ, ಉತ್ತರ ಮತ್ತು ತೀರ ಉತ್ತರದ ಜನರ ಭಾಷಾರೀತಿಗಳಲ್ಲಿ ಕ್ರಿಯಾರೂಪಗಳಲ್ಲಿ ಇದ್ದ ಕೆಲವು ವ್ಯತ್ಯಾಸಗಳನ್ನು ಕುರಿತು ಹೇಳುತ್ತದೆ. ಇದು ಬಹಳ ಕುತೂಹಲಕರವಾದ ವಿಷಯ. ಆದರೆ ದುರದೃಷ್ಟವಶಾತ್ ಇದರ ಬಗ್ಗೆ ದೊರೆಯುವ ಸಂಗತಿ ತೀರ ಅಲ್ಪ.

ಹೊಸಗನ್ನಡದಲ್ಲಿ ಸುಸ್ಪಷ್ಟವಾದ ಮೂರು ಪ್ರಾಂತೀಯ ಭೇದಗಳಿದ್ದು ಅವುಗಳಿಗೆ ಮೈಸೂರು ಕನ್ನಡ, ಧಾರವಾಡ ಕನ್ನಡ ಮತ್ತು ಮಂಗಳೂರು ಕನ್ನಡಗಳೆಂಬ ಹೆಸರು ಜನಸಾಮಾನ್ಯವಾಗಿ ಬಂದಿವೆ. ಈ ಮೂರು ಭಾಷಾರೀತಿಗಳ ಹೆಸರುಗಳೂ ಕ್ರಮವಾಗಿ ದಕ್ಷಿಣ ಕರ್ಣಾಟಕ, ಉತ್ತರ ಕರ್ಣಾಟಕ ಮತ್ತು ಘಟ್ಟದ ಕರ್ಣಾಟಕಗಳ ಸಾಂಸ್ಕೃತಿಕ ಕೇಂದ್ರಗಳನ್ನು ಸೂಚಿಸುವಂತೆ ಇವೆ. ತುಂಗಭದ್ರಾನದಿ ದಕ್ಷಿಣ ಮತ್ತು ಉತ್ತರ ಕರ್ಣಾಟಕಗಳನ್ನು ಪ್ರತ್ಯೇಕಿಸುವ ರೇಖೆಯಾದರೆ, ಪಶ್ಚಿಮಘಟ್ಟಗಳ ಸಾಲು ಪಶ್ಚಿಮ ತೀರದ ಪ್ರಾಂತ್ಯವನ್ನು ಪ್ರತ್ಯೇಕಿಸಿ ತೋರುತ್ತದೆ. ಈ ಒಂದೊಂದು ವಿಶಾಲಪ್ರದೇಶ ದಲ್ಲಿಯೂ ಅನೇಕ ಔಪಭಾಷಿಕ ಉಪಭೇದಗಳಿವೆಯೆಂಬುದನ್ನು ನೆನಪಿನಲ್ಲಿ ಇಡಬೇಕು. ಬಿಜಾಪುರದ ಉಪಭಾಷೆಗೆ ಉದಾಹರಣೆಗೆ, ಅದರದೇ ಆದ ಕೆಲವು ವಿಶಿಷ್ಟ ಲಕ್ಷಣಗಳಿವೆ.

ಇವುಗಳಲ್ಲದೆ ಸಾಮಾಜಿಕ ಭಾಷಾ ಭೇದಗಳೂ ಇವೆ. ಸಾಮಾನ್ಯವಾಗಿ ಎಲ್ಲ ಕಡೆಯೂ ಇರುವ ವರ್ಗಭಾಷಾಭೇದಗಳಲ್ಲದೆ ಕೆಲವು ಪ್ರತ್ಯೇಕ ಭಾಷೆಗಳೇ ಇವೆ. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಹವ್ಯಕ ಜನಾಂಗ ಮಾತನಾಡುವ ಕನ್ನಡಭಾಷೆ ಇದಕ್ಕೊಂದು ಉತ್ಕೃಷ್ಟ ಉದಾಹರಣೆ. ಈ ಭಾಷೆ ಕನ್ನಡದ ಕೆಲವು ಪ್ರಾಚೀನ ಭಾಷಾವೈಲಕ್ಷಣ್ಯಗಳನ್ನು ಉಳಿಸಿಕೊಂಡಿರುವುದಲ್ಲದೆ ಕೆಲವು ಹೊಸ ವೈಶಿಷ್ಟ್ಯ ಗಳನ್ನೂ ಬೆಳೆಸಿಕೊಂಡಿದೆ. ಹೀಗಾಗಿ ಇದು ಕನ್ನಡ ಭಾಷೆಯ ಸಾಮಾನ್ಯ ಸ್ವರೂಪದಿಂದ ಭಿನ್ನವಾಗಿದೆ. ಹವ್ಯಕ ಭಾಷೆಯಲ್ಲಿ ಅದೂ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಆರೇಳು ಉಪಭೇದಗಳಿವೆ.

ಉಪಭಾಷಾ ಅಧ್ಯಯನವು ನಮ್ಮ ದೇಶದಲ್ಲಿ ಇನ್ನೂ ಶೈಶವಾವಸ್ಥೆಯಲ್ಲಿದೆ. ಆಳವಾದ ಅಭ್ಯಾಸಗಳು ನಡೆದಿರುವುದೇ ಕಡಮೆ. ನಡೆಸಿದ ಕೆಲವೇ ಅಭ್ಯಾಸಗಳ ಫಲಿತಾಂಶ ಕೂಡ ಅಚ್ಚಾಗಿಲ್ಲ. ಇಡಿಯ ಕರ್ಣಾಟಕದ ಎಲ್ಲ ಉಪಭಾಷೆಗಳ ವ್ಯವಸ್ಥಿತ ಅಧ್ಯಯನ ನಡೆದಲ್ಲದೆ ಕನ್ನಡದ ಉಪಭಾಷೆಗಳ ಸ್ವರೂಪ ಮತ್ತು ವ್ಯಾಪ್ತಿಗಳ ಬಗ್ಗೆ ಖಚಿತವಾದ ಮಾತುಗಳನ್ನು ಹೇಳುವುದು ಸಾಧ್ಯವಿಲ್ಲ.

ಕವಿರಾಜಮಾರ್ಗದ ಹೇಳಿಕೆಯಂತೆ ಕಿಸುವೊಳಲ್ (ಬಿಜಾಪುರ ಜಿಲ್ಲೆಯ ಪಟ್ಟದ ಕಲ್ಲು), ಕೊಪಣ ನಗರ (ರಾಯಚೂರು ಜಿಲ್ಲೆಯ ಕೊಪ್ಪಲ್), ಪುಲಿಗೆರೆ (ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ) ಮತ್ತು ಒಂಕುಂದ (ಬೆಳಗಾಂ ಜಿಲ್ಲೆಯ ಒಕ್ಕುಂದ) ಇವು ಸೇರಿ

ತಿರುಳುಗನ್ನಡದ ನಾಡಾಗಿತ್ತು. ಪಂಪನು ಕಾವ್ಯರಚನೆ ಮಾಡಿದ್ದು ಈ ಶಿಷ್ಟಭಾಷೆಯಲ್ಲಿ. ಶತಮಾನಗಳು ಉರುಳಿದಂತೆ ಈ ಗುರುತ್ವಕೇಂದ್ರ ದಕ್ಷಿಣದ ಕಡೆಗೆ ಹೆಚ್ಚುಹೆಚ್ಚಾಗಿ ಸರಿಯಿತು. ಒಂದು ಆಶ್ಚರ್ಯಕರವಾದ ವಿಷಯವೆಂದರೆ ನಾಡಿನಾದ್ಯಂತ ಇಷ್ಟೆಲ್ಲ ಭಾಷಾಭೇದಗಳಿದ್ದರೂ ಶಿಷ್ಟಕನ್ನಡ ಮಾತ್ರ ಉದ್ದಕ್ಕೂ ರಕ್ಷಿತವಾಗಿ ಸಾಗಿಬಂದಿದೆ. ಈಗ ಮೈಸೂರು, ಧಾರವಾಡ, ಮಂಗಳೂರು—ಮೂರು ಪ್ರಧಾನ ಭಾಗಗಳಲ್ಲಿ ಬಳಕೆಯಲ್ಲಿರುವ ಶಿಷ್ಟ ಕನ್ನಡದಲ್ಲಿ ಸಹಜವಾಗಿಯೇ ಕೆಲವು ಪ್ರಾಂತೀಯ ಭೇದಗಳು, ಅದೂ ಶಬ್ದಕೋಶ ಸಂಬಂಧದಲ್ಲಿ ಇವೆ. ಆದರೆ ಸಂಸ್ಥಾನದ ಒಂದು ತುದಿಯಿಂದ ಮತ್ತೊಂದು ತುದಿವರೆಗೆ ಇರುವ ಶೀಘ್ರಪ್ರಯಾಣ ಮತ್ತು ಸಂಪರ್ಕ ವ್ಯವಸ್ಥೆಗಳ ಫಲವಾಗಿ ಈ ವ್ಯತ್ಯಾಸಗಳು ಮಾಯವಾಗುತ್ತಿವೆ. ರಾಜಕೀಯ ಪುನರ್ಯೋಜನೆ ಮತ್ತು ಕನ್ನಡ ಆಡುನುಡಿಯಾಗಿರುವ ಭಾಗಗಳ ಏಕೀಕರಣದ ಫಲವಾಗಿ ಎಲ್ಲವರ್ಗದ ಜನರಿಗೂ ಸಮ್ಮತವಾಗುವ ಏಕರೀತಿಯ ಶಿಷ್ಟಕನ್ನಡ ಭಾಷೆಯೊಂದು ತೊಡಕಿಲ್ಲದೆ ಶೀಘ್ರವಾಗಿ ರೂಪುಗೊಳ್ಳುವುದೆಂದು ಆಶಿಸಲು ಸಾಧ್ಯ.

೩

ಕನ್ನಡವಲ್ಲದೆ ವಿಶಾಲ ಮೈಸೂರು ರಾಜ್ಯದ ಗಡಿಗಳೊಳಗೆ ಬಹುಮಟ್ಟಿಗೆ ಬಳಕೆಯಲ್ಲಿರುವ ಇನ್ನೆರಡು ದ್ರಾವಿಡ ಭಾಷೆಗಳ ಬಗ್ಗೆ ಇಲ್ಲಿ ಸ್ವಲ್ಪ ವಿವರವಾಗಿ ಪ್ರಸ್ತಾವಿಸುವುದು ಅಗತ್ಯ. ಆ ದ್ರಾವಿಡ ಭಾಷೆಗಳು ತುಳು ಮತ್ತು ಕೊಡಗು. ತುಳು ಬಹುಮಟ್ಟಿಗೆ ಕಡಲತೀರದ ದಕ್ಷಿಣ ಕನ್ನಡ ಜಿಲ್ಲೆಗೇ ಸೀಮಿತವಾಗಿದೆ. ಕಲ್ಯಾಣಪುರಿ ನದಿಯು ಅದರ ಉತ್ತರ ಗಡಿಯಾಗಿದೆ. ಅದರ ಆಚೆಗೆ ಸಂಪೂರ್ಣವಾಗಿ ಕನ್ನಡ ಮಾತನಾಡುವ ಪ್ರದೇಶವಿದೆ. ಆದರೆ ತುಳು ಪ್ರದೇಶದಲ್ಲಿ ಕನ್ನಡ ಮಾತನಾಡುವವರೂ ಇದ್ದಾರೆ. (ಈಗ ಕೇರಳ ರಾಜ್ಯಕ್ಕೆ ಸೇರಿರುವ) ಕಾಸರಗೋಡು ತಾಲೂಕಿನಲ್ಲಿ ಹರಿಯುವ ಚಂದ್ರಗಿರಿ (ಅಥವಾ ಪಯಸ್ವಿನೀ) ನದಿಯು ತುಳುನಾಡಿನ ದಕ್ಷಿಣಗಡಿಯಾಗಿದೆ.

ತುಳುಭಾಷೆ ಎಲ್ಲಿ ಬಳಕೆಯಲ್ಲಿದೆಯೋ ಅಲ್ಲೆಲ್ಲ ಅದು ಎಲ್ಲ ವರ್ಗದ ಜನರ ಮನೆ ಮಾತಾಗಿದೆ. ತುಳುಭಾಷೆಯಲ್ಲಿ ಕನಿಷ್ಠ ಮೂರು ಸಾಮಾಜಿಕ ಭಾಷಾಭೇದಗಳಿವೆ. ಭೌಗೋಳಿಕ ಭಾಷಾಭೇದಗಳು ಇರುವುದೂ ಉಂಟು. ಬ್ರಾಹ್ಮಣವರ್ಗ ಬಳಸುವ ತುಳುವಿನಲ್ಲಿ ಸಂಸ್ಕೃತ ಶಬ್ದಗಳ ಪ್ರಮಾಣ ಎದ್ದು ಕಾಣುವಷ್ಟು ಹೆಚ್ಚಿನ ಪ್ರಮಾಣದಲ್ಲಿದೆ.

ತುಳುನಾಡು ಪ್ರಾಚೀನ ಕಾಲದಿಂದಲೂ ಇರುವುದಾಗಿ ತಿಳಿಯುತ್ತದೆ. ಕ್ರಿ.ಶ. ೨ನೆಯ ಶತಮಾನಕ್ಕೆ ಸೇರುವ, ತಮಿಳಿನ ಪ್ರಸಿದ್ಧ ಕಾವ್ಯಗಳಲ್ಲಿ ಒಂದಾದ ಅಕನಾನೂರು ಗ್ರಂಥವು ಹಣ್ಣುಗಳನ್ನು ತಿನ್ನುವ ನವಿಲುಗಳಿಂದ ನಿಬಿಡವಾದ ತೋಪುಗಳಿಗೆ ಪ್ರಸಿದ್ಧವಾದ ತುಳುನಾಡನ್ನು ಪ್ರಸ್ತಾವಿಸುತ್ತದೆ. (ಅಕನಾನೂರು ೧೫). ಆ ಕಾಲಕ್ಕಾಗಲೇ ತುಳುದೇಶಕ್ಕೆ ಒಂದು ಪ್ರತ್ಯೇಕ ಅಸ್ತಿತ್ವವಿತ್ತೆಂಬುದು ಇದರಿಂದ ತಿಳಿಯುತ್ತದೆ. ಇದಲ್ಲದೆ ಕ್ರಿ.ಶ. ೧೦೧೨ರ ಶಾಸನವೊಂದರಲ್ಲಿ ತುಳುವರ ಪ್ರಸ್ತಾಪವಿದೆ. (ಎಪಿಗ್ರಾಫಿಯ ಕರ್ಣಾಟಕ, III

ಶ್ರೀರಂಗಪಟ್ಟಣ ೧೪೦). ಹರಿಹರನ ಸು.ಕ್ರಿ.ಶ. ೧೨೦೦ರ ಬಸವರಾಜದೇವರ ರಗಳೆಯಲ್ಲಿಯೂ ತುಳುವ ದೇಶದ ಪ್ರಸ್ತಾಪವಿದೆ.

ಈ ಪ್ರದೇಶದ ಭಾಷೆಯೂ ಸಹ ಕೇವಲ ಒಂದು ಪ್ರಾಂತೀಯ ಭಾಷಾ ಭೇದವಾಗಿರದೆ ಪ್ರಾಚೀನ ಕಾಲದಿಂದಲೂ ಅದಕ್ಕೊಂದು ಪ್ರತ್ಯೇಕ ಅಸ್ತಿತ್ವವಿದ್ದಿರಬೇಕು. ತುಳುವಿನ ಕೆಲವು ಧ್ವನಿಗಳು ಪ್ರಾಚೀನ ತಮಿಳು ಅಥವಾ ಕನ್ನಡದ ಮುಂದುವರಿದ ರೂಪಗಳು ಮಾತ್ರವಾಗಿ ಕಾಣದಿರುವುದು ಇದಕ್ಕೊಂದು ಸಾಕ್ಷಿ. ಅಲ್ಲದೆ ತುಳುವಿನ ಕೆಲವು ವ್ಯಾಕರಣಾಂಶ (ಮಧ್ಯಮ ಪುರುಷದ ರೂಪಗಳಾದ 'ಇ' ಮತ್ತು 'ಇರು' ವಿನಂಥ ರೂಪಗಳು ದಕ್ಷಿಣ ದ್ರಾವಿಡಭಾಷೆಯಲ್ಲಿರುವ ಸಂವಾದಿ ಅಂಶಗಳಿಗಿಂತ ಮಧ್ಯ ದ್ರಾವಿಡಭಾಷೆಯ ಸಂವಾದಿ ಅಂಶಗಳನ್ನು ಹೆಚ್ಚಾಗಿ ಹೋಲುತ್ತವೆ. ಆಗಲೇ ತಿಳಿಸಿದಂತೆ **'ಆಕ್ಸಿರಿಂಖಸ್ ಲೇಖನ'** ದಲ್ಲಿರುವ ಭಾರತೀಯ ಭಾಷೆ, ಅದು ವಿಶ್ವಾಸಾರ್ಹವೇ ಆದುದಾದರೆ ಪೂರ್ವ ತುಳುವಾಗಿರಬೇಕು.

ಇದನ್ನೆಲ್ಲ ನೋಡಿದಾಗ ತುಳುಭಾಷೆ ಒಂದೂಮುಕ್ಕಾಲು ಸಹಸ್ರ ವರ್ಷಗಳ ಕಾಲ ಒಂದು ಸ್ವತಂತ್ರ ಭಾಷೆಯಾಗಿ ಬಾಳಿ ಬಂದಿದ್ದರೂ ಒಂದು ಗ್ರಾಂಥಿಕ ಭಾಷೆಯನ್ನು ರೂಪಿಸಿಕೊಳ್ಳದಿರುವುದು ಸೋಜಿಗವಾಗಿ ತೋರುತ್ತದೆ. ಸುಮಾರು ೧೪ನೆಯ ಶತಮಾನದ ಹೊತ್ತಿಗೆ ವಿದ್ವಾಂಸರು ಸಂಸ್ಕೃತ ಗ್ರಂಥಗಳನ್ನು ಬರೆಯಲು ಮಲಯಾಳದ ಲಿಪಿಯನ್ನು ಹೋಲುವ ಲಿಪಿಯೊಂದನ್ನು ತುಳುನಾಡಿನಲ್ಲಿ ಬಳಸಿದರು. ಆದರೆ ಈ ಲಿಪಿಯಲ್ಲಿ ರಚಿತವಾದ ಒಂದೇ ಒಂದು ಹಳೆಯ ಗ್ರಂಥವೂ ಈಗ ಇಲ್ಲವೆಂದು ತಿಳಿಯುತ್ತದೆ. ತುಳುವಿನಲ್ಲಿ ಬೇಕಾದಷ್ಟು ಲಾವಣಿಗಳು, ಜಾನಪದ ಗೀತಗಳು ಇದ್ದು ಅವುಗಳಲ್ಲಿ ಕೆಲವು ಅನೇಕ ಶತಮಾನಗಳಷ್ಟು ಹಿಂದಿನವು. ಕೋಟಿ ಮತ್ತು ಚನ್ನಯರ ಕಥೆಗಳಂಥ ಪಾರ್ದನಗಳು ಬಹು ಚೇತೋಹಾರಿಯಾಗಿವೆ. ಆದರೆ ಇವೆಲ್ಲವೂ ಕೇವಲ ಬಾಯಿಂದ ಬಾಯಿಗೆ ಹರಿದುಬಂದಿವೆ. ತುಳು ಮಾತನಾಡುವ ವಿದ್ವಾಂಸರು (ಸಂಸ್ಕೃತವನ್ನು ಬಿಟ್ಟರೆ) ಕನ್ನಡವನ್ನೇ ಬಹು ಕಾಲದಿಂದಲೂ ಪ್ರಕಟನ ಮಾಧ್ಯಮವಾಗಿ ಬಳಸುತ್ತ ಬಂದಿದ್ದಾರೆ. ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ದೊರೆಯುತ್ತ ಬಂದಿರುವ ಶಾಸನಗಳೆಲ್ಲ ಕನ್ನಡ ಲಿಪಿಯಲ್ಲೇ ಇವೆ.

ಸುಮಾರು ೧೯ನೆಯ ಶತಮಾನದ ಮಧ್ಯಭಾಗಕ್ಕೆ ತುಳುಭಾಷೆಯಲ್ಲಿ (ಕನ್ನಡ ಲಿಪಿಯ) ಕೆಲವು ಗ್ರಂಥಗಳು ರಚಿತವಾದವು. ಈ ಕೆಲಸ ಮಾಡಿದ ಸಾಹಸಿಗಳು ಮಂಗಳೂರಿನ ಕ್ರೈಸ್ತಪಾದ್ರಿಗಳು. ರೆವರೆಂಡ್ ಜೆ. ಬ್ರಿಗೆಲ್ ಅವರು ಇಂಗ್ಲಿಷಿನಲ್ಲಿ ರಚಿಸಿದ ಮೊದಲನೆಯ ತುಳು ವ್ಯಾಕರಣ ೧೮೭೨ರಲ್ಲಿ ಪ್ರಕಟವಾಯಿತು. ಎಸ್.ಯು. ಪಣಿಯಾಡಿಯವರು ತುಳುವಿನಲ್ಲಿಯೇ ರಚಿಸಿದ ಮತ್ತೊಂದು ವ್ಯಾಕರಣ ಅರುವತ್ತು ವರ್ಷಗಳನಂತರ ಪ್ರಕಟವಾಯಿತು. ಇಂದಿಗೂ ತುಳುವಿನಲ್ಲಿ ಗ್ರಂಥರಚನೆ ತುಂಬ ಕಡಮೆ.

ಪರಿಸ್ಥಿತಿಯಲ್ಲಿ ತುಳುವನ್ನೇ ಹೋಲುವ ಮತ್ತೊಂದು ಭಾಷೆಯೆಂದರೆ ಕೊಡಗು. ಇದರ ಜನಸಂಖ್ಯೆ ತುಳುವಿನದಕ್ಕಿಂತ ಕಡಮೆ. ಇದನ್ನಾಡುವ ಜನರೆಲ್ಲ ಪುಟ್ಟಜಿಲ್ಲೆಯಾದ ಕೊಡಗಿನಲ್ಲಿಯೇ ಇದ್ದಾರೆ. ಕ್ರಿ.ಶ. ೧೧೭೪ರ ಕನ್ನಡ ಶಾಸನವೊಂದರಲ್ಲಿ ಮೊದಲ ಬಾರಿಗೆ ಕೊಡಗರ ಪ್ರಸ್ತಾಪವಾಗಿದೆ (ಎಪಿಗ್ರಾಫಿಯ ಕರ್ಣಾಟಕ, IV, ಹುಣಸೂರು ೨೦). ಭಾಷಾಸಂಬಂಧವಾದ ಆಧಾರಗಳ ಮೇಲೆ ಕೊಡಗು ಭಾಷೆಯನ್ನು ಒಂದು ಸ್ವಷ್ಟಭಾಷೆಯಾಗಿ ಕರೆಯಲಾಗಿದೆ. ಕೊಡಗು ತುಳುವಿಗಿಂತ ಕನ್ನಡಕ್ಕೇ ಸ್ವಲ್ಪ ಹತ್ತಿರದ್ದಾಗಿ ಕಾಣುತ್ತದೆ.

ಪ್ರಾಚೀನ ಕನ್ನಡ ಹಳಗನ್ನಡಕ್ಕೆ ತಿರುಗುವಾಗ ಘಟಿಸಿದ ವಿಶಿಷ್ಟ ಧ್ವನಿವೈಲಕ್ಷಣ್ಯವಾದ ಸಂವೃತಸ್ವರ ಪರಿವರ್ತನೆಯ (Close vowel mutation) ಯಾವ ಸೂಚನೆಯನ್ನೂ ಕೊಡಗು ಭಾಷೆ ತೋರದಿರುವುದು ಕನ್ನಡ ಧ್ವನಿಶಾಸ್ತ್ರದ ದೃಷ್ಟಿಯಿಂದ ಸ್ವಾರಸ್ಯಕರ ಸಂಗತಿಯಾಗಿದೆ. ಇದಕ್ಕೆ—ಕೊ. ಎಲಿ—ಹ.ಗ. ಇಲಿ; ಕೊ. ಕೊರಿ—ಹ.ಗ. ಕುರಿ—ಇತ್ಯಾದಿ ನಿದರ್ಶನಗಳನ್ನು ನೋಡಬಹುದು. ಅಲ್ಲದೆ ಹಳಗನ್ನಡ ನಡುಗನ್ನಡವಾಗುವಾಗ ಪದಾದಿಯ ಪಕಾರ ಹಕಾರವಾಯಿತು. ಆದರೆ ಕೊಡಗಿನಲ್ಲಿ ಪದಾದಿಯ ಪಕಾರ ಹಾಗೆಯೇ ಇದೆ. ಕೊ. ಪತ್ತು—ಹೊ.ಗ. ದತ್ತು; ಕೊ. ಪೊಲ; ಹೊ.ಗ. ಹೊಲ—ಇತ್ಯಾದಿಗಳನ್ನು ಹೋಲಿಸಬಹುದು.

ಕೊಡಗಿಗೆ ಲಿಖಿತ ಸಾಹಿತ್ಯವಿಲ್ಲ. ಕೊಡಗು ಜಿಲ್ಲೆಯಲ್ಲಿ ಶಾಸನಗಳಿಗೆ ಮತ್ತು ಸಾಮಾನ್ಯ ಬರೆಹಕ್ಕೆ ಉದ್ದಕ್ಕೂ ಕನ್ನಡವನ್ನೇ ಬಳಸಲಾಗಿದೆ. ಇತರ ಭಾರತೀಯ ಭಾಷೆಗಳಲ್ಲಿರುವಂತೆ ಕೊಡಗಿನಲ್ಲಿಯೂ ಲಾವಣಿಗಳು, ಜಾನಪದ ಕಥೆಗಳು ಹೇರಳವಾಗಿವೆ. ನಡಿಕೇರಿಯಂಡ ಚಿನ್ನಪ್ಪ ಎನ್ನುವವರು ಇವನ್ನೆಲ್ಲ ಸಂಗ್ರಹಿಸಿ ೧೯೨೪ರಲ್ಲಿ **"ಕೊಡವದ ಪತ್ತೋಲೆ ಪಳಮೆ"** ಯಲ್ಲಿ ಪ್ರಕಟಿಸಿದರು. ಕೊಡಗು ದೇಶದ, ಅದರ ಇತಿಹಾಸದ ಮತ್ತು ಸಾಂಪ್ರದಾಯಿಕ ಪದ್ಧತಿಗಳ ವಿವರವನ್ನು ಈ ಕೃತಿಯಲ್ಲಿ (ಕನ್ನಡದಲ್ಲಿ) ಕೊಟ್ಟಿದೆ. ಕ್ಯಾಪ್ಟನ್ ಆರ್. ಎ. ಕೊಲೆ (R.A. Cole) ಯವರು ಇಂಗ್ಲಿಷಿನಲ್ಲಿ ರಚಿಸಿದ ಕೊಡಗು ಭಾಷೆಯ ಸಾಮಾನ್ಯ ವ್ಯಾಕರಣ (An Elementary Grammar of the Coorg Language) ಎಂಬ ಗ್ರಂಥ ೧೮೬೭ ರಷ್ಟು ಹಿಂದೆಯೇ ಪ್ರಕಟವಾಯಿತು.

ಅನೇಕ ಶತಮಾನಗಳಿಂದಲೂ ಕನ್ನಡದೊಡನೆ ಆಪ್ತಸಂಬಂಧವನ್ನು ಬೆಳೆಸಿಕೊಂಡು ಬಂದ ತಮಿಳು, ತೆಲುಗು ಮತ್ತು ಮಲೆಯಾಳಗಳಂಥ ಹಿರಿದು ದ್ರಾವಿಡ ಭಾಷೆಗಳ ವಿಷಯವನ್ನಾಗಲೀ ಕರ್ಣಾಟಕದಲ್ಲಿ ಬಳಕೆಯಲ್ಲಿರುವ ಅವುಗಳ ಕೆಲವು ಭಾಷಾಭೇದಗಳ ಬಗ್ಗೆಯಾಗಲೀ ಸಂಕ್ಷಿಪ್ತವಾಗಿ ತಿಳಿಸುವುದಕ್ಕೂ ಇಲ್ಲಿ ಸ್ಥಳವಿಲ್ಲ. ಅಥವಾ ಕನ್ನಡದೊಡನೆ ಬಹುಕಾಲ ನಿಕಟಸಂಪರ್ಕ ಪಡೆದಿರುವ ಸಂಸ್ಕೃತ, ಪ್ರಾಕೃತಗಳು, ಮರಾಠಿ, ಹಿಂದಿ-ಉರ್ದು (ವಿಶೇಷವಾಗಿ ಅದರ ದಖನೀ ರೂಪ) ಇತ್ಯಾದಿ ಇಂಡೋ ಆರ್ಯನ್ ಭಾಷೆಗಳ ವಿಷಯವನ್ನೂ ಪ್ರಸ್ತಾವಿಸುವಂತಿಲ್ಲ. ಆದರೆ ಆಗಲೇ ತಿಳಿಸಿದಂತೆ ಕೊಂಕಣಿ

ಭಾಷೆಯಾಡುವ ಜನರಲ್ಲಿ ಸುಮಾರು ಶೇಕಡ ೩೭ರಷ್ಟು ಜನ ಮೈಸೂರು ರಾಜ್ಯದಲ್ಲಿ ಇರುವುದರಿಂದ ಅದರ ಬಗ್ಗೆ ಮಾತ್ರ ಕೆಲವು ಮಾತುಗಳನ್ನು ಹೇಳಬಹುದು.

ಪ್ರಸಿದ್ಧರಾದ ಆಧುನಿಕ ಭಾಷಾವಿಜ್ಞಾನಿಗಳ ವಿಚಾರಪೂರ್ಣಮತದಂತೆ ಕೊಂಕಣಿಯು ಕೇವಲ ಬೇರೆ ಭಾಷೆಯೊಂದರ ಉಪಭಾಷೆಯಾಗಿರದೆ ಖಚಿತ ಸ್ಥಾನಮಾನಗಳಿರುವ ಒಂದು ಸ್ವತಂತ್ರಭಾಷೆಯಾಗಿದೆ. ಡಾ. ಎಸ್.ಎಮ್. ಕತ್ರೆಯವರ ಮಾತುಗಳಲ್ಲಿ ಹೇಳುವುದಾದರೆ ಕೊಂಕಣಿಯ ಭಾಷಾವೈಲಕ್ಷಣ್ಯಗಳನ್ನೆಲ್ಲ ಪರಿಶೀಲಿಸಿದನಂತರ (ಮರಾಠಿ ಮತ್ತು ಗುಜರಾತಿಗಳನ್ನು ಹತ್ತಿರದ ಸಂಬಂಧಿಗಳಾಗಿ ಪಡೆದ) ಮತ್ತು ಮಧ್ಯಭಾಷಾವರ್ಗದ (ವಿಶೇಷವಾಗಿ ಹಿಂದಿಯ ಚತುರ್ಥೀ ವಿಭಕ್ತಿ ಪ್ರತ್ಯಯ 'ಕಾ'ದ) ಸಂಪರ್ಕ ಪಡೆದ ಕೊಂಕಣಿಯನ್ನು ನೈಋತ್ಯ ಭಾಗದ ಭಾಷಾಸಮೂಹಕ್ಕೆ ಸೇರಿಸಬಹುದು. ವಿಸ್ತೃತರೂಪದ ಪುಲ್ಲಿಂಗ ಏಕವಚನ ನಾಮರೂಪಗಳ ರಚನೆಯಲ್ಲಿ ಕಾಣುವ ವ್ಯತ್ಯಾಸ ಮತ್ತು ಚತುರ್ಥೀ ವಿಭಕ್ತಿಗೆ ಹತ್ತುವ ಭಿನ್ನ ಪ್ರತ್ಯಯಗಳು–ಇವು ಕೊಂಕಣಿಯನ್ನು ಮರಾಠಿಯಿಂದ ಸ್ವತಂತ್ರವಾದ ಮತ್ತು ಪ್ರಾಚೀನ ಭಾಷಾವಸ್ಥಾನದ ಕೆಲವು ವೈಲಕ್ಷಣ್ಯಗಳನ್ನು ಉಳಿಸಿಕೊಂಡು ಬಂದಿರುವ ಭಾಷೆಯೆಂಬುದನ್ನು ತೋರಿಸುತ್ತವೆ. ಕೊಂಕಣಿ ಒಂದು ಉಪಭಾಷೆಯಾಗಿರದೆ ಸ್ವತಂತ್ರ ಭಾಷೆಯಾಗಿದೆಯೆಂಬುದು ಇದರಿಂದ ಸಿದ್ಧವಾಗುತ್ತದೆ. ಆದರೆ ಧ್ವನಿಸಂಬಂಧವಾದ ಪರಿಗಣನೆಗಳು ಈ ಎರಡೂ ಭಾಷೆಗಳಿಗೆ ಪ್ರಾಕೃತವೇ ಮೂಲ ಎನ್ನುವುದನ್ನು ತೋರುತ್ತವೆ. (The formation of Konkani, ಪುಟ ೧೫೨).

ಕೊಂಕಣಿ ಎಂದರೆ ಪಶ್ಚಿಮ ಕಡಲ ತಡಿಯ ಕೊಂಕಣ ಪ್ರದೇಶದಲ್ಲಿ ಬಳಕೆಯಲ್ಲಿರುವ ಭಾಷೆ ಎಂದರ್ಥ. ಪ್ರಾಚೀನ ಕಾಲದಿಂದ ಬಂದ ಕೊಂಕಣದ ಗಡಿಗಳು ಯಾವುವೆಂಬುದು ಆಳವಾಗಿ ವಿಚಾರ ಮಾಡಬೇಕಾದ ಅಂಶವಾಗಿದ್ದು ಅದಕ್ಕೆ ಇದು ಸ್ಥಳವಲ್ಲ. ಕೊಂಕಣ ಶಬ್ದದ ನಿಷ್ಪತ್ತಿಕೂಡ ವಿವಾದಾಸ್ಪದ ವಿಷಯವಾಗಿದೆ. ಕ್ರಿ.ಶ. ೫ನೆಯ ಶತಮಾನಕ್ಕಿಂತ ಈಚಿನದಲ್ಲದ ಪ್ರಾಚೀನ ತಮಿಳು ಗ್ರಂಥವಾದ ಶಿಲಪ್ಪದಿಕಾರಂನಲ್ಲಿ ಕೊಂಕಣರ್ (ಕೊಂಕಣದ ಜನರ) ಬಗ್ಗೆ ಪ್ರಸ್ತಾಪವಿದೆ. ಕ್ರಿ.ಶ. ೬ನೆಯ ಶತಮಾನದ ವರಾಹಮಿಹಿರನ ಬೃಹತ್ಸಂಹಿತೆಯಲ್ಲಿಯೂ ಕೊಂಕಣ ಶಬ್ದ ಬರುತ್ತದೆ. ಆದರೆ ಕೊಂಕಣದ ಜನ ಅಥವಾ ಕರ್ನಾಟಕಕ್ಕೆ ಸೇರಿರುವ ಕೊಂಕಣ ಪ್ರದೇಶದಲ್ಲಿರುವ ಜನರು ಆರಂಭದ ಶತಮಾನಗಳಲ್ಲಿ ಇವತ್ತಿನ ಕೊಂಕಣಿಗಾಗಲೀ ಅದರ ಪ್ರಾಚೀನರೂಪಕ್ಕಾಗಲೀ ಸಂಬಂಧಿಸಿದ ಭಾಷೆಯನ್ನು ಆಡುತ್ತಿದ್ದರೇ ಎಂಬುದು ಅನಿಶ್ಚಿತವಾದ ವಿಷಯ. ೧೧೮೬ರ ಶಾಸನವೊಂದು, ಅದೇ ಶಾಸನದಲ್ಲಿ ಕೊಂಕಣ ಚಕ್ರವರ್ತಿ ಎಂದು ಕರೆಯಲ್ಪಟ್ಟ ಅಪರಾದಿತ್ಯನಿಗೆ ಸಂಬಂಧಿಸಿದ್ದು ಅದರಲ್ಲಿರುವ ಕೆಲವು ವಾಕ್ಯಗಳನ್ನು ಕೊಂಕಣಿಭಾಷೆಯ ಪ್ರಾಚೀನ ರೂಪವೆಂದು ಹೇಳಲಾಗಿದೆ. ಆದರೆ ಈ ವಿಷಯದಲ್ಲಿ ಅಧಿಕಾರದಿಂದ ಮಾತಾಡಬಲ್ಲ ವಿದ್ವಾಂಸರೊಬ್ಬರ (ಡಾ॥ ಎಸ್. ಎಮ್. ಕತ್ರೆಯವರ) ಪ್ರಕಾರ ಮೇಲೆ ತಿಳಿಸಿದ ವಾಕ್ಯಗಳ ಭಾಷೆಯು ಪ್ರಾಚೀನ ಮರಾಠಿಯೇ ಹೊರತು ಕೊಂಕಣಿಯಲ್ಲ.

ಪೋರ್ಚುಗೀಸರು ಗೋವೆಯನ್ನು ಆಕ್ರಮಿಸಿಕೊಂಡಮೇಲೆ ಮತ್ತು ಜನರನ್ನು ಕ್ರೈಸ್ತಮತಕ್ಕೆ ಏಕಪ್ರಕಾರವಾಗಿ ಸೇರಿಸತೊಡಗಿದ ಮೇಲೆ ಕೊಂಕಣಿ ಜನರು ದಕ್ಷಿಣಕ್ಕೆ, ಉತ್ತರಕ್ಕೆ ಮತ್ತು ದಕ್ಷಿಣ ಕರ್ನಾಟಕ ಜಿಲ್ಲೆಗಳಿಗೆ, ಅಲ್ಲದೆ ಕೇರಳಕ್ಕೂ ಸಹ ಓಡಿಹೋದರು. ಕೊಂಕಣಿಯಲ್ಲಿ ಬಹುಶಃ ಆ ಮೊದಲೂ ಭಾಷಾಭೇದಗಳು ಇದ್ದಿರಬಹುದು. ಆದರೆ ಈಗ ಕೊಂಕಣಿ ಜನ ವಿಶಾಲವಾದ ಪ್ರದೇಶದಲ್ಲಿ ಹರಡಿಹೋದುದರಿಂದಲೂ ಅವರ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿರುವ ವಿವಿಧ ವರ್ಗಗಳ ಕಾರಣದಿಂದಲೂ ಸುತ್ತ ಇರುವ ಹೊಸ ಪ್ರದೇಶಗಳಲ್ಲಿನ ಭಾಷಾಪ್ರಭಾವಗಳಿಂದಲೂ ಕೊಂಕಣಿ ಭಾಷೆಯ ಅನೇಕ ಉಪಭೇದಗಳು ಸ್ಪಷ್ಟವಾಗಿ ಹರಳುಗೊಂಡವು. ಈಗ ಕೊಂಕಣಿಯಲ್ಲಿ ಕನಿಷ್ಠ ಆರು ಉಪಭೇದಗಳಂತೂ ಇವೆ.

ಕೊಂಕಣಿಯನ್ನು ಬರೆಯಲು ಬಳಸುವ ಲಿಪಿಯು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಬೇರೆ ಬೇರೆ ಭಾಗಗಳಲ್ಲಿರುವ ಕೊಂಕಣಿಗರ ಬೇರೆ ಬೇರೆ ವರ್ಗಗಳು ದೇವನಾಗರಿ, ಕನ್ನಡ ಮತ್ತು ರೋಮನ್ ಲಿಪಿಗಳನ್ನು ತಾವಿರುವ ಸ್ಥಳಗಳಿಗೆ ಅನುಗುಣವಾಗಿ ಬಳಸುತ್ತಾರೆ. ಗೋವೆಯಲ್ಲಿ ಕೂಡ ತೀರ ಈಚಿನವರೆಗೂ ಲೆಕ್ಕಪತ್ರಗಳಿಗೆ ಮತ್ತು ಲೇಖನ ವ್ಯವಹಾರಗಳಿಗೆ ಕನ್ನಡವನ್ನೇ ಬಳಸುತ್ತಿದ್ದರೆಂಬುದನ್ನು ಇಲ್ಲಿ ಗಮನಿಸಬಹುದು. ಕದಂಬ ರಾಜರ ಕಾಲದಿಂದಲೂ ಗೋವೆಯಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿತ್ತು.

ಫಾದರ್ ಥಮಸ್ ಸ್ಟೀಫನ್ಸ್ ಎನ್ನುವವರು ರಚಿಸಿದ 'Art de Lingua Canarian' ಎಂಬ ಗ್ರಂಥ ೧೬೪೦ ರಲ್ಲಿ ಪ್ರಕಟವಾಯಿತು. ಭಾರತೀಯ ಭಾಷೆಗಳನ್ನು ಕುರಿತ ವ್ಯಾಕರಣಗಳಲ್ಲೆಲ್ಲ ಮೊದಲು ಮುದ್ರಿತವಾದ ವ್ಯಾಕರಣ ಇದೇ ಆಗಿದೆ. ಹದಿನೇಳನೆಯ ಶತಮಾನದಿಂದ ಕೊಂಕಣಿ ಭಾಷೆ ಆಗಾಗ್ಗೆ ಸಾಹಿತ್ಯೋದ್ದೇಶಗಳಿಗೆ ಬಳಕೆಯಾಗ ತೊಡಗಿತು. ಅದಕ್ಕಿಂತ ಮುಂಚೆ ಕೊಂಕಣಿ ಸಾಹಿತ್ಯವೆಂಬುದೇ ಇರಲಿಲ್ಲವೆಂದು ತಿಳಿಯುತ್ತದೆ. ಈಗಲೂ ಕೊಂಕಣಿಯಲ್ಲಿ ಹೆಚ್ಚು ಬರೆಹ ಬರುತ್ತಿಲ್ಲ.

ಈ ಲೇಖನವನ್ನು ಮುಗಿಸುವ ಮುಂಚೆ ಒಂದು ಮಾತು ಹೇಳಬೇಕು. ಕನ್ನಡ ಜಿಲ್ಲೆಗಳಲ್ಲಿರುವ ಕೊಂಕಣಿ ಮಾತನಾಡುವ ಜನತೆ ಕನ್ನಡ ಸಾಹಿತ್ಯವನ್ನು ಬೆಳೆಸಿದ, ಬೆಳೆಸುತ್ತಿರುವ ಮತ್ತು ಕನ್ನಡದ ನಿಷ್ಠೆಯಲ್ಲಿ ಬೇರಾರಿಗೂ ಕಡಮೆಯಲ್ಲದ ಹಲವು ಪ್ರಸಿದ್ಧ ಬರೆಹಗಾರರಿಗೆ ಜನ್ಮವಿತ್ತಿದೆ. ಈ ಮಾತಿನ ಸತ್ಯತೆಗೆ ದಿ॥ ಪಂಜೆ ಮಂಗೇಶ ರಾವ್ ಮತ್ತು ದಿ॥ ಎಂ. ಗೋವಿಂದ ಪೈ ಈ ಇಬ್ಬರ ಹೆಸರೇ ಸಾಲದೆ?

೧೯೬೧ರ ಭಾರತೀಯ ಜನಗಣತಿಯ ಪ್ರಕಾರ ಭಾರತದ ಮುಖ್ಯ ಭಾಷೆಗಳು ಮತ್ತು ಅವುಗಳನ್ನು ಮಾತೃಭಾಷೆಯಾಗಿ ಬಳಸುವ ಜನರ ಸಂಖ್ಯೆ.

ಅಸ್ಸಾಮಿ	೫೮,೦೩,೪೬೫
ಬಂಗಾಳಿ	೩,೩೮,೮೮,೯೩೯
ಗುಜರಾತಿ	೨,೦೩,೦೪,೪೬೪
ಹಿಂದಿ	೧೩,೩೪,೩೫,೩೬೦
ಕನ್ನಡ	೧,೭೪,೧೫,೮೨೭
ಕಾಶ್ಮೀರಿ	೧೯,೫೬,೧೧೫
ಮಲಯಾಳಂ	೧,೭೦,೧೫,೭೮೨
ಮರಾಠಿ	೩,೩೨,೬೬,೭೭೧
ಒರಿಯ	೧,೫೭,೧೯,೩೯೮
ಪಂಜಾಬಿ	೧,೦೯,೫೦,೮೨೬
ಸಂಸ್ಕೃತ	೨,೫೪೪
ತಮಿಳು	೩,೦೫,೬೨,೭೦೬
ತೆಲುಗು	೩,೭೬,೬೮,೭೩೨
ಉರ್ದು	೨,೩೩,೨೩,೫೧೮

ಮೂಲ ಲೇಖಕರು (ಇಂಗ್ಲಿಷಿನಲ್ಲಿ) : ಪ್ರೊ॥ ಟಿ.ಎನ್. ಶ್ರೀಕಂಠಯ್ಯ
ಅನುವಾದಕರು : ಶ್ರೀ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

'ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿ'*

ಸುಮಾರು ಒಂಬತ್ತು ತಿಂಗಳ ಕೆಳಗೆ, ೧೯೩೩ ನೆಯ ನವೆಂಬರ್ ೧೪ ನೆಯ ದಿನ, ಇಂಗ್ಲಿಷ್ ಗ್ರಂಥವೊಂದರ 'ಪರಿಶಿಷ್ಟ'ವು (Supplement) ಹೊರಬಿದ್ದು ಅದನ್ನು ಪೂರ್ಣಗೊಳಿಸಿತು. ಈ ಪರಿಶಿಷ್ಟದಲ್ಲಿಯೇ ೯೦೪ ಪುಟಗಳಿವೆಯೆಂದ ಮೇಲೆ ಮುಖ್ಯಕೃತಿಯ ವಿಷಯದಲ್ಲಿ ಯಾರಿಗಾದರೂ ಕುತೂಹಲವು ಕೆರಳುತ್ತದೆ. ಅದು "ನಿಘಂಟುಗಳ ನ್ಯಾಯಾಧೀಶ್ವರ" (The Lord Chancellor among Dictionaries) ಎಂಬ ಬಿರುದನ್ನು ಪಡೆದಿರುವ 'ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿ.' ಇದರಷ್ಟು ದೀರ್ಘ ಕಾಲ ಮತ್ತೆ ಯಾವ ಗ್ರಂಥದ ರಚನೆಯೂ ಹಿಡಿದಿರ ಲಾರದು. ಇಂಥ ಮಹಾ ನಿಘಂಟನ್ನು ನಿರ್ಮಿಸ ಬೇಕೆಂದು ಆಲೋಚನೆ ಇಂಗ್ಲಿಷ್ ಭಾಷಾವಿಶಾರದರಿಗೆ ಹುಟ್ಟಿದ್ದು ೧೮೫೭ರಲ್ಲಿ. ಅಂದಿನಿಂದ ಶಬ್ದಗಳನ್ನೂ ಪ್ರಯೋಗೋದಾಹರಣೆಗಳನ್ನೂ ಶೇಖರಿಸಿ, ನಡುವೆ ಒದಗಿದ ತೊಡಕುಗಳನ್ನು ಪರಿಹರಿಸಿ, ಒಬ್ಬ ಮುಖ್ಯ ಸಂಪಾದಕನನ್ನು ಗೊತ್ತುಮಾಡಿ, ಆತನ ಕೈಗೆ ಗ್ರಂಥದ ಭಾರವನ್ನು ಒಪ್ಪಿಸಿದ್ದು ೧೮೭೮ ರಲ್ಲಿ. ಮುಖ್ಯ ಕೃತಿಯ ಕೊನೆಯ ಸಂಪುಟ ಹೊರಬಿದ್ದುದು ೧೯೨೮ರಲ್ಲಿ. ಈ ನಿಲುಗಡೆಯನ್ನು ಕಾಣುವುದಕ್ಕೆ ಎಷ್ಟೋ ಮುಂಚೆಯೇ ಈ ನಿಘಂಟಿನ ಪ್ರವರ್ತಕರೆಲ್ಲರೂ ಮುಖ್ಯ ಸಂಪಾದಕರಲ್ಲಿ ಇಬ್ಬರೂ ತಮ್ಮ ದೀರ್ಘ

* 'ಪ್ರಬುದ್ಧ ಕರ್ಣಾಟಕ', ೧೬.೧

ಜೀವನಗಳನ್ನು ಮುಗಿಸಿದ್ದರು. ಇದಕ್ಕೆ ಗ್ರಂಥದ ಅಪಾರತೆಯೇ ಕಾರಣ. ಮುಖ್ಯಕೃತಿಯ ಪುಟಗಳು ೧೫,೪೮೭. ಒಂದೊಂದು ಪುಟದಲ್ಲೂ ಸರಾಸರಿ ೧೧೨ ಪಂಕ್ತಿಗಳ ಕಲಂಗಳು (Columns) ಮೂರು. ಅವುಗಳಲ್ಲಿ ಒಟ್ಟು ಐದು ಕೋಟಿ ಪದಗಳು ಅಡಕವಾಗಿವೆ. ಅಲ್ಲಿ ಅಚ್ಚಾಗಿರುವ ಅಕ್ಷರದ ಮೊಳೆಗಳನ್ನು ಒಂದರ ಮಗ್ಗುಲಲ್ಲಿ ಒಂದರಂತೆ ಜೋಡಿಸುತ್ತಾ ಹೋದರೆ ೧೭೮ ಮೈಲಿ ಉದ್ದವಾಗಬಹುದು. ಈ ಗ್ರಂಥಕ್ಕೆ ಮುಖ್ಯ ಸಂಪಾದಕರು ನಾಲ್ಕು ಜನ (ಅವರಲ್ಲಿ ಈಗ ಇಬ್ಬರು ಮಾತ್ರ ಬದುಕಿದ್ದಾರೆ); ಉಪಸಂಪಾದಕರು ಮೂವತ್ತು ಮಂದಿ; "ಪ್ರಯೋಗ"ಗಳನ್ನು ಒದಗಿಸಿಕೊಟ್ಟವರೂ ಇತರ ವಿಧಗಳಲ್ಲಿ ಸಹಕರಿಸಿದವರೂ ೧,೩೦೦ ಕ್ಕೆ ಮೇಲ್ಪಟ್ಟಿದ್ದಾರೆ. ಗ್ರಂಥವು ಆಗಲೇ ಪುನರ್ಮುದ್ರಣ ಹೊಂದಿ, ಈಗ ೧೩ ಸಂಪುಟಗಳಲ್ಲಿ ಅಡಕವಾಗಿದೆ; ಇದರ ಬೆಲೆ ೩೧೫ ರೂಪಾಯಿಗಳು. ಒಟ್ಟು ಗ್ರಂಥದ ನಿರ್ಮಾಣಕ್ಕೆ ೪೦ ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ವೆಚ್ಚವಾಗಿದೆಯೆಂದು ಕೇಳಿದರೆ ಆ ಬೆಲೆ ಅತ್ಯಲ್ಪವೆನ್ನಿಸುತ್ತದೆ. ಆರನೆಯ ಸಂಪುಟದ ಮುದ್ರಣಕ್ಕಾಗಿ ಬಂದ ೫,೦೦೦ ಪೌಂಡುಗಳ ದತ್ತಿಯೊಂದನ್ನುಳಿದು ಮಿಕ್ಕ ಬಂಡವಾಳವನ್ನೆಲ್ಲಾ ಒದಗಿಸಿ, ಈ ಮಹಾಗ್ರಂಥದ ಮುದ್ರಣವನ್ನೂ ಪ್ರಕಾಶನವನ್ನೂ ಕೈಕೊಂಡ ಸಾಹಸಿಗಳು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನವರು.

ನಿಘಂಟುಗಳಲ್ಲಿ ಜನಸಾಮಾನ್ಯಕ್ಕೆ ಗೌರವ ಹುಟ್ಟುವುದು ಅಪೂರ್ವ; ನಿಘಂಟು ಒಂದು ಗ್ರಂಥವೆಂದು ಒಪ್ಪದವರೇ ಹಲವರಿದ್ದಾರು. ಅವರ ಪಾಲಿಗೆ ಅದೊಂದು ಶಬ್ದಗಳ ಕಂತೆ. ರೈಲು ಎಷ್ಟು ಗಂಟೆಗೆ ಹೊರಡುವುದೆಂದು ನೋಡುವುದಕ್ಕೆ 'ರೈಲ್ವೆ ಗೈಡ'ನ್ನು ಕುರಿಯುವ ಹಾಗೆ, ಯಾವುದಾದರೂ ಒಂದು ಶಬ್ದವನ್ನೋ ಅದರ ಅರ್ಥವನ್ನೋ ಅನಿವಾರ್ಯವಾಗಿ ತಿಳಿಯಬೇಕಾದಾಗ–ಉದಾಹರಣೆಗೆ, ಚಕ್ರಬಂಧ ಸ್ಪರ್ಧೆಗಳಿಗಾಗಿ (Cross word competitions)—ನಿಘಂಟನ್ನು ಹುಡುಕುತ್ತಾರೆ. ಆ ಅಗತ್ಯವು ತೀರಿದ ಕೂಡಲೆ ನಿಘಂಟಿನಲ್ಲಿ ಅವರಿಗಿರುವ ಆಸಕ್ತಿಯೂ ತೀರಿತು. ನಿಘಂಟುರಚನೆ ಎಷ್ಟು ಕಷ್ಟ, ಅದರ ಸಮಸ್ಯೆಗಳು ಎಷ್ಟು ವಿಪುಲ, ಕ್ಲಿಷ್ಟ ಎಂಬುದರ ಕಲ್ಪನೆ ಅವರಿಗೆ ಸಾಮಾನ್ಯವಾಗಿ ಇರುವುದಿಲ್ಲ. ಆದರೆ 'ಆಕ್ಸ್‌ಫರ್ಡ್ ಡಿಕ್ಷನರಿ'ಯಂಥ ಒಂದು ನಿಘಂಟಿನ ನಿರ್ಮಾಣಕ್ಕೆ ಮುಕ್ಕಾಲು ಶತಮಾನ ಹಿಡಿದು, ಅದು ಮುಗಿದ ವೇಳೆಯಲ್ಲಿ ಇಂಗ್ಲಿಷ್ ಸಾಹಿತ್ಯ ಪ್ರಪಂಚದೊಳಗೆ ಒಂದು ದೊಡ್ಡ ಕೋಲಾಹಲ ವುಂಟಾದಾಗ, ಅದರ ಅನುರಣನವು ನಮ್ಮ ಜನಸಾಮಾನ್ಯದ ಕಿವಿಗೂ ತಾಗಬಹುದು; ಅವರ ಕಣ್ಣು ಈ ಅದ್ಭುತದ ಕಡೆಗೆ ನಾಲ್ಕು ನಿಮಿಷಗಳ ಮಟ್ಟಿಗಾದರೂ ತಿರುಗಬಹುದು.

ಆಕ್ಸ್‌ಫರ್ಡ್ ನಿಘಂಟಿಗೆ ಮೊದಲೇ ಇಂಗ್ಲಿಷ್ ಭಾಷೆಯಲ್ಲಿ ಹಲವು ನಿಘಂಟುಗಳು ಹುಟ್ಟಿದ್ದುವು. ಜಾನ್‌ಸನ್ ಪಂಡಿತನ ಕೃತಿಯ ಹೆಸರು ಇಂದಿಗೂ ನಮ್ಮ ಕಿವಿಗೆ ಬೀಳುತ್ತಿದೆ; ಆತನು ಅದಕ್ಕೆ ಬರೆದ ಪೀಠಿಕೆ ಇಂದಿಗೂ ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಸಿದ್ಧವಾಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಹುಟ್ಟಿದ 'ವೆಬ್‌ಸ್ಟರ್' ನಿಘಂಟು

(*Webster's Dictionary of the English Language*), 'ಸೆಂಚುರಿ' ನಿಘಂಟು (*The Century Dictionary*) ಮೊದಲಾದವುಗಳಿಗೆ ಇಂದಿಗೂ ಪ್ರಚಾರವಿದೆ. ವಿಸ್ತಾರದಲ್ಲಾಗಲಿ ಪರಿಪೂರ್ಣತೆಯಲ್ಲಾಗಲಿ ಪ್ರಯೋಗಗಳ ಸಮಗ್ರತೆಯಲ್ಲಾಗಲಿ ಪ್ರಾಮಾಣ್ಯದಲ್ಲಾಗಲಿ ಇವು ಯಾವುವೂ ಆಕ್ಸ್‌ಫರ್ಡ್ ನಿಘಂಟಿನ ಹತ್ತಿರಕ್ಕೆ ಕೂಡ ಬರಲಾರವು. ಈ ನಿಘಂಟಿನ ಮುಖ್ಯ ಭಾಗವು ಮುಗಿದಾಗ (೧೯೨೮ರಲ್ಲಿ) ಅದರ ಸಂಪಾದಕವರ್ಗ ಮುದ್ರಾಪಕವರ್ಗದವರನ್ನು ಗೌರವಿಸಲು ಒಂದು ದೊಡ್ಡ ಔತನವನ್ನು ಏರ್ಪಡಿಸಿದ್ದರು. ಆಗ ಇಂಗ್ಲೆಂಡಿನ ಪ್ರಧಾನಮಂತ್ರಿಗಳಾಗಿದ್ದ ಬಾಲ್ಡ್‌ವಿನ್ನರು ಭಾಷಣ ಮಾಡುತ್ತಾ "ಪರಿಪೂರ್ಣತೆಯಲ್ಲಿ ಅದ್ವಿತೀಯ, ಪ್ರಾಮಾಣ್ಯದಲ್ಲಿ ಅನುಪಗಮ್ಯ" ಎಂದು ಈ ಗ್ರಂಥವನ್ನು ಹೊಗಳಿದರು. ಪ್ರಪಂಚದ ಬೇರೆ ಯಾವ ಭಾಷೆಯಲ್ಲೂ ಇಷ್ಟು ಸಮಗ್ರವಾದ, ಉತ್ಕೃಷ್ಟವಾದ ನಿಘಂಟು ಇಲ್ಲವೆಂದು ಬಲ್ಲವರು ಹೇಳುತ್ತಾರೆ. ಮುಖ್ಯಕೃತಿಯಲ್ಲಿ ಪ್ರತಿಪಾದಿಸಿರುವ ಶಬ್ದಗಳ ಮತ್ತು ಸಮಾಸಗಳ ಒಟ್ಟು ಸಂಖ್ಯೆ ೪,೧೪,೮೨೫; ಅವುಗಳ ಪ್ರಯೋಗವನ್ನು ತೋರಿಸುವುದಕ್ಕೆ ಕೊಟ್ಟಿರುವ ಉದಾಹರಣೆ ಗಳು ೧೮,೨೭,೩೦೬ ಇಷ್ಟು ಸಾಮಗ್ರಿಯನ್ನು ಪುಟದ ಅಂದ ಕೆಡದಂತೆ, ಒಂದೊಂದು ಅಂಶಕ್ಕೂ ಉಚಿತವಾದ ಪ್ರಾಮುಖ್ಯ ಬರುವಂತೆ, ಆದಷ್ಟು ಕಡಿಮೆ ಜಾಗದಲ್ಲಿ ಅಡಕವಾಗುವಂತೆ, ಸಂಯೋಜಿಸಿ ಅಚ್ಚುಹಾಕಬೇಕಾದರೆ ಮುದ್ರಣ ಶಾಲೆಯವರು ಸುಮಾರು ಮೂವತ್ತು ಬಗೆಯ ಅಕ್ಷರದ ಅಚ್ಚುಗಳನ್ನು ಉಪಯೋಗಿಸಬೇಕಾಯಿತು. "ಮುದ್ರಣ ಕಲೆಯನ್ನು ಕಂಡುಹಿಡಿದಂದಿನಿಂದ ಯಾವ ವಿಶ್ವವಿದ್ಯಾನಿಲಯವಾಗಲಿ, ಮುದ್ರಣಶಾಲೆಯೇ ಆಗಲಿ ಕೈಕೊಂಡಿರುವ ಉದ್ಯಮಗಳಲ್ಲಿ ಅತ್ಯಗಾಧವಾದದ್ದು....ಈ ಭೀಮಸಾಹಸವನ್ನು ನಿರ್ವಹಿಸಿರುವುದು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಕ್ಕೆ ಒಂದು ಹೆಚ್ಚಿನ ಕೀರ್ತಿಪತಾಕೆ" ಎಂದು 'ಟೈಮ್ಸ್' ಪತ್ರಿಕಾಕರ್ತರು ಹೊಗಳಿರುವುದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ.

ಈ ಮಹಾ ನಿಘಂಟಿನ ರಚನಾಕ್ರಮವನ್ನು ಕುರಿತು ಎರಡು ಮಾತುಗಳನ್ನು ಹೇಳಬಹುದು. ಮೊದಲನೆಯ ಸಂಪುಟದ ಅವತರಣಿಕೆಯಲ್ಲಿ ಹೀಗೆ ಬರೆದಿದ್ದಾರೆ. "ಈ ನಿಘಂಟಿನ ಉದ್ದೇಶವೇನೆಂದರೆ—ಈಗ ಬಳಕೆಯಲ್ಲಿರುವ ಮತ್ತು ಕಳೆದ ಏಳುನೂರು ವರ್ಷಗಳಲ್ಲಿ ಎಂದಾದರೂ ಬಳಕೆಯಲ್ಲಿತ್ತೆಂದು ತಿಳಿದುಬಂದಿರುವ ಇಂಗ್ಲಿಷ್ ಶಬ್ದಗಳ ಅರ್ಥ ಮೂಲ ಚರಿತ್ರೆಗಳನ್ನು ಪರ್ಯಾಪ್ತವಾಗುವಂತೆ ನಿರೂಪಿಸಿರುವುದು. ಇಲ್ಲಿಯ ಪ್ರಯತ್ನವೇನೆಂದರೆ—(೧) ಪ್ರತಿಯೊಂದು ಶಬ್ದದ ವಿಷಯದಲ್ಲೂ ಅದು ಎಂದು, ಹೇಗೆ, ಯಾವ ರೂಪದಲ್ಲಿ, ಯಾವ ಅರ್ಥದೊಂದಿಗೆ ಇಂಗ್ಲಿಷ್ ಶಬ್ದವಾಯಿತು; ಅಲ್ಲಿಂದೀಚೆಗೆ ರೂಪದಲ್ಲೂ ಅರ್ಥದಲ್ಲೂ ಅದು ಯಾವ ಯಾವ ಬೆಳವಣಿಗೆಗಳನ್ನು ಪಡೆದಿದೆ; ಅದರ ಪ್ರಯೋಗಗಳಲ್ಲಿ ಯಾವುವು ಕಾಲಕ್ರಮದಲ್ಲಿ ಲೋಪವಾಗಿವೆ (become obsolete); ಯಾವುವು ಇನ್ನೂ ನಿಂತಿವೆ; ಈಚೆಗೆ ಯಾವ ಹೊಸ ಪ್ರಯೋಗಗಳು ಯಾವ ಬಗೆಗಳಲ್ಲಿ, ಎಂದಿನಿಂದ ತಲೆಯೆತ್ತಿವೆ ಎಂಬುದನ್ನು ತೋರಿಸುವುದು; (೨) ಈ ಅಂಶಗಳಿಗೆಲ್ಲಾ ಉದಾಹರಣೆಯಾಗಿ, ನಮಗೆ ಗೊತ್ತಾಗಿರುವ ಮಟ್ಟಿಗೆ ಶಬ್ದವು ಮೊಟ್ಟಮೊದಲು ಕಾಣಿಸಿಕೊಂಡದ್ದರಿಂದ ಪ್ರಾರಂಭಿಸಿ ಕೊನೆಯ ಸಲಕ್ಕೆ ಅಥವಾ

ಇಂದಿನವರೆಗೆ ಮುಟ್ಟುವಂತೆ 'ಪ್ರಯೋಗ' ಪರಂಪರೆಯನ್ನು ಕೊಡುವುದು; ಹೀಗೆ ಶಬ್ದವು ತನ್ನ ಚರಿತ್ರೆಯನ್ನೂ ಅರ್ಥವನ್ನೂ ತಾನೇ ಪ್ರದರ್ಶಿಸುವಂತೆ ಮಾಡುವುದು; (೩) ಪ್ರತಿಯೊಂದು ಶಬ್ದದ ರೂಪ ನಿಷ್ಪತ್ತಿಯನ್ನು ಕೇವಲ ಐತಿಹಾಸಿಕಾಂಶದ ಆಧಾರದ ಮೇಲೆಯೇ, ಆಧುನಿಕ ಭಾಷಾಶಾಸ್ತ್ರದ ಪದ್ಧತಿಗಳನ್ನೂ ಸಿದ್ಧಾಂತಗಳನ್ನೂ ಅನುಸರಿಸಿಯೇ ಪ್ರತಿಪಾದಿಸುವುದು."—ಇದಕ್ಕಿಂತ ಸಮರ್ಪಕವಾದ ಗುರಿಯನ್ನು ಯಾವ ನಿಘಂಟುಕಾರರೂ ಇಟ್ಟುಕೊಳ್ಳಲಾರರು. A ಯಿಂದ ಹಿಡಿದು Z ವರೆಗೆ ಒಂದೇ ರೀತಿಯಲ್ಲಿ—ಮೊದ ಮೊದಲು ಯಾವ ಭಾಗವನ್ನೂ ಅತಿ ಹಿಗ್ಗಲಿಸದೆ, ಕೊನೆಕೊನೆಯಲ್ಲಿ ದೌಡಾಯಿಸದೆ—ಉದ್ದಕ್ಕೂ ವಿಹಿತವಾದ ಕ್ರಮದಲ್ಲಿ ಈ ಗುರಿಯನ್ನು ಸಾಧಿಸಿರುವುದು ಆಕ್ಸ್‌ಫರ್ಡ್ ನಿಘಂಟುಕಾರರ ಅಪೂರ್ವವಾದ ಪ್ರಶಸ್ತಿ.

ಈ ನಿಘಂಟಿನ ಕಟ್ಟಡವೆಲ್ಲ ಅನುಪಮವಾದ "ಪ್ರಯೋಗ" ಸಂಪತ್ತಿನ ಮೇಲೆ ನಿಂತಿದೆ. ಹದಿನೆಂಟು ಲಕ್ಷಕ್ಕೆ ಮಿಾರಿದ ಪ್ರಯೋಗಗಳನ್ನು ಗ್ರಂಥ ಶರೀರದಲ್ಲಿ ಕೊಟ್ಟಿದ್ದಾರೆಂದು ಕೇಳಿದ ಮಾತ್ರಕ್ಕೆ ಅವುಗಳ ಸಂಕಲನ ಕಾರ್ಯದ ಪೂರ್ಣಪ್ರಮಾಣ . ನಮಗೆ ಮನದಟ್ಟಾಗುವುದಿಲ್ಲ. ಈ ನಿಘಂಟಿನ ರಚನೆಗಾಗಿ ಸಮಗ್ರ ಇಂಗ್ಲಿಷ್ ಸಾಹಿತ್ಯವನ್ನು ಮೊದಲಿನಿಂದ ಕೊನೆಯವರೆಗೂ ಹೊಸದಾಗಿ ಶೋಧಿಸಬೇಕಾಯಿತು. ಅಲ್ಲಿಂದ ಶಬ್ದ ಶಬ್ದಕ್ಕೂ ಅವಶ್ಯಕವಾದ ಪ್ರಯೋಗಗಳನ್ನು ಉದ್ಧರಿಸಬೇಕಾಯಿತು. ಈ ನಿಘಂಟಿನಲ್ಲಿ ಉದಾಹರಿಸಿರುವ ಮುಖ್ಯ ಗ್ರಂಥಗಳ ಪಟ್ಟಿಯೊಂದೇ ೮೮ ದೊಡ್ಡ ಪುಟಗಳನ್ನು ಆಕ್ರಮಿಸಿದೆ; ಪುಟಪುಟಕ್ಕೂ ಸುಮಾರು ೨೭೦ ಹೆಸರುಗಳಿವೆ ಎಂದು ಕೇಳಿದ ಮೇಲೆ, ಶೋಧಿಸಿದ ಒಟ್ಟು ಗ್ರಂಥಗಳ ಸಂಖ್ಯೆಯೆಷ್ಟಿರಬಹುದೋ ವಾಚಕರೇ ಊಹಿಸಿಕೊಳ್ಳಬೇಕು. ಈ ನಿಘಂಟಿಗೆ ಉಪಯೋಗಿಸಿಕೊಳ್ಳದ ಗ್ರಂಥರಾಶಿಯೇ ಇಲ್ಲ. ಕಾವ್ಯಗಳು, ನಾಟಕಗಳು, ಕಥೆ ಕಾದಂಬರಿಗಳು, ಪ್ರಬಂಧಗಳು, ಶಾಸ್ತ್ರಗ್ರಂಥಗಳು, ಕಡತಗಳು (records) ಭಾಷಣಗಳು, ಪತ್ರಿಕೆಗಳು, ವರದಿಗಳು : ಭಾಷಾಪ್ರಯೋಗಕ್ಕೆ ಎಷ್ಟು ವಿಧದ ಹಳೆಯ, ಹೊಸ ದಾಖಲೆಗಳುಂಟೋ ಅಷ್ಟು ಮೂಲೆಗಳಿಗೂ ಈ ನಿಘಂಟುಮಹಾನದಿ ನುಗ್ಗಿದೆ. ಇಷ್ಟೊಂದು ದೊಡ್ಡ ಗ್ರಂಥರಾಶಿಯನ್ನು ಶೋಧಿಸಿ ಅಲ್ಲಿಂದ ಬೇಕಾದ ಪ್ರಯೋಗಗಳನ್ನು ಎತ್ತುವುದಕ್ಕೆ ಸಂಬಳ ಕೊಟ್ಟು ಜನರನ್ನು ನೇಮಿಸಬೇಕಾಗಿದ್ದೆ ಈ ನಿಘಂಟಿನ ಕಲ್ಪನೆ ಆಕಾಶದಲ್ಲೇ ಉಳಿದುಬಿಡುತ್ತಿತ್ತು. ಕೇವಲ ಭಾಷಾಭಿಮಾನದಿಂದ ಸಾವಿರಾರು ಖಾಸಗಿ ಜನಗಳು ಮುಂದೆ ಬಂದು ಪ್ರಯೋಗ ಸಂಗ್ರಹ ಕಾರ್ಯಕ್ಕೆ ಸೊಂಟ ಕಟ್ಟಿ ನಿಂತದ್ದರಿಂದ ನಿಘಂಟು ಮಹಾಕಾರ್ಯವು ಮುಂದೆ ಸಾಗಿತು. ಈ ವಾಚಕ ಸೇನೆಯಲ್ಲಿ ಹಲವರು ಈ ಕೆಲಸವನ್ನು ತಮ್ಮ ಜೀವಮಾನದ ವ್ರತವನ್ನಾಗಿ ಮಾಡಿಕೊಂಡರು. ತಾವು ಕೂಡಿಸಿದ ಒಂದೊಂದು ಪ್ರಯೋಗವನ್ನೂ ಬೇರೆ ಬೇರೆ ಚೀಟಿಗಳ ಮೇಲೆ ಬರೆಯುವುದು, ನಿಘಂಟು ಕಾರ್ಯಾಲಯಕ್ಕೆ ಕಳಿಸುವುದು—ಈ ಸ್ವಸಂತೋಷದ ದುಡಿತಕ್ಕೆ ೧೮೫೮ ರಿಂದಲೇ ಪ್ರಾರಂಭವಾಯಿತು. ೧೮೮೪ ರೊಳಗಾಗಲೇ ಒಬ್ಬಿಬ್ಬರು ಇಂಥ ಒಂದೂವರೆ ಲಕ್ಷ

ಚೀಟಿಗಳನ್ನು ಕಳುಹಿಸಿದ್ದರು. ಅಲ್ಲಿಂದ ಮುಂದಕ್ಕೂ ಈ ಕೆಲಸವು ಅವಿಚ್ಛಿನ್ನವಾಗಿ ನಡೆದೇ ಬಂದಿತು.

ಬೆಟ್ಟದಂತೆ ರಾಶಿ ಬೀಳುತ್ತಿದ್ದ ಈ ಪ್ರಯೋಗಗಳನ್ನು ಓದಿ, ವಿಂಗಡಿಸಿ ವಿಭಜಿಸಿ, ಕ್ರಮವಾಗಿ ಜೋಡಿಸಿ ಅನಾವಶ್ಯಕವಾದವನ್ನು, ತೆಗೆದುಹಾಕಿ, ಬೇಕಾದವನ್ನು ಹೊಸದಾಗಿ ಸೇರಿಸಿ, ಅದರಿಂದ ಶಬ್ದದ ಚರಿತ್ರೆಯನ್ನು ಕಡೆಯುವ ಕೆಲಸವು ನಿಘಂಟಿನ ಸಂಪಾದಕವರ್ಗಕ್ಕೂ ಅವರ ಸಹಕಾರಿಗಳಿಗೂ ಬಿದ್ದಿತು. ವಾಚಕರು, ಸಹಾಯಕರು, ಉಪಸಂಪಾದಕರು, ಸಂಪಾದಕರು, ಶೋಧಿಸುವವರು, ಸಲಹೆ ಕೊಡುವವರು, ಪ್ರೂಫ್ ನೋಡುವವರು—ಹೀಗೆ ಎಷ್ಟೊಂದು ಜನದ ಕೈವಾಡ! ಒಂದು ಶಬ್ದದ ಚರಿತ್ರೆಯನ್ನು ತಪ್ಪಿಲ್ಲದಂತೆ ನಿಷ್ಕರ್ಷಿಸಲು ಎಷ್ಟು ಕಾಲ ಹಿಡಿಯಿತು, ಎಷ್ಟು ಶ್ರಮ ಪಡಬೇಕಾಯಿತು ಎಂಬುದು ಜನಸಾಮಾನ್ಯಕ್ಕೆ ಗೊತ್ತಾಗುವುದಿಲ್ಲ. "Set" ಎಂಬ ಮೂರು ವರ್ಣದ ಒಂದು ಶಬ್ದದ ವ್ಯವಸ್ಥೆಗೆ ನಿಘಂಟು ಕಾರ್ಯಾಲಯದವರಿಗೆಲ್ಲಾ ಒಂಬತ್ತು ತಿಂಗಳ ಕೆಲಸ ಹಿಡಿಯಿತಂತೆ. ಹೀಗೆ ದಿನಗಳನ್ನು ನುಂಗಿದ ಪದಗಳು ಎಷ್ಟೋ! ಇಂಗ್ಲಿಷಿನಲ್ಲಿ ನೆಲಸಿರುವ ಅನ್ಯದೇಶ ಶಬ್ದಗಳ ಅರ್ಥವನ್ನು ನಿರ್ಣಯಿಸುವುದಕ್ಕೆ ಹೊರಗಿನ ವಿದ್ವಾಂಸರಿಗೆ ಮೇಲಿಂದ ಮೇಲೆ ಕಾಗದ ಬರೆಯಬೇಕಾಗುತ್ತಿತ್ತು. ಹೊಸದಾಗಿ ಸೃಷ್ಟಿಯಾದ ಶಬ್ದಗಳು ಇನ್ನೊಂದು ಬಗೆಯ ಕಷ್ಟವನ್ನು ಕೊಡುತ್ತಿದ್ದುವು. ಎಷ್ಟೋ ವೇಳೆ ಅವುಗಳ ಜನಕರಿಗೆ ಅವನ್ನು ಹೇಗೆ ಉಚ್ಚರಿಸಬೇಕೆಂಬುದೇ ನಿರ್ಧರವಾಗಿರುತ್ತಿರಲಿಲ್ಲ. "Gaseous" ಎಂಬ ಸಾಮಾನ್ಯ ಶಬ್ದವನ್ನು ಒಂದು ಸಭೆಯಲ್ಲಿ ಆರು ಜನ ದೊಡ್ಡ ಭೌತಶಾಸ್ತ್ರಜ್ಞರು ಆರು ವಿಧವಾಗಿ ಉಚ್ಚರಿಸಿದ್ದನ್ನು ಈ ನಿಘಂಟಿನ ಪ್ರಥಮ ಸಂಪಾದಕರು ಕೇಳಿದರಂತೆ! ಇದೆಲ್ಲಕ್ಕೂ ಕಠಿನವಾದದ್ದು ರೂಪನಿಷ್ಪತ್ತಿ. ಪ್ರಥಮ ಸಂಪುಟದ ಅವತರಣಿಕೆಯಲ್ಲಿ ಸಂಪಾದಕರು ಹೀಗೆ ಬರೆದಿದ್ದಾರೆ: "ಒಂದು ಲೇಖನವು ಐದಾರು ಪಂಕ್ತಿಗಳೊಳಗೆ ಅಡಕವಾಗಿರಬಹುದು; ಆದರೂ ಅದಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ಕಂಡುಹಿಡಿಯಲು ಕೆಲವು ವೇಳೆ ಎಷ್ಟು ಶ್ರಮಪಡಬೇಕಾಯಿತೆಂದು ಹೇಳಿದರೆ ಯಾರೂ ನಂಬುವುದಿಲ್ಲ; ಕೊನೆಗೆ 'ರೂಪನಿಷ್ಪತ್ತಿ ಗೊತ್ತಿಲ್ಲ' ಎಂಬ ಮಾತುಗಳನ್ನು ದೃಢವಾಗಿ ಬರೆಯುವುದಕ್ಕಾದರೂ ಎಷ್ಟು ಗಂಟೆಗಳ ಶೋಧನೆಯೂ, ಇತರ ಗ್ರಂಥಗಳಲ್ಲಿ ನಿಶ್ಶಂಕೆಯಿಂದ ಹೇಳಿಬಿಟ್ಟಿರುವುದರ ಪರೀಕ್ಷೆಯೂ ಬೇಕಾಯಿತು!" ಹೌದು. ನಿಘಂಟಿನ ಹೇಳಿಕೆ ನಮ್ಮ ಜನತೆ ಅನ್ನುವಂತೆ "ನಿಘಂಟಾ"ಗಬೇಕಾದರೆ ಎಷ್ಟು ಕಾಲ ಎಷ್ಟು ದುಡಿದರೂ ಸಾಲದು.

ಈ ಮಹಾಕಾರ್ಯಕ್ಕೆ ಪ್ರಥಮ ಸೂತ್ರಧಾರನಾಗಿ ನಿಂತು ನಿಘಂಟು ರಚನೆಯ ವ್ಯಾಪ್ತಿ ವಿವರಗಳನ್ನು ನಿರ್ಧರಿಸಿ ಅದರ ಕೆಲಸವನ್ನು ಅರ್ಧಕ್ಕೆ ಮೀರಿ ನಡಸಿದಾತನು ಜೆ.ಎ.ಎಚ್. ಮರೆ (J.A.H. Murray). ಈತನನ್ನು ಮುಖ್ಯ ಸಂಪಾದಕ ಪದವಿಗೆ ನೇಮಿಸುವುದಕ್ಕೆ ಇಪ್ಪತ್ತು ವರ್ಷ ಮುಂಚೆಯಿಂದಲೂ ಇಂಗ್ಲಿಷ್ ಫಿಲಲಾಜಿಕಲ್ ಸೊಸೈಟಿಯ (English Philological Society) ಆಶ್ರಯದಲ್ಲಿ ಪ್ರಯೋಗಗಳ

ಸಂಕಲನವು ನಡೆಯುತ್ತಿತ್ತು. ಆದರೂ ಯಾರೂ ನೆಲೆಯಾಗಿ ನಿಂತು ಸಂಪಾದಕ ಕಾರ್ಯವನ್ನು ನಿರ್ವಹಿಸಿರಲಿಲ್ಲ; ಇಷ್ಟು ದೊಡ್ಡ ಗ್ರಂಥವನ್ನು ಅಚ್ಚು ಹಾಕಿಸುವ ಭಾರವನ್ನು ಹೊರಲು ಯಾವ ಸಂಸ್ಥೆಯೂ ಮುಂದೆ ಬಂದಿರಲಿಲ್ಲ. ೧೮೭೮ರ ಹೊತ್ತಿಗೆ ಈ ವಿಘ್ನಗಳೆಲ್ಲ ಪರಿಹಾರವಾದುವು. ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನವರು ಪ್ರಕಾಶಕರಾಗಲು ಒಪ್ಪಿದರು; ಮರೆ ಪಂಡಿತನಿಗೆ ಸಂಪಾದಕತ್ವವನ್ನು ವಹಿಸಿ, ನಿಘಂಟನ್ನು ಮುಗಿಸಲು ಹತ್ತುವರ್ಷ ಕಾಲವನ್ನು ಕೊಟ್ಟರು. ಆ ಹತ್ತು ವರ್ಷ ಹೋಗಿ ಇಪ್ಪತ್ತಾಯಿತು, ಮೂವತ್ತಾಯಿತು; ನಿಘಂಟು ಮುಗಿಯುವ ಚಿಹ್ನೆಗಳು ಬೇರೆ ತೋರಲಿಲ್ಲ. ಇನ್ನೂ ಐದಾರು ವರ್ಷ ದಾಟಿ ೧೯೧೫ನೆಯ ಇಸವಿ ಬಂದಿತು; ಎಪ್ಪತ್ತೆಂಟು ವಯಸ್ಸಿನ ಮರೆ ತನ್ನ ಜೀವನವನ್ನೇ ಮುಗಿಸಿದನು. ನಿಘಂಟು ಮುಗಿಯುವುದಕ್ಕೆ ಇನ್ನೂ ಹದಿಮೂರು ವರ್ಷ ಬೇಕಾಯಿತು. ಆದರೂ ತಾನು ಸಾಯುವ ವೇಳೆಗೆ ಮರೆ ಒಟ್ಟು ನಿಘಂಟಿನ ಅರ್ಧಭಾಗವನ್ನು ಸ್ವಂತವಾಗಿ ಸಂಪಾದಿಸಿ ಅಚ್ಚು ಮಾಡಿಸಿದ್ದನು; ಇನ್ನೂ ಬಹುಭಾಗದ ಮೇಲುವಿಚಾರಣೆಯನ್ನು ನೋಡಿಕೊಂಡಿದ್ದನು. ಆಕ್ಸ್‌ಫರ್ಡ್ ನಿಘಂಟಿಗೆ 'ಮರೆಯ ನಿಘಂಟು' (*Murray's Dictionary*) ಎಂಬ ಇನ್ನೊಂದು ಹೆಸರು ಮೊದಲನಿಂದಲೂ ಬಂದಿದೆ; ಈಗಲೂ ಇದೆ. ಅದು ಅನುಚಿತವಲ್ಲ.

ಮರೆ ಸಂಪಾದಕನಾದ ಕೆಲವು ದಿನಗಳಲ್ಲೇ ಬೇರೊಬ್ಬಾತನು ನಿಘಂಟಿನ ಕಾರ್ಯಾಲಯಕ್ಕೆ ಸೇರಿದನು. ಈತನೇ ಹೆನ್ರಿ ಬ್ರ್ಯಾಡ್ಲೆ (Henry Bradley). ಬ್ರ್ಯಾಡ್ಲೆ ಮನೆತನವು ವಿದ್ವತ್ತಿಗೆ ಪ್ರಸಿದ್ಧವಾದದ್ದು. ಎಫ್.ಎಚ್. ಬ್ರ್ಯಾಡ್ಲೆ ಎಂಬಾತನು ಆಧುನಿಕ ತತ್ತ್ವಜ್ಞರಲ್ಲಿ ತುಂಬ ವಿಖ್ಯಾತನಾದವನು. ಆತನ ಸಹೋದರನಾದ ಎ.ಸಿ. ಬ್ರ್ಯಾಡ್ಲೆಯ ಹೆಸರನ್ನು ಷೇಕ್ಸ್ಪಿಯರ್ ನಾಟಕ ವ್ಯಾಸಂಗಕ್ಕೆ ಕೈಹಾಕಿರುವರೆಲ್ಲರೂ ಬಲ್ಲರು. ನಮ್ಮ ಹೆನ್ರಿ ಬ್ರ್ಯಾಡ್ಲೆ ಈ ಪ್ರಖ್ಯಾತ ಸಹೋದರರಿಗೆ ಹತ್ತಿರದ ಜ್ಞಾತಿಯಾಗಬೇಕು. ಆಕ್ಸ್‌ಫರ್ಡ್ ನಿಘಂಟಿಗೆ ಈತನು ಗಂಟುಬಿದ್ದ ಕಥೆ ಸ್ವಾರಸ್ಯವಾಗಿದೆ. ಬ್ರ್ಯಾಡ್ಲೆ ಮೊದಲಿಗೆ ಒಳನಾಡಿನ ಯಾವುದೋ ಒಂದು ಕಾರ್ಖಾನೆಯಲ್ಲಿ ಗುಮಾಸ್ತೆಯಾಗಿದ್ದನು; ಅದರಿಂದ ಸಂಸಾರ ತೂಗದೆ, ಪತ್ರಿಕೋದ್ಯೋಗಕ್ಕೆ ಸೇರಬೇಕೆಂದು ಆತನು ೧೮೮೪ರಲ್ಲಿ ಲಂಡನ್ನಿಗೆ ಬಂದು 'ಅಕ್ಯಾಡೆಮಿ' (Academy) ಎಂಬ ಪತ್ರಿಕೆಯ ಸಂಪಾದಕನನ್ನು ನೋಡಿದನು. ಆ ವೇಳೆಗೆ ಸರಿಯಾಗಿ ಮರೆಯ ನಿಘಂಟಿನ ಮೊದಲನೆಯ ಸಂಚಿಕೆ ಹೊರಬಿದ್ದಿತ್ತು. ಅದರಮೇಲೆ ಒಂದು ಉದ್ದವಾದ ವಿಮರ್ಶೆಯನ್ನು ಬರೆಯುವ ಕೆಲಸವೇ ಬ್ರ್ಯಾಡ್ಲೆಗೆ ದೊರೆಯಿತು. ಈ ವಿಮರ್ಶಕನ ಪ್ರಜ್ಞೆಯನ್ನೂ ಪಾಂಡಿತ್ಯವನ್ನೂ ಕಂಡು ಮರೆಗೆ ತುಂಬ ಮೆಚ್ಚಿಕೆಯಾಗಿ, ಆತನು ಬ್ರ್ಯಾಡ್ಲೆಯನ್ನು ನಿಘಂಟಿನ ಒಳರಂಗಕ್ಕೆ ಬರುವಂತೆ ಒತ್ತಾಯಪಡಿಸಿದನು. ಬ್ರ್ಯಾಡ್ಲೆ, ಆಕ್ಸ್‌ಫರ್ಡ್ ನಿಘಂಟು—ಈ ಉಭಯತ್ರರ ಭಾಗ್ಯಗಳೂ ಇಲ್ಲಿ ಸಂಧಿಸಿದುವೆಂದು ಹೇಳಬಹುದು. ಬ್ರ್ಯಾಡ್ಲೆಯದು ಅಸಾಧಾರಣ ಪ್ರತಿಭೆ. ಕೆಲಸಕ್ಕೆ ಸೇರಿದ ನಾಲ್ಕೈದು ವರ್ಷಗಳಲ್ಲೇ ನಿಘಂಟಿನ ಭಾಗಗಳನ್ನು ಸ್ವತಂತ್ರವಾಗಿ ಸಂಪಾದಿಸುವ ಗೌರವವನ್ನು ಈತನಿಗೆ ವಹಿಸಿದರು. ಮರೆ ಕಾಲವಾದ ಬಳಿಕ ತಾನು ಕಾಲವಾಗುವವರೆಗೆ ಈತನೇ ಮುಖ್ಯ ಸಂಪಾದಕನಾದನು. ಇವರಿಬ್ಬರಲ್ಲದೆ ಡಬ್ಲ್ಯು.ಎ. ಕ್ರೇಗಿ (W.A. Craigie)

ಸಿ.ಟಿ. ಅನಿಯನ್ಸ್ (C.T. Onions) ಎಂಬ ಇನ್ನಿಬ್ಬರು ವಿದ್ವಾಂಸರೂ ಬೇರೆ ಬೇರೆ ಕಾಲಗಳಲ್ಲಿ ಸಂಪಾದಕ ಪದವಿಗೆ ಏರಿದರು. ಈ ಕೊನೆಯವರಿಬ್ಬರ ಆಡಳಿತದಲ್ಲೇ ನಿಘಂಟು ಪೂರ್ಣಗೊಂಡದ್ದು.

ಆಕ್ಸ್‌ಫರ್ಡ್ ನಿಘಂಟಿನ ಶೈಶವದಲ್ಲಿ ಅದಕ್ಕೆ 'ಹೊಸ ಇಂಗ್ಲಿಷ್ ನಿಘಂಟು' (*The New English Dictionary*) ಎಂದು ನಾಮಕರಣ ಮಾಡಿದ್ದರು. ಆದರೆ ಎರಡು ತಲೆಮಾರುಗಳ ಕಾಲದಲ್ಲಿ ಭಾಗಭಾಗವಾಗಿ ಹೊರಬೀಳುತ್ತಿದ್ದ ಈ ನಿಘಂಟು "ಹೊಸದು" ಎಂಬ ಹೆಸರಿಗೆ ಹೇಗೆ ಪಾತ್ರವಾಗುತ್ತದೆ! ಭಾಷೆಯಲ್ಲಿರುವ ಒಂದು ಶಬ್ದವನ್ನೂ ಬಿಡದೆ, ಅದರ ರೂಪ ವೈವಿಧ್ಯ ಅರ್ಥವೈಚಿತ್ರ್ಯವೆಲ್ಲವನ್ನೂ ಹಲವು ಮಂದಿ ಕಣ್ಣಿನಲ್ಲಿ ಕಣ್ಣಿಟ್ಟುಕೊಂಡು ಶೋಧಿಸಿ ಗುರುತಿಸಿರಬಹುದು. ಆದರೆ ವರ್ಣ ಮಾಲೆಯ ಒಂದು ಅಕ್ಷರವನ್ನು ಮುಗಿಸಿ ಸುಧಾರಿಸಿಕೊಂಡು ಮತ್ತೊಂದರ ಕಡೆಗೆ ತಿರುಗುವಷ್ಟರಲ್ಲಿಯೇ ಹಿಂದಿನ ಅಕ್ಷರದ ಸಂತತಿಯಲ್ಲಿ ನೂತನ ಶಬ್ದಶಿಶುವೊಂದು ಅವತರಿಸಿ ಈ ಪತ್ತೇದಾರರು ಮೈಕೈ ಪರಚಿಕೊಳ್ಳುವಂತೆ ಮಾಡಬಹುದು. ಇಂಗ್ಲಿಷ್ ಭಾಷೆ ದಿನದಿನಕ್ಕೂ ಬೆಳೆಯುತ್ತಿರುವ ಭಾಷೆ; ನಿನ್ನೆಯ ಸಂಜೆ ಇಲ್ಲದಿದ್ದ ಶಬ್ದವೋ ಪ್ರಯೋಗವೋ ಈ ದಿನ ಬೆಳಗ್ಗೆ ವೃತ್ತಪತ್ರಿಕೆಗಳಲ್ಲಿ ಬಂದಿರುತ್ತದೆ. ಕುಂಟುಗಾಲಿನ ನಿಘಂಟು ಇದರ ಸಮಕ್ಕೆ ಓಡುವುದು ಹೇಗೆ? ಸಿನಿಮ ಎಂಬ ಶಬ್ದವನ್ನು—ಇಂಗ್ಲೆಂಡಿನ ಮಾತಿರಲಿ—ನಮ್ಮ ದೇಶದ ಮಕ್ಕಳೂ ಬಲ್ಲವು. ಆದರೆ ಆಕ್ಸ್‌ಫರ್ಡ್ ನಿಘಂಟಿನ ಮುಖ್ಯ ಶರೀರದ ಹದಿನೈದು ಸಾವಿರ ಪುಟಗಳನ್ನು ಮೊದಲಿನಿಂದ ಕೊನೆಯವರೆಗೆ ತಿರುವಿ ಹಾಕಿದರೂ ಅದು ಕಣ್ಣಿಗೆ ಬೀಳುವುದಿಲ್ಲ. Back number, birth control, broadcasting, foolproof, highbrow, lip-stick, pep, pullover, radium, waiting list—ಈ ಮೊದಲಾದ ಪದಗಳು ಇಂಗ್ಲಿಷ್ ಬಲ್ಲವರೆಲ್ಲರ ಬಾಯಲ್ಲೂ ಈಗ ಓಡಾಡುತ್ತಿವೆ. ಆದರೆ ಆಕ್ಸ್‌ಫರ್ಡ್ ನಿಘಂಟಿನ ಮುಖ್ಯಭಾಗವು ಅವನ್ನ ಅರಿಯದು. ಏಕೆಂದರೆ, ಇವೆಲ್ಲ ಬಳಕೆಗೆ ಬಂದದ್ದು ನಿಘಂಟಿನ ಆಯಾ ಸಂಪುಟವು ಪ್ರಕಟವಾದ ಈಚೆಗೆ. ಇದರ ಮೇಲೆ, ಮನುಷ್ಯನ ಕೈವಾಡ ಯಾವುದನ್ನು ತಾನೆ ತೋರಿಸಿ ಇದು ಪರಿಪೂರ್ಣ ಎಂದು ಹೇಳಬಹುದು? ಅದರಲ್ಲೂ ಇಷ್ಟು ದೊಡ್ಡ ಕೃತಿಯಲ್ಲಿ ಕೈತಪ್ಪುಗಳೂ ಪ್ರಮಾದಗಳೂ ಆಗುವ ಸಂಭವ ಇದ್ದೇ ಇರುತ್ತದೆ; ಎಷ್ಟೋ ಶಬ್ದಗಳಿಗೆ ಪ್ರಾಚೀನತರವಾದ ಪ್ರಯೋಗಗಳು ಆಗಾಗ ಕಣ್ಣಿಗೆ ಬೀಳುತ್ತಲೇ ಇರುತ್ತವೆ. ಈ ಲೋಪ ದೋಷಗಳನ್ನೆಲ್ಲಾ ತಿದ್ದಿ ಸರಿಪಡಿಸಿ, ಹೊಸ ಹೊಸ ಪದಗಳನ್ನು ಶೇಖರಿಸಿ ಆಕ್ಸ್‌ಫರ್ಡ್ ನಿಘಂಟಿಗೆ ನಿಜವಾಗಿಯೂ ಸಮಗ್ರತೆಯನ್ನು ಕೊಡಲು ಪರಿಶಿಷ್ಟವೊಂದು ಅಗತ್ಯವಾಯಿತು. ಇದರ ಅವಶ್ಯಕತೆಯನ್ನು ಮರೆ ಪಂಡಿತನೇ ಅರಿತಿದ್ದನು. ಆದ್ದರಿಂದ ಮುಖ್ಯ ಗ್ರಂಥದ ಜೊತೆಗೇ 'ಪರಿಶಿಷ್ಟ'ದ ರಚನೆಯೂ ಸಾಗಿತು. ಈಗ ಐವತ್ತು ವರ್ಷಗಳಿಂದೀಚೆಗೆ ಇಂಗ್ಲಿಷ್ ಭಾಷೆ ಬೆಳೆದಿರುವ ರೀತಿಯನ್ನು ಈ ಪರಿಶಿಷ್ಟದಿಂದ ಚೆನ್ನಾಗಿ ಅರಿಯಬಹುದು. ಈ ಯುಗದಲ್ಲಿ ವೈಜ್ಞಾನಿಕ ಸಂಶೋಧನೆ, ಯಂತ್ರನಿರ್ಮಾಣ—ಈ ಶಾಖೆಗಳಲ್ಲೇ ಶಬ್ದಸೃಷ್ಟಿ ಬಲು ಹೆಚ್ಚು. ಮಹಾಯುದ್ಧವಂತೂ ಹಲವು ಹೊಸ ಪದಗಳನ್ನೂ

ಪ್ರಯೋಗಗಳನ್ನೂ ಒದಗಿಸಿದೆ. ಹಾಗೆಯೇ ಕ್ರೀಡಾಪ್ರಪಂಚದ (The world of Sport) ನುಡಿಗಳಿಗೂ ಇಲ್ಲಿ ತುಂಬ ಸ್ಥಾನವು ದೊರೆತಿದೆ. ಬೆಡಗು, ಭೋಗಸಾಮಗ್ರಿ, ಚಿತ್ತಕ್ಷೋಭೆ ಇವುಗಳನ್ನು ಗುರುತಿಸುವ ಹಲವು ಮಾತುಗಳು ಇಲ್ಲಿ ಮೊದಲು ತಲೆಯೆತ್ತಿವೆ. ಈ ಕನ್ನಡಿಯಲ್ಲಿ ಆಧುನಿಕ ನಾಗರಿಕತೆ ತನ್ನ ಮುಖವನ್ನು ಚೆನ್ನಾಗಿ ನೋಡಿಕೊಳ್ಳಬಹುದು.[೧]

ಇಂಗ್ಲಿಷ್ ಶಬ್ದಶಾಸ್ತ್ರಕ್ಕೆ ಆಕ್ಸ್‌ಫರ್ಡ್ ನಿಘಂಟು ಪರಮಪ್ರಮಾಣವಾದರೂ ಅದರ ಉಪಯೋಗವನ್ನು ಪಡೆಯಬಲ್ಲವರು ಎಲ್ಲೋ ಕೆಲವು ಮಂದಿ. ಇದಕ್ಕೆ ಅದರ ಬೆಲೆಯೂ ಗಾತ್ರವೂ ಮುಖ್ಯ ಕಾರಣಗಳು. ಆದ್ದರಿಂದ ದೊಡ್ಡ ಗ್ರಂಥವು ಮುಗಿಯುವ ಹೊತ್ತಿಗೆ *The Shorter Oxford Dictionary* ಎಂಬ ಅದರ ಸಂಗ್ರಹವೊಂದು ಎರಡು ಸಂಪುಟಗಳಲ್ಲಿ ಹೊರಬಿದ್ದಿತು. ಇದರ ಬೆಲೆ ಕೂಡ ಜನಸಾಮಾನ್ಯದ ಹವಣಿಗೆ ಮೀರಿದ್ದೇ. ಭಾಷಾಪಂಡಿತರು ಹೊರತು ಮಿಕ್ಕವರ ಉಪಯೋಗಕ್ಕೆಲ್ಲಾ, ಫೌಲರ್ ಸಹೋದರರು (F.G. and H.W. Fowler) ಆಕ್ಸ್‌ಫರ್ಡ್ ನಿಘಂಟಿನ ಆಧಾರದ ಮೇಲೆ ಹಲವು ವರ್ಷಗಳಿಗೆ ಹಿಂದೆಯೇ ರಚಿಸಿದ *Concise Oxford Dictionary*[2] ಸಾಕು. ಇದು ಕೂಡ ಭಾರವೆನ್ನುವವರಿಗೇ ಅದೇ ಸಂಗ್ರಾಹಕರ *Pocket Oxford Dictionary* ಇದೆ. ಇದರ ಬೆಲೆ ಕಡಮೆಯಾದರೂ ನಿಜವಾಗಿ ಜೇಬಿಗೆ ಹಿಡಿಸುವಷ್ಟು ಅದು ಸಣ್ಣದಲ್ಲ. ಆದ್ದರಿಂದ ಹೆಚ್ಚು ವಿಷಯ ಬಿಟ್ಟುಹೋಗದಂತೆ ಅನುಭವಸ್ಥನಾದ ಮುದ್ರಣಕಾರನೊಬ್ಬನು *The Little Oxford Dictionary* ಎಂಬ ಹೆಸರಿನಿಂದ ಮೂಲಮಹಾನಿಘಂಟಿನ ಕಿರಿಯ ಮರಿಯೊಂದನ್ನು ರಚಿಸಿದನು; ಈ ಕೊನೆಯದರ ಬೆಲೆ ಒಂದೇ ರೂಪಾಯಿ. ಗ್ರಾಹಕರು ತಮ್ಮ ಅಗತ್ಯವನ್ನೂ ಆಳವನ್ನೂ ನೋಡಿಕೊಂಡು ಯಾವುದನ್ನೂ ಬೇಕಾದರೂ ಕೊಳ್ಳಬಹುದು.

ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟಿನ ಮಹಾವೈಭವವನ್ನು ನೋಡಿ ನಮ್ಮ ಮನೆಗೆ ಹಿಂದಿರುಗುವಾಗ, "ಕನ್ನಡದ ಮಾತೇನು?" ಎಂಬ ಪ್ರಶ್ನೆ ಒಬ್ಬಿಬ್ಬರ ತಲೆಯಲ್ಲಾದರೂ ಮೂಡಬಹುದು. "ಏನೂ ಇಲ್ಲ" ಎಂದು ಕೈಯಾಡಿಸುವ ದೈನ್ಯಕ್ಕೆ ಗುರಿಯಾಗದಂತೆ, ಜರ್ಮನ್ ಮಿಷನರಿಗಳೊಬ್ಬರು ಕನ್ನಡ-ಇಂಗ್ಲಿಷ್ ನಿಘಂಟನ್ನು ನಮಗೆ ದಯಪಾಲಿಸಿದ್ದಾರೆ. ಇದೂ ತೂಕವಾದ ಗ್ರಂಥವೇ; ಇದರಲ್ಲಿ ೧೭೫೦ಕ್ಕೆ ಮೀರಿ ಪುಟಗಳಿವೆ. ಇದನ್ನು ರಚಿಸಲು ಕಿಟ್ಟೆಲ್ (F. Kittel) ಪಂಡಿತನಿಗೆ ಹದಿನೆಂಟು ವರ್ಷಗಳು ಹಿಡಿದುವು. ಇಂದಿಗೂ ಕನ್ನಡ ಕಾವ್ಯಗಳಲ್ಲಿ ನಡುನಡುವೆ ಅಡ್ಡಗಟ್ಟುವ ಕ್ಲಿಷ್ಟಪದಗಳಿಗೆ ಅರ್ಥ

---

೧. ಮುಖ್ಯ ಕೃತಿಯಂತೆಯೇ ಈ 'ಪರಿಶಿಷ್ಟ'ವು ಮುಗಿದಾಗಲೂ ಒಂದು ಸಂತೋಷೋತ್ಸವವು ನಡೆಯಿತು. ಆ ಸಮಾರಂಭದಲ್ಲಿ ಪ್ರೊ. ಗಾರ್ಡನ್ ಎಂಬವರು ಮಾಡಿದ ಭಾಷಣವು ಈ ಅಂಶವನ್ನು ಉಜ್ಜ್ವಲವಾಗಿ ಚಿತ್ರಿಸುತ್ತದೆ. *The periodical* ಎಂಬ ಪತ್ರಿಕೆ (March 1934) ಈ ಭಾಷಣವನ್ನೂ ಆಕ್ಸ್‌ಫರ್ಡ್ ನಿಘಂಟಿಗೆ ಸಂಬಂಧಿಸಿದ ಹಲವು ವಿಚಾರಗಳನ್ನು ಪ್ರಕಟಿಸಿದೆ. ಪ್ರಸ್ತುತ ಲೇಖನಕ್ಕೆ ಇದು ಮುಖ್ಯವಾದ ಆಧಾರ.

೨. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟಿಗೆ ಇದೇ ತಳಹದಿ.

ತಿಳಿಯುವುದಕ್ಕೆ ಈ ನಿಘಂಟಿನ ಹಾಳೆಗಳನ್ನು ಮಗುಚುವುದೇ ಮುಖ್ಯ ಸಾಧನ. ಆದರೆ ಇದರಲ್ಲಿ ಎಷ್ಟೋ ಸಲ, ಅರ್ಥದ ಮಾತಿರಲಿ ಹುಡುಕುತ್ತಿದ್ದ ಶಬ್ದವೇ ತಪ್ಪಿಸಿಕೊಳ್ಳುವ ಸಂಭವವುಂಟು. ಹಳೆಯ ಕಾವ್ಯಗಳನ್ನು ಓದುವವರಿಗೂ ಓದಿಸುವವರಿಗೂ ಇದು ದಿನಚರಿಯ ನಿರಾಶೆ. ಕಿಟ್ಟೆಲ್ ನಿಘಂಟಿನಿಂದ ನಮ್ಮ ಮಾನ ಉಳಿದಿರಬಹುದೇ ಹೊರತು, ಕೋರಿದ ಉಪಯೋಗಗಳೆಲ್ಲ ಸಿದ್ಧಿಸುವ ಹಾಗಿಲ್ಲ. ಇದಕ್ಕೆ ಹಲವು ಕಾರಣಗಳುಂಟು. ಈ ನಿಘಂಟನ್ನು ರಚಿಸುವ ಕಾಲಕ್ಕೆ 'ಪಂಪಭಾರತ' 'ಗದಾಯುದ್ಧ' ಗಳಂಥ ಪ್ರಾಚೀನ ಮಹಾಕಾವ್ಯಗಳೇ ಕಿಟ್ಟೆಲ್ ಪಂಡಿತನಿಗೆ ದೊರೆತಿರಲಿಲ್ಲ. ಈಗ ಅಚ್ಚಾಗಿರುವ ಹಳಗನ್ನಡದ ಇನ್ನೂ ಹಲವು ಕಾವ್ಯಗಳು ಬೆಳಕಿಗೆ ಬಂದದ್ದು ಈಚೆಗೆ. ಇದಲ್ಲದೆ ಕನ್ನಡಿಗರ ಚರಿತ್ರೆಗೂ ಭಾಷೆಗೂ ದೊಡ್ಡ ಸಾಕ್ಷಿಯಾದ ಶಾಸನಗಳ ಉಪಯೋಗವೂ ಈ ನಿಘಂಟಿನ ರಚನೆಗೆ ದೊರೆಯಲಿಲ್ಲ. ಆಧುನಿಕ ಸಾಹಿತ್ಯದಲ್ಲಂತೂ ಗಣ್ಯವಾದ ಗ್ರಂಥಗಳು ಹೊರಬೀಳುತ್ತಿರುವುದು ಕಿಟ್ಟೆಲ್ ಕಾಲದಿಂದ ಎಷ್ಟೋ ಈಚೆಗೆ. ಈಗ ಇಂಗ್ಲಿಷಿನಂತೆಯೇ ಕನ್ನಡದಲ್ಲಿಯೂ ಹೊಸ ಹೊಸ ಶಬ್ದಗಳು ಹುಟ್ಟುತ್ತಿವೆ; ಹೊರಗಿನಿಂದ ಭಾಷೆಗೆ ಬಂದು ಸೇರುತ್ತಿವೆ. ಈ ಸಾಮಗ್ರಿಯನ್ನೆಲ್ಲಾ ಒಳಕೊಳ್ಳದ ಒಂದು ನಿಘಂಟು ಈ ಕಾಲದಲ್ಲಿ, ಅದರಲ್ಲೂ ಆಕ್ಸ್‌ಫರ್ಡ್ ನಿಘಂಟಿನ ಮಹಾಜ್ಯೋತಿಯನ್ನು ನೋಡಿ ಕೋರೈಸಿಹೋದ ಕಣ್ಣುಗಳಿಗೆ, ಹೇಗೆ ತಾನೆ ತೃಪ್ತಿ ಕೊಟ್ಟೀತು!

ಆದರೆ ಭೂಮಂಡಲವನ್ನೇ ಸುತ್ತುಗಟ್ಟಿರುವ ಇಂಗ್ಲಿಷ್ ಭಾಷೆಯಲ್ಲಿ, ಹಿಂದೂ ದೇಶದ ದಕ್ಷಿಣದ ಮೂಲೆಯೊಂದರಲ್ಲಿ ಹುದುಗಿರುವ ಕನ್ನಡವೆಲ್ಲಿ!—ಎಂದು ಯಾರಾದರೂ ಹಾಸ್ಯ ಮಾಡಬಹುದು. ನಿಜ. ನಮ್ಮಲ್ಲಿ ಆ ಜನಸಂಪತ್ತೂ ಇಲ್ಲ, ಶಬ್ದ ಸಂಪತ್ತೂ ಇಲ್ಲ; ಆಕ್ಸ್‌ಫರ್ಡ್ ನಿಘಂಟನ್ನು ಸರಿಗಟ್ಟಬೇಕೆಂಬ ಹೆಬ್ಬಕೆಯೂ ಇಲ್ಲ; ಆಕ್ಸ್‌ಫರ್ಡ್ ನಿಘಂಟನ್ನು ಸರಿಗಟ್ಟಬೇಕೆಂಬ ಹೆಬ್ಬಯಕೆಯೂ ಇಲ್ಲ. ಆದರೆ ನಾವು ಚಿಕ್ಕವರಾದ ಮಾತ್ರಕ್ಕೆ ತಲೆಯೆತ್ತಿ ನೋಡಲೇ ಕೂಡದೇ? ಆ ಪ್ರದೀಪದಿಂದ ನಮ್ಮದೊಂದು ಸಣ್ಣ ಹಣತೆಯನ್ನು ಹೊತ್ತಿಸಿಕೊಂಡು ನಮ್ಮ ಕುಟೀರವನ್ನು ಬೆಳಗಿಕೊಳ್ಳಕೂಡದೆ? ಪ್ರಮಾಣಭೂತವಾದ ಒಂದು ನಿಘಂಟನ್ನು ರಚಿಸುವುದು ಬಯಸಿದ ಕೂಡಲೇ ಗಗನದಲ್ಲಿ ಏರುವ ಗಾಳಿಯ ಗೋಪುರವೇನೋ ಅಲ್ಲ. ಮೊಟ್ಟಮೊದಲು ಇದರ ತಳಹದಿಯೇ ಎಷ್ಟೋ ಆಳಕ್ಕೆ ಇಳಿಯಬೇಕು; ಪ್ರಯೋಗ ಸಂಗ್ರಹ, ವ್ಯಾಸಂಗ, ಚರ್ಚೆ, ಪರಿಶೋಧನೆ—ಇದೆಷ್ಟೋ ನಡೆಯಬೇಕು. ಆದರೆ ಈ ಕಾರ್ಯಕ್ಕೆ ನೆಲವಿನ್ನೂ ಹದವಾಗಿಲ್ಲ, ಸಲಕರಣೆಗಳು ಸರಿಯಾಗಿಲ್ಲ ಎಂದು ನಾವು ಕೈಕಟ್ಟಿ ಕುಳಿತರೆ ಈ ಅನುಕೂಲತೆಯೆಲ್ಲ ಒದಗುವುದಾದರೂ ಎಂದಿಗೆ?

ಇಂಥ ನಿಘಂಟುಗಳ ರಚನೆಗೆ ನಮ್ಮ ದೇಶದಲ್ಲಿಯೂ ಉದಾಹರಣೆಗಳಿಲ್ಲದೆ ಹೋಗಿಲ್ಲ. ಮದರಾಸು ವಿಶ್ವವಿದ್ಯಾನಿಲಯದವರು ಹಣವನ್ನು ನೀರಿನಂತೆ ಸುರಿದು 'ತಮಿಳು ಮಹಾಕೋಶ'ವನ್ನು (*The Tamil Lexicon*) ಸಿದ್ಧಪಡಿಸುತ್ತಿದ್ದಾರೆ. ಅದು ಎಷ್ಟೋ ವರ್ಷಗಳಿಂದ ಭಾಗಭಾಗವಾಗಿ ಹೊರಬೀಳುತ್ತಿದೆ. ಅತ್ತ ಸಿಂಹಳದ್ವೀಪದಲ್ಲಿ

ರಾಯಲ್ ಏಷಿಯಾಟಿಕ್ ಸೊಸೈಟಿಯ ಶಾಖೆಯವರು ಸರ್ಕಾರದ ಬೆಂಬಲವನ್ನು ಪಡೆದು ಸಿಂಘಳಿ ನಿಘಂಟುವಿನ ನಿರ್ಮಾಣಕ್ಕೆ ಕೈಹಾಕಿ ಆಗಲೇ ಏಳು ವರ್ಷಗಳು ದುಡಿದಿದ್ದಾರೆಂದೂ ಮೊನ್ನೆ ತಾನೆ ಅದರ ಪ್ರಥಮ ಸಂಪುಟವನ್ನು ಹೊರಕ್ಕೆ ತಂದಿದ್ದಾರೆಂದೂ ಕೇಳುತ್ತೇವೆ. ಸರೀಕರಂತೆ ನಾವೂ ಕೆಲಸ ಮಾಡಬೇಕೆಂಬ ಹುರುಡೂ, ಆಕ್ಸ್‌ಫರ್ಡ್ ನಿಘಂಟಿನ ಮೇಲ್ಪಂಕ್ತಿಯೂ, ಸಾವಿರ ವರ್ಷಗಳಿಗೆ ಹಿಂದಿನಿಂದ ಅವಿಚ್ಛಿನ್ನವಾಗಿ ಬೆಳೆದುಬಂದ ಗ್ರಂಥರಾಶಿಯೂ ನಮಗಿರುವಾಗ ಕನ್ನಡ ಮಹಾನಿಘಂಟು ಎಂದಿಗೂ ಕನಸಾಗಿಯೇ ಉಳಿಯಲಾರದು. ನಮ್ಮ ಹಂಬಲ ಮೊದಲು ಹಿರಿದಾಗಲಿ; ಸಿದ್ಧಿಯೂ ಹತ್ತಿರಕ್ಕೆ ಬರುತ್ತದೆ. "ಜೀವನ್ ಭದ್ರಾಣಿ ಪಶ್ಯತಿ."

೧೯೩೪]

ಇತ್ತೀಚೆಯ ಮಾತು

ಕಾಲಚಕ್ರದ ಪರಿವರ್ತನೆಯಲ್ಲಿ ಮೇಲಿನ ಹಂಬಲಿಕೆ ಕನಸಾಗಿಯೇ ಉಳಿಯಲಿಲ್ಲ. ಸವಿಸ್ತರವಾದ ಸಪ್ರಮಾಣವಾದ 'ಕನ್ನಡ ನಿಘಂಟಿ'ನ ರಚನೆಗೆ ಕನ್ನಡ ಸಾಹಿತ್ಯ ಪರಿಷತ್ತು ೧೯೪೩ರಲ್ಲಿ ಕೈಹಾಕಿತು; ನಾಡಿನ ವಿದ್ವಾಂಸರ ಸಹಕಾರವನ್ನು ದೊರಕಿಸಿಕೊಂಡಿತು. ಈಚೆಗೆ ಮೈಸೂರು ರಾಜ್ಯದ ಸರಕಾರದ ಧನಸಹಾಯವೂ ಒದಗುತ್ತಿದೆ. ಸಾವಕಾಶವಾದರೂ ಸಾವಧಾನವಾಗಿ ನಿಘಂಟಿನ ಕೆಲಸ ಮುಂದೆ ಸಾಗುತ್ತಿದೆ. ಅದರ ರೂಪ ರಚನೆ ಹೇಗಿರುತ್ತದೆಂಬುದನ್ನು ತೋರಿಸುವ 'ಮೊದಲ ಎಂಟು ಪುಟಗಳ ಕರಡು ಪ್ರತಿ' ಕಳೆದ ವರ್ಷ ಹೊರಬಿದ್ದಿತು[೩]...ಹೌದು, "ಜೀವನ್ ಭದ್ರಾಣಿ ಪಶ್ಯತಿ"! ಆರಂಭ ಮಂಗಳವನ್ನಂತೂ ಕಂಡೆವು; ಸಮಾಪ್ತಿ ಮಂಗಳವೂ ಆದಷ್ಟು ಬೇಗ ಸಿದ್ಧಿಸಲಿ.

ಸಮಾಲೋಕನ : ೧೯೫೮

●

೩. ಈಗ ಇದರ ನಾಲ್ಕು ಸಂಪುಟಗಳು ಹೊರಬಿದ್ದಿವೆ. (ಸಂ.)

ಭಾಗ ೫

ಛಂದಸ್ಸು

'ಚತ್ತಾಣ' ಮತ್ತು 'ಬೆದಂಡೆ'

"ಚತ್ತಾಣ", "ಬೆದಂಡೆ" ಎಂಬುವು 'ಕವಿರಾಜಮಾರ್ಗ'ದ ಕಾಲಕ್ಕೇ (ಎಂದರೆ ಹನ್ನೊಂದು ಶತಮಾನಗಳ ಹಿಂದೆಯೇ) ಕನ್ನಡದಲ್ಲಿ ಪ್ರಸಿದ್ಧವಾಗಿದ್ದ ಕಾವ್ಯಪ್ರಭೇದಗಳು.

ನುಡಿಗೆಲ್ಲಂ ಸಲ್ಲದ ಕ-
ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ-
ಗಡಿನ ನೆಗಟ್ತೆಯ ಕಬ್ಬದೊ-
ಳೊಡಂಬಂ ಮಾಡಿದರ್ ಪುರಾತನ ಕವಿಗಳ್

ಎಂಬ ಪದ್ಯದಲ್ಲಿ (ಕವಿರಾ., ೧.೩೨) ಈ ಹೆಸರುಗಳು ಮೊದಲು ಕಾಣಿಸಿಕೊಳ್ಳುತ್ತವೆ. ಈ ಪದ್ಯದ ಅರ್ಥವು ನಿಸ್ಸಂದೇಹವಾಗಿ ತಿಳಿದಿದೆಯೆಂದು ಹೇಳಲು ಆಗದಿದ್ದರೂ, ಅದರ ಅಭಿಪ್ರಾಯವಂತೂ ಸ್ಪಷ್ಟ "ನುಡಿಗೆಲ್ಲಂ ಸಲ್ಲದ" ಎಂಬ ಉಕ್ತಿಯನ್ನು[೧] ನೋಡಿದರೆ, ಈ ಚತ್ತಾಣ-ಬೆದಂಡೆಗಳು ಬೇರೆ ಭಾಷೆಗಳಲ್ಲಿ ಇಲ್ಲ, ಕನ್ನಡದಲ್ಲಿ ಮಾತ್ರ ಪ್ರಚುರವಾಗಿವೆ ಎಂದು ಕವಿರಾಜಮಾರ್ಗಕಾರನು ತಿಳಿಸುವಂತೆ ತೋರುತ್ತದೆ. ಇದಕ್ಕೆ

---

೧. "ಸಲ್ಲದ" ಎಂಬುದಕ್ಕೆ "ಸಕ್ಕದ" ಎಂದು ಒಂದು ಹಸ್ತಪ್ರತಿಯಲ್ಲಿ ದೊರೆಯುವ ಪಾಠಾಂತರವು ಅಪಪಾಠವೆಂದು ತೋರುತ್ತದೆ.
ಈ ಲೇಖನದಲ್ಲಿ ಉದಾಹರಿಸುವ ಪದ್ಯ ಮೊದಲಾದವುಗಳಲ್ಲಿ ಅವಶ್ಯವೆನಿಸಿದ ಕಡೆ ಮಾತ್ರ ಪಾಠಾಂತರಗಳನ್ನು ಗಮನಿಸುತ್ತೇವೆ.

ಪೋಷಕವಾಗಿ, ನಾವು ಬಲ್ಲಮಟ್ಟಿಗೆ, ಸಂಸ್ಕೃತದ ವಿಸ್ತಾರವಾದ ಅಲಂಕಾರಶಾಸ್ತ್ರ ಗ್ರಂಥರಾಶಿಯಲ್ಲಿ ಎಲ್ಲಿಯೂ ಇವುಗಳ ಉಲ್ಲೇಖವಿಲ್ಲ; ಪ್ರಾಕೃತದಲ್ಲಿ ಕೂಡ ಈ ಹೆಸರುಗಳು ಕಾಣಬರುವುದಿಲ್ಲ. ಕನ್ನಡದಲ್ಲಾದರೆ ಚತ್ತಾಣ-ಬೆದಂಡೆಗಳು ಇದ್ದುದು ಮಾತ್ರವಲ್ಲ; 'ಕವಿರಾಜಮಾರ್ಗ'ದ ಕಾಲದಲ್ಲಿ "ನೆಗಟ್ತೆ" ವಡೆದು ಪ್ರಸಿದ್ಧವೂ ಆಗಿದ್ದುವು. "ಒಡಂಬಡಂ ಮಾಡಿದರ್ ಪುರಾತನ ಕವಿಗಳ್" ಎಂಬ ವಾಕ್ಯಕ್ಕೆ, ಇವು ಹೊಸದಾಗಿ ತಲೆಯೆತ್ತಿದ ಕಾವ್ಯಪ್ರಕಾರಗಳಲ್ಲ; ಹಿಂದಿನ ಕವಿಗಳು ಆಗಲೆ ಇದನ್ನು ಅಂಗೀಕರಿಸಿದ್ದರು, ಎಂದರೆ ಈ ಬಗೆಯ ಕಾವ್ಯಗಳನ್ನು ರಚಿಸಿದ್ದರು—ಎಂದು ಅರ್ಥಮಾಡಬಹುದು. ಇದಕ್ಕೆ ತಕ್ಕ ಹಾಗೆ :

> ಪರಮ ಶ್ರೀವಿಜಯ ಕವೀ-
> ಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳಾ
> ನಿರತಿಶಯವಸ್ತು ವಿಸ್ತರ-
> ವಿರಚನೆ ಲಕ್ಷ್ಯಂ ತದಾದ್ಯ ಕಾವ್ಯಕ್ಕೆಂದುಂ

ಎಂಬ ಮುಂದಿನ ಪದ್ಯದಲ್ಲಿಯೇ (೧.೩೩) ಕನ್ನಡದ "ಆದ್ಯಕಾವ್ಯ" ಪ್ರವರ್ತಕರಾದ ಕವಿಗಳ ಹೆಸರುಗಳನ್ನು ಕೊಟ್ಟಿರುವುದರಿಂದ, ಈ ಮೊದಲ ಕಾವ್ಯಗಳಲ್ಲಿ ಕೆಲವಾದರೂ ಚತ್ತಾಣ-ಬೆದಂಡೆ ಜಾತಿಗಳಿಗೆ ಸೇರಿದವಾಗಿರಬೇಕು, ಈ ಕವಿಗಳಲ್ಲಿ ಕೆಲವರಾದರೂ ಅವುಗಳ ಕರ್ತೃಗಳಾಗಿರಬೇಕು ಎಂದು ಊಹಿಸಿದರೆ ತಪ್ಪಾಗಲಾರದು.

ಈ ಪುರಾತನ ಕೃತಿಗಳಲ್ಲಿ ಯಾವುದೊಂದೂ ಇದುವರೆಗೆ ದೊರೆತಿಲ್ಲವೆಂಬುದು ಸಾಹಿತ್ಯಾಭ್ಯಾಸಿಗಳಿಗೆ ತಿಳಿದಿರುವ ಸಂಗತಿ. 'ಕವಿರಾಜಮಾರ್ಗ'ಕ್ಕಿಂತ ಈಚಿನ ಕೃತಿಗಳಲ್ಲಿಯೂ ಯಾವುದೂ ಕೂಡ ಈ ಎರಡು ಪ್ರಭೇದಗಳಲ್ಲಿ ಒಂದಕ್ಕೆ ಸೇರಿದ್ದೆಂದು ನಿರ್ದಿಷ್ಟವಾಗಿ ಉಕ್ತವಾಗಿಲ್ಲ. ಚತ್ತಾಣ, ಬೆದಂಡೆ ಎಂಬ ಹೆಸರುಗಳು ಮಾತ್ರ ಅಲ್ಲೊಮ್ಮೆ ಇಲ್ಲೊಮ್ಮೆ-ಕೆಲವು ಲಕ್ಷಣ ಗ್ರಂಥಗಳಲ್ಲೂ ಬೇರೆ ಕಡೆಗಳಲ್ಲೂ-ತಲೆಹಾಕಿ ಆ ಬಳಿಕ ಕಣ್ಮರೆಯಾಗುತ್ತವೆ. ಇಂದಿನ ನಮ್ಮ ಕಿವಿಗೆ ಈ ಎರಡು ಶಬ್ದರೂಪಗಳೇ ಕೆಲಮಟ್ಟಿಗೆ ವಿಲಕ್ಷಣವೆನ್ನಿಸುತ್ತವೆ. ಹೀಗಿರುವುದರಿಂದ ಈ ಕಾವ್ಯಜಾತಿಗಳ ಹೆಸರು, ಸ್ವರೂಪ, ಪ್ರಾಚುರ್ಯ ಮೊದಲಾದವನ್ನು ಕುರಿತು ವಿವೇಚನಾಸಕ್ತಿ ಹುಟ್ಟುವುದು ಸಹಜ. ಈ ಹಿಂದೆಯೇ ಒಬ್ಬಿಬ್ಬರು ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಸಂಬಂಧವಾಗಿ ದೊರೆಯುವ ಪರಿಮಿತ ಸಾಮಗ್ರಿಯನ್ನು ಒಟ್ಟುಗೂಡಿಸಿ, ಪರಿಶೀಲಿಸಿ, ಇದರಿಂದ ಹೊರಡುವ ಕೆಲವು ಅಂಶಗಳನ್ನೂ ಊಹೆಗಳನ್ನೂ ರೂಪಿಸುವುದು ನಮ್ಮ ಲೇಖನದ ಉದ್ದೇಶ.

ಕನ್ನಡದ ಪ್ರಾಚೀನ ಲಕ್ಷಣಗ್ರಂಥಗಳ ಕಡೆಗೇ ಮೊದಲು ತಿರುಗೋಣ. 'ಕವಿರಾಜಮಾರ್ಗ'ದಲ್ಲಿ ಬೆದಂಡೆ-ಚತ್ತಾಣಗಳ ಸ್ವರೂಪವನ್ನು ಈ ಕೆಳಗಿನ ಎರಡು ಪದ್ಯಗಳು ತಿಳಿಸಿ, ಅಷ್ಟಕ್ಕೇ ವಿರಮಿಸುತ್ತವೆ; ಇವು "ಪರಮ ಶ್ರೀವಿಜಯ..." ಎಂದು ಈಗಾಗಲೆ ಉದಾಹರಿಸಿರುವ ಪದ್ಯ (೧.೩೩) ವಾದ ಕೂಡಲೆ ಬರುತ್ತವೆ :

ಕಂದಮುಮಮಳಿನವೃತ್ತಮು-
ಮೊಂದೊಂದೆಡೆಗೊಂದು ಜಾತಿ ಜಾಣೆಸೆಯೆ ಬೆಡಂ-
ಗೊಂದಿವಱೊಳಮರೆ ಪೇೞಲ್
ಸುಂದರರೂಪಿಂ ಬೆದಂಡೆಗಬ್ಬಮದಕ್ಕುಂ (೧.೩೪)

ಕಂದಂಗಳ್ ಪಲವಾಗಿರೆ
ಸುಂದರವೃತ್ತಂಗಳಕ್ಕರಂ ಚೌಪದಿ ಮ-
ತ್ತಂ ದಲ್ ಗೀತಿಕೆ ತಿವದಿಗ-
ಳಂದಂಬೆತ್ತೆಸೆಯೆ ಪೇೞ್ದೊಡದು ಚತ್ತಾಣಂ (೧.೩೫)

ಎರಡನೆಯ ನಾಗವರ್ಮನ (ಕ್ರಿ.ಶ. ಸುಮಾರು ೧೧೪೫) 'ಕಾವ್ಯಾವಲೋಕನ'ದಲ್ಲಿ ಈ ಸಂಬಂಧವಾಗಿ ಬಂದಿರುವ ಪದ್ಯಗಳು ಕೆಳಗೆ ಕಂಡಂತೆ ಇವೆ :

ಸಂದಿಸಿರೆ ಕಂದಮುಂ ಪೆಱ-
ತೊಂದಱಿಕೆಯ ವೃತ್ತಜಾತಿಯುಂ ಪದಮವು ತ-
ಳ್ತೊಂದಿರೆ ಪನ್ನೆರಡುವರಂ
ಸಂದುದು ಮೆಲ್ವಾಡೆನಿಕ್ಕುಮದು ಕನ್ನಡದೊಳ್

ಪದಿನಯ್ದುಮಿರ್ಪತಯ್ದುಂ
ಪದಂ ಯಥಾಸಂಭವಂ ಪ್ರಬಂಧದ ಮೆಯ್ಯೊಳ್
ಪುದಿದೊದವಿ ನೆಗೞ್ದೊಡಂತದು
ಸದಲಂಕಾರಂ ರಸಾಸ್ಪದಂ ಪಾಡಕ್ಕುಂ

ಪಾಡುಗಳಿಂದಂ ತಱಿಸಲೆ
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ-
ಡಾಡುವರದಱಿಂ[3] ದಲ್ ಮೆ-
ಲ್ವಾಡುಂ ರೂಢಿಯ ಬೆದಂಡೆಗಬ್ಬಮುಮಕ್ಕುಂ

ಪಲತೆಱದ ಪದ್ಯದಿಂದಂ
ಲಲಿತವಚೋರಚನನಿಚಯಪದ್ಧತಿಕೆಗಳಿಂ
ಸಲೆ ನಿಲೆ ಸಮೆದುದು ಸರಸಾ-
ಖಿಲವರ್ಣನಮಾದೊಡದುವೆ ಬಾಜನೆಗಬ್ಬಂ (೯೫೨-೫೫)

---

೨. ಈ ಪದ್ಯದ ಮೂರನೆಯ ಚರಣದ ಪಾಠವನ್ನು ಶ್ರೀ ಕೆ.ಬಿ. ಪಾಠಕ್ ಅವರ 'ಕವಿರಾಜಮಾರ್ಗ'ದ ಪರಿಷ್ಕರಣವನ್ನು ಅನುಸರಿಸಿ ಕೊಟ್ಟಿದೆ. ಶ್ರೀ ಎ. ವೆಂಕಟರಾವ್ ಮತ್ತು ಶ್ರೀ ಎಚ್. ಶೇಷಅಯ್ಯಂಗಾರ್ ಅವರ ಪರಿಷ್ಕರಣದಲ್ಲಿ "ದಲ್ ಗೀತಿಗೆ ತಿವಿದಿ..." ಎಂದು ಅಚ್ಚಾಗಿದೆ.

೩. "-ಅದಱಿಂ" ಎಂಬುದಕ್ಕೆ "-ಇನ್ನದು" ಎಂದು ಪಾಠಾಂತರವುಂಟು.

'ಕಾವ್ಯಾವಲೋಕನ'ಕ್ಕೆ ಸರಿಸುಮಾರು ಸಮಕಾಲದ್ದೋ ಸ್ವಲ್ಪ ಈಚಿನದೋ ಆದ 'ಉದಯಾದಿತ್ಯಾಲಂಕಾರ'ದಲ್ಲಿ ಈ ಪದ್ಯ ದೊರೆಯುತ್ತದೆ :

ಕನ್ನಡದೊಳ್ ಚಂಪೂಕೃತಿ
ಸನ್ನುತತರ ವಚನಕಾವ್ಯಮೆನಿಕುಂ ಚತ್ತಾ-
ಣಂ ನೆಱೆ ವೈದಂಡಕಮೆನೆ
ಸನ್ನುತಿಯಂ ಸರ್ಗಬಂಧಕೃತಿ ತಳೆದಿರ್ಕುಂ (೬)

ಮೊದಲು ಇಷ್ಟು ಸಾಮಗ್ರಿಯನ್ನು ಮುಂದಿಟ್ಟುಕೊಂಡು ವಿಚಾರಕ್ಕೆ ತೊಡಗಬಹುದು. ಉದಯಾದಿತ್ಯನ ಹೇಳಿಕೆಯ ಮೇರೆಗೆ, ಗದ್ಯಪದ್ಯ ಮಿಶ್ರವಾದ ಚಂಪೂಕಾವ್ಯಕ್ಕೆ "ವಚನಕಾವ್ಯ" ಎಂಬುದು ಇನ್ನೊಂದು ಹೆಸರು.[೪] ಚಂಪುವಿಗಿಂತ ಭಿನ್ನವಾದ "ಸರ್ಗಬಂಧಕೃತಿ"ಯಲ್ಲಿ, ಎಂದರೆ ಪದ್ಯಗಳನ್ನು ಮಾತ್ರ ಉಳ್ಳ ಕಾವ್ಯದಲ್ಲಿ,[೫] ಚತ್ತಾಣ, ವೈದಂಡಕ ಎಂಬುವು ಪ್ರಭೇದಗಳು. ಇಲ್ಲಿ ಚತ್ತಾಣದ ಜೊತೆಗೆ ಬಂದಿರುವ "ವೈದಂಡಕ" ಎಂಬದು "ಬೆದಂಡೆ"ಗೆ ಸಮಾನಾರ್ಥಕವೇ ಸರಿ. ಕೇಶಿರಾಜನ 'ಶಬ್ದಮಣಿದರ್ಪಣ'ದ (ಕ್ರಿ.ಶ. ಸುಮಾರು ೧೨೬೦) "ಪ್ರಯೋಗಸಾರವೆಂಬ ಶಬ್ದಾರ್ಥನಿರ್ಣಯ" ಭಾಗದಲ್ಲಿ ಕಾಣಬರುವ "ಬೆದಂಡೆಯೆಂದು ವೈದಂಡಿಕಂ" ಎಂಬ ಉಲ್ಲೇಖ (ಪುಟ ೨೮೨) ಈ ಅಭಿಪ್ರಾಯವನ್ನು ದೃಢಪಡಿಸುತ್ತದೆ; ಅಲ್ಲಿಯೇ "ಚತ್ತಾಣಮೆಂದೊಂದು ಕಾವ್ಯಂ" ಎಂಬ ಮಾತೂ (ಪುಟ ೨೮೦) ಬರುತ್ತದೆ.[೬] (ವೈದಂಡಕ, ವೈದಂಡಿಕ–ಇವುಗಳಲ್ಲಿ ಎರಡನೆಯದೇ ಸರಿಯಾದ ರೂಪ.) ಇಷ್ಟು ತಿಳಿದಮೇಲೆ, "ಬೆದಂಡೆ" ಎಂಬುದು "ವೈದಂಡಿಕ"ದ

---

೪. ಚಂಪೂಕಾವ್ಯಗಳಲ್ಲಿ ಪದ್ಯಗಳ ನಡುವೆ ವಿಪುಲವಾಗಿ ಬರುವ ಗದ್ಯಖಂಡಗಳಿಗೆ "ವಚನ" ಎಂಬ ಹೆಸರಿರುವುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಹೀಗೆ ಈ "ವಚನ"ಗಳು "ಚಂಪು"ವನ್ನು ಕೇವಲ ಪದ್ಯಮಯವಾದ ಕಾವ್ಯದಿಂದ ಪ್ರತ್ಯೇಕಿಸುವುದರಿಂದ ಅದನ್ನು "ವಚನ ಕಾವ್ಯ"ವೆಂದು ಕರೆದಿರಬೇಕು.

೫. "ಪದ್ಯದೊಳೆ ಸರ್ಗಬಂಧಂ ಗದ್ಯದೊಳಾಖ್ಯಾಯಿಕಾ ಕಥಾಯುತಂ..." (ಉದಯಾ., ೫) ; "ದೊರೆವೆತ್ತ ಪದ್ಯದಿಂದ ವಿರಚಿಸಿದುದು ಸರ್ಗಬಂಧಮಕ್ಕುಂ ಕಾವ್ಯಂ" (ಕಾವ್ಯಾವ., ೯೫೦).

೬. ಇಲ್ಲಿ ಕೊಟ್ಟಿರುವ ಪುಟ, ಸೂತ್ರ ಮೊದಲಾದವುಗಳ ಸಂಖ್ಯೆಗಳು ಶ್ರೀ ಡಿ.ಎಲ್. ನರಸಿಂಹಾಚಾರ್ಯರ ಪರಿಷ್ಕರಣಕ್ಕೆ (೧೯೫೯) ಅನ್ವಯಿಸುತ್ತವೆ.

"ಬೆದಂಡೆ" ಎಂಬ ಶಬ್ದವು "ಸ್ವಭಾವದಿಂದ ನಿತ್ಯಬಿಂದು" ಎಂದು 'ಶಬ್ದಮಣಿ ದರ್ಪಣ'ದಲ್ಲಿ ಸೂತ್ರ ೪೬ರ ಕೆಳಗೆ ಉಕ್ತವಾಗಿದೆ. "ನುಡಿಗೆಲ್ಲಂ ಸಲ್ಲದ..." ಎಂಬ 'ಕವಿರಾಜಮಾರ್ಗದ'ದ ಇಡಿ ಪದ್ಯ 'ಶಬ್ದಮಣಿ ದರ್ಪಣ'ದ ಹಲವು ಹಸ್ತಪ್ರತಿಗಳಲ್ಲಿ ಸೂತ್ರ ೧೦೮ರ ಕೆಳಗೆ ಉದಾಹೃತವಾಗಿದೆ. ಡಾ. ಕಿಟೆಲ್ ಅವರ ೧೮೭೨ನೆಯ ಇಸವಿಯ ಪರಿಷ್ಕರಣದಲ್ಲೂ ಅವರ *Kannada-English Dictionary* ಯೊಳಗಿನ ಉದ್ಧರಣದಲ್ಲೂ (ಪುಟ ೬೩೪) ಈ ಪದ್ಯದ "ಚತ್ತಾಣ"ದ ಸ್ಥಾನದಲ್ಲಿ "ಜತ್ತಾಣ" ಎಂದು ಪಾಠವಿದೆ.

ತದ್ಭವ ರೂಪವೆಂದು ಡಾ. ಎಫ್. ಕಿಟೆಲ್ ಅವರನ್ನು ಅನುಸರಿಸಿ ಒಪ್ಪಬಹುದು.[೭]

ಬೆದಂಡೆಯ ಸ್ವರೂಪನ್ನೇ ಮೊದಲು ಗಮನಿಸೋಣ. ನಾಗವರ್ಮನು ಪದ, ಪಾಡು, ಮೆಲ್ವಾಡು, ಬೆದಂಡೆ—ಇವನ್ನು ಕುರಿತು ಒಟ್ಟಿಗೆ ಪ್ರಸ್ತಾವಿಸುತ್ತಾನೆ. ಅವನು ಕೊಟ್ಟಿರುವ ಲಕ್ಷಣಗಳ ಮೇರೆಗೆ, ಒಂದಕ್ಕೂ ಮತ್ತೊಂದಕ್ಕೂ ಅಲ್ಲಿ ಸೇರುವ ಪದ್ಯಗಳ ಸಂಖ್ಯೆಯಲ್ಲಿ ವ್ಯತ್ಯಾಸವೇ ಹೊರತು ಮೂಲಸ್ವರೂಪದಲ್ಲಿ ಭೇದವೇನೂ ಗೋಚರಿಸುವುದಿಲ್ಲ. ಅವನ ಹೇಳಿಕೆಯಂತೆ, ಕಂದವೂ ಪ್ರಸಿದ್ಧವಾದ ("ಅಜಿಕೆಯ") ಬೇರೊಂದು ವೃತ್ತಜಾತಿಯೂ ಜೊತೆಗೂಡಿ ಬಂದರೆ "ಪದ"ವಾಗುತ್ತದೆ. "ಅವು" (=ಆ ಜೊತೆಗೂಡಿದ ಕಂದವೃತ್ತಗಳು, ಎಂದರೆ "ಪದ"ಗಳು) ಹನ್ನೆರಡರತನಕ ಒಟ್ಟಾಗಿ ಬಂದರೆ "ಮೆಲ್ವಾಡು" ಆಗುತ್ತದೆ. ಹದಿನೈದು ಅಥವಾ ಇಪ್ಪತ್ತೈದು "ಪದ"ಗಳು ಕಾವ್ಯಶರೀರದಲ್ಲಿ ಅಳವಟ್ಟರೆ "ಪಾಡು" ಆಗುತ್ತದೆ. ಪಾಡುಗಳಿಂದ ಘಟಿತವಾದುದ್ದನ್ನೇ ವಿದ್ವಾಂಸರು "ಪಾಡಗಬ್ಬ" (=ಹಾಡತಕ್ಕ ಕಾವ್ಯ) ಎನ್ನುತ್ತಾರೆ. ಅದರಿಂದಲೇ "ಮೆಲ್ವಾಡೂ" "ಬೆದಂಡೆಗಬ್ಬ"ವೂ ಆಗುತ್ತವೆ. ಫಲಿತಾಂಶವೇನೆಂದರೆ, ಕಂದ ಮತ್ತು ಒಂದು ಪ್ರಸಿದ್ಧ ಜಾತಿಯ ವೃತ್ತ ಇವು ಕೂಡಿದರೆ "ಪದ"; ಈ ಪದವೇ ಇಲ್ಲಿನ ಶ್ರೇಣಿಯಲ್ಲಿ ಹೆಸರಿಸಿರುವ ಪದ್ಯಜಾತಿಗಳಿಗೆಲ್ಲ ಮೂಲಘಟಕ. ಈ ಕಂದ-ವೃತ್ತಗಳ ಸಂಖ್ಯೆಗೆ ಅನುಸಾರವಾಗಿ ಮೆಲ್ವಾಡು, ಪಾಡು ಮುಂತಾದವು ಏರ್ಪಡುತ್ತವೆ. ಬೆದಂಡೆಗಬ್ಬದಲ್ಲಿ ಕಂದ-ವೃತ್ತಗಳ ಸಂಖ್ಯೆ ಎಷ್ಟಿರಬೇಕೆಂದು ನಾಗವರ್ಮನು ಖಚಿತಪಡಿಸಿಲ್ಲ. 'ಕಾವ್ಯಾವಲೋಕನ'ದ ೯೫೪ನೆಯ ಪದ್ಯದ ಮೂರನೆಯ ಚರಣದಲ್ಲಿ "ಅದಱಿಂ ದಲ್" ಎಂಬುದಕ್ಕಿಂತ "ಇನ್ನದು ದಲ್" ಎಂಬುದೇ ಸಮಂಜಸ ತರವಾದ ಪಾಠವೆಂದು ಅಂಗೀಕರಿಸಿದಲ್ಲಿ, "ಪಾಡುಗಬ್ಬ" ಎಂಬುದು ಸಾಮಾನ್ಯ ಜಾತಿವಾಚಕ ಶಬ್ದವೆಂದೂ ಅದರಲ್ಲಿ "ಮೆಲ್ವಾಡು", "ಬೆದಂಡೆ" ಮೊದಲಾದ ಬಗೆಗಳು ಅಡಕವಾಗುತ್ತವೆಂದೂ ಭಾವಿಸಬಹುದು. "ಮೆಲ್ವಾಡಿ"ಗೆ "ಬೆದಂಡೆ" ಎಂಬುದು ಇನ್ನೊಂದು ಹೆಸರು ಮಾತ್ರ ಎಂದು ಶ್ರೀ ರಾ. ನರಸಿಂಹಾಚಾರ್ಯರು ಅಭಿಪ್ರಾಯ

ಬೊಮ್ಮರಸನ 'ಚತುರಾಸ್ಯನಿಘಂಟು' (ಕ್ರಿ.ಶ. ಸುಮಾರು ೧೪೫೦), ಲಿಂಗಮಂತ್ರಿಯ 'ಕಬ್ಬಿಗರ ಕೈಪಿಡಿ' (ಕ್ರಿ.ಶ. ಸುಮಾರು ೧೫೩೦), ತೊಂಟದಾರ್ಯನ 'ಕರ್ಣಾಟಕ ಶಬ್ದಮಂಜರಿ' (ಕ್ರಿ.ಶ. ೧೫೬೦)—ಈ ನಿಘಂಟುಗಳು ಪ್ರಸ್ತುತ ಶಬ್ದಗಳೊಳಗೆ ಒಂದನ್ನೋ ಎಲ್ಲವನ್ನೋ ಉಲ್ಲೇಖಿಸಿರುವುದುಂಟು. (ಡಾ. ಕಿಟೆಲ್ ಅವರ ನಿಘಂಟಿನಲ್ಲಿ ಚತ್ತಾಣ, ಬೆದಂಡೆ ಶಬ್ದಗಳ ಕೆಳಗೆ ಕೊಟ್ಟಿರುವ ಪರಾಮರ್ಶಗಳನ್ನು ನೋಡಿ.) ಇವಕ್ಕೆಲ್ಲ 'ಶಬ್ದಮಣಿದರ್ಪಣ'ದ ಹೇಳಿಕೆಗಳೇ ಮೂಲಾಧಾರವೆಂದು ತೋರುತ್ತದೆ.

೭. F. Kittel : *Kannada-English Dictionary*, Page. 1138.
"ವೈದಂಡಿಕ"ದ ನಿಷ್ಪತ್ತಿಯನ್ನು ಕುರಿತು ಪ್ರಸುತ ಲೇಖನದಲ್ಲಿ ಮುಂದೆ ಬರುವ ಚರ್ಚೆಯನ್ನು ಗಮನಿಸಿ.

ಪಡುತ್ತಾರೆ.[೮] ಈ ಜಾತಿಯ ಕಾವ್ಯದಲ್ಲಿ ಸಂಖ್ಯಾವಿಭೇದಗಳನ್ನು ಬಿಟ್ಟರೆ ಒಂದು ಮುಖ್ಯಾಂಶ ಎದ್ದುಕಾಣುತ್ತದೆ; ಇದರಲ್ಲಿ ಬರುವ ಛಂದಸ್ಸು ಎರಡೇ ಬಗೆಯದು— ಕಂದ, ಜೊತೆಗೆ ಯಾವುದಾದರೂ ಒಂದು ಪ್ರಸಿದ್ಧವೃತ್ತ. ಹೆಚ್ಚಿನ ವೈವಿಧ್ಯಕ್ಕೆ ಇಲ್ಲಿ ಅವಕಾಶವಿಲ್ಲ.

'ಕವಿರಾಜಮಾರ್ಗ'ದ "ಬೆದಂಡೆ"ಯ ಕಡೆಗೆ ಇನ್ನು ತಿರುಗಬಹುದು. ಅಲ್ಲಿಯ "ಕಂದಮುಂ ಅಮಳಿನವೃತ್ತಮುಂ ಒಂದೊಂದೆಡೆಗೆ ಒಂದು ಜಾತಿ..." ಎಂಬ ಉಕ್ತಿಯ ಖಚಿತವಾದ ಅರ್ಥವೇನು? ಕಂದದ ಜೊತೆಗೆ ಬರುವ ಅಮಳಿನ [=ಒಳ್ಳೆಯ="ಅಜಿಕೆಯ" (?)] ವೃತ್ತವು ಒಂದೊಂದು ಜಾಗದಲ್ಲಿ ಒಂದೊಂದು ಜಾತಿಯದಾಗಿರಬೇಕೆಂದೆ? ಇಲ್ಲವೆ, ಒಂದೊಂದು ಎಡೆಗೆ (=ಮಧ್ಯಮಧ್ಯದಲ್ಲಿ) ಒಂದೇ ಜಾತಿಯದು ಬರಬೇಕೆಂದೆ? ಎರಡನೆಯ ಅರ್ಥವೇ ಸಂಭಾವ್ಯವೆಂದು ತೋರುತ್ತದೆ. ಮೊದಲನೆಯದು ಸರಿಹೊಂದಬೇಕಾದರೆ "ಒಂದೊಂದೆಡೆಗೆ ಒಂದೊಂದು ಜಾತಿ ಎಂದು ಮೂಲಪಾಠ ಇರಬೇಕಾಗಿತ್ತಲ್ಲವೆ? ನಾಗವರ್ಮನ ಮತಕ್ಕೂ ನಮ್ಮ ಅರ್ಥ ಹೊಂದಿಕೆಯಾಗುತ್ತದೆ; ಬೆದಂಡೆಯೆಂಬ ಪಾಡುಗಬ್ಬದ ತಳಹದಿಯಾದ "ಪದ"ದಲ್ಲಿ ಮೇಲೆ ನೋಡಿದಂತೆ ಕಂದದೊಂದಿಗೆ ಒಂದೇ ವೃತ್ತ ಜಾತಿ ತಾನೆ ಸೇರಬೇಕಾದದ್ದು. ಅಂತೂ 'ಕವಿರಾಜಮಾರ್ಗ', 'ಕಾವ್ಯಾವಲೋಕನ' ಈ ಎರಡರ ಮತದಂತೆಯೂ ಬೆದಂಡೆಯಲ್ಲಿ ಕಂದಗಳೂ ನಡುನಡುವೆ ಒಂದೇ ಜಾತಿಯ ವೃತ್ತಗಳೂ ಸೇರಿ ಬಂದಿರಬೇಕೆಂದು ನಿರ್ಣಯಿಸಬಹುದು.

ಬೆದಂಡೆಯನ್ನು ಪಾಡುಗಬ್ಬವೆಂದು ನಾಗವರ್ಮನು ನಿರ್ದೇಶಿಸಿರುವುದರಲ್ಲಿ ಯಥಾರ್ಥತೆಯುಂಟು. ಇದನ್ನು ಹಾಡುತ್ತಿದ್ದರೆಂಬುದಕ್ಕೆ ಕನ್ನಡ ಸಾಹಿತ್ಯದಲ್ಲಿ ಸಮರ್ಥನೆ ದೊರೆಯುತ್ತದೆ. ಆಂಡಯ್ಯನ 'ಕಬ್ಬಿಗರ ಕಾವ'ದಲ್ಲಿ (ಕ್ರಿ.ಶ. ಸುಮಾರು ೧೨೩೫) ಶಿವನು ರವಿಮುಖನೆಂದು ಜೊನ್ನವಕ್ಕಿ ಕಾಮನಿಗೆ ಬಿನ್ನವಿಸುತ್ತಾ,

"ಮತ್ತಮಾತಂ...ಬೆದಂಡೆಯೊಳಾದೊಡಂ ಪಾಡೆಂಬುದಂ...ಸೈರಿಸಂ"

ಎಂದು ಹೇಳುತ್ತದೆ. (೧೮೯೩ರ ಮುದ್ರಣ. ೧೪೮). ಶಿವನಿಗೆ ಹಾಡು ಎಂದರೆ ಆಗದು; ಬೆದಂಡೆಯೆಂಬ ಕಾವ್ಯಪ್ರಭೇದವನ್ನು ಕುರಿತು ಪ್ರಸ್ತಾವಿಸುವಾಗ ಕೂಡ "ಪಾಡು" ಎಂಬ ಮಾತನ್ನು ಅವನ ಮುಂದೆ ಎತ್ತಕೂಡದು ಎಂದು ಇಲ್ಲಿಯ ಆಶಯ.

ಇದಕ್ಕಿಂತಲೂ ಮುಖ್ಯವೂ ಸ್ವಾರಸ್ಯಜನಕವೂ ಆದ ನಿದರ್ಶನವೆಂದರೆ, ಮಲ್ಲಿಕಾರ್ಜುನನಿಂದ ಸಂಕಲಿತವಾದ 'ಸೂಕ್ತಿಸುಧಾರ್ಣವ'ದಲ್ಲಿ (ಕ್ರಿ.ಶ. ಸುಮಾರು ೧೨೪೫) ಬರುವ ಈ ಪದ್ಯ (೮.೧೩೪) :

---

೮. "...a comparison of Nagavarma's definition of *melvāḍu* with that of *bedaṇḍegabbam* found in the *kavi-rājamārga*, leads one to suspect that *bedaṇḍe* (Sanskrit *vai-dandika?*) is only another name for *melvādu*". R. Narasimhachar (Ed.) *Kāvyāvalōkana*, Introduction, Page 37.

ಕಱು ತಡೆದತ್ತು ಕಂಚನುೞಲೂಮನೆಯೂಕೆಗಳುಯ್ದುರಕ್ಕ ಮಿಂ-
ದೆಱೆಯಪನಾಱಿದಪ್ಪನಸಗಂ ಮಡಿದಾರನೆ ಕೂಸನೇತಕೆಂ-
ದಱಿಯೆನದೊಂದು ಸೋಂಕಿದುದು ಪಾಡುವರಲ್ಲಿ ಬೆದಂಡೆ ತೊತ್ತನೆ-
ತ್ತಱಿಸುವೆನೆಂದು ಪೋಪ ನೆವಮಂ ಸಮಕಟ್ಟುವರಲ್ಲಿ ಪಾಣ್ಬೆಯರ್ ॥

ಈ ಪದ್ಯದ ಕರ್ತೃ ಯಾರೋ ತಿಳಿಯದು. ಜಾರಸ್ತ್ರೀಯರು ಸಂಜೆಯ ವೇಳೆಯಲ್ಲಿ ಮನೆಯನ್ನು ಬಿಟ್ಟು ತಮ್ಮ ಪ್ರಿಯರ ಬಳಿಗೆ ಹೋಗಲು ಒಡ್ಡುವ ತೋರಿಕೆಯ ನೆವಗಳನ್ನು ಈ ಪದ್ಯ ಪಟ್ಟಿಮಾಡುತ್ತದೆ. "ಅಲ್ಲಿ ಬೆದಂಡೆಯನ್ನು ಹಾಡುತ್ತಾರೆ; ಅದನ್ನು ಕೇಳಲು ಹೋಗುತ್ತೇನೆ" ಎನ್ನುವುದು ಇಂಥ ಒಂದು ನೆವ. ಈ ಜಾರೆಯರು ಮನೆಯಿಂದ ಹೊರಬಿದ್ದ ಕೆಲಹೊತ್ತಿನಲ್ಲಿ—ಅತಿಶೀಘ್ರವಲ್ಲದ, ಅತಿವಿಳಂಬವೂ ಅಲ್ಲದ ಕಾಲಾವಧಿಯಲ್ಲಿ—ಹಿಂದಿರುಗಬೇಕಾದ ಸಂದರ್ಭ ಇದು. ಮೇಯಲು ಹೋಗಿ ಇನ್ನೂ ಹಿಂದಕ್ಕೆ ಬಾರದ ಕರುವನ್ನು ಹುಡುಕುವುದು, ಅತಿಸಮೀಪವೂ ಅತಿ ದೂರವೂ ಅಲ್ಲದಿರುವ ಮನೆಯ ಹೆಂಗಸರು ("ಊ ಮನೆಯ ಊಕೆಗಳ್") ತೆಗೆದುಕೊಂಡು ಹೋಗಿದ್ದ ಊಟದ ತಳಿಗೆಯನ್ನು ಹಿಂದಕ್ಕೆ ಪಡೆದು ತರುವುದು, ತಡಮಾಡಿದ ಅಗಸನ ಮನೆಯಿಂದ ಮಡಿ ಬಟ್ಟೆಯನ್ನು ತರುವುದು–ಇಂಥ ಮಧ್ಯಪರಿಮಿತಿಯ ಕಾಲದ ಕಾರ್ಯಗಳ ಸಾಲಿಗೆ ಬೆದಂಡೆಯ ಹಾಡಿಕೆಯನ್ನು ಕೇಳಿಕೊಂಡು ಸೇರುತ್ತದೆ.[೯] ಇದರಿಂದ ಒಂದು ಬೆದಂಡೆ ಸಾಮಾನ್ಯವಾಗಿ ಎಷ್ಟು ಉದ್ದವಾಗಿರಬಹುದು ಎಂಬುದನ್ನು ಅರಿಯಲು ಸೂಚನೆಯೂ ದೊರೆಯುತ್ತದೆಯಲ್ಲವೆ! ಅದು ಅತಿಹ್ರಸ್ವವೂ ಅತಿ ದೀರ್ಘವೂ ಅಲ್ಲದ ಕೃತಿಯಾಗಿದ್ದಿರಬೇಕು.

ಬೆದಂಡೆಯ ಮೂಲರೂಪವೆಂದು ತೋರುವ 'ವೈದಂಡಿಕ' ಶಬ್ದದ ಕಡೆಗೆ ಇನ್ನು ತಿರುಗೋಣ. ಇದು ಸಂಸ್ಕೃತದ "ವಿದಂಡ" ಎಂಬುದರಿಂದ ನಿಷ್ಪನ್ನವಾಗಿದೆಯೆಂದೂ ("fr. ವಿದಂಡ"), "ವೈತಂಡಿಕ" ("A disputation or captious young man" ಎಂದರೆ, ವಿತಂಡಾವಾದ ಮಾಡತಕ್ಕವನು) ಎಂಬುದಕ್ಕೆ ಸಮಾನವೆಂದೂ ಡಾ. ಕಿಟಲ್ ಅವರು

---

೯. "ಮಿಂದೆಱೆಯಪನಾಱಿದಪ್ಪಂ" ಎಂಬುದಕ್ಕೆ ಸರಿಯಾಗಿ ಅರ್ಥವಾಗುವುದಿಲ್ಲ. ಆಡಿದಪ್ಪಂ–ಆಲಿದಪ್ಪಂ ಎಂಬ ಪಾಠಾಂತರಗಳೂ ಉಂಟು. "ಕಱು ತಡೆದತ್ತು... ಉಯ್ದುರ್" ಎಂಬ ಭಾಗ 'ಶಬ್ದಮಣಿದರ್ಪಣ'ದಲ್ಲಿ ೧೮೦ನೆಯ ಸೂತ್ರದ ಕೆಳಗೆ ಉದಾಹೃತವಾಗಿದೆ. "ಉದು (ಊ)" ಎಂಬುದು "ಅದು (ಆ)," "ಇದು (ಈ)"–ಈ ಎರಡರ ಮಧ್ಯದ ಸ್ಥಾನದ ವಸ್ತುವನ್ನು ತೋರಿಸುವ ಸರ್ವನಾಮ.

ಚಂದ್ರರಾಜನ 'ಮದನತಿಲಕ'ದಲ್ಲಿ (ಕ್ರಿ.ಶ. ೧೧ನೆಯ ಶತಮಾನದ ಪೂರ್ವಭಾಗ) ಬರುವ–"ಕೊಟಲ ಬೆಡಂಬೆಯ ಪಗರಣದಟೆಗಳ...ದೆಸೆ ಬೋಗಲೀಯಲಾಗದು ವಧುವಂ" ಎಂಬ ಪದ್ಯದಲ್ಲಿ ([illegible]) ಕೊಳಲು, ಬೆಡಂಬೆ, ಪಗರಣ ಇಂಥ ಆಟಪಾಟಗಳು ನಡೆಯುವ ಕಡೆಗೆ ಕುಲವಧುವನ್ನು ಪೋಗಗೊಡಬಾರದು ಎಂಬ ಎಚ್ಚರಿಕೆಯಿದೆ. ಇಲ್ಲಿ ಬಂದಿರುವ "ಬೆಡಂಬೆ" "ಬೆದಂಡೆ"ಯ ಅಪಪಾಠವಾಗಿರ ಬಹುದು.

ತಮ್ಮ ನಿಘಂಟಿನಲ್ಲಿ ನಿರ್ದೇಶಿಸುತ್ತಾರೆ (ಪುಟ ೧೪೩೩). ಈ ಅಭಿಪ್ರಾಯವನ್ನು ಬಹುಶಃ ಅವಲಂಬಿಸಿ, "ಬೆದಂಡೆ"ಗೆ "Criticism, critical skill, exactness" ಎಂದೂ, "ಬೆದಂಡೆಗಬ್ಬ"ಕ್ಕೆ "Skilful song-poetry" ಎಂದೂ (ಪುಟ ೧೧೩೮) ಅರ್ಥ ಕೊಡುತ್ತಾರೆ. ಆದರೆ ವಿತಂಡಾವಾದಕ್ಕೂ ಬೆದಂಡೆಗೂ ಯಾವ ಸಂಬಂಧವೂ ಇರುವಂತೆ ತೋರುವುದಿಲ್ಲ. ಕನ್ನಡದಲ್ಲಿ "ದಂಡಿಗೆ" (ಸಂಸ್ಕೃತ : ದಂಡಿಕಾ) ಎಂಬುದಕ್ಕೆ ವೀಣೆ ವೀಣಾದಂಡ ಮೊದಲಾದ ಅರ್ಥಗಳುಂಟು.[೧೦] ಬೆದಂಡೆಯ ಮೂಲವನ್ನು ಈ ದಿಕ್ಕಿನಲ್ಲಿ ಹುಡುಕಬೇಕು "*ವಿದಂಡಿಕಾ" ಎಂಬುದು ವಾದ್ಯವಿಶೇಷವನ್ನು ಹೇಳುವ ಶಬ್ದವಾಗಿದ್ದಿರಬಹುದು; ಅದರ ಸಂಬಂಧವುಳ್ಳದ್ದು, ಎಂದರೆ ಅಂಥ ವಾದ್ಯದ ಶ್ರುತಿಯೊಡನೆ ಹಾಡತಕ್ಕದ್ದು "ವೈದಂಡಿಕ". ವೈದಂಡಿಕದ ತದ್ಭವ ಬೆದಂಡೆಯೆಂಬ ಹಾಡುಗಬ್ಬ.

ಇನ್ನು ಚತ್ತಾಣದ ವಿಚಾರ. 'ಕವಿರಾಜಮಾರ್ಗ'ದಲ್ಲಿ ಹೇಳಿರುವ ಲಕ್ಷಣದಂತೆ ಇದರ ವಿಶೇಷ ಗುಣವೆಂದರೆ ವೃತ್ತಜಾತಿಯ ವೈವಿಧ್ಯ. ಹಲವು ಕಂದಗಳ ಜೊತೆಗೆ ಸುಂದರವಾದ [ಸಂಸ್ಕೃತದ] ವೃತ್ತಗಳು ಮಾತ್ರವಲ್ಲದೆ [ದೇಶೀಯ ಛಂದಸ್ಸಿನ] ಅಕ್ಕರ, ಚೌಪದಿ, ಗೀತಿಕೆ, ತ್ರಿಪದಿ ಮೊದಲಾದವೂ ಇಲ್ಲಿ ಬಂದು ಸೊಗಸು ಕೊಡುತ್ತವೆ. ಈ ವಿಷಯದಲ್ಲಿ ಚತ್ತಾಣಕ್ಕೂ, ಒಂದೇ ಬಗೆಯ ವೃತ್ತಕ್ಕೆ ಸೀಮಿತವಾದ ಬೆದಂಡೆಗೂ ವ್ಯತ್ಯಾಸ ಎದ್ದು ಕಾಣಿಸುತ್ತದೆ.

ನಾಗವರ್ಮನ ನಿರೂಪಣೆಯಲ್ಲಿ ಚತ್ತಾಣದ ಹೆಸರಿಲ್ಲ; ಆದರೆ ಅವನ "ಬಾಜನೆಗಬ್ಬ"ದ ಲಕ್ಷಣವನ್ನು ನೋಡಿ. "ಪಲತೆಱದ ಪದ್ಯ"ದಿಂದ ನಿರ್ಮಿತವಾದದ್ದು ಅದು; ಚತ್ತಾಣದ ವೃತ್ತವೈವಿಧ್ಯವನ್ನು ಇದು ಚೆನ್ನಾಗಿ ಹೋಲುತ್ತದೆ. ನಾಗವರ್ಮನು "ಲಲಿತವಚೋರಚನನಿಚಯ **ಪದ್ಧತಿಕೆಗಳಿಂ**" ಅದು ಕೂಡಿರಬೇಕೆನ್ನುತ್ತಾನೆ; ಈ "ಪದ್ಧತಿಕೆ" ಎಂಬುದು ರಗಳೆಯ ಪ್ರಾಚೀನ ಪ್ರಭೇದಗಳಲ್ಲಿ ಒಂದಾದ "ಪದ್ಧಳಿ" (=ಪ್ರಾಕೃತದ ಪಜ್ಝಟಿಕಾ).[೧೧] ಅಲ್ಲದೆ ಬಾಜನೆಗಬ್ಬದಲ್ಲಿ ಸರಸವಾದ ಅಖಿಲವರ್ಣನೆಗಳು ಇರಬೇಕು. ಪದ್ಧತಿಕೆ, ವರ್ಣನೆಗಳು ಇವುಗಳ ವಿಷಯ 'ಕವಿರಾಜಮಾರ್ಗ'ದ ಚತ್ತಾಣದಲ್ಲಿ ಉಕ್ತವಾಗಿಲ್ಲದಿದ್ದರೂ, ಎರಡರಲ್ಲೂ ವೃತ್ತಗಳ ವೈವಿಧ್ಯವು ಮುಖ್ಯವಾದ ಸಮಾನಾಂಶವೆಂಬುದನ್ನು ನೆನೆದರೆ, ಚತ್ತಾಣವೇ ಕಾಲಾಂತರದಲ್ಲಿ ಬಾಜನೆಗಬ್ಬವೆನಿಸಿಕೊಂಡಿತೆಂದು ನಂಬಬಹುದು. As Nagavarma's definition of *bājanegabbam* nearly agrees with that of *chattāṇa* given in the *Kavirājamārga* it may be concluded that

೧೦. "ಎನ್ನ ಕಾಯವ ದಂಡಿಗೆಯ ಮಾಡಯ್ಯಾ; ಎನ್ನ ಸಿರವ ಸೋರೆಯ ಮಾಡಯ್ಯಾ; ಎನ್ನ ನರವ ತಂತಿಯ ಮಾಡಯ್ಯಾ! ಎನ್ನ ಬೆರಳಕಡ್ಡಿಯ ಮಾಡಯ್ಯಾ! ಬತ್ತೀಸ ರಾಗವ ಹಾಡಯ್ಯಾ; ಉರದಲೊತ್ತಿ ಬಾರಿಸು ಕೂಡಲ ಸಂಗಮದೇವಾ" ಎಂಬ ಬಸವಣ್ಣನವರ ವಚನ ಇಲ್ಲಿ ನೆನಪಾಗುತ್ತದೆ. ('ಬಸವಣ್ಣನವರ ಷಟ್‌ಸ್ಥಲದ ವಚನಗಳು'; ಶ್ರೀ ಶಿ.ಶಿ. ಬಸವನಾಳರ ಪರಿಷ್ಕರಣ, ವಚನ ಸಂಖ್ಯೆ ೫೦೦).

೧೧. ಈ ಸಮೀಕರಣವನ್ನು ಮೊದಲು ಉಲ್ಲೇಖಿಸಿದವರು ಶ್ರೀ ಮುಳಿಯ ತಿಮ್ಮಪ್ಪಯ್ಯನವರು; 'ಕವಿರಾಜಮಾರ್ಗವಿವೇಕ—೧', ಪುಟ ೧೨೧.

they are identical" ಎಂದು ಹಿಂದೆಯೇ ಶ್ರೀ ರಾ. ನರಸಿಂಹಾಚಾರ್ಯರು ನಿರ್ಣಯಿಸಿದ್ದ ರೆಂಬುದನ್ನೂ ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.[೧೨]

"ಬಾಜನೆಗಬ್ಬ"ದಲ್ಲಿನ "ಬಾಜನೆ" ಎಂದರೇನು? ಮೆಲ್ವಾಡು, ಬೆದಂಡೆಗಬ್ಬ, ಬಾಜನೆಗಬ್ಬ ಇವನ್ನು ಕುರಿತು ಹೇಳುತ್ತಾ "[they] appear to have been sung with or without the accompaniment of a musical instrument, as is evident from the word *pāḍu* (song) and *bājane* (playing upon a musical instrument)" ಎಂದು ಶ್ರೀ ರಾ. ನರಸಿಂಹಾಚಾರ್ಯರು ಬರೆಯುತ್ತಾರೆ.[೧೩] "ಬಾಜನೆ" ಎಂಬ ರೂಪ "ವಾದನ"ದ ತದ್ಭವವೆಂದು ಗ್ರಹಿಸಿ ಅವರು ಹೀಗೆ ಅಭಿಪ್ರಾಯಪಟ್ಟಿರಬೇಕು.[೧೪] ಆದರೆ, ಇದನ್ನು ಅಂಗೀಕರಿಸಿದಲ್ಲಿ ಚತ್ತಾಣ (=ಬಾಜನೆಗಬ್ಬ) ಬೆದಂಡೆಗಳೆರಡೂ ಹಾಡುಗಬ್ಬಗಳೇ ಆಗಿಬಿಡುತ್ತವೆ. ಚತ್ತಾಣವನ್ನು ಹಾಡುತ್ತಿದ್ದರೆಂಬುದಕ್ಕೆ ಎಲ್ಲಿಯೂ ಸೂಚನೆಯಿಲ್ಲ. ಇಲ್ಲಿಯ "ಬಾಜನೆ"ಯ ಸಂಸ್ಕೃತಮೂಲ "ವಾದನ"ವಲ್ಲ, ಅದು ನಿಜವಾಗಿ "ವಾಚನ (ವಾಚನಾ)" ಆಗಿರಬೇಕೆಂದು ನಮಗೆ ತೋರುತ್ತದೆ. ಕೇಶಿರಾಜನು 'ಶಬ್ದಮಣಿದರ್ಪಣ'ದ ಅಪಭ್ರಂಶಪ್ರಕರಣದಲ್ಲಿ,

"ಚಕಾರಕ್ಕೆ ಜಕಾರಾಂ—...ವಾಚನಾ-ಬಾಜನೆ"

ಎಂದು ಹೇಳಿರುವುದನ್ನೂ (ಸೂತ್ರ ೨೭೯ರ ಕೆಳಗೆ) 'ವಡ್ಡಾರಾಧನೆ'ಯ (ಕ್ರಿ.ಶ. ಸುಮಾರು ೯೨೦) ಸುಕುಮಾರಸ್ವಾಮಿಯ ಕಥೆಯಲ್ಲಿ,

"ನಿಮ್ಮ ತಂಗೆಯಪ್ಪ ಕಾಶ್ಯಪಿಯಟ್ಟಿದೋಲೆಯೆಂದೊಡೆ ಓಲೆಯಂ ಬಾಜಿಸಿ ನೋಡಿ ಸೋಮಶರ್ಮಂ ಕಟೆದುದುಮಂ....ಮಕ್ಕಳಂ ತನಿಗಿನಿತೊಪ್ಪಿಸಿ ಅಟ್ಟಿದುದುಮಂ ಇಂತಿವೆಲ್ಲಮಂ **ಬಾಜಿಸಿ** ನೋಡಿ"[೧೫]

ಎಂಬಲ್ಲಿ ಎರಡು ಕಡೆಯೂ, ರನ್ನನ 'ಅಜಿತಪುರಾಣ'ದಲ್ಲಿ (ಕ್ರಿ.ಶ. ೯೯೩),

"ವೃಷಭಾಚಲಮಂ ಕಂಡು ಮನದೆಗೊಂಡು ನಿಜವಿಜಯಪ್ರಶಸ್ತಿಯನಲ್ಲಿ ಬರೆಯಿಸಲೆಂದು ಪೋಗಿ ಪುರಾತನ ಚಕ್ರವರ್ತಿಗಳ ದಿಗ್ವಿಜಯಕೀರ್ತಿಗಳಂ **ಬಾಜಿಸೆ** ಕೇಳ್ದು ಗಲಿತಗರ್ವನಾಗಿ" (೯.೩೪ ವಚನ).

---

೧೨. *Kavirājamārga*, Introduction, Page 37.

೧೩. Ibid.

೧೪. "ಬಾಜನೆಗಬ್ಬ (ವಾದನಕಾವ್ಯ) – ಎಂದರೆ ಹಿಮ್ಮೇಳದೊಡನೆ ಹಾಡುವ ಕಾವ್ಯ" ಎಂಬುದು ('ಕವಿರಾಜಮಾರ್ಗವಿವೇಕ'-೧, ಪುಟ ೧೨೨) ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಅಭಿಪ್ರಾಯ ಕೂಡ. ಈ ಬಾಜನೆಗಬ್ಬದ ಸಂತತಿಯಲ್ಲೇ ಯಕ್ಷಗಾನವು ತಲೆದೋರಿತೆಂದೂ ಅವರು ಭಾವಿಸುತ್ತಾರೆ; ಈ ಊಹೆಗೆ ಯಾವ ಆಧಾರವೂ ಇರುವಂತೆ ನಮಗೆ ತೋರುವುದಿಲ್ಲ.

೧೫. 'ವಡ್ಡಾರಾಧನೆ' (೧೯೫೫ರ ಮುದ್ರಣ), ಪುಟ ೩. "ಬಾಜಿಸಿ" ಎಂಬುದಕ್ಕೆ "ಬಾವಿಸಿ, ಬಾರಿಸಿ" ಎಂದು ಪಾಠಾಂತರಗಳುಂಟು.

ಎಂಬಲ್ಲಿಯೂ "ಬಾಜಿಸು" ಎಂಬುದಕ್ಕೆ ವಾಚಿಸು (=ಓದು) ಎಂದೇ ಅರ್ಥವಿರುವುದನ್ನು ಗಮನಿಸಿದರೆ, ಮೇಲಿನ ನಮ್ಮ ಊಹೆ ನಿರಾಧಾರವಲ್ಲವೆಂದು ಸ್ಪಷ್ಟವಾಗಬಹುದು. ಇದನ್ನು ಒಪ್ಪಿಕೊಂಡರೆ ಬಾಜನೆಗಬ್ಬ "ವಾಚನಕಾವ್ಯ"ವಾಗುತ್ತದೆ, ಎಂದರೆ ಓದುಗಬ್ಬವಾಗುತ್ತದೆ; ಶ್ರುತಿ, ರಾಗವಿಸ್ತಾರ, ತಾಳ ಮೊದಲಾದವುಗಳ ನೆರವಿಲ್ಲದೆ ವಾಚಿಸತಕ್ಕ (to be recited and not sung) ಕಾವ್ಯವಾಗುತ್ತದೆ. ಓದುಗಬ್ಬ-ಚತ್ತಾಣಕ್ಕೂ ಹಾಡುಗಬ್ಬ-ಬೆದಂಡೆಗೂ ಇನ್ನೊಂದು ಮುಖ್ಯಭೇದ ಏರ್ಪಡುತ್ತದೆ.

"ಚತ್ತಾಣ" ಎಂಬ ಶಬ್ದರೂಪದ ನಿಷ್ಪತ್ತಿ ಹೇಗೆ? ನಮಗೆ ತಿಳಿದ ಮಟ್ಟಿಗೆ ಯಾವ ಲಾಕ್ಷಣಿಕನೂ ಇದನ್ನು ಪ್ರಸ್ತಾವಿಸಿಲ್ಲ. ಇದು ದೇಶ್ಯಶಬ್ದದಂತೆ ತೋರುವುದಿಲ್ಲ. ಸಂಸ್ಕೃತದಲ್ಲಿ ದೊರೆತಿಲ್ಲ, ಪ್ರಾಕೃತ ನಿಘಂಟಿನಲ್ಲೂ ಕಾಣಬರುವುದಿಲ್ಲ. ಇದು ನಿಘಂಟುಕಾರರು ಗುರುತಿಸಿಲ್ಲದ ಒಂದು ತದ್ಭವವಾಗಿರಬಹುದೇನೋ ಎಂದು ಭಾವಿಸಿಕೊಂಡು ಅತೃಪ್ತಿಯಲ್ಲಿರುವಾಗ, ಜನ್ನನ 'ಅನಂತನಾಥಪುರಾಣ'ದಲ್ಲಿ (ಕ್ರಿ.ಶ. ೧೨೩೦) ಈ ಮುಂದಿನ ವಾಕ್ಯಭಾಗ ಕಣ್ಣನ್ನು ಸೆರೆಯಿಡಿಯಿತು:

> "...ಮುಕ್ತಕಂ ಕುಲಕಂ ಕೋಶಂ ಸಂಘಾತಂ ಎಂಬ ರಚನಾವೈಚಿತ್ರ್ಯ **ಚಿತ್ರಾಯತನ ವೈದಂಡಿಕ** ಪ್ರಬಂಧಬಂಧುರ ಪದ್ಯಬಂಧದೊಳಂ ಉತ್ಕಳಿಕೆ ಚೂರ್ಣಿಕೆ ಲತಿಕೆ ಖಂಡಂ ವೃತ್ತಗಂಧಿ ಚಿತ್ರಂ ಎಂಬ ಗದ್ಯಬಂಧದೊಳಂ ತದ್ದ್ಯುಗಳ ಸಮ್ಮಿಳಿತ ರಸಭಾವಸಂಪಚ್ಚಂಪೂಕೃತಿಯೊಳಂ..." (೧೦.೨೮ ವಚನ)

ಇಲ್ಲಿ ಕವಿ ಪದ್ಯಗದ್ಯಾದಿ ಕಾವ್ಯಪ್ರಕಾರಗಳನ್ನು ಹೇಳುತ್ತಿದ್ದಾನೆ. ಪದ್ಯ ಬಂಧದಲ್ಲಿ ಚಿತ್ರಾಯತನ ವೈದಂಡಿಕ ಎಂಬುವು ಎರಡು ಬಗೆಯ "ಪ್ರಬಂಧ"ಗಳು. ಇಲ್ಲಿಯ "ವೈದಂಡಿಕ" ನಮ್ಮ ಬೆದಂಡೆ; ಹಾಗಾದರ ಅದರ ಜೊತೆಗಿರುವ "ಚಿತ್ರಾಯತನ"? ಇದು ನಮ್ಮ "ಚತ್ತಾಣ"ದ ಮೂಲರೂಪವಾಗಿರಬಹುದು ಎಂಬ ಅಂಶ ಹೊಳೆದು ಮನಸ್ಸಿಗೆ ಎಷ್ಟೋ ಸಮಾಧಾನವಾಯಿತು. ಚತ್ತಾಣದ ಛಂದೋವೈಚಿತ್ರ್ಯವನ್ನು "ಚಿತ್ರಾಯತನ" ಎಂಬ ಹೆಸರು ಪ್ರತಿಬಿಂಬಿಸುತ್ತದೆಯೋ ಏನೋ. ಇದರಾಚೆಗೆ ಊಹೆಯನ್ನು ಮುಂದುವರಿಸಲು ಇನ್ನೂ ಹೆಚ್ಚಿನ ಸಾಮಗ್ರಿ ಬೇಕು.

ಚತ್ತಾಣ-ಬೆದಂಡೆಗಳನ್ನು ಕುರಿತು ಇದುವರೆಗಿನ ವಿಚಾರದಿಂದ ಹೊರಪಡುವ ಕೆಲವು ಅಂಶಗಳನ್ನು ಹೀಗೆ ಸಂಗ್ರಹಿಸಿಬಹುದು :

ಚತ್ತಾಣ (=ಚಿತ್ರಾಯತನ)	**ಬೆದಂಡೆ** (=ವೈದಂಡಿಕ)
೧. ಇದು ಬಾಜನೆಗಬ್ಬ ; ವಾಚಿಸ ತಕ್ಕದ್ದು.	೧. ಇದು ಪಾಡುಗಬ್ಬ : ಹಾಡತಕ್ಕದ್ದು.
೨. ಇದರಲ್ಲಿ ಕಂದ, ಹಲವು ಬಗೆಯ ಸಂಸ್ಕೃತ ವೃತ್ತಗಳು, ದೇಶೀಯ	೨. ಇದರಲ್ಲಿ ಕಂದ, ಒಂದೇ ಬಗೆಯ ಪ್ರಸಿದ್ಧ ವೃತ್ತ-ಇವು ಬರುತ್ತವೆ.

ಪದ್ಯಜಾತಿಗಳು–ಇವೆಲ್ಲ ಬರುತ್ತವೆ
(ಪದ್ದಳಿಯೂ ಬರಬಹುದು.)

೩. ಇದು ಅಖಿಲವರ್ಣನೆಗಳಿಂದ ಕೂಡಿದ ಕಾವ್ಯ; ಆದಕಾರಣವೇ ಬಹುಶಃ ದೀರ್ಘವಾಗಿರುತ್ತದೆ.	೩. ಇದು ಅತಿದೀರ್ಘವೂ ಅತಿಹ್ರಸ್ವವೂ ಅಲ್ಲದ, ಅಡಕವಾದ ಕಾವ್ಯ.

ಎರಡೂ ಕೇವಲ ಪದ್ಯಮಯವಾದ ಕಾವ್ಯಗಳು, ಆದರೆ ಚತ್ತಾಣದಲ್ಲಿ ನಡುನಡುವೆ ಗದ್ಯಖಂಡಗಳೂ ಸೇರಿ ಬಂದರೆ ಅದಕ್ಕೂ ಚಂಪೂ ಕಾವ್ಯಕ್ಕೂ ವಸ್ತುತಃ ಯಾವ ಭೇದವೂ ಉಳಿಯುವುದಿಲ್ಲ ಎನ್ನಿಸುತ್ತದೆ. "ಚಂಪೂ" ಎಂಬುದು ಸಂಸ್ಕೃತ ಸಾಹಿತ್ಯದಲ್ಲಿ ಅಷ್ಟೇನೂ ಪ್ರಾಚೀನವಾದ ರೂಪವಲ್ಲ, ಈಚೆಗೆ ಕಾಣಿಸಿಕೊಂಡದ್ದು; ಸಂಸ್ಕೃತದ ಪ್ರಾಚೀನ ಲಾಕ್ಷಣಿಕರಲ್ಲಿ ದಾಕ್ಷಿಣಾತ್ಯನಾದ ದಂಡಿಯೊಬ್ಬನೇ (ಕ್ರಿ.ಶ. ಸುಮಾರು ೬೫೦) ಇದನ್ನು ಹೆಸರಿಸತಕ್ಕವನು;[೧೬] "ಚಂಪೂ" ಶಬ್ದಕ್ಕೆ ಸಂಸ್ಕೃತದಲ್ಲಿ ಸ್ವರಸವಾದ ರೂಪ ನಿಷ್ಪತ್ತಿಯನ್ನು ಹೇಳುವುದೂ ಶಕ್ಯವಿಲ್ಲ. ತಮಿಳಿನ ಪ್ರಸಿದ್ಧ ಕಾವ್ಯಗಳಲ್ಲಿ ಒಂದಾದ 'ಶಿಲಪ್ಪದಿಕಾರ'ದ ಅನೇಕ ಸರ್ಗಗಳಲ್ಲಿ ಗದ್ಯಪದ್ಯಗಳ ಸಂಮಿಶ್ರಣವುಂಟು.[೧೭] ಇದನ್ನೆಲ್ಲಾ ಗಮನಿಸಿ ಚಂಪೂಕಾವ್ಯ ರೂಪವು ಭಾರತೀಯ ಸಾಹಿತ್ಯಕ್ಕೆ ದಕ್ಷಿಣ ಭಾರತದ ಕೊಡಿಗೆಯಾಗಿರ ಬೇಕೆಂದು ಭಾವಿಸಬಹುದು. ಕನ್ನಡದಮಟ್ಟಿಗೆ ಹೇಳುವುದಾದರೆ, ಹಿಂದಿನಿಂದ ಪ್ರಚುರವಾಗಿದ್ದ "ಚತ್ತಾಣ"ದಲ್ಲಿ ಗದ್ಯಖಂಡಗಳು ("ವಚನ"ಗಳು) ನಡುನಡುವೆ ಸೇರಿ "ಚಂಪು" ತಲೆಯೆತ್ತಿರಬಹುದು. ಚಂಪು ಜನಪ್ರಿಯವಾಗಿ ಬೆಳೆದಂತೆಲ್ಲ ಚತ್ತಾಣ ಮೂಲೆಗೆ ಬಿದ್ದಿರಬಹುದು. ಈ ವಿಷಯದ ವಿಸ್ತರಣಕ್ಕೆ ಈ ಲೇಖನದಲ್ಲಿ ಅವಕಾಶವಿಲ್ಲ; ಅಲ್ಲದೆ, ಸಂಶೋಧನೆಯ ಮೂಲಕ ಹೆಚ್ಚಿನ ಅಂಶಗಳು ಬೆಳಕಿಗೆ ಬರಬೇಕಾದ ಅವಶ್ಯಕತೆಯೂ ಉಂಟು.

ನಾಗವರ್ಮನ ಮೆಲ್ವಾಡಿಗೆ ಜನ್ನನ 'ಯಶೋಧರಚರಿತೆ' (ಕ್ರಿ.ಶ. ೧೨೦೯) ಒಂದು ನಿದರ್ಶನವಾಗಬಹುದೆಂದು ಶ್ರೀ ರಾ. ನರಸಿಂಹಾಚಾರ್ಯರು ಭಾವಿಸುತ್ತಾರೆ.[೧೮]

---

೧೬ "ಗದ್ಯಪದ್ಯಮಯೀ ಕಾಚಿಚ್ಚಂಪೂರಿತ್ಯಭಿಧೀಯತೇ" ('ಕಾವ್ಯಾದರ್ಶ', ೧.೩೧).

೧೭ "...A third feature [*Śilappadikarm*] which is of noteworthy is the mixed prose and verse found in several cantos, each supplementing the other. No earlier instance of this kind of composition is met with in Tamil literature, though Tolkappiyar refers to this type." (S. Vaiyapuri Pillai : *History of Tamil Language and Literatue*, Page 156). 'ಶಿಲಪ್ಪದಿಕಾರ'ದ ಕಾಲ ಕ್ರಿ.ಶ. ೮೨೫ರಿಂದ ಈಚೆಗೆ ಎಂದು ಶ್ರೀ ವೈಯಾಪುರಿ ಪಿಳ್ಳೆಯವರ ಅಭಿಪ್ರಾಯ; ತಮಿಳು ವಿದ್ವಾಂಸರು ಸಾಮಾನ್ಯವಾಗಿ ಇದನ್ನು ಕ್ರಿ.ಶ. ಐದನೆಯ ಶತಮಾನಕ್ಕೆ, ಕೆಲವರು ಇನ್ನೂ ಹಿಂದಕ್ಕೆ, ಸೇರಿಸುತ್ತಾರೆ.

೧೮. *Kavyavalokana*, Introduction, Page 37.

ಆದರೆ ಉದ್ದಕ್ಕೂ ಕಂದಪದ್ಯದಲ್ಲೇ ರಚಿತವಾಗಿರುವ ಈ ಕಾವ್ಯದ ನಾಲ್ಕು "ಅವತಾರ"ಗಳ **ಕೊನೆಯಲ್ಲಿ** ಮಾತ್ರ ೨,೨,೨,೪—ಈ ಸಂಖ್ಯೆಯ[೧೯] ವೃತ್ತಗಳು ಬರುತ್ತವೆ. ಇವುಗಳಲ್ಲಿ, ಪ್ರತಿಯೊಂದು ಅವತಾರದಲ್ಲೂ ತಪ್ಪದೆ ಪುನರುಕ್ತವಾಗುವ ಒಂದು ಪದ್ಯ ಮಾಲಿನೀವೃತ್ತದ್ದು; ಮಿಕ್ಕವು ಯಥಾಸಂಭವವಾಗಿ ಮಂದಾಕ್ರಾಂತ, ಹರಿಣಿ, ಚಂಪಕಮಾಲೆ, ಮತ್ತೇಭವಿಕ್ರೀಡಿತ ಮತ್ತು ಉತ್ಪಲಮಾಲೆ. ಅಲ್ಲದೆ ಇಲ್ಲಿಯ ಒಟ್ಟು ಪದ್ಯಗಳ ಸಂಖ್ಯೆ ೩೧೦. ಹೀಗಿರುವುದರಿಂದ 'ಯಶೋಧರಚರಿತೆ' ಮೆಲ್ವಾಡಿಗೆ (ಅಥವಾ ಬೆದಂಡೆಗೆ) ನಿದರ್ಶನವಾಗಬಲ್ಲದೆ ಎಂಬುದು ಸಂದೇಹಾಸ್ಪದ. 'ಕವಿರಾಜಮಾರ್ಗ' ಮಾತ್ರ ಲಕ್ಷಣಗ್ರಂಥವಾಗದೆ ಒಂದು ಕಾವ್ಯವಾಗಿದ್ದಿದ್ದರೆ, ಅಲ್ಲಿಯ ಪದ್ಯಜಾತಿವೈವಿಧ್ಯದ ದೃಷ್ಟಿಯಿಂದ ಅದು ಚತ್ತಾಣಕ್ಕೆ ಒಳ್ಳೆಯ ನಿದರ್ಶನವಾಗಬಹುದಿತ್ತು.

ಕಾವ್ಯಾನುಭವ : ೧೯೭೦

●

---

೧೯. ನಾಲ್ಕನೆಯ ಅವತಾರದ ಕೊನೆಯ ಎರಡು ವೃತ್ತಗಳು ಪ್ರಕ್ಷಿಪ್ತವಾಗಿರಬಹುದು ಎಂದು ಅದರ ಸಂಪಾದಕರಾದ ಶ್ರೀ ಮಂ. ಆ. ರಾಮಾನುಜ ಅಯ್ಯಂಗಾರರು ಭಾವಿಸುತ್ತಾರೆ.

ಕನ್ನಡದಲ್ಲಿ ಹೊಸ ಮಟ್ಟುಗಳಿಗಿರುವ ಅವಶ್ಯಕತೆ*

ಕನ್ನಡದಲ್ಲಿ ಕಾವ್ಯರಚನೆಗೆ ಇದುವರೆಗಿದ್ದ ಮಟ್ಟುಗಳೇ (Metres) ಸಾಲುತ್ತಿರಲಿಲ್ಲವೆ? ಸಂಸ್ಕೃತದ ಅಸಂಖ್ಯಾತ ವೃತ್ತಗಳಿವೆ, ಕಂದಪದ್ಯವಿದೆ, ಷಟ್ಪದಿಗಳಿವೆ; ಇನ್ನೂ ವೈವಿಧ್ಯವನ್ನು ಬಯಸತಕ್ಕವರಿಗೆ ಅಕ್ಕರ, ಸಾಂಗತ್ಯ ಮೊದಲಾದವುಗಳಿವೆ. ಇವುಗಳಲ್ಲಿ ಹಿಂದಿನವರು ಸಾಧಿಸದ ಯಾವ ಹೊಸ ಫಲಸಿದ್ಧಿಗಳನ್ನು ಈಗ ಪ್ರಚುರವಾಗುತ್ತಿರುವ ಹೊಸ ಛಂದಸ್ಸು—ಅದಕ್ಕೆ ಈ ಗೌರವದ ಹೆಸರನ್ನು ಕೊಟ್ಟರೂ ಕೊಡೋಣ—ಸಾಧಿಸಬಹುದು? "ಪಿಂಡ ಖರ್ಜೂರದಲ್ಲಿ ಬೇಸರಪಟ್ಟು ಹುಣಿಸೆಯ ಹಣ್ಣನ್ನು ತಿನ್ನಲು ಬಯಸಿ"ದಂತಲ್ಲವೆ ಇದು? ಮೂವತ್ತು ಮೂರು ಕೋಟಿ ದೇವತೆಗಳಿಗೆ ಹರಕೆ ಹೊರುವ ಭಾರತೀಯರ ವ್ಯರ್ಥ ಚಾಪಲ್ಯವಲ್ಲವೆ ಇದು?—ಎಂದು ಅವಿಶ್ವಾಸದ ಮುಗುಳು ನಗೆಯಿಂದ ಕೇಳತಕ್ಕವರುಂಟು. ಇವರಿಗೆ ಉತ್ತರ ಹೇಳುವುದು ಸಾಧ್ಯವೆ?

ಮತ್ತೆ ಕೆಲವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತಾರೆ: ಅವರ ದೃಷ್ಟಿಯಲ್ಲಿ **"ಹೊಸ ಛಂದಸ್ಸು"** ಎನ್ನುವುದು ಸರಸ್ವತೀದ್ರೋಹ. "ಹೊಸ ಕವಿತೆಗೆ ನಿಯಮವೂ ಇಲ್ಲ, ನಾಯಕರೂ ಇಲ್ಲ; ಬರೆದದ್ದೇ ಛಂದಸ್ಸು, ಕಟ್ಟಿದ್ದೇ ಕಾವ್ಯ" ಎಂದು ಅವರ ಅಭಿಪ್ರಾಯ. ಅವರನ್ನು ಉದ್ದೇಶಿಸಿ, "ಹೊಸ ಕವನಗಳಲ್ಲಿ ಕೂಡ

---

* 'ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ', ೧೫.೪

ಸ್ಪಷ್ಟವಾದ, ಅರ್ಥವತ್ತಾದ ಛಂದೋನಿಯಮಗಳುಂಟು. ಅವುಗಳಲ್ಲಿಯೂ ಇಂಪುಂಟು, ಹಿತವುಂಟು" ಎನ್ನುವುದನ್ನು ವಿಶದಪಡಿಸುವುದು. ಅಗತ್ಯವಾದರೂ ಅದಕ್ಕೆ ಇಲ್ಲಿ ಅವಕಾಶವಿಲ್ಲ. ಆ ಕೆಲಸಕ್ಕೆ ಈ ಲೇಖನವು ಮಂಗಳಾಚರಣೆ ಮಾತ್ರ.

ಮೊದಲಿನ ಆಕ್ಷೇಪಣೆಯ ಕಡೆಗೆ ಇನ್ನು ಗಮನ ಕೊಡೋಣ : ಆಕ್ಷೇಪಕರ ಪಟ್ಟಿಯಲ್ಲಿರುವ ಮಟ್ಟುಗಳೆಲ್ಲವೂ ಕನ್ನಡದಲ್ಲಿ ಅನಾದಿಯಿಂದಲೂ ಇರಲಿಲ್ಲ. ಕನ್ನಡದ ಛಂದಸ್ಸು ನೀರು ನಿಂತ ಒಂದು ಕೊಳದಂತೆ ಅಲ್ಲ; ಅದು ಒಂದು ನದಿಯಂತೆ : ಅಲ್ಲಲ್ಲಿ ಉಪನದಿಗಳನ್ನು ಸೇರಿಸಿಕೊಳ್ಳುತ್ತ, ಒಂದು ಕ್ಷೀಣಿಸಿ ಮತ್ತೊಂದು ಪ್ರಬಲಿಸುವ ಶಾಖೆಗಳಾಗಿ ಒಡೆಯುತ್ತ, ಮುಂದು ಮುಂದಕ್ಕೆ ಹರಿಯುವ ನದಿಯಂತೆ. ಈ ಛಂದಸ್ಸು ಬಲು ಹಿಂದಿನಿಂದ ಬೆಳೆಯುತ್ತಲೇ ಇದೆ; ಹೊಸ ಹೊಸ ಸಂಬಂಧಗಳನ್ನು ಗ್ರಹಿಸುತ್ತಲೇ ಇದೆ; ತನ್ನ ಜಾಯಮಾನಕ್ಕೂ ಬೆಳವಣಿಗೆಗೂ ಸರಿಬೀಳದ ಮಟ್ಟುಗಳನ್ನು ಕೈ ಬಿಡುತ್ತಲೇ ಇದೆ. ಕನ್ನಡದಲ್ಲಿ ಆದಿಯಿಂದ ದ್ರಾವಿಡ ಛಂದಸ್ಸಿನ ತಳಹದಿಯೇ ಬೇರೆ; ಅಲ್ಲಿಂದೀಚೆಗೆ ಬಂದು ಬೇರೂರಿ ಕನ್ನಡದ ಚಂಪೂಕಾವ್ಯಗಳಲ್ಲೆಲ್ಲಾ ಉದ್ಘೋಷಿಸಿದ ಸಂಸ್ಕೃತದ ವೃತ್ತಗಳು, ಪ್ರಾಕೃತದ ಕಂದ ಇವುಗಳ ತಳಹದಿಯೇ ಬೇರೆ ಬೇರೆ. ಇನ್ನೂ ಈಚೆಗೆ ಪ್ರಬಲಿಸಿ ನಮಗೆಲ್ಲ ಸುಪರಿಚಿತವಾಗಿರುವ ಷಟ್ಪದಿಗಳ ತಳಹದಿಯೇ ಬೇರೆ. ಇವೆಲ್ಲವೂ ಬೇರೆ ಬೇರೆಯ ಕಾಲಗಳಲ್ಲಿ ಕನ್ನಡಕ್ಕೆ ಬಂದವು, ಬೇರೆ ಬೇರೆಯ ನಿಯಮಗಳನ್ನು ಅನುಸರಿಸ ತಕ್ಕವು, ಒಂದನ್ನೊಂದು ಹಿಮ್ಮೆಟ್ಟಿಸಿರತಕ್ಕವು.[೧] ಈ ಕ್ರಮಕ್ಕೆ ಅನುಗುಣವಾಗಿ ಪ್ರಮುಖಸ್ಥಾನವು ಈಗ ಹೊಸ ಮಟ್ಟುಗಳಿಗೆ ದೊರೆತಿದೆ.

ಮೊದಲು ದ್ರಾವಿಡ ಛಂದಸ್ಸನ್ನು ತೆಗೆದುಕೊಳ್ಳೋಣ. ಅದು ಒಂದಾನೊಂದು ಕಾಲದಲ್ಲಿ ಬಹು ಪ್ರಚುರವಾಗಿದ್ದಿರಬೇಕು; ಜನಪದ ಸಾಹಿತ್ಯವು ಅದರಲ್ಲಿ ತುಂಬಿ ತುಳುಕುತ್ತಿದ್ದಿರಬೇಕು. ಆದರೆ ಅದರ ರಹಸ್ಯವು ಈಗ ನಮ್ಮ ಜನಕ್ಕೆ ಹಿಡಿಯುವಂತೆ ಕಾಣಿಸಲಿಲ್ಲ. ಚಂಪೂಕಾವ್ಯಗಳಲ್ಲಿ ಅಲ್ಲಲ್ಲಿ ಬರುವ ಪಿರಿಯಕ್ಕರ ಮೊದಲಾದವುಗಳನ್ನು ಸುಶ್ರಾವ್ಯವಾಗಿ ಓದುವ ಧಾಟಿಯನ್ನು ಕಂಡುಕೊಳ್ಳುವುದೇ ಈಗಿನ ಅನೇಕರಿಗೆ ಕಷ್ಟವಾಗಿದೆ; ಅವನ್ನು ಉಪಯೋಗಿಸುವ ಕವಿಗಳಂತೂ ಈಗ ಇಲ್ಲವೇ ಇಲ್ಲ.[೨] ಈ ದ್ರಾವಿಡ

೧. ಕನ್ನಡದ ಛಂದಸ್ಸಿನ ಚರಿತ್ರೆಯನ್ನು ಇದುವರೆಗೆ [೧೯೩೧] ಯಾರೂ ನಿರೂಪಿಸಿಲ್ಲ. ಈ ವಿಷಯವನ್ನು ಕುರಿತು ಈ ಲೇಖನದಲ್ಲಿ ಹೇಳಿರುವ ಅಂಶಗಳಲ್ಲಿ ಹಲವನ್ನು ನಾನು ಗ್ರಹಿಸಿದ್ದು ನನ್ನ ಗುರುಗಳಾದ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರ ಉಪನ್ಯಾಸ ಪ್ರವಚನಗಳಿಂದ. ಅವರಿಗೆ ನನ್ನ ಕೃತಜ್ಞತೆಯನ್ನು ಈ ಮೂಲಕ ಸಲ್ಲಿಸುತ್ತೇನೆ. [ಶ್ರೀಮಾನ್ ಬಿ.ಎಂ.ಶ್ರೀ. ಅವರ ಬಹುಕಾಲದ ಪರಿಶೋಧನೆ ಸೂಕ್ಷ್ಮಾಲೋಚನೆಗಳ ಸಾರವು 'ಕನ್ನಡ ಕೈಪಿಡಿ'ಯ ದ್ವಿತೀಯ ಪರಿಷ್ಕರಣಕ್ಕಾಗಿ [೧೯೩೬] ಅವರು ಬರೆದ 'ಕನ್ನಡ ಛಂದಸ್ಸಿನ ಚರಿತ್ರೆ' ಎಂಬ ಅಧ್ಯಾಯದಲ್ಲಿ ಪ್ರಕಾಶಕ್ಕೆ ಬಂದಿತು.]

೨. [ಇತ್ತೀಚೆಗೆ ಪಿರಿಯಕ್ಕರದಲ್ಲೂ ಕೆಲವು ಕವನಗಳು ರಚಿತವಾಗಿವೆ.]

ಛಂದಸ್ಸಿನ ಆಧಾರದಿಂದ ಹುಟ್ಟಿದ ತ್ರಿಪದಿ, ಸಾಂಗತ್ಯ, ಹೆಂಗಸರ ಹಾಡು ಇವುಗಳ ಗತಿ ಕೊಂಚ ವಾಸಿ. ಆದರೆ ಅವುಗಳನ್ನು ಕೂಡ ಶುದ್ಧ ದ್ರಾವಿಡ ರೀತಿಯಲ್ಲಿ ಹೇಳುವವರು ಕಡಮೆ. ಈ ಮಟ್ಟುಗಳು ವಾಚನ (Recitation)ಕ್ಕೆ ಅನುಕೂಲಿಸುವುದಿಲ್ಲ; ಅವುಗಳಲ್ಲಿ ಹಾಡಿನ ಛಾಯೆಯನ್ನು ತಂದು ಹೇಳಬೇಕು. ಇದರಿಂದ ಈಗಿನ ಕವಿಗಳಿಗೆ ಅವುಗಳಲ್ಲಿ ಉತ್ಸಾಹವು ಕಡಮೆಯಾದರೂ ಅವು ಪೂರ್ಣವಾಗಿ ಲುಪ್ತವಾಗಿಲ್ಲ; ಹೊಸ ಕವಿಗಳಲ್ಲಿ ಕೆಲವರು ಈ ಮಟ್ಟುಗಳಲ್ಲಿ ಕವನಗಳನ್ನು ರಚಿಸಿದ್ದಾರೆ.

ದ್ರಾವಿಡ ಛಂದಸ್ಸು ಮರೆಗೊಂಡದ್ದು ಆರ್ಯ ಛಂದಸ್ಸಿನ ಪ್ರಾಬಲ್ಯದಿಂದ. ಪ್ರೌಢ ಕಾವ್ಯಗಳನ್ನೆಲ್ಲ ನಮ್ಮ ಕವಿಗಳು ಚಂಪೂಶೈಲಿಯಲ್ಲಿ ವೃತ್ತಕಂದಗಳನ್ನು ತುಂಬಿ ಬರೆದರು. ಕಂದವಂತೂ ಕನ್ನಡಕ್ಕೆ ಹಾಗೂ ಹೀಗೂ ತಕ್ಕಮಟ್ಟಿಗೆ ಒಗ್ಗಿ ಹೋಯಿತು. (ಈಚಿನ ಷಟ್ಪದಿಗಳಂತೆ ಅದೂ ಮಾತ್ರಾಗಣಕ್ಕೆ ಸೇರಿರುವುದೇ ಇದರ ಕಾರಣವಾಗಿರಬೇಕು.) ವೃತ್ತಗಳು ಮಾತ್ರ ತಮ್ಮ ಪರಕೀಯತೆಯನ್ನು ಮರೆಯಲಿಲ್ಲ. ನಮ್ಮ ಪ್ರಾಚೀನರು ಮೊದಮೊದಲು ಶ್ಲೋಕ (ಅನುಷ್ಟುಭ್), ಇಂದ್ರವಜ್ರಾ ಮೊದಲಾದ ವಿಧವಿಧದ ವೃತ್ತಗಳನ್ನೆಲ್ಲ ಕನ್ನಡಕ್ಕೆ ಒದಗಿಸಲು ಪ್ರಯತ್ನಪಟ್ಟು—

ಶ್ಲೋಕ ॥ ಪೆಱ[ನಾ]ವಂ ಧರಾಚಕ್ರಕ್ಕೆಱೆಯಂ ಕೆಳೆಯಪ್ಪವಂ ॥
ನೆಱೆಯಾರೆಣೆಯೆಂಬನ್ನಂ ಕ್ಷುಱಿತಬ್ಧಿಗೆ ಬನ್ನಮಂ ॥
(ಕವಿರಾಜಮಾರ್ಗ, ೨.೧೨೭)

ಎಂಬೀ ಬಗೆಯ ಪ್ರಯೋಗಗಳನ್ನೆಲ್ಲ ನಡಸಿ ಸರಿಹೋಗದೆ ಕೈಬಿಟ್ಟರು. ಕೊನೆಗೆ, "ಖ್ಯಾತ ಕರ್ಣಾಟಕಂ" ಎಂದು ಹೊಗಳಿಸಿಕೊಳ್ಳುವ ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ, ಮಹಾಸ್ರಗ್ಧರೆ—ಎಂಬ ಆರು ವೃತ್ತಗಳೇ ಕರ್ಣಾಟಕ ಕಾವ್ಯರಂಗದಲ್ಲೆಲ್ಲ ನರ್ತಿಸಲು ನಿಂತ ಸಂಸ್ಕೃತಜನ್ಯ ವೃತ್ತಗಳು. ಇವುಗಳಲ್ಲೂ ಕನ್ನಡಕ್ಕೆ ಹೆಚ್ಚಾಗಿ ಹೊಂದಿರತಕ್ಕವು ಉತ್ಪಲಮಾಲೆ, ಚಂಪಕಮಾಲೆ ಇವೆರಡೇ; ಮಿಕ್ಕವುಗಳಲ್ಲಿ ಸಂಸ್ಕೃತದ ಧ್ವನಿಯೇ ಹೆಚ್ಚು.[೩] ಹೀಗೆ, ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿ ಕೋಟ್ಯಂತರ ವೃತ್ತಗಳು ಹುಟ್ಟುವುದಕ್ಕೆ ಅವಕಾಶ ಕೊಟ್ಟಿದ್ದರೂ, ನೂರಾರು ವೃತ್ತಗಳನ್ನು ಉದಾಹರಿಸಿದ್ದರೂ, ಕನ್ನಡದಲ್ಲಿ ನಿಜವಾಗಿ ಬಳಕೆಗೆ ಬಂದವು ಬೆರಳಲ್ಲಿ ಎಣಿಸುವುದಕ್ಕೆ ಕೂಡ ಸಾಲುವುದಿಲ್ಲ.

ಈ ಕೆಲವನ್ನಾದರೂ ಉಪಯೋಗಿಸುವುದಕ್ಕೂ ಅಡಚಣೆಯೊಂದಿದೆ: ಈ ಸಂಸ್ಕೃತ ವೃತ್ತಗಳು ಕರ್ಮಣಿಪ್ರಯೋಗದ ಹಾಗೆ; ಇಷ್ಟು ದಿನಗಳು ಬಳಕೆಯಲ್ಲಿದ್ದರೂ ಕನ್ನಡಕ್ಕೆ ಒಗ್ಗಿದಂತೆ ತೋರುವುದಿಲ್ಲ. ಅವುಗಳ ಧಾಟಿಗೂ ಕನ್ನಡ ಭಾಷೆಯ ಗತಿಗೂ ಹೊಂದಿಕೆ ಸಾಲದು. ಇದರ ಸತ್ಯವನ್ನರಿಯಬೇಕಾದರೆ ಹಳಗನ್ನಡದಿಂದ ದೇಶ್ಯಶಬ್ದಗಳೇ ಹೆಚ್ಚಾಗಿರುವ

---

೩. ಉತ್ಪಲಮಾಲೆ ಚಂಪಕಮಾಲೆಗಳಲ್ಲಿ ದೇಶ್ಯಶಬ್ದಗಳೂ ಮಿಕ್ಕವುಗಳಲ್ಲಿ ಸಂಸ್ಕೃತ ಶಬ್ದ ಸಮಾಸಗಳೂ ಸಾಮಾನ್ಯವಾಗಿ ಹೆಚ್ಚಾಗಿರುವುದನ್ನು ಗಮನಿಸಬಹುದು.

ಒಂದು ವೃತ್ತವನ್ನು ತೆಗೆದುಕೊಳ್ಳಬಹುದು. ಪಂಪನ ಈ ಮತ್ತೇಭ ವಿಕ್ರೀಡಿತವೊಂದು ಸಾಕು :

ಚಲದಿಂ ಕೃಷ್ಣೆಯ ಕೇಶಮಂ ಪಿಡಿದ ನಿನ್ನಿಂದಾದಟಿಲ್ ನಿನ್ನುರಃ
ಸ್ಥಲಮಂ ಪೋೞದೆ ಪೋಪುದಲ್ತೆನಗದೇಕಳ್ಕಿರ್ದಪ್ಪೈ ಬಾೞ್ವ ಪಂ ।
ಬಲದೇನಿಂ ನಿನಗುಂಟೆ ನಿನ್ನನುಜರಂ ಕಂಡೆಂತುಮೇನೆನ್ನ ತೋ
ಳ್ವಲೆಯೊಳ್ ಸಿಲ್ಕಿದೆಯೆಂದು ಮೂದಲಿಸುವುದುಂ ದುಶ್ಶಾಸನಂ ತಾಗಿದಂ ॥
(ಪಂಪಭಾರತ, ೧೨.೧೪೬)

ಈ ಪದ್ಯವನ್ನು ಅದರ ಧಾಟಿಗಾಗಿ ಓದಿದರೆ ಮೊದಲ ಮೂರು ಚರಣಗಳ ಭಾಷೆಯೂ ಅರ್ಥವೂ ನಮ್ಮ ಹಿಡಿತಕ್ಕೆ ಸಿಕ್ಕುವುದಿಲ್ಲ. ಅರ್ಥಕ್ಕಾಗಿ ಓದಿದರೆ ವೃತ್ತದ ಧಾಟಿ ಮರೆಯಾಗುತ್ತದೆ. ಕನ್ನಡ ಕವಿಗಳು ಬೇಕೆಂದೇ ಹೀಗೆ ಒಂದಕ್ಕೊಂದಕ್ಕೆ ವೈಷಮ್ಯಗಳನ್ನು ಕಲ್ಪಿಸುವಂತೆ ತೋರುತ್ತದೆ. ಯತಿಸ್ಥಾನದಲ್ಲಿಯೂ ಪ್ರತಿಪಾದದ ಅಂತ್ಯದಲ್ಲಿಯೂ ಅರ್ಥವು ಸಹಜವಾಗಿ ತಡೆದು ಮುಂದುವರಿಯುವಂಥ ವೃತ್ತಗಳನ್ನೇನಾದರೂ ಕನ್ನಡದಲ್ಲಿ ಬರೆದರೆ ಅವು ಕಿವಿಗೆ ಇಂಪಾಗಿ ಕೇಳಿಸುವುದಿಲ್ಲ. ಅಲ್ಲದೆ, ಕನ್ನಡದ ಕೋಮಲವಾದ ಚಿಕ್ಕ ಮಾತುಗಳಲ್ಲಿ ಧೀರಗಮನದ ಸಂಸ್ಕೃತ ವೃತ್ತಗಳ ಘೋಷಕ್ಕೆ ಜೋಡಿಯಾಗತಕ್ಕ ನಾದವಿಲ್ಲ. ಹೀಗೆ ಭಾಷೆಯ ಗತಿಗೆ ವಿರುದ್ಧ ಮಾರ್ಗದಲ್ಲಿ ನಡೆಯುವ ಛಂದಸ್ಸು ಎಷ್ಟರಮಟ್ಟಿಗೆ ಬೇರೂರಿ ನಿಲ್ಲಬಹುದು? ನಮ್ಮ ಪೂರ್ವ ಕವಿಗಳೇನೋ ಈ ವೃತ್ತಗಳಲ್ಲಿ ಬಹಳ ಕೃಷಿಮಾಡಿದರು; ಆದರೂ ಅದು ಒಟ್ಟಿನಲ್ಲಿ ಸಫಲವಾದಂತೆ ತೋರುವುದಿಲ್ಲ.

ಹಳಗನ್ನಡದ ಮಾತೇ ಹೀಗಾಯಿತು. ಈಗ ಪೂರ್ಣ ಪ್ರಚಾರದಲ್ಲಿರುವ, ಕಾವ್ಯದ ಕೋಟೆಯ ಮೇಲೆ ಕೂಡ ತನ್ನ ಧ್ವಜವನ್ನು ನಟ್ಟಿರುವ ಹೊಸಗನ್ನಡದ ವಿಷಯದಲ್ಲಿ ಹೇಳತಕ್ಕದ್ದೇನು! ಇನ್ನು ಮುಂದೆ ಕಾವ್ಯಗಳಲ್ಲಿ ಹೊಸಗನ್ನಡವು ಇನ್ನೂ ಪ್ರಬಲಿಸುವ ಚಿಹ್ನೆಗಳಿವೆಯೇ ಹೊರತು ಅದು ಹಿಮ್ಮೆಟ್ಟಿಸುವ ಸೂಚನೆಯೇನೂ ಇಲ್ಲ. ಇದು ಸಹಜವೇ ತಾನೆ. ಕಾವ್ಯರಮಣಿ ಪಾಂಡಿತ್ಯದ ಸಿಂಹಾಸನದಿಂದ ಇಳಿದು ಜನಮಧ್ಯದಲ್ಲಿ ವಿಹರಿಸಬೇಕಾದರೆ ಅವಳು ಹೊಸಗನ್ನಡದ ಉಡಿಗೆಯನ್ನೇ ಧರಿಸಬೇಕು. ಹೊಸ ಗನ್ನಡದಲ್ಲಿ ಕ್ಲಿಷ್ಟವಾದ ಸಂಸ್ಕೃತ ಪದಗಳಿಗೂ ಆಡಂಬರದ ಸಮಾಸಗಳಿಗೂ ಅವಕಾಶವಿಲ್ಲ. ಇವು ಇಲ್ಲವಾದರೆ ವೃತ್ತಗಳ ಬಿಗಿಯೇ ಅರ್ಧ ತಪ್ಪುತ್ತದೆ. ಅಲ್ಲದೆ, ಹೊಸಗನ್ನಡದಲ್ಲಿ ಪದಗಳೆಲ್ಲ ಹ್ರಸ್ವಸ್ವರಾಂತವಾಗಿ ನಿಲ್ಲುವುದೇ ರೂಢಿ. ಪ್ರತಿಪಾದದ ಕೊನೆಯಲ್ಲೂ ಗುರುವರ್ಣವಿರಬೇಕಾದ ಸಂಸ್ಕೃತ ವೃತ್ತಗಳಲ್ಲಿ ಹೊಸಗನ್ನಡವನ್ನು ಅಡಕುವುದು ಹೇಗೆ? ಅವೆರಡಕ್ಕೂ ಹೊಂದಿಕೆ ತರುವುದು ಹೇಗೆ? ಹೊಸಗನ್ನಡವನ್ನುಪಯೋಗಿಸಿ ಕೆಲವರು ಬರೆದಿರುವ ವೃತ್ತಗಳು ವಿಲಕ್ಷಣವಾಗಿ ಕೇಳಿಸುತ್ತವೆ.

ಕಂದಪದ್ಯಗಳು ನಮಗೆ ಇನ್ನೂ ಹತ್ತಿರವಾಗಿದ್ದರೂ, ಅವು ಹಳಗನ್ನಡದ ಮರ್ಯಾದೆಯನ್ನೇ ಹೆಚ್ಚಾಗಿ ನಿರೀಕ್ಷಿಸತಕ್ಕವು; ಅವುಗಳಲ್ಲಿ ಕೂಡ ಎರಡನೆಯ ಮತ್ತು ನಾಲ್ಕನೆಯ ಪಾದಗಳ ಕೊನೆಯ ಅಕ್ಷರವು ಗುರುವೇ ಆಗಬೇಕು. ಈ ಪಾದಗಳನ್ನು

ಲಘುವಿನಲ್ಲೇ ನಿಲ್ಲಿಸುವ ಪ್ರಯತ್ನವು ಈಚೆಯ ಹಳಗನ್ನಡದಲ್ಲಿ ಅಲ್ಲಲ್ಲೇ ತೋರುತ್ತಿದ್ದಿತು. (ಉದಾ:—ವೀರಭದ್ರ ವಿಜಯ, ೯.೨೦,೨೧).[೪] ಆದರೆ ಪದ್ಯವು ಅದರಿಂದ ಶಿಥಿಲವಾಗುವುದರಿಂದ ಈ ಪದ್ಧತಿಗೆ ಪುರಸ್ಕಾರವು ದೊರೆಯದೆ ಹೋಗಿರಬೇಕು. ಹೊಸಗನ್ನಡವನ್ನು ಉಪಯೋಗಿಸಿ ಕಂದವನ್ನು ಬರೆಯಲು ಹೊರಟ ಪ್ರಯತ್ನಗಳೂ ಸಮರ್ಪಕವಾಗಿಲ್ಲ.

ಹಾಗಾದರೆ, ವೃತ್ತಕಂದಗಳ ಸೊಲ್ಲೇ ಇನ್ನು ಅಡಗಿಹೋಗುತ್ತದೆಯೇ? ವೃತ್ತಗಳ ಗಂಭೀರನಾದವನ್ನೂ ಕಂದಪದ್ಯಗಳ ಸ್ಪಷ್ಟಮಾಧುರ್ಯವನ್ನೂ ನಾವು ಇನ್ನು ಕೈಬಿಡಬೇಕೆ?—ಎಂದು ಅವುಗಳ ಸ್ವಾರಸ್ಯಕ್ಕೆ ಮನಸೋತವರು ಮರುಗಬಹುದು. ಹೊಸಗನ್ನಡದಲ್ಲೇನೋ ಅವುಗಳಿಗೆ ಸ್ಥಾನವಿಲ್ಲವೆಂದೇ ತೋರುತ್ತದೆ. ಈ ವಿಷಯವನ್ನು ಕುರಿತು ಹಲುಬುವುದು ವ್ಯರ್ಥ. ನಮಗೆ ಪರಮ ಪ್ರಿಯವಾದ ವಸ್ತುಗಳು ಕೂಡ ತಮ್ಮ ಕಾಲವು ಕಳೆದ ಬಳಿಕ ಗತಿಸಲೇಬೇಕು. ಸಂಸ್ಕೃತ ಭಾಷೆಯಲ್ಲಿಯೇ, ವೈದಿಕ ಛಂದಸ್ಸಿನ ಧೀರೋದಾತ್ತವಾದ ವಿವಿಧ ಘೋಷವೆಷ್ಟು ದಿನ ಉಳಿಯಿತು? ಅದರ ಸ್ಥಾನವನ್ನು ಸ್ಫಟಿಕದಂತೆ ತಳತಳಿಸುವ ಚಚ್ಚೌಕದ ವೃತ್ತಗಳು ಆಕ್ರಮಿಸಲಿಲ್ಲವೆ? ಸೃಷ್ಟಿಯ ನಿಯಮವೇ ಇದು. ಹಣ್ಣೆಲೆ ಉದುರುತ್ತದೆ, ಹೊಸ ತಳಿರು ಚಿಗುರುತ್ತದೆ.

ಇನ್ನು, ಷಟ್ಪದಿಗಳ ವಿಚಾರ. ಇದುವರೆಗೆ ಗೊತ್ತಾಗಿರುವ ಮಟ್ಟಿಗೆ,[೫] ಇವು ಹೆರರಿಂದ ಸ್ವೀಕರಿಸಿದ ದತ್ತಪುತ್ರರಲ್ಲ; ಕನ್ನಡಕ್ಕೆ ಮನೆಯ ಮಕ್ಕಳು. ಷಟ್ಪದಿಗಳ ತಳಹದಿ ಕನ್ನಡಭಾಷೆಯ

---

೪. ['ಜಗನ್ನಾಥವಿಜಯ', ೨. ೨೮. ೩೦, ೩೧ ನೋಡಿ. 'ಆದಿಪುರಾಣ', ೧೧.೧೨೪ರಲ್ಲೇ ಹೀಗೆ ಉಂಟು ("...ತಣ್ಗಪಿಂಸೊಳೊಳ ।"). ಆದರೆ ಇಲ್ಲಿಯ ಮೂಲ ಪಾಠ "ತಣ್ಗಂಪಿನೊಳಂ ।" ಎಂದು ಇದ್ದಿರಬಹುದು.]

೫. ಶ್ರೀಮಾನ್ ಮಂಜೇಶ್ವರ ಗೋವಿಂದ ಪೈ ಅವರು 'ಕನ್ನಡ ಷಟ್ಪದಿಗಳು' ಎಂಬ ಲೇಖನದಲ್ಲಿ (ಜಯಕರ್ನಾಟಕ, ೯. ೨, ಪು. ೧೩೪, ೧೩೬) ಈ ರೀತಿ ಪ್ರತಿಪಾದಿಸಿದ್ದಾರೆ—

"...ಪ್ರಾಯಶಃ ಷಟ್ಪದಿಗಳೆಲ್ಲವೂ ಒಂದಲ್ಲ ಒಂದು ವರ್ಣವೃತ್ತದಿಂದ ತಾನೆ ಹುಟ್ಟಿರಬೇಕಲ್ಲದೆ ಅವು ಸಂಸ್ಕೃತದ ಛಂದಸ್ಸಿನ ಸಂಘಟನವು ಕನ್ನಡ ಛಂದಸ್ಸಿಗೆ ಒದಗಿರುವ ಮುಂಚೆ ಹುಟ್ಟಿರಲಾರವು, ಎಂದರೆ ಅವು ಸ್ವತಂತ್ರವಾದ ಕನ್ನಡ ಛಂದಸ್ಸಿನಿಂದ ಹುಟ್ಟಿರಲಾರವು"..."ಹೇಗೂ ಅವುಗಳ (ಷಟ್ಪದಿಗಳ) ಹುಟ್ಟಿಗೆ ಆಯಾ ವೃತ್ತಗಳೂ ಆಯಾ ತಾಳಗಳೂ (ಎಂದರೆ, ಆಯಾ ತಾಳಗಳಲ್ಲಿರುವ ಆಯಾ ವೃತ್ತಗಳೂ) ಕಾರಣವಾಗಿರಬೇಕಲ್ಲದೆ, ಅವು ಸ್ವತಂತ್ರವಾದ ಕನ್ನಡ ಛಂದಸ್ಸಲ್ಲವೆಂದೂ, ಸಂಗೀತದ, ಮುಖ್ಯತಃ ತಾಳಗಳ ಅನುಸಂಧಾನವು ಛಂದಸ್ಸಿಗೆ ಒದಗಿರದ ಮುಂಚೆ ಷಟ್ಪದಿಗಳು ಒಗೆದಿರಲಾರವೆಂದೂ ನನ್ನ ದೃಢನಂಬಿಕೆ."

ಇದು ವಿಚಾರಣೀಯವಾದ ವಿಷಯ. ಇದರ ಚರ್ಚೆಗೆ ಇಲ್ಲಿ ಸ್ಥಳವಿಲ್ಲದಿದ್ದರೂ ಎರಡು ಅಂಶಗಳನ್ನು ಸೂಚಿಸಬಹುದು : (೧) ಸಂಸ್ಕೃತದ ವರ್ಣವೃತ್ತಗಳಿಂದ ಷಟ್ಪದಿಗಳು ಹುಟ್ಟಿದರೆ ಷಟ್ಪದಿಯೊಂದರ ಪ್ರತಿಗಣದಲ್ಲಿಯೂ ಗುರುಲಘು ವಿನ್ಯಾಸವು ನಿಯತವಾಗಿರಬೇಕಷ್ಟೆ ಆದರೆ ಯಾವ ಷಟ್ಪದಿಯಲ್ಲೂ

ಸಹಜಗತಿಯ ಅಡಿಗಲ್ಲಿನ ಮೇಲೆ ಭದ್ರವಾಗಿ ಕುಳಿತಿದೆ. ಹೊಸಗನ್ನಡದ ರೂಪಗಳೂ ಷಟ್ಪದಿಗಳೂ ಕಾವ್ಯದಲ್ಲಿ ಹೆಚ್ಚುಕಡಮೆ ಒಟ್ಟಿಗೆ ಬಳಕೆಗೆ ಬಂದದ್ದು ಅಪರಿಚಿತವಾದ ವಿಷಯವಲ್ಲ; ಷಟ್ಪದಿಗಳ ಛಂದಸ್ಸಿಗೂ ಹೊಸಗನ್ನಡಕ್ಕೂ ಇರುವ ಸಾಮರಸ್ಯವೇ ಇದಕ್ಕೆ ಕಾರಣ. ಷಟ್ಪದಿಗಳಲ್ಲಿ ಶ್ರಾವ್ಯವಾದ ಹಲವು ಕನ್ನಡ ಕಾವ್ಯಗಳು ಹುಟ್ಟಿವೆ. ಸಂಸ್ಕೃತ ವೃತ್ತಗಳನ್ನೂ ಕಂದಪದ್ಯಗಳನ್ನೂ ಇಂಪಾಗಿ ಓದಲು ಹಿಂಜರಿಯುವ ಅನೇಕರು ಷಟ್ಪದಿಗಳನ್ನು ಸರಾಗವಾಗಿ ಓದುತ್ತಾರೆ: ಭಾರತವಾಚನವು ಒಂದು ಜನಪ್ರಿಯವಾದ ಕಲೆಯಾಗಿ ಪರಿಣಮಿಸಿದೆ. ಇದೆಲ್ಲವೂ, ಷಟ್ಪದಿಗಳ ಮೂಲವು ಕನ್ನಡಕ್ಕೆ ಸಹಜವಾದ ಛಂದಸ್ಸೆಂಬುದನ್ನು ಸಾರಿ ಹೇಳುತ್ತದೆ.

ಆದರೆ ಬರಿಯ ಷಟ್ಪದಿಗಳನ್ನಿಟ್ಟುಕೊಂಡೇ ನಾವು ತೃಪ್ತರಾಗುವುದು ಸಾಧ್ಯವಲ್ಲ. ಷಟ್ಪದಿಗಳ ಸಂಖ್ಯೆ ಬಹು ಮಿತ; ಇರುವುದು ಅರೇ ಷಟ್ಪದಿ. ಅವುಗಳಲ್ಲಿಯೂ ಹಿಂದಿನವರು ಹೆಚ್ಚಾಗಿ ಬಳಸುತ್ತಿದ್ದವು ಎರಡೇ : ಭಾಮಿನಿ ವಾರ್ಧಕಗಳು. ಬಂಧದಲ್ಲಿಯೋ, ಈ ಷಟ್ಪದಿಗಳು ಒಂದರ ಪಡಿಯಚ್ಚು ಇನ್ನೊಂದು. ಇಷ್ಟು ಇಕ್ಕಟ್ಟಾದ ಗರಡಿಯಲ್ಲಿ ಜಟ್ಟಿ ತನ್ನ ಪಟ್ಟುಗಳನ್ನೆಲ್ಲ ತೋರಿಸುವುದು ಹೇಗೆ? ಮಾಡಿದ್ದನ್ನೇ ಚಚು ತಪ್ಪದಂತೆ ಮತ್ತೆ ಮತ್ತೆ ಮಾಡುವುದರಲ್ಲಿ ಸುಖವಿಲ್ಲ. ಆದ್ದರಿಂದ ಷಟ್ಪದಿಗಳ ಮೂಲವೂ ಕನ್ನಡಕ್ಕೆ ತಕ್ಕದ್ದಾದರೂ, ಈಗ ಇರುವ ಷಟ್ಪದಿಗಳನ್ನೇ ಪೂರ್ಣವಾಗಿ ನೆಚ್ಚಿಬಿಡದೆ, ಅವುಗಳ ಮೂಲಸೂತ್ರವನ್ನು ವಿಸ್ತರಿಸಿ ಅವಕ್ಕಿಂತಲೂ ವಿಶಾಲವಾದ, ವಿವಿಧವಾದ ಮಟ್ಟುಗಳನ್ನು ಕಲ್ಪಿಸಿಕೊಳ್ಳುವುದು ಹೊಸ ಕವಿಗಳಿಗೆ ಅಗತ್ಯವಾಯಿತು.

ಕವಿ ತನ್ನ ಭಾವಗಳಿಗೆಲ್ಲ ಮೊದಲು ಮಾತಿನ ರೂಪವನ್ನು ಕೊಟ್ಟು ಬಳಿಕ ಆ ಪಾಕವನ್ನು, ಪಾತ್ರೆಗಳಲ್ಲಿ ನೀರನ್ನು ತುಂಬಿದಂತೆ, ಕೆಲವು ವೃತ್ತ (Stanza) ಗಳಲ್ಲಿ

ಹಾಗಿಲ್ಲ. ಗುರುಲಘುಗಳು ಹೇಗಾದರೂ ಬರಬಹುದು; ಮಾತ್ರೆಗಳ ಸಂಖ್ಯೆ ಮಾತ್ರ ನಿಯತವಾಗಿರಬೇಕು. ಈ ವ್ಯತ್ಯಾಸಕ್ಕೆ ಸಮಾಧಾನವೇನು? (೨) ನಾಗವರ್ಮನು 'ಛಂದೊಂಬುಧಿ'ಯಲ್ಲಿ ಕೊಟ್ಟಿರುವ "ಮಂದರ ಧರಗಣ..." ಎಂಬ ಷಟ್ಪದಿಯೇ ನಮಗೆ ಸಿಕ್ಕಿರುವ ಉದಾಹರಣೆಗಳಲ್ಲಿ ಅತಿ ಪ್ರಾಚೀನವಷ್ಟೆ. ಅದನ್ನು ಅವನು "ಕರ್ಣಾಟಕ ವಿಷಯ ಜಾತಿ"ಯನ್ನು ಹೇಳುವ "ಅಧಿಕಾರ"ದಲ್ಲಿ ಕೊಟ್ಟು, ಅದು ವಿಷ್ಣುಗುಣ ರುದ್ರಗಣಗಳಿಂದ ಏರ್ಪಟ್ಟಿದೆಯೆಂದು ಹೇಳುತ್ತಾನೆ. ಚಂದ್ರರಾಜನ 'ಮದನತಿಲಕ'ದಲ್ಲಿ ನೇರವಾಗಿ ಸ್ಫುಟಗೊಳ್ಳುವುದೂ ಇದೊಂದೇ ಷಟ್ಪದಿ. ಈ ಅಂಶಗಳಿಗೆ ಗಮನ ಕೊಡಬೇಡವೆ? ನಮ್ಮ ಷಟ್ಪದಿಗಳ ಮೂಲವಾದ ಮಾತ್ರಾಗಣಗಳು "ದ್ರಾವಿಡ" ಛಂದಸ್ಸಿನ ಬ್ರಹ್ಮವಿಷ್ಣು ರುದ್ರಗಣಗಳಿಂದಲೇ, ಬಹುಶಃ ಪ್ರಾಕೃತ ಛಂದಸ್ಸಿನ ಸಂಪರ್ಕದ ಫಲವಾಗಿ, ವಿಪರಿಣಮಿಸಿರಬಹುದು. ದ್ರಾವಿಡ ಛಂದಸ್ಸಿನ ತ್ರಿಪದಿ ಈಗ ಐದು ಮಾತ್ರೆಯ ಗಣದ ಧಾಟಿಗೆ ತಿರುಗಿರುವುದು ಈ ಊಹೆಯನ್ನು ಬಲಪಡಿಸುತ್ತದೆ.

[ಷಟ್ಪದಿಯನ್ನು ಕುರಿತು ಹೆಚ್ಚಿನ ವಿಚಾರಕ್ಕೆ ಪ್ರಕೃತಗ್ರಂಥದಲ್ಲಿ ಮುಂದೆ ಸೇರಿರುವ ' "ಅಪೂರ್ವ" ಷಟ್ಪದಿಯ ಲಕ್ಷಣ' ಎಂಬ ಲೇಖನವನ್ನು ನೋಡಿ.]

ತುಂಬಿಡುವುದಿಲ್ಲ. ಕವಚಧಾರಿಯಾಗಿ ಕರ್ಣನು ಜನಿಸಿದಂತೆ, ಭಾವಗಳು ಕವಿಯ ಹೃದಯದಿಂದ ಛಂದೋಬದ್ಧವಾಗಿಯೇ ರೂಪುದಳೆದು ಹೊರಬೀಳುತ್ತವೆ. ಒಂದು ಪದ್ಯಬಂಧಕ್ಕೂ ಅದರಲ್ಲಿ ವ್ಯಕ್ತವಾಗುವ ಭಾವಗಳಿಗೂ ಬಲು ಹತ್ತಿರದ ಸಂಬಂಧವಿದೆ. ಪದ್ಯದ ಓಟ ತಡೆ ತಿರುವುಗಳನ್ನೇ ಅನುಸರಿಸುತ್ತವೆ. ಆದುದರಿಂದ ಕವಿ ಆಯ್ದುಕೊಳ್ಳುವ ವೃತ್ತವು ಅನುಚಿತವಾಗಿದ್ದರೆ ಆತನ ಕವನವು ಹದಗೆಡುವುದರಲ್ಲಿ ಸಂಶಯವಿಲ್ಲ. ವೃತ್ತದ ಬಂಧವು (Structure) ಚೀನಾ ದೇಶದಲ್ಲಿ ಹಿಂದೆ ಹೆಣ್ಣುಮಕ್ಕಳ ಕಾಲಿಗೆ ತೊಡಿಸುತ್ತಿದ್ದ ಕಬ್ಬಿಣದ ಜೋಡಿನಂತೆ : ಅದರ ಪರಿಮಿತಿಯೆಷ್ಟೋ ಭಾವವೂ ಅಷ್ಟೇ ಬೆಳೆಯಬೇಕು; ಅದರ ಆಕಾರವು ಹೇಗೋ ಇದು ಹಾಗೆಯೇ ಆಕಾರ ತಳೆಯಬೇಕು. ಉಚಿತವಾದ ಮತ್ತೊಂದು ಹೋಲಿಕೆಯನ್ನು ಕೊಡಬಹುದಾದರೆ, ವೃತ್ತದ ಬಂಧವು ಗ್ರೀಕ್ ಪುರಾಣದ ಪ್ರೊಕ್ರಸ್ಟೀಸನ ಹಾಸಿಗೆಯಂತೆ; ಭಾವವು ಚಿಕ್ಕದಾಗಿದ್ದರೆ ಅದನ್ನು ವೃತ್ತವು ತನ್ನುದ್ದಕ್ಕೆ ಎಳೆದು ಎಳೆದು ಹಿಗ್ಗಲಿಸುತ್ತದೆ; ಭಾವವು ದೊಡ್ಡದಾಗಿದ್ದರೆ ಅದರ ತಲೆಯನ್ನೋ ಕಾಲನ್ನೋ ಕತ್ತರಿಸಿಹಾಕುತ್ತದೆ. ಇದಕ್ಕೆ ಹಲವು ನಿದರ್ಶನಗಳನ್ನು ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಕಾಣಬಹುದು. ಸಂಸ್ಕೃತ ವೃತ್ತಗಳಲ್ಲಿ ಅನಾವಶ್ಯಕವಾದ ಅನೇಕ ಆಡಂಬರದ ಶಬ್ದಗಳನ್ನು ಕವಿಗಳು ತುಂಬುವುದು ಇದರಿಂದಲೇ. ಲಕ್ಷ್ಮೀಶನಂಥ ಔಚಿತ್ಯ ಜ್ಞಾನವುಳ್ಳ ಕವಿ ಕೂಡ 'ಜೈಮಿನಿ ಭಾರತ'ದಲ್ಲಿ ಒಂದು ವಾರ್ಧಕ ಷಟ್ಪದಿಯ ತುಂಬ ಒಂದು ಭಾವವನ್ನು ವಿಸ್ತರಿಸಲಾರದೆ ಅಲ್ಲಲ್ಲಿ ಕ್ಲೇಶಪಟ್ಟಿರುವುದು ಇದರಿಂದಲೇ.

ಹೀಗಿರುವುದರಿಂದ, ಕಂದ ಸಂಸ್ಕೃತ ವೃತ್ತಗಳಲ್ಲಿ ನಾಲ್ಕು ಚರಣಗಳು, ಷಟ್ಪದಿಗಳಲ್ಲಿ ಆರು ಚರಣಗಳು—ಈ ರೀತಿಯ ಅತಿನಿಯತವಾದ ಚರಣ ಸಂಖ್ಯೆಯೂ ಅವುಗಳ ಅತಿನಿಬದ್ಧವಾದ ಗತಿಯೂ ಕವಿಯ ಹೃದಯದಲ್ಲಿ ಜನಿಸುವ ಅನಂತ ಭಾವಗಳಲ್ಲಿ ಎಲ್ಲವನ್ನೂ ಉತ್ಕೃಷ್ಟವಾಗಿ ನಿರೂಪಿಸಲಾರವು. ವೃತ್ತದ ಧಾಟಿಯೂ ಸಾಧ್ಯವಾದ ಮಟ್ಟಿಗೆ ಭಾವದ ಸ್ಥಿತಿಗತಿಗಳನ್ನು ಪ್ರತಿಬಿಂಬಿಸಬೇಕು. ಆದಕಾರಣ, ಭಾವದ ಗತಿಗೆ ತಕ್ಕಂತೆ ಬಳುಕುವ, ಬೇಕೆಂದಾಗ ಹಿಗ್ಗುವ, ಓಡುವ ಕುದುರೆ ನಿಲ್ಲುವಂತೆ ಥಟ್ಟನೆ ನಿಲ್ಲುವ ವಿವಿಧ ಗತಿಯ ಮಟ್ಟುಗಳು ಕನ್ನಡಕ್ಕೆ ಬೇಕಾದವು; ಹೊಸ ಮಾದರಿಗಳನ್ನು ಕಂಡುಹಿಡಿಯ ಬೇಕಾಯಿತು. ಈ ಕಾರ್ಯದಲ್ಲಿ ಆಧುನಿಕ ಕವಿಗಳು ಸಂಪೂರ್ಣವಾಗಿ ಹೊಸ ಜಾಡನ್ನೇ ಹುಡುಕುವುದು ಅವಶ್ಯಕವಾಗಲಿಲ್ಲ. ಇವರು ಬಯಸುತ್ತಿದ್ದ ಸ್ವಾತಂತ್ರ್ಯವನ್ನೇ ಹಿಂದಿನವರು ಬಯಸಿ ಅಲ್ಲಲ್ಲಿ ಹೊಸ ಮಟ್ಟುಗಳನ್ನು ಉಪಯೋಗಿಸಿರುವುದು ಪ್ರಾಚೀನ ಸಾಹಿತ್ಯದಲ್ಲೇ ನಮಗೆ ಗೋಚರಿಸುತ್ತದೆ.

ಇಂಥ ಮಟ್ಟುಗಳಲ್ಲಿ ರಗಳೆ ಮುಖ್ಯವಾದುದು.[೬] ಅದನ್ನು ನಾಗವರ್ಮನು ಸ್ಮರಿಸಿದ್ದರೂ ಅದರ ನಿಯಮಪ್ರಭೇದಗಳ ನಿರೂಪಣೆಯ ಕಡೆಗೆ ಅವನು ಹೆಚ್ಚು

---

೬. ಕ್ರಿ.ಶ. ೧೦ನೆಯ ಶತಮಾನದ ಉತ್ತರಾರ್ಧದಲ್ಲಿ ಪುಷ್ಪದಂತಕವಿಯ 'ಜಸಹರಚರಿಉ', 'ಣಾಯಕುಮಾರಚರಿಉ,' 'ಮಹಾಪುರಾಣ' ಮೊದಲಾದ ಅಪಭ್ರಂಶ ಕಾವ್ಯಗಳು ಪ್ರಕಟನೆಯಾದೀಚೆಗೆ, ರಗಳೆಯ ಮೂಲ ಯಾವುದೆಂಬುದು ಬಲು ಮಟ್ಟಿಗೆ ಸ್ಫುಟವಾಗಿದೆ. ಈ ಕಾವ್ಯಗಳಲ್ಲಿ ನಮ್ಮ

ಗಮನವನ್ನು ಕೊಡಲಿಲ್ಲ. "ಮಾತ್ರೆ ಸಮನಾಗಿ" "ತಾಳದ ಗಣನೆಗೊಡಂಬಟ್ಟರೆ" ರಗಳೆಯಾಗುವುದೆಂದು ಒಂದು ಕಂದಪದ್ಯದಲ್ಲಿ ('ಛಂದೋಂಬುಧಿ', ೩ನೆಯ ಅಧಿಕಾರದಲ್ಲಿ) ಸೂತ್ರಿಸಿ ಅವನು ಮುಂದೆ ಸಾಗುತ್ತಾನೆ. ಪಂಪ ಮೊದಲಾದವರು ಬಗೆಬಗೆಯ ರಗಳೆಗಳನ್ನುಪಯೋಗಿಸಿದ್ದರೂ ಅವುಗಳನ್ನು ಕುರಿತು ಅವನು ಪ್ರಸಂಗಿಸಲಿಲ್ಲ. ಪಂಪನ ರಗಳೆಗಳಲ್ಲಿ ಹೊಸ ಮಾರ್ಗದ ಹಲವು ಲಕ್ಷಣಗಳು ಕಾಣಬರುತ್ತವೆ. ಆ ರಗಳೆಗಳಲ್ಲಿ ಒಂದು ಪ್ರಭೇದದ ಕೆಲವು ಚರಣಗಳನ್ನು ಇಲ್ಲಿ ಉದಾಹರಿಸಬಹುದು :

> ಅಲ್ಲಿ ಸೊಗಯಿಸುವ ಕೃತಕಗಿರಿಗಳಿಂ ಕಲ್ಪತರುಗಳನೆ ಪೋಲ್ವ ಮರಗಳಿಂ।
> ನಂದನಂಗಳೊಳ ಸುಟಿವ ಬಿರಯಿಯಿಂ ಕಂಪು[ಕ]ಣ್ಮಲೆಯೆ
> ಪೂತಸುರಯಿಯಿಂ।
> ಸುತ್ತಲುಂ ಪರಿವ ಜರಿವೊನಲ್ಗಳಿಂದೆತ್ತಲುಂ ನಲಿವ ಪೊಸ ನವಿಲ್ಗಳಿಂ॥
> (ಪಂಪಭಾರತ, ೩.೨೨)

ಇದರ್ರಲ್ಲಿ ವಿಚಾರಾರ್ಹವಾದ ಹಲವು ಅಂಶಗಳಿವೆ : ಮೊದಲನೆಯದೆಂದರೆ, ಕನ್ನಡಕ್ಕೆ ಅತಿ ಮುಖ್ಯವಾದ ಆದಿಪ್ರಾಸದ ನಿರಾಕರಣೆ. (ಆದರೆ ಪಂಪನು ಮತ್ತೊಂದು ಬಗೆಯ ಪ್ರಾಸವನ್ನು ಇಲ್ಲಿ ಇಟ್ಟಿದ್ದಾನೆ : ಚರಣಗಳನ್ನು ಇಲ್ಲಿ ಅಚ್ಚಾಗಿರುವಂತೆಯೇ ಇಟ್ಟುಕೊಂಡರೆ ಅದನ್ನು ಮಧ್ಯಪ್ರಾಸವೆನ್ನಬಹುದು; ಇಲ್ಲವಾದರೆ, ಪ್ರತಿಯೊಂದು ಚರಣವನ್ನೂ ಎರಡೆರಡು ಭಾಗಗಳಾಗಿ ವಿಭಾಗಿಸಿ, ಅಂತ್ಯಪ್ರಾಸವೆನ್ನಬಹುದು) ಚರಣಗಳ ಸಂಖ್ಯೆ ಇಷ್ಟೇ ಆಗಬೇಕೆಂಬ ನಿರ್ಬಂಧವೂ ಇಲ್ಲಿಲ್ಲ. ಇವಕ್ಕಿಂತಲೂ ಸ್ವಾರಸ್ಯಕರವಾದ ವಿಷಯವೇನೆಂದರೆ, ಪಂಪನು ಇಲ್ಲಿ ಹೊಸಬಗೆಯ ಸಂಮಿಶ್ರಗಣದ (೩ ಮಾತ್ರೆಯ ಗಣ+೫ ಮಾತ್ರೆಯ ಗಣ) ಮಟ್ಟೊಂದನ್ನು ಪ್ರಯೋಗಿಸಿದ್ದಾನೆ. ಅದು ಮತ್ತೆ ತಲೆಯೆತ್ತಿರುವುದು ಈ ಆಧುನಿಕ ಕಾಲದಲ್ಲೇ—'ಇಂಗ್ಲಿಷ್ ಗೀತೆಗಳ'ಲ್ಲಿನ 'ಚೋಳಕನ್ನೆಯರು' ಎಂಬ ಕವನದಲ್ಲಿ.[೨]

ಹೀಗೆ ಪಂಪನು ಆಧುನಿಕರಿಗೆ ಹಲವು ವಿಧಗಳಲ್ಲಿ ಮಾರ್ಗದರ್ಶಿಯಾಗಿದ್ದಾನೆ. ಅವನಿಂದೀಚೆಗೆ ರಗಳೆಗಳನ್ನು ಹೇರಳವಾಗಿ ಉಪಯೋಗಿಸಿದವನು ಹರಿಹರ ಕವಿ. ಆದರೆ ಅವುಗಳ ಪ್ರಾಬಲ್ಯವು ಅವನ ತಲೆಗೇ ನಿಂತುಹೋಯಿತು. ಕಥನಕಾವ್ಯಕ್ಕೆ ಇಷ್ಟು ಉಚಿತವಾದ ಮಟ್ಟುಗಳನ್ನು ಹಿಂದಿನ ಕವಿಗಳು ಏಕೆ ಆದರಿಸಲಿಲ್ಲವೋ! ಆಧುನಿಕ ಕಾಲದಲ್ಲಿ ಮಾತ್ರ ರಗಳೆಗೆ ಮತ್ತೆ ಪ್ರಾಶಸ್ತ್ಯವು ದೊರೆತಿದೆ. ಲಲಿತರಗಳೆಯ ಪ್ರಾಸಗಳನ್ನು ಕಿತ್ತುಹಾಕಿ ಸರಳಮಾಡಿ ಚರಣಗಳನ್ನು ತಡೆಯಿಲ್ಲದೆ ಹರಿಯಬಿಡುವುದರಿಂದ

ರಗಳೆಗಳ ಹಲವು ಬಗೆಗಳನ್ನು ಹೋಲುವ ಪದ್ಯ ಜಾತಿಗಳು ತುಂಬಿವೆ; ಇವುಗಳ ಲಕ್ಷಣವು ಹಿಂದಿನ ಪ್ರಾಕೃತ ಛಂದೋಗ್ರಂಥಗಳಲ್ಲಿ ನಿರೂಪಿತವಾಗಿದೆ. ಸಂಸ್ಕೃತದಿಂದ ವೃತ್ತಗಳೂ ಪ್ರಾಕೃತದಿಂದ ಕಂದವೂ ಕನ್ನಡಕ್ಕೆ ಬಂದಂತೆ ಬಹುಶಃ ಅಪಭ್ರಂಶದಿಂದ ರಗಳೆಯ ಪ್ರಭೇದಗಳು ಕನ್ನಡಕ್ಕೆ ಬಂದುವೆಂದು ತೋರುತ್ತದೆ; "ರಗಳೆ" ("ರಘಟಾ") ಎಂಬ ಹೆಸರು ಮಾತ್ರ ಅಲ್ಲಿ ಇದುವರೆಗೆ ಕಾಣಬಂದಿಲ್ಲ. ರಗಳೆಯ ಮೂಲದ ಪರಿಶೀಲನೆಗೆ ಇದು ಸ್ಥಳವಲ್ಲ.

೨. [ಈ ಸಂದರ್ಭದಲ್ಲಿ ಪ್ರಕೃತ ಗ್ರಂಥದ ೨೪೭ನೆಯ ಪುಟವನ್ನೂ ನೋಡಬಹುದು.

ಹುಟ್ಟಿರುವ "ಸರಳರಗಳೆ" ಈಗಾಗಲೇ ಕವಿಪ್ರಿಯವಾಗಿದೆ. ಇಂಗ್ಲಿಷಿನ 'Blank Verse' ಎಂಬ ಮಟ್ಟಿನಂತೆ ನಾಟಕಗಳನ್ನೂ ಕಥನಕಾವ್ಯಗಳನ್ನೂ ಬರೆಯುವುದಕ್ಕೆ ಇದನ್ನು ಉಪಯೋಗಿಸುವ ಪ್ರಯತ್ನವು ಆಶಾಜನಕವಾಗಿ ನಡೆಯುತ್ತಿದೆ.

ದ್ವಿಪದಿ ಚೌಪದಿಗಳ ಕಥೆಯೂ ರಗಳೆಯ ಕಥೆಯೇ. ನಮ್ಮ ಹಿಂದಿನ ಕವಿಗಳಿಗೆ ಅವು ಅಷ್ಟು ಗಂಭೀರವಾಗಿ ತೋರಲಿಲ್ಲವೇನೊ! ಅದಕ್ಕೇ ಅವರು ಕೊರವಂಜಿಯ ಹಾಡುಗಳಿಗೂ ಮಾನೌಮಿಯ ಪದ್ಯಗಳಿಗೂ ಅವನ್ನು ಮೀಸಲಾಗಿಟ್ಟಿದಂತೆ ಕಾಣಿಸುತ್ತದೆ. ಜೊತೆಗೆ ಇನ್ನೊಂದು ಮಟ್ಟನ್ನು ಇಲ್ಲಿ ಹೆಸರಿಸುವುದು ಉಚಿತ : 'ಗೋವಿನಕಥೆ'ಯನ್ನು ಕನ್ನಡನಾಡಿನಲ್ಲಿ ಅರಿಯದವರು ಯಾರು? ಮೆಚ್ಚದವರು ಯಾರು? ಅದರ ಸೊಗಸಿಗೆ ಅದರ ಮಟ್ಟೂ ಬಲುಮಟ್ಟಿಗೆ ಕಾರಣವೆಂದು ತೋರುತ್ತದೆ. ಹೊಸ ಕವಿಗಳು ಅದರ ಸ್ವಾರಸ್ಯವನ್ನು ಕಂಡುಕೊಳ್ಳದೆ ಬಿಟ್ಟಿಲ್ಲ. ಅವರು ಅದರಲ್ಲಿ ಮಕ್ಕಳಿಗೆ ಕಥೆಗಳನ್ನು ಹೇಳಬಲ್ಲರು, ಹಾಸ್ಯವನ್ನು ಸೂಸಬಲ್ಲರು : ಗಹನವಾದ, ಗಂಭೀರವಾದ ಭಾವಗಳನ್ನು ಕೂಡ ರಮ್ಯವಾಗಿ ನಿರೂಪಿಸಬಲ್ಲರು.

ಹೀಗೆಯೇ, ದಾಸರ ಪದಗಳು, ಯಕ್ಷಗಾನಗಳು, ಹಾಡುಗಳು—ಇವುಗಳಲ್ಲೆಲ್ಲ ಛಂದಶ್ಶಾಸ್ತ್ರದ ಅತಿನಿಯಮದ ಕಟ್ಟುಗಳನ್ನು ಕಳಚಿ ಹೊಸ ಹೊಸ ಸಿದ್ಧಿಗಳನ್ನು ಪಡೆಯುವ ಪ್ರಯತ್ನವು ಹಿಂದೆಯೇ ನಡೆಸಿರುವುದನ್ನು ನಾವು ಕಾಣಬಹುದು. ಆದರೆ, ಆಗಿನ ಪ್ರಯತ್ನಗಳಿಗೂ ಈಗಿನವಕ್ಕೂ ಪದವಿಯಲ್ಲಿ ಭೇದವಿದೆ. ಜನಸಾಮಾನ್ಯವನ್ನು ಉದ್ದೇಶಿಸಿ ಬರೆದ, ಜನಸಾಮಾನ್ಯಕ್ಕೇ ಸೇರಿದ ಕವಿಗಳು ಮಾತ್ರ ಇಂತ ಶಾಸ್ತ್ರಪ್ರಣೀತವಲ್ಲದ ಮಟ್ಟುಗಳನ್ನು ಹಿಂದೆ ಉಪಯೋಗಿಸುತ್ತಿದ್ದರು. ಕಾವ್ಯವು ಲಕ್ಷಣಬದ್ಧವಾಗಬೇಕೆಂದು ಬಯಸಿದವರೆಲ್ಲರೂ ಸಂಸ್ಕೃತವೃತ್ತ ಕಂದಗಳನ್ನೋ ಷಟ್ಪದಿಯನ್ನೋ ಆರಿಸಿಕೊಳ್ಳುತ್ತಿದ್ದರು. (ಷಟ್ಪದಿಗೆ ಕೂಡ ಮನ್ನಣೆಯನ್ನು ಸಲ್ಲಿಸದ ವೀರ ವಿದ್ವಾಂಸರು ನಮ್ಮಲ್ಲಿ ಇನ್ನೂ ಇದ್ದಾರೆ.) ಈಗಲಾದರೆ ಕವಿಗಳು ಈ ಜಾನಪದ ಛಂದಸ್ಸಿನಲ್ಲಿ ಹೊಸತನವನ್ನೂ ಇಂಪನ್ನೂ ಕಂಡು ಹೀಗೆ ಬಹಿಷ್ಕೃತರನ್ನು ಉದ್ಧರಿಸುವ ಕಾರ್ಯವು ನಮ್ಮ ಛಂದಸ್ಸಿನಲ್ಲಿ ಈಗ ನಡೆಯುತ್ತಿದೆ.

ಹಿಂದೆ ಇಂಥ ಮಟ್ಟುಗಳು ತಲೆದೋರುತ್ತಿದ್ದ ಬಗೆಗೂ ಈಗ ನಡೆಯುತ್ತಿರುವ ಪ್ರಯೋಗಕ್ಕೂ ಒಂದು ಮುಖ್ಯ ವ್ಯತ್ಯಾಸವುಂಟು : ಹಿಂದಿನವರು ಒಂದು ಕ್ರಮವರಿತು ಹೊಸ ಮಟ್ಟುಗಳನ್ನು ನಿರ್ಮಿಸಿಕೊಳ್ಳಲಿಲ್ಲ; ಹೊಸ ಮಟ್ಟುಗಳಲ್ಲಿ ಎಷ್ಟು ವೈವಿಧ್ಯವಿರ ಬಹುದೆಂಬುದರ ಕಲ್ಪನೆಯೂ ಅವರಿಗೆ ಬಂದಿರಲಾರದು. ಇದುವರೆಗೂ ನಮ್ಮ ಛಂದಸ್ಸಿನ ಹಡಗು ಪ್ರಾಚೀನ ಸೂತ್ರಗಳ ಇಕ್ಕಟ್ಟಿನ ಹೊಳೆಯೊಳಗೇ ಹೋಗುತ್ತಿದ್ದಿತು: ಒಂದೊಂದು ಸಲ ಸಮುದ್ರದೊಳಕ್ಕೆ ನುಗ್ಗಿದರೂ ಹೆಚ್ಚು ದೂರ ಹೋಗಲಂಜಿ ಹಿಂದಿರುಗುತ್ತಿದ್ದಿತು. ಈಗ ಅದು ಧೈರ್ಯದೊಡನೆ ನಿರ್ಭಯವಾಗಿ ಸಮುದ್ರದ ಮೇಲೆಲ್ಲ ಸಂಚರಿಸಲು ಅಭ್ಯಾಸ ಮಾಡುತ್ತಿದೆ ; ತನ್ನ ಸಾಮರ್ಥ್ಯವನ್ನು ಕಂಡುಕೊಳ್ಳಲು ನಿರಂತರ ಪ್ರಯತ್ನ ಮಾಡುತ್ತಿದೆ. ಹೊಸ ಹುರುಪಿನಲ್ಲಿ ಅದು ಎತ್ತಲೋ ನುಗ್ಗಿ ಸುಳಿಗಳಿಗೆ

ಸಿಕ್ಕುವುದೂ ಉಂಟು; ದಿಕ್ಕು ತಪ್ಪಿ ಎಲ್ಲೆಲ್ಲೋ ಅಲೆಯುವುದೂ ಉಂಟು. ಆದರೆ, ಆ ಸುಳಿಗಳಿಂದ ತಪ್ಪಿಸಿಕೊಳ್ಳುವುದಕ್ಕೂ ಸರಿಯಾದ ದಾರಿಗೆ ತಿರುಗಿಕೊಳ್ಳುವುದಕ್ಕೂ ಅದಕ್ಕೆ ಸ್ವಸಾಮರ್ಥ್ಯವೂ ವಿವೇಚನೆಯೂ ಉಂಟೆಂದು ನಾವು ನಂಬಬಹುದು.

ಕನ್ನಡ ಛಂದಸ್ಸು ಈ ರೀತಿ ಸುಖಸಂಚಾರಕ್ಕೆ ಉದ್ದೇಶ ಪೂರ್ವಕವಾಗಿ ಹೊರಟಿದ್ದು ಇಂಗ್ಲಿಷ್ ಸಾಹಿತ್ಯದ ಸಂಪರ್ಕದಿಂದಲೆ ಎಂದು ಒಪ್ಪಿಕೊಳ್ಳಬೇಕು. ಇದಕ್ಕಾಗಿ ಕೆಲವರು ಈಗಿನ ಕವಿಗಳನ್ನು ಅನುಕರಣಶೀಲರೆಂದು ಕರೆದು ಹಾಸ್ಯ ಮಾಡಬಹುದು. ಆದರೆ ಇಂಗ್ಲಿಷ್ ಛಂದಸ್ಸಿನ ವಿಶಾಲ ಮಾರ್ಗವನ್ನೂ ವೈವಿಧ್ಯವನ್ನೂ ನೋಡಿದ ಯಾರಿಗೆ ತಾನೆ ಕನ್ನಡದಲ್ಲೂ ಆ ಸೌಂದರ್ಯವನ್ನು ಪಡೆದು ಅನುಭವಿಸಬೇಕೆಂಬ ಆಕಾಂಕ್ಷೆ ಹುಟ್ಟುವುದಿಲ್ಲ! ಅದಕ್ಕೆ ಅನುಕೂಲವಾಗಿ, ನಮ್ಮ ರಗಳೆ ಷಟ್ಪದಿಗಳ ಆಧಾರವಾದ ಮಾತ್ರಾ ಛಂದಸ್ಸು ಅಂಥ ಹಿಗ್ಗಲಿಕೆಯನ್ನು ಸುಲಭವಾಗಿ ತಡೆಯಬಲ್ಲದೆಂದೂ, ಅತಿ ರಮ್ಯವಾದ ರೂಪಗಳನ್ನು ತಾಳಬಲ್ಲದೆಂದೂ ಗೊತ್ತಾದರೆ ಯಾರ ಹೃದಯ ತಾನೆ ಉಬ್ಬುವುದಿಲ್ಲ ! ಇಂಗ್ಲಿಷ್ ಛಂದಸ್ಸಿನಲ್ಲಿ ಯಾವ ಯಾವ ಪ್ರಯೋಗಗಳೂ ಫಲಗಳೂ ಸಾಧ್ಯವಾಗಿವೆಯೋ ಅವೆಲ್ಲವೂ ಹೆಚ್ಚು ಕಡಮೆ ಕನ್ನಡಕ್ಕೂ ಸಾಧ್ಯವೆಂದು 'ಇಂಗ್ಲಿಷ್ ಗೀತಗಳ'ನ್ನು ಓದಿದವರು ಹೇಳಬಲ್ಲರು. ಈ ಸಾಧನೆಗಾಗಿ ನಾವು ನಮ್ಮ ತಾಯಿಬೇರನ್ನು ಛೇದಿಸಿ ಬೇರೊಂದು ಸಸಿಯನ್ನು ಪರದೇಶದಿಂದ ತಂದು ನಟ್ಟು ಬೆಳಸಬೇಕಾಗಿಲ್ಲ; ನಮ್ಮ ಸಸಿಯನ್ನೇ ಕಸಿ ಮಾಡಿ ಬೆಳಸಿದರಾಯಿತು. ನಮ್ಮ ಬಳಿ ಚಿನ್ನವಿದ್ದಿತು; ಅದು ನಮಗೆ ಗೊತ್ತಿರಲಿಲ್ಲ. ಇಂಗ್ಲಿಷ್ ಛಂದಸ್ಸಿನ ಒರೆಗಲ್ಲಿಗೆ ಉಜ್ಜಿ ಅದನ್ನು ಚಿನ್ನವೆಂದು ಕಂಡುಕೊಂಡಿದ್ದೇವೆ; ಅದರಿಂದ ಆಭರಣಗಳನ್ನು ಮಾಡಿ, ನಮ್ಮ ಕಾವ್ಯದೇವಿಯನ್ನು ಸಿಂಗರಿಸೋಣ.

"ಹೊಸ" ಛಂದಸ್ಸು ಜನಗಳಿಗೆ ಎಷ್ಟು ಪ್ರಿಯವಾಗಿದೆಯೆನ್ನುವುದು ಅದಕ್ಕೆ ಎಲ್ಲೆಲ್ಲೂ ದೊರೆಯುತ್ತಿರುವ ಆದರದಿಂದಲೇ ಸ್ಪಷ್ಟವಾಗುತ್ತದೆ. ಈಗ ಮಾಸಪತ್ರಿಕೆ ಮೊದಲಾದವುಗಳಲ್ಲಿ ಅಚ್ಚಾಗುತ್ತಿರುವ ಕವನಗಳನ್ನು ನೋಡಿ; ಪ್ರಕಟವಾಗುತ್ತಿರುವ ಹೊಸ ಕಾವ್ಯಗಳನ್ನು ನೋಡಿ : ಹೆಚ್ಚು ಕಡಮೆ ಎಲ್ಲವೂ ಹೊಸ ಮಟ್ಟುಗಳಲ್ಲಿಯೇ ಇವೆ. ಹೊಸ ರೀತಿಯ ಬೆಳಕು ಹರಿದ ಕೂಡಲೆ ಅದುವರೆಗೂ ನಿದ್ರಿಸುತ್ತಿದ್ದ ಎಷ್ಟೋ ಕವಿಪಕ್ಷಿಗಳು ಎಚ್ಚತ್ತು ಸುಖವಾಗಿ ಗಾನ ಮಾಡಲು ಆರಂಭಿಸಿದುವು. ಕನ್ನಡ ಕವಿತೆಯಲ್ಲಿ ಒಂದು ಹೊಸ ಕಳೆಯುಕ್ಕಿತು. ಮನಸ್ಸಿನ ಭಾವಗಳನ್ನು ನೇರವಾಗಿ, ಗುರಿತಪ್ಪದೆ, ಬಳಸಿಲ್ಲದೆ ನಿರೂಪಿಸುವ ಶಕ್ತಿಯನ್ನು ಕವಿಗೆ ಹೊಸ ಮಟ್ಟುಗಳು ಕೊಟ್ಟುವು. ಈ ಮಟ್ಟುಗಳ ಸ್ವರೂಪವೇನು, ಮೂಲವೇನು, ನಿಯಮಗಳೇನು ಎಂಬುದರ ವಿಚಾರವು ಇನ್ನು ನಡೆಯಬೇಕಾಗಿದೆ.

೧೯೩೧]

ಸಮಾಲೋಚನ : ೧೯೫೪

ಹೊಸ ಛಂದಸ್ಸಿನ ಲಯಗಳು*

೧

ಈ ಹೊಸ ಯುಗದ ಕವಿಗಳು ಪತ್ರಿಕೆ ಪುಸ್ತಕಗಳಲ್ಲಿ ಪ್ರಕಾಶಗೊಳಿಸುತ್ತಿರುವ ಕವನಗಳಲ್ಲಿ ಪದ್ಯಜಾತಿ ಅನಂತವಾಗಿರುವಂತೆ ಮೇಲುನೋಟಕ್ಕೆ ತೋರಬಹುದು. ಹಿಂದಿನ ಛಂದಸ್ಸಿನಲ್ಲಿದ್ದಂತೆ ಪದ್ಯಕ್ಕೆ ಇಷ್ಟೇ ಚರಣ, ಚರಣಕ್ಕೆ ಇಷ್ಟೇ ಅಕ್ಷರ ಅಥವಾ ಮಾತ್ರೆ ಎಂಬ ಕಟ್ಟಳೆಯೇ ಕಾಣಿಸದೆ, ಹೊಸ ಛಂದಸ್ಸಿನಲ್ಲಿ ಅನಾಯಕತೆ ತಾಂಡವವಾಡುತ್ತಿರುವಂತೆ ಭಾಸವಾಗ ಬಹುದು. ಆದರೆ ಒಳಹೊಕ್ಕು ಪರಿಶೀಲಿಸಿದರೆ, ಇಲ್ಲಿರುವುದು ವೈವಿಧ್ಯವೇ ಹೊರತು ಸ್ವಚ್ಛಂದತೆಯಲ್ಲ ವೆಂಬುದು ಸ್ಪಷ್ಟವಾಗುತ್ತದೆ. ಪದ್ಯದಲ್ಲಿ ಎಷ್ಟೆಷ್ಟು ಚರಣಗಳಿರಬೇಕು, ಅವು ಎಷ್ಟೆಷ್ಟು ಉದ್ದವಾಗಿರಬೇಕು, ಒಂದಕ್ಕೊಂದನ್ನು ಹೇಗೆ ಜೋಡಿಸಬೇಕು—ಈ ಮೊದಲಾದ ವಿವರಗಳಲ್ಲಿ ಕೂಡ ಕಿವಿಗೆ ಹಿತವಾಗುವ, ಹಿಡಿತಕ್ಕೆ ಸಿಕ್ಕುವ ನಿಯಮಗಳುಂಟೆಂದು ತೋರಿಸು ವುದು ಕಷ್ಟವಲ್ಲ; ಆದರೆ ಅವುಗಳ ನಿರೂಪಣೆ ಸದ್ಯದಲ್ಲಿ ನಮ್ಮ ಉದ್ದೇಶಕ್ಕೆ ಮಿಾರಿದ್ದು. ಇನ್ನು ಈ ವಿವಿಧ ವಿಸ್ತಾರಕ್ಕೆಲ್ಲಾ ಇಂಬುಗೊಟ್ಟು ಅದರ ಜೀವಾಳವಾಗಿ ಮಿಡಿಯುವ ನಡೆಗಳು ಗ್ರಹಿಕೆಗೆ ನಿಲುಕದಷ್ಟೇನೂ ಗಹನವಾಗಿಲ್ಲ; ಅವುಗಳನ್ನು ಎಣಿಕೆ ಮಾಡುವುದಕ್ಕಂತೂ ನಿಜವಾಗಿ ಎರಡು ಕೈಗಳ ಬೆರಳುಗಳು ಕೂಡ

* 'ಸಂಭಾವನೆ', ಬೆಂಗಳೂರು, ೧೯೪೧.

ಅನಾವಶ್ಯಕ. ಈ ಮೂಲಗತಿಗಳು ಯಾವುವು, ಅವುಗಳ ವಿನ್ಯಾಸ ಹೇಗೆ, ಅಲ್ಲಿಯ ಸಮಸ್ಯೆಗಳೇನು ಎಂಬುದನ್ನು ಕೆಲವು ಮಟ್ಟಿಗೆ ವಿಚಾರ ಮಾಡುವುದೇ ಇಲ್ಲಿಯ ಪ್ರಯತ್ನ.

ಹೊಸ ಕವಿತೆಯ ನಾಡಿನಲ್ಲಿ ಹೆದ್ದಾರಿಗಳನ್ನು ತೆರೆದ 'ಇಂಗ್ಲಿಷ್ ಗೀತಗಳು', 'ಅಶ್ವತ್ಥಾಮನ್'—ಈ ಎರಡು ಕೃತಿಗಳಿಂದ ಎತ್ತಿಕೊಟ್ಟಿರುವ ಕೆಳಗಿನ ಪದ್ಯಗಳನ್ನು ನೋಡಿ:

(೧) ಮೊದಲು ತಾಯ ಹಾಲ ಕುಡಿದು,
ಲಲ್ಲೆಯಿಂದ ತೊದಲಿ ನುಡಿದು,
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು
ನಲ್ಲೆಯೊಲವ ತೆರೆದು ತಂದ
ಮಾತದಾವುದು—

(೨) ಲೋಕಂ ಪುಟ್ಟಲ್, ಲೋಕಂ ಸಾಯಲ್,
ದೇವತೆಗಳ ಗಣಮೆಲ್ಲಂ ಪಾಯಲ್,
ಒರ್ವನೆ ತಾಂಡವವಾಡುವ ರಾಜಾ,
ನಾಟ್ಯಂಗಲಿಸುವ ಓ ನಟರಾಜ,
ಕುಣಿವೆನ್, ಕಲಿಸೆನಗೀಗಳ್; ಬಾರಯ್,
ಕುಣಿವೆನ್, ಬಾರಯ್!
ಓ ಶಿವೆ, ಬಾರಯ್!

(೩) ಆಶೆಗಳು; ಆಶೆಯನು ಕನಲಿಸುವ ವಿಘ್ನಗಳು;
ಆಶೆಯೊಳಡಗಿಹೋಗುವ ಭಯಗಳು;
ಬಹುಕಾಲ ಮನಸಿನಲಿ ಮರಸಿದ್ದು ಬೆಳಸಿದ್ದ,
ಬಹುಕಾಲ ಬೆಳಸಿದ್ದ ವಾಂಛಿತಗಳು.

(೪) ಚೆಲ್ವಿನ ನೆಲೆ, ಕಣ್ಗಳ ಬಲೆ, ಸುಖದೊಱತೆಯ ಬನವಾಸೀ,
ಬಳೆದಲೆದಾ ಕಾನ್‌ಮಲೆಗಳನ್ ಆನ್ ಮಱವೆನೆ, ಬನವಾಸೀ!
ಭಾರತದೀ ಸುಟೆಗಾಳಿಗೆ ಸಿಲ್ಕುತೆ ನಾನ್ ತಱಗಾದೆನ್;
ಪೆಱ ತುಂಬುತೆ, ಪೇಱ ತೇಯುತೆ, ಮನೆಗಾಣದೆ ಬಡವಾದೆನ್;
ನಿನ್ನನೆ ನೆನೆನೆದೋ ತಾಯ್, ಪಂಬಲಿಸುವ ನೋವೊಂದೇ!
ಇನ್ನೆನಗೇನಾಸೆಗಳೋ, ಪಾರ್ವುದು ನಾನ್ ಸಾವೊಂದೇ!!

(೫) ಒಲಿದುದಾಯಿತು, ನಲಿದುದಾಯಿತು,
ನೊಂದುದಾಯಿತು, ಬೆಂದುದಾಯಿತು,
ಇಲ್ಲೆ ನರಕವ ಕಂಡುದಾಯಿತು;
ಎಲ್ಲ ಆಯಿತು ನಮಗೆ, ನಲ್ಲೆ.

(೬) ನೋಟಸಿಂಗರದ ತೋಟದೊತ್ತಿನಲಿ
ಮುಸುಕುಕೊಂಬೆಗಳ ನೆರಳಲಿ,
ಮೇಳದೊರಗಿರುವರೇಳು ಕನ್ನೆಯರು
ಮಿಸುನಿ ಜಿಂಕೆಗಳ ತೆರದಲಿ......

ಈ ಪದ್ಯಗಳ ನಡೆಗೆ ಗಮನಕೊಟ್ಟು ಓದುತ್ತಿದ್ದರೆ ಅಥವಾ ಕೇಳುತ್ತಿದ್ದರೆ, ನಿಯತವಾದ ಜಾಗಗಳಲ್ಲಿ ತಾಳ ಹಾಕಬೇಕೆನ್ನಿಸುತ್ತದೆ; ಉತ್ಸಾಹಶಾಲಿಗಳು ಹಾಗೆ ಮಾಡಿಬಿಡುವುದೂ ಉಂಟು. ಆದರೆ ಅಂಗಚೇಷ್ಟೆಯಿಲ್ಲದೆ ಪದ್ಯದ ಅಕ್ಷಗಳನ್ನು ಒತ್ತಿ ಉಚ್ಚರಿಸುವುದರಿಂದಲೇ ತಾಳದ ನೆಲೆಯನ್ನು ತೋರಿಸಬಹುದು. ಸಾಮಾನ್ಯವಾಗಿ ಪದ್ಯವಾಚನದಲ್ಲಿ ಮಾಡುವುದು ಹೀಗೆಯೇ. ಉದಾಹರಣೆಗೆ, ಮೇಲಿನ ಮೊದಲನೆಯ ಪದ್ಯದ ಮೊದಲನೆಯ ಚರಣವನ್ನು ತೆಗೆದುಕೊಳ್ಳೋಣ:

´ಮೊದಲು ´ತಾಯ ´ಹಾಲ ´ಕುಡಿದು

ಇಲ್ಲಿ, ´ ಎಂಬ ಚಿಹ್ನೆಯನ್ನು ಮುಮ್ಮಗ್ಗುಲಲ್ಲಿ ಬರೆದು ಸೂಚಿಸಿರುವ ಅಕ್ಷರಗಳ ಮೇಲೆ ತಾಳಗಳು ಬೀಳುತ್ತವೆ. ಇವುಗಳ ವಿನ್ಯಾಸವನ್ನು ಅರಿತ ಹೊರತು ಪದ್ಯದ ನಡೆ ಮನಸ್ಸಿಗೆ ತಟ್ಟುವುದಿಲ್ಲ. ಈ ತಾಳಗಳು ಬೀಳುವಾಗ ಒಂದಕ್ಕೊಂದಕ್ಕೆ ನಡುವೆ ಒಂದೇ ಸಮನಾದ ಕಾಲದ ಅಂತರವಿರುತ್ತವೆಂಬುದು ಅನುಭವದ ವಿಷಯ. ಹೀಗೆ ನಿಯತವಾದ ಕಾಲದ ಅಂತರದಲ್ಲಿ ತಾಳಗಳು ಆವರ್ತನೆಯಾಗುವುದಕ್ಕೆ ಲಯ (Rhythm) ಎಂದು ಹೆಸರು. "ಲಯ"ದ ಅರ್ಥವನ್ನು ಇನ್ನಷ್ಟು ಹಿಗ್ಗಲಿಸಿ, ಸದೃಶಕ್ರಿಯೆಗಳ ಪರಂಪರೆಯಲ್ಲಿ ನಿಯಮಬದ್ಧತೆ ಗೋಚರವಾದಾಗಲೆಲ್ಲ ಅದು ನಿಷ್ಪನ್ನವಾಗುವುದೆಂದು ಹೇಳಬಹುದು. ಈ ದೃಷ್ಟಿಯಿಂದ ನೋಡಿದರೆ, ಮಾನವನ ಒಟ್ಟು ಜೀವನಕ್ಕೇ ಲಯವು ಮೂಲಸೂತ್ರ. ಅವನು ನಡೆಯುವಾಗ ಇಡುವ ಹೆಜ್ಜೆಗಳಲ್ಲಿ ಒಂದಕ್ಕೊಂದಕ್ಕೆ ಒಂದೇ ಅಂತರವಿರುತ್ತದೆ; ಅವನ ನಾಡಿಗಳಲ್ಲಿ ಸುತ್ತುವ ರಕ್ತವು ಹೃದಯದಿಂದ ಅಳತೆ ಮಾಡಿದಹಾಗೆ ಬಿಟ್ಟು ಬಿಟ್ಟು ಉಕ್ಕುತ್ತದೆ; ಅವನು ಬಿಡುವ ಉಸಿರು ನಿಮಿಷಕ್ಕೆ ಇಷ್ಟು ಸಲ ಎಂಬಂತೆ ನಿಯಮದಿಂದ ಆಡುತ್ತದೆ. ಮಾನವನನ್ನಷ್ಟೇ ಏಕೆ, ಸಮಸ್ತ ವಿಶ್ವವನ್ನೇ ಲಯ ನಡೆಸುತ್ತಿದೆ. "ಕುಣಿತಿಲ್ದ ಜಗ ಇಲ್ಲಾ!" ಆದ್ದರಿಂದಲೇ,

ಹಗಲಿರಳ ತಾಳಕ್ಕ
ಮುಗಿಯದ ಕಾಳಕ್ಕ
ಜನುಮಗಳ ಮ್ಯಾಳಕ್ಕ । ಕುಣಿಯೋಣು ಬಾ...

ಎಂದು ಕವಿ ಹಾಡಿರುವುದು. ಹೀಗಿರುವಲ್ಲಿ, ಮಾನವನಿಗೆ ಆನಂದ ಕೊಡುವ ಕಾವ್ಯ, ಗಾಯನ ಮೊದಲಾದ ಲಲಿತಕಲೆಗಳು ಲಯದ ಆಧಾರವನ್ನೇ ಹಿಡಿದು ನಿಂತಿರುವಲ್ಲಿ ಏನಾಶ್ಚರ್ಯ?

ನರ್ತನದ ಲಯಕ್ಕೆ ಹೊಂದಿಕೊಂಡು ಪದ್ಯ ಮೊದಲು ಉದಿಸಿತೆಂದು ಸಂಶೋಧಕರ ಅಭಿಪ್ರಾಯ. ಪದ್ಯದ ಸ್ಪಷ್ಟವಾದ ಲಯವೇ ಅದನ್ನು ಗದ್ಯದಿಂದ

ಬೇರ್ಪಡಿಸತಕ್ಕದ್ದು. ಇದರಲ್ಲಿ ತಾಳತಾಳಕ್ಕೂ ನಡುವೆ ನಿಯತವಾಗಿ ಬರುವ ಕಾಲದ ಅಂತರವನ್ನು ಅಕ್ಷರಗಳ ಉಚ್ಚಾರಣೆ ತುಂಬುತ್ತದೆ. ಹೀಗೆ ಎರಡು ತಾಳಗಳ ನಡುವೆ ಬರತಕ್ಕ ಅಕ್ಷರಸಮುದಾಯಕ್ಕೆ "ಗಣ"ವೆಂದು ಹೆಸರು. (ಈ ಲಕ್ಷಣದಲ್ಲಿ, ಕೊನೆಯ ತಾಳದ ಮುಂದೆ ನಿಲ್ಲುವ ಅಕ್ಷರ ಸಮುದಾಯವೂ ಸೇರುತ್ತದೆ.) ನಾವು ಹಿಂದೆ ಪರಿಶೀಲಿಸಿದ ಚರಣದಲ್ಲಿ, "ಮೊದಲು," "ತಾಯ," "ಹಾಲ," "ಕುಡಿದು"–ಎಂಬ ನಾಲ್ಕು ಗಣಗಳಿವೆ. ಪದ್ಯದ ಒಂದು ಚರಣದಲ್ಲಿ ಲಯಪ್ರತೀತಿ ಉಂಟಾಗಬೇಕಾದರೆ, ಅದರಲ್ಲಿ ಕೂಡಿರುವ ಗಣಗಳ ಉಚ್ಚಾರಣೆಯ ಕಾಲ ಸರಿಸಮನಾಗಿರಬೇಕೆಂದು ಬೇರೆ ಹೇಳಬೇಕಾಗಿಲ್ಲ. ಈ ಗಣವೇ ನಮ್ಮ ಛಂದಸ್ಸಿನ ಮಾನದಂಡ.

ಅಕ್ಷರಗಳು ಕೂಡಿ ಗಣವಾಗುತ್ತದೆ. ಈ ಅಕ್ಷರಗಳೆಲ್ಲದರ ಉಚ್ಚಾರಕ್ಕೂ ಒಂದೇ ಅಳತೆಯ ಕಾಲ ಹಿಡಿಯುವುದಿಲ್ಲ. ಹ್ರಸ್ವಸ್ವರಕ್ಕೆ ಕಡಮೆ ಕಾಲ ಸಾಕು; ದೀರ್ಘಸ್ವರಕ್ಕೆ ಹೆಚ್ಚು ಕಾಲ ಬೇಕು. ಒಂದು ಸ್ವರದ ಮುಂದೆ ಒತ್ತಕ್ಷರ ಮೊದಲಾದವು ಇದ್ದರೆ, ಆ ಸ್ವರವು ಹ್ರಸ್ವವಾಗಿದ್ದರೂ ಅದರ ಉಚ್ಚಾರಣೆಯ ಒಟ್ಟು ಕಾಲವು ದೀರ್ಘವಾಗುತ್ತದೆ. ಈ ಪರಿಸ್ಥಿತಿಯನ್ನು ಅನುಸರಿಸಿಯೇ ಅಕ್ಷರಗಳನ್ನು "ಲಘು," "ಗುರು" ಎಂದು ವಿಂಗಡಿಸಿ, ಲಘುವಿನ ಉಚ್ಚಾರಕ್ಕೆ ಒಂದು ಮಾತ್ರೆಯ ಕಾಲವೆಂದೂ, ಗುರುವಿನ ಉಚ್ಚಾರಕ್ಕೆ ಎರಡು ಮಾತ್ರೆಯ ಕಾಲವೆಂದೂ ನಿಷ್ಕರ್ಷಿಸಿದ್ದಾರೆ. ಎಲ್ಲ ಸಂದರ್ಭಗಳಲ್ಲೂ ಲಘುಗುರುಗಳಿಗೆ ಇದೇ ಕಾಲಪರಿಮಾಣವಿರುತ್ತದೆಂದು ಹೇಳಲಾಗುವುದಿಲ್ಲ. ಸ್ವಲ್ಪ ಎಳೆದು ಉಚ್ಚರಿಸಿ ಲಘುವನ್ನು ಉದ್ದ ಮಾಡಬಹುದು; ತ್ವರಿತವಾಗಿ ಉಚ್ಚರಿಸಿ ಅಥವಾ ಮುಂದಿನ ಒತ್ತಕ್ಷರ ಮೊದಲಾದದ್ದನ್ನು ತೇಲಿಸಿ ಗುರುವನ್ನು ಮೊಟಕು ಮಾಡಬಹುದು. ಆದರೂ ಒಟ್ಟಿನ ಮೇಲೆ, ಛಂದಸ್ಸಿನಲ್ಲಿ ಅಕ್ಷರಗಳಿಗೆ ಕೊಟ್ಟಿರುವ ಮಾತ್ರೆಯ ಬೆಲೆ ನಮ್ಮ ಸಾಮಾನ್ಯಾನುಭವಕ್ಕೆ ಸರಿಹೊಂದುತ್ತದೆ. ಗಣಗಳ ಕಾಲ ನಿರ್ಣಯಕ್ಕಂತೂ ಇಂಥ ಒಂದು ನಿರ್ದಿಷ್ಟವಾದ, ಸುಲಭವಾಗಿ ಗೊತ್ತಾಗುವ ಅಳತೆಯ ಕಡ್ಡಿ ಆವಶ್ಯಕ. ಇದರ ಮೇಲೆ ವಿಶೇಷ ಸಂದರ್ಭಗಳಲ್ಲಿ ಈ ಬೆಲೆಗಳನ್ನು ಹೆಚ್ಚು ಕಡಮೆ ಮಾಡಿಕೊಳ್ಳುವುದು ಅಸಾಧ್ಯವಲ್ಲ.[೧]

---

೧. "ಹ್ರಸ್ವಸ್ವರಗಳಿಗೆ ಲಘುವೆಂತಲೂ; ದೀರ್ಘಸ್ವರ, ಪ್ಲುತಸ್ವರ, ಅನುಸ್ವಾರ ವಿಸರ್ಗಗಳಿಂದ ಕೂಡಿದ ಅಕ್ಷರ, ಸಂಯುಕ್ತಾಕ್ಷರಕ್ಕೆ ಹಿಂದಿರುವ ಅಕ್ಷರ— ಇವುಗಳಿಗೆ ಗುರುವೆಂತಲೂ ಸಂಜ್ಞೆ." [ಕನ್ನಡ ಕೈಪಿಡಿ, ೧ನೆಯ ಸಂಪುಟ (ಎರಡನೆಯ ಮುದ್ರಣ), ಪು ೮೩.] ಹೊಸ ಛಂದಸ್ಸಿನಲ್ಲಿ ಒಂದು ಅಕ್ಷರಕ್ಕೆ ಮೂರು ಮಾತ್ರೆಯ (ಇದು ಪ್ಲುತದ ನಿಜವಾದ ಕಾಲ) ಅಥವಾ ಅದಕ್ಕೂ ಹೆಚ್ಚಿನ ಬೆಲೆ ಬರುವುದುಂಟು; (ಲಘು ಸ್ವರಕ್ಕೆ, ಮುಖ್ಯವಾಗಿ ಚರಣದ ಕೊನೆಯಲ್ಲಿ, ಗುರುವಿನ ಬೆಲೆ ಬರುವುದುಂಟು;) ಮೌನ ಅಥವಾ ವಿರಾಮ ಕೂಡ ಅಪೂರ್ವವಾಗಿ ಮಾತ್ರೆಯ ಎಣಿಕೆಗೆ ಸಿಕ್ಕುವುದುಂಟು. ಇದೆಲ್ಲ ಮಿತವಾಗಿ ಸಂದರ್ಭೋಚಿತವಾಗಿ ಬಂದರೆ ಲಯದ ಸೊಗಸು ಹೆಚ್ಚುತ್ತದೆ. [ಈ ವಿಷಯವನ್ನು ಕುರಿತ ಹೆಚ್ಚಿನ ವಿಚಾರಕ್ಕೆ ಪ್ರಕೃತಗ್ರಂಥದಲ್ಲಿ ಮುಂದೆ ಬಂದಿರುವ 'ಮಾತ್ರೆ, ಮುಡಿ, ಪದ್ಮಗಣ' ಎಂಬ ಲೇಖನವನ್ನು ನೋಡಿ.]

ಇನ್ನು, ಆಗಲೇ ಉದಾಹರಿಸಿರುವ ಆರು ಪದ್ಯಖಂಡಗಳ ಕಡೆಗೆ ಮತ್ತೆ ತಿರುಗೋಣ. ಇವುಗಳ ಮೊದಲನೆಯ ಚರಣಗಳನ್ನು ತಾಳಕ್ಕೆ ಅನುಸಾರವಾಗಿ ಗಣಗಳಾಗಿ ವಿಂಗಡಿಸಿದರೆ ಈ ರೀತಿ ಆಗುತ್ತದೆ.

U U U — U — U U U U
(೧) ಮೊದಲು । ತಾಯ । ಹಾಲ । ಕುಡಿದು । (೩+೩+೩+೩)

— — — — — — — —
(೨) ಲೋಕಂ । ಪುಟ್ಟಲ್ । ಲೋಕಂ । ಸಾಯಲ್ । (೪+೪+೪+೪)

—UUU —U U U UUUU U —U UU
(೩) ಆಶೆಗಳು । ಆಶೆಯನು । ಕನಲಿಸುವ । ವಿಘ್ನಗಳು । (೫+೫+೫+೫)

—UUUU —UUUU U U U U U U UU— —
(೪) ಚೆಲ್ವಿನ ನೆಲೆ ಕಣ್ಗಳ ಬಲೆ । ಸುಖದೊಱತೆಯ । ಬನವಾಸೀ । (೬+೬+೬+೬)

U U U — U U UUU — U U
(೫) ಒಲಿದು । ದಾಯಿತು । ನಲಿದು । ದಾಯಿತು । (೩+೪+೩+೪)

— U —UUU — U —UUU
(೬) ನೋಟ । ಸಿಂಗರದ । ತೋಟ । ದೊತ್ತಿನಲಿ । (೩+೫+೩+೫)

ಈ ಚರಣಗಳಲ್ಲಿ ಪ್ರತಿಯೊಂದರ ನಡೆಯೂ ಬೇರೆ ಬೇರೆ. ಒಂದನೆಯದರಲ್ಲಿ ೩ ಮಾತ್ರೆಯ ಗಣಗಳು ಬಂದಿವೆ; ಅಲ್ಲಿಂದ ಮುಂದಿನ ಮೂರು ಉದಾಹರಣೆಗಳಲ್ಲಿ ಕ್ರಮವಾಗಿ ಗಣಕ್ಕೆ ಒಂದೊಂದು ಮಾತ್ರೆ ಹೆಚ್ಚುತ್ತಾ ೪, ೫ ಮತ್ತು ೬ ಮಾತ್ರೆಯ ಗಣಗಳು ಬಂದಿವೆ. "ಒಲಿದುದಾಯಿತು ನಲಿದುದಾಯಿತು" ಎಂಬ ಚರಣದಲ್ಲಾದರೆ, ಒಂದೇ ಬಗೆಯ ಗಣಗಳು ಸಾಲಾಗಿ ಬಾರದೆ ೩ ಮಾತ್ರೆಯದರ ಮುಂದೆ ೪ ಮಾತ್ರೆಯದು ಅನುವೃತ್ತವಾಗಿ ಬರುವಂತೆ ಕಾಣಿಸುತ್ತದೆ. ನಿಜವಾಗಿ ನೋಡಿದರೆ, ಈ ಚರಣದಲ್ಲಿ ಇರತಕ್ಕದ್ದು ೭ ಮಾತ್ರೆಯ ಗಣಗಳು ಎರಡು. ಈ ಗಣ ದೀರ್ಘವಾಗಿರುವುದರಿಂದ ಅಖಂಡವಾಗಿ ಹಿಡಿತಕ್ಕೆ ಸಿಕ್ಕುವುದಿಲ್ಲ; ಇದರಲ್ಲಿ ಒಳತಾಳ ಬಿದ್ದು ಒಂದೊಂದೂ ೩+೪ ಎಂಬಂತೆ ವಿಭಾಗವಾಗುತ್ತದೆ. ಇದರಂತೆಯೇ "ನೋಟಸಿಂಗರದ ತೋಟದೊತ್ತಿನಲಿ" ಎಂಬ ಚರಣದಲ್ಲೂ ಇರುವುದು ಎರಡೇ ಗಣ—೮ ಮಾತ್ರೆಯ ಎರಡು ಗಣ; ಅದರ ಒಳವಿಭಾಗ ೩+೫ರಂತೆ ಆಗುತ್ತದೆ. ಹೀಗೆ, ಮೇಲಿನ ಉದಾಹರಣೆಗಳಲ್ಲಿ ಕ್ರಮವಾಗಿ ೩,೪,೫,೬,೭ ಮತ್ತು ೮ ಮಾತ್ರೆಯ ಗಣದ ಲಯಗಳು ಬಂದಿವೆ. ಹೊಸಗನ್ನಡದ ಮಾತ್ರಾ ಛಂದಸ್ಸಿಗೆ[೨] ಇವೇ ತಳಹದಿ.

---

೨. ಇಲ್ಲಿ "ಮಾತ್ರಾ ಛಂದಸ್ಸೆ"ಂಬ ಮಾತನ್ನು ಉದ್ದೇಶಪೂರ್ವಕವಾಗಿ ಉಪಯೋಗಿಸಿದೆ. ಮಾತ್ರಾಗಣದ ನಿಯಮಗಳಿಗೆ ಒಳಪಡದ ಹಿಂದಿನ ಅಕ್ಕರ, ತ್ರಿಪದಿ, ಸಾಂಗತ್ಯ ಮೊದಲಾದವುಗಳ ಧಾಟಿಯಲ್ಲಿ

ಈ ಆರು ಲಯಗಳಲ್ಲಿ ಒಂದೇ ಹೊರತು ಮಿಕ್ಕ ಯಾವುದೂ ಕನ್ನಡಿಗರಿಗೆ ಅಪರಿಚಿತವಾದವಲ್ಲ. ೩ ಮಾತ್ರೆಯ ಗಣವು ಉತ್ಸಾಹರಗಳೆ ಭೋಗ ಷಟ್ಪದಿಗಳಲ್ಲೂ, ೪ ಮಾತ್ರೆಯದು ಮಂದಾನಿಲರಗಳೆ ಶರಷಟ್ಪದಿ ಪರಿವರ್ಧಿನೀ ಷಟ್ಪದಿಗಳಲ್ಲೂ, ೪ ಮಾತ್ರೆಯದು ಮಂದಾನಿಲರಗಳೆ ಶರಷಟ್ಪದಿ ಪರಿವರ್ಧಿನೀ ಷಟ್ಪದಿಗಳಲ್ಲೂ, ೫ ಮಾತ್ರೆಯದು ಲಲಿತರಗಳೆ ಕುಸುಮಷಟ್ಪದಿ ವಾರ್ಧಕ ಷಟ್ಪದಿಗಳಲ್ಲೂ, ೭ (=೩+೪) ಮಾತ್ರೆಯದು ಭಾಮಿನೀಷಟ್ಪದಿ ಗೋವಿನಕತೆಯ ಮಟ್ಟುಗಳಲ್ಲೂ ಹಿಂದಿನಿಂದ ನಮಗೆ ಬಳಕೆಯಾಗಿವೆ. ೮ (=೩+೫) ಮಾತ್ರೆಯ ಗಣವನ್ನು[೩] ಪಂಪನು ರಗಳೆಯೊಂದರಲ್ಲಿ (ಪಂಪಭಾರತ, ೩.೨೨) ಪ್ರಯೋಗಿಸಿದ್ದನು; ಹತ್ತು ಶತಮಾನಗಳೀಚೆಗೆ ಮತ್ತೆ ಅದು 'ಇಂಗ್ಲಿಷ್ ಗೀತಗಳ'ಲ್ಲಿ ತಲೆಯೆತ್ತಿತು. ೬ ಮಾತ್ರೆಯ ಗಣದ ಧಾಟಿ ಮಾತ್ರ, ಈ ಲೇಖಕನಿಗೆ ತಿಳಿದ ಮಟ್ಟಿಗೆ, ಕನ್ನಡಕ್ಕೆ ಹೊಚ್ಚಹೊಸದು; 'ಅಶ್ವತ್ಥಾಮನ್' ನಾಟಕದಲ್ಲೇ ಅದರ ಆವಿರ್ಭಾವವಾದದ್ದು.[೪] ಅಲ್ಲಿಂದೀಚೆಗೆ ಈ ಧಾಟಿ ಕವಿಜನಪ್ರಿಯವಾಗಿ, ಒಳ್ಳೊಳ್ಳೆಯ ಗೀತೆಗಳು ಅದರಲ್ಲಿ ಬಂದಿವೆ.

ಈಗಿನ ಕವಿಗಳು ಲಯಬದ್ಧವಾಗಿ ರಚಿಸುತ್ತಿರುವ ಪದ್ಯಗಳೆಲ್ಲವೂ ಈ ಆರು ಧಾಟಿಗಳಲ್ಲೇ ಅಡಕವಾಗುತ್ತವೆ. ಮಾತ್ರಾಛಂದಸ್ಸಿನಲ್ಲಿ ಸಾಧ್ಯವಾಗುವ ಲಯಗಳು ಇಷ್ಟು ಮಾತ್ರವೇ? ಬೇರೆ ಯಾವುದನ್ನಾದರೂ ಯೋಚಿಸುವುದು ಅಶಕ್ಯವೇ?–ಎಂಬ ಪ್ರಶ್ನೆ ಇಲ್ಲಿ ಏಳಬಹುದು. ಕೇವಲ ಗಣಿತದ ದೃಷ್ಟಿಯಿಂದ ಹೇಳುವುದಾದರೆ ಇನ್ನೆರಡು

ಕೆಲವು ಪದ್ಯಗಳನ್ನು ಈಗಿನ ಕವಿಗಳೂ ಕಟ್ಟಿದ್ದಾರೆ. (ಉದಾಹರಣೆಗೆ, 'ಇಂಗ್ಲಿಷ್ ಗೀತಗಳ'ಲ್ಲಿ ಸೇರಿರುವ 'ಬ್ಲೆನ್‌ಹೀಮ್ ಕದನ' ಎಂಬುದು ಈ ಬಗೆಯದು.) ಇವಕ್ಕೆ ಆಧಾರವಾದ ಬ್ರಹ್ಮ ವಿಷ್ಣು ರುದ್ರ ಗಣಗಳ ರಚನೆ ಬೇರೊಂದು ರೀತಿಯಲ್ಲಿ ಆಗುತ್ತದೆ. ಈ "ಅಂಶಗಣ"ಗಳ ಸ್ವರೂಪ ನಿರೂಪಣೆ ನಮ್ಮ ಪ್ರಕೃತೋದ್ದೇಶಕ್ಕೆ ಒಳಪಟ್ಟದ್ದೇ ಆದರೂ ಲೇಖನವು ಅತಿ ದೀರ್ಘವಾದೀತೆಂದು ಅದಕ್ಕೆ ಕೈಹಾಕಿಲ್ಲ. ಈ ಲೇಖನದಲ್ಲಿ ಹೇಳಿರತಕ್ಕ ಮಾತೆಲ್ಲ ಮಾತ್ರಾಗಣದ ಧಾಟಿಗಳಿಗೆ ಮಾತ್ರ ಅನ್ವಯಿಸುತ್ತದೆ. ಹೊಸಗನ್ನಡದ ಕಾವ್ಯರಾಶಿಯಲ್ಲಿ ಈ ಮಾತ್ರಾಗಣಗಳೇ ಅತ್ಯಂತ ಪ್ರಚುರವಾಗಿರತಕ್ಕವು; ಅಂಶಗಣದ ಧಾಟಿ ಅಲ್ಲೊಂದು ಕಡೆ ಇಲ್ಲೊಂದು ಕಡೆ ಗೋಚರಿಸುತ್ತದೆ.

೩. ಈ ೮ ಮಾತ್ರೆಯ ಗಣ ೩+೫ ರಂತೆ ವಿಭಾಗವಾಗುತ್ತದೆ; ೪+೪ರಂತೆ ವಿಭಾಗವಾಗುವುದಿಲ್ಲ. ಆದ್ದರಿಂದಲೇ ಇದರ ಲಯವು ೪ ಮಾತ್ರೆಯ ಗಣದ ಲಯಕ್ಕಿಂತ ಬೇರೆಯಾಗಿದೆ. ಹೀಗೆಯೆ ೬ ಮಾತ್ರೆಯ ಗಣವು ಶುದ್ಧವಾಗಿರಬೇಕಾದರೆ ಅದು ೩ ಮಾತ್ರೆಯ ಗಣಗಳ ಯುಗ್ಮವಾಗಬಾರದು; ೨+೪ ಅಥವಾ ೪+೨ರಂತೆ ಅದರ ರಚನೆಯಾಗಿರಬೇಕು. ಮೇಲಿನ ಉದಾಹರಣೆಗಳನ್ನು ಪರಿಶೀಲಿಸಿದರೆ ಈ ವಿಷಯ ಸ್ಪಷ್ಟವಾಗುತ್ತದೆ.

೪. [ಆದರೆ, ಹಿಂದಿನ "ಧವಳ"ದ ಹಾಡುಗಳಲ್ಲಿ ೬ ಮಾತ್ರೆಯ ಗಣದ ಲಯ ಪ್ರಚುರವಾಗಿತ್ತೆಂದು ಶ್ರೀ ಡಿ.ಎಲ್. ನರಸಿಂಹಾಚಾರ್ಯರು 'ಧವಳವೆಂಬ ಹಾಡಿನ ಸ್ವರೂಪ' ಎಂಬ ಲೇಖನದಲ್ಲಿ ಈಚೆಗೆ ಪ್ರತಿಪಾದಿಸಿದ್ದಾರೆ ('ಶ್ರೀ ಪಂಜೆಯವರ ನೆನಪಿಗಾಗಿ', ಪು. ೧೯೦-೪).]

ಲಯಗಳಿಗೆ ಅವಕಾಶವುಂಟು. ಮೇಲೆ ಪರಿಗಣಿಸಿರುವ ಗಣಗಳಲ್ಲಿ ೩ ಮಾತ್ರೆಯದೇ ಎಲ್ಲಕ್ಕೂ ಕಿರಿಯದು. ಮಾತ್ರಾ ಸಂಖ್ಯೆಯನ್ನು ಇನ್ನೂ ಕಡಿಮೆ ಮಾಡಿ ೨ ಮಾತ್ರೆಯ ಗಣವನ್ನು ಕಟ್ಟಬಹುದು. ಆದರೆ ಅದು ಅತಿ ಹ್ರಸ್ವವಾಗುತ್ತದೆ; ತಾಳತಾಳಕ್ಕೆ ಅಂತರ ಬಲುಕಿರಿದಾಗುತ್ತದೆ. ಅಲ್ಲದೆ, ೨ ಮಾತ್ರೆಯ ಎರಡು ಗಣಗಳಿಗೂ ೪ ಮಾತ್ರೆಯ ಒಂದು ಗಣಕ್ಕೂ ನಿಜವಾದ ಭೇದವೇನೂ ಇರುವುದಿಲ್ಲ. ಇನ್ನು ಉಳಿದದ್ದು ೯ ಮಾತ್ರೆಯ ಗಣದ ನಡೆ. (ಇದನ್ನು ೩ ಮಾತ್ರೆಯ ಗಣದಿಂದ ಬೇರ್ಪಡಿಸಬೇಕಾದರೆ ಉಪಗಣಗಳು (೪+೫ರಂತೆ ಒಡೆಯಬೇಕೆಂಬುದು ಸ್ಪಷ್ಟ.) ಈ ಗಣವು ಗಮನಾರ್ಹವೆಂಬುದಕ್ಕೆ ಸಂಗೀತದ ತಾಳಗಳಲ್ಲಿ ೯ ಮಾತ್ರೆಯ ಬೆಲೆಯುಳ್ಳ ಸಂಕೀರ್ಣಜಾತಿಯೊಂದಿರುವುದು ಪೋಷಕವಾಗುತ್ತದೆ. ಈ ಗಣಗಳನ್ನು ಉಪಯೋಗಿಸಿ "ಪ್ರೌಢಷಟ್ಪದಿ" ಯೆಂಬ ಹೆಸರಿನಿಂದ ಕೆಲವು ಪದ್ಯಗಳನ್ನೂ ಒಬ್ಬ ಕವಿಗಳು ರಚಿಸಿದ್ದಾರೆ[೫]. ಉದಾಹರಣೆಗೆ—

(೭) ಕಡುಕಂಗೊಳಿಪ ಕರ್ಣಾಟಕ ತಾಯುಮಂ
ಬೆಡಗಿನ ಸಾಹಿತ್ಯ ಸಮ್ಮೇಲನಮುಮಂ
ಪೊಡಮಡುವೆಂ ಬಿಡದಖಿಲ ಕಬ್ಬಿಗರುಮಂ ಪಂಡಿತ
ಪಾಮರರುಮಂ।
ಇಡುವೆಂ ನಿಮ್ಮೆದುರು ಬಡವಂ ಬಸವನಾಂ
ದಿಡ ಬಕುತಿಯ ಪಿಡಿದು ಕನ್ನಡ ಷಟ್ಪದಿಯ
ತೊಡಕಂ ಬಿಡಿಸಲೊಂದಂ ಗಡ ಬೇಡುವೆಂ ಕುಡುವುದಿದಕೆ
ಸಲಹೆಯಂ॥

ಇಲ್ಲಿ ನಿಜವಾಗಿ, ಲಯದ ನೆಲೆಯನ್ನು ಅರಿತುಕೊಳ್ಳುವುದು ಕಷ್ಟವಾಗುತ್ತದೆ.

೪ ೫ ೪ ೫
"ಕಡುಕಂ । ಗೋಳಿಪ ಕ ॥ ರ್ಣಾಟಕ । ತಾಯುಮಂ...." ಈ ರೀತಿ ಇಲ್ಲಿಯ ಗಣವಿಭಾಗವೇಗಬೇಕು; ಎಂದರೆ, ೯ ಮಾತ್ರೆಯ ಗಣದಲ್ಲಿ ಮೊದಲ ೪ ಮಾತ್ರೆಯಾದ ಮೇಲೆ ಒಳತಾಳ ಬೀಳಬೇಕು. ಹೀಗೆ ಉಪಗಣಗಳಿಂದ ಒಂದು ದೀರ್ಘಗುಣವನ್ನು ಕಟ್ಟುವಾಗ ಗಮನಿಸಬೇಕಾದ ನಿಯಮವೊಂದಿರುವಂತೆ ತೋರುತ್ತದೆ : ಈ ಎರಡು ಉಪಗಣಗಳಿಗೂ ಅಳತೆಯಲ್ಲಿ ಸುಸ್ಪಷ್ಟವಾದ, ಸುಲಭಗ್ರಾಹ್ಯವಾದ ವ್ಯತ್ಯಾಸವಿರಬೇಕು. ೭ ಮತ್ತು ೮ ಮಾತ್ರೆಯ ಗಣಗಳಲ್ಲಿ ಈ ವ್ಯತ್ಯಾಸವುಂಟು. ೭=೩+೪; ಈ ಎರಡು ಉಪಗಣಗಳಿಗೂ ಅಳತೆಯಲ್ಲಿ ೩ : ೪=೧ : ೧ ೧/೩ರಷ್ಟು ಅಂತರವಿದೆ ; ಇದನ್ನು ಮನಸ್ಸು ಸರಿಯಾಗಿ ಹಿಡಿಯುತ್ತದೆಂಬುದು ಅನುಭವಸಿದ್ಧವಾದದ್ದು. ೮ ಮಾತ್ರೆಯ

---

೫. ಶ್ರೀಮಾನ್ ಪಟ್ಟೇದ ಚನ್ನಪ್ಪನವರ ಬಸವಪ್ಪ : 'ಕನ್ನಡ ಷಟ್ಪದಿಗಳು' (ಪರಿಷತ್ಪತ್ರಿಕೆ, ೧೪.೪)

ಗಣದಲ್ಲಂತೂ ಈ ಅಂತರ ಇನ್ನೂ ಸ್ಪಷ್ಟವಾಗಿದೆ—೩ : ೫=೧ : ೧ ೨/೩. ೯ ಮಾತ್ರೆಯ ಗಣದಲ್ಲಾದರೆ ಈ ಅಂತರ ತುಂಬ ಕಡಮೆಯಾಗುತ್ತದೆ—೪: ೫=೧ : ೧ ೧/೪ ; ಇಲ್ಲಿಯ ಉಪಗಣಗಳಿಗಿರುವ ಈ ಸೂಕ್ಷ್ಮ ವ್ಯತ್ಯಾಸವನ್ನು ಉದ್ದಕ್ಕೂ ಗ್ರಹಿಸಿಕೊಂಡು ಲಯವನ್ನು ಹಿಡಿಯುತ್ತಾ ಹೋಗುವುದು ಕಷ್ಟವಾಗುತ್ತದೆ. ಇದರ ಬದಲು, ೪ ಮಾತ್ರೆಯ ಗಣಕ್ಕೂ ೫ ಮಾತ್ರೆಯ ಗಣಕ್ಕೂ ಒಂದೇ ಬೆಲೆ ಕೊಟ್ಟು ಸಮೀಕರಣ ಮಾಡಿ ಓದೋಣವೆಂದರೆ, ಅವೆರಡಕ್ಕೂ ಇರುವ ೧ ಮಾತ್ರೆಯ ವ್ಯತ್ಯಾಸ ಅಡ್ಡಿಯಾಗಿ ನಿಲ್ಲುತ್ತದೆ. ಈ ವಿವರಣೆ ಒಪ್ಪಗೆಯಾಗಲಿ ಆಗದಿರಲಿ, ೯ ಮಾತ್ರೆಯ ಗಣ ಶ್ರಾವ್ಯವಾಗಿಲ್ಲವೆಂಬುದೇನೋ ಪ್ರಕೃತ ಲೇಖಕನ ಅನುಭವದ ವಿಷಯ. ಸಂಗೀತದಲ್ಲಿ ಕೂಡ ೯ ಮಾತ್ರೆಯ ಸಂಕೀರ್ಣ ಜಾತಿ ಅಪ್ರಚುರವೆಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು.

೨

ಛಂದಸ್ಸಿನ ಜೀವಾಳ ಲಯ; ಲಯವನ್ನು ರೂಪಿಸತಕ್ಕವು ಗಣಗಳು. ನಮ್ಮ ಛಂದಸ್ಸಿನ ಗಣಿತದಲ್ಲಿ ಮಾತ್ರೆಯೇ ಕನಿಷ್ಠ ಮಾಪಕವಾದರೂ ಅದರ ಉಪಯೋಗವೆಲ್ಲಾ ಗಣವನ್ನು ಅಳೆಯುವುದರಲ್ಲಿ. ಮಾತ್ರಾಸಂಖ್ಯೆಯ ಮೇರೆಗೆ ಬೇರೆ ಬೇರೆ ಗಣಗಳು ಆಗುತ್ತವೆ; ಗಣವನ್ನು ಕಟ್ಟಿದ ಮೇಲೆ ಮಾತ್ರೆಗಳ ಕೆಲಸ ಮುಗಿಯಿತು. ಚರಣದ ರಚನೆಯಲ್ಲಿ ಗಮನಿಸಬೇಕಾದದ್ದು ಗಣವೇ ಹೊರತು ಮಾತ್ರೆಯಲ್ಲ. ಆದ್ದರಿಂದ, ಒಂದು ಚರಣವನ್ನು ಗಣಗಳಾಗಿ ವಿಂಗಡಿಸಲು ಆಗದಿದ್ದರೆ, ಅದರಲ್ಲಿ ಮಾತ್ರೆಗಳ ಲೆಕ್ಕ ಸರಿಯಾಗಿದ್ದರೂ ಲಯ ಪ್ರತೀತಿ ಹುಟ್ಟುವುದಿಲ್ಲ. ಈ ಕೆಳಗಿನ ಉದಾಹರಣೆಯನ್ನು ನೋಡಿ :

UUU U U — —∩ U U U U UU — U
(೮) ಜಡಿಮಳೆಯು । ಹೋ ಎಂದು । ಸು ರಿ ದಿ ತ್ತು ; । ಬಿರುಗಾಳಿ ।
(೨೦ ಮಾತ್ರೆ)

UUU U — U — UU — U —U—U
ಬಲೆಗೊಳಗಾದ ಕೇಸರಿಯಂತೆ ಗರ್ಜಿಸಿತ್ತು. (೨೦ ಮಾತ್ರೆ)

ಎರಡು ಚರಣಗಳಲ್ಲೂ ಸಮನಾಗಿ ೨೦ ಮಾತ್ರೆಗಳಿವೆ. ಆದರೆ ಲಯದ ದೃಷ್ಟಿಯಿಂದ ಒಂದಕ್ಕೂ ಇನ್ನೊಂದಕ್ಕೂ ಎಷ್ಟು ವ್ಯತ್ಯಾಸ! ಮೊದಲನೆಯದೊಳಗೆ ತಾಳ ಬೀಳುವ ಕಡೆ ಹೊಸ ಗಣವು ಹೊಸ ಅಕ್ಷರದಿಂದ ಮೊದಲಾಗುವುದರಿಂದ ಲಯ ಸುಲಭವಾಗಿ ಸಿಕ್ಕುತ್ತದೆ. ಎರಡನೆಯದರಲ್ಲಿ ಈ ರೀತಿಯ ಗಣ ವಿಭಜನೆ ಸಾಧ್ಯವಲ್ಲ. ಮೊದಲ ಹತ್ತು

UU U U — U — U

ಮಾತ್ರೆಗಳನ್ನೇ ನೋಡೋಣ : "ಬಲೆಗೊಳಗಾದ ಕೇಸ"—ಇಲ್ಲಿ ತಾಳಕ್ಕೆ ಸರಿಯಾಗಿ ಗಣಗಳನ್ನು ವಿಂಗಡಿಸಬೇಕಾದರೆ "ಗಾ" ಎಂಬ ಗುರುವನ್ನು ಕತ್ತರಿಸಿ ಒಂದು ಮಾತ್ರೆಯನ್ನು ಹಿಂದಿನ ಗಣಕ್ಕೂ ಇನ್ನೊಂದು ಮುಂದಿನ ಗಣಕ್ಕೂ ಹಂಚಿಕೊಡಬೇಕು. ಹೀಗೆ ಒಂದು ಅಕ್ಷರವನ್ನು ಸೀಳುವುದು ಅಸಾಧ್ಯ. ಆದ್ದರಿಂದಲೇ ಇಲ್ಲಿ ಲಯ ಕೆಟ್ಟುಹೋಗಿದೆ.

ತಾಳ ಬೀಳುವ ಕಡೆ ಅಕ್ಷರವನ್ನು ಕತ್ತರಿಸದೆ ಗಣವಿಭಾಗ ಮಾಡುವಂತಿದ್ದರೆ ಸಾಕೆ? ಇಷ್ಟರಿಂದಲೇ ಚರಣದ ಧಾಟಿ ಕಿವಿಗೆ ಇಂಪಾಗುತ್ತದೆಯೆ?—ಈ ಸಾಲುಗಳನ್ನು ನೋಡೋಣ :

(೯) ಧ್ವನಿಸಿ ಬಯಲಾಗುತಿಹ ಸುರಗಾನದಂತೆ
ಕನಸಿನಲಿ ಗೈದಿರುವ । ಮೃತ ಪಾನ । ದಂತೆ.

ಇಲ್ಲಿಯದು ೫ ಮಾತ್ರೆಯ ಗಣದ ನಡೆ. ಮೊದಲನೆಯ ಚರಣ ಸರಾಗವಾಗಿ ಓಡುತ್ತದೆ. ಎರಡನೆಯದರಲ್ಲಿ ತಾಳ "ಮೃ" ಎಂಬ ಅಕ್ಷರದ ಮೇಲೆ ಬೀಳಬೇಕಷ್ಟೆ; ಅದಕ್ಕೆ ತಕ್ಕಂತೆ "ಮೃ" ಎಂಬುದನ್ನು ಒತ್ತಿ ಉಚ್ಚರಿಸಿದರೆ, ಇಲ್ಲಿಯ ಪದಚ್ಛೇದವು "ಗೈದಿರುವ+ಮೃತಪಾನ" ಎಂದಾಗಿ ಕವಿಯ ಆಶಯವೇ ಕೆಡುತ್ತದೆ. "ಅಮೃತಪಾನ" ಎಂಬ ಪದಸ್ವರೂಪ ಹೊಳೆಯಬೇಕಾದರೆ, "ವ" ಎಂಬ ಅಕ್ಷರವನ್ನು ಒತ್ತಬೇಕು; ಆಗ ಲಯ ಕೆಡುತ್ತದೆ.

(೧೦) ವಿಪ್ಲವ ಮೂರ್ತಿಯ ಸಖನಾಗಿಹನ್ನೈ
ಕವಿಗರ । ಸುಗಿರಸು । ಗಳ ಋಣವಿಲ್ಲ.

ಇಲ್ಲಿ ಮೊದಲನೆಯ ಚರಣದಲ್ಲಿ ೪ ಮಾತ್ರೆಗಳಿಗೊಂದು ಬಾರಿ ತಾಳ ಸರಿಯಾಗಿ ಬೀಳುತ್ತದೆ. ಮುಂದಿನ ಚರಣದಲ್ಲಿ ಎರಡನೆಯ ಗಣ "ಸು" ಎಂಬ ಅಕ್ಷರದಿಂದ ಮೊದಲಾಗಬೇಕು; ಅದರ ಮೇಲೆ ತಾಳ ಬಿದ್ದರೆ "ಸುಗಿರಸು" ಎಂಬ ಯಾವುದೋ ವಿಚಿತ್ರ ಪದದ ಪ್ರತೀತಿಯುಂಟಾಗುತ್ತದೆ.

ಇನ್ನೆರಡು ಉದಾಹರಣೆಗಳು :

(೧೧) ಅಂಧನೃಪ ನೀ ಮರುಳೆ । ಸಗಿ ನಮ್ಮ । ಬರಿಸಿದ್ಯೆ
ಅಂದು ತೋರಿದೆ ವಾರಣಾವತವನು.

(೧೨) ಮೂಡಲು ಬಿಳುಪೇರಲು ಬಿಚ್ಚಿದರು
ಓಡಿದರಡವಿಯೆ । ದೆಯ ಸೇ । ರಿದರು.

—ಇವುಗಳಲ್ಲಿ ದಪ್ಪಲಿಪಿಯಲ್ಲಿ ಕೊಟ್ಟಿರುವ "ಸ", "ದೆ" ಎಂಬ ಅಕ್ಷರಗಳನ್ನು ತಾಳಕ್ಕೆ ಅನುಸಾರವಾಗಿ ಒತ್ತಿದರೆ ಶಬ್ದದ ಪ್ರತೀತಿಯೇ ಕೆಡುತ್ತದೆ.

ಈ ಸಂದರ್ಭದಲ್ಲಿ ನನ್ನ ಅನುಭವದಿಂದಲೇ ಒಂದು ಉದಾಹರಣೆಯನ್ನು ಕೊಟ್ಟರೆ ಅನುಚಿತವಾಗಲಾರದು. ಒಂದು ಕವನದಲ್ಲಿ,

(೧೩) ನನ್ನಳವು ತಿಳಿದರೂ,
ನಿನ್ನ ಮುನಿಸಿರಿದರೂ,
ಮೊಂಡಾಟವು ಬಿಡದಲ್ಲ !

ಎಂದು ಬರೆದೆನು. ಮಾತ್ರೆಗಳ ಲೆಕ್ಕವೇನೋ ಸರಿಹೋಯಿತು; ಆದರೆ ಕೊನೆಯ ಚರಣವನ್ನು ಏನು ಮಾಡಿದರೂ ೫ ಮಾತ್ರೆಯ ಗಣದ ಲಯಕ್ಕೆ ಹೊಂದಿಸಲು

ಆಗಲಿಲ್ಲ. "ಮೊಂಡಾಟವು । ಬಿಡದಲ್ಲ" ಎಂದೋ "ಮೊಂಡಾ । ಟವು ಬಿಡ । ದಲ್ಲ" ಎಂದೋ ಗಣಗಳು ಒಡೆಯುತ್ತಿದ್ದುವು. "ಮೊಂಡಾಟವಣಗದಲ್ಲ!" ಎಂದು ಚರಣವನ್ನು ತಿದ್ದಿದ ಮೇಲೆ ಲಯವೂ ಅರ್ಥವೂ ಹೊಂದಿಕೆಯಾದವು.

ಈ ಪರಿಸ್ಥಿತಿಗೆ ಕಾರಣವೇನು?—ಪದ್ಯದ ಲಯಕ್ಕೆ ಗಮನಕೊಟ್ಟು ಓದುವಾಗ ನಾವು ಏನು ಮಾಡುತ್ತೇವೆಂಬುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಮೊದಲ ಒಂದೆರಡು ಚರಣಗಳನ್ನು ದಾಟುವಷ್ಟರಲ್ಲೇ ಪದ್ಯದ ನಡೆ ಯಾವುದೆಂಬುದನ್ನು ಅರಿತುಕೊಳ್ಳುತ್ತೇವೆ. ಬಳಿಕ, ಮನಸ್ಸಿನಲ್ಲಿ ಅದನ್ನೇ ಮಿಾಟುತ್ತಾ, ತಾಳಕ್ಕೆ ಪ್ರತಿನಿಧಿಯಾಗಿ ಗಣದ ಮೊದಲ ಅಕ್ಷರವನ್ನು ಒತ್ತುತ್ತಾ ಮುಂದೆ ಸಾಗುತ್ತೇವೆ. ಇಷ್ಟನ್ನು ಮಾಡಿದ ಹೊರತು ನಮಗೆ ಗಣವಿಭಾಗ ಅರಿವಾಗುವುದಿಲ್ಲ ; ಲಯದ ಅನುಭವ ಉಂಟಾಗುವುದಿಲ್ಲ.

ಈ ಬಗೆಯ ಒತ್ತನ್ನು ತಾಳಬೇಕಾದರೆ, ಪ್ರಾಮುಖ್ಯಕ್ಕೆ ಬರಬೇಕಾದರೆ, ಗಣದ ಮೊದಲಲ್ಲಿ ನಿಲ್ಲುವ ಅಕ್ಷರಕ್ಕೆ ತಕ್ಕಮಟ್ಟಿನ ಅರ್ಹತೆ ಇರಬೇಕು. ಈ ಅರ್ಹತೆ ಪದದ ಎಲ್ಲ ಅಕ್ಷರಗಳಿಗೂ ಒಂದೇ ಸಮನಾಗಿರುವುದಿಲ್ಲ; ಅವುಗಳಲ್ಲಿ ಕೆಲವಕ್ಕೆ ಉಚ್ಚಾರಣೆ ಸಬಲ, ಇನ್ನು ಕೆಲವಕ್ಕೆ ದುರ್ಬಲ. ಇಂಗ್ಲಿಷಿನಲ್ಲಿರುವ ಹಾಗೆ ಕನ್ನಡದಲ್ಲಿ ಸ್ವರಾಘಾತವು (Accent) ಪ್ರಮುಖವಾಗಿಲ್ಲವೆಂಬುದು ನಿಜ; ಆದರೆ ಕನ್ನಡದಲ್ಲಿ ಅದು ಇಲ್ಲವೇ ಇಲ್ಲವೆಂದು ಹೇಳುವಂತಿಲ್ಲ. ನಮ್ಮಲ್ಲಿ ಸಾಮಾನ್ಯವಾಗಿ ಪದದ ಮೊದಲನೆಯ ಸ್ವರದ ಮೇಲೆ ಆಘಾತವಿರುತ್ತದೆಂದು ಸ್ಥೂಲವಾಗಿ ಹೇಳಬಹುದು. ಪ್ರತ್ಯಯಗಳು ಈ ದೃಷ್ಟಿಯಿಂದ ದುರ್ಬಲ. ಸ್ವರವು ಗುರುವಾಗಿದ್ದರೆ ಮಾತ್ರ, ಪದದಲ್ಲಿ ಯಾವ ಸ್ಥಾನದಲ್ಲಿದ್ದರೂ ಆಘಾತವನ್ನು ತಡೆಯಬಲ್ಲದು.[೬]

ಛಂದಸ್ಸಿನ ಚೌಕಟ್ಟಿನೊಳಗೆ ಅರ್ಥಗರ್ಭಿತವಾದ ಮಾತುಗಳನ್ನು ಅಳವಡಿಸುವುದು ಪದ್ಯಕಾರನ ಕೆಲಸ. ಒಂದು ಕಡೆ, ತಾಳಮಾನವನನ್ನು ಸರಿಸಿ ಛಂದಸ್ಸಿನ ಧಾಟಿಯನ್ನು ಕಾಪಾಡಿಕೊಳ್ಳಬೇಕು; ಇನ್ನೊಂದು ಕಡೆ, ಆಡುವ ಮಾತಿನ ಜೀವಸ್ವರಗಳು ಕೆಡದಂತೆ ನೋಡಿಕೊಳ್ಳಬೇಕು. ಗಾಯಕನಿಗೆ ಹಾಡಿನ ಅಕ್ಷರಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಎಳೆದು ತೇಲಿಸಿ ಒತ್ತಿ ಎತ್ತಿ ಹೇಳುವ ಸ್ವಾತಂತ್ರ್ಯವುಂಟು; ಅವನ ಬಾಯಲ್ಲಿ ಕೃತಿಯ ಮಾತುಗಳು ಸ್ವಲ್ಪ ನಲುಗಿದರೂ ಲಕ್ಷ್ಯಕ್ಕೆ ಬರಲಾರದು. ಪದ್ಯಕಾರನಿಗೆ ಈ ಸ್ವಾತಂತ್ರ್ಯವಿಲ್ಲ. ಪದ್ಯದ ಗಣಗಳು ತನ್ನನ್ನು ಆ ಕಡೆಗಷ್ಟು ಈ ಕಡೆಗಷ್ಟು ಹರಿದು ಹಂಚಿಕೊಳ್ಳುತ್ತಿದ್ದರೆ, ಪದವು ಸುಮ್ಮನೆ ಸಹಿಸಿಕೊಂಡಿರುವುದಿಲ್ಲ. ಪದದ ಪ್ರಮುಖವಾದ ಅಕ್ಷರದಿಂದ ಗಣ ಮೊದಲಾದರೆ ಸರಿ; ಇಲ್ಲದೆ ಹೋದರೆ, ತಾಳವೊಂದು ಕಡೆ ಜಗ್ಗಿದರೆ ಸ್ವರದ ಒತ್ತು ಇನ್ನೊಂದು ಕಡೆ ಜಗ್ಗುತ್ತದೆ. ಲಯ ನೆಲದಪ್ಪಿ, ಪದ್ಯ ಗಂಟುಗಂಟಾಗುತ್ತದೆ.

---

೬. ಕನ್ನಡದಲ್ಲಿ ಸ್ವರಾಘಾತ ಪರಿಶೋಧನೆ ಶಾಸ್ತ್ರೀಯವಾಗಿ ಇದುವರೆಗೆ ನಡೆದಿಲ್ಲ. ಆದಕಾರಣ, ಅದರ ನಿಯಮಗಳನ್ನು ನಿಷ್ಕೃಷ್ಟವಾಗಿ. ಸಮಗ್ರವಾಗಿ ಇಲ್ಲಿ ತೇಳಲು ಸಾಧ್ಯವಾಗಿಲ್ಲ. ಈ ವಿಷಯವನ್ನು ಪರಿಶೀಲಿಸತಕ್ಕವರಿಗೆ ಕನ್ನಡ ಛಂದಸ್ಸಿನ ವಿಮರ್ಶೆ ಬಹುಮಟ್ಟಿಗೆ ಉಪಯುಕ್ತವಾಗ ಬಹುದು.

ಮೇಲಿನ ಮಾತಿಗೆ, ಗಣಕ್ಕೊಂಡು ಪದವನ್ನಿಡುತ್ತಾ ಹೋಗಬೇಕೆಂದು ಸರ್ವಥಾ ಅರ್ಥವಲ್ಲ. ಅಂಥ ಪದವಿನ್ಯಾಸಕ್ಕಿಂತ ಬೇಸರಪಡಿಸುವುದು ಬೇರೊಂದಿಲ್ಲ. ಜೀವನದಲ್ಲಿ ಹೇಗೋ ಛಂದಸ್ಸಿನಲ್ಲೂ ಹಾಗೆಯೇ ನಿಯಮವೂ ಬೇಕು, ವೈವಿಧ್ಯವೂ ಬೇಕು. ಇವೆರಡನ್ನೂ ಹೊಂದಿಸುವುದೇ ಕವಿಯ ಮುಂದಿರುವ ಸಮಸ್ಯೆ. ಇದರ ಮೇಲೆ, ಪದದಲ್ಲಿ ಆಘಾತವನ್ನು ಸಹಿಸತಕ್ಕದ್ದು ಅದರ ಮೊದಲ ಸ್ವರವೊಂದೇ ಅಲ್ಲ; ಮಿಕ್ಕ ಸ್ವರಗಳೂ ಸಮಯೋಚಿತವಾಗಿ ತಾಳದ ಏಟನ್ನು ತಡೆಯಬಲ್ಲವು. ಪದ್ಯದ ಶ್ರುತಿ ಎಲ್ಲಿ ಸಹ್ಯವಾಗುತ್ತದೆ, ಎಲ್ಲಿ ಅಸಹ್ಯವಾಗುತ್ತದೆ ಎಂಬುದನ್ನು ತೆರೆದ ಮನಸ್ಸಿನಿಂದ ಗಮನಿಸಿದರೆ, ಕೆಲವು ಕಟ್ಟಳೆಗಳು ಹೊರಡುವಂತೆ ತೋರುತ್ತದೆ. ಅವನ್ನು ಈ ಕೆಳಗೆ ಸೂಚಿಸಲಾಗಿದೆ:

ಪದದ ಆದಿಯಲ್ಲಿ ಒಂದಕ್ಕಿಂತ ಹೆಚ್ಚಾಗಿ ಲಘುಸ್ವರಗಳಿದ್ದರೆ, ಎರಡನೆಯ ಸ್ವರ ಅತಿ ದುರ್ಬಲವಾಗಿರುತ್ತದೆ; ತಾಳದ ಒತ್ತನ್ನು ಅದು ಎಷ್ಟು ಮಾತ್ರಕ್ಕೂ ತಡೆಯಲಾರದು. ಆದ್ದರಿಂದಲೇ, ಮೇಲಿನ ೯, ೧೧ ಮತ್ತು ೧೨ನೆಯ ಉದಾಹರಣೆಗಳಲ್ಲಿ ಯತಿಭಂಗ[೭] ವಾಗಿರುವುದು.

ಪದದ ಕೊನೆಯಲ್ಲಿರುವ ಲಘುವಿನಿಂದಲೂ ಹೊಸ ಗಣ ಆರಂಭವಾಗಬಾರದು. ಮೇಲಿನ ೧೦ ಮತ್ತು ೧೩ನೆಯ ಉದಾಹರಣೆಗಳಲ್ಲಿ ಈ ದೋಷವಿದೆ.

ಗುರು ಪದದಲ್ಲಿ ಎಲ್ಲಿದ್ದರೂ ಸರಿಯೆ, ಒತ್ತನ್ನು ತಡೆದುಕೊಳ್ಳುತ್ತದೆ. ಆದಕಾರಣ, ಪದದ ಎರಡನೆಯ ಸ್ವರವೇ ಆಗಲಿ ಕೊನೆಯ ಸ್ವರವೇ ಆಗಲಿ ಗುರುವಾಗಿದ್ದರೆ, ಅದರಿಂದ ಗಣ ಮೊದಲಾದರೂ ಯತಿ ಕೆಡುವುದಿಲ್ಲ.

ಉದಾಹರಣೆ : ಪದದ ಎರಡನೆಯ ಸ್ವರಕ್ಕೆ—

(೧೪) ಚಟಪಟಗುಟ್ಟಿ ಚ । ಟಾಕಿಯು ಮುಂಗಡೆ ಠೀವಿಯ ತೋರುತ
ಬರುತಿರಲು

(೧೫) ಪುರುಷಬಲವ ಬೆಳಗಿರೆನುತ ಜಡರ ಪಳಿದು ಮೊಳಗುತಂ
ಪರಿವಳೀ ಕ । ವೇರತನಯೆ ಧೀರಜನನಿಯೆನಿಸುತುಂ.

ಪದದ ಕೊನೆಯ ಸ್ವರಕ್ಕೆ—

(೧೬) ಸುಖದ ದುಃಖದ ವಿಪುಲವೇಣಿ, ಪನ್ನಗವೇಣಿ,
ಭಾಗ್ಯದೇವತೆಯ ಕೊರ । ಲಿಂ ಬಿದ್ದ ಕಟ್ಟಾಣಿ.

---

೭. ಗಣಕ್ಕೆ ಸರಿಯಾಗಿ ಪದವೂ ಮುಗಿಯುವುದಕ್ಕೆ ಅಥವಾ ವಿಭಾಗವಾಗುವುದಕ್ಕೆ "ಯತಿ"ಯೆಂದು ಇಲ್ಲಿ ಹೆಸರು ಕೊಡಲಾಗಿದೆ. ಈ "ಯತಿ" ಸ್ವರೂಪವು ಸಂಸ್ಕೃತ ಛಂದಸ್ಸಿನ ಯತಿಸ್ವರೂಪವನ್ನು ಅನೇಕ ಅಂಶಗಳಲ್ಲಿ ಹೋಲುತ್ತದೆ. ಕುತೂಹಲವುಳ್ಳವರು 'ವೃತ್ತರತ್ನಾಕರ'ಕ್ಕೆ (೧.೧೨) ನಾರಾಯಣ ಭಟ್ಟನು ಬರೆದಿರುವ ಟೀಕೆಯನ್ನು ನೋಡಬಹುದು.

"ಮುಡಿ"ಯನ್ನು ಕುರಿತು ಒಂದು ಮಾತು.[೮] ಇದು ಸ್ವರೂಪದಲ್ಲಿ ಲಘುವಾಗಿದ್ದಾಗ ಕೂಡ ಇದಕ್ಕೆ ಉಚ್ಚಾರಣೆಯಲ್ಲಿ ಒಂದು ಗುರುವಿನ ಬೆಲೆಯಾದರೂ ಬಂದೇ ಬರುತ್ತದೆ. ಆದಕಾರಣ ಇದರ ಮೇಲೆ ತಾಳ ಬಿದ್ದಾಗ ಯತಿಭಂಗವಾಗುವುದಿಲ್ಲ.

ಅಂತೂ, ಒಂದು ಪದವನ್ನು ಎರಡು ಗಣಗಳಿಗೆ ಹಂಚುವುದಾದರೆ, ಅದರಲ್ಲಿ ಕನಿಷ್ಠಪಕ್ಷ ೨ ಮಾತ್ರೆಯಷ್ಟು ಅಕ್ಷರಗಳಾದರೂ (ಎಂದರೆ ಎರಡು ಲಘುಗಳು ಅಥವಾ ಒಂದು ಗುರು) ಒಂದೊಂದು ಗಣಕ್ಕೆ ಸೇರಬೇಕು. ("ಚಟಾಕಿ", "ಕವೇರತನಯೆ"- ಇಂಥ ಕಡೆಗಳಲ್ಲಿರುವಂತೆ ಪದದ ಆದಿಯಲ್ಲಿ ಒಂದು ಲಘುವಾದ ಒಡನೆಯೇ ಗುರು ಬಂದರೆ ಈ ನಿಯಮ ಅನ್ವಯಿಸುವುದಿಲ್ಲ.) ಈ ಕೆಳಗಿನ ಚರಣಗಳನ್ನು ನೋಡಿ:

(೧೭) ನಿನ್ನಾ ಮೋಹದ ನಡುವನು ಬಳಸುವ
ಚಿನ್ನದ ಕಟ್ಟಾ । **ಗಲು ಬಯ** । ಕೆ.

(೧೮) ಮದುವಣಿಗನೊಪ್ಪುತಿರಲವನ **ಕೈ** । ಗಳ ಬಿಗಿದು
ಪದೆದು ಕೊಂಡೊಯ್ದೊಗಿ । **ಸಿದ** ರುದ್ರಭೂಮಿಯಿದು.

ಮೇಲೆ ೧೩ನೆಯ ಉದಾಹರಣೆಯ "ಮೊಂಡಾಟವು ಬಿಡದಲ್ಲ" ಎಂಬ ಚರಣದಲ್ಲಿ ಕೆಟ್ಟುಹೋದ ಯತಿ "ಮೊಂಡಾಟವಣಗದಲ್ಲ" ಎಂಬುದರಲ್ಲಿ ಹೇಗೆ ಸರಿಹೋಯಿತು? ಈ ತಿದ್ದಿದ ಚರಣದಲ್ಲಿ ತಾಳ ಬೀಳುವ ಕಡೆ ಸಂಧಿಯಾಗಿ ಕ್ಲೇಶವನ್ನು ಪರಿಹರಿಸಿದೆ. ಒಂದು ಅಕ್ಷರದಲ್ಲಿ ಆಘಾತ ಬೀಳುವುದು ಅದರ ಸ್ವರದ ಮೇಲೆ. ಇಲ್ಲಿ "-ವಣಗದ-" ಎಂಬ ಗಣದ ಆದಿಸ್ವರವಾದ "ಅ" ಎಂಬುದು "ಅಣಗದು" ಎಂಬ ಪದದ ಮೊದಲನೆಯ ಸ್ವರವೂ ಆಗಿರುವುದರಿಂದ ತಾಳದ ಒತ್ತನ್ನು ಸರಿಯಾಗಿ ತಡೆಯುತ್ತದೆ. ಈ ಸ್ವರಕ್ಕೆ "ಮೊಂಡಾಟವು" ಎಂಬ ಹಿಂದಿನ ಪದದ "ವ್" ಎಂಬ ವ್ಯಂಜನ ಅಂಟಿಕೊಂಡಿದ್ದರೂ ಏನೂ ತೊಂದರೆಯಾಗಿಲ್ಲ; ಸಂಧಿಯಲ್ಲಿ ತನ್ನ ಸ್ವರವನ್ನು ಕಳೆದುಕೊಂಡ ಬಳಿಕ ಅದಕ್ಕೆ ಯಾವ ಮಹತ್ವವೂ ಉಳಿಯಲಿಲ್ಲ. ಹೀಗೆ ಸಂಧಿಸ್ಥಾನದಲ್ಲಿ ಗಣವನ್ನು ಮೊದಲು ಮಾಡುವುದು ಸರ್ವಸಾಮಾನ್ಯವಾದ ರೂಢಿ. ಇದಕ್ಕೆ ಮೇಲಿನ ಉದಾಹರಣೆಗಳಲ್ಲೇ ಎಷ್ಟೋ ನಿದರ್ಶನಗಳು ದೊರೆಯುತ್ತವೆ. ಇನ್ನೂ ಕೆಲವನ್ನು ಕೊಡಬಹುದು :

---

೮. ಷಟ್ಪದಿಯ ೩ ಮತ್ತು ೬ನೆಯ ಚರಣಗಳ ಕೊನೆಯಲ್ಲಿ ನಿಲ್ಲುವಂತೆ, ಚರಣದ ಕೊನೆಯಲ್ಲಿ ಬಿಡಿಯಾಗಿ ನಿಂತು ಅದಕ್ಕೆ ಮುಕ್ತಾಯ ಕೊಡುವ ಅಕ್ಷರಕ್ಕೆ "ಮುಡಿ" ಯೆಂಬ ಹೆಸರನ್ನು ಇಲ್ಲಿ ಕೊಟ್ಟಿದೆ. ಮೇಲಿನ ೧೪ ನೆಯ ಉದಾಹರಣೆಯಲ್ಲಿ "...।ತೋರುತ। ಬರುತಿರ। ಲು" ಎಂಬ ಕಡೆ "ಲು" ಎಂಬ ಅಕ್ಷರಮುಡಿ. ಇದರ ಬೆಲೆ ಒಂದು ಗುರುವಿನಷ್ಟೆಂದು ಹೇಳುವುದು ವಾಡಿಕೆ; ನಿಜವಾಗಿ ಇದರ ಬೆಲೆಯು ಒಂದು ಗಣದ ಕಾಲ. ಮುಡಿಯನ್ನು ಉಚ್ಚರಿಸಿದ ಬಳಿಕ ಉಳಿಯುವ ಕಾಲವನ್ನು ಮೌನ ತುಂಬುತ್ತದೆ. [ಮುಡಿಯನ್ನು ಕುರಿತ ಹೆಚ್ಚಿನ ವಿಚಾರಕ್ಕೆ 'ಮಾತ್ರೆ, ಮುಡಿ, ಪದ್ಯಗಣ' ಎಂಬ ಲೇಖನವನ್ನು ನೋಡಿ.]

(೧೯) ಅತ್ತ । ರತ್ತ । ರತ್ತ । ರೆಂದು
ಹೊತ್ತು ಮೂರು ನುಡಿವೆ ನೀನ್.

(೨೦) ನೂರು ತೋಟಗಳಲಿ ನಿಂತು
ಚೆಲುವು ನಗುತ । ಲಿರವು । ದೆಂತು !

(೨೧) ಚಿಮ್ಮುತ ಎಲೆಯಿಂ । ದೆಲೆಯೆಡೆಗೆ
ಚಿಮುಕಿಸಿ ಮೋಹವ । ನಡಿಗಡಿಗೆ.

(೨೨) ನಕ್ಷತ್ರ । ದುಪ್ಪರಿಗೆ ತುತ್ತತುದಿಯಲಿ ನಿಂತು
ಅಕ್ಷಯದ ಆನಂಧ । ವುಣುವರಸಿಯಾಗೆ !

(೨೩) ಎಮ್ಮ ಮನೆ । ಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮಡಿ । ಲೊಳಗಿಡಲು ತಂದಿರುವೆವು.

ಆದಷ್ಟು ಮಟ್ಟಿಗೂ ಪದಚ್ಛೇದವು ಸ್ವಾಭಾವಿಕವಾಗಿರುವಂತೆ ನೋಡಿಕೊಳ್ಳಬೇಕು. "ನಡತೆಯಲಿ" ಎಂಬುದನ್ನು "ನಡತೆ । ಯಲಿ" ಎಂದು ವಿಭಾಗಿಸಿದರೆ ಸರಿಹೋಗುತ್ತದೆ; ಏಕೆಂದರೆ ಇಲ್ಲಿ ಛೇದವು ಪ್ರಕೃತಿ ಪ್ರತ್ಯಯಗಳಿಗೆ ನಡುವೆ ಬರುತ್ತದೆ. ಆದರೆ "ನಡ । ತೆಯಲಿ" ಎಂಬುದು ಸರಿಹೋಗುವುದಿಲ್ಲ. ಸಮಾಸದಲ್ಲೂ ಹೀಗೆಯೇ:

(೨೪) ಕಾರ್‌ಮುಸುಕು ರಾತ್ರಿ ಬೆ । ಳ್ಗುದುರೆಗಳ ಸೂರ್ಯಂಗೆ ಬೆನ್ನಿತ್ತು
ಸರಿಗುಂ.

ಇಲ್ಲಿ "ಬೆಳ್ಗುದುರೆಗಳ (=ಬೆಳ್ । ಗುದುರೆಗಳ)" ಎಂಬ ಕಡೆ ಛೇದವು ಸಹಜವಾಗಿದೆ, ಹಿತವಾಗಿದೆ. ಇದನ್ನು "ಬೆಳ್ಗು । ದುರೆಗಳ" ಎಂಬಂತೆ ಒಡೆಯಬೇಕಾಗಿಬಂದಿದ್ದರೆ ಅಸುಖವುಂಟಾಗುತ್ತಿತ್ತು. ಅಂತೂ ಗಣವಿನ್ಯಾಸದಲ್ಲಿ ಅರ್ಥಪ್ರತೀತಿಗೆ ಭಂಗವುಂಟಾಗದಂತೆ ಕವಿ ಮೈಯೆಲ್ಲಾ ಕಣ್ಣಾಗಿ ನೋಡಿಕೊಳ್ಳಬೇಕು.[೯]

(೨೫) ...... ಕರಯುಗದಿ
ವಿಜಯಮಾಲೆಯನಾಂತು, ಗಜಪುರದ ಕಡೆಗೊರ್ಮೆ

---

೯. ಇಂದಿನ ಛಂದಸ್ಸಿಗೆ ತಳಹದಿಯಾಗಿರುವ ಮಾತ್ರಾಗಣಗಳು ರಗಳೆ ಷಟ್ಪದಿಗಳಲ್ಲಿ ಪ್ರಚುರವಾಗಿದ್ದವು ತಾನೆ. ಇಲ್ಲಿಗೆ ಅನ್ವಯಿಸುತ್ತವೆಂದು ಮೇಲೆ ಗುರುತು ಕಾಣಿಸಿರುವ ಯತಿನಿಯಮಗಳ ವ್ಯಾಪ್ತಿಯನ್ನು ಅಲ್ಲಿಯೂ ನೋಡಬಹುದು. ಹಿಂದಿನ ಕವಿಗಳು ಇವನ್ನು ಉಲ್ಲಂಘಿಸಿರುವ ಕಡೆಗಳಲ್ಲಿ ಪದ್ಯದ ಓಟ ಕೆಟ್ಟಿರುವುದೂ ಗೋಚರವಾಗುತ್ತದೆ. ಇದಕ್ಕೆ ಉದಾಹರಣೆಗಳನ್ನೂ, ಈ ವಿಷಯವನ್ನು "ಅಂಶ"ದ ದೃಷ್ಟಿಯಿಂದ ವಿಮರ್ಶಿಸಿ ನಡೆಸಿರುವ ಪರಿಶೀಲನೆಯನ್ನೂ, 'ಕನ್ನಡ ಕೈಪಿಡಿ', ಸಂಪುಟ ೧ (ಎರಡನೆಯ ಮುದ್ರಣ), ಪುಟ ೧೭೬-೯ರಲ್ಲಿ ನೋಡಬಹುದು.

ಮಣಿಪುರದ ಕಡೆಗೊರ್ಮೆ ಬಗೆಯನಿರ್ಕಡೆ ಮಾಡಿ
ಒಲವಿನುಯ್ಯಾಲೆಯಲಿ ನಲಿದಳ್ ವಿಜಯಲಕ್ಷ್ಮಿ !

ಇಲ್ಲಿ ಕೊನೆಯ ಚರಣದ ನಡೆ ಹೇಗೆ?—

ಒಲವಿನು । ಯ್ಯಾಲೆಯಲಿ । ನಲಿದಳ್ । ವಿಜಯಲಕ್ಷ್ಮಿ ।

ಎಂದು ಗಣಗಳನ್ನು ವಿಂಗಡಿಸಿದರೆ "ವಿ । ಜಯ" ಎಂಬ ಕಡೆ ಯತಿಭಂಗವಾಗುತ್ತದೆ. ಈ ಚರಣವನ್ನು, ".... । ನಲಿದಳ್ ∧ । ವಿಜಯಲಕ್ಷ್ಮಿ!" ಎಂದು ಓದಬೇಕೆಂದು ತೋರುತ್ತದೆ. ಆಗ, ಮೂರನೆಯ ಗಣದಲ್ಲಿ ಒಂದು ಮಾತ್ರೆಯ ಕಾಲದ ಮೌನ ಅಥವಾ ವಿರಾಮ ಬರುತ್ತದೆ. (ಇದನ್ನು ∧ ಈ ಚಿಹ್ನೆಯಿಂದ ತೋರಿಸಿದೆ); ಕೊನೆಯಲ್ಲಿ "ಮುಡಿ" ನಿಲ್ಲುತ್ತದೆ. ಇಂಥ ಪ್ರಯೋಗಗಳು ಸರಳರಗಳೆಯಲ್ಲಿ ದೊರೆಯುವುದುಂಟು. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ವಿರಾಮ ಬರುವ ಕಡೆ ಪದದಲ್ಲೂ ವಿರಾಮಕ್ಕೆ ಅವಕಾಶವಿರಬೇಕು; ಮುಡಿಯೊಂದಿಗೆ ಭಾವದಲ್ಲೂ ಮುಕ್ತಾಯವಿರಬೇಕು.

(೨೬) ಕಾಡಿಸುವ ಕಾಡುದೇವರಿಗೆ ಹೊಗಳಿಕೆ ಬೇಕು.
ಪ್ರೇಮನಿಧಿಯಾಗಿರುವ । ದೇವರಿ ∧ । ಗೊಲುಮೆ ಸಾ । ಕು.

ಇಲ್ಲಿ, "ದೇವರಿ–∧ ಎಂಬ ಕಡೆ ಪದವೂ ಮುಗಿದಿದ್ದರೆ ಚೆನ್ನಾಗಿರುತ್ತಿತ್ತು. ಅಥವಾ, "ದೇ" ಎಂಬುದನ್ನು ಪ್ಲುತವಾಗಿ ಉಚ್ಚರಿಸಿ ಅದಕ್ಕೆ ೩ ಮಾತ್ರೆಯ ಕಾಲನ್ನು ಕೊಡಬೇಕೋ ಏನೋ.

ಯತಿಯನ್ನು ಪಾಲಿಸುವುದರಲ್ಲಿ ವೈವಿಧ್ಯವನ್ನು ಎಷ್ಟು ಮಟ್ಟಿಗೆ ಉಳಿಸಿಕೊಳ್ಳಬಹುದೆಂಬುದಕ್ಕೆ ಈ ಕೆಳಗಿನ ಒಂದು ನಿದರ್ಶನ ಸಾಕು :

(೨೭) ಕಲೆಯ । ಬಲ್ಲ ಕು । ಲಾಲ । ಮೂಡಿಪ ।
ಮಾಟ । ದೊಲು ಮೃ । ತ್ತಿಕೆಯೊ । ಳು—
ತಿರುಗಿ । ಜಗವೆಂ । ತಾಗು । ತಿರುವುದು ।
ಪೆರೆಯಿ । ಕಲೆಯಿಂ । ತಮದೊ । ಳು ।

ಚರಣಮಧ್ಯದಲ್ಲಿಯೇ ಯತಿನಿಯಮಗಳು ಇಷ್ಟು ಸೂಕ್ಷ್ಮವಾಗಿರುವಾಗ ಚರಣಾಂತ್ಯದಲ್ಲಿ ಕವಿ ಇನ್ನಷ್ಟು ಎಚ್ಚರಿಕೆ ವಹಿಸಬೇಕೆಂದು ಬೇರೆ ಹೇಳುವುದು ಅನಾವಶ್ಯಕ. ಹೊಸಗನ್ನಡದ ಕವಿತೆಯಲ್ಲಿ ಚರಣದೊಂದಿಗೆ ಪದವನ್ನೂ ಮುಗಿಸುವುದೇ ಪದ್ಧತಿ; ಒಮ್ಮೊಮ್ಮೆ ಲೋಪಸಂಧಿಯ ಸಹಾಯದಿಂದ ಕೊನೆಯ ಪದದ ಅಂತ್ಯ ವ್ಯಂಜನವನ್ನು ಮುಂದಿನ ಚರಣದ ಮೊದಲಿಗೆ ಜೋಡಿಸುವುದುಂಟು. ಇಂದಿನ ರೂಢಿ ಹೀಗಿರುವುದರಿಂದ, ಹಿಂದಿನ ಚರಣಕ್ಕಷ್ಟು ಮುಂದಿನ ಚರಣಕ್ಕಷ್ಟು ಸೇರುವಂತೆ ಒಂದು ಪದವನ್ನು ಛೇದಿಸಿದರೆ, ಅದರಲ್ಲೂ ಯತಿನಿಯಮವನ್ನು ಮೀರಿದರೆ, ಶ್ರುತಿಸಹ್ಯವಾಗದೆ ಹೋಗುವುದು ಖಂಡಿತ :

(೨೮) ಕಾಲಚಕ್ರದಲಿ ಚಿತ್ರಿಸಿದ ಚಕ್ರಾಧಿಪ-
ತ್ಯಗಳ ಗಣನೆಯಂ ಮಾಡಬಲ್ಲವರುಂಟೆ ಕಾ-
ಲಕಾಲಕೆ ತೋರಿ ಸಂಕಲ್ಪ ಕಾರ್ಯವ ಮಾಡಿ
ಮುಳುಗುವುವು;...

(೨೯) ನುಡಿಸುತಿರು ಏಕನಾದವ ಗುರುವೆ ! ಜೀವಲಹ-
ರಿಯ ಭೇದ ಒಡೆದು ಕಾಣಲಿ. ಅಭೇದದ ಕಟ್ಟ-
ಡವು ಇಟ್ಟಳಿಸಿ ಬರಲಿ....

೨೮ನೆಯ ಉದಾಹರಣೆಯಲ್ಲಿ ಗಮನಿಸತಕ್ಕ ಇನ್ನೊಂದು ಅಂಶವುಂಟು. "ಕಾಲಕಾಲಕೆ" ಎಂಬ ಪದವು ಚರಣಾಂತ್ಯದಲ್ಲಿ ಭೇದಹೊಂದಿ. "ಲಕಾಲಕೆ" ಎಂಬ ಅದರ ಭಾಗವು ಒಂದು ಗಣವಾಗಿ ನಿಂತಿದೆ. ಇಲ್ಲಿ "ಲ" ಎಂಬ ಲಘುವಿನ ಮೇಲೆ ಒತ್ತು ಬೀಳಬೇಕು; ಆದರೆ ಅದರ ಮುಂದೆಯೇ "ಕಾ" ಎಂಬ ಗುರು ನಿಂತು ಆಘಾತವನ್ನು ತನ್ನ ಕಡೆಗೆ ಸೆಳೆಯುತ್ತದೆ. ಹೀಗಾಗಿ ಗಣದ ರಚನೆ ಶ್ರಾವ್ಯವಾಗಿಲ್ಲ. ಗಣದ ಮೊದಲಲ್ಲಿ ಒಂದು ಲಘುವನ್ನಿಟ್ಟು ಕೂಡಲೇ ಗುರುವನ್ನು ತರುವ ಪದ್ಧತಿ ಕನ್ನಡ ಛಂದಸ್ಸಿನ ಸಂಪ್ರದಾಯಕ್ಕೆ ಅನನುಗುಣವಾದದ್ದು. ಹಿಂದಿನಿಂದಲೂ ಅಷ್ಟೇ ಕವಿಗಳು ಇಂಥ ಗಣಗಳನ್ನು ಸಾಮಾನ್ಯವಾಗಿ ಉಪಯೋಗಿಸಿಲ್ಲ, ಶಾಸ್ತ್ರಕಾರರು ಒಪ್ಪಿಲ್ಲ. ಷಟ್ಪದಿಗಳಲ್ಲಿ U—(೩ ಮಾತ್ರೆ), U—U(೪ ಮಾತ್ರೆ), U— —ಅಥವಾ U—UU(೫ ಮಾತ್ರೆ) : ಈ ಗಣಗಳು ಬರಕೂಡದೆಂದು ನಿಷೇಧಿಸಿರುವ ವಿಷಯ ಎಲ್ಲರಿಗೂ ತಿಳಿದಿದೆ. (ಈ ಗಣಗಳನ್ನು "ವಿಷಮಗಣ"ಗಳೆಂದು ಕರೆಯಬಹುದು.) ಹೀಗೆ ನಿಷೇಧಿಸುವುದಕ್ಕೆ ಸ್ವರಾಘಾತದ ನಿಯಮದ ಮೇರೆಗೆ ಔಚಿತ್ಯವೂ ಉಂಟೆಂದು ಮೇಲೆ ನೋಡಿದ್ದಾಗಿದೆ.

ಆದರೂ, ಈಗಿನ ಕವಿಗಳು ವಿಶೇಷ ಪ್ರಯೋಜನದ ದೃಷ್ಟಿಯಿಂದ ವಿಷಮಗಣಗಳನ್ನು ಕೆಲವು ವೇಳೆ ಪ್ರಯೋಗಿಸುವುದುಂಟು :

(೩೦) ದೊಬ್ಬೆಯ ಹಬ್ಬಿಸಿ ಒಂದೇ ದಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ,
U—U
ದೊಬ್ಬುಳಿ ತೆರೆಯನು । **ದಡಕ್ಕೆ** । ಹೊಮ್ಮಿಸಿ,
ಅಬ್ಬರದಲಿ ಘೋರ್ ಘೋರೆನೆ ಗುಮ್ಮಿಸಿ....

ಇದು 'ತೆಂಕಣ ಗಾಳಿಯಾಟ'ದ ಒಂದು ವಿಲಾಸದ ವರ್ಣನೆ. ಇಲ್ಲಿ ದಪ್ಪ ಲಿಪಿಯಲ್ಲಿ ತೋರಿಸಿರುವ ಕಡೆ ವಿಷಮಗಣ ಬಂದು, ತೆರೆ ದಡಕ್ಕೆ ಅಪ್ಪಳಿಸಿದ ಭಾವಕ್ಕೆ ಪುಷ್ಟಿ ಕೊಡುತ್ತದೆ.

ಮೂರು ಮಾತ್ರೆಯ ಗಣದಲ್ಲಿ ಹೆಚ್ಚು ವೈವಿಧ್ಯಕ್ಕೆ ಅವಕಾಶವಿಲ್ಲ. U— ಎಂಬ ವಿಷಮಗಣವನ್ನು ಕೈಬಿಟ್ಟರೆ, —U, UUU ಈ ಎರಡು ಬಗೆಯಲ್ಲೇ ಅದರ ಪ್ರಸ್ತಾರ

ಮುಗಿಯುತ್ತದೆ. ಆದಕಾರಣ ಕವಿಗಳು ೩ ಮಾತ್ರೆಯ ಗಣದಲ್ಲಿ U— ಗಣವನ್ನೂ ಆಗಾಗ ಉಪಯೋಗಿಸುತ್ತಾರೆ. ಇದು ಹದ ಮೀರದಂತೆ, ಅದರಲ್ಲೂ ಚರಣದ ಕೊನೆಯಲ್ಲಿಲ್ಲಿ, ಬಂದರೆ ಇಂಪಾಗಿಯೂ ಇರಬಲ್ಲದು. ಮುಂದಿನ ಪದ್ಯದಲ್ಲಿ ಹೀಗೆ ವಿಷಮಗಣಗಳು ಸಾಲುಗಟ್ಟಿಕೊಂಡು, ಚರಣದ ನಡುವೆ ಕೂಡ ಬಂದಿವೆ:

(೩೧) ಬಂಡನುಂಡು ದುಂಬಿವಿಂಡು ಹಾಡುತಿಹುವು ಹಾರುತ;
      U—   U—
ಮತ್ತ । ಮಧು । ಮಾಸ । ಬಿದು । ಬನ್ನಿರೆಂದು ಸಾರುತ.
                U—
ಜಾರುತಿಹುದು ಮಾಗಿ । ಚಳಿ,
                U—
ಕುಸುಮಿಸಿರುವ ಲತೆಗ । ಳಲಿ
                U—
ಮೊರೆಯುತಿಹವು ಸೊಕ್ಕಿ । ದಳಿ
ಮುಕ್ತಜೀವರಂದದಿ !
      U—   U—
ಉಲಿಯೆ । ಪಿಕ, । ಗಳಪೆ । ಶುಕ, । ಸುಗ್ಗಿ ಬಂದಿತಂದದಿ !

ಇಲ್ಲಿಯ ವಿಷಮಗಣಗಳಲ್ಲಿ ಲಘುಸ್ವರಕ್ಕೆ ಗುರುವಿನ ಬೆಲೆಯೂ, ಅಂತ್ಯಪ್ರಾಸದ ಬಿಗಿಯೂ ಸಮುಚಿತವಾಗಿ ಬಂದು ಪದ್ಯ ಮನೋಹರವಾಗಿದೆ.

"ರಗಳೆಯ ಕವಿ" ಹರಿಹರನು U—ಗಣವನ್ನು ಹಿಂದೆಯೇ 'ಮಹಾದೇವಿಯಕ್ಕನ ರಗಳೆ'ಯಲ್ಲಿ ರಮ್ಯವಾಗಿ ಉಪಯೋಗಿಸಿದ್ದನು:

                                        U—
(೩೨) ಬರುತಮಿರ್ದಳಿಂದುಧರನ ಪೂಜೆಗೆಮ್ಮ । ಮಹಾ । ದೇವಿ
                                        U—
ಪರಮಭಕ್ತ ಶಾಂತಿಯುಕ್ತೆಯತಿವಿರಕ್ತೆ । ಮಹಾ । ದೇವಿ.

ಚರಣದ ಮೊದಲಲ್ಲೇ ತಾಳವೂ ಮೊದಲಾಗಿ ಮುಂದುವರಿಯುವುದೇ ಪದ್ಯದ ರೂಢಿ. ಆದರೆ, ಈ ಉದಾಹರಣೆಯನ್ನು ನೋಡಿ :

(೩೩) ಅ] ನಾಥೆ ಇವ । ಳಿನ್ನೊಬ್ಬ–।
ಳೀ ಜನ್ಮ ರೋಸಿ,
ವೇಧೆಯನು ತಾಳದೆಯೆ
ಮುಳುಗಿದಳು ಹೊಳೆಗೆ.

ಮೊದಲನೆಯ ಚರಣದಲ್ಲಿ "ಅ" ಎಂಬ ಲಘು ಬಿಡಿಯಾಗಿ ನಿಂತು, ಅಲ್ಲಿಂದ ಮುಂದೆ ೫ ಮಾತ್ರೆಯ ಎರಡು ಗಣಗಳು ಬಂದಿವೆ. ಹೀಗೆ ತಾಳಕ್ಕೆ ಮೊದಲೇ ಅಕ್ಷರ

ಬಂದಿರುವುದು ಹಾರುವ ಅಥವಾ ಓಡುವ ಪಂದ್ಯಗಳಲ್ಲಿ ನೇಮಿಸಿದ ಗೆರೆಗಿಂತ ಕೆಲವು ಹೆಜ್ಜೆ ಹಿಂದಿನಿಂದ ಸ್ಪರ್ಧಾಳು ಓಡಿಬಂದು ವೇಗವನ್ನು ಬೆಳಸಿಕೊಳ್ಳು ವಂತೆ. ಚರಣಕ್ಕೆ ಇದರಿಂದ ಹೊಸ ಬಲ ಬರುತ್ತದೆ. ಮೇಲಿನ ಉದಾಹರಣೆಯಲ್ಲಿ ಹೀಗೆ ತಾಳವನ್ನು ಎತ್ತಿಕೊಡುವ ಅಕ್ಷರ ಲಘು; ತ್ವರಿತವಾಗಿ ಅದನ್ನು ಉಚ್ಚರಿಸ ಬಹುದು. ಅದರ ಮುಂದಿನ ಅಕ್ಷರ ಗುರು; ಆದ್ದರಿಂದ ಸ್ವರಾಘಾತವೂ ತಾಳವೂ ಅಲ್ಲಿ ಒಡಬೆರೆಯುತ್ತವೆ. ಈ ಬಗೆಯ ವಿನ್ಯಾಸವನ್ನು ಮಿಕ್ಕ ಜಾತಿಯ ಗಣಗಳಲ್ಲೂ ತರಬಹುದು:

(೩೪) ಚ]ಳುಕ್ಯರಾಷ್ಟ್ರ ಕೂಟರೆಲ್ಲಿ,
ಗಂಗರಾ ಕದಂಬರೆಲ್ಲಿ,.... (೩ ಮಾತ್ರೆಯ ಗಣ)

(೩೫) ಕು] ಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು. (೪ ಮಾತ್ರೆಯ ಗಣ)

೩೫ನೆಯ ಉದಾಹರಣೆಯಲ್ಲಿ, ಕೆಲವರು ಮೊದಲಲ್ಲಿ ವಿಷಮಗಣವನ್ನು ತಂದು, 'ವ್ಯಾ' ಎಂಬ ಒತ್ತಕ್ಷರವನ್ನು ಶಿಥಿಲಮಾಡಿ,

U — U *
ಕುಮಾರ । ವ್ಯಾಸನು ಹಾಡಿದನೆಂದರೆ

ಎಂಬಂತೆ ಓದುತ್ತಾರೆ. ಆದರೆ ಗತ್ತು ಗಾಂಭೀರ್ಯಗಳನ್ನು ಉಳಿಸಿಕೊಳ್ಳಲು ಮೊದಲನೆಯ ಮಾರ್ಗವೇ ಉತ್ತಮವೆಂದು ತೋರುತ್ತದೆ.

೪ ಮಾತ್ರೆಯ ಗಣದ ಧಾಟಿಯಲ್ಲಿ ಮೊದಲ ತಾಳಕ್ಕೆ ಹಿಂದೆ ಎರಡು ಲಘುಗಳನ್ನು ನಿಲ್ಲಿಸಿಯೂ ಸೊಗಸನ್ನು ತಂದಿರುವುದುಂಟು :

(೩೬) ಹಗ] ಲೆಲ್ಲಾ । ಕಳೆಯಿತು । ಸೂರ್ಯನು । ಮುಳುಗೆ
ಖಗ] ಹಾರಿತು ಗೂಡಿನ ಒಳಗೆ
ಜಗ] ವೆಲ್ಲಾ ಬೆಳಗಿತು ದೀಪವು ಬೆಳಗೆ
ಗಗ] ನಾಂಗಣದಲಿ ಉಡು ತೊಳಗೆ ....

ಈ ಚರಣಗಳನ್ನು, "ಹಗಲೆ । ಲ್ಲಾ ಕಳೆ । ಯಿತು ಸೂ । ರ್ಯನು ಮುಳು । ಗೆ".... ಎಂಬಂತೆ ವಿಭಾಗಿಸುವುದೂ ಅಸಾಧ್ಯವಲ್ಲ. ಆದರೆ ಮೊದಲನೆಯ ರೀತಿಯಲ್ಲೇ ಇಂಪು ಹೆಚ್ಚು.

ಮೇಲಿನ ಉದಾಹರಣೆಗಳಲ್ಲೆಲ್ಲಾ, ತಾಳ ಮೊದಲಾಗುವ ಕಡೆ ಗುರು ನಿಯತವಾಗಿ ಬಂದಿರುವುದನ್ನು ಗಮನಿಸಬೇಕು. ಹೀಗಿಲ್ಲದಿದ್ದರೆ ಲಯ ಕೆಡುತ್ತದೆ :

(೩೭) ನೆ]ನೆಯಲಾರೆ ! । ಕಿರಿಯ ದೋ । ಣೆಯು ತೆರೆಗ । ಳಗ್ರದಲಿ ।...

ಇಲ್ಲಿ ಚರಣದ ಎರಡನೆಯ ಅಕ್ಷರ ಲಘುವಾಗಿರುವುದರಿಂದ, ಅದರಲ್ಲೂ ಪದದ ಎರಡನೆಯ ಲಘುವಾಗಿರುವುದರಿಂದ, ಏನು ಮಾಡಿದರೂ ತಾಳ ಅಲ್ಲಿ ಬೀಳುವುದಿಲ್ಲ. ಈ ಚರಣವನ್ನು ಸರಿಹೊಂದಿಸಬೇಕಾದರೆ,

"ನೆನೆಯಲಾ । ರೆ ! ಕಿರಿಯ। ದೋ] ಣೆಯು ತೆರೆಗ। ಳಗ್ರದಲಿ।" ಎಂದೋ,

"ನೆನಯಲಾ । ರೆ ! ಕಿರಿಯ ದೋ। ಣೆಯು ತೆರಗ। ಳಗ್ರದಲಿ।" ಎಂದೋ,

ಓದಬೇಕು. ಆಗ ಚರಣಮಧ್ಯದಲ್ಲಿ ಒಂದು ಗುರು ಅಧಿಕವಾಗಿ ನಿಲ್ಲುತ್ತದೆ.

೩

ಗಣವಿನ್ಯಾಸದಲ್ಲಿ ಕಾಣಬರುವ ವಿಶೇಷಾಂಶವೊಂದನ್ನು ಈಗ ಕೆಲವು ಮಟ್ಟಿಗೆ ಪರಿಶೀಲಿಸಬೇಕಾಗುತ್ತದೆ. ಕೆಳಗಿನ ಚರಣಗಳನ್ನು ನೋಡಿ;

(೩೮) ಒಳ್ಳೆಯ ಮಗಳು ಒಳ್ಳೆಯ ಗೆಳತಿ
ಒಳ್ಳೆಯ ಸೊಸೆ ಬಹು ಒಳ್ಳೆಯ ಹೆಂಡತಿ
ಚೆಲುವು ಹೆಚ್ಚೊ ಗುಣ ಹೆಚ್ಚೋ ಎಂಬುದು
ತಿಳಿಯದೊ ಅವಳನು ನೋಡಿದ ಜನಕೆ.
ಮಲ್ಲಮ್ಮಾ ಮಲ್ಲಮ್ಮಾ
ಇಲ್ಲವಾದೆಯಾ ಮಲ್ಲಮ್ಮಾ.

ಇಲ್ಲಿಯ ಲಯ ೪ ಮಾತ್ರೆಯ ಗಣಗಳಿಂದ ಆಗಿದೆಯೆಂಬುದು ಸ್ಪಷ್ಟ ಆದರೆ ಮೂರನೆಯ ಚರಣವನ್ನು ಗಣಗಳಾಗಿ ವಿಂಗಡಿಸಿ ನೋಡಿ :

ಚೆಲುವು ಹೆಚ್ಚೊ ಗುಣ । ಹೆಚ್ಚೋ । ಎಂಬುದು ।

ಚರಣದ ಪೂರ್ವದಲ್ಲಿ 'ಹೆ-' ಎಂಬ ಗುರುವನ್ನು ಮಧ್ಯಕ್ಕೆ ಕತ್ತರಿಸಿದ ಹೊರತು ೪ ಮಾತ್ರೆಯ ಗಣಗಳೇ ಸಿಕ್ಕುವಂತಿಲ್ಲ. ಇದೇನು, ಗಣವಿನ್ಯಾಸದ ಮೂಲತತ್ತ್ವಕ್ಕೇ ಕುಠಾರ ಬಿದ್ದಿತಲ್ಲ ಎನ್ನಿಸಬಹುದು. ಆದರೆ ಚರಣದ ಶ್ರಾವ್ಯತೆ ಏನೂ ಕಡಿಮೆಯಾಗಿಲ್ಲ; ನಿಜವಾಗಿ ಈ ಭಾಗದಲ್ಲಿ ಅದಕ್ಕೊಂದು ಹೊಸ ಸೊಗಸು ಬಂದಿದೆ. ಬಾಣ ಬಿಟ್ಟಂತೆ ನೇರವಾಗಿ ಸಾಗುವ ಬದಲು, ನಟಿಯಂತೆ ಇಲ್ಲಿ ಬಳುಕಿ ಮುಂದುವರಿಯುತ್ತದೆ. ಇದಕ್ಕೆ ಕಾರಣವೇನು?

ಇಂಥ ಕಡೆಗಳಲ್ಲಿ ಲಯದ ಮಾನದಂಡ ೪ ಮಾತ್ರೆಯ ಒಂಟಿ ಗಣವಲ್ಲ; ಅದು ೮ ಮಾತ್ರೆಯ ಕಾಲದ ದ್ವಿಗಣ (೪+೪). ಈ ದೀರ್ಘ ಗಣದಲ್ಲಿ ಒಳತಾಳ ಸಹಜವಾಗಿ ಬರಲೇಬೇಕು; ಅದು ಸಾಮಾನ್ಯವಾಗಿ ೪+೪ರಂತೆ ಒಡೆಯುತ್ತದೆ. ಆದರೆ ಒಂದೊಂದು ಸಲ ಈ ೪+೪ಕ್ಕೆ ಬದಲಾಗಿ ೩+೫ ರಂತೆ ಗಣವಿನ್ಯಾಸ ಮಾಡಿದರೆ ಮುಖ್ಯಲಯ ಕೆಡುವುದಿಲ್ಲ; ಅದರ ರಚನೆಯಲ್ಲಿ ವೈವಿಧ್ಯವೊದಗುತ್ತದೆ. ಇದೇ ಮೇಲಿನ ಚರಣದ ಸೊಗಸಿನ ಗುಟ್ಟು. ಅದರ ಗಣವಿಭಾಗವನ್ನು

ಚೆಲುವು : ಹೆಚ್ಚೊ ಗುಣ । ಹೆಚ್ಚೋ ಎಂಬುದು

—ಹೀಗೆ ತೋರಿಸಬಹುದು. ಇದರಂತೆಯೇ, ಮೇಲಿನ ಉದಾಹರಣೆಯಲ್ಲಿ ಆರನೆಯ ಚರಣದ ರಚನೆ ಈ ರೀತಿಯದು :

ಇಲ್ಲ : ವಾದೆಯಾ । ಮಲ್ಲಮ್ಮಾ

ಈ ಬಗೆಯ ಗಣವಿನ್ಯಾಸಕ್ಕೆ ಇನ್ನು ಕೆಲವು ಉದಾಹರಣೆಗಳು :

(೩೯) ಹೊಂಬಿಸಿಲೆಚ್ಚರಗೊಳಿಸದ ಮೌನ
ರಾಗ : ಮೋದಗಳು । ಕಲಕದ ಮೌನ.

(೪೦) "ಏಳೈ ಕನ್ನಡ ಭಾಗ್ಯವಿಧಾತನೆ"
ಎನುತೆ : ಹಾಡುತಿಹ । ವೈತಾಳಿ.

(೪೧) ಗಳಗಳರವದಿಂ ತೊರೆಯಾಗೋಡಿ
ಬಳುಕಿ : ನಲಿದು ಸುರ । ಗಾನವ ಪಾಡಿ.

(೪೨) ಆಸೆ : ಯೆಸಳು ತಲೆ । ಯೆತ್ತುವ ಮೊದಲೆ
ಸೌಸವವನು ಬಗೆ ಬೀರುವ ಮೊದಲೆ.

ಕೊನೆಯ ಎರಡು ಕಡೆಗಳಲ್ಲಿ "ಬಳುಕಿ ನ। ಲಿದು ಸುರ—", ಆಸೆಯೆ। ಸಳುತಲೆ—" ಎಂದು ೪+೪ರಂತೆ ಭೇದ ಮಾಡುವುದು ಸಾಧ್ಯ; ಆದರೆ ಹಾಗೆ ಮಾಡಿದರೆ ಯತಿ ನಿಜವಾಗಿ ಕೆಡುತ್ತದೆ. ೩+೫ರಂತೆ ವಿಂಗಡಿಸಿ ಓದುವುದೇ ಸಹಜ; ಅದರಲ್ಲೇ ಸೊಗಸು.

೪+೪ರ ಸ್ಥಾನದಲ್ಲಿ ೩+೫ ಬಂದಾಗ, ಈ ೫ ಮಾತ್ರೆಯ ಭಾಗವನ್ನು ೩+೨ರಂತೆ ಒಡೆಯಲು ಸಾಧ್ಯವಾದರೆ ಶ್ರಾವ್ಯತೆ ಹೆಚ್ಚೆಂದು ತೋರುತ್ತದೆ. ಮೇಲಿನ ಉದಾಹರಣೆಗಳಲ್ಲೆಲ್ಲಾ ಇದು ಸಾಧ್ಯವಾಗುತ್ತದೆ.

(೪೩) ಜಗ ಬೆಳಗಲು ದೆಸೆ ಹೊಳಲಿಡೆ ನಕ್ಕು
ಮುಗಿಲ : ಬೆನ್ನೇರಿ । ಮೋದದಿ ಮಿಕ್ಕು.

UUU —U
ಇಲ್ಲಿ "ಮುಗಿಲ : ಬೆನ್ನೇರಿ" ಎಂಬುದನ್ನು ೩+೩+೨ರಂತೆ ವಿಭಾಗಿಸಲಾಗುವುದಿಲ್ಲ.
UUU —U U U
ಇದರ ಬದಲು "ಮುಗಿಲ. ಬೆನ್ನಿ. ನ ಲಿ" (೩+೩+೨) ಎಂದು ಇದ್ದಿದ್ದರೆ ಚರಣದ ಇಂಪು ಹೆಚ್ಚುತ್ತಿರಲಿಲ್ಲವೆ?

ಹೀಗೆ ೪+೪ರ ಧಾಟಿಯಲ್ಲಿ ಪದ್ಯ ನಡೆಯುತ್ತಿರುವಾಗ ಒಂದೊಂದು ಕಡೆ ೩+೫ನ್ನು ಉಪಯೋಗಿಸುವ ಪದ್ಧತಿ ಆಧುನಿಕ ಯುಗದಲ್ಲಿ ಮೊದಲಾದದ್ದೇನೂ ಅಲ್ಲ; ಇದರ ಸುಖವನ್ನು ಜನ್ನ ರಾಘವಾಂಕರು ಅರಿತಿದ್ದರು.

(೪೪) ಮೊಟಗುವುವಘಮೃಗವಿರದೋಡುವಿನಂ
ಮೊಟಗು : ಗೆತ್ತು ಕೇ । ಕಿಗಳಾಡುವಿನಂ...
ಸಕಲ : ದೇಶ ಭಾ । ಷಾಪ್ರತಿಭಾನಂ
ಪ್ರಕಟಂ ನೆಗೆದುದು ದಿವ್ಯಧ್ವಾನಂ. (ಅನಂತನಾಥಪುರಾಣ)

(೪೫) ಏವೆ : ನೇವೆನೆಲೆ । ಮಗನೇ ಮಗನೇ
ಸಾವೇಕಾಯಿತ್ತೆಲೆ ಚೆನ್ನಿಗನೇ. (ಹರಿಶ್ಚಂದ್ರ ಕಾವ್ಯ)

ಈ ರಚನೆ ಕನ್ನಡದಲ್ಲಿ ಮಾತ್ರವಲ್ಲ; ಸಂಸ್ಕೃತದಲ್ಲಿ 'ಗೀತಗೋವಿಂದ'ದಲ್ಲಿಯೇ ಕಾಣಿಸಿಕೊಂಡಿದೆ. ನಾದನಿಧಿಯಾದ ಜಯದೇವಕವಿಗೇ ಇದು ಒಪ್ಪಿಗೆಯಾದಮೇಲೆ ಇದರ ಇಂಪಿಗೆ ಬೇರೆ ಪ್ರಮಾಣ ಬೇಕಿಲ್ಲ. ಒಂದು ಉದಾಹರಣೆ ಇಲ್ಲಿಗೆ ಸಾಕು;

(೪೬) ಮದನಮಹೀಪತಿ। ಕನಕ : ದಂಡರುಚಿ। ಕೇಶರ ಕುಸುಮ ವಿಕಾಸೇ
ಮಿಲಿತ ಶಿಲೀಮುಖ ಪಾಟಲಪಟಲಕೃತ ಸ್ಮರತೂಣವಿಲಾಸೇ.

ಹೀಗೆ ಲಯದಲ್ಲಿ ಒಂದು ಹೊಸ ಬಳುಕನ್ನು ತರುವುದಕ್ಕಾಗಿ ಒಂದು ಜಾತಿಯ ಗಣಗಳ ಸ್ಥಾನದಲ್ಲಿ ಅದೇ ಮಾತ್ರಾಪರಿಮಿತಿಯ ಇನ್ನೊಂದು ಜಾತಿಯ ಗಣಗಳನ್ನು ಇರಿಸುವುದಕ್ಕೆ "ಗಣಪರಿವವೃತ್ತಿ"ಯೆಂಬ ಹೆಸರನ್ನು ಇಲ್ಲಿ ಕೊಟ್ಟಿದೆ.

೩ ಮಾತ್ರೆಯ ಗಣದ ಧಾಟಿ ಶುದ್ಧವಾಗಿ ನಡೆದರೆ ಅದರಲ್ಲಿ ಏಕನಾದಕ್ಕೆ ಅವಕಾಶ ಹೆಚ್ಚು. ೩+೩ರ ಸ್ಥಾನದಲ್ಲಿ (೨+೪ ಅಥವಾ ೪+೨ರ ರಚನೆಯುಳ್ಳ) ೬ ಮಾತ್ರೆಯ ಗಣವನ್ನು ಪ್ರಯೋಗಿಸುವುದು ಈಗ ರೂಢಿಯಾಗುತ್ತಿದೆ. ಈ ಬಗೆಯ ಪರಿವರ್ತನೆಯನ್ನು ಔಚಿತ್ಯವರಿತು ನಡಸಿದರೆ ಪದ್ಯ ಎಷ್ಟು ರಮ್ಯವಾಗುವುದೆಂಬುದಕ್ಕೆ ಈ ಕೆಳಗಿನ ನಿದರ್ಶನಗಳು ಸಾಕು:

(೪೭) ಗಂಗೆ ಯಮುನೆ ಕೂಡಿ ಹರಿದು
ಸಂಗಮ.ಜಲ । ಬಿಳಿದು ಕರಿದು
ತಿಂಗಳ.ನಗೆ । ಮೇರೆವರಿದು
ಬೇರೆ ಮಿರುಗು ನೀರಿಗು.

(೪೮) "ಭೃಂಗ ದ.ಜೆ । ನ್ನೇರಿ ಬಂತು ಕಲ್ಪನಾವಿಲಾಸಾ"...
ಏನು ಏನು? ಜೇನು ಜೇನು? । ಎನೆ. ಗುಂ ಗುಂ । ಗಾನಾ
ಓಂ.ಕಾರದ । ಶಂಖನಾದಕಿಂತ ಕಿಂಚಿದೂನಾ
ಕವಿಯ ಏಕತಾನ ಕವನದಂತೆ ನಾದಲೀನಾ...
ಮಾತು ಮಾತು ಮಥಿಸಿ ಬಂದ । ನಾದದ.ನವ । ನೀತಾ.

೫+೫ರ ಸ್ಥಾನದಲ್ಲಿ ೩+೪+೩ರ ಛಾಯೆಯನ್ನು ತರುವುದಂತೂ ಅತಿ ಸಾಮಾನ್ಯ; ಕಿವಿಗೊಟ್ಟು ಆಲಿಸಿದ ಹೊರತು ಗಮನಕ್ಕೇ ಬಾರದಷ್ಟು ಸಾಮಾನ್ಯ. ಕೆಳಗಿನ ಚರಣದಲ್ಲಿ ಈ ಪರಿವೃತ್ತಿ ಹಿತವಾಗಿ ಬಂದಿದೆ :

(೪೯) ಮೊದಲ : ಬೇ ´ಟದ : ಮೊಳಕೆ । ಪಣ್ಗೊಂಡ ಕಾನನಂ
ಮೊದಲ : ಮೋ ´ಹದ : ಬಲೆಯ । ನೆಯ್ದೆಡೆಯ ತಿಳಿಗೊಳಂ
ಮೊದಲ : ಮಿಲ ´ದ : ಮತ್ತೆ । ವಿರಹದ ಶಿವಾಲಯಂ.

(೫೦) ಎನ್ನ : ದೇ ´ವರ : ಗುಡಿಗೆ । ನಂದಿದಾಸೆಯ ದೀಪ
ನಿಟ್ಟುಸಿರ ಮಂತ್ರ ; ಉಮ್ಮಳದ ತಂತ್ರ

ಇಲ್ಲೆಲ್ಲಾ ೫+೫ರಂತೆ ಗಣಗಳನ್ನು ಬಿಡಿಸುವುದು ಸಾಧ್ಯ; ಆದರೆ ೫+೪+೩ರಂತೆ ಇವು ಹೆಚ್ಚು ಸಹಜವಾಗಿ ಒಡೆದು ವೈವಿಧ್ಯವನ್ನು ಉಂಟು ಮಾಡುತ್ತವೆ.

(೫೧) ಕ್ರಾಂತಿ : ಕಾ ´ ಳಿಕ : ಠಾರಿ । ಯಂ ನನ್ನೆದೆಗೆ ಕುರಿತು
ಝಳಪಿಸುತೆ ಬದ್ಧಭ್ರುಕುಟಿ ಕೋಪದಲಿ ನಿಂತು
ದಂಷ್ಟ್ರಘರ್ಷಣರವಂ ಪೊಣ್ಮೆ ಗಜರಿದಳಿಂತು.

ಇಲ್ಲಿ ಮೊದಲನೆಯ ಚರಣದ ಆದಿಯಲ್ಲಿ ೩+೪+೩ರ ಓಟ ಬಂದು ಯತಿಯನ್ನು ಉಳಿಸಿಕೊಡುತ್ತದೆ. ೫+೫ ರಂತೆಯೇ ವಿಭಾಗಿಸಬೇಕಾಗಿದ್ದಲ್ಲಿ, "ಕ್ರಾಂತಿ ಕಾ । ಳಿ ಕಠಾರಿ" ಎಂದು ಒಡೆದು, "ಳಿ" ಎಂಬ ಪದಾಂತ್ಯದ ಲಘುವಿನ ಮೇಲೆ ತಾಳ ಬಿದ್ದು ಯತಿ ಕೆಡುತ್ತಿತ್ತು. (ಯಂ ನನ್ನೆ । ದೆಗೆ ಕುರಿತು" ಎಂಬಲ್ಲಿ ಯತಿಭಂಗವಾಗಿದೆ.)

೫ ಮಾತ್ರೆಯ ಗಣದ ಧಾಟಿಯಲ್ಲಿ ಚರಣದ ಮಧ್ಯಭಾಗದಲ್ಲಿ ಈ ಪರಿವೃತ್ತಿಯ ಛಾಯೆ ಬಂದರೆ ಅತಿಶಯವಾದ ಬಳಕು ಅಲ್ಲಿ ಗೋಚರವಾಗುತ್ತವೆ. ಈ ನಿದರ್ಶನಗಳನ್ನು ನೋಡಿ :

(೫೨) ಕೆನ್ನೆಯಲಿ । ಕೆಂಪು : ಬಿಳು ಪನು : ಸುಳಿಸಿ । ಕೇಳಿದಳು
ಕಣ್ಣ ನಾಚಿಕೆಪಟ್ಟು ನೆಲದಲಿಟ್ಟು

(೫೩) ಗಡಗಡನೆ । ಭೂಮಿ : ನಡು ´ಗಿತು : ದುಃಖ । ವಾರ್ತೆಯಂ
ಜಗಕೆಲ್ಲ ಕೇಳಿಸುರ ಮರಣದುಂದುಭಿಯಂತೆ.

(೫೪) ಸರಿಯಾಗಿ ನಡೆವುದಕೆ ಬಾರದಿರುವೆಳೆಗೂಸ
ಪಿಡಿದೆತ್ತಿ । ಕೊಂಡು ⁝ ಮೇ´ಗಡೆ ⁝ ಗೊಯ್ವ । ನು.
(೫೫) ವೀರಕ್ಕೆ । ವಿನಯ ⁝ ಮೆಂ´ಬುದು ⁝ ಮುಡಿಯ । ಮಾಣಿಕಂ.

ಈಗ ಕೆಳಗಿನ ಚರಣಗಳನ್ನು ಪರಿಶೀಲಿಸಿ :

(೫೬) ನಿಮ್ಮ ನೆನೆ । ದೊಡಮೆನ್ನ । **ಗಾನದ ಹಕ್ಕಿ ರೆಕ್ಕೆ**
ಮುದುರಿ ರೆ । ಪ್ಪೆಯ ಮುಚ್ಚಿ । ಕಾವು ಕೂ । ರುವುದಳಲ
ಮೊಟ್ಟೆಯ ಮೇಲೆ ಸುಯ್ದು. । ಸುಯ್ವುದೆ ∧ । ಚರಮಗೀ । ತೆ.

ಇಲ್ಲಿ ದಪ್ಪ ಲಿಪಿಯಲ್ಲಿ ಅಚ್ಚುಮಾಡಿರುವ ಕಡೆಗಳಲ್ಲಿ ೫+೫ರಂತೆ ವಿಭಾಗ ಮಾಡುವುದು ಅಶಕ್ಯ. ಇವನ್ನು ೪+೩+೩ರಂತೆ ಭಾವಿಸಬೇಕೇನೋ. ಹಾಗಾದರೆ ಲಯ ಕೆಡುವುದಿಲ್ಲವೇ ಎಂಬುದು ವಿಚಾರ ಮಾಡಬೇಕಾದ ವಿಷಯ. ಅಥವಾ "ಗಾನದ ∧। ಹಕ್ಕಿ ರೆ । ಕ್ಕೆ", "ಮೊಟ್ಟೆಯ ∧ । ಮೇಲೆ ಸು।ಯ್ದು" ಎಂಬಂತೆ ವಿರಾಮವನ್ನು ತಂದು, ಬಿಡಿಯಕ್ಷರವನ್ನು ನಿಲ್ಲಿಸಿ, ಹಿಂದೆ ೨೫ನೆಯ ಉದಾಹರಣೆಯಲ್ಲಿ ಮಾಡಿದಂತೆ ಅನ್ವಯಿಸಿಕೊಳ್ಳಬೇಕೇನೋ. ಆ ಪಕ್ಷದಲ್ಲಿ ಪದ್ಯದ ಕಟ್ಟು ತುಂಬ ಶಿಥಿಲವಾಗುವುದಿಲ್ಲವೆ?[೧೦]

ನಮ್ಮ ಕಾವ್ಯಪ್ರಪಂಚದಲ್ಲಿ ಇದು ಹೊಸ ಪ್ರಯೋಗಗಳ ಕಾಲ; ಹಳಬರು ನಡೆದಾಡಿ ಸವೆದು ಕೊರಕಲು ಬಿದ್ದ ಹಳೆಯ ಜಾಡಿನಲ್ಲೇ ಕಣ್ಣು ಮುಚ್ಚಿಕೊಂಡು ಸಾಗದೆ, ಹೊಸ ಹೊಸ ದಾರಿಗಳನ್ನು ಹುಡುಕುತ್ತಾ ಅತ್ತ ಇತ್ತ ಸುಳಿದಾಡುತ್ತಿರುವ ಕಾಲ; ಕವಿಗಳು ಹೊಸ ಹೊಸ ಸೊಗಸುಗಳನ್ನು ತಮ್ಮ ಪ್ರತಿಭಾ ಬಲದಿಂದ ನಿರ್ಮಿಸುತ್ತಿರುವ ಕಾಲ; ಜನತೆ ತನ್ನ ಕಿವಿಯನ್ನು ಈ ಹೊಸ ನಾದಗಳಿಗೆ ಪಳಗಿಸಿ ಕೊಳ್ಳುತ್ತಿರುವ ಕಾಲ. ಈ ಸಂಧಿಕಾಲದಲ್ಲಿ ಛಂದಸ್ಸಿನ ಪ್ರಯೋಗಗಳನ್ನು ಕುರಿತು

---

೧೦. [ಆದರೆ ಕನ್ನಡದ ಹಿಂದಿನ ಕಾವ್ಯಗಳಲ್ಲಿಯೇ ೫+೫ರ ಸ್ಥಾನದಲ್ಲಿ ೪+೩+೩ ಬಂದಿರುವುದು ಒಮ್ಮೊಮ್ಮೆ ಗೋಚರಿಸುತ್ತದೆಂಬುದನ್ನು ಇಲ್ಲಿ ನೆನೆಯಬೇಕು. ಉದಾಹರಣೆಗೆ—

(೫೭) ಹರಹರ ⁝ ಮ´ಱೆದ ⁝ ನಲ್ಲಿ । ಸುಗತಿಯಂ ಮುರಜಮಂ
ಹರಹರ ⁝ ಮ´ಱೆದ ⁝ ನಲ್ಲಿ । ಶಿವನುಮಂ ತನ್ನುಮಂ.

(ಹರಿಹರ : ಪ್ರಭುದೇವರ ರಗಳೆ)

(೫೮) ಪೇಳಲೇನಹುದಿನ್ನು ಬಭ್ರುವಾಹನನೊಡನೆ
ಕಾಳೆಗಂಗೊಡುವೆನಾಂ ಕುಲಕೆ ಮಗನೀನೊರ್ವ
ಬಾಳುವೆ ⁝ ಗೆ´ಡಿಸ ಬೇಡ । ಗಜಪುರಕೆ ಪೋಗಿ ಮುರಹರ ಧರ್ಮನಂದನರ್ಗೆ।

(ಲಕ್ಷ್ಮೀಶ : ಜೈಮಿನಿಭಾರತ)

ಮೇಲೆ (೫೧)ನೆಯ ಉದಾಹರಣೆಯಲ್ಲೂ

ಕ್ರಾಂತಿಕಾಳಿ ಕಠಾರಿ । ಯಂ ನ ⁝ ನ್ನೆದೆಗೆ ⁝ ಕುರಿತು

ಎಂದು ಗಣಪರಿವೃತ್ತಿಯನ್ನು ಗುರುತಿಸಬೇಕೇನೋ.]

ಇದೇ ಕೊನೆಯ ಮಾತೆಂದು ವಿಮರ್ಶಕನು ಏನನ್ನೂ ಖಚಿತವಾಗಿ ಸಿದ್ಧಾಂತಿಸಲಾರನು; ಹಾಗೆ ಸಿದ್ಧಾಂತಿಸಲೂ ಬಾರದು. ಮೇಲೆ ಮಾಡಿರುವ ಎಲ್ಲ ವಿಚಾರವೂ ನಿರ್ದುಷ್ಟವೆಂಬ ಹಠ ಈ ಲೇಖಕನಿಗಂತೂ ಖಂಡಿತ ಇಲ್ಲ.

ಈ ಕಾಲು ಶತಮಾನದ ಪ್ರಯೋಗ ಪರೀಕ್ಷೆಯಲ್ಲಿ ಒಂದು ಅಂಶವೇನೋ ದೃಢಪಟ್ಟಿದೆ. ನಿಯಮಗಳನ್ನು ಅತಿ ಶ್ರದ್ಧೆಯಿಂದ ಅನುಸರಿಸಿದರೆ ಏಕನಾದವುಂಟಾಗಿ ಬೇಸರಪಡಿಸುತ್ತದೆ; ಅತಿಕ್ರಮಗಳೂ ಅಪವಾದಗಳೂ ಹೆಚ್ಚಾದರೆ ಲಯದ ನೆಲೆಯೇ ತಪ್ಪಿಹೋಗುತ್ತದೆ. ಒಂದು ಕಿವಿಯನ್ನು ತಾಳಕ್ಕೂ ಒಂದು ಕಿವಿಯನ್ನು ಭಾಷಾಗತಿಗೂ ಪದ್ಯಕಾರನು ತೆರೆದಿಟ್ಟು, ಎರಡಕ್ಕೂ ವಿರೋಧ ಬಾರದಂತೆ ತನ್ನ ಹಾಡನ್ನು ಕಟ್ಟಬೇಕು. ನಿಯಮ ವೈವಿಧ್ಯಗಳ ಸಮನ್ವಯವೇ ಛಂದಸ್ಸಿನ ತಿರುಳು.

೧೯೪೧]

ಸಮಾಲೋಕನ : ೧೯೫೮

ಮಾತ್ರೆ, ಮುಡಿ, ಪದ್ಯಗಣ*

೧

ಒಂದು ಮಾತ್ರೆಯ ಕಾಲದ ಲಘು, ಎರಡು ಮಾತ್ರೆಯ ಕಾಲದ ಗುರು—ಇವೆರಡೇ ಕನ್ನಡ ಛಂದಸ್ಸಿನಲ್ಲಿ ಹಿಂದೆ ಬಳಕೆಯಾಗಿದ್ದ ಅಕ್ಷರಗಳು. ಹೊಸ ಛಂದಸ್ಸಿನಲ್ಲಾದರೆ ಒಂದು ಅಕ್ಷರಕ್ಕೆ ಕೆಲವು ವೇಳೆ ಎರಡು ಮಾತ್ರೆಗಿಂತ ಹೆಚ್ಚಿನ ಬೆಲೆ ಬರುವುದುಂಟು. ಮುಖ್ಯವಾಗಿ ಮೂರು ಮಾತ್ರೆಯ ಗಣದ ಲಯದಲ್ಲಿ, ಎಷ್ಟೋ ಕಡೆ ಒಂದು ಗುರುವಿಗೆ ಮೂರು ಮಾತ್ರೆಯ ಬೆಲೆ ಕೊಟ್ಟು ಅದನ್ನು ಒಂದು ಗಣವಾಗಿ ಪರಿಗಣಿಸುವುದು ರೂಢಿಗೆ ಬರುತ್ತಿದೆ. ಔಚಿತ್ಯವರಿತು ಉಪಯೋಗಿಸಿದರೆ ಇದು ವಿಶೇಷ ಫಲವನ್ನು ಕೊಡಬಲ್ಲದು:

---

* 'ಹೊಸ ಛಂದಸ್ಸಿನ ಲಯಗಳು' ಎಂಬ ಲೇಖನವನ್ನು ಬರೆದಾಗ ಅದರ ಭಾಗವಾಗಿ ಪ್ರಕೃತ ಲೇಖನದ ೧ ಮತ್ತು ೨ನೆಯ ಖಂಡಗಳನ್ನೂ ಬರೆದಿದ್ದೆನು. ಆದರೆ ಆ ಲೇಖನವು ಅತಿದೀರ್ಘವಾಗುವುದೆಂಬ ಭಯ ದಿಂದ ಇವನ್ನು ಅಲ್ಲಿ ಸೇರಿಸದೆ ಬಿಡಲಾಯಿತು. ಈಗ ಇವನ್ನು ಪರಿಷ್ಕರಿಸಿ, ೩ ಮತ್ತು ೪ ನೆಯ ಖಂಡಗಳನ್ನು ಹೊಸದಾಗಿ ಬರೆದು ಜೊತೆಗೂಡಿಸಿ ಪ್ರಕೃತ ಲೇಖನ ವನ್ನು ಸಿದ್ಧಪಡಿಸಿದೆ. ಇದು ಹಿಂದಿನ ಲೇಖನಕ್ಕೆ ಒಂದು ರೀತಿಯ ಅನುಬಂಧವೆಂದು ಭಾವಿಸಬಹುದು.

(೧) ಹಿಂದೆ ಸೆರೆಗೆ ಸಿಲುಕುತ
ಕಂಸಭಯಕೆ ನಡುಗುತ
"ಹಡೆದ ಕೂಸ ಪಾಳ್ವುದೆಂತು" । ಎನುತ ತ । ಲ್ಲಣಿಸು । ತ.

ಇಲ್ಲಿ "ತ" ಎಂಬುದನ್ನು ಮೂರು ಮಾತ್ರೆಯ ಕಾಲಕ್ಕೆ ಎಳೆದು ಪಲುಕಿಸುವುದರಲ್ಲೇ ತಲ್ಲಣದ ನಡುಕವೂ ಸೂಚಿತವಾಗುತ್ತದೆ. ಪ್ಲುತವನ್ನು "ತಽ" ಎಂಬಂತೆ ಗುರುತಿಸುವುದು ಈಚೆಗೆ ರೂಢಿಯಾಗಿದೆ.

ಕೆಲವು ವೇಳೆ ಒಂದು ಅಕ್ಷರದ ಕಾಲ ಮೂರು ಮಾತ್ರೆಗೂ ಮೀರವುದುಂಟು :

(೨) ನಿನ್ನ ಬೆಳ್ಳಿಯ ಹೂವಲಂದ
ನನ್ನ ಕಣ್ಣಿಗದೇನು ಚೆಂದ !
ಮೂಡ ಬೆಳ್ಳಿಯ ಥಳಕು ಮಂದ.
ನನ್ನ । ಮೇ । ರಿ ! (೪ ಮಾತ್ರೆ)

ಮೂರಕ್ಕಿಂತಲೂ ಹೆಚ್ಚು ಮಾತ್ರೆಗಳ ಬೆಲೆ ಒಂದು ಅಕ್ಷರಕ್ಕೆ ಇರುವಲ್ಲಿ ಅದನ್ನು "ಮೇ" —ಹೀಗೆ ಗುರುತಿಸಬಹುದು; ಅಂಥ ಅಕ್ಷರವನ್ನು "ಕಂಪಿತ"ವೆಂದು ಕರೆಯಬಹುದು.

ಎಷ್ಟೋ ಸಲ, ಒಂದು ಅಕ್ಷರವು ಲಘುವಾಗಿದ್ದರೂ, ಸಂದರ್ಭವಶದಿಂದ ಅದನ್ನು ಎಳೆದು ಎರಡು ಮಾತ್ರೆಯ ಬೆಲೆ ಕೊಟ್ಟು ಗಣವನ್ನು ಸರಿಮಾಡಿಕೊಳ್ಳಬೇಕಾಗುತ್ತದೆ. ಈ ಎಳೆತವನ್ನು ಅರ್ಥ ತಡೆಯುವಂತಿರಬೇಕು; ಕವಿಯ ಅಶಕ್ತಿಯಿಂದ ಇದು ಆವಶ್ಯಕವಾದಂತೆ ತೋರಬಾರದು. ಕೆಳಗಿನ ಚರಣಗಳಲ್ಲಿ ಇದು ಹಿತವಾಗಿ ಬಂದಿದೆ:

(೩) ಕೆರಳಿ ಕೆರಳಿ ಗಾಳಿ ಚಚ್ಚಿತು
ಇರುಳ ಕತ್ತಲೆ ಕವಿದು ಮುಚ್ಚಿತು.

(೪) ದಳದೊಡನೆಯೆ ನಾ ಸಾರುವೆನು—ಕೊಳು
ಗುಳದೊಳು ಬಲುಹನು ತೋರುವೆನು—ಹಗೆ
ಬಳಗವ ದಣಿಯದೆ ಮೀರುವೆನು.

(೫) ಇಂದುವಿಗೆ ಕಳೆಯೆಲ್ಲ
ತುಂಬಿರಲು ನೋಡಿ
ಚೆಂದುಮಾಮ ಬಾಬ
ಎಂಬರಿಲ್ಲ.

(೫) ನೆಯ ಉದಾರಹರಣೆಯಲ್ಲಿ "ಮಾಮಾ" ಎಂದು ದೀರ್ಘವನ್ನೇ ಬರೆಯಲೂಬಹುದಾಗಿತ್ತು.

ಚರಣದ ಕೊನೆಯಲ್ಲಿ ಲಘುವಿಗೆ ಗುರುವಿನ ಬೆಲೆಯನ್ನು ಕೊಡುವುದು ಸಾಮಾನ್ಯ :

(೬) ನಾದಬ್ರಹ್ಮದ
ಕಗ್ಗವಿಯಲ್ಲಿ
ಮೌನದ ವೀಣೆಗೆ
ಕರುಳಿನ ತಂತಿ.

(೭) ಜರೆ ಜವ್ವನವನು ಸೇರುವ ಮೊದಲೆ
ತೊರೆ ಲಜ್ಜೆಯ ಸೇರೆನ್ನೆದೆಯೊಳಗೆ.

ಕೆಲವು ಸಂದರ್ಭಗಳಲ್ಲಿ ಮೌನವನ್ನು ಅಥವಾ ವಿರಾಮವನ್ನು ತುಂಬಿ ಗಣವನ್ನು ಪೂರಣ ಮಾಡಬೇಕಾಗುತ್ತದೆ. ಆಗ ಈ ಮೌನಕ್ಕೂ ಮಾತ್ರೆಯ ಬೆಲೆ ಬರುತ್ತದೆ. ಹೀಗೆ ಮೌನ ಬಂದ ಕಡೆ ಅರ್ಥದಲ್ಲೂ ವಿರಾಮ ತೋರಬೇಕು.

(೮) ಈಗಳೇ । ನಾದೆನ್ ! ∧ । ಕೇಳ, ದೈವೇಚ್ಛೆಯನ್, ಜಮದಗ್ನಿ,
ಅಯ್ಯನ್;

ಎನ್ನನಾ ಋಷಿ ಭರದ್ವಾಜಂಗೆ ಕೊಟ್ಟನ್ ∧ –। ದಾನಮನ್‌ಕೊಟ್ಟನ್.

(ಇಲ್ಲಿ ಮೌನವನ್ನು ∧ ಈ ಚಿಹ್ನೆಯಿಂದ ಗುರುತಿಸಿದೆ.)

ಈ ಕೆಳಗಿನ ಚರಣಗಳನ್ನು ಪರಿಶೀಲಿಸಿ :

(೯) ಮಿಂಚು ಮಿಂಚನು ಸೆಣಸುವ ತೆರದಿ
ಸಿಡಿಲು ಸಿಡಿಲನು ಸೆಣಸುವ ತೆರದಿ.

ಇಲ್ಲಿರುವುದು ನಾಲ್ಕು ಮಾತ್ರೆಯ ನಡೆ. ಮೊದಲನೆಯ ಗಣವನ್ನು ಇದಕ್ಕೆ ಹೊಂದಿಸಿಕೊಳ್ಳಲು, "ಮಿಂ" ಎಂಬುದಕ್ಕೆ ಮೂರು ಮಾತ್ರೆಯ ಬೆಲೆ ಕೊಡಬೇಕು; ಸ್ವರದ ಮುಂದಿನ ಅನುನಾಸಿಕವನ್ನು ಎಳೆದು ಹಾಗೆ ಮಾಡುವುದೂ ಸಾಧ್ಯ. ಎರಡನೆಯ ಸಾಲಿನಲ್ಲಿ "ಸಿಡಿಲು" ಎಂಬುದಕ್ಕೂ ಇದೇ ನಾಲ್ಕು ಮಾತ್ರೆಯ ಕಾಲ ; ಇಲ್ಲಿಯ ಮೂರು ಲಘುಗಳಲ್ಲಿ ಯಾವುದನ್ನು ಅರ್ಥ ಕೆಡದಂತೆ ದೀರ್ಘಗೊಳಿಸುವುದು ? "ಸಿಡಿಲು" ಎಂಬುದರ ಮುಂದೆ ಒಂದು ಮಾತ್ರೆಯ ಕಾಲದ ವಿರಾಮವನ್ನಿಟ್ಟು ಗಣವನ್ನು ಸರಿದೂಗಿಸಬೇಕು; ಇಲ್ಲವೇ ಈ ಲಘುಗಳಲ್ಲಿ ಒಂದೊಂದಕ್ಕೂ ೧೧/₃ ಮಾತ್ರೆಯ ಬೆಲೆ ಕಟ್ಟಬೇಕು. ಮೊದಲ ಮಾರ್ಗವೇ ಸುಕರವೆಂದು ತೋರುತ್ತದೆ.

ಒಂದು ಅಕ್ಷರಕ್ಕೆ ಅದರ ಸಹಜವಾದ ಕಾಲಕ್ಕಿಂತ ಹೆಚ್ಚಿನ ಮಾತ್ರೆಯ ಬೆಲೆಯನ್ನು ಕೊಡಬೇಕಾಗುವಂತೆ, ಸಂದರ್ಭವಶದಿಂದ ಒಂದು ಗುರುವಿಗೆ ಒಂದೇ ಮಾತ್ರೆಯ ಬೆಲೆಯನ್ನು ಕೊಡಬೇಕಾಗುತ್ತದೆ; ಮುಂದಿನ ಒತ್ತಕ್ಷರವನ್ನೋ ಅನುನಾಸಿಕವನ್ನೋ ತೇಲಿಸಬೇಕಾಗುತ್ತದೆ. ಉದಾಹರಣೆಗೆ

(೧೦) ಕುರಿ ನೆಗೆದಾಟ, ಕುರುಬರ ಕೊಳಲನೂ । ದಾಟ
ಇನಿಯರ ಬೇಟ, ಬನದಲಿ । ಬೆಳದಿಂಗ । ಳೂಟ...
ಮಾವಿನ ಸೊಂಪು, ಮಲ್ಲಿಗೆ । ಬಯಲೆಲ್ಲ । ಕಂಪು
ಗಾಳಿಯ ತಂಪು, ಜನಗಳ ಜಾತ್ರೆಯ ಗುಂಪು...[೧]

ಈ ಬಗೆಯ ಉದಾಹರಣೆಗಳನ್ನು ಇಲ್ಲಿ ಬೆಳಸುವುದು ಅನಾವಶ್ಯಕ. ಆದರೆ ಒಂದು ವಿಷಯದ ಕಡೆಗೆ ಮಾತ್ರ ವಿಶೇಷ ಗಮನವನ್ನು ಎಳೆಯಬೇಕಾಗಿದೆ. ಒಂದು ಪದದ ಕೊನೆಯಲ್ಲಿ ಹ್ರಸ್ವಸ್ವರವಿದ್ದು ಅದರ ಮುಂದಿನ ಪದದ ಆದಿಯಲ್ಲಿ ಒತ್ತಕ್ಷರವಿದ್ದರೆ. ಈ ಒತ್ತಕ್ಷರವನ್ನು ತೇಲಿಸಿ ಉಚ್ಚರಿಸಿ ಹಿಂದಿನ ಹ್ರಸ್ವವನ್ನು ಲಘುವಾಗಿಯೇ ಉಳಿಸುವುದು ಉತ್ತಮ. ಉದಾಹರಣೆಗೆ—

(೧೧) ಏನು ಕೋಮಲಕಾಯ !
ಹೊಳಪು ಹೊಸ ಪ್ರಾಯ ![೨]

(೧೨) ಅವರ ಜೀವನ ಹಣತೆ ಕ್ಷಣದೊಳು
ನಂದಿಯೋಯಿತು ಹೊನಲೊಳು.

---

೧. ಹಳಗನ್ನಡದಲ್ಲಿ ಪ್ರಚುರವಾಗಿದ್ದ "ಮಟ್ಟರಗಳೆ"ಯ ಚರಣವೊಂದರ ಉಪಾಂತ್ಯ ಗಣದಲ್ಲಿಯೂ ಹೀಗೆಯೇ ಗುರ್ವಕ್ಷರವನ್ನು ತೇಲಿಸಿ ಲಘುವಾಗಿ, "ತ್ವರಿತ"ವಾಗಿ ಉಚ್ಚರಿಸಬೇಕಾಗುವುದೆಂಬುದನ್ನು ಜ್ಞಾಪಿಸಿಕೊಳ್ಳಬಹುದು :

ಅವಿರಳ । ಕುಸುಮಾ । ವಳಿ ಕಂಪು । ವೇೞ್
ಸೊಗಯಿಪ । ಕುಱುಮಿಡಿ । ಗಳೊಳೊಪ್ಪಿ । ತೋೞ್...

(ಪಂಪಭಾರತ, ೪.೧೦)

ಈ ರಚನೆಯೇ ಮೇಲಿನ 'ವಸಂತ' ಕವನದಲ್ಲಿ ಚರಣದ ಉತ್ತರಾರ್ಧದ ತ್ವರಿತ ಲಯವನ್ನೂ ಪ್ರೇರಿಸಿತೋ **ಏನೋ**.

೨. * ಈ ಚಿಹ್ನೆ ಒತ್ತಕ್ಷರದ ಶಿಥಿಲೋಚ್ಚಾರಣೆಯನ್ನು ಸೂಚಿಸುತ್ತದೆ.

ಕೆಳಗಿನ ಉದಾಹರಣೆಯನ್ನು ಗಮನಿಸಿ :

(೧೩) ಕರುಣರಸ ಹಿಂಡಿ ತೆಗೆಯುವುದಲ್ಲ, ದಿವದಿಂದ
ಸುರಿವ ಶೀಕರದ ಸ್ವಭಾವಿ ಆಹುದು ;

ಇಲ್ಲಿ "ಸ್ವ" ಎಂಬುದು ಉತ್ತರಪದದ ಆದಿಯಲ್ಲಿದೆ; ಅದರ ಹಿಂದಿನ ಪದದ ಕೊನೆಯ "ದ" ಎಂಬ ಹ್ರಸ್ವಸ್ವರ ಗಣದ ಲೆಕ್ಕಕ್ಕಾಗಿ ಗುರುವಾಗಿದೆ. ಇಲ್ಲಿರುವುದು ಲೋಪಸಂಧಿ, "ಶೀಕರದ+ಅಸ್ವಭಾವಿ" ಎಂಬಂತೆ ಇಲ್ಲಿಯ ಪದ ವಿಭಾಗ—ಎಂಬ ಭಾವನೆ ಇಂಥ ಕಡೆಯಲ್ಲಿ ಓದುಗನಿಗೆ ಸಾಮಾನ್ಯವಾಗಿ ಬರುತ್ತದೆ. ಈ ಬಗೆಯ ತೊಡಕಿಗೆ ಅವಕಾಶ ಕೊಡದಂತೆ ಪದ್ಯದ ಚರಣದಲ್ಲಿ ಪದಗಳ ಜೋಡಣೆಯಾದರೆ ಮೇಲು.[೩]

೨

(೧೪) ಗಿರಿಯನೇರುವ ಬಲವ ಕೊಟ್ಟು ಏರೆನ್ನುವನು
ನಡೆವ ಶಕ್ತಿಯ ಕೊಟ್ಟು ನಡೆ ಎಂಬ । ನು ;
ಸರಿಯಾಗಿ ನಡೆವುದಕೆ ಬಾರದಿರುವೆಳೆಗೂಸ
ಪಿಡಿದೆತ್ತಿಕೊಂಡು ಮೇಗಡೆಗೊಯ್ವ । ನು.

ಈ ಪದ್ಯದ ೧ನೆಯ (ಮತ್ತು ೩ ನೆಯ) ಚರಣದಲ್ಲಿ ೫ ಮಾತ್ರೆಯ ನಾಲ್ಕು ಗಣಗಳೂ ೨ನೆಯ (ಮತ್ತು ೪ನೆಯ) ಚರಣದಲ್ಲಿ ೫ ಮಾತ್ರೆಯ ಮೂರು ಗಣಗಳೂ ಒಂದು ಗುರುವೂ ನಿಂತಿವೆ. ಈ ರೀತಿಯಾಗಿ ಒಂದು ಬಿಡಿ ಅಕ್ಷರವನ್ನು ಕೊನೆಗೆ ಕೂಡಿಸಿ ಚರಣಕ್ಕೆ ಮುಕ್ತಾಯ ಕೊಡುವುದು ಕನ್ನಡ ಛಂದಸ್ಸಿನ ವಿಶೇಷ ಲಕ್ಷಣ. ಷಟ್ಪದಿಯ ೩, ೬ನೆಯ ಪಾದಗಳ ಕೊನೆಗೆ ಒಂದು ಅಕ್ಷರ ಹೀಗೆ ನಿಲ್ಲುವುದನ್ನು ಇಲ್ಲಿ

---

೩. ಶಬ್ದಮಣಿದರ್ಪಣದ ೫೯ನೆಯ ಸೂತ್ರದಲ್ಲಿ "ಪದಪದಪೂರ್ವಂ ದ್ವಿತ್ವಾಕ್ಷರಮಾಗಿರೆ ಪೂರ್ವಪದದ ಚರಮಂ ಹ್ರಸ್ವಾಕ್ಷರಮಾಗೆ ಸಂಧಿದೋಷಂ" ಎಂದು ಸ್ಪಷ್ಟವಾಗಿ ಹೇಳಿ, "ಸರೇಫಮಿದಿರಾಗೆ ಶಿಥಿಲಮೆಂದನುಸರಿಪರ್" ಎಂದು "ಸರೇಫ ಸಂಯೋಗ" ಬಂದಕಡೆ ಮಾತ್ರ ವಿನಾಯತಿಯನ್ನು ಕೊಟ್ಟಿದೆ ; ಸಂಸ್ಕೃತದಲ್ಲೂ ಈ ಬಗೆಯ ಅವಕಾಶವುಂಟು. ಇಲ್ಲಿ ಒತ್ತಕ್ಷರವು "ಶಿಥಿಲವಾಗಿ" ಉಚ್ಚಾರ ಹೊಂದಿ ಹಿಂದಿನ ಹ್ರಸ್ವವು ಲಘುವಾಗಿಯೇ ಉಳಿಯುವುದೆಂಬುದನ್ನು ಗಮನಿಸಬೇಕು. ಆದರೆ ಹಳಗನ್ನಡದಲ್ಲಿಯೇ ಒಮ್ಮೊಮ್ಮೆ ಈ ನಿಯಮವು ಭಂಗವಾಗಿರುವುದೂ ಉಂಟು. ಉದಾಹರಣೆಗೆ,

...ನಿರಂತರಂ ತಗುಳ್ದು ಕೀರ್ತಿಸೆ ಮಿಕ್ಕಿಸೆ ವ । ಪ್ರಚಂಡಮಾ
ರ್ತಂಡನಲರ್ಚುಗೆನ್ನ ಹೃದಯಾಂಬುಜಮಂ ನಿಜವಾಙ್ಮರೀಚಿಯಿಂ ॥
(ಪಂಪಭಾರತ, ೧.೩)

ಜ್ಞಾಪಿಸಿಕೊಳ್ಳಬಹುದು. (ಗಣದ ಲೆಕ್ಕದಂತೆ, ಮೇಲಿನ ಪದ್ಯ ಒಂದು ಕುಸುಮ ಷಟ್ಪದಿಯೇ; ಷಟ್ಪದಿಯ ೧, ೨ ಮತ್ತು ೪, ೫ನೆಯ ಪಾದಗಳು ಕ್ರಮವಾಗಿ ಇದರ ೧ ಮತ್ತು ೩ನೆಯ ಪಾದಗಳಾಗಿವೆ ; ಅಷ್ಟೇ.) ಈ ಬಿಡಿ ಅಕ್ಷರವನ್ನು ಒಂದು ಗುರುವೆಂದು ಕರೆಯುವುದು ವಾಡಿಕೆ. ಆದರೆ ತಾಳದ ದೃಷ್ಟಿಯಿಂದ ನೋಡಿದರೆ ಈ ಒಂದು ಅಕ್ಷರವೇ ಒಂದು ಗಣದ ಸ್ಥಾನದಲ್ಲಿ ನಿಲ್ಲುತ್ತದೆ. ಒಂದು ಗಣದಷ್ಟು ಕಾಲ ಇದನ್ನು ಎಳೆದಾದರೂ ಹೇಳಬಹುದು ; ಅಥವಾ, ಇದನ್ನು ಉಚ್ಚರಿಸಿದ ಬಳಿಕ ಉಳಿಯುವ ಕಾಲವನ್ನು ಮೌನದಿಂದಾದರೂ ತುಂಬಬಹುದು. ಹೀಗೆ ಚರಣದ ಕೊನೆಗೆ ನಿಂತು ಅದಕ್ಕೆ ಮುಡಿವು ಕೊಡುವ ಅಕ್ಷರಕ್ಕೆ "ಮುಡಿ" ಎಂಬ ಹೆಸರನ್ನು ಇಲ್ಲಿ ಕೊಡಲಾಗಿದೆ. ಮಾತ್ರೆಯ ದೃಷ್ಟಿಯಿಂದ ಮುಡಿಗೆ ಎಲ್ಲ ಕಡೆಗಳಲ್ಲೂ ಒಂದೇ ಬೆಲೆಯಿಲ್ಲ. ಅದು ಯಾವ ಬಗೆಯ ಗಣದೊಂದಿಗೆ ಬರುತ್ತದೋ ಅದರ ಬೆಲೆಯನ್ನು ಹೊಂದುತ್ತದೆ. ಮೇಲಿನ ಉದಾಹರಣೆಯಲ್ಲಿ ಅದರ ಕಾಲ (ಜೊತೆಯ ಮೌನವೂ ಸೇರಿ) ೫ ಮಾತ್ರೆ; ಕೆಳಗಿನದರಲ್ಲಿ ೪ ಮಾತ್ರೆ :

(೧೫) ಸಾಯ್ವರ ಶಾಪದ । ಲಿ
ಬೀಳ್ವರ ತಾಪದ । ಲಿ
ನಸು ಸೋತಿರುವರ ಕೋಪದ । ಲಿ.

ಮುಡಿ ಕೆಲವು ವೇಳೆ ಚರಣದ ನಡುವೆಯೂ ಬರುವುದುಂಟು; ಅದು ಭಾವದ ನಿಲುಗಡೆಯನ್ನು ಸೂಚಿಸಿದರೆ, ಪ್ರಾಸದ ಬೆಂಬಲವನ್ನು ಪಡೆದರೆ, ಅದಕ್ಕೆ ಸೊಗಸು ಬರುತ್ತದೆ.

ಮು ಮು
(೧೬) ಇರುಳು । ಹಗಲೊ । ಳು, ॥ ಹರುಷ । ವೆನ್ನೊ । ಳು
ಮು ಮು
ತೊರೆದೆ । ಹೋಯಿ । ತೋ, ॥ ಹೋಯಿ ॥ ತೋ !
ಮು ಮು
(೧೭) ಸುಣ್ಣವನು । ಸುರಿದಮೇ । ಲೆ ॥ ಕಣ್ಣೀರನೆರೆಯೆ ಹಾ । ಲೇ ?
ಬಣ್ಣಬಣ್ಣದ ಜೀವ ಕತಕತನೆ ಕುದಿಯುವವು
ಮನೆಯಾಯ್ತು ಮಲ್ಲಸಾಲೆ.

(೧೮) ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ
ಮು
ಎಂದೆನ್ನ । ಕೇಳೆಲೇ । ಕೆ?—॥ ಎನ್ನರಸ
ಮು
ಸುಮ್ಮನಿರಿ ಎಂದಳಾ । ಕೆ.

ಮುಡಿಯನ್ನು ಹೀಗೆ ಚರಣದ ನಡುವೆ ತರುವ ಪದ್ಧತಿ ಹೊಸದೇನೂ ಅಲ್ಲ. 'ಅರ್ಜುನಜೋಗಿಯ ಹಾಡು' ಮೊದಲಾದುವುಗಳಲ್ಲಿ ಆಗಲೇ ಕಾಣಿಸಿಕೊಂಡಿದೆ.[೪]

ಅಕ್ಷರಗಳಿಗೆ ಎಷ್ಟೆಷ್ಟು ಮಾತ್ರೆಗಳ ಕಾಲವನ್ನು ಕೊಡಬೇಕಾದೀತೆಂಬುದನ್ನು ಒಂದೇ ಕಡೆ ನಿದರ್ಶಿಸಲು ಈ ಕೆಳಗಿನ ಚರಣಗಳನ್ನು ಉದಾಹರಿಸಬಹುದು. ಇಲ್ಲಿಯದು ೪ ಮಾತ್ರೆಯ ಗಣದ ಧಾಟಿ :

ಇ
(೧೯) ಇಂತು । ಲಗ್ಗೆಯ ಹತ್ತುವ ಜವದಲಿ
ಕೈದುಗಳೊಲೆಯುವ ಖಣಿಖಣಿ ರವದಲಿ
UUU ಇ ಮು ಇ ಇ ಮು
ಇರುಳ ^ । ಮೌನವು । ಬೆಚ್ಚಿ । ತು ! । ಸದ್ದು । ಹೆಚ್ಚಿ । ತು !

ಇಲ್ಲಿ, "ಮೌನ", "ಪ್ಲುತ", "ಮುಡಿ"–ಎಲ್ಲವೂ ಉಂಟು.

೩

ಈಗ ಒಂದು ಚೌಪದಿಯನ್ನು ಪರಿಶೀಲಿಸೋಣ :

೫ ೫ ೫ U –
(೨೦) ಕಿತ್ತಿಳಿಯ । ಮರಗಳಲಿ । ಹೂಗಳರ । ಳುತ್ತ,

೫ ೫ ೫ U
ಎತ್ತಲುಂ । ಮಿಂಚುಹುಳು । ಚಿಮ್ಮಿ ಕುಣಿ । ಯುತ್ತ

೫ ೫ ೫ U
ಮುತ್ತಿಕೊಂ । ಡಿಹ ದೇಶ । ದೊಳಗಿಹುದೆ । ತಾಯೆ ?

೫ ೫ ೫ UU—
ಅತ್ತಲಿ । ಲ್ಲಾ ರಾಜ್ಯ ಅತ್ತಲಿ । ಲ್ಲಣುಗಾ !

ಪ್ರತಿಯೊಂದು ಚರಣದಲ್ಲೂ ೫ ಮಾತ್ರೆಯ ಗಣಗಳು ಮೂರು + ೪ ಮಾತ್ರೆಯ ಗಣ ಒಂದು—ಎಂದು ಇದರ ಲಕ್ಷಣವನ್ನು ಹೇಳುವುದು ವಾಡಿಕೆಯಾಗಿದೆ. ಆದರೆ ಗಮನಿಸಬೇಕಾದ ವಿಷಯವೇನೆಂದರೆ—ಈ ಕೊನೆಯ ಗಣದಲ್ಲಿ, ೧ ಗುರುವಿನ (ಅಥವಾ ೨ ಲಘುಗಳ) ಮುಂದೆ ಒಂದೇ ಅಕ್ಷರವಿರಬೇಕು. ಈ ತುದಿಯ ಅಕ್ಷರವು

---

೪. ಈ ಗ್ರಂಥದಲ್ಲಿ ಹಿಂದೆ ೨೪೮ನೆಯ ಪುಟವನ್ನು ನೋಡಿ.

ಸ್ವರೂಪದಲ್ಲಿ ಲಘುವಾದರೂ ಆಗಬಹುದು, ಗುರುವಾದರೂ ಆಗಬಹುದು; ಚರಣಾಂತ್ಯದಲ್ಲಿರುವುದರಿಂದ ಅದು ಲಘುವಾಗಿದ್ದಾಗಲೂ ಎಳೆದು ಹೇಳುವುದು ಸಾಧ್ಯ, ಹಾಗೆ ಹೇಳುವುದು ರೂಢಿಯೂ ಹೌದು. ಆದರೆ ಅದರ ಬೆಲೆ ಎರಡು ಮಾತ್ರೆಯೆಂಬ ಭಾವನೆಯಿಂದ ಅದರ ಜಾಗದಲ್ಲಿ ಎರಡೂ ಲಘುಗಳನ್ನಿರಿಸುವ ಹಾಗಿಲ್ಲ.

ಎಂದರೆ ಇಲ್ಲಿಯ ಅಂತ್ಯ ಗಣವು UU.— (U) ಎಂದಾಗಲಿ, —.— (U) ಎಂದಾಗಲಿ, ಇರಬೇಕು; —UUUU ಎಂಬಂತೆ ಅಥವಾ —UU ಎಂಬಂತೆ ಇರುವುದು ಸಾಧ್ಯವಲ್ಲ.

ನಡುಗನ್ನಡದ ಚೌಪದಿಯ ರಚನೆಯೂ ಹೀಗೆಯೇ ಇತ್ತು :

U

(೨೧) ಮಳೆ ಬಂದು ಬೆಳೆ ಬೆಳೆದು ಧರೆ ತಣಿಯ । ಲೆಂದು

U

ತಿಳಿಗೊಳಗಳುಕ್ಕಿ ತುಱುಗಳು ಕಱಿಯ । ಲೆಂದು

U

ನಳಿನಮುಖಿಯರು ಸುಪುತ್ರರ ಪಡೆಯ । ಲೆಂದು

U

ಇಳೆಯೊಳಗೆ ಹರಸಿದೆವು ಬಾಲಕರು । ಬಂದು.

ದ್ವಿಪದಿಯ ಚರಣಗಳೂ ಇದೇ ರಚನೆಗೆ ಒಳಪಟ್ಟಿದ್ದುವು :

UUU

(೨೨) ರಾಯ ಕಳುಹಿದನೆನ್ನ ತಾಯೆ ನಿ । ನ್ನಡಿಗೆ

UUU

ವಾಯುಸುತ ತಾನೆನುತ ಪೊಡೆಮಡುತ । ಲಡಿಗೆ

— U

(೨೩) ಸೊಕ್ಕಿದಸುರನ ಕೂಡೆ ಮಿಕ್ಕು ಮಾ । ತಾಡಿ

— U

ರಕ್ಕಸರು ಹೊತ್ತಿಸಿದ ಬಾಲದುರಿ । ನೋಡಿ.

ಈ ಚರಣಗಳಲ್ಲೆಲ್ಲ ಗಣವಿನ್ಯಾಸ : ೫+೫+೫+ UU U ಎಂಬಂತೆ.

ಮೂರು ೫ ಮಾತ್ರೆಯ ಗಣಗಳ ಮುಂದೆ UU-.U ಈ ಗಣವು ಬಂದು ಚರಣದ ಕೊನೆಯಲ್ಲಿ ಒಂದು ಬಗೆಯ ಮುಕ್ತಾಯದ ಭಾವನೆಯುಂಟು ಮಾಡುತ್ತದೆ. ನಾವು ಆಗಲೆ ನೋಡಿರುವ "ಮುಡಿ"ಯ ಕಾರ್ಯದ ಜೊತೆಗೆ ಇದನ್ನು ಹೋಲಿಸಬಹುದು. ಮುಡಿಯಂತೆಯೇ ಈ ಗಣಕ್ಕೂ ಕಾಲಮಾನದ ದೃಷ್ಟಿಯಿಂದ ಇಲ್ಲಿ ೫ ಮಾತ್ರೆಗಳ ಬೆಲೆ. ಇದನ್ನು ಕೊನೆಯ ಅಕ್ಷರದ ಪಲುಕಿನಿಂದಾಗಲಿ ಮೌನದಿಂದಾಗಲಿ

ತುಂಬಿಕೊಳ್ಳಬಹುದು. ವ್ಯತ್ಯಾಸವೇನೆಂದರೆ, ಮುಡಿಯಲ್ಲಿ ಗೋಚರಿಸದ ಸಾವಕಾಶ ಗತಿ UU.U ಗಣದಲ್ಲಿ ಉಂಟು. ಇವೆರಡರ ಬದಲು ೫ ಮಾತ್ರೆಯ ಒಂದು ಪೂರ್ಣಗಣ ಕೊನೆಯಲ್ಲಿ ಬಂದರೆ ಮುಕ್ತಾಯದ ಭಾವನೆಗೆ ಪ್ರತಿಯಾಗಿ ಮುಂದಿನ ಚರಣದ ಆಕಾಂಕ್ಷೆಯನ್ನು ತರುತ್ತದೆ. ಒಂದೆರಡು ಉದಾಹರಣೆಗಳನ್ನು ನೋಡಿದರೆ ಈ ವಿಚಾರ ಹೆಚ್ಚು ಸ್ಫುಟವಾಗಬಹುದು :

(೨೪) ಎಚ್ಚರೆಚ್ಚರು ಮಾರ ಮೂಜಗದ । ಸಿಂಗಾರ (೫+೫+೫+೫)
ಮನುಮನದ ಬಂಗಾರ ಎಚ್ಚರೈ । ಏಳೈ. (೫+೫+೫+– –)

(೨೫) ತಲೆಭಾರ ಇಳಿದಿತ್ತು, ಅಂಗಾರ । ಬೆಳೆದಿತ್ತು ; (೫+೫+೫+೫)
ಮೈಯನ್ನು ಮುಚ್ಚಿತ್ತು ಕೆಂಪು ಸೀ । ರೆ, (೫+೫+೫ಮು)

(೨೬) ಬೆಳದಿಂಗಳಿಳಿತಂದು ಸೋಕುತಲೆ । ಹೊಮ್ಮಿ (೫+೫+೫+ U)
ಸೆಳೆದಲೆಗಳಪ್ಪುವುವು ಹಿಗ್ಗಿ ಚಿ । ಮ್ಮಿ. (೫+೫+೫+ಮು)

ಹೀಗೆ "ಮುಡಿ"ಗಿಂತಲೂ ಅಕ್ಷರ ಪ್ರಮಾಣದಲ್ಲಿ ಉದ್ದವಾಗಿ, ಮುಕ್ತಾಯದ ಭಾವನೆಯನ್ನು ಅದಕ್ಕಿಂತ ಸವಕಾಶವಾಗಿ ತರುವ UU.U ಲಕ್ಷಣದ ವಿಶೇಷ ಗಣಕ್ಕೆ "ಪದ್ಮಗಣ" ಎಂಬ ಹೆಸರನ್ನು ಇಲ್ಲಿ ಕೊಟ್ಟಿದೆ. "ಪದ್ಮ" ಎಂಬುದು ಇದರ ಪ್ರಕಾರಗಳಲ್ಲಿ ಒಂದಕ್ಕೆ (—U) ಉದಾಹಣೆಯೂ ಆಗುತ್ತದೆ. ಪ್ರಸ್ತಾರದಲ್ಲಿ ಇದರ ಸಂಕೇತವಾಗಿ "ಪ" ಎಂದು ಉಪಯೋಗಿಸಬಹುದು.

ಮೇಲಿನ ಉದಾಹರಣೆಗಳಲ್ಲಿ ಪದ್ಮಗಣವು ೫ ಮಾತ್ರೆಯ ಮೂರು ಗಣಗಳ ಸಾಲಿನ ಕೊನೆಯಲ್ಲಿ ಬಂದಿದೆ. ಆದರೆ ಅದರ ಹಿಂದಿನ ಗಣಗಳ ಸಂಖ್ಯೆ ಮೂರೇ ಆಗಬೇಕೆಂಬ ನಿಯಮವೇನೂ ಇಲ್ಲ. ಮುಡಿಯಂತೆಯೇ ಪದ್ಮಗಣವೂ ಇನ್ನೂ ಕಡಮೆ ಅಥವಾ ಹೆಚ್ಚು ಸಂಖ್ಯೆಯ ಗಣಗಳ ಕೊನೆಯಲ್ಲಿ ಬರುವುದುಂಟು :

(೨೭) ಹಾಡಿದನು । ಗಮಕಿ; (೫+ಪ)
ನಾಡು ನಲಿದುದು ರಸದ ಕಡಲಿನಲಿ । ದುಮುಕಿ. (೫+೫+೫+ಪ)

(೨೮) ಸಿರಿಗೌರಿಯಂತೆ ಬಂದರು ತಾಯಿ ಹಸೆಮಣೆಗೆ,
ಸೆರಗಿನಲಿ ಕಣ್ಣೀರ । ನೊರಸಿ ; (೫+೫+ಪ)
ಸುಖದೊಳಗೆ ನಿಮ್ಮ ನೆನೆದರು ತಾಯಿ ಗುಣವಂತೆ,
ದೀಪದಲಿ ಬಿಡುಗಣ್ಣ । ನಿಲಿಸಿ. (೫+೫+ಪ)

(೨೯) ಹಸುರ ಸೊಬಗಂ ತೊಟ್ಟು, ಹಾಡುತ್ತ, ಬಾನ್‌ಬಯಲೊಳಾಟವಾ।
ಡುತ್ತ, (೫+೫+೫+೫+೫+ಪ)
ಸೌಂದರ್ಯದಿಂ ತೀವಿ, ಭೂದೇವಿ ಬೆಳಗಿದಳು, ಜೀವಪರಮಾತ್ಮರಿಂ।
ತೊಳಗಿ. (೫+೫+೫+೫+೫+೫+ಪ)

ಪದ್ಮಗಣವು ಸಾಮಾನ್ಯವಾಗಿ ಚರಣದ ಕೊನೆಯಲ್ಲಿ ಬರುತ್ತದೆ; ಆದರೆ ಮುಡಿಯಂತೆಯೇ ಅದು ಚರಣದೊಳಗಡೆ ಬರುವುದೂ ಅಪೂರ್ವವಲ್ಲ :

(೩೦) ಮೇಲೊಂದು । ಗರುಡ । ಹಾರುತಿಹು । ದು (೫+ಪ+೫+ಮು)
ಕೆಳಗದರ । ನೆರಳು । ಓಡುತಿಹು । ದು "
ಅದಕೊ ಅದ । ರಚ್ಚೆ ಹಾ । ದಿ (೫+೫+ಮು)
ಇದಕು ಹರಿ । ದತ್ತ ಬೀದಿ. "

(೩೦) ನೆಯ ಉದಾಹರಣೆಯಲ್ಲಿ "ಗರುಡ", "ನೆರಳು" ಎಂಬ ಕಡೆಗಳಲ್ಲಿ ಕೊನೆಯ ಅಕ್ಷರಗಳನ್ನು ಎಳೆದು ಹೇಳುವುದಕ್ಕಿಂತ ಅವುಗಳ ಮುಂದೆ ಸ್ವಲ್ಪ ಮೌನವನ್ನು ತಂದು ೫ ಮಾತ್ರೆಯ ಕಾಲಕ್ಕೆ ಸರಿದೂಗಿಸುವುದೇ ಉತ್ತಮವೆಂದು ತೋರುತ್ತದೆ.[೫]

(೩೧) ತಿಂಗಳಿನ । ಸೊಂಪು ; । ತೇನೆಯುಲಿ । ಯಿಂಪು ; (೫+ಪ+೫+ಪ)
ಕೇತಕಿಯ । ಧೂಳಿ । ತುಂಬಿದೀ । ಗಾಳಿ (")
ತಂಪಾಗಿ । ದೆ. (೫+ಮು)

(೩೧) ನೆಯ ಉದಾಹರಣೆಯಲ್ಲಿ ಪದ್ಮಗಣಗಳ ಕೊನೆಯ ಅಕ್ಷರಗಳನ್ನು ಎಳೆದು ಹೇಳುವುದೇ ಸೊಗಸು ; ಇಲ್ಲಿ ಪ್ರಾಸದ ನೆರವೂ ಉಂಟು.

ಈಗಾಗಲೇ ಮೇಲೆ ಕೊಟ್ಟಿರುವ (೮)ನೆಯ ಉದಾಹರಣೆಯನ್ನೂ ಮತ್ತೆ ನೋಡಬಹುದು :

ಈಗಳೇ । ನಾದೆನ್ ! । ಕೇಳ, ದೈವೇಚ್ಛೆಯನ್, ಜಮದಗ್ನಿ । ಅಯ್ಯನ್.
ಎನ್ನನಾ ಋಷಿ ಭರದ್ವಾಜಂಗೆ । ಕೊಟ್ಟನ್ – । ದಾನಮನ್ । ಕೊಟ್ಟನ್.

ಇಲ್ಲಿ ಎರಡು ಚರಣಗಳ ಕೊನೆಯ ಗಣಗಳೂ ಪದ್ಮಗಣಗಳೆಂಬುದು ಸ್ಪಷ್ಟ. ಇವುಗಳಲ್ಲದೆ, "ನಾದೆನ್," "ಕೊಟ್ಟನ್" ಎಂಬುವೂ ಪದ್ಮಗಣಗಳೆಂದು ಈಗ ವಿದಿತವಾಗಬಹುದು. ಇವೆರಡರ ಕೊನೆಯಲ್ಲಿ ಭಾವದ ನಿಲುಗಡೆಯೂ ಇರುವುದರಿಂದ ಗಣವಿನ್ಯಾಸ ಹಿತವಾಗಿದೆ.

"ಸರಳರಗಳೆ", "ಮಹಾಛಂದಸ್ಸು"–ಇವುಗಳಲ್ಲಿ ೫ ಮಾತ್ರೆಯ ಗಣದ ಧಾಟಿಯೇ ಮೂಲ ಶ್ರುತಿಯಷ್ಟೆ. ಇದರಲ್ಲಿ ವೈವಿಧ್ಯವನ್ನು ತರುವ ವಿಧಾನಗಳಲ್ಲಿ ಅರ್ಥದ ವಿರಾಮವನ್ನು ಚರಣದ ಬೇರೆ ಬೇರೆ ಸ್ಥಾನಗಳಲ್ಲಿ ತರುವುದೂ ಒಂದು. ಇದಕ್ಕೆ ಹೊಂದಿಕೊಳ್ಳುವಂತೆ, ೫ ಮಾತ್ರೆಯ ಗಣದ ಬದಲು ಒಮ್ಮೊಮ್ಮೆ ಪದ್ಮಗಣ ಬಂದು, ಇಂಪನ್ನು ಹೆಚ್ಚಿಸುವುದುಂಟು. ಇದಕ್ಕೆ ಒಂದು ಉದಾಹರಣೆಯನ್ನು ಈ ಕೆಳಗೆ ಕೊಟ್ಟಿದೆ :

---

೫. ಇಲ್ಲಿ "೫+೩+೫+ಮು" ಎಂಬಂತೆ ೧ ಮತ್ತು ೨ ನೆಯ ಚರಣಗಳ ರಚನೆಯೆಂದೂ. "೫+೩+ಪ" ಎಂಬಂತೆ ೩ ಮತ್ತು ೪ ನೆಯ ಚರಣಗಳ ರಚನೆಯೆಂದೂ ಕವನದ ಕರ್ತೃಗಳ ಅಭಿಪ್ರಾಯ.

ಪ
(೩೨) ಬೆನಕನಂ । ಕರೆದಳ್ ; । ಒರೆದಳ್ ಭವಾನಿ : "ನಡೆ,
ವಿನಾಯಕ, ಪ್ರಪುಲ್ಲಿಸು ರಘೂತ್ತಮ ಮನೋಂಬುಜದಿ
ಅಭವ ಸಂಜ್ಞಾನ ಮಹದಿಚ್ಛೆಯಿಂ."...

ಇದುವರೆಗೆ ೫ ಮಾತ್ರೆಯ ಗಣದ ಚರಣಗಳನ್ನೇ ಪರಿಶೀಲಿಸಿದೆವು. ಆದರೆ ಪದ್ಮಗಣದ ವ್ಯಾಪ್ತಿ ಇಷ್ಟಕ್ಕೇ ನಿಲ್ಲುವುದಿಲ್ಲ. ಕೆಳಗಿನ ಉದಾಹರಣೆಗಳನ್ನು ನೋಡಿ :

(೩೩) ತಪ್ತಾತ್ಮರ ನಿಡುಸುಯ್ಯಲು ಈ ಬನದೆಲೆ । ಹುಯಿಲು,
ದುಃಖಿಗಳಾರ್ತಾಕ್ರಂದನವೀ ಕೋಕಿಲ । ಕುಕಿಲು;
ಈ ಹಳುವಿನ ಮರೆಗಾರೋ ಪೊರೆ ಪೊರೆ ಶರ । ಣೆಂದು
ಮೌನದೊಳೆನ್ನೆರೆವಂತಿದೆ ನನ್ನಯ ಕಿವಿ । ಗಿಂದು.

(೩೪) ಚಣಚಣಕೂ ಮಿರುಮಿಂಚುವ
ಕೋಲ್ಮಿಂಚಿನ ಸಂಚೇನಿದು—
ತಪಭಂಗಕೆ ಕುಸುಮಾಸ್ತ್ರವ-
ನಣಿಗೈವನೊ । ಮಾರಂ ?

ಇಲ್ಲೆಲ್ಲ ೬ ಮಾತ್ರೆಯ ಗಣಗಳ ಕೊನೆಗೆ ಪದ್ಮಗಣ ಬಂದಿದೆ.

೩ ಮಾತ್ರೆಯ ಮತ್ತು ೪ ಮಾತ್ರೆಯ ಗಣಗಳ ಮುಂದೆ—"ಮುಡಿ" ಬರುವಂತೆ —ಪದ್ಮಗಣ ಬರುವುದೂ ಅಶಕ್ಯವಲ್ಲ. ಉದಾಹರಣೆಗೆ,

(೩೫) ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ । ಗೊತ್ತು
ತೋಳುಗಳಿಗೆ ತೋಳಬಂದಿ
ಕೆನ್ನೆ ತುಂಬ । ಮುತ್ತು.

ಇಲ್ಲಿ ಗಣವಿನ್ಯಾಸವು ಮುದ್ರಿತಪಾಠವನ್ನು ಅನುಸರಿಸಿ,

ಆತ । ಕೊಟ್ಟ । ವಸ್ತು । ಒಡವೆ... (೩+೩+೩+೩)

ಎಂದೋ, ಅಥವಾ ಕೆಲವರ ವಾಚನದಲ್ಲಿ ಕೇಳಬರುವಂತೆ,

ಆತ । ಕೊಟ್ಟ । ವಸ್ತು । ಒಡವೆ... (೩+೪+೩+೪)

ಎಂದೋ—ಆಗಬಹುದು. ಎರಡು ಸಂದರ್ಭಗಳಲ್ಲೂ, "ಗೊತ್ತು," "ಮುತ್ತು" ಎಂಬವು ಪದ್ಮಗಣಗಳು (_U). ವಾಚನ ಮಾಡುವಾಗ ಕೆಲವರು "ಗೊsತ್ತು" "ಮುsತ್ತು" (೩+ಮು) ಎಂದು ಹೇಳುವುದುಂಟು. ಆ ಪಕ್ಷದಲ್ಲಿ ಇಲ್ಲಿಯ ೨ನೆಯ ಮತ್ತು ೪ನೆಯ

ಚರಣಗಳ ಪ್ರಸ್ತಾರ ೩+೪+೩+ಮು ಎಂದಾಗುತ್ತದೆ. ಆದರೆ ಇದೇ ಕವನದ (ಅಂಬಿಕಾತನಯದತ್ತ : 'ನಾನು ಬಡವಿ') ಮೊದಲ "ನುಡಿ"ಯನ್ನು ನೋಡಿದರೆ—

> (೩೬) ನಾನು ಬಡವಿ ಆತ ಬಡವ
> ಒಲವೆ ನಮ್ಮ ಬದುಕು...

ಇಲ್ಲಿ "ಬದುಕು" ಎಂಬುದನ್ನು "ಪ್ಲುತ+ಮು" ಎಂದು ಭಾವಿಸುವುದು ಕ್ಲಿಷ್ಟವಾಗುತ್ತದೆ. ಪದ್ಮಗಣವೆಂದೇ ಅದನ್ನು ಗಣಿಸಬೇಕು.

ಹೀಗೆ, ಮುಡಿ, ಪದ್ಮಗಣ ಇವೆರಡೂ ಬಲುಮಟ್ಟಿಗೆ ಒಂದನ್ನೊಂದು ಹೋಲುತ್ತವೆ; ಚರಣದ ರಚನೆಯಲ್ಲಿ ವಿಶೇಷ ಪಾತ್ರವನ್ನು ವಹಿಸುತ್ತವೆ. ಒಂದಕ್ಕೂ ಇನ್ನೊಂದಕ್ಕೂ ಇರುವ ಮುಖ್ಯ ವ್ಯತ್ಯಾಸವೆಂದರೆ, ಮುಡಿ ಬಂದಾಗ ಮುಕ್ತಾಯದಲ್ಲಿ ಕ್ಷಿಪ್ರಗತಿ, ಪದ್ಮಗಣ ಬಂದಾಗ ಸಾವಕಾಶ ಗತಿ. ಪದ್ಮಗಣಕ್ಕಿಂತ ಮುಡಿಯ ವ್ಯಾಪನೆ ಕೆಲಮಟ್ಟಿಗೆ ಹೆಚ್ಚೆಂಬುದನ್ನೂ ನೆನಪಿಡಬಹುದು.

೪

ಈ ಸಂಬಂಧದಲ್ಲಿ ಕನ್ನಡದ "ಅಂಶ" ಗಣಗಳ ದಿಕ್ಕಿಗೆ ಸ್ವಲ್ಪ ತಿರುಗೋಣ. ಬ್ರಹ್ಮಗಣಕ್ಕೆ (UUU) ಒಂದು "ಅಂಶ" ಸೇರಿದರೆ ವಿಷ್ಣುಗಣ (UUUU)ವಾಗುತ್ತದೆ. ವಿಷ್ಣುಗಣಕ್ಕೆ ಒಂದು "ಅಂಶ" ಸೇರಿದರೆ ರುದ್ರಗಣ (UUUUU)ವಾಗುತ್ತದೆ ಎಂಬುದು ಇವುಗಳ ಪರಿಚಯವನ್ನು ಕೊಂಚ ಮಟ್ಟಿಗೆ ಮಾಡಿಕೊಂಡಿರುವವರಿಗೂ ಗೊತ್ತು. ಹಳಗನ್ನಡದ "ಅಂಶ" ಛಂದಸ್ಸಿನ ಪದ್ಯಜಾತಿಗಳಲ್ಲಿ ಒಂಟಿ ರುದ್ರಗಣವು ವಿಷ್ಣುಗಣಗಳ ಸಾಲಿನ ಕೊನೆಯಲ್ಲಿ ನಿಲ್ಲುವುದೇ ರೂಢಿ. ಆದಕಾರಣ ಅದು ವ್ಯಾವಹಾರಿಕವಾಗಿ ವಿಷ್ಣುಗಣ+೧ "ಅಂಶವೇ" ಆಗುತ್ತದೆ. ಪಿರಿಯಕ್ಕರ, ಷಟ್ಪದಿ ಮೊದಲಾದವುಗಳ ಪ್ರಸ್ತಾರವನ್ನು ಪರಿಶೀಲಿಸಿದರೆ ಈ ಮಾತು ವಿಶದವಾಗುತ್ತದೆ : ಪಿರಿಯಕ್ಕರದ ಒಂದು ಚರಣದ ಸಾಮಾನ್ಯ ಲಕ್ಷಣ—೧ ಬ್ರಹ್ಮ+೫ ವಿಷ್ಣು+೧ ರುದ್ರ; ಇದನ್ನು ಯಾವ ತೊಡಕೂ ಇಲ್ಲದೆ, ೧ ಬ್ರಹ್ಮ+೬ ವಿಷ್ಣು+೧ "ಅಂಶ" ಎಂದು ಭಾವಿಸಬಹುದು. ಷಟ್ಪದಿಯ ಒಂದು ಅರ್ಧದಲ್ಲಿ, ನಾಗವರ್ಮನ ಲಕ್ಷಣದಂತೆ, ೬ ವಿಷ್ಣು+೧ ರುದ್ರ ಇರುತ್ತವೆ; ಇವನ್ನು ೭ ವಿಷ್ಣು + ೧ "ಅಂಶ" ಎಂದು ಗಣಿಸಬಹುದು. ಈ ವಿಷಯದ ಸವಿಸ್ತಾರವಾದ ಪ್ರತಿಪಾದನೆಗೆ ಇದು ಸ್ಥಳವಲ್ಲ.[೬] ಅಂತೂ ಈ ಹೆಚ್ಚಿನ ಒಂದು "ಅಂಶ"ವೇ ನಮ್ಮ "ಮುಡಿ"ಗೆ ಮೂಲವೆಂದು ತೋರುವ ವಿಷಯವನ್ನು ಇಲ್ಲಿ ಸೂಚಿಸಬಹುದು.

---

೬. ಅಂಶಗಣಗಳ ವಿನ್ಯಾಸ, ಷಟ್ಪದಿಯ ರಚನೆ ಮೊದಲಾದವುಗಳನ್ನು ಈ ಮುಂದೆ ಬರುವ "ಅಪೂರ್ವ ಷಟ್ಪದಿಯ ಲಕ್ಷಣ" ಎಂಬ ಲೇಖನದಲ್ಲಿ ಕೆಲಮಟ್ಟಿಗೆ ಪ್ರಸ್ತಾಪಿಸಿದೆ: ಅಂಶಗಣಗಳನ್ನು ಕುರಿತ ಹೆಚ್ಚಿನ ವಿಚಾರಕ್ಕೆ 'ಕನ್ನಡ ಕೈಪಿಡಿ' (ದ್ವಿತೀಯ ಮುದ್ರಣ)—ಸಂಪುಟ ೧ರಲ್ಲಿ 'ಕನ್ನಡ ಛಂದಸ್ಸಿನ ಚರಿತ್ರೆ' ಎಂಬ ಅಧ್ಯಾಯವನ್ನು ನೋಡಬೇಕು.

ಮೊದಲು "ಮುಡಿ" ಷಟ್ಪದಿಯ ಪ್ರಕಾರಗಳಲ್ಲಿ ನೆಲೆಗೊಂಡು, ಬಳಿಕ ಎಲ್ಲ ಬಗೆಯ ಲಯಗಳ ವಿವಿಧ ರೀತಿಯ ಚರಣಗಳಿಗೆ ವ್ಯಾಪಿಸಿದಂತೆ ತೋರುತ್ತದೆ. ಹೊಸ ಛಂದಸ್ಸಿನಲ್ಲಿ ಇದರ ಉಪಯೋಗ ಎಷ್ಟು ಮಟ್ಟಿಗೆ ಹಬ್ಬಿದೆಯೆಂಬುದನ್ನು ಆಗಲೇ ನೋಡಿದ್ದೇವೆ.

ಇನ್ನು ಪದ್ಮಗಣದ ವಿಚಾರ. ಇದರ ಮೂಲವೂ "ಅಂಶ" ಛಂದಸಿನಲ್ಲೇ ಗೋಚರವಾಗುತ್ತದೆ. ಹಳಗನ್ನಡದ "ದೊರೆಯಕ್ಕರ", ತೆಲುಗಿನ "ದ್ವಿಪದ" "ಚೌಪದ" "ತರುವೋಜ"ಗಳು, ನಡುಗನ್ನಡದ "ಸಾಂಗತ್ಯ" ಇವುಗಳಲ್ಲಿ ಎರಡು "ಅಂಶ"ಗಳ "ಬ್ರಹ್ಮ" (ಅಥವಾ "ಸೂರ್ಯ") ಗಣಕ್ಕೆ[೭] ಇದ್ದ ನಿಯತಸ್ಥಾನವನ್ನು ಪರಿಶೀಲಿಸಿದರೆ ಈ ವಿಷಯ ವಿಶದವಾಗಬಹುದು.

ಮೊದಲು ತೆಲುಗಿನಲ್ಲಿ ದ್ವಿಪದವನ್ನು ತೆಗೆದುಕೊಳ್ಳೋಣ :

(೩೭) ತೊಲಿಕೋಂಡಿ ಕನುವಿಚ್ಚಿ ನಿಲಿಚಿ ಮ್ಯೆವೆಂಚಿ
ಜಲಜಲ ಜಿಕ್ಕಲು ಸಡಲಿಂಚಿ ನೀಲ್ಗಿ
ಗ್ರಕ್ಕುನಂ ಗಾಲಾರ್ಚಿ ಕಂಠಂಬು ವಿಚ್ಚಿ
ಮುಕ್ಕುನ ನೀಂಕೆಲು ಚೆಕ್ಕೊಲ್ಪಿ ಕಡುಪು
ವೆಕ್ಕಿಂಚಿ ಮೆಡಸಾಚಿ ನಿಕ್ಕಿ ಮಿನ್ನೂಚಿ
ಕೊಕ್ಕೊರೋ ಕುಱ್ಱನಿ ಕೂಯಕ ಮುನ್ನ.
(ಪಾಲ್ಕುರಿಕಿ ಸೋಮನಾಥ : ಬಸವಪುರಾಣ)

ಇದರ ಚರಣವೊಂದರ ರಚನೆ ಹೀಗೆ :

ಇಂದ್ರ	ಇಂದ್ರ	ಇಂದ್ರ	ಸೂರ್ಯ
ತೊಲೊಕೋಂಡಿ ।	ಕನುವಿಚ್ಚಿ ।	ನಿಲಿಚಿ ಮ್ಯೆ ।	ವೆಂಚಿ.

ಈ ದ್ವಿಪದದ ಧಾಟಿ ತೆಲುಗಿನಲ್ಲಿ ಬಲು ಹಳೆಯದು. ಇದರ ನೀತಿ ಅದ್ದಂಕಿಯ ಪಂಡರಂಗನ ಶಾಸನದಲ್ಲಿ (ಕ್ರಿ.ಶ. ಸು. ೮೪೮) ಕಾಣಬರುವ "ತರುವೋಜ" ಎಂಬ ಪದ್ಯರೂಪದಲ್ಲಿ ಗೋಚರವಾಗುತ್ತದೆ ತರುವೋಜದಲ್ಲಿ ಸಮಾನವಾದ ನಾಲ್ಕು ಪಾದಗಳುಂಟು; ಅವುಗಳಲ್ಲಿ ಚರಣವೊಂದರ ನಡೆ ಹೀಗೆ :

---

೭. ತೆಲುಗಿನ ಇಂದ್ರ=ಕನ್ನಡದ ವಿಷ್ಣು; ತೆಲುಗಿನ ಸೂರ್ಯ=ಕನ್ನಡದ ಬ್ರಹ್ಮ. ಕನ್ನಡದ ವಿಷ್ಣುಗಣದ ಪ್ರಕಾರಗಳಲ್ಲಿ ಸೇರುವ UU._._ ಬ್ರಹ್ಮಗಣದ ಪ್ರಕಾರಗಳಲ್ಲಿ ಸೇರುವ UU._ ಈ ಗಣಗಳನ್ನು ತೆಲುಗಿನ ಛಂದೋಗ್ರಂಥಗಳಲ್ಲಿ ಅಂಗೀಕರಿಸಿಲ್ಲ. ಆದರೆ ತೆಲುಗಿನ ಅತಿ ಪ್ರಾಚೀನ ಶಾಸನಗಳಲ್ಲಿ ಇಂಥ ಗಣಗಳು ಅಲ್ಲಲ್ಲಿ ಕಾಣಬರುತ್ತವೆ: (೩೮) ನೆಯ ಉದಾಹರಣೆಯಲ್ಲಿನ "ಬಲಗರ್ವಂ" (UU._._) ಎಂಬುದನ್ನು ನೋಡಿ.

ಇಂ ಇಂ ಇಂ ಸೂರ್ಯ ಇಂ
(೩೮) ಷಟ್ಪಂಬು । ಗಟ್ಟಿನ । ಪ್ರಥಮಂಬು । ನೇಣ್ಣು ॥ ಬಲಗರ್ವಂ ।
ಇಂ ಇಂ ಸೂ
ಬೊಪ್ಪಗ । ಬೈಲೇಚಿ । ಸೇನ.

ತರುವೋಜದ ಒಂದು ಚರಣ ಒಂದು ದ್ವಿಪದಿಗೆ (ಎಂದರೆ ಅದರ ಎರಡು ಚರಣಗಳ ಜೋಡಿಗೆ) ಸಮನಾಗುತ್ತದೆ. ಇಲ್ಲೆಲ್ಲ ಗಮನಿಸಬೇಕಾದ ಅಂಶವೇನೆಂದರೆ, ಚರಣದ ಅಂತ್ಯದಲ್ಲಿ (ತರುವೋಜದಲ್ಲಿ ಚರಣಾರ್ಧದ ಅಂತ್ಯದಲ್ಲಿ ಕೂಡ) ಮೂರು ಇಂದ್ರಗಣಗಳ ಕೊನೆಗೆ ಒಂದು ಸೂರ್ಯಗಣ ನಿಯತವಾಗಿ ಬರುತ್ತದೆ; ಚರಣಕ್ಕೆ ಮುಕ್ತಾಯವನ್ನು ಕೊಡುತ್ತದೆ.

ತೆಲುಗಿನ ದ್ವಿಪದ ತರುವೋಜಗಳ ಧಾಟಿಯೇ ನಡುಗನ್ನಡದ ದ್ವಿಪದಿ ಚೌಪದಿಗಳಿಗೆ ಮೂಲ.[೮] ಇವುಗಳ ಚರಣದ ರಚನೆ ನಾವು ಆಗಲೆ ನೋಡಿರುವಂತೆ, ೫+೫+೫+೫+ ಪದ್ಮಗಣ. ದೇಶೀಯ ಛಂದಸ್ಸಿನಲ್ಲಿ ಅಂಶಗಣಗಳು ಮಾತ್ರಾಗಣಗಳಾಗಿ ಪರಿವರ್ತನೆ ಹೊಂದಿದಾಗ ಸಾಮಾನ್ಯವಾಗಿ ವಿಷ್ಣು (ಅಥವಾ ಇಂದ್ರ) ಗಣವು ೫ ಮಾತ್ರೆಯ ಗಣವಾಗಿ ಏರ್ಪಟ್ಟಿತು. ಹಾಗೆಯೇ, ನಿಯತಸ್ಥಾನದಲ್ಲಿನ, ಮುಖ್ಯವಾಗಿ ಚರಣಾಂತ್ಯದಲ್ಲಿನ ಬ್ರಹ್ಮ (ಅಥವಾ ಸೂರ್ಯ) ಗಣವು ನಮ್ಮ "ಪದ್ಮಗಣ"ವಾಗಿ ನಿಂತಿತೆಂಬುದು ಇಲ್ಲಿ ಸ್ಪಷ್ಟವಾಗಬಹುದು.

ಸಾಂಗತ್ಯ ಅಂಶಗಣದ ನಡೆಯನ್ನೇ ಉಳಿಸಿಕೊಂಡಿದೆ :

ವಿ ವಿ ವಿ ವಿ
(೩೯) ಸುಳಿದು ಸು । ತ್ತುವಳು ನಾ । ಟ್ಯದೊಳು ಸ । ಮ್ಮೋಹನ ।
ವಿ ವಿ ಬ್ರ
ಜಲಧಿಯ । ಸುಳಿಯೊ ಎಂ । ಬಂತೆ
ವಿ ವಿ ವಿ ವಿ
ಬಲಕೆಡ । ಕೊಲೆದು ಹ । ರಿವಳೆಳ । ವಿಸಿಲಲ್ಲಿ ।
ವಿ ವಿ ಬ್ರ
ಎಳನಾಗ । ಹರಿವಂತೆ । ಮುರಿದು.

ಇಲ್ಲಿ ೨ನೆಯ ಮತ್ತು ೪ನೆಯ ಚರಣಗಳ ಕೊನೆಯಲ್ಲಿ ಬ್ರಹ್ಮಗಣ ಬಂದು ಮುಕ್ತಾಯ ಕೊಡುತ್ತದೆ. ಮಾತ್ರಾಗಣದ ಲಯದಲ್ಲಿ ಇದಕ್ಕೆ ಸಂವಾದಿಯಾದ ಪದ್ಯದ ಪ್ರಸ್ತಾರವು ೫+೫+೫॥೫+೫+೫+ಪ....ಎಂದು ಆಗುತ್ತದೆ. ಈ ರಚನೆಯ ಪದ್ಯಗಳೂ

---

೮. ನಾಗವರ್ಮನು ಹೇಳುವ ಚೌಪದಿಯ ಲಕ್ಷಣ : ೧ ವಿಷ್ಣು+೧ ರುದ್ರ, ಇದಕ್ಕೂ ನಡುಗನ್ನಡದ ಬಳಕೆಯ ಚೌಪದಿಗೂ ಸಂಬಂಧವಿಲ್ಲ; ನಾಗವರ್ಮನು ದ್ವಿಪದಿಯನ್ನು ಹೇಳಿಲ್ಲ.

ಹೊಸಗನ್ನಡದಲ್ಲಿ ದೊರೆಯುತ್ತವೆ; ಮೇಲಿನ (೨೮) ನೆಯ ಉದಾಹರಣೆಯನ್ನು ನೋಡಿ.

ಕೊನೆಯದಾಗಿ ಛಂದೋಬುಧಿಯಲ್ಲಿ ಉಕ್ತವಾಗಿರುವ "ದೊರೆಯಕ್ಕರ"ವನ್ನು ನೋಡಬಹುದು. ಇದರ ಒಂದು ಪಾದದ ಲಕ್ಷಣ : ವಿ+ವಿ+ಬ್ರ+ವಿ+ವಿ+ಬ್ರ : ಎಂದರೆ ಇದರಲ್ಲಿ ವಿ+ವಿ+ಬ್ರ ಎಂಬುದು ದ್ವಿರುಕ್ತವಾಗುತ್ತದೆ. ದೊರೆಯಕ್ಕರವನ್ನು ಕುರಿತ ನಾಗವರ್ಮನ ಪದ್ಯದ ಕೊನೆಯ ಪಾದ ಹೀಗಿದೆ :

ವಿ ನಿ ಬ್ರ ವಿ ವಿ ಬ್ರ

(೪೦) ದೊರೆಯಾಗಿ । ಸಂದುದು । ದೊರೆಯ । ಕ್ಕರಮಿದ । ನಱಿವುದೀ। ತೆಱಿದಿಂ.

ಕನ್ನಡ ಕಾವ್ಯಗಳಲ್ಲಿ ದೊರೆಯಕ್ಕರದ ನಿದರ್ಶನಗಳು ಈಗ ದೊರೆಯುವುದಿಲ್ಲ. ಆದರೆ, ಅಸಗನು 'ಕರ್ಣಾಟ ಕುಮಾರಸಂಭವಕಾವ್ಯ'ದಲ್ಲಿ ಇದನ್ನು ಉಪಯೋಗಿಸಿದ್ದನೆಂದು ಜಯಕೀರ್ತಿಯ 'ಛಂದೋನುಶಾಸನ'ದಲ್ಲಿನ ಇದರ ವಿಷಯಕವಾದ ಪದ್ಯದಿಂದ ತಿಳಿಯಬರುತ್ತದೆ. ಆ ಪದ್ಯ ದೊರೆಯಕ್ಕರಕ್ಕೆ ಲಕ್ಷ್ಯವೂ ಆಗಿದೆ.

(೪೧) ...ಶ್ರುತಿಕಾಂತಮಕ್ಷರದಕ್ಷೈರಾದೃತಮಸಗಾಖ್ಯ ಕವಿನಾ
ಪ್ರತಿಪಾದಿತಂ ನನು ಕರ್ಣಾಟಕುಮಾರಸಂಭವಕಾವ್ಯೇ ॥ (೭.೭)

ತೆಲುಗಿನಲ್ಲಿ ದೊರೆಯಕ್ಕರದ ನಿದರ್ಶನಗಳು ಯುದ್ಧಮಲ್ಲನ ಬೆಜವಾಡದ ಶಾಸನದಲ್ಲೂ (ಕ್ರಿ.ಶ. ೮೯೮), ನನ್ನಯಭಟ್ಟನ ಆಂಧ್ರ ಮಹಾಭಾರತದಲ್ಲೂ (೧.೪. ೧೦೩ ; ೩. ೪. ೩) ಕಾಣಬರುತ್ತವೆ. ಜಯಕೀರ್ತಿ ದೊರೆಯಕ್ಕರವನ್ನು "ಸಮಾನಾಕ್ಷರ"ವೆಂದು ಕರೆಯುತ್ತಾನೆ, ತೆಲುಗರು "ಮಧ್ಯಾಕ್ಕರ"ವೆನ್ನುತ್ತಾರೆ.

ದೊರೆಯಕ್ಕರದ ಚರಣಾಂತ್ಯದಲ್ಲೂ ಚರಣಾರ್ಧದ ಅಂತ್ಯದಲ್ಲೂ ಬ್ರಹ್ಮ (ಅಥವಾ ಸೂರ್ಯ) ಗಣವು—ತರುವೋಜದಲ್ಲಿ ಹೇಗೋ ಹಾಗೆ—ನಿಯತವಾಗಿ ಬಂದು ಮುಕ್ತಾಯದ ಭಾವನೆಯನ್ನು ಕೊಡುವುದೆಂಬುದನ್ನು ಗಮನಿಸಬೇಕು. ಸಾಂಗತ್ಯದ ೨ನೆಯ (ಅಥವಾ ೪ನೆಯ) ಚರಣವು ದೊರೆಯಕ್ಕರದ ಚರಣಾರ್ಧಕ್ಕೆ ಸಮನೆಂಬುದನ್ನೂ ಇಲ್ಲಿ ಸ್ಮರಿಸಬಹುದು. ದೊರೆಯಕ್ಕರದ ಒಂದು ಪಾದಕ್ಕೆ ಸಂವಾದಿಯಾಗಿ ಮಾತ್ರಾಗಣದ ಲಯದಲ್ಲಿ—

೫ ೫ ಪ

(೪೨) ಅಲ್ಲಿ ಕೊರ । ಗೆಂಬುದಿ । ಲ್ಲಮ್ಮ,

೪ ೫ ಪ

ಅಲ್ಲಿ ಚಳಿ । ಛಿದ್ರವಿ । ಲ್ಲಮ್ಮ,

ಇಂಥ ಎರಡು ಸಾಲುಗಳು ನಿಲ್ಲುತ್ತವೆ.

ಪಿರಿಯಕ್ಕರ, ದೊರೆಯಕ್ಕರ, ಸಾಂಗತ್ಯ ಮೊದಲಾದವುಗಳಲ್ಲಿ ಬ್ರಹ್ಮ ಗಣವು ವಿಷ್ಣುಗಣಗಳ ಸಾಲಿನಲ್ಲಿ ಸೇರಿಕೊಂಡು ಬರುತ್ತದೆ ; ನಿಯತಸ್ಥಾನಗಳಲ್ಲಿ ಮಾತ್ರವಲ್ಲದೆ

ಒಮ್ಮೊಮ್ಮೆ ವಿಷ್ಣುಗಣಕ್ಕೆ ಪ್ರತಿಯಾಗಿ ಬರುವುದೂ ಉಂಟು. ಅದು ಚರಣಮಧ್ಯದಲ್ಲಿ ಬಂದಾಗ ಕೂಡ, ಅದರ ಎರಡನೆಯ "ಅಂಶ"ವನ್ನು ಎಳೆದು ಪಲುಕಿಸಿ ಗಣದ ಕಾಲವನ್ನು ವಿಷ್ಣುಗಣದ ಕಾಲಕ್ಕೆ ಸರಿದೂಗಿಸುವುದೇ ರೂಢಿ. ಉದಾಹರಣೆಗೆ—

ಬ್ರ ವಿ ವಿ ಬ್ರ ವಿ
(೪೩) ಪಿರಿಯ । ಮಡುಗಳೆ । ಮಜ್ಜನ । ಮಾಗೆ । ಪೊಸನಾರೆ ।
ವಿ ರುದ್ರ
ದೇವಾಂಗ । ವಸ್ತ್ರಮಾಗೆ.
(ಪಂಪಭಾರತ, ೭.೨೮)

ಪಿರಿಯಕ್ಕರದ ಈ ಚರಣದಲ್ಲಿ ೧ನೆಯ ಮತ್ತು ೪ನೆಯ ಗಣಗಳು ಬ್ರಹ್ಮ; ಇವನ್ನು ವಿಷ್ಣುಗಣದ ಕಾಲಕ್ಕೆ ಎಳೆದು ಹೇಳುವುದರಿಂದಲೇ ಲಯಕ್ಕೆ ಒಂದು ಬಳುಕು ಸೊಗಸು ಹೆಚ್ಚುತ್ತದೆ. ಸಾಂಗತ್ಯದಲ್ಲೂ ಹೀಗೆಯೇ :

(೪೪) ಪೆಣ್ಣಲ್ಲ । ವೇ ತಮ್ಮ । ನೆಲ್ಲ ಪ । ಡೆದ ತಾಯಿ ।
ಪೆಣ್ಣಲ್ಲ । ವೇ ಪೊರೆ । ದವಳು
ಬ್ರ
ಪೆಣ್ಣು ಪೆ । ಣ್ಣೆಂದೇ । ತಕೆ ಬೀಳು । ಗಳೆವರು
ಬ್ರ
ಕಣ್ಣು ಕಾ । ಣದ ಗಾ । ವಿಲರು.

ಇಲ್ಲಿ ಮೂರು ನಾಲ್ಕನೆಯ ಚರಣಗಳಲ್ಲಿ "ಣ್ಣೆಂದೇ", "ಣದ ಗಾ" ಎಂಬಿವು ಬ್ರಹ್ಮಗಣಗಳು. ಆದರೆ ವಾಚನದಲ್ಲಿ ಇವುಗಳದು ವಿಷ್ಣುಗಣದ ಕಾಲ.

ಚರಣ ಮಧ್ಯದಲ್ಲಿ ಹೀಗಿರುವಾಗ, ಚರಣಾಂತ್ಯದಲ್ಲಂತೂ ಬ್ರಹ್ಮಗಣದ ಎಳೆತ ಬಲು ಸುಲಭ. "ಬ್ರಹ್ಮಗಣ"ದ ಈ ಗುಣವೇ ನಮ್ಮ "ಪದ್ಮಗಣ"ದಲ್ಲೂ ಕಾಣುಬರುತ್ತದೆ. "ಪದ್ಮಗಣ"ದ ಉಚ್ಚಾರಣೆಯ ಕಾಲ ಇಷ್ಟೇ ಮಾತ್ರೆಗಳೆಂದು ಖಚಿತವಲ್ಲ ; ಅದು ಯಾವ ಬಗೆಯ ಮಾತ್ರಾಗಣಗಳೊಡನೆ ಸೇರಿ ಬರುತ್ತದೆಯೋ ಅವುಗಳ ಕಾಲವನ್ನು ಅವಲಂಬಿಸುತ್ತದೆ. ಆದರೆ ಅದರ ರಚನೆ ಮಾತ್ರ ನಿಯತ ; ಬ್ರಹ್ಮಗಣದಂತೆಯೇ ಅದರಲ್ಲಿ ಇಂದಿಗೆ ಕೂಡ ಎರಡೇ ಅಂಶಗಳು (UU U) ಇರುತ್ತವೆ.[೯]

೯. ಹಳಗನ್ನಡದ ತ್ರಿಪದಿಯಲ್ಲಿ, ೬ ನೆಯ ಮತ್ತು ೧೦ ನೆಯ ಗಣಗಳು "ಬ್ರಹ್ಮಗಣ"ವಾಗಿರಬೇಕೆಂದು ಲಕ್ಷಣವಷ್ಟೆ; ಇವನ್ನು ವಿಷ್ಣುಗಣದ ಕಾಲಕ್ಕೆ ಎಳೆದು ಹೇಳುವುದು ಸಾಧ್ಯ. ಇತ್ತೀಚಿನ ತ್ರಿಪದಿಯಲ್ಲಿ ಈ ಸ್ಥಾನಗಳಲ್ಲಿ ನಮ್ಮ "ಪದ್ಮಗಣ"ವೇ ಬಲುಮಟ್ಟಿಗೆ ಬರುತ್ತದೆ; ಆದರೆ ಒಮ್ಮೊಮ್ಮೆ UU UU : ಈ ವಿನ್ಯಾಸವೂ ಕಾಣಿಸಿಕೊಳ್ಳುವುದುಂಟು.

ಹೀಗೆ ಪದ್ಮಗಣವು ಅಂಶಛಂದಸ್ಸಿನ "ಬ್ರಹ್ಮ" (ಅಥವಾ "ಸೂರ್ಯ) ಗಣದಿಂದ ಆವಿರ್ಭವಿಸಿ, ಅದರ ಲಕ್ಷಣಗಳನ್ನೇ ಬಲುಮಟ್ಟಿಗೆ ಉಳಿಸಿಕೊಂಡು ಅದಕ್ಕೆ ಸಂವಾದಿಯಾಗಿ ನಮ್ಮ ಮಾತ್ರಾಛಂದಸ್ಸಿನಲ್ಲಿ ಪ್ರಚುರವಾಗಿರುವುದರಿಂದ ಅದಕ್ಕೆ ಇಲ್ಲಿ "ಪದ್ಮ" ಎಂದು "ಬ್ರಹ್ಮ" "ಸೂರ್ಯ"ರಿಬ್ಬರಿಗೂ ಪ್ರಿಯವಾದ ಹೆಸರನ್ನು ಕೊಟ್ಟಿರುವುದು ಅನುಚಿತವೆನಿಸಲಾರದು.

ಹೊಸಗನ್ನಡ ಪದ್ಯದಲ್ಲಿ ಮುಡಿಯೂ ಪದ್ಮಗಣವೂ ಚರಣರಚನೆಯ ಪ್ರಮುಖ ಘಟಕಗಳು. ನಮ್ಮ ಮಾತ್ರಾಛಂದಸ್ಸಿನ ಈ ಎರಡು ಅಂಗಗಳ ಬೇರು ಅಂಶಛಂದಸ್ಸಿನ ವಿಶಿಷ್ಟ ರೂಪಗಳಲ್ಲಿದೆಯೆಂಬುದು ಸ್ವಾರಸ್ಯದ ಸಂಗತಿ.

೧೯೪೧, ೧೯೫೮]

ಸಮಾಲೋಕನ : ೧೯೫೮

"ಅಪೂರ್ವ" ಷಟ್ಪದಿಯ ಲಕ್ಷಣ*

'ಕನ್ನಡನುಡಿ'ಯ ಇದೇ [೧೫] ಸಂಪುಟದ ೨ನೆಯ ಸಂಚಿಕೆಯಲ್ಲಿ ಶ್ರೀ ದೇಸಾಯಿ ಪಾಂಡು ರಂಗರಾಯರು ಪ್ರಾಚೀನ ಶಿಲಾಶಾಸನವೊಂದರಲ್ಲಿ ಕಾಣಬರುವ ಒಂದು "ಷಟ್‌ಪದ"ವನ್ನು ಎತ್ತಿಕೊಟ್ಟು ಅದರ ಲಕ್ಷಣವನ್ನು ಕುರಿತು ವಿಚಾರ ಮಾಡಿದ್ದಾರೆ. ಈ ಅಮ್ಮಿನಭಾವಿಯ ಶಾಸನ (ಕಾಲ : ಕ್ರಿ.ಶ. ಸುಮಾರು ೧೦೭೧) ಇನ್ನೂ ಅಪ್ರಕಟಿತವಾಗಿರುವುದರಿಂದ[೧] ಶಾಸನದ ಇಲಾಖೆಯ ಹೊರಗಿರುವವರಿಗೆ ಇದರ ಪರಿಚಯವಾಗುವ ಸಂಭವ ಅತ್ಯಲ್ಪ. ಆದಕಾರಣ ಸಾಹಿತ್ಯಾಭ್ಯಾಸಿಗಳ ಗಮನವನ್ನು ಇತ್ತ ಕಡೆ ಎಳೆದು ಶ್ರೀಪಾಂಡುರಂಗರಾಯರು ಉಪಕಾರ ಮಾಡಿದ್ದಾರೆ. ಶಾಸನದಲ್ಲಿ ಈ ಭಾಗವು ಸವೆದುಹೋಗಿರುವುದರಿಂದ ಸಮಗ್ರ ಪದ್ಯ ಹೇಗಿತ್ತೆಂದು ತಿಳಿಯಲು ಆಗದಿದ್ದರೂ ಶ್ರೀಯುತರು ದೊರೆತಷ್ಟನ್ನೇ ಓದಿ ಈ ಕೆಳಗೆ ಕಂಡಂತೆ ಕೊಟ್ಟಿದ್ದಾರೆ:

"ಹರ ಪಾದಾಂಬುಜಭೃಂಗಂ
ಪರನಾರೀಜನದೂರಂ

---

* 'ಕನ್ನಡನುಡಿ', ೧೫. ೩-೪

೧. [ಈ ಶಾಸನವು *Bombay Karnatak Inscriptions, Volume I-Part 2* ರಲ್ಲಿ (ಸಂಖ್ಯೆ ೧೨೧) ೧೯೫೩ನೆಯ ಇಸವಿಯಲ್ಲಿ ಪ್ರಕಟವಾಯಿತು.

....
..............................ಜಾತರೂಪಂ
ಸರಸತಿಗಣಭಕ್ತಂ [ತಾಂ]
ನರಸಮ್ಮಂ ನೆಗರ್ದನೀ ಧರೆಗೆಲ್ಲಂ ॥"

ಈ ಶಾಸನದೊಳಗೆ ಮಿಕ್ಕ ಪದ್ಯಜಾತಿಗಳ ಹೆಸರನ್ನು ಅಲ್ಲಲ್ಲೇ ನಿರ್ದೇಶಿಸಿರುವ ಹಾಗೆ, ಈ ಪದ್ಯವನ್ನು "ಷಟ್ಪದ" ಎಂಧು ಕರೆದಿರುವುದು ಗಮನಾರ್ಹವಾಗಿದೆ. ನಡುಗನ್ನಡದಲ್ಲಿ ಬಳಕೆಯಾಗಿರುವ "ಶರ," "ಪರಿವರ್ಧಿನಿ" ಮೊದಲಾದ ಷಟ್ಪದೀಪ್ರಭೇದಗಳ ಲಕ್ಷಣ ಇದಕ್ಕೆ ಅನ್ವಯಿಸುವುದಿಲ್ಲವೆಂದು ಶ್ರೀ ಪಾಂಡುರಂಗ ರಾಯರು ಪರೀಕ್ಷಿಸಿ ನೋಡಿ, ಇದು ೧,೨,೪ ಮತ್ತು ೫ನೆಯ ಪಾದಗಳಲ್ಲಿ ಒಂದೊಂದರಲ್ಲೂ ೪ ಮಾತ್ರೆಯ ಮೂರು ಗಣಗಳನ್ನು ಹೊಂದಿರುವ "ಅಪೂರ್ವ ಷಟ್ಪದಿ"ಯಾಗಿದೆಯೆಂಬ ನಿರ್ಣಯಕ್ಕೆ ಬಂದಿದ್ದಾರೆ. ಅವರ ಲೇಖನವು ಪ್ರಕಟವಾದೀಚೆಗೆ 'ಕರ್ಮವೀರ'ದ [೧೯೫೨ರ] ಮಾರ್ಚಿ ೧೭ರ ಸಂಚಿಕೆಯಲ್ಲಿ ಶ್ರೀ ಪಾ.ವೆಂ.ಆ. ಅವರು ಈ ಷಟ್ಪದಿಯನ್ನು ಪರಿಶೀಲಿಸಿ ಇದು "ಆರ್ಯಾ ವೃತ್ತಪ್ರಭೇದ"ವಾಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಈ ತ್ರುಟಿತ ಷಟ್ಪದಿ ಪ್ರಾಚೀನತೆಯಿಂದಲೂ ಸ್ವರೂಪವಿಶೇಷದಿಂದಲೂ ಪ್ರಸ್ತಾರಸಂದಿಗ್ಧತೆಯಿಂದಲೂ ಕುತೂಹಲವನ್ನು ಕೆರಳಿಸತಕ್ಕದ್ದಾಗಿದೆ. ಆದಕಾರಣ ಕನ್ನಡ ಛಂದಸ್ಸಿನ ಚರಿತ್ರೆಯ ದೃಷ್ಟಿಯಿಂದ ಇದರ ಸ್ಥಾನವನ್ನೂ ಲಕ್ಷಣವನ್ನು ನಿರ್ದೇಶಿಸುವುದು ಅಪ್ರಸಕ್ತವೆನಿಸಲಾರದು.

ಷಟ್ಪದಿ ಎಂದ ಕೂಡಲೆ ಈಗ ನಮಗೆ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂಬ ಆರು ಬಗೆಗಳು ಥಟ್ಟನೆ ನೆನಪಾಗುತ್ತವೆ; ಇವುಗಳ ಧಾಟಿಯೇ ಬಾಲ್ಯದಿಂದಲೂ ಬಳಕೆಯಾಗಿರುವುದರಿಂದ ३, ೪ ಅಥವಾ ೫ ಮಾತ್ರೆಗಳ ಗಣಗಳಿಂದ ಷಟ್ಪದಿಯ ಪಾದಗಳನ್ನು ಅಳೆದು ನೋಡುವ ಪ್ರವೃತ್ತಿಯೂ ಸಹಜವಾಗಿ ಉಂಟಾಗುತ್ತದೆ. ಆದರೆ ಕನ್ನಡದಲ್ಲಿ ಮೊದಲಿಗೆ ಇದ್ದುದು ಒಂದೇ ಷಟ್ಪದಿ, ಈ ಆರಲ್ಲ. ನಾಗವರ್ಮನು ತನ್ನ 'ಛಂದೋಂಬುಧಿ'ಯಲ್ಲಿ (ಕ್ರಿ.ಶ. ಸುಮಾರು ೯೯೦) "ಷಟ್ಪದಿ" ಎಂದು ಹೆಸರು ಕೊಟ್ಟು ಹೇಳಿದ್ದುದು ಒಂದೇ ಪದ್ಯಜಾತಿ. ಶರ, ಕುಸುಮ ಮೊದಲಾದವು ಛಂದೋಬುಧಿಯಲ್ಲಿ ಪ್ರಕ್ಷಿಪ್ತವಾದವೆಂಬುದು ಆ ಗ್ರಂಥದ ಮಾತೃಕೆಗಳ ಪರಿಶೀಲನೆಯಿಂದ ವ್ಯಕ್ತವಾಗುತ್ತದೆ. ಕನ್ನಡ ಛಂದಸ್ಸು ವಿಸ್ತರಿಸಿದಂತೆಲ್ಲ, ಮಾರ್ಪಾಡು ಹೊಂದಿದಂತೆಲ್ಲ ಛಂದೋಂಬುಧಿಯ ಪಾಠವೂ ಬಗೆಬಗೆಯಾಗಿ ರೂಪು ತಳೆಯಿತು. ಛಂದೋಂಬುಧಿಯ ಪಾಠಭೇದಗಳ ಚರಿತ್ರೆ ಕನ್ನಡ ಛಂದಸ್ಸಿನ ಚರಿತ್ರೆಗೆ ಒಂದು ರೀತಿಯ ಪ್ರತೀಕವಾಗಿದೆಯೆಂದು ಕೂಡ ಹೇಳಬಹುದು. ಇನ್ನೊಂದು ಮುಖ್ಯ ವಿಷಯ. ನಾಗವರ್ಮನು ಷಟ್ಪದಿಯನ್ನು

ಛಂದೋಂಬುಧಿಯಲ್ಲಿ "ಕರ್ಣಾಟಕ ವಿಷಯ ಜಾತಿ"ಗೆ ಮೀಸಲಾಗಿರುವ ಪಂಚಮಾಧಿಕಾರದಲ್ಲಿ ಪಿರಿಯಕ್ಕರ, ತ್ರಿಪದಿ ಮೊದಲಾದವುಗಳ ಮಾಲೆಯಲ್ಲಿ ಕೊಟ್ಟು, ಅವುಗಳಂತೆಯೇ ಇದರ ಲಕ್ಷಣವನ್ನೂ "ಅಂಶಗಣ"ಗಳಿಂದ ನಿರ್ದೇಶಿಸಿದ್ದಾನೆ.

"ಅಂಶಗಣ"ಗಳ ಸ್ವರೂಪವನ್ನು ಕುರಿತು ದಿಕ್ಸೂಚನೆ ಮಾಡುವುದು ಇಲ್ಲಿ ಅಪ್ರಕೃತವಾಗಲಾರದು. ಬ್ರಹ್ಮ, ವಿಷ್ಣು, ರುದ್ರ ಎಂದು ಮೂರೂ ಗಣಗಳು ಕನ್ನಡದಲ್ಲಿ ಹೆಸರಾಗಿವೆ. ಬ್ರಹ್ಮಗಣದಲ್ಲಿ ಎರಡು "ಅಂಶ"ಗಳೂ ವಿಷ್ಣುಗಣದಲ್ಲಿ ಮೂರೂ ರುದ್ರಗಣದಲ್ಲಿ ನಾಲ್ಕೂ ಇರುತ್ತವೆ. "ಅಂಶ"ದ ಮೂಲಮಾಪಕ ಒಂದು ಗುರ್ವಕ್ಷರ (—). ಗಣದ ಮೊದಲನೆಯ ಅಂಶ ಒಂದು ಗುರುವಾಗಿರುತ್ತದೆ; ಇದರ ಸ್ಥಾನದಲ್ಲಿ ಮಾತ್ರ ಎರಡು ಲಘುಗಳು (UU) ಬರಬಹುದು. ಗಣದಲ್ಲಿ ಆ ಮುಂದಿನ ಪ್ರತಿಯೊಂದು ಅಂಶವೂ ಒಂದು ಗುರುವೋ (—) ಒಂದು ಲಘುವೋ (U) ಆಗಿರುತ್ತದೆ. ಎಂದರೆ, ಗಣದ ಮೊದಲನೆಯ ಅಂಶ ಮಾತ್ರ ಒಂದು ಗುರುವಿನಿಂದ ಅಥವಾ ಎರಡು ಲಘುಗಳಿಂದ ಕೂಡಿರಬಹುದು. (U–ಈ ಬಗೆಯ ಅಕ್ಷರವಿನ್ಯಾಸ ಇಲ್ಲಿ ಬರುವಂತಿಲ್ಲ.) ಗಣದ ಮಿಕ್ಕ ಅಂಶಗಳೆಲ್ಲ ಒಂದೊಂದೇ ಅಕ್ಷರದಿಂದ (Syllable) ಆಗಿರಬೇಕು. ಈ ಅಕ್ಷರವು ಲಘುವಾಗಿದ್ದರೆ ಅದನ್ನು ಸಂದರ್ಭೋಚಿತವಾಗಿ ಎಳೆದು ಹೇಳಿ ಅಥವಾ ಪಲುಕಿಸಿ ತಾಳವನ್ನು ಸರಿತೂಗಿಸುವುದು ಹಿಂದಿನಿಂದ ಬಂದ ಪದ್ಧತಿ. ಮಾತ್ರಾಗಣದ ಲಯಕ್ಕೂ ಅಂಶಗಣದ ಲಯಕ್ಕೂ ವ್ಯತ್ಯಾಸವಿರುವುದು ಅಕ್ಷರಗಳ ಈ ಬಳುಕಿನಲ್ಲಿ, ಇದರಿಂದ ಸಿದ್ಧಿಸುವ ಧಾಟಿಯ ಒನಪಿನಲ್ಲಿ. ಕಿವಿಯಾರ ಕೇಳಿದ ಹೊರತು ಈ ವಿಶಿಷ್ಟತೆಯನ್ನು ಮನಗಾಣುವುದು ಕಷ್ಟ. ಆದರೂ ಅಂಶಗಣಗಳ ನಡೆ ಹೇಗಿರುವುದುದೆಂಬುದನ್ನು ಸೂಚಿಸಲು "ಸಾಂಗತ್ಯ"ದ ಕಡೆಗೆ ಬೆರಳು ನೀಡಬಹುದು. ಅಂಶ ಲಯಕ್ಕೆ ನಿದರ್ಶನವಾಗಿ ಕನ್ನಡದಲ್ಲಿ ಇಂದಿಗೂ ಉಳಿದಿರುವುದು—ಜನಪದ ಸಾಹಿತ್ಯದ ಕೆಲವು ಹಾಡುಗಳನ್ನು ಬಿಟ್ಟರೆ—ಸಾಂಗತ್ಯವೊಂದೇ.[೨] ಹಿಂದೆ ಹಳಗನ್ನಡದ ಕಾಲದಲ್ಲಿ ಪಿರಿಯಕ್ಕರ, ತ್ರಿಪದಿ, ಷಟ್ಪದಿ ಮೊದಲಾದ ಎಲ್ಲ "ದೇಶ್ಯ" ಛಂದಸ್ಸುಗಳೂ ಅಂಶಗಣದ ಧಾಟಿಯಲ್ಲೇ ನಡೆಯುತ್ತಿದ್ದುವು. ಇವುಗಳಲ್ಲಿ ಪಿರಿಯಕ್ಕರ ಮೊದಲಾದುವು ತುಂಬ ಹಿಂದೆಯೇ

---

೧. ಬ್ರಹ್ಮ ವಿಷ್ಣು ರುದ್ರಗಣಗಳ ಮೂಲಮಾಪಕವನ್ನು (Unit of measurement) "ಅಂಶ"ವೆಂದು ಕರೆದು, ಈ ಗಣಗಳನ್ನು "ಅಂಶಗಣ"ಗಳೆಂದು ನಿರ್ದೇಶಿಸಿದವರು ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು. ಮಗಣ ಯಗಣ ಮೊದಲಾದ ಸಂಸ್ಕೃತದ ಅಕ್ಷರಗಣಗಳಿಂದಲೂ, ೩.೪.೫ ಮೊದಲಾದ ಮಾತ್ರಾಗಣಗಳಿಂದಲೂ ಈ ದ್ರಾವಿಡ ಜನ್ಯ ಗಣಗಳನ್ನು ಬೇರ್ಪಡಿಸಿ ಹೇಳಲು ಈ ಹೆಸರು ತುಂಬ ಉಪಯುಕ್ತವಾಗಿರುವುದ ರಿಂದ ಅದನ್ನೇ ಇಲ್ಲಿ ಬಳಸಿದ್ದೇವೆ. ("ಅಂಶಗಣ"ವನ್ನು "ದೇವಗಣ"ವೆಂದೂ ಕೆಲವರು ಕರೆಯುವುದುಂಟು.)

೨. ಕನ್ನಡದ ಸೋದರ ಭಾಷೆಗಳಾದ ತಮಿಳು ಮಲೆಯಾಳಗಳಲ್ಲಿ ನಮ್ಮ ಅಂಶ ಲಯಕ್ಕೆ ಸಂವಾದಿಯಾದ ದೇಶ್ಯಲಯ ಇನ್ನೂ ಜೀವಂತವಾಗಿದೆ.

ನಿಂತು ಹೋದುವು. ತ್ರಿಪದಿಯ ರಚನೆಯಲ್ಲಿ ಒಂದು ದೊಡ್ಡ ಪರಿವರ್ತನೆ ಉಂಟಾಯಿತು: ಇದರ ನಡೆ ಅಂಶಗಣದ ಧಾಟಿಯಿಂದ ಮಾತ್ರಾಗಣದ ಧಾಟಿಗೆ ತಿರುಗಿತು. ಕ್ರಿ.ಶ. ಸುಮಾರು ೭೦೦ರಲ್ಲಿ ರಚಿತವಾದ ತ್ರಿಪದಿಗಳಲ್ಲಿ ಒಂದನ್ನು (ಉದಾಹರಣೆಗೆ, "ಸಾಧುಗೆ ಸಾಧು..." ಎಂಬುದನ್ನು[೪]) ಸರ್ವಜ್ಞನ ತ್ರಿಪದಿಗಳಲ್ಲಿ ಒಂದರ ಪ್ರಚಲಿತ ಪಾಠದೊಂದಿಗೆ ಹೋಲಿಸಿದರೆ ಈ ಧಾಟಿಯ ಅಂತರ ಸ್ಪಷ್ಟವಾಗುತ್ತದೆ. ತ್ರಿಪದಿಯ ದಾರಿಯನ್ನೇ ಷಟ್ಪದಿಯೂ ಹಿಡಿಯಿತು. ಅಂಶಗಣದ ನಡೆಯ ಒಂದು ಷಟ್ಪದಿ ಮರೆಯಾಗಿ, ಬೇರೆ ಬೇರೆ ಮಾತ್ರಾಗಣಗಳಿಂದ ನಿಷ್ಪನ್ನವಾಗುವ ಶರ, ಕುಸುಮ ಮೊದಲಾದ ಷಟ್ಪದಿಗಳ ಷಟ್ಕವು ರೂಢಿಗೆ ಬಂದಿತು. (ಈ ನಡುವೆ ರಾಘವಾಂಕನು 'ವೀರಶಚರಿತೆ'ಯಲ್ಲೂ ಕುಮುದೇಂದು ತನ್ನ ರಾಮಾಯಣದಲ್ಲೂ ಕೆಲವು ವಿಲಕ್ಷಣವಾದ ಷಟ್ಪದಿಗಳನ್ನೂ ಕಟ್ಟಿ ನೋಡಿದರು.) ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ನಡೆದ ಈ ಮಹಾಪರಿವರ್ತನೆಯ ವಿಷಯವನ್ನೂ "ಅಂಶಗಣ"ಗಳ ವೈಶಿಷ್ಟ್ಯವನ್ನೂ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು 'ಕನ್ನಡ ಕೈಪಿಡಿ'ಯಲ್ಲಿ[೫] ಸಪ್ರಮಾಣವಾಗಿ ಪ್ರತಿಪಾದಿಸಿರುವುದರಿಂದ ಈ ವಿಚಾರವಾಗಿ ಇಲ್ಲಿ ಇನ್ನು ಮಾತು ಬೆಳೆಸುವ ಆವಶ್ಯಕತೆಯಿಲ್ಲ.

ಷಟ್ಪದಿಯ ಪ್ರಾಚೀನರೂಪದ ಲಕ್ಷಣವನ್ನು ತಿಳಿದುಕೊಳ್ಳಲು ನಮಗೆ ಇರುವ ಸಹಾಯ ನಾಗವರ್ಮನ 'ಛಂದೋಂಬುಧಿ'ಯೊಂದೇ ಅಲ್ಲ. ಜಯಕೀರ್ತಿ ಎಂಬಾತನು ಸಂಸ್ಕೃತದಲ್ಲಿ ಬರೆದಿರುವ 'ಛಂದೋನುಶಾಸನ'ದಲ್ಲಿ ಒಂದು ಅಧ್ಯಾಯ (ಸಪ್ತಮಾಧಿಕಾರ) ಪೂರ್ತಿಯಾಗಿ "ಕರ್ಣಾಟಕ ವಿಷಯ ಭಾಷಾಜಾತಿ"ಗೆ ಮೀಸಲಾಗಿದೆ. ಜಯಕೀರ್ತಿಯ ಕಾಲ ಬಹುಶಃ ಕ್ರಿ.ಶ. ೧೧ನೆಯ ಶತಮಾನ. ಅವನ ಮನೆಮಾತು ಕನ್ನಡ; ಕನ್ನಡ ಸಾಹಿತ್ಯದ ಪರಿಚಯ ಅವನಿಗೆ ಚೆನ್ನಾಗಿ ಇದ್ದಿತಲ್ಲದೆ 'ಛಂದೋಂಬುಧಿ'ಯನ್ನೂ ಅವನು ನೋಡಿದ್ದಂತೆ ತೋರುತ್ತದೆ. ಷಟ್ಪದಿಯ ಲಕ್ಷ್ಯಲಕ್ಷಣಗಳೆರಡೂ ಜಯಕೀರ್ತಿಯ ಗ್ರಂಥದಲ್ಲಿ ಒಂದೇ ಪದ್ಯದಲ್ಲಿ (೭.೧೭) ದೊರೆಯುತ್ತವೆ. ಸಂಸ್ಕೃತದಲ್ಲಿ ಶಾರ್ಙ್ಗದೇವನ (ಕ್ರಿ.ಶ. ೧೩ನೆಯ ಶತಮಾನ) 'ಸಂಗೀತ ರತ್ನಾಕರ'ದಲ್ಲಿಯೂ ಷಟ್ಪದಿಯ ಲಕ್ಷಣ ಬಂದಿದೆ. (೪.೨೭೨—೩); ಇದು ಕರ್ಣಾಟಕ ಭಾಷೆಯದೆಂದು ಅಲ್ಲಿ ಸ್ಪಷ್ಟವಾಗಿಯೇ ಉಕ್ತವಾಗಿದೆ. ಇದೆಲ್ಲದರ ಜೊತೆಗೆ ತೆಲುಗುಭಾಷೆಯ 'ಕವಿಜನಾಶ್ರಯ' (ಜಾತ್ಯಧಿಕಾರ, ೩೩), (ಛಂದೋದರ್ಪಣ' (೩.೪೬), 'ಅಪ್ಪಕವೀಯ' (೪.೨೯೬) ಎಂಬ ಪ್ರಾಚೀನ ಛಂದೋ ಗ್ರಂಥಗಳಲ್ಲೂ ಷಟ್ಪದಿಯ ಲಕ್ಷ್ಯಲಕ್ಷಣಗಳನ್ನು ನೋಡಬಹುದು.

---

೪. Indian Antiquary. Vol. X, ಪು. ೬೧, 'ಕನ್ನಡ ಕೈಪಿಡಿ,' ಸಂಪುಟ ೧ (ಎರಡನೆಯ ಮುದ್ರಣ), ಪು. ೧೪೮ ಮತ್ತು ಮುಂದಕ್ಕೆ ನೋಡಿ.

೫. ಮೇಲೆ ಉಕ್ತವಾಗಿರುವ 'ಕನ್ನಡ ಕೈಪಿಡಿಯಲ್ಲಿ' 'ಕನ್ನಡ ಛಂದಸ್ಸಿನ ಚರಿತ್ರೆ' ಎಂಬ ಅಧ್ಯಾಯವನ್ನು ನೋಡಿ. "ಅಂಶಗಣ"ಗಳ ವಿವರ ಪು. ೧೪೨—೧೪೪ರಲ್ಲೂ, ಷಟ್ಪದಿಯ ಚರಿತ್ರೆ ಪು. ೧೭೧—೧೮೦ ರಲ್ಲೂ ದೊರೆಯುತ್ತವೆ.

ಇಲ್ಲಿ ಗಮನಾರ್ಹವಾದ ವಿಷಯವೇನೆಂದರೆ—ಷಟ್ಪದಿಯ ಲಕ್ಷಣವನ್ನು ಕುರಿತು ಈ ಎಲ್ಲ ಗ್ರಂಥಗಳಲ್ಲೂ ಕಾಣಬರುವ ಐಕಮತ್ಯ: ಷಟ್ಪದಿಯ ಮೊದಲ ಎರಡು ಪಾದಗಳಲ್ಲಿ ಎರಡೆರಡು ವಿಷ್ಣುಗಣಗಳು, ಮೂರನೆಯ ಪಾದದಲ್ಲಿ ಎರಡು ವಿಷ್ಣುಗಳಾದಮೇಲೆ ಒಂದು ರುದ್ರಗಣ (ಎಂದರೆ ವಿ+ವಿ । ವಿ+ವಿ । ವಿ+ವಿ+ರು ॥); ಉತ್ತರಾರ್ಧದಲ್ಲಿಯೂ ಹೀಗೆಯೇ. ಈ ಲಕ್ಷಣಕಾರರು ಉಪಯೋಗಿಸಿರುವ ಸಂಕೇತಗಳು ಬೇರೆ ಬೇರೆ : ನಾಗವರ್ಮನು ಬ್ರಹ್ಮ, ವಿಷ್ಣು, ರುದ್ರ ಎಂದು ಕರೆದಿರುವ ಗಣಗಳನ್ನು ಸಂಸ್ಕೃತದಲ್ಲಿ ಕ್ರಮವಾಗಿ ಸೂರ್ಯ, ಇಂದ್ರ, ಚಂದ್ರ ಎಂದೂ ಕರೆಯುತ್ತಾರೆ.[೭] (ಈ ವೈವಿಧ್ಯ ಸಾಲದೆಂಬಂತೆ ಸಂಸ್ಕೃತದಲ್ಲಿ ಈ ಗಣಗಳಿಗೆ ಕ್ರಮವಾಗಿ "ರ", "ಲ"; "ಧ" ಎಂಬ ಸಂಕೇತಗಳನ್ನು ಉಪಯೋಗಿಸಿರುವುದೂ ಉಂಟು!) ಕೆಲವರು ಪಾದಪಾದವನ್ನೂ ಹೆಸರಿಸಿ ಅಲ್ಲಿಯ ಗಣಗಳನ್ನು ಹೇಳಿದರೆ ಮತ್ತೆ ಕೆಲವರು ಪೂರ್ವಾರ್ಧ ಉತ್ತರಾರ್ಧಗಳ ಲೆಕ್ಕವನ್ನು ಮಾತ್ರ ಕೊಡುತ್ತಾರೆ. ಆದರೆ ಲಕ್ಷಣ ಮಾತ್ರ ಒಂದೇ.

ಲಕ್ಷ್ಯಲಕ್ಷಣಗಳನ್ನು ಒಂದೇ ಪದ್ಯದಲ್ಲಿ ಕೊಡುವುದೇ ನಾಗವರ್ಮನ ಪದ್ಧತಿಯಷ್ಟೆ: ಷಟ್ಪದಿಯನ್ನು ಕುರಿತ ಅವನ ಉಕ್ತಿ ಅದಕ್ಕೆ ಅನುಸಾರವಾಗಿಯೇ ಇದ್ದಿತೆಂದು ನಂಬಬಹುದು. ಆದರೆ ಷಟ್ಪದಿಯ ಚರಿತ್ರೆಯಲ್ಲಿ ಆದ ಪರಿವರ್ತನೆಯ ಸೋಂಕು ನಾಗವರ್ಮನ ಪದ್ಯಕ್ಕೂ ತಟ್ಟಿ, ಈಗ ಅಚ್ಚಿನ ಪುಸ್ತಕಗಳಲ್ಲಿ ಕಾಣಬರುವ ಪಾಠವು "ಶರಷಟ್ಪದಿ"ಗೆ ಉದಾಹರಣೆಯಾಗಿ ಪರಿಣಮಿಸಿದೆ. (ಆದರೂ ವಿಷ್ಣುಗಣ ರುದ್ರಗಣಗಳ ಹೆಸರೇ ಲಕ್ಷಣದಲ್ಲಿ ಉಳಿದಿದೆ; ನಾಲ್ಕು ಮಾತ್ರೆಯ ಗಣದ ಸೊಲ್ಲೇ ಅಲ್ಲಿಲ್ಲ!) ಅಚ್ಚಿನ ಪುಸ್ತಕಗಳನ್ನೇ ನೆಚ್ಚದೆ, ಅವುಗಳ ಸಂಪಾದಕರು ಉಲ್ಲೇಖಿಸಿರುವ ಪಾಠಾಂತರಗಳನ್ನೂ ಇನ್ನೂ ಕೆಲವು ಕೈಬರಹದ ಮಾತೃಕೆಗಳಲ್ಲಿ ದೊರೆಯುವ ಪಾಠಗಳನ್ನೂ ಷಟ್ಪದಿಯ ಸರಿಯಾದ ಲಕ್ಷಣವನ್ನೂ ಗಮನಕ್ಕೆ ತಂದುಕೊಂಡಲ್ಲಿ, ನಾಗವರ್ಮನ ಮೂಲಪಾಠ ಈ ಕೆಳಗೆ ಕೊಟ್ಟಿರುವಂತೆ ಇದ್ದಿರಬೇಕೆಂದು ಊಹಿಸಬಹುದು. (ಅಂಶಗಳನ್ನೂ ಗಣವಿನ್ಯಾಸವನ್ನೂ ಇಲ್ಲಿಯೇ ಗುರುತಿಸಿ ತೋರಿಸಿದೆ.)—

ವಿ ವಿ

ಮಂ. ದ. ರ । ಧರ. ಗ. ಣಂ ।

---

೬. ಜಯಕೀರ್ತಿಯ 'ಛಂದೋನುಶಾಸವನ'ವನ್ನೂ ಕನ್ನಡದ ದೃಷ್ಟಿಯಿಂದ ಅದರ ಮಹತ್ತ್ವವನ್ನೂ ಕುರಿತು H.C. Velankar: 'Chandonus'asana of Jayakirti and Ancient Kannada Metres' ಎಂಬ ಲೇಖನವನ್ನು ನೋಡಬಹುದು. (JBBARS' New Series, Vol. 21). ಪ್ರೊ. ವೇಲಣಕರ್ ಅವರೇ ಸಂಪಾದಿಸಿ ಇತ್ತೀಚೆಗೆ ಪ್ರಕಟಿಸಿರುವ 'ಜಯದಾಮನ್' ಎಂಬ ಸಂಕಲನದಲ್ಲಿ 'ಛಂದೋನುಶಾಸನ' ಸಮಗ್ರವಾಗಿ ಬಂದಿದೆ.

೭. ಕನ್ನಡದ ಬ್ರಹ್ಮ ವಿಷ್ಣು ರುದ್ರಗಣಗಳ ಕೆಲವು ಪ್ರಭೇದಗಳನ್ನು ತೆಲುಗಿನ ಸೂರ್ಯ ಇಂದ್ರ ಚಂದ್ರಗಣಗಳು ಒಳಕೊಳ್ಳುವುದಿಲ್ಲ. ಅದರ ವಿವರಣೆ ಇಲ್ಲಿ ಅಪಕೃತ.

ಏ ಏ
ಬಂ. ದಿ. ಕರ್ಾ । ಜಿಂ. ತ್ಯ. ದೊಳ್ ।
ಏ ಏ ರು
ಕುಂ. ದ. ದೆ । ನೆಲ. ಸು. ಗೆ. । ಮದ. ನ. ಹ. ರಂ ॥
ಏ ಏ
ಇಂ. ದು. ನಿ । ಭಾ. ನ. ನೆ
ಏ ಏ
ಮುಂ. ದ. ಣ । ತೆಜ. ನು. ಮಿಾ ।
ಏ ಏ ರು
ಯಂ. ದ. ಮಾ । ದಂ. ದು. ಷ । ಟ್ಪ [ದ]. ಲ. ಕ್ಷ. ಣಂ ॥[೮]

ಮಾತ್ರಾಗಣದಲ್ಲಿ ಲೆಕ್ಕ ಇಲ್ಲಿಗೆ ಅನ್ವಯಿಸುವುದೇ ಇಲ್ಲವೆಂಬುದನ್ನು ಗಮನಿಸಬೇಕು.

ನಾಗವರ್ಮನೂ ಮಿಕ್ಕ ಲಕ್ಷಣಕಾರರು ಹೇಳುವ ಲಕ್ಷಣ ಕಲ್ಪಿತವಲ್ಲ, ಮೇಲೆ ಕೊಟ್ಟಿರುವ ಪರಿಷ್ಕೃತ ಪಾಠ ಕೃತಕವಲ್ಲ ಎಂದು ದೃಢಪಡಿಸಲು ನಮ್ಮ ಸುದೈವದಿಂದ ಶಾಂತಿನಾಥನ 'ಸುಕುಮಾರ ಚರಿತ'ದಲ್ಲಿ (ಕ್ರಿ.ಶ. ಸು. ೧೦೬೦) ಒಂದು "ಷಟ್ಪದ" ದೊರೆಯುತ್ತದೆ. 'ಸುಕುಮಾರ ಚರಿತ' ಇನ್ನೂ [೧೯೫೨] ಪ್ರಕಟವಾಗಿಲ್ಲ; ಅದರ ಸಂಪಾದನೆಯನ್ನು ಕೈಕೊಂಡಿರುವ ಶ್ರೀ ತ.ಸು. ಶಾಮರಾಯರು ಒಂದು ಲೇಖನದಲ್ಲಿ ಈ ಪದ್ಯವನ್ನು ಎತ್ತಿಕೊಟ್ಟು ಅದರ ಸರಿಯಾದ ಲಕ್ಷಣವನ್ನು ನಿರ್ದೇಶಿಸಿದ್ದಾರೆ. ಆ ಪದ್ಯವನ್ನು ಇಲ್ಲಿ ಉದಾಹರಿಸಬಹುದು.

ಅದು. ಪ. ರ । ಮಾ. ಸ್ಪ. ದ ।
ಮದು. ಪು. ಣ್ಯ । ಸಂ. ಪ. ದ ।
ಮದು. ಮ. ಹಾ । ಭ್ಯುದ. ಯ. ವಿ । ಲಾ. ಸಾ. ವಾ. ಸಂ ॥
ಅದು. ದಿ. ಬ್ಯ । ಮದು. ಸೇ. ಬ್ಯ ।
ಮದು. ಸೌ. ಮ್ಯ । ಮದು. ರ. ಮ್ಯ ।
ಮದು. ಸು. ಖಾ । ಧಾ. ರ. ಸಂ । ಸಾ. ರ. ಸಾ. ರಂ ॥ (೧೨.೫೧)

---

೮. ಆರನೆಯ ಪಾದವು "ಯಂದಮೆಯಾಗಲ್ಕೆ ಷಟ್ಪದಿ ಕೇಳ್" ಎಂಬಂತೆ ಇದ್ದಿರುವುದೂ ಅಸಂಭವಲ್ಲ. ಈ ಪದ್ಯದ ಪಾಠವನ್ನು ನಿರ್ಣಯಿಸುವಾಗ ಮೈಸೂರು ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿರುವ ಛಂದೋಂಬುಧಿಯ ಎರಡು ಕೈಬರೆಹದ ಮಾತೃಕೆಗಳ (KA 283, KA 287) ಉಪಯೋಗವನ್ನೂ ಪಡೆಯಲಾಗಿದೆ. ನಮ್ಮ ಸ್ವೀಕೃತ ಪಾಠದ ಸಮರ್ಥನೆ ಈ ಚಿಕ್ಕ ಲೇಖನಕ್ಕೆ ಭಾರವಾಗಬಹುದೆಂದು ಭಾವಿಸಿ ಅದನ್ನು ಕುರಿತು ಇಲ್ಲಿ ಪ್ರಸಂಗಿಸಿಲ್ಲ.

ಇಲ್ಲಿ ಪ್ರತಿಯೊಂದು ಅರ್ಧದಲ್ಲಿಯೂ "ವಿ+ವಿ । ವಿ+ವಿ । ವಿ+ವಿ+ರು ॥" ಎಂಬ ಲಕ್ಷಣವು ಚಚು ತಪ್ಪದೆ ಅನ್ವಯಿಸುವುದನ್ನೂ ಮಾತ್ರಾಗಣದ ಲೆಕ್ಕಕ್ಕೆ ಇದು ಎಷ್ಟು ಮಾತ್ರಕ್ಕೂ ಅಳವಡದಿರುವುದನ್ನೂ ಗಮನಿಸಬೇಕು. ಮಾತ್ರಾಗಣದ ಲೆಕ್ಕದಂತೆ ಇದು ೪ ೪ (=೮) । ೫ ೪ (=೯) । ೫ ೪ ೬ ಗ (=೧೭) ॥ ೫ ೫ (=೧೦) । ೫ ೫ (=೧೦) । ೫ ೫ ೫ ಗ = ೧೭ ॥ ಎಂದು ಆಗುತ್ತದೆ.

ಶ್ರೀ ಪಾಂಡುರಂಗರಾಯರು ಉದ್ಧರಿಸಿರುವ ಅಮ್ಮಿನಭಾವಿಯ ಶಾಸನದ ಷಟ್ಪದಿಯ ಕಡೆಗೆ ಈಗ ತಿರುಗಬಹುದು. ಮೇಲೆ ನಿರೂಪಿಸಿರುವ ವಿಷಯಗಳನ್ನೂ ಈ ಶಾಸನದ ಕಾಲವು (ಕ್ರಿ.ಶ. ಸು. ೧೦೭೧) ಶಾಂತಿನಾಥನ ಕಾಲಕ್ಕೆ (ಕ್ರಿ.ಶ. ಸು ೧೦೬೦) ತೀರ ಹತ್ತಿರವೆಂಬುದನ್ನೂ ನೆನಪಿನಲ್ಲಿಟ್ಟುಕೊಂಡು ಪರಿಶೀಲಿಸಿದರೆ, ಈ ಪದ್ಯದ ಸರಿಯಾದ ಲಕ್ಷಣ ಕಷ್ಟವಿಲ್ಲದೆ ಹೊಳೆಯುತ್ತದೆ.

ಹರ. ಪಾ. ದಾಂ । ಬುಜ. ಭೃಂ ಗಂ ।
ಪರ. ನಾ. ರೀ । ಜನ. ದೂ. ರಂ ।

....

. . . ಜಾತರೂಪಂ
ಸರ. ಸ.ತಿ । ಗಣ.ಭಕ್ತ. ।
ನರ. ಸ.ಮ್ಮಂ । ನೆಗ. ರ್ದ.ನೀ । ಧರಗೆಲ್ಲಂ ॥

೧ ೨ ಒಂದು ಮತ್ತು ಎರಡನೆಯ ಪಾದಗಳು ಎರಡೆರಡು ವಿಷ್ಣುಗಳಿಂದ ಕೂಡಿ ಲಕ್ಷಣಬದ್ಧವಾಗಿವೆ. (೩) ಮೂರನೆಯ ಪಾದ ಅತ್ಯಂತ ನಷ್ಟವಾಗಿರುವುದರಿಂದ ಅದನ್ನು ಕುರಿತು ಏನೂ ಹೇಳುವಂತಿಲ್ಲ. (೩) ನಾಲ್ಕನೆಯ ಪಾದದಲ್ಲಿ ಉಳಿದಿರುವ "ಜಾತರೂಪಂ" ಎಂಬುದು ವಿಷ್ಣುಗಣಕ್ಕೆ ಅಳವಡುವುದಿಲ್ಲ. (ನಾಲ್ಕು ಮಾತ್ರೆಯ ಗಣಕ್ಕೂ ಹೊಂದುವುದಿಲ್ಲ.) ಅದು "ಜಿತರೂಪಂ" ಎಂದೋ "ನಿರ್ಜಿತರೂಪಂ" ಎಂದೋ ಇದ್ದಿದ್ದ ಪಕ್ಷದಲ್ಲಿ ಗಣದ ವಿನ್ಯಾಸ ಸರಿಹೋಗುತ್ತಿತ್ತು. ಹೀಗಿರುವುದರಿಂದ "ಜಾತ ರೂಪಂ" ಎಂಬ ಕಡೆ ಶಾಸನದ ಅಕ್ಷರಗಳು ಸ್ಪಷ್ಟವಾಗಿ ಕಾಣಿಸುತ್ತವೆಯೆ, ಅವನ್ನು ತಪ್ಪಿಲ್ಲದೆ ಉಲ್ಲೇಖಿಸಲಾಗಿದೆಯೆ ಎಂಬ ಪ್ರಶ್ನೆ ಉದಿಸುತ್ತದೆ. (೫) ಐದನೆಯ ಪಾದದ ಕೊನೆಯಲ್ಲಿ ಶ್ರೀ ಪಾಂಡುರಂಗರಾಯರು [ತಾಂ] ಎಂಬುದನ್ನು ಆವರಣ ಚಿಹ್ನೆಯಲ್ಲಿ ಕೊಟ್ಟಿದ್ದಾರೆ. "ಒಂದು ಅಕ್ಷರವನ್ನು ಸರಿಪಡಿಸಿಕೊಂಡು" ಈ ಪದ್ಯವನ್ನು ಓದಿರುವುದಾಗಿ ಅವರು ಹೇಳುತ್ತಾರೆ. ಆ "ಸರಿಪಡಿಸಿದ" ಅಕ್ಷರ ಈ "ತಾಂ" ಎಂದೇ ತೋರುತ್ತದೆ. ಇಲ್ಲಿ "ಸರಿಪಡಿಸಿದ ಎಂಬ ಮಾತಿನ ಅರ್ಥ ಸ್ಪಷ್ಟವಾಗುವುದಿಲ್ಲ. ಈ ಅಕ್ಷರಕ್ಕೆ ಶಾಸನದಲ್ಲಿ ಆಧಾರವೇನಾದರೂ ಉಂಟೆ? ಇಲ್ಲವೆ, ಈ ಷಟ್ಪದಿಗೆ ತಾವು ಸೂಚಿಸಿರತಕ್ಕ ಲಕ್ಷಣವನ್ನು ಹೊಂದಿಸುವ ಸಲುವಾಗಿ, ನಾಲ್ಕು ಮಾತ್ರೆಯ ಮೂರು ಗಣಗಳ ಲೆಕ್ಕ ಭರ್ತಿಯಾಗುವಂತೆ, ಶ್ರೀಯುತರು "ತಾಂ" ಎಂಬುದನ್ನು ಹೊಸದಾಗಿ ಸೇರಿಸಿದ್ದಾರೆಯೆ ಎಂಬ ಸಂದೇಹ

---

೯. 'ಸುಕುಮಾರ ಚರಿತೆಯಲ್ಲಿ ಕಂಡುಬರುವ ಒಂದು ಷಟ್ಪದಿ' ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ೩೧.೨). ['ಸುಕುಮಾರಚರಿತ' ೧೯೫೪ರಲ್ಲಿ ಪ್ರಕಟವಾಯಿತು].

ಒದಗುತ್ತದೆ. [ತಾಂ] ಎಂಬುದು ಇಲ್ಲಿ ಪ್ರಕ್ಷಿಪ್ತವೆಂದೇ ನಮಗೆ ತೋರುತ್ತದೆ. ಆದಕಾರಣ ನಮ್ಮ ಪ್ರಸ್ತಾರದಲ್ಲಿ ಅದನ್ನು ಬಿಟ್ಟಿದ್ದೇವೆ. ಈಗ ಎರಡು ವಿಷ್ಣುಗಣಗಳುಸರಿಯಾಗಿ ಗೋಚರಿಸುತ್ತವೆ. ಇನ್ನೊಂದು ವಿಷಯ : "ಸರಸತಿಗಣಭಕ್ತಂ" ಎಂಬ ಪದಕ್ಕೆ ಅರ್ಥ ಸರಿಯಾಗಿ ಆಗುವುದಿಲ್ಲ. ಇಲ್ಲಿ ಯಾವುದಾದರೂ ಅಕ್ಷರ ತಪ್ಪಾಗಿದೆಯೆ? (೬) ಇನ್ನು ಆರನೆಯ ಪಾದ. "ನೆಗರ್ದಂ" (ನೆಗಟ್ದಂ) ಎಂಬ ಕಡೆ, ಶ್ರೀ ಪಾ. ವೆಂ. ಆ ಅವರು ಗಮನಿಸಿರುವಂತೆ, "ರ್ದ" ಶಿಥಿಲದ್ವಿತ್ವವೇ ಸರಿ. ಪಾದ ಈಗಿರುವಂತೆಯೇ ಪ್ರಸ್ತರಿಸಿದರೆ, "ಧರೆ. ಗೆ. ಲ್ಲಂ." ಎಂಬ ಕೊನೆಯ ಗಣವೂ ವಿಷ್ಣುವೇ ಆಗುತ್ತದೆ. ಆದರೆ ಷಟ್ಪದಿಯ ಪೂವಾರ್ಧ ಉತ್ತರಾರ್ಧಗಳ ಅಂತ್ಯಗಣ ನಾಲ್ಕು ನಾಲ್ಕು ಅಂಶವುಳ್ಳ ರುದ್ರಗಣವಾಗಬೇಕು. (ಇದನ್ನು ವಿಷ್ಣುಗಣ+ಒಂದು ಅಂಶ ಎಂದು ಬೇಕಾದರೂ ಭಾವಿಸಬಹುದು.) ಇಲ್ಲೇಕೆ ಹೀಗೆ ಒಂದು ಅಂಶ ಕಡಮೆ ಬಂದಿದೆಯೋ? "ಧರ.ಣಿ.ಗೆ.ಲ್ಲಂ" ಎಂದೇನಾದರೂ ಮೂಲಪಾಠವಿದ್ದಿರಬಹುದೆ?[೧೦]

ಹೀಗೆ ಒಂದೆರಡು ಸಂದೇಹಗಳು ನಿವಾರಣೆಯಾಗದಿದ್ದರೂ, ಈ ಷಟ್ಪದಿಯ ನಡೆ ಅಂಶಗಣದ್ದೇ ಎಂದು ಹೇಳಲು ಪ್ರಬಲವಾದ ಯಾವ ಆಕ್ಷೇಪಣೆಯೂ ಇಲ್ಲವೆಂದೂ, ಲಕ್ಷಣದ ದೃಷ್ಟಿಯಿಂದ ಇದು "ಅಪೂರ್ವ"ವೇನೂ ಅಲ್ಲವೆಂದೂ ಮನವರಿಕೆಯಾಗದಿರದು.

ಕನ್ನಡದ ಪ್ರಾಚೀನ ಸಾಹಿತ್ಯದಲ್ಲಿ ಷಟ್ಪದಿ ಅತಿವಿರಳ. 'ಸುಕುಮಾರ ಚರಿತ'ದಲ್ಲಿ ದೊರೆಯುವುದರ ಜೊತೆಗೆ ಅಮ್ಮಿನಭಾವಿಯ ಶಾಸನದ ಪ್ರಸ್ತುತ-ಪದ್ಯವೇ, ನಾವು ಬಲ್ಲಮಟ್ಟಿಗೆ, ಸ್ವತಂತ್ರವೂ ಸ್ಪಷ್ಟವೂ ಆದ ಇನ್ನೊಂದು ನಿದರ್ಶನ.[೧೧] ಈ ಪದ್ಯದಲ್ಲಿ ಹಲವು ಅಕ್ಷರಗಳು ಸವೆದು ಹೋಗಿರುವುದೂ, ಓದಲು ಸಾಧ್ಯವಾದ ಕಡೆಗಳಲ್ಲೂ

---

೧೦. [ಶ್ರೀ ದೇಸಾಯಿ ಪಾಂಡುರಂಗರಾಯರು 'ಅಪೂರ್ವಷಟ್ಪದಿಯ ಇಡಿವೃತ್ತ' ಎಂಬ ಲೇಖನವನ್ನು ಈಚೆಗೆ ಬರೆದು ('ಕನ್ನಡನುಡಿ.' ೧೫.೧೧), ಅದರಲ್ಲಿ ಅಮ್ಮಿನಭಾವಿಯ ಷಟ್ಪದವು ಅಂಶಗಣಘಟಿತವೆಂಬುದನ್ನು ಒಪ್ಪಿದ್ದಾರೆ. ೪ನೆಯ ಪಾದದ ಪಾಠ "(ಸರಸನೂರ್ಜಿ)ತ ರೂಪಂ" ಎಂದು ಇದ್ದಿರಬೇಕೆಂದು ಊಹಿಸುತ್ತಾರೆ. ೫–೬ ಪಾದಗಳಲ್ಲಿ "ಸರಸತಿಗಭಕ್ತನರಸಂಮ್ಮಂ" ಎಂಬುದು ಶಾಸನದಲ್ಲಿ ಕಾಣಬರುವ ಪಾಠವೆಂಧು ತಿಳಿಸಿ, ಆದಕಾರಣ ಇಲ್ಲಿ ಉಕ್ತನಾಗಿರುವ ವ್ಯಕ್ತಿಯ ಹೆಸರು "ಅರಸಮ್ಮಂ" "ನರಸಮ್ಮಂ" ಅಲ್ಲ ಎಂದು ಖಚಿತಪಡಿಸಿದ್ದಾರೆ. "ಸರಸತಿಗಣಭಕ್ತಂ" ಎಂಬುದು ಶಿಲ್ಪ ಮೊದಲಾದ ಕಲೆಗಳಲ್ಲಿ ಅಭಿಜ್ಞರಾದವರಿಗೆ ಅನ್ವಯಿಸುತ್ತಿತ್ತು ಎಂಬುದನ್ನು ಸಾಧಾರವಾಗಿ ಪ್ರತಿಪಾದಿಸಿದ್ದಾರೆ.]

೧೧. ಚಂದ್ರರಾಜನ (ಕ್ರಿ.ಶ. ೧೧ನೆಯ ಶತಮಾನದ ಪೂರ್ವಾರ್ಧ) 'ಮದನ ತಿಲಕ'ದಲ್ಲಿ ಬರುವ "ಅಂಗನ್ನೃಪಾಯತಿ ತುಂಗಭುಜಂ..." ಎಂಬ ಪದ್ಯವೊಂದು (೧.೧೫) ಪ್ರಸಿದ್ಧವಾಗಿದೆ. (ಕರ್ಣಾಟಕ ಕವಿಚರಿತೆ, I, ೯೩–೪ ನೋಡಿ.) "ಇದುವೆ ಎಡೆಯಕ್ಕರಮುಂ, ಕಿಟಿಯಕ್ಕರಮುಂ, ಚೌಪದಿಕೆಯುಂ, ಎರಡು ಷಟ್ಪದಿಯುಂ, ತ್ರಿಪದೋನ್ನತಿಯುಂ....ಗೋಮೂತ್ರಿಕೆಯುಂ ಅಕ್ಕುಂ" ಎಂದು ಕವಿಯೇ ಹೇಳಿದ್ಧಾನೆ. "ಪೂರ್ವಾರ್ಧವೂ ಉತ್ತರಾರ್ಧವೂ ಒಂದೊಂದು ಶರಷಟ್ಪದಿಯ ಪದ್ಯವಾಗುತ್ತದೆ" ಎಂದು ಶ್ರೀ ರಾ. ನರಸಿಂಹಾಚಾರ್ಯರು ಸೂಚಿಸಿದ್ದಾರೆ. ನಾಲ್ಕು ಮಾತ್ರೆಯ ಗಣಗಳ ಲೆಕ್ಕವೂ ಇಲ್ಲಿ

ಮೇಲೆ ನಿರ್ದೇಶಿಸಿರುವಂತೆ ಪಾಠವು ತುಸಮಟ್ಟಿಗೆ ಸಂದಿಗ್ಧವಾಗಿರುವುದೂ ನಮ್ಮ ದುರ್ದೈವ. ಕನ್ನಡ ಛಂದಸ್ಸಿನ ಚರಿತ್ರೆಯ ದೃಷ್ಟಿಯಿಂದ ಈ ಷಟ್ಪದಿ ಮುಖ್ಯವಾಗಿರುವ ಕಾರಣ ಶ್ರೀ ಪಾಂಡುರಂಗರಾಯರು ಇನ್ನೊಮ್ಮೆ ಈ ಶಾಸನಭಾಗವನ್ನು ಕಣ್ಣಿನಲ್ಲಿ ಕಣ್ಣಿಟ್ಟು ನೋಡಿ ಅಲ್ಲಿ ಗೋಚರವಾಗುವ ಪಾಠವನ್ನು "ಮಕ್ಕೀ ಕಾ ಮಕ್ಕಿ" ಯಾಗಿ ಪ್ರಕಟಿಸಿ ಸಾಹಿತ್ಯಾಭ್ಯಾಸಿಗಳಿಗೆ ಮತ್ತಷ್ಟು ಉಪಕಾರ ಮಾಡಬೇಕೆಂದು ಕೋರುತ್ತೇವೆ.

ಶಾಸನದಲ್ಲಿ ಈ ಪದ್ಯ ಜಾತಿಯುನ್ನು "ಷಟ್ಪದ" ಎಂದು ಕರೆದಿದೆ. 'ಸುಕುಮಾರಚರಿತ'ದಲ್ಲಿ "ಷಟ್ಪದ" ಎಂಬ ರೂಪವೇ ಉಂಟು. ತೆಲುಗಿನ ಮೂರು ಛಂದೋಗ್ರಂಥಗಳಲ್ಲೂ ಅದೇ "ಷಟ್ಪದ" ಎಂಬುದೇ ಕಾಣಬರುತ್ತದೆ. ಜಯಕೀರ್ತಿಯ 'ಛಂದೋನುಶಾಸನ'ದಲ್ಲಿ "ಷಟ್ಪದಿಕಾ" ಎಂದು ಬಂದಿದೆ. 'ಮದನತಿಲಕ' 'ಸಂಗೀತ ರತ್ನಾಕರ' ಗಳಲ್ಲಿ "ಷಟ್ಪದಿ" ಎಂಬ ರೂಪ ಗೋಚರವಾಗುತ್ತದೆ. ನಾಗವರ್ಮನ 'ಛಂದೋಂಬುಧಿ'ಯ ಪ್ರಚಲಿತ ಪಾಠದಲ್ಲಿ "ಷಟ್ಪದಿ" ಎಂದು ದೊರೆಯುತ್ತದೆ; ಆದರೆ ಮೊದಲಿಗೆ "ಷಟ್ಪದ" ಎಂದು ಇದ್ದಿರುವುದು ಅಸಂಭವವಲ್ಲ. ಹಾಗಾದರೆ ಈ ಶಬ್ದದ ಮೂಲರೂಪ ಯಾವುದು?—ಸದ್ಯಕ್ಕೇನೋ, "ಷಟ್ಪದ" ಎಂಬ ಅಕಾರಾಂತದ ಕಡೆಗೇ ಸಂಭಾವ್ಯತೆ ಓಲುತ್ತದೆ. ಅಂಶಗಣದ ನಡೆಯುಳ್ಳ ಪ್ರಾಚೀನ ಪದ್ಯರೂಪಕ್ಕೆ "ಷಟ್ಪದ" ಎಂಬ ಹೆಸರನ್ನು ಮೀಸಲಾಗಿರಿಸಿ, ಶರ, ಕುಸುಮ ಮೊದಲಾದ ಮಾತ್ರಾಗಣಬದ್ಧವಾದ ಬಗೆಗಳನ್ನು, ರೂಢಿಗೆ ಅನುಸಾರವಾಗಿ, "ಷಟ್ಪದಿ" ಎಂದು ಕರೆಯುವ ವ್ಯವಸ್ಥೆ ಮಾಡುವುದು ಯುಕ್ತವಲ್ಲವೆ?

೧೯೪೨]

ಸಮಾಲೋಕನ : ೧೯೫೮

ಸರಿ ಹೋಗುವುದರಿಂದ ಹೀಗೆ ಹೇಳುವುದು ಸಾಧ್ಯ. ಆದರೆ ವಿಷ್ಣುರುದ್ರಗಣಗಳ ಲೆಕ್ಕ ಇಲ್ಲಿಗೆ ಸಂಪೂರ್ಣವಾಗಿ ಅನ್ವಯಿಸುತ್ತದೆ; ಇದನ್ನು ಶ್ರೀ ತ.ಸು. ಶಾಮರಾಯರು ಮೇಲೆ ಉಕ್ತವಾದ ತಮ್ಮ ಲೇಖನದಲ್ಲಿ ಸ್ಮರಿಸಿದ್ದಾರೆ. ಹಲವು ಧಾಟಿಗಳ ಬೇರೆಬೇರೆ ಪದ್ಯಜಾತಿಗಳು ಒಂದೇ ಪದ್ಯದಲ್ಲಿ ಹೊರಡುವಂತೆ ರಚಿಸಿರುವುದೇ ಇಲ್ಲಿಯ ಚಮತ್ಕಾರವಾದ ಕಾರಣ ಇಲ್ಲಿ ಮಾತ್ರೆಗಳ ಲೆಕ್ಕವೂ ಹೊಂದಿದರೆ ಆಶ್ಚರ್ಯವಲ್ಲ; ಹಾಗೆಯೇ ಅಕ್ಷರ ಗಣಗಳ ವಿನ್ಯಾಸವೂ ಇಲ್ಲಿಗೆ ಒಪ್ಪುತ್ತದೆ. ಈ ಪದ್ಯದ ಕಾಲ ಸುಕುಮಾರಚರಿತದ ಕಾಲಕ್ಕೆ ಸಮೀಪವೆಂಬುದನ್ನೂ ಎಡೆಯಕ್ಕರವೇ ಮೊದಲಾದ ಅಂಶಗಣಘಟಿತವಾದ ಪದ್ಯಜಾತಿಗಳು ಇಲ್ಲಿ ಹೊರಡುವುದನ್ನೂ ನೆನೆದರೆ, ಚಂದ್ರರಾಜನ ಮನಸ್ಸಿನಲ್ಲಿದ್ದುದು ಅಂಶಗಣದ ಷಟ್ಪದಿಯೆಂದೇ ತೋರುತ್ತದೆ. "ಶರಷಟ್ಪದಿ" ಎನ್ನದೆ "ಷಟ್ಪದಿ" ಎಂದು ಮಾತ್ರವೆ. ಅವನು ಹೇಳಿರುವುದನ್ನೂ ಲಕ್ಷಿಸಬೇಕು.

ರನ್ನದ 'ಗದಾಯುದ್ಧ ಕಾವ್ಯ'ದ ಒಂದು ಮಾತೃಕೆಯಲ್ಲಿ "ಹಾ ಕುರುಕುಲ ಮೂಲ ಸ್ತಂಭಾ....ಪನ್ನಗಕೇತೂ" ಎಂಬ ಪದ್ಯವಿದೆ. (ಮಂ. ಆ. ರಾಮಾನುಜಯ್ಯಂಗಾರರ ೧೯೩೫ನೆಯ ಇಸವಿಯ ಪರಿಷ್ಕರಣವನ್ನು ನೋಡಿ; ಅಲ್ಲಿ ಇದರ ಸಂಖ್ಯೆ ೯.೨೧.) ಮಾತೃಕೆಯಲ್ಲಿ ಇದಕ್ಕೆ "ಮಾತ್ರಾಸಮಕ ಷಟ್ಪದಿ" ಎಂದು ಹೆಸರು ಕೊಟ್ಟಿದೆ; ಪದ್ಯವೂ ತ್ರುಟಿತವಾಗಿದೆ. ಈ ಪದ್ಯ ರನ್ನನ ರಚನೆಯೆ ಇದರ ಸರಿಯಾದ ಪಾಠವೇನು, ಸರಿಯಾದ ಹೆಸರೂ ಲಕ್ಷಣವೂ ಏನು—ಎಂಬುದರ ವಿಚಾರ ಇಲ್ಲಿ ಅಪ್ರಕೃತ.

ಪರಿಶಿಷ್ಟ

ಕ್ರಿ.ಶ. ೧೦೬೭ರ ೧೦೬೭ರ ಶಾಸನವೊಂದರಲ್ಲಿ ಬರುವ ಒಂದು ಪದ್ಯದ ರೋಮನ್ ಲಿಪಿ ಪಾಠ ಈ ರೀತಿ ಇದೆ (ಎಪಿಗ್ರಾಫಿಯ ಕಾರ್ನಾಟಿಕ, XI—ಚಿತ್ರದುರ್ಗ, ೪೭; ಪುಟ ೨೨) :

ಮಣ್ಡಲಿಗಾವ ಪ್ರಚಣ್ಡಬಿವ್ವಿಗಂ ಜಯ
ಗೊಣ್ಡೇಶ್ವರ ಬಿಟ್ಟುಂಬಳಿಯಂ
ಭಣ್ಡಣಕಳ್ಕದ ಗಣ್ಡನೀಯಲ್ಕಾಂಪ
ಗಣ್ಡಂ ಮಾಚಿಗನೆಯ್ದೆ ರಕ್ಷಿಪಂ ॥

ಈ ಪದ್ಯ ಅಂಶಗಣಗಳಿಂದ ಘಟಿತವಾಗಿದೆಯೆಂಬುದು ಸ್ಪಷ್ಟ ಇಲ್ಲಿಯ ಪ್ರಾಸವಿನ್ಯಾಸವನ್ನು ಗಮನಿಸಿದರೆ ಇದರ ಪಾದಗಳು ನಿಜವಾಗಿ ಆರು ಎಂಬುದೂ ಅರಿವಾಗುತ್ತದೆ :

ಮ.ಣ್ಡಲಿ । ಗಾ.ವ.ಪ್ರ ।
ಚ.ಣ್ಡ.ಬಿ । ವ್ವಿಗಂ. ಜ.ಯ ।
ಗೊ.ಣ್ಡೇ.ಶ್ವ । ರ.ಕ್ಕೆ. ಬಿ । ಟ್ಟುಂ.ಬ.ಳಿ.ಯಂ ।
ಭ.ಣ್ಡ.ಣ । ಕ.ಳ್ಕದ ।
ಗ.ಣ್ಡ.ನೀ । ಯ.ಲ್ಕಾಂ.ಪ ।
ಗ.ಣ್ಡಂ.ಮಾ । ಚಿಗ.ನೆ.ಯ್ದೆ । ರ.ಕ್ಷಿ.ಪಂ ।

ಇದು ನಮ್ಮ "ಷಟ್ಪದಕ್ಕೆ" ಮತ್ತೊಂದು ಒಳ್ಳೆಯ ನಿದರ್ಶನ. ೨ನೆಯ ಪಾದದ ೨ನೆಯ ಗಣವಾದ "ವ್ವಿಗಂ ಜಯ" ಎಂಬುದರಲ್ಲಿ ಒಂದು ಲಘುವಿನ ಮುಂದೆ ಒಂದು ಗುರು ಬರುವುದರಿಂದ, "ಅಂಶ"ಗಣ ರಚನೆಯ ನಿಯಮ ಮೀರುತ್ತದೆ. "ವ್ವಿಗ. ಜ.ಯ" ಎಂಬುದು ಇಲ್ಲಿಯ ಮೂಲಪಾಠವಾಗಿದ್ದರಬಹುದು ; "ಬಿವ್ವಿಗ" ಎಂಬ ರೀತಿಯ ಪ್ರಕೃತಿ ಪ್ರಯೋಗಗಳು ಹಳಗನ್ನಡದಲ್ಲಿ ಅಪೂರ್ವವಲ್ಲ. ೬ನೆಯ ಪಾದದ ಕೊನೆಯ ಗಣವಾದ "ರ.ಕ್ಷಿ.ಪಂ" ಎಂಬುದು ವಿಷ್ಣುಗಣ; ಲಕ್ಷಣಕ್ಕನುಸಾರವಾಗಿ ಬರಬೇಕಾದ ರುದ್ರಗಣವಲ್ಲ. ಆದರೆ ಅಮ್ಮಿನಭಾವಿಯ ಶಾಸನದಲ್ಲೂ ೬ನೆಯ ಪಾದದ ಕೊನೆಯ ಗಣ ಹೀಗೆಯೇ ವಿಷ್ಣು ("ಧರೆ.ಗೆ.ಲ್ಲಂ") ಎಂಬುದನ್ನು ಗಮನಿಸಬಹುದು.

ಈ ಶಾಸನದ ಕಾಲವಾದ ಕ್ರಿ.ಶ. ೧೦೬೭ ಅಮ್ಮಿನಭಾವಿಯ ಶಾಸನದ ಮತ್ತು ಶಾಂತಿನಾಥನ 'ಸುಕುಮಾರ ಚರಿತ'ದ ಕಾಲಗಳಿಗೆ ತುಂಬ ಸಮೀಪವೆಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ಈ ಪದ್ಯದ ಕಡೆಗೆ ನನ್ನ ಗಮನವನ್ನು ಎಳೆದವರು ಶ್ರೀ ಜಿ. ವರದರಾಜರಾಯರು; ಇದು ಎಪಿಗ್ರಾಫಿಯ ಕರ್ನಾಟಿಕದಲ್ಲಿ ಅಚ್ಚಾಗಿರುವಂತೆ ನಾಲ್ಕು ಪಾದದ ಪದ್ಯವಲ್ಲ, ನಿಜವಾಗಿ ಇದು ಷಟ್ಪದ ಎಂಬುದನ್ನು ಮೊದಲು ಗುರುತಿಸಿದವರು ಶ್ರೀ ಡಿ.ಎಲ್. ನರಸಿಂಹಚಾರ್ಯರು. ಇಬ್ಬರು ಮಿತ್ರರಿಗೂ ನನ್ನ ಕೃತಜ್ಞತೆಗಳು.

ಭಾಗ ೬

ಮುನ್ನುಡಿಗಳು, ಬಿಡಿ ಲೇಖನಗಳು

ರಾಜಸೇವಾಸಕ್ತ ಪ್ರೊ. ಬಿ.ಎಂ. ಶ್ರೀಕಂಠಯ್ಯನವರಿಗೆ 'ಸಂಭಾವನೆ'*

ಇದೇ ಸೆಪ್ಟೆಂಬರ್ ೧೪ನೆಯ ತಾರೀಖು ಭಾನುವಾರ ಬೆಳಗ್ಗೆ ಬೆಂಗಳೂರಿನ ಪರಿಷ್ಮಂದಿರದಲ್ಲಿ ಒಂದು ಅಪೂರ್ವವಾದ ಸಮಾರಂಭ ಏರ್ಪಟ್ಟಿದ್ದಿತು. ಅಂದು ರಾಜಸೇವಾಸಕ್ತ ಪ್ರೊ. ಬಿ.ಎಂ. ಶ್ರೀಕಂಠಯ್ಯನವರ ಹುಟ್ಟಿದ ಹಬ್ಬವನ್ನು ಅವರ ಶಿಷ್ಯರೂ ಮಿತ್ರರೂ ಅಭಿಮಾನಿಗಳೂ ಆದರದಿಂದ ಆಚರಿಸಿದರು. ಹೊಸ ಗನ್ನಡದ ಕುಲಪತಿಗಳೆಂಬ ಪ್ರಶಸ್ತಿಯನ್ನು ಗಳಿಸಿ ಕೊಂಡಿರುವ ಮಹನೀಯರ ವರ್ಷವರ್ಧಂತಿ ಅಂದು ಜರುಗಿತೆಂಬುದೊಂದೇ ಉತ್ಸವದ ವಿಶೇಷವಲ್ಲ. ಹಾಗೆ ನೋಡಿದರೆ ತಾರೀಖಿನ ಲೆಕ್ಕದಂತೆ ಅದು ೧೯೪೧ ನೆಯ ಜನವರಿ ೩ನೆಯ ದಿನವೇ ನಡೆಯಬೇಕಾಗಿತ್ತು. ಉತ್ಸವದ ದಿನ ಮುಂದುವರಿದದ್ದಕ್ಕೆ ವಿಶೇಷ ಕಾರಣವುಂಟು. ಶ್ರೀಮಾನ್ ಶ್ರೀಕಂಠಯ್ಯನವರು ಕನ್ನಡ ನುಡಿಯ ಏಳಿಗೆಗಾಗಿ, ಕನ್ನಡ ಸಾಹಿತ್ಯದ ಸುಧಾರಣೆ ಗಾಗಿ, ಕನ್ನಡ ವಿದ್ವತ್ತಿನ ವಿಸ್ತರಣೆಗಾಗಿ ತನುಮನ ಧನಗಳನ್ನು ಮೀಸಲಾಗಿಟ್ಟು ಅವಿಶ್ರಾಂತವಾಗಿ ತಾವು ದುಡಿದಿರುವುದು ಮಾತ್ರವಲ್ಲದೆ, ಶಿಷ್ಯರನ್ನು ಹುರುಪು ಗೊಳಿಸಿ, ನಾಡಿನವರನ್ನು ಪ್ರಚೋದಿಸಿ, ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ ನಡಸಿರುವ ಬಹುಮುಖವೂ

* 'ಪ್ರಬುದ್ಧ ಕರ್ಣಾಟಕ' ಸಂಪುಟ ೨೩, ದೀಪಾವಳಿ ಸಂಚಿಕೆ : ವಸ್ತುಕೋಶ

ಅಸಾಧಾರಣವೂ ಆದ ಭಾಷಾಸೇವೆಯನ್ನು ಸನ್ಮಾನಿಸಲು ತಕ್ಕ ಕಾಣಿಕೆಯೊಂದನ್ನು ಅವರಿಗೆ ಅರ್ಪಿಸಬೇಕೆಂಬ ಇಚ್ಛೆ ಶ್ರೀಯುತರ ಮಿತ್ರವರ್ಗದವರಿಗೆ ಕೆಲವು ದಿನಗಳಿಂದಲೂ ಇದ್ದಿತು. ಶ್ರೀಮಾನ್ ಶ್ರೀಕಂಠಯ್ಯನವರ ಆಸಕ್ತಿಯ ವಿವಿಧ ವಿಷಯಗಳನ್ನು ಕುರಿತು ಅವರಿಂದ ಸ್ಫೂರ್ತಿ ಪಡೆದವರೂ ಅವರಲ್ಲಿ ಸ್ನೇಹ ಗೌರವಗಳನ್ನುಳ್ಳವರೂ ಆದ ಅನೇಕ ಮಂದಿ ಸಾಹಿತಿಗಳಿಂದ ಲೇಖನಗಳನ್ನು ಬರಸಿ, ಕೂಡಿಸಿ, ಅಚ್ಚುಮಾಡಿಸಿ ಈ ಪ್ರಬಂಧ ಸಂಪುಟವನ್ನು ಈ ಉತ್ಸವದ ಕಾಲದಲ್ಲಿ ಅರ್ಪಿಸಬೇಕೆಂದು ತೀರ್ಮಾನ ಮಾಡಿದ್ದರಿಂದ ಅದು ಕೈಗೂಡಲು ಸಹಜವಾಗಿಯೇ ಹೆಚ್ಚು ಕಾಲ ಬೇಕಾಯಿತು.' ಉತ್ಸವಕ್ಕೆ ಮೈಸೂರು ಸಂಸ್ಥಾನದ ದಿವಾನರವರಾದ ರಾಜಮಂತ್ರ ಪ್ರವೀಣ ಶ್ರೀಮಾನ್ ಎನ್. ಮಾಧವರಾಯರು ಅಧ್ಯಕ್ಷರಾಗಿ ದಯಮಾಡಿಸಿ, ಕನ್ನಡದ ವಿದ್ವಾಂಸರನ್ನು ಗೌರವಿಸಿದ್ದು ಕನ್ನಡದ ಕಾರ್ಯಕ್ಕೆ ಉತ್ತೇಜನ ಕೊಟ್ಟು ಅಂದಿನ ಸಭೆಗೆ ವಿಶೇಷ ಕಳೆಯನ್ನು ಉಂಟು ಮಾಡಿತು.

ಅಂದಿನ ಭಾಷಣಗಳಲ್ಲೂ ಮಿಕ್ಕ ಕಾರ್ಯಕಲಾಪಗಳಲ್ಲೂ ಹೃದ್ಯವಾದ ಔಚಿತ್ಯವಿದ್ದಿತು. ಆ ದಿನ ಮಾತನಾಡಿದವರು ಶ್ರೀಕಂಠಯ್ಯನವರ ಹೃದಯವನ್ನು ಅರಿತವರು, ಅವರ ಶಕ್ತಿಯನ್ನೂ ಸಾಧನೆಯನ್ನೂ ಬಲ್ಲವರು. ಕನ್ನಡ ಸೇವೆಯಲ್ಲಿ ಶ್ರೀಮಾನ್ ಶ್ರೀಕಂಠಯ್ಯನವರು ಧನ್ಯರಾದರೆಂಬ ಮಾತು ಅಂದು ಮತ್ತೆ ಮತ್ತೆ ಮೊಳಗಿತು. ಈ ಅಭಿನಂದನೆಗೆ, ಸನ್ಮಾನಕ್ಕೆ ಉತ್ತರವಾಗಿ ಅತಿಥಿಗಳು ತಮ್ಮ ಅಂತರಂಗದಿಂದ ಉಕ್ಕಿ ಬಂದ ಕೆಲವು ಮಾತುಗಳಲ್ಲಿ ತಮ್ಮ ಜೀವನದ ಗುರಿಯನ್ನೂ ಹಂಬಲವನ್ನೂ ಧೀರ ಸ್ತಿಮಿತವಾದ ವಾಣಿಯಲ್ಲಿ ನಿರೂಪಿಸಿದರು. ಎಲ್ಲ ದಿಕ್ಕಿನ ಬೆಳಕಿಗೂ ಕನ್ನಡಿಗರು ತಮ್ಮ ಮನೆಯ ಕಿಟಕಿ ಬಾಗಿಲುಗಳನ್ನು ತೆರೆದಿರಬೇಕು; ಒಳ್ಳೆಯ ತೋಟಗಾರನಂತೆ, ಕನ್ನಡದ ಗಿಡಗಳನ್ನು ನಾಶ ಮಾಡುವ ಒಣರೆಂಬೆಗಳನ್ನು ಕತ್ತರಿಸಿ, ಗಿಡಕ್ಕೆ ಜೀವರಸ ಬರುವಂತೆ ಕಸಿ ಮಾಡಿ ಸೊಗಸಾದ ಹೂವು ಹಣ್ಣು ಬರುವಂತೆ ದುಡಿಯಬೇಕು–ಎಂಬುದೇ ಅವರ ಭಾಷಣದ ತಿರುಳು. ಆ ದಿನದ ಕಾರ್ಯ ಕಲಾಪಗಳ ವಿಸ್ತಾರವಾದ ವರದಿ 'ಕನ್ನಡ ನುಡಿ' ಯಲ್ಲಿ ಬಂದಿರುವುದರಿಂದ ಅದನ್ನು ಇಲ್ಲಿ ನಿರೂಪಿಸುವ ಕೆಲಸಕ್ಕೆ ಕೈ ಹಾಕಿಲ್ಲ.

ಶ್ರೀಯವರಿಗೆ ಅರ್ಪಿಸಿದ 'ಸಂಭಾವನೆ' ಒಂದು ಮಹಾ ಸಂಪುಟ. ಕರ್ಣಾಟಕದ ಎಲ್ಲ ಭಾಗಗಳ ವಿದ್ವಾಂಸರೂ ಇದಕ್ಕೆ ಲೇಖನಗಳನ್ನು ಬರೆದಿದ್ದಾರೆ. ಸಾಹಿತ್ಯ, ಭಾಷೆ, ಕಲೆ, ಸಂಸ್ಕೃತಿ, ತತ್ತ್ವ; ಶ್ರೀಮಾನ್ ಶ್ರೀಕಂಠಯ್ಯನವರ ವ್ಯಕ್ತಿತ್ವ, ಕೃತಿಗಳು, ನಾಡು, ನುಡಿಗಳ ಸೇವೆ – ಈ ಮೊದಲಾದ ವಿಷಯಗಳನ್ನು ಕುರಿತು ವಿವರಣಾತ್ಮಕವೂ ಸಂಶೋಧನಾತ್ಮಕವೂ ಆದ ೭೫ ಲೇಖನಗಳು ಇಲ್ಲಿ ಬಂದಿವೆ. ಶ್ರೀಯವರ ಗುರುಗಳೂ ಹಿರಿಯ ಮಿತ್ರರೂ ಆದ ಐದು ಮಂದಿ ಮಹನೀಯರು ಶುಭಾಶಂಸನೆಯ ಮುನ್ನುಡಿಗಳನ್ನು ಬರೆದು ಕೊಟ್ಟು ಈ ಗ್ರಂಥದ ಗೌರವವನ್ನು ಹೆಚ್ಚಿಸಿದ್ದಾರೆ. ರಾಯಲ್ ಅಷ್ಟಪತ್ರದ ಆಕಾರದ ಸುಮಾರು ೬೦೦ ಪುಟಗಳನ್ನು ಒಳಗೊಂಡು ವಿವಿಧ

ವಸ್ತುಗರ್ಭಿತವಾದ ಈ 'ಸಂಭಾವನೆ'ಯ ಸಂಪುಟಗಳ ವಿಷಯ ಸೂಚಿಕೆಯನ್ನು ಬರೆಯುವುದಕ್ಕೆ ಎಷ್ಟೋ ಜಾಗ ಬೇಕಾಗುತ್ತದೆ; ಅದರ ಪರಿಚಯ ಮಾಡಿಕೊಡಲು ವಿಸ್ತಾರವಾದ ಒಂದು ಲೇಖನವೇ ಬೇಕು. ಇದನ್ನು ಅರ್ಪಿಸಬೇಕೆಂದು ಸಂಕಲ್ಪಿಸಿ ಇಷ್ಟು ಲೇಖನಗಳನ್ನು ಬಹುಬೇಗ ಜೊತೆಗೊಳಿಸಿ ಸಿದ್ಧಪಡಿಸಲು ಸೂತ್ರಧಾರರಂತೆ ನಿಂತು ಕೆಲಸ ಮಾಡಿದ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯಂಗಾರ್ಯರೂ ಅವರ ಜೊತೆಗೆ ಕೆಲಸ ಮಾಡಿದ ರಾಘವಾಚಾರ್ಯರೇ ಮೊದಲಾದ ಅಭಿಮಾನಿಗಳೂ ವಿಶೇಷ ಅಭಿನಂದನೀಯರು. 'ಸಂಭಾವನೆ' ಕನ್ನಡಿಗರ ಗುರುಭಕ್ತಿಗೆ, ವಿದ್ವತ್ತಿಗೆ, ಲೇಖ ಪ್ರಕಟನ ಸಾಮರ್ಥ್ಯಕ್ಕೆ ನಿದರ್ಶನವಾಗಿ, ಶ್ರೀಯವರಿಗೆ 'ಆತ್ಮಗುಣಾನುರೂಪ'ವಾದ ಕಾಣಿಕೆಯಾಗಿದೆ. ಕನ್ನಡದ ಅಭಿಮಾನಿಗಳೆಲ್ಲರೂ ಈ ಸಂಪುಟವನ್ನು ತೆಗೆದುಕೊಂಡು ಅದರ ಸ್ವಾರಸ್ಯವನ್ನು ಸವಿಯಬೇಕಾಗಿ ಪ್ರಾರ್ಥಿಸುತ್ತೇವೆ.

೧೯೪೨]

ಕಾವ್ಯಾನುಭವ : ೧೯೭೦

ಸರ್. ಎಂ. ವಿಶ್ವೇಶ್ವರಯ್ಯನವರ ೮೧ನೆಯ ಹುಟ್ಟುಹಬ್ಬ*

ಮೈಸೂರಿನವರಾಗಿ ಹುಟ್ಟಿ, ಅಖಿಲ ಭಾರತ ಖಂಡದಲ್ಲಿ–ಅಷ್ಟೇ ಏಕೆ, ಅಖಿಲ ಭೂಮಂಡಲದಲ್ಲಿ–ವಿಖ್ಯಾತರಾಗಿ, ನಮ್ಮ ಸುದೈವದಿಂದ ಇಂದಿಗೂ ಲೋಕಕಲ್ಯಾಣಕ್ಕಾಗಿ ದುಡಿಯುತ್ತಿರುವ ಮಹಾವ್ಯಕ್ತಿ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು. ಈ ಮಹನೀಯರ ೮೧ನೆಯ ಹುಟ್ಟಿದ ಹಬ್ಬದ ಆಚರಣೆ ಮೈಸೂರಿನ ಒಳಗೂ ಹೊರಗೂ ಅನೇಕ ಸ್ಥಳಗಳಲ್ಲಿ ಸಂಭ್ರಮದಿಂದ, ವಿಜೃಂಭಣೆಯಿಂದ ನಡೆಯಿತು. ಶ್ರೀಮಾನ್ ವಿಶ್ವೇಶ್ವರಯ್ಯನವರು ಆಧುನಿಕ ಮೈಸೂರಿನ ನಿರ್ಮಾಪಕರು. ಅವರು ಈ ಸಂಸ್ಥಾನದ ಚೀಫ್ ಎಂಜಿನಿಯರ್ ಆಗಿ, ದಿವಾನರಾಗಿ, ಕೆಲಸ ಮಾಡಿದ ಕೆಲವೇ ವರ್ಷಗಳಲ್ಲಿ ಅವರು ಹುಟ್ಟಿಹಾಕಿದ ಸಂಸ್ಥೆಗಳೆಷ್ಟು, ಸಾಧನೆ ಮಾಡಿದ ಕಾರ್ಯವೆಷ್ಟು! ಕೃಷ್ಣರಾಜಸಾಗರ, ಭದ್ರಾವತಿಯ ಕಾರ್ಖಾನೆ, ಮೈಸೂರು ಬ್ಯಾಂಕು, ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ಸಾಹಿತ್ಯ ಪರಿಷತ್ತು–ಇಷ್ಟೇ ಹೆಸರುಗಳು ಸಾಕು; ಇವುಗಳಲ್ಲಿ ಒಂದೊಂದೂ ಅವರ ದೇಶಭಕ್ತಿಗೆ, ವಿಶಾಲ ಹೃದಯಕ್ಕೆ, ದೂರ ದೃಷ್ಟಿಗೆ, ಕಾರ್ಯದಕ್ಷತೆಗೆ ಸಾಕ್ಷಿಯಾಗಿ, ಅವರ ಕೀರ್ತಿಗೆ ಜ್ಞಾಪಕವಾಗಿ, ನಿಲ್ಲತಕ್ಕವು. ಶ್ರೀಮಾನ್ ವಿಶ್ವೇಶ್ವರಯ್ಯನವರು ಜಗದ್ವಿಖ್ಯಾತರಾದ ಶಿಲ್ಪ

* 'ಪ್ರಬುದ್ಧ ಕರ್ಣಾಟಕ' ಸಂಪುಟ ೨೩, ದೀಪಾವಳಿ ಸಂಚಿಕೆ, ವಸ್ತುಕೋಶ

ಪ್ರವೀಣರು, ದೊಡ್ಡ ವೈಜ್ಞಾನಿಕರು, ಅರ್ಥಶಾಸ್ತ್ರ ಕೋವಿದರು; ಇದೆಲ್ಲಕ್ಕೂ ಮಿಗಿಲಾಗಿ ಅವರೊಬ್ಬ ದೊಡ್ಡ ಕಣಸುಗಾರರು; ಹಾಗೆ ಕಂಡ ಕಣಸನ್ನು ಕಲ್ಲುಗಾರೆಯಲ್ಲಿ, ಯಂತ್ರ ಸಲಕರಣೆಯಲ್ಲಿ ಸಂಘ ಸಂಸ್ಥೆಯಲ್ಲಿ ಹಿಡಿದು ಕಡೆದು ನಿಲ್ಲಿಸುವ ಕೆಲಸಗಾರರು. ಇದೇ ಅವರ ಮಹಿಮೆಯ ಗುಟ್ಟು, ಪರಿಸ್ಥಿತಿ ಸನ್ನಿವೇಶಗಳು ಎಷ್ಟೇ ವಿಷಮವಾಗಿದ್ದರೂ, ಸುತ್ತಮುತ್ತಿನವರ ಮನಸ್ಸು ಎಷ್ಟೇ ಜಡವಾಗಿದ್ದರೂ, ಸಾಧನ ಸಂಪತ್ತು ಎಷ್ಟೇ ಅಲ್ಪವಾಗಿದ್ದರೂ ಅವರು ಪ್ರಗತಿಯಲ್ಲಿ ನಂಬಿಕೆ ತೊರೆದವರಲ್ಲ, ಆ ಮಾರ್ಗದಲ್ಲಿ ಅಡಿಯಿಡಲು ಹಿಂಜರಿದವರಲ್ಲ. ವಿಘ್ನಗಳು ಮೇಲಿಂದ ಮೇಲೆ ಆಘಾತ ಮಾಡಿದರೂ ತಮ್ಮ ಆತ್ಮದ ಮೂಲಗುಣವಾದ ಉತ್ಸಾಹವನ್ನು ಉಡುಗಿಸಿಕೊಂಡವರಲ್ಲ. ಇಷ್ಟು ಹಿರಿಯ ವಯಸ್ಸಿನಲ್ಲೂ ಅವರು ಪಾದರಸದಂತೆ ಚುರುಕು. ತಮ್ಮ ಆಶಾವಾದದಿಂದ ಅವರು ತರುಣರನ್ನೂ ನಾಚಿಸುವರು; ಅನನ್ಯವಾದ ಕ್ರಿಯಾಶಕ್ತಿಯಿಂದ ಪ್ರತಿಪಕ್ಷದವರ ಗೌರವವನ್ನು ಗಳಿಸಿ, ಸಾಧ್ಯವಿದ್ದಲ್ಲೆಲ್ಲಾ ಅವರ ಮನಸ್ಸನ್ನು ತಮ್ಮ ಕಡೆಗೆ ತಿರುಗಿಸಿ ಕೊಳ್ಳುವರು. ಭಾರತೀಯರ ಬಡತನ ಹರಿಯುವುದು ಹೇಗೆ, ಅವರ ಬದುಕು ಉತ್ತಮವಾಗುವುದು ಹೇಗೆ, ಅವರ ಗೌರವ ಬೆಳೆಯುವುದು ಹೇಗೆ?– ಎಂಬುದೇ ಶ್ರೀಮಾನ್ ವಿಶ್ವೇಶ್ವರಯ್ಯನವರ ಧ್ಯಾನವಸ್ತು. ವಿದ್ಯೆ, ವಿಜ್ಞಾನ, ಕೈಗಾರಿಕೆ ಇದೇ ಅವರು ದೇಶದ ಶ್ರೇಯಸ್ಸಿಗಾಗಿ ಉಪದೇಶಿಸುವ ಬೀಜಮಂತ್ರ.

ಈ ಮಹನೀಯರು ನೂರು ಕಾಲ ಬಾಳಲಿ, ತಾವು ನಟ್ಟ ವೃಕ್ಷಗಳೆಲ್ಲಾ ಚೆನ್ನಾಗಿ ಫಲ ಬಿಡುವುದನ್ನು ಕಾಣಲಿ, ತಾವು ಕಂಡ ಕಣಸುಗಳೆಲ್ಲ ಕಾರ್ಯಗತವಾಗುತವಂತೆ ಮಾಡಲು ದೇವರು ಅವರಿಗೆ ಶಕ್ತಿ ಸಾಧನಗಳನ್ನು ಕೊಡಲಿ.

೧೯೪೨]

ಕಾವ್ಯಾನುಭವ, ೧೯೭೦

ಎಲ್.ವಿ. ರಾಮಸ್ವಾಮಿ ಅಯ್ಯರ್ ಅವರು*

ಕೊಚ್ಚಿ ಸಂಸ್ಥಾನದ ಎರ್ನಾಕುಳದಲ್ಲಿ ಮಹಾರಾಜರವರ ಕಾಲೇಜಿನಲ್ಲಿ ಇಂಗ್ಲಿಷ್ ಸಹಾಯಾಧ್ಯಾಪಕರಾಗಿದ್ದ ಶ್ರೀ ಎಲ್.ವಿ. ರಾಮಸ್ವಾಮಿ ಅಯ್ಯರ್ ಎಂ.ಎ., ಬಿ.ಎಲ್. ಅವರು ಇದೇ ಫೆಬ್ರವರಿ ೨ನೆಯ ತಾರೀಖಿನ ದಿನ ದಿವಂಗತರಾದರೆಂದು ವೃತ್ತಪತ್ರಿಕೆಯಲ್ಲಿ ಓದಿ ಮನಸ್ಸಿಗೆ ತೀವ್ರ ದುಃಖವಾಗಿದೆ.

ಶ್ರೀ ರಾಮಸ್ವಾಮಿ ಅಯ್ಯರವರು ಬಹುಭಾಷಾ ವಿಶಾರದರು. ತಮಿಳು, ಮಲೆಯಾಳ, ಕನ್ನಡ, ತೆಲುಗು ಮೊದಲಾದ ದ್ರಾವಿಡ ಭಾಷೆಗಳು, ಹಿಂದೀ, ಬಂಗಾಳಿ ಮೊದಲಾದ ಭಾರತೀಯ ಆರ್ಯಭಾಷೆಗಳು-ಇವನ್ನು ಮಾತ್ರವಲ್ಲದೆ ಜರ್ಮನ್, ಫ್ರೆಂಚ್ ಮೊದಲಾದ ಪಾಶ್ಚಾತ್ಯ ಭಾಷೆಗಳನ್ನೂ ಅವರು ಬಲ್ಲವರಾಗಿದ್ದರು. ಅವರ ಒಲುಮೆಯ ವಿಷಯ ಭಾಷಾಶಾಸ್ತ್ರ. ಅದರಲ್ಲಿಯೂ ದ್ರಾವಿಡ ಭಾಷಾಶಾಸ್ತ್ರ (Dravidian Linguistics). ೧೯ನೆಯ ಶತಮಾನದಲ್ಲಿ ಡಾ. ಕಾಲ್ಡ್‌ವೆಲ್ ಅವರು ದ್ರಾವಿಡ ಭಾಷಾ ವರ್ಗದ ಸ್ವತಂತ್ರವಾದ ಅಸ್ತಿತ್ವವನ್ನು ಸ್ಥಾಪಿಸಿ, ಈ ಶಾಸ್ತ್ರದ ಮೂಲ ಮಹಾ ಗ್ರಂಥವಾದ ತೌಲನಿಕ ವ್ಯಾಕರಣವನ್ನು ಬರೆದಿಟ್ಟಮೇಲೆ, ಈ ಶಾಖೆಯಲ್ಲಿ ವ್ಯಾಸಂಗ, ಪರಿಶೋಧನೆಗಳು ಹೆಚ್ಚಾಗಿ ನಡೆಯಲಿಲ್ಲ.

* 'ಪ್ರಬುದ್ಧ ಕರ್ಣಾಟಕ' ಸಂಪುಟ ೨೯, ಸಂಕ್ರಾಂತಿ ಸಂಚಿಕೆ, ಸಂಪಾದಕೀಯ.

ದಕ್ಷಿಣ ಭಾರತದ ವಿಶ್ವವಿದ್ಯಾನಿಲಯಗಳೂ ಕೂಡ ಈ ವಿಷಯಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಿಲ್ಲ. ಹೀಗೆ ಯಾರಿಗೂ ಬೇಡವಾದ ಈ ಶಾಸ್ತ್ರಕ್ಕೆ ಶ್ರೀ ರಾಮಸ್ವಾಮಿ ಅಯ್ಯರವರು ತಮ್ಮ ಜೀವಮಾನವನ್ನು ಮುಡಿಪು ಕಟ್ಟಿ, ಅನೇಕ ದ್ರಾವಿಡ ಭಾಷೆಗಳಲ್ಲಿ ಕೂಲಂಕಷವಾದ ಜ್ಞಾನವನ್ನು ಸಂಪಾದಿಸಿ, ಅವುಗಳ ಪರಸ್ಪರ ಸಂಬಂಧವನ್ನು ಆಧುನಿಕ ಶಾಸ್ತ್ರೀಯ ಕ್ರಮದಲ್ಲಿ ಪರಿಶೋಧಿಸಿ, ಮಹತ್ವಪೂರ್ಣವಾದ ಅನೇಕ ಹೊಸ ವಿಷಯಗಳನ್ನು ಸಾಧಾರವಾಗಿ ನಿರೂಪಿಸಿದರು; ಶಾಸ್ತ್ರದ ಜ್ಞಾನ ಭಂಡಾರವನ್ನು ಅನೇಕ ಮುಖವಾಗಿ ವಿಸ್ತರಿಸಿದರು. ಹಲವು ಸಂದಿಗ್ಧ ವಿಷಯಗಳನ್ನು ಪರಿಷ್ಕಾರಗೊಳಿಸಿದರು. ಡಾ. ಕಾಲ್ಡ್ ವೆಲ್ಲರ ತರವಾಯ ದ್ರಾವಿಡ ಭಾಷಾ ಶಾಸ್ತ್ರದಲ್ಲಿ ಸರ್ವತೋಮುಖವಾದ ಪಾಂಡಿತ್ಯವನ್ನು ಗಳಿಸಿ ಅದನ್ನು ಶಾಸ್ತ್ರೀಯವಾಗಿ ಬೆಳೆಸಿದವರಲ್ಲಿ ಶ್ರೀ ರಾಮಸ್ವಾಮಿ ಅಯ್ಯರವರೇ ಅಗ್ರಗಣ್ಯರೆಂದು ಧಾರಾಳವಾಗಿ ಹೇಳಬಹುದು.

ಶ್ರೀ ರಾಮಸ್ವಾಮಿ ಅಯ್ಯರವರು ಅನೇಕಾನೇಕ ಲೇಖನಗಳನ್ನು ಬರೆದರು. ಅವೆಲ್ಲ ವಿದ್ವತ್ಪತ್ರಿಕೆಗಳಲ್ಲೂ ಸ್ಮಾರಕ ಸಂಪುಟಗಳಲ್ಲೂ ಹರಡಿಹೋಗಿವೆ. ಹೀಗೆ ಪ್ರತಿ ಪಾದಿಸಿರುವ ವಿಷಯವನ್ನೆಲ್ಲಾ ಕ್ರೋಢೀಕರಿಸಿ, ತೌಲನಿಕ ದ್ರಾವಿಡ ವ್ಯಾಕರಣವನ್ನು ಕುರಿತು ಪ್ರಮಾಣಭೂತವಾದ ಗ್ರಂಥವೊಂದನ್ನು ಅವರು ಅವಶ್ಯವಾಗಿ ಬರೆಯಬೇಕಾಗಿತ್ತು; ಈ ಕೆಲಸ ಮಾಡಲು ಅವರಷ್ಟು ಅಧಿಕಾರ, ಸಾಮರ್ಥ್ಯವುಳ್ಳವರು ಬೇರೆ ಯಾರೂ ಕಾಣುತ್ತಿಲ್ಲ. ಆದರೆ ಭಾಷಾಶಾಸ್ತ್ರದ ವಿಷಯವಾಗಿ ಜನತೆಗಿರುವ ಅಜ್ಞಾನ, ವಿಶ್ವವಿದ್ಯಾನಿಲಯಗಳಿಗೆ ಇರುವ ಅನಾದರ–ಇವುಗಳಿಂದ ಶ್ರೀ ರಾಮಸ್ವಾಮಿ ಅಯ್ಯರವರಿಗೆ ಯಾವ ಪ್ರೋತ್ಸಾಹವಾಗಲಿ, ಪುರಸ್ಕಾರವಾಗಲಿ ದೊರೆಯದೆ, ಕೆಲಸ ತಡೆದು ನಿಂತು ಬಿಟ್ಟಿತು! ಕಾಲೇಜಿನಲ್ಲಿ ಇಂಗ್ಲಿಷ್ ಪಾಠಗಳನ್ನು ಹೇಳುತ್ತಾ, ನಡುವೆ ದೊರೆತ ಬಿಡುವಿನಲ್ಲಿ ಭಾಷಾಶಾಸ್ತ್ರದ ವ್ಯಾಸಂಗವನ್ನು ಮುಂದುವರಿಸಬೇಕಾಗಿತ್ತು. ಆದರೆ ಅವರು ಕಾಲವಶ ರಾದದ್ದು ಕೇವಲ ೪೫ನೆಯ ವಯಸ್ಸಿನಲ್ಲಿ. ಇಂಥ ಪರಿಸ್ಥಿತಿಯಲ್ಲಿ ಅವರು ಸಾಧಿಸಿದ ಜ್ಞಾನರಾಶಿ ಯಾರಿಗಾದರೂ ಬೆರಗನ್ನು ತರುತ್ತದೆ.

ಶ್ರೀ ರಾಮಸ್ವಾಮಿ ಅಯ್ಯರವರಿಗೆ ಕನ್ನಡದಲ್ಲಿ ಒಳ್ಳೆಯ ಜ್ಞಾನವಿತ್ತು. ಇದರ ಸಂಶೋಧನೆಯಲ್ಲಿ ಆಸ್ಥೆಯಿತ್ತು. ನಮ್ಮ ಪರಿಷತ್ತಿನ ಕನ್ನಡ ಕೋಶದ ಸಮಾಲೋಚನ ಸಮಿತಿಯ ಸದಸ್ಯರಾಗಲು ಅವರು ಸಂತೋಷದಿಂದ ಒಪ್ಪಿಕೊಂಡಿದ್ದರು. ಸುಮಾರು ಹನ್ನೆರಡು ವರ್ಷದ ಹಿಂದೆ ಅವರು ಬೆಂಗಳೂರಿಗೂ ಮೈಸೂರಿಗೂ ಬಂದಿದ್ದಾಗ ಅವರ ಪ್ರತ್ಯಕ್ಷ ಪರಿಚಯ ಕೆಲವು ಮಂದಿ ಮಿತ್ರರೊಡನೆ ನನಗೆ ದೊರೆಯಿತು. ಶ್ರೀಯುತರ ಸರಳ ಸ್ವಭಾವವೂ ಗಾಢ ವಿದ್ವತ್ತೂ ಜ್ಞಾನ ಕುತೂಹಲವೂ ಎಲ್ಲರ ಮನಸ್ಸನ್ನೂ ಸೆಳೆದವು. ಅವರು ಲೋಕದ ಮುಂದೆ ಗದ್ದಲ ಮಾಡುವ ಸ್ವಭಾವದವರಲ್ಲ. ತಮ್ಮ ವ್ಯಾಸಂಗವೆಷ್ಟೋ ಲೇಖನ ವ್ಯವಸಾಯವೆಷ್ಟೋ ಅಷ್ಟರಲ್ಲೇ ಮಗ್ನರಾಗಿರತಕ್ಕವರು. ಆದಕಾರಣ ಅವರ ಹೆಸರು ಜನತೆಯ ಕಿವಿಗೆ ಅಷ್ಟಾಗಿ ಬೀಳಲಿಲ್ಲ. ಆದರೆ ಭಾರತ

ಭೂಮಿಯ ಮತ್ತು ಹೊರಗಿನ ಭಾಷಾಶಾಸ್ತ್ರಜ್ಞರ ಮಂಡಲಿಯಲ್ಲಿ ಅವರಿಗೆ ಹೆಚ್ಚಿನ ಪುರಸ್ಕಾರವಿತ್ತು.

ಶ್ರೀ ರಾಮಸ್ವಾಮಿ ಅಯ್ಯರವರು ಅಕಾಲ ಮೃತ್ಯುವಿಗೆ ಒಳಗಾದದ್ದು ವಿದ್ವತ್ ಪ್ರಪಂಚದ ದೊಡ್ಡ ದೌರ್ಭಾಗ್ಯ. ದ್ರಾವಿಡ ಭಾಷಾಶಾಸ್ತ್ರಜ್ಞರ ಸಾಲಿನಲ್ಲಿ ಅವರ ಹಿರಿಯ ಸ್ಥಾನ ತೆರಪಾಗಿ ನಿಂತುಬಿಟ್ಟಿತು! ಅನೇಕ ಕಡೆಗಳಲ್ಲಿ ಚದುರಿಹೋಗಿರುವ ಅವರ ಲೇಖನಗಳನ್ನು ಸಂಕಲನ ಮಾಡಿ ಸಂಪುಟ ರೂಪದಲ್ಲಿ ಪ್ರಕಟಿಸುವುದು ಅತಿ ತೀವ್ರವಾಗಿ ನಡೆಯಬೇಕಾಗಿರುವ ಕಾರ್ಯ. ದಕ್ಷಿಣ ಭಾರತದ ಯಾವುದಾದರೊಂದು ವಿಶ್ವವಿದ್ಯಾನಿಲಯವು ಇತ್ತ ಕಡೆ ಗಮನ ಕೊಡಲೇಬೇಕು.

೧೯೪೮]

ಕಾವ್ಯಾನುಭವ : ೧೯೭೦

ನಾಟಕಾವತಂಸ ಶ್ರೀಮಾನ್ ಸ್ಥಾನಂ ನರಸಿಂಹರಾಯರು*

ತಾನು ವಹಿಸುವ ಪಾತ್ರದ ಹೃದಯವನ್ನು ಹೊಕ್ಕು ಅದರಲ್ಲಿ ತಲ್ಲೀನವಾಗತಕ್ಕ ಶಕ್ತಿ; ವಿವಿಧ ಭಾವಗಳನ್ನು ಮನೋಹರವಾದ ಅಭಿನಯದಲ್ಲಿ ವ್ಯಕ್ತಪಡಿಸತಕ್ಕ ಪ್ರತಿಭೆ; ಶ್ರಾವ್ಯವಾದ ಸುಸ್ಫುಟವಾದ ಉಚ್ಚಾರಣೆ; ಭಾವಕ್ಕೂ ಸನ್ನಿವೇಶಕ್ಕೂ ಹೊಂದಿಕೊಂಡು, ಅಭಿನಯಕ್ಕೆ ಅಂಗವಾಗಿ, ಉಂಟೋ ಇಲ್ಲವೋ ಎಂಬಂತೆ ತೋರಿ, ಆ ಅಲ್ಪಾವಕಾಶದಲ್ಲೇ ರಸವನ್ನು ಉಕ್ಕಿಸಿ ಬಿಡುವ ಸಂಗೀತ—ಇವಿಷ್ಟೂ ಒಬ್ಬನೇ ವ್ಯಕ್ತಿಯಲ್ಲಿ ಸೇರುವುದೆಂದರೆ ಅದು ಪ್ರೇಕ್ಷಕರ ಪುಣ್ಯವೇ ಸರಿ. ನಾಟಕಾವತಂಸ ಶ್ರೀಮಾನ್ ಸ್ಥಾನಂ ನರಸಿಂಹರಾಯರು ಬೆಂಗಳೂರಿನಲ್ಲಿಯೂ ಮೈಸೂರಿನಲ್ಲಿಯೂ ನಾಟಕಗಳನ್ನಾಡಿ ರಸಿಕರಿಗೆ ಹುಚ್ಚು ಹಿಡಿಸಿದ್ದಾರೆಂದರೆ ಅದು ಅತಿಶಯೋಕ್ತಿಯಲ್ಲ. ನಾಟಕಗಳ ಭಾಷೆ ತೆಲುಗು—ನಮ್ಮ ಪ್ರೇಕ್ಷಕವರ್ಗಕ್ಕೆ ಸಾಮಾನ್ಯವಾಗಿ ಬಳಕೆಯಿಲ್ಲದ ಭಾಷೆ. ನಾಟಕಗಳ ರಚನೆಯಲ್ಲಿ ಹೇಳಿಸಿಕೊಳ್ಳುವಂತಹ ಕೌಶಲವೇನೂ ಇಲ್ಲ; ಒಟ್ಟಿನ ಮೇಲೆ ಅವು ಸುಸಂಸ್ಕೃತರನ್ನು ಮೆಚ್ಚಿಸಲಾರವೆಂದೇ ಹೇಳಬೇಕು. ಜೊತೆಯ ನಟರು ಸಾಧಾರಣ ನಾಟಕದ ಕಂಪೆನಿಗಳಲ್ಲಿ ಇರತಕ್ಕಂಥವರು; ಅವರಿಂದ ಶ್ರೀಮಾನ್ ನರಸಿಂಹರಾಯರ ಅಭಿನಯಕ್ಕೆ ಪೋಷಣೆ ದೊರೆಯುವುದು ಬಹುಶಃ

* 'ಪ್ರಬುದ್ಧ ಕರ್ಣಾಟಕ' ಸಂಪುಟ ೧೪, ಸಂಕ್ರಾಂತಿ ವಸ್ತುಕೋಶ.

ತಾರತಮ್ಯ ಪ್ರದರ್ಶನದ ಮೂಲಕ. ಇದರ ಮೇಲೆ ತಾವು ವಹಿಸುವುದು ಸ್ತ್ರೀ ಪಾತ್ರ—ಹೀಗೆ ಎಲ್ಲವೂ ಅನನುಕೂಲತೆಗಳೇ ಆಗಿದ್ದರೂ ತಮ್ಮ ಅದ್ಭುತ ಪ್ರತಿಭೆಯ ಸಾಮರ್ಥ್ಯದಿಂದ ಶ್ರೀಮಾನ್ ನರಸಿಂಹರಾಯರು ಅದೆಲ್ಲವನ್ನೂ ಮರೆಸಿ ಕನ್ನಡಿಗರ ಮನಸ್ಸನ್ನು ಸೂರೆಗೊಂಡಿದ್ದಾರೆ. ಬಜಾರು ನಾಟಕಗಳನ್ನು ಕಣ್ಣೆತ್ತಿಯೂ ನೋಡದ, ಅತೃಪ್ತಿಯ ಮೂರ್ತಿಗಳಾದ ಅರೋಚಕಿಗಳನ್ನೂ ಮರುಳುಗೊಳಿಸಿ ಮತ್ತೆ ಮತ್ತೆ ನಮ್ಮ ಅಭಿನಯದ ದರ್ಶನಕ್ಕೆ ಸೆಳೆಯುತ್ತಿದ್ದಾರೆ. ನಾಟಕಶಾಲೆ ತುಂಬಿ ಕಿಕ್ಕಿರಿಯದ ದಿನವೇ ಇಲ್ಲ; ಅದರಲ್ಲಿ ಸರಿಯಾದ ಜಾಗ ಸಿಕ್ಕಬೇಕಾದರೆ ಬಲು ಮುಂಚೆ ಹೋಗಿ ಗಂಟೆಗಳ ಕಟ್ಟಳೆ ಕಾದಹೊರತು ಮಾರ್ಗವಿಲ್ಲ. ಹಳ್ಳಿಗರು, ಪಟ್ಟಣಿಗರು, ಪಾಮರರು, ಪಂಡಿತರು—ಎಲ್ಲರಿಗೂ ಒಂದೇ ಸಮನಾದ ಉತ್ಸಾಹ. ಹೀಗೆ ಭಿನ್ನ ಭಿನ್ನ ರುಚಿಯವರನ್ನು ಒಂದೇ ಬಗೆಯಲ್ಲಿ ಒಂದೇ ಸಮನೆ ಮೆಚ್ಚಿಸತಕ್ಕ ಶಕ್ತಿ ಉನ್ನತವಾದ ಕಲೆಗೆ ಮಾತ್ರ ಸಾಧ್ಯ.

ಶ್ರೀಮಾನ್ ನರಸಿಂಹರಾಯರ ಅಭಿನಯವನ್ನು ನೋಡಿ ಮುಗ್ಧರಾದವರಿಗೆ ಅವರ ಪರಿಚಯವನ್ನು ರಂಗಸ್ಥಳದ ಹೊರಗೂ ಮಾಡಿಕೊಳ್ಳಬೇಕೆನ್ನಿಸಿದ್ದು ಸಹಜ. ಆದ್ದರಿಂದ ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದವರು ೧೯೩೨ನೆಯ ಡಿಸೆಂಬರ್ ೨೩ನೆಯ ತಾರೀಖು ಸಂಜೆಗೆ ಶ್ರೀಮಾನ್ ರಾ. ಅನಂತ ಕೃಷ್ಣಶರ್ಮರವರ ಅಧ್ಯಕ್ಷತೆಯಲ್ಲಿ "ಅಭಿನಯಕಲೆ"ಯನ್ನು ಕುರಿತು ನಾಟಕಾವತಂಸರ ಉಪನ್ಯಾಸವೊಂದನ್ನು ಏರ್ಪಡಿಸಿದ್ದರು. ಆಗ ತಾನೆ ಇಂಡಿಯನ್ ಫಿಲಸಾಫಿಕಲ್ ಕಾಂಗ್ರೆಸ್ಸಿನ ಉಪನ್ಯಾಸಗಳ ಸುರಿಮಳೆ ಮುಗಿದಿತ್ತು; ವಿದ್ಯಾರ್ಥಿಗಳೆಲ್ಲರೂ ಕ್ರಿಸ್ಮಸ್ ರಜಕ್ಕಾಗಿ ತಮ್ಮ ಊರುಗಳಿಗೆ ಹೊರಡುವ ಸಮಯ ಒದಗಿತ್ತು. ಆದರೆ ಉಪನ್ಯಾಸಕರ ಕೀರ್ತಿಯ ಪ್ರಭಾವದಿಂದ ಮಂದಿರವು ಸದಸ್ಯರಿಂದ ತುಂಬಿಹೋಗಿತ್ತು. ಆ ಸುಸಂಸ್ಕೃತರ ಸಭೆಯ ಮುಂದೆ ತೆಲುಗು ಭಾಷೆಯಲ್ಲಿ ಶ್ರೀಮಾನ್ ನರಸಿಂಹರಾಯರು ನಿರರ್ಗಳವಾದ ವಾಗ್ಝರಿಯಿಂದ, ಅನುಪಮವಾದ ಆವೇಶದಿಂದ ಮಾತನಾಡಿದರು. ಆ ಸನ್ನಿವೇಶದ ಸ್ವಾರಸ್ಯವನ್ನು ಮಾತಿನಲ್ಲಿ ವಿವರಿಸುವುದು ಕಷ್ಟ. ಎರಡೂವರೆ ಗಂಟೆಯ ಕಾಲ ಉಪನ್ಯಾಸ ಜರುಗಿತೆನ್ನುವುದು ಸದಸ್ಯರಿಗೆ ಗೊತ್ತಾದದ್ದು ಉಪನ್ಯಾಸ ನಿಂತ ಮೇಲೆ ಗಡಿಯಾರವನ್ನು ನೋಡಿಕೊಂಡಾಗಲೇ. ಸಭೆಗೆ ಬಂದಿದ್ದವರಲ್ಲಿ ತೆಲುಗನ್ನು ತಿಳಿಯದವರೇ ಬಹಳ ಮಂದಿ; ಆದರೂ ಅಖಂಡವಾದ—ಕರತಾಡನದಿಂದ ಮಾತ್ರ ಕಲಕಿದಂತಾಗಿ ಮತ್ತೆ ಥಟ್ಟನೆ ಕೂಡಿಕೊಳ್ಳುವ—ಅವಧಾನ. ಅಂದಿನವರೆಗೆ ಪ್ರೇಕ್ಷಕರ ಪಾಲಿಗೆ ನಾಟಕಾವತಂಸರು ಮಾತ್ರ ಆಗಿದ್ದ ಶ್ರೀಮಾನ್ ನರಸಿಂಹರಾಯರು ಆ ದಿನ ವಾಗ್ಮಿಗಳಾದರು, ವಿಮರ್ಶಕರಾದರು, ಕವಿಗಳಾದರು, ನಾಟ್ಯಯೋಗಿಗಳಾದರು. ಅಂದಿನ ಅವರ ಉಪನ್ಯಾದಲ್ಲಿ ಸೂತ್ರವುಂಟು, ಉದಾಹರಣೆಯುಂಟು, ವಿಮರ್ಶೆಯುಂಟು, ಆದರ್ಶವುಂಟು, ಉಪದೇಶವುಂಟು, ಸಾಕ್ಷಾತ್ಕಾರವುಂಟು. ಕಿವಿಗೆ ಇಂಪಾದ, ಅಂತಃಕರಣಕ್ಕೆ ಸಂಸ್ಕಾರವಾದ ಈ ಬಗೆಯ ಔತನವು ಪ್ರೇಕ್ಷಕನ ಜನ್ಮದಲ್ಲಿ ಹಲವು ಸಲ ದೊರೆಯಲಾರದು.

ಅಂದು ವೇದಿಕೆಯ ಮೇಲೆ ನಿಂತು ಶ್ರೀಮಾನ್ ಸ್ಥಾನಂ ನರಸಿಂಹರಾಯರು ಗಳಿಸಿದ ವಿಜಯವು ಅವರ ರಂಗಸ್ಥಳದ ವಿಜಯವನ್ನು ಮೀರಿಸಿತೆನ್ನಬಹುದು.

ಇಂಥ ಉಪನ್ಯಾಸವನ್ನು ಮೈಮರೆತು ಕೇಳುತ್ತಿದ್ದವರಿಗೆ ಅದು ಮುಗಿದ ಮೇಲೆ, ಲಿಪಿಯಲ್ಲಿ ಅದನ್ನು ಅಡಕ ಮಾಡಿ ಶಾಶ್ವತವಾಗಿ ನಿಲ್ಲಿಸಿಕೊಳ್ಳಲು ಲಘು ಲೇಖನಕಾರರು ಯಾರೂ ಇರಲಿಲ್ಲವಲ್ಲ ಎಂದು ವಿಷಾದವಾಯಿತು. ಏಕೆಂದರೆ ಅಂದು ಶ್ರೀಮಾನ್ ನರಸಿಂಹರಾಯರ ವಾಣಿಯಲ್ಲಿ ಕಲೆಯ ತಿರುಳು ಹೊರಬಿದ್ದಿತು. ಆ ದಿನ ಅವರು ಕಲಾಪ್ರೇಮಿಗಳಿಗೂ ಕಲಾಭ್ಯಾಸಿಗಳಿಗೂ ಮನನಕ್ಕೆ ಯೋಗ್ಯವಾದ ಜೀವ ತತ್ತ್ವಗಳನ್ನು ಪ್ರತಿಪಾದಿಸಿದರು; ನಮ್ಮ ರಂಗಭೂಮಿಯಲ್ಲಿ ತಲೆಯೆತ್ತಿ ನಿಂತಿರುವ ಹಲವು ಸಮಸ್ಯೆಗಳಿಗೆ ಸಿದ್ಧಾಂತ ರೂಪವಾದ ಉತ್ತರಗಳನ್ನು ಕೊಟ್ಟರು; ತಮ್ಮ ವಿಚಾರದ, ಅನುಭವದ, ಉಪಾಸನೆಯ, ಅಮೂಲ್ಯ ಸಾರವನ್ನು ಸರ್ವಸುಲಭವಾದ ಮಾತಿನಲ್ಲಿ ನಿರೂಪಿಸಿದರು. ಇಂಥ ಭಾಷಣವನ್ನು ಅದು ಬಂದಂತೆಯೇ ಬರೆದುಕೊಳ್ಳಲಾಗಲಿಲ್ಲವಲ್ಲ ಎಂದು ಶ್ರೋತೃಗಳು ತಪಿಸುವುದರಲ್ಲಿ ಆಶ್ಚರ್ಯವೇನು? ಆದರೆ ಅದೂ ಒಂದು ಹುಚ್ಚೇ. ಅವರು ಆಡಿದ ಮಾತುಗಳನ್ನೆಲ್ಲಾ ಒಂದು ವೇಳೆ ಗುರುತು ಹಾಕಿಕೊಂಡಿದ್ದರೂ—ಆ ಭಾಷಣ ಸಮಯದಲ್ಲಿ ಅವರ ಮುಖದ ಮೇಲೆ ಅರಳುತ್ತಿದ್ದ ಮಂದಹಾಸ; ಆವೇಶವನ್ನು ಅನುಸರಿಸಿ ಅದು ಥಟ್ಟನೆ ಗಾಂಭೀರ್ಯಕ್ಕೆ, ಉದಾತ್ತತೆಗೆ ತಿರುಗಿಬಿಡುತ್ತಿದ್ದ ಸೊಗಸು; ಸೂತ್ರಕ್ಕೆ ನಿದರ್ಶನವಾಗಿ ಸುಳಿದು, ಸಾಮಾಜಿಕ ಆಸೆಯನ್ನು ಇನ್ನೂ ಕೆರಳಿಸುತ್ತಿದ್ದ ಆ ಅಭಿನಯ, ಆ ಸಂಗೀತ;—ಇದೆಲ್ಲವನ್ನೂ ಉಳಿಸಿಕೊಳ್ಳುವ ಬಗೆ ಹೇಗೆ! ಇವು ಸಾಮಾಜಿಕರ ಚಿತ್ತಭಿತ್ತಿಯಲ್ಲಿ ಮಾತ್ರ ಉಳಿದಿರತಕ್ಕವು.

ಆದರೂ, ಸಾಧ್ಯವಾದರೆ ಮುಂದಿನ ಸಂಚಿಕೆಯಲ್ಲಿ ಶ್ರೀಮಾನ್ ನರಸಿಂಹರಾಯರ ಉಪನ್ಯಾಸದ ಸಾರಾಂಶವನ್ನಾದರೂ ಪ್ರಕಟಿಸಬೇಕೆಂಬ ಅಪೇಕ್ಷೆಯೇನೋ ಇದೆ.

೧೯೩೩]

ಕಾವ್ಯಾನುಭವ : ೧೯೭೦

ಕಾರಂತರ ಅರವತ್ತು:
ಕನ್ನಡದ ಕ್ರಾಂತಿಪುರುಷ

ಶ್ರೀ ಶಿವರಾಮ ಕಾರಂತರು ನಮ್ಮ ತಲೆಮಾರಿನ ಕನ್ನಡದ ಕ್ರಾಂತಿಪುರುಷರಲ್ಲಿ ಒಬ್ಬರು. ಅವರ ಪ್ರತಿಭೆಗೆ ಅಳವಡವ ಕಲೆಯಿಲ್ಲ. ಅವರ ಲೇಖನಿಯಿಂದ ಸಂತತವಾಗಿ ಹೊರಬೀಳುತ್ತಿರುವ ಕೃತಿಗಳಲ್ಲಿ ಹಲವನ್ನು ಓದಿ ಮೆಚ್ಚಿರುವ ಅನೇಕ ಮಂದಿ ಕನ್ನಡಿಗರಲ್ಲಿ ನಾನೂ ಒಬ್ಬ. ದೂರದಿಂದ ಮಾತ್ರವಲ್ಲದೆ ಹತ್ತಿರದಿಂದಲೂ ಅವರ ಬಹುಮುಖವಾದ ಕಾರ್ಯೋತ್ಸಾಹವನ್ನು ಆಗಾಗ ನಿರೀಕ್ಷಿಸಿ ಬೆರಗಾಗಿದ್ದೇನೆ; ಅವರ ಪರಿಚಯ ಭಾಗ್ಯವನ್ನು ಕೆಲವು ಮಟ್ಟಿಗೆ ಪಡೆದು ನನ್ನ ಅನುಭವ ಆನಂದಗಳನ್ನು ಹೆಚ್ಚಿಸಿಕೊಂಡಿದ್ದೇನೆ.

ನಿಸರ್ಗವೇ ನಮ್ಮ ಎದುರಿಗೆ ಸುರುಳಿ ಬಿಚ್ಚಿ ಕೊಂಡು ಸಾಗುತ್ತಿದ್ದರೆ ಉಂಟಾಗಬಹುದಾದ ಅನುಭವ ಕಾರಂತರ ಕೃತಿಗಳನ್ನು ಓದುತ್ತಿರುವಾಗ ನಮಗೆ ಅನೇಕ ವೇಳೆ ಲಭಿಸಿದೆ. ಅವರ ಬರಹದಲ್ಲಿ ಒಟ್ಟಿನ ಮೇಲೆ ಕಲೆಯ "ನಿರ್ಮಿತಿ"ಗಿಂತ ನಿಸರ್ಗದ ಆವಿಷ್ಕೃತಿ ಹೆಚ್ಚು. ಇಲ್ಲಿ ನಿಸರ್ಗವೆಂದರೆ ಕಡಲು, ಬೆಟ್ಟ, ಹೊಳೆ, ಕಾಡು ಮೊದಲಾದ ಅಚೇತನ ಪ್ರಕೃತಿ ಮಾತ್ರವಲ್ಲ, ವಿವಿಧ ವಿಚಿತ್ರವಾದ ಮಾನವ ಪ್ರಕೃತಿಯೂ ಅದರಲ್ಲಿ ಹಾಸು ಹೊಕ್ಕಾಗಿ ಸೇರುತ್ತದೆ.

ಕಾರಂತರ ಬರವಣಿಗೆ ಬೆಳೆದಂತೆಲ್ಲ ಅವರ ಸಹಾನುಭೂತಿ ಶಕ್ತಿಯೂ ಬೆಳೆದು ಬಂದಿರುವಂತೆ ಕಾಣುತ್ತದೆ. ದುಡಿಮೆ ದುಃಖ ಇವೇ ತಮ್ಮ ಬಾಳಿನ

ಸಾರವಾದರೂ ಅಚಲ ಶ್ರದ್ಧೆಯನ್ನು ಭದ್ರವಾಗಿ ನೆಮ್ಮಿ ನಿಲ್ಲುವ ಸ್ತ್ರೀ ಪಾತ್ರಗಳಲ್ಲಂತೂ ಕಾರಂತರಿಗೆ ಅಪಾರ ಗೌರವ. ಇಂಥ ಪಾತ್ರಗಳಿಂದಲೇ ಅವರ ಮಹಾಕೃತಿ 'ಮರಳಿ ಮಣ್ಣಿಗೆ', ಈಚಿನ 'ನಂಬಿದವರ ನಾಕ ನರಕ' ಮೊದಲಾದವು ಅಮರವಾಗಿರುವುವು. ವಿಚಾರಪರರಾದ ಕಾರಂತರ ದೃಷ್ಟಿಯಲ್ಲಿ "ಬಾಳ್ವೆಯೇ ಬೆಳಕು". ಆದರೆ ಅನ್ಯರ ಬದುಕನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅವರ ಸಾಂಪ್ರದಾಯಿಕ ನಂಬಿಕೆಗಳನ್ನು–ಅವು ತಮ್ಮವದಲ್ಲದಿದ್ದರೂ–ಅರ್ಥ ಮಾಡಿಕೊಳ್ಳಬೇಕು ಎಂಬುದು ಕಾರಂತರ ದೃಢತತ್ತ್ವ ಡಾಂಭಿಕ ವರ್ತನೆಯನ್ನು, ಆಷಾಢಭೂತಿ ವಿದ್ಯೆಯನ್ನು ಕಂಡರೆ ಮಾತ್ರ ಅವರಿಗೆ ಎಂದಿಗೂ ಆಗದು. ಅದನ್ನು ವ್ಯಂಗ್ಯವಾಗಿ ವಾಚ್ಯವಾಗಿ ಅವರು ಖಂಡಿಸುತ್ತಲೇ ಇರುತ್ತಾರೆ. ಇಷ್ಟಾದರೂ ಬದುಕಿನ ಅನಂತ ವಿವಿಧತೆಯನ್ನು ಅವರು ಚೆನ್ನಾಗಿ ಮನಗಂಡವರು. 'ಹಳ್ಳಿಯ ಹತ್ತು ಸಮಸ್ತರು' ಎಂಬ ಅಪೂರ್ವ ಕೃತಿ ಇದಕ್ಕೆ ಉತ್ತಮ ಸಾಕ್ಷಿ. "ತಂತ್ರ"ದ ಕಡೆ ಕಾರಂತರ ಗಮನ ಕಡಿಮೆ. ಆದರೆ ಮನಸ್ಸು ಮಾಡಿದರೆ ಅದರಲ್ಲಿ ಎಂಥ ಸಿದ್ಧಿಯನ್ನು ಅವರು ಮುಟ್ಟಬಲ್ಲರೆಂಬುದನ್ನು ಅವರ ಇತ್ತೀಚಿನ 'ಅಳಿದಮೇಲೆ' ಸಾರುತ್ತದೆ.

ಕಾರಂತರಿಗೆ ಇಷ್ಟರಲ್ಲೇ ಅರವತ್ತು ತುಂಬುತ್ತದೆ ಎಂದರೆ ಅವರ ಅರಿವೂ ಅನುಭವವೂ ಪಕ್ವವಾಗಿದೆ ಎಂದು ಮಾತ್ರ ಅರ್ಥ. ಅವರ ಸಹಜವಾದ ಹುರುಪನ್ನೂ ಲವಲವಿಕೆಯನ್ನೂ ವಯಸ್ಸು ಎಂದಿಗೂ ಕುಂದಿಸಲಾರದು; ಅದಕ್ಕೆ ಅವರು ಇನ್ನಷ್ಟು ಮೆರುಗು ಕೊಡಬಹುದು.

ಕಾವ್ಯಾನುಭವ : ೧೯೭೦

ಜ್ಞಾನೋಪಾಸಕ*

ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್ಯರೂ ನಾನು ಒಬ್ಬರನ್ನೊಬ್ಬರು ಬಾಲ್ಯದಿಂದ ಬಲ್ಲವರು; ಕೆಲ ಕಾಲ ಜೊತೆಯಲ್ಲಿ ಓದಿದವರು; ಬಹು ಕಾಲ ಜೊತೆಯಾಗಿ ದುಡಿದವರು; ವಯಸ್ಸಿನೊಂದಿಗೆ ಸ್ನೇಹವನ್ನೂ ಜೊತೆ ಜೊತೆಗೆ ಬೆಳೆಸಿಕೊಂಡವರು. ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನೂ ಅವರ ಕಾರ್ಯಕ್ಷೇತ್ರದ ಹಲವು ಸಾಧನೆಗಳನ್ನೂ ಕುರಿತು ಅವರ ಶಿಷ್ಯರೂ ಮಿತ್ರರೂ ನಿಕಟ ಪರಿಚಯದಿಂದ ಬರೆದಿರುವ ಲೇಖನಗಳ ಈ ಸಂಕಲನಕ್ಕೆ ಮುನ್ನುಡಿಯಾಗಿ ನನ್ನ ಎರಡು ಮಾತನ್ನೂ ಸೇರಿಸಬೇಕೆಂದೂ ಇದರ ಪ್ರಕಾಶಕರು ಅಪೇಕ್ಷಿಸಿ ನನ್ನನ್ನು ಗೌರವಿಸಿದ್ದಾರೆ. ನರಸಿಂಹಾಚಾರ್ಯರಲ್ಲಿ ನನಗಿರುವ ಪ್ರೀತಿಯನ್ನೂ ಮೆಚ್ಚಿಗೆಯನ್ನೂ ಸೂಚಿಸುವುದು ನನಗೆ ಯಾವಾಗಲೂ ಸಂತೋಷದ ವಿಷಯವೇ. ಅದರಲ್ಲೂ ಇನ್ನೂ ಹಲವರಿಗಿದ್ದಂತೆಯೇ ನಮ್ಮಿಬ್ಬರಿಗೂ ಕೂಡ ಹಿರಿಯ ಕನಸಾಗಿದ್ದ ಕನ್ನಡ ನಾಡಿನ ಏಕೀಕರಣವು ಈಚೆಗೆ ಫಲಿಸಿ, ದೂರದ ಬಿದರೆ ಪಟ್ಟಣ ರಾಜ್ಯದ ಉತ್ತರ ಗಡಿಯೊಳಕ್ಕೆ ಬಂದು, ಅಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ಪ್ರೊ. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ವಿಶೇಷ ಸಂದರ್ಭದಲ್ಲಿ

---

* ಪ್ರೊ. ಡಿ.ಎಲ್. ನರಸಿಂಹಾಚಾರ್ಯರಿಗೆ ಅವರ ಶಿಷ್ಯರೂ ಮಿತ್ರರೂ ಅರ್ಪಿಸಿದ 'ಜ್ಞಾನೋಪಾಸಕ' ಗ್ರಂಥಕ್ಕೆ ಬರೆದ ಮುನ್ನುಡಿ (೫-೨-೧೯೬೦)

ಈ ಎರಡು ಮಾತನ್ನು ಬರೆಯುವುದು ನನಗೆ ಹೆಚ್ಚಿನ ಸಂತೋಷದ ವಿಷಯ. ಆದರೆ, ಆಪ್ತಮಿತ್ರನನ್ನು ಕುರಿತು ಬರೆಯುವುದರಲ್ಲಿ ಸಂತೋಷದ ಜೊತೆಗೆ ಸಂಕೋಚವೂ ಬೆರೆಯುತ್ತದೆ. ಆತ್ಮೀಯತೆಯ ಬಣ್ಣ ಕವಿದು ಪ್ರಶಂಸೆ ಎಲ್ಲಿ ಹದ ಮೀರುತ್ತದೊ ಎಂಬ ಭಯದಿಂದ ಉತ್ಸಾಹವನ್ನು ಅದುಮಿಕೊಳ್ಳುವ ಸಂದರ್ಭವೂ ಇಲ್ಲಿ ಉಂಟು!

ಡಿ.ಎಲ್.ಎನ್. ಎಂದರೆ ಪಾಂಡಿತ್ಯ, ಪಾಂಡಿತ್ಯ ಎಂದರೆ ಡಿ.ಎಲ್.ಎನ್. ಎನ್ನುವುದು ಕನ್ನಡ ಬಲ್ಲವರಲ್ಲೆಲ್ಲಾ ಈಗ ರೂಢಿಯ ಭಾವನೆಯಾಗಿದೆ. ಪಾಂಡಿತ್ಯದ ಗಳಿಕೆಗಾಗಿ, ಬೆಳೆವಳಿಗೆಗಾಗಿ ಜೀವಮಾನವನ್ನೇ ತೇಯುತ್ತಿರುವವರು ನರಸಿಂಹಾಚಾರ್ಯರು. ಪಾಂಡಿತ್ಯವೆನ್ನುವುದು ಕೇವಲ ಸಮಯ ಸ್ಫೂರ್ತಿಯಿಂದ ಮಿಂಚುವ ವಸ್ತುವಲ್ಲ. ನಿರಂತರವಾದ ವ್ಯಾಸಂಗವೇ ಅದನ್ನು ಸಾಧಿಸುವ ರಾಜಮಾರ್ಗ. ಕಣಕಣವಾಗಿ ವಿಷಯ ಸಂಗ್ರಹ ಮಾಡಿ, ಸಂಶೋಧನೆ ಮಾಡಿ, ತನ್ನ ಕಣಜವನ್ನು ತುಂಬಿಕೊಳ್ಳಬೇಕು. ಈ ತುಣುಕುಗಳು ಎಲ್ಲಿ ದೊರೆಯುತ್ತವೆ? ಯಾವ ನಿಘಂಟಿನಲ್ಲಿ, ಯಾವ ಓಲೆಯ ಗರಿಯ ಪ್ರತಿಯಲ್ಲಿ, ಯಾವ ಶಾಸನದಲ್ಲಿ, ಯಾವ ಶಾಸ್ತ್ರ ಗ್ರಂಥದಲ್ಲಿ, ಯಾವ ಭಾಷೆಯ ಯಾವ ಸಂಶೋಧನ ಪತ್ರಿಕೆಯಲ್ಲಿ, ಯಾವ ಪ್ರದೇಶದ ಮನೆ ಮಾತಿನಲ್ಲಿ? ಎಂದು ಕಣ್ಣು ಕಿವಿಗಳನ್ನು ತೆರೆದುಕೊಂಡೇ ಗಮನವಿಡಬೇಕು. ಒಂದು ಶಬ್ದದ ಮೂಲವನ್ನು ಪರಿಶೋಧಿಸುವುದಕ್ಕಾಗಿ ಅದರ ಅರ್ಥವನ್ನು ನಿರ್ಣೈಸುವುದಕ್ಕಾಗಿ ನರಸಿಂಹಾಚಾರ್ಯರು ಪಟ್ಟಿರುವ ಶ್ರಮವನ್ನು ಅವರೇ ಬಲ್ಲರು. ಫಲ ದೊರೆತಾಗ ಅವರಿಗೆ ಯಾವ ಆನಂದ ದೊರೆಯಿತೆಂಬುದನ್ನು ಅವರ ಮುಖ ನೋಡಿಯೇ ಅರಿಯಬೇಕು; ಆ ಆನಂದದಲ್ಲಿ ನಾವೂ ಭಾಗಿಗಳಾಬೇಕು!

ಕೆಲವು ತಿಂಗಳ ಕೆಳಗೆ ಇಂಥ ಒಂದು ಕಗ್ಗಂಟನ್ನು ಅವರು ಬಿಡಿಸಿದ ಸಂದರ್ಭ ನೆನಪಿಗೆ ಬರುತ್ತದೆ. ಒಂದು ಸಂಜೆ ನರಸಿಂಹಾಚಾರ್ಯರು ನಮ್ಮ ಮನೆಗೆ ಬಂದಿದ್ದಾಗ, "ಎಲ್ಲಿ, ಆದಿಪುರಾಣ ತೆಗೆಯಿರಿ" ಎಂದರು–

ಪೊಳೆವಲರಮರ್ದಿನ ಕಪ್ಪುರ
ವಳುಕಿನ ಕತ್ತುರಿಯ ಕೊಳೆತ [ದೂ]ರ್ವಾಭರಣಂ–।
ಗಳ ಪೊಳೆವ ಮಾಣಿಕಂಗಳ
ಬೆಳಗಿದೆ ಸೂಚಿಸಿತು ಭರತನಂತಃಪುರಮಂ ॥ (೧೧–೪೩)

ಎಂಬ ಪದ್ಯವನ್ನು ತೋರಿಸಿ, "ಇಲ್ಲಿ 'ಕೊಳೆತ' ಎಂದರೆ ಏನು?" ಎಂದರು. ಇದು ಬಹು ದಿನಗಳಿಂದ ಕನ್ನಡದ ಉಪಾಧ್ಯಾಯರನ್ನು ಬಾಧಿಸುವ ಪ್ರಶ್ನೆ. ಪ್ರೊ. ಕುಂದಣಗಾರರ ಇತ್ತೀಚಿನ ಪರಿಷ್ಕರಣದಲ್ಲಿ ಕೂಡ "[ಕೊಳದ]" ಎಂಬುದು ಮೂಲ ಪಾಠವಾಗಿರಬಹುದೆಂದು ಊಹೆ ಮಾಡಿ ಕೈಬಿಡಲಾಗಿದೆ. ನಾನು ತಲೆಯಲ್ಲಾಡಿಸಿದೆ. "ಅದು 'ಕೊಳೆತುಹೋದ' ಎಂಬುದಂತೂ ಅಲ್ಲ. ಇಲ್ಲಿ ಏಟಿ ಇರಬೇಕೋ ಹೇಗೆ?" ಎಂದೆ. ನರಸಿಂಹಾಚಾರ್ಯರು "ಅದರ ಸರಿಯಾದ ರೂಪ 'ಕೊಟಿತ', 'ಎಳೆಯ, ಹೊಸ' ಎಂದು ಅರ್ಥ ತೆಲುಗಿನ 'ಕೊತ್ತ'ವನ್ನು ಜ್ಞಾಪಿಸಿಕೊಳ್ಳಿ" ಎಂದರು. ಅವರ ಮುಖದ ಮೇಲೆ ಉಲ್ಲಾಸದ ಮಿಂಚು ಹೊಳೆಯಿತು. ಅದರ ಬೆಳಕಿನಲ್ಲಿ ನನ್ನ

ಬಹುಕಾಲದ ಸಂದೇಹ ಹರಿದುಹೋಯಿತು! ತೆಲುಗಿನ ಕ್ರೊತ್ತ (=ಹೊಸ)ದ ಪೂರ್ವರೂಪವೂ ಹಳಗನ್ನಡದಲ್ಲಿ ನಿಂತ ರೂಪವೂ ಒಂದೇ; 'ಕೊಟಿತ' ತೆಲುಗಿನಲ್ಲಿ, ಕೊಟಿತ>ಕ್ರೊತ್ತ, ಪೊಟಿಲ್>ಪೋಲು: ಹೀಗೆ ಧ್ವನಿ ವ್ಯತ್ಯಾಸವಾಗುವುದು ಹಳೆಯ ತೆಲುಗಿನ ಸಾಮಾನ್ಯ ನಿಯಮ. ತಮಿಳಿನ 'ಕುಟನ್ದೈ' (=ಶಿಶು) ಮೊದಲಾದ ಶಬ್ದಗಳನ್ನು ಇಲ್ಲಿ ಸ್ಮರಿಸಬಹುದು. ಅಂತೂ ಪಂಪನ 'ಆದಿಪುರಾಣ'ದಲ್ಲಿ 'ಕೊಟಿತ ದೂರ್ವಾಭರಣ' ಎಂದರೆ 'ಎಳೆಯ ಗರಿಕೆಯ ಆಭರಣ'; ಇದು ಮಾಂಗಲ್ಯ ಸೂಚಕ ದ್ರವ್ಯ. ಪಂಪನು ಈ ಅಪೂರ್ವ ಪದವನ್ನು ಉಳಿಸಿಕೊಟ್ಟದ್ದಕ್ಕೆ ನಾವು ಅವನಿಗೆ ಕೃತಜ್ಞನಾಗಿರಬೇಕು; ದ್ರಾವಿಡ ಭಾಷಾಶಾಸ್ತ್ರದ ಜ್ಞಾನದ ಬಲದಿಂದ ಅದರ ಮೂಲವನ್ನು ಬೆಳಗಿ, ಅರ್ಥವನ್ನು ಸ್ಫುಟಮಾಡಿಕೊಟ್ಟದ್ದಕ್ಕಾಗಿ ಪಂಪನ ಭಕ್ತರಾದ ನರಸಿಂಹಾಚಾರ್ಯರಿಗೆ ನಾವು ಕೃತಜ್ಞರಾಗಿರಬೇಕು. ಕಾಲಪುರುಷನ ವಿಸ್ಮೃತಿಯ ತೆರೆಮೆರೆಯಿಂದ ಜ್ಞಾನ ಕಿರಣಗಳನ್ನು ನರಸಿಂಹಾಚಾರ್ಯರು ಬಯಲಿಗೆ ತರುವುದನ್ನು ನೋಡಿದಾಗ ನನಗೆ ಇಂಗ್ಲೀಷಿನ ಒಂದು ದ್ವಿಪದಿ ಜ್ಞಾಪಕಕ್ಕೆ ಬರುತ್ತದೆ; ಕ್ರಿ.ಶ. ಹದಿನೆಂಟನೆಯ ಶತಮಾನದ ಆದಿಭಾಗದಲ್ಲಿದ್ದ ಹರ್ನ್ ಎಂಬ ಪ್ರಾಕ್ತನ ಸಂಶೋಧಕನನ್ನು ಕುರಿತ ಪದ್ಯ ಅದು :

Quothe Time to Thomas Hearne-
Whatever I forget you Learn!

ಪಾಂಡಿತ್ಯವೆಂದರೆ ಕೇವಲ ವಿಷಯ ರಾಶಿಯ ಸಂಗ್ರಹವಲ್ಲ. ಆ ರಾಶಿ ಬೇಕೇ ಬೇಕು. ಆದರೆ ಅಷ್ಟೇ ಸಾಲದು. ಆ ವಿವಿಧ ವಿಷಯಗಳಲ್ಲಿ ಮರೆಯಾಗಿರುವ ಸಂಬಂಧಗಳನ್ನು ಊಹಿಸಿ ಗ್ರಹಿಸಿ, ಎಳೆಗಳ ತೊಡಕುಗಳನ್ನು ಬಿಡಿಸಿ ಕೂಡಿಸಿ, ತತ್ವವನ್ನು ಬೆಳಗುವ ಸಂಯೋಜಕ ಪ್ರತಿಭೆಯೂ ಜೊತೆಗೆ ಅವಶ್ಯಕವಾಗಿ ಬೇಕು. ಇದು ನರಸಿಂಹಾಚಾರ್ಯರಲ್ಲಿ ಹೇಗೆ ಕೆಲಸ ಮಾಡುತ್ತಿರುತ್ತದೆ ಎಂಬುದನ್ನು ನಾನು ಹಲವು ಸಂದರ್ಭಗಳಲ್ಲಿ ಮನಗಂಡು ಬೆರಗಾಗಿದ್ದೇನೆ. ಹಳಗನ್ನಡ ಭಾಷೆ ಸಾಹಿತ್ಯಗಳ ವಿಷಯಕ್ಕಂತೂ ಹಲವರು ಹೇಳಿರುವಂತೆ, ನಾನೂ ಬಲ್ಲಂತೆ–ಅವರೊಂದು "ಜಂಗಮ ಬೃಹತ್ಕೋಶ". ಅವರಿಗೂ ಹರಿಯದಿರುವ ಪ್ರಶ್ನೆಗಳು ಇಲ್ಲವೆಂದಲ್ಲ. ಆದರೆ ಹಳಗನ್ನಡದಲ್ಲಿ ಅವರಿಗಿಂತಲೂ ನಿಷ್ಣಾತರಾದ ವಿದ್ವಾಂಸರನ್ನು ಕಾಣುವುದು ಅಶಕ್ಯವೆಂದೇ ನನ್ನ ಭಾವನೆ.

ನರಸಿಂಹಾಚಾರ್ಯರ ಪಾಂಡಿತ್ಯಕ್ಕೆ ಅವರ ಜ್ಞಾಪಕಶಕ್ತಿಯ ಬೆಂಬಲ ಅತ್ಯಧಿಕ. ಚಿಕ್ಕಂದಿನಿಂದ ಪ್ರಖರವಾಗಿದ್ದ ತಮ್ಮ ಸ್ಮೃತಿಶಕ್ತಿ ಈಗ ಕುಗ್ಗಿದೆಯೆಂದು ಅವರು ಒಮ್ಮೊಮ್ಮೆ ಕೊರಗುವುದುಂಟು. ಆದರೆ ಇದೆಲ್ಲಾ ಶ್ರೀಮಂತನು ಕೊಂಚ ಹಣವನ್ನು ಕಳೆದುಕೊಂಡು ಕೊರಗಾಡುವಂತೆ; ಈ ವಿಷಯದಲ್ಲಿ ನಾನು ಅವರಿಗೆ ಹೆಚ್ಚು ಸಹಾನುಭೂತಿಯನ್ನು ತೋರಿಸಲಾರೆ. ಈ ವಯಸ್ಸಿನಲ್ಲಿ ಕೂಡ ಅವರಿಗೆ ವಿಸ್ತಾರವಾದ ಟಿಪ್ಪಣಿಗಳು, ಸೂಚೀ ಪಟ್ಟಿಕೆಗಳೂ (Index Cards) ಮೊದಲಾದ ಆಧುನಿಕ ವಿದ್ವತ್ತಿನ ಪರಿಕರಗಳು ಅವಶ್ಯಕವೆನಿಸಿಲ್ಲ. ಕಂಬಚ್ಚಿನಲ್ಲಿ ಚಿನ್ನದ ತಂತಿಯನ್ನು ಎಳೆದಹಾಗೆ ಅವರ ಬಾಯಿಂದ

ಹಳಗನ್ನಡದ ಪದ್ಯಮಾಲೆ ಈಗಲೂ ಸರಾಗವಾಗಿ ಹರಿದುಬರುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಯಾವುದೊ ಒಂದು ಸಂಶೋಧನ ಪತ್ರಿಕೆಯಲ್ಲಿ ಅವರು ಒಮ್ಮೆ ಓದಿದ್ದ ಒಂದು ಲೇಖನದೊಳಗಿನ ವಿಷಯ ರೇಡಿಯೋವಿನಲ್ಲಿ ಮುಳ್ಳನ್ನು ಗೊತ್ತಾದ ಸ್ಥಾನಕ್ಕೆ ಜರುಗಿಸಿದ ಕೂಡಲೆ ಸಂಗೀತದ ಧ್ವನಿ ಎದ್ದು ಬರುವಂತೆ ಅವರ ಕಣ್ಣ ಮುಂದೆ ಎದ್ದು ನಿಲ್ಲುತ್ತದೆ.

ನರಸಿಂಹಾಚಾರ್ಯರ ಶಿಷ್ಯರಾಗಿ ಅವರಿಂದ ಪಾಠ ಕಲಿತ ವಿದ್ಯಾರ್ಥಿಗಳು ನಿಜವಾಗಿಯೂ ಧನ್ಯರು. ಭಾಷೆಯ ರಹಸ್ಯ, ಸಾಹಿತ್ಯದ ಸ್ವಾರಸ್ಯ ಎರಡನ್ನೂ ಏಕರೀತಿಯ ಉತ್ಸಾಹದಿಂದ ಮನಮುಟ್ಟಿಸಬಲ್ಲ ಸವ್ಯಸಾಚಿಗಳು ಅವರು. ಪ್ರಸ್ತುತ ಲೇಖನ ಸಂಗ್ರಹದಲ್ಲಿ ಅವರ ಶಿಷ್ಯರು ಬರೆದಿರುವುದನ್ನು ಓದಿದಾಗ, ಈ ಶ್ರೇಷ್ಠ ಉಪಾಧ್ಯಾಯನ ತರಗತಿಗಳಲ್ಲಿ ಕುಳಿತು ಪಾಠ ಕೇಳುವ ಅವಕಾಶ ನನಗೂ ಒದಗಬಾರದಾಗಿತ್ತೆ ಎಂದು ನಿಜವಾಗಿಯೂ ಅನ್ನಿಸಿತು. ಆದರೆ ಆಗ ಅವರ ಆತ್ಮೀಯ ಸ್ನೇಹವೂ ಸಲಿಗೆಯೂ ನನಗೆ ಈಗಿನಂತೆ ಬಹುಶಃ ದೊರೆಯುತ್ತಿರಲಿಲ್ಲವೇನೋ ಎಂದು ತೋರಿ ಮನಸ್ಸು ಸಮಾಧಾನಕ್ಕೆ ಬಂದಿತು!

ಜೀವನದಲ್ಲಿ ಪ್ರೇಮ ಎಷ್ಟು ದೊಡ್ಡದೋ ಸ್ನೇಹವೋ ಅಷ್ಟೇ ದೊಡ್ಡದು. ಪ್ರೇಮಕ್ಕೆ ಏಕವ್ಯಕ್ತಿನಿಷ್ಠೆಯ ನಿಯಮವುಂಟು. ಸ್ನೇಹಕ್ಕಾದರೆ ಆ ಪರಿಮಿತಿಯೂ ಇಲ್ಲ. ನರಸಿಂಹಾಚಾರ್ಯರಂಥ ದೊಡ್ಡ ಮನಸ್ಸಿನ ಪ್ರಿಯಮಿತ್ರರನ್ನು ಪಡೆದಿರುವುದು ನನ್ನ ಭಾಗ್ಯ ವಿಶೇಷ. ವಿದ್ವತ್ತಿನ ವಿಷಯವಾಗಿ ಅವರೂ ನಾನೂ ಹಲವು ಸಲ ಬಿರುಸಾಗಿಯೇ ಚರ್ಚೆ ಮಾಡಿದ್ದೇವೆ; ಕಾದಾಡಿದ್ದೇವೆ ಕೂಡ! ಎಷ್ಟೋ ವಿಚಾರಗಳಲ್ಲಿ ಅಭಿಪ್ರಾಯ ಭೇದಗಳನ್ನು ಜೋಕೆಯಿಂದ ಉಳಿಸಿಕೊಂಡು ಬಂದಿದ್ದೇವೆ. ಆದರೆ ಇದೊಂದೂ ಸ್ನೇಹದ ನಿರ್ಮಲತೆಯನ್ನು ಕದಡಿಲ್ಲ. ಹಾಗೆ ನೋಡಿದರೆ, ಕಾಲಚಕ್ರ ಉರುಳಿದಂತೆಲ್ಲಾ ಸಂಕೋಚದ ತೆರೆಗಳು ಸರಿದು ಮನಸ್ಸುಗಳು ಬಲು ಹತ್ತಿರಕ್ಕೆ ಬಂದಿವೆ. ನರಸಿಂಹಾಚಾರ್ಯರಂಥ ಮಿತ್ರರನ್ನು ನೆನೆಧಗ "ಕೇನಾಮೃತಮಿದಂ ಸೃಷ್ಟಂ ಮಿತ್ರಮಿತ್ಯಕ್ಷರ ದ್ವಯಂ" ಎಂದು ಚಿಕ್ಕಂದಿನಲ್ಲಿ ಓದಿದ್ದ ಸುಭಾಷಿತ ಪಂಕ್ತಿ ನೆನೆಪಾಗುತ್ತದೆ. ಈ ಸನ್ಮಿತ್ರನ ಅಪರಂಜಿಯಂಥ ಮನಸ್ಸಿನ ಅರಿವು ಕನ್ನಡಿಗರಿಗೆಲ್ಲ ಚೆನ್ನಾಗಿ ಉಂಟಾಗಲಿ. ಈತನ ಪಾಂಡಿತ್ಯಸೌಧಕ್ಕೆ ಕಳಶವಿಟ್ಟಂತೆ ಒದಗಿರುವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಈತನ ಸಿದ್ಧಿಯ ಔನ್ನತ್ಯಕ್ಕೆ ದೀವಿಗೆಯಾಗಿ ಬೆಳಗಲಿ.

ಕಾವ್ಯಾನುಭವ : ೧೯೭೦

ಶೂನ್ಯ ಸಂಪಾದನೆಯನ್ನು ಕುರಿತು*

ಶ್ರೀ ಚಿದಾನಂದಮೂರ್ತಿ ಕನ್ನಡ ಭಾಷಾ ಸಾಹಿತ್ಯಗಳ ನೈಷ್ಠಿಕ ವಿದ್ಯಾರ್ಥಿ, ಸಮರ್ಥ ಅಧ್ಯಾಪಕರು, ತಾರುಣ್ಯದಲ್ಲಿಯೇ ಕೈ ಪಳಗಿಸಿಕೊಂಡಿರುವ ಸಂಶೋಧಕರು. ಇವರ ನಿರಂತರವಾದ ಕೃತಿಯನ್ನೂ ಅದರ ಉತ್ತಮವಾದ ಲೇಖನ ಫಲವನ್ನೂ ನಿಕಟವಾಗಿ ನೋಡುತ್ತಾ ಮೆಚ್ಚುತ್ತಾ ಬಂದಿರುವ ನನಗೆ ಈ ಮುಂದಿನ ನಾಲ್ಕು ಮಾತುಗಳನ್ನು ಬರೆಯಲು "ಮುನ್ನುಡಿಗಳ ರಚನೆಯಲ್ಲಿ ಹೆಚ್ಚಿನ ಪ್ರವೃತ್ತಿಯಿಲ್ಲದಿದ್ದರೂ"–ನಿಜವಾಗಿ ಸಂತೋಷವಾಗಿದೆ.

'ಶೂನ್ಯ ಸಂಪಾದನೆ' ಕನ್ನಡದ ಒಂದು ಅಪೂರ್ವ ಕೃತಿ. ಅದು ಧರ್ಮ ಜಿಜ್ಞಾಸುಗಳಂತೆಯೆ ಸಾಹಿತ್ಯ ರಸಿಕರ ಮನಸ್ಸನ್ನೂ ವಿಶೇಷವಾಗಿ ಸೆಳೆದಿದೆ. ಇದರ ಗುರಿಯೇನು, ಸೊಗಸೇನು, ಹಿರಿಮೆಯೇನು; ಪಾಠ ಸಂಪ್ರದಾಯಗಳ ಬೆಳವಣಿಗೆಯೇನು; ಇಲ್ಲಿ ಎದ್ದಿರುವ, ಇದು ಎಬ್ಬಿಸಿರುವ ಸಮಸ್ಯೆಗಳೇನು–ಇಂಥ ಹಲವು ಅಂಶಗಳನ್ನು ಕುರಿತು ಶ್ರೀ ಚಿದಾನಂದಮೂರ್ತಿ ತಮ್ಮ ಈ ಗ್ರಂಥದಲ್ಲಿ ಸಾಧಾರವಾಗಿ ವಿಚಾರ ಮಾಡಿದ್ದಾರೆ. ಮುಖ್ಯವಾಗಿ ಸಾಮಾನ್ಯ ವಾಚಕರಿಗೆ ಮುಟ್ಟುವಂತೆ ಆದಷ್ಟು ನಿರೂಪಿಸಬೇಕೆಂಬುದು ಅವರ ಉದ್ದೇಶ;

---

* ಡಾ. ಎಂ. ಚಿದಾನಂದಮೂರ್ತಿಯವರ 'ಶೂನ್ಯ ಸಂಪಾದನೆಯನ್ನು ಕುರಿತು' ಎಂಬ ಗ್ರಂಥಕ್ಕೆ ಬರೆದ ಮುನ್ನುಡಿ (೨೬-೧೨-೧೯೬೭)

ಆದರೆ ವೀರಶೈವ ಸಾಹಿತ್ಯದ ಅಭ್ಯಾಸದಲ್ಲಿ ತಕ್ಕಮಟ್ಟಿನ ಪರಿಶ್ರಮವುಳ್ಳವರು ಕೂಡ ಇದನ್ನು ಓದಿ ಅನೇಕ ಹೊಸ ವಿಷಯಗಳನ್ನು ತಿಳಿದುಕೊಳ್ಳಬಹುದು; ಹೊಸ ದೃಷ್ಟಿಯನ್ನೂ ಬೆಳೆಸಿಕೊಳ್ಳಬಹುದು.

ಶ್ರೀ ಚಿದಾನಂದಮೂರ್ತಿಗಳ 'ಶೂನ್ಯ ಸಂಪಾದನೆಯನ್ನು ಕುರಿತು' ಒಳ್ಳೆಯ ಸಂಶೋಧನ ಗ್ರಂಥ. ಸಂಶೋಧಕನ ಮುಖ್ಯ ಕರ್ತವ್ಯವೆಂದರೆ-ಮೂಲ ಸಾಮಗ್ರಿ ಎಲ್ಲೆಲ್ಲಿದೆ ಎಂಬುದನ್ನು ಕಂಡುಹಿಡಿದು ಅದರ ಸಾಕ್ಷಾತ್ತಾದ ಪರಿಚಯವನ್ನು ಪಡೆಯುವುದು; ತನ್ನ ಸಂಶೋಧನೆಯಲ್ಲಿ ದೊರೆತ ಯಾವ ಸತ್ಯಾಂಶವನ್ನೂ-ಅದು ತನ್ನ ಮನಸ್ಸಿನ ಒಲವಿಗೆ, ಸಂಪ್ರದಾಯದ ನಂಬಿಕೆಗೆ, ಆವರೆಗಿನ ಗ್ರಹಿಕೆಗೆ ಹೊಂದಿಕೆಯಾಗದಂತೆ ತೋರಿದರೂ ಕೂಡ-ಕೈಬಿಡದೆ ತಿರಿಮುರಿ ಮಾಡದೆ ಯಥಾವತ್ತಾಗಿ ಉಲ್ಲೇಖಿಸುವುದು; ತನ್ನ ಎದುಗಿರುವ ಎಲ್ಲ ಅಂಶಗಳನ್ನೂ ನ್ಯಾಯಾಧೀಶನಂತೆ ತೂಗಿ ವಿಮರ್ಶಿಸಿ, ವಸ್ತು ನಿಷ್ಠವಾದ ಪರಿಶೀಲನೆಯಿಂದ ಹೊರಟ ನಿರ್ಣಯಗಳನ್ನು ಖಚಿತವಾಗಿ ನಿರೂಪಿಸುವುದು; ಸಂದೇಹಗಳು ಪರಿಹಾರವಾಗದ ಕಡೆ, ಹೆಚ್ಚಿನ ಸಾಮಗ್ರಿ ಒದಗುವತನಕ ಕೊನೆ ಮಾತನ್ನು ತಡೆಹಿಡಿಯುವುದು. ಈ ಕಷ್ಟದ ಕಾರ್ಯವನ್ನು ಶ್ರೀ ಚಿದಾನಂದಮೂರ್ತಿ ಹೇಗೆ ಎಚ್ಚರದಿಂದ ನಿರ್ವಹಿಸಿದ್ದಾರೆಂಬುದು ಅವರ ಗ್ರಂಥವನ್ನು ಓದುವವರಿಗೆ ಮನವರಿಕೆಯಾಗದಿರದು. ಇದನ್ನು ಬರೆಯಲು ಅವರು ಅನೇಕ ಅಚ್ಚಿನ ಗ್ರಂಥಗಳನ್ನೂ ಕೈ ಬರಹದಲ್ಲೇ ಇನ್ನೂ ಉಳಿದಿರುವ ಪ್ರತಿಗಳನ್ನೂ ವಿಪುಲ ಸಂಖ್ಯೆಯ ಶಾಸನಗಳನ್ನೂ ಶೋಧಿಸಿದ್ದಾರೆ; ಇದುವರೆಗೆ ಬಂದಿರುವ ಲೇಖನಗಳನ್ನು ಪರಿಶೀಲಿಸಿ ಯಥೋಚಿತವಾಗಿ ಉಪಯೋಗಿಸಿಕೊಂಡಿದ್ದಾರೆ; ಆಧಾರ ಸಾಮಗ್ರಿ ಎತ್ತ ಕಡೆ ಬೆರಳು ನೀಡಿದರೆ ಅತ್ತ ಕಡೆ ದೃಢ ಮನಸ್ಸಿನಿಂದ ಸಾಗಿದ್ದಾರೆ. ಹೀಗೆಂದರೆ ಶ್ರೀ ಚಿದಾನಂದಮೂರ್ತಿಯವರ ಎಲ್ಲ ಅಭಿಪ್ರಾಯಗಳನ್ನೂ ಒಪ್ಪಿಕೊಳ್ಳಲೇಬೇಕೆಂದೇನೂ ಇಲ್ಲ. ಉದಾಹರಣೆಗೆ ಶಿವಗಣಪ್ರಸಾದಿ ಮಹಾದೇವಯ್ಯನ 'ಶೂನ್ಯ ಸಂಪಾದನೆ' ಚಾಮರಸನ 'ಪ್ರಭುಲಿಂಗಲೀಲೆ'ಗಿಂತ ಪ್ರಾಚೀನವೆಂದು ಪ್ರತಿಪಾದಿಸಿರುವುದನ್ನು ಓದಿದ ಮೇಲೂ ಅದಕ್ಕೆ ವಿರುದ್ಧವಾದ ನನ್ನ ಹಳೆಯ ಗ್ರಹಿಕೆಯನ್ನು ಮಾರ್ಪಡಿಸಿಕೊಳ್ಳಲು ನನಗೆ ಇನ್ನೂ ಆಗಿಲ್ಲ! ಬೇರೆಯ ವಾಚಕರಿಗೆ ಬೇರೆ ಕೆಲವು ಅಂಶಗಳನ್ನು ಕುರಿತು ಅಭಿಪ್ರಾಯವುಂಟಾಗಬಹುದು. ಆದರೆ ಯಾರೂ ಕೂಡ ಶ್ರೀ ಚಿದಾನಂದಮೂರ್ತಿಯವರ ಸತ್ಯನಿಷ್ಠೆಯನ್ನಾಗಲಿ ಹೃದಯ ಶುದ್ಧಿಯನ್ನಾಗಲಿ ಪ್ರಶ್ನಿಸಲಾರರೆಂದು ನನ್ನ ನಂಬಿಕೆ. ಇಂಥ ಗ್ರಂಥಗಳಲ್ಲಿ ಸಿದ್ಧಾಂತಕ್ಕಿಂತ ಮಾರ್ಗ ಮುಖ್ಯ. ಇಲ್ಲಿಯ ಮಾರ್ಗ ನೇರ, ಶಾಸ್ತ್ರೀಯ.

'ಶೂನ್ಯ ಸಂಪಾದನೆ' ಸಾಹಿತ್ಯದ ದೃಷ್ಟಿಯಿಂದ ರಸನಿಬಿಡವಾಗಿದ್ದರೂ ಅದು ಪ್ರಥಮತಃ ಒಂದು ಮತೀಯ ಗ್ರಂಥ; ಕ್ರಿ.ಶ. ಹನ್ನೆರಡನೆಯ ಶತಮಾನದ ಕನ್ನಡನಾಡಿನ ಧಾರ್ಮಿಕ ಗಗನದಲ್ಲಿ ಬೆಳಗಿದ ವೀರಶೈವ ಮಹಾಮಹಿಮರ "ವಚನ"ಗಳನ್ನು ಮೂಲ ರೂಪದಲ್ಲಿಯೇ ಕಟ್ಟಿಕೊಡುವ ಉದ್ದೇಶದಿಂದ ಉದ್ಭವಿಸಿದ ಕೃತಿ : ಅವರ "ಚರಿತ್ರೆ"ಯನ್ನು ಕುರಿತ ಅನೇಕ ಸಂಗತಿಗಳ ಸಂಗ್ರಹ. ಇಂತಹ ಪೂಜ್ಯಗ್ರಂಥದ ಮೇಲೆ

ಸಂಶೋಧನೆಯ ಕಿರಣಗಳನ್ನು ಹಾಯಿಸುವುದೆಂದರೆ ಸಾಹಸ ಕಾರ್ಯವೇ ಸರಿ. ಇದರಿಂದ ಹೊರಡುವ ಕೆಲವು ನಿರ್ಣಯಗಳು ಶ್ರದ್ಧಾವಂತರ ಮನಸ್ಸನ್ನು ನೋಯಿಸುವುದೂ ಅಸಂಭವವಲ್ಲ. ಆದರೆ ಆಧುನಿಕ ಯುಗದಲ್ಲಿ ಐತಿಹಾಸಿಕ ದೃಷ್ಟಿ ವಿದ್ವತ್ತಿನ ಒಂದು ಮುಖ್ಯವಾದ ಅಂಗ. ಸಮಸ್ತ ವಿಷಯಗಳಿಗೂ–ಒಂದು ಮತಕ್ಕೆ ಅವರ ಗ್ರಂಥಗಳಿಗೆ ಕೂಡ–ಚರಿತ್ರೆಯುಂಟು ಎಂಬುದು ಇಂದಿನವರ ದೃಢವಾದ ಅರಿವು. ಜಗತ್ತಿನ ಎಲ್ಲ ಮತಗಳ ವಿಷಯದಲ್ಲೂ ಈ ಬಗೆಯ ಶೋಧನೆ ಈಗಾಗಲೆ ನಡೆದಿದೆ, ಇನ್ನೂ ನಡೆಯುತ್ತಿದೆ. ನಮ್ಮ ದೇಶದಲ್ಲಿಯೇ ಆಸ್ತಿಕರು "ಅಪೌರುಷೇಯ"ವೆಂದು ನಂಬಿರುವ ವೇದಗಳ ಕರ್ತೃತ್ವ, ಕಾಲನಿರ್ಣಯ, ಪಾಠಸಂಶೋಧನೆ ಮೊದಲಾದುವನ್ನು ಕುರಿತು ಪಾಶ್ಚಾತ್ಯರೂ, ಈಚೆಗೆ ನಮ್ಮ ವಿದ್ವಾಂಸರೂ ಪರಿಶೋಧನೆ ನಡೆಸಿ ಹೊಸ ಹೊಸ ವಾದಗಳನ್ನು ಮುಂದಿರಿಸಿಲ್ಲವೆ? ಅವುಗಳಲ್ಲಿ ಹಲವನ್ನು ವಿಚಾರಪರರಾದ ಧರ್ಮನಿಷ್ಠರು ಅಂಗೀಕರಿಸಿಲ್ಲವೆ? ಕ್ರೈಸ್ತ ಮತದಲ್ಲಿ "ಸುವಾರ್ತೆ"ಗಳನ್ನು (The Gospels) ಕುರಿತು ವಿಸ್ತಾರವಾದ ಸಂಶೋಧನೆ ನಡೆದು ಅದರ ಹಲವು ನಿರ್ಣಯಗಳನ್ನು ಕ್ರೈಸ್ತ ಧಾರ್ಮಿಕರೇ ಒಪ್ಪಿಕೊಂಡಿಲ್ಲವೆ? ದೇವಮೂಲ, ಋಷಿಮೂಲಗಳನ್ನು ಹುಡುಕಬಾರದೆಂಬುದು ಹಿಂದಿನವರ ಭಾವನೆಯಾಯಿತು; ಅವುಗಳನ್ನು ಅರಿತುಕೊಂಡರೂ ಧರ್ಮದ ತಿರುಳಿಗೆ ಯಾವ ಕುಂದೂ ಬರಲಾರದೆಂಬುದು ನಮ್ಮ ನಂಬಿಕೆಯಾಗಿರಬೇಕು.

ಹಿಂದೂಧರ್ಮ ಒಬ್ಬ ವ್ಯಕ್ತಿಯನ್ನು ಅವಲಂಬಿಸಿದ್ದಲ್ಲ; ಇದರ ಅತ್ಯಂತ ಪೂಜ್ಯರಾದ ಪ್ರವರ್ತಕರೂ ಕೂಡ ದ್ರಷ್ಟಾರರೇ ಹೊರತು ಕರ್ತಾರರಲ್ಲ. ನಮ್ಮವರ ನಂಬಿಕೆಯಂತೆ ಧರ್ಮ "ಅನಾದಿ"; ಈ "ಆದ್ಯ"ರು ಅವರ ಬಗೆಯನ್ನು ತಮ್ಮ ಪ್ರತಿಭಾನದ ಬಲದಿಂದ ಸಾಕ್ಷಾತ್ಕಾರ ಮಾಡಿಕೊಂಡವರು. ಧರ್ಮವೆಂಬುದು ಅವರ ಕಾಣ್ಕೆಯೇ ಹೊರತು ಕಲ್ಪನೆಯಲ್ಲ. ಈ "ದರ್ಶನ" ಶಕ್ತಿ ಹಲವರಿಗೆ ಮೀಸಲು ಎಂಬುದನ್ನು ಒಪ್ಪಿಕೊಂಡು ಅವರನ್ನು ಪೂಜಿಸಿದವರೂ, ಅವರ ವ್ಯಕ್ತಿತ್ವದ "ವೈಲಕ್ಷಣ"ಗಳಿಗೆ ಅನುಸಾರವಾಗಿ ಧರ್ಮದ ಮಹಿಮೆ ಇಳಿಯುವುದಿಲ್ಲ ಅಥವಾ ಏರುವುದಿಲ್ಲ. ಈ ವಿಷಯದಲ್ಲಿ ಹಿಂದೂಧರ್ಮ ಜಗತ್ತಿನ ಇತರ ಧರ್ಮಗಳಿಗಿಂತ ಭಿನ್ನವಾಗಿದೆ. ಇದು ಅದಕ್ಕೆ ಭೂಷಣವೇ ಹೊರತು ದೂಷಣವಲ್ಲ. ಈ ಅಂಶವನ್ನು ನೆನಪಿನಲ್ಲಿಟ್ಟುಕೊಂಡರೆ, ಅಲ್ಲಮಪ್ರಭು ಕಾಮಲತೆಯ ಮೋಹಕ್ಕೆ ಒಳಗಾಗಿದ್ದನೆ ಇಲ್ಲವೆ, ಮಹಾದೇವಿಯಕ್ಕ ಕೌಶಿಕನ ಪತ್ನಿಯಾಗಿ ಕೆಲವು ದಿನಗಳನ್ನು ಕಳೆದಳೆ ಇಲ್ಲವೆ, ಎಂಬಂಥ ವಿಷಯಗಳು ಇತಿಹಾಸದ ದೃಷ್ಟಿಯಿಂದ ಮಹತ್ವದ ಪ್ರಶ್ನೆಗಳಾದರೂ ಧರ್ಮದ ತಿರುಳಿನ ದೃಷ್ಟಿಯಿಂದ ಕ್ಲೇಶಕಾರಿಗಳಾಗುವುದಿಲ್ಲ. ಇವರಿಬ್ಬರೂ ಸಂಸಾರದ ಸುಳಿಯಲ್ಲಿ ಕೆಲವು ಕಾಲ ತೊಳಲಿದರೆಂದು ಒಪ್ಪಿಕೊಳ್ಳಬೇಕಾಗಿ ಬಂದರೂ, ಅವರ ಸಿದ್ಧಿಯ ಬೆಲೆ ಇಳಿಯುವುದಿಲ್ಲ. ಅವರ "ವಚನ"ಗಳ ಮಹತ್ವ ಅಳಿಯುವುದಿಲ್ಲ. ಇದರ ಮೇಲೆ, ಭಕ್ತಿಭಂಡಾರಿ ಬಸವಣ್ಣನಿಗೆ ಪತ್ನಿಯರ ಸಹವಾಸ ವಿರಲಿಲ್ಲವೆ, "ಭವಿ"ಯ ಸೇವೆಯ ದಂದುಗವಿರಲಿಲ್ಲವೆ? ಇವುಗಳಿಂದ ಆತನ ಸಿದ್ಧಿಯೂ ಸಾಧನೆಯು ಯಾವ ಅಂಶದಲ್ಲಿ ಕೊರೆಯಾಗಿವೆ?

"ಹದಿನೈದನೆಯ ಶತಮಾನದಲ್ಲಿ ಸಂಕಲನಕಾರರು ವಚನಗಳ ಪಾಠದ ಮೇಲೆ ಸಾಕಷ್ಟು ಕೈಯಾಡಿಸಿದ್ದಾರೆ" ಎಂಬ ತೀರ್ಮಾನಕ್ಕೆ ತಮಗಿಂತ ಹಿಂದಿನ ಸಂಶೋಧಕರಂತೆಯೇ ಶ್ರೀ ಚಿದಾನಂದಮೂರ್ತಿ ಕೂಡ ಬಂದಿದ್ದಾರೆ (ಪು. ೮೩); ಅದನ್ನು ಸಾಧಾರವಾಗಿ ಪ್ರತಿಪಾದಿಸಿದ್ದಾರೆ. ಇದೇನೂ ಸೋಜಿಗದ ವಿಷಯವಲ್ಲ; ಇಂಥ "ಕೈಯಾಟ" ನಡೆದಿರುವುದು ವೀರಶೈವ ಧರ್ಮವೊಲ್ಲೊಂದರಲ್ಲಿ ಮಾತ್ರವೇ ಅಲ್ಲ. ಕ್ರೈಸ್ತ ಮೊದಲಾದ ಇತರ ಧರ್ಮಗಳ ಗ್ರಂಥಗಳಲ್ಲಿಯೂ ಇದಕ್ಕೆ ನಿದರ್ಶನ ದೊರೆಯುತ್ತವೆ. ನಮ್ಮ ದೇಶದಲ್ಲಿಯೇ "ಪಂಚಮ ವೇದ"ವೆನಿಸಿದ 'ಮಹಾಭಾರತ' ಗ್ರಂಥ ಎಷ್ಟು ಶತಮಾನಗಳ ಕಾಲ, ಎಷ್ಟೊಂದು ವ್ಯಾಪಕವಾದ ಪ್ರಕ್ಷೇಪ ಪರಿವರ್ತನೆಗೆ ಒಳಗಾಗಿದೆ ಎಂಬುದಕ್ಕೆ ಪುಣೆಯ ಭಂಡಾರ್ಕರ್ ಸಂಶೋಧನ ಸಂಸ್ಥೆಯಿಂದ ಪ್ರಕಟವಾಗುತ್ತಿರುವ ಅದರ ಪರಿಷ್ಕರಣ ಮಹಾಸಾಕ್ಷಿ. "ಗ್ರಂಥ ಸಂಪಾದನೆ"ಯೆಂಬುದು ಈಗ ಒಂದು ಖಚಿತವಾದ ಶಾಸ್ತ್ರವಾಗಿ ಪರಿಣಮಿಸಿದೆ. ಅದರಲ್ಲಿ ನಿಷ್ಣಾತರಾದವರು ವೀರಶೈವದ ವಚನ ಭಂಡಾರವನ್ನೂ ಇತರ ಪ್ರಮುಖ ಗ್ರಂಥಗಳನ್ನೂ ಶಾಸ್ತ್ರೀಯವಾಗಿ ಶೋಧಿಸಿ, ಅವುಗಳ ಮೂಲಪಾಠವನ್ನು ಸಾಧಾರವಾಗಿ ನಿರ್ಧರಿಸಿ, ಪಾಠಾಂತರಗಳೊಡನೆ ಅಚ್ಚುಮಾಡಿಸಿ ಜನತೆಯ ಮುಂದೆ ಇಡಬೇಕು. 'ಶೂನ್ಯ ಸಂಪಾದನೆ'ಯಂಥ ಗ್ರಂಥದ ಎಲ್ಲಾ ಪಾಠ ಸಂಪ್ರದಾಯಗಳನ್ನೂ ಜೊತೆಗೂಡಿಸಿ ಕೊಡುವ "ತೌಲನಿಕ" ಪರಿಷ್ಕರಣಗಳನ್ನು ಸಿದ್ಧಪಡಿಸಿ ಪ್ರಕಟಿಸಬೇಕು. ಇಂಥ ಕಾಲದಲ್ಲಿ ಮೇಲೆ ಉಕ್ತವಾದ 'ಮಹಾಭಾರತ'ದ ಪರಿಷ್ಕರಣವೂ ಪಾಶ್ಚಾತ್ಯ ವಿದ್ವಾಂಸರು ನಿರ್ವಹಿಸಿರುವ 'ಪಂಚತಂತ್ರ'ದ ಪರಿಷ್ಕರಣಗಳೂ ಬಲುಮಟ್ಟಿಗೆ ಮಾರ್ಗದರ್ಶನ ಮಾಡಬಹುದು. ವೀರಶೈವ ಧರ್ಮದ ಚರಿತ್ರೆಯ ದೃಷ್ಟಿಯಿಂದಲೂ ಈ ಗ್ರಂಥಸಂಪಾದನ ಕಾರ್ಯದ ಆವಶ್ಯಕತೆ ಎಷ್ಟೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ; ಈ ಮಾರ್ಗದಲ್ಲಿ ಕೆಲವು ಮಟ್ಟಿಗಾದರೂ ಕೆಲಸ ದೇಶದಲ್ಲಿ ಆಗಲೆ ಪ್ರಾರಂಭವಾಗಿರುವುದು ಸ್ವಾಗತಿಸಬೇಕಾದ ಸಂಗತಿ.

ಶ್ರೀ ಚಿದಾನಂದಮೂರ್ತಿ ಸ್ವಯಂ ವೀರಶೈವರು; ವೀರಶೈವಧರ್ಮದ ಆಧಾರಭೂತ ಗ್ರಂಥಗಳನ್ನು ಚೆನ್ನಾಗಿ ವ್ಯಾಸಂಗ ಮಾಡಿರತಕ್ಕವರು; ಅದರ ಮಹಾಪುರುಷರ ವಿಷಯದಲ್ಲಿ ಅತಿಶಯ ಗೌರವವುಳ್ಳವರು; ಜೊತೆಗೆ ಈಗಾಗಲೇ ಹೇಳಿರುವಂತೆ ಇತಿಹಾಸ ವಿಮರ್ಶಕನ ದೃಷ್ಟಿಯನ್ನು ಉತ್ತಮ ರೀತಿಯಲ್ಲಿ ಬೆಳಸಿಕೊಂಡು ಬಂದಿರತಕ್ಕವರು. ಹೀಗೆ ಉಚಿತಗುಣ ಸಮ್ಮಿಳನದಿಂದ ಪಾಕಗೊಂಡಿರುವ ಅವರ ಈ ಪ್ರಥಮಕೃತಿ ಎಲ್ಲರ ಆದರಕ್ಕೆ ಪಾತ್ರವಾಗಲಿ; ಸಂಶೋಧನೆಯಲ್ಲಿ ಅವರಿಗಿರುವ ಸಹಜೋತ್ಸಾಹ ಉನ್ನತವಾಗಿ ಹಬ್ಬಲಿ.

ಕಾವ್ಯಾನುಭವ : ೧೯೭೦

●

'ವಚನ' ಸುಂದರಿ*

ವಚನ ಸುಂದರಿ ತನ್ನ ಭಾವನೆಯ ಸುಳಿ ಗುರುಳುಗಳನ್ನೆಲ್ಲ ಬಿಗಿದೆಳೆದು ಹೆಣೆದು ಹೆರಳಿನ ಬಂಧನದಲಿರಿಸಿಲ್ಲ ಪದ್ಯವನಿತೆಯಂತೆ. ಆಕೆಯದು ಕದಲದ ಛಂದಸ್ಸಿನ ಬಿಗಿಮುಡಿ; ಈಕೆಯದು ಬಳುಕುವ ಲಯದ ತುದಿ ಜಡೆ. ಗದ್ಯದ ಗಂಡುಬೀರಿಯಂತೆ ಬಿಟ್ಟಮಂಡೆಯಲ್ಲಿ ಕಟ್ಟನೊಲ್ಲದೆ ಬೀದಿಯಲೆಯುವಳೂ ಇವಳಲ್ಲ. ತರಳೆಯೊಬ್ಬಳು ಮಿಂದು ಎಳಸಾದ ಕುರುಳ ಕೂಡಿಸಿ ತುದಿಗಂಟಿಗೆ ಗುಲಾಬಿಯೊಂದನ್ನು ಸೆಕ್ಕೆ ಎಳೆ ಬಿಸಿಲಿನಲಿ ನಿಂತಂತೆ ಇವಳ ನಿಲುವು.

ಜನವೆಲ್ಲ ಬಲ್ಲ ಬಳಕೆಯ ಮಾತುಗಳೆ ಇವಳ ಮಾತುಗಳು; ಅವರುಸಿರೆ ಇವಳುಸಿರು. ಒಮ್ಮೊಮ್ಮೆ ಹಳೆಯ ಛಾಯೆಯ ನುಡಿಗಟ್ಟು ಇಣಿಕಬಹುದಲ್ಲಲ್ಲಿ. ಆದರದು ಕುಂದಲ್ಲ; ಮತ್ತೆ ಉಚಿತ ಭೂಷಣವಹುದು ಸುಂದರಿಯ ಕೆನ್ನೆಯಲಿ ಮಂಗಳದ ಕುರುಹು ಅರಿಸಿನದ ಲಘುರೇಖೆ ಕಂಡರೂ ಕಾಣಿಸದೆ ಒಪ್ಪುವಂತೆ.

ಹೆಚ್ಚು ನುಡಿಯುವಳಲ್ಲ ಈ ಗರತಿ. ಮಾತು ಮುತ್ತೆಂದು ತಿಳಿದಿಹಳು; ಬಗೆಯಿಂದ ಭಾವವು ಹೊಮ್ಮಿ ಮೊನೆಯ ಮಾತಿನ ಕಂಚುಕವ ತೊಟ್ಟು ಗಂಟಲ ನೊತ್ತಿದಲ್ಲದೆ ತುಟಿಯನಲುಗಿಸಳು. ಬಣ್ಣಬಣ್ಣದ ಶಬ್ದ

---

* 'ಪ್ರಬುದ್ಧ ಕರ್ಣಾಟಕ' ಸಂ. ೧೭, ಸಂಕ್ರಾಂತಿಯ ಸಂಚಿಕೆ.

ಜಾಲದಲಿ ಭಾವಶೂನ್ಯತೆಗೆ ಮುಸುಕಿಡುವ ವೈಯ್ಯಾರ ಇವಳಿಗಿಲ್ಲ. ಕಿರಿದು ನುಡಿ; ಹಿರಿದು ಬಗೆ: ಇದೆ ಇವಳ ಜಪದ ಮಂತ್ರ.

ಒಮ್ಮೆ ಮಸೆದಲಗಿನಂತೆ ನೇರಕೆ ನುಗ್ಗಿ ನಾಟುವುದೆದೆಗೆ ಇವಳ ವಚನ; ಒಮ್ಮೆ ಉಪಮೆಯ ರಂಗುಕಿಡಿಯಾಗಿ ಹೊಳೆದು ಬೀರುವುದು ಹಿಂದೆ ಕಾಣದ ಬೆಳಕನು; ಒಮ್ಮೆ ಕಥೆ ಚಿತ್ರಗಳ ಮರೆಯಲಿ ಬಂದು ತೆರೆದ ಬಾಗಿಲ ಸಂದಿನಿಂದ ನುಸುಳುವುದು ಮಾನಸಮಂದಿರಕೆ; ಒಮ್ಮೊಮ್ಮೆ ಕರುಳ ಕೂಗಾಗಿ ಹೊರಬಿದ್ದು ಕೇಳುವರೆದೆಯ ಮರುದನಿಯೊಳಗೆ ಲೀನವಾಗುವುದು.

೧೯೩೬]

ಕಾವ್ಯಾನುಭವ : ೧೯೭೦

●

ಉಷಾಸ್ವಪ್ನ

ತಮ್ಮ 'ಉಷಾಸ್ವಪ್ನ'ದ ಕೆಲವು ಅನುಭವಗಳನ್ನು ಸಹೃದಯ ಲೋಕಕ್ಕೆ ಅರಿಕೆ ಮಾಡುವ ವೇಳೆಯಲ್ಲಿ ಬೆಂಬಲದ ಹರಕೆ ನನ್ನಿಂದ ಸಲ್ಲಬೇಕೆಂದು ಶ್ರೀಮಾನ್ ಅನಂತನಾರಾಯಣ ಅವರು ಕೋರಿದ್ದಾರೆ. 'ಮುನ್ನುಡಿ' ಗಳಲ್ಲಿ ನನಗೆ ಹೆಚ್ಚಿನ ನಂಬಿಕೆಯಿಲ್ಲ. ಕೆಲವು ಅಪೂರ್ವ ಸಂದರ್ಭಗಳಲ್ಲಿ ಹೊರತು ಅವುಗಳಿಂದ ಕೃತಿಗಳಿಗೆ ಉತ್ಕರ್ಷವೊದಗುವ ಸಂಭವ ಬಲು ಕಡಿಮೆ. ಆದರೂ ಈ ತರುಣ ಮಿತ್ರರ ವಿಶ್ವಾಸಕ್ಕೆ ಕಟ್ಟುಬಿದ್ದು, ಅವರ ಪ್ರಾರ್ಥನೆಯ ಒಕ್ಕಣೆಗೆ ಮನಸೋತು, ಈ ಅಭ್ಯಾಸ ವಿಲ್ಲದ 'ಪೌರೋಹಿತ್ಯ'ಕ್ಕೆ ಅಳುಕಿನಿಂದಲೇ ಒಪ್ಪಿ ಕೊಂಡಿದ್ದೇನೆ.

ಇಲ್ಲಿ ಜೊತೆಗೂಡಿರುವ ಕವನಗಳಲ್ಲಿ ಹೆಚ್ಚು ಕಡಮೆ ಎಲ್ಲವೂ ಪ್ರೇಮಗೀತಗಳು. ಯೌವನದ ಪ್ರೇಮದಲ್ಲಿ ಆಕಾಂಕ್ಷೆ, ನಿರೀಕ್ಷೆ, ಉದ್ರೇಕ, ಉಲ್ಲಾಸ— ಇಂಥ ಭಾವಗಳೇ ಹೆಚ್ಚು. ವಿಷಾದ ನಿರಾಶೆಗಳು ಮೂಡಿದರೂ, ಹೃದಯವನ್ನು ತಲ್ಲಣಗೊಳಿಸಿದರೂ ಅವು ನೆಲೆಯಾಗಿ ನಿಲ್ಲತಕ್ಕವಲ್ಲ. ಉತ್ತರಕ್ಷಣದಲ್ಲಿ ಮತ್ತೆ ಭರವಸೆ ತಲೆಯೆತ್ತುವುದೇ ಸಾಮಾನ್ಯ. ಆದರೆ, ಲೋಕದಲ್ಲಿ ತರುಣ ಪ್ರೇಮಿಗೆ ಒದಗಬಾರದ ಮಹಾ ನಷ್ಟ ಶ್ರೀಮಾನ್ ಅನಂತನಾರಾಯಣ ಅವರ ಭಾಗಕ್ಕೆ ಅನಿರೀಕ್ಷಿತವಾಗಿ ಬಂದಿತು. ಪ್ರೇಮದ ದಳಗಳಿನ್ನೂ ಅರಳುತ್ತಿರುವಾಗಲೇ, ಸುಖದ ಹೊಂಗನಸುಗಳು ಸಿದ್ಧಿಸುವ ಮೊದಲೇ, ಪ್ರೇಯಸಿ ಪರಲೋಕಕ್ಕೆ ನಡೆದಳು. ("ಮದುವೆಯಾಯಿತು. ಉಷೆಗೆ ಮಸಣ ಮಂಟಪದಲ್ಲಿ".) "ಹೋದಳುಷೆ-ಬಂತು ನಿಶೆ":

ನಡುವಣ ಹಗಲಿನ ಅನುಭವವೇ ತನಗಿಲ್ಲವಾಯಿತು! ಜೀವನದ ದಾರಿ ನಾಲ್ಕು ಹೆಜ್ಜೆಗೇ ತಪ್ಪಿಹೋಯಿತು! ಹೀಗೆ ಬಡಿದ ಸಿಡಿಲಿನಿಂದ ಕವಿಯ ಹೃದಯ ಬಿರಿದು ಹೋದರೂ ಅದರ ಆಳದಿಂದಲೇ ರಸದ ಚಿಲುಮೆ ಉಕ್ಕಿದೆ. ಇದೇ ಕಾವ್ಯದ ಪವಾಡ; "ಶೋಕಃ ಶ್ಲೋಕತ್ವಮಾಗತಃ!" ತಾರುಣ್ಯದ ಪ್ರೇಮಭರದಲ್ಲಿ ಅಸಾಮಾನ್ಯವೆನಿಸುವ ಆಳದ ನೋವಿನ, ನಿತ್ಯನಿರಾಶೆಯ ಗೀತಗಳು ಈ ಕವಿಯ ಕೊರಳಿನಿಂದ ಹೊಮ್ಮಿವೆ. "ಜಗದ ವೀಣೆಯು ನುಡಿಯುತಿರುವುದು, ನನ್ನ ವೀಣೆಯು ನುಡಿಯದು."—ಈ ಪಲ್ಲವಿಯೇ ಸುಂದರವಾದ ಹಾಡೊಂದನ್ನು ಕಟ್ಟಿದೆ.

ನೋವು ಹೃದಯದ ಸ್ಥಾಯಿಯಾಗಿರುವಾಗ, ಎತ್ತ ತಿರುಗಲಿ, ಏನನ್ನೇ ನೋಡಲಿ– ಹಳೆಯ ನೆನಪುಗಳು ಕೆರಳುತ್ತವೆ. ಎಳೆಯ ಮಕ್ಕಳ ಕಣ್ಣು ಮುಚ್ಚಾಲೆಯ ಆಟವನ್ನು ನೋಡಿದರೆ, ತಾವಿಬ್ಬರೂ ಎಳತನದಲ್ಲಿ ಆಡಿದ್ದು ಒಳಗಣ್ಣ ಮುಂದೆ ಸುಳಿಯುತ್ತದೆ. ಆದರೆ "ಆಕೆ ಅವಿತಿಹಳೆಲ್ಲೊ ಕಾಣೆ!" ರಮ್ಯಪ್ರಕೃತಿಯ ದರ್ಶನವೆಲ್ಲ ಆಕೆಯ ನೆನಪಿಗೇ ದಾರಿ ಮಾಡಿಕೊಡುತ್ತದೆ. ಅಷ್ಟೇಕೆ, ನೋವಿನ ಹಿನ್ನೆಲೆಯಿಂದ ವಸ್ತುಸ್ವರೂಪವೇ ಹೊಸ ರೀತಿಯಲ್ಲಿ ಗೋಚರಿಸುವುದೂ ಉಂಟು :

"ಬಾನಲಿ ಬೆಳುದಿಂಗಳ ಕುಡುಗೋಲು
ತಂಪು ಸಿಡಿಲಿನೊಲು ಸಾಗಿರಲು
ಹೃದಯ ಎಲ್ಲಿಯೋ ದೂರ ಹಾರಿರಲು
ನೆನಪೇತಕೆ ಬಾರದೊ ನಾನರಿಯೆ!"

"ನೆನಪೇತಕೆ ಬರುವುದೊ!"—ಇನ್ನೇತಕ್ಕೆ? ವಿಯೋಗಿಗೆ ಅದೊಂದೇ ತಾನೆ ಜೀವಾಧಾರ!

ಶ್ರೀಮಾನ್ ಅನಂತನಾರಾಯಣ ಅವರು ಇನ್ನೂ ತರುಣರು. ವೇದನೆಗೆ ಹೃದಯವನ್ನು ಒಗ್ಗಿಸಿಕೊಂಡು, ಬಾಳಿನ ನಂಜನ್ನು ಕಾವ್ಯರಸವಾಗಿ ಹಿಂಡಿಕೊಂಡಿರುವುದಕ್ಕಾಗಿ ಅವರ ಧೈರ್ಯವನ್ನು ಸಹೃದಯರು ಶ್ಲಾಘಿಸಬೇಕು. ಇಲ್ಲಿಯ ಎಲ್ಲ ಪದ್ಯಗಳಲ್ಲೂ, ಭಾವದ ಸಿರಿಯೂ ಭಾಷೆಯ ಬಿಗಿಯೂ ಛಂದಸ್ಸಿನ ಬಂಧವೂ ಒಂದೇ ಹದದಲ್ಲಿ ಸಾಧಿಸಿವೆಯೆಂದು ನಾನು ಹೇಳುತ್ತಿಲ್ಲ; ಆ ಭಾವನೆ ಕವಿಗಳಿಗೂ ಇಲ್ಲವೆಂದು ನಾನು ಬಲ್ಲೆ. ಅವರದು ಪಳಗುತ್ತಿರುವ ಕೈ; ಬೆಳೆಯುತ್ತಿರುವ ಕಲೆ. ಒಳ್ಳೆಯ ಕಾವ್ಯಕ್ಕೆ ಅನುಭವದ ಕಾವು ಅತ್ಯಗತ್ಯ. ತಮ್ಮ ಪಾಲಿಗೆ ಬರಬೇಕಾದುದಕ್ಕಿಂತ ಮಿಗಿಲಾಗಿಯೇ ಜೀವನ ಕ್ಲೇಶಗಳನ್ನು ಶ್ರೀಮಾನ್ ಅನಂತನಾರಾಯಣ ಅವರು ಅರಿತಿದ್ದಾರೆ. ಸ್ವಕೀಯ ದುಃಖದಲ್ಲಿಯೇ ಮುಳುಗಿಬಿಡದೆ, ದೇಶಹಿತದ ಕಾರ್ಯಗಳಲ್ಲಿ ಉತ್ಸಾಹದಿಂದ ಭಾಗವಹಿಸಿ ಲೋಕಾನುಭವವನ್ನು ಹೆಚ್ಚಿಸಿಕೊಂಡಿದ್ದಾರೆ, ಆತ್ಮಸಂಸ್ಕಾರವನ್ನು ಪಡೆಯುತ್ತಿದ್ದಾರೆ. ಅವರ ಗಾಢ ವಿಶಾಲವಾದ ಅನುಭವ ಇನ್ನೂ ಪರಿಪಾಕಗೊಳ್ಳಲಿ, ಕಲೆ ಇನ್ನೂ ಹದವಾದ ಫಲವನ್ನು ನಮ್ಮ ಜನಕ್ಕೆ ಕೊಡಲಿ.

ಕಾವ್ಯಾನುಭವ : ೧೯೭೦

●

ಚಿತ್ರಪರಿಚಯ: ಕುರುಡ ಭಿಕ್ಷುಕ*

ಈ ಚಿತ್ರವನ್ನು ಬರೆದ ಮ. ರಾ. ಎಂ.ವಿ. ಸೀತಾರಾಮಯ್ಯನವರು ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಜೂನಿಯರ್ ಎಂ.ಎ. ತರಗತಿಯಲ್ಲಿ ಓದುತ್ತಿದ್ದಾರೆ. ಇನ್ನೂ ವಿದ್ಯಾರ್ಥಿ ದೆಶೆಯಲ್ಲಿದ್ದರೂ ಇವರು ಚಿತ್ರಕಲೆಯನ್ನು ಮಾತ್ರವೇ ಅಲ್ಲ, ಕಾವ್ಯ ಕಲೆಯನ್ನೂ ಸದ್ದಿಲ್ಲದೆ ಉಪಾಸನೆ ಮಾಡುತ್ತಿದ್ದಾರೆ. ಇವರ ಕವನಗಳಲ್ಲಿ ಕೆಲವು ಈಗಾಗಲೆ ಪ್ರಕಟವಾಗಿವೆ; ಕಾವ್ಯಕಲೆಗಿಂತಲೂ ಮುಂಚೆಯೇ ಇವರಿಗೆ ಒಲಿದು ಬಂದ ಚಿತ್ರಕಲೆಯ ಸೇವಾಫಲವು ಪ್ರಕಾಶ ಹೊಂದು ವುದಕ್ಕೆ ಇದೇ ಮೊದಲು.

ಈ ಚಿತ್ರವು ಸ್ವಕಲ್ಪಿವೂ ಹೌದು, ಅನುಕರಣವೂ ಹೌದು. ಇವರ ಮಿತ್ರಮಂಡಲಿಯವರು ಮ.ರಾ. ಕೆ.ವಿ. ಪುಟ್ಟಪ್ಪನವರ "ಜಲಗಾರ" ಎಂಬ ನಾಟಕವನ್ನು ಒಂದು ಸಲ ಅಭಿನಯಿಸಿದ್ದರು. ಅದರಲ್ಲಿ ಬರತಕ್ಕ ಕುರುಡ ಭಿಕ್ಷುಕನ ದರ್ಶನವೇ ಈ ಚಿತ್ರಕ್ಕೆ ಅಂಕುರ. ನಾಟಕದ ಮರುದಿನ ಈಗಿನ ರೂಢಿಯಂತೆ, ನಟವರ್ಗದ ಛಾಯಾಚಿತ್ರವನ್ನು ತೆಗೆಯಿಸಿದರು. ಆ ಛಾಯಾಚಿತ್ರದಲ್ಲಿ ಕಂಡುಬಂದ ಭಿಕ್ಷುಕನ ರೂಪವೇ ಈ ಚಿತ್ರಕ್ಕೆ ಆಧಾರ. ಆದರೆ ಅಲ್ಲಿಯ ರೂಪಕ್ಕೂ ಇಲ್ಲಿಯದಕ್ಕೂ ಭಾವ ವ್ಯತ್ಯಾಸವು ಬಹಳವಾಗಿದೆ. ಭಿಕ್ಷುಕನು ನಾಟಕದಲ್ಲಿ ಕುರುಡನಾಗಿದ್ದರೂ ಛಾಯಾಚಿತ್ರದಲ್ಲಿ ಕಣ್ಣು ಬಿಟ್ಟು

---

* ಪ್ರಬುದ್ಧ ಕರ್ಣಾಟಕ, ೧೯೨೮.

ಕೊಂಡೇ ಕುಳಿತಿದ್ದಾನೆ. ಅವನ ಮುಖದಲ್ಲಿ ದೈನ್ಯಭಾವದ ಲೇಶವೂ ಇಲ್ಲ; ಅದು ಯಾವ ಭಾವವೂ ತೋರದ ಬರಿಯ ಮುಖ. ಇಲ್ಲಿಯ ಚಿತ್ರದ ಸ್ವಾರಸ್ಯವೆಲ್ಲ ಭಿಕ್ಷುಕನ ಕಾಣದ ಕಣ್ಣುಗಳಲ್ಲಿ ದೀನವದನದಲ್ಲಿ ಅಡಗಿದೆ. ಅವನ ಮುಖದಲ್ಲಿ ತೋರುತ್ತಿರುವುದು ಜುಗುಪ್ಸೆಯಲ್ಲ, ನಿರಾಶೆಯಲ್ಲ, ದೈವಚಿತ್ತಕ್ಕೆ ತಲೆಬಾಗುವ ಗಾಢಸಹನೆ. ಬೀದಿಯಲ್ಲಿ ಹೋಗಬಹುದಾದವರಿಗೆ ಕೂಡ ಅವನು ಮೊರೆಯಿಡುತ್ತಿಲ್ಲ; ಅಲ್ಲಿಗೆ ಬಂದಾಗ ಅವರಾಗಿಯೇ ಅವನ ಸ್ಥಿತಿಗೆ ಮನಗರಗಿ ಅವನ ಡಬ್ಬಕ್ಕೆ ಒಂದು ಕಾಸನ್ನು ಹಾಕಿದರುಂಟು.

ಚಿತ್ರವು ಎಷ್ಟು ಸಹಜವಾಗಿದೆ ಎಂಬುದನ್ನು ವಿವರಿಸಬೇಕಾಗಿಲ್ಲ. ಒಂದೇ ಒಂದು ಅಂಶವನ್ನು ಸೂಚಿಸಬಹುದಾದರೆ ಭಿಕ್ಷುಕನ ಮಾಸಿದ ಬನೀನೂ ಹಳೆಯ ಟೋಪಿಯೂ ಎಲ್ಲೆಲ್ಲಿ ಹರಿದಿರಬೇಕೋ ಅಲ್ಲಲ್ಲೇ ಹರಿದು ಹೋಗಿವೆ. ಚಿತ್ರದಲ್ಲೆಲ್ಲ ನಯಗೆಲಸವು ಬಹಳ ಕುಶಲತೆಯಿಂದ ನಡೆದಿದೆ; ಆದರೆ ಆ ಸೂಕ್ಷ್ಮ ಸೌಂದರ್ಯವೆಲ್ಲವೂ ಅಚ್ಚಿನಲ್ಲಿ ಉಳಿಯುವುದು ಅಸಾಧ್ಯ. ಮುಖ್ಯವಾಗಿ, ಮೂಲಚಿತ್ರದ ವರ್ಣವಿನ್ಯಾಸವು-ಚಿತ್ರಕಾರನ ಕಲ್ಪನೆಗೂ ಕೌಶಲಕ್ಕೂ ಸಾಕ್ಷಿಯಾದ ವರ್ಣವಿನ್ಯಾಸವು-ಅಚ್ಚಿನ ಚಿತ್ರದಲ್ಲಿ ಪೂರ್ಣವಾಗಿ ಬಿಟ್ಟುಹೋಗಿದೆ. ಅದರಿಂದ ಚಿತ್ರಕಾರನ ಶಕ್ತಿ ವ್ಯಕ್ತವಾಗುವುದಕ್ಕೆ ಅರ್ಧ ಅವಕಾಶವೇ ತಪ್ಪಿಹೋಗಿದ್ದರೂ ಮೂಲಚಿತ್ರದ ಸೌಂದರ್ಯವನ್ನು ಊಹಿಸಿಕೊಳ್ಳುವುದಕ್ಕೆ ಉಳಿದಿರುವ ಅಂಶಗಳೇ ಸಾಕು.

ಕಾವ್ಯಾನುಭವ : ೧೯೭೦

ಬಡತನದ ಬಾಳು*

ಬಡತನವು ಒಂದು ಗುಣವಲ್ಲ, ಅಥವಾ ಒಬ್ಬ ವ್ಯಕ್ತಿಯ ಪಾಪದ ಫಲವೂ ಅಲ್ಲ. ಅದೊಂದು ಸಾಮಾಜಿಕ ಪಾಪ; ಸಾಂಕ್ರಾಮಿಕ ರೋಗ— ಹೀಗೆನ್ನುವುದೇ, ಈ ಗ್ರಂಥಕ್ಕೆ ಶ್ರೀಮಾನ್ ದ.ರಾ. ಬೇಂದ್ರೆಯವರು ಬರೆದಿರುವ ಮುನ್ನುಡಿಯ ತಿರುಳು. ಈ ದೃಷ್ಟಿ ಪಾಠಕರಿಗೆ ಉದಿಸುವಂತೆ, ಬಡತನದ ಕ್ಲೇಶ ನಿಷ್ಠುರತೆಗಳನ್ನೂ ಅನ್ಯಾಯ ಅಶರಣತೆಗಳನ್ನೂ ಅವರ ಕಣ್ಣ ಮುಂದೆ ಇಲ್ಲಿಯ ಮೂರು ಕಥೆಗಳಲ್ಲಿ ಗ್ರಂಥಕರ್ತರು ಒಡ್ಡಿದ್ದಾರೆ. ಕಥೆಗಾರಿಕೆಯ ಜೊತೆಗೆ ಈ ಉದ್ದೇಶ ಸಾಧನೆಯೂ ಅವರಿಗೆ ಪ್ರಧಾನವಾಗಿರುವುದರಿಂದ, ಅಲ್ಲಲ್ಲಿ ಸಾಹಿತ್ಯ ಪಾಕದ ಹದವನ್ನೂ ಕೂಡ ಮೀರಿ ಕರುಣರಸವು ಕುದಿಯುತ್ತದೆ.

ಇಲ್ಲಿಯ ಒಂದೊಂದು ಕಥೆಯಲ್ಲಿ ಬಡತನದ ಒಂದೊಂದು ಮುಖವೂ ಪರಿಣಾಮವೂ ಚಿತ್ರಿತವಾಗಿದೆ. 'ಈ ಚಿತ್ರ, ಆ ಚಿತ್ರ' ಎಂಬ ಮೊದಲನೆಯ ಕಥೆಯ ಹೆಸರೇ ಅದರ ತಿರುಳು. ಬಡತನ ಸಿರಿತನಗಳನ್ನು ಜೊತೆ ಜೊತೆಗೆ ಚಿತ್ರಿಸಿ ಒಂದರ ಬೆಳಕಿನಿಂದ ಒಂದರ ಹುಳುಕನ್ನು ಬಯಲಿಗೆಳೆಯುವ ಕುಶಲ ಕ್ರಿಯೆಯನ್ನು ಇಲ್ಲಿ ನೋಡಬಹುದು. ಮಾದಪ್ಪನದು ತುಂಬು ಸಂಸಾರ; ತನಗೆ ಬರುವ ಒಂಬತ್ತು ರೂಪಾಯಿನ

---

* ಲೇಖಕರು : ಶ್ರೀಮಾನ್ ಆನಂದಕಂದ; ಪ್ರಬುದ್ಧ ಕರ್ಣಾಟಕ, ೧೪.೨

ಸಂಬಳದಲ್ಲಿ ಇದನ್ನು ತೂಗಬೇಕು. ಇವನ ಧಣಿ ಪುರುಷೋತ್ತಮ ನಾಯಕರ ಮನೆಯಲ್ಲಿ– ಒಬ್ಬ ಹುಡುಗನನ್ನು ಬಿಟ್ಟರೆ–ಇರುವವರು ಗಂಡ ಹೆಂಡತಿ ಇಬ್ಬರೇ. ಆದರೆ, ನಾಟಕ, ಸಿನಿಮಾಗಳಿಗೇ ತಿಂಗಳಿಗೆ ಅರವತ್ತಾರು ರೂಪಾಯಿಗಳನ್ನು ಚೆಲ್ಲುವ ರಸಿಕರು ಅವರು. ನಾಯಕರ ಶ್ರೀಮಂತಿಕೆ ಅವರಲ್ಲಿ ಸ್ವಾರ್ಥವನ್ನು ಹೆಚ್ಚಿಸಿ, ಉಪೇಕ್ಷೆ, ಅವಿಚಾರಗಳನ್ನು ಬೆಳೆಸಿದೆ. ಮೂವತ್ತು ವರ್ಷಗಳಿಂದ ತಮ್ಮ ಬಳಿ ದುಡಿಯುತ್ತಿರುವ ಮಾದಪ್ಪನು ತನ್ನ ಹೆಂಡತಿ ಮಕ್ಕಳ ಗೋಳನ್ನು ವರ್ಣಿಸಿ, ಒಂದೆರಡು ರೂಪಾಯಿ ಸಂಬಳ ಹೆಚ್ಚಿಸಬೇಕೆಂದು ಬೇಡಿಕೊಂಡಾಗ "ಸರಿ! ಇದೆಲ್ಲವೂ ಪುರಾಣವಾಯಿತು! ನಿನ್ನ ಸಂಸಾರವೆಲ್ಲವನ್ನೂ ಸಾಗಿಸುವ ಹೊಣೆಯನ್ನೇನೂ ನಾವು ಹೊತ್ತಿಲ್ಲವಲ್ಲ!" ಎಂದು ನಿಷ್ಕಂಪವಾಗಿ ಹೇಳುವಷ್ಟು ಮಟ್ಟಿಗೆ ಅವರ ಮನಸ್ಸು ಕಲ್ಲಾಗಿದೆ. ಈ ಚಿತ್ರಕ್ಕೆ ಒರೆಹಚ್ಚಿ ನೋಡಿದರೆ, ಬಡತನವೇ ಸಾವಿರ ಪಾಲಿಗೆ ಉತ್ತಮ. ಅದರಲ್ಲಿ ಸ್ವಾರ್ಥತ್ಯಾಗದ ಘನತೆಯುಂಟು: ಮಕ್ಕಳು ಚಳಿಯ ಕೊರೆತದಲ್ಲಿ ನಡುಗುವರೆಂದು ಕೇಳಿ ತನ್ನ ಕಂಬಳಿಯನ್ನು ಅವರಿಗೆ ಕೊಟ್ಟು ಬಿಡುವಂಥ ಅನುಭವಕ್ಕೆ ಪುರುಷೋತ್ತಮ ನಾಯಕರ ಸಿರಿತನದಲ್ಲಿ ಅವಕಾಶವೇ ಇಲ್ಲ. ಮಾದಪ್ಪ–ಹೊನ್ನಮ್ಮ ಇವರ ಪ್ರೇಮ ದೀಪ್ತವಾದ ಮನೆವಾಳ್ತೆಯ ಅನುಭವವೂ ನಾಯಕರಿಗಲ್ಲ. ಸುಂದರಿಯಾದ ಹೆಂಡತಿಯಿದ್ದಾಳೆ, ಕೋರಿದ ವೈಭವವಿದೆ; ಆದರೆ ಅವರು ತಮ್ಮ ಗೃಹಿಣಿಯಲ್ಲಿ 'ರೊಮಾನ್ಸ್'ನ್ನು ಕಾಣರು. ಅದನ್ನು ಸವಿಯಬೇಕಾದರೆ, ಆಕೆಯನ್ನ ಮನೆಯಲ್ಲೇ ಬಿಟ್ಟು, ಸಿನಿಮದ ಎರಡನೆಯ ಪ್ರದರ್ಶನಕ್ಕೆ ಅವರು ಹೋಗಿಬರಬೇಕು.

ಬಡತನ–ಸಿರಿತನಗಳ ಈ ದ್ವಂದ್ವ ಚಿತ್ರವನ್ನು ಕೂಡಿಸುವ ಕಥಾಂಶ ಮಾತ್ರ ಅಷ್ಟು ಸಹಜವೆನಿಸಲಾರದು. ರಾತ್ರಿಯಲ್ಲಿ ನಾಯಕರ ಹಾಸಿಗೆಯನ್ನು ಸರಿಮಾಡುತ್ತಿರುವಾಗ ಮಾದಪ್ಪನು ಅದರ ಸೊಗಸಿಗೆ ಮನಸೋತು, ಕ್ಷಣಕಾಲ ಅದರ ಮೇಲೆ ಮಲಗಲು ಆಸೆ ಪಡುವುದೂ, ಆ ರೀತಿ ಮಲಗಿ ಮಾಗಿಯ ಚಳಿಯ ಸಹಾಯದಿಂದ ಹಾಗೆಯೇ ನಿದ್ದೆ ಹೋಗುವುದೂ ಅಸಂಭವವೇನೂ ಅಲ್ಲ; ಆದರೆ ಅಷ್ಟು ಸ್ವಾಭಾವಿಕವೂ ಅಲ್ಲ. ಈ ಕೃತಕ ಘಟನೆಯನ್ನೊಡ್ಡಿ ಗ್ರಂಥಕರ್ತರು ಪಾಠಕರ ಕುತೂಹಲವನ್ನೆಬ್ಬಿಸಿರುವುದೂ, ಅದರಿಂದ ಕೊನೆಗೆ ನಾಯಕರ ಮನಸ್ಸು ಮೃದುವಾಯಿತೆಂದು ತೋರಿಸಿರುವುದೂ ನಿಜ. ಆದರೆ ಈ ಭಾಗವು ಕಥೆಯ ಸತ್ತ್ವವನ್ನು ಸ್ವಲ್ಪ ಕುಗ್ಗಿಸಿದೆಯೆಂದೇ ಹೇಳಬಹುದು.

'ಬಹಿಷ್ಕಾರ' ಎರಡನೆಯ ಕಥೆ. ಇದರಲ್ಲಿ ಶ್ರೀಕಂಠಭಟ್ಟರು ಬ್ರಾಹ್ಮಣಿಕೆಯ ಕಟ್ಟುಪಾಡನ್ನು ಅನುಸರಿಸದೆ ತಪ್ಪಿದರೆಂದು ಅವರಿಗೆ ಮಠದವರು ಬಹಿಷ್ಕಾರವನ್ನು ವಿಧಿಸುತ್ತಾರೆ. ಭಟ್ಟರು ಕುಲದ ಕಟ್ಟನ್ನು ಮೀರಿದ್ದು ಅನಿವಾರ್ಯ ಪ್ರಸಂಗ ಬಂದಾಗ, ಪ್ಲೇಗಿಗೆ ಮನೆಮಂದಿ ಆಹುತಿಯಾಗುತ್ತಿದ್ದಾಗ, ಅದರ ಸೋಂಕಿಗೆ ಹೆದರಿ ಕುಲದವರು ತಮ್ಮನ್ನು ಕೈಬಿಟ್ಟಿದ್ದಾಗ. ಆದರೂ ಮಠದ ಆಗ್ರಹಕ್ಕೆ ಅವರು ತುತ್ತಾದರು. ಮುನ್ನೂರು ರೂಪಾಯಿಗಳ ತಪ್ಪುಗಾಣಿಕೆಯನ್ನು ಒಪ್ಪಿಸಿದ್ದರೆ ಅವರ ದೋಷವೆಲ್ಲಾ ಭಸ್ಮವಾಗುತ್ತಿತ್ತು.

ಆದರೆ ಆ ಬಡ ಪ್ರಾಣಿಗೆ ಅಷ್ಟು ಹಣ ಎಲ್ಲಿಂದ ಬರಬೇಕು?–"ಈ ಬಹಿಷ್ಕಾರವು ಮಾನವನ ತಪ್ಪಿಗಾಗಿ ಅಲ್ಲ; ಅಪರಾಧಕ್ಕಾಗಿ ಅಲ್ಲ; ಆತನ ಬಡತನದ ಬಾಳಿಗಾಗಿ".

ಈ ಕಥೆಯಲ್ಲಿ ಪ್ಲೇಗು ಜಾಡ್ಯದ ಹಾವಳಿಯೂ, ಭಟ್ಟರೂ ಅವರ ಮನೆಯವರೂ ಅದರಿಂದ ಪಟ್ಟ ಬೇಗೆಯೂ ಚೆನ್ನಾಗಿ ವರ್ಣಿತವಾಗಿವೆ. ಆದರೆ ಇದಕ್ಕೆ 'ಮುನ್ನುಡಿ'ಯಾಗಿ, "ಅಯ್ಯಮಾರಿ"ನ ಹೆಸರಿನ ಇತಿಹಾಸವನ್ನು ಸಂಶೋಧಿಸಿದ ವೃತ್ತಾಂತವು ದೀರ್ಘವಾಗಿ ಬಂದಿರುವುದು ಮುಖ್ಯಕಥೆಗೆ ತಲೆಭಾರವಾದಂತೆಯೇ ತೋರುತ್ತದೆ. ಅದಕ್ಕೂ ಕಥೆಗೂ ಅಭ್ಯಂತರ ಸಂಬಂಧವು ಕಡಮೆ. ಕಥೆಗಾರರಿಗೂ ಈ ಅಂಶವು ಗೊತ್ತುಂಟು.

ಕೊನೆಯ ಕಥೆಯಾದ 'ಹೊಟ್ಟೆಯ ಹೋರಾಟ'ವೇ ಇಲ್ಲಿಯ ಕಥೆಗಳಲ್ಲಿ ಉತ್ತಮವೆನ್ನಬಹುದು. ಉಳಿದವುಗಳಲ್ಲಿ ಅಲ್ಲಲ್ಲಿ ಕಾಣಬರುವ ಓಜಸ್ಸೂ ಭಾವಪುಷ್ಟಿಯೂ ಹೃದಯ ಗ್ರಾಹಕತೆಯೂ ಇದರಲ್ಲಿ ಉದ್ದಕ್ಕೂ ಕಂಡುಬರುತ್ತವೆ. ಚಂದಮ್ಮನ ಕರುಣ ಕಥೆಯನ್ನು ಲೇಖಕರು ತಲ್ಲೀನತೆಯಿಂದ ನಿರೂಪಿಸಿದ್ದಾರೆ. ಮೊದಲಲ್ಲಿ ಶಿವಪ್ಪ–ಚಂದಮ್ಮ ಇವರ ಸಂಸಾರ ಹೇಗಿತ್ತು? ಈ ಹಳ್ಳಿಗರ ಬಾಳಿನಲ್ಲಿ ಏನು ನೆಮ್ಮದಿ, ಏನು ರಸಿಕತೆ! ಶಿವಪ್ಪನು ಬದುಕಿರುವವರೆಗೂ ಚಂದಮ್ಮನು "ಹುಲುಸಿನ ದೇವತೆ"ಯಾಗಿದ್ದಳು. ಅವನು ತೀರಿಹೋದನು. ಚಂದಮ್ಮನ ಬದುಕಿನ "ಹಾಲಿನ ಹರಿವ್ಯಾಗೆಲ್ಲಾ ಉಪ್ಪುಗೂಡಿ" ಹೋಯಿತು. ಮಳೆಯಿಲ್ಲ, ಬೆಳೆಯಿಲ್ಲ, ಕೂಲಿಯಿಲ್ಲ. ಇಂಥ ಕಷ್ಟ ಜೀವನದಲ್ಲಿ "ಶಾರದ ಕಾನೂನಿ"ನ ಗಲಭೆಯಿದ್ದಿತು. ಅದು ಜಾರಿಗೆ ಬರುವ ಮೊದಲೇ ಚಂದಮ್ಮನು ಊರಿನವರಂತೆ ತನ್ನ ಇಬ್ಬರು ಗಂಡು ಮಕ್ಕಳಿಗೂ ಮದುವೆ ಮಾಡಲೇಬೇಕಾಯಿತು. ಇದಕ್ಕಾಗಿ ಹದಿನೈದು ದಿನದ ಗಡು ಮಾಡಿಕೊಂಡು ನೂರಕ್ಕೆ ತಿಂಗಳಿಗೆ ಹದಿನೈದರಂತೆ ನಾಗರಿಕರ ಕಲ್ಪನೆಗೆ ಮೀರಿದ ಬಡ್ಡಿದರದ ಮೇಲೆ ಸಾಲ ಮಾಡಬೇಕಾಯಿತು. ಮದುವೆ ನಡೆಯಿತು. ಅದರ ಗದ್ದಲವಿನ್ನೂ ಅಡಗುವುದಕ್ಕಿಲ್ಲ. ಅದರ ಸಾಲದ ತೀರುವಳಿಗಾಗಿ ಇದ್ದ ಒಂದು ಹೊಲವನ್ನು ಮಾರುವ ಸ್ಥಿತಿಗೆ ಇಳಿಯಿತು. ಆ ವ್ಯವಹಾರದಲ್ಲಿ, ಸಾಹುಕಾರರ, ದಳ್ಳಾಳಿಗಳ, ಗೌಡ, ಶಾನುಭೋಗರ ಸುಲಿಗೆ ಕಚೇರಿ ಖರ್ಚು; ಇವೆಲ್ಲರ ತಿಂಡಿ ತೀರ್ಥದ ಖರ್ಚು,—"ರಾಯರ! ರೊಟ್ಟೀ ಮ್ಯಾಗ ಕಾರಾನೂ ಕಾಣದಿರೋ ನಾನೂ ನನ್ನ ಮಗ ನಿಂತುಕೊಂಡು, ಅವರು ತಿನ್ನೂ ಸೊಗಸನ್ನೆಲ್ಲಾ ಮಿಕಿಮಿಕಿ ನೋಡತಿದ್ದೀವಿ. ಎಲ್ಲಾರೂ ತಿಂದ ಪಳಾರದ ಖರ್ಚು ನಾಕೂವರಿ ರೂಪಾಯಿ ಆತು...ಬಡತನದ ಬಾಳೇವು ಬಲು ಕೆಟ್ಟ ತಾಯಿ! ಮಂದೀ ಪಳಾರದ ಖರ್ಚನ್ನೆಲ್ಲಾ ನಾನೇ ಕೊಟ್ಟೆ; ಆದರೆ ನನ್ನ ಮಗ ಒಂದು ದುಡ್ಡಿನ ಚುರಮುರೀನೂ ಕೊಂಡುಕೊಡಲಿಲ್ಲ. ಮನಿಂದ ಕಟ್ಟಿ ತಂದಿರೂ ತಂಗಳ ರೊಟ್ಟೀ ತಿಂದು, ಹೊಳೀ ನೀರು ಕುಡಿದದ್ದೆಷ್ಟೋ ಅಷ್ಟೇಯಪ್ಪ"!...

ಕಥೆಯ ಬಹುಭಾಗವು ಚಂದಮ್ಮನ ಆಡುಮಾತಿನಲ್ಲೇ ಬಂದಿದೆ; ಇದರಿಂದಲೇ ಅದಕ್ಕೆ ಜೀವಕಳೆಯೂ ಬಂದಿದೆ. ಆಕೆಯ ಒಕ್ಕಣೆಯ ಸಹಜೋಜ್ವಲತೆ ಯಾರ ಹೃದಯವನ್ನಾದರೂ ಕರಗಿಸುತ್ತದೆ. ಅವಳಂಥ ಮುಗ್ಧೆಯನ್ನು ಕಾಡಿ ತಿಂದ ಮಧ್ಯಸ್ಥಗಾರರ

ಮೇಲೆ ನಮ್ಮ ರೋಷ ಕೆರಳುತ್ತದೆ. ಆದರೆ ಕಥೆಯ ಕೊನೆಗೆ ಬಂದಾಗ ಅವರ ಅನ್ಯಾಯಗಳಿಗೂ ಬಡತನವೇ ಮುಖ್ಯ ಕಾರಣವೆಂದು ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಶಾನುಭೋಗ ರಂಗಣ್ಣನು ಹೆಂಗರುಳಿನ ಮನುಷ್ಯ. ಆದರೆ "ನೀನೆ ನೋಡು, ಈ ನಮ್ಮ ಶಾನುಭೋಗಗಿರಿ ಬಲು ಹಾಳು ಕೆಲಸ...'ಸರಬರಾಯಿ' ಮಾಡದಿದ್ದರೆ ನಮ್ಮ ಕೆಲಸ ಗಾಳಿಯಲ್ಲಿ ಹಿಡಿದ ದೀಪ. ಎಂತಲೇ ಏನೇನೋ ಹೆದರಿಕೆ ಬೆದರಿಕೆ ಹಾಕೋದು; ರೈತರ ಕಡೆಯಿಂದ ಹಣ ಉಬ್ಬಿಕೊಳ್ಳೋದು; ಹೀಗೆ ಮಾಡದಿದ್ದರೆ ನಮ್ಮ ಸಂಸಾರ ಹೇಗೆ ಸಾಗಬೇಕು ನೋಡು"–ಹೌದು. ಬಡತನವು ದಿಟವಾಗಿಯೂ ಸಾಮಾಜಿಕ ಪಾಪ.

ಕೊಂಚ ಮಾತುಗಳಿಂದ ಸ್ಪಷ್ಟವಾದ ಚಿತ್ರವೊಂದನ್ನು ಕಟ್ಟುವುದರಲ್ಲಿ ಆನಂದಕಂದರು ಚತುರರು. "ಹುಲುಸಿನ ದೇವತೆ"ಯಂತೆ ಕಣಕ್ಕೆ ಬರುವ ಚಂದಮ್ಮನ ವರ್ಣನೆಯನ್ನೂ, ಸಂತೆಗೆಂದು ಬಂದಿದ್ದ ಶ್ರೀಕಂಠಭಟ್ಟರ ವರ್ಣನೆಯನ್ನೂ ಇಲ್ಲಿ ಉದಾಹರಿಸಬಹುದು. 'ಈ ಚಿತ್ರ, ಆ ಚಿತ್ರ'ದಲ್ಲಿ, ಮಾದಪ್ಪನ ಕುಟುಂಬದ ಮೇಲೆ ಚಳಿಗಾಲದ ಪ್ರಭಾವವನ್ನೂ ಸೂಕ್ಷ್ಮದೃಷ್ಟಿಯಿಂದ ವರ್ಣಿಸಿರುವುದೂ ರಮ್ಯವಾಗಿದೆ.

ಈ ಕಥೆಗಳನ್ನೆಲ್ಲಾ ಕರುಣ ರಸವೇ ಆವರಿಸಿದ್ದರೂ, ಅದರ ಅಂಚಿನಲ್ಲಿ ಮೃದು ಹಾಸವೂ—ಅದರಿಂದ ಕಳೆಗೊಂಡು–ಒಮ್ಮೊಮ್ಮೆ ಮಿನುಗುತ್ತದೆ. "ಸತ್ತವರಿಗಾಗಿ ಮರುಗುವುದೂ ಮನುಷ್ಯರ ಧರ್ಮ; ಬದುಕಿರುವುದಕ್ಕಾಗಿ ತಿನ್ನುವುದೂ ಮನುಷ್ಯರ ಧರ್ಮ" ಎನ್ನುವುದು ತುಂಬ ಸಹಜವಾದ ಮಾತು. "ನಿಮ್ಮ ಮನೇಲಿ ಹಳೆ ಜೋಳ ಹುಳಿ ಮಜ್ಜಿಗೆ ಹೆಚ್ಚಾಗಲಮ್ಮಾ!" ಎಂದು ತಿರುಪೆಯವರು ಕೂಗುವ ಮಾತಿಗೆ" ಕಾಲೇ ವರ್ಷತು ಪರ್ಜನ್ಯಃ ಪೃಥ್ವೀಸ್ಯಾತ್ ಸಸ್ಯಶಾಲಿನೀ" ಎಂಬ ಹರಕೆಯೇ ಅರ್ಥವೆಂದು ತೋರಿಸಿರುವುದು ಸ್ವಾರಸ್ಯಕರವಾಗಿದೆ.

೧೯೩೩]

ಕಾವ್ಯಾನುಭವ : ೧೯೭೦

ಹುಟ್ಟಿದ ಹಳ್ಳಿ–ಹಳ್ಳಿಯ ಹಾಡು*

"ಪಾಮರ ಸಾಹಿತ್ಯ"ವನ್ನು ಸಂಗ್ರಹಿಸಲು ಹೊರಟು ಈ ಗ್ರಂಥವನ್ನು ರಚಿಸಿದಂತೆ ಗ್ರಂಥಕರ್ತರು 'ಮನುನ್ನುಡಿ'ಯಲ್ಲಿ ಹೇಳಿದ್ದಾರೆ. ಇದರಲ್ಲಿ ಬಹುಭಾಗ ಕೋಲಾಟದ ಪದಗಳು, ದೇವರು ಮೇಲಿನ ಪದಗಳು, ಬೀಸುವ ಕುಟ್ಟುವ ಪದಗಳು, ಪ್ರಸ್ತಪ್ರಯೋಜನಗಳಲ್ಲಿ ಹೇಳತಕ್ಕುವು ಮೊದಲಾದ ಹಾಡುಗಳಿಂದ ತುಂಬಿದೆ. 'ಜಯಕರ್ಣಾಟಕ'ದಲ್ಲಿ ಪ್ರಕಟವಾಗುತ್ತಿರುವ ಜನಪದ ಸಾಹಿತ್ಯದ ರುಚಿಯನ್ನು ಕಂಡವರಿಗೆ ಶ್ರೀಮಾನ್ ರಂಗ ಸ್ವಾಮಿಯವರು ಮಾಡಿರುವ ಕಾರ್ಯದ ಮಹತ್ವವನ್ನೂ ಸ್ವಾರಸ್ಯವನ್ನೂ ಬೇರೆ ವರ್ಣಿಸಿ ಹೇಳಬೇಕಾಗಿಲ್ಲ. ಈ ಹಳ್ಳಿಯ ಹಾಡುಗಳಲ್ಲಿ ಪದಗಳನ್ನೂ ಬಿಡಿಸಿ ಬಿಂಗಡ ವಾಗಿ ಅಚ್ಚು ಹಾಕಿಸಿದ್ದರೆ ವಾಚಕರ ಸೌಕರ್ಯವು ಹೆಚ್ಚುತ್ತಿತ್ತು.

ಹಳ್ಳಿಯ ಹಾಡುಗಳ ಜೊತೆಗೆ ಹಳ್ಳಿಯ ಗಾದೆ ಗಳನ್ನೂ ಇಲ್ಲಿ ಸಂಗ್ರಹಿಸಿರುವುದು ತುಂಬ ಉತ್ತಮವಾದ ಕಾರ್ಯ. ಈ ಗಾದೆಗಳ ಪಟ್ಟಿಯೇ ಸುಮಾರು ಇಪ್ಪತ್ತು ಪುಟಗಳಷ್ಟಿದೆ. ಅಲ್ಲಿಂದ ಮಾದರಿಗಾಗಿ ತೆಗೆದು ಕೊಟ್ಟಿರುವ ಈ ಉದಾಹರಣೆ ಗಳಿಂದ ಹಳ್ಳಿಯ ಜನರ ಪ್ರಜ್ಞೆಯನ್ನು ಅರಿಯಬಹುದು.

---

* ಪ್ರಬುದ್ಧ ಕರ್ಣಾಟಕ, ೧೫.೨

"ಅತ್ತೆ ಮನೇಲಿ ಹೇಗಿರುವೆ ಮಗಳೆ ಅಂದ್ರೆ
ಚಿಲಕಕ್ಕೆ ಮೊಳಕ್ಕೆ ತಗುಲಿದ ಹಾಗೆ ಅಂದ್ಲು"

"ಊರಿಗೆ ಮಾಡಿದ ಉಪಕಾರ ಹೆಣಕ್ಕೆ ಮಾಡಿದ ಶೃಂಗಾರ"

"ಕಾಣದ ಊರಿಗೆ ನಾಲಿಗೆಯೇ ದಾರಿ"

"ಮೂಗಿರುವ ತನಕ ನೆಗಡಿ ತಪ್ಪುವ ಹಾಗಿಲ್ಲ"

ಹಳ್ಳಿಯವರ ಮಾತಿನಲ್ಲಿ ಒಂದು ಸಹಜತೆಯಿದೆ, ವ್ಯಂಗ್ಯವಿದೆ. ಬಹುಕಾಲದ ಅನುಭವವು ಅದರಲ್ಲಿ ಬಳಕೆಯ ನಿದರ್ಶನಗಳ ರೂಪವಾಗಿ ಒಡೆದು ಮೂಡುತ್ತದೆ. ಅದರ ಸ್ವರೂಪವನ್ನು ಹಳ್ಳಿಯವರ ಜೀವನದ ಸರಣಿಯನ್ನೂ ನಮ್ಮ ಕಣ್ಣ ಮುಂದಿಡುವುದಕ್ಕಾಗಿ ಗ್ರಂಥಕರ್ತರು ಅಲ್ಲಿ ನಡೆಯಬಹುದಾದ ಸಂಭಾಷಣೆಗಳ ಕೆಲವು ಚಿತ್ರಗಳನ್ನು ಬೇರೆ ಇದರ ಜೊತೆಗೆ ಸೇರಿಸಿದ್ದಾರೆ. ಈ ಭಾಗದಿಂದ ಒಂದು ಸಣ್ಣ ಚಿತ್ರವನ್ನು ಉದಾಹರಿಸಬಹುದು :

ಯಜಮಾನ—ಇದ್ಯಾಕ್ಲೇ ತಪ್ಲೆ ಚೌರಿಗೇಯ ನಿಂತ್ಹಿದ್ಹಂಗೆ ಬಿಸಾಕ್ತಿದ್ದಿ.

ಹೆಂಡತಿ—ಅಯ್ಯೋ ಹೋಗು, ಯಾವ ಮುಂದ್ಲಾರುಳೋ ಮಗನ್ಗೆ ಸಂಪಾದನೆ ಮಾಡಿ ಇಡ್ಬೇಕು, ಹೋದರೆ ಹೋಯ್ತದೆ.

ಗ್ರಂಥಕರ್ತರು "ಪಾಪ ಮಕ್ಕಳಿರಲಿಲ್ಲ" ಎಂದು ಒಂದು ಸಣ್ಣ ಸೂಚನೆ ಕೊಟ್ಟು ಈ ಇಳಿವಯಸ್ಸಿನ ದಂಪತಿಗಳ ಬಾಳಿನ ವಿಷಾದವನ್ನು ನಮ್ಮ ಹೃದಯಕ್ಕೆ ಮುಟ್ಟಿಸುತ್ತಾರೆ. ಚಿತ್ರವು ಹಳ್ಳಿಯ ಮಾತಿನ ಮಾರ್ಗವೊಂದನ್ನು ತೋರಿಸಿ ನಿಲ್ಲದೆ ಅಲ್ಲಿಯ ಜನಗಳ ಹೃದಯವನ್ನು ಬಿಚ್ಚಿಡುತ್ತದೆ.

ಈ ಸಂಕಲನ ಕಾರ್ಯವೊಂದಕ್ಕಾಗಿಯೇ ಕನ್ನಡಿಗರು ಶ್ರೀಮಾನ್ ರಂಗಸ್ವಾಮಿಯವರಿಗೆ ಕೃತಜ್ಞರಾಗಿರಬೇಕು. ಆದರೆ ಗ್ರಂಥದ ವಿಷಯವು ಇಷ್ಟಕ್ಕೇ ಮುಗಿಯಲಿಲ್ಲ. ಇದೆಲ್ಲಕ್ಕೂ ಪೀಠಿಕೆಯಾಗಿ ಅವರು ಬಂಡಿಹೊಳೆಯೆಂಬ ಒಂದು ಸಣ್ಣ ಹಳ್ಳಿಯ ಜೀವನಕ್ರಮವನ್ನು ವರ್ಣಿಸಿ ಆ ಮೂಲಕ ನಮ್ಮ ನಾಡಿನ ಗ್ರಾಮಸಂಸ್ಕೃತಿಯ ಪರಿಚಯವನ್ನೇ ವಿಸ್ತಾರವಾಗಿ ಮಾಡಿಕೊಟ್ಟಿದ್ದಾರೆ. ಹಳ್ಳಿಯವರ ದಿನದಿನದ ಬದುಕು, ನಡೆ ನುಡಿ, ಧರ್ಮ ಕರ್ಮ, ಹಬ್ಬ ಹುಣ್ಣಿಮೆ, ಮದುವೆ ಸಾವು, ಆಟ ಬೇಟೆ, ಹಾಡು ಹಸೆ—ಇದೆಲ್ಲವನ್ನೂ ಸರಳವಾದ ಮಾತಿನಲ್ಲಿ, ಸರಸವಾದ ರೀತಿಯಲ್ಲಿ ನಿರೂಪಿಸಿದ್ದಾರೆ. ಗ್ರಂಥಕರ್ತರು ಹಳ್ಳಿಯವರೊಂದಿಗೆ ವಾಸ ಮಾಡುತ್ತಾ ಅವರ ಜೀವನದಲ್ಲಿ ತಮ್ಮ ಜೀವನವನ್ನು ಬೆರೆಸಿರುವುದರಿಂದ ಪಟ್ಟಣಿಗರಿಗೆ ಅಲಭ್ಯವಾದ ಆ ಬಾಳಿನ ಗುಟ್ಟನ್ನೂ ಮಾತಿನ ಸೊಗಸನ್ನೂ ಸಂಪಾದಿಸಿದ್ದಾರೆ. ಅವರ ಬರವಣಿಗೆ ಹೊಳೆಯ ನೀರಿನಂತೆ ಹರಿಯುತ್ತದೆ. "ಬಂಡೆಯ ಮೇಲೆ ಬೆಳೆ ಬೆಳೆದರೂ ಬಡತನವು ಇಂಗದೆ ಹೋಯಿತು". "...ಕೆಲವು ಜನ ಮದ್ರಾಸಿ ಕಲ್ಲು ಕೆಲಸದವರು ಊರೊಳಗೆ ಸೇರಿಕೊಂಡಿದ್ದರು.

ಯಾವಾಗಲೂ ಗಡ್ರಬಡ್ರ ಎರಿದು ಗಲಾಟೆಯಾಗಿಯೇ ಇದ್ದಿತು". "...ಗಂಡ ಹೆಂಡಿರು ಜಗಳವಾಡಿದರೂ ನಮ್ಮೂರ ಜೋಯಿಸರಲ್ಲಿ ಬಂದು ಪ್ರಶ್ನೆ ಕೇಳದಿರುವುದು ಅಪರೂಪ"—ಈ ಬಗೆಯ ವಾಕ್ಯಗಳು ಈ ಗ್ರಂಥದ ಉದ್ದಕ್ಕೂ ದೊರೆಯುತ್ತವೆ.

ಒಟ್ಟಿನ ಮೇಲೆ ಈ ಗ್ರಂಥವು ಹಳ್ಳಿಯ ಬದುಕಿನ ವಿಶ್ವಕೋಶವೆನ್ನಬಹುದು. ಇಲ್ಲಿ ಇದು ಮುಖ್ಯ, ಇದು ಅಮೂಲ್ಯ ಎಂಬ ಭೇದವಿಲ್ಲ. ಗ್ರಂಥಕರ್ತರೇ ಹೇಳಿರುವ ಹಾಗೆ "ಈ ಗ್ರಂಥಾರಂಭದ ಉದ್ದೇಶವು ಹಳೇ ಕಾಲದ ಮುದುಕರ ದಫ್ತಾರದಂತೆ ಚೂರುಪಾರುಗಳನ್ನು ಸೇರಿಸುವ ಅಭಿಲಾಷೆಯಿಂದ ಕೂಡಿದೆ." (ಪುಟ ೧೨೭) ಇಲ್ಲಿಯ ವಿಷಯ ಸಂಗ್ರಹವು ಒಂದೆರಡು ದಿನಗಳಲ್ಲಿ ಆಗತಕ್ಕದ್ದಲ್ಲ. ಅದು ಒಂದು ಜೀವಮಾನದ ಅನುಭವದ ಫಲ. ಹಳ್ಳಿಯ ಬಾಳು ಹಿಂದೆ ಎಷ್ಟು ಸರಳವಾಗಿತ್ತು, ಸುಂದರವಾಗಿತ್ತು, ಶಾಂತಿಯುತವಾಗಿತ್ತು; ಈಗ ಎಷ್ಟು ದುರ್ಗತಿಗಿಳಿದಿದೆ—ಎಂಬ ವ್ಯಥೆ ಗ್ರಂಥದ ಉದ್ದಕ್ಕೂ ಶ್ರುತಿಯಂತೆ ಕೇಳಬಂದು ಅದರ ಅರ್ಥವನ್ನು ಹೆಚ್ಚಿಸಿದೆ.

"...ತಲೆಗೆ ಎಣ್ಣೆ ಕಾಣದವರೂ, ಎರಡು ಹೊತ್ತು ಊಟವಿಲ್ಲದಿರುವವರೂ ಅನೇಕರಿದ್ದರು. ಇನ್ನೇನೂ ಉಳಿಯುವುದಿಲ್ಲವೆಂದು ತಿಳಿದ ಮೇಲೆ ಕಾಫೀ ತೋಟಕ್ಕೆ ಸೇರುವ ವಾಡಿಕೆ...ಕೊಟ್ಟ ಕಾಳುಗಳನ್ನು ಕಟ್ಟಿಕೊಳ್ಳಲು ತಮಗೆ ಬಟ್ಟೆ ಇಲ್ಲದುದರಿಂದ ಕಷ್ಟಪಡುವವರನ್ನೂ ನಾಚಿಕೊಳ್ಳುವವರನ್ನೂ ನೋಡಿತು ಈ ಕಣ್ಣು, ಮರುಗಿತು ಈ ಮನವು". ಈ ಬಗೆಯ ನುಡಿ ಅಲ್ಲಲ್ಲೇ ದೊರೆಯುತ್ತದೆ. ಗ್ರಂಥದ ಕೊನೆಯಲ್ಲಂತೂ ಲೇಖಕರ ಹೃದಯವು ಕರಗಿ ನೀರಾಗಿದೆ. "ನನ್ನ ಸ್ಥಾನವು ಜಗತ್ತಿಗೇ ಮಂಗಳವನ್ನು ಕೋರುವುದಾಗಿರುವುದು" ಎಂದು ಈ ಅರ್ಚಕರು ಹೇಳಿ ಆ ಪ್ರಕಾರವೇ ತಮ್ಮ ಆರಾಧ್ಯ ದೈವವಾದ ರಂಗನಾಥನನ್ನು ವಿಶ್ವದ ಮಂಗಳಕ್ಕಾಗಿ ಪ್ರಾರ್ಥಿಸುತ್ತಾರೆ; "ಬಡತನವು ಪಾಪದ ಹೆದ್ದಾರಿ. ನಮ್ಮನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗು, ಸ್ವಾಮಿ" ಎಂದು ಅನನ್ಯ ಭಾವದಿಂದ ಬೇಡುತ್ತಾರೆ. ಈ ಭಾಗವು ವಾಚಕನಲ್ಲಿ ಭಕ್ತಿಯನ್ನು ಉದ್ರೇಕಿಸುತ್ತದೆ.

ಓದಲು ಮೊದಲು ಮಾಡಿದರೆ ಮುಗಿಸಿ ಕೆಳಗಿಡಬೇಕೆನ್ನಿಸುವ ಈ ಪುಸ್ತಕದಲ್ಲಿ ನಿಜವಾದ ಕೊರತೆ ಒಂದೇ : ಅದು ಇದರ ಕ್ರಮವಿಹೀನತೆ. ಗ್ರಂಥಕರ್ತರು ಮಾತಾಡುವವರ ಹಾಗೆ ಸಂಗತಿಗಳನ್ನು ತಮಗೆ ನೆನಪು ಬಂದ ಕ್ರಮದಲ್ಲಿ ಉದ್ದಕ್ಕೂ ಗುರುತು ಹಾಕುತ್ತಾ ಹೋಗಿದ್ದಾರೆ. ಈಗಲೂ ಅದನ್ನು ಆಯಕಟ್ಟಿಗೆ ತಂದರೆ ಉತ್ತಮ. ಶುದ್ಧಾಶುದ್ಧ ಪತ್ರಿಕೆ ನಾಲ್ಕು ಪುಟಗಳನ್ನು ಆಕ್ರಮಿಸಬಾರದಾಗಿತ್ತು. ಆದರೆ ಇದೆಲ್ಲವೂ ಅಷ್ಟು ಪ್ರಧಾನವಾದ ವಿಷಯವಲ್ಲ. ನಮ್ಮ ಜನಜೀವನದಲ್ಲಿ ಅಭಿಮಾನವಿರತಕ್ಕವರೆಲ್ಲರೂ ಅಗತ್ಯವಾಗಿ ಸಂಗ್ರಹಿಸಬೇಕಾದ ಗ್ರಂಥವಿದು.

೧೯೩೪]

ಕಾವ್ಯಾನುಭವ : ೧೯೭೦

ಜಾನಪದ ಕಥನ ಗೀತೆಗಳು*

ಉತ್ಸಾಹಿ ತರುಣಮಿತ್ರರಾದ ಶ್ರೀಮಾನ್ ಕ.ರಾ.ಕೃ. ಅವರು ತಾವು ಬಹು ಶ್ರಮಪಟ್ಟು ಸಂಪಾದಿಸಿ ಪ್ರಕಟಿಸುತ್ತಿರುವ ಈ ದೊಡ್ಡ ಜನಪದ ಸಾಹಿತ್ಯ ಸಂಗ್ರಹಕ್ಕೆ ಶುಭಾಶಂಸೆಯ ಮೊದಲ ಮಾತನ್ನು ಬರೆದು ಕೊಡಬೇಕೆಂದು ನನ್ನನ್ನು ಕೋರಿದ್ದಾರೆ. ಇಲ್ಲಿ ಕೂಡಿಸಿರುವ ಹಲವು ಹಾಡುಗಳಲ್ಲಿ ಕವಿತೆಯ ಸ್ವಯಂಪ್ರಕಾಶ ಬೆಳಗುತ್ತಿದೆ. ಅಲ್ಲದೆ ಈ ಬಗೆಯ ಸಾಹಿತ್ಯದ ವಿಷಯದಲ್ಲಿ ಪರಿಶ್ರಮವುಳ್ಳ ಹಲವು ಮಂದಿ ಮಹನೀಯರ ಬರಹಗಳಿಂದ ವಾಕ್ಯಮಾಲೆಗಳನ್ನು ಸಂಪಾದಕರು ಆಯ್ದುಕೊಂಡು ಭಾಗಭಾಗಕ್ಕೂ ಬೇರೆ ಬೇರೆ ಮುನ್ನುಡಿಗಳಾಗಿ ಅಳವಡಿಸಿದ್ದಾರೆ. ಹೀಗಿರುವಾಗ ನಾನು ಹೊಸದಾಗಿ ಹೇಳಬಹುದಾದದ್ದು ಏನಿದ್ದೀತು? ಆದರೂ ಒಪ್ಪಿಕೊಂಡ ಮೇಲೆ, ಗ್ರಂಥಪ್ರಕಟನೆ ವಿಳಂಬವಾಗದಂತೆ ಎರಡು ಮಾತನ್ನು ಬರೆದುಕೊಲೇಬೇಕಾಗಿ ಬಂದಾಗ ಒಂದು ಆಲೋಚನೆ ಹೊಳೆಯಿತು. ಅನೇಕ ವರ್ಷಗಳ ಹಿಂದೆ ನಾನು ಜನಪದ ಸಾಹಿತ್ಯದ ಅನರ್ಘ್ಯ ರತ್ನವೊಂದನ್ನು ಕುರಿತು ಬರೆದ ಲೇಖನವೊಂದರಿಂದ ಕೆಲವು ವಾಕ್ಯಗಳನ್ನು ಎತ್ತಿಕೊಟ್ಟರೆ ಇಲ್ಲಿಗೆ ತಕ್ಕಮಟ್ಟಿಗೆ ಹೊಂದಿಕೆಯಾಗಬಹುದೆಂದು ತೋರಿತು. ಈ ಸುಲಭೋಪಾಯವನ್ನೇ ಈ ಕೆಳಗೆ ಅವಲಂಬಿಸಿದ್ದೇನೆ:

---

* ಜಾನಪದ ಕಥನ ಗೀತೆಗಳು : ಸಂಪಾದಕ ಕ.ರಾ.ಕೃ : ೧೯೫೯.

"ಯಾವ ಗಣಿಯಲ್ಲಿ ಎಂಥ ಮಣಿ ಅಡಗಿರುವುದೋ! ಹಳ್ಳಿಯವರ ಹಾಡುಗಳನ್ನು ಕುರಿತು ಸುಶಿಕ್ಷಿತರಲ್ಲಿ ಮೊದಲಿಗೆ ಅನಾದರವೂ ತಿರಸ್ಕಾರವೂ ಇದ್ದುವು. ಅಕ್ಷರ ಕಲಿಯದವರು, ನಾಗರಿಕ ಜೀವನವನ್ನು ತಿಳಿಯದವರು, ವ್ಯಾಕರಣ ಬದ್ಧವಾಗಿ ಮಾತನಾಡಲು ಅರಿಯದವರು–ಇಂಥವರು ತಮ್ಮ ಹೃದಯವನ್ನು ಹಗುರ ಮಾಡಿಕೊಳ್ಳುವುದಕ್ಕಾಗಿ ಆಗಾಗ ಹಾಡಿಕೊಂಡ ಹಾಡುಗಳಲ್ಲಿ ಏನು ತಿರುಳಿದ್ದೀತೆಂದು ವಿದ್ವಾಂಸರು ಅಸಡ್ಡೆ ಮಾಡುತ್ತಿದ್ದ ಕಾಲವೊಂದಿತ್ತು. ಆದರೆ ಆ ಭಾವ ಈಗ ಬಲುಮಟ್ಟಿಗೆ ತೊಲಗಿದೆ. ಪ್ರೌಢಿಮೆಯುಳ್ಳವರು ಕೂಡ ಈ ಹಾಡುಗಳ ರುಚಿಯನ್ನು ಮನಗಾಣುತ್ತಿದ್ದಾರೆ. ಸಹೃದಯರಾದ ವಿಮರ್ಶಕರ ನಿರೀಕ್ಷೆಗೂ ಮೀರಿ ಬಗೆಯನ್ನು ಸೂರುಗೊಳ್ಳುವ ಕೃತಿಗಳು ಈ ಕ್ಷೇತ್ರದಲ್ಲಿ ಹಲವು ಬಾರಿ ದೊರೆಯುತ್ತವೆ. ಅಂಥವನ್ನು ಸಂಧಿಸಿದಾಗ 'ಇದು ಹಳ್ಳಿಯ ಹಾಡು : ಗುಣವನ್ನು ಗ್ರಹಿಸಬೇಕು' ಎಂಬ ಕೃಪಾದೃಷ್ಟಿ ತೊಲಗಿ, 'ಇದು ಒಳ್ಳೆಯ ಕಾವ್ಯ ಉತ್ತಮೋತ್ತಮ ಕಾವ್ಯ. ಇದರ ರಸವನ್ನು ಸವಿದು, ಹೃದಯವನ್ನು ಸಂಸ್ಕರಿಸಿಕೊಳ್ಳಬೇಕು' ಎಂಬ ನಮ್ರಬುದ್ಧಿ ಮೊಳೆಯುತ್ತದೆ.

ಕನ್ನಡದ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರೂ ನನ್ನ ಪ್ರಿಯ ಮಿತ್ರರೂ ಆದ ಪ್ರೊ|| ಡಿ.ಎಲ್. ನರಸಿಂಹಾಚಾರ್ಯರಿಗೆ 'ಜಾನಪದ ಕಥನ ಗೀತೆಗಳು' ಎಂಬ ಈ ಕೃತಿ ಅರ್ಪಿತವಾಗಿದೆ. ನರಸಿಂಹಾಚಾರ್ಯರು ಗ್ರಂಥಸಂಪಾದನೆಯಲ್ಲಿ ನಿಷ್ಣಾತರು; ಅವರಿಗೆ ಈ ಉಪಹಾರ ಇಷ್ಟವಾಗಲೆಂದೂ, ನಾಡಿನ ಸಹೃದಯ ವೃಂದಕ್ಕೆ ಇದರಿಂದ ರಸಸ್ವಾದ ಅತಿಶಯವಾಗಿ ಲಭಿಸಲೆಂದೂ ನನ್ನ ಹಾರೈಕೆ.

ಕಂದನ ಕಾವ್ಯಮಾಲೆ*

ಶ್ರೀಮಾನ್ ರಾಜರತ್ನಂ ಅವರು ಮಾಡುತ್ತಿರುವ ಶಿಶುಸೇವೆಯ ಪರಿಚಯವು ನಮ್ಮ ವಾಚಕರಿಗೆ ಆಗಲೇ ಉಂಟಾಗಿದೆ. ಒಂದು ವರ್ಷದೊಳಗೆ ಅವರು ಮಕ್ಕಳ ಪದ್ಯದ ಮೂರು ಪುಸ್ತಕಗಳನ್ನು ರಚಿಸಿ ಪ್ರಕಟಿಸಿದ್ದಾರೆ; ಮಕ್ಕಳಿಗಾಗಿ ಕವನಗಳನ್ನೂ ಕಥೆಗಳನ್ನೂ ಬರೆಯುವ ಕಾರ್ಯದಲ್ಲೇ ಇನ್ನೂ ತೊಡಗಿದ್ದಾರೆ. ಈ ನಡುವೆ, ಕನ್ನಡದಲ್ಲಿ ಬೇರೆ ಬೇರೆ ಕವಿಗಳು ಬರೆದ ಪದ್ಯಗಳನ್ನು ಆರಿಸಿ ಸೇರಿಸಿ ಕನ್ನಡ ನಾಡಿನ ಕಂದನಿಗೆ ಮತ್ತೊಂದು ಉಡುಗೊರೆಯನ್ನು ಓದಿಸಿದ್ದಾರೆ. ಈ ಸಂಕಲನ ಕಾರ್ಯವನ್ನು ಕೈಕೊಳ್ಳಲು ಶ್ರೀಮಾನ್ ರಾಜರತ್ನಂ ಅವರಿಗೆ ಒಂದು ವಿಶೇಷವಾದ ಸೌಕರ್ಯವಿತ್ತು : ಅವರು ಮೈಸೂರಿನ ಶಿಶುವಿಹಾರದಲ್ಲಿ ಮಕ್ಕಳೊಂದಿಗೆ ಆಟವಾಡಿ, ಕೆಲಸಮಾಡಿ, ಪಾಠ ಹೇಳಿದವರು. ಆ 'ಶಿಶುವಿಹಾರ'ದ ಮಕ್ಕಳು ಬಹುಮತದಿಂದ ಆರಿಸಿ ಸವಿದ ಕವನಗಳ ಕಲಿಕೆಯೇ ಈ "ಕಂದನ ಕಾವ್ಯಮಾಲೆ".

ಇದರಲ್ಲಿ ಮೂವತ್ತೊಂಬತ್ತು ಕವನಗಳಿವೆ. ಕವಿಗಳ ಸಂಖ್ಯೆ ಇಪ್ಪತ್ತರ ಹತ್ತಿರಕ್ಕೂ ಬರುತ್ತದೆ. ಆಧುನಿಕ ಕೃತಿಗಳ ಜೊತೆಗೆ ಹಳೆಯ ಹಾಡುಗಳಿಂದಲೂ ಕೆಲವನ್ನು ಆಯ್ದುಕೊಂಡಿರುವುದು ಶ್ಲಾಘ್ಯವಾದ ವಿಷಯ. (ಇವುಗಳ ಸಂಖ್ಯೆ ಇನ್ನೂ ಹೆಚ್ಚಬಹುದಾಗಿತ್ತು).

---

* ಪ್ರಬುದ್ಧ ಕರ್ಣಾಟಕ. ಸಂಪುಟ ೧೫.೩

ಅಂತೂ ಮಕ್ಕಳಿಗಾಗಿ ಬರೆದ ಯಾರನ್ನೂ ಸಂಪಾದಕರು ಮರೆತಂತಿಲ್ಲ. ಹೀಗೆ ಶೈಶವ ಪದ್ಯಕಾರರ ಪರಿಚಯವನ್ನು ಮಾಡಿಕೊಡಬೇಕೆಂಬ ಉದ್ದೇಶವಿರುವುದರಿಂದಲೇ ಏನೋ, ಕನ್ನಡದಲ್ಲಿರುವ ಉತ್ತಮ ಕವನಗಳೆಲ್ಲವೂ ಇಲ್ಲಿ ಬಂದಿಲ್ಲ. ಉದಾಹರಣೆಗೆ ಶ್ರೀಮಾನ್ ಹೊಯಿಸಳರ ಪದ್ಯಗಳಲ್ಲಿ ಇನ್ನೂ ಕೆಲವನ್ನು ಇಲ್ಲಿ ಕೊಡಬಹುದಾಗಿತ್ತು; ಈ ಸಂಪಾದಕರೇ ಬರೆದ 'ಕೋಡುಬಳೆ'ಯನ್ನು ಅವಶ್ಯಕವಾಗಿ ಸೇರಿಸಬೇಕಾಗಿತ್ತು. ಇಂಥ ಕವನಗಳಿಗೆ ಜಾಗ ಕೊಡುವುದಕ್ಕಾಗಿ 'ದೊಡ್ಡವರು', 'ಬೊಬ್ಬೊಭೋಂ ಬೊಮ್ಮ', 'ಪುಟ್ಟಹಕ್ಕಿ' ಮೊದಲಾದುವನ್ನು ಕೈ ಬಿಟ್ಟಿದ್ದರೂ ಹೆಚ್ಚು ನಷ್ಟವಾಗುತ್ತಿರಲಿಲ್ಲ.

ಇಲ್ಲಿಯ ಕವನಗಳನ್ನು ಕೇಳಿ ಮೆಚ್ಚಿದ 'ಶಿಶುವಿಹಾರ'ದ ಮಕ್ಕಳಲ್ಲಿ ಯಾರ ವಯಸ್ಸೂ "ಎಂಟೊಂಭತ್ತು ವರುಷ"ಕ್ಕೆ ಮೀರದಿದ್ದರೂ ಅವರಲ್ಲೇ ಎರಡು ದರ್ಜೆಗಳಿರುವಂತೆ ತೋರುತ್ತದೆ. ಕೆಲವರು ಕೇವಲ ಶಿಶುಗಳು—ನಾದದ ಮೇಲೆಯೋ, ಪ್ರಾಸದ ಮೇಲೆಯೋ ಹೆಚ್ಚು ಗಮನವಿಡತಕ್ಕವರು. ಇನ್ನೂ ಕೆಲವರು ಅರ್ಥಸ್ವಾರಸ್ಯವನ್ನೂ ಬಯಸತಕ್ಕವರು. ಇವರಿಬ್ಬರಿಗೂ ಪ್ರಿಯವಾದ ಕವನಗಳನ್ನು ವಿಂಗಡಿಸಿ ಬೇರೆ ಬೇರೆ ಪುಸ್ತಕಗಳಾಗಿ ಪ್ರಕಟಿಸಿದರೆ ಅನುಕೂಲವುಂಟು. ಆದರೆ ಹಾಗೆ ಮಾಡುವುದಕ್ಕೆ ಬೇಕಾದಷ್ಟು ಕಾವ್ಯ ಸಮೃದ್ಧಿ ಕನ್ನಡದಲ್ಲಿ ಇನ್ನೂ ಒದಗಿಲ್ಲವೇನೋ!

ಶ್ರೀಮಾನ್ ರಾಜರತ್ನಂ ಅವರು ಎಂದಿನಂತೆ ಈ ಪುಸ್ತಕವನ್ನೂ ದಪ್ಪವಾದ ಅಕ್ಷರಗಳಲ್ಲಿ ಅಂದವಾಗಿ ಮುದ್ರಿಸಿದ್ದಾರೆ; ಬೆಲೆಯನ್ನೂ ಕಡಮೆಯಾಗಿಯೇ ಇಟ್ಟಿದ್ದಾರೆ. ಮಕ್ಕಳು ಇದನ್ನು ಕೊಂಡು ಓದಿ ಕುಣಿದಾಡುವುದರಲ್ಲಿ ಯಾವ ಸಂಶಯವೂ ಇಲ್ಲ.

೧೯೩೪]

ಕಾವ್ಯಾನುಭವ : ೧೯೭೦

ಎಡ್‌ಮಂಡ್ ಬರ್ಕ್*

ನಲವತ್ತು ವರ್ಷಗಳಿಗೂ ಹಿಂದೆ ಮೈಸೂರಿನ ಮಹಾರಾಜರ ಕಾಲೇಜಿನಲ್ಲಿ ನಾನು ಬಿ.ಎ. ತರಗತಿಯಲ್ಲಿ ಓದುತ್ತಿದ್ದಾಗ ನಮಗೆ ರಾಜ್ಯಶಾಸ್ತ್ರವನ್ನು ಬೋಧಿಸಿದ ಗುರುಗಳಲ್ಲಿ ಶ್ರೀಮಾನ್ ಎಚ್. ಕೃಷ್ಣರಾಯರು ಒಬ್ಬರು; ಶಾಖೆಯ ಪ್ರಾಧ್ಯಾಪಕರಾಗಿ ಅವರು ವಿಶ್ರಾಂತಿ ಪಡೆದರು. ಇದರ ಜೊತೆಗೆ ಕ್ರೀಡಾರಂಗದಲ್ಲಿ ಅವರು ಆಸಕ್ತಿವಹಿಸಿ ಕಾಲೇಜಿನ ಆಟಗಳ ಶಾಖೆಗೆ ಬಹುಕಾಲ ಕಾರ್ಯದರ್ಶಿಗಳಾಗಿ ಕೆಲಸ ಮಾಡಿ ಹೆಸರು ಪಡೆದರು. ವಿದ್ಯಾರ್ಥಿಗಳ ವಿಷಯದಲ್ಲಿ ಅವರದು ಅವ್ಯಾಜವಾದ, ಅಮಿತವಾದ ಪ್ರೀತಿ ವಿಶ್ವಾಸ. ನಮ್ಮಲ್ಲಿ ಹಲವರು ಅವರ ವಿದ್ಯಾರ್ಥಿಗಳಾಗಿದ್ದಾಗಲೂ ಅಷ್ಟೆ, ಆ ಬಳಿಕ ಜೊತೆಯ ಉಪಾಧ್ಯಾಯರಾಗಿದ್ದಾಗಲೂ ಅಷ್ಟೆ, ಅವರನ್ನು "ಮೇಷ್ಟ್ರೆ, ಮೇಷ್ಟ್ರೆ" ಎಂದು ಕರೆಯುತ್ತಾ ಸುತ್ತುಗಟ್ಟುತ್ತಿದ್ದೆವು. ರಾಜ್ಯಶಾಸ್ತ್ರದಲ್ಲಾಗಲಿ ಕ್ರೀಡಾರಂಗದಲ್ಲಾಗಲಿ ನಾನು ಎಷ್ಟು ಮಾತ್ರವೂ ಮುಂದುವರಿಯದಿದ್ದರೂ ಅವರ ಅವಿಚ್ಛಿನ್ನವಾದ ಅಭಿಮಾನಕ್ಕೆ ಪಾತ್ರರಾದ ಹಳೆಯ ಶಿಷ್ಯರಲ್ಲಿ ನಾನೂ ಒಬ್ಬ ಎಂದು ನೆನೆಯುವುದು ನನಗೆ ಸಂತೋಷದ ವಿಷಯ.

---

* ಪ್ರೊ. ಎಚ್. ಕೃಷ್ಣರಾಯರ 'ಎಡ್ಮಂಡ್ ಬರ್ಕ್' ಗ್ರಂಥಕ್ಕೆ ಬರೆದ ಮುನ್ನುಡಿ (೨೧-೮-೧೯೬೫)

ರಾಜ್ಯಶಾಸ್ತ್ರದಲ್ಲಿ ಶ್ರೀಮಾನ್ ಕೃಷ್ಣರಾಯರದು ವಿಶಾಲವಾದ ಪಾಂಡಿತ್ಯ. ತಮ್ಮ ತಲೆಮಾರಿನವರಿಗೆ ಇಂಗ್ಲೀಷೇ ಹೆಚ್ಚು ಬಳಕೆಯ ಭಾಷೆಯಾಗಿದ್ದರೂ ಅವರು ಇಂಗ್ಲೀಷಿನಲ್ಲಿ ಬರೆಯುವ ಗೋಜಿಗೆ ಹೋಗದೆ ತಮ್ಮ ಶಾಸ್ತ್ರ ಪ್ರವೀಣತೆಯ ಫಲ ಕನ್ನಡಿಗರಿಗೆ ದೊರೆಯುವಂತಾಗಬೇಕೆಂದು ಕನ್ನಡದಲ್ಲಿಯೇ ಗ್ರಂಥರಚನೆ ಮಾಡಲು ಬಲು ಹಿಂದೆಯೇ ಕಂಕಣ ತೊಟ್ಟರು. 'ರಾಜ್ಯಶಾಸ್ತ್ರ', 'ಪಾಶ್ಚಾತ್ಯ ರಾಜಕೀಯ ತತ್ವಶಾಸ್ತ್ರ' ಎಂಬ ತೂಕವಾದ ಗ್ರಂಥಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ಮೂಲಕ ಜನತೆಗೆ ಅರ್ಪಿಸಿದರು. ಅವರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆಗಾಗಿ ಬರೆದ 'ಮುನಿಸಿಪಾಲಿಟಿ', ಪುಟ್ಟಣ್ಣ ಚೆಟ್ಟರ ಪುದುವಟ್ಟಿನ ಪ್ರಕಟನ ಮಾಲೆಗಾಗಿ ಬರೆದ 'ಸರ್ಕಾರ, ಅದರ ಪದ್ಧತಿ ಮತ್ತು ರಚನಾಕ್ರಮ' ಈ ಮೊದಲಾದ ಚಿಕ್ಕ ಪುಸ್ತಕಗಳನ್ನು ಇಲ್ಲಿ ಸ್ಮರಿಸಬಹುದು.

ಪ್ರಾಧ್ಯಾಪಕ ಪದವಿಯಿಂದ ವಿಶ್ರಾಂತಿ ಪಡೆದು ಹಾಯಾಗಿ ಕುಳಿತಿರಬಹುದಾದ ಕಾಲದಲ್ಲೂ ಶ್ರೀಮಾನ್ ಕೃಷ್ಣರಾಯರು ಬರವಣಿಗೆಯ ಕೆಲಸವನ್ನು ಸಂತತವಾಗಿ ನಡೆಸುತ್ತಲೇ ಇದ್ದಾರೆ. ಮುಪ್ಪು ಅವರ ಮನಸ್ಸಿನ ಲವಲವಿಕೆಯನ್ನು ಕುಂದಿಸಿಲ್ಲ. ಶಾಸ್ತ್ರೀಯ ಗ್ರಂಥಗಳ ಜೊತೆಗೆ ಅವರು ಲೋಕ ಪ್ರಸಿದ್ಧವಾದ ಕೆಲವು ಮಂದಿ ಪಾಶ್ಚಾತ್ಯರ ಜೀವನ ಚರಿತ್ರೆಗಳನ್ನು ರಚಿಸುತ್ತಿದ್ದಾರೆ. ಬ್ರಿಟನ್ನಿನಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಬಾಳಿದ ಮಹಾ ಮೇಧಾವಿಯಾದ ಜಾನ್ ಸ್ಟೂಯರ್ಟ್ ಮಿಲ್ ಎಂಬ ತತ್ವ ಶಾಸ್ತ್ರಜ್ಞನನ್ನು ಕುರಿತ ಅವರ ಗ್ರಂಥ ಕೆಲವು ವರ್ಷಗಳ ಹಿಂದೆ ಪ್ರಕಟವಾಯಿತು. ಹದಿನೆಂಟನೆಯ ಶತಮಾನದ ಮಹಾವಾಗ್ಮಿಯೂ ರಾಜಕಾರಣಪಟುವೂ ಆದ ಎಡ್ಮಂಡ್ ಬರ್ಕ್‌ನ ಜೀವನ ಚರಿತ್ರೆ ಈಗ ಹೊರಬರುತ್ತಿದೆ.

ಎಡ್ಮಂಡ್ ಬರ್ಕ್‌ನ ಹೆಸರು ನಮ್ಮ ತಲೆಮಾರಿನ ವಿದ್ಯಾರ್ಥಿಗಳಿಗೆ ಚೆನ್ನಾಗಿ ಪರಿಚಿತವಾಗಿತ್ತು. ಇಂಗ್ಲೀಷಿನಲ್ಲಿ ವಾಗ್ಮಿಗಳಾಗಬೇಕೆಂದು ಬಯಸುತ್ತಿದ್ದ ಕೆಲವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಅವನು ಮಾಡಿದ ಭಾಷಣಗಳ ಕೆಲವು ಭಾಗಗಳನ್ನು ಬಾಯಿಪಾಠ ಮಾಡಿ ಭಾಷಾ ವೈಖರಿ, ವಿಷಯ ವಿನ್ಯಾಸ ಮೊದಲಾದುವನ್ನು ಮನದಟ್ಟು ಮಾಡಿಕೊಳ್ಳುತ್ತಿದ್ದರು. ಫ್ರಾನ್ಸ್‌ನ ಮಹಾಕ್ರಾಂತಿಯ ಆ ಕಾಲದಲ್ಲಿ ಆ ದೇಶದ ಕೊನೆಯ ರಾಣಿಗೆ ಒದಗಿದ ದುರ್ಗತಿಯನ್ನು ಕುರಿತ ಬರ್ಕನ ವಾಕ್ಯ ಸರಣಿಯನ್ನು ಓದಿ, ಕೇಳಿ ಕಣ್ಣೀರು ಸುರಿಸಿದವರುಂಟು. ವಾರನ್ ಹೇಸ್ಟಿಂಗ್ಸನು ಇಂಡಿಯಾದಲ್ಲಿ ಆಡಳಿತ ನಡೆಸುವಾಗ ಅನೇಕ ದುಷ್ಕೃತ್ಯಗಳನ್ನು ಆಚರಿಸಿದನೆಂಬ ಆಪಾದನೆಯನ್ನು ಹೂಡಿ ಬರ್ಕನು ಮಾಡಿದ ಗರ್ಜನೆಗಳನ್ನು ನಮ್ಮಲ್ಲಿ ಅನೇಕರು ಮೆಚ್ಚಿಕೊಂಡಿದ್ದರು. ಇಷ್ಟಾದರೂ ಬರ್ಕನ ಜೀವನ ಚರಿತ್ರೆಯನ್ನು ಸಮಗ್ರವಾಗಿ ಓದಿ ಅವನ ಗುಣದೋಷಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದವರ ಸಂಖ್ಯೆ ನಮ್ಮ ವಿದ್ಯಾರ್ಥಿ ಕಾಲದಲ್ಲೂ ಕಡಿಮೆ. ಈಗಲಂತೂ ಇನ್ನೂ ತಗ್ಗಿರಬೇಕು.

ಭಾರತ ಸರ್ವತೋಮುಖವಾಗಿ ಬೆಳೆಯಬೇಕಾದರೆ ನಮ್ಮ ನಾಡಿನ ಮಹಾವ್ಯಕ್ತಿಗಳ ಚರಿತ್ರೆ, ಅವರ ಸಾಧನೆ ಸಿದ್ಧಿಗಳು ಇಷ್ಟನ್ನು ಮಾತ್ರ ನಮ್ಮ ಜನರು ತಿಳಿದುಕೊಂಡರೆ ಸಾಲದು. ಗಣ್ಯರಾದ ವಿದೇಶೀಯರ ವಿಚಾರವನ್ನೂ ಸಮರ್ಪಕವಾಗಿ ತಿಳಿದುಕೊಳ್ಳಬೇಕು; ನಮ್ಮ ಜನಜೀವನವನ್ನು ಸರಿಯಾಗಿ ರೂಪಿಸಿಕೊಳ್ಳಲು ಅತ್ತ ಕಡೆಯಿಂದಲೂ ಅವಶ್ಯವಾದ ಪಾಠಗಳನ್ನು ಕಲಿಯಬೇಕು. ಇದೆಲ್ಲಕ್ಕೆ ಸಹಾಯಕವಾಗುವ ಗ್ರಂಥಗಳು ನಮ್ಮ ದೇಶ ಭಾಷೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಹೊರಬೀಳಬೇಕು. ಈ ದಾರಿಯಲ್ಲಿ ಶ್ರೀಮಾನ್ ಕೃಷ್ಣರಾಯರ ಗ್ರಂಥಗಳಿಂದ ಕನ್ನಡಿಗರಿಗೆ ತುಂಬ ಪ್ರಯೋಜನವಾಗಿದೆ, ಆಗುತ್ತಿದೆ. ಪ್ರಸ್ತುತ ಗ್ರಂಥದಲ್ಲಿ ಅವರು ಎಡ್ಮಂಡ್ ಬರ್ಕನ ಜೀವನಕಥೆ, ಗುಣದೋಷಗಳು, ಅಂದಿನ ಸಾಮಾಜಿಕ ರಾಜಕೀಯ ಪ್ರಪಂಚದಲ್ಲಿ ಅವನ ಮಹತ್ವ, ಅವನ ಶತ್ರುಮಿತ್ರರ ವಿಚಾರ ಇದೆಲ್ಲವನ್ನೂ ಸರಳವಾದ ಮತ್ತು ಖಚಿತವಾದ ಮಾತುಗಳಲ್ಲಿ ತಿಳಿಸಿದ್ದಾರೆ. ಬರ್ಕನ ಅನೇಕ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಅವರು ಶ್ರಮವಹಿಸಿ ರಚಿಸಿರುವ ಈ ಗ್ರಂಥವನ್ನು ಓದತಕ್ಕ ಕನ್ನಡಿಗರ ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆಗಳು ಬೆಳೆಯುತ್ತವೆ ಎಂಬ ವಿಷಯದಲ್ಲಿ ಏನೂ ಸಂಶಯವಿಲ್ಲ. ನಮ್ಮ ಜನ ಈ ಕೃತಿಯನ್ನು ಆದರದಿಂದ ಪುರಸ್ಕರಿಸುವರೆಂದು ನಾನು ನಿರೀಕ್ಷಿಸುತ್ತೇನೆ.

ಕಾವ್ಯಾನುಭವ : ೧೯೭೦

●

ಭಾಗ ೭

ಲಲಿತ ಪ್ರಬಂಧ

ನಂಟರು

ಯಾರು ನಂಟರು?

"ಇದು ಎಂಥ ಪ್ರಶ್ನೆ! ಎಳೆಯ ಮಕ್ಕಳಿಗೆ ಕೂಡ ಯಾರು ನಂಟರು ಎಂದು ಗೊತ್ತಿದೆಯಲ್ಲಾ!" ಎಂದು ಹಾಸ್ಯಮಾಡಬೇಡಿ. ಇದು ಎಷ್ಟು ತೊಡಕಾದ ಸಮಸ್ಯೆ ಎನ್ನುವುದು ಒಂದು ಕ್ಷಣದಲ್ಲಿ ಮನದಟ್ಟಾಗುತ್ತದೆ.

ಮಾವ, ಭಾವ, ಅತ್ತೆ, ಮೈದುನ—ಇವರೆಲ್ಲರೂ ನಂಟರೆಂದು ನೀವು ಬೇಗ ಹೇಳಿಬಿಡಬಹುದು. ರಕ್ತಸಂಬಂಧಿಗಳೆಲ್ಲರೂ ನಂಟರೆಂದು ಶಾಸ್ತ್ರ ಪರಿಷ್ಕೃತ ವಾದ ಬುದ್ಧಿಯುಳ್ಳವರು ಲಕ್ಷಣವನ್ನೂ ಕಲ್ಪಿಸಬಹುದು. ಆದರೆ ಬಾಂಧವ್ಯದ ರಹಸ್ಯಗಳನ್ನೆಲ್ಲಾ ಒಂದು ಸೂತ್ರ ದಿಂದ ಕಟ್ಟಿಹಾಕುವುದು ಸಾಧ್ಯವಲ್ಲ. ತಂದೆತಾಯಿಗಳ ರಕ್ತವೇ ನಮ್ಮ ದೇಹದಲ್ಲೆಲ್ಲಾ ಹರಿಯುತ್ತಿದೆಯಷ್ಟೆ. ಇವರು ನಂಟರೆ? ಈಗಿನ ವಿದ್ಯಾವಂತರಾದ ನೀವು ನಿಮ್ಮ ಮುಪ್ಪಿನ ತಂದೆಯೊಡನೆ ಬೆಂಗಳೂರಿನಲ್ಲಿ ಪೇಟೆಯ ಕಡೆಗೆ ಹೊರಟಿರಿ ಎನ್ನಿ. ಆಗ ನಿಮ್ಮ ಮಿತ್ರರೊಬ್ಬರು ಎದುರಿಗೆ ಬಂದು ಕಂಡು "ಇವರು ಯಾರು?" ಎಂದು ನಿಮ್ಮ ತಂದೆಯ ಕಡೆಗೆ ತೋರಿಸಿ ಕೇಳಿದಾಗ, ನೀವು "ನಮ್ಮ ನಂಟರು" ಎಂದು ಹೇಳಿಬಿಟ್ಟರೆ ಆಗುವ ಅನರ್ಥವನ್ನು ಊಹಿಸುವು ದಾದರೂ ಸಾಧ್ಯವೆ? ಕೆಲವು ಮಂದಿ ಸತ್ಪುತ್ರರು ಇಂಥ ಉತ್ತರಗಳನ್ನು ಕೊಟ್ಟ ಮಾತ್ರದಿಂದಲೇ ಎಷ್ಟೋ ಸಂಸಾರಗಳು ಒಡೆದು ಹೋಗಿಲ್ಲವೇ?

"ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ" ಎಂದು ಹೇಳುವುದು ಗಾದೆಯಲ್ಲಿ ಮಾತ್ರ. ಉಪ್ಪು ರುಚಿಯೆಂದು ಬರಿಯ ಉಪ್ಪನ್ನೇ ಒಂದು ಹಿಡಿಯಷ್ಟು ಮುಕ್ಕಿ; ತಾಯಿ ಬಂಧುವೆಂದು ಆಕೆಯನ್ನು ಬಂಧುವಿನಂತೆಯೇ ಕಂಡು ಕರೆಯಿರಿ. ಆಗ ಗೊತ್ತಾಗುತ್ತದೆ! ಉಪ್ಪು ರುಚಿಗೆ ಮಿಾರಿದ್ದು; ತಾಯಿ ಬಂಧುಗಳಿಗೆ ಮಿಾರಿದವಳು.

ತಂದೆತಾಯಿಗಳ ಮಾತಾಯಿತು. ಮಕ್ಕಳೊ? ತಂದೆಯನ್ನು "ನಂಟರು" ಎಂದಲ್ಲ, "ನಮ್ಮವರು" "ನಮ್ಮ ಮನೆಯ ದೇವರಪೂಜೆಯ ಬ್ರಾಹ್ಮಣರು" ಎಂದು ಕೂಡ ಕರೆದ ಪುಣ್ಯಾತ್ಮರಿರಬಹುದು. ಆದರೆ ಎಂಥ ಕಟುಕನೇ ಆಗಲಿ, ತನ್ನ ಮಗನನ್ನು "ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಲಿಲ್ಲ" ಎಂದು ಬೈದಿರಬಹುದೇ ಹೊರತು, "ನೀನು ನನ್ನ ನಂಟ" ಎಂದು ಹೇಳಿದ ಪಾಪವನ್ನು ಕಟ್ಟಿಕೊಂಡಿರಲಾರನು.

ಇನ್ನು ಹೆಂಡತಿಯನ್ನು "ನಂಟಳು" ಎನ್ನಬಹುದೆ? ಕೇಳಿದ ಕೂಡಲೆ ನೀವೇ ನಕ್ಕುಬಿಡುತ್ತೀರಿ. ವಿಚಾರಮಾಡುವ ಪ್ರಸಂಗವೇ ಇಲ್ಲ. ಬುದ್ಧಿಗಿಂತ ಮೊದಲು ನಿಮ್ಮ ಹೃದಯವೇ ಇಲ್ಲಿ ತೀರ್ಪನ್ನು ಹೇಳಿಬಿಡುತ್ತದೆ.

ಹೋಗಲಿ. ಅಣ್ಣತಮ್ಮಂದಿರನ್ನು ನಂಟರೆನ್ನಬಹುದೆ? "ಹುಟ್ಟಹುಟ್ಟುತ ಅಣ್ಣತಮ್ಮಂದಿರು, ಬೆಳೆಯಬೆಳೆಯುತ ದಾಯಾದಿಗಳು." ಅಣ್ಣತಮ್ಮಂದಿರು ಗ್ರಹಚಾರ ತಪ್ಪಿದರೆ ದಾಯಾದಿಗಳಾಗುವರೇ ಹೊರತು ನಂಟರು ಮಾತ್ರ ಎಂದಿಗೂ ಆಗುವುದಿಲ್ಲ. ದಾಯಾದಿಗಳಿಗೂ ನಂಟರಿಗೂ ಇರುವ ವ್ಯತ್ಯಾಸವನ್ನು ನೋಡಿ : ದಾಯಾದಿಗಳಲ್ಲಿ ನಿಮಗೆ ದ್ವೇಷಭಾವ, ನಂಟರಲ್ಲಿ ಉದಾಸೀನಭಾವ. (ಪ್ರೀತಿಯೂ ಕೆಲವು ಕಡೆ ಇದ್ದೀತು; ಆದರೆ ಅದು ಬಹುವಿರಳ.) ನೀವು ಅಪ್ಪಿ ತಪ್ಪಿ ಕ್ರೂರಿಗಳಾದರೆ ದಾಯಾದಿಗಳಿಗೆ ಕೇಡು ಬಯಸುವಿರಿ; ಅವರಿಗೆ ಸಿರಿ ಬಂದರೆ ಕರುಬುವಿರಿ. ಅವರೂ ಹಾಗೆಯೇ. ಅಸಲಿಗೆ ಬಡ್ಡಿಯನ್ನು ಸೇರಿಸಿ ನಿಮ್ಮ ಮೇಲೆ ಅವರು ವಿಷಕಾರುವರು. ನಂಟರ ವಿಚಾರ ಹಾಗಲ್ಲ. ಅವರ ಮೇಲೆ ನಿಮಗೆ ದ್ವೇಷವಿಲ್ಲ. ಅವರು ಮನೆಗೆ ಬಂದರೆ ಉಪಚಾರ ಮಾಡುವಿರಿ, ಯೋಗಕ್ಷೇಮವನ್ನು ಕೇಳುವಿರಿ. ಯಾವ ದಾಯಾದಿಗಳೇ ಆಗಲಿ, ಪ್ರಾಣ ಹೋಗುವಂತಿದ್ದರೂ ನಿಮ್ಮ ಮನೆಯ ಹೊಸಿಲನ್ನಾದರೂ ಮೆಟ್ಟುವರೆ!

ಹಾಗಾದರೆ ಯಾರು ನಂಟರು?

ತಂದೆತಾಯಿಗಳಲ್ಲ, ಹೆಂಡತಿಮಕ್ಕಳಲ್ಲ, ಅಣ್ಣತಮ್ಮಂದಿರಲ್ಲ, ಅಕ್ಕತಂಗಿಯರಲ್ಲ. ಇವರ ರಕ್ತಸಂಬಂಧಿಗಳು ನಮಗೆ ನಂಟರು. ತಂದೆಯ ತಂಗಿ ನಿಮ್ಮ ಸೋದರತ್ತೆಯಾಗ ಬೇಕು. ಹೆಂಡತಿಯ ತಂದೆ ನಿಮ್ಮ ಮಾವನಾಗಬೇಕು. ಇವರು ನಿಮ್ಮ ನಂಟರು. ಹೀಗೆಯೇ. ಪ್ರತ್ಯಕ್ಷ ರಕ್ತಸಂಬಂಧವುಳ್ಳವರನ್ನು ನಂಟರ ಪಟ್ಟಿಯಿಂದ ತೆಗೆದುಹಾಕಬೇಕು. ಒಂದು ತಲೆಯಾದರೂ ದೂರದ ಸಂಬಂಧದವರೇ ಬಾಂಧವ್ಯದ ಪೂಜ್ಯತೆಗೆ ಅಧಿಕಾರಿಗಳು.

ಇದರಲ್ಲಿ ಒಂದು ಸ್ವಾರಸ್ಯವುಂಟು. ನಂಟತನದಲ್ಲಿ ನಮಗೆ ಹತ್ತಿರದ ಕಡೆಗೆ ಒಂದು ಎಲ್ಲೆಯಿರುವ ಹಾಗೆ ನಮಗೆ ದೂರದ ಕಡೆಗೆ ಇಲ್ಲ. ದೂರ ದೂರಕ್ಕೆ

ಹೋದಹಾಗೆಲ್ಲ ಅದೊಂದು ಮಹಾರಣ್ಯ. ಅಲ್ಲಿ ನಮಗೆ ದಾರಿಯೂ ಕಾಣುವುದಿಲ್ಲ, ಕೊನೆಯೂ ಸಿಕ್ಕುವುದಿಲ್ಲ. ಮಾತಾಡಿಸಿದವರೆಲ್ಲರೂ ನಂಟರೇ ಆಗಿಬಿಡುತ್ತಾರೆ. ನಿಮ್ಮ ಚಿಕ್ಕಮ್ಮ—ಎಂದರೆ ನಿಮ್ಮ ತಾಯಿಯ ತಂಗಿ—ನಿಮಗೆ ನಂಟರಷ್ಟೇ. ಅವರ ಗಂಡನೊ? ಆತನ ತಮ್ಮನೊ? ಆ ತಮ್ಮನ ಮಾವನ ಮಗನೊ? ಆ ಮಗನ ಹೆಂಡತಿಯ ಸೋದರತ್ತೆಯ ಗಂಡನೊ? ಎಲ್ಲರೂ ನಂಟರೇ ತಾನೆ! ನಿಮ್ಮ ಮದುವೆಗೆ ಈ ತುದಿಯ ನಂಟನು ಬಂದಿದ್ದನಲ್ಲ, ಆತನನ್ನು ಹಿಂದೆ ನೀವು ನೋಡಿ ಕಾಣಿರಿ, ಹೆಸರನ್ನು ಅರಿಯಿರಿ; ಕಡೆಗೆ ಅಂಥವನೊಬ್ಬನು ಇದ್ದ ಸಂಗತಿ ಕೂಡ ನಿಮಗೆ ಗೊತ್ತಿರಲಿಲ್ಲ. ಆದರೇನು? "ನೀನು ನನ್ನ ನಂಟನಲ್ಲ" ಎಂದು ಹೇಳಿ ಆತನನ್ನು ಅಸಡ್ಡೆ ಮಾಡಿದಿರಾ? ಗೌರವವಾಗಿ ಮೊದಲನೆಯ ಪಂಕ್ತಿಗೇ ಮಣೆ ಹಾಕಿ ಕುಳ್ಳಿರಿಸಿ ಔತನಮಾಡಿ ಕಳಿಸಿಕೊಟ್ಟಿರಿ. ಹಾಗೆ ಮಾಡಿದ್ದರಿಂದಲೇ ನಿಮಗೆ ಮಾನ ಬಂದಿತು.

ಮೈಸೂರಿನಲ್ಲಿ ಮನೆಮಾಡಿಕೊಂಡಿರುವವರಿಗೆ ಬಾಂಧವ್ಯದ ಸೌಖ್ಯ ನವರಾತ್ರಿಯ ಕಾಲದಲ್ಲಿ ತಕ್ಕಮಟ್ಟಿಗೆ ಮನದಟ್ಟಾಗುತ್ತದೆ. ಮನೆಯ ಯಜಮಾನ ಅಷ್ಟೊಂದು ನೆಮ್ಮದಿಯಾಗಿಲ್ಲದಿದ್ದರೆ ಅದರ ಸೊಗಸು ಇನ್ನೂ ಹೆಚ್ಚು. ರೈಲ್ವೆ ಸ್ಟೇಷನ್ನಿಗೆ ಒಂದು ಗಾಡಿ ಬಂದಿತೆಂದರೆ ಅವನು ಒಂದು ಗೇಣಿನಷ್ಟು ಕುಗ್ಗಿಹೋಗುತ್ತಾನೆ. ಅವನ ಮನೆಯಲ್ಲಿ ಒಂದು ಕೊಠಡಿ ಕಿಕ್ಕಿರಿದು ಹೋಗುತ್ತದೆ. ಪಾಪ, ಆ ಗಾಡಿಗಳ ಸಂಖ್ಯೆಗಾದರೂ ಮಿತಿಯುಂಟೆ? ಹಿಂದೆ ಒಂದು ಬರುತ್ತಿದ್ದ ಕಡೆ ಈಗ ಹತ್ತು. ಘಂಟೆಘಂಟೆಗೂ ಸ್ಪೆಷಲ್ ಗಾಡಿಗಳೇ; ಬೆಂಗಳೂರಿನ ಕಡೆಯಿಂದ, ಅರಸೀಕೆರೆಯ ಕಡೆಯಿಂದ, ಚಾಮರಾಜನಗರದ ಕಡೆಯಿಂದ! ಗಾಡಿಗಾಡಿಗೂ ನಂಟರು. ನಿತ್ಯವೂ ಮನೆಯಲ್ಲಿ ಸಮಾರಾಧನೆ. ಒಂದು ನವರಾತ್ರಿ ಕಳೆಯುವ ಹೊತ್ತಿಗೆ ಒಂದು ಅಶ್ವಮೇಧ ಯಾಗವನ್ನು ಕೈಕೊಂಡು ಕೊನೆ ಮುಟ್ಟಿಸಿದಷ್ಟು ಶ್ರಮ ಮನೆಮಂದಿ ಎಲ್ಲರಿಗೆ.

ಬಾಂಧವ್ಯದಲ್ಲೆಲ್ಲಾ ವಿಚಿತ್ರವಾದದ್ದು ಅಳಿಯಮಾವಂದಿರ ಸಂಬಂಧ. ಮಿಕ್ಕ ನಂಟರಲ್ಲೆಲ್ಲಾ ಉದಾಸೀನಭಾವವಿದ್ದರೆ, ಅಳಿಯನಿಗೂ ಮಾವನಿಗೂ ಶತ್ರುಭಾವ. ಹಿಂದೆ ಶತ್ರುವಾಗಿ ನಿಮ್ಮಿಂದ ನರಳಿದ್ದವನೇ ಈ ಜನ್ಮದಲ್ಲಿ ಸೇಡುತೀರಿಸಿಕೊಳ್ಳುವುದಕ್ಕಾಗಿ ನಿಮ್ಮ ಅಳಿಯನಾಗಿಯೋ ಮಾವನಾಗಿಯೋ ಹುಟ್ಟುವನು. ಅಳಿಯಂದಿರೆಲ್ಲರೂ ಕೆಟ್ಟವರು, ಮಾವಂದಿರೆಲ್ಲರೂ ಒಳ್ಳೆಯವರು ಎಂದು ಕೆಲವರು ಹೇಳುತ್ತಾರೆ. ಇದು ಪಕ್ಷಪಾತದ ಮಾತು; ಇದರಲ್ಲಿ ನನಗೆ ನಂಬಿಕೆಯಿಲ್ಲ. ಮಾವ ಒಳ್ಳೆಯವನಾದರೆ ಅಳಿಯ ಕೆಟ್ಟವನು; ಅಳಿಯ ಸಾಧುವಾದರೆ ಮಾವ ಕೆಡುಕಿ—ಹೀಗೆ ಇರುತ್ತದೆ. ಅನೇಕ ವೇಳೆ ಇಬ್ಬರೂ ದುಷ್ಟರಾಗಿದ್ದರೂ ಇರಬಹುದು. ಆದರೆ ಇಬ್ಬರೂ ಒಳ್ಳೆಯವರಾಗಿರು ವುದನ್ನು ನೋಡುವುದೂ ಕುದುರೆಯ ಕೊಂಬನ್ನು ತರುವುದೂ ಒಂದೇ. ಒಂದು ವೇಳೆ ಇತರರಿಗೆ ಇಬ್ಬರೂ ಒಳ್ಳೆಯವರಾಗಿದ್ದರೂ, ತಮ್ಮೊಳಗೆ ಮಾತ್ರ ಒಬ್ಬನ ತಲೆಯನ್ನು ಕಂಡರೆ ಇನ್ನೊಬ್ಬನಿಗೆ ಆಗುವುದಿಲ್ಲ. ಇದು ಸೃಷ್ಟಿಯ ನಿಯಮವೆಂದು ತೋರುತ್ತದೆ. ಗೋ–ವ್ಯಾಘ್ರ, ಗಜ–ಸಿಂಹ, ತುರಗ–ಮಹಿಷ, ಈ ರೀತಿಯಾಗಿ ಜಾತಿವೈರಿಗಳ ಪಟ್ಟಿಯನ್ನು

ಕೊಡುವ ಒಂದು ಸಂಸ್ಕೃತಪದ್ಯವಿದೆ. ಅದನ್ನು ಬರೆದವರು ಬುದ್ಧಿವಂತರಾಗಿದ್ದರೆ ಶ್ವಶುರ–ಜಾಮಾತೃ ಎಂದು ಇನ್ನೊಂದು ವರ್ಗವನ್ನೂ ಅಲ್ಲಿ ಸೇರಿಸುತ್ತಿದ್ದರು. ಮದುವೆಗೆ ಮುಂಚೆ ಅಳಿಯನೂ ಮಾವನೂ ಪರಿಚಯಸ್ಥರಾಗಿ ಪ್ರೀತಿಯಿಂದಲೇ ಇದ್ದರೂ, ಅಥವಾ ಈಗ ಹೆಚ್ಚಾಗಿ ನಡೆಯುವಂತೆ ಅಪರಿಚಿತರಾಗಿಯೇ ಇದ್ದರೂ ಕಾಶೀಯಾತ್ರೆಯ ಸಮಯದಲ್ಲಿ ಮಾವನು ತನ್ನ ಕಣ್ಣೀರನ್ನು ಬೆರಸಿಯೇ ಅಳಿಯನ ಕಾಲನ್ನು ತೊಳೆಯುತ್ತಾನೆ. ಇದಕ್ಕೆ ಈಗಿನ ವರದಕ್ಷಿಣೆಯೇ ಅನೇಕ ಸಂದರ್ಭಗಳಲ್ಲಿ ಕಾರಣವೆನ್ನಬಹುದು; ಆದರೆ ಹಿಂದೆ ಅದು ಇರಲಿಲ್ಲವಷ್ಟೆ; ಈಗಲೂ ಕೆಲವು ಕಡೆಗಳಲ್ಲಿ ಇಲ್ಲವಷ್ಟೆ. ಹಾಗಾದರೆ ವೈರ ಮಾತ್ರ ಏಕೆ ಪೂರ್ವಕಾಲದಿಂದಲೂ ಇದ್ದೇ ಇದೆ?

ನಂಟರು ಎಂದರೆ ಸುಮ್ಮನೆ ಜನರು ಹಿಗ್ಗುತ್ತಾರಲ್ಲ, ಒಂದು ಸೋಜಿಗದ ಸಂಗತಿಯನ್ನು ಯಾರಾದರೂ ಆಲೋಚಿಸಿದ್ದೀರಾ? ನಿಮ್ಮ ನಂಟರಲ್ಲಿ ಎಷ್ಟು ಜನ ನಿಮ್ಮ ಸ್ನೇಹಿತರು? ಅಥವಾ ಆ ಪ್ರಶ್ನೆಯನ್ನೇ ಮಗುಚಿ ಕೇಳುವುದಾದರೆ ನಿಮ್ಮ ಸ್ನೇಹಿತರಲ್ಲಿ ಎಷ್ಟು ಜನ ನಿಮ್ಮ ನಂಟರು? ನಂಟನಾದವನು ಎಂದಿಗೂ ಸ್ನೇಹಿತ ನಾಗುವುದಿಲ್ಲ : ನಿಜವಾದ ಸ್ನೇಹವು ರಕ್ತಸಂಬಂಧವಿಲ್ಲದವನಲ್ಲಿಯೇ ಹುಟ್ಟುವುದು. ನಿಮ್ಮ ಪ್ರಿಯಮಿತ್ರನನ್ನು ಹೆಣ್ಣು ಕೊಟ್ಟೋ ತಂದೋ ನಂಟನನ್ನು ಮಾತ್ರ ಮಾಡಿಕೊಳ್ಳಬೇಡಿ. ಆ ದಿನವೇ ನಿಮ್ಮಿಬ್ಬರ ಸ್ನೇಹಕ್ಕೆ ನೀವು ಎಳ್ಳುನೀರು ಬಿಟ್ಟಹಾಗೆ. ಇದಕ್ಕೆ ಕಾರಣವುಂಟು. ಸ್ನೇಹದ ತಳಹದಿ ಪ್ರೇಮ, ಋಜುತ್ವ, ಬಾಂಧವ್ಯದ ತಳಹದಿ ಗೌರವ, ಬಿಗುಮಾನ. ಅದಕ್ಕೂ ಇದಕ್ಕೂ ಗಂಟುಬೀಳುವುದು ಹೇಗೆ? ಸ್ನೇಹಿತನ ಸಂಗಡ ಮುಚ್ಚು ಮರೆಯಿಲ್ಲದೆ ನಿಮ್ಮ ಅಂತರಂಗವನ್ನು ಬಿಚ್ಚಿ ಹೇಳುವಂತೆ ನಂಟನ ಸಂಗಡ ಹೇಳಲಾದೀತೆ? ಸ್ನೇಹಿತನೊಂದಿಗೆ ಸರಸವಾಡುವಂತೆ ನಂಟನೊಂದಿಗೆ ಆಡಲಾದೀತೆ? ಯಾವ ಘಳಿಗೆಗೆ ನಗೆ ಹೋಗಿ ಹೊಗೆಯಾಗುವುದೋ ಎಂಬ ಭೀತಿ.

ನಂಟರೆಂದರೆ ಯಾವಾಗಲೂ ಹೆದರಿಕೆ; ನಿಮ್ಮನ್ನು ಎಲ್ಲಿ ಆಡಿಕೊಳ್ಳುವರೋ ಎಂದು. ನಿಮ್ಮ ಹುಳುಕು ಯಾವುದೂ ಅವರಿಗೆ ಕಾಣಿಸದ ಹಾಗೆ ನೀವು ಬಲು ಎಚ್ಚರವಾಗಿರುತ್ತೀರಿ. ನಂಟರು ಮನೆಗೆ ಬಂದರೆ, ಹೊರಕ್ಕೇ ತೆಗೆಯದ ಜಮಖಾನವನ್ನು ಆ ಹೊತ್ತು ಹಾಸಬೇಕು. ಮಿಕ್ಕ ದಿನಗಳಲ್ಲಿ ಹರುಕು ಸೀರೆಯನ್ನು ಉಡುತ್ತಿದ್ದರೂ ಆ ದಿನ ದೊಡ್ಡಂಚಿನ ಸೀರೆಯನ್ನುಟ್ಟುಕೊಂಡೇ ನಿಮ್ಮ ಹೆಂಡತಿ ಊಟಕ್ಕೆ ಬಡಿಸಬೇಕು. ಮಾರನೆಯ ದಿನಕ್ಕೆ ಅಕ್ಕಿಯೇ ಇಲ್ಲದಿದ್ದರೂ, ಅಂಗಡಿಯಲ್ಲಿ ಸಾಲ ವಿಷದಂತೆ ಏರುತ್ತಿದ್ದರೂ, ಏನಾದರೂ ಮಾಡಿ ರವೆ, ಸಕ್ಕರೆ, ಕಾಫಿಪುಡಿ ಇವನ್ನೆಲ್ಲ ತಂದು ಅಚ್ಚುಕಟ್ಟಾಗಿ ಫಲಾಹಾರಕ್ಕೆ ಏರ್ಪಡಿಸಬೇಕು. "ಅಟ್ಟಡಿಗೆ ಅಳಿಯನಿಗೆ, ಇಟ್ಟ ನೀರು ಮಾವನಿಗೆ" ಎಂದು ಹಾಡು ಹೇಳುವ ಹಾಗೆ. ಆಮೇಲೆ ಗೊತ್ತೇ ಇದೆ : ". . . ಮುಂದೆ ಬರುವ ಪತ್ರದ ಸಾಲ ಮಗನಿಗೆ."

೧೯೨೮]

ತಾರೆಗಳು

"ತಟಿದ್ವಾ ತಾರಾ ವಾ ಕನಕಲತಿಕಾ ವಾ ಕಿಮಬಲಾ" ("ತನಿಮಿಂಚೊ ತಾರೆಯೋ ಕನಕ ಲತೆಯೋ ವನಿತೆಯೋ") ಎಂದು ಮುಗಿಯುವ ಪದ್ಯವೊಂದು ಸಂಸ್ಕೃತದಲ್ಲಿದೆ. ಅಬಲೆಯರನ್ನು ವರ್ಣಿಸುವ ಪದ್ಯಗಳು, ಕಾವ್ಯಗಳು ಸಂಸ್ಕೃತದಲ್ಲೂ ಅದರಿಂದ ಪುಷ್ಟಿಹೊಂದಿದ ದೇಶಭಾಷೆಗಳಲ್ಲೂ ಹೇರಳವಾಗಿ ಉಂಟು; ಈ ವಿಷಯವನ್ನು ಬಿಟ್ಟರೆ ಕವಿತೆಗೆ ಜೀವನವೇ ಸಾಗುವುದಿಲ್ಲವೋ ಎಂದು ಕೇಳುವಷ್ಟು ಮಟ್ಟಿಗೆ ಉಂಟು. ಆದರೆ ಅವುಗಳಲ್ಲಿ ಸಾಮಾನ್ಯವಾಗಿ ಕಾಣದಿರುವ ಒಂದು ಸೌಂದರ್ಯ ಈ ಪದ್ಯದಲ್ಲಿರುವಂತೆ ನನಗೆ ತೋರುತ್ತದೆ. ಪದ್ಯದ ವಿಷಯವಾಗಲಿ ಅದನ್ನು ನಿರೂಪಿಸುವ ರೀತಿಯಾಗಲಿ ಹೊಸದೇನೂ ಅಲ್ಲ. ತನ್ನ ಕಣ್ಣಮುಂದೆ ಹೊಳೆದ ಸುಂದರಿಯೊಬ್ಬಳನ್ನು ಕಂಡು—"ಇದು ಚಂದ್ರನೋ, ಪದ್ಮವೋ, ಕನ್ನಡಿಯೋ, ಅಥವಾ ಮುಖವೋ ಇವು ಕಮಲಗಳೋ, ಮೀನುಗಳೋ, ಮದನಬಾಣಗಳೋ, ಅಥವಾ ಕಣ್ಣುಗಳೋ" ಎಂದು ಮೊದಲಾಗಿ ಕೇಳುವ ಭ್ರಮೆ ಹಿಂದೆ ಅನೇಕರಿಗೆ ಹುಟ್ಟಿದೆ; ಮುಂದೆಯೂ ಹುಟ್ಟತಕ್ಕದ್ದೇ; ಅದರಲ್ಲೇನೂ ಅತಿಶಯವಿಲ್ಲ. ಈ ಪದ್ಯದ ಅತಿಶಯವೆಲ್ಲಾ ಅದರ ಕೊನೆಯ ಪಾದದಲ್ಲಿ ಅಡಗಿದೆ : "ಇದು ಮಿಂಚೋ, ತಾರೆಯೋ, ಬಂಗಾರದ ಬಳ್ಳಿಯೋ, ಅಥವಾ ಅಬಲೆಯೋ"—ಅಬಲೆಯನ್ನು ತಾರೆಯೆಂದು ಭ್ರಮಿಸಿದವನು ಈ ಕವಿಯೊಬ್ಬನೇ. ಎಂಥ ಸುಂದರವಾದ ಕಲ್ಪನೆ; ಎಷ್ಟು ಗಭೀರವಾದ ಹೋಲಿಕೆ!

ಪಶ್ಚಿಮಗಗನದಲ್ಲಿ ಸಂಜೆಗೆಂಪು ಒಂದೊಂದು ಸಲ ಬಲುಬೇಗ ಆರಿ ಹೋಗುತ್ತದೆ. ಮೇಘಗಳು ಯಾವಾಗಲೋ ಮರೆಯಾಗಿರುತ್ತವೆ. ಆಕಾಶದಲ್ಲೆಲ್ಲಾ ಶುಭ್ರನೀಲ; ಮುಳುಗಿದ ಸೂರ್ಯನ ಕಿರಣಶೇಷದ ಬೆಳಕು ಪೂರ್ಣವಾಗಿ ಅಳಿಯದ ಅಗಾಧವಾದ ನೀಲ. ಅದರಲ್ಲಿ ಕುದುರೆಯ ಮುಖದ ಮೇಲಿನ ಬಿಳಿಯ ಬೊಟ್ಟಿನಂತೆ ಒಂದೇ ಒಂದು ತಾರೆ ಮೂಡುತ್ತದೆ. ಆ ತಾರೆಯ ಮೇಲೆ ನಡುವ ನೋಟವನ್ನು ಸೆಳೆಯತಕ್ಕ ಬೇರೆ ಯಾವ ವಸ್ತುಶಕಲವೂ ಆ ಅನಂತಾಕಾಶದಲ್ಲಿ ಸುಳಿಯುವುದಿಲ್ಲ. ಹೊರಗೆ ಬರಲು ಹಿಂಜರಿಯುವ, ಗುಂಪಿನೊಳಗೆ ಮರೆಯಾಗುವ ಆ ಕಿರಿಯ ತಾರೆಯನ್ನು ಒಮ್ಮೆಯಾದರೂ ಲೋಕದ ಗಮನಕ್ಕೆ ತರಬೇಕೆಂದೇ ಮಿಕ್ಕೆಲ್ಲ ವಸ್ತುಗಳೂ ಆಕಾಶರಂಗದಿಂದ ಜಾರಿಬಿಟ್ಟಿರುವಂತೆ ತೋರುತ್ತದೆ. ನೀಲಿಯ ತೆರೆಯ ಮೇಲಿನ ಈ ಬಿಳಿಯ ಚುಕ್ಕೆ ಆಕಾರದಲ್ಲಿ ಕಿರಿದಾಗಿದ್ದರೂ ನಮ್ಮ ಅಂತಃಕರಣವನ್ನೆಲ್ಲಾ ತುಂಬಿಕೊಳ್ಳುತ್ತದೆ. ಇಂಥ ತಾರೆಗೆ ನಲ್ಲೆಯನ್ನು ಹೋಲಿಸುವುದು ಎಷ್ಟು ಮರ್ಮಜ್ಞವಾದ ಉಪಮಾನ! "ತಾರಾ ವಾ" ಎಂದು ಕೇಳಿದಾಗ ಮನಸ್ಸು ಹೇಗೆ ಅರಳುತ್ತದೆ!

ಹೀಗಿದ್ದರೂ, ನಮ್ಮ ಹಿಂದಿನ ಕವಿಗಳು ತಾರೆಗೆ ಬಹಳ ಅನ್ಯಾಯ ಮಾಡಿದ್ದಾರೆ. ಅದು ಅವರ ಎದುರಿಗೆ ಬಂದು ಚೀರಲಿಲ್ಲ; ಸಹಜ ಲಜ್ಜೆಯಿಂದ ಸ್ವಲ್ಪ ಹಿಂದೆ ನಿಂತಿತು. ಈ ಕಾರಣದಿಂದ ಅದನ್ನು ಅವರು ಉಪೇಕ್ಷಿಸಿಬಿಟ್ಟರು. ಎಲ್ಲೋ ಒಂದೊಂದು ಸಲ ರಮಣಿಯ ಕಣ್ಣುಗಳೊಂದಿಗೆ ಅದನ್ನು ತೂಗಿ ಅದರ ಕಣ್ಣೊರಸಿಬಿಟ್ಟರು. ಸಾಮಾನ್ಯವಾಗಿ, ತೋರಿದ ಕೂಡಲೇ ಬಯಲಾಗುವ ಮಿಂಚಿನ ಕ್ಷಣಿಕ ಸೌಂದರ್ಯದ ಕಡೆಗೇ ಅವರ ದೃಷ್ಟಿ; ಲೋಕದಲ್ಲೆಲ್ಲೂ ಇಲ್ಲದ ಬಂಗಾರದ ಬಳ್ಳಿಯ ಮೇಲೆಯೇ ಅವರ ಮೋಹ. ಸ್ಥಿರವಾದ ವಿಮಲವಾದ ದಿವ್ಯವಾದ ತಾರೆಯ ಹೋಲಿಕೆಯನ್ನು ಸ್ತ್ರೀದೇಹಕ್ಕೆ ಕೊಟ್ಟು ಅದನ್ನು ಪವಿತ್ರಗೊಳಿಸುವ ಬಗೆಯೇ ಅವರಿಗೆ ಹೊಳೆಯಲಿಲ್ಲ. ಒಬ್ಬ ಕವಿಗಾದರೂ ಅದು ಸ್ಫುರಿಸಿದ್ದು ಆಶ್ಚರ್ಯವೇ ಸರಿ.

ಹೋಲಿಕೆಯ ಮಾತು ಹೋಗಲಿ; ತಾರೆಯ, ತಾರೆಗಳ ಸೌಂದರ್ಯವನ್ನಾದರೂ ನಮ್ಮವರು ಗಮನಿಸಿದ್ದಾರೆಯೆ? ಇಲ್ಲ, ಇಲ್ಲ : "ಕಾ ನಿಶಾ ಶಶಿನಾವಿನಾ" (ಚಂದ್ರನಿಲ್ಲದೆ ಎಂಥ ರಾತ್ರಿ?)—ಬೆಳುದಿಂಗಳೇನೋ ಸೊಗಸು, ನಿಜ. ಆದರೆ ಅದೇ ಜೀವನದ ಸುಖಸರ್ವಸ್ವವೆ? ಚಂದ್ರನಿಗೆ ನಮ್ಮವರು ಅತಿಪ್ರಾಶಸ್ತ್ಯವನ್ನು ಕೊಟ್ಟು ಅವನನ್ನು ಕೊಬ್ಬಿಸಿಬಿಟ್ಟಿದ್ದಾರೆ. ಕಾವ್ಯಗಳ ತುಂಬ ಅವನ ಪ್ರತಾಪವೇ. ತಾರೆಯ ಮಾತನ್ನು ಒಂದು ವೇಳೆ ಎತ್ತಿದರೆ, ಚಂದ್ರನೊಡನೆ ಹೋಲಿಸಿ ಅದನ್ನು ಹೀಯಾಳಿಸುವುದಕ್ಕೆ; ಚಂದ್ರನು ತಾರಾ ಮಂಡಲಕ್ಕೆಲ್ಲಾ ಒಡೆಯನೆಂದು ಸಾರುವುದಕ್ಕೆ. ಅದರಿಂದಲೇ ಅವನಿಗೆ ಅಷ್ಟು ಅಹಂಕಾರ : ವಿರಹಿಗಳನ್ನು ನಿಷ್ಕರಣೆಯಿಂದ ಉರಿಸುತ್ತಾನೆ. ಅಂತೂ, ಚಂದ್ರನ ಮೇಲಿನ ಅಭಿಮಾನಾತಿರೇಕದಲ್ಲಿ ನಮ್ಮವರ ಪ್ರಜ್ಞೆಯೇ ಲುಪ್ತವಾಗಿಹೋಯಿತೇನೊ. ಇಲ್ಲದಿದ್ದರೆ, ಅಮಾವಾಸ್ಯೆಯ ರಾತ್ರಿಯಲ್ಲಿ ಅವರು ಆಕಾಶವನ್ನು ವೀಕ್ಷಿಸಿ ಅದರ ಸೌಂದರ್ಯವನ್ನು ಸವಿಯದೆ, ಹೊಗಳದೆ ಬಿಡುತ್ತಿದ್ದರೆ?

ರಾತ್ರಿಯಲ್ಲಿ ಆಕಾಶವನ್ನು ನಿರೀಕ್ಷಿಸುವುದು ಈಚೀಚೆಗೆ ಒಂದು ಅಪೂರ್ವ ಭೋಗವಾಗಿ ಪರಿಣಮಿಸುತ್ತಿದೆ. ವಿದ್ಯುದ್ದೀಪಗಳು ಬೆಳಗುವ ಪಟ್ಟಣಗಳಲ್ಲಂತೂ ಬೆಳುದಿಂಗಳ ಸುಖವನ್ನು ಅನುಭವಿಸುವುದೇ ಅಸಾಧ್ಯ; ಒಂದೊಂದು ಸಲ ದೀಪಗಳು ಥಟ್ಟನೆ ಆರಿಹೋದಾಗ ಹೊಸ ನಿಧಿ ಸಿಕ್ಕಿದಂತೆ ಮನಸ್ಸಿಗೆ ಅನ್ನಿಸುತ್ತದೆ. ಇನ್ನು ತಾರೆಗಳ ಮಾತೇಕೆ! ಅನೇಕರು ಅವುಗಳನ್ನು ಚೆನ್ನಾಗಿ ನೋಡಿದ್ದಾರೆಯೋ ಇಲ್ಲವೋ, ಅದೂ ಸಂದೇಹವೇ. ಅವುಗಳನ್ನು ಮನದಣಿಯ ನೋಡಬೇಕಾದರೆ ಈಗ ಹಳ್ಳಿಗಳಿಗೆ ಹೋಗಬೇಕು. ಅದರಲ್ಲೂ, ಮಾಳಿಗೆಮನೆಗಳಿರುವ ಹಳ್ಳಿಗಳಿಗೆ ಹೋಗಬೇಕು. ಬೇಸಗೆಯಲ್ಲಿ ಹಾಯಾಗಿ ಮನೆಯ ಮಾಳಿಗೆಯ ಮೇಲೆ ಅಂಗತ್ತನಾಗಿ ಮಲಗಿ ಅಮಾವಾಸ್ಯೆಯ ಆಕಾಶವನ್ನೆಲ್ಲಾ ಒಂದೇ ನೋಟದಲ್ಲಿ ನುಂಗಿಬಿಡುವ ಅದೃಷ್ಟ ಎಲ್ಲರಿಗೂ ಲಭಿಸುವುದಿಲ್ಲ. ಆ ನೋಟದಲ್ಲಿ ಏನು ವೈವಿಧ್ಯ, ಸ್ವಾರಸ್ಯ, ಏನು ಅದ್ಭುತ, ಏನು ವಿಭ್ರಮ! ಲೆಕ್ಕವಿಲ್ಲದಷ್ಟು ಬೆಳಕಿನ ಕಿಡಿಗಳು ಮಿನುಗಿ ಮಿನುಗಿ ಮಿನುಗುವುದನ್ನು ಎಷ್ಟು ಹೊತ್ತು ನೋಡಿದರೂ ತೃಪ್ತಿಯುಂಟಾದೀತೆ? ರಾತ್ರಿಯ ಬಹುಭಾಗ ಕಣ್ಣು ಮುಚ್ಚದೆಯೇ ಕಳೆದುಹೋಗುತ್ತದೆ. ಉತ್ತರದಲ್ಲಿ ಸಪ್ತರ್ಷಿಮಂಡಲದ "ಸ"ವೊತ್ತು ಗಡಿಯಾರದ ಘಂಟೆಯ ಮುಳ್ಳಿನಂತೆ ನಿಶ್ಚಲವಾಗಿ ತೋರುತ್ತಾ ಪರಿಭ್ರಮಿಸುತ್ತಿರುತ್ತದೆ. ಇತ್ತ ಪಶ್ಚಿಮದಲ್ಲಿ ಮೃಗಶಿರೆಯ ಮಂಡಲ ಮೆಲ್ಲಮೆಲ್ಲಗೆ ಬೆಟ್ಟಗಳ ತುದಿಗೆ ಇಳಿಯುತ್ತಿರುತ್ತದೆ. ನೆತ್ತಿಯ ಕಡೆ ತೇಜಸ್ಸಿನ ಪುಂಜ : ಬಿಳಿ ಮರಳ ದಿಣ್ಣೆಯಂತೆ ಗೋಚರಿಸುವ ಛಾಯಾ ಪಥ. ಎಲ್ಲೆಲ್ಲಿಯೂ ಹೂವೆರಚಿದಂತೆ ತಾರೆಗಳು; ಇಲ್ಲಿ ದಟ್ಟವಾಗಿ, ಅಲ್ಲಿ ವಿರಳವಾಗಿ, ಒಂದು ಕಣ್ಣುಕುಕ್ಕುವಂತೆ ಮಿರುಗಿ ಮತ್ತೊಂದು ಆಕಾಶದ ನೀಲದಲ್ಲಿ ಮಬ್ಬಾಗಿ ಕರಗಿ, ನೋಡುವವನ ಮುಗ್ಧಹೃದಯವನ್ನು ತಮ್ಮಲ್ಲಿಯೇ ಲಯಗೊಳಿಸುತ್ತವೆ. ವಿಶ್ವತೇಜಸ್ಸೇ ಅನಂತಾಕೃತಿಯನ್ನು ತಳೆದು ಪ್ರತ್ಯಕ್ಷವಾಗಿರುತ್ತದೆ. ಈ ದಿವ್ಯದರ್ಶನದ ಎದುರಿಗೆ ಮನುಷ್ಯನ ಕ್ಷುದ್ರ ಭಾವಗಳು ದಹಿಸಿಹೋಗುವುದರಲ್ಲಿ ಏನಾಶ್ಚರ್ಯ!

●

ಮನೆಗಳು

ಹೊಸದಾಗಿ ಕೆಲಸ ದೊರೆತು ಮೈಸೂರಿನಲ್ಲಿ ಸಂಸಾರವನ್ನು ಹೂಡಬೇಕಾಗಿ ಬಂದಾಗ ತುಂಬ ತೊಂದರೆಪಡಬೇಕಾಯಿತು. ಹಲವರ ಕಾಲನ್ನು ಕಟ್ಟದೆ, ಊರಿನಲ್ಲಿ ಅನ್ನಕ್ಕೆ ದಂಡವಾಗಿ ತಂದೆಯ ಕಣ್ಣಿಗೆ ಶೂಲವಾಗಿ ಕುಳಿತುಕೊಳ್ಳದೆ ಸ್ವತಂತ್ರ ಜೀವನಕ್ಕೆ ಒಂದು ಆಧಾರ ಈ ಕಷ್ಟದ ಕಾಲದಲ್ಲಿ ಇಷ್ಟು ಬೇಗ ಸಿಕ್ಕಿತಲ್ಲಾ ಎಂದು ಸಂತೋಷಪಡುವುದಕ್ಕೇ ಅವಕಾಶವಿಲ್ಲದೆ ಹೋಯಿತು. ಅದುವರೆಗೆ ಹಾಸ್ಟೆಲಿನಲ್ಲಿ ಇದ್ದುಕೊಂಡು, ಬೇಕಾದಾಗಲೆಲ್ಲಾ ಊರಿಗೆ ಕಾಗದ ಬರೆದು ಹಣ ತರಿಸಿಕೊಂಡು ಹಾಯಾಗಿ ಕಾಲಕಳೆಯುವುದೇ ಅಭ್ಯಾಸವಾಗಿತ್ತು. ಕೆಲಸವಾಯಿತು; ಸ್ವಂತ ಸಂಪಾದನೆಗೆ ಪ್ರಾರಂಭವಾಯಿತು; ಆತಂಕವನ್ನೂ ಸಂಪಾದಿಸಿಕೊಂಡ ದ್ದಾಯಿತು. ಅವುಗಳಲ್ಲಿ ಮೊದಲನೆಯದೇ ಮನೆ ಹುಡುಕುವ ಆತಂಕ. ಹೋದಕೂಡಲೆ ಮನೆ ಎಲ್ಲಿ ಸಿಕ್ಕುತ್ತದೆ? ಲಕ್ಷಣವಾಗಿ ಅಚ್ಚುಕಟ್ಟಾಗಿ ಅನುಕೂಲವಾಗಿ ಬಾಡಿಗೆ ಸುಲಭ ಇರಬೇಕೋ ಬೇಡವೋ? "ಅಡಿಗೆ ಮನೆಯಲ್ಲಿ ನಲ್ಲಿ ಇರುವಂಥ ಒಂದು ಮನೆ ಮಾಡಪ್ಪ; ಇಲ್ಲವಾದರೆ ತುಂಬ ತೊಂದರೆ" ಎಂದು ನಮ್ಮ ಅಜ್ಜಿ ಬೇರೆ ಹೇಳಿದ್ದರು. ಆದ್ದರಿಂದ, "ಸದ್ಯಕ್ಕೆ ಹೋಟಲಿನಲ್ಲಿ ಇದ್ದುಕೊಂಡು, ಆದಷ್ಟು ಬೇಗ ಒಂದು ಮನೆಯನ್ನು ಗೊತ್ತುಮಾಡಿ ಎಲ್ಲರನ್ನೂ ಕರಸಿಕೊಳ್ಳುತ್ತೇನೆ" ಎಂದು —ಮುಖ್ಯವಾಗಿ ಕುಟುಂಬಕ್ಕೆ—ಭರವಸೆ ಹೇಳಿ ಅವರನ್ನೆಲ್ಲ ಊರಲ್ಲೇ ಬಿಟ್ಟುಬಂದು ನಾಲ್ಕು ದಿನ

ಹಿಂದಿನ ಸ್ವತಂತ್ರ ಜೀವನವನ್ನೇ ಮುಂದುವರಿಸಲು ಪ್ರಯತ್ನಪಟ್ಟದ್ದಾಯಿತು. ಆದರೆ ಆ ಸ್ವರ್ಗದಿಂದ ಬಲುಬೇಗ ಚ್ಯುತಿಯೊದಗಬೇಕೆ? ಊರಿನಿಂದ ಕಾಗದದ ಮೇಲೆ ಕಾಗದದ ಸುರಿಮಳೆ! ಇನ್ನೊಂದು ಕಾಗದ ಬರುವುದರೊಳಗೆ ಕಾಗದ ಬರೆಯತಕ್ಕವರೇ ತಲೆಯಮೇಲೆ ಇಳಿದುಬಿಟ್ಟಾರೆಂಬ ಭೀತಿಯಿಂದ, ಮನಸ್ಸಿಲ್ಲದ ಸ್ನೇಹಿತರನ್ನು ಕಾಫಿಯ ಲಂಚಕೊಟ್ಟು ಜೊತೆಯಲ್ಲಿ ಕಟ್ಟಿಕೊಂಡು ಬೀದಿ ಬೀದಿ ಅಲೆಯುವುದಕ್ಕೆ ಇನ್ನು ಹೊರಡಲೇ ಬೇಕಾಯಿತು.

ಮೈಸೂರಿನಲ್ಲಿ ಮನೆ ಸಿಕ್ಕುವುದು ಕಷ್ಟ ಎಂದು ಎಲ್ಲರಿಗೂ ಗೊತ್ತು. ಆ ಮಾತು ಸಾಮಾನ್ಯವಾಗಿ ನಿಜವೆಂದು ನನಗೂ ಗೊತ್ತು; ಆದರೆ ಪ್ರಯತ್ನ ಮಾಡಿದರೆ ಒಂದು ಒಳ್ಳೆಯ ಮನೆಯನ್ನು ದೊರಕಿಸುವುದು ಅಸಾಧ್ಯವಲ್ಲವೆಂದು ಒಳಗೊಳಗೇ ಒಂದು ಧೈರ್ಯಧ್ವನಿ ಮೊಳಗುತ್ತಿತ್ತು. ಆದರೆ ಅದು ಈಗ ಹುಸಿ ನೆಚ್ಚಿಕೆಯಾಗಿ ಪರಿಣಮಿಸಿತು. ಒಳ್ಳೆಯ ಮನೆಗಳಿಗೆ ಮನೆಯನ್ನೇ ಮಾರಿ ತೆರಬೇಕಾದಷ್ಟು ಬಾಡಿಗೆ. ನಮ್ಮ ಹವಣಿನ ಬಾಡಿಗೆಗೆ ಸಿಕ್ಕುವ ಮನೆ ಮನೆಯೆನ್ನಿಸಿಕೊಳ್ಳುವುದಕ್ಕೆ ಅರ್ಹವಲ್ಲ, ಅಲೆದಲೆದು ಸಾಕಾಯಿತು. ರಾಜಬೀದಿಗಳನ್ನು ನಿಟ್ಟುಸಿರುಬಿಟ್ಟು ಬಿಟ್ಟು ಓಣಿಸಂದಿಗಳಲ್ಲಿ ಆಗ ಅಲೆದೆವು; ವಿಸ್ತರಣಗಳಲ್ಲಿ ವಾಸಮಾಡುವ ಆಸೆಯನ್ನು ತೊರೆದು, ಅನಿವಾರ್ಯವಾದ ಹಳೆಯ ಊರನ್ನೇ ಆಶ್ರಯಿಸಿದೆವು. ಆದರೂ ಏನು; ದುರದೃಷ್ಟ ಹೋದಹೋದಲ್ಲಿಗೆ ಬೆನ್ನಟ್ಟಿ ಬಂದಿತು. ಕಡೆಗೆ ಸಿಕ್ಕಿದ್ದು ಒಂದು ಒಳಸಂಸಾರದ ಮನೆ. ಅದರಲ್ಲಿ ಒಂದೇ ನಲ್ಲಿ. (ಸ್ನಾನದ ಮನೆಗೆ ಬೇರೆಯ ನಲ್ಲಿ ಇಲ್ಲ. ಇನ್ನು ಅಡಿಗೆಮನೆಯ ಮಾತೇಕೆ?) ಆ ನಲ್ಲಿಗೆ ನಾಲ್ಕು ಕುಟುಂಬದವರು ಹಕ್ಕುದಾರರು; ಅವರಲ್ಲಿ ಇಬ್ಬರು ಜಗಳಗಂಟಿಗರು. ದೀಪವಿಲ್ಲ— ಮೈಸೂರು ಪಟ್ಟಣದ ಮಾತು ಹಾಗಿರಲಿ, ಬೆಟ್ಟಗುಡ್ಡದ ಮೇಲೆಲ್ಲಾ ವಿದ್ಯುಚ್ಛಕ್ತಿಯ ಬೆಳಕು ಚೆಲ್ಲಿದ್ದರೂ ನಮ್ಮ ಕೋಣೆಯಲ್ಲಿ ಮಿಣುಕತಕ್ಕದ್ದು ಸೀಮೆಯೆಣ್ಣೆಯ ಕಾಡಿಗೆದೀಪವೇ. ಅಡಿಗೆ ಮನೆಯಲ್ಲಿ ಕಗ್ಗತ್ತಲೆ. ಸ್ನಾನದ ಮನೆಯಲ್ಲಿ ಹೊಗೆ ಸುತ್ತಿಕೊಂಡರೆ ಹೊರಕ್ಕೆ ಬರಲು ದಾರಿಯೇ ತೋರುವುದಿಲ್ಲ. ಮುಂದೆ ಅಂಗಳವಿಲ್ಲ; ಹಿಂದೆ ಹಿತ್ತಿಲಿಲ್ಲ. ಸದ್ಯಕ್ಕೆ ನಮಗೆ ದೊರೆತ ಭಾಗ ಕಕ್ಕಸದ ಮಗ್ಗುಲಲ್ಲೇ ಇರಲಿಲ್ಲವಲ್ಲ; ಅಷ್ಟೇ ನಮ್ಮ ಪುಣ್ಯ. ಇನ್ನು ಆ ಕಕ್ಕಸವೋ! ಆ ಭೂಲೋಕದ ನರಕವನ್ನು ಅನುಭವಿಸಿದ್ದೇ ಸಾಕಾಗಿದೆ, ಜೊತೆಗೆ ಅದರ ವರ್ಣನೆಯನ್ನೂ ಸಹಿಸುವುದು ಅಸಾಧ್ಯ.

ನಮ್ಮ ನಗರಗಳಲ್ಲಿ ದಿನದಿನವೂ ಹೊಸಮನೆಗಳು ಏಳುತ್ತಿವೆ. ಮೊದಲು ಹೊಲವಾಗಿದ್ದು, ಕಾಡಾಗಿದ್ದು ಇಲಿಗೆದ್ದಲುಗಳಿಗೆ ಬೀಡಾಗಿದ್ದ ಪ್ರದೇಶಗಳೆಲ್ಲಾ ಈಗ ಮನುಷ್ಯರ ವಸತಿಗಳಾಗುತ್ತಿವೆ. ನಿವೇಶನಗಳ ಬೆಲೆ ಅಲ್ಲಲ್ಲಿ ಏರಿದರೂ ಮನೆಗಳ ಬೆಲೆ ಇಳಿಯುತ್ತಿದೆ ಎಂದು ಬಲ್ಲವರು ಆಡಿಕೊಳ್ಳುತ್ತಿದ್ದಾರೆ; ಮನೆ ಕಟ್ಟಿಸುವುದಕ್ಕಿಂತಲೂ ಹಣವನ್ನು ಬಡ್ಡಿಗೆ ಕೊಡುವುದೇ ಲಾಭಕರವೆಂದು ತೀರ್ಮಾನಿಸುತ್ತಿದ್ದಾರೆ. ಹಾಗೆ ಮನೆಗಳ ಬೆಲೆ ಕಡಿಮೆಯಾದರೆ ಬಾಡಿಗೆಯೂ ಕಡಿಮೆಯಾಗಬೇಡವೆ? ಆದರೆ ಕಂಡ

ಹಾಗೆ ಅದು ಏರುತ್ತದೆಯೇ ಹೊರತು ಕಡಮೆಯಾದದ್ದನ್ನಂತೂ ಎಲ್ಲಿಯೂ ಕಾಣಲಿಲ್ಲ; ಕೇಳಲೂ ಇಲ್ಲ. ಬಹುಶಃ ಮನೆಗಳ ಬೆಲೆ ಕಡಮೆಯಾದದ್ದರಿಂದಲೇ ಬಾಡಿಗೆಯನ್ನಾದರೂ ಹೆಚ್ಚಿಸಿ ಸಂಪಾದಿಸೋಣವೆಂದು ಮಾಲೀಕರು ಈ ಉಪಾಯ ಹೂಡಿದ್ದಾರೆಯೋ ಏನೋ. ಅಂತೂ ಅವರಿಗೆ ಕರುಣೆಯಿಲ್ಲ; ನಮಗೆ ಗತಿಯಲ್ಲ. ಈ ದಿನ, "ಮನೆಗೆ ಹೊಸದಾಗಿ ನಲ್ಲಿ ಇಡಿಸಿದೆವು; ಆದ್ದರಿಂದ ಬಾಡಿಗೆ ಹೆಚ್ಚಿಸಬೇಕಾಯಿತು" ಎಂದೂ, ನಾಳೆಯ ದಿನ, "ಮನೆಗೆ ಬಣ್ಣ ಹಚ್ಚಿಸಿದ್ದೇವೆ; ಹೆಚ್ಚಾಗಿ ಬಾಡಿಗೆ ಕೊಡಬೇಕು" ಎಂದೂ, ನಾಡಿದ್ದು, "ಮನೆಗೆ ಎಲೆಕ್ಟ್ರಿಕ್ ದೀಪ ಹಾಕಿಸಬೇಕೆಂದಿದ್ದೇವೆ; ನೀವು ಈಗ ಕೊಡುವ ಬಾಡಿಗೆ ಅದಕ್ಕೆ ಸಾಲದು" ಎಂದೂ ಹೇಳಿ ಕಿತ್ತುಕೊಳ್ಳುತ್ತಲೇ ಇದ್ದಾರೆ. ನಾವೂ ಅವರ ಕೈಗೆ ಸಿಕ್ಕಿ, ಇರುವುದಕ್ಕೆ ಇಷ್ಟವಿಲ್ಲದೆ ಬಿಡುವುದಕ್ಕೆ ಅನುಕೂಲವಿಲ್ಲದೆ, ಅಡಿಗೆಗೆ ತರಕಾರಿಯನ್ನು ತಪ್ಪಿಸಿ ಮಕ್ಕಳಿಗೆ ಹಾಲನ್ನು ಕುಗ್ಗಿಸಿ, ಅವರು ಕೇಳಿಕೇಳಿದಷ್ಟು ಬಾಡಿಗೆಯನ್ನು ತೆರುತ್ತಲೇ ಇದ್ದೇವೆ. ಈ ಸುಲಿಗೆ ಎಲ್ಲಿಗೆ ನಿಲ್ಲುತ್ತದೋ, ಎಂದಿಗೆ ಮುಗಿಯುತ್ತದೋ! ಸದ್ಯಕ್ಕೆ, "ಮನೆಯನ್ನು ಇದ್ದ ಸ್ಥಿತಿಯಲ್ಲೇ ಬಿಟ್ಟಿದ್ದೇವೆ; ಅದಕ್ಕಾಗಿ ಹೆಚ್ಚು ಬಾಡಿಗೆ ಕೊಡಿ" ಎಂದು ನಮ್ಮನ್ನು ಇದುವರೆಗೆ ಯಾರೂ ಪೀಡಿಸಿಲ್ಲ. ಆ ಅನುಭವವೂ ಹಲವರಿಗೆ ಒದಗಿರಬಹುದು.

ಹೋಗಲಿ; ಬಾಡಿಗೆಗಾಗಿಯೇ ಮನೆಯನ್ನು ಕಟ್ಟಿಸಿರತಕ್ಕವರಿಗೆ ಮನೆ ಚೆನ್ನಾಗಿರಬೇಕೆಂಬುದರ ಅಗತ್ಯವಿಲ್ಲ. ಹಣವನ್ನು ಸುಲಿಯುವುದೇ ಅವರ ಕೆಲಸ. ಅವರ ಮನೆಗಳಲ್ಲಿ ವಾಸಮಾಡತಕ್ಕ ನಾವೂ ಇದನ್ನರಿತು ಮನಸ್ಸನ್ನು ಹತೋಟಿಗೆ ತಂದುಕೊಳ್ಳುತ್ತಿರುತ್ತೇವೆ. ಒಂದು ವೇಳೆ ಬಹಳ ಬೇಸರವಾದರೆ ಈ ಮನೆಯನ್ನು ಬಿಟ್ಟು ಮತ್ತೊಂದಕ್ಕೆ ಹೋಗುತ್ತೇವೆ. ನಮಗೇನು ಕಡಮೆ? ಬಾಡಿಗೆ ಕೊಡಲು ಸಿದ್ಧವಾಗಿದ್ದರೆ ಊರ ಮನೆಗಳೆಲ್ಲಾ ನಮ್ಮವೇ. ನಮಗಿಂತಲೂ ಶೋಚನೀಯವಾದ ಸ್ಥಿತಿ ಸ್ವಂತದ ಮನೆಯಲ್ಲಿ ವಾಸಮಾಡತಕ್ಕ ಹಲವರದು. ಅವರಲ್ಲೂ ದುರದೃಷ್ಟವಂತರೇ ಹೆಚ್ಚು. ಈ "ಸ್ವಂತದ ಮನೆ" ಅವರ ಪಾಲಿಗೆ ಬಂದ ದುಃಖಗಳಲ್ಲಿ ಒಂದು. ತಂದೆ ಸಾಲವನ್ನು ಮಗನ ತಲೆಗೆ ಕಟ್ಟಿ ಹೋದಂತೆಯೇ ಈ ಮನೆಯನ್ನೂ ಕಟ್ಟಿಹೋಗಿದ್ದಾನೆ. ಆ ಸಾಲವನ್ನು ಎಷ್ಟೋ ಕರೆಕರೆಪಟ್ಟು ಹೊರಬೇಕಾಗಿರುವಂತೆಯೇ ಈ ಮನೆಯಲ್ಲೂ ಪಡಬಾರದ ಜುಗುಪ್ಸೆಪಟ್ಟು ವಾಸಮಾಡಬೇಕು. ಈ ಅಪ್ಪ ಹಾಕಿದ ಆಲದ ಮರದಲ್ಲಿ ನೇಣು ಹಾಕಿಕೊಳ್ಳದಿದ್ದರೆ ಮಾರ್ಗವೇ ಇಲ್ಲ. ತನ್ನದೇ ಮನೆಯಿರುವಾಗ ಬೇರೆ ಕಡೆಗೆ ಹೋಗಿ ಬಾಡಿಗೆ ತೆತ್ತು ಕೊಡಿಕೊಂಡಿರುವುದು ಯೋಗ್ಯವೆ. ಸಾಧ್ಯವೆ?–ಆದರೆ ಈ "ಸ್ವಂತದ ಮನೆ"ಯ ಅನುಕೂಲಗಳನ್ನು ಸ್ವಲ್ಪ ನೋಡಿ. ಅದು ಇರುವುದು ಊರಿನ ಪ್ರಾಚೀನತಮ ಭಾಗದಲ್ಲಿ; ತಗ್ಗಿನ ಕಿಷ್ಕಿಂಧೆಯಲ್ಲಿ, ರೋಗದ ತವರುಮನೆಯಲ್ಲಿ. ಪ್ಲೇಗು ಹತ್ತಿರದ ನಂಟನಂತೆ ಊರಿಗೆ ಬಂದ ಕೂಡಲೇ ಮೊದಲು ಇಲ್ಲಿಗೆ ದರ್ಶನ ಕೊಟ್ಟರೆ, ಮಲೇರಿಯಾ ಜ್ವರ ಮನೆಮಂದಿಯಲ್ಲಿ ಒಬ್ಬನಂತೆ ನಿತ್ಯವೂ ಜೊತೆಯಲ್ಲೇ ವಾಸಮಾಡುತ್ತದೆ. ಬೀದಿ ಕೊಚ್ಚೆ; ಇಕ್ಕಟ್ಟು. ಅಲ್ಲಿ ತಿರುಗಾಡಬೇಕಾದರೆ ಮೂಗಿಗೆ ಕರವಸ್ತ್ರವನ್ನು ಹಿಡಿದುಕೊಂಡೇ ಇರಬೇಕು.

ಮಳೆ ಬಂದಾಗ ಬೀದಿಯ ನೀರು ಚರಂಡಿಯೊಳಗೆ ಹರಿಯುವ ಬದಲು—ಚರಂಡಿ ಇದ್ದರೆ ತಾನೆ ಅದರಲ್ಲಿ ಹರಿಯುವುದು—ಮನೆಯೊಳಕ್ಕೇ ನುಗ್ಗಲು ಸಾಹಸ ಮಾಡುತ್ತದೆ. ಹಿಂದೆ ಯಾವಾಗಲೋ ಕಟ್ಟಿದ ಮನೆ : ಚೇಳುಗಳೂ ತಗುಣೆಗಳೂ ನಿರ್ಭಯವಾಗಿ ಹಗಲು ಹೊತ್ತಿನಲ್ಲೇ ಸಂಚರಿಸುತ್ತವೆ. ಮಳೆಗಾಲದಲ್ಲಿ ರಾತ್ರಿಯ ಹೊತ್ತು ಪುನಃ ಪುನಃ ಏಳದಂತೆ ಮೈಯೂರಬೇಕಾದರೆ—ನಿದ್ರಿಸುವುದೆಲ್ಲಿ ಬಂತು—ಒಂದು ಜಾಗವನ್ನು ಕಂಡುಕೊಳ್ಳುವುದೇ ದೊಡ್ಡ ಸಮಸ್ಯೆ. ಅದೆಲ್ಲವನ್ನೂ ಸಹಿಸೋಣ. ಯಾರಾದರೂ ನಮ್ಮನ್ನು ನೋಡುವುದಕ್ಕೆಂದು ಬಂದರೆ ಅವರಿಗೆ ಮುಖ ತೋರಿಸುವುದು ಹೇಗೆ, ಎಲ್ಲಿ? ಆ ಕೊಠಡಿ ಎನಿಸಿಕೊಂಡದ್ದೋ, ಅದರಲ್ಲಿ ತಲೆಯೆತ್ತಿ ನಿಂತುಕೊಳ್ಳುವಂತೆಯೇ ಇಲ್ಲ. ಸೆರೆಮನೆಯ ಕಿಟಕಿಗಿಂತಲೂ ಅವಲಕ್ಷಣವಾದ ಒಂದು ಕಂಡಿಯಿಂದ ಬೆಳಕೋ ಗಾಳಿಯೋ–ಈ ಮನೆಯ ತನಕ ಬೀದಿ ಅದನ್ನು ಹಾಯಗೊಟ್ಟಿದ್ದರೆ—ಒಳಕ್ಕೆ ನುಸುಳಬೇಕು. ಮನೆಗೆ ಬಂದವರು ಪಡುವ ಸಂಕೋಚಕ್ಕಿಂತಲೂ ಮನೆಯವರು ಪಟ್ಟುಕೊಳ್ಳುವ ಮನಃಕ್ಲೇಶವೇ ಹೆಚ್ಚು. ಬಾಡಿಗೆ ಮನೆಯಾಗಿದ್ದರೆ, "ಏನು ಮಾಡೋಣ, ಈ ಊರಲ್ಲಿ ಎಷ್ಟು ಬಾಡಿಗೆ ಕೊಟ್ಟರೂ ಲಕ್ಷಣವಾದ ಮನೆಯೇ ಸಿಕ್ಕುವುದಿಲ್ಲ. ಇದಕ್ಕಿಂತ ಅನ್ಯಾಯದ ಮನೆ ಉಂಟೆ!" ಎಂದು ಆತ್ಮಕ್ಲೇಶವನ್ನೇ ಆತ್ಮಾನುಕಂಪವಾಗಿ ಪಲ್ಲಟಿಸಿಕೊಂಡು ಮನಸ್ಸಿನ ವ್ಯಥೆಯನ್ನೆಲ್ಲಾ ಮನೆಯ ಮಾಲೀಕನ ಮೇಲೆ ರೋಷವಾಗಿ ತಿರುಗಿಸ ಬಹುದಾಗಿತ್ತು. ಈಗ ಆ ತೃಪ್ತಿಗೂ ಅವಕಾಶವಿಲ್ಲ.

ಇದನ್ನೆಲ್ಲಾ ನೋಡಿ ನೋಡಿ, "ಮನೆ ಕಟ್ಟುವವರಿಗೆ ಹಣವನ್ನು ಕೊಟ್ಟ ಹಾಗೆ ಬುದ್ಧಿಯನ್ನೇಕೆ ದೇವರು ಅನುಗ್ರಹಿಸಲಿಲ್ಲ" ಎಂದು ಹಲವು ಬಾರಿ ಮನಸ್ಸಿನಲ್ಲಿ ಪ್ರಶ್ನೆ ಮೂಡಿದೆ. ಮನೆ ವಾಸಕ್ಕೆ ಹಿತಕರವಾಗಿಬೇಕು, ನೋಟಕ್ಕೆ ಅಂದವಾಗಿರಬೇಕು ಎಂಬ ಸರಳ ತತ್ತ್ವವೇ ಇವರಿಗೆ ಹೊಳೆದಂತೆ ತೋರುವುದಿಲ್ಲ. ಹಣವನ್ನು ನೀರಿನಂತೆ ಚೆಲ್ಲಿ ಕಟ್ಟಿಸುತ್ತಾರೆ. ಕಟ್ಟಿಸಿದ ಮೇಲೆ ಅದು ಮನೆಯೂ ಆಗುವುದಿಲ್ಲ, ಗುಹೆಯೂ ಆಗುವುದಿಲ್ಲ. ಸಾವಿರಾರು ರೂಪಾಯಿಗಳನ್ನು ಸುರಿದು ಕಟ್ಟಿದ ಮನೆ ಎಂಬುದೊಂದೇ ಮಾಲೀಕನಿಗೆ ಅಭಿಮಾನ. ಯಾವ ಮನೆಯನ್ನು ನೋಡಿದರೂ ಸಾಧಾರಣವಾಗಿ 'ವಿಶ್ವಗುಣಾದರ್ಶ'ದ ಕೃಶಾನುವಿನಂತೆಯೇ ವರ್ತಿಸುವ ಹಾಗಾಗುತ್ತದೆ; ಎತ್ತ ತಿರುಗಿದರೂ ದೋಷದ ಕುಪ್ಪೆಗಳೇ ಕಣ್ಣಿಗೆ ಬೀಳುತ್ತವೆ. ಲೋಕದಲ್ಲಿ ಎಷ್ಟು ಮಂದಿ ಇಲ್ಲ : ಇದ್ದುದರಲ್ಲಿಯೇ ತೃಪ್ತಿಹೊಂದಿ, ಯಾವುದನ್ನೂ ಮನಸ್ಸಿಗೆ ಹತ್ತಿಸಿಕೊಳ್ಳದೆ ಹೇಗೋ ಹಾಗೆ ಬಾಳಿಕೊಂಡು ಹಾಯಾಗಿ ಕಾಲಹಾಕುವುದಿಲ್ಲವೆ? ಈ ಅಲ್ಪತೃಪ್ತಿ ನಮಗೇಕೆ ಬರಬಾರದು? ಯಾವ ಮನೆಯಲ್ಲೂ ಅದರ ಹುಳುಕುಗಳೇ ಎದ್ದು ಕಾಣಿಸುತ್ತವೆಯಲ್ಲ! ಮಹಡಿಯಿಲ್ಲದ ಮನೆಯನ್ನು ಕಂಡರೆ—ಇದು ಮನೆಯಲ್ಲಿ, ಸೆರೆಮನೆ. ಮಹಡಿಯ ಮನೆಯನ್ನು ಕಂಡರೆ—ಇದಕ್ಕೆ ಬಿಸಿಲುಮಚ್ಚೇ ಇಲ್ಲ, ಈ ಸಂಪತ್ತಿಗೆ ಮಹಡಿಯೇತಕ್ಕೆ? ಒಂದು ಮನೆಗೆ ಮುಂದುಗಡೆ ಅಂಗಳ ಸಾಲದು; ಮತ್ತೊಂದಕ್ಕೆ ಹಿಂದುಗಡೆ ಚಾವಣಿ ಬಲು ತಗ್ಗು. ಹೀಗೆಯೇ. ಕೊನೆಯಿಲ್ಲ ಮೊದಲಿಲ್ಲ.

ಆದರೆ ಕೆಲವು ಮನೆಗಳುಂಟು. ಅವುಗಳಲ್ಲಿ ಒಂದೆರಡು ಕುಂದುಗಳಿದ್ದರೂ ಅವುಗಳ ಸೌಂದರ್ಯದಲ್ಲಿ ಆ ದೋಷಗಳು ಲೀನವಾಗಿ ಹೋಗಿವೆ. ಬೀದಿಯಲ್ಲಿ ಹೋಗುವಾಗ ಎಷ್ಟೋ ಸಲ ಜನದ ಕಡೆ ನೋಡುವುದಕ್ಕಿಂತ ಹೆಚ್ಚಾಗಿ ಇಂಥ ಮನೆಯ ಕಡೆಗೇ ಕಣ್ಣು ಹರಿಯುತ್ತದೆ. ಅದರ ಅನುಕೂಲತೆಗಳನ್ನು ಒಟ್ಟೊಟ್ಟಾಗಿ, ಅಂಶಅಂಶವಾಗಿ ಮನಸ್ಸು ಸವಿದು ಆ ಮನೆಯಲ್ಲಿ ವಾಸಮಾಡಬಹುದಾಗಿದ್ದರೆ ಹೇಗೆ ಸುಖಪಡಬಹುದಾಗಿತ್ತು ಎಂದುಕೊಂಡಿದೆ. ಕಡೆಗೆ, ಈ ಮನೆಯ ವಾಸ ಹಣೆಯಲ್ಲಿ ಬರೆಯದಿದ್ದರೆ ಹೋಗಲಿ; ನಾನಿರುವ ಬಿಲದ ಎದುರಿಗಾದರೂ ಇದು ಇರಬಾರದಾಗಿತ್ತೆ; ಈಗ ಕೊಡುತ್ತಿರುವ ದುಬಾರಿ ಬಾಡಿಗೆಯನ್ನು ಆಗ ಈ ಮನೆಯ ಸಂತತದರ್ಶನದ ಸಂತೋಷಕ್ಕೋಸ್ಕರ ಧಾರಾಳವಾಗಿ ಕೊಡಬಹುದಾಗಿತ್ತು—ಎನ್ನಿಸಿರುವುದೂ ಉಂಟು. ಆದರೆ ಹಾಗಾಗದೆ ಇರುವುದೇ ಒಂದು ಪಕ್ಷಕ್ಕೆ ಮೇಲು. ಈಗ ಬೀದಿಯಲ್ಲಿ ಒಂದು ರಮ್ಯವಾದ ಮನೆಯನ್ನು ಕಂಡರೇ ನಾಲ್ಕು ನಿಮಿಷ ಅದನ್ನು ದಿಟ್ಟಿಸುತ್ತಾ ನಿಂತುಕೊಳ್ಳುವ ಈ ಪ್ರಾಣಿಗೆ, ಆಗ ಹಗಲೂ ಇರುಳೂ ನೋಡಿ ನೋಡಿ ಹುಚ್ಚೇ ಹಿಡಿದುಬಿಡುತ್ತಿತ್ತೋ ಏನೋ; ಆ ಮನೆಯಲ್ಲಿ ವಾಸಮಾಡುವ ಅದೃಷ್ಟ ತನಗಿಲ್ಲವೆಂದು ಮಿತಿಮೀರಿದ ಅಸೂಯೆಯೇ ಜನಿಸುತ್ತಿತ್ತೋ ಏನೋ. ಆದ್ದರಿಂದಲೇ ಕೆಟ್ಟಮನೆಗಳ ಸಾಲಿನಲ್ಲಿ ಬಹುಶಃ ಲಕ್ಷಣವಾದ ಮನೆಗಳಿರುವುದಿಲ್ಲವೆಂದು ತೋರುತ್ತದೆ; ಒಂದು ವೇಳೆ ಇದ್ದರೂ, ಮಾಲೀಕನ ಅಭಿರುಚಿಯ ಸುದೈವದಿಂದ ಅದಕ್ಕೆ ಕಣ್ಣಿಗೆ ಬಡಿಯುವಂಥ ಬಣ್ಣವೋ, ವಿಕಾರವಾದ ಹೊರಮನೆ ("ಔಟ್-ಹೌಸ್") ಗಳೋ ಇದ್ದು ಮನೆ ಬೀದಿಗೆ ಭೂಷಣವಾಗುವುದಕ್ಕಿಂತ ದೂಷಣವಾಗಿರುತ್ತದೆ.

ಒಳ್ಳೆಯ ಮನೆಯಲ್ಲಿ ವಾಸಮಾಡಬೇಕೆಂಬ ಆಸೆ ಯಾರಿಗಿಲ್ಲ? ನನಗಂತೂ ಈ ಆಸೆಯನ್ನು ದೇವರು ನನ್ನ ಪಾಲಿಗೆ ಬರಬೇಕಾದದ್ದಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ದಯಪಾಲಿಸಿದಂತೆ ತೋರುತ್ತದೆ. ಬಳಿಕ ಹಾಗೆಯೇ ಮರುಗಿ, ಈ ದುರ್ದೈವಿಗೆ ನೆನಸಿನಲ್ಲಂತೂ ಆ ಆಸೆ ಸಫಲವಾಗುವ ಹಾಗಿಲ್ಲ; ಕನಸಿನಲ್ಲಾದರೂ ಅದನ್ನು ನೆರವೇರಿಸಿಕೊಳ್ಳಲಿ—ಎಂದು ಕನಿಕರಿಸಿ ಈ ಅಂಶದ ಮಟ್ಟಿಗಾದರೂ ಕೊಂಚ ಕಲ್ಪನಾಶಕ್ತಿಯನ್ನು ಜೊತೆಗೆ ದಯಪಾಲಿಸಿದಂತೆ ತೋರುತ್ತದೆ. ಅಂತೂ, ಮನೆಗಳ ವಿಷಯದಲ್ಲಿ ನನಗೆ ಒಂದು ಹುಚ್ಚು ಹಿಡಿದು ಹೋಗಿದೆ. ಒಂದು ಸಲ ಬ್ರಹ್ಮನು ಇಬ್ಬರು ರಾಕ್ಷಸರನ್ನು ಮರಳುಮಾಡುವುದಕ್ಕಾಗಿ ಲೋಕೋತ್ತರ ಸೌಂದರ್ಯಶಾಲಿನಿಯಾದ ಒಬ್ಬ ಅಪ್ಸರೆಯನ್ನು ನಿರ್ಮಿಸಬೇಕಾಯಿತಂತೆ. ತನ್ನ ಸೃಷ್ಟಿಯಲ್ಲಿ ಆ ಕಾರ್ಯಕ್ಕೆ ತಕ್ಕ ಮಾದರಿಯೇ ಇರಲಿಲ್ಲ. ಪಾಪ, ತನ್ನ ಪ್ರತಿಭೆಯನ್ನೆಲ್ಲಾ ಆಗಲೇ ವೆಚ್ಚಮಾಡಿ ಮುಗಿಸಿದ್ದಾನೆ. ಇನ್ನು ಅದು ಅಭಿನವ ಸೌಂದರ್ಯವನ್ನು ನಿರ್ಮಿಸಲಾರದು. ಏನು ಮಾಡುತ್ತಾನೆ? ತಲೆ ಕೊರೆಯುತ್ತಾ ಚಿಂತಿಸುತ್ತಿರುವಾಗ ಬ್ರಹ್ಮನಿಗೆ ಒಂದು ಉಪಾಯ ಹೊಳೆಯಿತು. ಅದುವರೆಗೆ ತಾನು ಸೃಷ್ಟಿಸಿದ ಒಬ್ಬೊಬ್ಬ ದಿವ್ಯ ಸುಂದರಿಯಿಂದ ಒಂದೊಂದು ಉತ್ತಮಾಂಶವನ್ನು ತಿಲದಷ್ಟು ಮಾತ್ರ ತೆಗೆದುಕೊಂಡು "ತಿಲೋತ್ತಮೆ"ಯನ್ನು

ನಿರ್ಮಿಸಿದನಂತೆ. ನಾನೂ ಕಲ್ಪನಾ ಪ್ರಪಂಚದಲ್ಲಿ ಗೃಹತಿಲೋತ್ತಮೆಯನ್ನು ನಿರ್ಮಿಸಿದ್ದೇನೆ. ಅಲ್ಲೊಂದು ಇಲ್ಲೊಂದು ಕಡೆ ನೋಡಿ, ಮೆಚ್ಚಿ, ಶ್ಲಾಘಿಸಿದ ಅಂಶಗಳನ್ನೆಲ್ಲಾ ಪುಂಜೀಕರಿಸಿ ನಿರ್ಮಿಸಿದ ಸುಖನಿಕೇತನ ಅದು. ಅದರ ಬಾಗಿಲು ದಕ್ಷಿಣ ದಿಕ್ಕಿಗೆ. ಪ್ರಾತಃಕಾಲದಲ್ಲಾಗಲಿ ಸಾಯಂಕಾಲದಲ್ಲಾಗಲಿ ಪಡಸಾಲೆಗೆ ನೇರವಾಗಿ ಬಿಸಿಲು ಬೀಳದಂತೆ ತಡೆಯುವುದಕ್ಕೋಸ್ಕರ ಹೆಂಚಿನದೋ ಹುಲ್ಲಿನದೋ ಮುಂಜೂರನ್ನು ಕಟ್ಟಿ ಮನೆಯನ್ನು ಕತ್ತಲು ಮಾಡಬೇಕಾಗಿಲ್ಲ. ವಿಕಾರಗೊಳಿಸಬೇಕಾಗಿಲ್ಲ. ಕೆಳಗೆ ಪಶ್ಚಿಮ ಪಾರ್ಶ್ವದಲ್ಲಿ ಒಂದರೊಳಕ್ಕೆ ಒಂದಕ್ಕೆ ಪ್ರವೇಶವಿರುವ ಎರಡು ಕೊಠಡಿಗಳು; ಮಹಡಿಯ ಮೇಲೂ ಅದರಂತೆಯೇ. ಈ ಕೊಠಡಿಗಳು ಹೀಗೇಕೆ ಇರಬೇಕೆಂಬುದನ್ನು ರಸಿಕರಿಗೆ ವಿವರಿಸುವುದು ಅನಾವಶ್ಯಕ. ಅವುಗಳಲ್ಲಿ ಮುಂದಿನದು ಕಾರ್ಯಾಗಾರ; ಹಿಂದಿನದು ಶಯ್ಯಾಗಾರ. ಎಂಥ ಬೇಸಗೆಯಲ್ಲಿ ಕೂಡ ಪಶ್ಚಿಮದ ಗಾಳಿ ತಣ್ಣಗೆ ಸಂಚರಿಸಿ ಶಯ್ಯಾಗಾರವನ್ನು ಇಂಪಾಗಿ ತಂಪಾಗಿ ಇಟ್ಟಿರುತ್ತದೆ. ಶಯ್ಯಾಗಾರಕ್ಕೆ ಹತ್ತಿಕೊಂಡು ಪೂರ್ವಕ್ಕೆ ಬಿಸಿಲುಮಚ್ಚು—ಅಲ್ಲ, ಚಂದ್ರಶಾಲೆ. ಮಹಡಿಗೆ ಎರಡುಕಡೆ ಮೆಟ್ಟಲು ಸಾಲು; ಆಗಂತುಕರ ಪ್ರವೇಶಕ್ಕೆ ಮುಂದುಗಡೆ, ಅಂತಃಪುರದ ಪ್ರದೇಶಕ್ಕೆ ಹಿಂದುಗಡೆ . . . ಓಹೋ, ಇನ್ನು ಹೆಚ್ಚಾಗಿ ವರ್ಣಿಸುವುದಿಲ್ಲ. ಎಲ್ಲ ವಿವರಗಳನ್ನೂ ಬಿಡಿಸಿ ಹೇಳಿದರೆ ನನಗೆ ಅದರ ಮೇಲಿರುವ ಸ್ವಾಮ್ಯದ ಹಕ್ಕು ಹೊರಟುಹೋದೀತು. ನನ್ನ ಚಿಂತೆಯ, ಆಸೆಯ, ಪ್ರತಿಭೆಯ ಫಲವನ್ನು ನಾನು ಅನುಭವಿಸುವ ಮುಂಚೆಯೇ "ರೊಕ್ಕ–ಮುಕ್ಕ"ಗಳು ಯಾರಾದರೂ ಅನುಭವಿಸಿಯಾರೆಂದು ಹೆದರಿಕೆ ಬೇರೆ. ಆದರೆ ಇಷ್ಟನ್ನು ಮಾತ್ರ ಹೇಳುತ್ತೇನೆ. ಈ ಮನೆ ಎಷ್ಟು ಸರ್ವ ಸಂಪನ್ನವಾಗಿದೆಯೆಂದರೆ ಕಸಪೊರಕೆಯನ್ನು ಇರಿಸುವುದಕ್ಕೆ ಕೂಡ ಅದರಲ್ಲಿ ಉಚಿತವಾದ ನಿರ್ದಿಷ್ಟವಾದ ಸ್ಥಾನವಿದೆ. ನನ್ನಂತೆಯೇ ಮನೆಯ ಹುಚ್ಚು ಹಿಡಿದ ಮಿತ್ರರೂ ನಾನೂ ಆಲೋಚಿಸಿ ಅದನ್ನೂ ನಿರ್ಧರಿಸಿದ್ದೇವೆ.

ಇಷ್ಟು ರಮಣೀಯವಾದ ಅನುಕೂಲವಾದ ಆಶಾಜನಕವಾದ ವಸತಿಯನ್ನು ಕಟ್ಟಿಸುವುದು ಲಕ್ಷಾಧಿಕಾರಿಗೆ ಮಾತ್ರ ಸಾಧ್ಯವೇನೋ—ಎಂದು ನೀವು ಚಿಂತಿಸುತ್ತಿರಬಹುದು. ಆದರೆ ನಮ್ಮ ಕಲ್ಪನೆ ಗಾಳಿಯ ಪಟದಂತೆ ಗಗನದಲ್ಲಿ ಹಾರಾಡುತ್ತಿದ್ದರೂ ವಿವೇಕದ ದಾರ ಅದನ್ನು ಭೂಮಿಗೆ ಜಗ್ಗಿ ಹಿಡಿದಿದೆ. ಮನೆ ಸುಂದರವಾಗಿದ್ದ ಮಾತ್ರಕ್ಕೆ ಸುಲಭವಾಗಿರಕೂಡದೆಂದು ಯಾರೂ ಇದುವರೆಗೆ ಕಾನೂನನ್ನು ವಿಧಿಸಿಲ್ಲ. ನಮ್ಮ ಮನೆಯನ್ನು ಆರೇ ಸಾವಿರ ರೂಪಾಯಿಗೆ ಕಟ್ಟಿಸಿಬಿಡಬಹುದು (ಇದರಲ್ಲಿ ನಿವೇಶನದ ಬೆಲೆ ಕೂಡ ಸೇರಿದೆ).* ಹಲವರು ಒಂದು ಮದುವೆಮುಂಜಿಗೆ ಇದಕ್ಕಿಂತ ಹೆಚ್ಚು ಹಣವನ್ನು ವ್ಯರ್ಥಮಾಡುತ್ತಾರಲ್ಲವೆ; ಒಂದು ವ್ಯಾಜ್ಯಹೂಡಿ ಇದಕ್ಕಿಂತ ಹೆಚ್ಚು ಹಣವನ್ನು ಕಳೆದುಕೊಳ್ಳುತ್ತಾರಲ್ಲವೆ? ಆದರೆ ನಮಗೆ ಈ ಆರುಸಾವಿರ ರೂಪಾಯಿಯೇ ಮೃಗತೃಷ್ಣಿಕೆಯಂತೆ ಅಲಭ್ಯವಾಗಿ ದೂರದಲ್ಲಿ ಬಹುದೂರದಲ್ಲಿ ನಿಂತು ಅಣಕಿಸುತ್ತಿದೆ;

---

* ಇದೆಲ್ಲ ಈ ಪ್ರಬಂಧವನ್ನು ಬರೆದಂದಿನ, ಸುಮಾರು ಮೂವತ್ತು ವರ್ಷಗಳ ಹಿಂದಿನ, ಮಾತು!

ಅದನ್ನು ಹಿಂಬಾಲಿಸಿ ತೊಳಲುವ ಪಥಿಕನಂತೆಯೇ ನಾವೂ ಬಯಲಾಸೆಯಿಂದ ಜೀವನದಲ್ಲಿ ಮುಂದುವರಿಯುತ್ತಿದ್ದೇವೆ. ಮರಳುಗಾಡಿನಲ್ಲಿ ತಣ್ಣೀರಿನ ಕೊಳ ಗೋಚರಿಸುವಂತೆ ಮುಂದೆ ಒಂದಾನೊಂದು ಕಾಲಕ್ಕೆ ಆ ಸಂಪತ್ತೂ ದೊರೆಯಬಹುದು; ಆಗ ಈ ಮನೆಯನ್ನೂ ಕಟ್ಟಿಸಬಹುದು. ಆದರೇನು? ನಮ್ಮ ಮಿತ್ರರೊಬ್ಬರು ಹೇಳಿದಂತೆ "ಆ ವೇಳೆಗೆ ಈಗಿನ ಯೌವನವೂ ಈಗಿನ ಉತ್ಸಾಹವೂ ಉಳಿದಿರುತ್ತವೆಯೆ?" ಇದೇ ದುಃಖದ ಸಂಗತಿ. ಹಂಬಲಿಸಿ ಒಂದು ಭೋಗವನ್ನು ಸಂಪಾದಿಸುವ ಹೊತ್ತಿಗೆ ಅದನ್ನು ಆಸ್ವಾದಿಸುವ ತ್ರಾಣವೇ ಕುಗ್ಗಿ ಹೋಗಿರುತ್ತದೆ. "ಎತದೇವಾನುಶೋಚಾಮಿ ವಯಸ್ತತ್ರಾತಿವರ್ತತೇ" ("ಇದನೆ ಕುರಿತು ಕುದಿವೆನು ನಾನಿಂದು : ವಯಸು ಬಳಿಕ ಮಿಾರುವುದೆಂದು!")

ಕಾಸಿನ ಸಂಘ

ಹಲವು ವರ್ಷಗಳ ಹಿಂದಿನ ಸಂಗತಿ. ಮೈಸೂರು ವಿಶ್ವವಿದ್ಯಾನಿಲಯದ ಒಂದು ಕಾಲೇಜಿನ ತರುಣ ಉಪಾಧ್ಯಾಯರಲ್ಲಿ ಕನ್ನಡವನ್ನು ಕುರಿತು ಹೊಸ ಉತ್ಸಾಹ ಮೂಡಿತ್ತು. ಕನ್ನಡ ಪಾಠವನ್ನು ಹೇಳುವವರಿಗೆ ಮಾತ್ರವಲ್ಲದೆ ಇಂಗ್ಲಿಷ್, ಸಂಸ್ಕೃತ, ದರ್ಶನ, ವಿಜ್ಞಾನ ಮೊದಲಾದವುಗಳ ಪ್ರವೀಣರಿಗೂ ಕನ್ನಡದ ಹುಚ್ಚು ಕೆರಳಿತ್ತು. ಕನ್ನಡದಲ್ಲಿ ಬರೆಯಬೇಕು, ಕನ್ನಡವನ್ನೇ ಆಡಬೇಕು ಎಂಬ ಹುಮ್ಮಸ್ಸು ಎಲ್ಲರಲ್ಲೂ ಹೊಮ್ಮುತ್ತಿತ್ತು. ಇಂಥ ಸುಸಮಯದಲ್ಲಿ ಒಂದು ದಿನ ಅಪರಾಹ್ಣದ ವೇಳೆ, ಕಾಫಿಯ ಸೇವನೆ ನಡೆಯುತ್ತಾ ಹರಟೆ ಸಾಗುತ್ತಾ ಇರುವಾಗ, ಒಬ್ಬಿಬ್ಬರು ಉತ್ಸಾಹಿಗಳ ಗಮನ ತಮ್ಮೆಲ್ಲರ ಮಾತಿನ ಸ್ವರೂಪದ ಕಡೆಗೇ ಹೊರಳಿತು. ಎಂಥ ಮಾತು ಅದು! ಇತ್ತ ಕನ್ನಡವಲ್ಲ, ಅತ್ತ ಇಂಗ್ಲಿಷಲ್ಲ. ಅದೊಂದು ಹರುಕುಮುರುಕು ಜಾತಿಯ ಬೆರಕೆನುಡಿ. ಆಡುವವನ ಆಲಸ್ಯವೇ ಇದರ ಮೂಲಸೂತ್ರ, ವಾಕ್ಯ ಇಂಗ್ಲಿಷಿನಲ್ಲಿ ಆರಂಭವಾಗಿ ಕನ್ನಡದಲ್ಲಿ ಕೊನೆಮುಟ್ಟ ಬಹುದು; ಅಥವಾ ಕನ್ನಡದಲ್ಲಿ ಮೊದಲಾಗಿ ಇಂಗ್ಲಿಷಿನ ಛಾಯೆಯನ್ನು ತಳೆದು ಕಡೆಗೆ ಕನ್ನಡಕ್ಕೇ ಇಳಿಯ ಬಹುದು. ಎಷ್ಟೋ ಸಲ ಅದು ವಾಕ್ಯವೇ ಆಗುತ್ತಿರಲಿಲ್ಲ; ಅಡಿಮುಡಿಯಿಲ್ಲದ ಶಬ್ದಗಳ ಸಂತೆಯಾಗಿಬಿಡುತ್ತಿತ್ತು. ಇಲ್ಲಿ ಕಲೆಯುತ್ತಿದ್ದ ಮಾತುಗಳಲ್ಲಿ ಇಂಗ್ಲಿಷಿನ ಪರಿಮಾಣವೇ ಹೆಚ್ಚು; ಹರುಕು ಬಟ್ಟೆಗೆ ತೇಪೆ ಹಾಕಿದಂತೆ ಅಲ್ಲೊಂದು ಇಲ್ಲೊಂದು ಕನ್ನಡ ಪದ ಅಥವಾ ಪ್ರತ್ಯಯ.

Decide ಮಾಡು, Start ಆಗು—ಇಂಥ ನೂತನ ಧಾತುಗಳಿಂದ ಕನ್ನಡದ ಧಾತುಕೋಶ ಹಿಗ್ಗಲಿಸುತ್ತಿತ್ತು. ಇಷ್ಟೇ ಸಾಲದೆ, and, but, yet ಮೊದಲಾದ ಇಂಗ್ಲಿಷ್ ಅವ್ಯಯಗಳು ಕೂಡ ಸಂಕೋಚವಿಲ್ಲದೆ ಕನ್ನಡ ಪದಗಳೊಂದಿಗೆ ಸರಸಮಾಡುತ್ತಿದ್ದುವು. ಅಂತೂ ಕನ್ನಡ ಮಾತು ಹೊಳೆಯದಿದ್ದರೆ ಇಂಗ್ಲಿಷ್, ಇಂಗ್ಲಿಷ್ ಮಾತು ಹೊಳೆಯದಿದ್ದರೆ ಕನ್ನಡ, ಎರಡೂ ತಿಳಿಯದಿದ್ದರೆ ಅಂಗಚೇಷ್ಟೆ—ಹೀಗೆ ವ್ಯವಹಾರ ನಡೆಯುತ್ತಿತ್ತು. ಈ ವಿಚಿತ್ರವಾಗ್ಜಾಲಕ್ಕೆ ಉದಾಹರಣೆಯನ್ನು ಬೇರೆಯಾಗಿ ಏಕೆ ಕೊಡಬೇಕು? ಇಂಗ್ಲಿಷಿನ ಬಳಕೆಯನ್ನು ಇಟ್ಟುಕೊಂಡಿರುವ ವಾಚಕರು ತಾವು ಆಡುವ ಮಾತನ್ನೇ ನಾಲ್ಕು ನಿಮಿಷ ಗಮನಿಸಿದರೆ ಸಾಕು!

ಭಾಷಾಭಿಮಾನದ ಅಂಜನವನ್ನು ಹಚ್ಚಿಕೊಂಡು ನೋಡತೊಡಗಿದ ಮೇಲೆ ನಮ್ಮ ಉತ್ಸಾಹಿಗಳಿಗೆ ಈ ಬಗೆಯ ಮಾತು ತುಂಬ ಹೊಲಸಾಗಿ ಕಂಡಿತು; ಇದನ್ನು ಆಡಿ ಆಡಿ ಅಪವಿತ್ರವಾದ ನಾಲಗೆಯನ್ನು ಯಾವ ದರ್ಭೆ ಹಾಕಿ ಸುಟ್ಟರೆ ತಾನೆ ಶುದ್ಧಿಯಾದೀತು ಎನ್ನಿಸಿತು. ವಿಶ್ವಸಾಹಸ ಮಾಡಿ ಈ ಕಲಬೆರಕೆಯ ನುಡಿಯನ್ನು ಹೊರದೂಡಬೇಕು, ಕನ್ನಡವನ್ನು ಆದಷ್ಟು ಶುದ್ಧವಾಗಿ ಆಡಬೇಕು ಎಂಬ ಕೆಚ್ಚು ಬಲಿಯಿತು. ಒಬ್ಬರೊಂದಿಗೊಬ್ಬರು ಮಾತಾಡಿಕೊಂಡು ಉತ್ಸಾಹವನ್ನು ಉದ್ದೀಪಿಸಿಕೊಂಡರು; ನಿಶ್ಚಯವನ್ನು ದೃಢಪಡಿಸಿಕೊಂಡರು; ಹೊಸ ಪ್ರತಿಜ್ಞೆಯನ್ನು ಹೂಡಿ ಹೊಸದೊಂದು ಸಂಘವನ್ನು ಕಟ್ಟಿದರು.

ಸಂಘದ ಜೀವಸೂತ್ರ ಇಷ್ಟೇ : "ಕನ್ನಡವನ್ನು ಆಡುವಾಗ ಅದರಲ್ಲಿ ಇಂಗ್ಲಿಷ್ ಮಾತನ್ನು ಬೆರಸಕೂಡದು." ಸೂತ್ರ ಎಷ್ಟೇ ಸರಳವಾಗಿರಲಿ, ಅದಕ್ಕೆ ವೃತ್ತಿವ್ಯಾಖ್ಯಾನಗಳು ಇರಲೇ ಬೇಕಷ್ಟೆ. ಇಲ್ಲಿ ಕೂಡ, ಸಂಘದ ಗುರಿಗೆ ಭಂಗಬಾರದಂತೆ, ಸದಸ್ಯರನ್ನು ಅನಾವಶ್ಯಕವಾದ ನಿರ್ಬಂಧಗಳಿಗೆ ಒಳಪಡಿಸದಂತೆ, ಸೂತ್ರದ ಅರ್ಥವನ್ನು ಪರಿಷ್ಕರಿಸಿದರು, ನಿಯಮಾವಳಿಯನ್ನು ಏರ್ಪಡಿಸಿದರು. ಇಂಗ್ಲಿಷನ್ನು ಶುದ್ಧಾಂಗವಾಗಿ ವರ್ಜಿಸಿಬಿಡಬೇಕೆಂಬ ಅಭಿಪ್ರಾಯ ಯಾರಿಗೂ ಇರಲಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷಿನ ಮೂಲಕ ಪಾಠಪ್ರವಚನಗಳನ್ನು ಹೇಳುತ್ತಾ ಇಂಗ್ಲಿಷ್ ಪುಸ್ತಕಗಳನ್ನೇ ಹಗಲೂ ಇರುಳೂ ಓದುತ್ತಾ, ಇಂಗ್ಲಿಷನ್ನೇ ಜೀವನಕ್ಕಾಗಿ ಅವಲಂಬಿಸಿದ್ದವರಿಗೆ, "ನೀವು ಇಂಗ್ಲಿಷಿನ ವ್ಯವಹಾರವನ್ನೇ ಬಿಡಬೇಕು" ಎಂದು ಹೇಳಬಹುದೆ? ಹಾಗೆ ಹೇಳಿದರೆ ಅವರು ಕೇಳಿಯಾರೆ? ಸಂಘ ಯಾವ ಭಾಷೆಯನ್ನೂ ಬಿಡಬೇಕೆನ್ನಲಿಲ್ಲ. **ಕನ್ನಡವನ್ನು ಆಡುವಾಗ** ಅದರಲ್ಲಿ ಇಂಗ್ಲಿಷ್ ಮಾತನ್ನು ಸೇರಿಸಕೂಡದೆಂದು ಮಾತ್ರ ಕಟ್ಟಳೆಮಾಡಿತು. ಹೀಗೆಂದರೆ ಇಷ್ಟೇ ಅರ್ಥ : ಒಂದು ವಾಕ್ಯವನ್ನು ಕನ್ನಡದಲ್ಲಿ ಪ್ರಾರಂಭ ಮಾಡಿದರೆ ಕನ್ನಡದಲ್ಲೇ ಕೊನೆತನಕ ನಿರ್ವಾಹಮಾಡಬೇಕು : ನಡುವೆ ಇಂಗ್ಲಿಷಿಗೆ ತಿರುಗಿಸಕೂಡದು. ಇಂಗ್ಲಿಷಿಗೂ ಇದರಿಂದ ಒಂದು ಪ್ರಯೋಜನ ಲಭಿಸಿತು : ಇಂಗ್ಲಿಷಿನಲ್ಲಿ ವಾಕ್ಯವನ್ನು ಮೊದಲು ಮಾಡಿದರೆ ಅದನ್ನು ಇಂಗ್ಲಿಷಿನಲ್ಲೇ ಸಾಗಿಸಬೇಕು; ನಡುವೆ ಕನ್ನಡವನ್ನು ತರಬಾರದು. ಈ ಪರಿಷ್ಕಾರವನ್ನು ಕೇಳಿದ ಕೂಡಲೆ ಸದಸ್ಯರನೇಕರಿಗೆ ಸಂಘದ ವಿಷಯದಲ್ಲಿ ಕೃತಜ್ಞತೆ

ಹೆಚ್ಚಾಯಿತು. ಏಕೆಂದರೆ ಈ ನಿಯಮವನ್ನು ಅನುಸರಿಸುವುದರಿಂದ ತಮ್ಮ ಕನ್ನಡ ಮಾತು ಶುದ್ಧವಾಗುವುದರ ಜೊತೆಗೆ ಇಂಗ್ಲಿಷ್ ಮಾತು ತನ್ನಷ್ಟಕ್ಕೆ ತಾನೇ ಶುದ್ಧವಾಗುವುದೆಂದು ಅವರಿಗೆ ಸುಲಭವಾಗಿ ಮನವರಿಕೆಯಾಯಿತು. ಇನ್ನು ಈ ಏಕಭಾಷಾನಿಯಮಕ್ಕೆ ಕೂಡ ಉದಾರವಾಗಿಯೇ ಅರ್ಥಮಾಡಿದರು. ಕನ್ನಡದೊಂದಿಗೆ ಇಂಗ್ಲಿಷನ್ನು ಬೆರಸಬಾರದೆಂದರೆ, ಎರಡು ಘಂಟೆಯ ಕಾಲದ ಮಾತು ಕಥೆಯಲ್ಲಿ ಮೊದಲಿನಿಂದ ಕೊನೆಯತನಕ ಕೇವಲ ಕನ್ನಡವನ್ನೇ ಅಥವಾ ಇಂಗ್ಲೀಷನ್ನೇ ಪಟ್ಟುಹಿಡಿದು ಆಡಬೇಕೆಂದಲ್ಲ. (ಇಂಥ ಕಠೋರ ಸಂಯಮಕ್ಕೆ ಯಾರೂ ಸಿದ್ಧವಾಗಿರಲಿಲ್ಲ!) ವಿಧಿ ಅನ್ವಯಿಸುವುದು ಬಿಡಿ ವಾಕ್ಯಕ್ಕೆ ಹೊರತು ವಾಕ್ಯಗಳ ಸಮುದಾಯಕ್ಕಲ್ಲ. ಆದಕಾರಣ ಒಂದು ವಾಕ್ಯವನ್ನು ಕನ್ನಡದಲ್ಲಿ ಪ್ರಾರಂಭಿಸಿ ಕನ್ನಡದಲ್ಲೇ ಮುಗಿಸಿದ ಬಳಿಕ ಮುಂದಿನ ವಾಕ್ಯಕ್ಕೇ ಇಂಗ್ಲೀಷನ್ನು ಶರಣುಹೊಕ್ಕರೆ ಅದು ನಿರ್ದುಷ್ಟವೆಂದೇ ಒಪ್ಪಿಕೊಳ್ಳಲಾಯಿತು.

ಇದಿಷ್ಟೂ ವಾಕ್ಯವಿಚಾರ. ಒಂದು ಪದ ಇಂಗ್ಲಿಷಿನದೇ ಅಲ್ಲವೇ ಎಂಬುದನ್ನು ನಿರ್ಧರಿಸುವುದರಲ್ಲೂ ನಿಯಮ ಅನುಕೂಲವಾಗಿಯೇ ಏರ್ಪಟ್ಟಿತು. ಈಗ ಮನೆ ಮಾತಿನಲ್ಲಿ ಕೂಡ, ರೈಲು, ಮೋಟಾರು, ಕೋರ್ಟು, ಕಾಲೇಜು ಮೊದಲಾದ ಪದಗಳನ್ನು ಧಾರಾಳವಾಗಿಯೇ ಉಪಯೋಗಿಸುತ್ತಾರೆ. ಹೀಗೆ ಕನ್ನಡದ ಕುಲಕ್ಕೇ ಸೇರಿಹೋಗಿರುವ ಪದಗಳನ್ನು ಕಿತ್ತೊಗೆದು, ಹೊಗೆಬಂಡಿ (ಅಥವಾ ಧೂಮಶಕಟ), ನ್ಯಾಯಸ್ಥಾನ ಮೊದಲಾದವನ್ನು ಬಳಸಬೇಕೆಂದು ಯಾರನ್ನೂ ಒತ್ತಾಯ ಪಡಿಸುತ್ತಿರಲಿಲ್ಲ. ಇದರಂತೆ English ಎಂಬ ಪದ ಕನ್ನಡದಲ್ಲಿ "ಇಂಗ್ಲಿಷ್" ಆಗಿಯೇ ಉಳಿಯಿತು; ಆಂಗ್ಲೇಯ ಭಾಷೆಯಾಗಿಯೇ "ಅಂಗ್ರೇಜಿ" ಯಾಗಿಯೋ ಅವತಾರ ತಾಳಲಿಲ್ಲ. ಕೆಲವು ಇಂಗ್ಲಿಷ್ ಪದಗಳಿಗೆ ಸರಿಯಾದ ಪ್ರತಿಪದಗಳು ಮಾತಾಡುವವನಿಗೆ ಥಟ್ಟನೆ ಹೊಳೆಯದಿರಬಹುದು; ಅಥವಾ ಕನ್ನಡದಲ್ಲಿ ಇನ್ನೂ ಸೃಷ್ಟಿಯಾಗದೆಯೇ ಇರಬಹುದು. ಅಂಥ ಕಡೆ ತಾನು ಉಪಯೋಗಿಸುವ ಪದ ಇಂಗ್ಲಿಷಿನದೆಂಬ ಎಚ್ಚರಿಕೆ ವಕ್ತೃವಿಗೆ ಇದ್ದರೆ ಸಾಕು; "ಇಂಗ್ಲಿಷಿನಲ್ಲಿ Constitution ಅನ್ನುತ್ತಾರಲ್ಲ ಅದು. .", "Telepathy ಎನ್ನುವುದರ ಮೂಲಕ . .", "Transcendentalism ಎಂದು ಹೇಳುವುದಿಲ್ಲವೇ, ಆ ವಾದದಲ್ಲಿ . ."— ಹೀಗೆ ಅನುವಾದಿಸಿದರೆ ದೋಷವಿಲ್ಲವೆಂದು ಅಂಗೀಕಾರವಾಯಿತು.

ಕನ್ನಡವನ್ನು ಆಡುವಾಗ ಅವಶ್ಯಬಿದ್ದ ಇಂಗ್ಲಿಷ್ ಪದಕ್ಕೆಲ್ಲ, ಪ್ರತಿ ಪದವನ್ನು ಅಚ್ಚಗನ್ನಡದಲ್ಲಿಯೇ ಹುಡುಕಬೇಕೆಂಬ ವೀರಾವೇಶವೂ ಇರಲಿಲ್ಲ. ಮೂಲಸೂತ್ರದ ಮೇರೆಗೆ ಬಹಿಷ್ಕಾರ ಇಂಗ್ಲಿಷಿಗೇ ಹೊರತು ಸಂಸ್ಕೃತ, ಹಿಂದುಸ್ತಾನಿ, ತಮಿಳು, ಮರಾಠಿ ಮೊದಲಾದ ಬೇರೆ ಯಾವ ಭಾಷೆಗೂ ತಟ್ಟಲಿಲ್ಲ. "He was arrested" ಎನ್ನುವುದನ್ನು ಕನ್ನಡದಲ್ಲಿ "ಅವನನ್ನು ಸೆರೆಹಿಡಿದರು" ಎಂದು ಹೇಳಬೇಕಾಗಿರಲಿಲ್ಲ; ಅವನನ್ನು ದಸ್ತಗಿರಿ ಮಾಡಿದರು" ಎಂದರೆ ಸಾಕಾಗಿತ್ತು. ಇಂಗ್ಲಿಷನ್ನುಳಿದ ಮಿಕ್ಕ ಭಾಷೆಗಳಿಗೆಲ್ಲ— ಮುಖ್ಯವಾಗಿ ಹಿಂದುಸ್ತಾನಿಗೆ–ಕನ್ನಡದ ಹೆಬ್ಬಾಗಿಲು ತೆರೆದೇ ಇತ್ತು! ಹುಕುಂ, ಕಛೇರಿ, ಜಬರದಸ್ತು, ಷೋಕಿ, ರಿಯಾಯತಿ, ಬಡಾವಣೆ—ಈ ಪರಂಪರೆಗೆ ಯಾವ ತಡೆಯೂ ಇರಲೇ ಇಲ್ಲ.

ಇಷ್ಟು ಉದಾರೋದಾರವಾದ ನಿಯಮಗಳೊಡನೆ—"ನಿಯಮ"ವೆಂಬ ಹೆಸರಿಗೇ ಅರ್ಹವಲ್ಲದಷ್ಟು ಸಡಿಲವಾದ ನಿಯಮಗಳೊಡನೆ–ಉತ್ಸಾಹದ ಕೋಲಾಹಲದಲ್ಲಿ ಸಂಘ ಜನ್ಮವೆತ್ತಿತ್ತು. ಮೂಲಸೂತ್ರವನ್ನು ಒಮ್ಮೆ ಮನನ ಮಾಡಿದರೆ ಸಾಕು, ಅದನ್ನು ಯಾರೂ ಮುರಿಯುವ ಸಂಭವವೇ ಇಲ್ಲವೆಂದು ಎಲ್ಲರ ಭಾವನೆ. ಆದರೂ ಸಂಶಯಾತ್ಮರೊಬ್ಬರು ಸಂಘದ ನಿಯಮಾವಳಿಯಲ್ಲಿ ಶಿಕ್ಷೆಯ "ಕಲಂ" ಸೇರಿದ್ದರೆ ಒಳ್ಳೆಯದೆಂದು ಮೆಲ್ಲಗೆ ಸೂಚಿಸಿ ಅದನ್ನು ಹೇಗೋ ಮಂಜೂರು ಮಾಡಿಸಿಬಿಟ್ಟರು; "ಒಂದು ಕನ್ನಡ ವಾಕ್ಯದಲ್ಲಿ ಇಂಗ್ಲಿಷ್ ಪದಗಳನ್ನು ಸೇರಿಸಿದರೆ, ಹಾಗೆ ಸೇರಿಸಿದ ಪ್ರತಿಯೊಂದು ಪದಕ್ಕೂ ಒಂದು ಕಾಸಿನಂತೆ ಜುಲ್ಮಾನೆ ಕೊಡತಕ್ಕದ್ದು." ವಿಧಿಯನ್ನು ಮುರಿಯಬಹುದೆಂದು ಶಂಕೆಯೇ ಯಾರಿಗೂ ಇರಲಿಲ್ಲ; ಒಂದು ವೇಳೆ ಅಪೂರ್ವವಾಗಿ ಮುರಿದರೂ, ಶಿಕ್ಷೆ ಅತ್ಯಲ್ಪ.

ಸಂಘದ ಕೆಲಸಕ್ಕೆ ಮೊದಲಾಯಿತು; ಸದಸ್ಯರು ನಿರೀಕ್ಷಿಸಿದ್ದಕ್ಕೆ ವಿರೋಧವಾಗಿ ಅವರ ಕಷ್ಟನಷ್ಟಗಳಿಗೂ ಮೊದಲಾಯಿತು :

ಒಬ್ಬರು :	As I was saying ಈ essayನಲ್ಲಿ he has perpetrated impossible blunders.
ಇನ್ನೊಬ್ಬರು :	ತಾಳಿ ತಾಳಿ ಸ್ವಾಮಿ. ನೀವು ಹತ್ತು ಕಾಸು fine ಕೊಡಬೇಕು.
ಮೊದಲನೆಯವರು :	ಅದು ಹೇಗೆ? ಉದ್ದಕ್ಕೂ I have been using English only.
ಎರಡನೆಯವರು :	ಇನ್ನೂ ಆರು ಕಾಸು ನಿಮ್ಮ accountಗೆ ಏರಿತು.
ಮೂರನೆಯವರು :	ಸ್ವಾಮಿ ನಗದಿ ಗುಮಾಸ್ತರೆ, ನಿಮ್ಮ ಲೆಕ್ಕಕ್ಕೂ ಎರಡು ಕಾಸು ಸೇರಿತು!

—ಈ ಬಗೆಯ ಸಂವಾದಗಳಿಗೆ ಅವಕಾಶವುಂಟಾಯಿತು. ಇಷ್ಟೊಂದು ದುಡ್ಡನ್ನು ತಾವು ಏಕೆ ತೆರಬೇಕೆಂದು ಮೊದಲನೆಯವರಿಗೆ ಇನ್ನೂ ಅರಿವಾಗಲೊಲ್ಲದು. ವಾಕ್ಯ ಇಂಗ್ಲಿಷಿನಲ್ಲೇ ಪ್ರಾರಂಭವಾದರೂ ಅದರಲ್ಲಿ ಕನ್ನಡ ಮಾತು ತಲೆ ಹಾಕಿದರೆ ಅದನ್ನು ಕನ್ನಡ ವಾಕ್ಯವೆಂದೇ ಭಾವಿಸಬೇಕೆಂದೂ ಅದರಲ್ಲಿ ಬಂದ ಇಂಗ್ಲಿಷ್ ಪದಗಳಿಗೆಲ್ಲ ತಪ್ಪುಕಾಣಿಕೆ ಕೊಡಬೇಕೆಂದೂ ಒಂದು ಉಪನಿಯಮ ಒಪ್ಪಿಗೆ ಪಡೆದಿತ್ತು. ಇದು ಉಚಿತವೇ ತಾನೆ. ಸಂಘದ ಮೂಲೋದ್ದೇಶ ಕನ್ನಡದ ಶುದ್ಧಿಯೇ ಹೊರತು ಇಂಗ್ಲಿಷಿನ ಸಂರಕ್ಷಣೆಯಲ್ಲವಲ್ಲ! ಆದ ಕಾರಣ, ಇಂಗ್ಲಿಷ್ ವಾಕ್ಯದಲ್ಲಿ ಕನ್ನಡ ಸೇರಿತೆಂದು ಶಿಕ್ಷೆ ವಿಧಿಸುವ ಬದಲು ಅಲ್ಲಿ ಕನ್ನಡದೊಂದಿಗೆ ಬೆರಕೆಯಾಗಿದ್ದ ಇಂಗ್ಲಿಷ್ ಪದಗಳನ್ನೇ ತಪ್ಪಿನ ಲೆಕ್ಕಕ್ಕೆ ತೆಗೆದುಕೊಳ್ಳುವುದು ಸೂಕ್ತವೆಂದು ಎಲ್ಲರೂ ಅಂಗೀಕರಿಸಿದ್ದರು. ಇದೇ ಹಲವು ಮಂದಿ ವಾಕ್ಚತುರರ ಗಂಟಲ ಗಾಣವಾಯಿತು. ತಾವು ಇಂಗ್ಲಿಷ್ ಭಾಷಾ ವಿಶಾರದರೆಂದು ಭಾವಿಸಿಕೊಂಡು ಪರಮಾಣುವಿನಿಂದ ಪರಮಾತ್ಮನವರೆಗೂ ಆಚೆಗೂ ಎಲ್ಲ ವಿಷಯಗಳ ಮೇಲೆ ಲೀಲಾಜಾಲವಾಗಿ ಉಪನ್ಯಾಸ ಕೊಚ್ಚುತ್ತಿದ್ದವರಿಗೆ ಈಗ ಅಚ್ಚ ಇಂಗ್ಲಿಷಿನಲ್ಲಿ ಮಾತಾಡುವುದು

ಅಚ್ಚಗನ್ನಡದಷ್ಟೇ ಕಷ್ಟವೆಂದು ಅನುಭವಕ್ಕೆ ಬರತೊಡಗಿತು. ಇಂಥವರನೇಕರು ತಮ್ಮ ಆರ್ಥಿಕ ಹಿತಕ್ಕಾಗಿ ಕ್ರಿಕೆಟ್ ಆಟವನ್ನು ಸ್ಮರಿಸಿಕೊಂಡರು. ಅಲ್ಲಿ ಚೆಂಡನ್ನು ಎಷ್ಟೇ ದೂರಕ್ಕೆ ಹೊಡೆದರೂ "ಸೀಮೆ"ಯನ್ನು (Boundary) ದಾಟಿದ್ದಕ್ಕೆ ಪರಮಾವಧಿಯ ಫಲ ಇಷ್ಟೇ ಓಟ ಎಂದು ಕ್ಲುಪ್ತ ಮಾಡಿಲ್ಲವೆ. ಅದೇ ರೀತಿ, ವಾಕ್ಯ ಎಷ್ಟೇ ಉದ್ದವಾಗಿರಲಿ, ಮಿಶ್ರಣ ಎಷ್ಟೇ ಘೋರವಾಗಿ ನಡೆದಿರಲಿ, ಅದನ್ನು ಲಕ್ಷಿಸದೆ ಒಂದು ವಾಕ್ಯಕ್ಕೆ ಒಂದೇ "ಸೀಮೆ" ಎಂದು ಪರಿಗಣಿಸಿ ಅದಕ್ಕೆ ಮೂರು ಕಾಸಿನ ದಂಡವನ್ನು ಮಾತ್ರ ವಿಧಿಸಬೇಕೆಂಬ ರಿಯಾಯತಿ ಹೊಸದಾಗಿ ಹುಟ್ಟಿತು. ಆದರೆ ಇದರಿಂದ ಕಾಸಿನ ಲೆಕ್ಕವೇನೂ ಕಡಿಮೆಯಾಗಲಿಲ್ಲ. ಎಲ್ಲರಬಾಯಲ್ಲೂ "ಸೀಮೆ"ಗಳ ಸುರಿಮಳೆ! ಇನ್ನು ಸಂಘದ ನಿಯಮರಕ್ಷಕರ ಉಕ್ತಿಗಳಲ್ಲೂ ಸ್ವಾರಸ್ಯವಿರುತ್ತಿತ್ತು. ಇನ್ನೊಬ್ಬರು ತಪ್ಪು ಮಾಡುವುದನ್ನೇ ರಣಹದ್ದಿನಂತೆ ನಿರೀಕ್ಷಿಸುತ್ತಾ, ಮಾತು ಹೊರಟ ಕೂಡಲೆ ಕಾಸಿನ ಲೆಕ್ಕವನ್ನು ಕೂಗುತ್ತಿದ್ದವರಿಗೆ ಆ ಉತ್ಸಾಹೋದ್ರೇಕದಲ್ಲಿ ತಮ್ಮ ಮಾತಿನ ಮೇಲಿನ ಎಚ್ಚರವೇ ಎಷ್ಟೋ ಸಲ ತಪ್ಪಿ ಅವರ ಕೈಯಿಂದಲೂ ಕಾಸು ಬೀಳುತ್ತಿತ್ತು.

ಸಂಘದ ನಿಯಮಗಳನ್ನು ಅನ್ವಯಿಸುವಾಗ ಕೆಲವು ಸಮಸ್ಯೆಗಳು ಸಹಜವಾಗಿ ತಲೆಯೆತ್ತಿದುವು. "ರೂಮು" (Room) ಕನ್ನಡಕ್ಕೆ ಸೇರಿದ್ದೆ ಅಲ್ಲವೆ? ಇದುವರೆಗೆ Teachers' room ಎನ್ನುತ್ತಿದ್ದವರು ಈಗ "ಉಪಾಧ್ಯಾಯರ ಕೊಠಡಿ" ಎಂದರೆ ಕಾಲೇಜಿನ ಜವಾನರು ಮುಖಮುಖ ನೋಡುತ್ತಾರಲ್ಲ! ದರ್ಜಿಯ ಅಂಗಡಿಗೆ ಹೋದಾಗ Silk, Woollen cloth ಎನ್ನುವ ಬದಲು "ರೇಷ್ಮೆ, ತುಪಟದ ಬಟ್ಟೆ" ಎಂದೇ ಹೇಳಬೇಕೆ? Stiff ಎನ್ನುವುದಕ್ಕೆ ಸಮಾನ ಪದ ಏನು? ಒಂದು ವೇಳೆ "ಇಷ್ಟೀಪು" ಎಂದರೆ ನಮ್ಮ ಮಾನಕ್ಕೆ ತಡೆಯುತ್ತದೆಯೆ? ದರ್ಜಿಯೇ ನಗುತ್ತಾನೋ ಏನೋ? ಅವನಿಗೆ ಕೋಪ ಬಾರದಿರಬೇಕಾದರೆ ಅವನನ್ನು Tailor ಎಂದೇ ಕರೆಯಬೇಕಲ್ಲವೆ? Collar ಎಂದು ಹೇಳಿ ಹೇಳಿ ಅಭ್ಯಾಸವಾಗಿರುವಾಗ "ಕೊರಳುಪಟ್ಟಿ" ಎನ್ನುವುದಕ್ಕೆ ಹೋದರೆ ಗಂಟಲು ಬಿಗಿಯದೆ ಇರುತ್ತದೆಯೆ? Belt ಎನ್ನಬಹುದೋ, ಇಲ್ಲವೆ "ಸೊಂಟಪಟ್ಟಿ" ಎಂದು ಹೇಳಿ ನಗುಪಾಟಲಾಗಬೇಕೋ? "ಹೋಟಲು" ಕನ್ನಡಪದ; ಸರಿ. ಹೋಟಲಿನ ಮಾಣಿಗೆ "ಎರಡು ಪ್ಲೇಟ್ ಬೋಂಡ, ಎರಡು ಕಪ್ ಕಾಫಿ" ಎಂದು ಹೇಳುವ ಬದಲು "ಎರಡು ತಟ್ಟೆ ಬೋಂಡ, ಎರಡು ಲೋಟ ಕಾಫಿ" ಎಂದು ಯಾವ ಮುಖದಿಂದ ಹೇಳುವುದು? ಹೀಗೆ ಮಾನ ಹೋಗುವ ಕಡೆಗಳಲ್ಲಾದರೂ ವಿನಾಯತಿ ಬೇಡವೆ?—ಇಂಥ ಪ್ರಶ್ನೆಗಳು ಘಂಟೆ ಘಂಟೆಗೂ ಏಳುತ್ತಿದ್ದುವು. ಇವುಗಳ ನಿರ್ಣಯವನ್ನು ಕನ್ನಡ ಜನ ಕೊನೆಗೆ ಹೇಗಾದರೂ ಮಾಡಲಿ, ಸದ್ಯಕ್ಕೆ ಒಂದು ತೀರ್ಪನ್ನು ಕೊಟ್ಟು ಕಾಸಿನ ಲೆಕ್ಕದ ವ್ಯವಸ್ಥೆಯನ್ನು ಉಳಿಸುವುದಕ್ಕೆ ಒಬ್ಬ ಹೊಣೆಗಾರನು ಬೇಕಾದನು. ಅಲ್ಲದೆ ಇಂಗ್ಲಿಷಿನ ಕಠಿನ ಪದಗಳಿಗೆ ಪ್ರತಿಪದಗಳನ್ನು ಹುಡುಕಿ ತರುವ ಕ್ಲೇಶವನ್ನು ಯಾರಾದರೂ ಒಬ್ಬನಿಗೆ ವಹಿಸಿಬಿಡುವುದರಲ್ಲಿ ಸೌಕರ್ಯವುಂಟೆಂದು ಹಲವು ಮಂದಿ ಸದಸ್ಯರಿಗೆ ತೋರಿತು. ಇಷ್ಟರ ಮೇಲೆ ಸಂಘದ ಹಣಕಾಸಿನ ಲೆಕ್ಕವನ್ನು ಇಟ್ಟು ಅದನ್ನು ವಸೂಲು ಮಾಡುವ ಕರ್ತವ್ಯವನ್ನು ಒಬ್ಬನಿಗೆ ಒಪ್ಪಿಸಲೇಬೇಕಾಗಿತ್ತು. ಈ ಕೋಟಲೆಗಳನ್ನೆಲ್ಲಾ

ಒಟ್ಟಿಗೆ ಪೋಣಿಸಿ "ವಿಧಾಯಕ"ನೆಂಬ ಹೆಮ್ಮೆಯ ಹೆಸರನ್ನು ಕುಚ್ಚುಗಟ್ಟಿ, ಈ ಮುಳ್ಳಿನ ಮಾಲಿಕೆಯನ್ನು ಒಬ್ಬಾತನ ಕೊರಳಿಗೆ ಹಾಕಿಬಿಟ್ಟರು.

ಈ ವಿಧಾಯಕನಿಗೆ ಸಂಘದ ಅಭಿವೃದ್ಧಿಯ ವಿಷಯದಲ್ಲಿ ಹೇರಳವಾದ ಆಸಕ್ತಿಯಿತ್ತು. ಈಗಲಂತೂ ತನ್ನ ಕರ್ತವ್ಯವನ್ನು ವ್ರತದಂತೆ ಕೈಕೊಂಡನು. ಮೊದಲ ತಿಂಗಳಲ್ಲಿ ವಸೂಲಾದ ತಪ್ಪುಕಾಣಿಕೆಯ ಹಣಕ್ಕೆ ಅಂದವಾದ ರಟ್ಟಿನ ಕೈಪುಸ್ತಕಗಳನ್ನು ಕೊಂಡು ತಂದು ಸದಸ್ಯರಿಗೆಲ್ಲ "ಓದಿಸಿ", ಅವುಗಳಲ್ಲಿ ಪ್ರತಿಯೊಬ್ಬರೂ ತಮ್ಮ ಮತ್ತು ಉಳಿದವರ ತಪ್ಪುಗಳ ಲೆಕ್ಕವನ್ನು ಗುರುತು ಮಾಡಿ ತಿಂಗಳ ಕೊನೆಯಲ್ಲಿ ಲೆಕ್ಕ ಒಪ್ಪಿಸಬೇಕೆಂದು ನೇಮಿಸಿದನು. ತನ್ನ ಪುಸ್ತಕದಲ್ಲಿ ಬಿಡಿ ಲೆಕ್ಕ ಒಟ್ಟು ಲೆಕ್ಕಗಳಿಗೂ ಕಠಿನಪದಗಳ ಅರ್ಥಕ್ಕೂ ಸಮಸ್ಯೆಗಳ ಚರ್ಚೆಗೂ ಬೇರೆಬೇರೆ ಪುಟಗಳನ್ನು ಮೀಸಲಾಗಿಟ್ಟನು. ಮಿತ್ರರೆನ್ನದೆ ಉದಾಸೀನರೆನ್ನದೆ ಎಲ್ಲರ ತಪ್ಪುಗಳನ್ನೂ ನಿರ್ದಾಕ್ಷಿಣ್ಯವಾಗಿ ಉಲ್ಲೇಖಿಸಲು ತೊಡಗಿದನು. ಅದೇ ರೀತಿ ಮಾಡಬೇಕೆಂದು ಮಿಕ್ಕವರನ್ನು ಬೇಡಿಕೊಂಡನು, ಒತ್ತಾಯಪಡಿಸಿದನು.

ಹೀಗೆ, ತಪ್ಪುಗಳ ಶೋಧನೆಗೂ ಕಾಸುಗಳ ಸುರಿಮಳೆಗೂ ಅತಿಶಯ ವಿನೋದಕ್ಕೂ ಎಡೆಯಾಯಿತು. ಮೊದಮೊದಲಲ್ಲಿ ಸಂಘದ ಸದಸ್ಯರೆಲ್ಲರೂ ಪರಸ್ಪರ ಪತ್ತೇದಾರರಾದರು. ನಿರೀಕ್ಷಿಸದಿದ್ದ ಸ್ಥಳಗಳಲ್ಲಿ, ಅನುಕೂಲವಲ್ಲದಿದ್ದ ಸಂದರ್ಭಗಳಲ್ಲಿ ಕೂಡ, ತಪ್ಪನ್ನು ಹಿಡಿಯುವುದಕ್ಕೆ ಕೈಪುಸ್ತಕ ಸೀಸದ ಕಡ್ಡಿಗಳೊಡನೆ ಯಾರಾದರೊಬ್ಬರು ಕಾದೇ ಇರುತ್ತಿದ್ದರು. ಒಂದು ಸಂಜೆ ಸದಸ್ಯರೊಬ್ಬರು ಕೆಲವು ಮಂದಿ ಇಷ್ಟಶಿಷ್ಯರೊಡಗೂಡಿ ಕಾಲೇಜಿನ ಹತ್ತಿರದ ಕೆರೆಯಲ್ಲಿ ನೌಕಾವಿಹಾರ ಮಾಡುತ್ತಿದ್ದರು. ಮನೋಹರವಾದ ಪರಿಸರಣ, ಕೆರೆಯ ಶೀತಲಜಲದಲ್ಲಿ ಲಯಬದ್ಧವಾದ ಸಂಚಲನ, ಶಿಷ್ಯರೊಂದಿಗೆ ಹಾಸ್ಯ ರಂಜಿತವಾದ ಸಲ್ಲಾಪ—ಇದರಲ್ಲಿ ಗುರುಗಳು ಮಗ್ನರಾಗಿದ್ದಾರೆ. ಆಗ ಇದ್ದಕ್ಕಿದ್ದ ಹಾಗೆ ಕೆರೆಯ ಏರಿಯಿಂದ "ಬಿತ್ತು ಮೂರು ಕಾಸು; ಹುಷಾರ್!" ಎಂಬ ಕೂಗು ಸಂಜೆಯ ಶಾಂತಿಯನ್ನು ಸೀಳಿಕೊಂಡು ಬಂದು ಕೆರೆಯ ನಡುವೆ ದೋಣಿಯಲ್ಲಿದ್ದ ಇವರ ಕಿವಿಯನ್ನು ಶೂಲದಂತೆ ಇರಿಯಿತು. ಬೆಚ್ಚಿ ನೋಡು ನೋಡುತ್ತಾರೆ, ಏರಿಯ ಮೇಲೆ ಸಹಸದಸ್ಯರೊಬ್ಬರು ಗಾಳಿಯ ಸವಾರಿಗೆ ಹೊರಟಿದ್ದಾರೆ! ಕೆರೆಯ ನಡುವೆ ಅರೆಮರವಿನಲ್ಲಿ ತಾನು ಆಡುತ್ತಿದ್ದ ಮಾತನ್ನು ಈತನು ಹೊಂಚಿ ಕೇಳಿ ಹೀಗೆ ತಪ್ಪು ಹುಡುಕಿ ಉದ್ಘೋಷಿಸಬಹುದೆ? ಶಿಷ್ಯರ ಮುಂದೆ ತನ್ನ ಮಾನವನ್ನು ಕಳೆಯಬಹುದೆ? ಉಲ್ಲಾಸವನ್ನೆಲ್ಲಾ ಉಡುಗಿಸಬಹುದೆ? ಇದಕ್ಕೆ ಸಮಯ ಸಾಧಿಸಿ ಪ್ರತೀಕಾರ ಮಾಡಿದ ಹೊರತು ಮನಸ್ಸು ಹದಕ್ಕೆ ಬರುತ್ತದೆಯೆ?—ಇಂಥ ಪ್ರಸಂಗಗಳು ಎಷ್ಟೊಂದು ನಡೆದುವೊ! ಕಡೆಗೆ ನಿದ್ದೆ ಮಾಡುವಾಗ ಕೂಡ ಕಾಸಿನ ತಪ್ಪನ್ನು ಕನವರಿಸಿಕೊಂಡು ಚೀರಿ ಮಡದಿ ಮಕ್ಕಳನ್ನು ಬೆಚ್ಚಿಸಿದವರು ಎಷ್ಟೋ ಮಂದಿ. ಸಂಘದ ಪ್ರಭಾವ ಸದಸ್ಯರ ಜೀವನವನ್ನು ಆದ್ಯಂತವಾಗಿ ವ್ಯಾಪಿಸಿತು. ಎಲ್ಲರೂ "ಶಾಲಾ ನಿಘಂಟಿ"ನ ಹಾಳೆಗಳನ್ನು ಮಗುಚ ತೊಡಗಿದರು. (ಆಗಿನ್ನೂ ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಕೆಲಸ ಮೊದಲಾಗಿರಲಿಲ್ಲ.) "ಇದಕ್ಕೆ ಸಮಾನ ಪದ ಯಾವುದು? ಈ ಅಭಿಪ್ರಾಯವನ್ನು

ಕನ್ನಡದಲ್ಲಿ ಹೇಗೆ ಹೇಳುವುದು?"—ಯಾರ ಬಾಯಲ್ಲೂ ಈ ಬಗೆಯ ಪ್ರಶ್ನೆಗಳೇ. ಕನ್ನಡದ ಭಾಗ್ಯಚಕ್ರ ಮೇಲಕ್ಕೆ ಏರಿತೆಂದೇ ಅನೇಕರು ನಂಬಿದರು.

ಕೆಲವು ದಿನ ಕಳೆಯಿತು. ಕಾಸಿನ ಲೆಕ್ಕ ರೂಪಾಯಿಗಳ ಮಟ್ಟಕ್ಕೆ ಹತ್ತಿತು. ಕೆಲವರಂತೂ ಒಂದು ತಿಂಗಳಲ್ಲಿ ಕಾಫಿತಿಂಡಿಗಾಗಿ ವೆಚ್ಚ ಮಾಡುತ್ತಿದ್ದುದಕ್ಕಿಂತ ಹೆಚ್ಚು ಹಣವನ್ನು ತಪ್ಪು ಕಾಣಿಕೆಯಾಗಿ ಸಂಘಕ್ಕೆ ಸಲ್ಲಿಸಬೇಕಾಯಿತು. ಇದನ್ನು ನೋಡಿ ಸದಸ್ಯರ ಹೃದಯದಲ್ಲಿ ಕ್ರಮಕ್ರಮವಾಗಿ ಭೀತಿಸಂಚಾರವಾಯಿತು. ವಾಕ್ಪಟುಗಳಾಗಿದ್ದ ಹಲವರ ನಾಲಗೆ ಬಿಗಿಯಿತು. ನಿರ್ಭಯವಾಗಿ ನಿರರ್ಗಳವಾಗಿ ಹರಟೆ ಹೊಡೆಯುತ್ತಿದ್ದ ಕಾಲ ಮಾಯವಾಯಿತು. ಅರ್ಥಕ್ಕಿಂತ ಶಬ್ದಕ್ಕೆ ಪುರಸ್ಕಾರ ಹೆಚ್ಚಿತು; ಎರಡಕ್ಕಿಂತಲೂ ಮೌನವೇ ಮೇಲೆಂಬ ಪರಮಾರ್ಥ ಹಲವರಿಗೆ ಗೋಚರಿಸಿತು. "ಮೂಕಂ ಕರೋತಿ ವಾಚಾಲಂ" ಎಂಬ ಪಂಕ್ತಿ ಇಲ್ಲಿಗೆ ವಿಪರೀತಾರ್ಥದಲ್ಲಿ ಅನ್ವಯಿಸಿತು. ಅದುವರೆಗೂ ನಾಮಕರಣವನ್ನೇ ಕಾಣದಿದ್ದ ಸಂಘಕ್ಕೆ ಈಗ 'ಕಾಸಿನ ಸಂಘ'ವೆಂಬ ಅಪಖ್ಯಾತಿ ಅಂಟಿಕೊಂಡಿತು.

ಹಣ ತೆರುವುದನ್ನು ತಪ್ಪಿಸಿಕೊಳ್ಳುವ ಸಲುವಾಗಿ, ಹಿಂದೆ ಊಹೆಗೂ ಮೀರಿದ್ದ ಕೆಲವು ಪದ್ಧತಿಗಳು ಕಾಣಿಸಿಕೊಂಡವು. "ನಾನು ಕನ್ನಡವನ್ನು ಆಡುವುದಕ್ಕೆ ಹೊರಟರೆ ತಾನೆ ಜುಲ್ಮಾನೆ ಬೀಳುವುದು. ಇನ್ನು ಮುಂದೆ ಏನಾದರೂ ಚಿಂತೆಯಿಲ್ಲ, ಇಂಗ್ಲಿಷನ್ನೇ ಉದ್ದಕ್ಕೂ ಆಡುತ್ತಾ ಇದ್ದುಬಿಡೋಣ" ಎಂದು ಕೆಲವರು ದೃಢಪ್ರತಿಜ್ಞೆ ಮಾಡಿ ಅದನ್ನೇ ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದರು. ಅದುವರೆಗೆ ಅವರ ಬಾಯಿಂದ ಒಮ್ಮೊಮ್ಮೆ ಹೊರಡುತ್ತಿದ್ದ ಕನ್ನಡ ಪದಗಳೂ ಈಗ ಅಗೋಚರವಾದುವು. ಬೇಕೆಂದು ಕನ್ನಡದಲ್ಲಿ ಪ್ರಶ್ನೆಹಾಕಿದರೂ ಅವರು ಎಚ್ಚರ ತಪ್ಪದೆ ಇಂಗ್ಲಿಷಿನಲ್ಲೇ ಉತ್ತರ ಕೊಡುತ್ತಿದ್ದರು. ಇನ್ನು ಕೆಲವರು ಬೇರೊಂದು ಯುಕ್ತಿಯನ್ನು ಹುಡುಕಿದರು. "ಕನ್ನಡಕ್ಕೆ ಇಂಗ್ಲಿಷನ್ನು ಬೆರಸಿದರೆ ದೋಷ; ತಮಿಳಿನಲ್ಲೋ ಹಿಂದುಸ್ತಾನಿಯಲ್ಲೋ ಮಾತಾಡುತ್ತಾ ಅದರ ತುಂಬ ಇಂಗ್ಲಿಷನ್ನು ಗಿಡಿದರೂ ನಮ್ಮ ಕೈತಡೆಯುವವರು ಯಾರು?" ಎಂದು ತಮಿಳು ಹಿಂದುಸ್ತಾನಿಗಳ ಕೊಲೆಗೆ ತೊಡಗಿದರು. ಇವರ ವಾಗ್ಧಾರೆಯನ್ನು ನೋಡಿದವರಿಗೆ—ಕನ್ನಡದ ಮಾತಿರಲಿ, ಈ ಜೊತೆಯ ಭಾಷೆಗಳ ರಕ್ಷಣೆಗಾಗಿ ಒಂದು ಸಂಘವನ್ನು ಮೊದಲು ಸ್ಥಾಪಿಸಬೇಕು ಎನ್ನಿಸುತ್ತಿತ್ತು.

ಈ ಎರಡು ಗುಂಪಿನ ಸದಸ್ಯರು ಹೀಗೆ ಚಾಪೆಯ ಕೆಳಗೆ ತೂರಿದರೆ, ಬೇರೆ ಕೆಲವರು ರಂಗೋಲಿಯ ಕೆಳಗೆ ತೂರುವ ಚಳಕವನ್ನು ತೋರಿಸಿದರು. "ಈಗ game ಅಂತಾರಲ್ಲ ಅದನ್ನು start ಅನ್ನೋ ಪದಾರ್ಥ ಮಾಡೋಣ", "ಇವತ್ತು weather ಅನ್ನೋ ಪದಾರ್ಥ warm ಅಂತಾರಲ್ಲ ಅದಾಗಿದೆ", "ನನ್ನ ಮಾತನ್ನು ಬಕಗ್ರೀವದಲ್ಲಿ personal ಅನ್ನೋ ಹಾಗೆ ತಗೋಬೇಡಿ, objective ಅಂತಾರಲ್ಲ ಹಾಗೆ consider ಮಾಡಿ—consider ಬಕಗ್ರೀವದಲ್ಲಿ"—ಈ ಸೌಷ್ಠವದ ವಾಕ್ಯಪರಂಪರೆ ಅವರ ಬಾಯಲ್ಲಿ ಒಂದೇ ಸಮನಾಗಿ ಹೊರಡತೊಡಗಿತು. "ಬಕಗ್ರೀವದಲ್ಲಿ" ಎನ್ನುವುದು "in inverted commas" ಎಂಬುದಕ್ಕೆ ಕನ್ನಡ! ನಮ್ಮಲ್ಲಿ ಹಿಂದಿನಿಂದಲೂ ಇರುವ "ಹಂಸಪಾದ"

ಎಂಬುದರ ಮಾದರಿಯ ಮೇಲೆ, ಈ "ಬಕಗ್ರೀವ"ವನ್ನು ಅನುವಾದ ಚಿಹ್ನೆ ಎಂಬ ಅರ್ಥದಲ್ಲಿ ಪ್ರತಿಭಾಶಾಲಿಗಳೊಬ್ಬರು ಸಂಘದಲ್ಲಿ ಬಳಕೆಗೆ ತಂದಿದ್ದರು. "ಬಕಗ್ರೀವದಲ್ಲಿ" ಎಂಬ ಮಂತ್ರಾಕ್ಷರಗಳನ್ನು ಒಂದು ಇಂಗ್ಲಿಷ್ ಪದದ ಹಿಂದೆಯೋ ಮುಂದೆಯೋ ಉಚ್ಚರಿಸಿಬಿಟ್ಟರೆ ತೀರಿತು. ಯಾವ ಮೈಲಿಗೆಯ ದೋಷವೂ ಅಂಟುತ್ತಿರಲಿಲ್ಲ!—ಹಿಂದೆ ಹೇಳಿದ ಎರಡು ವರ್ಗದವರೇನೋ ಸಂಘದ ನಿಯಮಗಳಿಗೆ ಅಂಜಿ ಆತ್ಮಸಂರಕ್ಷಣೆಯ ಉಪಾಯಗಳನ್ನು ಹುಡುಕಿಕೊಂಡರೆನ್ನಬಹುದು. ಈ ಕೊನೆಯುವರ್ಗದ ಮಹನೀಯರಾದರೆ "ಅನುವಾದ ವಿಧಿ"ಯ ವಿಡಂಬನಾ ಶಾಸ್ತ್ರವನ್ನು ಪ್ರಯೋಗಿಸಿ, ಸಂಘವನ್ನು ಹಾಸ್ಯದ ಗಾಳಿಯಲ್ಲಿ ತೂರಿಬಿಡುವಂತೆ ತೋರಿತು. ಅದನ್ನು ತಡೆಗಟ್ಟುವ ಯಾವ ಪ್ರತ್ಯಸ್ತ್ರಗಳೂ ವಿಧಾಯಕನ ಬತ್ತಳಿಕೆಯಲ್ಲಿ ಇರಲಿಲ್ಲ.

ಈ ನಡುವೆ ವಿಧಾಯಕನಿಗೆ ಕೆಲವು ವಿಲಕ್ಷಣವಾದ ಅನುಭವಗಳು ಒದಗ ತೊಡಗಿದವು. ತಾನು ಎದುರಿಗಿದ್ದಾಗ ಮಾತ್ರ ಸದಸ್ಯರೆಲ್ಲರೂ ಬೇಕಾದಷ್ಟು ತಪ್ಪು ಮಾಡುತ್ತಿದ್ದಂತೆಯೂ ಅವರವರೇ ಸಂಧಿಸಿದಾಗ ಹರಟೆಯಲ್ಲಿ ಎಷ್ಟು ಕಾಲ ಕಳೆದರೂ ಅವರ ಬಾಯಿಂದ ಬೆರಕೆಮಾತೇ ಹೊರಡದಿದ್ದಂತೆಯೂ ಸದಸ್ಯರ ಲೆಕ್ಕದ ಪುಸ್ತಕಗಳ ಪರಿಶೀಲನೆಯಿಂದ ಈತನಿಗೆ ಭಾಸವಾಯಿತು. ಇದರ ಜೊತೆಗೆ, ಉಪಾಧ್ಯಾಯರ ಕೊಠಡಿಯಲ್ಲಿ ಈತನಿಲ್ಲದಿರುವಾಗ ಯಥೇಚ್ಛವಾಗಿ ಗದ್ದಲವಾಗುತ್ತಿದ್ದರೂ, ದೂರದಲ್ಲಿ ಈತನ ಮುಖ ಕಾಣುತ್ತಿದ್ದ ಹಾಗೆಯೇ ಗುಸುಗುಸು ಮಾತು ಅರ್ಧ ನಿಮಿಷ ನಡೆದು, ಈತನು ಕೊಠಡಿಗೆ ಕಾಲಿಡುವುದಕ್ಕೂ ಅಲ್ಲಿ ನಿಶ್ಶಬ್ದತೆ ತುಂಬಿಕೊಳ್ಳುವುದಕ್ಕೂ ಸರಿ ಹೋಗುತ್ತಿತ್ತು; ಕೊಠಡಿಯಿಂದ ಹೊರಡುತ್ತಲೇ ಮತ್ತೆ ಮಾತಿನ ಹೊಳೆ ಹರಿಯುತ್ತಿತ್ತು. ಇದೆಲ್ಲಕ್ಕಿಂತ ಹೆಚ್ಚಾಗಿ ಆತನನ್ನು ಕಳವಳಪಡಿಸಿದ ಸಂಗತಿಯೇನೆಂದರೆ, ಹಿಂದೆ ಆಪ್ತಮಿತ್ರರಾಗಿದ್ದವರು ಕೂಡ ಈಗ ದೂರದಲ್ಲಿ ಕಂಡರೆ ಕಾಣದವರಂತೆ ಹಾಗೆಯೇ ಸರಿದುಬಿಡುತ್ತಿದ್ದರು. ಒಂದೊಂದು ವೇಳೆ ಸಮೀಪಿಸಲೇಬೇಕಾದಾಗ ಎರಡು ನಿಮಿಷಗಳೂ ತುಟಿಪಿಟಕ್ಕೆನ್ನದೆ ಸುಮ್ಮನಿದ್ದು, ಬೇರೆ ಯಾವುದೋ ಕೆಲಸವನ್ನು ಜ್ಞಾಪಿಸಿಕೊಂಡವರಂತೆ ಹೊರಡುತ್ತಿದ್ದರು. ಅಂತೂ ತುಂಬಿದ ವಿಶ್ವದಲ್ಲಿ ತಾನು ಮಾತ್ರ ಏಕೋ ಒಂಟಿಯಾದಂತೆ ವಿಧಾಯಕನಿಗೆ ಅರಿವಾಯಿತು.

ಇದೆಲ್ಲದರ ಅರ್ಥ ಕೊನೆಕೊನೆಗೆ ಆತನ ಉತ್ಸಾಹದ ತಿಮಿರವನ್ನು ಭೇದಿಸಿ ಕೊಂಡುಬಂದು ಒಳಗಣ್ಣಿಗೆ ಹೊಳೆಯಿತು : ಕನ್ನಡದ ಉದ್ಧಾರಕ್ಕಾಗಿ ಹೊರಟಿದ್ದವರು "ಕಾಸಿನ ಲೆಕ್ಕ"ದ ಮಹಿಮೆಯಿಂದ ಈಗ ಕನ್ನಡವನ್ನೇ ಹಗೆಯಾಗಿ ಕಾಣುವ ಸ್ಥಿತಿಗೆ ಇಳಿದಿದ್ದರು; ಕನ್ನಡ ಮಾತಿನಲ್ಲಿ ಇಂಗ್ಲಿಷಿಗೆ ಬಹಿಷ್ಕಾರ ಹಾಕಲು ಕಂಕಣ ಕಟ್ಟಿದ್ದವರು ಈಗ ತಮ್ಮ ವಿಧಾಯಕನಿಗೇ ಬಹಿಷ್ಕಾರ ಹಾಕಿದ್ದರು.

ಇದಕ್ಕೆ ಏನು ಪರಿಹಾರವೆಂದು ಚಿಂತಿಸುತ್ತಾ ತಲೆಯ ಮೇಲೆ ಕೈಹೊತ್ತು ಕುಳಿತಿದ್ದ ವಿಧಾಯಕನ ಜಡಮತಿಯಲ್ಲಿ ಒಂದು ದಿನ ಇದ್ದಕ್ಕಿದ್ದ ಹಾಗೆ ವಿದ್ಯುತ್ಸಂಚಾರವಾಯಿತು; ಅಮೂಲ್ಯವಾದೊಂದು ದಾರಿ ಗೋಚರವಾಯಿತು. ಸದಸ್ಯರು ಅದುವರೆಗೆ ಸಂಘಕ್ಕೆ

ತೆತ್ತಿದ್ದ ಕಾಸುಗಳೆಲ್ಲವೂ ಸೇರಿ ಸೇರಿ **ಅಡಕ**ವಾದ ಗಂಟಾಗಿತ್ತು; ಅದನ್ನು ವಿಧಾಯಕನು ಈಗ ಬಿಚ್ಚಿದನು. ಆ ದಿನ ಸಂಜೆಯೇ ಉಪಾಧ್ಯಾಯರ ಕೊಠಡಿಯಲ್ಲಿ ವಿಶೇಷ ವೈಭವದೊಡನೆ ಒಂದು ಉಪಾಹಾರ ಕೂಟವನ್ನು ಏರ್ಪಡಿಸಿದನು. ಕೂಟದ ಕಾರಣ ತಿಳಿಯದಿದ್ದರೂ ಉದಾರ ಮನಸ್ಸಿನಿಂದ ಸದಸ್ಯರೆಲ್ಲರೂ ದಯಮಾಡಿಸಿ ಸೀತಿಂಡಿಗಳನ್ನು ತಿಂದು ಖಾರವನ್ನು ರುಚಿನೋಡಿ ಕಾಫಿಯ ರಸವನ್ನು ಮೆಲ್ಲಮೆಲ್ಲಗೆ ಆಸ್ವಾದಿಸುವುದರಲ್ಲಿ ತಲ್ಲೀನರಾಗಿದ್ದಾರೆ. ತಾಟು ಲೋಟ ಚಮಚಗಳ ಕಿಣಕಿಣ ಧ್ವನಿಯೇ ಹೊರತು ಯಾವ ಸದ್ದೂ ಯಾರ ಉಸಿರೂ ಆ ವಿಶಾಲವಾದ ಕೊಠಡಿಯಲ್ಲಿ ಕೇಳಬರುತ್ತಿಲ್ಲ. ಆಗ ವಿಧಾಯಕನು ಎದ್ದುನಿಂತು ಮೇಲಕ್ಕೆ ನೋಡುತ್ತಾ, "ಕಾಫಿ ಕುಡಿಯುವಾಗ ನಮ್ಮ ಕಾಸಿನ ಸಂಘ ತಲೆಯೆತ್ತಿತು; ಈಗ ಅದನ್ನು ಕಾಫಿಯಲ್ಲೇ ಮುಳುಗಿಸಿಬಿಡೋಣ. ಇನ್ನು ಮುಂದೆ ನಾನು ವಿಧಾಯಕನಲ್ಲ, ನೀವು ಸದಸ್ಯರಲ್ಲ. ಎಲ್ಲರೂ ಕೇವಲ friends, ಅಷ್ಟೇ" ಎಂದು ಹೇಳಿ ತನ್ನ ಲೆಕ್ಕದ ಕಡತವನ್ನು ಹಾಳೆಹಾಳೆಯಾಗಿ ಹರಿದು ಗಾಳಿಗೆ ತೂರಿಬಿಟ್ಟನು. "Dictator ಕೀ ಜೈ!" ಎಂಬ ಮಹಾಘೋಷ ಆ ಸಮೂಹದಿಂದ ಏಕಕಂಠವಾಗಿ ಹೊರಟು ಕೊಠಡಿಯ ಚಾವಣಿಯನ್ನು ಅಲ್ಲಾಡಿಸಿಬಿಟ್ಟಿತು.

ಆ ಲೆಕ್ಕದ ಪುಸ್ತಕದ ಒಂದೆರಡು ಹಾಳೆಗಳು ಉಪಾಧ್ಯಾಯರ ಕೊಠಡಿಯ ಮೂಲೆಗಳಲ್ಲಿ ಎಲ್ಲಾದರೂ ಅವಿತುಕೊಂಡು 'ಕಾಸಿನ ಸಂಘ'ದ ಸದಸ್ಯರನ್ನು ಈಗಲೂ ಅಣಕಿಸುತ್ತಿರಬಹುದು.

●

ನೆಗಡಿ

"ಒಂದು, ಎರಡು, ಮೂರು, ನಾಲ್ಕು, ಐದು, ...ಇಲ್ಲ, ಇನ್ನೂ ಮುಗಿದಿಲ್ಲ!—ಆರು, ಏಳು, ಎಂಟು, ಒಂಬತ್ತು,—ಅಬ್ಬಬ್ಬಾ!—ಹತ್ತು, ಇನ್ನೂ ಒಂದು! . . . ಈಗ ಶಾಂತವಾಯಿತು!"

ಇದೇನು ಎಣಿಕೆ? ಮನೆಯಲ್ಲಿರುವ ಹುಡುಗರು ಹಿರಿಯರು ಎಲ್ಲರಿಗೂ ಈ ಬೆರಗೇಕೆ? ಹೊರಗಿನಿಂದ ಯಾರಾದರೂ ಸಂಸ್ಥಾನಾಧಿಪತಿಗಳು ಆಗಮಿಸಿದಾಗ ಆಗುವ ಗುಂಡುಗಳನ್ನು ಹೀಗೆ ಲೆಕ್ಕ ಹಾಕುತ್ತಿದ್ದಾರೆಯೆ?

ಅಲ್ಲ, ಅಲ್ಲ! ನನಗೆ ನೆಗಡಿ ಹಿಡಿದಾಗ ಭಾಂಕರಿಸುವ ಸೀನುಗಳ ಲೆಕ್ಕ ಇದು! ಹೊರಗಿನ ಪ್ರಭುಗಳ ಆಗಮನ ನಿರ್ಗಮನ ಕಾಲಗಳಲ್ಲಿ ಮಾತ್ರ ಗುಂಡಿನ ಮರ್ಯಾದೆ ನಡೆಯುವುದು ಸಂಪ್ರದಾಯ. ಆದರೆ ಈ ನನ್ನ ಪಟ್ಟದ ದೊರೆಗೆ ಅಷ್ಟರಲ್ಲೇ ತೃಪ್ತಿಯಿಲ್ಲ; ಇಷ್ಟೇ ಗುಂಡುಗಳೆಂಬ ಕ್ಲುಪ್ತವೂ ಇಲ್ಲ. ಸ್ವೇಚ್ಛೆಯಾಗಿ ಸ್ವತಂತ್ರವಾಗಿ ಎಣಿಕೆಯನ್ನು ಅಣಕಿಸಿ ಸೀನುಗಳು ಹೊರಬಿದ್ದು ಮನೆತುಂಬ ಪ್ರತಿಧ್ವನಿಸುತ್ತವೆ; ನಾಭಿಯಿಂದ ನೆತ್ತಿಯವರೆಗೆ ಅಂಗಾಂಗಗಳನ್ನು ಅಲ್ಲಾಡಿಸುತ್ತವೆ. ಡೈನಮೈಟುಗಳು ಸಾಲಾಗಿ ಸಿಡಿದಾಗ ಬಂಡೆಗಳು ಬಿರಿದು ಮಣ್ಣೆಲ್ಲ ಎರಚಾಡಿ ಉತ್ಕಂಪಿಸುವ ಭೂಭಾಗದಂತೆ ನಾನಿದ್ದರೆ, ನಮ್ಮ ಮನೆಮಂದಿ ಯೆಲ್ಲರೂ ಸೀನಿನ ತುಂತುರುಗಳು ಎಟುಕದಷ್ಟು ದೂರದಲ್ಲಿ ನಿಂತು ಸ್ವಲ್ಪವೂ ಅಂಜಿಕೆಯಿಲ್ಲದೆ ಉತ್ಸಾಹದಿಂದ ಸೀನುಗಳನ್ನು ಎಣಿಸಲು ತೊಡಗುತ್ತಾರೆ.

ಈ ಸಲ ಇಷ್ಟೇ ಬರುತ್ತವೆ ಎಂದು—ನನಗೆ ತಿಳಿಯದಂತೆ—ಒಬ್ಬರೊಡನೊಬ್ಬರು ಪಂತಗಳನ್ನು ಕೂಡ ಕಟ್ಟುತ್ತಾರೋ ಏನೋ. ನನಗೆ ಮೈ ಕೈ ನೋವೆಂದರೆ ಆತಂಕಪಡುವ ಕೈಹಿಡಿದಾಕೆ ಕೂಡ ಈ ಪ್ರಸಂಗದಲ್ಲಿ ಮಿಕ್ಕವರ ಜೊತೆಗೇ ಸೇರಿಬಿಡುತ್ತಾಳೆ. ರೇಗಿ ಪ್ರಯೋಜನವಿಲ್ಲ. ಗಂಟಲು ಚೆನ್ನಾಗಿ ಕಟ್ಟಿಕೊಂಡಿರುವುದರಿಂದ ಗಟ್ಟಿಯಾಗಿ ಆರ್ಭಟಿಸಲು ಕೂಡ ಆಗುವುದಿಲ್ಲ. ಹೋಯಿತು–ಈ ನೆಗಡಿಸೀನುಗಳಿಂದ ದರ್ಪ ಹೋಯಿತು, ಗೌರವ ಹೋಯಿತು!

ಇದೊಂದು ದೊಡ್ಡ ಕೊರಗು ನನಗೆ. ನೆಗಡಿ ಎಂಥ ಪ್ರಬಲವಾದ ವ್ಯಾಧಿ! ಇದು ಹಿಡಿದರೆ ಸಾಕು; ಮೂಗು ಆನೆಯ ಸೊಂಡಲಿನಷ್ಟು ಭಾರವಾಗುತ್ತದೆ. ಕಣ್ಣು ಉರಿಗೆಂಡವಾಗಿ, ಅಂಗುಳು ಹುರಿಹೆಂಚಾಗಿ, ಗಂಟಲು ಶ್ಲೇಷ್ಮದ ಕೆಸರಿನಲ್ಲಿ ಅಡಗಿ ಹೋಗುತ್ತದೆ. ಎದೆಯಂತೂ ಉಕ್ಕಿನ ಯಂತ್ರದಲ್ಲಿ ಅದುಮಿದಂತಾಗುತ್ತದೆ. ನೆತ್ತಿ ಕತ್ತಿನ ಮೇಲೆ ನಿಂತಿರುವಂತೆಯೇ ತೋರುವುದಿಲ್ಲ. ದೇಹದ ಊರ್ಧ್ವ ಭಾಗದಲ್ಲೆಲ್ಲಾ ಈ ರೋಗದ ಅಸಂಖ್ಯಾತ ಕ್ರಿಮಿಸೇನೆ ಬೀಡುಬಿಟ್ಟಿರುತ್ತದೆ. ಹೀಗಿದ್ದರೂ ನೆಗಡಿ ಬಂದವನ ವಿಷಯದಲ್ಲಿ ಯಾರಿಗಾದರೂ ಸಹಾನುಭೂತಿಯುಂಟೆ? ಒಬ್ಬನಿಗೆ ಸ್ವಲ್ಪ ಜ್ವರ ಬಂದರೆ ಸಾಕು; ಬೆಚ್ಚಗೆ ಹಾಸಿಗೆ ಹಾಸಿ ಹೊದಿಸಿ, ಬಾಯಿಗೆ ಸವಿಯಾಗುವಂತೆ ಹಾಲುಗಂಜಿಗಳನ್ನು ಹವಣಿಸಿ, ಔಷಧಿಗಾಗಿ ಮನೆಯವರೆಲ್ಲ ಪರದಾಡುವವರೇ. ಸಾಧಾರಣವಾಗಿ ಮನೆಯ ಹತ್ತಿರ ಸುಳಿಯದ ಮಿತ್ರರೆಲ್ಲ ಹುಡುಕಿಕೊಂಡುಬಂದು ಹತ್ತಿರ ಕುಳಿತು ಆ ಮಾತು ಈ ಮಾತು ಆಡಿ ಬೇಸರ ಕಳೆಯುವವರೇ. ಆದರೆ ಜ್ವರಕ್ಕಿಂತ ಹತ್ತುಪಾಲು ಬಿರುಸಾಗಿ ನೆಗಡಿ ದೇಹವನ್ನು ಕಿತ್ತು ತಿನ್ನುತ್ತಿದ್ದರೂ ನಿಮ್ಮ ವಿಷಯದಲ್ಲಿ ಯಾರಿಗೂ ಲಕ್ಷ್ಯವಿಲ್ಲ. "ಒಂದು ಕಡ್ಡಿ ಸೌದೆಯೂ ಇಲ್ಲ, ಅಂದರೆ. ಡಿಪೋಕ್ಕೆ ಹೋಗಿ ವಿಚಾರಿಸಿಕೊಂಡು ಬರಬಾರದೆ?" ಎಂದು ನಿಮ್ಮ ಅರ್ಧಾಂಗಿಯೇ ಆಜ್ಞಾಪಿಸುತ್ತಾಳೆ. "ಮೊದಲೇ ನೆಗಡಿ, ತಲೆಭಾರ; ಮೇಲೆ ಸೋನೆ ಬೇರೆ ಬೀಳುತ್ತಿದೆಯಲ್ಲ!" ಎಂದು ನೀವು ಒಂದೆರಡು ಸಲ ಕೆಮ್ಮಿ ಗಗ್ಗರದನಿಯಿಂದ ಹೇಳಿದರೆ, "ಅಯ್ಯೋ, ನಿಮ್ಮ ನೆಗಡಿ ತಪ್ಪಿದ ದಿನ ಯಾವುದು? ತಲೆಯ ಮೇಲೆ ಒಂದು ಟವಲು ಹಾಕಿಕೊಂಡು ಹೋಗಿ ಬನ್ನಿ; ಬೇಕಾದರೆ ಶಾಲನ್ನೇ ಹೊದ್ದುಕೊಳ್ಳಿ. ಆಮೇಲೆ ಕಷಾಯ ಕಾಸಿಕೊಡುತ್ತೇನೆ; ಎಲ್ಲಾ ಸರಿಹೋಗುತ್ತದೆ" ಎಂದು ತಾತ್ಸಾರವಾಗಿ ಅನ್ನುತ್ತಾಳೆ. ಅಲ್ಲಿಗೇ ನಿಲ್ಲಿಸದೆ, "ಇಷ್ಟಕ್ಕೂ ನಿಮ್ಮದೇ ಅಪಥ್ಯ. ತಿಳಿದೂ ತಿಳಿದೂ ಕ್ಷೌರಮಾಡಿಕೊಂಡು ನೆತ್ತಿಗೆ ಸ್ನಾನ ಮಾಡಿದಿರಿ. ಒಂದು ದಿನ ಮುಖಕೆತ್ತಿಕೊಳ್ಳದಿದ್ದರೆ ಏನು ಉಳಿದುಹೋಗುತ್ತಿತ್ತು? ಮಜ್ಜಿಗೆ ಹಾಕಿಸಿಕೊಳ್ಳಬೇಡಿ ಅಂತ ನಿನ್ನೆಯ ರಾತ್ರಿ ನಾನು ಎಷ್ಟು ಒರಲಿಕೊಂಡರೂ ಕೇಳಿದಿರಾ? ಎಳೆಯ ಮಕ್ಕಳ ಹಾಗೆ ಹಠ ಮಾಡಿದಿರಿ. ಈಗ ಅನುಭವಿಸಿ." ಎಂದು ಹಂಗಿಸಿ ಅಟ್ಟಿಬಿಡುತ್ತಾಳೆ. ಆಕೆಗೆ ಯಾವಾಗಲೂ ನಿಮ್ಮ ಮಜ್ಜಿಗೆಯ ಮೇಲೆಯೇ ಕಣ್ಣು. ಅನ್ನಕ್ಕೆ ಹಾಲು ಕಲಸಿಕೊಂಡರೆ ಒಂದು ತುತ್ತೂ ನಿಮ್ಮ ಗಂಟಲಲ್ಲಿ ಇಳಿಯುವುದಿಲ್ಲವೆಂದು ಆಕೆ ಬಲ್ಲಳು. ಅದಕ್ಕೇ, ನೆಗಡಿಯ ಸುಳಿವನ್ನು ಕಂಡ ಕೂಡಲೆ ಎಲ್ಲಕ್ಕೂ ಮುಂದಾಗಿ ಮಜ್ಜಿಗೆಯನ್ನು ತಪ್ಪಿಸಿಬಿಡುತ್ತಾಳೆ. ಹಾಲನ್ನವನ್ನು ಔಷಧಿಯಂತೆ ಊಡಿಸುತ್ತಾಳೆ. ಇಷ್ಟೇ ಅಲ್ಲ.

ಉರಿಬೇಸಗೆಯಲ್ಲಿ ಕೂಡ, ಒಂದು ಲೋಟ ನೀರು ಮಜ್ಜಿಗೆಯನ್ನೋ ನಿಂಬೆಹಣ್ಣಿನ ಪಾನಕವನ್ನೋ ಮಾಡಿಕೊಡೆಂದು ನೀವು ಕೇಳಿದರೆ, "ಸಾಕು ಸುಮ್ಮನಿರಿ. ಹಾಗೆಲ್ಲ ಚಪಲಪಡಬಾರದು. ನೆಗಡಿ ಬಂದು ಬಿಟ್ಟೀತು!" ಎಂದು ನಸುನಗುತ್ತಾ ನಿಷೇಧಿಸಿಬಿಡುತ್ತಾಳೆ.

ಮನೆಯ ಸೌಖ್ಯ ಹೀಗಾಯಿತು. ಹೊರಗಡೆಯೋ? ನೀವು ಎದುರಿಗೆ ಬಂದಾಗ ಆಪ್ತಮಿತ್ರರು ಕೂಡ ಹಾವನ್ನು ಕಂಡಂತೆ ಹಿಮ್ಮೆಟ್ಟುತ್ತಾರೆ. ವಿಧಿಯಿಲ್ಲದೆ ಮಾತಾಡಿಸಲೇ ಬೇಕಾದಾಗ ಚರಂಡಿಯ ದುರ್ವಾಸನೆಗೆ ಅಸಹ್ಯಪಟ್ಟವರಂತೆ ಮುಖಕ್ಕೆ ಬಟ್ಟೆ ಹಿಡಿದುಕೊಂಡೇ ನಿಲ್ಲುತ್ತಾರೆ. ಕೆಲವು ಮಂದಿ ಸಲಿಗೆಯ ಸ್ನೇಹಿತರಂತೂ, "ಅಯ್ಯಾ ಮಹಾರಾಯ, ಈ ನೆಗಡಿ ಕಟ್ಟಿಕೊಂಡು ಯಾವ ದಿಗ್ವಿಜಯಕ್ಕೆ ಹೊರಟೆ? ಹಾಯಾಗಿ ಮನೆಯಲ್ಲಿ ಮೂಗು ಮುಚ್ಚಿಕೊಂಡು ಇರಬಾರದಾಗಿತ್ತೆ? ನಿನ್ನ ಶೀತಶೀಕರಗಳನ್ನು ನಮ್ಮ ಮೇಲೆ ತೂರಬೇಡಪ್ಪಾ!" ಎಂದು ಸ್ಪಷ್ಟವಾಗಿಯೇ ಆಡಿ ದೂರ ನೂಕುತ್ತಾರೆ. ಆದರೆ ಇವರ ಬಹಿಷ್ಕಾರಕ್ಕೆ ಬೆದರಿ ನಿತ್ಯಕ್ರಮವನ್ನು ಬಿಡಲಾದೀತೆ? ಮೂಗು ಕಟ್ಟಿಕೊಂಡಾಗಲೆಲ್ಲ ರಜಕ್ಕೆ ಬರೆದುಹಾಕಿ ಮನೆಯಲ್ಲಿ ಕುಳಿತುಬಿಟ್ಟರೆ, ಸಂಬಳಕ್ಕೇ ಸೊನ್ನೆ ಬಿದ್ದೀತು! ಇಷ್ಟರ ಮೇಲೆ ನೆಗಡಿ ನನ್ನೊಬ್ಬನ ಹಕ್ಕಿನ ಆಸ್ತಿಯೇನೂ ಅಲ್ಲವಲ್ಲ. ಇವರ ಮುಖವನ್ನು ಅದು ಮೂಸಿನೋಡಲೇಕೂಡದೋ? ಅಂಥ ಸ್ವಾಮ್ಯಭಾವ ನನಗೇನೂ ಇಲ್ಲ. ನನ್ನ ಸಹವಾಸದಿಂದ ಇವರಿಗೂ ಅದರ ನಿಕಟ ಪರಿಚಯ ಒದಗಲಿ; ಆಗ ಮೆತ್ತಗಾಗುತ್ತಾರೆ. "ಸಮಾನಶೀಲವ್ಯಸನೇಷು ಸಖ್ಯಂ" ಎಂಬ ಉಕ್ತಿ ಸಾರ್ಥಕವಾಗುವುದು ಇನ್ನು ಹೇಗೆ! ಕೈಯಲ್ಲಿ ಕರವಸ್ತ್ರವನ್ನು ಹಿಡಿದು ಮೂಗನ್ನು ಹಿಂಡುತ್ತಾ ಕಣ್ಣೀರನ್ನು ಸುರಿಸುತ್ತಾ ದೀನವೀಕ್ಷಣವನ್ನು ಒಬ್ಬರ ಕಡೆಗೊಬ್ಬರು ಬೀರಿದಾಗಲಲ್ಲವೆ ಸಹಾನುಭೂತಿ ದಾಂಗುಡಿಯಿಟ್ಟು ಮೈತ್ರಿಯ ಬಂಧನ ಬಿಗಿ ಯಾಗುವುದು!

ನೆಗಡಿಗೆ ಇಂಥ ಕಾಲ, ಇಷ್ಟು ಸಲ ಎಂಬ ಕಟ್ಟುಪಾಡು ಯಾವುದೂ ಇದ್ದಂತೆ ನನ್ನ ಅನುಭವಕ್ಕೆ ಬಂದಿಲ್ಲ. ಚಳಿಗಾಲದಲ್ಲಿ, ಅದರಲ್ಲೂ ತುಂತುರು ಹನಿ ಬೀಳುವಾಗ, ಇದರ ಉರುಬು ಹೆಚ್ಚು ಎಂದು ಹೇಳುವವರುಂಟು. ನೊವೆಂಬರ್ ತಿಂಗಳ ಮೊದಲನೆಯ ವಾರದಲ್ಲಿ ನೆಗಡಿ ಭೇಟಿ ಕೊಡದಿದ್ದರೆ, ಋತುಧರ್ಮವೇ ಬದಲಾದಂತೆ ಆತಂಕ ಪಡುವವರೂ ಉಂಟು. ಆದರೆ ನನ್ನ ನೆಗಡಿ ಹೀಗೆ ತನ್ನ ಸವಾರಿಗೆ ಪರಿಮಿತಿಗಳನ್ನು ಕಲ್ಪಿಸಿಕೊಂಡಿಲ್ಲ. ಆದಕಾರಣವೇ ಒಮ್ಮೊಮ್ಮೆ ನನ್ನ ಪ್ರಶಂಸೆಯನ್ನು ಕೂಡ ಗಳಿಸಿದೆ. ನನ್ನ ಗುರುತಿನ ದೊಡ್ಡ ಮನುಷ್ಯರೊಬ್ಬರು, "ನನಗೆ ಮೂರು ತಿಂಗಳಿಗೊಂದು ಸಲ ತಪ್ಪದೆ ನೆಗಡಿ ಹಿಡಿಯುತ್ತದೆ" ಎಂದು ಹೇಳಿ, ತಿಂಗಳಿಗೊಂದು ಸಲ ತಪ್ಪದೆ ಒಂದು ಸಾವಿರ ರೂಪಾಯಿ ಸಂಬಳ ತೆಗೆಯುವವರ ಹಾಗೆ ಹೆಮ್ಮೆ ಕೊಚ್ಚಿಕೊಂಡರು. ಆದರೆ ಅವರನ್ನು ಕುರಿತು ಕನಿಕರವೂ ಅವರ ನಿಯಮಬದ್ಧವಾದ ನೆಗಡಿಯ ವಿಷಯದಲ್ಲಿ ತಿರಸ್ಕಾರವೂ ನನಗೆ ಹುಟ್ಟಿತು. ನನ್ನ ನೆಗಡಿಯ ಪೂರ್ಣ ಸ್ವಾತಂತ್ರ್ಯವನ್ನು ನೆನೆದು ಅದರಲ್ಲಿ ಅಭಿಮಾನವುಕ್ಕಿತು. ಅದು ಹೀಗೆಲ್ಲ ಅವಧಿಗೆ ಕಟ್ಟುಬೀಳುವುದಿಲ್ಲ. ಮನಸ್ಸು

ಬಂದರೆ ಮರಮರಳಿ ಬರುತ್ತದೆ, ಅನೇಕ ಕಾಲ ತಂಗುತ್ತದೆ; ಇಲ್ಲವಾದರೆ ಎಷ್ಟೋ ದಿನ ನಾನು ಕಾದು ನಿರೀಕ್ಷಿಸುತ್ತಿದ್ದರೂ ಇತ್ತ ಕಡೆ ಸುಳಿಯುವುದೇ ಇಲ್ಲ. ಉದಾಹರಣೆಗೆ, ಈ ಸಲದ ನೊವೆಂಬರಿನಲ್ಲಿ ನನ್ನ ಸುತ್ತಮುತ್ತ ಎಲ್ಲರೂ ಸೀನುಗಳ ಬೊಬ್ಬೆಯನ್ನೇ ಎಬ್ಬಿಸಿದ್ದರೂ ನಾನು ಮಾತ್ರ ಶೀತನಿರೋಧಕ ಮುಖವಾಡವನ್ನು ಧರಿಸಿದವನಂತೆ ಪ್ರಶಾಂತನಾಗಿದ್ದೆ; ನಿರಾಳವಾಗಿ ಓಡಾಡಿದೆ. ಡಿಸೆಂಬರ್ ತಿಂಗಳು ಮೈದೋರಿದ ಮೇಲೆ, ಈ ಒಗ್ಗಿದ ಅತಿಥೇಯನನ್ನು ಇನ್ನು ಕಾಯಿಸಬಾರದೆಂದು ನನ್ನ ನೆಗಡಿ ದೊಡ್ಡ ಮನಸ್ಸು ಮಾಡಿ, ಈಗ ಭೇಟಿ ಕೊಟ್ಟಿದೆ. ಆದರೂ ಮಿತಪರಿವಾರದೊಡನೆ ಬಂದಿದೆ; ನನ್ನಿಂದ ಹೆಚ್ಚು ಸೇವೆಯನ್ನು ಅಪೇಕ್ಷಿಸಿಲ್ಲ. ಈ ಹರಟೆಯನ್ನು ಬರೆಯುವುದಕ್ಕೆ ಕೂಡ ಅವಕಾಶ ಕೊಟ್ಟಿದೆ. (ಇದು ತನ್ನ ಪ್ರತಾಪದ ವರ್ಣನೆಯಾದ ಕಾರಣ ಹೀಗೆ ಸುಮ್ಮನಿದೆಯೆಂದು ಭಾವಿಸಿ ಅದರ ಔದಾರ್ಯಕ್ಕೆ ಕಳಂಕವನ್ನು ನಾನು ಆರೋಪಿಸಲೊಲ್ಲೆ.) ಮತ್ತೆಷ್ಟೋ ಸಲ, ಬಿರುಬೇಸಗೆಯಲ್ಲೇ ಸಹವಾಸಕಾತರತೆಯಿಂದ ನನ್ನ ಬಳಿಗೆ ಹಲವು ಬಾರಿ ಬಂದಿದೆ; ಬೆಳಕಿಗೆ ನಾನು ಕಣ್ಣು ಬಿಡದಷ್ಟು ಮಟ್ಟಿಗೆ ಕೂಡ ಮುಖಕ್ಕೆ ಮುತ್ತಿಗೆ ಹಾಕಿದೆ.

ಹೀಗೆ ನನ್ನ ನೆಗಡಿ ಸರ್ವತಂತ್ರಸ್ವತಂತ್ರವಾದರೂ ಅದಕ್ಕೆ ಸಮಯ ಜ್ಞಾನವಿಲ್ಲವೆಂದೂ ನಾನು ಹೇಳಲಾರೆ. ಏಕೆಂದರೆ, ನಾನು ಎಲ್ಲಾದರೂ ಭಾಷಣ ಮಾಡುವಂತೆ ಏರ್ಪಾಡಾದರೆ, ಆಹ್ವಾನ ಪತ್ರಿಕೆಯನ್ನು ನೋಡಿಕೊಂಡು ಬಂದಂತೆ ಒಪ್ಪೊತ್ತು ಮುಂಚೆಯೇ ಬರುತ್ತದೆ. ತಂದೆ ಎಲ್ಲಿಗಾದರೂ ಹೊರಟಾಗ ಮಗು ಚಂಡಿ ಹಿಡಿದು ಹೇಗಲೇರುವಂತೆ, ಇದೂ ನನ್ನ ಮೂಗನ್ನು ಸೇರಿ ನನ್ನ ಜೊತೆಗೆ ಹೊರಡುತ್ತದೆ. ಒಂದು ಸಲವಂತೂ ಇದರ ಜಾಗರೂಕತೆ ನನ್ನನ್ನು ದಿಗ್ಭ್ರಮೆಗೊಳಿಸಿತು. ಒಬ್ಬನ ಜೀವಮಾನದಲ್ಲಿ ಒಂದೆರಡು ಬಾರಿ ಮಾತ್ರ ಒದಗಬಹುದಾದ ವಿಶೇಷ ಸಂದರ್ಭ ಅದು. ವ್ಯವಸ್ಥಾಪಕರು ಯಾವ ಕಾರಣದಿಂದಲೋ ನನ್ನಲ್ಲಿ ಅಕ್ಕರೆ ತೋರಿಸಿ, ಭಾಷಣ ಮಾಡಬೇಕೆಂದು ಕೋರಿದ್ದರು. ನಾನೂ ಔತ್ಸುಕ್ಯದಿಂದಲೇ ಒಪ್ಪಿಕೊಂಡಿದ್ದೆ. ಆ ಮಹಾ ಸಮಾರಂಭದಲ್ಲಿ ನನ್ನ ಅಲ್ಪವಾದ ವಾಗ್ವಿಭವವನ್ನು ಕೈಯಲ್ಲಾದಷ್ಟು ಆಕರ್ಷಕವಾಗಿ ಪ್ರದರ್ಶಿಸಬೇಕೆಂದು ಸಂಕಲ್ಪಿಸಿದ್ದೆ. ಆದರೆ ಮುಹೂರ್ತಕ್ಕೆ ಸರಿಯಾಗಿ ಒಂದು ದಿನ ಮುಂಚೆ ನೆಗಡಿ ನನ್ನ ಮೂಗನ್ನು ತಟ್ಟಿತು, ಗಂಟಲನ್ನು ಕಟ್ಟಿತು. ಭಾಷಣದ ದಿನ ಬೆಳಗ್ಗೆ ಧ್ವನಿ ಕೂತು ಹೋಗಿತ್ತು ಎನ್ನುವುದಕ್ಕಿಂತ ಹೂತುಹೋಗಿತ್ತು ಎಂದರೆ ಸತ್ಯಕ್ಕೆ ಹತ್ತಿರವಾಗಬಹುದು! ಕಲ್ಲುಬಸವನ ಬಾಯ ಧಾರೆಯಂತೆ ಮೂಗಿನಿಂದ ನೀರು ಸಂತತವಾಗಿ ಒಸರುತ್ತಿದೆ; ನನ್ನ ಕರವಸ್ತ್ರಗಳ ಸರಬರಾಯಿ ಮುಗಿಯಿತೇ ಹೊರತು ಅದರ ಹೊನಲು ತಗ್ಗಲಿಲ್ಲ. ಏನು ಮಾಡುವುದು? ನೆಗಡಿಗೆ ರಾಮಬಾಣ ಯಾವುದೂ ಇಲ್ಲವೆಂದು ನಾನು ಚೆನ್ನಾಗಿ ಬಲ್ಲೆ. ಯಾವ ತಾರಕನನ್ನೂ ಶರಣು ಕಾಣದೆ, ತನ್ನ ಕರ್ಮವನ್ನು ತಾನು ಅನುಭವಿಸಿಯೇ ಸವೆಯಿಸ ಬೇಕಾದಂತೆ, ಕನಿಷ್ಠಪಕ್ಷ ಮೂರುದಿನವಾದರೂ ಅದರ ಬಿರುಬೇಗೆಯಲ್ಲಿ ಪರಿತಪಿಸಲೇ ಬೇಕೆಂದೂ ನಾನು ಬಲ್ಲೆ. ಆದರೂ ಆಪತ್ಕಾಲದಲ್ಲಿ ಕಂಡ ಕಂಡ ಶಿಲೆಗೆಲ್ಲ ಕೈ ಮುಗಿಯುವಂತೆ, ನಾನು ಕೇಳಿಕೇಳಿದ ಚಿಕಿತ್ಸೆಗಳನ್ನೆಲ್ಲಾ ನಡಸಿದೆ. ನೆಗಡಿ ಅಜೀರ್ಣದಿಂದ

ಪ್ರಬಲಿಸುತ್ತದೆ, ಇದಕ್ಕೆ ಉಪವಾಸ ಒಳ್ಳೆಯದು ಎಂದು ಯಾರೋ ಹೇಳಿದರು. ಪ್ರಾಚೀನ ಕಾಲದಲ್ಲಿ, ಸಮರದ ಹಿಂದಿನ ರಾತ್ರಿ ಯುದ್ಧವೀರರು ದರ್ಭಶಯ್ಯೆಯಲ್ಲಿ ನಿರಾಹಾರವ್ರತ ಹಿಡಿದು ಮಲಗುತ್ತಿದ್ದಂತೆ ನಾನೂ ಬರಿಯ ಹೊಟ್ಟೆಯಲ್ಲಿ ಹೊರಳಾಡಿದೆ. ಆದರೆ ಯಾವ ಗುಣವೂ ಕಾಣಲಿಲ್ಲ. ಒಣ ಅವಲಕ್ಕಿಯನ್ನು ತಿಂದರೆ ನೆಗಡಿಯನ್ನು ಹೀರುತ್ತದೆ ಎಂದು ಮಾರನೆಯ ಬೆಳಗ್ಗೆ ಬೇರೊಬ್ಬರು ಸಲಹೆಕೊಟ್ಟರು. ಹಾಗೇ ಆಗಲೆಂದು—ಬಹುಶಃ ಕಳೆದಿರುಳಿನ ಉಪವಾಸದ ಪ್ರೇರಣೆಯೂ ಕೊಂಚ ಸೇರಿ—ಒಂದು ಹಿಡಿ ಅವಲಕ್ಕಿಯನ್ನು ಆ ದುರ್ಭಿಕ್ಷ ಕಾಲದಲ್ಲೂ ಹೇಗೋ ಸಂಗ್ರಹಿಸಿ, ಪರಿಕರವೇನೂ ಇಲ್ಲದೆಯೆ ಅಗಿದು ನೋಡಿದೆ. ಅತ್ತ ವೈದ್ಯರ ಬಳಿ ಹೋಗಿ, ಬಾಯನ್ನು ಬಳ್ಳದಗಲಕ್ಕೆ ತೆರೆದು ನುಂಗಲಾರದ ಉಗುಳಬಾರದ ದ್ರಾವಕವನ್ನು ಗಂಟಲೊಳಕ್ಕೆ ಲೇಪನ ಮಾಡಿಸಿಕೊಂಡೆ. ಬೂದಿಬಣ್ಣದ ಕಹಿಒಗಚಿನ ಘಾಟು ನೀರನ್ನು ತೀರ್ಥದಂತೆ ಪ್ರಾಶನಮಾಡಿದೆ. ಮನೆಗೆ ಬಂದು, ನಿಗಿನಿಗಿ ಉರಿಯುವ ಕೆಂಡದ ಮುಂದೆ ಕುಳಿತು, ಕಂಠನಾದ ಹದವಾಗಲೆಂದು ಮನಸ್ಸಿನಲ್ಲೇ ಹರಸಿಕೊಂಡು, ಮುಖವನ್ನು ತಮಟೆಯಂತೆ ಕೆಂಚಗೆ ಕಾಯಿಸಿದೆ. ಮತ್ತೆ ಅದೇ ಕೆಂಡಕ್ಕೆ ಅರಿಸಿನದ ಪುಡಿಯನ್ನು ಉದುರಿಸಿ—ರಾಗಿಯ ಹಿಟ್ಟನ್ನೂ ಬೆರಸಬೇಕಾಗಿತ್ತು; ಆದರೆ ಚಿನ್ನ ಕೊಟ್ಟರೂ ಅದು ಸಿಕ್ಕುವಂತಿರಲಿಲ್ಲ! —ತಲೆಗೆ ಕಂಬಳಿ ಕವಿಚಿಕೊಂಡು, ಮೇಲಕ್ಕೆ ಅಡರುವ ಧೂಮಸ್ತೋಮವನ್ನು ಮೂಗು ಬಾಯಿಗಳು ಮುಷ್ಕರ ಹಿಡಿಯುವ ತನಕ ಹೀರಿಹೀರಿ, ಕ್ರಿಮಿಗಳ ಉಚ್ಚಾಟನೆಯಾಗಲೆಂದು ಮಂತ್ರ ಜಪಿಸಿದೆ. ಕಡೆಗೆ ಒಬ್ಬ ಹಿತಶತ್ರುವಿನ ಬೋಧನೆಗೆ ಕಿವಿಗೊಟ್ಟು ಒಂದೆರಡು ಚುಟಿಕೆ ನಸ್ಯವನ್ನೂ ಏರಿಸಿದೆ. ಮೊದಲಿಗಿಂತ ನಾಲ್ಕು ಪಾಲು ಹೆಚ್ಚಾಗಿ ಸೀನು ಬಂದಿತು; ಮೂಗು ಇನ್ನಷ್ಟು ಹೊಲಸಾಯಿತು!

ಇಷ್ಟೆಲ್ಲ ಸಾಧನೆ ಮಾಡಿದರೂ ಫಲ ಮಾತ್ರ ಗೋಚರವಾಗಲಿಲ್ಲ. ಆದರೂ ನಾನು ಎದೆಗುಂದರೆ, ಆ ದಿನ ಸಂಜೆ ಅಂಗಿಗಳ ಮೇಲೆ ಅಂಗಿಗಳನ್ನು ತೊಟ್ಟು, ಕೊರಳಿಗೆ ಉಣ್ಣೆಯ ಪಟ್ಟೆಯನ್ನು ಅಳವಡಿಸಿ, ನೆತ್ತಿಯ ಮೇಲೆ ಪೇಟವನ್ನು ಒತ್ತಿ ಧರಿಸಿ, ಗಂಟಲ ಗುಳಿಗೆಗಳನ್ನು ಚಪ್ಪರಿಸುತ್ತಾ ವೇದಿಕೆಯನ್ನೇರಿ ಮಹಾಸಭೆಯನ್ನು ಎದುರಿಸಿ ನಿಂತೆ. ಮುಂದುಗಡೆಯೇ ಧ್ವನಿವರ್ಧಕ ಮಿನುಗುತ್ತಾ ಭರವಸೆ ಕೊಡುತ್ತಿತ್ತು. ಬಾಯಿ ತೆರೆದೆ; ನಾಲಗೆಯಾಡಿಸಿದೆ. ಆದರೆ ಧ್ವನಿ ಹೊರಡಲೇ ಇಲ್ಲ. ಚಲಚ್ಚಿತ್ರಮಂದಿರದಲ್ಲಿ ಒಮ್ಮೊಮ್ಮೆ ಧ್ವನಿ ಭಾಗ ಒಂದೆರಡು ಕ್ಷಣ ಕಡಿದುಹೋಗಿ ಪಾತ್ರಗಳ ಮೂಗುಸನ್ನೆ ಮಾತ್ರ ಕಾಣಿಸಿದಾಗಿನ ಅನುಭವ ನನ್ನ ಶ್ರೋತೃಗಳಿಗೆ ಲಭಿಸಿರಬೇಕು. ಯಂತ್ರವೇ ಕೆಲಸಮಾಡುತ್ತಿಲ್ಲವೇನೋ ಎಂದು ವ್ಯವಸ್ಥಾಪಕರು ಬೆದರಿ ಧಾವಿಸಿ ಬಂದರು. ಅಷ್ಟು ಹೊತ್ತಿಗೆ, ನನ್ನ ಧ್ವನಿ ನೆಗಡಿಯ ಹಿಡಿತದಿಂದ ತುಸ ಬಿಡಿಸಿಕೊಂಡು, ಗುರುತೇ ತಿಳಿಯದಷ್ಟು ಬಡವಾಗಿ ಜಡವಾಗಿ ಗುಹೆಯೊಳಗಿನ ನರಳಿಕೆಯಂತೆ ಹೊರಕ್ಕೆ ಬಂದಿತ್ತು. ಅದನ್ನು ಕೇಳಿ ನನಗೇ ಜುಗುಪ್ಸೆಯಾಯಿತು. ಆಲೋಚಿಸಿದ್ದ ಉತ್ಕೃಷ್ಟ ಭಾವಗಳೆಲ್ಲ ಎಲ್ಲಿಗೊ ಪಲಾಯನ ಮಾಡಿದ್ದುವು. ಜಲಪಾತದಂತೆ ಧುಮುಕಬೇಕಾಗಿದ್ದ ನನ್ನ ವಾಗ್ವಾಹಿನಿ ಬೇಸಗೆ ದಿನದ ನಲ್ಲಿಯ ನೀರಿನಂತೆ ತೊಟತೊಟ ಎಂದು ಕ್ಷೀಣವಾಗಿ ಜಿನುಗುತ್ತಿತ್ತು.

ಹಾಗೂ ಹೀಗೂ ಮೂರು ನಾಲ್ಕು ನಿಮಿಷ ಮೊಂಡತನದಿಂದ ಮಾತಾಡಿದೆ; ಕಡೆಗೆ ಸೋಲನ್ನೊಪ್ಪಿ ಮುಕ್ತಾಯಕ್ಕೆ ಸಂದುಬಿಟ್ಟೆ. ಅಲ್ಲಿಂದೀಚೆಗೆ ಬುದ್ಧಿ ಕಲಿತಿದ್ದೇನೆ. ಭಾಷಣ ಮಾಡಲು ಯಾರಾದರೂ ಕರೆದಾಗ, "ನನ್ನ ನೆಗಡಿ ಒಪ್ಪಿಗೆ ಕೊಟ್ಟರೆ—" ಎಂದು ಒಂದು ನಿಬಂಧನೆಯನ್ನು ಸೇರಿಸಲು ಮರೆಯುವುದಿಲ್ಲ.

ಈ ಅಶರಣತೆಗೆ ಪರಿಹಾರವೇ ಇಲ್ಲವೆ? ವೈದ್ಯವಿದ್ಯೆ ಇಷ್ಟು ಮುಂದುವರಿದಿರುವಾಗ, ನಿನ್ನೆ ಮೊನ್ನೆಯ ತನಕ ಹೆಸರೇ ಕೇಳದಿದ್ದ ಅಪೂರ್ವ ರೋಗಗಳಿಗೆಲ್ಲ ಚಿಕಿತ್ಸಾ ಕ್ರಮಗಳು ಏರ್ಪಟ್ಟಿರುವಾಗ, ಜೀವಿಗಳ ಜನ್ಮಶತ್ರುವಾದ ಈ ನೆಗಡಿಗೇಕೆ ಇನ್ನೂ ಮದ್ದು ಸಿದ್ಧವಾಗಿಲ್ಲ? ಎಲ್ಲಕ್ಕೂ ಸೂಜಿಮದ್ದು ಚುಚ್ಚುವಂತೆ ಇದಕ್ಕೂ ಚುಚ್ಚಿ ಚರ್ಮದ ರಂಧ್ರಗಳನ್ನು ಹೆಚ್ಚಿಸುವ ವಿಧಾನವೂ ಅಲ್ಲಲ್ಲಿ ಬಳಕೆಗೆ ಬಂದಿದೆ. ಆದರೇನು? "ನೆಗಡಿಗೆ ಚಿಕಿತ್ಸೆ ಮಾಡಿದರೆ ಒಂದು ವಾರದಲ್ಲಿ ಗುಣವಾಗುತ್ತದೆ; ಹಾಗೆಯೇ ಬಿಟ್ಟರೆ ಏಳು ದಿನ ಬೇಕಾಗುತ್ತದೆ." ಎನ್ನುವುದೇ ಇನ್ನೂ ಕೊನೆಮಾತಾಗಿ ಉಳಿದಿದೆ. ನೆಗಡಿ ಬಾರದಂತೆ ತಡೆಗಟ್ಟುವ ಮುಂಜಾಗರೂಕತೆಯ ಕ್ರಮವಂತೂ ಕನಸಿನ ಗಂಟೇ ಸರಿ. ಕೈಲಾಸ ಶಿಖರದಲ್ಲೇನೋ, ಪರಶಿವನು ಗಂಗಾಧರನೂ ಚಂದ್ರಶೇಖರನೂ ಆಗಿದ್ದರೂ ಫಾಲನೇತ್ರದ ಅಗ್ನಿಷ್ಟಿಕೆಯನ್ನು ಸಂತತವೂ ಉರಿಸುತ್ತಾ ಶೀತಬಾಧೆಯನ್ನು ದೂರವಿರಿಸಿರ ಬಹುದು. ಭೂತಲದ ನಮಗಾದರೆ ಯಾವ ಪರಿಹಾರವೂ ಇನ್ನೂ ಗೋಚರವಾಗಿಲ್ಲ. ಮಾನವನ ದೇಹ ರಚನೆಯಲ್ಲೇ ಈ ವ್ಯಾಧಿಗೆ ಭದ್ರವಾದ ನೆಲಗಟ್ಟು ದೊರೆತಿದೆ. ಗಾದೆಯ ಮಾತು ದಿಟ : "ಮೂಗಿರುವ ತನಕ ನೆಗಡಿ ತಪ್ಪುವ ಹಾಗಿಲ್ಲ!"

ತಗುಣಿ

"ಚೆನ್ನಾಗಿ ನಿದ್ದೆ ಬಂತೆ?"

ಹಿಂದಿನ ರಾತ್ರಿ ಬಂದು ಇಳಿದುಕೊಂಡಿದ್ದ ಅತಿಥಿಯನ್ನು ಮರುದಿನ ಬೆಳಗ್ಗೆ ಹೀಗೆ ಕುಶಲಪ್ರಶ್ನೆ ಕೇಳಿ ಮಾತಾಡಿಸುವುದು ಅನೂಚಾನವಾದ ಪದ್ಧತಿ. ಈ ರೀತಿಯಾಗಿ ಪ್ರಶ್ನೆ ಕೇಳುವವನಿಗೆ ವಿಶಿಷ್ಟವಾದ ಹೆಸರೇ ಸಂಸ್ಕೃತದಲ್ಲಿ ಇತ್ತು. ಸ್ವಾಗತವನ್ನು ಕೋರುವವನು "ಸ್ವಾಗತಿಕ" ನಾಗುತ್ತಿದ್ದ ಹಾಗೆ, "ಸುಖಶಯನವಾಯಿತೆ?" ಎಂದು ಕೇಳುವವನು "ಸೌಖಶಾಯನಿಕ" ಎನ್ನಿಸಿಕೊಳ್ಳುತ್ತಿದ್ದನು. ಸಾಂಪ್ರದಾಯಿಕವಾದ ಇಂಥ ಪ್ರಶ್ನೆಗೆ, "ನಿದ್ದೆ ಚೆನ್ನಾಗಿ ಬಂತು. ಮಲಗಿಕೊಂಡದ್ದು ಒಂದೇ ಗೊತ್ತು. ಈಗ ತಾನೆ ಕಣ್ಣುಬಿಡುತ್ತಿದ್ದೇನೆ" ಎಂದು ಔಪಚಾರಿಕವಾಗಿ ಉತ್ತರ ಕೊಡುವುದೇ ಸಭ್ಯತನ. "ನೀವು ಆರೋಗ್ಯವೆ?" ಎಂದು ಭೇಟಿಯ ಕಾಲದ ಸಾಮಾನ್ಯೋಕ್ತಿಗೆ, "ಇಷ್ಟರ ಮಟ್ಟಿಗೆ. ನೀವು ಆರೋಗ್ಯವೆ?" ಎಂದು ಮರುನುಡಿ ಸಲ್ಲಿಸುವ ಹಾಗೆ. ಅದನ್ನು ಬಿಟ್ಟು, ಪ್ರಶ್ನೆ ಕೇಳಿದ್ದೇ ಸಾಕು ಎಂದುಕೊಂಡು, "ಸರಿಯಾಗಿ ನಿದ್ದೆ ಬರಲಿಲ್ಲ. ಮೈಯನ್ನು ಏನೋ ಚುರಕ್ ಎಂದು ಕಚ್ಚಿದ ಹಾಗಾಯಿತು. ಅದರ ಉರಿ ಇನ್ನೂ ಹೋಗಿಲ್ಲ" ಎಂದು ಹೇಳುವುದಕ್ಕಾಗುತ್ತದೆಯೆ? ನಿದ್ದೆಗೆ ಕೆಲವು ಮಟ್ಟಿಗೆ ಭಂಗವುಂಟಾಗಿದ್ದರೂ ಅದನ್ನು ಬಿಡಿಸಿ ಹೇಳಿದರೆ ಆತಿಥೇಯರು ಎಲ್ಲಿ ಸಂಕೋಚಪಟ್ಟುಕೊಳ್ಳುತ್ತಾರೋ, ಎಲ್ಲಿ ನೊಂದುಕೊಳ್ಳುತ್ತಾರೋ, ಎಂದುಕೊಂಡು ಸುಮ್ಮನಿದ್ದು

ಬಿಡುವುದೇ ಶಿಷ್ಟಾಚಾರ. ಆದರೆ ಎಲ್ಲ ಸಂದರ್ಭಗಳಲ್ಲೂ ಇದನ್ನು ತಪ್ಪದೆ ಪರಿಪಾಲಿಸುವುದು ಕಷ್ಟವಾಗುತ್ತದೆ.

ಭಾಷೆಯಲ್ಲಿ ಶಬ್ದಗಳು ಕಾರಣವಿಲ್ಲದೆ ಹುಟ್ಟುವುದಿಲ್ಲ. ಸಂಸ್ಕೃತದಲ್ಲಿ "ಸೌಖಶಾಯನಿಕ" ಎಂಬುದು ಮಾತ್ರವೇ ಅಲ್ಲ; "ಸೌಖಶಾಯಿಕ, ಸೌಖಶಯಿಕ, ಸೌಖಸುಪ್ತಿಕ, ಸೌಖರಾತ್ರಿಕ"—ಇವೆಲ್ಲ ಉಂಟು. ಒಬ್ಬಾತನು ಸುಖವಾಗಿ ನಿದ್ದೆಮಾಡಿದನೆ, ಸುಖವಾಗಿ ರಾತ್ರಿಯನ್ನು ಕಳೆದನೆ ಎಂದು ವಿಚಾರಿಸುವವನನ್ನು ನಿರ್ದೇಶಿಸಲು ಇಷ್ಟೊಂದು ಶಬ್ದಸಮೃದ್ಧಿಯಿರುವುದನ್ನು ಕುರಿತು ಚಿಂತಿಸಿದಾಗ, ಹೀಗೆ ಪ್ರಶ್ನೆ ಕೇಳುವುದು ಕೇವಲ ಉಪಚಾರಕ್ಕಾಗಿ ಇದ್ದಿರಲಾರದು ಎಂದು ನನಗೆ ಒಮ್ಮೊಮ್ಮೆ ಅನ್ನಿಸುತ್ತದೆ. ರಾಜ ಮಹಾರಾಜರ ಅರಮನೆಗಳಲ್ಲಿ ಹೇಗೆ ಇದ್ದಿತೋ ತಿಳಿಯದು. ಸಾಮಾನ್ಯರ ವಸತಿಗಳಲ್ಲಾದರೂ ಈ ಕಾಲದಂತೆ ಆ ಕಾಲದಲ್ಲಿಯೂ ತಗುಣೆ, ಸೊಳ್ಳೆ ಮೊದಲಾದುವು ನಿದ್ರೋಪಾಸಕರನ್ನು ಚೆನ್ನಾಗಿಯೇ ಬಾಧಿಸುತ್ತಿದ್ದಿರಬೇಕು. ('ಪಂಚತಂತ್ರ'ದಲ್ಲಿ ಬರುವ ಮಂದವಿಸರ್ಪಿಣಿಯೆಂಬ ಹೇನು, ಡುಂಡುಕನೆಂಬ ತಗುಣೆ ಇವುಗಳ ಕಥೆಯನ್ನು ಜ್ಞಾಪಿಸಿಕೊಂಡರೆ, ಅರಸರ ಶಯ್ಯೆ ಕೂಡ ಇಂಥ ಪ್ರಾಣಿಗಳಿಗೆ ಅಪರಿಚಿತವಾಗಿರಲಿಲ್ಲ ಎಂದು ಒಪ್ಪಬೇಕಾಗುತ್ತದೆ.) ಅನೇಕ ಸಂದರ್ಭಗಳಲ್ಲಿ, ಅತಿಥಿಯಂತೆ ಆತಿಥೇಯನೂ ತನ್ನ ಕೋಣೆಯಲ್ಲಿ ನಿದ್ದೆಯಿಲ್ಲದೆ ಹೊರಳಾಡಿ, ಬೆಳಗಾದರೆ ಸಾಕು ಎಂದು ಕಾದಿದ್ದು, ಎದ್ದು ಅತಿಥಿಯನ್ನು ಕಂಡ ಕೂಡಲೆ ಅವನಿಗೆ ಆತಂಕದಿಂದಲೇ ಪ್ರಶ್ನೆ ಹಾಕುತ್ತಿದ್ದನೆಂದು ತೋರುತ್ತದೆ. ಅತಿಥಿ ಕೂಡ ದಾಕ್ಷಿಣ್ಯಕ್ಕೆ ಹೆಚ್ಚು ಕಟ್ಟುಬೀಳದೆ, ತನ್ನನ್ನು ತಗುಣೆಯೋ ಸೊಳ್ಳೆಯೋ ಮತ್ತೊಂದೋ ಎಲ್ಲವೂ ಜೊತೆಗೂಡಿಯೋ ಬಾಧಿಸಿದ್ದನ್ನು ಸೂಚ್ಯವಾಗಿ ಯಾದರೂ ತಿಳಿಸುತ್ತಿದ್ದಿರಬೇಕು. ಆತನೇನಾದರೂ ಪ್ರಾಮಾಣಿಕವಾಗಿ "ಚೆನ್ನಾಗಿ ನಿದ್ದೆ ಬಂತು" ಎಂದು ಉತ್ತರಕೊಟ್ಟಲ್ಲಿ ಅದು ಇಬ್ಬರಿಗೂ ಆನಂದದ ವಿಷಯವಾಗುತ್ತಿದ್ದಿರ ಬೇಕು.

ನಾಗರಿಕ ಮಾನವನ ರಕ್ತದ ರುಚಿಗೋ ಶರೀರದ ಗಂಧಕ್ಕೋ ಆಹಾರದ ಪುಷ್ಟಿಗೋ ಮೋಹಿಸಿ ಅವನ ಜೊತೆಗೇ ತಾವೂ ಬಿಡಾರ ಹೂಡಿ ಕಾಡುವ ಅಲ್ಪಜಂತುಗಳು ಅನೇಕ ಇವೆ : ತಗುಣೆಗಳಿವೆ, ಸೊಳ್ಳೆಗಳಿವೆ, ಇರುವೆಗಳಿವೆ, ನೊಣಗಳಿವೆ, ನುಸಿ, ಗುಂಗುರು, ಜಿರಲೆ ಮೊದಲಾದ ಇನ್ನೂ ಏನೇನೋ ಇವೆ. ಸೊಳ್ಳೆಗಳಂತೂ ಈಚೆಗೆ ಬಲುಹೆಚ್ಚಿ ಸರ್ಕಾರಗಳ ಗಮನವನ್ನೂ ಸೆಳೆದಿವೆ. ನಗರದ ಹೊಸ ವಿಸ್ತರಣಗಳಲ್ಲಿ ಕೂಡ ರಾತ್ರಿಯ ವೇಳೆ ಪರದೆಯನ್ನು ಕಟ್ಟಿಕೊಳ್ಳದೆ ಮಲಗುವುದು ಅಶಕ್ಯವಾಗಿ ಪರಿಣಮಿಸಿದೆ. ಪರದೆಯ ರಕ್ಷಾಬಂಧನವಿದ್ದರೆ ತಾನೆ ಏನು! ಅದರ ಸುತ್ತಲೂ ಹೊರಗೆ ಸೊಳ್ಳೆಗಳು ಮುತ್ತಿಗೆ ಹಾಕಿ ಝೇಂಕಾರ ಮಾಡುತ್ತಿರುತ್ತವೆ; ಅವುಗಳ ಮೊರೆತವೇ ಮಲಗಿದವನಿಗೆ ಜೋಗುಳವಾಗಬೇಕು. ಪರದೆಯನ್ನು ಸ್ವಲ್ಪ ಸರಿಸಿದರೂ ಸಾಕು, ಅದರ ಯಾವುದೇ ಮೂಲೆಯಲ್ಲಿ ಒಂದು ಸಣ್ಣ ಛಿದ್ರ ಇದ್ದರೂ ಸಾಕು, ಅವಕಾಶವನ್ನೇ ಕಾದಿದ್ದು ನಾಲ್ಕಾರು ಒಳಕ್ಕೆ ನುಗ್ಗಿಬಿಡುತ್ತವೆ. ಅವುಗಳನ್ನು ಹುಡುಕಿ ಪರಿಹರಿಸಿದಹೊರತು

ಮತ್ತೆ ನಿದ್ದೆ ಬರುವಹಾಗಿಲ್ಲ. ರಾತ್ರಿಯ ನಿದ್ದೆಯ ಮಾತು ಹಾಗಿರಲಿ, ಸಂಜೆಯಾದ ಬಳಿಕ ಮೇಜಿನ ಬಳಿ ಕುಳಿತು ಕೆಲಸ ಮಾಡುವುದೂ ಅಶಕ್ಯವಾಗುತ್ತದೆ. ಮೇಜಿನ ಕೆಳಗೆ ನೀಡಿರುವ ಕಾಲುಗಳನ್ನು ಸೊಳ್ಳೆಗಳು ಉಪಚರಿಸಲು ತೊಡಗುತ್ತವೆ. ನಗರದ ಕೆಲವು ಕಡೆಗಳಲ್ಲಿ ಊಟದ ತಟ್ಟೆಯ ಬಳಿಗೂ ಸೊಳ್ಳೆಗಳೂ ಗುಂಪಾಗಿ ಬರುವುದು ಉಂಟಂತೆ. ಸದ್ಯಕ್ಕೆ ಆ ಅನುಭವವಿನ್ನೂ ನನಗೆ ಬಂದಿಲ್ಲ.

ಊಟ ತಿಂಡಿಗಳ ಮೇಲೆ ಕಣ್ಣು ಮುಖ್ಯವಾಗಿ ನೊಣಗಳಿಗೆ. ರೇಷ್ಮೆಯ ವ್ಯವಸಾಯಕ್ಕೆ ಪ್ರಸಿದ್ಧವಾದ ಒಂದು ಊರಿನಲ್ಲಿ ಅನೇಕ ವರ್ಷಗಳ ಹಿಂದೆ ಒಂದು ಸಲ ಊಟಕ್ಕೆ ಕುಳಿತುಕೊಂಡಿದ್ದಾಗ ಹಿಂಡುಹಿಂಡಾಗಿ ನೊಣಗಳು ಬಂದು ಎಲೆಯ ಹತ್ತಿರ ತೊಟ್ಟಿಕ್ಕಿದ್ದ ಪಾಯಸದ ಬಿಂದುಗಳನ್ನು ನಿರಾತಂಕವಾಗಿ ಹೀರಿದ ದೃಶ್ಯವನ್ನು ವಿಸ್ಮಿತ ನೇತ್ರಗಳಿಂದ ನಾನು ನೋಡಿದ್ದು ಇಂದಿಗೂ ನೆನಪಿದೆ. ಸಾಮಾನ್ಯವಾಗಿ ನಮ್ಮ ಮನೆಗಳಲ್ಲಿ ನೊಣಗಳು ಇಷ್ಟೊಂದು ಸ್ವಾತಂತ್ರ್ಯವನ್ನು ವಹಿಸುವುದಿಲ್ಲ. ಆದರೆ ಒಮ್ಮೊಮ್ಮೆ ಬಿಸಿ ಕಾಫಿಯ ಲೋಟವನ್ನು ನೀವು ಕೈಯಲ್ಲಿ ಹಿಡಿದುಕೊಂಡು ಇನ್ನೇನು ತುಟಿಗೆ ಎತ್ತಿಕೊಳ್ಳಬೇಕು ಎನ್ನುವಷ್ಟರಲ್ಲಿ ನೊಣ ಯಾವ ಮಾಯದಲ್ಲೋ ಬಂದು ಅದರೊಳಕ್ಕೆ ಬಿದ್ದುಬಿಡುತ್ತದೆ; ನಿಮ್ಮ ಕಾಫಿಯನ್ನು ಕೆಡಿಸುವುದಲ್ಲದೆ ತನ್ನ ಪ್ರಾಣವನ್ನೂ ನೀಗುತ್ತದೆ. ತನ್ನ ಅಪಾಯವನ್ನೂ ಲಕ್ಷಿಸದೆ ಇನ್ನೊಬ್ಬನಿಗೆ ಅಪಕಾರ ಮಾಡುವವನನ್ನು ಅಷ್ಟಲ್ಲದೆ ನೊಣಕ್ಕೆ ಹೋಲಿಸುತ್ತಾರೆಯೆ!

ಇಷ್ಟಾದರೂ ಸಮಾಜದಲ್ಲಿ ಒಬ್ಬನಿಗೆ ತಗುಣೆಯಿಂದ ಅಪಕೀರ್ತಿ ಬರುವ ಹಾಗೆ ಸೊಳ್ಳೆ, ನೊಣ ಮೊದಲಾದುವುಗಳಿಂದ ಬರುವುದಿಲ್ಲ. ಮನೆಯಲ್ಲಿ ಸೊಳ್ಳೆಗಳು ಹೆಚ್ಚಿದ್ದರೆ, "ಏನು ಮಾಡೋಣ? ಈ ಊರೇ ಹಾಗಾಗಿದೆ. ನಗರಪಾಲಕರು ಇತ್ತ ಕಡೆ ಗಮನವನ್ನೇ ಕೊಡುತ್ತಿಲ್ಲ. ಚರಂಡಿಗಳು ಗೊಬ್ಬರದ ಗುಂಡಿಗಳಾಗಿವೆ. ಹಿಂದೆ ಕೆಲವು ದಿನ ಡಿ.ಡಿ.ಟಿ. ಯನ್ನು ತಂದು ಗೋಡೆಗಳ ಮೇಲೆ ಚಿಮುಕಿಸುತ್ತಿದ್ದರು. ಈಗ ಅದನ್ನೂ ನಿಲ್ಲಿಸಿದ್ದಾರೆ. ಡಿ.ಡಿ.ಟಿ.ಯನ್ನು ಕುಡಿದಷ್ಟೂ ಸೊಳ್ಳೆಗಳು ಸಾಯುವ ಬದಲು ಇನ್ನಷ್ಟು ಉಬ್ಬುವುದನ್ನು ಕಲಿತುಕೊಂಡಿವೆ ಎಂದು ಬೇರೆ ಹೇಳುತ್ತಾರೆ. ಅಂತೂ ಇವುಗಳ ಕಾಟದಲ್ಲಿ ನರಳಬೇಕಾಗಿ ಬಂದಿದೆ. ಯಾರಿಗೆ ಗೊತ್ತು : ಸೊಳ್ಳೆಪರದೆಗಳನ್ನು ತಯಾರಿಸುವವರು ಇವುಗಳ ಅಭಿವೃದ್ಧಿಗಾಗಿ ಸಂಚುಮಾಡಿದ್ದಾರೋ ಏನೋ" ಎಂದು ಮನೆಯ ಮಾಲೀಕ ಧೈರ್ಯವಾಗಿ ಹೇಳಬಹುದು. ಅದಕ್ಕೆ ಉತ್ತರವಾಗಿ ಆಗಂತುಕರು "ಹೌದು. ನಮ್ಮ ಊರಿನಲ್ಲೂ ಇದೇ ಗತಿ. ಹಾಗೆ ನೋಡಿದರೆ ನಿಮ್ಮ ಸೊಳ್ಳೆಗಳೇ ವಾಸಿ. ಕ್ಲುಪ್ತಕಾಲಗಳಲ್ಲಿ ಧಾಳಿಯಿಡುತ್ತವೆ; ಸಂಗೀತ ಹೇಳಿಕೊಂಡು ಕಚ್ಚುತ್ತವೆ. ನಮ್ಮೂರಿನವಕ್ಕೆ ಹೊತ್ತು ಗೊತ್ತು ಯಾವುದೂ ಇಲ್ಲ; ಅವು ಶಬ್ದವನ್ನು ಕೂಡ ಮಾಡುವುದಿಲ್ಲ. ಅವುಗಳ ವಜ್ರಮೂತಿಯ ಮೊರೆಯ ಸೊಗಸನ್ನು ಅನುಭವರಸಿಕರೇ ಬಲ್ಲರು" ಎಂದು ಸಹಾನುಭೂತಿಯ ಮಾತನ್ನು ಆಡುತ್ತಾರೆ. ನೊಣಗಳ ವಿಷಯವೂ ಹೀಗೆಯೇ. ಅವುಗಳ ಉತ್ಪತ್ತಿ, ಸ್ಥಿತಿ, ಸಂಚಾರ, ಲಯ ಈ ಯಾವುದೊಂದಕ್ಕೂ ಮನೆಯ ಮಾಲೀಕ ವೈಯಕ್ತಿಕವಾಗಿ

ಹೊಣೆಗಾರನಲ್ಲ. ಉರುಬಿನ ಕಾಲದಲ್ಲಿ, ನಿತ್ಯವೂ ಫಿನ್ಯೈಲ್ ಹಾಕಿ ನೆಲವನ್ನು ಸಾರಿಸುತ್ತಿದ್ದರೂ ಅವು ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತವೆ; ಮಿಕ್ಕ ಕಾಲದಲ್ಲಿ ಸಕ್ಕರೆಯ ಕಣಗಳು ನೆಲದ ಮೇಲೆ ಚೆಲ್ಲಾಡಿದ್ದರೂ ಅವು ಗೋಚರವೇ ಆಗುವುದಿಲ್ಲ. ಸೊಳ್ಳೆ, ನೊಣ ಮೊದಲಾದವು ಸಾಮೂಹಿಕ ಜಂತುಗಳು. ಸಾಂಕ್ರಾಮಿಕ ರೋಗಗಳಂತೆ ಅವುಗಳ ಚಲನವಲನ. ಅವುಗಳ ಮುಂದೆ ವ್ಯಕ್ತಿಯೊಬ್ಬನ ಆಟ ಏನೂ ನಡೆಯುವುದಿಲ್ಲ. ಇದು ಎಲ್ಲರಿಗೂ ಗೊತ್ತು. ಆದಕಾರಣ ಅವು ಉಲ್ಬಣವಾದಾಗ, ಸಾಂಕ್ರಾಮಿಕ ರೋಗಗಳನ್ನೇ ಹರಡಿದಾಗ ಕೂಡ, ಮನೆಯ ಮಾಲೀಕ ತೊಂದರೆಪಡುವುದರ ಜೊತೆಗೆ ತಲೆತಗ್ಗಿಸಬೇಕಾಗುವುದಿಲ್ಲ.

ತಗುಣೆಗಳ ವಿಚಾರವೇ ಬೇರೆ. ಮನೆಯಲ್ಲಿ ಅವು ಕಾಣಿಸಿಕೊಂಡರೆ ಅದಕ್ಕೆ ಮನೆಯವರ ಅಶುಚಿ ಅಜಾಗರೂಕತೆಗಳೇ ಬಲುಮಟ್ಟಿಗೆ ಕಾರಣವೆಂಬ ಭಾವನೆ ಸಮಾಜದಲ್ಲಿ ಬೇರೂರಿದೆ. ತಗುಣೆಯ ಕೃಷಿಕ್ಷೇತ್ರವಾಗಿರುವ ಮನೆಯಲ್ಲಿ ಕೂಡ, "ಇಲ್ಲಿ ತಗುಣೆ ಕಾಣಿಸಿತು" ಎಂದು ಆಗಂತುಕರು ಹೇಳಕೂಡದು. ಮಾಲೀಕರು ಈ ಆಪಾದನೆಯನ್ನು ತೀಕ್ಷ್ಣವಾಗಿ ನಿರಾಕರಿಸುತ್ತಾರೆ. ಲಂಚಕೋರರನ್ನು "ನೀನು ಲಂಚ ತೆಗೆದುಕೊಳ್ಳುತ್ತೀಯೆ" ಎಂದು ಎದುರಿಗೇ ದೂರಿದರೆ, ಹೇಗೋ ಹಾಗೆ. ಸ್ನೇಹಿತರ ಮನೆಗಳಲ್ಲಿ ಕೂಡ, ರಾತ್ರಿಯ ವೇಳೆ ತಗುಣೆಯ ಬಾಧೆಯಿಂದ ನರಳಿದರೂ ಬಾಯಿ ಮುಚ್ಚಿಕೊಂಡು ಸುಮ್ಮನಿರಬೇಕು; ಕೈಗೆ ಸಿಕ್ಕಿದರೂ ಅದನ್ನು ಅವರಿಗೆ ಕಾಣದ ಹಾಗೆ ಹೊಸಕಿ ಹೊರಕ್ಕೆ ಸಾಗಿಸಬೇಕು. ಅಪ್ಪಿತಪ್ಪಿ ಒಂದುವೇಳೆ, "ಏನಯ್ಯ, ನಿಮ್ಮ ಮನೆಗೆ ತಗುಣೆಯ ಪ್ರವೇಶ ಆಗಿರುವಂತಿದೆಯಲ್ಲ" ಎಂದು ನೀವು ಉದ್ಗಾರ ತೆಗೆದರೆ, "ಎಲ್ಲಾದರೂ ಉಂಟೇ? ಅದರ ಹೆಸರೂ ಕೂಡ ಇಲ್ಲಿ ಸುಳಿಯುವುದಿಲ್ಲ. ರೈಲಿನಲ್ಲಿ ಪ್ರಯಾಣಮಾಡಿ ಬಂದಾಗ ನೀನೇ ಒಂದೆರಡನ್ನು ಹಾಸಿಗೆಯಲ್ಲಿ ಸೇರಿಸಿಕೊಂಡು ತಂದೆಯೋ ಏನೋ. ಮಹಾರಾಯ, ಆ ಆ ಸುರುಳಿಯನ್ನು ಗೋಡೆಗೆ ಒರಗಿಸಿ ಇಡಬೇಡ. ನಮ್ಮ ಮನೆಗೂ ಹತ್ತಿ ಬಿಟ್ಟೀತು" ಎಂದು ಆಪ್ತಮಿತ್ರರು ಕೂಡ ಹೇಳುವುದುಂಟು. ತಗುಣೆಗೆ ಆಶ್ರಯದಾತನೆಂಬ ಆಪಾದನೆ ಸ್ಥಿರಪಟ್ಟರೆ ಸಮಾಜದಲ್ಲಿ ಒಬ್ಬನ ಅಂತಸ್ತು ಕೆಳಗಿಳಿದಂತೆಯೇ ಸರಿ.

ಇದರ ಮೇಲೆ ಹಿಂಸೆಯ ದೃಷ್ಟಿಯಿಂದ ಕೂಡ ಸೊಳ್ಳೆ, ನೊಣ ಮೊದಲಾದವು ಗಳಿಗೂ ತಗುಣೆಗೂ ಎಷ್ಟು ಭೇದ! ಸೊಳ್ಳೆಯನ್ನೇ ತೆಗೆದುಕೊಳ್ಳೋಣ. ಅದರ ಕಡಿತದ ನೋವು ಪರಿಮಿತ. ಗುರುತು ಅಲ್ಪಕಾಲಿಕ. ತಗುಣೆಯದು ಹಾಗಲ್ಲ. ಇದರ ಸಂಸ್ಪರ್ಶ ವಾಯಿತೆಂದರೆ ಚರ್ಮಕ್ಕೆ ಕಾದ ಸೂಜಿ ಚುಚ್ಚಿದಂತಾಗುತ್ತದೆ; ಉಜ್ಜಿದಷ್ಟೂ ಉರಿ ಹೆಚ್ಚುತ್ತದೆ; ದೇಹದ ಆ ಭಾಗದಲ್ಲೂ ಅದರ ಸುತ್ತಮುತ್ತಲೂ ದುರುಗುಟ್ಟುವ ಕೆಂಪುಬಣ್ಣ ಹೊಮ್ಮಿ, ಅಷ್ಟು ಅಗಲಕ್ಕೂ ರೊಟ್ಟಿತಟ್ಟಿದಂತೆ ಊದಿಕೊಳ್ಳುತ್ತದೆ. ಈ ಸಂಕಟ ಇಳಿಯಲು ಘಂಟೆಗಳು ಬೇಕು; ಅದರ ಚಿಹ್ನೆ ಕಣ್ಮರೆಯಾಗಲು ದಿನಗಳು ಬೇಕು. ಇಷ್ಟಾದರೂ, ಕಚ್ಚಿದ ತಗುಣೆ ಕಣ್ಣಿಗೆ ಬೀಳುತ್ತದೆಯೆ? ಅದು ನಿಮ್ಮ ಉಡುಪಿನ ಹೊರಗಿನಿಂದಲೇ

ರಕ್ತಹೀರಬಲ್ಲುದು; ಅದು ಜಾಗವನ್ನು ಬಿಟ್ಟ ಬಳಿಕವೇ ನಿಮಗೆ ಅನುಗ್ರಹವಾಯಿತೆಂಬ ವಿಷಯ ಮೆದುಳಿಗೆ ಮುಟ್ಟುವುದು. ಅದನ್ನು ಕೊಂದಾದರೂ ಸಮಾಧಾನ ಪಡೆಯೋಣ ವೆಂದರೆ, ತೀವ್ರಗತಿಯಲ್ಲಿ ಇನ್ನೆಲ್ಲಿಗೋ ಹರಿದು ಹೋಗಿರುತ್ತದೆ...ಮಾನವನ ಕ್ಷುದ್ರ ಶತ್ರುಗಳ ಶ್ರೇಣಿಯಲ್ಲಿ ತಗುಣೆಗೇ ಅಗ್ರತಾಂಬೂಲ.

ಸಂಸ್ಕೃತದಲ್ಲಿ ಒಂದು ಶ್ಲೋಕವುಂಟು. ಹಗಲಿರುಳೂ ಇಂಥ ಜಂತುಗಳ ಕಾಟಕ್ಕೆ ಗುರಿಯಾಗಿ ರೋಸಿಹೋದ ಒಬ್ಬಾತನ ಉದ್ಗಾರವಿದೆಂದು ತೋರುತ್ತದೆ :

> ಮತ್ಕುಣಾ ಮಶಕಾ ರಾತ್ರೌ ಮಕ್ಷಿಕಾ ಯಾಚಕಾ ದಿವಿ ।
> ಪಿಪೀಲಿಕಾಶ್ಚ ಭಾರ್ಯಾ ಚ ಬಾಧಂತೇ ಮಾಂ ದಿವಾನಿಶಂ ॥

"ತಗುಣೆಗಳು, ಸೊಳ್ಳೆಗಳು ಇರುಳಿನಲ್ಲಿ; ನೊಣಗಳು, ತಿರುಕರು ಹಗಲಿನಲ್ಲಿ; ಇರುವೆಗಳು, ಹೆಂಡತಿ ಇವರಾದರೋ ಇರುಳು ಹಗಲು ಎರಡರಲ್ಲೂ ನನ್ನನ್ನು ಬಾಧಿಸುತ್ತಾರೆ."—ಈ ಶ್ಲೋಕದಲ್ಲಿ ತಗುಣೆ, ಸೊಳ್ಳೆ, ನೊಣ, ಇರುವೆ—ಇವುಗಳ ಜೊತೆಗೆ ಹೆಂಡತಿಯನ್ನೂ ಸೇರಿಸಿರುವುದು ಆಧುನಿಕಯುಗದ "ರೊಮ್ಯಾಂಟಿಕ್" ತರುಣರಿಗೆ ಅತ್ಯಂತ ಅಸಭ್ಯ, ಅಸಹ್ಯ ಎನಿಸುವುದು ಸಹಜ. (ತಿರುಕರ ಪ್ರಶ್ನೆ ಇಲ್ಲಿ ಬೇಡ.) ಆದರೆ ಶ್ಲೋಕಕಾರನ ಅನುಭವ ಹೇಗಿದ್ದಿತೋ! ಅದನ್ನು ಅಲ್ಲಗಳೆಯಲು ನಾವು ಯಾರು? ಇದರ ಮೇಲೆ ಭಾರ್ಯೆಯ ವಿಷಯವೂ ಈಗ ನಮಗೆ ಪ್ರಕೃತವಲ್ಲ. ತನ್ನ ಪಟ್ಟಿಯಲ್ಲಿ ಈ ಕವಿ ತಗುಣೆಗಳಿಗೆ ಅಗ್ರಸ್ಥಾನ ಕೊಟ್ಟಿರುವುದನ್ನು ನೋಡಿದರೆ ಅವನು ಅಷ್ಟೇನೂ ಅವಿಚಾರಿಯಲ್ಲ ಎನ್ನಿಸುತ್ತದೆ. ಆದರೆ ತಗುಣೆಯ ಕಾಟ ರಾತ್ರಿಯೊಂದಕ್ಕೆ ನಿಯಮಿತವೆಂದು ಅವನು ಹೇಳಿರುವುದು ಮಾತ್ರ ನನಗೆ ಒಪ್ಪಿಗೆಯಿಲ್ಲ. ಇರುಳಿನಂತೆ ಹಗಲಿನಲ್ಲೂ ಅದರ ದಂಶನಕ್ಕೆ ಎಷ್ಟೋ ಕಡೆ ಪಾತ್ರನಾಗಿರುವ ನನ್ನ ದೃಷ್ಟಿಯಲ್ಲಿ ಅದು "ದಿವಾನಿಶಂ" ಗುಂಪಿಗೆ ಸೇರಬೇಕಾಗಿತ್ತು.

ದೀರ್ಘಾನುಭವದ ಬಲದಿಂದ ತಗುಣೆಯ ವಿಷಯವಾಗಿ ನನ್ನಲ್ಲಿ ಸಂದೇಹ ಪ್ರಕೃತಿ ತುಂಬ ಬೆಳೆದಿದೆ. ಯಾರ ಮನೆಗೆ ಹೋದರೂ ಮೊದಲು ಗೋಡೆಗಳ ಕಡೆಗೆ ನೋಡುತ್ತೇನೆ. ಅಲ್ಲಿ ಗೋಡೆಗೆ ತಗುಲುಹಾಕಿರುವ ಪಟಗಳ ಅಂಚಿನಲ್ಲಿ, ಅಲ್ಲಿಯ ಸಣ್ಣ ರಂಧ್ರಗಳ ಸುತ್ತಮುತ್ತ, ಸಾಸಿವೆಕಾಳಿನ ತುಣುಕುಗಳಂಥ ಸೂಕ್ಷ್ಮಾಕೃತಿಯ ಕಪ್ಪು ಕಲೆಗಳು ಗೋಚರವಾದರೆ ಇಲ್ಲಿ ತಗುಣೆಗಳ ಬೀಡುಗಳುಂಟೆಂದು ನಿರ್ಧರಿಸಿ ಗೋಡೆಯಿಂದ ದೂರ ಕುಳಿತಿರುತ್ತೇನೆ. ಕುರ್ಚಿ ಮೇಜುಗಳಲ್ಲಿ ಈ ಹೊರಗಿನ ಚಿಹ್ನೆಗಳು ಸಾಮಾನ್ಯವಾಗಿ ದೊರೆಯುವುದಿಲ್ಲ. ಆ ಮನೆಯ ಅಚ್ಚುಕಟ್ಟಿನ ಪರಿಚಯ ಮೊದಲೇ ಚೆನ್ನಾಗಿ ಇದ್ದ ಹೊರತು ಬೆತ್ತದ ಕುರ್ಚಿಗಳನ್ನು ಪರಿಹರಿಸುವುದೇ ಉತ್ತಮೋಪಾಯ. ಹಾಗೆಯೇ ನೀವು ಇಳಿದುಕೊಂಡ ಕಡೆ ಮಂಚದ ಸಂದುಗಳನ್ನೂ ದಿಂಬುಗಳ ಅಂಚುಗಳನ್ನೂ ಒಮ್ಮೆ ಪರೀಕ್ಷಿಸಿ ನೋಡುವುದು ಅವಶ್ಯ. (ಇದನ್ನೆಲ್ಲ ಮಾಲೀಕರ ಕಣ್ಣಿಗೆ ಬೀಳದಂತೆ ನಿರ್ವಹಿಸಬೇಕೆಂದು ಲೋಕ ಬಲ್ಲವರಿಗೆ ಹೇಳಬೇಕಾಗಿಲ್ಲವಷ್ಟೆ.)

ಇಷ್ಟೆಲ್ಲ ಮುಂಜಾಗರೂಕತೆ ಇದ್ದರೂ, ಗ್ರಹಗತಿ ಚೆನ್ನಾಗಿಲ್ಲದಿದ್ದರೆ ತಗುಣೆಗಳಿಗೆ ತುತ್ತಾಗುವುದನ್ನು ತಪ್ಪಿಸಿಕೊಳ್ಳಲು ಅಶಕ್ಯವಾಗಬಹುದು.

ಒಂದು ಬಾರಿ ನಾನು ಪಶ್ಚಿಮಕರಾವಳಿಯ ಪಟ್ಟಣವೊಂದಕ್ಕೆ ಉಪನ್ಯಾಸ ಕೊಡುವುದಕ್ಕಾಗಿ ಹೋಗಬೇಕಾಯಿತು. ಅಲ್ಲಿಯ ಸಮುದ್ರತೀರ ಬಲು ರಮ್ಯವೆಂದು ಕೇಳಿದ್ದ ಮನಸ್ಸು ಈ ಸಂದರ್ಭವನ್ನು ಉತ್ಸಾಹದಿಂದ ಸ್ವಾಗತಿಸಿತು. ಆ ಊರಿಗೆ ಒಂದು ಮೈಲಿ ದೂರದಲ್ಲಿ ಲಕ್ಷಣವಾದ ಪ್ರವಾಸಿ ಮಂದಿರವಿದೆ; ಅಲ್ಲಿಂದ ಸಮುದ್ರಕ್ಕೂ ಸಮೀಪ. ಆದರೆ ಅಲ್ಲಿ ನಾನು ಇಳಿದುಕೊಂಡರೆ ಊಟತಿಂಡಿಯ ವ್ಯವಸ್ಥೆಗೆ ಅನನುಕೂಲವೆಂದು ಆಲೋಚಿಸಿ ವ್ಯವಸ್ಥಾಪಕರು ಊರ ಮಧ್ಯದ ಒಂದು ಹೋಟಲಿನಲ್ಲಿ—ಅದನ್ನು "ಅತಿಥಿ ನಿಕೇತನ" ಎಂದು ಸದ್ಯಕ್ಕೆ ಕರೆಯೋಣ—ಇಳಿಸಿದರು. ಅಲ್ಲಿಗೆ ನಾನು ತಲುಪಿದಾಗ ಮಧ್ಯಾಹ್ನ. ನನ್ನ ಬಿಡಾರ ಹೊಟಲಿನ ಮಹಡಿಯ ಮೇಲೆ. ಅದರಲ್ಲಿ ಸಾಕಾದಷ್ಟು ಕಿಟಕಿಗಳೂ ಮಂಚವೂ ಇದ್ದುವು. ನೆಲಗಟ್ಟು ಅಷ್ಟೇನೂ ಸೊಗಸದಿದ್ದರೂ, ಒಟ್ಟಿನಮೇಲೆ ಚಿಂತೆಯಿಲ್ಲ ಎಂದುಕೊಂಡು, ಮೊದಲು ಅಭ್ಯಾಸ ಬಲದಿಂದ ಗೋಡೆಗಳನ್ನು ಪರೀಕ್ಷೆಮಾಡಿದೆನು. ತಗುಣೆಗಳ ಬಿಡಾರವೂ ಇಲ್ಲಿ ಉಂಟೆಂಬುದಕ್ಕೆ ಚೆನ್ನಾಗಿ ನಿದರ್ಶನ ದೊರೆಯಿತು. ಬಳಿಕ ಮಂಚದ ಮೇಲಿನ ಹಾಸಿಗೆಯ ಕೊನೆಗಳನ್ನು ಎತ್ತಿನೋಡಿದೆನು. ಅಲ್ಲಿಯ ದೃಶ್ಯದಿಂದ ಮನಸ್ಸು ದಿಗಿಲುಗೊಂಡಿತು. ಆ ಮಂಚದ ಗೋಜಿಗೇ ಹೋಗದೆ, ಅದಕ್ಕೆ ದೂರವಾಗಿ ಒರಟುನೆಲದ ಮೇಲೆಯೇ ನನ್ನ "ಸರ್ವಗ್ರಾಹಿ"ಯ (ಹೋಲ್ಡ್-ಆಲ್) ಸುರುಳಿಯನ್ನು ಬಿಚ್ಚಿ, ಜೊತೆಗೆ ತಂದಿದ್ದ ಡಿ.ಡಿ.ಟಿ. ಡಬ್ಬಿಯಿಂದ ಪುಡಿಯನ್ನು ಸುತ್ತಲೂ ಚಿಮುಕಿಸಿ ಹಾಸಿಗೆಯಮೇಲೆ ಮೈಯನ್ನು ಚಾಚಿದೆನು. ಮುಂಗಾರು ಮಳೆಗೆ ಪೂರ್ವಭಾವಿಯಾಗಿ ಬರುವ ಮಳೆಯ ಸೆಳಕುಗಳಂತೆ ಹಗಲಲ್ಲೆ ನನ್ನನ್ನು ಹುಡುಕಿಕೊಂಡು ಬಂದ ಒಂದೆರಡು ತಗುಣೆಗಳಿಗೆ ತಕ್ಕ ಶಾಸ್ತಿ ಮಾಡಿ ಕೆಲವು ನಿಮಿಷಗಳ ನಿದ್ದೆಯನ್ನೂ ಮಾಡಿದೆನು.

ಅಪರಾಹ್ಣದ ವಿಶ್ರಾಂತಿ ಶೀಘ್ರವಾಗಿಯೇ ಮುಗಿಯಿತು. ಕರೆಯಲು ಬಂದ ವ್ಯವಸ್ಥಾಪಕರೊಡನೆ ಕೆಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಉಪನ್ಯಾಸವನ್ನೂ ಕೊಟ್ಟು ಹೋಟಲಿಗೆ ರಾತ್ರಿ ಹಿಂದಿರುಗಿದ್ದಾಯಿತು. ಆ ಊರಿನಲ್ಲಿ ವಿದ್ಯುಚ್ಛಕ್ತಿಯ ದೀಪವಿರಲಿಲ್ಲ. ಊಟ ಮುಗಿದ ಬಳಿಕ, ಮಿಣುಮಿಣುಕುವ ಒಂದು ಲಾಂದರವನ್ನು ನನ್ನ ಕೈಗೆ ಕೊಟ್ಟು, ನೀವು ಮಲಗಿಕೊಳ್ಳುವಾಗ ಇದನ್ನು ಆರಿಸಿಬಿಡಿ ಎಂಬ ಸೂಚನೆಯನ್ನೂ ಕೊಟ್ಟು ಹೋಟಲಿನ ಮಾಲೀಕ ಜಾರಿದನು. ಆ ಮಹಡಿಗೆಲ್ಲ ನಾನೊಬ್ಬನೇ. ಜೊತೆಗೆ ನನ್ನ ಟಾರ್ಚು ಮಾತ್ರ ಇತ್ತು. ಮಲಗುವ ಮುಂಚೆ ನಾನು ಮತ್ತೊಮ್ಮೆ ಹಾಸಿಗೆಯ ಸುರುಳಿಯನ್ನು ಪರೀಕ್ಷಿಸಿ, ಕೈಗೆ ಸಿಕ್ಕಿದ ಇನ್ನೆರಡುಮೂರು ತಗುಣೆಗಳನ್ನು ಧ್ವಂಸ ಮಾಡಿ, ಹಾಸಿಗೆಯ ಸುತ್ತಲೂ ದಟ್ಟವಾಗಿ ಅವಿಚ್ಛಿನ್ನವಾಗಿ ಡಿ.ಡಿ.ಟಿ.ಯ ರಂಗೋಲಿಯಿಕ್ಕಿ ಅಷ್ಟದಿಗ್ಬಂಧನ ಮಾಡಿದೆನು. ಆ ಒಂದು ರಾತ್ರಿಗೇ ನನ್ನ ಡಬ್ಬಿಯಲ್ಲಿದ್ದ ಪುಡಿಯ ಬಹುಭಾಗವನ್ನು ವಿನಿಯೋಗಿಸಿದೆನು. ಯಾವುದಾದರೂ

ಪರಿಹಾರ ಮಂತ್ರದ ಉಪದೇಶವನ್ನು ನಾನು ಪಡೆದಿದ್ದರೆ ಅದನ್ನು ಜಪಿಸುತ್ತಿದ್ದೆನೋ ಏನೋ. ಅಂತೂ ನನಗೆ ತಿಳಿದ ಮಟ್ಟಿಗೆ ಪ್ರತಿರಕ್ಷೆಯ ಸನ್ನಾಹವನ್ನು ಪೂರೈಸಿ ಹಾಸಿಗೆಯನ್ನು ಆಶ್ರಯಿಸಿದೆನು. ಹೋಟಲಿನವರ ಆಕ್ಷೇಪಣೆಗೆ ಒಳಗಾಗಬಾರದೆಂದು ಲಾಂದರವನ್ನು ಆರಿಸಿದೆನು. ತಲೆದಿಂಬಿನ ಒಂದು ಪಕ್ಕದಲ್ಲಿ ಟಾರ್ಚು, ಮತ್ತೊಂದು ಪಕ್ಕದಲ್ಲಿ ಡಿ.ಡಿ.ಟಿ.ಯ ಡಬ್ಬಿ. ಕೈಗಡಿಯಾರ ಕೈಯಲ್ಲೇ ಇತ್ತು; ದೀಪವನ್ನು ಆರಿಸುವಾಗ ನೋಡಿಕೊಂಡೆನು : ರಾತ್ರಿ ಹತ್ತು ಘಂಟೆ ಆಗಿತ್ತು.

ಪ್ರಯಾಣ, ಅಲೆದಾಟ ಮೊದಲಾದವುಗಳ ಆಯಾಸದಿಂದ ನಿದ್ದೆಯೇನೋ ತಡವಿಲ್ಲದೆ ಬಂದಿತು. ಆದರೆ ಇದ್ದಕ್ಕಿದ್ದ ಹಾಗೆ ಎಚ್ಚರವೂ ಆಯಿತು. ಶರೀರದ ನಾಲ್ಕಾರು ಕಡೆಗಳಲ್ಲಿ ಉರಿಮುಳ್ಳು ಕುಕ್ಕಿದಂತೆ ಅನುಭವ. ದಿಗ್ಗನೆದ್ದು ಟಾರ್ಚನ್ನು ಹೊತ್ತಿಸಿ ಆ ಕಡೆ ಈ ಕಡೆ ಹಾಯಿಸಿ ನೋಡುತ್ತೇನೆ : ಮಗ್ಗಲು ಹಾಸಿಗೆಯ ಮೇಲೆ ಏಳೆಂಟು ತಗಣೆಗಳು ಹರಿದಾಡುತ್ತಿವೆ. ಇನ್ನೂ ಆಚೆಗೆ ನೋಡಿದರೆ, ಕೋಟೆಯನ್ನು ಮುತ್ತಿ ಒಳಕ್ಕೆ ಇಳಿಯುವ ಸೈನಿಕರಂತೆ ಸಾಲಾಗಿ ನಾಲ್ಕು ಕಡೆಗಳಿಂದಲೂ ಬರುತ್ತಿವೆ; ಡಿ.ಡಿ.ಟಿ.ಯ ವಲಯವನ್ನು ಯಾವ ಶಂಕೆಯೂ ಇಲ್ಲದೆ ದಾಟಿ ನನ್ನ ಕಡೆಗೆ ನುಗ್ಗುತ್ತಿವೆ. ಟಾರ್ಚನ್ನು ತಿರುಗಿಸಿದ ಕಡೆ ಮಾತ್ರ ಅದರ ಬೆಳಕಿಗೆ ಕಣ್ಣು ಕೋರೈಸಿದಂತೆ ಹಿಮ್ಮೆಟ್ಟಿ ಪಕ್ಕಕ್ಕೆ ಹೊರಳಿ, ಅದು ಬೇರೆ ಕಡೆ ತಿರುಗಿದ ಕೂಡಲೇ ಮತ್ತೆ ಹಿಂದಿನ ಜಾಡಿನಲ್ಲೇ ಮುಂದುವರಿಯುತ್ತಿವೆ. ತಗಣೆಗಳ ಇಂಥ ಸಾಮೂಹಿಕ ಧಾಳಿಯನ್ನು ಹಿಂದೆಲ್ಲೂ ನಾನು ಕಂಡಿರಲಿಲ್ಲ. ಅಷ್ಟೊಂದು ತಗಣೆಗಳನ್ನು ಹೋಟಲಿನವರು ಹೇಗೆ ಕೃಷಿ ಮಾಡಿ ಬೆಳಸಿದ್ದರೋ. ಈಚೆಗೆ ತಕ್ಕ ಆಹಾರ ದೊರೆಯದೆ ಅವು ಎಷ್ಟೊಂದು ಹಸಿದಿದ್ದುವೋ! ಅಂತೂ ನನ್ನ ಭೋಜನದ ಅನುಕೂಲಕ್ಕೆಂದು ಈ ಹೋಟಲನ್ನು ಉಪನ್ಯಾಸದ ವ್ಯವಸ್ಥಾಪಕರು ಗೊತ್ತುಮಾಡಿದ್ದು ಅಲ್ಲಿಯ ತಗಣೆಗಳ ಭೋಜನಕ್ಕೆ ಅನುಕೂಲವಾಯಿತು.

ಎಂಥ ಶತ್ರುಗಳು ಮೇಲೆ ಬಿದ್ದರೂ ತನ್ನ ಕೈಯಲ್ಲಾದ ಮಟ್ಟಿಗೆ ಆತ್ಮ ಸಂರಕ್ಷಣೆ ಮಾಡಿಕೊಳ್ಳಲೇಬೇಕಷ್ಟೆ. ಹೊದಿಕೆಯನ್ನು ತೆಗೆದು ದೂರಕ್ಕೆ ಎಸೆದೆನು. ಡಿ.ಡಿ.ಟಿ. ಸೀಮಾರೇಖೆಯ ಆಚೆಗೂ ಕೈನೀಡಿ ಸಿಕ್ಕಿದಷ್ಟು ತಗಣೆಗಳನ್ನು ನಾಶಮಾಡಿದೆನು. ಟಾರ್ಚನ್ನು ಎಲ್ಲ ದಿಕ್ಕುಗಳಿಗೂ ತಿರುಗಿಸಿ ಸದ್ಯಕ್ಕೆ ಹೊಸ ಪಟಾಲಂ ಯಾವುದೂ ಬರುತ್ತಿಲ್ಲವೆಂದು ದೃಢಮಾಡಿಕೊಂಡು, ಮತ್ತೆ ಮಲಗಿ ಕಣ್ಣುಮುಚ್ಚಿಕೊಂಡೆನು. ನಿದ್ದೆಯೇನೋ ಬಂದಿತು; ಆದರೆ ಅರ್ಧ ಘಂಟೆಯೊಳಗೆ ಮತ್ತೆ ಮೈಯುರಿ, ಮತ್ತೆ ಎಚ್ಚರ, ಮತ್ತೆ ತಗುಣೆಗಳ ಸಾಲಿನ ದರ್ಶನ. ಮತ್ತೆ ಅವುಗಳೊಡನೆ ಹೋರಾಟ. ರಾತ್ರಿಯೆಲ್ಲಾ ಹೀಗೆಯೇ ನಡೆಯಿತು. ಅಂದು ನಾನು ಪಟ್ಟ ಹಿಂಸೆಯ ನೆನಪಿನ ಗಾಯ ಇಂದಿಗೂ ಪೂರ್ತಿಯಾಗಿ ವಾಸಿಯಾಗಿಲ್ಲ. ಬೆಳಗ್ಗೆ ಹೊತ್ತಿಗೆ ಮುಂಚೆಯೇ ನಾನು ಬಸ್ಸನ್ನು ಹತ್ತಿ ಬೇರೆ ಊರಿಗೆ ಪ್ರಯಾಣ ಮಾಡಬೇಕಾಗಿತ್ತು; ಆತಿಥೇಯರು ನನ್ನನ್ನು ಕರೆದುಕೊಂಡುಹೋಗಲು ಬರುವುದಕ್ಕೆ ಎಷ್ಟೋ ಮುನ್ನವೇ ನಾನು

ಗಂಟುಮೂಟೆಯನ್ನು ಕಟ್ಟಿಟ್ಟು, ತಗುಣೆಗಳು ಕಡಿದು ಊದಿ ಉರಿಯುತ್ತಿದ್ದ ಶರೀರಭಾಗಗಳನ್ನು ನೇವರಿಸಿಕೊಳ್ಳುತ್ತಾ ಕುಳಿತಿದ್ದೆನು. "ರಾತ್ರಿ ಚೆನ್ನಾಗಿ ನಿದ್ದೆ ಬಂತೆ" ಎಂದು ಅವರು ಸಾಂಪ್ರದಾಯಿಕವಾಗಿ ಕೇಳಿದ ಪ್ರಶ್ನೆಗೆ ಸಾಂಪ್ರದಾಯಕವಾದ ಉತ್ತರವನ್ನು ಕೊಡಲು ನನಗೆ ಅಸಾಧ್ಯವಾಯಿತು. "ಸ್ವಾಮಿ, ನಿಮ್ಮ ಅತಿಥಿಗಳು ಚೆನ್ನಾಗಿ ನಿದ್ದೆ ಮಾಡಬೇಕೆಂದು ನಿಮ್ಮ ಮನಸ್ಸಿನಲ್ಲಿದ್ದರೆ ಇಂಥ ಅತಿಥಿನಿಕೇತನಗಳಲ್ಲಿ ಅವರನ್ನು ದಯವಿಟ್ಟು ಇಳಿಸಬೇಡಿ" ಎಂದು ಸಲಹೆಕೊಟ್ಟು ಮುಂದಕ್ಕೆ ಪ್ರಯಾಣ ಮಾಡಿದೆನು.

ಮೇಲಿನ ಕಥೆಯನ್ನು ಕೇಳಿದ ಮಿತ್ರರೊಬ್ಬರು, "ಕರಾವಳಿಯ ಪ್ರದೇಶಗಳಲ್ಲೇ ಹಾಗೆ. ಆ ಹೋಟಲನ್ನು ಏಕೆ ಶಪಿಸುತ್ತೀರಿ? ದೊಡ್ಡವರ ಸೌಧಗಳಲ್ಲೂ ತಗುಣೆಗಳಿರುತ್ತವೆ" ಎಂದು ಹೇಳಿದರು. ಈ ಮಾತಿನಲ್ಲಿ ಕೆಲವು ಮಟ್ಟಿನ ಸತ್ಯಾಂಶ ಇಲ್ಲದಿಲ್ಲ. ನಾನು ಬೊಂಬಾಯಿ ನಗರದಲ್ಲಿ ಒಂದೆರಡುಬಾರಿ ಅನುಕೂಲಸ್ಥರ ಮನೆಗಳಲ್ಲಿ ಇಳಿದು ಕೊಂಡಿದ್ದಾಗಲೂ ತಗುಣೆಗಳ ಸ್ಪರ್ಶರುಚಿಯನ್ನು ಮನಗಂಡಿದ್ದೇನೆ. ಹಾಗೆ ನೋಡಿದರೆ ತಗುಣೆ ಎಲ್ಲಿ ಇಲ್ಲ? ಕಡಲ ತಡಿಯಲ್ಲಿ ಹೇಗೋ ಹಾಗೆ ಪ್ರಸ್ಥಭೂಮಿಯಲ್ಲೂ ನೆಲೆಸಿರುತ್ತದೆ. ಮನೆ, ಮಠ, ಹೋಟಲು, ಛತ್ರ ಎಂದೇನೂ ಅದು ಭೇದಮಾಡುವಂತೆ ತೋರುವುದಿಲ್ಲ. ಎಲ್ಲಿ ಕಾಲೂರಲು ಮರೆಯಾದ ಅವಕಾಶ ದೊರೆಯುತ್ತದೆ, ಎಲ್ಲಿ ಹೀರಲು ಆಗಾಗ ಮನುಷ್ಯರಕ್ತ ನಿಲುಕುತ್ತದೆ—ಅಲ್ಲೆಲ್ಲಾ ತಗುಣೆ ಯಥಾಶಕ್ತಿಯಾಗಿ ಬೀಡು ಬಿಟ್ಟಿರುತ್ತದೆ. ಚಲಿಸುವ ರೈಲಿನಲ್ಲೂ ಇದರ ಕೃಪಾಕಟಾಕ್ಷವನ್ನು ಹಲವು ಬಾರಿ ಅನುಭವಿಸಿರುತ್ತೇವೆ. ಮೊದಲನೆಯ ತರಗತಿಯ ಗಾಡಿಯಲ್ಲಿ—ಬಲುಮಟ್ಟಿಗೆ ನಿದ್ದೆಯ ಆಸೆಯಿಂದ—ಹೇರಳವಾಗಿ ಹಣ ತೆತ್ತು ರಾತ್ರಿ ಮೈಯನ್ನು ಮುಟ್ಟಿಮುಟ್ಟಿ ಸವರಿಕೊಂಡದ್ದು ಉಂಟು. ಮೊದಲನೆಯ ತರಗತಿಯ ಒಂದು "ಪೀಠ"ದಲ್ಲಿ ಎರಡು ತಗುಣೆಗಳಿದ್ದರೆ, ಎರಡನೆಯ ತರಗತಿಯಲ್ಲಿ ನಾಲ್ಕು, ಮೂರನೆಯದರಲ್ಲಿ ಎಂಟು-ಹೀಗೆ ಟಿಕೆಟ್ ದರದ ಪರಿಮಾಣಕ್ಕೆ ಪ್ರತಿಗುಣವಾಗಿ ಅವುಗಳ ಸಂಖ್ಯೆ ಹೆಚ್ಚುತ್ತದೆ ಎಂದು ಬೇಕಾದರೆ ಸಮಾಧಾನ ತಂದುಕೊಳ್ಳಬಹುದು. ವೇಳೆಯೂ ತಾಳ್ಮೆಯೂ ಉಳ್ಳ ಯಾರಾದರೂ ಈ ವಿಷಯದಲ್ಲಿ ಸಮಗ್ರವಾಗಿ ಸಂಶೋಧನೆ ನಡಸಿ ಗಣಿತಿಶಾಸ್ತ್ರಕ್ಕೆ ಹೊಸ ಆಹಾರವನ್ನೂ ಒದಗಿಸಬಹುದು.

ಮನೆ, ಹೋಟಲು, ರೈಲು ಇವು ಹಾಗಿರಲಿ; ಉಪನ್ಯಾಸಮಂದಿರದ ವೇದಿಕೆಯ ಮೇಲಿನ ಪೀಠಗಳನ್ನು ಕೂಡ ತಗುಣೆಗಳು ಮಿಾಸಲಾಗಿ ಬಿಡುವುದಿಲ್ಲ. ಕೆಲವು ವರ್ಷಕಾಲ ನಾನು ವಾಸವಾಗಿದ್ದ ನಗರವೊಂದರಲ್ಲಿ ಒಂದು ಉಪನ್ಯಾಸಮಂದಿರವಿತ್ತು. ಅಲ್ಲಿ ಒಮ್ಮೆ ನಾನು ಒಂದು ಘಂಟೆಯ ಕಾಲ ನಿಂತು ಉಪನ್ಯಾಸಮಾಡಿದ ಬಳಿಕ ಅಧ್ಯಕ್ಷರ ಭಾಷಣದ ವೇಳೆಯಲ್ಲಿ ಕುರ್ಚಿಯ ಮೇಲೆ ಕುಳಿತುಕೊಂಡಿರಬೇಕಾಯಿತು. ಅಂದಿನ ಅಧ್ಯಕ್ಷ ಮಹಾಶಯರು ಮಿಕ್ಕವರ ಹಾಗಲ್ಲ. ನಿಜವಾಗಿಯೂ ಕೃಪಾಶಾಲಿಗಳು; ಕೇವಲ ಹತ್ತು ನಿಮಿಷಗಳಲ್ಲೇ ತಮ್ಮ ಭಾಷಣವನ್ನು ಮುಗಿಸಿದರು. ಆದರೆ ಅಷ್ಟರೊಳಗೆ ನನಗೆ ಆ ಕುರ್ಚಿಯ ಸಹವಾಸ ಸಾಕುಸಾಕಾಗಿಹೋಗಿತ್ತು. ನನ್ನ ಉಪನ್ಯಾಸ ಅದರಲ್ಲಿದ್ದ ತಗುಣೆಗಳಿಗೆ ರುಚಿಸದೆ ಅವು ನನ್ನ ಮೇಲೆ ರೇಗಿದ್ದುವೋ ಏನೋ, ಈಗ ಚೆನ್ನಾಗಿ

ಸೇಡು ತೀರಿಸಿಕೊಂಡವು. ಹೀಗಿರುವಾಗ, ಕೆಲವು ತಿಂಗಳುಗಳ ಬಳಿಕ ಅದೇ ಮಂದಿರದಲ್ಲಿ ಮಹಿಳೆಯರ ಕಾರ್ಯಕ್ರಮವೊಂದಕ್ಕೆ ನಾನು ಅಧ್ಯಕ್ಷತೆ ವಹಿಸಬೇಕಾಯಿತು. ವ್ಯವಸ್ಥಾಪಕರು ನನ್ನನ್ನು ಕರೆದುಕೊಂಡು ಹೋಗಿ, ಆ ಪರಿಚಿತವಾದ ಕುರ್ಚಿಯ ಮೇಲೆಯೇ ಪ್ರತಿಷ್ಠಾಪಿಸಿದರು. ನೆನಪಿನಲ್ಲಿ ಮಾಸಿಹೋಗಿದ ಹಳೆಯ ಅನುಭವಗಳು ಶತಾಧಿಕವಾಗಿ ಮರುಕೊಳಿಸಿದುವು. ನಾನು ಅಧ್ಯಕ್ಷ ಅದು ಮಹಿಳೆಯರ ಸಭೆ : ಪರಿಸ್ಥಿತಿ ಏನೆಂಬುದನ್ನು ಕಾರ್ಯಕರ್ತರಿಗೆ ತಿಳಿಯಪಡಿಸಲು ಸಂಕೋಚವೂ ಸಭಾಮರ್ಯಾದೆಯೂ ಅಡ್ಡಿಯಾದವು. ಅಂತೂ ಆ ಮತ್ಕುಣಾಸನದಲ್ಲಿ ಕುಳಿತು ಸುಮಾರು ಒಂದೂವರೆ ಘಂಟೆಯ ಕಾಲವನ್ನು ನಾನು ಹೇಗೆ ಕಳೆದೆನೊ! ನೆನೆದರೆ ಈಗಲೂ ಮೈ ಜುಮ್ಮೆನ್ನುತ್ತದೆ. ಜೈನಧರ್ಮದ ಗ್ರಂಥಗಳಲ್ಲಿ ಇಪ್ಪತ್ತೆರಡು "ಪರೀಷಹ"ಗಳನ್ನು ಉಲ್ಲೇಖಿಸಿ, ಕರ್ಮವನ್ನು ತಡೆಗಟ್ಟಬೇಕೆನ್ನುವವನು ಅವುಗಳನ್ನು ಜಯಿಸಬೇಕು ಎಂದು ವಿಧಿಸುತ್ತಾರೆ. ಹಸಿವು ಬಾಯಾರಿಕೆ ಮೊದಲಾದವುಗಳಂತೆ ಗುಂಗುರು, ಸೊಳ್ಳೆ, ತಗುಣೆ, ಇರುವೆ, ಚೇಳು ಇತ್ಯಾದಿಗಳ ಬಾಧೆಯೂ "ಪರೀಷಹ"ಗಳಲ್ಲಿ ಒಂದು. ಇದನ್ನು ಜೈನತಪಸ್ವಿ ಸಹಿಸಿಕೊಳ್ಳಬೇಕು. "ಪೆತ್ತ ಪರೀಷಹ ಜಯಮೆ ತಪಂ, ತಪಕೆ ಬೇಱೆ ಕೋಡೆರಡೊಳವೇ?" ಎಂದು ಜನ್ನಕವಿ ಹೇಳಿ, ಇದೇ ತಪಸ್ಸಿನ ತಿರುಳೆಂದು ದೃಢಪಡಿಸುತ್ತಾನೆ. ಈ ಮಾತು ದಿಟವಾದರೆ, ಆ ಸಂಜೆ ನಾನು ಕುರ್ಚಿಯಿಂದ ಎದ್ದು ಓಡಿಹೋಗದೆ, ಚೀರಾಡದೆ, ಕಡೆಗೆ ಮುಖವಿಕಾರವನ್ನು ಕೂಡ ತೋರಿಸದೆ, ತಗುಣೆಗಳ ಕಡಿತದ ನರಕ ಯಾತನೆಯನ್ನು ಅಷ್ಟೊಂದು ಹೊತ್ತು ಸಹಿಸಿಕೊಂಡು ಕುಳಿತು, ಅಂದಿನ ಮಟ್ಟಿಗೆ "ತಪಸ್ವಿ"ಯೇ ಆದೆನೆನ್ನಬಹುದು. "ತಪಸ್ವಿ" ಎಂಬ ಶಬ್ದಕ್ಕೆ "ಕನಿಕರಕ್ಕೆ ಪಾತ್ರನಾದ ಪ್ರಾಣಿ" ಎಂದೂ ಸಂಸ್ಕೃತದಲ್ಲಿ ಅರ್ಥವುಂಟೆಂಬುದನ್ನು ಪ್ರಾಜ್ಞರು ನೆನೆದು, ಆ ಅರ್ಥದಲ್ಲಾದರೂ ಅದನ್ನು ನನಗೆ ಅನ್ವಯಿಸಬಹುದು.

ಕೆಲವರಿದ್ದಾರೆ. ಹಾವಾಡಿಗರಿಗೆ ಹಾವುಗಳು ಹೇಗೋ ಹಾಗೆ ಇವರಿಗೆ ತಗುಣೆಗಳು. ಅವು ಮೈಮೇಲೆಲ್ಲಾ ಹರಿದಾಡಿದರೂ ಕಚ್ಚಿದರೂ ಇವರಿಗೆ ಬಾಧೆಯುಂಟಾಗುವುದಿಲ್ಲ. ಬಾಧೆಯ ಮಾತಿರಲಿ, ಅದರ ಅರಿವೇ ಇವರಿಗೆ ಆಗುವಂತೆ ತೋರಲಿಲ್ಲ. ಅವರ ಮೈಯ ಚರ್ಮ ಸೃಷ್ಟಿಕರ್ತನಿಂದ ಯಾವ ವಿನಾಯತಿಯನ್ನು ಪಡೆದುತಂದಿದೆಯೋ! ಇಂಥವರೊಬ್ಬರು ರಸ್ತೆಯಲ್ಲಿ ಸಂಧಿಸಿ ಮಾತಾಡುತ್ತಿರುವಾಗ ಅವರ ಅಂಗಿಯ ಮೇಲೆ ಒಂದು ತಗುಣೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಶತಪದ ತಿರುಗುತ್ತಿದ್ದುದನ್ನು ಕಣ್ಣಾರ ನೋಡಿದ್ದೇನೆ. ಇನ್ನೊಮ್ಮೆ ನಾನು ಒಂದು ಸಭೆಯಲ್ಲಿ ಒಬ್ಬರ ಪಕ್ಕದಲ್ಲಿ ಕುಳಿತುಕೊಂಡಿದ್ದೆ. ಅವರ ತಲೆಯ ಮೇಲೆ ಭಾರಿ ಜರಿಯಂಚಿನ ಪೇಟ; ಪೇಟದ ಅಂಚು ಹಣೆಗೆ ಸೋಕುವ ಕಡೆ ಬೆವರಿನ ಮಲಿನರೇಖೆ ಅಲ್ಲಲ್ಲಿ ಗೋಚರವಾಗುತ್ತಿದ್ದರೂ ಪೇಟದ ಬೆಲೆಯೇನೋ ಭಾರಿಯೇ. ಅದರ ಮೇಲೆ ಒಂದು ತಗುಣೆ ಓಡಾಡುತ್ತಿತ್ತು. ಪೇಟದ ಪದರಗಳೊಳಗೆ ಒಮ್ಮೆ ಮರೆಯಾಗುವುದು, ಮತ್ತೊಮ್ಮೆ ಹೊರಗೆ ಕಾಣಿಸಿಕೊಂಡು ಇನ್ನೊಂದು ದಿಕ್ಕಿಗೆ ಅಭಿಮುಖವಾಗುವುದು—ಹೀಗೆ ಸಾಗಿತ್ತು ಅದರ ಸಂಚಾರಲೀಲೆ. ಸಮ್ಮೋಹನ ಮಂತ್ರಕ್ಕೆ ಕಟ್ಟುಬಿದ್ದವನಂತೆ ಅದನ್ನು ವೀಕ್ಷಿಸುವುದರಲ್ಲೇ ನನ್ನ ದೃಷ್ಟಿ

ಮಗ್ನವಾಗಿತ್ತು. ಅಲ್ಲದೆ, ಅದು ಎಲ್ಲಿ ಚಿಮ್ಮಿ ನನ್ನ ಮೈಮೇಲೆ ಬೀಳುವುದೋ ಎಂಬ ಭೀತಿ ಬೇರೆ. ಉಪನ್ಯಾಸದ ವಾಗ್ವೈಖರಿ ನನ್ನ ಮೆದುಳಿಗೆ ಮುಟ್ಟಲೇ ಇಲ್ಲ. ಇಷ್ಟಾದರೂ, "ಸ್ವಾಮಿ, ನಿಮ್ಮ ಪೇಟದಲ್ಲಿ ಒಂದು 'ಗೃಹರತ್ನ' ಸೇರಿಕೊಂಡಿದೆ, ಎಂದು ಆ ಪಕ್ಕದ ಮಹನೀಯರಿಗೆ ಹೇಳಲು ನನಗೆ ಧೈರ್ಯ ಬರಲಿಲ್ಲ! ಒಂದು ವೇಳೆ ಹೇಳಿದ್ದರೂ ಅವರು ಲಕ್ಷಿಸುತ್ತಿದ್ದರೋ ಇಲ್ಲವೋ ಯಾರಿಗೆ ಗೊತ್ತು, ಅವರು ಇದನ್ನು ಅಕ್ಕರೆಯಿಂದ ಸಾಕಿದ್ದರೋ ಏನೋ ಅದರ ಚಲನವಲನಗಳ ಲಯಕ್ಕೆ ಅನುಸಾರವಾಗಿ ಅವರ ಬುದ್ಧಿ ಕೆಲಸಮಾಡುತ್ತಿತ್ತೋ ಏನೋ! ಅಂತೂ ಇಂಥ ಮತ್ಕುಣಾಭರಣರನ್ನು ಕಂಡಾಗ ಅವರ ಹತ್ತಿರ ನಿಲ್ಲಲು ನನ್ನ ಶರೀರ ಹಿಂಜರಿದರೂ ನನ್ನ ಮನಸ್ಸು ಇಷ್ಟವಿಲ್ಲದ ಗೌರವವನ್ನು ಅವರಿಗೆ ಮೌನವಾಗಿ ಅರ್ಪಿಸುತ್ತದೆ.

ಮೇಲೆ ವರ್ಣಿಸಿರುವಂಥ ಅಪೂರ್ವ ಪುರುಷರನ್ನು ಬಿಟ್ಟರೆ, ತಗುಣೆಗಳಿಗೂ ಅವುಗಳ ಸಹಧರ್ಮಿಗಳಿಗೂ ನನ್ನಂತೆ ಅಂಜುವವರೇ ಜನತೆಯ ಸಾಮಾನ್ಯ ಭಾಗ. ಎಲ್ಲ ಕಾಲದಲ್ಲಿಯೂ ಹೀಗೆಯೇ, ಎಲ್ಲ ದೇಶದಲ್ಲಿಯೂ ಹೀಗೆಯೇ. ಭಯವನ್ನು ಹುಟ್ಟಿಸುವ ದುಷ್ಟಜೀವಿಗಳನ್ನು ಕೊಲ್ಲುವ ಪ್ರವೃತ್ತಿ ಮಾನವನಿಗೆ ಸಹಜವಾಗಿ ಒದಗುತ್ತದೆ. ಪ್ರಾಚೀನ ಇರಾನಿನಲ್ಲಂತೂ, ಇಂಥ ಅನಿಷ್ಟಜಂತುಗಳ ಸಮೂಲ ನಾಶನವು ("Extirpation of obnoxious creatures") ಧಾರ್ಮಿಕರ ಒಂದು ಅವಶ್ಯಕರ್ತವ್ಯ ವಾಗಿದ್ದಿತೆಂತೆ. ಹಲವು ವರ್ಷಗಳ ಹಿಂದೆ ಇರಾನಿನ ಪ್ರಸಿದ್ಧ ವಿದ್ವಾಂಸರೊಬ್ಬರು ಮೈಸೂರಿಗೆ ಬಂದು ಜರತುಷ್ಟ್ರ ಧರ್ಮವನ್ನು ಕುರಿತು ಉಪನ್ಯಾಸ ಕೊಟ್ಟರು. ಅವರು ಹೇಳಿದ ವಿಷಯಗಳಲ್ಲಿ "Extirpation of obnoxious creatures" ಇಂಥಿಂಥ ದುಷ್ಟ ಜಂತುಗಳನ್ನು ಇಂಥಿಂಥ ಋತುಗಳಲ್ಲಿ ಹೀಗೆ ಹೀಗೆ ನಾಶಮಾಡಬೇಕು ಎಂದು ಆಗಿನ ಶಾಸ್ತ್ರಕಾರರು ವಿಶದವಾಗಿ ವಿಧಿಸಿದ್ದರಂತೆ. ಈಗಲೂ ಧರ್ಮಪ್ರವರ್ತಕರು ಯಾರಾದರೂ ಇಂಥದೊಂದು "ವ್ರತ"ದ ಚಳವಳಿಯನ್ನು ಏಕೆ ಹೂಡಬಾರದು? ಇಲ್ಲಿ ಹಿಂಸೆಯ ಪಾಪ ಸೋಕುವುದಿಲ್ಲ, ಅದಕ್ಕೆ ಬದಲು ಮಾನವರಕ್ಷಣೆಯ ಪುಣ್ಯ ಒದಗುತ್ತದೆ ಎಂದು ಏಕೆ ಘೋಷಿಸಬಾರದು? ಲೌಕಿಕ ರಾಜ್ಯದಲ್ಲಿ (Secular state) ನೋಹಿವ್ರತಗಳಿಗೆ ಪುರಸ್ಕಾರ ಎಲ್ಲಿ ದೊರೆಯುತ್ತದೆ ಎಂದು ಯಾರಾದರೂ ಆಕ್ಷೇಪಣೆ ತೆಗೆಯಬಹುದು. ಹೋಗಲಿ. ಇಂಗ್ಲೆಂಡಿನಲ್ಲಿ ತಗುಣೆ, ಜಿರಲೆ ಮೊದಲಾದವುಗಳನ್ನು ನಾಶಮಾಡುವ ಕಸಬನ್ನೇ ಕೈಕೊಂಡಿರುವ ಜನಗಳೂ ಕಂಪನಿಗಳೂ ಹಲವು ತಲೆಮಾರುಗಳಿಂದ ಉಂಟೆಂದು ಯಾವುದೋ ಒಂದು ಪತ್ರಿಕೆಯಲ್ಲಿ ಓದಿದ ನೆನಪಿದೆ. "ವ್ರತ" ಎಂಬ ಶಬ್ದ ರುಚಿಸದಿದ್ದರೆ ಬೇಡ; ಪಾಶ್ಚಾತ್ಯರಂತೆ "ವೃತ್ತಿ"ಯ ರೂಪದಲ್ಲಾದರೂ ಈ ಅವಶ್ಯಕಾರ್ಯವನ್ನು ಯಾರಾದರೂ ಉದ್ಯಮಶಾಲಿಗಳು ನಮ್ಮ ದೇಶದಲ್ಲೂ ಕೈಕೊಂಡು ಪುಣ್ಯವನ್ನಲ್ಲದಿದ್ದರೆ ಹಣವನ್ನಾದರೂ ಗಳಿಸಬಹುದಲ್ಲ!

"ಹರನು ಹಿಮಾಚಲದಲ್ಲಿ ಪವಡಿಸುತ್ತಾನೆ, ಹರಿ ಕ್ಷೀರಸಾಗರದಲ್ಲಿ ಪವಡಿಸುತ್ತಾನೆ: ಏಕೆ ಎಂದರೆ, ತಗುಣೆಗೆ ಹೆದರಿ!"—ಈ ಆಶಯವುಳ್ಳ ಒಂದು ಶ್ಲೋಕ ಸಂಸ್ಕೃತದಲ್ಲುಂಟು.

ದೇವತೆಗಳೇ ಹೆದರಿ ಪರ್ವತದ ತುದಿಯಲ್ಲೋ ಸಮುದ್ರದ ಮಧ್ಯದಲ್ಲೋ ರಾತ್ರಿಯನ್ನು ಕಳೆಯುವಾಗ ಸಾಮಾನ್ಯ ಮಾನವನು ತಗುಣೆಯಿರುವ ಜಾಗದಿಂದ ದೂರ ಸರಿಯುವುದೊಂದೇ ಉಪಾಯವೆಂದು ನಮ್ಮ ಹಿಂದಿನವರು ಸಾಮಾನ್ಯವಾಗಿ ಭಾವಿಸಿದ್ದ ಹಾಗೆ ಕಾಣುತ್ತದೆ. ಆದರೆ ಯಾರೊಬ್ಬರೂ ಅದನ್ನು ಎದುರಿಸುವ ಉಪಾಯಗಳನ್ನು ಆಲೋಚಿಸಿಯೇ ಇರಲಿಲ್ಲವೆ? ಇಲ್ಲವೆಂದರೆ, ಅದು ಮಾನವನ ಆತ್ಮರಕ್ಷಣ ಪ್ರವೃತ್ತಿಯನ್ನೇ ಅಲ್ಲಗಳೆದ ಹಾಗಾಗುತ್ತದೆ. ಈ ವಿಷಯದಲ್ಲಿ ತಕ್ಕಷ್ಟು ಸಂಶೋಧನೆ ನಡೆದರೆ ಹೊಸ ವಿಷಯಗಳು ಬೆಳಕಿಗೆ ಬರಬಹುದು. ನನ್ನ ಕಣ್ಣಿಗೆ ಬಿದ್ದ ಒಂದು ವಾಕ್ಯವನ್ನು ಇಲ್ಲಿ ಉದ್ಧರಿಸುತ್ತೇನೆ—ಅದೂ 'ಕರ್ಣಾಟಕ ಕವಿಚರಿತೆ'ಯಿಂದ. "ಕಡಲೆಯ ಬೇರು ಸಿದ್ಧದಿನದಲ್ಲಿ ತಂದು ಮಂಚದಲ್ಲಿ ಕಟ್ಟಲು ತಿಗುಣೆ ಹೊದ್ದಲಮ್ಮದು."—ಹೀಗೆಂದು 'ಜ್ವಾಲಿನೀ ಕಲ್ಪಾದಿಸಂಗ್ರಹ' ಎಂಬ ಗ್ರಂಥದ ಕರ್ತೃ ಆಶ್ವಾಸನಕೊಡುತ್ತಾನೆ. ಈ ಪ್ರಯೋಗವನ್ನು ಆತನು ಸ್ವತಃ ನಡಸಿ ಪ್ರಯೋಜನವನ್ನು ಕಂಡು ಈ ರೀತಿ ಬರೆದನೋ, ಹಿಂದಿನ ಗ್ರಂಥಗಳಿಂದ ಗತಾನುಗತಿಕವಾಗಿ ಸುಮ್ಮನೆ ನಕಲು ಮಾಡಿದನೋ, ತಿಳಿಯದು. ಇದರ ಮೇಲೆ "ಸಿದ್ಧದಿನ" ಎಂದರೇನು? ಕಡಲೆಯ ಬೇರು ಕೆಲಸಮಾಡಲು ತಿಥಿ ವಾರ ನಕ್ಷತ್ರಗಳ ಸಹಾಯವನ್ನು ಅಪೇಕ್ಷಿಸುವುದಾದರೆ ಅದೆಂಥ ಸಿದ್ಧೌಷಧ? ಅಲ್ಲದೆ, ತಗುಣೆಗಳು ಮಂಚದ ಕಾಲಮೇಲೆ ಹತ್ತದಂತೆ ಅದು ತಡೆಯುತ್ತದೆಯೇ ಹೊರತು ಅವನ್ನು ಕೊಲ್ಲುವುದಿಲ್ಲವಲ್ಲ! ನಮ್ಮ ದೇಶದಲ್ಲಿ ಮಂಚದ ಮೇಲೆ ಮಲಗುವ ಭೋಗಿಗಳು ಎಷ್ಟು ಮಂದಿ? ನೆಲದ ಮೇಲೆ ಹಾಸಿಗೆಯನ್ನು ಹಾಕಿಕೊಂಡೋ, ಅದೂ ಇಲ್ಲದೆಯೋ, ಮಲಗುವವರ ಸಂರಕ್ಷಣೆ ಹೇಗೆ? ಅಂತೂ ಈ ಪ್ರಯೋಗ ನನ್ನ ಮನಸ್ಸಿಗೆ ಹಿಡಿಸಲಿಲ್ಲ.

ಒಂದನೆಯ ಮಂಗರಾಜನ 'ಖಗೇಂದ್ರಮಣಿದರ್ಪಣ'ದಲ್ಲಿ ಇನ್ನೊಂದು ವಾಕ್ಯ ದೊರೆಯಿತು : "ಉಗುನಿಯ ಪಾಲಂ ಪೂಸಲ್ ತಗುಣೆಯ ವಿಷಂ ಅಟಿಗುಂ." ಇದು ಚಿಕಿತ್ಸೋಪಾಯ, ಪರಿಹಾರೋಪಾಯವಲ್ಲ. ತಗುಣೆ ಕಡಿದ ಜಾಗಕ್ಕೆ ಉಗುನಿಯ ಬಳ್ಳಿಯ ಹಾಲನ್ನು ಲೇಪಿಸಿದರೆ, ಅದರ ವಿಷ ಇಳಿಯುತ್ತದಂತೆ. ಇರಬಹುದು. ಆದರೆ ತಗುಣೆ ಕಡಿಯುವುದು ಮನೆಯಲ್ಲಿ, ಬಲುಮಟ್ಟಿಗೆ ನಿದ್ದೆಯ ಸಮಯದಲ್ಲಿ. ಆ ಮುಹೂರ್ತಕ್ಕೆ ಒದಗುವ ಹಾಗೆ ಉಗುನಿಯ ಹಾಲನ್ನು ಹವಣಿಸಿಕೊಂಡು ಇರುವುದು ಕಷ್ಟವಲ್ಲವೆ? ಈ ಬಳ್ಳಿ ಯಾವ ವೇಳೆಯಲ್ಲಿ, ಯಾವ ಕಾಡಿನಲ್ಲಿ ಬೆಳೆದಿರುತ್ತದೆಯೋ? ಒಂದು ವೇಳೆ ಮುಂಜಾಗರೂಕತೆಯಿಂದ ಅದನ್ನು ಹುಡುಕಿ ಕಿತ್ತುತಂದು ಸಮೀಪದಲ್ಲಿ ಇರಿಸಿಕೊಂಡರೂ, ಬಳ್ಳಿ ಒಣಗದಂತೆ, ಅದರ ಹಾಲು ಬತ್ತಿ ಹೋಗದಂತೆ ತಡೆಯುವ ಶೈತ್ಯಕ್ರಿಯೆಯನ್ನು ಕಂಡುಹಿಡಿಯಬೇಕಲ್ಲ. ಅಲ್ಲದೆ, ಬೇರೆಯವರ ಮನೆಗಳಿಗೆ ಹೋಗುವಾಗಲೆಲ್ಲ ಅಲ್ಲಿ ಸಂಭವಿಸಬಹುದಾದ ಮತ್ಕುಣದಂಶನಕ್ಕೆ ಕೂಡಲೆ ಚಿಕಿತ್ಸೆಮಾಡಲು ಉಗುನಿಯ ಬಳ್ಳಿಯ ಕಟ್ಟನ್ನೋ ಅದರ ಹಾಲಿನ ಗಿಂಡಿಯನ್ನೋ ಕೈಯಲ್ಲಿ ಹಿಡಿದುಕೊಂಡು ಹೋಗುವುದು ಸಾಧ್ಯವೆ, ಸರಿಯೆ?....ಆಧುನಿಕ ಕಾಲದಲ್ಲಿ ವೃತ್ತಪತ್ರಿಕೆಗಳು ತಗುಣೆಯನ್ನು ಪರಿಹಾರಮಾಡುವ ಚೂರ್ಣ, ದ್ರಾವಕ ಮೊದಲಾದವುಗಳ ಜಾಹಿರಾತುಗಳನ್ನು ಆ..ಾಗ ಪ್ರಕಟಿಸುತ್ತವೆ. ಈ ವಸ್ತುಗಳು ತಗುಣೆಗಳನ್ನು

ಕೊಲ್ಲುದವುದಕ್ಕಿಂತ ಹೆಚ್ಚಾಗಿ, ಅಪ್ಪಿ ತಪ್ಪಿ ತಮ್ಮನ್ನು ಪ್ರಾಶನಮಾಡಿದ ಮನುಷ್ಯರನ್ನೇ ಆಹುತಿ ತೆಗೆದುಕೊಂಡುವೆಂದು ಓದಿರುವುದೂ ಉಂಟು. ಈ ಬಗೆಯ ವಾರಣಮಾರಣ ಕ್ರಿಯೆಗಳಿಗೆ ಜಗ್ಗದ ಗಟ್ಟಿಪಿಂಡ ತಗುಣೆ. ಅದು ರಕ್ತಬೀಜಾಸುರನ ಸಂತತಿ—ಒಂದು ಕೆಳಕ್ಕೆ ಬಿದ್ದರೆ ಅದರ ಜಾಗದಲ್ಲಿ ಹತ್ತು ಉದ್ಭವಿಸುತ್ತವೆ.

ಗಟ್ಟಿಪಿಂಡ ಎನ್ನುತ್ತಲೂ ನೆನಪಿಗೆ ಬಂದಿತು—ಹರಿಹರಕವಿಯ 'ರೇವಣ ಸಿದ್ಧೇಶ್ವರ ರಗಳೆ'ಯಲ್ಲಿ ಕಾಣಿಸಿಕೊಳ್ಳುವ ರಾಕ್ಷಸ ತಗುಣೆಗಳ ಜೋಡಿ. ರೇವಣಸಿದ್ಧೇಶ್ವರನು ದೇಶಸಂಚಾರ ಮಾಡುತ್ತಾ ಬಂದು ಮಾಸನೂರೆಂಬ ಪಟ್ಟಣದ ಹೊರಗಡೆಯ ಶಿವಾಲಯದಲ್ಲಿ ಒಂದು ಸಂಜೆ ಕುಳಿತಿದ್ದನಂತೆ. ಅದನ್ನು ಕಂಡು ಅಲ್ಲಿಯ ಪೂಜಾರಿ, "ಎಲೆ ಸಿದ್ಧ, ಇಲ್ಲೇಕೆ ಇರುತ್ತೀಯೆ? ಈ ಶಿವಾಲಯದ ಮುಂದಿನ ವೃಕ್ಷದ್ವಯದಲ್ಲಿರುವ ಎರಡು ಕಾರಣಿಕ ತಗುಣೆಗಳಿಂದ ಇಲ್ಲಿ ಮಲಗಿದ್ದ ದೇಶಾಂತರಿಗಳು ಹಲವರು ಮಡಿದುಹೋದರು. ಇಲ್ಲಿ ಇರಬೇಡ" ಎಂದು ಎಚ್ಚರಿಕೆ ಕೊಟ್ಟನಂತೆ. ಅದಕ್ಕೆ ರೇವಣಸಿದ್ಧನು, "ಅಯ್ಯಾ ದೇಶಾಂತರಿಯಾದವನು ತಗುಣೆ, ಚಿಕ್ಕಟ, ಹಸಿವು, ಬಾಯಾರಿಕೆ ಇವಕ್ಕೆಲ್ಲ ಅಂಜಿದರೆ ಹೇಗೆ? ನಾನು ಇಲ್ಲಿಯೇ ಇದ್ದು ಬಂದದ್ದನ್ನು ನೋಡಿಕೊಳ್ಳುತ್ತೇನೆ" ಎಂದು ಉತ್ತರಕೊಟ್ಟನಂತೆ. ಪೂಜಾರಿ ಅಲ್ಲಿ ನಿಲ್ಲಲು ಶಕ್ತನಾಗದೆ ಊರೊಳಕ್ಕೆ ಹೊರಟು ಹೋದನಂತೆ. ತ್ರಿಕಾಲಜ್ಞನಾದ ಸಿದ್ಧನು ನೆನೆದು ನೋಡಿ, ಒಂದು ರಾಕ್ಷಸಮಿಥುನವು ಶಾಪವಶದಿಂದ ಹೀಗೆ ಅಲ್ಲಿದ್ದುದನ್ನು ಅರಿತು ಅವು ಮಾಡುವ ಪ್ರಾಣಿವಧೆಯನ್ನು ನಿಲ್ಲಿಸಬೇಕೆಂದು ಆಲೋಚಿಸುತ್ತಿರುವಾಗ, ನಟ್ಟಿರುಳಿನಲ್ಲಿ ಆ ತಗುಣೆಗಳೆರಡೂ ಮರಗಳಿಂದ ಬೇಗ ಬೇಗ ಇಳಿದುಬಂದು, ಆ ಶಿವಯೋಗಿಯನ್ನು ಕಂಡು ಭಯಪಟ್ಟು ತಿರುಗಿ ಮರಗಳನ್ನು ಏರುತ್ತಿದ್ದುವಂತೆ. ಆಗ ರೇವಣಸಿದ್ಧನು ಥಟ್ಟನೆ ನೋಡಿ ತನ್ನ ಹಣೆಗಣ್ಣಿಗೆ ಅಪ್ಪಣೆಮಾಡಲು, ಮರಗಳು ಸುಟ್ಟು ಬೂದಿಯಾಗಿ ತಗುಣೆಗಳು ಬೆಂದು ಕರಗಿ ಕುದಿದ ಎರಡು ಉಕ್ಕಿನ ಗುಂಡುಗಳಾದುವಂತೆ. ಆ ರಾಕ್ಷಸರ ಶಕ್ತಿಗೆ ವಿಸ್ಮಯಪಟ್ಟು ಸಿದ್ಧನು ಅವನ್ನು ಮರುದಿನ ಬೆಳಗ್ಗೆ ಮಾಸನೂರಿಗೆ ತಂದು ಕಮ್ಮಾರನ ಕೈಗೆ ಕೊಟ್ಟು, ಅವನ ಭಯವನ್ನು ನಿವಾರಿಸಿ, ಎರಡು ಕಠಾರಿಗಳನ್ನು ಮಾಡಿಸಿದನಂತೆ. ಅವುಗಳಲ್ಲಿ ಗಂಡು ತಗುಣೆಯ ಗುಂಡು ತನ್ನನ್ನು ಕಮ್ಮಾರನು ಎಷ್ಟು ಕಾಸಿ ಬಡಿದರೂ ಉದ್ದವಾಗದೆ, ಆ ಮನೆಯ ಮುಂದೆ ಒಬ್ಬನು ಹಿಡಿದಿದ್ದ ಹೊಸ ಮಾಂಸವನ್ನು ಕಂಡು ಅದಕ್ಕೆ ನಿಮಿರಿತಂತೆ; ಆ ಮಾಂಸವನ್ನು ಹಾಗೆಯೆ ಹಿಡಿದು ತೋರಿಸುತ್ತಾ ಗುಂಡನ್ನು ಬಡಿದು ಅಲಗಿನ ಆಕಾರಕ್ಕೆ ತಿರುಗಿಸಬೇಕಾಯಿತಂತೆ!

ಇಷ್ಟು ಕಥೆ ನಮಗೆ ಸಾಕು. ಆ ಕಠಾರಿಗಳ ಮುಂದಿನ ವೃತ್ತಾಂತದ ಅದ್ಭುತ ಏನೆಂಬುದನ್ನು ತಿಳಿಯುವ ಆಸೆಯುಳ್ಳವರು 'ರೇವಣಸಿದ್ಧೇಶ್ವರ ರಗಳೆ'ಯನ್ನೇ ಓದಬಹುದು. ಈ ಕಥೆಯ ಐತಿಹಾಸಿಕ ಸತ್ಯವೇನೆಂಬುದರ ವಿವೇಚನೆ ನಮಗೆ ಅಪ್ರಕೃತ. ಅದರ "ಪ್ರತಿಮಾಸತ್ಯ" ಮಾತ್ರ ಅಪ್ರತಿಮವೆನ್ನಲು ಯಾವ ಅಡ್ಡಿಯೂ ಇಲ್ಲ. ಮತ್ಕುಣಜಾತಿಯ ಕಠೋರತೆಯನ್ನೂ ರಕ್ತಪಿಪಾಸೆಯನ್ನೂ ಹರಿಹರಕವಿ ಇಲ್ಲಿ ಉಜ್ವಲ ರೂಪದಲ್ಲಿ ಕಡೆದು ನಿಲ್ಲಿಸಿದ್ದಾನೆ.

ತಗುಣೆಯ ವಿಷಯದಲ್ಲಿ ಅಪೂರ್ವದೃಷ್ಟಿಯ ಕೆಲವು ಉಕ್ತಿಗಳನ್ನು ಕೇಳುವ ಯೋಗ ಒಮ್ಮೆ ಲಭಿಸಿತು. ಇಬ್ಬರು ತತ್ತ್ವಶಾಸ್ತ್ರ ಪ್ರವೀಣರು ವಾದದಲ್ಲಿ ತೊಡಗಿದ್ದಾರೆ. ಯಾವುದೋ ಒಂದು ಸೂಕ್ಷ್ಮಸಮಸ್ಯೆಯ ವಿಶ್ಲೇಷಣದಲ್ಲಿ ಸಂಪೂರ್ಣವಾಗಿ ಮಗ್ನರಾಗಿದ್ದಾರೆ. ಅವರಲ್ಲಿ ಒಬ್ಬರು ಇನ್ನೊಬ್ಬರ ಕಡೆಗೆ ಬೆರಳುನೀಡಿ, "Let us suppose you are a bug (ನೀವು ಒಂದು ತಗುಣೆ ಎಂದು ಭಾವಿಸೋಣ)" ಎಂದು ಮುಟ್ಟಿ ತೋರಿಸುತ್ತಾ ಹೇಳಿದರು. ಇನ್ನೊಬ್ಬರು ಬೃಹದಾಕಾರದ ಆಳು; ರಕ್ತ ಚಿಮ್ಮುವ ಮುಖವೊಂದನ್ನು ಬಿಟ್ಟರೆ ತಗುಣೆಯೊಡನೆ ಮತ್ತೆ ಯಾವುದರಲ್ಲೂ ಸಾದೃಶ್ಯವಿಲ್ಲದವರು. ಅವರು ಮೊದಲಿನವರಷ್ಟೇ ಗಂಭೀರವಾಗಿ, "Yes (ಆಗಲಿ)" ಎಂದು ನೇರವಾಗಿ ಉತ್ತರಕೊಟ್ಟರು. ಈ ಧಾಟಿಯಲ್ಲೇ ಚರ್ಚೆ ಮುಂದೆ ಸಾಗಿತು! ಈ ತತ್ತ್ವಶಾಸ್ತ್ರಿಗಳು ವಾದದಲ್ಲಿ ನಿದರ್ಶನಕ್ಕಾಗಿ ತಗುಣೆಯನ್ನೇ ಏಕೆ ಆರಿಸಿಕೊಂಡರೋ. ಆದರೆ ಇವರಿಬ್ಬರ ನಿರ್ಲಿಪ್ತತೆ ನನ್ನನ್ನು ದಿಗ್ಭ್ರಮೆಗೊಳಿಸಿತು. ದರ್ಶನ ಪರಾಕಾಷ್ಠೆ ಎಂದರೆ ಇದು ಎನ್ನಿಸಿತು...ತಗುಣೆಯೊಂದಿಗೆ ಅಭೇದವನ್ನು ಅಂಗೀಕರಿಸುವ ದೃಷ್ಟಿ ನನಗೆ ಸ್ವಪ್ನಾವಸ್ಥೆಯಲ್ಲಿ ಕೂಡ ಅಸಾಧ್ಯ. ಆದರೆ ಅದರ ಸಾಮೀಪ್ಯವನ್ನಾದರೂ ಗಮನಿಸದಿರುವಷ್ಟು ಮಟ್ಟಿನ ನಿರ್ವಿಕಾರಚಿತ್ತವೃತ್ತಿ ಎಂದಾದರೂ ಲಭಿಸುವುದಾದರೆ!—

ಮಿಕ್ಕ ಮಾತು

ತಗುಣೆಯ ಮುಖದಂತೆಯೇ ಅದರ ಕನ್ನಡ ಹೆಸರಿನ ಕಾಗುಣಿತವೂ ಕ್ಲೇಶದಾಯಕವಾಗಿದೆ. 'ತಗುಣೆ', 'ತಿಗುಣೆ'—ಈ ಎರಡು ರೂಪಗಳೂ ಹಳೆಯ ಗ್ರಂಥಗಳಲ್ಲಿ ದೊರೆಯುತ್ತವೆ. (ಮೇಲೆ ಕೊಟ್ಟಿರುವ ಎರಡು ಉದ್ಧರಣಗಳಲ್ಲಿ ಮೂಲದಲ್ಲಿ ಕಾಣಬರುವ ರೂಪಗಳನ್ನು ಯಥಾವತ್ತಾಗಿ ಉಳಿಸಿಕೊಂಡಿದ್ದೇನೆ.) ಇವುಗಳ ಜೊತೆಗೆ, 'ತಗಣಿ, ತಗಣೆ, ತಿಗಣೆ'—ಈ ರೂಪಗಳನ್ನೂ ಕಿಟ್ಟೆಲ್ ಉಲ್ಲೇಖಿಸುತ್ತಾನೆ, ತಾನು ಕಂಡು ಕೇಳಿದ ರೂಪಗಳನ್ನೆಲ್ಲ—ಅವು ಪ್ರಾದೇಶಿಕವಾಗಿದ್ದರೂ ಬಿಡದೆ—ಕೊಡುವ ಸಾಮಾನ್ಯ ಪದ್ಧತಿಯಂತೆ. ಇಷ್ಟೇ ಸಾಲದೆಂಬಂತೆ 'ತಗುಣಿ' ಕೂಡ ಒಮ್ಮೊಮ್ಮೆ ಗೋಚರವಾಗುತ್ತದೆ. ಇವುಗಳಲ್ಲಿ ನಾನು ಸದ್ಯಕ್ಕೆ 'ತಗುಣೆ' ಯನ್ನು ಪುರಸ್ಕರಿಸಿದ್ದೇನೆ. ಈ ಪ್ರಾಣಿಯ ಕಾಟವನ್ನು ಮಾನವ ಕುಲಕ್ಕೆ ಖಚಿತವಾಗಿ ತಪ್ಪಿಸುವ ಭರವಸೆಯನ್ನು ಯಾರಾದರೂ ಕೊಡುವುದಾದರೆ ಆ ಮಹನೀಯರು ವಿಧಿಸುವ ಕಾಗುಣಿತವನ್ನು ಒಪ್ಪಿಕೊಳ್ಳಲು ಸಿದ್ಧವಾಗಿದ್ದೇನೆ!

ಮಮತೆ

ಆ ದಿನ ಅಪರಾಹ್ಣ ಎಲ್ಲೆಲ್ಲೂ ಮೌನ ತುಂಬಿತ್ತು. ಮಾರಾಟದ ಸರಕನ್ನು ಹೊತ್ತು, ಬೀದಿ ಬೀದಿ ಸುತ್ತುವವರ ಕೂಗು ಕೂಡ ವಿಶ್ರಮಿಸಿಕೊಳ್ಳುತ್ತಿತ್ತು. ಮನೆಯನ್ನು ನನ್ನ ಕಾವಲಿಗೆ ಬಿಟ್ಟು, ತುಸ ದೂರದಲ್ಲಿದ್ದ ಪರಿಚಯಸ್ಥರ ಮನೆಗೆ ನನ್ನ ಮಡದಿ ಏತಕ್ಕಾಗಿಯೋ ಹೋಗಿದ್ದಳು. ಪಡಸಾಲೆಯಲ್ಲಿ ಆರಾಮ ಕುರ್ಚಿಯ ಮೇಲೆ ಹಾಯಾಗಿ ಒರಗಿಕೊಂಡು, ಯಾರ ಅಂಕೆಯೂ ಇಲ್ಲದೆ ಮೆಚ್ಚಿನ ಗ್ರಂಥವೊಂದನ್ನು ಓದುವುದರಲ್ಲಿ ನಾನು ಮುಳುಗಿಹೋಗಿದ್ದೆನು.

ಸ್ವಲ್ಪ ಹೊತ್ತಾಯಿತು. ಎಳೆಯ ಮಗುವೊಂದು ಎಲ್ಲೋ ಅಳುತ್ತಿರುವಂತೆ ಅವಧಾನದ ಸೆರಗಿಗೆ ಅರಿವಿನ ಎಳೆಯೊಂದು ಸೋಕಿ ಓರೆಯಾಯಿತು ಗಾಢ ನಿದ್ರೆಯಲ್ಲಿರುವಾಗ ಒಂದು ಇರುವೆ ಕೈಯ ಮೇಲೆ ಹರಿದುಹೋದರೆ ಅರೆ ಎಚ್ಚರದಲ್ಲಿ ಅದನ್ನು ಕೊಡಹಿ ಮತ್ತೆ ಮೈಮರೆಯುವಂತೆ, ರಸಧಾರೆಯನ್ನು ಮತ್ತೆ ಕೂಡಿಸಿಕೊಂಡು ಮುಂದುವರಿದೆನು.

ಅಳು ನಿಂತಂತೆ ತೋರಲಿಲ್ಲ. ಅಲೆಯಲೆಯಾಗಿ ಬಂದು ನನ್ನ ಮನಸ್ಸಿಗೆ ಬಡಿಯತೊಡಗಿತು. "ಎಂಥ ರಗಳೆಯ ಮಗು!" ಎಂದು ಬೇಸರಗೊಂಡು, ಅವಧಾನದ ರಶ್ಮಿಗಳನ್ನು ಸೆಳೆದು ಬಿಗಿಹಿಡಿದು ಮತ್ತೆ ಪುಸ್ತಕಕ್ಕೆ ಕಣ್ಣನ್ನು ಜೋಡಿಸಿದೆನು.

ಇದ್ದಕ್ಕಿದ್ದಂತೆ ಮಗುವಿನ ದನಿಯ ಗುರುತು ಕತ್ತಲೆಯ ಮಿಂಚಿನಂತೆ ಅಂತರಂಗಕ್ಕೆ ಹೊಳೆಯಿತು :

ಅಳುತ್ತಿರುವುದು ನಮ್ಮ ಮಗು! ತಾಯಿ ಹೊರ ಹೊರಟಾಗ ಅದು ತೊಟ್ಟಿಲಿನಲ್ಲಿ ನಿದ್ದೆಮಾಡುತ್ತಿತ್ತು. ಬೇಗ ಹಿಂದಿರುಗಬಹುದು ಎಂದುಕೊಂಡು ಆಕೆ ನನ್ನನ್ನು ಎಚ್ಚರಿಸಿ ಹೋಗಿರಲಿಲ್ಲ. ಅಥವಾ, ನನ್ನ ಓದಿನ ಮಬ್ಬಿನಲ್ಲಿ ಆಕೆಯ ಮಾತೇ ಕಿವಿಗೆ ಬಿದ್ದಿರಲಿಲ್ಲವೋ! ಉಪೇಕ್ಷೆ, ಜುಗುಪ್ಸೆ—ಎಲ್ಲವೂ ಚೆದರಿಹೋಯಿತು. ಧಿಗ್ಗನೆದ್ದು, ಪುಸ್ತಕವನ್ನು ಒಂದು ಕಡೆಗೆ ಎಸೆದು, ಒಳಕೊಠಡಿಗೆ ನಾಲ್ಕೇ ದಾಪಿನಲ್ಲಿ ಚಿಮ್ಮಿಹೋಗಿ, ತೊಟ್ಟಿಲಿನಲ್ಲಿ ಎದ್ದು ಕುಳಿತು ಅಳುತ್ತಿದ್ದ ಮಗುವನ್ನು ಎತ್ತಿಕೊಂಡೆನು. ಅಪ್ಪಿ ಮುದ್ದಿಸಿ, ತಿಳಿದ ರೀತಿಯಲ್ಲಿ ಸಂತೈಸತೊಡಗಿದೆನು. ಮಗು ನನ್ನ ತೋಳಿನಲ್ಲಿ ಭದ್ರವಾಗಿ ನಿಂತಿದ್ದರೂ, ತೊಟ್ಟಿಲಿನಿಂದ ಮಗುಚಿಕೊಂಡಿದ್ದರೆ ಏನು ಗತಿ ಎಂಬ ಆತಂಕದಿಂದ ನನ್ನ ಎದೆ ಡವಗುಟ್ಟುತ್ತಲೇ ಇತ್ತು. ಕ್ಷಣಾರ್ಧದ ಹಿಂದೆ ಮನಸ್ಸನ್ನು ಕವಿದಿದ್ದ ಕಾವ್ಯದ ನೆನಪು ಕೂಡ ಉಳಿಯಲಿಲ್ಲ!

ಆಹ ಮಮತೆಯೆ!

'ವೋಟು'

ಅಂದು ಶನಿವಾರ. ಬೆಳಗಿನ ಹನ್ನೊಂದುವರೆಯ ಸಮಯ. ಕೊಠಡಿಯಲ್ಲಿ ಕುಳಿತು ಏನೋ ಕೆಲಸವನ್ನು, ಅಪರೂಪವಾಗಿ ಊಟದ ಹಂಬಲೂ ಇಲ್ಲದೆ, ನಾನು ಮಾಡುತ್ತಿದ್ದೆ. ಹೊರಗೆ ಏನು ನಡೆಯುತ್ತಿದೆ ಎನ್ನುವುದರ ಕಡೆಗೆ ಲಕ್ಷ್ಯವೇ ಇರಲಿಲ್ಲ. ಆಗ, ಸ್ಕೂಲಿನಿಂದ ನಮ್ಮ ಚಿಕ್ಕ ಹುಡುಗ ಇನ್ನೂ ಬರಲಿಲ್ಲ ಎಂದು ನನ್ನ ಹೆಂಡತಿ ಹೊರ ಬಾಗಿಲಿಗೆ ಆಗಾಗ ಹೋಗಿ ನೋಡುತ್ತಾ ನಿಟ್ಟಿಸುತ್ತಾ ಆತಂಕಪಡುತ್ತಿದ್ದ ವಿಷಯ ನನಗೆ ವ್ಯಕ್ತವಾಯಿತು. ಸರಿ, ಅವಳ ಒತ್ತಾಯಕ್ಕೆ ಅವನನ್ನು ಹುಡುಕಿಕೊಂಡು ಬರಲು ಮನೆಯಲ್ಲಿದ್ದ ಒಬ್ಬಿಬ್ಬರು ದೊಡ್ಡ ಹುಡುಗರೂ ಹೊರಟರು. ತಾಯ ಆತಂಕ ಇನ್ನೇನು ಭೀತಿಯಾಗಿ ತಿರುಗಬೇಕು; ಅಷ್ಟರಲ್ಲಿ ಮಗನ ಮುಖ ಬೀದಿಯ ಆ ತುದಿಯಲ್ಲಿ ಗೋಚರಿಸಿತು.

"ಯಾಕೋ ಇಷ್ಟು ಹೊತ್ತಾಯಿತು?"—ಬಾಗಿಲಿಗೆ ಅವನು ಬಂದ ಕೂಡಲೇ ಕೇಳಿದೆವು.

"ಇವತ್ತು ಸ್ಕೂಲಿನಲ್ಲಿ ಚರ್ಚೆ ಇತ್ತು" ಎಂದು ಉತ್ತರ ಬಂದಿತು. ಎಲಾ, ಇಷ್ಟು ಚಿಕ್ಕ ಹುಡುಗರಿಗೆ ಆಗಲೇ ಚರ್ಚೆಯೇ!

"ಚರ್ಚೆಯ ವಿಷಯ ಏನು?"

"ತಾಯಿ ಹೆಚ್ಚೋ ತಂದೆ ಹೆಚ್ಚೋ ಅಂತ."

"ಒಳ್ಳೆಯ ವಿಷಯ! ನೀನೂ ಮಾತಾಡಿದೆ ಯೇನೋ?"

"ಇಲ್ಲ."

"ಹೋಗಲಿ, ಯಾರು ಹೆಚ್ಚು ಎನ್ನುವ ಕಡೆಗೆ ವೋಟು ಕೊಟ್ಟೆ?"

"ತಂದೆ ಹೆಚ್ಚು ಎನ್ನುವ ಕಡೆಗೆ".

"ಅಲ್ಲವೋ, ನೀನು ಬರಲಿಲ್ಲ ಎಂದು ಆಗಿನಿಂದ ನಿಮ್ಮಮ್ಮ ಪರದಾಡುತ್ತಿದ್ದಾಳೆ. ನೀನು ಮನೆಗೆ ಬಂದಿಲ್ಲ ಎನ್ನುವುದು ಕೂಡ ನನ್ನ ಗಮನಕ್ಕೆ ಬರಲಿಲ್ಲ. ನಿನಗೆ ತಂದೆ ಹೇಗೆ ಹೆಚ್ಚೋ?" ಎಂದು ನಾನು ಕೇಳಿದೆ.

"ಅದು ನನ್ನ ಇಷ್ಟ" ಎಂದ ಮಗ.

"ಸರಿಯಾಯಿತು? ಯಾವ ಯಾವ ಕಡೆಗೆ ಎಷ್ಟೆಷ್ಟು ಜನ ಹುಡುಗರು?"

"ತಾಯಿಯ ಕಡೆಗೆ ಐವತ್ತೊಂದು ಜನ, ತಂದೆಯ ಕಡೆಗೆ ಐವತ್ತೇಳು ಜನ. ನಮ್ಮ ಮಾನಿಟರು ಇದ್ದ ಕಡೆಗೆ ನಾನು ವೋಟು ಕೊಟ್ಟೆ."

ಪ್ರಜಾಭಿಪ್ರಾಯ ಹೀಗೆ ತಾನೆ ನಿರ್ಣಯವಾಗುತ್ತಿರುವುದು!

ಮಹಾರಾಜರವರ ಕಾಲೇಜಿಗೆ ನಾನು ಸೇರಿದ್ದು ಮುಖ್ಯವಾಗಿ ಸಂಸ್ಕೃತ ಕನ್ನಡಗಳನ್ನು ಕಲಿಯಬೇಕೆಂಬ ಆಸೆಯಿಂದ. ಆಗಿನ 'ವಿಶ್ವವಿದ್ಯಾನಿಲಯ ಪ್ರವೇಶ ಪರೀಕ್ಷೆ'ಗೆ (University Entrance Examination) ತುಮಕೂರಿನ ಹೈಸ್ಕೂಲಿನಲ್ಲಿ ನನ್ನ ಐಚ್ಛಿಕ ವಿಷಯಗಳು ಗಣಿತ ಮತ್ತು ವಿಜ್ಞಾನ, ದ್ವಿತೀಯ ಭಾಷೆ ಸಂಸ್ಕೃತ. ಕನ್ನಡದ ಕ್ರಮವಾದ ವ್ಯಾಸಂಗ ಕನ್ನಡ ಲೋಅರ್ ಸೆಕೆಂಡರಿ ಪರೀಕ್ಷೆಗೇ ನಿಂತುಹೋಗಿತ್ತು. ಸಂಸ್ಕೃತವನ್ನು ಐಚ್ಛಿಕ ವಿಷಯಗಳಲ್ಲಿ ಒಂದಾಗಿ ತೆಗೆದುಕೊಂಡರೆ ಹೆಚ್ಚು ಗ್ರಂಥಗಳನ್ನು ಅವಲೋಕಿಸಬಹುದು, ಕನ್ನಡವನ್ನು ದ್ವಿತೀಯ ಭಾಷೆಯಾಗಿ ಓದಬಹುದು ಎಂದು ಹಿತೈಷಿಗಳೊಬ್ಬರು ಕೊಟ್ಟ ಸಲಹೆ ನನ್ನ ಮನಸ್ಸಿನಲ್ಲಿ ಬೇರೂರಿತು. ವಿಜ್ಞಾನದ ವ್ಯಾಸಂಗಕ್ಕೆ ಇಂದಿನಂತೆಯೇ ೧೯೨೩ನೆಯ ಇಸವಿಯಲ್ಲಿ ಕೂಡ ಹೆಚ್ಚುಗಾರಿಕೆಯೂ ಮೇಲಾಟವೂ ಇದ್ದರೂ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕಡೆಗೆ ನಿರ್ಧಾರ ಪೂರ್ವಕವಾಗಿ ಬೆನ್ನು ತಿರುಗಿಸಿ ಮೈಸೂರಿನ ದಿಕ್ಕನ್ನು ಹಿಡಿದೆನು; ಮಹಾರಾಜರವರ ಕಾಲೇಜಿನ ಶಾಂತವಾದ ಮಡಿಲನ್ನು ಸೇರಿದೆನು; ಕಣ್ಣನ್ನು ತೆರೆದು ಬುದ್ಧಿಯನ್ನು ತಿದ್ದಿ ಹೃದಯವನ್ನು ಮಿಡಿದು ಬಾಳಿನ ದಾರಿಗೆ ಬೆಳಕನ್ನು ನೀಡಿದ ಗುರುವರೇಣ್ಯರನ್ನು ಕಂಡೆನು.

ಸಂಸ್ಕೃತದ ಪ್ರಾಧ್ಯಾಪಕರಾಗಿದ್ದ ಎಂ. ಹಿರಿಯಣ್ಣನವರು ನಿರಾಡಂಬರದ ಮೂರ್ತಿ. ಇಂಗ್ಲಿಷರ

ನಡೆನುಡಿಗಳು ಗಣ್ಯರನೇಕರ ಮನಸ್ಸನ್ನು ಇಂದಿಗಿಂತ ಎಷ್ಟೋ ಅತಿಶಯವಾಗಿ ಸೂರೆಗೊಂಡಿದ್ದ ಆ ಕಾಲದಲ್ಲಿ ಪಂಚೆಯುಟ್ಟುಕೊಂಡು ಕಾಲೇಜಿಗೆ ಬರುತ್ತಿದ್ದ ಪ್ರೊಫೆಸರುಗಳು ಅತಿ ವಿರಳವಾಗಿದ್ದರು; ಆ ಅಪೂರ್ವರಲ್ಲಿ ಈ ಗುರುಗಳು ಒಬ್ಬರು. ಆದರೆ ಅವರದು ಎಂಥ ಬಿಳು ಬಿಳುಪಿನ, ಕರೆಯಿಲ್ಲದ ಪಂಚೆ! ಕೆನೆಬಣ್ಣದ ನಿಲುವಂಗಿ. ಸರಿಗೆಯಿಲ್ಲದೆ ಬೆಳಗುವ ರುಮಾಲು, ಕಾಲಿಗೆ ಪೂನಾ ಜೋಡು. ಇದೆಲ್ಲಕ್ಕೂ ಕಳೆಗೊಟ್ಟು ಶಿಷ್ಯನ ಹೃದಯದಲ್ಲಿ ಭಕ್ತಿಯನ್ನು ಅಪ್ರಯತ್ನವಾಗಿ ಉಕ್ಕಿಸುವ ಶಾಂತ ಗಂಭೀರ ಮುಖಮುದ್ರೆ, ಧೀರೋನ್ನತ ಮನೋವೃತ್ತಿ.

ಹಿರಿಯಣ್ಣನವರ ಪಾಠ ಬಲು ಹಿತ: ವ್ಯಾಸಂಗವನ್ನು ತಪಸ್ಸಿನಂತೆ ವರ್ಷಗಟ್ಟಳೆ ಸಾಧಿಸಿಕೊಂಡು ಬಂದು ಅನೇಕ ಜ್ಞಾನಶಾಖೆಗಳಲ್ಲಿ ಪೂರ್ಣ ವಿದ್ವತ್ತನ್ನು ಅವರು ಗಳಿಸಿದ್ದರೂ ಅದನ್ನು ಕೊಂಚವಾದರೂ ಮೆರಸಲೊಲ್ಲರು. ಅವರ ವಿದ್ಯೆಯಷ್ಟೇ ಹಿರಿದು ಅವರ ವಿನಯ. ಅಷ್ಟು ದೊಡ್ಡ ಪಂಡಿತರು ಹೊಸದಾಗಿ ಕೆಲಸಕ್ಕೆ ಸೇರಿದ ಉಪಾಧ್ಯಾಯನಂತೆ ಪ್ರತಿ ದಿನದ ಪಾಠಕ್ಕೆ ಪೂರ್ವಸಿದ್ಧತೆ ಮಾಡಿಕೊಂಡು ಬರುವುದನ್ನು ನೋಡಿ ನಮ್ಮ ಸೋಮಾರಿತನ ನಾಚಿಕೊಳ್ಳುತ್ತಿತ್ತು. ಬೇರೆ ಯಾರ ತರಗತಿಗೂ ಇಲ್ಲದಿದ್ದರೂ ಇವರದಕ್ಕೆ ಮಾತ್ರ ಹಳೆಯ ಪಾಠಗಳನ್ನು ತಿರುವಿಹಾಕಿಕೊಂಡು ಬರಲು ಅಭ್ಯಾಸಮಾಡಿದೆವು. ತತ್ತ್ವಶಾಸ್ತ್ರದಲ್ಲಿ ಅವರದು ಲೋಕವಿಶ್ರುತವಾದ ಪಾಂಡಿತ್ಯ. ಈ ವಿಷಯವಾಗಿ ಅವರು ಈಚೆಗೆ ಪ್ರಕಟಿಸಿದ ಗ್ರಂಥಗಳೂ ಲೇಖನಗಳೂ ವಿದ್ವಾಂಸರಿಗೇ ಪ್ರಮಾಣಭೂತವಾದವು. ಆದರೆ ಭಾರತೀಯ ದರ್ಶನಗಳನ್ನು ಅವರ ಪಾದಮೂಲದಲ್ಲಿ ಕುಳಿತು ಓದುವ ಭಾಗ್ಯವನ್ನು ನಾನು ಪಡೆದು ಬರಲಿಲ್ಲ. ಭಾಷೆ, ಸಾಹಿತ್ಯ, ಇವುಗಳ ಮೀಮಾಂಸೆ—ಇದು ನನ್ನ ವ್ಯಾಸಂಗದ ಮುಖ್ಯ ವಿಷಯ. ಇದನ್ನು ಎಷ್ಟು ಚೆನ್ನಾಗಿ ವಿಷಯ ಪರಿಷ್ಕಾರವಾಗುವಂತೆ, ಸಂಶಯ ಪರಿಹಾರವಾಗುವಂತೆ, ಆಸಕ್ತಿ ಬೆಳೆಯುವಂತೆ, ಒಳನೋಟ ಬಲಿಯುವಂತೆ ಹಿರಿಯಣ್ಣನವರು ಬೋಧಿಸುತ್ತಿದ್ದರೆಂದರೆ ಘಂಟೆ ಹೊಡೆದ ಮೇಲೆ ಕೂಡ ಅವರ ಕೊಠಡಿಯನ್ನು ಬಿಟ್ಟು ಎದ್ದು ಹೋಗಲು ಕಾಲೇ ಬರುತ್ತಿರಲಿಲ್ಲ.

ಗುರುಗಳ ಉಕ್ತಿ ಖಚಿತ, ಆದರೆ ಮೃದು. ಅವರು ಗಟ್ಟಿಯಾಗಿ ದನಿಯೇರಿಸಿದ್ದನ್ನೇ ವಿದ್ಯಾರ್ಥಿಗಳು ಅರಿಯೆವು. ಮಾತಿನಲ್ಲಾಗಲಿ ಬರಹದಲ್ಲಾಗಲಿ ಅವರು ವಾಗ್ವಿಜೃಂಭಣೆಗೆ ಎಂದೂ ಮನಸೋತವರಲ್ಲ. ಮೇಲಕ್ಕೆ ಚಿಮ್ಮಿ ಬಣ್ಣಗಳನ್ನು ಕೆದರಿ ಕಣ್ಣನ್ನು ಕೋರೈಸಿ ಮತ್ತೆ ಕತ್ತಲನ್ನೇ ಬೆಳಸುವ ತಾರಾಮಂಡಲದಂತೆ ಅಲ್ಲ ಅವರ ಶೈಲಿ; ದೃಷ್ಟಿಗೆ ಹದವಾಗಿ ಕೋಣೆಯ ಮೂಲೆಮೂಲೆಗಳನ್ನೂ ಗಲಭೆಯಿಲ್ಲದೆ ಬೆಳಗುವ ಸ್ತಿಮಿತ ತೇಜಸ್ಸು ಅದು. ನಿಶಿತವಾದ ಒಂದೊಂದು ವಾಕ್ಯದಲ್ಲೇ ಅವರು ವಿಷಯದ ತಿರುಳನ್ನು ಮನಮುಟ್ಟಿಸಬಲ್ಲರು; ಟೀಕೆಯನ್ನೂ ಮಾಡಬಲ್ಲರು. "Not what the Poet says, but leaves unsaid—that is the essence of Poetry." ("ಕವಿ ಹೇಳಿರುವುದಲ್ಲ, ಹೇಳದೆ ಬಿಟ್ಟಿರುವುದು–ಅದು ಕಾವ್ಯದ ಸಾರ") "Dhvani is failure that succeeds." ("ಧ್ವನಿ ಸೋತು ಗೆಲ್ಲುತ್ತದೆ.") "Art should not have a moral aim, but should

have a moral view." ("ಕಲೆಗೆ ನೀತಿಯ ಗುರಿಯಿರಬಾರದು, ಆದರೆ ನೀತಿಯ ದೃಷ್ಟಿಯಿರಬೇಕು.") "The same India that produced a Kalidasa produced also his commentators."—("ಕಾಳಿದಾಸನಿಗೆ ಜನ್ಮವಿತ್ತ ಭಾರತವೇ ಆತನ ವ್ಯಾಖ್ಯಾನಕಾರರಿಗೂ ಜನ್ಮವಿತ್ತಿತು.")—ಇಂಥ ವಾಕ್ಯಗಳು ಅವರ ಮಾತಿನಲ್ಲೂ ಬರೆವಣಿಗೆಯಲ್ಲೂ ಎಷ್ಟೊಂದು! ಮನಸ್ಸಿನಲ್ಲಿ ಪರಿಭಾವಿಸಿದಂತೆಲ್ಲ ಅವುಗಳ ಅರ್ಥ ಆಳವಾಗುತ್ತದೆ.

ಹಿರಿಯಣ್ಣನವರು ಯಾವ ಕೆಲಸವನ್ನೇ ಕೈಕೊಳ್ಳಲಿ, ಕ್ರಮವಾಗಿ ಅಚ್ಚುಕಟ್ಟಾಗಿ ಮಾಡುವರು. ದೊಡ್ಡ ಆಕಾರದ ಕಾಗದವನ್ನು ಹೇಗೆ ಮಡಿಸಿ ಲಕೋಟೆಯೊಳಕ್ಕೆ ಹಾಕಬೇಕೆಂಬುದನ್ನು ಅವರಿಂದ ಒಮ್ಮೆ ತಿಳಿದುಕೊಂಡದ್ದು ನನಗೆ ಇನ್ನೂ ಮರೆತಿಲ್ಲ. ಪ್ರಕಟನೆಗೆ ಹೋಗತಕ್ಕ ಗ್ರಂಥದ ವಿಷಯದಲ್ಲಿ ಅವರು ಎಷ್ಟು ಎಚ್ಚರಿಕೆ ತೆಗೆದುಕೊಳ್ಳುತ್ತಿದ್ದರೋ ಅಷ್ಟೇ ಎಚ್ಚರಿಕೆಯನ್ನು ತಮ್ಮ ಪ್ರತಿಯೊಂದು ಕಾಗದಪತ್ರದ ವಿಷಯದಲ್ಲೂ, ಪ್ರತಿಯೊಂದು ಉಕ್ತಿಯ ವಿಷಯದಲ್ಲೂ ತೆಗೆದುಕೊಳ್ಳುವರು. ಕಾಲೇಜಿನ ಸಂಸ್ಕೃತಸಂಘ ಕರ್ಣಾಟಕಸಂಘ ಮೊದಲಾದವು ನಡಸಿದ ಸಭೆಗಳ ಕಾರ್ಯವಿವರವನ್ನು ಭಾಷಣಗಳ ಸಾರಾಂಶದೊಡನೆ ನಡೆವಳಿಕೆಯ ಪುಸ್ತಕದಲ್ಲಿ ಉಲ್ಲೇಖಿಸುವ ರೂಢಿ ಆ ಕಾಲದಲ್ಲಿ ಇತ್ತು. ಹಿರಿಯಣ್ಣನವರು ಯಾವುದಾದರೂ ಸಭೆಯಲ್ಲಿ ತಾವು ಮಾಡಿದ ಅಧ್ಯಕ್ಷ ಭಾಷಣದ ಸಾರಾಂಶವನ್ನು ತಾವೇ ಬರೆದು ಕಾರ್ಯದರ್ಶಿಗೆ ಕೊಟ್ಟು ಅವನ ಕೆಲಸವನ್ನು ಹಗುರ ಮಾಡಿಕೊಡುತ್ತಿದ್ದರು; ತಮ್ಮ ಮಾತು ತಪ್ಪಾಗಿ ವರದಿಯಾಗದಂತೆ ನೋಡಿಕೊಳ್ಳುತ್ತಿದ್ದರು. ಇನ್ನೊಬ್ಬರ ಲೇಖನಗಳನ್ನು—ವಿದ್ಯಾರ್ಥಿದೆಶೆಯ ಪ್ರಬಂಧಗಳನ್ನು ಕೂಡ—ಅವಲೋಕಿಸುವುದರಲ್ಲಿಯೂ ಅವರಿಗೆ ಅಷ್ಟೇ ಶ್ರದ್ಧೆ. ಒಂದು ದಿನವನ್ನು ಮುಂದಾಗಿ ಗೊತ್ತುಮಾಡಿ, ಅಷ್ಟರೊಳಗೆ ಲೇಖನವನ್ನು ಕಣ್ಣಿನಲ್ಲಿ ಕಣ್ಣಿಟ್ಟು ಓದಿ, ಚರ್ಚಿಸಬೇಕಾದ ಅಂಶಗಳನ್ನು ಬೇರೆಯ ಕಾಗದದ ಮೇಲೆ ತಮ್ಮ ಕೂರ್ಪುಮೊನೆಯ ಸೀಸದ ಕಡ್ಡಿಯಲ್ಲಿ ಗುರುತುಹಾಕಿಟ್ಟುಕೊಂಡು, ಗೊತ್ತಾದ ವೇಳೆಗೆ ನಮ್ಮ ಆಗಮನವನ್ನು ನಿರೀಕ್ಷಿಸುತ್ತಿರುವರು, ಬೇಸರವಿಲ್ಲದೆ ಎಲ್ಲವನ್ನೂ ಚರ್ಚಿಸುವರು, ಸಂಶಯಗಳನ್ನು ಪರಿಹರಿಸುವರು. ಅಚ್ಚಾದ ಲೇಖನವನ್ನೋ ಗ್ರಂಥವನ್ನೋ ಅವರಿಗೆ ಒಪ್ಪಿಸಿ ಆಶೀರ್ವಾದ ಬೇಡಿದಾಗಲೂ ಹಾಗೆಯೇ; ಪೂರ್ತಿಯಾಗಿ, ಸಾವಧಾನವಾಗಿ ಓದಿ ಹಿತವಾದ ನಾಲ್ಕು ಮಾತನ್ನು ಬರೆದುಕಳಿಸಿ ಉತ್ತೇಜನಕೊಡುವರು.

ಹಿರಿಯಣ್ಣನವರು ಮೊದಮೊದಲಲ್ಲಿ ತಾವಾಗಿ ಮುಂದೆ ಬಂದು ವಿದ್ಯಾರ್ಥಿಗಳೊಡನೆ ಸಲಿಗೆಯಿಂದ ವರ್ತಿಸುತ್ತಿರಲಿಲ್ಲವೆಂಬುದು ನಿಜ. ಆದರೆ ಪರಿಚಯ ಪಕ್ವವಾದ ಬಳಿಕ, ಕಾಲಕ್ರಮದಲ್ಲಿ ಮನಸ್ಸಿನ ತೆರೆ ಸರಿದ ಬಳಿಕ, ಶಿಷ್ಯರ ಉತ್ಸಾಹ ಶ್ರದ್ಧೆಗಳಲ್ಲಿ ನಂಬಿಕೆ ತಕ್ಕಮಟ್ಟಿಗೆ ದೃಢಪಟ್ಟ ಬಳಿಕ ಅವರು ಆತ್ಮೀಯತೆಯನ್ನು ನಿಸ್ಸಂಕೋಚವಾಗಿ ಬೆಳಸುತ್ತಿದ್ದರು. ಹಿರಿಯಣ್ಣನವರು ಹಳೆಗಾಲದ ಎಷ್ಟೊಂದು ಸಂಗತಿಗಳನ್ನು ಸವಿವರವಾಗಿ ಹೇಳಬಲ್ಲರು, ತಿಳಿ ಹಾಸ್ಯದ ಪ್ರಸಂಗಗಳನ್ನು ಸರಸವಾಗಿ ನಿರೂಪಿಸಬಲ್ಲರು, ಹಸುಮಗುವಿನಂತೆ ತಾವೂ ನಮ್ಮೊಡನೆ ನಗಬಲ್ಲರು! ಎಷ್ಟೋ ದಿನ—ತರಗತಿಯಲ್ಲಲ್ಲ,

ಇತ್ತೀಚೆಗೆ—ಅವರ ಸಂಗಡ ನಾವು ಕೆಲವರು ಘಂಟೆಗಟ್ಟಳೆ ಸಲ್ಲಾಪ ಮಾಡಿ ಹೃದಯಕ್ಕೆ ಹಗುರವನ್ನೂ ಮತಿಗೆ ಚೋದನೆಯನ್ನೂ ಆತ್ಮಕ್ಕೆ ಸಂಸ್ಕಾರವನ್ನೂ ಪಡೆದಿಲ್ಲವೆ? ಅವರಿಂದ ಕೇಳಿದ ಮಾತುಗಳನ್ನು ಆಗಾಗ ಬರೆದಿಟ್ಟಿದ್ದರೆ ಅದೊಂದು ಅನುಭವಾಮೃತವಾಗಿ ನಿಲ್ಲುತ್ತಿತ್ತು.

ಹೀಗಿದ್ದರೂ ಹಿರಿಯಣ್ಣನವರ ಸಮ್ಮುಖದಲ್ಲಿ ಹೆಚ್ಚು ಉತ್ಸಾಹದಿಂದ ವರ್ತಿಸಲು ಅವಕಾಶ ಸಾಲದೆಂಬ ತಪ್ಪುಭಾವನೆ ಕೆಲವರಲ್ಲಿ ಮೂಡಿದ್ದುದು ಉಂಟು. ನಮ್ಮ ಗುರುಗಳಲ್ಲಿ ಪೂಜ್ಯಭಾವನೆಯನ್ನು ಇಟ್ಟುಕೊಂಡಿದ್ದ ಹಿರಿಯ ಮಿತ್ರರೊಬ್ಬರ ಸಂಗಡ ಇತ್ತೀಚೆಗೆ ನಾನು ಮಾತನಾಡುತ್ತಿದ್ದಾಗ ಅವರು—ಈ ಅಂಶವನ್ನೂ ನೆನೆದೇ ಇರಬಹುದು—"ಹಿರಿಯಣ್ಣನವರು ಹಿಮಾಲಯದಂಥ ಮನುಷ್ಯರು, ಹೋಲಿಕೆಯ ಹಲವು ಅರ್ಥಗಳಲ್ಲಿ" ಎಂದರು. ಆದರೆ ಆ ಹಿಮಾಲಯದಿಂದ ಎಂಥ ಗಂಗೆ ನಿರಂತರವಾಗಿ ಹರಿದುಬರುತ್ತಿತ್ತು! ಅದರ ನಿರ್ಮಲೋದಕದಲ್ಲಿ ಮಿಂದು ಅಂತರಂಗವನ್ನು ಪಾವನ ಮಾಡಿಕೊಳ್ಳಲು ಶಿಷ್ಯರಾದ ನಮಗೆ ಯಾವಾಗಲೂ ಸೌಲಭ್ಯವಿತ್ತು. ಆದರೆ ಲೋಕವಿಖ್ಯಾತರಾಗಿದ್ದ ಇಂಥ ಗುರುಶ್ರೇಷ್ಠರ ವಿದ್ಯಾಪರಿಣತಿಯ ಪೂರ್ಣ ಪ್ರಯೋಜನವನ್ನು ಪಡೆಯಲು, ತತ್ವಶಾಸ್ತ್ರವನ್ನು ಅರಿವಿನ ಗುರಿಯಾಗಿ ಮಾತ್ರವಲ್ಲದೆ ಬಾಳಿನ ದಾರಿಯಾಗಿಯೂ ಮಾಡಿಕೊಂಡು ಮನೆಯಲ್ಲಿ ವಾಸಮಾಡುವ ಯೋಗಿಯಾಗಿದ್ದ ಅವರ ವ್ಯಕ್ತಿತ್ವದ ತೇಜಸ್ಸಿನಿಂದ ಕಾರ್ಯ ಸ್ಫೂರ್ತಿಯನ್ನು ಪಡೆಯಲು, ಅವರ ಪರೋಕ್ಷದಲ್ಲಿ ಅವರ ಹೆಸರನ್ನು ಎತ್ತಿಹಿಡಿಯಲು, ಮೈಸೂರಿನ ನಮ್ಮ ಸತೀರ್ಥ್ಯವೃಂದಕ್ಕೆ ಚೈತನ್ಯ ಸಾಲದೆ ಹೋಯಿತು.

* * *

ಕಾಲೇಜಿಗೆ ನಾನು ಬಂದ ಕೂಡಲೆ ಗಮನವನ್ನು ಮೊದಲು ಸೆಳೆದವರು ಪ್ರೊ. ಬಿ.ಎಂ. ಶ್ರೀಕಂಠಯ್ಯನವರು. ಕನ್ನಡ ಕವಿತೆಗೆ ಹಳೆಯ ಸೂತ್ರಗಳ ಸಂಕಲೆಯನ್ನು ಬಿಡಿಸಿ ಹೊಸಮಾರ್ಗವನ್ನು ತೆರೆದ ಅವರ 'ಇಂಗ್ಲಿಷ್ ಗೀತಗಳ'ಲ್ಲಿ ಕೆಲವು ಆಗಲೇ ಪ್ರಕಟನೆ ಹೊಂದಿದ್ದವು. ಅವನ್ನು ಓದಿ ಮುಗ್ಧನಾಗಿದ್ದ ನನಗೆ ಅವರನ್ನು ಕಣ್ಣಾರ ನೋಡಬೇಕೆಂಬ ಅಪೇಕ್ಷೆ ಅಧಿಕವಾಗಿತ್ತು. ಅವರ ಗಂಭೀರಮೂರ್ತಿ, ಧೀರವಾಣಿ, ಸ್ವತಂತ್ರದೃಷ್ಟಿ, ದಿಗಂತವನ್ನೂ ದಾಟುವ ವಿಚಾರಸರಣಿ—ಇವು ಆ ಅಪೇಕ್ಷೆಯನ್ನು ಚೆನ್ನಾಗಿ ಪೂರ್ಣಮಾಡಿದುವು.

ಶ್ರೀಕಂಠಯ್ಯನವರು ಇಂಗ್ಲಿಷ್ ಪ್ರಾಧ್ಯಾಪಕರು. ಬ್ರೌನಿಂಗ್ ಕವಿಯ 'The Grammarian's Funeral' ('ವೈಯಾಕರಣನ ಅಂತ್ಯಕ್ರಿಯೆ') ಎಂಬ ಕವನದ ಮೇಲಿನ ಅವರ ಪ್ರವಚನವನ್ನು ಕೇಳಿ ನಾನು ಜುಮ್ಮುಗೊಂಡದ್ದು ಇಂದಿಗೂ ಮರೆತಿಲ್ಲ. ವರ್ಡ್ಸ್‌ವರ್ತ್ ಅಂತೂ ಅವರ ಮೆಚ್ಚಿನ ಕವಿ; ಅವರ ಪ್ರಸಾದದಿಂದ ನಮಗೂ ಮೆಚ್ಚಿನ ಕವಿಯಾದನು. ಬಿ.ಎ. ಪರೀಕ್ಷೆ ಮುಗಿದ ಬಳಿಕ, ಇಂಗ್ಲಿಷ್ ಎಂ.ಎ. ತರಗತಿಯಲ್ಲಿ ಇಂಗ್ಲಿಷ್ 'ರೊಮ್ಯಾಂಟಿಕ್' ಕವಿಗಳ ಗಾಢಪರಿಚಯವನ್ನು ಈ ಗುರುಗಳಿಂದ

ಮಾಡಿಕೊಳ್ಳಬೇಕೆಂದು ನಾವು ಬೆಳಸಿಕೊಂಡಿದ್ದ ಆಸೆಗೆ ಇದ್ದಕ್ಕಿದ್ದಂತೆ ಧಕ್ಕೆ ತಗುಲಿತು. ಈ ಸಾಹಿತ್ಯವಿಶಾರದರು ಶಿಷ್ಯ ವೃಂದಕ್ಕೆ ರಸಾಸ್ವಾದ ಮಾಡಿಸುವ ಕೆಲಸವನ್ನು ಬಿಟ್ಟು, ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರಾಗಿ ನೇಮಕ ಹೊಂದಿ, ಕಚೇರಿಯ ಕಾಗದದ ಕಟ್ಟುಗಳಲ್ಲಿ ಮುಳುಗಿರಬೇಕಾಯಿತು. ಈ ನೇಮಕವನ್ನು ವಿದ್ಯಾರ್ಥಿಗಳಂತೂ ಆಗ ಹಳಿದೆವು. ಆದರೆ ಯಾವ ಫಲಕ್ಕೆ ಯಾವುದು ಕಾರಣವಾಗಬೇಕೋ. ದೇಶಭಾಷೆಯಾದ ಕನ್ನಡದ ಪ್ರೋತ್ಸಾಹವನ್ನು ತನ್ನ ಮುಖ್ಯೋದ್ದೇಶಗಳಲ್ಲಿ ಒಂದಾಗಿ ಇಟ್ಟುಕೊಂಡು ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾಗಿ ಆ ವೇಳೆಗೆ ಹತ್ತು ವರ್ಷದ ಮೇಲಾಗಿತ್ತು. ಇಂಗ್ಲಿಷ್, ಸಂಸ್ಕೃತ, ಚರಿತ್ರೆ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಕಡೆಗೆ ಪಾರಸಿ ಭಾಷೆ—ಈ ಎಲ್ಲದರಲ್ಲೂ ಎಂ.ಎ. ಪರೀಕ್ಷೆಗೆ ಏರ್ಪಾಡು ಇತ್ತು; ಪಾಠವೂ ನಡೆಯುತ್ತಿತ್ತು. ಆದರೆ ಕನ್ನಡಕ್ಕೆ ಮಾತ್ರ ಈ ಉನ್ನತ ಪಂಕ್ತಿಯಲ್ಲಿ ಅದುವರೆಗೆ ಪ್ರವೇಶವಿರಲಿಲ್ಲ! ಶ್ರೀಕಂಠಯ್ಯನವರು ರಿಜಿಸ್ಟ್ರಾರ್ ಪದವಿಯ ಸೂತ್ರಗಳನ್ನು ಕೈಯಲ್ಲಿ ಹಿಡಿದ ಒಂದು ವರ್ಷದೊಳಗಾಗಿ ಕನ್ನಡ ಎಂ.ಎ. ತರಗತಿ ಮಹಾರಾಜರವರ ಕಾಲೇಜಿನಲ್ಲಿ ತೆರೆಯಿತು. (ಇದು ಕೇವಲ ಅವರ ದೃಢ ಪ್ರಯತ್ನದ ಫಲವೇ ಎಂಬುದು ಎಲ್ಲರಿಗೂ ಗೊತ್ತಿದ್ದ ಗುಟ್ಟು.) ಶ್ರೀಕಂಠಯ್ಯನವರೇ ವೇತನ ತೆಗೆದುಕೊಳ್ಳದ ಕನ್ನಡ ಗೌರವ ಪ್ರಾಧ್ಯಾಪಕರಾಗಿ ಮುಂದೆ ಬಂದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಪ್ರೌಢತಮ ವ್ಯಾಸಂಗಕ್ಕೆ ಶಾರದಾಪೂಜೆಯನ್ನು ಮಾಡಿದರು. ಮೊದಲ ತಂಡದ ಕನ್ನಡ ಎಂ.ಎ. ವಿದ್ಯಾರ್ಥಿಗಳ ಪಂಕ್ತಿಗೆ ಅಧಿಕೃತವಾಗಿ ಸೇರಲು ನನಗೆ ಅವಕಾಶವಿಲ್ಲದಿದ್ದರೂ, ಗುರುಗಳ ಅಪ್ಪಣೆ ಪಡೆದು ಅವರ ಪಾಠಗಳಿಗೆ ಹೋಗುತ್ತಿದ್ದೆ. (ಮುಂದೆ ಅವರ ಹಿತೋಕ್ತಿಯ ಮೇರೆಗೆ ಕನ್ನಡ ಎಂ.ಎ. ತರಗತಿಗೆ ಸಕ್ರಮವಾಗಿಯೇ ಸೇರಿ ಅವರಲ್ಲಿ ಶಿಷ್ಯವೃತ್ತಿಯನ್ನು ಇನ್ನಷ್ಟು ಕಾಲ ಮುಂದುವರಿಸಿ ತಿಳಿವನ್ನು ಹೆಚ್ಚಿಸಿಕೊಂಡೆ.)

ಶ್ರೀಕಂಠಯ್ಯನವರ ಇಂಗ್ಲಿಷ್ ಪಾಂಡಿತ್ಯವನ್ನು ಅನೇಕರು ಬಲ್ಲರು. ಆದರೆ ಅವರ ಕನ್ನಡ ಪಾಂಡಿತ್ಯ ಎಷ್ಟು ಆಳವಾಗಿತ್ತೆಂಬುದನ್ನು ತಿಳಿಯುವ ಅವಕಾಶ ದೊರೆತದ್ದು ಕನ್ನಡ ಎಂ.ಎ. ತರಗತಿಯ ಶಿಷ್ಯರಿಗೆ ಮಾತ್ರ. ಕನ್ನಡಕ್ಕೆ ಉತ್ತೇಜನವೇ ಇಲ್ಲದಿದ್ದ ಕಾಲದಲ್ಲಿ, ಅದನ್ನು ಎಲ್ಲರೂ ಕಡೆಗಣಿಸಿದ್ದ ಕಾಲದಲ್ಲಿ, ಈ ಇಂಗ್ಲಿಷ್ ಸಾಹಿತ್ಯ ಪಾರಂಗತರು ಸ್ವಂತ ವ್ಯವಸಾಯದಿಂದ ಕನ್ನಡದಲ್ಲಿ ಪೂರ್ಣ ವಿದ್ವತ್ತನ್ನು ಗಳಿಸಿಕೊಂಡಿದ್ದರು. ಹಳಗನ್ನಡದ ಕಾವ್ಯಗಳನ್ನು—ಅಚ್ಚಾಗಿದ್ದವನ್ನು ಮಾತ್ರವಲ್ಲದೆ ಓಲೆಗರಿಯ ಪ್ರತಿಗಳಲ್ಲಿ ಅಡಗಿದ್ದವನ್ನು ಕೂಡ—ಶ್ರದ್ಧೆಯಿಂದ ಅಧ್ಯಯನ ಮಾಡಿದ್ದರು. ಕನ್ನಡ ಸಾಹಿತ್ಯ ಬೆಳೆದ ಬಗೆಯನ್ನೂ ಅದರ ಗುಣದೋಷಗಳನ್ನೂ ದುರಭಿಮಾನಕ್ಕೆ ಎಡೆಗೊಡದಂತೆ, ಶುದ್ಧ ರುಚಿ ಬೆಳೆಯುವಂತೆ, ಹೊಸ ನೋಟ ತೆರೆಯುವಂತೆ ಬೋಧಿಸುತ್ತಿದ್ದರು. ಭಾಷಾಶಾಸ್ತ್ರದಲ್ಲಂತೂ ಅವರದು ಮೊನೆಯಾದ ಪ್ರಜ್ಞೆ. ಒಂದು ಕನ್ನಡ ಮಾತಿನ ಬೆನ್ನು ಹತ್ತಿ ಹೊರಟು, ಹಳಗನ್ನಡ, ಪೂರ್ವದ ಹಳಗನ್ನಡ, ಹಳೆಯ ತಮಿಳು, ಮೂಲ ದ್ರಾವಿಡ, ಸಾಧ್ಯವಾದರೆ ಇನ್ನೂ ಆಚೆಗೆ ಅದನ್ನು ಹಿಂಬಾಲಿಸಿ ನಡೆದು, ಅದರ ಚರಿತ್ರೆ ಮತ್ತೆ ದೃಗ್ಗೋಚರವಾಗುವಂತೆ ಅವರು ನಿರೂಪಿಸುತ್ತಿದ್ದ ವೈಖರಿಯನ್ನು ಹೇಗೆ ಮರೆಯಬಹುದು! ಛಂದಸ್ಸಿನ

ಸಂಶೋಧನ ಸಂಸ್ಕರಣಗಳಲ್ಲಿ ಅವರು ಮಾಡಿದ ಮಹಾಕಾರ್ಯ ಹೊಸಗನ್ನಡ ಕಾವ್ಯದ ಚರಿತ್ರೆಯ ಮೇಲೆ ತನ್ನ ಪ್ರಭಾವವನ್ನು ಆಗಲೇ ಮುದ್ರೆಯೊತ್ತಿದೆ. ತಮ್ಮ ಎಲ್ಲ ವ್ಯಾಸಂಗದ, ವಿಚಾರದ ಫಲವನ್ನೂ ಅವರು ಶಿಷ್ಯವೃಂದಕ್ಕೆ ನಿರ್ವಂಚನೆಯಾಗಿ ಧಾರೆಯೆರೆದರು. ತಮ್ಮ ಉತ್ಸಾಹದ ನಂದಾದೀವಿಗೆಯಿಂದ ಶಿಷ್ಯರ—ಅಷ್ಟೇ ಏಕೆ, ತಮ್ಮ ಹತ್ತಿರ ಬಂದವರೆಲ್ಲರ—ಹೃದಯಗಳಲ್ಲಿ ಸ್ವಭಾಷಾಪ್ರೇಮದ ಹಣತೆಯನ್ನು ಹೊತ್ತಿಸಿದರು.

ಬಿ.ಎಂ. ಶ್ರೀಯವರು ಕನ್ನಡದ ಶ್ರೇಷ್ಠ ವಾಗ್ಮಿಗಳಲ್ಲಿ ಒಬ್ಬರು. ಒಮ್ಮೊಮ್ಮೆ ಅವರ ಭಾಷಣಗಳು ದೀರ್ಘವಾಗುತ್ತಿದ್ದುದು ನಿಜ; ಒಮ್ಮೊಮ್ಮೆ ವಿಷಯ ನೇರವಾಗಿ ಸಾಗದೆ ಅತ್ತಿತ್ತ ಅಲೆದಾಡುವಂತೆ ತೋರುತ್ತಿದ್ದುದು ನಿಜ. ಆದರೆ ಆ ಮಾತಿನ ಠೀವಿ ಅವರಿಗೇ ಮೀಸಲಾದದ್ದು. ಹೃದಯಭಾವದಿಂದ ಕಾವುಗೊಂಡು, ಹದವಾದ ವರ್ಣವಿನ್ಯಾಸದಿಂದ ತಂಬೂರಿಯನ್ನು ಮೀಟಿದಂತೆ ಝೇಂಕರಿಸುತ್ತಾ, ಅರ್ಥಧ್ವನಿಯಿಂದ ಆಲೋಚನೆಯ ತರಂಗಗಳನ್ನು ದೂರ ದೂರಕ್ಕೆ ಹಾಯಿಸುತ್ತಾ, ಕನ್ನಡ ನುಡಿ ಅವರ ಕಂಠದಿಂದ ಹೊರಹೊಮ್ಮಿದ ಹಾಗೆ ಇನ್ನೆಲ್ಲಿಂದ ಬಂದದ್ದನ್ನು ನಾನಂತೂ ಕೇಳಿಲ್ಲ. ಇಂಥ "ನುಡಿಜಾಣ"ರು ಸಭೆಯಲ್ಲಿ ನಿಂತು ಕನ್ನಡದಲ್ಲಿ ನಾಲ್ಕು ಮಾತಾಡಲು ಹಿಂಜರಿಯುತ್ತಿದ್ದ ಕಾಲವೊಂದಿತ್ತೆಂದು ಹೇಳಿದರೆ ಜನ ನಂಬದಿರಬಹುದು. ಆದರೆ ಅಂಥ ಒಂದು ಸಂದರ್ಭ ನೆನಪಿದೆ. ವಿದ್ಯಾರ್ಥಿಯೊಬ್ಬಾತನು ಕನ್ನಡದಲ್ಲಿ ಬರೆದ ಪ್ರಬಂಧವನ್ನು ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ಓದುವ ಏರ್ಪಾಡಾಗಿತ್ತು. ಸಂಘದ ಅಧ್ಯಕ್ಷರಾದ ಶ್ರೀಕಂಠಯ್ಯನವರೇ ಆ ದಿನದ ಸಭಾಧ್ಯಕ್ಷರೂ ಆಗಿ ಬಂದಿದ್ದರು. ಅಧ್ಯಕ್ಷರ ಭಾಷಣ ಕನ್ನಡದಲ್ಲಿ ಆಗಬೇಕು ಎಂದು ಒಬ್ಬಿಬ್ಬರು ಸದಸ್ಯರು ಧೈರ್ಯ ಮಾಡಿ ಕೋರಿದರು. "ನಾನು ಕನ್ನಡದಲ್ಲೇ ಮಾತನಾಡಬೇಕೆಂದು ನೀವು ಒತ್ತಾಯಪಡಿಸಿದರೆ ಸಂಘದ ಅಧ್ಯಕ್ಷ ಸ್ಥಾನವನ್ನು ಬಿಟ್ಟುಬಿಡುತ್ತೇನೆ" ಎಂದು ಅರ್ಥ ಬರುವಂತೆ—ಕಾಲದುರ್ವಿಪಾಕ ದಿಂದಲೋ ಏನೋ—"ಶ್ರೀ"ಯವರು ಇಂಗ್ಲಿಷಿನಲ್ಲಿ ಹೇಳುತ್ತಲೇ ನಮ್ಮೆಲ್ಲರ ಎದೆ ಝಲ್ಲೆಂದಿತು. ಇವರಿಗೆ ಇಂಗ್ಲಿಷಿನಲ್ಲಿ ಅಷ್ಟು ಅಭಿಮಾನವಿದ್ದರೆ ಅದರಲ್ಲೇ ಮಾತಾಡಲಿ, ಬೇಕಾದರೆ 'ಬಂಟು' ಭಾಷೆಯಲ್ಲಿ ಮಾತಾಡಲಿ; ಸಂಘವನ್ನು ಮಾತ್ರ ಬಿಡದಿರಲಿ' ಎಂದುಕೊಂಡೆವು. ಅಂದಿನ ಅಧ್ಯಕ್ಷಭಾಷಣ ಇಂಗ್ಲಿಷಿನಲ್ಲೇ ನಡೆಯಿತು. ಆದರೆ ಬಿ.ಎಂ. ಶ್ರೀಯವರು ಹೀಗೆ ಹಠತೊಡುವುದಕ್ಕೆ ಬಹುಶಃ ಇದೇ ಕೊನೆಯ ಸಲ. ಕರ್ಣಾಟಕ ಸಂಘ ಆ ಬಾರಿ ಅವರಿಗೆ ಸೋತು ಬಳಿಕ ಅವರನ್ನೇ ಗೆದ್ದಿತು. ಮುಂದಿನ ವರ್ಷ ಮತ್ತೊಬ್ಬ ವಿದ್ಯಾರ್ಥಿ—ಈ ಭಾಗ್ಯಶಾಲಿ ನಾನೇ ಎಂದು ನನ್ನ ನೆನಪು; ಇದು ಕೇವಲ ನನ್ನ ಜ್ಞಾಪಕಶಕ್ತಿಯ ಪಕ್ಷಪಾತವೆಂದು ನಂಬಲಾರೆ—ತನ್ನ ಪ್ರಬಂಧವನ್ನು ಓದಿದಾಗ "ಶ್ರೀ"ಯವರು ಅಧ್ಯಕ್ಷ ಭಾಷಣವನ್ನು ಕನ್ನಡದಲ್ಲಿಯೇ ಸೊಗಸಾಗಿ ಮಾಡಿದರು. ವಿದ್ಯಾರ್ಥಿಗಳ ಕನ್ನಡದ ಅಭಿಮಾನದಲ್ಲಿ ಆ ವೇಳೆಗೆ ಗುರುಗಳಿಗೆ ನಂಬಿಕೆ ಬೆಳೆದಿತ್ತು; ಅವರ ಸಂಕೋಚದ ಚಳಿಯೂ ಮುರಿದಿತ್ತು. ಅವರ 'ಇಂಗ್ಲಿಷ್ ಗೀತೆಗಳಿ'ಂದ ಸ್ಫೂರ್ತಿ ಪಡೆದ ಅವರ ಶಿಷ್ಯರು ವಿದ್ಯಾರ್ಥಿ ದಶೆಯಲ್ಲೇ ರಚಿಸಿದ ಕವನಗಳ ಸಂಗ್ರಹವನ್ನು 'ಕಿರಿಯ ಕಾಣಿಕೆ'ಯಾಗಿ ಸಂಘವು ೧೯೨೮ರಲ್ಲಿ ಪ್ರಕಟಿಸಿ ಅರ್ಪಿಸಿದಾಗ, "ಶ್ರೀ"

ಯವರಿಗಾದ ಆನಂದಾತಿಶಯವನ್ನು ಕಣ್ಣಾರ ಕಂಡವರೇ ಬಲ್ಲರು. "ಗುರುದಕ್ಷಿಣೆ ಸಂದಿತು" ಎಂದರು; ಅಂದಿನ ಉತ್ಸವದಲ್ಲಿ ಪರಮೋತ್ಸಾಹದಿಂದ ಭಾಗವಹಿಸಿ, "ಬದುಕಿನಲ್ಲಿ ಸಂತೋಷ ಎಂದರೆ ಇದೇ ತಾನೆ" ಎಂದರು! ಅಂದು 'ಕಿರಿಯ ಕಾಣಿಕೆ' ಯನ್ನು ಗುರುಗಳಿಗೆ ಸಲ್ಲಿಸಿದ ತರುಣರಲ್ಲಿ ಒಬ್ಬಿಬ್ಬರು ಇಂದು ಹೊಸಗನ್ನಡದ ಹಿರಿಯ ಕವಿಗಳ ಸಾಲಿನಲ್ಲಿ ರಾಜಿಸುತ್ತಿದ್ದಾರೆ!

ಕನ್ನಡ ಮಾತು ತಲೆಯೆತ್ತುವ ಬಗೆ ಹೇಗೆ ಎಂಬ ಚಿಂತೆಯನ್ನು ತಾವು ವಿದ್ಯಾರ್ಥಿಯಾಗಿದ್ದಾಗಲೇ ಹತ್ತಿಸಿಕೊಂಡು, ಆ ಕಾರ್ಯದ ರೂಪರೇಖೆಗಳನ್ನು ತಾರುಣ್ಯದಲ್ಲೇ ರಚಿಸಿ ಜನತೆಯ ಮುಂದೆ ಇಟ್ಟು, ಪರಿಣತ ವಯಸ್ಸಿನಲ್ಲಂತೂ ಕನ್ನಡದ ಸೇವೆಯನ್ನು ಏಕೈಕ ವ್ರತವಾಗಿ ಕೈಕೊಂಡ ಭಾಷಾಭಕ್ತರು ಬಿ.ಎಂ. ಶ್ರೀಕಂಠಯ್ಯನವರು. ಕಾಲೇಜಿನ ಮರೆಯಲ್ಲಿ ಏಕಾಂತಪ್ರಿಯರಾಗಿ ಇರುತ್ತಿದ್ದ ಈ ವಿದ್ವಾಂಸರು ಕನ್ನಡದ ಬಾವುಟವನ್ನು ಹಿಡಿದುಕೊಂಡು ಜನನಾಯಕರಾಗಿ ನಾಡನ್ನೆಲ್ಲಾ ಸುತ್ತಿದರು; ಉದ್ರೇಕಕ್ಕೆ ಅವಕಾಶವಿಲ್ಲದ ಪಾಠಪ್ರವಚನಗಳನ್ನು ನಡಸುತ್ತಿದ್ದವರು ತುಂಬುಸಭೆಗಳನ್ನು ಹುರಿದುಂಬಿಸುವ ಭಾಷಣ ಗಳನ್ನು ಮಾಡುತ್ತಾ "ಸಿರಿಗನ್ನಡಂ ಗೆಲ್ಗೆ" ಎಂಬ ಮಂತ್ರವನ್ನು ಘೋಷಿಸುವ ಆಚಾರ್ಯರಾದವರು. ಕೊನೆಕೊನೆಗಂತೂ ಅವರು ಕನ್ನಡದ ರಕ್ಷಾಮಣಿಯಾಗಿ ಕಂಗೊಳಿಸಿದರು. ಕನ್ನಡದ ಏಳಿಗೆಗೆ ಅಡ್ಡಿಯಾಗಿ ಬರುವ ಯಾವ ಇತರ ಅಭಿಮಾನವನ್ನೇ ಆಗಲಿ ತೊರೆಯುವಷ್ಟು ಹರಿಯುವಷ್ಟು ದೂರ ಏಕನಿಷ್ಠೆಯಿಂದ ನಡೆದರು. ಇಹಲೋಕದ ವ್ಯಾಪಾರವನ್ನು ಮುಗಿಸುವುದಕ್ಕೆ ಕೇವಲ ಕೆಲವೇ ನಿಮಿಷಗಳ ಹಿಂದೆ ಅವರು ಮಾತನಾಡುತ್ತಿದ್ದ ವಿಷಯ ಕೂಡ ತಮ್ಮ ಜೀವನದ ಉಸಿರಾದ ಕನ್ನಡದ ಹಿತಚಿಂತನೆಯೇ!

* * *

ಕನ್ನಡ ಎಂ.ಎ. ತರಗತಿಯನ್ನು ತೆರೆದ ಕೆಲವು ತಿಂಗಳಿಗೆ ಶ್ರೀ ಟಿ.ಎಸ್. ವೆಂಕಣ್ಣಯ್ಯ ನವರು ಕನ್ನಡದ ಪ್ರಾಧ್ಯಾಪಕರಾಗಿ ಮೈಸೂರಿಗೆ ಬಂದರು. ಮೈಸೂರು ವಿಶ್ವವಿದ್ಯಾ ನಿಲಯದಲ್ಲಿ ಕನ್ನಡಕ್ಕೆ ಒಬ್ಬ 'ಪ್ರೊಫೆಸರ'ನ್ನು ನೇಮಿಸುವುದಕ್ಕೆ ಅದೇ ಮೊದಲು. ಆ ಪದವಿಗೆ ಮಾನ್ಯತೆಯನ್ನು ಸಂಪಾದಿಸಿ, ಜೊತೆಯ ಉಪಾಧ್ಯಾಯರ ಪ್ರೀತಿ ಗೌರವಗಳನ್ನು ಆತ್ಮಗುಣದಿಂದ ಗಳಿಸಿ ಕನ್ನಡದ ಕೆಲಸ ಕಾಲೇಜಿನಲ್ಲಿ ಅವರಿವರೆನ್ನದೆ ಎಲ್ಲರ ಕೆಲಸ ವಾಗುವಂತೆ ಮಾಡಿದ ಮಹಾನಿಯೋಜಕರು, ತೆರೆಯ ಹಿಂದೆ ನಿಂತು ಸದ್ದಿಲ್ಲದೆ ದುಡಿಯುತ್ತಿದ್ದ ಸೂತ್ರಧಾರರು ವೆಂಕಣ್ಣಯ್ಯನವರು. ವಿದ್ಯಾರ್ಥಿಗಳ ಮೇಲಂತೂ ಅವರ ಪ್ರೀತಿ ಅಪರಿಮಿತ. ಅವರ ಪಾಠಗಳ ರುಚಿಯನ್ನಾಗಲಿ ವಿದ್ಯಾಪರಿಶ್ರಮವನ್ನಾಗಲಿ ಸಂಶೋಧನವ್ಯವಸಾಯವನ್ನಾಗಲಿ ಭಾಷಣಸ್ವಾರಸ್ಯವನ್ನಾಗಲಿ ಕುರಿತು ಪ್ರಸಂಗಿಸುವುದು ಇಲ್ಲಿ ನನ್ನ ಉದ್ದೇಶವಲ್ಲ. ವೆಂಕಣ್ಣಯ್ಯನವರ ಶಿಷ್ಯನಾಗುವುದರ ಜೊತೆಗೆ, ಅವರ ಮಾರ್ಗದರ್ಶನದಲ್ಲಿ ಅನೇಕ ವರ್ಷ ಕಾಲ ನನ್ನ ಪ್ರೀತಿಯ ಕಾಲೇಜಿನಲ್ಲಿ ಕನ್ನಡದ ಉಪಾಧ್ಯಾಯನಾಗಿ ಕೆಲಸ ಮಾಡುವ ಭಾಗ್ಯ ನನ್ನದಾಗಿತ್ತು. ಈ ಪ್ರಿಯ ಗುರುಗಳು ಹಿರಿಯ ಅಣ್ಣನಂತೆ ನಮ್ಮನ್ನು ನೋಡಿಕೊಂಡರು; ತಾವು ಹಿಂದೆ ನಿಂತು ನಮ್ಮ ಬೆನ್ನು

ತಟ್ಟಿ ಕೆಲಸ ಮಾಡಿಸಿದರು. ತಮ್ಮ ಶಾಖೆಯಲ್ಲಿ ಯಾರೊಬ್ಬರಿಗೆ ಒಳ್ಳೆಯ ಹೆಸರು ಬಂದರೂ ತಮಗೇ ಬಂದಷ್ಟು ಅವರಿಗೆ ಸಂತೋಷ. ಆಗಾಗ ನಮ್ಮೆಲ್ಲ ಮನೆಗೆ ಕರೆದು ಸವಿಯಾದ ತಿಂಡಿತೀರ್ಥವನ್ನು ಕೊಟ್ಟು, ವ್ಯಾಸಂಗ, ಲೇಖನ ಮೊದಲಾದದ್ದನ್ನು ಕುರಿತು ಪ್ರಾಸಂಗಿಕವಾಗಿ ಮಾತಾಡಿ, ಅಳುಕನ್ನು ಬಿಡಿಸಿ, ಹುರುಪನ್ನು ಕುದುರಿಸಿದರು. ಮೊದಲ ಕೆಲವು ವರ್ಷಗಳಲ್ಲಂತೂ, ಸಂಜೆಯ ವೇಳೆ ಅವರ ಮನೆಯಲ್ಲಿ ಅನೇಕ ಮಂದಿ ತರುಣ ಉಪಾಧ್ಯಾಯರು—ಇವರಲ್ಲಿ ಕನ್ನಡ ಶಾಖೆಗೆ ಸೇರದಿದ್ದವರೇ ಹೆಚ್ಚು ಮಂದಿ—ನೆರೆದು, ಸಲ್ಲಾಪಗೋಷ್ಠಿಯನ್ನು ನಡಸುವುದೂ ಸಂಚಾರ ಹೊರಡುವುದೂ ವಾಡಿಕೆಯಾಗಿತ್ತು. ವೆಂಕಣ್ಣಯ್ಯನವರ ಮನೆಯ ವರಾಂಡದಲ್ಲಿ ನಿತ್ಯವೂ "ಪಾದರಕ್ಷೆಗಳ ಪರಿಷತ್ತು" ನೆರೆಯುವುದೆಂದು ನಾವು ವಿನೋದಕ್ಕಾಗಿ ಹೇಳುತ್ತಿದ್ದೆವು. ಅಪರಿಚಿತರಾದವರು ಅವರಲ್ಲಿಗೆ ಬಂದರೂ ಹೊಸಬತನ ಹೆಚ್ಚು ಕಾಲ ಉಳಿಯುತ್ತಿರಲಿಲ್ಲ. ನಮಗಂತೂ ಅವರ ಬಳಿಯಲ್ಲಿ ಯಾವ ಸಂಕೋಚವೂ ಇಲ್ಲದೆ ಕಷ್ಟಸುಖಗಳನ್ನು ವರದಿಯೊಪ್ಪಿಸುವುದು ರೂಢಿಯಾಗಿಬಿಟ್ಟಿತ್ತು. ವೆಂಕಣ್ಣಯ್ಯನವರು ಎಲ್ಲವನ್ನೂ ಸಾವಧಾನವಾಗಿ ಕೇಳುವರು; ತಮ್ಮ ವಿಶಾಲವಾದ ಅನುಭವದ ಸಾರವನ್ನು ತಿಳಿಸುವರು; ಉಚಿತವಾದ ಸಲಹೆ ಕೊಡುವರು; ಸಹಾಯವನ್ನೂ ನೀಡುವರು.

ನಮ್ಮಲ್ಲಿ ಎಷ್ಟು ಪ್ರೀತಿ, ಎಷ್ಟು ಸಲಿಗೆ ಅವರಿಗೆ! ಅವರ ಕೈಕೆಳಗಿನವರೆಂದು ನಾವು ತಿಳಿದುಕೊಳ್ಳುವುದಕ್ಕೇ ಅವಕಾಶ ಕೊಡುತ್ತಿರಲಿಲ್ಲ. ನನ್ನ ಅನುಭವದ ಹಲವು ಪ್ರಸಂಗಗಳಲ್ಲಿ ಒಂದನ್ನಾದರೂ ಇಲ್ಲಿ ಉಲ್ಲೇಖಿಸದಲ್ಲದೆ ಮನಸ್ಸು ನಿಲ್ಲದು. ಪರಸ್ಥಳದಿಂದ ಬಂದಿದ್ದ ಹಿರಿಯ ಮಿತ್ರರೊಬ್ಬರನ್ನು ನಮ್ಮ ಮನೆಗೆ ಊಟಕ್ಕೆ ಕರೆದಿದ್ದೆನು. ಜೊತೆಗೆ ನನ್ನ ಸಹಾಧ್ಯಾಪಕರಿಬ್ಬರುಮೂರು ಮಂದಿಯೂ ಬರುವವರಾಗಿದ್ದರು. ಅಂದಿನ ಅತಿಥಿಗಳು ವೆಂಕಣ್ಣಯ್ಯನವರಿಗೂ ಆಪ್ತರು. ಆದರೆ ಪ್ರೊಫೆಸರನ್ನು ಈ ಗೋಷ್ಠಿಗೆ ಕರೆಯುವುದು ಹೇಗೆ ಎಂದು ಸಂಕೋಚಪಟ್ಟುಕೊಂಡು ವೆಂಕಣ್ಣಯ್ಯನವರಿಗೆ ಇದರ ವಿಚಾರವನ್ನು ನಾನು ತಿಳಿಸಿರಲಿಲ್ಲ. ಅಂದು ಬೆಳಗ್ಗೆ ಹನ್ನೊಂದು ಘಂಟೆಯ ಸಮಯ. ವೆಂಕಣ್ಣಯ್ಯನವರು ನಮ್ಮ ಮನೆಯ ಹತ್ತಿರ ಬಂದು ನನ್ನನ್ನು ಕೂಗಿದರು. "ಶ್ರೀಕಂಠಯ್ಯ, ನೀವು—ರನ್ನು ಊಟಕ್ಕೆ ಕರೆದಿದ್ದೀರಂತೆ. ನನಗೇಕೆ ಹೇಳಲಿಲ್ಲ? ನಾನೇ ಅವರನ್ನು ಕರೆಯಬೇಕೆಂದಿದ್ದೆ. ಈಗ ತಾನೆ ಏನಾಯಿತು? ನಿಮ್ಮ ಮನೆಗೇ ಬಂದುಬಿಡುತ್ತೇನೆ; ಇಲ್ಲೇ ಅವರ ಜೊತೆಯಲ್ಲಿ ಊಟ ಮಾಡಿದರೆ ಸರಿ" ಎಂದರು. ನನ್ನ ಸಂಕುಚಿತ ಭಾವನೆಗಾಗಿ ನಾನು ಭೂಮಿಗೆ ಇಳಿದುಹೋದೆ. "ಸಾರ್, ತಪ್ಪಾಯಿತು. ನೀವು ಖಂಡಿತ ಇಲ್ಲಿಗೇ ಬರಬೇಕು" ಎಂದು ತುಟಿಗಳನ್ನು ಅಲುಗಿಸಲು ಹೇಗೆ ಸಾಧ್ಯವಾಯಿತೋ ಕಾಣೆ. "ನಾನಾಗಿಯೇ ಬರುತ್ತೇನೆ ಎಂದವನು ಬರದೆ ಇರುತ್ತೇನೆಯೆ? ನಿಮಗೇಕೆ ಯೋಚನೆ? ಮಿಾಟಿಂಗಿನಿಂದ ಹಾಗೆಯೇ ಬರುತ್ತಿದ್ದೇನೆ; ಮನೆಗೆ ಹೋಗಿ ಹಿಂದಕ್ಕೆ ಬರುತ್ತೇನೆ" ಎಂದು ಹೇಳಿ ನನ್ನ ಮನಸ್ಸನ್ನು ಹದಕ್ಕೆ ತಂದರು; ಊಟಕ್ಕೂ ಬಂದರು. ಅಂದಿನಿಂದ, ಇವರ ಹತ್ತಿರ ಮೇಲಿನ ಅಧಿಕಾರಿಗಳೆಂಬಂತೆ ನಡೆದುಕೊಳ್ಳಕೂಡದು, ಪ್ರೀತಿಯ ಅಣ್ಣನ ಹತ್ತಿರ ಹೇಗೋ ಹಾಗಿರಬೇಕು ಎಂದು ನಿಶ್ಚಯ ಮಾಡಿದೆನು. ಕಡೆಕಡೆಗಂತೂ ಅವರನ್ನು ಸಂಧಿಸಿದಾಗ

ಸಂಪ್ರದಾಯದಂತೆ ಕೈ ಮುಗಿದು ನಮಸ್ಕಾರ ಮಾಡುವುದನ್ನೂ ನಾವು ಕೆಲವರು ಬಿಟ್ಟೆವು; ಆತ್ಮೀಯತೆಗೆ ಅದೂ ಒಂದು ಅಡ್ಡಿಯೆಂಬ ಭಾವ ಮನಸ್ಸಿನಲ್ಲಿ ಬಲಿದುಹೋಗಿತ್ತು!

ಉದ್ಯೋಗದಿಂದ ವಿಶ್ರಾಂತಿಯನ್ನು ಪಡೆಯುವ ಮೊದಲೇ, ಕನ್ನಡಕ್ಕಾಗಿ ದುಡಿಯುತ್ತಿರುವಾಗಲೇ, ವೆಂಕಣ್ಣಯ್ಯನವರು ನಮ್ಮನ್ನು ಅಗಲಿಬಿಟ್ಟರು. ಅವರ ಮರಣದ ಘೋರ ವಾರ್ತೆ ಕಿವಿಗೆ ಬಿದ್ದಾಗ, ಬದುಕಿನಲ್ಲಿ ಎಂತೋ ಸಾವಿನಲ್ಲೂ ಅಂತೆಯೇ ಉಪಶಾಂತವಾಗಿದ್ದ ಅವರ ಮುಖವನ್ನು ಕೊನೆಯ ಬಾರಿ ಹನಿತುಂಬಿದ ಕಣ್ಣಿನಿಂದ ನೋಡಿದಾಗ, ಅನುಭವಿಸಿದ ಕರುಳಿನ ವೇದನೆಯನ್ನು ಹೇಗೆ ವರ್ಣಿಸುವುದು! ಅವರು ತೀರಿಹೋದ ಬಳಿಕವೂ ಎಷ್ಟೋ ದಿನಗಳವರೆಗೆ ಕಾಲೇಜಿನ ಒಳ ಕೈಸಾಲೆಯಲ್ಲಿ ಹೋಗುತ್ತಿದ್ದರೆ, ಅವರ ನಸುಬಾಗಿದ ಉನ್ನತ ಮೂರ್ತಿ ಇದ್ದಕ್ಕಿದ್ದಂತೆ ಎದುರಿಗೆ ಬಂದ ಹಾಗೆ ಭಾಸವಾಗುತ್ತಿತ್ತು. ಆದರೆ ಈ ಅವ್ಯಾಜಹಿತೈಷಿಗಳನ್ನು ಉದಾರಹೃದಯರನ್ನು ಉದಾತ್ತಸತ್ತ್ವರನ್ನು ಕಣ್ಣಾರ ಕಾಣುವುದು ಇನ್ನೆಲ್ಲಿ ಬಂತು! ದಿಟ್ಟಿಸಿ ನೋಡಿದರೆ ಬರಿಯ ಬಯಲು!

* * *

ಮಹಾರಾಜರವರ ಕಾಲೇಜಿನಲ್ಲಿ ನನಗೆ ದೊರೆತ ಗುರುವೃಂದದಲ್ಲಿ ಚಿರ ಸ್ಮರಣೀಯರಾದ ಇನ್ನೂ ಹಲವರುಂಟು; ಅವರಲ್ಲಿ ಕೀರ್ತಿಶೇಷರಾಗಿರತಕ್ಕವರನ್ನೇ ಕುರಿತು ಎರಡು ಮಾತುಗಳನ್ನು ಹೇಳುವುದಕ್ಕೂ ಇಲ್ಲಿ ಅವಕಾಶ ಸಾಲದು. ಆದರೂ, ವ್ಯಾಕರಣ ಸಂಶೋಧನೆಗಾಗಿ ಜೀವವನ್ನೇ ತೇದವರಾದರೂ ಕನ್ನಡ ಕಾವ್ಯವನ್ನು ಹೇಳುವಾಗ ನಮ್ಮನ್ನು ರಸಪ್ರವಾಹದಲ್ಲಿ ತೇಲಿಸುತ್ತಿದ್ದ ಪಂಡಿತ ಕಾನಕಾನಹಳ್ಳಿ ವರದಾಚಾರ್ಯರನ್ನು ನೆನೆಯದಿರುವುದು ಹೇಗೆ? ತರಗತಿಗೆ ಬರಿಗೈಯಲ್ಲಿ ಬಂದು, "ಅಣ್ಣಯ್ಯ, ಎಲ್ಲಿ ಪುಸ್ತಕ, ಎಲ್ಲಿ, ಎಲ್ಲಿ?" ಎಂದು ಬಾಗಿಲ ಹತ್ತಿರ ಕುಳಿತ ಯಾರೋ ಒಬ್ಬ ವಿದ್ಯಾರ್ಥಿಯು ಕೈಯಿಂದ ಹಳಗನ್ನಡದ ಕಠಿನ ಕಾವ್ಯವನ್ನು ಎಳೆದುಕೊಂಡು ವೇದಿಕೆಯನ್ನು ಹತ್ತಿ ನಿರರ್ಗಳವಾಗಿ ಅಂದಿನ ಪಾಠವನ್ನು ವ್ಯಾಖ್ಯಾನಿಸುತ್ತಿದ್ದ ಅವರ ವಿದ್ವತ್ತನ್ನೂ ಕೆಚ್ಚನ್ನೂ ಜ್ಞಾಪಿಸಿಕೊಂಡರೆ ಈಗಲೂ ಬೆರಗಾಗುತ್ತದೆ.—ಕನ್ನಡದ ದುಡಿಮೆಯಲ್ಲೇ ತಮ್ಮ ಕಣ್ಣನ್ನು ಕಳೆದುಕೊಂಡ ಮೇಲೆ ಕೂಡ, ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂದು ಆ ದುಃಸ್ಥಿತಿಯಲ್ಲೇ ಕಾಲೇಜಿಗೆ ಬಂದು ನಮಗೆ 'ಗದಾಯುದ್ಧ'ವನ್ನು ಪಾಠ ಹೇಳಿದ ಶ್ರೀ ಬಿ. ಕೃಷ್ಣಪ್ಪನವರ ಶಿಷ್ಯವಾತ್ಸಲ್ಯವನ್ನು ಹೇಗೆ ಮರೆಯಬಹುದು? ವಿದ್ಯಾರ್ಥಿಯೊಬ್ಬನು ಪುಸ್ತಕದಿಂದ ಪದ್ಯವನ್ನು ಓದುವುದು, ಇವರು ಅವನ್ನು ನೆನಪಿನಿಂದ ವಿವರಿಸುವುದು : ಹೀಗೆ ತಿಂಗಳುಗಟ್ಟಳೆ, ನಿಯಮಿತ ಪಾಠ ಮುಗಿಯುವವರೆಗೂ ನಡೆಯಿತು.—ಕಾಲೇಜಿಗೆ ನಾನು ಸೇರಿದಾಗ ಮುಖ್ಯಾಧ್ಯಾಪಕ ರಾಗಿದ್ದವರು ಶ್ರೀ ಎನ್.ಎಸ್. ಸುಬ್ಬರಾಯರು. ಆಡಳಿತದ ಬಿಗಿ ಎಂದರೆ ಅವರದು; ಅರ್ಥಶಾಸ್ತ್ರದ ಜೊತೆಗೆ ಶಿಸ್ತಿನ ಪಾಲನೆಯನ್ನೂ ಅವರು ನಮಗೆ ಕಲಿಸಿದರು. ದರ್ಪದ ಜೊತೆಗೆ ಉದಾರವಾದ ಶಿಷ್ಯಪ್ರೇಮವೂ ಅವರ ಹೃದಯದಲ್ಲಿ ತುಂಬಿತ್ತು. ಅವರ

ಅದ್ಭುತ ಜ್ಞಾಪಕಶಕ್ತಿಯೋ! ಕಾನ್ವೋಕೇಷನ್ ಕಾಲದಲ್ಲಿ, ಇನ್ನೂರು ಮುನ್ನೂರು ಮಂದಿ ಪದವೀಧರರ ಹೆಸರುಗಳನ್ನು, ಪಟ್ಟಿಕೆಯ ಸಹಾಯವನ್ನೇ ಕೋರದೆ, ಕೇವಲ ಮುಖಗಳನ್ನು ನೋಡಿಕೊಂಡು ಗುರುತಿಸುತ್ತಾ, ಪ್ರಥಮಾಕ್ಷರಗಳಲ್ಲಿ ಕೂಡ ವ್ಯತ್ಯಾಸ ವಿಲ್ಲದಂತೆ ಅವರ ಹಾಗೆ ಒಪ್ಪಿಸಬಲ್ಲ ಬೇರೊಬ್ಬ ಧೀರನು ಯಾರು!

ನಮ್ಮ ಇನ್ನೊಬ್ಬ ಮುಖ್ಯಾಧ್ಯಾಪಕರನ್ನು—ಈಚೆಗೆ ವಿಶ್ರಾಂತಿ ಪಡೆದು ಈಗ ಬ್ರಿಟನ್ನಿನಲ್ಲಿದ್ದರೂ ನಮ್ಮ ಕಾಲೇಜಿನಲ್ಲಿ ಆಸಕ್ತಿಯನ್ನು ಉಳಿಸಿಕೊಂಡಿರುವವರನ್ನು—ನೆನೆದು ಈ ಲೇಖನವನ್ನು ಮುಗಿಸುತ್ತೇನೆ. ಪ್ರೊ. ಜೆ.ಸಿ. ರಾಲೋ ಅವರು ಸಾಹಿತ್ಯ ಪಾಠವನ್ನು ಹೇಳುತ್ತಿದ್ದ ವೈಖರಿಯ ಮಾತು ಹಾಗಿರಲಿ—ನಾಟಕವನ್ನಂತೂ ಅವರ ಬಾಯಿಂದಲೇ ಕೇಳಬೇಕು—ವಾಕ್ಯರಚನೆಯನ್ನು ಕಲಿಸುವಾಗ ಅವರ ಹಾಗೆ ವಿದ್ಯಾರ್ಥಿಗಳನ್ನು ಕುಣಿಸಬಲ್ಲ ಉಪಾಧ್ಯಾಯರನ್ನು ಮತ್ತೆಲ್ಲಿ ಕಾಣೋಣ! ಮಿಕ್ಕ ಪಾಠಗಳಿಗೆಲ್ಲ "ಚಕ್ಕರ್" ಹೊಡೆಯುತ್ತಿದ್ದ ವಿದ್ಯಾರ್ಥಿಗಳೂ ಕೂಡ ಇವರ ವಾಕ್ಯರಚನೆಯ ತರಗತಿಗೆ ತಪ್ಪದೆ ಬಂದು ಕುಳಿತುಕೊಳ್ಳುತ್ತಿದ್ದರು. ಕಾಗುಣಿತ, ಉಚ್ಚಾರಣೆ—ಇಂಥ ವಿಚಾರಗಳಲ್ಲಿ ಕೂಡ ರಾಲೋ ಅವರು ತುಂಬ ಆಸಕ್ತಿಯನ್ನು ಉದ್ರೇಕಿಸುತ್ತಿದ್ದರು. ಒಮ್ಮೆ ಒಬ್ಬ ವಿದ್ಯಾರ್ಥಿ ದಿಟ್ಟತನದಿಂದ "ನಿಮ್ಮ ಹೆಸರಿನ ಸರಿಯಾದ ಉಚ್ಚಾರಣೆ ಹೇಗೆ?" ಎಂದು ಕೇಳಿದನು. (ಅವರ ಹೆಸರನ್ನು ಕೆಲವರು 'ರೋಲೋ' ಎಂದೂ ಕೆಲವರು 'ರಾಲೋ' ಎಂದೂ ಉಚ್ಚರಿಸುತ್ತಿದ್ದರು) ಆಗಿನ್ನೂ ಧ್ವನಿವಿಜ್ಞಾನದ (Phonetics) ವ್ಯಾಸಂಗವು ಮಹಾರಾಜರವರ ಕಾಲೇಜಿಗೆ ಪ್ರವೇಶಿಸಿರಲಿಲ್ಲ. (Cardinal Vowels) (ಮಾನ ಸ್ವರಗಳು), IPA Symbols (ಐ.ಪಿ.ಎ. ಲಿಪಿಚಿಹ್ನೆಗಳು) ಇತ್ಯಾದಿಗಳ ಪರಿಚಯ ಗುರುವರ್ಗದವರಿಗೇ ಬಹುಶಃ ಇರಲಿಲ್ಲ. "That is a matter on which I am the final authority. It is Rollo, rhyming with Apollo!" (ಆ ವಿಷಯದಲ್ಲಿ ನಾನೇ ಕೊನೆಯ ಪ್ರಮಾಣ. ಅದು ರಾಲೋ, ಅದರ ಪ್ರಾಸಪದ ಅಪಾಲೋ!") ಎಂದು ಅವರು ಥಟ್ಟನೆ ಉತ್ತರಕೊಟ್ಟು ನಮ್ಮನ್ನೆಲ್ಲಾ ನಗೆಯಲ್ಲಿ ತೇಲಿಸಿಬಿಟ್ಟರು!*

"ತಸ್ಯ ಮೇ ಸರ್ವಶಿಷ್ಯಸ್ಯ ನೋಪದೇಶದರಿದ್ರತಾ." ("ಅಂತು ಸರ್ವರ ಶಿಷ್ಯನಾದ ನನಗೆ ಉಪದೇಶಭಾಗದಲಿ ಇಲ್ಲ ಕೊರತೆ.")

ಶ್ರೀಗುರುಭ್ಯೋ ನಮಃ.

* ಇಂಗ್ಲಿಷ್ ಧ್ವನಿಗಳ ದೃಷ್ಟಿಯಿಂದ, 'ರೋಲೋ', 'ರಾಲೋ' ಈ ಎರಡು ಉಚ್ಚಾರಣೆಗಳೂ ಸರಿಯಲ್ಲ. Rollo ಎಂಬ ಶಬ್ದದ ಪ್ರಥಮ ಸ್ವರದ ಉಚ್ಚಾರಣೆ ನಮ್ಮ ಆಕಾರ-ಓಕಾರಗಳಿಗೆ ಮಧ್ಯದ ಸ್ಥಾನದ್ದು. ಇದನ್ನು IPA ವರ್ಣಮಾಲೆಯಲ್ಲಿ 'ɔ' ಚಿಹ್ನೆಯಿಂದ ಗುರುತಿಸುತ್ತಾರೆ. ಈಚೆಗೆ ನಮ್ಮ ದೇಶದ ಲಿಪಿಗಳಲ್ಲಿ 'ॅ' ಎಂಬಂತೆ ಅದನ್ನು ಕೆಲವರು ನಿರ್ದೇಶಿಸುವುದುಂಟು.

ಮೈಸೂರು ರಾಜ್ಯದ ವಿದ್ಯಾಭಿವೃದ್ಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪಾತ್ರ

ಜ್ಞಾನವನ್ನು ಕೂಡಿಸಿ ಬೆಳಸಿ ಜನತೆಯಲ್ಲಿ ಹರಡುವ ವಿಶ್ವವಿದ್ಯಾನಿಲಯವನ್ನು ನೆನೆದಾಗಲೆಲ್ಲ ಜೀವನದಿಯ ಪ್ರವಾಹದಿಂದ ತುಂಬಿ ತುಳುಕಿ ನಾಡಿನ ಜನರಿಗೆ ಬದುಕನ್ನೂ ಬೆಳಕನ್ನೂ ಎರೆಯುವ ಮಹಾಜಲಾಶಯದ ನೆನಪಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯವನ್ನು ಕುರಿತು ಆಲೋಚಿಸುವಾಗ ನಗರದ ಸಮೀಪದಲ್ಲೇ ಇರುವ ಕೃಷ್ಣರಾಜಸಾಗರ ನೆನಪಿಗೆ ಬರುವುದು ಸಹಜ. ಜನತೆಯ ಬಾಹ್ಯಜೀವನಕ್ಕೆ ಪುಷ್ಟಿಯನ್ನು ಒಂದು ನೀಡಿದರೆ ಅದರ ಅಂತರಂಗಕ್ಕೆ ಇನ್ನೊಂದು ನೀಡುತ್ತದೆ ಎನ್ನುವುದಿಷ್ಟೇ ಅಲ್ಲ ಇವುಗಳಿಗಿರುವ ಸಾಮ್ಯ. ಇವುಗಳ ಪ್ರಾರಂಭವೂ ಒಂದೇ ಮೂಲದಿಂದ; ಸರಿಸುಮಾರು ಒಂದೇ ಕಾಲದಲ್ಲಿ. ಮೈಸೂರು ವಿಶ್ವವಿದ್ಯಾನಿಲಯ, ಕೃಷ್ಣರಾಜಸಾಗರ– ಈ ಎರಡರ ನಿರ್ಮಾಣವನ್ನು ಕುರಿತು ಆಳವಾಗಿ ಆಲೋಚಿಸಿ, ಅಡ್ಡಿತಡೆಗಳನ್ನು ಜಯಿಸಿ ಕಾರ್ಯಕ್ಷೇತ್ರಕ್ಕೆ ತಂದವರು ಮೈಸೂರಿನ ಶ್ರೇಷ್ಠ ದಿವಾನರಾಗಿದ್ದ ಮಹಾಮೇಧಾವಿ ಬಹುದೂರದರ್ಶಿ ಸರ್ ಎಂ. ವಿಶ್ವೇಶ್ವರಯ್ಯನವರು, ಮತ್ತು ಅವರಿಗೆ ಅವಿರತವಾದ ಬೆಂಬಲವನ್ನು ಕೊಟ್ಟ, ರಾಜ್ಯದ ಸರ್ವತೋಮುಖವಾದ ಅಭಿವೃದ್ಧಿಯನ್ನು ವ್ರತವಾಗಿ ಕೈಕೊಂಡಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು.

ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಯನ್ನು ಕುರಿತು ಸರ್ಕಾರದ ವಿಶೇಷಪ್ರಕಟನೆ ಹೊರಟು ಅದು

ವಿಧ್ಯುಕ್ತವಾಗಿ ಅಸ್ತಿತ್ವಕ್ಕೆ ಬಂದದ್ದು ೧೯೧೬ನೆಯ ಇಸವಿ ಜುಲೈ ೨೫ನೆಯ ದಿನದಂದು. ನಾಳೆಗೆ ಸರಿಯಾಗಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ಐವತ್ತು ವರ್ಷಗಳು ತುಂಬುತ್ತವೆ. ಇದನ್ನು ಕೊಂಡಾಡುವುದಕ್ಕಾಗಿ ಸುವರ್ಣ ಮಹೋತ್ಸವದ ಆಚರಣೆ ಮೈಸೂರು ನಗರದಲ್ಲಿ ನಾಳೆಯದಿನ ವೈಭವದಿಂದ ಪ್ರಾರಂಭವಾಗುತ್ತದೆ. ಪುರಾತನವಾದ ನಮ್ಮ ದೇಶದ ಚರಿತ್ರೆಯಲ್ಲಿ ಅರ್ಧಶತಮಾನ ಅಂಥ ದೀರ್ಘಕಾಲವೇನೂ ಅಲ್ಲ; ಆದರೆ ನಮ್ಮ ದೇಶದ ವಿದ್ಯಾಪ್ರಗತಿಯ ಚರಿತ್ರೆಯಲ್ಲಿ ಅದು ಪ್ರಮುಖವಾದದ್ದು. ೧೯೧೬ನೆಯ ಜುಲೈ ೨೫ರಂದು ಅಂಕುರಾರ್ಪಣ ಹೊಂದಿದ ಈ ಬೋಧಿವೃಕ್ಷ ಇಂದು ಹೆಮ್ಮರವಾಗಿ ಬೆಳೆದಿದೆ; ಇನ್ನೂ ಬೆಳೆಯುತ್ತಿದೆ. ದಿಕ್ಕುದಿಕ್ಕಿಗೆ ಶಾಖೆಗಳನ್ನು ಚಾಚಿದೆ; ಬಿಳಲುಗಳನ್ನು ಊರಿದೆ. ಎರಡು ತಲೆಮಾರುಗಳ ಜ್ಞಾನಪಿಪಾಸುಗಳಿಗೆ ಅಮೃತವನ್ನು ನೀಡಿದೆ. ಅಷ್ಟೇ ಅಲ್ಲ. ಇದರ ಅಂಗವಾಗಿ ಬೆಳೆದು ಪ್ರಬುದ್ಧ ಸ್ಥಿತಿಗೆ ಬಂದ ಬೆಂಗಳೂರಿನ ಎರಡು ಸಂಸ್ಥೆಗಳು ಕೃಷಿವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ ಎಂಬ ಎರಡು ಸ್ವತಂತ್ರ ವಿಶ್ವವಿದ್ಯಾನಿಲಯಗಳಾಗಿ ರೂಪುಗೊಂಡು ರಾಜ್ಯದ ರಾಜಧಾನಿಯ ಮಹತ್ವವನ್ನು ಹೆಚ್ಚಿಸಿವೆ.

ಮೈಸೂರು ವಿಶ್ವವಿದ್ಯಾನಿಲಯವು ಸಂಸ್ಥಾಪಿತವಾಗುವ ಮುಂಚೆಯೇ ಮೈಸೂರಿನಲ್ಲಿ ಮಹಾರಾಜರ ಕಾಲೇಜು, ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜು ಇವೆರಡೂ ಐವತ್ತು ಅರವತ್ತು ವರ್ಷಗಳಿಗೂ ಮೀರಿದಷ್ಟು ಕಾಲ ಶ್ರೇಷ್ಠವಾಗಿ ಕೆಲಸಮಾಡಿ ಹೆಸರುಗಳಿಸಿದ್ದುವು. ಮೈಸೂರಿನ ಪ್ರೌಢ ವಿದ್ಯಾ ಸರಸ್ವತಿಯ ಎರಡು ಕಣ್ಣುಗಳಾಗಿದ್ದ ಈ ಕಾಲೇಜುಗಳು ಹೊಸ ವಿಶ್ವವಿದ್ಯಾನಿಲಯದ ಆಧಾರಸ್ತಂಭಗಳಾದುವು. ಈ ಭದ್ರವಾದ ತಳಹದಿಯ ಮೇಲೆ ಭವ್ಯವಾಗಿ ವಿಸ್ತಾರವಾಗಿ ಮೈಸೂರು ವಿಶ್ವವಿದ್ಯಾನಿಲಯ ಹಬ್ಬಿತು. ಶೀಘ್ರದಲ್ಲಿಯೇ ಯಂತ್ರವಿದ್ಯೆಯ ಕಾಲೇಜು ಇವುಗಳ ಜೊತೆಗೆ ಸೇರಿತು; ಆ ಮುಂದೆ ವೈದ್ಯಕೀಯ ಕಾಲೇಜು ಬಂದಿತು; ಶಿಕ್ಷಣಶಾಸ್ತ್ರಕ್ಕೆಂದೇ ಪ್ರತ್ಯೇಕವಾದ ಕಾಲೇಜು ಆಯಿತು; ವಾಣಿಜ್ಯಶಾಸ್ತ್ರ, ನ್ಯಾಯಶಾಸ್ತ್ರ ಇವುಗಳ ಕಾಲೇಜುಗಳೂ ಹುಟ್ಟಿದುವು; ಕೃಷಿವಿಜ್ಞಾನ ಹಿಂದೆ ಬೀಳಬಹುದೆ! ಅದರ ಕಾಲೇಜೂ ಬಂದಿತು. ಕಡೆಗೆ ಸಂಗೀತ ಮತ್ತು ನಾಟ್ಯಕಲೆಗಳ ಕಾಲೇಜೂ ಮೈದೋರಿತು. ಸದ್ಯದಲ್ಲಿ ಜ್ಞಾಪಕಕ್ಕೆ ಬಂದ ವಿಷಯಗಳನ್ನು ಮಾತ್ರ ಇಲ್ಲಿ ಹೆಸರಿಸಿದ್ದೇನೆ. ಇನ್ನೂ ಯಾವುದಾದರೂ ಮುಖ್ಯ ವಿಷಯಗಳನ್ನು ಕುರಿತ ಕಾಲೇಜುಗಳನ್ನು ನಾನು ಮರೆತಿರುವುದೂ ಅಸಂಭವವಲ್ಲ.

ಈ ಕಾಲೇಜುಗಳು ಮೊದಲು ಬೆಂಗಳೂರು ಮೈಸೂರು ನಗರಗಳಲ್ಲಿ ಮಾತ್ರ ತಲೆಯೆತ್ತಿದುವು, ಅದೂ ಸರ್ಕಾರದ ಆಡಳಿತದಲ್ಲಿ. ಆದರೆ ವಿದ್ಯೆ ಬೆಳೆದ ಹಾಗೆಲ್ಲ ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿ, ಕೆಲವು ತಾಲ್ಲೂಕು ಸ್ಥಳಗಳಲ್ಲಿ, ಕಡೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಈಗ ಕಾಲೇಜುಗಳು ನೆಲೆಗೊಂಡಿವೆ. ಎರಡು ಕಾಲೇಜುಗಳಿಂದ ಪ್ರಾರಂಭಿಸಿದ ವಿಶ್ವವಿದ್ಯಾನಿಲಯ ಈಗ ಐವತ್ತೊಂಬತ್ತು ಕಾಲೇಜುಗಳಿಂದ ಕೂಡಿದೆ (ಅದೂ ಬೆಂಗಳೂರು ವಿಶ್ವವಿದ್ಯಾನಿಲಯದ ವಲಯವನ್ನು ಬಿಟ್ಟು). ಸರ್ಕಾರಿ ಕಾಲೇಜುಗಳ

ಸಂಖ್ಯೆಯನ್ನು ಖಾಸಗಿ ಕಾಲೇಜುಗಳ ಸಂಖ್ಯೆ ಮಿಾರಿಸಿದೆ. ಮಹಿಳೆಯರ ಶಿಕ್ಷಣಕ್ಕಾಗಿಯೇ ಪ್ರತ್ಯೇಕವಾದ ಕಾಲೇಜುಗಳೂ ಇವೆ; ಅವುಗಳಲ್ಲೂ ವಿದ್ಯಾರ್ಥಿನಿಯರು ಕಿಕ್ಕಿರಿಯುತ್ತಿದ್ದಾರೆ. ಜೀವನೋಪಾಯಕ್ಕಾಗಿ ವೃತ್ತಿಗಳನ್ನು ಅವಲಂಬಿಸಿರುವ ಪುರುಷರೂ ಮಹಿಳೆಯರೂ ತಮ್ಮ ವಿದ್ಯೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಸಂಧ್ಯಾಕಾಲದ ಕಾಲೇಜುಗಳೂ ಈಗ ಹುಟ್ಟಿವೆ; ಜನಪ್ರಿಯವೂ ಆಗಿವೆ. ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೂವತ್ತು ಸಾವಿರಕ್ಕೆ ಮೇಲ್ಪಟ್ಟ ಸಂಖ್ಯೆಯ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಸುಮಾರು ಅರವತ್ತೆಂಟು ಸಾವಿರ ಮಂದಿ ಪದವೀಧರರು ಈ ಐವತ್ತು ವರ್ಷಗಳಲ್ಲಿ ಹೊರಬಿದ್ದಿದ್ದಾರೆ.

ಸ್ನಾತಕೋತ್ತರ ಬೋಧನೆ, ಸಂಶೋಧನೆ ಇವುಗಳನ್ನು ಕುರಿತು ಎರಡು ಮಾತನ್ನು ಹೇಳಬೇಕು. ಮೊದಲಿಗೆ ಮಹಾರಾಜರ ಕಾಲೇಜಿನಲ್ಲಿ ಕೆಲವು ವಿಷಯಗಳಲ್ಲಿ ಮಾತ್ರ ಎಂ.ಎ. ತರಗತಿಗಳಿದ್ದುವು; ಓದುತ್ತಿದ್ದವರ ಸಂಖ್ಯೆಯೂ ಕಡಮೆ. ಕೆಲವು ವರ್ಷಗಳಾದ ಬಳಿಕ ಸೆಂಟ್ರಲ್ ಕಾಲೇಜಿನಲ್ಲಿ ಎಂ.ಎಸ್‌ಸಿ. ತರಗತಿಗಳು ಪ್ರಾರಂಭವಾದುವು. ಇನ್ನು ಮೇಲುಮಟ್ಟದ ಡಾಕ್ಟರೇಟ್ ಪ್ರಶಸ್ತಿಗಾಗಿ ಸಂಶೋಧನೆ ನಡಸಲು, ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲು ವ್ಯವಸ್ಥಿತವಾದ ಯಾವ ಏರ್ಪಾಡೂ ಬಹುಕಾಲದವರೆಗೆ ಇರಲಿಲ್ಲ. ಆದರೆ ಕಾಲಕ್ರಮದಲ್ಲಿ ಇದು ಬದಲಾಯಿಸಿತು. ಮೈಸೂರು ನಗರದಲ್ಲಿ ಕುಕ್ಕರಹಳ್ಳಿ ಕೆರೆಯ ಪಶ್ಚಿಮದ ವಿಶಾಲೋನ್ನತ ಪ್ರದೇಶದಲ್ಲಿ ಸ್ನಾತಕೋತ್ತರ ಬೋಧನೆ ಸಂಶೋಧನೆ ಗಳಿಗೆ ಮಿಾಸಲಾದ "ಮಾನಸಗಂಗೋತ್ರಿ" ಆವಿರ್ಭವಿಸಿತು. ಅಲ್ಲಿ ಮೊದಲೇ ಇದ್ದ ರಾಜಭವನ ಜಯಲಕ್ಷ್ಮೀವಿಲಾಸದ ಜೊತೆಗೆ ಜ್ಞಾನ ವಿಜ್ಞಾನಗಳ ವಿವಿಧ ಶಾಖೆಗಳಾಗಿ ಹಲವು ಭವನಗಳು ಎದ್ದು ನಿಂತಿವೆ. ಗ್ರಂಥಾಲಯಭವನ ಕಣ್ಣನ್ನು ಸೆಳೆಯುತ್ತಿದೆ. ಗಾಂಧೀಭವನವೂ ಏರ್ಪಟ್ಟಿದೆ. ಅಧ್ಯಾಪಕರಿಗಾಗಿ ವಿದ್ಯಾರ್ಥಿಗಳಿಗಾಗಿ ವಸತಿಗಳು ಆಗಿವೆ. ಮುನ್ನೂರು ಎಕರೆಯ ವಿಸ್ತಾರದ ಈ ಹೊಸ ನಿವೇಶನದಲ್ಲಿ ಓಡಾಡುವುದೇ ಒಂದು ಆನಂದ.

ಇಲ್ಲಿ ಕೆರೆ ಅಲ್ಲಿ ಗಿರಿ; ಎಲ್ಲೆಲ್ಲು ಶಾಲೆಗಳು;
ಸುತ್ತಲೂ ಸುಳಿಯುತಿಹ ಶಿಷ್ಯವೃಂದ!

ಕುಕ್ಕರಹಳ್ಳಿಕೆರೆಯೂ ಈಗ ವಿಶ್ವವಿದ್ಯಾನಿಲಯದ ವಶಕ್ಕೆ ಬಂದುದು, ಹಳೆಯ ನಿವೇಶನವನ್ನು ಹೊಸ ನಿವೇಶನವನ್ನೂ ಒಂದುಗೂಡಿಸುವ ಸರೋವರವಾಗಿದೆ. ಮಾನಸಗಂಗೋತ್ರಿಯ ಸ್ನಾತಕೋತ್ತರ ವಿಭಾಗದಲ್ಲಿ ಸುಮಾರು ೨೩ ಶಾಖೆಗಳಿವೆ; ಸುಮಾರು ೮೦೦ ಮಂದಿ ವಿದ್ಯಾರ್ಥಿಗಳೂ ೧೫೦ ಮಂದಿ ಅಧ್ಯಾಪಕರೂ ಇದ್ದಾರೆ. ಸಂಶೋಧನೆಯಲ್ಲೇ ನಿರತರಾಗಿರುವ ಪ್ರೌಢವಿದ್ಯಾರ್ಥಿಗಳೇ ಗಣನೀಯ ಸಂಖ್ಯೆಯಲ್ಲಿ ಇದ್ದಾರೆ.

ಇಷ್ಟು ದೊಡ್ಡದಾಗಿ ಬೆಳೆದಿರುವ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಈ ಐವತ್ತು ವರ್ಷಗಳಲ್ಲಿ ಹಲವು ಮಂದಿ ವಿಖ್ಯಾತರಾದ ಪ್ರಾಧ್ಯಾಪಕರೂ ಅಧ್ಯಾಪಕರೂ ಅನೇಕ ಸಾವಿರ ಮಂದಿ ವಿದ್ಯಾರ್ಥಿಗಳಿಗೆ ತಮ್ಮ ಸತ್ವದ ಸಾರವಾದ ವಿದ್ಯೆಯನ್ನು

ನಿರ್ವಂಚನೆಯಾಗಿ ಧಾರೆಯೆರೆದು ಮೈಸೂರು ರಾಜ್ಯದ ಮೂಲೆ ಮೂಲೆಗಳಿಗೂ ಇನ್ನೂ ಹೊರಗಡೆಗೂ ಹರಸಿಕಳಿಸಿಕೊಟ್ಟಿದ್ದಾರೆ. ವಿಶ್ವವಿದ್ಯಾನಿಲಯದ ಪ್ರಾರಂಭಕಾಲದಲ್ಲಿ ಇದಕ್ಕೆ ಕೀರ್ತಿಯನ್ನು ತಂದ ಒಬ್ಬಿಬ್ಬರು ಪ್ರಾಧ್ಯಾಪಕರನ್ನಾದರೂ ಇಲ್ಲಿ ನೆನೆಯಬೇಕು. ಮಹಾರಾಜರ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿ ಉಪಾಧ್ಯಾಯನಾಗಿ ಅಲ್ಲಿಯೇ ನನ್ನ ಜೀವಿತದ ಸಾರವತ್ತಾದ ಬಹುಭಾಗವನ್ನು ಕಳೆದ ನನ್ನ ಗಮನ ಆ ಕಾಲೇಜಿನ ಮಹಾಮಹಿಮರ ಕಡೆಗೇ ಮೊದಲು ಹರಿಯುತ್ತದೆ. ಅವರಲ್ಲಿ ಇಂದು ಮೊದಲು ನೆನೆಯಬೇಕಾದವರು—ಭಾರತದ ರಾಷ್ಟ್ರಪತಿಗಳೂ ಮೈಸೂರು ನಗರದಲ್ಲಿ ನಾಳೆಯ ಸಮಾರಂಭವನ್ನು ಉದ್ಘಾಟಿಸುವವರೂ ಆದ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಅವರು. ಇವರು ಮಹಾರಾಜರ ಕಾಲೇಜಿನಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅವರ ಶಿಷ್ಯರಾಗಿದ್ದವರು—ಆ ಯೋಗ ನನಗಿರಲಿಲ್ಲ—ಅವರ ಪಾಠದ ವೈಖರಿಯನ್ನು ಈಗಲೂ ವರ್ಣಿಸುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ವ್ಯಾಸಂಗಮಾಡಿ ಬಂದ ಹೊರತು ಒಬ್ಬ ವಿದ್ವಾಂಸನಿಗೆ ಹಿರಿಮೆ ಬರುವುದಿಲ್ಲ ಎಂಬ ಭಾವನೆ ಆ ಕಾಲದಲ್ಲಿ ವಿಶೇಷವಾಗಿ ಇತ್ತು. (ಈಗಲೂ ಅದು ಇನ್ನೂ ಹರಿದಿಲ್ಲ!) ಡಾ. ರಾಧಾಕೃಷ್ಣನ್ ಅವರು ಆಗಿನ್ನೂ ಸಮುದ್ರವನ್ನು ದಾಟಿರಲಿಲ್ಲ. ತರಗತಿಯಲ್ಲಿ ವಿದ್ಯಾರ್ಥಿಯೊಬ್ಬನು ಧೈರ್ಯಮಾಡಿ, "ಸಾರ್, ನೀವು ಇಂಗ್ಲೆಂಡಿಗೆ ಹೋಗಿ ಬರುವುದಿಲ್ಲವೆ?" ಎಂದು ಕೇಳಿದನಂತೆ. "Yes. We shall go there—to teach" ("ಹೌದು. ಹೋಗುತ್ತೇವೆ–ಬೋಧಿಸುವುದಕ್ಕೆ") ಎಂದು ಅವರು ಉತ್ತರ ಕೊಟ್ಟರಂತೆ. ಆ ಮುಂದೆ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಕ್ಕೆ ಪ್ರಾಚ್ಯಧರ್ಮಗಳ ಪ್ರಾಧ್ಯಾಪಕರಾಗಿ ಹೋಗಿ, ಕೊಟ್ಟ ಮಾತನ್ನು ನಡಸಿದರು!

ಇನ್ನೊಬ್ಬ ಮಹಾವಿದ್ವಾಂಸರು—ಇವರ ಶಿಷ್ಯನಾಗುವ ಭಾಗ್ಯ ನನಗೆ ಲಭಿಸಿತ್ತು—ಸಂಸ್ಕೃತ ಮತ್ತು ಭಾರತೀಯದರ್ಶನಗಳ ಪ್ರಾಧ್ಯಾಪಕರಾಗಿದ್ದ ಆಚಾರ್ಯ ಎಂ. ಹಿರಿಯಣ್ಣ ನವರು; ತಮ್ಮ ಅಪೂರ್ವವಾದ ಗ್ರಂಥಲೇಖನಗಳಿಂದ ಉದಾತ್ತಜೀವನದಿಂದ ಲೋಕ ವಂದ್ಯರಾದವರು. ನನ್ನ ಇನ್ನೊಬ್ಬ ಗುರುಗಳು ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು. ಇವರು ಇಂಗ್ಲಿಷಿನ ಪ್ರಾಧ್ಯಾಪಕರು; ಕನ್ನಡದ ರಕ್ಷಾಮಣಿಯಾಗಿ ಕಂಗೊಳಿಸಿ, ಕನ್ನಡದ ವಿದ್ವತ್‌ಪ್ರಪಂಚದಲ್ಲಿ ಮಾತ್ರವಲ್ಲದೆ ಕನ್ನಡನಾಡಿನ ಭಾವಜೀವನದಲ್ಲೇ ಹೊಸ ಸ್ಫೂರ್ತಿಯನ್ನು ಪುನರುಜ್ಜೀವನವನ್ನೂ ತಂದವರು. ಮೈಸೂರಿನಲ್ಲಿ ಮಾತ್ರ ಏಕೆ, ಭಾರತದ ವಿಶ್ವವಿದ್ಯಾನಿಲಯಗಳಲ್ಲೇ ಪ್ರಥಮತಃ ಮನಶ್ಶಾಸ್ತ್ರಕ್ಕೆ ಸ್ವತಂತ್ರಸ್ಥಾನವನ್ನೂ ಪ್ರಾಯೋಗಿಕರೂಪವನ್ನೂ ತಂದುಕೊಟ್ಟ ಡಾ. ಎಂ.ವಿ. ಗೋಪಾಲಸ್ವಾಮಿ ಅವರೂ ಇಲ್ಲಿ ಮನನೀಯರು. ಇವರು "ಆಕಾಶವಾಣಿ", "ಶಿಶುವಿಹಾರ" ಇವುಗಳನ್ನೂ ಖಾಸಗಿ ಯಾಗಿ ಪ್ರಾರಂಭಿಸಿ ಭಾರತಕ್ಕೇ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಗಣಿತಶಾಸ್ತ್ರವನ್ನು ಊರ್ಜಿತಗೊಳಿಸಿದ ಪ್ರೊ. ಎಂ.ಟಿ. ನಾರಾಯಣ ಅಯ್ಯಂಗಾರ್, ಭೌತವಿಜ್ಞಾನದ ಪ್ರಾಧ್ಯಾಪಕರಾಗಿದ್ದು ಇಂದಿಗೂ ನಮ್ಮೊಡನೆ ಸುದೈವದಿಂದ ಇರುವ ಪ್ರೊ. ಬಿ. ವೆಂಕಟೇಶಾಚಾರ್ ಇವರನ್ನೂ ಸ್ಮರಿಸಬೇಕು. ಪಾಶ್ಚಾತ್ಯ ಪ್ರಾಧ್ಯಾಪಕರಲ್ಲಿ ಮಹಾರಾಜರ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್ ಜೆ.ಸಿ. ರಾಲೋ, ಸೆಂಟ್ರಲ್ ಕಾಲೇಜಿನ

ಭೌತಶಾಸ್ತ್ರದ ಪ್ರೊಫೆಸರ್ ಡಾ. ಇ.ಪಿ. ಮೆಟ್ಕಾಫ್ ಇವರಿಗೂ ನಮ್ಮ ಕೃತಜ್ಞತೆಗಳು ಸಲ್ಲಬೇಕು. ಸ್ಮರಣೀಯರು ಇನ್ನೂ ಹಲವು ಮಂದಿ ಇದ್ದಾರೆ; ಆದರೆ ಅವರ ಸ್ಮರಣೆಗೆ ಕಾಲಾವಕಾಶವಿಲ್ಲ.

ವಿಶ್ವವಿದ್ಯಾನಿಲಯದ ಬೋಧನಾಂಗ ಸಂಶೋಧನಾಂಗಗಳ ಜೊತೆಗೆ ಪ್ರಸಾರಾಂಗವೂ ಅಷ್ಟೇ ಮುಖ್ಯವೆಂದು ಮೈಸೂರು ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿ ವಿಶ್ರಾಂತ ಉಪಕುಲಪತಿ ಡಾ. ಕೆ.ವಿ. ಪುಟ್ಟಪ್ಪನವರು ಹೇಳುತ್ತಾ ಬಂದಿದ್ದಾರೆ. ('ಪ್ರಸಾರಾಂಗ' ಎಂದು ನಾಮಕರಣಮಾಡಿ, ಅದರ ಕಾರ್ಯಕ್ಷೇತ್ರವನ್ನು ವಿಪುಲವಾಗಿ ವಿಸ್ತರಿಸಿದವರೂ ಅವರೇ.). . . ಕಾಲೇಜುಗಳಿಗೆ ವಿದ್ಯಾರ್ಜನೆಗಾಗಿ ಬಂದವರಿಗೆ ಪಾಠಹೇಳಿ ಕಳಿಸಿಕೊಟ್ಟರೆ ಸಾಲದು; ಇಲ್ಲಿಗೆ ಬರುವ ಶಕ್ತಿಯೂ ಅನುಕೂಲತೆಯೂ ಇಲ್ಲದ ಅಸಂಖ್ಯಾತ ಮಂದಿಗೆ ಕಲಿತುಕೊಳ್ಳುವ ತಿಳಿದುಕೊಳ್ಳುವ ಆಸೆ ಬೇಕಾದಷ್ಟು ಇದೆ; ನಾವು ಸಂಗ್ರಹಿಸಿರುವ ಜ್ಞಾನವನ್ನು ಅವರ ಬಾಗಿಲಿಗೇ ಒಯ್ದು ಮುಟ್ಟಿಸಬೇಕು ಎಂಬ ಆಲೋಚನೆ ನಮ್ಮ ವಿಶ್ವವಿದ್ಯಾನಿಲಯದ ಅಧ್ಯಾಪಕರ ಮನಸ್ಸಿನಲ್ಲಿ ಅನೇಕ ವರ್ಷಗಳ ಹಿಂದೆಯೇ ಉದಿಸಿತು. ಆ ವೇಳೆಗಾಗಲೆ ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘ ಏರ್ಪಟ್ಟಿತ್ತು. ಈ ಸಂಘದವರು ಮೈಸೂರು ಬೆಂಗಳೂರು ನಗರಗಳನ್ನು ಬಿಟ್ಟು ರಾಜ್ಯದ ಬೇರೆ ಬೇರೆ ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ ಉಪನ್ಯಾಸಗಳನ್ನು ಸ್ವಯಂಪ್ರೇರಣೆಯಿಂದ ನಿಷ್ಕಾಮಮನೋವೃತ್ತಿಯಿಂದ ನಡಸಲು ಪ್ರಾರಂಭಮಾಡಿದರು. ಮೊದಲನೆ ಉಪನ್ಯಾಸ ಸಪ್ತಾಹ ನಡೆದದ್ದು ಹಾಸನದಲ್ಲಿ, ೧೯೩೩ರಲ್ಲಿ—ಮೂವತ್ತು ಮೂರು ವರ್ಷಗಳಿಗೆ ಹಿಂದೆ. ವಿಶ್ವವಿದ್ಯಾನಿಲಯದ ಉತ್ಸವಮೂರ್ತಿ ಗುಡಿಯನ್ನು ಬಿಟ್ಟು ಹೊರಗೆ ಮೆರವಣಿಗೆ ಹೊರಟಂತೆ ಕಾಣಿಸುತ್ತಿದ್ದ ಈ ಸಮಾರಂಭದ ಉತ್ಸಾಹ ಉಲ್ಲಾಸಗಳು ಈಗಲೂ ನನ್ನ ನೆನಪಿನಲ್ಲಿವೆ. ಉಪನ್ಯಾಸಗಳು ಪ್ರತಿ ಸಂಜೆಯೂ ಎರಡು ಘಂಟೆಗಳ ಕಾಲ ನಡೆಯುತ್ತಿದ್ದುವು. ಕಾವ್ಯವಾಚನ, ಸಾಹಿತ್ಯಸಮೀಕ್ಷೆ, ಇತಿಹಾಸ, ತತ್ತ್ವಶಾಸ್ತ್ರ, ವಿಜ್ಞಾನದ ವಿಚಾರಗಳು—ಹೀಗೆ ವಿಷಯವೈವಿಧ್ಯ ಬೇಕಾದಷ್ಟು ಇರುತ್ತಿತ್ತು. ಉಪನ್ಯಾಸಗಳೆಲ್ಲವೂ ಕನ್ನಡದಲ್ಲಿಯೇ ಇರುತ್ತಿದ್ದುವು. ಕಾಲೇಜುಗಳ ಅಧ್ಯಾಪಕರಲ್ಲಿ ಅನೇಕರು ಕನ್ನಡದಲ್ಲಿ ಸಾರ್ವಜನಿಕ ಭಾಷಣಗಳನ್ನು ಮಾಡಲು ಅದೇ ಮೊದಲು. ಪಾರಿಭಾಷಿಕ ಶಬ್ದಗಳನ್ನು ಹವಣಿಸಿಕೊಂಡರು; ನಿರೂಪಣೆಯ ರೀತಿಯನ್ನು ಹದಗೊಳಿಸಿಕೊಂಡರು; ಎಂಥ ಗಹನವಾದ ವಿಷಯವನ್ನಾದರೂ ಜನಕ್ಕೆ ತಿಳಿಯುವ ಹಾಗೆ ಕನ್ನಡದಲ್ಲಿ ಹೇಳುವ ಧೈರ್ಯವನ್ನು ಸಂಪಾದಿಸಿಕೊಂಡರು. ಈ ಪ್ರಯೋಗ ಎಷ್ಟರಮಟ್ಟಿಗೆ ಜನಪ್ರಿಯವಾಯಿತೆಂದರೆ ದೇಶದ ಮೂಲೆ ಮೂಲೆಗಳಿಂದಲೂ ಇಂಥ ಉಪನ್ಯಾಸಗಳ ಏರ್ಪಾಡಿಗಾಗಿ ಕೋರಿಕೆಗಳು ಬರತೊಡಗಿದುವು. ಇದರ ಯಶಸ್ಸು ದೂರದ ಆಕ್ಸ್‌ಫರ್ಡಿನ ತನಕ ಮುಟ್ಟಿ, "ಮೈಸೂರಿನ ಪ್ರಯೋಗ" ಎಂಬ ಪ್ರಶಸ್ತಿ ಕೂಡ ಇದಕ್ಕೆ ಬಂದಿತು.

ಉಪನ್ಯಾಸಗಳು ಕೇಳಿದವರ ಕಿವಿಗಳಲ್ಲಿ ಕೆಲವು ಘಂಟೆ ಝೇಂಕರಿಸುತ್ತವೆ. ಅವರ ಮನಸ್ಸುಗಳಲ್ಲಿ ನಾಲ್ಕಾರು ದಿವಸ ನರ್ತಿಸುತ್ತವೆ; ಆದರೆ ಕಾಲಕಳೆದಂತೆ ಹಾಗೆಯೇ

ಕರಗಿಹೋಗುತ್ತವೆ. ಇವುಗಳಿಗೆ ಒಂದು ಖಚಿತ ರೂಪವನ್ನು ಕೊಟ್ಟು ಹಿಡಿದು ನಿಲ್ಲಿಸಬೇಕಾದರೆ ಗ್ರಂಥ ಪ್ರಕಟನೆಯೂ ಅವಶ್ಯಕ ಎಂಬುದೂ ಬಲು ಹಿಂದೆಯೇ ಇದರ ಪ್ರವರ್ತಕರಿಗೆ ಮನದಟ್ಟಾಯಿತು. ಈ ಯೋಜನೆಗೆ ಪ್ರೋತ್ಸಾಹಕೊಟ್ಟು ಕಾರ್ಯರೂಪಕ್ಕೆ ಮೊದಲು ತಂದವರು ಆಗ ಉಪಕುಲಪತಿಗಳಾಗಿದ್ದ ಶ್ರೀ ಎನ್.ಎಸ್. ಸುಬ್ಬರಾಯರು; ಉಪನ್ಯಾಸ ಮಾಲೆ, ಪುಸ್ತಕಮಾಲೆ ಇವುಗಳ ಸಲುವಾಗಿ ಹಲವುಕಾಲ ಅವಿಶ್ರಾಂತವಾಗಿ ದುಡಿದ ಸಾಹಸಗಾರರು ಅಧ್ಯಾಪಕಸಂಘದ ಪ್ರಥಮ ಕಾರ್ಯದರ್ಶಿ ಶ್ರೀ ಜಿ. ಹನುಮಂತ ರಾಯರು. ಅಂದು ಹೊರಬಿದ್ದ ಪ್ರಚಾರ ಪುಸ್ತಕಮಾಲೆ ಇಂದು ತುಂಬುವಾಹಿನಿಯಾಗಿ ಹರಿದುಬರುತ್ತಿದೆ. ಎರಡು-ಮೂರಾಣೆಗಳ ಅತ್ಯಲ್ಪವಾದ ಬೆಲೆಯಲ್ಲಿ ಸಪ್ರಮಾಣವಾದ ಜ್ಞಾನವನ್ನು ಕಟ್ಟಿಕೊಡುವ ಈ ಕಿರು ಹೊತ್ತಿಗೆಗಳು ನೂರಾರು ಸಂಖ್ಯೆಯಲ್ಲಿ ಪ್ರಕಟವಾಗಿವೆ; ಲಕ್ಷಾಂತರ ಪ್ರತಿಗಳು ಮಾರಾಟವಾಗಿವೆ. ಈ ಮಾಲೆಯಲ್ಲದೆ, ಕನ್ನಡಗ್ರಂಥಮಾಲೆ, ಪುಟ್ಟಣ್ಣಚೆಟ್ಟರ ಪುದುವಟ್ಟಿನ ಗ್ರಂಥಮಾಲೆ, ಕನ್ನಡಪಠ್ಯಪುಸ್ತಕಮಾಲೆ, ವಿಶೇಷೋ ಉಪನ್ಯಾಸ ಪುಸ್ತಕಮಾಲೆ—ಈ ಮಾಲೆಗಳಲ್ಲೂ ಬಗೆಬಗೆಯ ವಿಷಯದ, ಬಗೆಬಗೆಯ ರೀತಿಯ ಗ್ರಂಥಗಳು ಹೊರಬಿದ್ದಿವೆ, ಹೊರಬೀಳುತ್ತಿವೆ. ಪ್ರಾಚ್ಯ ಸಂಶೋಧನಸಂಸ್ಥೆಯ ಸಂಸ್ಕೃತ ಮತ್ತು ಕನ್ನಡ ಪ್ರಕಟನೆಗಳನ್ನೂ ಇಂಗ್ಲಿಷ್-ಕನ್ನಡ ನಿಘಂಟನ್ನೂ ಇಲ್ಲಿ ಮರೆಯುವಂತಿಲ್ಲ. ವಿಶ್ವವಿದ್ಯಾನಿಲಯದ ಪ್ರಸಾರಾಂಗ ಈಗ ಮಾನಸಗಂಗೋತ್ರಿಯ ಭವ್ಯವಾದ ಜಯಲಕ್ಷ್ಮೀವಿಲಾಸದಲ್ಲಿ ನೆಲೆಗೊಂಡಿದೆ. ಇಲ್ಲಿ ಪ್ರಕಟನೆಗಳ ಸಾಲುಸಾಲುಗಳನ್ನು ನೋಡುವುದು ಕಣ್ಣಿಗೆ ಒಂದು ಹಬ್ಬ. ಭಾರತದ ಬೇರೆ ಬೇರೆ ರಾಜ್ಯಗಳಿಂದ, ಹಾಗೂ ವಿದೇಶಗಳಿಂದ ಇಲ್ಲಿಗೆ ಬಂದು ವೀಕ್ಷಿಸಿದ ಗಣ್ಯರು ವಿಶ್ವವಿದ್ಯಾನಿಲಯದ ಈ ಸಾಧನೆಯನ್ನು ತುಂಬ ಮೆಚ್ಚಿಕೊಂಡಿದ್ದಾರೆ; ಭಾರತದ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಈ ಬಗೆಯ ಪ್ರಯತ್ನ ಈ ಮಟ್ಟದಲ್ಲಿ, ಈ ವ್ಯಾಪ್ತಿಯಲ್ಲಿ ನಡೆದಿಲ್ಲ ಎಂದು ಹೊಗಳಿದ್ದಾರೆ. ಬೇಕಾದಷ್ಟು ಕೆಲಸ ಮಾಡಿದ್ದೀರಿ; ಆದರೆ ನಿಮ್ಮ ಪ್ರಸಾರಾಂಗದ ಕಾರ್ಯಕ್ಕೆ ಪ್ರಚಾರ (Propaganda) ಮಾತ್ರ ಸಾಲದು ಎಂದು ಟೀಕಿಸಿಯೂ ಇದ್ದಾರೆ.

ವಿಶ್ವವಿದ್ಯಾನಿಲಯದ ಇನ್ನೊಂದು ಪ್ರಕಾಶನಕಾರ್ಯವನ್ನು ಇಲ್ಲಿ ಎತ್ತಿ ಹೇಳಬೇಕು. 'ಪ್ರಬುದ್ಧ ಕರ್ಣಾಟಕ' ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟನೆಯಾಗಿ ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳ ಸಂಪಾದಕತ್ವದಲ್ಲಿ ೧೯೧೯ರಲ್ಲಿ ಪ್ರಾರಂಭವಾಯಿತು. ಅವರೂ ದಿವಂಗತ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರೂ 'ಪ್ರಬುದ್ಧ ಕರ್ಣಾಟಕ'ಕ್ಕಾಗಿ ಬಹುಕಾಲ, ಬಹಳವಾಗಿ ದುಡಿದರು.

೧೯೩೭ರಲ್ಲಿ ವಿಶ್ವವಿದ್ಯಾನಿಲಯವೇ ಇದನ್ನು ವಹಿಸಿಕೊಂಡು ಕನ್ನಡ ಶಾಖೆಯ ಮೇಲ್ವಿಚಾರಣೆಯಲ್ಲಿ ಇಂದಿಗೂ ನಡೆಸಿಕೊಂಡು ಬರುತ್ತಿದೆ. ಅಂದು ಉದಯೋನ್ಮುಖರಾಗಿ ಇಂದು ಸ್ವನಾಮ ವಿಖ್ಯಾತರಾಗಿರುವ ಎಷ್ಟೋಂದು ಮಂದಿ ಕವಿಗಳ, ವಿದ್ವಾಂಸರ, ವಿಮರ್ಶಕರ, ಕಥೆಗಾರರ, ಸಂಶೋಧಕರ, ವಿಜ್ಞಾನಿಗಳ, ಕನ್ನಡ ಲೇಖನಗಳು-ಪುಸ್ತಕಗಳು ಕೂಡ-'ಪ್ರಬುದ್ಧ ಕರ್ಣಾಟಕ'ದಲ್ಲಿ ಬೆಳಕನ್ನು ಕಂಡಿವೆ! ತನ್ನ ಬರಹ 'ಪ್ರಬುದ್ಧ

ಕರ್ಣಾಟಕ'ದಲ್ಲಿ ಅಚ್ಚಾದರೆ ಅದೊಂದು ಪದವಿಯನ್ನು ಗಳಿಸಿದಂತೆ ಎಂಬ ಭಾವನೆ ತರುಣ ಲೇಖಕರಲ್ಲಿ ಇದ್ದ ಕಾಲವೂ ಉಂಟು. ಕನ್ನಡದ ಸಾಹಿತ್ಯ ಸಂಪತ್ತಿಗಾಗಿ 'ಪ್ರಬುದ್ಧ ಕರ್ಣಾಟಕ' ಮಾಡಿರುವ ಸೇವೆ ಅಷ್ಟಿಷ್ಟಲ್ಲ. ಅದರ ಸುವರ್ಣ ಮಹೋತ್ಸವವೂ ಶೀಘ್ರದಲ್ಲೇ ನೆರವೇರಬೇಕಾಗಿದೆ.

ದೇಶದ ವಿದ್ಯಾಪ್ರಗತಿಗಾಗಿ, ಜ್ಞಾನದ ಸಂವರ್ಧನ ಪ್ರಸಾರಗಳಿಗಾಗಿ ನಮ್ಮ ವಿಶ್ವವಿದ್ಯಾನಿಲಯ ತನ್ನ ಜನ್ಮದಿಂದಿಲೂ ದುಡಿಯುತ್ತಾ ಬಂದಿದೆ. ಇದರ ಸಂಸ್ಥಾಪಕರಾದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ದೇಶಭಾಷೆಯಾದ ಕನ್ನಡಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂಬ ವಿಶೇಷ ಕರ್ತವ್ಯವನ್ನು ಇದಕ್ಕೆ ವಿಧಿಸಿದ್ದರು. ಅದರ ಪಾಲನೆಯೂ ಶ್ರದ್ಧೆಯಿಂದ ನಡೆದಿದೆ. ಆದರೆ ಒಂದು ಕೊರತೆಯನ್ನು ಮಾತ್ರ ಈಗ ಗಮನಿಸದೆ ಬಿಡುವಂತಿಲ್ಲ. ಕನ್ನಡದ ಮಕ್ಕಳು ಕನ್ನಡದ ಮೂಲಕ ಅತ್ಯುನ್ನತ ಮಟ್ಟದ ವಿದ್ಯೆಯನ್ನು ಕಲಿಯುವಂತೆ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಮಾಧ್ಯಮದ ವ್ಯವಸ್ಥೆ ಆಗಬೇಕೆಂಬ ಕಣಸು ಇನ್ನೂ ಕನಸಾಗಿಯೇ ಉಳಿದಿದೆ. ಇದು ಬೇಗನೆ ದೃಢವಾಗಿ ಧೈರ್ಯವಾಗಿ ವ್ಯಾಪಕವಾಗಿ ಕಾರ್ಯರಂಗಕ್ಕೆ ಬರಲಿ ಎಂಬುದೇ ನನ್ನಂಥ ಹಲವರ ಆಸೆ. "ನ ಹಿ ಜ್ಞಾನೇನ ಸದೃಶಂ" ಎಂಬುದು ನಮ್ಮ ವಿಶ್ವವಿದ್ಯಾನಿಲಯದ ಧ್ಯೇಯವಾಕ್ಯ. ಪವಿತ್ರವಾದ ಜ್ಞಾನ ತನ್ನ ನುಡಿಯ ಮೂಲಕವೇ ದೊರೆತರೆ ಜನ ಬದುಕುತ್ತದೆ; ಜ್ಞಾನವೂ ಊರ್ಜಿತವಾಗುತ್ತದೆ.

●

ನಂದಾದೀವಿಗೆ

ಗಾಂಧೀಜಿಯನ್ನು ಕುರಿತು ಮಾತನಾಡುವವರೆಲ್ಲ ಅವರಿಗೆ ಜ್ಯೋತಿಯ ಹೋಲಿಕೆಯನ್ನು ತಪ್ಪದೆ ಕೊಟ್ಟಿದ್ದಾರೆ. ಇದು ಬರಿಯ ಸಂಪ್ರದಾಯದ ಉಪಮೆಯಲ್ಲ. ಎರಡು ವರ್ಷದ ಕೆಳಗೆ [೧೯೪೬ ರಲ್ಲಿ], ಮದರಾಸಿನಲ್ಲಿ ಅವರ ದರ್ಶನಮಾಡುವ ಭಾಗ್ಯವನ್ನು ಪಡೆದಾಗ ಈ ಹೋಲಿಕೆಯ ಔಚಿತ್ಯ ಚೆನ್ನಾಗಿ ಮನವರಿಕೆಯಾಯಿತು. ಅಂದಿನ ಅಪರಾಹ್ಣ ನಾಲ್ಕು ಘಂಟೆಗೆ ಗಾಂಧಿಯವರು ದಕ್ಷಿಣ ಭಾರತದ ಸಾಹಿತಿಗಳ ಮತ್ತು ಕಲಾವಿದರ ಗೋಷ್ಠಿಗೆ ಭೇಟಿಕೊಡುವರೆಂದು ಗೊತ್ತಾಗಿತ್ತು. ಸಮಯ ಒದಗಿತ್ತು. ಬಿಳುಬಿಳುಪಿನ ಖಾದಿಯ ಪಂಚೆಯನ್ನು ಮೊಳಕಾಲವರೆಗೆ ಬಿಗಿದುಟ್ಟು ಅದೇ ಬಗೆಯ ಉತ್ತರೀಯವನ್ನು ಭುಜದ ಮೇಲೆ ಅಳವಡಿಸಿಕೊಂಡು ಗಾಂಧೀಜೀ ದೃಷ್ಟಿಪಥದಲ್ಲಿ ಹೊಳೆದರು. ಬೆಳಗಿದ ತಾಮ್ರದ ತಗಡಿನಂತೆ ಅವರ ದೇಹ. ಚಿತ್ರಗಳಲ್ಲಿ ಮಾಸಲುಗೆಂಪಿನ ಮೈಬಣ್ಣವನ್ನು ನೋಡಿ ಅವರು ಹಾಗೆಯೇ ಇರಬಹುದೆಂದು ಭಾವಿಸಿಕೊಂಡಿದ್ದ ನಮಗೆ ಮನಸ್ಸಿನಲ್ಲಿ ಮೊದಲು ಉದಿಸಿದ ಭಾವ ಬೆರಗು : ಈ ತೇಜಶ್ಶಲಾಕೆಯ ಸಂದರ್ಶನಕ್ಕೆ ನಾವು ಸಿದ್ಧರಾಗಿರಲಿಲ್ಲ! ಉಡುಪಿನ ಧವಳತೆ, ದೇಹದ ದೀಪ್ತಾರುಣ ಕಾಂತಿ, ಮುಖದ ಅಕಳಂಕ ಮಂದಹಾಸ—ಎಂಥ ಸಾಮರಸ್ಯ ಅದು!

"ತಾಪಸವೃತ್ತಿಯಲಿ
ಘನಿಸಿರಲು ತೇಜ
ದೀಪವೋ ದೇಹವೋ
ಎನಿಸುತಿಹ ಒಡಲು"

ಎಂದು ಈ ಮಹಾತ್ಮನನ್ನು ಕುರಿತು 'ಶ್ರೀನಿವಾಸ'ರು ಹಾಡಿರುವುದು ಅತಿಶಯೋಕ್ತಿಯಲ್ಲ ವೆಂದು ಮನಸ್ಸಿಗೆ ಸ್ಪಷ್ಟವಾಯಿತು. ನಡೆದು ಬರುತ್ತಿರುವ ದೀವಿಗೆಯಂತೆ ಗಾಂಧೀಜೀ ಕಾಣಿಸಿದರು. ಅವರು ವೇದಿಕೆಯನ್ನೇರಿ ನಿಂತಾಗ, ಅವರ ನಡುವಿನಿಂದ ಇಳಿಬಿದ್ದಿದ್ದ ಗಡಿಯಾರ ಒಂದು ನಿಮಿಷವೂ ಹೆಚ್ಚು ಕಡಿಮೆಯಿಲ್ಲದೆ ನಾಲ್ಕು ಘಂಟೆಯನ್ನು ತೋರಿಸುತ್ತಿತ್ತು.

ಅಂದಿನಿಂದೀಚಿನ ಅಲ್ಪಾವಧಿಯಲ್ಲಿ ಎಷ್ಟೊಂದು ಆಗಿ ಹೋಯಿತು : ಭಾರತದ ಸ್ವಾತಂತ್ರ್ಯ—ಬಿಸಿಲುಗುದುರೆಯಂತೆ ಮುಂದುಮುಂದಕ್ಕೆ ಓಡುತ್ತಿದ್ದ ಸ್ವಾತಂತ್ರ್ಯ—ಕರಗತ ವಾಯಿತು. ನೆನೆಯಲು ಮನಸ್ಸು ಹಿಂಜರಿಯುತ್ತಿದ್ದ ಭಾರತದ ವಿಭಾಗವೂ ಅದರ ಜೊತೆಗೇ ಒದಗಿತು. ಹೊಸ ಪರಿಸ್ಥಿತಿಯನ್ನು ಒಗ್ಗಿಸಿಕೊಳ್ಳುವುದರೊಳಗೆ ನಂಬಲಾಗದ ಬರಸಿಡಿಲೆರಗಿ "ರಾಷ್ಟ್ರದ ತಂದೆ"ಯನ್ನೇ ಕೊಂದುಬಿಟ್ಟಿತು; ನವಭಾರತ ತಬ್ಬಲಿಯಾಯಿತು!

ಗಾಂಧೀಜಿಯನ್ನು ಕಳೆದುಕೊಂಡ ಮಹಾದುಃಖದಲ್ಲಿ ಚಕ್ರವರ್ತಿ ರಾಜ ಗೋಪಾಲಾಚಾರ್ಯರು ತಮಿಳುನಾಡಿನ ಬಾಂಧವರಿಗೆ ಕಳಿಸಿದ ಸಂದೇಶದಲ್ಲಿ ಮೊದಲನೆಯ ವಾಕ್ಯ ಹೀಗಿದೆ : "ನಂದಾದೀವಿಗೆ ನಂದಿಹೋಯಿತು!" ಎಷ್ಟೊಂದು ಅರ್ಥಗರ್ಭಿತವಾದ ಉಕ್ತಿ! ದೇವರ ಸನ್ನಿಧಿಯಲ್ಲಿ ಶುಭದ ಹಾರೈಕೆಯಿಂದ ಮುಡುಪು ಕಟ್ಟಿ ಹೊತ್ತಿಸಿಟ್ಟು ಯಾವ ಸಂದರ್ಭದಲ್ಲೂ ಆರದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುವ ನಂದದ ದೀವಿಗೆ—ನಂದಾದೀವಿಗೆ. ಗಾಂಧೀಜೀ ನಿಜವಾಗಿ ನಮ್ಮ ರಾಷ್ಟ್ರದ ನಂದಾದೀವಿಗೆ ಯಾಗಿದ್ದರು. ಭಗವಂತನ ಕೃಪೆ ನಮ್ಮ ಮೇಲೆ ನಿತ್ಯವಾಗಿ ಉಂಟೆಂಬುದಕ್ಕೆ ನಿದರ್ಶನ ವಾಗಿದ್ದರು. ನಮ್ಮ ನಿರಾಶೆಯ ಕತ್ತಲೆಯನ್ನು ತೊಲಗಿಸಿ ಧೈರ್ಯವನ್ನು ಬೀರುವ, ಸತ್ಯವನ್ನು ಬೆಳಗುವ ಜ್ಯೋತಿಯಾಗಿದ್ದರು. ಇಂಥ ದೀಪ—ಎಂದಿಗೂ ನಂದಬಾರದ ದೀಪ— ಇದೇ ಜನವರಿ ೩೦ನೆಯ ತಾರೀಖಿನಂದು ಥಟ್ಟನೆ ನಂದಿಹೋಯಿತು.

ದೀಪ ತಾನಾಗಿ ನಂದಲಿಲ್ಲ! ಗಾಂಧಿಯವರು ಇನ್ನೂ ಹಲವು ಕಾಲ ಬದುಕಿ ಲೋಕಹಿತಕ್ಕಾಗಿ ದುಡಿಯುವ ಉದ್ದೇಶವನ್ನು ಇಟ್ಟುಕೊಂಡಿದ್ದರು. ಆದರೆ ಅವರ ರಕ್ಷೆ ನಮ್ಮ ಜನರಲ್ಲೇ ಕೆಲವರಿಗೆ ಬೇಡವಾಯಿತು. ಅವರು ಬೀರುತ್ತಿದ್ದ ಪ್ರೇಮದ ಬೆಳಕು ದ್ವೇಷದಿಂದ ಬೇನೆಗೊಂಡಿದ್ದ ಇವರ ಕಣ್ಣನ್ನು ಕುಕ್ಕಿತು. ಕೇಳುವವರಿಗೆ ಇಲ್ಲದಿರಲಿ, ಊರ್ಧ್ವಬಾಹುವಾಗಿ ನಿಂತು ಜನತೆಯ ತಪ್ಪುಗಳನ್ನು ಖಂಡಿಸಿ ಸತ್ಯವನ್ನು ಸಾರುತ್ತಿದ್ದ ಅವರ ಉದಾತ್ತ ವಾಣಿಯನ್ನು ಸಹಿಸುವುದು ಇವರಿಗೆ ಅಶಕ್ಯವಾಯಿತು. ನಂದಾದೀವಿಗೆಯನ್ನು ನಮ್ಮ ಜನರೇ ನಂದಿಸಿಬಿಟ್ಟರು, ಅಂತರಾತ್ಮನ ವಾಣಿಯನ್ನು ಉಡುಗಿಸಿಬಿಟ್ಟರು, ಕರ್ಮಸಾಕ್ಷಿಯನ್ನು ಕೊಲೆಮಾಡಿಬಿಟ್ಟರು. ಅಹಿಂಸೆಯ ಅವತಾರ ಮೂರ್ತಿ ಹಿಂಸೆಗೆ ಬಲಿಯಾಗಿ ದೇಹವೊಪ್ಪಿಸಬೇಕಾಯಿತು. ಹಿಂದೂಧರ್ಮದ ಐಕ್ಯೈಕ ರಕ್ಷಾಮಣಿ ಹಿಂದುವೊಬ್ಬನ ಗುಂಡಿನೇಟಿಗೆ ಆಹುತಿಯಾಗಬೇಕಾಯಿತು. ಅನಿರೀಕ್ಷಿತ ದುರಂತವಿಧಿ!

ಎಂಥ ರೀತಿಯಲ್ಲಿ ಅವರ ಮರಣ! ಗಾಂಧೀಜೀ ಪ್ರಾರ್ಥನಾಸಭೆಯನ್ನು ಹೊಕ್ಕು ಇನ್ನೇನು ವೇದಿಕೆಯನ್ನೇರುವ ಸಮಯ. ಮೊದಲೇ ಪರಿಶುದ್ಧವಾದ ಅವರ ಹೃದಯ ಈಗಲಂತೂ ಪರಿಶುದ್ಧತಮವಾಗಿದೆ. ಅವರ ಬಳಿಗೆ ಬಂದು ನಮಸ್ಕರಿಸುವ ಭಕ್ತನಂತೆ ಬಾಗಿದವನು ಕೊಲೆಗಾರನಾಗಿ ಎದ್ದು ಒಂದಾದ ಮೇಲೊಂದು ಗುಂಡನ್ನು ಹಾರಿಸಿದ್ದಾನೆ. ಗಾಂಧೀಜೀ ಬೆದರಿದರೆ, ಬೆನ್ನಿತ್ತರೆ? ತಮ್ಮ ನುಡಿಯಂತೆ ನಡೆದು ಮೃತ್ಯುವನ್ನು ಸ್ವಾಗತಿಸಿದರು. ಮೂರು ಗುಂಡುಗಳೂ ಈ ಧೀರ ಸತ್ಯಾಗ್ರಹಿಯ ಎದೆಯನ್ನೇ ತೂರಿದುವು; ಕೊನೆಯ ಕ್ಷಣದಲ್ಲಿ ನಾಲಗೆಯಿಂದ ತಾರಕಮಂತ್ರವಾದ ರಾಮನಾಮವೇ ಹೊರಟಿತು. ಪ್ರಾಣವಾಯು ಹಾರಿಹೋದ ಮುಖದಲ್ಲಿ ಎಂದೆಂದಿನ ಕ್ಷಮೆ ಶಾಂತಿಗಳೇ ನೆಲಸಿದ್ದುವು. "ಶರಣರ ಗುಟ್ಟನ್ನು ಮರಣದಲ್ಲಿ ನೋಡು!"

ಗಾಂಧೀಜೀ ಕೊಲೆಗಾರನ ಕೈಯಲ್ಲಿ ಮಡಿಯುವುದಕ್ಕಿಂತ, ಕೆಲವು ದಿನಗಳ ಮುಂಚೆ ಹಿಡಿದಿದ್ದ ಉಪವಾಸವ್ರತದಲ್ಲೇ ದೇಹವನ್ನು ತೊರೆದಿದ್ದರೆ ಉತ್ತಮವಾಗುತ್ತಿತ್ತೋ ಏನೋ ಎಂದು ಒಬ್ಬಿಬ್ಬರು ಹಿರಿಯರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಗಾಂಧೀಜೀಯ ಜೀವನಕ್ಕೆ ಈ ಕೊಲೆಯ ಕೊನೆಯೇ ಅಚಿಂತ್ಯವಾದರೂ ಭೀಕರವಾದರೂ ಸಹಜ ಶಿಖರವೆಂದು ತೋರುತ್ತದೆ. ಈ ಮಹಾಪುರುಷನ ಜೀವನಚರಿತೆ ಈ ಉಪಸಂಹಾರದಿಂದ ಎಲ್ಲ ನಿರೀಕ್ಷೆಗೂ ಮೀರಿ ಸರ್ವಾಂಗಪೂರ್ಣವಾದ ಕಲಾಕೃತಿಯಾಯಿತು. ಅವರು ಜೀವಮಾನದ ಉದ್ದಕ್ಕೂ ಯಾವ ಅಹಿಂಸಾತತ್ತ್ವವನ್ನು ಎತ್ತಿ ಹಿಡಿದರೋ ಯಾವ ವಿಶ್ವಪ್ರೇಮವನ್ನು ಸಾರಿದರೋ ಅದರ ಪರಾಕಾಷ್ಠೆಯನ್ನು ನಿದರ್ಶಿಸಿದ್ದರಿಂದಲ್ಲವೆ, ಹಿಂಸೆಯ ಉಪಾಸಕನೊಬ್ಬರು ಅವರ ಉಸಿರನ್ನು ಉಡುಗಿಸಿದ್ದು. ಸಂಕುಚಿತ ಹೃದಯದವರಿಗೆ ತಮ್ಮ ಬೋಧನೆ ರುಚಿಸುತ್ತಿಲ್ಲವೆಂದು ಗಾಂಧೀಜೀಗೆ ತಿಳಿದಿತ್ತು. ಅವರ ರೋಷ ಕೆರಳಿ, ತಮ್ಮ ಮೇಲೆ ಕೈಯೆತ್ತುವುದಕ್ಕೂ ಅವರು ಹಿಂಜರಿಯದಿರಬಹುದೆಂದು ಕೆಲವೇ ದಿನಗಳ ಕೆಳಗೆ ಸಿಡಿ ಮದ್ದಿನ ಪ್ರಕರಣದಿಂದ ಸೂಚನೆಯೂ ಬಂದಿತ್ತು. ಆದರೆ ಪೋಲಿಸಿನವರ ಕಾವಲಿನಲ್ಲಿ ದೇಹವನ್ನು ಸುರಕ್ಷಿತವಾಗಿರಿಸಲು ಗಾಂಧೀಜೀ ನಿರಾಕರಿಸಿದರು. ಪ್ರಾರ್ಥನಾಸಭೆಗೆ ಬರುವವರನ್ನು ಶೋಧಿಸಿ ಒಳಕ್ಕೆ ಬಿಡಬೇಕೆಂಬ ಸಲಹೆಯನ್ನು ಸಂಪೂರ್ಣವಾಗಿ ನಿಷೇಧಿಸಿದರು. ಆಪ್ತರ ಒತ್ತಾಯಕ್ಕೇನಾದರೂ ಮನಗೊಟ್ಟು ಅವರು ಅದಕ್ಕೆ ಸಮ್ಮತಿಸಿದ್ದರೆ ಅದುವರೆಗೆ ಅವರು ಬಾಳಿದ ಬಾಳೆಲ್ಲ ಹುಸಿಯಾಗಿಬಿಡುತ್ತಿತ್ತು. ದೈವಸಂಕಲ್ಪದಲ್ಲಿ ಅಚಲವಾದ ನಂಬಿಕೆಯನ್ನಿಟ್ಟು ತಮ್ಮ ಎಂದಿನ ಮಾರ್ಗದಲ್ಲಿ ನಿರ್ಭಯವಾಗಿ ಮುಂದುವರಿದರು. ಪ್ರೇಮಪ್ರತಿಷ್ಠಾಪನೆಯ ಮಹಾಯಜ್ಞದಲ್ಲಿ ತಮ್ಮ ಅಮೂಲ್ಯ ಜೀವವನ್ನು ಪೂರ್ಣಾಹುತಿಯಾಗಿ ಸಲ್ಲಿಸಿಬಿಟ್ಟರು.

ಗಾಂಧೀಜೀ ಮೃತ್ಯುವಶವಾಗಲು ಎಷ್ಟೊಂದು ಸನ್ನಿವೇಶಗಳು ಹಿಂದೆಲ್ಲ ಒದಗಿದ್ದುವು! ಅವರು ಕೈಕೊಂಡ ಅನೇಕ ಉಪವಾಸಗಳಲ್ಲಿ ಯಾವುದಾದರೂ ಒಂದು ಅವರನ್ನು ಕೊಂಡೊಯ್ಯಬಹುದಾಗಿತ್ತು. ಆದರೆ ಆಗೆಲ್ಲ ಅನೇಕ "ಪವಾಡ"ಗಳೇ ನಡೆದು, ಅವರ ಉದ್ದೇಶಗಳು ಕೈಗೂಡಿ, ಜೀವ ಉಳಿಯಿತು. ಗಾಂಧೀಜೀ ಯಾರನ್ನೂ ದ್ವೇಷಿಸದಿದ್ದರೂ,

ಆ ದೃಷ್ಟಿಯಿಂದ ಅವರು "ಅಜಾತಶತ್ರು"ವೇ ಆಗಿದ್ದರೂ, ಅವರನ್ನು ಕುರಿತು ಹಗೆ ತಾಳಿದವರು ಹಿಂದೆಯೇ ಇದ್ದರು, ಈ ಗಾಂಧಿಯಿಂದಲೇ ತಮ್ಮವರ ಸರ್ವನಾಶವೆಂದು ನಂಬಿದವರು ಇದ್ದರು. ಆದರೆ ಯಾರೊಬ್ಬರೂ ಗಾಂಧಿಯವರ ಮೇಲೆ ಕೈ ಮಾಡಲಿಲ್ಲ. ಭಾರತ ವಿಭಜನೆಗೆ ಮುಂಚೆ ನವಖಲಿಯಲ್ಲಿ ಅನಾಥಬಂಧುವಾಗಿ ಒಬ್ಬರೇ ಹಳ್ಳಿಯಿಂದ ಹಳ್ಳಿಗೆ ಗದ್ದೆಯ ಬದುಗಳ ಮೇಲೆ ಸಂಚರಿಸುತ್ತಿದ್ದಾಗ ಅಪ್ರಯಾಸವಾಗಿ ಯಾರಾದರೊಬ್ಬರು ಅವರನ್ನು ತೀರಿಸಿಬಿಡಬಹುದಾಗಿತ್ತು. ಆದರೆ ಗಾಂಧೀಜೀ ಅಲ್ಲಿಂದ ಕೃತಕೃತ್ಯರಾಗಿ ಹಿಂದಿರುಗಿದರು. ಸ್ವತಂತ್ರ ಭಾರತದ ರಾಜಧಾನಿಯಲ್ಲಿ ರಾಷ್ಟ್ರನಾಯಕರ ರಕ್ಷಣೆಯಲ್ಲಿ ಅವರಿರುವಾಗ, ಹಿಂದೂ ಧರ್ಮದ ಸರ್ವಸಹಿಷ್ಣುತೆಯನ್ನು ಅನುಷ್ಠಾನಕ್ಕೆ ತನ್ನಿರೆಂದು ಅವರು ತಮ್ಮ ಜನರಿಗೆ ಮೊರೆಯಿಟ್ಟು ಅದರ ಸಾಧನೆಗಾಗಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟ ವೇಳೆಯಲ್ಲಿ, ಅವರ ಹೃದಯರಕ್ತವನ್ನು ಸುರಿಸಿ ತನ್ನ ಕೈಯನ್ನೂ ಧರ್ಮವನ್ನೂ ಕಲಂಕಗೊಳಿಸುವ ಅಪೂರ್ವಯೋಗ "ಹಿಂದು"ವೊಬ್ಬನಿಗೆ ಮಿಾಸಲಾಗಿತ್ತು! ವಿಧಿಯ ಉದ್ದೇಶವೇ ಹೀಗಿತ್ತೋ ಏನೋ!

ಗಾಂಧಿಯವರನ್ನು ನಿಜವಾಗಿ ಯಾರು ಕೊಂದವರು? ಅವರ ಮೇಲೆ ಗುಂಡುಹಾರಿಸಿ ಕೆಡಹಿದವನು ಒಂದು ನಿಮಿತ್ತ ಮಾತ್ರ. ಈ ಕೊಲೆಯ ಸನ್ನಾಹ ನಿಜವಾಗಿ ವರ್ಷಾಂತರದ ಹಿಂದೆಯೇ ಮೊದಲಾಯಿತು. ಒಂದಿಗೆ ಹುಟ್ಟಿ ಒಟ್ಟಿಗೆ ಬೆಳೆದು ಒಡಗೂಡಿ ಬಾಳತಕ್ಕವರ ಮನಸ್ಸುಗಳನ್ನು ದ್ವೇಷದ ಉದ್ಗಾರವನ್ನು ಚೀರಿಚೀರಿ ಕೆಡಿಸಿ, ನಾಡನ್ನು ಒಡೆದು, ಪೈಶಾಚಿಕಭಾವಗಳು ಇತ್ತಂಡದ ಕೋಟ್ಯಂತರ ಹೃದಯಗಳಲ್ಲಿ ಉನ್ಮತ್ತನರ್ತನ ಮಾಡುವಂತೆ ಯಾರೂ ಯಾರು ಕೆರಳಿಸಿದರೋ ಅವರಿಗೆಲ್ಲ ಈ ಕೊಲೆಯ ಹೊಣೆಗಾರಿಕೆಯಲ್ಲಿ ಪಾಲು ಇದ್ದೇ ಇದೆ. ಈ ಅಭಿನವ ಮಹಾಭಾರತ ಸಂಗ್ರಾಮದಲ್ಲಿ ಶತಸಹಸ್ರ ಮಂದಿ ನಿರಪರಾಧಿಗಳ ರಕ್ತ ನೆಲವನ್ನು ತೋಯಿಸಿತು. ಲಕ್ಷೋಪಲಕ್ಷ ಮಂದಿ ನಿರಪರಾಧಿಗಳು ನೆಲೆಗೆಟ್ಟು ನಿರ್ಗತಿಕರಾಗಿ ಅಲೆಯುವಂತಾಯಿತು. ಈ ಎಲ್ಲ ಕೊಲೆ ಎಲ್ಲ ಹಿಂಸೆ ಎಲ್ಲ ಅನಾಹುತದ ಚರಮತರ್ಪಣವಾಗಿ ಅಹಿಂಸೆಯ ಪರಮಾಚಾರ್ಯನ ಜೀವರಕ್ತವೂ ಸುರಿದುಬಿಟ್ಟಿತು!

ದ್ವೇಷ–ಪ್ರೇಮ: ಈ ಉತ್ಕಟಭಾವಗಳಲ್ಲಿ ಯಾವುದು ಮೇಲುಗೈ? ಮಾನವ ಕುಲದ ಹೃದಯಾಂಗಣದಲ್ಲಿ ಇವೆರಡಕ್ಕೂ ಅನಾದಿಯಾದ ಹೋರಾಟ ನಡೆಯುತ್ತಿದೆ. ಇಳಿವಯಸ್ಸಿನಲ್ಲಿ ಪರಿಭಾವಿಸಿದಾಗ ನಿರಂತರವೆಂದೇ ತೋರುವ ಹೋರಾಟ ನಡೆಯುತ್ತಿದೆ. ನಾಗರಿಕತೆ ಪ್ರಬಲಿಸಿ, ಜೀವನದಲ್ಲಿ ಸಂಯಮ ಅವಶ್ಯವೆಂದು ಧರ್ಮಾಚಾರ್ಯರ ಮಾರ್ಗದರ್ಶನದಿಂದ ಅರಿವು ಹುಟ್ಟಿದ ಬಳಿಕ, ದ್ವೇಷ ತಗ್ಗಿತೇನೋ ಹತೋಟಿಗೆ ಬಂದಿತೇನೋ ಎಂಬಂತೆ ಕೆಲಕಾಲ ತೋರುತ್ತಿತ್ತು. ಆದರೆ ಅದು ಬರಿಯ ತೋರಿಕೆಯಾಯಿತು. ಮೊದಲನೆಯ ಮಹಾಯುದ್ಧದ ಕೊನೆಯಲ್ಲಿ ವಿಜಯಶಾಲಿಗಳ ಸ್ವಾರ್ಥ ಹೆಡೆಯೆತ್ತಿ ನಲಿದಾಗ ಸೋತ ಜನಾಂಗಗಳ ಹೃದಯದಲ್ಲಿ ದ್ವೇಷರೋಷಗಳ ಬೀಜವೂ ಚೆನ್ನಾಗಿ ಪುಷ್ಟಿಗೊಂಡಿತು. ಸಾಂಕ್ರಾಮಿಕರೋಗದ ವಿಷಕ್ರಿಮಿಗಳು ಎಲ್ಲೆಲ್ಲೂ

ಇರುತ್ತವೆ; ಸಾಮಾನ್ಯವಾಗಿ ಅನುಲ್ಬಣಾವಸ್ಥೆಯಲ್ಲಿದ್ದು ಹದವಾದ ಸನ್ನಿವೇಶವನ್ನು ಎದುರು ನೋಡುತ್ತಿರುತ್ತವೆ. ಅವಕಾಶ ತೆರೆದಾಗ ಬಲುಬೇಗ ಉಬ್ಬಿ ಸ್ಥಳದಿಂದ ಸ್ಥಳಕ್ಕೆ ವಾಯುವೇಗದಿಂದ ಹಬ್ಬಿ ಪ್ರಬಲ ಕ್ಷೋಭೆಗೆ ಮೊದಲುಮಾಡುತ್ತವೆ. ವಿಶೇಷಸಂದರ್ಭಗಳಲ್ಲಿ ದೇಶದಿಂದ ದೇಶಕ್ಕೂ ದಾಟಿಹೋಗಿ ಅಖಿಲ ಭೂಮಂಡಲವನ್ನೇ ಸುತ್ತುಗಟ್ಟಿ ಜನಾಂಗಗಳನ್ನೇ ನುಂಗಿಬಿಡುತ್ತವೆ. ಮೊದಲನೆಯ ಮಹಾಯುದ್ಧದ ಕೊನೆಯಲ್ಲಿ ಇನ್‌ಫ್ಲೂಯೆನ್ಸ ಹೀಗೆ ವಿಶ್ವಗ್ರಾಸಿಯಾಗಿ ನಿಮಿರಿ ನಿಂತಿತು. ಆದರೆ ಅದಕ್ಕಿಂತಲೂ ಘೋರವಾದ ಸಂಗತಿಯೇನೆಂದರೆ ಆ ಯುದ್ಧದ ಪ್ರತ್ಯಕ್ಷ ಪರಿಣಾಮವಾಗಿ ದ್ವೇಷಾಸಹನೆಗಳ ವಿಷಬೀಜಕ್ಕೂ ಹದವಾದ ನೆಲ ಸಿಕ್ಕಿತು. ಅಲ್ಪಕಾಲದಲ್ಲಿಯೇ ಮೊಳಕೆ ಬಿಟ್ಟು ಎಲೆಯಿಕ್ಕಿ ಗಿಡವೆದ್ದು ಕವಲೊಡೆದು ಹೆಮ್ಮರವಾಗಿ ಈ ದ್ವೇಷನ್ಯಗ್ರೋಧವು ದೇಶದಿಂದ ದೇಶಕ್ಕೆ ಖಂಡದಿಂದ ಖಂಡಕ್ಕೆ ದಾಂಗುಡಿಯನ್ನು ಬೀಸಿತು, ಬಿಳಿಲುಗಳನ್ನು ಬಿಟ್ಟು ದಿಗಂತದ ವರೆಗೂ ಹಬ್ಬಿ ನೆಲೆಯೂರಿನಿಂತಿತು. ಹಿಂಸೆಯ ನೆರಳನ್ನು ವಿಶ್ವಕ್ಕೇ ಕವಿಸಿತು. ಇದರ ಮಹಾಫಲವೇ ಎರಡನೆಯ ಮಹಾಯುದ್ಧ. ಈ ಮೂಲವೃಕ್ಷದ ಪ್ರತೀಕವೇ ಹಿಟ್ಲರ್. ಹಿಂಸೆಯ, ದ್ವೇಷದ, ಅಸಹಿಷ್ಣುತೆಯ ಪ್ರತಿನಿಧಿಯಾಗಿ ಈ ಸಂಕ್ರಾಂತಿ ಪುರುಷನು ಕಾಣಿಸಿಕೊಂಡನು. ದೇಶವಿದೇಶಗಳಲ್ಲಿ ಅವನ ದಾಳಿಗೆ ತಲೆಬಾಗಿದವರು ಎಷ್ಟು ಮಂದಿ, ಅವನ ಆದರ್ಶದಿಂದ ಪಾಠ ಕಲಿತು ತಮ್ಮ ಶಕ್ತಿಗೆ ಅನುಗುಣವಾಗಿ ಅನುಸರಿಸಿದವರು ಎಷ್ಟು ಮಂದಿ! ಭರತಭೂಮಿಯಲ್ಲೂ ಈತನಿಗೆ ಶಿಷ್ಯರು ಒದಗಿದರು; ದ್ವೇಷ ಮಹಾಮಂತ್ರವನ್ನು ಶ್ರದ್ಧೆಯಿಂದ ಪುರಶ್ಚರಣೆ ಮಾಡಿದರು. ಹಿಟ್ಲರನ ಮಹಾಪತನವನ್ನು ನೋಡಿದರೂ ಕೂಡ ಇದರ ವಿಫಲತೆ ಅವರಿಗೆ ಗೋಚರವಾಗಲಿಲ್ಲ.

"ಕರ್ಮಮಿಾ ಪರಿ ಮಱೆಗೆ ಮಱೆ ಇಕ್ಕುತಿರ್ಕುಂ
ಕ್ಷಮೆಯಿಂದೆ ಸಮೆಯದಿರೆ ಮಱುಕೊಳಿಸುತಿರ್ಕುಂ"

ಎಂಬ ಶಾಶ್ವತ ತತ್ತ್ವ ಅವರಿಗೆ ಅರಿವಾಗಲಿಲ್ಲ. ದ್ವೇಷಕ್ಕೆ ದ್ವೇಷವೇ ಪ್ರತೀಕಾರವಾಯಿತು. ಕೊಲೆಗೆ ಕೊಲೆ, ಹೊಲೆಗೆ ಹೊಲೆ ಎದುರಾಳಾಗಿ ನಿಂತಿತು. ಇದಕ್ಕೆ ನಿಲುಗಡೆ ಎಲ್ಲಿಗೆ, ಎಂದಿಗೆ? "ಸಾಕ್ಷರಾ ವಿಪರೀತಾಶ್ಚೇತ್ ರಾಕ್ಷಸಾ ಏವ ಕೇವಲಂ!" ಅಕ್ಷರಸ್ಥರ ಬುದ್ಧಿ ಹಿಂದುಮುಂದಾದರೆ ಅವರು ರಾಕ್ಷಸರೇ ಆಗಿಬಿಡುತ್ತಾರಲ್ಲವೆ?

ಗಾಂಧೀಜೀ ವಿಶ್ವಪ್ರೇಮದ ದೃಶ್ಯಮೂರ್ತಿ. ಇಂಥವರನ್ನೇ ಹಿಂಸೆ ಆಹುತಿಯಾಗಿ ತೆಗೆದುಕೊಂಡುಬಿಟ್ಟಿತು. ಇದನ್ನು ನೆನೆದರೆ, ದ್ವೇಷ-ಪ್ರೇಮಗಳ ಸಂತತವಾದ ಹೋರಾಟದಲ್ಲಿ ಸದ್ಯಕ್ಕೆ ದ್ವೇಷವೇ ಮೇಲುಗೈಯಾಯಿತೇನೋ, ದ್ವೇಷದ ಬೇರನ್ನು ಮಾನವ ಹೃದಯದಿಂದ ಕಿತ್ತೊಗೆಯುವುದು ಅಸಂಭವವೇನೋ, ದ್ವೇಷವನ್ನು ಪ್ರೇಮದಿಂದ ಗೆಲ್ಲುವುದು ಅಶಕ್ಯವೇನೋ ಎನಿಸುತ್ತದೆ. ಆದರೆ ಇದು ಎಂದಿಗೂ ಕೊನೆಮಾತಾಗಲಾರದು. ಇಂದು ಎತ್ತೆತ್ತಲೂ ಮುಸುಕಿರುವ ಮಹಾತಂಕದಲ್ಲಿ ಆಶ್ವಾಸನಕೊಡುವ ಆ ಮಹಾತ್ಮನ ಕೆಲವು ವಾಕ್ಯಗಳನ್ನು ನೆನೆಯೋಣ :

". . In God's world unmixed evil never prospers. God rules even where Satan seems to hold sway, because that later exists on His sufferance. Some people say that Satyagraha is of no avail against a person who has no moral sense. I join issue with that. The stoniest heart must melt if we are true and have enough patience. A Satyagrahi lays down his life but never gives up. ."

("....ಭಗವಂತನ ವಿಶ್ವದಲ್ಲಿ ಕೇವಲ ದುರಿತ ಎಂದಿಗೂ ಏಳಿಗೆಹೊಂದದು. ಸೈತಾನನ ಆಧಿಪತ್ಯ ನಡೆಯುತ್ತಿರುವಂತೆ ತೋರುವಲ್ಲಿ ಕೂಡ ಭಗವಂತನು ಆಳುತ್ತಾನೆ, ಏಕೆಂದರೆ ಆತನು ಸೈರಿಸಿದರೆ ಮಾತ್ರವೇ ಇವನ ಅಸ್ತಿತ್ವ. ಧರ್ಮದೃಷ್ಟಿಯಿಲ್ಲದ ಮನುಷ್ಯನಿಗೆದುರಾಗಿ ಸತ್ಯಾಗ್ರಹವು ನಿಷ್ಫಲವೆಂದು ಕೆಲವರು ಹೇಳುತ್ತಾರೆ. ಆದರೆ ಅದನ್ನು ನಾನು ಪ್ರತಿಭಟಿಸುತ್ತೇನೆ. ನಮ್ಮಲ್ಲಿ ಸತ್ಯವೂ ಸಾಕಾದಷ್ಟು ತಾಳ್ಮೆಯೂ ಇದ್ದರೆ ಕಗ್ಗಲ್ಲಿನಂಥ ಹೃದಯ ಕೂಡ ಕರಗಲೇಬೇಕು. ಸತ್ಯಾಗ್ರಹಿ ತನ್ನ ಪ್ರಾಣವನ್ನಾದರೂ ಒಪ್ಪಿಸುವನು, ಆದರೆ ಎಂದಿಗೂ ಕೈಯಿಳಿಸುವುದಿಲ್ಲ....")

ಗಾಂಧೀಜೀ ಭಗವಂತನನ್ನು ಅರಿತಿದ್ದಂತೆ, ದೇವವಾಣಿಯನ್ನು ಕೇಳಿದ್ದಂತೆ, ನಾವು ಅರಿತಿಲ್ಲ, ಕೇಳಿಲ್ಲ. ದೇವರಲ್ಲಿ ಅವರಿಗಿದ್ದ ಶ್ರದ್ಧೆಯೂ ಸರ್ವಾರ್ಪಣಭಾವವೂ ನಮ್ಮಲ್ಲಿ ಮೂಡುವುದು ಅಶಕ್ಯ. ಸರ್ವಶಕ್ತನೂ ಪರಿಪೂರ್ಣನೂ ಆದ ದೇವರು ಉಂಟೆ ಎಂಬ ವಿಚಾರದಲ್ಲೇ ನಮಗೆ ಸಂದೇಹ ತಲೆದೋರಬಹುದು. ಆದರೆ ಎಂಥ ಸಂದೇಹಶೀಲನ ಹೃದಯಕ್ಕಾದರೂ ಮೇಲಿನ ಧೀರವಾಕ್ಯಗಳು ನಾಟದಿರವು. ಪಾತಕಿಗಳ ಒಡಲಿನಲ್ಲೂ ಪರಮಾತ್ಮನಿದ್ದಾನೆ ಎಂಬ ನಂಬಿಕೆ ನೈಜವೆಂದು ಕಾಣಿಸದಿರದು. "ಶಠಂ ಪ್ರತಿ ಶಾಠ್ಯಮ್" (ಮೋಸಗಾರನಿಗೆ ಪ್ರತಿಯಾಗಿ ಮೋಸವನ್ನು ಆಚರಿಸಬೇಕು) ಎಂದು ಲೋಕ ಮಾನ್ಯರಾದ ರಾಷ್ಟ್ರಭಕ್ತರು ಕೂಡ ಪ್ರತಿಪಾದಿಸುತ್ತಿದ್ದ ಕಾಲದಲ್ಲಿ, "ಶಠಂ ಪ್ರತ್ಯಪಿ ಸತ್ಯಂ" (ಮೋಸಗಾರನಿಗೆ ಪ್ರತಿಯಾಗಿ ಕೂಡ ಸತ್ಯವನ್ನೇ ಆಚರಿಸಬೇಕು) ಎಂದು ಗಾಂಧೀಜೀ ಘಂಟಾಘೋಷವಾಗಿ ಸಾರಿದರು. "ಸತ್ಯವೇ ಗುರಿ, ಅಹಿಂಸೆಯೇ ದಾರಿ" ಎಂಬುದನ್ನು ಸಮಸ್ತ ವ್ಯವಹಾರದ ಬೀಜ ಮಂತ್ರವಾಗಿ ಸ್ಥಾಪಿಸಿ, ಹೊಸದೊಂದು ಯುಗವನ್ನೇ ಪ್ರಾರಂಭಿಸಿದರು. ಇಂಥವರ ದೇಹ ಕಣ್ಮರೆಯಾದ ಮಾತ್ರಕ್ಕೆ ಜೀವನಜ್ಯೋತಿ ಹೇಗೆ ತಾನೆ ನಂದಬಹುದು? ಗಾಂಧೀಜೀ ಬದುಕಿದ್ದಾಗ ಅಭೀತಿಯನ್ನು ಕಲಿಸಿ, ಪರಕೀಯರ ಆಕ್ರಮಣದಿಂದ ಬಾಗಿದ್ದ ನಮ್ಮ ಬೆನ್ನನ್ನು ವಜ್ರಸ್ತಂಭವಾಗಿ ಎತ್ತಿ ನಿಲ್ಲಿಸಿದರು, ಸ್ವಾತಂತ್ರ್ಯವನ್ನು ಕೈಗೆ ತಂದುಕೊಟ್ಟರು. ಆ ವೇಳೆಯಲ್ಲಿ ಜನತೆಯ ದೇಹದೊಂದಿಗೆ ಹೃದಯವೂ ಕಠಿನವಾಗಿಬಿಟ್ಟಿತೋ? ಅಹಿಂಸಾತತ್ತ್ವವನ್ನು ಸ್ವತಂತ್ರಭಾರತ ಪೂರ್ಣವಾಗಿ ಅನುಸರಿಸಲಿಲ್ಲ. ಗಾಂಧೀಜೀಯನ್ನು ಕಳೆದುಕೊಂಡು, ಅವಿಧೇಯರಾದ ಮಕ್ಕಳಂತೆ ಈಗ ಭಾರತೀಯರೆಲ್ಲರೂ ಅಳಲುತ್ತಿದ್ದೇವೆ. ಈಗ ಸುರಿಸುವ ಕಣ್ಣೀರಿನಿಂದ ನಮ್ಮ ಹೃದಯಭೂಮಿ ಮತ್ತೆ ಮೃದುವಾಗಬೇಕಾಗಿದೆ. ಅಭೀತಿಗಿಂತ ಕಠಿನವಾದ ಅಹಿಂಸೆಯ ಪಾಠವನ್ನು ನಮಗೆ ಕಲಿಸಲು ಗಾಂಧೀಜೀ ಹೀಗೆ ಪ್ರಾಣತ್ಯಾಗ ಮಾಡಬೇಕಾಯಿತೇನೋ. ತನ್ನ

ಬದುಕಿನಲ್ಲಿ ಸ್ವಾತಂತ್ರ್ಯವನ್ನು ಗೆದ್ದು ಕೊಟ್ಟ ಈ ಮಹಾತ್ಮನು ತನ್ನ ಮರಣದಿಂದ ಜನತೆಯ ಹೃದಯವನ್ನು ಗೆಲ್ಲಬೇಕಾಯಿತೇನೋ.

ಲೋಕದಲ್ಲಿ ದ್ವೇಷ ನಿಶ್ಶೇಷವಾಗಿ ಉಡುಗುವುದಕ್ಕೆ, ಪ್ರೇಮ ಸರ್ವವ್ಯಾಪಿಯಾಗಿ ನೆಲೆಗೊಳ್ಳುವುದಕ್ಕೆ ಇನ್ನೂ ಬಹುಕಾಲ ಬೇಕು. ಅದರ ನಿರೀಕ್ಷೆಯಲ್ಲಿ ಅದರ ಸಾಧನೆಯಲ್ಲಿ ನಾವು ಸಹನೆಯನ್ನು ಕಲಿಯಬೇಕು. ಗಾಂಧೀಜೀ ನಮ್ಮೆಲ್ಲರ ಹೃದಯದಲ್ಲಿ ನಿಕ್ಷೇಪವಾಗಿ ಬಿಟ್ಟುಹೋಗಿರುವ ವಿಶ್ವಪ್ರೇಮದ ಕಿಡಿಯನ್ನು ಮಾತ್ರ ನಾವು ಸನ್ಮತಿಯ ಹಣತೆಯಲ್ಲಿ ಕೈಯಲ್ಲಾದಮಟ್ಟಿಗೂ ಜೋಪಾನವಾಗಿ ಕಾಪಾಡಿಕೊಂಡು ಬಂದರೆ ಸಾಕು; ಯಾವ ವಿಷದ ಗಾಳಿ ಬೀಸಿದರೂ ಆರಿಹೋಗದ ನಂದಾದೀವಿಗೆಯಾಗಿ ಮುಂದೆ ಬೆಳಗಬಲ್ಲದು. "ಸಬಕೋ ಸನ್ಮತಿ ದೇ ಭಗವಾನ್!"

ಇಳೆಗಹಿಂಸೆಯ ಪರಮತತ್ತ್ವವನು ತೋಳೆತ್ತಿ
        ಉಸಿರ ಬಲವುಳ್ಳನಕ ಸಾರಿದ ಗುರು;
ದರ್ಪವನು ಧೈರ‍್ಯದಲಿ, ಶಸ್ತ್ರವನು ಸಹನೆಯಲಿ
        ಶಠತೆಯನು ಸತ್ಯದಲಿ ಜಯಿಸಿದ ಕಲಿ;
ಹುಡಿಯ ಹುಳುಗಳನೆತ್ತಿ, ವಜ್ರಹೃಯದವ ಬಿತ್ತಿ
        ವೀರಜನ್ಮವನಿತ್ತ ಹಿರಿಯ ತಂದೆ;
ನೆಲದ ನಡೆವಳಿಕೆಯಲಿ ನಾಕದೌನ್ನತ್ಯವನು
        ಮೇಳವಿಸಿ ತೋರಿದ ಪವಾಡಪುರುಷ;
ಪ್ರೇಮಸಂಸ್ಥಾಪನೆಯ ವಿಶ್ವಜಿದ್‌ಯಜ್ಞದಲಿ
        ಪ್ರಾಣಪೂರ್ಣಾಹುತಿಯನ್ನಿತ್ತ ದಾನಿ;
ಭಾರತದ ಭಾಗ್ಯರವಿ, ದೀನದಳಿತರ ರಕ್ಷೆ,
ವಿಮಲಧರ್ಮದ ವಾಣಿ, ಜನತೆಯಂತಸ್ಸಾಕ್ಷಿ,
        ಸರ್ವೋದಯದ ಸೂತ್ರಧಾರ – ಗಾಂಧಿ!

ವಿಶ್ವೇಶ್ವರಯ್ಯನವರ ದರ್ಶನ

ಅಂದು ಅಪರಾಹ್ಣ ಮೂರು ಘಂಟೆಯ ಸಮಯ. ಶ್ರೀ ಮಾಸ್ತಿಯವರು ನಮ್ಮ ಮನೆಯ ಕಡೆಗೆ ಬರುತ್ತಿರುವುದು ಕಿಟಕಿಯಿಂದ ಕಾಣಿಸಿತು. ನಾನು ಎದ್ದುಹೋಗಿ ಹೊರಬಾಗಿಲ ಹತ್ತಿರ ಅವರನ್ನು ಎದುರುಗೊಂಡೆ. "ಈ ಸಲ 'ಜೀವನ'ದ ವಿಶೇಷ ಸಂಚಿಕೆಯನ್ನು ವಿಶ್ವೇಶ್ವರಯ್ಯನವರ ವಿಚಾರಕ್ಕೆ ಮೀಸಲಾಗಿಡಬೇಕೆಂದು ನಾನು ಸಂಕಲ್ಪಿಸಿರುವುದು ನಿಮಗೆ ಜ್ಞಾಪಕವಿದೆಯೆ?" ಎಂದರು 'ಜೀವನ' ಪತ್ರಿಕೆಯ ಸಂಪಾದಕರು. "ಇದೆ, ಸಾರ್" ಎಂದು ಅಷ್ಟೇ ಹೇಳಿ ನಾನು ಸುಮ್ಮನಾದೆ. ಸಂಚಿಕೆಯ ಉದ್ದೇಶವನ್ನು ಮಾತ್ರವೇ ಅಲ್ಲ, ಅದಕ್ಕೆ ನಾನು ಒಂದು ಲೇಖನ ಬರೆಯಬೇಕೆಂಬುದನ್ನೂ ಮಾಸ್ತಿಯವರು ಆಗಲೆ ನನಗೆ ಹೇಳಿದ್ದರು. ಹಿಂದೆ ಒಂದೆರಡು ಬಾರಿ ಲೇಖನಗಳನ್ನು ಬರೆಯಲು ಒಪ್ಪಿಕೊಂಡು, ನಾನು ಕೃತಾರ್ಥನಾಗದೆ ಹೋದದ್ದು ನೆನಪಿಗೆ ಬಂದು ಮನಸ್ಸು ಅಳುಕಿತು. ಈ ಸಲ ಹಾಗಾಗದಿರಲೆಂದು ಮುನ್ನೆಚ್ಚರಿಕೆ ಕೊಡಲು ಸಂಪಾದಕರು ಈ ಎದುರುಮನೆಯ ಸೋಮಾರಿಯ ಬಳಿಗೆ ಬಂದರೇನೋ ಎಂಬ ಆಲೋಚನೆ ಮನಸ್ಸಿನಲ್ಲಿ ಹಾಯ್ದುಹೋಯಿತು.*

---

* ಆಗ ನಾನು ಬೆಂಗಳೂರಿನಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಮನೆಯ ಎದುರುಗಡೆಯ ಮನೆಯೊಂದರಲ್ಲಿ ವಾಸಮಾಡುತ್ತಿದ್ದೆ.

"ಈ ದಿನ ವಿಶ್ವೇಶ್ವರಯ್ಯನವರನ್ನು ಕಾಣಲು ನಾನು ಹೋಗುತ್ತೇನೆ. ವಿಶೇಷಸಂಚಿಕೆಗೆ ಅವರ ಅನುಮತಿಯನ್ನೂ ಆಶೀರ್ವಾದವನ್ನೂ ಪಡೆಯಬೇಕು. ಹದಿನೈದು ದಿನದಿಂದ ಪ್ರಯತ್ನಿಸಿ ಅವರ ಭೇಟಿಗೆ ಈ ದಿನ ಅವಕಾಶ ದೊರಕಿಸಿಕೊಂಡಿದ್ದೇನೆ. ನೀವು ಜೊತೆಗೆ ಬರುತ್ತೀರಾ ಎಂದು ಕೇಳಬೇಕೆನ್ನಿಸಿತು, ಬಂದೆ. ಬೇರೆ ಕೆಲಸವೇನೂ ಇಲ್ಲವಾದರೆ ಬನ್ನಿ, ಹೋಗೋಣ" ಎಂದರು ಮಾಸ್ತಿಯವರು.

ಕೆಂಡವೆಂದು ಭಾವಿಸಿದ್ದು ಮಾಣಿಕ್ಯವಾಯಿತು! ಲೇಖನದ ಪ್ರಸ್ತಾಪವನ್ನೇ ಎತ್ತದೆ, ವಿಶ್ವೇಶ್ವರಯ್ಯನವರ ದರ್ಶನ ಮಾಡಿಸುತ್ತೇನೆ ಬಾ ಎಂದು ಮಾಸ್ತಿಯವರು ನನ್ನಲ್ಲಿ ಅಧಿಕ ಕೃಪೆಯನ್ನು ತೋರಿಸಿದರು. ವಿಶ್ವೇಶ್ವರಯ್ಯನವರೆಂದರೆ ಮೈಸೂರಿನ ನಮಗೆ ಒಬ್ಬ ಆದರ್ಶ ಮಹನೀಯರು. ತೊಂಬತ್ತು ವರ್ಷ ಹರೆಯದ [೧೯೫೧ರಲ್ಲಿ] ಈ ಹಿರಿಯರು ಎಷ್ಟು ಮಟ್ಟಿಗೆ ಕಣಸಗಾರರೋ ಅಷ್ಟು ಮಟ್ಟಿಗೂ ಕೆಲಸಗಾರರು. ಅವರ ನಿರ್ಮಾಣ ಪರಂಪರೆಯನ್ನೂ ವರ್ಚಸ್ಸಿನ ಪ್ರಭಾವವನ್ನೂ ಎಲ್ಲೆಲ್ಲೂ ಕಾಣಬಹುದು; ಆದರೆ ಅವರನ್ನೇ ಕಾಣಬೇಕೆಂದರೆ ಸಾಮಾನ್ಯರಿಗೆ ಸುಲಭವಲ್ಲ. ಇಂಥ ದೊಡ್ಡವರ ದರ್ಶನ ಅನಿರೀಕ್ಷಿತವಾಗಿ ಅನಾಯಾಸವಾಗಿ ದೊರೆಯುವಾಗ ಅದಕ್ಕಿಂತ ಬೇರೆ ಕೆಲಸ ಉಂಟೆ! "ಹೆಳವನಿದ್ದಲ್ಲಿಗೆ ಹೊಳೆ ಬಂದಿತು!" ಮಾಸ್ತಿಯವರು ಕೇಳಿದ್ದೇ ತಡ, "ಸಂತೋಷದಿಂದ ಬರುತ್ತೇನೆ, ಸಾರ್!" ಎಂದು ಹೇಳಿದೆ. ಸರಸರನೆ ಬಟ್ಟೆ ಹಾಕಿಕೊಂಡು, ವೇಳೆಗೆ ಮುಂಚೆಯೇ ಸಿದ್ಧವಾದೆ.

ಕಾಲನಿಯಮವನ್ನು ಚ ಚು ತಪ್ಪದೆ ಪಾಲಿಸುವುದರಲ್ಲಿ ವಿಶ್ವೇಶ್ವರಯ್ಯನವರದು ಎತ್ತಿದ ಕೈ. ಆ ದಿನ ನಾಲ್ಕೂವರೆ ಘಂಟೆಗೆ ಭೇಟಿಗೆ ಬರಬಹುದೆಂದು ಅವರು ಗೊತ್ತುಪಡಿಸಿದ್ದರು. ನಾಲ್ಕು ಘಂಟೆಗೆ ಸ್ವಲ್ಪ ಕಾಫಿ ತೆಗೆದುಕೊಂಡು, ಅಂದಿನ ಟಪಾಲಿಗೆ ಹೋಗಬೇಕಾದ ಕಾಗದ ಪತ್ರಗಳ ಹಸನು ಪ್ರತಿಗಳನ್ನು ಸರಿನೋಡಿ ರುಜುಹಾಕಿ, ನಾಲ್ಕೂವರೆಗೆ ತಮ್ಮನ್ನು ಕಾಣಬಂದವರಿಗೆ ಭೇಟಿ ಕೊಟ್ಟು, ಐದೂವರೆ ಘಂಟೆಗೆ ಬಿಸಿಲಿರಲಿ ಮಳೆಯಿರಲಿ ಸಂಚಾರ ಹೊರಡುವುದು ಅವರ ಬೆಂಗಳೂರಿನ ದಿನಚರಿಯಂತೆ. ಹೊತ್ತಿಗೆ ಸರಿಯಾಗಿ ಅವರನ್ನು ನೋಡಬೇಕು; ಒಂದು ನಿಮಿಷವೂ ಕಾಯಿಸುವ ಹಾಗಿಲ್ಲ. ವಿಶ್ವೇಶ್ವರಯ್ಯನವರ ಆಪ್ತವರ್ಗಕ್ಕೆ ಸೇರಿದ ಶ್ರೀ ಡಿ.ಎಸ್. ವೆಂಕಣ್ಣನವರೂ ಜೊತೆಗೆ ಬರುವವರಾಗಿದ್ದರು. ದಾರಿಯಲ್ಲಿ ಒಂದು ಕಡೆ ಮಾಸ್ತಿಯವರಿಗೆ ಸ್ವಲ್ಪ ಬೇರೆಯ ಕೆಲಸವೂ ಇತ್ತು. ಆದಕಾರಣ ತಕ್ಕಮಟ್ಟಿಗೆ ಮುಂದಾಗಿಯೇ ಮನೆಯನ್ನು ಬಿಟ್ಟೆವು.

ಕಾರಿನಲ್ಲಿ ನನ್ನನ್ನು ಕುಳ್ಳಿರ ಹೇಳಿ, ಮಾಸ್ತಿಯವರು ಹತ್ತು ಹದಿನೈದು ನಿಮಿಷ ಕಾಲ ಕಾರ್ಯಾಂತರದ ನಿಮಿತ್ತ ಹೋಗಿದ್ದಾಗ, ವಿಶ್ವೇಶ್ವರಯ್ಯನವರನ್ನು ಕುರಿತ ಆಲೋಚನೆಯಲ್ಲೇ ನನ್ನ ಮನಸ್ಸು ಮಗ್ನವಾಗಿತ್ತು. ಅವರನ್ನು ನಾನು ಕಾಣುವುದಕ್ಕೆ ಇದು ಮೊದಲನೆಯ ಸಲವಲ್ಲ. ಹಿಂದೆ, ಬಲು ಹಿಂದೆ ಅವರು ಮೈಸೂರಿನ ದಿವಾನರಾಗಿದ್ದಾಗ, ನಾನು ಚಿಕ್ಕನಾಯಕನಹಳ್ಳಿಯ ಎ.ವಿ. ಸ್ಕೂಲಿನಲ್ಲಿ ಓದುತ್ತಿದ್ದಾಗ,

ನಮ್ಮ ಪಾಠಶಾಲೆಗೆ ಅವರು ಭೇಟಿ ಕೊಟ್ಟ ಪ್ರಸಂಗ ನನಗೆ ಸಹಜವಾಗಿ ನೆನಪಾಯಿತು. ದಿವಾನರು ತಾಲ್ಲೂಕು ಜಾಗಕ್ಕೆ ಬರುವುದೆಂದರೆ ಆಗಿನ ಕಾಲದಲ್ಲಿ ಸಾಮಾನ್ಯ ಸಂಗತಿಯಾಗಿರಲಿಲ್ಲ. ಅದಕ್ಕೆ ನಿರೀಕ್ಷೆಯೆಷ್ಟೋ, ಪೂರ್ವಸಿದ್ಧತೆಯೆಷ್ಟೋ, ಅಲಂಕಾರ ಸಂಭ್ರಮವೆಷ್ಟೋ, ಅಧಿಕಾರಿಗಳ ಆತಂಕವೆಷ್ಟೋ! ಆ ದಿನ ಬೆಳಗ್ಗೆ ಸುಮಾರು ಒಂಬತ್ತು ಘಂಟೆಗೆ ಒಂದರ ಹಿಂದೆ ಏಳು ಕಾರುಗಳು ಸಂಸ್ಥಾನದ ಮತ್ತು ಡಿಸ್ಟ್ರಿಕ್ಟಿನ ಉನ್ನತಾಧಿಕಾರಿಗಳನ್ನೆಲ್ಲಾ ಕೂರಿಸಿಕೊಂಡು ಬಂದು ನಮ್ಮ ಶಾಲೆಯ ಮುಂದೆ ನಿಂತುವು. ದಿವಾನರು ಇಳಿದು ಸರಸರನೆ ಶಾಲೆಯೊಳಕ್ಕೆ ಬಂದರು. ಅವರನ್ನು ಪ್ರತಿಯೊಂದು ತರಗತಿಗೂ ಕರೆದುಕೊಂಡು ಹೋಗಿ ಸಾವಕಾಶವಾಗಿ ತೋರಿಸಬೇಕು, ಅವರು ಶಾಲೆಯನ್ನು ಬಿಡುವ ಮುನ್ನ ಆರೇಳು ಮಂದಿ ವಿದ್ಯಾರ್ಥಿಗಳು ಸಾಲಾಗಿ ನಿಂತು ಕೆಲವು ಸ್ತುತಿಪದ್ಯಗಳನ್ನು ಅವರ ಮುಂದೆ ವಾಚಿಸಬೇಕು ಎಂದು ನಮ್ಮ ಮುಖ್ಯೋಪಾಧ್ಯಾಯರ ಏರ್ಪಾಡು. (ಆ ಪದ್ಯಾವಳಿಯ ಕರ್ತೃ ಯಾರೆಂದು ನನಗೆ ತಿಳಿಯದು. ಬೆಂಗಳೂರಿನ ಕವಿಯೊಬ್ಬರು ರಚಿಸಿ ಪ್ರಕಟಿಸಿದ್ದ ಕವನವನ್ನು ಈ ಸಮಯಕ್ಕೆ ನಮ್ಮ ಶಾಲೆಯವರು ಉಪಯೋಗಿಸಿಕೊಂಡರೆಂದು ನನ್ನ ಭಾವನೆ.) ಆ ವಾಚನಕಾರ ವೃಂದದಲ್ಲಿ ನಾನೂ ಒಬ್ಬನಾಗಿದ್ದೆ. ಅದರಿಂದಲೇ ಆಗ ಗಟ್ಟಿ ಮಾಡಿದ್ದ ಪದ್ಯಗಳಲ್ಲಿ ಒಂದೆರಡು ಈಗಲೂ ಬಾಯಿಗೆ ಬರುತ್ತವೆ :

ವಿಶ್ವೇಶ ವಿಶ್ವವಂದಿತ
ವಿಶ್ವಾತ್ಮಕ ವಿಶ್ವರೂಪ ವಿಶ್ವಕುಟುಂಬೀ
ವಿಶ್ವೇಶ್ವರಾಖ್ಯಮಂತ್ರಿಗೆ
ಶಾಶ್ವತಸುಖವಿತ್ತು ಸಲಹು ನೀಂ ದಯದಿಂದಂ . . .

ಅಜಗರದಂದದೆ ನಿದ್ರೆಯ
ಭಜಕರ್ ತಾಮೆನಿಪ ಕನ್ನಡಿಗರಂ ವಿದ್ಯಾ
ಸುಜನತೆ ಧೈರ್ಯಸ್ಥೈರ್ಯ
ಪ್ರಜೆಯೆನಿಸಲ್ ಯತ್ನಿಸುತ್ತೆ ಜಸಮಂ ಪಡೆದೈ.

(ಕನ್ನಡಿಗರ ನಿದ್ರಾಜಾಡ್ಯವನ್ನು ಬಿಡಿಸುವುದಕ್ಕೆ ವಿಶ್ವೇಶ್ವರಯ್ಯನವರು ಮಹಾ ಪ್ರಯತ್ನ ಮಾಡಿದ್ದೇನೋ ನಿಜ; ನಿರೀಕ್ಷಿಸಿದಷ್ಟು ಅದು ಸಫಲವಾಗದಿದ್ದರೆ ಅದರ ಹೊಣೆ ನಮ್ಮದೇ ಹೊರತು ಅವರದಲ್ಲ!)

ವಿಶ್ವೇಶ್ವರಯ್ಯನವರು ಶಾಲೆಯೊಳಕ್ಕೆ ಬಂದರು. ನಾಲ್ಕಾರು ನಿಮಿಷದಲ್ಲಿ ಶಾಲೆಯನ್ನು ಕುರಿತು ಹತ್ತಾರು ವಿಷಯಗಳನ್ನು ವಿಚಾರಿಸಿದರು. ಬೇಗನೆ ಹಿಂದಕ್ಕೆ ತಿರುಗಿದರು. ಬಾಗಿಲ ಹತ್ತಿರ ಸಾಲಾಗಿ ನಿಂತಿದ್ದ ವಿದ್ಯಾರ್ಥಿಗಳಲ್ಲಿ ಮೊದಲನೆಯವನು ಪದ್ಯ ಹೇಳಲು ಗಂಟಲನ್ನು ಸರಿಮಾಡಿಕೊಳ್ಳುತ್ತಿರುವಾಗಲೇ, "ಇದೆಲ್ಲ ಬೇಡ" ಎಂದು ಹೇಳಿ ಹೊರಕ್ಕೆ ನಡೆದೇ ಬಿಟ್ಟರು. ನಾವು ಶ್ರಮಪಟ್ಟು ಕಲಿತಿದ್ದ ಪದ್ಯಗಳನ್ನು ಅವರ ಮುಂದೆ ಒಪ್ಪಿಸಲು ಅವಕಾಶವೇ ಒದಗಲಿಲ್ಲ!

ಆ ಸಲದ ಭೇಟಿಯಲ್ಲಿ ವಿಶ್ವೇಶ್ವರಯ್ಯನವರು ಹೆಚ್ಚು ಕಾಲವನ್ನು ಚಿಕ್ಕನಾಯಕನ ಹಳ್ಳಿಯ ಊರಿನಲ್ಲಿ ಕಳೆಯಲಿಲ್ಲವೆಂದು ನನ್ನ ಜ್ಞಾಪಕ. ಅದರ ಪೂರ್ವದಿಕ್ಕಿಗಿರುವ ಗುಡ್ಡಸಾಲಿನೊಳಗೆ ಕುದುರೆಯ ಮೇಲೆ, ಕಾಲುನಡಗೆಯಲ್ಲಿ, ಸುತ್ತಾಡಿದರೆಂದೂ, ಅಲ್ಲಿ ದೊರೆಯುವ ಮ್ಯಾಂಗನೀಸ್ ಅದುರು, ಇನ್ನೂ ಆಚೆಗೆ ನನ್ನ ಜನ್ಮಭೂಮಿಯ ಹತ್ತಿರದ ಓಬಳಾಪುರದಲ್ಲಿ ದೊರೆಯುವ ಸುಣ್ಣ ಕಲ್ಲು ಇವನ್ನು ಅಗೆಯಿಸುವ ಏರ್ಪಾಡು ಮಾಡಿದರೆಂದೂ ದೊಡ್ಡವರು ಆಡುತ್ತಿದ್ದ ಮಾತು, ನನ್ನ ಕಿವಿಗೂ ಬಿದ್ದಿತು. . .

ಈ ಹಿಂದಿನ ನೆನಪಿನಲ್ಲೇ ನನ್ನ ಮನಸ್ಸು ಅಲೆದಾಡುತ್ತಿರುವಾಗ ಮಾಸ್ತಿಯವರು ಕಾರಿಗೆ ಹಿಂದಿರುಗಿದರು. ಮುಂದೆ ವೆಂಕಣ್ಣನವರನ್ನೂ ಜೊತೆಗೆ ಕರೆದುಕೊಂಡು ಕ್ಲುಪ್ತಕಾಲಕ್ಕೆ ಇನ್ನೂ ಹತ್ತುನಿಮಿಷ ಇರುವಾಗಲೇ 'ಅಪ್‌ಲೆಂಡ್ಸ್' ಬಂಗಲೆಗೆ ತಲಪಿದೆವು. ವಿಶ್ವೇಶ್ವರಯ್ಯನವರು ತಮ್ಮ ಕೋಣೆಯಲ್ಲಿ ಮೇಜಿನ ಮುಂದೆ ಕಾರ್ಯಮಗ್ನರಾಗಿ ಕುಳಿತಿರುವುದು ಕಿಟಕಿಯಿಂದ ಕಾಣಿಸಿತು. ನಾವು ಸುಸಜ್ಜಿತವಾದ ದಿವಾನ್ ಖಾನೆಯಲ್ಲಿ ನಾಲ್ಕೂವರೆ ಘಂಟೆ ಆಗುವುದನ್ನೂ ವಿಶ್ವೇಶ್ವರಯ್ಯನವರು ಬರುವುದನ್ನೂ ನಿರೀಕ್ಷಿಸುತ್ತಾ ಕುಳಿತೆವು. ಅಲ್ಲಿ ನನ್ನ ಕಣ್ಣನ್ನು ಮುಖ್ಯವಾಗಿ ಸೆಳೆದದ್ದು ಎದುರು ಗೋಡೆಗೆ ತಗುಲುಹಾಕಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ದೊಡ್ಡ ಚಿತ್ರ ಮತ್ತು ಕೊಠಡಿಯ ನಡುವೆ ಮೇಜಿನ ಮೇಲೆ ಇರಿಸಿದ್ದ ಮಗುವೊಂದರ ಛಾಯಾಚಿತ್ರ. (ಈ ಮಗು ವಿಶ್ವೇಶ್ವರಯ್ಯನವರ ತಮ್ಮಂದಿರ ಮೊಮ್ಮಗುವೆಂದು ಆ ಬಳಿಕ ತಿಳಿಯಿತು.)

ನಾವು ಬಂದ ವಿಷಯ ವಿಶ್ವೇಶ್ವರಯ್ಯನವರಿಗೆ ಆಗಲೆ ಅರಿಕೆಯಾಗಿತ್ತು. ವೇಳೆಗೆ ಇನ್ನೂ ಎರಡು ನಿಮಿಷ ಇರುವಾಗಲೇ ಅವರು ಬಂದರು. ಎಲ್ಲರ ಪರಿಚಯವನ್ನೂ ಮಾಡಿಕೊಂಡು, ಕೈಕುಲುಕಿ ಹತ್ತಿರದಲ್ಲೇ ಕುಳಿತುಕೊಂಡರು. ಸುಮಾರು ಮೂವತ್ತುಮೂರು ವರ್ಷಗಳ ಹಿಂದೆ ಅವರನ್ನು ನಾನು ನೋಡಿದಾಗ ಹೇಗಿದ್ದರೆಂಬುದು ನನಗೆ ಮರೆತು ಹೋಗಿದ್ದರೂ ಭಾವಚಿತ್ರಗಳಲ್ಲಿ ನೋಡಿ ಅವರ ಆಕಾರವನ್ನು ಗುರುತಿಸಬಲ್ಲವನಾಗಿದ್ದೆ. ಅದೇ ಕೃಶವಾದ ಶರೀರ, ಅದೇ ಹೊಳಪಿನ, ಕನ್ನಡಕವನ್ನು ಅಪೇಕ್ಷಿಸದ ಚುರುಕು ಕಣ್ಣುಗಳು. ತೊಂಬತ್ತು ವರ್ಷಗಳ ಭಾರಕ್ಕೆ ಬೆನ್ನು ನಸು ಮಾತ್ರ ಬಾಗಿರಬಹುದು, ಶ್ರವಣಶಕ್ತಿ ತುಸಮಾತ್ರ ಕುಗ್ಗಿರಬಹುದು; ಅಷ್ಟೇ. ದೇಹದ ಚಟುವಟಿಕೆಯಾಗಲಿ ಮನಸ್ಸಿನ ಲವಲವಿಕೆಯಾಗಲಿ ಎಳ್ಳಷ್ಟೂ ಕುಂದಿದ್ದಂತೆ ತೋರಲಿಲ್ಲ. ಎಲ್ಲ ವಿಚಾರದಲ್ಲೂ ಇರುವಂತೆಯೇ ಉಡುಪಿನಲ್ಲೂ ಅವರದು ಖಚಿತವಾದ ಶಿಸ್ತು. ಮುಖಕ್ಕೆಲ್ಲ ದೊಡ್ಡದಾಗಿ ಎದ್ದುಕಾಣುತ್ತಿದ್ದ ಆ ಸರಿಗೆಯ ಪೇಟ, ಆಡಂಬರವಿಲ್ಲದ ಆದರೆ ಸಲಕ್ಷಣವಾದ ಉಡುಪು; ಕೈಯಲ್ಲಿ ಮಾತ್ರ ನಾಲ್ಕಾಣೆಯ (ಈಗಿನ ಬೆಲೆಯಲ್ಲಿ!) ಒಂದು ಸೀಸದ ಕಡ್ಡಿ. ಕಾಗದದ ಮೇಲೆ ಏನನ್ನೋ ಗುರುತುಮಾಡುತ್ತಿದ್ದವರು ಹಾಗೆಯೇ ಎದ್ದು ನಮ್ಮಲ್ಲಿಗೆ ಬಂದರೆಂದು ತೋರುತ್ತದೆ.

ಮಾಸ್ತಿಯವರು ಹಿಂದೆ ತಾವು ಮೈಸೂರು ಸಿವಿಲ್ ಸರ್ವಿಸ್ಸಿಗೆ ಸೇರಿದ ಹೊಸದರಲ್ಲಿ ವಿಶ್ವೇಶ್ವರಯ್ಯನವರ ಹತ್ತಿರ ಕೆಲವು ತಿಂಗಳು ಕೆಲಸ ಮಾಡುತ್ತಿದ್ದುದನ್ನು ನೆನಪುಮಾಡಿಕೊಟ್ಟು,

ಈಗ 'ಜೀವನ' ಪತ್ರಿಕೆಯನ್ನು ನಡಸುತ್ತಿರುವ ವಿಷಯವನ್ನು ತಿಳಿಸಿ, ಹಿಂದಿನ ಎರಡು ವಿಶೇಷ ಸಂಚಿಕೆಗಳನ್ನೂ ಪ್ರಚಲಿತ ಸಂಚಿಕೆಯನ್ನೂ ಅವರ ಕೈಗೆ ಕೊಟ್ಟರು. ವಿಶ್ವೇಶ್ವರಯ್ಯನವರು "Yes, Jivana is important" (ಹೌದು, ಜೀವನ ಮುಖ್ಯ) ಎಂದರು. (ಮಾತುಕಥೆ ಬಲುಮಟ್ಟಿಗೆ ಇಂಗ್ಲಿಷಿನಲ್ಲೇ ನಡೆಯಿತು.) ಭಾರತ ಸ್ವಾತಂತ್ರ್ಯದ ವಿಶೇಷ ಸಂಚಿಕೆಯ ಹಾಳೆಗಳನ್ನು ತಿರುವಿಹಾಕುತ್ತಾ ಗಾಂಧೀಜೀಯ ಚಿತ್ರವನ್ನು ಕಂಡು ಕ್ಷಣಕಾಲ ಅಲ್ಲೇ ತಡೆದರು; "He also did a thankless job, did he not?" (ಅವರು ಮಾಡಿದ್ದೂ ಫಲವಿಲ್ಲದ ಕೆಲಸ, ಅಲ್ಲವೆ?) ಎಂದರು. ಆಮೇಲೆ "ಇಂಥ ಪತ್ರಿಕೆಯನ್ನು ಕನ್ನಡದಲ್ಲಿ ನಡಸಿ ಜನರಿಗೆ ತಿಳಿವಳಿಕೆ ಕೊಡುವುದು ಆವಶ್ಯಕ" ಎಂದರು. ಆಗ ಮಾಸ್ತಿಯವರು "ಈ ಸಲ ತಮ್ಮನ್ನೂ ತಮ್ಮ ದೇಶಸೇವೆಯ ಕಾರ್ಯಗಳನ್ನೂ ಕುರಿತು ವಿಶೇಷ ಸಂಚಿಕೆ ಹೊರಡಿಸಬೇಕೆಂದಿದ್ದೇನೆ. ಅದಕ್ಕೆ ಅಪ್ಪಣೆ ಕೇಳುವುದಕ್ಕೆಂದೇ ಇಂದು ತಮ್ಮ ಸಂದರ್ಶನವನ್ನು ಬೇಡಿದ್ದು" ಎಂದು ಪ್ರಕೃತದ ಮಾತನ್ನು ಎತ್ತಿದರು.

ವಿಶ್ವೇಶ್ವರಯ್ಯನವರು : "ಬೇಡ ಬೇಡ, ಅದನ್ನೆಲ್ಲ ಮರೆತುಬಿಡುವುದು ಉತ್ತಮ."

ಮಾಸ್ತಿಯವರು : "ಇದು ತಮಗಾಗಿ ಮಾಡುತ್ತಿರುವುದೇನೂ ಅಲ್ಲ; ತಮ್ಮ ವಿಷಯ ನಮ್ಮ ಜನಕ್ಕೆ ಗೊತ್ತಾಗಬೇಕು. ತಾವು ಬೆಂಗಳೂರಲ್ಲಿರುತ್ತಾ ತಮಗೆ ಇದನ್ನು ತಿಳಿಸದೆ ಮಾಡಬಾರದು ಎಂದು ದರ್ಶನ ಬೇಡಿದೆ. ತಮಗೆ ಇದಕ್ಕಿಂತ ಹೆಚ್ಚಾಗಿ ತೊಂದರೆ ಕೊಡುವುದಿಲ್ಲ."

ವಿಶ್ವೇಶ್ವರಯ್ಯನವರು : "ಈ ಕೆಲಸವನ್ನು ನೀವು ಮಾಡಬೇಕು ಎಂದರೆ ನಾನು ಹೇಗೆ ತಡೆಯಬಲ್ಲೆ?"

ಅಂತೂ ಅಧಿಕ ಶ್ರಮವಿಲ್ಲದೆ ಒಪ್ಪಿಗೆ ಪಡೆದದ್ದಾಯಿತು. "ಸಂಚಿಕೆಗೆ ತಾವು ಒಂದು ಸಂದೇಶ ಕೊಡಬೇಕು" ಎಂದು ಮಾಸ್ತಿಯವರು ಬೇಡಿದರು. ಆದರೆ ಈ ಕೊಸರನ್ನು ಕೊಡಲು ವಿಶ್ವೇಶ್ವರಯ್ಯನವರು ಒಪ್ಪಲಿಲ್ಲ :

"ಅದನ್ನು ಮಾತ್ರ ಕೇಳಬೇಡಿ. ನಾನು ಹೇಳತಕ್ಕದ್ದು ಏನೂ ಇಲ್ಲ. ಎಲ್ಲವನ್ನೂ ನನ್ನ ಹೊಸ ಪುಸ್ತಕದಲ್ಲಿ ಆಗಲೆ ಹೇಳಿದ್ದೇನೆ. ವೆಂಕಣ್ಣನವರೆ, ಪುಸ್ತಕದ ಪ್ರತಿಗಳು ಬಂದುವೆ? ನಿಮಗೆ ಕಳಿಸಬೇಕೆಂದು ಪ್ರಕಾಶಕರಿಗೆ ತಿಳಿಸಿದ್ದೆ."

"ಇಲ್ಲ ಸಾರ್, ಇನ್ನೂ ಬಂದಿಲ್ಲ. ಇಷ್ಟರಲ್ಲೇ ಬರಬಹುದು."

"ಸ್ವಲ್ಪ ತಾಳಿ" ಎಂದು ವಿಶ್ವೇಶ್ವರಯ್ಯನವರೇ ಎದ್ದು ಹೋಗಿ, "The Memoirs of My Working Life" ಎಂಬ ತಮ್ಮ ಹೊಸ ಪುಸ್ತಕದ ಪ್ರತಿಯನ್ನು ತಂದು ಮಾಸ್ತಿಯವರ ಕೈಯಲ್ಲಿರಿಸಿದರು. (ಅವರ ಬಳಿ ಆಗ ಇದ್ದದ್ದು ಇದೊಂದೇ ಪ್ರತಿಯೆಂದು ಆ ಮೇಲೆ ತಿಳಿಯಿತು.

"ಒಳ್ಳೆಯದು ಸ್ವಾಮಿ, ಇದನ್ನು ಓದಿ ಸಂಚಿಕೆಗೆ ಉಪಯೋಗಿಸಿಕೊಳ್ಳುತ್ತೇನೆ. ಇಷ್ಟು ನನಗೆ ಸಾಕು."

"ಓದಿ; ಇದರಿಂದ ನಿಮಗೆ ಹೇಗೆ ಆಶಾಭಂಗವಾಯಿತೆಂಬುದನ್ನು ವೆಂಕಣ್ಣನವರಿಗೆ ಐದಾರು ದಿವಸದಲ್ಲಿ ತಿಳಿಸಿಬಿಡಿ!"

"ದಯಮಾಡಿ ತಮ್ಮ ಹಸ್ತಾಕ್ಷರದಲ್ಲಿ ಆಶೀರ್ವಾದ ಬರೆದುಕೊಡಬೇಕು."

ಹಸ್ತಾಕ್ಷರವನ್ನು ಬರೆಯಲು ವಿಶ್ವೇಶ್ವರಯ್ಯನವರಿಗೆ ಲೇಖನಿ ಬೇಕಾಯಿತು. ಅವರ ಕೈಯಲ್ಲಿದ್ದುದು ಸೀಸದ ಕಡ್ಡಿ. ನನ್ನ ಲೇಖನಿಯನ್ನು ಜೇಬಿನಿಂದ ತೆಗೆದು ಮುಚ್ಚಳ ತೆರದು, ಕೊಡಲು ಕೈ ನೀಡಿದೆ. ಅವರ ಹಸ್ತಸ್ಪರ್ಶದಿಂದಲಾದರೂ ಇದಕ್ಕೆ ಸ್ವಲ್ಪ ಚಟುವಟಿಕೆ ಬಂದೀತೆಂದು ನನ್ನ ಆಸೆ; ಆದರೆ ಆ ಲಭ್ಯವಿರಲಿಲ್ಲ. ವಿಶ್ವೇಶ್ವರಯ್ಯನವರು "ಯಾರೋ ಅಲ್ಲಿ" ಎಂದು ಆಳನ್ನು ಕೂಗಿ, ಕೊಠಡಿಯಿಂದ ತಮ್ಮ ಲೇಖನಿಯನ್ನೇ ತರಿಸಿಕೊಂಡರು. ಪುಸ್ತಕವನ್ನು ತೆರೆದು ಒಂದು ಕ್ಷಣ ಆಲೋಚಿಸಿದರು.

"ಏನೆಂದು ಬರೆಯಲು? With the compliments of M.V. ಎನ್ನಲೆ?"

ಮಾಸ್ತಿಯವರು : "ದಯವಿಟ್ಟು With blessings ಎಂದು ಬರೆಯಬೇಕು."

ವಿಶ್ವೇಶ್ವರಯ್ಯನವರು ಅದಕ್ಕೆ ಒಪ್ಪಲಿಲ್ಲ. "With the best wishes of M. Visvesvaraya" ಎಂದು ಬರೆದರು. ಬರೆಯುವಾಗ ಅವರ ಕೈಯನ್ನೇ ನಾನು ಗಮನಿಸುತ್ತಿದ್ದೆ. ಸ್ವಲ್ಪವೂ ನಡುಕವಿರಲಿಲ್ಲ. ಅಕ್ಷರಗಳು ದೃಢವಾಗಿ ಸ್ಫುಟವಾಗಿ ರೂಪುಗೊಂಡಿದ್ದುವು. ಹಾಗೆಯೇ ಮಾತಾಡುತ್ತಾ ವಿಶ್ವೇಶ್ವರಯ್ಯನವರು, "ಕೆಲವು ದಿನದ ಕೆಳಗೆ ನಾನು ಸಿ. ರಾಜಗೋಪಾಲಚಾರ್ಯರ ಅತಿಥಿಯಾಗಿದ್ದಾಗ, ಅವರು 'ಊಟ ಮಾಡುವಾಗ, ನೀರು ಕುಡಿಯುವಾಗ ನಿಮ್ಮ ಕೈ ನಡುಗುವುದಿಲ್ಲವೆ?' ಎಂದು ನನ್ನನ್ನು ಕೇಳಿದರು. ನಾನು 'ಇನ್ನೂ ಇಲ್ಲ' (Not yet) ಎಂದು ಉತ್ತರಕೊಟ್ಟೆ" ಎಂದರು. ಬರೆವಣಿಗೆಯಲ್ಲೇ ನಡುಗದ ಕೈ ತುತ್ತನ್ನೂ ಪಾತ್ರೆಯನ್ನೂ ಹಿಡಿದಾಗ ಹೇಗೆ ನಡುಗೀತು!

ಈ ಹಿರಿಯರ ಸಮ್ಮುಖದಲ್ಲಿ ನಾವು ಇದ್ದುದೆಲ್ಲ ಕೇವಲ ಕಾಲು ಘಂಟೆ. ಅಷ್ಟರಲ್ಲೇ ದೇಶದ ಯೋಗಕ್ಷೇಮದ ಮಾತುಗಳು ಬಂದುಹೋದುವು. ಯಾವ ವ್ಯಕ್ತಿಯನ್ನು ಕುರಿತಾದರೂ ಒಂದು ಕಠಿನವಾದ ಉಕ್ತಿ ಕೂಡ ಅವರ ಬಾಯಿಂದ ಬರಲಿಲ್ಲ. ಅನುಭವ ಹೆಚ್ಚಾದ ಮೇಲೆ ಎಲ್ಲ ಸರಿಹೋಗುತ್ತದೆ ಎಂಬ ಆಶಾಭಾವವನ್ನೇ ಅವರು ತೋರಿಸಿದರು. ಹೊರಡುವ ಮುನ್ನ "ಕುಟುಂಬ ಯೋಜನೆಯ (Family Planning) ವಿಷಯದಲ್ಲಿ ನಿಮ್ಮ ಅಭಿಪ್ರಯವೇನು?" ಎಂದು ಮಾಸ್ತಿಯವರಿಗೆ ತಾವು ಪ್ರಶ್ನೆ ಹಾಕಿದರು.

"ಅದು ಅವಶ್ಯ."

"ಆ ರೀತಿಯ ಯೋಜನೆಯಿಲ್ಲದಿದ್ದರೆ ಇನ್ನು ಇಪ್ಪತ್ತು ವರ್ಷದೊಳಗೆ ಬೀದಿಯಲ್ಲೇ ಜನ ಸಾಯುವುದನ್ನು ನಾವು ಕಾಣಬೇಕಾಗುತ್ತದೆ." ಇದೇ ವಿಷಯವನ್ನು ವಿಶ್ವೇಶ್ವರಯ್ಯನವರು ತಮ್ಮ ಗ್ರಂಥದಲ್ಲೂ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ.

ಬೀಳ್ಕೊಳ್ಳುವ ಸಮಯ ಬಂದಿತು. ಕೊಠಡಿಯ ಬಾಗಿಲ ಬಳಿ ಅವರಿಗೆ ನಮಸ್ಕಾರ ಹೇಳಿ ಬಂದು, ಪೋರ್ಟಿಕೋದಲ್ಲಿದ್ದ ಕಾರಿನಲ್ಲಿ ಕುಳಿತೆವು. ಅಷ್ಟರಲ್ಲಿ ಈ ಹಿರಿಯರು ವರಾಂಡಾ ಮಧ್ಯಕ್ಕೆ ಬಂದು ಮತ್ತೊಮ್ಮೆ ಬೀಳ್ಕೊಡುವ ನಮಸ್ಕಾರಮಾಡಿ ಕಾರು ಹೊರಟ ಮೇಲೆ ಅಲ್ಲಿಂದ ಸರಿದರು.

ಹಿಂದಿರುಗುವಾಗ ದಾರಿಯಲ್ಲಿ ಮಾಸ್ತಿಯವರು "ಭೇಟಿ ಹೇಗಿತ್ತು?" ಎಂದರು. ನಾನು "ಚೆನ್ನಾಗಿತ್ತು, ಸಾರ್" ಎಂದೆ. "ಇದನ್ನೇ ಕುರಿತು ನೀವು ನಾಲ್ಕು ಮಾತು ಬರೆಯಬಹುದಲ್ಲ" ಎಂದು ಅವರು ಸೂಚಿಸಿದರು. ಸಂಪಾದಕರಿಗೆ ಈ ಯೋಚನೆ ಮೊದಲೇ ಇದ್ದಿರಬಹುದೆಂದು ನನ್ನ ಮನಸ್ಸಿಗೆ ಹೊಳೆಯದಿರಲಿಲ್ಲ.

"ಆಗಲಿ, ಬರೆಯುತ್ತೇನೆ" ಎಂದೆ, ಆ ಘಳಿಗೆಯ ಉತ್ಸಾಹದಲ್ಲಿ. "ತಮ್ಮ ಸಹಾಯವೂ ಇದರಲ್ಲಿ ಬೇಕಾದೀತು" ಎಂಬ ಮಾತನ್ನೂ ಸೇರಿಸಿದೆ. ಆದರೆ, "ಅದರ ಸ್ವಾರಸ್ಯವನ್ನು ಲೇಖನದಲ್ಲಿ ತರುವುದು ನನಗೆ ಕಷ್ಟ" ಎಂದು ಹೇಳಲು ಆಗ ತೋರಲಿಲ್ಲ.

●

ಹಿಮದರ್ಶನ

ಕಾಳಿದಾಸನ 'ಕುಮಾರಸಂಭವ' ಕಾವ್ಯ ಬಹು ಭವ್ಯವಾಗಿ ಪ್ರಾರಂಭವಾಗುತ್ತದೆ :

"ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ
ಹಿಮಾಲಯೋ ನಾಮ ನಗಾಧಿರಾಜಃ ।
ಪೂರ್ವಾಪರೌ ತೋಯನಿಧೀವಗಾಹ್ಯ
ಸ್ಥಿತಃ ಪೃಥಿವ್ಯಾ ಇವ ಮಾನದಂಡಃ ॥"

—ಈ ಪ್ರಥಮಪದ್ಯದ ಸೊಗಸನ್ನು ಅನೇಕರು ಮೆಚ್ಚಿದ್ದಾರೆ. ಇಲ್ಲಿ ಹಿಮಾಲಯಕ್ಕೆ ಕಾಳಿದಾಸನು ಕೊಟ್ಟಿರುವ "ದೇವತಾತ್ಮಾ" ಎಂಬ ವಿಶೇಷಣವೊಂದು ಸಾಕು, ಸಹೃದಯನನ್ನು ಅಮರಪಥದ ಉನ್ನತಿಗೆ ಕರೆದೊಯ್ಯುವುದಕ್ಕೆ. ಪೂರ್ವಪಶ್ಚಿಮ ಸಮುದ್ರಗಳ ತನಕ ಇಕ್ಕೆಲಗಳಲ್ಲೂ ಚಾಚಿಕೊಂಡು, ಭೂಮಂಡಲವನ್ನೇ ಅಳೆಯತಕ್ಕ ಮಾನದಂಡದಂತೆ ಈ ಪರ್ವತ ರಾಜನು ಇದ್ದಾನೆಂಬ, ವಸ್ತುಸ್ಥಿತಿಯನ್ನು ಅಷ್ಟೇನೂ ಅತಿಕ್ರಮಿಸದ, ಕಲ್ಪನೆಯಂತೂ ಮಹಾಕವಿಯ ಪ್ರತಿಭಾ ದೃಷ್ಟಿಗೆ ಮಾತ್ರ ನಿಲುಕತಕ್ಕದ್ದು. ಈ ಪದ್ಯದ ಪೂರ್ವಾರ್ಧದಲ್ಲಿ "ದೇವತಾತ್ಮಾ" ಎಂಬುದರಿಂದ ಮೊದಲುಗೊಂಡು "ನಗಾಧಿರಾಜಃ" ಎಂಬುದರ ತನಕ ದೀರ್ಘ ಆ-ಕಾರಗಳನ್ನು ಕಾಳಿದಾಸನು ಮತ್ತೆ ಮತ್ತೆ ಬಳಸಿರುವುದು ಕೂಡ ಉದ್ದೇಶಪೂರ್ವಕವಾಗಿ–ಹಿಮಾಲಯದ ದೇದೀಪ್ಯಮಾನವಾದ ವಿಸ್ತಾರವನ್ನು ಮನಮುಟ್ಟಿಸುವುದಕ್ಕಾಗಿ ಎಂದು ಬಂಗಾಳ ಕವಿಯೊಬ್ಬರಿಂದ

ರವೀಂದ್ರನಾಥಠಾಕೂರರು ತಮ್ಮ ಚಿಕ್ಕಂದಿನಲ್ಲಿ ಕೇಳಿದಂತೆ ತಮ್ಮ 'ಜೀವನ ಸ್ಮೃತಿ'ಯಲ್ಲಿ ಉಲ್ಲೇಖಿಸಿದ್ದಾರೆ.

ಆದರೆ ಇಲ್ಲಿಂದ ಮುಂದೆ ಬರುವ ಹಿಮಾಲಯದ ವರ್ಣನೆಯಲ್ಲಿ "ಹಿಮ"ದ ಸೊಗಸನ್ನು ತುಂಬಿಕೊಡುವ ಕಡೆಗೆ ಕಾಳಿದಾಸನ ಮನಸ್ಸು ಅದೇಕೋ ಹರಿಯಲಿಲ್ಲ. "ಘನೀಭೂತಹಿಮ"ದ ಮಾತು ಒಂದು ಕಡೆ ಬಂದಿದ್ದರೂ, ಕಾಳಿದಾಸನ ಒಲವು ಅತ್ತಕಡೆ ಇರಲಿಲ್ಲ. ಅಷ್ಟೇ ಅಲ್ಲ. ಹಿಮದ ಪ್ರಚುರತೆ ವಸ್ತುತಃ ಒಂದು ನ್ಯೂನತೆಯೆಂದು ಸೂಚಿಸುವಷ್ಟು ದೂರ ಅವನು ಹೋಗುತ್ತಾನೆ :

ಅನಂತರತ್ನ ಪ್ರಭವಸ್ಯ ಯಸ್ಯ
ಹಿಮಂ ನ ಸೌಭಾಗ್ಯ ವಿಲೋಪಿ ಜಾತಂ ।
ಏಕೋ ಹಿ ದೋಷೋ ಗುಣಸನ್ನಿಪಾತೇ
ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ ॥

ಹಿಮಾಲಯವು ಅನಂತಸಂಖ್ಯೆಯ ರತ್ನಗಳಿಗೆ ಆಕರವಾಗಿರುವುದರಿಂದ, ಈ ಈ ಒಂದು ಹಿಮದಿಂದ ಅದರ ಸೊಬಗಿಗೆ ಕುಂದು ಒದಗಲಿಲ್ಲ; ಅನೇಕ ಗುಣಗಳ ಗಡಣದಲ್ಲಿ ಒಂದು ದೋಷ ಮುಳುಗಿ ಹೋಗುವುದಿಲ್ಲವೆ, ಚಂದ್ರನ ಕಿರಣಗಳ ನಡುವೆ ಅವನ ಕಪ್ಪು ಮಚ್ಚೆಯಂತೆ—ಹೀಗೆನ್ನುತ್ತಾನೆ ಕಾಳಿದಾಸ. ಹಿಮರಾಶಿಯ ಮಧ್ಯದಲ್ಲಿ ತಾನು ಕೆಲವು ಕಾಲವಾದರೂ ವಾಸ ಮಾಡಬೇಕಾಗಿ ಬಂದು, ಅದರ ಕೊರೆತದಿಂದ ತಾನು ಕ್ಲೇಶಪಟ್ಟಿದ್ದ ಸಂದರ್ಭಗಳು ನೆನಪಿನಲ್ಲಿ ಹಸಿಯಾಗಿದ್ದು, ಕಾಳಿದಾಸನು ಹೀಗೆ ಬರೆದನೇನೋ. ಹಿಮದ ಉಪಹತಿಗೆ ಸಿಕ್ಕಿ ಕಮಲದಂಥ ಹೂವುಗಳು ಸೊರಗಿ ಹೋದದ್ದನ್ನು ಕಣ್ಣಾರ ಕಂಡುನೊಂದಿದ್ದ ಪುಷ್ಪಪ್ರಿಯನಾದ ಕಾಳಿದಾಸನಿಗೆ ಹಿಮದ ಮೇಲೆ ಅಭಿಮಾನ ಮೂಡಲಿಲ್ಲವೇನೊ!

ನಿವಾಸಕ್ಕೆ ಹೇಗಾದರೂ ಇರಲಿ, ನೋಟಕ್ಕೆ ಮಾತ್ರ ಹಿಮ ಬಲು ಸೊಗಸು. ಅದರಲ್ಲಿ ದಕ್ಷಿಣ ಭಾರತದ ಅತ್ಯುನ್ನತವಾದ ಗಿರಿಗಳಲ್ಲಿ ಕೂಡ ಹಿಮದ ಸೆಲೆಯನ್ನೇ ಕಾಣದ ನಮ್ಮಂಥವರಿಗಂತೂ ಅದರ ಪ್ರಥಮದರ್ಶನ ಒಂದು ಅಪೂರ್ವಾನುಭವ. ನನಗೆ ಆ ದರ್ಶನ ಭಾರತದ ಪಾವನರಕ್ಷೆಯಾದ ಹಿಮಾಲಯದಲ್ಲಿ ಲಭಿಸಿರಲಿಲ್ಲ. (ನಾನು ಅದನ್ನು ವೀಕ್ಷಿಸಿದ ಸನ್ನಿವೇಶ ಅದಕ್ಕೆ ಅನುಕೂಲವಾಗಿರಲಿಲ್ಲ.) ಯೂರೋಪ್ ಖಂಡದಮೇಲೆ ವಿಮಾನದಲ್ಲಿ ಪಶ್ಚಿಮಾಭಿಮುಖವಾಗಿ ಹಾಯುವಾಗ ಆಲ್ಪ್ಸ್ ಪರ್ವತಶ್ರೇಣಿಯ ಗಿರಿ ಶಿಖರಗಳಲ್ಲಿ ನೀಲಶಿಲೆಯ ಸಮುಚ್ಚಯಗಳನ್ನು ಧವಳಲೇಪದಿಂದ ಆಚ್ಛಾದಿಸಿ ವ್ಯಾಪಿಸಿದ್ದ ಹಿಮರಾಶಿ ಕಣ್ಣನ್ನು ಸೆರೆಹಿಡಿಯಿತು. ಆಗ ಈ ದೃಶ್ಯ ಕೆಲವು ನಿಮಿಷಗಳ ಕಾಲ ಮಾತ್ರ ಮಿಂಚಿ ಹಿಂದಕ್ಕೆ ಸರಿದುಬಿಟ್ಟಿತು. ಹಿಮದ ಸಮೀಪದೃಶ್ಯ ನನಗೆ ಮೊದಲ ಬಾರಿ ದೊರೆತದ್ದು ಅಮೆರಿಕಾದಲ್ಲಿ; ಫಿಲಡೆಲ್ಫಿಯ ನಗರದ ಭಾರತೀಯ ವಿದ್ಯಾರ್ಥಿಸಂಘದವರು ದೀಪಾವಳಿಯ ಉತ್ಸವವನ್ನು ಸಂಭ್ರಮದಿಂದ ನೆರವೇರಿಸಿದ ಮರುದಿನ ಬೆಳಿಗ್ಗೆ. (ಈ ಉತ್ಸವವನ್ನು ಬೇರೊಂದು ಕಡೆ ವರ್ಣಿಸಿದ್ದೇನೆ.) ಆ ರಾತ್ರಿ

ನನ್ನ ವಸತಿಗೆ ಹಿಂದಿರುಗಿದಾಗ ಕೊರೆಯುವ ಚಳಿಯೊಂದು ಹೊರತು ಬೇರೆ ಯಾವ ವಿಶೇಷವೂ ರಸ್ತೆಗಳಲ್ಲಿ ಕಾಣಬರಲಿಲ್ಲ. ಬೆಳಗ್ಗೆ ಎದ್ದು ನೋಡಿದರೆ ಎಲ್ಲೆಲ್ಲೂ ಹಿಮ ಸುರಿದಿದ್ದು ಹೊಸ ಅನುಭವವನ್ನು ಪ್ರವೇಶಗೊಳಿಸಿತ್ತು.

ವಾಯುಗುಣದಲ್ಲಿ ಉಷ್ಣಾಂಶ ತುಂಬ ಕೆಳಗಿಳಿದಾಗ ಮಳೆಯ ಬದಲು ಹಿಮ (Snow) ಬೀಳುತ್ತದೆ. ಇದು ಪ್ರಾರಂಭವಾಗುವಾಗ ಹತ್ತಿಯ ಎಳೆಗಳಂತೆ ಕಾಣಿಸಿಕೊಂಡು ತೆಳ್ಳತೆಳ್ಳಗೆ ಬೆಳ್ಳಬೆಳ್ಳಗೆ ಗಾಳಿಯಲ್ಲಿ ತೂರಾಡುತ್ತಾ ಹೇಗೋ ಭೂಮಿಯನ್ನು ಮುಟ್ಟುತ್ತದೆ. ನೆಲದ ಮೇಲೆ ಕೂಡ ಅದರ ಮೊದಮೊದಲ ನೆಲಸಿಕೆ ಬಲು ನವಿರು. ಕೈಗೆ ತೆಗೆದುಕೊಂಡು ಪರೀಕ್ಷಿಸಿದರೆ ಒಂದೊಂದು ಹಿಮದ ಎಸಳೂ (Snow flakes) ಅತಿ ಸೂಕ್ಷ್ಮವಾದ ಸ್ಫಟಿಕ ರಚನೆಯುಳ್ಳ ವಸ್ತು! ಈ ಎಸಳುಗಳು ದಟ್ಟವಾಗಿ ಬಿದ್ದ ಬಳಿಕ ಹತ್ತಿಯ ರಾಶಿಯನ್ನು ಹರಡಿರುವಂತೆ ಗೋಚರಿಸುತ್ತವೆ. ಆ ಮುಂದೆ ಬಿಸಿಲು ಬೀಳದಿದ್ದಲ್ಲಿ ಇದೆಲ್ಲ ಘನಿಭೂತವಾಗಿ ಮಂಜುಗಡ್ಡೆಯಾಗಿ, ನೀರ್ಗಲ್ಲಾಗಿ (ice) ಪರಿಣಮಿಸುತ್ತದೆ. ಆಗ ಕೂಡ ಬಿಳಿಯ ಉಪ್ಪಿನ ಹರಳುಗಳನ್ನು ರಾಶಿರಾಶಿಯಾಗಿ ಎಲ್ಲೆಲ್ಲೂ ಚೆಲ್ಲಿರುವಂತೆ ತೋರುತ್ತದೆ. ಇದರ ಮೇಲೆ ಪಾದರಕ್ಷೆಯನ್ನು ಧರಿಸಿ ನಡೆದರೆ ಸಣ್ಣಸಣ್ಣ ಗಾಜಿನ ಚೂರುಗಳನ್ನು ತುಳಿದಾಡಿದಂತೆ ಶಬ್ದಾನುಭವವಾಗುತ್ತದೆ. ಈ ನೀರ್ಗಲ್ಲ ತುಣುಕುಗಳ ಮೇಲೆ ಕೆಲವು ದಿನಗಳು ಸೂರ್ಯಸ್ಪರ್ಶವಾಗದೆ ತಡೆದರೆ, ಇವು ಕೂಡಿಕೊಂಡು ಇನ್ನಷ್ಟು ಗಡುಸಾಗಿ ನುಣುಪಾದ ಬೆಣಚುಗಲ್ಲಿನ ಸ್ತರದಂತೆ ತೋರುತ್ತವೆ. ಇದರ ಮೇಲೆ ನಡೆಯುವಾಗ ಜಾರಿಕೆ; ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ದೊಡ್ಡ ಅಡ್ಡಿ. ಒಮ್ಮೊಮ್ಮೆ ಕಾರುಗಳು ಹಿಮಪಾತಕ್ಕೆ ಸಿಕ್ಕಿಬಿದ್ದು ಅಲುಗಾಡಿಸಲಾಗದಷ್ಟು ಗಟ್ಟಿಯಾಗಿ ಹೂತುಕೊಂಡು ದಿನಗಟ್ಟಳೆ ರಸ್ತೆಯಲ್ಲೇ ಸೆರೆಯಾಗಿ ನಿಲ್ಲುವ ಸನ್ನಿವೇಶಗಳೂ ಉಂಟು. ಆಗ ನೀರ್ಗಲ್ಲನ್ನು ವಿಶೇಷ ರೀತಿಯ ಕೊಡಲಿ, ಗುದ್ದಲಿ ಮೊದಲಾದ ಸಲಕರಣೆಗಳಿಂದ ಕತ್ತರಿಸಿ, ಎತ್ತಿ ಹಾಕಿ ದಾರಿಯನ್ನು ಬಿಡಿಸಿಕೊಳ್ಳಬೇಕು. ಇಲ್ಲವೇ ಮತ್ತೆ ಬಿಸಿಲು ಚೆನ್ನಾಗಿ ಬಂದು, ನೀರ್ಗಲ್ಲು ತಾನಾಗಿಯೇ ಕರಗಿ ಹರಿದು ದಾರಿಮಾಡಿ ಕೊಡಬೇಕು. ಆಗ ಕೊಚ್ಚೆ ಕೆಸರುಗಳ ಕೋಟಲೆ. ಹಿಮದ ದ್ರವವೂ ರಸ್ತೆಯ ಮರಳು ಮಣ್ಣೂ ಮಿಶ್ರವಾಗಿ ಕಾಕಂಬಿಯ ಪಾಕದಲ್ಲಿ ಕಾಲಿಟ್ಟಂತೆ ಅನುಭವವಾಗುತ್ತದೆ . . . ಆದರೆ ಇಲ್ಲಿ ನನ್ನ ಉದ್ದೇಶ ಹಿಮದ ಅಸೌಕರ್ಯಗಳನ್ನು ಪಟ್ಟಿ ಮಾಡುವುದಲ್ಲ; ನನ್ನ ಹೃದಯವನ್ನು ಸೂರೆಗೊಂಡ ಅದರ ಕೆಲವು ಸೌಂದರ್ಯ ವಿಶೇಷಗಳನ್ನು ಉಲ್ಲೇಖಿಸುವುದು ಮಾತ್ರ!

ಕಾರ್ನೆಲ್ (Cornell) ವಿಶ್ವವಿದ್ಯಾನಿಲಯ ಅಮೆರಿಕದ ನ್ಯೂಯಾರ್ಕ್ ಸಂಸ್ಥಾನದ ಇಥಕ (Ithaca) ಎಂಬ ಪಟ್ಟಣದಲ್ಲಿ ಒಂದು ಮೇಡಿನ ಮೇಲೆ ಇದೆ. ಅಲ್ಲಿಗೆ ನಾನು ಎರಡು ದಿನದ ಮಟ್ಟಿಗೆ ಹೋಗಿದ್ದಾಗ ಡಿಸೆಂಬರ್ ತಿಂಗಳ ಮೂರನೆಯ ವಾರ. ಆಗ ಕೊರೆಯುವ ಚಳಿಗಾಳಿ ಅಲೆಯುತ್ತಿತ್ತು, ಹಿಮದ ಮಳೆ ಆಗಾಗ ಸುರಿಯುತ್ತಿತ್ತು. ಆದರೆ ವಿಶ್ವವಿದ್ಯಾನಿಲಯದ ನಿವೇಶನದ ಎತ್ತರದಿಂದ ಹಿಮದ ಹರಹನ್ನು ನೋಡಿದಾಗ ಈ ಕೊರೆತವೆಲ್ಲವೂ ಮರೆತುಹೋಯಿತು. ಕಣ್ಣು ಹರಿಯುವಷ್ಟು ದೂರ ಬಯಲೆಲ್ಲವೂ

ಹಿಮಮಯ. ನೆಲದ ಮೇಲೆ ಮಾತ್ರವಲ್ಲ, ಮನೆಗಳ ಛಾವಣಿ, ಕಾರುಗಳ ನೆತ್ತಿ, ಮರಗಳ ಕೊಂಬೆಗಳು ಎಲೆಗಳು–ಎಲ್ಲದರ ಮೇಲೂ ದಟ್ಟವಾಗಿ ಬಿಳಿಯ ಹಿಟ್ಟನ್ನು ಚೆಲ್ಲಿದಂತೆ ಹಿಮ. ಹಾಗಲ್ಲ, ಈ ಸೊಗಸಿಗೆ "ಬಿಳಿಯ ಹಿಟ್ಟು"ಗಳಲ್ಲಿ ಎನ್ನುವುದು ಹೀನೋಪಮೆ. ನಿಜವಾಗಿ ಅದು "ಬೆಳುದಿಂಗಳ ಪುಡಿ" ಎನ್ನಿಸಿತು. ನಮ್ಮ ಕಾವ್ಯಗಳಲ್ಲಿ ಬರುವ ಬೆಳುದಿಂಗಳ ವರ್ಣನೆಗಳು ಸಹಜವಾಗಿ ನೆನಪಿಗೆ ಬಂದುವು. ಬೆಳುದಿಂಗಳಿನಂತೆಯೇ ಹಿಮವೂ ಕೂಡ ಕವಿದ ವಸ್ತುಗಳಿಗೆಲ್ಲ ಹೊಸ ಮೆರುಗನ್ನು ಕೊಡುತ್ತದೆ; ಹೊಸ ಮಾಯೆಯನ್ನು ಸೃಜಿಸುತ್ತದೆ. ಒಂದು ನಿದರ್ಶನ ಸಾಕು : ಇಥಕ ಪಟ್ಟಣದ ರೈಲ್ವೆ ನಿಲ್ದಾಣದ ಬಳಿ ಕೆಲಸಕ್ಕೆ ಬಾರದ ಹಳೆಯ ಕಬ್ಬಿಣದ ಮುರುಕು ತಗಡುಗಳ ಒಟ್ಟಿಲೊಂದು ಬಿದ್ದಿತ್ತು. ಅದರ ಮೇಲೆ ಹಿಮವರ್ಷವಾಗಿ, ಈ ಲೋಹರಾಶಿಯ ಭೂತಾಕೃತಿಗೆ ಬೆಳ್ಳಿಯ ಕವಚ ಭುಜಕೀರ್ತಿ ಕಿರೀಟಗಳನ್ನು ತೊಡಿಸಿದಂತೆ ಮೆರೆಯುತ್ತಿತ್ತು.

ಹಾರ್ವರ್ಡ್ ವಿಶ್ವವಿದ್ಯಾನಿಲಯಕ್ಕೆ ನಾನು ಹೋದದ್ದು ಜನವರಿ ತಿಂಗಳ ಎರಡನೆಯ ವಾರದ ಪ್ರಾರಂಭದಲ್ಲಿ. ಆ ವೇಳೆಗೆ ಅಲ್ಲಿ ಸೋನೆಮಳೆ ಹಿಡಿದಿತ್ತು. ಏಳೆಂಟು ದಿನಗಳು ಸೂರ್ಯನ ಮುಖವನ್ನೇ ಕಾಣದ ದುರ್ದಿನಗಳು. ಆ ಬಳಿಕ ಒಂದೆರಡು ದಿನ ಹಿಮದ ಮಳೆ ಬಿದ್ದು, ಬಿಸಿಲಿನ ಕಿರಣಗಳು ಕಾಣಿಸಿಕೊಂಡುವು. ಕಾರ್ನೆಲ್‌ನಲ್ಲಿ ಹಿಮದ ವಿಸ್ತಾರವನ್ನು ನೋಡಿದ್ದೆ. ಹಾರ್ವರ್ಡ್‌ನಲ್ಲಿ ಅದರ ಸಾಂದ್ರತೆ ಅನುಭವಕ್ಕೆ ಬಂದಿತು. ಎಲ್ಲೆಲ್ಲೂ ಬಿಳಿಯ ಹಿಮಸಂಕುಲ ಒಂದು ಅಡಿಯಷ್ಟು, ಇನ್ನೂ ಹೆಚ್ಚು, ಆಳವಾಗಿ ಸುರಿದಿತ್ತು. ವಿಶ್ವವಿದ್ಯಾನಿಲಯದ ಅಂಗಳವಂತೂ (the yard) ಅಪೂರ್ವ ಶೋಭೆಯಿಂದ ಕಂಗೊಳಿಸುತ್ತಿತ್ತು. ಚಳಿಗಾಲದಲ್ಲಿ ಎಲ್ಲ ಗಿಡಮರಗಳೂ ಸಂಪೂರ್ಣವಾಗಿ ಎಲೆಯುದುರಿ, ಬರಡು ಕೊಂಬೆ, ಕಡ್ಡಿಗಳನ್ನು ಚಾಚಿಕೊಂಡು ನಿಂತಿರುತ್ತವೆ. ವಸಂತದಲ್ಲಿ ಅವುಗಳ ನಳನಳಿಸುವ ಈ ಚಿಗುರುಗಳನ್ನೂ ಶರತ್ಕಾಲದಲ್ಲಿ ಪರಿಣತ ಪರ್ಣಗಳ ವರ್ಣರಂಜನೆಯನ್ನೂ ಕಂಡಿದ್ದ ಕಣ್ಣುಗಳಿಗೆ ಈ ಬಕ್ಕಬೋರಲು ದೃಶ್ಯ ತುಂಬ ಅಸುಖವನ್ನುಂಟು ಮಾಡುತ್ತದೆ. ಆದರೆ ಹಿಮ ಬಿದ್ದಮೇಲೆ ಇವುಗಳಲ್ಲಿ ಮತ್ತೊಂದು ರೂಪ ಪರಾವರ್ತನೆ ನಡೆಯುತ್ತದೆ. ಗಿಡಗಳ ರೆಂಬೆಗಳ ಮೇಲೆ ಹಿಮ ತೆಳ್ಳಗೆ ಕವಿದು ಆಯಾ ಆಕೃತಿಗಳು ರೇಖೆಗೆಡದಂತೆ ಹೆಪ್ಪುಗಟ್ಟುತ್ತದೆ. ಹಿಮದ ಲೇಪ ಗಾಢವಾದರೆ ಗಿಡಗಳು ಬೆಳ್ಳಿಯಿಂದ ಎರಕ ಹೊಯ್ದಂತೆ ಮಿನುಗುತ್ತವೆ; ಅದು ಸೂಕ್ಷ್ಮವಾಗಿ ಪಾರದರ್ಶಕತೆಯನ್ನು ಕೆಲಮಟ್ಟಿಗೆ ಉಳಿಸಿರುವ ಕಡೆ ಗಿಡಗಳು ಕರ್ಪೂರ ಶಲಾಕೆಯಿಂದ ರಚಿಸಿದಂತೆ ಕಂಗೊಳಿಸುತ್ತವೆ. ಒಂದು ಹರೆಯದ ಗಿಡವಂತೂ ಶ್ವೇತ ಶುಭ್ರವಸನವನ್ನು ಧರಿಸಿ ತನ್ನ ವಿವಾಹ ಮಹೋತ್ಸವಕ್ಕಾಗಿ ಚರ್ಚಿಗೆ ಹೊರಟುನಿಂತ ತನೂದರಿಯಂತೆ ಭಾಸವಾಗುತ್ತಿತ್ತು. (ಬೆಂಗಳೂರಿನ ಲಾಲ್‌ಬಾಗಿನಲ್ಲಿ ವಸಂತಕಾಲದಲ್ಲಿ ಎಳಗೆಂಪಿನ ಹೂ ಗೊಂಚಲುಗಳನ್ನು ತಲೆ ತುಂಬ ಮುಡಿದುಕೊಂಡು, ಆಧುನಿಕ ತರುಣಿಯರಂತೆ ಬಳುಕುತ್ತಾ ನಿಲ್ಲುವ ಕೆಲವು ಗಿಡಗಳ ವಿಲಾಸ ನೆನಪಿಗೆ ಬಂದಿತು!) ದೊಡ್ಡ ಮರಗಳದು ಬೇರೊಂದು ವಿನ್ಯಾಸ. ರೆಂಬೆಗಳು ಅವುಗಳಲ್ಲಿಯೂ ಹಿಮಾವೃತವಾಗಿದ್ದರೂ, ಕಾಂಡದಲ್ಲಿ ಒಂದು ಮಗ್ಗುಲು ಬಿಳುಪು, ಇನ್ನೊಂದು ಬೋರಲು. ವಿಶ್ವವಿದ್ಯಾನಿಲಯದ ವಿಶಾಲವಾದ

ಅಂಗಳದಲ್ಲಿ ನಾಲ್ಕು ಅಂಚುಗಳಲ್ಲೂ ಬೆಳ್ಳಿಯ ತಗಡನ್ನು ಹೊದಿಸಿದಂತೆ ಕಟ್ಟಡಗಳ ಛಾವಣಿಗಳು; ಕೆಳಗೆ ಬಿಳಿಸಕ್ಕರೆಯನ್ನು ಹರಡಿದಂತಿರುವ ನೆಲ. ನಡುವೆ ಈ ವಿಚಿತ್ರವಾದ ಹೊದಿಕೆಯ ಗಿಡಮರಗಳು. ಯಕ್ಷಲೋಕಕ್ಕೇನಾದರೂ ಬಂದಿದ್ದೇವೆಯೋ ಎಂಬಂತೆ ಭಾಸವಾಗುತ್ತಿತ್ತು. ಹಿಮದ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು, ಯಾರೋ ಅಲ್ಲೆ ಬಿಟ್ಟು ಹೋಗಿದ್ದ, ಒಂದು ಬೈಸಿಕಲ್ಲಿಗೂ ಹೊಸ ಕಳೆ ಬಂದಿತ್ತು. ಅದರ ಪೀಠದ ಮೇಲೂ "ಕ್ಯಾರಿಯರಿ"ನ ಮೇಲೂ ಹಿಮದ ಗುಪ್ಪೆಗಳು ಸವಾರಿಗಾಗಿ ಕುಳಿತ ಯಕ್ಷ ಶಿಶುಗಳಂತೆ ತೋರುತ್ತಿದ್ದುವು!

ಹಿಮ ಸುರಿಯಿತೆಂದರೆ ಮಕ್ಕಳಿಗೆ ದೊಡ್ಡ ಹಬ್ಬ; ನಮ್ಮಲ್ಲಿ ಆಲಿಕಲ್ಲ ಮಳೆ ಬಿದ್ದರೆ ಹೇಗೋ ಹಾಗೆ. ಬೀದಿಗೆ ನುಗ್ಗಿ ಬೊಗಸೆ ತುಂಬ ಹಿಮವನ್ನು ಎತ್ತಿಕೊಂಡು ಉಂಡೆಗಳಾಗಿ ಕಟ್ಟಿ ಒಬ್ಬರ ಮೇಲೊಬ್ಬರು ಎಸೆದಾಡುತ್ತಾರೆ; ದೊಡ್ಡವರನ್ನೂ ಈ ಆಟಕ್ಕೆ ಆಹ್ವಾನಿಸುತ್ತಾರೆ. ಮಕ್ಕಳ ಕೈಯಲ್ಲಿ ಈ ಹಿಮಕಂದುಕಗಳು ಬೆಣ್ಣೆಯ ತೆರಳೆಗಳಂತೆ ಕಾಣಿಸುತ್ತವೆ. ಶೀತಾಂಶ ಅಧಿಕವಾದಾಗ ಕೊಳ ಕುಂಟೆಗಳಲ್ಲಿ, ಕೆಲವು ಹೊಳೆಗಳಲ್ಲಿ ಕೂಡ, ನೀರು ಹೆಪ್ಪುಗಟ್ಟಿ ದೃಢವಾದ ನೀರ್ಗಲ್ಲಾಗುತ್ತದೆ. ಅದರ ಮೇಲೆ ಮಕ್ಕಳೂ ದೊಡ್ಡವರೂ ಸ್ಕೇಟ್ (Skate) ಎಂಬ ಪಾದುಕೆಗಳನ್ನು ಕಟ್ಟಿಕೊಂಡು ಜಾರುವ ಆಟವಾಡುತ್ತಾರೆ. ಘನಿಸಿದ ಕ್ಷೀರ ಸರೋವರದಂತಿರುವ ನೀರ್ಗಲ್ಲ ಬಿಳಿಯ ಹರಹಿನ ಮೇಲೆ ಕೆಂಪು ನೀಲಿ ಹಸುರು ಮೊದಲಾದ ಅನೇಕ ವರ್ಣಗಳ ಉಡಿಗೆ ತೊಡಿಗೆಗಳನ್ನು ಧರಿಸಿಕೊಂಡು ಮಕ್ಕಳು ಎದ್ದುಬಿದ್ದು ಹರಿದಾಡುವುದನ್ನು ನೋಡುವುದು ಕಣ್ಣಿಗೆ ಬಲುಹಿತ. ರಂಗಮಂದಿರಗಳಲ್ಲಿ ನೀರ್ಗಲ್ಲಿನ ನೆಲಗಟ್ಟನ್ನು ಕೃತಕವಾಗಿ ರಚಿಸಿ ಅದರ ಮೇಲೆ ನೃತ್ಯ ಪ್ರದರ್ಶನಗಳನ್ನು ಏರ್ಪಡಿಸುವುದೂ ಉಂಟು. ಒಮ್ಮೆ ನ್ಯೂಯಾರ್ಕ್ ನಗರದಲ್ಲಿ ಸೋನಿಯ ಹೆನ್ಯೆ (Sonia Henje) ಎಂಬ ವಿಖ್ಯಾತ ನರ್ತಕಿ ನಂಬಲಾಗದ ವೇಗದೊಡನೆ ಪ್ರದರ್ಶಿಸಿದ ನರ್ತನಮಾಲೆಯನ್ನು ವಿಸ್ಮಿತ ನಯನಗಳಿಂದ ನೋಡಿದ್ದು ನನಗೆ ಇನ್ನೂ ಮರೆತಿಲ್ಲ.

ಹಿಮದ ಭವ್ಯತೆಯನ್ನು ಅರಿಯಬೇಕಾದರೆ, ಅದು ಅನಾದಿಕಾಲದಿಂದಲೂ ನೀರ್ಗಲ್ಲಾಗಿ ಘನಿಸಿ ಯಾವ ಸೂರ್ಯ ಪ್ರತಾಪಕ್ಕೂ ಸಗ್ಗದೆ ನೆಲೆನಿಂತಿರುವ ಪರ್ವತ ಪ್ರದೇಶಗಳಿಗೆ ಹೋಗಿ ನೋಡಬೇಕು. ನಾನು ಈ ದರ್ಶನವನ್ನು ಪಡೆದದ್ದು ಸ್ವಿಟ್ಸರ್‌ಲೆಂಡ್‌ನಲ್ಲಿ ಇದು ಗಿರಿ ಸರೋವರಗಳ ಸಮೃದ್ಧ ಸೌಂದರ್ಯದ ದೇಶ. ಇಲ್ಲಿ "ಯುಂಗ್ ಫೌ" ("Jungfrau" "ನವಕನ್ಯೆ") ಎಂಬ ಗಿರಿಶಿಖರ—"ಗಿರಿಶಿಖರಿಣಿ" ಎನ್ನಬೇಕೋ?—ಸಮುದ್ರದ ಮಟ್ಟದಿಂದ ಹದಿಮೂರುವರೆ ಸಾವಿರ ಅಡಿಗಳಿಗಿಂತಲೂ ಉನ್ನತವಾಗಿ ಧವಳ ಹಿಮಧಾರಿಣಿಯಾಗಿ ಪ್ರೇಕ್ಷಕರಿಗೆ, ಪರ್ವತಾರೋಹಕರಿಗೆ ಆಹ್ವಾನವಿತ್ತು ನಿಂತಿದೆ. ಜೆನೀವ (Geneva) ನಗರದಿಂದ ಜ್ಯೂರಿಕ್ (Zurich) ನಗರಕ್ಕೆ ಹೋಗುವಾಗ ನಾನು ಇದನ್ನು ನೋಡಬೇಕೆಂದೇ ಬಳಸುದಾರಿಯಲ್ಲಿ ಪ್ರಯಾಣಮಾಡಿದೆ. ಜೆನೀವದಿಂದ ನಾನು ಹಿಡಿದ ದಾರಿ ಜೆನೀವ ಸರೋವರದ ಉತ್ತರದ ದಂಡೆಯನ್ನು ಸುತ್ತಿಕೊಂಡು ಸಾಗುತ್ತದೆ. ಬಲಪಕ್ಕದಲ್ಲಿ ಅಪರಾಹ್ಣದ ಸೂರ್ಯನ ಕಿರಣಗಳಲ್ಲಿ ಮಿಂದು ಮಿಂಚುವ ನೀಲಜಲರಾಶಿ. ಎಡಪಕ್ಕದಲ್ಲಿ ಉದ್ದಕ್ಕೂ ಅಲ್ಲಲ್ಲೇ ಊರುಗಳಿಂದ ಗಿರಿಧಾಮಗಳಿಂದ ಸೊಗಸುವ

ಬೆಟ್ಟಸಾಲು. ಅಲ್ಲಿ ಒಂದು ಕಡೆ ಬೆಟ್ಟದ ಮೇಲೆ ನಿಮಿರಿ ನಿಂತು, ಬೈರನ್ ಕವಿಯ 'Prisoner of Chillon' ('ಷಿಲನಿನ ಸೆರೆಯಾಳು') ಎಂಬ ಕವನವನ್ನು ನೆನಪಿಗೆ ತಂದುಕೊಟ್ಟ ಷಿಲನ್ ಕೊತ್ತಳ (Chillon Castle). ದಾರಿಯ ದೃಶ್ಯಗಳನ್ನು ಸವಿಯುತ್ತಾ, ಯುಂಗ್ ಫ್ರೌ ಗಿರಿ ಶಿಖರಕ್ಕೆ ಪ್ರವೇಶಭೂಮಿಯಾದ ಇಂಟರ್‌ಲಾಕೆನ್ (Interlaken) ಎಂಬ ಊರಿಗೆ ಅಂದು ಸಂಜೆ ನಾನು ಮುಟ್ಟಿದೆ.

ಇಲ್ಲಿ ಸ್ವಿಸ್ ರೈಲ್ವೆ ವ್ಯವಸ್ಥೆಯನ್ನು ಕುರಿತು ಒಂದು ಮಾತನ್ನು ಹೇಳಬೇಕು. ಜೆನೀವದಿಂದ ಇಂಟರ್‌ಲಾಕೆನ್‌ಗೆ ಇರುವುದೆಲ್ಲ ಕೇವಲ ಒಂದು ಅಪರಾಹ್ಣದ ಪ್ರಯಾಣ. ಈ ಪರಿಮಿತದೂರ, ಈಗ ನನಗೆ ನೆನಪಿರುವಂತೆ, ನಾಲ್ಕು ರೈಲ್ವೆ ಕಂಪನಿಗಳ ಆಡಳಿತದಲ್ಲಿ ಹಂಚಿಕೆಯಾಗಿದೆ. ಒಂದೊಂದರ ಎಲ್ಲೆ ಬಂದಾಗಲೂ ತಾನು ಕುಳಿತಿದ್ದ ಟ್ರೇನಿನಿಂದ ಪ್ರಯಾಣಿಕನು ಇಳಿದು ಸಮೀಪದಲ್ಲಿ ನಿಂತಿರುವ ಬೇರೊಂದಕ್ಕೆ ಹತ್ತಬೇಕು. ಒಂದು ಕಡೆಯಲ್ಲಂತೂ ಒಂದಕ್ಕೂ ಇನ್ನೊಂದಕ್ಕೂ ಇದ್ದ ವೇಳೆಯ ಅಂತರ ಕೇವಲ ಐದು ನಿಮಿಷಗಳು ಮಾತ್ರ. ನನ್ನ ಜೊತೆಗೆ ಕೆಲವು ಸಾಮಾನುಗಳೂ ಇದ್ದುದರಿಂದ ಪೋರ್ಟರನ್ನು ಕೂಗಿ ಸಾಮಾನುಗಳನ್ನು ಒಂದರಿಂದ ಇಳಿಸಿಕೊಂಡು ಹೋಗಿ ಇನ್ನೊಂದರಲ್ಲಿ ಕುಳಿತುಕೊಳ್ಳಬೇಕಾಯಿತು. ಅಕಸ್ಮಾತ್ತಾಗಿ ಮೊದಲ ಟ್ರೇನು ತಡವಾಗಿ ಬಂದು ಅಷ್ಟರಲ್ಲಿ ಮುಂದಿನದು ಹೊರಟು ಹೋಗಿದ್ದರೆ, ನನ್ನ ಪ್ರಯಾಣದ ವ್ಯವಸ್ಥೆಯೆಲ್ಲ ತಲೆಕೆಳಗಾಗುವುದಲ್ಲ ಎಂದು ಚಿಂತೆಯಾಯಿತು. ಜೆನೀವದಲ್ಲಿ ನನ್ನ ಟಿಕೆಟ್ಟುಗಳ ಏರ್ಪಾಡು ಮಾಡಿದ ಟಾಮಸ್ ಕುಕ್ (Thomas Cook) ಕಂಪನಿಯ ಪ್ರತಿನಿಧಿಯನ್ನು ಕುರಿತು, "ಒಂದು ಟ್ರೇನಿಗೂ ಮತ್ತೊಂದಕ್ಕೂ ನಡುವೆ ಇರುವ ಕಾಲಾವಕಾಶ ಕೇವಲ ಐದು ನಿಮಿಷವೆಂದರೆ ಬಹಳ ಕಡಮೆಯಲ್ಲವೆ?" ಎಂದು ಕೇಳಿದೆ. ಅದಕ್ಕೆ ಆತ, ("ಐದು ನಿಮಿಷ ಎಂದರೆ ಐದೂ ನಿಮಿಷ") "Five minutes is five minutes" ಎಂದು ಉತ್ತರಕೊಟ್ಟನು. ಸ್ವಿಸ್ ಟ್ರೇನ್‌ಗಳು ಅಷ್ಟು ನಿಯತವಾಗಿ ಕಾಲಬದ್ಧವಾಗಿ ಸಂಚರಿಸುತ್ತವೆ. ಎಂಬುದು ಆತನ ದೃಢವಿಶ್ವಾಸವಾಗಿತ್ತು—ಅದು ಸಾಧಾರವೂ ಆಗಿತ್ತು. ಒಂದು ನಿಮಿಷ ಕೂಡ ಹೆಚ್ಚು ಕಡಮೆಯಾಗದಂತೆ ರೈಲು ನಡಸುವುದು ಸ್ವಿಸ್ ಜನಾಂಗದವರ ಅಪೂರ್ವಗುಣ! ಸ್ವಿಟ್ಸರ್‌ಲೆಂಡಿನಲ್ಲಿ ರೈಲ್ವೆ ಪ್ರಯಾಣಮಾಡಿದ ಎಲ್ಲ ಸಂದರ್ಭಗಳಲ್ಲೂ ಅವರ ಈ ಹೆಚ್ಚುಗಾರಿಕೆಗೆ ಪೂರ್ಣನಿದರ್ಶನ ದೊರೆಯಿತು.

ಇನ್ನು "ಯುಂಗ್ ಫ್ರೌ" ಯಾತ್ರೆಯ ಕಡೆಗೆ ತಿರುಗೋಣ. ವಿಶೇಷ ರೀತಿಯ ಸುರಕ್ಷಣೆಯ ಸಾಧನೆಗಳುಳ್ಳ ವಿದ್ಯುಚ್ಛಕ್ತಿಯ ರೈಲ್ವೆಯಲ್ಲಿ ಇಂಟರ್‌ಲಾಕೆನ್ನಿನಿಂದ ಪ್ರಾತಃಕಾಲ ಹೊರಟು ಅತಿಮಂದವಾದ ವೇಗದಲ್ಲಿ ಬೆಟ್ಟವನ್ನೇರಬೇಕು. ಅಂದು ಮಾರ್ಚಿ ೧೪ನೆಯ ತಾರೀಖಾದರೂ ಚಳಿಗಾಲ ಇನ್ನೂ ಮುಗಿದಿರಲಿಲ್ಲ; ಆದರೆ ಬೆಚ್ಚನೆ ಉಡುಪನ್ನು ಧರಿಸಿದ್ದ ಪ್ರವಾಸಿಗಳಿಗೆ ಚಳಿಯ ಕೊರೆತ ಸಹ್ಯವಾಗಿತ್ತು; ಹಿತವಾಗಿತ್ತು ಎಂದು ಕೂಡ ಹೇಳಬಹುದು. ಸ್ವಚ್ಛವಾದ ವಾತಾವರಣ, ಆಕಾಶದಲ್ಲಿ ನಿರ್ಮಲ ನೀಲವರ್ಣ, ದಾರಿಯಲ್ಲಿ ಅಲ್ಲಲ್ಲೇ ಕಂಗೊಳಿಸುತ್ತಿದ್ದ ಹಿಮನದಿಗಳು, ಹೆಪ್ಪುಗಟ್ಟಿದ ಝುರಿಗಳು, ಎಲ್ಲೋ ಒಂದೊಂದು ಕಡೆ ಸಣ್ಣಗೆ ಹರಿಯುವ ನೀರಿನ ಎಸಳುಗಳು, ಕಣಿವೆಗಳಲ್ಲಿ ನೀಳವಾದ ಫರ್ (Fir)

ವೃಕ್ಷಗಳ ಸಾಲು ಸಾಲುಗಳು, ಅವುಗಳ ನಡುವೆ ಅಲ್ಲಲ್ಲೇ ಮರದ ಮನೆಗಳು, ಅಕ್ಕ ಪಕ್ಕಗಳಲ್ಲಿ ಬೆಟ್ಟಗಳ ಸಾನುಪ್ರದೇಶಗಳ ನೀರ್ಗಲ್ಲಿನ ವಿಸ್ತಾರದ ಮೇಲೆ "ಸ್ಕೀಯಿಂಗ್" (Skiing) ಎಂಬ ಜಾರಿಕೆ-ಹಾರಿಕೆಯ ಕ್ರೀಡೆಯಲ್ಲಿ ನಿರತರಾಗಿರುವ ತರುಣ ತರುಣಿಯರು. ರೈಲಿನಲ್ಲಿ ಕೂಡ, "ಸ್ಕೀಯಿಂಗ್" ಸಾಧನಗಳನ್ನು ಹೊತ್ತುಕೊಂಡು ಬಂದಿರುವ ಜೊತೆಯ ಪ್ರಯಾಣಿಕರ ತಂಡಗಳು. ಇದರ ಮೇಲೆ, ಬೆಟ್ಟದ ಶಿಲಾಘನದಲ್ಲಿ ಕೊರೆದು ನಿರ್ಮಿಸಿದ, ಸುಮಾರು ಐದು ಮೈಲಿಯಷ್ಟು ದೀರ್ಘದೂರದ ಸುರಂಗದ ಪ್ರಯಾಣ ಬೇರೆ; ಪ್ರಯಾಣದಲ್ಲಿ ತುದಿಗೆ ಪ್ರಪಂಚದಲ್ಲೇ ಬಹುಶಃ ಅತ್ಯುನ್ನತವಾದ ಮಟ್ಟದಲ್ಲಿರುವ ಯುಂಗ್ ಫ್ರೌಯೋಖ್ (Jung fraujoch) ಎಂಬ ರೈಲ್ವೆ ನಿಲ್ದಾಣ—ಇದರ ಎತ್ತರ ಸಮುದ್ರದ ಮಟ್ಟದಿಂದ ೧೧,೩೪೦ ಅಡಿಗಳು! ಭಾರತದ ಉಷ್ಣವಲಯ ಭಾಗದಿಂದ ಹೋದ ಪ್ರವಾಸಿಗಂತೂ ಇದೆಲ್ಲ ಅಪೂರ್ವವಾದ ದೃಶ್ಯಾವಳಿ.

ಅಂದು ನಮ್ಮ ಅದೃಷ್ಟಕ್ಕೆ ವಾತಾವರಣದಲ್ಲಿ ಎಳ್ಳಷ್ಟಾದರೂ ಮೋಡದ ಸುಳಿವಿರಲಿಲ್ಲ. ಮಂಜಿನ ಹಬೆಯೂ (mist) ಇರಲಿಲ್ಲ. ರೈಲಿನಲ್ಲಿ ಸಾವಕಾಶವಾಗಿ ಏರುತ್ತಿರುವಾಗ ಆಗಾಗ "ನವಕನ್ಯೆ"ಯ ದೂರದರ್ಶನ; ರೈಲ್ವೆ ತುದಿಯ ಬೆಟ್ಟದ ಏಣಿಯ ಪ್ರಸ್ಥಭೂಮಿಯನ್ನು ಮುಟ್ಟಿದ ಮೇಲಂತೂ ಸಮೀಪದ ದರ್ಶನ. ಅಲ್ಲಿ ನಿಂತು ಸುತ್ತಲೂ ನೋಡಿದರೆ ಒಂದು ಪಕ್ಕದಲ್ಲಿ, ಬಹುದೂರದವರೆಗೂ ವ್ಯಾಪಿಸಿದ ಅಕ್ಷತ ಹಿಮಕ್ಷೇತ್ರದ ಬಿಳುಪು, ಇನ್ನೊಂದು ಪಕ್ಕದಲ್ಲಿ, ಕೆಳಗೆ ತಗ್ಗಿನ ಕಣಿವೆಗಳಲ್ಲಿ ದಿಗಂತದವರೆಗೂ ಗೋಚರಿಸುವ ವನರಾಜಿಯ, ಹುಲ್ಲು ಹಸಲೆಯ ಹಸುರು. ಎದುರಿಗೆ ಶುಭ್ರವಸನೆಯಾದ ಈ ಅಪಾರ್ಥಿವ "ಕನ್ಯೆ" ನೋಡಿ ನೋಡಿ ನನ್ನ ಕಣ್ಣುಗಳ ಬರ ಹಿಂಗಿತು. ಆಗ ನನ್ನ ಬಳಿ ಬಿಸಿಲ ಕನ್ನಡಕ ಇರಲಿಲ್ಲ. ಆದಕಾರಣ ಹಿಮದ ಹೊಳಪನ್ನು ನನ್ನ ಜೊತೆಗೆ ಯಾತ್ರಿಕರಿಗಿಂತ ಹೆಚ್ಚಾಗಿಯೇ ನನ್ನ ಕಣ್ಣುಗಳಿಗೆ ತುಂಬಿಕೊಂಡೆ!

ಈ ಬೆಟ್ಟಸಾಲಿನ ಒಂದು ಉನ್ನತಸ್ಥಾನದಲ್ಲಿ ಕಟ್ಟಡವೊಂದರ ಗೋಪುರ ಎದ್ದು ನಿಂತಿದೆ. ಆ ಕಟ್ಟಡ ಧಾರ್ಮಿಕರಿಗೆ ಆಕರ್ಷಕವಾಗಬಹುದಾದ ಚರ್ಚ್ ಅಲ್ಲ. ಪ್ರವಾಸಿಗಳಿಗೆ ಪ್ರಿಯವಾಗಬಹುದಾದ ಹೋಟಲೂ ಅಲ್ಲ. (ಈ ಜಾಗದಲ್ಲಿ ಹೋಟಲೂ ಉಂಟು; ಅದಿಲ್ಲದೆ ಪ್ರವಾಸಿಯ ಬದುಕು ಸಾಗುವುದು ಹೇಗೆ? ಆದರೆ ಅದಕ್ಕೆ ಈ ಅಗ್ರಸ್ಥಾನವಿಲ್ಲ.) ಸ್ವಿಟ್ಸರ್‌ಲೆಂಡ್ ಕ್ರೈಸ್ತ ಧರ್ಮದ ಸುಧಾರಕರಲ್ಲಿ ಒಬ್ಬನಾಗಿದ್ದ ಜಾನ್ ಕ್ಯಾಲ್ವಿನ್ನನ ದೇಶ; ಸ್ವಿಸ್ ಜನರು ಹೋಟಲಿನ ಉದ್ಯಮವನ್ನು ನಡಸುವುದರಲ್ಲಿ ಅಗ್ರಗಣ್ಯರು. ಆದರೆ ಈ ಔನ್ನತ್ಯದಲ್ಲಿ ಅವರು ಸ್ಥಾಪಿಸಿರುವುದು ವಾಯುಮಾನ ಪರಿಶೀಲನೆ ಖಗೋಳವೀಕ್ಷಣೆ ಇವುಗಳ ಸಲುವಾಗಿ ವೇಧಶಾಲೆ (Observatory). ಈ ವೀಕ್ಷಣಮಂದಿರ ನಿಜವಾಗಿ ಇಲ್ಲಿಗೆ ಉಚಿತತಮವಾದ ಕಟ್ಟಡ. ಇಷ್ಟು ಎತ್ತರದ ಗಿರಿ ಶಿಖರಕ್ಕೆ ಸಾಧಾರಣ ಪ್ರೇಕ್ಷಕರು ಕೂಡ ಆಯಾಸವಿಲ್ಲದೆ ಬಂದು ಇಲ್ಲಿಯ ಅಲೌಕಿಕ ಸೌಂದರ್ಯವನ್ನು ಮನಗಾಣಲು ಅನುಕೂಲವಾಗುವಂತೆ ಈ ಬೆಟ್ಟದ ರೈಲ್ವೆಯನ್ನು ಅನೇಕ ಅಡ್ಡಿ ಅಡಚಣೆಗಳನ್ನೂ ಅತಿಶ್ರಮದಿಂದ ಗೆದ್ದು ನಿರ್ಮಿಸಿದ ಸ್ವಿಸ್ ಯಂತ್ರ ವಿದ್ಯಾಪರಿಣತರ ಸಾಹಸಕ್ಕೆ ಇದು ಅಪ್ರತಿಮವಾದ ಪ್ರತೀಕ.

ನಮ್ಮ ರೈಲು ಬೆಟ್ಟದ ಮೇಲಿನಿಂದ ಇಳಿಯಲು ತೊಡಗಿದಾಗ ಇಳಿ ಹೊತ್ತಿಗೆ ತಿರುಗಿತ್ತು. ಆಗಲೂ "ಯುಂಗ್ ಫ್ರೌ" ದರ್ಶನ ಮುಗಿಯಲಿಲ್ಲ. ಈಗ ಮಾತ್ರ ಆಕೆಯ ಮುಖವನ್ನು ಬಲು ತೆಳುವಾದ ನೀಲ ಮೇಘಗಳು ಮುಸುಕಿಯೂ ಮುಸುಕದಂತೆ ಆವರಿಸಿದ್ದುವು. ಈ ಅವಗುಂಠನವತಿಯಾದ "ನಮ್ಮ ಕನ್ಯೆ"ಯ ನೋಟವೂ ಮನೋಹರವಾಗಿತ್ತು. ಒಮ್ಮೆ ಈ ಮುಸುಕು ಕೊಂಚ ಓಸರಿಸಿ, ಮುಖದ ಮೇಲುಭಾಗವನ್ನು ತೆರೆದು ತೋರಿಸಿ ಗಲ್ಲವನ್ನು ಮಾತ್ರ ಮುಚ್ಚಿದ್ದಂತೆ ಕಾಣಿಸಿತು! ನಾವು ಇಣಟರ್‌ಲಾಕೆನ್‌ಗೆ ಸಮಿಾಸುತ್ತಿರುವಾಗ ಇಕ್ಕೆಲಗಳಲ್ಲೂ ಬಲಿಷ್ಠವಾದ ಬೆಟ್ಟ ಸಾಲುಗಳು ನೆತ್ತಿಯಮೇಲೆ ಒಂದಿಷ್ಟು ಹಿಮದ ಗುಪ್ಪೆಯ ಕಾಣಿಕೆಯನ್ನು ಎತ್ತಿಹಿಡಿದು, ಎತ್ತರದಲ್ಲಿ ಮೇಘಸಿಂಹಾಸನದ ಮೇಲೆ ಮಂಡಿಸಿದ "ನವಕನ್ಯೆ" ಮಹಾರಾಣಿಯನ್ನು ಓಲೈಸುವ ಆಸ್ಥಾನ ವೀರರಂತೆ ಭಾಸವಾದುವು. ಒಂದು ರೀತಿಯಲ್ಲಿ, ದೂರದಿಂದ ಪಡೆದ ಈ ವಿಭವಸಾಕ್ಷಾತ್ಕಾರವೇ ಪರಮ ರಮಣೀಯವೆನ್ನಿಸಿತು; ಈ ಯಾತ್ರೆಯ ಆನಂದಕ್ಕೆಲ್ಲ ಕಿರೀಟವೆನ್ನಿಸಿತು!

ಪ್ರವಾಸಿಯ ಪೆಟ್ಟಿಗೆಗಳು

ಪ್ರಿಯ ನ—,

ಭಾರತದಿಂದ ಅಮೆರಿಕಕ್ಕೆ ನಾನು ಪ್ರಯಾಣ ಮಾಡಿದಾಗ ಮಾರ್ಗದಲ್ಲಿ ಅಸಾಮಾನ್ಯ ಘಟನೆಯೊಂದಕ್ಕೆ ಒಳಗಾದೆನೆಂದು ಹಿಂದೆ ನಿಮಗೆ ಸೂಚಿಸಿದ್ದೆನಷ್ಟೆ. ವಿವರಗಳನ್ನು ಆಗ ಬರೆದು ತಿಳಿಸಲು ಅವಕಾಶವಾಗಲಿಲ್ಲ. ಅದೆಲ್ಲ ನಡೆದು ಹಲವು ದಿನಗಳಾದ ಮೇಲೆ ಈಗ ಬರೆಯಬೇಕು ಎನ್ನಿಸಿ ಈ ಮುಂದೆ ನಿವೇದಿಸಿದ್ದೇನೆ. ಮುಖ್ಯಾಂಶಗಳು ಎಷ್ಟರಮಟ್ಟಿಗೆ ನೆನಪಿನಲ್ಲಿ ನಿಂತು ಇಲ್ಲಿ ಬಂದಿವೆಯೋ, ನನ್ನ ಅನುಭವ ಕಹಿಸಿಹಿಗಳು ಎಷ್ಟರಮಟ್ಟಿಗೆ ಇಲ್ಲಿ ಭಟ್ಟಿಯಿಳಿದಿವೆಯೋ!

ಜೂನ್ ಹದಿನೇಳನೆಯ ರಾತ್ರಿ ನಾನು ಹತ್ತಬೇಕಾಗಿದ್ದ ವಿಮಾನ ಕೊಲಂಬೋದಿಂದ ಬೊಂಬಾಯಿಗೆ ಬಂದು ತಲಪಿದ್ದೇ ತುಂಬ ತಡವಾಗಿ. ರಾತ್ರಿ ಎಂಟೂವರೆಗೆ ಅದು ಬೊಂಬಾಯಿಂದ ಹೊರಡುವುದೆಂದು ನಂಬಿ, ನಾನೂ ನನ್ನಂತೆ ಕೆಲವರೂ ವಿಮಾನದ ಕಂಪನಿಯ ಕಚೇರಿಗೆ ಸಂಜೆಗೆ ಮುಂಚೆಯೇ ಬಂದು ಸೇರಿದ ಬಳಿಕ ಈ ನಿಧಾನದ ಸುದ್ದಿ ಕಿವಿಗೆ ಬಿತ್ತು. ಹತ್ತಿರದಲ್ಲೇ ಅಲ್ಲಲ್ಲಿ ಸುಳಿದಾಡುತ್ತಿದ್ದು, ಕಡೆಗೆ ಕಂಪನಿಯವರ ಬಸ್ಸಿನಲ್ಲಿ ಸಾಂತಾ ಕ್ರೂಸ್ ನಿಲ್ದಾಣವನ್ನು ಮುಟ್ಟಿದ ಮೇಲೆ ಕೂಡ, ಪ್ರಯಾಣಕ್ಕೆ ಎಷ್ಟೋ ಹೊತ್ತು ಮಿಕ್ಕಿತ್ತು. ಸಾಮಾನುಗಳನ್ನು ತೂಕ ಹಾಕಿಸುವುದು, ಪ್ರವಾಸಪತ್ರ ("ಪಾಸ್‌ಪೋರ್ಟ್"), "ವೀಸಾ" ಮೊದಲಾದವುಗಳನ್ನು ತನಿಖೆಮಾಡಿಸುವುದು,

ಬೀಳ್ಕೊಡಲು ಬಂದಿದ್ದ ಬಂಧುಮಿತ್ರರ ಸಂಗಡ ಸಲ್ಲಾಪ ನಡಸುವುದು—ಇದರಲ್ಲಿ ವೇಳೆ ಹಾಗೂ ಹೀಗೂ ಕಳೆಯಿತು. ಬಟ್ಟೆಬರೆ, ಪುಸ್ತಕ ಪುಡಿಸಾಮಾನು ಇವನ್ನು ಎಷ್ಟೋ ಹಗುರವಾಗಿ ತೆಗೆದುಕೊಂಡಿದ್ದೇನೆ ಎಂದು ನಾನು ಭಾವಿಸಿದ್ದರೂ, ತೂಕದ ಯಂತ್ರ ಮಾತ್ರ ನನ್ನ ಸಾಮಗ್ರಿ ಪರಿಮಿತಿಗೆ ಮೀರಿದೆ ಎಂದು ಘೋಷಿಸಿತು. ಅವಶ್ಯವಾದ ಕೆಲವು ಪರಿಕರಗಳನ್ನು ಮನಸ್ಸಿಲ್ಲದ ಮನಸ್ಸಿನಲ್ಲಿ ಕೆಳಗೆ ತೆಗೆದಿಟ್ಟು ಹಿಂದಕ್ಕೆ ಕಳಿಸಬೇಕಾಯಿತು. ಮನೆಯಿಂದ ಮಾಡಿಸಿಕೊಂಡು ತಂದಿದ್ದ ಚಟ್ನಿಪುಡಿಯ ಡಬ್ಬಿಯನ್ನೂ ಕೈಬಿಡಲೆ ಎಂದುಕೊಂಡೆ. ಮಿತ್ರರು, "ಅದರ ಉಪಯೋಗ ಮುಂದೆ ನಿನಗೆ ಗೊತ್ತಾಗುತ್ತದೆ; ಒಂದು ಪುಸ್ತಕವನ್ನೋ ಬಟ್ಟೆಯನ್ನೋ ಅದರ ಬದಲು ಕೆಳಗಿರಿಸು" ಎಂದರು. ನಾನು ಹಾಗೆಯೇ ಮಾಡಿದೆ—ಅವರು ಹೇಳಿದ್ದು ಸರಿ!

ಅಂತೂ ವಿಮಾನ ಸರಿಹೊತ್ತು ದಾಟಿದ ಬಳಿಕ, ಸುಮಾರು ಹನ್ನೆರಡೂವರೆಗೆ ಹೊರಟೇಬಿಟ್ಟಿತು. ಬೀಳ್ಕೊಡಲು ಬಂದಿದ್ದವರ ಮುಖಗಳು ಆ ಜನಸ್ತೋಮದಲ್ಲಿ, ಇರುಳಿನ ನೆಳಲುಬೆಳಕಿನಲ್ಲಿ ಮಸಕುಮಸುಕಾಗಿ ಗೋಚರಿಸುವಷ್ಟು ಕಾಲವೂ ವಿಮಾನದ ಕಿಟಕಿಯ ಪ್ಲಾಸ್ಟಿಕ್ ಗಾಜಿನ ಹಿಂದೆ ಮುಖವಿಟ್ಟುಕೊಂಡು ನೋಡುತ್ತಿದ್ದುದಾಯಿತು. ವಿಮಾನ ಮೊದಲು ಕೆಲವು ದೂರ ಟಾರ್‌ಮ್ಯಾಕ್ ರಸ್ತೆಯ ಮೇಲೆ ಹರಿದೋಡಿ, ಬಳಿಕ ಪ್ರಯಾಣಿಕರಿಗೆ ಅರಿವೇ ಆಗದಂತೆ ಮೇಲಕ್ಕೇರಿತು. ಕಣ್ಣಿನ ನೇರಕ್ಕೆ ಕಾಣಿಸುತ್ತಿದ್ದ ಮುಖಗಳು, ದೀಪಗಳು, ಕಟ್ಟಡಗಳು—ಎಲ್ಲವೂ ಕೆಳಕೆಳಗೆ, ದೂರದೂರಕ್ಕೆ ಸರಿದುವು. ಎಷ್ಟೇ ಧೈರ್ಯದಿಂದ ಬಿಗಿಗೂಡಿದ್ದರೂ, ಪ್ರಯಾಣದ ವಿಮೆ ಮಾಡಿರುವುದನ್ನು ನೆನೆದು ಸಮಾಧಾನಪಡುತ್ತಿದ್ದರೂ, ವಿಮಾನ ಚಲಿಸತೊಡಗಿದಾಗ ಅದರ ಸ್ಪಂದನಕ್ಕೆ ಮರುಮಿಡಿಯುವಂತೆ ಸ್ವಲ್ಪ—ಸ್ವಲ್ಪವೇ ಸ್ವಲ್ಪ—ಅದಿರುತ್ತಿದ್ದ ನನ್ನ ಹೃದಯ ವಾಯುಪಥಕ್ಕೇರಿ ಈಗ ಹದಕ್ಕೆ ಬಂದಿತು, ಹಗುರವಾಯಿತು. ಬೊಂಬಾಯಿ ನಗರದ ದೀಪರಾಶಿ ಕತ್ತಲಲ್ಲಿ ಕರಗಿಹೋದ ಮೇಲೆ, ಸೊಂಟಕ್ಕೆ ಬಿಗಿದುಕೊಂಡಿದ್ದ ಪೀಠದ ಪಟ್ಟಿಯನ್ನು (seat belt) ಬಿಚ್ಚಿ, ಒರಗು ಕುರ್ಚಿಯ ಬೆನ್ನನ್ನು ಇನ್ನಷ್ಟು ಹಿಂದಕ್ಕೆ ಬಾಗಿಸಿ, ಕಾಲುಗಳನ್ನು ಸಾಧ್ಯವಾದಷ್ಟೂ ನೀಡಿ ಮಿಕ್ಕ ಪ್ರಯಾಣಿಕರಂತೆಯೇ ನಾನೂ ವಿಶ್ರಾಂತಿ ಪಡೆಯಲು ಪ್ರಯತ್ನ ಮಾಡಿದೆ. ಕಣ್ಣಿಗೂ ಜೊಂಪು ಹತ್ತಿತು.

ನಾಲ್ಕು ಘಂಟೆ ತಡವಾಗಿ ಹೊರಟ ವಿಮಾನ ಆ ಅಂತರವನ್ನೇ ಉದ್ದಕ್ಕೂ ಶ್ರದ್ಧೆಯಿಂದ ಬಲುಮಟ್ಟಿಗೆ ಪಾಲಿಸಿತು. ಪ್ಯಾರಿಸ್ ನಗರಕ್ಕೆ ನಾವು ೧೮ ನೆಯ ಸಂಜೆ ಐದೂವರೆ ಘಂಟೆಗೆ ಸೇರಬೇಕಾಗಿತ್ತು; ಆದರೆ ಅಲ್ಲಿಗೆ ನಮ್ಮ ವಿಮಾನ ಮುಟ್ಟಿದಾಗ ರಾತ್ರಿ ಒಂಬತ್ತಕ್ಕೆ ಮೀರಿತ್ತು. ಬೇಸಗೆಯ ಸಂಧ್ಯಾಕಾಲದ ತಂಗುಬೆಳಕು ಕೂಡ ಅಳಿದುಹೋಗಿ ಕತ್ತಲೆ ಕವಿದಿತ್ತು.

ನಾನು ಕುಳಿತಿದ್ದ T.W.A. ಕಂಪನಿಯ ವಿಮಾನ ಕೊಲಂಬೋದಿಂದ ಬೊಂಬಾಯಿಗೆ ಮುಟ್ಟಿ, ಕೈರೋ, ರೋಮ್ ಮೊದಲಾದ ನಗರಗಳ ಮೂಲಕ ಪ್ಯಾರಿಸ್ಸಿಗೆ ಬಂದು ಅಲ್ಲಿಂದ ನೇರವಾಗಿ ನ್ಯೂಯಾರ್ಕಿಗೆ ಹೋಗತಕ್ಕದ್ದು. ಎರಡು ರಾತ್ರಿಗಳ ಕಾಲ

ಒಂದೇ ಸಮನೆ ನಿಲುಗಡೆಯಿಲ್ಲದೆ ಪ್ರಯಾಣ ಮಾಡಿದರೆ ಆಯಾಸ ಹೆಚ್ಚಾಗುವುದೆಂದು ಯೋಚಿಸಿ, ಒಂದು ರಾತ್ರಿಯನ್ನೂ ಮರುಹಗಲನ್ನೂ ನಾನು ಲಂಡನ್ನಿನಲ್ಲಿ ಕಳೆದು ಅಲ್ಲಿಂದ ನ್ಯೂಯಾರ್ಕಿಗೆ ಅದೇ ಕಂಪನಿಯ ಬೇರೊಂದು ವಿಮಾನದಲ್ಲಿ ಪ್ರಯಾಣ ಮಾಡಬೇಕೆಂದು ಏರ್ಪಾಡಾಗಿತ್ತು. ಆದಕಾರಣ ನಾನು ಪ್ಯಾರಿಸ್ಸಿನಲ್ಲಿ ಇಳಿದು, ಅಲ್ಲಿಂದ ಕೂಡಲೆ ಹೊರಡುವ ಬೇರೊಂದು ಕಂಪನಿಯ ವಿಮಾನವನ್ನು ಹತ್ತಿ ಲಂಡನ್ನಿಗೆ ಸೇರಬೇಕಾಗಿತ್ತು. ಆದರೆ ನಾನು ಬಂದ ವಿಮಾನ ಇಷ್ಟು ತಡವಾಗಿ ಪ್ಯಾರಿಸ್ಸಿಗೆ ಸೇರುವ ವೇಳೆಗೆ ಲಂಡನ್ನಿನ ಕಡೆಯ ವಿಮಾನ ಹೊರಟುಹೋಗಿ ಎಷ್ಟೋ ಹೊತ್ತಾಗಿತ್ತು.

ಮುಂದೇನು ಮಾಡುವುದು? "ಇಲ್ಲಿಂದ ಲಂಡನ್ನಿಗೆ ಹೋಗತಕ್ಕ ಮುಂದಿನ ವಿಮಾನ ಬೆಳಗಿನ ಜಾವ ಎರಡೂವರೆ ಘಂಟೆಗೆ ಹೊರಡುತ್ತದೆ; ಅದನ್ನು ನೀವು ಹತ್ತಬೇಕು" ಎಂದು ಅಲ್ಲಿಯ ಅಧಿಕಾರಿಗಳು ತಿಳಿಸಿದರು. ಈ ಐದು ಘಂಟೆಯ ಅಂತರವನ್ನು ಕಳೆಯುವುದು ಹೇಗೆ? ನನ್ನ ಹಾಗೆಯೇ ಪ್ಯಾರಿಸ್ಸಿನಲ್ಲಿ ಇಳಿದು ಲಂಡನ್ನಿಗೆ ಹೋಗುವ ಸಹಪ್ರಯಾಣಿಕರು ಐದು ಮಂದಿ ಇದ್ದರು—ಎಲ್ಲರೂ ಭಾರತೀಯರೇ. ನಮ್ಮೆಲ್ಲರಿಗೂ ಇದೇ ಪ್ರಥಮ ಸಾಗರೋತ್ತರ ಪ್ರಯಾಣ. ಇಂಗ್ಲಿಷ್ ಹೊರತು ಬೇರೆ ಪಾಶ್ಚಾತ್ಯಭಾಷೆ ನಮ್ಮಲ್ಲಿ ಯಾರಿಗೂ ಬಾರದು; ಇಬ್ಬರಿಗೆ ಇಂಗ್ಲಿಷ್ ಕೂಡ ಬಾರದು. ಆದರೂ ನಮ್ಮ ಗುಂಪಿನ ದಿಟ್ಟ ತರುಣನೊಬ್ಬನು "ಹೇಗೂ ಇಲ್ಲಿ ನಾಲ್ಕೈದು ಘಂಟೆಯ ಕಾಲವನ್ನು ಕಳೆಯಬೇಕು. ಇಲ್ಲೇ ಕೂತು ತೂಕಡಿಸುವ ಬದಲು ಪ್ಯಾರಿಸ್ ನಗರದೊಳಕ್ಕೆ ಏಕೆ ಹೋಗಿ ನೋಡಿಕೊಂಡು ಬರಬಾರದು?" ಎಂದು ಸೂಚನೆ ಕೊಟ್ಟನು. ಅದು ಎಲ್ಲರಿಗೂ ರುಚಿಸಿತು. ಆದರೆ ಪ್ಯಾರಿಸ್–ಆರ್ಲಿ (Paris-Orly) ಎಂಬ ಈ ಅಂತರ ರಾಷ್ಟ್ರೀಯ ವಿಮಾನ ಕ್ಷೇತ್ರದ ಎಲ್ಲೆಯಿಂದ ಹೊರಗೆ ಹೋಗಬೇಕಾದರೆ ಫ್ರೆಂಚ್ ವೀಸಾ ಬೇಕು. ಎಷ್ಟೇ ಅಲ್ಪಾವಧಿಯ ಮಟ್ಟಿಗಾದರೂ ನಿಲ್ದಾಣವನ್ನು ಬಿಟ್ಟು ನಗರವನ್ನು ಪ್ರವೇಶಿಸುವುದಕ್ಕೂ ವೀಸಾ ಅವಶ್ಯವಾಗಿ ಬೇಕು. ಇಂಥ ಸಂದರ್ಭಗಳಲ್ಲಿ ನಿಲ್ದಾಣದಲ್ಲಿಯೇ "transit visa" (ಮಾರ್ಗದ ವೀಸಾ) ಎಂಬುದನ್ನು ಕೊಡುತ್ತಾರೆ. ಅಲ್ಲಿಯ ಪೋಲಿಸ್ ಅಧಿಕಾರಿ ಈ ಮುದ್ರೆಯನ್ನು ನಮ್ಮ ಪ್ರವಾಸಪತ್ರದಲ್ಲಿ ಶೀಘ್ರವಾಗಿಯೇ ಒತ್ತಿದನು—ನಮ್ಮ ಮೇಲೆ ಕನಿಕರಿಸಿ. "ಇಂಥಿಂಥ ಜಾಗಗಳಿಗೆ ಹೋಗಿಬನ್ನಿ. ಒಂದೂವರೆ ಘಂಟೆಯ ವೇಳೆಗೆ ಇಲ್ಲಿ ಸಮೀಪದಲ್ಲಿರುವ ಇನ್ನೊಂದು ನಿಲ್ದಾಣಕ್ಕೆ ಹಿಂದಿರುಗಿ ಬನ್ನಿ. ನಿಮ್ಮ ವಿಮಾನ ಲಂಡನ್ನಿಗೆ ಅಲ್ಲಿಂದ ಹೊರಡುತ್ತದೆ" ಎಂದು ಮೊದಲಾದ ಸಲಹೆಗಳನ್ನೂ ಪಡೆದೆವು.

ಆರ್ಲಿ ವಿಮಾನ ಕ್ಷೇತ್ರವನ್ನು ಬಿಡುವ ಮೊದಲು, ನಮ್ಮ ಸಾಮಾನುಗಳನ್ನೆಲ್ಲ ಹಿಂದಿನ ವಿಮಾನದಿಂದ ಕೆಳಗಿಳಿಸಿದ್ದಾರೆಯೆ ಎಂದು ವಿಚಾರಿಸಿಕೊಂಡೆವು. ಅವನ್ನು ನಾವು ನಿಂತಿದ್ದ ಬಳಿಗೆ ತರುವುದು ಸ್ವಲ್ಪ ತಡವಾಗಿತ್ತು. ಒಂದೆರಡು ಬಾರಿ ಆ ವಿಷಯವಾಗಿ ನಾವು ಪ್ರಶ್ನಿಸಿದಾಗ ಅಲ್ಲಿದ್ದ ಅಧಿಕಾರಿಣಿಯೊಬ್ಬಳು, "Don't worry, we do these things everyday" ("ಆತಂಕ ಪಡಬೇಡಿ. ಈ ಕೆಲಸಗಳನ್ನು ನಾವು ಪ್ರತಿನಿತ್ಯವೂ

ಮಾಡುತ್ತೇವೆ") ಎಂದು ಹಸನ್ಮುಖದಿಂದ ಉತ್ತರ ಕೊಟ್ಟಿದ್ದಳು. ಸ್ವಲ್ಪ ಹೊತ್ತಿಗೆ ಸಾಮಾನುಗಳೂ ಬಂದುವು : ನನ್ನ ಎರಡು ಚರ್ಮದ ಸೂಟ್‌ಕೇಸುಗಳು, ಮಿಕ್ಕವರ ಪೆಟ್ಟಿಗೆಗಳು, ಚೀಲಗಳು, ಇತ್ಯಾದಿ. ಜೊತೆಗೆ ಒಬ್ಬಾತನ ಬಂದೂಕ ಬೇರೆ; ಇಂಗ್ಲೆಂಡಿನ ಯಾವ ಮಹಾರಣ್ಯಗಳಲ್ಲಿ ಷಿಕಾರಿ ಮಾಡಲು ಅದನ್ನು ಅವನು ತಂದಿದ್ದನೋ! ನನ್ನ ನಿತ್ಯೋಪಯೋಗದ ಉಪಕರಣಗಳನ್ನು ಇಟ್ಟುಕೊಳ್ಳುವ ನೀಲವರ್ಣದ ಕೈಚೀಲ ನನ್ನ ಕೈಯಲ್ಲೇ ಇತ್ತು. "ನಗರ ಪರ್ಯಟನಕ್ಕೆ ಹೋಗುವಾಗ ಈ ಚೀಲವೇಕೆ? ಇದೂ ಮಿಕ್ಕ ಸಾಮಾನುಗಳ ಜೊತೆಯಲ್ಲೇ ಇರಲಿ" ಎಂದು ಯಾರೋ—ಬಹುಶಃ ನಿಲ್ದಾಣದ ಅಧಿಕಾರಿವರ್ಗದವರೇ ಎಂದು ತೋರುತ್ತದೆ—ಸಲಹೆಕೊಟ್ಟರು. ಅಂತೂ ಇದ್ದಬದ್ದ ಸಾಮಗ್ರಿಯನ್ನೆಲ್ಲಾ ನಿಲ್ದಾಣದಲ್ಲಿ ಒಂದು ಕಡೆ ಕೂಡಿಟ್ಟು ಅದರ ಕಾವಲಿಗೆ ನಮ್ಮ ಜೊತೆಗಾರನ ಬಂದೂಕವನ್ನು ಗುಪ್ಪೆಯ ಮೇಲೆ ಹೂಡಿ ನಾವು ಊರೊಳಕ್ಕೆ ತೆರಳಿದೆವು.

ಅಂದು ಶನಿವಾರ. ಆ ರಾತ್ರಿಯಲ್ಲಿ ಪ್ಯಾರಿಸ್‌ನಗರ ವಿಶಾಲವಾದ ರಸ್ತೆಗಳಿಂದ, ಝುಗಝುಗಿಸುವ ದೀಪರಾಜಿಯಿಂದ ಶೋಭಿಸುತ್ತಿತ್ತು. ಅದುವರೆಗೆ ಪುಸ್ತಕದ ವರ್ಣನೆಗಳನ್ನು ಮಾತ್ರ ಓದಿ ಕುತೂಹಲಪಡುತ್ತಿದ್ದ ನನಗೆ ಈ ಪರಮ ಸುಂದರವಾದ ನಗರದ ವೈಭವವನ್ನು ಈಗ—ಅತ್ಯಲ್ಪಕಾಲದ ಮಟ್ಟಿಗೇ ಆಗಲಿ—ಕಣ್ಣಾರ ನೋಡುವ ಅವಕಾಶ ಅನಿರೀಕ್ಷಿತವಾಗಿ ಲಭಿಸಿತು. ಆದರೆ ದೇಹದ ಬಳಲಿಕೆಯಿಂದ ಕಣ್ಣು ನಿದ್ದೆಗೆ ಎಳೆಯುತ್ತಿತ್ತು. ಹಿಂದಿನ ರಾತ್ರಿಯಿಂದಲೂ ಸರಿಯಾಗಿ ನಿದ್ದೆಯಿರಲಿಲ್ಲ. ಈ ದಿನ ಬೆಳಗ್ಗೆ ಅರೇಬಿಯದ ಮರಳುಗಾಡಿನ ಮೇಲೆ ಬೆಳಗಿನ ಐದು ಘಂಟೆಗೆ ಕಣ್ಣನ್ನು ಬೆಳಕಿಗೆ ತೆರೆದಾಗಿನಿಂದ ಈವರೆಗೂ ಕಣ್ಣುಮುಚ್ಚಿಯೇ ಇರಲಿಲ್ಲ. ಪಶ್ಚಿಮಾಭಿಮುಖವಾಗಿ ನಾವು ಪ್ರಯಾಣ ಮಾಡುತ್ತಿದ್ದ ಕಾರಣ ದಿವಸ ಹಲವು ಘಂಟೆಗಳಷ್ಟು ದೀರ್ಘತರವಾಗಿತ್ತು. ಹೀಗಾಗಿ ಟ್ಯಾಕ್ಸಿಯ ಹಿಂದಿನ ಪೀಠದಲ್ಲಿ ಕುಳಿತು ನಾನು ಬಲುಮಟ್ಟಿಗೆ ತೂಕಡಿಸುತ್ತಲೇ ಇದ್ದೆ. ಷಾನ್ಸ್ ಎಲೀಸೀ (Champs Elysees) ಎಂಬ ಪ್ರಸಿದ್ಧವಾದ ರಸ್ತೆಯ ಮೂಲಕ Arc de Triomphe ("ವಿಜಯದ ಕಮಾನು") ಎಂಬ ಮಹಾಮಂಟಪದ ಬಳಿಗೆ ಹೋಗಿ ಬಂದದ್ದು, ಜಗದ್ವಿಖ್ಯಾತವಾದ ಐಫೆಲ್ ಗೋಪುರದ (Eiffel Tower) ಎರಡನೆಯ ಅಂತಸ್ತಿಗೆ ಏರಿ ಅಲ್ಲಿಯ ಉಪಾಹಾರ ಗೃಹದಲ್ಲಿ ನೂರಾರು ಫ್ರಾಂಕುಗಳನ್ನು ತೆತ್ತು ಅಷ್ಟೇನೂ ರುಚಿಯಿಲ್ಲದ ಕಾಫಿಯನ್ನು ಕುಡಿದದ್ದು—ಇವೆರಡೇ ನೆನಪಿನಲ್ಲಿ ಈಗ ನಿಂತಿರತಕ್ಕವು. ಹಾಗಲ್ಲ, ಟ್ಯಾಕ್ಸಿಯವನಿಗೆ ಒಟ್ಟು ೩,೫೦೦ ಫ್ರಾಂಕುಗಳನ್ನು ಕೊಟ್ಟೆವೆಂಬುದೂ ಮರೆತಿಲ್ಲ. (ಈ ಅಂಕಿಯನ್ನು ನೋಡಿ ಹೆದರಬೇಡಿ. ನಮ್ಮ ಒಂದು ರೂಪಾಯಿಗೆ ಸುಮಾರು ಎಪ್ಪತ್ತೈದು ಫ್ರಾಂಕುಗಳು ಸಮ. ಆದರೂ ನಾವು ತೆತ್ತ ಹಣ ಹೆಚ್ಚೇ.)

ರಾತ್ರಿ ಒಂದೂವರೆ ಘಂಟೆಗೆ ಮೊದಲೇ ನಮ್ಮ ನಿರ್ಗಮನದ ವಿಮಾನದ ನಿಲ್ದಾಣಕ್ಕೆ ಹಿಂದಿರುಗಿದೆವು. ಜೂನ್ ತಿಂಗಳಾದರೂ ಚಳಿಯ ಕೊರೆತ ಬೇಕಾದಷ್ಟಿತ್ತು, ಅಲ್ಲದೆ ರಾತ್ರಿ ಬೇರೆ. ನನ್ನ ಕಂಠವಸ್ತ್ರವನ್ನು (ಮಫ್ಲರ್) ಕೈಚೀಲದಲ್ಲೇ ಇರಿಸಿದ್ದೆ; ಈಗ ಅದನ್ನು ಸುತ್ತಿಕೊಳ್ಳಬೇಕೆನ್ನಿಸಿತು. "ನಮ್ಮ ಸಾಮಾನುಗಳು ಎಲ್ಲಿ? ನಿಮ್ಮವರ ಸಲಹೆಯಂತೆ

ಅಂತೂ ಪಾಸ್‌ಪೋರ್ಟ್, ಪರ್ಸ್, ಜೀವ ಈ ಮೂರನ್ನೂ ಬಿಗಿಹಿಡಿದುಕೊಂಡು ನನಗಾಗಿ ಮೊದಲೇ ಗೊತ್ತುಪಡಿಸಿದ್ದ ಹೋಟಲಿಗೆ ಹೋದೆ. ಅಲ್ಲಿ ನನ್ನ ಕೊಠಡಿಯನ್ನು ಹೊಕ್ಕು ಕುರ್ಚಿಯ ಮೇಲೆ ಕುಸಿದು ಕುಳಿತೆ. ಮನಸ್ಸಿನ ಸ್ಥಿತಿ ಏನೇ ಆಗಿರಲಿ, ಪ್ರಾತರ್ವಿಧಿಗಳನ್ನು ಮುಗಿಸಲೇಬೇಕಷ್ಟೆ. ಆಧುನಿಕ ಸಂಪ್ರದಾಯದಂತೆ, ಎಲ್ಲಿಗೆ ಹೋಗಬೇಕಾದರೂ ಯಾರನ್ನು ಕಾಣಬೇಕಾದರೂ ಮೊದಲು ಮುಖವನ್ನು ನಯಮಾಡಿ ಕೊಂಡಿರಲೇಬೇಕಷ್ಟೆ. ಆದರೆ ನನ್ನ ಕ್ಷೌರೋಪಕರಣಗಳೆಲ್ಲ ಕೈ ಚೀಲದಲ್ಲೇ ಉಳಿದು ಹೋಗಿದ್ದುವು. ತತ್ಕಾಲಕ್ಕಾದರೂ ಬೇರೆಯ ರೇಸರ್, ಬ್ಲೇಡ್, ಬ್ರಷ್ ಮೊದಲಾದವನ್ನು ಕೊಳ್ಳೋಣವೆಂದು ಆಲೋಚಿಸಿ, ಅಂಗಡಿಯ ದಾರಿಯನ್ನು ವಿಚಾರಿಸಲು ಹೋಟಲಿನ ಪೋರ್ಟರನ್ನು ಕೊಠಡಿಯಲ್ಲಿದ್ದ ಫೋನಿನ ಮೂಲಕ ಕರೆದು ಕೇಳಿದೆ. "ಇಂದು ಭಾನುವಾರ. ಇಲ್ಲಿ ಯಾವ ಅಂಗಡಿಯೂ ಈ ದಿನ ತೆರೆಯುವುದಿಲ್ಲ" ಎಂದು ಆತ ಉತ್ತರ ಕೊಟ್ಟನು. ಅದನ್ನು ಕೇಳಿ ಧೈರ್ಯ ಮತ್ತಷ್ಟು ಇಳಿದುಹೋಯಿತು. ಅಂಗಡಿಕಾರ ಜನಾಂಗದ ರಾಜಧಾನಿಯಾದ ಲಂಡನ್ ಮಹಾನಗರ ಭಾನುವಾರದ ದಿನ ಇಷ್ಟೊಂದು ವ್ಯಾಪಾರಶೂನ್ಯವಾಗಿರಬಹುದೆಂದು ನನಗೆ ತೋರಿರಲಿಲ್ಲ. ಮುಂದೇನು ಮಾಡುವುದು? "ಅಯ್ಯಾ, ನನ್ನದು ಇಂಥ ಅಸಹಾಯ ಸ್ಥಿತಿ. ದಯವಿಟ್ಟು ಎಲ್ಲಿಂದಲಾದರೂ ನನಗೆ ಕ್ಷೌರಸಾಮಗ್ರಿಯನ್ನು ಸಂಪಾದಿಸಿಕೊಡು" ಎಂದು ಆ ಪೋರ್ಟರನ್ನೇ ಬೇಡಿಕೊಂಡೆ. ಆತ ನನ್ನ ಮೇಲೆ ಕನಿಕರಿಸಿ, ಯಾರು ಯಾರನ್ನೋ ಯಾಚಿಸಿ, ಸ್ವಲ್ಪ ಹೊತ್ತಿನ ಮೇಲೆ ಒಂದು ಸೇಫ್ಟಿ ರೇಸರನ್ನು—ಬ್ಲೇಡ್ ಸಮೇತವಾಗಿ—ತಂದುಕೊಟ್ಟನು; "ಎಷ್ಟು ಪ್ರಯತ್ನಿಸಿದರೂ ಬ್ರಷ್ ದೊರೆಯಲಿಲ್ಲ" ಎಂದು ಹೇಳಿದನು. ಸದ್ಯಕ್ಕೆ ಇಷ್ಟಾದರೂ ದೊರೆಯಿತಲ್ಲ! ನನ್ನ ಪುಣ್ಯಕ್ಕೆ, ಕೊಠಡಿಗೆ ಸೇರಿದಂತೆ ಸ್ನಾನ ಶೌಚಗಳ ಕೋಣೆಯಿತ್ತು. ಅದರಲ್ಲಿ ಹೇಗೂ ಬಿಸಿ ನೀರಿತ್ತು, ಸಾಬೂನಿತ್ತು, ಒಗೆದ ಟವಲ್ ಇತ್ತು. ನನ್ನ ಬೆರಳೇ ಬ್ರಷ್ ಆಯಿತು! ಅಂತೂ ಮುಖವನ್ನು ಚೆನ್ನಾಗಿ ಕೆತ್ತಿಕೊಂಡು ಬಿಸಿನೀರಿನಲ್ಲಿ ಹಾಯಾಗಿ ಸ್ನಾನಮಾಡಿದೆ. ಬಳಲಿಕೆ ಅರ್ಧ ಪರಿಹಾರವಾಯಿತು. ಆದರೆ ಬದಲಾಯಿಸಿ ತೊಡುವುದಕ್ಕೆ ಶುಭ್ರವಾದ ಒಳ ಉಡುಪು ಇಲ್ಲ. ವಿಮಾನದಿಂದ ಇಳಿದಾಗ ಮೈಮೇಲೆ ಏನಿತ್ತೋ ಆ ಹಳೆಯ ಬಟ್ಟೆಯೇ ಗತಿ. ಅದನ್ನೇ ಮತ್ತೆ ಧರಿಸಿ, ಮೊದಲು ದೂರವಾಣಿಯ ಮುಂದೆ ಕುಳಿತು ವಿಮಾನ ಕ್ಷೇತ್ರದ ಅಧಿಕಾರಿಯನ್ನು ವಿಚಾರಿಸಿದೆ. ಈ ವೇಳೆಗಾಗಲೆ, ಅಲ್ಲಿ ಮೊದಲಿದ್ದವನ ಸರದಿ ಮುಗಿದು ಅವನ ಜಾಗದಲ್ಲಿ ಇನ್ನೊಬ್ಬ ಬಂದು ಕುಳಿತಿದ್ದಂತೆ ಕಾಣುತ್ತದೆ. "ಯಾರು ನೀವು? ಏನು ವಿಷಯ?" ಎಂಬ ಪ್ರಶ್ನೆ ಹೊಸ ದನಿಯಲ್ಲಿ ಬಂದಿತು. ಈತನಿಗೆ ನನ್ನ ಪೂರ್ವೋತ್ತರಗಳನ್ನೂ ಪೆಟ್ಟಿಗೆಗಳು ಕೈಸೇರದಿರುವ ಶೋಚನೀಯ ಸ್ಥಿತಿಯನ್ನೂ ಮತ್ತೆ ಪಾಠ ಒಪ್ಪಿಸಬೇಕಾಯಿತು. "ಆಗಲಿ, ವಿಚಾರಿಸುತ್ತೇನೆ" ಎಂಬ ಅಷ್ಟೇನೂ ಉತ್ಸಾಹಭರಿತವಲ್ಲದ ಉತ್ತರ ಬಂದಿತು. ನನ್ನ ಫೋನಿನ ಸಂಖ್ಯೆಯನ್ನು ಆತನಿಗೆ ಶ್ರುತಪಡಿಸಿ, ವಿಷಯ ಗೊತ್ತಾದ ಕೂಡಲೆ ನನಗೆ ವಿಳಂಬ ಮಾಡದೆ ತಿಳಿಸಬೇಕೆಂಬ ಯಾಚನೆಯನ್ನು ಸಲ್ಲಿಸಿ, ಹಸಿದಿದ್ದ ಹೊಟ್ಟೆಯ ಕಡೆ ಈಗ ಗಮನಕೊಟ್ಟೆ.

ಹೋಟಲನ್ನು ಬಿಟ್ಟು ಹೊರಗೆಲ್ಲಿ ಹೋಗುವುದಕ್ಕೂ ಮನಸ್ಸು ಬರಲಿಲ್ಲ. ವಿಮಾನ ಕ್ಷೇತ್ರದಿಂದ ವರ್ತಮಾನ ಬಂದ ಪಕ್ಷದಲ್ಲಿ ಅದನ್ನು ಕೇಳಲು ನಾನು ಕೊಠಡಿಯಲ್ಲಿ ಇಲ್ಲದಿದ್ದರೆ ಹೇಗೆ? ಈ ಆತಂಕದಲ್ಲಿ, ಈ ನಿರೀಕ್ಷೆಯಲ್ಲಿ, ಅರ್ಧ ಘಂಟೆಗೊಮ್ಮೆ ದೂರವಾಣಿಯನ್ನು ಆಶ್ರಯಿಸುವುದರಲ್ಲಿ, ಮತ್ತೆ ಮತ್ತೆ ನನ್ನ ಅಶರಣ ಸ್ಥಿತಿಯನ್ನು ವಿವರಿಸುವುದರಲ್ಲಿ, "ಆಗಲಿ, ವಿಚಾರಿಸುತ್ತೇವೆ" ಎಂಬ ಉತ್ತರದ ಪುನರಾವೃತ್ತಿಯನ್ನು ಆಲೈಸುವುದರಲ್ಲಿ—ಹಗಲಿನ ಬಹುಭಾಗ ಕೊಠಡಿಯ ಏಕಾಂತವಾಸದಲ್ಲಿಯೇ ಕಳೆದು ಹೋಯಿತು. ಕಡೆಗೆ ಅಪರಾಹ್ಣ ಮೂರು ಗಂಟೆ ತಿರುಗಿದ ಮೇಲೆ ಬೇರೊಂದು ಉತ್ತರ ನಿಲ್ದಾಣದಿಂದ ಬಂದಿತು. "ನಿಮ್ಮ ಸಾಮಾನುಗಳು ಸಿಕ್ಕಿದುವು, ಬಂದು ತೆಗೆದುಕೊಳ್ಳಿ" ಎಂದು ಅಲ್ಲ; "ಪೆಟ್ಟಿಗೆಗಳು ಕ್ಯಾಸಬ್ಲಾಂಕಕ್ಕೆ ಹೋಗಿವೆ" ಎಂದು : ಪ್ಯಾರಿಸ್‌ಆರ್ಲಿ ವಿಮಾನ ಕ್ಷೇತ್ರದ ಕೆಲಸಗಾರರು ನಮ್ಮ ಸಾಮಾನುಗಳನ್ನು ಲಂಡನ್ನಿನ ವಿಮಾನಕ್ಕೆ ಹಾಕುವ ಬದಲು ಕ್ಯಾಸಬ್ಲಾಂಕಕ್ಕೆ ಹೋಗುವ ವಿಮಾನಕ್ಕೆ ಹಾಕಿಬಿಟ್ಟಿದ್ದರಂತೆ! ....ಎಲ್ಲಿದೆ ಈ ಕ್ಯಾಸಬ್ಲಾಂಕ? ಎರಡನೆಯ ಮಹಾಯುದ್ಧ ನಡೆಯುತ್ತಿದ್ದಾಗ ಈ ಊರ ಹೆಸರು ಪತ್ರಿಕೆಗಳಲ್ಲಿ ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತಿತ್ತು. ಇದು ಆಫ್ರಿಕಾ ಖಂಡದಲ್ಲಿ ಎಲ್ಲೋ ಒಂದು ಕಡೆ ಇದೆ ಎಂದು ಮಾತ್ರ ನಾನು ಗಮನಿಸಿದ್ದೆ, ಅಷ್ಟೆ. ಭೂಪಟವನ್ನು ನೋಡಿ ಅದು ಯಾವ ಜಾಗದಲ್ಲಿದೆ ಎಂದು ನಿರ್ಧರ ಮಾಡಿಕೊಳ್ಳುವ ಶ್ರಮವನ್ನು ಕೂಡ ವಹಿಸಿರಲಿಲ್ಲ. ಅಂಥ ಕ್ಯಾಸಬ್ಲಾಂಕಕ್ಕೂ ನನಗೂ ಈಗ ಆತ್ಮೀಯ ಸಂಬಂಧ ಒದಗಿತು—ನನ್ನ ಪೆಟ್ಟಿಗೆಗಳು ಯಾರ ಅಚಾತುರ್ಯದಿಂದಲೋ ಅಲ್ಲಿಗೆ ಪ್ರಯಾಣ ಬೆಳಸಿದ್ದರ ಮೂಲಕ. ಅಲ್ಲಿಂದ ಅವನ್ನು ಬರಮಾಡಿಕೊಳ್ಳುವ ಬಗೆ ಹೇಗೆ? ನಾನೇ ಅಲ್ಲಿಗೆ ಹೋಗಬೇಕಾಗಿ ಬಂದರೆ ಏನು ಗತಿ? ಅವು ಪತ್ತೆಯಾಗಿ ಕೈಗೆ ಮರಳುವ ತನಕ ಲಂಡನ್ನಿನ ಹೋಟಲು ಕೋಣೆಯ ಮಿಟಿಮಿಟಿ ಸ್ವರ್ಗದಲ್ಲಿ ಕುಳಿತಿರುವುದಾದರೂ ಸಾಧ್ಯವೆ? ಸ್ವಲ್ಪ ಹೊತ್ತು ಏನೂ ತೋರಲಿಲ್ಲ.

ಕಡೆಗೆ ವಿಮಾನಾಧಿಕಾರಿಗಳನ್ನೇ ಮತ್ತೆ ಕೇಳಿದೆ : ಮುಂದೆ ಏನು ಮಾಡಲಿ ಎಂದು. "ನೀವು ಇಲ್ಲಿ ನಿಲ್ಲಬೇಡಿ. ಮೊದಲೇ ಏರ್ಪಾಡಾಗಿರುವಂತೆ ಈ ರಾತ್ರಿ ನ್ಯೂಯಾರ್ಕಿಗೆ ನಿಮ್ಮ ಪ್ರಯಾಣವನ್ನು ಮುಂದುವರಿಸಿ. ಇಲ್ಲವಾದರೆ ಈಗ ತೆಗೆದು ಕೊಂಡಿರುವ ಟಿಕೆಟ್ ವ್ಯರ್ಥವಾಗಿ ನಿಮಗೆ ತುಂಬ ತೊಡಕಾಗುತ್ತದೆ. ಕ್ಯಾಸಬ್ಲಾಂಕದಿಂದ ನಿಮ್ಮ ಸಾಮಗ್ರಿ ನೇರವಾಗಿ ನ್ಯಾಯಾರ್ಕಿಗೇ ತಲಪುವಂತೆ ವ್ಯವಸ್ಥೆ ಮಾಡುತ್ತೇವೆ" ಎಂಬ ಉತ್ತರ ಬಂದಿತು. ಪ್ಯಾರಿಸ್ಸಿನಿಂದ ಲಂಡನ್ನಿಗೆ ನನ್ನ ಜೊತೆಗೆ ಅವು ಬರಬೇಕಾಗಿ ದ್ದಾಗಲೆ ಇಷ್ಟೊಂದು ಅವ್ಯವಸ್ಥೆ; ಇನ್ನು ಇವರು ಹೇಳುವಂತೆ ಅವು ನಿಜವಾಗಿ ಕ್ಯಾಸಬ್ಲಾಂಕಕ್ಕೇ ಹೋಗಿದ್ದು, ಅಲ್ಲಿ ಪತ್ತೆಯಾಗಿ, ಅಲ್ಲಿಂದ ಸ್ವತಂತ್ರವಾಗಿ ನ್ಯೂಯಾರ್ಕಿಗೆ ಬಂದಾಗ ನೋಡಿಕೊಳ್ಳೋಣ ಎಂದು ಮನಸ್ಸಿನಲ್ಲಿಯೇ ಅಂದುಕೊಂಡು, ಆ ಅಧಿಕಾರಿಗಳಿಗೆ ಪ್ರಕಾಶವಾಗಿ ವಂದನೆಯನ್ನು ಸಲ್ಲಿಸಿ, ಇತ್ತ ಕಡೆ ತಿರುಗಿದೆ.

ಒಂದು ಸಮಸ್ಯೆಯೇನೋ ಪರಿಹಾರವಾಯಿತು. ಹೋಟಲು ಕೊಠಡಿಯ ಟೆಲಿಫೋನಿನ ಸಮ್ಮುಖದ ಸೆರೆಯಿಂದ ಬಿಡುಗಡೆಯಾಯಿತು. ಆ ರಾತ್ರಿಯೇ ನಾನು

ಲಂಡನನ್ನು ಬಿಡಬೇಕೆಂಬುದೂ ದೃಢವಾಯಿತು. ಇನ್ನು ಸಂಜೆಯ ತನಕ ಕಾಲವನ್ನು ಕಳೆಯಬೇಕಷ್ಟೆ. ಕೊಠಡಿಯಿಂದ ಕೆಳಕ್ಕಿಳಿದು ಬಂದು, ಹತ್ತಿರದಲ್ಲಿ ಪ್ರೇಕ್ಷಣೀಯವಾದ ಜಾಗ ಯಾವುದಾದರೂ ಇದೆಯೆ ಎಂದು ವಿಚಾರಿಸಿದೆ. "ಬ್ರಿಟಿಷ್ ಮ್ಯೂಸಿಯಮ್ಮಿಗೆ ಇಲ್ಲಿಂದ ಎರಡೇ ನಿಮಿಷದ ನಡಗೆ" ಎಂದು ಒಬ್ಬರು ಹೇಳಿದರು. "ಅಯ್ಯೋ, ಇಷ್ಟೊಂದು ವೇಳೆ ಬರಿಯ ಕಳವಳದಲ್ಲಿ ಕಳೆದುಹೋಯಿತಲ್ಲ" ಎಂದು ಪರಿತಾಪ ಪಟ್ಟು, ಕೂಡಲೆ ಅಲ್ಲಿಗೆ ನಾನು ನಡೆದೆ. ಸುಮಾರು ಎರಡು ಘಂಟೆಯ ಕಾಲ ಆ ಮಹಾಸಂಸ್ಥೆಯ ಅನೇಕ ಭಾಗಗಳಲ್ಲಿ ಸುತ್ತಾಡಿ ಎಷ್ಟೋ ಸಮಾಧಾನವನ್ನು ಪಡೆದೆ. ಅದೆಲ್ಲದರ ವರ್ಣನೆಗೆ ಇದು ಸ್ಥಳವಲ್ಲ. ಅಲ್ಲದೆ, ಎರಡು ಗಂಟೆಗಳ ಕಾಲ ಅಲ್ಲ, ಎರಡು ವಾರಗಳ ಕಾಲ ಅವಕಾಶವಿದ್ದರೂ ಬ್ರಿಟಿಷ್ ಮೂಸಿಯಮ್ಮಿನ ಎಲ್ಲ ಭಾಗಗಳನ್ನೂ ಅವಲೋಕಿಸಿ ಮುಗಿಸಲು ಸಾಧ್ಯವಿಲ್ಲ. ಅಲ್ಲಿ ಸಂಗ್ರಹಿಸಿರುವ ಪ್ರಾಚೀನ ಪತ್ರಗಳ ವಿಭಾಗದಲ್ಲಿ ನೋಡಿದ ಒಂದು ಗ್ರೀಕ್ ಭಾಷೆಯ ಪತ್ರ—ಪಪೈರಸ್ ಎಂಬ ಜೊಂಡಿನ ಕಾಗದದ ಮೇಲೆ ಕ್ರಿ.ಶ. ಮೂರನೆಯ ಶತಮಾನದಲ್ಲಿ ಬರೆದದ್ದು—ನನ್ನ ಮನಸ್ಸನ್ನು ಆ ಘಳಿಗೆಯಲ್ಲಿ ಸೆಳೆಯಿತು. "ನೀನು ಊರು ಬಿಟ್ಟು ಹೋಗಿ ಬಲು ದಿನವಾಯಿತು. ನಿನ್ನನ್ನು ನೋಡಬೇಕೆನ್ನಿಸಿದೆ. ನೀನು ಬೇಗ ಹಿಂದಕ್ಕೆ ಬಾರದಿದ್ದರೆ ನಾನು ಮತ್ತೆ ನಿನಗೆ ಪತ್ರ ಬರೆಯುವುದಿಲ್ಲ..." ಸುಮಾರು ಈ ಧಾಟಿಯಲ್ಲಿ ಶಾಲೆಗೆ ಹೋಗುವ ಚಿಕ್ಕ ಹುಡುಗನೊಬ್ಬನು ಪ್ರವಾಸದಲ್ಲಿದ್ದ ತನ್ನ ತಂದೆಗೆ ಬರೆದಿದ್ದ ಪತ್ರ ಅದು. ಪತ್ರದ ಇಂಗ್ಲಿಷ್ ಭಾಷಾಂತರವನ್ನು ಜೊತೆಗೇ ಇರಿಸಿದ್ದರು. ಅದನ್ನು ಓದಿಕೊಂಡು, ಹದಿನೇಳು ಶತಮಾನಗಳ ಹಿಂದಿನ ಗ್ರೀಕ್ ಮೂಲ ಪ್ರತಿಯ ಮೇಲೆ ಕಣ್ಣುಹಾಯಿಸಿದಾಗ ನನಗೆ ಕರುಳು ಹಿಂಡಿದಂತಾಯಿತು. ಊರನ್ನು ನಾನು ಬಿಡುವ ಸಮಯದಲ್ಲಿ, ಇನ್ನೇನು ರೈಲು ಹೊರಡುತ್ತದೆ ಎನ್ನುವಾಗ, ನನ್ನ ಚಿಕ್ಕವಯಸ್ಸಿನ ಮಗ, "ಅಣ್ಣ, ಈ ರಜದಲ್ಲಿ ನೀನು ನಮ್ಮ ಜೊತೆ ಹೆಚ್ಚು ದಿನ ಇರಲೇ ಇಲ್ಲ. ಈಗ ಮತ್ತೆ ಬಲು ದೂರಕ್ಕೆ ಹೊರಟುಬಿಟ್ಟೆ" ಎಂದು ಹೇಳಿದ್ದು ಜ್ಞಾಪಕಕ್ಕೆ ಬಂದಿತು. ಊರಿನ ನೆನಪೂ ಸದ್ಯದ ಭವಣೆಯೂ ಮನಸ್ಸನ್ನು ಒತ್ತಿದುವು...

ನಾನು ಇಳಿದುಕೊಂಡಿದ್ದ ಹೋಟಲಿಗೆ ಮತ್ತೆ ಹಿಂದಿರುಗಲಿಲ್ಲ, ಹಿಂದಿರುಗ ಬೇಕಾಗಿಯೂ ಇರಲಿಲ್ಲ. ಜೊತೆಗೆ ಒಯ್ಯಬೇಕಾದ ಸಾಮಾನು ಯಾವುದಾದರೂ ಇದ್ದಿದ್ದರೆ, ಅದನ್ನು ಹೋಟಲಿನಲ್ಲಿ ಬಿಟ್ಟುಬಂದಿದ್ದರೆ, ಆ ತೊಡಕು! ಊಟ ವಸತಿಗಳ ಲೆಕ್ಕವನ್ನು ಮುಗಿಸಿಕೊಂಡೇ ನಾನು ಹೋಟಲಿನಿಂದ ಹೊರಬಿದ್ದಿದ್ದೆ. ಈಗ ಅಲ್ಲಲ್ಲಿ ಸ್ವಲ್ಪ ದೂರ ನಡೆದು, ಸರಿಯಾದ ಬಸ್ಸನ್ನು ಹಿಡಿದು, ವಿಮಾನ ಕ್ಷೇತ್ರಕ್ಕೆ ಎಷ್ಟೋ ಮುಂಚೆಯೇ ತಲಪಿದೆ. ಅಲ್ಲಿ ಮತ್ತೆ ವಿಚಾರಿಸಿ ನನ್ನ ಪೆಟ್ಟಿಗೆಗಳು ಅಕಸ್ಮಾತ್ತಾಗಿ ಈ ನಡುವೆ ಲಂಡನ್ನಿಗೆ ಬಂದು ಇಳಿದಿಲ್ಲವೆಂಬುದನ್ನು ದೃಢಪಡಿಸಿಕೊಂಡೆ. ವಿಮಾನದ ಕಂಪನಿಯವರ ಕಾರುಣ್ಯಭರಿತವಾದ ಸಹಾಯದಿಂದ ಅಧಿಕಾರಿಗಳ ತನಿಖೆಗಳನ್ನು ದಾಟಿದೆ. ಕ್ಯಾಸಬ್ಲಾಂಕದ ದಿಕ್ಕಿಗೆ ಕೈ ಮುಗಿದು ನ್ಯೂಯಾರ್ಕಿನ ವಿಮಾನವನ್ನು ಹತ್ತಿದೆ. ಹತ್ತುವ ಮೊದಲು ವಿಮಾನ ಕ್ಷೇತ್ರದ ಅಂಗಡಿಯಲ್ಲಿ ಒಂದು ಮಫ್ಲರನ್ನು ಕೊಂಡುಕೊಂಡಿದ್ದೆ,

ಆರು ಡಾಲರ್‌ಗಳನ್ನು ಕೊಟ್ಟು "ಇದರ ಉಣ್ಣೆ ಎಷ್ಟು ನಯವಾಗಿದೆ, ಇದರ ವರ್ಣವಿನ್ಯಾಸ ಎಷ್ಟು ಹದವಾಗಿದೆ! ನೀವು ಇದನ್ನು ಧರಿಸಿ ಓಡಾಡುತ್ತಿದ್ದರೆ ನೋಡಿದವರು ನಿಮ್ಮನ್ನು ಕುರಿತು ಈರ್ಷ್ಯೆಪಡುತ್ತಾರೆ" ಎಂದು ವ್ಯಾಪಾರಿ ಅದರ ಚೆಲುವನ್ನು ಬಾಯಿ ತುಂಬ ವರ್ಣಿಸಿ ಅದನ್ನು ನನ್ನ ಕೊರಳಿಗೆ ಕಟ್ಟಿದ್ದನು. ಅವನ ಮಾತಿನಲ್ಲಿ ಸತ್ಯಾಂಶವಿಲ್ಲದಿಲ್ಲ. ಆದರೆ ಅದು ಮುಖ್ಯವಲ್ಲ. ಭಾನುವಾರದ ದಿನವೂ ಲಂಡನ್ನಿನ ವಿಮಾನ ಕ್ಷೇತ್ರದಲ್ಲಿ ಮಾತ್ರ ಅಂಗಡಿಗಳು ತೆರೆದಿರುತ್ತವೆ! ಮುಂದೆ ದಾರಿಯಲ್ಲಿ ಐರ್ಲೆಂಡಿನ ಷಾನನ್ ಎಂಬ ಪಟ್ಟಣದಲ್ಲಿ ನಮ್ಮ ವಿಮಾನ ಇಳಿದಾಗ ಅಂದವಾದ ಕ್ಷೌರೋಪಕರಣದ ಪೆಟ್ಟಿಗೆಯನ್ನು ಕೊಂಡುಕೊಂಡೆ; ಮಾರನೆಯ ಬೆಳಗ್ಗೆ ವಿಮಾನದಲ್ಲಿ ನಾನು ಅದನ್ನೇ ಉಪಯೋಗಿಸಿದೆ.

ಅಂತರಿಕ್ಷಪ್ರಯಾಣದ ವಿಶೇಷಗಳನ್ನು ಇಲ್ಲಿ ವರ್ಣಿಸುವುದಿಲ್ಲ. "ಅವಸ್ತುಭೂತ"ನಾಗಿ ದುಗುಡದ ಮನಸ್ಸಿನಲ್ಲಿ ನಾನು ಇದ್ದರೂ ರಾತ್ರಿ ತಕ್ಕಮಟ್ಟಿಗೆ ನಿದ್ದೆ ಬಂದಿತು. ಅಟ್ಲಾಂಟಿಕ್ ಸಾಗರದ ಮೇಲೆ ಬೆಳಗಾಗಿ ನಾನು ಎಚ್ಚರಗೊಂಡಾಗ "ನಿದ್ದೆ ಚೆನ್ನಾಗಿ ಆಯಿತೆ?" ಎಂದು ಪಕ್ಕದವರೊಬ್ಬರು ಕೇಳಿದರು. ನಾನು "ಹೌದು" ಎಂದು ಯಥಾವತ್ತಾಗಿಯೇ ಉತ್ತರಕೊಟ್ಟೆ. ವಿಮಾನದಲ್ಲಿಯೇ ಬೆಳಗಿನ ಉಪಾಹಾರವಾಯಿತು; ಮಧ್ಯಾಹ್ನದ ಊಟವೂ ಆಯಿತು. (ನಮ್ಮ ಗಡಿಯಾರ ಲಂಡನ್ನಿನ ವೇಳೆಯ ಲೆಕ್ಕವನ್ನೇ ಇದುವರೆಗೂ ಅನುಸರಿಸಿತ್ತು.) ಆದರೆ ನ್ಯೂಯಾರ್ಕಿನಲ್ಲಿ ಇಳಿದಾಗ ನೋಡಿದರೆ ಅಲ್ಲಿ ಇನ್ನೂ ಪೂರ್ವಾಹ್ನ! ಲಂಡನ್ನಿಗಿಂತ ನ್ಯೂಯಾರ್ಕಿನ ಗಡಿಯಾರ ಐದು ಘಂಟೆ ಹಿಂದು!

ನ್ಯೂಯಾರ್ಕಿನಲ್ಲಿ ವಿಮಾನದಿಂದ ಇಳಿದು ಅಮೆರಿಕದ ಭೂಸ್ಪರ್ಶವನ್ನು ಮಾಡಿದ್ದೇನೋ ಆಯಿತು. ಆದರೆ ವಿಮಾನಕ್ಷೇತ್ರದಿಂದ ಹೊರಬೀಳಬೇಕಾದರೆ ಕೆಲವು ವಿಧ್ಯುಕ್ತಪತ್ರಗಳನ್ನು ಅಧಿಕಾರಿಗಳಿಗೆ ತೋರಿಸಿ, ಸರಿ ಎನಿಸಿಕೊಳ್ಳಬೇಕು. ಅದರಲ್ಲೂ ವಿದೇಶೀಯನೊಬ್ಬನು ಸಂಯುಕ್ತಸಂಸ್ಥಾನವನ್ನು ಮೊದಲ ಬಾರಿ ಪ್ರವೇಶಿಸುವಾಗಲಂತೂ ಇದು ಅನಿವಾರ್ಯ. ನನ್ನ ಬಳಿ ಭಾರತ ಸರ್ಕಾರದವರು ದಯಪಾಲಿಸಿದ್ದ ಪಾಸ್‌ಪೋರ್ಟ್ ಇತ್ತು; ಅದರ ಒಂದು ಪುಟದಲ್ಲಿ ಸಂಯುಕ್ತಸಂಸ್ಥಾನ ಸರ್ಕಾರದ ಕಾನ್‌ಸಲ್ ಜನರಲ್ ಅವರ ಬೊಂಬಾಯಿ ನಗರದ ಕಚೇರಿಯಲ್ಲಿ ಮುದ್ರಿಸಿದ್ದ ವೀಸಾ ಇತ್ತು. ಅಲ್ಲದೆ, ನಾನು ಸಿಡುಬು, ಕಾಲರಾ ಇವುಗಳ ನಿರೋಧಕವಾಗಿ ಸೂಜಿಮದ್ದುಗಳನ್ನು ಚುಚ್ಚಿಸಿ ಕೊಂಡಿದ್ದ ಅಂಶವನ್ನು ರುಜುವಾತು ಮಾಡಿಕೊಡುವ ಅಂತರರಾಷ್ಟ್ರೀಯ ಆರೋಗ್ಯ ಪ್ರಮಾಣ ಪತ್ರವೂ ಇತ್ತು. ಆದರೆ ಇಷ್ಟೇ ಸಾಲದು. ಅಮೆರಿಕಾ ಸಂಯುಕ್ತಸಂಸ್ಥಾನದ ಸರ್ಕಾರಕ್ಕೆ ಆಗಂತುಕರ ಆರೋಗ್ಯದ ವಿಷಯದಲ್ಲಿ ಇನ್ನೂ ತೀಕ್ಷ್ಣವಾದ ಆಸಕ್ತಿ. ಆ ಸರ್ಕಾರದ ವೀಸಾವನ್ನು ಪಡೆಯುವುದಕ್ಕೆ ಪೂರ್ವಭಾವಿಯಾದ ಒಂದು ನಿಯಮವೇನೆಂದರೆ, ಮೂರು ಮಂದಿ ಅಧಿಕೃತರಾದ ವೈದ್ಯರು ಪ್ರವೇಶಾಭ್ಯರ್ಥಿಯನ್ನು ಸ್ವದೇಶದಲ್ಲೇ ವಿವರವಾಗಿ ಪರೀಕ್ಷಿಸಿ ಅವನಲ್ಲಿ ಆಕ್ಷೇಪಣೀಯವಾದ ರೋಗಗಳು ಯಾವುವೂ ಇಲ್ಲವೆಂದು ಪ್ರಶಸ್ತಿ ಪತ್ರವನ್ನು ಕೊಟ್ಟಿರಬೇಕು. (ಆ ಪರೀಕ್ಷೆಗಳಲ್ಲಿ ನಾನು ತೇರ್ಗಡೆ ಹೊಂದಿದ್ದು ಬೇರೊಂದು

ಕಥೆ!) ಹಾಗೆ ಸಂಪಾದಿಸಿದ ಅಮೂಲ್ಯವಾದ ದಾಖಲೆಗಳಲ್ಲಿ ಹೃದಯ ಪ್ರದೇಶದ ಎಕ್ಸ್-ರೇ ಛಾಯಾಚಿತ್ರವಂತೂ ಬಹು ಮುಖ್ಯ; ಈತನಲ್ಲಿ ಕ್ಷಯರೋಗದ ಚಿಹ್ನೆ ಒಂದು ರೇಖೆಯಷ್ಟೂ ಇಲ್ಲವೆಂದು ಅದು ಸಾರಿಹೇಳಬೇಕು. ನನ್ನ ಎದೆಗೂಡಿದ ಉದ್ದಗಲದ ಅಳತೆಯ ಈ ಭಾರಿ ಛಾಯಾಚಿತ್ರವನ್ನು ಒಂದು ವಿಸ್ತಾರವಾದ ಲಕೋಟೆಯೊಳಗಿಟ್ಟು ಮೊಹರು ಮಾಡಿ, "ಇದನ್ನು ನಿನ್ನ ಜೊತೆಯಲ್ಲೇ ಭದ್ರವಾಗಿ ತೆಗೆದುಕೊಂಡು ಹೋಗು. ಇದನ್ನು ಮಡಿಸಬೇಡ ನಲುಗಿಸಬೇಡ; ಜೋಕೆ. ಇದರಲ್ಲೇನಾದರೂ ಗೀರುಪಾರು ಆದರೆ ನೀನು ಅಮೆರಿಕಾವನ್ನು ಪ್ರವೇಶಿಸುವುದೇ ಕಷ್ಟವಾಗಬಹುದು" ಎಂದು ಬೊಂಬಾಯಿಯ ಕಚೇರಿಯವರು ತುಂಬ ಎಚ್ಚರಿಕೆ ಕೊಟ್ಟಿದ್ದರು. ಅವರ ಆದೇಶವನ್ನು ಅಕ್ಷರಶಃ ಪರಿಪಾಲಿಸಬೇಕೆಂದು ನಾನು ನನ್ನ ದೊಡ್ಡ ಸೂಟ್‌ಕೇಸಿನ ತಳದಲ್ಲಿ ಅದನ್ನು ಓರಣವಾಗಿ ಹಾಸಿ ಮಲಗಿಸಿ ಮೇಲೆ ಮೆತ್ತಗೆ ಬಟ್ಟೆ ಬರೆ ಮೊದಲಾದವನ್ನು ಜೋಡಿಸಿದ್ದೆ. ಈಗ ನ್ಯೂಯಾರ್ಕಿನಲ್ಲಿ ಇಳಿದಾಗ ಆ ಅತಿಮುಖ್ಯವಾದ ಛಾಯಾಚಿತ್ರವೇ ನನ್ನ ಜೊತೆಗಿಲ್ಲ! ಇದಲ್ಲದೆ ಬೊಂಬಾಯಿಯ ಕಚೇರಿಯವರು ನನಗೆ ಕೊಟ್ಟು, ನ್ಯೂಯಾರ್ಕಿನ ಅಧಿಕಾರಿಗಳಿಗೆ ಒಪ್ಪಿಸಬೇಕಾಗಿದ್ದ ಇನ್ನು ಕೆಲವು ದಾಖಲೆಯ ಪತ್ರಗಳೂ ಜೊತೆಗಿಲ್ಲ. ಅವನ್ನು ಛಾಯಾಚಿತ್ರದ ಜೊತೆಗೇ ಕಾವಲಾಗಿ ನಾನು ಇರಿಸಿದ್ದೆ. ಪೆಟ್ಟಿಗೆಯೊಳಗೆ ಎಲ್ಲವೂ ಕ್ಯಾಸಬ್ಲಾಂಕದ ವಿಹಾರಕ್ಕೆಂದು ನನ್ನನ್ನು ಬಿಟ್ಟು ಹಾರಿ ಹೋಗಿದ್ದವು!

ಈಗ ನನಗಿದ್ದ ದಾರಿ ಒಂದೇ. ವಿಮಾನದಲ್ಲಿ ನಮ್ಮ ಊಟತಿಂಡಿಗಳನ್ನು ನೋಡಿಕೊಳ್ಳುತ್ತಿದ್ದ "ಗಗನಸಖಿ"ಯನ್ನು (air hostess) ಮರೆಹೊಕ್ಕೆ. ನನ್ನ ತಪ್ಪೇನೂ ಇಲ್ಲದೆ ಹೀಗೆ ಬರಿಗೈಯಲ್ಲಿ ನ್ಯೂಯಾರ್ಕಿಗೆ ಬರಬೇಕಾಯಿತೆಂಬುದನ್ನು ಆಕೆಗೆ ತಿಳಿಸಿದೆ. ರಾಕಿಫೆಲರ್ ಪ್ರತಿಷ್ಠಾಪನದವರ ಆಶ್ರಯದಲ್ಲಿ ನಾನು ಬಂದಿರುವೆನೆಂದೂ, ಅವರನ್ನು ವಿಚಾರಿಸಿ ನನ್ನ ಪೂರ್ವೋತ್ತರಗಳನ್ನು ತಿಳಿದುಕೊಳ್ಳಬಹುದೆಂದೂ ಆಕೆಗೆ ಹೇಳಿದೆ. ಆಕೆಯೂ ಆಕೆಯ ಜೊತೆಯ ಅಧಿಕಾರಿಗಳೂ ಯಾರುಯಾರನ್ನು ಏನು ಕೇಳಿದರೋ, ಯಾರು ಯಾರಿಗೆ ಏನೇನು ಹೇಳಿದರೋ, ಅಂತೂ ಸ್ವಲ್ಪ ಹೊತ್ತಾದ ಬಳಿಕ, ನಾನು ಮಂಕು ಕವಿದು ಸುಮ್ಮನೆ ಕುಳಿತಿದ್ದ ಬಳಿಗೆ ಮರಳಿ ಬಂದು, ನನ್ನನ್ನು ಸರ್ಕಾರದ ಅಧಿಕಾರಿಯ ಬಳಿಗೆ ಕರೆದುಕೊಂಡುಹೋದರು. ಆತನು ನಾಲ್ಕೇ ನಿಮಿಷದಲ್ಲಿ ವಿಷಯವನ್ನು ಗ್ರಹಿಸಿ, "Papers mislaid" ("ಕಾಗದಪತ್ರಗಳು ಕೈತಪ್ಪಿಹೋಗಿವೆ") ಎಂದು ತನ್ನ ದಾಖಲೆಗಳಲ್ಲಿ ಟಿಪ್ಪಣಿ ಮಾಡಿಕೊಂಡು, "Admitted" ("ಪ್ರವೇಶಕೊಟ್ಟಿದೆ") ಎಂದು ನನ್ನ ಪ್ರವಾಸ ಪತ್ರದ ವೀಸಾ ಪುಟದಲ್ಲಿ ಮುದ್ರೆಯೊತ್ತಿ ರುಜುಮಾಡಿ, ನನ್ನ ವಂದನೆಗಳನ್ನು ಸ್ವೀಕರಿಸಿ, ಬೀಳ್ಕೊಟ್ಟನು.

ಇನ್ನು ಮುಂದಿನದು ಸುಂಕದ ಕಟ್ಟೆ. ಸಾಮಾನ್ಯವಾಗಿ ಪ್ರಯಾಣಿಕರು ಅಲ್ಲಿ ಕೆಲಹೊತ್ತು ನಿಲ್ಲಬೇಕಾಗುತ್ತದೆ; ಪೆಟ್ಟಿಗೆಗಳನ್ನು ತೆರೆದು, ಕಟ್ಟುಗಳನ್ನು ಬಿಚ್ಚಿ, ತೋರಿಸಬೇಕಾಗುತ್ತದೆ. ಅಧಿಕಾರಿಗಳ ಪ್ರಶ್ನೆಗಳಿಗೆ ತೃಪ್ತಿಕರವಾಗಿ ಉತ್ತರ ಕೊಡಬೇಕಾಗುತ್ತದೆ.

ಆದರೆ ನನ್ನ ಬಳಿ ಏನಿತ್ತು ಈ ಕೊಟಲೆಗೆ ಒಳಗಾಗುವುದಕ್ಕೆ? ಲಂಡನ್ನಿನ ವ್ಯಾಪಾರಿ ನನ್ನ ಕಂಠವಸ್ತ್ರವನ್ನು ಹಾಕಿಕೊಟ್ಟಿದ್ದ ಒಂದು ಕಾಗದದ ಚೀಲ ಮಾತ್ರ ನನ್ನ ಕೈಯಲ್ಲಿತ್ತು. ಅದನ್ನು ಹಿಡಿದಿದ್ದ ಹಾಗೆಯೇ ಕೈಬೀಸಿಕೊಂಡು, ಯಾರ ಅಂಕೆಯೂ ಇಲ್ಲದೆ ಹೊರಕ್ಕೆ ಬಂದೆ. "Travel light" ("ಹಗುರವಾಗಿ ಪ್ರಯಾಣ ಮಾಡಿ") ಎಂದು ಈಗ ಎಲ್ಲೆಲ್ಲೂ ಪ್ರಚಾರ ಮಾಡುತ್ತಿದ್ದಾರಷ್ಟೆ ವಿಮಾನದ ಪ್ರಯಾಣದಲ್ಲಿ ಅದು ಆವಶ್ಯಕ ವಿಧಿ—ಸಾಮಾನು ಹೆಚ್ಚಾದರೆ ಅತಿಯಾಗಿ ಲಗೇಜ್ ಹಣವನ್ನು ತೆರಬೇಕಾಗುತ್ತದೆ! ಆದರೆ ಭೂಮಂಡಲದ ಅತ್ತಣ ಪಾರ್ಶ್ವದಿಂದ ಅನೇಕ ಸಹಸ್ರ ಮೈಲಿಗಳನ್ನು ಅತಿಕ್ರಮಿಸಿ, ಸಪ್ತಸಾಗರಗಳನ್ನು ದಾಟಿ ಬಂದ ಬೇರೆ ಯಾವ ಪ್ರಯಾಣಿಕನೂ ನನ್ನಷ್ಟು "ಹಗುರ"ವಾಗಿ ನ್ಯೂಯಾರ್ಕಿನಲ್ಲಿ ಇಳಿದಿರಲಾರನು!

ಮುಂದಿನ ಕಥೆಯನ್ನು ಬೇಗ ಮುಗಿಸುತ್ತೇನೆ. ನಾನು ಪ್ರಯಾಣ ಮಾಡಿಬಂದ T.W.A. ವಿಮಾನದ ಅಧಿಕಾರಿಗಳಿಗೆ ಈ ವಿಷಮ ಕಾಲದಲ್ಲಿ ಅವರಿಂದ ಆದ ವಿಶೇಷ ಸಹಾಯಕ್ಕಾಗಿ ತುಂಬುಹೃದಯದ ಕೃತಜ್ಞತೆಯನ್ನು ಸಲ್ಲಿಸಿ ಬೀಳ್ಕೊಂಡು, ನ್ಯೂಯಾರ್ಕ್ ನಗರದಲ್ಲಿ ನನಗಾಗಿ ಗೊತ್ತು ಮಾಡಿದ್ದ ಹೋಟಲಿಗೆ ನೇರವಾಗಿ ಹೋಗಿ ಸೇರಿದೆ. ರಾಕಿಫೆಲರ್ ಪ್ರತಿಷ್ಠಾನದ ಅಧಿಕಾರಿ ಶ್ರೀ ಗಿ—ಅವರು ನನ್ನನ್ನು ನ್ಯೂಯಾರ್ಕಿಗೆ ಸ್ವಾಗತಿಸಿ ಆ ದಿನವೇ ಬರೆದು ಕಳಿಸಿದ್ದ ವಿಶ್ವಾಸಪೂರ್ಣವಾದ ಪತ್ರ ನನಗಾಗಿ ಕಾದಿತ್ತು. ಅದನ್ನು ಕೈಗೆ ತೆಗೆದುಕೊಂಡಾಗ ಅವರ ಹಸ್ತಸ್ಪರ್ಶ ಮಾಡಿದಷ್ಟು ಸಂತೋಷವಾಯಿತು. ಮಿತ್ರರ ನಡುವೆ ಬಂದು ಸೇರಿದೆನೆಂಬ ನೆಮ್ಮದಿ ಮೂಡಿತು. ಮೊದಲು, ಸಮೀಪದ ಅಂಗಡಿಗೆ ಹೋಗಿ ಅತ್ಯವಶ್ಯವಾದ ಒಳಉಡುಪು, ದಂತಮಂಜನ ಮೊದಲಾದ ನಿತ್ಯೋಪಯೋಗದ ವಸ್ತುಗಳನ್ನು ಕೊಂಡು ತಂದು, ಮನಸ್ಸು ತಣಿಯುವಂತೆ ಸ್ನಾನಮಾಡಿದೆ. ಆ ಬಳಿಕ ದಿನಮಧ್ಯದ ಊಟವನ್ನು (lunch) ಮುಗಿಸಿಕೊಂಡು—ಇದೇನು ಮತ್ತೆ ಮಧ್ಯಾಹ್ನದ ಊಟ ಎನ್ನಬೇಡಿ! ನ್ಯೂಯಾರ್ಕಿನಲ್ಲಿ ಆಗ ತಾನೆ ಅಪರಾಹ್ಣಕ್ಕೆ ತಿರುಗಿತ್ತು; ವಿಮಾನದ ಊಟ ಆಗಲೆ ಕರಗಿತ್ತು—ರಾಕಿಫೆಲರ್ ಪ್ರತಿಷ್ಠಾನದ ಮಹಾಸೌಧಕ್ಕೆ (Rockefeller Center) ಹೋಗಿ ಶ್ರೀ ಗಿ—ಅವರನ್ನು ಕಂಡೆ. ಕುಶಲಪ್ರಶ್ನೆಗಳು ಆದರದಿಂದ ನಡೆದುವು. ಪೆಟ್ಟಿಗೆಗಳ ಪ್ರಸಂಗವೂ ವರದಿಯಾಯಿತು. "ಲಕ್ಷ ಮಂದಿ ಪ್ರಯಾಣಿಕರಲ್ಲಿ ಎಲ್ಲೋ ಒಬ್ಬರಿಗೆ ಹೀಗಾಗುವುದುಂಟು" ಎಂದು ಗಿ—ಅವರು ಹೇಳಿ ನನ್ನ ಅಪೂರ್ವ ದುರದೃಷ್ಟವನ್ನು ಕುರಿತು ವಿಸ್ಮಯಪಟ್ಟರು. ಬಳಿಕ ತಮ್ಮ ಸಂಸ್ಥೆಯ ಕೆಲಸಗಾರರೊಬ್ಬರ ಬಳಿಗೆ ನನ್ನನ್ನು ಕರೆದುಕೊಂಡು ಹೋಗಿ, "ವಿಷಯವನ್ನೆಲ್ಲ ಇವರಿಗೆ ತಿಳಿಸಿಬಿಡಿ. ನಿಮ್ಮ ಸಾಮಾನುಗಳನ್ನು ಬರಮಾಡಿಕೊಳ್ಳಲು ಇವರು ಸರ್ವಪ್ರಯತ್ನವನ್ನೂ ಮಾಡುತ್ತಾರೆ" ಎಂದು ಭರವಸೆ ಕೊಟ್ಟರು. ನನ್ನ ಜೇಬಿನಲ್ಲಿ ಉಪಯೋಗವಿಲ್ಲದೆ ಮರುಗುತ್ತಿದ್ದ ಬೀಗದ ಕೈಯ ಗೊಂಚಲನ್ನು ಆ ಸಹಾಯಕ ಮಹನೀಯನಿಗೆ ಒಪ್ಪಿಸಿ, ನಾನು ಇತ್ತ ತಿರುಗಿದೆ. . . .

ಮರುದಿನ ಸಂಜೆ ನಾನು ನ್ಯೂಯಾರ್ಕಿಗೆ ಸುಮಾರು ಐನೂರು ಮೈಲಿ ದೂರದಲ್ಲಿರುವ ಆ್ಯನ್ ಆರ್ಬರ್ ಎಂಬ ಪಟ್ಟಣಕ್ಕೆ—ಅಲ್ಲಿಯ ಮಿಷಿಗನ್ ವಿಶ್ವವಿದ್ಯಾ

ನಿಲಯವನ್ನು ಸೇರಲು—ರೈಲಿನಲ್ಲಿ ಹೊರಡಬೇಕಾಗಿತ್ತು. ಪ್ರಯಾಣಕ್ಕೆ ಕೆಲವು ಘಂಟೆಗಳ ಮುನ್ನ ರಾಕಿಫೆಲರ್ ಅಧಿಷ್ಠಾನಕ್ಕೆ ಭೇಟಿ ಕೊಟ್ಟು ನನ್ನ ಪೆಟ್ಟಿಗೆಗಳನ್ನು ಕುರಿತು ಹೊಸ ಸುದ್ದಿ ಏನೂ ಬಂದಿಲ್ಲವೆಂದು ದೃಢಮಾಡಿಕೊಂಡದ್ದಾಯಿತು. ಆದರೆ ಇನ್ನು ಮುಂದಕ್ಕೆ ಕೂಡ ಕೇವಲ ಉಟ್ಟ ಬಟ್ಟೆಯಲ್ಲಿ ಹೋಗುವುದಕ್ಕಾಗುತ್ತದೆಯೆ? ನನ್ನ ಪೆಟ್ಟಿಗೆಗಳು ಹಿಂದಕ್ಕೆ ಬರುವುದು—ಒಂದು ವೇಳೆ ಬಂದರೂ, ಸಕಾಲದಲ್ಲಿ ಬರುವುದು—ಯಾವ ನೆಚ್ಚಿಕೆ? ಸದ್ಯದ ಉಪಯೋಗಕ್ಕಾದರೂ ಕೆಲವು ಬಟ್ಟೆಬರೆಗಳು ಅವಶ್ಯವಲ್ಲವೆ? ಅಂಥ ಕೆಲವು ವಸ್ತುಗಳನ್ನು ಕೊಂಡುಕೊಂಡು ನ್ಯೂಯಾರ್ಕಿನ ಗ್ರ್ಯಾಂಡ್ ಸೆಂಟ್ರಲ್ ರೈಲ್ವೆ ಸ್ಟೇಷನ್ನಿಗೆ ಸ್ವಲ್ಪ ಮುಂದಾಗಿಯೇ ತಲಪಿ, ಆ್ಯನ್ ಆರ್ಬರ್ ಕಡೆ ಹೋಗುವ ಟ್ರೇನಿನ "ಪುಲ್‌ಮನ್" ಗಾಡಿಯಲ್ಲಿ ನನಗಾಗಿ ಗೊತ್ತುಮಾಡಿದ್ದ "ರೂಮೆಟ್" ("roomette") ಅನ್ನು ಸೇರಿದೆ. ಅದು ಒಬ್ಬನೇ ಪ್ರಯಾಣಿಕನಿಗೆ ಮೀಸಲಾದ ಕಿರುಕೋಣೆ. ಅದರ ಪರಿಮಿತವಾದ ಜಾಗದಲ್ಲಿ ಅಳವಡಿಸಿದ್ದ ಕುಳಿತುಕೊಳ್ಳುವ ಒರಗುಪೀಠ, ಗೋಡೆಗೆ ಸೇರಿದಂತೆ ಮಡಿಸಿಕೊಂಡದ್ದು ಬೇಕೆಂದಾಗ ಬಿಚ್ಚಿ ಹರಡಲಾಗುವ ಪೂರ್ವಸಜ್ಜಿತ ಶಯನ, ಕುಡಿಯುವ ನೀರಿನ ನಲ್ಲಿ, ದೀಪವಿನ್ಯಾಸ, ವಾಯುನಿಯಂತ್ರಣ, ಶೌಚಸೌಕರ್ಯ, ಬಾಗಿಲನ್ನು ಮುಚ್ಚುವ ಮತ್ತು ತೆರೆಯುವ ರೀತಿ, ಪರಿಚಾರಕರನ್ನು ಆಹ್ವಾನಿಸುವ ಒತ್ತುಗುಂಡಿ—ಈ ಮೊದಲಾದ ಹಲವು ವಿಶೇಷಗಳನ್ನು ಬೆರಗುಗಣ್ಣಿನಿಂದ ವೀಕ್ಷಿಸುತ್ತಾ, ಕೆಲವನ್ನು ಪರೀಕ್ಷಿಸುತ್ತಾ ಕಾಲವನ್ನು ಕಳೆದೆ.

ವೇಳಾಪತ್ರಿಕೆಯ ಮೇರೆಗೆ ರೈಲು ಸಂಜೆ ಆರು ಘಂಟೆಗೆ ಹೊರಡಬೇಕು. ದಕ್ಷತೆಯ ನೆಲೆವೀಡಾದ ಅಮೆರಿಕದಲ್ಲಿ ಕೂಡ ರೈಲುಗಳು ನಮ್ಮ ದೇಶದಲ್ಲಿರುವಂತೆಯೇ ಒಮ್ಮೊಮ್ಮೆ ತಡವಾಗಿ ಹೊರಡುವುದುಂಟು, ಇನ್ನೂ ತಡವಾಗಿ ಗುರಿಯನ್ನು ಮುಟ್ಟುವುದೂ ಉಂಟು. ಆದರೆ ಆ ಸಂಜೆ ನಮ್ಮ ರೈಲು ಹೊತ್ತಿಗೆ ಸರಿಯಾಗಿ ಹೊರಡಲು ಯಾವ ಅಡಚಣೆಯೂ ಇದ್ದಂತೆ ತೋರಲಿಲ್ಲ. ಆರು ಘಂಟೆಯೂ ತೀರ ಸಮೀಪಿಸಿತು; ಇನ್ನು ಎರಡುಮೂರು ನಿಮಿಷ ಮಾತ್ರ ಉಳಿದಿರಬೇಕು. ಅಷ್ಟರಲ್ಲಿ ಒಬ್ಬಾತನು ಏದುತ್ತಾ, ಮೇಲುಸಿರುಬಿಡುತ್ತಾ, ಪೆಟ್ಟಿಗೆಗಳನ್ನು ಎರಡು ಕೈಯಲ್ಲೂ ಹಿಡಿದುಕೊಂಡು ನನ್ನ "ರೂಮೆಟ್" ಬಳಿಗೆ ದಡದಡನೆ ಬಂದು ಒಳಕ್ಕೆ ನುಗ್ಗಿದನು. ಬಾಗಿಲ ಹತ್ತಿರ ಹೊರಗಡೆ ನಿಂತಿದ್ದ ನಾನು, "ಇದೇನು, ಇಲ್ಲಿಗೆ ಬರುತ್ತಿದ್ದೀರಿ? ಈ ರೂಮೆಟ್ ನನಗಾಗಿ ರಿಸರ್ವ್ ಆಗಿದೆ" ಎನ್ನುತ್ತಾ ಆತನ ಕಡೆಗೆ ನೋಡಿದೆ. ರೈಲು ಹೊರಡುವ ಹೊತ್ತಿನಲ್ಲಿ ಇದೇನು ವ್ಯವಹಾರ ಅಂಟಿತು ನನಗೆ—ಎಂಬ ಚಿಂತೆ ಮೂಡಿತು. ಸಾವಧಾನವಾಗಿ ಉತ್ತರ ಕೊಡಲು ಆತನಿಗೆ ಆಗಲಿಲ್ಲ. "ಇದು, ಇದು—" ಎಂದು ಉಸಿರು ಸಿಕ್ಕಿಕೊಂಡವನಂತೆ ಹೇಳುತ್ತಿದ್ದಾನೆ. ಅಷ್ಟರಲ್ಲಿ ಆತನ ಕೈಯಿಂದ ರೂಮೆಟ್ಟಿನ ಒರಗುಪೀಠದ ಮೇಲೆ ಕುಸಿದು ಬಿದ್ದಿದ್ದ ನೀಲವರ್ಣದ ಕೈಚೀಲದ ಕಡೆಗೆ ನನ್ನ ದೃಷ್ಟಿ ಹರಿಯಿತು. ಕ್ಷಣಾರ್ಧದಲ್ಲಿ ಅದರ ಗುರುತು ಝುಗ್ಗನೆ ಹೊಳೆಯಿತು. ಅದು ನನ್ನ ಕೈಚೀಲ! ನನ್ನ ದಿನಬಳಕೆಯ ಉಪಕರಣಗಳನ್ನು ಇರಿಸಿದ್ದ ವಿಮಾನೋಪಯೋಗದ ಕೈಚೀಲ!—ಅದರ ಜೊತೆಗಿದ್ದ ಆ ಎರಡು ಚರ್ಮದ ಪೆಟ್ಟಿಗೆಗಳು! ಅವೂ ನನ್ನವೇ! (ಜೊತೆಗೆ ಬೀಗದಕೈಯ ಗೊಂಚಲೂ

ಇದೆ.) ನನ್ನ ಸಾಮಾನುಗಳೆಲ್ಲವೂ ಸಂಪೂರ್ಣವಾಗಿ ಹೀಗೆ ಪ್ರತ್ಯಕ್ಷವಾದದ್ದನ್ನು ಕಂಡು ನನ್ನ ಆನಂದ ಉಕ್ಕಿ ಬಂದಿತು. ಅವುಗಳನ್ನು ತಂದಾತನ ಕಡೆಗೆ ಹೊಸ ಭಾವನೆಯಿಂದ ಈಗ ನೋಡಿದೆ! ಆತನೇ ರಾಕಿಫೆಲರ್ ಪ್ರತಿಷ್ಠಾನದ ಸಹಾಯಕ, ನನ್ನ ಸಾಮಾನುಗಳನ್ನು ಬರಮಾಡಿಕೊಡುವ ಹೊಣೆಯನ್ನು ಹೊತ್ತಿದ್ದ ಮಹಾಶಯ, ಈಗ ಅವುಗಳನ್ನು ನಾನು ನ್ಯೂಯಾರ್ಕ್ ನಗರವನ್ನು ಬಿಡುವ ಹೊತ್ತಿಗೆ ಸರಿಯಾಗಿ ತಂದೊಪ್ಪಿಸಿ ನನ್ನನ್ನು ಕಷ್ಟ ನಷ್ಟ ಆತಂಕಗಳಿಂದ ಪಾರುಮಾಡಿದ ದೇವದೂತ! "ಇವೆಲ್ಲ ಹೇಗೆ ಬಂದುವು? ನಿಮಗೆ ವಂದನೆಯನ್ನು ಹೇಗೆ ಸಲ್ಲಿಸಲಿ?" ಎಂದು ಆತನ ಕೈ ಹಿಡಿದುಕೊಂಡು ಕೇಳಿದೆ. "ಏನನ್ನು ವಿವರಿಸುವುದಕ್ಕೂ ವೇಳೆಯಿಲ್ಲ. ಟ್ರೇನಿನ ಅಧಿಕಾರಿಗೆ ಹೇಳಿ ಕೆಲವೇ ನಿಮಿಷಗಳ ಅವಕಾಶ ಪಡೆದು ಬಂದಿದ್ದೇನೆ. ಅಂತೂ ನೀವು ನ್ಯೂಯಾರ್ಕನ್ನು ಬಿಡುವ ಮೊದಲೇ ಇವನ್ನು ನಿಮ್ಮ ಕೈ ಸೇರಿಸಲು ಸಾಧ್ಯವಾಯಿತಲ್ಲ. ಇಲ್ಲವಾದರೆ ಆ್ಯನ್ ಆರ್ಬರ್‌ಗೆ ಇವನ್ನು ಪ್ರತ್ಯೇಕವಾಗಿ ಕಳಿಸಬೇಕಾಗುತ್ತಿತ್ತು; ಮೂರುನಾಲ್ಕು ದಿನ ತಡವಾಗುತ್ತಿತ್ತು. ಅಗತ್ಯವಾದ ಪದಾರ್ಥಗಳಿಲ್ಲದೆ ನಿಮಗೆ ಎಷ್ಟು ತೊಂದರೆಯಾಗುತ್ತಿತ್ತೋ" ಎಂದು ಹೇಳುತ್ತಲೇ ಆತನು ಹಿಂದಿರುಗಿದನು. "ಪುಲ್‌ಮನ್" ಗಾಡಿಯ ಬಾಗಿಲಿಗೆ ತಕ್ಕಮಟ್ಟಿನ ದೂರದಲ್ಲಿ ನನ್ನ "ರೂಮೆಟ್" ಇತ್ತು. ಆತನು ಮೊಗಸಾಲೆಯಲ್ಲಿ (corridor) ವೇಗವಾಗಿ ನಡೆದು ಹೋಗಿ ಕೆಳಕ್ಕೆ ಇಳಿದ ಒಂದೆರಡು ನಿಮಿಷದಲ್ಲಿ ರೈಲು ಚಲಿಸಿತು. ನನ್ನ ವ್ಯವಹಾರದಿಂದ ರೈಲು ಹೊರಡುವುದಕ್ಕೆ ಏಳೆಂಟು ನಿಮಿಷಗಳಾದರೂ ತಡವಾಗಿರಬೇಕು!

ನನ್ನ ಪೆಟ್ಟಿಗೆಗಳೂ ಕೈಚೀಲವೂ ನನ್ನ ವಶಕ್ಕೆ ಮತ್ತೆ ಬಂದಿವೆ, ನನ್ನ ಮುಂದೆಯೇ ಇವೆ ಎಂಬ ನಂಬಿಕೆ ನನಗೆ ಬರಲು ಹಲವು ನಿಮಿಷಗಳು ಹಿಡಿದುವು. ಅವುಗಳನ್ನು ಮತ್ತೆ ಮತ್ತೆ ನೋಡಿ, ಮುಟ್ಟಿ, ಅಲುಗಾಡಿಸಿ ದೃಢಮಾಡಿಕೊಂಡೆ. ತೆರೆದು ನೋಡಿದೆ : ಒಳಗಿನ ಯಾವೊಂದು ಪದಾರ್ಥವೂ ಕಳೆದು ಹೋಗಿರಲಿಲ್ಲ; ಎಲ್ಲವೂ ಸರಿಯಾಗಿದ್ದುವು. ಈಗ ಸಂಪೂರ್ಣವಾಗಿ ನಿರುಪಯೋಗಿಯಾದ ನನ್ನ ಎದೆಗೂಡಿನ ಎಕ್ಸ್–ರೇ ಛಾಯಾಚಿತ್ರ ಕೂಡ ಪೆಟ್ಟಿಗೆಯ ತಳಭಾಗದಲ್ಲಿ ಲಕೋಟೆಯೊಳಗಡೆ ಒಂದಿಷ್ಟೂ ನಲುಗದೆ ಮಲಗಿತ್ತು.

ಆ್ಯನ್ ಆರ್ಬರ್ ಪ್ರಯಾಣ ಹಿತವಾಗಿ ಸಾಗಿತೆಂದು ಬೇರೆಯಾಗಿ ತಿಳಿಸಬೇಕಾಗಿಲ್ಲ . . . .ಆ ಮುಂದೆ ಪತ್ರ ಬರೆದು ಸಂಬಂಧಪಟ್ಟವರನ್ನು ಸಾವಕಾಶವಾಗಿ ವಿಚಾರಿಸಿ, ತಿಳಿದುಕೊಂಡೆ—ಈ ಸಾಮಗ್ರಿ ಹೇಗೆ ಬಂದಿತು ಎಂಬುದನ್ನು. ಅಂದು ನಾನು ರಾಕಿಫೆಲರ್ ಸಂಸ್ಥೆಯಿಂದ ಹೊರಟು ಬಂದ ಕೆಲವು ಹೊತ್ತಿನ ಮೇಲೆ ಅಲ್ಲಿಗೆ ನ್ಯೂಯಾರ್ಕಿನ ವಿಮಾನಕ್ಷೇತ್ರದಿಂದ ದೂರವಾಣಿಯ ಮೂಲಕ ಸುದ್ದಿ ಬಂದಿತಂತೆ—ಕ್ಯಾಸಬ್ಲಾಂಕದಿಂದ ನನ್ನ ಪೆಟ್ಟಿಗೆಗಳು ಬಂದಿವೆಯೆಂದು. ಕೂಡಲೇ ಈ ನನ್ನ ಹಿತಸಾಧಕನು ವಿಮಾನ ಕ್ಷೇತ್ರಕ್ಕೆ ಹೋಗಿ ಅವುಗಳನ್ನು ನನ್ನ ಪರವಾಗಿ ವಶಕ್ಕೆ ತೆಗೆದುಕೊಂಡನಂತೆ. ಅಲ್ಲಿ ಆತನು ಯಾವ ಅಧಿಕಾರಿಗಳಿಗೆ ಏನು ಸಮಜಾಯಿಷಿ ಹೇಳಬೇಕಾಯಿತೋ. ಬೀಗದ ಕೈಯ ಗೊಂಚಲು ಆತನ ಹತ್ತಿರವೇ ಇತ್ತು; ಸುಂಕ ತೆರಬೇಕಾದ ಅಥವಾ ನಿಷಿದ್ಧವಾದ

ಯಾವ ಪದಾರ್ಥವೂ ನನ್ನ ಪೆಟ್ಟಿಗೆಗಳಲ್ಲಿ ಇರಲಿಲ್ಲ! ಆದರೂ ಕಲಾಪವೆಲ್ಲವೂ ಮುಗಿಯುವ ಹೊತ್ತಿಗೆ ವೇಳೆ ಮಾರುತ್ತಾ ಬಂದಿತ್ತು. ರೈಲು ನ್ಯೂಯಾರ್ಕನ್ನು ಬಿಡುವುದರೊಳಗಾಗಿ ಅವನ್ನು ನನ್ನ ಕೈಗೆ ಮುಟ್ಟಿಸಬೇಕೆಂದು ಆತನು ಟ್ಯಾಕ್ಸಿಯಲ್ಲಿ ಅತಿವೇಗದಿಂದ ಸ್ಟೇಷನ್ನಿಗೆ ಬಂದನಂತೆ. ದಾರಿಯಲ್ಲಿ ಎರಡುಬಾರಿ ಪೋಲೀಸಿನವರಿಂದ "ಟಿಕೆಟ್" ಪಡೆದನಂತೆ. (ವೇಗದ ಎಲ್ಲೆಯನ್ನು ಮಾರುವುದು, ರಸ್ತೆಯ ಸಂಚಾರದ ಕಟ್ಟುಪಾಡುಗಳನ್ನು ಅತಿಕ್ರಮಿಸುವುದು—ಈ ಬಗೆಯ ಅಪರಾಧಗಳಿಗೆ ಪೋಲಿಸಿನವರು ಆಪಾದನೆಯ ಚೀಟಿಯನ್ನು ಸ್ಥಳದಲ್ಲೇ ಕೈಗೆ ಕೊಡುತ್ತಾರೆ. "To be given the ticket" ಎಂದರೆ ಇದು!) ಎಲ್ಲ ವೆಚ್ಚವನ್ನೂ—"ದಂಡ" ಸಮೇತವಾಗಿ—ರಾಕಿಫೆಲರ್ ಪ್ರತಿಷ್ಠಾನದವರೇ ಕೊಟ್ಟರು. "ಸಾಮಾನುಗಳು ತಪ್ಪು ದಾರಿಯನ್ನು ಹಿಡಿದದ್ದಕ್ಕೆ ನೀವು ಹೊಣೆಯಲ್ಲ, ವೆಚ್ಚವನ್ನು ನಾವೇ ವಹಿಸಿಕೊಳ್ಳುತ್ತೇವೆ" ಎಂದು ನನಗೆ ನಿರ್ಧರವಾಗಿ ತಿಳಿಸಿಬಿಟ್ಟರು; ವೆಚ್ಚ ಎಷ್ಟಾಯಿತೆಂಬುದನ್ನು ಕೂಡ ನನಗೆ ಹೇಳಲಿಲ್ಲ.

ಕೈಬಿಟ್ಟು ಹೋದ ಸಾಮಗ್ರಿಯನ್ನು ಇಷ್ಟೊಂದು ಶೀಘ್ರವಾಗಿ ಹುಡುಕಿಸಿ ಸಾವಿರಾರು ಮೈಲಿಗಳ ಆಚೆ ಇರುವ ಮಾಲೀಕರಿಗೆ ಮತ್ತೆ ಒಪ್ಪಿಸುವುದು ಹೇಗೆ ಸಾಧ್ಯ? ಇದನ್ನು ನಿರ್ವಹಿಸಲು ಎಷ್ಟೊಂದು ಆಸ್ಥೆ ಬೇಕು, ವ್ಯವಸ್ಥೆ ಬೇಕು!-ಈ ವಿಷಯವನ್ನು ಕುರಿತು ನಾನು ಆಶ್ಚರ್ಯಪಡುತ್ತಿರುವಾಗಲೇ, ನನ್ನ ಅನುಭವ ಇನ್ನೂ ಹೊಸದಾಗಿರುವಾಗಲೆ, I A T A (International Air Transport Association) ಎಂಬ ಸಂಸ್ಥೆಯ ಕಾರ್ಯಕಲಾಪಗಳ ವಿಚಾರವನ್ನು ಒಂದು ಮಾಸಪತ್ರಿಕೆಯಲ್ಲಿ ಓದಿದೆ. ಬಾಸ್ಟನ್ ನಗರದ ಒಬ್ಬ ಉಪಾಧ್ಯಾಯರ ಸೂಟ್‌ಕೇಸು ಕಳೆದುಹೋದಾಗ I A T A ಸಂಸ್ಥೆಯವರು ಅತ್ಯಾಧುನಿಕವಾದ ಸಮಾಚಾರ ಸಂಪರ್ಕ ಸಾಧನಗಳನ್ನು ಉಪಯೋಗಿಸಿ, ಇಪ್ಪತ್ತುನಾಲ್ಕು ಘಂಟೆಯೊಳಗೆ ಆ ಪೆಟ್ಟಿಗೆ ಮತ್ತೆ ಆ ಉಪಾಧ್ಯಾಯರ ಕೈಗೆ ಸೇರುವ ಹಾಗೆ ಮಾಡಿದರಂತೆ. ಆ ಪೆಟ್ಟಿಗೆ ಕಣ್ಮರೆಯಾಗಿದ್ದುದು ಪ್ಯಾರಿಸ್-ಆರ್ಲಿ ವಿಮಾನ ಕ್ಷೇತ್ರದಲ್ಲಿ—ಎಂದರೆ ನನ್ನ ಪೆಟ್ಟಿಗೆಗಳು ಮಾಯವಾಗಿದ್ದ ಕಡೆಯಲ್ಲಿಯೇ. "We do these things everyday" ಎಂದು ಅಲ್ಲಿಯ ಅಧಿಕಾರಿಣಿ ನನಗೆ ಹೇಳಿದ ಮಾತು ದಿಟ, ಹಾಗಾದರೆ! ಇವರೆಲ್ಲರ ಕಣ್ಣು ಮುಖ್ಯವಾಗಿ ಉಪಾಧ್ಯಾಯರ ಸಾಮಾನಿನ ಮೇಲೆಯೇ ಏಕೆ ಬೀಳುತ್ತದೆಯೋ?

ಇಂತು ನಿಮ್ಮ
ಶ್ರೀ—.

●

ಕೈಯಲ್ಲಿ ಮಾರ್ಗದರ್ಶನ ಪುಸ್ತಕ, ಕೊರಳಲ್ಲಿ ಅಪಸವ್ಯವಾಗಿ ಇಳಿಬಿದ್ದಿರುವ ಕ್ಯಾಮರಾ, ಮುಖದಲ್ಲಿ ವ್ಯಗ್ರದೃಷ್ಟಿಯ ಪೆಚ್ಚುಕಳೆ—ನೂರು ಗಜದ ದೂರ ದಿಂದಲೇ ಇವನೊಬ್ಬ ಪ್ರವಾಸಿಯೆಂಬು ಗುರುತಿಸಿ ಬಿಡಬಹುದು. ಪಶ್ಚಿಮದೇಶಗಳ ಪ್ರೇಕ್ಷಣೀಯ ಸ್ಥಳಗಳಲ್ಲಿ ಇಂಥವರು ಬಹುಸಂಖ್ಯೆಯಲ್ಲಿ ಅಲೆಯುತ್ತಿರುತ್ತಾರೆ—ಒಮ್ಮೆ ಒಂಟಿಯಾಗಿ, ಒಮ್ಮೆ ಗುಂಪುಗುಂಪಾಗಿ. ಭಾರತ ದಲ್ಲಾದರೆ ಮೊನ್ನೆ ಮೊನ್ನೆಯ ತನಕ ನಮ್ಮ ಜನರಿಗೆ ಈ ಗೀಳು ಹೆಚ್ಚಾಗಿ ಹಿಡಿದಿರಲಿಲ್ಲ. ಆಗಾಗ ಕಾರುಗಳಲ್ಲಿ ಬಂದು ಇಲ್ಲಿ ರಸ್ತೆಗಳಲ್ಲಿ ಧೂಳೆಬ್ಬಿಸುತ್ತಿದ್ದವರು ಬಲುಮಟ್ಟಿಗೆ ವಿದೇಶೀಯ ಪ್ರವಾಸಿಗಳು. ಈಗಲಾದರೆ, 'Tourist' ಎಂಬ ಲಲಾಟಪಟ್ಟವನ್ನು ಧರಿಸಿ ಪ್ರೇಕ್ಷಕ ಸಮುದಾಯವನ್ನು ತುಂಬಿಕೊಂಡು ಅನೇಕ ಬಸ್ಸುಗಳು ರಜಾ ದಿನವೆನ್ನದೆ ಬಿಡಿ ದಿನವೆನ್ನದೆ ಎಲ್ಲೆಲ್ಲಿಯೂ ಸಂಚರಿಸುತ್ತವೆ, ಮೂಲೆಮೂಲೆಗಳಿಗೂ ನುಗ್ಗುತ್ತವೆ. "ನವರಾತ್ರಿಯ ಪ್ರಯುಕ್ತ" "ಶಿವರಾತ್ರಿಯ ಪ್ರಯುಕ್ತ", "ಈ ಜಾತ್ರೆಗಾಗಿ", "ಆ ಉತ್ಸವಕ್ಕಾಗಿ" ವಿಶೇಷ ಬಸ್ಸು ಗಳನ್ನು ಬಿಡುತ್ತೇವೆ; ಬೃಂದಾವನವನ್ನು ತೋರಿಸುತ್ತೇವೆ, ತಿರುಪತಿಯ ಯಾತ್ರೆಯನ್ನು ಮಾಡಿಸುತ್ತೇವೆ, ನೀಲಗಿರಿಗೆ ಹತ್ತಿಸುತ್ತೇವೆ; ಉತ್ತಮವಾದ ಊಟ, ಉತ್ಕೃಷ್ಟವಾದ ಕಾಫಿತಿಂಡಿ, ಅಪೇಕ್ಷಿತವಾದ ವೈದ್ಯಸಹಾಯ ಎಲ್ಲಕ್ಕೂ ಏರ್ಪಾಡುಮಾಡಿರುತ್ತೇವೆ—ಬನ್ನಿ; ಕೆಲವೇ "ಸೀಟು" ಗಳು ಉಳಿದಿವೆ—ತಡಮಾಡದೆ ಬನ್ನಿ ಎಂದು ಆಕರ್ಷಕ ವಾಗಿ ಜಾಹಿರಾತುಗಳನ್ನು ಪ್ರಕಟಿಸಿ, ಕೇವಲ ಧಾರ್ಮಿಕ

ಮನೋವೃತ್ತಿಯವರಲ್ಲಿ ಕೂಡ ಪ್ರಯಾಣ ಚಾಪಲ್ಯವನ್ನು ಪ್ರಚೋದಿಸುವ ಕಂಪನಿಗಳು ಬೆಳೆಯುತ್ತಿವೆ. ವಿಶೇಷಸೌಕರ್ಯವುಳ್ಳ ರೈಲುಗಾಡಿಗಳನ್ನೇ ತಿಂಗಳುಗಟ್ಟಳೆಯ ಪ್ರವಾಸಕ್ಕಾಗಿ ಗೊತ್ತುಮಾಡಿ, "ಆಸೇತು ಶೀತಾಚಲಪರ್ಯಂತ" ಭಾರತದರ್ಶನಮಾಡಿಸುವ ಉದ್ಯಮ ಸಂಸ್ಥೆಗಳು ಸ್ಥಾಪಿತವಾಗಿವೆ. ಇದರ ಮೇಲೆ, ವಿದ್ಯಾರ್ಥಿಗಳನ್ನು, ಕ್ರೀಡಾಪಟುಗಳನ್ನು, ಕಲಾವಿಲಾಸಿಗಳನ್ನು, ಕೃಷಿವಿಶಾರದರನ್ನು ರಿಯಾಯಿತಿಯ ದರಗಳಲ್ಲಿ ದೇಶದ ಆದ್ಯಂತವೂ ಸುತ್ತಿಸುವ ವ್ಯವಸ್ಥೆಗಳೂ ಇವೆ. ರಾಜಕೀಯ ಸ್ವಾತಂತ್ರ್ಯವು ಲಭಿಸಿದೀಚೆಗೆ ಭಾರತ ಭೂಮಿಯಲ್ಲಿ ಕೂಡ ಈ ಪ್ರವಾಸಲಾಲಸೆ ಚೆನ್ನಾಗಿ ಬೇರೂರಿದೆಯೆಂಬುದಕ್ಕೆ ನಿದರ್ಶನ ಪ್ರತಿಯೊಂದು ರಾಜಮಾರ್ಗದಲ್ಲೂ ಗೋಚರವಾಗುತ್ತದೆ.

ಪ್ರವಾಸಿಗಳಲ್ಲಿ ಎರಡು ಬಗೆ : ಯಾವುದಾದರೊಂದು "ಯಾತ್ರೆ"ಯನ್ನು—ಅದು ಧಾರ್ಮಿಕವಾಗಿರಬಹುದು, ಲೌಕಿಕವಾಗಿರಬಹುದು, ಎರಡರ ಮಿಶ್ರಣವೂ ಆಗಿರಬಹುದು—ಮಾಡಬೇಕೆಂದು ಹಲವು ದಿನಗಳಿಗೆ ಮೊದಲೇ ನಿರ್ಧಾರಮಾಡಿ, ಅದಕ್ಕಾಗಿ ಹಣವನ್ನು ಹೇಗೋ ಶೇಖರಿಸಿ ತಮ್ಮ ಜೇಬಿನಿಂದಲೇ ವೆಚ್ಚಮಾಡಿ ಕೃತಾರ್ಥರಾಗುವರು ಒಂದು ಜಾತಿ. ಹೀಗೆ ಪ್ರವಾಸಮಾಡುವವರು ಶ್ರೀಮಂತರಾಗಿರಬೇಕು, ಇಲ್ಲವೇ ಸಂಕಲ್ಪ ಸಾಧಕರಾಗಿರಬೇಕು. ಇವರು ಈ ಯಾತ್ರೆಗಳನ್ನು ವ್ರತದಂತೆ ಕೈಗೊಳ್ಳುತ್ತಾರೆ, ಉಗ್ರನಿಷ್ಠೆಯಿಂದ ನೆರವೇರಿಸುತ್ತಾರೆ. ಎರಡನೆಯ ಜಾತಿಯವರಲ್ಲಿ ಆ ಹಣವು ಇರುವುದಿಲ್ಲ, ಆ ಹಠವೂ ಇರುವುದಿಲ್ಲ. ಇವರು ತಾನಾಗಿಯೇ ಅವಕಾಶವೊದಗಿದಾಗ, ಪ್ರೇಕ್ಷಣ ಕುತೂಹಲಕ್ಕೂ ತಕ್ಕಮಟ್ಟಿಗೆ ಆಸ್ಪದ ಕೊಡುವವರು. ತಾವು ಅವಲಂಬಿಸಿರುವ ವೃತ್ತಿಯ ಬಲದಿಂದ ಇಂಥವರು ಆಗಾಗ ದೇಶಪರ್ಯಟನ ಮಾಡಬೇಕಾಗಬಹುದು. ಒಂದು ಉಪನ್ಯಾಸ ಕೊಡುವುದಕ್ಕೆ, ಒಂದು ಸಭೆಯಲ್ಲಿ ಭಾಗವಹಿಸುವುದಕ್ಕೆ, ಒಂದು ಸಮ್ಮೇಳನವನ್ನು ವೀಕ್ಷಿಸುವುದಕ್ಕೆ ಅವರು ದೂರದ ಸ್ಥಳಗಳಿಗೆ ಹೋಗಬೇಕಾಗಬಹುದು. ಒಮ್ಮೊಮ್ಮೆ ಅದೃಷ್ಟ ಕಣ್ಣುಬಿಟ್ಟು ನೋಡಿದ್ದರ ಫಲವಾಗಿ, ಹೆಚ್ಚಿನ ವಿದ್ಯಾರ್ಜನೆಗಾಗಿ ವಿಷಯಸಂಗ್ರಹಕ್ಕಾಗಿ ಸರ್ಕಾರದ ಅಥವಾ ಉದಾರ ಸಂಸ್ಥೆಯೊಂದರ ವಿಶೇಷಕೃಪೆಯಿಂದ ವಿದೇಶಗಳಿಗೆ ಹೋಗಿಬರುವ ಅನುಕೂಲ ಸಂದರ್ಭವೂ ಅವರಿಗೆ ಒದಗಬಹುದು. ಅಂಥ ಸನ್ನಿವೇಶಗಳಲ್ಲಿ, ಕಣ್‌ತಡೆ ಕಟ್ಟಿಸಿಕೊಂಡ ಟಾಂಗಾ ಕುದುರೆಯಂತೆ "ಹೋದ ಪುಟ್ಟ, ಬಂದ ಪುಟ್ಟ" ಎನ್ನುವಷ್ಟರಲ್ಲಿಯೇ ಮುಗಿಸಿಬಿಡದೆ, ಇವರು ಕರ್ತವ್ಯ ನಿರ್ವಾಹದ ಜೊತೆಗೆ ಅನತಿದೂರದ ರಮ್ಯಸ್ಥಳಗಳ ಕಡೆಗೂ ಕಣ್ಣುಹಾಯಿಸತಕ್ಕವರು; ಇಂಥ ಸಂದರ್ಶನಗಳಿಗಾಗಿ ಒಂದೆರಡು ಹೆಚ್ಚು ದಿನಗಳನ್ನು ವಿನಿಯೋಗಿಸಬೇಕಾಗಿ ಬಂದರೂ, ಪ್ರಯಾಣಗಳನ್ನು ವಿಸ್ತರಿಸಬೇಕಾಗಿ ಬಂದರೂ, ಜೇಬಿನ ಹಣವನ್ನೇ ವೆಚ್ಚಮಾಡಬೇಕಾಗಿ ಬಂದರೂ ಹಿಂಜರಿಯದವರು. ನಾನು ಈ ಎರಡನೆಯ ವರ್ಗಕ್ಕೆ ಸೇರಿದವನು.

ಪ್ರವಾಸಿ ಯಾವ ಬಗೆಯವನೇ ಆಗಿರಲಿ; ಅವನ ದಿನಚರಿ ಹೂವಿನ ಹಾಸಿಗೆಯೇನೂ ಅಲ್ಲ. ನನಗೆ, ನನ್ನಂಥ ಹಲವರಿಗೆ, ರಾತ್ರಿಯ ಕೊನೆಯ ಜಾವದ ನಿದ್ದೆ ಎಲ್ಲಕ್ಕಿಂತ ಸವಿ. ನಡುರಾತ್ರಿಯಲ್ಲಿ ಒಂದೆರಡು ಸಲ ಎಚ್ಚರವಾಗಿ ಸ್ವಲ್ಪ ಹೊತ್ತು

ಹಾಸಿಗೆಯ ಮೇಲೆ ಹೊರಳಾಡಿದ್ದರೂ ಬಾಧಕವಿಲ್ಲ; ಹೊತ್ತಿಗೆ ಮುಂಚೆ ಏಳಬೇಕಾಗಿಲ್ಲ ಎಂಬ ಭರವಸೆಯಿದ್ದರೆ ಮನಸ್ಸು ನೆಮ್ಮದಿಯಾಗಿರುತ್ತದೆ. ಬೆಳಗಿನ ಐದು ಘಂಟೆಗೆ ಗಾಢನಿದ್ರೆ ಕವಿದು ಬಳಲಿಕೆಯನ್ನೆಲ್ಲಾ ಪರಿಹರಿಸುತ್ತದೆ. ಬಾಲಸೂರ್ಯನ ಕಿರಣಗಳು ಕಿಟಕಿಯ ಮೂಲಕ ತೂರಿಬಂದು ಕಣ್ಣುಗಳನ್ನು ಮೆಲ್ಲಗೆ ಬಿಡಿಸುತ್ತಿರುವಾಗ, ಆಕಾಶ ವಾಣಿಯ ಪ್ರಭಾತಗೀತ ಮೃದುಮಧುರವಾಗಿ ಕಿವಿಗಳನ್ನು ಪ್ರವೇಶಿಸುತ್ತಿರುವಾಗ, ಸಿದ್ಧವಾದ ಬಿಸಿ ಕಾಫಿಯ ಸುವಾಸನೆ ಅಡಿಗೆಯ ಮನೆಯಿಂದ ಮೂಗಿನ ಬಳಿಗೆ ಹಾಯುತ್ತಿರುವಾಗ, ಎಚ್ಚರದ ದಳಗಳು ಹೂವಿನೆಸಳುಗಳಂತೆ ತೊಡಕಿಲ್ಲದೆ ಅರಳಿ ಹೊಸ ಹಗಲನ್ನು ಸ್ವಾಗತಿಸುತ್ತವೆ. ಆದರೆ ಜೀವನದ ಈ ಒಂದು ಅಮೂಲ್ಯವಾದ ಸುಲಭಸುಖ ಪ್ರವಾಸಿಯ ಪಾಲಿಗೆ ಬಲುಮಟ್ಟಿಗೆ ಶೂನ್ಯ. ಎಷ್ಟೋ ಸಲ ಬೆಳಗಿನ ಜಾವಕ್ಕಿಂತಲೂ ಮೊದಲೇ ಅವನ ದಿನ ಪ್ರಾರಂಭವಾಗುತ್ತದೆ. ಪ್ರಯಾಣಕ್ಕೆ ಅನುಕೂಲವಾದ ರೈಲುಗಳನ್ನೂ ಬಸ್ಸುಗಳನ್ನೂ ವ್ಯವಸ್ಥಾಪಕರು ಅದೇಕೆ ನಿರ್ದಯರಾಗಿ ಸೂರ್ಯೋದಯಕ್ಕೆ ಮೊದಲೇ ಹೊರಡಿಸುತ್ತಾರೋ. ಸಮಯವನ್ನು ಸಾಧಿಸಬೇಕಾದರೆ ಹಾಸಿಗೆಯ ಆಸರೆಯನ್ನು ಬಲುಮುಂಚೆ ಬಿಡಬೇಕು. ಗಡಿಯಾರದ ಅಲಾರಮ್ಮಿಗಿಂತ ಒಂದು ಘಂಟೆ ಮೊದಲೇ ಮನಸ್ಸಿನ ಆತಂಕ ಎಬ್ಬಿಸುತ್ತದೆ. ಆಮೇಲೆ ಎಷ್ಟು ಕಣ್ಣುಮುಚ್ಚಿದರೂ ನಿದ್ದೆ ಮರಳುವುದಿಲ್ಲ. ಅವೇಳೆಯ ಸ್ನಾನ, ರಾತ್ರಿಯ ಹಾಲಿನ ಕಾಫಿ ಮೊದಲಾದವುಗಳ ಹವಣಿಕೆಯಲ್ಲಿ ಕೈ ಹಿಡಿದವಳ ಸೈರಣೆ ಹಲವು ಬಾರಿ ಹದಗೆಡುತ್ತದೆ. ಟಾಂಗಾ ತರುವುದಕ್ಕಾಗಿ ಮನೆಯ ಹುಡುಗರು ನಸುಕಿನ ಚಳಿಯಲ್ಲೇ ಓಡಬೇಕಾಗುತ್ತದೆ. ಪರಸ್ಥಳದಲ್ಲಿ ಇಳಿದು ಕೊಂಡಿದ್ದಾಗಲಂತೂ ಹೊತ್ತು ಹುಟ್ಟುವ ಮೊದಲೇ ಪ್ರಯಾಣ ಮಾಡಬೇಕಾಗಿ ಬಂದರೆ ಇನ್ನೂ ತೊಂದರೆ. ಇಷ್ಟು ಬೇಗ ಕಾಫಿ ಮಾಡಿ ಮುಂದೆ ಹಿಡಿಯುವವರು ಯಾರು? ಸ್ನಾನಕ್ಕೆ ತಣ್ಣೀರೇ ಗತಿ. ವೇಳೆ ಮೀರಿಹೋಗದಂತೆ ನಿಲ್ದಾಣವನ್ನು ಮುಟ್ಟುವುದೇ ಮಹಾಸಾಹಸ!

ಊಟ ಉಪಾಹಾರಗಳ ವಿಷಯವೂ ಅಷ್ಟಕ್ಕಷ್ಟೇ. ಕಾಫಿಯನ್ನು ಫಿಲ್ಟರಿನಲ್ಲೇ ಶೋಧಿಸಿರಬೇಕು, ಇಡ್ಡಲಿಗೆ ತೆಂಗಿನಕಾಯಿ ಚಟ್ಣಿಯೇ ಬೇಕು, "ಕಾಯ್ದಿಟಿಪಿದ ತುಪ್ಪ"ವೂ ಕೆನೆಮೊಸರೂ ಇಲ್ಲದೆ ಅನ್ನದ ತುತ್ತು ಗಂಟಲಿಗೇ ಹೋಗುವುದಿಲ್ಲ ಎನ್ನುವ "ಕುಸಿವಿಷ್ಟೆ"ಯ ಸ್ವಭಾವ ಯಾರಿಗಾದರೂ ಇದ್ದರೆ ಅಂಥವನಿಗೆ ಪ್ರವಾಸ ಒಳ್ಳೆಯ ಪಾಠಗಳನ್ನು ಕಲಿಸುತ್ತದೆ. ಇವನು ಉತ್ತರದಿಕ್ಕಿನಲ್ಲೇನಾದರೂ ಪ್ರಯಾಣ ಹೊರಟನೆಂದರೆ ಪ್ರಾತಃಕಾಲದಲ್ಲೇ ಚಹಾ ಕಷಾಯವನ್ನು ಹೀರಬೇಕಾಗುತ್ತದೆ. ನಾರುನಾರಾದ ಒಣಕಲು ಪೂರಿಗಳಿಂದ ಹೊಟ್ಟೆಯನ್ನು ಭರ್ತಿಮಾಡಿಕೊಳ್ಳಬೇಕಾಗುತ್ತದೆ. ಬೆಣ್ಣೆ ಕಾಯಿಸಿದ ತುಪ್ಪವೆಲ್ಲಿ ಬರಬೇಕು; ಸಾಸಿವೆಯೆಣ್ಣೆಯ ಪೀತವರ್ಣ ಅಡಿಗೆಯಲ್ಲಿ ತೇಲದಿದ್ದರೆ ಅದೇ ಒಂದು ಪುಣ್ಯ! ಸ್ವದೇಶದಲ್ಲೇ ಹೀಗೆ ಎಂದ ಮೇಲೆ, ವಿದೇಶದಲ್ಲಿ ಪ್ರವಾಸಮಾಡುವಾಗ ಆಹಾರದ ವಿಷಯ ಭಾರಿಯ ತಲೆನೋವಾಗಬಹುದು. ಶಾಕಾಹಾರಿಯಾಗಿ ಇದ್ದುಕೊಂಡೇ ಪ್ರಪಂಚ ಪರ್ಯಟನ ಮಾಡುವುದು ಸಾಧ್ಯ. ಆದರೆ ಆ ವ್ರತಪರಿಪಾಲನೆಗೆ ಮನಸ್ಸಿನ ಒಂದು ಭಾಗವನ್ನು ಸಂತತವಾಗಿ ನೇಮಿಸಿರಬೇಕಾಗುತ್ತದೆ. ಊಟಕ್ಕೆ ಕರೆದವರಿಗೆ "ನಾನು

ಶಾಕಾಹಾರಿ" ಎಂದು ಅರಿಕೆಮಾಡಿದರೆ ಸಾಲದು. ಅವರ ಗಣನೆಯಲ್ಲಿ ಮೀನು ಒಂದು ಶಾಕಸಾಮಗ್ರಿ. (ನಮ್ಮ ದೇಶದಲ್ಲೇ ಬಂಗಾಳದವರು ಮೀನನ್ನು "ಗಂಗಾಫಲ" ಎಂದು ಕರೆಯುತ್ತಾರಂತೆ). ಆದಕಾರಣ ಎಲ್ಲೆಲ್ಲಿ ಹೋದರೂ "No fish, no meat" ("ಮೀನು ಬೇಡ, ಮಾಂಸ ಬೇಡ") ಎಂದು ಬಿಡಿಸಿ ಹೇಳಬೇಕು. ಉಪಾಹಾರಗೃಹಗಳಲ್ಲಿ ಊಟ ತಿಂಡಿಗಳನ್ನು ಆರಿಸಿಕೊಳ್ಳುವ ಮೊದಲು, ಈ ಪದಾರ್ಥದಲ್ಲಿ ನಿಷಿದ್ಧವಸ್ತುಗಳು ಉಂಟೆ ಎಂದು ಕೇಳಿ ಕೇಳಿ ದೃಢಪಡಿಸಿಕೊಳ್ಳಬೇಕು. ಅಷ್ಟಕ್ಕೆ ಅವಕಾಶವಿಲ್ಲದಿದ್ದರೆ, ಅಥವಾ ಇದನ್ನೆಲ್ಲಾ ಕೇಳಲು ಸಂಕೋಚ ಅಡ್ಡಿಬಂದರೆ, ಕೇವಲ ಬ್ರೆಡ್ಡು ಬೆಣ್ಣೆ ಹಾಲು ಹಣ್ಣುಗಳಿಂದಲೇ ಹಸಿವನ್ನು ಇಂಗಿಸಿಕೊಳ್ಳಬೇಕು.

ಇಂಗ್ಲಿಷ್ ರಾಜ್ಯಭಾಷೆಯಲ್ಲದ ದೇಶಗಳಲ್ಲಿ ಒಬ್ಬೊಬ್ಬರೇ ಪ್ರವಾಸ ಮಾಡುವಾಗ ತೊಡಕು ಇನ್ನೂ ಹೆಚ್ಚಾಗುತ್ತದೆ. ಹಾಲೆಂಡ್, ಸ್ವಿಟ್ಸರ್‌ಲೆಂಡ್ ಮೊದಲಾದ ದೇಶಗಳಲ್ಲಿ ಅಷ್ಟೇನೂ ಕ್ಲೇಶವಿಲ್ಲ; ಅಲ್ಲಿ ಇಂಗ್ಲಿಷ್ ತಕ್ಕಮಟ್ಟಿಗೆ "ನಡೆಯುತ್ತದೆ". ಪ್ರವಾಸಿಗಳ ಉಪಚಾರವನ್ನೇ ಹಿರಿಯ ಉದ್ಯಮವಾಗಿ ಮಾಡಿಕೊಂಡು, ಅಮೆರಿಕನರ ಡಾಲರುಗಳನ್ನು ರಾಶಿರಾಶಿಯಾಗಿ ಗಳಿಸುತ್ತಿರುವ ಇಟಲಿಯ ಹೋಟಲುಗಳಲ್ಲೂ ಇಂಗ್ಲಿಷಿನ ಬಳಕೆ ತಕ್ಕಮಟ್ಟಿಗೆ ಉಂಟು. (ಇಂಗ್ಲಿಷಿನಲ್ಲಿ ನೀವು ಮಾತಾಡಿದರೆ ಸಾಕು, ನಿಮಗೆ ಅಮೆರಿಕನ್ ಪಟ್ಟವನ್ನೇ ಕಟ್ಟಿ ದುಬಾರಿಯ ದರಗಳನ್ನು ನಿರ್ದಾಕ್ಷಿಣ್ಯವಾಗಿ ವಿಧಿಸುತ್ತಾರೆ.) ಆದರೆ ಅಲ್ಲಿ ಕೂಡ ಅಸಹಾಯಸ್ಥಿತಿ ಒದಗುವುದುಂಟು. ರೋಮ್ ನಗರದಲ್ಲಿ ನಾನು ಒಮ್ಮೆ ರಾಜಮಾರ್ಗಕ್ಕೆ ದೂರವಾದ ಒಂದು ರೆಸ್ಟೊರಾಂಟಿಗೆ ಮಧ್ಯಾಹ್ನದ ಉಪಾಹಾರಕ್ಕಾಗಿ ಹೋಗಬೇಕಾಯಿತು. "ಸ್ಪಗೇಟಿ" (Spaghetti) ಬೇಕು ಎಂದು ಕೇಳಿದೆ. (ಇದು ಇಟಲಿಯ ಜನಪ್ರಿಯ ಆಹಾರ; ನಮ್ಮ ಸೇವೆಗೆಯನ್ನು ಬಲುಮಟ್ಟಿಗೆ ಹೋಲುತ್ತದೆ.) ಆ ತಾಟು ಬೇಗ ಬಂದಿತು. ಅದರೊಡನೆ ನಂಜಿಕೊಳ್ಳಲು ಏನಾದರೂ ವ್ಯಂಜನ ಸಾಮಗ್ರಿ ಬೇಡವೆ? ಟೊಮ್ಯಾಟೋ ಗೊಜ್ಜು ಇದಕ್ಕೆ ಎತ್ತಿದ ಕೈ. "Tomato" ಎಂಬ ಶಬ್ದವನ್ನು ನನಗೆ ತೋರಿದ ಹಲವು ರೀತಿಗಳಲ್ಲಿ ಉಚ್ಚರಿಸಿದೆ. ಅಲ್ಲಿದ್ದ ಯಾರಿಗೂ ಅರ್ಥವಾಗಲಿಲ್ಲ. ಕಡೆಗೆ, ಹಸಿವಿನ ಪ್ರೇರಣೆಯಿಂದ ಜ್ಞಾಪಕಶಕ್ತಿ ಚುರುಕಾಗಿ ಇದ್ದರೂ ಇರಬಹುದು, ಎಲ್ಲೋ ಒಮ್ಮೆ ಕಿವಿಗೆ ಬಿದ್ದಿದ್ದ "ಪೊಮೊದೋರೊ" (Pomodoro) ಎಂಬ ಶಬ್ದ ನನ್ನ ನಾಲಗೆಯಿಂದ ಹೊರಟಿತು. ಟೊಮ್ಯಾಟೋ ಗೊಜ್ಜಿನ ಸೀಸೆ ನನ್ನ ಮೇಜಿಗೆ ಬಂದಿತು!

ಫ್ರಾನ್ಸಿನಲ್ಲಿ ಫ್ರೆಂಚ್ ಭಾಷೆ ಬಾರದವನ ಸ್ಥಿತಿ ಇದಕ್ಕಿಂತ ಕೇಡಾಗುವುದುಂಟು. ಪಾಶ್ಚಾತ್ಯದೇಶಗಳಲ್ಲಿ ಪ್ರವಾಸಿಗಳ ಅನುಕೂಲಕ್ಕೆಂದೇ ದ್ವಿಭಾಷಾ ಶಬ್ದಕೋಶಗಳನ್ನು ಸಿದ್ಧಪಡಿಸಿ ಮಾರುತ್ತಾರೆ. ಮಾರ್ಗದರ್ಶನ ಪುಸ್ತಕದಂತೆಯೇ ಇದೂ ಅವಶ್ಯ ಸಾಧನ. ರೈಲಿನಲ್ಲಿ, ಬಸ್ಸಿನಲ್ಲಿ, ಹೋಟಲಿನಲ್ಲಿ, ಅಂಗಡಿಯಲ್ಲಿ, ಅಂಚೆಕಚೇರಿಯಲ್ಲಿ ಉಪಯೋಗಿಸಬೇಕಾಗಿ ಬರುವ ಶಬ್ದಗಳು, ಶಬ್ದಸಮುಚ್ಚಯಗಳು, ವಾಕ್ಯಗಳು ಮೊದಲಾದವನ್ನು ಇದರೊಳಗೆ ಎರಡು ಭಾಷೆಗಳಲ್ಲೂ ಕೊಟ್ಟಿರುವುದಲ್ಲದೆ, ಉಚ್ಚಾರಣೆಯನ್ನು

ನಿರ್ದೇಶಿಸಿರುವುದೂ ಉಂಟು. ಆದರೂ ಒಮ್ಮೊಮ್ಮೆ ಈ ಶಬ್ದಪುಸ್ತಕದ ಸಹಾಯ ಸಾಲದೆ ಹೋಗಬಹುದು. ಒಬ್ಬ ಪ್ರವಾಸಿ ಫ್ರಾನ್ಸಿನಲ್ಲಿ ಊಟಕ್ಕಾಗಿ ಒಂದು ರೆಸ್ಟೊರಾಂಟಿಗೆ ಹೋದನಂತೆ. ಆತನಿಗೆ ನಡುವೆ ಉಪ್ಪು ಬೇಕಾಯಿತು; ಫ್ರೆಂಚಿನಲ್ಲಿ ಉಪ್ಪು ಎನ್ನುವುದಕ್ಕೆ ಸಮಾನ ಪದ ಯಾವುದೆಂದು ತಿಳಿಯದು. ತನ್ನ ಒಡನಾಡಿಯಾದ ಶಬ್ದಪುಸ್ತಕವನ್ನು ತೆರೆದು ನೋಡುತ್ತಾನೆ : ಆತನ ದುರ್ದೈವದಿಂದ ಅದರಲ್ಲಿ ಉಪ್ಪು ಇರಲಿಲ್ಲ! "Salt, salt" ಎಂದು ಕುಗಿದರೂ, ತಿಳಿದ ಸನ್ನೆಗಳನ್ನೆಲ್ಲಾ ಮಾಡಿದರೂ, ಅಲ್ಲಿಯ "ಮಾಣಿ"ಗೆ ಅರ್ಥವಾಗಲಿಲ್ಲ. ಕಡೆಗೆ ಈತನು ಉಪ್ಪಿಲ್ಲದೆಯೆ ಊಟ ಮುಗಿಸಿಕೊಂಡು ಹೊರಡ ಬೇಕಾಯಿತಂತೆ! ಇಷ್ಟೊಂದು ದುಃಸ್ಥಿತಿ ನನಗೆ ಎಲ್ಲೂ ಒದಗಲಿಲ್ಲ. ಸ್ವದೇಶಕ್ಕೆ ಹಿಂದಿರುಗುವ ದಾರಿಯಲ್ಲಿ ಫ್ರಾನ್ಸಿನಲ್ಲಿ ನಾನು ಕೆಲವು ದಿನ ಪ್ರವಾಸ ಮಾಡಿದಾಗ ಕೊಂಡುಕೊಂಡ 'English-French : Helps to conversation' ಎಂಬ ಸಣ್ಣ ಪುಸ್ತಕದಲ್ಲಿ, ಉಪ್ಪು (du sel), ಮೆಣಸು (du poiver), ಸಕ್ಕರೆ (du sucsre) ಇವೆಲ್ಲ ಉಚ್ಚಾರಣೆ ಸಮೇತವಾಗಿ ಇದ್ದುವು!

ಪ್ರವಾಸದಲ್ಲಿ ತೃಪ್ತಿ ಬರಬೇಕಾದರೆ ಒಂದು ನಗರದಲ್ಲಿ ಹೆಚ್ಚುಕಾಲ ತಂಗಿದ್ದು, ಅದರ ದೃಶ್ಯವಿಶೇಷಗಳನ್ನೆಲ್ಲಾ ಸಾವಕಾಶವಾಗಿ ವಿವರ ವಿವರವಾಗಿ ತಾನೇ ನೋಡಿಕೊಂಡು ಹೋಗುವುದು ಉತ್ತಮಮಾರ್ಗ. ಅದಕ್ಕೆ ದಿನ ಬೇಕು, ಹಣ ಬೇಕು. ಈ ಅನುಕೂಲ ಎಷ್ಟು ಮಂದಿ ಪ್ರವಾಸಿಗಳಿಗಿರುತ್ತದೆ! ಇವರಿಗಿರುವುದು ಒಂದೇ ದಾರಿ : ಮಾರ್ಗದರ್ಶನ ಮಾಡುವ ಬಸ್ಸುಗಳಲ್ಲಿ ಕುಳಿತು ನಗರದ ಮುಖ್ಯವಾದ ನೋಟಗಳನ್ನು ಮುಗಿಸುವುದು. ಆದರೆ ಇದರಿಂದ ಸಂತುಷ್ಟಿ ದೊರೆಯುವ ಬದಲು ಆಕಾಂಕ್ಷೆ ಬೆಳೆಯುತ್ತದೆ. ಎರಡೂವರೆ ಸಾವಿರ ವರ್ಷಗಳಿಗೆ ಮೀರಿದ ಚರಿತ್ರೆಯ ಪ್ರತ್ಯಕ್ಷ ಅವಶೇಷಗಳಿಂದ ಕಿಕ್ಕಿರಿದು, ಕ್ರೈಸ್ತ ಧರ್ಮದ ಮಹೋನ್ನತ ದೇವಮಂದಿರಗಳಿಂದ ನಿಬಿಡವಾಗಿ, ಪಾಶ್ಚಾತ್ಯ ಜಗತ್ತಿನ ಶ್ರೇಷ್ಠಶಿಲ್ಪ ಶ್ರೇಷ್ಠ ಚಿತ್ರಗಳ ನೆಲೆವೀಡಾಗಿರುವ ರೋಮ್ ನಗರವನ್ನು ನಾಲ್ಕೈದು ದಿನಾರ್ಧಗಳ ನಿರ್ದೇಶಿತ ಪರ್ಯಟನದಲ್ಲಿ "ಮುಗಿಸ"ಬೇಕಾದವನ ಅಳಲನ್ನು ಸಹೃದಯರೇ ಊಹಿಸಿಕೊಳ್ಳಬೇಕು. ಜೀವತುಂಬಿ ಉಸಿರಾಡುತ್ತಿದೆಯೋ ಎಂಬಂತೆ ತೋರಿ ಮಾನವ ಸೌಂದರ್ಯದ ಪರಾಕಾಷ್ಠೆಯನ್ನು ಮನಗಾಣಿಸುವ ಪ್ರತಿಮೆಯೊಂದರ ಮುಂದೆ ನಿಂತು ಅದರ ಮುಖದ ಕಳೆಯನ್ನು, ನಿಲವಿನ ಭಂಗಿಯನ್ನು ಪರಿಭಾವಿಸುತ್ತಿರುವಷ್ಟರಲ್ಲೇ ಮಾರ್ಗದರ್ಶಿ ದಾಟಿ ಹೋಗಿರುತ್ತಾನೆ, ಜೊತೆಗಾರರೂ ಮುಂದೆ ಸಾಗಿರುತ್ತಾರೆ. ಇಷ್ಟವಿಲ್ಲದಿದ್ದರೂ ಅಲ್ಲಿಂದ ತಾನೂ ಚಲಿಸಲೇ ಬೇಕಾಗುತ್ತದೆ. ಒಂದು ಕಡೆಯಲ್ಲಂತೂ ಮನಸ್ಸು ಅತಿಶಯ ವೇದನೆಗೆ ಒಳಗಾಯಿತು. 'ಸಂಕಲೆಗಳಲ್ಲಿನ ಸಂತ ಪೀಟರ್' (St. Peter in chains) ಎಂಬ ಹೆಸರಿನ ದೇವಾಲಯದೊಳಗೆ ಇರುವ ಮೋಸೆಸ್ಸನ ವಿಗ್ರಹವನ್ನು ದರ್ಶನಮಾಡಿದ ಸಂದರ್ಭ ಅದು. ಮೈಕಲ್ ಆಂಗೆಲೋ (Michelangelo) ಎಂಬ ಕಲಾಸಾರ್ವಭೌಮನು ಅಮೃತಶಿಲೆಯಲ್ಲಿ ಬೆಣ್ಣೆಯಲ್ಲಿ ಹೇಗೋ ಹಾಗೆ ಲೀಲಾಜಾಲವಾಗಿ ಕೈಯಾಡಿಸಿ ಕಂಡರಿಸಿರುವ ಧೀರೋದಾತ್ತ ಮೂರ್ತಿ ಅದು. ಮೋಸೆಸ್ ಮಹಾಪ್ರವಾದಿ ಪೀಠಾಸೀನನಾಗಿರುವ ನಿಲವಿನ ದಿಟ್ಟತನ. ಅವನ

ಅಂಗೋಪಾಂಗಗಳ ದಾರ್ಢ್ಯ, ತುಟಿಗಳ ಸುತ್ತಿನಿಂದ ಋಷಿಯೋಗ್ಯವಾಗಿ ಹೊಮ್ಮಿ ಇಳಿದು ಬಂದಿರುವ ಕೇಶರಾಶಿಯ ಹೊನಲು ಇದೆಲ್ಲ ಹಾಗಿರಲಿ. ನೇತ್ರಗಳ ವೀರ ದೃಷ್ಟಿ, ವದನದ ನಿಷ್ಠುರಮುದ್ರೆ—ಇವೇ ಸಾಕು ಯಾರನ್ನಾದರೂ ತಡೆದು ನಿಲ್ಲಿಸುವುದಕ್ಕೆ. "ನೀವು ಪಾಲಿಸುವ ಸಲುವಾಗಿ ಭಗವಂತನ ಸಮ್ಮುಖದಿಂದ ನಾನು ದಶ ಶಾಸನಗಳನ್ನು (The Ten Commandments) ತಂದು ಸಾರಿದೆನಲ್ಲ. ಅವನ್ನೆಲ್ಲ ಉಲ್ಲಂಘಿಸಿದ ನೀವು ನನಗೆ ಹೇಗೆ ತಕ್ಕ ಶಿಷ್ಯರಾದೀರಿ?" ಎಂದು ಈ ಗುರುವರೇಣ್ಯನು ತನ್ನವರನ್ನು ಅಧಿಕ್ಷೇಪಿಸುತ್ತಿರುವಂತೆ ನನಗೆ ತೋರಿತು. ಏಕೆ ಮರೆಮಾಚಲಿ!—ನಮ್ಮ ವೇದವ್ಯಾಸರ ನೆನಪು ನನಗೆ ಅನಿವಾರ್ಯವಾಗಿ ಉಂಟಾಯಿತು :

> "ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿತ್ ಶೃಣೋತಿ ಮಾಂ ।
> ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ ॥"

("ಇದೋ, ತೋಳುಗಳನ್ನು ಎತ್ತಿಕೊಂಡು ಕೂಗಿಕೊಳ್ಳುತ್ತಿದ್ದೇನೆ. ಯಾರೊಬ್ಬರೂ ನನ್ನನ್ನು ಆಲಿಸುವುದಿಲ್ಲವಲ್ಲ! ಧರ್ಮದಿಂದಲೇ ಅರ್ಥ, ಧರ್ಮದಿಂದಲೇ ಕಾಮ : ಏಕೆ ಅದನ್ನು ಸೇವಿಸುವುದಿಲ್ಲ?")—ಎಂಬ ಅನೇಕ ಸಾವಿರ ವರ್ಷಗಳ ಹಿಂದಿನ ವ್ಯಾಸವಾಣಿ ನನ್ನ ಕಿವಿಗಳಲ್ಲಿ ಮೊರೆಯುತ್ತಿರುವಂತೆ ಭಾಸವಾಯಿತು!...ಮೋಸೆಸ್ಸನ ವಿಗ್ರಹದ ಭವ್ಯತೆಯನ್ನು ಮನಸ್ಸಿನಲ್ಲಿ ತುಂಬಿಕೊಳ್ಳುತ್ತಾ ಅದರ ಪರಿಭಾವನೆಯಲ್ಲಿ ನಾನು ಮುಳುಗಿರುವಾಗಲೇ ಮಾರ್ಗದರ್ಶಿಯ ಅನುಲ್ಲಂಘನೀಯವಾದ ಕರೆ ಕಿವಿಯನ್ನು ಕೊರೆಯಿತು. ತೃಷಿತನೇತ್ರನಾಗಿ, ಅತೃಪ್ತಹೃದಯನಾಗಿ ನಾನು ಹೆಜ್ಜೆಗಳನ್ನು ಇತ್ತಕಡೆ ತಿರುಗಿಸಬೇಕಾಯಿತು. ಪ್ರವಾಸಿಯ ಪ್ರಪಂಚದಲ್ಲಿ ಗಡಿಯಾರದ್ದೇ ಪರಮಶಾಸನ!

ಗಡಿಯಾರ ಎನ್ನುತ್ತಲೂ ಇನ್ನೊಂದು ಪ್ರಸಂಗ ನೆನಪಾಗುತ್ತದೆ. ನನ್ನ ಪ್ರವಾಸದಲ್ಲಿ ಮಿಲಾನ್ ನಗರದ ಸಂದರ್ಶನಕ್ಕಾಗಿ ನನಗೆ ದೊರೆತದ್ದು ಕೆಲವು ಘಂಟೆ ಮಾತ್ರ—ವೆನಿಸ್ಸಿನಿಂದ ಜೇನೋವಕ್ಕೆ ಹೋಗುವ ದಾರಿಯಲ್ಲಿ. ಮಿಲಾನಿನಲ್ಲಿ ನಾನು ನೋಡಬೇಕೆಂದಿದ್ದ ಅಂಶಗಳು ಎರಡು! ಒಂದು ಅಲ್ಲಿಯ ಬೃಹತ್ ಪ್ರಮಾಣದ ಕೇಥಿಡ್ರಲ್ (Cathedrala) ಇನ್ನೊಂದು ಸಾಂತ ಮರಿಯ ದೆಲ್ಲ ಗ್ರಾಸಿಯ (Santa Maria della Grazia) ಎಂಬ ಚರ್ಚಿಗೆ ಸೇರಿದ ಕಾನ್ವೆಂಟಿನೊಳಗೆ ಒಂದು ಗೋಡೆಯ ಮೇಲೆ ಲಿಯೊನಾರ್ದೋ ದ ವಿಂಚಿ (Leonardo da Vinci) ಯೇಸು ಕ್ರಿಸ್ತನ ಕೊನೆಯ ಭೋಜನವನ್ನು ಕುರಿತು ರಚಿಸಿರುವ "The Last Supper" ಎಂಬ ಲೋಕವಿಖ್ಯಾತವಾದ ವರ್ಣಚಿತ್ರ. ನನಗೆ ಇದ್ದ ಪರಿಮಿತ ವೇಳೆಯಲ್ಲೆ ಇವೆರಡನ್ನೂ ನೋಡಿ ಮುಂದಿನ ರೈಲನ್ನು ಹಿಡಿಯುವುದು ಸಾಧ್ಯವೆಂದು ಮಿತ್ರರು ಮೊದಲೇ ತಿಳಿಸಿದ್ದರು. ಮಿಲಾನಿನಲ್ಲಿ ನಾನು ಇಳಿದಾಗ ಅಪರಾಹ್ಣ ಸುಮಾರು ಎರಡು ಘಂಟೆಯ ಸಮಯ. ಅಲ್ಲಿಂದ ಮೊದಲು ಕೆಥೀಡ್ರಲ್‌ಗೆ ಹೋಗಿ ಒಳಗೆಲ್ಲಾ ಸುತ್ತಿ, ಮೇಲೆಲ್ಲಾ ಹತ್ತಿ, ಆ ಮಹಾ ದೇವಾಲಯವನ್ನು ಕಟ್ಟುವುದಕ್ಕೆ ಅಲಂಕರಿಸುವುದಕ್ಕೆ ವಿಗ್ರಹಪರಂಪರೆಯನ್ನು ಕಡೆದು ನಿಲ್ಲಿಸುವುದಕ್ಕೆ ಸೂರೆಯಾಗಿದ್ದ ಅಮೃತ ಶಿಲೆಯ ವೈಭವವನ್ನೆಲ್ಲಾ ವೀಕ್ಷಿಸಿ, ಹೊರಗೆ

ಬರುವುದರಲ್ಲಿ ಕೆಲವು ಹೊತ್ತು ಕಳೆಯಿತು. ಅಲ್ಲಿಂದ ದ ವಿಂಚಿಯ ಚಿತ್ರವಿರುವ ಕಾನ್ವೆಂಟನ್ನು ಹುಡುಕಿಕೊಂಡುಹೋಗಿ ಮುಟ್ಟುವಷ್ಟರಲ್ಲಿ ನಾಲ್ಕೂವರೆ ಘಂಟೆಯಾಗಿತ್ತು. ಕಾನ್ವೆಂಟಿನ ಬಾಗಿಲು ಮುಚ್ಚಿಬಿಟ್ಟಿತ್ತು. ಪ್ರವೇಶ ಬೆಳಗಿನ ೧೦ ಘಂಟೆಯಿಂದ ಸಂಜೆ ೪ರ ವರೆಗೆ ಎಂದು ಸೂಚಿಸುತ್ತಿದ್ದ ಚಿಕ್ಕ ಫಲಕವನ್ನು ಬಾಗಿಲ ಬಳಿ ನೋಡಿ ಮನಸ್ಸು ಕಳವಳಗೊಂಡಿತು. (ಈ ಅತಿಮುಖ್ಯವಾದ ವಿವರ ನನಗೆ ಮೊದಲೇ ತಿಳಿದುಬಂದಿರಲಿಲ್ಲ.) ಆದರೂ ಒಂದು ಪ್ರಯತ್ನ ಮಾಡಿ ನೋಡೋಣವೆಂದು ಪಕ್ಕದಲ್ಲಿದ್ದ ಚರ್ಚಿನೊಳಕ್ಕೆ ಹೋಗಿ ಅಲ್ಲಿಯ ಮುಖ್ಯಸ್ಥರನ್ನು ಹುಡುಕುತ್ತಿದ್ದೆ. ನನ್ನಂತೆಯೇ ತಡವಾಗಿ ಬಂದಿದ್ದ ಅಮೆರಿಕನ್ ಸಂಸಾರವೊಂದರ ಐದು ಮಂದಿ ಜೊತೆಯಾದರು. ಚರ್ಚಿನ ಪಾದ್ರಿಯೊಬ್ಬರು ಸ್ವಲ್ಪ ಹೊತ್ತಾದ ಮೇಲೆ ಅಲ್ಲಿಗೆ ಬಂದರು; ಅವರಿಗೆ ನಮ್ಮ ಅಭಿಲಾಷೆಯನ್ನು ನಿವೇದಿಸಿಕೊಂಡೆವು. ನಮಗೆ ಇಟಾಲಿಯನ್ ಭಾಷೆ ಬಾರದು; ಆತನಿಗೆ ಇಂಗ್ಲಿಷ್ ತಿಳಿಯದು. ಆದರೂ, "ದ ವಿಂಚಿಯ ಚಿತ್ರವನ್ನು ನೋಡುವ ಸಲುವಾಗಿಯೇ ಇಲ್ಲಿಗೆ ಬಂದಿದ್ದೇವೆ. ಇವರು ಅಮೆರಿಕದವರು, ನಾನು ಇಂಡಿಯಾ ದೇಶದವನು. ಇಷ್ಟೊಂದು ದೂರದಿಂದ ಇದರ ದರ್ಶನಕ್ಕಾಗಿ ಬಂದಿದ್ದೇವೆ. ಹೇಗಾದರೂ ಕೃಪೆಮಾಡಿ, ನಮಗೆ ಕಾನ್ವೆಂಟಿನೊಳಕ್ಕೆ ಹೋಗಿ ಚಿತ್ರವನ್ನು ನೋಡಲು ಒಪ್ಪಿಗೆ ಕೊಡಬೇಕು" ಎಂಬ ಪ್ರಾರ್ಥನೆಯನ್ನು ಮಾತಿನಿಂದ, ಸನ್ನೆಯಿಂದ ಹೇಗೋ ಆತನ ಗಮನಕ್ಕೆ ತಂದೆವು. ಎಷ್ಟು ಬೇಡಿಕೊಂಡರೂ ಆತನ ಮನಸ್ಸು ಕರಗಲಿಲ್ಲ, ನಿಯಮನಿಷ್ಠೆ ಸಡಿಲಲಿಲ್ಲ. "ಇಲ್ಲ, ಇಲ್ಲ" ಎಂದಷ್ಟೇ ಇಟಾಲಿಯನ್ ಭಾಷೆಯಲ್ಲಿ ಉತ್ತರಕೊಟ್ಟು ಆತ ಹೊರಟೇ ಹೋದನು! ವಿಂಚಿಯ ಮೂಲಚಿತ್ರವನ್ನು ನೋಡುವ ಭಾಗ್ಯ ಲಭಿಸಲೇ ಇಲ್ಲ. ಪ್ರವಾಸಿಯ ಜೀವನದಲ್ಲಿ ಇಂಥ ಆಶಾಭಂಗಗಳು ಎಷ್ಟೋ!

ಇನ್ನೊಂದು ಜಾತಿಯ ಆಶಾಭಂಗಕ್ಕೆ ನಯಾಗರಾ ಜಲಪಾತದ ದರ್ಶನ ಒಳ್ಳೆಯ ಉದಾಹರಣೆ. ಅಷ್ಟು ದೂರ ಹೋಗಿಯೂ ಈ ಪ್ರಸಿದ್ಧ ಜಲಪಾತವನ್ನು ನೋಡಿಕೊಂಡು ಬಾರದಿದ್ದರೆ ಅಮೆರಿಕದ ಯಾತ್ರೆಯೇ ಪೂರ್ಣವಾಗುವುದಿಲ್ಲವೆಂದು ನಮ್ಮ ದೇಶದಲ್ಲಿ ಹಲವರ ಭಾವನೆ; ಭೂವಿವರಣೆಯ ಪುಸ್ತಕಗಳಲ್ಲಿ ಇದರ ವರ್ಣನೆಗಳನ್ನು ಓದಿ ಆ ನೋಟಕ್ಕಾಗಿ ಬಾಯಿತೆರೆದುಕೊಂಡಿರುತ್ತೇವೆ. ನಾನು ಆ್ಯನ್ ಆರ್ಬರ್ ಪಟ್ಟಣದಲ್ಲಿದ್ದಾಗ ನಯಾಗರಕ್ಕೆ ಅಲ್ಲಿಂದ ಒಂದೇ ದಿನದಲ್ಲಿ ಹೋಗಿ ಹಿಂದಕ್ಕೆ ಬರುವಂತೆ ರೈಲ್ವೆಯ ವಿಶೇಷ ಪ್ರಯಾಣವೊಂದು ಏರ್ಪಾಡಾಗಿತ್ತು. ಈ ಸುಸಂಧಿಯನ್ನು ಕಳೆದುಕೊಂಡರೆ, ಮುಂದೆ ಸ್ವದೇಶದಲ್ಲಿ ಮುಖ ತೋರಿಸುವುದು ಹೇಗೆ; ಮಿಕ್ಕವರ ಮಾತಿರಲಿ, ಮನೆಯ ಹುಡುಗರಿಗೆ ಉತ್ತರ ಕೊಡುವುದು ಹೇಗೆ ಎಂದುಕೊಂಡು, ನಾನು ಆ್ಯನ್ ಆರ್ಬರ್ ಪಟ್ಟಣವನ್ನು ಬಿಡಬೇಕಾದ ಹಿಂದಿನ ದಿನ ಹೇಗೋ ಅವಕಾಶ ಕಲ್ಪಿಸಿಕೊಂಡು, ಮಿತ್ರರೊಬ್ಬರನ್ನು ಪ್ರೋತ್ಸಾಹಿಸಿ ಅವರೊಂದಿಗೆ ಆ ಪ್ರವಾಸವನ್ನು ಕೈಕೊಂಡದ್ದಾಯಿತು. ರೈಲು ಪ್ರಯಾಣವೇ ಬಲುಹೊತ್ತು ಹಿಡಿಯಿತು. ಕೊನೆಗೆ ಇಳಿದು, ಹೋಗಿ ನೋಡಿದಾಗ ಉತ್ಸಾಹವೆಲ್ಲ ಉಡುಗಿಹೋಯಿತು. ಜಲಪಾತವೇನೋ ಬೇಕಾದಷ್ಟು ವಿಶಾಲವಾಗಿದೆ; ನದಿಯ ಪಾತ್ರವೂ ತುಂಬ ವಿಸ್ತಾರವಾಗಿದೆ. ಆದರೇನು? ಜಲಪಾತದಲ್ಲಿ ಮುಖ್ಯವಾದದ್ದು

"ಪಾತ"ದ ಎತ್ತರವಷ್ಟೆ. ಅದೇ ಇಲ್ಲಿ ಬಲು ಕಡಮೆ; ಸುಮಾರು ನೂರರುವತ್ತು ಅಡಿಗಳು ಮಾತ್ರ. ಎಂಟುನೂರು ಮೂವತ್ತು ಅಡಿಯ ಎತ್ತರದಿಂದ ವಿಭಿನ್ನ ವೈಖರಿಯ ನಾಲ್ಕು ಸೀಳುಗಳಾಗಿ ಪ್ರಪಾತಕ್ಕೆ ಧುಮುಕುವ ನಮ್ಮ ಜೋಗದ ಜಲಪಾತವನ್ನು ತಳದಲ್ಲಿ ನಿಂತು ಘಂಟೆಗಟ್ಟಳೆ ನೋಡಿದ ಕಣ್ಣುಗಳಿಗೆ ನಯಾಗರದ ನೋಟ ಪಿಚ್ಚೆನಿಸಿತು. ಇದರ ಅದ್ಭುತ ಅಷ್ಟಕ್ಕಷ್ಟೇ ಎಂದು ಆನ್ ಆರ್ಬರಿನಲ್ಲಿಯೇ ಒಬ್ಬಿಬ್ಬರ ಬಾಯಲ್ಲಿ ಕೇಳಿದ್ದರೂ ನಾನೂ ನಂಬದಿದ್ದ ಒಡಕುಸುದ್ದಿ ಸತ್ಯವಾಯಿತು. ನಯಾಗರಾ ಜಲಪಾತ ಎರಡು ಭಾಗಗಳಲ್ಲಿದೆ. ಒಂದು ಸಂಯುಕ್ತ ಸಂಸ್ಥಾನಕ್ಕೆ ಸೇರಿದ್ದು, ಇನ್ನೊಂದು ಕೆನಡಾ ದೇಶಕ್ಕೆ. ಕೆನಡಾಭಾಗದ ಪಾತ ಹೆಚ್ಚು ಸುಂದರ ಎನ್ನುತ್ತಾರೆ. ಅಮೆರಿಕನ್ ಪ್ರೇಕ್ಷಕರೆಲ್ಲರೂ ಅತ್ತಕಡೆಗೂ ಹೋಗಿ ನೋಡಿಕೊಂಡು ಬಂದರೂ ನಾವಿಬ್ಬರು ಭಾರತೀಯರು ಮಾತ್ರ ಅಲ್ಲಿಗೆ ಹೋಗುವಹಾಗಿರಲಿಲ್ಲ. ಹಾಗಲ್ಲ!—ಕೆನಡಾ ಪ್ರದೇಶಕ್ಕೆ ನಾವು ಹೋಗಬಹುದಾಗಿತ್ತು; ಹೋಗಿದ್ದರೆ ಸಂಯುಕ್ತ ಸಂಸ್ಥಾನದೊಳಕ್ಕೆ ಮತ್ತೆ ಹೆಜ್ಜೆಯಿಡುವಂತಿರಲಿಲ್ಲ. ಅದು "ವೀಸಾ"ದ ನಿಯಮಗಳಿಗೆ ಸಂಬಂಧಿಸಿದ ನಿರ್ಬಂಧ. ಈ ಸಂಕಟ ಬೇರೆ! ಅಂತೂ ಈ ಅನುಭವ ಕಷಾಯಕ್ಕಾಗಿ ತಕ್ಕಮಟ್ಟಿಗೆ ಹಣ ಕೈಬಿಟ್ಟು ಹೋಯಿತಲ್ಲ ಎಂದು ನೊಂದುಕೊಂಡು ರೈಲಿಗೆ ಹಿಂದಿರುಗಿದ್ದಾಯಿತು.

ಮತ್ತೆ ಕೆಲವು ಬಗೆಯ ಆಶಾಭಂಗಗಳಿಗೆ ಪ್ರಕೃತಿಯ ಅಸಹಕಾರ ಕಾರಣವಾಗುತ್ತದೆ. ಭಾರತದಲ್ಲಿಯೇ ಸಮುದ್ರ ತೀರದ ಸೂರ್ಯೋದಯ ಸೂರ್ಯಾಸ್ತಗಳು ಬಹುರಮ್ಯವೆಂದು ಎಲ್ಲರೂ ಹೇಳುತ್ತಾರಷ್ಟೆ. ನಾನು ಮದರಾಸಿಗೆ ಮೊದಲ ಬಾರಿ ಹೋದದ್ದು ಅಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ವೀಕ್ಷಿಸಲೆಂದು. ಆ ಸಮಯದಲ್ಲಿ ಒಂದು ಬೆಳಗಿನ ಜಾವ ನಾವು ಕೆಲವು ಮಂದಿ ಮಿತ್ರರು ಸೂರ್ಯೋದಯವನ್ನು ಎದುರುಗೊಳ್ಳುವ ಆಸೆಯಿಂದ ಉತ್ಸಾಹಗೊಂಡು ನಮ್ಮ ಬಿಡಾರದಿಂದ ಸಮುದ್ರತೀರದವರೆಗಿನ ನಾಲ್ಕು ಮೈಲಿಯ ದೂರವನ್ನು ಕತ್ತಲೆ ಕತ್ತಲೆಯಾಗಿರುವಾಗಲೇ ನಡೆದೆವು. ಮುಹೂರ್ತಕ್ಕೆ ಎಷ್ಟೋ ಮುಂಚೆ ಅಲ್ಲಿಗೆ ಸೇರಿ, ನಟ್ಟ ಕಣ್ಣಿನಿಂದ ಪೂರ್ವ ದಿಗಂತವನ್ನೇ ನೋಡುತ್ತಾ, ಮೀನುಗಾರರ ನಾಡುದೋಣಿಗಳು ಅಡ್ಡಲಾಗಿ ಹಾಯ್ದು ಹೋಗುತ್ತಿದ್ದರೆ, ಎಲ್ಲಿ ನೋಟಕ್ಕೆ ಅಡ್ಡಿಯಾಗುವುದೋ ಎಂದು ಆತಂಕಪಡುತ್ತಾ, "ದೃಷ್ಟಿವಾರಿಯ ಧೀರ"ರಂತೆ ಕುಳಿತಿದ್ದೆವು. ಆದರೆ ಆ ಚಳಿಗಾಲದಲ್ಲೂ ವರುಣದೇವನಿಗೆ ನಮ್ಮ ಸೂರ್ಯೋಪಾಸಕರ ತಂಡದ ಮೇಲೆ ಏನು ಕೋಪ ಬಂದಿತೋ. ಆಕಾಶವೂ ನೀರೂ ಕೂಡುವ ಅಂಚಿಗೆ ಎದುರಾಗಿ ಮೋಡಗಳು ತೆರೆ ಕಟ್ಟಿದ್ದುವು. ಸೂರ್ಯನು ಕಡಲಿನಿಂದ ಎದ್ದು ಮೇಲಕ್ಕೇರಿ ಬಂದ ಎಷ್ಟೋ ಹೊತ್ತಾದಮೇಲೆ ಅವನ ಬಿಂಬದ ದರ್ಶನ ಮಸಕುಮಸಕಾಗಿ ನಮಗೆ ಆದದ್ದು! ಅಲ್ಲಿಂದೀಚೆಗೆ ನಾನು ಮದರಾಸಿಗೆ ಕಾರ್ಯಾಂತರ ನಿಮಿತ್ತವಾಗಿ ಹಲವುಬಾರಿ ಹೋಗಿ ಬಂದಿದ್ದೇನೆ; ಆದರೆ ಸೂರ್ಯೋದಯದ ದರ್ಶನಕ್ಕಾಗಿ ಮತ್ತೊಮ್ಮೆ ನಿದ್ದೆಕೆಟ್ಟು ಆಶಾಭಂಗವನ್ನು ಗಳಿಸುವ ಗೋಜಿಗೆ ಹೋಗಿಲ್ಲ.

ಸೂರ್ಯಾಸ್ತದ ವಿಷಯದಲ್ಲೂ ಇದೇ ದುರದೃಷ್ಟವೇ ನನ್ನ ಬೆನ್ನು ಹತ್ತಿತು : ಆಗುಂಬೆಯಲ್ಲೂ ಮೋಡಗಳು ಅಡ್ಡ ಬಂದುವು! ಮೊನ್ನೆ ಕೆಲವು ವಾರಗಳ ಕೆಳಗೆ

ಒಂದು ಕೊನೆಯ ಪ್ರಯತ್ನವನ್ನು ಮಾಡಿದೆ. ಒಂದು ಮೀಟಿಂಗಿನ ಸಲುವಾಗಿ ತಿರುವನಂತಪುರಕ್ಕೆ ನಾನು ಹೋಗಬೇಕಾಗಿ ಬಂದಿತು. ಕೇರಳದಲ್ಲಿ ಸಂಚಾರ ಮಾಡುವ ಯೋಗ ಇದುವರೆಗೆ ಒದಗಿರಲಿಲ್ಲ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಸಮೀಪದ ಕನ್ಯಾಕುಮಾರಿಗೂ ಹೋಗಿಬರಬೇಕೆಂದು ಸಂಕಲ್ಪಿಸಿ, ಇದಕ್ಕಾಗಿ ಮೀಟಿಂಗಿಗೆ ಒಂದು ದಿನ ಮೊದಲೇ ತಿರುವನಂತಪುರವನ್ನು ತಲಪಿದೆ. ಕನ್ಯಾಕುಮಾರಿ ಭಾರತದ ದಕ್ಷಿಣದ ತುದಿಯಲ್ಲಿ ಹಿಂದೂಸಾಗರ, ಬಂಗಾಳಾಕೊಲ್ಲಿ, ಅರಬ್ಬೀಸಮುದ್ರ ಈ ಮೂರು ಜಲರಾಶಿಗಳ ಸಂಧಿ ಸ್ಥಾನದಲ್ಲಿರುವುದರಿಂದ, ಅಲ್ಲಿ ಸಂಜೆ ಅರಬ್ಬೀಸಮುದ್ರದ ಮೇಲೆ ಸೂರ್ಯಾಸ್ತವನ್ನೂ ಬೆಳಿಗ್ಗೆ ಬಂಗಾಳಕೊಲ್ಲಿಯ ಮೇಲೆ ಸೂರ್ಯೋದಯವನ್ನೂ ನೋಡುವ ಅಪೂರ್ವ ಸನ್ನಿವೇಶ ಉಂಟು. ಕನ್ಯಾಕುಮಾರಿಗೆ ನಾನು ಸಂಜೆಯೊಳಗೆ ಸೇರಿ ರಾತ್ರಿಯನ್ನು ಅಲ್ಲೇ ಕಳೆದು ಬೆಳಗ್ಗೆ ಸ್ವಲ್ಪ ಹೊತ್ತು ಬಿಟ್ಟುಕೊಂಡು ಹಿಂದಿರುಗುವುದೆಂದು ಗೊತ್ತಾಗಿತ್ತು. ಇದಕ್ಕೆ ಅನುಕೂಲಿಸುವಂತೆ ಬಸ್ಸುಗಳ ವ್ಯವಸ್ಥೆಯೂ ಇತ್ತು. ಆದರೆ ನನ್ನ ಗ್ರಹಚಾರ. ತಿರುವನಂತಪುರದಿಂದ ಅಪರಾಹ್ಣದಲ್ಲಿ ಹೊರಟ ಬಸ್ಸು ಕುಂಟುತ್ತಾ ಕುಂಟುತ್ತಾ ರಾತ್ರಿ ಏಳೂವರೆಯ ಹೊತ್ತಿಗೆ ಕನ್ಯಾಕುಮಾರಿಯನ್ನು ಮುಟ್ಟಿತು. ಅಷ್ಟು ಹೊತ್ತಿಗೆ ಸೂರ್ಯನು ವಿಶ್ರಾಂತಿಗಾಗಿ ಸಮುದ್ರದ ಕೆಳಕ್ಕೆ ಇಳಿದು ಎಷ್ಟೋ ಹೊತ್ತಾಗಿತ್ತು. ದೇವಿ ಕುಮಾರಿಯ ಗುಡಿಗೆ ಹೋಗಿ ದರ್ಶನಮಾಡಿ, ಆಕೆಯ ವಿಗ್ರಹದ ಮೂಗುತಿಯ ವಜ್ರಗಳ ಕಾಂತಿಯನ್ನು ನೋಡಲು ಆ ರಾತ್ರಿ ನನಗೆ ಸಾಧ್ಯವಾಯಿತಲ್ಲ; ಅಷ್ಟೇ ನನ್ನ ಪುಣ್ಯ. ಮರುದಿನ ಬೆಳಿಗ್ಗೆ ಮುಂಚೆಯೇ ಎದ್ದು ಸೂರ್ಯನನ್ನು ಎದುರುಗೊಳ್ಳಲು ನಾನೇನೋ ಸಿದ್ಧವಾದೆ. ಆದರೆ ಇಲ್ಲಿಯೂ ಮೋಡಗಳು ತಮ್ಮ ನಿತ್ಯವಿಧಿಯನ್ನು ಪಾಲಿಸಿದುವು. ನನ್ನ ಹಣೆಯ ಬರಹ ಈ ವಿಷಯದಲ್ಲಿ ಇಷ್ಟೇ ಸರಿ ಎಂದು ತೀರ್ಮಾನ ಮಾಡಿಕೊಂಡು ಹಿಂದಿರುಗಿದ್ದಾಯಿತು.

ಆದರೆ ಪ್ರಕೃತಿ ಯಾವಾಗಲೂ ಪ್ರವಾಸಿಯೊಡನೆ ವಿರೋಧವನ್ನೇ ಮಸೆಯುತ್ತದೆ ಎಂದು ಭಾವಿಸಿದರೆ ತಪ್ಪಾಗುತ್ತದೆ. ಅದು ಒಮ್ಮೊಮ್ಮೆ ಅನಿರೀಕ್ಷಿತವಾದ ಸೌಂದರ್ಯ ಪ್ರದರ್ಶನದಿಂದ ಕಣ್ಣುಗಳ ಬರವನ್ನು ಹಿಂಗಿಸುವುದೂ ಉಂಟು. ಗೋಕರ್ಣಕ್ಕೆ ಒಂದು ಬಾರಿ ನಾನು ಹೋಗಿದ್ದಾಗ, ಅಲ್ಲಿ ಮಿತ್ರರೊಬ್ಬರ ಆತಿಥ್ಯಕ್ಕೆ ಕಟ್ಟುಬಿದ್ದು ದಿನವೆಲ್ಲ ನಿಲ್ಲಬೇಕಾಯಿತು. ರಾತ್ರಿಯ ಊಟವನ್ನು ಮುಗಿಸಿಕೊಂಡು, ಜೊತೆಗೆ ಇನ್ನು ಕೆಲವು ಮಂದಿ ಮಿತ್ರರನ್ನೂ ಕರೆದುಕೊಂಡು ಕಡಲ ದಂಡೆಗೆ ಹೋದೆವು. ಅಲ್ಲಿಗೆ ನಾವು ಮುಟ್ಟುವ ವೇಳೆಗೆ ರಾತ್ರಿ ಒಂಬತ್ತರ ಮೇಲಾಗಿತ್ತು. ಗೋಕರ್ಣದ ಅರ್ಧಚಂದ್ರಾಕಾರದ ಸಮುದ್ರತೀರ ಬಲುರಮ್ಯ. ಅದರ ಹರವಾದ ಮರಳುದಿಣ್ಣೆ ಕುಳಿತುಕೊಳ್ಳಲು ಬಲುಹಿತ. ಅಲ್ಲಿ ವಿರಾಮವಾಗಿ ಕೊಂಚಹೊತ್ತು ಮಾತಾಡುತ್ತಾ ಕಾಲ ಕಳೆಯಬೇಕೆನ್ನುವುದಷ್ಟೇ ನಮಗಿದ್ದ ಉದ್ದೇಶ. ಅಂದು ಅಮಾವಾಸ್ಯೆಯ ಕತ್ತಲೆ, ಮೇಲೆ ಆಕಾಶದಲ್ಲಿ ನಕ್ಷತ್ರಗಳು ಮಿನುಗಿ ಎಲ್ಲೋ ಕೊಂಚ ಬೆಳಕನ್ನು ಬೀರುತ್ತಿವೆ. ಆದರೆ ನಮ್ಮ ಮುಂದಿನ ಸಮುದ್ರದ ಜಲ ರಾಶಿಯ ಮೇಲೆ ಅದೆಂಥ ಅದ್ಭುತಪ್ರಕಾಶ! ತೆರೆಗಳು ದೂರದಿಂದ ಸಾಲು ಸಾಲಾಗಿ ಎದ್ದು ಬಿದ್ದು ದಡದ ಕಡೆ ಹಾಯ್ದು ಬರುತ್ತಿರುವಾಗ ತಮ್ಮ ನೆತ್ತಿಯಂಚಿನ

ಉದ್ದಕ್ಕೂ ಪಂಜಿನ ಮಾಲೆಗಳನ್ನು ಹೊತ್ತು ತರುತ್ತಿರುವಂತೆ ತೋರುತ್ತಿದೆ. ಪ್ರತಿಯೊಂದು ಅಲೆಯ ಆಕೃತಿವಿನ್ಯಾಸವೂ ರಂಜಕದ ರೇಖೆಗಳಿಂದ ಬರೆದಿರುವಂತೆ ಹೊಳೆಯುತ್ತಿದೆ. ದಿಗಂತದ ಎಡದ ಕೊನೆಯಿಂದ ಬಲದ ಕೊನೆಯವರೆಗೂ ಮಿಂಚಿನ ಬಳ್ಳಿಗಳು ನಿಲುವಿಲ್ಲದೆ ಹಾರಾಡಿದಂತೆ ಕಾಣಿಸುತ್ತಿದೆ. ಒಂದು ಘಂಟೆಯ ಕಾಲ ಈ ಸೋಜಿಗದ ಬೆಳಕಿನ ಸುಗ್ಗಿಯನ್ನೇ ನೋಡುತ್ತಾ ಕುಳಿತಿದ್ದೆವು. ಅಲೆಗಳ ದೀಪನೃತ್ಯ ಕೊಂಚವೂ ಇಳಿಮುಖವಾಗಲಿಲ್ಲ; ನಮ್ಮ ದರ್ಶನಾಸಕ್ತಿ ಕೊಂಚವೂ ಕುಗ್ಗಲಿಲ್ಲ. ಮನೆಗಳಿಗೆ ಹಿಂದಿರುಗಲು ಹೊತ್ತು ಮೀರುವುದೆಂದು ಆ ಜ್ಯೋತಿರ್ವಿಲಾಸದ ಕಡೆಗೆ ಬೆನ್ನು ತಿರುಗಿಸಿ ಹೆಜ್ಜೆ ಹಾಕಬೇಕಾಯಿತು; ಆಗ ಕೂಡ ಮತ್ತೆ ಮತ್ತೆ ಕೊರಳನ್ನು ಹೊರಳಿಸಿ ಅತ್ತಕಡೆ ನೋಡದಿರಲು ಸಾಧ್ಯವಾಗಲಿಲ್ಲ.

ಈ ಅಪೂರ್ವವಾದ ದೀಪ್ತಿ ಯಾವುದು? ನಕ್ಷತ್ರಗಳ ಪ್ರತಿಬಿಂಬವಂತೂ ಖಂಡಿತ ಅಲ್ಲ. ಕೆಲಕೆಲವು ಸಮುದ್ರತೀರಗಳಲ್ಲಿ ವಾಸಮಾಡುವ ನಾಕ್ಟಿಲ್ಯೂಕ (noctiluca) ಎಂಬ ಜಾತಿಯ ಅಸಂಖ್ಯಾತ ಏಕಾಣುಜೀವಿಗಳು ಅಲೆಗಳ ಚಲನೆಯಿಂದ ಪ್ರಚೋದನೆಗೊಂಡು ಹೀಗೆ ವಿಚಿತ್ರಕಾಂತಿಯನ್ನು ಬೀರುತ್ತವೆ ಎಂದು ಹೇಳುತ್ತಾರೆ. ಸಮುದ್ರದಲ್ಲಿ ಹಡಗು ಪ್ರಯಾಣ ಮಾಡುವಾಗ ರಾತ್ರಿಯ ವೇಳೆಯಲ್ಲಿ ಒಮ್ಮೊಮ್ಮೆ ಇಂಥ ಪ್ರಕಾಶ ಕಾಣಿಸುತ್ತದೆ. (ಇದಕ್ಕೆ ಕಾರಣ ಬೇರೆ ಜಾತಿಯ ಜೀವಾಣುಗಳಂತೆ.) ಕೆಂಪು ಕಡಲಿನ (The Red sea) ಮೂಲಕ ಬರುವಾಗ ನಾನೂ ನೋಡಿದ್ದುಂಟು. ಆದರೆ ಗೋಕರ್ಣದಲ್ಲಿ ಆ ದಿನ ರಾತ್ರಿ ನಾವು ಕಂಡ ದೃಶ್ಯದ ಶತಾಂಶಕ್ಕೆ ಕೂಡ ಅದು ಸಮನಾಗಿರಲಿಲ್ಲ. ಗೋಕರ್ಣದ ಸ್ಥಳೀಯರೇ ಇಂಥದನ್ನು ಹಿಂದೆಂದೂ ನೋಡಿರಲಿಲ್ಲ ಎಂದು ಹೇಳಿದರು; ನನ್ನಷ್ಟೇ ಬೆರಗನ್ನು ಪಡೆದರು. ಅಂದು ಪ್ರಕೃತಿಗೆ ನಮ್ಮ ಮೇಲೆ ಅದೇನು ಕೃಪೆ ಬಂದಿತೋ : ಈ ಜ್ಯೋತಿರ್ದರ್ಶನವನ್ನು ಅಪ್ರಾರ್ಥಿತವಾಗಿ ದಯಪಾಲಿಸಿತು.

ಅತಿಶಾಬ್ದಿಕವೇಗ, ಆಕಾಶಯಾತ್ರೆ ಇವೆಲ್ಲ ದಿನಂಪ್ರತಿಯ ಮಾತುಗಳಾಗಿ, ಒಬ್ಬನು ಸಶರೀರನಾಗಿಯೇ ಚಂದ್ರಮಂಡಲವನ್ನು ಮುಟ್ಟಿ ಭೂಮಿಗೆ ಮರಳುವುದು ನಾಳೆಯೋ ನಾಡಿದ್ದೋ ಸಿದ್ಧಿಸಬಹುದೆಂಬ ನಿರೀಕ್ಷೆಯಿರುವ ಇಂದಿನ ದಿನಗಳಲ್ಲಿ ದೇಶದ ಒಂದು ನಗರದಿಂದ ಮತ್ತೊಂದು ನಗರಕ್ಕೆ, ಭೂಮಿಯ ಒಂದು ಖಂಡದಿಂದ ಮತ್ತೊಂದು ಖಂಡಕ್ಕೆ ವಿಮಾನದ ಮೂಲಕ ಪ್ರಯಾಣ ಮಾಡುವುದರಲ್ಲಿ ಯಾವ ಹೆಚ್ಚುಗಾರಿಕೆಯೂ ಉಳಿದಿಲ್ಲ. ಭಾರತದಲ್ಲಿಯೇ ಒಂದು ದಿನಕ್ಕೆ ಏನಿಲ್ಲವೆಂದರೂ ಹತ್ತಿರ ಹತ್ತಿರ ಮೂರುಸಾವಿರ ಜನ ವಿಮಾನಗಳಲ್ಲಿ ಪ್ರಯಾಣ ಮಾಡುತ್ತಾರಂತೆ. ಈ ಪ್ರಯಾಣಿಕರಲ್ಲಿ ಬಹುಪಾಲು ಮಂದಿ ಕೈಯಲ್ಲಿ ಒಂದು ಪುಸ್ತಕವನ್ನೋ ಸಚಿತ್ರ ಪತ್ರಿಕೆಯನ್ನೇ ಹಿಡಿದುಕೊಂಡು ಕಿಟಕಿಯ ದಿಕ್ಕಿಗೇ ಕಣ್ಣು ತಿರುಗಿಸದೆ ವೇಳೆಯನ್ನು ವೆಚ್ಚಮಾಡುತ್ತಾರೆ. ಅವರಿಗೆ ವಿಮಾನಯಾನವೆನ್ನುವುದು ಯಾಂತ್ರಿಕ ಜೀವನದ ಒಂದು ಸಾಮಾನ್ಯ ಭಾಗವಾಗಿ ಬಿಟ್ಟಿರುತ್ತದೆ. ಆದರೆ ಮೊದಲ ಬಾರಿ ವಿಮಾನವನ್ನು ಹತ್ತಿ ಅಂತರಿಕ್ಷದಿಂದ ಭೂಮಿಯನ್ನು ಅವಲೋಕಿಸುವುದು ಜೀವಮಾನದ ಒಂದು ವಿಶೇಷಾನುಭವ—ಅರಳಿದ ಕಣ್ಣಿನಿಂದ,

ತೆರೆದ ಹೃದಯದಿಂದ ಸವಿಯಬೇಕಾದ ಅನುಭವ. ೧೯೪೯ರಲ್ಲಿ ನಾನು ದೆಹಲಿಯಿಂದ ಬೆಂಗಳೂರಿಗೆ ವಿಮಾನದಲ್ಲಿ ಮಾಡಿದ ಪ್ರಥಮಯಾತ್ರೆ ನೆನಪಿನಲ್ಲಿ ಇನ್ನೂ ಮಾಸದೆ ನಿಂತಿದೆ. ನಮ್ಮನ್ನು ಕರೆತಂದ ವಿಮಾನದ ಹೆಸರು 'ಸಾವಿತ್ರಿ'. ಯಮಧರ್ಮರಾಯನ ಪಾಶದಿಂದ ತನ್ನ ಗಂಡನ ಪ್ರಾಣವನ್ನು ಬಿಡಿಸಿಕೊಂಡು ಬಂದ ಪತಿವ್ರತೆಯ ಹೆಸರು ಅದು—ಪ್ರಯಾಣಿಕರಿಗೆ ಧೈರ್ಯ ತರುವಂಥದು. (ಈಗೇಕೆ ವಿಮಾನಗಳಿಗೆ ಹೀಗೆ ನಾಮಕರಣ ಮಾಡುವುದಿಲ್ಲವೋ. ಹಡಗುಗಳಿಗೆ ಕೊಡುವ ಹಾಗೆ ಇವಕ್ಕೂ ಉಚಿತವಾದ ಅಂಕಿತ ನಾಮಗಳನ್ನು ಕೊಡಬಾರದೆ! ಈಗ ಕೇವಲ ಅಂಕಿ ಅಕ್ಷರಗಳನ್ನು ಮಾತ್ರ ಗುರುತಿಗಾಗಿ ಕೊಟ್ಟು ಮುಗಿಸುತ್ತಾರೆ.)

'ಸಾವಿತ್ರಿ'ಯ ವೇಗ ಘಂಟೆಗೆ ಸುಮಾರು ಇನ್ನೂರು ಮೈಲಿಗಳು. ರೈಲಿನಲ್ಲಿ ಕಾರಿನಲ್ಲಿ ಘಂಟೆಗೆ ಸುಮಾರು ಐವತ್ತು-ಅರವತ್ತು ಮೈಲಿಗಳಿಗಿಂತ ಹೆಚ್ಚಿನ ವೇಗವನ್ನು ಅರಿಯದ ಮನಸ್ಸಿಗೆ ಇದು ಅಪರಿಮಿತವೆಂದು ವಿಮಾನವನ್ನು ಹತ್ತುವ ಮೊದಲು ತೋರುತ್ತಿತ್ತು. ಆದರೆ ವಾಯುಪಥಕ್ಕೆ ಏರಿ ಏಳೆಂಟುಸಾವಿರ ಅಡಿಗಳ ಎತ್ತರದಿಂದ ಅವಲೋಕಿಸುವಾಗ, ಮನಸ್ಸಿನಲ್ಲಿ ಮೂಡಿದ್ದು—ಇದೇನು, ವಿಮಾನ ಇಷ್ಟು ನಿಧಾನವಾಗಿ ಅಂಬೆಗಾಲಿಕ್ಕುತ್ತಿದೆ ಎಂಬ ಭಾವ. ಒಳಗೆ ಕುಳಿತವರಿಗೆ ವಿಮಾನದ ವೇಗ ನೇರವಾಗಿ ಅರಿವೇ ಆಗುವುದಿಲ್ಲ; ಎಂಜಿನ್ನಿನ ಶಬ್ದ ಮಾತ್ರ ಹತ್ತಿಯನ್ನು ತುರುಕಿಕೊಂಡ ಕಿವಿಯಲ್ಲಿ ಕೊಂಚ ಮೊರೆಯುತ್ತಿರುತ್ತದೆ. (ಘಂಟೆಗೆ ನಾನೂರು ಐನೂರು ಮೈಲಿಯ ವೇಗದಲ್ಲಿ ಹಾರಿದರೂ ಇಷ್ಟೇ.) ಒಂದು ದೊಡ್ಡ ಪಟ್ಟಣದಮೇಲೆ ವಿಮಾನ ಹಾಯ್ದು ಹೋಗುವಾಗ, ಪಟ್ಟಣದ ಭಾಗಗಳು ಅದರ ನಿಡುರೆಕ್ಕೆಗಳ ಕೆಳಗೆ ಕ್ರಮಕ್ರಮವಾಗಿ ಮರೆಯಾಗುವ ದೃಶ್ಯ ಕಿಟಕಿಯ ಬಳಿ ಕುಳಿತು ನೋಡುವವನಿಗೆ ಗ್ರಹಣಕಾಲದಲ್ಲಿ ಛಾಯೆ ಚಂದ್ರ ಮಂಡಲದ ಅಂಚಿನಿಂದ ಪ್ರಾರಂಭಿಸಿ ಮೆಲ್ಲಮೆಲ್ಲನೆ ಬಿಂಬವನ್ನು ನುಂಗುತ್ತಾ ಹೋಗುವುದರ ನೆನಪನ್ನು ಕೊಡುತ್ತಿತ್ತು. ಆದರೆ ಇದಕ್ಕೆ ಪ್ರತಿಯಾಗಿ, ದಿಗಂತದ ಒಂದು ಕೊನೆಯಿಂದ ಇನ್ನೊಂದರ ಕಡೆಗೆ ಬಹು ದೂರ ಅನೇಕ ಮೈಲಿಗಳವರೆಗೆ ನದಿಗಳ ನೀಳವನ್ನು ಒಂದೇ ನೋಟದಲ್ಲಿ ಗ್ರಹಿಸಿದ ಅನುಭವ ಬೇರೆ ರೀತಿಯದು : ಕೃಷ್ಣಾ, ತುಂಗಭದ್ರಾ ಇವೆರಡರ ಸುದೀರ್ಘವಾದ ರಜತರೇಖೆಗಳು, ಇವಕ್ಕೆ ಅಲ್ಲಲ್ಲಿ ಬಂದು ಸೇರುವ ಹೊಳೆಗಳ ಸೀಳುಗೆರೆಗಳು, ಎರಡು ನದಿಗಳ ಸಂಗಮ, ಅಲ್ಲಿಂದಾಚೆಗೆ ಏಕವೇಣಿಯಾಗಿ ಮುಂದುವರಿಯುವ ಕೃಷ್ಣೆಯ ಪಾತ್ರ, ಇವಲ್ಲದೆ, ನೆಲಕ್ಕೇ ಹತ್ತಿಕೊಂಡಿರು ವಂತೆ ಕಾಣುವ ಬೆಟ್ಟ ಸಾಲುಗಳು, ಕುರುಚಲು ಗಿಡಗಳ ಸಮುದಾಯದಂತೆ ತೋರುವ ಅರಣ್ಯಗಳು, ಕರ್ನಾಟಕದ ಎಲ್ಲೆಯೊಳಗೆ ಬಂದಿದ್ದೀರಿ ಎಂಬ ಸಂದೇಶವನ್ನು ನೀರಿನ ಹರಹಿನಿಂದ ಮಿಂಚಿಸುವ ಹಲವಾರು ಕೆರೆಕಟ್ಟೆಗಳು, ಬಣ್ಣಬಣ್ಣದ ಬಟ್ಟೆಯ ಚೂರುಗಳನ್ನು ನೇರವಾಗಿ ಕತ್ತರಿಸಿ ಸೇರಿಸಿ ಹೊಲಿದ ದಟ್ಟಿಗಳನ್ನು ನೆಲದ ಮೇಲೆ ಎಲ್ಲೆಲ್ಲೂ ಹಾಸಿದಂತೆ ಕಾಣಿಸುವ ಹೊಲಗದ್ದೆಗಳು, ತುಂಬೆಯ ಗಿಡಗಳಂತೆ ಭಾಸವಾಗುವ ತೆಂಗಿನ ಮರಗಳು!

ಜೊತೆಗೆ, ಮೋಡಗಳ ವಿಲಾಸ. ಭೂತಳದಲ್ಲಿರುವವರಿಗೆ ಆಕಾಶದ ನೋಟಕ್ಕೆ ಅಡ್ಡಿಯಾಗುವ ಈ ಮೋಡಗಳು ಆಕಾಶದಿಂದ ಕೆಳಗೆ ನೋಡುವವರಿಗೆ ಅದಕ್ಕೆ ಪರಿಹಾರವಾಗಿಯೋ ಎಂಬಂತೆ ಹೊಸ ಸೊಗಸುಗಳನ್ನು ತೋರಿಸುತ್ತವೆ. ಮೋಡಗಳಲ್ಲೂ ತಗ್ಗು ಎತ್ತರ ಗಾತ್ರ ಅಂತಸ್ತುಗಳು ಉಂಟೆಂದು ಈಗ ಮನವರಿಕೆಯಾಗುತ್ತದೆ. ದೈತ್ಯವಿಸ್ತಾರದ ಅರಳೆಯ ಸುರುಳಿಗಳಂತೆ, ಹಾಯಿಪಟಗಳನ್ನು ಹರಡಿಕೊಂಡಿರುವ ಹಡಗುಗಳಂತೆ ಇಂದ್ರಜಲದಿಂದ ಮೇಲಕ್ಕೇರಿದ ಮಂಜುಗಡ್ಡೆಗಳಂತೆ—ಬಿಳಿಮೋಡಗಳು ನಿಮ್ಮ ಕೆಳಗೆ ತೇಲುತ್ತಿರುತ್ತವೆ; ಅವುಗಳ ನೆರಳು ಭೂಮಿಯ ಮೇಲೆ ಬಿದ್ದಿರುವುದೂ ಒಮ್ಮೊಮ್ಮೆ ಗೋಚರವಾಗುತ್ತದೆ. ಈ ಮೋಡಗಳಿಗೆ ಹಲವು ಮಟ್ಟಗಳ ಹಲವು ಪಥಗಳು : ಕೆಲವು ತೀರ ಕೆಳಗೆ, ಮತ್ತೆ ಕೆಲವು ಸ್ವಲ್ಪ ಮೇಲೆ, ಇನ್ನು ಕೆಲವು ಇನ್ನೂ ಮೇಲೆ. ಒಂದು ಮೋಡವಂತೂ ಕೆಳಗೆ ಅಗಲವಾಗಿ ಮೇಲೆ ಶಂಕುವಿನ ಆಕಾರವಾಗಿ ಉದ್ದಕ್ಕೆ ನಿಮಿರಿ, ನೀಳವಾದ ಶಿಖರದಿಂದ ಕೂಡಿದ ವಿಲಕ್ಷಣವಾದ ಬೆಟ್ಟದಂತೆ ಕಂಗೊಳಿಸಿತು. ಮಳೆಗಾಲದಲ್ಲಿ ಪ್ರಯಾಣಮಾಡುವಾಗ ಮೋಡಗಳು ಇನ್ನಷ್ಟು ಮದಿಸಿ ವಿಮಾನಕ್ಕೇ ಮುತ್ತಿಗೆ ಹಾಕುವುದುಂಟು. ಅವುಗಳ ಹಿಂಡಿನೊಳಗೆ ವಿಮಾನ ನುಗ್ಗಿ ದಾರಿ ಮಾಡಿಕೊಂಡು ಹೋಗುವಂತೆ ತೋರುತ್ತದೆ. ಆಗ ದಶದಿಕ್ಕುಗಳೂ ಮೇಘಮಯ. ಹಿಂದೆ, ಮುಂದೆ, ಮೇಲೆ, ಕೆಳಗೆ ಎತ್ತಲೂ ಬೇರೆ ಏನೂ ಗೋಚರವಾಗುವುದಿಲ್ಲ. ಸಾಲದ್ದಕ್ಕೆ, ಹಳ್ಳತಿಟ್ಟಿನ ರಸ್ತೆಯಲ್ಲಿ ಹೋಗುವ ಕಾರಿನಂತೆ ವಿಮಾನವೂ ಕುಲುಕಾಡಿ, ಹತ್ತೆಂಟು ಮಳೆಯ ಹನಿಗಳು ಕಿಟಕಿಯ ಹೊರಗಾಜಿಗೆ ಬಡಿದು ಸಿಡಿದು, "ಪೀಠದ ಪಟ್ಟಿಯನ್ನು ಕಟ್ಟಿಕೊಳ್ಳಿ" ಎಂಬ ಎಚ್ಚರಿಕೆಯ ಸಂದೇಶ ವಿಮಾನದೊಳಗಿನ ಎದುರುಗೋಡೆಯ ಫಲಕದ ಮೇಲೆ ರಕ್ತಾಕ್ಷರಗಳಲ್ಲಿ ಕಾಣಿಸಿಕೊಂಡರೆ ಪ್ರವಾಸಿಯ ಹೃದಯ ಕೆಲವು ಕ್ಷಣ ಪರದಾಡುವುದೂ ಉಂಟು!

ಮೆಡಿಟರೇನಿಯನ್ ಸಮುದ್ರದ ಮಧ್ಯಭಾಗದ ಮೇಲೆ ಹತ್ತು-ಹನ್ನೆರಡು ಸಾವಿರ ಅಡಿಗಳ ಎತ್ತರದಲ್ಲಿ ಕುಳಿತು ವಿಮಾನಯಾನ ಮಾಡುವಾಗ ಒಂದು ವಿಶೇಷದೃಶ್ಯ ಗೋಚರಿಸಿತು. ಕೆಳಗೆ ಅತ್ತ ಇತ್ತ ಗುಪ್ಪೆಗುಪ್ಪೆಯಾಗಿ ಚೆದರಿರುವ ಬಿಳಿಮೋಡಗಳು; ಅವುಗಳ ನಡುನಡುವೆ ದಿಗಂತವೇ ಎಲ್ಲೆಯಾಗಿರುವ ಅಪಾರ ನೀಲಜಲರಾಶಿಯ ಇಣಿಕುನೋಟ. ಬಿಳಿಮೋಡಗಳು ತೇಲುತ್ತಿರುವ ನೀಲಾಕಾಶವನ್ನು ನೋಡುತ್ತಿರುವಂತೆಯೇ ಭಾಸವಾಯಿತು; ಯಾವ ಭೇದವೂ ತೋರಲಿಲ್ಲ. ನಾನು ಕತ್ತೆತ್ತಿ ನೋಡುವ ಬದಲು ಕತ್ತು ಬಗ್ಗಿಸಿ ನೋಡುತ್ತಿದ್ದೆ. ಅಷ್ಟೆ ಸಂಸ್ಕೃತದಲ್ಲಿ ಅನನ್ವಯಾಲಂಕಾರಕ್ಕೆ ಉದಾಹರಣೆಯಾಗಿ, "ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ" (ಆಕಾಶದ ಆಕಾರ ಆಕಾಶದ್ದೇ ಸರಿ, ಸಾಗರಕ್ಕೆ ಸಾಗರವೇ ಹೋಲಿಕೆ") ಎಂಬ ವಾಕ್ಯವುಂಟು. ಅದರ ಒಂದು ಪಾದವನ್ನು ಉಪಮಾಲಂಕಾರಕ್ಕೆ ಉದಾಹರಣೆಯಾಗುವಂತೆ "ಸಾಗರೋ ಗಗನೋಪಮಃ" ಎಂದು ತಿದ್ದಿ, ಒಂದು ಸಮಸ್ಯೆಯಾಗಿ ಒಡ್ಡಬೇಕೆನ್ನಿಸಿತು. ಸಂಸ್ಕೃತ ಪ್ರವೀಣರು ಇದನ್ನು ಯಥಾಶಕ್ತಿಯಾಗಿ ಪೂರಣಮಾಡಬಹುದು. ನನ್ನ ಅನುಭವಕ್ಕೆ ಕನ್ನಡದಲ್ಲಿ ಈ ಕೆಳಗೆ ಕಂಡಂತೆ ರೂಪುಕೊಟ್ಟಿದ್ದೇನೆ :

ಬಿಳಿಮೋಡದ ಪಟಲದ ನಡುನಡುವೆ
ಹೊಳೆದಿರೆ ಜಲರಾಶಿಯ ನೀಲ—
ಬಾಗುತ ನೋಡುವ ವೈಮಾನಿಕನಿಗೆ
ಆಗಸವೆನಿಸಿತು ಸಾಗರವು!

ಪ್ರೇಕ್ಷಣೀಯವೆಂದು ಹೊಗಳಿಸಿಕೊಂಡ ವಸ್ತುಗಳನ್ನು, ಸ್ಥಳಗಳನ್ನು ನೋಡಿಕೊಂಡು ಬರಬೇಕೆಂಬ ಆಸೆ ಪ್ರವಾಸಿಯ ಮನಸ್ಸಿನಲ್ಲಿ ಬುಗ್ಗೆಯಂತೆ ಸಂತತವಾಗಿ ಚಿಮ್ಮುತ್ತಿದ್ದರೂ, ಹಲವು ಸಂದರ್ಭಗಳ ಅನುಭವದಿಂದ ಅವನ ನಿರೀಕ್ಷೆ ತಕ್ಕಮಟ್ಟಿಗೆ ಇಳಿದಿರುತ್ತದೆ; ಇಷ್ಟೊಂದು ರಮ್ಯತೆ ಮರ್ತ್ಯಲೋಕದಲ್ಲಿ ಇರಬಲ್ಲದೆ, ಏಕಾಪೋಶನವಾಗಿ ದೊರೆಯಬಲ್ಲದೆ ಎಂಬ ಸಂದೇಹವೂ ಅವನಲ್ಲಿ ತಕ್ಕಮಟ್ಟಿಗೆ ಬೆಳೆದಿರುತ್ತದೆ. ಆದರೆ ಅವನು ಯಾವಾಗಲೂ ದರ್ಶನಸಾಹಸಿ. ಹಿಂದಿನ ಆಶಾಭಂಗಗಳಿಂದ ಹಿಂಜರಿಯದೆ ಮುನ್ನುಗ್ಗುತ್ತಿರುತ್ತಾನೆ. ಅದಕ್ಕೆ ಫಲವೂ ಕೆಲವು ಸಲ ಉತ್ತಮವಾಗಿ ಲಭಿಸುತ್ತದೆ. ಕಣ್ಣಾರ ನೋಡಿದ ಬಳಿಕ, ಯಾವ ಶಬ್ದವೈಖರಿ ತಾನೆ ಈ ಭವ್ಯಸೌಂದರ್ಯದ ಉನ್ನತಿಯನ್ನು ಎಟುಕಿಸಿಕೊಳ್ಳಬಲ್ಲದು ಎಂಬ ಬೆರಗನ್ನು ತರುವ ಸನ್ನಿವೇಶಗಳೂ ಜಗತ್ತಿನಲ್ಲಿ ಉಂಟು. "ಯತೋ ವಾಚೋ ನಿವರ್ತಂತೇ" ಎಂದು ಗುರುತಿಸಬಹುದಾದ ಅನುಭವವನ್ನು ನಮ್ಮ ದೇಶದಲ್ಲಿ ಗೋಮಟೇಶ್ವರನ ದರ್ಶನದಿಂದಲೂ ತಾಜ್‌ಮಹಲಿನ ದರ್ಶನದಿಂದಲೂ ನಿಸ್ಸಂದೇಹವಾಗಿ ಪಡೆಯಬಹುದು. ಅದರ ವಿವರಣೆ ಅಸಮರ್ಪಕವೂ ಅಧಿಕಪ್ರಸಂಗವೂ ಆಗುವುದೆಂದು ತಿಳಿದೂ ತಿಳಿದೂ ಇಲ್ಲಿ ಏಕೆ ಕೈಹಾಕಲಿ! ಇವೆರಡೂ ಕಲ್ಪನೆಗೆ ಮೀರಿದ ಅತಿಶಯವನ್ನು ಸಾಧಿಸಿರುವ ಮಾನವನಿರ್ಮಿತಿಗಳು. ಒಮ್ಮೊಮ್ಮೆ ಪ್ರಕೃತಿಯೇ ಕಲಾವಿದನ ಪಾತ್ರವನ್ನು ವಹಿಸಿ ಬೃಹದ್ಭವ್ಯತೆಯ ಸ್ಥಾನಗಳನ್ನು ನಿರ್ಮಿಸುತ್ತದೆ. ಅಲ್ಲಿ ಮಡುಗಟ್ಟಿರುವ ಘನಸೌಂದರ್ಯ ಪ್ರೇಕ್ಷಕನನ್ನು ಪರವಶನನ್ನಾಗಿ ಮಾಡುತ್ತದೆ. ಇಂಥ ಪ್ರದೇಶಗಳಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಒಂದಾದ ಕ್ಯಾಲಿಫೋರ್ನಿಯದಲ್ಲಿರುವ ಯೋಸೇಮಿಟಿ ಕಣಿವೆ (Yosemite Valley) ಒಂದು.

ಒಂದು ಹಿಮದ ನದಿ (glacier) ಅನೇಕಾನೇಕ ಸಾವಿರ ವರ್ಷಗಳ ಹಿಂದೆ ಬೆಟ್ಟದ ಮೇಲೆ ಧಾಳಿಯಿಟ್ಟು ಕೊರೆದು ಕೊರೆದು ರಚಿಸಿರುವ ಮಹಾಕಂದರ 'ಯೋಸೇಮಿಟಿ'. ಇದರ ಉದ್ದ ಏಳು ಮೈಲಿ, ಅಗಲ ಒಂದು ಮೈಲಿ. ಈಗ ಅದರ ತಳದಲ್ಲಿ ನಿಂತು ನೋಡಿದರೆ ಮೂರುಸಾವಿರ ಅಡಿಗೆ ಮೀರಿದ ಉನ್ನತೆಯುಳ್ಳ ಶಿಲಾಮಯವಾದ ಹಲವು ನಿಡುಬೆಟ್ಟಗಳು ಎತ್ತಲೂ ಕಾಣಿಸುತ್ತವೆ. (Half Dome) ಎಂಬ ಹೆಸರಿನ ಒಂದು ಶಿಲಾಪರ್ವತದ ಎತ್ತರ ಕಣಿವೆಯ ಮಟ್ಟದಿಂದ ೪೮೫೦ ಅಡಿಗಳಂತೆ. ಎರಡು ಮೂರು ಬೆಟ್ಟಗಳಂತೂ ಕೇವಲ ಲಂಬಾಕಾರದ ಏಕಶಿಲೆಯ ಬಂಡೆಗಳು. ಕತ್ತೆತ್ತಿ ತುದಿಯ ಕಡೆ ನೋಡುತ್ತಿದ್ದರೆ, ಕತ್ತು ಮುರಿದುಹೋಗುವಂತಾಗುತ್ತದೆ. ಉಕ್ಕಿನ—ಅಲ್ಲ, ವಜ್ರದ—ಭಾರಿಯ ಉಳಿಗಳಿಂದ ಇಲ್ಲಿಯ ಶಿಲೆಗಳನ್ನು ಕೆತ್ತಿ ಬಿಡಿಸಿದ್ದಾರೋ ಎನ್ನಿಸುತ್ತದೆ. ಇಂದ್ರನು ವಜ್ರಾಯುಧದಿಂದ ಪರ್ವತಗಳ ರೆಕ್ಕೆಗಳನ್ನು ಕಡಿದುಹಾಕಿದನೆಂದು

ನಮ್ಮ ಪುರಾಣಗಳಲ್ಲಿ ಓದಿದ್ದರೆ ನೆನಪು ಬರುತ್ತದೆ. ಬೆಟ್ಟಗಳ ಮೇಲಕ್ಕೆ ಸೊಗಸಾದ ಕಾಂಕ್ರೀಟ್ ರಸ್ತೆಗಳ ಮೂಲಕ ಹೋಗಬಹುದು. ಎಲ್ಲೆಲ್ಲೂ ಲೋಕಪ್ರಸಿದ್ಧವಾದ, ಕ್ಯಾಲಿಫೋರ್ನಿಯಾ ರಾಜ್ಯಕ್ಕೇ ಮೀಸಲಾದ ರೆಡ್‌ವುಡ್ (redwood) ಹೆಮ್ಮರಗಳು. ಕೆಲವು ರಸ್ತೆಗಳ ಇಕ್ಕೆಲಗಳಲ್ಲಿ ಇವು ಹತ್ತಾರು ಮೈಲಿಗಳ ಉದ್ದಕ್ಕೂ ನಿಡು ನೀಟಾಗಿ ತಲೆಯೆತ್ತಿ ನಿಂತು ಈ ಕಣಿವೆಯನ್ನು ರಕ್ಷಿಸುವ ಮಹಾಸೈನ್ಯದ ಪಡೆಗಳಂತೆ ಕಂಗೊಳಿಸುತ್ತವೆ.

ಕೆಲವು ಜಾಗಗಳಲ್ಲಂತೂ ಸೇಕೋಯಾ (Sequoia) ಎಂಬ ವಿಶೇಷ ಪ್ರಭೇದದ, ಬೆಂಕಿಗೆ ಸಗ್ಗದ, ಕಾಲಪುರುಷನಿಗೆ ತಗ್ಗದ, ದೈತ್ಯಪ್ರಮಾಣದ ಮಹಾವೃಕ್ಷಗಳು ಬಹು ಸಂಖ್ಯೆಯಲ್ಲಿ ಕಾಣಿಸುತ್ತವೆ—ಮೂರುನಾಲ್ಕು ಸಾವಿರ ವರ್ಷಗಳ ವಯಸ್ಸನ್ನು ಕಂಡಿರುವ ಚಿರಂಜೀವಿಗಳೂ ಇವುಗಳಲ್ಲಿ ಉಂಟು.

ಬೆಟ್ಟವೊಂದರ ನೆತ್ತಿಯ ಮೇಲೆ 'ಗ್ಲೇಸಿಯರ್ ಪಾಯಿಂಟ್' (Glacier Point) ಎಂಬ ಸ್ಥಾನವಿದೆ. ಅಲ್ಲಿಗೆ ಹೋಗಿ ನಿಂತು ಅವಲೋಕಿಸಿದರೆ, ಈ ಕಂದರದ ಅಗಾಧ ಪರಿಮಾಣವೂ ಅಪೂರ್ವ ಸೌಂದರ್ಯವೂ ಏಕವೀಕ್ಷಣಕ್ಕೇ ಅರಿವಾಗುತ್ತವೆ. ಕೆಳಗಡೆ ಮೂರು ಸಾವಿರದ ಇನ್ನೂರು ಅಡಿಯ ತಳದಲ್ಲಿ ಕಣಿವೆಯ ಹರವು; ಎದುರಿಗೆ ಇದರ ಕೋಟೆಕೊತ್ತಳಗಳಂತೆ ಸಾಲಾಗಿ ಹಬ್ಬಿರುವ ಬೆಟ್ಟಗಳು; ಅವುಗಳಲ್ಲಿ ಒಂದರ ಮೇಲಿನಿಂದ ಧುಮುಕುವ ಯೋಸೇಮಿಟಿ ಜಲಪಾತ (Yosemite Fall). ಇದು ಮೊದಲ ಸಲಕ್ಕೇ ಸುಮಾರು ೧೪೦೦ ಅಡಿಯ ಆಳಕ್ಕೆ ನೇರವಾಗಿ ಧುಮುಕಿ ಆ ಸಾಹಸದಿಂದ ಆಯಾಸಗೊಂಡಂತೆ ವಿಶ್ರಮಿಸಿಕೊಳ್ಳುತ್ತಾ ಹಲವು ವೇಣಿಗಳಾಗಿ ಕೆಲವು ದೂರ ಮರೆಯಲ್ಲಿ ಕೆಳಗಿಳಿದು, ಕಡೆಯಲ್ಲಿ ಸುಮಾರು ೩೦೦ ಅಡಿಯ ಕೆಳಗಿನ ಪ್ರಪಾತಕ್ಕೆ ಇನ್ನೊಮ್ಮೆ ಧುಮುಕುತ್ತದೆ. ಇದಲ್ಲದೆ ಇನ್ನೂ ಕೆಲವು ಸಣ್ಣ ಪ್ರಮಾಣದ, ಆದರೆ ವಿಶೇಷ ಸೌಂದರ್ಯದ, ಜಲಪಾತಗಳು ಸುತ್ತಮುತ್ತ ಉಂಟು.

ಕಾಡುಮೇಡುಗಳಲ್ಲಿ, ಹಳ್ಳಕೊಳ್ಳಗಳಲ್ಲಿ, ಕಡೆಗೆ ಮರುಭೂಮಿಗಳಲ್ಲಿ ಕೂಡ ವಿಹಾರಸ್ಥಾನಗಳನ್ನು ನಿರ್ಮಿಸುವುದರಲ್ಲಿ ಅಮೆರಿಕನ್ನರು ನಿಪುಣರು. ದೈವದತ್ತವಾದ ಪ್ರಕೃತಿ ಸೌಂದರ್ಯದ ಸಂಪತ್ತನ್ನು ಕಣ್ಣುಮನಸ್ಸುಗಳು ನಲಿಯುವಂತೆ, ತಣಿಯುವಂತೆ ಆಸ್ವಾದಿಸಲು ಅನುಕೂಲಿಸುವ ಎಲ್ಲ ಏರ್ಪಾಡುಗಳನ್ನು ಎಲ್ಲೆಲ್ಲಿಯೂ ಮಾಡಿರುತ್ತಾರೆ. (ಈ ಭೋಗಕ್ಕೆ ಹಣವೊಂದು ಮಾತ್ರ ಕೈ ತುಂಬ ಇರಬೇಕು!) ಯೋಸೇಮಿಟಿ ಕಣಿವೆ ಬೇಸಗೆಯ ಮಹಾ ವಿಹಾರಸ್ಥಾನ. ಸಾವಿರಾರು ಮಂದಿ ಪ್ರವಾಸಿಗಳು ಇಲ್ಲಿ ಬಂದು ವಾಸ ಮಾಡಬಹುದು, ಹಾಗೆ ಮಾಡುತ್ತಾರೆ. ಇಲ್ಲಿ ಭಾರಿಯ ಹೋಟಲುಗಳುಂಟು. ಮರದ ಗುಡಿಸಲುಗಳು ಬಟ್ಟೆಯ ಗುಡಾರಗಳು ಉಂಟು. ಪ್ರವಾಸಿಗಳು ತಮ್ಮ "ಟ್ರೇಲರ್"ಗಳಲ್ಲಿಯೇ ಕುಳಿತು ಮಲಗಲು ಅವಕಾಶ ಮಾಡಿಕೊಡುವ ಬಯಲು ಜಾಗಗಳು ಉಂಟು. ಅಲ್ಲಲ್ಲಿ ಜುಳುಜುಳನೆ ಹರಿಯುವ ಕಿರುಹೊಳೆಗಳು. ಸುತ್ತಲೂ ಬಗೆಬಗೆಯ ತಂಪು ಮರಗಳು, ಕೈಗೆ ನಿಲುಕುವ ಹಣ್ಣಿನ ತೋಟಗಳು, ಹಚ್ಚನೆ

ಗರಿಕೆಯ ಹಸಲೆ, ಮನುಷ್ಯರನ್ನು ಕಂಡರೂ ಬೆದರದೆ ಆಗಾಗ ಸುಳಿದಾಡುವ ಜಿಂಕೆಗಳು— ಎಲ್ಲವೂ ಉಂಟು. ಎರಡು ದಿನ ಇದ್ದು ನೋಡಿಕೊಂಡು ಹೋಗಬಹುದು, ಎರಡು ತಿಂಗಳು ಬೇಕಾದರೂ ನೆಲಸಬಹುದು. ಶುದ್ಧವಾದ ನೀರಿನಲ್ಲಿ ನಲ್ಲಿಗಳಿವೆ, ಸ್ನಾನಗೃಹಗಳಿವೆ, ಈಜುವ ಕೊಳವಿದೆ. ಊಟತಿಂಡಿಗೆ ಅಧಿಕಬೆಲೆಯ ಹೋಟಲು ಇದೆ, ಸುಲಭ ದರದ ಕ್ಯಾಫಿಟೇರಿಯ ಇದೆ, ಸ್ವಂತ ಅಡಿಗೆಗೂ ಅವಕಾಶವಿದೆ. ಸುತ್ತಮುತ್ತ ಇರುವ ಅನೇಕ ರಮ್ಯಸ್ಥಳಗಳನ್ನು ಶ್ರಮವಿಲ್ಲದೆ ನೋಡಿಕೊಂಡು ಬರಲು ಬಸ್ಸುಗಳ ವ್ಯವಸ್ಥೆ ಇದೆ. ನಾನು ಇಲ್ಲಿ ಎರಡು ದಿನಗಳಿದ್ದು, ಹಲವು ದೃಶ್ಯಗಳನ್ನು ನೋಡಿ, ಪ್ರಯಾಣಕ್ಕೆ, ಸುತ್ತಾಟಕ್ಕೆ, ವಸತಿಭೋಜನಗಳಿಗೆ ಐವತ್ತು—ಅರವತ್ತು ಡಾಲರುಗಳನ್ನು ವೆಚ್ಚಮಾಡಿದೆ. ಆದರೆ ಈ ವೆಚ್ಚ ಪರಮಸಾರ್ಥಕವಾಯಿತೆಂದೇ ನನ್ನ ಭಾವನೆ.

ನಾನು ಇಳಿದುಕೊಂಡಿದ್ದ ಜಾಗ ಕ್ಯಾಂಪ್‌ಕರಿ (Camp Curry) ಎಂಬಲ್ಲಿ ಅದು ಗ್ಲೇಸಿಯರ್ ಪಾಯಿಂಟ್ ಬಂಡೆಗೆ ನೇರವಾಗಿ ಕೆಳಗೆ ಇದೆ. ಪ್ರತಿಯೊಂದು ರಾತ್ರಿಯೂ ಎಂಟು ಘಂಟೆಗೆ ಸರಿಯಾಗಿ ಅಲ್ಲಿ ಸಂಗೀತ ಜಾನಪದ ನೃತ್ಯ ಮೊದಲಾದವನ್ನು ಏರ್ಪಡಿಸುತ್ತಿದ್ದರು—ಪ್ರವಾಸಿಗಳ ಉಲ್ಲಾಸಕ್ಕಾಗಿ. ರಾತ್ರಿಯ ಊಟವನ್ನು ಮುಗಿಸಿಕೊಂಡು ಅಲ್ಲಿ ನೆರೆದ ಜನಸಮೂಹದ ನಡುವೆ ಕುಳಿತು ವೇದಿಕೆಯ ಮೇಲಿನ ಮನೋರಂಜನೆಯ ಕಾರ್ಯಕ್ರಮದಿಂದ ಹರ್ಷಿಸಬಹುದಾಗಿತ್ತು. (ಹಾರ್ಪ್ ಎಂಬ ತಂತಿಯ ವಾದ್ಯವನ್ನು ಒಬ್ಬಾಕೆ ಮನೋಹರವಾಗಿ ನುಡಿಸಿದ್ದು ನನ್ನ ನೆನಪಿನಲ್ಲಿ ಬಹುದಿನಗಳು ಅನುರಣಿಸುತ್ತಿತ್ತು.) ಆ ರಾತ್ರಿ ಅಲ್ಲಿ ಹಾಗೆ ಕುಳಿತಿರುವಾಗ ಒಂದು ವಿಚಿತ್ರ ಕಲ್ಪನೆ ನನಗೆ ಹೊಳೆಯಿತು. ನಾಲ್ಕು ಕಡೆಗಳಲ್ಲೂ ತನಿತನಿಯಾಗಿ ಏಕಘನದ ನಿಡುಬಂಡೆಗಳು—ವಿಶ್ವಶಿಲ್ಪಿ ನಿರ್ಮಿಸಿದ ಅದ್ಭುತಕಮಲದ ದಳಗಳರಂತೆ; ತಳಮಧ್ಯದಲ್ಲಿ ಉನ್ನತಮಹಾವೃಕ್ಷಗಳ ತೋಪುಗಳು— ಕಮಲದ ಪರಾಗಗಳಂತೆ! ಇಲ್ಲಿ ದುಂಬಿಗಳಿಗೂ ಕೊರತೆಯಿರಲಿಲ್ಲ—ಮಧುರವಾಗಿ ಹಾಡುತ್ತಿದ್ದ ಗಾಯಕರೇ ಅವು! . . . ರಾತ್ರಿ ಒಂಬತ್ತು ಘಂಟೆಯೊಳಗೆ ಕಾರ್ಯಕ್ರಮವನ್ನು ನಿಲ್ಲಿಸುತ್ತಾರೆ. ದೀಪಗಳನ್ನೆಲ್ಲಾ ಆರಿಸಿ, ಗ್ಲೇಸಿಯರ್ ಪಾಯಿಂಟ್ ದಿಕ್ಕಿಗೆ ಪೀಠಗಳನ್ನು ತಿರುಗಿಸಿಕೊಳ್ಳುವಂತೆ ಸೂಚನೆಕೊಡುತ್ತಾರೆ. ಆಗ ಕೆಲವೇ ನಿಮಿಷಗಳ ಇನ್ನೊಂದು ನೋಟ. ಗ್ಲೇಸಿಯರ್ ಪಾಯಿಂಟಿನ ಮೇಲುಗಡೆ ಮರದ ಚಕ್ಕೆಗಳನ್ನು ಕೂಡಿರಿಸಿದ್ದು ಸಂಜೆಯ ಹೊತ್ತಿಗೆ ಬೆಂಕಿ ಹೊತ್ತಿಸಿ ಉರಿಮಾಡಿ, ಒಂಬತ್ತು ಘಂಟೆಯ ವೇಳೆಗೆ ಸಂಜ್ಞೆ ಬಂದ ಕೂಡಲೆ ಕೆಳಕ್ಕೆ ತಳ್ಳುತ್ತಾರೆ. ಇರುಳ ಕತ್ತಲೆಯಲ್ಲಿ ಈ ನಿಗಿ ನಿಗಿ ಉರಿಯುವ ಕೆಂಡದ ರಾಶಿ ಗಿರಿಶಿಖರದಿಂದ ಜ್ವಲಿಸುವ ಧಾರೆಯಂತೆ ನೇರವಾಗಿ ಕೆಳಕ್ಕೆ ಸುರಿಯುವುದು ಮಾತ್ರ ಕಾಣಿಸುತ್ತದೆ! ಅಂಧಕಾರದ ಹಿನ್ನೆಲೆಯಲ್ಲಿ ಸಾವಿರಾರು ಅಡಿಗಳಷ್ಟು ಲಂಬದ ಈ ಅಗ್ನಿಪಾತವನ್ನು ನೋಡುವ ಅಪೂರ್ವ ವಿಸ್ಮಯದ ಅನುಭವಕ್ಕೆ ಯಾವ ಬೆಲೆಯನ್ನಾದರೂ ಕಟ್ಟಬಹುದು.

ಯೋಸೇಮಿಟಿಯ ಪ್ರವಾಸ ರಮ್ಯವಾಗಿತ್ತು. ಉಜ್ಜ್ವಲವಾಗಿತ್ತು. ಆದರೆ ಆ ಸಾವಿರಾರು ಮಂದಿ ಉಲ್ಲಾಸಿಗಳ ನಡುವೆ—ನವದಂಪತಿಗಳು, ವೃದ್ಧ ಸಂಸಾರಿಗಳು, ತಂದೆತಾಯಿಮಕ್ಕಳು, ಗುಂಪುಕೂಡಿದ ಸ್ನೇಹಿತರು ಇವರೆಲ್ಲರ ನಡುವೆ—ನಾನೊಬ್ಬನು

ಮಾತ್ರ ಒಂಟಿ ಎನ್ನಿಸಿತು. ಜೊತೆಯಿಲ್ಲದ ಜನವೇ ಅಲ್ಲಿ ಇರಲಿಲ್ಲವೆಂದು ತೋರಿತು. ನನ್ನ ಏಕಾಂಗಿತ್ವದಿಂದ ಅಲ್ಲಿಯ ರಸಾನುಭವ ಅಪೂರ್ಣವೆನ್ನಿಸಿತು. ಮನೆಯವರಾಗಲಿ ಮಿತ್ರರಾಗಲಿ ಜೊತೆಗಿಲ್ಲದೆ ಇಂಥ ಸ್ಥಳಗಳಿಗೆ ಒಬ್ಬನೇ ಹೋಗಬಾರದು :

> "Even the thought of beauty hurts
> If there is none to share it!"
> [ರಮ್ಯತೆಯ ಬಗೆದರೂ ನೋಯುವುದು ಮನಸು,
> ಪಾಲುಗೊಳಲೊಬ್ಬರೂ ಜೊತೆಗಿಲ್ಲದಿರಲು!]

ಹಿಂದೆ ತಾಜ್ ಮಹಲನ್ನು ನೋಡಿದಾಗ ಈ ಕೊರತೆ ಅನುಭವಕ್ಕೆ ಬಂದಿತ್ತು. ಅಮೆರಿಕದಲ್ಲಿ ಯೋಸೇಮಿಟಿಗೆ ಬಂದಾಗ ಅದು ಮರುಕೊಳಿಸಿತು!

ಯೋಸೇಮಿಟಿಗೆ ಹೃದಯವನ್ನು ತೆತ್ತು, ಸಿನಿಮಾ ಸ್ವರ್ಗವಾದ ಲಾಸ್ ಏಂಜೆಲಿಸ್ (Los Angeles) ಮೂಲಕ ಹಾಯುವಾಗ ಅಲ್ಲಿ ಯಾವ ತಾರೆಗಳ ದರ್ಶನವನ್ನೂ ಮಾಡದೆ, ಕೇವಲ "ಸ್ಮಾಗ್" (smog = smoke + fog) ಎಂಬ ಹೊಗೆ ಮಂಜುಗಳ ಮಿಶ್ರಣದ ಗಾಳಿಯಲ್ಲಿ ಉಸಿರೆಳೆದು, ೧೧೫ ಡಿಗ್ರಿಯ ತಾಪದಲ್ಲಿ ಬಳಲಿ ಬೆಂಡಾಗಿ, ಅಲ್ಲಿಂದ ಮುಂದೆ ನಾನು ಅರಿಸೋನಾ (Arizona) ರಾಜ್ಯದ ಗ್ರ್ಯಾಂಡ್ ಕ್ಯಾನ್ಯನ್‌ಗೆ (Grand Canyon) ಬಂದೆ. ಬೃಹತ್ತು ಮಹತ್ತಾಗಿ ಪರಿಣಮಿಸುವ ಪ್ರಕೃತಿಸ್ಥಾನ ಗ್ರ್ಯಾಂಡ್ ಕ್ಯಾನ್ಯನ್. ಇಲ್ಲಿ ಕಾಲೊರ್ಯಾಡೋ (Colorado) ಜೀವನದಿ ಮಳೆ ಗಾಳಿ ಮಂಜುಗಳ ನೆರವಿನಿಂದ ಇನ್ನೂರಕ್ಕೂ ಮೀರಿದ ಮೈಲಿಗಳಷ್ಟು ಉದ್ದ, ಹತ್ತುಹದಿನೆಂಟು ಮೈಲಿಗಳಷ್ಟು ಅಗಲ. ಒಂದುಮೈಲಿಯಷ್ಟು ಆಳದ ಕಂದರವನ್ನು, ಅನೇಕ ಕೋಟಿವರ್ಷಗಳ ಕಾಲ ಇಲ್ಲಿ ಕೊರೆದು ಅಲ್ಲಿ ಮೇಲಕ್ಕೆ ಎತ್ತಿ, ನಿರ್ಮಿಸಿದೆ. ಇದರ ವರ್ಣನೆಗಳನ್ನು ಮೊದಲೇ ಓದಿದ್ದೆ. "It beggars description" ("ಅದರ ಮುಂದೆ ವರ್ಣನೆ ಭಿಕ್ಷಾರ್ಥಿಯಾಗುತ್ತದೆ"), "It is unbelievable" ("ಕಣ್ಣುಗಳು ಅದನ್ನು ನಂಬಲಾರವು")—ಹೀಗೆಲ್ಲ ಅದರ ಪ್ರಶಂಸೆಯನ್ನು ಕೇಳಿದ್ದೆ. ಈ ಮಹಾಕಂದರದ ಮೇಲುದಡದಲ್ಲಿ ನಿಂತು ಅದರ ಅನೇಕಾನೇಕ ಮೈಲಿಗಳ ವಿಸ್ತಾರವನ್ನು ಕಂಡಾಗ, ಒಂದು ಮೈಲಿಯಷ್ಟು ಕೆಳಗೆ ಬಗ್ಗಿನೋಡಿ, ತಳದಲ್ಲಿ ವೇಗವಾಗಿ ಹರಿಯುವ ನದಿ ಕೆಸರಿನ ರಾಶಿಯಂತೆ ಕುಂಟಗಾಲಿನಿಂದ ಸಾಗುತ್ತಿರುವ ಹಾಗೆ ಗೋಚರವಾದದ್ದನ್ನು ಭಾವಿಸಿದಾಗ, ಕಣಿವೆಯ ಮೇಲಂಚಿನ ರಸ್ತೆಯಲ್ಲಿ ದಿನವೆಲ್ಲ ಬಸ್ಸಿನೊಳಗೆ ಕುಳಿತು ಸುತ್ತಿ ಅದರ ಅಂಶಮಾತ್ರವನ್ನು ಮುಗಿಸಿದಾಗ, ಹಗಲು ಬಿಸಿಲು ಮಾಲಿದಂತೆಲ್ಲ ಕಣಿವೆಯ ಎದುರುಪಾರ್ಶ್ವದ, ಪ್ರಕೃತಿನಿರ್ಮಿತವಾದ ದೇವಸ್ಥಾನಗಳಂತೆ ಗೋಚರಿಸುವ ಬೆಟ್ಟಗಳು ಬಣ್ಣಗಳನ್ನು ಬದಲಾಯಿಸುತ್ತಾ "ನವೋನವ"ವಾಗುವುದನ್ನು ದರ್ಶನಮಾಡಿದಾಗ—ಇದು ದಿಟವಾಗಿ ಸೃಷ್ಟಿಯ ಮಹಾದ್ಭುತಗಳಲ್ಲಿ ಒಂದು; ಇದರ ವರ್ಣನೆಗಳೆಲ್ಲ ಸಪ್ಪೆಯ ಸ್ವಭಾವೋಕ್ತಿಗಳು ಎನ್ನಿಸಿತು. ಪ್ರಪಂಚದಲ್ಲಿ ಇದೇ ರೀತಿಯ, ಇದೇ ಪ್ರಮಾಣದ ಇನ್ನೊಂದು ದೃಶ್ಯ ಇಲ್ಲ ಎನ್ನುತ್ತಾರೆ.

ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲೇ ಇರುವ ಇನ್ನೊಂದು ವಿಭೂತಿ ಸ್ಥಾನ ನ್ಯೂ ಮೆಕ್ಸಿಕೋ (New Mexico) ರಾಜ್ಯದ ಕಾರ್ಲ್ಸ್‌ಬ್ಯಾಡ್ ಕುಹರಗಳು (Carlsbad Caverns) ಎಂದು ಕೇಳಿದ್ದೇನೆ. (ಈ ಅತಿ ವಿಸ್ತಾರವಾದ ಕುಹರಗಳೊಳಗೆ ಘನೀಭೂತ ವಾದ ನೀರು ಚಿತ್ರವಿಚಿತ್ರವಾದ ಹಿಮಮಯದ ಆಕೃತಿಗಳನ್ನು ನಿರ್ಮಿಸಿದೆಯಂತೆ.) ಯೋಸೇಮಿಟಿ, ಗ್ರ್ಯಾಡ್ ಕ್ಯಾನ್ಯನ್, ಕಾರ್ಲ್ಸ್ ಬ್ಯಾಡ್ ಕ್ಯಾವರ್ನ್ಸ್—ಇವು ಅಮೆರಿಕದ ಅದ್ಭುತ ತ್ರಯವೆಂದು ಹೇಳುವುದುಂಟು. ಈ ಮೂರನೆಯದನ್ನು ನಾನು ನೋಡಲು ಸಾಧ್ಯವಾಗಲಿಲ್ಲವೆಂಬ ಕೊರತೆಯೇನೋ ಮನಸ್ಸಿನಲ್ಲಿ ಇನ್ನೂ ನಿಂತಿದೆ. "ಎಯ್ದಿದುದ ಱೊಳ್ ಅಳವಡದುದುಂ ಎಯ್ದದುದನೆ ಬಯಸುತಿರ್ಪುದುಂ ಜೀವಕ್ಕೆ ಏಗೆಯ್ದುಂ ಇದು ಸಹಜಂ!" ಅಮೆರಿಕನ್ನರೊಡನೆ ಮಾತಾಡುವಾಗ, "ನಿಮ್ಮ ದೇಶದಲ್ಲಿ ಇಂಥಿಂಥ ಕಡೆಗಳಲ್ಲಿ ಸುತ್ತಿದ್ದೇನೆ; ಇಂಥಿಂಥ ದೃಶ್ಯಗಳನ್ನು ನೋಡಿದ್ದೇನೆ; ಕಾರ್ಲ್ಸ್‌ಬ್ಯಾಡ್ ಒಂದು ಕಡೆಗೆ ಹೋಗಲು ಆಗಲಿಲ್ಲ" ಎಂದು ನಾನು ಹೇಳಿದರೆ, ಅವರು "ಇಷ್ಟೊಂದು ಜಾಗಗಳಿಗೆ ನಾವೇ ಹೋಗಿಲ್ಲ, ನಮ್ಮ ದೇಶದ ಲಕ್ಷಾಂತರ ಜನ ಹೋಗಿಲ್ಲ. ನೀನೇ ವಾಸಿ!" ಎನ್ನುತ್ತಾರೆ. ಲೋಕದ ರೀತಿಯೇ ಹೀಗೆ. ಭಾರತದಲ್ಲಿ ಪರದೇಶದ ಪ್ರವಾಸಿಗಳು ನೋಡಿಕೊಂಡು ಹೋಗುವಷ್ಟು ಸ್ಥಳಗಳನ್ನು ನಾವು ನೋಡಿರುವುದಿಲ್ಲ. ಒಪ್ಪಿಕೊಳ್ಳಲು ನಾಚಿಕೆಯಾಗುತ್ತದೆ : ಎಲ್ಲೋರ ಅಜಂತಾಗಳಿಗೆ ಹೋಗಿಬರುವುದಕ್ಕೇ ನನಗೆ ಇನ್ನೂ ಆಗಿಲ್ಲ!

ಪ್ರವಾಸದಲ್ಲಿ ಕ್ಲೇಶವೂ ಉಂಟು ಉತ್ಸಾಹವೂ ಉಂಟು, ಹರ್ಷವೂ ಉಂಟು ವಿಷಾದವೂ ಉಂಟು. ಒಟ್ಟಿನಮೇಲೆ ಕಷ್ಟಕ್ಕಿಂತ ಸುಖವೇ ಹೆಚ್ಚೆನ್ನಿಸುತ್ತದೆ. ಇಲ್ಲವಾದರೆ ಇಷ್ಟೊಂದು ಜನ ಪ್ರವಾಸಗಳನ್ನು ಕೈಕೊಳ್ಳುತ್ತಿರಲಿಲ್ಲ. ಅಲ್ಲದೆ, ಅನುಭವಕಾಲದಲ್ಲಿ ಕ್ಲೇಶಕೊಟ್ಟಿದ್ದ ಸಂಗತಿಯೇ ಆ ಮುಂದೆ ಎಲ್ಲವೂ ಮುಗಿದ ಮೇಲೆ ಪರಿಭಾವಿಸುವಾಗ ಒಳ್ಳೆಯ ಆಸ್ವಾದವನ್ನು ಕೊಡುತ್ತದೆ. "ಪ್ರಾಪ್ತಾನಿ ದುಃಖಾನ್ಯಪಿ ದಂಡಕೇಷು ಸಂಚಿಂತ್ಯ ಮಾನಾನಿ ಸುಖಾನ್ಯಭೂವನ್" ಎಂದು ಕಾಳಿದಾಸನು ಹೇಳಿದ್ದು ದಿಟ. ಸೀತಾರಾಮರು ಅಯೋಧ್ಯೆಗೆ ಹಿಂದಿರುಗಿಬಂದು, ಸುಖವಾಗಿ ಅರಮನೆಯಲ್ಲಿ ಕೆಲವು ದಿನಗಳನ್ನು ಕಳೆಯುತ್ತಿರುವ ಕಾಲದಲ್ಲಿ, ಅಲ್ಲಿಯ ಚಿತ್ರಶಾಲೆಗಳಲ್ಲಿ ಹಿಂದಿನ ಘಟನೆಗಳ ಚಿತ್ರಗಳನ್ನು ನೋಡಿದಾಗ—ದಂಡಕಾರಣ್ಯದಲ್ಲಿ ತಾವು ಅನುಭವಿಸಿದ ಅನೇಕ ದುಃಖಗಳು ಕೂಡ ಈಗ ಪರಿಭಾವಿಸುವಂದು ಸುಖಗಳೇ ಆಗಿ ಪರಿಣಮಿಸಿದುವಂತೆ! ಪರಿಭಾವನೆಯಲ್ಲೇ ಹೀಗಾದ ಮೇಲೆ, ತಾನು ಪಟ್ಟ ಪಾಡನ್ನು ಇನ್ನೊಬ್ಬರ ಮುಂದೆ ವಿವರಿಸಿ ಹೇಳುವಾಗಲಂತೂ, ಉತ್ಸಾಹ ಉಕ್ಕಿಬರುತ್ತದೆ. ಈ "ರಸ"ವನ್ನು ರುಚಿನೋಡುವುದ ಕ್ಕಾದರೂ ಪ್ರವಾಸಿಯಾಗಬೇಕು.

ಆದರೆ ಒಂದು ಎಚ್ಚರಿಕೆ. ನಾಳೆ ಹೊರಡೋಣ, ನಾಡಿದ್ದು ಹೊರಡೋಣ ಎಂದು ಮುಹೂರ್ತವನ್ನು ಮುಂದಕ್ಕೆ ತಳ್ಳುತ್ತಾ ಹೋಗಬಾರದು. ಪ್ರವಾಸಿಯಾಗ ಬೇಕೆನ್ನುವವನಿಗೆ ದೇಹಾರೋಗ್ಯ ಬೇಕು, ಜಂಘಾಬಲ ಬೇಕು, ಒಳ ಸೋರದ ಉತ್ಸಾಹ

ಬೇಕು. ಇದೆಲ್ಲ ತಾರುಣ್ಯದಲ್ಲಿ ತುಂಬಿಕೊಂಡಿರುತ್ತದೆ. ವಯಸ್ಸು ಹೆಚ್ಚಿದ ಬಳಿಕ, ಎರಡು ಮೈಲಿ ನಡೆಯುವಷ್ಟರಲ್ಲಿ ನಾಲ್ಕು ಕಡೆ ಕುಳಿತುಕೊಳ್ಳಬೇಕೆನ್ನಿಸುತ್ತದೆ. ಬೆಟ್ಟವನ್ನು ಹತ್ತಿ ಇಳಿಯಬೇಕಾದರೆ ವಾಹನವಿಲ್ಲದೆ ದೇಹ ಮುಂದಕ್ಕೆ ಚಲಿಸುವುದೇ ಇಲ್ಲ. ಅನ್ನಪಾನಗಳಲ್ಲಿ ಪಥ್ಯಾಪಥ್ಯಗಳ ನಿಯಮ ಪ್ರಬಲವಾಗುತ್ತದೆ. ಸುಪ್ಪತ್ತಿಗೆಯ ಮೇಲೆ ಮಲಗಿದರೂ ಕಣ್ಣಿಗೆ ಸರಿಯಾಗಿ ನಿದ್ದೆ ಹತ್ತುವುದಿಲ್ಲ. ಹೊಸ ಸ್ಥಳವನ್ನು ನೋಡಬೇಕೆಂಬ ಆಸೆ ಆಗಾಗ ತಲೆದೋರಿದರೂ ಪ್ರಯಾಣದ ಕ್ಲೇಶಗಳನ್ನು ಭಾವಿಸಿದೊಡನೆ ಹಾಗೆಯೇ ಉಡುಗಿಹೋಗುತ್ತದೆ. ಇರುವಲ್ಲಿಯೇ ಹಾಯಾಗಿ ಇದ್ದುಬಿಡೋಣ ಎನ್ನಿಸುತ್ತದೆ. ನೋಟಗಳು ಯೌವನದಲ್ಲಿ, ನೆನವರಿಕೆ ಮುಪ್ಪಿನಲ್ಲಿ!

ನರೆ ಕೆನ್ನೆಗೆ, ತೆರೆ ಗಲ್ಲಕೆ ಬಂದಡಸದ ಮುನ್ನ,
ಕೀಳುಣಿಸಿನ, ಏದುಸಿರಿನ, ಚಳಿಸೆಕೆಗಳ ಚಿಂತೆ
ಮನವನಲ್ಲಾಡಿಸದ ಮುನ್ನ,
ತಗುಣೆ ಸೊಳ್ಳೆ ಗುಂಪು ಗದ್ದಲಗಳ ಭೀತಿ
ರಕ್ತವನಾರಿಸದ ಮುನ್ನ,
ಮೈಯ ಕೆಚ್ಚು, ಕಾಲ ಕಸುವು, ಬಗೆಯ ಹುಮ್ಮಸು
ಒಪ್ಪವಳಿಯದ ಮುನ್ನ,
ಮುಪ್ಪಿನ ಭಾರ ಹೆಗಲೇರದ ಮುನ್ನ,
ಕಿವಿಗೊಡು ಓ ಪ್ರೇಕ್ಷಣರಸಿಕನೆ, ಪ್ರವಾಸದ ಕರೆಗೆ!

ಪ್ರವಾಸಿಯ ಪತ್ರಗಳಿಂದ ಕೆಲವು ತುಣುಕುಗಳು

[ನ್ಯೂಯಾರ್ಕಿನ ರಾಕಿಫೆಲರ್ ಪ್ರತಿಷ್ಠಾನದವರ (Rockefeller Foundation) ಸಹಾಯದಿಂದ ನಾನು ಪಶ್ಚಿಮ ದೇಶಗಳಲ್ಲಿ ಪ್ರವಾಸದಲ್ಲಿದ್ದಾಗ, ನನ್ನ ಯೋಗ ಕ್ಷೇಮವನ್ನೂ ಅಲ್ಲಿಯ ಸ್ಥಿತಿಗತಿಗಳನ್ನೂ ಕುರಿತು ಸ್ವದೇಶದಲ್ಲಿದ್ದ ಮನೆಯವರಿಗೆ, ಮಿತ್ರರಿಗೆ ಪತ್ರಗಳನ್ನೂ ಆಗಾಗ ಬರೆಯುತ್ತಿದ್ದುದುಂಟು. ಸಾಮಾನ್ಯ ವಾಚಕರಿಗೆ ರುಚಿಸಬಹುದಾದ ಕೆಲವು ಖಂಡಗಳನ್ನು ಅವುಗಳಿಂದ ಎತ್ತಿ ತೆಗೆದುಕೊಟ್ಟಿದ್ದೇನೆ. ಈ ಕೆಳಗಿನವು ನಾನು ಅಮೆರಿಕದಲ್ಲಿದ್ದಾಗ, ೧೯೫೫ರಲ್ಲಿ, ಧಾರವಾಡದಲ್ಲಿದ್ದ ನನ್ನ ಮಡದಿ ಮಕ್ಕಳಿಗೆ ಬರೆದ ಕೆಲವು ಪತ್ರಗಳಿಂದ ಆರಿಸಿಕೊಂಡ ಭಾಗಗಳು.]

೧. ಮನೆಯ ಕಡೆಯ ಸುದ್ದಿ

ಆ್ಯನ್ ಅರ್ಬರ್,
ಮಿಷಿಗನ್,
ಜುಲೈ ೮, ೧೯೫೫

ಕಳೆದ ಕೆಲವು ದಿನಗಳು ನಿಮ್ಮ ಯೋಗಕ್ಷೇಮದ ಕಾಗದವನ್ನೇ ತವಕದಿಂದ ನಾನು ನಿರೀಕ್ಷಿಸುತ್ತಿದ್ದೆ. ಇಲ್ಲಿಂದ ನನ್ನ ಕಾಗದ ಸುಮಾರು ಹನ್ನೊಂದು ಸಾವಿರ ಮೈಲಿಗಳನ್ನು ದಾಟಿ ಅದಕ್ಕೆ ಉತ್ತರ ಅಷ್ಟೇ ದೂರದಿಂದ ಬರಬೇಕಾದರೆ, ವಿಮಾನದ ಮೂಲಕ ಕೆಲವು ದಿನಗಳು ಹಿಡಿಯುತ್ತವೆ ಎಂದು ನನಗೆ ಗೊತ್ತು. ಆದರೂ ತವಕದಿಂದ ನಿಮ್ಮ ಉತ್ತರವನ್ನು ಎದುರುನೋಡುತ್ತಿದ್ದೆ.

ಮೊನ್ನೆಯದಿನ (ಬುಧವಾರ) ಮಧ್ಯಾಹ್ನ ನಮ್ಮ ಗ್ರೀಷ್ಮ ಶಾಲೆಯ (Summer School) ಆಶ್ರಯದಲ್ಲಿ ಒಂದು "ಲಂಚ್" (lunch) ಇತ್ತು. (ಇಲ್ಲಿ ಪ್ರತಿ ಬುಧವಾರವೂ ಹೀಗೆ "ಲಂಚ್" ಏರ್ಪಾಡಾಗಿರುತ್ತದೆ; ಅದಕ್ಕೆ ಒಂದು ಡಾಲರ್ ಮೂವತ್ತು ಸೆಂಟ್ ಕೊಡಬೇಕು. ಅಷ್ಟೆ! ಮೊದಲೇ ತಿಳಿಸಿದಲ್ಲಿ ನನ್ನಂಥ ಶಾಕಾಹಾರಿಗಳಿಗೂ ಏರ್ಪಾಡು ಮಾಡುತ್ತಾರೆ : ಬೇಯಿಸಿದ ಕಾಯಿಪಲ್ಯಗಳನ್ನು ಕೊಡುತ್ತಾರೆ; ಬ್ರೆಡ್, ಹಾಲು ಇದ್ದೇ ಇರುತ್ತವೆ.) ಆ ವೇಳೆಯಲ್ಲಿ ಭಾಷಾವಿಜ್ಞಾನದ ಸಂಸ್ಥೆಯ (Linguistic Institute) ಸಹಾಯಕರೊಬ್ಬರು ಅಲ್ಲಿಯ ವಿಳಾಸಕ್ಕೆ ನನಗಾಗಿ ಬಂದಿದ್ದ ಲಕೋಟೆಯನ್ನು ನನ್ನ ಕೈಗೆ ಕೊಟ್ಟರು. ಅದನ್ನು ನೋಡಿದಾಗ ನನಗೆ ಎಷ್ಟು ಸಂತೋಷವಾಯಿತೋ! ಅಲ್ಲಿಯೇ ಅದನ್ನು ಒಡೆದು, ನಿನ್ನ ಮತ್ತು ಚಿರಂಜೀವಿಗಳ ಕಾಗದಗಳನ್ನು ಓದುವುದರಲ್ಲಿ ನಾನು ಮಗ್ನನಾದೆ. ನನ್ನ ಜೊತೆಯಲ್ಲಿದ್ದ ಒಬ್ಬಿಬ್ಬರಿಗೆ, "ಇದು ನಮ್ಮೂರಿನ ಕಾಗದ; ನನಗೆ ಮನೆಯಿಂದ ಬಂದ ಮೊದಲನೆಯ ಕಾಗದ" ಎಂದು ಕೂಡ ಹೇಳಿದೆ. ಅವರು ಏನು ತಿಳಿದು ಕೊಂಡರೋ! ಪ್ರವಾಸಿಯ ಮನಸ್ಸು ಅವರಿಗೆ ಅರ್ಥವಾಗದೆ ಇರಲಾರದು.

ಇಲ್ಲಿಗೆ ಹಾಲೆಂಡಿನಿಂದ ಬಂದಿರುವ ನನ್ನ ಸಹಾಧ್ಯಾಯಿಗಳೊಬ್ಬರ ಮನೆಗೆ ನಾನು ನಿನ್ನೆಯ ಸಂಜೆ ಊಟಕ್ಕೆ ಹೋಗಿದ್ದೆ. ಈತನೂ ಈತನ ಹೆಂಡತಿಯೂ ಒಂದು "ಅಪಾರ್ಟ್‌ಮೆಂಟ್"ನಲ್ಲಿ (apartment) ಬಾಡಿಗೆಗೆ ಇದ್ದಾರೆ. ಇಂಥ ಅಪಾರ್ಟ್‌ಮೆಂಟ್ ಗಳು ಈ ಮನೆಯಲ್ಲಿ ಐದಾರು ಇವೆ. ಮನೆಯೊಳಗೆ ಪ್ರವೇಶ ಮಾಡುತ್ತಲೇ "ನಡುವೆ"ಯಲ್ಲಿ ಮೇಜಿನಮೇಲೆ ಒಂದು ಕಡೆ ಎರಡು "ಕಾಗದ"ಗಳು ಇದ್ದುದನ್ನು ನೋಡಿದೆ. ಇಲ್ಲಿ ಟಪಾಲಿನವನು ಬರುವುದು ಒಂದೇ ಸಲ—ಬೆಳಗಿನ ಹೊತ್ತಿನಲ್ಲಿ. ಇಳಿಹೊತ್ತಾದರೂ ಈ ಕಾಗದಗಳ "ಮಾಲೀಕ"ರು ಇವನ್ನು ತೆಗೆದುಕೊಂಡೇ ಇಲ್ಲವಲ್ಲ ಎನ್ನಿಸಿತು. ಊಟ ಮುಗಿಸಿಕೊಂಡು ನಾನು ಹಿಂದಿರುಗುವಾಗ ಕೂಡ, ಅವು ಇನ್ನೂ ಅಲ್ಲಿಯೇ ಇದ್ದುವು. "ಇಷ್ಟೊಂದು ತಾತ್ಸಾರವೇ? ಅಯ್ಯೋ!" ಎನ್ನಿಸಿತು. ಆಪ್ತೇಷ್ಟರ ಕಾಗದಗಳನ್ನು ಕುರಿತು ನನಗಿರುವ ಉತ್ಸುಕತೆಯಲ್ಲಿ, ಇವನ್ನು ನಾನೇ ಎತ್ತಿಕೊಂಡುಬಿಡಲೆ ಎನ್ನಿಸಿತು! (ಈ ಪತ್ರಗಳ "ಮಾಲೀಕ"ರು ಬೆಳಗ್ಗೆ ಕೆಲಸಕ್ಕಾಗಿ ಹೋದವರು ಇನ್ನೂ ಬಂದಿರಲಾರರು; ಅದಕ್ಕೇ ಇವು ಹೀಗೆ ಅನಾಥವಾಗಿ ಇಲ್ಲಿ ಬಿದ್ದಿರಬೇಕು ಎಂಬ ಆಲೋಚನೆ ಆಮೇಲೆ ಹೊಳೆಯಿತು!)

ಜುಲೈ ೧೬, ೧೯೫೫

ನಮ್ಮ ದೇಶದಲ್ಲಿ ಇರುವಾಗ ಒಂದು ಕಾಗದ ಇನ್ನೊಬ್ಬರಿಗೆ ತಲುಪುವುದಕ್ಕೆ ಸಾಮಾನ್ಯವಾಗಿ ಎರಡು ದಿನಕ್ಕಿಂತ ಹೆಚ್ಚಾಗಿ ಹಿಡಿಯುವುದಿಲ್ಲ. ವಿಮಾನದ ಅಂಚೆಯ ಸೌಕರ್ಯವಿರುವುದರಿಂದ ದೆಹಲಿಯಂಥ ದೂರದ ಊರಿನಿಂದ ಕೂಡ ಕಾಗದ ಎರಡು ಮೂರು ದಿನದಲ್ಲಿ ಬಂದುಬಿಡುತ್ತದೆ. ಇಲ್ಲಿಂದಲಾದರೆ ವಿಮಾನದಲ್ಲಿಯೇ ಕಾಗದ ಪ್ರಯಾಣಮಾಡಿದರೂ ನನ್ನ ಕಾಗದ ನಿಮಗೆ ತಲಪಲು ಒಂದುವಾರ. ಅದಕ್ಕೆ ಮರುದಿನವೇ

ನೀವು ಬರೆದ ಉತ್ತರ ನನ್ನ ಕೈ ಸೇರಲು ಒಂದು ವಾರ—ಹೀಗೆ ಸುಮಾರು ಹದಿನೈದು ದಿನ ಹಿಡಿಯುತ್ತದೆ. ಆದರೆ ವಾರಕ್ಕೆ ಒಂದು ಕಾಗದವನ್ನಾದರೂ ನೀವೂ ನಾನೂ ತಪ್ಪದೆ ಬರೆಯುತ್ತಿರುವುದರಿಂದ, ಉತ್ತರ ಪ್ರತ್ಯುತ್ತರಗಳು ದಾರಿಯಲ್ಲಿ ಸಂಧಿಸುತ್ತವೆ ಎಂದುಕೊಳ್ಳಬಹುದು; ಕಳೆದವಾರ ಬರೆದ ಕಾಗದಕ್ಕೆ ಅಲ್ಲವಾದರೂ ಅದರ ಹಿಂದಿನ ವಾರದ ಕಾಗದಕ್ಕೆ ಉತ್ತರ ಬಂದಿತೆಂದು ಸಮಾಧಾನ ಮಾಡಿಕೊಳ್ಳಬಹುದು. ರೈಲೇನೋ ಕ್ಲುಪ್ತವಾಗಿ ಬರುತ್ತಿದೆ; ಆದರೆ ಈ ದಿವಸ ಬಂದದ್ದು ಇಂದಿನದಲ್ಲ, ನಿನ್ನೆಯದು ಎಂದಹಾಗೆ! ಅಂತೂ ಈ ಆಧುನಿಕ ಕಾಲದಲ್ಲಿ ಇಷ್ಟೊಂದು ಅನುಕೂಲತೆಯಿದ್ದರೂ ಅಲ್ಲಿಂದ ಇಲ್ಲಿಗೆ ದಾರಿ, ವೇಳೆ ಇವು ಎಷ್ಟೊಂದು ದೂರ! ಆದರೂ 'ಮೇಘದೂತ'ದ ಯಕ್ಷನ ಕಥೆಗಿಂತ ಇದು ಉತ್ತಮವಲ್ಲವೆ!...

ಅಂದ ಹಾಗೆ, ನಿನ್ನೆಯ ದಿನ ಇಲ್ಲಿ ಒಂದು ಪ್ರಸಂಗ ನಡೆಯಿತು. ಭಾರತೀಯ ತರುಣಮಿತ್ರರೊಬ್ಬರು ನನ್ನಂತೆಯೇ ಇಲ್ಲಿ ವ್ಯಾಸಂಗಮಾಡುತ್ತಿದ್ದಾರೆ. ಆತ ಈ ದೇಶಕ್ಕೆ ಬಂದು ಸುಮಾರು ಒಂದು ವರ್ಷವಾಯಿತು. ಇನ್ನು ಕನಿಷ್ಠಪಕ್ಷ ಸುಮಾರು ಹತ್ತು ತಿಂಗಳಾದರೂ ಇಲ್ಲಿ ಇರಬೇಕು. ಸ್ವಸ್ಥಳದಲ್ಲಿ ಈತನ ತಾಯಿ, ಹೆಂಡತಿ, ಚಿಕ್ಕಮಕ್ಕಳು, ಸೋದರಮಾವ–ಎಲ್ಲ ಇದ್ದಾರೆ. ಮೊನ್ನೆಯ ಸಂಜೆ ತಾಯಿ ಬರೆದ ಕಾಗದ ಈತನ ಕೈಸೇರಿತಂತೆ. ಆತ ಇನ್ನೂ ದೀರ್ಘಕಾಲ ಇಲ್ಲಿ ಇರಬೇಕಾಗುತ್ತದೆ ಎಂದು ಆಕೆ ಭಾವಿಸಿ, ಕೆಲವು ದುಃಖದ ಮಾತುಗಳನ್ನು ಬರೆದಿದ್ದರೆಂದು ತೋರುತ್ತದೆ. ಕಾಗದವನ್ನು ಓದಿ ಈತನ ಮನಸ್ಸಿಗೆ ತುಂಬ ಕಳವಳವಾಯಿತು. ತನ್ನ ಮುಖವನ್ನು ನೋಡಲು ಸಾಧ್ಯವಿಲ್ಲದಿದ್ದರೂ ತನ್ನ ಕಂಠಧ್ವನಿಯನ್ನಾದರೂ ಆಕೆ ಕೇಳಿ ತನ್ನೊಡನೆ ನೇರವಾಗಿ ಒಂದೆರಡು ಮಾತನ್ನಾಡಿದರೆ ಆಕೆಗೆ ಸಮಾಧಾನವಾಗಬಹುದು ಎನ್ನಿಸಿತು. "ರೇಡಿಯೋ ಫೋನ್" (Radiophone) ಮೂಲಕ ತನ್ನ ತಾಯಿಯೊಡನೆ ಮಾತಾಡಬೇಕೆಂದು ಆತ ನಿರ್ಧರಮಾಡಿದನು. ರೇಡಿಯೋ ಫೋನ್ ಎಂದರೆ ಏನೆಂದು ಸ್ವಲ್ಪ ವಿವರಿಸ ಬೇಕಲ್ಲವೆ. ಈ ದೇಶದಲ್ಲಿ (ಅಮೆರಿಕದಲ್ಲಿ) ಎಲ್ಲಿಂದ ಎಲ್ಲಿಗೆ ಬೇಕಾದರೂ—ಈ ಊರಿಗೂ ಆ ಊರಿಗೂ ಸಾವಿರಾರು ಮೈಲಿಗಳ ಅಂತರವಿದ್ದರೂ ಚಿಂತೆಯಿಲ್ಲ— ಸುಲಭವಾಗಿ ಕೆಲವು ನಿಮಿಷಗಳಲ್ಲಿ ದೂರದ ಟೆಲಿಫೋನ್ ಮೂಲಕ (long-distance telephone : ಇದನ್ನು ನಮ್ಮ ದೇಶದಲ್ಲಿ trunk telephone ಎನ್ನುತ್ತಾರೆ) ಮಾತಾಡ ಬಹುದು. ಉದಾಹರಣೆಗೆ ಆ್ಯನ್ ಆರ್ಬರ್‌ನಿಂದ ನ್ಯೂಯಾರ್ಕಿಗೆ, ಬೇಕಾದರೆ ಸ್ಯಾನ್ ಫ್ರಾನ್ಸಿಸ್ಕೋಗೆ ಕೂಡ, ಹೀಗೆ ಟೆಲಿಫೋನ್ ಎತ್ತಿಹಿಡಿದು ಆ ದೂರದ ಊರು ಬೇಕು ಎಂದು ಎಕ್ಸ್‌ಛೇಂಜಿನವರಿಗೆ ತಿಳಿಸಿ ಕೆಲವೇ ನಿಮಿಷಗಳಲ್ಲಿ ಸಂಪರ್ಕಪಡೆಯಬಹುದು. ವೆಚ್ಚವೂ ಹೆಚ್ಚಾಗುವುದಿಲ್ಲ ಎನ್ನುತ್ತಾರೆ. ಆದರೆ ಇಲ್ಲಿಂದ ಇಂಡಿಯಾದ ಒಂದು ಊರಿನಲ್ಲಿರುವ ಯಾರಾದರೂ ಒಬ್ಬರೊಡನೆ ಮಾತಾಡಬೇಕಾದರೆ ಇಷ್ಟು ಸುಲಭವಲ್ಲ. ಟೆಲಿಫೋನಿನ ಜೊತೆಗೆ ರೇಡಿಯೋ ಸಹಾಯ ಕೂಡ ಬೇಕಾಗುತ್ತದೆ. ಮೊದಲು ಇಲ್ಲಿಂದ ನ್ಯೂಯಾರ್ಕಿನ ಕಚೇರಿಯ ಸಂಗಡ ಫೋನ್ ಮೂಲಕ ಮಾತಾಡಬೇಕು. ಅವರು ರೇಡಿಯೋ ಮೂಲಕ ಲಂಡನ್ನಿನ ಕಚೇರಿಯೊಂದಿಗೆ, ಲಂಡನ್ನಿನವರು

ರೇಡಿಯೋ ಮೂಲಕ ಬೊಂಬಾಯಿನ ಕಚೇರಿಯೊಂದಿಗೆ, ಬೊಂಬಾಯಿಯವರು ಟ್ರಂಕ್ ಫೋನ್ ಮೂಲಕ ನಿರ್ದಿಷ್ಟವಾದ ಸ್ಥಳಕ್ಕೆ (ಉದಾಹರಣೆಗೆ ಈತನಿಗೆ ಬೇಕಾಗಿದ್ದ ಗುಂಟೂರಿಗೆ) ಸಂಪರ್ಕವನ್ನು ಕಲ್ಪಿಸುತ್ತಾರೆ. ಮೊನ್ನೆಯ ಸಂಜೆ ಈತ ನ್ಯೂಯಾರ್ಕಿನ ಕಚೇರಿಯವರಿಗೆ ಫೋನ್ ಮೂಲಕ ತನ್ನ ಅಪೇಕ್ಷೆಯನ್ನು ತಿಳಿಸಿದರು : ಅವರು ಲಂಡನ್, ಬೊಂಬಾಯಿಗಳ ಮೂಲಕ ಗುಂಟೂರಿನ ಸಂಬಂಧ ಪಡೆಯಲು ಎಷ್ಟೋ ಘಂಟೆ ಬೇಕಾಯಿತು. ಗುಂಟೂರಿನಲ್ಲಿ ಇವರ ಮನೆಗೆ ಫೋನ್ ಇಲ್ಲವಲ್ಲ! (ಅದೇನು ಅಮೆರಿಕವೇ ಮನೆಮನೆಗೂ ಕೊಠಡಿ ಕೊಠಡಿಗೂ ಫೋನ್ ಇರುವುದಕ್ಕೆ!) ಪೋಸ್ಟ್ ಆಫೀಸಿನವರು ಈತನ ತಾಯಿ, ಹೆಂಡತಿ ಇವರಿಗೆ ಹೇಳಿ ಕಳಿಸಿ, ಅವರು ಪೋಸ್ಟ್ ಆಫೀಸಿಗೋ ಫೋನ್ ಸೌಕರ್ಯವಿರುವ ಮತ್ತೊಂದು ಕಡೆಗೂ ಹೋಗಿ ಅಲ್ಲಿಂದ ಮಾತಾಡಬೇಕು. ಗುಂಟೂರಿನಲ್ಲಿ ಪೋಸ್ಟ್ ಆಫೀಸಿಗೆ ಅವರು ಬಂದಿದ್ದಾರೆ, ಇನ್ನು ಅವರೊಂದಿಗೆ ಮಾತಾಡಬಹುದು ಎಂಬ ನಿರ್ದೇಶನ ಆ್ಯನ್ ಆರ್ಬರಿನಲ್ಲಿ ಈತನಿಗೆ ಬರುವುದಕ್ಕೆ ಅನೇಕ ಘಂಟೆಗಳಾದುವು. ಇದರ ಮೇಲೆ ಇಲ್ಲಿ ಹಗಲಾಗಿರುವಾಗ ಇಂಡಿಯಾದಲ್ಲಿ ರಾತ್ರಿ : ಅಲ್ಲಿಗೂ ಇಲ್ಲಿಗೂ ಹತ್ತೂವರೆ ಘಂಟೆಯ ಕಾಲವ್ಯತ್ಯಾಸವಿದೆ! ಈ ತೊಡಕು ಬೇರೆ. ಅಂತೂ ನಿನ್ನೆಯ ಬೆಳಗ್ಗೆ ಇಲ್ಲಿ ಸುಮಾರು ಎಂಟು ಘಂಟೆಗೆ ಸಂಪರ್ಕ ಒದಗಿತು. ಅದುವರೆಗೂ ಈತ ನಿದ್ದೆಯನ್ನು ಕೂಡ ತಡೆದುಕೊಂಡು ಫೋನ್ ಶಬ್ದವನ್ನೇ ನಿರೀಕ್ಷಿಸುತ್ತಿದ್ದರು. (ಆತನ ಕೋಣೆಯಲ್ಲೇ ಒಂದು ಫೋನ್ ಇದೆ.)

ಇದ್ದಕ್ಕಿದ್ದ ಹಾಗೆಯೇ ಈ ರೇಡಿಯೋ ಫೋನ್ ಏಕೆ ಬಂತು ಎಂದು ಆತನ ಮನೆಯವರು ತುಂಬ ಗಾಬರಿಪಟ್ಟಿರಬೇಕು. ಪೋಸ್ಟ್ ಆಫೀಸಿಗೆ ತಾಯಿ, ಹೆಂಡತಿ, ಸೋದರಮಾವ ಎಲ್ಲರೂ ಬಂದಿದ್ದಾರೆ. ತಾಯಿಗೆ ಗಾಬರಿ ಅಧಿಕವಾಗಿ ಫೋನಿನಲ್ಲಿ ಮಾತಾಡಲು ಆಕೆಗೆ ಆಗಲೇ ಇಲ್ಲವಂತೆ; ಹೆಂಡತಿ. ಸೋದರಮಾವ ಮಾತಾಡಿದರು : ಅವರ ಧ್ವನಿಗಳ ಗುರುತು ಈತನಿಗೆ ಸಿಕ್ಕಲಿಲ್ಲ. ಪಾತಾಳದಿಂದಲೊ ಆಕಾಶದಿಂದಲೋ ಯಾರೋ ಏನೋ ಶಬ್ದಮಾಡಿದಂತಿತ್ತು. ಅಂತೂ ತಾನು ಕ್ಷೇಮವಾಗಿರುವುದನ್ನು ಆತ ಮನೆಯವರಿಗೆ ತಿಳಿಸಿದರು; ಅವರ ಯೋಗಕ್ಷೇಮವನ್ನು ತಾವು ತಿಳಿದುಕೊಂಡರು. ಹೀಗೆ ತಾಯಿ ಆ ಪಕ್ಕದ ಫೋನಿನ ಎದುರಿಗೇ ಇದ್ದರೂ ಆಕೆಯೊಡನೆ ಒಂದು ಮಾತನ್ನೂ ಆಡಲಿಲ್ಲ; ಮಿಕ್ಕವರೊಡನೆ ಮಾತಾಡಿದರೂ ಧ್ವನಿಗಳನ್ನು ಗುರುತಿಸಲು ಆಗಲಿಲ್ಲ! ಇಷ್ಟೆಲ್ಲ ಕಲಾಪಕ್ಕೆ ಹದಿನೈದು ನಿಮಿಷ ಹಿಡಿಯಿತಂತೆ. ಆದರೆ ಇವರು ಪರಸ್ಪರವಾಗಿ ಮಾತಾಡಿದ್ದು ಎಂಟೇ ನಿಮಿಷಗಳು ಎಂದು ಫೋನ್ ವ್ಯವಸ್ಥಾಪಕರು ಉದಾರಮನಸ್ಸಿನಿಂದ ಲೆಕ್ಕ ಹಾಕಿ, ಒಂದು ನಿಮಿಷಕ್ಕೆ ಐದು ಡಾಲರ್‌ಗಳಂತೆ ಒಟ್ಟು ನಲವತ್ತು ಡಾಲರ್‌ಗಳನ್ನು ಈತನ ಲೆಕ್ಕಕ್ಕೆ ಏರಿಸಿದರು. ನಲವತ್ತು ಡಾಲರ್ ಎಂದರೆ ಹತ್ತಿರ ಹತ್ತಿರ ಇನ್ನೂರು ರೂಪಾಯಿ. ಅಮೆರಿಕನ್ನರ ದೃಷ್ಟಿಯಲ್ಲೂ ಇದು ದೊಡ್ಡ ಮೊತ್ತವೇ. ಇಷ್ಟು ವೆಚ್ಚ ಮಾಡಿದರೂ ಈತನಿಗೆ ಮನಸ್ಸಮಾಧಾನ ಬರಲಿಲ್ಲ!

ನಿನ್ನೆಯ ಬೆಳಗ್ಗೆ ಈತ ತರಗತಿಗೆ ಬಂದಿರಲಿಲ್ಲ; ಅಪರಾಹ್ಣದಲ್ಲಿ ಬಂದರು. ಏಕೆ ಬರಲಿಲ್ಲ ಎಂದಾಗ ಈ ವೃತ್ತಾಂತವನ್ನು ಹೇಳಿದರು. ಮನಸ್ಸು ತುಂಬ ನೊಂದಿದ್ದಂತೆ

ತೋರಿತು. ನಾನು ಜೊತೆಯಲ್ಲಿ ಕರೆದುಕೊಂಡು ಹೋಗಿ, ಎಲ್ಲ ವಿಷಯವನ್ನೂ ವಿವರವಾಗಿ ಕೇಳಿ ಎರಡು ಸಮಾಧಾನದ ಮಾತನ್ನು ಹೇಳಿದೆ. ಇಬ್ಬರೂ ಜೊತೆಯಲ್ಲಿ "ಮಿಲ್ಕ್ ಷೇಕ್" (milk shake) ಕುಡಿದೆವು. ಆ ಬಳಿಕ ನನ್ನ ಕೊಠಡಿಗೂ ಕರೆತಂದು, ಆ ಮಾತು ಈ ಮಾತು ಆಡುತ್ತಿದ್ದೆ. ಆಪ್ತೇಷ್ಟರು ಅನೇಕ ದಿನಗಳ ಕಾಲ ಅಗಲಿರುವಾಗ, ಅದರಲ್ಲೂ ದೇಶಾಂತರದಲ್ಲಿ, ಬೇರೊಂದು ಭೂಖಂಡದಲ್ಲಿ, ಇರುವಾಗ ಹೃದಯ ಹೀಗೆ ತಳಮಳಿಸುವುದರಲ್ಲಿ ಏನೇನೂ ಆಶ್ಚರ್ಯವಿಲ್ಲ. ಹಿತೈಷಿಗಳ ಸಂಗಡ ಮಾತಾಡಿ, ಮನಸ್ಸನ್ನು ಬಿಚ್ಚಿ ಹೇಳಿ, ನೋವನ್ನು ಆರಿಸಿಕೊಳ್ಳುವುದೊಂದೇ ಇದಕ್ಕೆ ಪರಿಹಾರ...

೨. ಷಿಕಾಗೋ ನಗರದಲ್ಲಿ

ಆ್ಯನ್ ಆರ್ಬರ್,
ಮಿಷಿಗನ್,
ಆಗಸ್ಟ್ ೬, ೧೯೫೫

ಕಳೆದ ಶನಿವಾರ ಒಂದು ಮೀಟಿಂಗಿಗಾಗಿ ನಾನು ಷಿಕಾಗೋ ನಗರಕ್ಕೆ ಹೋಗಿ ಅಲ್ಲಿಂದ ಮಂಗಳವಾರ ಬೆಳಗ್ಗೆ ಇಲ್ಲಿಗೆ ಹಿಂದಿರುಗಿದೆ. ಷಿಕಾಗೋ ಬಲು ವಿಸ್ತಾರವಾದ ಊರು; ಕೆಲಸ ಕಾರ್ಯಗಳ ತೊಡಕಿನಿಂದ ಅದನ್ನು ಈ ಬಾರಿ ಚೆನ್ನಾಗಿ ನೋಡಲು ಆಗಲಿಲ್ಲ. ಇನ್ನೊಂದು ಸಲ ಇಲ್ಲಿಗೆ ಬಂದಾಗ ಪ್ರಯತ್ನಿಸಬೇಕು...

ನಾನು ಇಳಿದುಕೊಂಡಿದ್ದ "ವಿಂಡರ್ ಮಿಯರ್ ಈಸ್ಟ್" ಎಂಬ ಹೋಟಲಿಗೆ ಅತಿ ಸಮೀಪದಲ್ಲಿ "The Museum of Science and Industry" (ವಿಜ್ಞಾನ ಮತ್ತು ಉದ್ಯಮಗಳ ಮ್ಯೂಸಿಯಮ್) ಇದೆ. ನನಗಿದ್ದ ಅಲ್ಪಾವಕಾಶದಲ್ಲಿ ಅದರ ಎಲ್ಲ ಭಾಗ ಗಳನ್ನೂ ನೋಡಿ ಮುಗಿಸಲು ಸಾಧ್ಯವೇ ಇರಲಿಲ್ಲ. ಆದರೂ ಕೆಲವು ಕಡೆಗಳಲ್ಲಿ ಸುತ್ತಾಡಿದೆ. ಮೋಟಾರು, ಹಡಗು, ವಿಮಾನ ಇತ್ಯಾದಿಗಳ ಚರಿತ್ರೆ ವಿಕಾಸ ಇದೆಲ್ಲದರ ಪ್ರದರ್ಶನವನ್ನು ಇಲ್ಲಿ ಅತ್ಯಾಕರ್ಷಕವಾಗಿ ಅಳವಡಿಸಿದ್ದಾರೆ. ಟೆಲಿವಿಷನ್ ಭಾಗದಲ್ಲಿ ನಮ್ಮ ಮುಖವನ್ನು ನಾವೇ ನೋಡಿಕೊಳ್ಳಬಹುದು : ಒಂದು ಕ್ಲುಪ್ತವಾದ ಜಾಗದಲ್ಲಿ ನಾವು ನಿಂತ ಕೂಡಲೆ ಎದುರಿನ ಒಂದು ಫಲಕದಲ್ಲಿ ನಮ್ಮ ಟೆಲಿವಿಷನ್ ಪ್ರತಿಬಿಂಬ ಗೋಚರಿಸುತ್ತದೆ. ಇನ್ನು ಸ್ವಲ್ಪ ದೂರದಲ್ಲಿ ಇನ್ನಷ್ಟು ವಿಸ್ತಾರವಾದ ಫಲಕದ ಮೇಲೂ ಅದು ಬೀಳುತ್ತದೆ. ಅದನ್ನು ನಮ್ಮ ಮಿತ್ರರು ನೋಡಿ ಆನಂದಿಸಬಹುದು. ಹಾಗೆಯೇ ಟೆಲಿಫೋನಿನಲ್ಲಿ ನಮ್ಮ ಧ್ವನಿಯನ್ನು ನಾವೇ ಕೇಳಬಹುದು : ಒಂದು ಕೈಯಲ್ಲಿ ಒಂದು ಟೆಲಿಫೋನನ್ನು ಎತ್ತಿ ಮಾತಾಡಿದರೆ ಇನ್ನೊಂದು ಕೈಯಲ್ಲಿ ಕಿವಿಯ ಬಳಿ ಹಿಡಿದ ಬೇರೊಂದು ಟೆಲಿಫೋನಿನ ಮೂಲಕ ನಮ್ಮ ಧ್ವನಿಯೇ ಕೇಳಿಬರುತ್ತದೆ. ಇಂಥ ವಿಚಿತ್ರಗಳು ಅಲ್ಲಿ ಹಲವಿವೆ. ಎರಡನೆಯ ಮಹಾಯುದ್ಧದಲ್ಲಿ ಅಮೆರಿಕನ್ನರು ಹಿಡಿದ ಸಬ್‌ಮೆರೀನ್ ಒಂದನ್ನು ಅನಾಮತ್ತಾಗಿ ತಂದು ಈ ಮ್ಯೂಸಿಯಮ್ ಕಟ್ಟಡದಲ್ಲಿ ಇರಿಸಿದ್ದಾರೆ. ಇಪ್ಪತ್ತೈದು ಸೆಂಟ್‌ಗಳನ್ನು ಕೊಟ್ಟು ಅದರೊಳಗೆ ಹೋಗಿ ನೋಡಿಕೊಂಡು

ಬರಬಹುದು. ಅದನ್ನು ಪ್ರವೇಶಿಸಿದಾಗ, ಅದರಲ್ಲಿ ಉಪಯೋಗಿಸಿದ್ದ ಯಂತ್ರಸಾಮಗ್ರಿಯ ವಿಪುಲತೆ ಸಂಕೀರ್ಣತೆಗಳನ್ನು ನೋಡಿ ದಿಗ್ಭ್ರಮೆಯಾಯಿತು.

ಹೀಗೆಯೇ ಬರೆಯುತ್ತಾ ಹೋಗಬಹುದು. ಆದರೆ ಇಂಥ ವಿಷಯಗಳಲ್ಲಿ ನನ್ನ ಜ್ಞಾಪಕ ಶಕ್ತಿ ಅಷ್ಟೇನೂ ಚುರುಕಲ್ಲ; ವಿವರಗಳು ಬಲುಬೇಗ ಮರೆತು ಹೋಗುತ್ತವೆ. ಅಲ್ಲದೆ ಇದೆಲ್ಲದರ ಸಾಮಾನ್ಯ ರೀತಿಯ ವರ್ಣನೆ ಸಾವಿರಾರು ಮೈಲಿಗಳ ಆಚೆ ಇರುವವರ ಕಣ್ಣ ಮುಂದೆ ಸ್ಫುಟವಾದ ಚಿತ್ರಗಳನ್ನೇನೂ ಕಟ್ಟಿ ನಿಲ್ಲಿಸುವುದಿಲ್ಲ. ಆದಕಾರಣ ಈ ವಿಷಯವನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಒಂದು ಅಂಶವನ್ನು ಮಾತ್ರ ಒತ್ತಿ ಹೇಳಬೇಕು. ಈ ಬಗೆಯ ಪ್ರದರ್ಶನಾಲಯಗಳನ್ನು ಏರ್ಪಡಿಸುವುದರಲ್ಲಿ ಅಮೆರಿಕನ್ನರು ತುಂಬ ಚತುರರು. ಜೋಡಣೆ, ಆಕರ್ಷಣೆ, ವಿವರಣೆ—ಇವೆಲ್ಲದರ ಮರ್ಮ ಅವರಿಗೆ ಗೊತ್ತಿದೆ. ಅಲ್ಲಿ ಇಲ್ಲಿ ಸುತ್ತಾಡಿ ನಮ್ಮ ಕಾಲುಗಳು ಸೋಲಬೇಕೇ ಹೊರತು, ನೋಡಿದ್ದು ಸಾಕು ಇನ್ನು ಮನೆಗೆ ಹೋಗೋಣ ಎನ್ನಿಸುವುದಿಲ್ಲ. ಗಡಿಯಾರ ವೇಳೆಯನ್ನೂ ಉಳಿದ ಕೆಲಸವನ್ನೂ ಜ್ಞಾಪಿಸಿ ಹಿಂದಕ್ಕೆ ಕಳಿಸುತ್ತದೆ.

ಷಿಕಾಗೋ ನಗರ ಮಿಷಿಗನ್ ಸರೋವರದ ಒಂದು ದಡದಲ್ಲಿದೆ. ಇದು ದೊಡ್ಡ ಸರೋವರ, ನೂರಾರು ಮೈಲಿಗಳ ವಿಸ್ತಾರವುಳ್ಳದ್ದು. ಈ ಸರೋವರದ ಒಂದು ಕಡೆಯಿಂದ ಮತ್ತೊಂದು ಕಡೆಗೆ ನಾವೆಗಳು ಓಡಾಡುತ್ತವೆ. ನಾವು ಷಿಕಾಗೋಕ್ಕೆ ಹೋಗಿದ್ದಾಗ ಅಲ್ಲಿ ಬಲುಸೆಕೆ; ನೆರಳಿನಲ್ಲಿಯೇ ನೂರು ಡಿಗ್ರಿಯನ್ನು ತಾಪ ಒಮ್ಮೊಮ್ಮೆ ಮುಟ್ಟುತ್ತಿತ್ತು. ಇದರ ಜೊತೆಗೆ ವಾತಾವರಣದ ತೇವ ಬೇರೆ. ಬೊಂಬಾಯನ್ನು ನೆನಪಿಗೆ ತರುತ್ತಿತ್ತು. ಇಷ್ಟೊಂದು ತೀವ್ರವಾದ ಬೇಸಗೆಯನ್ನು ನಾವು ಧಾರವಾಡದಲ್ಲಾಗಲಿ ಬೆಂಗಳೂರು ಮೈಸೂರುಗಳಲ್ಲಾಗಲಿ ಎಂದೂ ನೋಡಿಲ್ಲ. ಈ ಬೇಸಗೆಯ ಬೇಗೆಯನ್ನು ಪರಿಹರಿಸಿಕೊಳ್ಳಲು ಜನ—ಗಂಡು, ಹೆಣ್ಣು ಕೂಡಿ—ಸರೋವರದ ತೀರಕ್ಕೆ ಹೋಗುತ್ತಾರೆ. ರಾತ್ರಿಯ ಬಹುಭಾಗವನ್ನು ಅಲ್ಲಿಯೇ ಕಳೆಯುತ್ತಾರೆ. ನರ್ತನ ಭೋಜನಗಳನ್ನು ಅಲ್ಲಿ ನಡಸುತ್ತಾರೆ. ಇಲ್ಲಿ ಗಂಡು ಹೆಣ್ಣುಗಳಿಗೆ ಎಗ್ಗು, ಸಂಕೋಚ ಮೊದಲಾದವು ಬಲು ಕಡಮೆ. ಮೊದಮೊದಲು ನಮ್ಮಂಥವರಿಗೆ ಇದು ವಿಲಕ್ಷಣ, ವಿಪರೀತ ಎನ್ನಿಸುತ್ತದೆ. ಆಮೇಲೆ ನೋಡಿ ನೋಡಿ ಮನಸ್ಸಿಗೆ ಅಲ್ಲದಿದ್ದರೂ ಕಣ್ಣಿಗೆ ಅಭ್ಯಾಸವಾಗುತ್ತದೆ. ಬೇಸಗೆಯಲ್ಲಂತೂ ಇಲ್ಲಿಯ ಹೆಂಗಸರು ಅರೆಬತ್ತಲೆ ಇರುತ್ತಾರೆ ಎಂದರೆ ತಪ್ಪಾಗಲಾರದು. ಅರ್ಧ ತೊಡೆಗೆ, ಒಮ್ಮೊಮ್ಮೆ ಇನ್ನೂ ಮೇಲಕ್ಕೆ, ಮುಗಿಯುವ ಚಡ್ಡಿಗಳನ್ನು ಹಾಕಿಕೊಂಡು ತೆರೆದ ಕೊರಳಿನ ತೆರೆದ ತೋಳಿನ ಕಂಚುಕಗಳನ್ನು ತೊಟ್ಟುಕೊಂಡು ಓಡಾಡುತ್ತಿರುತ್ತಾರೆ. ಹೀಗೆ ಲಂಗವಿಲ್ಲದೆ ಚಡ್ಡಿ ಷರಾಯಿಗಳನ್ನು ಧರಿಸಿದ ಹೆಂಗಸರ ವಿಷಯದಲ್ಲಿ ಇಲ್ಲಿಯ ಕೆಲಮಂದಿ ಹಿರಿಯರು ಟೀಕೆ ಮಾಡಿದರೂ ಅವರು ಲಕ್ಷ್ಯಮಾಡುವುದಿಲ್ಲ. ಗಂಡಸರು ಹೆಂಗಸರು ಎಲ್ಲರೂ ಸಿಗರೇಟು ಸೇದುತ್ತಾರೆ. (ತರಗತಿಗಳಲ್ಲಿ ಕೂಡ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇದುವುದನ್ನು ನೋಡಿದ್ದೇನೆ.) ಒಟ್ಟಿಗೆ ರೆಸ್ಟೋರಾಂಟ್‌ಗಳಿಗೆ ಹೋಗುತ್ತಾರೆ, ನಿಸ್ಸಂಕೋಚವಾಗಿ ಪರಸ್ಪರ ಸಲ್ಲಾಪ ಮಾಡುತ್ತಾರೆ. ಹೀಗೆ ತುಂಬ

ಸಲಿಗೆಯಾಗಿ ನಡೆದರೂ, ಅದು ವಿಲಕ್ಷಣವೆಂದು ನಮಗೆ ಅನ್ನಿಸಿದ ಹಾಗೆ ಅವರಿಗೆ ಅನ್ನಿಸುವುದಲ್ಲ. ಇದೆಲ್ಲ ಸ್ವೇಚ್ಛಾಚಾರ, ಸ್ವಚ್ಛಂದ ವರ್ತನೆ ಎಂದು ಟೀಕಿಸುವುದೂ ತಪ್ಪಾಗುತ್ತದೆ. ಇದರಲ್ಲೇ ಅವರು ಶೀಲದ, ಸಭ್ಯತೆಯ ಎಲ್ಲೆಯನ್ನು ಕಲ್ಪಿಸಿಕೊಂಡಿರುತ್ತಾರೆ; ಅದನ್ನು ಸಾಮಾನ್ಯವಾಗಿ ಮೀರುವುದಿಲ್ಲ. ಹೆಂಗಸರಿಗೆ ಇಲ್ಲಿ ನಿರ್ಭಯ ಹೆಚ್ಚು : ಒಬ್ಬೊಬ್ಬರೇ ನಿರಾತಂಕವಾಗಿ ಓಡಾಡುತ್ತಾರೆ, ದೂರ ಪ್ರದೇಶಗಳಿಗೆ ಪ್ರಯಾಣ ಮಾಡುತ್ತಾರೆ. ನಮ್ಮ ದೇಶದಲ್ಲಿ ಕೆಲವರು ಮಾಡುವ ಹಾಗೆ ಅವರನ್ನು ಇಲ್ಲಿ ಯಾರೂ ದುರುಗುಟ್ಟಿ ನೋಡುವುದಿಲ್ಲ, ಅಣಕಿಸುವುದಿಲ್ಲ, ಕಿಸಿಕಿಸಿ ನಗುವುದಿಲ್ಲ. ಗಂಡು ಹೆಣ್ಣು ಇಬ್ಬರೂ ಶಾಲೆಗಳಲ್ಲಿ ಕಚೇರಿಗಳಲ್ಲಿ ಸಮಾನಭಾವದಿಂದ ವರ್ತಿಸುತ್ತಾರೆ. ಶೀಲವನ್ನು ಕಾಪಾಡಿ ಕೊಂಡು, ಲಜ್ಜೆಯನ್ನು ಪೂರ್ತಿಯಾಗಿ ಕೈಬಿಡದೆ, ಹೆಂಗಸರು ಗಂಡಸರೊಡನೆ— ಮನೆಯಲ್ಲಿ ಹೇಗೋ ಹಾಗೆ ಹೊರಗೂ ಸಹೋದರ ಸಹೋದರಿಯರಂತೆ— ನಡೆದುಕೊಳ್ಳುವುದುನ್ನು ನಮ್ಮ ದೇಶದಲ್ಲೂ ಕಲಿಯಬೇಕಾಗಿದೆ.

ಮಾತು ಎಲ್ಲೆಲ್ಲಿಗೋ ಹೋಯಿತು. ಆ ರಾತ್ರಿ ಷಿಕಾಗೋ ನಗರದ ಸರೋವರ ತೀರದಲ್ಲಿ ನಮ್ಮ ಮಿತ್ರರು ಕೆಲವರು (ಎಲ್ಲರೂ ಗಂಡಸರೇ) ಈಜಾಡಿದರು. ನಾನು ದಡದ ಬಂಡೆಯೊಂದರ ಮೇಲೆ ಕುಳಿತು ಅವರಿಗೆ ಪ್ರೋತ್ಸಾಹ ಕೊಡುತ್ತಿದ್ದೆ. ಆ ರಾತ್ರಿ ಹೋಟಲಿಗೆ ಹಿಂದಿರುಗಿದ ಮೇಲೆ ಕೊಠಡಿಯಲ್ಲಿ ಕುಳಿತಾಗ ಕೆಲವರು ಬಿಯರ್ ಮುಂತಾದ ಪಾನೀಯಗಳನ್ನು ತರಿಸಿಕೊಂಡು ಕುಡಿದರು. ನಾನು ಜಿಂಜರನ್ನು (ginger) ಅವರ ಜೊತೆಗೆ ಕುಳಿತು ಕುಡಿದೆ. ಜಿಂಜರ್ ಎಂದರೆ ಶುಂಠಿಯ ರಸ ಎಂದು ನಿನಗೆ ಗೊತ್ತಿದೆಯಷ್ಟೆ. ಹೀಗೆ ಮಾಂಸಾಹಾರಿಗಳ ಜೊತೆಗೆ ಊಟಕ್ಕೆ ಕುಳಿತರೂ ಕೇವಲ ಶಾಕಾಹಾರವನ್ನು, ಮಾದಕ ಪಾನೀಯಗಳನ್ನು ಸೇವಿಸುವವರ ಜೊತೆಯಲ್ಲಿ ಜಿಂಜರ್, ಸೋಡ, ಕಾಫಿ ಕಡೆಗೆ ನೀರು ಇಂಥದನ್ನು ತೆಗೆದುಕೊಳ್ಳುವುದು ನನಗೆ ಅಭ್ಯಾಸವಾಗಿದೆ. ಇದೇನೂ ಕಷ್ಟವೆಂದು ನನಗೆ ಅನಿಸಿಲ್ಲ. ಅವರ ಆಹಾರ ಪಾನೀಯಗಳ ಕಡೆಗೆ ನನ್ನ ಮನಸ್ಸು ಓಡುತ್ತಲೂ ಇಲ್ಲ. ಅವರೂ ನನ್ನನ್ನು ಬಲಾತ್ಕರಿಸುವುದಿಲ್ಲ. ಇದೆಲ್ಲವೂ ನನಗೆ ವಯಸ್ಸು ಸ್ವಲ್ಪ ಹೆಚ್ಚಾಗಿರುವುದರ ಪ್ರಯೋಜನ ಎಂದು ತೋರುತ್ತದೆ. ಕೇವಲ ತರುಣರಾದವರು ನಮ್ಮ ದೇಶದಿಂದ ಇಲ್ಲಿಗೆ ಬಂದು ಹಲವುಕಾಲ ನೆಲಸಿದರೆ ಅವರಿಗೆ ಆಹಾರ ಪಾನೀಯಗಳ ವಿಷಯದಲ್ಲಿ ನಿಯಮಪಾಲನೆ ಕಷ್ಟವಾಗುವುದು ಅಸಂಭವವಲ್ಲ. ಅಂತೂ ಜೀವನ ವಿಚಿತ್ರ!

೩. ಅಮೆರಿಕದಲ್ಲಿ ದೀಪಾವಳಿ

ಫಿಲಡೆಲ್ಫಿಯ,
ಪೆನ್‌ಸಿಲ್ವೇನಿಯ.
ನೊವೆಂಬರ್ ೨೭, ೧೯೫೫

ಇಲ್ಲಿ ಕಳೆದ ಗುರುವಾರದಿಂದ ನಾಳೆ ಕೂಡಿ ಒಟ್ಟು ನಾಲ್ಕು ದಿನ ರಜ ಬಂದಿದೆ. ಗುರುವಾರ, ೨೪ನೆಯ ತಾರೀಖು, "Thanksgiving Day". ಎಂದರೆ ಕೃತಜ್ಞತಾ

ಸಮರ್ಪಣೆಯ ದಿನ. ಈ ಹಬ್ಬವನ್ನು ಈ ದೇಶದವರು ಸಂಭ್ರಮದಿಂದ ಆಚರಿಸುತ್ತಾರೆ. ಅಮೆರಿಕಕ್ಕೆ ಯೂರೋಪಿನಿಂದ ಜನರು ಮೊದಲು ವಲಸೆ ಬಂದಾಗ, ಸುರಕ್ಷಿತವಾಗಿ ಇಲ್ಲಿಗೆ ಸೇರಿ ನೆಲಸಿದ್ದಕ್ಕಾಗಿ ಭಗವಂತನಿಗೆ ಕೃತಜ್ಞತೆಯನ್ನು ಸಲ್ಲಿಸುವ ದಿನ ಇದೆಂದು ಓದಿದ ನೆನಪು; ಆದರೆ ಪುಸ್ತಕಗಳ ಸಹಾಯವಿಲ್ಲದೆ, ಬಲ್ಲವರನ್ನು ಕೇಳಿ ದೃಢಪಡಿಸಿಕೊಳ್ಳದೆ ಇದು ಸರಿಯೆಂದು ನಿರ್ಧರಿಸಿ ಹೇಳಲಾರೆ. ಈ ಕಾಗದದ ವಿಷಯಕ್ಕೆ ಇಷ್ಟು ತಿಳುವಳಿಕೆ ಸಾಕು. ಕೆಲಸದ ಮೇಲೆ ದೂರ ಪ್ರದೇಶಕ್ಕೆ ಹೋಗಿದ್ದ ಮಕ್ಕಳು ಮರಿ ಎಲ್ಲರೂ "Thanksgiving" ದಿನದಂದು "ತೌರುಮನೆ"ಗೆ ಎಂದರೆ ತಂದೆ ತಾಯಿಗಳು ಇರುವಲ್ಲಿಗೆ ಬಂದು ಕಲೆಯುತ್ತಾರೆ. ಇದು ಮುಖ್ಯವಾಗಿ ಕುಟುಂಬದ ಹಬ್ಬ (Family festival). ಆ ದಿನ ಬಹು ಪಾಲು ಎಲ್ಲರ ಮನೆಗಳಲ್ಲೂ ಟರ್ಕಿ (Turkey) ಎಂಬ ಒಂದು ಜಾತಿಯ ಬಾತುಕೋಳಿಯನ್ನು ಉಪಯೋಗಿಸಿ ಅಡಿಗೆ ಮಾಡುತ್ತಾರೆ. ಇದೂ ಅಮೆರಿಕಾದಲ್ಲಿ ಅನೂಚಾನವಾಗಿ ಬಂದ ಸಂಪ್ರದಾಯ. ಹಬ್ಬದ ಅಡಿಗೆಯನ್ನು ಹೊಟ್ಟೆ ಬಿರಿಯುವಂತೆ ಊಟ ಮಾಡುವುದೂ ಸಂಪ್ರದಾಯವಂತೆ. ಧಾರವಾಡದಲ್ಲಿ ಯಥೇಚ್ಛವಾಗಿ ಕರಿದ ತಿನಿಸುಗಳನ್ನು ತಿಂದು ದೀಪಾವಳಿಯನ್ನು ಆಚರಿಸುವುದಿಲ್ಲವೆ, ಹಾಗೆ. ಅಜೀರ್ಣವಾಗುವುದೂ ಅಪೂರ್ವವಲ್ಲ!

"Thanksgiving Day" ಗಾಗಿ ನಿಮಗೆ ಎಲ್ಲಿಂದಲೂ ಆಹ್ವಾನ ಬಾರದಿದ್ದರೆ ತಿಳಿಸಿ; ನಾವು ಏರ್ಪಾಡು ಮಾಡುತ್ತೇವೆ ಎಂದು ಇಲ್ಲಿಯ ಒಂದೆರಡು ಸಂಸ್ಥೆಗಳವರು ನನಗೆ ಮೊದಲೇ ಪತ್ರ ಬರೆದಿದ್ದರು. (ಇದು ಪರದೇಶದಿಂದ ಬಂದಿರುವ ವಿದ್ಯಾರ್ಥಿಗಳಲ್ಲಿ ಅವರಿಗಿರುವ ವಿಶ್ವಾಸ ಸೌಜನ್ಯಗಳನ್ನು ತೋರಿಸುತ್ತದೆ.) ನಾನು ಮನಸ್ಸು ಮಾಡಿದ್ದರೆ ಸುಲಭವಾಗಿ ಹಬ್ಬದ ಊಟಕ್ಕೆ ಎಲ್ಲಿಗಾದರೂ ಹೋಗಬಹುದಾಗಿತ್ತು. ಆದರೆ ಹೋಗಲಿಲ್ಲ. ಏಕೆ ಎನ್ನುವುದು ನಿನಗೆ ತಿಳಿದೇ ಇದೆ. "ನಾನು ಬಾತುಕೋಳಿಯನ್ನು ಮುಟ್ಟುವನಲ್ಲ; ನನಗೆ ಕಾಯಿಪಲ್ಯಗಳ ಅಡಿಗೆ ಮಾಡಿ ಬಡಿಸಿ" ಎಂದು ಮೊದಲೇ ತಿಳಿಸಬೇಕು. ನನ್ನನ್ನು ಕರೆದ ಗೃಹಸ್ಥರಿಗೂ ತೊಂದರೆ, ನನಗೂ ತೊಂದರೆ. ಈ ಪೇಚಾಟವೇಕೆ; ಹಾಯಾಗಿ ನನ್ನ ಅಪಾರ್ಟ್‌ಮೆಂಟಿನಲ್ಲಿಯೇ ಇರೋಣ ಎಂದುಕೊಂಡು ನಿಂತುಬಿಟ್ಟೆ. ಆದರೆ ಅಮೆರಿಕನ್ನರ ರಾಷ್ಟ್ರೀಯ ಹಬ್ಬವನ್ನೂ ಕಡೆಗಣಿಸಲಿಲ್ಲ. ಇಲ್ಲಿಯೇ ಬಾದಾಮಿ ಹಾಲನ್ನು ಸೊಗಸಾಗಿ ಮಾಡಿಕೊಂಡು, ನಿತ್ಯದ ಆಹಾರದೊಂದಿಗೆ ಸೇವಿಸಿದೆ. ಹೊಟ್ಟೆ ತುಂಬಿತು; ಅಜೀರ್ಣವಾಗಲಿಲ್ಲ!

ದೀಪಾವಳಿ ಎನ್ನುತ್ತಲೂ ನೆನಪಾಯಿತು. ಇಲ್ಲಿಯ ಭಾರತೀಯ ವಿದ್ಯಾರ್ಥಿ ಸಂಘದವರು ದೀಪಾವಳಿಯ ಹಬ್ಬವನ್ನು ಆಚರಿಸಲು ಏರ್ಪಾಡು ಮಾಡುತ್ತಿದ್ದಾರೆಂದು ಹಿಂದಿನ ಕಾಗದವೊಂದರಲ್ಲಿ ನಾನು ಬರೆದಿದ್ದೆನಲ್ಲವೆ. ಅದನ್ನು ಅವರು, ೧೮ನೆಯ ತಾರೀಖಿನಂದು ಆಚರಿಸಿದ ವಿಷಯವನ್ನು ಕೊಂಚಮಟ್ಟಿಗೆ ವರ್ಣಿಸುತ್ತೇನೆ. ನಮ್ಮ ಜನರಲ್ಲಿ ಅನೇಕರಿಗೆ ಸ್ವಭಾವಜನ್ಯವಾದ ಅವ್ಯವಸ್ಥೆ ಅವರನ್ನು ಈ ದೇಶಕ್ಕೂ ಹಿಂಬಾಲಿಸಿ ಬರುವಂತೆ ತೋರುತ್ತದೆ. ಸಂಘದ ಸಾಮಾನ್ಯ ಸಭೆಯಲ್ಲಿ, ಉತ್ಸವದ ವರ್ತಮಾನವನ್ನು

ಎಲ್ಲ ಸದಸ್ಯರಿಗೂ ಮೊದಲೇ ಮುಟ್ಟಿಸುವುದಾಗಿ ಭರವಸೆ ಕೊಟ್ಟಿದ್ದರು; ಇಷ್ಟ ಮಿತ್ರರನ್ನು ಜತೆಗೆ ಕರೆತರಬಹುದೆಂದೂ, ಈ ಅಂಶವನ್ನು ಆಹ್ವಾನಪತ್ರದಲ್ಲಿ ಖಚಿತವಾಗಿ ಉಲ್ಲೇಖಿಸುವುವೆಂದೂ ಭರವಸೆ ಕೊಟ್ಟಿದ್ದರು. ಆದರೆ ಹಬ್ಬ ಹತ್ತಿರಬಂದರೂ ಅದರ ಸುದ್ದಿಯೇ ನನಗೆ ಬರಲಿಲ್ಲ. ಇದರ ಮೇಲೆ ಸದಸ್ಯತ್ವ ಚಂದಾಹಣ ಎರಡು ಡಾಲರನ್ನು ಎಲ್ಲರಿಗಿಂತ ಮೊದಲು ಕೊಟ್ಟಿದ್ದವನು ನಾನೇ. (ನನ್ನಂತೆಯೇ ಅನೇಕರಿಗೆ ಆಹ್ವಾನಪತ್ರ ಹೋಗಿರಲಿಲ್ಲವೆಂದು ಆಮೇಲೆ ತಿಳಿಯಿತು.) ಆದರೂ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. 'ನೋಟಿಸ್ ಬೋರ್ಡ್'ಗಳಲ್ಲಿ ಪ್ರಕಟನೆಯನ್ನು ಹಚ್ಚಿದ್ದರು. ಈ ವಿಷಯದಲ್ಲಿ ಬಿಗುಮಾನ ಪಟ್ಟರೆ ಪ್ರಯೋಜನವಿಲ್ಲವೆಂದು ನಿರ್ಧರಿಸಿ, ಆ ರಾತ್ರಿ ಹೊತ್ತಿಗೆ ಸರಿಯಾಗಿ (ಎಂಟೂವರೆ ಘಂಟೆಗೆ : ಇದನ್ನು "ಪ್ರಕಟನೆ" ಹೇಗೂ ಘೋಷಿಸಿತ್ತಷ್ಟೆ!) ಸಭಾಭವನಕ್ಕೆ ನಾನು ಹೋದೆ. ನಾನು ಆಹ್ವಾನಿಸಿದ್ದ ನಮ್ಮ ಪ್ರೊಫೆಸರ್ ಮಿತ್ರರೊಬ್ಬರು ಕೂಡ ಸಭೆಗೆ ಬಂದಿದ್ದರು—ಅವರು ಸ್ವಲ್ಪ ಹೊತ್ತುಮಾಡಿಕೊಂಡು ಬಂದರು.

ಉತ್ಸವದ ಏರ್ಪಾಡು ಮಾತ್ರ ಸಮರ್ಪಕವಾಗಿತ್ತು. ರಮಣೀಯವಾಗಿತ್ತು. ಇಲ್ಲಿಯ ಕ್ರಿಶ್ಚಿಯನ್ ಅಸೋಸಿಯೇಷನ್ ಭವನದ ಮಹಡಿಯೇ ದೀಪಾವಳಿಯ ಉತ್ಸವದ ಸ್ಥಳ. ಭವನದ ತಲೆಬಾಗಿಲಲ್ಲೇ ಸುಂದರವಾದ, ರಂಗೋಲಿಯ ರೀತಿಯ ಚಿತ್ರಗಳನ್ನು ಬರೆದಿದ್ದರು. ದೇವನಾಗರೀ ಲಿಪಿಯಲ್ಲಿ "ಓಂ" ಕೂಡ ಸೇರಿತ್ತು. (ಕ್ರೈಸ್ತಭವನ ಪುನೀತವಾಯಿತು ಎಂದುಕೊಂಡೆ!) ಮೆಟ್ಟಿಲು ಸಾಲಿನ ಬಳಿ, ಮತ್ತು ಮಹಡಿಯ ಮೇಲೆ ಎಲ್ಲೆಲ್ಲೂ ಬಣ್ಣದ ಕಾಗದದ ತೋರಣಗಳು; ಮನೋಹರವಾದ ಅಲಂಕಾರ ಚಿತ್ರಗಳು ವೇದಿಕೆಯ ಮೇಲೂ ಹಾಗೆಯೇ. ಅದರಂತೆಯೇ ಬಣ್ಣ ಬಣ್ಣದ ವಿದ್ಯುಚ್ಛಕ್ತಿಯ ದೀಪದ ಗೊಂಚಲುಗಳು. ಇನ್ನೊಂದು ವಿಷಯವನ್ನು ಮೊದಲೇ ಹೇಳಬೇಕಾಗಿತ್ತು. ಬಿಳಿಯ ಅಮೆರಿಕನ್ ಹುಡುಗಿಯರಿಬ್ಬರು ನಮ್ಮ ದೇಶದ ಸೀರೆ ಕುಪ್ಪಸಗಳನ್ನು ಧರಿಸಿ ಮುಂಬಾಗಿಲಲ್ಲೇ ಅತಿಥಿಗಳನ್ನು ನಗೆಮೊಗದಿಂದ ಸ್ವಾಗತಿಸಿ ಅವರಿಗೆ ಕಾರ್ಯಕ್ರಮದ ಪಟ್ಟಿಕೆಗಳನ್ನು ಹಂಚುತ್ತಿದ್ದರು. ತುಟಿಯ ಹಚ್ಚುರಂಗು (Lipstick), ಕತ್ತರಿಸಿದ ತಲೆಗೂದಲು (bobbed hair) ಇವನ್ನು ಬಿಟ್ಟರೆ ನಮ್ಮ ಹುಡುಗಿಯರಂತೆಯೇ ಕಾಣಿಸುತ್ತಿದ್ದರು. (ನಮ್ಮ ದೇಶದಲ್ಲಿ ಕೂಡ ಬೊಂಬಾಯಿಯಂಥ ನಗರಗಳಲ್ಲಿ ಇಂಥ "ಅಲಂಕಾರವುಳ್ಳ" ಹುಡುಗಿಯರನ್ನು ನೋಡಿರುವೆಯಷ್ಟೆ) ಒಬ್ಬ ಹುಡುಗಿ ಹಣೆಗೆ ಕುಂಕುಮದ ತಿಲಕವನ್ನು ಕೂಡ ಇಟ್ಟುಕೊಂಡಿದ್ದಳು. ಹೀಗೆಯೇ ಇನ್ನೂ ಅನೇಕಮಂದಿ ಅಮೆರಿಕನ್ ಹುಡುಗಿಯರು ಈ ದಿನದ ಮಟ್ಟಿಗೆ ಉಡುಪಿನಲ್ಲಿ, ಉತ್ಸಾಹದಲ್ಲಿ ಭಾರತೀಯರಾಗಿ ಉತ್ಸವಕ್ಕೆ ಕಳೆಗೂಡಿಸಿದರು. ಫಿಲಡೆಲ್ಫಿಯದಲ್ಲಿ ನಮ್ಮ ದೇಶದ ಹೆಣ್ಣು ಮಕ್ಕಳು ಹಲವು ಮಂದಿ ಇಲ್ಲ; ಇಷ್ಟೊಂದು ಸೀರೆ ಕುಪ್ಪಸಗಳು ಹೇಗೆ ಬಂದುವೋ! ಆದರೆ ನಮ್ಮ ಒಬ್ಬೊಬ್ಬ ಮಹಿಳೆಯ ಹತ್ತಿರವೂ ಏನಿಲ್ಲವೆಂದರೂ ಒಂದು "ಡಜನ್" ಸೀರೆಯಾದರೂ ಇರುತ್ತದೆಯಲ್ಲವೆ? (ಅನುಕೂಲಸ್ಥರಾಗಿರುವವರ ಹತ್ತಿರ ಎರಡು "ಡಜನ್" ಇರುವುದೂ ಅಪೂರ್ವವಲ್ಲ!) ಅವನ್ನೆಲ್ಲ ಇಲ್ಲಿನ ನಮ್ಮ ದೇಶದ ಹುಡುಗಿಯರು ಹೊರಕ್ಕೆ ತೆಗೆದು ಅಮೆರಿಕನ್ ಹುಡುಗಿಯರಿಗೆ ತಾತ್ಕಾಲಿಕವಗಿ ಉಡಿಸಿದ್ದಂತೆ ತೋರುತ್ತದೆ. ಮೂರು

ನಾಲ್ಕು ಮಂದಿ ಭಾರತೀಯ ಮಹಿಳೆಯರಂತೂ ಸ್ವದೇಶದ ಅಲಂಕಾರದಲ್ಲೇ ಬಂದಿದ್ದರು. ಯಾರೂ ಹೂವನ್ನು ಮುಡಿದಿರಲಿಲ್ಲ ಎಂಬುದೊಂದೇ ನ್ಯೂನತೆ. ಆದರೆ ಇಲ್ಲಿಯ ಹುಡುಗಿಯರು ಸಾಮಾನ್ಯವಾಗಿ ಕೂದಲನ್ನು ಕತ್ತರಿಸಿಕೊಂಡಿರುವುದರಿಂದ, "ಜಡೆಯಿಲ್ಲದೆ ಹೆರಳಿಲ್ಲದೆ, "ಕ್ರಾಪಿ"ಗೆ ಹೂವು ಮುಡಿಸುವುದು ಹೇಗೆ? ಅಲ್ಲದೆ ಇಲ್ಲಿ ಹೂವಿಗೆ ಬಹಳ ಬೆಲೆ! ಕಟ್ಟಿದ ಹೂವಂತೂ ಸಿಕ್ಕಲೇ ಆರದು.

ಹೆಂಗಸರ ಉಡುಪಿಗೆ ತೀರ ವಿರುದ್ಧವಾಗಿತ್ತು ನಮ್ಮ ದೇಶದ ಗಂಡಸರ ಉಡುಪು. ಅಮೆರಿಕನ್ನರೇನೋ ತಮ್ಮ ಉಡುಪಿನಲ್ಲಿ ಬರುವುದು ಸರಿ; ಆದರೆ ಭಾರತೀಯರಲ್ಲಿ ಕೂಡ ಹೆಚ್ಚು ಕಡಮೆ ಎಲ್ಲರೂ ಕಾಲರ್ ಟೈಗಳನ್ನು ಧರಿಸಿದ್ದವರೇ. ನಾನು ನನ್ನ ಮುಚ್ಚುಕೊರಳಿನ ಕಪ್ಪು ಅಂಗಿ, ಬಿಳಿಯ ಫ್ಲಾನಲ್ಲಿನ ಷರಾಯಿ ಇವನ್ನು ಆ ದಿನ ಪೆಟ್ಟಿಗೆಯಿಂದ ತೆಗೆದು ಧರಿಸಿದ್ದೆ. ನನ್ನ ಹಾಗೆ ಇನ್ನು ಮೂರು ನಾಲ್ಕು ಮಂದಿ ಮಾತ್ರ ಈ ಬಗೆಯ ಉಡುಪಿನಲ್ಲಿದ್ದರು. ಒಬ್ಬಾತ—ಆತ ಬಂಗಾಳಿ—ಧೋತ್ರವನ್ನುಟ್ಟು ಜುಬ್ಬವನ್ನು ಧರಿಸಿಕೊಂಡು ಬಂದಿದ್ದ; ವೇದಿಕೆಯನ್ನೂ ಹತ್ತಿ ಕಾರ್ಯಕ್ರಮದ ಮೇರೆಗೆ ಒಂದು ಹಿಂದೀ ಹಾಡನ್ನೂ ಹಾಡಿದ. (ಆತನ ಧೈರ್ಯ ನನಗೂ ಇರಬಾರದಾಗಿತ್ತೆ; ಆ ಒಂದು ದಿನವಾದರೂ ಲಕ್ಷಣವಾಗಿ ಕಚ್ಚೆ ಪಂಚೆಯುಟ್ಟು ಫಿಲಡೆಲ್ಫಿಯದ ನಿವಾಸಿಗಳ ಮುಂದೆ ಸುಳಿದಾಡುವ ಬುದ್ಧಿ ಬರಬಾರದಾಗಿತ್ತೆ. ನಾನು ಊರಿನಿಂದ ತಂದಿರುವ ಒಂಟಿ ಪಂಚೆಯನ್ನು ನನ್ನ ಕೊಠಡಿಯೊಳಗಡೆಯೇ ದಟ್ಟಿಯುಟ್ಟು ಸವೆಯಿಸುತ್ತಿದ್ದೇನೆ!)

ಕಾರ್ಯಕ್ರಮದಲ್ಲಿ, ಈ ದೇಶದ Mr. Roy J. Mc. Corkel ಎಂಬವರ "India, Land of Promise" ಎಂಬ ಭಾಷಣ ಒಂದು ಮುಖ್ಯಾಂಶವಾಗಿತ್ತು. ಆತ ಭಾರತಕ್ಕೆ ಎರಡುಬಾರಿ ಹೋಗಿಬಂದವರು; ಅಲ್ಲಿನ ವಿಷಯವನ್ನು ತಕ್ಕಮಟ್ಟಿಗೆ ತಿಳಿದುಕೊಂಡಿದ್ದಾರೆ. ನಮ್ಮ ದೋಷ, ಗುಣ ಎರಡನ್ನೂ ಹೇಳಿದರು. ಭಾಷಣ ಒಟ್ಟಿನ ಮೇಲೆ ಚೆನ್ನಾಗಿತ್ತು. ಆ ಬಳಿಕ, ಗಾಯನ, ನರ್ತನ; ತಾಜ್‌ಮಹಲ್, ಭಾರತೀಯ ಸ್ತ್ರೀಯರ ಉಡುಪಿನ ವೈವಿಧ್ಯ ಇವನ್ನು ತೋರಿಸುವ "ಡಾಕ್ಯುಮೆಂಟರಿ" ಚಿತ್ರಗಳು. ಕೊನೆಯಲ್ಲಿ ಉಪಾಹಾರ.

ಅಂದಿನ ಕಾರ್ಯಕಲಾಪದಲ್ಲಿ ಎರಡು ಅಂಶಗಳು ಇನ್ನೂ ಮನಸ್ಸಿನಲ್ಲಿ ನಿಂತಿವೆ. ಪ್ರೊ. ಷಿಗುರ ಓಯೆ (Sigura Oae) ಎಂಬ ಜಪಾನಿನ ವಿದ್ವಾಂಸರೊಬ್ಬರು ರವೀಂದ್ರನಾಥ ಠಾಕೂರರ ಗೀತವೊಂದನ್ನು ಆಕರ್ಷಕವಾಗಿ ಹಾಡಿದರು. ಆತನಿಗೆ ಬಂಗಾಳಿ ಬರುವುದಿಲ್ಲವಂತೆ; ಆದರೂ ಹಾಡಿನ ಧಾಟಿಯನ್ನು ಚೆನ್ನಾಗಿ ಹಿಡಿದಿದ್ದರು. ಇನ್ನೊಂದು ಅಂಶ ವೀಣಾವಾದನ. ನಮ್ಮ ದಕ್ಷಿಣ ಭಾರತದ ಒಬ್ಬಾಕೆ ವೀಣೆಯನ್ನು ಹತ್ತು ಹನ್ನೆರಡು ನಿಮಿಷ ಕಾಲ ಸೊಗಸಾಗಿ ನುಡಿಸಿದರು. ಇಲ್ಲಿ ಈಕೆ ಪಿಎಚ್.ಡಿ. ಪರೀಕ್ಷೆಗಾಗಿ ಅಭ್ಯಾಸಮಾಡುತ್ತಿದ್ದಾರಂತೆ. ಈ ಭಾರಿಯ ಗಾತ್ರದ ವೀಣೆಯನ್ನು ಭಾರತದಿಂದ ಈಕೆ ತಂದಿರುವುದು ಮಾತ್ರವಲ್ಲದೆ ಇಷ್ಟು ಇಂಪಾಗಿ ನುಡಿಸಿದ್ದೂ ನನಗೆ ಬೆರಗುಂಟು ಮಾಡಿತು. ವೀಣೆಯ ನಿನಾದವನ್ನು, ಕರ್ಣಾಟಕ ಸಂಗೀತದ ರಾಗಾಲಾಪನೆ ಮಧ್ಯಮ ಕಾಲಗಳನ್ನು ಈ ಫಿಲಡೆಲ್ಫಿಯ ನಗರದಲ್ಲಿ ಕೇಳಬಹುದೆಂದು ನಾನು ಕನಸಿನಲ್ಲಿ ಕೂಡ

ಭಾವಿಸಿರಲಿಲ್ಲ. ಆ ಹತ್ತು-ಹನ್ನೆರಡು ನಿಮಿಷಕಾಲ ನಾನು ಧಾರವಾಡದಲ್ಲಿ ನಮ್ಮ "ಸಂಗೀತಗೋಷ್ಠಿ"ಯ ಸಭೆಯಲ್ಲಿ ಬಂಧುಮಿತ್ರರ ನಡುವೆ ಇದ್ದೇನೋ ಎನೋ ಎನ್ನಿಸಿತು. ಆದರೆ ಆ ಕನಸು ವೀಣೆಯ ಸ್ವನ ನಿಲ್ಲುತ್ತಲೇ ತಾನೂ ಮುಗಿಯಿತು!

ಉಪಾಹಾರಕ್ಕೆ ಸ್ವಲ್ಪ ಖಾರ ಹಚ್ಚಿದ ಅವಲಕ್ಕಿಯ ಪುರಿ (ಇದು ಒಂದು ಬಗೆಯ "ಚೂಡಾ" ಎನ್ನಬಹುದು), ಎರಡು ಕರಿದ ಸೀ ತಿಂಡಿಗಳು, ಹಣ್ಣಿನ ರಸ—ಇವನ್ನು ಒದಗಿಸಿದ್ದರು. ಗುಂಪಿನ ನಡುವೆ ಅಮೆರಿಕನ್ನರು ಕೆಲವು ಮಂದಿ ನನ್ನನ್ನು ಈ ತಿಂಡಿಗಳ ಹೆಸರೇನು ಎಂದು ಕೇಳಿದರು. ನನಗೆ ಗೊತ್ತಿದ್ದರೆ ತಾನೆ; (ಅವು ಉತ್ತರ ಭಾರತದ ತಿಂಡಿಗಳು.) ಸೀ, ಖಾರ ಈ ರುಚಿ ಮಾತ್ರ ಗೊತ್ತು. ಒಂದನ್ನು ಸ್ವಲ್ಪ ಸೀಯಿಸಿದ್ದಂತೆ ತೋರಿತು. ಅವಲಕ್ಕಿಯ ಪುರಿ ಅಮೆರಿಕನ್ನರಿಗೂ ಗೊತ್ತು; ಅದನ್ನು puffed rice ಎನ್ನುತ್ತಾರೆ.

ರಾತ್ರಿ ಮನೆಗೆ ಹಿಂದಿರುಗಿದಾಗ ಹನ್ನೊಂದೂವರೆ ಆಗಿತ್ತು. ಬೆಳಗ್ಗೆ ಎದ್ದು ನೋಡಿದಾಗ ಮೊದಲಬಾರಿಗೆ ಹಿಮ ಸುರಿದಿತ್ತು!...

ಪ್ರವಾಸಿಯ ಪತ್ರ-ದಿನಚರಿಗಳಿಂದ

[ನ್ಯೂಯಾರ್ಕಿನ ರಾಕಿಫೆಲರ್ ಪ್ರತಿಷ್ಠಾನದವರ ಸಹಾಯದಿಂದ ನಾನು ಪಶ್ಚಿಮ ದೇಶಗಳಲ್ಲಿ ಪ್ರವಾಸ ದಲ್ಲಿದ್ದಾಗ, ನನ್ನ ಯೋಗಕ್ಷೇಮವನ್ನೂ ಅಲ್ಲಿಯ ಸ್ಥಿತಿಗತಿಗಳನ್ನೂ ಕುರಿತು ಸ್ವದೇಶದಲ್ಲಿದ್ದ ಮನೆಯವರಿಗೆ, ಮಿತ್ರರಿಗೆ ಪತ್ರಗಳನ್ನು ಆಗಾಗ ಬರೆಯುತ್ತಿದ್ದುದುಂಟು; ದಿನಚರಿಯಲ್ಲಿ ಕೆಲವು ಅಂಶಗಳನ್ನು ಆಗಾಗ ಗುರುತು ಹಾಕುತ್ತಿದ್ದುದೂ ಉಂಟು. ಆ ಬರವಣಿಗೆಯಲ್ಲಿ ಸಾಮಾನ್ಯ ವಾಚಕರಿಗೆ ರುಚಿಸಬಹುದಾದ ಕೆಲವು ಖಂಡಗಳನ್ನು ಎತ್ತಿ ತೆಗೆದು, 'ಪ್ರವಾಸಿಯ ಪತ್ರಗಳಿಂದ ಕೆಲವು ತುಣುಕುಗಳು' ಎಂಬ ಹೆಸರಿನಲ್ಲಿ 'ಪ್ರಜಾಮತ'ದ ೧೯೬೩ನೆಯ ವರ್ಷದ "ದೀಪಾವಳಿ ಸಂಚಿಕೆ"ಯಲ್ಲಿ ಪ್ರಕಾಶಪಡಿಸಿದ್ದೆನು. ಪ್ರಸ್ತುತ ಲೇಖನ ಅದರ ಮುಂದಿನ ಭಾಗವೆನ್ನಬಹುದು.]

೧. ವಸತಿ, ಊಟ ತಿಂಡಿ

ಆ್ಯನ್ ಆರ್ಬರ್, ಮಿಷಿಗನ್,
ಜೂನ್ ೨೯, ಜುಲೈ ೮, ೧೯೫೫

ಇಲ್ಲಿಗೆ ಬಂದ ಹೊಸದರಲ್ಲಿ ನಾನು "ಮಿಷಿಗನ್ ಯೂನಿಯನ್" ಎಂಬ ವಿಶ್ವವಿದ್ಯಾನಿಲಯದ ವಸತಿಗೃಹದಲ್ಲಿ ಇಳಿದುಕೊಂಡಿದ್ದೆ. ಅದರಲ್ಲಿ ಒಂದು ಕೊಠಡಿಗೆ ಬಾಡಿಗೆ ದಿವಸಕ್ಕೆ ಮೂರು ಡಾಲರ್ ಎಂದು ಮೊದಲು ತಿಳಿಯಬಂದಿತ್ತು. ಇಲ್ಲಿಗೆ ಬಂದ ಮೇಲೆ ವಿಚಾರಿಸಿದ್ದರಲ್ಲಿ, ಅದು ರಿಯಾಯತಿಯ ದರವೆಂದೂ

ನಾನು ದಿನವೊಂದಕ್ಕೆ ಐದೂವರೆ ಡಾಲರ್ ಕೊಡಬೇಕೆಂದೂ ಹೇಳಿದರು. ಆದರೂ ಬೇರೆ ಕಡೆ ನಿವಾಸವನ್ನು ಗೊತ್ತುಮಾಡಿಕೊಳ್ಳುವವರೆಗೆ ಅಲ್ಲೇ ಇರಬೇಕಾಯಿತು. ಈ ನಡುವೆ ಇಲ್ಲಿಯ ಬೀದಿಗಳಲ್ಲಿ ಒಂಟಿಯಾಗಿಯೂ ಜೊತೆಗಾರರ ಸಂಗಡವೂ ಕೊಠಡಿಯನ್ನು ಹುಡುಕಿಕೊಂಡು ಅಲೆದದ್ದಾಯಿತು. ಸುಮಾರು ಮೂವತ್ತೆರಡು ವರ್ಷದ ಕೆಳಗೆ, ನಾನು ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ, ಮೈಸೂರಿನ ಬೀದಿಗಳಲ್ಲಿ ವಸತಿಯನ್ನು ಹುಡುಕಿಕೊಂಡು ಅಲೆದದ್ದು ನೆನಪಿಗೆ ಬಂತು. ಅಂತೂ ಎರಡೂ ದಿನದ ಕೆಳಗೆ ಒಂದು ಅಪಾರ್ಟ್‌ಮೆಂಟ್ (apartment) ಸಿಕ್ಕಿತು. ಓದಿಕೊಳ್ಳುವ ಕೊಠಡಿ, ಅದಕ್ಕೆ ಸೇರಿದಂತೆ ಮಲಗುವ ಕೋಣೆ, ಪುಟಾಣಿ ಅಡಿಗೆ ಮನೆ (Kitchenette)—ಇಷ್ಟು ಇದರಲ್ಲಿ ಇವೆ. ಪಕ್ಕದಲ್ಲಿಯೇ ಸ್ನಾನ-ಶೌಚಗಳ ಕೋಣೆ. ಇದೆ. ಈ ಮನೆಯೊಳಗೆ ನನ್ನಂತೆಯೇ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಮಾಡುವ ಇನ್ನೂ ನಾಲ್ಕು ಮಂದಿ ಬಾಡಿಗೆದಾರರಿಗೂ ಇದರ ಉಪಯೋಗದ ಸಮಾನಾವಕಾಶ ಉಂಟು. ನನ್ನ ಅಪಾರ್ಟ್‌ಮೆಂಟಿಗೆ ಬಾಡಿಗೆ ವಾರಕ್ಕೆ ಹನ್ನೆರಡು ಡಾಲರ್‌ಗಳು; ಇಲ್ಲಿಯ ದರಗಳ ದೃಷ್ಟಿಯಿಂದ ಇದೇನೂ ಹೆಚ್ಚಲ್ಲ ಎನ್ನುತ್ತಾರೆ. ಓದುವ ಕೊಠಡಿ ಚೆನ್ನಾಗಿದೆ; ಇದರಲ್ಲಿ ಕುರ್ಚಿಗಳು, ಸೋಫಾ, ಬೇರೆ ಬೇರೆ ಕಡೆಗಳಲ್ಲಿ ದೀಪಗಳು—ಎಲ್ಲಾ ಇವೆ. ದೊಡ್ಡ ಕುಕ್ಕೆಯಂಥ ಒಂದು ಆರಾಮ ಕುರ್ಚಿ ಬೇರೆ ಇದೆ! ನೋಡಿದಾಗ ಮನಸ್ಸು ಅಳುಕಿದರೂ ಅದರಲ್ಲಿ ಕುಳಿತುಕೊಂಡ ಮೇಲೆ ಹಾಯಾಗಿರುತ್ತದೆ. ಅದಕ್ಕೆ ಹಾಕಿರುವ ರಕ್ತಗುಂಪು ಬಣ್ಣದ ಬಟ್ಟೆ ಮಾತ್ರ ಕಣ್ಣನ್ನು ಕುಕ್ಕುತ್ತದೆ.

ಮಲಗುವ ಕೋಣೆಯಲ್ಲಿ ಕೋಟು ಷರ್ಟು ಷರಾಯಿಗಳನ್ನು ತಗುಲುಹಾಕಲು ಪ್ರತ್ಯೇಕವಾದ ವ್ಯವಸ್ಥೆ, ಮುಖ ತೊಳೆದುಕೊಳ್ಳಲು ಬಿಸಿನೀರಿನ ತಣ್ಣೀರಿನ ಬೇರೆ ಬೇರೆ ಬೇರೆ ನಲ್ಲಿಗಳಿರುವ Wash basion (ಇದನ್ನು ಕನ್ನಡದಲ್ಲಿ ಏನೆಂದು ಕರೆಯಬೇಕು? "ತೊಳೆಯುವ ಬೋಗುಣಿ" ಎಂಬ ಭಾಷಾಂತರ ನನಗೆ ಹಿಡಿಸಲಿಲ್ಲ!)—ಇವೂ ಉಂಟು. ಇಷ್ಟ ಬಂದರೆ ಎರಡು ನಲ್ಲಿಗಳನ್ನೂ ಜೊತೆಗೇ ತಿರುಗಿಸಿ ಬಿಸಿನೀರನ್ನು ಹದಮಾಡಿಕೊಳ್ಳ ಬಹುದು. ಹಾಸಿಗೆ ಮಾತ್ರ ಮೆತ್ತಗೆ ಅಚ್ಚುಕಟ್ಟಾಗಿದ್ದರೂ ರೈಲ್ವೆ ಕಂಪಾರ್ಟ್‌ಮೆಂಟನ್ನು ನೆನಪಿಗೆ ತರುತ್ತದೆ : ಒಂದರ ನೆತ್ತಿಯ ಮೇಲೊಂದರಂತೆ ಎರಡು ಹಾಸಿಗೆ ಚೌಕಟ್ಟುಗಳು! ಆದರೆ ಇಲ್ಲಿ ಈಗ ವಾಸಮಾಡುವವನು ನಾನೊಬ್ಬನೇ. ದುಪ್ಪಟ, ರಗ್ಗು, ಟವೆಲುಗಳು ಇವೆಲ್ಲವನ್ನೂ ಮನೆಯ ಒಡತಿಯೇ ಒದಗಿಸಿ ವಾರವಾರಕ್ಕೂ ಬದಲಾಯಿಸುತ್ತಾಳೆ. ಅಡಿಗೆಯ ಕೋಣೆಯೂ ವರ್ಣಿಸುವ ಹಾಗೆ ಇದೆ. ಅಷ್ಟೊಂದು ಕಿರಿದಾದ ಜಾಗದಲ್ಲಿ ವಿದ್ಯುಚ್ಛಕ್ತಿಯ ಒಲೆ, ರೆಫ್ರಿಜಿರೇಟರ್ (Refrigirator, "ಶೀತಕ"), ತಟ್ಟೆಬಟ್ಟಲು, ಚಮಚ ಇತ್ಯಾದಿಗಳನ್ನೆಲ್ಲ ಓರಣವಾಗಿ ಇಡಲು ಖಾನಿ ಕಪಾಟುಗಳು, ಅಂಗಡಿಯಿಂದ ತಂದ ಡಬ್ಬಿಗಳ ಮುಚ್ಚಳವನ್ನು ಕತ್ತರಿಸಿ ತೆಗೆಯಲು ಹೊಸ ನಮೂನೆಯ ಒಂದು ಸಲಕರಣೆ (ಇದು ಮುಚ್ಚಳದ ತಗಡನ್ನು ನೇರವಾಗಿ ಕತ್ತರಿಸಿ ಡಬ್ಬಿಯೊಳಕ್ಕೆ ಅದು ಬೀಳದಂತೆ ತಾನೇ ಹಿಡಿದುಕೊಳ್ಳುತ್ತದೆ; ಡಬ್ಬಿಯೊಂದೇ ನಮ್ಮ ಕೈಯಲ್ಲಿ ನಿಲ್ಲುತ್ತದೆ!)—ಇದನ್ನೆಲ್ಲಾ ನೋಡಿದರೆ ದಿಗ್ಭ್ರಮೆಯಾಗುತ್ತದೆ.

ಈ ಮನೆಯ ಯಜಮಾನತಿ ತುಂಬ ಒಳ್ಳೆಯ ಸ್ವಭಾವದ ವೃದ್ಧೆ; ಈಕೆಗೆ ದೊಡ್ಡ ವಯಸ್ಸಿನ ಮಗ ಇದ್ದಾರೆ; ಆತ ಬೇರೆ ಯಾವುದೋ ಊರಿನಲ್ಲಿ ಕೆಲಸದಲ್ಲಿ ಇದ್ದಾರೆ. ಈಕೆ ಒಬ್ಬಳೇ ಈ ಮನೆಯ ವಹಿವಾಟನ್ನು ನೋಡಿಕೊಳ್ಳುವುದಲ್ಲದೆ ಇನ್ನೂ ಒಂದು ಮನೆಯನ್ನು ಸ್ವಂತ ಮೇಲುವಿಚಾರಣೆಯಲ್ಲಿ ಕಟ್ಟಿಸುತ್ತಿದ್ದಾಳೆ. ವೃದ್ಧಾಪ್ಯದಲ್ಲೂ ಆಕೆಗಿರುವ ಕಾರ್ಯೋತ್ಸಾಹವನ್ನು ನೋಡಿದರೆ ನನಗೆ ನಾಚಿಕೆಯಾಗುತ್ತದೆ. "ಇದೇನು, ಈ ವಯಸ್ಸಿನಲ್ಲೂ ಹೀಗೆ ದುಡಿಯುತ್ತೀರಿ?" ಎಂದು ನಾನು ಕೇಳಿದಾಗ, "I suppose I get a Kick out of it" ("ಅದರಿಂದ ನನಗೆ ಪುಟಿಯುವ ಹುರುಪು ಬರುತ್ತದೆಂದು ತೋರುತ್ತದೆ") ಎಂದು ಉತ್ತರಕೊಟ್ಟಳು!

ಈ ಅಪಾರ್ಟ್‌ಮೆಂಟ್ ಸಿಕ್ಕಿದ್ದು ನನಗೆ ತುಂಬ ಅನುಕೂಲವಾಯಿತು. ಬೆಳಗಿನ ಉಪಹಾರಕ್ಕಾಗಿ ಹೊರಗಡೆ ಹೋಗಿಬರುವ ಶ್ರಮ ತಪ್ಪಿತು. Instant Coffee ("ತತ್‌ಕ್ಷಣದ ಕಾಫಿ") ಎಂಬುದನ್ನು ಇಲ್ಲಿ ಮಾರುತ್ತಾರೆ. ಬಟ್ಟಲಿಗೆ ಒಂದು ಚಮಚ ಪುಡಿ ಹಾಕಿ, ಮೇಲೆ ಬಿಸಿನೀರು ಸುರಿದು, ಸಕ್ಕರೆಯ ತುಂಡಗಳನ್ನು ಇಳಿಬಿಟ್ಟು, ಕ್ರೀಮ್ ಸೇರಿಸಿದರೆ ಆಯಿತು—ಹದವಾದ ಕಾಫಿ ತತ್‌ಕ್ಷಣದಲ್ಲೇ—ಸಿದ್ಧವಾಗುತ್ತದೆ. ಬೆಳಗಿನ ಉಪಾಹಾರಕ್ಕೂ ಯೋಚನೆಯಿಲ್ಲ. ಮುಸುಕಿನ ಜೋಳದ ಅವಲಕ್ಕಿಗೆ (Cornflake) ಸಕ್ಕರೆ ಹಾಲು ಬೆರಸಿ ಸೇವಿಸುವುದು; ಎರಡು ಹಲ್ಲೆ ಬ್ರೆಡ್ಡನ್ನು ಟೋಸ್ಟರಿನಲ್ಲಿ (toster) ಬಿಸಿಮಾಡಿ ಬೆಣ್ಣೆ, ಕ್ರೀಮ್ ಚೀಸ್ ಅಥವಾ ಜಾಮ್ ಸೇರಿಸಿಕೊಂಡು ತಿನ್ನುವುದು, ಒಂದು ಬಟ್ಟಲು ಕಿತ್ತಳೆ ಹಣ್ಣಿನ ರಸಕುಡಿಯುವುದು. ಬೆಳಿಗ್ಗೆ ಹೊಟ್ಟೆ ತುಂಬಲು ಇಷ್ಟು ಯಥೇಚ್ಛವಲ್ಲವೆ. ಮಧ್ಯಾಹ್ನ ಅಥವಾ ಸಂಜೆ ಒಪ್ಪೊತ್ತು ನಾನೇ ಅಡಿಗೆ ಮಾಡಿಕೊಳ್ಳುತ್ತೇನೆ. (ಇನ್ನೊಂದು ಹೊತ್ತು ರೆಸ್ಟೋರಾಂಟಿಗೆ ಹೋಗಿ ಬರುತ್ತೇನೆ.) ಇಲ್ಲಿ minute rice ("ನಿಮಿಷದ ಅಕ್ಕಿ") ಎನ್ನುವುದು ದೊರೆಯುತ್ತದೆ. ಇದನ್ನು ತೊಳೆಯಬೇಕಾಗಿಲ್ಲ. ಎಸರಿಟ್ಟು ಕುದಿಸಬೇಕಾಗಿಲ್ಲ. ಸ್ವಲ್ಪ ಕಡಮೆ ಒಂದು ಬಟ್ಟಲು ಅಕ್ಕಿಗೆ ಒಂದು ಬಟ್ಟಲು ಕುಡಿಯುವ ನೀರನ್ನು ಸೇರಿಸಿ ಹದಿಮೂರು ನಿಮಿಷ ("ಒಂದು" ನಿಮಿಷ ಅಲ್ಲ!) ಮುಚ್ಚಿಟ್ಟಿದ್ದರೆ ತಾನಾಗಿಯೇ ಅನ್ನವಾಗುತ್ತದೆ. ಇದಕ್ಕೆ ವ್ಯಂಜನ ಪರಿಕರವೋ ಎಂದರೆ, ಮೊದಲೇ ಕತ್ತರಿಸಿ ಪಾಕ ಮಾಡಿ ಡಬ್ಬಗಳಲ್ಲಿ ತುಂಬಿ ಭದ್ರಪಡಿಸಿ ಮಾರುವ ಕಾಯಿಪಲ್ಯಗಳು (Pre-cooked Vegetables) ಅಂಗಡಿಗಳಲ್ಲಿ ದೊರೆಯುತ್ತವೆ. ಡಬ್ಬಿಯನ್ನು ಒಡೆದು ಕಾಯಿಪಲ್ಯವನ್ನು ಒಂದು ಪಾತ್ರೆಗೆ ಸುರಿದುಕೊಂಡು, ಮೊದಲೇ ಸಿದ್ಧವಾದ ಒಗ್ಗರಣೆ, ಮೆಣಸಿನ ಪುಡಿ, ಖಾರದ ಪುಡಿ, ಜೀರಿಗೆ ಪುಡಿ, ಮಸಾಲೆ ಪುಡಿ ಇತ್ಯಾದಿಗಳಲ್ಲಿ ಇಷ್ಟಬಂದದ್ದನ್ನು ಕೂಡಿಸಿ ಕುದಿಸಿದರೆ ಹತ್ತು ನಿಮಿಷದಲ್ಲಿ ಹುಳಿ ಪಲ್ಯಗಳಿಗೆ ಮಧ್ಯಸ್ಥದ ಒಂದು ವ್ಯಂಜನ ಸಿದ್ಧವಾಗುತ್ತದೆ. ಯೋಗರ್ಟ್ (Yoghurt) ಎಂಬ ಕೆನೆ ಮೊಸರು ಸಿಕ್ಕುತ್ತದೆ ಇಲ್ಲಿ. ಮಜ್ಜಿಗೆಯೂ ದೊರೆಯುತ್ತದೆ. ಇನ್ನೇನು ಬೇಕು? ಸಾಲದಕ್ಕೆ ಊರಿನಿಂದ ಜೊತೆಗೆ ತಂದ ಚಟ್ನಿಪುಡಿ ಇದೆ; ಅದು ಬಲು ರುಚಿಯಾಗಿದೆ. (ಉಪ್ಪಿನ ಕಾಯಿ ಮಾತ್ರ ಕೆಟ್ಟುಹೋಯಿತು!) ಇದರ ಮೇಲೆ ಒಂದು ಬಾಳೆಯ ಹಣ್ಣನ್ನೋ ಸೇಬಿನ ಹಣ್ಣನ್ನೋ ತಪ್ಪದೆ ತಿನ್ನುತ್ತೇನೆ; ಸ್ವದೇಶದಲ್ಲಿ ಈ ನಿತ್ಯಭೋಗ ಇರಲಿಲ್ಲ!

ಹುಳಿಗೆ ನಿಂಬೆಹುಳಿಯನ್ನು ಉಪಯೋಗಿಸುತ್ತೇನೆ. (ಇಲ್ಲಿ ಹುಣಿಸೆ ಹಣ್ಣೂ ದೊರೆಯುವುದಂತೆ; ಅದಕ್ಕೆ ಇಲ್ಲಿನ ಹೆಸರು ಏನು ಎಂಬುದು ಗೊತ್ತಾಗದೆ ಅದನ್ನು ಕಂಡುಹಿಡಿಯಲು ಆಗಲಿಲ್ಲ. Tamarind ಎಂದರೆ ಇಲ್ಲಿಯವರಿಗೆ ಅರ್ಥವಾಗುವುದಿಲ್ಲ.) ಉಂಡ ಬಾಯಿಗೆ ಒಗ್ಗರಣೆಗೂ ಕೊರತೆಯಿಲ್ಲ. ಖಾರ ಹಚ್ಚಿದ ನೆಲಗಡಲೆಯ ಬೀಜ, ಗೋಡಂಬಿ ದೊರೆಯುತ್ತವೆ. ಇದು ರಾಜಭೋಜನ ತಾನೆ! ನನ್ನಂತೆ ಅಲ್ಲದೆ ಪಾಕ ಶಾಸ್ತ್ರ ಪ್ರವೀಣರಾಗಿ ಅಡಿಗೆ ಮಾಡಿಕೊಳ್ಳುವವರಿಗೆ ಇಲ್ಲಿ ಬಗೆ ಬಗೆಯ ಬೇಳೆಗಳೂ ದೊರೆಯುತ್ತವೆ. ದುಡ್ಡು ಸುರಿದರೆ ಸಾಕು : ಅಮೆರಿಕದಲ್ಲಿ ದೊರೆಯುವ ಸಾಮಾನೇ ಇಲ್ಲ. ಎಲ್ಲವನ್ನೂ ಅಂದವಾಗಿ ರಟ್ಟಿನ ಪೊಟ್ಟಣಗಳಲ್ಲಿ ಅಥವಾ ತಗಡಿನ ಡಬ್ಬಿಗಳಲ್ಲಿ "ಪ್ಯಾಕ್" ಮಾಡಿ ಬಣ್ಣ ಬಣ್ಣದ ಕಾಗದ ಪಟ್ಟಿಗಳ ಮೇಲೆ ಅವುಗಳ ಉಪಯೋಗ ವಿಧಾನವನ್ನು ಅಚ್ಚುಮಾಡಿಸಿ ಅಂಟಿಸಿರುತ್ತಾರೆ. ಅಥವಾ ಜೊತೆಗೆ ಇಟ್ಟಿರುತ್ತಾರೆ. ಆದ್ದರಿಂದಲೆ "Almighty Dollar" (ಸರ್ವಶಕ್ತ ಡಾಲರ್) ಎನ್ನುತ್ತಾರೋ ಏನೋ. ಹಿಂದಿನವರು "ಸರ್ವಶಕ್ತ" ಎಂಬ ವಿಶೇಷಣವನ್ನು ಭಗವಂತನಿಗೆ ಉಪಯೋಗಿಸುತ್ತಿದ್ದರು. ಈಗ ಅವನ ಸ್ಥಾನವನ್ನು ಡಾಲರ್ ಆಕ್ರಮಿಸಿತು.

೨. ಇಂಗ್ಲಿಷ್ ಸ್ಪೀಕಿಂಗ್ ಯೂನಿಯನ್
(The English Speaking Union)

ಫಿಲಡೆಲ್ಫಿಯ,
ಅಕ್ಟೋಬರ್ ೧೪, ೧೯೫೫

ಕಳೆದ ಬುಧವಾರ, ಇಲ್ಲಿಯ English Speaking Union ಎಂಬ ಸಂಸ್ಥೆಯವರು ಕಾಮನ್‌ವೆಲ್ತಿನಿಂದ (Commonwealth)—ಎಂದರೆ ಇಂಗ್ಲೆಂಡ್, ಕೆನಡ, ಇಂಡಿಯ, ಪಾಕಿಸ್ಥಾನ ಈ ಮೊದಲಾದ ರಾಷ್ಟ್ರಗಳಿಂದ—ಇಲ್ಲಿಗೆ ಓದಲು ಬಂದಿರುವ ವಿದ್ಯಾರ್ಥಿಗಳನ್ನು ಸ್ವಾಗತಿಸಿ ಸತ್ಕರಿಸಲು ಒಂದು 'ಟೀ ಪಾರ್ಟಿ'ಯನ್ನು ಏರ್ಪಡಿಸಿದ್ದರು. ನಾನೂ ಹೋಗಿದ್ದೆ. ಇಂಡಿಯಕ್ಕೆ ಇತ್ತೀಚೆಗೆ, ಎಂದರೆ ಕಳೆದ ಬೇಸಗೆಯಲ್ಲಿ, ಹೋಗಿ ಬಂದಿದ್ದ ಈ ಸ್ಥಳದ ಇಬ್ಬರು ವೃದ್ಧೆಯನ್ನು ಇಲ್ಲಿ ನೋಡಿದೆ; ಅವರೊಂದಿಗೆ ಮಾತಾಡಿದೆ. ಒಬ್ಬಾಕೆ ಇಂಡಿಯದಲ್ಲಿ ನಾಲ್ಕು ದಿನ ಮಾತ್ರ ಇದ್ದಳಂತೆ. ಅವಳ ಅನುಭವ ಹಿತವಾಗಿರಲಿಲ್ಲವಂತೆ. ಬೆಳಗಿನ ಜಾವ ಮೂರೂವರೆ ಘಂಟೆಯಲ್ಲಿ ಆಕೆ ವಿಮಾನದಿಂದ ದೆಹಲಿಯಲ್ಲಿ ಇಳಿದು ಕೊಂಚಮಟ್ಟಿಗೆ ತೊಂದರೆಪಟ್ಟಳೆಂದು ತೋರಿತು. ಟ್ಯಾಕ್ಸಿಯನ್ನು ನಡಸುತ್ತಿದ್ದ ಸರ್ದಾರ್‌ಜೀಯ ಗಡ್ಡ ಮೀಸೆ ಕೂಡ ಆಕೆಯನ್ನು (ನಿಷ್ಕಾರಣವಾಗಿ!) ಭಯಪಡಿಸಿದಂತೆ ಆಕೆಯ ಮಾತಿನಿಂದ ತೋರಿತು. ಅಂತೂ ಆ ಬೆಳಗಿನ ಕಹಿ ಆಕೆಯ ನಾಲಗೆಯ ಮೇಲೆ ಇಂದಿಗೂ ಉಳಿದಿತ್ತು!—ಇನ್ನೊಬ್ಬಾಕೆ ಪಾರ್ಟಿಯ ಕೊನೆಗೆ ನನ್ನನ್ನು ಸಂಧಿಸಿದಳು. ತಾನು ಇಂಡಿಯಕ್ಕೆ ಹೋಗಿ ಬಂದ ವಿಷಯವನ್ನು ಒಂದೆರಡು ಮಾತಿನಲ್ಲಿ ಹೇಳಿದಳು ದೆಹಲಿ, ಅಮೃತಸರ, ಕಾಶ್ಮೀರ ಇಲ್ಲಿಗೆಲ್ಲ ಆಕೆ ಹೋಗಿದ್ದಳಂತೆ. ಈಕೆಯ ಮುಖಭಾವದಲ್ಲೂ ಉಕ್ತಿಯಲ್ಲೂ ನಮ್ಮ ದೇಶವನ್ನೂ ನಮ್ಮವರನ್ನೂ ಕುರಿತು ವಿಶ್ವಾಸ

ಎದ್ದು ಕಾಣುತ್ತಿತ್ತು. ಹಾಗೆಯೇ ಮಾತಾಡುತ್ತಾ, "ನೀವು ಈ ನಗರದ ಹಳೆಯ ಮಾದರಿಯ ಮನೆಗಳಿಗೆ (Colonial type house) ಹೋಗಿಲ್ಲವೆ?" ಎಂದಳು. ನಾನು "ಇಲ್ಲ" ಎಂದೆ. "ಹಾಗಾದರೆ ಬನ್ನಿ; ನಮ್ಮ ಮನೆಗೆ ಹೋಗೋಣ; ತೋರಿಸುತ್ತೇನೆ. ಮನೆಯಲ್ಲಿ ಮಗ, ಮಗಳು ಇದ್ದಾರೆ. ಈ ರಾತ್ರಿಯ ಊಟವನ್ನು ಅಲ್ಲಿಯೇ ಮಾಡಿ" ಎಂದಳು ಆಕೆ. ಔತನ ಇಷ್ಟು ಬೇಗ ಬಂತಲ್ಲ ಎಂದು ನನಗೆ ಸ್ವಲ್ಪ ಆಶ್ಚರ್ಯವಾಯಿತು. ಆದರೆ ಇಷ್ಟೊಂದು ವಿಶ್ವಾಸದಿಂದಲೂ ಸದ್ಭಾವದಿಂದಲೂ ಕರೆಯುತ್ತಿರುವಾಗ ನಾನು ಹೇಗೆ ಒಲ್ಲೆ ಎನ್ನಲಿ! "ಬರುತ್ತೇನೆ. ಆದರೆ ನಿಮಗೆ ತೊಂದರೆಯಾಗಬಹುದು. ನಾನು ಮೀನು, ಮಾಂಸ ತೆಗೆದುಕೊಳ್ಳುವುದಿಲ್ಲವಲ್ಲ" ಎಂದೆ ನಾನು. ಈಗ ಆಕೆಗೂ ಮನಸ್ಸಿನಲ್ಲಿ ಸ್ವಲ್ಪ ಗೊಂದಲವಾಗಿರಬೇಕು. ಆದರೆ ಅದನ್ನು ತೋರ್ಪಡಿಸದೆ, ಒಂದು ಕ್ಷಣಾರ್ಧ ಮಾತ್ರ ತಡಮಾಡಿ, "ಚಿಂತೆಯಿಲ್ಲ. ಕಾಯಿಪಲ್ಯ ತೆಗೆದುಕೊಳ್ಳುತ್ತೀರಷ್ಟೆ" ಎಂದರು. ನಾನು "ಓಹೋ. ಕಾಯಿಪಲ್ಯ, ರೊಟ್ಟಿ, ಹಾಲು ಹಣ್ಣು–ಇದನ್ನೆಲ್ಲ ತೆಗೆದುಕೊಳ್ಳುತ್ತೇನೆ. ಈ ದೇಶದಲ್ಲಿ ಅನಿರ್ವಾಹವಾದಾಗ ಮೊಟ್ಟೆಯನ್ನು ತೆಗೆದುಕೊಳ್ಳುವುದೂ ಅಭ್ಯಾಸವಾಗಿದೆ. ನಿಮಗೆ ತೊಂದರೆಯಾಗದಿದ್ದರೆ ಸಂತೋಷವಾಗಿ ಬರುತ್ತೇನೆ" ಎಂದೆ.

ಹೀಗೆ ಪರದೇಶಗಳಿಂದ ಹೊಸದಾಗಿ ಬಂದ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಸಂಸ್ಥೆಗಳು ಇಲ್ಲಿ ಅನೇಕ ಇವೆ. ಇಂಥ ಸಮಾರಂಭಕ್ಕೆ ಬಂದ ಯಾರನ್ನಾದರೂ ತಮ್ಮ ಮನೆಗೆ ಆಹ್ವಾನಿಸಿ ಅವರ ಪರದೇಶ ವಾಸ ಹಿತವಾಗುವಂತೆ ಮಾಡುವ ಉದ್ದೇಶವನ್ನೂ ಇಟ್ಟುಕೊಂಡೇ ಕೆಲವು ಮಂದಿ ಮಹಿಳೆಯರು ಇಲ್ಲಿಗೆ ಬಂದಿರುವುದೂ ಉಂಟು. ಅಂತೂ ಶ್ರೀಮತಿ ಪಿ—ಅವರ ಜೊತೆಯಲ್ಲಿ ಅವರ ಮನೆಗೆ ಆ ಸಂಜೆ ನಾನು ಹೋದೆ. ಆಕೆಯ ವಂಶದವರು ನೂರಾರು ವರ್ಷಗಳಿಂದ, ಅಮೆರಿಕಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಹಿಂದಿನ ವಸಾಹತುಕಾಲದಿಂದಲೂ (Colonial days) ಈ ದೇಶದಲ್ಲಿ ಇದ್ದಾರಂತೆ. ಆ ಮನೆಯನ್ನು ನಾನು ನೋಡಬೇಕೆಂದು ಆಕೆ ಆಹ್ವಾನಿಸಿದ್ದು ನನ್ನನ್ನು ಊಟಕ್ಕೆ ಕರೆಯಲು ಒಂದು ನಿಮಿತ್ತ ಅಷ್ಟೆ; ಆದಕಾರಣ ಮನೆಯ ವರ್ಣನೆಗೆ ಇಲ್ಲಿ ತೊಡಗುವುದಿಲ್ಲ. ಶ್ರೀಮತಿ ಪಿ—, ಆಕೆಯ ಮಗಳು, ಆಮೇಲೆ ಮನೆಗೆ ಬಂದ ಮಗ (ಈತ ಒಂದು ಬ್ಯಾಂಕಿನಲ್ಲಿ ಕೆಲಸದಲ್ಲಿದ್ದಾನೆ)—ಎಲ್ಲರೂ ನನ್ನನ್ನು ತುಂಬ ವಿಶ್ವಾಸವಾಗಿ, ಸಲಿಗೆಯಾಗಿ, ಕಂಡರು. (ನನಗಾಗಿ ಈಕೆ ದಾರಿಯಲ್ಲಿ ಸೀಮೆ ಹುರುಳಿಕಾಯಿ ಡಬ್ಬಿಯನ್ನು ಬೇರೆ ಕೊಂಡುಕೊಂಡಿದ್ದಳು.) ಊಟ ಚೆನ್ನಾಗಿ ಸಾಗಿತ್ತು. ಕೊನೆಯಲ್ಲಿ "ಪೈ" (Pie) ಬಂತು. ಈ ದೇಶದಲ್ಲಿ ಇದನ್ನು ವಿಶೇಷವಾಗಿ ಮಾಡುತ್ತಾರೆ. ವಿಧಾನ ನನಗೆ ತಿಳಿಯದು : ಹಣ್ಣು, ಗೋಧಿಯ ಹಿಟ್ಟು ಸಕ್ಕರೆ ಇತ್ಯಾದಿಗಳೆಲ್ಲ ಸೇರಿ ರುಚಿಯಾಗಿರುತ್ತವೆ. ಸೇಬು ಹಣ್ಣಿನ ಪೈಯನ್ನು (apple pie) ಹಲವು ಕಡೆಗಳಲ್ಲಿ ತಿಂದಿದ್ದೇನೆ. ಇವರ ಮನೆಯಲ್ಲಿ ಅಂದು ಕುಂಬಳದ ಪೈಯನ್ನು (pumpkin pie) ಬಡಿಸಿದರು; ಬಲು ಸೊಗಸಾಗಿತ್ತು. ಅದರ ಸವಿಗೆ ಮೊದಲ ತುತ್ತಿಗೇ ನಾನು ಮಾರು ಹೋದೆ. ಹೋಟಲಿನ ತಿಂಡಿಗೂ ಮನೆಯ ತಿಂಡಿಗೂ ಈ ದೇಶದಲ್ಲೂ ಬಹಳ ಭೇದವಿರುತ್ತದೆ. ಈ ಕುಂಬಳದ ಪೈ ಮಾಡುವುದನ್ನು ನಮ್ಮ ದೇಶದವರೂ ಅವಶ್ಯವಾಗಿ ಕಲಿಯಬೇಕು.

ಊಟ ಮುಗಿದ ಮೇಲೆ ಬೈಠಕ್ ಖಾನೆಯಲ್ಲಿ (drawing room) ಕುಳಿತೆವು. ಶ್ರೀಮತಿ ಪಿ—ಕಾಶ್ಮೀರದಲ್ಲಿ ಕೊಂಡುಕೊಂಡಿದ್ದ ಕೆಲವು ಪದಾರ್ಥಗಳು ಅದೇ ದಿನದ ಟಪಾಲಿನಲ್ಲಿ ಇಲ್ಲಿಗೆ ಬಂದಿದ್ದುವು. ಕಟ್ಟನ್ನು ಒಡೆಯಲು ನಾನೂ ಸಹಾಯ ಮಾಡಿದೆ. ಒಳಗೆ ನೋಡಿದರೆ, ಕಾಗದದ ತಿರುಳಿನಿಂದ (papier mache) ಮಾಡಿದ ಭರಣಿಗಳು, ಪೆಟ್ಟಿಗೆಗಳು; ಅವುಗಳ ಮೇಲೆಲ್ಲ ಬಣ್ಣಬಣ್ಣದ ಕುಸುರಿಗೆಲಸ. (ಇಂಥ ಒಂದೆರಡನ್ನು ನಾನು ದೆಹಲಿಯಿಂದ ತಂದಿದ್ದದ್ದು ನಿಮಗೆ ನೆನಪಿರಬೇಕು.) ಜೊತೆಗೆ ಕಾಶ್ಮೀರದ ಶಾಲುಗಳು, ವಸ್ತ್ರಗಳು ಇತ್ಯಾದಿ.—ತನ್ನ ಆಪ್ತೇಷ್ಟರಿಗೆ ಮೆಚ್ಚಾಗಿ ಕೊಡಲು ಆಕೆ ಇವನ್ನೆಲ್ಲ ಕೊಂಡು ತಂದಿದ್ದಳು. ಭಾರತದ ಈ ಸಾಮಗ್ರಿ ಇವರ ಮನೆಗೆ ಬಂದ ದಿನವೇ ಭಾರತೀಯನಾದ ನಾನು ಅಲ್ಲಿಗೆ ಊಟಕ್ಕೆ ಹೋದದ್ದು "ಕರ್ಮಧರ್ಮಸಂಯೋಗ". ಶ್ರೀಮತಿ ಪಿ—, ಆಕೆಯ ಮಗಳು ಇಬ್ಬರೂ ನನ್ನ ಸಂಗಡ ಬೇಕಾದಷ್ಟು ಮಾತಾಡಿದರು; ಹಾಗೆ ನೋಡಿದರೆ ಮಗನೇ ಬಲು ಮಟ್ಟಿಗೆ ಮೌನವಾಗಿದ್ದ. (ಮಗ, ಮಗಳು ಇಬ್ಬರೂ ಪ್ರೌಢವಯಸ್ಕರು; ಆದರೆ ಇವರಿಬ್ಬರಲ್ಲಿ ಒಬ್ಬರೂ ಇನ್ನೂ ಮದುವೆಯಾಗಿಲ್ಲ.) ಇಲ್ಲಿ ಹೆಂಗಸರು ಚೆನ್ನಾಗಿ ಓದಿಕೊಂಡಿರುತ್ತಾರೆ. ಅನೇಕ ವಿಷಯಗಳನ್ನು ತಿಳಿದು ಕೊಂಡಿರುತ್ತಾರೆ. ಅಲ್ಲದೆ ಧೈರ್ಯಶಾಲಿಗಳು; ಈ ವೃದ್ಧೆ ಜೊತೆಗೆ ಯಾರೂ ಇಲ್ಲದೆ ಒಬ್ಬಳೇ ಇಂಡಿಯಕ್ಕೆ ಹೋಗಿ ಬಂದಿದ್ದಳು.

ಈ ಕಾಶ್ಮೀರದ ಉಪಾಯನ ವಸ್ತುಗಳನ್ನು ನೋಡಿದಾಗ, ನಾನೂ ಸ್ವದೇಶಕ್ಕೆ ಹಿಂದಿರುಗುವಾಗ ಏನನ್ನಾದರೂ ತೆಗೆದುಕೊಂಡು ಹೋಗಬೇಕಲ್ಲವೆ ಎಂಬ ಆಲೋಚನೆ ನನ್ನ ಮನಸ್ಸಿನಲ್ಲಿ ಮೂಡಿತು. ಆ ವಿಷಯವನ್ನೂ ಇವರೊಂದಿಗೆ ಸ್ವಲ್ಪ ಪ್ರಸ್ತಾವಿಸಿದೆ. ನಾನು ಕೆಲವು ವರ್ಷಗಳಿಗೆ ಹಿಂದೆ ಪಾವಗಡಕ್ಕೆ ಉಪನ್ಯಾಸಕ್ಕೆಂದು ಹೋಗಿ ಬರಿಕೈಯಲ್ಲಿ ಹಿಂದಕ್ಕೆ ಬಂದಾಗ ನಡೆದ ಸಂಗತಿ ನಿನಗೆ ನೆನಪಿದೆಯೆ? "ಅಣ್ಣಾ, ಪಾವಗಡದಿಂದ ನನಗೆ ಏನು ತಂದೆ?" ಎಂದು ನಮ್ಮ ನಾ—ಕೇಳಿದಳು. "ಬೆಂಗಳೂರಲ್ಲಿ ಸಿಕ್ಕದ ಯಾವ ಸಾಮಾನು ಪಾವಗಡದಲ್ಲಿ ಸಿಕ್ಕುತ್ತದಮ್ಮ, ಅಲ್ಲಿಂದ ತರುವುದಕ್ಕೆ?" "ಅದು ನಿಜ, ಅಣ್ಣ. ಆದರೆ ನೀನು ಪಾವಗಡಕ್ಕೆ ಹೋಗಿ ಬಂದದ್ದಕ್ಕೆ ಏನು ಗುರುತು ನಮಗೆ?"— ಈ ಸಂವಾದವನ್ನು ಇಲ್ಲಿ ವರದಿ ಮಾಡಿದೆ! ನಾನು ಇಲ್ಲಿಂದ ಏನನ್ನು ತರಬೇಕು; ನೀವೇ ಸೂಚಿಸಿ!

೩. ಸಂಕೀರ್ಣ

ಆ್ಯನ್ ಆರ್ಬರ್, ಮಿಷಿಗನ್,
ಜುಲೈ ೯, ೧೯೫೫

ಮೊನ್ನೆ ಹಾಲೆಂಡಿನಿಂದ ಇಲ್ಲಿಗೆ ಬಂದಿರುವ ಸಹಾಧ್ಯಾಯಿಗಳೊಬ್ಬರ ಮನೆಯಲ್ಲಿ ಸೇರಿದ್ದ ಗೋಷ್ಠಿಯಲ್ಲಿ "ಸ್ನೇಹ"ದ ಪ್ರಸ್ತಾಪ ಬಂತು. ಹಾಲೆಂಡಿನಲ್ಲಿ "friend" ಎಂಬ ಶಬ್ದವನ್ನು ಧಾರಾಳವಾಗಿ ಉಪಯೋಗಿಸುವುದಿಲ್ಲವಂತೆ. ಪರಿಚಯಸ್ಥರು— ಒಬ್ಬರನ್ನೊಬ್ಬರು ಅನೇಕವರ್ಷಗಳಿಂದ ಬಲ್ಲವರು ಕೂಡ–ಜೊತೆಗಿದ್ದಾಗ, ಹೊಸದಾಗಿ,

ಬಂದ ಇನ್ನೊಬ್ಬರಿಗೆ ಗುರುತುಮಾಡಿಕೊಡಬೇಕಾದ ಸಂದರ್ಭದಲ್ಲಿ, "This is my friend, Mr So-and-so" (ಇವರು ನನ್ನ ಸ್ನೇಹಿತರಾದ ಶ್ರೀಮಾರ್ ಇಂಥವರು) ಎಂದು ಹೇಳುವುದಿಲ್ಲವಂತೆ; "This is Mr So-and-so" (ಇವರು ಶ್ರೀಮಾರ್ ಇಂಥವರು) ಎಂದು ಮಾತ್ರ ಹೇಳುತ್ತಾರಂತೆ. ಒಬ್ಬರ ವಿಷಯವಾಗಿ ಮಾತಾಡುತ್ತಾ, ಆತ ಅಥವಾ ಆಕೆ ನಿಮ್ಮ "friend" ಏ ಎಂದು ಯಾರಾದರೂ ಪ್ರಶ್ನಿಸಿದರೆ, ಈತ ಅಥವಾ ಈಕೆ ನಿಂತ ನಿಲವಿನಲ್ಲೇ ಆಲೋಚಿಸಲು ಪ್ರಾರಂಭಿಸುತ್ತಾನೆ (ಳೆ) : "Is he (she) my friend? No, he is not my friend" ಈ ರೀತಿಯಾಗಿ! ಇಲ್ಲಿ ನನಗೆ ಹೀಗೆ ತೋರುತ್ತದೆ. ಹಾಲೆಂಡಿನವರಲ್ಲಿ "friend" ಎಂಬ ಶಬ್ದದ ಪ್ರಯೋಗ "ಪ್ರಿಯ", "ಪ್ರೇಯಸಿ" (lover) ಎಂಬುದರಷ್ಟೇ ಖಚಿತವಾಗಿರಬಹುದು. ಜೀವಮಾನದಲ್ಲಿ ಒಬ್ಬನಿಗೆ ನಿಜವಾದ ಸ್ನೇಹಿತರು ಇಬ್ಬರು ಮೂವರು ಅಥವಾ ನಾಲ್ಕೈದು ಮಂದಿ ("ದ್ವಿತ್ರಾಃ ಪಂಚಷಾ ವಾ") ಇದ್ದರೆ ಹೆಚ್ಚು. ಅವರನ್ನು ಬಿಟ್ಟು ಬೇರೆ ಯಾರನ್ನೂ "friend" ಎಂದು ಕರೆಯಲು ಇವರ ಮನಸ್ಸು ಒಪ್ಪುವುದಿಲ್ಲ.

ಆದರೆ ಸಾಮಾಜಿಕ ವ್ಯವಹಾರದಲ್ಲಿ ಇದು ತೊಡಕಿಗೆ ಕಾರಣವಾಗುತ್ತದೆ, ಅಲ್ಲವೆ ಎಂದ ಕೇಳಿದರೆ ಅವರು ಹೀಗೆ ಉತ್ತರ ಕೊಡುತ್ತಾರೆ. "ಒಂದನೆಯದಾಗಿ, ಒಬ್ಬರನ್ನು ಬರಿಯ ಉಪಚಾರಕ್ಕೋಸ್ಕರ ಸುಳ್ಳುಸುಳ್ಳಾಗಿ ನಮ್ಮ ಸ್ನೇಹಿತರು ಎಂದು ಕರೆಯಬಾರದು. ಸ್ನೇಹ ಅಷ್ಟು ಹಗುರವಲ್ಲ. ಎರಡನೆಯದಾಗಿ, ನಮ್ಮ ಸ್ನೇಹಿತರೆಂದು ಒಬ್ಬರನ್ನು ನಾವು ನಿರ್ದೇಶಿಸಿದರೆ ಅವರು ಅದನ್ನು ಒಪ್ಪದಿರಬಹುದು!....ನಮ್ಮ ದೇಶದಲ್ಲಾದರೆ, ಜೊತೆಗಿರುವ ಒಬ್ಬರನ್ನು ಗುರುತುಮಾಡಿಕೊಡುತ್ತಾ, ಈತ ನಮ್ಮ ಸ್ನೇಹಿತ ಎಂದು ಹೇಳದೆ, ಈತ ನಮ್ಮ ಪರಿಚಯಸ್ಥ ಎಂದು ಹೇಳುವುದು ಹೇಗೆ? ಆತನಿಗೆ ಅಸಮಾಧಾನವಾಗುವುದಿಲ್ಲವೆ? ನಮಗೇ ಸಂಕೋಚವಾಗುವುದಿಲ್ಲವೆ?" ಅಂತೂ ಶಬ್ದವ್ಯವಹಾರ ತೊಡಕಿನ ವಿಷಯ!

ಸಾಮಾಜಿಕ ವ್ಯವಹಾರದಲ್ಲಿ ಕೂಡ ಈ ನೈಷ್ಠಿಕತೆ ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತದಂತೆ. ನಿಮಗೆ ಇಷ್ಟವಿಲ್ಲದವರೊಬ್ಬರು ಕೊಠಡಿಯೊಳಕ್ಕೆ ಬಂದರೆ, ಅವರ ಕೈ ಕುಲುಕಲು ನಿಮಗೆ ಮನಸ್ಸು ಬಾರದಿರಬಹುದು. ಆಗ ನೀವು ಸಭ್ಯತೆಗಾಗಿ ಕೈ ಕುಲುಕುವುದಿಲ್ಲ. "I don't mind if he resents it. I cannot be a hypocrite" "ಅವನಿಗೆ ಮುನಿಸು ಬಂದರೆ ನಾನು ಗಮನಿಸುವುದಿಲ್ಲ. ನಾನು ಮಿಥ್ಯಾಚಾರಿಯಾಗಲಾರೆ" ಹೀಗೆನ್ನುವುದು ಡಚ್ ಜನರ ವಾದ. ನಾವು ಇದನ್ನು ಇದ್ದಹಾಗೆ, ಮರೆಮಾಚದೆ ಹೇಳುವವರು ಎಂದು ಅವರ ಹೆಮ್ಮೆ.

* * *

ಜುಲೈ ೧೭, ೧೯೫೫

ಹಾಲೆಂಡಿನಲ್ಲಿ ಒಬ್ಬರನ್ನು "ಟೀ" ಇತ್ಯಾದಿಗಳಿಗೆ ಇಷ್ಟುಹೊತ್ತಿಗೆ, ಉದಾಹರಣೆಗೆ ಮೂರು ಘಂಟೆಗೆ, ಬನ್ನಿ ಎಂದು ಕರೆದಿದ್ದರೆ, ಹೊತ್ತಿಗೆ ಸರಿಯಾಗಿ, ಗಡಿಯಾರದ ಮುಳ್ಳು ಮೂರು ಘಂಟೆಯನ್ನು ತೋರಿಸುತ್ತಿರುವಾಗಲೇ ಅಲ್ಲಿಗೆ ಹೋಗುವುದು

ಸಾಮಾಜಿಕ ನೀತಿಯಲ್ಲವಂತೆ. ಇದೇನು, ಇವನು ಇಷ್ಟೊಂದು ಹೊಟ್ಟೆಬಾಕನೆ, ಮೂರು ಘಂಟೆಗೇ ಬಂದುಬಿಟ್ಟಿದ್ದಾನೆ : ಬಾಗಿಲು ತೆರೆಯುವುದನ್ನೇ ಕಾದಿದ್ದಾನೆ ಎಂದುಕೊಳ್ಳುತ್ತಾರಂತೆ ಆತಿಥೇಯರು. ಇದು ನನಗೆ ಗೊತ್ತಿರಲಿಲ್ಲ. ಕೋ—ಅವರ ಮನೆಗೆ ನಾನು ಮೊದಲ ಸಲ ಹೋದಾಗ, ಮೂರು ಎಂದರೆ ಸರಿಯಾಗಿ ಮೂರು ಘಂಟೆಗೆ ಹೋದೆ. ಬಾಗಿಲು ತೆರೆಯುವುದು ಕೆಲವು ಕ್ಷಣ ತಡವಾಯಿತು. ಆದರೆ ನನ್ನನ್ನು ಆದರದಿಂದ ಸ್ವಾಗತಿಸಿದರು...ಇನ್ನೊಂದು ದಿನ ನನ್ನ ಅಪಾರ್ಟ್‌ಮೆಂಟಿಗೆ ದಂಪತಿಗಳಿಬ್ಬರೂ ಬಂದ ಸಂದರ್ಭದಲ್ಲಿ ನಾನು ಮೂರು ಘಂಟೆ ಎಂದು ಹೇಳಿದ್ದರೂ, ಇವರು ಬಂದಾಗ ಮೂರು ಇಪ್ಪತ್ತು ಆಗಿತ್ತು. ಇವರೇಕೆ ಇಷ್ಟು ತಡಮಾಡಿದ್ದಾರೆ? ನಾನಿರುವ ಮನೆ ಇವರಿಗೆ ಗೊತ್ತಾಗಲಿಲ್ಲವೋ ಎಂದು ಆತಂಕವಾಯಿತು. ಈಚೆಗೆ ಎಲ್ಲವೂ ವಿಶದವಾಯಿತು! ಆ ದಿನ ನಾನು ಹೊತ್ತಿಗೆ ಸರಿಯಾಗಿ ತಮ್ಮ ಮನೆಗೆ ಬಂದದ್ದು ಹೊಟ್ಟೆಬಾಕತನದಿಂದ ಅಲ್ಲ, ಡಚ್ ವ್ಯವಹಾರದ ಅಜ್ಞತೆಯಿಂದ ಎಂದು ಕೋ—ದಂಪತಿಗಳು ತಿಳಿದಿದ್ದಾರೆ ಎಂದು ನಂಬುತ್ತೇನೆ.

ರೈಲು, ಕಛೇರಿ ಇಂಥ ಕಡೆಗಳಿಗೆ ಮಾತ್ರ ಡಚ್ಚರು ನಿಯತವಾದ ವೇಳೆಗೇ ಹೋಗುತ್ತಾರಂತೆ.

*   *   *

ಫಿಲಡೆಲ್ಫಿಯ,
ಅಕ್ಟೋಬರ್ ೨೮, ೧೯೫೫

ನಿನ್ನೆಯ ಬೆಳಗ್ಗೆ ಕೂದಲು ಕತ್ತರಿಸಿಕೊಳ್ಳುವುದಕ್ಕಾಗಿ (hair-cut) ಒಂದು ಕ್ಷೌರದ ಅಂಗಡಿಗೆ ಹೋದೆ. ಬೆಳಗ್ಗೆ ಒಂಬತ್ತೂಕಾಲು ಘಂಟೆ. ಅಂಗಡಿಯಾತ ಒಬ್ಬನೇ ಇದ್ದ. ಆತನ ಬಿಳಿಯ ನಿಲುವಂಗಿಯನ್ನು ನೋಡಿ ಇವನೇ ಕ್ಷೌರಿಕನಿರಬೇಕೆಂದು ನಿರ್ಧರಿಸಿ. "I want a haircut, please" (ನನ್ನ ಕೂದಲನ್ನು ಕತ್ತರಿಸಬೇಕು, ದಯವಿಟ್ಟು) ಎಂದೆ. ಆತನು ನನ್ನನ್ನು ಸ್ವಲ್ಪ ದಿಟ್ಟಿಸಿ ನೋಡಿದ; ಕ್ಷೌರಕನಲ್ಲದವನನ್ನು ಕೇಳಿ ಅಪಮಾನ ಮಾಡಿದೆನೇನೋ ಎಂದು ನನಗೆ ಸ್ವಲ್ಪ ಅಳುಕು ಉಂಟಾಯಿತು.

"Are you a Negro?" (ನೀವು ನೀಗ್ರೋ ಜನವೆ?) ಎಂದ ಆತ. (ಸಂಭಾಷಣೆಯೆಲ್ಲ ಇಂಗ್ಲಿಷಿನಲ್ಲೇ ನಡೆಯಿತು ಎಂದು ಹೇಳಬೇಕಾಗಿಲ್ಲ.)

"ಅಲ್ಲ. ನಾನು ಇಂಡಿಯನ್—ಇಂಡಿಯಾ ದೇಶದಿಂದ ಬಂದವನು. ಏಕೆ ಹೀಗೆ ಕೇಳುತ್ತೀರಿ?"

"ನಾವು ಇಲ್ಲಿ ನೀಗ್ರೋ ಜನರಿಗೆ ಸೇವೆ ಸಲ್ಲಿಸುವುದಿಲ್ಲ."

"ನಾನು ನೀಗ್ರೋ ಅಲ್ಲ. ನನ್ನ ಕೂದಲಿನ ಕಡೆ ನೋಡಿ." (ನೀಗ್ರೋ ಜನರ ಕೂದಲು ಉಣ್ಣೆಯಂತೆ ಗುಂಗುರಾಗಿ ಇರುತ್ತದೆ.)

"ನಿಜ, ದಯವಿಟ್ಟು ನನ್ನನ್ನು ಕ್ಷಮಿಸಿ. ನಿಮ್ಮ ಬಣ್ಣ ಕಪ್ಪು. ಅದಕ್ಕಾಗಿ ಹೀಗೆ ಕೇಳಿದೆ. ನಿಮ್ಮಂಥ ಜನ ಇಲ್ಲಿಗೆ ಬರುವುದು ಇದೇ ಮೊದಲ ಸಲ."

"ಏಕೆ? ಫಿಲಡೆಲ್ಫಿಯದಲ್ಲಿ ಎಂಬತ್ತು ಮಂದಿ ಇಂಡಿಯದ ವಿದ್ಯಾರ್ಥಿಗಳು ಇದ್ದಾರಲ್ಲ ...ನಾನು ಈ ದೇಶದ ಉತ್ತರ ಭಾಗ ಪಶ್ಚಿಮ ಭಾಗಗಳಲ್ಲೆಲ್ಲಾ ಸುತ್ತಿದ್ದೇನೆ. ಆದರೆ, ನೀಗ್ರೋಗಳಿಗೆ ಸೇವೆಸಲ್ಲಿಸುವುದಿಲ್ಲವೆಂದು ನಾನು ಕೇಳುವುದೂ ಇದೇ ಮೊದಲ ಬಾರಿ."

"ಅದೇನೇ ಇರಲಿ. ಫಿಲಡೆಲ್ಫಿಯದಲ್ಲಿ ನಾವು ನೀಗ್ರೋಗಳಿಗೆ ಸೇವೆ ಸಲ್ಲಿಸುವುದಿಲ್ಲ."

"ಹಾಗಾದರೆ ನೀಗ್ರೋಗಳು ಏನು ಮಾಡುತ್ತಾರೆ?"

"ಅವರಿಗೆ ತಮ್ಮವರ ಅಂಗಡಿಗಳೇ ಇವೇ."

"ಇದೇನು ಟ್ರೇಡ್-ಯೂನಿಯನ್ ವ್ಯವಸ್ಥೆಯೋ ನಿಮ್ಮಲ್ಲಿ?" (Is this a Union matter with you?)

"ಹೌದು".

ನೀಗ್ರೋ ಸಮಸ್ಯೆಯ ಪ್ರತ್ಯಕ್ಷಾನುಭವ ನನಗೆ ಬಂದದ್ದು ಇದೇ ಮೊದಲು. ಫಿಲಡೆಲ್ಫಿಯ ಎಂದರೆ "ಸೋದರ ಪ್ರೀತಿಯ ನಗರ" ಎಂದು ಅರ್ಥ. ಇಂಥ ಮಹಾ ನಗರದಲ್ಲಿಯೇ ಹೀಗಾದರೆ, ಇನ್ನೂ ದಕ್ಷಿಣ ರಾಜ್ಯಗಳಲ್ಲಿ ನೀಗ್ರೋ ಸಮಸ್ಯೆ ಇನ್ನೂ ಕಠಿನವೇ ತಾನೆ.

ಅಷ್ಟೇಕೆ. ನಮ್ಮ ದೇಶದಲ್ಲಿಯೇ ಮೊನ್ನೆ ಮೊನ್ನೆಯ ತನಕ ಕ್ಷೌರದ ಅಂಗಡಿಗಳ ಮುಂದೆ "ಉತ್ತಮರಿಗೆ ಮಾತ್ರ" ಎಂದು ಬೋರ್ಡುಗಳನ್ನು ತಗಲು ಹಾಕುತ್ತಿರಲಿಲ್ಲವೆ? ಸ್ವಾತಂತ್ರ್ಯ ಲಭಿಸಿದ ಈಚೆಗೆ, ಸುದೈವದಿಂದ ಅಂಥ ವರ್ತನೆ ಕಾನೂನಿನ ಮೇರೆಗೆ ಅಪರಾಧವಾಗುತ್ತವೆ. ಈ ದೇಶದಲ್ಲಿ ಕಾನೂನು ಈ ವಿಷಯದಲ್ಲಿ ಇನ್ನೂ ಪ್ರವೇಶಿಸಿದಂತೆ ಕಾಣಲಿಲ್ಲ.

●

ಭಾಗ ೮

ತೀ.ನಂ.ಶ್ರೀ. ಅವರ
ಪುಸ್ತಕಗಳ ‘ಅರಿಕೆ’ಗಳು

ಪಂಪ

ಬೇಲೂರಿಗೋ ಹಳೆಯಬೀಡಿಗೋ ಒಬ್ಬರನ್ನು ಕರೆದುಕೊಂಡು ಹೋಗಿ, ಒಂದೇ ಘಂಟೆಯ ಕಾಲದಲ್ಲಿ ದೇವಾಲಯದ ದರ್ಶನ ಮಾಡಿಸಲು ಒಪ್ಪಿಕೊಂಡವನ ಅವಸ್ಥೆಯನ್ನು ಸುಲಭವಾಗಿ ಊಹಿಸಬಹುದು. ಗುಡಿಯನ್ನು ಬೇಗಬೇಗ ಒಂದು ಸುತ್ತು ಹಾಕಿಸಿ, ದೇವರಿಗೆ ಒಂದಿಷ್ಟು ಮಂಗಳಾರತಿ ಮಾಡಿಸಿ, ಈ ಮದನಿಕಾ ವಿಗ್ರಹದ ನಿಲವನ್ನೋ ಆ ಕಂಬದ ಮಾಟವನ್ನೋ ಮೆಚ್ಚಿ ಮೆಚ್ಚಿ ತೋರಿಸುವಷ್ಟರಲ್ಲೇ ಘಂಟೆ ಹಾರಿಹೋಗಿ ಬಿಡುತ್ತದೆ. ನೋಡಲು ಬಂದವರ ಮಾತು ಹಾಗಿರಲಿ; ತೋರಿಸಲು ನಿಂತವನಿಗೇ ಸ್ವಲ್ಪವೂ ತೃಪ್ತಿಯಿಲ್ಲ. ಪಂಪಮಹಾಕವಿಯ ಪರಿಚಯವನ್ನು ಅಂಗೈಯಗಲದ ಅರುವತ್ತು ನಾಲ್ಕು ಪುಟಗಳಲ್ಲಿ ಮಾಡಿಕೊಡಲು ಹೊರಟು ಇದೇ ಸಂಕಟವನ್ನು ನಾನು ಪಡಬೇಕಾಯಿತು. ಪಂಪನ ಮಹತ್ತ್ವವನ್ನೂ ಅವನ ಕಾವ್ಯಗಳ ಬಗೆಬಗೆಯ ಸೊಗಸನ್ನೂ ವಿಶದವಾಗಿ ನಿರೂಪಿಸಲು ಇಲ್ಲಿ ಎಷ್ಟು ಮಾತ್ರಕ್ಕೂ ಸಾಧ್ಯವಾಗಿಲ್ಲ; ಆ ಆಸೆಯನ್ನೇ ನಾನು ಇಟ್ಟುಕೊಳ್ಳುವಂತಿರಲಿಲ್ಲ. ಈಗಿನ ಕಾಲದಲ್ಲಿ, ಸಿನಿಮಾ ಮಂದಿರಕ್ಕೆ ಒಂದು ಚಿತ್ರಪಟವನ್ನು ತರಿಸುವ ಮುಂಚೆ, ಅದರ ಮೊದಲ ರುಚಿಯನ್ನು ಕಾಣಿಸಿ ಪ್ರೇಕ್ಷಕರಲ್ಲಿ ಕುತೂಹಲವನ್ನು ಹುಟ್ಟಿಸುವುದಕ್ಕಾಗಿ 'ಟ್ರೇಲರ್' ಎಂಬ ಮುಂಗಾಣಿಕೆಯ ಚಿತ್ರವನ್ನು ತೋರಿಸುತ್ತಾರಷ್ಟೆ. ಪಂಪನ ಕಾವ್ಯಗಳಿಗೆ ಈ ಬಗೆಯ ಪ್ರವೇಶವು ನನ್ನ ಪುಸ್ತಕದಿಂದ ಉಂಟಾದರೆ ಸಾಕು.

ಹಳಗನ್ನಡದ ಬಳಕೆಯಿಲ್ಲದವರಿಗೆ ಪಂಪನ ಬರೆವಣಿಗೆ ಸುಲಭವಾಗಿ ಅರ್ಥವಾಗುವುದಿಲ್ಲ. ಪದ್ಯಗಳಲ್ಲಂತೂ ಸಂಧಿಯ ನಿಯಮದಂತೆ ಮಾತುಗಳೆಲ್ಲ ಒಂದಕ್ಕೊಂದು ಹೆಣೆದುಕೊಂಡಿರುವುದರಿಂದ ಪದವಿಭಾಗವೇ ಮೊದಲು ಕಷ್ಟಕೊಡುತ್ತದೆ. ಈ ಪುಸ್ತಕದಲ್ಲಿ ಪಂಪನ ಕಾವ್ಯದಿಂದ ಉದಾಹರಿಸಿರುವ ಭಾಗಗಳನ್ನೆಲ್ಲಾ ಆದಷ್ಟು ಮಟ್ಟಿಗೆ ಸಂಧಿ ಬಿಡಿಸಿ ವಿರಾಮ ಚಿಹ್ನೆಗಳನ್ನು ಉಪಯೋಗಿಸಿ ಅಚ್ಚು ಮಾಡಿದೆ. ಈ ಕಾವ್ಯಭಾಗಗಳ ಸಾರವನ್ನು ಅಲ್ಲಲ್ಲೇ ಕೆಲವು ವಾಕ್ಯಗಳಲ್ಲಿ ಸೂಚಿಸುವುದರ ಮೂಲಕ ಅವುಗಳ ಅರ್ಥವನ್ನು ವಿಶದಪಡಿಸಲು ಪ್ರಯತ್ನ ಮಾಡಿದೆ. ಕೆಲವು ಕಠಿನ ಪದಗಳ ಅರ್ಥವನ್ನೂ ಕೊಟ್ಟಿದೆ. ಇದೆಲ್ಲದರಿಂದ, ವಾಚಕರಿಗೆ ಪಂಪನ ಕನ್ನಡವು ಹೆಚ್ಚು ಶ್ರಮವಿಲ್ಲದೆ ತಿಳಿಯುವಂತಾಗಲಿ.

ತಿರುಮಕೂಡಲು ನರಸೀಪುರದಲ್ಲೂ ಹಾಸನದಲ್ಲೂ ಪಂಪನನ್ನು ಕುರಿತು ನಾನು ಕೊಟ್ಟ ಉಪನ್ಯಾಸಗಳೇ ಈ ಪುಸ್ತಕಕ್ಕೆ ತಳಹದಿ. ಇದನ್ನು ಬರೆಯುವಂತೆ ನನ್ನನ್ನು ಪ್ರೋತ್ಸಾಹಿಸಿ, ಬರೆದದ್ದನ್ನು ಪರಿಷ್ಕರಿಸಿ ಉಪಕಾರಮಾಡಿದ ಸಂಪಾದಕ ಮಂಡಲಿಯ ನನ್ನ ಮಿತ್ರರಿಗೆ, ಅದರಲ್ಲೂ ಶ್ರೀಮಾನ್ ಜಿ. ಹನುಮಂತರಾಯರಿಗೆ, ನನ್ನ ಕೃತಜ್ಞತೆಯನ್ನು ಈ ಮೂಲಕ ಸಲ್ಲಿಸುತ್ತೇನೆ.

ಪಂಪನ ಮೇಲೆ ಲೇಖನಗಳೂ ಗ್ರಂಥಗಳೂ ಈ ಮೊದಲೇ ಹೊರಬಿದ್ದಿವೆ. ವಾಚಕರ ಸೌಕರ್ಯಕ್ಕಾಗಿ ಅವುಗಳ ಸಣ್ಣ ಪಟ್ಟಿಯೊಂದನ್ನು ಮುಂದೆ ಕೊಟ್ಟಿದೆ. ಈ ಪುಸ್ತಕದ ರಚನೆಯಲ್ಲಿ ಅವುಗಳಿಂದ ನಾನು ಪಡೆದಿರುವ ಸಹಾಯವನ್ನು ಇಲ್ಲಿ ಹೃತ್ಪೂರ್ವಕವಾಗಿ ಸ್ಮರಿಸುತ್ತೇನೆ.

೧೫-೧೨-೧೯೩೯

ಕಾವ್ಯ ಸಮೀಕ್ಷೆ

ಕಳೆದ ಹಲವು ವರ್ಷಗಳಲ್ಲಿ ನಾನು ಬರೆದು ಪ್ರಕಟಿಸಿದ ಕೆಲವು ಲೇಖನಗಳು ಈ ಸಂಕಲನದಲ್ಲಿ ಈಗ ಒಟ್ಟುಗೂಡಿ ಅಚ್ಚಾಗಿವೆ. ಇವುಗಳಲ್ಲಿ ನಾಲ್ಕನೆಯದು ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದ ಪ್ರಕಟನೆಯಾದ 'ಕುಮಾರವ್ಯಾಸ ಪ್ರಶಸ್ತಿ'ಗೆ ಸೇರಿದ್ದು. ಮಿಕ್ಕೆಲ್ಲವೂ ಬೆಳಕು ಕಂಡದ್ದು 'ಪ್ರಬುದ್ಧ ಕರ್ನಾಟಕ'ದಲ್ಲಿ. ಹೀಗೆ ಪ್ರಥಮಾಶ್ರಯವನ್ನು ಕೊಟ್ಟ ಸಂಪಾದಕರುಗಳ ಕೃಪೆಯನ್ನು ಸಂತೋಷದಿಂದ ಸ್ಮರಿಸುತ್ತೇನೆ. 'ಶಾಕುಂತಲವನ್ನು ಕುರಿತು' ಎಂಬ ಲೇಖನಕ್ಕೆ ಮೈಸೂರಿನ ಆಕಾಶವಾಣಿಯವರು ೧೯೪೨ನೆಯ ಇಸವಿಯಲ್ಲಿ ಏರ್ಪಡಿಸಿದ್ದ ಕಾಳಿದಾಸೋತ್ಸವದಲ್ಲಿ ನಾನು ಆಡಿದ ಮಾತುಗಳು ಆಧಾರ; ಭಾಷಣದ ಧಾಟಿಯೇ ಬರಹದಲ್ಲೂ ಉಳಿದಿದೆ.

ಈ ಪ್ರಬಂಧಗಳಲ್ಲಿ ಒಂದೊಂದೂ ಬೇರೆ ಬೇರೆ ಕಾಲದಲ್ಲಿ ಬಿಡಿಯಾಗಿ ರಚಿತವಾಗಿದ್ದರೂ, ಇಲ್ಲಿ ಕೂಡಿಸಿ ನೋಡುವಾಗ ವಸ್ತುವಿನ ಮಟ್ಟಿಗಾದರೂ ಇವಕ್ಕೆ ಸಂಬಂಧವುಂಟೆಂದು ತೋರದಿರದು. ವಿಷಮಪ್ರಣಯದ ಅನೇಕ ಮುಖವಾದ ಗತಿ ಇವುಗಳಲ್ಲಿ ಗೋಚರಿಸುತ್ತದೆ. ಅದು ದುರಂತವಾಗಬಹುದು, ಮಂಗಳಾಂತವಾಗಬಹುದು; ನಿಂದ್ಯವಾಗಬಹುದು, ವಂದ್ಯವಾಗಬಹುದು. ಎಲ್ಲವೂ ಒಂದೇ ಹೊನಲಿನ ವಿಭಿನ್ನ ವೇಣಿಗಳು. ಕೊನೆಯ ಪ್ರಬಂಧದಲ್ಲಿ ಪ್ರತಿಪಾದನೆಯ ಗುರಿಯೂ ಕ್ರಮವೂ ಮಿಕ್ಕ ಕಡೆಗಳಿಗಿಂತ ಬೇರೆಯಾಗಿದ್ದರೂ ಅಲ್ಲಿ ಕೂಡ ಈ ಸಹಸ್ರಶೀರ್ಷವಸ್ತು ಹೆಡೆಯೆತ್ತಿಕೊಂಡೇ ಇದೆ.

ಇಲ್ಲಿಯ ಮೊದಲನೆಯ ಲೇಖನದಲ್ಲಿ 'ವಿಕ್ರಮೋರ್ವಶೀಯ'ವನ್ನು ಕುರಿತ ವಿಮರ್ಶೆ ಕಠಿನವಾಯಿತೆಂದು ಕಾಳಿದಾಸನ ಭಕ್ತರಿಗೆ ತೋರುವುದು ಅಸಂಭವವಲ್ಲ. ಹದಿನಾಲ್ಕು ವರ್ಷಗಳ ಹಿಂದೆ ಬರೆದದ್ದನ್ನು ಈಗ ಮತ್ತೆ ಓದಿ ನೋಡಿದಾಗ, ಅಭಿಪ್ರಾಯವನ್ನು ಮಾರ್ಪಡಿಸಬೇಕೆಂದು ತೋರಲಿಲ್ಲವಾದರೂ ಕೆಲವು ಕಡೆಗಳಲ್ಲಿ ಉಕ್ತಿ ಕಟುವೆನ್ನಿಸಿತು. ಅಂಥದನ್ನೆಲ್ಲ ಈ ಪರಿಷ್ಕರಣದಲ್ಲಿ ಯಥಾಮತಿಯಾಗಿ ತಿದ್ದಿದ್ದೇನೆ, ತೊಡೆದಿದ್ದೇನೆ. ವಿಕ್ರಮೋರ್ವಶೀಯದ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಒಪ್ಪದವರಿಗೆ ಕೂಡ, ಇಲ್ಲಿ ಅಪಚಾರದ ಮಾತುಗಳೇನೂ ಕಾಣಲಾರವೆಂದು ನಂಬಿದ್ದೇನೆ. ಭರತಖಂಡದ ಕವಿಕುಲಗುರುವನ್ನು ಕುರಿತು ನನ್ನ ಹೃದಯದಲ್ಲಿರುವ ಅತಿಶಯವಾದ ಮೆಚ್ಚಿಕೆ ಗೌರವಗಳಿಗೆ

ತಕ್ಕಮಟ್ಟಿನ ನಿದರ್ಶನ ಇಲ್ಲಿಯ ಬರೆವಣಿಗೆಯಲ್ಲೇ ಉಂಟೆಂದು ನನ್ನ ಭರವಸೆ...ಮಿಕ್ಕ ಪ್ರಬಂಧಗಳಲ್ಲೂ ಅಲ್ಲಲ್ಲಿ ಮಾತುಗಳನ್ನು ಯಥೋಚಿತವಾಗಿ ಸರಿಪಡಿಸಿದೆ; ಆದರೆ ಹೆಚ್ಚು ತಿದ್ದುಪಾಡಿಗೆ ಕೈಹಾಕಿಲ್ಲ. ಕೊನೆಯ ಪ್ರಬಂಧಕ್ಕೆ ಸೇರಿರುವ 'ಪರಿಶಿಷ್ಟ' ಹೊಸದು; ತಾವು ಸಂಗ್ರಹಿಸಿರುವ ವಚನಗಳನ್ನು ಕುರಿತು ಕೆಲವು ವಿವರಣೆಗಳನ್ನು ತಿಳಿಸಿದ್ದಕ್ಕಾಗಿ ಶ್ರೀಮಾನ್ ಎಚ್. ದೇವೀರಪ್ಪನವರಿಗೆ ನಾನು ಕೃತಜ್ಞನಾಗಿದ್ದೇನೆ.

ಈ 'ಕಾವ್ಯಸಮೀಕ್ಷೆ'ಯನ್ನು ಪ್ರಕಟಿಸುವ ಭಾರವನ್ನು ವಹಿಸಿದ್ದಕ್ಕಾಗಿ ನನ್ನ ಮಿತ್ರರಾದ ಶ್ರೀಮಾನ್ ಕೂಡಲಿ ಚಿದಂಬರಂ ಅವರಿಗೂ, ಅಂದವಾಗಿ ಅಚ್ಚು ಮಾಡಿರುವುದಕ್ಕಾಗಿ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನವರಿಗೂ ನನ್ನ ವಂದನೆಗಳು.

೨೪-೯-೧೯೪೭

ಸಮಾಲೋಕನ

ನನ್ನ ಲೇಖನ ವ್ಯವಸಾಯ ಅಷ್ಟೇನೂ ಹುಲುಸಲ್ಲ; ಆದರೂ ಕಳೆದ ಅನೇಕ ವರ್ಷಗಳಲ್ಲಿ, ಬಲುಮಟ್ಟಿಗೆ ಸಂಪಾದಕ ಮಿತ್ರರ ಒತ್ತಾಯಕ್ಕೆ ಕಟ್ಟುಬಿದ್ದು, ವಿಮರ್ಶೆ, ಪ್ರಸ್ತಾವನೆ, ಸಂಶೋಧನ ಲೇಖನ ಮೊದಲಾದವನ್ನು ಆಗಾಗ ಬರೆಯಬೇಕಾಯಿತು. ಹಲವು ಪತ್ರಿಕೆಗಳಲ್ಲೂ ಗ್ರಂಥಗಳಲ್ಲೂ ಚೆದರಿಹೋಗಿ, ನೋಡಬೇಕೆನ್ನುವವರಿಗೆ ಈಗ ಸುಲಭವಾಗಿ ದೊರೆಯದಿರುವ ಇಂಥಬರಹಗಳನ್ನು ಒಟ್ಟುಗೂಡಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂಬ ನಿರ್ಧಾರವನ್ನು ನನ್ನ ಶಿಷ್ಯ-ಮಿತ್ರರೂ ನುರಿತ ಪ್ರಕಾಶಕರೂ ಆದ ಶ್ರೀಮಾನ್ ಎಚ್.ಎಂ. ಶಂಕರನಾರಾಯಣರಾಯರು ಕೈಕೊಂಡರು. ಅವರ ಉದ್ದೇಶ ಸಾಧನಶಕ್ತಿಯನ್ನು ಅನುಭವದಿಂದ ಬಲ್ಲ ನಾನು ಹೆಚ್ಚು ಚರ್ಚೆಮಾಡದೆ ಒಪ್ಪಿಕೊಂಡು, ಈ ಮುಂದಿನ ಲೇಖನಗಳನ್ನು ಆಯ್ದು ಕೂಡಿಸಿಕೊಟ್ಟಿದ್ದೇನೆ. ಇವುಗಳಲ್ಲಿ 'ಮುಡಿ, ಮಾತ್ರೆ, ಪದ್ಮಗಣ' ಎಂಬುದು ಮಾತ್ರ ಹಿಂದೆ ಎಲ್ಲೂ ಬೆಳಕನ್ನು ಕಂಡಿರಲಿಲ್ಲ; ಅದರ ಬಹು ಭಾಗವನ್ನು ಈ ಸಂಕಲನಕ್ಕಾಗಿಯೇ ಬರೆದೆನೆಂದೂ ಹೇಳಬಹುದು. 'ಗದಾಯುದ್ಧವೂ ಸ್ವೀಕರಣ ವಿಚಾರವೂ', 'ಇದೆ, ಇವೆ ಮೊದಲಾದ ಕ್ರಿಯರೂಪಗಳ ವಿಚಾರ'—ಇಂಥ ಇನ್ನೂ ಕೆಲವು ಹಳೆಯ ಲೇಖನಗಳು ಇಲ್ಲಿ ನ್ಯಾಯವಾಗಿ ಸೇರಬೇಕಾಗಿತ್ತು. ಆದರೆ ಅವುಗಳಲ್ಲಿ ಹೆಚ್ಚಿನ ಮಾರ್ಪಾಡು ಆವಶ್ಯಕವೆಂದು ತೋರಿ, ಸದ್ಯಕ್ಕೆ ಅವನ್ನು ಕೈ ಬಿಡಲಾಯಿತು.

ಇಲ್ಲಿಯ ಲೇಖನಗಳಲ್ಲಿ ಅತ್ಯವಶ್ಯವೆನಿಸಿದ ಕೆಲವು ಚಿಕ್ಕ ತಿದ್ದುಪಾಡುಗಳನ್ನು ಮಾತ್ರ ಮಾಡಿ, ಆದಷ್ಟುಮಟ್ಟಿಗೆ ಅವುಗಳ ಮೊದಲ ಪ್ರಕಟನೆಯ ರೂಪದಲ್ಲಿಯೇ ಉಳಿಸಿದ್ದೇನೆ. ಹೆಚ್ಚಿನ ಸಂಗತಿಗಳನ್ನಾಗಲಿ ಮಾರ್ಪಾಡುಗಳನ್ನಾಗಲಿ ನಿರ್ದೇಶಿಸಬೇಕೆಂದು ತೋರಿದ ಕಡೆ, ಅವನ್ನು ಕೆಲವು ಅಡಿ ಟಿಪ್ಪಣಿಗಳಲ್ಲಿಯೂ ಪರಿಶಿಷ್ಟಗಳಲ್ಲಿಯೂ ಕಾಣಿಸಿದ್ದೇನೆ. ಈ ಲೇಖನಗಳನ್ನು ರಚನೆಯ ಕಾಲದ ದೃಷ್ಟಿಯಿಂದ ಯಾರಾದರೂ ಸಮಾಲೋಕನ ಮಾಡುವುದಾದರೆ ಇದರಿಂದ ಉಪಯೋಗವಾಗಬಹುದೆಂದು ನನ್ನ ಭಾವನೆ.

ಗ್ರಂಥದ ಆಯಾ ಭಾಗಗಳು ಅಚ್ಚಾದ ಬಳಿಕ ಒಂದು ಅಂಶವು ಬೆಳಕಿಗೂ ಒಂದು ವಿಚಾರವು ನನ್ನ ಗಮನಕ್ಕೂ ಬಂದುವು. ಅವನ್ನು ಕುರಿತು ಎರಡು ಮಾತುಗಳನ್ನು ಇಲ್ಲಿ ಹೇಳುವುದು ಅಪ್ರಸಕ್ತವೆನಿಸಲಾರದು :

(೧) ಪುಟ ೧೬೧–೧೬೨ರಲ್ಲಿ, ಇಱಿವ ಬೆಡಂಗ–ಸತ್ಯಾಶ್ರಯನಿಗೆ "ಆಹವಮಲ್ಲ" ಎಂಬ ಹೆಸರು ಇತ್ತೆ, ಹೇಗೆ ಎಂಬ ವಿಷಯವನ್ನು ಸಂದೇಹದಲ್ಲಿಯೇ ಉಳಿಸಲಾಗಿದೆ. ಆದರೆ, ಅವನಿಗೆ ಆ ಹೆಸರು ಇತ್ತು ಎಂಬ ಅಭಿಪ್ರಾಯಕ್ಕೆ ಇತ್ತೀಚೆಗೆ ಚಿಕ್ಕೆರೂರಿನಲ್ಲಿ ದೊರೆತ ಒಂದು ಶಾಸನದಿಂದ (ಕ್ರಿ. ಶ. ೯೯೫) ಪುಷ್ಟಿ ದೊರೆಯುತ್ತದೆ. ಇದರಲ್ಲಿ ಉಕ್ತನಾಗಿರುವ ಮಹಾಮಂಡಲೇಶ್ವರ ಆಹವಮಲ್ಲನು ಆಗ ಚಕ್ರವರ್ತಿಯಾಗಿದ್ದ ತೈಲಪನಲ್ಲ, ಅವನ ಮಗನಾದ ಸತ್ಯಾಶ್ರಯನಾಗಿರಬೇಕು ಎಂದು ಈ ಶಾಸನವನ್ನು ಸಂಗ್ರಹಿಸಿದ ಶ್ರೀ ಬಾ.ರಾ. ಗೋಪಾಲ್ ಅವರು ನಿರೂಪಿಸುತ್ತಾರೆ ('ಗದಾಯುದ್ಧ ಕಾಲ ನಿರ್ಣಯ' : 'ಪ್ರಬುದ್ಧ ಕರ್ಣಾಟಕ', ೪೦.೨). ಇದನ್ನು ಒಪ್ಪಬಹುದೆಂದು ತೋರುತ್ತದೆ. ಶಾಸನ ಇನ್ನೂ ಪ್ರಕಟಿತವಾಗಿಲ್ಲ.

(೨) ಪುಟ ೨೪೮ರಲ್ಲಿ, "ಶ್ರೀ"ಯವರ 'ವಸಂತ' ಎಂಬ ಕವನ 'ಅಂಶ' ಗಣದ ಧಾಟಿಯಲ್ಲಿದೆ ಎಂದು ಸೂಚಿಸಿದೆ; ಪುಟ ೫೪೪–೫೪೫ರಲ್ಲಿ, ಇಲ್ಲಿಯದು ನಾಲ್ಕು ಮಾತ್ರೆಯ ಗಣವೆಂದು ಲೆಕ್ಕ ಮಾಡಿದೆ. ಇದಕ್ಕೆ ಸಮಾಧಾನ ಹೇಳುವುದು ಆವಶ್ಯಕ. ಈ ಕವನವನ್ನು ಎರಡು ಧಾಟಿಗಳಲ್ಲೂ ಓದುವುದು ಸಾಧ್ಯ. ಇಲ್ಲಿ 'ವಿಷ್ಣುಗಣ'ವುಂಟೆಂದು 'ಶ್ರೀ'ಯವರು ಒಮ್ಮೆ ಹೇಳಿದ್ದನ್ನೂ ನಾನು ಕೇಳಿಬಲ್ಲೆ. ಆದರೆ "ಅಂಶ"ದ ದೃಷ್ಟಿಯಿಂದ ನೋಡಿದರೆ, ಪ್ರತಿಯೊಂದು ನುಡಿಯ ಮೊದಲ ಮೂರು ಚರಣಗಳ ೨ನೆಯ ಮತ್ತು ೫ನೆಯ ಗಣಗಳೂ, "ಕೂವೂ ಜಗ್‌ಜಗ್, ಪುವ್ವೀ, ಟೂವಿಟ್ಟವೂ!" ಎಂಬ ಕೊನೆಯ ಚರಣದ ಮೊದಲ ૩ ಗಣಗಳೂ "ಬ್ರಹ್ಮ" ಗಣಗಳು, "ವಿಷ್ಣು"ವಲ್ಲ. ಅಲ್ಲದೆ ಪ್ರತಿ ಚರಣದ ೪ನೆಯ ಗಣವೊಂದು (ಅದೂ ಕೆಲವು ಕಡೆಗಳಲ್ಲಿ ಮಾತ್ರ) ಹೊರತು ಮಿಕ್ಕ ಎಲ್ಲ ಗಣಗಳ ಬೆಲೆ ನಿಯತವಾಗಿ ನಾಲ್ಕು ಮಾತ್ರೆಗಳು. ೪ನೆಯ ಗಣದಲ್ಲಿ ಕೂಡ, "ಮಟ್ಟರಗಳೆ"ಯ ಲೆಕ್ಕವನ್ನು ಅನುಸರಿಸಿದರೆ, "ಅಪವಾದ"ವೆಂದು ತೋರುವ ಗಣದ ಉಚ್ಚಾರಣೆಯ ಕಾಲ ನಾಲ್ಕು ಮಾತ್ರೆಗಳೇ. ಈ ಹೇಳಿಕೆಗೆ ಪೋಷಕವಾಗಿ, "ಕೊಳಲಿನೂ" ಎಂಬಲ್ಲಿ (೨ನೆಯ ನುಡಿಯ ಮೊದಲನೆಯ ಚರಣ) "ನೂ" ಎಂಬುದರ ಬೆಲೆ "ಲಘು"ವೆಂದು "ಶ್ರೀ"ಯವರೇ ನಿರ್ದೇಶಿಸಿದ್ದನ್ನೂ ನಾನು ಕೇಳಿಬಲ್ಲೆ. ಆದಕಾರಣ, 'ವಸಂತ'ದ ಧಾಟಿ ಅಂಶಗಣದ್ದು ಎನ್ನುವುದಕ್ಕಿಂತ ನಾಲ್ಕು ಮಾತ್ರೆಯ ಗಣದ್ದು ಎಂದು ಹೇಳುವುದೇ ಹೆಚ್ಚು ಸಮರ್ಪಕವೆಂದು ನನ್ನ ಈಗಿನ ಭಾವನೆ. ರಗಳೆಯ "೪ ಮಾತ್ರೆಯ ಗಣಗಳಲ್ಲಿ ಅಂಶವೂ, ಮಾತ್ರೆಯೂ ಬೆರಸಿರುವಂತೆ ಕಾಣುತ್ತದೆ" ಎಂಬುದು "ಶ್ರೀ"ಯವರ ಅಭಿಪ್ರಾಯವಾಗಿತ್ತು ('ಕನ್ನಡ ಕೈಪಿಡಿ'—೧, ಎರಡನೆಯ ಮುದ್ರಣ, ಪುಟ ೧೬೯ ನೋಡಿ); ಇದರ ಚರ್ಚೆಗೆ ಇಲ್ಲಿ ಅವಕಾಶವಿಲ್ಲ.

ಈ 'ಸಮಾಲೋಕನ'ದಲ್ಲಿ ಸೇರಿಸಿರುವ ಲೇಖನಗಳು ಮೊದಲು ಎಲ್ಲಿ ಪ್ರಕಟವಾಗಿದ್ದುವು ಎಂಬ ವಿವರವನ್ನು ಆಯಾ ಲೇಖನದ ಮೊದಲ ಪುಟದಲ್ಲಿ ಅಡಿ

ಟಿಪ್ಪಣಿಯಲ್ಲಿ ಕೊಟ್ಟಿದೆ. ಇವುಗಳ ಪ್ರಥಮ ಪ್ರಕಾಶಕರೆಲ್ಲರಿಗೂ ನನ್ನ ಕೃತಜ್ಞತೆಯನ್ನು ಸಂತೋಷದಿಂದ ಸಲ್ಲಿಸುತ್ತೇನೆ. ಈ ಲೇಖನಗಳಲ್ಲಿ ಹಲವನ್ನು ಈ ಮುದ್ರಣಕ್ಕಾಗಿ ಬೇಸರವಿಲ್ಲದೆ ಪ್ರತಿ ಮಾಡಿಕೊಟ್ಟ ನನ್ನ ಮಗಳು ಚಿ.ಸೌ. ನಾಗರತ್ನಳ ಸಹಾಯವನ್ನು ಇಲ್ಲಿ ನೆನೆಯಬೇಕು. ಪುಸ್ತಕವನ್ನು ಅಂದವಾಗಿ ಮುದ್ರಣಮಾಡಿರುವ ವೆಸ್ಲಿ ಪ್ರೆಸ್ಸಿನವರಿಗೂ ನನ್ನ ವಿಶೇಷ ವಂದನೆಗಳು.

೨೪-೮-೧೯೫೮

ನಂಟರು

ಈ ಪುಸ್ತಕದಲ್ಲಿ ಜೊತೆಗೂಡಿಸಿರುವ ರೀತಿಯ ಲೇಖನಗಳಿಗೆ 'ಪ್ರಬಂಧ' ಎಂಬ ಹೆಸರು ತಕ್ಕಮಟ್ಟಿಗೆ ರೂಢಿಯಾಗಿದೆ. ಅದು ಅಷ್ಟೇನೂ ಉಚಿತವಲ್ಲವೆಂಬ ಆಕ್ಷೇಪಣೆಯೂ ಇದೆ. ಇವುಗಳ ವಿನ್ಯಾಸದಲ್ಲಿ ಕಟ್ಟುನಿಟ್ಟಿನ ಬಿಗುಹು ಇರುವುದಿಲ್ಲ; ಆದರೆ ಇವು ಗೊತ್ತುಗುರಿಯಿಲ್ಲದ ಹರಟೆಗಳೂ ಅಲ್ಲ. 'ಶಿಥಿಲಬಂಧ' ಎಂಬ ಹೆಸರು ಇವಕ್ಕೆ ಒಪ್ಪಬಹುದಾಗಿತ್ತು; ಆದರೆ ಹಾಗೆ ಕರೆಯಲು ಲೇಖಕನ ಮನಸ್ಸು ಒಪ್ಪುವುದಿಲ್ಲ!

ಇಲ್ಲಿ ರೂಪಿಸಿರುವ ನೋವುನಲವುಗಳು, ಉಲ್ಲೇಖಿಸಿರುವ ಚಿಂತನೆಗಳು, ವರ್ಣಿಸಿರುವ ಸಂಗತಿಗಳು ಇವೆಲ್ಲ ನನ್ನ ಆಸಕ್ತಿಯನ್ನು ಬಹಳವಾಗಿ ಸೆಳೆದಿವೆ; ಮೇಜಿನ ಮುಂದೆ "ಜಿತ"ವಾಗಿ ಕುಳಿತು ಬರೆಯುವ ವಿಷಯದಲ್ಲಿ ನನಗಿರುವ ಅನುತ್ಸಾಹವನ್ನೂ ಶ್ರಮಭೀತಿಯನ್ನೂ ಹಿಮ್ಮೆಟ್ಟಿಸಿ ಈ ಲಿಖಿತರೂಪವನ್ನು ತಳೆದಿವೆ; ಇವು ನಿಮ್ಮ ಆಸಕ್ತಿಯನ್ನೂ ಕೆಲವು ಮಟ್ಟಿಗೆ ಗಳಿಸಲಿ—ಹೀಗೆಂದು ಮಾತ್ರ ಲೇಖಕನು ವಾಚಕರಿಗೆ ನಿವೇದನ ಮಾಡಬಹುದು.

ಪ್ರಬಂಧಕಾರನ ಬರಹದಲ್ಲಿ "ನಾನು" ಎಂಬ ಮಾತು ಮತ್ತೆ ಮತ್ತೆ ಬರುತ್ತದೆ. ಅದು "ಅಹಂಕಾರ"ದ ಉಕ್ತಿಯೆಂದು ಯಾರೂ ಭಾವಿಸಬಾರದು; ಅದು ಕೇವಲ ಆತ್ಮೀಯತೆಯನ್ನು ಗಳಿಸುವ ಸಾಧನ. ಅದನ್ನು ಸಂಕೋಚವಿಲ್ಲದೆ ಉಪಯೋಗಿಸಲು ಲೇಖಕನು ಹೆದರಿದರೆ ಕೆಲಸ ಕೆಡುತ್ತದೆ. ಒಂದೊಂದು ಪ್ರಬಂಧವೂ ಲೇಖಕನ ಒಂದೊಂದು ಚಿತ್ತಲಹರಿಯ ನಿರೂಪಣೆ. ಅದರಲ್ಲಿ ಹೇಳಿರುವ ವಿಷಯಗಳನ್ನೂ ಬೆಳಸಿರುವ ವಿಚಾರಗಳನ್ನೂ ಕೇವಲ ವಸ್ತುನಿಷ್ಠೆಯ ಕನ್ನಡಕದ ಮೂಲಕ ನೋಡಬಾರದು. ಆ ತಳಹದಿ ಇಲ್ಲಿರಬೇಕು, ನಿಜ. ಆದರೆ ಅದೇ ಇದರ ಶಿಖರವಲ್ಲ. ಇಲ್ಲಿ ಬಂದಿರುವ ಕೆಲವು ಸಂಗತಿಗಳು ತಿರುಚಿಕೊಂಡಿರಬಹುದು, ಇದು ಹೋಗುವ ದಾರಿ ಕೆಲವು ವೇಳೆ ವಕ್ರವೆನಿಸಬಹುದು. ಆದರೆ ಇದೊಂದೂ ಮುಖ್ಯವಲ್ಲ. ಇಂಥ ಪ್ರಬಂಧಗಳನ್ನು ಮೂಡಿಸಿರುವ ಮನೋಧರ್ಮ ವಾಚಕರಿಗೆ ರುಚಿಸಿದರೆ, ಇದರೊಂದಿಗೆ ಅವರ ಹೃದಯ ಕೆಲವು ಕ್ಷಣಗಳಾದರೂ ಸಮತಾನವಾಗಿ ಮಿಡಿದರೆ ಲೇಖಕನು ಕೃತಾರ್ಥನಾಗುತ್ತಾನೆ. ತೀವ್ರಗತಿಯಲ್ಲೂ ರಸನಿಷ್ಠೆಯಲ್ಲೂ ಲಯಬದ್ಧತೆಯಲ್ಲೂ ಪ್ರಬಂಧವು

ಭಾವಗೀತಕ್ಕಿಂತ ಕೆಳಮಟ್ಟದ್ದಾದರೂ ಎರಡಕ್ಕೂ ಬಲುಮಟ್ಟಿನ ಸಾದೃಶ್ಯವಿದೆ. ಪ್ರಬಂಧವೆನ್ನುವುದು ಮಂದ್ರಶ್ರುತಿಯ ಭಾವಗೀತ.

'ನಾನು ಬರೆದಿರುವ ಪ್ರಬಂಧಗಳ ಸಂಖ್ಯೆ ಅಲ್ಪವಾಗಿದ್ದರೂ, ಬರೆವಣಿಗೆಯೇನೋ ವಿದ್ಯಾರ್ಥಿದಶೆಯಲ್ಲೇ ಪ್ರಾರಂಭವಾಯಿತು. ಅಂದಿನವುಗಳಲ್ಲಿ 'ನಂಟರು' ಎಂಬ ಲೇಖನ ಮಾತ್ರ ಇಲ್ಲಿ ಬಂದಿದೆ; ಒಟ್ಟು ಸಂಗ್ರಹಕ್ಕೇ ಆ ಹೆಸರನ್ನು ಕೊಟ್ಟಿದೆ. ಇದು ೧೯೨೮ರಲ್ಲಿ 'ಒಕ್ಕಲಿಗರ ಪತ್ರಿಕೆಯ ವಾರ್ಷಿಕ ಸಂಚಿಕೆ'ಯಲ್ಲಿ ಪ್ರಕಟವಾಯಿತು. ಅಲ್ಲಿಂದೀಚೆಗೆ ಎರಡು ವರ್ಷಕ್ಕೆ, ನಾಲ್ಕು ವರ್ಷಕ್ಕೆ ಒಮ್ಮೆ ಬರೆದ ಪ್ರಬಂಧಗಳು ಕನ್ನಡನಾಡಿನ ಮಾನ್ಯ ಸಂಪಾದಕರನೇಕರ ವಿಶ್ವಾಸದಿಂದ ಆಗಾಗ ಬೆಳಕನ್ನು ಕಂಡುವು : 'ತಾರೆಗಳು' ಎಂಬುದು—ಅಲ್ಪಾಯುವಾದರೂ ಕೀರ್ತಿಗಳಿಸಿ ಬಾಳಿದ 'ಪ್ರಬೋಧಕ'ದಲ್ಲಿ, 'ಮನೆಗಳು'—'ಜಯ ಕರ್ನಾಟಕ'ದಲ್ಲಿ, 'ಕಾಸಿನ ಸಂಘ'—'ಕನ್ನಡನುಡಿ'ಯಲ್ಲಿ, 'ನೆಗಡಿ' ಮತ್ತು 'ವಿಶ್ವೇಶ್ವರಯ್ಯನವರ ದರ್ಶನ'—'ಜೀವನ'ದಲ್ಲಿ, 'ಮಮತೆ'—'ನಡೆದು ಬಂದ ದಾರಿ'ಯಲ್ಲಿ, 'ಗುರುಸ್ಮರಣೆ'—'ಮೈಸೂರು ಮಹಾರಾಜರವರ ಕಾಲೇಜಿನ ಶತಮಾನೋತ್ಸವ ಸಂಪುಟ'ದಲ್ಲಿ, 'ನಂದಾದೀವಿಗೆ'—'ಪುಸ್ತಕಪ್ರಪಂಚ'ದಲ್ಲಿ. ಇವುಗಳಲ್ಲಿ ಕೆಲವು ಆ ಬಳಿಕ ಹೊರಬಿದ್ದ ಪ್ರಬಂಧಸಂಕಲನಗಳಲ್ಲಿಯೂ ಸೇರಿವೆ. ಎಲ್ಲ ಸಂಪಾದಕರಿಗೂ ನನ್ನ ಕೃತಜ್ಞತೆಯನ್ನು ಈ ಮೂಲಕ ಸಲ್ಲಿಸುತ್ತೇನೆ.

'ವೋಟು' ಎಂಬ ಪುಟ್ಟ ಲೇಖನವನ್ನು ಬರೆದು ಹಲವು ವರ್ಷಗಳಾದರೂ ಅದು ಪ್ರಕಟವಾಗಲು ಇದೇ ಮೊದಲು. 'ತಗುಣಿ', 'ಪ್ರವಾಸಿಯ ಪೆಟ್ಟಿಗೆಗಳು', 'ಪ್ರವಾಸಿ'—ಈ ಮೂರನ್ನೂ ನನ್ನ ಶಿಷ್ಯರೂ ಈ ಗ್ರಂಥದ ಪ್ರಕಾಶಕರೂ ಆದ ಶ್ರೀಮಾನ್ ಎಚ್.ಎಂ. ಶಂಕರನಾರಾಯಣರಾಯರ ನಿರ್ಬಂಧಕ್ಕೆ ಅಧಿಕವಾಗಿ ಸಿಕ್ಕಿಕೊಂಡು ಈ ವರ್ಷ ಬರೆದೆ. ನಮ್ಮ ತಲೆಮಾರಿನವರಿಗೆ ಇಷ್ಟವಾಗಿದ್ದ ಒತ್ತು ಸೇವಗೆಯ ಹಾಗೆ ನನ್ನ ಬರೆವಣಿಗೆ; ಹಿಟ್ಟು ಬೇಕಾದಷ್ಟು ಇದ್ದರೂ, ಅದು ಹದವಾಗಿ ಬೆಂದಿದ್ದರೂ, ಒರಳಿನೊಳಕ್ಕೆ ಹಾಕಿದ ಮಾತ್ರಕ್ಕೆ ಅದರಿಂದ ಸೇವಗೆಯ ಎಳೆಗಳು ಇಳಿದು ಬರುವುದಿಲ್ಲ; ಮೇಲಿಂದ ಅದನ್ನು ಯಾರಾದರೂ ಗಟ್ಟಿಯಾಗಿ ಒತ್ತಬೇಕು—ಎಂದು ನಾನು ಆಗಾಗ ಕೊಡುವ ಸಾಮತಿಯನ್ನು ಅವರು ಚೆನ್ನಾಗಿ ಅರ್ಥಮಾಡಿಕೊಂಡಿರುವಂತೆ ಕಾಣಿಸುತ್ತದೆ! ಅವರ ಪ್ರಿಯವಾದ ಒತ್ತಾಯವಿಲ್ಲದೆ ಈ ಲೇಖನಗಳು ಹೊರಬೀಳುತ್ತಿರಲಿಲ್ಲ.

ಒಂದು ಸ್ವಕೀಯ ವಿಷಯವನ್ನು ಇಲ್ಲಿ ಉಲ್ಲೇಖಿಸುವುದು ಅನುಚಿತವಾಗಲಾರದು. ಭಾಷಾವಿಜ್ಞಾನದ ಹೆಚ್ಚಿನ ಅಧ್ಯಯನಕ್ಕೆಂದು ೧೯೫೫-೫೬ರಲ್ಲಿ ನನಗೆ ನ್ಯೂಯಾರ್ಕಿನ ರಾಕಿಫೆಲರ್ ಪ್ರತಿಷ್ಠಾನದವರ (The Rockefeller Foundation) ಒಂದು ವಿಶೇಷವೇತನ (Speical fellowship) ದೊರೆಯಿತು. ಅದರ ಫಲವಾಗಿ ನಾನು ಅಮೇರಿಕದ ಸಂಯುಕ್ತ ಸಂಸ್ಥಾನಗಳು, ಯೂರೋಪಿನ ನಾಲ್ಕೈದು ದೇಶಗಳು ಇಲ್ಲೆಲ್ಲಾ ವಿಶಾಲವಾದ ಪ್ರವಾಸವನ್ನು ಕೈಕೊಳ್ಳಲು ಒಳ್ಳೆಯ ಅವಕಾಶ ಲಭಿಸಿತು. ಆಗಿನ ನನ್ನ ಅನುಭವಗಳನ್ನು

ಕುರಿತು 'ಪಶ್ಚಿಮಾಯನ'ವೆಂಬ ಒಂದು ವಿಸ್ತಾರವಾದ ಪುಸ್ತಕವನ್ನೇ ಬರೆಯಬೇಕೆಂಬ ಆಸೆಯಿತ್ತು. ಅದಕ್ಕಾಗಿ ತಕ್ಕಷ್ಟು ವಿಷಯಸಂಗ್ರಹವನ್ನು ಶ್ರಮಪಟ್ಟು ಮಾಡಿದ್ದೂ ಆಯಿತು. ಆದರೆ ಕಾಲ ಹೇಗೋ ಕಳೆದುಹೋಯಿತು. ಆ ಪ್ರವಾಸಕ್ಕೆ ಸಂಬಂಧಿಸಿದಂತೆ ಎರಡು ಲೇಖನಗಳನ್ನಾದರೂ ಬರೆಯಲು ಈಗ ಸಾಧ್ಯವಾಯಿತೆಂಬುದು ಮನಸ್ಸಿಗೆ ಕೊಂಚ ಸಮಾಧಾನವನ್ನು ತಂದಿದೆ.

ನಾನು ಕೊಟ್ಟ ತೊಂದರೆಗಳನ್ನು ಸಹಿಸಿಕೊಂಡು ಈ ಪುಸ್ತಕವನ್ನು ಅಂದವಾಗಿ ಶೀಘ್ರವಾಗಿ ಅಚ್ಚುಮಾಡಿಕೊಟ್ಟ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನವರಿಗೂ ಈ ಕಾರ್ಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿದ ಶ್ರೀ ಜಿ.ಎಚ್. ಕೃಷ್ಣಮೂರ್ತಿ ಅವರಿಗೂ ನನ್ನ ವಂದನೆಗಳು ಸಲ್ಲಬೇಕಾಗಿವೆ.

೮-೮-೧೯೬೩

ಪ್ರೊ. ತೀ.ನಂ. ಶ್ರೀಕಂಠಯ್ಯನವರು ನವೋದಯ ಸಾಹಿತ್ಯ ಸಂದರ್ಭದಲ್ಲಿ ಕನ್ನಡದ ವಿದ್ವತ್ತು ಮತ್ತು ವಿಮರ್ಶೆಗಳಿಗೆ ಭದ್ರವಾದ ಬುನಾದಿಯನ್ನು ಹಾಕಿದ ಮೊದಲಿಗರಲ್ಲಿ ಒಬ್ಬರು. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಈ ಮೂರೂ ಭಾಷಾಸಾಹಿತ್ಯಗಳ ಪರಿಣತಿಯಿಂದ ಬರೆಯಬಲ್ಲ ಅವರ ಸಾಮರ್ಥ್ಯವು ತುಂಬ ಗಟ್ಟಿಮುಟ್ಟಾದ ಮತ್ತು ಎಲ್ಲ ಕಾಲಕ್ಕೂ ನಿಲ್ಲಬಲ್ಲಂಥ ಕೆಲವು ಕೃತಿಗಳನ್ನು ನೀಡಿದೆ. ಯಾವುದೇ ವಿಷಯವನ್ನು ಕುರಿತು ಬರೆಯುವ ಅಥವಾ ಮಾತನಾಡುವ ಮುನ್ನ ಅದು ನಿಷ್ಕೃಷ್ಟವಾಗಿ ಖಚಿತವಾಗುವವರೆಗೂ ತಡೆ ಹಿಡಿಯುವ ತಾಳ್ಮೆ, ಬರೆದುದನ್ನು ಮತ್ತೆ ಮತ್ತೆ ಪರಿಷ್ಕರಿಸುವ ಎಚ್ಚರ, ಬರೆದುದನ್ನು ಪ್ರಕಟಿಸುವ ಬಗ್ಗೆ ಅವರಿಗಿದ್ದ ಸಂಯಮ– ಇತ್ಯಾದಿಗಳಿಂದಾಗಿ, ನವೋದಯದ ಉತ್ಸಾಹ, ಆವೇಶ, ಪ್ರಕಟನೆಯ ಕಾತರ, ಹೆಸರಿನ ಹಂಬಲ, ಈ ಎಲ್ಲವುಗಳಿಂದ ವಿಮುಖವಾದ ಒಂದು ಚಿಂತನಶೀಲ ಸ್ತಿಮಿತ ಮನಸ್ಸಿನ ಹದವನ್ನು ಕಾಯ್ದುಕೊಂಡವರು ತೀ.ನಂ. ಶ್ರೀಕಂಠಯ್ಯನವರು. ಈ ಕಾರಣದಿಂದ ಅಂದಿನ ಇತರ ಲೇಖಕರಿಗೆ ಹೋಲಿಸಿದರೆ ಅವರು ಬರೆದದ್ದು ತೀರಾ ಕಡಿಮೆ; ಆದರೆ ಏನು ಬರೆದರೋ ಅದಷ್ಟೂ ಘಟ್ಟಿಯಾದದ್ದು

ಜಿ.ಎಸ್. ಶಿವರುದ್ರಪ್ಪ

ISBN : 81-7713-200-8 ಬೆಲೆ ರೂ. : ೨೭೫/-

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು